ನಿರ್ವಾಣ ಶ್ರೀ

ಶ್ರೀ ಮ.ಪ್ರ.ಸ್ವ. ಶ್ರೀ ಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳವರ
ಪಟ್ಟಾಧಿಕಾರ ರಜತ ಮಹೋತ್ಸವ ಸಂಪುಟ



ಶ್ರೀ ದೇಗುಲ ಮಠಾಧ್ಯಕ್ಷರಾದ
ಶ್ರೀ ಮ.ಪ್ರ.ಸ್ವ. ಶ್ರೀ ಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳವರ
ಪಟ್ಟಾಧಿಕಾರ ರಜತ ಮಹೋತ್ಸವ ಸಮಿತಿ, ಕನಕಪುರ.

ನಿರ್ವಾಣಶ್ರೀ

(ಶ್ರೀ ಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳವರ ಪಟ್ಟಾಧಿಕಾರ
ರಜತ ಮಹೋತ್ಸವ ಅಭಿವಂದನ ಸಂಪುಟ)

ಪ್ರಧಾನ ಸಂಪಾದಕರು

ಎನ್. ಬಸವಾರಾಧ್ಯ

ಸಂಪಾದಕರು

ಟಿ.ಆರ್. ಮಹಾದೇವಯ್ಯ

ಶ್ರೀ ದೇಗುಲ ಮಠಾಧ್ಯಕ್ಷರಾದ
ಶ್ರೀ ಮ.ಪ್ರ.ಸ್ವ. ಶ್ರೀ ಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳವರ
ಪಟ್ಟಾಧಿಕಾರ ರಜತ ಮಹೋತ್ಸವ ಸಮಿತಿ
ಕನಕಪುರ-೫೬೨ ೧೧೭, ಬೆಂಗಳೂರು ಗ್ರಾಮಾಂತರ ಜಿಲ್ಲೆ

NIRVANASHRI
Falicitation Volume to His Holiness Shri Shri Mummadi Nirvana Mahaswamigalu of Degulamutt, Kanakapura, Bangalore Rural Dist. on the occassion of Silver Jubilee Celebration. Chief Editor : **Prof. N. Basavaradhya**
Editor : **Sri T.R. Mahadevaiah.** Published by : Silver Jubilee Celebration Committee, Degulamutt, Kanakapura-562 117, Bangalore Rural Dist.

Pages : xii+460 First Edition : 2005 Price : **Rs. 200/-**

ಮುಖಪುಟ ವಿನ್ಯಾಸ : ಮೋನಪ್ಪ

'ನಿರ್ವಾಣಶ್ರೀ' ಸಂಪಾದಕ ಸಮಿತಿ

ಪೂಜ್ಯ ಶ್ರೀ ಶ್ರೀ ಮುಮ್ಮಡಿ ಮಹಲಿಂಗ ಸ್ವಾಮಿಗಳು
ಅಧ್ಯಕ್ಷರು

ಪ್ರೊ. ಎನ್. ಬಸವಾರಾಧ್ಯ
ಪ್ರಧಾನ ಸಂಪಾದಕರು

ಟಿ.ಆರ್. ಮಹಾದೇವಯ್ಯ
ಸಂಪಾದಕರು

ಸದಸ್ಯರು

ಗೊ.ರು. ಚನ್ನಬಸಪ್ಪ
ಡಾ. ಎಸ್. ವಿದ್ಯಾಶಂಕರ
ಪ್ರೊ. ಬಿ. ವಿರೂಪಾಕ್ಷಪ್ಪ
ಎಂ.ಜಿ. ನಾಗರಾಜ್
ಪ್ರೊ. ಆರ್. ರಾಚಪ್ಪ
ಷಣ್ಮುಖಯ್ಯ ಅಕ್ಕೂರಮಠ
ಎಸ್. ಶಿವಣ್ಣ
ಎಸ್. ಈಶ್ವರದೇವರು
ಎಂ. ಮಲ್ಲಿಕಾರ್ಜುನಯ್ಯ
ಡಾ. ಸಿ. ಶಿವಕುಮಾರಸ್ವಾಮಿ
ಎಸ್. ಪಿನಾಕಪಾಣಿ
ಸಿ.ಚ. ಯತೀಶ್ವರ
ಎಸ್. ವಿಶ್ವನಾಥಮೂರ್ತಿ

ಛಾಯಾಕ್ಷರ ಜೋಡಣೆ:
ವರ್ಷಿಣಿ ಗ್ರಾಫಿಕ್ಸ್, ಬೆಂಗಳೂರು. ✆ : ೦೮೦-೨೩೪೦೨೫೭೫

ಮುದ್ರಕರು:
ಸ್ನೇಹಾ ಪ್ರಿಂಟರ್ಸ್
ನಂ. ೧೧೪, ೪ನೇ ಅಡ್ಡರಸ್ತೆ, ಬಿ.ಸಿ.ಸಿ. ಬಡಾವಣೆ, ಅತ್ತಿಗುಪ್ಪೆ,
ವಿಜಯನಗರ ೨ನೇ ಹಂತ, ಬೆಂಗಳೂರು-೪೦. ✆ : ೦೮೦-೨೩೩೯೨೮೧೪
E-Mail-snehaprinters1@rediffmail.com
karthikenterprisesin@yahoo.com

ಗೌರವಾಧ್ಯಕ್ಷರ ನುಡಿ

ಶ್ರೀ ದೇಗುಲ ಮಠದ ಗುರುಪರಂಪರೆಯಲ್ಲಿ ನಮ್ಮ ಪೂಜ್ಯ ಗುರುವರ್ಯರಾದ ಶ್ರೀ ಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳದು ವಿಶಿಷ್ಟ ವ್ಯಕ್ತಿತ್ವ. ತಮ್ಮ ಲಿಂಗತಪಸ್ಸಿನಿಂದ, ವ್ಯವಹಾರ ಕೌಶಲದಿಂದ ಶ್ರೀಮಠವನ್ನು ಹಲವು ಮುಖವಾಗಿ ಬೆಳೆಸಿದ್ದಾರೆ. ಅವರು ನೆರವೇರಿಸಿದ ಕಾರ್ಯಕ್ರಮಗಳು ಅವರ ಶ್ರಮ, ಕಾರ್ಯಕ್ಷಮತೆ, ಸಾಮಾಜಿಕ ಕಾಳಜಿಗಳಿಗೆ ಸಾಕ್ಷಿಯಾಗಿವೆ. ವಿದ್ಯಾರ್ಥಿಗಳ ಬಗ್ಗೆ ಅವರು ತೋರಿಸುವ ಅಕ್ಕರೆ, ಮಠದ ಭಕ್ತರ ಬಗ್ಗೆ ಇಟ್ಟಿರುವ ವಾತ್ಸಲ್ಯಗಳು ಅವರ ಮಾತೃಹೃದಯದ ದ್ಯೋತಕವಾಗಿದೆ.

ಪೂಜ್ಯರು ಶ್ರೀಮಠದ ಕರ್ಣಧಾರತ್ವವನ್ನು ವಹಿಸಿಕೊಂಡು ೨೫ ವರ್ಷಗಳು ಉರುಳಿವೆ. ಧರ್ಮದ ಉನ್ನತಿಗಾಗಿ, ಸಾಮಾಜಿಕ ಸ್ವಾಸ್ಥ್ಯಕ್ಕಾಗಿ ಅವರು ತಮ್ಮ ಬದುಕನ್ನು ಮೀಸಲಿಟ್ಟು ದುಡಿಯುತ್ತಾ ಬಂದಿದ್ದಾರೆ. ಅವರ ಬಹುಮುಖವಾದ ಸೇವೆಯನ್ನು ಕೃತಜ್ಞತೆಯಿಂದ ಸ್ಮರಿಸಿ ಪೂಜ್ಯರನ್ನು ಅಭಿವಂದಿಸಬೇಕೆಂದು ಭಕ್ತರು, ಅಭಿಮಾನಿಗಳು ಅವರ ವಿರಕ್ತ ಪಟ್ಟಾಧಿಕಾರದ ರಜತಮಹೋತ್ಸವವನ್ನು ೨೦೦೫ರ ಏಪ್ರಿಲ್‌ನಲ್ಲಿ ಹಮ್ಮಿಕೊಂಡಿದ್ದಾರೆ. ಈ ಮಂಗಲಮಯ ಸಮಾರಂಭದ ಸವಿನೆನಪಿಗೆಂದು ಕೆಲವು ಕಟ್ಟಡಗಳು ಉದ್ಘಾಟನೆಗೊಳ್ಳಲಿವೆ. ಅದರಂತೆ **'ನಿರ್ವಾಣಶ್ರೀ'** ಎಂಬ ಬೃಹತ್ ಅಭಿವಂದನ ಸಂಪುಟವು ಪೂಜ್ಯಪಾದರಿಗೆ ಅರ್ಪಣೆಯಾಗಲಿದೆ.

ಪೂಜ್ಯರ ಅಭಿವಂದನ ಗ್ರಂಥದ ಸ್ವರೂಪವನ್ನು ಕುರಿತು ಸಮಾಲೋಚಿಸಲು ಬೆಂಗಳೂರಿನಲ್ಲಿ ವಿದ್ವಾಂಸರ ಸಭೆಯನ್ನು ನಮ್ಮ ಅಧ್ಯಕ್ಷತೆಯಲ್ಲಿ ಕರೆಯಲಾಗಿತ್ತು. ಗ್ರಂಥವು ಅಭಿನಂದನ ಸಂಪುಟಗಳ ಶ್ರೇಣಿಯಲ್ಲಿ ಶೋಭಿಸುವಂತಿರಬೇಕು; ಪೂಜ್ಯರ ಅಮಳ ವ್ಯಕ್ತಿತ್ವಕ್ಕೆ ತಕ್ಕುದಾಗಿರಬೇಕೆಂಬ ನಮ್ಮ ಸಲಹೆಯಂತೆ ಅದರ ರೂಪು ರೇಷೆಯನ್ನು ನಿರ್ಣಯಿಸಲಾಯಿತು. ನಾಡಿನ ಶ್ರೇಷ್ಠ ವಿದ್ವಾಂಸರಾದ ಶ್ರೀ ಎನ್. ಬಸವಾರಾಧ್ಯ ಅವರು ಅದರ ಪ್ರಧಾನ ಸಂಪಾದಕರಾಗಿರಬೇಕೆಂದೂ, ಇನ್ನೊಬ್ಬ ವಿದ್ವಾಂಸರಾದ ಶ್ರೀ ಟಿ.ಆರ್. ಮಹಾದೇವಯ್ಯನವರು ಅದರ ಸಂಪಾದಕರಾಗಿರಬೇಕೆಂದೂ ತೀರ್ಮಾನಿಸಲಾಯಿತು. ಅದರಂತೆ ಅವರು ನಾಡಿನ ಅನೇಕ ವಿದ್ವಾಂಸರನ್ನು ಸಂಪರ್ಕಿಸಿ ಲೇಖನಗಳನ್ನು ಬರೆಸಿ ಗ್ರಂಥಸಂಪಾದನಾ ಕಾರ್ಯವನ್ನು ತೃಪ್ತಿಕರವಾಗಿ ಮಾಡಿದ್ದಾರೆ. ಈ ಸಂಬಂಧವಾಗಿ ಅನೇಕ ಬಾರಿ ಶ್ರೀಮಠಕ್ಕೆ ಬಂದು ವಿಷಯ ಸಂಗ್ರಹಿಸಿದ್ದಾರೆ; ಸಮಾಲೋಚನೆಗಳನ್ನು ನಡೆಸಿದ್ದಾರೆ. ಶ್ರಮವಹಿಸಿ ಗ್ರಂಥವನ್ನು ಹೊರತಂದಿದ್ದಾರೆ.

ಡಾ. ಎಸ್. ವಿದ್ಯಾಶಂಕರ ಅವರು ಈ ಗ್ರಂಥವನ್ನು ಶ್ರದ್ಧೆಯಿಂದ ಅಚ್ಚುಮಾಡಿದ್ದಾರೆ. ಸಮಿತಿಯ ಎಲ್ಲಾ ಸದಸ್ಯರು, ವಿಶೇಷವಾಗಿ ಶ್ರೀ ಎಸ್. ವಿಶ್ವನಾಥಮೂರ್ತಿ ಅವರು ಈ ಸಂಬಂಧದಲ್ಲಿ ವಿಶೇಷ ನೆರವು ನೀಡಿದ್ದಾರೆ. ಇವರೆಲ್ಲರಿಗೂ ಮಂಗಳಾಶೀರ್ವಾದಗಳು ಸಲ್ಲುತ್ತವೆ.

'ನಿರ್ವಾಣಶ್ರೀ' ಗ್ರಂಥದ ಮುದ್ರಣವೆಚ್ಚವನ್ನು ಲಿಂ|| ಹೆಚ್.ಎಸ್. ಭೋಗಪ್ಪ-ನಂಜಮ್ಮ ದಂಪತಿಗಳ ಸ್ಮರಣಾರ್ಥವಾಗಿ ಅವರ ಸತ್ಪುತ್ರರಾದ ಶ್ರೀ ಹೆಚ್.ಬಿ. ಗುರುಮಲ್ಲಪ್ಪನವರು ಮತ್ತು ಅವರ ಧರ್ಮಪತ್ನಿ ಶ್ರೀಮತಿ ಮಂಜುಳ ಅವರು ಭರಿಸಿದ್ದಾರೆ. ಅವರಿಗೆ ಆದಿ ನಿರ್ವಾಣಸ್ವಾಮಿಗಳ ಕೃಪಾಶೀರ್ವಾದಗಳು ನಿರಂತರ ವರ್ಷಿಸಲೆಂದು ಹಾರೈಸುತ್ತೇವೆ.

ಶ್ರೀ ಮುಮ್ಮಡಿ ಮಹಲಿಂಗ ಸ್ವಾಮಿಗಳು

ಪ್ರಧಾನ ಸಂಪಾದಕರ ಮಾತು

ಧರ್ಮಪ್ರಧಾನವಾದ ಭರತಖಂಡದಲ್ಲಿ ಸಹಸ್ರಾರು ವರ್ಷಗಳಿಂದ ವಿವಿಧ ಧರ್ಮಗಳ ಅನೇಕ ಮಠಗಳು ಸ್ಥಾಪನೆಗೊಂಡು ಈ ದೇಶದ ಜನತೆಗೆ ಮುಕ್ತಿಮಾರ್ಗವನ್ನು ತೋರಿವೆ. ಈ ನಾಡಿನ ಜನತೆ ಸನ್ಮಾರ್ಗದಲ್ಲಿ ನಡೆದು ಸತ್ಕಾರ್ಯಗಳನ್ನು ಮಾಡುವುದಕ್ಕೆ ಪ್ರೇರಣೆಯನ್ನು ನೀಡಿವೆ. ಬೌದ್ಧ, ಜೈನ, ವೈಷ್ಣವ, ವೀರಶೈವ -ಇವೇ ಮೊದಲಾದ ಧರ್ಮಗಳ ತತ್ತ್ವಸಿದ್ಧಾಂತಗಳ ಆಚರಣೆ ಅನುಷ್ಠಾನಗಳಿಂದ ಲಕ್ಷಾಂತರಜನ ಜೀವನಸಾರ್ಥಕ್ಯವನ್ನು ಪಡೆದುಕೊಂಡಿರುವುದನ್ನು ಇತಿಹಾಸದಿಂದ ಕಂಡುಕೊಳ್ಳಬಹುದಾಗಿದೆ. ಕಾಲಕಾಲಕ್ಕೆ ವಿವಿಧ ಧರ್ಮಗಳ ಆಚಾರ್ಯರು, ಗುರುಗಳು, ಪೀಠಾಧಿಪತಿಗಳು ಈ ಧರ್ಮಗಳ ಉದ್ಧಾರಕ್ಕೆ, ಉತ್ಥಾನಕ್ಕೆ, ಅಹರ್ನಿಶಿ ಶ್ರಮಿಸಿರುವುದನ್ನು ಈ ನಾಡಿನ ಪರಂಪರೆಯಿಂದ, ಚರಿತ್ರೆಯಿಂದ ಅರಿತುಕೊಳ್ಳಬಹುದಾಗಿದೆ. ಭಾರತೀಯ ಧರ್ಮ ವಿಶ್ವಧರ್ಮಗಳಲ್ಲಿ ಮಹತ್ವವನ್ನೂ ಮನ್ನಣೆಯನ್ನೂ ಪಡೆದುಕೊಂಡಿದೆ. ವಿಶ್ವದ ಹಲವಾರು ಕಡೆ ಈ ಭಾರತೀಯ ಧರ್ಮ ಇಂದಿಗೂ ಜೀವಂತವಾಗಿದೆ, ಜ್ವಲಂತವಾಗಿದೆ. "ಧರ್ಮೋ ರಕ್ಷತಿ ರಕ್ಷಿತಃ" ಎಂಬುದು ಭಾರತೀಯ ಧರ್ಮದ ಬೀಜಮಂತ್ರವಾಗಿದೆ. "ಸರ್ವೇ ಜನಾಃ ಸುಖಿನೋ ಭವಂತು" ಎಂಬ ಸಾರ್ವಕಾಲಿಕ, ಸಾರ್ವದೇಶಿಕ ತತ್ತ್ವ ಸಿದ್ಧಾಂತವನ್ನು ಹೊಂದಿದೆ. ಸ್ವತಂತ್ರ ಭಾರತದ ಧ್ಯೇಯವಾಕ್ಯವು "ಅಹಿಂಸಾ ಪರಮೋ ಧರ್ಮಃ", "ನಹಿ ಜ್ಞಾನೇನ ಸದೃಶಂ" ಎಂಬುದೇ ಆಗಿದೆ. ಇಂತಹ ಭರತಖಂಡದಲ್ಲಿ ವಿವಿಧ ಧರ್ಮಗಳ ಅಸಂಖ್ಯಾತ ಮಠಗಳು ಈ ದೇಶದ ಧರ್ಮ-ಸಂಸ್ಕೃತಿಯನ್ನು ವಿಶ್ವಕ್ಕೆ ಸಾರಿತೋರುತ್ತಿವೆ.

ಕರ್ನಾಟಕದಲ್ಲಿ ಅಸಂಖ್ಯಾತ ಧರ್ಮಪೀಠಗಳು ಸ್ಥಾಪನೆಗೊಂಡಿವೆ. ಅವುಗಳಲ್ಲಿ ವೀರಶೈವ ಧರ್ಮಪೀಠಗಳ ಸ್ಥಾನ ಮಹತ್ತರವಾದುದು. ಸರ್ವಧರ್ಮಗಳ ಆಡುಂಬೊಲವಾದ ಕರ್ನಾಟಕದಲ್ಲಿ ಸುಮಾರು ಐದುಸಾವಿರಕ್ಕೂ ಮಿಗಿಲಾದ ವೀರಶೈವ ಮಠಗಳು ಒಂದು ಕಾಲದಲ್ಲಿ ಅಸ್ತಿತ್ವದಲ್ಲಿದ್ದಂತೆ ದಾಖಲೆಗಳಿಂದ ಸ್ಥಿರಪಟ್ಟಿದೆ. ಈ ಮಠಗಳು ಧಾರ್ಮಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ ಲೋಕೋತ್ತರ ಕಾರ್ಯಗಳನ್ನು ಮಾಡುತ್ತಿದ್ದುದು ಸರ್ವವಿದಿತವಾಗಿದೆ. ಸಹಸ್ರಾರು ಸಂಖ್ಯೆಯಲ್ಲಿದ್ದ ಈ ವೀರಶೈವ ಮಠಗಳು ಇಂದು ಕೇವಲ ನೂರಾರು ಸಂಖ್ಯೆಗೆ ಇಳಿದಿರುವುದು ಒಂದು ವಿಪರ್ಯಾಸವೇ ಸರಿ. ಈ ಇಪ್ಪತ್ತೊಂದನೆಯ ಶತಮಾನದ ವಿಜ್ಞಾನ ಮತ್ತು ತಂತ್ರಜ್ಞಾನಗಳ ಸಂಧಿಕಾಲದಲ್ಲಿ ಅಳಿದುಳಿದಿರುವ ವೀರಶೈವ ಮಠಗಳಲ್ಲಿ ಬೆಂಗಳೂರು ಜಿಲ್ಲೆಯ ಕನಕಪುರದ ದೇಗುಲಮಠವು ಪ್ರಮುಖ ಪ್ರಾಚೀನ ಮಠವಾಗಿದೆ.

ಸುಮಾರು ಆರು ಶತಮಾನಗಳ ಇತಿಹಾಸವನ್ನು ಹೊಂದಿರುವ ದೇಗುಲಮಠವು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕನಕಪುರ ತಾಲ್ಲೂಕಿನ ಕನಕಪುರದಲ್ಲಿ ಸ್ಥಾಪಿತವಾಗಿದೆ. ಇದು ದಾಸೋಹ ಮಠವೆಂದೇ ಪ್ರಖ್ಯಾತಿಗೊಂಡಿದೆ. ಅಲ್ಲಮಪ್ರಭುದೇವರ ಪರಂಪರೆಗೆ ಸೇರಿದ ನಿರಂಜನ ಸ್ವಾಮಿಗಳ ಗಣಸಮೂಹದ ನೂರೊಂದು ವಿರಕ್ತರಲ್ಲೊಬ್ಬರಾದ ಆದ್ಯ ನಿರ್ವಾಣ ಸ್ವಾಮಿಗಳೇ ಪ್ರಥಮರು ಎಂಬ ಪ್ರತೀತಿಯಿದೆ. ಶ್ರೀ ಆದಿ ನಿರ್ವಾಣ ಸ್ವಾಮಿಗಳು ಪರಮ ಶಿವಪೂಜಾನಿಷ್ಠರು. ಶಿವಯೋಗಕ್ಕೇ ತಮ್ಮನ್ನು ಅರ್ಪಿಸಿಕೊಂಡವರು, ಧರ್ಮಪರರು, ಭಕ್ತರನ್ನು ಸನ್ಮಾರ್ಗದಲ್ಲಿ ನಡೆಸಿಕೊಂಡು ಹೋಗುತ್ತಿದ್ದವರು. ದೇಗುಲಮಠದಲ್ಲಿ ನೆಲಸಿದ ಶ್ರೀ ನಿರ್ವಾಣ ಸ್ವಾಮಿಗಳು ಕ್ಷೇತ್ರಾಭಿವೃದ್ಧಿ ಕಾರ್ಯಗಳನ್ನು ಮಾಡಿ ಅಸಂಖ್ಯಾತ ಭಕ್ತರ ಅಪಾರ ಪ್ರೀತಿ-ವಿಶ್ವಾಸ ಮನ್ನಣೆಗೆ ಪಾತ್ರರಾದವರು. ಅನೇಕ ಪವಾಡಗಳನ್ನು ಮಾಡಿ ಜನತೆಯ ಮನವನ್ನು ಗೆದ್ದವರು.

ಶ್ರೀ ನಿರ್ವಾಣ ಸ್ವಾಮಿಗಳು ನೆಲೆನಿಂತ ಮಠವೇ ದೇಗುಲಮಠವೆನಿಸಿಕೊಂಡಿತು. ನೂರಿಪ್ಪತ್ತು ವರ್ಷಗಳು ಜೀವಿಸಿದ್ದ ಶ್ರೀ ನಿರ್ವಾಣ ಸ್ವಾಮಿಗಳ ಕಾಲಾನಂತರದಲ್ಲಿ ಶ್ರೀ ದೇವಲಿಂಗ ಸ್ವಾಮಿಗಳು; ಶ್ರೀ ನಾಗಲಿಂಗ ಸ್ವಾಮಿಗಳು; ಶ್ರೀ ನಂಜಯ್ಯ ಸ್ವಾಮಿಗಳು; ಶ್ರೀ ಮಹಾಲಿಂಗ ಸ್ವಾಮಿಗಳು; ಶ್ರೀ ಹುಚ್ಚಪ್ಪ ಸ್ವಾಮಿಗಳು; ಶ್ರೀ ಮರುಳಸಿದ್ಧ ಸ್ವಾಮಿಗಳು; ಶ್ರೀ ಚೆನ್ನಬಸವ ಸ್ವಾಮಿಗಳು; ಇಮ್ಮಡಿ ಶ್ರೀ ಮರುಳಸಿದ್ಧ ಸ್ವಾಮಿಗಳು; ಇಮ್ಮಡಿ ನಿರ್ವಾಣ ಸ್ವಾಮಿಗಳು ಮತ್ತು ಇಮ್ಮಡಿ ಹುಚ್ಚಪ್ಪ ಸ್ವಾಮಿಗಳು; ಇಮ್ಮಡಿ ಶ್ರೀ ಮಹಾಲಿಂಗ ಸ್ವಾಮಿಗಳು ದೇಗುಲಮಠದ ಪೀಠಾಧಿಪತಿಗಳಾಗಿ ಕಾರ್ಯನಿರ್ವಹಿಸಿದ್ದಾರೆ. ಪ್ರಸ್ತುತ ಶ್ರೀ ಮುಮ್ಮಡಿ ನಿರ್ವಾಣ ಸ್ವಾಮಿಗಳು ದೇಗುಲಮಠದ ಪೀಠಾಧ್ಯಕ್ಷರಾಗಿ ಮಹೋನ್ನತ ಕಾರ್ಯಗಳನ್ನು ಮಾಡುತ್ತಿರುವುದು ಸರ್ವವಿದಿತವಾಗಿದೆ. ಶ್ರೀಗಳವರು ತಮ್ಮ ಉತ್ತರಾಧಿಕಾರಿಗಳಾಗಿ ಶ್ರೀ ಮುಮ್ಮಡಿ ಮಹಾಲಿಂಗ ಸ್ವಾಮಿಗಳನ್ನು ನೇಮಕ ಮಾಡಿಕೊಂಡಿದ್ದಾರೆ.

ಈವರೆಗಿನ ದೇಗುಲಮಠದ ಗುರುಪರಂಪರೆಯ ನಿರಂತರ ಪರಿಶ್ರಮದಿಂದ ನಾಡಿನಾದ್ಯಂತ ಅಸಂಖ್ಯಾತ ಭಕ್ತರು ರೂಪುಗೊಂಡಿದ್ದಾರೆ. ಅನೇಕ ವಿದ್ಯಾಸಂಸ್ಥೆಗಳು ಸ್ಥಾಪಿತವಾಗಿವೆ. ಶ್ರೀಮಠವು ಗ್ರಾಮೀಣ ಶಿಕ್ಷಣಕ್ಕೆ ಆದ್ಯತೆಯನ್ನು ನೀಡುತ್ತಿದೆ. ವಿಶೇಷವಾಗಿ ಬಡ ವಿದ್ಯಾರ್ಥಿಗಳ, ಅನಾಥರ ಶಿಕ್ಷಣಕ್ಕೂ ಅವರ ಸಂರಕ್ಷಣೆಗೂ ಕೈಕೊಂಡಿರುವ ಮಹತ್ತರ ಕಾರ್ಯಗಳು ಅನ್ಯಾದೃಶವಾದುವು. ಜಾತಿಮತ ಪಂಥಗಳ ವರ್ಗವರ್ಣಗಳ ಭೇದಭಾವವಿಲ್ಲದೆ ಸರ್ವರಿಗೂ ವಿದ್ಯೆ ಅಶನ ವಸನಗಳನ್ನು ನೀಡುತ್ತಿರುವುದು 'ಮಾನವ ಜಾತಿ ತಾನೊಂದೆ ವಲಂ' ಎಂಬ ಪಂಪ ಕವಿಯ ಲೋಕನೀತಿಗೆ ಜ್ವಲಂತ ನಿದರ್ಶನವಾಗಿದೆ. ಗ್ರಾಮೀಣ ಶಿಕ್ಷಣದ ಮೂಲಕ ದೀನ ದಲಿತೋದ್ಧಾರ ಕಾರ್ಯಗಳಿಗೆ ಆದ್ಯತೆಯನ್ನು ನೀಡುತ್ತಿರುವ ಶ್ರೀ ದೇಗುಲಮಠ ನಿಜಕ್ಕೂ ಆದರ್ಶಪ್ರಾಯವಾದುದು. ಶ್ರೀಮಠ ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳಾದರೂ ಎಂತಹವು.

ಪ್ರಾಥಮಿಕ ಶಾಲೆ, ಪ್ರೌಢಶಾಲೆ, ಪದವಿಪೂರ್ವ ಕಾಲೇಜು, ಬಿ.ಎಡ್. ಕಾಲೇಜು, ಬಾಲಕಿಯರ ಪ್ರೌಢಶಾಲೆ, ಅನಾಥ ಶಿಶುಸಂರಕ್ಷಣಾಲಯ, ಕೈಗಾರಿಕಾ ತರಬೇತಿ ಸಂಸ್ಥೆ, ಸಂಸ್ಕೃತ ಪಾಠಶಾಲೆ, ವಸತಿ ಪ್ರೌಢಶಾಲೆ, ನರ್ಸಿಂಗ್ ಕಾಲೇಜ್, ಟಿಸಿಎಚ್ -ಇವೇ ಮೊದಲಾದ ವಿಶಿಷ್ಟ ವೈವಿಧ್ಯಮಯ ಶಿಕ್ಷಣ ಸಂಸ್ಥೆಗಳನ್ನು ಪ್ರಧಾನವಾಗಿ ಗ್ರಾಮೀಣ ಪ್ರದೇಶಗಳಲ್ಲಿ ನಡೆಸಿಕೊಂಡು ಬರುತ್ತಿರುವುದು ಶ್ರೀ ದೇಗುಲಮಠದ ಹೆಗ್ಗಳಿಕೆಯಾಗಿದೆ. ಈ ವಿದ್ಯಾಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಸಹಸ್ರಾರು ಬಡವಿದ್ಯಾರ್ಥಿಗಳಿಗೆ ಉಚಿತ ಊಟ ಮತ್ತು ವಸತಿ ಸೌಕರ್ಯವನ್ನು ನೀಡಲಾಗುತ್ತಿದೆ. ಶ್ರೀಮಠದಲ್ಲಿ ವ್ಯಾಸಂಗ ಮಾಡಿರುವವರಲ್ಲಿ ಹಲವಾರು ಮಂದಿ ರಾಜ್ಯ, ರಾಷ್ಟ್ರ ಹಾಗೂ ವಿಶ್ವದ ವಿವಿಧ ಭಾಗಗಳಲ್ಲಿ ಉನ್ನತ ಪದವಿಗಳನ್ನು ಹೊಂದಿರುವುದು ಹೆಮ್ಮೆಯ ಅಭಿಮಾನ ಸಂಗತಿಯಾಗಿದೆ.


ದೇಗುಲಮಠದ ಪರಮಪೂಜ್ಯರಾದ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳವರ ಕನ್ನಡ ನಾಡು-ನುಡಿ-ಸಂಸ್ಕೃತಿಗಳ ಬಗೆಗಿನ ಅಪಾರ ಅಭಿಮಾನದ ಒಂದು ಪ್ರಮುಖ ಸಂದರ್ಭವನ್ನು ಉಲ್ಲೇಖಿಸಲು ಇಚ್ಛಿಸುತ್ತೇನೆ. ನಾನು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷನಾಗಿದ್ದಾಗ ಅರವತ್ತೇಳನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಕನಕಪುರದಲ್ಲಿ ನಡೆಸಬೇಕೆಂದು ಒಂದೆಯೇ ತೀರ್ಮಾನವಾಗಿತ್ತು. ಸಮ್ಮೇಳನ ನಡೆಸಲು ಸೂಕ್ತವಾದ ಸ್ಥಳ ಪರಿಶೀಲನೆಗಾಗಿ ನಾನು ಪರಿಷತ್ತಿನ ಮತ್ತು ಸ್ವಾಗತ ಸಮಿತಿಯ ಪದಾಧಿಕಾರಿಗಳೊಂದಿಗೆ ಕನಕಪುರಕ್ಕೆ ಹೋಗಿ ಶ್ರೀ ದೇಗುಲಮಠದ ಪರಮಪೂಜ್ಯ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳವರನ್ನು ಕಂಡು ಸಮ್ಮೇಳನ ನಡೆಸಲು ಸೂಕ್ತ ಸ್ಥಳವನ್ನು ಸೂಚಿಸಬೇಕೆಂದು ವಿನಂತಿಸಿಕೊಂಡಾಗ ಶ್ರೀಗಳವರು "ಬಸವಾರಾಧ್ಯರೇ, ನಮ್ಮ ಮಠದ ಆವರಣದಲ್ಲೇ ಸಮ್ಮೇಳನವನ್ನು ಮಾಡಿ" ಎಂದು ಆಹ್ವಾನವನ್ನು ಕೊಟ್ಟರು. ಆಗ ನಾನು "ಬುದ್ಧೀ, ಸಹಸ್ರಾರು ಜನ ಭಾಗವಹಿಸಲಿರುವ ಸಮ್ಮೇಳನದಲ್ಲಿ ಶ್ರೀಮಠದ ಒಂದು ಗಿಡಗಂಟೆಯಾಗಲಿ, ಉದ್ಯಾನವಾಗಲಿ ಉಳಿಯುವುದಿಲ್ಲ. ಆದುದರಿಂದ ಸಮ್ಮೇಳನಕ್ಕೆ ಬೇರ ಸ್ಥಳವನ್ನು ಆರಿಸಿಕೊಳ್ಳುತ್ತೇವೆ. ಈ ಸಮ್ಮೇಳನಕ್ಕೆ ಬರುವ ಮಹಿಳಾ ಪ್ರತಿನಿಧಿಗಳಿಗೆ ಶ್ರೀಮಠದಲ್ಲಿ ಆಶ್ರಯ ಮಾಡಿಕೊಟ್ಟರೆ ತುಂಬ ಉಪಕಾರವಾಗುತ್ತದೆ" ಎಂದು ವಿನಂತಿಸಿಕೊಂಡಾಗ ಶ್ರೀಗಳವರು ಸಂತೋಷದಿಂದ ಒಪ್ಪಿಗೆಯನ್ನಿತ್ತರು. ಅಷ್ಟೇ ಅಲ್ಲ ಆ ಸಂದರ್ಭದಲ್ಲಿ ನಡೆದ ಚಿಣ್ಣರ ಮೇಳಕ್ಕೂ ಅವಕಾಶ ಮಾಡಿಕೊಟ್ಟರು. ಶ್ರೀಗಳವರ ಧಾರ್ಮಿಕ, ಸಾಹಿತ್ಯಕ, ಸಾಂಸ್ಕೃತಿಕ ಕಳಕಳಿಗೆ ಇದು ಜ್ವಲಂತ ನಿದರ್ಶನವಾಗಿದೆ.

ಪ್ರಸ್ತುತ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳವರ ಪಟ್ಟಾಧಿಕಾರದ ರಜತ ಮಹೋತ್ಸವ ಸಮಿತಿಯ ಸಭೆಯನ್ನು ೨೦೦೨ ನವೆಂಬರ್ ತಿಂಗಳಿನಲ್ಲಿ ಕರೆಯಲಾಗಿತ್ತು. ಈ ಶುಭಸಂದರ್ಭದಲ್ಲಿ ಶ್ರೀಗಳವರಿಗೆ ಒಂದು ಸ್ಮರಣ ಸಂಪುಟವನ್ನು ಸಮರ್ಪಿಸಬೇಕೆಂದು ಶ್ರೀಮಠದ ಕಿರಿಯ ಸ್ವಾಮಿಗಳವರಾದ ಪೂಜ್ಯ ಶ್ರೀ ಮುಮ್ಮಡಿ ಮಹಾಲಿಂಗ ಸ್ವಾಮಿಗಳವರು ಅಧ್ಯಕ್ಷರಾಗಿರುವ ಸಂಪಾದಕ ಸಮಿತಿಯು ತೀರ್ಮಾನಿಸಿ, ನನ್ನನ್ನು ಪ್ರಧಾನ ಸಂಪಾದಕನನ್ನಾಗಿಯೂ, ಶ್ರೀ ಟಿ.ಆರ್. ಮಹಾದೇವಯ್ಯ ಅವರನ್ನು ಸಂಪಾದಕರನ್ನಾಗಿಯೂ ಆಯ್ಕೆ ಮಾಡಿತು. ಸಮಿತಿಯ ಆದೇಶದಂತೆ ಶ್ರೀ ದೇಗುಲಮಠದ ಪರಂಪರೆ, ಇತಿವೃತ್ತಗಳು, ಕನಕಪುರದ ಪ್ರಾದೇಶಿಕ ಪರಿಸರ, ವೀರಶೈವ ಧರ್ಮ, ಸಾಹಿತ್ಯ, ಸಂಸ್ಕೃತಿ, ಸಾಮಾಜಿಕ, ಶೈಕ್ಷಣಿಕ ಕ್ಷೇತ್ರಗಳನ್ನು ಕುರಿತಂತೆ ಸುಮಾರು ನಲವತ್ತು ಲೇಖನಗಳನ್ನು ಈ ಸಂಪುಟದಲ್ಲಿ ಸಮಾವೇಶಗೊಳಿಸಲಾಗಿದೆ. ಈ ಎಲ್ಲ ಕ್ಷೇತ್ರಗಳಿಗೂ ಮೊದಲು ಶ್ರೀಮಠದ ಕೊಡುಗೆಯನ್ನು ಪ್ರಧಾನವಾಗಿ ಪ್ರಸ್ತಾಪಿಸಲಾಗಿದೆ. ನಾಡಿನ ಶ್ರೇಷ್ಠ ವಿದ್ವಾಂಸರು ನಮ್ಮ ಮನವಿಗೆ ಓಗೊಟ್ಟು ಈ ಸಂಪುಟಕ್ಕೆ ಮೌಲಿಕ ಲೇಖನಗಳನ್ನು ಬರೆದುಕೊಟ್ಟು ಉಪಕರಿಸಿದ್ದಾರೆ. ಶ್ರೀಮಠದ ಮೇಲಿನ ಅವರ ಅಸೀಮ ಭಕ್ತಿ, ಪ್ರೀತಿ ವಿಶ್ವಾಸಗಳು ಅಸದೃಶವಾದುವು. ಈ ವಿದ್ವನ್ಮಣಿಗಳಿಗೆಲ್ಲ ನಾನು ಶ್ರೀಮಠದ ವತಿಯಿಂದ ಅನಂತ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ಸಂಪುಟದ ಸಂಪಾದಕರಾದ ಶ್ರೀ ಟಿ.ಆರ್. ಮಹಾದೇವಯ್ಯನವರು ಲೇಖನಗಳ ಸಂಗ್ರಹದಿಂದ ಹಿಡಿದು ಅದು ಸರ್ವಾಂಗ ಸುಂದರವಾಗಿ ಹೊರಬರುವವರೆಗೆ ವಿಶೇಷವಾಗಿ ಶ್ರಮಿಸಿದ್ದಾರೆ. ಅವರ ಈ ನಿಷ್ಠೆ ಶ್ರದ್ಧೆ ಕಾರ್ಯತತ್ಪರತೆಗಳನ್ನು ನಾನು ವಿಶೇಷವಾಗಿ ಪರಿಗಣಿಸಿ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಅಂತೆಯೇ ಈ ಸಂಪುಟ ಸಮಿತಿಯ ಸದಸ್ಯರಿಗೂ ಕೃತಜ್ಞತೆಗಳು ಸಲ್ಲುತ್ತವೆ.

ದೇಗುಲಮಠದ ಈ ರಜತ ಮಹೋತ್ಸವ ಸಂದರ್ಭದ ಸ್ಮರಣ ಸಂಪುಟ 'ನಿರ್ವಾಣಶ್ರೀ'ಯ ಮುದ್ರಣವನ್ನು ಶ್ರೀಮಠದ ಮೇಲಿನ ಅಪಾರ ಭಕ್ತಿಶ್ರದ್ಧೆಗಳಿಂದ ಬೆಂಗಳೂರಿನ ಸ್ನೇಹಾ ಮುದ್ರಣಾಲಯದ ಒಡೆಯರಾದ ಡಾ. ಎಸ್. ವಿದ್ಯಾಶಂಕರ ಅವರು ಮನಮೆಚ್ಚುವಂತೆ ಅಚ್ಚುಮಾಡಿಕೊಟ್ಟಿದ್ದಾರೆ. ಶ್ರೀಮಠದ ಪರವಾಗಿ ಶ್ರೀಯುತರಿಗೆ ಅಭಿನಂದನೆಗಳನ್ನು ಸಮರ್ಪಿಸುತ್ತೇನೆ. ಈ ಮಹತ್ತರ ಕಾರ್ಯದಲ್ಲಿ ವಿಶೇಷ ಆಸಕ್ತಿ ತಳೆದ ಶ್ರೀ ವಿಶ್ವನಾಥಮೂರ್ತಿ ಅವರಿಗೂ ಮತ್ತು ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನೆರವಾದವರೆಲ್ಲರಿಗೂ ನಾನು ಅನಂತ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಕರ್ನಾಟಕದ ವೀರಶೈವ ಮಠಗಳ ಪರಂಪರೆಯಲ್ಲಿ ದೇಗುಲಮಠಕ್ಕೆ ತನ್ನದೇ ಆದ ವಿಶಿಷ್ಟ ಸ್ಥಾನವಿದೆ. ಪ್ರಾಚೀನ ಇತಿಹಾಸವುಳ್ಳ ಶ್ರೀಮಠವು ನಡೆದು ಬಂದ ದಾರಿ ಆದರ್ಶಪ್ರಾಯವಾಗಿದೆ, ಅನುಕರಣೀಯವಾಗಿದೆ, ಅನುಸರಣೀಯವಾಗಿದೆ. ಲಕ್ಷಾಂತರ ಭಕ್ತರ ಮನೋಮಂದಿರದಲ್ಲಿ, ಶ್ರೀಮಠದಲ್ಲಿ ನೆಲಸಿ ವ್ಯಾಸಂಗ ಮಾಡಿರುವ ಸಹಸ್ರಾರು ಮಂದಿ ವಿದ್ಯಾರ್ಥಿಗಳ ಚಿತ್ತಭಿತ್ತಿಯಲ್ಲಿ ಶಾಶ್ವತವಾದ ಭಕ್ತಿಭಾವನೆಗಳು ನೆಲೆಗೊಂಡಿವೆ. ಭಕ್ತಿ ಮುಕ್ತಿಯ ಆವಾಸಸ್ಥಾನವಾಗಿರುವ ದೇಗುಲಮಠ ನಿತ್ಯದಾಸೋಹದಿಂದ ಸಾಮಾಜಿಕ ಮತ್ತು ಶೈಕ್ಷಣಿಕ ಕಾರ್ಯಗಳಿಂದ ನಿರಂತರವಾಗಿ ಕಂಗೊಳಿಸುತ್ತಿರುವ ಮುಕ್ತಿಧಾಮವಾಗಿದೆ. ಶ್ರೀಮಠದ ಜ್ವಲಂತ ಪರಂಪರೆಯ ಪ್ರತೀಕವಾಗಿ ಲೋಕೋದ್ಧಾರ ಕಾರ್ಯ ಮಾಡುತ್ತಿರುವ ಪರಮಪೂಜ್ಯ ಶ್ರೀ ಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳವರ ಶ್ರೀಚರಣಗಳಿಗೆ ನಮಿಸಿ, ರಜತ ಮಹೋತ್ಸವದ ಸ್ಮರಣ ಸಂಪುಟ ನಿರ್ವಾಣಶ್ರೀಯ ಪ್ರಧಾನ ಸಂಪಾದಕರಾಗಿ ಸೇವೆಗೈವ ಸದವಕಾಶ ಪ್ರಾಪ್ತವಾದುದು ನನ್ನ ಪುಣ್ಯವೆಂದು ಭಾವಿಸಿ, ಇದಕ್ಕೆ ಕಾರಣೀಭೂತರಾದ ಎಲ್ಲ ಶ್ರೀಗಳವರಿಗೂ ನಮಿಸುತ್ತೇನೆ. "ನಿರ್ವಾಣಶ್ರೀ"ಯು ಪ್ರತಿಯೊಬ್ಬರ ಮನವನ್ನೂ ಮನೆಯನ್ನೂ ಸದಾ ತೊಳಗಿ ಬೆಳಗುತ್ತಿರಲಿ ಎಂದು ಹಾರೈಸುತ್ತೇನೆ.

ಎನ್. ಬಸವಾರಾಧ್ಯ
ಪ್ರಧಾನ ಸಂಪಾದಕ



ಗ್ರಂಥದಾನಿಗಳಾದ

ಶ್ರೀ ಹೆಚ್.ಬಿ. ಗುರುಮಲ್ಲಪ್ಪ ಹಾಗೂ ಶ್ರೀಮತಿ ಸಿ. ಮಂಜುಳಾ ಅವರು

ಶ್ರೀ ದೇಗುಲಮಠದ ಹಳೆಯ ವಿದ್ಯಾರ್ಥಿಗಳೂ, ಉದಾರಚರಿತರೂ ಆದ ಶ್ರೀ ಹೆಚ್.ಬಿ. ಗುರುಮಲ್ಲಪ್ಪನವರು ಮಳವಳ್ಳಿ ತಾ. ಹೆಬ್ಬಣಿ ಗ್ರಾಮದ ಶರಣದಂಪತಿಗಳಾದ ಹೆಚ್.ಎಸ್. ಭೋಗಪ್ಪ ಮತ್ತು ನಂಜಮ್ಮನವರಿಗೆ ೨೨.೫.೧೯೫೪ರ ರಂದು ಜನಿಸಿದರು. ಎಸ್.ಎಸ್.ಎಲ್.ಸಿ. ಪಾಸಾದ ನಂತರ ಕಾಲೇಜಿಗೆ ಸೇರಿದರು. ಆದರೆ ಓದು ಮುಂದುವರಿಸಲಾಗಲಿಲ್ಲ. ಕೆಲಸ ಹುಡುಕಿಕೊಂಡು ೧೯೭೦ರಲ್ಲಿ ಬೆಂಗಳೂರಿಗೆ ಬಂದರು. ಕೆಲಸ ದೊರಕದಿದ್ದಾಗ, ಧೃತಿಗೆಡದೆ ಸ್ವಂತ ವ್ಯವಹಾರ ಮಾಡಲು ನಿರ್ಧರಿಸಿ ನರಸಿಂಹರಾಜ ಕಾಲೋನಿಯ ಬಸವೇಶ್ವರ ವೇಸ್ಟ್ ಪೇಪರ್ ಮಾರ್ಟ್ ಆರಂಭಿಸಿದರು. ತನ್ನ ಕಾಲ ಮೇಲೆ ತಾನು ನಿಲ್ಲಬೇಕೆಂಬ ಛಲದಲ್ಲಿ ಮುನ್ನಡೆದರು. ೧೯೭೨ರಲ್ಲಿ ಬೆಂಗಳೂರಿನ ಲಕ್ಷ್ಮೀಪುರದ ಚನ್ನವೀರಯ್ಯನವರ ಸುಪುತ್ರಿ ಶ್ರೀಮತಿ ಸಿ. ಮಂಜುಳಾ ಅವರನ್ನು ಮದುವೆಯಾದರು. ಅವರದು ಆದರ್ಶದಾಂಪತ್ಯ, ಹಿತಮಿತ ಸಂಸಾರ ಆರತಿಗೊಬ್ಬ ಮಗಳು ಪೂಜಾ, ಕೀರ್ತಿಗೊಬ್ಬ ಮಗ ಕುಮಾರಸ್ವಾಮಿ ಇದ್ದಾರೆ.

ಶ್ರೀಯುತರು ಕಾಯಕಷ್ಟದ ದುಡಿಮೆಯಿಂದ, ಪ್ರಾಮಾಣಿಕ ವ್ಯವಹಾರಗಳಿಂದ ಉನ್ನತಿ ಸಾಧಿಸಿದ್ದಾರೆ. ಮಠಮಾನ್ಯಗಳೆಂದರೆ ಅವರಿಗೆ ಅಪಾರಭಕ್ತಿ, ದೀನದಲಿತರೆಂದರೆ ಕರುಣೆ, ಅಪಾರ ಸಾಮಾಜಿಕ ಕಳಕಳಿಯುಳ್ಳ ಅವರು ಎಲೆಮರೆಯ ಕಾಯಂತೆ ಉದಾರವಾಗಿ ದಾನಧರ್ಮ ಮಾಡುತ್ತಾ ಬಂದಿದ್ದಾರೆ. ಬಸವ ಸಂಗಮ, ಶರಣ ಸಾಹಿತ್ಯ ಪರಿಷತ್ತು ಮೊದಲಾದ ಅನೇಕ ಸಾಮಾಜಿಕ ಹಾಗೂ ಧಾರ್ಮಿಕ ಸಂಘಟನೆಗಳೊಡನೆ ನಿಕಟ ಸಂಪರ್ಕವನ್ನಿಟ್ಟುಕೊಂಡಿರುವ ಅವರು ಹಲವಂದದಲ್ಲಿ ಸೇವಾತತ್ಪರರಾಗಿದ್ದಾರೆ.

ತಮ್ಮ ಜನ್ಮಸ್ಥಳ ಹೆಬ್ಬಣಿಯಲ್ಲಿ ತಮ್ಮ ತಂದೆ-ತಾಯಿಗಳ ಹೆಸರಿನಲ್ಲಿ ಶ್ರೀ ನಿರ್ವಾಣೇಶ್ವರ ವಿರಕ್ತಮಠವನ್ನು ಸ್ಥಾಪಿಸಿ ಅದು ಸಾರೋದ್ಧಾರವಾಗಿ ನಡೆದುಕೊಂಡು ಹೋಗಲು ಸ್ಥಿರ ಹಾಗೂ ಚರ ಆಸ್ತಿಯನ್ನು ಬಿಟ್ಟಿದ್ದಾರೆ. ಅದು ಶ್ರೀದೇಗುಲಮಠದ ಶಾಖಾಮಠವಾಗಿ ಕಾರ್ಯನಿರ್ವಹಿಸುತ್ತಿದೆ. ಶ್ರೀಮಠಕ್ಕೆ ಸೇರಿದಂತೆ ವೃದ್ಧಾಶ್ರಮ, ಅನಾಥಾಲಯ, ಗೋಶಾಲೆ, ಪ್ರಾರ್ಥನಾ ಮಂದಿರಗಳನ್ನು ನಿರ್ಮಿಸುವ ಯೋಜನೆ ಹಾಕಿಕೊಂಡಿದ್ದಾರೆ. ಶ್ರೀ ಗುರುಮಲ್ಲಪ್ಪನವರು ಗೋದಾನ, ವಸ್ತ್ರದಾನ, ಭೂದಾನ, ಅನ್ನದಾನ, ಸುವರ್ಣದಾನಗಳೆಂಬ ಪಂಚದಾನಗಳನ್ನು ಮಾಡಿ ಪರಮದಾಸೋಹಿ ಎನಿಸಿಕೊಂಡಿದ್ದಾರೆ. ಇದೀಗ ಶ್ರೀದೇಗುಲ ಮಠದ ಪುಣ್ಯಮೂರ್ತಿ ಶ್ರೀ ನಿ.ಪ್ರ. ಮುಮ್ಮಡಿ ನಿರ್ವಾಣ ಸ್ವಾಮಿಗಳ ಪಟ್ಟಾಧಿಕಾರ ರಜತಮಹೋತ್ಸವದ ಸಂದರ್ಭದ **'ನಿರ್ವಾಣಶ್ರೀ'** ಅಭಿವಂದನ ಸಂಪುಟದ ಪ್ರಕಟಣೆಯ ಹೊಣೆ ಹೊತ್ತು ಗ್ರಂಥದಾನಿಗಳೂ, ಜ್ಞಾನದಾಸೋಹಿಗಳೂ ಆಗಿದ್ದಾರೆ. ಅವರಿಗೆ ಮತ್ತು ಅವರ ಕುಟುಂಬ ವರ್ಗದವರಿಗೆ ಶ್ರೀದೇಗುಲಮಠದ ಗುರುಪರಂಪರೆಯ ಕೃಪಾಶೀರ್ವಾದವಿರಲೆಂದು ಹಾರೈಸುತ್ತೇವೆ.

-ಸಂ

ಪರಿವಿಡಿ

ಭಾಗ-೧ : ಶ್ರೀಮಠ-ಶ್ರೀಗಳವರು

ಭಾಗ-೨ : ವೀರಶೈವ ಧರ್ಮ-ಸಾಹಿತ್ಯ-ಸಂಸ್ಕೃತಿ-ಕಲೆ

ಭಾಗ-೩ : ಶರಣರು-ವಚನ ವಾಙ್ಮಯ

ಭಾಗ-೪ : ಜಾನಪದ

ಭಾಗ-೫ : ಶಿಕ್ಷಣ

ಭಾಗ-೬ : ಸಂಕೀರ್ಣ



ಲಿಂ|| ಶ್ರೀ ಇಮ್ಮಡಿ ನಿರ್ವಾಣ ಮಹಾಸ್ವಾಮಿಗಳು



ಶ್ರೀ ಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳು

ಗುರು-ಶಿಷ್ಯ ಸಮಾಲೋಚನೆ



ಶ್ರೀ ಶ್ರೀ ಮುಮ್ಮಡಿ ಮಹಾಲಿಂಗ ಮಹಾಸ್ವಾಮಿಗಳು
ಶ್ರೀ ಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳು



ಲಿಂ|| ಶ್ರೀ ಮಹಲಿಂಗ ಮಹಾಸ್ವಾಮಿಗಳು



ಬಿ.ಎಸ್ಸಿ, ವಿದ್ಯಾರ್ಥಿಯಾಗಿದ್ದಾಗ
ಶ್ರೀ ಶ್ರೀ ಮುಮ್ಮಡಿ ನಿರ್ವಾಣ
ಮಹಾಸ್ವಾಮಿಗಳು




ಮರಿಯಾಲ ಮಠದ ಪಟ್ಟಾಧಿಕಾರದ
ನಂತರ ವೈರಾಗ್ಯಮೂರ್ತಿಗಳಾದ
ಶ್ರೀ ಶ್ರೀ ಮುಮ್ಮಡಿ
ನಿರ್ವಾಣ ಮಹಾಸ್ವಾಮಿಗಳು



ನೆಲ್ಲಿಗೆರೆ ಮಠದಲ್ಲಿದ್ದಾಗ
ಶ್ರೀ ಶ್ರೀ ಮುಮ್ಮಡಿ ನಿರ್ವಾಣ
ಮಹಾಸ್ವಾಮಿಗಳು

ಗುರು–ಶಿಷ್ಯರು



ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳು ಮತ್ತು ಶ್ರೀ ಇಮ್ಮಡಿ ಮಹಾಲಿಂಗ ಮಹಾಸ್ವಾಮಿಗಳು



ಮುಖ್ಯಮಂತ್ರಿ
ಜೆ.ಹೆಚ್. ಪಟೇಲ್
ಅವರಿಗೆ ಸನ್ಮಾನ



ಮೈಸೂರಿನ
ಶ್ರೀ ನಿರ್ವಾಣಸ್ವಾಮಿ
ಪ್ರೌಢಶಾಲೆಯ ಕಟ್ಟಡದ
ಶಂಕುಸ್ಥಾಪನೆಯ
ಸಮಾರಂಭದ
ಕಾರ್ಯಕ್ರಮವನ್ನು
ಶ್ರೀ ಎಂ.ವಿ. ರಾಜಶೇಖರನ್‌ರವರು
ಉದ್ಘಾಟಿಸುತ್ತಿರುವುದು



ಮುಖ್ಯಮಂತ್ರಿ
ಎಸ್.ಎಂ. ಕೃಷ್ಣ
ಅವರಿಗೆ ಸನ್ಮಾನ



ಮಾಜಿ ಪ್ರಧಾನಿ
ಶ್ರೀ ಎಚ್.ಡಿ. ದೇವೇಗೌಡ
ಅವರಿಗೆ
ಹಿರಿಯ ಶ್ರೀಗಳವರಿಂದ
ಸನ್ಮಾನ



ಮೈಸೂರಿನ
ಶ್ರೀ ನಿರ್ವಾಣಸ್ವಾಮಿ
ಪ್ರೌಢಶಾಲೆಯ ಕಟ್ಟಡದ
ಶಂಕುಸ್ಥಾಪನಾ
ಸಮಾರಂಭದಲ್ಲಿ
ಹಿರಿಯ ಶ್ರೀಗಳವರು
ಶ್ರೀ ಎಂ. ರಾಜಶೇಖರಮೂರ್ತಿ
ಅವರಿಗೆ ನೆನಪಿನ ಕಾಣಿಕೆ
ನೀಡುತ್ತಿರುವುದು



ಶ್ರೀಮಠದಲ್ಲಿ
ಆಯುಧಪೂಜೆಯ ದಿನ
ಹಿರಿಯ ಶ್ರೀಗಳವರಿಗೆ
ಶಮಿಪೂಜೆಯ ನಿಮಿತ್ತ
ಕಿರಿಯ ಶ್ರೀಗಳವರಿಂದ
ಭಕ್ತಿ ಸಮರ್ಪಣೆ



ಮಾನ್ಯಶ್ರೀ
ಡಿ.ಕೆ. ಶಿವಕುಮಾರ್
ಅವರಿಗೆ
ಉಭಯ ಶ್ರೀಗಳಿಂದ
ಆಶೀರ್ವಾದ



ಮಾನ್ಯಶ್ರೀ
ವಿ. ಸೋಮಣ್ಣ
ದಂಪತಿಗಳೊಡನೆ
ಕುಶಲ



ಸಿದ್ಧಗಂಗೆಯ
ಗುರುವಂದನಾ
ಮಹೋತ್ಸವದಂದು
ಪೂಜ್ಯರು
ಪಾಲ್ಗೊಂಡಿರುವುದು



ಗೃಹ ಸಚಿವ
ಮಲ್ಲಿಕಾರ್ಜುನ ಖರ್ಗೆ
ಅವರು ಪೂಜ್ಯರಿಗೆ
ಗೌರವ
ಸಲ್ಲಿಸುತ್ತಿರುವುದು



ಮಾನ್ಯಶ್ರೀ
ಪಿ.ಜಿ.ಆರ್. ಸಿಂಧ್ಯ
ಅವರಿಗೆ
ಉಭಯ ಶ್ರೀಗಳಿಂದ
ಆಶೀರ್ವಾದ



ಸಚಿವ
ಎಂ.ಪಿ. ಪ್ರಕಾಶ್
ಅವರಿಗೆ
ಶ್ರೀ ಶ್ರೀ ಮುಮ್ಮಡಿ
ನಿರ್ವಾಣ ಮಹಾಸ್ವಾಮಿಗಳು
ಆಶೀರ್ವದಿಸುತ್ತಿರುವುದು



ಹಿರಿಯ ಶ್ರೀಗಳೊಡನೆ
ಸಮಾಲೋಚಿಸುತ್ತಿರುವ
ಮೈಸೂರಿನ
ದತ್ತ ಪೀಠಾಧ್ಯಕ್ಷರಾದ
ಜಗದ್ಗುರು
ಗಣಪತಿ ಸಚ್ಚಿದಾನಂದ
ಸ್ವಾಮಿಗಳವರು



ಸಿದ್ಧಗಂಗೆಯ
ಪೂಜ್ಯರಿಗೆ
ದೇಗುಲಮಠದಿಂದ
ಭಕ್ತಿ ಸಮರ್ಪಣೆ



ಶ್ರೀ ಶ್ರೀ ಮುಮ್ಮಡಿ ನಿರ್ವಾಣ
ಮಹಾಸ್ವಾಮಿಗಳವರಿಗೆ
ಗೌರವಾರ್ಪಣೆ.
ಸಿದ್ಧಗಂಗೆಯ
ಕಿರಿಯ ಶ್ರೀಗಳು
ಹಾಗೂ
ಲಿಂ|| ಹೆಚ್ ನಾಗಪ್ಪನವರು



ನೂತನ
ಪ್ರೌಢಶಾಲಾ ಕಟ್ಟಡ



ಶ್ರೀಮಠದಲ್ಲಿ
ನೂತನವಾಗಿ
ನಿರ್ಮಿಸಲಾಗಿರುವ
ದಾಸೋಹ ಭವನದತ್ತ
ಸಾಗುತ್ತಿರುವ
ವಿದ್ಯಾರ್ಥಿ ಸಮೂಹ



ಶ್ರೀಮಠಕ್ಕೆ ಆಗಮಿಸಿದ
ಉಡುಪಿ ಪೇಜಾವರ ಮಠದ
ಶ್ರೀ ವಿಶ್ವೇಶ್ವರತೀರ್ಥ
ಸ್ವಾಮೀಜಿಯವರಿಗೆ
ಗೌರವಾರ್ಪಣೆ



ದಿ|| ಹೆಚ್. ನಾಗಪ್ಪನವರ
ಶಿವಗಣಾರಾಧನೆ
ನಿಮಿತ್ತ ಧಾರ್ಮಿಕ ಸಭೆ



ಲಕ್ಷದೀಪೋತ್ಸವ ಸಮಾರಂಭ
ಉಭಯ ಶ್ರೀಗಳೊಡನೆ
ಪಿ.ಜಿ.ಆರ್.ಸಿಂಧ್ಯ,
ಜಿ.ವಿ. ಅಯ್ಯರ್,
ಎಸ್.ಬಿ. ಮುದ್ದಪ್ಪ ಅವರು



ದೇವನೂರಿನ ಶ್ರೀಮನ್ನಿರಂಜನ
ಗುರುಮಲ್ಲೇಶ್ವರರ ಸಂಸ್ಮರಣ
ಶತಮಾನೋತ್ಸವದಲ್ಲಿ ನಡೆದ
ಮಠಾಧಿಪತಿಗಳ
ಸಮಾವೇಶವನ್ನು
ಹಿರಿಯ ಶ್ರೀಗಳು
ಉದ್ಘಾಟಿಸುತ್ತಿರುವುದು



ಅಖಿಲ ಭಾರತ
ವೀರಶೈವ ಮಹಾಸಭೆಯ
ಕಾರ್ಯಕ್ರಮದಲ್ಲಿ
ಸಿದ್ಧಗಂಗೆಯ ಪೂಜ್ಯರು,
ಬೇಲಿಮಠದ ಪೂಜ್ಯರು,
ಶಿವಗಂಗೆ ಮೇಲಣಗವಿಮಠದ
ಪೂಜ್ಯರು,
ಭೀಮಣ್ಣ ಖಂಡ್ರೆ,
ಚಂದ್ರಕಾಂತ ಬೆಲ್ಲದ ಅವರು



ಪೂಜ್ಯ ಸಿದ್ಧಗಂಗಾ ಶ್ರೀಗಳು,
ಹುಬ್ಬಳ್ಳಿ ಮೂರುಸಾವಿರ
ಮಠದ ಜಗದ್ಗುರುಗಳೊಡನೆ
ಶ್ರೀ ಶ್ರೀ ಮುಮ್ಮಡಿ
ನಿರ್ವಾಣ ಮಹಾಸ್ವಾಮಿಗಳು



ಶ್ರೀ ನಿರ್ವಾಣಸ್ವಾಮಿ
ಪ್ರೌಢಶಾಲಾ ಕಟ್ಟಡದ
ಶಂಕುಸ್ಥಾಪನಾ
ಮಹೋತ್ಸವ



ಶ್ರೀಗಳೊಡನೆ
ಕಾಯಕನಿರತ
ವಿದ್ಯಾರ್ಥಿಗಳು



ಕಣದಲ್ಲಿ
ವಿದ್ಯಾರ್ಥಿಗಳೊಡನೆ
ಶ್ರೀಗಳು



ದಾಸೋಹ :
ವಿದ್ಯಾರ್ಥಿಗಳಿಗೆ
ಹಿರಿಯ ಶ್ರೀಗಳು
ಆಹಾರ
ಉಣಬಡಿಸುತ್ತಿರುವುದು



ಶ್ರೀಮಹಲಿಂಗೇಶ್ವರ
ಕೈಗಾರಿಕಾ ಸಂಸ್ಥೆಯಲ್ಲಿ
ಯಂತ್ರದ ಉದ್ಘಾಟನೆ



ಕನ್ನಡ ಸಾಹಿತ್ಯ ಪರಿಷತ್ತಿನ
ಅಧ್ಯಕ್ಷರಾದ
ಶ್ರೀ ಎನ್. ಬಸವಾರಾಧ್ಯರಿಂದ
ಉದ್ಘಾಟನೆ
ಉಭಯ ಶ್ರೀಗಳು,
ಪಿ.ಜಿ.ಆರ್. ಸಿಂಧ್ಯ ಹಾಗೂ
ಗೋವಿಂದೇಗೌಡರು



ಪ್ರಕೃತಿಯ
ಮಡಿಲಲ್ಲಿ
ದೇಗುಲ ಸಿರಿ

ಭಾಗ-೧

ಶ್ರೀಮಠ-ಶ್ರೀಗಳವರು

ಶ್ರೀ ದೇಗುಲಮಠ

ಸಂಕ್ಷಿಪ್ತ ಇತಿಹಾಸ ಮತ್ತು ಪರಂಪರೆ

✍ ಎನ್. ಮಹಾದೇವಪ್ಪ

ಕನಕಪುರವು ಕರ್ನಾಟಕದ ಹೃದಯದಂತಿರುವ ಪಟ್ಟಣ. ಬೆಂಗಳೂರು ನಗರದಿಂದ ನೈರುತ್ಯಕ್ಕೆ ೫೬ ಕಿ.ಮೀ.ಗಳ ಅಂತರದಲ್ಲಿ ಭಾರತದ ಅತ್ಯಂತ ದೊಡ್ಡ ಲೋಕಸಭಾಕ್ಷೇತ್ರ ಹಾಗೂ ಕರ್ನಾಟಕದ ಅತ್ಯಂತ ಎರಡನೆಯ ದೊಡ್ಡ ತಾಲ್ಲೂಕೆಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಅದೇ ಹೆಸರಿನ ತಾಲ್ಲೂಕು ಕೇಂದ್ರವಾಗಿದೆ. ಪಟ್ಟಣದ ಉತ್ತರ-ಪೂರ್ವದಿಕ್ಕುಗಳಲ್ಲಿ ದಕ್ಷಿಣಾಭಿಮುಖವಾಗಿ ಹರಿದು ಹೋಗುವ ಅರ್ಕಾವತಿ ನದಿಯು ೩೦ ಕಿ.ಮೀ.ಗಳ ದೂರದಲ್ಲಿ ಕಾವೇರಿ ನದಿಯೊಡನೆ ಸಂಗಮವಾಗಿ, ೨ ಕಿ.ಮೀ. ದೂರ ಸಾಗಿ, 'ಮೇಕೆದಾಟು' ಎಂಬ ಸುಂದರ, ಅದ್ಭುತ ಪ್ರೇಕ್ಷಣೀಯ ಸ್ಥಳ ನಿರ್ಮಾಣವಾಗಿದೆ. ವಿಶಾಲವಾದ ಕನಕಪುರ ತಾಲ್ಲೂಕು ಬೆಟ್ಟ-ಗುಡ್ಡಗಳ ದಟ್ಟ ಅರಣ್ಯಗಳಿಂದ ಕೂಡಿದೆ. ಕೃಷಿಯೇ ಪ್ರಧಾನ ಕಸುಬಾಗಿದೆ. ಇತ್ತೀಚೆಗೆ ಇಲ್ಲಿನ ಉತ್ಕೃಷ್ಟ ಗ್ರಾನೈಟ್ ಜಗತ್ತಿನ ಗಮನ ಸೆಳೆದಿದೆ.

ಇಂದಿನ 'ಕನಕಪುರ' ಎಂಬ ಹೆಸರು ಈ ಊರಿಗೆ ಅನ್ವರ್ಥಕವೆನಿಸುವಂತಿದೆ. ಹಿಂದೆ ಈ ಊರಿಗೆ ಬೇರೆ ಬೇರೆ ಹೆಸರುಗಳಿದ್ದುವೆಂದು ತಾಲ್ಲೂಕಿನ ಬೇರೆ ಬೇರೆ ಭಾಗಗಳಲ್ಲಿ ದೊರೆತಿರುವ ಬೇರೆ ಬೇರೆ ಕಾಲದ ಶಾಸನಗಳಿಂದ ತಿಳಿದು ಬರುತ್ತದೆ. ಈ ಊರಿನ ಬಹಳ ಹಿಂದಿನ ಹೆಸರು 'ಕಾಣಿಕಾರನಹಳ್ಳಿ' ಎಂಬುದಾಗಿತ್ತೆಂದೂ ಹೈದರ್‌ಆಲಿ ಮತ್ತು ಆತನ ಮಗ ಟಿಪ್ಪುಸುಲ್ತಾನನ ಕಾಲದಿಂದ 'ಕಾನ್‌ಕಾನ್‌ಹಳ್ಳಿ' ಎಂಬುದಾಗಿ ಕರೆಯಲ್ಪಡುತ್ತಿದ್ದು ಸ್ವಾತಂತ್ರ್ಯಾನಂತರ ೧೯೪೯ ರಲ್ಲಿ ಪ್ರಜಾಸರ್ಕಾರ 'ಕನಕಪುರ' ಎಂಬುದಾಗಿ ನಾಮಕರಣ ಮಾಡಿತೆಂದೂ ತಿಳಿದುಬರುತ್ತದೆ. 'ಕಾಣಿ' ಎಂದರೆ ಹೊಲ-ಗದ್ದೆ-ಆಸ್ತಿ ಎಂಬ ಅರ್ಥವಿದ್ದು 'ಕಾಣಿಕಾರ' ಎಂದರೆ ಆಸ್ತಿವಂತ, ಭೂಮಾಲೀಕ ಎಂಬುದಾಗಿ ಅರ್ಥೈಸುತ್ತಾರೆ. ಆದರೆ 'ಕಾಣಿ' ಎಂದರೆ 'ಒಂದು ಚಿಕ್ಕ ನಾಣ್ಯ' ಎಂಬ ಅರ್ಥವೂ ಇದ್ದು, 'ಕಾಣಿಕಾರ' ಎಂದರೆ ಹಣವಂತ, ಲೇವಾದೇವಿಗಾರ ಎಂಬುದಾಗಿಯೂ ಅರ್ಥೈಸುತ್ತಾರೆ. ಆದರೆ ತಾಲ್ಲೂಕಿನಲ್ಲಿ ಅಲ್ಲಲ್ಲಿ ನಿರ್ಮಾಣವಾಗಿರುವ 'ದೊಡ್ಡಿ'ಗಳನ್ನು ಗಮನಿಸಿದರೆ 'ಭೂಮಾಲೀಕ'ನೆಂಬುದೇ ವಿಹಿತವೆನಿಸುತ್ತದೆ. ಹೈದರಾಲಿಯ ಕಾಲದಿಂದ ಈಚೆಗೆ ಕಾನ್‌ಕಾನ್‌ಹಳ್ಳಿ ಎಂಬ ಹೆಸರಿನಿಂದ ಕರೆಯಲ್ಪಡುವ ಈ ಊರು ಹೊಸ ತುರ್ಕಿಭಾಷೆಯ 'ಖಾನ್'ಶಬ್ದವು ಹಳೆಯ ತುರ್ಕಿಭಾಷೆಯಲ್ಲಿ 'ಕಾನ್' ಎಂಬುದಾಗಿತ್ತು. 'ಕಾನ್' ಶಬ್ದವು ವಿಕಾರ ಹೊಂದಿ 'ಕಾನ' ಎಂಬುದಾಗಿರಬಹುದೆಂದು 'ಕಾನ್' ಶಬ್ದವು ಪೂರ್ವದ್ರಾವಿಡದ 'ಕೋನ್' ಅಥವಾ 'ಕೋ' ಎಂಬ 'ನಾಯಕ' ಅಥವಾ 'ದೇವರು' ಎಂಬ ಅರ್ಥ ಕೊಡುವ ಶಬ್ದಗಳಿಂದ ಮೂಡಿಬಂದಿರಬಹುದೆಂದೂ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. 'ಕಾನ್' ಎಂದರೆ 'ಕಾಡು' ಎಂಬ ಅರ್ಥವೂ ಇರುವುದರಿಂದ ಕಾಡುಗಳಿಂದ ಕೂಡಿದ ಹಳ್ಳಿ 'ಕಾನ್‌ಕಾನ್‌ಹಳ್ಳಿ' ಏಕಾಗಿರಬಾರದೆಂದೂ ಕೆಲವರು ಅಭಿಪ್ರಾಯ ಪಡುತ್ತಾರೆ. ಹೈದರ್-ಟಿಪ್ಪು ಕಾಲದಲ್ಲಿ ಈ ಊರು ಪ್ರಮುಖ ಸೇನಾನೆಲೆಯಾಗಿದ್ದು ಬ್ರಿಟಿಷ್ ಸೈನ್ಯ ಈ ಮಾರ್ಗವಾಗಿ (೧೭೯೩-೧೭೯೯ರಲ್ಲಿ) ಶ್ರೀರಂಗಪಟ್ಟಣಕ್ಕೆ ಹಾದುಹೋಗುತ್ತಿದ್ದುದರಿಂದ ಅವರಿಗೆ ಅಡ್ಡಿಯುಂಟುಮಾಡುವ ದೃಷ್ಟಿಯಿಂದ ಟಿಪ್ಪುವು ಎರಡುಬಾರಿ ಕಾನಕಾನಹಳ್ಳಿಗೆ ಬೆಂಕಿ ಇಟ್ಟನೆಂದೂ ಹೇಳುತ್ತಾರೆ. ಈ ಭಾಗವು ರಾಮಾಯಣದಲ್ಲಿ ಉಕ್ತವಾಗಿರುವ ದಂಡಕಾರಣ್ಯದ ಒಂದು ಭಾಗವಾಗಿತ್ತೆಂದೂ ಸೀತಾದೇವಿ ಮೈದೊಳೆದ ಕಾವೇರಿ ನದಿ, ಶ್ರೀರಾಮ-ಲಕ್ಷ್ಮಣರು ಸಂಚರಿಸಿದ ಪೂರ್ವಾದ್ರಿ ಇವೆಲ್ಲಾ ಈ ಭಾಗದಲ್ಲಿಯೇ ಇರುವುದರಿಂದ ಈ ಮಾತಿಗೆ ಪುಷ್ಟಿ ದೊರೆಯುತ್ತದೆಂದೂ ಹೇಳುತ್ತಾರೆ. ಮಹಾಭಾರತದಲ್ಲೂ ಈ ಪ್ರದೇಶದ ಪ್ರಾಚೀನ ಚರಿತ್ರೆಗೆ ಸಂಬಂಧಿಸಿದ ಆಖ್ಯಾನವುಂಟೆಂದು ಹೇಳುತ್ತಾರೆ. ಈ ಪ್ರಾಂತ್ಯವನ್ನು

ರಾಜಕೀಯ ಏಳುಬೀಳುಗಳಿಗನುಗುಣವಾಗಿ ಗಂಗರು, ಚೋಳರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರು ಒಡೆಯರು, ಕಡೆಗೆ ಬ್ರಿಟಿಷರು ಆಳಿರುವರೆಂದು ತಿಳಿದುಬರುತ್ತದೆ. ಈ ಬೇರೆ ಬೇರೆ ಆಡಳಿತಗಳು ಈ ಪ್ರದೇಶದ ಧಾರ್ಮಿಕ, ಸಾಂಸ್ಕೃತಿಕ, ಇತಿಹಾಸದ ಮೇಲೂ ಪ್ರಭಾವ ಬೀರಿವೆ.

ರಾಷ್ಟ್ರದ ಸ್ವಾತಂತ್ರ್ಯ ಚಳುವಳಿಗೂ ಕಾನಕಾನಹಳ್ಳಿ ತನ್ನ ಕೊಡುಗೆಯನ್ನು ನೀಡಿದೆ. ರಾಷ್ಟ್ರಪಿತ ಗಾಂಧೀಜಿಯವರು ೧೯೨೭ ಮತ್ತು ೧೯೩೪ರಲ್ಲಿ ಇಲ್ಲಿಗೆ ಭೇಟಿ ನೀಡಿ ಜನರಲ್ಲಿ ಜಾಗೃತಿ ಮೂಡಿಸಿ, ಸ್ವಾತಂತ್ರಸೇನಾನಿಗಳನ್ನು ಹುರಿದುಂಬಿಸಿದ್ದಾರೆ.

ಸ್ವಾತಂತ್ರ್ಯಾನಂತರ ರಚಿತವಾದ ಪ್ರಜಾಸರ್ಕಾರದಲ್ಲಿ ಈ ತಾಲ್ಲೂಕಿಗೆ ದಕ್ಷರೂ, ದೂರದೃಷ್ಟಿಯುಳ್ಳವರೂ, ಪ್ರಾಮಾಣಿಕರೂ, ತ್ಯಾಗ ಸೇವಾಗುಣ ಸಂಪನ್ನರೂ ಆದವರ ನಾಯಕತ್ವ ದೊರಕಿದ್ದು ಬಹಳ ಹಿಂದುಳಿದಿದ್ದ ಈ ಪ್ರದೇಶವು ಇಂದು ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ಶೈಕ್ಷಣಿಕ, ಕೃಷಿ, ವಾಣಿಜ್ಯಾದಿ ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸುತ್ತಿದೆ. ಆದರೆ ನೀರಾವರಿ ಸೌಲಭ್ಯ ಕಡಿಮೆ ಇರುವುದರಿಂದ ಒಮ್ಮೊಮ್ಮೆ ರೈತರು ಮಳೆಯೊಡನೆ ಜೂಜಾಟವಾಡಬೇಕಾಗುತ್ತದೆ.

ಶ್ರೀ ದೇಗುಲಮಠದ ಸ್ಥಾಪನೆ-ಸ್ಥಳ, ಸನ್ನಿವೇಶ, ಹಿನ್ನೆಲೆ

ಕನಕಪುರ ತಾಲ್ಲೂಕು ಮಾತ್ರವಲ್ಲದೆ ರಾಜ್ಯದ ಬೇರೆ ಬೇರೆ ಭಾಗಗಳಿಂದಲೂ, ನೆರೆಯ ತಮಿಳುನಾಡಿನಿಂದಲೂ ಸಹ ವಿದ್ಯಾರ್ಜನೆಗಾಗಿ ಬರುತ್ತಿರುವ ಬಡಮಕ್ಕಳಿಗೆ ಉಚಿತ ಅಶನ, ವಸತಿ, ವಸನ, ಶಿಕ್ಷಣಗಳನ್ನು ಅರ್ಧಶತಮಾನಕ್ಕೂ ಹೆಚ್ಚಿನ ಅವಧಿಯಿಂದಲೂ ನೀಡುತ್ತಿರುವ, ದಾಸೋಹಕ್ಕೆ ತನ್ನನ್ನು ತಾನು ಸಮರ್ಪಿಸಿಕೊಂಡಿರುವ, ನ್ಯಾಯದಾನಕ್ಕೆ ಹೆಸರಾಗಿರುವ, ಧರ್ಮದ ದಾರಿಯನ್ನು ಹದಗೊಳಿಸಿ ಸಮಾನಾಂತರವಾಗಿ ಕರ್ಮಪಥವನ್ನೂ ಸೃಜಿಸಿ, ದಾರಿಕಾಣದವರ, ಮೋಕ್ಷಾರ್ಥಿಗಳ ಗುರಿ ಸಾಧನೆಯ ಮಾರ್ಗವನ್ನೂ ನಿರ್ಮಿಸಿ, ಎಲ್ಲರು ಮುದದಿಂದಲೇ ಮುಂದುವರಿವಂತೆ ನಡೆಸುತ್ತಾ, ನಾಡಿನ ಶೈಕ್ಷಣಿಕ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಧಾರ್ಮಿಕ ಕ್ಷೇತ್ರಕ್ಕೆ ತನ್ನ ಸುದೀರ್ಘ ದೀಪ್ತಿಯ ಮುದ್ರೆಯೊತ್ತಿರುವ ಮಹಮನೆ ಶ್ರೀ ದೇಗುಲಮಠವು. ಕನಕಪುರ ಪಟ್ಟಣದ ಉತ್ತರದ ದಿಡ್ಡಿಬಾಗಿಲಿನಿಂದ ಸುಮಾರು ಅರ್ಧ ಕಿ.ಮೀ. ಅಂತರದಲ್ಲಿ ಅರ್ಕಾವತಿ ನದಿಯ ಪಶ್ಚಿಮದಂಡೆಯಲ್ಲಿರುವ ದೊಡ್ಡ ಆಶ್ರಮವೇ ಶ್ರೀ ದೇಗುಲಮಠ.

ನಿತ್ಯಹಸುರಾದ, ಹಕ್ಕಿಗಳ ಇಂಚರದಿಂದ ಕರ್ಣಾನಂದಕರವಾದ, ಸತ್ಯವನ್ನು ಎತ್ತಿನಿಂತ ಶ್ರದ್ಧಾಳುವಿನಂತೆ ಫಲಭಾರದಿಂದ ತೂಗುತ್ತಾ ತೊನೆಯುತ್ತಾ ಗರಿಗೆದರಿ ಗಗನಕ್ಕೆ ಚಾಮರವಿಡಿದು ನಿಂತಿರುವ ನಾರಿಕೇಳಗಳ, ಮಿಡಿವರೆ ರಸಬಿಡುವ ಕಬ್ಬು, ರೇಷಿಮೆಯ ಹೊಳಪನ್ನು ಪತ್ರದಲ್ಲೇ ಬಿಂಬಿಸುವ ಉಪ್ಪುನೇರಿಳೆ, ಕಿರಾತವನಿತೆಯ ಜಡೆಗೆ ಹಚ್ಚಿದ ಜಡೆಬಿಲ್ಲೆಗಳಂತೆ ಗೋಚರಿಸುವ ಪನಸು, ಆಮ್ರ, ಹುಳಿ, ನೇರಳೆ, ದ್ರಾಕ್ಷಿ, ನಿಂಬೆ, ಸೀಬೆ, ಕದಳಿ ಮುಂತಾದ ಬಗೆಬಗೆಯ ಫಲವೃಕ್ಷ, ಗಿಡ-ಬಳ್ಳಿಗಳ, ಸುರಹೊನ್ನೆ, ಮೊಲ್ಲೆ, ಮಲ್ಲಿಗೆ, ಕಣಗಲೆ, ಶಿರೀಷ, ಪಾರಿಜಾತಾದಿ ಪುಷ್ಪಗಳು, ಬನ್ನಿ, ಲಕ್ಕಿ, ಬಿಲ್ವಾದಿ ಪತ್ರೆಗಳ, ದೇವಮಾತೃಕ, ನದೀಮಾತೃಕಗಳ ನೀರುಂಡು ಬೆಳೆದು ಬಾಗಿ ನಿಂತು ಹುಸಿಗಾಳಿಗೆ ಹಸಿರು ತೆರೆಗಳಂತೆ ಏರಿಳಿವ ಬತ್ತ, ರಾಗಿ, ಜೋಳಾದಿ ಪೈರುಪಚ್ಚೆಗಳಿಂದ ಕಂಗೊಳಿಸುವ ಗದ್ದೆ-ತೋಟಗಳ ಮಧ್ಯೆ, ಪುರದ ಹೆಮ್ಮೆಯಂತೆ, ಪುಣ್ಯದ ಗೊತ್ತಿನಂತೆ, ಸಾಧನೆಯ ಸಾಮ್ರಾಜ್ಯದಂತೆ, ಅರಿವಿನ ಆಗರದಂತೆ, ಭಕ್ತರ ಬೀಡಿನಂತೆ, ಬಡವರ ಬಂಧುವಿನಂತೆ, ಬಿದ್ದವರನುದ್ಧರಿಸುವಂತೆ, ಶರಣರಂತಃಕರಣ ಪರಿಮಳದಂತೆ, ಕಣ್ಣಿಗಂದವಾಗಿ, ಮನಕ್ಕೆ ನೆಮ್ಮದಿಯ ನೀಡುವ ನೆಲೆಯಾಗಿ ನಿಂತಿದೆ ಸುಕ್ಷೇತ್ರ ಶ್ರೀ ದೇಗುಲಮಠ. ಶ್ರೀ ಮಠದ ಭವ್ಯತೆಗೆ ಭಂಗ ತಾರದೆ ನವ್ಯತೆಯೂ ಅಳವಟ್ಟಿದೆ– ಹಳತು- ಹೊಸತರ ಸಂಗಮದಂತೆ. ಹಿರಿಯರ ತಪೋಬಲ ಕಿರಿಯರ ಓಜಸ್ಸನ್ನು ಪೋಷಿಸಿ ಬೆಳೆಸುತ್ತದೆ. ಧರ್ಮದ ಅಭಿವೃದ್ಧಿ, ಕಾಯಕ ಪ್ರೇಮ, ಸಹಬಾಳ್ವೆ,

ಅಂತರಂಗ, ಬಹಿರಂಗಗಳ ಸಮನ್ವಯ, ಅನ್ನಬ್ರಹ್ಮನೊಡನೆ ಸೆಣಸಾಟ, ಅಜ್ಞಾನ ರಕ್ಕಸನೊಡನೆ ಹೋರಾಟ, ಸಮಾಜ ಕಲ್ಯಾಣ ಸಾಧನೆಗಾಗಿ ಶ್ರೀಕ್ಷೇತ್ರ ನಿರಂತರವಾಗಿ ಕಾರ್ಯ ನಿರ್ವಹಿಸುತ್ತಿದೆ.

ಸಮಾಜದ ಸರ್ವವರ್ಗದ ಮಕ್ಕಳೂ ಸಮವಸ್ತ್ರ ಧರಿಸಿ, ಸಮಪ್ರಸಾದ ಭುಂಜಿಸಿ, ಸಮತೀರ್ಥ ಸವಿದು ಆಡುತ್ತಾ, ಹಾಡುತ್ತಾ, ಓದುತ್ತಾ, ಬರೆಯುತ್ತಾ, ಮಾನವ ಕುಸುಮಗಳಂತೆ ನಕ್ಕು ನಲಿವ ದೃಶ್ಯ ತಾಯಿಯ ಮೊಲೆಹಾಲನುಂಡು, ಹಸಿರುಹುಲ್ಲು ತಿನ್ನುವ, ತಿಳಿನೀರು ಕುಡಿದು ಸಂತಸದಿಂದ ಕುಣಿದಾಡುವ ಪ್ರಾಣಿಶಿಶುಗಳು; ಮರಿ ಕರುಗಳತ್ತ ದಿಟ್ಟಿಸಿ ನೋಡುತ್ತಾ ಹೂಂಕರಿಸುವ ತಾಯಿ ಪ್ರಾಣಿಗಳು, ದರ್ಪದಿಂದ ಗುಟರಿಡುವ ಗೂಳಿಗಳು, ಕೈಯಲ್ಲಿ ಗ್ರಂಥಗಳನ್ನಿಡಿದು ಭಸ್ಮಧಾರಿಗಳಾಗಿ, ರುದ್ರಾಕ್ಷಿ, ಕಾಷಾಯಧಾರಿಗಳಾಗಿ ಓಡಾಡುವ ವಟುಗಳು -ಈ ದೃಶ್ಯಗಳನ್ನು ಕಂಡಾಗ ಪ್ರಾಚೀನ ಕಾಲದ ಋಷ್ಯಾಶ್ರಮಗಳ ವರ್ಣನೆಯ ದೃಶ್ಯಗಳನ್ನು ಪ್ರತ್ಯಕ್ಷ ಕಂಡಂತಾಗುತ್ತದೆ.

ಹನ್ನೆರಡನೆಯ ಶತಮಾನ ಇಪ್ಪತ್ತೊಂದನೆಯ ಶತಮಾನವನ್ನು ಮೆಟ್ಟಿ ನಿಂತಿದೆ. ಅಂಕಿಗಳ ವಿಲೋಮದಿಂದಲ್ಲ. ಧರ್ಮದೀಪ್ತಿಯಿಂದ. ಕಾಲ, ದೇಶಗಳನ್ನು ಗೆದ್ದು, ಪ್ರಕೃತಿಯ ಸೃಷ್ಟಿಗೆ ಪ್ರತಿಸೃಷ್ಟಿ ಮಾಡಬಲ್ಲೆನೆಂದು ಬೀಗುತ್ತಾ ವಿಜ್ಞಾನ ತಂತ್ರಜ್ಞಾನಗಳ ಬುಟ್ಟಿಯಲ್ಲಿ ಮಥನಕಾಲದ ವಿಷವನ್ನು ತುಂಬಿಕೊಂಡು ಭಸ್ಮಾಸುರನಾಗಿ ನರ್ತಿಸುತ್ತಿರುವ ಮಾನವ ಇಂದು ತಾನು ಕಾಣಲಾರದೆ, ಪಡೆಯಲಾರದೆ, ಪಾಡುಪಡುತ್ತಿರುವುದು, ಶಾಂತಿನೆಮ್ಮದಿಗಳ ನಿರ್ಭೀತಿ ಬದುಕಿಗಾಗಿ. ಆದರೆ ಬಿಡಿಗಾಸಿನ ಖರ್ಚಿಲ್ಲದೆ, ಶಾಂತಿ-ನೆಮ್ಮದಿ-ಸಮಾನತೆಗಳನ್ನು ಪಡೆಯಬಹುದೆಂದು ಹಾದಿ ತೋರಿದವರು ಹನ್ನೆರಡನೇ ಶತಮಾನದ ಕರ್ನಾಟಕದ ಶಿವಶರಣರು.

ಭರತಖಂಡದ ಮೃತ್ತಿಕೆ ಪವಿತ್ರತರವಾದುದು. ಕರ್ನಾಟಕದ ಮೃತ್ತಿಕೆ ಪವಿತ್ರತಮವಾದುದು. ಅದಾವ ಪವಾಡವೋ ಕರ್ನಾಟಕ ಕ್ರಿ.ಶ.ಹನ್ನೆರಡನೆಯ ಶತಮಾನದಲ್ಲಿ ಬಸವಾದಿ ಪ್ರಮಥ ಪುಣ್ಯಪುರುಷರನ್ನು ಅಗಣಿತ ಪ್ರಮಾಣದಲ್ಲಿ ಬಿತ್ತಿ ಬೆಳೆಯಿತು. ಅಧ್ಯಾತ್ಮಕ್ಷೇತ್ರವನ್ನು ಸೂರೆಮಾಡಿತ್ತು. ಸಾಮಾನ್ಯರಂತೆ ಮೈದಳೆದು ಅಸಾಮಾನ್ಯರಾಗಿ ಬೆಳೆದು ನಿಂತ, ಕಗ್ಗತ್ತಲೊಡಲಿನಿಂದ ಸಿಡಿದ ಬೆಳಕಿನ ಪುತ್ಥಳಿಗಳಾಗಿ, ಜ್ಞಾನದ ಗಂಗೋತ್ರಿಗಳಾಗಿ, ಆಚಾರ-ವಿಚಾರಗಳ ಹರಿಕಾರರಾಗಿ, ಧರ್ಮ-ದರ್ಶನಗಳ ದಿಗ್ದರ್ಶಕರಾಗಿ, ಇಹ-ಪರಗಳ ಸಂಗಮವಾಗಿ, ಸರಳತೆ-ಸಜ್ಜನಿಕೆಗಳ ಸಾಕಾರಮೂರ್ತಿಗಳಾಗಿ, ತ್ಯಾಗ-ಶೀಲ, ಶಾಂತಿ-ಸಹನೆಗಳ ಪ್ರತೀಕಗಳಾಗಿ, ನಿರಾಡಂಬರ-ನಿರ್ಮಲ ಬದುಕಿನ ಸಂಚಾಲಕರಾಗಿ, ಜಾತಿ-ವಿಜಾತಿ ಎನ್ನದೆ ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ಗುರಿ ಹೊಂದಿ, ಆಶೆ-ಆಮಿಷಗಳಿಗೆ ಬಲಿಯಾಗದೆ ಸ್ತ್ರೀ-ಪುರುಷ, ಮೇಲು-ಕೀಳೆಂಬ ಭೇದವೆಣಿಸದೆ ಮರಣಕ್ಕೆ ಮಹಾನವಮಿಯ, ಮಾತಿಗೆ ಜೋತಿರ್ಲಿಂಗದ ಮನ್ನಣೆ ನೀಡಿ, ಬೇರಾಗಿ ಬೆಳಸಿ ದೇವದೇವನ ಅರಿವಿಗೆ ದೇಹ ದೇಗುಲದ ಕರದೊಳು ಇಷ್ಟಲಿಂಗದ ಕುರುಹ ಪ್ರತಿಷ್ಠಾಪಿಸಿ ದೃಷ್ಟಿಸಂಗಮದಿಂದ ಧ್ಯಾನ ವಿದ್ಯುತ್ತನ್ನು ಹಾಯಿಸಿ, ಅರಿವಿನ ಜ್ಯೋತಿಯ ಬೆಳಗಿಸಿದ ಮಹಾಮಹಿಮ ಶಿವಶರಣರ ಕಣಜ ಕರ್ನಾಟಕ. ಹಿಮಗಿರಿಯ ತವಸಿಗಳು ಏಕಾಂಗಿಗಳಾದರೆ ಇವರು ಸಮಾಜ ಜೀವಿಗಳು, ಸಕುಟುಂಬಿಗಳು, ವಿಶ್ವಪ್ರೇಮಿಗಳು. ಭಕ್ತಿಯಲ್ಲಿ, ನಿಸ್ವಾರ್ಥದಲ್ಲಿ, ಕಾಯಕ ಪ್ರೇಮಾನುಷ್ಠಾನದಲ್ಲಿ, ಸಮಾನತೆಯಲ್ಲಿ, ಇವರಲ್ಲಿ ಪರಸ್ಪರ ಗೆದ್ದವರಿಲ್ಲ, ಸೋತವರಿಲ್ಲ, ಶರಣು ಎಂದರೆ ಶರಣು ಶರಣಾರ್ಥಿ ಎಂಬ ಇವರನ್ನು ಗೆಲ್ಲಲು ಸಾಧ್ಯವೆ? ಇವರು ಉಟ್ಟು ಮೆರೆದವರಲ್ಲ, ತೊಟ್ಟು ತೊನೆದವರಲ್ಲ, ಉಂಡು ಉರುಳಾಡಿದವರಲ್ಲ, ಕಂಡು ಕರುಬಿದವರಲ್ಲ, ಅರಸಿ ಹಾತೊರೆದವರಲ್ಲ, ಗುದ್ದಾಡಿ ಗದ್ದಲಮಾಡಿದವರಲ್ಲ, ಸಂಚುಮಾಡಿ ಸಂಚಯಿಸಿದವರಲ್ಲ, ಹೊಂಚುಹಾಕಿ ವಂಚಿಸಿದವರಲ್ಲ. ಶರಣರು ಕೊಟ್ಟು ಕೆಟ್ಟೆವೆಂದು ಅಳಲಿದವರಲ್ಲ, ಮಾಡಿದೆವೆಂದು ಬೀಗಿದವರಲ್ಲ, 'ಮಾಡಿದೆನೆಂಬುದು ಮನದಲ್ಲಿ ಹೊಳೆದರೆ ಏಡಿಸಿ ಕಾಡಿತ್ತು ಶಿವನ ಡಂಗುರ'ವೆಂಬರಿವಿದ್ದವರು. ಅಂತರಂಗ-ಬಹಿರಂಗ ಶುದ್ಧಿಯ ರಾಜವೀಥಿಯಲ್ಲಿ ಕ್ರಮಿಸಿದವರು. 'ಸಾಸುವೆಯಷ್ಟು ಸುಖ ಬಯಸಿ ಸಾಗರದಷ್ಟು ದುಃಖಕ್ಕೆ ಒಳಗಾಗದವರು. ಭಾವೀ ಜನಾಂಗದ ಒಳಿತಿಗಾಗಿ ಫಲ, ಪುಷ್ಪ

ನೆರಳಿಗಾಗಿ 'ಅಂತರಂಗ ಸ್ಫುರಿತ ನೈಸರ್ಗಿಕ ಭಾವನೆಗಳ ಬಹುಕೋಟಿ ವೃಕ್ಷಗಳ ನೆಟ್ಟು ಬೆಳೆಸಿ ಹೋದವರು. ನೂರು ಮರ, ನೂರು ತೆರ ಫಲಭಾರ, ಸವಿ ಒಂದಕ್ಕೊಂದು ಅತಿಮಧುರ, ಅಷ್ಟಾವರಣ ನಿಷ್ಠಾಚರಣೆಗಳಿಂದ ಪಂಚಾಚಾರಗಳ ಪಾಲಿಸಿದವರು. ಕರ್ನಾಟಕದಲ್ಲಿ ಇಂತಹ ಶರಣರ ಹಿಂಡೇ ಜನಿಸಿ, ಬಾಳಿ, ಬೆಳಗಿ ಬೆಳಕಾಯಿತು. ಅವರು ಇಂದಿಲ್ಲ. ಅವರು ಅಂದು ಮಾತ್ರ ಸಂದವರಲ್ಲ. ಅವರು ಎಂದೆಂದೂ ಇದ್ದಾರೆ. ಅವರು ಲುಪ್ತಲೋಭಿಗಳು, ಗುಪ್ತ ಕರುಣಾಮಯಿಗಳು, ಪರ್ಯಾಪ್ತ ಶಿವಭಕ್ತರು, ತಪ್ತ ತೇಜಸ್ವಿಗಳು, ನಿಷ್ಠೆನೇಮದೊಳು ಅಧಿಕ ಶಕ್ತರು. ಒಳಗಣ್ಣು ತೆರೆದವರಿಗೆ ಬೆಳಕು ಪ್ರಜ್ವಲಿಸುತ್ತದೆ. ಒಳಗಿವಿಯಲ್ಲಿ ಧ್ವನಿ ಪ್ರತಿಧ್ವನಿಸುತ್ತದೆ. ಭಕ್ತಿಯ ನನೆ-ಕೊನೆಗಳನ್ನು ಹಸರಿಸಿ, ಮುಕ್ತಿಯ ಫಲಗಳನ್ನು ನೀಡಿರುವುದರ ಅರಿವಾಗುತ್ತದೆ.

ಇದು ಹನ್ನೆರಡನೇ ಶತಮಾನದಲ್ಲಿ ಕರ್ನಾಟಕದಲ್ಲಿ ಉದಯಿಸಿ, ಪ್ರಜ್ವಲಿಸಿ, ಪಸರಿಸಿದ ಸಮಷ್ಠಿಪ್ರಜ್ಞೆಯ ವಿಶ್ವವನ್ನಾಳುವ ಸಾಮರ್ಥ್ಯದ ಕರ್ನಾಟಕದ ಶಿವಶರಣ- ಶರಣೆಯರ ಚಿತ್ರ. ಅವರು ದೇವಲೋಕದ ಕಛೇರಿಯನ್ನು ಭೂಮಿಗೆ ಸ್ಥಳಾಂತರಿಸಿದ್ದರು. ಪಾಪ! ಅಲ್ಲಿದ್ದ ರಾಕ್ಷಸರು ಮಾರುವೇಷದಲ್ಲಿ ಇಲ್ಲಿಯೂ ಬರಬೇಕೆ! ಇಂದಿನಂತೆಯೇ ಅಂದೂ ಇದ್ದ ದುಷ್ಟರು ಬಸವ, ಅಲ್ಲಮ, ಚನ್ನಬಸವ, ಸಿದ್ಧರಾಮ, ಮಹಾದೇವಿ, ಮುಕ್ತಾಯಕ್ಕಗಳಂತಹ ಶರಣರು ಬೋಧಿಸಿದ ಧರ್ಮದ ಬೇರಿಗೆ ಬೆನ್ನೀರೆರೆದರು. ಸಮನ್ವಯದ ಸಮಾನತೆಯ ಸಂದೇಶ ಸಾರುತ್ತ ಸಾಗುತ್ತಿದ್ದ ಮಾರ್ಗಕ್ಕೆ ಮುಳ್ಳು ಹಾಕಿದರು. ಪರಿಣಾಮವಾಗಿ ಕಲ್ಯಾಣದ ಕ್ರಾಂತಿಯಾಗಿ ಶರಣಕುಲವೆಲ್ಲ ನಾಡಿನಾದ್ಯಂತ ಚದುರಿತು, ಹೊರನಾಡುಗಳತ್ತಲೂ ತೆರಳಿತು. ಚದುರಿಹೋದ ಶರಣರಲ್ಲಿ ಹಲವರು ತಮ್ಮ ತನುಸಂರಕ್ಷಣೆಯೊಡನೆ ಧರ್ಮಪ್ರಸಾರದ ಸಂಕಲ್ಪದಿಂದ ಪ್ರಸಾರಗ್ರಂಥಗಳನ್ನು ಸಂರಕ್ಷಿಸಿಕೊಂಡರು. ತಾವು ನಿಂತಲ್ಲೇ ಗೂಡು ಕಟ್ಟಿದರು. ನೆನಪಿದ್ದಷ್ಟು ಸಂದೇಶ ಸಾರಿದರು. ಇಂದು ಅಸಂಖ್ಯಾತ ಕೋಟಿ ಹಣ ವ್ಯಯಿಸಿದರೂ, ಶರಣರು ಬೋಧಿಸಿದ ತತ್ತ್ವ ಪಾಲಿಸದೆ, ಅವರ ನಡೆನುಡಿಗಳನ್ನು ಅನುಸರಿಸದೆ ಇದ್ದರೆ ಸಮಾಜವು ಸುಖ, ಶಾಂತಿ, ನೆಮ್ಮದಿಗಳನ್ನು ಕಾಣಲಾರದು ಎಂಬುದನ್ನು ನಾವಿಂದು ಕಾಣುತ್ತಿದ್ದೇವೆ.

ಹನ್ನೆರಡನೇ ಶತಮಾನದಲ್ಲಿ ಕಲ್ಯಾಣಪಟ್ಟಣದಲ್ಲಿ ಬಸವೇಶ್ವರರಿಂದ ಸ್ಥಾಪಿತವಾದ ಶೂನ್ಯಸಿಂಹಾಸನದ ಪ್ರಥಮ ಅಧಿಪತಿಗಳಾದ ಅಲ್ಲಮಪ್ರಭುಗಳ ಪರಂಪರೆಯಲ್ಲಿ ಬಂದ ಐದನೆಯ ಪಟ್ಟದ ಆದಿಗಣೇಶ್ವರರೆಂಬುವವರು ತಮ್ಮ ಗುರುಗಳಾದ ಆದಿಗಣನಾಥರ ಅನುಜ್ಞೆಯಂತೆ ಕೊಂಕಣದೇಶದ ಲವಣಸಮುದ್ರ ತೀರದ ಗೊಹೆ(ಗೋವ)ಯಲ್ಲಿ ಗೊಹೇಶ್ವರ ಲಿಂಗಾಲಯದಲ್ಲಿದ್ದು ಲಿಂಗಪೂಜಾ ಜಂಗಮದಾಸೋಹದಿಂದಿರುವ ಸಮಯದಲ್ಲಿ ಮ್ಲೇಚ್ಛರ ಅವಾಂತರ ಹೆಚ್ಚಿದುದರಿಂದ ಅವರು ಆ ಸ್ಥಳವನ್ನು ಬಿಟ್ಟು ದೇಶಸಂಚಾರ ಮಾಡುತ್ತಾ ತಲಕಾಡು ಕಾವೇರಿತೀರದ ಮಾಲಂಗಿ ಸಮೀಪದ ಪ್ರಭುದೇವರ ಬೆಟ್ಟಕ್ಕೆ ಬಂದು ನೆಲೆಸಿದರು.

ಅವರು ನಂತರ ಬಂದ ಅವರ ಶಿಷ್ಯರಾದ ಆರನೆಯ ಪಟ್ಟದ ನಿರ್ಮಾಯ ಗಣೇಶ್ವರರು, ಮಹಾಮಹಿಮರೂ, ವೀರ ವಿರಕ್ತರೂ ಆಗಿ ಅಲ್ಲಿಂದ ಹೊರಟು ಅನೇಕ ಪವಾಡಗಳನ್ನು ಮೆರೆದರು, ಅವರೇ ಮಲೆಮಹದೇಶ್ವರರು. ಅವರು ಅದೇ ಹೆಸರಿನ ಮೇಲೆ ಮಲೆಮಹದೇಶ್ವರ ಬೆಟ್ಟದಲ್ಲಿ ಶಿವಯೋಗ ಸಮಾಧಿಸ್ಥರಾದರು. ಆ ಪರಂಪರೆಯ ಏಳನೆಯ ಪಟ್ಟದ ನಿರಂಜನ ಗಣೇಶ್ವರರು ಹಳೇಬೀಡಿನ ವಿಷ್ಣುವರ್ಧನ ಬಲ್ಲಾಳನ ಕಾಲದವರೆಂದೂ, ಅವರು ಹರಿಹರ ರಾಘವಾಂಕ, ಕೆರೆಯ ಪದ್ಮರಸ, ಸೋಸಲೆಯ ಭೈರವರಾಜ, ಜಕ್ಕಲೂರ ನುಲಿಯ ಕಲ್ಲಪ್ಪ ಮುಂತಾದ ಮಹಿಮರಿಗೆ ದರ್ಶನಾಶೀರ್ವಾದವನ್ನಿತ್ತರೆಂದೂ, ನಿರಂಜನವಂಶರತ್ನಾಕರದಿಂದ ತಿಳಿದುಬರುತ್ತದೆ. ಆ ನಿರಂಜನಸ್ವಾಮಿಗಳೇ ತಮ್ಮ ಗಣಸಮೂಹದಲ್ಲಿದ್ದ ನೂರಾಒಂದು ವಿರಕ್ತರೊಡನೆ ದೇಶಸಂಚಾರ ಮಾಡುತ್ತ ಶಿವಮತವನ್ನು ಉದ್ಧಾರ ಮಾಡುತ್ತಾ ಭಕ್ತಮಹೇಶ್ವರರಿಗೆ ಷಟ್‌ಸ್ಥಲ ಜ್ಞಾನೋಪದೇಶ

ಮಾಡುತ್ತಾ ಹೊರಟು ಘೋರಾರಣ್ಯದಿಂದ ಕೂಡಿದ ಪೂರ್ವಘಟ್ಟದ ಪರ್ವತ ಪ್ರದೇಶದಲ್ಲಿ ನೆಲಸಿದರು. ಅವರ ಶಿಷ್ಯರಾದ ಜ್ಞಾನಾನಂದ ಸ್ವಾಮಿಗಳು ಈ ಪ್ರದೇಶಗಳಲ್ಲಿಯೇ ಇದ್ದು ಬಯಲಾದರು. ಅನಂತರ ಅವರ ಶಿಷ್ಯರಾದ ಆತ್ಮಗಣನಾಥರು ತಮ್ಮ ಶಿಷ್ಯ ಸಮೂಹದೊಡನೆ ಕಂಚಿ, ಕಾಳಹಸ್ತಿ, ತಿರುವಣ್ಣಾಮಲೈ, ಚಿದಂಬರ, ಕುಂಭಕೋಣ ಮುಂತಾದ ಚೋಳದೇಶದ ಪ್ರದೇಶಗಳಲ್ಲಿ ಸಂಚರಿಸಿ ಮಠಗಳನ್ನು ಸ್ಥಾಪಿಸಿದರೆಂದು ತಿಳಿದುಬರುತ್ತದೆ.

ಮೇಲೆ ತಿಳಿಸಿದ ನೂರೊಂದು ವಿರಕ್ತರಲ್ಲಿ ಕೆಲವರು ಕಾವೇರಿ ಅರ್ಕಾವತೀ ನದಿಗಳ ತೀರದ ಅರಣ್ಯಗಳಲ್ಲಿ ನಲಸಿ ಷಟ್‌ಸ್ಥಲ ಜ್ಞಾನೋಪದೇಶ, ಶಿವಯೋಗ ನಿಷ್ಠೆಯಲ್ಲಿ ನಿರತರಾದರು. ಇಂತಹ ಕ್ಷೇತ್ರಗಳಲ್ಲಿ ಕಾವೇರಿ ಅರ್ಕಾವತಿ ಸಂಗಮದ ಹತ್ತಿರದ ಮಡಿವಾಳ ಮತ್ತು ಅರ್ಕಾವತಿ ಬಲದಂಡೆಯ ಕಾಣಿಕಾರನಹಳ್ಳಿ (ಕನಕಪುರ)ಗಳು ಪ್ರಖ್ಯಾತವಾದುವು. ಪ್ರಭುದೇವ ಪರಂಪರೆಯವರಾದ ನಿರಂಜನಸ್ವಾಮಿಗಳ ಗಣಸಮೂಹದ ನೂರೊಂದು ವಿರಕ್ತಮೂರ್ತಿಗಳಲ್ಲಿ ಒಬ್ಬರಾದ ಆದ್ಯಶ್ರೀ ನಿರ್ವಾಣ ಮಹಾಶಿವಯೋಗಿಗಳು ನೆಲೆಸಿದ ಅರ್ಕಾವತಿ ತೀರದ ಕಾಣಿಕಾರನಹಳ್ಳಿಯ ಕ್ಷೇತ್ರವು ಆ ಕಾಲಕ್ಕೆ ಬೆಟ್ಟಗುಡ್ಡಗಳ ದಟ್ಟ ಅರಣ್ಯ ಪ್ರದೇಶದ ಸನಿಹದಲ್ಲಿದ್ದು, ಮೃಗ ಪಕ್ಷಿ ಸರೀಸೃಪಾದಿ ನಾನಾ ಜಾತಿಯ ಜೀವಿಗಳಿಗೂ ಆವಾಸಸ್ಥಾನವಾಗಿತ್ತೆಂದೂ, ಅಧ್ಯಾತ್ಮಸಾಧನೆಗೈಯಲಿಚ್ಛಿಸುವ ಮುಮುಕ್ಷುಗಳಿಗೆ ಅನುಕೂಲಕರವಾದ ಸ್ಥಳವಾಗಿದ್ದು, ಸಾಧಕರು ನೆಲೆಯೂರತೊಡಗಿದರು. ಆದ್ಯ ನಿರ್ವಾಣಮಹಾಸ್ವಾಮಿಗಳವರು, ಮೂಡಲು ಬಿಳಿಕಲ್ಲು ಬೆಟ್ಟ, ತೆಂಕಲು ಸಿದ್ದೇಶ್ವರ ಬೆಟ್ಟ, ಪಡುವಲು ಬಾಣಂತಿಮಾರಮ್ಮನ ಬೆಟ್ಟ, ಬಡಗಲು ಗಂಗಾಧರೇಶ್ವರನ ಬೆಟ್ಟಗಳ ಆಹ್ಲಾದದ ಅವಧಿಸ್ಥಾನವೆನಿಸುವ ಆ ನಾಲ್ಕುಬೆಟ್ಟಗಳ ನಡುವಣ ಅರ್ಕಾವತಿಯ ಬಲದಂಡೆಯ ಸಮತಲ ಪ್ರದೇಶದಲ್ಲಿ ನೆಲೆಸಿದರು. ಇಂದು ಅದು ಪಾವನ ಕ್ಷೇತ್ರ. ಮಾದೇಶ್ವರರ ಮಾಮನೆಯಾಗಿ ನಿಂತ ಶಿವಯೋಗ ಭೂಮಿ. ಈ ಭೂಮಿ 'ಮಠಚ್ಛಾತ್ರಾದಿ ನಿಲಯಂ' ಎಂಬುಕ್ತಿಯನ್ನು ಸಾರ್ಥಕವೆನಿಸಿ 'ಮಠ'ವೆನಿಸಿತು. ಶ್ರೀ ಮಠದ ಸಂಸ್ಥಾಪಕರಾದ ಆದ್ಯ ಶ್ರೀ ನಿರ್ವಾಣ ಶಿವಯೋಗಿಗಳವರು ಮಹಾನ್ ತಪಸ್ವಿಗಳು, ಮಹಿಮಾ ಪುರುಷರು ಆಗಿದ್ದು ನಾಡಿನ ಜನತೆ ಅವರನ್ನು ಸಾಕ್ಷಾತ್ ದೇವರೆಂದೇ ಭಾವಿಸಿ ಗೌರವಿಸುತ್ತಿದ್ದುದರಿಂದ ಶ್ರೀಮಠ ಶ್ರೀ ನಿರ್ವಾಣದೇವರ ಮಠವೆಂದೇ ಪ್ರಸಿದ್ಧಿ ಪಡೆಯಿತು. ಕಾಲಾಂತರದಲ್ಲಿ ಶ್ರೀ ಮಠದ ಕೀರ್ತಿ ಹಬ್ಬಿ ಹಸರಿಸಿದಂತೆ ಭಕ್ತಸಮೂಹದ ಆಗಮನ ನಾನಾಕಡೆಗಳಿಂದ ಶ್ರೀಗಳವರ ದರ್ಶನಾಶೀರ್ವಾದಗಳಿಗಾಗಿ ಧಾವಿಸಿ ಬರುತ್ತಿದ್ದುದರಿಂದ ಕಾಲಾಂತರದಲ್ಲಿ 'ದೇಗುಲ ಮಠ' ಎಂಬ ಹೆಸರಿನಿಂದ ಪ್ರಸಿದ್ಧವಾಗಿ ಈ ಮುಂದಿನ ಮಹಾಪುರುಷರಿಗೆ ಅನುಕ್ರಮವಾಗಿ ನೆಲೆಯಾಯಿತು; ಸಾಧನಾ ಕ್ಷೇತ್ರವಾಯಿತು.

೧. ಆದ್ಯ ಶ್ರೀ ನಿರ್ವಾಣ ಮಹಾಶಿವಯೋಗಿಗಳು

೨. ಶ್ರೀ ದೇವಲಿಂಗ ಮಹಾಸ್ವಾಮಿಗಳು

೩. ಶ್ರೀ ನಂಜಯ್ಯ ಮಹಾಸ್ವಾಮಿಗಳು

೪. ಶ್ರೀ ನಾಗಲಿಂಗ ಮಹಾಸ್ವಾಮಿಗಳು

೫. ಶ್ರೀ ಮಹಾಲಿಂಗ ಮಹಾಸ್ವಾಮಿಗಳು

೬. ಶ್ರೀ ಹುಚ್ಚಪ್ಪ ಮಹಾಶಿವಯೋಗಿಗಳು

೭. ಶ್ರೀ ಮರುಳಸಿದ್ಧ ಮಹಾಸ್ವಾಮಿಗಳು

೮. ಶ್ರೀ ಚನ್ನಬಸವ ಮಹಾಸ್ವಾಮಿಗಳು

೯. ಇಮ್ಮಡಿ ಶ್ರೀ ಮರುಳಸಿದ್ಧ ಮಹಾಸ್ವಾಮಿಗಳು

೧೦. ಇಮ್ಮಡಿ ಶ್ರೀ ನಿರ್ವಾಣ ಮಹಾಶಿವಯೋಗಿಗಳು

೧೧. ಇಮ್ಮಡಿ ಶ್ರೀ ಹುಚ್ಚಪ್ಪ ಮಹಾಸ್ವಾಮಿಗಳು

೧೨. ಇಮ್ಮಡಿ ಶ್ರೀ ಮಹಾಲಿಂಗಮಹಾಸ್ವಾಮಿಗಳು

೧೩. ಮುಮ್ಮಡಿ ಶ್ರೀ ನಿರ್ವಾಣ ಮಹಾಸ್ವಾಮಿಗಳು

೧೪. ಮುಮ್ಮಡಿ ಶ್ರೀ ಮಹಾಲಿಂಗಮಹಾಸ್ವಾಮಿಗಳು

ಆದ್ಯ ಶ್ರೀ ನಿರ್ವಾಣ ಮಹಾಶಿವಯೋಗಿಗಳು

ಸ್ವತಸ್ಸಿದ್ಧರಾದ ಆದ್ಯ ಶ್ರೀ ನಿರ್ವಾಣಮಹಾಶಿವಯೋಗಿಗಳು ಅಲ್ಲಮಪ್ರಭು ಪರಂಪರೆಯವರಾಗಿದ್ದರೆಂಬುದು ವಿದಿತವೇ ಆಗಿದೆ. ಅವರು ಮಹಾವಿರತರು. ಅಣಿಮಾದಿ ಅಷ್ಟಸಿದ್ಧಿಗಳನ್ನು ಸಾಧಿಸಿ ಜನತೆಯನ್ನು ಆಕರ್ಷಿಸಬೇಕೆಂಬ ಹವಣಿಕೆ ಅವರಿಗಿರಲಿಲ್ಲ. ಅವಿರತ ನಿಷ್ಠೆಯಿಂದಾಗಿ, ಅಷ್ಟಸಿದ್ಧಿಗಳು ಅವರನ್ನು ಹಿಂಬಾಲಿಸಿದುವು. ಲೋಕ ಲೌಕಿಕದಲ್ಲಿ ಅವರು ತೊಡರಿದವರಲ್ಲ, ಆದರೂ 'ಜಾಣನು ಲೌಕಿಕ ಪಾರಮಾರ್ಥವೆರಡನ್ನು ಮಾಣದೆ ನಡೆಸುತ್ತಿಹ'ನೆಂಬ ಶ್ರೀ ನಿಜಗುಣ ಶಿವಯೋಗಿಗಳ ಉಕ್ತಿಯಂತೆ ದೇಹಧಾರಿಯಾಗಿದ್ದು ಲೋಕದವರನ್ನು ಪಾರಮಾರ್ಥಪಥಕ್ಕೆ ಕರೆದೊಯ್ಯಲು ಬೇಕಾಗುವಷ್ಟು ವ್ಯವಹಾರದಿಂದ ದೂರವಾದವರಲ್ಲ. ತೋರಿಕೆಗೆ ಮಾತ್ರ ಲೋಕದವರಂತಿದ್ದು ತಮ್ಮ ನಿಜದರಿವಿನ ಎಚ್ಚರದಲ್ಲಿ 'ಬೆಂದ ನುಲಿ' ಯಂತಿದ್ದವರು. ಸಾಧಕರನ್ನು ಅನಿತ್ಯದಿಂದ ನಿತ್ಯಕ್ಕೆ ಒಯ್ಯುವ ದಾರಿದೀಪವಾಗಿದ್ದರು. ಸರ್ವೇಂದ್ರಿಯ ವ್ಯವಹಾರಗಳನ್ನು ಲಿಂಗಭೋಗವಾಗಿ ಪರಿವರ್ತಿಸಿ, ಲಿಂಗಭೋಗೋಪಭೋಗಿಗಳಾಗಿದ್ದವರು, ಸರ್ವಸಮತಾಭಾವವುಳ್ಳವರಾಗಿ ವಿಶಿಷ್ಟ ಪ್ರಾಣಿವರ್ಗದಲ್ಲೂ ದಯಾಪರರಾಗಿದ್ದವರು. ಮನದ ಸಂಕಲ್ಪ ವಿಕಲ್ಪಗಳನ್ನು ಅಳಿದವರು, ಜೀವನ್ಮುಕ್ತರು, ಪರಮ ವೈರಾಗ್ಯಮೂರ್ತಿಗಳು. ಪೂಜ್ಯರು ಪೂಜಾಧ್ಯಾನಾಸಕ್ತರಾಗಿರುತ್ತಾ ಸದಾ ಶಿವಯೋಗ ನಿರತರಾಗಿದ್ದರು. ಕೌಪೀನಧಾರಿಗಳಾಗಿ ಭಸ್ಮರುದ್ರಾಕ್ಷ ಭೂಷಣರಾಗಿರುತ್ತಿದ್ದರು. ಶಿವತೇಜಸ್ಸಿನಿಂದ ಉಜ್ವಲಗೊಂಡಿತ್ತು ಅವರ ದಿವ್ಯಮೂರ್ತಿಸ್ವರೂಪ. ಅವರ ಪರಿಪೂರ್ಣವಾದ ಶಿವಜ್ಞಾನ ಸಂಪತ್ತು, ಜ್ಞಾನಕ್ರಿಯಾ ಸಮನ್ವಯ ದೃಷ್ಟಿ, ನಡೆನುಡಿಗಳ ಹೊಂದಾಣಿಕೆ, ವಿಶಾಲದೃಷ್ಟಿ, ಸದ್ಭಕ್ತಿಭಾವಗಳಿಂದಾದ ನಿರ್ಮಲ ಚಾರಿತ್ರ್ಯ -ಇವು ಅವರ ವ್ಯಕ್ತಿತ್ವವನ್ನು ರೂಪಿಸಿದ್ದವು. ಆದರಿಂದಾಗಿ ಆ ಮಹಾಂತರು ನೆಲೆಸಿದ ಕ್ಷೇತ್ರ ಸುಕ್ಷೇತ್ರವೆನಿಸಿತು. ಅವರ ಪ್ರಭಾವ ಎಲ್ಲೆಡೆಯೂ ಹಬ್ಬಿ ದಿನದಿನವೂ ನಾಡಿನ ನಾನಾಮೂಲೆಗಳಿಂದ ಭಕ್ತಸಮೂಹವು ಪೂಜ್ಯರ ದರ್ಶನಾಶೀರ್ವಾದಗಳಿಗೆ ಧಾವಿಸಿ ಬರುತ್ತಿತ್ತು, ಆ ಸಾಕಾರ ಶಿವನ ಸಂದರ್ಶನಕ್ಕಾಗಿ. ಆ ಕಾರಣದಿಂದ ಈ ಕ್ಷೇತ್ರಕ್ಕೆ ದೇಗುಲ (ದೇವಸ್ಥಾನ) ಮಠವೆಂಬ ಪ್ರತೀತಿ ಉಂಟಾದುದು ಸಹಜವೇ ಆಗಿದೆ.

ಆದ್ಯ ಶ್ರೀನಿರ್ವಾಣಮಹಾಶಿವಯೋಗಿಗಳವರು ಅನುಪಮ ಬೋಧಾಗುರುಗಳೂ ಆಗಿದ್ದುದರಿಂದ ಅನೇಕ ಮೋಕ್ಷಾರ್ಥಿಗಳು ಅವರ ಉಪದೇಶಾಮೃತವನ್ನು ಪಡೆಯಲು ಕಾತರರಾಗಿ ಬರುತ್ತಿದ್ದರಷ್ಟೆ. ಶ್ರೀ ಶಿವಯೋಗಿಗಳು ಮುಮುಕ್ಷುಗಳ ಮಾನಸಿಕ ಶಕ್ತಿಯನ್ನರಿತು ಅವರವರ ಅಂತಸ್ತಿಗೆ ತಕ್ಕಂತೆ ಆಧ್ಯಾತ್ಮ ವಿಚಾರಗಳನ್ನರುಹಿ ಮಾರ್ಗದರ್ಶನ ನೀಡುತ್ತಿದ್ದರು.

ಆದ್ಯ ಶ್ರೀನಿರ್ವಾಣ ಮಹಾಶಿವಯೋಗಿಗಳವರ ಮಹಿಮಾತಿಶಯವನ್ನು ತಿಳಿಸುವ ಹಲವು ನಿದರ್ಶನಗಳು ಈ ಪ್ರಾಂತ್ಯದಲ್ಲಿ ಜನಜನಿತವಾಗಿವೆ. ಸಚ್ಚಿದಾನಂದ ಸ್ವರೂಪ ಶಿವೆಯ ಪ್ರಕೃತಿರೂಪಿಂದ ನಾಲ್ವರು ಶಕ್ತಿಯರು ಅವತರಿಸಿ ನಿತ್ಯರಾದ ಆದ್ಯ ನಿರ್ವಾಣ ಮಹಾಶಿವಯೋಗಿಗಳವರನ್ನು ಕಾಯೇನ ವಾಚಾ ಮನಸಾ ಭಕ್ತಿಪೂರ್ವಕ ಸೇವಿಸುತ್ತಿದ್ದರಂತೆ! ಶಿವನಲ್ಲಿ ಅವಿನಾಭೂತವಾಗಿರುವ ಶಿವೆಯ ನಿಜದ ನಿಲುವನ್ನು ಗುರುಮುಖದಿಂದ ಅರಿತು ಆರಾಧಿಸಬೇಕೆಂಬುದೇ ಅವರ ಮನದಾಸೆಯಾಗಿತ್ತಂತೆ. ಮಹಾಕಾಲ ಬರಲು ಆ ಶಿವಯೋಗಿಗಳವರ ಕೃಪೆಯಿಂದ ಅವರಿಚ್ಛೆ ಸಾಧ್ಯವಾಗಿ ಆ ನಾಲ್ವರು ಕೃತಾರ್ಥರಾದರಂತೆ.

ವಿರುಪಸಂದ್ರ, ಕುರುಪೇಟೆ, ಮಳಗಾಳು ಮತ್ತು ಕನಕಪುರ ಈ ನಾಲ್ಕು ಗ್ರಾಮಗಳಲ್ಲಿ ಗುಡಿಕಟ್ಟಿ ಆ ನಾಲ್ವರು ಶಕ್ತಿಯರನ್ನು ಸಂಕೇತ ಸಂಸ್ಮರಣಾರೂಪದಿಂದ ಇಂದಿಗೂ ಪೂಜಿಸುತ್ತಿದ್ದಾರೆ. ಆಯಾ ಊರ ಮಂದಿ ಪ್ರತಿವರ್ಷದಲ್ಲೂ ಆಯಾ ದೇವಾಲಯಗಳ ಮುಂಭಾಗದಲ್ಲಿ 'ಕೊಂಡ' ಮಾಡುವಾಗ ದೇಗುಲಮಠದಿಂದ ಆ ದೇವಿಯರಿಗೆ ಸೋಗಿಲು ತುಂಬುವ, ತೀರ್ಥಕೊಡುವ ಪದ್ಧತಿಯನ್ನು ಈವತ್ತಿಗೂ ಕಾಣಬಹುದು. ತೌರಿನಿಂದ ಬೀಳ್ಕೊಡುವಾಗ ಮಗಳಿಗೆ ತಾಯಿಯು ಲೇಸಬಯಸಿ ಆಶೀರ್ವದಿಸುವ ಸಂಪ್ರದಾಯವದು. ಭಕ್ತಕೋಟಿಯನ್ನು ಶುದ್ಧಗೊಳಿಸುವುದಕ್ಕಾಗಿ ಗುರುಗಳು ಕರುಣಿಸುವ ಒಳ್ಳೆಯ ರೂಢಿಯಿದು.

ಆದ್ಯ ಶ್ರೀನಿರ್ವಾಣಮಹಾಶಿವಯೋಗಿಗಳವರು ಒಮ್ಮೆ ಕೊಲ್ಲಾಪುರ ಪಟ್ಟಣದಲ್ಲಿದ್ದಾಗ ಆ ನಾಲ್ವರು ಉಪ ಶಕ್ತಿಯರು ಎಳೆಕೂಸುಗಳ ಆಕಾರದಿಂದ ಆಗಮಿಸಿ ಶ್ರೀ ಶ್ರೀಗಳವರ ಕೃಪಾಶ್ರಯವನ್ನು ಅಪೇಕ್ಷಿಸಿದರೆಂದೂ ಕರುಣಾಳುಗಳಾದ ಪೂಜ್ಯರು ಆ ಮಾಯದ ಕಂದಮ್ಮಗಳನ್ನು ಕರೆತಂದು ತಮ್ಮ ಶ್ರೀಮಠದಲ್ಲಿ ಅಕ್ಕರೆಯಿಂದ ಪೋಷಿಸಿ ಕಡೆಗೆ ಶಿವೆಯ ಗುಹ್ಯಾದ್ಗುಹ್ಯತರ ಸ್ವರೂಪವನ್ನು ಅರಿವುಗೊಳಿಸಿ ಕಟಾಕ್ಷಿಸಿದರೆಂದೂ ಪ್ರತೀತಿ.

ಒಂದು ದಿನ ಪ್ರಾತಃಕಾಲ ಸೂರ್ಯೋದಯದ ಸಮಯ-ಕನ್ಯೆಯೊಬ್ಬಳು ತನ್ನ ಓರಗೆಯ ಗೆಳತಿಯರೊಡನೆ ಅರ್ಕಾವತಿಯ ನದಿಯಿಂದ ನೀರು ಹೊತ್ತು ತರುತ್ತಿದ್ದಳು. ಆದ್ಯ ನಿರ್ವಾಣಮಹಾಶಿವಯೋಗಿಗಳವರು ಆಗ ತಾನೇ ಶಿವಾರ್ಚನೆ ಮುಗಿಸಿ ಮಠದ ಹೊರ ಅವರಣದಲ್ಲಿ ನಿಂತಿದ್ದರು. ಕೌಪೀನ ಧಾರಿಗಳಾಗಿ, ಭಸ್ಮರುದ್ರಾಕ್ಷಿಗಳನ್ನು ಧರಿಸಿ ನಿಂತಿದ್ದ ಸಾಕ್ಷಾತ್ ಶಿವಸ್ವರೂಪಿ ಶಿವಯೋಗಿಗಳವರನ್ನು ಆ ಕನ್ಯೆಯರು ಸಂದರ್ಶಿಸಿದರು.

ನೀರಿನ ಕೊಡಗಳನ್ನಿರಿಸಿ ಪಾದಕ್ಕೆ ಎರಗಿದರು. ದಯಾರ್ದ್ರಹೃದಯರಾದ ಪೂಜ್ಯರು ಹಸನ್ಮುಖರಾಗಿ, ಅವರ ಮನವನ್ನು ಪರೀಕ್ಷಿಸುವ ಸಲುವಾಗಿ ಕೌಪೀನಕ್ಕಾಗಿ ತುಂಡು ಪಾವಡ ಕೊಡುವಂತೆ ಕೇಳಿದರು. ಒಬ್ಬ ಜಾಣ ಕನ್ಯೆಯು ತನ್ನ ನೂತನ ಪೀತಾಂಬರದ ಸೀರೆಯ ಸೆರಗನ್ನೇ ಹರಿದು ಪೂಜ್ಯರಿಗೆ ಭಕ್ತಿಯಿಂದ ಅರ್ಪಿಸಿ ನಮಸ್ಕರಿಸಿದಳು. ಎಲ್ಲರೂ ತಮ್ಮ ತಮ್ಮ ಮನೆಯ ಕಡೆ ತೆರಳಿದರು. ಪಾವಡವನ್ನಿತ್ತ ಕನ್ಯೆ ನಡೆದ ವೃತ್ತಾಂತವನ್ನು ತನ್ನ ತಂದೆ ತಾಯಿಗಳಿಗೆ ತಿಳಿಸಿದಳು. ಹರಿದ ತನ್ನ ಸೀರೆಯ ಸೆರಗನ್ನು ಅವರಿಗೆ ತೋರಿಸಿ ನೋಡುವಲ್ಲಿ ಸೀರೆಯ ಸೆರಗು ಹರಿದಿರದೆ ಮೊದಲಿನಂತೆಯೇ ಇದ್ದಿತು! ಅದನ್ನು ನೋಡಿ ಎಲ್ಲರೂ ಆಶ್ಚರ್ಯಪಟ್ಟರು. ಕೂಡಲೇ ಆಕೆಯ ತಂದೆ ತಾಯಿಗಳು, ಬಂಧು ಮಿತ್ರರು ಓಡಿಬಂದು ಶಿವಯೋಗಿಗಳವರನ್ನು ಸಂದರ್ಶಿಸಿ, ಸಾಷ್ಟಾಂಗ ಪ್ರಣತರಾಗಿ ಗುರುವಿನ ಮಹಿಮೆಯನ್ನು ಮನಸಾರೆ ಕೊಂಡಾಡಿದರು.

ಆದ್ಯ ಶ್ರೀ ನಿರ್ವಾಣ ಮಹಾಶಿವಯೋಗಿಗಳವರ ಈ ಬಗೆಯ ಮಹಿಮೆಗಳನ್ನು ತಿಳಿಸುವ ಪ್ರಸಂಗಗಳು ಜನಮನದಲ್ಲಿ ಈಗಲೂ ನೆಲಸಿವೆ. ನಿಗ್ರಹಾನುಗ್ರಹ ಸಮರ್ಥರಾದ ಈ ಮಹಾಮಹಿಮರು ನೂರಿಪ್ಪತ್ತು (೧೨೦) ವರ್ಷಗಳ ಕಾಲ ಬಾಳಿ ಲಿಂಗೈಕ್ಯರಾದರು. ಅವರ ಮೂಲ ಗದ್ದುಗೆಯು ಶ್ರೀ ಮಠದಲ್ಲಿದೆ.

ಶ್ರೀ ದೇವಲಿಂಗ ಮಹಾಸ್ವಾಮಿಗಳವರು.

ಆದ್ಯ ಶ್ರೀನಿರ್ವಾಣಮಹಾಶಿವಯೋಗಿಗಳವರ ಸೇವೆಯಲ್ಲಿದ್ದವರು ಶ್ರೀ ದೇವಲಿಂಗ ಮಹಾಸ್ವಾಮಿಗಳವರು. ಗುರುಗಳ ಸೇವೆಯನ್ನು ಕಠಿಣ ವ್ರತದಂತೆ ಭಕ್ತಿಯಿಂದ, ನಿಷ್ಠೆಯಿಂದ ಆಚರಿಸಿದವರು ಅವರು. ಗುರುವಿನ ಕೃಪೆಗೆ ಪಾತ್ರರಾಗಿದ್ದುದಲ್ಲದೆ, ಅವರು ಅತ್ಯಂತ ಸೂಕ್ಷ್ಮಮತಿಗಳೂ ಆಗಿದ್ದವರು. ಗುರುವಿನ ಪೂರ್ಣಾನುಗ್ರಹವನ್ನು ಪಡೆದ ಬಳಿಕ ಅವರು ಪ್ರತ್ಯೇಕ ಆಶ್ರಮವೊಂದನ್ನು ತೆರೆದು ತಮ್ಮ ಅನುಷ್ಠಾನವನ್ನು ಬೆಳೆಸುತ್ತಾ ಬಂದರು. ಆ ನೂತನ ಆಶ್ರಮವೇ ಚಿಕ್ಕಮಠವೆಂಬ ಹೆಸರನ್ನು ತಾಳಿತು. ಗುರುಗಳ ಆದರ್ಶವನ್ನೇ ಅವರೂ ಪಾಲಿಸಿದರು. ಶಿವಶರಣರ ವಚನಾನುಭವವನ್ನು ಯೋಗ ಮತ್ತು ಶಾಸ್ತ್ರ ಪಾಂಡಿತ್ಯವನ್ನು ಪಡೆದರು. ಟೀಕಾರ್ಥ ವಿವೇಚನೆಯಲ್ಲಿ ಬಹಳ ಆಸಕ್ತರಾಗಿದ್ದರು. ಶಿವಯೋಗ ನಿಷ್ಠರು. ಗುರುಗಳಂತೆ ವೀರ ವೈರಾಗ್ಯಮೂರ್ತಿಗಳು, ಶಿವಪೂಜಾ ದುರಂಧರರು. ಅವರ ಪೂಜಾನುಷ್ಠಾನ ಪ್ರಭಾವವು ಅನಂತ ರೂಪದಲ್ಲಿ ಹೊರಹೊಮ್ಮುತ್ತಿತ್ತು.

ಶ್ರೀಮಠದ ವ್ಯಾಪ್ತಿಗೆ ಸೇರಿದ ಸ್ಮಶಾನ ಭೂಮಿಯಲ್ಲಿ ಖನನ ಮತ್ತು ದಹನ ಕ್ರಿಯೆಗಳೆರಡೂ ಪ್ರತ್ಯೇಕ ಸ್ಥಾನಗಳಲ್ಲಿ ನಡೆಸಲ್ಪಡುತ್ತಿದ್ದುವು. ಆದರೆ ದಹನ ಕಾಲದಲ್ಲಿ ಶಿರಸ್ಸು ಸಿಡಿಯುವ ಭೇದನ ಶಬ್ಧವುಂಟಾಗುತ್ತಿದ್ದುದರಿಂದ ಪೂಜಾನುಷ್ಠಾನದ ಶಾಂತಿಮಯ ವಾತಾವರಣವು ಕಲಕುವ ಸಂಭವಪಿರುತ್ತಿದ್ದುದರಿಂದ ಅಂದಿನಿಂದಾಚೆಗೆ ದಹನಕಾಲದ ಶಿರೋಭೇದನ ಶಬ್ದವಾಗದಂತೆ ಪೂಜ್ಯರ ಅಪ್ಪಣೆಯಾಯಿತು. ಪೂಜ್ಯರ ತಪಃಪ್ರಭಾವದಿಂದಾಗಿ ಇಂದಿಗೂ ಶ್ರೀಮಠದ ವ್ಯಾಪ್ತಿಯಲ್ಲಿ ಆ ಶಬ್ದ ಕೇಳಿಸದಂತಾಗಿದೆ.

ತಮ್ಮ ಗುರುಗಳಂತೆಯೇ ಶ್ರೀ ದೇವಲಿಂಗ ಮಹಾಸ್ವಾಮಿಗಳು ಮಹಾತಪಸ್ವಿಗಳಾಗಿದ್ದುದಲ್ಲದೆ ಭಕ್ತರ ಇಷ್ಟಾರ್ಥಗಳನ್ನು ತಮ್ಮ ಕೃಪಾದೃಷ್ಟಿಯಿಂದ ನೆರವೇರಿಸುತ್ತಿದ್ದರು. ವ್ಯಾಧಿಗ್ರಸ್ಥರಿಗೂ, ಸಾಂಸಾರಿಕ ತೊಂದರೆಗಳಿಂದ ಪೀಡಿತರಾಗಿದ್ದವರಿಗೂ ಆಶೀರ್ವದಿಸಿ ತೊಂದರೆ ನಿವಾರಣೆ ಮಾಡುತ್ತಿದ್ದರು. ಶ್ರೀಗಳವರು ದೇಗುಲಮಠದಲ್ಲಿಯೇ ಲಿಂಗೈಕ್ಯರಾದರು. ಅವರ ಗದ್ದುಗೆ ಚಿಕ್ಕಮಠದಲ್ಲಿದೆ.

ಶ್ರೀ ನಂಜಯ್ಯ ಮಹಾಸ್ವಾಮಿಗಳು

ಆದ್ಯ ಶ್ರೀನಿರ್ವಾಣಮಹಾಶಿವಯೋಗಿಗಳವರ ನಂತರ ದೊಡ್ಡಮಠದ ಅಧಿಕಾರ ವಹಿಸಿಕೊಂಡವರಲ್ಲಿ ಶ್ರೀ ನಂಜಯ್ಯ ಮಹಾಸ್ವಾಮಿಗಳು ಮುಖ್ಯರಾದವರು. ಇವರು ವೀರವೈರಾಗ್ಯಮೂರ್ತಿಗಳಾಗಿದ್ದು, ಶಾಸ್ತ್ರಪಾಂಡಿತ್ಯವನ್ನು ಗಳಿಸಿದ್ದರು. ಇವರು ಕೆಲವು ಕಾಲ ಶಿವಕ್ಷೇತ್ರಗಳ ಪ್ರವಾಸಮಾಡಿ ಮಠಕ್ಕೆ ಹಿಂತಿರುಗಿದರು. ಮಠದ ಅಭಿವೃದ್ಧಿಕಾರ್ಯಕ್ಕೆ ಗಮನಕೊಟ್ಟರು.

ಶ್ರೀ ನಾಗಲಿಂಗ ಮಹಾಸ್ವಾಮಿಗಳು

ಲಿಂಗೈಕ್ಯರಾದ ಶ್ರೀ ದೇವಲಿಂಗಮಹಾಸ್ವಾಮಿಗಳವರು ಚಿಕ್ಕಮಠದ ಉತ್ತರಾಧಿಕಾರವನ್ನು ತಮ್ಮ ಕರಕಮಲ ಸಂಜಾತರಾದ ಶ್ರೀ ನಾಗಲಿಂಗಮಹಾಸ್ವಾಮಿಗಳವರಿಗೆ ವಹಿಸಿದರು. ನೂತನಶ್ರೀಗಳವರು ತಮ್ಮ ಗುರುಗಳ ಸೇವೆಯನ್ನು ಸತತವಾಗಿ ನಡೆಸಿದವರು ಮತ್ತು ಅವರ ಪೂರ್ಣ ವಾತ್ಸಲ್ಯವನ್ನು ಗಳಿಸಿದವರು. ಅಲ್ಲದೆ, ಅವರು ಶಿವಧರ್ಮನಿಷ್ಠೆವುಳ್ಳವರು. ಶರಣಮಾರ್ಗದಲ್ಲಿ ಅಚಲ ಶ್ರದ್ಧೆವುಳ್ಳವರೂ, ಶಾಸ್ತ್ರಪರಿಚಯವುಳ್ಳವರೂ, ಅನುಭಾವಿಗಳೂ ಆಗಿದ್ದರು. ವಿನಯ, ವಿಶಾಲದೃಷ್ಟಿ, ದಯೆ, ಸೌಶೀಲಾದಿ ಸದ್ಗುಣ ಸಂಪತ್ತುಳ್ಳವರು. ತ್ರಿಕಾಲ ಪೂಜಾಸಕ್ತರು. ಅವರ ಸಾನ್ನಿಧ್ಯ ದರ್ಶನಲಾಭ ಪಡೆಯಲು ಬಂದವರ ಕಷ್ಟನಷ್ಟಗಳನ್ನು ಸಾವಧಾನ ಚಿತ್ತದಿಂದ ಆಲಿಸಿ ಪರಿಹಾರೋಪಾಯವನ್ನು ತಿಳಿಸುತ್ತಿದ್ದರು. ಧರ್ಮಸ್ವರೂಪವನ್ನು ಶ್ರೋತೃಗಳಿಗೆ ಮನದಟ್ಟುಮಾಡುತ್ತಿದ್ದರು. ಅವರ ಗದ್ದುಗೆ ಚಿಕ್ಕಮಠದಲ್ಲಿದೆ.

ಶ್ರೀ ಮಹಲಿಂಗ ಮಹಾಸ್ವಾಮಿಗಳು

ಶ್ರೀ ನಂಜಯ್ಯ ಮಹಾಸ್ವಾಮಿಗಳು ಲಿಂಗೈಕ್ಯರಾದ ನಂತರ ಶ್ರೀ ದೇಗುಲಮಠದ ನಿರಾಭಾರಿ ಪೀಠವನ್ನಲಂಕರಿಸಿದವರು ಶ್ರೀ ಮಹಾಲಿಂಗ ಮಹಾಸ್ವಾಮಿಗಳು. ಆ ವೇಳೆಗೆ ಚಿಕ್ಕಮಠದ ಅಧಿಕಾರ ನಿರ್ವಹಣೆಯೂ ಅವರ ಪಾಲಿಗೆ ಬಂದಿತು. ಶ್ರೀಗಳು ಎರಡೂ ಮಠಗಳ ವ್ಯವಸ್ಥೆಯನ್ನು ದಕ್ಷತೆಯಿಂದ ನಿರ್ವಹಿಸಿದರು. ಶ್ರೀಗಳ ಅನುಷ್ಠಾನ ಶಿವಯೋಗ ಪ್ರಭಾವಗಳು ನಾಡಿನ ಎಲ್ಲಾ ಕಡೆಗಳಿಂದಲೂ ಭಕ್ತಸಂದೋಹವನ್ನು ಆಕರ್ಷಿಸಿದುವು. ಕಲ್ಯಾಣದ ಶರಣರ ವಚನಾನುಭವದಲ್ಲಿ ಶ್ರೀಗಳು ನಿಷ್ಣಾತರು. ಭಜನೆ ಅನುಭವಗೋಷ್ಠಿಗಳಿಂದ ಭಕ್ತರ ಹೃನ್ಮಂದಿರವನ್ನು ಬೆಳಗಿಸಿದವರು ಅವರು. ಸಮಾಜ ಜೀವನದಲ್ಲಿ ಆಗಾಗ್ಗೆ ತಲೆದೋರುತ್ತಿದ್ದ ವಿರಸ-ಭಿನ್ನತೆಗಳನ್ನು ಅಳಿಸಿ, ಶಿವತತ್ವ ವಿಚಾರಗಳನ್ನು ಪ್ರಚುರಪಡಿಸುವುದರಲ್ಲಿ ಅವರಿಗೆ ತೀವ್ರವಾದ ಆಸಕ್ತಿ ಇತ್ತು. ಅವರ ಗದ್ದುಗೆ ಶ್ರೀಮಠದಲ್ಲಿದೆ.

ಶ್ರೀ ಹುಚ್ಚಪ್ಪ ಮಹಾಸ್ವಾಮಿಗಳು

ಶ್ರೀ ಮಹಾಲಿಂಗಮಹಾಸ್ವಾಮಿಗಳು ಲಿಂಗೈಕ್ಯರಾದ ಬಳಿಕ ಈ ಪರಂಪರೆಯ ಚರಪಟ್ಟಾಧಿಕಾರವನ್ನು ವಹಿಸಿದವರು ಶ್ರೀ ಹುಚ್ಚಪ್ಪ ಮಹಾಸ್ವಾಮಿಗಳು. ಇವರು ಮಹಾನಿಷ್ಠೆಯ ಶಿವಯೋಗಿಗಳು, ಅವರ ಆತ್ಮಶಕ್ತಿ ಪ್ರಕೃತಿಶಕ್ತಿಯನ್ನು ಮೀರಿಸಿತ್ತು.

ಅವರು ಸ್ವಲೀಲಾನಂದದಿಂದಿದ್ದ ಶಿವಯೋಗಿಗಳು. ಅವರ ಮಹಿಮೆಯನ್ನು ಕುರಿತ ಒಂದೆರಡು ನಿದರ್ಶನಗಳನ್ನು ನಾವು ಕಾಣಬಹುದು.

ಪಕ್ಕದ ಗ್ರಾಮವೊಂದರ ಭಕ್ತರೊಬ್ಬರ ಮನೆಗೆ ಶ್ರೀಗಳು ಒಮ್ಮೆ ಬಿನ್ನಹಕ್ಕೆ ದಯಮಾಡಿಸಬೇಕಾಗಿತ್ತು. ಆ ಗ್ರಾಮವಿದ್ದುದು ನದಿಯ ಆಚೆ ದಡದಲ್ಲಿ. ಆ ಹಿಂದಿನ ರಾತ್ರಿ ವಿಶೇಷ ಮಳೆಯಾಗಿದ್ದುದರಿಂದ ನದಿಯಲ್ಲಿ ಪೂರ್ಣಪ್ರವಾಹವಿತ್ತು. ನದಿಯನ್ನು ದಾಟುವುಧು ಅಶಕ್ತವಾಗಿತ್ತು. ಗಣಪರ್ವದ ಪ್ರಯುಕ್ತ ಬಿನ್ನಹ ಅನಿವಾರ್ಯವಾಗಿತ್ತು. ಮಧ್ಯಾಹ್ನವಾದರೂ ನದಿಯಲ್ಲಿ ನೀರು ಇಳಿಯಲಿಲ್ಲ; ಹಾಯಗಡವಿರಲಿಲ್ಲ. ಶ್ರೀ ಹುಚ್ಚಪ್ಪ ಮಹಾಸ್ವಾಮಿಗಳು ಆಗಲವಾದ ಬಾಳೆಯಲೆವೊಂದನ್ನು ತರಿಸಿ ಅದರ ಮೇಲೆ ಕುಳಿತು ಧ್ಯಾನಾಸಕ್ತರಾದರು. ಸ್ವಲ್ಪಹೊತ್ತಿನಲ್ಲಿ ನದಿ ಪ್ರವಾಹದಲ್ಲಿ ತೇಲಿ ಆಚೆ ದಡವನ್ನು ನಿರಾತಂಕವಾಗಿ ತಲುಪಿದರು. ಆ ದಿನದ ಅವರ ಬಿನ್ನಹ ಬಿಡುಗಡೆ ಕರ್ತವ್ಯ ಯಶಸ್ವಿಯಾಗಿ ನೆರವೇರಿತು.

ಮತ್ತೊಂದು ದಿನ ಶ್ರೀಗಳವರು ಹೂದೋಟದಲ್ಲಿ ಅಡ್ಡಾಡುತ್ತಿರುವ ವೇಳೆಯಲ್ಲಿ ನಾಗರಹಾವೊಂದು ಅವರ ಪಾದಾಂಗುಷ್ಠವನ್ನು ಕಚ್ಚಿತು. ಶ್ರೀಗಳು ಅದನ್ನು ದೃಷ್ಟಿಸಿ ನೋಡಿದರು; ಹಾವು ಹೊರಳಾಡಿ ಪ್ರಾಣ ಬಿಟ್ಟಿತು. ಶ್ರೀಗಳವರಿಗೆ ಯಾವ ತೊಂದರೆಯೂ ಆಗಲಿಲ್ಲ. ಸತ್ತು ಬಿದ್ದ ಹಾವನ್ನು ಮತ್ತೆ ಕರುಣೆಯಿಂದ ದೃಷ್ಟಿಸಿದರು. ಹಾವಿನ ಪ್ರಾಣ ಮರಳಿ ಅದು ಹರಿದು ಹೋಯಿತು. ಅಂದು ಶ್ರೀಗಳವರು ಮಠದ ಎಲ್ಲೆಯಲ್ಲಿ ಎಲ್ಲಿ ಸರ್ಪದಷ್ಟವಾದರೂ ವಿಷವೇರದಿರಲಿ ಎಂದು ಉದ್ಗರಿಸಿದರಂತೆ! ಅಂದಿನಿಂದ ಮಠದ ಸುತ್ತಣ ಪ್ರದೇಶದಲ್ಲಿ ಇಂದಿಗೂ ಹಾವು ಕಚ್ಚಿದವರು ಮರಣ ಹೊಂದುತ್ತಿಲ್ಲ.

ಶ್ರೀ ಹುಚ್ಚಪ್ಪ ಮಹಾಸ್ವಾಮಿಗಳ ಈ ಬಗೆಯ ಅನೇಕಾನೇಕ ಮಹಿಮೆಗಳು ಜನಮನದಲ್ಲಿ ಉಳಿದುಬಂದಿವೆ.

ಮೈಸೂರು ರಾಜಮನೆತನದವರಿಂದ ಕೊಡುಗೆ: ಆ ವೇಳೆಗೆ ದೇಗುಲಮಠದ ಗುರುಪರಂಪರೆಯ ಪ್ರಭಾವವು ನಾಡಿನ ಎಲ್ಲೆಡೆಯೂ ಹಬ್ಬಿತ್ತು. ಈ ಕ್ಷೇತ್ರದ ಮಹಿಮೆ ಮೈಸೂರು ರಾಜಮನೆತನದವರನ್ನೂ ಆಕರ್ಷಿಸಿತು. ಶಾಲಿವಾಹನ ಶಕ ೧೫೮೯ ಪ್ಲವಂಗ ಸಂವತ್ಸರ ಭಾದ್ರಪದ ಶುದ್ಧ ೧೫ ಶುಕ್ರವಾರ (ಕ್ರಿ.ಶ. ೧೬೬೭ ಆಗಸ್ಟ್ ೨೩) ದಲ್ಲಿ ದೊಡ್ಡದೇವರಾಜ ಒಡೆಯರು ಮೈಸೂರು ಸಿಂಹಾಸನಾಧೀಶರಾಗಿದ್ದಾಗ, ಅವರ ಸ್ವಬಂಧುವೂ ದಳವಾಯಿಯೂ ಆಗಿದ್ದ ದಳವಾಯಿ ಕೊಮಾರಯ್ಯನ ತಾಯಿ ತಿಮ್ಮಮ್ಮಣ್ಣಿಯವರು ಶ್ರೀ ದೇಗುಲಮಠಕ್ಕೆ ಬಂದು ಶ್ರೀಗಳ ದರ್ಶನಾಶೀರ್ವಾದವನ್ನು ಪಡೆದರು. ಅವರು ಅಂದು ಶ್ರೀ ದೇಗುಲಮಠದ ಮಹಿಮೆಯನ್ನು ಅರಿತು ನಮ್ರ ಭಕ್ತಿಕಾಣಿಕೆಯನ್ನು ರಾಜೋಚಿತ ಗೌರವಗಳನ್ನು ಗುರುಸನ್ನಿಧಿಗೆ ಅರ್ಪಿಸಿದರು. ಅಲ್ಲದೆ ಮಠವನ್ನು ಕಟ್ಟಿಸಿ ಭೂಸ್ವಾಸ್ಥೆಯನ್ನು ದಾನಮಾಡಿದರು.

ಕೆಲವು ವರ್ಷಗಳು ಕಳೆದ ನಂತರ ದಳವಾಯಿ ಕೊಮಾರಯ್ಯನ ತಾಯಿ ತಿಮ್ಮಮ್ಮಣ್ಣಿಯವರು ಗತಿಸಿದುದರಿಂದ ಅವರ ಉತ್ತರಕರ್ಮಾದಿ ಸಂಬಂಧವಾಗಿ ಅಸ್ಥಿಶೇಷವನ್ನು ಗಂಧದ ಪೆಟ್ಟಿಗೆಯಲ್ಲಿಟ್ಟು ಅವರ ಪುತ್ರರೂ ಮತ್ತು ಬಂಧು ವರ್ಗದವರು ವಾರಣಾಸಿಗೆ ತೆಗೆದುಕೊಂಡು ಹೋಗುವ ಉದ್ದೇಶದಿಂದ ಕನಕಪುರ ಶ್ರೀ ಕ್ಷೇತ್ರ ಸಂದರ್ಶನಕ್ಕಾಗಿ ಬಂದರು. ಆಗ ಮಧ್ಯಾಹ್ನದ ಸಮಯವಾಗಿತ್ತು. ಅಸ್ಥಿಶೇಷದ ಕರಂಡವನ್ನು ಮಠದ ಪೂರ್ವಭಾಗದಲ್ಲಿನ ವೃಕ್ಷದಡಿಯಲ್ಲಿರಿಸಿ, ನದಿಯಲ್ಲಿ ಸ್ನಾನಾದಿ ಆಹ್ನಿಕಗಳನ್ನು ಮುಗಿಸಿ ಶ್ರೀಗಳ ಸಂದರ್ಶನ ಮಾಡಿ, ಸಾಷ್ಟಾಂಗ ಪ್ರಣತರಾದರು. ಶ್ರೀಗಳು ರಾಜಬಂಧುಗಳನ್ನು ಯಥೋಚಿತವಾಗಿ ಗೌರವಿಸಿ ಆಶೀರ್ವದಿಸಿದರು. ಪ್ರಸಾದ ಸ್ವೀಕಾರಾನಂತರ ಆದ್ಯ ಶ್ರೀ ನಿರ್ವಾಣಮಹಾಸ್ವಾಮಿಗಳವರ ಗದ್ದುಗೆಗೆ ಸಾಷ್ಟಾಂಗವೆರಗಿ ಹೊರಡಲು ಸಿದ್ಧರಾದರು. ಆ ಸಮಯದಲ್ಲಿ ಅಸ್ತಿಶೇಷ ಕರಂಡಕವನ್ನೆತ್ತಲು ಅದು ಹೂಬುಟ್ಟಿಯಂತೆ ಹಗುರವಾಗಿತ್ತು. ಕರಂಡಕವನ್ನು ತೆರೆದು ನೋಡಲು ಅಸ್ಥಿಶೇಷಗಳು ಸುವಾಸನಾಯುಕ್ತವಾದ ಮಲ್ಲಿಗೆ ಹೂವುಗಳಾಗಿ ಪರಿವರ್ತಿತವಾಗಿರುವುದು

ಗೋಚರವಾಯಿತು. ಎಲ್ಲರೂ ಮಹದಾಶ್ಚರ್ಯಪಟ್ಟರು. ಅದೆಲ್ಲವೂ ಆದ್ಯ ಶ್ರೀ ನಿರ್ವಾಣಮಹಾಸ್ವಾಮಿಗಳವರ ಮಹಿಮಾ ಪ್ರಭಾವವೆಂಬ ಅರಿವು ಮೂಡಿತು. ತಿಮ್ಮಮ್ಮಣ್ಣಿಯವರ ಪುಣ್ಯಪರಿಪಾಕದಿಂದಾದ ಈ ಆಶ್ಚರ್ಯಕರ ಘಟನೆಯಿಂದ ಆಕೆಯ ಉತ್ತರಕ್ರಿಯೆಯು ಪೂರ್ಣವಾದುದೆಂಬ ಭಾವನೆ ಅರಸುಮನೆತನದವರಿಗೆ ಉಂಟಾಯಿತು. ಸಮಾಚಾರವನ್ನು ಮೈಸೂರಿಗೆ ತಿಳಿಸಲಾಯಿತು. ಗುರು ಹಿರಿಯರ ಅನುಜ್ಞೆಯಂತೆ ಕರಂಡಕವಿದ್ದ ಸ್ಥಳದಲ್ಲಿಯೇ ಅಂತ್ಯವಿಧಿಯನ್ನಾಚರಿಸಿ, ಅಸ್ತಿಶೇಷ ಕರಂಡವನ್ನು ದೇಗುಲಮಠದ ಆವರಣದ ಪೂರ್ವಭಾಗದಲ್ಲಿ ಭೂಸ್ಥಾಪನೆ ಮಾಡಲಾಯಿತು.

ಅಘಟಿತಘಟನಾ ಸಮರ್ಥರೆಂದು ಹೆಸರು ಗಳಿಸಿದ ಶ್ರೀ ಹುಚ್ಚಪ್ಪ ಮಹಾಸ್ವಾಮಿಗಳು ಪೂರ್ಣಾಯುಗಳಾಗಿ ಲಿಂಗೈಕ್ಯರಾದರು. ಅವರ ಗದ್ದುಗೆ ಮಠದ ಆವರಣದಲ್ಲಿದೆ.

ಶ್ರೀ ಮರುಳಸಿದ್ಧ ಮಹಾಸ್ವಾಮಿಗಳು

ಶ್ರೀ ಹುಚ್ಚಪ್ಪ ಮಹಾಸ್ವಾಮಿಗಳವರ ನಂತರ ದೇಗುಲಮಠದ ಅಧಿಕಾರವನ್ನು ವಹಿಸಿಕೊಂಡವರು ಶ್ರೀ ಮರುಳಸಿದ್ಧ ಮಹಾಸ್ವಾಮಿಗಳು. ಶ್ರೀಗಳು ತಮ್ಮ ಆಶ್ರಮಧರ್ಮವನ್ನು ನಿಷ್ಠೆಯಿಂದ ಕಾಪಾಡಿಕೊಂಡವರು. ಸ್ವಾರ್ಥ ಕೀರ್ತಿಕಾಮನೆಗಳಿಗೆ ಮನವಿತ್ತವರಲ್ಲ. ತತ್ವಪ್ರಿಯರಾದರೂ ಧರ್ಮದ ಸುಲಭಮಾರ್ಗಿಗಳಾಗಿದ್ದರು. ದರ್ಶನಕ್ಕಾಗಿ ಬಂದ ಭಕ್ತರನ್ನು ಪ್ರೀತ್ಯಾದರಗಳಿಂದ ಸಂತೈಸುತ್ತಿದ್ದರು.

ದೈವಲೀಲೆ! ಶ್ರೀಗಳು ಅಧಿಕಾರವಹಿಸಿದ ಕೆಲವು ವರ್ಷಗಳಲ್ಲೇ ಅನಿರೀಕ್ಷಿತ ಘಟನೆಯೊಂದುಂಟಾಯಿತು. ಮೂಲಾ ನಕ್ಷತ್ರದ ಮಳೆ ವಿಶೇಷವಾಗಿ ಸುರಿದು ಅರ್ಕಾವತಿಯಲ್ಲಿ ಪೂರ್ಣ ಪ್ರವಾಹವುಂಟಾಯಿತು. ಆ ಪ್ರದೇಶದ ಜನ ಹಿಂದೆಂದೂ ಅಂತಹ ಮಹಾಪೂರವನ್ನು ನೋಡಿರಲಿಲ್ಲ, ಕೇಳಿರಲಿಲ್ಲ. ಚಿಕ್ಕಮಠ ದೊಡ್ಡಮಠಗಳ ಶಿಲಾಕಟ್ಟಡಗಳು ಕೊಚ್ಚಿಹೋದವು. ಅದರಿಂದಲೇ 'ಮೂಲದ ಮಳೆಹೊಯ್ದು ದೇಗುಲಮಠ ಕೊಚ್ಚಿಹೋಯಿತು' ಎಂಬ ಮಾತು ನಾಣ್ಣುಡಿಯಾಗಿ ಕನಕಪುರ ಪ್ರಾಂತ್ಯದಲ್ಲಿ ಈಗಲೂ ಜನಜನಿತವಾಗಿದೆ. ಆ ಕಾಲದಲ್ಲಿ ಪ್ರಸಿದ್ಧವಾಗಿದ್ದು ಅರ್ಕಾವತಿಯ ಉಪಶಾಖೆಯೊಂದರ ದಡದಲ್ಲಿ ಅರ್ಕಾವತಿ ಕಾವೇರಿಗಳ ಸಂಗಮಕ್ಕೆ ಅನತಿದೂರದಲ್ಲಿರುವ ಮಡಿವಾಳದ ಶಿಲಾಮಠ ಮತ್ತು ಓಂಕಾರೇಶ್ವರ ದೇವಾಲಯಗಳು ಅದೇ ಪ್ರವಾಹಕ್ಕೆ ಸಿಕ್ಕಿ ಕೊಚ್ಚಿಹೋದುದರ ಅವಶೇಷಗಳನ್ನು ಈಗಲೂ ಗುರುತಿಸಬಹುದಾಗಿದೆ. ಆ ಅನಾಹುತದಿಂದ ದೇಗುಲಮಠದಲ್ಲಿ ಶೇಖರವಾಗಿದ್ದ ಅನೇಕಾನೇಕ ತಾಳೆಯೋಲೆ ಗ್ರಂಥಗಳು, ಅಪೂರ್ವವಸ್ತುಗಳು ಪ್ರವಾಹಕ್ಕೆ ತುತ್ತಾಗಿ ನಾಶವಾದುವೆಂದು ತಿಳಿದುಬಂದಿದೆ. ಇಷ್ಟಾದರೂ ಶ್ರೀ ಮರುಳಸಿದ್ಧಮಹಾಸ್ವಾಮಿಗಳು ವೀರವೈರಾಗ್ಯಪ್ರವೃತ್ತಿಯವರಾದ್ದರಿಂದ ಮನಃಕ್ಲೇಶ ಹೊಂದದೆ ಎಲ್ಲವೂ ಶಿವನ ಲೀಲೆಯೆಂದುಕೊಂಡರು. ತಮ್ಮ ಹಿರಿಯರು ನಿರ್ಮಿಸಿದ ದೇಗುಲಮಠದ (ನಿರ್ವಾಣದೇವರ ಮಠ) ಶಿಲಾಕಟ್ಟಡಗಳು ಮಹಾಪೂರದಿಂದ ಕೊಚ್ಚಿಹೋದ ಸಮಾಚಾರವು ಮೈಸೂರಿನ ಅರಸುಮನೆತನದವರಿಗೆ ತಲುಪಿತು. ಮಠದ ಜೀರ್ಣೋದ್ಧಾರಕಾರ್ಯವನ್ನು ಕೈಗೊಳ್ಳುವ ಸದುದ್ದೇಶದಿಂದ ಅರಸುಮನೆತನದವರು ಈ ಕ್ಷೇತ್ರಕ್ಕೆ ಬಂದರು.

ಕ್ರಿ.ಶ. ೧೬೭೭ನೇ ಏಪ್ರಿಲ್ ೨೮ (ಕಾಳಾಯುಕ್ತಿ ಸಂವತ್ಸರದ ವೈಶಾಖ ಬಹುಳ ಅಮವಾಸ್ಯೆ ೧೫) ಭಾನುವಾರದಂದು ದಳವಾಯಿ ಕೊಮಾರಯ್ಯನ ತಾಯಿ ತಿಮ್ಮಮ್ಮಣ್ಣಿಯವರ ಅಸ್ಥಿಶೇಷ ಕರಂಡಕವನ್ನು ಭೂಸ್ಥಾಪನೆ ಮಾಡಿದ ಸ್ಥಳದಲ್ಲಿ ಶಿಲಾಮಂಟಪವನ್ನು ನಿರ್ಮಿಸಿ, ಅಲ್ಲಿ ವೃಷಭೇಶ್ವರ ಶಿಲಾಮೂರ್ತಿಯನ್ನು ಪ್ರತಿಷ್ಠಿಸಿದರು. ಎದುರಿಗಿರುವ ಮಹಾಮಹಿಮರಾದ ಶ್ರೀ ಹುಚ್ಚಪ್ಪ ಮಹಾಸ್ವಾಮಿಗಳವರ ಗದ್ದುಗೆಗೆ ಶಿಲಾಕಟ್ಟಡವನ್ನು ನಿರ್ಮಿಸಿದರು. ಅಲ್ಲದೆ ಕೊಚ್ಚಿಹೋಗಿದ್ದ ಮಠಗಳೆರಡನ್ನೂ ಪುನರ್ನಿರ್ಮಾಣ ಮಾಡಿಸಿ ದೇಗುಲಮಠಕ್ಕೆ ಮತ್ತೆ ಕೆಲವು ಎಕರೆ ಭೂಮಿಯನ್ನು ದಾನಮಾಡಿದರು. ಈ ವಿಷಯವು ಮಠದ ಆವರಣದಲ್ಲಿರುವ ಎರಡನೆಯ ಶಾಸನದಲ್ಲಿ ಉಲ್ಲೇಖಿಸಲ್ಪಟ್ಟಿದೆ. ಕೆಲವು ವರ್ಷಗಳ ನಂತರ ಶ್ರೀ ಮರುಳಸಿದ್ಧ ಮಹಾಸ್ವಾಮಿಗಳವರು ಲಿಂಗೈಕ್ಯರಾದರು.

ಶ್ರೀ ಚನ್ನಬಸವಮಹಾಸ್ವಾಮಿಗಳು

ಶ್ರೀಮರುಳಸಿದ್ಧಮಹಾಸ್ವಾಮಿಗಳ ಅನಂತರ ಮಠದ ಚರಪಟ್ಟಾಧಿಕಾರವನ್ನು ವಹಿಸಿದವರಲ್ಲಿ ಶ್ರೀ ಚನ್ನಬಸವ ಮಹಾಸ್ವಾಮಿಗಳು ಮುಖ್ಯರು. ಅವರು ಪೂರ್ವಾಶ್ರಮದಲ್ಲಿ ಕನಕಪುರದ ಬಳಿ ಇರುವ ಅರಳಾಳು ಗ್ರಾಮದಲ್ಲಿ ಜನಿಸಿದವರು. ಶ್ರೀಗಳವರು ಮಠದ ಪುರೋಭಿವೃದ್ಧಿಗಾಗಿ ವಿಶೇಷ ಶ್ರಮವಹಿಸಿದರು. ಮಠದ ಸುತ್ತಲೂ ಇದ್ದ ಮಠದ ಮಾನ್ಯ ಭೂಮಿಗಳನ್ನು ರೂಢಿಸುವ ಸಲುವಾಗಿ ರೈತವರ್ಗದವರಿಗೆ ಹಂಚಿಕೊಟ್ಟದ್ದು ಇವರ ಕಾಲದಲ್ಲೇ. ಶ್ರೀಗಳು ತಮ್ಮ ದೈನಂದಿನ ಪೂಜೆ ಅನುಷ್ಠಾನಗಳನ್ನು ಲೋಪವಿಲ್ಲದಂತೆ ನಡೆಸುತ್ತಿದ್ದುದಲ್ಲದೆ ಮಠದ ಹೊರಗಣ ವ್ಯವಹಾರಗಳನ್ನೆಲ್ಲಾ ದಕ್ಷತೆಯಿಂದ ದೀರ್ಘಕಾಲ ನಿರ್ವಹಿಸಿದರು. ಶ್ರೀಗಳವರಿಗೆ ಎರಡೂ ಮಠಗಳ ಕಾರ್ಯನಿರ್ವಹಣೆಯ ಜವಾಬ್ದಾರಿ ಹೆಚ್ಚಾದುದರಿಂದ ಅರಳಾಳು ಗ್ರಾಮದ ವಟು ಒಬ್ಬರನ್ನು ಆರಿಸಿ ಅವರಿಗೆ ಚಿಕ್ಕಮಠದ ಆಶ್ರಮಾಧಿಕಾರವನ್ನು ವಹಿಸಿದ್ದರು. ಅವರೇ ಇಮ್ಮಡಿ ಶ್ರೀ ಮರುಳಸಿದ್ಧ ಮಹಾಸ್ವಾಮಿಗಳು.

ಇಮ್ಮಡಿ ಶ್ರೀ ಮರುಳಸಿದ್ಧಮಹಾಸ್ವಾಮಿಗಳು

ಶ್ರೀಚನ್ನಬಸವಮಹಾಸ್ವಾಮಿಗಳು ದೊಡ್ಡಮಠದಲ್ಲೂ, ಇಮ್ಮಡಿ ಶ್ರೀ ಮರುಳಸಿದ್ಧಮಹಾಸ್ವಾಮಿಗಳು ಚಿಕ್ಕಮಠದಲ್ಲೂ ವ್ಯವಹಾರಗಳನ್ನು ನಿರ್ವಹಿಸುತ್ತಿದ್ದರು. ಇಮ್ಮಡಿ ಶ್ರೀ ಮರುಳಸಿದ್ಧಮಹಾಸ್ವಾಮಿಗಳು ಶಿವಪೂಜಾನಿಷ್ಠರು, ಸಾಮಾಜಿಕ ಸಮಸ್ಯೆಗಳನ್ನು ದಕ್ಷತೆಯಿಂದ ಇತ್ಯರ್ಥಪಡಿಸುತ್ತಿದ್ದರು. ಶಿಥಿಲವಾಗುತ್ತಿದ್ದ ಮಠದ ಕಟ್ಟಡಗಳನ್ನು ಪುನರುಜ್ಜೀವನಗೊಳಿಸಿದರು.

ಆ ವೇಳೆಗೆ ಶ್ರೀಚನ್ನಬಸವಸ್ವಾಮಿಗಳು ಮುಪ್ಪಿನವರಾಗಿದ್ದುದರಿಂದ ಮಠದ ವ್ಯವಹಾರಗಳನ್ನು ನೋಡಿಕೊಳ್ಳಲು ಉತ್ತರಾಧಿಕಾರಿಗಳನ್ನು ನೇಮಿಸುವ ಅಗತ್ಯ ತೋರಿತು. ಆಗ ಉಭಯ ಶ್ರೀಗಳೂ ಭಕ್ತಮಂಡಳಿಯವರೊಡನೆ ಆಲೋಚಿಸಿ ದೊಡ್ಡಮಠಕ್ಕೆ ಐಜೂರಿನ ಶ್ರೀ ಸಾವಂದಪ್ಪನವರ ಕಿರಿಯ ಪುತ್ರರಾದ ಶ್ರೀ ಬಸಪ್ಪದೇವರನ್ನು ಉತ್ತರಾಧಿಕಾರಿಗಳನ್ನಾಗಿ ಆರಿಸಿದರು. ಶ್ರೀ ಇಮ್ಮಡಿ ಮರುಳಸಿದ್ಧಮಹಾಸ್ವಾಮಿಗಳ ಸಲಹೆಯಂತೆ ಅರಳಾಳು ಗ್ರಾಮದ ಶ್ರೀ ಕಾಳಪ್ಪನವರನ್ನು ಚಿಕ್ಕಮಠದ ಉತ್ತರಾಧಿಕಾರಿಗಳನ್ನಾಗಿ ಆರಿಸಲಾಯಿತು.

ಇಮ್ಮಡಿ ಶ್ರೀ ನಿರ್ವಾಣಮಹಾಸ್ವಾಮಿಗಳು ಮತ್ತು ಇಮ್ಮಡಿ ಶ್ರೀ ಹುಚ್ಚಪ್ಪ ಮಹಾಸ್ವಾಮಿಗಳು

ಶಾಲಿವಾಹನಶಕ ೧೮೨೪ (ಕ್ರಿ.ಶ. ೧೯೦೩)ನೇ ಶೋಭಕೃತಸಂವತ್ಸರದ ಮಾಘಮಾಸದಲ್ಲಿ ಉಭಯ ವಟುಗಳೂ ವಿರಕ್ತಾಶ್ರಮಾಧಿಕಾರವನ್ನು ಸ್ವೀಕರಿಸಿದರು. ಶ್ರೀ ಬಸಪ್ಪದೇವರಿಗೆ ಇಮ್ಮಡಿ ಶ್ರೀ ನಿರ್ವಾಣಮಹಾಸ್ವಾಮಿಗಳೆಂದೂ, ಶ್ರೀ ಕಾಳಪ್ಪ ನವರಿಗೆ ಇಮ್ಮಡಿ ಶ್ರೀ ಹುಚ್ಚಪ್ಪಮಹಾಸ್ವಾಮಿಗಳೆಂದೂ ನಾಮಾಂಕಿತವಾಯಿತು. ಉಭಯ ನೂತನ ಶ್ರೀಗಳು ದೇಹವನ್ನೂ ಆತ್ಮವನ್ನೂ ಶಿವಸ್ವರೂಪಿ ಗುರುಲಿಂಗಜಂಗಮಕ್ಕೆ ಸಮರ್ಪಣೆ ಮಾಡಿ, ಆ ಶಿವಪ್ರಸಾದದಲ್ಲಿ ಸಮಾಜದ ಹಾಗೂ ದೇಶದ ಏಳಿಗೆಯನ್ನು ಬಯಸುತ್ತಾ ಶ್ರಮಿಸುತ್ತಾ ಇರುತ್ತಿದ್ದರು. ಜನಜಂಗುಳಿಯ ನಡುವೆಯಿದ್ದು, ಹಿಂದುಳಿದ ಸಮಾಜವನ್ನು ಪೋಷಿಸಿ ಬೆಳೆಸುವುದು, ಅತಿಥಿ ಅಭ್ಯಾಗತರ ರಕ್ಷಣೆ ಮಾಡುವುದು, ಹಿರಿಯ ಗುರುಗಳ ಆದೇಶದಂತೆ ಸುಸಂಸ್ಕೃತಿ ಪ್ರಸಾರ ಮಾಡುವುದೂ ಸಹ ತಮ್ಮ ಪಾಲಿನ ಕೆಲಸವೆಂದು ಅವರಿಬ್ಬರೂ ನಂಬಿದ್ದರು. ಸರ್ವಸಂಗ ಪರಿತ್ಯಾಗಿಗಳಾದ ಅವರೀರ್ವರ ಸ್ವಾಭಾವಿಕ ಲಕ್ಷಣವೆಂದರೆ ಸಕಲ ಪ್ರಾಣಿಗಳಿಗೂ ದಯೆ ತೋರುವುದು.

ಇಮ್ಮಡಿ ಶ್ರೀ ನಿರ್ವಾಣಮಹಾಸ್ವಾಮಿಗಳವರು ಕ್ರಿ.ಶ. ೧೯೦೭ರಲ್ಲಿ ಕೆಲವು ವಿರಕ್ತಮೂರ್ತಿಗಳೊಡನೆ ಶಿವಕ್ಷೇತ್ರಗಳ ಪ್ರವಾಸ ಕೈಗೊಂಡರು. ಉಳವಿಯ ಶ್ರೀ ಚನ್ನಬಸವೇಶ್ವರ ರಥೋತ್ಸವವನ್ನು ಸಂದರ್ಶಿಸಿ ಬಂದರು. ಹಿರಿಯ ಗುರುಗಳಾದ ಶ್ರೀ ಚನ್ನಬಸವೇಶ್ವರ ಮಹಾಸ್ವಾಮಿಗಳು ಪೂರ್ಣಾಯುಗಳಾಗಿದ್ದು ೧೯೧೦ರಲ್ಲಿ ಲಿಂಗೈಕ್ಯರಾದರು. ಅವರ ಗದ್ದುಗೆ ಶ್ರೀಮಠದಲ್ಲಿದೆ.

ಇಮ್ಮಡಿ ಶ್ರೀ ನಿರ್ವಾಣಮಹಾಸ್ವಾಮಿಗಳು ಎರಡನೆಯ ಬಾರಿಗೆ ೧೯೨೦ ರಲ್ಲಿ ಶಿವಕ್ಷೇತ್ರಗಳನ್ನು ನೋಡಲು ಪ್ರವಾಸ ಹೊರಟರು. ಪ್ರಥಮದಲ್ಲಿ ಚಿತ್ರದುರ್ಗದ ಶ್ರೀ ಜಯದೇವ ಮುರುಘರಾಜೇಂದ್ರಮಹಾಸ್ವಾಮಿಯವರ ದರ್ಶನಾಶೀರ್ವಾದವನ್ನು ಪಡೆದು ಉತ್ತರ ಭಾರತದ ವಾರಣಾಸಿ ಮುಂತಾದ ಹಲವಾರು ಕ್ಷೇತ್ರಗಳನ್ನು ಸಂದರ್ಶಿಸಿ ಬಂದರು. ಆ ವೇಳೆಗೆ ಇಮ್ಮಡಿ ಶ್ರೀ ಹುಚ್ಚಪ್ಪಸ್ವಾಮಿಗಳು ಅವಸಾನ ಸ್ಥಿತಿಯಲ್ಲಿದ್ದು ಶ್ರೀಗಳು ಪ್ರವಾಸದಿಂದ ಹಿಂತಿರುಗಿದ ಸ್ವಲ್ಪ ದಿನದಲ್ಲಿಯೇ ಲಿಂಗೈಕ್ಯರಾದರು.

ಕ್ರಿ.ಶ. ೧೯೨೩ರಲ್ಲಿ ಇಮ್ಮಡಿ ಶ್ರೀಮರುಳಸಿದ್ಧಮಹಾಸ್ವಾಮಿಗಳ ನೇತೃತ್ವದಲ್ಲಿ ಶ್ರೀಮಠದ ಪರಮ ಶಿಷ್ಯರಾದ ಬೆಂಗಳೂರಿನ ಶ್ರೀ ಗುರುಪಾದಪ್ಪ ಎಂಬ ವೃದ್ಧಭಕ್ತರ ಆರ್ಥಿಕ ಸಹಾಯದಿಂದ ಮತ್ತು ಸ್ಥಳೀಯ ಭಕ್ತಮಂಡಳಿಯವರ ನೆರವಿನಿಂದ ಮಠದ ಗದ್ದುಗೆ ಕಟ್ಟಡಗಳ ಪುನರುದ್ಧಾರ ಕಾರ್ಯಗಳು ಜರುಗಿದವು. ಕ್ರಿ.ಶ. ೧೯೨೪ರಲ್ಲಿ ಇಮ್ಮಡಿ ಶ್ರೀ ಮರುಳಸಿದ್ಧಮಹಾಸ್ವಾಮಿಗಳು ಲಿಂಗೈಕ್ಯರಾದರು. ಬಳಿಕ ಎರಡೂ ಮಠಗಳ ವ್ಯವಸ್ಥೆಯನ್ನು ಇಮ್ಮಡಿ ಶ್ರೀ ನಿರ್ವಾಣಮಹಾಸ್ವಾಮಿಗಳವರೇ ವಹಿಸಿದರು.

ಇಮ್ಮಡಿ ಶ್ರೀನಿರ್ವಾಣಮಹಾಸ್ವಾಮಿಗಳು:

ಬೆಂಗಳೂರು ಜಿಲ್ಲೆ, ರಾಮನಗರ ತಾಲ್ಲೂಕಿನ ಐಜೂರು ಗ್ರಾಮದ ಶ್ರೀ ಸಾವಂದಪ್ಪ ಮತ್ತು ಶ್ರೀಮತಿ ಗೌರಮ್ಮನವರ ಪುಣ್ಯಗರ್ಭದಲ್ಲಿ ೧೮೬೯ರಲ್ಲಿ ಕಿರಿಯ ಪುತ್ರರಾಗಿ ಶ್ರೀ ಬಸಪ್ಪದೇವರು ಜನಿಸಿದರು (ಇವರೇ ಇಮ್ಮಡಿ ಶ್ರೀ ನಿರ್ವಾಣಮಹಾ ಸ್ವಾಮಿಗಳಾದರು) ಇವರ ತಂದೆ-ತಾಯಿಗಳು ಗುರುಲಿಂಗಜಂಗಮ ದಾಸೋಹದಲ್ಲಿ ಪರಮ ನಿಷ್ಠರು, ಉದಾರಿಗಳೂ ದಯಾಪರರೂ ಆಗಿದ್ದರು. ದೇಶದಲ್ಲಿ ಘೋರ ಕ್ಷಾಮ ತಲೆದೋರಿದಾಗ ತಮ್ಮ ಆಸ್ತಿಯನ್ನು ಮಾರಿ ಜನತೆಗೆ ಸಹಾಯ ನೀಡಿದವರು. ಇಂತಹವರ ಪುತ್ರರಾಗಿ ಜನಿಸಿದ ಬಸಪ್ಪದೇವರನ್ನು ಚನ್ನಾಗಿ ಸಾಕಿ ಪ್ರಾಥಮಿಕ ವಿದ್ಯಾಭ್ಯಾಸ ಮಾಡಿಸಿದರು. ಬಸಪ್ಪದೇವರಿಗೆ ಗುರು ಲಿಂಗ ಜಂಗಮ ಸೇವೆಯೆಂದರೆ ಅಪಾರ ಪ್ರೀತಿ, ಶ್ರದ್ಧೆ. ಅವರ ಮನೆಯಲ್ಲಿ ನೆಲೆಯಾಗಿದ್ದ ಶ್ರೀ ಸಿದ್ಧರಾಮಸ್ವಾಮಿಗಳೆಂಬ ನಿಷ್ಠಾವಂತ ಶಿವಯೋಗಿಗಳ ಸೇವೆಯನ್ನು ಬಸಪ್ಪದೇವರು ಅಸಿಧಾರಾವ್ರತದಂತೆ ಶ್ರದ್ಧೆಯಿಂದ ನಡೆಸುತ್ತಿದ್ದರು. ಸ್ವಾಮಿಗಳಿಗೆ ಮಡಿವಸ್ತ್ರಗಳನ್ನು ಸಿದ್ಧಪಡಿಸುವುದು, ಹೂ ಪತ್ರೆ ತರುವುದು, ಸ್ನಾನ ಪೂಜಾದಿಗಳಿಗೆ ಅಣಿಮಾಡುವುದು ಅವರ ದೈನಂದಿನ ಕರ್ತವ್ಯವಾಗಿತ್ತು. ಅದರಲ್ಲಿ ಅವರಿಗೆ ಹಿರಿಯ ಸಹೋದರಿ ಭದ್ರಕಾಳಮ್ಮನವರು ಈ ಸೇವೆಯಲ್ಲಿ ನೆರವಾಗುತ್ತಿದ್ದರು. ಶ್ರೀ ಸಿದ್ಧರಾಮಸ್ವಾಮಿಗಳು ಬಸಪ್ಪದೇವರ ಸೇವಾಸಕ್ತಿ ವಿನಯ ವೈರಾಗ್ಯಾದಿ ಗುಣಗಳಿಗೆ ಮೆಚ್ಚಿ ಅವರಿಗೆ ಸ್ವಲ್ಪ ಮಟ್ಟಿನ ಆಧ್ಯಾತ್ಮಿಕ ಶಿಕ್ಷಣವನ್ನು ಕೊಟ್ಟರು. ಇವರಿಗೆ ಚಿಕ್ಕಂದಿನಿಂದಲೂ ಸಕಲ ಜೀವರಾಶಿಗಳಲ್ಲೂ ದಯಾಪರತೆ, ಹಲವಾರು ವೇಳೆ ದನಕರುಗಳು ಅವರ ಹೊಲಗಳಿಗೆ ಹೋಗಿ ಮೇಯುತ್ತಿರುವುದನ್ನು ಕಣ್ಣಾರೆ ಕಂಡರೂ ಅವುಗಳನ್ನು ದೂರ ಅಟ್ಟದೆ 'ಪಾಪ! ಬಡಪ್ರಾಣಿಗಳು ಹೊಟ್ಟೆಗಿಲ್ಲ, ಮೇಯಲಿ ಬಿಡಿ' ಎನ್ನುತ್ತಿದ್ದರಂತೆ. ಕಿರಿತನದಲ್ಲೂ ತಂದೆ-ತಾಯಿ ಸೋದರ-ಸೋದರಿ, ಬಂಧು-ಬಳಗದ ವ್ಯಾಮೋಹ ಅವರಿಗಿರಲಿಲ್ಲ. ಇವರ ಭಕ್ತಿ ವೈರಾಗ್ಯ ಗುಣಗಳನ್ನು ಅರಿತಿದ್ದ ಕನಕಪುರ ದೇಗುಲಮಠದ ಅಂದಿನ ಗುರುಗಳಾದ ಶ್ರೀ ಚನ್ನಬಸವಮಹಾಸ್ವಾಮಿಗಳು ಶ್ರೀಮಠಕ್ಕೆ ಉತ್ತರಾಧಿಕಾರಿಗಳಾಗಿ ಆರಿಸಿಕೊಂಡದ್ದರಲ್ಲಿ ಆಶ್ಚರ್ಯವೇನಿಲ್ಲ.

ಶ್ರೀ ಸಾವಂದಪ್ಪ, ಶ್ರೀಮತಿ ಗೌರಮ್ಮ ದಂಪತಿಗಳ ಒಪ್ಪಿಗೆ ಪಡೆದು ಕ್ರಿ.ಶ. ೧೮೯೪ರಲ್ಲಿ ಶ್ರೀ ಬಸಪ್ಪದೇವರಿಗೆ ಮಾಹೇಶ್ವರ ದೀಕ್ಷೆಯನ್ನು ನೀಡಲಾಯಿತು. ಅಂದಿನಿಂದ ೧೦ ವರ್ಷಕಾಲ ಶ್ರೀ ಬಸಪ್ಪದೇವರು ದೇಗುಲಮಠದಲ್ಲಿದ್ದು, ಅತ್ಯಂತ ಶ್ರದ್ಧಾಭಕ್ತಿಯಿಂದ ಗುರುಸೇವೆ ಮಾಡಿದರು. ದೊಡ್ಡಮಠದ ಶ್ರೀ ಚನ್ನಬಸವಮಹಾಸ್ವಾಮಿಗಳು, ಚಿಕ್ಕಮಠದ ಇಮ್ಮಡಿ ಶ್ರೀ ಮರುಳಸಿದ್ಧ ಮಹಾಸ್ವಾಮಿಗಳು ಮಠದ ಭಕ್ತಮಂಡಳಿ ಸಹಕಾರದಿಂದ ದೊಡ್ಡಮಠಕ್ಕೆ ಐಜೂರಿನ ಶ್ರೀ ಬಸಪ್ಪದೇವರನ್ನು, ಚಿಕ್ಕಮಠಕ್ಕೆ, ಅರಳಾಳು ಗ್ರಾಮದ ಕಾಳಪ್ಪನವರನ್ನು ಉತ್ತರಾಧಿಕಾರಿಗಳಾಗಿ ಆರಿಸಿ, ಈ ಆಯ್ಕೆಗೆ ಚಿತ್ರದುರ್ಗದ ಶ್ರೀ ನಿರಂಜನ ಜಗದ್ಗುರು, ಜಯದೇವ ಮುರುಘರಾಜೇಂದ್ರಮಹಾಸ್ವಾಮಿಗಳವರ ಆಶೀರ್ವಾದ ಪಡೆದು ಶ್ರೀಗಳವರ ಮತ್ತು ಭಕ್ತಮಂಡಳಿಯ

ಅಪೇಕ್ಷೆಯಂತೆ ಉಭಯ ವಟುಗಳು ಕ್ರಿ.ಶ. ೧೯೦೩ನೇ ಶೋಭಕೃತು ಸಂವತ್ಸರದ ಮಾಘ ಮಾಸದಲ್ಲಿ ವಿರಕ್ತ ಪಟ್ಟಾಧಿಕಾರವನ್ನು ಸ್ವೀಕರಿಸಿದರು. ಶ್ರೀ ಬಸಪ್ಪ ದೇವರಿಗೆ ಇಮ್ಮಡಿ ಶ್ರೀ ನಿರ್ವಾಣ ಮಹಾಸ್ವಾಮಿಗಳೆಂಬುದಾಗಿಯೂ, ಶ್ರೀ ಕಾಳಪ್ಪನವರಿಗೆ ಇಮ್ಮಡಿ ಶ್ರೀ ಹುಚ್ಚಪ್ಪ ಮಹಾಸ್ವಾಮಿಗಳೆಂಬುದಾಗಿಯೂ ನಾಮಾಂಕಿತವಾಯಿತು. ಈ ಸಮಾರಂಭವು ಅತ್ಯಂತ ವೈಭವದಿಂದ ಜರುಗಿತು.

ಶ್ರೀ ಇಮ್ಮಡಿ ನಿರ್ವಾಣ ಮಹಾಸ್ವಾಮಿಗಳವರ ದೈನಂದಿನ ಆಚರಣೆ, ಅಥಣಿ ಶ್ರೀ ಮುರುಘೇಂದ್ರ ಶ್ರೀಗಳವರ ಆದರ್ಶದಂತೆ ವ್ಯವಸ್ಥಿತವಾಗಿತ್ತು. ಆಶ್ರಮ ಸ್ವೀಕರಿಸಿದ ಕೆಲವು ಕಾಲ, ಮಠದಲ್ಲಿ ರಜಾ ಹೊಡೆಯುವುದು, ಸಾರಣೆ ಮಾಡುವುದು, ಪೂಜಾಸಾಮಗ್ರಿಗಳನ್ನು ಸಿದ್ಧಪಡಿಸಿಕೊಳ್ಳುವುದು ಮುಂತಾದ ಎಲ್ಲಾ ಕೆಲಸಗಳನ್ನೂ ಬೇರೆಯವರ ಸಹಾಯಕ್ಕಾಗಿ ಕಾಯದೆ ತಾವೇ ಮಾಡಿಕೊಳ್ಳುತ್ತಿದ್ದರು. ಅರುಣೋದಯಕ್ಕೆ ಮೊದಲೇ ಗದ್ದುಗೆ ಪೂಜೆ, ಲಿಂಗಪೂಜೆಗಳನ್ನು ಮಾಡಿ ಮುಗಿಸುತ್ತಿದ್ದರು. ತ್ರಿಕಾಲ ಲಿಂಗಪೂಜಾ ದುರಂಧರರಾಗಿದ್ದರು. ಪೂಜಾನಂತರ ಧರ್ಮಗ್ರಂಥಾವಲೋಕನ, ದರ್ಶನಾರ್ಥಿಗಳಾಗಿ ಬಂದ ಭಕ್ತ ಸಮೂಹದೊಡನೆ ಕುಶಲಸಂಭಾಷಣೆ ಮತ್ತು ಆಶೀರ್ವಚನ ನೀಡುವುದು; ಒಡನೆ ಬಂದ ಚಿಕ್ಕಮಕ್ಕಳಿಗೆ ಹಣ್ಣು ಹಂಪಲನ್ನಿತ್ತು ಕರುಣೆಯಿಂದ ಮೃದುವಚನಗಳಿಂದ ಮಾತಾಡಿಸುವುದು, ಅತಿಥಿಗಳಿಗೆ ಪ್ರಸಾದ ನೀಡುವುದು, ಇತರ ಮಠಾಧೀಶ್ವರರು ಬಂದರೆ ಅವರೊಡನೆ ತುಂಬು ಹೃದಯದಿಂದ ಸಂಭಾಷಿಸುವುದು, ಗೋವುಗಳಿಗೆ ತಾವೇ ಹುಲ್ಲು ನೀರು ಕೊಡುವುದು -ಇವು ಅವರು ಮಠದಲ್ಲಿದ್ದಾಗ ನಡೆಸುತ್ತಿದ್ದ ದಿನಚರಿಗಳು.

ಇಮ್ಮಡಿ ಶ್ರೀ ನಿರ್ವಾಣಮಹಾಸ್ವಾಮಿಗಳು ಕೆಲವು ಮಠಾಧೀಶ್ವರರೊಡನೆ ೧೯೦೭ರಲ್ಲಿ ಚಿತ್ರದುರ್ಗ, ದಾವಣಗೆರೆ, ಹಾನಗಲ್ಲು, ಗದಗ, ಹುಬ್ಬಳ್ಳಿ ಮಾರ್ಗವಾಗಿ ಉಳವಿ ಚನ್ನಬಸವೇಶ್ವರ ರಥೋತ್ಸವವನ್ನು ಸಂದರ್ಶಿಸಲು ಉಳವಿಗೆ ತೆರಳಿದರು. ಅಲ್ಲಿಂದ ಮುಂದೆ ಧರ್ಮಸ್ಥಳ, ಬನವಾಸಿ, ಬೆಳಗಾವಿ, ಬಾದಾಮಿ, ಬಾಗಲಕೋಟೆ, ಕೂಡಲಸಂಗಮ, ಬಾಗೇವಾಡಿ, ವಿಜಾಪುರ, ಶ್ರೀಶೈಲ, ಬಳ್ಳಾರಿ, ಕೊಟ್ಟೂರು ಮುಂತಾದ ಅನೇಕ ಕ್ಷೇತ್ರಗಳನ್ನು ಪಟ್ಟಣಗಳನ್ನು ಸಂದರ್ಶಿಸಿ ಮಠಕ್ಕೆ ಹಿಂದಿರುಗಿದರು. ಕ್ರಿ.ಶ. ೧೯೧೮ರಲ್ಲಿ ಹಿರಿಯ ಗುರುಗಳಾದ ಶ್ರೀ ಚನ್ನಬಸವ ಮಹಾಸ್ವಾಮಿಗಳು ಲಿಂಗೈಕ್ಯರಾದರು.

ಕ್ರಿ.ಶ. ೧೯೨೦ ರ ಆಗಸ್ಟ್ ತಿಂಗಳಲ್ಲಿ ಪೂಜ್ಯರು ಶಿವಕ್ಷೇತ್ರಗಳ ಎರಡನೆಯ ಪ್ರವಾಸವನ್ನು ಕೈಗೊಂಡರು. ಚನ್ನಪಟ್ಟಣದ ಕುಡಿನೀರುಕಟ್ಟೆ ಮಠದ ಚರಮೂರ್ತಿ ಶ್ರೀ ಶಿವರುದ್ರಸ್ವಾಮಿಗಳು, ಸೇವೆಗಾಗಿ ಐಜೂರಿನ ಶ್ರೀ ವೀರಭದ್ರಪ್ಪನವರು ಅವರೊಡನೆ ಪ್ರವಾಸ ಭಾಗಿಗಳಾದರು. ಚಿತ್ರದುರ್ಗಕ್ಕೆ ಪ್ರಯಾಣಮಾಡಿ, ಅಲ್ಲಿನ ಬೃಹನ್ಮಠದ ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರನ್ನು ಸಂದರ್ಶಿಸಿದರು. ಜಗದ್ಗುರುಗಳವರು ಪೂಜ್ಯರನ್ನು ಬೃಹನ್ಮಠದಲ್ಲಿ ಮೂರುದಿನಗಳ ಕಾಲ ಉಳಿಸಿಕೊಂಡು ಪ್ರವಾಸಕ್ಕೆ ಬೇಕಾದ ಸಲಹೆ ಸೌಲಭ್ಯಗಳನ್ನು ನೀಡಿದ್ದಲ್ಲದೆ, ಅನೇಕ ಧಾರ್ಮಿಕ ವಿಷಯಗಳ ವಿನಿಯಮ ಮಾಡಿದರೆಂದು ತಿಳಿದುಬರುತ್ತದೆ. ಅನಂತರ ಪೂಜ್ಯರು ಹುಬ್ಬಳ್ಳಿಯ ಮೂರುಸಾವಿರ ಮಠ, ಸಿದ್ಧಾರೂಢರ ಮಠಗಳಿಗೆ ಭೇಟಿಕೊಟ್ಟು, ಧಾರವಾಡಕ್ಕೆ ಬಂದರು. ಧಾರವಾಡದ ಶ್ರೀ ಮುರುಘಾಮಠಕ್ಕೆ ಆಗಮಿಸಿದಾಗ ರಾತ್ರಿ ಮೂರುಘಂಟೆ ಸಮಯ. ಮಹಾಶಿವಯೋಗಿಗಳಾದ ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳವರನ್ನು ಸಂದರ್ಶಿಸಿದ ಕೂಡಲೇ ಉಭಯ ಶ್ರೀಗಳವರೂ ಪರಸ್ಪರ ಸಾಷ್ಟಾಂಗ ಪ್ರಣತರಾಗಿ ಆಲಿಂಗಿಸಿಕೊಂಡುದು ಒಂದು ಭವ್ಯ ಸನ್ನಿವೇಶ! ಮಾರನೆಯ ದಿನ ಮುರುಘಾಮಠದಲ್ಲಿ ಜರುಗಿದ ಏಕಾದಶ ರುದ್ರಪೂಜೆಯಲ್ಲಿ ಶ್ರೀ ನಿರ್ವಾಣಮಹಾಸ್ವಾಮಿಗಳು ಪೂಜಾಮೂರ್ತಿಗಳಲ್ಲಿ ಒಬ್ಬರು. ನಂತರದ ಹರಗುರು ಚರಮೂರ್ತಿಗಳ ಉತ್ಸವದಲ್ಲಿ ಶ್ರೀ ನಿರ್ವಾಣಮಹಾಸ್ವಾಮಿಗಳವರು ಮಠಾಧೀಶ್ವರರ ಶ್ರೇಣಿಯಲ್ಲಿ ಅಗ್ರಸ್ಥಾನದಲ್ಲಿದ್ದರು.

ಮುಂದೆ ಪೂಜ್ಯರು ಪುಣೆ, ಬೆಳಗಾಂ, ನಾಸಿಕ್, ಪಂಚವಟಿ ಮೂಲಕ ಅಥಣಿಗೆ ಪ್ರಯಾಣ ಮಾಡಿದರು. ಮಹಾ ಶಿವಯೋಗೀಶ್ವರರಾದ ಶ್ರೀ ಮುರುಘೇಂದ್ರ ಶಿವಯೋಗಿಗಳ ಗದ್ದುಗೆಯನ್ನು ಸಂದರ್ಶಿಸಿದರು. ನಂತರ ಮುಂಬಯಿ, ಅಲಹಾಬಾದ್ (ಪ್ರಯಾಗ)ಗಳನ್ನು ವೀಕ್ಷಿಸಿ, ವಾರಣಾಸಿಗೆ ಹೊರಟರು.

ಕಾಶೀಕ್ಷೇತ್ರದ ಸುರಾಭಾಂಡೇಶ್ವರದಲ್ಲಿ ಇದ್ದ ಮೈಸೂರು ಅರಮನೆ ಪಂಚಗವಿ ಮಠದ ಅಧಿಪತಿಗಳಾಗಿದ್ದು, ಸುಮಾರು ನಲವತ್ತು ವರ್ಷಕಾಲ ಕಾಶಿಯಲ್ಲಿ ವ್ಯಾಸಂಗ ಮಾಡಿ, ಸಂಸ್ಕೃತ, ಹಿಂದಿ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಪರಿಪೂರ್ಣ ಪಾಂಡಿತ್ಯವನ್ನು ಗಳಿಸಿದ್ದ ನೈಷ್ಠಿಕ ಬ್ರಹ್ಮಚರ್ಯ, ವೀರವೈರಾಗ್ಯವೃತ್ತಿಯ ಶ್ರೀ ಗೌರೀಶಂಕರ ಮಹಾಸ್ವಾಮಿಗಳು ಅಷ್ಟು ದೂರದಿಂದ ಪ್ರವಾಸಮಾಡಿ ಬಂದು ತಮಗೆ ದರ್ಶನವಿತ್ತ ಇಮ್ಮಡಿ ಶ್ರೀ ನಿರ್ವಾಣ ಮಹಾಶಿವಯೋಗಿಗಳವರನ್ನು ಭಕ್ತಿ ಗೌರವಗಳಿಂದ ಸ್ವಾಗತಿಸಿದರು. ಬಳಿಕ ಪೂಜ್ಯರು ಕಾಶಿ ವಿಶ್ವಾರಾಧ್ಯ ಜಗದ್ಗುರು ಪೀಠ ಕ್ಷೇತ್ರವಾದ ಶ್ರೀ ಜಂಗಮವಾಡಿ ಮಠಕ್ಕೆ ತೆರಳಿ ಅಲ್ಲಿನ ಶ್ರೀಗಳವರ ಆದರಾತಿಥ್ಯಗಳನ್ನು ಸ್ವೀಕರಿಸಿ ಇಪ್ಪತ್ತು ದಿನಗಳು ಅಲ್ಲಿಯೇ ತಂಗಿದ್ದು ಕಾಶಿಕ್ಷೇತ್ರದ ಎಲ್ಲಾ ಪ್ರೇಕ್ಷಣೀಯ ಸ್ಥಳಗಳನ್ನೂ ಸಂದರ್ಶಿಸಿದರು. ವಿಶ್ವಾರಾಧ್ಯಪೀಠದ ಶ್ರೀಗಳವರು ಇಮ್ಮಡಿ ಶ್ರೀ ನಿರ್ವಾಣ ಮಹಾಶಿವಯೋಗಿಗಳವರ ಮಹಿಮಾತಿಶಯಗಳಿಂದ ಆಕರ್ಷಿತರಾಗಿ ಪ್ರತಿದಿನವೂ ಶಿವಾನುಭವ ತತ್ವವಿಚಾರಗಳನ್ನು ಮಂಥನ ಮಾಡುತ್ತಿದ್ದರು. ಕಾಶಿಯನ್ನು ಬಿಟ್ಟು ಹೊರಡುವ ಮುನ್ನ ಶ್ರೀಗಳು ಮತ್ತೆ ಸುರಾಭಾಂಡೇಶ್ವರದಲ್ಲಿ ಶ್ರೀಗೌರೀಶಂಕರ ಮಹಾಸ್ವಾಮಿಗಳವರನ್ನು ಸಂದರ್ಶಿಸಿದಾಗ ಅವರು ಶ್ರೀ ನಿರ್ವಾಣಮಹಾಶಿವಯೋಗಿಗಳವರನ್ನು ಕುರಿತು "ಬುದ್ಧಿ, ತಾವಿದ್ದ ಕಡೆ ಹುಲಿ-ಗೋವುಗಳು ಪರಸ್ಪರ ವೈಷಮ್ಯವನ್ನು ಮರೆತು ಸಹಜ ಪ್ರೇಮದಿಂದಿರುತ್ತವೆ" ಎಂದು ಉದ್ಗರಿಸಿದರಂತೆ.

ಅಲ್ಲಿಂದ ಮುಂದೆ ಕಲ್ಕತ್ತೆಗೆ ಪ್ರಯಾಣಮಾಡಿ ಛತ್ರವೊಂದರಲ್ಲಿ ಬಿಡಾರ ಮಾಡಿದರು. ಅಲ್ಲಿದ್ದ ಕೆಲವು ಜೈನ ವರ್ತಕರು, ಮಹಿಳೆಯರು ಪೂಜ್ಯರನ್ನು ಅನನ್ಯ ಭಕ್ತಿ ಗೌರವಗಳಿಂದ ಆದರಿಸಿ ಪೂಜ್ಯರ ಆಶೀರ್ವಾದ ಪಡೆದು ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ಮಾಡಿಸಿದರು. ಕಲ್ಕತ್ತೆಯನ್ನು ಬಿಟ್ಟು ಬೆಜವಾಡ ಜಗನ್ನಾಥಗಳ ಮೂಲಕ ಮದರಾಸಿಗೆ ಬಂದು ಮಠವೊಂದರಲ್ಲಿ ಎರಡು ದಿನ ಬಿಡಾರಮಾಡಿ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿಕೊಟ್ಟು ಬೆಂಗಳೂರಿಗೆ ಹಿಂತಿರುಗಿ ಕನಕಪುರ ಸೇರಿದರು. ಈ ಪ್ರವಾಸವು ಮೂರು ತಿಂಗಳ ಕಾಲ ಹಿಡಿಯಿತು. ಪೂಜ್ಯರು ಈ ರೀತಿ ಚರಜಂಗಮ ಕರ್ತವ್ಯವನ್ನು ನೆರವೇರಿಸಿದರು.

ಕಾಶಿಯಿಂದ ಹಿಂತಿರುಗಿದ ವೇಳೆಗೆ ಇಮ್ಮಡಿ ಶ್ರೀ ಹುಚ್ಚಪ್ಪಮಹಾಸ್ವಾಮಿಗಳು ಅವಸಾನ ಸ್ಥಿತಿಯಲ್ಲಿದ್ದರು. ಶ್ರೀಗಳಿಂದ ಕರ್ಣಮಂತ್ರಜಪೋಚ್ಚಾರಣೆ ಮುಂತಾದ ಸಾಂಪ್ರದಾಯಿಕ ಕಾರ್ಯಗಳಾದ ಬಳಿಕ ಶ್ರೀ ಹುಚ್ಚಪ್ಪ ಮಹಾಸ್ವಾಮಿಗಳು ಲಿಂಗದೊಳಗಾದರು.

ಇಮ್ಮಡಿ ಶ್ರೀ ನಿರ್ವಾಣ ಮಹಾಶಿವಯೋಗಿಗಳವರು ಪವಾಡ ಪುರುಷರು. ಒಮ್ಮೆ ಮಠದ ಹಿರಿಯ ಗುರುಗಳಾದ ಶ್ರೀ ಚನ್ನಬಸವಮಹಾಸ್ವಾಮಿಗಳ ವಾರ್ಷಿಕ ಜಂಗಮಾರಾಧನೆ ಶ್ರೀಮಠದಲ್ಲಿ ನಡೆದಿತ್ತು. ಅಂದು ರಾತ್ರಿ ಶ್ರೀ ಹುಲ್ಕುಂಟೆ ಚನ್ನಪ್ಪನವರು, ಶ್ರೀ ಐಜೂರು ರುದ್ರದೇವರು ವಿಶ್ರಾಂತಿಗಾಗಿ ದೊಡ್ಡಮಠಕ್ಕೆ ಬಂದರು. ಅಲ್ಲಿ ಶ್ರೀ ನಿರ್ವಾಣಮಹಾಸ್ವಾಮಿಗಳವರು ಕುಳಿತಿದ್ದ ಆಸನದ ಸಮೀಪದಲ್ಲಿ ಸರ್ಪ ಗೋಚರಿಸಿತು. ಬಂದ ಭಕ್ತರಿಬ್ಬರೂ ಗಾಬರಿಗೊಂಡರು. ಪೂಜ್ಯರು ಅವರಿಗೆ ಹೆದರಬೇಡಿರೆಂದು ತಿಳಿಸಿ ಅದನ್ನು ಕೈಲಿ ಹಿಡಿದು ಶ್ರೀ ಕ್ಷೇತ್ರದ ಹಿಂಭಾಗಕ್ಕೆ ಬಿಟ್ಟು ಬಂದರು. ಶ್ರೀಗಳು ಉತ್ತರ ಭಾರತ ಪ್ರವಾಸದಲ್ಲಿದ್ದಾಗ ಕೃಷ್ಣಾನದಿಯಲ್ಲಿ ಸ್ನಾನಮಾಡಿ, ಮರಳು ದಿಣ್ಣೆಯೊಂದರ ಮೇಲೆ ಕುಳಿತು ಧ್ಯಾನಾಸಕ್ತರಾಗಿದ್ದಾಗ ನದಿಯ ಪ್ರವಾಹ ತೆರೆ-ತೆರೆಯಾಗಿ ನುಗ್ಗಿ ಬರುತ್ತಿತ್ತು. ಜೊತೆಯಲ್ಲಿದ್ದವರು ಹೆದರಿ ದಡಕ್ಕೆ ಬಂದರು. ಶ್ರೀಗಳನ್ನು ಎಷ್ಟು ಪ್ರಾರ್ಥಿಸಿದರೂ ಅವರು ಕದಲದೆ ಸ್ಥಿರಚಿತ್ತರಾಗಿ ಕುಳಿತುಬಿಟ್ಟರು. ಪ್ರವಾಹ ಮೇರೆಮೀರಿತು. ಆದರೆ ಪ್ರವಾಹದ ತೆರೆಗಳು ಶ್ರೀಗಳನ್ನು ಮುಟ್ಟದೆ

ಇಳಿದುಹೋದವು. ಶ್ರೀಗಳು ಅಭಿಷೇಕಗಳನ್ನು ಮುಗಿಸಿ ಹೊರಬಂದರು. ಮತ್ತೆ ಮಹಾಪೂರವು ಮೊದಲಿನಂತೆ ಇಮ್ಮಡಿಸಿ ತುಂಬಿ ಹರಿಯತೊಡಗಿತು. ಹಲವಾರು ವೇಳೆ ಶ್ರೀಗಳು ಲಿಂಗಪೂಜೆ ಮಾಡುತ್ತಿದ್ದ ಸಮಯದಲ್ಲಿ ಎರಡು ನಾಗಗಳು ಹೆಡೆಎತ್ತಿ ಮುಂದೆ ನಿಂತು ಪೂಜಾನಂತರ ಹರಿದುಹೋಗುತ್ತಿದ್ದುವು. ಕ್ರಿ.ಶ. ೧೯೨೪ರಲ್ಲಿ ಶ್ರೀ ಇಮ್ಮಡಿ ಮರುಳಸಿದ್ದಮಹಾಸ್ವಾಮಿಗಳು ಲಿಂಗೈಕ್ಯರಾದರು. ಶ್ರೀಮಠದ ವ್ಯವಸ್ಥೆಯನ್ನು ಇಮ್ಮಡಿ ಶ್ರೀ ನಿರ್ವಾಣಮಹಾಸ್ವಾಮಿಗಳವರೇ ವಹಿಸಿದರು.

ಶ್ರೀ ಮಠದ ಮುಂದಿನ ಉತ್ತರಾಧಿಕಾರಿಗಳು ಇಮ್ಮಡಿ ಶ್ರೀ ನಿರ್ವಾಣ ಮಹಾಶಿವಯೋಗಿಗಳು, ಶ್ರೀ ಮಠದ ಉತ್ತರಾಧಿಕಾರಿಗಳನ್ನು ಆರಿಸಲು ಸ್ಥಳೀಯ ಮುಖಂಡರೊಡನೆ ಸಮಾಲೋಚಿಸಿ, ಅವರೊಡನೆ ಶ್ರೀ ಸಿದ್ಧಗಂಗಾಕ್ಷೇತ್ರಕ್ಕೆ ತೆರಳಿದರು. ಶ್ರೀ ಸಿದ್ಧಗಂಗಾ ಕ್ಷೇತ್ರದ ಅಂದಿನ ಅಧಿಪತಿಗಳೂ, ಪರಮ ತಪೋಧನರೂ ಆದ ಶ್ರೀ ಉದ್ದಾನ ಶಿವಯೋಗಿಗಳವರಲ್ಲಿ ವಿಷಯ ಪ್ರಸ್ತಾಪಿಸಿದರು. ಶ್ರೀ ಉದ್ದಾನ ಶಿವಯೋಗಿಗಳವರು ತಮ್ಮ ಗುರುಕುಲದಲ್ಲಿ ವಿದ್ಯಾಭ್ಯಾಸ ಮಾಡಿಕೊಂಡಿದ್ದ ಕೆಂಬಳಲು ಗ್ರಾಮದ ಗುರುಲಿಂಗಜಂಗಮ ಸೇವಾನಿರತರಾದ ಶ್ರೀ ಸಿದ್ಧಬಸಪ್ಪ, ಬಸಮ್ಮ ಅವರ ಸುಪುತ್ರರಾದ ಶ್ರೀ ಕಾಳಪ್ಪ ಎಂಬುವವರನ್ನು ದೇಗುಲಮಠದ ಶ್ರೀ ನಿರ್ವಾಣಮಹಾಶಿವಯೋಗಿಗಳವರ ಉತ್ತರಾಧಿಕಾರಿಯಾಗಿ ನಿಶ್ಚಯಿಸಿ ವಟುವನ್ನು ಆಶೀರ್ವದಿಸಿ ಕಳುಹಿಸಿಕೊಟ್ಟರು. ಶಾಲಿವಾಹನ ಶಕ ೧೮೫೦ ಬಹುಧಾನ್ಯ ಸಂವತ್ಸರದ ಮಾಘ ಶುದ್ಧ ಸಪ್ತಮಿ (೧೯೩೯ ರ ಫೆಬ್ರವರಿ) ಶುಭಮೂಹೂರ್ತದಲ್ಲಿ ದೇಗುಲಮಠದ ಚರಪಟ್ಟಾಧಿಕಾರ ಮಹೋತ್ಸವವು ವೈಭವದಿಂದ ಜರುಗಿತು. ನೂತನ ಶ್ರೀಗಳವರಿಗೆ ಚರಮೂರ್ತಿ ಇಮ್ಮಡಿ ಶ್ರೀ ಮಹಾಲಿಂಗಮಹಾಸ್ವಾಮಿಗಳೆಂದು ಅಭಿಧಾನವಾಯಿತು. ನೂತನ ಶ್ರೀಗಳವರು ತಮ್ಮ ಹಿರಿಯ ಗುರುವರ್ಯರ ಕೃಪಾಶ್ರಯದಲ್ಲಿ ತಮ್ಮ ದಿವ್ಯಪರಂಪರೆಯ ಪ್ರಗತಿಯನ್ನು ಗುರುಕೃಪೆಯಿಂದ ಸಾಧಿಸುವ ಸಂಕಲ್ಪವನ್ನು ಕೈಗೊಂಡರು.

ಇಮ್ಮಡಿ ಶ್ರೀ ನಿರ್ವಾಣಮಹಾಶಿವಯೋಗಿಗಳು

ಶ್ರೀದೇಗುಲಮಠದ ಇತಿಹಾಸದಲ್ಲಿ ಇಮ್ಮಡಿ ಶ್ರೀ ನಿರ್ವಾಣಮಹಾಶಿವಯೋಗಿಗಳ ಕಾಲ ಒಂದು ಮೈಲಿಗಲ್ಲು. ಅವರು ಪವಾಡಪುರುಷರೆಂಬುದು ಈಗಾಗಲೇ ವ್ಯಕ್ತವಾಗಿದೆ. ಅವರು ಪರಮ ದಾಸೋಹಮೂರ್ತಿಗಳೂ, ಶಿವಾನುಭವದಲ್ಲಿ ವಿಶೇಷ ಆಸಕ್ತಿವುಳ್ಳವರೂ ಆಗಿದ್ದರು. ಇವರು ಶ್ರೀ ದೇಗುಲಮಠದ ಮೇಲೆ ಬೀರಿದ ಪ್ರಭಾವ ಅಷ್ಟು ಹಿರಿದು. ಇವರದು ದೃಢವೂ, ಆರೋಗ್ಯಪೂರ್ಣವೂ, ಎತ್ತರವೂ ಆದ ನಿಲುವು. ತೇಜಃಪುಂಜವಾದ ಮುಖ, ಕಾಂತಿಮಯವಾದ ನಯನಗಳು. ಅವರು ದಯಮಾಡಿಸುತ್ತಿದ್ದರೆ ಗಾಂಭೀರ್ಯವೇ ಮೈದಳೆದು ಅಡಿಇಟ್ಟಂತೆ ಅನುಭವವಾಗುತ್ತಿತ್ತು. ಅವರು ತೃಪ್ತಿಯನ್ನೇ ಬಿತ್ತಿ, ತೃಪ್ತಿಯನ್ನೇ ಬೆಳೆದು ತೃಪ್ತಿಯನ್ನೇ ಸೂಸುತ್ತಿದ್ದ ನಿತ್ಯತೃಪ್ತರು. ಅವರು ಹೊರಟರೆ ರಸ್ತೆಯ ಇಕ್ಕೆಲಗಳಲ್ಲಿ ಜನರು ನಿಂತು ಭಕ್ತಿ ಗೌರವಗಳಿಂದ ತಲೆಬಾಗಿ ನಮಿಸುತ್ತಿದ್ದ ದೃಶ್ಯ ಇಂದಿಗೂ ಕಣ್ಣಿಗೆ ಕಟ್ಟಿದಂತಿದೆ.

ಶ್ರೀಗಳವರಿಗೆ ಬಡವ- ಬಲ್ಲಿದರೆಂಬ ಭೇದ ಭಾವವಿರಲಿಲ್ಲ. ಈ ವಿಚಾರ ಅವರನ್ನು ಸನಿಹದಿಂದ ಬಲ್ಲವರೆಲ್ಲರಿಗೂ ತಿಳಿದಿದೆ. ಸಮಾಜದ ಅತ್ಯಂತ ಪ್ರತಿಷ್ಠಿತ ಗೌರವಾನ್ವಿತ ಶ್ರೀಮಂತ ವರ್ಗದವರು ಬಂದು ದರ್ಶನ ಮಾಡಿದಾಗ ಎಷ್ಟು ಪ್ರೀತಿಯಿಂದ ಮಾತನಾಡಿಸುತ್ತಿದ್ದರೋ, ಹರಕು ಅಂಗಿಯ ತಿರುಕ ಬಂದು ಮಾತನಾಡಿಸಿದಾಗಲೂ ಅಷ್ಟೇ ಪ್ರೀತಿಯಿಂದ ಮಾತನಾಡಿಸುತ್ತಿದ್ದರು. ಅವರ ಮಾತು ನೇರ, ಸರಳ, ಮಿತ. ದೃಷ್ಟಿಯು ಆಳ, ಗಂಭೀರ. ಹಣಕ್ಕೆ ಅವರು ನೀಡುತ್ತಿದ್ದುದು ಕವಡೆಯ ಬೆಲೆ ಅಷ್ಟೆ.

ಪೂಜ್ಯರು ಬಿನ್ನಹ ಬಿಡುಗಡೆಗೆ ದಯಮಾಡಿಸಿದಾಗ ತಮ್ಮೊಡನೆ ಕರೆದೊಯ್ಯುತ್ತಿದ್ದ ಮಕ್ಕಳು, ಕಾರಿನ ಚಾಲಕ ಮುಂತಾದ ಅನುಯಾಯಿಗಳ ಯೋಗ ಕ್ಷೇಮವನ್ನು ಚೆನ್ನಾಗಿ ವಿಚಾರಿಸಲು ಮನೆಯ ಒಡೆಯರಿಗೆ ಸೂಚಿಸುತ್ತಿದ್ದುದು ಒಂದು ವಿಶಿಷ್ಟ ಗುಣ. ಪೂಜಾದಿ ಧಾರ್ಮಿಕ ಕಾರ್ಯದಲ್ಲಿ ಸ್ತ್ರೀಯರಿಗೆ ಪುರುಷರಿಗೆ ಸಮಾನ ಅವಕಾಶಗಳನ್ನು ಕೊಡುತ್ತಿದ್ದರು.

ಶಿವದೀಕ್ಷೆ ಪಡೆದು ಎಳೆಯ ವಯಸ್ಸಿನಲ್ಲೇ ಕಾಷಾಯಧಾರಿಗಳಾದ ಎಳೆಯ ವಟುಗಳ ಬಗ್ಗೆ, ಸ್ತ್ರೀಯರ ಬಗ್ಗೆ ಆ ವೈರಾಗ್ಯಮೂರ್ತಿ ತೋರುತ್ತಿದ್ದ ಗೌರವ ಅಸದೃಶ.

ಚಿಕ್ಕಮಕ್ಕಳು, ಮೂಕಪ್ರಾಣಿಗಳಿಗೆ ಅವರು ತೋರಿಸುತ್ತಿದ್ದ ದಯೆ ಸರ್ವರಿಗೂ ಅಚ್ಚರಿವುಂಟುಮಾಡುತ್ತಿತ್ತು. ಅಳುವ ಮಕ್ಕಳನ್ನು ತಾಯಿಯಂತೆ ಮೈದಡವಿ ಲಲ್ಲೆಗೈದು ಊಟಮಾಡಿಸುವುದು, ಹಣ್ಣು ಹಂಪಲುಗಳನ್ನಿತ್ತು ಉಪಚರಿಸುವುದು ಅವರ ಪ್ರೀತಿಯ ದ್ಯೋತಕ. ಶ್ರೀ ಮಠದಲ್ಲಿ ಕರುಗಳು ಬಿಸಿಲಲ್ಲಿ ಒಣಗುತ್ತಾ ಬಸವಳಿಯುವುದನ್ನು ಕಂಡರೆ ನೊಂದುಕೊಂಡು ಎಷ್ಟೇ ಕೇಲಸಪಿರಲಿ, ಅವುಗಳಿಗೆ ನೀರುಣಿಸಿ ನೆರಳಲ್ಲಿ ಕಟ್ಟಿ ಹುಲ್ಲು ಹಾಕಿಯೇ ಮುಂದೆ ಸಾಗುತ್ತಿದ್ದರು. ದನಕರುಗಳು, ಬೆಕ್ಕು, ನಾಯಿ ಮುಂತಾದ ಮೂಕಪ್ರಾಣಿಗಳನ್ನು ಹಿಂಸಿಸುವುದು ಅವರಿಂದ ಸಹಿಸಲಾಗುತ್ತಿರಲಿಲ್ಲ. ಒಮ್ಮೆ ಬಿನ್ನಹ ಮುಗಿಸಿಕೊಂಡು ಹೊರಗಿನಿಂದ ಬಂದು ಅವರ ಕಣ್ಣಿಗೆ ಬೆಕ್ಕಿನ ಮರಿಗಳು ಕಾಣಿಸದಿದ್ದಾಗ ತುಂತುರು ಮಳೆಯ ಕಗ್ಗತ್ತಲಿನಲ್ಲಿಯೇ ಕಂದೀಲು ಹಚ್ಚಿಕೊಂಡು ಬೇಲಿಗುಂಟ ಹುಡುಕಿ, ಹಿಡಿದು ತಂದು ಘಾಸಿಗೊಂಡ ಮರಿಗಳನ್ನು ಉಪಚರಿಸಿ, ಬೆಚ್ಚನೆಯ ಹಾಸಿನಲ್ಲಿ ಮಲಗಿಸಿ ಅನಂತರ ತಾವು ಮಲಗುತ್ತಿದ್ದರಂತೆ. ಪೂಜ್ಯರು ಸರ್ವರಲ್ಲೂ ಸಮಾನ ಪ್ರೀತಿವುಳ್ಳವರೇ ಆದರೂ, ಒಮ್ಮೊಮ್ಮೆ ದೀನ ದಲಿತರ ಪಕ್ಷಪಾತಿಯೇನೋ ಎನಿಸುತ್ತಿತ್ತು. ಬಡವರ ಮನೆಯ ಸರಳ ಭಕ್ಷ್ಯಭೋಜಗಳ ನೈವೇದ್ಯ ಅವರಿಗೆ ಆಪ್ಯಾಯಮಾನ. ಆಶ್ರಯಿಸಿದವರನ್ನು ಎಂದಿಗೂ ಕೈಬಿಡದ ಮನೋಧರ್ಮ, ಬದುಕಿನ ಅತಂತ್ರ ಪರಿಸ್ಥಿತಿಗೆ ಸಿಕ್ಕಿ ದುಃಖಕ್ಕೊಳಗಾದ ಹೆಣ್ಣುಮಕ್ಕಳು, ವೃದ್ಧರು, ರೋಗಿಗಳು ಮತ್ತು ಚಿಕ್ಕಮಕ್ಕಳಲ್ಲಿ ಅಪಾರ ಕರುಣೆ. ಇಂತಹವರಿಗೆ ಶ್ರೀಮಠದ ವಾಯವ್ಯ ಮೂಲೆಯ "ಮಜ್ಜಿಗೆ ಮನೆ" ಎಂಬ ಸುಪ್ರಸಿದ್ಧ ಹೆಸರಿನ ಜಾಗವೇ ಆಶ್ರಯ ತಾಣ. ಅದೆಷ್ಟು ಜನರ ಕಂಬನಿಯನ್ನು ಈ ಸ್ಥಳ ಒರೆಸಿದೆಯೋ, ಸಾಂತ್ವನ ತುಂಬಿದೆಯೋ, ಭ್ರಾಂತಿ ನೀಗಿದೆಯೋ! ತಮ್ಮನ್ನು ಆಶ್ರಯಿಸಿ ಬೇಡಿ ಬಂದವರನ್ನು ಪೂಜ್ಯರು ಎಂದೂ ಕೈಬಿಡಲಿಲ್ಲ. ಇಂತಹ ವೈಶಿಷ್ಟಪೂರ್ಣ ಕರುಣಾಮೂರ್ತಿಯನ್ನು ನಾನು ಕಂಡಿಲ್ಲ. ಅವರ ಕೃಪಾದೃಷ್ಟಿ ಬಿದ್ದವರನ್ನು ಮುಟ್ಟುವ ಸಾಹಸಿಗಳೂ ಯಾರೂ ಇರಲಿಲ್ಲ. ಅವರ ಅಮೃತಹಸ್ತದಿಂದ ಪ್ರಸಾದ ಸೇವಿಸಿದವರು ಮಹಾಭಾಗ್ಯ ಶಾಲಿಗಳೆಂದೇ ನನ್ನ ಭಾವನೆ. ಅವರಿಗೆ ಏನೂ ಗೊತ್ತಿರಲಿಲ್ಲ. ಆದರೆ ಅವರಿಗೆ ಎಲ್ಲವೂ ಗೊತ್ತಿತ್ತು. ಅವರು ಕಲ್ಯಾಣದ ಗುಪ್ತಭಕ್ತ ಅಜಗಣ್ಣನಂತೆ.

ಇಮ್ಮಡಿ ಶ್ರೀ ನಿರ್ವಾಣ ಮಹಾಶಿವಯೋಗಿಗಳವರ ಕಾಲದಲ್ಲಿ ಶ್ರೀ ದೇಗುಲಮಠ ಕ್ಷೇತ್ರದ ದಾಸೋಹ-ಕಾಯಕ ಮುಗಿಲು ಮುಟ್ಟಿತ್ತು. ಎಷ್ಟೇ ಜನರು ಎಂತಹ ವೇಳೆಯಲ್ಲಿ ಬಂದರೂ, ಪ್ರಸಾದ ದೊರೆಯಲಿಲ್ಲವೆಂಬ ಸೊಲ್ಲು ಕೇಳಿಬರಲಿಲ್ಲ. ದಾಸೋಹಕಾರ್ಯದಲ್ಲಿ ಎಂದೂ ಬೇಸರ ಕಾಣದ ಪರಮ ದಾಸೋಹಮೂರ್ತಿ ಅವರು.

ಶ್ರೀಮಠದ ತುಂಬಾ ಯಾವುದೇ ಕೆಲಸವನ್ನು ಮಾಡುವ ಜನರಿದ್ದರೂ ಶತಸಂವತ್ಸರಗಳನ್ನು ದಾಟಿನಿಂತಿದ್ದ ಆ ತಪೋಮೂರ್ತಿ ತಮ್ಮ ಕೈಯಲ್ಲಿ ಬಿಸಿಸಾರಿನ ಬಕೆಟ್ಟು ಹಿಡಿದು ಶಾಲಾ ಮಕ್ಕಳಿಗೆ, ಭಕ್ತರಿಗೆ ನೀಡುತ್ತಿದ್ದ ವೈಖರಿ ಅದ್ಭುತ. ಬಾವಿಯಿಂದ ನೀರು ಸೇದುತ್ತಿದ್ದರು, ಪೂಜೋಪಕರಣಗಳನ್ನು ಬೆಳಗುತ್ತಿದ್ದರು, ತರಕಾರಿ ಹೆಚ್ಚುತ್ತಿದ್ದರು, ದೀಪಗಳಿಗೆ ಬತ್ತಿ ಹೊಸೆಯುತ್ತಿದ್ದರು, ಹೂವು ಎತ್ತುತ್ತಿದ್ದರು. ಅವರ ಶಿವಪೂಜೆ ಅದ್ಭುತ! ಆನಂದ!

ಶಿವಯೋಗಿಗಳು ಮಿತಭಾಷಿಗಳು, ಅವರ ಅಪರಿಮಿತ ಶಿವಧ್ಯಾನಕ್ಕೆ, ತನ್ಮಯತೆಗೆ ಮೌನವೊಂದು ಮಹಾಭರಣ. ಹಾವು ಹರಿದು ಬರಲಿ, ನುಗ್ಗಿ ಬರಲಿ, ಏನೇ ಆದರೂ ಅವರದು ಸ್ಥಿರಚಿತ್ತ. ಅಳುಕಿ ಗಾಬರಿಗೊಂಡವರಲ್ಲ.

ಪೂಜ್ಯರು ವಚನಗಳನ್ನು ರಚಿಸಲಿಲ್ಲ, ಉಪ್ಪು ಕಾರ ಹಚ್ಚಿದ ಉಪನ್ಯಾಸಗಳನ್ನು ನೀಡಲಿಲ್ಲ, ಸಭೆ ಸಮಾರಂಭ ಸನ್ಮಾನಗಳಿಗೆ ತಾವಾಗಿಯೇ ಹಾತೊರೆಯಲಿಲ್ಲ, ಘೋಷಣೆಗಳನ್ನು ಕೂಗಿದವರಲ್ಲ, ಇವೆಲ್ಲವನ್ನೂ ಅಪಾರವಾಗಿ ಮಾಡಿ ಬಹುಜನರು ಸಾಧಿಸಲಾರದ್ದನ್ನು ಅವರು ಕೇವಲ ಮುಗ್ಧಭಾವದ ಮುಗುಳ್ನಗೆಯ ಪ್ರೇಮ ಕಾರುಣ್ಯಗಳ ಸಂಭಾಷಣೆಯಿಂದಲೇ ಸಾಧಿಸಿದರು.

ಕಳ್ಳನನ್ನು ಕಳ್ಳನೆನ್ನದೆ. ಸುಳ್ಳನನ್ನು ಸುಳ್ಳನೆನ್ನದೆ ಯಾರನ್ನೂ ಯಾವುದಕ್ಕೂ ದೂಷಿಸದೆ ತಲೆಯಾಡಿಸುತ್ತಾ ಮುಗುಳ್ನಗೆ ಬೀರುತ್ತಿದ್ದ ಅವರ ಮುಗುಳ್ನಗೆಗೆ ಕಲ್ಲೆದೆ, ಮುಳ್ಳೆದೆ, ಗಂಟೆದೆ, ಕೆಚ್ಚೆದೆ, ಸೊಕ್ಕೆದೆಗಳೆಲ್ಲಾ ನುಚ್ಚುನೂರಾಗಿ ಕರಗಿ ನೀರಾಗುತ್ತಿದ್ದುವು.

ಭಾರತದ ಶ್ರೇಷ್ಠ ದಾರ್ಶನಿಕರೂ, ಪಂಡಿತೋತ್ತಮರೂ, ಪರಮ ವೈರಾಗ್ಯಮೂರ್ತಿಗಳೂ, ಮಹಾ ಮಹಿಮರೂ ಆಗಿದ್ದ ಮೈಸೂರು ಅರಮನೆ ಪಂಚಗವಿ ಮಠಾಧ್ಯಕ್ಷರಾದ ಶ್ರೀ ಶ್ರೀ ಗೌರೀಶಂಕರ ಮಹಾಸ್ವಾಮಿಗಳು ಪೂಜ್ಯರ ದರ್ಶನಾರ್ಥವಾಗಿ ನಾಲ್ಕಾರು ವೇಳೆ ಶ್ರೀಮಠಕ್ಕೆ ದಯಪಾಡಿಸಿದರು. ಶಿವಯೋಗಿಗಳ ಮಹತ್ವವನ್ನರಿತ ಅವರು "ಉತ್ತರ ಕರ್ನಾಟಕದಲ್ಲಿ ಮುರಗೋಡ ಶ್ರೀ ಮಹಾಂತ ಶಿವಯೋಗಿಗಳೂ, ದಕ್ಷಿಣ ಕರ್ನಾಟಕದಲ್ಲಿ ಕನಕಪುರ ದೇಗುಲಮಠದ ಶ್ರೀ ನಿರ್ವಾಣ ಮಹಾಶಿವಯೋಗಿಗಳೂ, ಅಪೂರ್ವ ವ್ಯಕ್ತಿತ್ವವುಳ್ಳ ಜೀವಂತರಾದ ಮಹಾಶಿವಯೋಗಿಗಳು ಎಂದು ಅನೇಕ ಸಂದರ್ಭಗಳಲ್ಲಿ ಹೇಳಿದ್ದುಂಟು. ಅಖಿಲ ಭಾರತ ವೀರಶೈವ ಮಹಾಸಭಾಧ್ಯಕ್ಷರಾಗಿದ್ದ ಪರಮದಾಸೋಹಮೂರ್ತಿಗಳೂ ವೀರವೈರಾಗ್ಯ ಸಂಪನ್ನರೂ ಶಿವಯೋಗ ಸಿದ್ಧರೂ, ಶ್ರೀ ಸಿದ್ಧಗಂಗಾ ಕ್ಷೇತ್ರಾಧೀಶರೂ ಆದ ಪರಮಪೂಜ್ಯ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರು ಹಲವಾರು ವೇಳೆ ಪೂಜ್ಯರ ದರ್ಶನಭಾಗಿಗಳಾಗಿದ್ದಾರೆ. ಪೂಜ್ಯರ ಪುಣ್ಯದರ್ಶನವೇ ಹೃದಯಸ್ಪರ್ಶಿ ಆಶೀರ್ವಚನವೆನಿಸುವಂತಿತ್ತು. ಪೂಜ್ಯರು ತಪೋಮೂರ್ತಿಗಳು ನಾಡಿನ ಮಠಾಧೀಶರಲ್ಲಿ ಅಗ್ರಪಂಕ್ತಿಯಲ್ಲಿದ್ದುದಲ್ಲದೆ, ಪೂಜ್ಯರು ಅನೇಕ ಮಠಾಧೀಶರಿಗೆ ಆಯಾಯ ಮಠದ ಆಶ್ರಮಾಧಿಕಾರವನ್ನು ವಹಿಸಿಕೊಟ್ಟು ಬ್ರಹ್ಮೋಪದೇಶವನ್ನಿತ್ತು ಕೃತಾರ್ಥರನ್ನಾಗಿ ಮಾಡಿದ್ದಾರೆ. ಹೀಗೆ ಶಿವಯೋಗನಿಷ್ಠೆ, ವೀರವೈರಾಗ್ಯ ವೃತ್ತಿ, ಸರಳ ಸಹಜತೆಯಿಂದ ಕೂಡಿದ ಮುಗ್ಧತೆ, ಲಿಂಗಾನಂದ, ದಾಸೋಹಂಭಾವ ಮತ್ತು ಶರಣರಾಚರಣೆಗಳಿಂದ ವಿಶಿಷ್ಟ ಮಹತ್ವವನ್ನು ಗಳಿಸಿದ ಇಮ್ಮಡಿ ಶ್ರೀ ನಿರ್ವಾಣಮಹಾಶಿವಯೋಗಿಗಳವರ ಸ್ಥಾನ ಮಹೋನ್ನತವಾದುದ್ದು. ಶ್ರೀ ದೇಗುಲ ಸುಕ್ಷೇತ್ರದ ಈ ಮಹಾನ್‌ಜ್ಯೋತಿ ತಮ್ಮ ೧೦೩ ಸಂವತ್ಸರದ ತುಂಬು ಜೀವನವನ್ನು ಅನುಭವಿಸಿ, ದಿನಾಂಕ: ೩೦-೦೧-೧೯೭೨ರ ಸಂಜೆ ಜಗಜ್ಜ್ಯೋತಿಯಲ್ಲಿ ಲೀನವಾಯಿತು.

ಶಿವಯೋಗಿಗಳವರ ಅವಸಾನ ಸಮಯದಲ್ಲಿ ಅವರ ಕರಕಮಲಸಂಜಾತರಾದ ಚರಮೂರ್ತಿ ಶ್ರೀ ಇಮ್ಮಡಿ ಮಹಾಲಿಂಗಮಹಾಸ್ವಾಮಿಗಳವರೂ, ಗುರುಪುಂಗವರೂ, ಶ್ರೀ ಸಿದ್ಧಗಂಗಾಕ್ಷೇತ್ರಾಧೀಶರೂ ಆದ ಪರಮಪೂಜ್ಯ ಶ್ರೀ ಶ್ರೀ ಶಿವಕುಮಾರಮಹಾಸ್ವಾಮಿಗಳೂ, ಅನೇಕ ಹರಗುರುಚರಮೂರ್ತಿಗಳೂ ಅವರ ಸನಿಹದಲ್ಲಿದ್ದರು. ಪೂಜ್ಯರು ಲಿಂಗೈಕ್ಯರಾದ ಸುದ್ದಿ ಮುಟ್ಟುತ್ತಿದ್ದಂತೆಯೇ ನಾಡಿನ ನಾನಾ ಮೂಲೆಗಳಿಂದ ಭಕ್ತರ ಸಮೂಹವೇ ಹರಿದು ಬಂದು ಪೂಜ್ಯರ ಅಂತಿಮ ದರ್ಶನ ಪಡೆಯಿತು. ೩೧-೦೧-೧೯೭೨ ರ ಬೆಳಗಿನಿಂದ ಸಂಜೆಯವರಿಗೂ ಶಿವಯೋಗಿಗಳವರ ಪಾರ್ಥಿವ ಶರೀರದ ಉತ್ಸವವು ಕನಕಪುರ ಪಟ್ಟಣದ ಎಲ್ಲಾ ಬೀದಿಬೀದಿಗಳಲ್ಲೂ ನಡೆದು ಸಂಜೆ ಸಕಲ ಸಾಂಪ್ರದಾಯಕ ವಿಧಿಯೊಡನೆ ಶಿವಯೋಗಿಗಳವರ ಸಮಾಧಿಕಾರ್ಯಗಳು ಶ್ರೀಕ್ಷೇತ್ರದಲ್ಲಿ ಜರುಗಿದವು.

ದಿನಾಂಕ: ೧೧-೦೨-೧೯೭೨ ರಂದು ನಡೆದ ಶಿವಯೋಗಿಗಳವರ ಸಂಸ್ಮರಣೆಯು ನೂರಾರು ಮಂದಿ ಹರಗುರು ಚರಮೂರ್ತಿಗಳು, ಸಹಸ್ರಾರು ಗಣ್ಯರು, ಲಕ್ಷಾಂತರ ಭಕ್ತ ಸಮೂಹದಿಂದ ಕೂಡಿದ್ದು, ಪೂಜ್ಯರ ಗದ್ದುಗೆಗೆ ರುದ್ರಾಭಿಷೇಕ, ಜಂಗಮ ಪಾದಪೂಜೆ, ಭಕ್ತರಿಗೆ ಪ್ರಸಾದ ಸಂತರ್ಪಣೆ, ಶ್ರೀ ಸಿದ್ಧಗಂಗಾ ಶ್ರೀಗಳವರ ದಿವ್ಯಾಧ್ಯಕ್ಷತೆಯ ಬೃಹತ್ ಧಾರ್ಮಿಕ ಸಭೆಗಳು, ನ ಭೂತೋ ನ ಭವಿಷ್ಯತಿ ಎಂಬಂತೆ ಜರುಗಿದವು. ಸಂನ್ಯಾಸ ಸಂತೃಪ್ತಿಯಿಂದ ಬದುಕಬೇಕಾದರೆ ಇಮ್ಮಡಿ ಶ್ರೀ ನಿರ್ವಾಣಮಹಾಶಿವಯೋಗಿಗಳಂತಹವರನ್ನು ಆಶ್ರಯಿಸಿ ಬದುಕಬೇಕು!

ಶ್ರೀ ಇಮ್ಮಡಿ ನಿರ್ವಾಣಮಹಾಸ್ವಾಮಿಗಳವರು ತಾವು ಮಹಾಜ್ಯೋತಿಯಲ್ಲಿ ಲೀನವಾದರೂ ಸಹ ಆ ಜ್ಯೋತಿಯ ಕಾಂತಿ ಶ್ರೀಕ್ಷೇತ್ರದಲ್ಲಿ ಕಂದಿಲ್ಲವೆಂಬುದನ್ನು ಅವರು ಮುಂದಿನ ಪರಂಪರೆ ನಿಚ್ಚಳವಾಗಿ ತೋರಿಸುತ್ತಿದೆ. ಪೂಜ್ಯರ ಜೀವಿತ ಅವಧಿಯಲ್ಲಿಯೇ, ಅವರ ಅಪೇಕ್ಷೆಯಂತೆ ಅವರ ಕರಕಮಲಸಂಜಾತರಾದ ಚರಮೂರ್ತಿ ಇಮ್ಮಡಿ ಶ್ರೀ ಮಹಾಲಿಂಗ

ಮಹಾಸ್ವಾಮಿಗಳವರು ೧೯೬೪ರಲ್ಲಿ ಶ್ರೀ ನಿರ್ವಾಣಸ್ವಾಮಿ ಕೃಪಾ ವಿದ್ಯಾಪೀಠ ಎಂಬ ವಿದ್ಯಾಸಂಸ್ಥೆಯನ್ನು ಸ್ಥಾಪಿಸಿದರು. ಅವರ ಆಶ್ರಯದಲ್ಲಿ ದಿನಾಂಕ: ೦೧-೦೬-೬೪ರಂದು ಶ್ರೀ ಇಮ್ಮಡಿ ನಿರ್ವಾಣ ಮಹಾಶಿವಯೋಗಿಗಳವರ ದಿವ್ಯಹಸ್ತದಿಂದ ಶ್ರೀ ನಿರ್ವಾಣಸ್ವಾಮಿ ವಸತಿ ಪ್ರೌಢಶಾಲೆಯ ಪ್ರಾರಂಭೋತ್ಸವದ ಜ್ಯೋತಿಯನ್ನು ಹಚ್ಚಿ ಆಶೀರ್ವದಿಸಿದರು. ಇಂದು ಶ್ರೀ ಮಠದ ಆಶ್ರಯದಲ್ಲಿ ಹಲವಾರು ವಿದ್ಯಾಸಂಸ್ಥೆಗಳು ಗ್ರಾಮಾಂತರ ಪ್ರದೇಶಗಳಲ್ಲೂ ಅಂಕುರಿಸಿ, ಪ್ರಜ್ವಲಿಸುತ್ತಿವೆ. ಶೈಕ್ಷಣಿಕ ಚಟುವಟಿಕೆಗಳು ವೈವಿಧ್ಯಮಯವಾಗಿವೆ.

ಚರಮೂರ್ತಿ ಇಮ್ಮಡಿ ಶ್ರೀ ಮಹಾಲಿಂಗಮಹಾಸ್ವಾಮಿಗಳು:

ಕ್ರಿ.ಶ. ೧೯೨೪ರಲ್ಲಿ ಇಮ್ಮಡಿ ಶ್ರೀ ಮರುಳಸಿದ್ಧಮಹಾಸ್ವಾಮಿಗಳು ಲಿಂಗೈಕ್ಯರಾದುದನ್ನು, ಅಂದಿನಿಂದ ಶ್ರೀಮಠದ ವ್ಯವಸ್ಥೆಯನ್ನು ಶ್ರೀ ಇಮ್ಮಡಿ ನಿರ್ವಾಣಮಹಾಸ್ವಾಮಿಗಳವರೇ ವಹಿಸಿದ್ದರೆಂಬುದನ್ನೂ ತಿಳಿದಿದ್ದೇವೆ. ಪರಿಣಾಮವಾಗಿ ಶ್ರೀ ಇಮ್ಮಡಿ ನಿರ್ವಾಣಮಹಾಸ್ವಾಮಿಗಳವರ ಕಾರ್ಯಭಾರ ಹೆಚ್ಚಾಯಿತು. ಆದರೂ ಸುಮಾರು ೧೫ ವರ್ಷಗಳಷ್ಟು ದೀರ್ಘಕಾಲವನ್ನು ತಾವೊಬ್ಬರೇ ನಿರ್ವಹಿಸಿದರು. ಅನಂತರ ಸ್ಥಳೀಯ ಮುಖಂಡರೊಡನೆ ಸಮಾಲೋಚಿಸಿ ಶ್ರೀಮಠಕ್ಕೆ ನೂತನ ಪಟ್ಟವಿನ ಅನ್ವೇಷಣೆಯಲ್ಲಿ ತೊಡಗಿದರು. ಆದಾಗಲೇ ಸುಪ್ರಸಿದ್ಧ ಧಾರ್ಮಿಕ ಕ್ಷೇತ್ರವಾಗಿದ್ದ ಶ್ರೀ ಸಿದ್ಧಗಂಗೆಗೆ ಸ್ಥಳೀಯ ಮುಖಂಡರೊಡನೆ ಶ್ರೀ ಸಿದ್ಧಗಂಗೆಯ ಸಿದ್ಧಪುರುಷರಾದ ಶ್ರೀ ಶ್ರೀ ಉದ್ದಾನ ಶಿವಯೋಗಿಗಳವರಲ್ಲಿ ತಮ್ಮ ಅಭೀಷ್ಟವನ್ನು ವ್ಯಕ್ತಪಡಿಸಲು ತೆರಳಿದರು. ಆಶ್ಚರ್ಯ ಕಾದಿತ್ತು! ರೈಲಿನಿಂದಿಳಿಂದು ಶ್ರೀ ಮಠಾಭಿಮುಖವಾಗಿ ಹೊರಟಾಗ ಅನತಿ ದೂರದಲ್ಲಿಯೇ ಅವರನ್ನು ಸ್ವಾಗತಿಸಲೋ ಎಂಬಂತೆ ಶ್ರೀ ಉದ್ದಾನ ಶಿವಯೋಗಿಗಳವರು ತಮ್ಮ ನೆಚ್ಚಿನ ಶಿಷ್ಯರಾಗಿದ್ದ ಕಾಳಪ್ಪನವರೊಡನೆ ಎದುರಾಗಿ ದಯಮಾಡಿಸಿದರಂತೆ. ಕುಶಲಪ್ರಶ್ನೆಗಳಾದ ಮೇಲೆ ಶ್ರೀ ಮಠದಲ್ಲಿ ಪೂಜಾನುಷ್ಠಾನಗಳು ಮುಗಿದ ನಂತರ ಇಮ್ಮಡಿ ಶ್ರೀ ನಿರ್ವಾಣಮಹಾಸ್ವಾಮಿಗಳವರು, ಶ್ರೀ ಉದ್ದಾನ ಶಿವಯೋಗಿಗಳಲ್ಲಿ ತಮ್ಮ ಅಭೀಷ್ಟವನ್ನು ವ್ಯಕ್ತಪಡಿಸಿದರು.

ಶ್ರೀಗಳವರು ತಮ್ಮ ಅಚ್ಚುಮೆಚ್ಚಿನ ಶಿಷ್ಯರಾಗಿದ್ದ ಶ್ರೀ ಕಾಳಪ್ಪನವರನ್ನೇ ಶ್ರೀ ದೇಗುಲಮಠದ ಉತ್ತರಾಧಿಕಾರಿಗಳಾಗಿ ಆರಿಸಿಕೊಳ್ಳಲು ಸೂಚಿಸಿದರು. ಇಮ್ಮಡಿ ಶ್ರೀ ನಿರ್ವಾಣಮಹಾಪ್ರಭುಗಳವರು ಸಂತಸದಿಂದ ಶ್ರೀಗಳವರ ಸಲಹೆಯನ್ನು ಒಪ್ಪಿದರು. ಆದರೆ ಶ್ರೀ ಕಾಳಪ್ಪನವರು ಬೆಚ್ಚಿದರು. ಅವರಿಗೆ ಜಂಗಮನಿಷ್ಠೆ ನೇಮ ಕಾಠಿಣ್ಯತೆ ಖಿಡ್ಗಧಾರಾವ್ರತ. ಅರಿವು, ವ್ಯಾಪ್ತಿ ಮತ್ತು ಜವಾಬ್ದಾರಿಗಳ ಅರಿವಾಗಿತ್ತು. ಗುರುಸೇವೆಯೇ ಅವರ ಜೀವನದ ಪರಮಗುರಿಯಾಗಿತ್ತು. ಆದ್ದರಿಂದಲೇ ಅವರು ಈ ಗುರುತರ ಜವಾಬ್ದಾರಿ ಹೊರಲು ಕಿಂಚಿತ್ ಹಿಂಜರಿದರು. ಆದರೆ ಗುರುವಿಗೆ ಅರಿವಿಲ್ಲವೇ ಈ ಶಿಷ್ಯನ ಸತ್ವ! ಭವಿಷ್ಯಜ್ಞಾನಿಗಳಾದ ಶ್ರೀ ಉದ್ದಾನ ಶಿವಯೋಗಿಗಳವರು ಅವರಿಗೆ ಧೈರ್ಯತುಂಬಿ ಆಶೀರ್ವದಿಸಿ, ಆಶ್ರಮ ಸ್ವೀಕಾರಕ್ಕೆ ಆಜ್ಞೆ ಕೊಟ್ಟು ಒಪ್ಪಿಗೆಯ ನಮಸ್ಕಾರ ಹಾಕಿಸಿಕೊಂಡರಂತೆ.

ಶ್ರೀ ಕಾಳಪ್ಪನವರ ಜನನ, ಬಾಲ್ಯ, ವಿದ್ಯಾಭ್ಯಾಸ ತುಮಕೂರು ಜಿಲ್ಲೆ, ತುಮಕೂರು ತಾಲ್ಲೂಕು, ಹೆಬ್ಬೂರು ಹೋಬಳಿಯ ಒಂದು ಪುಟ್ಟಗ್ರಾಮ ಕೆಂಬಳಲು ಎಂಬುದು. ಅಲ್ಲಿನ ಭಕ್ತವರೇಣ್ಯರು ಗುರುಲಿಂಗ ಜಂಗಮ ಸೇವಾಕಾಂಕ್ಷಿಗಳೂ, ದಾಸೋಹ ಪ್ರೇಮಿಗಳೂ ಆದ ಶ್ರೀ ಸಿದ್ಧಬಸಪ್ಪ, ಶ್ರೀಮತಿ ಬಸಮ್ಮ ಎಂಬ ದಂಪತಿಗಳ ಸುಪುತ್ರರೇ ಶ್ರೀ ಕಾಳಪ್ಪನವರು. ತುಂಬಿದ ಮನೆ. ವ್ಯವಸಾಯವೇ ಕುಟುಂಬದ ಕಸುಬು. ಜೀವನದಲ್ಲಿ ಗುರುಲಿಂಗ ಜಂಗಮ ಸೇವಾದಿ ಕಾರ್ಯಗಳಲ್ಲಿ ಹಿರಿಯ ಮೌಲ್ಯಗಳನ್ನು ಇರಿಸಿಕೊಂಡಿದ್ದ ಕುಟುಂಬದವರು, ಕಾಯಕದಲ್ಲಿಯೂ ನಿಷ್ಠೆವುಳ್ಳವರಾಗಿದ್ದರು. ಶ್ರೀ ಕಾಳಪ್ಪನವರು ತುಂಬ ಚಟುವಟಿಕೆವುಳ್ಳವರಾಗಿ, ಮನೆಯ ಎಲ್ಲರ ಪ್ರೀತಿಗೆ ಪಾತ್ರರಾಗಿದ್ದರು. ಈಗಿನಂತೆ ಅಂದಿನ ದಿನಗಳಲ್ಲಿ ಹತ್ತಿರದಲ್ಲಿ ಶಿಕ್ಷಣ ಸೌಲಭ್ಯಗಳಿರಲಿಲ್ಲ. ಕಾಳಪ್ಪನವರಿಗಾದರೋ ತಮ್ಮ ಓರಗೆಯವರಂತೆ, ತಾವೂ ವಿದ್ಯಾರ್ಜನೆ ಮಾಡಬೇಕೆಂಬ ಹಂಬಲ. ಹಾಗಾಗಿ ಅಂದಿಗಾಗಲೇ ಶಿಕ್ಷಣಕ್ಕೆ ಒತ್ತು ನೀಡುವ ಸಲುವಾಗಿ ಅನಾಥರೂ, ನಗರಗಳಲ್ಲಿ ವಾಸಿಸಿ, ಶಿಕ್ಷಣ ಪಡೆಯಲು

ಅನುವಿಲ್ಲದವರ ಅನುಕೂಲಕ್ಕಾಗಿ ಶ್ರೀ ಸಿದ್ಧಗಂಗೆಯಲ್ಲಿ ಸ್ಥಾಪಿತವಾಗಿದ್ದ ಶ್ರೀ ಸಿದ್ಧಗಂಗಾ ಗುರುಕುಲವನ್ನು ಶ್ರೀ ಕಾಳಪ್ಪನವರು ತಮ್ಮ ಹಿರಿಯರ ಅನುಮತಿ ಪಡೆದು ಸೇರಿದರು. ಅಲ್ಲಿ ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣವನ್ನು ಮುಗಿಸುವಷ್ಟರಲ್ಲಿಯೇ ಸಂಸ್ಕೃತ ಕಾವ್ಯಪರೀಕ್ಷೆಯನ್ನು ಮುಗಿಸಿಕೊಂಡರು. ಮುಂದಿನ ವಿದ್ಯಾಭ್ಯಾಸಕ್ಕಾಗಿ, ಪ್ರೌಢಶಾಲೆಗೆ ಸೇರಿದರು.

ಶ್ರೀ ಕಾಳಪ್ಪನವರಿಗೆ ಓದುಬರಹಗಳಲ್ಲಿ ಅಪಾರ ಶ್ರದ್ಧೆ, ಅಭ್ಯಾಸದಲ್ಲಿ ತುಂಬಾ ಶಿಸ್ತು, ಕೇವಲ ತರಗತಿಯ ಪಾಠ ಪ್ರವಚನಗಳಲ್ಲಿ ಅಲ್ಲದೆ, ಆಟಗಳಲ್ಲೂ ಅವರಿಗೆ ಬಹು ಆಸಕ್ತಿ. ವಾಲಿಬಾಲ್ ಅವರ ಮೆಚ್ಚಿನ ಆಟ. ಸೈಕಲ್, ಕುದುರೆ ಸವಾರಿಗಳಲ್ಲಂತೂ ಅವರಿಗೆ ಅತೀವ ಆಸಕ್ತಿ. ಅವರು ಎಂತಹ ತುಂಟ ಕುದುರೆಯನ್ನಾದರೂ ಏರಿ ಸವಾರಿಮಾಡಿ ಗೆಳೆಯರ ಪ್ರಶಂಸೆಗೆ ಒಳಗಾಗುತ್ತಿದ್ದರು. ಶ್ರೀಮಠದ ಯಾವುದೇ ಕೆಲಸ ಕಾರ್ಯಗಳ ನಿರ್ವಹಣೆಗೆ ಇವರೇ ಮುಂದಾಳು. ತಮ್ಮ ಚುರುಕು ಬುದ್ಧಿ, ವಾಕ್‌ಚಾತುರ್ಯ, ಕಾರ್ಯಕೌಶಲ್ಯ ಸಂಘಟನಾ ಶಕ್ತಿ, ದಕ್ಷತೆ, ಸೇವಾನಿಷ್ಠೆ, ಮಿಗಿಲಾದ ಧಾರ್ಮಿಕ ಶ್ರದ್ಧೆ ಮುಂತಾದ ಸದ್ಗುಣಗಳಿಂದಾಗಿ ಇವರು ಕ್ಷೇತ್ರಾಧಿಪತಿಗಳಾದ ಶ್ರೀ ಉದ್ದಾನ ಶಿವಯೋಗಿಗಳ ದೃಷ್ಟಿಗೆ ಬೀಳುವುದು ತಡವಾಗಲಿಲ್ಲ.

ಶ್ರೀ ಉದ್ದಾನ ಶಿವಯೋಗಿಗಳು ಪವಾಡಪುರುಷರೆಂಬುದು ಲೋಕವಿದಿತವೂ, ನಿರ್ವಿವಾದವೂ ಆದ ಮಾತು. ಅವರಿಗೆ ಕಾಳಪ್ಪನವರಲ್ಲಿ ಅಪಾರ ಪ್ರೀತಿವಾತ್ಸಲ್ಯಗಳು. ಕೆಲಸವಿರಲಿ ಇಲ್ಲದಿರಲಿ ಕಾಳಪ್ಪನವರು ಅವರ ಸನಿಹದಲ್ಲಿದ್ದರೆ ಅವರಿಗೆ ಬಹಳ ಸಂತೋಷ. ಅವರು ಯಾವಾಗ ಕೇಳಿದರೂ ಶ್ರೀಮಠದಲ್ಲಿ ಇವರು ಗೈರುಹಾಜರಾಗದಂತಿರಬೇಕು. ಸಂದರ್ಶಕರೊಡನೆ ಶ್ರೀಗಳವರು ತಮ್ಮ ಶಿಷ್ಯನನ್ನು ಪ್ರಶಂಸಿಸಿ, ಪ್ರೋತ್ಸಾಹಿಸಿ ಮಾತನಾಡುವುದು ವಾಡಿಕೆ. ಪ್ರೀತಿಗಾಗಿ 'ಏ ಅಣ್ಣಾ' ಎಂದು ಕರೆಯುತ್ತಿದ್ದರು. ಕಾಳಪ್ಪನವರಿಗಾದರೋ ಶ್ರೀ ಉದ್ದಾನ ಶಿವಯೋಗಿಗಳವರಲ್ಲಿ ಅಷ್ಟೇ ಪ್ರೇಮ, ಭಕ್ತಿ. ಆದರೆ ಅಷ್ಟೆ ಭಯ. ಯಾವುದೇ ಗುರುತರವಾದ ಕಾರ್ಯವನ್ನಾಗಲಿ, ಕಾಳಪ್ಪನವರಿಗೆ ವಹಿಸಿದರೆ, ಅಥವಾ ಕಾಳಪ್ಪನವರು ವಹಿಸಿಕೊಂಡಿದ್ದಾರೆಂದು ತಿಳಿದು ಬಂದರೆ ಆಗಲೇ ಶ್ರೀಗಳವರಿಗೆ ತೃಪ್ತಿ, ಸಮಾಧಾನ. ಯಾವುದೇ ವಿಚಾರದಲ್ಲಿ ಇವರ ವರದಿ ಸಲಹೆಗಳಿಗೆ ಶ್ರೀಗಳವರ ಬಳಿ ಪುರಸ್ಕಾರ ದೊರೆಯುತ್ತಿತ್ತು. ಆದರೆ ಕಾಳಪ್ಪನವರು ಎಂದೂ ಸಹ ಗುರುವಿನ ಈ ನಂಬಿಕೆಯನ್ನು ದುರುಪಯೋಗ ಪಡಿಸಿಕೊಂಡವರಲ್ಲ. ಶ್ರೀಗಳವರಲ್ಲಿ ಅಷ್ಟೇ ನಿಷ್ಠೆ, ನಿಸ್ವಾರ್ಥ ನಿರ್ಮಲ ಚಿತ್ತದಿಂದ ತಮ್ಮ ಶಕ್ತಿ ಮೀರಿ ಗುರುಗಳನ್ನು ಸೇವಿಸುತ್ತಿದ್ದರು.

ಶ್ರೀ ಉದ್ದಾನ ಶಿವಯೋಗಿಗಳವರ ಕರಕಮಲಸಂಜಾತರೂ, ಕರ್ನಾಟಕ ಮಾತ್ರವಲ್ಲದೆ ಭರತ ಖಂಡದ ಇಂದಿನ ಗುರುವರ್ಗದಲ್ಲಿ ಅಗ್ರಪಂಕ್ತಿಯಲ್ಲಿರುವವರೂ ಶ್ರೀ ಸಿದ್ಧಗಂಗಾಕ್ಷೇತ್ರದ ಕೀರ್ತಿಯನ್ನು ತಮ್ಮ ಪವಾಡಸದೃಶ ಕಾರ್ಯಗಳಿಂದ ಔನ್ನತ್ಯಕ್ಕೇರಿಸಿರುವವರೂ, ತಪೋಮೂರ್ತಿಗಳೂ, ಪರಮದಾಸೋಹ ಮೂರ್ತಿಗಳೂ, ಜ್ಞಾನಭಂಡಾರಿಗಳೂ ಆಗಿರುವ ಪೂಜ್ಯ ಶ್ರೀ ಶ್ರೀ ಶಿವಕುಮಾರಮಹಾಸ್ವಾಮಿಗಳವರು ಅಂದು ಶ್ರೀ ಸಿದ್ದಗಂಗಾ ಗುರುಕುಲದಲ್ಲಿ ಶ್ರೀ ಕಾಳಪ್ಪನವರಿಗೆ ಬಹಳ ಆತ್ಮೀಯ ಸಂಗಾತಿಗಳಾಗಿದ್ದರು. ಶ್ರೀ ಉದ್ದಾನ ಶಿವಯೋಗಿಗಳವರು ತಮ್ಮ ಉತ್ತರಾಧಿಕಾರಿಗಳಾಗಿ ಆಯ್ಕೆಯಾಗಿದ್ದ ಶ್ರೀ ಶ್ರೀ ಶಿವಕುಮಾರಮಹಾಸ್ವಾಮಿಗಳನ್ನು ಕಠಿಣ ಪರೀಕ್ಷೆಗಳಿಗೆ ಒಳಪಡಿಸುತ್ತಿದ್ದರಂತೆ. ಅವರು ಮಾಡಿದ ಕಾರ್ಯಗಳನ್ನು ಕಟುವಾಗಿ ವಿಮರ್ಶಿಸಿ ಕಟೂಕ್ತಿಗಳನ್ನು ಆಡುತ್ತಿದ್ದರಂತೆ. ಇದನ್ನು ಸಹಿಸಲಾರದೆ ಮನ ನೊಂದ ಶ್ರೀ ಶಿವಕುಮಾರ ಮಹಾಸ್ವಾಮಿಗಳವರು ತಮ್ಮ ಆಪ್ತರಾದ ಕಾಳಪ್ಪನವರಲ್ಲಿ ತಮ್ಮ ವ್ಯಥೆಯನ್ನು ಹೇಳಿಕೊಂಡರಂತೆ. ಕಾಳಪ್ಪನವರು ಧೈರ್ಯಮಾಡಿ ಒಮ್ಮೆ ಶ್ರೀ ಉದ್ದಾನ ಶಿವಯೋಗಿಗಳಲ್ಲಿ ಈ ವಿಷಯ ನಿವೇದಿಸಿದಾಗ ಶ್ರೀಗಳವರು ಥಟ್ಟನೆ "ಅಯ್ಯೋ ಹುಚ್ಚಪ್ಪಾ, ನೂರು ಪೆಟು ಹಾಕಿದ್ದೇನೆ; ಇನ್ನೊಂದು ಏಟು ಹಾಕಿಬಿಟ್ಟು ಅನಂತರ ನಾನೇ ಪೂಜೆ ಮಾಡಿಕೊಂಡು ಬಿಡುತ್ತೇನೆ" ಎಂದು ಅಪ್ಪಣೆ ಕೊಡಿಸಿದರಂತೆ. ಕಾಳಪ್ಪನವರಿಗೆ ಮಾತು ಹೊರಡಲಿಲ್ಲ, ಬೆವರು ಹರಿಯಿತು. ಅವರ ಮೂಲಕ ವಿಚಾರ ತಿಳಿದ ಶ್ರೀ ಶಿವಕುಮಾರ ಮಹಾಸ್ವಾಮಿಗಳವರೂ ತಲ್ಲಣಿಸಿದರಂತೆ. ಪಶ್ಚಾತ್ತಾಪಪಟ್ಟು, ಗುರುವನ್ನು ಮನದಲ್ಲೇ ವಂದಿಸಿದರಂತೆ. ಮೂರ್ತಿಯು ಉಳಿ ಆಡಿದಷ್ಟು ಅದು ನಯವಾಗುವುದು, ಸುಂದರವಾಗುವುದೆಂಬುದನ್ನು ಆ ಶಿಲ್ಪಿ ಶಿವಯೋಗಿಗಳವರಿಗೆ

ಹೇಳಿಕೊಡಬೇಕೆ! ಶ್ರೀ ಕಾಳಪ್ಪನವರು ಪ್ರೌಢವ್ಯಾಸಂಗ ಮಾಡುತ್ತಿದ್ದಾಗಲೇ ತಮ್ಮ ಅಪಾರವಾದ ಶ್ರದ್ಧೆ, ಚುರುಕುಬುದ್ಧಿಗಳಿಂದ ವೇದ ಆಗಮ ಶಾಸ್ತ್ರಗಳನ್ನು, ಪುಣ್ಯಪುರುಷರ, ಶರಣವೇಣ್ಯರ ಜೀವನಚರಿತ್ರೆಗಳನ್ನು, ವಚನ ಸಾಹಿತ್ಯವನ್ನು, ಆಧ್ಯಾತ್ಮಿಕ ಸಾಹಿತ್ಯಗಳನ್ನು ಚೆನ್ನಾಗಿ ಅಭ್ಯಾಸ ಮಾಡಿದ್ದರು. ಪರಿಣಾಮವಾಗಿ ಲೌಕಿಕವಿದ್ಯೆಗಿಂತ ಆಧ್ಯಾತ್ಮಿಕ ಜ್ಞಾನ, ಸಮಾಜಸೇವೆಗಳತ್ತ ಒಲವು ಹೆಚ್ಚಿತು. ಶರಣರ ಸೇವೆಯನ್ನೆಸಗುತ್ತಾ ದೀನ-ದಲಿತರ ಕಷ್ಟ-ಕಾರ್ಪಣ್ಯಗಳನ್ನು ಕಣ್ಣಿಂದ ಕಾಣುತ್ತಿದ್ದ ಇವರ ಮನಸ್ಸಿಗೆ ತಮ್ಮೊಬ್ಬರ ಉದ್ಧಾರ ಹಿರಿದಲ್ಲ, ಸಮಾಜದ ಉದ್ಧಾರ, ಸೇವೆ ದೊಡ್ಡದು ಎಂದು ಮನವರಿಕೆಯಾಯಿತು. ಅಂತಹ ಸತ್‌ಸಂಕಲ್ಪ ಅವರಲ್ಲಿ ಮೂಡಿದ್ದು ನಾಡಿನ ಸೌಭಾಗ್ಯ.

ಶ್ರೀ ದೇಗುಲಮಠದಲ್ಲಿ ಅಧಿಕಾರ ಸ್ವೀಕಾರ ಮತ್ತು ಸೇವೆಗಾಗಿ ಶ್ರೀ ಕಾಳಪ್ಪನವರಲ್ಲಿ ಧೈರ್ಯತುಂಬಿ ಪ್ರೋತ್ಸಾಹಿಸಿ ಅವರನ್ನು ಒಪ್ಪಿಸಿದ ಶ್ರೀ ಉದ್ದಾನ ಶಿವಯೋಗಿಗಳವರು ಅವರನ್ನು ಹರಸಿ ಶ್ರೀ ದೇಗುಲಮಠಕ್ಕೆ ಕಳುಹಿಸಿಕೊಟ್ಟರು. ಶಾಲಿವಾಹನ ಶಕ ೧೮೬೦ ನೆಯ ಬಹುಧಾನ್ಯ ಸಂವತ್ಸರ ಮಾಘ ಶುದ್ಧ ಸಪ್ತಮಿಯ ದಿನ (ಕ್ರಿ.ಶ. ೧೯೩೯ ಫೆಬ್ರವರಿ) ಶುಭಮಹೂರ್ತದಲ್ಲಿ ಶ್ರೀ ದೇಗುಲಮಠದ ಚರಪಟ್ಟಾಧಿಕಾರ ಮಹೋತ್ಸವವು ವೈಭವೋತ್ಸಾಹಗಳಿಂದ ಜರುಗಿ ನೂತನ ಶ್ರೀಗಳಿಗೆ ಚರಮೂರ್ತಿ ಶ್ರೀ ಇಮ್ಮಡಿ ಶ್ರೀ ಮಹಲಿಂಗಸ್ವಾಮಿಗಳೆಂಬುದಾಗಿ ಅಭಿಧಾನವಾಯಿತು. ಅಂದು ಸನ್ಯಾಸಾಶ್ರಮದ ಅಪರಿಮಿತ ಶ್ರಮ ಇಮ್ಮಡಿ ಶ್ರೀ ಮಹಾಲಿಂಗಮಹಾಸ್ವಾಮಿಗಳವರ ಹೆಗಲಿನಲ್ಲಿ ರಾರಾಜಿಸತೊಡಗಿತು. ಆ ಶ್ರಮ ಹೊರಲು ಅವರು ಅರ್ಹರೆಂಬುದೇ ಶ್ರೀ ಉದ್ದಾನ ಶಿವಯೋಗಿಗಳವರ ದಿವ್ಯದೃಷ್ಟಿಯ ನಿಶ್ಚಯವೂ ಆಗಿತ್ತು. ಪೂಜ್ಯರು ಪಂಚಾಂಗವನ್ನು ನೋಡದೆಯೇ ಲಗ್ನವನ್ನು ನಿರ್ಧರಿಸಿ ಅಪ್ಪಣೆಕೊಟ್ಟರಂತೆ. ಅನಂತರ ಪಂಚಾಂಗ ಹುಡುಕಿದರೆ ಅದಲ್ಲದೆ ಬೇರೆ ಲಗ್ನವೇ ಕೂಡಿಬರಲಿಲ್ಲವಂತೆ!

ಶ್ರೀ ಇಮ್ಮಡಿ ನಿರ್ವಾಣ ಮಹಾಶಿವಯೋಗಿಗಳವರು ಮತ್ತು ಶ್ರೀ ಇಮ್ಮಡಿ ಮಹಾಲಿಂಗಸ್ವಾಮಿಗಳವರ ಗುರುಶಿಷ್ಯರ ಸಂಬಂಧ ಅಪೂರ್ವವೂ, ಅನನ್ಯವೂ, ಮಾದರಿಯೂ ಆದುದು. ತಾವು ಕೈಕೊಳ್ಳುವ ಪ್ರತಿಯೊಂದು ಕಾರ್ಯವೂ ತಮ್ಮ ಗುರುಪರಂಪರೆಯ ಕೀರ್ತಿ ಹಬ್ಬಿ ಪಸರಿಸಲು, ಸಮಾಜದ ಏಳಿಗೆಯಾಗಲು ಸಾಧಕವಾಗಬೇಕೆಂದು ನಂಬಿದ್ದರು. ತಮಗೆ ಉಪದೇಶವಿತ್ತು ಸಲಹಿದ ಗುರುವಿನ ಮಂಡೆಗೆ ಹೂವು ತರಬೇಕಲ್ಲದೆ, ಹುಲ್ಲು ತರವುದು ಸಲ್ಲದು ಎಂದು ನಂಬಿದ್ದರು. ಇಮ್ಮಡಿ ಶ್ರೀ ನಿರ್ವಾಣಮಹಾಸ್ವಾಮಿಗಳವರು ಇಮ್ಮಡಿ ಶ್ರೀ ಮಹಾಲಿಂಗಸ್ವಾಮಿಗಳವರನ್ನು ತಮ್ಮ ಶಿಷ್ಯರಾಗಿ ಪರಿಗ್ರಹಿಸಿದ ಮೇಲೆ ತಮ್ಮ ಕೊನೆಯ ದಿನಗಳನ್ನು ನೆಮ್ಮದಿಯಾಗಿ ಬಿನ್ನಹ, ಪೂಜೆ, ಧ್ಯಾನಾದಿಗಳಲ್ಲಿ ಕಳೆದರು. ಆದರೆ ಆ ನೆಮ್ಮದಿ ನೀಡುವಲ್ಲಿ ಶ್ರೀ ಮಹಾಲಿಂಗಮಹಾಸ್ವಾಮಿಗಳವರು ಬಹಳ ಶ್ರಮಪಟ್ಟಿರುವರೆಂಬುದು ಇಲ್ಲಿನ ಸನ್ನಿವೇಶ ಬಲ್ಲವರಿಗೆ ಮಾತ್ರ ವೇದ್ಯವಾಗುತ್ತಿತ್ತು.

ಹಿರಿಯ ಶ್ರೀಗಳವರಲ್ಲಿ ಕಿರಿಯ ಶ್ರೀಗಳವರಿಗೆ ಅಪಾರ ಗೌರವ, ಭಕ್ತಿ, ಆದರೆ ಅಷ್ಟೇ ಭಯ. ದೊಡ್ಡವರು ಬಿನ್ನಹಗಳಿಗೆ ದಯಮಾಡಿಸಿ, ಆಗಮಿಸುವುದು ಕಿಂಚಿತ್ ತಡವಾದರೆ ಚಿಕ್ಕವರು ತಳಮಳಗೊಳ್ಳುತ್ತಾ ಕುಳಿತಲ್ಲಿ ಕೂರದೆ, ನಿಂತಲ್ಲಿ ನಿಲ್ಲದೆ ಹಾದಿಯನ್ನೇ ನಿರೀಕ್ಷಿಸುತ್ತಿದ್ದರು. ದೊಡ್ಡವರಾದರೂ, ಶಿಷ್ಯರನ್ನು ಮೀರಿಸುವಂತಹ ವಾತ್ಸಲ್ಯಮಯಿಗಳು, ಚಿಕ್ಕವರ ಆಗಮನ ತಡವಾದರೆ ಅಕ್ಕ-ಪಕ್ಕದವರನ್ನು ಮತ್ತೆ ಮತ್ತೆ ವಿಚಾರಿಸುತ್ತಿದ್ದರು. ಚಿಕ್ಕವರು ದಯಮಾಡಿಸಿದರು, ಸ್ನಾನ ಮಾಡಿದರು ಎಂದಾಗಲೇ ತೃಪ್ತಿ. ಅಂತ್ಯದಲ್ಲಿಯೂ ಸಹ ದೊಡ್ಡವರು ತಾವು ಲಿಂಗದೊಳಗಾಗುವ ಹಿಂದಿನ ದಿನ ಬಿಜ್ಜಹಳ್ಳಿ ಸಾಹುಕಾರ್ ಪುಟ್ಟಪ್ಪನವರ ಗೃಹದಲ್ಲಿ ಚಿಕ್ಕವರಿಂದ ಪಾದಪೂಜೆಯ ಸೇವೆ ಸ್ವೀಕರಿಸಿದರು. ಲಿಂಗೈಕ್ಯರಾದ ದಿನವಂತೂ, ಚಿಕ್ಕವರು ಬಿನ್ನಹ ತೀರಿಸಿಕೊಂಡು ದಯಮಾಡಿಸುವವರೆಗೂ ದೊಡ್ಡವರ ಆತ್ಮಜ್ಯೋತಿ ಲಿಂಗದಲ್ಲಿ ಲೀನವಾಗಲಿಲ್ಲ. ಶ್ರೀಗಳೀರ್ವರ ಗುರು-ಶಿಷ್ಯ ಸಂಬಂಧ ಹೃದಯ-ರಕ್ತನಾಳಗಳಂತೆ ಜ್ಞಾನ-ಕ್ರಿಯಾವಾಹಿನಿಗಳಂತೆ, ಮೂಲವಿಗ್ರಹ ಉತ್ಸವಮೂರ್ತಿಗಳಂತೆ, ಪುಷ್ಪ-ಪರಿಮಳಗಳಂತೆ, ಅರುಣ ಕಿರಣಗಳಂತೆ, ಸಕ್ಕರೆ ಸವಿಗಳಂತೆ ಅನ್ಯೋನ್ಯವಾಗಿತ್ತು.

ಈ ಆದರ್ಶ ಗುರು-ಶಿಷ್ಯ ಸಂಬಂಧ ಪರಮಹಂಸ ವಿವೇಕಾನಂದರನ್ನು ನೆನಪಿಗೆ ತರುತ್ತದೆ. ಶ್ರೀ ಮಹಲಿಂಗಸ್ವಾಮಿಗಳವರು ಬಹಳ ಚುರುಕುಬುದ್ಧಿವುಳ್ಳವರು, ಒಳ್ಳೆಯ ಮಾತುಗಾರರು, ಹಾಸ್ಯಪ್ರಿಯರು, ಲೀಲಾಜಾಲವಾಗಿ ಸ್ವಾರಸ್ಯವಾಗಿ ಎದುರುಗಿರುವವರು ಮೆಚ್ಚಿ ತಲೆತೂಗುವಂತೆ, ಅವರ ಮನಂಬುಗುವಂತೆ ಮಾತನಾಡುವುದು ಅವರ ಒಂದು ವೈಶಿಷ್ಟ್ಯ. ಸಹನೆ-ಸಹಿಷ್ಣುತೆಗಳು ಅವರ ನೈಜಗುಣಗಳು. ಅನ್ಯಧರ್ಮಗಳಲ್ಲಿ, ಅನ್ಯಧರ್ಮೀಯರಲ್ಲಿ ಅಪಾರ ಗೌರವ. ಮಾತಿನಲ್ಲಿ ಎಂತೋ ಕಾರ್ಯದಲ್ಲಿಯೂ ಅಷ್ಟೆ ಪಾದರಸದಂತೆ ಚುರುಕು. ಧೈರ್ಯ, ದಕ್ಷತೆ, ವಿಚಕ್ಷಣತೆ, ಶ್ರದ್ಧೆ, ಶಿಸ್ತು ಎಲ್ಲಕ್ಕೂ ಕಲಸವಿಟ್ಟಂತೆ ಅವರ ಶಿವಾರ್ಪಿತ ಹಾಗೂ ನಿಸ್ವಾರ್ಥ ಮನೋಭಾವಗಳು. ಅವರ ಅನುಭವ ಅಪಾರ. ಭೂವ್ಯವಸಾಯದಿಂದ ಹಿಡಿದು ಆತ್ಮವ್ಯವಸಾಯದವರೆಗೂ ಅವರದು ಸಿದ್ಧಹಸ್ತ. ಆಕಾಶದತ್ತ ಕೆಲವು ಕ್ಷಣ ದೃಷ್ಟಿಹಾಯಿಸಿ ಇಂದು ಮಳೆ ಬರುತ್ತದೆ ಎಂದರೆ ಅಂದು ಮಳೆ ತಪ್ಪಿದುದು ನನಗೆ ನೆನಪಿಲ್ಲ. ಎತ್ತು, ಎಮ್ಮೆ, ಕುದುರೆಗಳನ್ನು ಒಮ್ಮೆ ದಿಟ್ಟಿಸಿ ನೋಡಿದರೆ ಸಾಕು ಜಾತಿ ಗುಣ ಸ್ವಭಾವಗಳ ಬಗ್ಗೆ ಹೇಳಿಬಿಡುತ್ತಿದ್ದರು. ಶಿವಪೂಜೆಯಲ್ಲಿ ಅಮಿತವಾದ ಲಿಂಗಾನಂದ ಸಾಮರಸ್ಯ ಅನುಭವಿಸುತ್ತಿದ್ದರು. ಅವರ ಸರ್ವಶಕ್ತಿಗಳಿಗೂ ಸರ್ವಕಾರ್ಯಗಳಿಗೂ ಸರ್ವಸಿದ್ಧಿಗಳಿಗೂ ಈ ಲಿಂಗಾಂಗ ಸಾಮರಸ್ಯ ಶಕ್ತಿಯೇ ಮೂಲವೆಂದು ನಂಬಿದ್ದರು.

ತಮ್ಮ ಗುರುಪುಂಗವರಂತೆ ಶ್ರೀ ಮಹಾಲಿಂಗಸ್ವಾಮಿಗಳವರು ಅತ್ಯಂತ ಕನಿಕರ ಸ್ವಭಾವ, ಅಪಾರ ಭೂತದಯೆ. ಶ್ರೀಮಠದ ಪ್ರಾಣಿಗಳಿಗೆ ಏನಾದರೂ ತೊಂದರೆಯಾದರೆ ನಾವು ಆತ್ಮೀಯ ಮಿತ್ರರ ಕಷ್ಟದಲ್ಲಿಯೂ ಪಡಲಾರದಷ್ಟು ಆತಂಕ ಪಡುತ್ತಿದ್ದರು. ಸೇವಕರು ಮೈಮರೆತಾರೆಂದು ರಾತ್ರಿಯಲ್ಲಿಯೂ ಅನೇಕ ಸಲ ಎದ್ದು ಹೋಗಿ ಅವುಗಳ ಬಗ್ಗೆ ವಿಚಾರಿಸುತ್ತಿದ್ದರು. ಶ್ರೀಮಠದಲ್ಲಿ ಆಶ್ರಯ ಪಡೆದ ರೋಗಿಗಳು, ಅಶಕ್ತರನ್ನು ಹೋಗುತ್ತಾ ಬರುತ್ತಾ ವಿಚಾರಿಸಿ ಧೈರ್ಯ ತುಂಬುತ್ತಿದ್ದರು. ಶ್ರೀಮಠದ ದನಕರುಗಳಿಗೆ ಅವರು ಸ್ವಹಸ್ತದಿಂದ ಉಪಚರಿಸುತ್ತಿರಲಿಲ್ಲ. ಆದರೆ ಆ ಪ್ರಾಣಿಗಳು ಅವರು ಕುಳಿತಲ್ಲಿಗೆ, ಅಡ್ಡಾಡುವಲ್ಲಿಗೆ ಬಂದು ನೆಕ್ಕಿ ಆಘ್ರಾಣಿಸಿ, ಅವರು ಮೈದಡವಿದ ಮೇಲೆ ತೃಪ್ತಿಯಿಂದ ಮುಂದೆ ಸಾಗುತ್ತಿದ್ದುದು ನಮಗೆ ನಿತ್ಯದ ನೋಟವಾಗುತ್ತಿತ್ತು. ಅವರ ಸಾತ್ವಿಕಗುಣದೆದುರು ಮದಿಸಿದ ಗೂಳಿಗಳು, ಕುದುರೆಗಳು ತಣ್ಣಗಾಗಿ ಅವರ ಬಳಿಬಂದು ನಿಲ್ಲುತ್ತಿದ್ದುವು. ಇದನ್ನೆಲ್ಲ ಗಮನಿಸಿದಾಗ. ಅವರ ಅಂತರಂಗದ ಭೂತದಯಾ ದರ್ಶನವಾಗಿ ಎಂತಹ ನಾಸ್ತಿಕನನ್ನಾದರೂ ಪುಳಕಿತಗೊಳಿಸುತ್ತಿತ್ತು.

ಶ್ರೀ ಮಹಲಿಂಗಸ್ವಾಮಿಗಳವರು ತುಂಬಾ ಸೌಜನ್ಯಶೀಲರು. ಭಕ್ತರು, ಅತಿಥಿಗಳನ್ನು ನಗುಮುಖದಿಂದ ಸ್ವಾಗತಿಸಿ ಕುಶಲಪ್ರಶ್ನೆ ಮಾಡುತ್ತಿದ್ದರು. ಶ್ರೀಮಠದ ಏಳಿಗೆಗಾಗಿ ತಮ್ಮ ಸಹಕಾರ ಸೇವೆಗಳನ್ನು ಅರ್ಪಿಸಿದ ಗಣ್ಯರನ್ನು ಅಭಿಮಾನದಿಂದ ಸ್ಮರಿಸಿಕೊಳ್ಳುತ್ತಿದ್ದರು. ಅವರ ಮತ್ತೊಂದು ಶ್ರೇಷ್ಠಗುಣ ಕ್ಷಮಾಶೀಲತೆ. ಎಂತಹ ಘೋರ ಅಪರಾಧ ಎಸಗಿದವರನ್ನೂ ಅವರು ಖಂಡಿಸುತ್ತಿರಲಿಲ್ಲ. ಶ್ರೀ ರಾಮಕೃಷ್ಣ ಪರಮಹಂಸರು ದೃಷ್ಟಾಂತ ಕತೆಗಳನ್ನು ಹೇಳುತ್ತಿದ್ದಂತೆ, ತಾವು ಕಂಡು ಕೇಳಿದ ತಮ್ಮ ಅನುಭವದ ಸನ್ನಿವೇಶಗಳನ್ನು ನಿದರ್ಶನವಾಗಿ ಬಳಸಿಕೊಂಡು ಬಹಳ ಪರಿಣಾಮಕಾರಿಯಾಗಿ ಮನಂಬುಗುವಂತೆ ವ್ಯಕ್ತಿಯಲ್ಲಿ ಆಲೋಚನಾ ತರಂಗಗಳೆದ್ದು ಪರಿವರ್ತನೆಯ ಹಾದಿ ಹಿಡಿಯುವಂತೆ ಮಾರ್ಮಿಕವಾಗಿ ಉಪದೇಶಿಸುತ್ತಿದ್ದರು. ಆಗ ಅವರ ಉಪದೇಶ ಮಿತ್ರ ಸಂಹಿತೆಯಂತೆ ಭಾಸವಾಗುತ್ತಿತ್ತು. ತಪ್ಪಿತಸ್ಥನನ್ನು ತಾವು ಕ್ಷಮಿಸಿ ಬಿಡುತ್ತಿದ್ದರು. "ಶಿಕ್ಷೆ ವಿಧಿಸಲು ಭಗವಂತನಿದ್ದಾನೆ. ಆ ಚಿಂತೆ ನಮಗೇಕೆ" ಎನ್ನುತ್ತಿದ್ದರು.

ಶ್ರೀ ಮಹಲಿಂಗಸ್ವಾಮಿಗಳವರು ನ್ಯಾಯತೀರ್ಪಿನಲ್ಲಿ ನಿಷ್ಪಕ್ಷಪಾತಿಗಳು. ಅನೇಕ ಕ್ಲಿಷ್ಟಕರವಾದ ವ್ಯಾಜ್ಯಗಳು ಉನ್ನತನ್ಯಾಯಾಲಯದ ಮೆಟ್ಟಲೇರಿ ಬಂದಂತಹವುಗಳು ಶ್ರೀಗಳಿಂದ ತೀರ್ಮಾನಿಸಲ್ಪಟ್ಟಿವೆ. ಶ್ರೀಗಳವರು ದಾನಿಗಳೊಬ್ಬರು ತಮ್ಮ ಆಸ್ತಿಯನ್ನು ನೋಂದಾವಣೆ ಮೂಲಕ ದಾನ ಕೊಟ್ಟರೂ ಅದನ್ನು ದಾನಿಗಳಿಗೆ ತಿಳುವಳಿಕೆ ಹೇಳಿ ಕೊಟ್ಟ ದಾನವನ್ನು ಹಿಂದಿರುಗಿಸಿದರು.

ಶ್ರೀ ಇಮ್ಮಡಿ ಮಹಾಲಿಂಗಮಹಾಸ್ವಾಮಿಗಳವರು ಶ್ರೀ ಸಿದ್ಧಗಂಗೆಯ ಗುರುಕುಲದಲ್ಲಿ ವಿದ್ಯಾಭ್ಯಾಸಮಾಡುತ್ತಿದ್ದಾಗ ಅವರ ಸಹಪಾಠಿಗಳಾಗಿದ್ದ ಕಂಚುಗಲ್ ಬಂಡೆಮಠದ ಅಧ್ಯಕ್ಷರಾಗಿದ್ದ ವಿರಕ್ತಮೂರ್ತಿ ಶ್ರೀ ಶ್ರೀ ಶಿವರುದ್ರಮಹಾಸ್ವಾಮಿಗಳವರು, ಅಂಕನಹಳ್ಳಿ ಗವೀಮಠಾಧ್ಯಕ್ಷರಾಗಿದ್ದ ಶ್ರೀ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರು, ಅವರ ಆಪ್ತ ಶರಣ ಮಿತ್ರರಾಗಿದ್ದರು. ಅವರು ಶ್ರೀ ಮಠಕ್ಕೆ ದಯಮಾಡಿಸಿದಾಗ, ಶ್ರೀ ಮಠದಲ್ಲಿ ಆಧ್ಯಾತ್ಮಿಕ, ಸಾಮಾಜಿಕ, ಸಾಂಸ್ಕೃತಿಕ ವಿಚಾರಗಳ ಚಿಂತನ ಮಂಥನಗಳ ಒಂದು ವಿಚಾರಗೋಷ್ಠಿಯೇ ನಡೆಯುತ್ತಿರುವಂತಿರುತ್ತಿತ್ತು. ಕೆಲವೊಮ್ಮೆ ಗಂಭೀರ ರೀತಿಯಲ್ಲಿ, ಕೆಲಮೊಮ್ಮೆ ಹಾಸ್ಯಲಹರಿಯಲ್ಲಿ ಈ ಗುರುಪುಂಗವರು ಸೇರಿದಾಗ ಶ್ರೀಮಠದಲ್ಲಿ ಅವರಲ್ಲಿ ಹೋಗಿ ಬರುವ ಭಕ್ತಾದಿಗಳಲ್ಲಿ ಒಂದು ರೀತಿಯ ಸಡಗರ, ಸಂಭ್ರಮ, ಸಂತಸ ತುಂಬಿ ತುಳುಕುತ್ತಿತ್ತು. ಶ್ರೀ ಸಿದ್ಧಗಂಗಾ ಶ್ರೀಗಳವರು ಭಾಗವಹಿಸಿದ ಸಭೆ, ಸಮಾರಂಭ ಪೂಜೆಗಳಲ್ಲಿ, ಅನುಭವ ಮಂಟಪದ ಅಲ್ಲಮ ಪ್ರಭುಗಳ ಅಧ್ಯಕ್ಷತೆಯ ಹಿರಿಮೆಯ ಹೊನಲು ಹರಿವಂತಿರುತ್ತಿತ್ತು. ಹಿರಿಯ ಕಿರಿಯ ಗಣಂಗಳ ಓಜಸ್ಸು ತೇಜಸ್ಸುಗಳ ಮಿಂಚು ಮಿಂಚುತ್ತಿತ್ತು. ಅಪರೂಪಕ್ಕೆ ಶ್ರೀಮಠಕ್ಕೆ ಬಂದು ಕಲ್ಲು ಇಟ್ಟಿಗೆಗಳ ಕಟ್ಟಡ ನೋಡಿ ಗದ್ದುಗೆಗೆ ಪೊಡಮಟ್ಟು ಹೊರಹೋಗುವವರಿಗೆ ಆ ಅಸಾಮಾನ್ಯ ದೃಶ್ಯಗಳು ಕಲ್ಪನೆಗೂ ಬಾರವು. ಶ್ರೀ ಮಠದ ತತ್ಕಾಲ ವ್ಯವಸ್ಥೆಯ ಹಗಲು ರಾತ್ರಿಗಳನ್ನು ಅನುಭವಿಸಿದವರಿಗೆ ಮಾತ್ರ ವೇದ್ಯ.

ಶ್ರೀ ಇಮ್ಮಡಿ ನಿರ್ವಾಣಮಹಾಶಿವಯೋಗಿಗಳವರ ಆಶೀರ್ವಾದ ಪಡೆದು ಇಮ್ಮಡಿ ಶ್ರೀ ಮಹಾಲಿಂಗ ಮಹಾಸ್ವಾಮಿಗಳವರು ಶ್ರೀಮಠದ ಆಶ್ರಯದಲ್ಲಿ ಶ್ರೀ ನಿರ್ವಾಣಸ್ವಾಮಿ ಕೃಪಾ ವಿದ್ಯಾಪೀಠ, ಶ್ರೀ ದೇಗುಲಮಠ, ಕನಕಪುರ ಎಂಬ ಹೆಸರಿನಿಂದ ವಿದ್ಯಾಸಂಸ್ಥೆಯೊಂದನ್ನು ೧೯೬೪ ರಲ್ಲಿ ಸ್ಥಾಪಿಸಿದರು. ಇದಕ್ಕೆ ಮೊದಲೇ ಶ್ರೀ ಮಠದ ವತಿಯಿಂದ ಒಂದು ಅನಾಥಾಲಯ ಮತ್ತು ಸಂಸ್ಕೃತ ಪಾಠಶಾಲೆ ಇವುಗಳು ತೆರೆಯಲ್ಪಟ್ಟಿದ್ದುವು. ೧೯೬೪ ರಲ್ಲಿ ವಿದ್ಯಾಸಂಸ್ಥೆಯ ಆಶ್ರಯದಲ್ಲಿ ಒಂದು ಪ್ರೌಢಶಾಲೆಯು ಸ್ಥಾಪಿಸಲ್ಪಟ್ಟಿತು. ತದನಂತರ ೧೯೬೫ ರಲ್ಲಿ ಮಾಗಡಿ ತಾಲ್ಲೂಕಿನ ವೀರೇಗೌಡನದೊಡ್ಡಿಯಲ್ಲಿ ಒಂದು ಪ್ರೌಢಶಾಲೆಯೂ, ೧೯೬೬ರಲ್ಲಿ ಮಳವಳ್ಳಿ ತಾಲ್ಲೂಕಿನ ಡಿ. ಹಲಸಹಳ್ಳಿಯಲ್ಲಿ ಒಂದು ಪ್ರೌಢಶಾಲೆಯು ತೆರೆಯಲ್ಪಟ್ಟವು. ೧೯೬೯ ರಲ್ಲಿ ಶ್ರೀ ಮಠದಲ್ಲಿಯೇ ಒಂದು ಹಿರಿಯ ಪ್ರಾಥಮಿಕ ಶಾಲೆಯು ತೆರೆಯಲ್ಪಟ್ಟಿತು. ಅನಾಥಾಲಯದಲ್ಲಿ ಸಮಾಜದ ನಾನಾ ವರ್ಗಗಳ ಸುಮಾರು ೬೦೦ ಮಕ್ಕಳಿಗೆ ಉಚಿತ ಅಶನ-ವಸನ-ವಸತಿ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟರು. ನಿತ್ಯ ನೂರಾರು ಮಂದಿ ಹೊರಗಿನವರಿಗೆ ದಾಸೋಹವು ನಡೆಯುತ್ತಿತ್ತು. ಅಶಕ್ತರು, ನಷ್ಟಾರೋಗ್ಯ ಜೀವಿಗಳು ಅನೇಕರು ಪೋಷಿಸಲ್ಪಡುತ್ತಿದ್ದರು. ಕಾಲಕಾಲಕ್ಕೆ ವ್ಯವಸ್ಥಿತವಾಗಿ ವ್ಯವಸಾಯ ಕಾರ್ಯ ನಡೆಯುವಂತೆ ನೋಡಿಕೊಳ್ಳುತ್ತಿದ್ದರು. ಬತ್ತದ ಅಧಿಕ ಇಳುವರಿಗಾಗಿ ಜಿಲ್ಲಾ ಹಾಗೂ ರಾಜ್ಯ ಮಟ್ಟದ ಬಹುಮಾನಗಳನ್ನು ಶ್ರೀಮಠಕ್ಕೆ ಸರ್ಕಾರ ನೀಡಿರುತ್ತದೆ. ಧಾರ್ಮಿಕ ಸಭೆ ಸಮಾರಂಭಗಳು, ಶಿವಾನುಭವ ಗೋಷ್ಠಿಗಳು, ಶಿವಕಥಾಕಾಲಕ್ಷೇಪ, ಭಾಷಣ, ಉಪನ್ಯಾಸಗಳ ಮೂಲಕ ಧರ್ಮಪ್ರಚಾರ ಕಾರ್ಯವನ್ನು ವ್ಯವಸ್ಥಿತವಾಗಿ ನಡೆಸಿಕೊಂಡು ಬರುತ್ತಿದ್ದರು.

ದೀನ ದಲಿತರು, ಹಿಂದುಳಿದವರಲ್ಲಿ ಶ್ರೀ ಇಮ್ಮಡಿ ಮಹಾಲಿಂಗಮಹಾಸ್ವಾಮಿಗಳವರಿಗೆ ಕರುಣೆ, ಕಳಕಳಿ ಇತ್ತು. ಒಮ್ಮೆ ಶ್ರೀಗಳವರಲ್ಲಿ ಸಂಭಾಷಣೆ ನಡೆಸುವಾಗ ನಾನೊಂದು ಅರಿಕೆ ಮಾಡಿಕೊಂಡೆ. 'ನಾವು ಜಾಣರಾದ ಉತ್ತಮ ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳನ್ನೇ ನಮ್ಮ ಸಂಸ್ಥೆಗೆ ಸೇರಿಸಿಕೊಂಡರೆ ಉತ್ತಮ ಫಲಿತಾಂಶ ಪಡೆಯಬಹುದು ಎಂದೆ. ಶ್ರೀಗಳವರು ಥಟ್ಟನೆ ಪ್ರಶ್ನೆ ಹಾಕಿದರು; 'ಹಾಗಾದರೆ ಕಡಿಮೆ ಅಂಕಗಳನ್ನು ಪಡೆದವರು, ಹಿಂದುಳಿದವರು ಎಲ್ಲಿಗೆ ಹೋಗಬೇಕು? ಅವರು ಬೇರೆ ಯಾರಿಗೂ ಬೇಡ, ನಮಗೂ ಬೇಡವೆ? ಹಾಗಾದರೆ ಅವರಿಗೆ ಎಲ್ಲಿಯೂ ಸ್ಥಾನವೇ ಬೇಡವೇ?' ಹಾಗೆಯೇ ಮುಂದುವರಿದು ನಗುತ್ತ ಹೇಳಿದರು 'ನೋಡಿ, ಸೃಷ್ಟಿಕರ್ತನ ದೃಷ್ಟಿಯಲ್ಲಿ ಎಲ್ಲರೂ ಒಂದೇ. ನಾವೂ ಹಾಗೆ ಮೇಲು ಕೀಳು,

ಹಿಂದು-ಮುಂದು ಎಂದು ಪರಿಗಣಿಸ ಹೊರಟರೆ ಬಡವರ, ಕಡಿಮೆ ಬುದ್ಧಿಶಕ್ತಿವುಳ್ಳವರ ಗತಿ ಏನು? ಉತ್ತಮ ಮಟ್ಟದಲ್ಲಿರುವವರು ಹೇಗೂ ಉತ್ತಮರಾಗಿರುತ್ತಾರೆ. ಅವರಿಗೆ ನಮ್ಮ ಪ್ರೋತ್ಸಾಹ ಅನಗತ್ಯ. ಅಂತವರನ್ನೇ ಆರಿಸಿಕೊಂಡು ನೂರಕ್ಕೆ ನೂರರಷ್ಟು ಫಲಿತಾಂಶ ಪಡೆದು ನಮ್ಮ ಬೆನ್ನು ತಟ್ಟಿಸಿಕೊಂಡು ಹೆಮ್ಮೆ ಪಡುವ ಬದಲು ಬಹಳ ಕೆಳಮಟ್ಟದಲ್ಲಿರುವವರಿಗೂ ಪ್ರೋತ್ಸಾಹ ನೀಡಿ ಶೇ. ೩೫ ಕ್ಕೆ ಏರಿಸಿದರೆ ಅದೂ ನಿಜವಾದ ಸೇವೆಯಲ್ಲವೇ. ಅವರೂ ಜೀವನ ಪರ್ಯಂತ ನೆನಪು ಮಾಡಿಕೊಳ್ಳುವುದಿಲ್ಲವೇ' ಎಂದರು. ಮತ್ತೆ ನಾನೆಂದೂ ಅಂತಹ ವಿಚಾರಗಳನ್ನು ಶ್ರೀಗಳವರಲ್ಲಿ ಪ್ರಸ್ತಾಪಿಸಲಿಲ್ಲ.'

ಶ್ರೀ ಇಮ್ಮಡಿ ಮಹಾಲಿಂಗ ಮಹಾಸ್ವಾಮಿಗಳವರು ಕೈಗೊಂಡು ನಡೆಸುತ್ತಿದ್ದ ಕಾರ್ಯಗಳನ್ನು ಅವರ ಆರಾಮದ ಬೆಳಕಿನಲ್ಲಿ ಗಮನಿಸಿದರೆ ನಿಜಕ್ಕೂ ಅದೊಂದು ಪವಾಡವೆನಿಸುತ್ತಿತ್ತು. 'ಇಷ್ಟು ಕಡಿಮೆ ಆದಾಯದಲ್ಲಿ ಈ ಬೃಹತ್ ಕಾರ್ಯಗಳನ್ನು ಹೇಗೆ ಸರಿದೂಗಿಸುತ್ತೀರಿ' ಎಂದು ಪ್ರಶ್ನಿಸಿದವರಿಗೆ ಶ್ರೀಗಳು ಬಹಳ ಸ್ವಾರಸ್ಯವಾಗಿ ಉತ್ತರ ಹೇಳುತ್ತಿದ್ದರು. 'ನಮಗಿರುವ ಸ್ಥಿರ ಆಸ್ತಿಯೆಂದರೆ ಹದಿನೈದು ಎಕರೆ ಗದ್ದೆ, ಅದೂ ನದಿಯ ಆಚೆ ದಡದಲ್ಲಿ, ಹತ್ತು ಎಕರೆ ಹೊಲ, ಮಳೆ ಬಿದ್ದರೆ ಬೆಳೆ ಉಂಟು, ಇಲ್ಲವಾದರೆ ಇಲ್ಲ. ಸರ್ಕಾರದ ಧನ ಸಹಾಯ ಅತ್ಯಲ್ಪ. ಆದರೂ ನಾವು ಧೃತಿಗೆಡುವುದಿಲ್ಲ. ನಮಗೊಂದು ಸ್ಥಿರವಾದ ಆಸ್ತಿಯಿದೆ- ಅಕ್ಷಯ ಪಾತ್ರೆಯಂತಹುದು. ಅದೇ ಜೋಳಿಗೆ, ಭಿಕ್ಷಾಪಾತ್ರೆ, 'ತಿರಿವರಿಂ ಸಿರಿವಂತರಾರು?' ಎಂದು ಸರ್ವಜ್ಞ ಮೂರ್ತಿಯೇ ಹೇಳಿಲ್ಲವೆ? ಎನ್ನುತ್ತಿದ್ದರು. ಸರ್ಕಾರ ಮುಜರಾಯಿ ಜಮೀನುಗಳನ್ನೆಲ್ಲಾ ವಶಪಡಿಸಿಕೊಳ್ಳುತ್ತದೆ ಎಂದಾಗ ಅವರು ಉದ್ಗರಿಸಿದ್ದು "ಬಹಳ ಒಳ್ಳೆಯ ಕೆಲಸ ಮಾಡಿದಂತಾಗುತ್ತದೆ. ನಮಗೆ ವ್ಯವಸಾಯ ಮಾಡಿಸುವ ಕಷ್ಟವನ್ನೇ ತಪ್ಪಿಸಿದಂತಾಗುತ್ತದೆ. ನೆಮ್ಮದಿಯಾಗಿ ಪೂಜೆ ತಪಸ್ಸುಗಳನ್ನಾಚರಿಸಬಹುದು'. ಕಷ್ಟಕಾಲದಲ್ಲಿಯೂ ಅವರ ಆತ್ಮ ವಿಶ್ವಾಸ, ಧೈರ್ಯ ಅಸಾಧಾರಣವಾದುದು.

ಜನತೆಯ ನಿಕಟ ಸಂಪರ್ಕ ಶ್ರೀಗಳವರಿಗಿದ್ದ ವರ್ಷದ ಅನೇಕ ದಿನಗಳಲ್ಲಿ ಬಿನ್ನಹ ಕಾರ್ಯಗಳಿಗಾಗಿ ಅನೇಕ ಊರುಗಳಿಗೆ ಪ್ರವಾಸಕ್ಕೆ ದಯಮಾಡಿಸುತ್ತಿದ್ದರು. ಜನತೆಯ ಬಗೆಗೆ ಹೇಳುವಾಗ 'ನಮ್ಮ ಜನತೆ ಬಡವರಾದರೂ ಹೃದಯವಂತರು, ಉದಾರಿಗಳು. ಇವರಲ್ಲಿ ಆತ್ಮಶಕ್ತಿ ಇನ್ನೂ ಬೆಳವಣಿಗೆಯಾಗಬೇಕು. ಆಗ ನಮ್ಮ ಸಂಸ್ಕೃತಿಯೂ ಬೆಳೆದು ನಮಗೆ ಕೇಡೆಂಬುದೇ ಇಲ್ಲ ಎಂದು ಹೇಳುತ್ತಿದ್ದರು. ಶ್ರೀಗಳವರನ್ನು ಸಂದರ್ಶಿಸಿದವರಿಗೆ 'ಇವರಿಗೆ ನಾವೇನಾದರೂ ಅಲ್ಪ ಕಾಣಿಕೆ ಕೊಡಬೇಕು. ಕೊಟ್ಟದ್ದು ಸಾರ್ಥಕವಾಗುತ್ತದೆ, ನಾವೂ ಪುಣ್ಯಭಾಜನರಾಗುತ್ತೇವೆ' ಎಂದು ಭಾವಿಸುವಂತಹ ವ್ಯಕ್ತಿತ್ವವನ್ನು ಸಹಜವಾಗಿ ಬೆಳೆಸಿಕೊಂಡಿದ್ದರು.

ಇಪ್ಪತ್ತನೆಯ ಶತಮಾನದಲ್ಲಿ ಶ್ರೀ ದೇಗುಲಮಠದ ಎತ್ತರ-ಬಿತ್ತರಗಳು ಹೊರ ಜಗತ್ತಿಗೆ ಹೆಚ್ಚು ಢಾಳಾಗಿ ಕಾಣುವಂತಾದುದು ಶ್ರೀ ಇಮ್ಮಡಿ ನಿರ್ವಾಣ ಮಹಾಪ್ರಭುಗಳ ತಪಶ್ಯಕ್ತಿ ಹಾಗೂ ಚರಮೂರ್ತಿ ಶ್ರೀ ಇಮ್ಮಡಿ ಮಹಾಲಿಂಗ ಮಹಾಪ್ರಭುಗಳ ಕ್ರಿಯಾಶಕ್ತಿಯಿಂದ ಎಂಬುದು ಆ ಅನುಪಮ ಗುರು-ಶಿಷ್ಯರ ಜೋಡಿಯನ್ನು ಹತ್ತಿರದಿಂದ ಬಲ್ಲವರಿಗೆಲ್ಲಾ ತಿಳಿದ ವಿಚಾರ. ಈ ಜೋಡಿ ಶ್ರೀ ದೇಗುಲಮಠದ ಸುವರ್ಣಮುಖಗಳಿಗೆ ನಾಂದಿಹಾಡಿದರು. ಶ್ರೀ ಇಮ್ಮಡಿ ಮಹಾಲಿಂಗಮಹಾಸ್ವಾಮಿಗಳವರು ಬರಿಯ ಕನಸುಗಳನ್ನು ಮಾತ್ರ ಹಂಚಿದವರಲ್ಲ. ಅವರ ದಣಿವರಿಯದ ನಿತ್ಯ ನಿರಂತರ ಚಟುವಟಿಕೆಯ ಮೂರ್ತಿಗಳಾಗಿದ್ದರು. ಹಿಡಿದ ಕಾರ್ಯವನ್ನು ಪೂರ್ಣಗೊಳಿಸುವವರೆಗೆ ನೆಮ್ಮದಿಯಿಂದ ನಿದ್ರಿಸುತ್ತಿರಲಿಲ್ಲ. ಅಷ್ಟು ಶ್ರದ್ಧೆ, ಕಳಕಳಿ. ೧೯೭೩ ರಲ್ಲಿ ಶ್ರೀ ಮಠವನ್ನು ಅರ್ಕಾವತಿಯ ಪ್ರವಾಹ ಆವರಿಸಿ ಆದ ಅನಾಹುತಗಳನ್ನು ಆತ್ಮಸ್ಥೈರ್ಯದಿಂದ ತಾಳಿಕೊಂಡ ಶ್ರೀಗಳವರು ಶ್ರೀಮಠದ ಸುತ್ತಲೂ ಭದ್ರವಾದ ಶಿಲಾಭಿತ್ತಿಯನ್ನು ನಿರ್ಮಿಸಲು ಸಂಕಲ್ಪ ಕೈಗೊಂಡು ಆ ಕಾರ್ಯ ಪೂರ್ಣವಾಗುವವರಿಗೂ ನೆಮ್ಮದಿ ಪಡೆಯಲಿಲ್ಲ.

ಲೋಕಾಭಿರಾಮವಾಗಿ ಮಾತನಾಡುತ್ತಾ ಶ್ರೀಗಳು ಒಮ್ಮೆ ಹೀಗೆ ಅಪ್ಪಣೆ ಕೊಡಿಸಿದರು "ನೋಡಿ ಈ ಮಠದ ಆಶ್ರಮ ಸ್ವೀಕಾರಮಾಡಿ ಮೂರು ದಶಕಗಳು ಪೂರ್ಣವಾದವು. ಸರ್ಕಾರಿ ಉದ್ಯೋಗಿಗಳಾದರೆ ನಿಯಮದಂತೆ ರಿಟೈರ್ ಆಗಬೇಕು. ಆದರೆ ಸಮಾಜದ ಈ ವಿಪ್ಲವ, ಅಶಾಂತಿಗಳನ್ನು ಗಮನಿಸಿದರೆ ನಾವೇ ಏನು, ಎಲ್ಲಾ ಮಠಾಧಿಪತಿಗಳ ಜವಾಬ್ದಾರಿ, ಹೊರೆ ಹೆಚ್ಚುತ್ತಿದೆ. ಏನೋ ಎಲ್ಲವೂ ಶಿವನ ಲೀಲೆ ಎಂದು ಹೇಳಿ ಮುಂದುವರೆದು, "ಏನೂ ಕೆಲಸಗಳು ಬಾಕಿ ಇಲ್ಲ ಎನಿಸಿದರೂ ಸಹ ಮಠದ ಸುತ್ತಲೂ ಒಂದು ಸಲ ಸುತ್ತಾಡಿ ಬಂದರೇ ಮನಸ್ಸಿಗೆ ಕಿಂಚಿತ್ ನೆಮ್ಮದಿ" ಎಂದರು. ಶ್ರೀಗಳವರು ಶ್ರೀಮಠ, ಸಮಾಜದ ಬಗೆಗೆ ಅಷ್ಟು ಕಳಕಳಿ ಹೊಂದಿದ್ದರು. ಶ್ರೀಗಳವರು ಬಿನ್ನಹ ಬಿಡುಗಡೆಗಳಿಗೆ ದಯಮಾಡಿಸಿ ಪಾದಸ್ಪರ್ಶ ಮಾಡಿ ಬಂದ ಮನೆಗಳಲ್ಲಿ, ಹಳ್ಳಿಗಳಲ್ಲಿ ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ, ಎಷ್ಟೋ ಸುಧಾರಣೆಗಳಾಗುತ್ತಿದ್ದವು. 'ಮತ್ತೆ ಶ್ರೀಗಳವರು ಇತ್ತ ದಯಮಾಡಿಸಿದರೆ ನಮ್ಮನ್ನು ನೋಡಿ ಸಂತಸದಿಂದ ಆಶೀರ್ವದಿಸಬೇಕು. ನಾವು ಅವರ ಕೃಪೆಗೆ ಪಾತ್ರರಾಗಬೇಕು', ಎಂಬಂತೆ ಭಕ್ತರು ವರ್ತಿಸುತ್ತಿದ್ದರು. ಮಾನವನ ಮೂಲಭೂತ ಅಗತ್ಯಗಳಾದ ಅನ್ನ, ಜ್ಞಾನ, ದೈವಗಳ ಸಾಕ್ಷಾತ್ಕಾರಕ್ಕಾಗಿ ಶ್ರೀಗಳವರು ಕಾಯಾ, ವಾಚಾ, ಮನಸಾ ದುಡಿದರು. ಅವರ ಕಾರ್ಯಕ್ಷೇತ್ರ, ಸಮಾಜವೇ ಆದರೂ, ಕಾರ್ಯಗಳೆಲ್ಲಾ ಸಮಾಜದಿಂದ ಸಮಾಜಕ್ಕಾಗಿಯೇ ಅವರ ಅಂತರಂಗ ಮಾತ್ರ ಸದಾ "ಅವನಲ್ಲಿ" ಲೀನವಾಗಿರುತ್ತಿತ್ತು.

ಪೂರ್ವ ಮತ್ತು ಪಶ್ಚಿಮ ಪಾಕಿಸ್ತಾನಗಳ ನಡುವೆ ಯುದ್ಧವಾಗಿ ಬಾಂಗ್ಲಾದೇಶ ಉದಯವಾದಾಗ ಪೂರ್ವ ಪಾಕಿಸ್ಥಾನದಿಂದ ಲಕ್ಷಾಂತರ ಮಂದಿ ನಿರಾಶ್ರಿತರಾಗಿ ಭಾರತಕ್ಕೆ ಆಗಮಿಸಿದರು. ಆಗ ಗಾಂಧಿವಾದಿಗಳಾದ ಸರ್ದಾರ ವೆಂಕಟರಾಮಯ್ಯನವರು ನಿರಾಶ್ರಿತರ ಕೆಲವು ಮಕ್ಕಳನ್ನು ಪೋಷಣೆಗಾಗಿ ಶ್ರೀಮಠಕ್ಕೆ ಕಳುಹಿಸುವುದಾಗಿಯೂ ಎಷ್ಟು ಮಕ್ಕಳನ್ನು ತಾವು ಸ್ವೀಕರಿಸುವಿರೆಂಬುದಕ್ಕೆ ಉತ್ತರ ಕೋರಿ ಶ್ರೀಗಳವರಿಗೊಂದು ನಿವೇದನಾ ಪತ್ರ ಬರೆದರು. 'ಇದಕ್ಕೆ ಏನು ಉತ್ತರ ಬರೆಯುವುದು ಬುದ್ಧಿ' ಎಂದು ಶ್ರೀಗಳವರಲ್ಲಿ ಅರಿಕೆ ಮಾಡಿದಾಗ ಶ್ರೀಗಳವರು 'ಅಂತಹ ಸ್ಥಿತಿಯಲ್ಲಿರುವ ಅನಾಥರಿಗಲ್ಲದೆ ಮತ್ತಾರಿಗೆ ಮಠಗಳಿರುವುದು? ನಿಮಗೆ ಶಕ್ಯವಿರುವಷ್ಟೂ ಮಕ್ಕಳನ್ನು ಕಳುಹಿಸಿರಿ ಎಂದು ಬರೆಯಿರಿ' ಎಂದು ಅಪ್ಪಣೆ ಕೊಡಿಸಿದರು.

ಶ್ರೀ ಇಮ್ಮಡಿ ಮಹಲಿಂಗ ಮಹಾಸ್ವಾಮಿಗಳವರಿಗೆ ವಾಕ್ಸಿದ್ಧಿ ಇದ್ದಿತೆಂಬುದು ನನಗೆ ಮನವರಿಕೆಯಾಗಿದೆ. ಒಮ್ಮೆ ಹೂಕುಂದ ಗ್ರಾಮದ ಹಿರಿಯರೊಬ್ಬರು ಶ್ರೀಮಠದ ಪ್ರೌಢಶಾಲೆಗೆ ತಮ್ಮ ಮೊಮ್ಮಗನನ್ನು ಸೇರಿಸಲು ಬಂದರು. ಅವರು ಶಾಲೆಗೆ ಸ್ವಲ್ಪ ಹಣ ಕಟ್ಟಬೇಕಾದ ಪ್ರಸಂಗದಲ್ಲಿ ಫಿನಾಯ್ತಿ ಅಥವಾ ರಿಯಾಯ್ತಿ ಕೋರಿ ಶ್ರೀಗಳವರಲ್ಲಿ ಹೋದರಂತೆ. ಶ್ರೀಗಳವರು ಅವರು ಚೆನ್ನಾಗಿ ಬಾಳಿ ಬದುಕಿದವರೆಂಬುದನ್ನು ಬಲ್ಲವರು. ಇಂದು ಅವರಿಗೆ ಆರ್ಥಿಕ ಮುಗ್ಗಟ್ಟಿದೆಯೆಂಬುದು ವೇದ್ಯವಾಗಿತ್ತು. ಆದರೂ 'ಏನು ಗೌಡರೇ, ನಿಮ್ಮಂತಹವರೇ ಹೀಗೆ ಹೇಳಿದರೆ ಇನ್ನು ಬಡವರ ಗತಿ ಏನು? ದೊಡ್ಡಮನೆ ಪ್ರಯತ್ನಮಾಡಿ, ಸಾಧ್ಯವೇ ಆಗದಿದ್ದರೆ ಮುಂದೆ ನೋಡೋಣ' ಎಂದು ಅಪ್ಪಣೆ ಕೊಟ್ಟು ಕಳುಹಿಸಿದರಂತೆ. ಆ ಹಿರಿಯರು ಮಾರನೆಯ ದಿನ ಮತ್ತೆ ಶಾಲೆಗೆ ಬಂದು 'ತಗೊಳ್ಳಿಸ್ವಾಮಿ ನಮ್ಮ ಹುಡುಗನ ಫೀಜು' ಎಂದು ಹೇಳಿ ಹಣ ಕೊಟ್ಟರು. 'ಇಲ್ಲ ಅಂತಿದ್ರಲ್ಲಾ ಗೌಡರೇ, ಈಗ ಹಣ ಎಲ್ಲಿಂದ ಬಂತು?' ಎಂದು ಪ್ರಶ್ನಿಸಿದಾಗ ಅವರು ಅಚ್ಚರಿಯಿಂದಲೇ ಹೇಳಿದರು. 'ನೋಡಿ ಸ್ವಾಮಿ, ಮಹಾಸ್ವಾಮಿಗಳವರನ್ನ ನಿನ್ನೆ ನೋಡಿ ಇರುವ ವಿಚಾರ ಅರಿಕೆ ಮಾಡಿ, ಮಾಫಿ ಮಾಡಲು ಪ್ರಾರ್ಥಿಸಿದಾಗ 'ದೊಡ್ಡಮನೆ ಇನ್ನೊಮ್ಮೆ ನೋಡಿ ಎಂದರು. ನಾನೇನೂ ಮರುಮಾತನಾಡದೆ ಚಿಂತಿಸುತ್ತಲೇ ಊರಿಗೆ ಹೋದೆ. ಮನೆಯಲ್ಲಿ ಸಂದೂಕ ತೆರೆದು ಅದೂ ಇದೂ ಹುಡುಕುತ್ತಾ ಇದ್ದಾಗ ನೋಡಿಸ್ವಾಮಿ, ಒಂದು ಪುಸ್ತಕದೊಳಗೆ ಇಷ್ಟು ಮಾತ್ರ ಸಿಕ್ತು' ಎಂದು ಹೇಳುತ್ತ ನೋಟುಗಳನ್ನು ಕೈಗಿತ್ತರು. 'ನೋಡಿ ಸ್ವಾಮಿ ಎಣಿಸಿಟ್ಟ ಹಾಗೆ ಫೀಜಿಗಾಗೋ ಅಷ್ಟು ಮಾತ್ರ ಇದೆ. ನನಗೆ ಬುದ್ಧಿಯವರ ಮಾತು ನೆನಪಿಸಿಕೊಂಡರೆ ತುಂಬಾ ಆಶ್ಚರ್ಯವಾಗುತ್ತಿದೆ ಸ್ವಾಮಿ' ಎಂದರು. ಇದು ಆಕಸ್ಮಿಕ ಕಾಕತಾಳೀಯವೆಂದರೆ ಅದಕ್ಕೆ ನಾನು ಉತ್ತರಿಸಲಾರೆ. ನನಗೆ ತಿಳಿದಮಟ್ಟಿಗೆ ಇನ್ನೂ ಎಷ್ಟೋ ಪ್ರಕರಣಗಳನ್ನು ನೆನಪಿಸಿಕೊಂಡಾಗ ನನಗೆ ಶ್ರೀಗಳವರ ವಾಕ್ಸಿದ್ಧಿಯ ಬಗ್ಗೆ ನಂಬಿಕೆಯಿದ್ದರೂ ಸಮಕಾಲೀನ ವ್ಯಕ್ತಿಗಳನ್ನು ಕುರಿತಾದುದರಿಂದ ನಾನು ಅವನ್ನು ವ್ಯಕ್ತಪಡಿಸಲಾರೆ. ಚರಮೂರ್ತಿ

ಶ್ರೀ ಇಮ್ಮಡಿ ಮಹಾಲಿಂಗಮಹಾಸ್ವಾಮಿಗಳವರ ಬೋಧನೆ, ಭಾಷಣಗಳು ಬಹು ವೈಶಿಷ್ಟ್ಯಪೂರ್ಣವಾಗಿರುತ್ತಿದ್ದವು. ಅವರು ಶಾಲಾ ಕಾಲೇಜುಗಳ ಅಧ್ಯಾಪಕರಂತೆ ಟಿಪ್ಪಣಿಮಾಡಿಕೊಂಡು ಬಂದು ಭಾಷಣ ಮಾಡುತ್ತಿದ್ದವರಲ್ಲ. ಅವರ ಭಾಷಣ ಆಶುಕವಿಗಳು ಕವನ ರಚಿಸಿದಂತೆ, ನೆರೆದ ಸಭಿಕರನ್ನು ನೋಡಿ ತಾವು ಏನು ಹೇಳಬೇಕು. ಎಷ್ಟು ಹೇಳಬೇಕು, ಹೇಗೆ ಹೇಳಬೇಕೆಂಬುದನ್ನು ಕ್ಷಿಪ್ರವಾಗಿ ಮನದಟ್ಟು ಮಾಡಿಕೊಂಡು ಬಿಡುತ್ತಿದ್ದರು. ಅವರ ಮಾತುಗಳಲ್ಲಿ ನಯ-ನಾಜೂಕು-ವೈಯ್ಯಾರಗಳಿಗಿಂತ ಕೇಳಿದವರ ಮನಸ್ಸನ್ನು ನೇರವಾಗಿ ಮುಟ್ಟಿ-ತಟ್ಟುವ ಶಕ್ತಿಯಿದ್ದಿತು. ಅವರ ಭಾಷಣದುದಕ್ಕೂ 'ಹ್ಞಾಂ ಹ್ಞೂಂ'ಗಳ ಅವಾಂತರವಿರುತ್ತಿರಲಿಲ್ಲ. ನಿರ್ಗಳವಾಗಿ ಹರಿದು ಬರುವ ಮಾತುಗಳು ಎಂತಹವರನ್ನೂ ಆಕರ್ಷಿಸುತ್ತಿದ್ದವು, ಮರುಳಾಗುವಂತೆ ಮಾಡುತ್ತಿದ್ದವು. ಭಾಷಣದ ಮಧ್ಯೆ ಅರ್ಥಗರ್ಭಿತವಾದ ಉಚಿತವಾದ ಗಾದೆಗಳು, ಶಿವಶರಣರ ವಚನಗಳು, ದೃಷ್ಟಾಂತಗಳು ಹಾಗೂ ಸ್ವಾನುಭವದ ವಿಚಾರಗಳನ್ನು ಹೇಳುತ್ತಾ ಸಭಿಕರನ್ನು ಜಾಗೃತವಾಗಿಡುತ್ತಿದ್ದರು. ಅವರ ದೃಷ್ಟಾಂತಗಳಲ್ಲಿ ಹಾಸ್ಯ ತುಂಬಿದ್ದರೂ ಒಳಗೆ ಕಟು ಸತ್ಯ, ನೀತಿ ಗೋಚರಿಸುತ್ತಿತ್ತು ಅಥವಾ ಅವರ ದೃಷ್ಟಾಂತಗಳು ಕಟುಸತ್ಯವನ್ನು ನೀತಿಯನ್ನು ಸಿಹಿಲೇಪನದಿಂದ ಉಣ್ಣಿಸಿದವುಗಳಾಗಿರುತ್ತಿದ್ದುವು ಎಂದರೂ ಸರಿಯೆ. ಚರಮೂರ್ತಿ ಶ್ರೀ ಇಮ್ಮಡಿ ಮಹಾಲಿಂಗ ಮಹಾಸ್ವಾಮಿಗಳವರು ಲಿಂಗೈಕ್ಯರಾದರು. ಆದರೆ ಶ್ರೀಮಠದಲ್ಲಿ ಅವರನ್ನು ದರ್ಶನಮಾಡುತ್ತಿದ್ದವರಿಗೆ, ಸಾನ್ನಿಧ್ಯಸುಖ ಅನುಭವಿಸಿದವರಿಗೆ ಶ್ರೀಗಳವರು ಶ್ರೀಮಠದಲ್ಲೆಯೇ ಚಲಿಸುತ್ತಿರುವಂತೆ ಭಾಸವಾಗುತ್ತದೆ. ಆ ದಿವ್ಯಚೇತನಕ್ಕೆ ಭಕ್ತಿಯ ನಮನಗಳು.

ಚರಮೂರ್ತಿ ಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳು

ಶ್ರೀ ಇಮ್ಮಡಿ ನಿರ್ವಾಣ ಶಿವಯೋಗಿಗಳು ಕ್ರಿ.ಶ. ೧೯೭೨ ರಲ್ಲಿ ಲಿಂಗೈಕ್ಯರಾದ ನಂತರ ಶ್ರೀಮಠದ ಕಾರ್ಯಭಾರವೆಲ್ಲಾ ಚರಮೂರ್ತಿ ಶ್ರೀ ಇಮ್ಮಡಿ ಮಹಾಲಿಂಗಪ್ರಭುಗಳ ಹೆಗಲಿಗೇ ಬಿದ್ದಿತ್ತು. ಆದಾಗಲೇ ಸುವರ್ಣಯುಗದ ನಾಂದಿಯಾಗಿದ್ದರಿಂದ ಕಾರ್ಯಬಾಹುಳ್ಯ ಹೆಚ್ಚಿದಂತೆಲ್ಲಾ ಶ್ರೀಗಳವರಿಗೆ ಬಿಡುವೆಂಬುದೇ ದೊರೆಯದಂತಾಗಿ ದೈಹಿಕವಾಗಿಯೂ ಶ್ರೀಗಳವರು ಕಿಂಚಿತ್ ಬಳಲಿದರು. ಪರಿಣಾಮವಾಗಿ ಕ್ರಿ.ಶ. ೧೯೭೬ ರಲ್ಲಿ ಶ್ರೀಗಳವರು ಶ್ರೀ ಮಠದ ಉತ್ತರಾಧಿಕಾರಿಗಳನ್ನು ಆರಿಸಲು ನಿರ್ಧರಿಸಿದರು. ಹಲವಾರು ವರ್ಷಗಳಿಂದ ತಮಗೆ ಪರಿಚಯವಿದ್ದ ಮಳವಳ್ಳಿ ತಾಲ್ಲೂಕಿನ ನೆಲ್ಲಿಗೆರೆ ಗ್ರಾಮದ ಮಠದಲ್ಲಿ ಅಧ್ಯಕ್ಷರಾಗಿದ್ದ ಶ್ರೀ ಶ್ರೀ ಶಿವರುದ್ರಸ್ವಾಮಿಗಳವರನ್ನು ಗುರ್ತಿಸಿಕೊಂಡು ಶ್ರೀ ಸಿದ್ಧಗಂಗಾ ಕ್ಷೇತ್ರಾಧ್ಯಕ್ಷರಾದ ಪರಮ ಪೂಜ್ಯರಾದ ಡಾ. ಶ್ರೀ ಶ್ರೀ ಶಿವಕುಮಾರಮಹಾಪ್ರಭುಗಳವರ ಹಾಗೂ ಭಕ್ತಸಮೂಹದ ಸಲಹೆಯನ್ನೂ ಪಡೆದು ಆಯ್ಕೆ ಮಾಡಿಕೊಂಡರು.

ಚರಮೂರ್ತಿ ಶ್ರೀ ಇಮ್ಮಡಿ ಮಹಾಲಿಂಗಮಹಾಸ್ವಾಮಿಗಳವರು ಚತುರ ಪರೀಕ್ಷಕರು, ತಮ್ಮ ಕರಕಮಲ ಸಂಜಾತರಾಗಿ ಆರಿಸಿಕೊಂಡ ವಟುವನ್ನು ಅನೇಕ ಸಂದರ್ಭಗಳಲ್ಲಿ ತಮ್ಮ ಮನದಲ್ಲಿಯೇ ಪರೀಕ್ಷಿಸಿಕೊಂಡಿದ್ದರು. ಅವರ ನಯ-ವಿನಯ, ಪತ್ರಗಳ ಒಕ್ಕಣೆ, (ಹಸ್ತಾಕ್ಷರದಿಂದಲೂ ಸಹ) ಸಂಘಟನಾ ಸಾಮರ್ಥ್ಯ, ಕಾರ್ಯವಿಚಕ್ಷಣೆ, ಸಹನಾದಿ ಗುಣಗಳನ್ನು ಮೆಚ್ಚಿದ್ದರು.

ನೂತನವಾಗಿ ಆಯ್ಕೆಯಾದ ವಟು ಶ್ರೀ ಶಿವರುದ್ರಸ್ವಾಮಿಗಳವರಿಗೆ ದಿನಾಂಕ: ೧೨-೦೨-೧೯೭೭ ರಂದು ಚರಮೂರ್ತಿ ಶ್ರೀ ಮುಮ್ಮಡಿ ನಿರ್ವಾಣಸ್ವಾಮಿಗಳೆಂಬ ನೂತನ ಅಭಿಧಾನದಿಂದ ಆಶ್ರಮ ದೀಕ್ಷೆ ನೀಡಲಾಯಿತು. ದೀಕ್ಷಾ ಕಾರ್ಯಕ್ರಮವು ಶ್ರೀಸಿದ್ಧಗಂಗಾ ಕ್ಷೇತ್ರಾಧಿಪತಿಗಳಾದ ಗುರುಪುಂಗವ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ನೂರಾರು ಹರಗುರು ಚರಮೂರ್ತಿಗಳು, ಅನೇಕ ಗಣ್ಯರು, ಮಂತ್ರಿ ಮಹೋದಯರು, ಲಕ್ಷಾಂತರ ಭಕ್ತರ ಸಮ್ಮುಖದಲ್ಲಿ ಶ್ರೀ ದೇಗುಲಮಠದಲ್ಲಿ ಬಹಳ ಸಡಗರ, ಸಂಭ್ರಮಗಳೊಡನೆ ನಡೆಯಿತು.

ಚರಮೂರ್ತಿ ಶ್ರೀ ಇಮ್ಮಡಿ ಮಹಾಲಿಂಗ ಮಹಾಸ್ವಾಮಿಗಳವರ ಉತ್ತರಾಧಿಕಾರಿಗಳಾಗಿ ಆರಿಸಲ್ಪಟ್ಟ ಶ್ರೀ ಶಿವರುದ್ರಸ್ವಾಮಿಗಳವರು ತಿರುಮಕೂಡ್ಲು ನರಸೀಪುರ ತಾಲ್ಲೂಕಿನ ಕುರುಬೂರು ಗ್ರಾಮದ ಶರಣ ವೀರಭದ್ರಪ್ಪ ಮತ್ತು ಶರಣೆ ತಾಯಮ್ಮನವರ ಸುಪುತ್ರರು, ಒಟ್ಟು ನಾಲ್ವರು ಪುತ್ರರು, ಓರ್ವ ಪುತ್ರಿ ಈ ಶರಣ ದಂಪತಿಗಳ ಸಂತಾನ.

ಶ್ರೀ ಶಿವರುದ್ರಸ್ವಾಮಿಗಳವರು ಜನಿಸಿದ್ದು ದಿನಾಂಕ: ೨೦-೦೫-೧೯೪೩ ರಂದು. ಮನೆತನದ ಕಸುಬು ವ್ಯವಸಾಯ, ತಂದೆ-ತಾಯಿಗಳು ಗುರು-ಲಿಂಗ-ಜಂಗಮ ಪ್ರೇಮಿಗಳು, ಸೇವಾನಿಷ್ಠರು. ಶ್ರೀ ಶಿವರುದ್ರಸ್ವಾಮಿಗಳವರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ಕುರುಬೂರಿನಲ್ಲಿಯೇ ಪೂರೈಸಿದರು. ಚಾಮರಾಜನಗರ ತಾಲ್ಲೂಕಿನ ಮರಿಯಾಲ ಗ್ರಾಮದಲ್ಲಿ ಗುಲ್ಬರ್ಗದತ್ತಣಿಂದ ಆಗಮಿಸಿದ್ದ ಶ್ರೀ ಮುರುಘೇಂದ್ರಸ್ವಾಮಿಗಳೆಂಬುವರು ಒಂದು ಮಠವನ್ನು ಸ್ಥಾಪಿಸಿದ್ದರು. ಅವರು ದೇವನೂರು ಮಠದ ಶ್ರೀ ಗುರು ಮಲ್ಲೇಶ್ವರ ಮಹಾಸ್ವಾಮಿಗಳವರ ಸಮಕಾಲೀನರು. ಶ್ರೀ ಮುರುಘೇಂದ್ರಸ್ವಾಮಿಗಳವರ ಉತ್ತರಾಧಿಕಾರಿಗಳಾಗಿದ್ದ ಶ್ರೀ ಮಹಾಂತಸ್ವಾಮಿಗಳವರೂ ಮತ್ತು ಅವರ ಉತ್ತರಾಧಿಕಾರಗಳಾಗಿದ್ದ ಶ್ರೀ ಸದಾಶಿವಸ್ವಾಮಿಗಳವರೂ ಕ್ರಮವಾಗಿ ಶ್ರೀ ಶಿವರುದ್ರಸ್ವಾಮಿಗಳವರ ಪೂರ್ವಾಶ್ರಮದ ದೊಡ್ಡಪ್ಪನವರು ಮತ್ತು ಸಹೋದರರಾಗಿದ್ದವರು.

ಪ್ರಾಥಮಿಕ ಶಿಕ್ಷಣವನ್ನು ಕುರುಬೂರಿನಲ್ಲಿ ಪೂರೈಸಿದ ಶ್ರೀ ಶಿವರುದ್ರಸ್ವಾಮಿಗಳವರು, ಮರಿಯಾಲ ಮಠದಲ್ಲಿದ್ದುಕೊಂಡು ತಮ್ಮ ಮಾಧ್ಯಮಿಕ ಹಾಗೂ ಪ್ರೌಢಶಾಲಾ ಶಿಕ್ಷಣವನ್ನು ಚಾಮರಾಜನಗರದಲ್ಲಿ ಪೂರೈಸಿದರು. ಅವರ ಕಾಲೇಜು ಶಿಕ್ಷಣವು ಮೈಸೂರಿನ ಶಾರದಾ ವಿಲಾಸ ಹಾಗೂ ಮಹಾರಾಜಾ ಕಾಲೇಜುಗಳಲ್ಲಿ ನಡೆಯಿತು. ಬಿ.ಎಸ್ಸಿ. ವರೆಗೆ ವಿದ್ಯಾಭ್ಯಾಸ ಮಾಡಿದರು.

ಶ್ರೀ ಶಿವರುದ್ರಸ್ವಾಮಿಗಳವರು ತಮ್ಮ ವಿದ್ಯಾರ್ಥಿ ಜೀವನದಲ್ಲಿ ಕೇವಲ ತರಗತಿಯ ಪಾಠಗಳನ್ನಲ್ಲದೆ ಆಟಗಳನ್ನು ಆಡುತ್ತಿದ್ದರು. ಜೊತೆಗೆ ಮರಿಯಾಲ ಮಠದಲ್ಲಿಯೇ ಧಾರ್ಮಿಕ ಶಿಕ್ಷಣವೂ ವೇದ-ಆಗಮ, ಪೂಜಾದಿಗಳ ಬಗೆಗೆ ತರಬೇತಿ ದೊರೆಯಿತು. ಗುರು-ಲಿಂಗ-ಜಂಗಮರ ಸೇವೆ ಮಾಡುತ್ತಾ ಇದ್ದು ವಿದ್ಯಾರ್ಜನೆ ಮಾಡುವಾಗಲೇ ಅವರಿಗೆ ನಿಷ್ಠೆ-ನೇಮ, ಕಠಿಣ ಶ್ರಮ, ಸರಳ ಜೀವನದತ್ತ ಒಲವು ತುಂಬಿ ಬಂದಿತು. ಆದರೂ ೧೯೬೮ರಿಂದ ಎರಡು ವರ್ಷಗಳ ಕಾಲ ಸರ್ಕಾರಿ ನೌಕರಿ ಮಾಡಿದರೂ ಧಾರ್ಮಿಕ ಜೀವನಕ್ಕೆ ಮಾರುಹೋದ ಅವರು ಸರ್ಕಾರಿ ನೌಕರಿಗೆ ರಾಜೀನಾಮೆ ಸಲ್ಲಿಸಿದರು.

ಶ್ರೀ ಶಿವರುದ್ರಸ್ವಾಮಿಗಳವರ ಆಧ್ಯಾತ್ಮಿಕ ಜೀವನದ ಒಲವನ್ನು ಬಲ್ಲವರಾಗಿದ್ದ ಮರಿಯಾಲ ಮಠದ ಪೀಠಾಧಿಪತಿಗಳಾಗಿದ್ದ ಶ್ರೀ ಸದಾಶಿವಸ್ವಾಮಿಗಳವರು ಇವರನ್ನೇ ಶ್ರೀ ಮಠದ ಉತ್ತರಾಧಿಕಾರಿಗಳೆಂದು ಸೂಚಿಸಿ ಉಯಿಲು ಬರೆಸಿಟ್ಟರು. ೧೯-೦೧-೧೯೭೦ ರಲ್ಲಿ ಶ್ರೀ ಸದಾಶಿವಸ್ವಾಮಿಗಳವರು ಲಿಂಗೈಕ್ಯರಾದರು. ಶ್ರೀ ಶಿವರುದ್ರಸ್ವಾಮಿಗಳವರು ಹಿರಿಯ ಶ್ರೀಗಳವರ ಉಯಿಲಿನಂತೆ ಮರಿಯಾಲ ಮಠದ ಉತ್ತರಾಧಿಕಾರಿಗಳಾದರೂ ಕಾರಣಾಂತರಗಳಿಂದ ಅವರು ಅಲ್ಲಿ ಮುಂದುವರೆಯಲಿಲ್ಲ.

ಶ್ರೀ ಶಿವರುದ್ರಸ್ವಾಮಿಗಳವರು ಮುಂದೆ ಕೆಲವು ದಿನಗಳ ಕಾಲ ಕುಣಿಗಲ್ ತಾಲ್ಲೂಕಿನ ಅಂಕನಹಳ್ಳಿ ಗವೀ ಮಠದಲ್ಲಿದ್ದು, ಅಲ್ಲಿನ ಅಧ್ಯಕ್ಷರಾಗಿದ್ದ ಶ್ರೀ ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರ ಕೃಪೆಗೆ ಪಾತ್ರರಾಗಿದ್ದರು. ಅಲ್ಲಿನ ಆಶ್ರಮ ಜೀವನವನ್ನೂ ಅಭ್ಯಸಿಸಿಕೊಂಡರು. ಅನಂತರ. ಕರ್ನಾಟಕದ ಶರಣರ ವಿಶ್ವವಿದ್ಯಾನಿಲಯದಂತಿರುವ ಶ್ರೀ ಸಿದ್ಧಗಂಗಾ ಕ್ಷೇತ್ರದಲ್ಲಿ ನೆಲಸಿ, ಪೂಜ್ಯ ಶ್ರೀ ಶ್ರೀಗಳವರ ಕೃಪೆಗೆ ಪಾತ್ರರಾಗಿ ಅಲ್ಲಿಯೂ ಆಶ್ರಮ ಜೀವನದ ಕಟ್ಟು-ನಿಟ್ಟು, ಸೇವಾ ಕ್ಷೇತ್ರಗಳ ಪರಿಚಯ ಪಡೆದುಕೊಂಡರು. ಅನಂತರ ಮಳವಳ್ಳಿ ತಾಲ್ಲೂಕಿನ ನೆಲ್ಲಿಗೆರೆ ಮಠದ ಶ್ರೀಗಳವರು ಲಿಂಗೈಕ್ಯರಾದುದರಿಂದ, ಅವರ ಮತ್ತು ಶ್ರೀ ಸಿದ್ಧಗಂಗಾ ಶ್ರೀಗಳವರ ಮತ್ತು ಶ್ರೀ ದೇಗುಲಮಠಾಧೀಶ್ವರರ ಹಾಗೂ ನೆಲ್ಲಿಗೆರೆ ಗ್ರಾಮಸ್ಥರ ಅಪೇಕ್ಷೆಯ ಮೇರೆಗೆ ನೆಲ್ಲಿಗೆರೆ ಮಠದಲ್ಲಿ ಶೀಮಠದ ಅಧ್ಯಕ್ಷರಾದರು.

ನೆಲ್ಲಿಗೆರೆ ಮಠದ ಅಧಿಕಾರ ವಹಿಸಿಕೊಂಡ ಪೂರ್ವದ ಮತ್ತು ನಂತರದ ಅವಧಿ ಶ್ರೀ ಶಿವರುದ್ರಸ್ವಾಮಿಗಳವರ ಅಂತಸ್ಸತ್ವ ಅರಳಿ ವ್ಯಕ್ತಿತ್ವ ವಿಕಸನಗೊಂಡ ಅವಧಿ. ಈ ಅವಧಿ ಅವರಿಗೆ ಧೈರ್ಯ, ಸ್ಥೈರ್ಯ, ಉತ್ಸಾಹಗಳನ್ನು ತುಂಬಿತು. ಎಂತಹ ಗುರುತರ ಕಾರ್ಯವನ್ನೂ ನಿರ್ವಹಿಸಬಲ್ಲೆನೆಂಬ ವಿಶ್ವಾಸ ಮೂಡಿತು.

ಶ್ರೀ ಶಿವರುದ್ರಸ್ವಾಮಿಗಳವರು ಶ್ರೀ ದೇಗುಲಮಠದಲ್ಲಿ ಆಶ್ರಮ ಸ್ವೀಕರಿಸುವ ಮೊದಲು ಅವರ ಸಂಕ್ಷಿಪ್ತ ಸಂದರ್ಶನ ನಡೆಸಿದಾಗ ವ್ಯಕ್ತಪಡಿಸಿದ ಅಭಿಪ್ರಾಯಗಳು ಅವರ ವ್ಯಕ್ತಿತ್ವಕ್ಕೆ ಕನ್ನಡಿ ಹಿಡಿದಂತಿವೆ. ತಾವು ಜೀವನದಲ್ಲಿ ಅದುವರೆಗೆ ಅನುಭವಿಸಿದ

ಕಷ್ಟಗಳು ನಿರೋಧಕ ಶಕ್ತಿಯನ್ನು ನೀಡಿರುವುದಾಗಿಯೂ ಶ್ರೀ ಸಿದ್ಧಗಂಗಾ ಹಾಗೂ ಶ್ರೀ ದೇಗುಲಮಠದ ಶ್ರೀಗಳವರ ಕೃಪಾದೃಷ್ಟಿ ತಮ್ಮತ್ತ ಹೊರಳಿ ಬದುಕು ಅಮೃತಮಯವಾಗಿದ್ದು, ನಂಬಿ ಕೆಟ್ಟವರಿಲ್ಲ ಎಂಬ ಅಣ್ಣನವರ ಉಕ್ತಿಗಳು ಸತ್ಯವಾಗಿರುವುದಾಗಿಯೂ, ಶ್ರೀ ಶ್ರೀಗಳೀರ್ವರ ಅಶೀರ್ವಾದದ ರಕ್ಷಾಕವಚ ತೊಟ್ಟು ಅವರು ಕೈಗೊಂಡಿರುವ ಮಹಾನ್ ಕಾರ್ಯಗಳಾದ ಅನ್ನವೈವದೊಲುಮೆಯ ಕಾರ್ಯಗಳನ್ನು ತ್ರಿಕರಣಪೂರ್ವಕವಾಗಿ ನಡೆಸುವುದಾಗಿ ಸಂಕಲ್ಪಿಸಿರುವುದಾಗಿಯೂ ವ್ಯಕ್ತಪಡಿಸಿದರು. ದೇಶವ ಉನ್ನತಿಗೆ ಪ್ರತಿಯೊಬ್ಬರೂ ಕಾಯಕ ಪ್ರೇಮಿಗಳಾಗಬೇಕು. ಬಡವ-ಬಲ್ಲಿದರ ನಡುವಣ ಅಂತರ ಕುಗ್ಗಬೇಕು. ಪರಸ್ಪರ ಸಹಕಾರ ಭಾವನೆ ಮೂಡಬೇಕು. ಭೇದಭಾವಗಳು, ಜಾತಿ ವೈಷಮ್ಯಗಳು ಪ್ರಗತಿಯ ಶತ್ರುಗಳಾಗಿವೆ. ಅವು ಹೋಗಿ ಪರಸ್ಪರ ಸೌಹಾರ್ದ ಮೂಡಬೇಕು. ಧರ್ಮದ ಹಾದಿ ದುರ್ಗಮ. ಹಾಗೆಂದು ಬಿಟ್ಟರೆ ಸರ್ವನಾಶ. ವ್ಯಕ್ತಿಗಿಂತ ಹಿರಿದು ದೇಶ. ಆದ್ದರಿಂದ ಧರ್ಮದ ಅಡಿಪಾಯ ಹೊಂದಿ, ಸಾಧು-ಸಂತರು, ಋಷಿಮುನಿಗಳು, ಶಿವಶರಣರು, ದಾಸರು ಸೂಚಿಸಿದ ಮಾರ್ಗಾವಲಂಬಿಗಳಾಗಿ ನಡೆಯಬೇಕು. ಆಗ ಶಾಂತಿ ನೆಲಸುತ್ತದೆ. ಪ್ರಗತಿ ಬೆನ್ನಟ್ಟಿಬರುತ್ತದೆ. ಪ್ರಜಾಪ್ರಭುತ್ವ ಯಶಸ್ವಿಯಾಗುತ್ತದೆ.

ವ್ಯಕ್ತಿಯ ಜೀವನ ದ್ವಿಮುಖ ಗುರಿ ಹೊಂದಿರಬೇಕು- ಲೌಕಿಕ ಹಾಗೂ ಪಾರಮಾರ್ಥಿಕ. ಎರಡರಲ್ಲಿ ಯಾವುದರ ಬೆಳವಣಿಗೆ ಕುಂಠಿತವಾದರೂ ವ್ಯಕ್ತಿತ್ವ ಪೂರ್ಣವಿಕಾಸಗೊಳ್ಳುವುದಿಲ್ಲ. ಈ ಎರಡನ್ನೂ ಸಮನ್ವಯಗೊಳಿಸಿ ಸಾಧಿಸಲು ನೆರವು ಬೇಕೆಂದರೆ ಮಠಗಳಿಗಿಂತಲೂ ಸೂಕ್ತವಾದ ಸಂಸ್ಥೆಗಳು ಕಡಿಮೆಯೆ. ಈ ದೃಷ್ಟಿಯಿಂದ ಮಠಗಳ ಬೆಳವಣಿಗೆಗೆ ಪ್ರೋತ್ಸಾಹ ನೀಡುವುದು ಸಮಾಜದ ಕರ್ತವ್ಯ.

ದೈವ ಸಾಕ್ಷಾತ್ಕಾರದ ಮಾರ್ಗ ಆಯಾ ವ್ಯಕ್ತಿಯ ಅನುಭವ, ದರ್ಶನಕ್ಕೆ ಅನುಗುಣವಾಗಿದ್ದರೂ ಇನ್ನೊಬ್ಬನ ದರ್ಶನ, ಅನುಭವಗಳನ್ನು ತಿರಸ್ಕಾರವಾಗಿ ಕಾಣುವ ಮಟ್ಟಕ್ಕೆ ಇಳಿಯಬಾರದು. ಶಿವಶರಣರು ನುಡಿದು ನಡೆದವರಲ್ಲ. ನಡೆದು ನುಡಿದವರು. ಅವರ ಅನುಭವೋಕ್ತಿಗಳು ಇಂದು ಸಾರ್ವತ್ರಿಕ ಮನ್ನಣೆ ಗಳಿಸಿವೆ.

ಶ್ರೀ ದೇಗುಲ ಮಠದ ಉತ್ತರಾಧಿಕಾರಿಯಾಗಿ ಶ್ರೀ ಮಠದ ಸತ್ಸಂಪ್ರದಾಯಗಳಿಗೆ ಚ್ಯುತಿಬಾರದಂತೆ, ಕಾಲೋಚಿತವಾಗಿ ಆಗಬೇಕಾದ ಮಾರ್ಪಾಡುಗಳನ್ನೂ ಮರೆಯದೆ ಸೇವೆ ಸಲ್ಲಿಸುವುದೇ ತಮ್ಮ ಹೆಗ್ಗುರಿಯೆಂದೂ, ಈ ಮಹಾಕಾರ್ಯಕ್ಕೆ ಶ್ರೀ ಗುರುವಿನ ಆಶೀರ್ವಾದ, ಸಮಾಜ, ಸರ್ಕಾರದ ಪ್ರೋತ್ಸಾಹ ಅಗತ್ಯವೆಂದೂ ಅದನ್ನು ಪಡೆಯುವ ಭರವಸೆಯೂ ತಮಗಿರುವುದಾಗಿ ಸ್ಪಷ್ಟಪಡಿಸಿದರು.

ಇಂತಹ ಸತ್ಸಂಕಲ್ಪದೊಡನೆ ಶ್ರೀ ಶಿವರುದ್ರಸ್ವಾಮಿಗಳವರು ಶ್ರೀ ದೇಗುಲಮಠದ ಉತ್ತರಾಧಿಕಾರಿಗಳಾಗಿ ೦೨-೦೨-೧೯೭೭ ರಂದು ಚರಮೂರ್ತಿ ಶ್ರೀ ಮುಮ್ಮಡಿ ನಿರ್ವಾಣಸ್ವಾಮಿಗಳೆಂಬ ನೂತನ ಅಭಿದಾನದಿಂದ ಆಶ್ರಮ ಸ್ವೀಕರಿಸಿದರು. ಶ್ರೀಗಳವರ ಹಿನ್ನೆಲೆಯನ್ನು ವೀಕ್ಷಿಸಿದಾಗ ಅವರು ಕಡೆದು ಮಾಡಿದ ವಿರಕ್ತರಲ್ಲ, ಒಡೆದು ಮೂಡಿದ ವಿರಕ್ತರು ಎನ್ನಿಸುತ್ತದೆ.

ಶ್ರೀ ಇಮ್ಮಡಿ ಮಹಾಲಿಂಗಮಹಾಸ್ವಾಮಿಗಳವರು ಹಾಗೂ ಚರಮೂರ್ತಿ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳವರ ಗುರು-ಶಿಷ್ಯ ಸಂಬಂಧ, ಶ್ರೀ ಮಠದ ವಿಸ್ತೃತ ಕಾರ್ಯ ಚಟುವಟಿಕೆಗಳ ಬಗ್ಗೆ ಹೇಳುವುದಾದರೆ:

ಶ್ರೀ ಮುಮ್ಮಡಿ ನಿರ್ವಾಣಮಹಾಸ್ವಾಮಿಗಳವರು ಶ್ರೀ ದೇಗುಲಮಠದ ಉತ್ತರಾಧಿಕಾರಿಗಳಾಗಿ ಆಯ್ಕೆಯಾಗಿ ಆಶ್ರಮ ಸ್ವೀಕರಿಸಿದಂದೇ ಶ್ರೀ ಇಮ್ಮಡಿ ಮಹಾಲಿಂಗಮಹಾಸ್ವಾಮಿಗಳವರಲ್ಲಿ ನೆಮ್ಮದಿಯು ಕೊನರ ತೊಡಗಿತು. ಆರೋಗ್ಯವೂ ಚೆನ್ನಾಗಿ ಸುಧಾರಿಸಿತು. ಮತ್ತೆ ಅವರಲ್ಲಿ ನವಚೇತನ ತುಂಬಿತು. ಅವರಿಗೀಗ ಯಾವ ಕಾರ್ಯಗಳೂ ಅಸಾಧ್ಯವೆನ್ನಿಸಲಿಲ್ಲ. ಅವರ ಕರಕಮಲಸಂಜಾತರು ಅವರಿಗೆ ಅಂತಹ ನೆಮ್ಮದಿ ಬರಲು ಕಾರಣರಾಗಿದ್ದರು.

ಶ್ರೀ ಇಮ್ಮಡಿ ಮಹಾಲಿಂಗಮಹಾಸ್ವಾಮಿಗಳವರು ತಮ್ಮ ಗುರುವಿನ ಬಗೆಗೆ ಅಪಾರ ಭಕ್ತಿ, ಗೌರವ ಹೊಂದಿದ್ದರೂ ಅಷ್ಟೇ ಭಯವನ್ನೂ ಹೊಂದಿದ್ದರು. ಆದರೆ ತಮ್ಮ ಕರಕಮಲಸಂಜಾತರನ್ನು ಅವರು ಭಯಪಡಲು ಆಸ್ಪದ ನೀಡಲಿಲ್ಲ. ತಮ್ಮ ಸನಿಹದಲ್ಲೇ ಕೂರಿಸಿಕೊಂಡು ಅವರಿಗೆ ಶ್ರೀಮಠದ ರೀತಿ-ನೀತಿಗಳ ಪರಿಚಯ; ಬಂದು ಹೋಗುವ, ಪರಂಪರೆಯಿಂದ ಇರುವ ಭಕ್ತರ, ಅಧಿಕಾರಿಗಳ ಪರಿಚಯಮಾಡಿಕೊಡುತ್ತಿದ್ದರು. ಶ್ರೀಮಠದ ಕಾರ್ಯಯೋಜನೆಗಳನ್ನು ಅವರೊಡನೆ ಚರ್ಚಿಸುತ್ತಿದ್ದರು. ಪರಸ್ಪರ ಸಲಹೆಗಳನ್ನು ಪುರಸ್ಕರಿಸುತ್ತಿದ್ದರು. ಹಾಗಾಗಿ ಯಾವುದೇ ಯೋಜನೆಗಳಲ್ಲಿ ಪಳಗಿದ ಎರಡೂ ಶಕ್ತಿಗಳು ಮಿಳಿತವಾಗುತ್ತಿದ್ದವು. ಗುರು-ಶಿಷ್ಯರಲ್ಲಿ ಅನ್ಯೋನ್ಯತೆ ಹೆಚ್ಚಿತು. ಅವರು ಗುರು-ಶಿಷ್ಯ ಸಂಬಂಧವು ಮಾದರಿಯದಾಗಿತ್ತು. ಇಮ್ಮಡಿ ಶ್ರೀ ಮಹಾಲಿಂಗ ಮಹಾಸ್ವಾಮಿಗಳವರು ತಮ್ಮ ಗುರುಗಳಾದ ಇಮ್ಮಡಿ ಶ್ರೀ ನಿರ್ವಾಣ ಮಹಾಶಿವಯೋಗಿಗಳವರು ಮತ್ತು ತಮ್ಮ ಶಿಷ್ಯರಾದ ಮುಮ್ಮಡಿ ಶ್ರೀ ನಿರ್ವಾಣ ಮಹಾಸ್ವಾಮಿಗಳವರ ನಡುವಣ ಸೇತುವೆಯಂತಿದ್ದರು. ತಮ್ಮ ಗುರುಗಳಿಂದ ತಾವು ಹೀರಿದ ಆಧ್ಯಾತ್ಮಿಕ ಶಕ್ತಿಯನ್ನು ತಮ್ಮದೇ ಆದ ಕ್ರಿಯಾಶಕ್ತಿಯನ್ನೂ ತಮ್ಮ ಕರಕಮಲಸಂಜಾತರಿಗೆ ಧಾರೆಯೆರೆದರು. ಶ್ರೀ ಮುಮ್ಮಡಿ ನಿರ್ವಾಣಸ್ವಾಮಿಗಳವರು ಸುಶಿಕ್ಷಿತರಾಗಿದ್ದು ಜಂಗಮ ಜೀವನದ ಜವಾಬ್ದಾರಿ, ಉದ್ಯೋಗ ಜೀವನದ ಪಾರತಂತ್ರ್ಯ, ಸಾಮಾಜಿಕ ಜೀವನದ ರೀತಿ-ನೀತಿಗಳನ್ನು ಅರಿತವರಾಗಿದ್ದರು. ಶ್ರೀ ಗುರುವಿನ ನಿರ್ದೇಶನದಲ್ಲಿ ತಮ್ಮನ್ನು ತಾವು ಸಮಾಜಸೇವೆಗೆ ಸಮರ್ಪಿಸಿಕೊಂಡರು. ಶ್ರೀ ಮಠದ ಸಂಪ್ರದಾಯಗಳನ್ನೆಲ್ಲಾ ಪೂರ್ಣವಾಗಿ ಮೈಗೂಡಿಸಿಕೊಂಡು, ವ್ಯವಸಾಯದಿಂದ ಆತ್ಮವ್ಯವಸಾಯದವರೆಗೂ ನೈಪುಣ್ಯತೆ ಸಾಧಿಸಿಕೊಂಡು, ತಮ್ಮ ಗುರುಗಳ ಹಾಗೂ ಸಮಾಜದ ಪ್ರೀತಿಗೆ, ಆದರಕ್ಕೆ ಪಾತ್ರರಾದರು. ಮುಮ್ಮಡಿ ಶ್ರೀ ನಿರ್ವಾಣ ಸ್ವಾಮಿಗಳವರು ವಿನಯ, ಸೌಜನ್ಯ, ನೇರ ನಡೆ ನುಡಿಯವರು. ಸದಾ ಹಸನ್ಮುಖಿಗಳು. ತಮ್ಮ ತ್ರಿಕಾಲ ಪೂಜಾನುಷ್ಠಾನ ಜಪತಪಾದಿಗಳಲ್ಲಿ ನಿಷ್ಠರು. ಗುರುಗಳು ಅನಾರೋಗ್ಯದಿಂದ ಬಳಲುವಾಗ ತಾವು ಅವರ ಬಳಿಯೇ ಇದ್ದು ತಮ್ಮ ಕಯ್ಯಾರೆ ಶುಶ್ರೂಷೆ ನಡೆಸುತ್ತಿದ್ದರು. ಇದೊಂದು ಅವರ ಹಿರಿಯ ಗುಣ. ಅನಿವಾರ್ಯವಾದ ಸಂದರ್ಭಗಳಲ್ಲಿ ಗುರುಗಳ ಅಪ್ಪಣೆ ಪಡೆದು ಸೂಕ್ತವ್ಯವಸ್ಥೆ ಮಾಡಿಯೇ ಪ್ರವಾಸ ಹೊರಡುತ್ತಿದ್ದರು. ಮಧ್ಯೆ ಮಧ್ಯೆ ದೂರವಾಣಿಯ ಮೂಲಕ ವಿಚಾರಿಸಿಕೊಳ್ಳುತ್ತಿದ್ದರು.

ಶ್ರೀ ಇಮ್ಮಡಿ ಮಹಾಲಿಂಗ ಮಹಾಸ್ವಾಮಿಗಳವರು ಪ್ರಾರಂಭಿಸಿದ್ದ ಎಲ್ಲಾ ಕಾರ್ಯಗಳೂ, ಅನ್ನದಾನ, ವಿದ್ಯಾದಾನ, ಧಾರ್ಮಿಕ ಪ್ರಚಾರ, ಸಾಮಾಜಿಕ ಚಟುವಟಿಕೆಗಳು, ಕೃಷಿಕ್ಷೇತ್ರದ ವಿಸ್ತರಣೆ ಇತ್ಯಾದಿ ಅಧಿಕಗೊಂಡವು. ಅನಾಥಾಲಯ ಮತ್ತು ಶಾಲೆಗಳಲ್ಲಿ ಮಕ್ಕಳ ಸಂಖ್ಯೆಯೂ ವೃದ್ಧಿಸಿತು. ಶ್ರೀ ಮಹಾಲಿಂಗೇಶ್ವರ ಭವನ, ಜನರಲ್ ಹಾಸ್ಟೆಲ್ ಕಟ್ಟಡ, ಕನಕಪುರ ತಾಲ್ಲೂಕಿನ ಹುಣಸನಹಳ್ಳಿಯಲ್ಲಿ ಒಂದು ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜು ಮತ್ತು ಒಂದು ವಿದ್ಯಾರ್ಥಿನಿಲಯ ಸ್ಥಾಪಿಸಲ್ಪಟ್ಟವು. ಕನಕಪುರ ಪೇಟೆಯಲ್ಲಿ ಸುಸಜ್ಜಿತವಾದ ಕಲ್ಯಾಣ ಮಂಟಪ ಮುಂತಾದ ಕಟ್ಟಡಗಳೂ ನಿರ್ಮಾಣವಾದವು. ಟ್ರಾಕ್ಟರ್ ಮುಂತಾಗಿ ವ್ಯವಸಾಯದ ಉಪಕರಣಗಳು, ಪಾಕಶಾಲೆಗೆ ವಿದ್ಯುದುಪಕರಣಗಳು, ದಿವ್ಯವೂ, ಭವ್ಯವೂ ಆದ ಶ್ರೀ ಇಮ್ಮಡಿ ಮಹಾಲಿಂಗ ಮಹಾಸ್ವಾಮಿಗಳವರ ಗದ್ದುಗೆ, ಪ್ರಾಚೀನ ಗುರುವರ್ಯರುಗಳ ಗದ್ದುಗೆಗಳ ಜೀರ್ಣೋದ್ಧಾರ, ಪ್ರವಾಹಾದಿ ಪ್ರಕೃತಿ ವಿಕೋಪಗಳನ್ನು ತಡೆಗಟ್ಟಲು ಶ್ರೀ ಮಠದ ಸುತ್ತ ಭದ್ರವಾದ ಶಿಲಾಭಿತ್ತಿ ನಿರ್ಮಾಣ ಮುಂತಾದ ಕಾರ್ಯಗಳೆಲ್ಲವೂ ಶ್ರೀ ಇಮ್ಮಡಿ ಮಹಾಲಿಂಗ ಮಹಾಸ್ವಾಮಿಗಳವರ ಆಣತಿಯಂತೆ ಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳವರು ಶ್ರದ್ಧೆಯಿಂದ, ಜವಾಬ್ದಾರಿಯಿಂದ ನೆರವೇರಿಸಿದ ಕಾರ್ಯಗಳು. ತಮ್ಮ ಕರಕಮಲಸಂಜಾತರ ಕಾರ್ಯವೈಖರಿ, ಶ್ರದ್ಧೆ, ನಿಷ್ಠೆ, ಭಕ್ತಿ ವಿಧೇಯತೆಗಳು ಶ್ರೀ ಇಮ್ಮಡಿ ಮಹಾಲಿಂಗ ಮಹಾಸ್ವಾಮಿಗಳವರಲ್ಲಿ ತೃಪ್ತಿಯನ್ನು ತಂದವು. ಆದರೆ ಈ ಗುರು-ಶಿಷ್ಯ ಜೋಡಿಯನ್ನು ನೋಡಿ ಕಾಲನು ಸಹಿಸದಾದ. ದಿನಾಂಕ ೧೬-೮-೧೯೮೭ರಂದು ಶ್ರೀ ಇಮ್ಮಡಿ ಮಹಾಲಿಂಗ ಮಹಾಸ್ವಾಮಿಗಳ ಆರೋಗ್ಯ ವಿಷಮಿಸಿ ಅಂದೇ ಶ್ರೀಗಳು ಲಿಂಗದೊಳಗಾದರು; ಮಹಾಬೆಳಕನ್ನು ಕೂಡಿಕೊಂಡರು. ಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳವರ ತೋಳ ಆಸರೆಯಲ್ಲೇ ಶ್ರೀಗಳವರ ಚೇತನ ಮಹಾಚೈತನ್ಯದತ್ತ ಪಯಣಿಸಿತು. ಶ್ರೀ ಮಠದ ಪಾದರಸದ ಗಣಿಯಾಗಿದ್ದ,

೪೮ ವರ್ಷಗಳ ಕಾಲ ಶ್ರೀಮಠವನ್ನು ಬೆಳಗಿದ್ದ ಶ್ರೀಗಳವರು ಲಿಂಗೈಕ್ಯರಾದ ವಿಷಯ ಹಬ್ಬುತ್ತಿದ್ದಂತೆಯೇ ಕನಕಪುರ ಪ್ರಾಂತ್ಯವೇ ಕಂಬನಿಯ ಕಡಲಲ್ಲಿ ಮುಳುಗಿತು. ಸಹಸ್ರ-ಸಹಸ್ರ ಸಂಖ್ಯೆಯಲ್ಲಿ ಜನತೆ ಅಂತಿಮ ದರ್ಶನಕ್ಕಾಗಿ ಧಾವಿಸಿ ಬಂದರು. ನಾಡಿನೆಲ್ಲೆಡೆಯಿಂದ ಭಕ್ತಿಯ ಶ್ರದ್ಧಾಂಜಲಿ ಹರಿದು ಬಂದಿತು.

ದಿನಾಂಕ ೧೭-೮-೧೯೮೭ರಂದು ಶ್ರೀಗಳವರ ಪಾರ್ಥಿವ ಶರೀರವನ್ನು ಕನಕಪುರದ ಬೀದಿ ಬೀದಿಗಳಲ್ಲೂ ಉತ್ಸವ ನಡೆಸಿ ಸಂಜೆ ಶ್ರೀಮಠದಲ್ಲಿ ಶ್ರೀ ಸಿದ್ಧಗಂಗಾ ಶ್ರೀಗಳವರ, ನೂರಾರು ಹರಗುರು ಚರಮೂರ್ತಿಗಳವರ ಸಮ್ಮುಖದಲ್ಲಿ ಸಹಸ್ರಾರು ಜನ ಗಣ್ಯರು, ಭಕ್ತರ ಎದುರಲ್ಲಿ ಸಾಂಪ್ರದಾಯಿಕ ಸಮಾಧಿ ಕಾರ್ಯಗಳನ್ನು ವಿದ್ಯುಕ್ತವಾಗಿ ನೆರವೇರಿಸಲಾಯಿತು.

ಹನ್ನೊಂದನೆಯ ದಿವಸದ ಗಣಾರಾಧನಾ ಕಾರ್ಯಗಳೂ ಹಿಂದಿನ ದಿನದ ರಾತ್ರಿಯಿಂದಲೇ ಪ್ರಾರಂಭವಾಗಿ ಶಿವಕೀರ್ತನೆ, ಭಜನೆ, ಧಾರ್ಮಿಕ ಪ್ರವಚನಗಳೊಡನೆ ನಡೆದವು. ಗದ್ದುಗೆಗೆ ರುದ್ರಾಭಿಷೇಕ, ಜಂಗಮ ಪೂಜಾ ಕಾರ್ಯಕ್ರಮ ನಡೆದವು. ಪರಮಪೂಜ್ಯ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ದಿವ್ಯಅಧ್ಯಕ್ಷತೆಯಲ್ಲಿ ಶಿವಾನುಭವ ಸಭೆ ನಡೆಯಿತು. ಹರಗುರು ಚರಮೂರ್ತಿಗಳು, ಸಾಹಿತಿಗಳು, ವಿದ್ವಾಂಸರು, ಗಣ್ಯರೆಲ್ಲಾ ಶ್ರೀಗಳವರ ತಪಶ್ಶಕ್ತಿ, ದಾಸೋಹ, ವಿದ್ಯಾದಾನಾದಿ ನಾನಾ ಬಗೆಯ ಪುಣ್ಯಕಾರ್ಯಗಳನ್ನೂ ತಮತಮಗೆ ಮನವರಿಕೆಯಾಗಿದ್ದಂತೆ ಕೊಂಡಾಡಿದರು.

ಒಂದು ದಶಕಕ್ಕೂ ಹೆಚ್ಚಿನ ಅವಧಿಗೆ ಶ್ರೀ ಮಠದಲ್ಲಿ ಶ್ರೀ ಇಮ್ಮಡಿ ಮಹಾಲಿಂಗ ಮಹಾಸ್ವಾಮಿಗಳವರ ಸಾನ್ನಿಧ್ಯದ ಕೃಪಾಶೀರ್ವಾದ ಅನುಭವಿಸಿದ್ದ ಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳವರು ತಮ್ಮ ಪ್ರಿಯ ಗುರುಗಳು ಲಿಂಗೈಕ್ಯರಾದುದರಿಂದ ವಿಚಲಿತರಾದರೂ ಧೃತಿಗೆಡದೆ ಅವರ ಆಶೀರ್ವಾದದ ಬೆಳಕಿನಲ್ಲಿ ಶ್ರೀಮಠದ ತೇರನ್ನು ವಿಶೇಷ ಆಸ್ಥೆಯಿಂದ ಎಳೆದರು. ಶ್ರೀಗಳವರು ಉದ್ದೇಶಿಸಿದ್ದ ಯಾವ ಕಾರ್ಯಗಳಿಗೂ ಲೋಪಬರದಂತೆ ನಡೆಸಿದರು. ಶ್ರೀಮಠದಲ್ಲಿ ತಾಂತ್ರಿಕ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುವ ಸಲುವಾಗಿ ಒಂದು ಕೈಗಾರಿಕಾ ತರಬೇತಿ ಸಂಸ್ಥೆಯನ್ನು ತೆರೆದರು. ಮದ್ದೂರು ತಾಲ್ಲೂಕು, ಕೆಸ್ತೂರು ಗ್ರಾಮದ ಶ್ರೀ ಸಿದ್ಧಗಂಗಾ ಗ್ರಾಮಾಂತರ ಬಾಲಕಿಯರ ಪ್ರೌಢಶಾಲೆಯನ್ನು ವಹಿಸಿಕೊಂಡರು. ಮಳವಳ್ಳಿ ತಾಲ್ಲೂಕು ಕನ್ನಹಳ್ಳಿ ಗ್ರಾಮದಲ್ಲಿ ಒಂದು ಪ್ರೌಢಶಾಲೆ, ಟಿ. ನರಸೀಪುರ ತಾಲ್ಲೂಕು, ಕುರುಬೂರು ಮತ್ತು ಮೈಸೂರುಗಳಲ್ಲಿ ಪ್ರೌಢಶಾಲೆಗಳನ್ನೂ, ನರ್ಸರಿ ಶಾಲೆಗಳನ್ನೂ ತೆರೆದು ಶ್ರೀಮಠದ ಶೈಕ್ಷಣಿಕ ರಂಗವನ್ನು ವಿಸ್ತರಿಸಿರುತ್ತಾರೆ, ವ್ಯವಸಾಯ ಕ್ಷೇತ್ರದಲ್ಲೂ ಹೆಚ್ಚಿನ ಪ್ರಗತಿ ಸಾಧಿಸಿರುತ್ತಾರೆ.

ಇತ್ತೀಚೆಗೆ ಶ್ರೀ ಮುಮ್ಮಡಿ ನಿರ್ವಾಣ ಸ್ವಾಮಿಗಳವರು ಜಗದ್ಗುರು ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಆಯೋಜಿಸಿದ್ದ ಅಮೇರಿಕಾ, ಯೂರೋಪ್ ಮುಂತಾದ ಐರೋಪ್ಯ ರಾಷ್ಟ್ರಗಳ ಶರಣರ ಪ್ರವಾಸದಲ್ಲಿ ತಾವೂ ಭಾಗವಹಿಸಿ ಅನೇಕ ರಾಷ್ಟ್ರಗಳನ್ನು ಸಂದರ್ಶಿಸಿರುತ್ತಾರೆ. ತಾವು ಸಂದರ್ಶಿಸಿದ ರಾಷ್ಟ್ರಗಳ ಜನತೆಯ ಶಿಸ್ತು, ಕಾರ್ಯತತ್ಪರತೆ, ನೈರ್ಮಲ್ಯ ಪ್ರಜ್ಞೆ, ದೇಶಪ್ರೇಮಗಳು ಶ್ರೀಗಳವರನ್ನು ಬಹುವಾಗಿ ಆಕರ್ಷಿಸಿದವು. ನಮ್ಮ ಜನತೆಯೂ ಇಂತಹ ಹಿರಿಯ ಗುಣಗಳು ಹಾಗೂ ಜವಾಬ್ದಾರಿಯನ್ನು ಮೈಗೂಡಿಸಿಕೊಂಡರೆ ದೇಶದ ಪ್ರಗತಿ ಮತ್ತು ಹಿರಿಮೆ ಇನ್ನೂ ಹೆಚ್ಚುತ್ತದೆ ಎಂಬುದಾಗಿ ಅಭಿಪ್ರಾಯ ಪಡುತ್ತಾರೆ.

ತೀರ ಇತ್ತೀಚೆಗೆ ತಾನೇ ಶ್ರೀಗಳವರು ಜಗದ್ಗುರು ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಆಯೋಜಿಸಿದ್ದ ಭಾರತ ದರ್ಶನ ಯಾತ್ರೆಯಲ್ಲಿ ಸುಮಾರು ನಾಲ್ಕು-ನೂರು ಶರಣ ಸಂಕುಲ ಹಾಗೂ ೮೦೦ಕ್ಕೂ ಮಿಕ್ಕು ಸಾರ್ವಜನಿಕರ ಎರಡು ವಾರಗಳ ಪ್ರವಾಸದಲ್ಲಿ ಭಾಗವಹಿಸಿ, ವಾರಣಾಸಿ(ಕಾಶಿ), ಮಥುರಾ, ಕೇದಾರ, ಪ್ರಯಾಗ, ಹರಿದ್ವಾರ, ಋಷಿಕೇಶ, ಆಗ್ರಾ, ದೆಹಲಿ, ಜೈಪುರ, ಮುಂಬಯಿ ಮುಂತಾದ ಪವಿತ್ರ ಹಾಗೂ ಪ್ರಸಿದ್ಧ ಪುಣ್ಯಕ್ಷೇತ್ರಗಳನ್ನು ಸಂದರ್ಶಿಸಿರುತ್ತಾರೆ. ಸಂದರ್ಶನಗಳ ಫಲವನ್ನು ಅವರು ತಮ್ಮ ಭವಿಷ್ಯದ ಕಾರ್ಯಗಳ ಉದ್ದೀಪನೆಗಾಗಿ ಬಳಸಿಕೊಳ್ಳುವುದರಲ್ಲಿ ಸಂದೇಹವಿಲ್ಲ.

ಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳವರು ತಮ್ಮ ಗುರು ಪುಂಗವರಂತೆಯೇ ಅಪಾರ ಜನಾನುರಾಗಿಗಳು, ದಿನವೂ ಅವರ ಉತ್ಸಾಹ ಹೆಚ್ಚುತ್ತಿದೆ. ಶ್ರೀಮಠಕ್ಕೆ ಬರುವ ಭಕ್ತಾದಿಗಳನ್ನು ಹಸನ್ಮುಖಿಗಳಾಗಿ ಮಾತನಾಡಿಸುತ್ತಾರೆ. ಅವರು ಅಜಾತಶತ್ರುಗಳು. ಅವರ ಕೃಪಾಶೀರ್ವಾದಗಳು ಸಮಾಜಕ್ಕೆ ಚಿರಕಾಲ ಒದಗಲೆಂದು ಹಾರೈಸೋಣ.

ಚರಮೂರ್ತಿ ಶ್ರೀ ಮುಮ್ಮಡಿ ಮಹಾಲಿಂಗಮಹಾಸ್ವಾಮಿಗಳವರು

ಲಿಂಗೈಕ್ಯ ಚರಮೂರ್ತಿ ಶ್ರೀ ಇಮ್ಮಡಿ ಮಹಾಲಿಂಗ ಮಹಾಸ್ವಾಮಿಗಳವರು ಲಿಂಗೈಕ್ಯರಾದ ನಂತರ ಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳವರು ತಾವೊಬ್ಬರೇ ದಶಕ ಮೀರಿ ಶ್ರೀಮಠದ ತೇರನ್ನು ಎಳೆದರೆಂಬುದು ವಿದಿತವಾಗಿದೆ. ಆದರೆ ಶ್ರೀಮಠದ ಕಾರ್ಯವ್ಯಾಪ್ತಿ ಮಿತಿ ಮೀರಿದುದರಿಂದ ಶ್ರೀಗಳವರು ಉತ್ತರಾಧಿಕಾರಿಗಳನ್ನು ಆಯ್ಕೆ ಮಾಡಲು ನಿರ್ಧರಿಸಿಕೊಂಡರು. ಸಮಾಜದವರ ಒಪ್ಪಿಗೆ ಪಡೆದು ಸೂಕ್ತ ವಟುವಿಗಾಗಿ ಶ್ರೀ ಸಿದ್ಧಗಂಗಾ ಮಠಾಧೀಶರಲ್ಲಿ ಸಮಾಲೋಚಿಸಿ ಶ್ರೀ ಕ್ಷೇತ್ರದಲ್ಲಿ ವ್ಯಾಸಂಗ ನಿರತರಾಗಿದ್ದ ಶ್ರೀ ಕೆ.ವಿ. ರೇಣುಕೇಶ್‌ರವರನ್ನು ಆಯ್ಕೆ ಮಾಡಿಕೊಂಡರು.

ಶ್ರೀ ರೇಣುಕೇಶ್‌ರವರ ಜನನ, ಬಾಲ್ಯ ಶಿಕ್ಷಣ

ಶ್ರೀ ರೇಣುಕೇಶ್‌ರವರು ಜನ್ಮಸ್ಥಳ ತುಮಕೂರು ಜಿಲ್ಲೆ, ತುಮಕೂರು ತಾಲ್ಲೂಕಿನ ಹೆಬ್ಬೂರು ಹೋಬಳಿಯ ಕೆಂಬಳಲು ಎಂಬ ಪುಟ್ಟಗ್ರಾಮ. ತುಮಕೂರು ಜಿಲ್ಲೆಯು ಕಲೆ, ಸಾಹಿತ್ಯ, ಸಂಸ್ಕೃತಿ, ಪುಣ್ಯಕ್ಷೇತ್ರಗಳಲ್ಲಿ ಕನ್ನಡ ನಾಡಿನಲ್ಲೇ ಹೆಸರು ಪಡೆದಿದೆ. ಸುಪ್ರಸಿದ್ಧ ಧಾರ್ಮಿಕ ಕ್ಷೇತ್ರಗಳಾದ ಶ್ರೀ ಸಿದ್ಧಗಂಗಾ, ಎಡೆಯೂರುಗಳು ಈ ಜಿಲ್ಲೆಗೆ ಸೇರಿವೆ.

ಕೆಂಬಳಲು ಗ್ರಾಮದ ಶರಣದಂಪತಿಗಳಾದ ಸಿದ್ಧಬಸಪ್ಪ-ಬಸಮ್ಮನವರು ದೈವಭಕ್ತರೂ, ಕಾಯಕ ಪ್ರೇಮಿಗಳೂ, ಗುರುಲಿಂಗ ಜಂಗಮ ಸೇವಾಕಾಂಕ್ಷಿಗಳೂ ಆಗಿದ್ದವರು. ಅವರ ಪ್ರಧಾನ ಕಸುಬು ಕೃಷಿ. ಇವರಿಗೆ ನಾಲ್ಕು ಗಂಡು ಮಕ್ಕಳು, ಮೂವರು ಹೆಣ್ಣು ಮಕ್ಕಳು. ಮೊದಲ ಮಗ ಶ್ರೀ ಬಸವಣ್ಣಪ್ಪ, ಎರಡನೆಯವರು ಶ್ರೀ ಚನ್ನಪ್ಪ, ಮೂರನೆಯವರು ಶ್ರೀ ಕಾಳಪ್ಪ, ನಾಲ್ಕನೆಯವರೇ ವೀರಪ್ಪನವರು. ಸಮಷ್ಟಿ ಕುಟುಂಬದ ಸಹೋದರರ ಮೇಲೆ ಶ್ರೀ ಸಿದ್ಧಗಂಗೆಯ ಸಿದ್ಧಪುರುಷರಾದ ಶ್ರೀ ಉದ್ಧಾನ ಶಿವಯೋಗಿಗಳವರ ಕೃಪಾಶೀರ್ವಾದವಿತ್ತು.

ಶರಣ ದಂಪತಿಗಳಾದ ವೀರಪ್ಪ ಮತ್ತು ಸಿದ್ಧಗಂಗಮ್ಮನವರ ಹಿರಿಯ ಪುತ್ರರಾದ ಶರಣ ವಿಶ್ವೇಶ್ವರಯ್ಯ ಹಾಗೂ ಶರಣೆ ರೇಣುಕಮ್ಮ ದಂಪತಿಗಳ ಮೂವರು ಗಂಡು ಮತ್ತು ಒಬ್ಬ ಪುತ್ರಿಯರ ಪೈಕಿ ಶ್ರೀ ರೇಣುಕೇಶ್‌ರವರು ಹಿರಿಯರು. ಇವರ ಜನನ ೧೫-೫-೧೯೭೩. ಮನೆಯಲ್ಲಿ ನಿತ್ಯ ಗುರು-ಲಿಂಗ-ಜಂಗಮ ಸೇವೆಯ ದರ್ಶನಾವಕಾಶ. ಬಾಲಕ ರೇಣುಕೇಶ್ ಬಹಳ ಚಟುವಟಿಕೆಯಿಂದ ಕೂಡಿದ್ದು ಮನೆಯ ಎಲ್ಲರ ಪ್ರೀತಿಯ, ಮುದ್ದಿನ ಶಿಶು.

ಶ್ರೀ ರೇಣುಕೇಶ್ ತಮ್ಮ ಪ್ರಾಥಮಿಕ ಶಿಕ್ಷಣವನ್ನು ಹುಟ್ಟಿದ ಊರಿನಲ್ಲಿಯೇ ಪೂರೈಸಿದರು. ಓದಿನಲ್ಲಿ ಚುರುಕಾಗಿದ್ದರೂ ಬರುಬರುತ್ತಾ ಏಕಾಂತ ಪ್ರಿಯರಾಗತೊಡಗಿದರು. ವ್ಯವಹಾರದಲ್ಲಿ, ನಡೆ-ನುಡಿಗಳಲ್ಲಿ, ಪ್ರಾಮಾಣಿಕತೆ, ಸಂಯಮಗಳು ಕಾಣಿಸಿಕೊಳ್ಳತೊಡಗಿದವು. ಒಬ್ಬರೇ ತಮ್ಮ ತೋಟ- ಗದ್ದೆಗಳತ್ತ ಹೋಗಿ ಪ್ರಕೃತಿಯನ್ನು, ಪಶು-ಪಕ್ಷಿ, ಗಿಡ-ಮರಗಳನ್ನು, ಪರಿಸರವನ್ನು, ತಾದಾತ್ಮ್ಯತೆಯಿಂದ ನೋಡಿ ಭಾವುಕರಾಗುತ್ತಿದ್ದರು. ೧೯೮೭ರಲ್ಲಿ ಏಳನೇ ತರಗತಿಯಲ್ಲಿ ಉತ್ತೀರ್ಣರಾಗಿ ಪ್ರೌಢಶಾಲೆ ವಿದ್ಯಾಭ್ಯಾಸಕ್ಕಾಗಿ ಕನಕಪುರ ಶ್ರೀ ದೇಗುಲಮಠದ ಶ್ರೀ ನಿರ್ವಾಣಸ್ವಾಮಿ ವಸತಿ ಪ್ರೌಢಶಾಲೆಗೆ ಸೇರಿದರು.

ತಮ್ಮ ಊರಿನಲ್ಲಿ ತಮ್ಮ ಮನೆಯ ಬಿನ್ನಹಕ್ಕೆ ಆಗಾಗ್ಗೆ ದಯಮಾಡಿಸುತ್ತಿದ್ದ ಶ್ರೀ ಸಿದ್ಧಗಂಗಾ ಕ್ಷೇತ್ರಾಧಿಪತಿಗಳಾದ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ಪ್ರಭಾವ ಶ್ರೀ ರೇಣುಕೇಶ್‌ರವರ ಮೇಲೆ ಆಗಲೇ ಮುದ್ರೆಯೊತ್ತಿತ್ತು. ಶ್ರೀ ದೇಗುಲಮಠ ಸೇರಿದ ಮೇಲೆ ಇಲ್ಲಿನ ಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳವರ ಕೃಪಾಶೀರ್ವಾದ ಪ್ರಭಾವಗಳು ಗಾಢವಾಗಿ ಬಿದ್ದವು. ಶ್ರೀ ಗುರುಸೇವೆಯನ್ನು ಮಾಡುತ್ತಾ ಶಿಕ್ಷಣವನ್ನೂ ಮುಂದುವರೆಸಿದರು. ಶ್ರೀ ರೇಣುಕೇಶರವರ ಸೇವಾ ನಿಷ್ಠೆ, ಪ್ರಾಮಾಣಿಕತೆ, ಗಾಂಭೀರ್ಯಾದಿ ಗುಣಗಳು ಶ್ರೀಗಳವರನ್ನು ಆಕರ್ಷಿಸಿದವು. ಶ್ರೀ ರೇಣುಕೇಶ್ ೧೯೮೯ರಲ್ಲಿ ಎಸ್.ಎಸ್.ಎಸ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾದರು.

ಮುಂದಿನ ವಿದ್ಯಾಭ್ಯಾಸಕ್ಕಾಗಿ ತುಮಕೂರಿನ ಶ್ರೀ ಸಿದ್ಧಗಂಗಾ ಮಠದಲ್ಲಿದ್ದುಕೊಂಡು ಕಲಾ ವಿಷಯಗಳಲ್ಲಿ ಪದವಿಪೂರ್ವ ಶಿಕ್ಷಣವನ್ನು ಶ್ರೀ ಸಿದ್ಧಗಂಗಾ ಕಿರಿಯ ಕಾಲೇಜಿನಲ್ಲೂ, ಪದವಿ ಶಿಕ್ಷಣವನ್ನು ಶ್ರೀ ಸಿದ್ಧಗಂಗಾ ಪ್ರಥಮ ದರ್ಜೆ ಕಾಲೇಜಿನಲ್ಲೂ ಪೂರೈಸಿದರು. ಪದವಿ ಶಿಕ್ಷಣದಲ್ಲಿ ಕನ್ನಡವನ್ನು ಒಂದು ಐಚ್ಛಿಕ ವಿಷಯವಾಗಿ ಆರಿಸಿಕೊಂಡು ೧೯೬೪ರಲ್ಲಿ ಬಿ.ಎ. ಪದವಿ ಪಡೆದರು. ಅವರ ವಿದ್ಯಾಗುರುಗಳಾಗಿದ್ದ ಕನ್ನಡ ವಿಭಾಗದ ಪ್ರಾಧ್ಯಾಪಕ ಶ್ರೀ ಎಚ್.ವಿ. ವೀರಭದ್ರಯ್ಯನವರು ಕನ್ನಡ ಭಾಷೆ, ಸಾಹಿತ್ಯದ ಬಗೆಗೆ ಅಪಾರ ಆಸಕ್ತಿ ಮೂಡಿಸಿದರೆಂಬುದಾಗಿ ತಿಳಿದುಬರುತ್ತದೆ.

ಪದವಿಪೂರ್ವ ಶಿಕ್ಷಣದ ಅವಧಿಯಲ್ಲೇ ಶ್ರೀ ಸಿದ್ಧಗಂಗಾ ಸಂಸ್ಕೃತ ಕಾಲೇಜಿನಲ್ಲಿ ಸಂಸ್ಕೃತ ಮತ್ತು ವೇದಾಧ್ಯಯನ ಶಿಕ್ಷಣವನ್ನೂ ಪಡೆದರು. ಕನ್ನಡದಲ್ಲಿ ಸ್ನಾತಕೋತ್ತರ ಪದವಿ ಪಡೆವ ಅಭೀಪ್ಸೆಯಿಂದ ೧೯೬೫ರಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯದ ಎಕ್ಸ್‌ಟರ್ನಲ್ ಕೋರ್ಸಿಗೆ ಸೇರಿದರು. ಸಂಯೋಗದಿಂದ ವಿಶ್ವವಿದ್ಯಾನಿಲಯವು ಅದೇ ವರ್ಷ ತುಮಕೂರಿನಲ್ಲಿಯೇ ಕನ್ನಡ ಎಂ.ಎ. ವಿಭಾಗ ಪ್ರಾರಂಭಿಸಿದ್ದರಿಂದ ಅಲ್ಲಿಯೇ ಅಭ್ಯಸಿಸಿ ೧೯೭೦ರಲ್ಲಿ ಅಂತಿಮ ಎಂ.ಎ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ೧೯೬೮ರಲ್ಲಿ ಸಂಸ್ಕೃತದಲ್ಲಿ ವೇದಾಂತ ವಿದ್ವದುತ್ತಮ ಪರೀಕ್ಷೆಗೂ ವ್ಯಾಸಂಗ ನಡೆಸಿದರು.

ಶ್ರೀ ಸಿದ್ಧಗಂಗಾ ಕ್ಷೇತ್ರದಲ್ಲಿ ವಿದ್ಯಾರ್ಥಿಯಾಗಿದ್ದಾಗ ಶ್ರೀ ಸಿದ್ಧಗಂಗಾ ಶ್ರೀಗಳವರಾದ ಪರಮಪೂಜ್ಯ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ಸೇವೆ ಮಾಡುವ ಅಪೂರ್ವ ಅವಕಾಶ ದೊರಕಿತು. ಭಾವೀ ದೇಗುಲಮಠದ ಶಿಲ್ಪಿಯ ನಿರ್ಮಾಣವಾದುದು ಆ ಮಹಾಸನ್ನಿಧಿಯಲ್ಲಿ. ಜ್ಞಾನವೃದ್ಧರೂ, ವಯೋವೃದ್ಧರೂ, ಪರಿಪಕ್ವ ತಪೋಬಲ ಸಂಪನ್ನರೂ ಆದ ಶ್ರೀಗಳವರ ಸಾಧನೆ-ಬೋಧನೆಗಳ ಅನುಭವದ ಸಾರ ಶ್ರೀ ರೇಣುಕೇಶ್‌ರವರ ಮಾನಸ ಸರೋವರದಲ್ಲಿ ಕರಗಿತು. ಸಿದ್ಧ ಪುರುಷರಾದ ಶ್ರೀ ಉದ್ದಾನ ಶಿವಯೋಗಿಗಳವರ ಕರಕಮಲಸಂಜಾತರಾದ ಅವರು ಇಂದು ಆಧ್ಯಾತ್ಮಕ್ಷೇತ್ರದ ಭಾರ್ಗವರು. ಅವರ ದರ್ಶನವೇ ಅಮೂಲ್ಯ, ಸ್ಪರ್ಶ ಅತ್ಯಮೂಲ್ಯ. ಅಂತಹವರ ಕಾಯಕ್ಕೆ ತೈಲ ಲೇಪನ ಮಾಡುತ್ತಾ, ಕಾಲು ಒತ್ತುತ್ತಾ ಸೇವೆ ಮಾಡುವಾಗ ಅವರು ತಮ್ಮ ಬದುಕಿನ ಅಪೂರ್ವ ಪ್ರಸಂಗಗಳನ್ನು ಕಳೆದರು. ಅಪೂರ್ವ ವ್ಯಕ್ತಿಗಳು ಗುರುಗಳು, ಜಗತ್ತಿನ ಧರ್ಮಗಳ ಸಾರವನ್ನೂ, ಕಾಷಾಯಧಾರಿಯ ಬದುಕಿನ ನೆಲೆ, ಬೆಲೆ, ತ್ಯಾಗ, ಶುದ್ಧಿ, ವೃದ್ಧಿಗಳ ಹಿರಿಮೆಯನ್ನೂ ಸಾಮಾಜಿಕ ಜೀವನದಲ್ಲಿ ಹೇಗೆ ತಾವರೆಯ ಎಲೆಯ ಮೇಲಿನ ನೀರ ಹನಿಯಂತೆ ಇರಬೇಕೆಂಬುದನ್ನೂ, ಸಕಲ ಜೀವಾತ್ಮರಿಗೆ ಲೇಸ ಬಯಸುವ ಬಗೆಯನ್ನೂ ಸೂಕ್ತ ನಿದರ್ಶನ-ವಚನಗಳು, ಪುರಾಣೇತಿಹಾಸಗಳು, ಋಷಿಗಳು, ದಾರ್ಶನಿಕರು ಮುಂತಾದವರ ನಿದರ್ಶನಗಳೊಡನೆ ಮನಂಬುಗುವಂತೆ ಅಪ್ಪಣೆ ಕೊಡುತ್ತಿದ್ದರಂತೆ. ಶ್ರೀ ರೇಣುಕೇಶ್‌ರವರ ಧನ್ಯತೆಗೆ ಇದಕ್ಕಿಂತ ಮಿಗಿಲೇನು ಬೇಕು?

ಶ್ರೀ ರೇಣುಕೇಶ್‌ರವರನ್ನು ಶ್ರೀ ದೇಗುಲ ಮಠದ ಉತ್ತರಾಧಿಕಾರಿಗಳಾಗಿ ಆರಿಸುವಲ್ಲಿ ಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳವರಲ್ಲಿ, ಶ್ರೀ ಸಿದ್ಧಗಂಗಾ ಶ್ರೀಗಳವರಲ್ಲಿ ಒಂದೇ ರೀತಿಯ ಅಭಿಪ್ರಾಯವಿದ್ದು ಸಮಾಜಬಾಂಧವರ ಅನುಮೋದನೆಯೂ ದೊರಕಿತು. ಇದರ ಪರಿಣಾಮವಾಗಿ ಶ್ರೀ ರೇಣುಕೇಶ್‌ರವರ ಅಂತರಂಗದ ಅಭೀಷ್ಟವೂ ಸಿದ್ಧಿಸಿದಂತಾಯಿತು. ೧೯೬೮ರಲ್ಲಿ ಶ್ರೀ ರೇಣುಕೇಶ್‌ರವರಿಗೆ ಚರಮೂರ್ತಿ ಶ್ರೀ ಮುಮ್ಮಡಿ ಮಹಾಲಿಂಗ ಸ್ವಾಮಿಗಳೆಂಬ ನೂತನ ಅಭಿಧಾನದಿಂದ ಆಶ್ರಮ ನೀಡಲಾಯಿತು.

ಶ್ರೀ ದೇಗುಲ ಮಠವಾಗಲೀ, ಮುಮ್ಮಡಿ ಶ್ರೀ ನಿರ್ವಾಣ ಮಹಾಪ್ರಭುಗಳಾಗಲೀ ಮುಮ್ಮಡಿ ಶ್ರೀ ಮಹಾಲಿಂಗ ಸ್ವಾಮಿಗಳವರಿಗೆ ಅಪರಿಚಿತವಲ್ಲ. ಉಳಿದಿರುವುದು ಸಾಧನೆಯಷ್ಟೆ. ಶ್ರೀ ದೇಗುಲ ಮಠದ ಗುರು ಪರಂಪರೆಯ ತಪಃಪ್ರಭಾವದಿಂದ ಶ್ರೀಮಠಕ್ಕೆ ಹೆಚ್ಚಿನ ವಿದ್ಯಾವಂತರೂ, ಉತ್ಸಾಹಿಗಳೂ, ಆಧ್ಯಾತ್ಮಿಕ ಬದುಕಿಗೆ ಮತ್ತು ಸಮಾಜಸೇವೆಗೆ ತಮ್ಮನ್ನು ಸಮರ್ಪಿಸಿಕೊಂಡವರೇ ಉತ್ತರಾಧಿಕಾರಿಗಳಾಗಿ ದೊರೆತುದು ಶ್ರೀ ಮಠದ ಮಕುಟಕ್ಕೆ ಮತ್ತೊಂದು ಅಮೂಲ್ಯ ರತ್ನವನ್ನು ಅಳವಡಿಸಿದಂತಾಯಿತು.

ಚರಮೂರ್ತಿ ಶ್ರೀ ಮುಮ್ಮಡಿ ಮಹಾಲಿಂಗ ಸ್ವಾಮಿಗಳವರು ಮೂವತ್ತರ ಹರಯದ, ಬಾಲಸೂರ್ಯ ತೇಜಸ್ವಿನ, ಸೂಕ್ಷ್ಮಗ್ರಹಿಕೆ, ಕಾರ್ಯತತ್ಪರತೆ, ಚಿಂತನಶೀಲತೆ, ವಿನಯಶೀಲತೆ, ಸೌಜನ್ಯಾದಿ ಗುಣಧರ್ಮಗಳು ಸಂಗಮಿಸಿರುವ ಕಿತ್ತಡಿಗಳು, ವಿದ್ಯಾಸಂಪನ್ನರು. ಶ್ರೀ ದೇಗುಲ ಮಠದ ಉತ್ಕರ್ಷ ಕಾರ್ಯದಲ್ಲಿ ಲಿಂ. ಶ್ರೀ ಇಮ್ಮಡಿ ಮಹಾಲಿಂಗಸ್ವಾಮಿಗಳವರ ಮುಂದುವರಿದ ರೂಪ. ಶ್ರೀ ಸಿದ್ಧಗಂಗಾ ಶ್ರೀಗಳವರ ಹಾಗೂ ಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳವರ ಆಶೀರ್ವಾದದ ವಜ್ರಕವಚ ಇವರ ಪಾಲಿಗಿದೆ. ಶ್ರೀ ಮುಮ್ಮಡಿ ನಿರ್ವಾಣ ಪ್ರಭುಗಳು ಇವರಿಗೆ ಗುರುವಾಗಿ ಲಭಿಸಿದ್ದೂ ಇವರ ಸುಕೃತವೆ.

ಶ್ರೀ ಮುಮ್ಮಡಿ ಮಹಾಲಿಂಗ ಮಹಾಸ್ವಾಮಿಗಳವರು ಆಶ್ರಮ ಸ್ವೀಕರಿಸಿ ಅರ್ಧದಶಕ ಮಾತ್ರ ಪೂರೈಸಿದ್ದು ಆಗಲೇ ಅಪಾರ ಸಂಖ್ಯೆಯ ಭಕ್ತರ ಪರಿಚಯ ಮಾಡಿಕೊಂಡಿದ್ದಾರೆ; ಕಾರ್ಯಕ್ಷೇತ್ರದ ವಿಸ್ತರಣೆಯಲ್ಲಿ ತೊಡಗಿದ್ದಾರೆ. ತಮ್ಮ ಗುರುವಿನೊಡನೆ ಅನ್ಯೋನ್ಯ ಸಂಬಂಧ ಬೆಳೆಸಿಕೊಂಡಿದ್ದಾರೆ. ತಮ್ಮ ಗುರುವಿನ ೨೫ ವರ್ಷಗಳ ಸೇವೆಯ, ವ್ಯಕ್ತಿತ್ವದ ಹಿರಿಮೆ-ಗರಿಮೆಗಳನ್ನು ಗ್ರಹಿಸಿ, ಅದನ್ನು ಸಮಾಜಕ್ಕೆ ಪ್ರಕಟಿಸುವ ನಿಟ್ಟಿನಲ್ಲಿ ಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳವರ ಸೇವಾಸ್ಮರಣೆಯ ರಜತ ಮಹೋತ್ಸವ ಕಾರ್ಯಗಳನ್ನು ಹಮ್ಮಿಕೊಂಡು ಹಗಲಿರುಳೂ ಶ್ರಮಿಸುತ್ತಿದ್ದಾರೆ. ಈ ಮಹತ್ಕಾರ್ಯದೊಡನೆ ಬೃಹತ್ ಯೋಜನೆಯನ್ನೂ ಹಮ್ಮಿಕೊಂಡಿದ್ದಾರೆ. ಸಾರ್ವಜನಿಕರು, ಭಕ್ತರಲ್ಲದೆ ಕಿರಿಯ ವಿದ್ಯಾರ್ಥಿಗಳ ನಿಕಟ ಸಂಪರ್ಕವಿಟ್ಟುಕೊಂಡಿದ್ದಾರೆ.

ಶ್ರೀ ಮುಮ್ಮಡಿ ಮಹಾಲಿಂಗ ಮಹಾಸ್ವಾಮಿಗಳವರು ಉತ್ಸಾಹಿಗಳು, ಒಳ್ಳೆಯ ಸಂಘಟನಾಶಕ್ತಿ ಹೊಂದಿದ್ದಾರೆ. ಅವರ ಕಾರ್ಯಚಟುವಟಿಕೆಗಳಿಗೆ ಭದ್ರಬುನಾದಿ ದೊರೆತಿದೆ. ಶ್ರೀಮಠದ ಗುರುಪರಂಪರೆಯ ಆಶೀರ್ವಾದ ಶಕ್ತಿ ಅವರಿಗಿದೆ. ಅವರು ಭಾವೀ ದೇಗುಲಮಠದ ನಾಡಿನ ಜ್ಯೋತಿಯಾಗಲಿ. ಶ್ರೀಮಠದ ಸೀಮಾಪುರುಷರಾಗಲಿ, ಸಮಾಜದ ಅಗತ್ಯಗಳನ್ನು ತಣಿಸಿ ಧರ್ಮಜಾಗೃತಿಯನ್ನುಂಟುಮಾಡುವ ಶಕ್ತಿ ಅವರಿಗೆ ಒದಗಿ ಬರಲಿ. ಅವರಿಗೆ ಸಮಾಜದ ಬೆಂಬಲ, ಗುರುವಿನ ಪೂರ್ಣ ಆಶೀರ್ವಾದ ಕೃಪೆಗಳೂ ಒದಗಿ ಬರಲೆಂದು ಹಾರೈಸೋಣ.

ಶ್ರೀಮಠದ ಗುರುಪರಂಪರೆಯನ್ನು ಅವಲೋಕಿಸಿದಾಗ ಪ್ರಕಾಂಡ ಪಂಡಿತರಿಗಿಂತ ಮಾನವ ಪ್ರೇಮಿಗಳು, ಭೂತದಯಾ ಮೂರ್ತಿಗಳು ಆಧ್ಯಾತ್ಮದತ್ತ ಆದ್ಯ ಗಮನವಿಟ್ಟು, ಒಡನೊಡನೆಯೇ ಸಮಾಜದ ಏಳಿಗೆಗೂ ಗಮನ ಹರಿಸಿದವರಾಗಿದ್ದಾರೆ. ವೈಭವದ ಬದುಕು, ಬಿರುದು ಬಾವಲಿಗಳ ಹಂಬಲವಿಲ್ಲದವರು. ಅವರೆಲ್ಲರೂ ಮೈಮೇಲೆ ಅರಿವೆ ಇಲ್ಲದುದರ ಪರಿವೆಯೂ ಇಲ್ಲದೆ ಸದಾಶಿವನ ಧ್ಯಾನದಲ್ಲಿ ಲೀನವಾಗಿದ್ದ ಆ ಮುಗ್ಧ ಸ್ನಿಗ್ಧ ಆಧ್ಯಾತ್ಮಲೋಕದ ಸೀಮಾಪುರುಷರಲ್ಲಿ ಒಬ್ಬರಾದ ಆದ್ಯ ಶ್ರೀ ನಿರ್ವಾಣೇಶ್ವರ ಮಹಾಶಿವಯೋಗಿಗಳವರ ಪರಂಪರೆಯಲ್ಲವೆ? ವೈಭವ, ಬೆಡಗು ಬಿನ್ನಾಣಗಳು ಒಳ ಸೇರಲಾರವು. ಆ ಪರಂಪರೆಯವರು ಮಾಡಿದ ಸಂಕಲ್ಪಗಳು- ಶ್ರೀಮಠದ ಎಲ್ಲೆಯಲ್ಲಿ ದಹನ ಕಾಲದಲ್ಲಿ ತಲೆಸಿಡಿಯದಿರುವುದು. ಸರ್ಪದಷ್ಟವಾದರೂ ವಿಷವೇರದಿರುವುದು, ಇಂದಿಗೂ ಸತ್ಯವಾಗಿದ್ದು ವಿಜ್ಞಾನಕ್ಕೇ ಸವಾಲಿನಂತಿದೆ. ಇತ್ತೀಚೆಗಷ್ಟೇ ಹುದುಗಿದ್ದ ಹೊನ್ನನ್ನು ಗಣಿಯಿಂದ ಹೊರತೆಗೆವಂತೆ ಶ್ರೀಮಠದ ಹಿರಿಮೆ, ಅಂತಸ್ಸತ್ವಗಳನ್ನು ಹೊರಹೊಮ್ಮಿಸುವ ಕಾರ್ಯ ಆರಂಭವಾಗಿದೆ. ಅಶನ-ವಸತಿಗಳ ಕೊರತೆ ನೀಗಿ ಅಕ್ಷರದಾಸೋಹ, ವಿದ್ಯಾಕಾಂಕ್ಷಿಗಳ ಅಗತ್ಯ ಪೂರೈಕೆ, ಆಧುನಿಕ ಕೈಗಾರಿಕೆ, ತಂತ್ರಜ್ಞಾನದ ಪರಿಚಯ, ಸಂಸ್ಕೃತ ವೇದಾಧ್ಯಯನ, ಆಗಮಗಳ ಸ್ಥೂಲ ಪರಿಚಯ, ವ್ಯವಸಾಯದಲ್ಲಿ ಸುಧಾರಿತ ಹಾಗೂ ವಾಣಿಜ್ಯ ಬೆಳೆಗಳ ಬೆಳೆಯುವಿಕೆಯಲ್ಲಿ ಪ್ರಗತಿ ಮುಂತಾಗಿ ಹಲವು ಬಗೆಯ ಕಾರ್ಯಗಳಲ್ಲಿ ಮುನ್ನಡೆ ಸಾಧಿಸುತ್ತಿವೆ. ಬಸವಳಿದ ಬದುಕಿಗೆ ಅಸುವಳಿಯದ ಮುನ್ನ ಸಾಂತ್ವನ ನೀಡುತ್ತಿದೆ. ಆಧ್ಯಾತ್ಮದ ವೈಭವೀಕರಣ ಅಥವಾ ಅತ್ಯಾಧುನಿಕತೆಯ ಭ್ರಮೆಯ ಮೋಡಿ ಇಲ್ಲದೆ ಸಾಮರಸ್ಯದ ಹೆಜ್ಜೆಯಲ್ಲಿ ಸಾಗುತ್ತಿದೆ ಶ್ರೀಮಠದ ಸೇವೆ.

■■

ಕನಕಪುರ ದೇಗುಲ ಮಠದ ಶಾಸನ

✍ ಶ್ರೀ ಆರ್. ಚಕ್ರವರ್ತಿ

ಬೆಂಗಳೂರು ಜಿಲ್ಲೆ ಕನಕಪುರದ ದೇಗುಲ ಮಠದ ಶಾಸನಗಳನ್ನು ಪ್ರಕಟಿಸುವುದಕ್ಕೆ ಮೊದಲು ವೀರಶೈವರು ಕರ್ನಾಟಕದಲ್ಲಿ ಸಮಾಜಕ್ಕೆ ಹಿಂದೆ ಮಾಡಿದ, ಈಗ ಮಾಡುತ್ತಿರುವ ಸೇವೆಯನ್ನು ಸ್ವಲ್ಪಮಟ್ಟಿಗಾದರೂ ತಿಳಿಸದಿದ್ದರೆ ನಮ್ಮ ಇಂದಿನ ಪೀಳಿಗೆಗೆ ಆದರ್ಶವನ್ನು ತೋರಿಸಿಕೊಟ್ಟಂತಾಗುವುದಿಲ್ಲ. ಇದಕ್ಕೆ ಮೊದಲು ಶಿವಪೂಜೆ, ಶೈವಮತ ಅದು ವೀರಶೈವವಾಗಿ ಪರಿವರ್ತನೆ ಹೊಂದಿದ ವಿಷಯಗಳನ್ನು ಸಿಂಹಾವಲೋಕನದಿಂದ ಸ್ವಲ್ಪಮಟ್ಟಿಗೆ ತಿಳಿಸದಿದ್ದರೆ ನಮ್ಮ ಉದ್ದೇಶವು ಸಫಲವಾಗುವುದಿಲ್ಲ.

ಭಾರತದಲ್ಲಿ ಲಿಂಗಪೂಜೆ ಅನಾದಿಯಾದುದು. ಹರಪ್ಪ ಮೊಹೆಂಜೋದಾರೋಗಳಲ್ಲಿ ದೊರೆತಿರುವ ಮುದ್ರಿಕೆಗಳಲ್ಲಿ ಧ್ಯಾನಾಸಕ್ತನಾದ ಯೋಗಿಯಾದ ಶಿವಮೂರ್ತಿ ಮತ್ತು ವೃಷಭ ಇದಲ್ಲದೆ ಲಿಂಗಗಳು ಗೋಚರವಾಗಿವೆ. ಇವುಗಳಿಂದ ಕ್ರಿಸ್ತಪೂರ್ವ ಮೂರು ಸಾವಿರ ವರ್ಷಗಳ ಹಿಂದೆಯೇ ಅನಾದಿಕಾಲದ ಭಾರತ ನಿವಾಸಿಗಳಾದ ದ್ರಾವಿಡರು ಲಿಂಗೋಪಾಸಕರೆಂದು ಸ್ಪಷ್ಟವಾಗಿ ತಿಳಿದುಬರುವುದು. ಐತಿಹಾಸಿಕ ಯುಗದಲ್ಲಿ ಆರ್ಯರು ಶಿವ ಮತ್ತು ವಿಷ್ಣುವನ್ನು ಪೂಜಿಸುತ್ತಿದ್ದರು. ಪ್ರಸಿದ್ಧ ವಿಶ್ವಕವಿಯಾದ ಕಾಳಿದಾಸನು ಶೈವನು. ಭಾರತದಲ್ಲೇ ಜನ್ಮತಳೆದ ಜೈನ, ಬೌದ್ಧ ಮತಗಳು ಕ್ರಿಸ್ತಪೂರ್ವ ಐದನೆಯ ಶತಮಾನದಿಂದ ತಮ್ಮ ಮತಗಳ ತತ್ವಗಳನ್ನು ಸಮಾಜದ ಮೇಲೆ ಬೀರಿ ಕೆಲವು ಕಾಲ ಪ್ರವರ್ಧಮಾನಗಳಾಗಿದ್ದವು. ಬೌದ್ಧಮತವು ಅಶೋಕನ ನೆರವಿನಿಂದ ಭಾರತದಲ್ಲಿ ಹರಡಿದುದಲ್ಲದೆ ಪೂರ್ವಾರ್ಧಗೋಳದಲ್ಲಿಯೂ ವ್ಯಾಪಕವಾಗಿದ್ದು ಶೂನ್ಯಸಿಂಹಾಸನವಾದುದರಿಂದ ಭಾರತದಲ್ಲಿ ಅದರ ಪ್ರಭಾವವು ಕಡಿಮೆಯಾಗಿ ಕ್ಷೀಣದೆಶೆಗೆ ಬಂದಿತು. ಜೈನಮತವೂ ಕ್ರಿಸ್ತಪೂರ್ವ ಐದನೆಯ ಶತಮಾನದಿಂದ ಆಧುನಿಕ ಕಾಲದವರೆಗೂ ಭಾರತದಲ್ಲಿ ಅಲ್ಲಲ್ಲೇ ಇರುವುದು. ಕ್ರಿಸ್ತಶಕ ಐದರಿಂದ ಹತ್ತನೆಯ ಶತಮಾನದವರೆಗೆ ಜೈನಮತವು ಕನ್ನಡ ನಾಡಿನಲ್ಲಿ ರಾಜಾಶ್ರಯ ಪಡೆದು ಬಹಳ ಉನ್ನತ ಸ್ಥಿತಿಗೆ ಬಂದಿತು. ಕೊನೆಕೊನೆಗೆ ಶೈವ ಮತ್ತು ವೈಷ್ಣವ ಮತಗಳ ಪ್ರಭಾವದಿಂದ ಬೌದ್ಧ ಮತ್ತು ಜೈನಮತಗಳ ಜನರು ವೈದಿಕಮತಗಳಾದ ಶೈವ ಮತ್ತು ವೈಷ್ಣವ ಮತಗಳನ್ನಾಶ್ರಯಿಸಿದರು.

ಕನ್ನಡ ನಾಡಿನಲ್ಲಿ ಕ್ರಿಸ್ತಪೂರ್ವ ಎರಡನೆಯ ಶತಮಾನದಿಂದ ಕ್ರಿ.ಶ. ಹನ್ನೆರಡನೆಯ ಶತಮಾನದವರೆಗೆ ಶೈವಮತವೇ ಪ್ರಚಾರವಾಗಿದ್ದಿತು. ಕರ್ನಾಟಕದ ಪ್ರಾಚೀನ ರಾಜರಾದ ಕದಂಬರು ಶೈವರು. ಭಾರತದಲ್ಲೇ ಅತ್ಯಂತ ಪ್ರಾಚೀನವೆಂದು ಹೇಳಬಹುದಾದ ಶೈವ ದೇವಾಲಯವಾದ ಪ್ರಣವೇಶ್ವರ ದೇವಾಲಯವು ಷಿಕಾರಿಪುರದ ತಾಲ್ಲೂಕು ತಾಳಗುಂದದಲ್ಲಿ ಈಗಲೂ ಇದೆ. ಕ್ರಿಸ್ತಪೂರ್ವ ಎರಡನೆಯ ಶತಮಾನದಲ್ಲಿ ದಕ್ಷಿಣ ಭಾರತದಲ್ಲಿ ರಾಜ್ಯಭಾರ ಮಾಡುತ್ತಿದ್ದ ಆಂಧ್ರ ರಾಜರಾದ ಶಾತಕರ್ಣಿ ಮೊದಲಾದ ರಾಜರು ಈ ದೇವರನ್ನು ಪೂಜಿಸುತ್ತಿದ್ದರೆಂದು ತಾಳಗುಂದದ ಶಾಸನ ತಿಳಿಸುವುದು. ಶೈವಮತಗಳಲ್ಲಿ ಕಾಳಾಮುಖ, ಕಾಪಾಲಿಕ, ಸಾತ್ವಿಕ ಮತವಾದ ವೀರಶೈವ ಎಂಬ ಪ್ರಭೇದಗಳಿವೆ. ಶ್ರೀಮದ್ಭಗವತ್ಪಾದಾಚಾರ್ಯರಾದ ಶಂಕರಾಚಾರ್ಯರು ಅವರ ಕಾಲದಲ್ಲಿದ್ದ ಶೈವ, ವೈಷ್ಣ, ಶಾಕ್ತೇಯ, ಗಾಣಾಪತ್ಯ, ಸೌರ ಮತ್ತು ಕಾಪಾಲಿಕ ಎಂಬ ಆರು ಮತಗಳು ವೈದಿಕ ಮತವೆಂದು ಸಾರಿ ಷಣ್ಮತಸ್ಥಾಪನಾಚಾರ್ಯರೆಂದು ಪ್ರಸಿದ್ಧರಾದರು. ಈ ಮೇಲೆ ಹೇಳಿದ ಮತಪ್ರಚಾರಕರು ತಮ್ಮ ತಮ್ಮ ಮತಗಳ ಉತ್ಕರ್ಷವನ್ನು ಕುರಿತು ಅನೇಕ ಗ್ರಂಥಗಳನ್ನು ಬರೆದು ಪ್ರಸಿದ್ಧರಾಗಿರುವರು.

ವೈದಿಕ ಮತಗಳಲ್ಲಿದ್ದ ಯಜ್ಞಯಾಗಾದಿಗಳು ಶೈವ, ಶಾಕ್ತೇಯ ಮತಗಳಲ್ಲಿದ್ದ ಪಶುವಧೆ ಮೊದಲಾದ ಪ್ರಾಣಿಹಿಂಸೆಗಳು ಬೌದ್ಧ ಜೈನಮತಗಳ ಪ್ರಭಾವದಿಂದ ಜನರಿಗೆ ಅಸಹ್ಯವಾಗಿ ಕಂಡಿತು. ವೈದಿಕ ಮತಗಳಲ್ಲಿ ಯಜ್ಞಕ್ಕೆ ಪ್ರಾಧಾನ್ಯವಿದ್ದಿತು.

ಕ್ರಮೇಣ ಯಜ್ಞ ಅಷ್ಟು ಮುಖ್ಯವಲ್ಲ, ಗೌಣವೆಂದೂ 'ಯಜ್ಞೋವೈವಿಷ್ಣುಃ' ಎಂದು ಹೇಳಿ ವಿಷ್ಣುಪೂಜೆಯೇ ಯಜ್ಞವೆಂದೂ 'ಸ್ವರ್ಗ ಕಾಮೋಯ ಜೇತ' ಎಂದು ಹೇಳಿ ಮೋಕ್ಷಕಾಮಿಗಳಿಗೆ ಯಜ್ಞ ಬೇಕಾಗಿಲ್ಲವೆಂದೂ ವೈದಿಕ ಮತಗಳು ಸಾರಿದವು. ಶಾಕ್ತೇಯ, ಭೈರವ, ಕಾಪಾಲಿಕ ಮೊದಲಾದ ಮತಗಳಲ್ಲಿದ್ದ ರಾಜಸ ಮತ್ತು ತಾಮಸ ಪೂಜೆಗಳನ್ನು ಖಂಡಿಸಿ ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನವರು ಸಾತ್ವಿಕ ಪೂಜೆಯಿಂದ ಶಿವನನ್ನು ಆರಾಧಿಸಿ ಕಾಯಕವೇ ಕೈಲಾಸವೆಂದು ಕರ್ಮಯೋಗವನ್ನು ಜನಗಳಿಗೆ ಬೋಧಿಸಿ ಹಿಂದೆ ಇದ್ದ ಕಾಪಾಲಿಕ, ಕಾಳಾಮುಖ, ಶಾಕ್ತೇಯ ಮತಗಳನ್ನೆಲ್ಲಾ ರೂಪಾಂತರಗೊಳಿಸಿ ವೀರಶೈವ ಮತವನ್ನಾಗಿ ಮಾರ್ಪಡಿಸಿದರು.

ಶೈವ ಮತ್ತು ವೈಷ್ಣವ ಮತಗಳು ಒಂದಕ್ಕೊಂದು ಪ್ರತಿಸ್ಪರ್ಧಿಗಳಾಗಿ ಭಾರತದಲ್ಲೆಲ್ಲಾ ತಮ್ಮ ತಮ್ಮ ಪ್ರಭಾವವನ್ನು ಬೀರುತ್ತಿದೆ. ದ್ರಾವಿಡ ದೇಶದಲ್ಲಿ ಆಳ್ವಾರುಗಳು, ನಾಥಮುನಿ, ಯಾಮುನಮುನಿ ಮತ್ತು ರಾಮಾನುಜಮುನಿಗಳಿಂದ ಶ್ರೀ ವೈಷ್ಣವ ಮತವು ಅಭಿವೃದ್ಧಿಗೆ ಬಂದಿತು. ಕನ್ನಡ ನಾಡಿನಲ್ಲಿ ಅಲ್ಲಮಪ್ರಭು, ಅಕ್ಕಮಹಾದೇವಿ ಮತ್ತು ಬಸವಣ್ಣನವರ ಉಪದೇಶಗಳಿಂದ ಶೈವವು ಸಾತ್ವಿಕ ಶೈವವಾಗಿ ರೂಪಾಂತರ ಹೊಂದಿ ವೀರಶೈವವಾಗಿ ಕರ್ನಾಟಕದಲ್ಲೆಲ್ಲಾ ಹನ್ನೆರಡನೆಯ ಶತಮಾನದಲ್ಲಿ ಒಂದು ಕ್ರಾಂತಿಯನ್ನುಂಟುಮಾಡಿತು. ಈ ಎರಡು ಮತಗಳಲ್ಲಿ ಉಪಾಸ್ಯ ದೈವವಾದ ವಿಷ್ಣು ಮತ್ತು ಶಿವ ಎಂಬ ಶಬ್ದಗಳಿಗೆ ಪ್ರತಿಯಾಗಿ ದೇವರು ಎಂಬ ಪದ ಪ್ರಯೋಗ ಮಾಡಿದರೆ ಈ ಎರಡು ಮತಗಳು ದೈವ ಸಾಕ್ಷಾತ್ಕಾರಕ್ಕೆ ತೋರಿಸಿರುವ ಮಾರ್ಗವು ಒಂದೇ ಆಗಿದೆ. ಎರಡು ಮತಗಳಲ್ಲೂ ವರ್ಣಾಶ್ರಮ ಧರ್ಮಗಳು ಪ್ರಧಾನವಲ್ಲ, ದೈವಭಕ್ತರಲ್ಲಿ ಭೇದವಿಲ್ಲ, ಮುಕ್ತಿಗೆ ಸ್ತ್ರೀ, ಶೂದ್ರ, ಚಂಡಾಲಾದಿಗಳಿಗೂ ಅಧಿಕಾರವುಂಟು ಎಂದು ಸಾರಿದುವು. ಶ್ರೀ ವೈಷ್ಣವರಿಗೆ ದ್ರಾವಿಡ ಪ್ರಬಂಧಗಳು ದಿವ್ಯಗ್ರಂಥಗಳಾದರೆ ವೀರಶೈವರಿಗೆ ಶಿವಶರಣರು ಬರೆದಿರುವ ವಚನ ಸಾಹಿತ್ಯವು ಪವಿತ್ರವಾಯಿತು. ಈ ಎರಡು ಮತಗಳಲ್ಲಿ ಭಕ್ತಿಗೆ ಪ್ರಾಧಾನ್ಯ. 'ಕಾಯಕವೇ ಕೈಲಾಸ' ಎಂದರೆ ಕರ್ಮಯೋಗದಿಂದ ಲೋಕಸೇವೆ, ಗುರುಸೇವೆ, ಸಮಾಜಸೇವೆ ಮಾಡಿ ಭಕ್ತಿಯಿಂದ ಶಿವನನ್ನು ಪೂಜಿಸಿದರೆ ಕೈಲಾಸವಾಗುವುದೆಂದು ವೀರಶೈವರು ಹೇಳಿದರು. ಶ್ರೀ ವೈಷ್ಣವರು ಜನಸೇವೆಯೇ ಜನಾರ್ಧನನ ಸೇವೆಯೆಂದು ಭಾವಿಸಿ ಲೋಕಾರಾಧನ ತತ್ಪರರಾಗಿ ಭಕ್ತಿಯಿಂದ ಭಗವಂತನನ್ನಾರಾಧಿಸಿ ಗುರುಮುಖೇನ ಪ್ರಪತ್ತಿ ಹೊಂದಿ ವಿಷ್ಣುಸಾಯುಜ್ಯವನ್ನು ಪಡೆಯುವರೆಂದು ವೈಷ್ಣವಮತವು ಬೋಧಿಸಿತು. ದ್ರಾವಿಡ ದೇಶದಲ್ಲಿ ರಾಮಾನುಜರು ಅಸ್ಪೃಶ್ಯತೆಯನ್ನು ತೊಡೆಯಲು ಪ್ರಯತ್ನಪಟ್ಟಂತೆ ಕನ್ನಡನಾಡಿನಲ್ಲಿ ಬಸವಣ್ಣನವರು ಅದೇ ಕೆಲಸ ಮಾಡಲು ಪ್ರಯತ್ನಪಟ್ಟರು.

ಮಠಗಳ ಉಗಮ: ವೇದೋಪನಿಷತ್ತುಗಳ ಕಾಲದಲ್ಲಿ ವಿದ್ಯಾಭ್ಯಾಸವು ಋಷ್ಯಾಶ್ರಮಗಳಲ್ಲಿ ನಡೆಯುತ್ತಿತ್ತು. ಒಬ್ಬೊಬ್ಬ ಪ್ರಸಿದ್ಧರಾದ ಋಷಿಗಳು ಕುಲಪತಿಗಳಾಗಿ ಸಾವಿರಾರು ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸ ಮಾಡಿಸುತ್ತಿದ್ದರು. ಈ ಗುರುಕುಲಕ್ಕೆ ಚಕ್ರವರ್ತಿಗಳ ಮಕ್ಕಳೇ ಆದಿಯಾಗಿ ಎಲ್ಲಾ ವರ್ಣದವರೂ ಹೋಗಿ ವಿದ್ಯೆ ಕಲಿತು ತಮ್ಮ ತಮ್ಮ ಜನ್ಮಸ್ಥಳಕ್ಕೆ ಬಂದು ಗೃಹಸ್ಥಾಶ್ರಮವನ್ನು ಸ್ವೀಕಾರ ಮಾಡುತ್ತಿದ್ದರು. ಕಾಲಕ್ರಮೇಣ ರಾಜರು, ಹಣವಂತರು ತಮ್ಮ ಮಕ್ಕಳುಗಳನ್ನು ಗುರುಕುಲಕ್ಕೆ ಕಳಿಸುವುದಕ್ಕೆ ಮನಸ್ಸಿಲ್ಲದೆ, ತಪಸ್ವಿಗಳು, ಬ್ರಹ್ಮಜ್ಞಾನಿಗಳು, ವಿದ್ಯಾವಂತರು ಸದಾಚಾರ ಸಂಪನ್ನರಾದ ಬ್ರಾಹ್ಮಣರನ್ನು ಪಟ್ಟಣಗಳಿಗೂ ಊರುಗಳಿಗೂ ಕರೆಸಿ ಅವರಿಗೆ ಪ್ರತ್ಯೇಕವಾಗಿ ಮನೆ ಕಟ್ಟಿಸಿಕೊಟ್ಟು ಅಶನವಸನಗಳಿಗೆ ಗ್ರಾಮ ಭೂಮಿಗಳನ್ನು ದಾನಮಾಡಿ ನಿರ್ಮಿಸಿದ ಬ್ರಾಹ್ಮಣ ಶ್ರೇಣಿಗಳೇ ಅಗ್ರಹಾರಗಳಾದುವು. ಈ ಅಗ್ರಹಾರ ನಿರ್ಮಾಣವು ಕ್ರಿ.ಶ. ಐದನೆಯ ಶತಮಾನದಿಂದ ಆಧುನಿಕ ಕಾಲದವರೆಗೂ ನಡೆದು ಬಂದಿದೆ. ಈ ಅಗ್ರಹಾರಗಳ ಮಧ್ಯೆ ಒಂದು ವೈಷ್ಣವಾಲಯವು ಈಶಾನ್ಯದಲ್ಲಿ ಒಂದು ಶೈವಾಲಯವು ನಿರ್ಮಿತವಾಗಿ ಈ ಆಲಯಗಳ ಅಂಗವಾಗಿ ಮಠಗಳು ಕಟ್ಟಲ್ಪಟ್ಟವು. ಜೈನ ಬೌದ್ಧ ಯತಿಗಳ ವಾಸಸ್ಥಳಗಳಿಗಾಗಿ ಚೈತ್ಯ ವಿಹಾರಗಳನ್ನು ಕಟ್ಟಿ ಅಲ್ಲಿ ವಾಸಿಸುವ ತಪೋಧನರ ಆಹಾರಾಭಯ ಭೈಷಜ್ಯಕ್ಕಾಗಿ ಗ್ರಾಮ ಭೂಮಿಗಳನ್ನು ಬಿಟ್ಟು ಅಲ್ಲಿಯೂ ವಿದ್ಯಾಭ್ಯಾಸ ಮಾಡಲು ಮಾರ್ಗ ಮಾಡಿದರು. ಶಂಕರ, ರಾಮಾನುಜ ಮತ್ತು ಮಧ್ವ ಮತದವರು ತಮ್ಮ

ಸನ್ಯಾಸಿಗಳು ವಾಸಮಾಡಿಕೊಂಡು ತಮ್ಮ ತಮ್ಮ ಸಿದ್ಧಾಂತಗಳನ್ನು ಪಾಠ ಪ್ರವಚನ ಮಾಡುತ್ತಿದ್ದ ಯತಿಗಳ ವಾಸಸ್ಥಳಗಳು ಮಠಗಳಾದವು. ಕರ್ಣಾಟಕದಲ್ಲಿ ಹನ್ನೊಂದರಿಂದ ಹದಿನಾಲ್ಕನೆಯ ಶತಮಾನದವರೆಗೆ ಶೈವ ದೇವಸ್ಥಾನಗಳ ಅಂಗವಾಗಿ ಹುಟ್ಟಿದ ಕಾಳಾಮುಖರ ಮಠಗಳು ಬಹಳ ಪ್ರಸಿದ್ಧವಾದುವು. ಶಿಕಾರಿಪುರದ ತಾಲ್ಲೂಕು ಬಳ್ಳಿಗಾವೆ ಎಂಬ ಊರಿನಲ್ಲಿರುವ ಶಿವದೇವಸ್ಥಾನಗಳ ಅಂಗವಾಗಿ ಅನೇಕ ಮಠಗಳಿದ್ದವು. ಇವುಗಳಲ್ಲಿ ಪಂಚಮಠಗಳು ಪ್ರಸಿದ್ಧವಾಗಿವೆ. ಈ ಮಠಗಳಲ್ಲಿ ಕುಲಪತಿಗಳಾದ ವಾಮಶಕ್ತಿ ರುದ್ರಶಕ್ತಿ ಮೊದಲಾದ ಕಾಳಾಮುಖ ಯತಿಗಳು ಸರ್ವಶಾಸ್ತ್ರ ಪಂಡಿತರಾಗಿ ಅನೇಕ ಶಿಷ್ಯರುಗಳನ್ನು ಮಠಗಳಲ್ಲಿ ಇಟ್ಟುಕೊಂಡು ಇಲ್ಲಿಯ ವಿದ್ಯಾರ್ಥಿಗಳ ಆಹಾರಾಚ್ಛಾದನಕ್ಕೆ ದಾನವನ್ನು ಸ್ವೀಕರಿಸಿರುವರು. ಬಳ್ಳಿಗಾವೆ ಶೈವಸಂಸ್ಕೃತಿಯ ಕೇಂದ್ರ. ಬಸವಣ್ಣ, ಅಕ್ಕಮಹಾದೇವಿ, ಪ್ರಭುದೇವರು ಇಲ್ಲಿಗೆ ಬಂದುದಕ್ಕೆ ಗ್ರಂಥಾಧಾರಗಳಲ್ಲದೆ ಪ್ರಭುದೇವರ ಗದ್ದಿಗೆ ಎಂದು ತೋರಿಸುವ ಸಮಾಧಿಯೂ ಇಲ್ಲಿದೆ. ಇಲ್ಲಿದ್ದ ಮಠಗಳೆಲ್ಲಾ ದೇವಸ್ಥಾನಗಳ ಅಂಗವಾಗಿದ್ದುವು. ಬಸವಣ್ಣನವರ ತರುವಾಯ ಗುರು ಜಂಗಮ ವಾಸಸ್ಥಾನಗಳೇ ಮಠಗಳಾದುವು. ವೀರಶೈವ ಮಠಗಳು ದೇಶದಲ್ಲೆಲ್ಲಾ ಹುಟ್ಟಿಕೊಂಡವು. 'ಮಠ ಛಾತ್ರಾದಿ ನಿಲಯಃ' ಎಂದು ಅಮರಸಿಂಹನು ಹೇಳಿರುವಂತೆ, ಇವು ಬರೀ ಗುರುಗಳ ಕೇವಲ ವಾಸಗೃಹಗಳಾಗಿರದೆ ವಿದ್ಯಾರ್ಥಿ ಮಂದಿರಗಳೂ ಆಗಿವೆ.

ಕರ್ಣಾಟಕದಲ್ಲಿರುವ ವೀರಶೈವ ಮಠಗಳೇ ಮಠಶಬ್ದ ವಾಚ್ಯಕ್ಕೆ ಯೋಗ್ಯವಾದುವು. ಇತರ ಮತಸ್ಥರ ಮಠಗಳು ದೇವರ ಪೂಜೆಗೂ ನಾಲ್ಕಾರು ಜನ ಪಂಡಿತರ ಕಾಲಕ್ಷೇಪಕ್ಕೂ ನೆರವಾಗಿ ಸಾರ್ವಜನಿಕರ ವಿದ್ಯಾಭ್ಯಾಸಕ್ಕೆ ಅಷ್ಟೊಂದು ಪ್ರಯೋಜನವಿಲ್ಲದೆ ಇದೆ. ವೀರಶೈವ ಮಠಗಳು ಅನೇಕ ವಿದ್ಯಾರ್ಥಿಗಳಿಗೆ ಅಶನವಸನಗಳಿಗೆ ಮಾರ್ಗ ಮಾಡಿಕೊಟ್ಟು ಮಾಧ್ಯಮಿಕ, ಪ್ರೌಢ, ಉಚ್ಚ ಶಿಕ್ಷಣ ಮತ್ತು ತಾಂತ್ರಿಕ ಜ್ಞಾನಕ್ಕೆ ಬೇಕಾದ ಪಾಠಶಾಲೆಗಳನ್ನು ತೆರೆದು ಸಾರ್ವಜನಿಕರ ವಿದ್ಯಾಭ್ಯಾಸಕ್ಕೆ ಮಹೋಪಕಾರ ಮಾಡುತ್ತಿವೆ. ಕನ್ನಡ ನಾಡಿನಲ್ಲಿ ವೀರಶೈವರು ಕಟ್ಟಿಸಿರುವಷ್ಟು ವಿದ್ಯಾರ್ಥಿ ನಿಲಯಗಳೂ, ವಿದ್ಯಾಭ್ಯಾಸಕ್ಕೆ ಕೊಡುವ ಪ್ರೋತ್ಸಾಹವೂ ಮತ್ತಾವ ಪಂಗಡದವರಿಂದಲೂ ಆಗುತ್ತಿಲ್ಲ. ವೀರಶೈವ ಗುರುಜಂಗಮರು ಜ್ಞಾನದೀಪವನ್ನು ಹಿಡಿದು ಮನೆ ಮನೆಗೂ ಹೋಗಿ ಅಜ್ಞಾನಿಗಳಿಗೆ, ಹಿಂದುಳಿದವರಿಗೆ ಬೆಳಕನ್ನು ಬೀರುತ್ತಿರುವರು. ವಿರಕ್ತರಾದ ಗುರು ಜಂಗಮರುಗಳು ಮನೆಯೋ ಪರ್ಣಶಾಲೆಯೋ ಕಟ್ಟಿಕೊಂಡು ತಮ್ಮ ತಪಶ್ಶಕ್ತಿಯಿಂದಲೂ ಯೋಗಬಲದಿಂದಲೂ ಶಿಷ್ಯರ ಮೇಲೆ ಪ್ರಭಾವವನ್ನು ಬೀರಿ ಅವರ ನೆರವಿನಿಂದ ದೊಡ್ಡ ದೊಡ್ಡ ಪೀಠಗಳನ್ನೇ ಸ್ಥಾಪಿಸಿರುವರು. ಹನ್ನೆರಡನೆಯ ಶತಮಾನದಿಂದ ಆಧುನಿಕ ಕಾಲದವರೆಗೆ ಈ ರೀತಿ ಸ್ಥಾಪಿಸಿದ ವೀರಶೈವ ಪೀಠಗಳನ್ನೂ ಮಠಗಳನ್ನೂ ಕನ್ನಡ ನಾಡಿನ ಎಲ್ಲಾ ಕಡೆಗಳಲ್ಲೂ ನಾವು ನೋಡಬಹುದು. ಇಂತಹ ಶ್ರೀಮಠಗಳಲ್ಲಿ ಕನಕಪುರದ ದೇಗುಲಮಠವೂ ಒಂದಾಗಿದೆ.

ಬೆಂಗಳೂರಿಗೆ ದೇಗುಲಮಠ ದಕ್ಷಿಣ ಮೂವತ್ತೈದು ಮೈಲಿಗಳೂ ಮೈಸೂರು ಉತ್ತರ ಅರವತ್ತು ಮೈಲಿಗಳ ಅಂತರದಲ್ಲಿ ಕನಕಪುರ ಎಂಬ ಬೆಂಗಳೂರು ಜಿಲ್ಲೆಯ ತಾಲ್ಲೂಕು ಕೇಂದ್ರವಿದೆ. ಹದಿಮೂರನೆಯ ಶತಮಾನದಿಂದ ಹದಿನೇಳನೆಯ ಶತಮಾನದವರೆಗೆ 'ಕಾಣಿಕಾರನಹಳ್ಳಿ ಎಂದೂ, ಹದಿನೆಂಟರಿಂದ ಇಪ್ಪತ್ತನೆಯ ಶತಮಾನದ ಪೂರ್ವಾರ್ಧದವರೆಗೆ ಕಾನ್‌ಕಾನ್‌ಹಳ್ಳಿಯೆಂದೂ ಭಾರತಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಕನಕಪುರವೆಂದೂ ಈ ಗ್ರಾಮಕ್ಕೆ ಹೆಸರು. ಪಾಳೇಗಾರರ ಕಾಲದಲ್ಲಿ ಕಟ್ಟಿಸಿದ ಕೋಟೆಯು ಶಿಥಿಲವಾಗಿ ಅಲ್ಲಲ್ಲೇ ಅದರ ಅವಶೇಷಗಳಿವೆ. ಕೋಟೆಯ ಉತ್ತರಭಾಗದಲ್ಲಿ ಪೇಟೆ ಇದೆ. ಕೋಟೆಯಲ್ಲಿ ರಂಗನಾಥಸ್ವಾಮಿ ದೇವಸ್ಥಾನವಿದೆ. ಕೋಟೆಗೂ ಪೇಟೆಗೂ ಮಧ್ಯೆ ರಾಮದೇವರ ದೇವಾಲಯ, ಆಂಜನೇಯನ ಗುಡಿ ಮತ್ತು ಸರ್ಕಾರಿ ಕಾರ್ಯಾಲಯಗಳ ಕಟ್ಟಡಗಳಿವೆ. ಕೋಟೆಗೆ ಅರ್ಧ ಮೈಲಿ ಪೇಟೆಗೆ ಎರಡು ಫರ್ಲಾಂಗ್ ಪೂರ್ವಕ್ಕೆ ದೇಗುಲಮಠವಿದೆ.

ಈ ಮಠವಿರುವ ಪ್ರದೇಶವು ಪ್ರಕೃತಿ ದತ್ತವಾದ ಸೌಂದರ್ಯದಿಂದ ಕೂಡಿ ಪ್ರಶಾಂತವಾದ ವಾತಾವರಣದಲ್ಲಿದೆ. ಮಠದ ಬಲಗಡೆ ಪಕ್ಕದಲ್ಲಿ ಅರ್ಕಾವತಿ ನದಿ ಹರಿಯುವುದು. ಕಲ್ಲುಮಠದ ಹಿಂದುಗಡೆ ಆಧುನಿಕ ಗೃಹನಿರ್ಮಾಣ ಸಾಧನಗಳಿಂದ ಕಟ್ಟಿರುವ ಪ್ರೌಢಶಾಲೆಯೂ ಮಠವೂ ಇವೆ. ಈ ಮಠದ ಈಶಾನ್ಯ ಮೂಲೆಯಲ್ಲಿ ಚೌಕನಾದ ಉದ್ದ 62" x ಅಗಲ 20" ಪ್ರಮಾಣ ಉಳ್ಳ ಒಂದು ಶಾಸನದ ಕಂಬವಿದೆ. ಈ ಮಠದ ಆಗ್ನೇಯಕ್ಕೆ ಹತ್ತು ಗದ್ದುಗೆಗಳಿವೆ. ಈ ಮಠದ ಪೀಠಾಧಿಪತಿಗಳಾಗಿದ್ದು ಶಿವೈಕ್ಯರಾದ ಸ್ವಾಮಿಗಳ ಸಮಾಧಿಗಳು ಈ ಗದ್ದುಗೆಗಳಾಗಿವೆ.

ಮಠದಲ್ಲಿರುವ ಹಾಖಲೆಗಳಿಂದ ಈ ಮಠದಲ್ಲಿ ಆದಿ ನಿರ್ವಾಣಸ್ವಾಮಿಗಳಿಂದ ಇಲ್ಲಿಯವರೆಗಿನ ಸ್ವಾಮಿಗಳ ಪರಂಪರೆಯನ್ನು ತಿಳಿಯಬಹುದಾಗಿದೆ.

ಮಠದ ಪೀಳಿಗೆ

೧. ಆದ್ಯ ನಿರ್ವಾಣಸ್ವಾಮಿಗಳು (ದೇವರು) ಮೂಲ ಪುರುಷರು

೨. ನಂಜಯ್ಯ ಸ್ವಾಮಿಗಳು

೩. ಮಹಾಲಿಂಗ ಸ್ವಾಮಿಗಳು

೪. ಹುಚ್ಚಪ್ಪ ಸ್ವಾಮಿಗಳು

೫. ಮರುಳಸಿದ್ಧ ದೇವರು

೬. ಚೆನ್ನಬಸವ ಸ್ವಾಮಿಗಳು

೭. ಇಮ್ಮಡಿ ಮರುಳಸಿದ್ಧರು

೮. ಇಮ್ಮಡಿ ನಿರ್ವಾಣ ಸ್ವಾಮಿಗಳು

೯. ಇಮ್ಮಡಿ ಹುಚ್ಚಪ್ಪ ಸ್ವಾಮಿಗಳು

೧೦. ಮಹಲಿಂಗ ಸ್ವಾಮಿಗಳು

ಗವಿಮಠ ಅಥವಾ ಚಿಕ್ಕಮಠದಲ್ಲಿ

೧. ದೇವಲಿಂಗ ಸ್ವಾಮಿಗಳು

೨. ನಾಗಲಿಂಗ ಸ್ವಾಮಿಗಳು

ಈಗ್ಗೆ ಕೆಲವು ವರ್ಷಗಳ ಹಿಂದೆ ಶಿವೈಕ್ಯರಾದ ಶ್ರೀ।। ನಿ।। ಪ್ರ।। ನಿರ್ವಾಣ ಮಹಾಸ್ವಾಮಿಗಳು

ಈಗ ಪೀಠಾಧಿಪತಿಗಳು ಶ್ರೀ।। ನಿ।। ಪ್ರ।। ಮಹಲಿಂಗ ಸ್ವಾಮಿಗಳು.

ಈ ಮಠಾಧಿಪತಿಗಳೆಲ್ಲರೂ ಪವಾಡ ಪುರುಷರು. ಇವರು ಮಾಡಿರುವ ಮಹತ್ಕಾರ್ಯಗಳನ್ನು ಈ ತಾಲ್ಲೂಕಿನ ಹಳ್ಳಿಗಳಲ್ಲೆಲ್ಲಾ ಪ್ರಸಿದ್ಧವಾಗಿ ಜನಜನಿತವಾದ ಅನೇಕ ಕಥೆಗಳಿಂದ ಎಲ್ಲರ ಬಾಯಿಂದಲೂ ಕೇಳಬಹುದು.

ಈ ಮಠದ ಶಿಲಾಶಾಸನ,

ದಿವಂಗತ ಬಿ.ಎಲ್. ರೈಸ್‌ರವರಿಂದ ಈಗ್ಗೆ ಸುಮಾರು ಎಪ್ಪತ್ತು ವರ್ಷಗಳ ಹಿಂದೆ ದೇಗುಲಮಠದ ಶಿಲಾಶಾಸನ ಎಂದು ಶಾಸನಗಳ ಸಂಪುಟ-೯ರಲ್ಲಿ ಕಾನ್‌ಕಾನ್‌ಹಳ್ಳಿದೇಗ(ಗು)ಲ ಶಾಸನ ಎಂದು ನಂಬರು ೯೧ ಆಗಿ ಪ್ರಕಟಿಸಿರುವ ಶಾಸನದ ವಾಚಕಗಳನ್ನು ಕೆಳಗೆ ಕೊಟ್ಟಿದೆ:

ಕಾನ್‌ಕಾನ್‌ಹಳ್ಳಿ ದೇಗಲ ಮಠದ ಕಲ್ಲು ೯೧

೧. ಶ್ರೀ ಶ್ರೀ ವಿಜಯ ಜಯಸ್ತು ಸ್ವಸ್ತಿ ಶಾಲಿವಾ

೨. ಹನ ತತ್ಪೂರ್ವಸಂವತ್ಸರ ೧೬೦ಲನೇ ಪ್ಲವಂಗ ಸಂವತ್ಸರ

೩. ಜೇಷ್ಠ ಶು ೧೫ ಯಲ್ಲು ಶ್ರೀಮದ್ರಾಜಾಧಿರಾಜ ಪ್ರ

೪. ವುಡ ಪ್ರತಾಪ ಶ್ರೀ ವೀರ ಮೈಸೂರ ಸಿದ್ಧ ವಡೆಯರಾದ ದೇವ

೫. ದೇವರಾಜ ವಡೆಯರು ಆಳುತ್ತಿರಲು ವಿರುಪಸಂದ್ರದ

೬. ಗ್ರಾಮದಲ್ಲು ದಳವಾಯಿ ಕುಮಾರಯ್ಯನ ತಾ

೭. ಯಿ ತಿಮ್ಮಮ್ಮನವರು ಸ್ವಾಸ್ತಿಯನ್ನು

೮. ಸ್ಥಿರವಾಗಿ ಆಗುಮಾಡಿ ಮಠವನ್ನು ಸಾಂಗವಾಗಿ

೯. ನಡಸುತ್ತಾ ಅನುಭವಿಸುತ್ತಾ ಬರುವುದು.

ಇವರ ಆಂಗ್ಲಭಾಷೆಯ ಭಾಷಾಂತರ: 1667 A.D. May it be vitorious. Be it well, on the date (specified) when the Rajadhiraja Praudha Pratapa the vira Maisura Siddha Vadeyar Devaraja Vadeyar was ruling in the Virupasandra Village, Dalavayi Komaraiya's mother Timmamma made a grant for the matha.

ಹಿಂದೆ ಪ್ರಕಟವಾಗಿರುವ ದೇಗುಲಮಠದ ಶಾಸನದ ಪ್ರತಿಯೊಂದು ಪಂಕ್ತಿಯನ್ನು ತಪ್ಪಾಗಿ ಓದಿರುವರು. ನಿರ್ವಾಣ ದೇವರ ಮಠಕ್ಕೆ ಕಲ್ಲುಮಠ ಕಟ್ಟಿಸಿದ ವಿಷಯ ತಿಳಿಸುವ ಭಾಗವನ್ನೇ ಸರಿಯಾಗಿ ಓದಿಲ್ಲ. ಕಾಲವನ್ನು ತಿಳಿಸುವ ಶಕ ಸಂವತ್ಸರ ತಪ್ಪು, ಮಾಸ ಓದಿರುವುದೂ ತಪ್ಪು. ಟಿಪ್ಪಣಿ ಬರೆಯುವಾಗ 'ಪ್ಲವಂಗ' ಸಂವತ್ಸರ ಇದ್ದುದನ್ನು ದೇವರಾಜ ವಡೆಯರ ಕಾಲದ ಪ್ಲವಂಗ ಸಂವತ್ಸರ ಯಾವಾಗ ಬರುವುದೆಂದು ಪಂಚಾಂಗ ನೋಡಿ ೧೬೬೭ ಎಂದು ಊಹಿಸಿ ಅದರ ಹಿಂದೆ ಪ್ರಶ್ನಾರ್ಥಕ ಚಿಹ್ನೆ ಹಾಕಿರುವರು. ಶಾಸನದಲ್ಲಿ ವಿರುಪಸಂದ್ರ ಎಂಬ ಗ್ರಾಮದ ಹೆಸರೇ ಇಲ್ಲ. ಕಾಣಿಕಾರನ ಹಳ್ಳಿಯಲ್ಲಿ ಮಾಡಿದ ಧರ್ಮದ ವಿಷಯವನ್ನೂ ತಿಳಿಸುವ ಬರವಣಿಗೆ ಓದಿಲ್ಲ.

ಈ ಕಂಬದ ಶಾಸನದಲ್ಲಿ ಒಟ್ಟು ಮೂವತ್ತೊಂಬತ್ತು ಪಂಕ್ತಿಗಳಿವೆ. ಬೇರೆ ಬೇರೆ ಕಾಲದಲ್ಲಿ ಬರೆದ ಎರಡು ಶಾಸನಗಳಿವೆ. ರೈಸ್ ಸಾಹೇಬರು ಓದಿರುವುದು ಒಂಬತ್ತು ಪಂಕ್ತಿಗಳು ಮಾತ್ರ. ಈ ಶಾಸನವಲ್ಲದೆ ಮತ್ತೆ ಯಾವುದಾದರೂ ಬೇರೆ ಶಾಸನವನ್ನು ಓದಿರಬಹುದೇ ಎಂಬ ಶಂಕೆಗೂ ಅವಕಾಶವಿಲ್ಲ. ಈ ಊರಿನಲ್ಲಿರುವುದು ಇದೊಂದೇ ಶಿಲಾಶಾಸನ. ಇಷ್ಟು ತಪ್ಪುಗಳನ್ನು ಏಕೆ ಮಾಡಿದರೋ ಗೊತ್ತಾಗುವುದಿಲ್ಲ.

ಈ ಕಲ್ಲಿನಲ್ಲಿ ಬರೆದಿರುವ ಭಾಗದ ಛಾಯಾಚಿತ್ರವನ್ನು ವಾಚಕರ ಅವಗಾಹನೆಗಾಗಿ ಇಲ್ಲಿ ಪ್ರಕಾಶ ಪಡಿಸಿದೆ. ಈಗ ಪುನರ್ವಿಮರ್ಶಿಸಿದ ಶಾಸನ ವಾಚಕವನ್ನು ಕೆಳಗೆ ಕೊಟ್ಟಿದೆ.

ಕನಕಪುರ ತಾಲ್ಲೂಕು ಕಸಬಾ ಗ್ರಾಮದ-ದೇಗುಲಮಠದ ಈಶಾನ್ಯಮೂಲೆಯಲ್ಲಿ ನಟ್ಟಿರುವ ಕಲ್ಲುಕಂಬ

ಪ್ರಮಾಣ ಉದ್ದ 63" x ಅಗಲ 20"

೧ ಸ್ವಸ್ತಿ ಶ್ರೀ ವಿಜೆಯಾಭ್ಯುದಯ ಶಾಲಿವಾಹನಕ ಶಕ

೨ ವರುಷ ಸಂದ ೧೫೮೯ ಪ್ಲವಂಗ ಸಂವತ್ಸರದಟ

೩ ಭಾದ್ರಪದ ಶುದ್ಧ ೧೫ ಲು ಶ್ರೀಮದ್ರಾಜಾಧಿರಾಜ ರಾಜ ಪ

೪ ರಮೇಶ್ವರ ಪ್ರಉಡ ಪ್ರತಾಪ ಶ್ರೀ ವೀರ ಮೈಸೂರ ಸಿಂ

೫ ಹಾಸನಾರೂಢರಾದ ದೇವರಾಜ ವಡೆಯರವ

೬ ರು ಸುಖದಿಂ ರಾಜ್ಯಂ ಗೈಉ ತಿರಲು ಹೊಂ? ಬ

೭ ನಾಡು ಸ್ತಳದ ಕಾಣುಕಾರನಹಳಿ ಗ್ರಾಮದ

೮ ಲು ನಿ (ನೆ) ರುವಾಣ ದೇವರ ಮಠದಲಿ ದಳವಾ

೯ ಯಿ ಕೊಮಾರ್ಯೆಯನ ತಾಯಿ ತಿಂಮಂಮ

೧೦ ನವರು ಕಟಿಸಿದ ಮಟದ ಧರ್ಮಕೆ

೧೧ ಕಾಣೆ ಕಾರನ ಹಳಿ ಗ್ರಾಮದಲು ಬೆದ

೧೨ ಲು ಭೂಮಿ ಕಂರ ಗ ೮ ಯಂಟುವರಹ

೧೩ ಭೂಸ್ವಾಸ್ತಿ ಯಂನು ಸಿಲಾಪ್ರತಿಷ್ಟೆ

೧೪ ಯಂ ಮಾಡಿಸಿ ಕೊಟ್ಟೆವಾಗಿ ಯೀ

೧೫ ಸ್ವಾಸ್ತಿಯಂನು ಆಗು ಮಾಡಿ ದು

೧೬ ಟ ಧರ್ಮ ವಂನು ಸಾಂಗವಾಗಿ ಮಾಡಿ

೧೭ ಕೊಂಡು ಸುಖದಲಿ ಬರೋದು ಎ

೧೮ ಂದು ಬರಸಿ ಕೊಟ್ಟ ಶಿಲಾ ಶಾಸನ

೧೯ ಯೀ ಧರ್ಮಮಂ ಆರು ಅಪಹರಿಸಿದರು

೨೦ ಕಾಸಿಯಲಿ ಗೋಉ ಕೊಂದ ಪಾಪಕೆ

೨೧ ಹೋಪರು.

ಇದೇ ಶಾಸನದ ಕೆಳಗಡೆ

೧ ಕಾಳಾಯುಕ್ತಿ ಸಂವತ್ಸರದ ವೈಶಾ

೨ ಖ ಬ ೧೫ ಲು ಮೈಸೂರು ಚಿಕ ದೇ

೩ ವ ರಾಜು ವಡೆಯರವರು ಪ್ರುಥವಿ

೪ ರಾಜಂಗೈವುತಿರಲು ಕಾಣೆ ಕಾ

೫ ರನಹಳಿ ಗ್ರಾಮದ ನಿರುವಾಣ ದೇವ

೬ ರ ಮಟದಲು ದಳವಾಯಿ ಕೊಮಾರ್ಯೆಯನ

೭ ತಾಯಿ ತಿಂಮಂಮನವರು ಕಟಿಸಿದ ಮ

೮ ಟ ಹುಚ್ಚು ಹೊಳೆ ಬಂದು ಮಟ ಕೊಚಿ



ಶ್ರೀ ದೇಗುಲಮಠದ ಆವರಣದಲ್ಲಿರುವ
ರಾಜಮನೆತನದವರು ನಿರ್ಮಿಸಿದ ಶಾಸನಗಳ ಸ್ತಂಭ



ರಾಜಮನೆತನದವರು ಕಟ್ಟಿಸಿದ ಶಿಲಾ ಮಂಟಪ
ಶ್ರೀ ದೇಗುಲಮಠ

೯ ಹೋಗಲಾಗಿ ಪ್ರತಿಯಾಗಿ ಕಲ್ಲಮಟವಂನು ಕಟ್ಟಿಸಿ
೧೦ ಪುನಃ ಪ್ರತಿಷ್ಟೆಯ ಮಾಡಿ ಆ ಮಟವನು
೧೧ ಕಾಣಿಕಾರನ ಹಳಿಯ ಪಡವಲು ಬಿಟ್ಟ
೧೨ ಬೆದಲು ಭೂಮಿಗ-೯ ಗವಿ ಮಟಕೆ ಬೆದಲು
೧೩ ಭೂಮಿ ಕಂ ೪ ಕೂಡಾ ಕಂ ೧೮ ಪುನ
೧೪ ಹ ಪ್ರತಿಷ್ಟೆಯಂನು ಮಾಡಿಸಿ ಕೊಟರು
೧೫ ಈ ಧರ್ಮವನು ಯಾರು ಅಪಹರಿಸಿದರು
೧೬ ಕಾಸಿಯಲು ಗೋಉ ಕೊಂದ ಪಾಪಕೆ
೧೭ ಹೋಹರು ಎಂದು ಬರಸಿ ಕೊಟ
೧೮ ಶಿಲಾಶಾಸನ

ಮೇಲ್ಗಡೆ ಬರೆದಿರುವ ಶಾಸನಗಳ ಲಿಪಿಗಳು ೧ ೧/೨ ಅಂಗುಲ ಪ್ರಮಾಣದಲ್ಲಿದ್ದು ಕೆಳಗಡೆ ಹೋಗುತ್ತಾ ಚಿಕ್ಕದಾಗುವುದು. ಕೊನೆ ಕೊನೆಗೆ ಕಲ್ಲಿನ ಒಂದೇ ಮುಖದಲ್ಲಿ ಪೂರ್ತಿಯಾಗಿ ಶಾಸದ ವಿಷಯ ಮುಗಿಸಲಾಗುವುದಿಲ್ಲವೆಂಬ ಶಂಕೆಯಿಂದ ಕೊನೆಯ ಪಂಕ್ತಿಗಳ ಅಕ್ಷರಗಳು ಬಹಳ ಚಿಕ್ಕವಾಗಿ ಓದಲು ಕಷ್ಟವಾಗಿರುವುದು. ಆದರೂ ಈ ಎರಡು ಶಾಸನಗಳನ್ನೂ ಸಾಧ್ಯವಾದ ಮಟ್ಟಿಗೆ ಸರಿಯಾಗಿ ಶುದ್ಧವಾದ ಪ್ರತಿ ಮಾಡಿದೆ.

ಈ ಎರಡು ಶಾಸನಗಳ ಸಾರಾಂಶ: ೧ ದೇವರಾಜವಡೆಯರ ಕಾಲದಲ್ಲಿ ಶಾಲಿವಾಹನ ಶಕ ೧೫೮೯ ಪ್ಲವಂಗ ಸಂವತ್ಸರ ಭಾದ್ರಪದ ಶು ೧೫ ಕ್ರಿ.ಶ. ೧೬೬೭ನೆಯ ತಾರೀಖು ಶುಕ್ರವಾರದಲ್ಲಿ ರಾಜಾಧಿರಾಜ ರಾಜ ಪರಮೇಶ್ವರ ವೀರ ಪ್ರತಾಪ ಶ್ರೀ ವೀರ ದೇವರಾಜವಡೆಯರು ಮೈಸೂರು ರಾಜ್ಯವನ್ನು ಆಳುತ್ತಿರುವಾಗ ಅವರ ದಳವಾಯಿ ಕೊಮಾರಯ್ಯನ ತಾಯಿ ತಿಮ್ಮಮ್ಮನು ಹೊಂಬನಾಡ ಕಾಣಿಕಾರನಹಳ್ಳಿ ನಿರ್ವಾಣದೇವರ ಮಠವನ್ನು ಕಟ್ಟಿಸಿ ಹೊಲಕಂಗ ಎಂಟು ವರಹ ಭೂಸ್ವಾಸ್ತೆಯನ್ನು ದಾನ ಮಾಡಿದಳು. ಮುಂದೆ ಧರ್ಮಾಪರಹಾರ ಮಾಡಿದವರು ಕಾಶಿಯಲ್ಲಿ ಗೋವು ಕೊಂದ ಪಾಪಕ್ಕೆ ಹೋಗುವರು ಎಂದು ಹೇಳಿದೆ.

ಎರಡನೆಯ ಶಾಸನದಲ್ಲಿ ಕಾಳಾಯುಕ್ತಿ ಸಂವತ್ಸರದ ವೈಶಾಖ ಬ ೧೫ ಲು ಅಂದರೆ ಕ್ರಿ.ಶ. ೧೬೭೮ ಏಪ್ರಿಲ್ ಇಪ್ಪತ್ತೆಂಟನೆಯ ಭಾನುವಾರ ಅಮಾವಾಸ್ಯೆಯ ದಿನ ಚಿಕ್ಕದೇವರಾಜವಡೆಯರು ಪೃಥ್ವೀರಾಜ್ಯಂಗೆಯುತ್ತಿರಲು ಅದೇ ಕೊಮಾರಯ್ಯನ ತಾಯಿ ತಿಮ್ಮಮ್ಮನು ಹಿಂದೆ ಕಟ್ಟಿಸಿದ್ದ ನಿರ್ವಾಣದೇವರ ಮಠವು ಹುಚ್ಚುಹೊಳೆ ಬಂದು ಕೊಚ್ಚಿಹೋಗಲು ಪುನಃ ಕಲ್ಲುಮಂಟಪವನ್ನು ಕಟ್ಟಿಸಿ ಪ್ರತಿಷ್ಠೆ ಮಾಡಿ ಕಾಣಿಕಾರನಹಳ್ಳಿ ಗ್ರಾಮದ ಪಶ್ಚಿಮಕ್ಕೆ ಹೊಲ-೯ಗ (ಗದ್ಯಾಣ) ಭೂಮಿಬಿಟ್ಟು ಗವಿಮಠಕ್ಕೆ ೪ಂಕೂಡಾ ಒಟ್ಟು ೧೮ 'ಕಂ' ಅಳತೆ ಭೂಮಿಯನ್ನು ಪುನಃ ಪ್ರತಿಷ್ಠೆ ಮಾಡಿಕೊಟ್ಟರು. ಮುಂದೆ ಮೇಲಿನಂತೆಯೇ ಫಲಶ್ರುತಿ ಇದೆ.

ಈ ಶಾಸನಗಳ ಭಾಷೆ: ರಾಜಾಸ್ಥಾನಗಳಲ್ಲಿರುವ ಪಂಡಿತರು ವಿದ್ವಾಂಸರು ಕವಿಗಳು ಅನೇಕ ಶಾಸನಗಳನ್ನು ಬರೆದು ಲಿಪಿಕಾರನಿಗೆ ಕೊಟ್ಟು ತಾಮ್ರದ ಹಲಗೆ ಅಥವಾ ಕಲ್ಲುಗಳ ಮೇಲೆ ರಾಜಾಧಿರಾಜರು, ದಂಡನಾಯಕರು ಶಾಸನಗಳನ್ನು ಬರೆಸುತ್ತಿದ್ದರು. ಈ ಶಾಸನಗಳನ್ನು ಬರೆದ ಕವಿಗಳ ಹೆಸರೂ ಲಿಪಿಕಾರನ ಹೆಸರೂ ಅನೇಕ ಶಾಸನಗಳಲ್ಲಿ ಉಕ್ತವಾಗಿವೆ. ಹೀಗೆ

ಬರೆದ ಅನೇಕ ತಾಮ್ರಶಾಸನಗಳು ಕಲ್ಲುಶಾಸನಗಳೂ ಕೂಡ ಒಂದೊಂದು ಚಂಪೂಕಾವ್ಯದಂತೆ ಇವೆ. ಹಳ್ಳಿಗಾಡುಗಳಲ್ಲಿ ಬರೆಸಿರುವ ಶಿಲಾಶಾಸನಗಳು ಜನಗಳು ಮಾತಾಡುವ ವ್ಯವಹಾರ ಭಾಷೆಯಲ್ಲಿದ್ದೂ ಅಕ್ಷರ ಸ್ಖಾಲಿತ್ಯಗಳುಳ್ಳವುಗಳಾಗಿವೆ. ಕನಕಪುರ ದೇಗುಲಮಠದ ಮೇಲಿನ ಎರಡು ಶಾಸನಗಳು ವ್ಯವಹಾರ ಭಾಷೆಯಲ್ಲಿ ಗ್ರಾಮಸ್ಥನಾದ ಸಾಮಾನ್ಯ ಮನುಷ್ಯನಿಂದ ರಚಿತವಾದುದು. ಮಹಾಪ್ರಾಣಾಕ್ಷರಕ್ಕೆ ಅಲ್ಪಪ್ರಾಣ 'ಮಠ'ಕ್ಕೆ ಪ್ರತಿಯಾಗಿ 'ಮಟ'ವ್ಯಂಜನವಿರುವ ಕಡೆ ಸ್ವರ ಪ್ರವುಡ-ಪ್ರಉಡ, ಎಂಟು-ಯಂಟು, ಈಥಮ-ಯೀಧರ್ಮ, ಗೋವು-ಗೋಉ. ಇವೇ ಮೊದಲಾದ ವಾಚಕ ದೋಷಗಳಿವೆ. ಆದರೂ ಈ ಶಾಸನಗಳು ನೈಜವಾದವು. ಅನೇಕ ಐತಿಹಾಸಿಕ ವಿಷಯಗಳನ್ನೊಳಗೊಂಡಿವೆ. ಇವುಗಳ ಸತ್ಯತೆಯ ವಿಷಯದಲ್ಲಿ ಯಾವ ಸಂದೇಹವೂ ಇಲ್ಲ.

ಕಾಲ: ಮೊದಲನೆಯ ಶಾಸನ ಶಾ.ಶ. ೧೫೪೯ ಅಂದರೆ ಕ್ರಿ.ಶ. ೧೬೬೭. ಈ ಕಾಲದಲ್ಲಿ ಮೈಸೂರು ರಾಜ್ಯವನ್ನು ಆಳುತ್ತಿದ್ದವರು ದೊಡ್ಡ ದೇವರಾಜವಡೆಯರು. ಅವರ ದಳವಾಯಿ ಕೊಮಾರಯ್ಯನು ೧೬೬೭ರಲ್ಲಿ ಅಧಿಕಾರಕ್ಕೆ ಬಂದನು. ಇವೆಲ್ಲವೂ ಸತ್ಯಾಂಶಗಳು.

ಎರಡನೆಯ ಶಾಸನದ ಕಾಲ: ಕಾಳಾಯುಕ್ತಿ ಸಂವತ್ಸರ ವೈಶಾಖ ೧೫ ಅಂದರೆ ಕ್ರಿ.ಶ. ೧೬೭೮ನೆಯ ವರ್ಷ ಏಪ್ರಿಲ್ ಇಪ್ಪತ್ತೆಂಟು ಭಾನುವಾರ ಅಮಾವಾಸ್ಯೆ. ಈ ಕಾಲದಲ್ಲಿ ಚಿಕ್ಕದೇವರಾಜು (ಜ) ವಡೆಯರು ಮೈಸೂರು ರಾಜ್ಯವಾಳುತ್ತಿದ್ದರು. ಇವರಲ್ಲೂ ಕೊಮಾರಯ್ಯ ದಳವಾಯಿ ಆಗಿದ್ದನು. ಚಿಕ್ಕದೇವರಾಜ ಒಡೆಯರ ಕಾಲದಲ್ಲಿ ಬರುವ ಕಾಳಾಯುಕ್ತಿ ಕ್ರಿ.ಶ. ೧೬೭೮ ವಾರದ ಹೆಸರು ಕೊಡದಿದ್ದರೂ ಕುಮಾರಯ್ಯ ನಿರ್ವಾಣ ದೇವರ ಮಠ ತಿಮ್ಮಮ್ಮ ಇವರುಗಳು ಇದ್ದ ಕಾಲದ ಕಾಳಾಯುಕ್ತಿ ೧೬೭೮ನೆಯ ಸಂವತ್ಸರವೇ ಸರಿ. ದಾನ ಮಾಡಬೇಕಾದರೆ ಸಾಮಾನ್ಯವಾಗಿ ಪರ್ವಕಾಲಗಳು, ಗ್ರಹಣಗಳು, ದ್ವಾದಶಿ, ಮಾತಾಪಿತೃಗಳ ಪುಣ್ಯದಿನಗಳಲ್ಲಿ ಈ ಶಾಸನಗಳು ಪೌರ್ಣಮಿ ಮತ್ತು ಅಮಾವಾಸ್ಯೆ ಪರ್ವಕಾಲಗಳಲ್ಲಿ ದಾನ ಮಾಡಿದ ವಿಷಯವು ತಿಳಿಯುವುದು.

ಐತಿಹಾಸಿಕ ವಿಷಯಗಳು: ಮೈಸೂರು ರಾಜ ಮನೆತನದಲ್ಲಿ ದೊಡ್ಡ ದೇವರಾಜ ವಡೆಯರವರು ಕಂಠೀರವ ನರಸರಾಜ ವಡೆಯರ ಕಾಲಾನಂತರ ೧೬೫೯ರಲ್ಲಿ ಪಟ್ಟಕ್ಕೆ ಬಂದು ೧೬೭೩ರವರೆಗೆ ಆಳಿದರು. ಮೈಸೂರು ದೇಶದ ಚರಿತ್ರೆಯಲ್ಲಿ ದೊಡ್ಡ ದೇವರಾಜ ವಡೆಯರವರ ವಿಷಯ ವಿವರವಾಗಿ ಕೊಟ್ಟಿದೆ. ಇವರು ಮಾಡದ ದಾನವಿಲ್ಲ, ಹೇಮಾದ್ರಿ ಹೇಳಿರುವ ಷೋಡಶ ಮಹಾದಾನಗಳನ್ನು ಮಾಡಿರುವರು. ಇವರ ಹೆಸರು ಆಚಂದ್ರತಾರಕವಾಗಿ ನಿಲ್ಲುವಂತೆ ಚಾಮುಂಡಿಬೆಟ್ಟಕ್ಕೆ ಸಾವಿರ ಮೆಟ್ಟಲುಗಳನ್ನು ಮಾಡಿಸಿದರು. ಬೆಟ್ಟದ ಮೇಲಿರುವ ಬಸವಣ್ಣನನ್ನು ಕೆತ್ತಿಸಿದರು. ದೊಡ್ಡ ಕೆರೆ ಕಟ್ಟಿಸಿದರು. ರಾಜಋಷಿಯಂತೆ ಬೆಳಗ್ಗೆ ಎದ್ದು ನಿತ್ಯಕರ್ಮಗಳನ್ನು ಮಾಡಿ ರಾಮಾಯಣ ಮತ್ತು ಸಹಸ್ರನಾಮ ಪಾರಾಯಣ ಮಾಡದೆ ಆಹಾರ ತೆಗೆದುಕೊಳ್ಳುತ್ತಿರಲಿಲ್ಲ. ಇವರು ಧರ್ಮಪ್ರಭುವಾಗಿದ್ದರು.

ಚಿಕ್ಕದೇವರಾಜವಡೆಯರು: ಇವರ ಕಾಲ ೧೬೭೩ ರಿಂದ ೧೭೦೪ ಶಾಸನಗಳಲ್ಲಿ ಚಿಕ್ಕದೇವರಾಜುವಡೆಯರು ಎಂದು ಉಲ್ಲೇಖಿಸಿರುವುದು. ರಾಜವಡೆಯರ ಹೆಸರೂ ರಾಜುವಡೆಯರೆಂದು ಬರೆಯಲ್ಪಟ್ಟಿದೆ. ಮೈಸೂರು ರಾಜಮನೆತನದಲ್ಲಿ ಚಿಕ್ಕದೇವರಾಜ ವಡೆಯರವರೇ ಅತ್ಯಂತ ಪ್ರಸಿದ್ಧರು. ರಾಜ್ಯವನ್ನು ನಾಲ್ಕು ಕಡೆಯೂ ವಿಸ್ತರಿಸಿ ಪಾಳೆ ಪಟ್ಟೆಸಂತಿದ್ದ ಮೈಸೂರು ರಾಜ್ಯವನ್ನು ಒಂದು ಸಂಸ್ಥಾನದ ಮಟ್ಟಕ್ಕೆ ಏರಿಸಿದರು. ದೇವರಾಜವಡೆಯರವರ ಕಾಲಾನಂತರ ೧೬೭೩ರಲ್ಲಿ ಮೈಸೂರು ಸಿಂಹಾಸನಾರೋಹಣ ಮಾಡಿ ೧೭೦೪ರವರೆಗೂ ದಕ್ಷತೆಯಿಂದ ರಾಜ್ಯಭಾರ ಮಾಡಿ ಮಧುರೆ ಚೊಕ್ಕನಾಥನನ್ನು ಸೋಲಿಸಿ ಅವನಿಂದ ಕಪ್ಪಕಾಣಿಕೆಗಳನ್ನು ತೆಗೆದುಕೊಂಡರು. ಮರಾಟೆಯವರನ್ನು ಸೋಲಿಸಿ ಡೆಲ್ಲಿ ಬಾದಷಹಾ ಆಗಿದ್ದ ಔರಂಗ್ ಜೇಬನಿಂದ 'ರಾಜಾ ಜಗದೇವ್' ಎಂಬ ಬಿರುದನ್ನು ಪಡೆದರು. ಇವರ ಆಸ್ಥಾನದಲ್ಲಿ ವಿಶಾಲಾಕ್ಷ ಪಂಡಿತ, ತಿರುಮಲಯ್ಯಂಗಾರ್,

ತಿಕ್ಕುಪಾಧ್ಯಾಯರೇ ಮೊದಲಾದ ಕವಿಗಳೂ ಪಂಡಿತರೂ ಇದ್ದರು. ಶಿಂಗಾರಮ್ಮ ಮತ್ತು ಸಂಚಿಯ ಹೊನ್ನಿ ಎಂಬ ಕವಯಿತ್ರಿಯರು ಇವರ ಆಶ್ರಯದಲ್ಲಿದ್ದು ಅನೇಕ ಕೃತಿಗಳನ್ನು ರಚಿಸಿರುವರು. ಸ್ವಯಂ ಕವಿಯಾಗಿ, ಕವಿಗಳಿಗೆ ಆಶ್ರಯ ಕೊಟ್ಟು ಕನ್ನಡ ಭಾಷೆಯಲ್ಲಿ ಅನೇಕ ಗ್ರಂಥಗಳನ್ನು ಬರೆಸಿದರು. ಕನ್ನಡ ಭಾಷೆಯ ಪುನರುತ್ಥಾನ ಇವರ ಕಾಲದಲ್ಲೇ ಆಯಿತು. ಮಠಾಧಿಪತಿಯೂ ಕವಿಯೂ ಉಭಯಭಾಷಾ ಪಂಡಿತನೂ ಆದ ಷಡಕ್ಷರದೇವ ಇವರ ಸಮಕಾಲೀನರು. ಇವರು ರಾಜ್ಯಕ್ಕೆ ಬರುವ ಮುನ್ನ ತನ್ನ ಆಪ್ತಮಿತ್ರರೊಡನೆ ಸೇರಿ ರಾಜ್ಯಕ್ಕಾಗಿ ಬಂಡಾಯ ಮಾಡಿದುದರಿಂದ ಹಂಗಳದಲ್ಲಿ ಸೆರೆಯಲ್ಲಿಡಲ್ಪಟ್ಟಿದ್ದರು. ಮೈಸೂರು ರಾಜ್ಯಾಡಳಿತ ಪದ್ಧತಿಯಲ್ಲಿ ಅನೇಕ ಮಾರ್ಪಾಟುಗಳನ್ನು ಮಾಡಿ ರಾಜ್ಯದ ಬೊಕ್ಕಸಕ್ಕೆ ಹಣ ತುಂಬಿಸಿ ನವಕೋಟಿ ನಾರಾಯಣ ಎಂಬ ಬಿರುದನ್ನು ಪಡೆದರು. ಮೈಸೂರು ರಾಜ್ಯದ ಚರಿತ್ರೆ ಎಂಬ ಅಂತರಿಕ್ಷದಲ್ಲಿ ಬೆಳಗುವ ಧ್ರುವತಾರೆಯಂತೆ ಇವರ ಕೀರ್ತಿಯು ಬೆಳಗುವುದು.

ಕೊಮಾರಯ್ಯ: ಇವನು ಕ್ರಿ.ಶ. ೧೬೬೭ ರಿಂದ ೧೬೮೨ ರವರೆವಿಗೂ ಮೈಸೂರು ರಾಜ್ಯದ ದಳವಾಯಿ ಆಗಿದ್ದನು. ಇವನ ಜನ್ಮಸ್ಥಳ ನಂಜನಗೂಡು ತಾಲ್ಲೂಕು ಕಳಲೆಗ್ರಾಮ. ದಳವಾಯಿ ಮನೆತನದವನು. ೧೬೮೨ರಲ್ಲಿ ತನ್ನ ದಳವಾಯಿತನಕ್ಕೆ ರಾಜೀನಾಮೆ ಕೊಡುವಾಗ ಇವನು ಮುದುಕನಾಗಿದ್ದನು. ಇವನು ಕಂಠೀರವ ನರಸರಾಜ ವಡೆಯರು, ದೇವರಾಜ ವಡೆಯರು ಮತ್ತು ಚಿಕ್ಕದೇವರಾಜ ವಡೆಯರು ಇವರುಗಳ ಕಾಲದಲ್ಲಿ ಅನೇಕ ಯುದ್ಧಗಳಲ್ಲಿ ಭಾಗವಹಿಸಿ ತನ್ನ ಪರಾಕ್ರಮವನ್ನು ಪ್ರಕಾಶಪಡಿಸಿರುವನು. ದೊಡ್ಡ ದೇವರಾಜವಡೆಯರು ಕೊಮಾರಯ್ಯನ ಶೌರ್ಯ ಪರಾಕ್ರಮಗಳಿಗೆ ಮೆಚ್ಚಿ ಇವನಿಗೆ ೧೬೬೭ರಲ್ಲಿ ದಳವಾಯಿತನವನ್ನು ಕೊಡುವರು. ಆ ಹುದ್ದೆಯಲ್ಲೇ ಚಿಕ್ಕದೇವರಾಜವಡೆಯರ ಕಾಲದಲ್ಲೂ ೧೬೮೨ರವರೆಗೆ ಮುಂದುವರಿಯುವನು. ೧೬೭೩ರಲ್ಲಿ ಅರಕಲ್‌ಗೂಡ್, ಅಂಗಡಿ, ಸಕಲೇಶಪುರ ಮತ್ತು ನುಗ್ಗೆಹಳ್ಳಿಗಳ ಪಾಳೇಗಾರರುಗಳನ್ನು ಗೆದ್ದು ಮೈಸೂರು ರಾಜ್ಯಕ್ಕೆ ಆ ಪ್ರಾಂತಗಳನ್ನು ಸೇರಿಸಿದನು. ೧೬೮೦ ರಿಂದ ೧೬೮೨ ರವರೆಗೆ ದಕ್ಷಿಣ ದಿಕ್ಕಿನ ಕಡೆ ದಂಡೆತ್ತಿಕೊಂಡು ಹೋಗಿ ಮಧುರೆಯ ಚೊಕ್ಕನಾಥನನ್ನು ಸೋಲಿಸಿ ತಿರುಚನಾಪಳ್ಳಿಯವರೆಗೂ ರಾಜ್ಯ ವಿಸ್ತರಣೆ ಮಾಡಿದ್ದಲ್ಲದೆ ಚೊಕ್ಕನಾಥನಿಂದ ಕಪ್ಪಕಾಣಿಕೆ ತೆಗೆದುಕೊಂಡು ಬರುವನು. ರಾಜಧಾನಿಯಿಂದ ಬಹಳ ದೂರದವರೆಗೂ ಸೈನ್ಯ ತೆಗೆದುಕೊಂಡು ಹೋಗಿದ್ದುದರಿಂದ ಇವನ ಸೈನ್ಯಕ್ಕೆ ಆಹಾರ ಮತ್ತು ಮದ್ದು ಗುಂಡುಗಳು ಸರಬರಾಜು ಆಗದೆ ಶತ್ರುವಿಗೆ ಸುಳಿವು ತಿಳಿಯದೆ ಹಿಂತಿರುಗಿ ಬರುವನು. ರಾಜಧಾನಿಗೆ ಸಹಾಯ ಕೇಳಿ ಎಷ್ಟು ಪತ್ರ ಬರೆದರೂ ಶತ್ರುಗಳು ಆ ಪತ್ರಗಳು ರಾಜರಿಗೆ ಮುಟ್ಟದಂತೆ ಮಾಡಲು ಮರಾಟೆಯವರು ಇವನನ್ನು ಸೋಲಿಸಿ ಸೆರೆಹಿಡಿದರು. ಬಂಧನದಿಂದ ಮುಕ್ತನಾಗಿ ರಾಜಧಾನಿಗೆ ಹಿಂತಿರುಗಿ, ಇಳಿವಯಸ್ಸಾಗಿದ್ದುದರಿಂದಲೂ ತನ್ನ ಸೋಲಿನಿಂದಲೂ ನಿರುತ್ಸಾಹನಾಗಿ ತಾನೇ ತನ್ನ ಕೆಲಸಕ್ಕೆ ರಾಜಿನಾಮೆ ಕೊಡುವನು. ಕೊಮಾರಯ್ಯನು ಚಿಕ್ಕದೇವರಾಜವಡೆಯರ ದಳವಾಯಿ ಮಾತ್ರವಲ್ಲದೆ ಹೆಣ್ಣು ಕೊಟ್ಟ ಮಾವನೂ ಆಗಿದ್ದನು. ಇವನ ಮಗಳಾದ ದೇವಮ್ಮಣ್ಣಿಯವರು ಚಿಕ್ಕದೇವರಾಜರು ರಾಜ್ಯಕ್ಕೆ ಬರುವುದಕ್ಕೆ ಮೊದಲೇ ವಿವಾಹವಾಗಿದ್ದರು. ಕೊಮಾರಯ್ಯನು ಚಿಕ್ಕದೇವರಾಜರ ಆಪ್ತಮಿತ್ರನೂ, ದಳವಾಯಿಯೂ ಮತ್ತು ಮಾವನೂ ಆಗಿದ್ದನು.

ತಿಮ್ಮಮ್ಮ: ಇವಳು ಕೊಮಾರಯ್ಯನ ತಾಯಿ, ವೀರಮಾತೆ, ಇವಳೇ ದೇಗುಲಮಠಕ್ಕೆ ಎರಡು ಶಾಸನಗಳನ್ನು ಬರೆಸಿ ದಾನ ಕೊಟ್ಟಿರುವಳು. ಶ್ರೀರಂಗಪಟ್ಟಣದ ರಾಜಾಸ್ಥಾನದಲ್ಲಿದ್ದು ರಾಜನಿಗೆ ಅಜ್ಜಿಯಾಗಿ ನಿರ್ವಾಣದೇವರ ಮಠಕ್ಕೆ ದಾನ ಕೊಡಬೇಕಾದರೆ ಇವಳಿಗೂ ನಿರ್ವಾಣದೇವರ ಮಠದ ಸ್ವಾಮಿಗಳಿಗೂ ಗುರು-ಶಿಷ್ಯ ಸಂಬಂಧವಿರಬೇಕು. ತಿಮ್ಮಮ್ಮನಿಗೆ ಆಗಿನ ಸ್ವಾಮಿಗಳು ಗುರುಗಳಾಗಿರಬಹುದು. ಮೊದಲು ೧೬೬೭ರಲ್ಲಿ ತನ್ನ ಮಗನು ದಳವಾಯಿ ಹುದ್ದೆಗೆ ಬಂದಾಗ ನಿರ್ವಾಣದೇವರ ಮಠ ಕಟ್ಟಿಸಿ ಭೂಮಿ ಕೊಟ್ಟಳು. ಈ ಮಠವು ೧೬೭೭ರಲ್ಲಿ ಮೂಲದ ಮಳೆ ಬಂದು ಮಠ ಕೊಚ್ಚಿ ಹೋಗಲು ಮತ್ತೆ ಮಠ ಕಟ್ಟಿಸಿ ಭೂಮಿದಾನ ಮಾಡಿರುವಳು. ಮೂಲ ಗುರುಗಳಾದ ನಿರ್ವಾಣದೇವರು ಯೋಗಪುರುಷರಾಗಿ ತಮ್ಮ ಪ್ರಭಾವವನ್ನು ರಾಜಾಸ್ಥಾನದವರೆಗೂ ಬೀರಿದ್ದರೆಂದು ತಿಳಿಯುವುದು. ತಿಮ್ಮಮ್ಮನು ೧೬೭೮ರಲ್ಲಿ ಹಣ್ಣು ಹಣ್ಣು

ಮುದುಕಿಯಾಗಿದ್ದಳೆಂದು ತಿಳಿಯುವುದು. ಕೊಮಾರಯ್ಯನೇ ೧೬೭೨ರಲ್ಲಿ ಮುದುಕನಾಗಿದ್ದಾಗ ಅವಳ ತಾಯಿ ವಿಷಯ ಹೇಳಬೇಕಾದುದೇ ಇಲ್ಲ.

ನಿರ್ವಾಣದೇವರು: ಇವರ ಹೆಸರು ಕ್ರಿ.ಶ. ೧೬೬೭ರಲ್ಲಿ ಬರೆದ ಮೊದಲನೇ ಶಾಸನದಲ್ಲೂ ಮತ್ತೆ ೧೬೭೮ರಲ್ಲಿ ಬರೆದ ಎರಡನೆಯ ಶಾಸನದಲ್ಲೂ ಬರುವುದು. ಇವರ ಪ್ರಭಾವವು ಕನಕಪುರ ತಾಲ್ಲೂಕು ಅಲ್ಲದೆ ಮೈಸೂರು ರಾಜ್ಯದಲ್ಲೂ ರಾಜಧಾನಿಯಲ್ಲೂ ಹರಡಬೇಕಾದರೆ ಈ ಶಾಸನಗಳು ಹುಟ್ಟುವ ಮೊದಲೇ ಇವರು ಯೋಗಪುರುಷರಾಗಿ, ಪವಾಡ ಪುರುಷರಾಗಿ ತಮ್ಮ ತಪಶ್ಶಕ್ತಿಯಿಂದ ಖ್ಯಾತಿಗೆ ಬಂದಿದ್ದರೆಂದು ತೋರುವುದು. ಈ ದೇಗುಲ ಮಠಕ್ಕೆ ಇವರೇ ಮೂಲ ಪುರುಷರು-ದೇಗುಲಮಠ ೧೬೫೦ಕ್ಕೆ ಮೊದಲೇ ಸ್ಥಾಪಿತವಾಗಿರುವುದರಲ್ಲಿ ಸಂದೇಹವಿಲ್ಲ* ಶಾಸನದಲ್ಲಿ ನಿರ್ವಾಣದೇವರ ಮಠ ಎಂದು ಇದೆ. ನಿರ್ವಾಣದೇವರ ಜೀವಿತಕಾಲದವರೆಗೂ ನಿರ್ವಾಣದೇವರಮಠವಾಗಿ ಅನಂತರ ದೇವರಮಠವಾಗಿ ಈಗ ದೇಗುಲಮಠವಾಗಿ ನಾಮಾಂತರಗಳನ್ನು ಹೊಂದಿದೆ.

ಕನಕಪುರ ತಾಲ್ಲೂಕು ಎಲ್ಲಾ ಕಡೆಗಳಲ್ಲೂ ನಿರ್ವಾಣದೇವರ ವಿಷಯಕವಾದ ಪವಾಡಗಳನ್ನು ತಿಳಿಸುವ ಕಥೆಗಳು ಜನಜನಿತವಾಗಿದೆ.

ಗವಿಮಠ: ನಿರ್ವಾಣದೇವರ ಕಾಲದಲ್ಲೇ ಗವಿಮಠವೂ ಇದ್ದಿತೆಂದು ತಿಳಿದುಬರುವುದು. ಈ ಪರಂಪರೆ ಒಬ್ಬಿಬ್ಬರು ಸ್ವಾಮಿಗಳಾದ ಮೇಲೆ ಮೂಲಮಠದಲ್ಲೇ ಐಕ್ಯವಾಯಿತು.

ಕಾಣಿಕಾರನಹಳ್ಳಿ: ಈಗ ಕನಕಪುರವೆಂದು ಕರೆಯುವ ಊರಿಗೆ ಹದಿಮೂರನೆಯ ಶತಮಾನದಲ್ಲಿ ಕಾಣಿಕಾರನಹಳ್ಳಿ ಎಂದು ಹೆಸರಿದ್ದಿತು. ಈ ಹೆಸರು ಹದಿನೆಂಟನೆಯ ಶತಮಾನದವರೆಗೂ ರೂಢಿಯಲ್ಲಿದ್ದು ಹೈದರ್, ಟಿಪ್ಪೂಸುಲ್ತಾನರ ಕಾಲದಲ್ಲಿ ಆಭಾಸವಾಗಿ ಕಾನ್‌ಕಾನ್‌ಹಳ್ಳಿ ಎಂದು ರೂಪಾಂತರಗೊಂಡಿತು. ಕಾನ್‌ಕಾನ್ ಎಂದರೆ ಯಾವ ಮಹಮದೀಯನೂ ಅಲ್ಲ. ಟಿಪ್ಪುವು ಬ್ರಿಟಿಷರಿಗೆ ಆಹಾರ, ಹುಲ್ಲು, ಸೊಪ್ಪು ಈ ಗ್ರಾಮದಲ್ಲಿ ದೊರೆಯದಿರಲೆಂದು ಈ ಊರನ್ನು ನಾಶಮಾಡಿದನು. ಅವನ ಕಾಲದಿಂದ ಈ ಹೆಸರು ಬಂದಿದೆ. ಮಹಮದೀಯರಿಗೂ ಈ ಊರಿಗೂ ಯಾವ ಸಂಬಂಧವೂ ಇಲ್ಲ. ಕಾಣಿ ಅಂದರೆ ಗದ್ದೆ, ಕಾಣಿಕಾರ ಅಂದರೆ ಗದ್ದೆಯುಳ್ಳವನು ಎಂಬ ಅರ್ಥದಲ್ಲಿ ಕಾಣಿಕಾರನಹಳ್ಳಿ ಎಂಬ ಪದದ ಅನ್ವರ್ಥವಾಗಿ ಹುಟ್ಟಿದೆ. ಭಾರತಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಮೈಸೂರು ಸರ್ಕಾರದವರು ಈ ಊರಿನ ಹೆಸರನ್ನು ಪ್ರಜಾಭಿಪ್ರಾಯದಂತೆ ಕನಕಪುರವೆಂದು ಕರೆದರು.

ಹುಚ್ಚು ಹೊಳೆ ಬಂದು ಮಠ ಕೊಚ್ಚಿ ಹೋಯಿತು: ಇದೊಂದು ಚಾರಿತ್ರಿಕ ಘಟನೆ. ಪ್ರಕೃತಿ ಪ್ರಕೋಪವನ್ನು ತಿಳಿಸುವುದು. ಅರ್ಕಾವತೀ ದಡದಲ್ಲಿ ಕನಕಪುರವೂ ದೇಗುಲಮಠವೂ ಇರುವುವು. ಈ ನದಿ ಅಷ್ಟು ದೊಡ್ಡ ನದಿಯಲ್ಲ. ಇದರಿಂದ ಈ ಅನಾಹುತ ಆಗಿರಬಹುದೇ? ಎಂಬ ಶಂಕೆ ಬರುವುದು. ಈ ಪ್ರಾಂತದಲ್ಲಿ 'ಮೂಲದ ಮಳೆ ಹೊಯ್ದು ದೇಗುಲ ಕೊಚ್ಚಿ ಹೋಯಿತು' ಎಂಬ ಗಾದೆ ರೂಢಿಯಲ್ಲಿದೆ.

ಈ ಗಾದೆ ಬಹಳ ಹಳೆಯದು. ನಮ್ಮ ಶಾಸನದಲ್ಲಿ ಈ ವಿಷಯ ಉಲ್ಲೇಖವಾಗಿದೆ. ಹಿಂದೊಮ್ಮೆ ನವೆಂಬರ್ ತಿಂಗಳಲ್ಲಿ ಚಂಡಮಾರುತ ಬೀಸಿ ಚಾಮರಾಜನಗರದ ತಾಲ್ಲೂಕು ಮತ್ತು ತಮಿಳುನಾಡಿನಲ್ಲಿ ಆದ ಪ್ರವಾಹಗಳ ಹಾವಳಿ ನಮಗೆ ಇನ್ನೂ ಜ್ಞಾಪಕಕ್ಕೆ ಬರುವುದು. ಆಗಾಗ್ಗೆ ಈ ರೀತಿ ಬಾಧೆಗಳು ಆಗುತ್ತಲೇ ಇರುವುದು. ೧೬೭೭ರಲ್ಲಿ ಮೂಲಾ

---

* ಆದ್ಯ ನಿರ್ವಾಣಸ್ವಾಮಿಗಳವರು ಕ್ರಿ.ಶ. ೧೪ನೆಯ ಶತಮಾನದಲ್ಲಿ ಈ ಮಠವನ್ನು ಸ್ಥಾಪಿಸಿದರು.

ನಕ್ಷತ್ರದ ಮಳೆಯಿಂದ ಹುಚ್ಚುಹೊಳೆ ಬಂದು ಮಠ ಕೊಚ್ಚಿಹೋಗಿ ೧೬೭೮ರ ವೈಶಾಖದಲ್ಲಿ ಈ ಮಠವು ಜೀರ್ಣೋದ್ಧಾರವಾಗಿರುವ ವಿಷಯವು ಇದರಿಂದ ವ್ಯಕ್ತವಾಗುವುದು. ಭಾರತದಲ್ಲಿಯೇ 'ವಿಶಾಖಾನ್ತಾನಿ ಮೇಘಾನಿ' ಎಂದು ಕಾಳಿದಾಸನು ಹೇಳಿರುವಂತೆ ವಿಶಾಖ ಮಳೆಯೇ ವರ್ಷದ ಕೊನೆ ಮಳೆ. ಮೂಲ ನಕ್ಷತ್ರದ ಮಳೆ ನವೆಂಬರಿನಲ್ಲಿ ಹುಟ್ಟುವುದು ಮಳೆ ಬೀಳುವುದು ಅಪೂರ್ವ. ಹಿಂದೆ ಆದ ದುರಂತವನ್ನು ಈ ಶಾಸನ ತಿಳಿಸುವುದು.

ದೇಗುಲಮಠದ ಚರಿತ್ರೆ: ಈಗ ದೇಗುಲ ಮಠವೆಂದು ಕರೆಯುವ ನಿರ್ವಾಣದೇವರ ಮಠವು ೧೪ನೆಯ ಶತಮಾನದಿಂದ ಪ್ರಾರಂಭವಾಗಿ ವಿಚ್ಛಿತ್ತಿ ಇಲ್ಲದೆ ಇಂದಿನವರೆಗೂ ನಡೆದು ಬಂದಿದೆ. ಈ ಮಠದಲ್ಲಿ ಹಿಂದೆ ಪೀಠಾಧಿಪತಿಗಳಾದ ಅನೇಕ ಮಂದಿ ಸ್ವಾಮಿಗಳ ಗದ್ದುಗೆ ಈ ಮಠದ ಸುತ್ತಲೂ ಇವೆ. ಒಬ್ಬೊಬ್ಬರೂ ಮಾಡಿರುವ ಮಹತ್ಕಾರ್ಯಗಳನ್ನು ತಿಳಿಸುವ ಜನಜನಿತವಾದ ಅನೇಕ ಕಥೆಗಳು ಈ ಪ್ರಾಂತದಲ್ಲಿ ಎಲ್ಲಾ ಕಡೆಗಳಲ್ಲೂ ಕೇಳಬಹುದು. ಒಂದು ಮಠ ಆರುನೂರು ವರ್ಷಗಳಿಂದ ಇದ್ದು ವಿದ್ಯಾದಾನ, ಪರೋಪಕಾರ, ಜ್ಞಾನೋಪದೇಶ ಮತ್ತು ಅಜ್ಞಾನಿಗಳಿಗೆ ಸನ್ಮಾರ್ಗವನ್ನು ತೋರಿಸುತ್ತಾ, ಕೀರ್ತಿ ಗಳಿಸಬೇಕಾದರೆ ಸಾಮಾನ್ಯವಲ್ಲ.

ಪೀಠಾಧಿಪತಿಗಳಾಗಿದ್ದ ಶ್ರೀ ನಿ.ಪ್ರ. ಮಹಲಿಂಗಸ್ವಾಮಿಗಳು ಯೋಗಪುರುಷರು. ಶಾಂತಿ, ಶಮ, ದಮಾದಿ ಗುಣಗಳಿಂದ ಪರಿಪೂರ್ಣರು. ಸರ್ವಸಮ ದೃಷ್ಟಿಯುಳ್ಳವರು. ಈಗ್ಗೆ ಕೆಲವು ವರ್ಷಗಳ ಹಿಂದೆ ಶಿವೈಕ್ಯರಾದ ಶ್ರೀ ನಿ.ಪ್ರ. ನಿರ್ವಾಣ ಮಹಾಸ್ವಾಮಿಗಳ ಗಣಾರಾಧನೆಯಲ್ಲಿ ಕನಕಪುರದ ಸುತ್ತ ಮುತ್ತಲ ಗ್ರಾಮಗಳಲ್ಲಿರುವ ಶ್ರೀ ವೈಷ್ಣವರು, ಸ್ಮಾರ್ತರು, ಮಾಧ್ವರು, ಆದ ತ್ರಿಮಸ್ಥರಿಗಲ್ಲದೆ ಎಲ್ಲಾ ಜಾತಿ ಕೋಮಿನವರಿಗೂ ಭೂತತೃಪ್ತ್ಯರ್ಥವಾಗಿ ಅನ್ನದಾನ ಮಾಡಿದ ವಿಷಯವು ಕನಕಪುರದ ಮನೆ ಮನೆಯ ಮಾತಾಗಿದೆ. ಅಲ್ಲದೆ ತಾವು ವಾಸ ಮಾಡುವ ಮಠದ ಆವರಣದಲ್ಲೇ ಒಂದು ಪ್ರೌಢಶಾಲೆಯನ್ನೂ, ಪ್ರಾಥಮಿಕ ಮಾಧ್ಯಮಿಕ ಶಾಲೆಗಳನ್ನೂ ಸಂಸ್ಕೃತ ವೇದ ಪಾಠಶಾಲೆಗಳನ್ನೂ ತೆರೆದು ಏಳುನೂರು ವಿದ್ಯಾರ್ಥಿಗಳಿಗೆ ಪಾಠ ಪ್ರವಚನಗಳು ನಡೆಯಲು ಅನುಕೂಲ ಕಲ್ಪಿಸಿ, ಉಚಿತವಾಗಿ ಅಶನ, ವಸತಿ ಏರ್ಪಾಡು ಮಾಡಿ ವಿದ್ಯಾದಾನ ಮಾಡುವುದು ಸ್ತೋತ್ರಾರ್ಹವಾದುದು. ಕಾಯಕವೇ ಕೈಲಾಸವೆಂದು ಶಿಷ್ಯರುಗಳಿಗೆ ಉಪದೇಶ ಮಾಡುತ್ತಾ ಲೋಕದ ಸುಧಾರಣೆಯಲ್ಲಿ ಮನಸ್ಸಿಟ್ಟು ಶ್ರಮಿಸುತ್ತಿರುವ ಲೋಕಾದರ್ಶಪ್ರಾಯವಾಗಿದೆ.

ಕೃಪೆ : ದೇಗುಲ ಜ್ಯೋತಿ

ಆದಿನಿರ್ವಾಣ ಸ್ವಾಮಿಗಳು*

✍ ಅಜ್ಜಂಪುರ ಜಿ. ಸೂರಿ

ಚೆನ್ನಬಸವಣ್ಣನವರ ನೇತೃತ್ವದಲ್ಲಿ ನಡೆದ ಸಮಗ್ರ ಚಳುವಳಿಯು ಮಾನವೋದ್ಧರಣದ ಪ್ರಕ್ರಿಯೆ ಇತಿಹಾಸದಲ್ಲಿ ಅತ್ಯಂತ ಪ್ರಮುಖ ಘಟ್ಟ. ಆ ಕಾಲದಲ್ಲಿ ವೀರಶೈವ ತತ್ವಗಳು ಉಜ್ವಲವಾಗಿ ಬೆಳಗಿದವು. ಪರಬ್ರಹ್ಮ ಸ್ವರೂಪರಾಗಿದ್ದ ಅಲ್ಲಮಪ್ರಭುಗಳು ಶೂನ್ಯಪೀಠ ಸಂಸ್ಥಾಪನಾಚಾರ್ಯರು ಹಾಗೂ ಅನುಭವ ಮಂಟಪದ ಅಧ್ಯಕ್ಷರು. ಆಚಾರ ನಿಷ್ಠೆ, ದಿವ್ಯಜ್ಞಾನವೇ ಜೀವನಧರ್ಮವಾಗಿ ಮಹಾಶಿವಯೋಗ ಸಾಧನೆಯಲ್ಲಿ ನಿಷ್ಣಾತರಾಗಿದ್ದರು.

ಆ ಕಾಲ ಬಸವಣ್ಣನವರ ಸಮಗ್ರ ಕ್ರಾಂತಿಯ [illegible]ನ್ನು ಸ್ವೀಕರಿಸುವಷ್ಟು ಪಕ್ವವಾಗಿರಲಿಲ್ಲ. ಹನ್ನೆರಡನೇ ಶತಮಾನದ ಅಂತ್ಯಕ್ಕೆ ತಲೆ ಎತ್ತಿದ ಮಾನವ ದೌರ್ಬಲ್ಯಗಳು ವೀರಶೈ[illegible] [illegible]ಜಸ್ಸನ್ನು ಕುಂದಿಸಿ, ತೇಜಸ್ಸನ್ನು ಮಸುಕುಗೊಳಿಸಲು ಯತ್ನಿಸಿದವು. ಪರಿಣಾಮ ಕ್ರಾಂತಿಯ ಕಿಡಿ ಭುಗಿಲೆದ್ದಿತು. ಪುರೋಹಿತಶಾಹಿ ಮತ್ತು ರಾಜಶಾಹಿಗಳು ಒಟ್ಟು ಸೇರಿ ಈ ಕ್ರಾಂತಿಯನ್ನು ಹತ್ತಿಕ್ಕಲು ಯತ್ನಿಸಿದವು. ಅನುಯಾಯಿಗಳಲ್ಲಿ ದಿಗ್ಭ್ರಾಂತಿ ಮೂಡಿತು. ಶರಣರಂತಃಕರಣ ನೊಂದಿತು; ಶಾಂತಿ ಭಂಗವಾಯಿತು. ಆ ಪ್ರಯತ್ನದ ಮೊದಲ ಹಂತ ಬಸವಣ್ಣನವರು ಕಲ್ಯಾಣವನ್ನು ತ್ಯಜಿಸುವುದರಲ್ಲಿ ಫಲ ಕೊಟ್ಟಿತು. ಅನಂತರ ಹರಳಯ್ಯ ಮಧುವರಸರನ್ನು ಎಳೆಹೂಟೆ ಶಿಕ್ಷೆಗೆ ಗುರಿಪಡಿಸಲಾಯಿತು. ಬಿಜ್ಜಳನ ಕೊಲೆಯಾಯಿತು. ಅದರ ಹೊಣೆಯನ್ನು ಶರಣರ ತಲೆಗೆ ಕಟ್ಟಲಾಯಿತು. ಕಲ್ಯಾಣವು ಕುದಿವ ಬಾಣಲೆಯಾಯಿತು. ಆಗ ಶರಣರೆಲ್ಲ ಸೇರಿ ತಾವಿಲ್ಲಿರುವುದು ಅಪಾಯಕಾರಿಯೆಂದು ಭಾವಿಸಿ ಕಲ್ಯಾಣದ ಕೇಂದ್ರವನ್ನು ಬಿಟ್ಟು ತಂಡತಂಡವಾಗಿ ಬೇರೆ ಬೇರೆ ದಿಕ್ಕುಗಳಿಗೆ ಒಬ್ಬೊಬ್ಬರ ನೇತೃತ್ವದಲ್ಲಿ ಚದುರಿಹೋದರು.

ಚೆನ್ನಬಸವಣ್ಣನವರ ನೇತೃತ್ವದ ಒಂದು ಶರಣರ ತಂಡ ಉಳವಿಯತ್ತ ಪಯಣಿಸಲು ನಿರ್ಧರಿಸಿದ್ದು ಬಹುಶಃ ಆಕಸ್ಮಿಕ ಇದ್ದಿರಬಹುದು. ಯಲ್ಲಾಪುರ, ಗಣೇಶಗುಡಿ ಮಾರ್ಗವಾಗಿ ಆ ಸ್ಥಳಕ್ಕೆ ಬಂದ ಚನ್ನಬಸವಣ್ಣನವರು "ನಾನಿಲ್ಲಿ ಉಳಿವೆ" ಎಂದರಂತೆ. ಆದ್ದರಿಂದಲೇ ಆ ಸ್ಥಳಕ್ಕೆ 'ಉಳವೆ' ಎಂಬ ಹೆಸರು ಬಂದು ಅದೀಗ 'ಉಳವಿ' ಆಗಿದೆ ಎಂಬುದೊಂದು ನಂಬಿಕೆ.

ಶರಣರಿಗೆ ಚಾಲುಕ್ಯರ ಗಡಿಯಿಂದ ಸಾಕಷ್ಟು ದೂರದಲ್ಲಿರುವ ಒಂದು ಸುರಕ್ಷಿತ ಸ್ಥಳದ ಅವಶ್ಯಕತೆ ಇತ್ತು. ಬಿಜ್ಜಳನ ಸೈನಿಕರಿಂದ ರಕ್ಷಣೆಯೂ ಬೇಕಿತ್ತು. ಈ ಎರಡೂ ಅಂಶಗಳು ಉಳವಿಯಲ್ಲಿದ್ದವು. ಇನ್ನೊಂದು ಪ್ರಮುಖ ಅಂಶವೆಂದರೆ ಉಳವಿಯು ಕೇವಲ ಒಂದೆರಡು ಕಿಲೋ ಮೀಟರ್‌ಗಳಷ್ಟು ಪ್ರಸ್ಥಭೂಮಿಯಾಗಿದ್ದು, ದುರ್ಗಮ ಬೆಟ್ಟಗಳಿಂದಲೂ, ದಟ್ಟವಾದ ಅರಣ್ಯಗಳಿಂದಲೂ ಸುತ್ತುವರಿದಿತ್ತು. ಶರಣರಿಗೆ ತಮ್ಮ ಅನುಭವ ಗೋಷ್ಠಿಗಳಿಗೆ, ವಚನಗಳ ರಚನೆಗೆ ಮತ್ತು ವಚನಗಳ ಪ್ರತಿಗಳನ್ನು ಸಿದ್ಧಪಡಿಸಲು ಪ್ರಶಾಂತ ವಾತಾವರಣವನ್ನು ಉಳವಿಯು ನೀಡಿತು.

ಚನ್ನಬಸವಣ್ಣನ ತಾಯಿ ಅಕ್ಕನಾಗಮ್ಮ, ಚಂದಯ್ಯ, ರುದ್ರ, ಮಲ್ಲರಾಜ ಹಾಗೂ ಅನೇಕ ಶರಣರು ಶರಣಧರ್ಮ ಮತ್ತು ಶರಣರ ಸಾಹಿತ್ಯವನ್ನು ರಕ್ಷಿಸಲು ಈ ದುರ್ಗಮ ಅರಣ್ಯವನ್ನು ಪ್ರವೇಶಿಸಬೇಕಾಯಿತು.

ಆ ಕಾಲದಲ್ಲಿ ಕದಂಬರ ಪೆರ್ಮಾಡಿಯ ಆಳ್ವಿಕೆ ಇದ್ದು, ಆ ರಾಜನು ಶರಣರನ್ನು ಸ್ವಾಗತಿಸಿ ರಕ್ಷಣೆ ಕೊಟ್ಟನಂತೆ. ಚನ್ನಬಸವಣ್ಣ ಮತ್ತು ಇತರೆ ವಚನಕಾರರು ವಚನ ಸಾಹಿತ್ಯದ ಮೂಲಕ ಆ ರಾಜನಿಗೆ ಕೃತಜ್ಞತೆ ಅರ್ಪಿಸಿದ್ದಾರೆ.

---

* ಈ ನಿರ್ವಾಣ ಸ್ವಾಮಿಗಳು ಬೇರೆ, ದೇಗುಲಮಠಕ್ಕೆ ಸಂಬಂಧಿಸಿದ ನಿರ್ವಾಣ ಸ್ವಾಮಿಗಳು ಬೇರೆ ಎಂಬ ಅಭಿಪ್ರಾಯವಿದೆ. ಲೇಖಕರು ತಮ್ಮ ಕಾದಂಬರಿಯಲ್ಲಿ ಚಿತ್ರಿಸಿರುವ ನಿರ್ವಾಣ ಸ್ವಾಮಿಗಳ ಜೀವನ ಚರಿತ್ರೆಯನ್ನೆ ಇಲ್ಲಿ ಸಂಕ್ಷಿಪ್ತವಾಗಿ ಲೇಖನ ರೂಪದಲ್ಲಿ ನೀಡಿದ್ದಾರೆ.

ಕಾಲಚಕ್ರ ಉರುಳಿತು.

ನಾಲ್ಕುನೂರು ವರುಷಗಳು ಕಾಲಗರ್ಭದಲ್ಲಿ ಸೇರಿಹೋದವು.

ಉಳವಿ ಅನೇಕ ಶರಣರ ಬೀಡಾಯಿತು.

ಪ್ರಭುದೇವ ಪರಂಪರೆಗೆ ಸೇರಿದ ಸಿದ್ಧಯ್ಯ-ನೀಲವ್ವೆ ದಂಪತಿಗಳ ಪುತ್ರರಾಗಿ ಶ್ರೀ ಗುರು ನಿರ್ವಾಣಸಿದ್ಧರು ಜನಿಸಿದರು. ಅವರು ಉಳವಿಯಿಂದ ಕರ್ನಾಟಕದ ಪಶ್ಚಿಮ ಕರಾವಳಿ ಉದ್ದಕ್ಕೂ ಸಂಚರಿಸುತ್ತಾ, ಅಗಣಿತ ಮಹಿಮೆಗಳನ್ನು ಬೀರುತ್ತಾ ಬಂದು, ಕಡೂರಿನ ಸಮೀಪದಲ್ಲಿರುವ ತುರುವಿನಕಲ್ ಗುಡ್ಡವನ್ನು ಸೇರಿದರು. ಅನೇಕ ಪವಾಡಗಳನ್ನು ಮೆರೆದರು. ಮುಂದೆ ಸಹ್ಯಾದ್ರಿ ತಪ್ಪಲಿನಲ್ಲಿ (ಈಗಿನ ಹೊಸಳ್ಳಿ ಕೈಮರ) ತಪಸ್ಸನ್ನಾಚರಿಸಿದರು. ಕಲ್ಯಾಣದ ಶಿವಶರಣರ ವಚನಾನುಭವವನ್ನೇ ಬಹುಮಟ್ಟಿಗೆ ಬೋಧಿಸುತ್ತಿದ್ದರು. ಮುಂದೆ ದಕ್ಷಿಣಾಭಿಮುಖವಾಗಿ ರಾಂಪುರ, ಚಿಕ್ಕನಾಯಕನಹಳ್ಳಿ ಮಾರ್ಗವಾಗಿ ಅರ್ಕಾವತಿ ಬಲದಂಡೆಯಲ್ಲಿ ನೆಲೆಸಿದರು. ಅಲ್ಲಿಯೇ ಲಿಂಗೈಕ್ಯರಾದರು. ಅವರ ಗದ್ದುಗೆ ಇರುವ ಮಠವೇ ದೇವರ ಮಠ ಅರ್ಥಾತ್ ದೇಗುಲ ಮಠ.

* * *

ಉಳವಿ ಗ್ರಾಮದ ಸುತ್ತ ಪ್ರಕೃತಿದೇವಿ ತನ್ನ ಸೊಬಗಿನ ಭಂಡಾರವನ್ನೇ ಹೊರಚೆಲ್ಲಿ ನಲಿದು ನರ್ತಿಸುತ್ತಿದ್ದಳು.

ಉಳವಿಯ ಜನ ಒಕ್ಕಲುತನದ ವೃತ್ತಿಯಲ್ಲಿದ್ದರೂ ಮುಗ್ಧ ಸ್ವಭಾವದವರು, ಸಂಪ್ರದಾಯಶೀಲರು, ವಿನಯಗುಣ ಸಂಪನ್ನರು. ಅಂಥವರಲ್ಲಿ ಜಂಗಮ ಮನೆತನದ ಸಿದ್ಧಯ್ಯನೂ ಒಬ್ಬ. ಆತನಿಗೆ ಸದಾಚಾರಶೀಲೆಯಾದ ನೀಲವ್ವ ಪತ್ನಿ. ಅವರಿಗೆ ಮುಳ್ಳಯ್ಯ, ಮುಪನಯ್ಯ, ಸೀತಾಳಯ್ಯಗಳೆಂಬ ಮೂವರು ಮುದ್ದಾದ ಮಕ್ಕಳು.

ಸ್ವಲ್ಪ ದೂರದಲ್ಲಿ ಚನ್ನಬಸವೇಶ್ವರರ ಗದ್ದುಗೆ. ಸಮೀಪದಲ್ಲೇ ಕಲ್ಯಾಣ. ಸುತ್ತಲೂ ಮರಗಿಡಗಳ ಹಸುರು. ಅಲ್ಲಿನ ಹಳ್ಳ, ಹೊಳೆ, ಗಿರಿ, ಝರಿ, ಬೆಟ್ಟ, ಬಯಲು, ಕಂದರ, ತಡಸಲುಗಳ ಸೌಂದರ್ಯವನ್ನು ನೋಡಿದಷ್ಟು ನೋಡಬೇಕೆನಿಸುವಂತಿತ್ತು.

ಎತ್ತ ದೃಷ್ಟಿ ಹಾಯಿಸಿದರೂ ಕಾಣುವ ದೃಶ್ಯಾವಳಿ ರಮ್ಯ, ಭವ್ಯ. ಒಮ್ಮೆ ಸತಿಪತಿಗಳು ಸಂತೋಷದಿಂದಿದ್ದಾಗ- "ಈ ಉಳವಿಗೆ ಬಂದು ನಿಮ್ ಕೈಹಿಡಿದು ಹತ್ತು ವರ್ಷ ಆಯ್ತು. ಹನ್ನೆರಡನೆ ಶತಮಾನದ ಶರಣ ಚನ್ನಬಸವಣ್ಣನವರು ನಡೆದಾಡಿದ ಸ್ಥಳ ಇದು. ಇದುವರೆಗೂ ಹೊಲ ಮನಿ ಕೆಲ್ಸಾನೇ ಆಯ್ತು. ಈ ಸುತ್ತಮುತ್ತ ಅನೇಕ ಶರಣರನ್ನು ನೆನಪಿಗೆ ತರುವ ಸ್ಥಳಗಳು, ಗವಿಗಳು ಇವೆಯಂತೆ. ಆ ಸ್ಥಳಗಳನ್ನೆಲ್ಲ ನೋಡಬೇಕು ಅಂತ ಆಸೆ" ಎಂದು ಗಂಡನನ್ನು ಕೇಳಿದಳು ನೀಲವ್ವ.

ನೀಲವ್ವ ತನಗಾಗಿ ಏನನ್ನೂ ಕೇಳಿಕೊಂಡವಳಲ್ಲ. ವರ್ಷಕ್ಕೆ ಒಮ್ಮೆ ತನ್ನ ತೌರೂರಾದ ಯಲ್ಲಾಪುರಕ್ಕೆ ಹೋಗಿಬರುತ್ತಿದ್ದಳು. ಉಳಿದಂತೆ ಹೊಲ ಮನೆ ಕೆಲಸ.

"ಆಗಲಿ, ತೋರಿಸ್ತೀನಿ" ಎಂದು ಮಾತುಕೊಟ್ಟ ಸಿದ್ಧಯ್ಯ ಕಾಲ್ನಡಿಗೆಯ ಪ್ರಯಾಣಕ್ಕೆ ನೀಲವ್ವ ಬುತ್ತಿ ಕಟ್ಟಿದಳು. ಆ ದಟ್ಟವಾದ ಕಾಡಿನಲ್ಲಿ ಹೋಗಿ ಗವಿಮಠ, ಮಹಾಮನೆ ಗವಿ, ಹರಳಯ್ಯನ ಚಿಲುಮೆ, ರುದ್ರಾಕ್ಷಿ ಗವಿಗಳನ್ನು ನೋಡುವ ಸಲುವಾಗಿ ಚುರುಕಾಗಿ ಹೊರಟ.

ಸ್ತ್ರೀಯೊಬ್ಬಳು ಮಲಗಿದಂತೆ ಕಾಣುವ ಅಕ್ಕನಾಗಮ್ಮ ಗವಿ ನಿಸರ್ಗ ಸಹಜ ರೂಪಿತ ಬಂಡೆಯನ್ನು ತೋರಿಸಿ- "ಇಲ್ಲಿ ಸಾಧು ಜಂಗಮರು ಧ್ಯಾನ ಮಾಡುತ್ತಿದ್ದರಂತೆ" ಎಂದ. ಸದಾ ನೀರು ಒಸರುತ್ತಿದ್ದ ಶಿವಶರಣ ಹರಳಯ್ಯ ಚಿಲುಮೆ, ಬುಡ್‌ಬುಡ್‌ಕೆರೆ ಎನ್ನುವ ಪುಷ್ಕರಣಿ, ಕಾವೇರಿ ಹಳ್ಳ, ವಿಭೂತಿ ಕಣಜ -ಎಲ್ಲವನ್ನೂ ನೋಡಿದ್ದಾಯಿತು.

"ಇದೇ ನೋಡು 'ಮಾನವಮಿ ಗವಿ'. ಬಸವಣ್ಣನವರ ಕಲ್ಯಾಣದ ಮಹಾಮನೆಯ ನೆನಪಿಗಾಗಿ ಈ ಗುಡ್ಡವನ್ನೆ ಕೊರೆದು ಕೋಣೆ ಮಾಡಿದ್ದಾರೆ" ಎಂದ. ಗವಿಗಳನ್ನು ನೋಡಬಯಸುವ ಭಕ್ತರು ಆ ಅರಣ್ಯದಲ್ಲಿ ಒಂಟೊಂಟಿಯಾಗಿ ಸಂಚರಿಸದೆ ಗುಂಪುಗುಂಪಾಗಿ ಹೋಗುತ್ತಿದ್ದರು.

ಸಿದ್ಧಯ್ಯ, ನೀಲವ್ವ ಏಳೆಂಟು ಜನರಿದ್ದ ಗುಂಪಿನಲ್ಲಿದ್ದರು. ಇದ್ದಕ್ಕಿದ್ದಂತೆ ಗುಂಪಿನಲ್ಲಿದ್ದ ವಿರೂಪಾಕ್ಷ ಸ್ವಾಮಿಗಳು ತರಗೆಲೆಗಳ ಮೇಲೆ ಉಂಡೆಯಾಗಿ ದೊಪ್ಪನೆ ಬಿದ್ದರು. ಭಾರಿಗಾತ್ರದ ಹೆಬ್ಬಾವೊಂದು ಅವರನ್ನು ಬಂಧಿಸಿತ್ತು. ಗಿಡಗಂಟೆಗಳನ್ನು ಸವರುತ್ತಾ ಮುಂದೆ ಸಾಗಲೆಂದು ತಂದಿದ್ದ ಆಯುಧವೊಂದು ಸಿದ್ಧಯ್ಯನ ಕೈಯಲಿತ್ತು.

"ಹರಹರ ಮಹಾದೇವ" ಎಂದವನೆ ಹಾವನ್ನು ಕತ್ತರಿಸಿದ. ಸ್ವಾಮಿಗಳು ಮೃತ್ಯುಪಂಜರದಿಂದ ಪಾರಾದರು. ಎದ್ದುನಿಂತು ಸಿದ್ಧಯ್ಯನ ಬೆನ್ನು ತಟ್ಟಿದರು. ನಂತರ ಬಗ್ಗಿ ಚಿಕ್ಕಕಲ್ಲನ್ನು ಕೈಗೆತ್ತಿಕೊಂಡು ಮಂತ್ರಿಸಿ ಹೊರಳಾಡುತ್ತಿದ್ದ ಹಾವಿನ ಕಡೆ ಎಸೆದರು. ಅದು ಫಕ್ಕನೆ ಭುಗಿಲೆದ್ದು ಉರಿಯತೊಡಗಿತು. ಜೊತೆಗೆ ಭಯಂಕರ ಕಿರುಚಾಟದ ಸದ್ದೂ ಕೇಳಿಸಿತು.

"ಭಕ್ತರಿಗೆ ಕಾಟಕೊಡುತ್ತಿದ್ದ ಪೀಡೆ ತೊಲಗಿತು" ಎಂದರು ಸ್ವಾಮಿಗಳು. ಯಾರಿಗೂ ಏನೂ ಅರ್ಥವಾಗಲಿಲ್ಲ.

"ಸರಿ ಬನ್ನಿ" ಎಂದು ಎಲ್ಲರನ್ನೂ ಕರೆದುಕೊಂಡು ಹೊರಟರು. ಸಿದ್ಧಿಗಳನ್ನು ಪಡೆದಿದ್ದರೂ ಪ್ರಸಿದ್ಧಿಗೆ ಮನಗೊಡದ ಮಹಾನುಭಾವರು ಅವರು.

ಒಂದೆರಡು ತಾಸು ನಡೆದ ಮೇಲೆ ಗುಹೆಯೊಂದು ಕಾಣಿಸಿತು. ಎಲ್ಲರೂ ಒಳಗೆ ಹೋದರು.

"ಎಲ್ಲರೂ ನಡೆದು ದಣಿದಿದ್ದೀರಿ, ಬಾಯಾರಿದ್ದೀರಿ. ನೀರು ಕುಡಿಯಿರಿ" ಎಂದು ಮಣ್ಣಿನ ಕುಡಿಕೆಗಳಲ್ಲಿ ನೀರು ತುಂಬಿ ಕೊಟ್ಟರು. ಅಮೃತದಂತಹ ನೀರು!

ಕುಡಿದಷ್ಟೂ ಕುಡಿಯಬೇಕೆನಿಸಿತು. ದಣಿವು, ಬಾಯಾರಿಗೆ ಎಲ್ಲವೂ ಕ್ಷಣದಲ್ಲಿ ಮಾಯ! ಬದಲಿಗೆ ಉತ್ಸಾಹ, ಚೈತನ್ಯ ಇಮ್ಮಡಿಯಾಯಿತು.

ಸ್ವಲ್ಪ ವಿಶ್ರಾಂತಿಯ ನಂತರ ವಿರೂಪಾಕ್ಷ ಸ್ವಾಮಿಗಳು ಸಿದ್ಧಯ್ಯ-ನೀಲವ್ವ ದಂಪತಿಗಳನ್ನು ದಿಟ್ಟಿಸಿ ನೋಡಿ- "ನೀವು ಸಿದ್ಧಪುರುಷನಿಗೆ ಜನ್ಮ ನೀಡಲಿದ್ದೀರಿ" ಎಂದರು. ದಂಪತಿಗಳಿಗೆ ಆಶ್ಚರ್ಯವಾಯಿತು.

ಜೊತೆಗೂಡಿ ಬಂದಿದ್ದವರಿಗೂ ಆಶ್ಚರ್ಯ.

"ಹೌದು, ಇಂದು ನಾನು ನಿಮ್ಮೊಂದಿಗೆ ಇರದೆ ಇದ್ದಿದ್ದರೆ ಆ ಉರಗ ರೂಪಿ ದುಷ್ಟಶಕ್ತಿ ನಿಮ್ಮಿಂದ ಮೂಡಲಿರುವ ಜ್ಯೋತಿಯನ್ನು ಅಲ್ಲೇ ಮುರುಟಿ ಹಾಕುತ್ತಿತ್ತು" ಎಂದರು ಸ್ವಾಮೀಜಿ.

ಎಲ್ಲರೂ ಶಿಲಾಮೂರ್ತಿಗಳಂತೆ ಕುಳಿತಿದ್ದರು. ಎಲ್ಲರಿಗೂ ಮತ್ತೆ ಕುಡಿಯಲು ನೀರು ಕೊಟ್ಟು ಮಂತ್ರಿಸಿದ ವಿಭೂತಿ ಪಟ್ಟೆ ಕೊಡುತ್ತಾ- "ನೀವೀಗ ಕುಡಿದ ನೀರು ಪವಿತ್ರವಾದ ಮೂಲಿಕೆಗಳಿಂದಲೂ, ಖನಿಜಗಳ ಸಂಪರ್ಕದಿಂದಲೂ ವಿಶೇಷ ಶಕ್ತಿ ಪಡೆದಿದೆ. ಮೂರ್‍ನಾಲ್ಕು ದಿನಗಳಾದರೂ ಹಸಿವು ನೀರಡಿಕೆಯಿಂದ ತೊಂದರೆಯಾಗದಂತೆ ನೋಡಿಕೊಳ್ಳುವ ಶಕ್ತಿ ಅದಕ್ಕಿದೆ. ನೀವು ಪ್ರವಾಸಿಗರು. ಬೆಳಕಿರುವಾಗಲೆ ಊರು ಸೇರಬೇಕು. ನೀವಿನ್ನು ಹೊರಡಿ. ನಿಮಗೆ ಶುಭವಾಗಲಿ."

ಎಲ್ಲರನ್ನೂ ಹರಸಿದರು.

ಸಿದ್ಧಯ್ಯ ದಂಪತಿಗಳು ಹೊರಟು ನಿಂತಾಗ- "ಚಿಂತಿಸಬೇಡಿ. ತಕ್ಕ ಸಮಯಕ್ಕೆ ಬಂದು ನಿಮ್ಮ ಕಂದ ಸಿದ್ಧಪುರುಷನನ್ನು ಕಾಣುತ್ತೇನೆ" ಎಂದು ಆಶೀರ್ವದಿಸಿದರು.

* * *

ಕಾಲಚಕ್ರ ಉರುಳುತ್ತಿತ್ತು.

ನೀಲವ್ವ ಲಿಂಗಪೂಜೆ ಮುಗಿಸಿಕೊಂಡ ಮೇಲೆ ಫಕ್ಕನೆ ಹೆರಿಗೆ ನೋವು ಕಾಣಿಸಿಕೊಂಡಿತು. ಮುಖ ಹುಳ್ಳಗೆ ಮಾಡಿಕೊಂಡಳು.

"ಬಸವೇಶ, ನಂದೀಶ, ಶಿವಶಿವಾ..." ಎನ್ನುತ್ತಾ ಉಸಿರು ಬಿಗಿಹಿಡಿದು ಕುಳಿತಲ್ಲೆ ಹೊಸಕಾಡಿದಳು. ಸಿದ್ಧಯ್ಯ ಗಾಬರಿಯಿಂದ ಬಾಗಿಲು ತೆರೆದುಕೊಂಡು ಸೂಲಗಿತ್ತಿಯನ್ನು ಕರೆತರಲು ಓಡಿದ. ಯಾರೊ ಇಬ್ಬರು ತನ್ನತ್ತಲೇ ಬರುತ್ತಿದ್ದರು. ಕ್ಷಣಕಾಲ ನಿಂತು ನೋಡಿದ.

ಒಬ್ಬ ಪುರುಷ! ಆತನ ಪಕ್ಕದಲ್ಲಿ ಸ್ತ್ರೀ!

ತಾನು ಸತಿಯೊಂದಿಗೆ ಶಿವಶರಣರ ಗವಿಗಳನ್ನು ನೋಡಲು ಹೋಗಿದ್ದಾಗ ಹೆಬ್ಬಾವಿನ ಹಿಡಿತಕ್ಕೆ ಸಿಕ್ಕಿಬಿದ್ದಿದ್ದವರು. ಇಬ್ಬರನ್ನೂ ದಿಟ್ಟಿಸಿ ನೋಡುತ್ತಾ "ಸಿದ್ಧಪುರುಷನಿಗೆ ಜನ್ಮ ನೀಡಲಿದ್ದೀರಿ" ಎಂದಿದ್ದವರು.

ತಕ್ಕ ಸಮಯಕ್ಕೆ ಬಂದು ಕಾಣುತ್ತೇನೆ ಎಂದಿದ್ದವರು.

ಅವರ ಪಕ್ಕದಲ್ಲಿದ್ದ ಹೆಂಗಸು ಫಕೀರವ್ವ!

ಸೂಲಗಿತ್ತಿ ಫಕೀರವ್ವನನ್ನು ವಿರೂಪಾಕ್ಷ ಸ್ವಾಮಿಗಳೇ ಕರೆತಂದಿದ್ದರು.

"ನೋಡು ಫಕೀರವ್ವ! ಸಿದ್ಧಯ್ಯ ಗಾಬರಿಯಾಗಿದ್ದಾನೆ! ಹೋಗಿ ನಿನ್ನ ಕೆಲಸ ನೋಡಿಕೊ" ಎಂದರು.

ಸ್ವಾಮಿಗಳ ಮಾತು ಸತ್ಯವಾಯಿತು.

ಸಿದ್ಧಯ್ಯನ ಆನಂದ ಹೇಳತೀರದು. ಒಂದು ತಾಸಿನ ಬಳಿಕ ಫಕೀರವ್ವ ಸೊಂಟಕ್ಕೆ ಸೀರೆಯ ಸೆರಗು ಸಿಕ್ಕಿಸಿಕೊಳ್ಳುತ್ತ ನಸುನಗುತ್ತಾ ಬಂದು "ಗಂಡು ಮಗು ಸ್ವಾಮೇರಾ!" ಎಂದಳು.

ಜನನದ ಸಮಯಕ್ಕೆ ಘಳಿಗೆಬಟ್ಟಲನ್ನು ನೋಡಲಿಲ್ಲ. ಆಗಸದತ್ತ ದೃಷ್ಟಿಹಾಯಿಸಲಿಲ್ಲ. ಉತ್ತರ ದಿಕ್ಕಿಗೆ ನಿಲ್ಲಲಿಲ್ಲ. ನಕ್ಷತ್ರಗಳನ್ನು ಗುರ್ತಿಸಲಿಲ್ಲ.

ಶಿವನ ಕರುಣೆಯ ಕೂಸು ಮುದ್ದಾಗಿತ್ತು.

ಬಟ್ಟೆ ಹಾಸಲ್ಪಟ್ಟ ಮೊರದಲ್ಲಿ ಮಗು ಮಲಗಿತ್ತು.

ವಿರೂಪಾಕ್ಷ ಸ್ವಾಮಿಗಳು ತಮ್ಮ ಜೋಳಿಗೆಯಲ್ಲಿದ್ದ ವಿಭೂತಿ ಘಟ್ಟಿ ತೆಗೆದು ಮಂತ್ರಿಸಿ ಶಿಶುವಿಗೆ ತ್ರಿಪುಂಡ್ರ ಧರಿಸಿದರು. ಹುಬ್ಬುಗಳ ಮಧ್ಯ ಬೊಟ್ಟಿಟ್ಟರು. ಸಿದ್ಧಪುರುಷನಂತೆ ಕಂಡಿದ್ದರಿಂದ ಪರಮ ವೈರಾಗ್ಯವನ್ನು ಸೂಚಿಸುವ "ನಿರ್ವಾಣಸಿದ್ಧ" ಎಂಬ ಹೆಸರಿನಿಂದ ಕರೆದು ಆಶೀರ್ವದಿಸಿದರು.

* * *

ಕಾಲಚಕ್ರ ಉರುಳುತ್ತಲೇ ಹೋಯಿತು.

ನೀಲವ್ವ ಈಗ ನಾಲ್ಕು ಮಕ್ಕಳ ತಾಯಿ. ಕ್ರಮೇಣ ನಿರ್ವಾಣಸಿದ್ಧ ಕೈಗೂಸಾಗಿ ಬೆಳೆಯದೆ ಬೀದಿಕೂಸಾಗಿ ಬೆಳೆಯತೊಡಗಿದ.

ಐದು ವರ್ಷಕ್ಕೆ ಕನ್ನಡ, ಸಂಸ್ಕೃತ ಅಕ್ಷರಾಭ್ಯಾಸ ಮರಳಿನ ಮೇಲೆ ನಡೆಯಿತು. ಎಂಟು ವರ್ಷ ತುಂಬುವಷ್ಟರಲ್ಲಿ ಗುರು ರುದ್ರಮುನಿಗಳು ಲಿಂಗಾಂಗ ಸಾಮರಸ್ಯ. ಇಷ್ಟಲಿಂಗ ಪೂಜಾವಿಧಾನ, ಶಿವನಿಷ್ಠೆ, ಶಿವನೇಮ ಇತ್ಯಾದಿಯನ್ನಿತ್ತು ಹರಸಿದರು.

ತೀಕ್ಷ್ಣಬುದ್ಧಿಯ ನಿರ್ವಾಣಸಿದ್ಧರಿಗೆ ಅಕ್ಷರವಿದ್ಯೆ ಕಷ್ಟವಾಗಲೇ ಇಲ್ಲ.

ನೀರು, ಗೊಬ್ಬರ, ಮಣ್ಣು ಎಲ್ಲದರ ಸಾರ ಹೀರಿ ಸಸ್ಯದಲ್ಲಿ ಹೂವು ಮೂಡುವಂತೆ ತಾನು ಗುರುವಿನಿಂದ ಸಂಸ್ಕಾರ ಸಂಸ್ಕೃತಿಗಳನ್ನು ಸ್ವೀಕರಿಸಿ ನಿರ್ವಾಣಸಿದ್ಧ ತನ್ನ ಅಂತಃಶಕ್ತಿಯನ್ನು ಹೆಚ್ಚಿಸಿಕೊಂಡ.

ಹನ್ನೆರಡು ವಸಂತಗಳನ್ನು ಕಳೆಯುವಷ್ಟರಲ್ಲಿ ಆತನಿಗೆ ಪುಣ್ಯಕ್ಷೇತ್ರಗಳನ್ನು ಸಂದರ್ಶಿಸುವ ಬಯಕೆ!

ಧರ್ಮ ಜಿಜ್ಞಾಸುಗಳ, ಮುಮುಕ್ಷುಗಳ ಸಾನಿಧ್ಯದಲ್ಲಿರುವಾಸೆ! ನಿರ್ವಾಣರು ಹದಿನಾರರ ಗಡಿ ದಾಟಿದಾಗ ಯೌವನವು ಅವರ ಚಿಗುರುಮೀಸೆಯಲ್ಲಿ ಚಿಗುರೊಡೆಯತೊಡಗಿತು.

ಅವರ ಸದ್ಗುಣ ಸ್ವಭಾವಗಳನ್ನು ಎಲ್ಲರೂ ಮೆಚ್ಚಿ ಹೊಗಳುತ್ತಿದ್ದರು. ಶಿವಯೋಗತತ್ಪರನಾದ ಆ ತೇಜಸ್ವಿ ಯುವಕನನ್ನು ಕಂಡಾಗ ಸಾಧುಗಳೇ ತಲೆಬಾಗುತ್ತಿದ್ದರಿಂದ ಈತನೊಬ್ಬ ಸ್ವಾಮಿಯೋ, ಯೋಗಿಯೋ ಆಗುತ್ತಾನೆಂದು ಜನ ಮಾತನಾಡಿಕೊಳ್ಳುತ್ತಿದ್ದರು.

ಒಮ್ಮೆ ವಿರೂಪಾಕ್ಷ ಸ್ವಾಮಿಗಳು ಶಿವಧ್ಯಾನದಲ್ಲಿದ್ದಾಗ ಹೆಬ್ಬುಲಿಯೊಂದು ಭಯಂಕರವಾಗಿ ಆರ್ಭಟಿಸಿತು.

ನಿರ್ವಾಣಸಿದ್ಧರು ಹೆದರಲಿಲ್ಲ, ಬೆದರಲಿಲ್ಲ. ನಿರ್ಭಯವಾಗಿ ಅದರ ಬಳಿಗೇ ಹೋದರು. ಹುಲಿರಾಯನ ದೃಷ್ಟಿ, ನಿರ್ವಾಣಸಿದ್ಧರ ದೃಷ್ಟಿ ಒಂದಾದವು. ಆ ಮಹಾನ್ ಸಾತ್ವಿಕ ಶಕ್ತಿಯ ಎದುರು ಅದರ ಆಟ ಸಾಗದೆ ಹೋಯಿತು. ಹುಲಿ ಅಲ್ಲಿಂದ ನಿರ್ಗಮಿಸಿತು.

ಶಿವಧ್ಯಾನದಲ್ಲಿದ್ದು ಎಲ್ಲವನ್ನೂ ಗಮನಿಸುತ್ತಿದ್ದ ವಿರೂಪಾಕ್ಷ ಸ್ವಾಮಿಗಳು "ನನ್ನ ಮಾತು ಹುಸಿಯಾಗುವುದಿಲ್ಲ. ಈತ ಯೋಗಕ್ಕಾಗಿ ಹುಟ್ಟಿದ್ದಾನೆ. ಸಿದ್ಧಪುರುಷನಾಗುತ್ತಾನೆ" ಎಂದುಕೊಂಡರು.

* * *

ವಿರೂಪಾಕ್ಷ ಸ್ವಾಮಿಗಳಿಂದ ಗುರುದೀಕ್ಷೆಯನ್ನು ಪಡೆದು ನಿರ್ವಾಣಸಿದ್ಧರು ವಿಭೂತಿ ರುದ್ರಾಕ್ಷಿಗಳನ್ನು ಧರಿಸಿ, ಹಾವುಗೆಗಳನ್ನು ಮೆಟ್ಟಿ, ಕಾವಿವಸ್ತ್ರಧಾರಿಗಳಾದರು.

ಸಂಕ್ರಾಂತಿಯ ಒಂದು ಶುಭಸಂದರ್ಭ!

ಸಿದ್ಧಯ್ಯ ದಂಪತಿಗಳು ಚನ್ನಬಸವೇಶ್ವರರ ಗದ್ದುಗೆಗೆ ಹೋದರು. ನೀಲವ್ವ ಮೊಣಕಾಲೂರಿ ಕುಳಿತುಕೊಂಡಳು. ಕೈ ಜೋಡಿಸಿ, ನಿಧಾನವಾಗಿ ಕಣ್ಣುಮುಚ್ಚಿ ಬಾಗಿ ನೆಲಕ್ಕೆ ಹಣೆ ಹಚ್ಚಿದಳು. ಶಿವ-ಜೀವರ ಐಕ್ಯಾನುಸಂಧಾನವೇರ್ಪಟ್ಟು ಶಿವ-ಜೀವ ಒಂದೇ ಆದರು.

ಉರಿಸೋಕಿದ ಒಣಹುಲ್ಲಿನ ಮೆದೆಯಂತೆ ನೀಲಮ್ಮನ ಸಾವಿನ ಸುದ್ದಿ ಊರಲ್ಲೆಲ್ಲಾ ಹರಡಿತು. ನಿರ್ವಾಣಸಿದ್ಧರು ಭಾವಸಮಾಧಿಗಿಳಿದರು.

* * *

ಒಂದು ಸುಂದರ ಸಂಜೆಯ ಸಮಯ!

ಊರಾಚೆ ಬಿಲ್ವವೃಕ್ಷದ ಅಡಿಯಲ್ಲಿ ಕುಳಿತಿದ್ದ ನಿರ್ವಾಣಸಿದ್ಧರಿಗೆ ದೂರದಿಂದ ದೀಪದ ಕುಡಿಯಂತೆ ಬೆಳಗುತ್ತಿದ್ದ ಮಹಾಜ್ಯೋತಿಯೊಂದು ತನ್ನ ಕಡೆಗೇ ನಡೆದು ಬರುತ್ತಿರುವುದು ಕಂಡಿತು. ಕಾವಿಯ ಕಫನಿಯಿಂದ ಆಚ್ಛಾದಿತವಾದ ಮೂರ್ತಿ ಎದುರಿಗೆ ಬಂದು ನಿಂತಾಗ ನಿರ್ವಾಣಸಿದ್ಧರು ಬಾಗಿ ವಂದಿಸಿದರು. ಆತನ ಆಧ್ಯಾತ್ಮಶಕ್ತಿಯನ್ನು ಗುರ್ತಿಸಿದ ಶ್ರೀಗುರು ಮರುಳಸಿದ್ಧರು ಪ್ರತಿವಂದಿಸಿ ಪರಸ್ಪರ ಆಲಿಂಗಿಸಿಕೊಂಡರು.

ದರ್ಪಣಕೆ ದರ್ಪಣ ಹಿಡಿದಂತೆ!

ಇಬ್ಬರೂ ಎರಡು ರಸಗನ್ನಡಿಗಳು!

ಒಬ್ಬರ ಬಿಂಬ ಮತ್ತೊಬ್ಬರಲ್ಲಿ!

ಅದೇಕೊ ಶ್ರೀಗುರು ಮರುಳಸಿದ್ಧರು ನಿರ್ವಾಣಸಿದ್ಧರಿಗೆ ತಮ್ಮ ಪ್ರವಾಸದ ಉದ್ದಿಶ್ಯ ಕುರಿತು ವಿವರಿಸತೊಡಗಿದರು.

ದೇಶ ಪರ್ಯಟನೆಯ ಸಂಪೂರ್ಣ ವಿವರ ನೀಡಿ- "ನಿಂತ ನೀರು ಕೊಚ್ಚೆಯಾದರೆ, ಹರಿವ ನೀರು ತೀರ್ಥವಾಗುತ್ತದೆ. ನಿತ್ಯ, ಶುದ್ಧ ಮುಕ್ತನಾಗಲು ಶಿವಾನುಭವವೊಂದೇ ಸಾಲದು. ನಿತ್ಯ ಪರ್ಯಟಣದಿಂದ ನಮಗೆ ಅಪಾರ ಲೋಕಾನುಭವವಾಗಬೇಕು. ನಿಮ್ಮನ್ನೆ ಕಾಯುತ್ತಿರುವವರಿಗೆ ಅಮೃತ ಸಿಂಚನವಾಗಬೇಕು. ಮುಂದೊಂದು ದಿನ ಸಹ್ಯಾದ್ರಿಯ ಮಡಿಲಲ್ಲಿ ಹರಿಯುವ ವೇದಾವತಿ ನದಿಯ ಪೂರ್ವಕ್ಕಿರುವ ಕಡೂರಿನ ಸಮೀಪದ ತುರುವಿನಕಲ್ ಬೆಟ್ಟದಲ್ಲಿ ನಿಮ್ಮನ್ನು ಭೇಟಿಯಾಗುತ್ತೇನೆ" ಎಂದರು.

ಅವರ ಖಚಿತವಾದ ಭವಿಷದ್‌ವಾಣಿಗೆ ನಿರ್ವಾಣಸಿದ್ಧರು ಬೆರಗಾದರು.

* * *

ಅಂದು ರಾತ್ರಿ ನಿರ್ವಾಣಸಿದ್ಧರು, ಮರುಳಸಿದ್ಧರು ಗಹನವಾದ ಚರ್ಚೆಯಲ್ಲಿ ಮುಳುಗಿದ್ದರು.

ದೇಶ ಪರ್ಯಟನದಿಂದ ಪರಮಾತ್ಮನ ನಿಜವನರಿಯಲು ಯತ್ನಿಸಬೇಕೆಂದುಕೊಂಡ ನಿರ್ವಾಣಸಿದ್ಧರು ನಾನಾ ಕ್ಷೇತ್ರಗಳನ್ನು ಸಂದರ್ಶಿಸಲು ನಿರ್ಧರಿಸಿದರು.

ಬೆಳದಿಂಗಳು ಹಾಲು ಚೆಲ್ಲಿದಂತಿತ್ತು.

ಬ್ರಾಹ್ಮೀ ಮುಹೂರ್ತದಲ್ಲಿ ಪರಸ್ಪರ ಬೀಳ್ಕೊಂಡರು.

ಶ್ರೀಗುರು ನಿರ್ವಾಣಸಿದ್ಧರು ತಮ್ಮ ಮನೆಯ ಮುಂದೆ ನಿಂತರು. ಮುಚ್ಚಲ್ಪಟ್ಟ ಬಾಗಿಲನ್ನು ದಿಟ್ಟಿಸುತ್ತಾ ತಂದೆಯನ್ನೂ ಅಣ್ಣಂದಿರನ್ನೂ ಮನದಲ್ಲೇ ಸ್ಮರಿಸಿದರು. ಪೊಡಮಟ್ಟರು. ನಂತರ ಸಹ್ಯಾದ್ರಿಯ ಸಾಲಿನತ್ತ ಹೊರಟರು.

* * *

ನೀಲವ್ವ ತೀರಿಕೊಂಡ ಮೂರೇ ತಿಂಗಳಿಗೆ ಸಿದ್ಧಯ್ಯನೂ ಶಿವನ ಪಾದ ಸೇರಿಬಿಟ್ಟ. ನಿರ್ವಾಣಸಿದ್ಧರು ಕಡಲತೀರದ ಕಣ್ಮಣಿ ಕಾರವಾರವನ್ನು ತಲುಪಿಸಿದರು. ಅರ್ಧಚಂದ್ರಾಕೃತಿಯಲ್ಲಿ ಹಬ್ಬಿದ ಕಡಲತೀರ, ಕಪ್ಪುಕಾಳಿ ನದಿಯು ಕಡಲಿನ ಒಡಲನ್ನು ಸೇರುವ ಸೊಬಗಿನ ಸಾಮರಸ್ಯ. ಮುಗಿಲೆತ್ತರಕ್ಕೆ ಚಾಚಿದ ಬೆಟ್ಟದ ಸಾಲುಗಳ ಸೌಂದರ್ಯ. ಅವುಗಳ ನಡುವೆ ನೀಳವಾಗಿ ನೆಲೆಸಿದ ಕಾರವಾರದ ಕರಾವಳಿ ನಿರ್ವಾಣಸಿದ್ಧರ ಮನ ಸೆಳೆಯಿತು.

ಮಾಜಾಳಿ, ಅಸ್ನೋಟಿ, ಅಮದಳ್ಳಿ, ಶರ್ವೆಯ ಭಕ್ತರನ್ನುದ್ದೇಶಿಸಿ ಧಾರ್ಮಿಕ ಉಪನ್ಯಾಸಗಳನ್ನು ನೀಡಿದರು. ಸಹ್ಯಾದ್ರಿ ಬೆಟ್ಟಗಳ ಮಾರ್ಗದಲ್ಲೇ ಒಂಟಿಯಾಗಿ ಪ್ರಯಾಣ ಮುಂದುವರಿಸಿದರು.

ಗೋಕರ್ಣದ ಕಡಲ ತೀರದಲ್ಲಿ ವಿಶ್ರಾಂತಿ ಪಡೆದರು. ಇಬ್ಬರು ಅಲ್ಲಿನ ಅಗೇರರು ಕಡಲಾಮೆಯನ್ನು, ಅದರ ಮೊಟ್ಟೆಗಳನ್ನು ಪಡೆಯಲು ಯತ್ನಿಸಿದಾಗ ಅವರಿಗೆ ಬುದ್ಧಿ ಹೇಳಲು ನೋಡಿದರು. ಕುಡಿದು ಅಮಲೇರಿದ್ದ ಅಗೇರರನ್ನು ಉಗ್ರನೋಟದ ಉರಿಗೆ ಸಿಲುಕಿಸಿ ಸರಿದಾರಿಗೆ ತಂದರು.

ಗೇರುಸೊಪ್ಪೆಯಲ್ಲಿ ಮೌಲ್ವಿಯೊಬ್ಬರ ಪರಿಚಯವಾಯಿತು. ಕೆಲವು ಕಾಲ ಅವರೊಂದಿಗಿದ್ದರು. ಈರ್ವರೂ ಶಾಂತಿ ಪ್ರಿಯರೇ. ಸಮಾನ ಮನಸ್ಕರು. ನಿರ್ವಾಣಸಿದ್ಧರು ಶರಣ ಧರ್ಮವನ್ನು, ವಚನಶಾಸ್ತ್ರ ರಹಸ್ಯವನ್ನು ಮೌಲ್ವಿಯವರಿಗೆ ತಿಳಿಸಿಕೊಟ್ಟು ಅವರಿಂದ ಇಸ್ಲಾಂ ಧರ್ಮದ ಮೂಲರಹಸ್ಯಗಳನ್ನು ತಿಳಿದುಕೊಂಡರು.

* * *

ಅಲ್ಲಿಂದ ಮುಂದೆ ವೀರ, ಭೀಭತ್ಸ, ಶೃಂಗಾರ, ಶಾಂತರಸಗಳೇ ಮೈದೋರಿ ಹರಿವಂತೆ ಶರಾವತಿ ನದಿಯು ರಾಜ, ಅಬ್ಬರ, ಬಾಣ, ರಾಣಿ ಎಂಬ ನಾಲ್ಕು ವಾಹಿನಿಗಳ ರೂಪದಲ್ಲಿ ಕೆಳಗುರುಳುವಾಗಿನ ನಯನಮನೋಹರ ನಾಟ್ಯ ಸನ್ನಿವೇಶದಿಂದ ನಿರ್ವಾಣಸಿದ್ಧರ ಮನ ಪುಳಕಗೊಂಡಿತು.

ಸಾಹಸಪ್ರಿಯ ನಿರ್ವಾಣಸಿದ್ಧರು ತಮ್ಮ ಪ್ರವಾಸ ಕಾಲದಲ್ಲಿ ಲೆಕ್ಕವಿಲ್ಲದಷ್ಟು ಆಕರ್ಷಕ ನೆಲೆಗಳನ್ನು, ದಿವ್ಯ ಧಾರ್ಮಿಕ ಕ್ಷೇತ್ರಗಳನ್ನೂ ಸಂದರ್ಶಿಸಿ ಮುಂದೆ ಸಾಗುತ್ತಿದ್ದರು. ತಂಗಿದ ಸ್ಥಳಗಳಲ್ಲಿ ಭಕ್ತರು ತಾವಾಗಿ ಬಂದು ಸೇರುತ್ತಿದ್ದರು. ಪ್ರಾರ್ಥನೆ, ಭಜನೆ, ಪ್ರವಚನಗಳು ನಡೆಯುತ್ತಿದ್ದವು. ಆಯಾ ಸ್ಥಲದ ಭಕ್ತರೇ ಪ್ರಸಾದ ಪಾನೀಯಗಳಿಗೆ ವ್ಯವಸ್ಥೆ ಮಾಡುತ್ತಿದ್ದರು. ಜನ ತಮ್ಮ ದುಃಖ ದುಮ್ಮಾನಗಳನ್ನು ನಿರ್ವಾಣಸಿದ್ಧರಲ್ಲಿ ತೋಡಿಕೊಳ್ಳುತ್ತಿದ್ದರು. ಗ್ರಾಮ ಕಲಹದಿಂದ ಹಿಡಿದು ವ್ಯಕ್ತಿ ವಿರಸದವರೆಗೂ ಎಲ್ಲ ತರಹದ ಸಮಸ್ಯೆಗಳಿರುತ್ತಿದ್ದವು. ಅನುಭಾವಿಗಳೂ, ಸತ್ಯಪರರೂ, ದಯಾಭರಿತರೂ, ಸ್ವಯಂ ಸಿದ್ಧಪುರುಷರೂ ಆಗಿದ್ದ ಅವರು ಜನರ ತೊಂದರೆಗಳನ್ನು ಸಾವಧಾನದಿಂದ ಆಲಿಸಿ, ಸಲಹೆ ನೀಡುವುದರ ಮೂಲಕವೋ, ತಿಳುವಳಿಕೆ ಹೇಳುವುದರ ಮೂಲಕವೋ ಪರಿಹಾರ ಸೂಚಿಸುತ್ತಿದ್ದರು. ನೊಂದವರ ಮನಸ್ಸು ಸಮಾಧಾನ ಪಡೆಯುತ್ತಿತ್ತು. ಹೀಗೆ ನಿರ್ವಾಣಸಿದ್ಧರಿಗೆ ಜನಸಾಮಾನ್ಯರ ಜೀವನದ ಕಷ್ಟ ನಷ್ಟಗಳ, ನೋವು ನಲಿವುಗಳ ದುಃಖ ದುರಂತಗಳ ಅರಿವಾಗತೊಡಗಿತು.

* * *

ಕೃತಯುಗದಲ್ಲಿ ಕೌಮುದಿಯೆಂದು, ತ್ರೇತಾಯುಗದಲ್ಲಿ ಬೈಂದವಿಯೆಂದು, ದ್ವಾಪರದಲ್ಲಿ ಜಯಂತಿಯೆಂದು, ಈ ಕಲಿಯುಗದಲ್ಲಿ ಬನವಾಸಿಯೆಂದು ಶಾಸನಗಳಲ್ಲಿ ವರ್ಣಿಸಲ್ಪಟ್ಟಿರುವ ಅತಿ ಪ್ರಾಚೀನ ಸ್ಥಳಕ್ಕೆ ನಿರ್ವಾಣಸಿದ್ಧರ ಆಗಮನವಾಯಿತು. ಅಲ್ಲಿ ಮಧುಕೇಶ್ವರನ ದರ್ಶನ ಪಡೆದು ಅಲ್ಲಿಂದ ಮುಂದೆ ಹೊಸ ಹೊಸ ಸ್ಥಳಗಳ ಪ್ರಕೃತಿ ಸೌಂದರ್ಯ, ಐತಿಹಾಸಿಕ ನೆಲೆ, ಕಲಾವೈಭವಗಳನ್ನು ಕಾಣುತ್ತಾ, ನಾನಾ ಬಗೆಯ ಆಚಾರ ವಿಚಾರ ಸಂಸ್ಕೃತಿಗಳ ಪ್ರತ್ಯಕ್ಷ ಪರಿಚಯಿಸಿಕೊಳ್ಳುತ್ತ ಘಟ್ಟದ ಮೇಲಿನ

ಶಿರಸಿಗೆ ಬಂದರು. ಶಿರಸಿಯ ಶಾಂತವೀರಸ್ವಾಮಿ ಮಠದಲ್ಲಿ ನಿರ್ವಾಣಸಿದ್ಧರು ಕೆಲವು ದಿನಗಳವರೆಗೆ ವಾಸ್ತವ್ಯ ಮಾಡಿದರು. ಎಲ್ಲೆಡೆಯಿಂದಲೂ ಭಕ್ತಸ್ತೋಮ ಅಲ್ಲಿಗೆ ಬಂದು ಶ್ರೀಗುರುವಿನ ಕೃಪಾಶೀರ್ವಾದ ಪಡೆದುಕೊಂಡು ಹೋಗುತ್ತಿತ್ತು. ಪ್ರತಿದಿನ ಸಂಧ್ಯಾ ಸಮಯದಲ್ಲಿ ವಿಶ್ವ ಸಂಸ್ಕೃತಿಗೆ ಹೊಂದುವಂತಹ ನೀತಿ ಸೂತ್ರಗಳು, ವೀರಶೈವ ಧಾರ್ಮಿಕ ಸಾಹಿತ್ಯದಲ್ಲಿ ವಿಫುಲವಾಗಿ ದೊರೆಯುತ್ತವೆ ಎಂದು ನೀತಿಬೋಧೆ ಮಾಡುತ್ತಿದ್ದರು.

* * *

ಮಲೆನಾಡಿನ ಸೆರಗಿನಿಂದ ಬಯಲುನಾಡಿನ ಹೆಬ್ಬಾಗಿಲಿನಂತಿದ್ದ ಅಜ್ಜಂಪುರಕ್ಕೆ ನಿರ್ವಾಣಸ್ವಾಮಿಗಳು ಹೊರಟರು.

ಪುರಪ್ರವೇಶ ಮಾಡುತ್ತಿದ್ದಂತೆಯೇ ಅಲ್ಲಿ ನಿರಪರಾಧಿಯೊಬ್ಬನಿಗೆ ಆಗುತ್ತಿದ್ದ ಶಿಕ್ಷೆಯನ್ನು ತಪ್ಪಿಸಿದರು. ಸುದ್ದಿ ಊರಿಗೆಲ್ಲ ಹರಡಿತು. ಊರಿನ ಹಿರಿಯರೆಲ್ಲ ಶೆಟ್ಟರ ಮುಖಂಡತ್ವದಲ್ಲಿ ಬಂದು ದೀಪದ ಕುಡಿಯಂತೆ ಬೆಳಗುತ್ತಿದ್ದ ನಿರ್ವಾಣಸಿದ್ಧರ ಪಾದಗಳಿಗೆ ಪ್ರಣಾಮಗಳನ್ನು ಸಲ್ಲಿಸಿ- "ನಮ್ಮೂರಿನ ಹುಂಬರಿಂದಾದ ಅಪಚಾರಕ್ಕೆ ನಾವೆಲ್ಲ ಕ್ಷಮೆ ಕೋರುತ್ತೇವೆ. ಮಹಾಪರಾಧವಾಗಿದೆ. ಕ್ಷಮಿಸಬೇಕು ಸದ್ಗುರುವೆ" ಎಂದು ಬೇಡಿಕೊಂಡರು. ಶ್ರೀಗುರು ನಿರ್ವಾಣಸಿದ್ಧರು ಪ್ರಸನ್ನರಾದರು. ಅಜ್ಜಂಪುರ ಗ್ರಾಮದ ಮಧ್ಯಭಾಗದಲ್ಲಿರುವ ಬಸವೇಶ್ವರ ದೇವಸ್ಥಾನದಲ್ಲಿ ನಿರ್ವಾಣಸಿದ್ಧರು ಬಿಡಾರ ಹೂಡಿದರು.

ಅಂದು ಪೂಜೆ ಪ್ರಸಾದಗಳು ಮುಗಿದ ಕೂಡಲೇ ದೇವಸ್ಥಾನದ ಜಗುಲಿಯ ಮೇಲೆ ಉಪಸ್ಥಿತರಾದರು. ಅವರ ಉಪನ್ಯಾಸದಲ್ಲಿ ನಿಂತ ನೆಲದ ಸ್ಥಳದ ಮಹಿಮೆ ಮತ್ತು ಮಳೆಯಿಲ್ಲದೆ ಕಂಗಾಲಾಗಿರುವ ಅಲ್ಲಿನ ಪರಿಸ್ಥಿತಿಯನ್ನು ವಿವರಿಸುತ್ತಾ- "ಇಲ್ಲಿಗೆ ಸಮೀಪದಲ್ಲಿರುವ ಶಿವಯೋಗಿ ಸಿದ್ಧರಾಮೇಶ್ವರ ಜಾಗೃತ ಸ್ಥಳವೊಂದಿದೆ. ನಿಮಗೆ ಆ ಕ್ರಿಯಾಜ್ಞಾನಿ, ಸಮನ್ವಯ ಶಿವಯೋಗಿ ಸಿದ್ಧರಾಮೇಶ್ವರರ ಕೃಪೆಯಿದೆ. ಯಾವ ನಾಡಿಗೆ ಮಳೆಯಾಗದಿದ್ದರೂ, ಅವರ ಗದ್ದುಗೆಯ ಸುತ್ತ ಹದಿನೆಂಟು ಮಾಗಣಿ ವ್ಯಾಪ್ತಿಯಲ್ಲಿ ಕಾಲಕಾಲಕ್ಕೆ ಮಳೆ ಸುರಿದು ಸಮೃದ್ಧ ಬೆಳೆಯಾಗುತ್ತದೆ. ನೀವೇನೂ ಚಿಂತಿಸಬೇಡಿ" ಎಂದರು.

ಅಂದು ಅಜ್ಜಂಪುರದಲ್ಲಿ ಸೇರಿದ್ದ ಹದಿನೆಂಟು ಮಾಗಣೆಯ ಅಪಾರಸಂಖ್ಯೆಯ ಭಕ್ತರಿಗೆ ಹೊಸ ಅನುಭವವೊಂದು ಆಗತೊಡಗಿತು. ಸಿದ್ಧರಾಮೇಶ್ವರ ಸ್ವಾಮಿ ಹಣ್ಣೇಗುಡ್ಡದಿಂದ ಹೊರಟ ಕ್ಷಣದಿಂದಲೇ ಸ್ವಚ್ಛವಾಗಿದ್ದ ನೀಲಾಕಾಶದಲ್ಲಿ ಕಾರ್ಮೋಡಗಳ ನೆರೆದಾಟ ಪ್ರಾರಂಭವಾಯಿತು. ಶ್ರೀ ಸ್ವಾಮಿಯು ಅಜ್ಜಂಪುರವನ್ನು ಪ್ರವೇಶಿಸುವಷ್ಟರಲ್ಲಿ ಗುಡುಗು-ಮಿಂಚುಗಳ ಆರ್ಭಟ! ಜನಸಾಗರ ಸಿದ್ಧರಾಮೇಶ್ವರ ಸ್ವಾಮಿಗೆ ಸಾಷ್ಟಾಂಗ ಪ್ರಣಾಮ ಸಲ್ಲಿಸಿತು. ಎಲ್ಲೆಲ್ಲೂ ನಿಶ್ಶಬ್ಧ! ದಪ್ಪ ದಪ್ಪ ಮಳೆಯ ಹನಿಗಳು ಬೀಳತೊಡಗಿದವು!

ಜನಸ್ತೋಮ "ಹರ ಹರ ಮಹಾದೇವ!" ಎಂದು ಜಯಘೋಷ ಮಾಡಿತು. ಪಲ್ಲಕ್ಕಿಯ ಹಿಂದೆ ಜನ ಸಾಗರದ ತೆರೆಗಳಂತೆ ಓಡತೊಡಗಿದರು.

ಧೋ! ಧೋ! ಎಂದು ಮಳೆ ಸುರಿಯಿತು. ಅದುವರೆಗೆ ದಣಿದು, ಬಾಯಾರಿದ್ದ ನೆಲದ ಬಾಯಾರಿಕೆ ಇಂಗಿತು. ಪರ್ವತರಾಯನ ಕೆರೆ ತುಂಬಿ ಕೋಡಿ ಬಿದ್ದಿತು.

* * *

ಸಹ್ಯಾದ್ರಿಯ ಸಾಲಿನಲ್ಲಿ ಹುಟ್ಟುವ ವರತೆ ಗೌರಿಹಳ್ಳವೆಂದು ಕರೆಸಿಕೊಂಡು ಪೂರ್ವದಿಕ್ಕಿಗೆ ಹರಿಯುತ್ತಿತ್ತು. ಶಕುನಗಿರಿಯಲ್ಲಿ ನಿಂತು ಅಲ್ಲಿಂದ ನುಸುಳಿ, ಪೂರ್ವದಿಕ್ಕಿಗೆ ತಿರುಗಿ, 'ವೇದ' ಎನಿಸಿಕೊಂಡರೆ, ಇನ್ನೊಂದು ಗಿರಿಯಲ್ಲಿ ಹುಟ್ಟುವ 'ಆವತಿ' ಮೂಡಣದಿಕ್ಕಿಗೇ ಹರಿದು ಶಿವನಗಿರಿ, ಕೊಗರೆಖಾನ ಗಿರಿಗಳೆಂಬ ಬೆಟ್ಟಗಳ ನಡುವಿನಿಂದ ಹರಿದುಬಂದು 'ವೇದ'ವನ್ನು ಕೂಡಿಕೊಂಡು 'ವೇದಾವತಿ'ಯಾಗಿ ಮುಂದೆ ಸಾಗುತ್ತಾಳೆ.

ವೇದಾವತಿಯ ದಂಡೆಯುದ್ದಕ್ಕೂ ನಡೆದುಕೊಂಡು ಹೋದ ನಿರ್ವಾಣಸಿದ್ಧರು ಪುರದ ಮಲ್ಲಿಕಾರ್ಜುನ ಸ್ವಾಮಿಯ ಜಟಾಮುಕುಟದಲ್ಲಿ ದೇವಗಂಗೆಯಾಗಿ ವಿರಾಜಿಸುವುದನ್ನು ಕಂಡು- 'ವೇದಾವತಿ-ಪುಣ್ಯವತಿ' ಎಂದುಕೊಂಡರು. ಅವರು ಅಲ್ಲಿ ಸ್ವಲ್ಪಕಾಲ ವಿಶ್ರಾಂತಿ ಪಡೆದು ಪಶ್ಚಿಮದ ಕಡೆ ಮುಖಮಾಡಿ ಹೊರಟರು.

ಅವರ ದೃಷ್ಟಿ ತುರುವಿನಕಲ್ ಬೆಟ್ಟದಲ್ಲಿ ನೆಟ್ಟಿತ್ತು. ಕಡೂರಿನ ಪಕ್ಕದಲ್ಲೇ ಬೃಹತ್‌ಗಾತ್ರದ ಕಲ್ಲು ಬಂಡೆಗಳಿಂದ ಕೂಡಿದ ತುರುವಿನಕಲ್ ಬೆಟ್ಟ! ಅದರ ಸುತ್ತ ನೂರು ಎಕರೆಗಳಷ್ಟು ವಿಸ್ತಾರವಾದ ತಪ್ಪಲಿನಂತಹ ನೆಲ. ತಲೆಯೆತ್ತಿ ನೋಡಿದವರ ಕತ್ತು ನೋಯುವಷ್ಟು ಭಾರೀ ಎತ್ತರಕ್ಕಿದ್ದ ಬಂಡೆಗಳ ಸಂದಿ-ಗೊಂದಿಗಳಲ್ಲಿ ಬಿಲ್ವವೃಕ್ಷಗಳು!

ಒಮ್ಮೆ ಅಲ್ಲಿ ಅಡಗಿ ಕುಳಿತರೆ ಯಾರಿಗೂ ಪತ್ತೆಯಾಗದಂತಹ ಆಯಕಟ್ಟಿನ ಜಾಗಗಳು. ಹುಲಿ, ಚಿರತೆಗಳಿದ್ದ ತುರುವಿನಕಲ್ ಬೆಟ್ಟಕ್ಕೆ ಹುಣ್ಣಿಮೆಯ ಚಂದ್ರ ಬಂದಂತೆ, ಅಂಗಕ್ಕೆ ಲಿಂಗ ಬಂದಂತೆ, ಶಾಂತಚಿತ್ತ ಸಂಪನ್ನರಾದ ಯೋಗಿ ನಿರ್ವಾಣಸಿದ್ಧರ ಆಗಮನವಾಯಿತು. ಅವರಿಗೆ ತುರುವಿನಕಲ್ ಬೆಟ್ಟ ಯೋಗಸಾಧನೆಗೆ ಪ್ರಶಸ್ತವಾದ ಸ್ಥಳ ಎನಿಸಿತು.

ನಿರ್ವಾಣಸಿದ್ಧರು ತುರುವಿನಕಲ್ ಬೆಟ್ಟದಲ್ಲೇ ನಿರ್ಜನ ವನವಾಸಿಯಾಗಿ ಆ ನೀರವ ಪ್ರದೇಶದಲ್ಲಿ ನಿರ್ಮಲ ಮನವನ್ನಿಟ್ಟು, ಅದನ್ನೇ ತಮ್ಮ ಶಾಂತಿಸಾಧನಕ್ಷೇತ್ರವನ್ನಾಗಿಸಿಕೊಂಡರು.

ತುರುವಿನಕಲ್ ಬೆಟ್ಟದ ಸುತ್ತ ಹದಿನಾರು ಹಳ್ಳಿಗಳಿಂದ ದನಕರುಗಳು ಮೇಯಲು ಬರುತ್ತಿದ್ದವು. ನಿರ್ವಾಣ ಸಿದ್ಧರಿಗೆ ದನಗಾಹಿಗಳ ಪರಿಚಯವಾಯಿತು. ದಿನ ಕಳೆದಂತೆ ನಿರ್ವಾಣಸ್ವಾಮಿಗಳ ಮಾತಿನ ಮೋಡಿಗೆ ಅವರು ಪೂರ್ಣ ಆಕರ್ಷಿತರಾದರು. ಯಾವುದನ್ನು ತಿಳಿದರೆ ಮತ್ತೇನನ್ನೂ ತಿಳಿಯುವ ಬಯಕೆ ಉಂಟಾಗಲಾರದೋ ಅಂತಹ ಗಹನ ವಿಚಾರಗಳನ್ನು ನಿರ್ವಾಣಸಿದ್ಧರು ಅವರಿಗೆ ಅತ್ಯಂತ ಸರಳವಾದ ಮಾತುಗಳಲ್ಲಿ ತಿಳಿಸುತ್ತಿದ್ದರು.

ಕಾಲ ಉರುಳುತ್ತಲೇ ಇತ್ತು.

ಪೂರ್ಣ ಯೌವ್ವನಸ್ಥರಾಗಿದ್ದ ನಿರ್ವಾಣಸಿದ್ಧರಲ್ಲಿ ಆಗಲೇ ಅದ್ಭುತ ಯೋಗಸಿದ್ಧಿ ನೆಲೆಸಿತ್ತು. ಬಹಳಷ್ಟು ಪವಾಡಗಳನ್ನು ಮೆರೆದರು.

* * *

ಅದುವರೆಗೆ ತುರುವಿನಕಲ್ ಬೆಟ್ಟದ ಅನೇಕ ಸುದ್ದಿಗಳನ್ನು ಕಡೂರಿನ ಸರದಾರರು ಕೇಳಿದ್ದರು. ಅದರಲ್ಲಿ ಸಲೀಂ-ಫಾತಿಮಾ ಸತ್ತು ಬದುಕಿದ ಸುದ್ದಿಯೂ ಒಂದು. ತಾನೇ ಕೈಯ್ಯಾರ ವಿಷವಿಟ್ಟು ಕೊಂದರೂ ಸ್ವಾಮಿಯೊಬ್ಬನ ಮಂತ್ರಬಲದಿಂದ ಅವರು ಬದುಕಿ ಎಲ್ಲಿಗೋ ಹೋದರಂತೆ ಎಂಬ ಸುದ್ದಿ ಕೇಳಿ ಸರದಾರರಿಗೆ ಅವಮಾನವಾಗಿತ್ತು. ಈಗ ನೋಡಿದರೆ ಸ್ವಾಮಿಯು ಮುದುಕಿಯೊಬ್ಬಳಿಗೆ ಕೊಟ್ಟ ಚಿಂದಿಬಟ್ಟೆ ಪೀತಾಂಬರವಾಯಿತಂತೆ! ಏನಾದರಾಗಲಿ ಅದನ್ನು ಪರೀಕ್ಷಿಸಬೇಕು ಎಂದುಕೊಂಡ.

ಪರೀಕ್ಷಿಸಿ ಎಲ್ಲರ ಎದುರಿನಲ್ಲಿ ಸರದಾರ ಸೋಲನ್ನು ಕಂಡ. ನಿರ್ವಾಣಸ್ವಾಮಿಗಳು ಹಗಲಿರುಳು ಶಿವಯೋಗ ಸಾಮ್ರಾಜ್ಯ ಸಾರ್ವಭೌಮರಾಗಿರುತ್ತಿದ್ದರು. ಸ್ವಸ್ಥಚಿತ್ತರಾಗಿದ್ದ ಅವರು ತಮ್ಮಷ್ಟಕ್ಕೆ ತಾವಿದ್ದರೂ ಅನೇಕ ಸದ್ಭಕ್ತರು ಸನ್ನಿಧಿಯ ದರ್ಶನಕ್ಕಾಗಿ ಬರುತ್ತಲೇ ಇದ್ದರು.

ನಿರ್ವಾಣ ಸ್ವಾಮಿಗಳೂ ಅಷ್ಟೆ. ಶಿಷ್ಯರಲ್ಲಿರಬಹುದಾದ ಸದ್ಗುಣ, ದೈವಭಕ್ತಿ, ವೈರಾಗ್ಯ, ಶೀಲವನ್ನು ಗುರುತಿಸಿ ಅವರ ಧಾರ್ಮಿಕ ಸಂಸ್ಕಾರವನ್ನು ಕೆರಳಿಸುತ್ತಾ ಬಂದಿದ್ದರು.

* * *

ಒಮ್ಮೆ ಯೋಗಸಮಾಧಿಗಿಳಿದ ನಿರ್ವಾಣಸ್ವಾಮಿಗಳು ಬೆಳುದಿಂಗಳ ರಾತ್ರಿಯಲ್ಲಿ ಒಂಟಿಯಾಗಿ ನಡೆದುಬರುತ್ತಿದ್ದ ಸಹಜ ಪಂಚಾಚಾರ ಪ್ರಾಜ್ಞ, ಷಟ್‌ಸ್ಥಲ ಬ್ರಹ್ಮ, ಅಷ್ಟಾವರಣ ಸಂಪನ್ನ, ಅನುಪಮ ಚರಿತ, ಧ್ಯಾನಧಾರಣ ಯೋಗ- ತಪಸ್ವಿ, ತೇಜಸ್ವಿ ಶ್ರೀಗುರು ಮರುಳಸಿದ್ಧರನ್ನು ತಮ್ಮ ಅಂತರ್‌ದೃಷ್ಟಿಯಿಂದಲೇ ಅರಿತು ಫಕ್ಕನೆ ಕಣ್ ತೆರೆದರು.

ಅಂಗಕ್ಕೆ ಲಿಂಗ ಬಂದಂತೆ ಶ್ರೀಗುರು ಮರುಳಸಿದ್ಧರು ನಿರ್ವಾಣಸಿದ್ಧರನ್ನು ಸಮೀಪಿಸಿದರು. ಎರಡು ಮಹಾಚೇತನಗಳ ಮಹಾಸಂಗಮ! ಇಬ್ಬರೂ ಪವಾಡ ಪುರುಷರೇ!

"ಉಳುವಿಯಲ್ಲಿ ತಮ್ಮ ಭೇಟಿಯಾಗಿತ್ತು. ಪರಮಪಾವನೆ ವೇದಾವತಿ ಹರಿವೆಡೆಯಿಂದ ಪೂರ್ವದಿಕ್ಕಿಗಿರುವ ನಿಡುವಳ್ಳಿ ನನ್ನ ಪೂರ್ವಾಶ್ರಮ. ಮುಂದೆ ಕಡೂರಿನ ಸಮೀಪವೇ ಇರುವ ತುರುವಿನಕಲ್ ಬೆಟ್ಟದಲ್ಲಿ ಭೇಟಿಯಾಗುತ್ತೇನೆ ಎಂದಿದ್ದಿರಿ. ಅದರಂತೆ ಬಂದೂ ಬಿಟ್ಟಿರಿ. ಸಂತೋಷವಾಯಿತು. ಇತ್ತ ದಯಮಾಡಿಸಬೇಕು" ಎನ್ನುತ್ತಾ ನಿರ್ವಾಣಸಿದ್ಧರು ತಮ್ಮ ಕಲ್ಲಿನ ಗವಿಗೆ ಮರುಳಸಿದ್ಧರನ್ನು ಕೈಹಿಡಿದು ಕರೆದೊಯ್ದರು.

* * *

ಮರುಳಸಿದ್ಧರು ಕೆಲವು ಕಾಲ ನಿರ್ವಾಣಸ್ವಾಮಿಗಳ ಬಳಿಯಲ್ಲೇ ಇರಲು ನಿರ್ಧರಿಸಿದರು.

ನಿರ್ವಾಣಸ್ವಾಮಿಗಳ ಬಳಿ ಕೆಲವು ಉಪನಿಷತ್ತುಗಳು, ಪುರಾಣ, ಆಗಮಗಳು ಮೊದಲಾದ ಓಲೆಗರಿ ಕಟ್ಟುಗಳಿದ್ದವು. ಇಬ್ಬರೂ ತಮ್ಮ ತಮ್ಮ ನಿಲುವಿಗನುಗುಣವಾಗಿ ವಚನಗಳಿಗೆ ಅರ್ಥವನ್ನು ಪರಿಭಾವಿಸುತ್ತಿದ್ದರು.

ನಿರ್ವಾಣಸ್ವಾಮಿಗಳ ಎದುರಿನಲ್ಲಿ ಮರುಳಸಿದ್ಧರು ತಮ್ಮ ಯಾವ ಶ್ರೇಷ್ಠತೆಯನ್ನು ತೋರಗೊಡುತ್ತಿರಲಿಲ್ಲ. ಅವರ ಮೈ-ಮನ ಪಾದರಸದಂತೆ ಚುರುಕು. ಬ್ರಾಹ್ಮೀ ಮುಹೂರ್ತದಲ್ಲಿದ್ದು ನಿತ್ಯಕರ್ಮಗಳನ್ನು ಮುಗಿಸಿ, ಮಿಂದು ಮಡಿಯುಟ್ಟು ಒಪ್ಪುಣಸೆಗೆ ಹೋಗುತ್ತಿದ್ದರು. ತ್ರಿದಳ ಬಿಲ್ವಗಳನ್ನು ಸಂಗ್ರಹಿಸುವುದು, ಅಗ್ಗವಣಿ ತರುವುದು, ಶಿವಪೂಜೆಗೆ ಅಣಿಮಾಡುವುದರಲ್ಲಿ ತಾವಾಗಿ ಮುಂದಿರುತ್ತಿದ್ದರು.

ಕೆಲವು ಕಾಲ ಇದೇ ರೀತಿ ನಡೆಯಿತು.

ಒಮ್ಮೆ ಹೂ ತರಲು ಹೋಗಿದ್ದ ಮರುಳಸಿದ್ಧರು ಶಿವಪೂಜೆಯ ಹೊತ್ತು ಮೀರಿದರೂ ಬರಲಿಲ್ಲ. ನಿರ್ವಾಣಸಿದ್ಧರಿಗೆ ಆಶ್ಚರ್ಯವಾಯಿತು. ಕಾದು ನೋಡಿದರು. ಪ್ರಯೋಜನವಿಲ್ಲ. ಪೂಜೆಗೆ ಬೇಕಾದ ಬಿಲ್ವಪತ್ರೆ ಇಲ್ಲ, ಅಗ್ಗವಣಿ ಇಲ್ಲ. ಅದೇಕೋ ಒಂದು ಕ್ಷಣವೂ ಅಲ್ಲಿ ಕುಳಿತಿರಲಾಗದೇ ನಿರ್ವಾಣಸಿದ್ಧರು ಗವಿಯಿಂದ ಹೊರಗೆ ಬಂದರು.

ಪೂರ್ವದಲ್ಲಾಗಲೇ ಹೊಂಬಣ್ಣದ ಕಿರಣಗಳಿಂದ ಮುಗಿಲಿಗೆ ರಂಗೇರುತ್ತಿತ್ತು. ಒಪ್ಪುಣಸೆಯ ಬಿಲ್ವವನ ಪ್ರವೇಶಿಸುತ್ತಲೇ ಆ ಚೇತೋಹಾರಿ ದೃಶ್ಯ ಕಂಡು ಅವರ ಮನ ಪ್ರಶಾಂತವಾಯಿತು. ಶಿವಯೋಗ ಸಮಾಧಿಯಲ್ಲಿದ್ದ ಮಹಾಗುರು ಮರುಳಸಿದ್ಧರ ದರ್ಶನವಾಯಿತು.

ಅವರ ಸುತ್ತಲೂ ವ್ಯಾಪಿಸಿದ್ದ ಪ್ರಭಾಮಂಡಲವನ್ನು ಕಂಡು ಚಕಿತರಾದರು. ಅದುವರೆಗೆ ತಮ್ಮ ಬಳಿ ಇದ್ದ ಮರುಳಸಿದ್ಧರು ಯಾರೆಂಬುದನ್ನು ತಮ್ಮ ಅಂತರ್‌ದೃಷ್ಟಿಯಿಂದ ಅರಿತು ತಲೆದೂಗಿದರು. ಶ್ರೀಗುರು ಮರುಳಸಿದ್ಧರು ಶಿವಯೋಗ ಸಮಾಧಿಯಿಂದ ಬಹಿರ್ಮುಖರಾದರು.

ನಿರ್ವಾಣಸಿದ್ಧರಾಗಲೇ ಕೈ ಜೋಡಿಸಿ ನಿಂತಿದ್ದರು.

"ನೀವು ಯಾರೆಂದು ಅರಿತೆನಯ್ಯಾ, ನೀವು ನನಗಿಂತ ದೊಡ್ಡವರು. ನೀವು ನನ್ನ ಸೇವೆ ಮಾಡುವುದು ಸರಿಯೆ?" ವಿನಯದಿಂದ ಕೇಳಿದರು. ಈರ್ವರೂ ಪರಸ್ಪರ ನೋಡಿಕೊಂಡರು! ಇಬ್ಬರೂ ಫಕ್ಕನೆ ನಕ್ಕುಬಿಟ್ಟರು. ಒಬ್ಬರನ್ನೊಬ್ಬರು ಅಪ್ಪಿಕೊಂಡರು.

"ಅಂತೂ, ನೀವು ನನ್ನನ್ನು ಗುರುತಿಸಿಯೇ ಬಿಟ್ಟಿರಿ!" ಎಂದರು ಮರುಳಸಿದ್ಧರು.

"ಸೂರ್ಯನನ್ನು ಬಹಳ ಕಾಲ ಮುಚ್ಚಿಡಲು ಸಾಧ್ಯವಾದೀತೇ? ಗುರುವೆ!"

"ಅಂತೂ ನಾನು ನೀವಾಗಿ, ನೀವು ನಾನಾಗಿ ಉಭಯ ಭಿನ್ನವಳಿದು, ಒಂದು ಬೆಳಕು ಮತ್ತೊಂದು ಬೆಳಕನ್ನು ನೋಡಲು ಬಂದಂತಿದೆಯಲ್ಲವೆ ನಿರ್ವಾಣಸಿದ್ಧರೆ? ಪರವಸ್ತುವೊಂದೇ ಆಗಿದ್ದರೂ, ಜಗತ್ತಿನ ಲೀಲಾರ್ಥಕ್ಕಾಗಿ ಅನೇಕ ರೂಪ ತಳೆಯುವುದುಂಟು. ತೋರಿಕೆಗೆ ಹಾಗೆ ಕಂಡರೂ ಅಂತರಂಗದಲ್ಲಿ ಒಂದೇ ಎಂಬುದನ್ನು ಮರೆಯಬಾರದಲ್ಲಾ, ಅದಕ್ಕಾಗಿ ಭಕ್ತಿ-ದಾಸೋಹ ನಡೆಸಿ ಮುಮುಕ್ಷುಗಳಿಗೆ ಮಾರ್ಗದರ್ಶನ ಮಾಡಬೇಕಾಗಿದೆ. ಭಕ್ತೋದ್ಧಾರಕ ಕ್ರಿಯೆಯಲ್ಲಿ ನಾವಿಬ್ಬರೂ ಶ್ರಮಿಸೋಣ. ನಾನು ಇಲ್ಲಿಂದಲೇ ಮಾದಾಪುರ, ಪಂಚನಹಳ್ಳಿ, ನಿಡುವಳ್ಳಿ, ಹಿರಿಯಕಲ್ ಬೆಟ್ಟ, ದೊಡ್ಡ ಮೇಟೀ ಕುರ್ಕೆ, ಬೆಲಗೂರು, ಹುಳಿಯಾರು, ಕೆಂಕೆರೆಪುರ, ಶೆಟ್ಟಿಕೆರೆ, ಚಿಕ್ಕನಾಯಕನಹಳ್ಳಿ, ಕುಪ್ಪೂರುಗಳಲ್ಲಿನ ಭಕ್ತರನ್ನು ಸಂದರ್ಶಿಸಬೇಕಾಗಿದೆ. ಕೊನೆಗೆ...

ಅಷ್ಟಕ್ಕೇ ಮಾತು ನಿಂತಿದ್ದರಿಂದ-

"ಕೊನೆಗೆ?" ಪ್ರಶ್ನಿಸಿದರು ನಿರ್ವಾಣಸಿದ್ಧರು.

"ಈ ಕಾಯಕ್ಕೆ ಅಲ್ಲಿ ಅಂತ್ಯ!"

ಮರುಳಸಿದ್ಧರ ನಿರ್ಧಾರದ ಧ್ವನಿ ಕೇಳಿ ಆಶ್ಚರ್ಯದಿಂದ-

"ಇದೂ..."

"ಇದು ಸನ್ನಿಚ್ಛೆಯಲ್ಲ, ಮಲ್ಲಿಕಾರ್ಜುನನ ಆದೇಶ. ಒಂದೆಲೆ ತೊಟ್ಟು ಕಳಚಿದರೆ ಮರ ಬೋಳಾದೀತೆ?" ಎಂದರು-

ಹೆಚ್ಚಿನ ಚರ್ಚೆ ಅನಪೇಕ್ಷಣೀಯ ಎಂಬಂತೆ.

ಪರಿವ್ರಾಜಕ ದೀಕ್ಷೆ ಸ್ವೀಕರಿಸಿದ್ದ ಶ್ರೀಗುರು ಮರುಳಸಿದ್ಧರು ನಿರ್ವಾಣಸಿದ್ಧರಿಂದ ಬೀಳ್ಕೊಂಡು ತಮ್ಮ ಪಯಣವನ್ನು ಮುಂದುವರೆಸಿದರು.

* * *

"ಅಪ್ಪ, ಅಮ್ಮ ಲಿಂಗೈಕ್ಯರಾದ ಮೇಲೆ ಮುಳ್ಳಯ್ಯ, ಮುಪನಯ್ಯ, ಸೀತಾಳಯ್ಯರಿಗೆ ಜಗತ್ತೇ ಶೂನ್ಯ ಎನ್ನಿಸಿತ್ತು."

'ಬದುಕುವುದಾದರೂ ಏತಕ್ಕೆ?' ಎಂಬ ಪ್ರಶ್ನೆ ಕಾಡತೊಡಗಿತು. ಕುಳಿತಾಗ, ನಿಂತಾಗ, ಆರೋಗಣೆ ಮಾಡುತ್ತಿದ್ದಾಗ ಪ್ರೀತಿಯ ತಮ್ಮ ನಿರ್ವಾಣಯ್ಯನ ನೆನಪಾಗುತ್ತಿತ್ತು. ಏನಾದರಾಗಲಿ ತಾವು ನಿರ್ವಾಣಯ್ಯನಿರುವಲ್ಲಿಗೇ ಹೋಗಬೇಕು. ಆತನನ್ನು ಮತ್ತೆ ಉಳವಿಗೆ ಕರೆತರಬೇಕು. ಇದೇ ತಮ್ಮ ನಿರ್ಧಾರವೆಂದುಕೊಂಡು, ಒಡಹುಟ್ಟಿದವನನ್ನು ಹುಡುಕುತ್ತಾ ಹೊರಟೇಬಿಟ್ಟರು. ಆದರೆ ಎಲ್ಲೆಲ್ಲಿ ಹುಡುಕುವುದು? ಹುಲ್ಲಿನ ಬಣವೆಯಲ್ಲಿ ಸೂಜಿ ಹುಡುಕುವುದೆ? ಸೂತ್ರ ಹರಿದ ಪಟದಂತೆ ಎತ್ತೆತ್ತಲೋ ಪಯಣ. ಗೊತ್ತಿಲ್ಲ-ಗುರಿಯಿಲ್ಲ. ತಮ್ಮನು ಇರುವ ಜಾಗ ತಿಳಿದಿದ್ದರಲ್ಲವೆ ನಿಶ್ಚಿತ ದಾರಿ?

ಅವರು ಒಮ್ಮೆ ಅರಣ್ಯದಲ್ಲಿ ನಿದ್ರಿಸುತ್ತಿದ್ದಾಗ ವಿರೂಪಾಕ್ಷ ಸ್ವಾಮಿಗಳು ಅವರ ಸ್ವಪ್ನದಲ್ಲಿ ಕಾಣಿಸಿಕೊಂಡರು. ಅವರು ಮುಂದೆ ನಡೆಯಬೇಕಾದ ದಿಕ್ಕನ್ನು, ಗುರಿಯನ್ನು ತೋರಿ ಮಾಯವಾದರು. ಮೂವರಿಗೂ ಏಕಕಾಲದಲ್ಲಿ ಕಾಣಿಸಿಕೊಂಡಿದ್ದರು. ಒಣಕರಟವಾದ ಓಟೆ ತಟಕ್ಕನೇ ಚಿಗಿತು ಮಾಮರವಾದ ಇಂದ್ರಜಾಲದಂತಾಯಿತು. ಮೂವರೂ ತಮಗಾದ ಅನುಭವಗಳನ್ನು ಹಂಚಿಕೊಂಡರು.

* * *

ತುರುವಿನಕಲ್ ಬೆಟ್ಟವನ್ನು ಹತ್ತಿ ತಮ್ಮ ಗವಿಯ ಬಳಿ ಬಂದ ನಿರ್ವಾಣಸಿದ್ಧರಿಗೆ ಆಶ್ಚರ್ಯ ಕಾದಿತ್ತು. ತಮ್ಮ ಗವಿಯ ಮುಂದೆ ಬಂಡೆಯೊಂದರ ಮೇಲೆ ಕುಳಿತಿದ್ದ ಮೂರು ಪುರುಷಾಕೃತಿಗಳನ್ನು ಕಂಡು ಥಕ್ಕನೆ ನಿಂತುಬಿಟ್ಟರು.

ಆಶ್ಚರ್ಯ! ಗುರುತು ಸಿಕ್ಕಿತು. ಅವರು ಬೇರಾರೂ ಆಗಿರದೆ ತಮ್ಮ ಪೂರ್ವಾಶ್ರಮದಲ್ಲಿ ಅಣ್ಣಂದಿರಾಗಿದ್ದ ಮುಳ್ಳಯ್ಯ, ಮುಪನಯ್ಯ, ಸೀತಾಳಯ್ಯರೇ ಆಗಿದ್ದರು.

ಅಣ್ಣಂದಿರನ್ನು ಕಾಣುತ್ತಲೇ ತಾನು ಯಾರಿಗೂ ಹೇಳದೇ ಉಳವಿಬಿಟ್ಟು ಬಂದ ತಪ್ಪಿನ ಅರಿವಾಯಿತು. ನಿರ್ವಾಣಯ್ಯನನ್ನು ಗುರುತಿಸಿದ ಅಣ್ಣಂದಿರು ಸಂಭ್ರಮಾಶ್ಚರ್ಯದಿಂದ ಎದ್ದುನಿಂತರು.

ಎಲ್ಲೆಲ್ಲೊ ಸುತ್ತಿ ಸೋತು ಸಾಕಾಗಿ ನಿರಾಶೆಯ ನಿಟ್ಟುಸಿರು ಬಿಡುತ್ತಾ ಬಂದು ನಿಂತಿದ್ದ ಅಣ್ಣಂದಿರನ್ನು ವಾತ್ಸಲ್ಯದಿಂದ ಮಾತನಾಡಿಸಿದರು. ಭಾವ ಬತ್ತಿದ ಮುಖ ಹೊತ್ತು ನಿಂತಿದ್ದ ಸಹೋದರರು ತಮ್ಮ ಕಣ್ಣುಗಳನ್ನು ತಾವೇ ನಂಬದವರಂತಾದರು.

ನಿಸ್ತೇಜವಾಗಿದ್ದ ಅವರ ಕಣ್ಣುಗಳಲ್ಲಿ ಚೈತನ್ಯದ ಮಿಂಚು ಹರಿದಾಡಿತು. ತಮ್ಮನನ್ನು ಪ್ರೀತಿಯಿಂದ ತಬ್ಬಿಕೊಂಡರು. ಮಮಕಾರದ ಸೆಲೆಯುಕ್ಕಿ ಕಣ್ಣೀರಿಟ್ಟರು. ನಿರ್ವಾಣಸಿದ್ಧರು ನಿರ್ವಿಕಾರ ಮನಸ್ಸಿನಿಂದ ಒಮ್ಮೆ ಕಣ್ಮುಚ್ಚಿ ಏನನ್ನೋ ನಿಗ್ರಹಿಸಿಕೊಳ್ಳುತ್ತಾ- “ಅಯ್ಯ ಹೇಗಿದ್ದಾರೆ?” ಎಂದಷ್ಟೇ ಕೇಳಿಬಿಟ್ಟರು. ಅಣ್ಣಂದಿರ ಪ್ರತಿಕ್ರಿಯೆಗಳು ಕಿವಿ ತಲುಪಿದವಾದರೂ ಪರಿಣಾಮ ಸೊನ್ನೆಯಾಯಿತು.

‘ಬನ್ನಿ’ ಎಂಬಂತೆ ಕೈಸನ್ನೆ ಮಾಡಿ ಗವಿಯನ್ನು ಪ್ರವೇಶಿಸಿದಾಗ, ಸಹೋದರರು ನಿರ್ವಾಣಸಿದ್ಧರನ್ನು ಹಿಂಬಾಲಿಸಿದರು.

ನಿರ್ವಾಣಸಿದ್ಧರ ಲಿಂಗಾರ್ಚನೆ, ಶಿವಯೋಗ ಚಿಂತನೆ, ಧ್ಯಾನ ಮೊದಲಾದುವನ್ನು ಗಮನಿಸುತ್ತಾ ಬಂದಿದ್ದರಿಂದ ಅವರಿಗೂ ಶಿವಯೋಗದ ಒಲವು ಮೂಡಿತು. ತಮ್ಮನೆಂಬ ಲೌಕಿಕಭಾವ ತೊರೆದು ನಿಜವಾದ ಗುರುವೆಂದು ನಂಬಿ, ತಮಗೂ ಶಿವದೀಕ್ಷೆ ಕೊಡುವಂತೆ ಕೇಳಿಕೊಂಡರು. ಅವರ ಮನ ಪಕ್ವವಾಗಿದೆಯೆಂದು ಅರಿತ ನಿರ್ವಾಣಸಿದ್ಧರು ಅಣ್ಣಂದಿರಿಗೆ ಕಾರುಣ್ಯಪೂರ್ಣ ದೀಕ್ಷೆ ನೀಡಿದರು.

ಒಂದು ದಿನ “ಅಣ್ಣಂದಿರೇ! ಇಲ್ಲಿಗೆ ಸುಮಾರು ಹತ್ತು ಹರಿದಾರಿ ದೂರದಲ್ಲಿ ಪವಿತ್ರ ಸಹ್ಯಾದ್ರಿ ಶ್ರೇಣಿ ಸಿಗುತ್ತದೆ. ಪೂರ್ವ-ಪಶ್ಚಿಮವಾಗಿ ಹಬ್ಬಿನಿಂತ ಚಂದ್ರದ್ರೋಣ ಪರ್ವತ ಅದು. ಅಲ್ಲಿನ ಅನೇಕ ಗವಿಗಳು, ಗುಹೆಗಳು, ಪ್ರಕೃತಿ ನಿರ್ಮಿತ ವೈಚಿತ್ರ್ಯಗಳು. ಸಹ್ಯಾದ್ರಿಯ ದಟ್ಟ ಕಾನನದ ನಡುವೆ ದಿಟ್ಟತನದಿಂದ ನಿಂತಿರುವ ಬೃಹದಾಕಾರದ ಆ ಪರ್ವತ ಶಿಖರ ಅತ್ಯಂತ ಮನೋಹರ. ಅಲ್ಲೇ ತುಂಗಾ, ಭದ್ರಾ, ಹೇಮಾವತಿ, ನೇತ್ರಾವತಿ, ವೇದಾವತಿ, ಯಗಚಿ ಮುಂತಾದ ಜೀವನದಿಗಳು ಹುಟ್ಟುತ್ತವೆ. ಅದು ಧ್ಯಾನಶೀಲ ಮುಮುಕ್ಷುಗಳಿಗೆ ಆಧ್ಯಾತ್ಮಿಕ ವೇದಿಕೆ. ಅದೊಂದು ನಿಬಿಡಾರಣ್ಯ, ನಿರ್ಜನ ಪ್ರದೇಶ. ಮಾನವ ಸಂಚಾರಕ್ಕೆ ಎಡೆಯೇ ಇಲ್ಲದ ಆ ಸ್ಥಳ ಮೃಣ್ಮಯತೆಯಿಂದ ಚಿನ್ಮಯತೆಯ ಕಡೆ ಕೊಂಡೊಯ್ಯುವ ಸಾಧನವಾಗುತ್ತದೆ. ಅಲ್ಲಿ ದೊರೆಯುವ ಕಂದಮೂಲ ಫಲಗಳನ್ನೇ ಶಿವಪ್ರಸಾದವೆಂದು ಭುಂಜಿಸುತ್ತಾ ಅಲ್ಲಿದ್ದು ಜಪ ತಪ ನೇಮ ನಿಷ್ಠೆಗಳನ್ನು

ಆಚರಿಸುತ್ತಾ ಇದ್ದುಬಿಡಿ. ಕೆಲವು ಕಾಲ ಇಲ್ಲಿದ್ದು, ತಪ್ಪದೇ ಸಹ್ಯಾದ್ರಿ ತಪ್ಪಲಿಗೆ ಬರುತ್ತೇನೆ. ನಿಮ್ಮನ್ನು ಸೇರುತ್ತೇನೆ. ಮಂಗಳವಾಗಲಿ" ಎಂದು ನಿರ್ವಾಣಸಿದ್ಧರು ಗುರುಸ್ಥಾನದಲ್ಲಿದ್ದು ಅಣ್ಣಂದಿರಿಗೆ "ಗುರಿ" ತೋರಿದರು.

ಅಣ್ಣಂದಿರು ಸಹ್ಯಾದ್ರಿಯ ಕಡೆ ಹೊರಟರು.

* * *

ಅಂದು ಮಹಾಶಿವರಾತ್ರಿ. ಗವಿಯ ಹೊರಗಡೆ ಸಂಭ್ರಮ, ರಾತ್ರಿಯೆಲ್ಲ ಹಗಲಿದ್ದಂತೆ. ಅಲ್ಲಿಗೆ ಬಂದಿದ್ದ ಭಕ್ತರೆಲ್ಲರೂ ಸ್ವಾಮಿಗಳಿಂದ ಆಶೀರ್ವಾದ ರೂಪದಲ್ಲಿ ಹಣ್ಣು ಹಂಪಲು ಪಡೆದುಕೊಂಡರು.

ನಿರ್ವಾಣಸ್ವಾಮಿಗಳಲ್ಲಿ ಅಪಾರ ಶ್ರದ್ಧೆ, ಭಕ್ತಿ ಉಳ್ಳವರಾಗಿದ್ದ ಶಿಷ್ಯ ಸಮೂಹ ಹರ್ಷಚಿತ್ತದಿಂದ ತಮ್ಮ ತಮ್ಮ ಊರುಗಳಿಗೆ ಚದುರಿ ಹೋದರು. ನಿರ್ಜನವಾಯ್ತು ಪ್ರದೇಶ.

ಕಡೂರಿನಿಂದ ಬಂದ ಸಿಪಾಯಿಗಳಿಬ್ಬರು ನಿರ್ವಾಣಸ್ವಾಮಿಯವರನ್ನು ಸಮೀಪಿಸಿ- "ಸರ್ದಾರ್ಜಿಯವರು ನಿಮ್ಮನ್ನು ಕರೆಯುತ್ತಿದ್ದಾರೆ ಬನ್ನಿ" ಎಂದು ನಿರ್ವಾಣಸ್ವಾಮಿಗಳನ್ನು ಕರೆದುಕೊಂಡು ಹೋದರು.

* * *

ಸರದಾರರು ವಿಶಾಲವಾದ ಕೋಣೆಗೆ ಪ್ರವೇಶಿಸುತ್ತಲೇ ಅವರಿಗಾಗಿ ಕಾಯುತ್ತ ಕುಳಿತಿದ್ದ ಪ್ರಮುಖರೆಲ್ಲ ಎದ್ದು ಸಲಾಂ ಮಾಡಿ ಕುಳಿತುಕೊಂಡರು.

ಸಿಪಾಯಿಗಳಿಬ್ಬರು ನಿರ್ವಾಣಸ್ವಾಮಿಗಳನ್ನು ಕರೆತಂದು ಅವರ ಅಕ್ಕಪಕ್ಕದಲ್ಲಿ ನಿಂತು ವಂದಿಸಿದರು. ಸರದಾರರು ಎತ್ತರದ ಪೀಠದಲ್ಲಿ ಕುಳಿತಿದ್ದರು. ಸ್ವಾಮಿಗಳು ತಲೆಬಾಗಲಿಲ್ಲ, ನಮಸ್ಕರಿಸಲಿಲ್ಲ, ಸರದಾರರ ಅಭಿಮಾನಕ್ಕೆ ಛಡಿಯೇಟು ಕೊಟ್ಟಂತಾಯಿತು. ಗಾಜಿನ ಲೋಟಕ್ಕೆ ಸೇವಕಿ ಸುರಿದುಕೊಟ್ಟ ಮದಿರೆಯನ್ನು ಪೂರ್ತಿ ಕುಡಿದು ಮೇಜಿನ ಮೇಲೆ ಕುಕ್ಕಿ ತಮ್ಮ ಅಸಮಾಧಾನ ಪ್ರದರ್ಶಿಸಿಕೊಂಡರು. ಸಿಪಾಯಿಗಳು ಥರಗುಟ್ಟುತ್ತಾ ತಾವು ತುರುವಿನಕಲ್ ಗುಡ್ಡಕ್ಕೆ ಹೋಗಿ ಸ್ವಾಮಿಯನ್ನು ಕರೆತಂದಿರುವುದಾಗಿ "ಈತನೇ ಆ ಸ್ವಾಮಿ" ಎಂದರು.

"ಸರದಾರರೇ, ನಾನೊಬ್ಬ ಸನ್ಯಾಸಿ ಎಂದು ಮೊದಲೇ ಈ ಸಿಪಾಯಿಗಳಲ್ಲಿ ಹೇಳಿಕೊಂಡೆ. ನಮ್ಮನ್ನು ಕರೆತರುವಂತೆ ಇವರಿಗೆ ಆಜ್ಞಾಪಿಸಿದ್ದರಂತೆ. ಕಾರಣ ಕೇಳಬಹುದೆ?"

ಅವರಾಡಿದ ಮಾತಿನಲ್ಲಿ ವಿನಯವಿದ್ದರೂ, ಅದರ ಹಿಂದಿದ್ದ ಗಂಡೆದೆಯನ್ನು, ಧೀರಗಂಭೀರ ಧ್ವನಿಯನ್ನು ಗಮನಿಸಿ ಕ್ಷಣ ಕಾಲ ಸರದಾರರಿಗೆ ಏನೂ ತೋಚದಂತಾಯಿತು. ಸ್ವಾಮಿಗಳು ಮೊದಲೇ ಆಜಾನುಬಾಹು, ಬಂಗಾರದ ಮೈಕಾಂತಿ, ಹಣೆಯಲ್ಲಿ ತ್ರಿಪುಂಡ್ರ ಭಸ್ಮ, ಕೊರಳಲ್ಲಿ ಲಿಂಗ, ರುದ್ರಾಕ್ಷಿಧಾರಣ, ಕಾವಿವಸ್ತ್ರಧಾರಿ, ಇದಕ್ಕೆಲ್ಲಾ ಶೋಭೆ ನೀಡುವಂತಿದ್ದ ಶಾಂತ ಮುಖಾರವಿಂದ. ನೋಡಿದವರೆಲ್ಲರಿಗೆ ಭಕ್ತಿಭಾವ ಮೂಡಿಸುವಂತಿದ್ದವು. ಒಮ್ಮೆ ನೋಡಿದರೆ ಮತ್ತೆ ಮತ್ತೆ ಅವರನ್ನು ನೋಡಬೇಕೆನ್ನಿಸುವಂತಿತ್ತು. ಸರದಾರರ ಅಹಂ ಹೆಡೆಯೆತ್ತಿತ್ತು.

"ಯಾರು ನೀವು? ತುರುವಿನಕಲ್ ಪಹಾಡ್‌ನಲ್ಲಿ ಯಾಕಿದ್ದೀರಿ? ಕಳ್ಳರ ಗುಂಪು ಇಟ್ಕೊಂಡಿ ಕಳ್ಳನ ಮಾಡಿಸ್ತೀರಂತೆ? ಅಂಗಂತ ಜನಗೋಳ ನಮ್ಗೆ ದೂರು ಕೊಟ್ಟಿದ್ದಾರೆ, ಇದ್ಕೆ ಏನಂತೀರಿ?"

"ಏನಂದಿರಿ? ನಾವು ಕಳ್ಳತನ ಮಾಡಿಸ್ತೀವಾ?" ಎನ್ನುತ್ತಲೇ ನಕ್ಕ ಸ್ವಾಮಿಗಳು- "ಇದೆಲ್ಲಾ ಸುಳ್ಳು, ಕಟ್ಟುಕಥೆ ಅಂತ ಮಾತ್ರ ಹೇಳಬಲ್ಲೆವು."

"ಏನು? ನಾವು ನಿಮ್ಗೆ ಬೇಕಂತ ಸುಳ್ಳು ಹೇಳ್ತೀವಾ? ಕಬರ್‌ದಾರ್, ಯಾರ ಎದುರ್ನಲ್ಲಿ ಮಾತಾಡ್ತಿದ್ದೀರಿ ಗೊತ್ತಾ? ಹಳ್ಳಿಗಳಿಂದ ಜನ ಯಾಕೆ ನಿಮ್ಮ ಹತ್ರ ಬರ್ತಿದ್ದಾರೆ?"

"ಒಬ್ಬ ಗುರುವಿನ ಹತ್ತಿರ ಶಿಷ್ಯರು ಯಾತಕ್ಕಾಗಿ ಹೋಗ್ತಾರೆ ಎನ್ನುವುದು ನಿಮಗೆ ತಿಳಿದಿಲ್ಲವೆ?"

"ಅಚ್ಛಾ! ನಮಗೇನೂ ಅದು ತಿಳಿಯಾಕಿಲ್ಲ. ನಿಮ್ಗೆ ಮಾತ್ರ ಕನ್ನ ಹಾಕ್ಸೋದು, ಕಳ್ತನ ಮಾಡ್ಸೋದು ಗೊತ್ತು ಅಲ್ವ?"

"ಏನೆಂದಿರಿ?... ಕಳ್ಳತನವೇ?... ಏನು ಹಾಗಂದ್ರೆ?"

ಸರದಾರರು ಸ್ವಾಮಿಗಳನ್ನೇ ಹುರಿದು ಮುಕ್ಕುವಂತೆ ನೋಡಿ ಚಪ್ಪಾಳೆ ತಟ್ಟಿ ಸದ್ದು ಮಾಡಿದರು. ಪಕ್ಕದ ಕೋಣೆಯಿಂದ ಗಂಗಜ್ಜಿಯನ್ನು, ರುದ್ರಶೆಟ್ಟಿಯನ್ನು ಸಿಪಾಯಿಗಳು ಕರೆತಂದರು. ಸ್ವಾಮಿಗಳನ್ನು ಕಾಣುತ್ತಲೇ ಗಂಗಜ್ಜಿಗೆ ದುಃಖ ಉಮ್ಮಳಿಸಿ ಬಂತು. ಓಡಿಬಂದವಳೇ ಪೀತಾಂಬರವನ್ನು ಸ್ವಾಮಿಗಳ ಪಾದದ ಬಳಿ ಇಟ್ಟು- "ಬುದ್ಧಿ! ನನ್ನ ಕ್ಷಮ್ಸಿ, ನೀವೇ ಕೊಟ್ಟ ಕಾವಿ ಚಿಂದಿ, ನಾನು ಮನೆಗೆ ಬರುವಷ್ಟರಲ್ಲಿ ಪೀತಾಂಬ್ರ ಆಗಿತ್ತು. ಇದನ್ನು ಈ ರುದ್ರಪ್ಪಶೆಟ್ಟಿ ಮನೆಯಿಂದ ಕದಿದ್ದೀನಂತೆ. ಅಂಗಂತ ರುದ್ರಪ್ಪಶೆಟ್ಟಿ ಈ ದೊರೆಗೆ ದೂರು ಕೊಟ್ಟವ್ನೆ ನನ್ನಪ್ಪ, ಗುರುವೆ! ನೀವೇ ಈ ಆಪತ್ನಿಂದ ಕಾಪಾಡ್ಬೇಕು" ಎಂದು ಹೇಳಿ ಅಜ್ಜಿ ಬೋರಾಡಿ ಅಳತೊಡಗಿದಳು.

ನಿರ್ವಾಣಸ್ವಾಮಿಗಳಿಗೆ ಎಲ್ಲವೂ ಅರ್ಥವಾಗಿ ಹೋಯಿತು, ಮರುಕಪಟ್ಟರು, ಸಂತೈಸಲು ಯತ್ನಿಸಿದರು.

"ನೀವು ಕೊಟ್ಟಿದ್ದು ಚಿಂದೀದು ಬಟ್ಟೆ, ಪೀತಾಂಬ್ರ ಆಯ್ತು ಅಂತಾಳೆ ಈ ಬುಡ್ಡಿ, ನಂಬಬೋದಾ ಸ್ವಾಮಿ?" ಎಂದ ವ್ಯಂಗ್ಯಭರಿತ ಸ್ವರದಲ್ಲಿ ಸರದಾರ.

"ಯಾಕೆ ನಂಬಬಾರದು?" ಅಷ್ಟೇ ಸಮಾಧಾನವಾಗಿ ಅಲಗಿನಂತೆ ಹರಿತವಾದ ಧ್ವನಿಯಲ್ಲಿ ಉತ್ತರ ಕೊಟ್ಟರು.

"ಆಂ?.....!?"

ಆಶ್ಚರ್ಯದಿಂದ ಸರದಾರರು ಹುಬ್ಬೇರಿಸಿದರು.

"ಆಸುರೀ ಶಕ್ತಿಗಳು ಎದುರಾದಾಗ ಪವಾಡ ಸದೃಶ್ಯ ಘಟನೆಗಳು ಅನಿವಾರ್ಯ."

"ಅಚ್ಚಾ! ಅಚ್ಚಾ! ಅಂಗಿದ್ಮೇಲೆ ಈ ಪೀತಾಂಬ್ರವ ಮತ್ತೆ ಮೊದಲ್ನಂಗೆ ಚಿಂದೀದು ಕಾವಿಬಟ್ಟೆ ಮಾಡ್ರಿ ನೋಡುವ?" ಎಂದು ಸವಾಲು ಹಾಕಿ ಸ್ವಾಮಿಗಳ ಮುಖವನ್ನೇ ಅದೊಂದು ರೀತಿ ನೋಡುತ್ತಾ ವ್ಯಂಗ್ಯದ ನಗೆ ನಕ್ಕ ಸರದಾರ.

ಸ್ವಾಮಿಗಳು ಸ್ವಲ್ಪ ಹೊತ್ತು ಮೌನವಾಗಿದ್ದರು. ಅಲ್ಲಿ ನೆರೆದಿದ್ದ ಪುರಪ್ರಮುಖರೆಲ್ಲ ಭಯಾಶ್ಚರ್ಯದಿಂದ ನೋಡುತ್ತಿದ್ದರು. ಸ್ವಾಮಿಗಳು ನಿಂತೇ ಇದ್ದರು.

ಸ್ವಾಮಿಗಳ ಬಣ್ಣ ಬಯಲಾಯಿತೆಂದುಕೊಂಡು ಸರದಾರ ಉಪ್ಪರಿಗೆ ಹಾರಿ ಹೋಗುವಂತೆ ವಿಕಟಾಟ್ಟಹಾಸದ ನಗೆ ನಕ್ಕ. ಆತನ ನಗೆ ತಾರಕಕ್ಕೇರುತ್ತಾ ಹೋದಂತೆ ಅಲ್ಲಿದ್ದ ಅವನ ಅನುಯಾಯಿಗಳಿಗೂ ನಗು ಬಂತು, ಗೊಳ್ಳೆಂದು ನಕ್ಕು ಬಿಟ್ಟರು. ಅದುವರೆಗೆ ಕಪ್ಪೆ ನುಂಗಿದ ಹಾವುಗಳಂತೆ ಮುಖಮಾಡಿ ನಿಂತಿದ್ದ ಸಿಪಾಯಿಗಳೂ ಫಕಫಕನೆ ನಕ್ಕು ನಗುವಿಗೆ ನಗು ಬೆರೆಸಿದರು.

ಕ್ರೋಧದ ಮದ್ದಿಗೆ ಕಿಡಿ ಇಟ್ಟಂತೆ ನಗುತ್ತಲೇ ಇದ್ದರು. ಎಲ್ಲರೂ ನಗುತ್ತಿರುವಾಗಲೇ ನಿರ್ವಾಣಸ್ವಾಮಿಗಳ ನರನಾಡಿಗಳಲ್ಲಿ ಮಿಂಚೊಂದು ಹರಿದಾಡಿತು.

ಉಗ್ರರೂಪ ತಾಳಿದ ಸ್ವಾಮಿಗಳು ಒಮ್ಮೆ ಕಣ್ಮುಚ್ಚಿದರು. ಆವೇಶದಿಂದ ಫಕ್ಕನೆ ಕಣ್ತೆರೆದು ಕಾಲಿನ ಬಳಿ ಬಿದ್ದಿದ್ದ ಪೀತಾಂಬರವನ್ನು ಬೆತ್ತದಿಂದೆತ್ತಿ ಮೇಲೆ ಚಿಮ್ಮಿದರು!

ಮೇಲೆ ಹಾರಿದ ಪೀತಾಂಬರ ಭರಭರನೆ ತಿರುಗುತ್ತಾ ಬಂದು ನೆಲಕ್ಕೆ ಬಿದ್ದಾಗ ಅದು ಅಂದು ತಾವು ಗಂಗಜ್ಜಿಗೆ ತಮ್ಮ ಪಾವುಡದಿಂದ ಹರಿದುಕೊಟ್ಟಿದ್ದ ಚಿಂದಿಯೇ ಆಗಿತ್ತು.

ಅಷ್ಟೇ!

ಅಲ್ಲಿ ನೆರೆದಿದ್ದವರೆಲ್ಲಾ ಬೆಚ್ಚಿಬಿದ್ದರು.

ಸುರಾಪಾನದಿಂದ ಕಣ್ಣು ಕೆಂಪೇರಿಸಿಕೊಂಡಿದ್ದ ಸರದಾರ ಸರ್ಪ ತುಳಿದವನಂತೆ ಫಕ್ಕನೆ ಎದ್ದುನಿಂತ.

ಸ್ವಾಮಿಗಳ ಉಗ್ರರೂಪ ಕಂಡು ಬೆದರಿದ.

"ಯಾ... ಅಲ್ಲಾಹ್!" ಎಂದು ಗೊಣಗಿಕೊಂಡ.

* * *

ಅಂದು ಪಾನಮತ್ತರಾಗಿದ್ದ ಸರದಾರರು ಸುಖಭೋಜನ ಮಾಡಿ ತಮ್ಮ ಪತ್ನಿಯೊಂದಿಗೆ ಏಕಾಂತದಲ್ಲಿದ್ದಾಗ ಪೀತಾಂಬರವೊಂದು ಕಾಪಿಚಿಂದಿಯಾದ ವಿಚಿತ್ರ ನೆನಪಾಯಿತು. ಅದನ್ನೇ ಪತ್ನಿಗೆ ಹೇಳಿದರು.

"ಇಂಥಾ ಚಮತ್ಕಾರಗಳನ್ನು ಹೊಟ್ಟೆಪಾಡಿಗಾಗಿ ಬೀದಿಯಲ್ಲಿ ಅಲೆಯುವ ಜಾದುಗಾರರು ಕೂಡ ತೋರಿಸಬಲ್ಲರು."

ಕೊಂಕುನುಡಿಯನ್ನು ನುಡಿದ ಆಕೆ ಕಿಸಕ್ಕನೆ ನಕ್ಕುಬಿಟ್ಟಳು. ಸರದಾರರು ಸ್ವಾಭಿಮಾನ ಬುಸುಗುಟ್ಟಿತು. ಕಾಲ ಬಂದಾಗ ಮತ್ತೆ ಪರೀಕ್ಷಿಸಬೇಕೆಂದುಕೊಂಡರು.

* * *

"ಏಯ್ ಸಾಮಿ... ಆಪ್ ಮಂತರ್ ತಂತರ್ ಜಾನ್‌ವಾಲೆ ಕನೇಕ ಮಾಲುಮ್ ಹೋತಾ ಹೈ. ನಮ್ದು ಘೋಡ ಕ ಪೇಟ್ ಮೆ ಕೈಸ ಬಚ್ಚ್ ಐತೆ ಹೇಳ್ತೀರಾ?" ಎಂದು ಪ್ರಶ್ನಿಸಿದರು ಸರದಾರರು.

"ಸರದಾರರೇ! ಈ ನಿಮ್ಮ ಕುದುರೆಯ ಹೊಟ್ಟೆಯಲ್ಲಿರುವುದು ಅಣಬೆಗಾಲು, ಹಣೆ ಚುಕ್ಕಿ, ಹೂಬಾಲವುಳ್ಳ ಹೆಣ್ಣುಮರಿ...!" ಎಂದರು.

ಆ ಧೀರ ಗಂಭೀರ ವಾಣಿಗೆ ಸರದಾರರು ಕ್ಷಣಕಾಲ ದಂಗಾದರು.

"ಈ ಕೂಡಲೆ ಇದರ ಹೊಟ್ಟೆ ಬಗೆದು ಮರಿಯನ್ನು ಹೊರಗೆ ತೆಗೆಯಿರಿ" ಎಂದು ತನ್ನ ಪರಿವಾರದವರಿಗೆ ಆಜ್ಞಾಪಿಸಿದರು. ಸರದಾರರನ್ನು ಹೊತ್ತು ಬಂದಿದ್ದ ಗಂಡು ಕುದುರೆಯು ಹೆಣ್ಣು ಕುದುರೆಗಾದ ದುರ್ಗತಿಗೆ ಕಣ್ಣೀರಿಟ್ಟಿತು. ಸಂಕಟ ತಡೆಯಲಾರದೆ ಒಂದೆರಡು ಹೆಜ್ಜೆ ಹಿಂದೆ ಸರಿಯಿತು. ಆಳುಮಕ್ಕಳು ನಿರ್ದಯದಿಂದ ಕುದುರೆ ಹೊಟ್ಟೆ ಸೀಳಿದರು. ಮುದ್ದಾದ ಮರಿಯನ್ನು ಹೊರತೆಗೆದರು.

ಸ್ವಾಮಿಗಳು ಹೇಳಿದ್ದ ಎಲ್ಲಾ ಲಕ್ಷಣಗಳೂ ಇನ್ನೂ ಕಣ್‌ಬಿಟ್ಟಿರದ ಆ ಎಳೆಯ ಮರಿಯಲ್ಲಿ ಇದ್ದುದನ್ನು ಗಮನಿಸಿದ ಸರದಾರರ ನೆತ್ತರು ಹೆಪ್ಪುಗಟ್ಟಿದಂತಾಯಿತು.

ಸ್ವತಃ ನಿರ್ವಾಣಸಿದ್ಧರೇ ಕರುಣೆಯಿಂದ ಕುದುರೆ ಮರಿಯನ್ನು ಹೊಟ್ಟೆಯಲ್ಲಿಟ್ಟು ಹೋಳುಮಾಡಿದ್ದನ್ನು ಜೋಡಿಸಿ, ಬೆತ್ತದಿಂದ ಮುಟ್ಟಿ ಬೆನ್ನು ತಟ್ಟಿದರು. ಕುದುರೆ ಚಂಗನೆ ಏನೂ ನಡೆದಿಲ್ಲವೆಂಬಂತೆ ನಿಂತಿತು.

ಶಿವಯೋಗಿ ಹರ್ಷಚಿತ್ತನಾದ!

ಶ್ರೀಗುರು ನಿರ್ವಾಣಸ್ವಾಮಿಗಳ ಈ ಪ್ರಸಂಗದಿಂದಾಗಿ ಅವರ ಖ್ಯಾತಿ ಇನ್ನಷ್ಟು ಹೆಚ್ಚಿತು.

* * *

ಅದುವರೆಗೆ ಸರದಾರರು ಒಡ್ಡಿದ್ದ ಎರಡು ಪರೀಕ್ಷೆಗಳಲ್ಲಿ ನಿರ್ವಾಣ ಸ್ವಾಮಿಗಳು ಗೆದ್ದಿದ್ದರು. ಆದರೂ ಸರದಾರರು ಪಾಠ ಕಲಿತಿರಲಿಲ್ಲ. ಅದೊಂದು ಬಗೆಯ ಮನರಂಜನೆ ಎಂದುಕೊಂಡ.

"ಸ್ವಾಮಿಯನ್ನು ಎತ್ತಿಗೆ ಬದಲು ಕಲ್ಲಿನ ಗಾಣಕ್ಕೆ ಕಟ್ಟಿ ಎಣ್ಣೆ ತೆಗೆಯಿರಿ" ಎಂದ.

ಎಷ್ಟೋ ದಿನಗಳಿಂದ ಚಲಿಸದೆ ನಿಂತಿದ್ದ ಕಲ್ಲಿನ ಗಾಣ, ಎಳ್ಳನ್ನು ಸುರಿದು ಎತ್ತಿಗೆ ಬದಲು ಸ್ವಾಮಿಯನ್ನು ಹೂಡಿದರು. ಮುಂದೆ ಚಲಿಸುವಂತೆ ಚಾಟಿಯಿಂದ ಹೊಡೆದರು.

ಇದ್ದಕ್ಕಿದ್ದಂತೆ ಕಾರ್ಮೋಡ ಕವಿಯಿತು. ಮುಗಿಲಿನ ಅಂಚು ಮಿಂಚಿತು! ಗಾಣ ತಿರುಗುವ ವೇಗ ಹೆಚ್ಚಿತು. ಪ್ರಳಯ ಕಾಲದ ಬಿರುಗಾಳಿ ಪ್ರಕೃತಿಯನ್ನೆ ಅಲ್ಲೋಲ ಕಲ್ಲೋಲ ಮಾಡಿತು. ಎಲ್ಲರ ಎದೆಗಳು ಡವಗುಟ್ಟ ತೊಡಗಿದವು.

ಭಯಂಕರ ಸದ್ದಿನೊಂದಿಗೆ ಗಾಣದಿಂದ ಬೇರ್ಪಟ್ಟ ಕೊಂತ ಪಡುವಣ ದಿಕ್ಕಿನತ್ತ ತೂರಿಹೋಗಿ ಬುಕ್ಕರಾಯನ ಕೆರೆಯಲ್ಲಿ ಬಿದ್ದುಹೋಯಿತು. ಕ್ಷಣಾರ್ಧದಲ್ಲಿ ನಡೆದುಹೋದ ಈ ಅತ್ಯದ್ಭುತ ಘಟನೆಗೆ ಸರದಾರದಾದಿಯಾಗಿ ಎಲ್ಲರೂ ಬೆಚ್ಚಿಬಿದ್ದರು.

ತಾನು ಸೋಲುತ್ತಿದ್ದೇನೆಂದು ಒಳದನಿ ಹೇಳುತ್ತಲೇ ಮತ್ತೆ ದರ್ಪದಿಂದ ಸೆಟೆದುನಿಂತ ಸರದಾರ. ಅಂಗರಕ್ಷಕರನ್ನು ಕರೆದು ಅವರ ಕಿವಿಯಲ್ಲೇನೋ ಹೇಳಿದ.

ಅಂಗರಕ್ಷಕರು ಸ್ವಾಮಿಯನ್ನು ಹಿಡಿದು ಹೆಡೆಮುರಿ ಕಟ್ಟಿ, ಚೀಲಕ್ಕೆ ತುರುಕಿ, ಮೂಟೆಕಟ್ಟಿ ಬಿಸಿಹೊಗೆ ಕಾರುತ್ತಿದ್ದ ಸುಣ್ಣದ ಗೂಡಿಗೆ ಹಾಕಿದರು.

ತಮ್ಮೆದುರಿನಲ್ಲೇ ನಡೆಯುತ್ತಿದ್ದ ಕ್ರೌರ್ಯವನ್ನು ತಡೆಯಲಾರದೆ ಜನಸಾಗರ 'ಶಿವಶಿವಾ' ಎಂದು ಮರುಗಿತು; ಕಣ್ಣೀರಿಟ್ಟಿತು.

ಸಿದ್ಧಪುರುಷನಿಗಾದ ಅನ್ಯಾಯಕ್ಕೆ ಬೆದರಿದಳು ದಿನಲಕ್ಷ್ಮಿ. ಅಷ್ಟರಲ್ಲಿ ಸರದಾರ ಕಣ್ಣು ಕಿರಿದು ಮಾಡಿ ನೋಡಿದ. ಬಂಗಾರದಂಥಾ ಮೈಬಣ್ಣದ ತೇಜಸ್ವಿ ನಿರ್ವಾಣಸ್ವಾಮಿಗಳು ಪಶ್ಚಿಮಾಭಿಮುಖವಾಗಿ ನಡೆದು ಹೋಗುತ್ತಿರುವುದು ಕಾಣಿಸಿತು. ಅವರಿಗೆ ಯಾವ ಕೇಡೂ ಆಗಿರಲಿಲ್ಲ.

* * *

ಭಯಂಕರ ಉರಿಬಿಸಿಲು.

ಸ್ವಾಮಿಗಳ ಮೈಮನಸ್ಸುಗಳೆರಡೂ ದಣಿದಿದ್ದವು.

ಕುರಿ ಕಾಯುತ್ತಿದ್ದ ಕುರುಬಗೌಡರು ದೌಡಾಯಿಸಿ ಬಂದರು. ಮರದ ನೆರಳಿನಲ್ಲಿ ಕರಿಯ ಕಂಬಳಿ ಹಾಸಿ, ಅದರ ಮೇಲೆ ಸ್ವಾಮಿಗಳನ್ನು ಕೂರಿಸಿ ಮೃದುವಾಗಿ ಕೈಕಾಲು ಹಿಚುಕಿ ಆಯಾಸ ಪರಿಹರಿಸಲು ನೆರವಾದರು. ಕುಂಭದ ತುಂಬಾ ಕುರಿ ಹಾಲು ತಂದು ಸ್ವೀಕರಿಸಬೇಕೆಂದು ಬಿನ್ನವಿಸಿಕೊಂಡರು.

ತಿಳಿಮನಸ್ಸಿನ ಭಕ್ತರ ಉಪಚಾರಕ್ಕೆ ನಿರ್ವಾಣಸ್ವಾಮಿಗಳು ನೀರಿಗೆ ಬಿದ್ದ ಸಕ್ಕರೆ ಬೊಂಬೆಯಂತೆ ಕರಗಿಹೋದರು.

ಸಾಕಾಗುವಷ್ಟು ಹಾಲು ಕುಡಿದು ತೃಪ್ತಿಯ ತೇಗು ತೇಗಿದರು.

ಬಹಳ ಹೊತ್ತು ಶೂನ್ಯವನ್ನು ದೃಷ್ಟಿಸುತ್ತಿದ್ದ ಶ್ರೀಗಳವರು ಇದ್ದಕ್ಕಿದ್ದಂತೆ ಭಕ್ತರನ್ನುದ್ದೇಶಿಸಿ- "ಕುಂಕಾನಾಡಿಂದ ಕೊಂಕನಕಲ್ಲು ಗಡಿಕಟ್ಟೆ ಮೂರು ವರ್ಷಕ್ಕೊಂದು ಬೆಳೆ, ಮಳೆ, ಹೊಲದಲ್ಲಿ ಹಸುರು; ಮನೆಯಲ್ಲಿ ಬಡತನ. ಹಾಲುಮತದವರು ಹಾಲುಕ್ಕಿದಂತೆ ಉಕ್ಕಲಿ" ಎಂದುಬಿಟ್ಟರು.

ಮಹಾತ್ಮರ ಬದುಕಿನಲ್ಲಿ ಲೌಕಿಕ ಘಟನೆಗಳ ಜೊತೆಯಲ್ಲೇ ಅಲೌಕಿಕ ಘಟನೆಗಳೂ ಕೂಡಿಬರುವುದುಂಟು. ಸಂದಿಗ್ಧ ಪರಿಸ್ಥಿತಿಯಲ್ಲಿ ಅವರ ಮಾತು ಮಂತ್ರವಾಗುತ್ತದೆ, ಕೃತಿಗಳು ಘನವಾಗುತ್ತವೆ.

ಮತ್ತೆ ಏನನ್ನೊ ಯೋಚಿಸಿದ ಸರದಾರರು ಸ್ವಾಮಿಗಳತ್ತ ಹೋಗಲು ಒಂದು ಹೆಜ್ಜೆ ಮುಂದಿಟ್ಟರು.

ಅಷ್ಟೇ!

ಸುಂದರ ಸ್ತ್ರೀಯೊಬ್ಬಳ ಕೈ ಅಡ್ಡಬಂತು.

"ಬೇಡ. ಅವರನ್ನು ಮತ್ತೆ ಮತ್ತೆ ಪರೀಕ್ಷಿಸುವುದು ಬೇಡ. ಅವರು ಮಹಾತಪಸ್ವಿಗಳು" ಎಂದಳು ಸರದಾರರ ಮಡದಿ.

"ಹೌದು, ಆ ಯೋಗಿಪುರುಷನನ್ನು ಇನ್ನಷ್ಟು ಪರೀಕ್ಷಿಸಲು ಹೊರಟರೆ ಅಲ್ಲಾಹನು ಎಂದೂ ನಿಮ್ಮನ್ನು ಕ್ಷಮಿಸಲಾರ. ಆತನ ದರ್ಬಾರಿನಲ್ಲಿ ಅಪರಾಧಿಗಳಾಗಿ ನಿಲ್ಲಬೇಕಾಗುತ್ತದೆ" ಎಂದು ತಿಳಿಹೇಳಿದರು.

* * *

ಶ್ರೀಗುರು ನಿರ್ವಾಣಸ್ವಾಮಿಗಳು ಮೂರು ಹರಿದಾರಿಯಷ್ಟು ಹಾದಿ ನಡೆದು ಒತ್ತೊತ್ತಾಗಿ ಬೆಳೆದ ಹಲಸು, ಮಾವಿನ ತೋಪು ದಾಟಿ ಸಖರಾಯಪಟ್ಟಣ ಗಡಿ ಪ್ರವೇಶಿಸಿದರು.

ಸಹ್ಯಾದ್ರಿ ಸಮೀಪ ಸಣ್ಣ ದೊಡ್ಡ ಗುಡ್ಡಗಳನ್ನೆಲ್ಲ ತೋರಣಕಟ್ಟಿ, ವಿಶಾಲವಾದ ಜಲಾನಯನ ಪ್ರದೇಶದ ಸದ್ಬಳಕೆಗಾಗಿ ಭಾರಿ ಕೆರೆಯೊಂದರ ನಿರ್ಮಾಣವಾಗಿತ್ತು. ಒಮ್ಮೆ ಕೋಡಿ ಒಡೆದಿತ್ತು. ಆಮೇಲೆ ಒಡೆದ ಕೋಡಿಯನ್ನು ಎಷ್ಟು ಸಲ ಕಟ್ಟಿದರೂ ನಿಲ್ಲಲಿಲ್ಲ. ಅದೇ ಚಿಂತೆಯಲ್ಲಿ ದೊರೆಗಳು ಕಂಗಾಲಾಗಿದ್ದರು.

"ನಿಮ್ಮ ಚಿಂತೆಯ ಕಾರಣ ನಮಗೆ ತಿಳಿದಿದೆ. ಮನುಷ್ಯನಿಗೆ ಆಯಸ್ಸಿದ್ದಂತೆ ಕೆರೆಕಟ್ಟೆ ಕಟ್ಟಡಗಳಿಗೂ ಆಯಸ್ಸು ಎಂಬುದಿರುತ್ತೆ. ಅದು ನಿಯಮ. ನಿಮ್ಮ ಕೆರೆಯ ಕೋಡಿಯ ಬಳಿ ಚಿಕ್ಕ ದೋಷವಿದೆ. ಅದನ್ನು ಸರಿಪಡಿಸಿದರೆ ಎಲ್ಲವೂ ಸರಿಹೋಗುತ್ತದೆ. ಅಗೋಚರ ಸಮಸ್ಯೆಗಿಂತ ನಿಂತ ನೆಲದ ಸಮಸ್ಯೆಯನ್ನು ಮೊದಲು ಗಮನಿಸಬೇಕು. ಅದಕ್ಕಾಗಿ ಕಾಯುವುದು ಬೇಡ. ಈಗಿಂದೀಗಲೆ ಕೆರೆಯ ದುರಸ್ತಿ ನಡೆಯುತ್ತಿರುವ ಕೆರೆಯ ಬಳಿ ಹೋಗೋಣ" ಎಂದು ಎದ್ದು ಹೊರಟರು.

ಶ್ರೀಗಳವರು ಕೆರೆಯ ಏರಿಯನ್ನು ಹತ್ತಿ ನಿಂತರು. ಅವರ ದೃಷ್ಟಿ ಒಂದು ಆಯಕಟ್ಟಿನ ಭಾಗದಲ್ಲಿ ನಿಂತಿತು. ಅಲ್ಲಿಗೆ ಇಳಿದುಹೋಗಿ ಪದ್ಮಾಸನದಲ್ಲಿ ಕುಳಿತರು.

ತಲೆ ಮೇಲೆತ್ತಿ ದಡದಲ್ಲಿದ್ದವರನ್ನು ಉದ್ದೇಶಿಸಿ- "ಈ ಕ್ಷಣದಿಂದ ನಿಮ್ಮ ಕಲ್ಲು, ಮಣ್ಣು, ಕೆಸರು ಎಲ್ಲವೂ ನಮ್ಮ ಮೇಲೆ ಬೀಳಲಿ. ಎಲ್ಲರೂ ಪಂಚಾಕ್ಷರಿ ಮಂತ್ರವನ್ನು ಪಠಿಸುತ್ತಾ ನಿರ್ಭಯವಾಗಿ ಮುಚ್ಚಿಬಿಡಿ" ಎಂದಾಗ ನಿಂತ ನೆಲವೇ ಕಂಪಿಸಿದಂತಾಯಿತು.

"ಶಿ...ವೋ...ಹಂ..."

ಇನ್ನು ಚರ್ಚೆ ಅನಾವಶ್ಯಕ ಎಂಬಂತೆ ಶ್ರೀಗಳ ಅಂತಿಮ ಆಜ್ಞೆಯಾಯಿತು. ಹತ್ತಾರು ನಗಾರಿ, ಭೇರಿ ನಿನಾದ ವಿಜೃಂಭಿಸಿತು.

ಮೊರೆ ಕ್ಷಣಕಾಲ ಯೋಚಿಸಿ 'ಶ್ರೀಗುರುವಿನಾಜ್ಞೆ' ಎಂದುಕೊಂಡು ಶಿವನಾಮ ಜಪಿಸುತ್ತ ಮೊದಲಿಗೆ ತಾವೇ ಒಂದು ಮಂಕರಿ ಮಣ್ಣನ್ನು ಮೇಲಿನಿಂದ ಸ್ವಾಮಿಗಳ ಮೇಲೆ ಸುರಿದರು. ಕೂಲಿ ಆಳುಗಳು, ಭಕ್ತರು, ಅವರಿವರೆನ್ನದೆ ಎಲ್ಲರೂ ಬಿಡುವಿಲ್ಲದ ಕಾರ್ಯದಲ್ಲಿ ಮಗ್ನರಾದರು.

ಕೋಡಿಯನ್ನು ಭದ್ರಪಡಿಸುವ ಕಾರ್ಯ ಮುಗಿಯಿತು. ಮರದ ಹಾವುಗೆಗಳನ್ನು ಮೆಟ್ಟಿಕೊಂಡಿದ್ದ ಮಂತ್ರವಿದ್ಯೆಯ ಪರಮಗುರು, ತೇಜಸ್ವಿ ಶ್ರೀಗುರು ನಿರ್ವಾಣಸ್ವಾಮಿಗಳು ಬರಿಬರಿ ಬಿಟ್ಟಿದ್ದ ಕೆರೆಯಂಗಳವನ್ನು ನೊರನೊರ ತುಳಿಯುತ್ತ ಮಹತ್‌ಶಿಖರ ಭವ್ಯಗಿರಿಯತ್ತ ಹೊರಟಿದ್ದನ್ನು ಕಂಡ ಎಲ್ಲರೂ ಭಕ್ತಿಯಿಂದ ಶಿರಬಾಗಿ ವಂದಿಸಿದರು.

ಪರಮ ಸಂತುಷ್ಟನಾದ ರಾಜ ಪುರಪ್ರಮುಖರ ಸಮ್ಮುಖದಲ್ಲಿ ಆ ಕೆರೆಗೆ ಶ್ರೀಗುರು ನಿರ್ವಾಣಯ್ಯನವರನ್ನು ಸ್ಮರಿಸಿ 'ಅಯ್ಯನಕೆರೆ' ಎಂಬ ಪುಣ್ಯನಾಮವನ್ನು ಪ್ರದಾನ ಮಾಡಿದರು.

* * *

ವಿಶ್ರಾಂತಿಯಿಲ್ಲದೆ ಸಾಗುತ್ತಿದ್ದ ನಿರ್ವಾಣಸ್ವಾಮಿಗಳ ಪಾದಗಳು ಚಂದ್ರದ್ರೋಣ ಪರ್ವತದ ತಪ್ಪಲಿನ ಕೈಮರದ ಬಳಿ ನಿಂತುಬಿಟ್ಟವು.

ಸೀತಾಳ ಮಲ್ಲಿಕಾರ್ಜುನ ಸ್ವಾಮಿಯ ಪೀಠವಿರುವುದನ್ನು ಗಮನಿಸಿದ ಅವರು ಕೆಲ ಕಾಲ ಅಲ್ಲಿಯೇ ಇರತೊಡಗಿದರು.

ದೂರದ ಭಕ್ತರ ಮೊರೆ ಕೇಳಿಸಿತೆಂಬಂತೆ ನಿರ್ವಾಣಸ್ವಾಮಿಗಳು ರಾಂಪುರದ ಕಡೆ ಹೊರಟರು. ಅಲ್ಲಿ ಕೆಲವು ಕಾಲ ಗ್ರಾಮೀಣರ ಬದುಕಿನಲ್ಲಿ ಒಂದಾಗಿ ಅನೇಕ ಮಹಿಮೆಗಳನ್ನು ಮೆರೆದರು. ಒಂದೇ ಕಡೆ ನೆಲೆ ನಿಲ್ಲಲಾರದ ಸ್ವಾಮಿಗಳು ಚಿಕ್ಕನಾಯ್ಕನಹಳ್ಳಿಗೆ ಬಂದು ಅಲ್ಲಿನ ಭಕ್ತರಿಗೆ ಮಾರ್ಗದರ್ಶಕರಾದರು.

ಪರಮ ವೈರಾಗ್ಯಮೂರ್ತಿಗಳಾದ ನಿರ್ವಾಣಸ್ವಾಮಿಗಳು ಅಲ್ಲಿಂದಲೂ ಹೊರಟು ಕನಕಪುರ ಊರಿನ ಉತ್ತರದ ಹೆಬ್ಬಾಗಿಲಿನಿಂದ ಪೂರ್ವಾಭಿಮುಖವಾಗಿ ನಡೆದುಬಂದು ಅರ್ಕಾವತಿ ನದಿಯ ದಂಡೆಯ ಮೇಲೆ ನಿಂತರು. ಅಲ್ಲಿನ ಹಸಿರು, ಪಕ್ಷಿಗಳ ಕಲರವ, ಧಾನ್ಯಶ್ರೀಯನ್ನು ಕಂಡು ಹರ್ಷಿತರಾದರು. ತಮ್ಮ ಉಳಿದ ಆಯಸ್ಸನ್ನು ಅಲ್ಲಿಯೇ ಕಳೆಯಲು ನಿರ್ಧರಿಸಿದರು.

ಕಾಲ ಉರುಳಿದಂತೆಲ್ಲ ನಿರ್ವಾಣಸ್ವಾಮಿಗಳವರ ಮಹಿಮೆಗೆ ಸಂಬಂಧಪಟ್ಟ ಅನೇಕ ಘಟನೆಗಳು ನಡೆದುಹೋದವು. ಮಹಾಮಹಿಮರಾದ ಅವರು ೧೨೦ ವರ್ಷಗಳ ಕಾಲ ಬಾಳಿ ಲಿಂಗೈಕ್ಯರಾದರೆಂಬುದು ಪ್ರತೀತಿ. ಅವರೇ ಆದಿ ನಿರ್ವಾಣಸ್ವಾಮಿಗಳು. ಅವರ ಮೂಲ ಗದ್ದುಗೆ ಇರುವ ಮಠವೇ ದೇಗುಲಮಠ. ಈ ದೇಗುಲಮಠ ಇಂದಿಗೂ ಜಾಗ್ರತ ಸ್ಥಳ ಎನಿಸಿದೆ.

■■

ಶ್ರೀ ದೇಗುಲ ಮಠಾಧ್ಯಕ್ಷರಾದ

ಪೂಜ್ಯ ಶ್ರೀಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳು

✍ ಟಿ.ಆರ್. ಮಹಾದೇವಯ್ಯ

ಲೋಕದಂತೆ ಬಾರರು, ಲೋಕದಂತೆ ಇರರು
ಲೋಕದಂತೆ ಹೋಗರು ನೋಡಯ್ಯ.
ಪುಣ್ಯದಂತೆ ಬಪ್ಪರು, ಜ್ಞಾನದಂತೆ ಇಪ್ಪರು
ಮುಕ್ತಿಯಂತೆ ಹೋಹರು ನೋಡಯ್ಯ.
ಉರಿಲಿಂಗದೇವಾ, ನಿಮ್ಮ ಶರಣರು
ಉಪಮಾತೀತರಾಗಿ ಉಪಮಿಸಬಾರದು.

ಶಿವಯೋಗಿ ಉರಿಲಿಂಗದೇವನ ಈ ನುಡಿ ದೊಡ್ಡವರ ಜೀವನ-ಸಾಧನೆಗಳನ್ನು ಕುರಿತು ಬರೆಯಬೇಕೆನ್ನುವವರಿಗೆ ಎಚ್ಚರಿಕೆ ಗಂಟೆಯಂತಿದೆ. ಮಹಾಸಾಧಕರಾದ ಮಹಾನುಭಾವಿಗಳ ವ್ಯಕ್ತಿತ್ವ ತಿಳಿಯಬೇಕೆಂಬ ಮನಸ್ಸಿಗೆ, ವ್ಯಕ್ತಗೊಳಿಸಲು ಮಾತಿಗೆ ನಿಲುಕದ್ದು, ಅದು ಉಪಮೆಗೆ ಅತೀತವಾದದ್ದು; ಶಬ್ದಗಳಲ್ಲಿ ಹಿಡಿದಿಡಲಾಗದ್ದು. ಅವರದು ಲೋಕಜೀವನಕ್ಕಿಂತ ಭಿನ್ನವಾದ ರೀತಿ. ಸ್ವಾರ್ಥ ಲವಲೇಶವಿಲ್ಲದ ಅವರ ಬದುಕು ಸಮಷ್ಟಿಯ ಹಿತಸಾಧನೆಗಾಗಿ ಸಮರ್ಪಣಗೊಂಡದ್ದು. ಲೋಕಹಿತ ಚಿಂತನೆ, ತದನುಸಾರವಾದ ಸತ್ಕ್ರಿಯೆಗಳ ಸಾಮರಸ್ಯದ ಬದುಕು ಅವರದು. ಅವರು ಪುಣ್ಯದ, ಜ್ಞಾನದ, ಮೋಕ್ಷದ ಪ್ರತೀಕ. ಇಂಥ ಆದರ್ಶದ ಬದುಕನ್ನು ನಡೆಸುತ್ತ ಲೋಕಸಂಗ್ರಹ ಮಾಡುವ ಮಹಾತ್ಮರ ಜೀವನವನ್ನು ತಿಳಿಯಲೇಬೇಕು. ಅವರು ಆಚರಿಸಿ ತೋರಿಸಿದ ದಾರಿಯಲ್ಲಿ ಸಾಗಲು ಪ್ರಯತ್ನಿಸಬೇಕು. ಅಂತೆಯೇ ಪ್ರಯತ್ನಪೂರ್ವಕವಾಗಿಯಾದರೂ ಅಂಥವರ ಜೀವನದ ಅನುಕರಣೀಯವಾದ ಬೆಳಕಿನ ಹೆಜ್ಜೆಗಳನ್ನು ಗುರುತಿಸಬೇಕು ಮತ್ತು ಮಾತಿನಲ್ಲಿ ಹಿಡಿದಿಡುವ ಕೆಲಸವನ್ನು ಮಾಡಲೇಬೇಕು. ಇದು ಅವರನ್ನು ಹೊಗಳಲು ಅಲ್ಲ, ನಮ್ಮ ಒಳಗ ಬೆಳಗಿಸಿಕೊಳ್ಳಲು! ಅಂಥ ಒಂದು ನಮ್ರ ಪ್ರಯತ್ನ ಇಲ್ಲಿದೆ.

ವ್ಯಕ್ತಿಚಿತ್ರ

ಎತ್ತರವಾದ ನಿಲವು, ತುಂಬುದೇಹ, ಎಣ್ಣೆಗೆಂಪು ಬಣ್ಣ, ಕಾವಿಯ ಕಫಿನಿ, ಮುಂಡಾಸಿನ ಪ್ರಭೆ. ಮುಖದಲ್ಲಿ ಸ್ನಿಗ್ಧವೂ, ಶಿಶುಸಹಜ ಮುಗ್ಧವೂ ಆದ ಮಂದಹಾಸ, ಮೃದುನುಡಿಗಳಿಂದ ಕೂಡಿದ ಸ್ನೇಹಮಯ ನಡವಳಿಕೆಯುಳ್ಳ, ಅರವತ್ತರ ಹರಯದ ಒಂದು ಧೀರ, ಗಂಭೀರ ವ್ಯಕ್ತಿತ್ವವನ್ನು ನಾವು ರೂಪಿಸಿಕೊಳ್ಳಬಲ್ಲೆವಾದರೆ ಅದು ಶ್ರೀದೇಗುಲಮಠದ ಇಂದಿನ ಅಧ್ಯಕ್ಷರಾದ **ಪೂಜ್ಯ ಶ್ರೀಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮಿ**ಗಳಾಗಿರುತ್ತಾರೆ. ಅವರ ಮುಖಮಂಡಲದಿಂದ ಸೂಸುವ ಸಾತ್ವಿಕ ಕಳೆ, ಕಣ್ಣುಗಳಿಂದ ಹೊಮ್ಮುವ ಪ್ರಶಾಂತತೆಗಳನ್ನು ನೋಡಿದರೆ ಸಾಕು, ನಾಸ್ತಿಕನ ಹೃದಯದಲ್ಲೂ ಭಕ್ತಿಭಾವ ಪುಟಿಯುತ್ತದೆ! ಹಮ್ಮುಬಿಮ್ಮುಗಳಿಲ್ಲದ ಅವರ ನಿರಾಡಂಬರ ವ್ಯಕ್ತಿತ್ವ ಎಲ್ಲರಲ್ಲೂ ಆತ್ಮೀಯ ಭಾವವನ್ನು ಮೂಡಿಸುತ್ತದೆ. ಸದಾ ಹಸನ್ಮುಖದಿಂದ ಅವರು ಬರಮಾಡಿಕೊಳ್ಳುವ ರೀತಿ ಆಗುಂತಕರನ್ನು ಪುಳಕಿತಗೊಳಿಸುತ್ತದೆ. ಪೂಜ್ಯರು ತಮ್ಮ ಸಹಜ ನಡವಳಿಕೆಯಿಂದ ಸ್ವಾಮಿಗಳ ಸಮುದಾಯದಲ್ಲಿ ವಿಶಿಷ್ಟವಾಗಿ ಕಾಣುತ್ತಾರೆ. ಅವರ ಆಶಯಗಳು, ಅವನ್ನು ಕೃತಿಯಲ್ಲಿ ತರಲು ಮಾಡುವ ಕ್ರಿಯಾಚರಣೆಗಳು ಅವರ ಸಕಲ ಜೀವರಿಗೆ ಲೇಸ ಬಯಸುವ ಗುಣದ ಪ್ರತೀಕವಾಗಿವೆ. ಎಂಥ ಅದ್ಭುತ ಸಾಧನೆಗೈದರೂ ಅವರು ಎಂದೂ ಹೇಳಿಕೊಳ್ಳುವುದಿಲ್ಲ. ತಮ್ಮ ಸಾಧನೆಗಳನ್ನು ಮೆರೆಸುವುದಕ್ಕಿಂತ ಮರೆಸಿ ಮೌನದಿಂದಿರುವುದು ಅವರ

ಸ್ವಭಾವ. 'ಮಾಡಿದೆನೆಂಬುದು ಮನದಲ್ಲಿ ಹೊಳೆದರೆ ಏಡಿಸಿ ಕಾಡಿತ್ತು ಶಿವನ ಡಂಗುರ!' ಎಂಬ ಅಣ್ಣನ ಮಾತಿನ ಅರಿವು ಅವರಿಗಿದೆ. 'ಶಿವನ ಕೃಪೆ, ಭಕ್ತರ ಸಹಕಾರಗಳಿಂದ ಎಲ್ಲಾ ಸುಸೂತ್ರವಾಗಿ ನಡೆಯುತ್ತಿವೆ. ನಾವು ನಿಮಿತ್ತ ಮಾತ್ರ' ಎಂದು ಹೇಳುತ್ತಾ ಅವರು ತಮ್ಮ ವಿನಯವನ್ನು ಮೆರೆಯುತ್ತಾರೆ. ಹೀಗಾಗಿ ಪೂಜನೀಯ **ಮುಮ್ಮಡಿ ನಿರ್ವಾಣಮಹಾಸ್ವಾಮಿ** ಅವರು ಶರಣಸಂಸ್ಕೃತಿಯ ಸಾಕಾರಮೂರ್ತಿಯಾಗಿ ಶೋಭಿಸುತ್ತಿದ್ದಾರೆ.

ಜನನ

ಕಾವೇರಿಪ್ರಾಂತವೆಂದೇ ಹೆಸರಾದ ಟಿ. ನರಸೀಪುರ ತಾಲ್ಲೋಕಿನ ಕುರುಬೂರು ಒಂದು ಸಣ್ಣಗ್ರಾಮ. ಅಲ್ಲಿದ್ದ ಆಚಾರ ಸಂಪನ್ನರೂ, ಸಜ್ಜನರೂ ಆದ ವೀರಭದ್ರಪ್ಪ ಮತ್ತು ತಾಯಮ್ಮ ದಂಪತಿಗಳಿಗೆ ೧೯೪೩ ಮೇ ತಿಂಗಳ ೨೦ನೇ ದಿನಾಂಕ ಶಿವರುದ್ರಸ್ವಾಮಿ ಜನಿಸಿದರು. ಈ ದಂಪತಿಗಳಿಗೆ ನಾಲ್ವರು ಪುತ್ರರೂ, ಒಬ್ಬ ಪುತ್ರಿಯೂ ಇದ್ದರು. ವ್ಯವಸಾಯವು ಅವರ ಮುಖ್ಯ ಕಸುಬು. ಕಷ್ಟಪಟ್ಟು ದುಡಿದು ಜೀವನ ನಡೆಸುವ ಕಾಯಕಜೀವಿಗಳಿದ್ದ, ಅಕೃತಕವಾದ ಗ್ರಾಮೀಣ ಪರಿಸರದಲ್ಲಿ ಮಗು ಬೆಳೆಯಿತು. ಪ್ರಾಥಮಿಕ ವಿದ್ಯಾಭ್ಯಾಸವು ಕುರುಬೂರಲ್ಲೇ ನಡೆಯಿತು. ಮುಂದಿನ ಓದು ಚಾಮರಾಜನಗರದಲ್ಲಿ ಸಾಗಿತು. ಅದೇ ತಾಲ್ಲೋಕಿನ ಮರಿಯಾಲದಲ್ಲಿ ಉತ್ತರದೇಶದಿಂದ ಬಂದಿದ್ದ ಶ್ರೀ ಮುರುಘೇಂದ್ರ ಸ್ವಾಮಿಗಳು ಒಂದು ಮಠವನ್ನು ಸ್ಥಾಪಿಸಿದ್ದರು. ಅವರು ದೇವನೂರು ದಾಸೋಹಮಠದ ಶ್ರೀ ಗುರುಮಲ್ಲೇಶ್ವರ ಮಹಾಸ್ವಾಮಿಗಳ ಸಮಕಾಲೀನರಾಗಿದ್ದರು. ಅದೇ ಮಠಕ್ಕೆ ಶಿವರುದ್ರಸ್ವಾಮಿಗಳ ದೊಡ್ಡಪ್ಪ ಶ್ರೀ ಮಹಾಂತಸ್ವಾಮಿಗಳು ಸ್ವಾಮಿಗಳಾದರು. ಕಾಲಾನಂತರ ಅವರ ದೊಡ್ಡಣ್ಣ ಶ್ರೀ ಸದಾಶಿವಸ್ವಾಮಿಗಳು ಅವರ ಉತ್ತರಾಧಿಕಾರಿಯಾದರು. ಶ್ರೀ ಶಿವರುದ್ರಸ್ವಾಮಿ ಆ ಮಠದಲ್ಲಿದ್ದುಕೊಂಡೇ ಚಾಮರಾಜನಗರದಲ್ಲಿ ತಮ್ಮ ಮಾಧ್ಯಮಿಕ ಮತ್ತು ಪ್ರೌಢಶಾಲಾ ಶಿಕ್ಷಣವನ್ನು ಮುಗಿಸಿದರು.

ಮಠಗಳ ಸಂಪರ್ಕ

ಹೀಗಾಗಿ ಶಿವರುದ್ರಸ್ವಾಮಿಗಳಿಗೆ ಶ್ರೀ ಮಠಗಳ ಸಂಪರ್ಕ ೧೯೫೩ರಿಂದಲೂ ಇತ್ತು. ಜೊತೆಗೆ ಅವರು ನೆಲ್ಲಿಗೆರೆಯ ಮಠ, ದೇವನೂರಮಠ, ಸುತ್ತೂರುಮಠ, ಮಲ್ಲನ ಮೂಲೆ ಮೊದಲಾದ ಮಠಗಳಲ್ಲಿ ನಡೆಯುವ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಪರಿಪಾಠವಿತ್ತು. ಪರಿಸರ ಪ್ರಭಾವದಿಂದಾಗಿ ಕೃಷಿಕ ಮನೆತನದಲ್ಲಿ ಹುಟ್ಟಿದ ಶಿವರುದ್ರಸ್ವಾಮಿಗಳಿಗೆ ಆಧ್ಯಾತ್ಮಕೃಷಿಯ ಬಗ್ಗೆ ಆಸಕ್ತಿ ಬಂದುದು ಸಹಜವಾಗಿಯೇ ಇದೆ. ಎಸ್‌ಎಸ್‌ಎಲ್‌ಸಿ ಪಾಸಾದಾಗ ಅವರಿಗೆ ಮುಂದೆ ಓದಬೇಕೆಂಬ ಉತ್ಕಟ ಅಭಿಲಾಷೆ ಮೂಡಿತು. ಮೈಸೂರಿನ ಶಾರದಾವಿಲಾಸ ಕಾಲೇಜಿನಲ್ಲಿ ಪಿಯುಸಿ ತರಗತಿಗೆ ಸೇರಿದರು. ಅವರಿಗೆ ಇರಲು ಶ್ರೀಸುತ್ತೂರು ಮಠದ ಉಚಿತ ವಿದ್ಯಾರ್ಥಿನಿಲಯ ಆಶ್ರಯ ನೀಡಿತು. ಹೋಟೆಲು, ಸಿನಿಮಾ ಮೊದಲಾದ ಆಕರ್ಷಣೆಯಿಂದ ದೂರ ಉಳಿದು, ತಮ್ಮೆಲ್ಲ ಗಮನವನ್ನು ಓದಿನತ್ತ ಕೇಂದ್ರೀಕರಿಸಿ ಪಿಯುಸಿ ಪರೀಕ್ಷೆಯಲ್ಲಿ ತೇರ್ಗಡೆಯಾದರು. ಮುಂದೆ ಮಹಾರಾಜಾ ಕಾಲೇಜಿನಲ್ಲಿ ಬಿ.ಎಸ್ಸಿ. ತರಗತಿಗೆ ಸೇರಿದರು. ಅಲ್ಲಿ ಅರ್ಥಶಾಸ್ತ್ರ ಮತ್ತು ಸಂಖ್ಯಾಶಾಸ್ತ್ರಗಳನ್ನು ವಿಶೇಷವಾಗಿ ಅಧ್ಯಯನ ಮಾಡಿದರು. ಅಶನ ಮತ್ತು ವಸತಿಗೆ ಮೈಸೂರಿನಲ್ಲಿದ್ದ ತುಂಬುನೇರಳೆ ಸಾಹುಕಾರ್ ಸಿದ್ಧಲಿಂಗಯ್ಯ ಉಚಿತ ವಿದ್ಯಾರ್ಥಿನಿಲಯವನ್ನು ಸೇರಿದರು.

ನೌಕರಿ

ರಜದಲ್ಲಿ ಊರಿಗೆ ಹಿಂತಿರುಗಿ, ಮನೆಯವರೊಡನೆ ಕೃಷಿಕೆಲಸದಲ್ಲಿ ದುಡಿಯುತ್ತಿದ್ದರು. ೧೯೬೫ರಲ್ಲಿ ಅವರ ತಂದೆ ತೀರಿಕೊಂಡರು. ಅದೇ ಹೊತ್ತಿಗೆ ಅವರಿಗೆ ಕೋರ್ಟಿನಲ್ಲಿ (ಲ್ಯಾಂಡ್ ಟ್ರಿಬ್ಯೂನಲ್) IIನೇ ದರ್ಜೆಯ ಗುಮಾಸ್ತನಾಗಿ ಕೆಲಸ ಸಿಕ್ಕಿತು. ೧೯೬೭ರ ಡಿಸೆಂಬರ್‌ನಿಂದ ಅವರ ವೃತ್ತಿಜೀವನ ಆರಂಭಗೊಂಡಿತು. ತಾವಾಯಿತು, ತಮ್ಮಕೆಲಸವಾಯಿತು. ಬಾಡಿಗೆ ರೂಂ ಮಾಡಿ, ತಾವೇ ಅಡಿಗೆ ಮಾಡಿ ಊಟ ಮಾಡಿಕೊಂಡು ಕೆಲಸಕ್ಕೆ ಹೋಗುತ್ತಿದ್ದರು. ಸರಳ ಜೀವನಕ್ಕೆ ಒಗ್ಗಿಕೊಂಡ ಅವರ ಮನ ಹೆಚ್ಚಿನದೇನನ್ನು ಬಯಸಲಿಲ್ಲ. ತಮ್ಮ ಕೆಲಸವನ್ನು ತಾವೇ ಮಾಡಿಕೊಳ್ಳುವ ಅಭ್ಯಾಸ ಅವರಿಗೆ ಬಂತು. 'ಸರಳ ಜೀವನ, ಉದಾತ್ತ ಚಿಂತನ' ಅವರ ಧ್ಯೇಯಾದರ್ಶವಾಯಿತು.

ಶ್ರೀ ಶಿವರುದ್ರಸ್ವಾಮಿಗಳಿಗೆ ಬಾಲ್ಯದಿಂದಲೂ ಗುರುಲಿಂಗಜಂಗಮ ಪ್ರೇಮ, ಜೊತೆಗೆ ಮಠದ ಸಂಪರ್ಕದಿಂದಾಗಿ ಆಧ್ಯಾತ್ಮಶಿಕ್ಷಣದ ಬುನಾದಿ ಸಿಕ್ಕಿತ್ತು. ಧರ್ಮನಿಷ್ಠೆ, ಆಚಾರವಿಚಾರಗಳ ಬಗ್ಗೆ ಶ್ರದ್ಧೆ ಬೆಳೆದವು.

ಮರಿಯಾಲ ಮಠ

ಮರಿಯಾಲ ಮಠದ ಪೀಠಾಧಿಪತಿಗಳಾಗಿದ್ದ ಇವರ ಅಣ್ಣಂದಿರಾದ ಶ್ರೀ ಸದಾಶಿವಸ್ವಾಮಿಗಳು ತಮ್ಮ ಸಹೋದರ ಶಿವರುದ್ರಸ್ವಾಮಿಗಳೇ ಶ್ರೀಮಠದ ಉತ್ತರಾಧಿಕಾರಿಯೆಂದು ಉಯಿಲು ಬರೆದಿದ್ದರು. ೧೯೭೦ರಲ್ಲಿ ಅವರು ಲಿಂಗೈಕ್ಯರಾದಾಗ ಶ್ರೀ ಶಿವರುದ್ರಸ್ವಾಮಿಗಳು ಆ ಮಠದ ಉತ್ತರಾಧಿಕಾರಿಯಾಗಬೇಕಿತ್ತು. ಆದರೆ ಪರಿಸ್ಥಿತಿ ಅನುಕೂಲವಾಗಿರಲಿಲ್ಲ. ತಕರಾರು, ಸಂಘರ್ಷಗಳನ್ನು ಎದುರಿಸಬೇಕಾಯಿತು. ಕೋರ್ಟಿನ ಕಟ್ಟೆ ಹತ್ತಿ, ತಮಗೇ ಗೆಲುವಾದರೂ ಶ್ರೀ ಶಿವರುದ್ರಸ್ವಾಮಿಗಳು ಅಲ್ಲಿಗೆ ಹೋಗಲಿಲ್ಲ.

ನೆಲ್ಲಿಗೆರೆಮಠ

ಅದೇ ಹೊತ್ತಿಗೆ ಮಳವಳ್ಳಿ ತಾಲ್ಲೂಕಿನ ನೆಲ್ಲಿಗೆರೆಯಲ್ಲಿ ಸದ್ಭಕ್ತರೊಬ್ಬರು ಮಠವೊಂದನ್ನು ಸ್ಥಾಪಿಸಲು ಒಂದು ಮನೆ ಮತ್ತು ಜಮೀನನ್ನು ಮರಿಯಾಲ ಮಠದ ಶ್ರೀ ಸದಾಶಿವ ಸ್ವಾಮಿಗಳಿಗೆ ದಾನವಾಗಿ ಕೊಟ್ಟಿದ್ದರು. ನೆಲ್ಲಿಗೆರೆಯ ಸದ್ಭಕ್ತರು ಶ್ರೀ ದೇಗುಲಮಠ ಹಾಗೂ ಶ್ರೀಸಿದ್ಧಗಂಗಾಮಠದ ಪೂಜ್ಯರುಗಳ ಸಲಹೆಯಂತೆ ಶ್ರೀ ಶಿವರುದ್ರಸ್ವಾಮಿಗಳು ಆ ಹೊಸ ಮಠಕ್ಕೆ ನಿಯೋಜಿತರಾದರು. ಆದರೆ ಅವರನ್ನು ಉತ್ತರಾಧಿಕಾರಿಯಾಗಿ ಆಶ್ರಮ ಪಟ್ಟಾಧಿಕಾರ ನಡೆಸುವ ಬಗ್ಗೆ ಜಿಜ್ಞಾಸೆಯುಂಟಾದಾಗ ಅಂಕನಹಳ್ಳಿ ಮಠದ ಶ್ರೀಸಿದ್ಧಲಿಂಗ ಶಿವಾಚಾರ್ಯರು, ಬಂಡೇಮಠದ ಶ್ರೀಶಿವರುದ್ರ ಮಹಾಸ್ವಾಮಿಗಳು ಮಹಂತೇಶ್ವರ ಗದ್ದುಗೆ ಮಠದಲ್ಲಿ ವಿಧ್ಯುಕ್ತವಾಗಿ ಸಂನ್ಯಾಸದೀಕ್ಷೆಯ ಕಾರ್ಯಕ್ರಮವನ್ನು ನಡೆಸಿದರು. ಶ್ರೀದೇಗುಲಮಠ ಮತ್ತು ಶ್ರೀಸಿದ್ದಗಂಗಾಮಠದ ಪೂಜ್ಯರ ಆಶೀರ್ವಾದ ದೊರಕಿತು. ಸ್ವಾಮಿಗಳು ಸಿದ್ಧಗಂಗೆಯಲ್ಲಿ ಕೆಲವು ಕಾಲ ಇದ್ದು ಆಚಾರಸಂಪತ್ತನ್ನು ಗಳಿಸಿ ಧರ್ಮಪೀಠವೊಂದರ ಕರ್ಣಧಾರತ್ವ ವಹಿಸಲು ಅಣಿಯಾದರು. ಈ ಅವಧಿಯಲ್ಲಿ ಅವರಿಗೆ ಯಾವುದೇ ಪರಿಸ್ಥಿತಿಯನ್ನು ಎದುರಿಸುವ ಸಾಮರ್ಥ್ಯ, ಆತ್ಮವಿಶ್ವಾಸ, ಧೈರ್ಯಸ್ಥೈರ್ಯಗಳು ಮೈಗೂಡಿದವು.

ಮಠಾಧ್ಯಕ್ಷರು

ನೆಲ್ಲಿಗೆರೆಗೆ ಬಂದು ಮಠದ ಅಧಿಕಾರವನ್ನು ವಹಿಸಿಕೊಂಡಾಗ ಮಠವು ಶಿಥಿಲಾವಸ್ಥೆಯಲ್ಲಿತ್ತು. ಆ ಪ್ರದೇಶದ ಜನ ಸಂಸ್ಕಾರವಿಲ್ಲದ ಬರಡುಜೀವನ ನಡೆಸುತ್ತಿದ್ದರು. ಆ ಮಠದಂತೆ ಜನಮನವನ್ನೂ ಕಟ್ಟಬೇಕಿತ್ತು. ಸುತ್ತೆಲ್ಲಾ ಅವಿದ್ಯಾವಂತರೇ ತುಂಬಿಕೊಂಡಿದ್ದರು. ಸ್ವಾಮಿಗಳು ತಮ್ಮ ಮಾನವಾಂತಃಕರಣದಿಂದ, ಚಾಕಚಕ್ಯತೆಯಿಂದ ಜನರ ಮನವನ್ನು ಒಲಿಸಿಕೊಂಡರು. ವಿದ್ಯೆಯಿಲ್ಲದೆ ಬೆಳೆಯುತ್ತಿದ್ದ ಆ ಪ್ರದೇಶದ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡುವ ಮೂಲಕ ಸಾಮಾಜಿಕ ಪರಿವರ್ತನೆ ತರುವ ಸಂಕಲ್ಪಮಾಡಿದರು. ಹಿರಿಯರನ್ನು ಒಪ್ಪಿಸಿ ಅನೇಕ ಮಕ್ಕಳನ್ನು ತಾವೇ ಚಾರ್ಜುಕೊಟ್ಟು ಸಿದ್ಧಗಂಗಾಮಠ, ಸುತ್ತೂರುಮಠಗಳಿಗೆ ಕಳಿಸಿ ಓದಿಸಿದರು. ಮನೆಯಲ್ಲಿ ಒಬ್ಬ ಓದಿ ಬುದ್ಧಿವಂತನಾದರೆ, ಸಂಸ್ಕಾರವಂತನಾದರೆ ಇಡೀ ಕುಟುಂಬ ಪ್ರಭಾವಿತವಾಗುತ್ತದೆಎಂಬುದನ್ನು ಅವರು ಬಲ್ಲವರಾಗಿದ್ದರು. ಒಂದು ರೀತಿಯಲ್ಲಿ ಪೂಜ್ಯರು ಆ ಪ್ರದೇಶದ ಜನಮನವನ್ನು ಬೆಳಗಿದ ಸೂರ್ಯನಾದರು. ಆ ಗ್ರಾಮೀಣ ಪ್ರದೇಶದಲ್ಲಿ ಮಿಂಚಿನ ಹೊಳೆ ತುಳುಕಾಡಿತು. ಅಜ್ಞಾನದ ಪೊರೆ ಕಳಚಿದಂತಾಗಿ ಜನರು ಸ್ವಾಮಿಗಳು ತಮ್ಮ ಉದ್ಧಾರಕ್ಕಾಗಿ ಬಂದ ಪರದೈವವೆಂದೇ ಬಗೆದರು. ಪೂಜ್ಯರು ಮಠವನ್ನು ಕಟ್ಟಬೇಕೆಂದು ಸಂಕಲ್ಪಿಸಿದಾಗ ಜನರೆಲ್ಲಾ ಒಗ್ಗೂಡಿ ತನುಮನಧನಗಳನ್ನು ನೀಡಿ ಕೆಲಸವನ್ನು ಆಗು ಮಾಡಿದರು. ಮಠಕ್ಕೆ ಒಂದು ನಿಶ್ಚಿತ ಆದಾಯವೇ ಇಲ್ಲದಿರುವಾಗ ಅಂಥ ದೊಡ್ಡಕೆಲಸವು ನೆರವೇರಿದ ರೀತಿ ಪೂಜ್ಯರ ಜನಪ್ರಿಯತೆಗೆ ಸಾಕ್ಷಿಯಾಯಿತು. ಬಹಳ ಮುತುವರ್ಜಿಯಿಂದ ಶ್ರೀಮಠದ ಅಭಿವೃದ್ಧಿಕಾರ್ಯಕ್ರಮಗಳನ್ನು ಭಕ್ತರ ಸಹಕಾರದಿಂದ ಕೈಗೆತ್ತಿಕೊಂಡರು. ಕ್ಷಿಪ್ರದಲ್ಲೇ ಅನೇಕ ಜನಹಿತಕಾರ್ಯಗಳು ಅಲ್ಲಿ ನೆರವೇರಿದವು. ಅಲ್ಲದೆ ಅನೇಕ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ನಾಡಿನ ಅನೇಕ ಸ್ವಾಮಿಗಳನ್ನು, ಸಾಹಿತಿಗಳನ್ನು, ಜನಮುಖಂಡರನ್ನು ಬರಮಾಡಿಕೊಂಡು ಶ್ರೀಮಠದ ಚಟುವಟಿಕೆಗಳ ಕಡೆ ಎಲ್ಲರ ಗಮನ

ಸೇರಿದರು. ಅವರಲ್ಲೂ ವರ್ಷಕ್ಕೊಮ್ಮೆ ಅವರು ನಡೆಸುತ್ತಿದ್ದ ಹಿರಿಯ ಗುರುಗಳಾಗಿದ್ದ ಮರಿಯಾಲ ಮಠದ ಶ್ರೀ ಶ್ರೀ ಮುರುಘರಾಜೇಂದ್ರ ಸ್ವಾಮಿಗಳವರ ಆರಾಧನಾ ಮಹೋತ್ಸವ ಒಂದು ಅರ್ಥಪೂರ್ಣ ಕಾರ್ಯಕ್ರಮವಾಗಿ ಜನಪ್ರಿಯವಾಯಿತು. ಶ್ರೀ ಸಿದ್ಧಗಂಗೆಯ ಪೂಜ್ಯರು, ಕನಕಪುರ ದೇಗುಲ ಮಠದ ಆಗಿನ ಪೂಜ್ಯರು ಈ ಸಮಾರಂಭಗಳಿಗೆ ಆಗಮಿಸುತ್ತಿದ್ದುದುಂಟು. ಸಮಾರಂಭದ ಅಚ್ಚುಕಟ್ಟಾದ ವ್ಯವಸ್ಥೆ, ಸ್ವಾಮಿಗಳ ಸಂಘಟನಾಶಕ್ತಿ, ಜನಾನುರಾಗಗಳ ಬಗ್ಗೆ ಅತಿಥಿಗಳು ಸಂತೋಷ ವ್ಯಕ್ತಪಡಿಸುತ್ತಿದ್ದುದಲ್ಲದೆ, ಶ್ರೀ ಶಿವರುದ್ರಸ್ವಾಮಿಗಳಂಥ ಸಮರ್ಥ ಸಂಘಟಕರಿಗೆ, ಯೋಜಕಸತ್ವವಿರುವ ಸ್ವಾಮಿಗಳಿಗೆ ಒಂದು ದೊಡ್ಡಮಠ ಬೇಕು ಎಂಬ ಭಾವನೆಯನ್ನು ವ್ಯಕ್ತಪಡಿಸುತ್ತಿದ್ದರು. ಆಗಲೇ ಅವರು ಬಹಳ ಜನರ ಗಮನಕ್ಕೆ ಬಂದದ್ದು.

ಆದರ್ಶ ಸ್ತಂಭ

'ಅದು ಬೇಕು, ಇದು ಬೇಕು ಎಂಬ ಎದೆಗುದಿಹತನ ಬೇಡ. ಯಾರ್ಯಾರಿಗೆ ಏನನ್ನು, ಎಷ್ಟನ್ನು, ಯಾವಾಗ ಕೊಡಬೇಕೆಂಬುದು ದೇವರಿಗೆ ಗೊತ್ತಿದೆ. ಅದಕ್ಕೆ ಏಕೆ ಕಾತರ, ವ್ಯಾಕುಲ? ಪಾಲಿಗೆ ಬಂದದ್ದು ಪಂಚಾಮೃತ' ಎನ್ನುವ ಶರಣರ ವಿವೇಕದ ನುಡಿ ಈ ಪೂಜ್ಯರಿಗೆ ಆದರ್ಶ. ಅವರಿಗೆ ಒದಗಿದ ಅವಗಡಗಳು ಅವರ ಅಂತಸ್ಸತ್ವವನ್ನು ಪರೀಕ್ಷೆಗೆ ಒಡ್ಡಿದವು ಎನ್ನಬಹುದು. ಒಂದು ರೀತಿಯಲ್ಲಿ ಅವು ಅವರ ವ್ಯಕ್ತಿತ್ವವನ್ನು ಗಟ್ಟಿಗೊಳಿಸುತ್ತಾ ಹೋದವು. ಒಂದು ಕಂಬವನ್ನು ನಡುವವರು ಅದನ್ನು ಕುಳಿಯಲ್ಲಿಟ್ಟು ಮಣ್ಣುತುಂಬಿ ಅಳ್ಳಾಡಿಸುತ್ತಾ ಮತ್ತಷ್ಟು ಮಣ್ಣು ಕೂರಿಸುತ್ತಾ ಬಿಗಿಗೊಳಿಸುವಂತೆ ಸ್ವಾಮಿಗಳ ಬದುಕಿನಲ್ಲಿ ಒದಗಿದ ಒಂದೊಂದು ಕುತ್ತೂ ಕೂಡ ಅವರ ಆದರ್ಶಸ್ತಂಭವನ್ನು ಬಿಗಿಗೊಳಿಸುತ್ತಾ ಹೋದವು. ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳುವ ಶಕ್ತಿ, ಸಮಸ್ಯೆಗಳನ್ನು ಬಿಡಿಸುವ ಧೈರ್ಯ ಹಾಗೂ ಛಾತಿಗಳು ಅವರಿಗೆ ಅಳವಟ್ಟವು. ಅವರು ಪರಿಸ್ಥಿತಿಯ ಕೈಗೊಂಬೆಯಾಗದೆ ಒಳ್ಳೆಯದನ್ನು ಸಾಧಿಸುವ ದೃಢಮನಸ್ಸಿನ ಸಹನಾಮೂರ್ತಿಯಾದರು. ಅಷ್ಟೇ ಅಲ್ಲ, ಜನರನ್ನು ಸಂಘಟಿಸುವ, ಅವರಲ್ಲಿ ಧರ್ಮಪ್ರಜ್ಞೆಯನ್ನು ಅರಳಿಸುವ, ಸಮಾಜಕಟ್ಟುವ ಮಣಿಹದಲ್ಲಿ ಅವರನ್ನು ಸಾರ್ಥಕವಾಗಿ ದುಡಿಸಿಕೊಳ್ಳುವ ತಂತ್ರವೂ ಸಹ ಅವರಿಗೆ ಸಿದ್ಧಿಸಿತು.

ಶ್ರೀ ದೇಗುಲಮಠದ ಕರೆ

೧೯೭೭ರಲ್ಲಿ ಕನಕಪುರದ ಶ್ರೀ ದೇಗುಲಮಠದ ಇಮ್ಮಡಿ ಮಹಲಿಂಗಸ್ವಾಮಿಗಳು ಅಸ್ವಸ್ಥರಾದರು. ಶ್ರೀಮಠದ ಜವಾಬ್ದಾರಿ ಜಾಸ್ತಿಯಾಗಿತ್ತು. ಸಮರ್ಥ ಉತ್ತರಾಧಿಕಾರಿಗೆ ಅದನ್ನು ವಹಿಸಿ ತಾವು ಪೂರ್ಣವಾಗಿ ಲಿಂಗಪೂಜಾನುಸಂಧಾನದಲ್ಲಿ ತೊಡಗಬೇಕೆಂಬ ಇಚ್ಛೆಯನ್ನು ಶ್ರೀಸಿದ್ಧಗಂಗೆಯ ಸ್ವಾಮಿಗಳಲ್ಲಿ ವ್ಯಕ್ತಪಡಿಸಿ, ಆ ಬಗ್ಗೆ ಸಮಾಲೋಚನೆ ನಡೆಸಿದರು. ನೆಲ್ಲಿಗೆರೆ ಮಠದಲ್ಲಿರುವ ಸ್ವಾಮಿಗಳ ಪ್ರಸ್ತಾಪ ಬಂತು. ಅವರ ತಾಳ್ಮೆ, ಆಚಾರ ಸಂಪನ್ನತೆ ಹಾಗೂ ಕರ್ತವ್ಯಶಕ್ತಿಗಳನ್ನು ಮೆಚ್ಚಿಕೊಂಡಿದ್ದ ಉಭಯ ಶ್ರೀಗಳು ಶ್ರೀಶಿವರುದ್ರಸ್ವಾಮಿಗಳಿಗೆ ಕರೆ ಕಳಿಸಿದರು. ದೇಗುಲಮಠದ ಉತ್ತಾರಾಧಿಕಾರಿಯಾಗಲು ಒಪ್ಪಿ ಕರ್ಪೂರ ಹಚ್ಚಿ ಗುರುಗಳಿಗೆ ನಮಸ್ಕಾರ ಹಾಕು ಎಂದರು. ಅದರಂತೆ ಶ್ರೀಶಿವರುದ್ರಸ್ವಾಮಿಗಳು ದೀರ್ಘದಂಡ ಪ್ರಣಾಮ ಮಾಡಿದರು.

ಶ್ರೀಮಠಕ್ಕೆ ಸಮರ್ಥ ಉತ್ತರಾಧಿಕಾರಿ ಬೇಕೆಂಬ ಕೊರಗಿನಲ್ಲಿದ್ದ ಮಹಲಿಂಗಸ್ವಾಮಿಗಳ ಆರೋಗ್ಯ ಕ್ಷೀಣಿಸಿತ್ತು. ಕೊರಗು ನಿವಾರಣೆಯಾಗುತ್ತಿದ್ದಂತೆ ಅವರ ಆರೋಗ್ಯ ಸುಧಾರಿಸಿ ಚೇತರಿಸಿಕೊಳ್ಳಲಾರಂಭಿಸಿದರು. ೧೯೭೭ರಲ್ಲಿ ಸಾಂಪ್ರದಾಯಿಕ ಪಟ್ಟಾಧಿಕಾರ ಮಹೋತ್ಸವ ವೈಭವದಿಂದ ನಡೆಯಿತು. ಶಾಸ್ತ್ರೋಕ್ತ ವಿಧಿವಿಧಾನಗಳ ನಂತರ ಶ್ರೀ ಶಿವರುದ್ರಸ್ವಾಮಿಗಳು ಶ್ರೀ ದೇಗುಲಮಠದ ಸ್ವಾಮಿಗಳ ಪರಂಪರೆಗೆ ಸೇರಿ **ಮೂರನೆಯ ನಿರ್ವಾಣಮಹಾಸ್ವಾಮಿಗಳಾದರು.**

'ನಿರ್ವಾಣ'

ಎಂಥ ಅರ್ಥಪೂರ್ಣವಾದ ಪದ **'ನಿರ್ವಾಣ!'** ಆ ಪದದ ಅರ್ಥವ್ಯಾಪ್ತಿ ಮತ್ತು ದೀಪ್ತಿ ಅತ್ಯದ್ಭುತವಾದದ್ದು. ಅದಕ್ಕೆ ಶಾಂತಿ, ಮೋಕ್ಷ, ಪರಮಸುಖ, ಶೂನ್ಯ, ತಪಸ್ಸು, ದೇಹಾತ್ಮಗಳ ಅಂತಿಮವಾದ ಅಳಿವು, ಸಂಸಾರಕ್ಲೇಶಗಳ ನಿವೃತ್ತಿ, ಅಹಂಕಾರ-ಮಮಕಾರಗಳ ನಿವೃತ್ತಿ ಮೊದಲಾದ ಅರ್ಥಗಳಿವೆ. 'ನಿರ್ವಾಣ'ವನ್ನು ಕುರಿತ ಶರಣ ಆದಯ್ಯನ ಸೂತ್ರಪ್ರಾಯವಾದ ವಚನವೊಂದು ಇಲ್ಲಿ ಉಲ್ಲೇಖನೀಯ:

ಹುಟ್ಟು ಹೊಂದುಗೆಟ್ಟುದೇ ನಿರ್ವಾಣ
ಮಲ ಮಾಯ ಕರ್ಮಂಗಳಳಿದುದೇ ನಿರ್ವಾಣ
ಶೋಕ ಮೋಹ ಹಿಂಗಿದುದೇ ನಿರ್ವಾಣ
ಇಹಪರದಾಸೆ ಬಿಟ್ಟುದೇ ನಿರ್ವಾಣ
ಇಂತಪ್ಪ ನಿರ್ವಾಣ ಸದ್ಯೋನ್ಮುಕ್ತಿ ಸೌರಾಷ್ಟ್ರ ಸೋಮೇಶ್ವರಾ.

(ಜನನ ಮರಣಗಳಿಲ್ಲದ್ದು. ಮಲತ್ರಯಗಳಳಿದದ್ದು, ದುಃಖ, ಮೋಹಗಳು ಇಲ್ಲದ್ದು, ಈ ಲೋಕ-ಪರಲೋಕದ ಆಸೆಗಳನ್ನು ಬಿಟ್ಟ ಸ್ಥಿತಿಯೇ ನಿರ್ವಾಣ. ಇದೇ ಸದ್ಯೋನ್ಮುಕ್ತಿ.)

ಶ್ರೀ ದೇಗುಲಮಠದ ಉತ್ತರಾಧಿಕಾರಿಗೆ 'ನಿರ್ವಾಣಮಹಾಸ್ವಾಮಿ'ಗಳೆಂಬ ಹೆಸರು ಅನ್ವರ್ಥಕವಾಗಿತ್ತು. ಅವರು ಬದುಕಿನ ಕಲ್ಲುಮುಳ್ಳಿನ ಹಾದಿಯಲ್ಲಿ ಸಾಗಿಬಂದಾಗಲೂ ಉಳಿಸಿಕೊಂಡು ಬಂದ, ರಾಗ-ದ್ವೇಷಗಳಳಿದ ಸಮಚಿತ್ತತೆಯೆ ಸಾಕು!

ಗುರುಗಳ ಅನುಗ್ರಹ

ಕಿರಿಯ ಶ್ರೀಗಳ ಶ್ರದ್ಧಾಪೂರ್ವಕ ಉಪಚಾರದಿಂದ ಕಾಯಕಯೋಗಿ ಶ್ರೀ ಮಹಾಲಿಂಗ ಮಹಾಸ್ವಾಮಿಗಳ ಕ್ಷೀಣಿಸಿದ್ದ ಆರೋಗ್ಯ ಸುಧಾರಿಸುತ್ತಾ ಬಂತು. ಮತ್ತೆ ಅವರ ಸೇವಾವಕಾಶ ಹಾಗೂ ಮಾರ್ಗದರ್ಶನಗಳು ಶ್ರೀ ಮುಮ್ಮಡಿ ನಿರ್ವಾಣಸ್ವಾಮಿಗಳಿಗೆ ದೊರಕಿದವು. ಅಪಾರ ಅನುಭವದ ಗಣಿಯು ಉತ್ಸಾಹಭರಿತ ಚೇತನಕ್ಕೆ ತೆರೆದುಕೊಂಡಿತು. ಗುರುಗಳು ಶ್ರೀಮಠದ ಸಂಪ್ರದಾಯ. ರೀತಿ-ರಿವಾಜುಗಳ ಬಗ್ಗೆ ಮನವರಿಕೆ ಮಾಡಿಕೊಟ್ಟರು. ಶ್ರೀಮಠದ ಸೇವಾ ಕರ್ತರನ್ನು, ಶಿಷ್ಯಮಕ್ಕಳನ್ನು ಪರಿಚಯ ಮಾಡಿಕೊಟ್ಟರು. ಅತ್ಯಲ್ಪಕಾಲದಲ್ಲೆ ಇವರ ಗುರು-ಶಿಷ್ಯ ಸಂಬಂಧ ಎಷ್ಟು ಅನ್ಯೋನ್ಯವಾಯಿತೆಂದರೆ ಗುರುಗಳು ಬಾಯಿಬಿಟ್ಟು ಹೇಳುವುದರೊಳಗೇ ಶಿಷ್ಯ ಆ ಯೋಜನೆಯ ರೂಪುರೇಷೆಯನ್ನು ಸಿದ್ಧಪಡಿಸಿರುತ್ತಿದ್ದರು. ಹಳೆಬೇರು, ಹೊಸ ಚಿಗುರು ಸೇರಿ ಮರವು ಸೊಗಸುವಂತೆ ಎರಡು ಶಕ್ತಿಗಳೂ ಒಂದುಗೂಡಿ ಶ್ರೀಮಠದ ಭವಿಷ್ಯವು ಉಜ್ವಲವಾಗುವಂತೆ ರೂಪಿಸಿದವು. ಶ್ರೀ ಗುರು ಮಹಾಲಿಂಗಮಹಾಸ್ವಾಮಿಗಳು ತಾವು ಸಾಕ್ಷಾತ್ಕಾರಿಸಿಕೊಂಡಿದ್ದ ಎಲ್ಲಾ ಆಧ್ಯಾತ್ಮಿಕ ಶಕ್ತಿಯನ್ನು, ವ್ಯವಹಾರ ಜ್ಞಾನವನ್ನು ಶ್ರೀ ನಿರ್ವಾಣಮಹಾಸ್ವಾಮಿಗಳಿಗೆ ಧಾರೆಯೆರೆದರು.

ಬಂಗಾರದ ಹೂವಿಗೆ ಪರಿಮಳ

ಶ್ರೀ ಮುಮ್ಮಡಿ ನಿರ್ವಾಣಮಹಾಸ್ವಾಮಿಗಳು ಸ್ನಾತಕಮಟ್ಟದವರೆಗೆ ಕಾಲೇಜು ಶಿಕ್ಷಣ ಪಡೆದಿದ್ದರೂ ಅವರು ಬೆಳೆದ ಪರಿಸರ ಪ್ರಭಾವದಿಂದ, ಹುಟ್ಟಿನಿಂದ ಬಂದ ಸಾತ್ವಿಕಗುಣದಿಂದ, ತಮಗೆ ಒದಗಿದ ಸಂಪರ್ಕದಿಂದಾಗಿ ಮೈಗೆ ಕಾವಿ ಧರಿಸುವ ಮುಂಚೆಯೇ ಮನಸ್ಸಿಗೆ ಕಾವಿ ಹೊದ್ದಿದ್ದರು. ಧಾರ್ಮಿಕ ಆಚಾರ-ವಿಚಾರಗಳಲ್ಲಿ, ಸಾಮಾಜಿಕ ನಡಾವಳಿಗಳಲ್ಲಿ ಅವರು ಚೆನ್ನಾಗಿ ಪಳಗಿದ್ದರು; ಪರಿಶುದ್ಧ ಜೀವನದ ಕ್ರಿಯಾಮೂರ್ತಿಯಾಗಿದ್ದರು. ಬಂಗಾರದ ಹೂವಿಗೆ ಪರಿಮಳ ಮೂಡುವಂತೆ ಸಿದ್ಧಗಂಗೆಯ ಪೂಜ್ಯ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳ ಹಾಗೂ ದೇಗುಲಮಠದ ಶ್ರೀ ಶ್ರೀ ಇಮ್ಮಡಿ ಮಹಲಿಂಗಮಹಾಸ್ವಾಮಿಗಳ ಕಣ್ಗಾರಿಕೆಯಲ್ಲಿ ತರಬೇತಿಹೊಂದಿ ಅವರ ಅನುಗ್ರಹಕ್ಕೆ ಪಾತ್ರರಾಗಿ ತಮ್ಮ ವ್ಯಕ್ತಿತ್ವಕ್ಕೆ ದಿವ್ಯಪ್ರಭೆಯನ್ನು ದೊರಕಿಸಿಕೊಂಡರು.

ಚಟುವಟಿಕೆಗಳು

ಶ್ರೀ ಮಠದ ಚಟುವಟಿಕೆಗಳು ಅಧಿಕಗೊಂಡವು. ಶ್ರೀಮಠದಲ್ಲಿ ಪ್ರಾಚೀನಕಾಲದ ಋಷ್ಯಾಶ್ರಮದ ಪವಿತ್ರವಾತಾವರಣವನ್ನು ಮುಂದುವರಿಸಿಕೊಂಡು ಬರುವ ಸರ್ವಪ್ರಯತ್ನವನ್ನು ಮಾಡಿದರು. ಆಧುನಿಕ ಜೀವನದ ಗಲಿಬಿಲಿಯಿಂದ ಕ್ಷೋಭೆಗೊಂಡ ಜನರ ಮನಸ್ಸಿಗೆ ಪ್ರಶಾಂತತೆಯನ್ನು ಅದು ಒದಗಿಸಬೇಕಾಗಿತ್ತು. ಹೊಟ್ಟೆಗೆ; ಅನ್ನ, ಬುದ್ಧಿಗೆ ಬೆಳಕು, ಮನಕ್ಕೆ ಪ್ರಸನ್ನತೆಗಳೆಂಬ ತ್ರಿವಿಧ ದಾಸೋಹವನ್ನು ಪೂರೈಸಬೇಕಾಗಿತ್ತು. ಇದರ ಜೊತೆಗೆ ಮಕ್ಕಳಿಗೆ ಕಾಲೋಚಿತವಾದ ಜ್ಞಾನ-ಸುಜ್ಞಾನ-ತಂತ್ರಜ್ಞಾನವನ್ನು ನೀಡುವ ವ್ಯವಸ್ಥೆಯನ್ನು ಮಾಡುವ ಅಗತ್ಯವನ್ನು ಅವರು ಕಂಡುಕೊಂಡರು. ಕಷ್ಟಪಟ್ಟು ಓದಿದ ಮಕ್ಕಳು ಮುಂದೆ ನೌಕರಿಗಾಗಿ ಸುತ್ತಾಡುವ ಬದಲು ತಮ್ಮ ಕಾಲ ಮೇಲೆ ತಾವು ನಿಂತು ತಮ್ಮ ಜೀವನೋಪಾಯವನ್ನು ಕಂಡುಕೊಳ್ಳಲು ಸಹಾಯಕವಾಗುವ

ತಾಂತ್ರಿಕ ವೃತ್ತಿಪರ ತರಬೇತಿ ನೀಡುವ ಶಾಲೆಗಳನ್ನು ತೆರೆಯುವ ಆಲೋಚನೆಯನ್ನು ಪೂಜ್ಯರು ಮಾಡಿದ್ದು ಅವರ ಮುಂದಾಲೋಚನೆಯ ಫಲವಾಗಿದೆ. ಇದರ ಸಲುವಾಗಿ ಅವರು ವಿಶೇಷ ಕಾಳಜಿವಹಿಸಿದರು. ಶ್ರೀಮಠದಲ್ಲಿರುವ ಶಿಕ್ಷಣಸಂಸ್ಥೆಗಳಲ್ಲದೆ ನಾಡಿನ ನಾನಾ ಕಡೆ ಗ್ರಾಮೀಣ ಪ್ರದೇಶದಲ್ಲಿ ಶಾಲಾಕಾಲೇಜುಗಳನ್ನು ತೆರೆದು ಹಳ್ಳಿಗಾಡಿನ ಬಡಮಕ್ಕಳ, ಅದರಲ್ಲೂ ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲ ಒದಗಿಸಿದರು. ಅವರ ಇಂಥ ಉದಾರಧೋರಣೆ ಹಾಗೂ ಪ್ರೋತ್ಸಾಹದಿಂದಾಗಿ ವಿದ್ಯಾರ್ಥಿನಿಲಯ ಹಾಗೂ ಅನಾಥಾಲಯದ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿತು. ಅಲ್ಲಿನ ಮಕ್ಕಳಿಗೆ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಲು ಸ್ವಾಮಿಗಳ ಮಾತೃಹೃದಯ ಸದಾ ತುಡಿಯುತ್ತಿರುತ್ತದೆ.

ಸಿದ್ಧಗಂಗೆಯ ಮಾದರಿ

ಪೂಜ್ಯರಿಗೆ ಶ್ರೀಸಿದ್ಧಗಂಗಾಕ್ಷೇತ್ರ ಒಂದು ಮಾದರಿ. ಅಲ್ಲಿನ ಕುಲಪತಿಗಳಾದ ಪೂಜ್ಯ ಶ್ರೀಶ್ರೀ ಶಿವಕುಮಾರಮಹಾಸ್ವಾಮಿಗಳು ಶರಣರ ಕಲ್ಪನೆಯ ಮಾನವ ಹಿತಸಾಧನೆಗೆ ಮಾರ್ಗದರ್ಶಿ, ತೋರುಗಂಬ. ಅಲ್ಲಿ ನಡೆಯುವ ನಿರಂತರ ದಾಸೋಹ, ಸಂಸ್ಕೃತ ಕಲಿಕೆಗೆ ಅವಕಾಶ, ಶ್ರಮದಾನ, ಸಾಮೂಹಿಕ ಪ್ರಾರ್ಥನೆ, ಸಂಸ್ಕೃತಿ ಸಂವರ್ಧನೆಯ ಚಟುವಟಿಕೆಗಳು, ಅನಾಥಮಕ್ಕಳ ಹಾಗೂ ಕುರುಡು ಮಕ್ಕಳ ಬಾಳಿಗೆ ಆಶ್ರಯ ನೀಡುವುದು ಮೊದಲಾದ ಕಲ್ಯಾಣಕಾರಕ ಸೇವೆಗಳನ್ನು ಶ್ರೀ ದೇಗುಲಮಠದಲ್ಲೂ ಅಳವಡಿಸಲಾಗಿದ್ದು, ಆ ಬಗ್ಗೆ ಒಂದು ಸ್ಥಾಯಿವ್ಯವಸ್ಥೆಯನ್ನು ಮಾಡಿರುವುದು ಕಂಡುಬರುತ್ತದೆ. ಅಂತೆಯೇ ಶ್ರೀಮಠವು ಈ ಭಾಗದಲ್ಲಿ ಎರಡನೆಯ ಶ್ರೀ ಸಿದ್ಧಗಂಗಾಕ್ಷೇತ್ರವಾಗಿ ಬೆಳಗುತ್ತಿದೆ.

ಕೃಷಿಕ್ಷೇತ್ರ

ಅದರಂತೆ ಪೂಜ್ಯರು ಶ್ರೀಮಠದ ಕೃಷಿಕ್ಷೇತ್ರದಲ್ಲೂ ಸಹ ಸುಧಾರಣೆಯನ್ನು ತಂದಿದ್ದಾರೆ. ಆಧುನಿಕ ರೀತಿಯ ವ್ಯವಸಾಯ ಪದ್ಧತಿಯನ್ನು ಜಾರಿಗೊಳಿಸಿದ್ದಾರೆ. ಟ್ರಾಕ್ಟರ್ ಮೊದಲಾದ ಉಪಕರಣಗಳನ್ನು ಒದಗಿಸಿದ್ದಾರೆ. ಶ್ರೀಮಠವು ಸಾಂಪ್ರದಾಯಿಕ ವ್ಯವಸಾಯದಿಂದಲೇ ಸಾಕಷ್ಟು ಪ್ರಗತಿ ಸಾಧಿಸಿತ್ತು. ಈಚೆಗೆ ವಾಣಿಜ್ಯಬೆಳೆಯನ್ನು ಬೆಳೆಯುವ ಆಲೋಚನೆ ಮಾಡಿ ಅರಿಶಿನ ಬೆಳೆದರು. ಪರಿಣಾಮವಾಗಿ ಒಂದು ವರ್ಷ ೨೫೦ ಕ್ವಿಂಟಲ್ ಅರಿಶಿಣದ ಇಳುವರಿ ಪಡೆದು ದಾಖಲೆ ಸ್ಥಾಪಿಸಿದ್ದುಂಟು. ಕರ್ನಾಟಕ ಸರ್ಕಾರದ ಕೃಷಿ ಇಲಾಖೆ ಈ ಸಾಧನೆಗೆ ಪುರಸ್ಕಾರ ನೀಡಿ ಪ್ರೋತ್ಸಾಹಿಸಿದೆ. ಜೊತೆಗೆ ಹೈನುಗಾರಿಕೆಯನ್ನು ಸಹ ಅಭಿವೃದ್ಧಿಗೊಳಿಸಲಾಗಿದೆ. ಬಡಮಕ್ಕಳ ವಿದ್ಯಾಭ್ಯಾಸಕ್ಕೆ, ದಾಸೋಹದ ಖರ್ಚಿಗೆ ಮಠದ ಹುಟ್ಟುವಳಿಯನ್ನು ಹೆಚ್ಚಿಸುವ ಯೋಜನೆಗಳನ್ನು ಕೈಗೆತ್ತಿಕೊಂಡಿದ್ದಾರೆ.

ಜನಜಾಗೃತಿ

ಶ್ರೀಮಠದಲ್ಲಿ ಜನಜಾಗೃತಿಯ ಕಾರ್ಯಕ್ರಮಗಳು ನಿರಂತರವಾಗಿ ನಡೆಯುವ ವ್ಯವಸ್ಥೆಯಾಗಿದೆ. ದೇಶದ ನಾನಾ ಕಡೆಯಿಂದ ವಿದ್ವಾಂಸರನ್ನು, ಕಲಾವಿದರನ್ನು ಕರೆಸಿ ಜನರಿಗೆ ಹೊಸ ಹೊಸ ವಿಚಾರಗಳು ಹಾಗೂ ಮನರಂಜನೆಯು ಒದಗುವಂತೆ ವಿಧಾಯಕವಾದ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದ್ದಾರೆ. ಅವರು ಬಿಜಾಪುರದ ಜ್ಞಾನಯೋಗಾಶ್ರಮದ ಪೂಜ್ಯ ಶ್ರೀ ಸಿದ್ಧೇಶ್ವರಸ್ವಾಮಿಗಳವರ ಆಧಾತ್ಮಪ್ರವಚನವನ್ನು ತಿಂಗಳುಗಟ್ಟಲೆ ನಡೆಸಿದ್ದನ್ನು ಉದಾಹರಿಸಬಹುದು.

ಸಮಸ್ಯೆಗಳಿಗೆ ಪರಿಹಾರ

ಮಠಗಳೆಂದರೆ ಜನಮನವನ್ನು ತಿಳಿಗೊಳಿಸುವ, ಅವರ ಬದುಕಿಗೆ ನೆಮ್ಮದಿ ತರುವ ಪಾವನ ನೆಲೆಗಳು. ಅವು ಧರ್ಮದ ನೆಲೆನೀಡಿದ್ದಂತೆ ಸಾಮಾಜಿಕ ಜಾಗೃತಿಯ ತಾಣಗಳೂ, ಸಂಘಟನೆಗಳ ಶಕ್ತಿಕೇಂದ್ರಗಳೂ ಆಗಿವೆ. ಶ್ರೀ ದೇಗುಲಮಠವು ಅಂಥ ಅಗ್ಗಳಿಕೆ ಪಾತ್ರವಾದದ್ದು ಪೂಜ್ಯ ಮುಮ್ಮಡಿ ನಿರ್ವಾಣಮಹಾಸ್ವಾಮಿಗಳ ಜನಪರ ಕಾಳಜಿಯಿಂದಾಗಿ ಎಂಬ ಮಾತಿನಲ್ಲಿ ಉತ್ಪ್ರೇಕ್ಷೆಯೇನೂ ಇಲ್ಲ. ಪೂಜ್ಯರು ಒಡೆದ ಮನಗಳನ್ನು ಒಂದುಗೂಡಿಸುವ ಸಾರ್ಥಕ ಕೆಲಸವನ್ನು ಮಾಡುತ್ತಿದ್ದಾರೆ. ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರ ನೀಡುತ್ತಿದ್ದಾರೆ. ಶ್ರೀ ಮಠವು ಒಂದು ನ್ಯಾಯಪೀಠವಾಗಿ ಪೂಜ್ಯ ಶ್ರೀ ನಿರ್ವಾಣಮಹಾಸ್ವಾಮಿಗಳು ನ್ಯಾಯಾಧೀಶರಾಗಿ ನಿಷ್ಪಕ್ಷಪಾತವಾದ ತೀರ್ಪುನೀಡಿ ಜನರ ಮನಸ್ಸನ್ನು ತಿಳಿಗೊಳಿಸಿದ್ದಾರೆ. ಜನರಿಗೆ ಸಹಬಾಳ್ವೆಯ ಮಹಾತತ್ವವನ್ನು ಮನವರಿಕೆ ಮಾಡಿದ್ದಾರೆ. ಮುಖ ಗಂಟುಹಾಕಿಕೊಂಡೋ, ಮುಖ ಸಪ್ಪಗೆ ಮಾಡಿಕೊಂಡೋ, ಲೋಕದ ಎಲ್ಲಾ ನೋವೂ

ತನಗೇ ಬಂದಿದೆಯೆಂದು ಬಸವಳಿದು ಬಂದ ಜನರನ್ನು ಕರುಣಾಳುವಾದ ಪೂಜ್ಯರ ಒಂದು ನಗೆ ನಿರಾಳವಾಗಿಸಿ ಬಿಡುತ್ತದೆ. ಜನರು ಮಂತ್ರಮುಗ್ಧರಾಗಿ ಅವರಿಗೆ ಶರಣಾಗುತ್ತಾರೆ. ಅಂಥ ಮಾಂತ್ರಿಕ ಶಕ್ತಿ ಪೂಜ್ಯರ ತೇಜಃಪೂರ್ಣ ವ್ಯಕ್ತಿತ್ವಕ್ಕೆ ಕೂಡಿ ಬಂದಿದೆ.

ಮಠಗಳೊಡನೆ ಸೌಹಾರ್ದಸಂಬಂಧ

ಪೂಜ್ಯರು ಉಳಿದ ಎಲ್ಲಾ ಮಠಗಳೊಡನೆ ಸೌಹಾರ್ದಯುತ ಸಂಬಂಧವನ್ನು ಹೊಂದಿದ್ದಾರೆ. ಅದು ಚಿಕ್ಕದಿರಲಿ, ದೊಡ್ಡದಿರಲಿ, ಮಠಗಳ ಸಂಪರ್ಕವಿರಿಸಿಕೊಂಡಿದ್ದಾರೆ. ಎಲ್ಲ ಸ್ವಾಮಿಗಳೂ ಕೂಡ ಮಾನವಕಲ್ಯಾಣಕ್ಕಾಗಿಯೇ ತಮ್ಮ ತಮ್ಮ ಶಕ್ತ್ಯಾನುಸಾರ ಶ್ರಮಿಸುತ್ತಿದ್ದಾರೆ. ಅವರಿಗೆ ಸ್ಫೂರ್ತಿನೀಡುವುದು, ಅವಶ್ಯವಾದಲ್ಲಿ ನೆರವಾಗುವುದು ತಮ್ಮ ಕರ್ತವ್ಯವೆಂದೇ ಅವರು ಭಾವಿಸುತ್ತಾರೆ. ಯಾವುದೇ ಮಠದಲ್ಲಿ ಸಮಸ್ಯೆಗಳುಂಟಾದಲ್ಲಿ ಅದನ್ನು ಬಗೆಹರಿಸಿ ಅದರ ಸೇವೆ ನಿರುಪಾಧಿಕವಾಗಿ ನಡೆಯುವಂತೆ ಶ್ರಮಿಸಿರುವುದೂ ಉಂಟು. ಹೀಗಾಗಿ ಎಲ್ಲಾ ಮಠಗಳವರೂ ಸಹ ಅವರನ್ನು ಮಾತೃಹೃದಯದ ಪೂಜ್ಯರೆಂದು ಆದರಿಸುತ್ತಿದ್ದಾರೆ; ಅವರ ಒತ್ತಾಸೆ, ಮಾರ್ಗದರ್ಶನ, ಪ್ರೋತ್ಸಾಹಗಳಿಗಾಗಿ ಹಾತೊರೆಯುತ್ತಾರೆ. ತಮ್ಮ ಶ್ರೀಮಠದಂತೆಯೇ ಉಳಿದ ಎಲ್ಲಾ ಮಠಗಳೂ ಬೆಳೆಯಬೇಕು. ಜನಕಲ್ಯಾಣ ಮಣಿಹ ನಿರಂತರವಾಗಿ ನಡೆಯಬೇಕು ಎಂಬುದು ಅವರ ಆಶಯ. ಅವರ ಇಂಥಾ ನಿಲವು ಅನನ್ಯವಾಗಿ ಕಾಣುತ್ತದೆ.

ಹೊಸ ಶಾಖಾಮಠ

ಮಳವಳ್ಳಿ ತಾಲ್ಲೂಕು ಹೆಬ್ಬಣಿ ಗ್ರಾಮದಲ್ಲಿ, ಗ್ರಾಮಸ್ಥರ ಅಪೇಕ್ಷೆಯಂತೆ ಶ್ರೀದೇಗುಲಮಠದ ಶಾಖಾಮಠ 'ಶ್ರೀನಿರ್ವಾಣೇಶ್ವರ ವಿರಕ್ತಮಠ' ೨೦೦೧ರಲ್ಲಿ ಆರಂಭವಾದುದು ಒಂದು ಚಾರಿತ್ರಿಕ ಘಟನೆ. ಪೂಜ್ಯ ಮುಮ್ಮಡಿ ನಿರ್ವಾಣ ಸ್ವಾಮಿಗಳು ಬಿ. ಶಂಭುಲಿಂಗ ಸ್ವಾಮಿ ಎಂಬ ವಟುವಿಗೆ ವಿರಕ್ತಾಶ್ರಮ ಚರಪಟ್ಟಾಧಿಕಾರವನ್ನು ಅನುಗ್ರಹಿಸಿದರು. ದಾನಿಗಳಾದ ಶ್ರೀ ಹೆಚ್.ಬಿ. ಗುರುಮಲ್ಲಪ್ಪನವರು ಈ ಶಾಖಾಮಠಕ್ಕೆ ಅಗತ್ಯವಾದ ನಿವೇಶನ ಹಾಗೂ ಕಟ್ಟಡಗಳನ್ನು ಕಟ್ಟಿಸಿಕೊಟ್ಟಿರುತ್ತಾರೆ. ಆ ವಟುವು ಈಗ ಪೂಜ್ಯರ ಕಣ್ಣರಿಕೆಯಲ್ಲಿ ಯುಕ್ತ ತರಬೇತಿಯನ್ನು ಪಡೆಯುತ್ತಿದ್ದಾರೆ.

ಭಕ್ತ ಬಳಗ

ತೌರಿಗೆ ಬರುವ ಹೆಣ್ಣುಮಕ್ಕಳ ಸಡಗರ ಶ್ರೀ ದೇಗುಲಮಠಕ್ಕೆ ಬರುವ ಭಕ್ತ ಬಳಗಕ್ಕೆ! ಅವರು ಶ್ರೀಗಳಿಗೆ ಭಕ್ತಿಕಾಣಿಕೆ ನೀಡಿ. ಪ್ರೀತಿಯ ಸೇವೆಮಾಡಿ ಕೃತಾರ್ಥರಾದರೆ, ತಾಯಿಕರುಳಿನ ಸ್ವಾಮಿಗಳು ಅವರಿಗೆ ಪ್ರೀತಿಯ ಉಪಚಾರ ಮಾಡಿ, ದಿವ್ಯಆಶೀರ್ವಾದ ನೀಡಿ ಅವರನ್ನು ಧನ್ಯರಾಗಿಸುತ್ತಾರೆ. ಅಲ್ಲದೆ ಭಕ್ತರು ತಮ್ಮ ಮನೆಗಳಿಗೆ ಪೂಜ್ಯರನ್ನು ಶಿವಪೂಜೆಗೆಂದು ಅಥವಾ ತಮ್ಮ ಊರಿನ ಸಾಂಸ್ಕೃತಿಕ ಸಮಾರಂಭಗಳಲ್ಲಿ ಆಶೀರ್ವಚನ ನೀಡಲೆಂದು ಆಹ್ವಾನಿಸಿ ಧನ್ಯತೆ ಪಡೆಯುವುದೂ ಉಂಟು. ಹೀಗಾಗಿ ನಾನಾ ಕಡೆಯಿಂದ ಬಿನ್ನಹದ ಕರೆಗಳು ನಿರಂತರ. ಜೊತೆಗೆ ಭಿಕ್ಷೆಗಾಗಿ ಬೇರೆ ಬೇರೆ ಊರುಗಳಿಗೆ ಹೋಗುವುದು ಬೇರೆ. ಶ್ರೀಮಠದ ಹಲವು ಮುಖದ ಸೇವಾಕಾರ್ಯಗಳು, ಸಾಲುಸಾಲಾಗಿ ಬರುವ ಭಕ್ತರ ಬಿನ್ನಹದ ಆಹ್ವಾನಗಳ ಒತ್ತಡ. ಇದರಿಂದಾಗಿ ಬಿಡುವು ಸಿಕ್ಕದ ಸಂದರ್ಭವೇರ್ಪಟ್ಟಿತು. ಹೀಗೆ ಕಾರ್ಯಬಾಹುಳ್ಯದ ಅನಿವಾರ್ಯತೆಯಿಂದ ಪೂಜ್ಯರಿಗೆ ಸಹಾಯಕರಾಗಿ ನಿಲ್ಲುವ ಕಿರಿಯ ಸಾಮಿಗಳ ಆವಶ್ಯಕತೆ ಕಂಡು ಬಂತು.

ಉತ್ತರಾಧಿಕಾರಿ

ಶ್ರೀ ದೇಗುಲಮಠದ ಉತ್ತರಾಧಿಕಾರಿಯ ಬಗ್ಗೆ ಹುಡುಕಾಟ ಆರಂಭವಾಯಿತು. ಶ್ರೀ ನಿರ್ವಾಣಮಹಾಸ್ವಾಮಿಗಳು ಶ್ರೀ ಸಿದ್ಧಗಂಗೆಯ ಪೂಜ್ಯರೊಡನೆ ಸಮಾಲೋಚನೆ ನಡೆಸಿದರು. ತುಮಕೂರು ಜಿಲ್ಲೆ ಹೆಬ್ಬೂರು ಬಳಿಯ ಕೆಂಬಳಲು ಗ್ರಾಮದ ಶರಣದಂಪತಿ ವಿಶ್ವೇಶ್ವರಯ್ಯ-ರೇಣುಕಮ್ಮನವರ ಹಿರಿಯ ಮಗ ರೇಣುಕೇಶರು ಅವರ ಗಮನಕ್ಕೆ ಬಂದರು. ಪ್ರೌಢಶಾಲಾ ಶಿಕ್ಷಣವನ್ನು ಶ್ರೀ ದೇಗುಲಮಠದಲ್ಲೇ ಮುಗಿಸಿ ಆನಂತರ ಶ್ರೀ ಸಿದ್ಧಗಂಗೆಯಲ್ಲಿ ಓದು ಮುಂದುವರಿಸಿ ಸ್ನಾತಕೋತ್ತರ ಪದವಿ ಪಡೆದಿದ್ದ ಶ್ರೀ ರೇಣುಕೇಶ ಸಂಸ್ಕೃತ ಅಧ್ಯಯನವನ್ನೂ ಮಾಡಿದ್ದ ಹುಟ್ಟುವಿರಾಗಿಯಾಗಿದ್ದರು. ದೈವಶ್ರದ್ಧೆ, ಗುರುಭಕ್ತಿ ಹಾಗೂ

ಸೇವಾಕಾಂಕ್ಷೆಯನ್ನು ಹೊಂದಿದ್ದು ಶ್ರೀಮಠದ ಉತ್ತರಾಧಿಕಾರಿಯಾಗಲು ಎಲ್ಲಾ ಅರ್ಹತೆಯನ್ನು ಪಡೆದಿರುವುದನ್ನು ಗಮನಿಸಿದರು. ಅವರನ್ನು ಆಯ್ಕೆ ಮಾಡಿ ಶ್ರೀ **ಮುಮ್ಮಡಿ ಮಹಲಿಂಗಸ್ವಾಮಿಗಳೆಂದು** ಕರೆದು ಪಟ್ಟಾಧಿಕಾರವನ್ನು ೨೩-೩-೧೯೮೮ರಂದು ನಡೆದ ಪವಿತ್ರ ಸಮಾರಂಭದಲ್ಲಿ ವಹಿಸಿಕೊಟ್ಟರು. ತಮಗೆ ಸಮರ್ಥ ಉತ್ತರಾಧಿಕಾರಿ ದೊರೆತ ಬಗ್ಗೆ ಪೂಜ್ಯರಿಗೆ ತೃಪ್ತಿಯಿದೆ. ಉಭಯಭಾಷಾವಿದ್ವಾಂಸರೂ, ಉತ್ಸಾಹೀ ಶರಣಪಥಗಾಮಿಗಳೂ ಆದ ಶ್ರೀ ಮುಮ್ಮಡಿ ಮಹಲಿಂಗಸ್ವಾಮಿಗಳು ಶ್ರೀ ದೇಗುಲಮಠದ ತೇರನ್ನು ಸರಿಯಾಗಿ ಮುನ್ನಡೆಸುವರೆಂಬ ವಿಸ್ವಾಸ ಅವರಿಗೆ ಇದೆ.

ದೇಶ-ವಿದೇಶ ಪರ್ಯಟನ

ಇಷ್ಟೆಲ್ಲಾ ನಿರಂತರ ಕಾರ್ಯಭಾರಗಳ ನಡುವೆಯೂ ಶ್ರೀಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳು ದೇಶ-ವಿದೇಶಗಳಲ್ಲಿ ಸುತ್ತಾಡಿ ತಮ್ಮ ಅನುಭವದ ಕ್ಷಿತಿಜವನ್ನು ವಿಸ್ತರಿಸಿಕೊಂಡಿದ್ದಾರೆ. ಶ್ರೀ ಸುತ್ತೂರು ಜಗದ್ಗುರುಗಳಾದ ಪೂಜ್ಯ ಶ್ರೀಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಏರ್ಪಡಿಸಿದ್ದ ಸಮಸ್ತ ಭಾರತ ದರ್ಶನ ಯಾತ್ರೆಯಲ್ಲಿ ಪಾಲ್ಗೊಂಡುದ್ದಲ್ಲದೆ, ಅಮೇರಿಕ, ಯೂರೋಪು ಮೊದಲಾದ ವಿದೇಶಗಳ ಪ್ರವಾಸ ಮಾಡಿಬಂದಿದ್ದಾರೆ. ಆಯಾ ದೇಶದ ಜನರ ಸಾಂಸ್ಕೃತಿಕ ಹಾಗೂ ಧಾರ್ಮಿಕ ಜೀವನವನ್ನು ವಿಶೇಷವಾಗಿ ಗಮನಿಸಿ ಬಂದು, ವಿದೇಶೀಯರ ಸಮಯಪಾಲನೆ, ಕಷ್ಟಸಹಿಷ್ಣುತೆ, ದೇಶಾಭಿಮಾನ ಮೊದಲಾದ ಗುಣಗಳನ್ನು ಭಾರತೀಯರು ಅಳವಡಿಸಿಕೊಳ್ಳುವುದು ಆಪೇಕ್ಷಣೀಯವೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಕ್ರಿಯಾಶೀಲತೆ

ಮುಮ್ಮಡಿ ನಿರ್ವಾಣಮಹಾಸ್ವಾಮಿಗಳು ಬರಿಯ ಕನಸುಗಾರರಲ್ಲ; ಯೋಜಕ ಸತ್ವವುಳ್ಳ ಕ್ರಿಯಾಶೀಲರು. ಅವರೊಬ್ಬ ಅದ್ಭುತ ಕ್ರಿಯಾತ್ಮಕ ತತ್ವಜ್ಞಾನಿ. ತಮ್ಮ ಬಳಿ ಬಂದವರಲ್ಲಿ ಇಂಥವೇ ಸದ್ಭಾವನೆಗಳನ್ನು ಮತ್ತು ಕ್ರಿಯಾಚಾರಗಳನ್ನು ಮೂಡಿಸಲು ಯತ್ನಿಸುತ್ತಾರೆ. ಅವರ ನಡೆ-ನುಡಿಗಳೇ ಉಳಿದವರಿಗೆ ಮಾದರಿ. ತಮ್ಮ ಸಂಪರ್ಕಕ್ಕೆ ಬಂದವರಲ್ಲಿ ಎಷ್ಟು ಜನರನ್ನು ಇಂಥ ಸನ್ಮಾರ್ಗಗಾಮಿಯಾಗುವಂತೆ ಮಾಡಿದೆ ಎಂದು ಅವರು ಲೆಕ್ಕ ಹಾಕುತ್ತಿದ್ದಾರು! 'ತ್ರಾಸು ಕಟ್ಟಳೆ ನಿಮ್ಮ ಕೈಯಲ್ಲಿ ತೂಗಿ ನೋಡು' ಎಂದು ಲಿಂಗದೇವನಿಗೆ ನಿತ್ಯ ನಿವೇದಿಸುತ್ತಿರಬಹುದೇನೋ ಎನಿಸುತ್ತದೆ.

ಅನನ್ಯ ವ್ಯಕ್ತಿತ್ವ.

ಪೂಜ್ಯರ ವ್ಯಕ್ತಿತ್ವದ ಬಗ್ಗೆ ವಿಚಾರ ಮಾಡಿದಾಗ, ಅವರ ಸಾಧನೆಗಳನ್ನು ಕುರಿತು ಬರೆಯುವಾಗ ಶರಣರ ಸೂಳ್ನುಡಿಯೊಂದು ಕಿವಿಯಲ್ಲಿ ನಿನದಿಸಿದಂತಾಗುತ್ತದೆ.

ತನುವಿನಲಿ ನಿರ್ಮೋಹ, ಮನದಲ್ಲಿ ನಿರಹಂಕಾರ
ಪ್ರಾಣದಲ್ಲಿ ನಿರ್ಭಯ, ಚಿತ್ತದಲ್ಲಿ ನಿರಪೇಕ್ಷ
ವಿಷಯಂಗಳಲ್ಲಿ ಉದಾಸೀನ, ಭಾವದಲ್ಲಿ ದಿಗಂಬರ,
ಜ್ಞಾನದಲ್ಲಿ ಪರಮಾನಂದವಡೆಗೊಂಡ ಬಳಿಕ
ಸೌರಾಷ್ಟ್ರ ಸೋಮೇಶ್ವರನೆಂಬ ಲಿಂಗ ಬೇರಿಲ್ಲ ಕಾಣಿರೆ (ಆದಯ್ಯ)

ಮೋಹ, ಅಹಂಕಾರ, ಭಯ, ಅಪೇಕ್ಷೆ, ಭಾವ, ವಿಷಯ-ಇವುಗಳಿಂದ ಮುಕ್ತನಾಗಿ, ಜ್ಞಾನದಲ್ಲಿ ಪರಮಾನಂದ ತುಂಬಿಕೊಂಡ ದೈವೀಗುಣ ಸಂಪನ್ನನು ಸಾಕ್ಷಾತ್ ದೇವರೇ.

ಮೌಲ್ಯಗಳ ಗಣಿ

ಇಂಥ ಅಪೂರ್ವವಾದ ಗುಣಮೌಲ್ಯಗಳ ಗಣಿಯಾಗಿರುವ ಶ್ರೀಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳು ನಮ್ಮ ನಡುವಿರುವ ನುಡಿವ, ನಡೆದಾಡುವ ಲಿಂಗವೇ ಆಗಿದ್ದಾರೆ. ಇಂಥ ದೈವೀ ಸ್ವರೂಪಿಗಳು ನಮ್ಮೊಡನೆ ಇನ್ನೂ ನೂರ್ಕಾಲವಿದ್ದು ನಮ್ಮನ್ನು ಹರಸುತ್ತಿರಲಿ ಎಂಬುದು ಎಲ್ಲರ ಒಕ್ಕೊರಲಿನ ಮೊರೆ. ಅವರ ಪಟ್ಟಾಧಿಕಾರದ ರಜತ ಮಹೋತ್ಸವದ ಪವಿತ್ರ ಸಂದರ್ಭದಲ್ಲಿ ಅವರಿಗೆ ಭಕ್ತಿಪುರಸ್ಸಾರವಾದ ಅಭಿವಂದನೆಗಳು.

■■

ದಿವ್ಯಗುರಿಯ ತೇಜೋನಿಧಿ
ಪೂಜ್ಯ ಶ್ರೀ ಶ್ರೀ ಮುಮ್ಮಡಿ ಮಹಲಿಂಗ ಸ್ವಾಮಿಗಳು

✍ ಎಸ್. ಚನ್ನಬಸವಯ್ಯ

ಭರತದೇಶ ಏಷ್ಯಾಖಂಡದಲ್ಲೆ ಅತಿದೊಡ್ಡ ಜಾತ್ಯಾತೀಕ ಪ್ರಜಾತಂತ್ರ ರಾಷ್ಟ್ರ. ನಮ್ಮ ಈ ರಾಷ್ಟ್ರದ ಕಲೆ, ಸಂಸ್ಕೃತಿ, ಧರ್ಮ ಪರಂಪರೆ ಶ್ರೇಷ್ಠ ಸ್ಥಾನವನ್ನು ಹೊಂದಿದೆ. ವಿಶ್ವದ ಮನ್ನಣೆಗೆ ಪಾತ್ರವಾಗಿದೆ. ವಿರಕ್ತ ಪರಂಪರೆಯ ಮಠಮಾನ್ಯಗಳು, ಅದರಲ್ಲೂ ಪ್ರಮುಖವಾಗಿ ಕರ್ನಾಟಕದಲ್ಲಿನ ಶೂನ್ಯ ಸಿಂಹಾಸನಾಧೀಶ್ವರರ ಪರಂಪರೆಯ ಮಠಗಳು ಪುರಾತನ ಕಾಲದಿಂದಲೂ ಐತಿಹಾಸಿಕ ಶ್ರೇಷ್ಠಸ್ಥಾನ ಪಡೆದಿವೆ. ಜ್ಞಾನ ದಾಸೋಹ, ಅನ್ನದಾಸೋಹದ ಆಶ್ರಮಗಳಾಗಿ ಸಮಾಜದ ಗೌರವಕ್ಕೆ ಪಾತ್ರವಾಗಿವೆ. ಅನಾಥರು, ನಿರ್ಗತಿಕರುಗಳಿಗೆ ಆಸರೆಯ ತಾಣವಾಗಿ, ಸಮಾಜದ ಅದರಲ್ಲೂ ಪ್ರಮುಖವಾಗಿ ಗ್ರಾಮೀಣ ಜನರ ಅಭಿವೃದ್ಧಿಗಾಗಿ ಈ ಮಠಗಳು ಸಲ್ಲಿಸಿರುವ ಮತ್ತು ಸಲ್ಲಿಸುತ್ತಿರುವ ಸೇವೆ ಅಮೋಘವಾದುದಾಗಿದೆ.

ಸಮಾಜದ ಜನರನ್ನು ತಿದ್ದುವ, ಅವರಿಗೆ ಉತ್ತಮ ವಿದ್ಯೆ ಬುದ್ಧಿ ಕಲಿಸಿ ಅವರನ್ನು ಉತ್ತಮ ಪ್ರಜೆಗಳನ್ನಾಗಿ ರೂಪಿಸುವ ಮಹತ್ತರ ಹೊಣೆಗಾರಿಕೆಯನ್ನು ಮಠಗಳು ನಿರ್ವಹಿಸುತ್ತಿರುವವು. ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಹಾಗೂ ಬಹುಮಟ್ಟಿಗೆ ಸಾಹಿತ್ಯಕ್ಷೇತ್ರದಲ್ಲಿ ಮಠಗಳು ಮಾಡಿರುವ ಸಾಧನೆ ಅದ್ಭುತ. ಸರ್ಕಾರ ಮಾಡಲಾಗದಂತಹ ಸಾಧನೆಯನ್ನು ಶೈಕ್ಷಣಿಕ ಕ್ಷೇತ್ರದಲ್ಲಿ ಒಂದೊಂದೆ ಮಠಗಳು ಮಾಡಿವೆ. ಅನಾಥರಿಗೆ, ಬಡವರಿಗೆ ಆಶ್ರಯ ನೀಡಿ ಅವರ ಬದುಕಿಗೆ ದಾರಿದೀಪವಾಗಿವೆ. ಮಠಗಳು ಹೊಂದಿರುವ ಸಮಾಜ ಸುಧಾರಣೆಯ ಸೇವಾಭಾವನೆಯು ಈ ಎಲ್ಲಾ ಸಾಧನೆಗಳ ಹಿಂದಿರುವ ಧ್ಯೇಯ.

ಒಂದು ಸಂಸ್ಕೃತಿ, ಒಂದು ಧರ್ಮ, ಶಿಕ್ಷಣ ಕ್ಷೇತ್ರ, ರಾಜಕೀಯ ಪಕ್ಷ ಹೀಗೆ ಯಾವುದೇ ಆಗಲಿ ಅದು ತನ್ನ ಸಂಕಲ್ಪಿತ ಗುರಿಯನ್ನು ತಲುಪಬೇಕಾದರೆ, ಯಶಸ್ಸನ್ನು ಗಳಿಸಬೇಕಾದರೆ ಪ್ರತಿಯೊಂದಕ್ಕೂ ಮಾರ್ಗದರ್ಶಕರು ಅಥವಾ ಮುಖಂಡರು ಅವಶ್ಯವಾಗಿ ಇರಬೇಕು. ಈ ಸ್ಥಾನ ಪರಮವಾದುದು ಹಾಗೂ ಪವಿತ್ರವಾದುದು. ಇಂಥ ಮಾರ್ಗದರ್ಶಕರು ಅಥವಾ ಮುಖಂಡರನ್ನು ಸಂಸ್ಕೃತಿಯ ಪ್ರಚಾರಕರು, ಧಾರ್ಮಿಕ ಮುಖಂಡರು, ವಿದ್ವಾಂಸರು, ತತ್ವಜ್ಞಾನಿಗಳು, ತಪೋನಿಧಿಗಳು, ತಜ್ಞರು ಮತ್ತು ನಾಯಕರು ಎಂದು ಬಗೆ ಬಗೆಯಾಗಿ ಗುರುತಿಸುತ್ತೇವೆ. ಇವರು ಎಷ್ಟರಮಟ್ಟಿನ ಸಾಧಕರಾಗಿರುತ್ತಾರೆಯೊ, ಸಂಯಮಿಗಳಾಗಿರುವರೊ, ದಕ್ಷರಾಗಿರುವರೊ, ದೂರದೃಷ್ಟಿಯನ್ನು ಹೊಂದಿರುವರೊ, ಸೇವಾ ಮನೋಭಾವನೆ ತಳೆದಿರುವರೊ ಆ ಆಧಾರದ ಮೇಲೆ ಆಯಾ ಕ್ಷೇತ್ರ ಉನ್ನತ ಸಾಧನೆ ಮಾಡುತ್ತದೆ, ಅದ್ಭುತ ಯಶಸ್ಸನ್ನು ಸಾಧಿಸುತ್ತವೆ. ಸಮಾಜಕ್ಕೆ ಹಾಗೆಯೇ ದೇಶಕ್ಕೆ ವರದಾನವಾಗಿ ಪರಿಣಮಿಸುತ್ತದೆ.

ಇಂಥ ಒಂದು ವಾತಾವರಣವನ್ನು ಇಂದು ನಾವು ವಿಶೇಷವಾಗಿ ಕರ್ನಾಟಕದ ವಿರಕ್ತ ಮಠಗಳು ಮತ್ತು ಮಠಾಧಿಪತಿಗಳಲ್ಲಿ ಕಾಣಬಹುದು. ಕನಕಪುರದ ಶ್ರೀ ದೇಗುಲಮಠವು ಇವುಗಳಲ್ಲಿ ಒಂದು. ಶ್ರೀ ದೇಗುಲಮಠದ ಪೀಠಾಧಿಪತಿಗಳ ಪರಂಪರೆ ಒಂದು ವಿಶೇಷ ಪರಂಪರೆ. ಸಾಮಾನ್ಯವಾಗಿ ಮಠಗಳಲ್ಲಿ ಒಬ್ಬರು ಮಠಾಧಿಪತಿಗಳಿರುತ್ತಾರೆ. ಇವರು ವಯೋವೃದ್ಧರಾಗಿದ್ದರೆ, ಮಠದ ವ್ಯವಹಾರವನ್ನು ನಿಭಾಯಿಸುವುದಕ್ಕೆ ಅವರಿಂದ ಸಾಧ್ಯವಿಲ್ಲದಿದ್ದರೆ ಅಂತಹ ಸಂದರ್ಭಗಳಲ್ಲಿ ಉತ್ತರಾಧಿಕಾರಿ ಪೀಠಾಧಿಪತಿಯನ್ನು ನೇಮಕ ಮಾಡಿಕೊಳ್ಳುವುದು ವಾಡಿಕೆ. ಇಲ್ಲವೆ ಮಠದ ಮುಂದಿನ ಮರಿ ಎಂದು ಹೆಸರಿಸಿ ಆಯಾ ಮಠದಲ್ಲೆ ಅವರಿಗೆ ವಿದ್ಯಾಭ್ಯಾಸ, ವೇದಾಧ್ಯಯನ ಮುಂತಾದ ಸಂಸ್ಕಾರಗಳನ್ನು ನೀಡುವುದು ಸಂಪ್ರದಾಯ. ಆದರೆ ಶ್ರೀ ದೇಗುಲಮಠದಲ್ಲಿ ಆದಿ ನಿರ್ವಾಣಸ್ವಾಮಿಯವರ ಕಾಲದಿಂದಲೂ ಹಿರಿಯ ಮತ್ತು ಕಿರಿಯ ಸ್ವಾಮಿಗಳಿಬ್ಬರೂ ಜೊತೆ ಜೊತೆಯಾಗಿ ಮಠಾಧಿಪತಿಗಳಾಗಿ ಮಠದ ಉಸ್ತುವಾರಿ ನೋಡಿಕೊಳ್ಳುವ ಪರಂಪರೆ ಬೆಳೆದುಬಂದಿದೆ. ಇಲ್ಲಿ ಇಮ್ಮಡಿ

ನಿರ್ವಾಣಸ್ವಾಮಿಗಳು ಮತ್ತು ಮಹಾಲಿಂಗ ಸ್ವಾಮಿಗಳ ನಾಮಾಭಿದಾನದ ಪರಂಪರೆ ಮುಂದುವರಿದಿದ್ದು ಹಿರಿಯ ಶ್ರೀಗಳಾದ ಮುಮ್ಮಡಿ ನಿರ್ವಾಣಸ್ವಾಮಿಗಳು ಹಾಗೂ ಕಿರಿಯ ಶ್ರೀಗಳಾದ ಮುಮ್ಮಡಿ ಮಹಾಲಿಂಗಸ್ವಾಮಿಗಳು ಈ ಪರಂಪರೆಯನ್ನು ಮುಂದುವರಿಸಿರುವರು.

ಜನನ ಮತ್ತು ಬಾಲ್ಯ: ತುಮಕುರು ಜಿಲ್ಲೆ ಹೆಬ್ಬೂರು ಹೋಬಳಿಯ ಕೆಂಬಳಲು ಗ್ರಾಮದ ಸಾಧಾರಣ ರೈತಕುಟುಂಬದಲ್ಲಿ ಶರಣೆ ರೇಣುಕಮ್ಮ ಮತ್ತು ಶರಣ ವಿಶ್ವೇಶ್ವರಯ್ಯ ದಂಪತಿಗಳ ಜೇಷ್ಠ ಪುತ್ರರಾಗಿ ೧೫-೫-೧೯೭೩ ರಲ್ಲಿ ಜನನ. ತಂದೆತಾಯಿ ಇಟ್ಟ ಹೆಸರು ರೇಣುಕೇಶ್. ಬಾಲ್ಯದಲ್ಲಿ ಗ್ರಾಮದ ಇತರೆ ಮಕ್ಕಳಂತೆ ಆಟ ಪಾಠ. ಬೇಸಾಯದ ಕೆಲಸಕಾರ್ಯದಲ್ಲಿ ತಂದೆಗೆ ನೆರವು ನೀಡಿಕೆ. ಗ್ರಾಮದ ಇತರೆ ಮಕ್ಕಳಿಗಿಂತ ಭಿನ್ನವಾದ ಗುಣಗಳಾವುವೂ ಗೋಚರವಾಗದ ಸಾಮಾನ್ಯ ಮಕ್ಕಳಂತೆ ಬಾಲ್ಯದ ಜೀವನ. ಕಷ್ಟಕಾರ್ಪಣ್ಯದ ಕಟು ಅನುಭವ. ಭವಿಷ್ಯ ರೂಪಿಸಿಕೊಳ್ಳುವ ದಿಸೆಯಲ್ಲಿ ಚಿಂತನೆ ಮಾಡುವ ಪ್ರಬುದ್ಧತೆ ಇಲ್ಲದಿದ್ದರೂ, ಕಡು ಬಡತನದ ದವಡೆಯಿಂದ ತಮ್ಮ ಕುಟುಂಬವನ್ನು ಪಾರುಮಾಡಬೇಕೆಂಬ ಚಿಂತನೆ ಮಾತ್ರ ಗಾಢವಾಗಿತ್ತು. ಬಾಲ್ಯಾವಸ್ಥೆಯಲ್ಲಿ ಸಾಮಾನ್ಯ ಮಕ್ಕಳಂತೆ ಗೋಚರವಾಗುತ್ತಿದ್ದರೂ, ಬಾಲಕನಿಗೆ ಅರಿವಿಲ್ಲದೆಯೇ ಆಗೋಚರ ಸೈದ್ಧಾಂತಿಕ ಛಾಯೆ, ನೈತಿಕ ಸೆಳವಿನ ಪ್ರಭಾವ ಅವರನ್ನು ರೂಪಿಸುತ್ತಾ ಬಂದು ಒಳ್ಳೆಯದನ್ನು ಒಪ್ಪುವ, ಕೆಟ್ಟದನ್ನು ನಿಷ್ಠುರವಾಗಿ ಖಂಡಿಸುವ ಗುಣ ಬಾಲಕನಲ್ಲಿ ಬೆಳೆಯುತ್ತಾ ಬಂದಿತು. ಓದಿನಲ್ಲಿ, ಇತರೆ ಕಾರ್ಯಗಳಲ್ಲಿ ಸಾಧಾರಣವಾಗಿದ್ದರು. ಹೇಳಿಕೊಳ್ಳುವಂತಹ, ಗುರುತಿಸಬಹುದಾದಂತಹ ಯಾವುದೇ ವಿಶೇಷ ಅಂಶ ಬಾಲ್ಯಾವಸ್ಥೆಯಲ್ಲಿ ಅವರಲ್ಲಿ ಕಂಡುಬಂದಿರಲಿಲ್ಲ.

ವ್ಯವಸಾಯಸ್ಥ ಕುಟುಂಬದಿಂದ ಬಂದ ರೇಣುಕೇಶ್‌ರವರಿಗೆ ಮಣ್ಣಿನ ಜೊತೆ ಅವಿನಾಭಾವ ಸಂಬಂಧ. ಗದ್ದೆ ಹೊಲ ತೋಟವೆಂದರೆ ಅವರಿಗೆ ಪ್ರಾಣ. ದಿನದಲ್ಲಿ ಒಮ್ಮೆಯಾದರೂ ಅಲ್ಲಿ ಸುತ್ತಾಡಿ ಬರದಿದ್ದರೆ ಮನಸ್ಸಿಗೆ ಸಮಾಧಾನವಿಲ್ಲ. ಬೇಸರವಾದಾಗ ತಮ್ಮ ತೋಟದ ಪಕ್ಕದಲ್ಲಿನ ವಿಶಾಲವಾದ ಕೆರೆಯ ಏರಿಯಲ್ಲಿ ಕುಳಿತು ಸುತ್ತಲೂ ಹಸಿರು ಚೆಲ್ಲುವ ಗದ್ದೆ ತೋಟಗಳನ್ನು ನೋಡುತ್ತ ನೋಡುತ್ತ ಭಾವಪರವಶನಾಗಿ ಮೈಮರೆಯುತ್ತಿದ್ದ ಅವರಿಗೆ ಪ್ರಕೃತಿಯ ಮಡಿಲಲ್ಲಿ ಕುಳಿತಾಗ ಯಾವುದೋ ಅವ್ಯಕ್ತ ಶಾಂತಿ, ಸಮಾಧಾನ ಮನಸ್ಸಿಗೆ. ಬಾಲ್ಯದಿಂದಲೂ ರೂಢಿಯಾದ ಮುಂಜಾನೆ, ಸಂಜೆಯ ವರ್ಣಮಯ ಮನಮೋಹಕ ದೃಶ್ಯದ ಲಾಸ್ಯರಂಜನೆಗೆ ಒಳಗಾದ ನಿಬ್ಬೆರಗು ಇಂದಿಗೂ ಮನಸ್ಸಿನಲ್ಲಿ ಸ್ಥಾಯಿಯಾಗಿದೆ. ದೇಗುಲಮಠದ ಸ್ವಾಮಿಯಾದ ಮೇಲೂ ನೆಲ, ಬಾನು, ಬೆಟ್ಟ, ಗುಡ್ಡ, ತೆಂಗಿನ ಬಾಗು ಬಳುಕು, ಬೀಸಿ ಕರೆವ ಬಾಳೆಯ ತೋಟ, ಪಚ್ಚೆ, ಹಸಿರು ಮುಕ್ಕಳಿಸುವ ಗದ್ದೆಗಳ ಸಾಲುಗಳ ಭಾವನಾತ್ಮಕ ಸಂಬಂಧ ಉಳಿದುಕೊಂಡು ಬಂದಿದೆ.

ವಿದ್ಯಾಭ್ಯಾಸ:

ಅವರ ಪ್ರಾಥಮಿಕ ವಿದ್ಯಾಭ್ಯಾಸ ಪಕ್ಕದ ಸೀನಪ್ಪನ ಹಳ್ಳಿಯ ಉಪಾಧ್ಯಾಯರಾಗಿದ್ದ ಅವರ ದೊಡ್ಡಪ್ಪ ಶ್ರೀ ಸಿದ್ಧಲಿಂಗಯ್ಯನವರ ಮಾರ್ಗದರ್ಶನವನ್ನು ನಡಯಿತು. ಚಿಕ್ಕಂದಿನಿಂದಲೂ ಎಲ್ಲರೊಡನೆ ಆತ್ಮೀಯವಾಗಿ ನಡೆದುಕೊಳ್ಳುವ ಸ್ನೇಹಮಯಿ. ಮಾಧ್ಯಮಿಕ ಶಾಲಾ ಶಿಕ್ಷಣ ಕೆಂಬಳಲಿನ ಸರ್ಕಾರಿ ಮಾಧ್ಯಮಿಕ ಶಾಲೆಯಲ್ಲಿ ಸಾಗಿತು. ನಂತರ ೧೯೮೬ರಲ್ಲಿ ಪ್ರೌಢಶಾಲಾ ವಿದ್ಯಾಭ್ಯಾಸಕ್ಕೆ ಕನಕಪುರಕ್ಕೆ ಆಗಮನ. ಶ್ರೀ ದೇಗುಲಮಠದಲ್ಲಿ ಆಶ್ರಯ. ಸಂಸ್ಕೃತದ ಅಭ್ಯಾಸವೂ ನಡೆಯಿತು. ೯ನೇ ತರಗತಿ ಓದುತ್ತಿದ್ದಾಗ ಯುಗಾದಿ ಹಬ್ಬದಂದು ಲಿಂಗಧಾರಣೆ. ಶ್ರೀ ದೇಗುಲಮಠದ ಶ್ರೀ ನಿರ್ವಾಣಸ್ವಾಮಿ ಪ್ರೌಢಶಾಲೆಯಲ್ಲಿ ಎಸ್.ಎಸ್.ಎಲ್.ಸಿ ವರೆಗೆ ವಿದ್ಯಾಭ್ಯಾಸ. ನಂತರ ಕಾಲೇಜು ವಿದ್ಯಾಭ್ಯಾಸಕ್ಕೆ ತುಮಕೂರಿಗೆ ಆಗಮನ. ಶ್ರೀ ಸಿದ್ಧಗಂಗಾಮಠದಲ್ಲಿ ಆಶ್ರಯ. ಮಠದ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ಪಿಯುಸಿ ವಿದ್ಯಾಭ್ಯಾಸ. ಸಿದ್ಧಗಂಗಾ ಪ್ರಥಮ ದರ್ಜೆ ಮಹಾವಿದ್ಯಾಲಯದಲ್ಲಿ ಬಿ.ಎ. ಪದವಿ ವ್ಯಾಸಂಗ, ಬಿ.ಎ. ಪದವಿ ಗಳಿಕೆ ನಂತರ ಬೆಂಗಳೂರು ವಿಶ್ವವಿದ್ಯಾಲಯದಿಂದ ಕನ್ನಡ ಎಂ.ಎ. ಗಳಿಕೆ. ಓದುವ ಹವ್ಯಾಸ ಅಪಾರ. ಯಾವಾಗಲೂ ಓದುತ್ತಲೇ ಇರಬೇಕೆಂಬ ಅಭಿಲಾಷೆ. ತಣಿಯದ ಜ್ಞಾನಪಿಪಾಸು.

ಕನಕಪುರದ ಶ್ರೀ ದೇಗುಲಮಠ ನೆಟ್ಟ ಗಿಡಕ್ಕೆ ನೀರೆರೆದು ಆರೈಕೆ ಮಾಡಿ ಉಜ್ವಲವಾಗಿ ಬೆಳೆಸಿದ್ದು ಶ್ರೀ ಸಿದ್ಧಗಂಗಾಮಠ. ಮಠಗಳ ಉಡಿಯಲ್ಲೇ ಬೆಳೆದ, ಸ್ವಾಮಿಗಳ ಸನಿಹದಲ್ಲೇ ಓಡಾಡಿದ ರೇಣುಕೇಶ್‌ಗೆ ತಾವು ಎಂದಾದರು ಒಂದು ಮಠದ ಸ್ವಾಮೀಜಿ ಆಗುವ ಆಕಾಂಕ್ಷೆಯಾಗಲಿ, ಇಂಥ ಒಂದು ಅವಕಾಶ ತಮಗೆ ಸಿಗಬಹುದೆಂಬ ಕಲ್ಪನೆಯಾಗಲಿ ಎಂದೂ ಎಲ್ಲೂ ಅವರ ಮನಸ್ಸಿನಲ್ಲಿ ಸುಳಿದಿರಲಿಲ್ಲ. ಈ ವಿಚಾರವಾಗಿ ಯಾರಾದರೂ ಪ್ರಸ್ತಾಪ ಮಾಡಿದ ಸಂದರ್ಭಗಳ ಅರಿವೂ ಇವರಿಗೆ ಇರಲಿಲ್ಲ. ವಿದ್ಯಾಭ್ಯಾಸ ಮುಗಿದ ನಂತರ ತಾವು ಏನುಮಾಡಬೇಕು ಎಂಬ ಕಲ್ಪನೆಯಾಗಲಿ, ಭವಿಷ್ಯದ ಜೀವನದ ಬಗ್ಗೆ ಚಿಂತೆಯಾಗಲಿ ಯಾವುದೂ ಇಲ್ಲದ ನಿರ್ಲಿಪ್ತ ಭಾವ ಅವರಲ್ಲಿ ಮೂಡಿತ್ತು. ಆದರೂ ಯಾವುದೋ ಒಂದು ಅಗೋಚರ ಶಕ್ತಿ ಇವರನ್ನು ಕೈಹಿಡಿದು ನಡೆಸುತ್ತಾ, ನಡೆನುಡಿಗಳನ್ನು ತಿದ್ದುತ್ತಾ, ಒರೆಹಚ್ಚಿದ ಗುಣಗಳನ್ನು ತುಂಬುತ್ತಾ ಸನ್ಮಾರ್ಗದಲ್ಲಿ ನಡೆಸುತ್ತಾ ಸಿದ್ಧಗಂಗಾ ಮಠದಲ್ಲಿ ಪರಮ ಪೂಜ್ಯ ಶ್ರೀಗಳ ಪರಮಾಪ್ತ ಶಿಷ್ಯರನ್ನಾಗಿ ಮಾರ್ಪಡಿಸಿದ ಬಗ್ಗೆ ಅವರಿಗೆ ವಿಸ್ಮಯವೆನಿಸಿದೆ. ಇದೊಂದು ದೈವೀಕೃಪೆಯೆಂದು ನಾವು ಅರ್ಥೈಸಬಹುದು.

ಮಿಂಚಿ ಮಾಯವಾಗಿದ್ದ ಸತ್ಯಸಂಗತಿ:

ಬಾಲಕ ರೇಣುಕೇಶ್ ಕನಕಪುರದ ಶ್ರೀ ದೇಗುಲಮಠದಲ್ಲಿ ಪ್ರೌಢಶಾಲಾ ವಿದ್ಯಾಭ್ಯಾಸ ಮಾಡುತ್ತಿದ್ದಾಗ ನಡೆದ ಮಹಾಲಿಂಗ ಸ್ವಾಮೀಜಿಯವರ ಆರಾಧನಾಮಹೋತ್ಸವದ ಸಂದರ್ಭದಲ್ಲಿ ಪರಮ ಪೂಜ್ಯ ಶ್ರೀ ಶ್ರೀ ಮುಮ್ಮಡಿ ನಿರ್ವಾಣ ಸ್ವಾಮೀಜಿಯವರು ಮತ್ತು ಅಂಕನಹಳ್ಳಿ ಗವಿಮಠದ ಪರಮ ಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿಯವರ ದಿವ್ಯದೃಷ್ಟಿ ಬಿದ್ದು ಅದು ಅಲ್ಲೇ ಮರೆಯಾಗಿತ್ತು. ರೇಣುಕೇಶ್ ತಮ್ಮ ತಾಯಿಯೊಡನೆ ಆರಾಧನೆಯ ದಿನ ಮಠದ ಆವರಣದಲ್ಲಿ ಬರುತ್ತಿದ್ದಾಗ ಎದುರಿಗೆ ಬಂದ ಪರಮ ಪೂಜ್ಯ ಮುಮ್ಮಡಿ ನಿರ್ವಾಣ ಸ್ವಾಮಿಜಿಯವರು ಮತ್ತು ಅಂಕನಹಳ್ಳಿ ಗವಿಮಠದ ಶ್ರೀಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮೀಜಿಯವರಿಗೆ ನಮಸ್ಕರಿಸಿ ಮೇಲೆದ್ದಾಗ ಅಂಕನಹಳ್ಳಿ ಶ್ರೀಗಳು ರೇಣುಕೇಶ್‌ರವರ ತಾಯಿಯನ್ನು ಕುರಿತು "ನಿನ್ನ ಮಗನ್ನ ಸ್ವಾಮೀಜಿ ಮಾಡೋಣ ಅಂತಿದ್ದೀನಿ ಕಣಮ್ಮ, ನೀನು ಏನು ಹೇಳ್ತಿ" ಎಂದಷ್ಟೇ ಕೇಳಿ ಬಾಲಕನ ತಲೆ ಸವರಿ ಹೊರಟು ಹೋದರು. ಅದು ಬಿಟ್ಟರೆ, ಮುಂದೆ ಯಾವಾಗಲೂ ಈ ವಿಚಾರವಾಗಿ ಯಾವುದೇ ಪ್ರಸ್ತಾಪ ಬಂದಿರಲಿಲ್ಲ. ಬಾಲಕ ರೇಣುಕೇಶ್‌ಗೂ ಆ ವಿಚಾರ ಆ ದಿನ ವಿಶೇಷವಾಗಿ ಕಂಡುಬರಲಿಲ್ಲ. ಮುಗ್ಧ ಬಾಲಕನಿಗೆ ಆ ವಿಚಾರ ಅಷ್ಟು ಗಹನವಾದುದೆಂದು ಅನ್ನಿಸಲೇ ಇಲ್ಲ. ಅಂದಿಗೆ, ಅಲ್ಲಿಗೇ ಆ ವಿಚಾರ ಮರೆತು ಮಾಯವಾಗಿತ್ತು.

ನೂತನ ಪರ್ವ:

ದೈವದ ಆಣತಿಯೊ ಏನೋ! ಸಿದ್ಧಗಂಗಾಮಠಕ್ಕೆ ವಿದ್ಯಾಭ್ಯಾಸ ಮುಂದುವರಿಸಲು ರೇಣುಕೇಶ್ ಬಂದರು. ಒಂದು ದಿವ್ಯ ಸಾನ್ನಿಧ್ಯಕ್ಕೆ ದಿವ್ಯ ಮುಹೂರ್ತವೊಂದರಲ್ಲಿ ದೈವ ಎಳೆದು ತಂದಿತು. ಗುರುಗಳ ಕಡೆಗೆ ಒಂದು ಅವ್ಯಕ್ತ ಸೆಳೆತ. ಅಕ್ಕಮಹಾದೇವಿ ಹೇಳುವಂತೆ

ಅರಲುಗೊಂಡ ಕೆರೆಗೆ ತೊರೆಬಂದು ಹಾಯ್ದಂತಾಯಿತ್ತು.
ಬರಲುಗೊಂಡ ಸಸಿಗೆ ಮಳೆ ಸುರಿದಂತಾಯಿತ್ತು ನೋಡಾ ಇಂದೆನಗೆ.
ಇಹದ ಸುಖ ಪರದ ಗತಿ ನಡೆದು ಬಂದಂತಾಯಿತ್ತು ನೋಡಾ ಎನಗೆ
ಚೆನ್ನಮಲ್ಲಿಕಾರ್ಜುನಯ್ಯಾ, ಗುರುಪಾದವ ಕಂಡು ಧನ್ಯಳಾದೆ ನೋಡಾ!

ಆ ಬಗೆಯ ಧನ್ಯತೆಯ ಭಾವ ಅರಳಿತು ಗುರುಗಳ ಪಾದ ದರುಶನವಾದಾಗ ರೇಣುಕೇಶ್‌ಗೆ.

ಶ್ರೀ ಸಿದ್ಧಗಂಗಾ ಮಠದಲ್ಲಿ ಓದುತ್ತಿದ್ದಾಗ ಯುವಕ ರೇಣುಕೇಶ್‌ರವರ ಜೀವನದ ಒಂದು ನೂತನ ಪರ್ವ ಆರಂಭ. ಶ್ರೀ ಶ್ರೀ ಉದ್ದಾನ ಸ್ವಾಮೀಜಿಯವರ ಚರಿತ್ರೆಯಿಂದ ಪ್ರಭಾವಿತರಾದ ಅವರು ಪ್ರತಿದಿನ ತಪ್ಪದೆ ಶ್ರೀ ಶ್ರೀ ಉದ್ದಾನ ಸ್ವಾಮೀಜಿಯವರ

ಗದ್ದುಗೆಗೆ ನಮಸ್ಕಾರ ಮಾಡಿ "ಅಪಕೀರ್ತಿ ಬರದಂತೆ ನನ್ನನ್ನು ಕಾಪಾಡಿ ಮುನ್ನಡೆಸು ತಂದೆ" ಎಂದು ಪ್ರಾರ್ಥಿಸುತ್ತಿದ್ದರು. ಯಾವುದೇ ಸಂದರ್ಭವಿದ್ದರೂ ಉದ್ದಾನ ಸ್ವಾಮಿಗಳ ಗದ್ದುಗೆಗೆ ನಮಸ್ಕರಿಸದೆ ದಿನಚರಿ ಪ್ರಾರಂಭಿಸುತ್ತಿರಲಿಲ್ಲ.

ಆಧ್ಯಾತ್ಮಿಕ ತರಬೇತಿ:

ಶ್ರೀ ಸಿದ್ಧಗಂಗಾಮಠದಲ್ಲಿ ವಾಸ್ತವ್ಯ ಹೂಡಿ, ಪಿಯುಸಿ ವ್ಯಾಸಂಗ ಮಾಡುತ್ತಿದ್ದ ಸಮಯದಲ್ಲಿ ಯುವಕ ರೇಣುಕೇಶ್ ಅವರಿಗರಿವಿಲ್ಲದೆ ಆಧ್ಯಾತ್ಮಿಕ ಮಾರ್ಗ ತುಳಿಯತೊಡಗಿದರು. ಸಿದ್ಧಗಂಗಾ ಶ್ರೀಗಳ ಅಭಿಮಾನ ಬರಸೆಳೆಯಿತು. ಶ್ರೀಗಳ ಆಪ್ತ ಶಿಷ್ಯರಾದರು. ಶ್ರೀಗಳ ಒಳ ಹೊರಗಿನ ನೇಮ ನಿಷ್ಠೆಗಳಿಗೆ ಅಣಿಮಾಡುವ ಕೈಂಕರ್ಯದಲ್ಲಿ ತೊಡಗಿದರು. ಶ್ರೀಗಳ ಶಿವ ಪೂಜೆಗೆ ವ್ಯವಸ್ಥೆ ಮಾಡುವುದರಲ್ಲಿ ಮೊದಲಿಗರಾಗಿ ಅವಕಾಶ ದೊರಕಿಸಿಕೊಂಡರು. ಶ್ರೀಗಳ ಅಂತರಂಗದ ಆಪ್ತ ಶಿಷ್ಯರಾಗಿ ರೂಪುಗೊಂಡರು. ಶ್ರೀಗಳವರು ತಮ್ಮ ಅಂತರಂಗದ ವಿಚಾರಗಳನ್ನು ಇವರೊಡನೆ ಹಂಚಿಕೊಳ್ಳುತ್ತಿದ್ದರೆಂದರೆ ಇವರಲ್ಲಿ ಎಷ್ಟು ಗಾಢವಾದ ಒಲುಮೆ, ಆಪ್ತತೆ ಇತ್ತು ಎಂಬುದನ್ನು ವರ್ಣಿಸಲು ಅಸದಳವಾದುದು. ಶ್ರೀಗಳ ಸೇವೆಯಲ್ಲಿ ಮನಃ ಪೂರ್ವಕವಾಗಿ ನಿರತರಾಗಿದ್ದ ರೇಣುಕೇಶ್ ಶ್ರೀಗಳ ಪ್ರಭಾವ ಪ್ರಭೆಯಲ್ಲಿ ಪುಟವಿಟ್ಟು ಪರಿಶುದ್ಧಾತ್ಮರಾಗಿ ಬೆಳೆದರು. ಸರ್ವತ್ಯಾಗಿಯಾದ ಶ್ರೀಗಳು ಈ ಶಿಷ್ಯನ ಒಲುಮೆಯ ಬಂಧನಕ್ಕೆ ಒಳಗಾಗಿದ್ದರು.

ಪೂಜೆಯಲ್ಲಿ ಪರಮಾನಂದ:

ಶಿವಪೂಜೆಯಲ್ಲಿ ಇವರಿಗಿರುವ ಆನಂದಕ್ಕೆ ಪಾರವೇ ಇಲ್ಲ. ಪೂಜೆಯಲ್ಲಿ ಏಕಾಗ್ರತೆಯ ಮಟ್ಟ ತಲುಪಿದಾಗ ಸಂಪೂರ್ಣವಾಗಿ ಶಿವಮಯವಾಗುವುದು ಅವರ ಪೂಜೆಯ ವಿಶೇಷ. ಓದುವುದನ್ನು ಬಿಟ್ಟರೆ ಶಿವಪೂಜೆ ಅವರಿಗೆ ಪರಮ ಆನಂದವನ್ನು ಉಂಟುಮಾಡುವುದು. ಮುಂದೆ ಮಾಡಬೇಕಾಗಿರುವ ಸಂಕಲ್ಪದ ದಿವ್ಯಮಾರ್ಗ ಅವರಿಗೆ ಗೋಚರಿಸುವುದು. ಲಿಂಗದೀಕ್ಷೆಯಾದ ಸಮಯದಿಂದಲೂ ಈ ವಿಶಿಷ್ಟಗುಣ ಅವರಲ್ಲಿ ಮೈದಳೆದು ಬಂತು.

ಇದಿಷ್ಟು ಅಂತರಂಗದ ಗುಣಗಳಾದರೆ, ಹಿರಿಯರ ಒಡನಾಟದ ಇಚ್ಛೆ, ಗುಣಕ್ಕೆ ಗೌರವ ನೀಡಿಕೆ, ಪ್ರತಿಭೆಗೆ ಮನ್ನಣೆ ನೀಡಿಕೆ, ವಿಮಲ ಪ್ರೀತಿಗೆ ಮಮತೆಯ ಕರುಣೆ, ವಿಶಾಲಭಾವನೆಗೆ ಪ್ರೋತ್ಸಾಹ ನೀಡಿಕೆ ಅವರ ಬಹಿರಂಗ ಗುಣ. ದಾರಿತಪ್ಪಿದ ಮಿತ್ರರಿಗೆ- ಭಕ್ತರಿಗೆ ಮಾರ್ಗದರ್ಶನ ನೀಡಿ ಸರಿದಾರಿಗೆ ತರುವ ನಿಷ್ಠುರ ಮನಸ್ಸು ಅವರದು. ಮಠದಲ್ಲಿರುವ ಮಕ್ಕಳಿಗೆ ಮಮತೆಯ ಚೇತನ, ವಾತ್ಸಲ್ಯಮಯಿ. ಸದ್ಗುಣಕ್ಕೆ ಸಾಕಾರ ಮೂರ್ತಿ ದುರ್ಗುಣಗಳಿಗೆ ನಿಷ್ಠುರವಾದಿ. ಮಾನವನ ಸೇವೆಯ ಮೂಲಕ ಮಹದೇವನನ್ನು ಕಾಣಬಹುದು ಎಂಬುದು ಅರಿವಿಗೆ ಬಂದುದು ಆ ದಿನಗಳಲ್ಲಿ.

ಪಟ್ಟಾಧಿಕಾರ:

ಸಿದ್ಧಗಂಗಾ ಶ್ರೀಗಳ ಅಂಗೈ ಅಂಗಳದಲ್ಲಿ ಅರಳಿದ ಶಿಷ್ಯ ಕಿರೀಟವನ್ನು ಕನಕಪುರದ ಶ್ರೀ ದೇಗುಲಮಠಕ್ಕೆ ಒಯ್ದು ಮಹಾಲಿಂಗ ಸ್ವಾಮೀಜಿಯವರ ಚರಣಕಮಲಗಳಿಗೆ ಅರ್ಪಿಸಿ ಅಲಂಕರಣಗೊಳಿಸಲು, ಪಟ್ಟಾಧಿಕಾರ ನೀಡಿ ಶ್ರೀ ದೇಗುಲ ಮಠದ ಸೇವಾಕ್ಷೇತ್ರವನ್ನು ವಿಸ್ತರಿಸಲು ಪರಮ ಪೂಜ್ಯ ಶ್ರೀ ಶ್ರೀ ಮುಮ್ಮಡಿ ನಿರ್ವಾಣ ಸ್ವಾಮೀಜಿಯವರಿಂದ ಸಿದ್ಧಗಂಗಾ ಶ್ರೀಗಳಲ್ಲಿ ಸಂಕಲ್ಪ ನಿವೇದನೆ. ಶ್ರೀ ದೇಗುಲಮಠದ ಭಕ್ತ ಸಮುದಾಯದಿಂದ ಪೂಜ್ಯ ಮುಮ್ಮಡಿ ನಿರ್ವಾಣ ಸ್ವಾಮೀಜಿಯವರ ಸಂಕಲ್ಪಕ್ಕೆ ಸಂಪೂರ್ಣ ಸಹಮತ. ಶ್ರೀಗಳ ಸಂಕಲ್ಪವನ್ನು ನೆರವೇರಿಸಿಕೊಡಲು ಭಕ್ತಸಮುದಾಯದಿಂದಲೂ ಸಿದ್ಧಗಂಗಾ ಶ್ರೀಗಳಲ್ಲಿ ಬಿನ್ನಹ. ಭಕ್ತ ಸಮುದಾಯದ ಪ್ರಾರ್ಥನೆಗೆ ಸಿದ್ಧಗಂಗಾ ಶ್ರೀಗಳಿಂದ ಅನುಗ್ರಹದ ಆಶೀರ್ವಚನ.

ಸಿದ್ಧಗಂಗಾ ಶ್ರೀಗಳಾದ ಪರಮ ಪೂಜ್ಯ ಡಾ. ಶಿವಕುಮಾರ ಸ್ವಾಮೀಜಿ, ಸುತ್ತೂರು ಮಠದ ವೀರಸಿಂಹಾಸನಾಧೀಶ್ವರ ಶ್ರೀಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ, ಹರಗುರುಗಳು, ಭಕ್ತ ಸಮುದಾಯದ ಸಮ್ಮುಖದಲ್ಲಿ ಶ್ರೀ ಈಶ್ವರ ಸಂವತ್ಸರ ಫಾಲ್ಗುಣಮಾಸ ಕೃಷ್ಣಪಕ್ಷ ದಿನಾಂಕ ೨೩-೩-೧೯೬೮ರಂದು ಸೋಮವಾರ ಪ್ರಾತಃಕಾಲ

ಬ್ರಾಹ್ಮೀಮುಹೂರ್ತದಲ್ಲಿ ಪಟ್ಟಾಧಿಕಾರ ಮಹೋತ್ಸವ. ಮುಮ್ಮಡಿ ಮಹಾಲಿಂಗ ಸ್ವಾಮೀಜಿ ಎಂಬ ಅಭಿದಾನದಿಂದ ನಿಯೋಜಿತರಾದರು. ಪೂಜ್ಯ ಮುಮ್ಮಡಿ ಮಹಾಲಿಂಗ ಸ್ವಾಮೀಜಿಯವರ ಪಟ್ಟಾಧಿಕಾರ ಮಹೋತ್ಸವ ಶ್ರೀ ದೇಗುಲ ಮಠದ ಇತಿಹಾಸದಲ್ಲಿ ಪ್ರಪ್ರಥಮ ಸ್ವರೂಪದ್ದಾಗಿದ್ದ ಹೆಗ್ಗಳಿಕೆ. ೬೦೦ ವರ್ಷಗಳ ಇತಿಹಾಸ ಹೊಂದಿರುವ ಈ ಮಠದಲ್ಲಿ ಇಷ್ಟೊಂದು ವಿಜೃಂಭಣೆಯಿಂದ, ಇಷ್ಟೊಂದು ಒಪ್ಪ ಓರಣದಿಂದ, ವೈಭವದಿಂದ ಯಾವುದೇ ಸಮಾರಂಭ ನಡೆದಿರಲಿಲ್ಲ. ಇಡೀ ದಕ್ಷಿಣ ಕರ್ನಾಟಕದ ಮಠಾಧಿಪತಿಗಳು, ಸಾಧು ಸಂತರು, ಭಕ್ತರ ಮಹಾಸಮುದಾಯವೇ ಶ್ರೀ ದೇಗುಲಮಠದಲ್ಲಿ ಮೇಳೈಸಿದ್ದ ದೃಶ್ಯ ಎಂತಹವರನ್ನೂ ವಿಸ್ಮಯಗೊಳಿಸುವಂತಿತ್ತು. ಭಕ್ತರ ಸಡಗರ ಸಂಭ್ರಮ, ಆನಂದಕ್ಕೆ ಪಾರವೇ ಇರಲಿಲ್ಲ. ಮಠದ ಆವರಣ ಪೂರ್ತಿ ಭಕ್ತಿಯ ಮಹಾಪೂರದಲ್ಲಿ ಮುಳುಗಿಹೋಗಿತ್ತು. ಎಂದೆಂದಿಗೂ ಮರೆಯಲಾಗದ ಪ್ರಭಾವದ ಅಜ್ಯೋತಿತ್ತು.

ಸಾಧನೆಯ ಗುರಿ:

ಶ್ರೀ ದೇಗುಲಮಠ ಕೈಗೊಂಡಿರುವ ಲೋಕಕಲ್ಯಾಣ ಸೇವೆಯನ್ನು ಇನ್ನೂ ಉನ್ನತ ಮಟ್ಟದಲ್ಲಿ ಮುಂದುವರಿಸುವುದು, ಬಸವ ಸಂದೇಶದ ಪ್ರಸಾರ ಮತ್ತು ಪರಿಪಾಲನೆಯನ್ನು ಅನೂಚಾನವಾಗಿ ನಡೆಸಿಕೊಂಡು ಬರುವ ದೀಕ್ಷೆಯನ್ನು ಯಾವುದೇ ಕುಂದಿಲ್ಲದಂತೆ ನೆರವೇರಿಸುವುದು ಪೂಜ್ಯ ಮುಮ್ಮಡಿ ಮಹಾಲಿಂಗಸ್ವಾಮೀಜಿಯವರ ಸಂಕಲ್ಪಿತ ಗುರಿಯಾಗಿರುವುದು. ಮನುಕುಲದ ಪ್ರಗತಿಗೆ ಅಡ್ಡಿಯಾಗಿರುವ ಅಸೂಯಾಗುಣವನ್ನು ಹೋಗಲಾಡಿಸಿ, ಸಮಾನತೆಯ ಬೀಜ ಬಿತ್ತಿ ಸಂಘಟನಾಶಕ್ತಿಯನ್ನು ಬೆಳೆಸುವ ದಿಶೆಯಲ್ಲಿ ಮಹತ್ತರ ಸಾಧನೆ ಮಾಡುವ ಅಭಿಲಾಷೆ. ಬಸವಣ್ಣನವರು ಕಟ್ಟಬಯಸಿದ ಸಮಾಜದ ಅರ್ಥದಲ್ಲಿ ಸಮಾಜ ಸುಧಾರಣೆ ಕಾರ್ಯ ಕೈಗೊಳ್ಳಲು ಮಠದ ಪರಂಪರೆಯನ್ನು ಆಧುನಿಕ ಸೌಲಭ್ಯದೊಡನೆ ಉನ್ನತ ಮಟ್ಟಕ್ಕೆ ಕೊಂಡೊಯ್ಯುವ ಬಯಕೆ. ಮಠದಲ್ಲಿ ಓದುತ್ತಿರುವ ಮಕ್ಕಳು ಸಮಾಜದಲ್ಲಿ ಮಾದರಿಯಾಗಿ ಜೀವಿಸಲು ಸೂಕ್ತ ಮಾರ್ಗದರ್ಶನ, ಉತ್ತಮ ಶಿಕ್ಷಣ ನೀಡುವುದು ಶ್ರೀಗಳ ಗುರಿಯಾಗಿರುವುದು.

ಸೌಜನ್ಯತೆಯ ಸಾಕಾರಮೂರ್ತಿಗಳಾಗಿರುವ ಪೂಜ್ಯರು ಸಾಹಿತಿಗಳು, ವಿದ್ವಾಂಸರು, ಕಲಾವಿದರಲ್ಲಿ ತೋರುವ ಗೌರವಾದರಗಳು, ಶ್ರೀಮಠದ ಕೆಲಸ ಕಾರ್ಯಗಳಲ್ಲಿ ತೋರುವ ಪ್ರಭಾವಪೂರ್ಣ ಕ್ರಿಯಾಶೀಲತೆ, ಶ್ರೀಮಠದ ಭಕ್ತರಲ್ಲಿ ಅವರು ಇಟ್ಟಿರುವ ವಿಶ್ವಾಸ ಮತ್ತು ಪ್ರೀತಿ ಅವರನ್ನು ಹೆಚ್ಚು ಜನಪ್ರಿಯರನ್ನಾಗಿ ಮಾಡಿವೆ.

ಕಿರಿಯ ಶ್ರೀಗಳ ಆಲೋಚನೆಗಳು ಇನ್ನಷ್ಟು ಸ್ಪಷ್ಟಗೊಳ್ಳಲೆಂದು ನಾವು ಅವರ ಜೊತೆ ಸಂದರ್ಶನ ನಡೆಸಿದೆವು. ನಮ್ಮ ಪ್ರಶ್ನೆಗಳಿಗೆ ಅವರು ನೀಡಿದ ಉತ್ತರಗಳನ್ನು ಮುಂದೆ ಕೊಡಲಾಗಿದೆ.

ಪ್ರಶ್ನೆ : **ಶ್ರೀ ಶ್ರೀ ಮುಮ್ಮಡಿ ನಿರ್ವಾಣ ಸ್ವಾಮಿಗಳು ಹಾಗೂ ನಿಮ್ಮ ಸಂಬಂಧ ಎಷ್ಟರಮಟ್ಟಿಗೆ ಮಧುರವಾಗಿದೆ?**

ಉತ್ತರ : ಬದುಕಿನಲ್ಲಿ ಇಬ್ಬರು ದೈವೀಸ್ವರೂಪರಾದ ಗುರುಗಳ ಶ್ರೀರಕ್ಷೆ ನನ್ನನ್ನು ಕಾಪಾಡಿದೆ. ಒಬ್ಬರು ಶ್ರೀ ಶ್ರೀ ಮುಮ್ಮಡಿ ನಿರ್ವಾಣ ಸ್ವಾಮಿಗಳು, ಇನ್ನೊಬ್ಬರು ಡಾ. ಶಿವಕುಮಾರ ಮಹಾಸ್ವಾಮಿಗಳು. ಈ ಇಬ್ಬರು ಗುರುಗಳ ಸಂಬಂಧ ಮಗ-ತಂದೆಯ ಸಂಬಂಧದಂತೆ. ನಾನು ಪ್ರೌಢಶಾಲೆಯ ವಿದ್ಯಾರ್ಥಿಯಾಗಿ ದೇಗುಲಮಠ ಪ್ರವೇಶಿಸಿದೆ. ಶ್ರೀ ಶ್ರೀ ಮುಮ್ಮಡಿ ನಿರ್ವಾಣ ಸ್ವಾಮಿಗಳ ದಿವ್ಯ ವ್ಯಕ್ತಿತ್ವ ನನ್ನನ್ನು ಚುಂಬಕ ಶಕ್ತಿಯಂತೆ ಆಕರ್ಷಿಸಿತು. ಗುರುಗಳು ನನಗೆ ಲಿಂಗದೀಕ್ಷೆ ಮಾಡಿದರು. ನಾನು ಮಠದ ವಿದ್ಯಾರ್ಥಿಯಾಗಿ ಅವರ ಸೇವೆಗೆ ನನ್ನನ್ನು ಅರ್ಪಿಸಿಕೊಂಡೆ. ಗುರುಗಳ ಮಡಿ ತೊಳೆಯುವುದು, ಪೂಜೆಗೆ ಹೂವನ್ನು ತಿರಿದು ತರುವುದು, ಪೂಜೆಗೆ ಅಣಿ ಮಾಡುವುದು, ಅವರು ಮಾಡುತ್ತಿದ್ದ ಪೂಜೆಯನ್ನು ತನ್ಮಯವಾಗಿ ನೋಡುವುದು -ಇವು ನನಗೆ ಆಗ ಬಹಳ ಪ್ರಿಯವಾದ ಕಾರ್ಯಗಳು. ನನಗೆ ಬಿಡುವಾಗಿದ್ದಾಗ ಗುರುಗಳು ನನ್ನನ್ನು ತಮ್ಮೊಂದಿಗೆ ಭಿಕ್ಷೆಗೆ ಕರೆದೊಯ್ಯುತ್ತಿದ್ದರು. ಸುತ್ತಮುತ್ತಲ ಹಳ್ಳಿಗಳಲ್ಲಿ ದವಸ-ಧಾನ್ಯಗಳಿಗೆಂದು ಅವರ ಜೊತೆ ನಡೆದು ಹೋಗುವುದು, ಗಾಡಿಯಲ್ಲಿ ಹೋಗುವುದು ನನಗೆ ಎಲ್ಲಿಲ್ಲದ ಸಂಭ್ರಮ. ಸಾತ್ವಿಕ ತೇಜದ ಆ ನನ್ನ ಗುರುಗಳ ಬಗೆಗೆ ಭಕ್ತರು ಹೇಗೆ ನಡೆದುಕೊಳ್ಳುತ್ತಿದ್ದರು,

ಗೌರವ ತೋರುತ್ತಿದ್ದರು, ತಾವಾಗಿಯೇ ಅವರ ಪಾದಗಳಿಗೆ ತಮ್ಮಲ್ಲಿದ್ದುದನ್ನು ತಂದು ಭಕ್ತಿಭಾವದಿಂದ ಅರ್ಪಣೆ ಮಾಡುತ್ತಿದ್ದರು ಎಂಬುದನ್ನು ಹತ್ತಿರದಿಂದ ನೋಡಿದಾಗ ನಿಸ್ವಾರ್ಥದ, ತ್ಯಾಗರೂಪದ ಗುರುಗಳ ಸೇವೆಗೆ ಬೆಲೆ ಕಟ್ಟಲಾಗದೆಂಬ ವಿಚಾರ ಆಗ ನನಗೆ ಹೊಳೆಯಿತು. ನಮ್ಮದು ಹಾಗೂ ಸಿದ್ಧಗಂಗೆಯದು ದಾಸೋಹದ ಮಠ. ಇಲ್ಲಿ ಅನ್ನದಾಸೋಹ, ಜ್ಞಾನದಾಸೋಹ ಪ್ರಧಾನವಾದುದು. ಭಕ್ತರೇ ಇದರ ಪೋಷಕರು; ನಾವು ನಿಮಿತ್ತ ಮಾತ್ರರು. ನಾನು ಪಿ.ಯು.ಸಿ. ಶಿಕ್ಷಣಕ್ಕೆಂದು ಸಿದ್ಧಗಂಗಾಮಠಕ್ಕೆ ಬಂದವನು ಪರಮಪೂಜ್ಯ ಡಾ. ಶಿವಕುಮಾರ ಸ್ವಾಮಿಗಳ ಉಡಿಗೆ ಬಿದ್ದೆ. ಅಲ್ಲೂ ನಾನು ಅವರ ಸೇವೆಗೆ ನನ್ನನ್ನು ಅರ್ಪಿಸಿಕೊಂಡೆ. ಅವರ ಹತ್ತಿರದ ಶಿಷ್ಯರಲ್ಲಿ ಒಬ್ಬನಾದೆ. ದೇಗುಲಮಠದ ಕಾರ್ಯವ್ಯಾಪ್ತಿಗಿಂತ ಸಿದ್ಧಗಂಗಾ ಮಠದ ಕಾರ್ಯವ್ಯಾಪ್ತಿ ತೀರಾ ದೊಡ್ಡದು. ಬಂದು ಹೋಗುವ ಭಕ್ತರ ಸಂಖ್ಯೆಯೂ ಹೆಚ್ಚು. ಇಲ್ಲಿ ಓದುವ ವಿದ್ಯಾರ್ಥಿಗಳ ಸಂಖ್ಯೆಯೂ ದೊಡ್ಡದು. ನನಗೆ ಕಾಯಕ-ದಾಸೋಹಗಳ ನಿಜವಾದ ಅಂತರಾರ್ಥ ತಿಳಿದದ್ದು ಇಲ್ಲಿಯೇ. ಮಠದ ಆಧ್ಯಾತ್ಮಿಕ ಪರಿಸರದಲ್ಲಿ ನಾನು ಕಾಲೇಜಿನ ಶಿಕ್ಷಣದಲ್ಲಿ ಪಡೆದುದಕ್ಕಿಂತ ಹೆಚ್ಚಿನ ಶಿಕ್ಷಣವನ್ನು ಗುರುಗಳ ಸಾನ್ನಿಧ್ಯದಲ್ಲಿ ಕಲಿತೆ. ಗುರುಗಳ ಕಾರ್ಯಚಟುವಟಿಕೆಗಳು ನಿತ್ಯವೂ ನನ್ನ ಮೇಲೆ ಪ್ರಭಾವ ಬೀರುತ್ತಿದ್ದುವು. ಅವರು ಸಮಾಧಾನಚಿತ್ತದಿಂದ ಭಕ್ತರ ಅಹವಾಲು ಕೇಳುತ್ತಿದ್ದ ರೀತಿ, ಪರಿಹಾರ ಸೂಚಿಸುತ್ತಿದ್ದ ಕ್ರಮ; ಶ್ರೀಮಠಕ್ಕೆ ಬಂದ ಭಕ್ತರುಗಳ, ಪ್ರತಿಷ್ಠಿತ ವ್ಯಕ್ತಿಗಳ, ಅಧಿಕಾರಿಗಳ ಜೊತೆ ಅವರು ವ್ಯವಹರಿಸುತ್ತಿದ್ದ ರೀತಿಯನ್ನು ನಾನು ಸೂಕ್ಷ್ಮವಾಗಿ ಗಮನಿಸುತ್ತ ಬಂದೆ. ಅವರ ಬಿಡುವಿಲ್ಲದ ದೈನಂದಿನ ಕಾರ್ಯಕ್ರಮ ಪ್ರಾರಂಭವಾಗುತ್ತಿದ್ದುದು ಬೆಳಗಿನ ನಾಲ್ಕು ಗಂಟೆಗೆ, ಕೊನೆಗೊಳ್ಳುತ್ತಿದ್ದುದು ರಾತ್ರಿ ೧೧ ಗಂಟೆಗೆ. ೯೮ರ ಇಳಿವಯಸ್ಸಿನಲ್ಲೂ ಅವರು ಚಟುವಟಿಕೆಯಿಂದಿರುವುದಕ್ಕೆ ಅವರು ತಮ್ಮನ್ನು ಒಂದು ನಿಯಮಬದ್ಧ ಶಿಸ್ತಿಗೆ, ಒಂದು ಶ್ರದ್ಧೆಯ ಜೀವನ ವಿಧಾನಕ್ಕೆ ಒಳಪಡಿಸಿಕೊಂಡಿರುವುದು ಕಾರಣವೆಂದು ನನಗೆ ಎಷ್ಟೋ ವೇಳೆ ಅನ್ನಿಸಿದೆ. ಅವರ ಆಶೀರ್ವಾದದಿಂದಲೇ ನಾನಿಂದು ದೇಗುಲಮಠದ ಸೇವಾದೀಕ್ಷೆಯನ್ನು ಹೊತ್ತಿರುವುದು.

ಪ್ರಶ್ನೆ : **ಧಾರ್ಮಿಕ ಶ್ರದ್ಧೆ ನಿಮ್ಮಲ್ಲಿ ವಿಶೇಷವಾಗಿ ಯಾರಿಂದ ಉದ್ದೀಪಿತವಾಯಿತು?**

ಉತ್ತರ : ಆಗಲೇ ಹೇಳಿದೆನಲ್ಲ, ನನ್ನನ್ನು ರೂಪಿಸಿದವರು ಇಬ್ಬರು ದೈವಸ್ವರೂಪಿ ಆರಾಧ್ಯಮೂರ್ತಿಗಳು ಎಂದು ಸಿದ್ಧರಾಮೇಶ್ವರರು ತಮ್ಮ ಒಂದು ವಚನದಲ್ಲಿ ಹೀಗೆ ಹೇಳಿರುವರು: "ಶಿಷ್ಯನೆಂಬ ವನಕ್ಕೆ ವಸಂತ ನೋಡಾ ಗುರು. ಶಿಷ್ಯನೆಂಬ ತಿಮಿರಕ್ಕೆ ಜ್ಯೋತಿ ನೋಡಾ ಗುರು. ಶಿಷ್ಯನೆಂಬ ರಾತ್ರಿಗೆ ಸೂರ್ಯ ನೋಡಾ ಗುರು. ಶಿಷ್ಯನೆಂಬ ನನಗೆ ಪ್ರಕೃಷ್ಟ ಪ್ರಮಥ ಚಿಂತಾಮಣಿ..." ಈ ಮಾತು ನನ್ನ ಇಬ್ಬರು ಗುರುಗಳಿಗೆ ಅನ್ವಯವಾಗುತ್ತದೆ. ಸಾಮಾನ್ಯ ಶಿಲೆಯಂತಿದ್ದ ನನ್ನನ್ನು ಕಟೆದು ಮೂರ್ತಿಯನ್ನಾಗಿ ಮಾಡಿದ; ಜ್ಞಾನದ ದೀವಿಗೆ ಹಚ್ಚಿದ; ಆಧ್ಯಾತ್ಮದ ಹಸಿವಿಗೆ ಒಗರವಾದ; ತ್ಯಾಗಕ್ಕೆ ಉಜ್ವಲ ಸಂಕೇತವಾದ -ಈ ಎರಡು ದಿವ್ಯಚೇತನಗಳಿಗೆ ನಾನು ಆಭಾರಿಯಾಗಿರುವೆ.

ಪ್ರಶ್ನೆ : **ನೀವು ಸಾಹಿತ್ಯದ ವಿದ್ಯಾರ್ಥಿಯಾಗಿದ್ದವರು. ಮಠದ ಆಧ್ಯಾತ್ಮಿಕ ಪರಿಸರಕ್ಕೆ ಹೇಗೆ ಹೊಂದಿಕೊಂಡಿರಿ?**

ಉತ್ತರ : ನಾನು ವಚನ ಸಾಹಿತ್ಯವನ್ನು ವಿಶೇಷವಾಗಿ ಅಧ್ಯಯನ ಮಾಡಿದೆ. ಇದಕ್ಕೆ ಕಾರಣ ನನ್ನ ಆರಾಧ್ಯರೂಪೀ ಗುರುಗಳು. ಬೆಳಗಿನ ವೇಳೆ ಹಾಗೂ ರಾತ್ರಿ ಮಲಗುವ ಮುನ್ನ ಸ್ವಲ್ಪಹೊತ್ತು ವಚನ ಸಾಹಿತ್ಯವನ್ನು ತಪ್ಪದೆ ಓದಲು ಅವರು ಆದೇಶಿಸಿದ್ದರು. ನನಗೆ ಸಾಮಾಜಿಕ ಜವಾಬ್ದಾರಿ, ಸಾಮಾಜಿಕ ಬದ್ಧತೆಗಳನ್ನು ಕಲಿಸಿದ್ದು ವಚನ ಸಾಹಿತ್ಯ. ಬಸವಣ್ಣ, ಸಿದ್ಧರಾಮೇಶ್ವರರ ವಚನಗಳು ನನಗೆ ಈ ದಿಶೆಯಲ್ಲಿ ಪ್ರಬೋಧನೆ ನೀಡಿದವು.

ಗುರುಗಳಾದವರು ತಮ್ಮನ್ನು ಸಮಾಜಕ್ಕೆ ಅರ್ಪಣೆ ಮಾಡಿಕೊಳ್ಳುವ ಕ್ರಮವನ್ನು ವಚನಗಳು ತಿಳಿಸಿದವು. ನನ್ನನ್ನು ನಾನು ತಿಳಿದುಕೊಳ್ಳಲು ಅವು ಕಲಿಸಿದುವು; ಬಹುಮುಖೀ ಸಾಮಾಜಿಕ ಚಟುವಟಿಕೆಗಳಲ್ಲಿ ನಮ್ಮನ್ನು ನಾವು ಹೇಗೆ ತೊಡಗಿಸಿಕೊಳ್ಳಬೇಕು ಎಂಬುದಕ್ಕೆ ಮಾರ್ಗದರ್ಶನ ಮಾಡಿದುವು; ನನ್ನ ಬದುಕು ಸತ್ಯದ, ನೀತಿಯ ನೆಲೆಗಟ್ಟಿನ ಮೇಲೆ ನಿಲ್ಲಲು ಕಲಿಸಿಕೊಟ್ಟುವು. ಚೆನ್ನಬಸವಣ್ಣನವರ ವಚನಗಳು ನನಗೆ ವೀರಶೈವ ಧರ್ಮದ ತಾತ್ವಿಕ ನೆಲೆ-ಕಲೆಗಳನ್ನು ಕಲಿಸಿಕೊಟ್ಟವು. ನಾನು ನನ್ನ ಬದುಕನ್ನು ವಚನ ಸಾಹಿತ್ಯದಿಂದ ರೂಪಿಸಿಕೊಂಡೆ. ಲೌಕಿಕ ಹಾಗೂ ಆಧ್ಯಾತ್ಮಿಕ ನೆಲೆಯಲ್ಲಿ ಅದು ನನಗೆ ಮಾರ್ಗದರ್ಶಿಯಾಯಿತು. ನಾನು ಸಾಹಿತ್ಯದ ವಿದ್ಯಾರ್ಥಿಯಾದುದರಿಂದ ನನಗೆ ಸಹಜವಾಗಿ ಬಂದ ಲಾಭವಿದು. ಸಾಹಿತ್ಯ ನನ್ನನ್ನು ಬೆಳೆಸಿದೆ. ನನ್ನ ನಡಾವಳಿಯನ್ನು ತಿದ್ದಿ ತೀಡಿ ಸರಿಗೊಳಿಸಿದೆ.

ಪ್ರಶ್ನೆ : ಚಿಕ್ಕ ವಯಸ್ಸಿನಲ್ಲಿ ಸಾಮಾಜಿಕ ಬದುಕಿನಲ್ಲಿ ಪರಿವರ್ತನೆಯ ಕನಸು ಕಂಡಿರುವಿರಿ. ಈ ಅಸಂಗತ ಬದುಕಿನಲ್ಲಿ ಏನಾದರೂ ಆಶಾಕಿರಣ ಕಾಣಿಸಿದೆಯೆ?

ಉತ್ತರ : ನಾನು ಆಶಾವಾದಿ. ನಮ್ಮ ಸುತ್ತಲಿನ ಈ ಅಸಂಗತ ಬದುಕಿನಲ್ಲೂ ಸುಧಾರಣೆಯನ್ನು ಕಾಣಬಯಸುವವನು. ನಮ್ಮ ಧ್ಯೇಯ, ನಮ್ಮ ಗುರಿ, ನಮ್ಮ ಸಾಧನೆ ನೇರವಾಗಿದ್ದರೆ ವ್ಯಕ್ತಿ ಹಾಗೂ ಸಾಮಾಜಿಕ ಪರಿವರ್ತನೆ ಕಠಿಣವೆಂದು ನನಗೆ ಅನ್ನಿಸಿಯೇ ಇಲ್ಲ. ಭಕ್ತರ ಮನೆಗಳಿಗೆ ನಾನು ಹೋದಾಗ ಮನೆಯ ಯಜಮಾನಿತಿಯನ್ನು, ಮಕ್ಕಳನ್ನು ನನ್ನ ವಿಶ್ವಾಸಕ್ಕೆ ತೆಗೆದುಕೊಳ್ಳುತ್ತೇನೆ. ನನ್ನ ಧರ್ಮದ ಉತ್ತಮಾಂಶಗಳನ್ನು ಅವರಿಗೆ ಮನವರಿಕೆ ಮಾಡಿಕೊಡಲು ಯತ್ನಿಸುತ್ತೇನೆ. ಸಾಧ್ಯವಾದಷ್ಟು ಸತ್ಯಶುದ್ಧರಾಗಿ ಬಾಳಿ ಎಂದು ಹೇಳುತ್ತೇನೆ. ನೀತಿಯ ನೆಲೆಗಟ್ಟಿನ ಮೇಲೆ ಕುಟುಂಬ ಜೀವನ ಸಾಗಲು ಅಗತ್ಯ ಸೂಚನೆ ನೀಡುತ್ತೇನೆ. ನನಗೆ ನನ್ನದೇ ಆದ ಇತಿಮಿತಿಗಳಿವೆ ಎಂಬುದನ್ನು ನಾನು ತಿಳಿದಿದ್ದೇನೆ. ದಿನದ ೨೪ ಗಂಟೆಗಳಲ್ಲಿ ಬದಲಾವಣೆ ತರಲು ಸಾಧ್ಯವಿಲ್ಲವೆಂಬ ಅರಿವೂ ನನಗಿದೆ. ಹೀಗಾಗಿ ನನ್ನದು ಸಮಾಧಾನದ ಸಾಮಾಜಿಕ ಪರಿವರ್ತನ ಕ್ರಮ. ಭಕ್ತರ ಮನಸ್ಸನ್ನು ಸಾಮಾಜಿಕ ಪರಿವರ್ತನೆಗೆ, ವೈಚಾರಿಕ ಮನೋಭಾವಕ್ಕೆ ಹೊಂದಿಸುವ ನಿಧಾನ ಗತಿ ನನ್ನದು.

ಪ್ರಶ್ನೆ : ನಿಮ್ಮ ಶಿಕ್ಷಣ ಕ್ರಮದಲ್ಲಿ ವೃತ್ತಿಪರ ಶಿಕ್ಷಣದ ಕಡೆಗೆ ನಿಮ್ಮ ಒಲವು ಇದ್ದಂತಿಲ್ಲ. ಎಲ್ಲ ಮಠಗಳೂ ಇತ್ತ ಧಾವಿಸುತ್ತಿರುವಾಗ, ಹಣ ಮಾಡುವ ದಂಧೆಗೆ ಇಳಿದಿರುವಾಗ ನೀವೇಕೆ ಪ್ರಯತ್ನಿಸುತ್ತಿಲ್ಲ?

ಉತ್ತರ : ನನಗೆ ವೃತ್ತಿಪರ ಶಿಕ್ಷಣಕ್ಕಿಂತ ಗ್ರಾಮೀಣ ಮಕ್ಕಳಿಗೆ ಅಗತ್ಯವಿರುವ ಮೂಲಭೂತ ಶಿಕ್ಷಣ ನೀಡುವ ಕಡೆಗೆ ನನ್ನ ಗಮನವಿದೆ. ನಮ್ಮಲ್ಲಿಗೆ ಬರುವ ಮಕ್ಕಳು ಬಡತನದ ರೇಖೆಗಿಂತ ಕೆಳಗಿನವರು, ಇಲ್ಲವೇ ತಮ್ಮ ಬಡತನದಲ್ಲಿ ವಿದ್ಯೆಯನ್ನು ಪಡೆಯಲಾಗದ ಅಸಹಾಯಕ ಸ್ಥಿತಿಯಲ್ಲಿರುವವರು. ನನ್ನ ಹಿಂದಿನ ಗುರುಗಳು, ನನ್ನ ಈಗಿನ ಗುರುಗಳು ಗ್ರಾಮೀಣ ಬಡಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಿರುವರು. ನಾನೂ ಇದಕ್ಕೆ ಬದ್ಧನಾಗಿದ್ದೇನೆ. ನನಗೆ ಮಠ ಆರ್ಥಿಕವಾಗಿ ಸಂಪನ್ನವಾಗಬೇಕು ಎಂಬ ಆಕಾಂಕ್ಷೆಯಿಲ್ಲ. ಭಕ್ತರ ಕೃಪಾರಕ್ಷೆಯಲ್ಲಿ ಮಠ ಹಿಂದೆಯೂ ನಡೆಯಿತು, ಈಗಲೂ ನಡೆದಿದೆ. ವೃತ್ತಿಪರ ಶಿಕ್ಷಣದ ಬೆನ್ನಹಿಂದೆ ನನಗೆ ಸಾಗುವುದು ಬೇಕಿಲ್ಲ. ಬಡಮಕ್ಕಳ ಒಂದು ಹಂತದ ಶಿಕ್ಷಣ ಯಶಸ್ವಿಯಾಗಿ ಪೂರೈಸಿ ಅವರ ಭವಿಷ್ಯ ಉತ್ತಮವಾಗಲು ಅಗತ್ಯವಿರುವ ಶೈಕ್ಷಣಿಕ ವಾತಾವರಣ ನಿರ್ಮಾಣ ಮಾಡಿರುವೆವು. ಇನ್ನೂ ಹೆಚ್ಚಿನ ಉನ್ನತ ಶಿಕ್ಷಣ ಪಡೆಯುವ ಅವಕಾಶ ಅವರವರ

ಶಕ್ತಿಯ ಮಿತಿಗೆ ಬಿಟ್ಟಿದ್ದು. ನಮ್ಮದು ಶಿಕ್ಷಣದ ಪ್ರಮುಖ ಹಂತವಾದ ಪ್ರೌಢಶಾಲಾ ಶಿಕ್ಷಣವನ್ನು ಉಚಿತವಾಗಿ ನೀಡುವುದು. ಜೊತೆಗೆ ಉಚಿತ ಊಟ, ವಸತಿ. ಆ ಮಕ್ಕಳ ಭವಿಷ್ಯವನ್ನು ರೂಪಿಸುವುದು ನಮ್ಮ ಮೇಲಿನ ಹೊಣೆಗಾರಿಕೆ. ಅವರ ನೈತಿಕ ಶಿಕ್ಷಣ, ನೈರ್ಮಲ್ಯ ಶಿಕ್ಷಣ ಇವು ಅವರ ಬಾಹ್ಯ ಶಿಕ್ಷಣದ ಜೊತೆಗೆ ಪೂರಕವಾಗಿವೆ. ಗ್ರಾಮೀಣ ಮಕ್ಕಳ ಪ್ರತಿಭೆಯ ಸರ್ವಾಂಗೀಣ ವಿಕಾಸ ನಮ್ಮ ಶಿಕ್ಷಣದ ಗುರಿ. ಇದರ ಪೂರೈಕೆಗಾಗಿ ನಾವು ಹಗಲನ್ನು ಇರುಳು ಮಾಡುತ್ತಿದ್ದೇವೆ, ಇರುಳನ್ನು ಹಗಲು ಮಾಡುತ್ತಿದ್ದೇವೆ. ಈ ಬಡ ಮಕ್ಕಳು ಉನ್ನತ ಶಿಕ್ಷಣ ಪಡೆಯಲು ಸಾಧ್ಯವಾಗದಿದ್ದಾಗ, ಅವರು ಸ್ವಂತ ಕಾಲ ಮೇಲೆ ನಿಲ್ಲಲು ವೃತ್ತಿಶಿಕ್ಷಣ ನೀಡುತ್ತಿದ್ದೇವೆ.

ಪ್ರಶ್ನೆ : **ಮಠದ ಬೆಳವಣಿಗೆಗೆ ನಿಮ್ಮದೇನಾದರೂ ಕನಸು ಇದೆಯೆ?**

ಉತ್ತರ : ಖಂಡಿತಾ ಇದೆ. ನನ್ನ ಗುರುಗಳು ನಮಗೆ ಮಾರ್ಗದರ್ಶನ ಮಾಡುತ್ತಿರುವರು. ನನ್ನ ಕನಸು ಮಕ್ಕಳ ಭವಿಷ್ಯವನ್ನು ರೂಪಿಸುವುದರ ಕಡೆಗೆ ಚಾಚಿಕೊಂಡಿದೆ. ಅದರಲ್ಲಿಯೇ ನನ್ನ ಆನಂದವಿದೆ. ನನಗೆ ಕನಸು ಕಾಣಲು ಪುರುಸೊತ್ತಾದರೂ ಎಲ್ಲಿದೆ? ಇಂದಿಂಗೆ, ನಾಳೆಗೆ ಏನು? ಎನ್ನುವ ಪರಿಸ್ಥಿತಿಯಲ್ಲಿ ನಾವು ಇದ್ದೇವೆ. ನಮ್ಮದು ಶ್ರೀಮಂತ ಮಠವಲ್ಲ. ಬಡ ಮಠ. ಆದರೆ ನಮ್ಮ ಮನಸ್ಸು ವಿಶಾಲವಾಗಿದೆ. ನಮ್ಮಲ್ಲಿಗೆ ಯಾವುದೇ ಮಗು ಬಂದರೂ ನಾವು ಸ್ವೀಕರಿಸುತ್ತೇವೆ. ಜಾತಿ-ಮತ-ಪಂಥ ನಾವು ನೋಡುವುದಿಲ್ಲ. ಆ ಮಕ್ಕಳು ದೇವರ ಇನ್ನೊಂದು ರೂಪ. ಅವುಗಳ ಪಾಲನೆ-ಪೋಷಣೆ-ಶಿಕ್ಷಣ ಇವುಗಳೇ ನಮ್ಮ ದೈನಂದಿನ ಪೂಜೆ. ನಮ್ಮ ಕನಸುಗಳು ಚಾಚಿಕೊಳ್ಳುವುದಿಲ್ಲ. ಏಕೆಂದರೆ, ಅವು ಚಿಕ್ಕವು. ನಮ್ಮ ಕರ್ತವ್ಯಗಳ ಚೌಕಟ್ಟು ತೀರಾ ದೊಡ್ಡದಲ್ಲ. ಬಡಮಕ್ಕಳ ಕಣ್ಣಿನಲ್ಲಿ ಆತ್ಮವಿಶ್ವಾಸ ಮೂಡಿಸುವುದು ನಮ್ಮ ಮುಖ್ಯ ಗುರಿ. ಮನೆತನದ ಬಡತನವನ್ನು ಮರೆಯಿಸಿ ನಮ್ಮ ಪರಿಸರದಲ್ಲಿ ಅವರನ್ನು ಉತ್ತಮ ಪ್ರಜೆಗಳನ್ನಾಗಿ ಮಾಡಲು ತರಬೇತು ಮಾಡುತ್ತೇವೆ.

ಪ್ರಶ್ನೆ : **ನಿಮ್ಮ ಭಾಗದವರೇ ಆದ ಶ್ರೀ ರಾಜಶೇಖರನ್‌ರವರು ಗ್ರಾಮ ಭಾರತದ ಪರಿಕಲ್ಪನೆಯಲ್ಲಿ ಗ್ರಾಮಗಳ ಪುನರುಜ್ಜೀವನವಾಗದೆ ಭಾರತಕ್ಕೆ ಭವಿಷ್ಯವಿಲ್ಲ ಎಂದು ಈಚೆಗೆ ಹೇಳಿರುವರು. ಅದರ ಬಗ್ಗೆ ನಿಮ್ಮ ಪ್ರತಿಕ್ರಿಯೆ ಏನು?**

ಉತ್ತರ : ಶ್ರೀ ರಾಜಶೇಖರನ್‌ರವರು ಹಾಗೂ ಅವರ ಇಡೀ ಕುಟುಂಬವರ್ಗ, ಶ್ರೀಮಠದ ಅಭಿಮಾನಿಗಳು. ಅವರಿಂದ ಮಠ ಮೇಲಿಂದ ಮೇಲೆ ಸಲಹೆ-ಸೂಚನೆ-ಮಾರ್ಗದರ್ಶನ ಪಡೆಯುತ್ತಿದೆ. ಅವರು ಅಪ್ಪಟ ಗಾಂಧೀವಾದಿಗಳು. ಗ್ರಾಮಸ್ವರಾಜ್ಯದ ಕನಸು ಕಂಡಿದ್ದರು ಮಹಾತ್ಮಾ ಗಾಂಧಿ. ಶ್ರೀ ರಾಜಶೇಖರನ್‌ರವರು ವಿಶ್ವದ ಎಲ್ಲ ದೇಶಗಳಲ್ಲಿ ಸುತ್ತಾಡಿರುವ ಅನುಭವಿಗಳು. ಭಾರತದ ಅಭಿವೃದ್ಧಿಯ ಗ್ರಾಮಗಳನ್ನು ಅವಲಂಬಿಸಿದೆ ಎಂದು ಅವರು ಬಲವಾಗಿ ನಂಬಿರುವರು. ರೈತನ ಕೃಷಿಯಲ್ಲಿ ಸುಧಾರಣೆ, ಹಣ ತರುವ ಬೆಳೆ, ಒಳ್ಳೆಯ ತಳಿಯ ಬೀಜ, ಗೊಬ್ಬರ, ಕಾಲಕಾಲಕ್ಕೆ ಒಳ್ಳೆಯ ಮಳೆ, ನಾಟಿ ಸಂದರ್ಭದಲ್ಲಿ ರೈತನಿಗೆ ಅಗತ್ಯವಿರುವ ಆರ್ಥಿಕ ನೆರವು, ರೈತನ ಬೆಳೆಗೆ ಯೋಗ್ಯವಾದ ಮಾರುಕಟ್ಟೆ -ಇವು ರೈತನ ಪಾಲಿಗೆ ಮೂಲಭೂತ ಅಗತ್ಯಗಳು. ಮಳೆಯಾಗದಿದ್ದಾಗ, ಅತಿವೃಷ್ಟಿಯಾದಾಗ ರೈತನಿಗೆ ನೆರವಾಗುವುದು ಸರಕಾರದ ಆದ್ಯಕರ್ತವ್ಯಗಳಲ್ಲಿ ಒಂದು. ಬೆಳೆ ವಿಮೆ ಯೋಜನೆ ಹಳ್ಳಿಯ ರೈತನಿಗೂ ವಿಸ್ತರಣೆಗೊಳ್ಳಬೇಕು. ಹಾಗಾದಾಗ ರೈತನ ಆರ್ಥಿಕ ಸ್ಥಿತಿ ಉತ್ತಮಗೊಳ್ಳುತ್ತದೆ. ಒಳ್ಳೆಯ ಬೆಳೆ ದೇಶದ ಹಸಿವನ್ನು ನಿವಾರಿಸಲು ತೀರಾ ಅಗತ್ಯವಾದುದು. ದೇಶದ ಆರ್ಥಿಕಭದ್ರತೆ ರೈತರ ಕೃಷಿ ಉತ್ಪನ್ನಗಳನ್ನು ಅವಲಂಬಿಸಿದೆ. ಕೃಷಿಪ್ರಧಾನ ವ್ಯವಸ್ಥೆಗೆ ಆದ್ಯತೆ ನೀಡುವ ಮೂಲಕ ದೇಶದ ಬಡತನ, ಹಸಿವು ನಿವಾರಣೆ ಸಾಧ್ಯ. ಈ ಹಿನ್ನೆಲೆಯಲ್ಲಿ ಇಂದು ಗ್ರಾಮ ಪುನರುಜ್ಜೀವನ ಮಹತ್ವದ ಪಾತ್ರ ನಿರ್ವಹಿಸಬೇಕಾಗಿದೆ.

ಆಶೀರ್ವಚನ:

"ಗ್ರಾಮಗಳು ನಮ್ಮ ರಾಷ್ಟ್ರದ ಬೆನ್ನೆಲುಬು. ನಮ್ಮ ರಾಷ್ಟ್ರದ ಉನ್ನತ ಪರಂಪರೆ, ನಾಗರೀಕತೆ, ಕಲೆ, ಸಂಸ್ಕೃತಿ, ಧರ್ಮ ಇಂದಿಗೂ ಅಚ್ಚಳಿಯದೆ ಉಳಿದು ಬೆಳೆದು ಬಂದಿರುವುದು ಗ್ರಾಮೀಣ ಸಮುದಾಯದಲ್ಲಿ ಮಾತ್ರ. ಆದರೆ ನಮ್ಮ ಗ್ರಾಮೀಣ ಪರಿಸರದಲ್ಲಿ ಇತ್ತೀಚೆಗೆ ಅನಾರೋಗ್ಯಕರ ವಾತಾವರಣ ನಿರ್ಮಾಣವಾಗುತ್ತಿರುವುದು ವಿಷಾದದ ಸಂಗತಿಯಾಗಿದೆ. ವಿಶಾಲ ಮನೋಭಾವನೆ ಅಳಿದು ಸಂಕುಚಿತ ಭಾವನೆ ಬೆಳೆಯುತ್ತಿದೆ; ಸಹಕಾರ ಮನೋಭಾವ ಮರೆಯಾಗುತ್ತಿದೆ. ಇದರಿಂದ ಪ್ರಗತಿಗೆ ಅಡ್ಡಿಯಾಗಿದೆ. ಅಶಾಂತಿ ಕಲಹಕ್ಕೆ ಆಸ್ಪದವಾಗಿದೆ. ಇಂಥ ವಾತಾವರಣ ನಿವಾರಣೆಯಾಗಿ ಸಮಾನತೆ, ಸಹಬಾಳ್ವೆಯ ವಾತಾವರಣ ಬೆಳೆಯಬೇಕು. ಮಾತ್ಸರ್ಯಗುಣ ಅಳಿದು, ಅಭಿವೃದ್ಧಿಗೆ ಆಧಾರವಾದ ಸಹಕಾರ ಗುಣ ಬೆಳೆಯಬೇಕು. ಜನರಲ್ಲಿ ಮೂಡಿರುವ ನಿರಾಶಾಭಾವನೆ, ಸೋಮಾರಿತನ ಹೋಗಬೇಕು. ಇದಾಗದ ಹೊರತು ಗ್ರಾಮೀಣ ಸಮುದಾಯದ ಅಭಿವೃದ್ಧಿಯಾಗದು. ಮಠಗಳು ಈ ದಿಸೆಯಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಬೇಕು."

"ವಿದ್ಯಾರ್ಥಿಗಳು ರಾಷ್ಟ್ರದ ಅಮೂಲ್ಯ ಆಸ್ತಿ. ರಾಷ್ಟ್ರದ ಭವ್ಯ ಭವಿಷ್ಯ ನಿರ್ಮಾಣದ ಶಕ್ತಿ. ಈ ಯುವಶಕ್ತಿ ಇಂದಿನ ದಿನಗಳಲ್ಲಿ ವಿದೇಶಿಸಂಸ್ಕೃತಿಗೆ ಮಾರುಹೋಗಿ ಅರಾಜಕತೆಯ ಹಾದಿ ಹಿಡಿಯುತ್ತಿರುವುದು ದುಃಖದ ಸಂಗತಿಯಾಗಿದೆ. ಇಂಥ ಬೆಳವಣಿಗೆಗೆ ಜರೂರಾಗಿ ನಿಲ್ಲಬೇಕು. ವಿದ್ಯಾರ್ಥಿ ಸಮುದಾಯದಲ್ಲಿ ಉದಾತ್ತ ಮನೋಭಾವ ಬೆಳೆಯಬೇಕು. ದೇಶೀಯ ಪರಂಪರೆಯ ಮೌಲ್ಯಗಳನ್ನು ಜೀವನ ಮಾರ್ಗದಲ್ಲಿ ಅಳವಡಿಸಿಕೊಳ್ಳಬೇಕು. ತಮ್ಮಲ್ಲಿರುವ ಪ್ರತಿಭೆಯನ್ನು ಸದುಪಯೋಗ ಮಾಡಿಕೊಂಡು ರಾಷ್ಟ್ರದ, ಸಮಾಜದ ಅಭಿವೃದ್ಧಿಗೆ ನೆರವಾಗಬೇಕು. ಜೀವನದಲ್ಲಿ ಶಿಸ್ತನ್ನು ಪಾಲಿಸಬೇಕು. ಪರಿಶುದ್ಧ ಜೀವನ ನಡೆಸಬೇಕು. ಸಾಂಸ್ಕೃತಿಕವಾಗಿ, ನೈತಿಕವಾಗಿ, ಆರ್ಥಿಕವಾಗಿ ಇತರರಿಗೆ ಮಾದರಿಯಾಗಬೇಕು. ಹೀಗಾದರೆ ಮಾತ್ರ ಜೀವನದಲ್ಲಿ ಮುಂದೆ ಬರಲು ಸಾಧ್ಯ."

ಮನುಷ್ಯನಿಂದ ಸಾಧ್ಯವಿಲ್ಲದ ಕೆಲಸ ಯಾವುದೂ ಇಲ್ಲ. ಇಚ್ಛಾಶಕ್ತಿ ಒಂದಿದ್ದರೆ ಅದರಿಂದ ಏನನ್ನಾದರೂ ಸಾಧಿಸಬಹುದು. ಸಾಧನೆಯ ಮೂಲ ಮಂತ್ರ ಇಚ್ಛಾಶಕ್ತಿ. ಮನುಷ್ಯ ತನ್ನ ನಡೆ, ನುಡಿ ಮತ್ತು ಮಾರ್ಗವನ್ನು ಪ್ರತಿಕ್ಷಣ ಪರೀಕ್ಷಿಸಿಕೊಳ್ಳುತ್ತಿರಬೇಕು. ತಪ್ಪನ್ನು ಹೊರಹಾಕಿ, ಒಪ್ಪನ್ನು ಉಳಿಸಿಕೊಳ್ಳಬೇಕು. ಬದುಕುವ ಕಲೆ ಕಲಿಯಬೇಕು. ಯಾರೂ ಹುಟ್ಟಿನಿಂದ ಕೆಟ್ಟವರಾಗಿರುವುದಿಲ್ಲ. ಕೆಟ್ಟಗುಣ ಮನುಷ್ಯ ಹೊಂದುವ ಸಹವಾಸದಿಂದ ಬೆಳೆಯುತ್ತದೆ. ಆದ್ದರಿಂದ ಮನುಷ್ಯರು ಸದ್ಗುಣಿಗಳಾಗಲು ಉತ್ತಮರ ಸಹವಾಸ ಮಾಡಬೇಕು. ಜಾಗರೂಕತೆಯಿಂದ ನಡೆದು ಸನ್ಮಾರ್ಗಿಗಳಾಗಿ ಪರಮ ಪದವಿ ಗಳಿಸಬೇಕು. ಮಠಾಧಿಪತಿಗಳು ಇದಕ್ಕೆ ಮಾರ್ಗದರ್ಶನ ನೀಡಬೇಕು ಎಂಬುದು ಪೂಜ್ಯ ಮುಮ್ಮಡಿ ಮಹಾಲಿಂಗ ಸ್ವಾಮೀಜಿಯವರ ಅಂತರಂಗದ ಅಭಿಲಾಷೆ. ಈ ನಿಟ್ಟಿನಲ್ಲಿ ಅವರು ಸೇವೆಗೈವ ಸಂಕಲ್ಪಹೊಂದಿರುವರು.

■■

ಶ್ರೀ ದೇಗುಲಮಠದ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಸೇವೆ

✍ ಡಾ. ಎಸ್.ಎಚ್. ಭುವನೇಶ್ವರ್

ವೇದೋಪನಿಷತ್ತುಗಳ ಕಾಲದಲ್ಲಿ ವಿದ್ಯಾಭ್ಯಾಸವು ಋಷ್ಯಾಶ್ರಮಗಳಲ್ಲಿ ನಡೆಯುತ್ತಿತ್ತು. ಇಲ್ಲಿ ಒಬ್ಬೊಬ್ಬ ಪ್ರಸಿದ್ಧರಾದ ಋಷಿಗಳು ಕುಲಪತಿಗಳಾಗಿ, ಸಾವಿರಾರು ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸ ಮಾಡಿಸುತ್ತಿದ್ದರು. ಈ ಗುರುಕುಲಕ್ಕೆ ಬದಲಾಗಿ ಮುಂದೆ ದೇವಾಲಯಗಳು ನಿರ್ಮಿತವಾದವು. ಕಾಲಕ್ರಮೇಣ ಈ ಆಲಯಗಳಲ್ಲಿ ಮಠಗಳು ಸ್ಥಾಪಿಸಲ್ಪಟ್ಟವು. ಮಠ ಎಂದರೆ ಬೋಧಿಸುವ ಗೃಹ ಅಥವಾ ಪಾಠಶಾಲೆ ಎಂಬರ್ಥಕ್ಕೆ ಅನುಗುಣವಾಗಿ ಗುರುಗಳು, ಶಿಷ್ಯರು, ಸನ್ಯಾಸಿಗಳು, ಬ್ರಹ್ಮಚಾರಿಗಳು ವಾಸಮಾಡುವ ಸ್ಥಳವಾಯಿತು. ಇಲ್ಲಿ ಸನ್ಯಾಸಿಗಳು ವಾಸಮಾಡಿಕೊಂಡು ತಮ್ಮ ತಮ್ಮ ಸಿದ್ಧಾಂತಗಳನ್ನು ಪಾಠಪ್ರವಚನ ಮಾಡುವ ಪರಿಪಾಠ ಉಂಟಾಯಿತು. ಇವು ಬರೀ ಗುರುಗಳ ವಾಸಗೃಹಗಳಾಗಿರದೆ ವಿದ್ಯಾರ್ಥಿಮಂದಿರಗಳೂ ಆಗಿವೆ. ಶೈವಸಂಪ್ರದಾಯವು ವೀರಶೈವ ಸಂಪ್ರದಾಯವಾದ ಮೇಲೆ ಎಳೆಯರಿಂದ ಹಿಡಿದು ವಯಸ್ಸಾದವರವರೆಗೆ, ಹೆಣ್ಣು ಮಕ್ಕಳೂ ಸೇರಿದಂತೆ ಗುರುಗಳ ನೇತೃತ್ವದಲ್ಲಿ ನಡೆಯುವ ಶಾಲೆಗಳು ಮಕ್ಕಳಿಗೆ ಓದುಬರಹ ಕಲಿಸಿ ವಿದ್ಯಾವಂತರನ್ನಾಗಿ ಮಾಡಿಸುವ 'ಸಾಲಿಮಠ', 'ಓದಿಸೋಮಠ', 'ವಿರಕ್ತಮಠ'ಗಳು ಇದ್ದವು. 'ಸಾಲಿಮಠ'ಗಳು ಓದುಬರಹ ಕಲಿಸುವುದರ ಜೊತೆಗೆ ಭೌತಿಕ ಬದುಕಿಗೆ ಅಗತ್ಯವಾದ ಯಾವುದಾದರೂ ಒಂದು ವೃತ್ತಿಯನ್ನು ಕಲಿಸುತ್ತಿದ್ದವು. ಇದರಿಂದ ವೃತ್ತಿಗೌರವವೂ ಉಂಟಾಗುತಿತ್ತು. 'ಓದಿಸುವ ಮಠ'ಗಳು ಅಕ್ಷರಾಭ್ಯಾಸ ಮಾಡಿಸುತ್ತಲೇ ಸಾಹಿತ್ಯಾಭ್ಯಾಸ, ಸಾಂಸ್ಕೃತಿಕ ಪರಂಪರೆಯನ್ನು ಮೂಡಿಸುತ್ತಿದ್ದವು ಇದೇ ಪಾಠಶಾಲೆಗಳು. 'ವಿರಕ್ತಮಠ'ಗಳು ಸ್ನಾತಕೋತ್ತರ ಶಿಕ್ಷಣಕ್ಷೇತ್ರಗಳಿದ್ದಂತೆ, ಇವು ಉಚ್ಚಶಿಕ್ಷಣ ಕೇಂದ್ರಗಳಾಗಿದ್ದವು. ಇಲ್ಲಿ ಸಮ್ಮೇಳನಗಳು, ವಿಚಾರ ಸಂಕಿರಣಗಳು, ಚರ್ಚಾಗೋಷ್ಠಿಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿದ್ದವು. ಹಾಗೆಯೇ ಧಾರ್ಮಿಕ ವಿಚಾರ, ವೈಚಾರಿಕ ದೃಷ್ಟಿಯ ವಿನಿಮಯಗಳೂ ಸಂವಾದದ ರೂಪದಲ್ಲಿ ನಡೆಯುತ್ತಿದ್ದವು. ಬಸವಣ್ಣಾದಿ ಶರಣರೆಲ್ಲಾ ಸೇರಿ ಅಲ್ಲಮಪ್ರಭುವಿನ ಅಧ್ಯಕ್ಷತೆಯಲ್ಲಿ ನಡೆಸುತಿದ್ದ 'ಅನುಭವ ಮಂಟಪ' ಈ ಗುಂಪಿಗೆ ಸೇರಿದುದು. ಈ ಹಿನ್ನೆಲೆಯಲ್ಲಿ ರೂಪಿತವಾದ ಶರಣರ ಒಂದೊಂದು ಮನೆಯೂ ಮಠವೇ ಆಗಿ ಪರಿಣಮಿಸಿದವು. ಜನರ ಶಿಕ್ಷಣ ಮಟ್ಟವು ಹೆಚ್ಚಿ, ಎಲ್ಲರೂ ವಿದ್ಯಾವಂತರೂ, ವಿಚಾರವಂತರೂ ಆಗುವಂಥ ಅವಕಾಶವನ್ನೂ ಒದಗಿಸಿದವು. ಸಮಾಜದಲ್ಲಿ ಸ್ಥಾನಮಾನಗಳಿಂದ ವಂಚಿತರಾಗಿ ಅವಕಾಶವೇ ಇಲ್ಲದೆ ಗೃಹಕೃತ್ಯದಲ್ಲೇ ಜೀವನ ಸವೆಸುತ್ತಿದ್ದ ಹೆಣ್ಣುಮಕ್ಕಳಿಗೆ ಕಲಿಯಲು ಅವಕಾಶ, ಚರ್ಚೆಯಲ್ಲಿ ಪಾಲ್ಗೊಳ್ಳುವ, ಸ್ವತಂತ್ರವಾಗಿ ಆಲೋಚಿಸಿ, ತಮ್ಮ ಅಭಿಪ್ರಾಯ ವ್ಯಕ್ತಪಡಿಸುವ ಮುಕ್ತ ಅವಕಾಶ ಪಡೆದರು. ಇದರಿಂದಾಗಿ ಅವರು ಸಂಪ್ರದಾಯದ ಸೆರೆಯಿಂದ ಹೊರಬಂದು ಪುರುಷ ಪ್ರಧಾನ ಸಮಾಜದಲ್ಲಿ ಪುರುಷರಿಗೆ ಸರಿಸಮನಾಗಿ ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ ಬೆಳೆದು ನಿಂತರು. ಕಲಿಯುವ ಅವಕಾಶ ಜಾತಿಮತಭೇದವಿಲ್ಲದೆ, ಮೇಲುಕೀಳು ಕಲ್ಪನೆಯಿಲ್ಲದೆ, ತಾರತಮ್ಯ ಭೇದವಿಲ್ಲದೆ ಎಲ್ಲರಿಗೂ ದೊರೆಯಿತು. ಶಿಕ್ಷಣವು ನಿತ್ಯಜೀವನದ ಅನಿವಾರ್ಯವಾಯಿತು. ಶಾಲೆಯಲ್ಲಿ ಕಲಿಯುವ ಸಾಂಪ್ರದಾಯಿಕ ಶಿಕ್ಷಣದ ಜೊತೆಗೆ ಸಾಮೂಹಿಕ ಶಿಕ್ಷಣದ ವ್ಯವಸ್ಥೆಯೂ ಆಗ ನಡೆಯಿತು. ಜನಸಾಮಾನ್ಯರೂ ಕೂಡ ಅಲ್ಲಿ ಬದುಕಿಗೆ ಅಗತ್ಯವಾದ ಮಾರ್ಗದರ್ಶನವನ್ನು, ಆಧ್ಯಾತ್ಮವಿಚಾರಗಳನ್ನು ಚರ್ಚೆಯ ಮೂಲಕ ರೂಢಿಸಿಕೊಳ್ಳುವಂತಾಯಿತು. ಶರಣರು ರೂಪಿಸಿದ ಸಾಮಾಜಿಕ ವ್ಯವಸ್ಥೆಯೇ, ಜೀವನವಿಧಾನವೇ ಒಂದು ರೀತಿಯಲ್ಲಿ ಜನತಾಶಿಕ್ಷಣವಾಯಿತು. ವ್ಯಕ್ತಿಯ ವಿಕಾಸವು ಸಮಷ್ಟಿಯ ಉತ್ಥಾನಕ್ಕೆ ಸಾಧನವೆಂಬ ತಿಳಿವಳಿಕೆ ಹೆಚ್ಚಿ, ಜನಜೀವನದಲ್ಲಿ ಮಾರ್ಪಾಡುಗಳಾದವು. ಜನರಲ್ಲಿ ಸ್ವತಂತ್ರವಿಚಾರಶಕ್ತಿ, ವೈಜ್ಞಾನಿಕ ದೃಷ್ಟಿ ಬೆಳೆಯಿತು. ಸಮಾಜಕ್ಕೆ ಅಗತ್ಯವಾದ ವಿವಿಧ ಕಸುಬುಗಳನ್ನು, ಕಸುಬುದಾರರನ್ನು,

ಕಲೆಗಳನ್ನು ಪ್ರೋತ್ಸಾಹಿಸಿ, ಅವರಲ್ಲಿನ ತಾರತಮ್ಯವನ್ನು ಹೋಗಲಾಡಿಸಿ ಅವನ್ನು ಕಲಿಯಲು ಎಲ್ಲರಿಗೂ ಅವಕಾಶ ಕೊಟ್ಟಿದ್ದರಿಂದ ಎಲ್ಲರಲ್ಲಿಯೂ ಕಾಯಕ ನಿಷ್ಠೆ ಉಂಟಾಯಿತು. ಶರಣರ ಈ ಶಿಕ್ಷಣನೀತಿಯಿಂದಾಗಿ ಸಮುದಾಯ ಶಿಕ್ಷಣಕ್ರಾಂತಿ ನಡೆಯಿತು. ನಿರಕ್ಷರಕುಕ್ಷಿಗಳೂ ಸಹ ಬದುಕಿನ ಮೌಲ್ಯಗಳನ್ನು ಕುರಿತು ಗಂಭೀರಚಿಂತನೆಯಲ್ಲಿ ತೊಡಗಿದರು. ಕೆಳವರ್ಗದವರೂ ಸೇರಿದಂತೆ ಶ್ರೀಸಾಮಾನ್ಯರು ಹೊಸವಿಚಾರಗಳನ್ನು ಅರಿತು, ಬದುಕಿನಲ್ಲಿ ಅವುಗಳನ್ನು ಅಳವಡಿಸಿಕೊಂಡರು. ಇವೆಲ್ಲಾ ಶರಣರ ಮಠಸಂಸ್ಕೃತಿ ತಂದ ಶೈಕ್ಷಣಿಕ ಕ್ರಾಂತಿಯ ಫಲಗಳಾದವು.

ಕಲ್ಯಾಣದಲ್ಲಿ ಕ್ರಾಂತಿಯಾದ ನಂತರ ಆಗ ಅಲ್ಲಿದ್ದ ಶರಣರೆಲ್ಲಾ ಚದುರಿ ನಾಡಿನಾದ್ಯಂತ ಒಂದೊಂದು ಕಿರಣಗಳಾಗಿ ಪ್ರಸರಿಸಿ ಸ್ವಪ್ರಕಾಶದಿಂದ ಮಠಗಳನ್ನು ಸ್ಥಾಪಿಸಿ, ಅಲ್ಲಿ ತಮ್ಮ ವಿರಕ್ತಮಠಗಳ ಸಂಪ್ರದಾಯವನ್ನು ಬೆಳೆಸಿದರು. ಅವೆಲ್ಲವೂ ಜನಜಾಗೃತಿಯ ಕೇಂದ್ರಗಳಾಗಿ, ಸಾಂಸ್ಕೃತಿಕ ನೆಲೆಗಳಾಗಿ ಜನರನ್ನು ವಿದ್ಯಾವಂತರನ್ನಾಗಿ, ಬುದ್ಧಿವಂತರನ್ನಾಗಿ ಮಾಡುವಲ್ಲಿ ಶ್ರಮಿಸುತ್ತಾ ಬಂದವು. ಈ ಮಠಗಳು ಶಿಕ್ಷಣ ಪ್ರಸಾರವನ್ನು ಒಂದು ವ್ರತದಂತೆ ನಡೆಸಿಕೊಂಡು ಬಂದಿವೆ. ಕಾಲಕ್ಕೆ ತಕ್ಕ ಆಧುನಿಕ ಶಿಕ್ಷಣದ ವಿಜ್ಞಾನ, ತಂತ್ರಜ್ಞಾನಗಳ ಜೊತೆಗೆ ಪ್ರಾಚೀನವಾದ ಸಂಸ್ಕೃತ ಅಭ್ಯಾಸ ಮತ್ತು ವೃತ್ತಿಶಿಕ್ಷಣವನ್ನು ಒದಗಿಸುತ್ತಿವೆ. ಜೊತೆಗೆ ಧರ್ಮದ ಸಾಮಾನ್ಯ ತಿಳುವಳಿಕೆಯನ್ನು ಎಳೆಯ ಮನಸ್ಸುಗಳಲ್ಲಿ ಬಿಂಬಿಸುವ ಕೆಲಸವನ್ನು ಮಾಡುತ್ತಿವೆ. ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಿ ಅವರಿಗೆ ಅಶನ-ವಸತಿಗಳನ್ನು ಒದಗಿಸುತ್ತಿವೆ. ಒಳ್ಳೆಯ ವ್ಯಕ್ತಿತ್ವ ನಿರ್ಮಾಣಕ್ಕೆ ಅಗತ್ಯವಾದ ವಾತಾವರಣವನ್ನೂ ಒದಗಿಸುತ್ತಿವೆ. ಹಳ್ಳಿಯ ಬಡಮಕ್ಕಳು ದೂರದ ಪಟ್ಟಣಗಳಿಗೆ ಹೋಗಿ ಓದಲಾಗದೆ ಇರುವ ಪರಿಸ್ಥಿತಿಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಶಾಲೆಗಳನ್ನು ತೆರೆದು, ಅವರನ್ನು ಸುಶಿಕ್ಷಿತರನ್ನಾಗಿ ಮಾಡಿದ ಕೀರ್ತಿ ಈ ಮಠಗಳಿಗಿದೆ. ಅಷ್ಟೇ ಅಲ್ಲದೆ ದೂರದಿಂದ ಬರುವ ಬಡಮಕ್ಕಳಿಗೆ ಜಾತಿಮತ, ಪಂಥಪಂಗಡಗಳ ತಾರತಮ್ಯವಿಲ್ಲದೆ ಆಶ್ರಯ ನೀಡಿ, ಊಟಹಾಕಿ ಅವರ ಬದುಕಿಗೆ ಬೆಳಕು ನೀಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ವಿರಕ್ತಮಠವಾಗಿ ಸ್ಥಾಪಿತವಾದವುಗಳಲ್ಲಿ ಕನಕಪುರದ ಶ್ರೀ ದೇಗುಲಮಠವೂ ಒಂದಾಗಿದೆ. ನೂರೊಂದಯ್ಯನ ಬೆಟ್ಟ, ಕಾವೇರಿ-ಅರ್ಕಾವತಿ ಸಂಗಮಸ್ಥಳದ ಬದಿಯಲ್ಲಿರುವ ಮಡಿವಾಳಕ್ಷೇತ್ರಗಳಲ್ಲಿ ನೆಲೆಸಿದ ಅಲ್ಲಮಪ್ರಭು ಪರಂಪರೆಯ ನಿರಂಜನ ಸ್ವಾಮಿಗಳ ಗಣಸಮೂಹ ನೂರ ಒಂದು ವಿರಕ್ತ ಮಹಾಶಿವಯೋಗಿಶ್ವರರಲ್ಲೊಬ್ಬರಾದ ಶ್ರೀ ಶ್ರೀ ನಿರಂಜನ ನಿರ್ವಾಣಶಿವಯೋಗಿಶ್ವರರು ಅಲ್ಲಿಂದ ಮುಂದೆ ಉತ್ತರಾಭಿಮುಖವಾಗಿ ಸಂಚರಿಸಿ, ಸುಮಾರು ಆರನೇ ಶತಮಾನಕ್ಕೂ ಹಿಂದೆಯೇ ಅರ್ಕಾವತಿನದಿಯ ಬಲದಡದಲ್ಲಿ ಬಂದು ನೆಲೆಸಿದರು. ಅವರೇ ಆದಿಗುರು ಶ್ರೀ ನಿರ್ವಾಣಸ್ವಾಮಿಗಳು. ಈ ಮಹಿಮಾಪುರುಷರ ಪ್ರಭಾವದಿಂದಾಗಿ ನಾಡಿನ ನಾನಾಕಡೆಗಳಿಂದ ಭಕ್ತಸಮೂಹ ಸಂದರ್ಶನಾರ್ಥವಾಗಿ ಈ ಕ್ಷೇತ್ರಕ್ಕೆ ಬರುತ್ತಿತ್ತು. ಅದರಿಂದಾಗಿಯೇ ಅದು ಪ್ರತ್ಯಕ್ಷ ದೇವರ ಬೀಡಾಗಿ 'ನಿರುವಾಣ ದೇವರಮಠ'ವೆಂಬ ಹೆಸರು ಪಡೆಯಿತು. ಅವರು ನೆಲೆಸಿದ ಈ ಪುಣ್ಯಕ್ಷೇತ್ರವೇ ಕನಕಪುರದ ಇಂದಿನ ಈ ಶ್ರೀದೇಗುಲಮಠ. 'ನಿರುವಾಣ ದೇವರಮಠ'ವೆಂದು ಪ್ರಸಿದ್ಧವಾಗಿದ್ದ ಶ್ರೀ ಮಠವು ಸುಮಾರು ಎರಡು ಶತಮಾನಗಳಿಂದೀಚೆಗೆ "ಶ್ರೀದೇಗುಲಮಠ"ವೆಂಬ ಅನ್ವರ್ಥನಾಮ ಪಡೆಯಿತು. ಈ ಮಹಾಮಹಿಮರು ತಮ್ಮ ಶಿವಯೋಗಾನುಷ್ಠಾನದಿಂದ ಅನೇಕ ಮಹಿಮೆಗಳನ್ನು ತೋರಿದರು. ಶ್ರೀಗಳು ಮೋಕ್ಷವನ್ನು ಬಯಸುವ ಜನರ ಮಾನಸಿಕ ಶಕ್ತಿಯನ್ನರಿತು ಅವರವರ ಅಂತಸ್ತಿಗೆ ತಕ್ಕಂತೆ ಆಧ್ಯಾತ್ಮ ವಿಚಾರಗಳನ್ನರುಹಿ ಮಾರ್ಗದರ್ಶನ ನೀಡುತ್ತಿದ್ದರು. ಕಲ್ಯಾಣದ ಶಿವಶರಣರ ವಚನಾನುಭವವನ್ನೇ ಬಹುಮಟ್ಟಿಗೆ ಬೋಧಿಸುತ್ತಿದ್ದುದಾಗಿ ತಿಳಿದುಬಂದಿದೆ. ಸಚ್ಚಿದಾನಂದ ಸ್ವರೂಪ ಶಿವೆಯು ಪ್ರಕೃತಿರೂಪಿಂದ ನಾಲ್ವರು ಶಕ್ತಿಯಗಳು ಅವತರಿಸಿ, ನಿತ್ಯರಾದ ಆದ್ಯನಿರ್ವಾಣಸ್ವಾಮಿಗಳವರನ್ನು ಕಾಯೇನ ವಾಚಾ ಮನಸಾ ಭಕ್ತಿಪೂರ್ವಕ ಸೇವಿಸುತಿದ್ದರಂತೆ. ಶಿವನಲ್ಲಿ ಅವಿನಾಭೂತವಾಗಿರುವ ಶಿವೆಯ ನಿಜದ ನಿಲುವನ್ನು ಗುರುಮುಖದಿಂದ ಅರಿತು ಆರಾಧಿಸಬೇಕೆಂಬುದೇ ಅವರ ಮನದಾಸೆಯಾಗಿತ್ತಂತೆ. ಅದರಂತೆ ವಿರುಪಸಂದ್ರ, ಕುರುಪೇಟೆ, ಮಳಗಾಳು ಮತ್ತು ಕನಕಪುರಗಳಲ್ಲಿ ಗುಡಿಕಟ್ಟಿ ಆ ನಾಲ್ವರು ಶಕ್ತಿಯರನ್ನು ಸಂಕೇತ ಸ್ಮರಣಾರೂಪದಿಂದ ಇಂದಿಗೂ ಪೂಜಿಸುತ್ತಿದ್ದಾರೆ. ಆಯಾಯ

ದೇವಾಲಯಗಳಲ್ಲಿ ಪ್ರತಿವರ್ಷವೂ 'ಕೊಂಡ' ಮಾಡುವಾಗ 'ಶ್ರೀ ದೇಗುಲಮಠ'ದಿಂದ ಆ ದೇವಿಯರವರಿಗೆ 'ಸೋಗಿಲು ತುಂಬುವ, ತೀರ್ಥ ಕೊಡುವ' ಪದ್ಧತಿಯನ್ನು ಇಂದಿಗೂ ಕಾಣಬಹುದು. ಈ ದೇವಿಯರು ಶ್ರೀಮಠಕ್ಕೆ ಬಂದಾಗ ಅವರನ್ನು ಸ್ವಾಮೀಜಿಯವರು ಒಂದು ನಿರ್ದಿಷ್ಟಸ್ಥಳಕ್ಕೆ ಕರೆದೊಯ್ದು ಬಿಟ್ಟುಬರುವ ಸಂಪ್ರದಾಯ ಈಗಲೂ ಬಳಕೆಯಲ್ಲಿದೆ.

ಶಾಸನದ ಪ್ರಕಾರ ಮೈಸೂರು ಅರಸು ದೇವರಾಜ ಒಡೆಯರ ದಳವಾಯಿ ವಿರುಪಸಂದ್ರದ ಕೋಮಾರಯ್ಯನ ತಾಯಿ ತಿಮ್ಮಮ್ಮ ಹೊಂಬನಾಡ ಕಾಣಿಕಾರನ ಹಳ್ಳಿಯಲ್ಲಿ ನಿರ್ವಾಣದೇವರ ಮಠವನ್ನು ಸ್ಥಾಪಿಸಿ, ಹೊಲ ಕಂ. ಗ. ೮ ವರಹ ಭೂಸ್ವಾಸ್ಥೆಯನ್ನು ದಾನಮಾಡಿದ ವಿಷಯವಿದೆ. ನಿರ್ವಾಣದೇವರ ಕಾಲದಲ್ಲೇ ಗವಿಮಠವೂ ಇದ್ದಿತೆಂದು ತಿಳಿದುಬರುವುದು. ಈ ಪರಂಪರೆಯ ಒಬ್ಬಿಬ್ಬರು ಸ್ವಾಮಿಗಳಾದ ಮೇಲೆ ಅದು ಮೂಲಮಠದಲ್ಲೇ ಐಕ್ಯವಾಯಿತು. ಈ ಮಠವು ೧೪ನೇ ಶತಮಾನದಲ್ಲಿ ಪ್ರಾರಂಭವಾಗಿ ಅನೇಕ ಪೀಠಾಧಿಪತಿಗಳಾದ ಸ್ವಾಮಿಗಳ ಗದ್ದುಗೆಗಳು ಈ ಮಠದ ಸುತ್ತಲೂ ಇವೆ. ಒಬ್ಬೊಬ್ಬರೂ ಮಾಡಿರುವ ಮಹತ್ಕಾರ್ಯಗಳು ಜನಜನಿತವಾಗಿವೆ. ಮೂಲನಕ್ಷತ್ರ ಮಳೆಯಿಂದ ಅರ್ಕಾವತಿ ನದಿಯ ಹುಚ್ಚುಪ್ರವಾಹಕ್ಕೆ ಸಿಕ್ಕಿದ ಶ್ರೀದೇಗುಲ ಮಠ ೧೬೭೭ರಲ್ಲಿ ಕೊಚ್ಚಿಹೋಯಿತು. ೨೮-೪-೧೬೭೮ರಲ್ಲಿ ಚಿಕ್ಕದೇವರಾಜ ಒಡೆಯರ ಕಾಲದಲ್ಲಿ ಶ್ರೀದೇಗುಲಮಠ ಪುನರುಜ್ಜೀವನಗೊಂಡಿತು. ಅಂದಿನಿಂದ ಶ್ರೀಮಠದಲ್ಲಿ ಗುರುವಿಗೆ ತನು, ಲಿಂಗಕ್ಕೆ ಮನ, ಜಂಗಮಕ್ಕೆ ಧನ ಎಂಬ ತ್ರಿವಿಧ ದಾಸೋಹವನ್ನೂ, ಜ್ಞಾನದಾಸೋಹ ಸತ್ಕಾರ್ಯವನ್ನು ನಿರಂತರವಾಗಿ ನಡೆಸುತ್ತಾ, ೬೦೦ ವರ್ಷಗಳಿಂದ ವಿದ್ಯಾದಾನ, ಪರೋಪಕಾರ, ಜ್ಞಾನೋಪದೇಶ ಮತ್ತು ಅಜ್ಞಾನಿಗಳಿಗೆ ಸನ್ಮಾರ್ಗವನ್ನು ತೋರಿಸುತ್ತಾ ಕೀರ್ತಿ ಗಳಿಸಿದೆ.

ಶೈಕ್ಷಣಿಕ ಬೆಳವಣಿಗೆಯಲ್ಲಿ ಮತ್ತು ನಗರಜೀವನ, ಸಾಂಸ್ಕೃತಿಕ ಬೆಳವಣಿಗೆಯಲ್ಲಿ ಸಾಕಷ್ಟು ಪ್ರಭಾವ ಬೀರಿರುವ ಶ್ರೀ ದೇಗುಲಮಠವು ಜನರು ತಮ್ಮ ನಿತ್ಯಜೀವನದ ಸಂಕಷ್ಟ ಬೇಗುದಿಗಳನ್ನು, ಚಿತ್ತದ ತಳಮಳವನ್ನು ಹೋಗಲಾಡಿಸಿಕೊಂಡು ಮನಶ್ಶಾಂತಿಯನ್ನು ಪಡೆಯಲು ಊರಿನಿಂದ ದೂರದಲ್ಲಿ ಪ್ರಶಾಂತವಾದ ಪ್ರಕೃತಿಮಡಿಲಲ್ಲಿ ಇರುವ ತನ್ನ ತಾಣಗಳತ್ತ ಆಕರ್ಷಿಸಿತು. ಇಲ್ಲಿ ಗುರುಗಳು ತಮ್ಮ ಅಪೂರ್ವವಾದ ಜ್ಞಾನಾನುಭವಗಳಿಂದ ಜನರ ಮನದ ಮಾಲಿನ್ಯವನ್ನು ತೊಳೆದು ಅವರಿಗೆ ತಿಳಿವಿನ ಬೆಳಕನ್ನು ನೀಡುತ್ತಿದ್ದರು. ಆಧ್ಯಾತ್ಮಿಕ ಮತ್ತು ನೈತಿಕಶಿಕ್ಷಣವೇ ನಿಜವಾದ ಶಿಕ್ಷಣವೆಂಬ ಭಾವವಿದ್ದ ಆ ಕಾಲದಲ್ಲಿ ಆತ್ಮವಿದ್ಯೆಯಲ್ಲಿ ಸಾಧನೆಮಾಡಿದ ಗುರುಗಳು ವಿದ್ಯೆಯನ್ನು ಆತ್ಮಜ್ಞಾನವೆಂದೂ, ಮೋಕ್ಷಸ್ಥಾನವೆಂದೂ, ಮೋಕ್ಷಸಾಧನವೆಂದೂ ಭಾವಿಸಿ ಧರ್ಮದ ಬುನಾದಿಯ ಮೇಲೆಯೇ ವಿದ್ಯಾಭ್ಯಾಸ ನಡೆಸಿದರು. ವಿಜ್ಞಾನ ಬೆಳವಣಿಗೆಯಾದಂತೆ ವಿಚಾರಶಕ್ತಿ ಬೆಳೆದು, ಶಿಕ್ಷಣದ ಮೇಲೂ ಧರ್ಮದ ನಿಯಂತ್ರಣ ಸಡಿಲವಾಗುತ್ತ ಹೋದುದನ್ನು ಕಾಣಬಹುದು. ಯುಗಧರ್ಮಕ್ಕೆ ಅನುಗುಣವಾಗಿ ಸ್ಪಂದಿಸುತ್ತಾ ರಚನಾತ್ಮಕ ಕಾರ್ಯಗಳಲ್ಲಿ ನಿರತವಾದ ಕೆಲವೇ ಮಠಗಳಲ್ಲಿ ಶ್ರೀದೇಗುಲಮಠವೂ ಒಂದಾಗಿದೆ. ಶ್ರೀಮಠದ ಮೂಲ ಉದ್ದೇಶ ಜನತೆಗೆ ಶಿಕ್ಷಣವನ್ನು ನೀಡುವುದೇ ಆಗಿತ್ತು. ಆ ಶಿಕ್ಷಣವು ಕೇವಲ ಉಪಜೀವನದ ಶಿಕ್ಷಣವಾಗಿರದೆ, ಸಾಮಾಜಿಕ, ಧಾರ್ಮಿಕ, ನೈತಿಕ, ಸಾಂಸ್ಕೃತಿಕ ಮೌಲ್ಯಗಳ ತಿಳುವಳಿಕೆ, ನಡವಳಿಕೆಯನ್ನು ರೂಪಿಸುವಂತಹ ಶಿಕ್ಷಣವಾಗಿತ್ತು. ಎಲ್ಲಾ ಜನಾಂಗದ ವಿದ್ಯಾರ್ಥಿಗಳಿಗೂ, ಉಚಿತ ಊಟ ಹಾಗೂ ವಸತಿಯ ವ್ಯವಸ್ಥೆ, ವಿದ್ಯಾರ್ಜನೆಗಾಗಿ ಭವ್ಯವಾದ ಹಾಗೂ ಸುಭದ್ರವಾದ ಕಟ್ಟಡಗಳ ವ್ಯವಸ್ಥೆ. ಪ್ರತಿನಿತ್ಯ ಬರುವ ನೂರಾರು ಮಂದಿ ಪ್ರವಾಸಿಗರಿಗೆ ಹಾಗೂ ಬಡಬಗ್ಗರಿಗೆ ದಾಸೋಹದ ವ್ಯವಸ್ಥೆ, ಸ್ಥಳೀಯ ಜಾತ್ರೆ ಹಾಗೂ ವಿಶೇಷ ಧಾರ್ಮಿಕ ಕಾರ್ಯಗಳಲ್ಲಿ ಸೇರುವ ಹತ್ತಾರು ಸಾವಿರ ಮಂದಿಗೆ ಸಾಂಗವಾದ ಪ್ರಸಾದದ ವ್ಯವಸ್ಥೆ ಮತ್ತು ಆಗಾಗ ನಡೆಯುವ ಧಾರ್ಮಿಕ ಸಭೆ, ಉಪನ್ಯಾಸ ಹಾಗೂ ಶಿವಾನುಭವ ಗೋಷ್ಠಿಗಳ ವ್ಯವಸ್ಥೆ -ಇವೇ ಮೊದಲಾದ ಬಹುಶ್ರುತ ಸೇವೆಗಳಿಂದಾಗಿ ಕನಕಪುರದ ಶ್ರೀದೇಗುಲಮಠವು ರಾಷ್ಟ್ರಮಟ್ಟದ ಶ್ರೇಷ್ಠ ಸಾಂಸ್ಕೃತಿಕ ಸೇವಾಸಂಸ್ಥೆಗಳಲ್ಲಿ ಒಂದಾಗಿದೆ. ಕಳೆದ ಅನೇಕ ದಶಕಗಳಿಂದ ನಾಡಿನ ಶೈಕ್ಷಣಿಕ, ಧಾರ್ಮಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ತನ್ನದೇ ಆದ ವಿಶಿಷ್ಟ ಕೊಡುಗೆಯನ್ನು ಸಲ್ಲಿಸುತ್ತಾ ಬಂದಿದೆ. ಶ್ರೀಮಠದ ಗುರುಪರಂಪರೆಯಲ್ಲಿ ಅನೇಕ ಜನ, ಹರಗುರುಚರಮೂರ್ತಿಗಳು ಭಕ್ತಿವೈರಾಗ್ಯದ ತ್ಯಾಗದ ನೀರೆರೆದು ಮಠವನ್ನು ಬೆಳೆಸಿದ್ದಾರೆ. ಶ್ರೀಮಠವು ತ್ರಿವಿಧ ದಾಸೋಹ

ನೀಡುತ್ತಾ ಬಂದಿರುವ ಮಹಾಮನೆಯಾಗಿದೆ. ಶ್ರೀಮಠದಲ್ಲಿ ವರ್ಷವಿಡೀ ಒಂದಲ್ಲ ಒಂದ ರೀತಿಯ ಕಾರ್ಯಕ್ರಮಗಳು ನಡೆಯುತ್ತಲೇ ಇರುತ್ತವೆ. ಪ್ರತಿದಿನ ನಿತ್ಯ ದಾಸೋಹವಂತೂ ಶ್ರೀದೇಗುಲಮಠದ ಹೆಸರಿನೊಂದಿಗೆ ಬೆಸೆದುಕೊಂಡಿರುವ ಸೇವೆಯಾಗಿದೆ. ಪ್ರತಿದಿನ ಶ್ರೀ ಶ್ರೀ ಇಮ್ಮಡಿ ನಿರ್ವಾಣ ಸ್ವಾಮಿಗಳ ಗದ್ದಿಗೆಗೆ ರುದ್ರಾಭಿಷೇಕ, ಪ್ರತಿತಿಂಗಳ ಪೌರ್ಣಮಿ ಮತ್ತು ಅಮವಾಸ್ಯೆಯ ದಿನಗಳಂದು ವಿಶೇಷ ಪೂಜೆ, ಫೆಬ್ರವರಿಯಲ್ಲಿ ಶ್ರೀ ಶ್ರೀ ಇಮ್ಮಡಿ ನಿರ್ವಾಣ ಮಹಾಸ್ವಾಮಿಗಳ ಮತ್ತು ಆಗಸ್ಟ್‌ನಲ್ಲಿ ಶ್ರೀ ಶ್ರೀ ಮಹಾಲಿಂಗ ಸ್ವಾಮಿಗಳ ಆರಾಧನೆ ಮಹೋತ್ಸವವನ್ನು ಅತ್ಯಂತ ಸಂಭ್ರಮ ಸಡಗರಗಳಿಂದ ಆಚರಿಸಲಾಗುತ್ತದೆ. ಈ ಸಂದರ್ಭದಲ್ಲಿ ನಾಡಿನ ಎಲ್ಲಾ ಹರಗುರುಚರಮೂರ್ತಿಗಳು ಭಾಗವಹಿಸುತ್ತಾರೆ. ಮಕರಸಂಕ್ರಾಂತಿಯಂದು ಗೋವುಗಳಿಗೆ ಶೃಂಗಾರಮಾಡಿ ಕಿಚ್ಚನ್ನು ಹಾಯಿಸಲಾಗುತ್ತದೆ. ಚಾಂದ್ರಮಾನ ಯುಗಾದಿಯಂದು ಹಳೆಯ ವಿದ್ಯಾರ್ಥಿಗಳೆಲ್ಲಾ ಸೇರಿ ವಿಶೇಷಕಾರ್ಯಕ್ರಮವನ್ನು ನಡೆಸುತ್ತಾರೆ. ಗೌರಿಹಬ್ಬದಲ್ಲಿ ಪೇಟೆಯಿಂದ ಎಲ್ಲರೂ ಶ್ರೀಮಠಕ್ಕೆ ಬಂದು ಬಾಗಿಣ ಅರ್ಪಿಸುತ್ತಾರೆ. ಗಣೇಶಹಬ್ಬದ ಪ್ರಯುಕ್ತ ಸ್ವಾಮೀಜಿಯವರು ಮೂರುದಿನಗಳ ಕಾಲ ಕನಕಪುರದ ಪೇಟೆಯಲ್ಲಿ ಎಲ್ಲರ ಮನೆಯಲ್ಲಿ ಶ್ರೀಗುರು ಕೋರಣ್ಯಭಿಕ್ಷಾ ಮಾಡುತ್ತಾರೆ. ಈ ಸಂದರ್ಭದಲ್ಲಿ ಇಡೀ ಕನಕಪುರವೇ ಸಂಭ್ರಮದಿಂದ ಶ್ರೀಸ್ವಾಮಿಗಳನ್ನು ಬರಮಾಡಿಕೊಂಡು ತಮ್ಮ ಶಕ್ತ್ಯಾನುಸಾರ ಭಿಕ್ಷೆ ನೀಡುತ್ತಾರೆ. ವಿಜಯದಶಮಿಯಲ್ಲಿ ಶ್ರೀಯವರಿಂದ ಶಮೀವೃಕ್ಷದ ಪೂಜೆಮಾಡಿ, ಬಂದ ಭಕ್ತರಿಗೆಲ್ಲಾ ಬನ್ನಿಪತ್ರೆಯನ್ನು ಹಂಚುವ ಕಾರ್ಯಕ್ರಮವಿರುತ್ತದೆ. ದೀಪಾವಳಿಯಲ್ಲಿ ಹಳೆಯ ವಿದ್ಯಾರ್ಥಿಗಳೆಲ್ಲಾ ಸೇರಿ ಸಂಭ್ರಮಿಸುತ್ತಾರೆ. ಇದೇ ಸಂದರ್ಭದಲ್ಲಿ ನಡೆಯುವ ಲಕ್ಷದೀಪೋತ್ಸವ ವಿಜೃಂಭಣೆಯಿಂದ ಶ್ರೀಮಠದ ಒಂದು ವಿಶೇಷ ಕಾರ್ಯಕ್ರಮವಾಗಿ ನಡೆಯುತ್ತದೆ. ಈ ಸಂದರ್ಭದಲ್ಲಿ ಎಲ್ಲಾ ಹರಗುರುಚರಮೂರ್ತಿಗಳ ಆಗಮನ, ಅವರುಗಳಿಂದ ಆಶೀರ್ವಾದ ಪಡೆಯಲು ಸಾಗರೋಪಾದಿಯಲ್ಲಿ ಭಕ್ತರ ಸಮಾವೇಶ ನಡೆಯುತ್ತದೆ. ಶ್ರೀಮಠದಲ್ಲಿ ಧನುರ್ಮಾಸದ ಪೂಜೆಯಂತೂ ಒಂದುತಿಂಗಳು ವೈಭವೋಪೇತವಾಗಿ ನಡೆಯುತ್ತದೆ.

ಭಕ್ತಾದಿಗಳ ನೆರವು ಹಾಗೂ ಸಹಕಾರದಿಂದ ತಮ್ಮ ಆರ್ಥಿಕ ಸ್ಥಿತಿಯ ಪರಿಮಿತಿಯೊಳಗೆ ಶ್ರೀಮಠವು ಅನಕ್ಷರಸ್ಥರೇ ತುಂಬಿರುವ ಗ್ರಾಮೀಣ ಪ್ರದೇಶದಲ್ಲಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ, ಅನುಪಮ ಸೇವೆಸಲ್ಲಿಸುತ್ತಾ ಬಂದಿದೆ. ದೀನದಲಿತರಿಗೆ, ಬಡಮಕ್ಕಳಿಗೆ ಶ್ರೀಮಠವು ಆಶ್ರಯ ನೀಡಿ ಅನ್ನದಾನ ಹಾಗೂ ಜ್ಞಾನದಾನವನ್ನು ನೀಡುವುದರ ಮೂಲಕ ಅವರನ್ನು ಸತ್ಪ್ರಜೆಗಳನ್ನಾಗಿ ರೂಪಿಸುತ್ತಾ ಬಂದಿದೆ. ಗ್ರಾಮೀಣ ಪ್ರದೇಶದ ಸಾವಿರಾರು ವಿದ್ಯಾರ್ಥಿಗಳು ಶ್ರೀ ಗುರುಗಳ ಕರುಣೆ, ವಾತ್ಸಲ್ಯದ ಪ್ರಭೆಯಲ್ಲಿ ತಮ್ಮ ಭವಿಷ್ಯವನ್ನು ರೂಪಿಸಿಕೊಂಡು ನಾಡಿನ ವಿವಿಧ ಕ್ಷೇತ್ರಗಳಲ್ಲಿ ಸೇವೆಸಲ್ಲಿಸುತ್ತಿದ್ದಾರೆ. ಶ್ರೀದೇಗುಲಮಠವು ಅನಾಥರಿಗೆ ಆಶ್ರಯವಾಗಿ, ಹಸಿದವರಿಗೆ, ಮಠಕ್ಕೆ ಬರುವವರಿಗೆ ಅನ್ನನಿಲಯವಾಗಿ, ಜ್ಞಾನಪಿಪಾಸುಗಳಿಗೆ ಜ್ಞಾನದೇಗುಲವಾಗಿ, ಅಂಧಕಾರದಲ್ಲಿರುವವರಿಗೆ ಜ್ಞಾನದೀವಿಗೆಯಾಗಿ, ಮೋಕ್ಷಬಯಸಿ ಬರುವವರಿಗೆ ಆಧ್ಯಾತ್ಮದ ರಸದೌತಣ ನೀಡುವ ಸಾಧನಾಕೇಂದ್ರವಾಗಿ ಸೇವೆ ಸಲ್ಲಿಸಿಕೊಂಡು ಬರುತ್ತಿದೆ. ಶ್ರೀಮಠದ ಆಶ್ರಯ ಕೇವಲ ಕನಕಪುರ ಪರಿಸರದ ಮಕ್ಕಳಿಗೆ ಮಾತ್ರ ಸೀಮಿತವಾಗಿರದೆ ಕರ್ನಾಟಕ, ಆಂಧ್ರ ಮತ್ತು ತಮಿಳುನಾಡಿನ ನಾನಾಭಾಗದ ಬಡಮಕ್ಕಳಿಗೂ ಇಲ್ಲಿ ಆಶ್ರಯ ನೀಡಲಾಗುತ್ತಿದೆ. ಅತ್ಯಂತ ಹಿಂದುಳಿದ ಪ್ರದೇಶ ಮತ್ತು ಶಾಲೆಗಳ ಆವಶ್ಯಕತೆ ಇರುವ ಜಾಗಗಳಲ್ಲಿ ಪ್ರೌಢಶಾಲೆಗಳನ್ನು ತೆರೆದು ಅಲ್ಲಿಯ ಸುತ್ತಮುತ್ತಲಿನ ಜನರ ಮತ್ತು ಅವರ ಮಕ್ಕಳಿಗೆ ಜ್ಞಾನ ನೀಡುವುದರಲ್ಲಿ ಮುಂದಾಗಿದೆ. ಗ್ರಾಮೀಣ ಮಕ್ಕಳಿಗೆ ಅಕ್ಷರವಿದ್ಯೆಯ ಜೊತೆಗೆ ಉದ್ಯೋಗ ವಿದ್ಯೆಯೂ ಅಗತ್ಯವೆಂಬುದನ್ನರಿತ ಕೈಗಾರಿಕಾ ತರಬೇತಿ ಸಂಸ್ಥೆಯನ್ನು ತೆರೆದಿದೆ. ಶ್ರೀಮಠವು ಸ್ವತಃ ಕೃಷಿಯನ್ನೂ ಮಾಡುತ್ತಾ ಸುತ್ತಮುತ್ತಲಿನ ರೈತರಿಗೆ ಸುಧಾರಿತ ಬೇಸಾಯದ ಪ್ರಾತ್ಯಕ್ಷಿತಾ ಕೇಂದ್ರವಾಗಿದೆ. ಆಸಕ್ತರ ಆಧ್ಯಾತ್ಮಿಕ ಹಸಿವನ್ನು ತಣಿಸಲು ಉಪನ್ಯಾಸ ಮಾಲೆಗಳು, ಅನುಭಾವ ಗೋಷ್ಠಿಗಳು, ತಪಸ್ವಿಗಳ ಅನುಭಾವದ ಆಶೀರ್ವಾದಗಳು, ಸುತ್ತಮುತ್ತಲಿನ ಜನರ ಸಮಸ್ಯೆಗಳಿಗೆ ಪರಿಹಾರಗಳು, ಶುಭಕಾರ್ಯ ಮಾಡಲು ಬೇಕಾದ ಮಾಹಿತಿಗಳು ದೊರೆಯುತ್ತಲೇ ಇವೆ. ಶ್ರೀ ದೇಗುಲಮಠದ ಆಶ್ರಯದಲ್ಲಿ ಲಿಂಗೈಕ್ಯ ಪೂಜ್ಯ ಶ್ರೀ ಶ್ರೀ ಇಮ್ಮಡಿ ಮಹಾಲಿಂಗ ಸ್ವಾಮಿಗಳ ಕಾಲದಲ್ಲಿ ಸ್ಥಾಪಿತವಾದ

ಶ್ರೀ ನಿರ್ವಾಣಸ್ವಾಮಿ ಕೃಪಾ ವಿದ್ಯಾಪೀಠದ ಮೂಲಕ ಸಾಕಷ್ಟು ಮೌಲ್ಯಾಧಾರಿತ ಶಿಕ್ಷಣ ಸಂಸ್ಥೆಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ತೆರೆದು ಬೃಹದಾಕಾರವಾಗಿ ಬೆಳೆಯಲು ಕಾರಣೀಭೂತರಾಗಿರುತ್ತಾರೆ. ಮುಂದೆ ಬಂದ ಶ್ರೀ ಶ್ರೀ ಮುಮ್ಮಡಿ ನಿರ್ವಾಣಮಹಾಸ್ವಾಮಿಗಳು ತಮ್ಮ ಗುರುವಿನ ಅನುಗ್ರಹವನ್ನು ಚಾಚುತಪ್ಪದೆ ಮುನ್ನಡೆಸಿಕೊಂಡು ಬಂದಿದ್ದಾರೆ. ಈ ಗುರುಗಳ ಕೈಯಾಸರೆಯಾಗಿ, ಸಾಕಷ್ಟು ದಿವ್ಯವಾದ ಆಲೋಚನೆಗಳನ್ನಿಟ್ಟುಕೊಂಡು ಶ್ರೀದೇಗುಲಮಠವನ್ನು ದೇಶವಿದೇಶಗಳಲ್ಲಿ ಬಿಂಬಿಸಬೇಕೆಂಬ ಅತ್ಯುತ್ಕಟವಾದ ಅಭಿಲಾಕ್ಷೆಯನ್ನು ಹೊಂದಿರುವ ಕಿರಿಯ ಸ್ವಾಮಿಗಳಾದ ಶ್ರೀ ಶ್ರೀ ಮುಮ್ಮಡಿ ಮಹಾಲಿಂಗ ಸ್ವಾಮಿಗಳ ಆಶಯ ನಿಜಕ್ಕೂ ಮೆಚ್ಚುವಂತಹದಾಗಿದೆ. ಈ ಇಬ್ಬರೂ ಸ್ವಾಮಿಗಳವರು ಕ್ರಿಯಾಶೀಲ ಮನೋಭಾವದಿಂದ ಶೈಕ್ಷಣಿಕವಾಗಿ ಹೊಸ ಹೊಸ ಯೋಜನೆಗಳನ್ನು ಶ್ರೀಮಠಕ್ಕೆ ನೀಡುವ ಪ್ರಯತ್ನವನ್ನು ಮಾಡುತ್ತಿದ್ದಾರೆ. ಶ್ರೀಮಠದ ಎಲ್ಲಾ ಗುರುಪರಂಪರೆಯವರ ಸಾಧನೆಯ ಫಲವಾಗಿ ಈ ಕೆಳಕಂಡ ಶಿಕ್ಷಣ ಸಂಸ್ಥೆಗಳು ವ್ಯವಸ್ಥಿತವಾದ ರೀತಿಯಲ್ಲಿ ಬೆಳೆಯುತ್ತಿವೆ:

೧. ಶ್ರೀ ನಿರ್ವಾಣಸ್ವಾಮಿ ಅನಾಥಾಲಯ, ಕನಕಪುರ, ೧೯೪೭

೨. ಶ್ರೀ ನಿರ್ವಾಣಸ್ವಾಮಿ ವಸತಿ ಪ್ರೌಢಶಾಲೆ, ಕನಕಪುರ, ೧೯೬೪

೩. ಶ್ರೀ ಮಹಾಲಿಂಗೇಶ್ವರ ಗ್ರಾಮಾಂತರ ಪ್ರೌಢಶಾಲೆ, ಕನಕಪುರ, ೧೯೬೫

೪. ಶ್ರೀ ಬಸವೇಶ್ವರ ಪ್ರೌಢಶಾಲೆ, ಡಿ. ಹಲಸಹಳ್ಳಿ, ಮಳವಳ್ಳಿತಾಲ್ಲೂಕು, ೧೯೬೬

೫. ಶ್ರೀ ಬಸವೇಶ್ವರ ಹಿರಿಯ ಪ್ರಾಥಮಿಕಶಾಲೆ, ಕನಕಪುರ, ೧೯೬೯

೬. ಶ್ರೀ ನಿರ್ವಾಣಸ್ವಾಮಿ ಅನಾಥಶಿಶು ಸಂರಕ್ಷಣಾಲಯ, ಕನಕಪುರ, ೧೯೭೭

೭. ಶ್ರೀ ನಿರ್ವಾಣಸ್ವಾಮಿ ಸಂಸ್ಕೃತ ಪಾಠಶಾಲೆ, ಕನಕಪುರ, ೧೯೭೯

೮. ಶ್ರೀ ಮಹಾಲಿಂಗಸ್ವಾಮಿ ಗ್ರಾಮಾಂತರ ಪ್ರೌಢಶಾಲೆ, ಹುಣಸನಹಳ್ಳಿ, ಕನಕಪುರ ತಾಲ್ಲೂಕು, ೧೯೮೮

೯. ಶ್ರೀ ಸಿದ್ಧಗಂಗಾ ಗ್ರಾಮಾಂತರ ಬಾಲಕಿಯರ ಪ್ರೌಢಶಾಲೆ, ಕೆಸ್ತೂರು, ಮದ್ದೂರು ತಾಲ್ಲೂಕು, ೧೯೯೦

೧೦. ಶ್ರೀ ಮಹಾಲಿಂಗಸ್ವಾಮಿ ವಿದ್ಯಾರ್ಥಿನಿಲಯ, ಹುಣಸನಹಳ್ಳಿ, ಕನಕಪುರ ತಾಲ್ಲೂಕು, ೧೯೯೦

೧೧. ಶ್ರೀ ಮಹಾಲಿಂಗಸ್ವಾಮಿ ಸಂಯುಕ್ತ ಪದವಿಪೂರ್ವ ಕಾಲೇಜು, ಹುಣಸನಹಳ್ಳಿ, ಕನಕಪುರ ತಾಲ್ಲೂಕು, ೧೯೯೨

೧೨. ಶ್ರೀ ಮಹಾಲಿಂಗೇಶ್ವರ ಕೈಗಾರಿಕಾ ತರಬೇತಿ ಸಂಸ್ಥೆ, ಕನಕಪುರ, ೧೯೯೨

೧೩. ಶ್ರೀ ಮಹಾಲಿಂಗೇಶ್ವರ ಗ್ರಾಮಾಂತರ ಪ್ರೌಢಶಾಲೆ, ಉಪ್ಪನಹಳ್ಳಿ (ಕನ್ನಹಳ್ಳಿ) ಮಳವಳ್ಳಿ ತಾಲ್ಲೂಕು, ೧೯೯೪

೧೪. ಶ್ರೀ ನಿರ್ವಾಣಸ್ವಾಮಿ ಗ್ರಾಮಾಂತರ ಪ್ರೌಢಶಾಲೆ, ಕುರುಬೂರು, ಟಿ. ನರಸೀಪುರ ತಾಲ್ಲೂಕು, ೧೯೯೯

೧೫. ಶ್ರೀ ನಿರ್ವಾಣಸ್ವಾಮಿ ಕಾನ್ವೆಂಟ್, ನಂದಿನಿ ಬಡಾವಣೆ, ಆಲನಹಳ್ಳಿ, ಟಿ. ನರಸೀಪುರ ತಾಲ್ಲೂಕು.

೧೬. ಶ್ರೀ ನಿರ್ವಾಣಸ್ವಾಮಿ ಪ್ರೌಢಶಾಲೆ, ನಂದಿನಿ ಬಡಾವಣೆ, ಆಲನಹಳ್ಳಿ, ಟಿ. ನರಸೀಪುರ ತಾಲ್ಲೂಕು, ೨೦೦೧

೧೭. ಶ್ರೀ ವಿದ್ಯಾದರ್ಶಿನಿ ಕಾನ್ವೆಂಟ್ ಕುರುಬೂರು, ಟಿ. ನರಸೀಪುರ ತಾಲ್ಲೂಕು, ೧೯೯೯

೧೮. ಶ್ರೀ ನಿರ್ವಾಣಸ್ವಾಮಿ ಕಾಲೇಜ್ ಆಫ್ ನರ್ಸಿಂಗ್, ಕನಕಪುರ, ೨೦೦೪

೧೯. ಶ್ರೀ ನಿರ್ವಾಣಸ್ವಾಮಿ ಡಿಪ್ಲೊಮೋಇನ್ ಟೀಚರ್ ಎಜುಕೇಷನ್ (ಟಿ.ಸಿ.ಎಚ್), ಕನಕಪುರ, ೨೦೦೪

೨೦. ಶ್ರೀ ನಿರ್ವಾಣಸ್ವಾಮಿ ಮಹಾವಿದ್ಯಾಲಯ ಬಿ.ಇಡಿ. ಕಾಲೇಜ್, ಕನಕಪುರ, ೨೦೦೪

ಭಾಗ-೨

ವೀರಶೈವ ಧರ್ಮ-ಸಾಹಿತ್ಯ-ಸಂಸ್ಕೃತಿ-ಕಲೆ

ವೀರಶೈವದ ಮೂಲ ಆಕರಗಳು

✍ ಡಾ. ಸಿ. ಶಿವಕುಮಾರ ಸ್ವಾಮಿ

ವೀರಶೈವವು ಶೈವಮತದ ಪ್ರಮುಖ ಶಾಖೆಗಳಲ್ಲೊಂದಾಗಿದೆ. ಈ ಮತದ ಲಕ್ಷಣಗಳೆಂದರೆ-(೧) ಗುರುವಿನ ಅನುಗ್ರಹದಿಂದ ಪ್ರಾಪ್ತವಾದ ಇಷ್ಟಲಿಂಗವನ್ನು ದೇಹದ ಮೇಲೆ ಸದಾ ಧರಿಸಿ ಅದನ್ನು ಭಕ್ತಿಯಿಂದ ಪೂಜಿಸುವುದು; (೨) ಗುರು-ಲಿಂಗ-ಜಂಗಮರ ಬಗ್ಗೆ ಅಪಾರ ಗೌರವದಿಂದಿರುವುದು; (೩) ಭಸ್ಮ, ರುದ್ರಾಕ್ಷ, ಮಂತ್ರ, ಪಾದೋದಕ, ಪ್ರಸಾದಗಳ ಬಗ್ಗೆ ಶ್ರದ್ಧೆಯಿಂದಿರುವುದು; (೪)ಸುಸಂಸ್ಕೃತಗೊಂಡ ಭಕ್ತಿಯಿಂದ ಷಟ್‌ಸ್ಥಲ ಮಾರ್ಗವೆಂದು ಕರೆಯಲ್ಪಡುವ ಆಧ್ಯಾತ್ಮಿಕ ಸಾಧನೆಯನ್ನು ಸಾಧಿಸಲು ಪ್ರಯತ್ನಿಸುವುದು; (೫) ಶಿವಯೋಗ ಸಾಧನೆಯಿಂದ ಜೀವಂತವಿರುವಾಗಲೇ ಶಿವನಲ್ಲಿ ಒಂದಾಗುವುದು; (೬) ಷಟ್‌ಸ್ಥಲ ಮಾರ್ಗಾನುಸಾರಿಯಾದ ಸಾಧಕನು ಆಧ್ಯಾತ್ಮಿಕ ಭೇದಾಭೇದ ಸಿದ್ಧಾಂತವನ್ನು ಅನುಸರಿಸುವುದು ಇತ್ಯಾದಿ. ಷಟ್‌ಸ್ಥಲಗಳಲ್ಲಿ ಮೊದಲಿನ ಮೂರು (ಭಕ್ತ, ಮಹೇಶ, ಪ್ರಸಾದಿ) ಸ್ಥಲಗಳು ಶಿವಜೀವರ ಭೇದವನ್ನು ತಿಳಿಸಿದರೆ, ಮುಂದಿನ ಎರಡು (ಪ್ರಾಣಲಿಂಗಿ ಮತ್ತು ಶರಣ) ಸ್ಥಲಗಳು ಯೋಗಸಾಧನೆಯ ಮೂಲಕ ಜೀವನನ್ನು ಶಿವನ ಹತ್ತಿರಕ್ಕೆ ಕೊಂಡೊಯ್ದರೆ, ಕೊನೆಯದಾದ ಐಕ್ಯಸ್ಥಲದಲ್ಲಿ ಜೀವನು ಶಿವನೊಂದಿಗೆ ಒಂದಾಗುವುದರ ಮೂಲಕ ಶಿವ-ಜೀವರಿಗೆ ಅಭೇದ ಉಂಟಾಗುತ್ತದೆ.

ಇಂತಹ ಧರ್ಮೋ-ಆಧ್ಯಾತ್ಮಿಕ ವ್ಯವಸ್ಥೆಯಿಂದ ಕೂಡಿರುವ ವೀರಶೈವದ ತತ್ತ್ವಗಳು ವೇದ, ಆಗಮ, ಉಪನಿಷತ್, ಪುರಾಣಗಳನ್ನು ಆಶ್ರಯಿಸಿರುವುದು ಪರಂಪರೆಯಿಂದ ತಿಳಿದುಬರುತ್ತದೆ. ಈ ವಿಷಯವು ಶ್ರೀಪತಿ ಪಂಡಿತರ ಶ್ರೀಕರಭಾಷ್ಯ (ಕ್ರಿ.ಶ. ೧೦೭೦), ನೀಲಕಂಠಶಿವಾಚಾರ್ಯರ ಕ್ರಿಯಾಸಾರ (ಕ್ರಿ.ಶ. ೧೫ನೆಯ ಶತಮಾನ), ಮೊಗ್ಗೆಯ ಮಾಯಿದೇವನ ಅನುಭವಸೂತ್ರ (ಕ್ರಿ.ಶ. ೧೫ನೆಯ ಶತಕ), ಸ್ವಪ್ರಭಾನಂದಶಿವಾಚಾರ್ಯರ ಶಿವಾದ್ವೈತಮಂಜರೀ (ಕ್ರಿ.ಶ. ೧೭ನೇ ಶತಮಾನ), ಮರಿತೋಂಟದಾರ್ಯರ ವೀರಶೈವಾನಂದಚಂದ್ರಿಕೆ (ಕ್ರಿ.ಶ. ೧೭ನೇ ಶತಮಾನ), ಶ್ರೀ ಸಿದ್ಧಾಂತ ಶಿಖಾಮಣಿ (ಸುಮಾರು ಕ್ರಿ.ಶ. ೧೦ನೇ ಶತಮಾನ) ಮುಂತಾದ ಸಂಸ್ಕೃತ ಗ್ರಂಥಗಳಲ್ಲಿ ನಿರೂಪಿತವಾಗಿರುವುದಲ್ಲದೆ ಕ್ರಿ.ಶ. ೧೧ನೇ ಶತಮಾನದಿಂದ ಆರಂಭವಾಗಿ ಕನ್ನಡ, ತೆಲುಗು, ತಮಿಳು, ಮರಾಠಿ, ಮಲಯಾಳಂ ಮೊದಲಾದ ಪ್ರಾದೇಶಿಕ ಭಾಷೆಗಳಲ್ಲಿ ನಿರೂಪಿತವಾಗಿರುವುದು ಸರ್ವವಿದಿತ. ಸಂಕ್ಷಿಪ್ತವಾದ ಈ ಪೀಠಿಕೆಯೊಂದಿಗೆ ವೇದ, ಉಪನಿಷತ್, ಆಗಮ, ಪುರಾಣಗಳಲ್ಲಿ ಕಂಡುಬರುವ ವೀರಶೈವದ ಮೂಲ ಆಕರಗಳ ಕಡೆ ಗಮನಹರಿಸೋಣ.

ವೀರಶೈವದ ಪ್ರಮುಖ ಚಿಹ್ನೆ ಎಂದರೆ ಲಿಂಗಧಾರಣೆ. ಲಿಂಗಧಾರಣೆಯನ್ನು ಕುರಿತು ಪ್ರಸ್ತಾಪಿಸುವ ಸಂದರ್ಭದಲ್ಲಿ ಅದರ ಪ್ರಾಚೀನತೆಯನ್ನು ಸಿದ್ಧಾಂತ ಶಿಖಾಮಣಿಯು ಹೀಗೆ ದೃಢಪಡಿಸುತ್ತದೆ-

ವೇದಶಾಸ್ತ್ರಪುರಾಣೇಷು ಕಾಮಿಕಾದ್ಯಾಗಮೇಷು ಚ।
ಲಿಂಗಧಾರಣಮಾಖ್ಯಾತಂ ವೀರಶೈವಸ್ಯ ನಿಶ್ಚಯಾತ್॥[1]

"ವೇದಗಳಲ್ಲಿಯೂ, ಶಾಸ್ತ್ರಗಳಲ್ಲಿಯೂ, ಪುರಾಣಗಳಲ್ಲಿಯೂ, ಕಾಮಿಕಾದಿ ವಾತುಲಾಂತಗಳಾದ ಶಿವಾಗಮಗಳಲ್ಲಿಯೂ ವೀರಶೈವನಿಗೆ ಲಿಂಗಧಾರಣವು ಹೇಳಲಾಗಿದೆ" ಎಂಬ ವಿಷಯವನ್ನು ಆಧಾರವಾಗಿಟ್ಟುಕೊಂಡು "**ವೀರಶೈವದ ಮೂಲ ಆಕರಗಳು**" ಎಂಬ ವಿಷಯವನ್ನು ಪ್ರಸ್ತುತಪಡಿಸಲಾಗುವುದು.

ವೇದಗಳಲ್ಲಿ ವೀರಶೈವ

ವೀರಶೈವದ ಆಚರಣೆಗಳಿಗೆ ಸಂಬಂಧಿಸಿದಂತೆ ವೇದಮಂತ್ರಗಳನ್ನು ಯಥೇಚ್ಛವಾಗಿ ಬಳಸಲಾಗಿದೆ. ಯಜುರ್ವೇದದ ರುದ್ರಾಧ್ಯಾಯದ ಮಂತ್ರಗಳು ಹಾಗೂ ಋಗ್ವೇದದ ರುದ್ರಮಂತ್ರ ಇತ್ಯಾದಿಗಳು ಈ ಮತದ ಆಚರಣೆಗೆ ಆವಶ್ಯಕವಾಗಿವೆ. ಋಗ್ವೇದದಲ್ಲಿನ-

ಪವಿತ್ರಂ ತೇ ವಿತತಂ ಬ್ರಹ್ಮಣಸ್ಪತೇ ಪ್ರಭುರ್ಗಾತ್ರಾಣಿ ಪರ್ಯೇಷಿ ವಿಶ್ವತಃ।
ಅತಪ್ತತನೂರ್ನ ತದಾಮೋ ಅಶ್ನುತೇ ಶ್ರತಾಸ ಇದ್ವಹಂಸ್ತತ್ಸಮಶತೇ॥[೨]

ಎಂಬ ಮಂತ್ರವು ಲಿಂಗಧಾರಣೆಯನ್ನು ಬೋಧಿಸುತ್ತದೆ. ಈ ಮಂತ್ರಕ್ಕೆ ನಂದಿಕೇಶ್ವರ ಶಿವಾಚಾರ್ಯರು ಲಿಂಗಧಾರಣ ಚಂದ್ರಿಕೆಯಲ್ಲಿ ವೀರಶೈವ ಪರವಾದ ವಿವರಣೆಯನ್ನು ಈ ರೀತಿಯಾಗಿ ನೀಡಿದ್ದಾರೆ:

"ಹೇ ಬ್ರಹ್ಮಣಸ್ಪತೇ- ಲಿಂಗರೂಪಶರೀರಾವಚ್ಛೇದೇನ ಶರೀರಿಭಾವೇನಾಧಿಷ್ಠಿತ ಪರಮಶಿವ, ತೇ-ತವ, ತತ್-ಬ್ರಹ್ಮಪದವಾಚ್ಯಲಿಂಗರೂಪಂ ಶರೀರಂ, ಪವಿತ್ರಂ-ಉಕ್ತರೀತ್ಯಾ ಶುಚ್ಯಶುಚಿಕಾಲೇಽಪಿ ಧರ್ತುಂ ಯೋಗ್ಯಂ, ವಿತತಂ-ಇಷ್ಟಾದಿಭೇದೇನ ಭಕ್ತಶರೀರಾದಿಭೇದೇನ ವಾ ಬಹುವಿಧಂ, ಪ್ರಭುಃ-ನಿಗ್ರಹಾನುಗ್ರಹ ಸಮರ್ಥಸ್ತ್ವಂ, ವಿಶ್ವತಃ-ಸಮಸ್ತಾನಿ, ಸಾರ್ವವಿಭಕ್ತಿಕಸ್ತಸಿಲ್, ಗಾತ್ರಾಣಿ-ಭಕ್ತಶರೀರಾಣಿ, ಪರ್ಯೇಷಿ-ವ್ಯಾಪ್ನೋಷಿ, ಧಾರ್ಯಮಾಣಸ್ಸನ್ ಲಿಂಗರೂಪಶರೀರದ್ವಾರಾ ಭಕ್ತಾಂಗಸಂಯುಕ್ತೋಽಸೀತ್ಯರ್ಥಃ। ಅತಪ್ತತನೂಃ- ತಪ್ತಾ ವೇಧಾಮನುಕ್ರಿಯಾದೀಕ್ಷಾತ್ರಯೇಣ ನಿರ್ದಗ್ಧಪಾಪಪಂಜರಾ- ತನೂರ್ಯಸ್ಯ ಸಾ ನ ಭವತೀತ್ಯತಪ್ತತನೂಃ, ದೀಕ್ಷಾತ್ರಯರಹಿತಃ, ಆಮಃ- ಅಪರಿಪಕ್ವಾಂತಃ-ಕರಣಸ್ಸನ್, ತತ್ ಶಿವಸ್ವರೂಪಂ ನ ಅಶ್ನುತೇ (ನ ಪ್ರಾಪ್ನೋತಿ)।[೩]

ಈ ವಿವರಣೆಯಿಂದ ಸ್ಪಷ್ಟವಾಗುವುದೇನೆಂದರೆ ಈ ಮಂತ್ರದಲ್ಲಿ ಉಕ್ತವಾಗಿರುವ 'ಬ್ರಹ್ಮಣಸ್ಪತಿ' ಎಂದರೆ ಸಾಕ್ಷಾತ್ ಪರಮಶಿವನೇ ಆಗಿದ್ದಾನೆ. ಅವನ ರೂಪವಾದ ಲಿಂಗವು 'ಬ್ರಹ್ಮನ್' ಎಂಬ ಪದದಿಂದ ಸೂಚಿತವಾಗಿದ್ದು, ಅದು ನಿತ್ಯವೂ, ಶುದ್ಧವೂ, ಪವಿತ್ರವೂ ಆಗಿದ್ದು ಶರೀರದ ಮೇಲೆ ಸದಾ ಧರಿಸಲು ಯೋಗ್ಯವಾಗಿದೆ. ಆ ಲಿಂಗವು ಇಷ್ಟಲಿಂಗ, ಪ್ರಾಣಲಿಂಗ ಮತ್ತು ಭಾವಲಿಂಗವೆಂದು ತ್ರಿವಿಧವಾಗಿದ್ದು ಮಾನವರು ತಮ್ಮ ಸ್ಥೂಲ, ಸೂಕ್ಷ್ಮ, ಕಾರಣಶರೀರಗಳಲ್ಲಿ ಧರಿಸುವಂತಹುದ್ದು. ಯಾರ ಶರೀರವು ದೀಕ್ಷಾತ್ರಯಗಳಿಂದ ಪರಿಶುದ್ಧವಾಗಿರುವುದಿಲ್ಲವೋ ಅಂತಹವರು ಪರಶಿವನ ಸ್ವರೂಪವನ್ನು ತಿಳಿಯಲಾರರು. ಶಿವನಿಗೋಸ್ಕರ ತಪಸ್ಸನ್ನಾಚರಿಸುವವರು 'ತಪ್ತತನು'ವೆಂತಲೂ, ತಪಸ್ಸನ್ನಾಚರಿಸದವನು 'ಅತಪ್ತತನು' ಎನಿಸುತ್ತಾನೆ. ಪರಿಪಕ್ವವಾದ ಅಂತಃಕರಣವುಳ್ಳವನು ಮೋಕ್ಷಾರ್ಥಿಯಾಗಿ ಲಿಂಗಧಾರಣೆಯನ್ನು ಮಾಡಿಕೊಳ್ಳುತ್ತಾನೆ.

ಈ ವೇದಮಂತ್ರದ ಅಭಿಪ್ರಾಯವು ವ್ಯಾಸೋಕ್ತ ಲಿಂಗಪುರಾಣದಲ್ಲಿ ಸ್ಪಷ್ಟವಾಗಿ ನಿರೂಪಿತವಾಗಿದ್ದು, ಈ ಮಂತ್ರವೇ ಪುರಾಣೋಕ್ತಿಗೆ ಮೂಲ ಆಕರವಾಗಿದೆ.[೪] ಅಲ್ಲದೆ ಸಿದ್ಧಾಂತ ಶಿಖಾಮಣಿಯ ಲಿಂಗಧಾರಣಸ್ಥಲದ ಈ ಶ್ಲೋಕಗಳಿಗೂ ಮೂಲ ಆಕರವಾಗಿದೆ:

ಋಗಿತ್ಯಾಹ ಪವಿತ್ರಂ ತೇ ವಿತತಂ ಬ್ರಹ್ಮಣಸ್ಪತೇ।
ತಸ್ಮಾತ್ಪವಿತ್ರಂ ತಲ್ಲಿಂಗಂ ಧಾರ್ಯಂ ಶೈವಮನಾಮಯಮ್॥
ಬ್ರಹ್ಮೇತಿ ಲಿಂಗಮಾಖ್ಯಾತಂ ಬ್ರಹ್ಮಣಃ ಪತಿರೀಶ್ವರಃ।
ಪವಿತ್ರಂ ತದ್ಧಿ ವಿಖ್ಯಾತಂ ತತ್ಸಂಪರ್ಕಾತ್ತನುಃ ಶುಚಿಃ॥
ಅತಪ್ತತನುರಜ್ಞೋ ವೈ ಆಮಃ ಸಂಸ್ಕಾರವರ್ಜಿತಃ।
ದೀಕ್ಷಯಾ ರಹಿತಃ ಸಾಕ್ಷಾನ್ನಾಪ್ನುಯಾಲ್ಲಿಂಗಮುತ್ತಮಮ್॥[೫]

ಋಗ್ವೇದದ ಮತ್ತೊಂದು ಮಂತ್ರವೂ ಲಿಂಗಧಾರಣಪರವಾಗಿದೆ. ಆ ಮಂತ್ರವು ಈ ರೀತಿಯಾಗಿದೆ:

ಅಯಂ ಮೇ ಹಸ್ತೋ ಭಗವಾನ್ ಅಯಂ ಮೇ ಭಗವತ್ತರಃ।
ಅಯಂ ಮೇ ವಿಶ್ವಭೇಷಜೋಽಯಂ ಶಿವಾಭಿಮರ್ಶನಃ।
ಅಯಂ ಮಾತಾ ಅಯಂ ಪಿತಾ ಅಯಂ ಜೀವಾತುರಾಗಮತ್।
ಇದಂ ತವ ಪ್ರಸರ್ಪಣಂ ಸುಬಂಧವೇಹಿ ನಿರೀಹಿ॥[೬]

ಈ ಮಂತ್ರಕ್ಕೆ ವೀರಶೈವಪರವಾದ ಅರ್ಥವಿವರಣೆಯು ಹೀಗಿದೆ: "**ಅತ್ರ ಭಗವಚ್ಛಬ್ದೇನ ಪರಮಶಿವ ಏವೋಚ್ಯತೇ, 'ಅಥೈನಂ ಭಗವಂತಂ ರುದ್ರಂ ಕುಮಾರಃ ಪಪ್ರಚ್ಛ', ಅಥ ಕಾಲಾಗ್ನಿರುದ್ರಂ ಭಗವಂತಂ ಸನತ್ಕುಮಾರಃ ಪಪ್ರಚ್ಛ (ಕಾಲಾಗ್ನಿರುದ್ರೋಪನಿಷತ್, ೫.೨) ಇತ್ಯಾದಿ ಶ್ರುತಿಷು 'ಇತಿ ಸಂಸ್ತೂಯಮಾನಸ್ತು ಭಗವಾನ್ ವೃಷಭಧ್ವಜಃ' ಇತಿ ಹರಿವಂಶಾದಿಷು ಚ ಶಿವೇ ತತ್ಪದಪ್ರಯೋಗಾತ್. ಏವಂ ಚ ಅಯಂ ಭಗವಾನ್-ಲಿಂಗರೂಪಃ ಶಿವಃ, ಮೇ ಹಸ್ತಃ ಹಸ್ತಗತಃ, ಮೇ ಮತ್ಸಂಬಂಧಿ, ಅಯಂ ಶಿವೋ ಭಗವತ್ತರಃ ಇತ್ಯರ್ಥಃ।**"[೭]

ಇಲ್ಲಿ ನಿರೂಪಿತವಾಗಿರುವ ಅರ್ಥವಿವರಣೆಯಂತೆ 'ಭಗವಾನ್' ಶಬ್ದವು ಕೇವಲ 'ಪರಮಶಿವ'ನಿಗೆ ಮಾತ್ರ ಅನ್ವಯವಾಗುತ್ತದೆ. ಅದಕ್ಕೆ ಪೂರಕವಾಗಿ ಅರ್ಥವಿವರಣೆಕಾರನು ಕಾಲಾಗ್ನಿರುದ್ರೋಪನಿಷತ್ ಮತ್ತು ಹರಿವಂಶಗಳಲ್ಲಿ ಭಗವಾನ್, ರುದ್ರ, ಕಾಲಾಗ್ನಿರುದ್ರ, ವೃಷಭಧ್ವಜ ಮುಂತಾದವುಗಳು ಒಂದೇ ವಿಭಕ್ತಿಯಲ್ಲಿರುವುದನ್ನು ಉಲ್ಲೇಖಿಸುತ್ತಾನೆ. ಶಿವನು ನನ್ನ ಹಸ್ತಗತನು ಅರ್ಥಾತ್ ನನ್ನ ಕರಪೀಠವನ್ನಲಂಕರಿಸಿದ್ದಾನೆ.

ಪೂರ್ವೋಕ್ತ ಎರಡನೆಯ ಮಂತ್ರವು (ಅಯಂ ಮಾತಾ ಅಯಂ ಪಿತಾ.....) ಕರಪೀಠಸ್ಥಲಿಂಗವೆಂದು ಹಿಂದಿನ ಮಂತ್ರದ ಅರ್ಥವನ್ನು ಹೇಳುವುದರ ಜೊತೆಗೆ ಲಿಂಗವು ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣೀಭೂತವೆಂದು ನಂದಿಕೇಶ್ವರ ಶಿವಾಚಾರ್ಯರು ವ್ಯಾಖ್ಯಾನಿಸಿದ್ದಾರೆ- "**ಏವಂ ಹಸ್ತಾದೌ ಲಿಂಗಧಾರಣಂ ವಿಧಾಯ ತಸ್ಯ ಲಿಂಗಸ್ಯ ಸೃಷ್ಟ್ಯಾದಿ ಕರ್ತೃತ್ವೇನಾರ್ಥವಾದಃ ಕ್ರಿಯತೇ। ತತ್ರ 'ಅಯಂ ಮಾತಾ ಅಯಂ ಪಿತಾ' ಇತಿ ಸೃಷ್ಟಿಕರ್ತೃತ್ವಂ ಅಭಿಧೀಯತೇ।**"[೮]

ಅದೇ ಅಭಿಪ್ರಾಯವು ಸಿದ್ಧಾಂತ ಶಿಖಾಮಣಿಯ ಈ ಶ್ಲೋಕದಲ್ಲಿ ವ್ಯಕ್ತವಾಗಿದೆ:

ಬ್ರಹ್ಮೇತಿ ವ್ಯಪದೇಶಸ್ಯ ವಿಷಯಂ ಯಂ ಪ್ರಚಕ್ಷತೇ।
ವೇದಾಂತಿನೋ ಜಗನ್ಮೂಲಂ ತಂ ನಮಾಮಿ ಪರಂ ಶಿವಮ್॥[೯]

"ವೇದಾಂತಿಗಳು 'ಪರಬ್ರಹ್ಮ' ಎಂಬ ಶಬ್ದಕ್ಕೆ ಯಾರನ್ನು ವಿಷಯವನ್ನಾಗಿ ಹೇಳುತ್ತಾರೆಯೋ ಅಂತಹ ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣೀಭೂತನಾದ ಆ ಪರಶಿವನನ್ನು ನಮಸ್ಕರಿಸುತ್ತೇನೆ."

ವೀರಶೈವ ಸಿದ್ಧಾಂತದ ಪ್ರಕಾರ ಪರಶಿವ ಬ್ರಹ್ಮದಿಂದಲೇ ಈ ಜಗತ್ತು ಸೃಷ್ಟಿಯಾಗಿ, ಅದರ ಆಧಾರದಿಂದಲೇ ಸ್ವಲ್ಪಕಾಲವಿದ್ದು ಕೊನೆಯಲ್ಲಿ ಅದರಲ್ಲಿಯೇ ಲಯವಾಗುತ್ತದೆ. ಆದ್ದರಿಂದ ಪರಶಿವನೇ ಸೃಷ್ಟಿ-ಸ್ಥಿತಿ-ಲಯಕರ್ತನು ಎಂಬ ಸಿದ್ಧಾಂತ ಶಿಖಾಮಣಿಯ ಉಕ್ತಿಗೆ ಪೂರ್ವೋಕ್ತ ಋಗ್ವೇದದ ಮಂತ್ರಗಳೇ ಮೂಲಾಕರವಾಗಿವೆ.

ಇವುಗಳಲ್ಲದೆ ಋಗ್ವೇದದ ಈ ಮಂತ್ರವು ವೀರಶೈವರ ಆಚರಣೆಯಲ್ಲಿ ಬಹುವಾಗಿ ಪ್ರಯೋಗದಲ್ಲಿದೆ:

ತ್ರ್ಯಂಬಕಂ ಯಜಾಮಹೇ ಸುಗಂಧಿಂ ಪುಷ್ಟಿವರ್ಧನಂ।
ಉರ್ವಾರುಕಮಿವಬಂಧನಾನ್ಮೃತ್ಯೋರ್ಮುಕ್ಷೀಯ ಮಾಮೃತಾತ್॥[೧೦]

'ತ್ರ್ಯಂಬಕ' ಎಂಬುದನ್ನು ಸಾಯಣರು ತಮ್ಮ ಭಾಷ್ಯದಲ್ಲಿ ಹೀಗೆ ಅರ್ಥೈಸಿದ್ದಾರೆ - "ತ್ರಯಾಣಾಂ ಬ್ರಹ್ಮವಿಷ್ಣುರುದ್ರಾಣಾಂ ಅಂಬಕಂ ಪಿತರಂ" ಅಂದರೆ ತ್ರಿಮೂರ್ತಿಗಳಿಗೂ ಕಾರಣನಾದ ಪರಶಿವಮೂರ್ತಿ. ಋಗ್ವೇದದಲ್ಲಿಯೇ ಹೇಳಿರುವ

"ಏಕಂ ಸದ್ವಿಪ್ರಾ ಬಹುಧಾ ವದಂತಿ" (ಋಗ್ವೇದ, ೧೦-೧೨-೩) ಎಂಬ ಕಲ್ಪನೆಯ ಪರಶಿವಬ್ರಹ್ಮದ ಆವಿರ್ಭಾವವನ್ನು ಋಗ್ವೇದದ ಮೇಲಿನ ಮಂತ್ರದಲ್ಲಿ ನೋಡಬಹುದಾಗಿದೆ.

ಇದೇ ರೀತಿಯಾಗಿ ಯಜುರ್ವೇದದಲ್ಲಿಯೂ ವೀರಶೈವ ಪರವಾದ ಮಂತ್ರಗಳು ಹೇರಳವಾಗಿವೆ. ರುದ್ರಾಧ್ಯಾಯವಂತೂ ವೀರಶೈವರ ಆಚಾರೋಪಯೋಗಿ ಮಂತ್ರಗಳಿಂದ ತುಂಬಿಹೋಗಿದೆ. ಲಿಂಗಧಾರಣಪರವಾದ ಈ ಮಂತ್ರವನ್ನು ಗಮನಿಸೋಣ:

ಯಾ ತೇ ರುದ್ರ ಶಿವಾ ತನೂರಘೋರಾಽಪಾಪಕಾಶಿನೀ।
ತಯಾ ನಸ್ತನುವಾ ಶಾಂತಮಯಾ ಗಿರಿಶಂತಾಭಿಚಾಕಶೀಹಿ॥[೧೧]

ಈ ಮಂತ್ರದ ವೀರಶೈವ ಪರವಾದ ಅರ್ಥವಿವರಣೆಯು ಲಿಂಗಧಾರಣಚಂದ್ರಿಕೆಯಲ್ಲಿ ಹೀಗೆ ನಿರೂಪಿತವಾಗಿದೆ - **"ರುದಂ ರೋದನಂ ಸಂಸಾರದುಃಖಜನಿತಂ ದ್ರಾವಯತಿ ಇತಿ ರುದ್ರ, ಅಘೋರ-ಶಾಂತಾಕರ, ಶಿವ-ಸರ್ವಮಂಗಲಪ್ರದ, ಯಾ ತೇ ತನೂಃ-ಲಿಂಗರೂಪಶರೀರಂ, ಸಾ ಅಪಾಪಕಾಶಿನೀ। ಲಿಂಗರೂಪಶರೀರಾವಚ್ಛಿನ್ನಃ ಶಿವಃ ಶಮದಮಸಂಪನ್ನೋ ಭಕ್ತಗಾತ್ರೇ ಧಾರ್ಯ ಇತಿ ಪರ್ಯವಸಿತಾರ್ಥಃ॥"**[೧೨]

ಇದರ ತಾತ್ಪರ್ಯವೇನೆಂದರೆ ಶಿವನು ಮಂಗಳಕರವೂ, ಅಘೋರವೂ ಆದ ತನ್ನ ತನುವಿನಿಂದ ನಮ್ಮನ್ನು ಪ್ರಕಾಶಗೊಳಿಸಲಿ. ಶಿವನ ಪಾಪಹಾರಿಯೂ, ಶಾಂತವೂ ಆದ ತನುವೆಂದರೆ ಲಿಂಗ. ಆ ಲಿಂಗವು ನಮ್ಮನ್ನು ಪ್ರಕಾಶಗೊಳಿಸಲಿ ಎಂಬುದು ವೀರಶೈವ ಸಿದ್ಧಾಂತ. ಈ ಮಂತ್ರದ ಅಭಿಪ್ರಾಯವು ಸಿದ್ಧಾಂತ ಶಿಖಾಮಣಿಯ ಲಿಂಗಧಾರಣಸ್ಥಲ ಮತ್ತು ಭಕ್ತದೇಹಿಕಲಿಂಗಸ್ಥಲದಲ್ಲಿ ಹೀಗೆ ಪ್ರಯೋಗವಾಗಿದೆ:

ಅಘೋರಾಽಪಾಪಕಾಶೀತಿ ಯಾ ತೇ ರುದ್ರ ಶಿವಾ ತನೂಃ।
ಯಜುಷಾ ಗೀಯತೇ ಯಸ್ಮಾತ್ತಸ್ಮಾಚ್ಛೈವೋಽಘವರ್ಜಿತಃ॥ [೧೩]
ಸರ್ವಾತ್ಮಾಽಪಿ ಪರಿಚ್ಛಿನ್ನೋ ಯಥಾ ದೇಹೇಷು ವರ್ತತೇ।
ತಥಾ ಸ್ವಕೀಯಭಕ್ತೇಷು ಶಂಕರೋ ಭಾಸತೇ ಸದಾ॥
ನಿತ್ಯಂ ಭಾತಿ ತ್ವದೀಯೇಷು ಯಾ ತೇ ರುದ್ರ ಶಿವಾ ತನೂಃ।
ಅಘೋರಾಽಪಾಪಕಾಶೀತಿ ಶ್ರುತಿರಾಹ ಸನಾತನೀ॥[೧೪]

ಯಜುರ್ವೇದದ ಮತ್ತೊಂದು ಮಂತ್ರ- '**ನಿಧನಪತಯೇ ನಮಃ- ನಿಧನಪತಾಂತಿಕಾಯ ನಮಃ। ಊರ್ಧ್ವಾಯ ನಮಃ- ಊರ್ಧ್ವಲಿಂಗಾಯ ನಮಃ। ಹಿರಣ್ಯಾಯ ನಮಃ ಹಿರಣ್ಯಲಿಂಗಾಯ ನಮಃ। ಸುವರ್ಣಾಯ ನಮಃ ಸುವರ್ಣಲಿಂಗಾಯ ನಮಃ। ದಿವ್ಯಾಯ ನಮಃ ದಿವ್ಯಲಿಂಗಾಯ ನಮಃ। ಭವಾಯ ನಮಃ ಭವಲಿಂಗಾಯ ನಮಃ। ಶರ್ವಾಯ ನಮಃ ಶರ್ವಲಿಂಗಾಯ ನಮಃ।.... ಏತಸ್ಸೋಮಸ್ಯ ಸೂರ್ಯಸ್ಯ ಸರ್ವಲಿಂಗಂ ಸ್ಥಾಪಯತಿ ಪಾಣಿಮಂತ್ರಂ ಪವಿತ್ರಂ॥"**[೧೫]

"ಸೂರ್ಯಮಂಡಲಾಂತರ್ವರ್ತಿಯಾದ ಉಮಾಸಹಿತನಾದ ಪರಶಿವನ ಪವಿತ್ರವಾದ ಈ ಮೇಲೆ ಹೇಳಲಾದ ಹತ್ತು ಬಗೆಯ ಲಿಂಗಾತ್ಮಕವಾದ, ಈ ಕರಕಮಲದಲ್ಲಿ ರಾರಾಜಿಸುವ ಶಿವಲಿಂಗವನ್ನು ಶ್ರೀಗುರುವು ದೀಕ್ಷಾಕಾಲದಲ್ಲಿ ಸ್ಥಾಪಿಸುತ್ತಾನೆ" ಎಂಬುದು ಮೇಲಿನ ಮಂತ್ರದ ತಾತ್ಪರ್ಯ. ಈ ಮಂತ್ರದಲ್ಲಿ ಲಿಂಗಧಾರಣೆಯು ಬಹಳ ಸುಂದರವಾಗಿ ಪ್ರತಿಪಾದಿತವಾಗಿದೆ. ಲಿಂಗಪುರಾಣದಲ್ಲಿ ವ್ಯಾಸಮಹರ್ಷಿಗಳು ಈ ಮಂತ್ರಾರ್ಥವನ್ನು ಸ್ಪಷ್ಟವಾಗಿ ಪ್ರತಿಪಾದಿಸಿದ್ದಾರೆ.[೧೬]

"ಯಶ್ಛಂದಸಾಮೃಷಭೋ ವಿಶ್ವರೂಪಃ। ಛಂದೋಭ್ಯೋಽಧ್ಯಮೃತಾತ್ ಸಂಬಭೂವ। ಸ ಮೇಂದ್ರೋ ಮೇಧಯಾ ಸ್ಪೃಣೋತು। ಅಮೃತಸ್ಯ ದೇವಧಾರಣೋ ಭೂಯಾಸಂ। ಶರೀರಂ ಮೇ ವಿಚರ್ಷಣಂ। ಜಿಹ್ವಾ ಮೇ ಮಧುಮತ್ತಮಾ। ಕರ್ಣಾಭ್ಯಾಂ ಭೂರಿ ವಿಶ್ರುವಂ। ಬ್ರಹ್ಮಣಃ ಕೋಶೋಽಸಿಮೇಧಯಾ ಪಿಹಿತಃ। ಶ್ರುತಂ ಮೇ ಗೋಪಾಯ॥"[೧೭]

"ನಮೋ ಬ್ರಹ್ಮಣೇ ಧಾರಣಂ ಮೇ ಅಸ್ತ್ವನಿರಾಕರಣಂ ಧಾರಯಿತಾ ಭೂಯಾಸಂ ಕರ್ಣಯೋಃ ಶ್ರುತಂ ಮಾಚ್ಯೋಢ್ವಂ ಮಮಾಮುಷ್ಯ ಓಂ॥"[೧೮]

ಯಜುರ್ವೇದದ ಈ ಮಂತ್ರಗಳೂ ಲಿಂಗಧಾರಣೆಯನ್ನು ಬೋಧಿಸುತ್ತವೆ. ಇದೇ ರೀತಿಯಾಗಿ ಸಾವಿರಾರು ವೇದ ಮಂತ್ರಗಳು ಲಿಂಗಧಾರಣೆಯ ಜೊತೆಗೆ ವೀರಶೈವಕ್ಕೆ ಸಂಬಂಧಿಸಿದ ವಿಷಯಗಳನ್ನು ನಿರೂಪಿಸುತ್ತವೆ. ಆದರೆ ವಿಸ್ತಾರ ಭಯದಿಂದ ಅದನ್ನು ಪ್ರಸ್ತಾಪಿಸುತ್ತಿಲ್ಲ.

ಇಲ್ಲಿಯವರೆಗೆ ವೇದೋಕ್ತ ವೀರಶೈವದ ಮೂಲ ಆಕರಗಳನ್ನು ಸಂಕ್ಷಿಪ್ತವಾಗಿ ಪರಿಚಯಿಸಲಾಯಿತು. ಇನ್ನು ಉಪನಿಷತ್ತುಗಳಲ್ಲಿ ವರ್ಣಿತವಾಗಿರುವ ವೀರಶೈವದ ವಿಷಯಗಳನ್ನು ಪರಿಚಯ ಮಾಡಿಕೊಡಲಾಗುವುದು.

ಉಪನಿಷತ್ತುಗಳಲ್ಲಿ ವೀರಶೈವ: ವೇದಾಂತಗಳೆಂದು ಪ್ರಸಿದ್ಧವಾಗಿರುವ ಉಪನಿಷತ್ತುಗಳು ವೇದಶಾಖೆಗಳ ಒಂದು ಭಾಗವೆನಿಸಿವೆ. ನಾಲ್ಕು ವೇದಗಳಿಗೆ ಸಂಬಂಧಿಸಿದ ಉಪನಿಷತ್ತುಗಳ ಒಟ್ಟು ಸಂಖ್ಯೆ ೧೧೮೦. ಆದರೆ ಇಂದು ನಮಗೆ ೧೦೮ ಉಪನಿಷತ್ತುಗಳು ಮಾತ್ರ ಲಭಿಸುತ್ತಿವೆ.[೧೯] ಈ ೧೦೮ ಉಪನಿಷತ್ತುಗಳ ಪೈಕಿ ಪಂಡಿತ ಎ. ಮಹದೇವಶಾಸ್ತ್ರಿಗಳೆಂಬ ವಿದ್ವಾಂಸರು "ಶೈವೋಪನಿಷದಃ" ಎಂಬ ಶೀರ್ಷಿಕೆಯಲ್ಲಿ ೧೫ ಉಪನಿಷತ್ತುಗಳನ್ನು ಪ್ರತ್ಯೇಕಿಸಿ ಉಪನಿಷದ್ ಬ್ರಹ್ಮಯೋಗಿಗಳ ವ್ಯಾಖ್ಯಾನದೊಂದಿಗೆ ಮದರಾಸಿನ 'ದಿ ಅಡ್ಯಾರ್ ಲೈಬ್ರರಿ ಮತ್ತು ರೀಸರ್ಚ್ ಸೆಂಟರ್' ನಿಂದ ೧೯೨೫ ರಲ್ಲಿ ಪ್ರಕಟಿಸಿದ್ದಾರೆ. ಆ ಗ್ರಂಥದಲ್ಲಿರುವ ೧೫ ಉಪನಿಷತ್ತುಗಳೆಂದರೆ-(೧) ಅಕ್ಷಮಾಲಿಕೋಪನಿಷತ್, ೨) ಅಥರ್ವಶಿಖೋಪನಿಷತ್, ೩) ಅಥರ್ವಶಿರೋಪನಿಷತ್, ೪) ಕಾಲಾಗ್ನಿರುದ್ರೋಪನಿಷತ್, ೫) ಕೈವಲ್ಯೋಪನಿಷತ್, ೬) ಗಣಪತ್ಯುಪನಿಷತ್, ೭) ಜಾಬಾಲ್ಯುಪನಿಷತ್, ೮) ದಕ್ಷಿಣಾಮೂರ್ತ್ಯುಪನಿಷತ್, ೯) ಪಂಚಬ್ರಹ್ಮೋಪನಿಷತ್, ೧೦) ಬೃಹಜ್ಜಾಬಾಲೋಪನಿಷತ್, ೧೧) ಭಸ್ಮಜಾಬಾಲೋಪನಿಷತ್, ೧೨) ರುದ್ರಾಕ್ಷಹೃದಯೋಪನಿಷತ್, ೧೩) ರುದ್ರಾಕ್ಷಜಾಬಾಲೋಪನಿಷತ್, ೧೪) ಶರಭೋಪನಿಷತ್ ಮತ್ತು ೧೫) ಶ್ವೇತಾಶ್ವತರೋಪನಿಷತ್. ಪ್ರಕಟಿತವಾದ ಈ ಉಪನಿಷತ್ತುಗಳಲ್ಲದೆ ಮೈಸೂರಿನ ಪ್ರಾಚ್ಯವಿದ್ಯಾ ಸಂಶೋಧನಾಲಯದಲ್ಲಿ ಹಸ್ತಪ್ರತಿರೂಪದಲ್ಲಿರುವ ವೀರಶೈವಕ್ಕೆ ಸಂಬಂಧಿಸಿದ ಕೆಲವು ಉಪನಿಷತ್ತುಗಳಿವೆ. ಅವುಗಳೆಂದರೆ - ವೇದಾಂತಸಾರೋಪನಿಷತ್, ಭಕ್ತಿಯೋಗೋಪನಿಷತ್, ನಿರ್ಲೇಪೋಪನಿಷತ್, ಪಿಪ್ಪಲೋಪನಿಷತ್, ಪ್ರಸಾದಜಾಬಾಲೋಪನಿಷತ್, ಚಿದಂಬರೋಪನಿಷತ್, ಪ್ರಣವಶರೀರೋಪನಿಷತ್, ಶ್ರುತಿರಹಸ್ಯೋಪನಿಷತ್ ಮತ್ತು ಸಿದ್ಧಾಂತಶಿಖೋಪನಿಷತ್ತುಗಳು ಮುಖ್ಯವಾಗಿವೆ. ಅಲ್ಲದೆ ಮದ್ರಾಸ್ ಗವರ್ನಮೆಂಟ್ ಓರಿಯಂಟಲ್ ಲೈಬ್ರರಿಯಲ್ಲಿರುವ 'ಲಿಂಗಧಾರಣೋಪನಿಷತ್ ಮತ್ತು ವೀರಲೈಂಗೋಪನಿಷತ್' ಎಂಬ ಅಪ್ರಕಟಿತ ಗ್ರಂಥಗಳೂ ಕೂಡ ವೀರಶೈವಕ್ಕೆ ಸಂಬಂಧಿಸಿವೆ.[೨೦] ಇವುಗಳಲ್ಲದೆ ಈಶ, ಕೇನ, ಕಠ, ಮುಂಡಕ ಮುಂತಾದ ದಶೋಪನಿಷತ್ತುಗಳಲ್ಲಿಯೂ ವೀರಶೈವದ ಮೂಲ ಆಕರಗಳು ಗೋಚರವಾಗುತ್ತವೆಯಲ್ಲದೆ ಈಶ,[೨೧] ಕೇನೋಪನಿಷತ್ತುಗಳಿಗೆ [೨೨] ಉಮಚಿಗಿ ಶಂಕರಶಾಸ್ತ್ರಿಗಳು, ಶ್ವೇತಾಶ್ವತರೋಪನಿಷತ್ತಿಗೆ ಡಾ॥ ಟಿ.ಜಿ. ಸಿದ್ಧಪ್ಪಾರಾಧ್ಯರು ವೀರಶೈವ ಪರವಾದ ಭಾಷ್ಯಗಳನ್ನು ಬರೆದಿರುತ್ತಾರೆ.[೨೩] ಪ್ರಸ್ತುತ ಉಪನಿಷತ್ತುಗಳಲ್ಲಿ ಕಂಡುಬರುವ ವೀರಶೈವದ ಮೂಲ ಆಕರಗಳನ್ನು ಗಮನಿಸೋಣ.

ಅಷ್ಟಾವರಣ: ಅಷ್ಟಾವರಣಗಳು ವೀರಶೈವ ಧರ್ಮದ ಅಂಗಗಳೆನಿಸಿದ್ದು, ಧರ್ಮದ ಪ್ರಮುಖ ಕಟ್ಟಳೆಗಳಾಗಿವೆ. ಗುರು, ಲಿಂಗ, ಜಂಗಮ, ಭಸ್ಮ, ರುದ್ರಾಕ್ಷ, ಮಂತ್ರ, ಪಾದೋದಕ ಮತ್ತು ಪ್ರಸಾದ - ಇವೇ ಅಷ್ಟಾವರಣಗಳು. ಅಷ್ಟಾವರಣಗಳ ಪರಿಕಲ್ಪನೆಯು ಶೈವಾಗಮೋತ್ತರ ಭಾಗಗಳಲ್ಲಿ ವ್ಯವಸ್ಥಿತವಾಗಿ ಪ್ರತಿಪಾದಿತವಾಗಿದೆ. ಇದಕ್ಕೆ ಮೂಲ ಸ್ಫೂರ್ತಿಯನ್ನು ಶೈವೋಪನಿಷತ್ತುಗಳಲ್ಲಿ ಕಾಣಬಹುದಾಗಿದೆ. ಹಳೆಯ ೧೦೮ ಉಪನಿಷತ್ತುಗಳಲ್ಲಿ ಒಂದಾದ ರುದ್ರೋಪನಿಷತ್ತಿನ "ಜಂಗಮರೂಪಃ

ಶಿವಃ, ಶಿವ ಏವ ಲಿಂಗಮ್"[೨೪] ಮುಂತಾದ ವಾಕ್ಯಗಳಲ್ಲಿ ಗುರು-ಲಿಂಗ-ಜಂಗಮರನ್ನು ಶಿವನೆಂದು ವರ್ಣಿಸಿರುವುದು ಕಂಡು ಬರುತ್ತದೆ. ಅದೇ ಉಪನಿಷತ್ತಿನಲ್ಲಿ ಭಸ್ಮ, ಪಾದೋದಕ ಹಾಗೂ ತೀರ್ಥಗಳ ಮಹಿಮೆಯನ್ನು ವರ್ಣಿಸಲಾಗಿದೆ.[೨೫] ವಜ್ರೋಪನಿಷತ್ತಿನಲ್ಲಿ ಭಸ್ಮಧಾರಣೆಯ ವಿವರಗಳು ಕಂಡುಬರುತ್ತವೆ. ಗುರುಭಕ್ತರಿಗೆ ದೀಕ್ಷೆಯನ್ನು ಅನುಗ್ರಹಿಸಿ, ವೀರಶೈವ ಸಿದ್ಧಾಂತವನ್ನು ಬೋಧಿಸುತ್ತಾನೆ. ವೀರಶೈವ ಧರ್ಮದಲ್ಲಿ ಗುರು-ಲಿಂಗ-ಜಂಗಮಗಳು ಪೂಜ್ಯ ಆವರಣಗಳಾಗಿದ್ದು, ಅವುಗಳನ್ನು ಸಮಾನ ಭಕ್ತಿ-ಗೌರವಗಳಿಂದ ಆರಾಧಿಸಬೇಕು. ಅದಕ್ಕೆ ಮೂಲವು ಶ್ವೇತಾಶ್ವತರೋಪನಿಷತ್ತಿನ ಈ ಮಂತ್ರವೇ ಆಗಿದೆ: **"ಯಸ್ಯ ದೇವೇ ಪರಾ ಭಕ್ತಿಃ ಯಥಾ ದೇವೇ ತಥಾ ಗುರೌ।"**[೨೬] ಈ ವಿಷಯಗಳಲ್ಲದೆ ಬೃಹಜ್ಜಾಬಾಲೋಪನಿಷತ್, ಜಾಬಾಲೋಪನಿಷತ್, ಭಸ್ಮಜಾಬಾಲೋಪನಿಷತ್, ರುದ್ರಾಕ್ಷಜಾಬಾಲೋಪನಿಷತ್ ಮುಂತಾದ ಉಪನಿಷತ್ತುಗಳಲ್ಲಿ ಭಸ್ಮ-ರುದ್ರಾಕ್ಷಗಳಿಗೆ ಸಂಬಂಧಿಸಿದ ದೀರ್ಘ ವಿವರಗಳು ನಿರೂಪಿತವಾಗಿವೆ. ಈ ರೀತಿಯಾಗಿ ಅಷ್ಟಾವರಣಗಳ ವಿವರಣೆಗಳು ಶೈವೋಪನಿಷತ್ತುಗಳಲ್ಲಿ ದೊರೆತರೂ ಸಹ 'ಅಷ್ಟಾವರಣ' ಶಬ್ದದ ಪ್ರಯೋಗ ಕಂಡುಬರುವುದಿಲ್ಲ. ಶೈವಾಗಮಗಳಲ್ಲಿ ಈ ಶಬ್ದವು ಮೊದಲಿಗೆ ಪ್ರಯೋಗವಾಗಿದೆ.[೨೭]

ವೀರಶೈವ ತತ್ತ್ವವಿಚಾರಕ್ಕೆ ಸಂಬಂಧಿಸಿದ ಪತಿ, ಪಶು, ಪಾಶ, ಜಗತ್ತು, ಮೋಕ್ಷ ಮುಂತಾದ ವಿಚಾರಗಳಿಗೂ ಉಪನಿಷತ್ತುಗಳೇ ಮೂಲ ಆಕರಗಳಾಗಿವೆ. ಉಪನಿಷತ್ತುಗಳಲ್ಲಿ ನಿರೂಪಿತವಾದ ವೀರಶೈವಕ್ಕೆ ಸಂಬಂಧಿಸಿದ ವಿಷಯಗಳ ಕಡೆ ಈಗ ಗಮನಹರಿಸೋಣ.

ಭಸ್ಮ: ವೀರಶೈವ ಅಷ್ಟಾವರಣಗಳಲ್ಲಿ ಭಸ್ಮವು ನಾಲ್ಕನೆಯ ಆವರಣ. ಭಸ್ಮದ ವಿಷಯವನ್ನು ಕುರಿತು ಕಾಲಾಗ್ನಿರುದ್ರೋಪನಿಷತ್, ಜಾಬಾಲೋಪನಿಷತ್ ಬೃಹಜ್ಜಾಬಾಲೋಪನಿಷತ್, ಭಸ್ಮಜಾಬಾಲೋಪನಿಷತ್‌ಗಳು ದೀರ್ಘವಾಗಿ ನಿರೂಪಿಸಿದ್ದು, ಅದೇ ಮುಂದಿನ ವೀರಶೈವ ಸಾಹಿತ್ಯದಲ್ಲಿ ಯಥಾವತ್ತಾಗಿ ಪುನರುಕ್ತವಾಗಿರುತ್ತದೆ.

ಭಸ್ಮಪಂಚಕಗಳು: ಭಸ್ಮವು ವಿಭೂತಿ, ಭಸಿತ, ಭಸ್ಮ, ಕ್ಷಾರ ಮತ್ತು ರಕ್ಷಾ ಎಂದು ಐದು ಪ್ರಕಾರವಾಗಿದೆ.[೨೮] ಈ ಐದು ಪ್ರಕಾರದ ಭಸ್ಮಗಳು ಪರಶಿವನ ಸದ್ಯೋಜಾತಾದಿ ಪಂಚಮುಖಗಳಿಂದುತ್ಪನ್ನವಾದ ಕಪಿಲಾದಿ ಗೋವುಗಳ ಗೋಮಯದಿಂದ ನಿರ್ಮಾಣವಾದವುಗಳೆಂದು ಬೃಹಜ್ಜಾಬಾಲೋಪನಿಷತ್ತು[೨೯] ನಿರೂಪಿಸಿದೆ. ಅದರ ವಿವರಗಳು ಈ ರೀತಿಯಾಗಿವೆ.

ಕ್ರ.ಸಂ.	ಭಸ್ಮದ ಹೆಸರು	ಪರಶಿವನ ಮುಖ	ಗೋವು	ವರ್ಣ	ತತ್ತ್ವ	ಕಲೆ
೧.	ವಿಭೂತಿ	ಸದ್ಯೋಜಾತ	ನಂದಾ	ಕಪಿಲ	ಪೃಥ್ವೀ	ನಿವೃತ್ತಿ
೨.	ಭಸಿತ	ವಾಮದೇವ	ಭದ್ರಾ	ಕೃಷ್ಣ	ಜಲ	ಪ್ರತಿಷ್ಠೆ
೩.	ಭಸ್ಮ	ಅಘೋರ	ಸುರಭಿ	ರಕ್ತ	ಅಗ್ನಿ	ವಿದ್ಯೆ
೪.	ಕ್ಷಾರ	ತತ್ಪುರುಷ	ಸುಶೀಲಾ	ಶ್ವೇತಾ	ವಾಯು	ಶಾಂತಿ
೫.	ರಕ್ಷಾ	ಈಶಾನ	ಸುಮನಾ	ಚಿತ್ರ	ಆಕಾಶ	ಶಾಂತ್ಯತೀತ

ಸಿದ್ಧಾಂತ ಶಿಖಾಮಣಿಯು ಭಸ್ಮಪಂಚಕಗಳ ನಿರೂಪಣೆಯಲ್ಲಿ ಪೂರ್ವೋಕ್ತ ಉಪನಿಷತ್ತಿನ ಅಭಿಪ್ರಾಯವನ್ನು ಅನುಸರಿಸಿದೆ. ಆದರೆ ಪಂಚ ಗೋವುಗಳ ವರ್ಣಗಳು ಕ್ರಮವಾಗಿ ಕಪಿಲ, ಕೃಷ್ಣ, ಧವಲ, ಧೂಮ್ರ ಮತ್ತು ರಕ್ತ.[೩೦]

ಭಸ್ಮ ಪಂಚಕಗಳ ಲಕ್ಷಣವನ್ನು ಅದೇ ಉಪನಿಷತ್ತು ಹೀಗೆ ನಿರೂಪಿಸಿದೆ: ......**ಐಶ್ವರ್ಯಕಾರದ್ಭೂತಿಃ। ಭಸ್ಮ ಸರ್ವಾಘ ಭಕ್ಷಣಾತ್। ಭಾಸನಾದ್ಭಸಿತಮ್। ಕ್ಷಾರಣಾದಾಪದಾಂ ಕ್ಷಾರಮ್। ಭೂತಪ್ರೇತಪಿಶಾಚಬ್ರಹ್ಮರಾಕ್ಷಸಾಪಸ್ಮಾರ ಭವಭೀತಿಭ್ಯೋಽಭಿರಕ್ಷಣಾದ್ರಕ್ಷೇತಿ॥**[೯೧] "ಅಣಿಮಾದಿ ಅಷ್ಟೈಶ್ವರ್ಯಗಳಿಗೆ ಕಾರಣವಾದ್ದರಿಂದ ವಿಭೂತಿ; ಎಲ್ಲ ಪಾಪಗಳನ್ನು ನಿವಾರಿಸುವ ಕಾರಣ ಭಸ್ಮ; ಪರಶಿವತತ್ವದ ಪ್ರಕಾಶನ ಮಾಡುವುದರಿಂದ ಭಸಿತ; ಎಲ್ಲ ಬಗೆಯ ಆಪತ್ತುಗಳು ನಿವಾರಣೆಯಾಗುವುದರಿಂದ ಕ್ಷಾರ ಮತ್ತು ಭೂತ, ಪ್ರೇತ, ಪಿಶಾಚಾದಿ ಪೀಡೆಗಳಿಂದ ರಕ್ಷಿಸುವುದರಿಂದ ರಕ್ಷಾ ಎನಿಸಿದೆ." ಇದೇ ಸಿದ್ಧಾಂತ ಶಿಖಾಮಣಿಯ ಭಸ್ಮಪಂಚಕಗಳ ಲಕ್ಷಣಕ್ಕೆ ಮೂಲವಾಗಿದೆ:

ವಿಭೂತಿರ್ಭೂತಿಹೇತುತ್ವಾತ್ ಭಸಿತಂ ತತ್ತ್ವಭಾಸನಾತ್।
ಪಾಪಾನಾಂ ಭರ್ತ್ಸನಾದ್ ಭಸ್ಮ ಕ್ಷಾರಣಾತ್ ಕ್ಷಾರಮಾಪದಾಮ್।
ರಕ್ಷಣಾತ್ ಸರ್ವಭೂತೇಭ್ಯೋ ರಕ್ಷೇತಿ ಪರಿಗೀಯತೇ॥[೯೨]

ಭಸ್ಮಧಾರಣವಿಧಿ: ವೀರಶೈವ ಸಿದ್ಧಾಂತದಲ್ಲಿ ಭಸ್ಮಧಾರಣೆಯು ಭಸ್ಮಸ್ನಾನ, ಭಸ್ಮೋದ್ಧೂಲನ ಮತ್ತು ತ್ರಿಪುಂಡ್ರಧಾರಣವೆಂದು ಮೂರು ವಿಧವಾಗಿದೆ. ಈ ಮೂರು ಬಗೆಯ ವಿಧಿಗಳಿಗೆ ಮೂಲ ಆಕರವೂ ಬೃಹಜ್ಜಾಬಾಲೋಪ-ನಿಷತ್ತೇ ಆಗಿದೆ. ಭಸ್ಮಧಾರಣವಿಧಿಯು ಅಲ್ಲಿ ಹೀಗೆ ನಿರೂಪಿತವಾಗಿದೆ :

ಈಶಾದ್ಯೈಃ ಪಂಚಭಿರ್ಮಂತ್ರೈಸ್ತನುಂ ಕ್ರಮಾದುದ್ಧೂಲಯೇತ್। ಈಶಾನೇತಿ ಶಿರೋದೇಶಂ ಮುಖಂ ತತ್ಪುರುಷೇಣ ತು। ಊರುದೇಶಮಘೋರೇಣ ಗುಹ್ಯಂ ವಾಮೇನ। ಸದ್ಯೋಜಾತೇನ ವೈ ಪಾದೌ ಸರ್ವಾಂಗಂ ಪ್ರಣವೇನ। ಆಪಾದತಲಮಸ್ತಕಂ ಸರ್ವಾಂಗಂ ತತ ಊದ್ಧೂಲ್ಯಾಚಮ್ಯ ವಸನಂ ಧೌತಂ ಶ್ವೇತಂ ಪ್ರಧಾರಯೇದ್ವಿಧಿಸ್ನಾನಮಿದಮ್॥[೯೩] "ಈಶಾನಾದಿ ಪಂಚಬ್ರಹ್ಮ ಮಂತ್ರಗಳಿಂದ ಶರೀರಕ್ಕೆ ಕ್ರಮವಾಗಿ ಭಸ್ಮೋದ್ಧೂಲನವನ್ನು ಮಾಡಬೇಕು. ಈಶಾನ ಮಂತ್ರದಿಂದ ಶಿರಸ್ಸನ್ನು, ತತ್ಪುರುಷ ಮಂತ್ರದಿಂದ ಮುಖವನ್ನು, ಅಘೋರಮಂತ್ರದಿಂದ ತೊಡೆಗಳನ್ನು, ವಾಮದೇವ ಮಂತ್ರದಿಂದ ಗುಹ್ಯವನ್ನು, ಸದ್ಯೋಜಾತ ಮಂತ್ರದಿಂದ ಪಾದಗಳನ್ನು ಮತ್ತು ಪ್ರಣವದಿಂದ ಸರ್ವಾಂಗಗಳಿಗೆ ಭಸ್ಮಸ್ನಾನ (ನೀರಿನೊಂದಿಗೆ ಮಿಶ್ರಣ ಮಾಡಿದ ಭಸ್ಮಲೇಪನ) ಮತ್ತು ಭಸ್ಮೋದ್ಧೂಲನ (ನೀರಿನೊಂದಿಗೆ ಮಿಶ್ರಣಮಾಡದ ಭಸ್ಮಲೇಪನ) ವನ್ನು ಮಾಡಬೇಕು." ಶ್ರೀಸಿದ್ಧಾಂತ ಶಿಖಾಮಣಿಯ ಭಸ್ಮಧಾರಣವಿಧಿಗೆ ಪೂರ್ವೋಕ್ತ ಉಪನಿಷತ್ತು ಮೂಲ ಆಕರವಾಗಿದೆ:

ಶಿರ ಈಶಾನಮಂತ್ರೇಣ ಪುರುಷೇಣ ಮುಖಂ ತಥಾ ॥
ಹೃತ್‌ಪ್ರದೇಶಮಘೋರೇಣ ವಾಮದೇವೇನ ಗುಹ್ಯಕಮ್।
ಪಾದೌ ಸದ್ಯೇನ ಸರ್ವಾಂಗಂ ಪ್ರಣವೇನೈವ ಸೇಚಯೇತ್॥[೯೪]

ತ್ರಿಪುಂಡ್ರಧಾರಣವಿಧಿ : ವೀರಶೈವ ಸಾಧಕನು ಭಸ್ಮಸ್ನಾನ-ಭಸ್ಮೋದ್ಧೂಲನದ ನಂತರ ಅವಶ್ಯವಾಗಿ ತ್ರಿಪುಂಡ್ರಧಾರಣೆಯನ್ನು ಮಾಡಬೇಕು. ಉದ್ಧೂಲನವನ್ನು ಮಾಡಲು ಅಶಕ್ತನಾದವನು ತ್ರಿಪುಂಡ್ರಧಾರಣೆಯನ್ನು ಮಾಡಬಹುದು ಎಂದು ಬೃಹಜ್ಜಾಬಾಲೋಪನಿಷತ್ ನಿರೂಪಿಸಿದೆ:

"ಉದ್ಧೂಲನೇಽಪ್ಯಶಕ್ತಶ್ಚೇತ್ ತ್ರಿಪುಂಡ್ರಾದೀನಿ ಕಾರಯೇತ್।"[೯೫] ತ್ರಿಪುಂಡ್ರಧಾರಣೆಯನ್ನು ಮಧ್ಯದ ಮೂರು (ಅನಾಮಿಕಾ, ಕನಿಷ್ಠಿಕಾ ಮತ್ತು ತರ್ಜನೀ) ಬೆರಳುಗಳಿಂದ ಮಾಡಬೇಕು. ಅಲ್ಲದೆ ಈ ಮೂರು ರೇಖೆಗಳು ಬ್ರಹ್ಮ, ವಿಷ್ಣು ಮತ್ತು ಶಿವ ಸ್ವರೂಪದವುಗಳು. ಪಂಚಾಕ್ಷರ ಮಂತ್ರವನ್ನು ಜಪಿಸುತ್ತಾ ೩೨, ೧೬, ೮ ಅಥವಾ ೫ ಸ್ಥಾನಗಳಲ್ಲಿ ತ್ರಿಪುಂಡ್ರಧಾರಣೆ ಮಾಡಿಕೊಳ್ಳಬೇಕೆಂದು ಹೇಳಿ, ಈ ಸ್ಥಾನಗಳ ನಾಲ್ಕು ಪಟ್ಟಿಗಳನ್ನು ಪ್ರತ್ಯೇಕವಾಗಿ ಬೃಹಜ್ಜಾಬಾಲೋಪನಿಷತ್ ನಿರೂಪಿಸಿರುತ್ತದೆ:

ತ್ರಿಪುಂಡ್ರಂ ಕಾರಯೇತ್ ಪಶ್ಚಾತ್ ಬ್ರಹ್ಮವಿಷ್ಣುಶಿವಾತ್ಮಕಮ್।
ಮಧ್ಯಾಂಗುಲಿಭಿರಾದಾಯ ತಿಸೃಭಿರ್ಮೂಲಮಂತ್ರತಃ॥
ದ್ವಾತ್ರಿಂಶತ್ ಸ್ಥಾನಕೇ ಚಾಥ ಷೋಡಶಸ್ಥಾನಕೇಽಪಿ ವಾ।
ಅಷ್ಟಸ್ಥಾನೇ ತಥಾ ಚೈವ ಪಂಚಸ್ಥಾನೇಽಪಿ ಯೋಜಯೇತ್॥[೩೬]

ಮೂವತ್ತೆರಡು ಸ್ಥಾನಗಳು

ಉತ್ತಮಾಂಗೇ ಲಲಾಟೇ ಚ ಕರ್ಣಯೋರ್ನೇತ್ರಯೋಸ್ತಥಾ।
ನಾಸಾವಕ್ತ್ರೇ ಗಲೇ ಚೈವಮಂಸದ್ವಯಮತಃಪರಮ್॥
ಕೂರ್ಪರೇ ಮಣಿಬಂಧೇ ಚ ಹೃದಯೇ ಪಾರ್ಶ್ವಯೋರ್ದ್ವಯೋಃ।
ನಾಭೌ ಗುಹ್ಯದ್ವಯೇ ಚೈವಮೂರ್ವೋಃ ಸ್ಫಿಗ್‌ಬಿಂಬಜಾನುನಿ॥
ಜಂಘಾದ್ವಯೇ ಚ ಪಾದೌ ಚ ದ್ವಾತ್ರಿಂಶತ್ ಸ್ಥಾನಮುತ್ತಮಮ್॥[೩೭]

"ಶಿರಸ್ಸು, ಹಣೆ, ಎರಡು ಕಿವಿ, ಎರಡು ಕಣ್ಣು, ಮೂಗಿನ ಹೊಳ್ಳೆಗಳು, ಬಾಯಿ, ಕುತ್ತಿಗೆ, ಎರಡು ಭುಜಗಳು, ಮೊಣಕೈಗಳು, ಮುಂಗೈಗಳು, ಎದೆ, ಎರಡು ಪಕ್ಕೆಗಳು, ಹೊಕ್ಕಳು, ಎರಡು ಗುಹ್ಯಸ್ಥಾನಗಳು (ಜನನೇಂದ್ರಿಯ ಮತ್ತು ಗುದಸ್ಥಾನ), ತೊಡೆಗಳು, ಪಿರ್ರೆಗಳು, ಮೊಣಕಾಲುಗಳು, ಎರಡು ಮೀನಖಂಡಗಳು ಮತ್ತು ಎರಡು ಪಾದಗಳು -ಹೀಗೆ ಮೂವತ್ತೆರಡು ಸ್ಥಾನಗಳಲ್ಲಿ ತ್ರಿಪುಂಡ್ರಧಾರಣೆ ಮಾಡುವುದು ಉತ್ತಮ."

ಹದಿನಾರು ಸ್ಥಾನಗಳು :

ವಿದಧ್ಯಾತ್ ಷೋಡಶಸ್ಥಾನೇ ತ್ರಿಪುಂಡ್ರಂ ತು ಸಮಾಹಿತಃ।
ಶೀರ್ಷಕೇ ಚ ಲಲಾಟೇ ಚ ಕರ್ಣೇ ಚಾಂಸದ್ವಯೇ ತಥಾ।
ಕೂರ್ಪರೇ ಮಣಿಬಂಧೇ ಚ ಹೃದಯೇ ನಾಭಿಪಾರ್ಶ್ವಯೋಃ॥
ಪೃಷ್ಠೇ ಚೈಕಂ ಪ್ರತಿಸ್ಥಾನಂ ಜಪೇತ್ತತ್ರಾಧಿದೇವತಾಃ।[೩೮]

"ಶಿರಸ್ಸು, ಹಣೆ, ಕಿವಿಗಳು, ಭುಜಗಳು, ಮೊಣಕೈಗಳು, ಮುಂಗೈಗಳು, ಎದೆ, ಹೊಕ್ಕಳು, ಪಕ್ಕೆಗಳು ಮತ್ತು ನಿತಂಬಗಳು- ಈ ಹದಿನಾರು ಸ್ಥಾನಗಳಲ್ಲಿ ಅಧಿದೇವತೆಗಳ ಹೆಸರುಗಳನ್ನು ಜಪಿಸುತ್ತಾ ಏಕಾಗ್ರಚಿತ್ತದಿಂದ ತ್ರಿಪುಂಡ್ರವನ್ನು ಧರಿಸಿಕೊಳ್ಳಬಹುದು."

ಎಂಟು ಮತ್ತು ಐದು ಸ್ಥಾನಗಳು

ಗುರುಸ್ಥಾನಂ ಲಲಾಟಂ ಚ ಕರ್ಣದ್ವಯಮನಂತರಮ್।
ಅಂಸಯುಗ್ಮಂ ಚ ಹೃದಯಂ ನಾಭಿರಿತ್ಯಷ್ಟಮಂ ಭವೇತ್॥
ಬ್ರಹ್ಮಾ ಚ ಋಷಯಃ ಸಪ್ತ ದೇವತಾಶ್ಚ ಪ್ರಕೀರ್ತಿತಾಃ।
ಅಥವಾ ಮಸ್ತಕಂ ಬಾಹೂ ಹೃದಯಂ ನಾಭಿರೇವ ಚ॥
ಪಂಚಸ್ಥಾನಾನ್ಯಮೂನ್ಯಾಹುರ್ಭಸ್ಮತತ್ತ್ವವಿದೋ ಜನಾಃ।
ಯಥಾ ಸಂಭವತಃ ಕುರ್ಯಾದ್ದೇಶಕಾಲಾದ್ಯಪೇಕ್ಷಯಾ॥[೩೯]

"ಶಿರಸ್ಸು, ಹಣೆ, ಎರಡು ಕಿವಿಗಳು, ಎರಡು ಭುಜಗಳು, ಎದೆ, ಹೊಕ್ಕಳು -ಇವು ಎಂಟು ಸ್ಥಾನಗಳು. ಬ್ರಹ್ಮ ಮತ್ತು ಸಪ್ತರ್ಷಿಗಳು, ಹೀಗೆ ಎಂಟು ದೇವತೆಗಳು. ಹಣೆ, ಎರಡು ತೋಳುಗಳು, ಹೃದಯ ಮತ್ತು ಹೊಕ್ಕಳು-ಇವು ಐದು ಸ್ಥಾನಗಳು. ದೇಶ-ಕಾಲಗಳ ಅಪೇಕ್ಷೆಗೆ ಅನುಗುಣವಾಗಿ ಯಥಾಶಕ್ತಿ ಸ್ಥಾನಗಳಲ್ಲಿ (೩೨, ೧೬, ೮ ಅಥವಾ ೫) ತ್ರಿಪುಂಡ್ರವನ್ನು ಧರಿಸಿಕೊಳ್ಳಬಹುದು."

ಈ ರೀತಿಯಾಗಿ ೩೨, ೧೬, ೮ ಅಥವಾ ೫ ಸ್ಥಾನಗಳಲ್ಲಿ ಯಥಾಶಕ್ತಿ ತ್ರಿಪುಂಡ್ರವನ್ನು ಧರಿಸಬಹುದೆಂದು ಬೃಹಜ್ಜಾಬಾಲೋಪನಿಷತ್ತು ನಿರೂಪಿಸಿದೆ. ಇದೇ ವಿವರಗಳು ಚಂದ್ರಜ್ಞಾನಾಗಮ ಕ್ರಿಯಾಪಾದದ ೬.೪೩-೫೭ ರಲ್ಲಿ ಶಬ್ದಶಃ ಪುನರುಕ್ತಿಯಾಗಿವೆ. ಶ್ರೀ ಸಿದ್ಧಾಂತ ಶಿಖಾಮಣಿಯ ಪ್ರಕಾರ ಶರೀರದ ೧೫ ಸ್ಥಾನಗಳಲ್ಲಿ[೪೦] ತ್ರಿಪುಂಡ್ರಧಾರಣೆ ಮಾಡಿಕೊಳ್ಳಬೇಕು. ಅಲ್ಲಿ ಉಕ್ತವಾಗಿರುವ ಸ್ಥಾನಗಳೆಂದರೆ- ಶಿರಸ್ಸು, ಹಣೆ, ಎರಡು ಕಿವಿಗಳು, ಕುತ್ತಿಗೆ, ಎರಡು ಮುಂಗೈಗಳು, ಭುಜಗಳು, ಹೃದಯ, ನಾಭಿ, ಬೆನ್ನು, ಎರಡು ತೋಳುಗಳು ಮತ್ತು ಹೆಗಲು.[೪೧] ಚನ್ನಬಸವಣ್ಣನವರು ತಮ್ಮ ಒಂದು ವಚನದಲ್ಲಿ ೮, ೧೬, ೩೨,೩೬, ೪೪, ೪೮ ಸ್ಥಾನಗಳಲ್ಲಿ ತ್ರಿಪುಂಡ್ರಧಾರಣೆ ಮಾಡುವುದನ್ನು ಬೇರೆ ಬೇರೆ ಬಗೆಯ ಭಕ್ತರನ್ನು ಕುರಿತು ಹೇಳಿದ್ದಾರೆ.[೪೨] ಈ ಎಲ್ಲಾ ಅಂಶಗಳಿಂದ ಸ್ಪಷ್ಟವಾಗುವುದೇನೆಂದರೆ ತ್ರಿಪುಂಡ್ರಧಾರಣೆಗೆ ಸಂಬಂಧಿಸಿದಂತೆ ವ್ಯಕ್ತವಾಗಿರುವ ಎಲ್ಲಾ ವಿವರಗಳಿಗೆ ಬೃಹಜ್ಜಾಬಾಲೋಪನಿಷತ್ತೇ ಮೂಲ ಆಕರವೆಂದು ಸ್ಪಷ್ಟವಾಗುತ್ತದೆ.

ತ್ರಿಪುಂಡ್ರಧಾರಣೆಯ ಕ್ರಮ : ತ್ರಿಪುಂಡ್ರಧಾರಣೆಯ ಕ್ರಮಕ್ಕೆ ಸಂಬಂಧಿಸಿದಂತೆ ಕಾಲಾಗ್ನಿರುದ್ರೋಪನಿಷತ್ ಮತ್ತು ಜಾಬಾಲ್ಯುಪನಿಷತ್ತುಗಳಲ್ಲಿ ಈ ರೀತಿಯ ವಿವರಣೆಯು ಕಂಡುಬರುತ್ತದೆ :

"ಯದ್ದ್ರವ್ಯಂ ತದಾಗ್ನೇಯಂ ಭಸ್ಮಸದ್ಯೋಜಾತಾದಿ ಪಂಚಬ್ರಹ್ಮಮಂತ್ರೈಃ ಪರಿಗೃಹ್ಯಾಗ್ನಿರಿತಿ ಭಸ್ಮ ವಾಯುರಿತಿ ಭಸ್ಮ ಖಮಿತಿ ಭಸ್ಮ ಜಲಮಿತಿ ಭಸ್ಮ ಸ್ಥಲಮಿತಿ ಭಸ್ಮ ಇತ್ಯನೇನ ಅಭಿಮಂತ್ರ್ಯ ಮಾನಸ್ತೋಕೇ ತನಯ ಇತಿ ಸಮುದ್ಧೃತ್ಯ ಮಾ ನೋ ಮಹಾಂತಮಿತಿ ಜಲೇನ ಸಂಸೃಜ್ಯ ತ್ರಿಯಾಯುಷಂ ಜಮದಗ್ನೇರಿತಿ ಶಿರೋಲಲಾಟವಕ್ಷಃಸ್ಕಂದೇಷು ತ್ರಿಯಾಯುಷೈಸ್ತ್ರ್ಯಂಬಕೈಸ್ತ್ರಿಶಕ್ತಿಭಿಸ್ತಿರ್ಯಕ್‌ತಿಸ್ರೋರೇಖಾಃ ಪ್ರಕುರ್ವೀತ।[೪೩]

"ಅಗ್ನಿಯಿಂದ ಸಂಸ್ಕರಿಸಲ್ಪಟ್ಟು ಶುದ್ಧವಾದ ಭಸ್ಮವನ್ನು 'ಸದ್ಯೋಜಾತಂ ಪ್ರಪದ್ಯಾಮಿ' ಇತ್ಯಾದಿ ಪಂಚಬ್ರಹ್ಮ ಮಂತ್ರಗಳನ್ನು ಜಪಿಸುತ್ತಾ ವಾಮಕರಪೀಠದಲ್ಲಿರಿಸಿ "ಅಗ್ನಿರಿತಿ ಭಸ್ಮ, ವಾಯುರಿತಿ ಭಸ್ಮ, ಖಮಿತಿ ಭಸ್ಮ, ಜಲಮಿತಿ ಭಸ್ಮ, ಸ್ಥಲಮಿತಿಭಸ್ಮ" ಎಂಬ ಮಂತ್ರದಿಂದ ಅಭಿಮಂತ್ರಿಸಿ, "ಮಾನಸ್ತೋಕೇ ತನಯ" ಎಂಬ ಮಂತ್ರವನ್ನು ಜಪಿಸುತ್ತಾ ಅದನ್ನು ತೆಗೆದುಕೊಂಡು "ಮಾ ನೋ ಮಹಾಂತಂ" ಎಂಬ ಮಂತ್ರದಿಂದ ಭಸ್ಮವನ್ನು ನೀರಿನಲ್ಲಿ ಮಿಶ್ರಣ ಮಾಡಿ, "ತ್ರಿಯಾಯುಷಂ ಜಮದಗ್ನೇಃ"[೪೪] ಎಂಬ ಮಂತ್ರವನ್ನುಚ್ಚರಿಸುತ್ತಾ ಶಿರಸ್ಸು, ಹಣೆ, ಭುಜ ಮುಂತಾದ ಸ್ಥಾನಗಳಲ್ಲಿ ತ್ರಿಶಕ್ತ್ಯಾತ್ಮಕವಾದ ಮೂರು ರೇಖೆಗಳನ್ನು ಧರಿಸಬೇಕು." ತ್ರಿಪುಂಡ್ರಧಾರಣೋಪಯೋಗಿ ಮಂತ್ರ-ಸ್ಥಾನಗಳನ್ನು ಕುರಿತು ಬೃಹಜ್ಜಾಬಾಲೋಪನಿಷತ್ ಪೂರ್ವಕ್ಕಿಂತ ಬೇರೆಯಾಗಿ ವಿವರಿಸಿದೆ. ಅದು ಈ ರೀತಿಯಾಗಿದೆ : **ಲಲಾಟೇ ಬ್ರಹ್ಮಣೇ ನಮಃ। ಹೃದಯೇ ಹವ್ಯವಾಹನಾಯ ನಮಃ। ನಾಭೌ ಸ್ಕಂದಾಯ ನಮಃ। ಗಲೇ ವಿಷ್ಣವೇ ನಮಃ। ಮಧ್ಯೇ ಪ್ರಭಂಜನಾಯ ನಮಃ। ಮಣಿಬಂಧೇ ವಸುಭ್ಯೋ ನಮಃ। ಪೃಷ್ಠೇ ಹರಯೇ ನಮಃ। ಕಕುದಿ ಶಂಭವೇ ನಮಃ। ಶಿರಸಿ ಪರಮಾತ್ಮನೇ ನಮಃ। ಇತ್ಯಾದಿ ಸ್ಥಾನೇಷು ತ್ರಿಪುಂಡ್ರಂ ಧಾರಯೇತ್॥[೪೫]**

ತ್ರಿಪುಂಡ್ರಧಾರಣೆಯ ಪ್ರಮಾಣ : ಹಣೆಯಲ್ಲಿ ಭಸ್ಮ ತ್ರಿಪುಂಡ್ರಧಾರಣೆಯನ್ನು ಯಾವ ಪ್ರಮಾಣದಲ್ಲಿ ಮಾಡಬೇಕೆಂಬುದನ್ನು ಉಪನಿಷತ್ತುಗಳು ಹೀಗೆ ನಿರೂಪಿಸಿವೆ : ತ್ರಿಧಾ ರೇಖಾ ಆಲಲಾಟಾದಾಚಕ್ಷುಷೋರಾಮೂರ್ಧ್ನೋರಾಭ್ರುವೋಮಧ್ಯತಶ್ಚ॥[೪೬] "ಮೂರು ರೇಖೆಗಳು ಹಣೆಯಿಂದ ಕಣ್ಣುಗಳವರೆಗೆ, ಶಿರಸ್ಸಿನಿಂದ ಕಣ್ಣಿನ ಹುಬ್ಬುಗಳ ಮಧ್ಯದವರೆಗೆ ಇರಬೇಕು." ಈ ಅಭಿಪ್ರಾಯವು ಸಿದ್ಧಾಂತ ಶಿಖಾಮಣಿಯಲ್ಲಿ ಹೀಗೆ ನಿರೂಪಿತವಾಗಿದೆ:

ಮಧ್ಯಾಂಗುಲಿತ್ರಯೇಣೈವ ಸ್ವದಕ್ಷಿಣಕರಸ್ಯ ತು।
ಷಡಂಗುಲಾಯತಂ ಮಾನಮಪಿವಾಽಲಿಕಮಾನಕಮ್॥
ನೇತ್ರಯುಗ್ಮಪ್ರಮಾಣೇನ ಫಾಲೇ ದಧ್ಯಾತ್ ತ್ರಿಪುಂಡ್ರಕಮ್।
ಮಧ್ಯಮಾನಾಮಿಕಾಂಗುಷ್ಠೈರನುಲೋಮವಿಲೋಮತಃ॥[೪೭]

"ಬಲಹಸ್ತದ ಮಧ್ಯದ ಮೂರು (ತರ್ಜನಿ, ಮಧ್ಯಮ, ಅನಾಮಿಕಾ) ಬೆರಳುಗಳಿಂದ ಆರು ಅಂಗುಲ ಉದ್ದವಾಗಲಿ, ಹಣೆಯಿರುವಷ್ಟಾಗಲಿ, ಎರಡೂ ಕಣ್ಣುಗಳ ಸಮಾನಕ್ಕಾಗಲಿ ಹಣೆಯಲ್ಲಿ ತ್ರಿಪುಂಡ್ರಧಾರಣೆಯನ್ನು ಮಾಡಿಕೊಳ್ಳಬೇಕು. ಮಧ್ಯಮಾ-ಅನಾಮಿಕಾ ಬೆರಳುಗಳಿಂದ ಅನುಲೋಮ (ಮುಮ್ಮುಖ) ವಾಗಿಯೂ, ಅಂಗುಷ್ಠದಿಂದ ವಿಲೋಮ (ಹಿಮ್ಮುಖ) ವಾಗಿಯೂ ಹಣೆಯಲ್ಲಿ ತ್ರಿಪುಂಡ್ರವನ್ನು ಧರಿಸಬೇಕು."

ತ್ರಿಪುಂಡ್ರರೇಖೆಗಳಲ್ಲಿನ ಭಾವನಾವಿಶೇಷ :

ಶರೀರದ ನಾನಾ ಭಾಗಗಳಲ್ಲಿ ಧರಿಸುವ ತ್ರಿಪುಂಡ್ರದ ರೇಖೆಗಳು ಎಂತಹ ಭಾವನೆಯಿಂದ ಕೂಡಿವೆ ಎಂಬುದನ್ನು ಉಪನಿಷತ್ತುಗಳು ನಿರೂಪಿಸಿವೆ.

ಯಾಽಸ್ಯ ಪ್ರಥಮಾ ರೇಖಾ ಸಾ ಗಾರ್ಹಪತ್ಯಶ್ಚಾಕಾರೋ ರಜೋ ಭೂರ್ಲೋಕಃ
ಸ್ವಾತ್ಮಾ ಕ್ರಿಯಾಶಕ್ತಿಃ ಋಗ್ವೇದಃ ಪ್ರಾತಃಸವನಂ ಪ್ರಜಾಪತಿರ್ದೇವೋ ದೇವತೇತಿ।
ಯಾಽಸ್ಯ ದ್ವಿತೀಯಾ ರೇಖಾ ಸಾ ದಕ್ಷಿಣಾಗ್ನಿರುಕಾರಃ ಸತ್ತ್ವಮಂತರಿಕ್ಷಮಂತರಾತ್ಮಾ
ಚೇಚ್ಛಾಶಕ್ತಿರ್ಯಜುರ್ವೇದೋ ಮಾಧ್ಯಂದಿನಂ ಸವನಂ ವಿಷ್ಣುರ್ದೇವೋ ದೇವತೇತಿ।
ಯಾಽಸ್ಯ ತೃತೀಯಾ ರೇಖಾ ಸಾಽಽಹವನೀಯೋ ಮಕಾರಸ್ತಮೋ ದ್ಯೌರ್ಲೋಕಃ
ಪರಮಾತ್ಮಾ ಜ್ಞಾನಶಕ್ತಿಃ ಸಾಮವೇದಸ್ತೃತೀಯಸವನಂ ಮಹಾದೇವೋ ದೇವತೇತಿ॥[೪೮]

ಈ ಮಂತ್ರಾರ್ಥವೇನೆಂದರೆ - "ತ್ರಿಪುಂಡ್ರವಲ್ಲಿನ ಮೇಲಿನ, ಮಧ್ಯದ ಮತ್ತು ಕೆಳಗಿನ ರೇಖೆಗಳು ಋಗ್ವೇದ, ಯಜುರ್ವೇದ ಮತ್ತು ಸಾಮವೇದಗಳನ್ನು ; ಕ್ರಿಯಾಶಕ್ತಿ, ಇಚ್ಛಾಶಕ್ತಿ ಮತ್ತು ಜ್ಞಾನಶಕ್ತಿಗಳನ್ನು ; ಪ್ರಾತಃಸವನ, ಮಾಧ್ಯಂದಿನ ಸವನ ಮತ್ತು ಸಾಯಂ ಸವನಗಳನ್ನು ; ರಜಸ್ಸು, ಸತ್ತ್ವ ಮತ್ತು ತಮೋಗುಣಗಳನ್ನು ; ಗಾರ್ಹಪತ್ಯ, ದಕ್ಷಿಣಾಗ್ನಿ ಮತ್ತು ಆಹವನೀಯಗಳೆಂಬ ಮೂರು ಅಗ್ನಿಗಳನ್ನು ; ಆತ್ಮ, ಅಂತರಾತ್ಮ ಮತ್ತು ಪರಮಾತ್ಮರನ್ನು ; ಅಕಾರ, ಉಕಾರ ಮತ್ತು ಮಕಾರಗಳನ್ನು ; ಭೂಲೋಕ, ಅಂತರಿಕ್ಷ ಮತ್ತು ದ್ಯೌಲೋಕಗಳನ್ನು ; ಪ್ರಜಾಪತಿ, ವಿಷ್ಣು ಮತ್ತು ಮಹಾದೇವ ಎಂಬ ತ್ರಿಮೂರ್ತಿಗಳನ್ನು ಕ್ರಮವಾಗಿ ಪ್ರತಿನಿಧಿಸುತ್ತವೆ." ಬೃಹಜ್ಜಾಬಾಲೋಪನಿಷತ್ತಿನಲ್ಲಿ-

ಮಾನಸ್ತೋಕೇತಿ ಮಂತ್ರೇಣ ಮಂತ್ರಿತಂ ಭಸ್ಮ ಧಾರಯೇತ್।
ಊರ್ಧ್ವಪುಂಡ್ರಂ ಭವೇತ್ ಸಾಮ ಮಧ್ಯಪುಂಡ್ರಂ ತ್ರಿಯಾಯುಷಮ್॥
ತ್ರಿಯಾಯುಷಾಣಿ ಕುರುತೇ ಲಲಾಟೇ ಚ ಭುಜದ್ವಯೇ।
ನಾಭೌ ಶಿರಸಿ ಹೃತ್ಪಾರ್ಶ್ವೇ ಬ್ರಾಹ್ಮಣಾಃ ಕ್ಷತ್ರಿಯಾಸ್ತಥಾ॥[೪೯]

"ಮಾನಸ್ತೋಕೇ ತನಯೇ" ಎಂಬ ಮಂತ್ರದಿಂದ ಮಂತ್ರಿಸಲ್ಪಟ್ಟ ಭಸ್ಮವನ್ನು ಧರಿಸಬೇಕು. ತ್ರಿಪುಂಡ್ರಗಳಲ್ಲಿ ಮೇಲಿನ ಗೆರೆಯು ಸಾಮವೇದ, ಮಧ್ಯದ ಗೆರೆಯು ಯಜುರ್ವೇದ ಮತ್ತು ಕೆಳಗಿನ ಗೆರೆಯು ಋಗ್ವೇದಗಳನ್ನು ಪ್ರತಿನಿಧಿಸುತ್ತವೆ. ಆದ್ದರಿಂದ "ತ್ರಿಯಾಯುಷಂ" ಮಂತ್ರದಿಂದ ಬ್ರಾಹ್ಮಣ, ಕ್ಷತ್ರಿಯ ಮೊದಲಾದವರು ಹಣೆಯಲ್ಲಿ, ಎರಡು ಭುಜಗಳಲ್ಲಿ, ನಾಭಿಯಲ್ಲಿ, ಶಿರಸ್ಸಿನಲ್ಲಿ, ಹೃದಯ ಮತ್ತು ಎರಡು ಪಕ್ಕೆಗಳಲ್ಲಿ ಭಸ್ಮತ್ರಿಪುಂಡ್ರವನ್ನು ಧರಿಸಬೇಕು."

ತ್ರಿಪುಂಡ್ರವಲ್ಲಿನ ಮೂರು ರೇಖೆಗಳು ಪೂರ್ವೋಕ್ತ ಉಪನಿಷತ್ತುಗಳಲ್ಲಿ ವೇದಗಳ ಪ್ರತಿನಿಧಿತ್ವಕ್ಕೆ ಸಂಬಂಧಿಸಿದಂತೆ ಸ್ವಲ್ಪ ವ್ಯತ್ಯಾಸವು ಕಂಡುಬರುತ್ತದೆ. ಜಾಬಾಲೋಪನಿಷತ್ತಿನ ಪ್ರಕಾರ ಮೇಲಿನ, ಮಧ್ಯದ ಮತ್ತು ಕೆಳಗಿನ ರೇಖೆಗಳು ಋಗ್ವೇದ, ಯಜುರ್ವೇದ ಮತ್ತು ಸಾಮವೇದಗಳ ಪ್ರತೀಕಗಳಾದರೆ, ಬೃಹಜ್ಜಾಬಾಲೋಪನಿಷತ್ತಿನ ಪ್ರಕಾರ ಆ ರೇಖೆಗಳು ಸಾಮವೇದ,

ಯಜುರ್ವೇದ ಮತ್ತು ಋಗ್ವೇದಗಳ ಪ್ರತೀಕಗಳಾಗಿವೆ. ಚಂದ್ರಜ್ಞಾನಾಗಮವು ಈ ವಿಷಯದಲ್ಲಿ ಬೃಹಜ್ಜಾಬಾಲೋಪನಿಷತ್ತಿನ ಅಭಿಪ್ರಾಯವನ್ನು ಅನುಸರಿಸಿದೆ:

ಊರ್ಧ್ವಪುಂಡ್ರಂ ಭವೇತ್ ಸಾಮ ಮಧ್ಯಪುಂಡ್ರಂ ಯಜೂಂಷಿ ಚ।
ಅಧಃಪುಂಡ್ರಮೃಚಃ ಸಾಕ್ಷಾತ್ತಸ್ಮಾತ್ ಪುಂಡ್ರಂ ತ್ರಿಯಾಯುಷಮ್॥[೫೦]

ಚತುರ್ವಿಧ ಕಲ್ಪಭಸ್ಮ: ಭಸ್ಮವನ್ನು ಅವುಗಳ ತಯಾರಿಕೆಯ ಆಧಾರದ ಮೇಲೆ ಉಪನಿಷತ್ತುಗಳು ಚತುರ್ವಿಧ ಎಂದು ನಿರೂಪಿಸಿವೆ. **ಅಥ ಚತುರ್ವಿಧ ಭಸ್ಮಕಲ್ಪಮ್। ಪ್ರಥಮಮನುಕಲ್ಪಮ್। ದ್ವಿತೀಯಮುಪಕಲ್ಪಮ್। ಉಪೋಪಕಲ್ಪಂ ತೃತೀಯಮ್। ಅಕಲ್ಪಂ ಚತುರ್ಥಮ್॥**[೫೧] "ಭಸ್ಮವು ಚತುರ್ವಿಧ. ಅವುಗಳೆಂದರೆ- ೧. ಅನುಕಲ್ಪ, ೨. ಉಪಕಲ್ಪ, ೩. ಉಪೋಪಕಲ್ಪ ಮತ್ತು ೪. ಅಕಲ್ಪ" ಈ ಚತುರ್ವಿಧ ಭಸ್ಮಗಳ ಲಕ್ಷಣವನ್ನು ಬೃಹಜ್ಜಾಬಾಲೋಪನಿಷತ್ತು ಈ ರೀತಿಯಾಗಿ ಪ್ರತಿಪಾದಿಸಿದೆ :

"ಅಗ್ನಿಹೋತ್ರ ಸಮುದ್ಭೂತಂ ವಿರಜಾನಲಜಮನುಕಲ್ಪಮ್। ವನೇ ಶುಷ್ಕಂ ಶಕೃತ್ ಸಂಗೃಹ್ಯ ಕಲ್ಪೋಕ್ತವಿಧಿನಾ ಕಲ್ಪಿತಮನುಕಲ್ಪಂ ಸ್ಯಾತ್। ಅರಣ್ಯೇ ಶುಷ್ಕಗೋಮಯಂ ಚೂರ್ಣೀಕೃತ್ವಾನುಸಂಗೃಹ್ಯ ಗೋಮೂತ್ರೈಃ ಪಿಂಡೀಕೃತ್ಯ ಕಲ್ಪೋಕ್ತವಿಧಿನಾ ಕಲ್ಪಿತಮುಪೋಪಕಲ್ಪಮ್। ಶಿವಾಲಯಸ್ಥಮಕಲ್ಪಂ ಶತಕಲ್ಪಂ ಚ॥"[೫೨]

"ಅಗ್ನಿಹೋತ್ರಾದಿ ಹೋಮದ ಬೂದಿಯಿಂದ ತಯಾರಿಸಿದ್ದು **ಅನುಕಲ್ಪ**, ಕಾಡಿನಲ್ಲಿ ನೆಲದ ಮೇಲೆ ಬಿದ್ದಿರುವ ಒಣಗಿದ ಗೋಮಯವನ್ನು ಸಂಗ್ರಹಿಸಿ ಕಲ್ಪೋಕ್ತವಿಧಿಯಿಂದ ತಯಾರಿಸಿದ ಭಸ್ಮವು **ಉಪಕಲ್ಪ**ವೆನಿಸುತ್ತದೆ. ಕಾಡಿನಲ್ಲಿ ನೆಲದ ಮೇಲೆ ಬಿದ್ದಿರುವ ಒಣಗಿದ ಗೋಮಯವನ್ನು ಸಂಗ್ರಹಿಸಿ, ಅದನ್ನು ಪುಡಿಮಾಡಿ ಗೋಮೂತ್ರದೊಡನೆ ಬೆರೆಸಿ ಉಂಡೆಮಾಡಿ ಕಲ್ಪೋಕ್ತವಿಧಿಯಿಂದ ತಯಾರಿಸಿದ್ದು **ಉಪೋಪಕಲ್ಪ** ಭಸ್ಮ. ಶಿವಾಲಯದಲ್ಲಿರುವ ಗೋಮಯದಿಂದ ತಯಾರಿಸಿದ್ದು **ಅಕಲ್ಪ** ಭಸ್ಮ."

ಇಲ್ಲಿ ಉಕ್ತವಾಗಿರುವ ಚತುರ್ವಿಧ ಭಸ್ಮವು ತಯಾರಿಕೆಯ ಆಧಾರದ ಮೇಲೆ ಆಗಿರುವಂತಹದ್ದು. ಸಿದ್ಧಾಂತ ಶಿಖಾಮಣಿಯು ಈ ಉಪನಿಷತ್ತನ್ನು ಅನುಸರಿಸಿ ಕಲ್ಪ, ಅನುಕಲ್ಪ, ಉಪಕಲ್ಪ ಮತ್ತು ಅಕಲ್ಪ ಎಂದು ನಾಲ್ಕು ಪ್ರಕಾರಗಳನ್ನು ಹೇಳಿ,[೫೩] ಅವುಗಳ ಲಕ್ಷಣ ನಿರೂಪಣಾವಸರದಲ್ಲಿ ಚಂದ್ರಜ್ಞಾನಾಗಮೋಕ್ತ ಅಭಿಪ್ರಾಯವನ್ನು ಅನುಸರಿಸಿರುವುದು ಕಂಡುಬರುತ್ತದೆ.[೫೪] ಚಂದ್ರಜ್ಞಾನಾಗಮದಲ್ಲಿ ಶಾಂತಿಕ, ಪೌಷ್ಟಿಕ ಮತ್ತು ಕಾಮದ[೫೫] ಎಂದು ಭಸ್ಮದ ಮೂರು ಪ್ರಕಾರಗಳು ಮಾತ್ರ ನಿರೂಪಿತವಾಗಿದ್ದರೂ, ಅವುಗಳ ಲಕ್ಷಣವನ್ನು ಗಮನಿಸಿದಾಗ ಉಪನಿಷತ್ತು ಹಾಗೂ ಸಿದ್ಧಾಂತ ಶಿಖಾಮಣಿಗಳಲ್ಲಿನ ಚತುರ್ವಿಧ ಕಲ್ಪಭಸ್ಮದ ಹೆಸರುಗಳಲ್ಲಿ ಮಾತ್ರ ವ್ಯತ್ಯಾಸ ಕಂಡುಬರುತ್ತದೆಯೇ ಹೊರತು ಲಕ್ಷಣದಲ್ಲಲ್ಲ ಎಂಬುದು ಸ್ಪಷ್ಟವಾಗುತ್ತದೆ.

ವರ್ಣಾಶ್ರಮಭೇದದಿಂದ ಭಸ್ಮವಿಶೇಷವಿಧಿ : ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರೆಂಬ ನಾಲ್ಕು ವರ್ಣದವರು ಹಾಗೂ ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ ಮತ್ತು ಯತಿ ಎಂಬ ನಾಲ್ಕು ಆಶ್ರಮದವರು ಯಾವ ಬಗೆಯ ಭಸ್ಮವನ್ನು ಧರಿಸಬೇಕೆಂಬುದನ್ನು ಬೃಹಜ್ಜಾಬಾಲೋಪನಿಷತ್ತು ಹೀಗೆ ವಿವರಿಸಿದೆ :

ತ್ರಿವರ್ಣಿಕಾನಾಂ ಸರ್ವೇಷಾಮಗ್ನಿಹೋತ್ರಸಮುದ್ಭವಮ್।
ಇದಂ ಮುಖ್ಯಂ ಗೃಹಸ್ಥಾನಾಂ ವಿರಜಾನಲಜಂ ಭವೇತ್॥
ವಿರಜಾನಲಜಂ ಚೈವ ಧಾರ್ಯಂ ಪ್ರೋಕ್ತಂ ಮಹರ್ಷಿಭಿಃ।
ಔಪಾಸನಸಮುತ್ಪನ್ನಂ ಗೃಹಸ್ಥಾನಾಂ ವಿಶೇಷತಃ॥
ಸಮಿದಗ್ನಿಸಮುತ್ಪನ್ನಂ ಧಾರ್ಯಂ ವೈ ಬ್ರಹ್ಮಚಾರಿಣಾ।
ಶೂದ್ರಾಣಾಂ ಶ್ರೋತ್ರಿಯಾಗಾರಪಚನಾಗ್ನಿಸಮುದ್ಭವಮ್॥
ಅನ್ಯೇಷಾಮಪಿ ಸರ್ವೇಷಾಂ ಧಾರ್ಯಂ ದಾವಾನಲೋದ್ಭವಮ್।

ಯತೀನಾಂ ಜ್ಞಾನದಂ ಪ್ರೋಕ್ತಂ ವನಸ್ಥಾನಾಂ ವಿರಕ್ತಿದಮ್॥
ಅತಿವರ್ಣಾಶ್ರಮಾಣಾಂ ತು ಶ್ಮಶಾನಾಗ್ನಿಸಮುದ್ಭವಮ್।
ಸರ್ವೇಷಾಂ ದೇವಾಲಯಸ್ಥಂ ಭಸ್ಮ ಶಿವಾಗ್ನಿಜಂ ಶಿವಯೋಗಿನಾಮ್।
ಶಿವಾಲಯಸ್ಥಂ ತಲ್ಲಿಂಗಲಿಪ್ತಂ ವಾ ಮಂತ್ರಸಂಸ್ಕಾರದಗ್ಧಂ ವಾ॥[೫೬]

"(ಬ್ರಾಹ್ಮಣ, ಕ್ಷತ್ರಿಯ, ವೈಶ್ಯರೆಂಬ) ಮೂರು ವರ್ಣದವರಿಗೆಲ್ಲರಿಗೆ ಅಗ್ನಿಹೋತ್ರದಿಂದ ಉತ್ಪನ್ನವಾದ ಭಸ್ಮವು ಯೋಗ್ಯವಾದುದು. ವಿರಜಾಗ್ನಿಯಿಂದ ತಯಾರಿಸಿದ ಭಸ್ಮವು ಗೃಹಸ್ಥರಿಗೆ ಮುಖ್ಯವಾದುದೆಂದು ಮಹರ್ಷಿಗಳು ಹೇಳಿದ್ದಾರೆ. ಆದರೂ ಗೃಹಸ್ಥರು ಔಪಾಸನಾಗ್ನಿ (ಗೃಹಾಗ್ನಿ)ಯಿಂದ ತಯಾರಿಸಿದ ಭಸ್ಮವನ್ನು ವಿಶೇಷವಾಗಿ ಧರಿಸಬೇಕು. ಸಮಿತ್ತುಗಳಿಂದ ಉತ್ಪನ್ನವಾದ ಭಸ್ಮವನ್ನು ಬ್ರಹ್ಮಚಾರಿಗಳು ಧರಿಸಬೇಕು. ಶೂದ್ರರಿಗೆ ಶ್ರೋತ್ರಿಯರ (ವೇದಾಧ್ಯಯನ ಮಾಡಿದವರ) ಮನೆಯಲ್ಲಿ ಅಡಿಗೆ ಮಾಡಿದ ಭಸ್ಮವು ಯೋಗ್ಯವಾದುದು. ಉಳಿದವರೆಲ್ಲರೂ ದಾವಾನಲದಿಂದ (ಕಾಡಿನ ಬೆಂಕಿಯಿಂದ) ತಯಾರಿಸಿದ ಭಸ್ಮವನ್ನು ಧರಿಸಬೇಕು. ಭಸ್ಮಧಾರಣೆಯು ಯತಿಗಳಿಗೆ ಜ್ಞಾನದಾಯಕವಾದರೆ, ವಾನಪ್ರಸ್ಥರಿಗೆ ವಿರಕ್ತಿದಾಯಕವಾದುದು. ಅತಿವರ್ಣಾಶ್ರಮಿಗಳಿಗೆ (ಅವಧೂತರಿಗೆ) ಸ್ಮಶಾನಾಗ್ನಿಯಿಂದ ತಯಾರಿಸಿದ ಭಸ್ಮವು ವಿಹಿತವಾಗಿದೆ. ಎಲ್ಲ ಶಿವಯೋಗಿಗಳು ಶಿವಾಲಯದಲ್ಲಿನ ಶಿವಾಗ್ನಿಯಿಂದ ತಯಾರಿಸಿದ ಅಥವಾ ಶಿವಲಿಂಗಕ್ಕೆ ಅಂಟಿಕೊಂಡಿರುವ ಅಥವಾ ಮಂತ್ರ ಸಂಸ್ಕಾರದಿಂದ ದಗ್ಧವಾದ ಭಸ್ಮವನ್ನು ಧರಿಸಬೇಕು."

ಇಲ್ಲಿ ನಿರೂಪಿತವಾಗಿರುವ ವಿಷಯವು ಚಂದ್ರಜ್ಞಾನಾಗಮದಲ್ಲಿ ಶಬ್ದಶಃ ಪುನರುಕ್ತವಾಗಿದ್ದು, ಈ ಉಪನಿಷತ್ತೇ ಅದಕ್ಕೆ ಮೂಲ ಆಕರವಾಗಿದೆ ಎಂಬುದು ಸ್ಪಷ್ಟವಾಗುತ್ತದೆ.

ಭಸ್ಮಸ್ನಾನದ ಫಲ: ಶರೀರದ ಎಲ್ಲ ಭಾಗಗಳಿಗೆ ಭಸ್ಮೋದ್ಧೂಲನ ಮತ್ತು ಭಸ್ಮಸ್ನಾನ ಮಾಡುವುದರಿಂದ ಆಗುವ ಫಲವೇನು? ಎಂಬ ಜನಕ ಮಹಾರಾಜನ ಪ್ರಶ್ನೆಗೆ ಯಾಜ್ಞವಲ್ಕ್ಯ ಮಹರ್ಷಿಯು ಉತ್ತರಿಸಿರುವುದನ್ನು ಬೃಹಜ್ಜಾಬಾಲೋಪನಿಷತ್ತು ಹೀಗೆ ನಿರೂಪಿಸಿದೆ :

ಯಸ್ಯ ಕಸ್ಯಚಿಚ್ಛರೀರೇ ಯಾವಂತೋ ರೋಮಕೂಪಾಸ್ತಾವಂತಿ ಲಿಂಗಾನಿ ಭೂತ್ವಾ ತಿಷ್ಠಂತಿ ಬ್ರಾಹ್ಮಣೋ ವಾ ಕ್ಷತ್ರಿಯೋ ವಾ ವೈಶ್ಯೋ ವಾ ಶೂದ್ರೋ ವಾ ತದ್ಭಸ್ಮಧಾರಣಾದೇತಚ್ಛಬ್ದಸ್ಯ ರೂಪಂ ಯಸ್ಯಾಂ ತಸ್ಯಾಂ ಹ್ಯೇವಾವತಿಷ್ಠತೇ॥[೫೭]

"ಭಸ್ಮಸ್ನಾನ ಮಾಡುವುದರಿಂದ ಶರೀರದಲ್ಲಿರುವ ರೋಮಕೂಪಗಳೆಲ್ಲವೂ ಲಿಂಗಗಳಾಗುತ್ತವೆ. ಅಲ್ಲದೆ ಬ್ರಾಹ್ಮಣನಾಗಲಿ, ಕ್ಷತ್ರಿಯನಾಗಲಿ, ವೈಶ್ಯನಾಗಲಿ ಅಥವಾ ಶೂದ್ರನಾಗಲಿ ಭಸ್ಮಧಾರಣೆ ಮಾಡುವುದರಿಂದಲೇ ಭಸ್ಮರೂಪಿಗಳಾಗಿ ಪರಿಣಮಿಸುತ್ತಾರೆ."

ಭಸ್ಮಧಾರಣೆಯ ಫಲ: ಭಸ್ಮಧಾರಣೆಯಿಂದಲೇ ಮೋಕ್ಷವುಂಟಾಗುತ್ತದೆ, ಭಸ್ಮಧಾರಣೆಯಿಂದಲೇ ಶಿವಸಾಯುಜ್ಯ ಪ್ರಾಪ್ತವಾಗುತ್ತದೆ. ಭಸ್ಮಧಾರಣೆ ಮಾಡುವವನಿಗೆ ಪುನರ್ಜನ್ಮವಿಲ್ಲ. ಅದೇ ಭಸ್ಮಜ್ಯೋತಿ.

ತದ್ಭಸ್ಮಧಾರಣಾದೇವ ಮುಕ್ತಿರ್ಭವತಿ ತದ್ಭಸ್ಮಧಾರಣಾದೇವ ಶಿವಸಾಯುಜ್ಯಮವಾಪ್ನೋತಿ ನ ಸ ಪುನರಾವರ್ತತೇ ನ ಸ ಪುನರಾವರ್ತತೇ ಸ ಏಷ ಭಸ್ಮಜ್ಯೋತಿರಿತಿ ವೈ ಯಾಜ್ಞವಲ್ಕ್ಯಃ॥[೫೮]

ವಿಶೇಷ ಫಲ

ತೇನಾಧೀತಂ ಶ್ರುತಂ ತೇನ ತೇನ ಸರ್ವಮನುಷ್ಠಿತಮ್
ಯೇನ ವಿಪ್ರೇಣ ಶಿರಸಿ ತ್ರಿಪುಂಡ್ರಂ ಭಸ್ಮನಾ ಧೃತಮ್॥
ತ್ಯಕ್ತವರ್ಣಾಶ್ರಮಾಚಾರೋ ಲುಪ್ತಸರ್ವಕ್ರಿಯೋಽಪಿ ಯಃ।
ಸಕೃತ್ತಿರ್ಯಕ್ ತ್ರಿಪುಂಡ್ರಾಂಕಧಾರಣಾತ್ ಸೋಽಪಿ ಪೂಜ್ಯತೇ॥[೫೯]

"ಶಿರಸ್ಸಿನಲ್ಲಿ ತ್ರಿಪುಂಡ್ರಧಾರಣೆ ಮಾಡಿದ ವಿಪ್ರನು ಎಲ್ಲ ಶ್ರುತಿಗಳನ್ನು ಅಧ್ಯಯನ ಮಾಡಿದವನಾಗುತ್ತಾನೆ. ವರ್ಣಾಶ್ರಮದ ಆಚಾರಗಳನ್ನು ತ್ಯಜಿಸಿದವನೂ, ಎಲ್ಲ ಕರ್ಮಗಳಿಂದ ಲೋಪವಾದವನೂ ಸಹ ಒಮ್ಮೆ ತ್ರಿಪುಂಡ್ರಧಾರಣೆ ಮಾಡುವುದರಿಂದ ಅವನೂ ಸಹ ಪೂಜಿಸಲ್ಪಡುತ್ತಾನೆ."

ತ್ರಿಪುಂಡ್ರಂ ಭಸ್ಮನಾ ಕರೋತಿ ಯೋ ವಿದ್ವಾನ್ ಬ್ರಹ್ಮಚಾರೀ ಗೃಹೀ
ವಾನಪ್ರಸ್ಥೋ ಯತಿರ್ವಾ ಸ ಮಹಾಪಾತಕೋಪಪಾತಕೇಭ್ಯಃ ಪೂತೋ ಭವತಿ।
ಸ ಸರ್ವಾನ್ ವೇದಾನಧೀತೋ ಭವತಿ। ಸ ಸರ್ವಾನ್ ದೇವಾನ್ ಧ್ಯಾತೋ ಭವತಿ।
ಸ ಸರ್ವೇಷು ತೀರ್ಥೇಷು ಸ್ನಾತೋ ಭವತಿ। ಸ ಸಕಲರುದ್ರಮಂತ್ರಜಾಪೀ ಭವತಿ।
ನ ಸ ಪುನರಾವರ್ತತೇ ನ ಸ ಪುನರಾವರ್ತತೇ॥[೬೦]

"ಭಸ್ಮ ತ್ರಿಪುಂಡ್ರಧಾರಣೆಯನ್ನು ಮಾಡುವ ವಿದ್ವಾಂಸನು ಬ್ರಹ್ಮಚಾರಿಯಾಗಲಿ, ಗೃಹಸ್ಥನಾಗಲಿ, ವಾನಪ್ರಸ್ಥನಾಗಲಿ ಅಥವಾ ಯತಿಯಾಗಲಿ ಅವನು ಎಲ್ಲ ಮಹಾಪಾತಕಗಳಿಂದ- ಉಪಪಾತಕಗಳಿಂದ ಮುಕ್ತವಾಗಿ ಪವಿತ್ರನಾಗುತ್ತಾನೆ. ಅವನು ಎಲ್ಲ ವೇದಗಳನ್ನು ಅಧ್ಯಯನ ಮಾಡಿದವನಾಗುತ್ತಾನೆ. ಎಲ್ಲ ದೇವತೆಗಳನ್ನು ಧ್ಯಾನ ಮಾಡಿದವನಾಗುತ್ತಾನೆ. ಎಲ್ಲ ಪವಿತ್ರ ತೀರ್ಥಗಳಲ್ಲಿ ಸ್ನಾನ ಮಾಡಿದವನಾಗುತ್ತಾನೆ. ಎಲ್ಲ ರುದ್ರಮಂತ್ರಗಳನ್ನು ಜಪಿಸಿದವನಾಗುತ್ತಾನೆ. ಅಂಥವನಿಗೆ ಪುನರ್ಜನ್ಮವಿಲ್ಲ, ಪುನರ್ಜನ್ಮವಿಲ್ಲ." ಸಿದ್ಧಾಂತ ಶಿಖಾಮಣಿಯಲ್ಲಿ ಉಕ್ತವಾಗಿರುವ ಭಸ್ಮ ತ್ರಿಪುಂಡ್ರಧಾರಣೆಯ ಫಲದ ವಿಷಯಕ್ಕೆ ಪೂರ್ವೋಕ್ತ ಜಾಬಾಲೋಪನಿಷನ್ಮಂತ್ರವೇ ಮೂಲ ಆಕರವಾಗಿದೆ. ಆ ಶ್ಲೋಕವು ಹೀಗಿದೆ :

ಧಾರಣೀಯಂ ಸಮಸ್ತಾನಾಂ ಶೈವಾನಾಂ ಚ ವಿಶೇಷತಃ।
ನಾಸ್ತಿಕೋ ಭಿನ್ನಮರ್ಯಾದೋ ದುರಾಚಾರಪರಾಯಣಃ।
ಭಸ್ಮತ್ರಿಪುಂಡ್ರಧಾರೀ ಚೇನ್ಮುಚ್ಯತೇ ಸರ್ವಕಿಲ್ಬಿಷೈಃ॥[೬೧]

"ಸಮಸ್ತ ಶೈವರೂ ವಿಶೇಷವಾಗಿ ಭಸ್ಮ ತ್ರಿಪುಂಡ್ರಧಾರಣೆಯನ್ನು ಮಾಡಿಕೊಳ್ಳಬೇಕು. ನಾಸ್ತಿಕನಾಗಲಿ, ಜಾತಿಭ್ರಷ್ಟನಾಗಲಿ, ದುರಾಚಾರಿಯಾಗಲಿ ಭಸ್ಮತ್ರಿಪುಂಡ್ರವನ್ನು ಧರಿಸಿದ್ದೇ ಆದರೆ, ಅವರೆಲ್ಲರೂ ಸರ್ವಪಾಪಗಳಿಂದ ಮುಕ್ತರಾಗುತ್ತಾರೆ."

ತ್ರಿಪುಂಡ್ರಸ್ಯ ವಿಧಿರ್ಮಯಾ ವಕ್ತುಂ ನ ಶಕ್ಯಮಿತಿ ಸತ್ಯಮಿತಿ ಹೋವಾಚ। ಅಥ ಭಸ್ಮಚ್ಛನ್ನಃ ಸಂಸಾರಾನ್ಮುಚ್ಯತೇ। ಭಸ್ಮಶಯ್ಯಾಶಯಾನಸ್ತಚ್ಛಬ್ದಗೋಚರಃ ಶಿವಸಾಯುಜ್ಯಮವಾಪ್ನೋತಿ ನ ಸ ಪುನರಾವರ್ತತೇ ನ ಸ ಪುನರಾವರ್ತತೇ। ರುದ್ರಾಧ್ಯಾಯೀ ಸನ್ನಮೃತತ್ವಂ ಚ ಗಚ್ಛತಿ। ಸ ಏಷ ಭಸ್ಮಜ್ಯೋತಿಃ। ವಿಭೂತಿಧಾರಣಾದ್ ಬ್ರಹ್ಮೈಕತ್ವಂ ಚ ಗಚ್ಛತಿ। ವಿಭೂತಿ ಧಾರಣಾದೇವ ಸರ್ವೇಷು ತೀರ್ಥೇಷು ಸ್ನಾತೋ ಭವತಿ। ವಿಭೂತಿಧಾರಣಾದ್ ವಾರಾಣಸ್ಯಾಂ ಸ್ನಾನೇನ ಯತ್ ಫಲಮವಾಪ್ನೋತಿ ತತ್ ಫಲಮಶ್ನುತೇ। ಸ ಏಷ ಭಸ್ಮಜ್ಯೋತಿಃ। ಯಸ್ಯ ಕಸ್ಯಚಿಚ್ಛರೀರೇ ತ್ರಿಪುಂಡ್ರಸ್ಯ ಲಕ್ಷ್ಮ ವರ್ತತೇ ಪ್ರಥಮಾ ಪ್ರಜಾಪತಿರ್ದ್ವಿತೀಯಾ ವಿಷ್ಣುಸ್ತೃತೀಯಾ ಸದಾಶಿವ ಇತಿ ಸ ಏಷ ಭಸ್ಮಜ್ಯೋತಿಃ ಸ ಏಷ ಭಸ್ಮಜ್ಯೋತಿರಿತಿ॥[೬೨]

"ಪೈಪ್ಪಲಾದನು ಹೇಳಿದ ತ್ರಿಪುಂಡ್ರದ ವಿಧಿಯನ್ನು ನಾನು ಹೇಳಲು ಶಕ್ತನಲ್ಲ. ಸತ್ಯವೆಂದು ಹೇಳಿದ ಕಾಲಾಗ್ನಿರುದ್ರನು- ಭಸ್ಮವನ್ನು ಧರಿಸಿದವನು ಸಂಸಾರದಿಂದ ಮುಕ್ತನಾಗುವನು. ಭಸ್ಮಶಯ್ಯೆಯಲ್ಲಿ ಮಲಗಿದವನು ಆ ಶಬ್ದದ ವ್ಯಾಪ್ತಿಯಲ್ಲಿ ಬಂದು, ಭಸ್ಮ ನೆನಿಸಿಕೊಂಡು ಶಿವಸಾಯುಜ್ಯವನ್ನು ಹೊಂದುತ್ತಾನೆ, ಅವನು ಮತ್ತೆ ಹಿಂತಿರುಗಿ ಬರುವುದಿಲ್ಲ. ರುದ್ರಾಧ್ಯಾಯವನ್ನು ಪಠಿಸುವವನು ಅಮರನಾಗುತ್ತಾನೆ. ಅವನೇ ಭಸ್ಮಜ್ಯೋತಿ. ಭಸ್ಮವನ್ನು ಧರಿಸುವ ಮಾತ್ರದಿಂದ ಎಲ್ಲಾ ತೀರ್ಥಗಳಲ್ಲಿ ಸ್ನಾನಮಾಡಿದವನಾಗುವನು. ವಿಭೂತಿ ಧರಿಸುವುದರಿಂದ ಕಾಶಿಯಲ್ಲಿ ಸ್ನಾನಮಾಡಿದ ಫಲ ಯಾವುದಿದೆಯೋ ಆ ಫಲವನ್ನು ಹೊಂದುತ್ತಾನೆ. ಅವನೇ ಭಸ್ಮಜ್ಯೋತಿ. ಯಾರ ಶರೀರದಲ್ಲಿ ಭಸ್ಮತ್ರಿಪುಂಡ್ರದ ಗುರುತಿದೆಯೋ, ಅದರಲ್ಲಿ ಮೊದಲ ರೇಖೆ ಪ್ರಜಾಪತಿ, ಎರಡನೆಯದು ವಿಷ್ಣು ಮತ್ತು ಮೂರನೆಯದು ಸದಾಶಿವ. ಆದ್ದರಿಂದ ಅವನೇ ಭಸ್ಮಜ್ಯೋತಿಯು, ಅವನೇ ಭಸ್ಮಜ್ಯೋತಿಯು."

ಪೂರ್ವೋಕ್ತ ಬೃಹಜ್ಜಾಬಾಲೋಪನಿಷತ್, ಜಾಬಾಲೋಪನಿಷತ್‌ಗಳಲ್ಲಿ ನಿರೂಪಿತವಾಗಿರುವ ಭಸ್ಮಮಹಿಮೆಯ ವಿಷಯವು ಚಂದ್ರಜ್ಞಾನಾಗಮದಲ್ಲಿನ ಭಸ್ಮಮಹಿಮೆಗೆ ಮೂಲ ಸ್ಫೂರ್ತಿಯಾಗಿದೆ :

ಭಸ್ಮಜ್ಯೋತಿಃ ಸಮಾಮ್ನಾತಮವಶ್ಯಂ ತಸ್ಯ ಧಾರಣಾತ್।
ಸಂಸಾರಸಾಗರಂ ತೀರ್ತ್ವಾ ಕೈವಲ್ಯಫಲಮಶ್ನುತೇ॥
ಭಸ್ಮಸಂಧಾರಣಾದೇವ ಸರ್ವತೀರ್ಥಫಲಂ ಭವೇತ್।
ಭಸ್ಮಸಂಧಾರಣಾತ್ಸರ್ವಂ ಭಸ್ಮೀಭವತಿ ಕಿಲ್ಬಿಷಮ್॥
ಭಸ್ಮೇದಂ ಶಾಂಭವಂ ಜ್ಯೋತಿಸ್ತದ್ಧ್ಯಾನಾದ್ ಧ್ಯಾತ ಈಶ್ವರಃ।
ಭಸ್ಮಸಂದರ್ಶನಾದೇವ ಶಿವದರ್ಶನಮಶ್ನುತೇ॥
....
ಭೂವಿದ್ರಾವಣೇ ಪಾಪಸಂಹೃತೌ ಮುಕ್ತಿಸಾಧನೇ।
ನ ಭಸ್ಮನೋಽನ್ಯತ್ ಸದೃಶಮಿತ್ಯೇತಚ್ಛಿವಶಾಸನಮ್॥
ಭಸ್ಮನೋ ಮಹಿಮಾಽಗಣ್ಯಸ್ತಂ ವಕ್ತುಂ ಕೇನ ಶಕ್ಯತೇ।[೬೩]

"ಶಾಸ್ತ್ರಗಳಲ್ಲಿ ಭಸ್ಮವನ್ನು ಜ್ಯೋತಿರೂಪದಲ್ಲಿ ವರ್ಣಿಸಲಾಗಿದೆ. ಅದನ್ನು ಧರಿಸುವುದರಿಂದ ನಿಶ್ಚಯವಾಗಿ ಸಂಸಾರ ಸಾಗರವನ್ನು ದಾಟಿ ಕೈವಲ್ಯಫಲವನ್ನು ಹೊಂದುತ್ತಾನೆ. ಭಸ್ಮವನ್ನು ಧರಿಸುವ ಮಾತ್ರದಿಂದ ಎಲ್ಲಾ ತೀರ್ಥಗಳಲ್ಲಿ ಸ್ನಾನಮಾಡಿದ ಫಲವು ದೊರೆಯುತ್ತದೆ. ಭಸ್ಮವನ್ನು ಧರಿಸುವ ಮಾತ್ರದಿಂದ ಎಲ್ಲಾ ಪಾಪಗಳು ಭಸ್ಮವಾಗುತ್ತವೆ. ಭಸ್ಮವೆಂಬುದು ಶಂಭುವಿನ ಜ್ಯೋತಿ. ಅದನ್ನು ಧ್ಯಾನಮಾಡುವುದರಿಂದ ಈಶ್ವರನನ್ನು ಧ್ಯಾನಿಸಿದಂತಾಗುತ್ತದೆ. ಭಸ್ಮದ ದರ್ಶನ ಮಾತ್ರದಿಂದ ಶಿವನ ದರ್ಶನವನ್ನು ಮಾಡಿದಂತಾಗುತ್ತದೆ....... ಭೂತಗಳನ್ನು ಹೆದರಿಸಿ ಓಡಿಸುವುದರಲ್ಲಿ, ಪಾಪವನ್ನು ಪರಿಹರಿಸುವಲ್ಲಿ, ಮೋಕ್ಷವನ್ನು ಸಾಧಿಸಿಕೊಡುವಲ್ಲಿ ಭಸ್ಮಕ್ಕೆ ಸದೃಶವಾದುದು ಯಾವುದೂ ಇಲ್ಲ. ಇದು ಶಿವ ಶಾಸನ. ಭಸ್ಮದ ಮಹಿಮೆಯು ಗಣನೆಗೆ ನಿಲುಕಲಾರದು, ಅದನ್ನು ಯಾರು ತಾನೇ ಹೇಳಲು ಶಕ್ತರು?"

ರುದ್ರಾಕ್ಷ : ಅಷ್ಟಾವರಣಗಳ ಪೈಕಿ ರುದ್ರಾಕ್ಷವು ಐದನೆಯ ಆವರಣ. ರುದ್ರಾಕ್ಷವು ಒಂದು ವಿಶಿಷ್ಟಜಾತಿಯ ವೃಕ್ಷದ ಬೀಜ. ಉಪನಿಷತ್ತುಗಳಲ್ಲಿ ರುದ್ರಾಕ್ಷದ ಉತ್ಪತ್ತಿ, ಭೇದ, ಧಾರಣೆ ಮಾಡುವ ಸ್ಥಳ, ಮಹಿಮೆ, ಫಲ ಇತ್ಯಾದಿಗಳು ನಿರೂಪಿತವಾಗಿದ್ದು, ಇದೇ ನಂತರದ ಶಿವಾಗಮ, ಸಿದ್ಧಾಂತ ಶಿಖಾಮಣಿ ಮುಂತಾದ ಗ್ರಂಥಗಳಿಗೆ ಆಧಾರವಾಗಿದೆ. ಪ್ರಸ್ತುತ ಉಪನಿಷತ್ತುಗಳಲ್ಲಿ ನಿರೂಪಿತವಾಗಿರುವ ರುದ್ರಾಕ್ಷ ಸಂಬಂಧಿ ವಿಷಯಗಳನ್ನು ಪರಿಶೀಲಿಸೋಣ.

ರುದ್ರಾಕ್ಷದ ಉತ್ಪತ್ತಿ : ರುದ್ರಾಕ್ಷದ ಉತ್ಪತ್ತಿಯ ವಿಷಯವು ಬೃಹಜ್ಜಾಬಾಲೋಪನಿಷತ್, ರುದ್ರಾಕ್ಷಜಾಬಾಲೋಪನಿಷತ್ತುಗಳಲ್ಲಿ ಹೀಗೆ ನಿರೂಪಿತವಾಗಿದೆ:

ತ್ರಿಪುರವಧಾರ್ಥಮಹಂ ನಿಮೀಲಿತಾಕ್ಷೋಽಭವಮ್। ತೇಭ್ಯೋ ಜಲಬಿಂದವೋ ಭೂಮೌ ಪತಿತಾಸ್ತೇ ರುದ್ರಾಕ್ಷಾ ಜಾತಾಃ। ಸರ್ವಾನುಗ್ರಹಾರ್ಥಾಯ ತೇಷಾಂ ನಮೋಚ್ಚಾರಣಮಾತ್ರೇಣ ದಶಗೋಪ್ರದಾನಫಲಂ ದರ್ಶನಸ್ಪರ್ಶನಾಭ್ಯಾಂ ದ್ವಿಗುಣಫಲಮತ ಊರ್ಧ್ವಂ ವಕ್ತುಂ ನ ಶಕ್ನೋಮಿ॥

ತತ್ರೈತೇ ಶ್ಲೋಕಾ ಭವಂತಿ-

ಕಸ್ಮಿನ್ ಸ್ಥಿತಂ ತು ಕಿಂ ನಾಮ ಕಥಂ ವಾ ಧಾರ್ಯತೇ ನರೈಃ।
ಕತಿಭೇದಮುಖಾನ್ಯತ್ರ ಕೈರ್ಮಂತ್ರೈರ್ಧಾರ್ಯತೇ ಕಥಮ್॥
ದಿವ್ಯವರ್ಷಸಹಸ್ರಾಣಿ ಚಕ್ಷುರುನ್ಮೀಲಿತಂ ಮಯಾ।
ಭೂಮಾವಕ್ಷಿಪುಟಾಭ್ಯಾಂ ತು ಪತಿತಾ ಜಲಬಿಂದವಃ॥
ತತ್ರಾಶ್ರುಬಿಂದವೋ ಜಾತಾ ಮಹಾರುದ್ರಾಕ್ಷ ವೃಕ್ಷಕಾಃ।
ಸ್ಥಾವರತ್ವಮನುಪ್ರಾಪ್ಯ ಭಕ್ತಾನುಗ್ರಹಕಾರಣಾತ್॥[೬೪]

"ಭಗವಾನ್ ಕಾಲಾಗ್ನಿರುದ್ರನನ್ನು ಕುರಿತು ಭುಸುಂಡನು ರುದ್ರಾಕ್ಷಗಳೆಂದು ಹೆಸರು ಹೇಗೆ ಬಂದಿತು? ಮಾನವರು ಅವುಗಳನ್ನು ಹೇಗೆ ಧರಿಸಬೇಕು? ಎಷ್ಟು ಭೇದಗಳು ಹಾಗೂ ಮುಖಗಳಿವೆ? ಯಾವ ಮಂತ್ರಗಳಿಂದ ಧರಿಸಬೇಕೆಂದು ಪ್ರಶ್ನಿಸಲು, ಕಾಲಾಗ್ನಿರುದ್ರನು ಹೀಗೆ ಉತ್ತರಿಸುತ್ತಾನೆ : "ಹಿಂದೆ ತ್ರಿಪುರಸಂಹಾರಕ್ಕಾಗಿ ಭಗವಾನ್ ಶಿವನು ಕಣ್ಣುಗಳನ್ನು ದೇವತೆಗಳ ಸಹಸ್ರ ವರ್ಷಗಳ ಕಾಲ ತೆರೆದು ನೋಡಿದನು. ಅವನ ಎರಡೂ ಕಣ್ಣುಗಳಿಂದ ಕಣ್ಣೀರಿನ ಹನಿಗಳು ನೆಲದ ಮೇಲೆ ಬಿದ್ದವು. ಆ ಕಣ್ಣೀರಿನ ಹನಿಗಳೇ ಮಹಾರುದ್ರಾಕ್ಷ ವೃಕ್ಷಗಳಾಗಿ ಜನಿಸಿದವು. ಅವು ಭಕ್ತರ ಅನುಗ್ರಹಕ್ಕೋಸ್ಕರ ಸ್ಥಿರ ರೂಪವನ್ನು ಪಡೆದವು." ಇಲ್ಲಿ ನಿರೂಪಿತವಾಗಿರುವ ವಿಷಯವು ಶಬ್ದಶಃ ಯಥಾವತ್ತಾಗಿ ಚಂದ್ರಜ್ಞಾನಾಗಮ[೬೫]ದಲ್ಲಿ ಪುನರುಕ್ತವಾಗಿದ್ದು ಸಿದ್ಧಾಂತಶಿಖಾಮಣಿ[೬೬]ಯಲ್ಲಿಯೂ ಮುಂದುವರೆದಿದೆ. ಶ್ರೀ ಸಿದ್ಧಾಂತಶಿಖಾಮಣಿಯಲ್ಲಿನ "ರುದ್ರನೇತ್ರಸಮುತ್ಪನ್ನಾ ರುದ್ರಾಕ್ಷಾ ಲೋಕಪಾವನಾಃ" (೭.೪೮) ಎಂಬ ಉಕ್ತಿಯು ಬೃಹಜ್ಜಾಬಾಲೋಪನಿಷತ್ತಿನ "ರುದ್ರಸ್ಯ ನಯನಾದುತ್ಪನ್ನಾ ರುದ್ರಾಕ್ಷಾ ಇತಿ ಲೋಕೇ ಖ್ಯಾಯಂತೇ" (೭.೧೬) ಎಂಬ ಮಂತ್ರದ ಪುನರುಕ್ತಿಯೇ ಆಗಿದೆ.

ರುದ್ರಾಕ್ಷ ಭೇದಗಳು : ರುದ್ರಾಕ್ಷ ಭೇದಗಳನ್ನು ಕುರಿತು ರುದ್ರಾಕ್ಷಜಾಬಾಲೋಪನಿಷತ್ತು ಹೀಗೆ ವರ್ಣಿಸಿದೆ :

ಧಾತ್ರೀಫಲಪ್ರಮಾಣಂ ಯಚ್ಛ್ರೇಷ್ಠಮೇತದುದಾಹೃತಮ್॥
ಬದರೀಫಲಮಾತ್ರಂ ತು ಮಧ್ಯಮಂ ಪ್ರೋಚ್ಯತೇ ಬುಧೈಃ।
ಅಧಮಂ ಚಣಮಾತ್ರಂ ಸ್ಯಾತ್ ಪ್ರಕ್ರಿಯೈಷಾ ಮಯೋಚ್ಯತೇ॥[೬೭]

"ನೆಲ್ಲಿಕಾಯಿ ಗಾತ್ರದ ರುದ್ರಾಕ್ಷವು ಶ್ರೇಷ್ಠವೆಂದು ಹೇಳುತ್ತಾರೆ. ಬಾರೀಹಣ್ಣಿನ ಗಾತ್ರದ್ದು ಮಧ್ಯಮವೆಂದು ಜ್ಞಾನಿಗಳು ಹೇಳುತ್ತಾರೆ. ಕಡಲೆಕಾಳು ಗಾತ್ರದ್ದು ಅಧಮವೆಂದು ತಿಳಿಯಬೇಕು."

ರುದ್ರಾಕ್ಷಗಳ ಬ್ರಾಹ್ಮಣ-ಕ್ಷತ್ರಿಯಾದಿ ಜಾತಿಭೇದಗಳು: ಮೊದಲಿಗೆ ರುದ್ರಾಕ್ಷಗಳನ್ನು ಅವುಗಳ ಗಾತ್ರದ ಆಧಾರದ ಮೇಲೆ ಉತ್ತಮಾದಿಗಳೆಂದು ವರ್ಣಿಸಿದ ಉಪನಿಷತ್ತು, ಈಗ ಬ್ರಾಹ್ಮಣಾದಿ ಜಾತಿಯಾಧಾರದ ಮೇಲೆ ಭೇದಗಳನ್ನು ನಿರೂಪಿಸುತ್ತದೆ:

"ಶಿವನ ಆಜ್ಞಾನುಸಾರವಾಗಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬ ಜಾತಿಯ ರುದ್ರಾಕ್ಷ ಮರಗಳು ಭೂಮಿಯ ಮೇಲೆ ಉತ್ಪನ್ನವಾದವು. ಅವುಗಳಲ್ಲಿ ಅದೇ ಜಾತಿಯ ಶುಭ ರುದ್ರಾಕ್ಷಗಳು ಹುಟ್ಟುತ್ತವೆ. ಬಿಳಿಯ ರುದ್ರಾಕ್ಷಗಳು ಬ್ರಾಹ್ಮಣ, ಕೆಂಪು ಬಣ್ಣದವು ಕ್ಷತ್ರಿಯ, ಹಳದಿ ಬಣ್ಣದವು ವೈಶ್ಯ ಮತ್ತು ಕಪ್ಪು ಬಣ್ಣದವು ಶೂದ್ರ ಎಂದು ಹೇಳಲಾಗಿದೆ. ಬ್ರಾಹ್ಮಣನು ಬಿಳಿ ಬಣ್ಣದ ರುದ್ರಾಕ್ಷಗಳನ್ನು, ರಾಜನು ಕೆಂಪು ಬಣ್ಣದ ರುದ್ರಾಕ್ಷಗಳನ್ನು, ವೈಶ್ಯನು ಹಳದಿ ಬಣ್ಣದವುಗಳನ್ನು ಮತ್ತು ಶೂದ್ರನು ಬಿಳಿ ಬಣ್ಣದ ರುದ್ರಾಕ್ಷಗಳನ್ನು ಧರಿಸಬೇಕು."[೬೮]

ಗ್ರಾಹ್ಯ-ಅಗ್ರಾಹ್ಯ ರುದ್ರಾಕ್ಷಗಳು: ಧಾರಣೆಗೆ ಗ್ರಾಹ್ಯ-ಅಗ್ರಾಹ್ಯ ರುದ್ರಾಕ್ಷಗಳ ಬಗ್ಗೆ ರುದ್ರಾಕ್ಷಜಾಬಾಲೋಪನಿಷತ್ತಿನಲ್ಲಿ ಹೀಗೆ ನಿರೂಪಿಸಲಾಗಿದೆ :

ಸಮಾಃ ಸ್ನಿಗ್ಧಾ ದೃಢಾಃ ಸ್ಥೂಲಾಃ ಕಂಟಕೈಃ ಸಂಯುತಾಃ ಶುಭಾಃ।
ಕೃಮಿದಷ್ಟಂ ಛಿನ್ನಭಿನ್ನಂ ಕಂಟಕೈರ್ಹೀನಮೇವ ಚ॥
ವ್ರಣಯುಕ್ತಮಯುಕ್ತಂ ಚ ಷಡ್ ರುದ್ರಾಕ್ಷಾಣಿ ವರ್ಜಯೇತ್।[೬೯]

"ಸಮನಾದ, ಹೊಳಪುಳ್ಳ, ಗಟ್ಟಿಯಾದ, ದೊಡ್ಡದಾದ, ಮುಳ್ಳುಗಳಿಂದ ಕೂಡಿರುವ ರುದ್ರಾಕ್ಷಗಳು ಶುಭದಾಯಕವಾದವುಗಳು. ಹುಳುತಿಂದದ್ದು, ಚೂರುಚೂರಾಗಿರುವುದು, ಮುಳ್ಳುಗಳಿಲ್ಲದುದು, ವ್ರಣದಿಂದ ಕೂಡಿದುದು ಹಾಗೂ ದುಂಡಾಗಿಲ್ಲದಿರುವುದು -ಈ ಆರು ಬಗೆಯ ರುದ್ರಾಕ್ಷಗಳನ್ನು ತ್ಯಜಿಸಬೇಕು."

ರುದ್ರಾಕ್ಷಗಳ ಉತ್ತಮಾದಿ ಭೇದಗಳು: ಈಗಾಗಲೇ ವರ್ಣಿತವಾಗಿರುವಂತೆ ರುದ್ರಾಕ್ಷಗಳನ್ನು ಅವುಗಳ ಗಾತ್ರದ ಆಧಾರದ ಮೇಲೆ ಉತ್ತಮ-ಮಧ್ಯಮ-ಅಧಮವೆಂದು ನಿರೂಪಿಸಲಾಗಿದ್ದು, ಈಗ ಮತ್ತೊಂದು ಬಗೆಯಾಗಿ ಉತ್ತಮಾದಿ ಭೇದಗಳನ್ನು ರುದ್ರಾಕ್ಷಜಾಬಾಲೋಪನಿಷತ್ತು ಹೀಗೆ ನಿರೂಪಿಸುತ್ತದೆ :

ಸ್ವಯಮೇವಕೃತದ್ವಾರಂ ರುದ್ರಾಕ್ಷಂ ಸ್ಯಾದಿಹೋತ್ತಮಮ್॥
ಯತ್ತು ಪೌರುಷಯತ್ನೇನ ಕೃತಂ ತನ್ಮಧ್ಯಮಂ ಭವೇತ್।

....

ನಿಕಷೇ ಹೇಮರೇಖಾಭಾ ಯಸ್ಯ ರೇಖಾ ಪ್ರದೃಶ್ಯತೇ।
ತದಕ್ಷಮುತ್ತಮಂ ವಿದ್ಯಾತ್ ತದ್ಧಾರ್ಯಂ ಶಿವಪೂಜಕೈಃ॥[೨೦]

"ಸಹಜವಾದ ರಂಧ್ರವುಳ್ಳ ರುದ್ರಾಕ್ಷವು ಉತ್ತಮ, ಮಾನವರ ಪ್ರಯತ್ನದಿಂದ ಮಾಡಿದ ರಂಧ್ರವುಳ್ಳದ್ದು ಮಧ್ಯಮ.... ಒರೆಗಲ್ಲಿನ ಮೇಲೆ ಚಿನ್ನದ ರೇಖೆಯ ಕಾಂತಿಯಂತೆ ಯಾವ ರೇಖೆಯು ಕಾಣಿಸುತ್ತದೆಯೋ ಅದು ಉತ್ತಮವೆಂದು ತಿಳಿಯತಕ್ಕದ್ದು. ಅಂತಹ ರುದ್ರಾಕ್ಷವನ್ನು ಶಿವಪೂಜಕನು ಧರಿಸಬೇಕು."

ಚಂದ್ರಜ್ಞಾನಾಗಮದಲ್ಲಿ ಈ ಶ್ಲೋಕಗಳೆಲ್ಲವೂ ಯಥಾವತ್ತಾಗಿ ಪುನರುಕ್ತಿಯಾಗಿವೆ. ಆದರೆ ಸಿದ್ಧಾಂತ ಶಿಖಾಮಣಿಯು ಗಾತ್ರದ ಆಧಾರದ ಮೇಲೆ ಉತ್ತಮಾದಿ ಭೇದಗಳನ್ನು ಹೇಳುವುದಿಲ್ಲ. ಉಪನಿಷತ್ತು ಮತ್ತು ಆಗಮಗಳಂತೆ ಉತ್ತಮ-ಮಧ್ಯಮ-ಅಧಮವೆಂದು ರುದ್ರಾಕ್ಷಗಳ ತ್ರಿವಿಧ ಕುರಿತಂತೆ ಸಿದ್ಧಾಂತ ಶಿಖಾಮಣಿ ಏನನ್ನೂ ಹೇಳದೆ ಕೇವಲ ಶಿವಾಪೂಜಾನಿರತನು ಉತ್ತಮ ರುದ್ರಾಕ್ಷಗಳನ್ನೇ ಧರಿಸಬೇಕೆಂದು ಹೇಳುವಾಗ ಪೂರ್ವೋಕ್ತ ಉಪನಿಷತ್ತನ್ನು ಅನುಸರಿಸಿರುವುದು ಕಂಡುಬರುತ್ತದೆ. ಅದು ಹೀಗಿದೆ:

ಅಚ್ಛಿದ್ರಂ ಕನಕಪ್ರಖ್ಯಮನನ್ಯಧೃತಮುತ್ತಮಮ್।
ರುದ್ರಾಕ್ಷಂ ಧಾರಯೇತ್ ಪ್ರಾಜ್ಞಃ ಶಿವಪೂಜಾಪರಾಯಣಃ॥[೨೧]

"ಛಿದ್ರವಾಗದ, ಚಿನ್ನದ ರೇಖೆಯ ಕಾಂತಿಯಂತೆ ಕಂಗೊಳಿಸುವ, ಬೇರೆಯವರು ಧರಿಸದ ರುದ್ರಾಕ್ಷಗಳು ಉತ್ತಮವಾದವುಗಳು. ಶಿವಪೂಜಾನಿರತನಾದ ಪ್ರಾಜ್ಞನು ಇಂತಹ ರುದ್ರಾಕ್ಷಗಳನ್ನೇ ಧರಿಸಬೇಕು." ಸಿದ್ಧಾಂತ ಶಿಖಾಮಣಿಯ ಈ ಶ್ಲೋಕಕ್ಕೆ ಮೂಲ ರುದ್ರಾಕ್ಷಜಾಬಾಲೋಪನಿಷತ್ತಿನ ಈ ಶ್ಲೋಕ :

ನಿಕಷೇ ಹೇಮರೇಖಾಭಾ ಯಸ್ಯ ರೇಖಾ ಪ್ರದೃಶ್ಯತೇ॥
ತದಕ್ಷಮುತ್ತಮಂ ವಿದ್ಯಾತ್ ತದ್ಧಾರ್ಯಂ ಶಿವಪೂಜಕೈಃ।[೨೨]

ಹೀಗೆ ರುದ್ರಾಕ್ಷಗಳನ್ನು ಧರಿಸುವ ಸ್ಥಾನಗಳು ಮತ್ತು ಸಂಖ್ಯೆಗಳು,[೨೩] ಮಂತ್ರಪೂರ್ವಕವಾಗಿ ರುದ್ರಾಕ್ಷಧಾರಣ,[೨೪] ರುದ್ರಾಕ್ಷಗಳ ಮುಖಭೇದದಿಂದ ಫಲಭೇದ-[೨೫] ಈ ಎಲ್ಲ ವಿಷಯಗಳೂ ರುದ್ರಾಕ್ಷಜಾಬಾಲೋಪನಿಷತ್ತಿನಲ್ಲಿ ನಿರೂಪಿತವಾಗಿರುವ ವಿಷಯವನ್ನು ಯಥಾವತ್ತಾಗಿ ಚಂದ್ರಜ್ಞಾನಾಗಮವು ಸ್ವೀಕರಿಸಿದೆ.

ರುದ್ರಾಕ್ಷಧಾರಣೆ ಮಾಡುವ ಸ್ಥಾನ ಹಾಗೂ ಸಂಖ್ಯೆಯನ್ನು ಕುರಿತಂತೆ ಭಸ್ಮಜಾಬಾಲೋಪನಿಷತ್ತಿನಲ್ಲಿ- **"ಮೂರ್ಧ್ನಿ ಚತ್ವಾರಿಂಶತ್। ಶಿಖಾಯಾಮೇಕಂ ತ್ರಯಂ ವಾ। ಶ್ರೋತ್ರಯೋರ್ದ್ವಾದಶ। ಕಂಠೇ ದ್ವಾತ್ರಿಂಶತ್। ಬಾಹ್ವೋಃ ಷೋಡಶ ಷೋಡಶ। ದ್ವಾದಶ ದ್ವಾದಶ ಮಣಿಬಂಧಯೋಃ। ಷಟ್‌ಷಡಂಗುಷ್ಠಯೋಃ।"**[೨೬] ಎಂದು ನಿರೂಪಿಸಲಾಗಿದೆ. ಶ್ರೀ ಸಿದ್ಧಾಂತ ಶಿಖಾಮಣಿಯು ಈ ಎರಡೂ ಉಪನಿಷತ್ತುಗಳಲ್ಲಿ ನಿರೂಪಿತವಾಗಿರುವ ಅಂಶಗಳನ್ನೇ ಸ್ವೀಕರಿಸಿದ್ದು[೨೭] ಅದಕ್ಕೆ ಮೂಲವು ಉಪನಿಷತ್ತುಗಳೇ ಆಗಿವೆ. ಈ ಅಂಶವನ್ನು ಕೆಳಕಂಡ ಪಟ್ಟಿಯ ಆಧಾರದಿಂದ ತೌಲನಿಕವಾಗಿ ತೋರಿಸಲಾಗುವುದು.

ರುದ್ರಾಕ್ಷಧಾರಣೆ ಮಾಡುವ ಸ್ಥಾನ ಹಾಗೂ ಸಂಖ್ಯೆ

ಸ್ಥಾನ	ಭ.ಜಾ.ಉ.	ರು.ಜಾ.ಉ	ಚಂ.ಜ್ಞಾ.ಆ.	ಸಿ.ಶಿ.
ಶಿಖೆ	೧	೧	೧	೧
ಕಂಠ	೩೨	೩೨	೩೨	೩೨
ಮೂರ್ಧ್ನಿ	೪೦	೩೦	೩೦	೩೬
ಕಿವಿ	೬+೬	-	-	೬+೬
ಬಾಹು	೧೬+೧೬	೧೬+೧೬	೧೬+೧೬	೧೬+೧೬
ಮಣಿಬಂಧ	೧೨+೧೨	೧೨+೧೨	೧೨+೧೨	೧೨+೧೨
ಶಿರಸ್ಸು	-	೩೦೦	೩೦	೩

ಮಂತ್ರ : ವೀರಶೈವ ಅಷ್ಟಾವರಣಗಳಲ್ಲಿ ಮಂತ್ರವು ಆರನೆಯ ಆವರಣ. 'ನಮಃ ಶಿವಾಯ' ಎಂಬುದು ಪಂಚಾಕ್ಷರೀ ಮಂತ್ರವೆಂದು ಪ್ರಸಿದ್ಧವಾಗಿದ್ದರೆ ಅದೇ ಮಂತ್ರವೇ ಪ್ರಣವ ಅಥವಾ ಓಂಕಾರ ಸಹಿತವಾದರೆ ಷಡಕ್ಷರ ಮಂತ್ರವೆನಿಸುತ್ತದೆ. ವೀರಶೈವರಿಗೆ ಈ ಎರಡೂ ಮಂತ್ರಗಳು ಶ್ರೇಷ್ಠವಾಗಿದ್ದು 'ಮಂತ್ರರಾಜ' ಎಂದು ಕರೆಯಲ್ಪಟ್ಟಿದೆ. ಈ ಪಂಚಾಕ್ಷರೀ ಮಂತ್ರದ ಮೂಲವು ನಮಗೆ ವೇದಗಳಲ್ಲಿಯೇ ಕಂಡುಬರುತ್ತದೆ. ಯಜುರ್ವೇದದ ಎಂಟನೆಯ ಅನುವಾಕದ 'ನಮಃ ಶಿವಾಯ ಚ ಶಿವತರಾಯ ಚ' ಇತ್ಯಾದಿಯಾಗಿ ಆರಂಭವಾಗುವ ಮಂತ್ರವು ವೀರಶೈವರಿಗೆ ಪರಮ ಪಾವನವಾಗಿದೆ. ವೇದಗಳಲ್ಲಿ ಓಂಕಾರ ಮತ್ತು ಪ್ರಣವ ಶಬ್ದಗಳ ಲಕ್ಷಣವಾಗಲಿ, ಮಂತ್ರೋದ್ಧಾರ ಕ್ರಮವಾಗಲಿ ಕಂಡುಬರುವುದಿಲ್ಲ. ಆದರೆ ಉಪನಿಷತ್ತುಗಳಲ್ಲಿ ಈ ಅಂಶಗಳು ನಿರೂಪಿತವಾಗಿದ್ದು, ಶೈವಾಗಮೋತ್ತರ ಭಾಗಗಳಲ್ಲಿ ಪ್ರತಿಪಾದಿತವಾಗಿರುವ ಮಂತ್ರ ವಿಷಯಕ್ಕೆ ಮೂಲ ಆಕರಗಳಾಗಿವೆ. ಅದನ್ನು ಈಗ ಪ್ರಸ್ತುತಪಡಿಸಲಾಗುವುದು.

ಓಂಕಾರ ಶಬ್ದಾರ್ಥ : ಅಥರ್ವಶಿರ ಉಪನಿಷತ್ತು ಓಂಕಾರ ಶಬ್ದದ ಅರ್ಥವನ್ನು ಹೀಗೆ ನಿರೂಪಿಸಿದೆ- "**ಓಂಕಾರೋ ಯಸ್ಮಾದುಚ್ಚಾರ್ಯಮಾಣ ಏವ ಸರ್ವಂ ಶರೀರಂ ಊರ್ಧ್ವಮುನ್ನಾಮಯತಿ ತಸ್ಮಾದುಚ್ಯತ ಓಂಕಾರಃ।**"[೭೮] ತಾತ್ಪರ್ಯವೇನೆಂದರೆ "ಓಂಕಾರವನ್ನು ಉಚ್ಚಾರಮಾಡುವುದರಿಂದಲೇ ಯಾರ ಸಮಸ್ತ ಶರೀರವು ಮೇಲಕ್ಕೆ ಒಯ್ಯಲ್ಪಟ್ಟಂತೆ ಆಗುತ್ತದೆಯೋ ಆದ್ದರಿಂದ ಅದು ಓಂಕಾರವೆಂದು ಕರೆಯಲ್ಪಟ್ಟಿದೆ."

ಪ್ರಣವ ಶಬ್ದಾರ್ಥ : ಪ್ರಣವೋ ಯಸ್ಮಾದುಚ್ಚಾರ್ಯಮಾಣ ಏವ ಋಗ್‌ಯಜುಸ್ಸಾಮಾಥರ್ವಾಂಗಿರಸಶ್ಚ ಯಜ್ಞೇ ಬ್ರಹ್ಮಾ ಚ ಬ್ರಾಹ್ಮಣೇಭ್ಯಃ ಪ್ರಣಾಮಯತಿ ತಸ್ಮಾದುಚ್ಯತೇ ಪ್ರಣವಃ॥[೭೯]

"ಪ್ರಣವವನ್ನು ಉಚ್ಚಾರಮಾಡುವುದರಿಂದಲೇ ಸರ್ವತ್ರ ಸಮಾನಭಾವನೆಯೂ, ಋಗಾದಿ ಚತುರ್ವೇದಿಗಳಿಗೂ, ಯಜ್ಞದೀಕ್ಷಿತನಾದ ಬ್ರಹ್ಮನೆಂಬ ವೈದಿಕನಿಗೂ, ದ್ವಿಜರಿಗೂ ನಮಸ್ಕಾರ ಮಾಡಿದಂತಾಗುತ್ತದೆ. ಆದ್ದರಿಂದ ಅದು 'ಪ್ರಣವ' ಎನಿಸಿದೆ."

ಶಿವಷಡಕ್ಷರ-ಅಷ್ಟಾಕ್ಷರ ಮಂತ್ರೋದ್ಧಾರ ಕ್ರಮ : ಓಮಿತ್ಯಗ್ರೇ ವ್ಯಾಹರೇತ್। ನಮ ಇತಿ ಪಶ್ಚಾತ್। ತತಃ ಶಿವಾಯೇತ್ಯಕ್ಷರತ್ರಯಮ್। ಓಮಿತ್ಯಗ್ರೇ ವ್ಯಾಹರೇತ್। ನಮ ಇತಿ ಪಶ್ಚಾತ್। ತತೋ ಮಹಾದೇವಾಯೇತಿ ಪಂಚಾಕ್ಷರಾಣಿ।[೮೦]

" 'ಓಂ' ಕಾರವನ್ನು ಮೊದಲು ಜಪಿಸಿ, ನಂತರ 'ನಮಃ' ಶಬ್ದವನ್ನು ಜಪಿಸಬೇಕು. ತದನಂತರ 'ಶಿವಾಯ' ಎಂಬ ಮೂರು ಅಕ್ಷರಗಳನ್ನು ಉಚ್ಚರಿಸಬೇಕು. (ಇದು ಅಷ್ಟಾಕ್ಷರ ಮಂತ್ರೋದ್ಧಾರದ ಕ್ರಮ)."

ಇಲ್ಲಿ ಪ್ರಸ್ತುತಪಡಿಸಲಾಗಿರುವ ವಿಷಯಗಳಲ್ಲಿ ಷಡಕ್ಷರ ಮಂತ್ರೋದ್ಧಾರ ಕ್ರಮದ ನಿರೂಪಣೆ ವೀರಶೈವ ಸಿದ್ಧಾಂತಕ್ಕೆ ಮೂಲ ಪ್ರೇರಣೆಯಾಗಿದೆ. ಇದು ಶೈವಾಗಮೋತ್ತರ ಭಾಗಗಳಲ್ಲಿ ಪುನರುಕ್ತವಾಗಿದೆ:

ನಮಃ ಪದಂ ವದೇತ್ ಪೂರ್ವಂ ಯಾಂತಂ ಶಿವಪದಂ ತತಃ।
ಪ್ರಣವೇನ ಸಮಾಯುಕ್ತಂ ಷಡಕ್ಷರಮಿತಿ ಸ್ಮೃತಮ್॥[೮೧]

ಆದೌ ನಮಃ ಪ್ರಯೋಕ್ತವ್ಯಂ ಶಿವಾಯೇತಿ ತತಃ ಪರಮ್॥[೮೨]

....

ಇದಂ ಪ್ರಣವಪೂರ್ವಾ ತು ಷಡಕ್ಷರಮಿತಿ ಕಥ್ಯತೇ॥[೮೩]

ಸಿದ್ಧಾಂತ ಶಿಖಾಮಣಿಯಲ್ಲಿಯೂ ಸಹ ಇದೇ ಅಭಿಪ್ರಾಯವು ಪ್ರತಿಧ್ವನಿಸಿದ್ದು ಅದಕ್ಕೆ ಪೂರ್ವೋಕ್ತ ಶೈವೋಪನಿಷತ್ತುಗಳೇ ಆಧಾರವಾಗಿವೆ.

ನಮಃ ಶಬ್ದಂ ವದೇತ್ ಪೂರ್ವಂ ಶಿವಾಯೇತಿ ತತಃ ಪರಂ।
ಮಂತ್ರೋ ಪಂಚಾಕ್ಷರೋ ಹ್ಯೇಷಃ ಸರ್ವಶ್ರುತಿಶಿರೋಗತಃ॥[೮೪]

ಪಾದೋದಕ : ಪಾದೋದಕವು ಅಷ್ಟಾವರಣಗಳಲ್ಲಿ ಏಳನೆಯ ಆವರಣ, ಗುರು-ಲಿಂಗ-ಜಂಗಮದ ಪಾದ ತೊಳೆದ ಪವಿತ್ರ ಜಲವೇ ಪಾದೋದಕ. ಇದಕ್ಕೆ ತಾತ್ವಿಕವಾದ ಮತ್ತೊಂದು ಅರ್ಥವುಂಟು. ಅದೇನೆಂದರೆ "ವಿಜ್ಞಾನ ಮಾನಂದಂ ಬ್ರಹ್ಮ."[೮೫] ಇದು ಶ್ರುತಿಸಿದ್ಧವಾದ ಪಾದೋದಕದ ವಾಚ್ಯಾರ್ಥ. ಆನಂದ-ಜ್ಞಾನಗಳ ಸಮರಸವೇ ಪಾದೋದಕ. ಗುರು-ಶಿಷ್ಯ ಸೂಚಕವಾದ ಜ್ಞಾನ-ಆನಂದಗಳ ಐಕ್ಯರೂಪ ಸಂಪತ್ತಿನಿಂದ ಗುರು-ಶಿಷ್ಯರಲ್ಲಿ ಸಾಮರಸ್ಯ ಉಂಟಾಗುವುದೇ ಜ್ಞಾನಪಾದೋದಕ. ಈ ಅಂಶವು ಸಿದ್ಧಾಂತ ಶಿಖಾಮಣಿಯಲ್ಲಿ ಹೀಗೆ ನಿರೂಪಿತವಾಗಿದೆ:

ಸದೈಕ್ಯಸಂಪದಾನಂದೋ ಯೋಽಸೌಜ್ಞಾನಗುರುರ್ಮತಃ।
ತತ್ಸಾಮರಸ್ಯಂ ಶಿಷ್ಯಸ್ಯ ಜ್ಞಾನಪಾದೋದಕಂ ವಿದುಃ॥[೮೫(ಅ)]

'ಸಿದ್ಧಾಂತಶಿಖಾಮಣಿ'ಯ ಈ ಲಕ್ಷಣಕ್ಕೆ ಬೃಹದಾರಣ್ಯಕೋಪನಿಷತ್ತಿನ ಪೂರ್ವೋಕ್ತ ಮಂತ್ರವೇ ಮೂಲ ಎಂಬುದು ಸ್ಪಷ್ಟ.[೮೬]

ಪ್ರಸಾದ : ಅಷ್ಟಾವರಣಗಳಲ್ಲಿ ಪ್ರಸಾದವು ಎಂಟನೆಯ ಆವರಣ. ಗುರು-ಲಿಂಗ-ಜಂಗಮರಿಗೆ ಅರ್ಪಣೆ ಮಾಡಿದ್ದನ್ನು ಅನುಗ್ರಹಪೂರ್ವಕವಾಗಿ ಸ್ವೀಕರಿಸುವುದೇ ಪ್ರಸಾದ. ಅದರ ಮೂಲವು ಜಾಬಾಲಿಕೀಶ್ರುತಿಯಲ್ಲಿ ಹೀಗೆ ನಿರೂಪಿತವಾಗಿದೆ- **"ರುದ್ರೇಣಾತ್ತಮಶ್ನಂತಿ ರುದ್ರೇಣ ಪೀತಂ ಪಿಬಂತಿ ರುದ್ರೇಣಾಘ್ರಾತಂ ಜಿಘ್ರಂತಿ।"**[೮೭] ರುದ್ರನು ಭುಂಜಿಸಿದ ಅನ್ನವನ್ನು ಉಣ್ಣಬೇಕು; ರುದ್ರನು ಕುಡಿದ ನೀರನ್ನು ಕುಡಿಯಬೇಕು; ರುದ್ರನು ಆಘ್ರಾಣಿಸಿದ್ದನ್ನು ಆಘ್ರಾಣಿಸಬೇಕು. ಅಂದರೆ ಭಕ್ತನು ಅನಿಂದಿತವಾದ ಆಹಾರಾದಿಗಳನ್ನು ಇಷ್ಟಲಿಂಗಕ್ಕೆ ಸಮರ್ಪಿಸಿ ತಾನು ಸ್ವೀಕರಿಸಬೇಕೆಂದರ್ಥ. ಈಶಾವಾಸ್ಯೋಪನಿಷತ್ತಿನ "ತೇನ ತ್ಯಕ್ತೇನ ಭುಂಜೀಥಾ..."[೮೮] ಎಂಬ ವಾಕ್ಯವೂ ಸಹ ಇಷ್ಟಲಿಂಗಕ್ಕೆ ನೈವೇದ್ಯ ಮಾಡಿದ ಯಾವುದೇ ವಸ್ತುವನ್ನು ಸ್ವೀಕರಿಸಬೇಕೆಂಬ ವೀರಶೈವ ಸಿದ್ಧಾಂತಕ್ಕೆ ಮೂಲವಾಗಿದೆ.[೮೯]

ಸಮಸ್ತ ಪ್ರಾಣಿಗಳು ತಮ್ಮ ದೇಹದಲ್ಲಿರುವ ತತ್ತ್ವಗಳ ಶುದ್ಧಿಗಾಗಿ ಸತ್ಯಶುದ್ಧಕಾಯಕದಿಂದ ಅನ್ನವನ್ನು ಸಂಪಾದಿಸಬೇಕು. ಹಾಗೆ ಸಂಪಾದಿಸಿದ ಅನ್ನವನ್ನು ಶಿವಾರ್ಪಣೆ ಮಾಡಿದಾಗ ಪ್ರಸಾದವಾಗಿ ಪರಿಣಮಿಸುತ್ತದೆ. ಅಂತಹ ಪ್ರಸಾದ ಸ್ವೀಕಾರದಿಂದ ಆ ತತ್ತ್ವಗಳೆಲ್ಲ ಪರಿಶುದ್ಧವಾಗಿ, ಮನಸ್ಸು ನಿರ್ಮಲವಾಗಿ ಶಿವೋಪಾಸನೆಯೆಡೆಗೆ ಪ್ರವರ್ತಿಸುತ್ತದೆ. ಅದನ್ನು ಛಾಂದೋಗ್ಯೋಪನಿಷತ್ ಹೀಗೆ ನಿರೂಪಿಸಿದೆ:

ಆಹಾರಶುದ್ಧೌ ಸತ್ತ್ವಶುದ್ಧಿಃ ಸತ್ತ್ವಶುದ್ಧೌ ಧ್ರುವಾ ಸ್ಮೃತಿಃ।
ಸ್ಮೃತಿರ್ಲಾಭೇ ಸರ್ವಗ್ರಂಥೀನಾಂ ವಿಪ್ರಮೋಕ್ಷಃ॥[೯]

“ಆಹಾರ ಶುದ್ಧಿಯಿಂದ ಪ್ರಾಣಿಗಳ ದೇಹದಲ್ಲಿನ ತತ್ತ್ವಗಳೆಲ್ಲ ಶುದ್ಧಿಯಾಗುತ್ತವೆ. ತತ್ತ್ವಗಳ ಶುದ್ಧಿಯಿಂದ ಗುರು ಹಾಗೂ ಶ್ರುತಿಗಳ ಉಪದೇಶವು ಸ್ಮೃತಿಗೆ ಬರುತ್ತದೆ. ಆ ಸ್ಮೃತಿಯು ದೃಢವಾಗಲು ವಾಸನಾಮಯ ಗ್ರಂಥಿಗಳೆಲ್ಲವೂ ನಷ್ಟವಾಗುತ್ತವೆ.” ಈ ಶ್ರುತಿವಾಕ್ಯದ ಪ್ರಭಾವವು ಸಿದ್ಧಾಂತ ಶಿಖಾಮಣಿಯಲ್ಲಿ ಹೀಗೆ ಪುನರುಕ್ತವಾಗಿದೆ :

ಅನ್ನಶುದ್ಧ್ಯಾ ಹಿ ಸರ್ವೇಷಾಂ ತತ್ತ್ವಶುದ್ಧಿರುದಾಹೃತಾ।
ವಿಶುದ್ಧಮನ್ನಜಾತಂ ಹಿ ಯಚ್ಛಿವಾಯ ಸಮರ್ಪಿತಮ್॥[೧೦]

ಅಲ್ಲದೆ ‘ಮನಸ್ಸಿನ ಪ್ರಸನ್ನತೆಯೇ ಪ್ರಸಾದ’ ಎಂಬ ಸಿದ್ಧಾಂತ ಶಿಖಾಮಣಿಯು ನಿರೂಪಿಸಿರುವ ಪ್ರಸಾದ ಲಕ್ಷಣಕ್ಕೂ ಪೂರ್ವೋಕ್ತ ಉಪನಿಷನ್ಮಂತ್ರವೇ ಮೂಲ. ಸಿದ್ಧಾಂತ ಶಿಖಾಮಣಿಯು ಪ್ರತಿಪಾದಿಸಿರುವ ಪ್ರಸಾದ ಲಕ್ಷಣ ಹೀಗಿದೆ:

ನೈರ್ಮಲ್ಯಂ ಮನಸೋ ಲಿಂಗಂ ಪ್ರಸಾದ ಇತಿ ಕಥ್ಯತೇ।
ಶಿವಸ್ಯ ಲಿಂಗರೂಪಸ್ಯ ಪ್ರಸಾದಾದೇವ ಸಿದ್ಧ್ಯತಿ॥[೧೧]

ಅಷ್ಟಾವರಣಗಳ ವಿಷಯಗಳು ಮಾತ್ರವಲ್ಲದೆ ಇತರೆ ವಿಷಯಗಳಿಗೆ ಸಂಬಂಧಿಸಿದಂತೆ ವೀರಶೈವದ ಮೂಲ ಆಕರಗಳನ್ನು ಉಪನಿಷತ್ತುಗಳಿಂದ ಸ್ವೀಕರಿಸಲಾಗಿದೆ. ಉದಾಹರಣೆಗೆ,

೧. ನ ಸೂರ್ಯೋ ಭಾತಿ ತತ್ರೇಂದುರ್ನ ವಿದ್ಯುನ್ನ ಚ ಪಾವಕಃ।
ನ ತಾರಕಾ ಮಹಾಲಿಂಗೇ ದ್ಯೋತಮಾನೇ ಪರಾತ್ಮನಿ॥[೧೨]

ಎಂಬ ಸಿದ್ಧಾಂತ ಶಿಖಾಮಣಿಯಲ್ಲಿನ ಲಿಂಗನಿಜಸ್ಥಲದ ಈ ಶ್ಲೋಕಕ್ಕೆ ಮುಂಡಕೋಪನಿಷತ್ತಿನ ಈ ಶ್ಲೋಕವು ಮೂಲವಾಗಿದೆ:

ನ ತತ್ರ ಸೂರ್ಯೋ ಭಾತಿ ನ ಚಂದ್ರತಾರಕಮ್
ನೇಮಾ ವಿದ್ಯುತೋ ಭಾಂತಿ ಕುತೋಽಯಮಗ್ನಿಃ।
ತಮೇವ ಭಾಂತಮನುಭಾತಿ ಸರ್ವಂ
ತಸ್ಯ ಭಾಸಾ ಸರ್ವಮಿದಂ ವಿಭಾತಿ॥[೧೩]

೨. ಊರ್ಧ್ವಂ ಪ್ರಾಣಮುನ್ನಯತ್ಯಪಾನಂ ಪ್ರತ್ಯಗಚ್ಛತಿ।
ಮಧ್ಯೇ ವಾಮನಮಾಸೀನಂ ವಿಶ್ವೇದೇವಾ ಉಪಾಸತೇ॥[೧೪]

ಇಲ್ಲಿ ನಿರೂಪಿತವಾಗಿರುವ ಕಠೋಪನಿಷತ್ತಿನ ಮಂತ್ರದಂತೆ ಊರ್ಧ್ವಮುಖವಾಗಿ ಸಂಚರಿಸುವ ಪ್ರಾಣವನ್ನು ಅಧೋಮುಖವಾಗಿ ಚಲಿಸುವ ಅಪಾನದಿಂದ ಆಧಾರಾದಿ ಚಕ್ರಗಳಲ್ಲಿ ತಡೆದಾಗ ಅವೆರಡರ ಸಮಾಯೋಗದಿಂದ ದಿವ್ಯಜ್ಯೋತಿಯೊಂದು ಉದಯವಾಗುತ್ತದೆ. ಈ ಅಭಿಪ್ರಾಯವು ಬೇರೆ ಶಬ್ದಗಳಲ್ಲಿ ಸಿದ್ಧಾಂತ ಶಿಖಾಮಣಿಯಲ್ಲಿ ಬಂದಿದೆಯಷ್ಟೆ. ಅದು ಹೀಗಿದೆ:

ಪ್ರಾಣಾಪಾನಸಮಾಘಾತಾತ್ ಕಂದಮಧ್ಯಾದ್ಯದುತ್ಥಿತಮ್।
ಪ್ರಾಣಲಿಂಗಂ ತದಾಖ್ಯಾತಂ ಪ್ರಾಣಾಪಾನನಿರೋಧಿಭಿಃ॥[೧೫]

“ಪ್ರಾಣ-ಅಪಾನಗಳ ಸಂಯೋಜನೆಯಿಂದ ನಾಭಿಕಂದದಲ್ಲಿ ಉದಯಿಸುವ ಜ್ಯೋತಿಯನ್ನು ಪ್ರಾಣಲಿಂಗವೆಂದು ಹೇಳಲಾಗಿದೆ.”

೩. ಆತ್ಮಾನಮರಣಿಂ ಕೃತ್ವಾ ಪ್ರಣವಂ ಚೋತ್ತರಾರಣಿಮ್।
ಧ್ಯಾನನಿರ್ಮಥನಾಭ್ಯಾಸಾತ್ ಪಾಪಂ ದಹತಿ ಪಂಡಿತಃ॥[೧೬]

"ಆತ್ಮ-ಅನಾತ್ಮಗಳ ವಿವೇಕಶೀಲನಾದ ಶಿವಜ್ಞಾನಿಯು ಆತ್ಮವನ್ನು (ಮನಸ್ಸನ್ನು) ಯಾಗಾಗ್ನಿಯನ್ನು ಹೊತ್ತಿಸುವ ಕೆಳಗಿನ ಅರಣಿ (ಕಟ್ಟಿಗೆ)ಯನ್ನಾಗಿ ಮಾಡಿಕೊಂಡು, ಪ್ರಣವವನ್ನು ಮೇಲಿನ ಅರಣಿ (ಕಟ್ಟಿಗೆ)ಯನ್ನಾಗಿಸಿ, ಪುರಶ್ಚರಣಾತ್ಮಕವಾದ ಧ್ಯಾನಮಂಥನದ ಅಭ್ಯಾಸದಿಂದ ಪಾಪವನ್ನು ದಹನ ಮಾಡುತ್ತಾನೆ."

ಪುರಶ್ಚರಣಾತ್ಮಕ ಪ್ರಣವ ಪಂಚಾಕ್ಷರಾಭ್ಯಾಸದಿಂದ ಶಿವಯೋಗಿಯಲ್ಲಿ ಜ್ಞಾನಾಗ್ನಿಯು ಉತ್ಪನ್ನವಾಗುತ್ತದೆ. ಅದರ ಪರಿಣಾಮದಿಂದ ಅವಸ ಸಾಂಸಾರಿಕ ಪಾಶಗಳೆಲ್ಲ ಕ್ಷಣಾರ್ಧದಲ್ಲಿ ನಾಶವಾಗುತ್ತವೆ. ಶ್ರೀ ಸಿದ್ಧಾಂತ ಶಿಖಾಮಣಿಯ ಶಿವಯೋಗ ಸಮಾಧಿಸ್ಥಲದ-

ಆತ್ಮಾರಣಿಸಮುತ್ಥೇನ ಪ್ರಮೋದಮಥನಾತ್ಸುಧೀಃ।
ಜ್ಞಾನಾಗ್ನಿನಾ ದಹೇತ್ ಸರ್ವಂ ಪಾಶಜಾಲಂ ಜಗನ್ಮಯಮ್॥[೯೭]

ಎಂಬ ಶ್ಲೋಕಕ್ಕೆ ಪೂರ್ವೋಕ್ತ ಉಪನಿಷನ್ಮಂತ್ರವೇ ಮೂಲವಾಗಿದೆ. ಅಂತೆಯೇ ಅಲ್ಲಮಪ್ರಭುಗಳ ಈ ವಚನಕ್ಕೂ ಆ ಮಂತ್ರವೇ ಮೂಲ ಆಕರ :

ಅಂಗದಲ್ಲಿ ಮಾಡುವ ಸುಖ ಲಿಂಗಕ್ಕದು ಭೂಷಣವಾಯಿತ್ತು
ಕಾಡುಗಿಚ್ಚಿನ ಕೈಯಲಿ ಕರಡವ ಕೊಯಿಸುವಂತೆ
ಹಿಂದೆ ಮೆದೆ ಇಲ್ಲ, ಮುಂದೆ ಹುಲ್ಲಿಲ್ಲ
ಅಂಗಲಿಂಗವೆಂಬನ್ನಕ್ಕರ ಫಲದಾಯಕ.
ಲಿಂಗೈಕ್ಯವದು ಬೇರೆ ಗುಹೇಶ್ವರಾ.[೯೮]

ಲಿಂಗೈಕ್ಯನ ಅಂಗಕ್ಕೂ ಲಿಂಗಕ್ಕೂ ಭೇದವಿಲ್ಲವೆಂದು ತಿಳಿದು ಲಿಂಗಾಂಗ ಸಂಬಂಧಿಯಾದ ಶಿವಜ್ಞಾನಿಯ ಸುಖಗಳೆಲ್ಲವೂ ಲಿಂಗಾರ್ಪಿತವಾಗುತ್ತವೆ. ಆ ಅರ್ಪಣೆಯಿಂದ ಶಿವಜ್ಞಾನಾಗ್ನಿಯು ಉದಯವಾಗಿ ಆ ಅಗ್ನಿಯಲ್ಲಿ ಜೀವಾತ್ಮನನ್ನು ಆವರಿಸಿರುವ ಮಲ ಮಾಯಾದಿ ಕರ್ಮಗಳೆಲ್ಲ ನಾಶವಾಗುತ್ತವೆ.

೪. **ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ ಪೂರ್ಣಮುದಚ್ಯತೇ।**
ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೇ॥[೯೯]

ಪರಮಾತ್ಮನು ಪರಿಪೂರ್ಣನಾಗಿದ್ದು, ಅವನ ನಾಮರೂಪಾತ್ಮಕವಾದ ಈ ಜಗತ್ತು ಸಹ ಪರಿಪೂರ್ಣವೇ ಆಗಿದೆ. ಏಕೆಂದರೆ ಪೂರ್ಣದಿಂದ ಪೂರ್ಣವೇ ಪ್ರಕಟವಾಗಬಲ್ಲುದು. ಪೂರ್ಣವಿಶ್ವದಲ್ಲಿ ತುಂಬಿರುವ ಪೂರ್ಣ ಪರಮಾತ್ಮನನ್ನು ಸ್ವೀಕರಿಸಿದರೆ ಅರ್ಥಾತ್ ಪರಮಾತ್ಮನಲ್ಲಿಯೇ ಮನಸ್ಸನ್ನು ಕೇಂದ್ರೀಕರಿಸಿದರೆ ಪರಮಾತ್ಮನು ಪೂರ್ಣನಾಗಿಯೇ ಉಳಿಯುತ್ತಾನೆ. ಈ ಶಾಂತಿಮಂತ್ರದ ಪ್ರಕಾರ ಪರಮಾತ್ಮ ಮತ್ತು ಈ ಪ್ರಪಂಚ ಪರಸ್ಪರ ಆಧಾರ-ಆಧೇಯದಿಂದಿರುವುದು ಸ್ಪಷ್ಟವಾಗುತ್ತದೆ. ಅದನ್ನು ಸಿದ್ಧಾಂತ ಶಿಖಾಮಣಿಯು ಏಕಭಾಜನಸ್ಥಲದಲ್ಲಿ ಹೀಗೆ ನಿರೂಪಿಸಿದೆ :

ಶಿವೇ ವಿಶ್ವಮಿದಂ ಸರ್ವಂ ಶಿವಃ ಸರ್ವತ್ರ ಭಾಸತೇ।
ಆಧಾರಾಧೇಯಭಾವೇನ ಶಿವಸ್ಯ ಜಗತಃ ಸ್ಥಿತಿಃ॥[೧೦೦]

"ಶಿವನಲ್ಲಿ ಸಮಸ್ತ ಪ್ರಪಂಚವೂ, ಸಮಸ್ತ ಪ್ರಪಂಚದಲ್ಲಿ ಶಿವನೂ ತೋರುತ್ತಿರುವನು. ಶಿವನ ಮತ್ತು ಪ್ರಪಂಚದ ಸ್ಥಿತಿಯು ಆಧಾರ-ಆಧೇಯಭಾವದ್ದು. ಶಿವನು ಆಧಾರನಾಗಿದ್ದರೆ, ಪ್ರಪಂಚವು ಆಧೇಯವಾಗಿರುತ್ತದೆ." ಬೀಜವೃಕ್ಷ ನ್ಯಾಯದಂತೆ ಬೀಜವು ವೃಕ್ಷಕ್ಕೆ ಆಧಾರ, ವೃಕ್ಷವು ಬೀಜಕ್ಕೆ ಆಧೇಯ. ಆದ್ದರಿಂದ ಬೀಜ-ವೃಕ್ಷಗಳು ಪರಸ್ಪರ ಭಿನ್ನವಲ್ಲ. ಹಾಗೆಯೇ ವಿಶ್ವವು ಪರಮಾತ್ಮನಿಗೆ ಆಧೇಯವಾದರೂ, ತನಗೆ ಆಧಾರವಾದ ಪರಮಾತ್ಮನಿಗಿಂತ ಭಿನ್ನವಲ್ಲ. ಅಂತೆಯೇ ಶರಣನು ತನ್ನ ಮನಸ್ಸನ್ನು

ಭಗವಂತನಲ್ಲಿ ಸ್ಥಿರಗೊಳಿಸಿದರೆ ತಾನು ಪೂರ್ಣ ಶಿವನಾಗಿಯೇ ಉಳಿಯುತ್ತಾನೆ. ಇದು ಐಕ್ಯಸ್ಥಲದ ಸಿದ್ಧಿ. ಇಂತಹ ವೀರಶೈವ ಸಿದ್ಧಾಂತಕ್ಕೆ ಪೂರ್ವೋಕ್ತ ಈಶಾವಾಸ್ಯೋಪನಿಷತ್ತಿನ ಶಾಂತಿಮಂತ್ರವೇ ಮೂಲಆಕರವಾಗಿದೆ.

ಜೀವನೊಬ್ಬನೇ: ವೀರಶೈವ ಸಿದ್ಧಾಂತದ ಪ್ರಕಾರ ಭಗವಂತನು ಇಷ್ಟಲಿಂಗರೂಪಿ ಪರಶಿವನೊಬ್ಬನೆ ಆಗಿದ್ದಾನೆ. ಇದರ ಮೂಲವು ಉಪನಿಷತ್ತುಗಳಲ್ಲಿ ಕಂಡುಬರುತ್ತದೆ. ಕೆಲವು ಉಪನಿಷತ್ತುಗಳಲ್ಲಿ ಹಲವು ದೇವತೆಗಳನ್ನು ಕುರಿತ ಪ್ರಾರ್ಥನೆ ಇದ್ದರೂ ಪರಾತ್ಪರವಾದ ಆ ವಸ್ತುವು ಒಂದೇ ಎಂದು ಒಪ್ಪಿಕೊಂಡಿವೆ. ವೀರಶೈವದಲ್ಲಿಯೂ ಪರಾತ್ಪರ ವಸ್ತುವನ್ನು ಇಷ್ಟಲಿಂಗರೂಪಿ ಪರಶಿವನೆಂದು ವರ್ಣಿಸಲಾಗಿದೆ. ಇದಕ್ಕೆ ಮೂಲ ಆಕರವು ಈ ಉಪನಿಷದ್ವಾಕ್ಯಗಳಲ್ಲಿದೆ :

ಯ ಏಕೋ ಜಾಲವಾನೀಶತ ಈಶನೀಭಿಃ ಸರ್ವಾಗ್ಂ ಲೋಕಾನೀಶತ ಈಶನೀಭಿಃ।
ಯ ಏವೈಕ ಉದ್ಭವೇ ಸಂಭವೇ ಚ ಯ ಏತದ್ವಿದುರಮೃತಾಸ್ತೇ ಭವಂತಿ
ಏಕೋ ಹಿ ರುದ್ರೋ ನ ದ್ವಿತೀಯಾಯ ತಸ್ಥುರ್ಯಃ ಇಮಾನ್ ಲೋಕಾನೀಶತ ಈಶನೀಭಿಃ॥[೧೦೧]
ವಿಶ್ವಸ್ಯೈಕಂ ಪರಿವೇಷ್ಟಿತಾರಂ ಜ್ಞಾತ್ವಾ ದೇವಂ ಮುಚ್ಯತೇ ಸರ್ವಪಾಶೈಃ। [೧೦೨]
ಯಸ್ತೂರ್ಣನಾಭ ಇವ ತಂತುಭಿಃ ಪ್ರಧಾನಜೈಃ ಸ್ವಭಾವತಃ ದೇವ ಏಕಃ।[೧೦೩]
....
ಏಕೋ ದೇವಃ ಸರ್ವಭೂತೇಷು ಗೂಢಃ..................................[೧೦೪]

"ಎಲ್ಲ ಲೋಕಗಳನ್ನು ಕಾಪಾಡುವಂತಹ ಒಬ್ಬನೇ ಆದ ಪರಮಾತ್ಮನನ್ನು ತಿಳಿಯುವವರು ಅಮರರಾಗುತ್ತಾರೆ. ಸಮಸ್ತ ಪ್ರಪಂಚವನ್ನು ಸುತ್ತುಹಾಕಿರುವ ಪರಮಾತ್ಮನೊಬ್ಬನನ್ನು ತಿಳಿದರೆ ಎಲ್ಲ ಪಾಪಗಳಿಂದ ಮುಕ್ತನಾಗುತ್ತಾನೆ. ಜೇಡರ ಹುಳುವು ತನ್ನ ಪ್ರಧಾನ ತಂತುಗಳಿಂದ ಎಲ್ಲ ಕಡೆಗೂ ಸುತ್ತುಹಾಕುವಂತೆ ಒಬ್ಬನೇ ಒಬ್ಬ ದೇವನು ಎಲ್ಲ ವಸ್ತುಗಳನ್ನು ವ್ಯಾಪಿಸಿಕೊಂಡಿದ್ದಾನೆ. ಒಬ್ಬನೇ ದೇವನು ಎಲ್ಲ ಪ್ರಾಣಿಗಳಲ್ಲಿ ಗೂಢವಾಗಿದ್ದಾನೆ......."

ಯದೇಕಮವ್ಯಕ್ತಮನಂತರೂಪಂ ವಿಶ್ವಂ ಪುರಾಣಂ ತಮಸಃ ಪರಸ್ತಾತ್''[೧೦೫]

"ಅವ್ಯಕ್ತ, ಅನಂತರೂಪ, ಪ್ರಾಚೀನ, ತಮೋಗುಣಾತೀತನಾದ ಭಗವಂತನು ಒಬ್ಬನೆ." ಈ ರೀತಿಯಾಗಿ ವೀರಶೈವ ಧರ್ಮದ ಏಕದೇವೋಪಾಸನೆಯ ಮೂಲ ಆಕರಗಳು ಉಪನಿಷತ್ತುಗಳೇ ಆಗಿವೆ.

ವೀರಶೈವದ ತತ್ತ್ವವಿಚಾರಗಳು : ಇತರ ದರ್ಶನಗಳಂತೆ ವೀರಶೈವ ದರ್ಶನವೂ ತನ್ನದೇ ಆದ ತತ್ತ್ವವಿಚಾರಗಳನ್ನು ಹೊಂದಿದೆ. ಅವುಗಳೆಂದರೆ ಪತಿ, ಪಶು, ಪಾಶ, ಜಗತ್ತು ಮತ್ತು ಮೋಕ್ಷ. ವೀರಶೈವದ ಈ ತತ್ತ್ವವಿಚಾರಗಳ ಮೂಲವು ನಮಗೆ ಉಪನಿಷತ್ತುಗಳಲ್ಲಿಯೇ ಕಂಡುಬರುತ್ತದೆ. ಅವುಗಳನ್ನು ಈಗ ಪರಿಶೀಲಿಸೋಣ.

ವೀರಶೈವ ಸಿದ್ಧಾಂತದ ರೀತ್ಯಾ 'ಪತಿ' ಎಂದರೆ ವೇದಾಂತಿಗಳು ಬ್ರಹ್ಮ ಎಂದು ಕರೆಯುವ ಸಾಕ್ಷಾತ್ ಪರಶಿವನೇ ಆಗಿದ್ದಾನೆ. ಆ ವಿಷಯವನ್ನು ಸಿದ್ಧಾಂತ ಶಿಖಾಮಣಿಯು ಹೀಗೆ ನಿರೂಪಿಸಿದೆ :

ಬ್ರಹ್ಮೇತಿ ವ್ಯಪದೇಶಸ್ಯ ವಿಷಯಂ ಯಂ ಪ್ರಚಕ್ಷತೇ।
ವೇದಾಂತಿನೋ ಜಗನ್ಮೂಲಂ ತನ್ನಮಾಮಿ ಪರಂ ಶಿವಮ್॥[೧೦೬]

ಪರಶಿವಬ್ರಹ್ಮನ ಸಗುಣ ಸ್ವರೂಪವು ಸೃಷ್ಟಿಗೆ ಮೊದಲಿದ್ದ ನಿರ್ಗುಣ ಸ್ವರೂಪದಷ್ಟೆ ಸತ್ಯವಾದುದು. ಅಂತಹ ಪರಶಿವಬ್ರಹ್ಮನು ಸತ್, ಚಿತ್ ಮತ್ತು ಆನಂದ ಸ್ವರೂಪನು. ಇಂತಹ ಬ್ರಹ್ಮನ ಪರಿಕಲ್ಪನೆಯು ಉಪನಿಷತ್ತುಗಳಲ್ಲಿ ಸ್ಪಷ್ಟವಾಗಿ ನಿರೂಪಿತವಾಗಿದೆಯಲ್ಲದೆ ಪರಶಿವಬ್ರಹ್ಮನ ಶಕ್ತಿವಿಶಿಷ್ಟತ್ವ ಪರಿಕಲ್ಪನೆಯೂ ಪ್ರತಿಪಾದಿತವಾಗಿದೆ. ಈ ಅಭಿಪ್ರಾಯವು ಮೊಟ್ಟಮೊದಲಿಗೆ ಋಗ್ವೇದದ ಈ ಮಂತ್ರದಲ್ಲಿ ಕಂಡುಬರುತ್ತದೆ :

ನ ಮೃತ್ಯುರಾಸೀದಮೃತಂ ನ ತರ್ಹಿ
ನ ರಾತ್ರ್ಯಾ ಅಹ್ನ ಆಸೀತ್ ಪ್ರತೇಕಃ।
ಆನೀದವಾತಂ ಸ್ವಧಯಾ ತದೇಕಂ
ತಸ್ಮಾದ್ಧಾನ್ಯನ್ನ ಪರಃ ಕಿಂಚನಾ ಸ॥[೧೦೭]

ಆಗ ಮೃತ್ಯುವಾಗಲಿ, ಅಮೃತವಾಗಲಿ ಇರಲಿಲ್ಲ. ಹಗಲು-ರಾತ್ರಿಗಳ (ಸೂರ್ಯ-ಚಂದ್ರರ) ಗುರುತುಗಳಿರಲಿಲ್ಲ. ಅದು ಒಂದೇ (ಏಕಂ) ತನ್ನ ಶಕ್ತಿಯೊಂದಿಗೆ (ಸ್ವಧಾ) ಉಸಿರಾಡುತ್ತಿತ್ತು. ಅದಲ್ಲದೆ ಮತ್ತೊಂದು ಇರಲಿಲ್ಲ. ಈ 'ಸ್ವಧಾ' ಎಂಬುದು 'ಶಕ್ತಿ'ಯ ಬೇರೊಂದು ಹೆಸರಾಗಿದ್ದು, ಪರಶಿವನ ಅಂತರ್ಜಾತ ಶಕ್ತಿಯಾಗಿದೆ. ಈ ಅಭಿಪ್ರಾಯವನ್ನು ಈ ಉಪನಿಷನ್ಮಂತ್ರದಿಂದ ದೃಢಪಡಿಸಬಹುದಾಗಿದೆ :

ಯದಾ ತಮಸ್ತನ್ನ ದಿವಾ ನ ರಾತ್ರಿಃ
ನ ಸತ್ ನ ಚಾಸತ್ ಶಿವ ಏವ ಕೇವಲಃ।
ತದಕ್ಷರಂ ತತ್ಸವಿತುರ್ವರೇಣ್ಯಂ
ಪ್ರಜ್ಞಾ ಚ ತಸ್ಮಾತ್ ಪ್ರಸೃತಾ ಪುರಾಣೀ॥[೧೦೮]

"ಯಾವಾಗ ಅಲ್ಲಿ ರಾತ್ರಿಯಾಗಿತ್ತೋ ಆಗ ಅಲ್ಲಿ ಹಗಲಾಗಲಿ-ರಾತ್ರಿಯಾಗಲಿ, ಸತ್-ಅಸತ್‌ಗಳು ಇರದೆ ಕೇವಲ ಶಿವನೊಬ್ಬನೆ ಇದ್ದನು. ಅವನೇ ಸವಿತೃವಿನಿಂದ ಗೌರವಿಸಲ್ಪಡುವ ನಿರ್ವಿಕಾರ ಪರಶಿವನು. ಅನಾದಿ ಪ್ರಜ್ಞೆಯು ಅವನಿಂದ ಹೊರಹೊಮ್ಮಿತು."

ಅನಾದಿ ಸಂಸಿದ್ಧವಾದ ಪ್ರಜ್ಞಾ ಚಿಚ್ಛಕ್ತಿಯು ಆ ಪರಶಿವಬ್ರಹ್ಮನಿಂದ ಪ್ರಸೃತಾಕ್ರಿಯಾದಿ ಅನಂತರೂಪದಿಂದ ಪ್ರಸೃತವಾಯಿತೆಂದು ಈ ಮಂತ್ರವು ಬೋಧಿಸಿದೆ. "ಮಾಯಾಂ ತು ಪ್ರಕೃತಿಂ ವಿದ್ಯಾನ್ಮಾಯಿನಂ ತು ಮಹೇಶ್ವರಂ"[೧೦೯] ಎಂಬ ಮಂತ್ರವೂ ಸಹ ಪರಮಾತ್ಮನು ಶಕ್ತಿವಿಶಿಷ್ಟನಾಗಿರುವನೆಂದು ಬೋಧಿಸುತ್ತಿದೆ. "ಮಂ ಶಿವಂ ಅಯತಿ ಸ್ವಭಾವತಃ ಪ್ರಾಪ್ನೋತೀತಿ ಮಾಯಾ" ಎಂದು ವಿಗ್ರಹ ಮಾಡಿರುವುದರಿಂದ ಈ ಮಾಯೆಯು ವಿಮರ್ಶಶಕ್ತಿರೂಪ ಮಾಯೆಯಾಗಿರುತ್ತದೆ. ಈ ಮಂತ್ರದ ಅಭಿಪ್ರಾಯವನ್ನು ಸಿದ್ಧಾಗಮವು-

ಮಂ ಶಿವಂ ಪರಮಂ ಬ್ರಹ್ಮ ಪ್ರಾಪ್ನೋತೀತಿ ಸ್ವಭಾವತಃ।
ಮಾಯೇತಿ ಪ್ರೋಚ್ಯತೇ ಲೋಕೇ ಬ್ರಹ್ಮನಿಷ್ಠಾ ಸನಾತನೀ॥

ಎಂಬ ಶ್ಲೋಕದಿಂದ ವ್ಯಕ್ತಪಡಿಸಿದೆ. ಯಜುರ್ವೇದದ ತೈತ್ತಿರೀಯಸಂಹಿತೆಯು-

ಆಖುಸ್ತೇ ರುದ್ರಪಶುಸ್ತಂ ಜುಷಸ್ವೈಷ ತೇ ರುದ್ರಭಾಗಃ ಸಹ
ಸ್ವಸ್ರಾಂಬಿಕಯಾ ತು ಜುಷಸ್ವ॥[೧೧೦]

ಎಂಬ ಮಂತ್ರದಲ್ಲಿ ಶಕ್ತಿಯ ನಿತ್ಯತ್ವವನ್ನು ಪ್ರತಿಪಾದಿಸುತ್ತಿದ್ದು, 'ಸ್ವಸ್ರಾ ಅಂಬಿಕಯಾ' ಎಂಬ ಪದಗಳಲ್ಲಿ ಪರಮಾತ್ಮನಲ್ಲಿ ಶಕ್ತಿಯು ಸ್ವಾಭಾವಿಕವಾದುದೆಂದು ನಿರೂಪಿಸಿದೆ. ಇವುಗಳಲ್ಲದೆ "ನಮಃ ಸೋಮಾಯ ಚ ರುದ್ರಾಯ ಚ"[೧೧೧] ಎಂಬ ಶ್ರೀರುದ್ರ ಮಂತ್ರವೂ ಸಹ ಪರಮಾತ್ಮನು ಉಮಾರೂಪಶಕ್ತಿಯುಕ್ತನಾಗಿರುವನೆಂದು ವರ್ಣಿಸುತ್ತಿದೆ. ಇದೇ ಅಭಿಪ್ರಾಯವನ್ನು ಕೈವಲ್ಯೋಪನಿಷತ್ತು "ಉಮಾ ಸಹಾಯಂ ಪರಮೇಶ್ವರಂ ಪ್ರಭುಂ"[೧೧೨] ಎಂಬ ಮಂತ್ರದಿಂದ ಸಮರ್ಥಿಸಿದೆ. ಈ ಎಲ್ಲ ವೇದೋಪನಿಷತ್ತುಗಳ ಅಭಿಪ್ರಾಯವು ಸಿದ್ಧಾಂತ ಶಿಖಾಮಣಿ ನಿರೂಪಿತ ಪರಮಾತ್ಮನು ಶಕ್ತಿವಿಶಿಷ್ಟನು ಎಂಬುದಕ್ಕೆ ಮೂಲ ಆಕರಗಳಾಗಿವೆ:

ಯಥಾ ಚಂದ್ರೇ ಸ್ಥಿರಾ ಜ್ಯೋತ್ಸ್ನಾ ವಿಶ್ವವಸ್ತು ಪ್ರಕಾಶಿನೀ।
ತಥಾ ಶಕ್ತಿರ್ವಿಮರ್ಶಾಖ್ಯಾ ಪ್ರಕಾಶೇ ಬ್ರಹ್ಮಣಿ ಸ್ಥಿರಾ॥[೧೧೩]

"ಸಮಸ್ತ ವಸ್ತುಗಳನ್ನು ಪ್ರಕಾಶಪಡಿಸುವ ಚಂದ್ರಿಕೆಯು ಚಂದ್ರನಲ್ಲಿ ಹೇಗೆ ಸ್ಥಿರವಾಗಿರುವುದೋ ಹಾಗೆಯೇ ವಿಮರ್ಶವೆಂಬ ಶಕ್ತಿಯು ಪ್ರಕಾಶಸ್ವರೂಪ ಪರಬ್ರಹ್ಮನಲ್ಲಿ ಸ್ಥಿರವಾಗಿರುವುದು."

ಪರಶಿವನ 'ವಿಮರ್ಶಾಶಕ್ತಿ'ಯೇ 'ಪ್ರಜ್ಞಾ' ಎಂದು ಕರೆಯಲ್ಪಟ್ಟಿದೆ. ಈ ವಿಮರ್ಶಾಶಕ್ತಿಯು ಇಚ್ಛಾ, ಜ್ಞಾನ ಮತ್ತು ಕ್ರಿಯೆ ಎಂಬ ಮೂರು ರೂಪಗಳನ್ನು ಧರಿಸಿ, ಪರಶಿವನು ಪ್ರಪಂಚದ ರೂಪದಲ್ಲಿ ಪ್ರಕಟವಾಗುವಂತೆ ಮಾಡಿದೆ.

ವೀರಶೈವ ಸಿದ್ಧಾಂತದ ಪ್ರಕಾರ ಪೂರ್ವೋಕ್ತ ಪರಶಿವಬ್ರಹ್ಮನೇ 'ಪತಿ' ಎನಿಸಿದ್ದಾನೆ. ಅಲ್ಲದೆ ಪರಮಾತ್ಮನೇ ತನ್ನ ಜ್ಞಾನರೂಪ ಮಾಯೆಯಿಂದ ಮೋಹಿತನಾಗಿ ಸ್ಥೂಲಶರೀರಧಾರಿಯಾಗಿದ್ದಾನೆ. ಪರಶಿವನ ಅನಾದ್ಯವಿದ್ಯೆಯ ಸಂಬಂಧದಿಂದ ಹೊರಹೊಮ್ಮಿದ ಜೀವನು ಪರಶಿವನ ಅಂಶವೇ ಆಗಿದ್ದಾನೆ.[೧೧೪] ಅದನ್ನು ಸಿದ್ಧಾಂತ ಶಿಖಾಮಣಿಯು ಹೀಗೆ ನಿರೂಪಿಸಿದೆ:

ಅನಾದ್ಯವಿದ್ಯಾಸಂಬಂಧಾತ್ತದಂಶೋ ಜೀವನಾಮಕಃ।
ದೇವತಿರ್ಯಙ್ಮನುಷ್ಯಾದಿ ಜಾತಿಭೇದೇ ವ್ಯವಸ್ಥಿತಃ॥
ಮಾಯೀ ಮಾಹೇಶ್ವರಸ್ತೇಷಾಂ ಪ್ರೇರಕೋ ಹೃದಿ ಸಂಸ್ಥಿತಃ॥[೧೧೫]

"ತನ್ನಲ್ಲಿ ನಿತ್ಯ ಸಂಬಂಧದಿಂದಿದ್ದು ವಿಮರ್ಶಶಕ್ತಿಯಲ್ಲಿ ಅಡಕವಾಗಿರುವ ಅನಾದಿ ಮಾಯೆಯ ಸಂಬಂಧದಿಂದ ಆ ಪರಶಿವನ ಅಂಶವು 'ಜೀವ' ಎನಿಸಿಕೊಳ್ಳುತ್ತದೆ. ಆ ಜೀವನು ದೇವ, ಮನುಷ್ಯ, ಪಶು, ಪಕ್ಷಿ ಇತ್ಯಾದಿ ಭೇದಗಳಿಂದ ಕೂಡಿದ ಪ್ರಾಣಿವರ್ಗದಲ್ಲಿ ವಾಸಿಸುವನು. ಆ ಪರಶಿವನು ಮಾಯಾಶಕ್ತಿ (ವಿಮರ್ಶಶಕ್ತಿ)ಯಿಂದೊಡಗೂಡಿ ಪ್ರೇರಕನಾಗಿ ಸಮಸ್ತ ಪ್ರಾಣಿಗಳ ಹೃದಯದಲ್ಲಿ ವಾಸಿಸುವನು."

ಜೀವನು ಶಿವಾಂಶರೂಪನಾಗಿರುವನೆಂಬ ವೀರಶೈವ ಸಿದ್ಧಾಂತದ ಮೂಲವು ಬ್ರಹ್ಮಸೂತ್ರದ- "ಅಂಶೋ ನಾನಾವ್ಯಪದೇಶಾತ್" ಎಂಬ ಸೂತ್ರ ಹಾಗೂ ಮುಂಡಕೋಪನಿಷತ್ತಿನ ಈ ಮಂತ್ರದಲ್ಲಿರುವುದು ಕಂಡುಬರುತ್ತದೆ:

ಯಥಾ ಸುದೀಪ್ತಾತ್ಪಾವಕಾದ್ವಿಸ್ಫುಲಿಂಗಾಃ ಸಹಸ್ರಶಃ ಪ್ರಭವಂತೇ ಸರೂಪಾಃ।
ತಥಾಽಕ್ಷರಾದ್ವಿವಿಧಾಃ ಸೋಮ್ಯಭಾವಾಃ ಪ್ರಜಾಯಂತೇ ತತ್ರ ಚೈವಾಪಿಯಂತಿ॥[೧೧೬]

"ಅಗ್ನಿಯಿಂದ ಅದರ ಅಂಶರೂಪಗಳಾದ ಅಗ್ನಿಕಿಡಿಗಳು ಹೇಗೆ ಆವಿರ್ಭವಿಸುವವೋ, ಹಾಗೆಯೇ ಪರಬ್ರಹ್ಮನಿಂದ ತದಂಶಭೂತರಾದ ಜೀವರು ಆವಿರ್ಭವಿಸಿ ಅಲ್ಲಿಯೇ ಲಯವನ್ನು ಹೊಂದುತ್ತಾರೆ."

ಈಗಾಗಲೇ ಪ್ರಸ್ತುತಪಡಿಸಿರುವಂತೆ ವೀರಶೈವ ಸಿದ್ಧಾಂತದ ಪ್ರಕಾರ ಜೀವನು ಪಶು, ಪರಮಾತ್ಮನು ಪತಿ. ಈ ಪಶು-ಪತಿ ತತ್ತ್ವವು ಜಾಬಾಲೋಪನಿಷತ್ತಿನಲ್ಲಿ ಹೀಗೆ ನಿರೂಪಿತವಾಗಿದೆ :

ಪಶುಪತಿರಹಂಕಾರಾವಿಷ್ಟಃ ಸಂಸಾರೀ ಜೀವಃ। ಸ ಏವ ಪಶುಃ। ಸರ್ವಜ್ಞಃ ಪಂಚಕೃತ್ಯಸಂಪನ್ನಃ ಸರ್ವೇಶ್ವರ ಈಶಃ ಪಶುಪತಿಃ॥...ಜೀವಾಃ ಪಶವ ಉಕ್ತಾಃ। ತತ್ಪತಿತ್ವಾತ್ ಪಶುಪತಿಃ॥ ಕಥಂ ಜೀವಾಃ ಪಶವ ಇತಿ ತತ್ಪತಿರಿತಿ॥ ಯಥಾ ತೃಣಾಶಿನೋ ವಿವೇಕಹೀನಾಃ ಪರಪ್ರೇಷ್ಯಾಃ ಕೃಷ್ಯಾದಿಕರ್ಮಸು ನಿಯುಕ್ತಾಃ ಸಕಲದುಃಖಸಹಾಃ ಸ್ವಸ್ವಾಮಿಬಧ್ಯಮಾನಾ ಗವಾದಯಃ ಪಶವಃ। ಯಥಾ ತತ್ ಸ್ವಾಮಿನ ಇವ ಸರ್ವಜ್ಞ ಈಶಃ ಪಶುಃ॥[೧೧೭]

ಶಿವ-ಜೀವರ ಭೇದದ ಕಲ್ಪನೆ : ಶಿವ-ಜೀವರ ಭೇದದ ಕಲ್ಪನೆಯನ್ನು ಕುರಿತು ರುದ್ರಹೃದಯೋಪನಿಷತ್ ಈ ರೀತಿಯಾಗಿ ನಿರೂಪಿಸಿದೆ:

ದ್ವಾ ಸುಪರ್ಣೌ ಶರೀರೇಽಸ್ಮಿನ್ ಜೀವೇಶಾಖ್ಯೌ ಸಹ ಸ್ಥಿತೌ।
ತಯೋರ್ಜೀವಃ ಫಲಂ ಭುಂಕ್ತೇ ಕರ್ಮಣೋ ನ ಮಹೇಶ್ವರಃ॥
ಕೇವಲಂ ಸಾಕ್ಷಿರೂಪೇಣ ವಿನಾ ಭೋಗಂ ಮಹೇಶ್ವರಃ।
ಪ್ರಕಾಶತೇ ಸ್ವಯಂ ಭೇದಃ ಕಲ್ಪಿತೋ ಮಾಯಯಾ ತಯೋಃ॥
ಘಟಾಕಾಶಮಠಾಕಾಶೌ ಯಥಾಽಕಾಶಪ್ರಭೇದತಃ।
ಕಲ್ಪಿತೌ ಪರಮೌ ಜೀವಶಿವರೂಪೇಣ ಕಲ್ಪಿತೌ॥[೧೧೮]

"ಈ ಶರೀರದಲ್ಲಿ ಜೀವ ಮತ್ತು ಈಶ ಎಂಬ ಎರಡು ಪಕ್ಷಿಗಳು ಒಟ್ಟಿಗೆ ವಾಸಿಸುತ್ತಿವೆ. ಅವುಗಳಲ್ಲಿ ಜೀವನು ಸಂಚಿತ ಕರ್ಮಫಲವನ್ನು ತಿನ್ನುತ್ತಿದ್ದರೆ, ಮಹೇಶ್ವರನು ಯಾವುದೇ ಫಲವನ್ನು ಭೋಗಿಸದೆ ಅದಕ್ಕೆ ಕೇವಲ ಸಾಕ್ಷಿಯಾಗಿದ್ದಾನೆ. ಶಿವ-ಜೀವರ ಭೇದವು ಮಾಯೆಯಿಂದ ಸ್ವಯಂ ಪ್ರಕಟವಾಗಿದೆ. ಘಟಾಕಾಶ-ಮಠಾಕಾಶಗಳು ಆಕಾಶದ ಪ್ರಭೇದಗಳಾಗಿರುವಂತೆ ಶಿವ-ಜೀವರ ಭೇದವು ಕಲ್ಪಿತವಾಗಿದೆ." ಅರ್ಥಾತ್ ಶಿವ-ಜೀವರಲ್ಲಿ ಭೇದವು ಕೇವಲ ತಾತ್ವಿಕವಾಗಿರುವುದೇ ಹೊರತು ಉಪಾಧಿಯಿಂದಲ್ಲ. ಇದೇ ವೀರಶೈವ ಸಿದ್ಧಾಂತದ ಶಿವ-ಜೀವರ ಭೇದಕ್ಕೆ ಮೂಲ ಆಕರ.

ಶಿವ-ಜೀವರ ಅಭೇದ : ಶಿವ-ಜೀವರ ಅಭೇದವು ಕೈವಲ್ಯೋಪನಿಷತ್ತಿನಲ್ಲಿ ಈ ರೀತಿಯಾಗಿ ಪ್ರತಿಪಾದಿತವಾಗಿದೆ:

ಯತ್ಪರಂ ಬ್ರಹ್ಮ ಸರ್ವಾತ್ಮಾ ವಿಶ್ವಸ್ಯಾಯತನಂ ಮಹತ್।
ಸೂಕ್ಷ್ಮಾತ್ ಸೂಕ್ಷ್ಮತರಂ ನಿತ್ಯಂ ತತ್ತ್ವಮೇವ ತ್ವಮೇವ ತತ್॥
ಜಾಗ್ರತ್ ಸ್ವಪ್ನಸುಷುಪ್ತ್ಯಾದಿ ಪ್ರಪಂಚಂ ಯತ್ ಪ್ರಕಾಶತೇ।
ತದ್ ಬ್ರಹ್ಮಾಹಮಿತಿ ಜ್ಞಾತ್ವಾ ಸರ್ವಬಂಧೈಃ ಪ್ರಮುಚ್ಯತೇ॥
ತ್ರಿಷು ಧಾಮಸು ಯದ್ಭೋಜ್ಯಂ ಭೋಕ್ತಾ ಭೋಗಶ್ಚ ಯದ್ಭವೇತ್।
ತೇಭ್ಯೋ ವಿಲಕ್ಷಣಃ ಸಾಕ್ಷೀ ಚಿನ್ಮಾತ್ರೋಽಹಂ ಸದಾಶಿವಃ॥
ಮಯ್ಯೇವ ಸಕಲಂ ಜಾತಂ ಮಯಿ ಸರ್ವಂ ಪ್ರತಿಷ್ಠಿತಮ್।
ಮಯಿ ಸರ್ವಂ ಲಯಂ ಯಾತಿ ತದ್‌ಬ್ರಹ್ಮಾದ್ವಯಮಸ್ಮ್ಯಹಮ್।[೧೧೯]

"ಸಮಸ್ತ ಜಗತ್ತಿಗೆ ಆಶ್ರಯವೂ, ಸರ್ವಾತ್ಮನೂ, ಪರಬ್ರಹ್ಮನೂ, ಸೂಕ್ಷ್ಮಕ್ಕಿಂತ ಸೂಕ್ಷ್ಮತರವೂ, ನಿತ್ಯವೂ ಆದ ಯಾವ ತತ್ತ್ವವಿದೆಯೋ ಅದು ನೀನೇ (ಪರಮಾತ್ಮನೇ) ಆಗಿರುವೆ. ಜಾಗ್ರತ್, ಸ್ವಪ್ನ, ಸುಷುಪ್ತಿಯೇ ಮೊದಲಾದವುಗಳಿಂದ ಯಾವ ಪ್ರಪಂಚವು ಬೆಳಗುತ್ತಿದೆಯೋ ಅಂತಹ ಬ್ರಹ್ಮನು ನಾನೇ ಎಂದು ತಿಳಿದು ಎಲ್ಲಾ ಬಂಧನಗಳಿಂದ ಬಿಡುಗಡೆಗೊಳ್ಳುತ್ತದೆ. ಜಾಗ್ರವಾದಿ ಮೂರು ಸ್ಥಾನಗಳಲ್ಲಿ ಸ್ಥೂಲ ಪ್ರವಿಭಕ್ತಾನಂದರೂಪದಿಂದ ಪ್ರಸಿದ್ಧವಾಗಿರುವ ಭೋಜ್ಯ, ವಿಶ್ವತೈಜಸ ಮೊದಲಾದ ಭೋಕ್ತಾ ಮತ್ತು ಸ್ಥೂಲ ಪ್ರವಿಭಕ್ತ ಭೋಗಗಳಿವೆಯೋ ಅವುಗಳೆಲ್ಲಕ್ಕೂ ಚಿನ್ಮಾತ್ರನಾದ ಸದಾಶಿವನಾದ ನಾನು ವಿಲಕ್ಷಣವಾದ ಸಾಕ್ಷಿಯು. ಸಮಸ್ತವೂ ನನ್ನಿಂದಲೇ ಆವಿರ್ಭವಿಸುತ್ತದೆ ಹಾಗೂ ಸರ್ವವೂ ನನ್ನಲ್ಲಿಯೇ ಪ್ರತಿಷ್ಠಿತವಾಗಿದೆ ಮತ್ತು ಎಲ್ಲವೂ ನನ್ನಲ್ಲಿಯೇ ಲಯವನ್ನು ಹೊಂದುವುದರಿಂದ ನಾನು ಅದ್ವಿತೀಯನಾದ ಬ್ರಹ್ಮನಾಗಿರುವೆನು."

ವೀರಶೈವ ಸಿದ್ಧಾಂತವು ಭೇದಾಭೇದ, ದ್ವೈತಾದ್ವೈತ ಮತ್ತು ಶಕ್ತಿವಿಶಿಷ್ಟಾದ್ವೈತ ಮುಂತಾದ ಹೆಸರುಗಳಿಂದ ಕರೆಯಲ್ಪಟ್ಟಿದೆ. ಶಿವ-ಜೀವರ ಭೇದ-ಅಭೇದವನ್ನು ಹೇಳುವುದರಿಂದ ಭೇದಾಭೇದ, ದ್ವೈತಾದ್ವೈತವೆನಿಸಿದರೆ, ಶಕ್ತಿವಿಶಿಷ್ಟನಾದ ಶಿವ ಮತ್ತು ಶಕ್ತಿವಿಶಿಷ್ಟನಾದ ಜೀವ ಇವರ ಸಾಮರಸ್ಯವನ್ನು ಹೇಳುವುದರಿಂದ ಶಕ್ತಿವಿಶಿಷ್ಟಾದ್ವೈತವೆನಿಸಿದೆ. ಈ ಸಿದ್ಧಾಂತದ ಮೂಲ ಆಕರಗಳು ನಮಗೆ ಪೂರ್ವೋಕ್ತ ಉಪನಿಷತ್ತುಗಳಲ್ಲಿಯೇ ಸ್ಪಷ್ಟವಾಗಿ ನಿರೂಪಿತವಾಗಿರುವುದು ಗೋಚರವಾಗುತ್ತದೆ.

ಜಗತ್ತು : ವೀರಶೈವ ಸಿದ್ಧಾಂತದ ರೀತ್ಯಾ ಒಬ್ಬನೇ ಇದ್ದ ಪರಶಿವಬ್ರಹ್ಮನು ಶಕ್ತಿಯ ಲೀಲಾವಿಲಾಸದಿಂದ ಅನೇಕವಾಗಲು ಬಯಸುತ್ತಾನೆ.[೧೨೦] ಶಕ್ತಿಯು ಮೊದಲಿಗೆ ಇಚ್ಛಾ, ಜ್ಞಾನ, ಕ್ರಿಯಾ ಮುಂತಾದ ರೂಪಗಳನ್ನು ತಾಳಿ, ಪರಶಿವನು ಪ್ರಪಂಚದ ರೂಪವನ್ನು ತಾಳುವಂತೆ ಮಾಡುತ್ತಾಳೆ. ಈ ಅಭಿಪ್ರಾಯವು ಶ್ವೇತಾಶ್ವತರೋಪನಿಷತ್ತಿನ ಈ ಮಂತ್ರಗಳಿಂದ ಸ್ಪಷ್ಟವಾಗುತ್ತದೆ:

ಮಾಯಾಂ ತು ಪ್ರಕೃತಿಂ ವಿದ್ಯಾನ್ಮಾಯಿನಂ ತು ಮಹೇಶ್ವರಮ್।
ತಸ್ಯಾವಯವಭೂತೈಸ್ತು ವ್ಯಾಪ್ತಂ ಸರ್ವಮಿದಂ ಜಗತ್॥[೧೨೧]

"ಪ್ರಕೃತಿಯೇ ಮಾಯೆ, ಮಾಯೆಯುಳ್ಳವನೇ ಮಹೇಶ್ವರ. ಅವನ ಅವಯವಗಳಿಂದಲೇ ಈ ಜಗತ್ತು ವ್ಯಾಪಿಸಿರುವುದು."

ಪರಶಿವಬ್ರಹ್ಮನು ಚರಾಚರಾತ್ಮಕವಾದ ಈ ಜಗತ್ತಿಗೆ ಉಪಾದಾನಕಾರಣ ಮತ್ತು ನಿಮಿತ್ತಕಾರಣ ಎರಡೂ ಆಗಿದ್ದಾನೆಂಬುದು ವೀರಶೈವ ಸಿದ್ಧಾಂತ. ಮುಂಡಕೋಪನಿಷತ್ತಿನ ಈ ಮಂತ್ರದ ಆಧಾರದಿಂದ ಈ ನಿರ್ಣಯಕ್ಕೆ ಬರಲಾಗಿದೆ:

ಯಥೋರ್ಣನಾಭಿಃ ಸೃಜತೇ ಗೃಹ್ಣತೇ ಚ ಯಥಾ ಪೃಥಿವ್ಯಾಂ ಓಷಧಯಃ ಸಂಭವಂತಿ।
ಯಥಾ ಸತಃ ಪುರುಷಾತ್ ಕೇಶಲೋಮಾನಿ ತಥಾಕ್ಷರಾತ್ ಸಂಭವತೀಹ ವಿಶ್ವಮ್॥[೧೨೨]

ಪರಶಿವಬ್ರಹ್ಮನು ಈ ಜಗತ್ತಿಗೆ ಅಭಿನ್ನನಿಮಿತ್ತೋಪಾದಾನಕಾರಣವೆಂಬುದನ್ನು ಜೇಡವು ತನ್ನ ಬಲೆಯನ್ನು ಹೆಣೆಯುವ ಹೋಲಿಕೆಯೊಂದಿಗೆ ಪ್ರತಿಪಾದಿಸಲಾಗಿದೆ.

ಮೋಕ್ಷ ವಿಚಾರ : ಇತರ ದರ್ಶನಗಳಂತೆ ವೀರಶೈವ ದರ್ಶನವೂ ಸಹ ಮೋಕ್ಷವನ್ನು ಅಂಗೀಕರಿಸಿದೆ. ಈ ಸಿದ್ಧಾಂತದ ರೀತ್ಯಾ ಜೀವಾತ್ಮನು ಶಿವಯೋಗ ಸಾಧನೆಯ ಮೂಲಕ ಪರಮಾತ್ಮನಲ್ಲಿ ಐಕ್ಯವಾಗುವುದೇ ಮೋಕ್ಷ. ಇದನ್ನು ಲಿಂಗಾಂಗಸಾಮರಸ್ಯ ಎಂದು ಕರೆಯಲಾಗಿದೆ. ವೀರಶೈವ ಸಿದ್ಧಾಂತದ ಪ್ರಕಾರ ಲಿಂಗಾಂಗಸಂಗಿಯಾದ ವೀರಶೈವನಿಗೆ ಪುನರ್ಜನ್ಮವಿಲ್ಲ. ಅದನ್ನು ಪಾರಮೇಶ್ವರಾಗಮವು "ಏಕೇನ ಜನ್ಮನಾ ಮುಕ್ತಿಃ ವೀರಾಣಾಂ ತು ಮಹೇಶ್ವರಿ"[೧೨೩] ಎಂದು ಹೇಳಿದೆ. ವೀರಶೈವ ಸಾಧಕನು ಷಟ್‌ಸ್ಥಲ ಸೋಪಾನದ ಮೂಲಕ ಪರಮಾತ್ಮನಲ್ಲಿ ಒಂದಾಗುತ್ತಾನೆ. ಅದನ್ನು ಜೀವನ್ಮುಕ್ತ ಸ್ಥಿತಿ ಎಂದು ವರ್ಣಿಸಲಾಗಿದೆ. ಮಲ-ಮಾಯಾ- ಕರ್ಮಬಂಧನಗಳಿಂದ ಮುಕ್ತನಾದವನೇ ಜೀವನ್ಮುಕ್ತನು. ಇದರ ಮೂಲವು ಈ ಉಪನಿಷದ್ವಾಕ್ಯಗಳಲ್ಲಡಗಿದೆ:

ಯದಾ ಸರ್ವೇ ಪ್ರಮುಚ್ಯಂತೇ ಕಾಮಯೇಽಸ್ಯೇ ಹೃದಿಸ್ಥಿತಾಃ।
ಅಥಮರ್ತ್ಯೋಽಮೃತೋಭವತ್ಯತ್ರ ಬ್ರಹ್ಮಸಮಶ್ನುತೇ॥
ಯದಾ ಸರ್ವೇ ಪ್ರಭಿದ್ಯಂತೇ ಹೃದಯಸ್ಯೇಹಗ್ರಂಥಯಃ।
ಅಥ ಮರ್ತ್ಯೋಽಮೃತೋಽಭವತ್ಯೇತಾವದನುಶಾಸನಮ್।
ಹೃದಾ ಮನೀಷೀ ಮನಸಾಭಿಕ್ಲೃಪ್ತೋ ಯ ಏತದ್ವಿದುರಮೃತಾಸ್ತೇ ಭವಂತಿ॥[೧೨೪]

ಈ ಮಂತ್ರಗಳ ತಾತ್ಪರ್ಯವೇನೆಂದರೆ ಮಾನವನ ಅಂತಃಕರಣದಲ್ಲಿರುವ ಕಾಮನೆಗಳು ಅಳಿದುಹೋದವೆಂದರೆ ಅವನು ಅಮರನಾಗುವನು. ಇಲ್ಲಿಯೇ ಬ್ರಹ್ಮಪದವಿಯನ್ನು ಪಡೆಯುವನು. ಅಂತಃಕರಣದಲ್ಲಿರುವ ಮಿಥ್ಯ ಬಂಧನಗಳು ನಷ್ಟವಾದರೆ ಮಾನವನು ಅಮರನಾಗುತ್ತಾನೆ.

ವೀರಶೈವ ಸಿದ್ಧಾಂತವು ಲಿಂಗಾಂಗಸಾಮರಸ್ಯರೂಪ ಮೋಕ್ಷವನ್ನು ಶರಣಸತಿ-ಲಿಂಗಪತಿ ಎಂದು ವರ್ಣಿಸಿದೆ. ಅದಕ್ಕೆ ಪ್ರೇರಣೆಯು ಬೃಹದಾರಣ್ಯಕೋಪನಿಷತ್ತಿನ ಈ ಮಂತ್ರವೇ ಆಗಿದೆ:

ತದ್ಯಥಾ ಪ್ರಿಯಯಾ ಸ್ತ್ರಿಯಾ ಸಂಪರಿಷ್ವಕ್ತಃ ನ ಬಾಹ್ಯಂ ಕಿಂಚನ ವೇದನಾಂತರಂ।
ಏವಮೇವಾಯಂ ಪುರುಷಃ ಪ್ರಾಜ್ಞೇನಾತ್ಮನಾ ಸಂಪರಿಷ್ವಕ್ತೋ
ನ ಬಾಹ್ಯಂ ಕಿಂಚನ ವೇದನಾಂತರಂ। ತದ್ವಾ ಅಸ್ಯ ಏತದಾಪ್ತಕಾಮಂ
ಆತ್ಮಕಾಮಂ ಅಕಾಮಂ ರೂಪಂ[೧೨೫]

"ಪುರುಷನು ತನ್ನ ಪ್ರಿಯಪತ್ನಿಯನ್ನು ಆಲಿಂಗಿಸಿಕೊಂಡಿರುವಾಗ ಒಳ-ಹೊರಗಿನ ವಿಷಯದ ಜ್ಞಾನವು ಅವನಿಗಿರುವುದಿಲ್ಲ. ಅಂತೆಯೇ ಪರಮಾತ್ಮನೊಡನೆ ಬೆರೆತ ಪುರುಷನ ಸ್ಥಿತಿಯೂ ಹೀಗೆಯೇ ಇರುತ್ತದೆ." ಇಲ್ಲಿ ಪರಮಾತ್ಮನೇ ಪತಿ, ಆತನನ್ನು

ಉಪಾಸಿಸುವ ಪುರುಷನೇ ಸತಿ. ಓೀಗೆ ಶಿವ-ಜೀವರ ಐಕ್ಯವು ಸತಿ-ಪತಿ ನ್ಯಾಯದಂತಿರುವುದೆಂದು ಬೋಧಿಸುವುದೇ ಈ ಉಪನಿಷತ್ತಿನ ಸಂದೇಶವಾಗಿದೆ.

ಇದೇ ರೀತಿಯಾಗಿ ಲಿಂಗಾಂಗ ಸಾಮರಸ್ಯವನ್ನು ಬೋಧಿಸುವ ವೀರಶೈವ ಸಿದ್ಧಾಂತದ ರಹಸ್ಯವು ಮುಂಡಕೋಪನಿಷತ್ತಿನ ಈ ಮಂತ್ರದಲ್ಲಿ ನಿರೂಪಿತವಾಗಿದೆ :

ಯಥಾ ನದ್ಯಃ ಸ್ಯಂದಮಾನಾಃ ಸಮುದ್ರೇ ಅಸ್ತಂ ಗಚ್ಛಂತಿ ನಾಮರೂಪೇ ವಿಹಾಯ।
ತಥಾ ವಿದ್ವಾನ್ ನಾಮರೂಪಾದ್ವಿಮುಕ್ತಃ ಪರಾತ್ಪರಂ ಪುರುಷಮುಪೈತಿ ದಿವ್ಯಮ್॥[೧೨೬]

"ಯಾವ ರೀತಿಯಾಗಿ ನದಿಗಳು ಹರಿಯುತ್ತಾ, ತಮ್ಮ ಮೂಲ ರೂಪವನ್ನು ಬಿಟ್ಟು ಸಮುದ್ರದಲ್ಲಿ ಲೀನವಾಗುತ್ತವೆಯೋ ಹಾಗೆಯೇ ಪ್ರಾಜ್ಞನು ತನ್ನ ಜೀವಭಾವವನ್ನು ತ್ಯಜಿಸಿ ದಿವ್ಯವಾದ ಪರಾತ್ಪರ ಪುರುಷನಲ್ಲಿ ಲೀನನಾಗುತ್ತಾನೆ."

ಈ ಅಭಿಪ್ರಾಯವು ಸಿದ್ಧಾಂತ ಶಿಖಾಮಣಿಯಲ್ಲಿ ಹೀಗೆ ಪುನರುಕ್ತವಾಗಿದೆ :

ಜಲೇ ಜಲಮಿವ ನ್ಯಸ್ತಂ ವಹ್ನೌ ವಹ್ನಿರಿವಾರ್ಪಿತಃ।
ಪರಬ್ರಹ್ಮಣಿ ಲೀನಾತ್ಮಾ ವಿಭಾಗೇನ ನ ದೃಶ್ಯತೇ॥[೧೨೭]

"ನೀರಿನಲ್ಲಿ ನೀರನ್ನು ಬೆರೆಸಿದಂತೆ, ಬೆಂಕಿಯಲ್ಲಿ ಬೆಂಕಿಯನ್ನು ಬೆರೆಸಿದಂತೆ ಪರಬ್ರಹ್ಮಸ್ವರೂಪ ಮಹಾಲಿಂಗದಲ್ಲಿ ಆತ್ಮನನ್ನು ಲಯಗೊಳಿಸಿದ ಶಿವಯೋಗಿಯು ಜೀವಭಾವದಿಂದ ದೂರನಾಗಿ ಪರಬ್ರಹ್ಮನಲ್ಲಿ ಸಮರಸಭಾವವನ್ನು ಹೊಂದಿದ ಮೇಲೆ ಪರಬ್ರಹ್ಮ ಸ್ವರೂಪಕ್ಕಿಂತ ಭಿನ್ನವಾಗಿ ತೋರುವುದಿಲ್ಲ."

ಪುರಾಣಗಳಲ್ಲಿ ವೀರಶೈವ : ವೇದಾಗಮೋಪನಿಷತ್ತುಗಳಂತೆ ವ್ಯಾಸ ಪ್ರಣೀತ ಪುರಾಣಗಳಲ್ಲಿಯೂ ವೀರಶೈವದ ಮೂಲ ಆಕರಗಳು ಹೇರಳವಾಗಿ ಕಂಡುಬರುತ್ತವೆ. ಅದನ್ನು ಸಿದ್ಧಾಂತ ಶಿಖಾಮಣಿಯು "ವೇದಶಾಸ್ತ್ರಪುರಾಣೇಷು ಕಾಮಿಕಾದ್ಯಾಗಮೇಷು ಚ"[೧೨೮] ಎಂಬ ಶ್ಲೋಕದಲ್ಲಿ ಆ ಅಂಶವನ್ನು ದೃಢಪಡಿಸಿದೆ. ಅದನ್ನು ಈಗ ಸಂಕ್ಷಿಪ್ತವಾಗಿ ಗಮನಿಸೋಣ.

ಶಿವಪುರಾಣಾಂತರ್ಗತ ವಾಯವೀಯಸಂಹಿತೆ,[೧೨೯] ವಿದ್ಯೇಶ್ವರ ಸಂಹಿತೆ,[೧೩೦] ಸನತ್ಕುಮಾರಸಂಹಿತೆ;[೧೩೧] ಸ್ಕಂದ ಪುರಾಣಾಂತರ್ಗತ ಕೇದಾರಖಂಡ,[೧೩೨] ಅರುಣಾಚಲಮಾಹಾತ್ಮ್ಯ ಖಂಡ,[೧೩೩] ಶಂಕರಸಂಹಿತೆ;[೧೩೪] ಪದ್ಮಪುರಾಣಾಂತರ್ಗತ ಪಾತಾಲಖಂಡ,[೧೩೫] ಶಿವಗೀತೆ,[೧೩೬] ಲಿಂಗಪುರಾಣ,[೧೩೭] ಸೌರಪುರಾಣ[೧೩೮] ಮುಂತಾದ ಪುರಾಣಗಳಲ್ಲಿ ವೀರಶೈವಕ್ಕೆ ಸಂಬಂಧಿಸಿದ ಅನೇಕ ವಿಷಯಗಳು ನಿರೂಪಿತವಾಗಿವೆ. ಅವುಗಳಲ್ಲಿ ಪಂಚಕಲಶಸ್ಥಾಪನೆ, ದೀಕ್ಷಾಸಂಸ್ಕಾರ, ಲಿಂಗಧಾರಣೆ, ಗುರು-ಲಿಂಗ-ಜಂಗಮರ ಪ್ರಸಾದ ಸ್ವೀಕಾರ, ಭಸ್ಮಧಾರಣೆ; ಆಚಾರಲಿಂಗ-ಗುರುಲಿಂಗ-ಶಿವಲಿಂಗ-ಚರಲಿಂಗ-ಪ್ರಸಾದಲಿಂಗ-ಮಹಾಲಿಂಗ -ಎಂಬ ಷಡ್ಲಿಂಗಗಳ ವಿಚಾರ; ಭಕ್ತ-ಮಹೇಶ-ಪ್ರಸಾದಿ- ಪ್ರಾಣಲಿಂಗಿ-ಶರಣ-ಐಕ್ಯಗಳೆಂಬ ಷಟ್‌ಸ್ಥಲ ಮುಂತಾದ ವಿಚಾರಗಳು ಪ್ರತಿಪಾದಿತವಾಗಿವೆ. ಈ ಎಲ್ಲಾ ಅಂಶಗಳು ಮುಂದಿನ ವೀರಶೈವ ಸಾಹಿತ್ಯಕ್ಕೆ ಮೂಲ ಆಕಾರಗಳಾಗಿವೆ. ವಿಸ್ತಾರ ಭಯದಿಂದ ಪುರಾಣೋಕ್ತ ವೀರಶೈವದ ಮೂಲಾಂಶಗಳನ್ನು ಕೇವಲ ಉಲ್ಲೇಖಗಳಿಂದ ಸಂಕ್ಷೇಪಿಸಲಾಗಿದೆ. ಜಿಜ್ಞಾಸುಗಳು ಮೂಲ ಗ್ರಂಥಗಳನ್ನು ಅವಲೋಕಿಸಬಹುದು.

ಶೈವಾಗಮಗಳಲ್ಲಿ ವೀರಶೈವ :

ಶೈವಾಗಮಗಳು ಪೂರ್ವ ಮತ್ತು ಉತ್ತರ ಎಂಬ ಎರಡು ಭಾಗಗಳಲ್ಲಿದ್ದು, ಪೂರ್ವಭಾಗದಲ್ಲಿ ಸಾಮಾನ್ಯ ಶೈವಕ್ಕೆ ಸಂಬಂಧಿಸಿದ ಆಚಾರ-ವಿಚಾರಗಳ ನಿರೂಪಣೆಯಿದ್ದರೆ, ಉತ್ತರಭಾಗದಲ್ಲಿ ವೀರಶೈವಕ್ಕೆ ಸಂಬಂಧಿಸಿದ ಅಷ್ಟಾವರಣ,

ಪಂಚಾಚಾರ, ಷಟ್‌ಸ್ಥಲ ಸಿದ್ಧಾಂತ, ಆಚಾರ ಪರಂಪರೆಯ ಇತಿಹಾಸ, ದಾರ್ಶನಿಕ ತತ್ತ್ವಗಳ ನಿರೂಪಣೆಯು ವಿಸ್ತಾರವಾಗಿ ಬಂದಿದೆ.

ಕಾಮಿಕಾದಿ ವಾತುಲಾಂತ ಶೈವಾಗಮಗಳು ಒಟ್ಟು ಇಪ್ಪತ್ತೆಂಟು. ಈ ಇಪ್ಪತ್ತೆಂಟು ಶೈವಾಗಮೋತ್ತರ ಭಾಗಗಳಲ್ಲಿ ನಿರೂಪಿತವಾಗಿರುವ ವೀರಶೈವದ ವಿಚಾರಗಳು ಶ್ರೀ ಸಿದ್ಧಾಂತ ಶಿಖಾಮಣಿ, ಬಸವಣ್ಣ, ಚನ್ನಬಸವಣ್ಣ ಮೊದಲಾದ ಶಿವಶರಣರ ವಚನಗಳಿಗೆ ಮೂಲ ಆಕರಗಳಾಗಿವೆ. ಅದನ್ನು ಸಿದ್ಧಾಂತ ಶಿಖಾಮಣಿಯು ಹೀಗೆ ಸ್ಪಷ್ಟಪಡಿಸಿದೆ :

ಸಿದ್ಧಾಂತಾಖ್ಯೇ ಮಹಾತಂತ್ರೇ ಕಾಮಿಕಾದ್ಯೇ ಶಿವೋದಿತೇ।
ನಿರ್ದಿಷ್ಟಮುತ್ತರೇ ಭಾಗೇ ವೀರಶೈವಮತಂ ಪರಮ್॥[೧೬]

"ಶಿವನಿಂದ ಹೇಳಲ್ಪಟ್ಟ ಸಿದ್ಧಾಂತವೆಂದು ಕರೆಯಲಾಗಿರುವ ಕಾಮಿಕವೇ ಮೊದಲಾದ ಮಹಾತಂತ್ರಗಳ ಉತ್ತರಭಾಗಗಳಲ್ಲಿ ಶ್ರೇಷ್ಠವಾದ ವೀರಶೈವಮತವು ಪ್ರತಿಪಾದಿತವಾಗಿದೆ."

ಇಲ್ಲಿಯವರೆಗೆ ವೇದ, ಉಪನಿಷತ್ತು, ಪುರಾಣ ಹಾಗೂ ಆಗಮಗಳಲ್ಲಿ ಕಂಡು ಬರುವ ವೀರಶೈವದ ಮೂಲ ಆಕರಗಳನ್ನು ಕುರಿತು ಸೋದಾಹರಣವಾಗಿ ಪ್ರಸ್ತುತಪಡಿಸಲು ಒಂದು ಕಿರುಯತ್ನವನ್ನು ಮಾಡಲಾಗಿದೆ. ಇಲ್ಲಿ ನಿರೂಪಿತವಾಗಿರುವ ವಿಷಯಗಳು ನಂತರದ ಸಿದ್ಧಾಂತ ಶಿಖಾಮಣಿ, ಶ್ರೀಕರಭಾಷ್ಯ, ಕ್ರಿಯಾಸಾರ, ಶಿವಾನುಭವಸೂತ್ರ ಮುಂತಾದ ಸಂಸ್ಕೃತ ಗ್ರಂಥಗಳಿಗೆ ಹಾಗೂ ಬಸವಾದಿ ಶಿವಶರಣರ ವಚನಗಳಿಗೆ ಮೂಲ ಆಕರಗಳಾಗಿವೆ. ವೀರಶೈವರ ಆಚಾರ-ವಿಚಾರಗಳಿಗೆ ವೇದ-ಆಗಮ-ಪುರಾಣಗಳು ಮೂಲ ಆಕರಗಳಾದರೆ, ಉಪನಿಷತ್ತುಗಳು ತಾತ್ತ್ವಿಕ ವಿಚಾರಗಳಿಗೆ ಮೂಲ ಆಕರಗಳಾಗಿವೆ.

ಅಡಿಟಿಪ್ಪಣಿಗಳು

೧. ಸಿದ್ಧಾಂತ ಶಿಖಾಮಣಿ, (ಸಿ.ಶಿ.) ೬.೫೭
೨. ಋಗ್ವೇದ, ೯-೮೩-೧
೩. ಲಿಂಗಧಾರಣಚಂದ್ರಿಕೆ, ಪ್ರ. ಶೈವಭಾರತಿ ಶೋಧ ಪ್ರತಿಷ್ಠಾನ, ವಾರಣಾಸಿ, ೧೯೮೮, ಪು.೧೨೪
೪. ಲಿಂಗಪುರಾಣ, (ಉತ್ತರ ಭಾಗ) ಅಧ್ಯಾಯ ೨೧, ಶ್ಲೋಕ ೯೮-೧೦೨, ಸಂ. ಪೂವ್ವಾಡ ವೆಂಕಟರಾವ್, ಕಂಚಿ, ೧೮೭೯
೫. ಸಿದ್ಧಾಂತ ಶಿಖಾಮಣಿ, ೬.೫೮-೬೦
೬. ಋಗ್ವೇದ, ೧೦-೬೦-೧೨,೭
೭. ಲಿಂಗಧಾರಣಚಂದ್ರಿಕೆ, ಪು. ೧೪೬
೮. ಅದೇ, ಪು. ೧೫೩
೯. ಸಿದ್ಧಾಂತ ಶಿಖಾಮಣಿ, ೧.೨
೧೦. ಋಗ್ವೇದ, ೭-೫೯-೧೨
೧೧. ತೈತ್ತಿರೀಯಸಂಹಿತಾ, ೪.೫.೧.೧
೧೨. ಲಿಂಗಧಾರಣಚಂದ್ರಿಕೆ, ಪು. ೧೨೧
೧೩. ಸಿದ್ಧಾಂತ ಶಿಖಾಮಣಿ, ೬.೬೧
೧೪. ಅದೇ, ೧೦.೬೯-೭೦
೧೫. ಯಜುರ್ವೇದ ತೈತ್ತಿರೀಯಾರಣ್ಯಕ, ೧೦.೧೬
೧೬. ಲಿಂಗಪುರಾಣ, (ಉ.ಭಾ), ಅಧ್ಯಾಯ. ೨೧, ಶ್ಲೋಕ. ೧೦೩-೧೦೮

೧೭. ಯಜುರ್ವೇದ, ತೈತ್ತಿರೀಯಸಂಹಿತೆ, ೧,೪

೧೮. ಯಜುರ್ವೇದ, ತೈತ್ತಿರೀಯಾರಣ್ಯಕ, ೧೦,೯

೧೯. ನೋಡಿ: ಕಾಶೀನಾಥಶಾಸ್ತ್ರಿ, ವೀರಶೈವರತ್ನ, ಪು. ೭೭ (ಏಳನೇ ಆವೃತ್ತಿ) ಕಾಶೀನಾಥ ಗ್ರಂಥಮಾಲಾ, ೧೯೮೧

೨೦. ಕಾಶೀನಾಥಶಾಸ್ತ್ರಿ, ವೀರಶೈವರತ್ನ, ಪು. ೭೮-೭೯, ಪಂಚಾಚಾರ್ಯ ಪ್ರೆಸ್, ಮೈಸೂರು

೨೧. ಈಶಾವಾಸ್ಯೋಪನಿಷದ್ (ವೀರಶೈವಭಾಷ್ಯಸಹಿತಃ), ಶೈವಭಾರತೀ ಶೋಧ ಪ್ರತಿಷ್ಠಾನ, ವಾರಾಣಸಿ

೨೨. ಕೇನೋಪನಿಷದ್ (ವೀರಶೈವಭಾಷ್ಯಸಹಿತಃ), ಶೈವಭಾರತೀ ಶೋಧ ಪ್ರತಿಷ್ಠಾನಮ್, ವಾರಾಣಸಿ

೨೩. ಶ್ವೇತಾಶ್ವತರೋಪನಿಷದ್ವೀರಶೈವಭಾಷ್ಯಮ್- ಬೃಹನ್ಮಠ, ಚಿತ್ರದುರ್ಗ,೧೯೬೫

೨೪. ಅಪ್ರಕಟಿತ ಉಪನಿಷತ್ತುಗಳು, ಅಡ್ಯಾರ್, ಮದ್ರಾಸ್, ೧೯೩೩, ಪು. ೩೦೮-೩೦೯

೨೫. ಅದೇ, ಪು. ೩೦೮-೩೦೯

೨೬. ಶ್ವೇತಾಶ್ವತರೋಪನಿಷತ್, ೬.೨೩

೨೭. ಗುರುರ್ಲಿಂಗಂ ಜಂಗಮಶ್ಚ ತೀರ್ಥಂ ಚೈವ ಪ್ರಸಾದಕಃ।
ಭಸ್ಮ-ರುದ್ರಾಕ್ಷ-ಮಂತ್ರಾಶ್ಚೇತ್ಯಷ್ಟಾವರಣಸಂಜ್ಞಿತಾಃ। -ಚಂದ್ರಜ್ಞಾನಾಗಮ, ಕ್ರಿ.ಪಾ. ೨.೨

೨೮. ವಿಭೂತಿರ್ಭಸಿತಂ ಭಸ್ಮಕ್ಷಾರಂ ರಕ್ಷೇತಿ ಭಸ್ಮನೋ ಭವಂತಿ ಪಂಚ ನಾಮಾನಿ।
-ಬೃಹಜ್ಜಾಬಾಲೋಪನಿಷತ್, ೧.೧೫ ಹೋಲಿಸಿ : ಸಿದ್ಧಾಂತ ಶಿಖಾಮಣಿ, ೭.೪

೨೯. ಬೃ.ಜಾ. ಉ, ೧. ೧೦-೧೪; ಹೋಲಿಸಿ: ಸಿ. ಶಿ, ೭. ೬-೮

೩೦. ಕಪಿಲಃ ಕೃಷ್ಣಧವಲಧೂಮ್ರರಕ್ತಾಸ್ತಥೈವ ಚ।
ನಂದಾದೀನಾಂ ಗವಾಂ ವರ್ಣಾಃ ಕ್ರಮೇಣ ಪರಿಕೀರ್ತಿತಾಃ।। -ಸಿ. ಶಿ, ೭.೭

೩೧. ಬೃಹಜ್ಜಾಬಾಲೋಪನಿಷತ್ (ಬೃ.ಜಾ.ಉ), ೧. ೧೫

೩೨. ಸಿದ್ಧಾಂತ ಶಿಖಾಮಣಿ, ೭.೫

೩೩. ಬೃಹಜ್ಜಾಬಾಲೋಪನಿಷತ್, ೩.೩೨-೩೫;೪. ೨-೩

೩೪. ಸಿದ್ಧಾಂತ ಶಿಖಾಮಣಿ, ೭.೨೦-೨೧

೩೫. ಬೃಹಜ್ಜಾಬಾಲೋಪನಿಷತ್, ೪.೩೨

೩೬. ಬೃ.ಜಾ. ಉ, ೪, ೧೬; ಹೋಲಿಸಿ: ಚಂದ್ರಜ್ಞಾನಾಗಮ, ಕ್ರಿ.ಪಾ. ೬.೪೩-೪೪

೩೭. ಬೃ.ಜಾ. ಉ, ೪. ೧೭-೧೯; ಹೋಲಿಸಿ: ಚಂದ್ರಜ್ಞಾನಾಗಮ, ಕ್ರಿ.ಪಾ. ೬.೪೫-೪೬

೩೮. ಬೃ, ಜಾ. ಉ, ೪. ೨೧-೨೩ (೧೬ ಸ್ಥಾನಗಳ ಮತ್ತೊಂದು ಪಟ್ಟಿಯೂ ಇದೆ. ನೋಡಿ ೪. ೨೫-೨೬)

೩೯. ಬೃಹಜ್ಜಾಬಾಲೋಪನಿಷತ್, ೪.೨೯-೩೧; ಹೋಲಿಸಿ: ಚಂದ್ರಜ್ಞಾನಾಗಮ, ಕ್ರಿ.ಪಾ., ೬.೫೪-೫೭

೪೦. ತ್ರಿಪುಂಡ್ರಂ ಧಾರಯೇನ್ನಿತ್ಯಂ ಭಸ್ಮನಾ ಸಲಿಲೇನ ಚ।
ಸ್ಥಾನೇಷು ಪಂಚದಶಸು ಶರೀರೇ ಸಾಧಕೋತ್ತಮಃ।। -ಸಿದ್ಧಾಂತ ಶಿಖಾಮಣಿ, ೭.೩೦

೪೧. ಅದೇ, ೭.೩೧-೩೨

೪೨. ಚನ್ನಬಸವಣ್ಣನವರ ವಚನಗಳು, ವ. ಸಂ. ೯೪೬ (ಕ. ವಿ. ವಿ. ಧಾರವಾಡ)

೪೩. ಕಾಲಾಗ್ನಿರುದ್ರೋಪನಿಷತ್, ೩; ಜಾಬಾಲೋಪನಿಷತ್, ೧೯; ಭಸ್ಮಜಾಬಾಲೋಪನಿಷತ್, ೫

೪೪. ತ್ರ್ಯಾಯುಷಂ ಜಮದಗ್ನೇಃ ಕಶ್ಯಪಸ್ಯ ತ್ರ್ಯಾಯುಷಂ ಯದ್ ದೇವೇಷು ತ್ರ್ಯಾಯುಷಂ ತನ್ನೋ ಅಸ್ತು ತ್ರ್ಯಾಯುಷಮ್।।
-ಮಾಧ್ಯಂದಿನ ಸಂಹಿತಾ, ೩.೬೨

೪೫. ಬೃ.ಜಾ. ಉ, ೪.೩೩; ಹೋಲಿಸಿ; ಭಸ್ಮಜಾಬಾಲೋಪನಿಷತ್, ೧.೬

೪೬. ಕಾಲಾಗ್ನಿರುದ್ರೋಪನಿಷತ್, ೫; ಜಾಬಾಲೋಪನಿಷತ್, ೨೦

೪೭. ಸಿದ್ಧಾಂತ ಶಿಖಾಮಣಿ, ೭. ೩೫-೩೬

೪೮. ಜಾಬಾಲೋಪನಿಷತ್, ೨೧

೪೯. ಬೃಹಜ್ಜಾಬಾಲೋಪನಿಷತ್, ೫. ೧-೨

೫೦. ಚಂದ್ರಜ್ಞಾನಾಗಮ, ಕ್ರಿ.ಪಾ, ೬. ೫೮

೫೧. ಬೃ.ಜಾ. ಉ. ೩.೩೬

೫೨. ಅದೇ, ೩.೩೭

೫೩. ಭಸ್ಮೋತ್ಪಾದನಮುದ್ದಿಷ್ಟಂ ಚತುರ್ಧಾ ತಂತ್ರವೇದಿಭಿಃ।
ಕಲ್ಪಂ ಚೈವಾನುಕಲ್ಪಂ ಚ ಉಪಕಲ್ಪಮಕಲ್ಪಕಮ್॥ -ಸಿ.ಶಿ. ೭.೧೨

೫೪. ಅದೇ, ೭.೧೩-೧೭; ಚಂದ್ರಜ್ಞಾನಾಗಮ, ಕ್ರಿ. ಪಾ, ೬. ೩೧-೩೩

೫೫. ಶಾಂತಿಕಂ ಪೌಷ್ಟಿಕಂ ಭಸ್ಮ ಕಾಮದಂ ಚ ತ್ರಿಧಾ ಭವೇತ್। -ಚಂದ್ರಜ್ಞಾನಾಗಮ, ಕ್ರಿ.ಪಾ. ೬.೩೧

೫೬. ಬೃಹಜ್ಜಾಬಾಲೋಪನಿಷತ್, ೫. ೩-೭. ಈ ಶ್ಲೋಕಗಳು ಚಂದ್ರಜ್ಞಾನಾಗಮ, ಕ್ರಿ.ಪಾ. ೬. ೩೪-೩೬ ರಲ್ಲಿ ಯಥಾವತ್ತಾಗಿ ಪುನರುಕ್ತವಾಗಿವೆ.

೫೭. ಬೃಹಜ್ಜಾಬಾಲೋಪನಿಷತ್, ೭.೮

೫೮. ಅದೇ, ೭.೪

೫೯. ಅದೇ, ೫.೭-೮

೬೦. ಜಾಬಾಲೋಪನಿಷತ್, ೨೨

೬೧. ಸಿದ್ಧಾಂತ ಶಿಖಾಮಣಿ, ೭.೪೩

೬೨. ಬೃಹಾಜ್ಜಾಬಾಲೋಪನಿಷತ್, ೭.೧೪

೬೩. ಚಂದ್ರಜ್ಞಾನಾಗಮ, ಕ್ರಿ.ಪಾ. ೬. ೬೪-೬೯

೬೪. ರುದ್ರಾಕ್ಷಜಾಬಾಲೋಪನಿಷತ್, ೨-೫; ಚಂದ್ರಜ್ಞಾನಾಗಮ, ಕ್ರಿ.ಪಾ. ೭.೪-೫

೬೫. ಚಂದ್ರಜ್ಞಾನಾಗಮ, ಕ್ರಿ.ಪಾ. ೭.೪-೫

೬೬. ಸಿದ್ಧಾಂತ ಶಿಖಾಮಣಿ, ೭. ೪೬-೪೮

೬೭. ರುದ್ರಾಕ್ಷಜಾಬಾಲೋಪನಿಷತ್,೮-೯, ಪು. ೧೫೮; ನೋಡಿ: ಚಂದ್ರಜ್ಞಾನಾಗಮ, ಕ್ರಿ.ಪಾ, ೭.೯-೧೦ ರ ಶ್ಲೋಕಗಳು ಶಬ್ದಶಃ ಪುನರುಕ್ತವಾಗಿವೆ.

೬೮. ರುದ್ರಾಕ್ಷಜಾಬಾಲೋಪನಿಷತ್, ೧೦-೧೨; ನೋಡಿ: ಚಂದ್ರಜ್ಞಾನಾಗಮ, ಕ್ರಿ.ಪಾ. ೭.೧೧-೧೩. ಯಥಾವತ್ತಾಗಿವೆ.

೬೯. ರುದ್ರಾಕ್ಷಜಾಬಾಲೋಪನಿಷತ್, ೧೩-೧೪; ಚಂದ್ರಜ್ಞಾನಾಗಮ, ಕ್ರಿ.ಪಾ. ೭.೧೪ ಯಥಾವತ್ತಾಗಿ ಪುನರುಕ್ತವಾಗಿದೆ.

೭೦. ರುದ್ರಾಕ್ಷಜಾಬಾಲೋಪನಿಷತ್, ೧೪-೧೭; ಚಂದ್ರಜ್ಞಾನಾಗಮ, ಕ್ರಿ.ಪಾ. ೭.೧೫-೧೭

೭೧. ಸಿದ್ಧಾಂತ ಶಿಖಾಮಣಿ, ೯. ೫೧

೭೨. ರುದ್ರಾಕ್ಷಜಾಬಾಲೋಪನಿಷತ್ (ರು.ಜಾ.ಉ), ೧೭.೧೭

೭೩. ರು.ಜಾ.ಉ. ೧೭-೨೨; ಚಂದ್ರಜ್ಞಾನಾಗಮ, ಕ್ರಿ.ಪಾ. ೭.೧೮-೨೨

೭೪. ರು.ಜಾ.ಉ. ೨೩-೨೫; ಚಂದ್ರಜ್ಞಾನಾಗಮ, ಕ್ರಿ.ಪಾ. ೭.೨೩-೨೪

೭೫. ರು.ಜಾ.ಉ. ೨೭-೪೨; ಚಂದ್ರಜ್ಞಾನಾಗಮ, ಕ್ರಿ.ಪಾ. ೭.೨೫-೩೯

೭೬. ಭಸ್ಮಜಾಬಾಲೋಪನಿಷತ್, ೨.೨

೭೭. ಸಿದ್ಧಾಂತ ಶಿಖಾಮಣಿ, ೭.೫೩-೫೮

೭೮. ಅಥರ್ವಶಿರೋಪನಿಷತ್, ೪೫

೭೯. ಅದೇ, ೪೬

೮೦. ಭಸ್ಮಜಾಬಾಲೋಪನಿಷತ್, ೨.೪

೮೧. ಸೂಕ್ಷ್ಮಾಗಮ, ಕ್ರಿ.ಪಾ. ೩.೧೩

೮೨. ಚಂದ್ರಜ್ಞಾನಾಗಮ, ಕ್ರಿ.ಪಾ. ೮.೫

೮೩. ಅದೇ, ಕ್ರಿ.ಪಾ. ೮.೯

೮೪. ಸಿದ್ಧಾಂತ ಶಿಖಾಮಣಿ, ೮.೭

೮೫. ಬೃಹದಾರಣ್ಯಕೋಪನಿಷತ್, ೨-೯-೩೪

೮೫(ಅ). ಸಿದ್ಧಾಂತ ಶಿಖಾಮಣಿ, ೧೯.೧೯

೮೬. ಜಾಬಾಲೋಪನಿಷತ್, (?)

೮೭. ಈಶಾವಾಸ್ಯೋಪನಿಷತ್, ೧

೮೮. ಭುಂಜೀತ ರುದ್ರಭುಕ್ತಾನ್ನಂ ರುದ್ರಪೀತಂ ಜಲಂ ಪಿಬೇತ್।
ರುದ್ರಾಘ್ರಾತಂ ಸದಾ ಜಿಘ್ರೇದಿತಿ ಜಾಬಾಲಿಕೀ ಶ್ರುತಿಃ ॥ -ಸಿದ್ಧಾಂತ ಶಿಖಾಮಣಿ, ೯.೭೦

೮೯. ಛಾಂದೋಗ್ಯೋಪನಿಷತ್, ೭-೨೬-೨

೯೦. ಸಿದ್ಧಾಂತ ಶಿಖಾಮಣಿ, ೧೧.೯

೯೧. ಅದೇ, ೧೧.೬

೯೨. ಅದೇ, ೧೨.೩೮

೯೩. ಮುಂಡಕೋಪನಿಷತ್, ೨-೨-೧೦

೯೪. ಕಠೋಪನಿಷತ್, ೨-೨-೩

೯೫. ಸಿ.ಶಿ., ೧೨.೬

೯೬. ಕೈವಲ್ಯೋಪನಿಷತ್,೧.೧೧

೯೭. ಸಿ.ಶಿ., ೧೨. ೨೪

೯೮. ಅಲ್ಲಮಪ್ರಭು ವಚನ ಸಂಖ್ಯೆ, ೨೦೪ (ಸಮಗ್ರ ವಚನ ಸಂಪುಟ-೨, ಜನಪ್ರಿಯ ಆವೃತ್ತಿ, ೨೦೦೧)

೯೯. ಈಶಾವಾಸ್ಯೋಪನಿಷತ್, ಶಾಂತಿಮಂತ್ರ

೧೦೦. ಸಿದ್ಧಾಂತ ಶಿಖಾಮಣಿ, ೧೪.೩೦

೧೦೧. ಶ್ವೇತಾಶ್ವತರೋಪನಿಷತ್, ೩.೧

೧೦೨. ಅದೇ, ೪.೧೬

೧೦೩. ಅದೇ, ೬.೧೦

೧೦೪. ಅದೇ, ೬.೧೧

೧೦೫. ನಾರಾಯಣೋಪನಿಷತ್, ೧.೧

೧೦೬. ಸಿದ್ಧಾಂತ ಶಿಖಾಮಣಿ, ೧.೨

೧೦೭. ಋಗ್ವೇದ, ೧೦. ೧೨೯. ೨

೧೦೮. ಶ್ವೇತಾಶ್ವತರೋಪನಿಷತ್, ೪.೮

೧೦೯. ಅದೇ, ೪.೧೦

೧೧೦. ಯಜುರ್ವೇದ ತೈತ್ತಿರೀಯ ಸಂಹಿತೆ, ೧-೮-೬

೧೧೧. ಅದೇ, ೪-೫-೮

೧೧೨. ಕೈವಲ್ಯೋಪನಿಷತ್, ೧.೭

೧೧೩. ಸಿದ್ಧಾಂತ ಶಿಖಾಮಣಿ, ೨೦.೩೨

೧೧೪. ಸ ಏವ ಮಾಯಾ ಪರಿಮೋಹಿತಾತ್ಮಾ ಶರೀರಮಾಸ್ಥಾಯ ಕರೋತಿ ಸರ್ವಮ್। -ಕೈವಲ್ಯೋಪನಿಷತ್, ೧೨.೧೫

೧೧೫. ಸಿದ್ಧಾಂತ ಶಿಖಾಮಣಿ, ೫.೩೪

೧೧೬. ಮುಂಡಕೋಪನಿಷತ್

೧೧೭. ಜಾಬಾಲೋಪನಿಷತ್, ೧೧.೧೫

೧೧೮. ರುದ್ರಹೃದಯೋಪನಿಷತ್, ೪೧-೪೩; ಹೋಲಿಸಿ: ಶ್ವೇತಾಶ್ವತರೋಪನಿಷತ್, ೪.೬-೭

೧೧೯. ಕೈವಲ್ಯೋಪನಿಷತ್, ೧೬-೧೯

೧೨೦. ಬಹು ಸ್ಯಾಂ ಪ್ರಜಾಯೇಯ ॥ - ಛಾಂದೋಗ್ಯೋಪನಿಷತ್, ೬-೨-೩

೧೨೧. ಶ್ವೇತಾಶ್ವತರೋಪನಿಷತ್, ೪. ೧೦

೧೨೨. ಮುಂಡಕೋಪನಿಷತ್, ೧-೧-೭

೧೨೩. ಪಾರಮೇಶ್ವರಾಗಮ.

೧೨೪. ಕಠೋಪನಿಷತ್, ೨.೩.೧೪-೧೫; ನೋಡಿ: ಅದೇ, ೨.೬.೪; ಕೇನೋಪನಿಷತ್, ೨.೪

೧೨೫. ಬೃಹದಾರಣ್ಯಕೋಪನಿಷತ್, ೪-೩-೨೧

೧೨೬. ಮುಂಡಕೋಪನಿಷತ್, ೩-೨-೮

೧೨೭. ಸಿದ್ಧಾಂತ ಶಿಖಾಮಣಿ, ೨೦. ೬೧

೧೨೮. ಅದೇ, ೬.೫೭

೧೨೯. ಶಿವಪುರಾಣ, ವಾಯವೀಯಸಂಹಿತೆ, ಉ.ಭಾ, ಅಧ್ಯಾಯ. ೧೨.೪;೧೩.೩,೪, ೬೭,೬೮; ೧೫.೧೬-೧೭, ಅರುಣೋದಯರಾಯ್, ವಂಗವಾಸಿ ಪ್ರೆಸ್, ಕಲ್ಕತ್ತ, ೧೮೯೦

೧೩೦. ಶಿವಪುರಾಣ, ವಿದ್ಯೇಶ್ವರಸಂಹಿತೆ, ಅಧ್ಯಾಯ. ೧೩.೧೫; ೧೫. ೧೪೦;೧೬. ೭೯-೮೧, ೯೫-೯೬,೧೫೯, ೧೬೦; ೨೨. ೩೨-೩೬

೧೩೧. ಶಿವಪುರಾಣ, ಸನತ್ಕುಮಾರಸಂಹಿತೆ, ೪೩.೬೮

೧೩೨. ಸ್ಕಂದಪುರಾಣ, ಕೇದಾರಖಂಡ, ೭, ೨೧-೨೫, ೪೦-೪೨, ಖೇಮರಾಜ ಕೃಷ್ಣದಾಸ್, ಮುಂಬಯಿ.

೧೩೩. ಸ್ಕಂದಪುರಾಣ, ಅರುಣಾಚಲಮಾಹಾತ್ಮ್ಯಖಂಡ, ೧೧. ೫೩-೫೮,೮೨-೮೫

೧೩೪. ಸ್ಕಂದಪುರಾಣ, ಶಂಕರಸಂಹಿತೆ, ಅಧ್ಯಾಯ ೮೧-೮೬; ೮೧. ೬೫-೬೬; ೮೩.೬೭-೬೮; ೮೩. ೮೬-೮೮; ೮೪. ೪೩-೪೪; ೮೫.೯೧-೯೫ (ಮದ್ರಾಸ್, ಮೈಸೂರು, ಸೋಲಾಪುರ)

೧೩೫. ಪದ್ಮಪುರಾಣ, ಪಾತಾಲಖಂಡ, ಅಧ್ಯಾಯ ೧೦.೧೨೧-೧೩೬; ಖೇಮರಾಜ ಕೃಷ್ಣದಾಸ್, ಮುಂಬಯಿ

೧೩೬. ಪದ್ಮಪುರಾಣ, ಶಿವಗೀತೆ, ಅಧ್ಯಾಯ, ೧೬.೪-೫

೧೩೭. ಲಿಂಗಪುರಾಣ, ಉ.ಭಾ., ೨೧.೮೧-೯೬, ೧೨೨,೧೨೩, ಪೂವ್ವಾಡ ವೆಂಕಟರಾವ್, ಕಾಂಚೀ, ೧೮೭೯

೧೩೮. ಸೌರಪುರಾಣ, ೧೦. ೧೨; ೩೨. ೪೮-೪೯; ೩೫. ೨೫-೨೭, (ಆನಂದಾಶ್ರಮ ಸಂಸ್ಕೃತ ಗ್ರಂಥಮಾಲೆ, ಪುಣೆ)

೧೩೯. ಸಿದ್ಧಾಂತ ಶಿಖಾಮಣಿ, ೫.೧೪

ಆಕರ ಗ್ರಂಥಗಳು

೧. ಸಿದ್ಧಾಂತ ಶಿಖಾಮಣಿ- ಕಾಶೀನಾಥ ಶಾಸ್ತ್ರಿಗಳು, ಪಂಚಾಚಾರ್ಯ ಪ್ರೆಸ್, ಮೈಸೂರು, ೧೯೬೪

೨. ಸಿದ್ಧಾಂತ ಶಿಖಾಮಣಿ- ಶ್ರೀ ಸಿದ್ಧೇಶ್ವರಸ್ವಾಮಿಗಳು, ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, ೧೯೯೯

೩. The Saiva Upanisads with the commentary of Upanisad Brahmayogin, Edited by-A. Mahadeva Sastry, The Adyar Library and Research Centre, Madras, 1988.

೪. ಚಂದ್ರಜ್ಞಾನಾಗಮ-(ಕನ್ನಡಾನುವಾದ) ಡಾ. ಎಂ. ಶಿವಕುಮಾರ ಸ್ವಾಮಿ, ವೀರಶೈವ ಅನುಸಂಧಾನ ಸಂಸ್ಥಾನ, ಬೆಂಗಳೂರು, ೨೦೦೩

೫. ಸೂಕ್ಷ್ಮಾಗಮ-(ಕನ್ನಡಾನುವಾದ) ಷಣ್ಮುಖಯ್ಯ ಅಕ್ಕೂರಮಠ, ವೀರಶೈವ ಅನುಸಂಧಾನ ಸಂಸ್ಥಾನ, ಬೆಂಗಳೂರು, ೨೦೦೧

೬. ಪಾರಮೇಶ್ವರಾಗಮ- ಡಾ. ಎಂ. ಶಿವಕುಮಾರ ಸ್ವಾಮಿ, ವೀರಶೈವ ಅನುಸಂಧಾನ ಸಂಸ್ಥಾನ, ಬೆಂಗಳೂರು, ೧೯೯೯

೭. ಬೃಹದಾರಣ್ಯಕೋಪನಿಷತ್ - ರಾಮಕೃಷ್ಣಾಶ್ರಮ, ಮೈಸೂರು, ೧೯೯೦

೮. ಮುಂಡಕೋಪನಿಷತ್ - ರಾಮಕೃಷ್ಣಾ ಶ್ರಮ, ಮೈಸೂರು.

೯. ಕಠೋಪನಿಷತ್- ರಾಮಕೃಷ್ಣಾಶ್ರಮ, ಮೈಸೂರು.

೧೦. ಕೇನೋಪನಿಷತ್- ರಾಮಕೃಷ್ಣಾಶ್ರಮ, ಮೈಸೂರು.

೧೧. ಈಶಾವಾಸ್ಯೋಪನಿಷತ್- ರಾಮಕೃಷ್ಣಾಶ್ರಮ, ಮೈಸೂರು.

೧೨. ಶ್ವೇತಾಶ್ವತರೋಪನಿಷತ್- ಡಾ. ಟಿ.ಜಿ. ಸಿದ್ಧಪ್ಪಾರಾಧ್ಯ, ಬೃಹನ್ಮಠ, ಚಿತ್ರದುರ್ಗ, ೧೯೬೫

೧೩. ಛಾಂದೋಗ್ಯೋಪನಿಷತ್- ರಾಮಕೃಷ್ಣಾಶ್ರಮ, ಮೈಸೂರು.

೧೪. ನಾರಾಯಣೋಪನಿಷತ್.

೧೫. ವಿದ್ವನ್ಮಾನಸಹಂಸಃ- ಡಾ. ಎಂ. ಶಿವಕುಮಾರ ಸ್ವಾಮಿ ಅಭಿನಂದನ ಸಮಿತಿ, ಬೆಂಗಳೂರು, ೧೯೯೮

೧೬. ಬಸವತತ್ತ್ವರತ್ನಾಕರ- ವ್ಯಾಕರಣತೀರ್ಥ ಚಂದ್ರಶೇಖರ ಶಾಸ್ತ್ರಿ, ಬೆಂಗಳೂರು ಪ್ರೆಸ್, ೧೯೬೧

೧೭. ವೀರಶೈವದ ಉಗಮ ಮತ್ತು ಪ್ರಗತಿ- ಟಿ.ಎನ್. ಮಲ್ಲಪ್ಪ, ಗುಬ್ಬಿ ತೋಟದಪ್ಪ ಧರ್ಮಸಂಸ್ಥೆ, ಬೆಂಗಳೂರು, ೧೯೭೯

೧೮. ವೀರಶೈವರತ್ನ- ಕಾಶೀನಾಥ ಗ್ರಂಥಮಾಲೆ, ಪಂಚಾಚಾರ್ಯ ಪ್ರೆಸ್, ಮೈಸೂರು, ೧೯೮೧

೧೯. ಸಿದ್ಧಾಂತ ಶಿಖಾಮಣಿ ವಿಚಾರದೀಪ್ತಿ-ಡಾ. ಎಂ. ಶಿವಕುಮಾರ ಸ್ವಾಮಿ, ವೀರಶೈವ ಅನುಸಂಧಾನ ಸಂಸ್ಥಾನ, ಬೆಂಗಳೂರು, ೧೯೯೮

೨೦. ಲಿಂಗಧಾರಣಚಂದ್ರಿಕೆ-ನಂದಿಕೇಶ್ವರ ಶಿವಾಚಾರ್ಯರು, ಶೈವಭಾರತೀ ಶೋಧ ಪ್ರತಿಷ್ಠಾನ, ವಾರಾಣಸಿ.

೨೧. ಬಸವಣ್ಣನವರ ವಚನಗಳು- ಡಾ.ಆರ್.ಸಿ. ಹಿರೇಮಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೨೨. ಅಲ್ಲಮ ಪ್ರಭುಗಳ ವಚನಗಳು- (ಜನಪ್ರಿಯ ಆವೃತ್ತಿ) ಕನ್ನಡ ಪುಸ್ತಕ ಪ್ರಾಧಿಕಾರ, ೨೦೦೧

ವೀರಶೈವದಲ್ಲಿನ "ಲಿಂಗತತ್ತ್ವ ವಿವೇಚನೆ"

✍ ಡಾ. ಎಸ್.ಆರ್. ಸಿದ್ಧಲಿಂಗಪ್ಪ

ಪೀಠಿಕೆ:

'**ಲಿಂಗ**ವೆಂದರೆ ಶಾಸ್ತ್ರೀಯವಾಗಿ ಎಲ್ಲಕ್ಕೂ **ಉಗಮ**ಸ್ಥಾನ ಮತ್ತು **ಲಯ**ಸ್ಥಾನ. ಇಂತಹುದು ಕೇವಲ ತತ್ತ್ವವಾಗಿರದೆ ವಾಸ್ತವ ಅಂಶವೂ ಆಗಿದೆ. ವೈಜ್ಞಾನಿಕ ಹಿನ್ನೆಲೆಯಲ್ಲಿ ಎಲ್ಲಕ್ಕೂ ಉಗಮಸ್ಥಾನ ಮತ್ತು ಅದರಿಂದಾದ ಸರ್ವಸೃಷ್ಟಿಗಳು ಮನುಷ್ಯನ ದೇಹದಲ್ಲೇ (ಹಾಗೆ ಸೃಷ್ಟಿಯ ಎಲ್ಲಾ ದೇಹಗಳಲ್ಲೂ ಸಹ) ಇವೆ. ಸಾಧಕನಾದವನು ಇದನ್ನು ಕಾಣುವ ಪ್ರಕ್ರಿಯೆಗಳೇ 'ಲಿಂಗ' ತತ್ತ್ವ ವಿವೇಚನೆಗಳಾಗಿವೆ. ಒಂದು ರೀತಿಯಲ್ಲಿ "**ಲಿಂಗ**" ಎಂಬ ಪದಕ್ಕೆ "**ಪ್ರಜ್ಞೆ**" (ಅರಿವು) ಎಂದು ಅರ್ಥೈಸುವುದು ಹೆಚ್ಚು ಸೂಕ್ತ ಎಂದು ತಿಳಿಯಬಹುದು. ಅಂದರೆ ಇಡೀ "ಲಿಂಗತತ್ತ್ವ" ವಿವೇಚನೆ ಎಂದರೆ **ಪ್ರಜ್ಞಾ** ವಿಶೇಷಗಳ ವಿವೇಚನೆಗಳೆಂದೇ ತಿಳಿಯಬಹುದು. ಪ್ರಜ್ಞೆ(Consciousness) ಆಕಾಶತತ್ವದ ಅಭಿವ್ಯಕ್ತಿಯಾಗಿದೆ. ಪಂಚಭೂತಾತ್ಮಕವಾದ ಈ ಜಗತ್ತು ಸೃಷ್ಟಿ; ಎರಡು ನೆಲೆಗಳಲ್ಲಿದೆ. ಒಂದು ನಿರಾಕಾರಸ್ಥಿತಿ ಮತ್ತು ಮತ್ತೊಂದು ಸಾಕಾರ ಸ್ಥಿತಿ. ಇದನ್ನೇ ನಿರ್ಗುಣ ಮತ್ತು ಸಗುಣವೆಂದೂ ಸಹ ಕರೆಯಲಾಗಿದೆ. ವೀರಶೈವವು ತನ್ನ ಷಡುಸ್ಥಲ ಸಿದ್ಧಾಂತ ನಿರ್ಣಯಗಳಲ್ಲಿ ಈ ಲಿಂಗತತ್ತ್ವದ ನೆಲೆಗಳನ್ನು ೩೬ ತತ್ತ್ವಗಳ ಹಿನ್ನೆಲೆಗಳಲ್ಲಿ ಪ್ರತಿಪಾದಿಸಿದೆ. ಇದೇ ೩೬ ತತ್ತ್ವಗಳ ಆವಿಷ್ಕಾರಗಳು ಇಡೀ ವಿಶ್ವ ಸೃಷ್ಟಿಯಲ್ಲಿರುವುದೇ ಅಲ್ಲದೆ ಸಾಧಕನು ತನ್ನ ದೇಹದಲ್ಲೂ ನೋಡಿ, ಅನುಭಾವಕ್ಕೆ ತಂದುಕೊಳ್ಳಬಹುದಾಗಿದೆ. ಈ ಅನುಭಾವಗಳ ಹಿನ್ನೆಲೆಗಳುಳ್ಳ ಉಪಾಯವೇ, ತಂತ್ರವೇ, **ಇಷ್ಟಲಿಂಗೋಪಾಸನಾವಿದ್ಯೆ**ಯಾಗಿದೆ. ಈ ವಿದ್ಯೆಯಲ್ಲಿನ ಪ್ರಗತಿ, ಸಾಧನೆ, ಸಿದ್ಧಿಗಳು ಈ ಲಿಂಗತತ್ತ್ವ ವಿವೇಚನೆಯ ಆಂತರ್ಯಗಳ ತಿಳುವಳಿಕೆಗಳ ಮೇಲೆ ಅವಲಂಬಿತವಾಗಿದೆ ಎಂಬುದು ಮನನೀಯವಾದ ವಿಚಾರಗಳಾಗಿವೆ. ಈ ಪ್ರಬಂಧದಲ್ಲಿ ಕೇವಲ ವಿಷಯ ಪ್ರತಿಪಾದನೆಗಳು ಲಿಂಗತತ್ತ್ವ ವಿವೇಚನೆಗಳಿಗಷ್ಟೇ ಸೀಮಿತವಾಗಿ, ಆ ತತ್ತ್ವಗಳ ಸಾಧನೆ, ಸಿದ್ಧಿಗಳ ವಿಚಾರ ಮುಂದಿನ ಪ್ರತಿಪಾದನೆಗಳಲ್ಲಿ ಮಾಡಲಾಗುವುದು.

ನಿರಾಕಾರ ಲಿಂಗತತ್ತ್ವಗಳು: ಷಡುಸ್ಥಲ ಸಿದ್ಧಾಂತವು ಈ ತತ್ತ್ವಗಳನ್ನು ನಾಲ್ಕು ನೆಲೆಗಳಲ್ಲಿ ಗುರುತಿಸಿದೆ. **ಇವೆಲ್ಲಾ ನಿರಾಕಾರವೇ ಆದರೂ ಸಹ, ಈ ಪ್ರಭೇದಗಳನ್ನು ಗುರುತಿಸಿರುವುದು ವೀರಶೈವಕ್ಕೇ ಮೀಸಲಾದ ವಿಚಾರವಾಗಿದೆ.** ಈ ನಿರಾಕಾರ ಲಿಂಗತತ್ತ್ವಗಳು ಒಂದರಿಂದ ಮತ್ತೊಂದು ಬಂದಿವೆ. ಇವೆಲ್ಲವೂ ನಿರಾಕಾರವೇ ಆದರೂ ಅವುಗಳು ಪ್ರಭೇದಗಳಿಂದ ಚರ್ಚಿಸಲ್ಪಟ್ಟಿವೆ.

೧. ಸಹಜ (ನಿಜ, ಶರಣ) ೨. ನಿಃಶೂನ್ಯ (ನಿರಂಜನ) ೩. ಶೂನ್ಯ ೪. ನಿಷ್ಕಲ. ಇವನ್ನೇ ಷಡುಸ್ಥಲ ಸಿದ್ಧಾಂತವು ಜ್ಞಾನಶೂನ್ಯ (ನಿರಂಜನಾತೀತ ಷಟ್‌ಸ್ಥಲ); ಭಾವಾಭಾವಲಯ (ನಿರಾಮಯ ಷಟ್‌ಸ್ಥಲ); ಸ್ವಪರಾಜ್ಞ (ಸರ್ವಾಂಗಲಿಂಗ ಸ್ಥಲ); ಮತ್ತು ಚರಾಚರಲಯ ನಾಸ್ತಿಸ್ಥಲಗಳೆಂದು ಗುರುತಿಸಿದೆ. ಹೀಗೆ ಕೆಳಗೆ ಕಾಣಿಸಿರುವ ಕೋಷ್ಟಕದ ರೀತಿಯಲ್ಲಿ ವಿವರಣೆಗಳು ಇವೆ.

		ಸಂಸ್ಕೃತ ಗ್ರಂಥಗಳು	ಕನ್ನಡ ಗ್ರಂಥಗಳು
	ನಿರಾಕಾರ ಲಿಂಗತತ್ತ್ವಗಳು	ಷಡುಸ್ಥಲ ಸಿದ್ಧಾಂತ	
೧.	ಸಹಜ (ನಿಜ, ಶರಣ) (ಅನಾದಿ)	ಜ್ಞಾನಶೂನ್ಯ ಅನಾದಿಜಂಗಮ	ನಿರಂಜನಾತೀತ ಷಟ್‌ಸ್ಥಲ
೨.	ನಿಃಶೂನ್ಯ (ನಿರಂಜನ) (ಅನಾದಿ)	ಭಾವಾಭಾವಲಯ	ನಿರಾಮಯ ಷಟ್‌ಸ್ಥಲ
೩.	ಶೂನ್ಯ (ಅನಾದಿ)	ಸ್ವಪರಾಜ್ಞ	ಸರ್ವಾಂಗಲಿಂಗಸ್ಥಲ
೪.	ನಿಷ್ಕಲ (ಅನಾದಿ)	ಚರಾಚರಲಯ ನಾಸ್ತಿ	ಚರಾಚರನಾಸ್ತಿ

ನಿರಾಕಾರ ಲಿಂಗತತ್ವಗಳು: (ಕನ್ನಡ ಗ್ರಂಥಗಳಲ್ಲಿ ಈ ರೀತಿಯ ಸ್ಥಲ ವಿವರಣೆಗಳು ದೊರಕುವುದಿಲ್ಲ. ಕೇವಲ ಸೂತ್ರಪ್ರಾಯವಾದ ಸೂಚನೆ ಮತ್ತು ಹೆಸರುಗಳನ್ನು ಮಾತ್ರ ನಮೂದಿಸಿರುತ್ತಾರೆ.)

೧. ಸಹಜ ಸ್ಥಿತಿ:

ಸಾಧಕನೇ ಈ ಸ್ಥಿತಿಯಲ್ಲಿದ್ದಾಗಿನ ಪರಿಣಾಮಗಳನ್ನು ಕೆಲವು ಪ್ರಮಾಣ ಸ್ವರೂಪದ ಪ್ರಮೇಯಗಳಲ್ಲಿ ಪ್ರತಿಪಾದಿತವಾಗಿರುವುದರಿಂದ; ಈ ಸಹಜ ಸ್ಥಿತಿಗಳನ್ನು ಈ ಪ್ರತಿಪಾದನೆಗಳ ಮೂಲಕ ತಿಳಿಯಬೇಕು. ಇವು ಚರ್ಚೆ ಮತ್ತು ಅನುಭಾವಕ್ಕೆ ಬಿಟ್ಟು ವಿಚಾರಗಳಾದ್ದರಿಂದ, ಇಲ್ಲಿ ಕೇವಲ ಪ್ರತಿಪಾದನೆಗಳನ್ನು ಮಾತ್ರ ಮಾಡಲಾಗಿದೆ.

೧. ಪರ, ಅಪರಗಳನ್ನು ಅವಲಂಬಿಸಿದ ಭಾವಾಭಾವ ವಿವೇಚನಾ, 'ಜ್ಞಾನ' ಬ್ರಹ್ಮಣಿಯಲ್ಲಿ ಇಲ್ಲ. ಅದು ಶೂನ್ಯಸ್ಥಲವೆಂದು ತಿಳಿಯುತ್ತಾರೆ.

೨. ನೀರಿನಲ್ಲಿ ನೀರಿನಂತೆ, ಅಗ್ನಿಯಲ್ಲಿ ಅರ್ಪಿಸಲ್ಪಟ್ಟ ಅಗ್ನಿಯಂತೆ, ಪರಬ್ರಹ್ಮಣಿಯಲ್ಲಿ ಲೀನಾತ್ಮನಾದವನು ಅದಕ್ಕೆ ಭಿನ್ನವಾಗಿ ಕಾಣನು.

೩. ಭೇದ ಶಂಕೆಗಳು ಇಲ್ಲದ ಸರ್ವಾತ್ಮವಾದ ಪರತತ್ವದಲ್ಲಿ ಜ್ಞಾತ್ರಾದಿಗಳ ವ್ಯವಹಾರದಿಂದುತ್ಪನ್ನವಾದ ಜ್ಞಾನವು ಭಾವಿಸಲ್ಪಡುವುದೆಲ್ಲಿ?

೪. ನಿರ್ವಿಕಾರವಾದ, ನಿರಾಕಾರವಾದ, ನಿತ್ಯವಾದ ಸೀಮಾವಿವರ್ಜಿತವಾದ ಪರಬ್ರಹ್ಮವು, ಆಕಾಶದಂತೆ ನಿರ್ವಿಕಲ್ಪವಾಗಿ ಸ್ಥಿತವಾಗಿದೆ.

೫. ಪೃಥಿವ್ಯಾದಿಭೂತಗಳಲ್ಲ, ಗ್ರಹಗಳಲ್ಲ, ತಾರೆಗಳಲ್ಲ, ದೇವತೆಗಳಲ್ಲ, ಮಾನವರಲ್ಲ, ಪಶುಪಕ್ಷಿಗಳಲ್ಲ, ಮತ್ತಾವುದೂ ಅಲ್ಲ.

೬. ಕೇವಲ ಚಿನ್ಮಾತ್ರವಾದ ಸತ್, ಆನಂದ, ಲಕ್ಷಣವಾದ **ಅವನಲ್ಲಿ ನಾನು, ನಾನೆಂಬ** ಅಭಿಪ್ರಾಯದಿಂದ ಬೆಳೆದ ವಿಜ್ಞಾನವು ಏಕೆ ಭಾವಿಸಲ್ಪಡುತ್ತದೆ.

೭. ವಿಶೇಷವಾಗಿ (ಪರಶಿವತತ್ವವು) ಜ್ಞೇಯದಿಂದ ಅಭಾವವಾಗಿ, ಶೂನ್ಯಕಲ್ಪಿತವಾಗಿ ತಿಳಿಯಲ್ಪಡುತ್ತದೆ. **ಜ್ಞಾತೃ ಜ್ಞೇಯಾದಿಗಳಿಂದ ಶೂನ್ಯವು, ಜ್ಞಾನೇಜ್ಞಾನಾದಿಗಳಿಂದ ಶೂನ್ಯವು-**

೮. **ಆದಿ, ಅಂತ್ಯದಲ್ಲಿಯೂ, ಮಧ್ಯದಲ್ಲಿಯೂ, ಸರ್ವತ್ರವಾಗಿ ಸರ್ವದಾಶೂನ್ಯವು. ದ್ವಿತೀಯವಾದ ಪದಾರ್ಥಗಳಿಂದ ಶೂನ್ಯವೆಂದು ವಿಭಾವಿಸಲ್ಪಟ್ಟದೆ.**

೯. ಕೇವಲ ಸಚ್ಚಿದಾನಂದ ಪ್ರಕಾಶದ್ವಯ ಲಕ್ಷಣವಾದ ಪರಾಕಾಶವಾದ, ಪರಬ್ರಹ್ಮವು ಶೂನ್ಯಕಲ್ಪಿತವಾಗಿ ಪ್ರಕಾಶಿಸುತ್ತದೆ.

೧೦. ಶೂನ್ಯಜ್ಞಾನಾದಿ ಸಂಕಲ್ಪಗಳಿಂದ ಶೂನ್ಯಸರ್ವಾರ್ಥ ಸಾಧನವಾದ ನಿರುತ್ತರವಾದ, ಚಿದಾಕಾರವಾದ, ಸ್ವಪ್ರಕಾಶವಾದ, **ಜ್ಯೋತಿರ್ಲಿಂಗದಲ್ಲಿ** ಏಕತ್ವವನ್ನು ಹೊಂದಿದವನಿಗೆ ಜ್ಞಾನದ ಸಂಬಂಧವು ಹೇಗೆ ಹೇಳಲಾಗಿದೆ?

೧೧. ಯಾವನಿಗೆ **ಕಾರ್ಯಾವಸ್ಥೆಯು** ಇಲ್ಲವೋ ಹಾಗೂ **ಕಾರಣಾವಸ್ಥೆಯ** ಇಲ್ಲವೋ, **ಉಳಿಯುವಿಕೆ, ಉಳಿಯುವಿಕೆಗಳಿಲ್ಲವೋ,** ಅಂಥ **ಪರನನ್ನು "ಮುಕ್ತ"ನೆಂದು ಹೇಳಲಾಗಿದೆ.**

ಬಸವಣ್ಣನವರು ಒಂದು ವಚನದಲ್ಲಿ ಈ ರೀತಿ ಅಭಿಪ್ರಾಯಪಟ್ಟಿದ್ದಾರೆ.

> ಅಳಿವನಲ್ಲ, ಉಳಿವನಲ್ಲ, ಪ್ರಳಯವೆಂಬುದ ಮುನ್ನರಿಯನು.
> ಕಳಾಕುಳ ರಹಿತನು, ಉಭಯ ಕುಳರಹಿತನು.
> ಅರಿವ ಬಯತಿಟ್ಟು ಮರೆವ ಗಮನಿಯಲ್ಲ,
> ಕೂಡಲಸಂಗಮದೇವನೆಂಬ ಮುಗ್ಧನ,
> ಭಾವದ ಬಳಲಿಕೆಯಲ್ಲಿ ಗೆಲಬಹುದೇ ಹೇಳಾ!

"ಹೆಚ್ಚಿನ ವಚನಗಳು" ವಚನ. ೧೦೩೫, ಪುಟ ೨೭೦,
ಸ.ವ.ಸಂ. ೧, ಕ.ಸರ್ಕಾರ ೧೯೯೩)

ಎಲ್ಲಾ ಹನ್ನೆರಡನೆಯ ಶತಮಾನದ ಶರಣರ ವಚನಾಂಕಿತಗಳು, ನಿರಾಕಾರ ಲಿಂಗತತ್ತ್ವಗಳನ್ನೇ ಪ್ರತಿಪಾದಿಸುತ್ತವೆ.

೨. ನಿಃಶೂನ್ಯ (ನಿರಂಜನ):

೧. ತ್ವಂತಾಅಹಂತಾ ವಿನಿರ್ಮುಕ್ತನಾಗಿ (ನೀನು ನಾನು ಎಂಬ ಭೇದ ಭಾವವಿಲ್ಲದ) ಶೂನ್ಯಕಲ್ಪನೆಯಿಂದ "**ಚಿದಂಬರದಲ್ಲಿ** ಏಕೀಭವಿಸಿದ ಸಿದ್ಧನಿಗೆ ಭಾವಾಭಾವಗಳ ಕಥೆ ಎತ್ತಣದು?"

೨. ಅಹಂಭಾವದಿಂದ ಆತ್ಮನೆಂಬ ಆ ಭಾವದಿಂದ ಶೂನ್ಯತ್ವದಿಂದ ಭಾವಾಭಾವ ವಿನಿರ್ಮುಕ್ತನು ಜೀವನ್ಮುಕ್ತನಾಗಿ ಪ್ರಕಾಶಿಸುತ್ತಾನೆ.

೩. ಸುಖದುಃಖಾದಿ ಭಾವೇಷು ಚಿತ್‌ಸ್ವರೂಪನಾಗಿ ನಿರ್ಲೇಪನಾಗದ ಮಹಾತ್ಮನಿಗೆ ಭಾವವಾಗಲಿ ಅಥವಾ ಅಭಾವವಾಗಲಿ ಇರುವುದಿಲ್ಲ.

೪. ಗೋಚರಿಸುವ ಭಾವಾಭಾವಗಳು ಲಿಂಗದಲ್ಲಿ 'ಸತಿ'ಯಾಗಲು ಎಲ್ಲಿಯೂ ಯಾವ ಕಾರಣ ಇಲ್ಲವೋ ಆ ಕಾರಣ ಭಾವಾಭಾವ ಲಯವು.

೫. ಭಾವಾಭಾವ ವಸ್ತುಗಳ ವಿಮರ್ಶೆಯನ್ನು ತ್ಯಜಿಸಿದವನಿಗೆ ಯಾವ ಚಿದ್ರೂಪ ಪ್ರಕಾಶದಲ್ಲಿ ಸದ್ರೂಪವಾಗಲಿ ಅಥವಾ ಅಸದ್ರೂಪವಾಗಲಿ ಕಿಂಚಿತ್ತಾದರೂ ಕಾಣದು.

ಚೆನ್ನಬಸವಣ್ಣನವರು ಈ ವಿಚಾರದಲ್ಲಿ ಹೀಗೆನ್ನುತ್ತಾರೆ:

> ಆನು ನೀನೆಂಬ ಮೋಹವೆಲ್ಲಿಯದು,
> ಭಾವ ನಿರ್ಭಾವವೆಂಬ ಪ್ರಸಂಗವೆಲ್ಲಿಯದು ಹೇಳಾ!
> ಮನ ಲೀಯ, ಮನ ಲೀಯ ಉಭಯಭಾವರಹಿತ
> ಕೂಡಲಚೆನ್ನಸಂಗಾ ಲಿಂಗೈಕ್ಯವು.

(ವಚನ ೭೪೩, ಪುಟ ೨೨೮, ಸ.ವ.ಸಂ. ೩, ಕ.ಸರ್ಕಾರ)

೩. ಶೂನ್ಯ:

೧. ಅಪ್ರಮೇಯನಾದ ಚಿದಾಕಾರವೂ ಅದ್ವೈತ ವೈಭವವೂ ಬ್ರಹ್ಮಣೆಯಲ್ಲಿ ವಿಲೀನವಾದವನು ತನ್ನನ್ನಾಗಲಿ ಪರರನ್ನಾಗಲಿ ಏನು ತಿಳಿಯುತ್ತಾನೆ?

೨. ಯಾವುದರಲ್ಲಿ ಭೇದ ಸಂಬಂಧವಾದ ಅಹಂಗಳ ಮಿತಿ ಇಲ್ಲವೋ ವಿಭ್ರಮೆ ಇಲ್ಲವೋ, ಸಂಯೋಗ ವಿಯೋಗಗಳಿಲ್ಲವೋ, ಜ್ಞೇಯಜ್ಞಾತೃಗಳ ಕಲ್ಪನೆ ಇಲ್ಲವೋ-

೩. ಬಂಧವಿಲ್ಲ, ಮುಕ್ತಿಯಿಲ್ಲ, ದೇವಾದಿದೇವತೆಗಳ ಅಭಿಮಾನವಿಲ್ಲವೋ ಸುಖದುಃಖವಿಲ್ಲವೋ ಅಜ್ಞಾನ ಜ್ಞಾನಗಳಿಲ್ಲವೋ-

೪. ಉತ್ಕೃಷ್ಟತೆಯಿಲ್ಲ, ಹೀನತ್ವವಿಲ್ಲ, ಹಿಂದು ಮುಂದುಗಳಿಲ್ಲವೋ ಹಾಗೂ ದೂರ ಸಮೀಪಗಳಿಲ್ಲವೋ-

೫. ಸರ್ವಾಕಾರವಾದ, ಚಿದಾನಂದವಾದ, ಸತ್ಯರೂಪಿಣಿಯಾದ, ಶಾಶ್ವತವಾದ, ನಿರ್ಮಲವಾದ, ಪರಾಕಾಶಮಯವಾದ ಆಪರಬ್ರಹ್ಮಣಿಯಲ್ಲಿ-

೬. ಏಕೀಭಾವವನ್ನು ಪಡೆದ ಪರಮಾತ್ಮನಾದ ಯೋಗಿಗೆ **'ಪರ' 'ಅಪರ'** ಪರಿಜ್ಞಾನ ವಿಡಂಬನೆಗಳ (ಪರಿಹಾಸ) ಕಥೆಗಳು ಎಲ್ಲಿಯವು?

೭. ದೇಶ ಕಾಲಾದಿ ಅವಿಚ್ಛಿನ್ನಗಳಿಲ್ಲದ ತೇಜೋರೂಪದಲ್ಲಿ ಸಮಾಶ್ರಯನಾಗಿ ಸ್ವಪರಾಜ್ಞ ವಿರಹಿತನಾಗಿ (ಸ್ವಯಪರವನರಿಯದವನಾಗಿ) ಸ್ವಪರಾಜ್ಞಿಯಾಗಿದ್ದಾನೆ.

ಉರಿಲಿಂಗಪೆದ್ದಿ ಈ ವಿಚಾರದಲ್ಲಿ ಹೀಗೆ ಅಭಿಪ್ರಾಯಪಡುತ್ತಾರೆ:

> ನಲ್ಲನ ಕೂಡುವ ಭರದಲ್ಲಿ, ಎನ್ನುವನಿದಿರುವನೇನಂದರಿಯೆ.
> ನಲ್ಲನ ಕೂಡುವಾಳೂ ಎನ್ನುವ ನಲ್ಲನನೇನೆಂದರಿಯೆ.
> ಉರಿಲಿಂಗದೇವನ ಕೂಡಿದ ಬಳಿಕ ಆನೋ ತಾನೋ ಏನೆಂದರಿಯೆನು.

(ವಚನ ೧೨೪೯, ಪುಟ ೪೦೧, ಸಂಕೀರ್ಣ ವಚನ ಸಂಪುಟ ೧
ಕ.ಸರ್ಕಾರ ೧೯೯೩)

೪. ಚರಾಚರಲಯ ನಾಸ್ತಿ:

೧. ಚರಾಚರವು ಲಿಂಗೈಕ್ಯನಾಗಲು ಯೋಗಿಯು ನಿರ್ದೇಹಿಯಾಗಿ ಚರಾಚರ ವಿನಾಶಕನು ಆಗುತ್ತಾನೆ.

೨. ಈ ಜಗತ್ತಿನ ಪ್ರತೀತಿಯು ಅನಾದಿ ಅವಿದ್ಯಾ ಮೂಲವಾಗಿದ್ದು ಸ್ವಾತ್ಮೈಕ ಬೋಧವಾಗಿ ಅದೆಲ್ಲಾ ನಾಶವಾಗಲು ವಿಶ್ವ ಪ್ರಕಾಶನವೆಲ್ಲಿ?

೩. ನಭಸ್ಥಲದಲ್ಲಿ ಸಮುದ್ಭೂತವಾದ ಮೇಘಗಳು ಅಡಗುವಂತೆ ಸ್ವಾನುಭವಿಯ ಆತ್ಮನಲ್ಲಿ ವಿಷಯಗಳು ವಿಲೀನವಾಗುತ್ತವೆ.

೪. ಹೇಗೆ ಸ್ವಪ್ನದಲ್ಲಿ ಕಂಡ ವಸ್ತುವು ಎಚ್ಚರದಲ್ಲಿ ಲಯವಾಗುವುದೋ ಹಾಗೆ ಸರ್ವಸಂಸಾರವು **ಆತ್ಮಜ್ಞಾನ**ವಾಗಲು ನಾಶವಾಗುತ್ತದೆ.

೫. ಜಾಗ್ರತ ಸ್ವಪ್ನ ಸುಷುಪ್ತಿಗಳಿಗೆ ಪರಾವಸ್ಥೆಯಾದ **ತುರ್ಯ**ವನ್ನು ಪಡೆದವನಿಗೆ ಯಾವುದು ಪ್ರಮಾಣವು? ಯಾವುದು ಜ್ಞೇಯವು, ಜ್ಞಾನದ ಸಾಧನವಾವುದು?

೬. ವಾಙ್ಮನ ಧ್ಯಾನಗಳಿಗೆ ದೂರವಾದ ಯಾವತುರ್ಯಾತೀತ ಪದವಿದೆಯೋ ಅದರಲ್ಲಿ ಪ್ರವೇಶಿಸಿದ ಯೋಗಿಗೆ ಪುನಃ ವಿಶ್ವವು ಕಾಣುವುದಿಲ್ಲ.

೭. ಚಿದಾನಂದಮಯನಾದ **ಶಿವನ** ಸಂದರ್ಶನವಾಗಲು ಯೋಗೀಂದ್ರನು, ಅನ್ಯರನ್ನು ನೋಡನು. ಬೇರೆ ಏನನ್ನೂ ತಿಳಿಯುವುದಿಲ್ಲ. ಬೇರೆ ಏನನ್ನೂ ಸ್ವಲ್ಪವಾದರೂ ಕೇಳನು.

೮. ಸರ್ವ ಜಗವೆಲ್ಲ ಆ ಸತ್ಯವೇ ಸತ್ ಎಂದು ತೋರುತ್ತದೆ. ಶಿವಜ್ಞಾನವಾಗಲು ಆ ಜ್ಞಾನಸ್ವರೂಪವನ್ನೇ ಹೊಂದುತ್ತದೆ.

ಅಲ್ಲಮ ಈ ವಿಚಾರದಲ್ಲಿ ಹೀಗೆ ಅಭಿಪ್ರಾಯಪಡುತ್ತಾರೆ:

> ಅರಿವಿನ ಹೃದಯ ಕಂದೆರೆಯಬೇಕೆಂದು ಗುರು*ವೆಂದು
> ಕಲ್ಪಿಸಿಕೊಂಬರಲ್ಲದೆ, ಗುರುವೆಂದೆನಲುಂಟೆ? ಶಿಷ್ಯಂಗೆ
> ಶಿಷ್ಯನೆಂದೆನಲುಂಟೆ? **ಗುರುವಿಂಗೆ, ಗಮನಾಗಮನ ನಾಸ್ತಿಯಾದ**
> **ಲಿಂಗಕ್ಕೆ, ಅಂಗವೆಲ್ಲಿಯದು ಹೇಳಾ ಗುಹೇಶ್ವರಾ ?**
> * ಗುರು = ನಿಷ್ಕಲ ಪರವಸ್ತು; ಪರಬ್ರಹ್ಮ.

(ವಚನ ೮೩೯, ಪುಟ ೨೪೬, ಸಮಗ್ರ ವಚನ ಸಂಪುಟ ೨
ಕ.ಸರ್ಕಾರ ೧೯೯೩)

ಸಾಕಾರ ಲಿಂಗತತ್ವಗಳು:

ತದನಂತರದಲ್ಲಿ ಇದೇ ನಿರಾಕಾರ ಲಿಂಗತತ್ವವು **'ಸಾಕಾರ'ಲಿಂಗತತ್ವವಾಗಿದೆ.** ಈ ಸಾಕಾರ ಲಿಂಗತತ್ವವೇ ಈ ಸಕಲ ಸೃಷ್ಟಿಗೂ ಕಾರಣವಾಗಿದೆ. ವೀರಶೈವದ ಷಡುಸ್ಥಲ ಸಿದ್ಧಾಂತದ ಪ್ರಕಾರ ನಿರಾಕಾರಲಿಂಗತತ್ವವು (ಮೇಲೆ ಚರ್ಚಿಸಿದ ನಾಲ್ಕು ತತ್ವಗಳು) ತನ್ನನೊಳಗೊಂಡು "**ಸಾಕಾರಲಿಂಗವಿದು** ಬೇರೆ ಎಲ್ಲಾ ಲಿಂಗತತ್ವಗಳು ೩೬ ತತ್ವಗಳಾಗಿವೆ. ಇವನ್ನು ಪ್ರಮುಖವಾಗಿ ೧೧ ಲಿಂಗತತ್ವಗಳಾದ '**ಸಕಲ-ನಿಷ್ಕಲ**'ಗಳಾಗಿಯೂ; ಮತ್ತು ೨೫ ಲಿಂಗತತ್ವಗಳಾದ '**ಸಕಲ**'ಗಳಾಗಿಯೂ ತಿಳಿಯಲಾಗಿದೆ.

ಸ್ಥೂಲವಾಗಿ ಎಲ್ಲಾ ಲಿಂಗತತ್ವಗಳನ್ನು ಈ ಕೆಳಗೆ ಕಾಣಿಸಿರುವ ಕೋಷ್ಟಕದಲ್ಲಿ ಸೂಚಿಸಿದೆ:

ಲಿಂಗತತ್ವಗಳು	೩೬ ತತ್ವಗಳು	ಭಕ್ತ ಪ್ರವೃತ್ತಿ ಸೃಷ್ಟಿ	ಲಿಂಗೈಕ್ಯ ನಿವೃತ್ತಿ-ಲಯ ಮೋಕ್ಷ (ಜೀವನ್ಮುಕ್ತ)
ನಿರಾಕಾರ ಪರಮಾತ್ಮ, **ಗುರು, ಅನಾದಿ** ನಿಷ್ಕಲ **ಲಿಂಗ, ಆದಿ, ಜಂಗಮ** ಸಾಕಾರ ಪರಮಾತ್ಮ	೧	**ಗುರು** ನಿರಾಕಾರ; (ಅನಾದಿ) ಲಿಂಗತತ್ವಗಳು **ಲಿಂಗ** ಸಾಕಾರ; (ಆದಿ)	**ಲಿಂಗ** ಶಿವ-ಪರಶಿವ**ಗುರು** ಚಿಚ್ಛಕ್ತಿ, ವಿಮರ್ಶಾಶಕ್ತಿ
ಸಕಲ-ನಿಷ್ಕಲ	೧೦	ಶಕ್ತಿ; ಸದಾಶಿವ, ಈಶ್ವರ ಶುದ್ಧವಿದ್ಯಾ, ಮಾಯೆ ಕಲಾ, ಕಾಲ, ರಾಗ ಅವಿದ್ಯೆ, ನಿಯತಿ	ಪರಾಶಕ್ತಿ, ಆದಿಶಕ್ತಿ, ಇಚ್ಛಾಶಕ್ತಿ ಜ್ಞಾನಶಕ್ತಿ, ಕ್ರಿಯಾಶಕ್ತಿ, ಶಿವಸಾದಾಖ್ಯ, ಅಮೂರ್ತಸಾದಾಖ್ಯ ಮೂರ್ತಸಾದಾಖ್ಯ, ಕರ್ತುಸಾದಾಖ್ಯ ಕರ್ಮಸಾದಾಖ್ಯ
ಸಕಲ ಆದಿಜಂಗಮ / ಅಥವಾ **ಜಂಗಮ** (ಜೀವಾತ್ಮ) (ಆತ್ಮ)	೨೫	ಜ್ಞಾತೃಪಂಚಕ ಜ್ಞಾನಪಂಚಕ ವಿಷಯ ಪಂಚಕ ಕರ್ಮೇಂದ್ರಿಯಪಂಚಕ ಪಂಚಭೂತಗಳು	ಜ್ಞಾತೃಪಂಚಕ; ವಾಯುಪಂಚಕ; ಜ್ಞಾನಪಂಚಕ; ವಿಷಯಪಂಚಕ; ಕರ್ಮೇಂದ್ರಿಯಪಂಚಕ } ಇವು ಪಂಚ ಭೂತಾತ್ಮಕ ಪಂಚೀಕರಣ ದಿಂದಾದದ್ದು.

ವೀರಶೈವ ಸಿದ್ಧಾಂತದ ಪರಿಭಾಷೆಯಲ್ಲಿ (ಷಡುಸ್ಥಲ **ಸಿದ್ಧಾಂತ**) ನಿರಾಕಾರ ಲಿಂಗತತ್ವಗಳೇ **ಗುರು**ವಾಗಿದೆ, ಮತ್ತು ಸಾಕಾರ ಲಿಂಗತತ್ವಗಳಾದ ಸಾಕಾರ ಪರಮಾತ್ಮ, ಜೀವಾತ್ಮಗಳೇ **ಲಿಂಗ**, ಜಂಗಮಗಳಾಗಿವೆ. ಈ ಜೀವಾತ್ಮ (ಆತ್ಮ) ಸ್ವರೂಪ ಜಂಗಮವೇ ಸಾಧನೆಯ ಮೂಲಕ ಪರಮಾತ್ಮಗಳಾದ ಲಿಂಗ, ಗುರುಗಳಾಗಬೇಕು ಮತ್ತು ಅನಾದಿ ಜಂಗಮ, ಶರಣ ಸ್ಥಿತಿಯನ್ನು ತಲುಪಬೇಕು. ಷಡುಸ್ಥಲ ಸಿದ್ಧಾಂತ ಪರಿಭಾಷೆಯ**ಲ್ಲಿ ಸಾಧ**ಕನಾದ ಜೀವಿಯು **ಜಂಗಮ**ವಾಗಿದೆ, ಸಾಧನೆ

ಮಾಡಿದ ಸಿದ್ಧಪುರುಷ "ಶಿವಯೋಗಿ"ಯು ಜ್ಞಾನಜಂಗಮವಾಗಿದ್ದಾನೆ. ಈ ಪರಿಭಾಷೆಯನ್ನು ಅರ್ಥಮಾಡುವುದು ಬಹಳ ಪ್ರಮುಖವಾದ ವಿಚಾರ. ಈಗಿನ ವೀರಶೈವದ ಸನ್ನಿವೇಶದಲ್ಲಿ ಈ ಪದಗಳನ್ನು ಸರಿಯಾಗಿ ಅರ್ಥಮಾಡದೆ ಅನೇಕ ಗೊಂದಲಗಳಿಗೆ ಕಾರಣವಾಗಿದೆ. ವೀರಶೈವವು **ತತ್ವನಿಷ್ಠವಾದ ಧರ್ಮವಾಗಿದೆ, ವ್ಯಕ್ತಿನಿಷ್ಠ ಧರ್ಮವಲ್ಲ.** ಆದ್ದರಿಂದ ಈ ಲಿಂಗತತ್ವಗಳ ವಿವೇಚನೆ, ಅರ್ಥೈಸುವಿಕೆ, ಅನುಷ್ಠಾನ, ವ್ಯವಹಾರಗಳು ಸರಿಯಾದ ಜ್ಞಾನ ಮಟ್ಟದಲ್ಲಿ ಆಗಬೇಕಾದ ಅನಿವಾರ್ಯತೆ ಎಂದಿಗಿಂತ ಈಗ ಬಹಳವಾಗಿದೆ.

ಕೆಲವು ಷಟ್‌ಸ್ಥಲ ಸಿದ್ಧಾಂತದ ಮಾಹಿತಿಗಳನ್ನು ಸ್ಪಷ್ಟ ವಿವರಣೆಗಳಿಗಾಗಿ ಇಲ್ಲಿ ಪ್ರತಿಪಾದಿಸಲಾಗಿದೆ.

'ಜಂಗಮ' ಶಬ್ದವು ನಾನಾ ಗೊಂದಲಗಳಿಗೆ ಕಾರಣವಾಗಿದೆ. ಜಂಗಮ ಒಂದು ತತ್ವ. ಅದೇ ಜೀವಾತ್ಮ ಅಥವಾ "ಆತ್ಮ"ವಾಗಿದೆ. ಈ ಆತ್ಮವು ಸಾಧನೆಯ ಮುಖಾಂತರ ಪರಮಾತ್ಮವಾದಾಗ (ಸಾಕಾರ ಲಿಂಗತತ್ವ ಅಥವಾ ನಿರಾಕಾರ ಲಿಂಗತತ್ವ ಪರಮಾತ್ಮಗಳಾದಾಗ) ಅದು **'ಅಜಂಗಮ'** ಅಥವಾ **ಅಚರವಾದ** ಸ್ಥಾವರವಾಗುತ್ತದೆ. ಜ್ಞಾನ ಜಂಗಮವಾದ 'ಶಿವಯೋಗಿಯಾಗುತ್ತದೆ. ಅಲ್ಲಿಯವರೆವಿಗೆ **ಜಂಗಮ** ಶಬ್ದ ಕೇವಲ ಜೀವಾತ್ಮ (ಆತ್ಮ)ವನ್ನು ನಿರ್ದೇಶಿಸುತ್ತದೆ.

ಚೆನ್ನಬಸವಣ್ಣನವರು ಈ ವಿಚಾರದಲ್ಲಿ ತಮ್ಮ ವಚನದಲ್ಲಿ ಪ್ರತಿಪಾದಿಸುತ್ತಾರೆ:

> ಸ್ಥಾವರ ಜಂಗಮ ಒಂದೆಂಬರು ನೀವು ಕೇಳಿರೆ:
> ಸ್ಥಾವರವೆ ಲಿಂಗ, ಜಂಗಮವೆ ಭಕ್ತ.
> **ಪೂಜಿಸುವುದು ಲಿಂಗ, ಪೂಜೆಗೊಂಬುದು ಜಂಗಮ.**
> ಸ್ಥಾವರ-ಜಂಗಮ ಒಂದಾದ ಕಾರಣ **ಜಂಗಮವೆನಿಸಿತ್ತು.**
> ದೇವ-ಭಕ್ತನೊಂದಾದ ಕಾರಣ **ಸ್ಥಾವರವೆನಿಸಿತ್ತು.**
> ಸ್ಥಾವರವೇ **ಘಟವು**, ಜಂಗಮವೆ **ಪ್ರಾಣವು**,
> ಇದು ಕಾರಣ ಕೂಡಲಚೆನ್ನಸಂಗಾ ನಿಮ್ಮ **ಶರಣ*** **ಸ್ವತಂತ್ರ.**

*ಶರಣ : ಸಹಜಸ್ಥಿತಿ

.(ವಚನ ೩೯೪, ಪುಟ ೧೨೮, ಸಮಗ್ರ ವಚನ ಸಂಪುಟ ೩
ಕ.ಸರ್ಕಾರ ೧೯೯೩)

ಲಿಂಗತತ್ವ	ಷಡುಸ್ಥಲ ಸಿದ್ಧಾಂತ	೩೬ತತ್ವಗಳ ಪ್ರಕಾರ	ಸಾಧಕ (ಸಿದ್ಧಪುರುಷನಾದ ಸ್ವತಂತ್ರ)
ಸ್ಥಾವರ (ತತ್ವ)	ಇಷ್ಟಲಿಂಗ **ಲಿಂಗ** **ಅಚರ; ದೇವ** **ಅಜಂಗಮ.** **ಜ್ಞಾನಜಂಗಮ** } ಸಿದ್ಧ **ಶಿವಯೋಗಿ** } ಪುರುಷ	ಸಾಕಾರಲಿಂಗ ತತ್ವ : **ಶಿವ** ಶಂಭು, ಶಂಕರ, ಮಹೇಶ್ವರ ರುದ್ರ ಇತ್ಯಾದಿ	ಘಟ
ಜಂಗಮ (ತತ್ವ)	ಜೀವಾತ್ಮ (ಆತ್ಮ) **ಚರ, ಭಕ್ತ, ಜಂಗಮ** **(ಸಾಧಕ)**	ಸಕಲ ತತ್ವಗಳಾ ೨೫ ಲಿಂಗ ತತ್ವಗಳು ಪ್ರಪಂಚ.	ಪ್ರಾಣ

ಈ ವಚನದಲ್ಲಿ ಚೆನ್ನಬಸವಣ್ಣನವರು ಪ್ರಬಲವಾದ ಚಿಂತನೆಗಳನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಸಾಧಕನಲ್ಲಿಯ ನಿರಾಕಾರ ಪರಮಾತ್ಮ ಸ್ವರೂಪದ ಪರವಸ್ತುವಾದ **ಗುರುವು** ಮಹಾದೇವನು ನಿಷ್ಕಲ ಸ್ವರೂಪದಿಂದ ಸಾಧಕನಿಗೆ ಅವನ ಸಾಧನೆಗಳಿಗೆ ಅಪ್ರತಿಮ ಸ್ವರೂಪದ ಮಾರ್ಗದರ್ಶನಗಳನ್ನು ಮಾಡುತ್ತಿದೆ. ಇಲ್ಲಿ **'ಪೂಜಿಸುವುದು ಲಿಂಗ ಪೂಜೆಗೊಂಬುದು ಜಂಗಮ'** ಎಂಬ ಮಾತಿನಲ್ಲಿ ಲಿಂಗತತ್ವವೇ ಜಂಗಮತತ್ವವನ್ನು ತನ್ನ ಮಟ್ಟಕ್ಕೆ ತೆಗೆದುಕೊಳ್ಳುತ್ತಿದೆ ಎಂಬ ಅಭಿಪ್ರಾಯ

ಸೂಚಿಸುತ್ತದೆ. ಈ ಸಾಧನೆಯನ್ನು ಪ್ರಾಣದಲ್ಲಿರುವ **ಅರಿವಿನ** ಮೂಲಕ ಸಾಧಿಸಬೇಕೆಂಬ ಸೂಚನೆಯು ಸಹ ಇದೆ. ಇಷ್ಟಲಿಂಗೋಪಾಸನೆಯ ಗುಟ್ಟುಗಳನ್ನೆಲ್ಲಾ ಈ ವಚನ ಒಳಗೊಂಡಿದೆ. ಪ್ರಮುಖವಾಗಿ ಸಾಧಕನು ಪ್ರಯತ್ನಿಸಬೇಕಾದ ನೆಲೆ ಸಾಕಾರ ಪರಮಾತ್ಮ; ತದನಂತರದಲ್ಲಿ ನಿರಾಕಾರ ಪರಮಾತ್ಮ ಸ್ಥಿತಿಗಳು ಅಂದರೆ ನಿರಾಕಾರ ಲಿಂಗತತ್ತ್ವಗಳ ಅನುಭಾವಗಳು ತನ್ನಿಂದ ತಾನೇ ಆಗುತ್ತದೆ ಎಂಬ ಗೂಢವಾದ ಸತ್ಯಗಳನ್ನು ಸಹ ಈ ವಚನ ಒಳಗೊಂಡಿದೆ. ಆದ್ದರಿಂದ ಸೃಷ್ಟಿಕ್ರಮದಲ್ಲಿ ಗುರು, ಲಿಂಗ, ಜಂಗಮಗಳಿದ್ದರೆ, ನಿವೃತ್ತಿ ಅಥವಾ ಮೋಕ್ಷ ಮಾರ್ಗದಲ್ಲಿ ಜಂಗಮ, ಲಿಂಗ, ಗುರುವಿದೆ. ಅಷ್ಟಾವರಣದಲ್ಲಿನ ಪೂಜ್ಯ ವಸ್ತುಗಳಾದ ಗುರು, ಲಿಂಗ, ಜಂಗಮಗಳು ನಿಜವಾದ ಷಡುಸ್ಥಲ ಸಿದ್ಧಾಂತದ ನಿರ್ಣಯಗಳ ಪ್ರಕಾರ; ನಿಷ್ಕಲವಾದ ನಿರಾಕಾರ, ಸಾಕಾರ ಪರಮಾತ್ಮ ಮತ್ತು ಅಜಂಗಮ ಸ್ವರೂಪದ **ಏಕಮಾತ್ರ** ವ್ಯಕ್ತಿಯಾಗಿದ್ದಾನೆ. ಬೇರೆ ಬೇರೆ ಸಂದರ್ಭಗಳಲ್ಲಿ ಅವನು (ಏಕಮಾತ್ರ ವ್ಯಕ್ತಿ) ವಿಧವಿಧವಾಗಿ ಪೂಜೆಗೊಳ್ಳುತ್ತಾನೆ. ಸಾಧಕನು ತನ್ನ ಅಂತರಂಗದ ಗುರು, ಲಿಂಗ, ಜಂಗಮತತ್ತ್ವಗಳನ್ನೇ ಪೂಜಿಸಬೇಕು. ಆದರೆ ಬಹಿರಂಗದಲ್ಲಿ ಮತ್ತೋರ್ವ ಏಕಮಾತ್ರ ವ್ಯಕ್ತಿ ಜ್ಞಾನಿ, ಸಿದ್ಧಪುರುಷ ದೊರೆತರೆ ಅವನ ಮೂಲಕವಾಗಿಯೂ ತನ್ನಲ್ಲೇ ಇರುವ ಗುರು, ಲಿಂಗ, ಜಂಗಮಗಳನ್ನು ಪೂಜಿಸಿ (ಭಸ್ಮ, ರುದ್ರಾಕ್ಷಿ, ಮಂತ್ರಗಳ ಸಹಾಯದಿಂದ) ಧನ್ಯತೆ ಪಡೆಯಬೇಕು (ಪಾದೋದಕ, ಪ್ರಸಾದಗಳು). ಸಾಧಕನಿಗೆ ಬಾಹ್ಯ ಜ್ಞಾನಿಯ ಪರಿಚಯವೇ ಪಾದೋದಕ ಧನ್ಯತೆಯಾಗಿಯೂ, ಆ 'ಜ್ಞಾನಿ'ಯಿಂದ ದೊರೆತ ತನ್ನ ಸಾಧನೆಗಳಿಗೆ ಅನುಕೂಲವಾದ ಜ್ಞಾನಗಳೇ ಪ್ರಸಾದ ಧನ್ಯತೆಗಳಾಗಿಯೂ ಇವೆ.

ಈ ರೀತಿ ವೀರಶೈವವು ಈ ಪ್ರಪಂಚದಲ್ಲಿರುವ ಪ್ರಜ್ಞಾವಿಶೇಷಗಳನ್ನು ಅರ್ಥೈಸಿ, ಲಿಂಗತತ್ತ್ವಗಳ ಪರಿಭಾಷೆಯಲ್ಲಿ ಷಟ್‌ಸ್ಥಲ ಸಿದ್ಧಾಂತದ ಆಯಾಮಗಳಲ್ಲಿ ಚರ್ಚಿಸಿದೆ.

ಭಕ್ತಿ; ಶಕ್ತಿಗಳು ಒಂದೇ ವಿಚಾರಗಳಾಗಿವೆ. ಭಕ್ತಿ ಅಂಗಸ್ಥಲದ ಸಂಬಂಧವಾದರೆ, ಶಕ್ತಿ ಲಿಂಗಸ್ಥಲದ ಸಂಬಂಧವಾಗಿದೆ. **ಈ ಭಕ್ತಿ-ಶಕ್ತಿಗಳ ಅನ್ವಯಗಳ ಮೂಲಕ ಸಾಧಕನು ಈ "ಲಿಂಗತತ್ತ್ವಗಳ" ಅನುಸಂಧಾನಗಳನ್ನು ಮಾಡುತ್ತಾನೆ.** ಲಿಂಗಸ್ಥಲದ ನೆಲೆಗಳು ಗುರು, ಲಿಂಗ, ಜಂಗಮಗಳ ತ್ರಿವಿಧಗಳ ನೆಲೆಯಲ್ಲಿ ಷಡುಸ್ಥಲ ಸಿದ್ಧಾಂತದಲ್ಲಿ ಪ್ರತಿಪಾದಿತವಾಗಿದೆ. ಅಂಗಸ್ಥಲದ ಆಚರಣೆಗಳು ಸಹ ಅದೇ ನೆಲೆಯಲ್ಲಿ ನಡೆಯಬೇಕು.

ಸಾಕಾರ-ನಿರಕಾರಾ ಲಿಂಗತತ್ತ್ವಗಳು
ಮತ್ತು
ಷಡುಸ್ಥಲ ಸಿದ್ಧಾಂತ

ಅಂಗಸ್ಥಲ (ಆಚರಣೆಗಳು)		ಲಿಂಗಸ್ಥಲ (ಪ್ರಜ್ಞಾವಿಶೇಷಗಳು)	
ಭಕ್ತ	ಶ್ರದ್ಧಾಭಕ್ತಿ	ಆಚಾರಲಿಂಗ (ತ್ರಿವಿಧಗಳ* ನೆಲೆಯಲ್ಲಿ) ↓	ಕ್ರಿಯಾಶಕ್ತಿ
ಮಹೇಶ	ನಿಷ್ಠಾಭಕ್ತಿ	*ಗುರುಲಿಂಗ	ಜ್ಞಾನಶಕ್ತಿ
ಪ್ರಸಾದಿ	ಸಾವಧಾನಭಕ್ತಿ	ಶಿವಲಿಂಗ	ಇಚ್ಛಾಶಕ್ತಿ
ಪ್ರಾಣಲಿಂಗಿ	ಆನಂದಭಕ್ತಿ	*ಜಂಗಮಲಿಂಗ	ಆದಿಶಕ್ತಿ
ಶರಣ	ಅನುಭಾವಭಕ್ತಿ	ಪ್ರಸಾದಲಿಂಗ	ಪರಾಶಕ್ತಿ
ಐಕ್ಯ	ಸಮರಸಭಕ್ತಿ	ಮಹಾಲಿಂಗ ↓	ಚಿಚ್ಛಕ್ತಿ

* ತ್ರಿವಿಧಗಳು: ಗುರು, ಲಿಂಗ, ಜಂಗಮ.

* ಗುರು ಎಂದರೆ ಗುರುತತ್ತ್ವ; **ಗುರುಲಿಂಗವೆಂದರೆ "ಗುರುತತ್ತ್ವದ ಪ್ರಜ್ಞೆ"**; ಜಂಗಮವೆಂದರೆ ಜಂಗಮ ತತ್ತ್ವ; ಜಂಗಮ ಲಿಂಗವೆಂದರೆ **'ಜಂಗಮತತ್ತ್ವದ ಪ್ರಜ್ಞೆ'**. ಲಿಂಗ ಎಂದರೆ ಪ್ರಜ್ಞೆ.

ಸಾಧಕನು ಭಕ್ತಿಗಳ ಮೂಲಕ ಶಕ್ತಿಗಳ ಆವಿಷ್ಕಾರದಿಂದ 'ಲಿಗಂತತ್ತ್ವ'ಗಳ ಅನುಸಂಧಾನಗಳನ್ನು ಸಾಧಿಸುತ್ತಾನೆ. ಈ ವಿಚಾರದಲ್ಲಿ ಅಲ್ಲಮ ಅತ್ಯಂತ ಪ್ರಭಾವಿಯಾದ ಚಿಂತನೆಗಳನ್ನು ತಮ್ಮ ವಚನದ ಮೂಲಕ ಪ್ರತಿಪಾದಿಸಿದ್ದಾರೆ.

ತಲೆ ಇಲ್ಲದ ತಲೆಯಾತಂಗೆ ಕರುಳಿಲ್ಲದ ಒಡಲು ನೋಡಾ!
ಆ ನಲ್ಲಂಗೆ ಅಂಗವಿಲ್ಲದ ಅಂಗನೆ ಸತಿಯಾಗಿಪ್ಪಳು!
ಇವರಿಬ್ಬರ ಬಸುರಲ್ಲಿ ಹುಟ್ಟಿದಳೆಮ್ಮ ತಾಯಿ.
ನಾ ಹುಟ್ಟಿ "ತಾಯ" ಕೈವಿಡಿದು ಸಂಗವ ಮಾಡಿ
ನಿರ್ದೋಷಿಯಾದೆನು ಕಾಣಾ ಗುಹೇಶ್ವರಾ.

(ವಚನ ೯, ಪುಟ ೬, ಸ.ವ.ಸಂ. ೨, ಕ.ಸರ್ಕಾರ ೧೯೯೩)

ಇಲ್ಲಿ '**ತಾಯಿ**'ಯ ಪಾತ್ರ '**ಚಿಚ್ಛಕ್ತಿ**'ಯಾಗಿದೆ. ಈ ಚಿಚ್ಛಕ್ತಿಯ ಅನುಸಂಧಾನ ಕ್ರಮವಾಗಿ, ಕ್ರಿಯಾ, ಜ್ಞಾನ, ಇಚ್ಛಾ, ಆದಿ, ಪರಾಶಕ್ತಿಗಳ ಮೂಲಕ ನಡೆದು ಕಡೆಯಲ್ಲಿ ಚಿಚ್ಛಕ್ತಿ ಸ್ವರೂಪ ಸಾಧನೆಯಾಗಬೇಕಾಗಿದೆ. ಈ ನೆಲೆಗಳ ಸಾಧನೆಯ ವಿವರಗಳೇ ಲಿಂಗಸ್ಥಲದ (ಅಂತರಂಗದ) ನೆಲೆಗಳಾಗಿವೆ. ಇದಕ್ಕೆ ಪೂರಕವಾಗಿ ಅಂಗಸ್ಥಲದ ವಿವರಣೆಗಳ (ಬಹಿರಂಗ) ನೆಲೆಗಳಿರುತ್ತವೆ. ಬಸವಣ್ಣನವರು "**ಅಂತರಂಗಶುದ್ಧಿ; ಬಹಿರಂಗಶುದ್ಧಿ**▲"ಯೆಂಬ ಕ್ರಮವನ್ನು ಪ್ರತಿಪಾದಿಸುತ್ತಾರೆ. ಅಂದರೆ ಅಂತರಂಗದ ವಿಚಾರ ಆಚರಣೆಗಳ ಮೂಲದ ಬಹಿರಂಗದ ಆಚರಣೆಗಳು ಮಹತ್ವ ಪಡೆಯುತ್ತವೆ. ಅಂದರೆ ಜ್ಞಾನ, ಕ್ರಿಯೆಗಳ ಸಮುಚ್ಚಯ ಮುಖ್ಯವಾಗುತ್ತದೆ. ಇದೇ ವಿಚಾರವನ್ನು "**ವಿಚಾರ-ಆಚಾರ**"●ಗಳ ಹಿನ್ನೆಲೆಯಲ್ಲಿ ಬಸವಣ್ಣನವರು ಪ್ರತಿಪಾದಿಸುತ್ತಾರೆ. ಆದರೆ ಷಟ್‌ಸ್ಥಲ ಸಿದ್ಧಾಂತವು ಈ ಜ್ಞಾನ-ಕ್ರಿಯೆ ಅಥವಾ ವಿಚಾರ-ಆಚಾರಗಳ ಮಧ್ಯೆ ಮತ್ತೊಂದು ವಿಷಯವನ್ನು ಪ್ರತಿಪಾದಿಸುತ್ತದೆ. ಅದೇ "**ಭಾವ**" ಅಥವಾ "**ಧ್ಯಾನ**"ವಾಗಿದೆ. **ಈ ಕ್ರಿಯೆ, ಭಾವ (ಧ್ಯಾನ)**✦ **ಜ್ಞಾನಗಳ ತ್ರಿವಳಿ ಸಮುಚ್ಚಯಗಳನ್ನು ಷಟ್‌ಸ್ಥಲ ಸಿದ್ಧಾಂತ ಪ್ರತಿಪಾದನೆ ಮಾಡುತ್ತದೆ.** ಇದು ಅತ್ಯಂತ ಪ್ರಭಾವಶಾಲಿಯಾದ ಪ್ರತಿಪಾದನೆಯಾಗಿ, ಆಚರಿಸಬಲ್ಲ ಕ್ರಮವಾಗಿದೆ. "**ತಾದಾತ್ಮ್ಯ ಭಾವದ ಕ್ರಿಯೆಯ ಮೂಲಕ ಪಡೆಯುವ ಜ್ಞಾನ ವಿಜ್ಞಾನವಾದ ಅನುಭಾವವಾಗಿದೆ.**" ಈ ಕ್ರಮವನ್ನೇ ವಚನಕಾರರೂ ಸಹ ಅನುಸರಿಸಿ ಅನುಭಾವಗಳನ್ನು ತಮ್ಮ ವಚನಗಳಲ್ಲಿ ಪ್ರತಿಪಾದಿಸಿದ್ದಾರೆ. ಇಷ್ಟಲಿಂಗ ಪೂಜೆ, ಅರ್ಪಣೆ, ಪ್ರಸಾದ ಮುಂತಾದ ಬಾಹ್ಯಕ್ರಿಯೆಗಳು; ಅಂತರಂಗಿಕವಾದ ಲಿಂಗನಿಷ್ಪತ್ತಿ ಕ್ರಿಯೆಗಳು ಸಹ,ಕಯೆ, ಭಾವ(ಧ್ಯಾನ), ಜ್ಞಾನಗಳ ಹಿನ್ನೆಲೆಗಳಲ್ಲೇ ನಡೆಯುತ್ತದೆ. ಗೀತೆಗಳ ಕಾಲದ ಕ್ರಿಯೆ, ಧ್ಯಾನ, ಜ್ಞಾನಗಳ ಬಿಡಿಬಿಡಿಯಾದ ಆಲೋಚನೆಗಳು ಆಗಮಗಳ ಕಾಲಕ್ಕೆ ತ್ರಿವಳಿ ಸಮುಚ್ಚಯವಾಗಿ, ಲೌಕಿಕಾರ್ಥದ **ನಿಷ್ಕಾಮ ಕರ್ಮವು** ಪಾರಮಾರ್ಥಿಕ ಅರ್ಥದ ದೈವದ ಅನುಸಂಧಾನಗಳಲ್ಲಿ "**ಕಾಮ ವಿನಿರ್ಮುಕ್ತ**" ಸ್ಥಿತಿಗಳಾಗಿ ಷಡುಸ್ಥಲ ಸಿದ್ಧಾಂತದಲ್ಲಿ ಪ್ರತಿಪಾದಿತವಾಗಿದೆ. ವಚನಕಾರರೂ ಸಹ ಇಂತಹ ರೀತಿಯ ಅನುಸಂಧಾನಗಳನ್ನೇ ಮಾಡಿದ್ದಾರೆ, ಅನುಭಾವಿಗಳಾಗಿದ್ದಾರೆ.

ವೀರಶೈವದಲ್ಲಿ "ಲಿಂಗತತ್ತ್ವಗಳ ವಿವೇಚನೆ" ಪ್ರಜ್ಞಾವಿಶೇಷಗಳ ಪ್ರತಿಪಾದನೆಗಳ ಮೂಲಕ, "**ಷಡುಸ್ಥಲ ಸಿದ್ಧಾಂತದ**" ಆಯಾಮಗಳಲ್ಲಿ ಅನುಭಾವಗಳಾಗಿವೆ. ಬಸವಣ್ಣನವರು ತಮ್ಮ ಒಂದು ವಚನದಲ್ಲಿ ಈ ವಿಚಾರದಲ್ಲಿ ಪ್ರತಿಪಾದನೆಗಳನ್ನು ಮಾಡಿದ್ದಾರೆ.

▲ ಕಳಬೇಡ, ಕೊಲಬೇಡ; ವಚನ.

● ಭಕ್ತಿಯೆಂಬ ಪೃಥ್ವಿಯ ಮೇಲೆ - ವಚನ.

✦ ಕಾಶ್ಮೀರ ಶೈವದ ಪ್ರಕಾಂಡ ಪಂಡಿತನಾದ ಅಭಿನವಗುಪ್ತನು ಸಹ ಭಾವವನ್ನು ಧ್ಯಾನವೆಂದೇ ಗ್ರಹಿಸಿದ್ದಾನೆ.

ನುಡಿದ ನುಡಿಯೊಳಗೆ "ಷಡುಸ್ಥಲ" ಬಂದು**
ಎನ್ನ ಮನವನಿಂಬುಗೊಳ್ಳದಿದ್ದಡೆ,
ಸುಡುವೆನೀ ತನುವ ಕೂಡಲಸಂಗಮದೇವಾ.

ಷಡುಸ್ಥಲ ಸಿದ್ಧಾಂತವು ಏಕೋತ್ತರ ಶತಸ್ಥಲ ಕ್ರಮದಲ್ಲೂ ಮತ್ತು ಏಕೋತ್ತರ ಶತಸ್ಥಲವಲ್ಲದ ಕ್ರಮದಲ್ಲೂ ಪ್ರತಿಪಾದಿತವಾಗಿದೆ. **ಆದರೆ ಗುರು, ಲಿಂಗ, ಜಂಗಮಗಳಾದ ತ್ರಿವಿಧಗಳ ಸಂಪೂರ್ಣ ನೆಲೆಗಳಲ್ಲಿ ಏಕೋತ್ತರ ಶತಸ್ಥಲ ಸಿದ್ಧಾಂತ ಪ್ರತಿಪಾದನೆಗಳಾಗಿವೆ.** ಲಿಂಗತತ್ತ್ವಗಳ ಸಂಪೂರ್ಣ ವಿವೇಚನೆಗಳು ಏಕೋತ್ತರ ಶತಸ್ಥಲ ಸಿದ್ಧಾಂತದಲ್ಲಿನ ವಿಷಯಗಳನ್ನು "ನವ ವರ್ಗದ ಸಮಗ್ರ ಸಮಸಮುಚ್ಚಯ" ಕ್ರಮದಲ್ಲಿ ಅರ್ಥೈಸಿದರೆ; ವಚನಗಳಲ್ಲಿನ ಎಲ್ಲಾ ಆಯಾಮದ ಅನುಭಾವಗಳು ಅತ್ಯಂತ ಖಚಿತವಾಗಿ ಹೊಂದಾಣಿಕೆಗೆ ದೊರಕುತ್ತವೆ.

I ಗುರುಗುರು, II ಲಿಂಗಲಿಂಗ, III ಜಂಗಮಜಂಗಮ, IV ಗುರುಜಂಗಮ, V ಜಂಗಮಲಿಂಗ, VI ಲಿಂಗಗುರು, VII ಗುರುಲಿಂಗ, VIII ಲಿಂಗಜಂಗಮ, IX ಜಂಗಮಗುರು. ನಿರೂಪಣಾ ಕ್ರಮದಲ್ಲಿ ಷಟ್‌ಸ್ಥಲ ಸಿದ್ಧಾಂತವು ಕ್ರಮವಾಗಿ ೧ ರಿಂದ ೧೦೧ ಸ್ಥಲಗಳವರೆವಿಗೆ ಏಕೋತ್ತರ ಶತಸ್ಥಲವಾಗಿ ಪ್ರತಿಪಾದಿತವಾಗಿದೆ. ಏಕೋತ್ತರ ಶತಸ್ಥಲವು ೪೪ ಅಂಗಸ್ಥಲಗಳಾಗಿಯೂ ೫೭ ಲಿಂಗಸ್ಥಲಗಳಾಗಿಯೂ ಕ್ರಮದಲ್ಲಿ ನಿರೂಪಿತವಾಗಿದೆ. ಆದರೆ ಅರ್ಥೈಸುವ ಕ್ರಮವಾಗಿ;

ವರ್ಗ	ಲಿಂಗಸ್ಥಲ	ಅಂಗಸ್ಥಲ	ವಿಚಾರಗಳು
I ಗುರುಗುರು	೫೪, ೫೫, ೫೬, ೪೫, ೪೬, ೪೭; ೯೯	೧-೧೫ ೧೬-೨೪	ದೀಕ್ಷೆ, ಗುರು, ಲಿಂಗಪೂಜೆ ನಿರಾಕಾರ ಗುರು; ಭಕ್ತ; ಮಹೇಶ
II ಲಿಂಗಲಿಂಗ	೭೫, ೭೬, ೭೭ ೬೬, ೬೭, ೫೮ ೧೦೦	೨೫-೩೧ ೩೨-೩೬	ಅರ್ಪಣ; ಪ್ರಸಾದ, ನಿರಾಕಾರ, ಲಿಂಗ ಪ್ರಸಾದಿ ಪ್ರಾಣಲಿಂಗ
III ಜಂಗಮಜಂಗಮ	೯೬, ೯೭, ೯೮ ೮೭, ೮೮, ೮೯ ೧೦೧	೩೭-೪೦ ೪೧-೪೪	ಆಕಾಶತತ್ತ್ವಗಳು; ನಿರಾಕಾರ ಜಂಗಮ (ಅನಾದಿ) ಶರಣ, ಐಕ್ಯ
IV ಗುರುಜಂಗಮ	೯೦, ೯೧, ೯೨ ೮೧, ೮೨, ೮೩	-	ಸಾಧಕನಿಗೆ ಜ್ಞಾನ ಜಂಗಮನ ಪರಿಚಯ; (ಪಾದೋದಕ); ಲಿಂಗ ಪ್ರಕಾಶತೆಗಳು
V ಜಂಗಮಲಿಂಗ	೭೮, ೭೯, ೮೦ ೬೯, ೭೦, ೭೧	-	ಆ ಪರಿಚಯದಿಂದಾದ ಜ್ಞಾನಗಳು ಪ್ರಸಾದ : ಶಿಷ್ಯತ್ವ
VI ಲಿಂಗಗುರು	೫೭, ೫೮, ೫೯ ೪೮, ೪೯, ೫೦	-	ಇಷ್ಟಲಿಂಗೋಪಾಸನೆಯಿಂದ ಕಾಯತತ್ತ್ವಗಳ ಆವಿಷ್ಕಾರ

** ಭಕ್ತಿ, ಮಾಹೇಶ್ವರ, ಪ್ರಸಾದಿ... (ವಚನ ೮೯೭, ಪುಟ ೨೩೪, ಸ.ವ.ಸಂ. ೧, ಕ.ಸರ್ಕಾರ ೧೯೯೩)

VII ಗುರುಲಿಂಗ	೭೨, ೭೩, ೭೪ ೬೩, ೬೪, ೬೫	-	ಅನುಗ್ರಹಲಿಂಗ ತ್ರಿವಿಧಗಳಿಂದ ಆತ್ಮತತ್ವಗಳು
VIII ಲಿಂಗಜಂಗಮ	೯೩, ೯೪, ೯೫ ೮೪, ೮೫, ೮೬	-	ಲಿಂಗನಿಷ್ಪತ್ತಿ ಹಾಗೂ ಸ್ವತಃ ಸಾಧನಪ್ರಸಾದ, ನಿಷ್ಕಲ ಸ್ಥಿತಿ
IX ಜಂಗಮಗುರು	೬೦, ೬೧, ೬೨ ೫೧, ೫೨, ೫೩	-	ಜ್ಞಾನಿಯ ಇರುವಿಕೆ; ಅವನು ಮಾಡುವ ಮತ್ತು ಲೋಕೋತ್ತರ ಕಾರ್ಯಗಳು

ಇಲ್ಲಿ ಸ್ಥೂಲವಾಗಿ ಷಡುಸ್ಥಲ ಸಿದ್ಧಾಂತ ಪ್ರತಿಪಾದನೆಗಳು ಏಕೋತ್ತರ ಶತಸ್ಥಲ ಕ್ರಮದಲ್ಲಿ; ನಿರೂಪಿತವಾಗಿ (ಕ್ರಮ ಸಮುಚ್ಚಯದಲ್ಲಿ), ನವವರ್ಗದ ಸಮಗ್ರ ಸಮಸಮುಚ್ಚಯ ಕ್ರಮದಲ್ಲಿ ಅರ್ಥೈಸಿದಾಗ ಇಡೀ ವಚನವಾಙ್ಮಯ ಮತ್ತು ಅವುಗಳ ಅನುಭಾವಿಕ ಹಿನ್ನೆಲೆಗಳು ವಿಷದೀಕರಣಗಳಿಗೆ ದೊರಕುತ್ತದೆ. ಇದು ಈಗ ಖಚಿತವಾಗಿ ಪರಿಶೀಲಿಸಿದ ಸಂಶೋಧಿತ ವಿಚಾರ.

ಉದಾಹರಣೆಗಾಗಿ ಬಸವಣ್ಣನವರ ಒಂದು ವಚನ ಹೀಗಿದೆ:

ಲಿಂಗ ಜಂಗಮ, ಜಂಗಮ ಲಿಂಗವೆಂಬುದ
ಎನಗೆ ತೋರಿದವರಾರಯ್ಯ?
ಲಿಂಗವ ಪೂಜಿಸಿದಡೆ ಭವ ಹರಿಯದೆಂದು
ಜಂಗಮಮುಖ ಲಿಂಗವಾಗಿ ಬಂದು ಶಿಕ್ಷಿಸಿ, ರಕ್ಷಿಸಿ,
ಎನ್ನ ಆದಿ ಅನಾದಿಯ ತೋರಿ,
ಪ್ರಾಣಲಿಂಗ ಜಂಗಮವೆಂಬುದ ಎನಗೆ ಪ್ರತಿಷ್ಠಿಸಿ ತೋರಿದಿರಾಗಿ,
ಕೂಡಲಸಂಗಮದೇವಾ
ನಿಮ್ಮಿಂದಲಾನು ಬದುಕಿದೆನು ಕಾಣಾ, ಪ್ರಭುವೇ.

(ವಚನ ೧೩೪೩, ಪುಟ ೩೭೨, ಸ.ವ.ಸಂ. ೧
ಕ.ಸರ್ಕಾರ ೧೯೯೩)

ಇಲ್ಲಿ ಪ್ರಾಮುಖ್ಯತೆ ಪಡೆಯುವುದು ಲಿಂಗ ಜಂಗಮ, ಮತ್ತು ಜಂಗಮ ಲಿಂಗ ಪದಗಳು. ಇವನ್ನು ಲಿಂಗದಿಂದಾದ ಜಂಗಮವೆಂತಲೂ ಮತ್ತು ಜಂಗಮದಿಂದಾಗ ಲಿಂಗವೆಂತಲೂ ಅನ್ವಯ ಮಾಡಬೇಕು. ಆಗ ವರ್ಗದ VIII ಮತ್ತು ವರ್ಗದ V ರ, ವಿಚಾರಗಳು ಪ್ರತಿಪಾದನೆಗೆ ಬರುತ್ತದೆ.

	ಲಿಂಗಸ್ಥಲ			ಅಂಗಸ್ಥಲ
ವರ್ಗ VIII ಜಂಗಮ- ಕಾರಣ ಲಿಂಗಜಂಗಮ	* ೯೩ ಸ್ವೀಕೃತ ಪ್ರಸಾದಿ	* ೯೪ ಶಿಷ್ಟೋದನ ಪ್ರಸಾದಿ	* ೯೫ ಚರಾಚರಲಯ ಪ್ರಸಾದಿ	ಐಕ್ಯ
	* ೮೪ ಕ್ರಿಯಾನಿಷ್ಪತ್ತಿ	* ೮೫ ಭಾವನಿಷ್ಪತ್ತಿ	* ೮೬ ಜ್ಞಾನನಿಷ್ಪತ್ತಿ	ಶರಣ
	ಸ್ಥೂಲ	ಸೂಕ್ಷ್ಮ **ಲಿಂಗ**	ಕಾರಣ	

ಹೀಗೆ ಸಾಧಕನಿಗೆ ಲಿಂಗನಿಷ್ಪತ್ತಿಗಳಾಗಿ ಚರಾಚರಲಯ ಪ್ರಸಾದ ಜ್ಞಾನಗಳಾಗುತ್ತದೆ. ಈ ವಿಚಾರಗಳ ಹಿನ್ನೆಲೆಗಳನ್ನೇ ಮೇಲಿನ ಬಸವಣ್ಣನವರ ವಚನ ಪ್ರತಿಪಾದಿಸುತ್ತದೆ.

	ಲಿಂಗಸ್ಥಲ			ಅಂಗಸ್ಥಲ
ವರ್ಗ V ಜಂಗಮಲಿಂಗ-ಲಿಂಗ; ಸೂಕ್ಷ್ಮ	* ೭೮ ಆದಿಪ್ರಸಾದಿ	* ೭೯ ಅಂತ್ಯಪ್ರಸಾದಿ	* ೮೦ ಸೇವ್ಯಪ್ರಸಾದಿ	ಪ್ರಾಣಲಿಂಗಿ
	* ೬೯ ಶಿಷ್ಯ	* ೭೦ ಶುಶ್ರೂಷಾ	* ೭೧ ಸೇವ್ಯ	ಪ್ರಸಾದಿ
	ಸ್ಥೂಲ	ಸೂಕ್ಷ್ಮ	ಕಾರಣ	
		ಜಂಗಮ		

ಇಲ್ಲಿ ಜ್ಞಾನಿಯ ಪರಿಚಯವಾಗಿ, ಸಾಧಕನು ಅವನ ಶಿಷ್ಯತ್ವವನ್ನು ಮಾಡಿದಾಗ ಸಾಧಕನಲ್ಲಿ ಉಂಟಾಗುವ ಲಿಂಗಪ್ರಸಾದ ಜ್ಞಾನಗಳೇ ಮುಖ್ಯವಾಗಿದೆ.

ಹೀಗೆ ಲಿಂಗಜಂಗಮ; ಜಂಗಮ ಲಿಂಗಗಳು ಸಾಧಕನ ನೆಲೆಯಲ್ಲಿ ಅರ್ಥ ಪಡೆಯುತ್ತವೆ. ಕೇವಲ ಲಿಂಗಪೂಜೆಯಿಂದ ಧನ್ಯತೆ ಬರುವುದಿಲ್ಲ; ಹೀಗೆ ಜಂಗಮ ಲಿಂಗದಿಂದ ಜ್ಞಾನಗಳನ್ನು ಪಡೆಯಬೇಕು. ಅದೇ ಜಂಗಮಮುಖ ಲಿಂಗವಾಗಿ ಬಂದು ಶಿಕ್ಷಿಸಿ, ರಕ್ಷಿಸಿದಾಗ ಆದಿ, ಅನಾದಿ ಲಿಂಗ ತತ್ವಗಳನ್ನು ಸಾಧಕನಿಗೆ ಬೋಧಿಸಿದಾಗ ಸಾಧಕನಿಗೆ ಸ್ವತಃ ಲಿಂಗಜಂಗಮವಾಗುವ ಪ್ರಸಾದಗಳು ಲಭ್ಯವಾಗುತ್ತದೆ. ಇಂತಹ ಜಂಗಮಲಿಂಗವಾಗಿ ಪ್ರಭು ನನಗೆ ದೊರಕಿ ನಾನು ಧನ್ಯನಾದೆ ಎನ್ನುತ್ತಾರೆ ಬಸವಣ್ಣನವರು.

ಹೀಗೆ ವೀರಶೈವದಲ್ಲಿ "ಲಿಂಗತತ್ತ್ವ ವಿವೇಚನೆ" ವಿಶೇಷವಾಗಿ ಪ್ರಜ್ಞಾವಿಶೇಷಗಳಾಗಿ, ಷಡುಸ್ಥಲದ ನೆಲೆಗಳಲ್ಲಿ ಸಿದ್ಧಾಂತ ಪ್ರತಿಪಾದಿತವಾಗಿಯೂ, ಅನುಭಾವಿಕ ನೆಲೆಗಳಲ್ಲಿ ವಚನ ವಾಙ್ಮಯವಾಗಿಯೂ ಸಮಸ್ತ ಮುಮುಕ್ಷುಗಳಿಗೆ ದೊರಕುತ್ತಿದೆ. ಈ ಎಲ್ಲಾ ನೆಲೆಗಳ ವಿವರಗಳನ್ನು ಸಾಧಕನು ಅನುಭವ ಮಂಟಪಗಳ ಮೂಲಕ ಪರಸ್ಪರ ಚರ್ಚೆಯ ಮುಖಾಂತರ ಪಡೆದರೆ; ಯಾರ ಸಹಾಯವೂ ಇಲ್ಲದೆ, ಎಲ್ಲೇ ಇದ್ದರೂ. ಅವನು **ಈ ಆಧುನಿಕ ಕಾಲದಲ್ಲಿ ತನ್ನ ಸಾಧನೆಗಳನ್ನು ಮುಂದುವರೆಸಬಹುದು. ಇದರಲ್ಲಿ ಯಾವುದೇ ಸಂಶಯವಿಲ್ಲ.**

ಬುದ್ಧರಲ್ಲಿನ ನಾಗಾರ್ಜುನ ಮಂಡಿಸಿದ ತ್ರಿವಿಧಶೂನ್ಯಗಳು, ಈ ವೀರಶೈವದ ಜಂಗಮ, ಲಿಂಗ, ಗುರುವಿನ ಶೂನ್ಯ ಕಲ್ಪನೆಗಳಿಂದ ಪ್ರಭಾವಿತವಾಗಿದೆ ಎಂಬುದು ಪ್ರಸಿದ್ಧ ವಿದ್ವಾಂಸರ* ಅಭಿಪ್ರಾಯ. ನಾಗಾರ್ಜುನನಿಗೆ ಮೊದಲು ಬುದ್ಧರಲ್ಲಿ ಶೂನ್ಯದ ಕಲ್ಪಿತವಿರಲಿಲ್ಲವೆಂದು ತಿಳುವಳಿಕೆ ಇದೆ. ಬುದ್ಧರ ಶೂನ್ಯತ್ವ ವಾದ ವೀರಶೈವದ ಲಿಂಗತತ್ತ್ವಗಳ ವಿವೇಚನೆಗಳಿಂದಲೇ ಉಂಟಾಗಿರುವುದು ಅತ್ಯಂತ ಪ್ರಮುಖ ಸಂಗತಿಯಾಗಿದೆ.

ವೀರಶೈವದ ತ್ರಿವಿಧ ಶೂನ್ಯತ್ವದ ಕಲ್ಪನೆ:

ಗುರು	ಲಿಂಗ	ಜಂಗಮ
ನಿರಾಕಾರ ಲಿಂಗತತ್ತ್ವ ನಾಲ್ಕು ವಿಧ ೧. ನಿಷ್ಕಲ (೧ ತತ್ತ್ವ) ೨. ಶೂನ್ಯ ೩. ನಿಃಶೂನ್ಯ (ನಿರಂಜನ) ೪. ಸಹಜ (ನಿಜ, ಶರಣ) ಅನಾದಿ ಜಂಗಮ	ಸಾಕಾರ ಲಿಂಗತತ್ತ್ವ ಇಷ್ಟಲಿಂಗ ಅಜಂಗಮ, ಅಚರ (೧೦ ತತ್ತ್ವಗಳು) ಚರ, ಜಂಗಮ.	ಸಾಕಾರ ಲಿಂಗತತ್ತ್ವ ಜೀವಾತ್ಮ (ಆತ್ಮ) ಪ್ರಪಂಚ ಬಂಧನ (೨೫ ತತ್ತ್ವಗಳು)

---

* ಪ್ರೊ. ಎಸ್.ಕೆ. ರಾಮಚಂದ್ರರಾವ್ ಅವರು ಲೇಖಕನಿಗೆ ವೈಯಕ್ತಿಕವಾಗಿ ತಿಳಿಸಿದ್ದು.

ಇವೆಲ್ಲಾ **ಆಕಾಶತತ್ವದ ಶೂನ್ಯಗಳೇ ಆಗಿವೆ.** ಜ್ಞಾತೃಪಂಚಕಗಳು ಹೀಗಿವೆ:

<table>
<tr><td>೧.</td><td>ಜ್ಞಾತೃ</td><td>ಮಲಾವೃತ; ಅವಿದ್ಯಾವೃತ, ಜೀವಾತ್ಮ (ಆತ್ಮ), ಆಕಾಶದಿಂದಾದ ಆಕಾಶ</td><td rowspan="5">"ಆಕಾಶತತ್ವದ ಪಂಚೀಕರಣ"</td></tr>
<tr><td>೨.</td><td>ಮನ</td><td>ವಾಯುವಿನಿಂದಾದ ಆಕಾಶ</td></tr>
<tr><td>೩.</td><td>ಅಹಂಕಾರ</td><td>ಅಗ್ನಿಯಿಂದಾದ ಆಕಾಶ</td></tr>
<tr><td>೪.</td><td>ಬುದ್ಧಿ</td><td>ಅಪ್ಪುವಿನಿಂದಾದ ಆಕಾಶ</td></tr>
<tr><td>೫.</td><td>ಚಿತ್ತ</td><td>ಪೃಥ್ವಿಯಿಂದಾದ ಆಕಾಶ</td></tr>
</table>

ಸಾಧನೆಯಲ್ಲಿ ಜ್ಞಾತೃವು ತನ್ನ ಮನಸ್ಸನ್ನು ಅಹಂಕಾರ ನಿವೃತ್ತಿ ಮಾಡಿಕೊಂಡು ಬುದ್ಧಿ ಪ್ರಯೋಗದಿಂದ ವಿಚಾರಗಳನ್ನು ತಿಳಿದು ಆಚರಿಸಿ, ಖಚಿತವಾದ ಜ್ಞಾನಗಳನ್ನು ಪಡೆದ ಚಿತ್ತ ಸ್ಥಿತಿಯೇ ಜೀವಾತ್ಮನು ಪರಮಾತ್ಮ ಸ್ಥಿತಿಗಳನ್ನು ಪಡೆಯುವ ವಿಚಾರಗಳಾಗಿವೆ. ಈ ಅಹಂಕಾರ ನಿವೃತ್ತಿಗೆ ಮೂಲದ್ರವ್ಯ, ಪ್ರಪಂಚದಲ್ಲಿ ಇತರೇ ಎಲ್ಲಾ ಜೀವರಾಶಿಗಳ ಬಗ್ಗೆ ಇರಬೇಕಾದ ಪ್ರೀತಿ ಮತ್ತು ಅನುಕಂಪ ಮತ್ತು ತದನಂತರದಲ್ಲಿನ ಶೂನ್ಯತ್ವಗಳ ಬಗ್ಗೆ ಸಾಧನೆ, ಸಿದ್ಧಿ. **ಇದು ವೀರಶೈವರಲ್ಲಿ ದಾಸೋಹ ಮತ್ತು ಸಾಧನೆಗಳಾಗಿವೆ.** ಈ ಶೂನ್ಯತ್ವದ ಕಲ್ಪನೆಯಲ್ಲಿ ಜೀವಾತ್ಮ (ಆತ್ಮ)ನಲ್ಲಿ ಪರಮಾತ್ಮ ಸ್ಥಿತಿಯು ಇದೆ ಎಂಬುದರ ವಿವರಗಳನ್ನು ವಚನಕಾರರು ಪಿಂಡಸ್ಥಲದ ವಿವರಣೆಗಳಾಗಿ, ಬೀಜದಲ್ಲಿರುವ ವೃಕ್ಷದಂತೆ; ಕಣ್ಣಿಯ ಸ್ನೇಹದಂತೆ; ಗುಹೇಶ್ವರ ಶರಣ ನಿಮ್ಮ ಸಂಬಂಧ ಭಾವದ ಮರೆಯ ಅಪ್ಪ ಬ್ರಹ್ಮದಂತೆ, ಎಂಬ ವಿವರಣೆಗಳನ್ನು ಕೊಟ್ಟಿದ್ದಾರೆ.

ಹೀಗೆ ವೀರಶೈವದ 'ಲಿಂಗತತ್ವ' ವಿವೇಚನೆ ನಾನಾ ಆಯಾಮಗಳನ್ನು ಹೊಂದಿದೆ. ಅತ್ಯಂತ ಚೇತೋಹಾರಿಯಾದ ವಿವರಣೆಗಳನ್ನು ಹೊಂದಿದೆ. ಪ್ರತಿಯೊಂದು ವಿಚಾರವೂ ಸಹವೈಜ್ಞಾನಿಕವಾಗಿ ಪ್ರತಿಪಾದಿತವಾಗಿದೆ. ಮತ್ತೆ ಇವಿಷ್ಟೂ ಸಾಧಕನ ದೇಹದ ಅನ್ವಯ ಮತ್ತಷ್ಟು ವೈಜ್ಞಾನಿಕ ಸತ್ಯಗಳಾಗಿದೆ. ಇಷ್ಟಲಿಂಗೋಪಾಸನ ವಿದ್ಯೆ ಮತ್ತು ಲಿಂಗತತ್ವ ವಿವೇಚನೆ ಅತ್ಯಂತ ಗಮನಾರ್ಹ ವಿವರಗಳನ್ನು ಹೊಂದಿವೆ. ಇದು ವೀರಶೈವಕ್ಕೇ ವಿಶಿಷ್ಟವಾಗಿ ಸಂಬಂಧಿಸಿದ ವಿಚಾರವಾಗಿದೆ.

ಕನ್ನಡ ರಂಗಭೂಮಿಗೆ ವೀರಶೈವರ ಕೊಡುಗೆ

✍ ಕೆ.ವಿ. ನಾಗರಾಜಮೂರ್ತಿ

ಕನ್ನಡ ರಂಗಭೂಮಿಯ ಬೆಳವಣಿಗೆಯನ್ನು ಗಮನಿಸಿದಾಗ ಅದರ ಎಲ್ಲ ಘಟ್ಟಗಳಲ್ಲೂ ತನ್ನದೇ ಆದ ಕೊಡುಗೆಗಳ ಮೂಲಕ ವೀರಶೈವರು ಮಹತ್ತರ ಪಾತ್ರ ವಹಿಸಿದ್ದಾರೆ. ಒಂದೂವರೆ ಶತಕದ ಇತಿಹಾಸವಿರುವ ಕನ್ನಡ ರಂಗಭೂಮಿಗೆ ಜಾಸಪದ ರಂಗಭೂಮಿಯಿಂದ ಇಂದಿನ ಹವ್ಯಾಸಿ ರಂಗಭೂಮಿಯವರೆಗೆ ಶರಣರ ಕೊಡುಗೆ ನಿರಂತರವಾಗಿದೆ. ಜಾನಪದ ರಂಗಭೂಮಿಯಲ್ಲಿ ಶರಣ ಸಾಹಿತ್ಯವಂತೂ ಸಮೃದ್ಧಿಯಾಗಿ, ಚೇತೋಹಾರಿಯಾಗಿದ್ದು ಇಂದಿಗೂ ಅದರ ಜನಪ್ರಿಯತೆ ಕುಗ್ಗಿಲ್ಲ. ಕಂಸಾಳೆ, ವೀರಗಾಸೆಯ ಒಡಪುಗಳು, ವೀರಭದ್ರನ ಕುಣಿತ, ಪುರವಂತರ ಮೇಳ, ಶೈವ ಸಣ್ಣಾಟವೆಂದೇ ಹೆಸರಾದ ಡಪ್ಪಿನಾಟ... ಮೊದಲಾದುವು ಈಗಲೂ ತಮ್ಮ ಅಪೂರ್ವ ಶ್ರೀಮಂತ ಕಲಾವಂತಿಕೆಯನ್ನು ಉಳಿಸಿಕೊಂಡಿವೆ. ಡಪ್ಪಿನಾಟದಲ್ಲಿ ಅಲ್ಲಮಪ್ರಭು, ಬಸವಣ್ಣ, ಅಕ್ಕಮಹಾದೇವಿ, ತತ್ವಪದಕಾರರು, ಶಿವಯೋಗಿಗಳು ಮುಂತಾದ ಶರಣರ ಕಥೆಗಳನ್ನು ತಮ್ಮ ಶೈವ ಸಣ್ಣಾಟದ ಮೂಲಕ ಮನಮೋಹಕವಾಗಿ ರೂಪಿಸುವಲ್ಲಿ ಯಶಸ್ವಿಯಾಗಿದ್ದಾರೆ. ಇತರೆ ಸಣ್ಣಾಟದಂತೆ ಹಿಮ್ಮೇಳ, ಭಾಗವತ ಮತ್ತು ಕಥೆಗಾರರಿಂದ ವಿವಿಧ ತಾಳಗತಿಯನ್ನು ರಾಗಲಹರಿಯನ್ನು ಹರಿಸುತ್ತಾ ನಿರೂಪಿಸುವ ಶಿವಪಾರ್ವತಿಯರ ಸಂಭಾಷಣೆ ಕೇಳಲಷ್ಟೇ ಅಲ್ಲ ಅವರ ಹಾವಭಾವ, ಕುಣಿತ ನೋಡುಗರ ಕಣ್ಣುಗಳಿಗೆ ದೊಡ್ಡ ಹಬ್ಬ.

ಕನ್ನಡ ರಂಗಭೂಮಿಗೆ ನಿಜವಾದ ಮೆರಗು ನೀಡಿದ್ದು ವೃತ್ತಿರಂಗಭೂಮಿ. ಕರ್ನಾಟಕದ ಹಳೆಯ ಮೈಸೂರು ಮೊದಲ್ಗೊಂಡು ಉತ್ತರ ಕರ್ನಾಟಕದ ಬಹುತೇಕ ಹಳ್ಳಿಗಳಿಗೆ ವ್ಯಾಪಿಸಿದ ಈ ವೃತ್ತಿರಂಗಭೂಮಿ ಕಳೆದ ಶತಮಾನದಲ್ಲಿ ಸಾಧಿಸಿದ್ದು ಬಹಳ. ವೃತ್ತಿರಂಗಭೂಮಿಯ ಪ್ರತಿಯೊಂದು ಹಂತಗಳಲ್ಲೂ ವೀರಶೈವರ ಕಾಣಿಕೆ ದಾಖಲಾರ್ಹ. ವೀರಶೈವರ ರಂಗಭೂಮಿಯೆಂದರೆ ಅದೊಂದು ಜ್ಯಾತ್ಯಾತೀತ ರಂಗಭೂಮಿ. ತಮ್ಮ ಬೆಳವಣಿಗೆಯ ಜೊತೆಯಲ್ಲಿಯೇ ಇತರ ಸಮುದಾಯವನ್ನು ತನ್ನೊಳಗೆ ಬೆಳೆಸಿಕೊಳ್ಳುತ್ತಾ ನಡೆದವರು ವೀರಶೈವರು. ವೃತ್ತಿರಂಗಭೂಮಿಯ ಪ್ರಾರಂಭದ ದಿನಗಳಲ್ಲಿ ಪಾರ್ಸಿ ರಂಗಭೂಮಿ ಅತ್ಯಂತ ಪ್ರಭಾವಶಾಲಿಯಾಗಿತ್ತು. ತನ್ನ ಶ್ರೀಮಂತಿಕೆಯಿಂದ ದೊಡ್ಡ ಜನಾಕರ್ಷಣೆಯನ್ನೇ ಹೊಂದಿದ್ದದ್ದು ಪಾರ್ಸಿ ರಂಗಭೂಮಿ. ಆದರೆ ಈ ನಾಟಕಗಳ ಬಹುತೇಕ ಅಂಶಗಳು ಪರಭಾಷೆಯ ಸಂಸ್ಕೃತಿಯನ್ನು ಹೇರುವಂತಹವು.

ಇಂತಹ ಸಂದರ್ಭದಲ್ಲಿ ಕನ್ನಡ ಸಂಸ್ಕೃತಿ ನಾಶವಾಗುತ್ತಿರುವುದನ್ನು ಗಮಿನಿಸಿದ ಅಂದಿನ ಮೈಸೂರು ಮಹಾರಾಜರಾದ ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರ ಆಶಯದಂತೆ ಕನ್ನಡಕ್ಕೆ ಮಹತ್ವ ಕೊಡುವ ಕನ್ನಡದ ನಾಟಕಗಳನ್ನು ಪ್ರದರ್ಶಿಸುವ ಉದ್ದೇಶದಿಂದ "ಚಾಮರಾಜೇಂದ್ರ ಕರ್ನಾಟಕ ನಾಟಕ ಸಭಾ" ಹಳೆಯ ಮೈಸೂರಿನ ಭಾಗದಲ್ಲಿ ಪ್ರಾರಂಭವಾಯಿತು. ಪಾರ್ಸಿ ಕಂಪನಿಯ ಅದ್ದೂರಿ ವೇಷಭೂಷಣ, ಆಧುನಿಕ ತಂತ್ರಗಾರಿಕೆ, ನೃತ್ಯ, ಸಂಗೀತ ಎಲ್ಲದರಲ್ಲೂ ಶ್ರೀಮಂತಿಕೆಯ ರಂಗವೈಭವದಿಂದ ಪ್ರೇಕ್ಷಕರನ್ನು ಆಕರ್ಷಿಸುತ್ತಿದ್ದ ಪಾರ್ಸಿ ರಂಗಭೂಮಿಗೆ ಸಮನಾಗಿ ತಮ್ಮ ತಂಡವನ್ನು ಕಟ್ಟುವುದು ಕಷ್ಟವೆಂದು ಗೊತ್ತಿದ್ದರೂ ಅದಕ್ಕೆ ಸಾಟಿಯಾಗುವಂತಹ ತಂಡವನ್ನು ರೂಪಿಸಿದ ಯಶಸ್ಸು ಈ ಮಂಡಳಿಗೆ ಸಲ್ಲುತ್ತದೆ. ಅರಮನೆಯಲ್ಲಿ ವಿದ್ವಾಂಸರಾಗಿದ್ದ ಶ್ರೀ ಬಸವಪ್ಪ ಶಾಸ್ತ್ರಿಗಳ ಕೊಡುಗೆ ಅತ್ಯಂತ ಸ್ಮರಣೀಯ. ಈ ಸಂದರ್ಭದಲ್ಲಿ ಅತ್ಯಂತ ಆಕರ್ಷಕವಾಗಿ ಕನ್ನಡಕ್ಕೆ ಅನುವಾದಿಸಿದ ಸಂಸ್ಕೃತ ನಾಟಕಗಳು ಕನ್ನಡ ನಾಟಕ ಸಾಹಿತ್ಯಕ್ಕೆ ಒಂದು ತಳಹದಿಯಾಯಿತು. ಸ್ವತಃ **ಬಸವಪ್ಪ ಶಾಸ್ತ್ರಿಗಳೇ** ಚಾಮರಾಜೇಂದ್ರ ಕರ್ನಾಟಕ ನಾಟಕ ಸಭಾದ ಕಲಾವಿದರಿಗೆ ಅತ್ಯಂತ ವ್ಯವಸ್ಥಿತವಾಗಿ ರಂಗತಾಲೀಮು ಮಾಡಿಸಿ ಪಾರ್ಸಿ ರಂಗಭೂಮಿಯ ವೈಭವಕ್ಕೆ ಸರಿಸಾಟಿಯಾಗಿ ತಮ್ಮ ಸಾಹಿತ್ಯ ಮತ್ತು ಸಂಗೀತದ ಮೂಲಕ **ಶಾಕುಂತಲ** ನಾಟಕವನ್ನು

ಪ್ರದರ್ಶಿಸಿ ಜನಮನ ಗೆದ್ದರು. ಈ ನಾಟಕ ವರ್ಷಗಟ್ಟಲೆ ತುಂಬುಗೃಹಗಳಿಂದ ಪ್ರೇಕ್ಷಕರನ್ನು ತನ್ನೆಡೆಗೆ ಸೆಳೆಯುತ್ತಿತ್ತು. ಮೈಸೂರು, ಮಂಡ್ಯ, ಬೆಂಗಳೂರು ಮತ್ತಿತರ ಪ್ರಮುಖ ಸ್ಥಳಗಳಲ್ಲಿ ನೂರಾರು ಪ್ರದರ್ಶನಗಳನ್ನು ಕಂಡಿತು. ಬಿ. ರಾಚಪ್ಪ, ಚಿಕ್ಕರಾಮು, ಸುಬ್ಬರಾಯ ಮುಂತಾದವರು ಪ್ರಪ್ರಥಮವಾಗಿ ಈ ನಾಟಕದಲ್ಲಿ ಅಭಿನಯಿಸುವ ಮೂಲಕ ಮುಂದೆ ಪ್ರಖ್ಯಾತ ನಟರಾದರು. ಕನ್ನಡ ರಂಗಭೂಮಿಗೆ ವೀರಶೈವರ ಕೊಡುಗೆ ಇಲ್ಲಿಂದಲೇ ಪ್ರಾರಂಭವಾಯಿತು.

ಇದೇ ಸಂದರ್ಭದಲ್ಲಿ ಮೈಸೂರಿನಲ್ಲಿ ಪ್ರಾರಂಭವಾದ ಮತ್ತೊಂದು ಸಂಸ್ಥೆ "ರಾಜಧಾನಿ ನಾಟಕ ಮಂಡಳಿ". ಈ ನಾಟಕ ಮಂಡಳಿಗೆ ಮುಖ್ಯ ಚೇತನ ಎಂದರೆ ಮಾದಪ್ಪ ಶಾಸ್ತ್ರಿಗಳು. ಇವರು ರಚಿಸಿದ "ಮಕರಂದಿಕ ಪರಿಣಯ" ನಾಟಕ ಅತ್ಯಂತ ಜನಪ್ರಿಯವಾಯಿತು. ಚಾಮರಾಜ ನಾಟಕ ಮಂಡಳಿಗೆ ಮಹಾರಾಜರ ಆಶೀರ್ವಾದವಿದ್ದರೂ ಎರಡು ದಶಕಕ್ಕೂ ಹೆಚ್ಚು ಕಾಲ ಮಹತ್ತರ ನಾಟಕಗಳನ್ನು ಪ್ರದರ್ಶಿಸಿ ತನ್ನ ಸಂಸ್ಥೆಯ ಒಳಜಗಳದಿಂದ ಅಂತ್ಯವನ್ನು ಕಂಡಿತು. ರಾಜಧಾನಿ ಗೀತನಾಟಕ ಮೇಳ, ರಸಿಕ ಮನೋಲ್ಲಾಸಿನಿ ಸಭಾ, ಗೊಲ್ಲರಪೇಟೆ ನಾಟಕ ಸಭಾ, ಸಿಟಿ ಅಪೇರಾ... ಮುಂತಾದ ವೃತ್ತಿರಂಗಭೂಮಿ ತಂಡಗಳು ಹಳೇಮೈಸೂರಿನ ಭಾಗದಲ್ಲಿ ಪ್ರಾರಂಭವಾದರೂ ಅಲ್ಪಾಯುಷ್ಯವನ್ನು ಕಂಡು ಉತ್ತಮ ನಾಟಕಗಳನ್ನು ಪ್ರದರ್ಶಿಸಿದವು.

ಆದರ ಈ ಸಂಸ್ಥೆಗಳಂತೆ ಅಲ್ಪಾಯುಷ್ಯವನ್ನು ಕಾಣದೆ ಶತಮಾನೋತ್ಸವವನ್ನು ಆಚರಿಸಿಕೊಂಡು ಕರ್ನಾಟಕಕ್ಕಷ್ಟೇ ಅಲ್ಲದೆ ಭಾರತೀಯ ರಂಗಭೂಮಿಗೆ ಮಾದರಿಯಾಗಿದ್ದ "ಗುಬ್ಬಿ ಚನ್ನಬಸವೇಶ್ವರ ಕೃಪಾಪೋಷಿತ ನಾಟಕ ಸಂಘ" ೧೮೮೪ರಲ್ಲಿ ತುಮಕೂರಿನ ಜಿಲ್ಲೆಯ ಗುಬ್ಬಿ ಪಟ್ಟಣದಲ್ಲಿ ಶ್ರೀಚಂದಣ್ಣನವರಿಂದ ಪ್ರಾರಂಭಗೊಂಡಿತು. ಆದರೆ ಈ ಸಂಸ್ಥೆಗೆ ಖ್ಯಾತಿ ಹಾಗೂ ಕಾರ್ಯಕ್ಷಮತೆಯನ್ನು ತಂದುಕೊಟ್ಟರು ನಾಟಕರತ್ನ ಜಿ.ಹೆಚ್. ವೀರಣ್ಣನವರು. ಜಿ.ಹೆಚ್. ವೀರಣ್ಣನವರ ಮಾಲೀಕತ್ವದಲ್ಲಿ ಇಡೀ ರಾಷ್ಟ್ರವನ್ನೇ ಗಮನಸೆಳೆದ "ಚನ್ನಬಸವೇಶ್ವರ ನಾಟಕ ಮಂಡಳಿ" ಅತ್ಯಂತ ಪ್ರತಿಭಾನ್ವಿತ ನಟನಟಿಯರ ತಾಣವಾಗಿತ್ತು. ಭಕ್ತಶಿರೋಮಣಿ ಸಿ.ಬಿ. ಮಲ್ಲಪ್ಪ. ನಟಭಯಂಕರ ಗಂಗಾಧರರಾಯ, ಎಂ.ಎನ್. ಗಂಗಾಧರರಾಯರು, ಜಿ. ನಾಗೇಶರಾಯರು, ಮಳವಳ್ಳಿ ಸುಂದರಮ್ಮ... ಮುಂತಾದವರು ಪ್ರಾರಂಭದ ದಿನಗಳಲ್ಲಿ ತಮ್ಮ ಪ್ರತಿಭಾಪೂರ್ಣ ಅಭಿನಯ ನೀಡಿ ಸಂಸ್ಥೆಗೆ ಸೊಬಗನ್ನು ತಂದರು. ಕರ್ನಾಟಕ, ಆಂಧ್ರ, ತಮಿಳುನಾಡು ಮತ್ತು ಮಹಾರಾಷ್ಟ್ರಗಳಲ್ಲಿ ತಮ್ಮ ನಾಟಕ ಪ್ರದರ್ಶನ ಜಾಲವನ್ನು ವಿಸ್ತರಿಸಿಕೊಂಡ ಈ ಸಂಸ್ಥೆಯ ಮುಖ್ಯ ಜೀವಾಳ ಗುಬ್ಬಿ ವೀರಣ್ಣನವರು. ಕಂಪನಿಯ ಮಾಲೀಕರಾಗಿ, ನಟರಾಗಿ, ಹಲವು ಸಂದರ್ಭಗಳಲ್ಲಿ ನಿರ್ದೇಶಕರಾಗಿ ಈ ಸಂಸ್ಥೆಗೆ ತಮ್ಮ ಶಕ್ತಿಯನ್ನು ಧಾರೆಯೆರೆದರು.

ಬಾಲ್ಯದಲ್ಲಿಯೇ ಮಕ್ಕಳಿಗೆ ನಾಟಕದ ಅಭಿರುಚಿಯನ್ನು ಕಲಿಸುವ ದೃಷ್ಟಿಯಿಂದ "ಬಾಲಕಲಾವರ್ಧಿನಿ" ನಾಟಕ ಮಂಡಳಿಯನ್ನು ಗುಬ್ಬಿ ವೀರಣ್ಣನವರು ಸ್ಥಾಪಿಸಿದರು. ಈ ಸಂಸ್ಥೆಯಿಂದ ಮಕ್ಕಳೇ ಅಭಿನಯಿಸುತ್ತಿದ್ದ ಭಕ್ತ ಕಬೀರ, ಕೃಷ್ಣಲೀಲೆ, ಮುಂತಾದ ನಾಟಕಗಳನ್ನು ಕರ್ನಾಟಕದ ಹಲವು ಪ್ರದೇಶಗಳಲ್ಲಿ ಯಶಸ್ವಿಯಾಗಿ ಪ್ರದರ್ಶಿಸಿದರು. ಚನ್ನ ಬಸವೇಶ್ವರ ನಾಟಕ ಮಂಡಳಿ ಪ್ರದರ್ಶಿಸುತ್ತಿದ್ದ ಗುಲೇಬಕಾವಲಿ, ಪಾಂಡವವಿಜಯ, ಸತ್ಯಹರಿಶ್ಚಂದ್ರ, ಇಂದ್ರಸಭಾ, ಸದಾರಮೆ, ಕಬೀರ್‌ದಾಸ್, ಅಕ್ಕಮಹಾದೇವಿ, ಶ್ರೀಕೃಷ್ಣಲೀಲಾ ಮುಂತಾದ ನಾಟಕಗಳು ವರ್ಷಗಟ್ಟಲೇ ಪ್ರದರ್ಶನಗೊಳ್ಳುತ್ತಿದ್ದವು. ಕುರುಕ್ಷೇತ್ರ ನಾಟಕವನ್ನು ಬಿ. ಪುಟ್ಟಸ್ವಾಮಯ್ಯನವರಿಂದ ಬರೆಸಿ ಅಂದಿನ ಕಾಲಕ್ಕೆ ಬೃಹತ್ ಮೊತ್ತ ಎನ್ನಬಹುದಾದ ಮೂರು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ವೈವಿಧ್ಯಮಯ ರಂಗತಂತ್ರಗಳನ್ನು ಬಳಸಿ ನಾಟಕವನ್ನಾಗಿ ನಿರ್ಮಿಸಿದರು. ಜೀವಂತ ಆನೆ, ಕುದುರೆ, ರಥ ಮುಂತಾದುವುಗಳ ಜೊತೆಗೆ ಇನ್ನೂರಕ್ಕೂ ಹೆಚ್ಚು ಕಲಾವಿದರ ತಂಡ ನಾಟಕ ಪ್ರದರ್ಶನಗಳಲ್ಲಿ ಕಾರ್ಯನಿರ್ವಹಿಸುತ್ತಿತ್ತು. ಉತ್ತರ ಭಾರತದಲ್ಲಿ ಈ ನಾಟಕ ತಂಡ ತಮ್ಮ ಪ್ರದರ್ಶನಗಳನ್ನು ಮಾಡಲು ವಿಶೇಷ ರೈಲನ್ನೇ ಬಾಡಿಗೆ ಪಡೆದಿತ್ತು ಎಂದರೆ ಈ ಸಂಸ್ಥೆಯ ಶ್ರೀಮಂತಿಕೆ ಮತ್ತು ಖ್ಯಾತಿ ಅರ್ಥವಾಗುತ್ತದೆ. ಕನ್ನಡ ರಂಗಭೂಮಿಗೆ ಹೆಸರು ತಂದುಕೊಟ್ಟ ಬಹುತೇಕ ನಟರು ಮೂಡಿಬಂದದ್ದು ವೀರಣ್ಣನವರ ಗರಡಿಯಿಂದಲೇ. ನಟಸಾರ್ವಭೌಮ ರಾಜ್‌ಕುಮಾರ್ ಹಾಗೂ ಅವರ ತಂದೆ ಸಿಂಗಾನಲ್ಲೂರು

ಪುಟ್ಟಸ್ವಾಮಯ್ಯ, ಬಿ.ಎನ್. ಚಿನ್ನಪ್ಪ, ಶ್ರೀಕಂಠಾಚಾರ್ಯ, ಜಿ.ವಿ. ಅಯ್ಯರ್, ಬಾಲಕೃಷ್ಣ, ಪುಟ್ಟಬಸಪ್ಪ, ನರಸಿಂಹರಾಜು, ಮುರಾರಾಚಾರ್, ರಾಣಿಪಾರ್ಟ್‌ರಂಗಪ್ಪ, ನಾರಾಯಣನಾಯ್ಡು, ದಿವಂಗತ ಹಿರಣ್ಣಯ್ಯ, ಶೇಷಾಚಲಶೆಟ್ಟಿ ಮುಂತಾದ ಕಲಾವಿದೆಯರು ರೂಪುಗೊಂಡಿದ್ದು ಈ ಸಂಸ್ಥೆಯಲ್ಲಿಯೇ. ನಾಟಕಗಳ ರಚನೆಗೆ ಹೆಚ್ಚಿನ ಪ್ರೋತ್ಸಾಹ ಮತ್ತು ಮಹತ್ವವನ್ನು ಕೊಡುತ್ತಿದ್ದ ಗುಬ್ಬಿ ವೀರಣ್ಣನವರ ಒತ್ತಾಸೆಯೇ ಬೆಳ್ಳಾವೆ ನರಹರಿಶಾಸ್ತ್ರಿ ಮತ್ತು ಬಿ. ಪುಟ್ಟಸ್ವಾಮಯ್ಯನವರು ಅನೇಕ ಗಟ್ಟಿ ನಾಟಕಗಳನ್ನು ರಚಿಸಲು ಸಾಧ್ಯವಾಯಿತು. ಹೀಗೆ ಸ್ವತಃ ವೀರಶೈವರಾಗಿ ಚನ್ನಬಸವೇಶ್ವರ ನಾಟಕ ಮಂಡಳಿಯ ಮೂಲಕ ಬಸವಣ್ಣನವರ ಜಾತ್ಯಾತೀತ ಕಲ್ಪನೆಯನ್ನು ಆಚರಣೆಗೆ ತಂದ ಗುಬ್ಬಿ ವೀರಣ್ಣನವರು ಕರ್ನಾಟಕ ರಂಗಭೂಮಿಯಲ್ಲಿ ಎಂದೆಂದೂ ಅಮರರು. ಈ ಎಲ್ಲ ಸಾಧನೆಯನ್ನು ಗಮನಿಸಿಯೇ ಕರ್ನಾಟಕ ಸರ್ಕಾರ ಗುಬ್ಬಿ ವೀರಣ್ಣನವರ ಹೆಸರಿನಲ್ಲಿ ರಾಷ್ಟ್ರೀಯ ಪ್ರಶಸ್ತಿಯೊಂದನ್ನು ಸ್ಥಾಪಿಸಿದೆ. ಕನ್ನಡ ರಂಗಭೂಮಿಯ ಸರ್ವಾಂಗೀಣ ಅಭಿವೃದ್ಧಿಗೆ ಕೆಲಸ ಮಾಡುವ ರಂಗದಿಗ್ಗಜಗಳಿಗೆ ಈ ಪ್ರಶಸ್ತಿಯನ್ನು ಪ್ರತಿವರ್ಷ ಕೊಡಮಾಡಲಾಗುವುದು.

ಉತ್ತರ ಕರ್ನಾಟಕದಲ್ಲೂ ರಂಗಭೂಮಿಯ ಬೆಳವಣಿಗೆ ಇದೇ ಕಾಲಕ್ಕೆ ಸಮಾನಾಂತರವಾಗಿ ನಡೆಯುತ್ತಿತ್ತು. ಅಲ್ಲಿಯೂ ಸಹ ಪಾರ್ಸಿ ಮತ್ತು ಮರಾಠಿ ನಾಟಕಗಳ ಪ್ರಭಾವ ದಟ್ಟವಾಗಿದ್ದಾಗ ಶಾಂತಕವಿಗಳು (ಸಕ್ಕರಿ ಬಾಳಾಚಾರ್ಯ) ಪ್ರಾರಂಭಿಸಿದ "ವೀರನಾರಾಯಣಪ್ರಸಾದಿತ ಕೃತಪುರ ನಾಟಕ ಮಂಡಳಿ" ೧೮೭೯ರಲ್ಲಿ ತನ್ನ ಪ್ರದರ್ಶನಗಳನ್ನು ಅತ್ಯಂತ ಶಿಸ್ತಿನಿಂದ ಪ್ರದರ್ಶಿಸುತ್ತಿತ್ತು. ಜೊತೆಗೆ ಗುಳೇದಗುಡ್ಡದ ಬಾಲನಾಟಕ ಕಂಪನಿ, ಬೆಳಗಾವಿಯ ಅರಸಂಗಿ ನಾಟಕ ಕಂಪನಿ, ಧಾರವಾಡದ ತಂತುಪುರಾಣ ನಾಟಕ ಮಂಡಳಿ, ಮುಂತಾದ ಸಂಸ್ಥೆಗಳು ತಮ್ಮ ನಾಟಕಗಳನ್ನು ಪ್ರದರ್ಶಿಸುತ್ತಿದ್ದವು. ಇವೆಲ್ಲವೂ ಅತ್ಯಲ್ಪ ಕಾಲದಲ್ಲಿ ಅಂತ್ಯಗೊಂಡರೆ ೧೯೧೦ರಲ್ಲಿ ಸ್ಥಾಪಿತವಾದ ಗುಬ್ಬಿ ಕಂಪನಿಯಂತೆಯೇ ವಿಜೃಂಭಿಸಿದ ಉತ್ತರ ಕರ್ನಾಟಕದ ಮತ್ತೊಂದು ಸಂಸ್ಥೆ ಎಂದರೆ ವೀರಶೈವ ಸಮಾಜದ ಪ್ರಸಿದ್ಧ ನಾಟಕ ಶಿಕ್ಷಕ ಶಿವಮೂರ್ತಿಸ್ವಾಮಿ ಕಣಬರಗಿಮಠ ಪ್ರಾರಂಭಿಸಿದ "ಕೊಣ್ಣೂರಕರ ಸಂಗೀತ ನಾಟಕ ಮಂಡಳಿ" ಅಥವಾ "ಕಾಡಸಿದ್ದೇಶ್ವರ ಸಂಗೀತ ನಾಟಕ ಮಂಡಳಿ" ಕೊಣ್ಣೂರು, ಮೊದಲ ಬಾರಿಗೆ ಸ್ತ್ರೀಯನ್ನು ರಂಗಪ್ರವೇಶ ಮಾಡಿಸಿ ಅವರ ಅಭಿನಯದ ಮೂಲಕ ಪ್ರೇಕ್ಷಕರನ್ನು ರಂಜಿಸಿದರು. ಅಲ್ಲಿಯವರೆಗೆ ಉತ್ತರ ಕರ್ನಾಟಕದ ಬಹುತೇಕ ಕಂಪನಿಗಳಲ್ಲಿ ಪುರುಷರೇ ಸ್ತ್ರೀಪಾತ್ರಗಳನ್ನು ನಿರ್ವಹಿಸುತ್ತಿದ್ದರು.

ಹೀಗೆ ಸ್ತ್ರೀಯರನ್ನು ರಂಗಭೂಮಿಯಲ್ಲಿ ಪರಿಚಯಿಸಿದ ಖ್ಯಾತಿಯ ಜೊತೆಗೆ ಮತ್ತೊಂದು ಹೆಚ್ಚುಗಾರಿಕೆ ಎಂದರೆ ನಾಟಕದ ಪ್ರದರ್ಶನಕ್ಕೆ ಸ್ವಂತ ಡೈನಮೋ ಬಳಸಿ ವಿದ್ಯುತ್ ದೀಪಗಳನ್ನು ಬೆಳಗಿಸಿದ ಖ್ಯಾತಿ ಕಣಬರಗಿಮಠರದು. ಒಟ್ಟಿನಲ್ಲಿ ಅಂದಿನ ಮರಾಠಿ ಮತ್ತು ಪಾರ್ಸಿ ರಂಗಭೂಮಿಗೆ ಸಮನಾದ ಶ್ರೀಮಂತಿಕೆಯನ್ನು ತೋರಿದ ಸಂಸ್ಥೆ ಇದು. ತಮ್ಮ ಸಂಸ್ಥೆಯ ಏಳಿಗೆಗಾಗಿ ಮತ್ತು ರಂಗಭೂಮಿಯ ಉದ್ಧಾರಕ್ಕಾಗಿ ಕಳೆದುಕೊಂಡು ತಮ್ಮ ಜೀವನದಲ್ಲಿ ಬಡತನ ಕಂಡರೂ ರಂಗಭೂಮಿಯನ್ನು ಶ್ರೀಮಂತಗೊಳಿಸಿದ ಅಪರೂಪದ ವೃತ್ತಿರಂಗಭೂಮಿಯ ಮಾಲೀಕರಾಗಿ ಕನ್ನಡ ರಂಗಭೂಮಿಯಲ್ಲಿ ಚಿರಸ್ಥಾಯಿಯಾಗಿದ್ದಾರೆ.

೧೯೧೧ರಲ್ಲಿ ಲಿಂಗನಗೌಡ ಪಾಟೀಲರಿಂದ ಪ್ರಾರಂಭಗೊಂಡ ಹಲಗೇರಿಯ "ಹಾಲಸಿದ್ಧೇಶ್ವರ ಪ್ರಸಾದಿತ ಸಂಗೀತ ನಾಟಕ ಸಭಾ" ಸಾಮಾಜಿಕ, ಐತಿಹಾಸಿಕ ನಾಟಕಗಳಿಗೆ ಹೆಚ್ಚಿನ ಒತ್ತು ಕೊಟ್ಟ ಸಂಸ್ಥೆ. ವಿಡಂಬನೆ ಮತ್ತು ಹಾಸ್ಯದ ಮೂಲಕ ಸಮಾಜದ ಅಂಕುಡೊಂಕುಗಳನ್ನು ತಿದ್ದುವಲ್ಲಿ ಇಂದಿನ ಮಾಸ್ಟರ್ ಹಿರಣ್ಣಯ್ಯನವರ ಕಂಪನಿಯ ಹಾಗೆ ಕಾರ್ಯನಿರ್ವಹಿಸುತ್ತಿದ್ದ ಈ ಕಂಪನಿಗೆ ಮುಖ್ಯಶಕ್ತಿ ಎಂದರೆ ದೊಡ್ಡಜಟ್ಟಪ್ಪ ಮತ್ತು ಚಿಕ್ಕಜಟ್ಟಪ್ಪನವರುಗಳು. ಈ ಇಬ್ಬರು ವೀರಶೈವ ಸಹೋದರರ ನೇತೃತ್ವದಲ್ಲಿ ಈ ಕಂಪನಿ ಉತ್ತರ ಕರ್ನಾಟಕದ ಮನೆಮಾತಾಗಿತ್ತು. ಅಂದಿನ ಪ್ರಸ್ತುತ ವಿಚಾರಗಳನ್ನು ನಾಟಕಗಳಲ್ಲಿ ಅಳವಡಿಸಿಕೊಂಡು ಜನಮನವನ್ನು ಸೆಳೆಯುವಲ್ಲಿ ಯಶಸ್ವಿಯಾಗಿ ಅಪಾರ ಪ್ರೇಕ್ಷಕರನ್ನು ಹೊಂದಿರುವ ಸಂಸ್ಥೆಯೆಂದು ಹೆಸರಾಗಿತ್ತು. ಈ ಸಂಸ್ಥೆಯ ಜನಪ್ರಿಯತೆಯನ್ನು ಕಂಡು ಅಂದಿನ ಬ್ರಿಟಿಷ್ ಅಧಿಕಾರಿ ನಾಟಕದ ಕಂಪನಿಯ ಮೇಲೆ ವಿವಿಧ ರೀತಿಯ ನಿರ್ಬಂಧಗಳನ್ನು ಹೇರಲು ಪ್ರಾರಂಭಿಸಿದರು. ಆದರೆ ನಾಟಕದ ಪ್ರದರ್ಶನಗಳನ್ನು ತಡೆಯಲು ಆತನಿಗೆ ಸಾಧ್ಯವೇ ಆಗಲಿಲ್ಲ.

ಒಂದು ಊರಿನಲ್ಲಿ ತಡದರೆ ಮತ್ತೊಂದು ಊರಿಗೆ ಹೋಗಿ ಕ್ಯಾಂಪ್ ಹಾಕಿ ಬ್ರಿಟಿಷ್ ಅಧಿಕಾರಿಯ ಕಣ್ಣು ತಪ್ಪಿಸಿ ಸತತವಾಗಿ ನಾಟಕಗಳನ್ನು ಆಡುತ್ತಲೇ ಬಂದರು. ಜಟ್ಟಪ್ಪನವರ ಅಂತ್ಯವಾಗುತ್ತಲೇ ಕಂಪನಿಯ ಅಂತ್ಯವಾಯಿತು.

೧೯೩೭ರಲ್ಲಿ ಅಕ್ಕಂಡಿ ವೀರಪ್ಪನವರು ಸ್ಥಾಪಿಸಿದ "ವಿಶ್ವರಂಜನಿ ನಾಟಕ ಮಂಡಳಿ" ಅಭಿನಯವನ್ನೇ ಪ್ರಧಾನ ಮಾಡಿಕೊಂಡಿದ್ದ ನಾಟಕ ಸಂಸ್ಥೆ. ವಿವಿಧ ಸಮುದಾಯದ ಪ್ರಮುಖ ಕಲಾವಿದರನ್ನು ಸಂಘಟಿಸಿದ್ದ ಖ್ಯಾತಿ ಅಕ್ಕಂಡಿ ವೀರಪ್ಪನವರದು. ಅಂದಿನ ಕಾಲಕ್ಕೆ ನಟರಾಗಿ, ಗಾಯಕರಾಗಿ, ಪ್ರಸಿದ್ಧರಾಗಿದ್ದ ಹಂದಿಗನೂರು ಸಿದ್ಧರಾಮಪ್ಪನವರು ಈ ಸಂಸ್ಥೆಯ ಕಲಾವಿದರಾಗಿದ್ದರು. ತಮ್ಮ ಗಟ್ಟಿತನದ ಸಂಭಾಷಣೆ ಮತ್ತು ಗಾಯನ ಪಾಂಡಿತ್ಯದಿಂದಾಗಿ ಸಾಕಷ್ಟು ವರ್ಷ ಪೌರಾಣಿಕ ಮತ್ತು ಐತಿಹಾಸಿಕ ನಾಟಕಗಳ ಸಾರ್ವಭೌಮರಾಗಿದ್ದರು. ರಜಪೂತರಾಗಿದ್ದ ಹಂದಿಗನೂರು ಸಿದ್ಧರಾಮಪ್ಪನವರಿಗೆ ನಿರಂತರ ಪ್ರೋತ್ಸಾಹವಿತ್ತವರು ಅಕ್ಕಂಡಿ ವೀರಪ್ಪನವರು. ಹಾಗೆಯೇ ಮುಂದೆ ಸಿದ್ಧರಾಮಪ್ಪನವರು ತಮ್ಮದೇ ಆದ ಕಂಪನಿಯನ್ನು ಸ್ಥಾಪಿಸಿದಾಗ ಅವರ ಸಂಸ್ಥೆಯಲ್ಲಿ ಬಹುತೇಕ ಕಲಾವಿದರು ವೀರಶೈವವಾಗಿದ್ದುದು ಇನ್ನೊಂದು ವಿಶೇಷ. ಹಾಗೆಯೇ ಮತ್ತೊಬ್ಬ ವೀರಶೈವ ಮಾಲೀಕರಾದ ರಾಚಪ್ಪ ಹೋಳಗಿಯವರ "ಜ್ಞಾನೋದಯ ನಾಟ್ಯ ಸಂಘ"ದಲ್ಲೂ ಅಭಿನಯಿಸಿದ ಸಿದ್ಧರಾಮಪ್ಪನವರು ಆ ಸಂಸ್ಥೆಗೂ ಶಕ್ತಿಯನ್ನು ತುಂಬಿದರು.

ಇದೇ ಕಾಲಾವಧಿಯಲ್ಲಿ ಚಿಕ್ಕೋಡಿ ಶಿವಲಿಂಗ ಶಾಸ್ತ್ರಿಗಳ ಕಂಪನಿ ಬಹು ಯಶಸ್ವಿಯಾಗಿ ನಾಟಕಗಳನ್ನು ಪ್ರದರ್ಶಿಸುತ್ತಿತ್ತು. ಇವರ ನಾಟಕಗಳ ವಸ್ತು ಎಂದರೆ ದೇಶಭಕ್ತಿ. ಇವರು ಪ್ರದರ್ಶಿಸುತ್ತಿದ್ದ ವೀರರಾಣಿ ಕಿತ್ತೂರು ಚನ್ನಮ್ಮ ಅತ್ಯಂತ ಯಶಸ್ವಿ ನಾಟಕ. ಸ್ವಾತಂತ್ರ್ಯ ಸಂಗ್ರಾಮಕ್ಕೆ ಜನತೆಯನ್ನು ಪ್ರಚೋದಿಸುತ್ತಿದ್ದ ಈ ನಾಟಕಕ್ಕೆ ಬಹುತೇಕ ಉತ್ತರ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲೂ ಸಾರ್ವತ್ರಿಕವಾದಂತಹ ಬೆಂಬಲ ವ್ಯಕ್ತವಾಗುತ್ತಿತ್ತು. ಗಾಯನಕ್ಕೆ ಹೆಸರಾದ ಮಲ್ಲಿಕಾರ್ಜುನ ಮನ್ಸೂರರ ಸಂಬಂಧಿ ಶ್ರೀ ಬಸವರಾಜ ಮನ್ಸೂರು ಸ್ಥಾಪಿಸಿದ "ವಾಣಿವಿಲಾಸ ನಾಟಕ ಮಂಡಳಿ" ತಮ್ಮ ಸಂಗೀತಮಯ ನಾಟಕಗಳನ್ನು ಪ್ರದರ್ಶಿಸುವಲ್ಲಿ ಹೆಸರಾಗಿತ್ತು. ಹಾಗೆಯೇ ಪುರಾಸಿ ಭರಮಪ್ಪನವರ ನಾಟಕ ಮಂಡಳಿ, ಕವಲಿ ಚನ್ನಬಸಪ್ಪನವರ ಕಂಪನಿ, ಕಲಾಪ್ರಕಾಶ ನಾಟ್ಯ ಸಂಘ ಮುಂತಾದವು ವೀರಶೈವ ಮಾಲೀಕತ್ವದಲ್ಲಿ ನಡೆಯುತ್ತಿದ್ದು ಪೌರಾಣಿಕ ಮತ್ತು ಭಕ್ತಿಪ್ರಧಾನ ನಾಟಕಗಳನ್ನು ಅತ್ಯಂತ ಯಶಸ್ವಿಯಾಗಿ ಪ್ರದರ್ಶಿಸಿದವು.

ನಲವಡಿ ಶ್ರೀಕಂಠಶಾಸ್ತ್ರಿಗಳು ರಚಿಸಿದ ಹೇಮರೆಡ್ಡಿ ಮಲ್ಲಮ್ಮ ೭೫ ವರ್ಷಗಳಿಂದ ಸತತವಾಗಿ ಪ್ರದರ್ಶನಗೊಳ್ಳುತ್ತಿರುವ ನಾಟಕ. ಈಗಾಗಲೇ ಹಲವಾರು ಕಂಪನಿಗಳು ಈ ನಾಟಕಗಳನ್ನು ರಾಜ್ಯದ ಎಲ್ಲೆಡೆ ಪ್ರದರ್ಶಿಸಿ ಜನಪ್ರಿಯವಾಗಿಸಿವೆ. ಗದುಗಿನ ಪಂಚಾಕ್ಷರ ಗವಾಯಿಗಳು ಪ್ರಾರಂಭಿಸಿದ "ಶ್ರೀಕುಮಾರೇಶ್ವರ ಕೃಪಾ ಪೋಷಿತ ನಾಟಕ ಮಂಡಳಿ" ಹೇಮರೆಡ್ಡಿ ಮಲ್ಲಮ್ಮ ನಾಟಕವನ್ನು ಐದಾರು ವರ್ಷ ಪ್ರದರ್ಶಿಸಿ ಸಾವಿರಾರು ಪ್ರದರ್ಶನಗಳನ್ನು ನೀಡಿದೆ. ಭಕ್ತಿಪ್ರಧಾನವಾದ ಈ ನಾಟಕ ಗವಾಯಿಗಳ ಕಂಪನಿಗೆ ಹಣ ತರುವ ಅಕ್ಷಯ ಪಾತ್ರೆಯಾಗಿತ್ತು ಎಂದರೆ ತಪ್ಪೇನಿಲ್ಲ. ಅಂಥ ಕಲಾವಿದರ ಬಾಳಿಗೆ ಬೆಳಕು ನೀಡಿದವರು ಶ್ರೀಪಂಚಾಕ್ಷರ ಗವಾಯಿಗಳು. ಈಗಲೂ ಸಹ ಈ ಕಂಪನಿ ಆಗೊಂದು ಈಗೊಂದು ನಾಟಕ ಪ್ರದರ್ಶನವನ್ನು ಶ್ರೀಪುಟ್ಟರಾಜ ಗವಾಯಿಗಳ ನೇತೃತ್ವದಲ್ಲಿ ನೀಡುತ್ತಲೇ ಬರುತ್ತಿದೆ.

೧೯೪೦ರ ಸುಮಾರಿಗೆ ಪ್ರಾರಂಭವಾದ ಚಿತ್ತರಗಿ ಗಂಗಾಧರಶಾಸ್ತ್ರಿಗಳ "ಕುಮಾರವಿಜಯ ನಾಟ್ಯಸಂಘ" ಕರ್ನಾಟಕದಾದ್ಯಂತ ಪ್ರದರ್ಶನ ನೀಡಿ ಪ್ರೇಕ್ಷಕರ ಜನಮನ ಗೆದ್ದ ಸಂಸ್ಥೆ. ಉತ್ತಮ ಕಲಾವಿದರ ತಂಡವನ್ನು ಹೊಂದಿರುವ ಈ ಸಂಸ್ಥೆ ಇಂದೂ ಸಹ ಕ್ರಿಯಾಶೀಲವಾಗಿದೆ.

ದಾವಣಗೆರೆಯ ಕೆ.ಬಿ.ಆರ್. ನಾಟಕ ಕಂಪನಿ ಕಳೆದ ೫೫ ವರ್ಷಗಳಿಂದ ಸತತವಾಗಿ ನಾಟಕ ಪ್ರದರ್ಶನವನ್ನು ಮಾಡಿಕೊಂಡೇ ಬರುತ್ತಿರುವ ವೈಭವದ ಸಂಸ್ಥೆ. ದಿವಂಗತ ಚಿಂದೋಡಿ ವೀರಪ್ಪನವರು ಸ್ಥಾಪಿಸಿದ ಈ ಕಂಪನಿಯನ್ನು ಯಶಸ್ವಿಯಾಗಿ ಮುನ್ನಡೆಸಿದವರು ಶ್ರೀಮತಿ ಚಿಂದೋಡಿ ಲೀಲಾರವರು. ವೀರಶೈವ ಮಹಿಳೆಯೊಬ್ಬಳ ಮಾಲೀಕತ್ವದಲ್ಲಿ

ರಾಜ್ಯಾದ್ಯಂತ ನಾಟಕ ಪ್ರದರ್ಶನಗಳನ್ನು ನೀಡಿದ ಸಂಸ್ಥೆಯಿದು. ಈಕೆಯ ಸಂಘಟನಾಶಕ್ತಿ, ನಟನಾಚಾತುರ್ಯ, ಈಕೆಗೆ ಪದ್ಮಶ್ರೀ ಪ್ರಶಸ್ತಿಯ ಜೊತೆಗೆ ಕರ್ನಾಟಕ ನಾಟಕ ಅಕಾಡೆಮಿಯ ಅಧ್ಯಕ್ಷೆಯಾಗಿಯೂ ಕಾರ್ಯನಿರ್ವಹಿಸುವ ಅವಕಾಶವನ್ನು ತಂದುಕೊಟ್ಟಿತು. ದಿವಂಗತ ವೀರಪ್ಪನವರ ಅಭಿನಯಶೈಲಿಯನ್ನು ಮೆಚ್ಚಿದ ಮೈಸೂರು ಮಹಾರಾಜರು ತಮ್ಮ ಆಸ್ಥಾನಕ್ಕೆ ವೀರಪ್ಪನವರನ್ನು ಬರಮಾಡಿಕೊಂಡು ಅವರ ನಾಟಕ ಪ್ರದರ್ಶನವನ್ನು ಮಾಡಿಸಿ ಅವರ ಕೈಗೆ ಚಿನ್ನದ ತೋಡವನ್ನು ಸ್ವತಃ ತಾವೇ ಧರಿಸಿದರು. ಹಾಗಾಗಿಯೇ ವೀರಪ್ಪನವರಿಗೆ ಚಿನ್ನದ ತೋಡಿ ವೀರಪ್ಪ ಎಂದು ಹೆಸರಾಗಿ ನಂತರದ ದಿನಗಳಲ್ಲಿ ಚಿಂದೋಡಿವೀರಪ್ಪ ಎಂದು ಹೆಸರಾಯಿತು ಎನ್ನುತ್ತಾರೆ ಚಿಂದೋಡಿ ಲೀಲಾ. ಚಿಂದೋಡಿ ಈಗ ಒಂದು ರೀತಿಯಲ್ಲಿ ಅವರ ಮನೆತನದ ಹೆಸರಾಗಿದೆ. ಚಿಂದೋಡಿ ಬಂಗಾರೇಶ್, ಚಿಂದೋಡಿ ರಾಜು, ಚಿಂದೋಡಿ ಶಂಭು.... ಹೀಗೆ ಕಲಾವಿದರ ಪಟ್ಟಿ ಅದರ ಕಂಪನಿಯಲ್ಲಿ ಬೆಳೆಯುತ್ತಲೇ ಹೋಗುತ್ತಿದೆ. ಮೂರು ಬ್ರಾಂಚ್ ಕಂಪನಿಗಳನ್ನು ಹೊಂದಿರುವ ಕಂಪನಿಯ ಪ್ರಮುಖ ನಟಿಯಾಗಿ ಎಪ್ಪತ್ತು ವರ್ಷ ನೀರಿದ ಚಿಂದೋಡಿ ಲೀಲಾ ಈಗಲೂ ಪ್ರಮುಖ ಆಕರ್ಷಣೆ. ಆಕೆಯ ಕಿತ್ತೂರು ಚನ್ನಮ್ಮನ ಪಾತ್ರ, ಟಿಪ್ಪುಸುಲ್ತಾನನ ಪಾತ್ರ, ಪೋಲೀಸನ ಮಗಳಾಗಿ ಅಭಿನಯಿಸುವ ಪಾತ್ರ ಎಂಥವರನ್ನೂ ದಂಗುಬಡಿಸುತ್ತದೆ.

ಕಡಪಟ್ಟಿಯವರ "ಅಮರೇಶ್ವರ ನಾಟ್ಯಸಂಘ", ಜೋಳರಾಶಿ ದೊಡ್ಡನಗೌಡರು ಸ್ಥಾಪಿಸಿದ "ಮಿತ್ರಮಂಡಳಿ"ಗಳು ೧೯೪೫ರ ಆಸುಪಾಸಿನಲ್ಲಿ ಪ್ರಾರಂಭವಾಗಿ ಕರ್ನಾಟಕವಷ್ಟೇ ಅಲ್ಲದೆ ಆಂಧ್ರ ಮತ್ತು ಮಹಾರಾಷ್ಟ್ರಗಳಲ್ಲಿ ಪ್ರದರ್ಶಿಸಿದ್ದಾರೆ. ದೊಡ್ಡವಾಳು ಸಿದ್ಧಯ್ಯನವರ "ಸಮಾಜ ವಿಕಾಸ ನಾಟ್ಯಸಂಘ" ಈಗ ಕ್ರಿಯಾಶೀಲವಾಗಿಲ್ಲದಿದ್ದರೂ ಅಂದಿನ ದಿನಗಳಲ್ಲಿ ವೀರಶೈವ ಕಲಾವಿದರಿಂದಲೇ ಅನೇಕ ನಾಟಕಗಳನ್ನು ರಾಜ್ಯಾದ್ಯಂತ ಪ್ರದರ್ಶಿಸಿದೆ. ಈಗಲೂ ಸಹ ಅವರ ಮೊಮ್ಮಕ್ಕಳು ಆಗಾಗ ನಾಟಕ ಪ್ರದರ್ಶಿಸುತ್ತಲೇ ಇದ್ದಾರೆ. ಎಲಿವಾಳ ದೊಡ್ಡಯ್ಯನವರಂತೆ ಎಲಿವಾಳ ಸಿದ್ಧಯ್ಯನವರು ವೃತ್ತಿರಂಗಭೂಮಿಗಾಗಿಯೇ ತಮ್ಮನ್ನು ಸಮರ್ಪಿಸಿಕೊಂಡಿದ್ದಾರೆ. ಅವರ ವಂಶದ ಈಗಿನ ಕುಡಿಯಾಗಿರುವ ಜಗದೀಶ್ ಎಲಿವಾಳ (ಜಗ್ಗು ಜಾದೂಗಾರ್) ಬೇರೆ ಬೇರೆ ಕಂಪನಿಗಳಲ್ಲಿ ತಮ್ಮ ತಾಯಿಯೊಂದಿಗೆ ನಾಟಕ ಪ್ರದರ್ಶನವನ್ನು ಮಾಡುತ್ತಿದ್ದಾರೆ. ಮಳ್ಳಿಗೇರಿ ಪಂಚಯ್ಯನವರ ಕರ್ನಾಟಕ ನಾಟ್ಯಸಂಘ, ಗೋಕಾಕದ ಹೊಸಮನಿ ಸಹೋದರರ ಶಾರದ ನಾಟ್ಯಸಂಘ, ಸಿಂಧನೂರಿನ ಮೃಢದೇವ ಗವಾಯಿಗಳ ಕಂಪನಿ, ಸುಳ್ಳದ ದೇಸಾಯಿಯವರ ಶ್ರೀ ಶೈಲೇಶ್ವರ ನಾಟ್ಯಸಂಘ, ಗದುಗಿನ ವೀರೇಶ್ವರ ನಾಟ್ಯಸಂಘ, ಗುಡಗೇರಿ ಬಸವರಾಜರ ಶ್ರೀಸಂಗಮೇಶ್ವರ ನಾಟ್ಯಸಂಘ, ಬಿ.ಆರ್. ಅರಿಷಣಗೋಡಿಯವರ ಕಮತಗಿ ಹುಚ್ಚೇಶ್ವರ ನಾಟ್ಯ ಮಂಡಳಿ ಮುಂತಾದವುಗಳು ವೀರಶೈವರ ನೇತೃತ್ವ ಮತ್ತು ಅಭಿನಯದಲ್ಲಿ ಕಳೆದ ನಲವತ್ತು ವರ್ಷಗಳಿಂದ ಒಂದಿಲ್ಲೊಂದು ಊರುಗಳಲ್ಲಿ ತಮ್ಮದೇ ಆದ ಕ್ಯಾಂಪ್‌ಗಳನ್ನು ಮಾಡುತ್ತಾ ವೃತಿರಂಗಭೂಮಿಯನ್ನು ಜೀವಂತವಾಗಿವೆ. ಇಂದಿಗೂ ಉತ್ತರ ಕರ್ನಾಟಕದ ಯಾವುದೇ ಜಾತ್ರೆಯಾದರು ಈ ಸಂಸ್ಥೆಗಳು ತಮ್ಮ ನಾಟಕಗಳ ಮೂಲಕ ಪ್ರೇಕ್ಷಕರಿಗೆ ರಂಜನೆ ನೀಡುತ್ತಲೇ ಬರುತ್ತಿವೆ. ಅದರಲ್ಲೂ ಗುಡಗೇರಿ ಬಸವರಾಜರ ಸಂಗಮೇಶ್ವರ ನಾಟ್ಯ ಸಂಘ, ಅರಿಷಣಗೋಡಿಯವರ ಹುಚ್ಚೇಶ್ವರ ನಾಟಕ ಮಂಡಳಿ ಅತ್ಯಂತ ಪ್ರಸಿದ್ದ ತಂಡಗಳಾಗಿ ಹೊರಹೊಮ್ಮಿವೆ.

ಕಂಪನಿಯ ಮಾಲೀಕರಾಗಿ ಎಲ್ಲರನ್ನೂ ಸಮಾನಭಾವದಿಂದ ಕಂಡು ಯಶಸ್ವಿಯಾಗಿ ಕಂಪನಿಗಳನ್ನು ಜಾತ್ಯಾತೀತ ಸಂಸ್ಥೆಗಳನ್ನಾಗಿ ನಡೆಸಿದವರು ವೀರಶೈವರು. ತಮ್ಮ ಕಂಪನಿಗಳಲ್ಲಿ ಎಲ್ಲ ಜನಾಂಗದವರಿಗೆ ನೀಡುತ್ತಿದ್ದ ಪ್ರೋತ್ಸಾಹ ಮತ್ತು ಅವರು ಕೊಟ್ಟ ಆಶ್ರಯ ಯಾರೂ ಮರೆಯಲು ಸಾಧ್ಯವಿಲ್ಲ. ಹಾಗಾಗಿಯೇ ಈ ಕಂಪನಿಗಳು ಬೇರೆ ಕಂಪನಿಗಳಿಗೆ ಹೋಲಿಸಿದಾಗ ಅತ್ಯಂತ ಕ್ರಿಯಾಶೀಲವಾಗಿ ನಡೆಯುತ್ತಿದ್ದುದು ಲೋಕಸತ್ಯ. ಈ ಕಲಾವಿದರು ರಂಗಭೂಮಿಯ ಎಲ್ಲ ಪ್ರಕಾರದಲ್ಲೂ ಕಾರ್ಯನಿರ್ವಹಿಸಿದವರು. ಕೇವಲ ನಟನೆಗಷ್ಟೇ ಎಂದು ಸೀಮಿತವಾಗಿರಲಿಲ್ಲ. ಯಾವುದೇ ಕಂಪನಿಯಾಗಲಿ, ತಮ್ಮ ಮಾಲೀಕರಿಗೆ ಹೆಸರನ್ನು ಮತ್ತು ಯಶಸ್ಸನ್ನು ತಂದುಕೊಡುವಲ್ಲಿ ಕಂಕಣಬದ್ಧರಾಗಿ ದುಡಿಯುತ್ತಿದ್ದರು. ಗುಬ್ಬಿವೀರಣ್ಣನವರು ಹಾಸ್ಯ ಪಾತ್ರಗಳಿಗೆ ಹೆಸರಾದರೆ, ಕೀರೂರಿನ ಅದೃಶ್ಯಪ್ಪನವರು ಭೀಮನ ಪಾತ್ರಕ್ಕೆ ಹೆಸರಾಗಿದ್ದರು. ಕೊಟ್ಟೂರು ಬಸವರಾಜರಂತೂ (ಕೊಟ್ಟೂರಪ್ಪ)

ಕರ್ಣನ ಪಾತ್ರಕ್ಕೆ ಜೀವತುಂಬಿ ಅಭಿನಯಿಸುತ್ತಿದ್ದರು. ಅಭಿನವ ಕರ್ಣರೆಂದೇ ಖ್ಯಾತರಾಗಿದ್ದ ಕೊಟ್ಟೂರಪ್ಪನವರು ಕಂಠದಾನ ಮಾಡಿರುವ ಗ್ರಾಮಾಫೋನ್ ರೆಕಾರ್ಡ್‌ಗಳು ಕರ್ನಾಟಕದ ಬಹುತೇಕ ಹಳ್ಳಿಹಳ್ಳಿಗಳಲ್ಲಿ 'ದಾನಶೂರಕರ್ಣ'ದ ಮೂಲಕ ಹೊರಹೊಮ್ಮಿವೆ. ದೊಡ್ಡವಾಳ ಸಿದ್ಧಯ್ಯನವರು ಹಾಗೂ ಏಣಗಿ ಬಾಳಪ್ಪನವರ ಬಸವೇಶ್ವರರ ಪಾತ್ರಗಳೂ ಸದಾ ನೆನಪಿನಲ್ಲಿ ಉಳಿಯುವಂಥವು.

ಇಂದೂ ಸಹ ಅನೇಕ ಮನೆಗಳಲ್ಲಿ ಬಸವೇಶ್ವರರ ಭಾವಚಿತ್ರವೆಂದರೆ ಅದು ಈ ಇಬ್ಬರು ಕಲಾವಿದರ ಭಾವಚಿತ್ರವೇ ಆಗಿದೆ. ಲಕ್ಷ್ಮೇಶ್ವರ ಶಿವಯ್ಯನವರ ಶಿವನ ಪಾತ್ರ, ಹಳ್ಳಿಗುಡಿ ಸದಾಶಿವಪ್ಪನವರ ಕೊಂಡಿಮಂಚಣ್ಣ ಪಾತ್ರ, ಹಾವೇರಿ ಚಂದ್ರಶೇಖರಯ್ಯನವರ ಶಕುನಿ ಪಾತ್ರ, ಹಡಗಲಿ ವೀರಭದ್ರಪ್ಪನವರ ಟಿಪ್ಪುಸುಲ್ತಾನ್ ಪಾತ್ರ, ನ್ಯಾಮತಿ ಶಾಂತಪ್ಪನವರ ಮೀರ್‌ಸಾದಕ್ ಪಾತ್ರ, ನರೇಗಲ್‌ದ ಚನ್ನಬಸವಾಚಾರ್ಯರ ಭರಮರೆಡ್ಡಿ ಕೃಷ್ಣನ ಪಾತ್ರ... ಮುಂತಾದ ಪಾತ್ರಗಳು ವೀರಶೈವ ಕಲಾವಿದರ ಪ್ರತಿಭೆಗೆ ಒಂದು ಉದಾಹರಣೆಯಷ್ಟೇ. ಮಲ್ಲಿಕಾರ್ಜುನ ಮನ್ಸೂರ್, ಏಣಗಿ ಬಾಳಪ್ಪ, ಬಸವರಾಜ ಮನ್ಸೂರ್, ಬಾಳಪ್ಪ ಹುಕ್ಕೇರಿ, ಪಂಚಾಕ್ಷರಿಸ್ವಾಮಿ ಮತ್ತಿಗಟ್ಟಿ, ಪುಟ್ಟರಾಜಗವಾಯಿಗಳು, ಚಿತ್ತರಗಿ ಮುಪ್ಪಯ್ಯಸ್ವಾಮಿಗಳು, ಮುದೇನಗುಡಿ ಶಿವಯ್ಯಸ್ವಾಮಿಗಳು, ಮಾ.ಭ. ಸೋಮಣ್ಣ, ಮುಧೋಳ ವೀರಪ್ಪ, ಫಕೀರಪ್ಪ ಮುಂತಾದವರು ತಮ್ಮ ಮಾಧುರ್ಯಪೂರ್ಣ ಸಂಗೀತಸುಧೆಯನ್ನು ಹರಿಸಿ ವೃತ್ತಿರಂಗಭೂಮಿಗೆ ಗಾಯನದ ಗುಂಗನ್ನು ನೀಡಿದ್ದಾರೆ. ಇನ್ನು ಸ್ತ್ರೀಪಾತ್ರಗಳಲ್ಲಿ ಹಮ್ಮಿಗೆ ನೀಲಕಂಠಪ್ಪ, ಶಿವಯ್ಯನವರಂತೂ ಅತ್ಯಂತ ಪ್ರಸಿದ್ಧರಾಗಿದ್ದರು. ಸ್ಫುರದ್ರೂಪಿಗಳಾಗಿದ್ದ ಈ ವೀರಶೈವ ಯುವ ಕಲಾವಿದರು ತಾವು ಸ್ತ್ರೀ ಪಾತ್ರ ಮಾಡಿ ವಾಪಸ್ಸು ಮನೆಗೆ ಹೋಗುತ್ತಿದ್ದರೆ ಅನೇಕ ಯುವಕರು ಇವರು ನಿಜವಾದ ಹುಡುಗಿಯರೇ ಎಂದು ಭಾವಿಸಿ ಅವರನ್ನು ಹಿಂಬಾಲಿಸುತ್ತಿದುದು ಉಂಟು. ಹೀಗೆ ತಮ್ಮನ್ನು ತಾವು ಪಾತ್ರಗಳಿಗೆ ಅರ್ಪಿಸಿಕೊಂಡಿದ್ದ ಕಲಾವಿದರು ಇವರು. ಗುಬ್ಬಿ ಕಂಪನಿಯ ಸ್ವರ್ಣಮ್ಮ, ಮಾಲತಮ್ಮ, ಜಯಮ್ಮ, ಚಿಂದೋಡಿ ಲೀಲಾ ಮುಂತಾದ ಕಲಾವಿದೆಯರು ತಮ್ಮ ಭಾವಪೂರ್ಣ ಅಭಿನಯದ ಮೂಲಕ ಖ್ಯಾತರಾದವರು. ಹೀಗೆ ನೂರಾರು ವೀರಶೈವ ನಟ ನಟಿಯರು ತಮ್ಮ ವರ್ಣಮಯ ಪ್ರತಿಭೆಯ ಮೂಲಕ ವೃತ್ತಿ ರಂಗಭೂಮಿಯ ಅಭಿವೃದ್ಧಿಗೆ ಕಾರಣರಾಗಿದ್ದಾರೆ.

ಮೊದಲೇ ಹೇಳಿದ ಹಾಗೆ ಅಭಿನವ ಕಾಳಿದಾಸ ಎಂದೇ ಖ್ಯಾತನಾಮರಾಗಿದ್ದ ಬಸವಪ್ಪಶಾಸ್ತ್ರಿಗಳಿಂದ ಪ್ರಾರಂಭಗೊಳ್ಳುವ ಐವತ್ತಕ್ಕೂ ಹೆಚ್ಚು ವೃತ್ತಿ ನಾಟಕಕಾರರು ತಮ್ಮ ಕಲಾಕೃತಿಗಳ ಮೂಲಕ ವೃತ್ತಿ ರಂಗಭೂಮಿಯನ್ನು ಬೆಳಗಿದ್ದಾರೆ. 'ಸ್ತ್ರೀವಿಜಯ'ದ ಕರ್ತೃ ತಮ್ಮಣ್ಣಪ್ಪ ಚಿಕ್ಕೋಡಿಯವರು, ಶಿಕ್ಷಣಾಧಿಕಾರಿಯಾಗಿ ಪ್ರಸಿದ್ದರಾಗಿದ್ದ ಡೆಪ್ಯೂಟಿ ಚನ್ನಬಸಪ್ಪನವರು, ಮ್ಯಾಕ್‌ಬೆತ್ ನಾಟಕವನ್ನು ಕನ್ನಡೀಕರಿಸಿ ಯಶಸ್ವಿಯಾದರೆ, ಜೋಳದರಾಶಿ ದೊಡ್ಡಣ್ಣಗೌಡರ ಕಬೀರ ಮತ್ತು ಕನಕದಾಸ ನಾಟಕಗಳು ಅತ್ಯಂತ ಜನಪ್ರಿಯವಾಗಿದ್ದವು. ನಲವಡಿ ಶ್ರೀಕಂಠಶಾಸ್ತ್ರಿಗಳು ಕರ್ನಾಟಕದ ಕವಿಚಂದ್ರ ಎಂದೇ ಖ್ಯಾತರು. ಇವರ ಹೇಮರೆಡ್ಡಿ ಮಲ್ಲಮ್ಮ ದಾಖಲೆಯ ಪ್ರದರ್ಶನಗಳನ್ನು ಕಂಡಿದೆ. ಇನ್ನೂ ಜೂಬಿಲಿ ಕವಿ ಎಂದೇ ಹೆಸರಾದ ಎಚ್.ಎನ್. ಹೂಗಾರರ ಸಾಮಾಜಿಕ ನಾಟಕಗಳು ಈಗಲೂ ಜನಪ್ರಿಯ. ದೀಪಾವಳಿ, ಬೂದಿ ಮುಚ್ಚಿದ ಕೆಂಡ, ಸೊಸೆ ತಂದ ಸೌಭಾಗ್ಯ ಮುಂತಾದುವು ಹೂಗಾರರಿಗೆ ಹೆಸರನ್ನು ತಂದುಕೊಟ್ಟವು. ಪುಟ್ಟರಾಜ ಗವಾಯಿಗಳ ಅಕ್ಕಮಹಾದೇವಿಯಂತೂ ಸಂಗೀತಮಯ ನಾಟಕವಾಗಿ ಎಲ್ಲೆಡೆ ಪ್ರಸಿದ್ಧವಾಯಿತು. ಬಿ.ಆರ್. ಅರಿಷಿಣಗೋಡಿಯವರ ಸಾಮಾಜಿಕ ನಾಟಕಗಳು ಮತ್ತು ಸಂಗಮೇಶ ಗುರುವ ಅವರ ಐತಿಹಾಸಿಕ ಹಾಗೂ ಸಾಮಾಜಿಕ ನಾಟಕಗಳು ಈಗಲೂ ಹಲವು ಕಂಪನಿಗಳಲ್ಲಿ ಪ್ರದರ್ಶನಗೊಳ್ಳುತ್ತಿವೆ. ಇತ್ತೀಚಿನ ದಿನಗಳಲ್ಲಿ ಸೊರಗುತ್ತಿರುವ ವೃತ್ತಿ ರಂಗಭೂಮಿ ಸಂಸ್ಕೃತಿಯನ್ನು ಈಗಲೂ ತಮ್ಮ ಸ್ವಂತ ಶಕ್ತಿಯಿಂದ ನಡೆಸುತ್ತಿದ್ದರೆ ಅದರಲ್ಲಿ ಬಹುಪಾಲು ಕೊಡುಗೆ ವೀರಶೈವರದು ಎಂಬುದು ಯಾರೂ ಅಲ್ಲಗಳೆಯಲಾಗದ ಅಂಶ.

ಹೊಟ್ಟೆಪಾಡಿಗಾಗಿ ತಮ್ಮ ನಿತ್ಯದ ಬದುಕಿಗಾಗಿ ರಂಗಭೂಮಿಯನ್ನು ಅವಲಂಬಿಸಿದೆ ಕೇವಲ ತಮ್ಮ ಸಂತೋಷ ಮತ್ತು ಬೇರೆಯವರಿಗೆ ಸಾಮಾಜಿಕ ಶಿಕ್ಷಣವನ್ನು ನೀಡುವ ನಿಟ್ಟಿನಲ್ಲಿ ತೊಡಗಿಸಿಕೊಂಡಿರುವ ಹವ್ಯಾಸಿ ರಂಗಭೂಮಿ ಒಂದು

ರೀತಿಯ ಜ್ಞಾನದ ಕಲ್ಯಾಣಿ ಎಂದೇ ಹೇಳಬಹುದಾದ ರಂಗಮಂಚ. ರಂಗಭೂಮಿಗೆ ಮೌಲ್ಯವನ್ನು ತಂದುಕೊಟ್ಟ ಸಾಮಾಜಿಕ ಬದ್ಧತೆಯನ್ನು ನೇರವಾಗಿ ಅಳವಡಿಸಿಕೊಂಡು ಮೌಢ್ಯತೆ, ಮೂಢನಂಬಿಕೆ, ಸರ್ಕಾರಿ ಭ್ರಷ್ಟ ವ್ಯವಸ್ಥೆ, ಸಾಮಾಜಿಕ ಪಿಡುಗುಗಳ ವಿರುದ್ಧ ಸತತವಾಗಿ ಧ್ವನಿ ಎತ್ತುತ್ತಲೇ ಬರುತ್ತಿರುವುದು ಬಹುಮುಖ್ಯ ಅಂಶ. ಸಾಹಿತ್ಯಕ್ಕೆ ಹೆಚ್ಚು ಒತ್ತನ್ನು ಕೊಟ್ಟು ಅದನ್ನು ಚೇತೋಹಾರಿಯನ್ನಾಗಿ ರಂಗಭೂಮಿಗೆ ತರುವಲ್ಲಿ ಪ್ರಧಾನವಾಗಿ ಪೋಷಿಸಿದವರು ಕಾಲೇಜು ಶಿಕ್ಷಕರು, ಶಾಲಾ ಉಪಾಧ್ಯಾಯರು, ಕಾರ್ಖಾನೆಗಳ ಕಾರ್ಮಿಕರು, ಬ್ಯಾಂಕ್ ಉದ್ಯೋಗಿಗಳು ಹಾಗೂ ವಿದ್ಯಾರ್ಥಿ ವೃಂದ. ತಮ್ಮ ಬಿಡುವಿನ ವೇಳೆಯನ್ನು ಅತ್ಯಂತ ಅರ್ಥಪೂರ್ಣವಾಗಿ ವ್ಯಯಿಸಲು ಕಂಡುಕೊಂಡ ಮಾಧ್ಯಮವೇ ಹವ್ಯಾಸಿ ರಂಗಭೂಮಿ. ಭಾರತೀಯ ಹವ್ಯಾಸಿ ರಂಗಭೂಮಿಯ ಬೆಳವಣಿಗೆಯಲ್ಲಿ ಕರ್ನಾಟಕದ ಪಾತ್ರ ಬಹು ದೊಡ್ಡದು. ಕರ್ನಾಟಕದ ರಂಗಭೂಮಿ ಎಂದರೆ ಅದೊಂದು ವೈಚಾರಿಕ ಚಿಂತನೆಯ ಕೇಂದ್ರ. ಕರ್ನಾಟಕದ ಸಂದರ್ಭದಲ್ಲಿ ಹವ್ಯಾಸಿ ರಂಗಭೂಮಿಯ ಬೆಳವಣಿಗೆಯಲ್ಲಂತೂ ವೀರಶೈವರ ಕೊಡುಗೆ ಗಮನಾರ್ಹವಾದುದು. ಅದರಲ್ಲೂ ವಿಶೇಷವಾಗಿ ನಾಟಕಕಾರರದ್ದು. ಸಾಹಿತ್ಯದ ಒಂದು ಭಾಗವನ್ನಾಗಿ ನಾಟಕ ಸಾಹಿತ್ಯಕ್ಕೆ ಮೌಲ್ಯವನ್ನು ತಂದುಕೊಟ್ಟವರೇ ಇವರುಗಳು.

ಕನ್ನಡ ಪತ್ರಿಕೋದ್ಯಮ ಮತ್ತು ಕಾವ್ಯಕ್ಷೇತ್ರಗಳಲ್ಲಿ ತಮ್ಮ ಶಕ್ತಿಯನ್ನು ಮೆರೆದಿರುವ ಪಿ. ಲಂಕೇಶರು ರಂಗಭೂಮಿಗೂ ನಾಟಕಕಾರರಾಗಿ ಮಹತ್ವದ ಕಾಣಿಕೆಯನ್ನು ನೀಡಿದ್ದಾರೆ. ಲಂಕೇಶರು ರಚಿಸಿದ ಸಂಕ್ರಾಂತಿ ಬಸವಣ್ಣನವರ ಜೀವನ ಚಿತ್ರಣ, ೧೨ನೆಯ ಶತಮಾನದ ಶರಣರ ಸಂಘರ್ಷವನ್ನು ಅತ್ಯಂತ ಯಶಸ್ವಿಯಾಗಿ ನಿರೂಪಿಸುತ್ತದೆ. ಹಾಗೆಯೇ ಗುಣಮುಖ, ತೆರೆಗಳು ನಾಟಕ ಲಂಕೇಶರ ಪ್ರತಿಭೆಯ ವಿವಿಧ ಮುಖಗಳನ್ನು ಬಿಚ್ಚಿಡುತ್ತವೆ. ಟಿ. ಪ್ರಸನ್ನನ ಗೃಹಸ್ಥಾಶ್ರಮ ನಾಟಕ ಬಹುಶಃ ಲಂಕೇಶರ ಮೊದಲ ನಾಟಕವೆಂದು ಕಾಣುತ್ತದೆ. ಈ ನಾಟಕ ನಮ್ಮೊಳಗೆ ಹುದುಗಿರುವ ಅನೇಕ ಪ್ರಶ್ನೆಗಳನ್ನು ಹೊರಗೆಳೆಯುತ್ತದೆ. ಸಮಾಜವಾದವನ್ನು ಸಮರ್ಥವಾಗಿ ತಮ್ಮ ನಾಟಕಗಳಲ್ಲಿ ಪ್ರತಿಪಾದಿಸುವ ಲಂಕೇಶರಿಗೆ ಈ ಸಮಾಜದ ಬಗ್ಗೆ, ಬಡವರ ಬಗ್ಗೆ ಇರುವ ಆಳವಾದ ಚಿಂತನೆ ಈ ನಾಟಕಗಳಲ್ಲಿ ಪ್ರಕಾಶಗೊಳ್ಳುತ್ತದೆ. ಮಧ್ಯಮವರ್ಗದ ಆಶಯಗಳನ್ನು ಪ್ರತಿಬಿಂಬಿಸುವ ನಾಟಕವೇ ಗಿಳಿಯು ಪಂಜರದೊಳಗಿಲ್ಲ ಮತ್ತು ಬಿರುಕು. ಲಂಕೇಶರ ಈ ಎರಡು ನಾಟಕಗಳು ೭೦ರ ದಶಕದಲ್ಲಿ ಬಹುತೇಕ ಎಲ್ಲ ಕಾಲೇಜುಗಳ ವಿದ್ಯಾರ್ಥಿಗಳಿಂದಲೂ ಅಭಿನಯಿಸಲ್ಪಡುತ್ತಿದ್ದವು. ಪೋಲೀಸರಿದ್ದಾರೆ ಎಚ್ಚರಿಕೆ! ಸಿದ್ಧತೆ, ಕ್ರಾಂತಿ ಬಂತು ಕ್ರಾಂತಿ, ಮುಂತಾದವು ಲಂಕೇಶರ ಅಸಂಗತ ನಾಟಕಗಳಾದರು ಕುತೂಹಲವನ್ನು ಉಳಿಸಿಕೊಳ್ಳುವಲ್ಲಿ ಅತ್ಯಂತ ಯಶಸ್ವಿಯಾಗಿವೆ.

ಲಂಕೇಶರಂತೆಯೇ ಸಾಹಿತ್ಯ ಕ್ಷೇತ್ರದಲ್ಲಿ, ಅದರಲ್ಲೂ ಬಂಡಾಯ ಸಾಹಿತಿಗಳಾಗಿ ಪ್ರಸಿದ್ಧರಾದ ಚಂದ್ರಶೇಖರ ಪಾಟೀಲರು ಅನೇಕ ಏಕಾಂಕ ನಾಟಕಗಳನ್ನು ಮತ್ತು ಅಸಂಗತ ನಾಟಕಗಳನ್ನು ರಚಿಸಿದ್ದಾರೆ. ವ್ಯಂಗ್ಯ ಮತ್ತು ಹಾಸ್ಯದ ಸ್ಪರ್ಶವಿರುವ ಇವರ ನಾಟಕಗಳು ವಸ್ತುವಿನ ದೃಷ್ಟಿಯಿಂದ ಅತ್ಯಂತ ಮುಖ್ಯವಾಗುತ್ತವೆ. ಬದುಕಿನ ದುರಂತವನ್ನು ತಾವು ಮಾಡುವ ತಪ್ಪುಗಳನ್ನು ತಾವೇ ಯೋಚಿಸುವ ನೆರೆಯಲ್ಲಿ ರಚಿಸಿರುವ ಟಿಂಗರ ಬುಡ್ಡಣ್ಣ, ಬದುಕಿನ ವಿವಿಧ ಮುಖಗಳನ್ನು ಪರಿಚಯಿಸುವ ಗೋಕರ್ಣದ ಗೌಡಶಾನಿ ಅಸಂಗತ ನಾಟಕಗಳಾದ ಕೊಡೆಗಳು, ಕುಂಟ ಕುಂಟ ಕುರುವತ್ತಿ, ಗುರ್ತಿನವರು, ಸರ್ವಾಧಿಕಾರಿ ಧೋರಣೆ ವಿರುದ್ಧ ಜಗದಂಬೆಯ ಬೀದಿನಾಟಕ, ಮೂಢನಂಬಿಕೆ ವಿರುದ್ಧದ ಬುರುಡಿಬಾಬನ ಲಕ್ಷಾಪಹರಣ.... ಮುಂತಾದ ನಾಟಕಗಳು ಗಮನ ಸೆಳೆಯುತ್ತವೆ. ಹೆಚ್, ತಿಪ್ಪೇರುದ್ರಸ್ವಾಮಿಯವರ ನಿಜಗುಣ ಶಿವಯೋಗಿ, ಜಿ.ಎಸ್. ಶಿವರುದ್ರಪ್ಪನವರ ಮಹಾಸಂಗಮ, ವಚನ ಚಳುವಳಿಯನ್ನು ಪ್ರತಿಬಿಂಬಿಸುವ ನಾಟಕಗಳಾಗಿದ್ದರೆ, ಡಾ. ಪ್ರಭುಶಂಕರ ಆಮ್ರಪಾಲಿ ಮತ್ತು ಅಂಗುಲಿಮಾಲ ಬೌದ್ಧ ವಿಚಾರಧಾರೆಯನ್ನು ಪ್ರತಿಬಿಂಬಿಸುತ್ತವೆ.

ರಂಗಭೂಮಿಯ ಮುಖ್ಯವಾಹಿನಿಯಲ್ಲಿ ಕಾಣಬಹುದಾದ ಮತ್ತೊಬ್ಬ ಪ್ರತಿಭಾಶಾಲಿ ನಾಟಕಗಾರನೆಂದರೆ ಕವಿಯಾಗಿಯೂ ಖ್ಯಾತರಾಗಿದ್ದ ಹೆಚ್.ಎಸ್. ಶಿವಪ್ರಕಾಶ. ಈಗಾಗಲೇ ಶಿವಪ್ರಕಾಶರ ನಾಟಕಗಳು ಬಹುತೇಕ ಭಾರತೀಯ ಭಾಷೆಗಳಿಗೆ ಅನುವಾದಗೊಂಡಿರುವ ಗಮನಿಸಬೇಕಾದ ಅಂಶ. ಕಾಲಕ್ಷೇತ್ರದಲ್ಲಿ ತಮ್ಮದೇ ಆದ ವೈಚಾರಿಕ ಛಾಪನ್ನು ಮೂಡಿಸಿದ ಕವಿ

ಹೆಚ್.ಎಸ್. ಶಿವಪ್ರಕಾಶರು ತಮ್ಮ ಮಹಾಚೈತ್ರ ನಾಟಕದ ಮೂಲಕ ಹವ್ಯಾಸಿ ರಂಗಭೂಮಿಯ ನಾಟಕಕಾರರಾಗಿ ಮಹತ್ವದ ಘಟ್ಟವೊಂದರ ನಿರ್ಮಾಣಕ್ಕೆ ಕಾರಣರಾಗುತ್ತಾರೆ. ಶರಣ ಚಳುವಳಿ, ಬಿಜ್ಜಳನ ವಿರುದ್ಧದ ಬಂಡಾಯ, ಬಸವಣ್ಣನ ಸಾಮಾಜಿಕ ಕಳಕಳಿ ಜೊತೆಗೆ ಪುರೋಹಿತಶಾಹಿ ವರ್ಗದೊಂದಿಗೆ ಸೆಣಸುವ ಸಂಘರ್ಷ, ಕೊನೆಗೆ ಅಸಹಾಯಕತನ, ಇವೆಲ್ಲ ವಿಚಾರವನ್ನು ಅತ್ಯಂತ ಕಾವ್ಯಮಯವಾಗಿ ಜಾನಪದೀಯ ಹಿನ್ನೆಲೆಯಲ್ಲಿ ಆಕರ್ಷಕ ಬಂಧಗಳೊಡನೆ ನಾಟಕವನ್ನು ರೂಪಿಸಿದ್ದಾರೆ. ಪ್ರೇಕ್ಷಕರ ಕಣ್ಣಿಗೆ ದೃಶ್ಯರಂಜನೆ ಮಾತ್ರವಲ್ಲ, ಮೆದುಳಿಗೆ ವೈಚಾರಿಕ ಚಿಂತನೆಯನ್ನು ಈ ನಾಟಕ ನೀಡುತ್ತದೆ. ಇತಿಹಾಸ, ಪುರಾಣ, ಜಾನಪದ ಮತ್ತು ಪ್ರಸ್ತುತ ವಿಚಾರಗಳನ್ನು ಒಂದಕ್ಕೊಂದು ಹೋಲಿಸಿ ನಾಟಕ ಹೆಣೆಯುವ ಶಿವಪ್ರಕಾಶರ ಕಲಾಪ್ರೌಢಿಮೆ ಅಪ್ರತಿಮ. ಗಿರೀಶಕಾರ್ನಾಡ್ ಮತ್ತು ಕಂಬಾರರಷ್ಟೇ ಸಮರ್ಥ ನಾಟಕಕಾರರಾಗಿ ಪರಿಗಣಿಸುವ ಶಿವಪ್ರಕಾಶರು ಸದ್ಯಕ್ಕೆ ನವದೆಹಲಿಯ ಜವಹರಲಾಲ್ ವಿಶ್ವವಿದ್ಯಾನಿಲಯದ ನಾಟಕವಿಭಾಗದ ಮುಖ್ಯಸ್ಥರಾಗಿದ್ದಾರೆ. ಮಹಾಚೈತ್ರದ ನಂತರ ರಚಿಸಿದ ಸುಲ್ತಾನ್‌ಟಿಪ್ಪು, ಮಲ್ಲಮ್ಮನ ಮನೆಹೋಟ್ಲು, ಮದುರೈ ಕಾಂಡ, ಮಾದಾರಿ ಮಾದಯ್ಯ, ಮಾರನಾಯಕ, ಮಕರಚಂದ್ರ, ಷೇಕ್ಸ್‌ಪಿಯರ್ ಸ್ವಪ್ನನೌಕೆ -ಮುಂತಾದ ನಾಟಕಗಳು ಕರ್ನಾಟಕವಷ್ಟೇ ಅಲ್ಲ ಭಾರತೀಯ ರಂಗಭೂಮಿಯ ಅನೇಕ ಪ್ರಸಿದ್ಧ ತಂಡಗಳು ಅಭಿನಯಿಸಿವೆ. ಶಿವಪ್ರಕಾಶರ ಮತ್ತೊಂದು ಮಹತ್ತರ ನಾಟಕ ಹಳೆಯ ಮೈಸೂರು ಭಾಗದ ಅನುಭಾವಿ ಮಂಟೇಸ್ವಾಮಿಯನ್ನು ಕುರಿತ ಮಂಟೇಸ್ವಾಮಿ ಕಥಾಪ್ರಸಂಗ ನಾಟಕ ಪ್ರಯೋಗ ರಂಗತಂಡದಿಂದ ಇನ್ನೂರೈವತ್ತಕ್ಕೂ ಹೆಚ್ಚು ಪ್ರದರ್ಶನಗಳನ್ನು ನೀಡಿದೆ. ದೆಹಲಿ, ಮುಂಬೈ, ಬಿಹಾರ್, ತಮಿಳುನಾಡು, ಕೇರಳ, ಆಂಧ್ರ, ಮಧ್ಯಪ್ರದೇಶ, ಗುಜರಾತ್ -ಹೀಗೆ ರಾಷ್ಟ್ರದ ಪ್ರಮುಖ ರಂಗಕೇಂದ್ರಗಳಲ್ಲಿ ಯಶಸ್ಸು ಗಳಿಸಿದ ನಾಟಕ ಇದು. ಶಿವಪ್ರಕಾಶರ ಕಾವ್ಯ ಸಿಂಗಿರಾಜ ರಂಗರೂಪಗೊಂಡು ನೂರಾರು ಪ್ರದರ್ಶನಗಳನ್ನು ಕರ್ನಾಟಕದಲ್ಲಷ್ಟೇ ಅಲ್ಲ ಲಂಡನ್ ಮತ್ತು ಪ್ಯಾರಿಸ್ ನಗರಗಳಲ್ಲೂ ಕಂಡಿದೆ. ಹೀಗೆ ಶಿವಪ್ರಕಾಶ್ ಕನ್ನಡ ರಂಗಭೂಮಿಗೆ ನೀಡಿರುವ ಕಾಣಿಕೆ ಅತ್ಯಂತ ಮಹತ್ತರವಾದುದು. ಇವರ ಅನೇಕ ಕೃತಿಗಳು ವಿಶ್ವವಿದ್ಯಾಲಯಗಳ ಪಠ್ಯಪುಸ್ತಕಗಳಾಗಿವೆ. ಇವರ ಮಾತೃಕೆ ನಾಟಕ ದೆಹಲಿಯ ಪ್ರತಿಷ್ಠಿತ ನಾಟಕ ಸಂಸ್ಥೆ ಎನ್.ಎಸ್.ಡಿ ಯಿಂದ ೨೦೦೪ನೇ ಸಾಲಿನ ರೆಫರ್ಟರಿ ನಾಟಕವಾಗಿ ಪ್ರದರ್ಶನಗೊಳ್ಳುತ್ತಿರುವುದು ಶ್ರೀರಂಗ ಮತ್ತು ಕಾರ್ನಾಡರ ನಂತರ ಕನ್ನಡಕ್ಕೆ ಸಂದ ಗೌರವ.

ನಿಸರ್ಗಪ್ರಿಯರೆಂದೇ ಖ್ಯಾತರಾಗಿರುವ ಸಿದ್ಧಗಂಗಯ್ಯ ಪುರಾಣ ಮತ್ತು ಜನಪದ ವಸ್ತುಗಳನ್ನು ಬಳಸಿ ಸಮರ್ಥವಾದ ಹಲವು ನಾಟಕಗಳನ್ನು ರಚಿಸಿದ್ದಾರೆ. ಲಯಬದ್ಧ ಸಂಭಾಷಣೆ, ಸರಳ ಪಾತ್ರಗಳ ರಚನೆ, ಮತ್ತು ಜಾನಪದ ಹಿನ್ನೆಲೆಯನ್ನು ಬಳಸುವ ಕ್ರಿಯೆ ಇವರ ನಾಟಕದ ಪ್ರಮುಖ ಅಂಶಗಳು. ಕರಿಭಂಟ, ಚೋರಪುರಾಣ, ಶುನಶ್ಯೇಪ, ಯಶೋಧರ ಚಕ್ರವರ್ತಿ, ನಿಜಗುಣ ಶಿವಯೋಗಿ.... ಮುಂತಾದವು ಗಮನಿಸಬೇಕಾದ ನಿಸರ್ಗಪ್ರಿಯರ ಕೃತಿಗಳು. ಅನೇಕ ನಾಟಕ ಸ್ಪರ್ಧೆಗಳಲ್ಲಿ ಇವರ ನಾಟಕಗಳು ಪ್ರದರ್ಶಿತವಾಗುತ್ತಲೇ ಇರುತ್ತವೆ.

ಮೈಸೂರಿನ ಲಿಂಗದೇವರು ಹಳೇಮನೆ ಈಗಾಗಲೇ ತಮ್ಮ ಹಲವಾರು ನಾಟಕ ಕೃತಿಗಳ ಮೂಲಕ ಜನಪ್ರಿಯರಾದವರು. ಮೂಲತಃ ವಿಮರ್ಶಕರಾದ ಇವರ ನಾಟಕ ಹೈದರ್ ಅತ್ಯಂತ ಮುಖ್ಯವಾದುದು. ಪ್ರಜಾಪ್ರಭುತ್ವದ ಹಿನ್ನೆಲೆಯಲ್ಲಿ ರಾಜನ ಪಾತ್ರ ಹೇಗಿರಬೇಕು ಎಂಬುದನ್ನು ಅತ್ಯಂತ ವಸ್ತು ನಿಷ್ಠವಾಗಿ ಈ ನಾಟಕ ಹೇಳುತ್ತದೆ. ಇವರ ಮತ್ತೊಂದು ನಾಟಕ ಚಿಕ್ಕದೇವಭೂಪವನ್ನು ಜೊತೆಜೊತೆಯಾಗಿ ನೋಡಿದಾಗ ಇವರ ನಾಟಕಗಳಲ್ಲಿ ಬರುವ ರಾಜಕೀಯ ಮತ್ತು ಇತಿಹಾಸದ ವಿಶ್ಲೇಷಣೆಗಳು ಪ್ರೇಕ್ಷಕರಿಗೆ ಹೊಸ ವಿಷಯಗಳ ಬಗ್ಗೆ ವಿವೇಚನೆ ಮತ್ತು ವಿವರಗಳನ್ನು ನೀಡುತ್ತದೆ. ಹೈದರ್‌ನ ಪರವಾದ ನೆಲೆಯಿಂದಲೇ ಅಂದಿನ ಸಾಮಾಜಿಕ ಮತ್ತು ರಾಜಕೀಯ ವಿಚಾರಗಳನ್ನು ಅತ್ಯಂತ ಸಮರ್ಥವಾಗಿ ವಿಶ್ಲೇಷಿಸಿದ್ದಾರೆ. ಜನರ ಕಣ್ಣಿನಲ್ಲಿ ಧೂರ್ತನಾಗಿ ಕಾಣುವ ಹೈದರ್ ಈ ನಾಟಕದ ಮೂಲಕ ಅವನೆಷ್ಟು ಜನಪರ ಆಗಿದ್ದ ಎಂಬುದನ್ನು ಪ್ರತಿಪಾದಿಸಲು ಯತ್ನಿಸುತ್ತಾರೆ ಲಿಂಗದೇವರು ಹಳೆಮನೆ. ಚಿಕ್ಕದೇವಭೂಪ ನಾಟಕದ ಹಾಗೆ ದೃಶ್ಯಗಳ ನಿರೂಪಣೆ ಹಾಗೂ ಹಾಡು ಕುಣಿತ

ಮುಂತಾದುವುಗಳನ್ನು ಬಳಸದೆ ನೇರವಾಗಿ ಸಂಭಾಷಣೆಗೆ ತೊಡಗುತ್ತಾರೆ. ಈ ದೃಷ್ಟಿಯಿಂದ ನೋಡಿದರೆ ಇವರ ಚಿಕ್ಕದೇವರ ಭೂಪವೇ ಹೆಚ್ಚು ಆಕರ್ಷಕ ಎನ್ನಬಹುದು.

ಜಾನಪದ ನಾಟಕಗಳಲ್ಲಿ ವಿಶೇಷ ಯಶಸ್ಸನ್ನು ಸಾಧಿಸಿದವರಲ್ಲಿ ಬಳ್ಳಾರಿ ಜಿಲ್ಲೆಯ ಹಡಗಲಿ ತಾಲ್ಲೂಕಿನ ಮುದೇನೂರು ಸಂಗಣ್ಣವರು ಮುಖ್ಯರಾಗುತ್ತಾರೆ. ಇವರ ಲಕ್ಷಾಪತಿರಾಜನ ಕಥೆ ದೇಶ ವಿದೇಶಗಳಲ್ಲಿ ಪ್ರದರ್ಶನಗೊಂಡಿದೆ. ಗ್ರಾಮೀಣ ಭಾಗದ ಜನರನ್ನು ಆಕರ್ಷಿಸುವ ವಿಶೇಷ ಗುಣವನ್ನು ಹೊಂದಿರುವ ಇವರ ನಾಟಕಗಳಲ್ಲಿ ಶೀಲವತಿ, ಸೂಳೆಸಂಕವ್ವ, ಅವ್ವಣ್ಣವ್ವ ಬಹುಮುಖ್ಯವಾದವು. ಶೀಲವತಿ ನಾಟಕವಂತೂ ಮರಿಯಮ್ಮನಹಳ್ಳಿ ಲಲಿತ ಕಲಾರಂಗದಿಂದ ನೂರಾರು ಪ್ರದರ್ಶನಗಳನ್ನು ಕಂಡಿದೆ.

ಗೊ.ರು. ಚನ್ನಬಸಪ್ಪನವರು ಸಾಹಿತ್ಯದ ಹಾಗೂ ಸಾಂಸ್ಕೃತಿಕ ಕ್ಷೇತ್ರದ ಸಂಘಟಕರಾಗಿ ಹೆಸರಾದವರು. ಅನೇಕ ಗ್ರಂಥಗಳ ಸಂಪಾದಕರಾಗಿ ಮೌಲಿಕ ಗ್ರಂಥಗಳನ್ನು ಕನ್ನಡ ಸಾರಸ್ವತ ಲೋಕಕ್ಕೆ ನೀಡಿದವರು. ಇವರು ರಚಿಸಿರುವ ಹಲವಾರು ನಾಟಕಗಳಲ್ಲಿ ಜಾನಪದ ವಿಚಾರಗಳನ್ನು ಒಳಗೊಂಡಿರುವ ಮತ್ತು ಲಯಬದ್ಧವಾದ ಹಾಡುಗಳನ್ನು ಹೊಂದಿರುವ ಸಾಕ್ಷಿಕಲ್ಲು ಮತ್ತು ಬೆಳ್ಳಕ್ಕಿ ಹಿಂಡು ಬೆದರ್ಯಾವೋ ನಾಟಕಗಳು ಪ್ರಮುಖವಾದುವು. ಈಗಾಗಲೇ ನೂರಾರು ಪ್ರದರ್ಶನಗಳನ್ನು ಸಾಕ್ಷಿಕಲ್ಲು ಅತ್ಯಂತ ಯಶಸ್ವಿ ನಾಟಕವಾಗಿ ರಾಷ್ಟ್ರದ ಪ್ರಮುಖ ಭಾಗಗಳಲ್ಲಿ ಪ್ರದರ್ಶನಗೊಂಡಿದೆ. ಬೆಳ್ಳಕ್ಕಿ ಹಿಂಡು ಬೆದರ್ಯಾವೋ ನಾಟಕದ ಗ್ರಾಮೀಣ ಬದುಕಿನ ಕಲ್ಪನೆಗಳು ಎಲ್ಲರನ್ನೂ ಸೆರೆಹಿಡಿಯುತ್ತವೆ.

ಪ್ರೊ. ಹೆಚ್.ಎಂ. ಚನ್ನಯ್ಯನವರು ಹಿರಿಯ ನಾಟಕಕಾರರಲ್ಲಿ ಒಬ್ಬರಾಗಿದ್ದಾರೆ. ಅವರು ಅನುವಾದಗಳಿಗೆ ಹೆಚ್ಚು ಗಮನಕೊಟ್ಟಿದ್ದು ಅವರ ಸ್ವತಂತ್ರ ನಾಟಕಗಳಿಗೆ ಹಿನ್ನೆಡೆಯಾಯಿತೇನೋ ಎನ್ನಿಸುತ್ತದೆ. ಇವರ ಹುಯ್ಯೆಲವೋ ಡಂಗೂರವ ಬಹಳ ಗಮನ ಸೆಳೆಯುವ ನಾಟಕ. ಇವರ ಮತ್ತೊಂದು ನಾಟಕ ಎಲ್ಲರಂಥವನಲ್ಲ ನನ್ನ ಗಂಡ ಒಂದು ವಿಶಿಷ್ಟವಾದ ನಾಟಕ. ಚನ್ನಬಸಪ್ಪನವರ ನಾಟಕಗಳಂತೆಯೇ ಜಾನಪದ ಅಂಶಗಳನ್ನು ಯಶಸ್ವಿಯಾಗಿ ಬಳಸಿಕೊಂಡಿರುವ ವಿನೂತನ ಪ್ರಯೋಗ. ಒಂದಾನೊಂದು ಕಾಲದಲ್ಲಿ ನಡೆದ ಕಥೆಯನ್ನು ಸಾಂಕೇತಿಕವಾಗಿ ಹೇಳಿದರೂ ಸಮಕಾಲೀನ ಸಾಮಾಜಿಕ ವಿವರಗಳ ನಾಟಕದೊಟ್ಟಿಗೆ ಎಣೆಯುವ ತಂತ್ರ ಸಫಲವಾಗಿದೆ. ಚನ್ನಯ್ಯನವರು ಅನುವಾದಿಸಿರುವ ಅಯಾಸ್ ರುದ್ರನಾಟಕ ಅವರ ಅನುವಾದಗಳಲ್ಲೇ ಅತ್ಯಂತ ಪರಿಣಾಮಕಾರಿಯಾದದ್ದು.

ಹೂಲಿ ಶೇಖರರ ಅನೇಕ ನಾಟಕಗಳಲ್ಲಿ ಹಾವು ಹರಿದಾಡ್ತವಾ, ಕಲ್ಯಾಣದಲ್ಲಿ ಒಂದು ಕ್ರಾಂತಿ, ಅರಗಿನಬೆಟ್ಟ, ಬಹುಮುಖ್ಯವಾದ ನಾಟಕಗಳು, ಯುವ ನಾಟಕಕಾರರಾಗಿ ಸಾಕಷ್ಟು ಹೆಸರು ಗಳಿಸಿರುವ ಹೂಲಿ ಶೇಖರರ ನಾಟಕಗಳಲ್ಲಿ ಹಾಸ್ಯ ಮತ್ತು ಸಾಮಾಜಿಕ ಚಿಂತನೆ ಅತ್ಯಂತ ಸಮರ್ಥವಾಗಿ ಮೂಡಿಬಂದಿದೆ. ಸಾಮಾಜಿಕ ಸಮಸ್ಯೆಗಳ ಬಗ್ಗೆ ಮತ್ತು ಸರ್ಕಾರಿ ವ್ಯವಸ್ಥೆಗಳನ್ನು ವಿರೂಪಗೊಳಿಸುವ ಮತಿಗೇಡಿಗಳ ವಿರುದ್ಧ ರಚಿಸಿರುವ ಹಯರಾವಣ-ಮಹಿರಾವಣ ನಾಟಕದಲ್ಲಿ ಮೂಡುವ ವ್ಯಂಗ್ಯ ಪ್ರಸ್ತುತ ಸಮಾಜಕ್ಕೆ ಹಿಡಿದ ಕನ್ನಡಿಯಾಗಿದೆ. ಉತ್ತರ ಕರ್ನಾಟಕದ ಜಾನಪದೀಯ ಅಂಶಗಳನ್ನು ತಮ್ಮ ನಾಟಕಗಳಲ್ಲಿ ಯಥೇಚ್ಛವಾಗಿ ಬಳಸಿದ್ದಾರೆ ಹೂಲಿ ಶೇಖರ್.

ಯುವ ನಿರ್ದೇಶಕ ಉಮಾಶಂಕರ್, ತೇಜಸ್ವಿಯವರ ಚಿದಂಬರ ರಹಸ್ಯವನ್ನು ಒಂದು ಯಶಸ್ವಿ ನಾಟಕವನ್ನಾಗಿ ರೂಪಾಂತರಿಸಿದ್ದಾರೆ. ಹಾಗೆಯೇ ರಾಜಶೇಖರ ಶಾಂತಿಗ್ರಾಮರವರು ಆಲನಹಳ್ಳಿ ಕೃಷ್ಣರ ಕಾಡುವನ್ನು ನಾಟಕವನ್ನಾಗಿ ರೂಪಾಂತರಿಸಿದ್ದಾರೆ. ಈ ಎರಡೂ ನಾಟಕಗಳು ಸಾಕಷ್ಟು ಯಶಸ್ವಿಯಾಗಿ ಪ್ರದರ್ಶನಗಳನ್ನು ಕಂಡಿವೆ. ಸಿರಿಗೆರೆಯ ಲಿಂಗೈಕ್ಯ ಜಗದ್ಗುರು ಶಿವಕುಮಾರ ಶಿವಾಚಾರ್ಯರು ರಚಿಸಿರುವ ನಾಟಕಗಳು, ಬಸವರಾಜ ಸಬರದವರು ರಚಿಸಿರುವ ನಾಟಕಗಳು, ಬಿ.ಆರ್. ಪೋಲೀಸ್ ಪಾಟೀಲ್, ಮಹದೇವ ಬಣಕಾರ್, ಮಾತೆ ಮಹಾದೇವಿ, ಎಸ್.ವಿ. ಪಾಟೀಲ್, ಟಿ.ಆರ್. ಮಹಾದೇವಯ್ಯ ಅನೇಕ ನಾಟಕಗಳನ್ನು ಶರಣ ಸಂಪ್ರದಾಯಕ್ಕೆ ಸಂಬಂಧಿಸಿದಂತೆ ಐತಿಹಾಸಿಕ ನಾಟಕಗಳನ್ನು ರಚಿಸಿದ್ದಾರೆ.

ಡಾ. ಎಂ.ಎಂ. ಕಲಬುರ್ಗಿಯವರು ಸಂಶೋಧಕರಾಗಿ ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಂಡು ಖ್ಯಾತರಾದವರು. ತಮ್ಮ ಬಿಡುವಿನ ವೇಳೆಯಲ್ಲಿ ರಚಿಸಿದ ಕೆಟ್ಟಿತ್ತು ಕಲ್ಯಾಣ ಈಗಾಗಲೇ ಹತ್ತಾರು ಪ್ರದರ್ಶನಗಳನ್ನು ಕಂಡ ಒಂದು ಉತ್ತಮ ನಾಟಕ. ಸಂಗ್ಯಾಬಾಳ್ಯದ ನಂತರ ಅದರ ಅನೇಕ ವಿಚಾರಗಳನ್ನು ಮತ್ತು ನಾಟಕದ ವೈರುಧ್ಯವನ್ನು ಗಮನದಲ್ಲಿಟ್ಟುಕೊಂಡೇ ರಚಿಸಿದ ಇನ್ನೊಂದು ನಾಟಕ ಇನ್ನು ಪ್ರದರ್ಶನವನ್ನು ಕಾಣಬೇಕಾಗಿದೆ.

ದಿವಂಗತ ಟಿ.ಎಸ್. ಕರಿಬಸವಯ್ಯನವರು ಅತ್ತ ಪೂರ್ಣಪ್ರಮಾಣದ ವೃತ್ತಿಯೂ ಅಲ್ಲದ, ಹವ್ಯಾಸಿಯೂ ಅಲ್ಲದ ಒಂದು ರೀತಿಯ ರಂಗಭೂಮಿಯಲ್ಲಿ ತೊಡಗಿಸಿಕೊಂಡಿದ್ದವರು. ಹವ್ಯಾಸಿಯ ಕಲಾವಿದರನ್ನು ವೃತ್ತಿಪರರ ಹಾಗೆ ಪರಿಗಣಿಸಿ ಅವರಿಂದ ನಾಟಕಗಳನ್ನು ತಮ್ಮ ಸಂಸ್ಥೆಯ ಮೂಲಕ ಪ್ರದರ್ಶಿಸುತ್ತಿದ್ದರು. ಇವರು ಪ್ರದರ್ಶಿಸುತ್ತಿದ್ದ ಬಸವೇಶ್ವರ ನಾಟಕ ಕರ್ನಾಟಕದ ಬಹುತೇಕ ನಗರಗಳಲ್ಲಿ ಪ್ರದರ್ಶನಗೊಂಡಿದೆ.

ಕನ್ನಡ ರಂಗಭೂಮಿಗೆ ಪರಭಾಷೆಯ ನಾಟಕಗಳನ್ನು ಅನುವಾದಿಸಿದ ವೀರಶೈವ ನಾಟಕಕಾರರಲ್ಲಿ ಶ್ರೀ ಸಿದ್ಧಲಿಂಗ ಪಟ್ಟಣಶೆಟ್ಟಿಯವರು ಬಹುಮುಖ್ಯರಾಗುತ್ತಾರೆ. ವಿಶೇಷವಾಗಿ ಮೋಹನ್ ರಾಕೇಶ್‌ರವರ ನಾಟಕ ಆಷಾಢದ ಒಂದು ದಿನ ಕನ್ನಡದ ಮೂಲಕೃತಿಯೇನೋ ಎಂಬುವಂತೆ ಮೂಡಿಬಂದಿದೆ. ಅಲೆಗಳಲ್ಲಿ ರಾಜಹಂಸ, ಅದೇ ಅದುರೆ, ಧರ್ಮವೀರರ ಭಾರತೀಯರ ಅಂಧಯುಗ, ಚೂರಚರಣದಾಸ, ಶಸ್ತ್ರಸಂತಾನ, ಬೇರಿಲ್ಲದವರು ಮುಂತಾದ ಇಪ್ಪತ್ತೈದಕ್ಕೂ ಹೆಚ್ಚು ನಾಟಕಗಳು ಇಂದಿಗೂ ಯಶಸ್ವಿಯಾಗಿ ಪ್ರದರ್ಶನಗೊಳ್ಳುತ್ತಿವೆ. ಸಿದ್ಧಲಿಂಗಪಟ್ಟಣಶೆಟ್ಟಿಯವರ ಭಾಷಾಪ್ರೌಢಿಮೆ ಮತ್ತು ಲವಲವಿಕೆಯ ಸಂಭಾಷಣೆ ಪ್ರೇಕ್ಷಕರ ಮನಮುಟ್ಟುವಲ್ಲಿ ಯಶಸ್ವಿಯಾಗುತ್ತದೆ.

ಕನ್ನಡ ರಂಗಭೂಮಿಯಲ್ಲಿ ವ್ಯವಸ್ಥೆಯನ್ನು ಧಿಕ್ಕರಿಸುವ ಬಹಳಷ್ಟು ನಾಟಕಗಳು ಬಂದಿವೆ. ಇವುಗಳಲ್ಲಿ ಲೋಹಿತಾಶ್ವ ಅನುವಾದಿಸಿರುವ ಮುಖ್ಯಮಂತ್ರಿ ಹಿಂದಿಯಿಂದ ಕನ್ನಡಕ್ಕೆ ಅನುವಾದಗೊಂಡಿದೆ. ಈ ನಾಟಕ ಎಲ್ಲ ಸಂದರ್ಭದಲ್ಲೂ ಅತಿಮುಖ್ಯವೆನಿಸುತ್ತದೆ. ಈಗಾಗಲೇ ಮುನ್ನೂರಕ್ಕೂ ಹೆಚ್ಚು ಪ್ರದರ್ಶನಗಳನ್ನು ಕಂಡಿರುವ ಈ ನಾಟಕದ ಮೂಲಕ ಯಶಸ್ವಿ ನಾಟಕಕಾರರಾಗಿ ಲೋಹಿತಾಶ್ವ ಕಾಣಸಿಗುತ್ತಾರೆ. ಇವರು ಅನುವಾದಿಸಿರುವ ಭೀಷ್ಮಸಹಾನಿಯವರ ಸಂತೆಯಲ್ಲಿ ನಿಂತ ಕಬೀರ ಕೋಮುಸೌಹಾರ್ದತೆಯನ್ನು ಸಾರುವ ಬಹುಮುಖ್ಯ ನಾಟಕ. ಕಬೀರರ ದೋಹಾಗಳನ್ನು ಈ ನಾಟಕದಲ್ಲಿ ಕನ್ನಡೀಕರಿಸಿ ಕಾವ್ಯಮಯವನ್ನಾಗಿಸಿದ್ದಾರೆ.

ವಿಮರ್ಶಕರಾಗಿ ರಂಗಭೂಮಿಯ ಅನೇಕ ವಿಚಾರಗಳನ್ನು ದಾಖಲಿಸಿರುವ ಹಾಗೂ ರಂಗಭೂಮಿಯ ವಿಚಾರಗಳನ್ನೇ ಒಳಗೊಂಡಂತೆ ಪಿ.ಹೆಚ್.ಡಿ. ಪ್ರಬಂಧವನ್ನು ಪ್ರಕಟಿಸಿರುವ ಡಾ. ಕೆ. ಮರುಳಸಿದ್ಧಪ್ಪನವರು ಅನುವಾದಕರಾಗಿಯೂ ಗಮನ ಸೆಳೆದಿದ್ದಾರೆ. ಇವರು ಅನುವಾದಿಸಿರುವ ಗ್ರೀಕ್ ನಾಟಕ ಮಿಡಿಯಾ ಅತ್ಯಂತ ಗಮನಾರ್ಹವಾದುದು. ಈ ನಾಟಕವನ್ನು ಬಹಳಷ್ಟು ತಂಡಗಳು ಈಗಾಗಲೇ ಅಭಿನಯಿಸಿವೆ. ಸಾಹಿತ್ಯಕ ಮೌಲ್ಯಗಳಿಂದಾಗಿ ಅತ್ಯಂತ ಗಮನಸೆಳೆಯುವ ನಾಟಕವಿದಾಗಿದೆ. ಇವರು ಅನುವಾದಿಸಿರುವ ಮತ್ತೊಂದು ನಾಟಕ ರಕ್ತ ಕಣಗಲೆ ಮೂಲತಃ ರವೀಂದ್ರನಾಥ ಠಾಗೂರರ ರಕ್ತ ಕೊರವಿ ನಾಟಕ. ಇದೊಂದು ಸಮಾಜದ ಕೆಳವರ್ಗದ ವಿರುದ್ಧ ಬಂಡವಾಳಶಾಹಿಗಳ ಬರ್ಬರತೆಯನ್ನು ಚಿತ್ರಿಸುವ ಸಮರ್ಥ ನಾಟಕ. ಈ ನಾಟಕ ಈಗಾಗಲೇ ದೆಹಲಿಯ ರಾಷ್ಟ್ರೀಯ ಉತ್ಸವದಲ್ಲಿ ಪ್ರದರ್ಶನಗೊಂಡು ಅತ್ಯುತ್ತಮ ಕೃತಿಯೆಂದು ಪರಿಗಣಿಸಲ್ಪಟ್ಟಿದೆ. ಬೆಂಗಳೂರು ವಿಶ್ವವಿದ್ಯಾಲಯ ಉಪನ್ಯಾಸಕ ಸಿ. ವೀರಣ್ಣ ಅನುವಾದಿಸಿರುವ ಬ್ರೆಕ್ಟ್‌ನ ಮದರ್, ಕನ್ನಡದ ತಾಯಿ ನಾಟಕವಾಗಿ ಅತ್ಯಂತ ಯಶಸ್ಸನ್ನು ಕಂಡಿದೆ. ಈ ನಾಟಕದ ಮೂಲಕ ತಾಯಿ ಪಾತ್ರಧಾರಿ ಬಿ. ಜಯಶ್ರೀ ಎಲ್ಲರ ಗಮನ ಸೆಳೆದರು.

ರಾಜಕಾರಣದಲ್ಲಿ ಸದಾ ಕ್ರಿಯಾಶೀಲರಾಗಿರುವ ಶ್ರೀ ಎಂ.ಪಿ. ಪ್ರಕಾಶರು ರಂಗಭೂಮಿ ಮತ್ತು ಸಾಹಿತ್ಯಾಸಕ್ತಿ ಕಳೆದುಕೊಳ್ಳದ ಅಪರೂಪದ ಮಂತ್ರಿಗಳು. ನಾಟಕಕಾರರಾಗಿ, ನಟರಾಗಿ, ಸಂಘಟಕರಾಗಿ ಅತ್ಯಂತ ಶ್ರದ್ಧೆಯಿಂದ ಕೆಲಸಮಾಡುತ್ತಿರುವ ಒಬ್ಬ ಸೃಜನಶೀಲರು. ಇವರು ಅನುವಾದಿಸಿರುವ ನಾಟಕ ಉತ್ಪಲ್‌ದತ್‌ರ ಸೂರ್ಯಶಿಕಾರಿ ಈಗಾಗಲೇ ನೂರಾರು ಪ್ರದರ್ಶನಗಳನ್ನು ಕಂಡ ಗಮನಾರ್ಹ ನಾಟಕ.

ಡಾ. ಬಿ.ಎಸ್. ಸ್ವಾಮಿಯವರು ನೂರಕ್ಕೂ ಹೆಚ್ಚು ನಾಟಕಗಳನ್ನು ಬರೆದು ಪ್ರಸಾರ ಮಾಡಿದ್ದಾರೆ. ಇವರ ಬೃಹತ್ ರೇಡಿಯೋ ನಾಟಕಗಳ ಸಂಕಲನ ಈಗಾಗಲೇ ಪ್ರಕಟವಾಗಿದೆ. ಪೋಲೀಸ್ ಪಾಟೀಲ, ಹೇಮ ಪಟ್ಟಣಶೆಟ್ಟಿ, ಸಿದ್ಧಲಿಂಗ ದೇಸಾಯಿ ಮುಂತಾದವರು ರೇಡಿಯೋ ನಾಟಕಗಳ ಮೂಲಕ ತಮ್ಮ ಸಾಮಾಜಿಕ ಕಳಕಳಿಯನ್ನು ಶ್ರೋತೃಗಳಿಗೆ ಉಣಬಡಿಸಿದ್ದಾರೆ. ಪೋಲೀಸ್ ಪಾಟೀಲ ಮತ್ತು ಸಿದ್ಧಲಿಂಗ ದೇಸಾಯಿ ಅವರಿಗೆ ಆಕಾಶವಾಣಿಯ ರಾಷ್ಟ್ರೀಯ ಪ್ರಶಸ್ತಿಗಳೂ ಸಹ ದೊರಕಿವೆ.

ಹವ್ಯಾಸಿ ರಂಗಭೂಮಿ ಚಳವಳಿ ಒಂದು ಸಮೂಹ ಕ್ರಿಯೆಯಾಗಿ ಬೆಳೆಯುತ್ತಾ ಬಂದಿದೆ. ನಟ, ನಾಟಕಕಾರ, ನಿರ್ದೇಶಕ, ರಂಗತಂತ್ರಜ್ಞ ಹಾಗೂ ರಂಗ ಸಂಘಟಕ ಇವರೆಲ್ಲರ ಪರಸ್ಪರ ಸಂವಾದದ ಮೂಲಕ ಈ ಚಳುವಳಿಯನ್ನು ನಿರಂತರವಾಗಿ ನಡೆಸಲು ಸಾಧ್ಯವಾಗಿದೆ. ಈ ನಿಟ್ಟಿನಲ್ಲಿ ಈ ಒಂದು ಕ್ರಿಯೆಗೆ ಕಾಣಿಕೆ ಕೊಟ್ಟ ಹಲವಾರು ರಂಗಸಂಘಟಕರಲ್ಲಿ ರಂಗಸಂಪದ ತಂಡದ ಜೆ. ಲೋಕೇಶ್ ಬಹುಮುಖ್ಯರು. ಹವ್ಯಾಸಿ ಚಳುವಳಿಯ ಬೆಳವಣಿಗೆಯಲ್ಲಿ ಬಹುಮುಖ್ಯಪಾತ್ರ ವಹಿಸಿದ ಆರ್. ನಾಗೇಶ್, ಪ್ರಸನ್ನ, ಸಿ.ಜಿ.ಕೆ. ಉಮಾಶಂಕರ್ ಮುಂತಾದ ರಂಗನಿರ್ದೇಶಕರನ್ನು ಬಳಸಿಕೊಂಡು ಕನ್ನಡ ರಂಗಭೂಮಿಗೆ ಮೌಲ್ಯವನ್ನು ತಂದುಕೊಟ್ಟ ಯಶಸ್ವಿ ರಂಗಸಂಘಟಕರಿವರು. ಎಂಬತ್ತರ ದಶಕದಲ್ಲಿ ಲೋಕೇಶರ ಕೊಡುಗೆ ಒಂದು ದೊಡ್ಡ ಮೈಲಿಗಲ್ಲು ಎಂದೇ ಹೇಳಬಹುದು. ಆ ಸಂದರ್ಭದಲ್ಲಿ ನಿರ್ಮಿಸಿದ ಚಿದಂಬರ ರಹಸ್ಯ, ಯಯಾತಿ, ಸಂಗ್ಯಾಬಾಳ್ಯ, ಒಡಲಾಳ, ಸುಲ್ತಾನ ಟೀಪು, ಮಹಾಚೈತ್ರ ಮುಂತಾದ ನಾಟಕಗಳು ರಂಗಭೂಮಿಗೆ ಬಹುಮುಖ್ಯವೆನಿಸಿದವು. ಹಾಗೆಯೇ ತೊಂಬತ್ತರ ದಶಕಗಳಲ್ಲಿ ಪ್ರಯೋಗರಂಗ ತಂಡದ ಸಂಘಟಕರಾಗಿ ನಾಗರಾಜಮೂರ್ತಿ ಖ್ಯಾತ ನಾಟಕಕಾರರನ್ನು ಹಾಗೂ ನಿರ್ದೇಶಕರನ್ನು ಬಳಸಿಕೊಂಡು ನಿರ್ಮಿಸಿದ ನಾಟಕಗಳು ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಯಶಸ್ಸು ಗಳಿಸಿದವು. ಅದರಲ್ಲೂ ವಿಶೇಷವಾಗಿ ಪ್ರಯೋಗರಂಗದ ಮಂಟೇಸ್ವಾಮಿ ಕಥಾಪ್ರಸಂಗ ಇನ್ನೂರೈವತ್ತಕ್ಕೂ ಹೆಚ್ಚು ಪ್ರದರ್ಶನಗಳನ್ನು ಕಂಡಿದ್ದು, ಬ್ರಹ್ಮಚಾರಿ ಶರಣಾದ ಮತ್ತು ನಮ್ಮ ನಿಮ್ಮೊಳಗೊಬ್ಬ ನಾಟಕಗಳು ಎಪ್ಪತ್ತೈದಕ್ಕೂ ಹೆಚ್ಚು ಪ್ರದರ್ಶನಗಳನ್ನು ಕಂಡದ್ದು ಪ್ರಸ್ತಾಪಿಸಲು ಯೋಗ್ಯ. ಭಾರತ ಯಾತ್ರಾ ಕೇಂದ್ರದ ಮೂಲಕ ಹತ್ತೊಂಬತ್ತು ವರ್ಷಗಳಿಂದ ಸಂಘಟಿಸುತ್ತಿರುವ ಅಂತರ ಕಾಲೇಜು ರಂಗಸ್ಪರ್ಧೆಗಳು ಭಾರತೀಯ ರಂಗಭೂಮಿಯಲ್ಲೇ ಒಂದು ವಿಶಿಷ್ಟ ಪ್ರಯೋಗ. ಈ ಉತ್ಸವದಲ್ಲಿ ಸಾವಿರಾರು ವಿಧ್ಯಾರ್ಥಿ ಕಲಾವಿದರು ಪ್ರತಿ ವರ್ಷ ರಂಗಭೂಮಿಗೆ ಪಾದಾರ್ಪಣೆ ಮಾಡುತ್ತಾರೆ. ಇವರಲ್ಲಿ ಕನಿಷ್ಟ ನೂರು ಜನರಾದರೂ ರಂಗಭೂಮಿ ಮತ್ತು ಕಿರುತೆರೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುತ್ತಿರುವುದು ಅತ್ಯಂತ ಸಂತೋಷದ ಸಂಗತಿ. ಇನ್ನು ಗುಲಬರ್ಗದ ಶಂಕ್ರಯ್ಯ ಘಂಟಿ, ರಾಯಚೂರಿನ ಎಂ.ಬಿ. ಪಾಟೀಲ್, ಬಿಜಾಪುರದ ಚನ್ನವೀರ ಜಳಕಿ, ಧಾರವಾಡದ ವಿಶ್ವೇಶ್ವರಿ ಹಿರೇಮಠ, ಜಗುಚಂದ್ರ, ಬಸವಲಿಂಗಯ್ಯ ಹಿರೇಮಠ, ಏಣಗಿ ನಟರಾಜ, ಚಿಕ್ಕಮಗಳೂರಿನ ಕಲಾಸೇವಾಸಂಘದ ಪರಮೇಶ್ವರಪ್ಪ, ಮೈಸೂರಿನ ಉಮೇಶ್ ಮತ್ತು ಲಿಂಗದೇವರು ಹಳೇಮನೆ, ಗದಗಿನ ಚಂದ್ರಶೇಖರ ವಸ್ತ್ರದ, ಬಾಗಲಕೋಟೆಯ ಹೊಳೆಬಸು ಹಂಡೀಗೇರಿ, ದಾವಣಗೆರೆಯ ಪ್ರತಿಭಾ ನಾಟಕಸಭಾದ ಹಾಲಪ್ಪ ಮತ್ತು ಎಂ.ಜಿ. ಈಶ್ವರಪ್ಪ, ಬನ್ನಹಟ್ಟಿಯ ಪೋಲೀಸ್ ಪಾಟೀಲ್, ಪಾಟೀಲ್, ಇಳಕಲ್‌ನ ವಂಶಾಕೃತಮಠ, ಬೆಳಗಾವಿಯ ಬಸವರಾಜ ಜಗಜಂಪಿ, ಬಿ.ಎಸ್. ಗವಿಮಠ, ಬಳ್ಳಾರಿ ಜಿಲ್ಲೆ ಹಡಗಲಿಯ ರವಿ ಪ್ರಕಾಶ್, ಕೊಟ್ಟೂರಿನ ಸತ್ಯಪ್ರಕಾಶ್ ಮುಂತಾದವರು ವೀರಶೈವ ರಂಗಸಂಘಟಕರಾಗಿ ಕನ್ನಡ ರಂಗಭೂಮಿಯನ್ನು ಸದೃಢಗೊಳಿಸುವಲ್ಲಿ ನಿರಂತರ ಸೇವೆ ಮಾಡುತ್ತಿದ್ದಾರೆ.

ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ವ್ಯಾಪಿಸಿರುವ ನಟರು ನೂರಾರು ಸಂಖ್ಯೆಯಲ್ಲಿದ್ದಾರೆ. ಧಾರವಾಡದ ಖ್ಯಾತ ಕಲಾವಿದ ಏಣಗಿ ಬಾಳಪ್ಪನವರ ಪುತ್ರ ಏಣಗಿ ನಟರಾಜ್ ಎನ್‌ಎಸ್‌ಡಿ ಮತ್ತು ನೀನಾಸಂ ಪದವೀಧರರಾಗಿ ರಾಷ್ಟ್ರದ ಹಲವಾರು ರಂಗಸಂಸ್ಥೆಗಳಲ್ಲಿ ಅಭಿನಯಿಸಿದ್ದಾರೆ. ಹಾಗೂ ತಮ್ಮ ಪ್ರತಿಭಾಪೂರ್ಣ ಅಭಿನಯದ ಮೂಲಕ ಅಪಾರ ಯಶಸ್ಸನ್ನು ಗಳಿಸಿದ್ದಾರೆ. ನಾಟಕಕಾರರಾಗಿರುವ ಲೋಹಿತಾಶ್ವ ನಟರಾಗಿಯೂ ಯಶಸ್ಸು ಗಳಿಸಿದವರು. ತುಮಕೂರಿನ ಸಮುದಾಯದ ರಂಗಸಂಘಟನೆಯಲ್ಲಿಯೂ ತೊಡಗಿಸಿಕೊಂಡಿದ್ದ ಲೋಹಿತಾಶ್ವ ತುಮಕೂರು ರಂಗಭೂಮಿಯನ್ನು ಕಟ್ಟಿ ಬೆಳೆಸಿದ ಖ್ಯಾತಿಯನ್ನು

ಪಡೆದಿದ್ದಾರೆ. ಕತ್ತಲೆದಾರಿ ನಾಟಕದ ಅವರ ಅಭಿನಯ ಪ್ರೌಢಿಮೆ ಬೇರೆಯವರಿಗೆ ಮಾದರಿಯಾಗುವಂಥದ್ದು. ನಟಿಯರಾಗಿ ಬಿ. ಜಯಶ್ರೀ, ವಿಶ್ವೇಶ್ವರಿ ಹಿರೇಮಠ, ಎನ್‌ಎಸ್‌ಡಿ ಪದವೀಧರೆ ಸುಂದರಶ್ರೀ, ಮಂಜುಳ ಬಾದಾಮಿ ಗಮನಾರ್ಹ ಅಭಿನಯ ನೀಡಿ ಖ್ಯಾತರಾಗಿದ್ದಾರೆ. ಶಂಕ್ರಯ್ಯ ಘಂಟಿ, ಚನ್ನವೀರ ಜಳಕಿ, ಪುಟ್ಟರಾಜು, ಚಂದ್ರಶೇಖರ್, ಸುಗ್ಗನಹಳ್ಳಿ ಷಡಕ್ಷರಿ, ಜಿ.ವಿ. ಶಿವಾನಂದ್, ವೀರಪ್ಪ ಮರಳವಾಡಿ, ಐಟಿಐ ಆರಾಧ್ಯ, ಶಿವಕುಮಾರಾರಾಧ್ಯ ಮುಂತಾದವರು ಸತತವಾಗಿ ರಂಗಭೂಮಿಯಲ್ಲಿ ನಟರಾಗಿ ಗುರುತಿಸಿಕೊಂಡಿದ್ದಾರೆ. ಹವ್ಯಾಸಿ ರಂಗಭೂಮಿಯ ಪ್ರಾರಂಭದ ದಿನಗಳಲ್ಲಿ ಅಭಿನಯಿಸುತ್ತಿದ್ದ ದಿವಂಗತ ಕೊಂಡಜ್ಜಿ ರಾಜಶೇಖರ್ ಒಂದು ಮರೆಯಲಾಗದ ಪ್ರತಿಭೆ. ಬ್ಯಾಂಕುಗಳ ಉದ್ಯೋಗಿಗಳು ಮತ್ತು ಬೃಹತ್ ಕಾರ್ಖಾನೆಗಳ ಲಲಿತಕಲಾ ಸಂಘಗಳು ಅತ್ಯುತ್ತಮ ನಾಟಕಗಳನ್ನು ಪ್ರದರ್ಶಿಸುವಲ್ಲಿ ಹಿಂದೆ ಬಿದ್ದಿಲ್ಲ. ಈ ನಿಟ್ಟಿನಲ್ಲಿ ಮೈಕೋ ಕಾರ್ಖಾನೆಯ ಶರಣಪ್ಪ ಶೆಟ್ಟಿಗಾರ್, ಬಿಇಎಂಎಲ್‌ನ ಬಂಗಾರಪ್ಪ ಖುದಾಂಪುರ್, ದಿವಂಗತ ಬಸವರಾಜ್, ಎನ್‌ಜಿಎಫ್‌ನ ಪೂರ್ಣೇಂದ್ರ ಶೇಕರ್, ರುದ್ರಮೂರ್ತಿ, ಕೆಜಿಎಫ್ ಬೆಮೆಲ್‌ನ ಮಲ್ಲಿಕಾರ್ಜುನಯ್ಯ, ತಿಪ್ಪೇಸ್ವಾಮಿ, ಬೆಂಗಳೂರಿನ ಬಿಇಎಲ್‌ನ ಮೃತ್ಯುಂಜಯ, ಹೆಚ್‌ಎಎಲ್‌ನ ನಾಗರಾಜ್ ಮುಂತಾದವರು ನಟರಾಗಿ ಮತ್ತು ರಂಗಸಂಘಟಕರಾಗಿಯೂ ಕ್ರಿಯಾಶೀಲರಾಗಿದ್ದಾರೆ.

ಹವ್ಯಾಸಿ ರಂಗಭೂಮಿಯಲ್ಲಿ ನಾಟಕಕಾರ ಮತ್ತು ಸಂಘಟನಕಾರರಷ್ಟೇ ಮುಖ್ಯರಾಗುವರು ನಾಟಕದ ನಿರ್ದೇಶಕರುಗಳು. ಈ ದೃಷ್ಟಿಯಲ್ಲಿ ಕನ್ನಡ ರಂಗಭೂಮಿಗೆ ಮಹತ್ತರವಾದ ಕಾಣಿಕೆಗಳನ್ನು ನೀಡಿರುವ ನಿರ್ದೇಶಕರುಗಳಲ್ಲಿ ಬಿ. ಜಯಶ್ರೀ, ಅಶೋಕ ಬಾದರದಿನ್ನಿ, ಸುಂದರಶ್ರೀ, ಏಣಗಿ ನಟರಾಜ್, ನಾಗರಾಜಮೂರ್ತಿ, ಉಮಾಶಂಕರ್, ಶಂಕ್ರಯ್ಯ ಘಂಟಿ, ಶಿವಸಂಚಾರದ ಬಾದಾಮಿ, ಬಸವಲಿಂಗಯ್ಯ ಹಿರೇಮಠ, ವೀರಪ್ಪ ಮರಳವಾಡಿ ಮುಂತಾದವರ ಕಾಣಿಕೆ ಬಹು ಮಹತ್ವದ್ದು. ಅಶೋಕ ಬಾದರದಿನ್ನಿಯವರು ದೆಹಲಿಯ ಎನ್‌ಎಸ್‌ಡಿ ಪದವಿ ಪಡೆದು ಕರ್ನಾಟಕಕ್ಕೆ ವಾಪಸ್ ಆದ ನಂತರ ರಂಗಭೂಮಿಯನ್ನೇ ವೃತ್ತಿಯನ್ನಾಗಿ ಸ್ವೀಕರಿಸಿ ರಾಜ್ಯದ ಎಲ್ಲೆಡೆ ಹಲವು ರಂಗತಂಡಗಳಿಗೆ ನಾಟಕಗಳನ್ನು ನಿರ್ದೇಶಿಸಿ ಉತ್ತಮ ನಟರು ರಂಗಭೂಮಿಗೆ ಬರಲು ಕಾರಣರಾಗಿದ್ದಾರೆ.

ಬಿ. ಜಯಶ್ರೀಯವರಂತೂ ತಮ್ಮದೇ ತಂಡ ಸ್ಪಂದನದ ಮೂಲಕ ಲಕ್ಷಾಪತಿರಾಜನ ಕಥೆ, ಘಾಸಿರಾಮ್ ಕೊತ್ವಾಲ್, ಚಿತ್ರಪಟ ರಾಮಾಯಣ ಮುಂತಾದ ಇಪತ್ತಕ್ಕೂ ಹೆಚ್ಚು ನಾಟಕಗಳನ್ನು ನಿರ್ದೇಶಿಸಿ ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಖ್ಯಾತರಾಗಿದ್ದಾರೆ. ದೆಹಲಿ, ಮುಂಬೈ, ಚಂಡೀಘಡ, ಕಲ್ಕತ್ತಾ,.... ಮುಂತಾದ ಭಾರತದ ನಗರಗಳಲ್ಲದೇ ಇಂಗ್ಲೆಂಡ್‌ನ ತಂಡವೊಂದಕ್ಕೂ ನಾಟಕವನ್ನು ನಿರ್ದೇಶಿಸಿದ ಖ್ಯಾತಿ ಜಯಶ್ರೀಯವರಿಗೆ ಸಲ್ಲುತ್ತದೆ. ಗುಬ್ಬಿ ವೀರಣ್ಣನವರ ಮೊಮ್ಮಗಳಾದ ಬಿ. ಜಯಶ್ರೀ ಅಭಿಜಾತ ಕಲಾವಿದೆ. ಯಾವುದೇ ನಾಟಕದಲ್ಲಿ ನೀರು ಕುಡಿದಷ್ಟೇ ಸುಲಭವಾಗಿ ಅಭಿನಯಿಸುವ ಜಯಶ್ರೀ ನೃತ್ಯಗಾರ್ತಿಯಾಗಿ, ಸಂಗೀತ ಸಂಯೋಜಕಿಯಾಗಿ, ಭಾರತೀಯ ರಂಗಭೂಮಿಯ ಒಂದು ದೊಡ್ಡ ಕೊಡುಗೆಯಾಗಿದ್ದಾರೆ. ಕೇಂದ್ರ ಸಂಗೀತ ನಾಟಕ ಅಕಾಡೆಮಿ ಸದಸ್ಯೆಯಾಗಿ ಸೇವೆ ಸಲ್ಲಿಸುತ್ತಿರುವ ಜಯಶ್ರೀ ಕನ್ನಡ ಹವ್ಯಾಸಿ ರಂಗಭೂಮಿ ಕಂಡ ದೈತ್ಯ ಪ್ರತಿಭೆ.

ಏಣಗಿ ನಟರಾಜ್ ಮೂಲತಃ ವೃತ್ತಿರಂಗಭೂಮಿಯಿಂದ ಬಂದವರೂ ನಂತರದ ದಿನಗಳಲ್ಲಿ ನೀನಾಸಂ ಮತ್ತು ಎಸ್‌ಡಿಯಲ್ಲಿ ಪದವಿ ಪಡೆದು ಹವ್ಯಾಸಿ ರಂಗಭೂಮಿಯಲ್ಲೇ ನೆಲೆ ನಿಂತವರು. ಧಾರವಾಡವನ್ನು ಕೇಂದ್ರವಾಗಿಟ್ಟುಕೊಂಡು ಅನೇಕ ತಂಡಗಳಿಗೆ ಪ್ರಸಿದ್ಧ ನಾಟಕಗಳನ್ನು ಪ್ರದರ್ಶಿಸಿದ್ದಾರೆ. ಇವರ ಇತ್ತೀಚಿನ ನಾಟಕ ನಟಸಾಮ್ರಾಟ್ ಅತ್ಯಂತ ಯಶಸ್ಸು ಕಂಡಿದೆ. ಸುಂದರಶ್ರೀಯೂ ಎನ್‌ಎಸ್‌ಡಿಯ ಪದವೀಧರೆ. ಮತ್ತೊಬ್ಬ ಎನ್‌ಎಸ್‌ಡಿ ಪದವೀಧರ ಹವ್ಯಾಸಿ ರಂಗಭೂಮಿಯ ಖ್ಯಾತನಟ ಗುಬ್ಬಿ ವೀರಣ್ಣನವರ ಮಗ ಜಿ.ವಿ. ಶಿವಾನಂದ್‌ರವರ ಮಗಳು ಈಕೆ. ನಟಿಯಾಗಿ ಮಾತ್ರವಲ್ಲದೆ ನಿರ್ದೇಶಕಿಯಾಗಿ ಹಲವಾರು ನಾಟಕಗಳನ್ನು ಕನ್ನಡ ರಂಗಭೂಮಿಗೆ ನೀಡಿದ್ದಾರೆ. ಈಕೆ ನಿರ್ದೇಶಿಸಿದ ಕಕೇಷಿಯನ್ ಚಾಕ್‌ಸರ್ಕಲ್ ಒಂದು ಅದ್ಭುತ ಪ್ರಯೋಗ. ಕಿರುತೆರೆಯ

ಅಭಿನಯದ ಜೊತೆಗೆ ಕಾಲೇಜು ರಂಗಭೂಮಿಯಲ್ಲೂ ಸಕ್ರಿಯವಾಗಿದ್ದಾರೆ. ತುಮಕೂರು ಶಿವಕುಮಾರ್, ಧಾರವಾಡದ ತೋಂಟಾದಾರ್ಯ, ಮೈಸೂರಿನ ಉಮೇಶ್ ಮತ್ತು ಲಿಂಗದೇವರ ಹಳೆಮನೆ, ಬೆಂಗಳೂರಿನ ಮಲ್ಲಿಕಾರ್ಜುನ ಮಹಾಮನೆ, ಮುಂತಾದ ಐವತ್ತಕ್ಕೂ ಹೆಚ್ಚು ನಿರ್ದೇಶಕರು ರಂಗಭೂಮಿಯಲ್ಲಿ ತೊಡಗಿಸಿಕೊಂಡಿದ್ದಾರೆ.

ಇಂದು ಅನೇಕ ಮಠಗಳು ರಂಗಭೂಮಿಗೆ ಆಶ್ರಯ ನೀಡುತ್ತಿರುವುದು ಅತ್ಯಂತ ಸಮಾಧಾನಕರ ಅಂಶ. ಈ ನಿಟ್ಟಿನಲ್ಲಿ ತುಮಕೂರಿನ ಸಿದ್ಧಗಂಗಾಮಠ, ಮೈಸೂರಿನ ಸುತ್ತೂರು ಮಠ, ಗದಗಿನ ತೋಂಟಾದಾರ್ಯ ಮಠ, ಚಿತ್ರದುರ್ಗದ ಮುರುಘಾಮಠ, ಸಿರಿಗೆರೆಯ ತರಳಬಾಳು ಮಠ.... ಮುಂತಾದವುಗಳು ಉಲ್ಲೇಖನೀಯ. ಮೊದಲಿನಿಂದಲೂ ಈ ಮಠಗಳು ರಂಗಭೂಮಿಯ ಕಲಾವಿದರಿಗೆ ಆಶ್ರಯನೀಡಿ ಬೆಳೆಸುತ್ತಾ ಬಂದಿದೆ. ತುಮಕೂರಿನ ಸಿದ್ಧಗಂಗಾ ಮಠವಂತೂ ತಮ್ಮ ಮಠದ ಕಲಾವಿದರಿಂದಲೇ ಪ್ರದರ್ಶಿಸುವ ಶ್ರೀ ಜಗಜ್ಯೋತಿ ಬಸವೇಶ್ವರ ನಾಟಕ ಏಳುನೂರಕ್ಕೂ ಹೆಚ್ಚು ಪ್ರದರ್ಶನವನ್ನು ಕಂಡಿದೆ. ಮಠದ ಪೂಜ್ಯರಾದ ಡಾ. ಶ್ರೀ ಶಿವಕುಮಾರ ಸ್ವಾಮಿಗಳೇ ಪ್ರತಿ ಪ್ರದರ್ಶನದಲ್ಲೂ ಉಪಸ್ಥಿತರಿದ್ದು ನಾಟಕದ ಸಂಘಟನೆಯನ್ನು ನಿರ್ವಹಿಸುವುದು ರಂಗಭೂಮಿಗೆ ಮಹತ್ವವನ್ನು ತಂದುಕೊಟ್ಟಿದೆ. ಗದಗಿನ ತೋಂಟದಾರ್ಯ ಮಠದ ಡಾ. ಶ್ರೀ ಸಿದ್ಧಲಿಂಗ ಸ್ವಾಮಿಗಳು ತಮ್ಮ ಮಠದ ಕಲಾವಿದರ ಮೂಲಕ ನಾಟಕಗಳನ್ನು ಪ್ರದರ್ಶಿಸುತ್ತಿದ್ದಾರೆ. ಅದರಲ್ಲೂ ತಾವೇ ಅಭಿನಯಿಸಿ ಹಾಡುವ ನುಲಿಯ ಚಂದಯ್ಯನ ಪಾತ್ರ ಸೊಗಸಾಗಿ ಮೂಡಿಬಂದಿದೆ. ಗದಗಿನ ಮತ್ತೊಂದು ಪುಣ್ಯಕ್ಷೇತ್ರ ವೀರೇಶ್ವರ ಪುಣ್ಯಾಶ್ರಮ. ಈಗಲೂ ನಾಟಕ ಪ್ರದರ್ಶನ ಹಾಗೂ ಗಾಯನ ಕಾರ್ಯಕ್ರಮಗಳನ್ನು ನಡೆಸಿಕೊಂಡೇ ಬರುತ್ತಿದೆ. ವಿಶೇಷತೆ ಎಂದರೆ ಇಲ್ಲಿನ ಬಹುತೇಕ ಕಲಾವಿದರು ಜಗತ್ತಿಗೆ ಬೆಳಕನ್ನು ನೀಡುವ ಅಂಧರು. ಸಿರಿಗೆರೆಯ ತರಳಬಾಳು ಮಠ ಪ್ರತಿ ವರ್ಷ ನಾಟಕೋತ್ಸವ ಏರ್ಪಡಿಸುವ ಜೊತೆಗೆ ಮಠದ ವತಿಯಿಂದಲೇ ನಾಟಕ ಪ್ರದರ್ಶನಗಳನ್ನು ಮಾಡುತ್ತದೆ. ೨೦೦೦ ವರ್ಷದಲ್ಲಿ ಮಠದ ಕಲಾವಿದರು ಅಭಿನಯಿಸಿದ ಹೆಚ್.ಎಸ್. ಶಿವಪ್ರಕಾಶರ ಸುಲ್ತಾನ್ ಟಿಪ್ಪು ನಾಟಕ ಒಂದು ವಿಶಿಷ್ಟ ಅದ್ದೂರಿ ಪ್ರಯೋಗ. ಶ್ರೀಮಂತ ಪಳಗಿದ ಕಲಾವಿದರಿಂದ ಕೂಡಿದ ಸುಸಜ್ಜಿತ ತಂಡ ಇದಾಗಿತ್ತು. ಇದೇ ಸಿರಿಗೆರೆ ಮಠದ ಶಾಖಾಮಠವಾಗಿರುವ ಸಾಣೇಹಳ್ಳಿ ತರಳಬಾಳು ಮಠವಂತೂ ರಂಗಭೂಮಿಯಲ್ಲಿ ಬಹು ದೊಡ್ಡ ಸಾಧನೆಯನ್ನು ಮಾಡಿದೆ. ಕರ್ನಾಟಕದ ವೃತ್ತಿಪರ ನಾಟಕ ಸಂಸ್ಥೆಗಳಾದ ಕೆ.ವಿ. ಸುಬ್ಬಣ್ಣನವರ ನೀನಾಸಂ, ಮೈಸೂರಿನ ರಂಗಾಯಣದಂತೆ ಸಾಣೇಹಳ್ಳಿಯಲ್ಲಿ ಶಿವಸಂಚಾರ ಸಂಸ್ಥೆಯನ್ನು ಹುಟ್ಟು ಹಾಕುವುದರ ಮೂಲಕ ಪ್ರತಿ ವರ್ಷ ಮೂರು ಅಥವಾ ನಾಲ್ಕು ಹೊಸ ನಾಟಕಗಳನ್ನು ನಿರ್ಮಿಸಿ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಪ್ರವಾಸ ಮಾಡಿ ಇನ್ನೂರಕ್ಕೂ ಹೆಚ್ಚು ಪ್ರದರ್ಶನಗಳನ್ನು ನೀಡುತ್ತಿದೆ. ಕಲಾವಿದರಿಗಾಗಿಯೇ ಬಸ್, ನಾಟಕ ಪ್ರದರ್ಶನಕ್ಕೆ ಬೇಕಾಗಿರುವ ಆಧುನಿಕ ತಂತ್ರಜ್ಞ, ತರಬೇತಿ ಹೊಂದಿರುವ ಕಲಾವಿದರು ಮತ್ತು ಹಿನ್ನೆಲೆ ಗಾಯಕರಿಂದ ಎಲ್ಲ ವರ್ಗದವರ ಮತ್ತು ರಂಗಪ್ರೇಮಿಗಳ ಪ್ರೀತಿಗೆ ಪಾತ್ರವಾಗಿದೆ ಶಿವಸಂಚಾರ. ಕೇವಲ ಶರಣ ಸಂಪ್ರದಾಯ ನಾಟಕಗಳಿಗೆ ಸೀಮಿತವಾಗದೆ ಎಲ್ಲ ಪ್ರಾಕಾರದ ನಾಟಕಗಳನ್ನು ಶಿವಸಂಚಾರ ಪ್ರದರ್ಶಿಸುತ್ತಿದೆ. ಮೈಸೂರಿನ ಶಿವರಾತ್ರೀಶ್ವರ ಕೇಂದ್ರವಂತೂ ಪ್ರತಿವರ್ಷ ಜಾತ್ರೆಯ ಸಂದರ್ಭದಲ್ಲಿ ಬೃಹತ್ ನಾಟಕವನ್ನು ಸಂಘಟಿಸುವುದರ ಜೊತೆಗೆ ಮಠದ ಕಲಾವಿದರಿಗಾಗಿ ಉತ್ತಮ ದರ್ಜೆಯ ನಾಟಕಗಳನ್ನು ತಯಾರಿಸುತ್ತಿದೆ. ಶ್ರೀಮತಿ ಪ್ರೇಮಾಕಾರಂತ್, ಪಿ. ಗಂಗಾಧರಸ್ವಾಮಿ ಮುಂತಾದ ಖ್ಯಾತ ನಿರ್ದೇಶಕರು ಈ ತಂಡಕ್ಕಾಗಿ ನಾಟಕ ನಿರ್ದೇಶನ ಮಾಡಿದ್ದಾರೆ.

ಗೀತ ನಾಟಕ ನೃತ್ಯ ನಾಟಕಗಳ ಕ್ಷೇತ್ರಗಳಲ್ಲೂ ವೀರಶೈವರು ತಮ್ಮ ಹೆಜ್ಜೆ ಗುರುತುಗಳನ್ನು ಮೂಡಿಸಿದ್ದಾರೆ. ಸಾ.ಶಿ. ಮರುಳಯ್ಯ, ಜಿ.ಎಸ್. ಶಿವರುದ್ರಪ್ಪ ಮತ್ತು ಡಾ. ಪ್ರಭುಶಂಕರ್ ರಚಿಸಿರುವ ಅನೇಕ ಗೀತ ನಾಟಕಗಳು ಬ್ಯಾಲೆಗಳಾಗಿ ಮೂಡಿಬಂದಿವೆ. ಅದರಲ್ಲೂ ವಿಶೇಷವಾಗಿ ವೈಜಯಂತಿ ಕಾಶಿ ಮತ್ತು ಮಂಜುಳ ಪರಮೇಶ್ ತಂಡದವರು ಅನೇಕ ನೃತ್ಯ ನಾಟಕಗಳನ್ನು ಹೊರತಂದಿದ್ದಾರೆ. ಸುಮಾ ವಿಜಯ್ ಕಥಕ್ ನೃತ್ಯಗಾರ್ತಿಯಾಗಿ ಹೆಸರು ಪಡೆದು ಅನೇಕ ವಚನಗಳನ್ನು ಮತ್ತು ಹಂಪೆಯ ಇತಿಹಾಸವನ್ನು ಒಳಗೊಂಡಂತೆ ಐದಕ್ಕೂ ಹೆಚ್ಚು ನೃತ್ಯನಾಟಕಗಳನ್ನು ನಿರ್ದೇಶಿಸಿದ್ದಾರೆ. ಇವರ ಪ್ರೌಢದೇವರಾಯ, ಓಂಕಾರ ಮುಂತಾದ ನೃತ್ಯ ನಾಟಕಗಳು ಜನಮೆಚ್ಚುಗೆ ಗಳಿಸಿವೆ. ವೈಜಯಂತಿ ಕಾಶಿ ಮತ್ತು ಸುಮಾ ವಿಜಯ್‌ರವರು ಕೇವಲ ಭಾರತದಲ್ಲಷ್ಟೇ ಅಲ್ಲ. ಪಾಶ್ಚಾತ್ಯ ರಾಷ್ಟ್ರಗಳಲ್ಲೂ ನೃತ್ಯ ನಾಟಕಗಳ ಮೂಲಕ ಖ್ಯಾತರಾಗಿದ್ದಾರೆ.

ಶರಣವೈಭವ, ಅಕ್ಕಮಹಾದೇವಿ, ಧರ್ಮಜ್ಯೋತಿ ಮಹಾಬೆಳಗು ಮೊದಲಾದ ಗೀತನಾಟಕಗಳನ್ನು ಬರೆದು ತಮ್ಮ ಅಭಿನಯ ಕಲಾವಿದರು ತಂಡದಿಂದ ನಾಡಿನ ಅನೇಕ ಕಡೆ ಮತ್ತು ಹೊರಗೆ ಕೂಡ ಅನೇಕ ಪ್ರದರ್ಶನಗಳನ್ನು ನೀಡುತ್ತಾ ಬಂದಿರುವ ಶ್ರೀ ಪಿ.ಎನ್. ರುದ್ರಪ್ಪನವರ ಕಲಾಸೇವೆ ಉಲ್ಲೇಖನಾರ್ಹ.

ಬೀದಿ ನಾಟಕ ಕ್ಷೇತ್ರದಲ್ಲಿ ಮೈಸೂರಿನ ಉಮೇಶ್, ಲಿಂಗದೇವರು ಹಳೆಮನೆ, ಬನಹಟ್ಟಿಯ ಪೋಲೀಸ್ ಪಾಟೀಲ, ರಂಗಭಾರತಿಯ ನಾಗರಾಜಮೂರ್ತಿ, ದಾವಣಗೆರೆಯ ಸಿದ್ಧರಾಜು, ಮಲ್ಲಿಕಾರ್ಜುನ ಮಹಾಮನೆ, ಶಂಕ್ರಯ್ಯ ಘಂಟಿ ಮುಂತಾದವರು ಸತತವಾಗಿ ಕೆಲಸ ಮಾಡುತ್ತಿದ್ದಾರೆ. ರಂಗ ನೇಪಥ್ಯದಲ್ಲಿ ಕಲಾನಿರ್ದೇಶಕರಾಗಿ ಸಾಕಷ್ಟು ಕಾಣಿಕೆ ನೀಡಿರುವವರಲ್ಲಿ ಜಯದೇವ್ ಬಹುಮುಖ್ಯರು. ಅನೇಕ ನಾಟಕಗಳಿಗೆ ರಂಗಸಜ್ಜಿಕೆ ನಿರ್ಮಿಸಿಕೊಟ್ಟು ನಾಟಕಗಳು ಆಕರ್ಷಕವಾಗಿ ಮೂಡಿಬರಲು ಕಾರಣರಾಗಿದ್ದಾರೆ. ೨೫ ವರ್ಷಗಳ ರಂಗಭೂಮಿಯ ನಿರಂತರ ಸೇವೆ ಸಲ್ಲಿಸಿರುವ ಇವರಿಗೆ ನಾಟಕ ಅಕಾಡೆಮಿ ಪ್ರಶಸ್ತಿಯೂ ಸಂದಿದೆ. ಹಾಗೆಯೇ ಮೈಸೂರಿನ ಪಿ. ಗಂಗಾಧರಸ್ವಾಮಿ, ಕಲಾಮಂದಿರದ ಗುರು, ಬೆಳಕುತಜ್ಞರಾಗಿ ಹೆಸರು ಗಳಿಸಿರುವ ಡಾ. ಪರೇಶ್ ಕುಮಾರ್ ಮತ್ತು ರಟ್ಟೀಹಳ್ಳಿ ಮುದ್ದಣ್ಣನವರ ಕಾಣಿಕೆ ಮಹತ್ವದ್ದು.

ಗುಬ್ಬಿವೀರಣ್ಣ, ಚಿಂದೋಡಿ ಲೀಲಾ ತಮ್ಮ ಅಭಿನಯ ಪ್ರೌಢಿಮೆಗಾಗಿ ಭಾರತ ಸರ್ಕಾರದಿಂದ ಪ್ರಶಸ್ತಿ ಗಳಿಸಿದ್ದಾರೆ. ಅಂತೆಯೇ ಕರ್ನಾಟಕ ಸರ್ಕಾರ ರಂಗಭೂಮಿಯ ಸೇವೆಗಾಗಿ ಸ್ಥಾಪಿಸಿರುವ ಪ್ರತಿಷ್ಠಿತ ಒಂದು ಲಕ್ಷ ರೂಪಾಯಿ ಹಾಗೂ ಗೌರವ ಫಲಕದ ಗುಬ್ಬಿ ವೀರಣ್ಣ ಪ್ರಶಸ್ತಿಯನ್ನು ಏಣಗಿ ಬಾಳಪ್ಪ, ಹೆಚ್.ಎನ್. ಹೂಗಾರ, ಪದ್ಮಶ್ರೀ ಚಿಂದೋಡಿ ಲೀಲಾ, ಬಿ.ಆರ್. ಅರಿಷಿಣಗೋಡಿ ಇವರುಗಳಿಗೆ ಸಂದಿದೆ. ಹಾಗೆಯೇ ಪದ್ಮಶ್ರೀ ಚಿಂದೋಡಿ ಲೀಲಾ ಮತ್ತು ಡಾ. ಕೆ. ಮರುಳಸಿದ್ಧಪ್ಪನವರು ಕರ್ನಾಟಕ ನಾಟಕ ಅಕಾಡೆಮಿಯ ಅಧ್ಯಕ್ಷರಾಗಿ ರಂಗಭೂಮಿಯಲ್ಲಿ ಗಮನಾರ್ಹ ಸಾಧನೆ ಮಾಡಿದ್ದಾರೆ. ಹೀಗೆ ಕನ್ನಡ ರಂಗಭೂಮಿಯ ಎಲ್ಲ ಹಂತಗಳಲ್ಲೂ ವೀರಶೈವರ ಕೊಡುಗೆ ನಿರಂತರವಾಗಿ ಸಾಗುತ್ತಲೇ ಇದೆ.

ಅಭಿನಯ ಕಲಾವಿದರು

೧. ಶರಣ ವೈಭವ

೨. ಮಹಾಬೆಳಗು (ಕನ್ನಡ, ತಮಿಳು ಮತ್ತು ಹಿಂದಿ)

೩. ಅಮರಜ್ಯೋತಿ ಅಕ್ಕಮಹಾದೇವಿ (ಕನ್ನಡ ಮತ್ತು ಹಿಂದಿ)

೪. ಧರ್ಮಜ್ಯೋತಿ

೫. ವಿಶ್ವಜ್ಯೋತಿ ವಿಶ್ವಾರಾಧ್ಯ (ಕನ್ನಡ ಮತ್ತು ಹಿಂದಿ)

೬. ವಚನಾಂಜಲಿ (ವಚನ ಸಾಹಿತ್ಯವನ್ನು ಶಾಸ್ತ್ರೀಯವಾಗಿ ಭರತನಾಟ್ಯಕ್ಕೆ ಪ್ರಪ್ರಥಮವಾಗಿ ಅಳವಡಿಸಿದ್ದಾರೆ.)

ಶ್ರೀ ಸಿದ್ಧಾಂತ ಶಿಖಾಮಣಿ : ಒಂದು ಅವಲೋಕನ

✍ ಶ್ರೀ ಷ.ಬ್ರ. ಡಾ. ಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು

ಧರ್ಮವೊಂದನ್ನು ಪ್ರತಿನಿಧಿಸುವ ಗ್ರಂಥಗಳಲ್ಲಿ ಆ ಧರ್ಮದ ನೀತಿ ದರ್ಶನ ಮತ್ತು ಪರಂಪರೆಗಳು ಪ್ರತಿಪಾದಿಸಲ್ಪಟ್ಟಿರುತ್ತವೆ. ಈ ನಿಟ್ಟಿನಲ್ಲಿ ಶ್ರೀ ಸಿದ್ಧಾಂತ ಶಿಖಾಮಣಿಯು ಹೊರತಾದುದಲ್ಲ. ಇಲ್ಲಿ ನೈತಿಕ, ದಾರ್ಶನಿಕ ಮತ್ತು ಪಾರಂಪರಿಕ ವಿಚಾರಗಳು ಹೇರಳವಾಗಿ ನಿರೂಪಣೆಗೊಂಡಿವೆ. ಕಾರಣ ಇದನ್ನು ವೀರಶೈವರ ನೈತಿಕ ಗ್ರಂಥವೆಂತಲೂ, ದಾರ್ಶನಿಕ ಗ್ರಂಥವೆಂತಲೂ ಮತ್ತು ಪಾರಂಪರಿಕ ಗ್ರಂಥವೆಂತಲೂ ಪರಿಗಣಿಸಬಹುದು. ವೀರಶೈವದ ವಿಚಾರವನ್ನು ಹೆಚ್ಚಾಗಿ ಇಲ್ಲಿ ಪ್ರತಿಪಾದಿಸಲ್ಪಟ್ಟಿರುವುದರಿಂದ ಇದಕ್ಕೆ ವೀರಶೈವ ಗ್ರಂಥವೆಂದು ಹೇಳಬೇಕಾಗಿದೆಯಷ್ಟೆ. ಆದರೆ ಗುಣಾತ್ಮಕವಾಗಿ ಈ ಗ್ರಂಥವನ್ನು ಅವಲೊಕನ ಮಾಡಿದಾಗ ಇದು ಕೇವಲ ವೀರಶೈವರಿಗೆ ಮಾತ್ರ ಸೀಮಿತವಾದುದಲ್ಲ, ಆಧ್ಯಾತ್ಮದ ಗೌರಿಶಂಕರವನ್ನು ಏರಬಯಸುವ ವಿಶ್ವದ ಪ್ರತಿಯೊಬ್ಬ ವ್ಯಕ್ತಿಗೂ ದಾರಿದೀಪವಾಗಬಲ್ಲ ಮಹೋನ್ನತ ವಿಚಾರಗಳನ್ನು ತನ್ನಲ್ಲಿ ಗರ್ಭೀಕರಿಸಿಕೊಂಡಿರುವುದರಿಂದ ಇದು ವಿಶ್ವಮಾನ್ಯ ಗ್ರಂಥವೆಂದು ಹೇಳಬಹುದು.

ಸಿದ್ಧಾಂತ ಶಿಖಾಮಣಿಯು ಭಗವದ್ಗೀತೆಗೆ ಸಮನಾದ ಸ್ಥಾನವನ್ನು ಹೊಂದಿದೆ. ಮಹಾಭಾರತದ ಯುದ್ಧದಲ್ಲಿ ಅರ್ಜುನನ ಮನವನ್ನು ಆವರಿಸಿದ ವ್ಯಾಮೋಹ ನಿವಾರಣೆಗಾಗಿ ಭಗವಂತನಾದ ಕೃಷ್ಣನು ಉಪನಿಷತ್ತುಗಳ ಸಾರವನ್ನೇ ಉಪದೇಶಗೈಯುತ್ತಾನೆ. ಅದನ್ನೆ ವ್ಯಾಸಮಹರ್ಷಿಗಳು ಕೃಷ್ಣಾರ್ಜುನರ ಸಂವಾದ ರೂಪದಲ್ಲಿ ರಚಿಸಿದರು. ಇದರಂತೆ ಮಹರ್ಷಿ ಅಗಸ್ತ್ಯನ ಸಂಶಯ ನಿವಾರಣೆಗಾಗಿ ರೇಣುಕ ಭಗವತ್ಪಾದರು ಶಿವಾಗಮಗಳ ಸಾರವನ್ನು ಉಪದೇಶಿಸಿದರು. ಕಾಲಾಂತರದಲ್ಲಿ ಅದನ್ನೆ ಶಿವಯೋಗಿ ಶಿವಾಚಾರ್ಯರು 'ಸಿದ್ಧಾಂತ ಶಿಖಾಮಣಿ' ಎಂಬ ಹೆಸರಿನಿಂದ ವಿರಚಿಸಿದರು. ಭಗವಂತನಾದ ಕೃಷ್ಣನಿಂದ ಉಪದೇಶಿಸಲ್ಪಟ್ಟ ಈ ಉಪದೇಶವು ಪದ್ಯಾತ್ಮಕವಾದುದರಿಂದ ಅದನ್ನು 'ಭಗವದ್ಗೀತೆ' ಎಂದು ಕರೆಯುವಂತೆ 'ಸಿದ್ಧಾಂತ ಶಿಖಾಮಣಿ'ಯು ಕೂಡ ಪದ್ಯಾತ್ಮಕವಾಗಿರುವುದರಿಂದ ಇದನ್ನು 'ರೇಣುಕ ಗೀತೆ' ಎಂತಲೂ ಕರೆಯಲಾಗುತ್ತದೆ. ಇದೂ ಅಲ್ಲದೆ ಭಗವದ್ಗೀತೆಯ ೧೧ನೆಯ ಅಧ್ಯಾಯದಲ್ಲಿ ಅರ್ಜುನನ ಪ್ರಾರ್ಥನೆಯ ಮೇರೆಗೆ ಶ್ರೀಕೃಷ್ಣನು ವಿಶ್ವರೂಪ ದರ್ಶನ ಮಾಡಿಸಿರುವಂತೆ ಸಿದ್ಧಾಂತ ಶಿಖಾಮಣಿಯಲ್ಲಿಯೂ ೨೧ ನೇ ಪರಿಚ್ಛೇದದಲ್ಲಿ ವಿಭೀಷಣನ ಪ್ರಾರ್ಥನೆಯಂತೆ ಮೂರುಕೋಟಿ ಲಿಂಗಗಳನ್ನು ಸ್ಥಾಪಿಸುವುದಕ್ಕಾಗಿ ಏಕಕಾಲಕ್ಕೆ ಮೂರುಕೋಟಿ ಆಚಾರ್ಯರ ರೂಪವನ್ನು ಧರಿಸುವ ಮೂಲಕ ವಿಶ್ವರೂಪದರ್ಶನ ಮಾಡಿಸಿರುವುದನ್ನು ಕಾಣಬಹುದು. ಇದೆಲ್ಲಕ್ಕಿಂತಲೂ ಮಿಗಿಲಾಗಿ ಗೀತೆಯು ತನ್ನ ಕಾಲಮಾನದ ಎಲ್ಲ ಧರ್ಮಗಳ ನಿಲುವುಗಳನ್ನು ಸುಂದರ ಸಮನ್ವಯಗೊಳಿಸಲು ಪ್ರಯತ್ನಿಸುವಂತೆ ಸಿದ್ಧಾಂತ ಶಿಖಾಮಣಿಯೂ ಸಹ ಯಾವ ಮತವನ್ನು ಖಂಡಿಸದೆ, ಸರ್ವಶ್ರುತಿಗಳ ಸಮನ್ವಯವನ್ನೇ ಧ್ಯೇಯವಾಗಿರಿಸಿಕೊಂಡು ತಾನು ನಿರೂಪಿಸಬೇಕಾದ ಸಿದ್ಧಾಂತವನ್ನು ಪ್ರತಿಪಾದಿಸುತ್ತದೆ. ಅಂತೆಯೇ ಶಿವಯೋಗಿ ಶಿವಾಚಾರ್ಯರು ಗ್ರಂಥಾರಂಭದಲ್ಲಿ-

> ಅಗಸ್ತ್ಯ ಬಹುಧಾ ಖ್ಯಾತಾಃ ಸಿದ್ಧಾಂತಾರುಚಿಭೇದತಃ।
> ಭಿನ್ನಚಾರಸಮಾಯುಕ್ತಾನ್ನಾಭಿನ್ನಾರ್ಥಪ್ರತಿಪಾದಕಾಃ ॥
> ಸಾಂಖ್ಯಂ ಯೋಗಃ ಪಾಂಚರಾತ್ರಂ ವೇದಾಃ ಪಾಶುಪತಂ ತಥಾ।
> ಏತಾನಿ ಮಾನಭೂತಾನಿ ನ ಹಂತವ್ಯಾನಿ ಯುಕ್ತಿಭಿಃ॥ -ಶ್ರೀ ಸಿದ್ಧಾಂತ ಶಿಖಾಮಣಿ, ೫.೩-೪

ಅಗಸ್ತ್ಯನೆ! ತಮ್ಮ ತಮ್ಮ ರುಚಿಗನುಸಾರವಾಗಿ ವಿಭಿನ್ನವಾದ ಆಚಾರ-ವಿಚಾರಗಳನ್ನು ಹೊಂದಿದ ಮತಗಳು ಅನೇಕ. ಸಾಂಖ್ಯ, ಯೋಗ, ಪಾಂಚರಾತ್ರ, ವೈದಿಕ, ಪಾಶುಪತ ಮುಂತಾದ ಧರ್ಮಗಳಿಗೆ ತಮ್ಮದೇ ಆದ ಪ್ರಮಾಣಗಳಿರುವುದರಿಂದ

ಯುಕ್ತಿಗಳನ್ನು ಬಳಸಿ ಅವುಗಳನ್ನು ಖಂಡಿಸಬಾರದು ಎಂದು ಪ್ರತಿಜ್ಞೆ ಮಾಡಿ ಸಿದ್ಧಾಂತದ ನಿರೂಪಣೆಗೆ ತೊಡಗುತ್ತಾರೆ. ಇಷ್ಟೇ ಅಲ್ಲದೆ ಅದನ್ನು ಗ್ರಂಥದುದ್ದಕ್ಕೂ ಪಾಲಿಸಿಕೊಂಡು ಬಂದಿರುವರು. ಇದು ಈ ಗ್ರಂಥದ ಸಮನ್ವಯ ದೃಷ್ಟಿಗೆ ಮತ್ತು 'ಸ್ವಧರ್ಮನಿಷ್ಠೆ ಪರಧರ್ಮ ಸಹಿಷ್ಣುತೆಗೆ' ಜೀವಂತ ನಿದರ್ಶನ.

ಗ್ರಂಥ ಪರಿಚಯ:

ಸಿದ್ಧಾಂತ ಶಿಖಾಮಣಿಯು ೨೧ ಪರಿಚ್ಛೇದಗಳಿಂದ ಕೂಡಿದ್ದು ೧೪೩೮ ಶ್ಲೋಕಗಳು ಅಲ್ಲಿವೆ. ಈ ಗ್ರಂಥದ ಮೊದಲ ಐದು ಪರಿಚ್ಛೇದಗಳಲ್ಲಿ ಮತ್ತು ಕೊನೆಯದಾದ ೨೧ನೆಯ ಪರಿಚ್ಛೇದದಲ್ಲಿ ಚಾರಿತ್ರಿಕ ವಿಷಯ ಪ್ರತಿಪಾದಿಸಲ್ಪಟ್ಟಿದೆ. ಐದನೆಯ ಪರಿಚ್ಛೇದದಿಂದ ಇಪ್ಪತ್ತನೆಯ ಪರಿಚ್ಛೇದದವರೆಗೆ ವೀರಶೈವ ಷಟ್‌ಸ್ಥಲ ಸಿದ್ಧಾಂತ ಮತ್ತು ತದಂತರ್ಗತವಾದ ಏಕೋತ್ತರ ಶತಸ್ಥಲಗಳು ಸಕ್ರಮವಾಗಿ ನಿರೂಪಿಸಲ್ಪಟ್ಟಿವೆ. ಶಿವಸ್ತುತಿ ಮತ್ತು ಶಕ್ತಿಸ್ತುತಿಗಳೊಂದಿಗೆ ಪ್ರಾರಂಭಗೊಂಡ ಈ ಗ್ರಂಥದ ಮೊದಲ ಪರಿಚ್ಛೇದದಲ್ಲಿ ಶಿವಯೋಗಿ ಶಿವಾಚಾರ್ಯರ ವಂಶವರ್ಣನೆ ಮತ್ತು ಶಿವಯೋಗಿ ಶಿವಾಚಾರ್ಯರ ವರ್ಣನೆ ಪ್ರತಿಪಾದಿತವಾಗಿದೆ. ಎರಡನೆಯ ಪರಿಚ್ಛೇದದಲ್ಲಿ ಜಗತ್ ಸೃಷ್ಟಿಯ ವಿಚಾರ, ಮೂರನೆಯ ಪರಿಚ್ಛೇದದಲ್ಲಿ ಕೈಲಾಸ ಪರ್ವತದ ವರ್ಣನೆ, ಶಿವ ವರ್ಣನೆ, ಶಕ್ತಿ ವರ್ಣನೆ, ದೇವತಾಸಮೂಹ ಮಾಡಿದ ಶಿವ ಸೇವಾ ವರ್ಣನೆ ಮತ್ತು ಶ್ರೀ ರೇಣುಕ ಗಣೇಶ್ವರನಿಗೆ ಭೂಲೋಕದಲ್ಲಿ ಅವತಾರ ತಾಳಲು ಶಿವನ ಆದೇಶದ ವರ್ಣನೆ ನಿರೂಪಿತವಾಗಿವೆ. ನಾಲ್ಕನೆಯ ಪರಿಚ್ಛೇದದಲ್ಲಿ ಶ್ರೀ ರೇಣುಕ ಗಣೇಶ್ವರರು ಲಿಂಗದಿಂದ ಪ್ರಾದುರ್ಭವಿಸಿದ್ದು, ನಿಸರ್ಗರಮಣೀಯ ತಾಣವಾದ ಮಲಯಾಚಲಕ್ಕೆ ಆಕಾಶ ಮಾರ್ಗವಾಗಿ ಆಗಮಿಸಿದ್ದು, ಅಲ್ಲಿರುವ ಮಹಾಮಹಿಮಾಶಾಲಿ ಅಗಸ್ತ್ಯನಿಂದ ಪೂಜೆಗೊಂಡದ್ದು ಮತ್ತು ಬಹುದಿನಗಳಿಂದ ತನ್ನ ಮನದಲ್ಲಿ ಕೊರೆಯುವ ಸಂಶಯವನ್ನು ಅಗಸ್ತ್ಯನು ರೇಣುಕರ ಮುಂದಿರಿಸಿದ್ದು ವರ್ಣಿಸಲ್ಪಟ್ಟಿದೆ. ನಂತರದ ಐದರಿಂದ ಇಪ್ಪತ್ತನೆಯ ಪರಿಚ್ಛೇದದವರೆಗೆ ರೇಣುಕ ಭಗವತ್ಪಾದರ ಉಪದೇಶ ನಡೆಯುವುದು. ಇಪ್ಪತ್ತೊಂದನೆಯ ಪರಿಚ್ಛೇದದಲ್ಲಿ ಕೃತಕೃತ್ಯ ಭಾವದಿಂದ ಅಗಸ್ತ್ಯನಿಂದ ಬೀಳ್ಕೊಂಡ ರೇಣುಕರು ಲಂಕೆಗೆ ಆಗಮಿಸಿ ವಿಭೀಷಣನಿಂದ ಪೂಜೆಗೊಂಡು ಅವನ ಪ್ರಾರ್ಥನೆಯ ಮೇರೆಗೆ ರಾವಣನ ಸಂಕಲ್ಪ ಪೂರ್ತಿಗಾಗಿ ಒಂದೇ ಸಮಯದಲ್ಲಿ ಮೂರುಕೋಟಿ ಆಚಾರ್ಯರ ರೂಪವನ್ನು ಧರಿಸಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಾಪಿಸಿದ ವಿಷಯವು ಕಾವ್ಯಾತ್ಮಕವಾಗಿ ವರ್ಣಿಸಲ್ಪಟ್ಟಿದೆ. ಚಾರಿತ್ರಿಕ ವಿಷಯವನ್ನು ನಿರೂಪಿಸುವ ಪ್ರಸಂಗದಲ್ಲಿ ಶಿವಯೋಗಿ ಶಿವಾಚಾರ್ಯರು ಅಲ್ಲಲ್ಲಿ ಉಪಮೆ, ರೂಪಕ, ಪ್ರತಿಮೆ, ಪದಲಾಲಿತ್ಯ, ಪ್ರಾಸ ಮುಂತಾದವುಗಳನ್ನು ಮನೋಹರವಾಗಿ ಬಳಸುವ ಮೂಲಕ ತಮ್ಮ ಕಾವ್ಯಪ್ರತಿಭೆಯನ್ನೂ ಮೆರೆದಿದ್ದನ್ನು ಕಾಣಬಹುದು. ವಸ್ತುತಃ ಇದೊಂದು ಸೈದ್ಧಾಂತಿಕ ಗ್ರಂಥವಾದರೂ ಇದರಲ್ಲಿ ತೋರುವ ಸಾಹಿತ್ಯಿಕ ಅಂಶಗಳನ್ನು ಅವಲೋಕಿಸಿದಾಗ ಸಾಹಿತ್ಯದ ದೃಷ್ಟಿಯಿಂದಲೂ ಇದನ್ನು ಅಧ್ಯಯನ ಮಾಡಬಹುದು ಎಂದೆನಿಸುವುದು.

ಏಕೋತ್ತರಶತಸ್ಥಲಗಳು:

ಸಿದ್ಧಾಂತ ಶಿಖಾಮಣಿಯ ೫ ನೆಯ ಪರಿಚ್ಛೇದದಿಂದ ೨೦ ನೆಯ ಪರಿಚ್ಛೇದದವರೆಗೆ ಈ ಏಕೋತ್ತರ ಶತಸ್ಥಲಗಳನ್ನು ಪ್ರತಿಪಾದಿಸಲಾಗಿದೆ. ಗ್ರಂಥದ ಈ ಭಾಗವು ಇದರ ಜೀವಾಳ. ಶಿವಾಗಮಗಳ ನಂತರ ನೂರೊಂದು ಸ್ಥಲಗಳನ್ನು ವ್ಯವಸ್ಥಿತವಾಗಿ ನಿರೂಪಿಸಿದ ಮೊದಲ ಗ್ರಂಥ ಶ್ರೀ ಸಿದ್ಧಾಂತ ಶಿಖಾಮಣಿ. ನೂರೊಂದು ಸ್ಥಲಗಳನ್ನು ನಿರೂಪಿಸುವುದಕ್ಕಾಗಿಯೇ ಈ ಗ್ರಂಥ ರಚಿಸಲ್ಪಟ್ಟದ್ದು.

ಸಿದ್ಧಾಂತ ಶಿಖಾಮಣಿಯ ಪ್ರಕಾರ ಸ್ಥಲವೆಂದರೆ ಪರಶಿವ. ಆ ಪರಶಿವನು ತನ್ನ ಲೀಲಾ ವಿನೋದಕ್ಕಾಗಿ ತಾನೇ ಪೂಜ್ಯ-ಪೂಜಕ ಭಾವದಿಂದ ಲಿಂಗ ಮತ್ತು ಅಂಗವೆಂದು ಎರಡು ವಿಧದಲ್ಲಿ ವಿಭಾಗಗೊಳ್ಳುತ್ತಾನೆ. ಅವುಗಳಲ್ಲಿ ಪುನಃ ಅಂಗದಲ್ಲಿ

ಆರು ಭೇದ, ಲಿಂಗದಲ್ಲಿ ಆರು ಭೇದ ಉಂಟಾಗುತ್ತವೆ. ಭಕ್ತ, ಮಹೇಶ್ವರ, ಪ್ರಸಾದಿ, ಪ್ರಾಣಲಿಂಗ, ಶರಣ ಮತ್ತು ಐಕ್ಯ ಇವು ಅಂಗದ ಭೇದಗಳು. ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ ಮತ್ತು ಮಹಾಲಿಂಗ ಇವು ಲಿಂಗಸ್ಥಲದ ಭೇದಗಳು. ಇವುಗಳನ್ನು ಶಾಸ್ತ್ರೀಯ ಭಾಷೆಯಲ್ಲಿ ಷಟ್‌ಸ್ಥಲಗಳೆಂದು ಕರೆಯಲಾಗುತ್ತದೆ. ಷಟ್‌ಸ್ಥಲಗಳ ಅವಾಂತರ ಭೇದ (ಸ್ಥಲ)ಗಳೇ ಏಕೋತ್ತರಶತ (ನೂರೊಂದು)ಸ್ಥಲಗಳು.

ಸಿದ್ಧಾಂತ ಶಿಖಾಮಣಿಯು ನೂರೊಂದು ಸ್ಥಲಗಳಲ್ಲಿ ಮುಖ್ಯವಾಗಿ ಎರಡು ವಿಭಾಗಗಳನ್ನು ಮಾಡುತ್ತದೆ- ೧. ಅಂಗ ಷಟ್‌ಸ್ಥಲಾಂತರ್ಗತ ಸ್ಥಲಗಳು, ೨. ಲಿಂಗ ಷಟ್‌ಸ್ಥಲಾಂತರ್ಗತ ಸ್ಥಲಗಳು, ಅಂಗ (ಜೀವ)ಭಾವದಿಂದ ಆಚರಿಸುವ ಸ್ಥಲಗಳು ಅಂಗಸ್ಥಲಗಳೆಂತಲೂ ಲಿಂಗ (ಶಿವ) ಭಾವದಿಂದ ಆಚರಿಸುವ ಸ್ಥಲಗಳು ಲಿಂಗಸ್ಥಲಗಳೆಂತಲೂ ಸ್ಥೂಲವಾಗಿ ಅಂದುಕೊಳ್ಳಬಹುದು. ಅಂಗಸ್ಥಲಗಳು ೪೪, ಲಿಂಗಸ್ಥಲಗಳು ೫೭.

೧. ಪಿಂಡಸ್ಥಲ ೨. ಪಿಂಡಜ್ಞಾನಸ್ಥಲ ೩. ಸಂಸಾರಹೇಯ ಸ್ಥಲ ೪. ಗುರುಕಾರುಣ್ಯಸ್ಥಲ ೫. ಲಿಂಗಧಾರಣ ಸ್ಥಲ ೬. ವಿಭೂತಿಧಾರಣ ಸ್ಥಲ ೭. ರುದ್ರಾಕ್ಷಧಾರಣ ಸ್ಥಲ ೮. ಪಂಚಾಕ್ಷರ ಜಪ ಸ್ಥಲ ೯. ಭಕ್ತಮಾರ್ಗ ಸ್ಥಲ ೧೦. ಉಭಯ ಸ್ಥಲ ೧೧. ತ್ರಿವಿಧ ಸಂಪತ್ತಿ ಸ್ಥಲ ೧೨. ಪ್ರಸಾದ ಸ್ವೀಕಾರ ಸ್ಥಲ ೧೩. ಸೋಪಾಧಿದಾನ ಸ್ಥಲ ೧೪. ನಿರುಪಾಧಿ ದಾನ ಸ್ಥಲ ೧೫. ಸಹಜದಾನ ಸ್ಥಲ. ಇವು ಭಕ್ತಸ್ಥಲದ ಅವಾಂತರ ಸ್ಥಲಗಳು.

೧೬. ಮಾಹೇಶ್ವರ ಪ್ರಶಂಸಾ ಸ್ಥಲ ೧೭. ಲಿಂಗನಿಷ್ಠಾ ಸ್ಥಲ ೧೮. ಪೂರ್ವಾಶ್ರಯ ನಿರಸನ ಸ್ಥಲ ೧೯.ಸರ್ವಾದ್ವೈತ ನಿರಸನ ಸ್ಥಲ ೨೦. ಆಹ್ವಾನ ನಿರಸನ ಸ್ಥಲ ೨೧. ಅಷ್ಟಮೂರ್ತಿ ನಿರಸನ ಸ್ಥಲ ೨೨. ಸರ್ವಗತ್ವನಿರಸನ ಸ್ಥಲ ೨೩. ಶಿವ ಜಗನ್ಮಯ ಸ್ಥಲ ೨೪. ಭಕ್ತದೇಹಿಕ ಸ್ಥಲ -ಈ ಒಂಬತ್ತು ಸ್ಥಲಗಳು ಮಾಹೇಶ್ವರಸ್ಥಲದ ಅವಾಂತರ ಸ್ಥಲಗಳು.

೨೫. ಪ್ರಸಾದಿ ಸ್ಥಲ ೨೬. ಗುರು ಮಹಾತ್ಮ್ಯ ಸ್ಥಲ. ೨೭. ಲಿಂಗ ಮಹಾತ್ಮ್ಯಸ್ಥಲ ೨೮. ಜಂಗಮ ಮಹಾತ್ಮ್ಯ ಸ್ಥಲ ೨೯. ಭಕ್ತಮಹಾತ್ಮ್ಯ ಸ್ಥಲ ೩೦. ಶರಣ ಮಹಾತ್ಮ್ಯ ಸ್ಥಲ ೩೧. ಪ್ರಸಾದ ಮಹಾತ್ಮ್ಯ ಸ್ಥಲ. ಈ ಏಳು ಸ್ಥಲಗಳು ಪ್ರಸಾದಿಸ್ಥಲದ ಅವಾಂತರ ಸ್ಥಲಗಳು.

೩೨. ಪ್ರಾಣಲಿಂಗಿ ಸ್ಥಲ ೩೩. ಪ್ರಾಣಲಿಂಗಾರ್ಚನ ಸ್ಥಲ ೩೪. ಶಿವಯೋಗ ಸಮಾಧಿ ಸ್ಥಲ ೩೫. ಲಿಂಗನಿಜ ಸ್ಥಲ ೩೬. ಅಂಗಲಿಂಗ ಸ್ಥಲ -ಈ ಐದು ಪ್ರಾಣಲಿಂಗಿಸ್ಥಲದ ಅವಾಂತರ ಸ್ಥಲಗಳು.

೩೭. ಶರಣಸ್ಥಲ ೩೮. ತಾಮಸ ನಿರಸನ ಸ್ಥಲ ೩೯. ನಿರ್ದೇಶನ ಸ್ಥಲ ೪೦. ಶೀಲಸಂಪಾದನ ಸ್ಥಲ ೪೧. ಐಕ್ಯಸ್ಥಲ ೪೨. ಆಚಾರ ಸಂಪತ್ತಿ ಸ್ಥಲ ೪೩. ಏಕಭಾಜನ ಸ್ಥಲ ೪೪. ಸಹಭಾಜನ ಸ್ಥಲ -ಈ ನಾಲ್ಕು ಐಕ್ಯಸ್ಥಲದ ಅವಾಂತರ ಸ್ಥಲಗಳು. ಈ ಎಲ್ಲ ೪೪ ಸ್ಥಲಗಳು. ಇನ್ನು ಲಿಂಗಸ್ಥಲಾಂತರ್ಗತವಾದ ಷಟ್‌ಸ್ಥಲಗಳ ಅವಾಂತರ ಸ್ಥಲಗಳು ಈ ಕೆಳಗಿನಂತಿವೆ:

೪೫. ದೀಕ್ಷಾಗುರು ಸ್ಥಲ ೪೬. ಶಿಕ್ಷಾಗುರು ಸ್ಥಲ ೪೭. ಜ್ಞಾನಗುರು ಸ್ಥಲ ೪೮. ಕ್ರಿಯಾಲಿಂಗ ಸ್ಥಲ ೪೯. ಭಾವಲಿಂಗ ಸ್ಥಲ ೫೦. ಜ್ಞಾನಲಿಂಗ ಸ್ಥಲ ೫೧. ಸ್ವಸ್ಥಲ ೫೨. ಚರಸ್ಥಲ ೫೩. ಪರಸ್ಥಲ ೫೪. -ಈ ಒಂಬತ್ತು ಭಕ್ತ ಸ್ಥಲಾಂತರ್ಗತ ಅವಾಂತರ ಸ್ಥಲಗಳು ೫೪. ಕ್ರಿಯಾಗಮ ಸ್ಥಲ ೫೫. ಭಾವಾಗಮ ಸ್ಥಲ ೫೬. ಜ್ಞಾನಾಗಮ ಸ್ಥಲ ೫೭. ಸಕಾಯ ಸ್ಥಲ ೫೮. ಅಕಾಯ ಸ್ಥಲ ೫೯. ಪರಕಾಯ ಸ್ಥಲ ೬೦. ಧರ್ಮಾಚಾರ ಸ್ಥಲ ೬೧. ಭಾವಾಚಾರ ಸ್ಥಲ ೬೨. ಜ್ಞಾನಾಚಾರ ಸ್ಥಲ -ಈ ಒಂಬತ್ತು ಮಾಹೇಶ್ವರ ಸ್ಥಲದ ಅವಾಂತರ ಸ್ಥಲಗಳು.

೬೩. ಕಾಯಾನುಗ್ರಹ ಸ್ಥಲ ೬೪. ಇಂದ್ರಿಯಾನುಗ್ರಹ ಸ್ಥಲ ೬೫. ಪ್ರಾಣಾನುಗ್ರಹ ಸ್ಥಲ ೬೬. ಕಾಯಾರ್ಪಣ ಸ್ಥಲ ೬೭. ಕರಣಾರ್ಪಣ ೬೮. ಭಾವಾರ್ಪಣ ಸ್ಥಲ ೬೯. ಶಿಷ್ಯ ಸ್ಥಲ ೭೦. ಶುಶ್ರೂಷಾ ಸ್ಥಲ ೭೧. ಸೇವ್ಯಸ್ಥಲ -ಈ ಒಂಬತ್ತು

ಪ್ರಸಾದಿ ಸ್ಥಲದ ಅವಾಂತರ ಸ್ಥಲಗಳು. ೭೨. ಆತ್ಮಸ್ಥಲ ೭೩. ಅಂತರಾತ್ಮ ಸ್ಥಲ ೭೪. ಪರಮಾತ್ಮ ಸ್ಥಲ ೭೫. ನಿರ್ದೇಹಾಗಮ ಸ್ಥಲ ೭೬. ನಿರ್ಭಾವಾಗಮ ಸ್ಥಲ ೭೭. ನಷ್ಟಾಗಮ ಸ್ಥಲ ೭೮. ಆದಿಪ್ರಸಾದಿ ಸ್ಥಲ ೭೯. ಅಂತ್ಯ ಪ್ರಸಾದಿ ಸ್ಥಲ ೮೦. ಸೇವ್ಯಪ್ರಸಾದಿ ಸ್ಥಲ -ಈ ಒಂಬತ್ತು ಪ್ರಾಣಲಿಂಗಿಸ್ಥಲದ ಅವಾಂತರ ಸ್ಥಲಗಳು.

೮೧. ದೀಕ್ಷಾಪಾದೋದಕ ಸ್ಥಲ ೮೨. ಶಿಕ್ಷಾಪಾದೋದಕ ಸ್ಥಲ ೮೩. ಜ್ಞಾನ ಪಾದೋದಕ ಸ್ಥಲ ೮೪. ಕ್ರಿಯಾನಿಷ್ಪತ್ತಿ ಸ್ಥಲ ೮೫. ಭಾವನಿಷ್ಪತ್ತಿ ಸ್ಥಲ ೮೬. ಜ್ಞಾನನಿಷ್ಪತ್ತಿ ಸ್ಥಲ ೮೭. ಪಿಂಡಾಕಾಶ ಸ್ಥಲ ೮೮. ಬಿಂದ್ವಾಕಾಶ ಸ್ಥಲ ೮೯. ಮಹಾಕಾಶ ಸ್ಥಲ ೯೦. ಕ್ರಿಯಾಪ್ರಕಾಶ ಸ್ಥಲ ೯೧. ಭಾವಪ್ರಕಾಶ ಸ್ಥಲ ೯೨. ಜ್ಞಾನಪ್ರಕಾಶಸ್ಥಲ -ಈ ಹನ್ನೆರಡು ಶರಣಸ್ಥಲದ ಅವಾಂತರ ಸ್ಥಲಗಳು.

೯೩. ಸ್ವೀಕೃತ ಪ್ರಸಾದ ಸ್ಥಲ ೯೪. ಶಿಷ್ಟೋದನ ಸ್ಥಲ ೯೫. ಚರಾಚರಲಯ ಸ್ಥಲ ೯೬. ಭಾಂಡ ಸ್ಥಲ ೯೭. ಭಾಜನ ಸ್ಥಲ ೯೮. ಅಂಗಾಲೇಪ ಸ್ಥಲ ೯೯. ಸ್ವಪರಾಜ್ಞ ಸ್ಥಲ ೧೦೦. ಭಾವಾಭಾವಲಯ ಸ್ಥಲ ೧೦೧. ಜ್ಞಾನಶೂನ್ಯ ಸ್ಥಲ. ಈ ಒಂಬತ್ತು ಐಕ್ಯಸ್ಥಲದ ಅವಾಂತರ ಸ್ಥಲಗಳು -ಈ ೫೭ ಸ್ಥಲಗಳು ಲಿಂಗಸ್ಥಲಾಂತರ್ಗತವಾದ ಷಟ್‌ಸ್ಥಲಗಳ ಅವಾಂತರ ಭೇದಗಳು.

ಈ ನೂರೊಂದು ಸ್ಥಲಗಳ ಸಮಗ್ರ ಪರಿಚಯವು ಶಿವಾಗಮಗಳ ತರುವಾಯ ಸಿದ್ಧಾಂತ ಶಿಖಾಮಣಿಯಲ್ಲಿಯೇ ದೊರೆಯುತ್ತದೆ. ಸಿದ್ಧಾಂತ ಶಿಖಾಮಣಿಯ ನಂತರ ನೂರೊಂದು ಸ್ಥಲಗಳನ್ನು ನಿರೂಪಿಸುವ ಅನೇಕ ಗ್ರಂಥಗಳು ಕಾಲಕಾಲಕ್ಕೆ ಹೊರಬಂದಿವೆ. ಅವುಗಳಲ್ಲಿ ಮೊಗ್ಗೆಮಾಯಿದೇವರ ಷಟ್‌ಸ್ಥಲದ ಏಕೋತ್ತರ ಶತಪದಿ. ಮಹಾಲಿಂಗ ದೇವರು ಮತ್ತು ಜಕ್ಕಣಾರ್ಯರು ರಚಿಸಿರುವ ಏಕೋತ್ತರ ಶತಸ್ಥಲಗಳು ಮತ್ತು ಗುಬ್ಬಿ ಮಲ್ಲಣಾರ್ಯರ "ಗಣಭಾಷಿತರತ್ನಮಾಲೆ" -ಇವು ಪ್ರಮುಖವಾದುವು. ಇವುಗಳಲ್ಲಿ ಗಣಭಾಷಿತರತ್ನಮಾಲೆಯನ್ನು ಹೊರತುಪಡಿಸಿ ಮಿಕ್ಕ ಗ್ರಂಥಗಳು (ಕೆಲವು ಸ್ಥಲ ಬದಲಾವಣೆಗಳನ್ನು ಹೊರತುಪಡಿಸಿ) ಸಿದ್ಧಾಂತ ಶಿಖಾಮಣಿಯ ವಿಧಾನವನ್ನು ಅನುಸರಿಸಿ ನೂರೊಂದು ಸ್ಥಲಗಳ ವಿವರಣೆಯನ್ನು ನೀಡುತ್ತವೆ. ಗಣಭಾಷಿತರತ್ನಮಾಲೆಯಲ್ಲಿ ಮಾತ್ರ ಆಮೂಲಾಗ್ರ ವ್ಯತ್ಯಾಸವಿದೆ.

ಈ ಪ್ರಬಂಧದ ವ್ಯಾಪ್ತಿ ಚಿಕ್ಕದಿರುವುದರಿಂದ ಮತ್ತು ಮೂಲಗ್ರಂಥಕ್ಕೆ ಸಂಬಂಧಿಸಿದಂತೆ ಇನ್ನು ಅನೇಕ ವಿಚಾರಗಳನ್ನು ಇಲ್ಲಿ ಮಂಡಿಸಲೇಬೇಕಾದ ಅನಿವಾರ್ಯತೆ ಇರುವುದರಿಂದ, ಮಂಡಿಸದೇ ಬಿಟ್ಟರೆ ಈ ಪ್ರಬಂಧ ಅಪೂರ್ಣವೆನಿಸುವುದರಿಂದ ಇಲ್ಲಿ ನೂರೊಂದು ಸ್ಥಲಗಳ ವಿವರಣೆ ನೀಡದೇ ಕೇವಲ ನಾಮ ನಿರ್ದೇಶನ ಮಾತ್ರ ಮಾಡಲಾಗಿದೆ. ಇದೂ ಅಲ್ಲದೇ ಅವುಗಳ ವಿವರಣೆ ಮೂಲಗ್ರಂಥ ಮತ್ತು ಅನುವಾದಿತ ಗ್ರಂಥಗಳಲ್ಲಿ ಹೇರಳವಾಗಿ ದೊರೆಯುವುದು. ಜಿಜ್ಞಾಸುಗಳು ಅಲ್ಲಿ ಗಮನಿಸಬಹುದು.

ಸಿದ್ಧಾಂತ ಶಿಖಾಮಣಿಯ ದಾರ್ಶನಿಕ ನಿಲುವು: "ದೃಶ್ಯತೇ ಸಾಕ್ಷಾತ್ ಕ್ರಿಯತೇ ಪರಮತತ್ತ್ವಂ ಯೇನ ತದ್ದರ್ಶನಂ" ಪರಮ ತತ್ತ್ವದ ಸಾಕ್ಷಾತ್ಕಾರಕ್ಕೆ ಸಾಧನವಾದ ವಿವೇಕಕ್ಕೆ ದರ್ಶನವೆಂದು ಹೆಸರು. ಇದು ದರ್ಶನ ಶಬ್ದದ ಉತ್ಪತ್ತಿ. ಇದರ ಹಿನ್ನಲೆಯಲ್ಲಿ ಈಶ್ವರ, ಜೀವ, ಜಗತ್ತು, ಬಂಧ-ಮೋಕ್ಷ ಮತ್ತು ಮೋಕ್ಷೋಪಾಯಗಳನ್ನು ಕುರಿತು ಚರ್ಚಿಸಲಾಗುತ್ತದೆ. ಇವುಗಳ ವಿವೇಕವೇ ಪರಮ ತತ್ತ್ವದ ಸಾಕ್ಷಾತ್ಕಾರಕ್ಕೆ ಕಾರಣವೆಂಬ ವಿಶ್ವಾಸವೇ ಇವುಗಳನ್ನು ಕುರಿತು ಎಲ್ಲ ದರ್ಶನಗಳು ಆಲೋಚಿಸುವಂತೆ ಮಾಡಿದೆ. ಸಿದ್ಧಾಂತ ಶಿಖಾಮಣಿಯೂ ಇದಕ್ಕೆ ಹೊರತಲ್ಲ. ಅಲ್ಲಿಯೂ ಪ್ರಸಂಗಾನುಸಾರ ದಾರ್ಶನಿಕ ಪದಾರ್ಥಗಳಾದ ಈಶ್ವರ-ಜೀವ-ಜಗತ್ತು-ಬಂಧ-ಮೋಕ್ಷ-ಮೋಕ್ಷೋಪಾಯಗಳನ್ನು ಕುರಿತು ಅಲ್ಲಲ್ಲಿ ವಿವರಿಸಲಾಗಿದೆ.

I. ಈಶ್ವರ: ವೀರಶೈವ ದರ್ಶನದಲ್ಲಿ ಪರಮತತ್ತ್ವವನ್ನು ಪರಶಿವ ಸ್ಥಲ ಮತ್ತು ಲಿಂಗ ಎಂಬ ಹೆಸರಿನ ಮೂಲಕ ಸಂಬೋಧಿಸಲಾಗುತ್ತದೆ. ಸಿದ್ಧಾಂತ ಶಿಖಾಮಣಿಯು ಅದನ್ನು ಸರ್ವಥಾ ಅನುಸರಿಸಿಕೊಂಡು ಬಂದಿದೆ. ಈ ಪರಶಿವ ಚೈತನ್ಯದ ಸ್ವರೂಪವನ್ನು ನಿರೂಪಿಸುತ್ತ ಸಿದ್ಧಾಂತ ಶಿಖಾಮಣಿಯು-

ಪರಿಚ್ಛೇದಕಥಾಶೂನ್ಯಂ ಪ್ರಪಂಚಾತೀತವೈಭವಮ್।
ಪ್ರತ್ಯಕ್ಷಾದಿಪ್ರಮಾಣಾನಾಮಗೋಚರಪದೇ ಸ್ಥಿತಮ್॥
ಸ್ವಪ್ರಕಾಶಂ ಪರಾಕಾಶಮನೌಪಮ್ಯಮನಾಮಯಮ್।
ಸರ್ವಜ್ಞಂ ಸರ್ವಗಂ ಶಾಂತಂ ಸರ್ವಶಕ್ತಿನಿರಂಕುಶಮ್। (ಸಿ.ಶಿ. ೨.೪)

ಪರಶಿವ ಚೈತನ್ಯವು ದೇಶ-ಕಾಲ-ವಸ್ತುಗಳಿಂದ ಪರಿಚ್ಛಿನ್ನಗೊಳ್ಳದ್ದು, ಪ್ರಪಂಚಕ್ಕೆ ಮಿಗಿಲಾದ ವೈಭವ ಹೊಂದಿದ್ದು, ಪ್ರತ್ಯಕ್ಷ ಮೊದಲಾದ ಪ್ರಮಾಣಗಳಿಗೆ ನಿಲುಕದ್ದೂ ಸ್ವಪ್ರಕಾಶವೂ, ಆಕಾಶಕ್ಕಿಂತ ಸೂಕ್ಷ್ಮವೂ, ಉಪಮಾತೀತವೂ, ಮಲರಹಿತವೂ, ಸರ್ವಜ್ಞವೂ, ಸರ್ವವ್ಯಾಪಕವೂ, ಶಾಂತವೂ ಮತ್ತು ಎಲ್ಲ ವಿಧ ಶಕ್ತಿಗಳನ್ನು ತನ್ನ ಆಧೀನದಲ್ಲಿರಿಸಿಕೊಂಡಿದ್ದೂ ಆಗಿದೆ ಎಂದು ವರ್ಣಿಸುತ್ತದೆ.

ಈ ಗ್ರಂಥದ ಪ್ರಕಾರ ಪರಶಿವನು ಸಗುಣ ನಿರ್ಗುಣ ಉಭಯ ರೂಪನಿರುವನು. ಪರಶಿವನಲ್ಲಿ ಅವಿನಾಭಾವ ಸಂಬಂಧದಿಂದ ನೆಲೆಸಿರುವ ವ್ಯಕ್ತಿಯು ಸಂಕೋಚಗೊಂಡಾಗ ನಿರ್ಗುಣನೆಂತಲೂ, ಅದು ವಿಕಾಸಗೊಂಡಾಗ ಸಗುಣನೆಂತಲೂ ನಿರೂಪಿಸುವ ಮೂಲಕ ಇಲ್ಲಿ ಸಗುಣ-ನಿರ್ಗುಣ ಶಬ್ದಗಳಿಗೆ ವಿಶಿಷ್ಟವಾದ ಅರ್ಥವನ್ನು ಕೊಡಲಾಗಿದೆ. ಸಾಮಾನ್ಯವಾಗಿ ನಿರ್ಗುಣ ಎಂಬ ಪದಕ್ಕೆ ಯಾವುದೇ ಗುಣವಾಗಲಿ ಶಕ್ತಿಗಳಾಗಲಿ ಇಲ್ಲದ್ದೆಂದು ಅರ್ಥೈಸಲಾಗುತ್ತದೆ. ಆದರೆ ಇಲ್ಲಿ ಶಕ್ತಿಯ ಅಸ್ತಿತ್ವದ ನಿರಾಕರಣೆ ನಿರ್ಗುಣವಲ್ಲ.

ಶಕ್ತಿಯ ಸಂಕೋಚಗೊಂಡ ಅವಸ್ಥೆ ಪರಶಿವನ ನಿರ್ಗುಣರೂಪ, ವಿಕಾಸಗೊಂಡ ಅವಸ್ಥೆ ಸಗುಣರೂಪ. ಶಿವ-ಶಕ್ತಿಯರಲ್ಲಿ ಅವಿನಾಭಾವ ಸಂಬಂಧವನ್ನು ಹೇಳುವ ನಿಲುವು ಇದಕ್ಕೆ ಕಾರಣವಾಗಿರಬಹುದು.

ಯಥಾ ಚಂದ್ರೇ ಸ್ಥಿರಾ ಜ್ಯೋತ್ಸ್ನಾ ವಿಶ್ವವಸ್ತುಪ್ರಕಾಶಿನೀ।
ತಥಾ ಶಕ್ತಿರ್ವಿಮರ್ಶಾಖ್ಯಾ ಪ್ರಕಾಶೇ ಬ್ರಹ್ಮಣಿ ಸ್ಥಿರಾ॥ -ಸಿ.ಶಿ. ೨೦.೩೨

ಎಂಬುದಾಗಿ ಸಿದ್ಧಾಂತ ಶಿಖಾಮಣಿಯು ಪರಶಿವನಲ್ಲಿ ವಿಮರ್ಶೆ ಎಂಬ ಶಕ್ತಿಯು ಚಂದ್ರನಲ್ಲಿ ಬೆಳದಿಂಗಳಂತೆ ಸದಾ ನೆಲೆಸಿರುತ್ತದೆ ಎಂಬ ವಿಷಯವನ್ನು ಪ್ರತಿಪಾದಿಸುತ್ತದೆ. ಈ ಮೂಲಕ ಶಿವ-ಶಕ್ತಿಯರ ಅವಿನಾಭಾವ ಸಂಬಂಧವನ್ನು ಸ್ಪಷ್ಟಪಡಿಸುತ್ತದೆ. ಶಿವನಲ್ಲಿಯ ಈ ವಿಮರ್ಶೆ ಶಕ್ತಿಗೆ ಎರಡು ಅವಸ್ಥೆಗಳು- ೧) ಅವಿಭಾಗ ಪರಾಮರ್ಶೆ ಅವಸ್ಥೆ, ೨) ವಿಭಾಗ ಪರಾಮರ್ಶೆ ಅವಸ್ಥೆ. ಮೊದಲನೆಯ ಅವಸ್ಥೆಯಲ್ಲಿ ಈ ಶಕ್ತಿಯು ಸಚ್ಚಿದಾನಂದ ರೂಪನಾದ ಪರಶಿವನೊಂದಿಗೆ ಆ ಸಚ್ಚಿದಾನಂದಗಳ ಭೇದರೂಪದಿಂದ ನೆಲಸಿ ತನ್ನಲ್ಲಿ ಯಾವುದೇ ವಿಭಾಗವನ್ನು ಹೊಂದದೆ ಇರುತ್ತದೆ. ಅಂತೆಯೇ ಸಿದ್ಧಾಂತ ಶಿಖಾಮಣಿಯ "ತದೀಯಾ ಪರಮಾ ಶಕ್ತಿಃ ಸಚ್ಚಿದಾನಂದ ಲಕ್ಷಣಾ" (೨-೧೨) ಎಂತಲೂ "ವಂದೇ ತಾಂ ಪರಮಾನಂದಪ್ರಬೋಧಲಹರೀಂ ಶಿವಾಂ" (೧-೧೧) ಎಂತಲೂ ಹೇಳುವ ಮೂಲಕ ಶಕ್ತಿಯ ಮೊದಲ ಅವಸ್ಥೆಯನ್ನು ಸೂಚಿಸಿದೆ. ಎರಡನೆ ಅವಸ್ಥೆಯಲ್ಲಿ ಈ ಶಕ್ತಿಯೇ ಪರಶಿವನು ಸೃಷ್ಟಿಕಾರ್ಯದಲ್ಲಿ ತೊಡಗಿದಾಗ ಸತ್ವ-ರಜ-ತಮೋ ರೂಪದಿಂದ ಮೂರು ವಿಭಾಗವಾಗಿ ಅವನ ಸೃಷ್ಟಿಗೆ ಸಹಕಾರಿಯಾಗುತ್ತದೆ. ಇದನ್ನೇ ಸಿದ್ಧಾಂತಶಿಖಾಮಣಿಯು ಸೂಚ್ಯವಾಗಿ "ಗುಣ ತ್ರಯಾತ್ಮಿಕಾ ಶಕ್ತಿರ್ಬ್ರಹ್ಮನಿಷ್ಠಾ ಸನಾತನೀ" (೫-೩೯) ಎಂಬುದಾಗಿ ಪ್ರತಿಪಾದಿಸುತ್ತದೆ. ಹೀಗೆ ಸಿದ್ಧಾಂತಶಿಖಾಮಣಿಯ ಪ್ರಕಾರ ಶಿವನು ಶಕ್ತಿವಿಶಿಷ್ಟನೂ, ಸಗುಣ ನಿರ್ಗುಣೋಭಯರೂಪನೂ, ಸಮಸ್ತ ಸೃಷ್ಟಿಗೆ ಕಾರಣನೂ ಆಗಿರುವನು.

II. ಜೀವ: 'ಏಕಾಕೀ ನೈವ ರಮತೆ' 'ತದೈಕ್ಷತ ಬಹು ಸ್ಯಾಂ ಪ್ರಜಾಯೇಯ' ಮುಂತಾದ ಶ್ರುತಿ ವಚನದಂತೆ, ಒಂದೇ ಆದ ಆ ಪರಶಿವ ಚೈತನ್ಯವು ಅನೇಕವಾಗಬೇಕೆಂದು ಸಂಕಲ್ಪ ಮಾಡಿತು. ಆಗ ಅವನಲ್ಲಿರುವ ಇಚ್ಛಾ-ಜ್ಞಾನ-ಕ್ರಿಯಾ ಈ ಶಕ್ತಿಗಳು ಸಂಕುಚಿತಗೊಂಡು ಆಣವ-ಮಾಯೀಯ-ಕಾರ್ಮಿಕ ಎಂಬ ಮೂರು ಮಲಗಳಾಗಿ ಪರಶಿವನ ಅಂಶವನ್ನು

ಆವರಿಸಿಕೊಳ್ಳುತ್ತವೆ. ಈ ಮೂರು ಮಲಗಳಿಂದ ಆವೃತವಾಗಿ ಸಂಸಾರದ ಬಂಧನಕ್ಕೊಳಪಟ್ಟು ಬೆಳಗುತ್ತಿರುವ ಪರಶಿವನ ಅಂಶವೇ ಜೀವವೆಂದು ಕರೆಯಲ್ಪಡುತ್ತದೆ. "ಅನಾದ್ಯವಿದ್ಯಾ ಸಂಬಂಧಾತ್ ತದಂಶೋ ಜೀವನಾಮಕಃ" (೫-೩೪) ಎಂಬಲ್ಲಿ ಮತ್ತು

ಕಿಂಚಿತ್‌ಕರ್ತಾ ಚ ಕಿಂಚಿಜ್ಞೋ ಬದ್ಧೋऽನಾದಿ ಶರೀರವಾನ್।
ಅವಿದ್ಯಾಮೋಹಿತಾ ಜೀವಾ ಬ್ರಹ್ಮೈಕ್ಯಜ್ಞಾನವರ್ಜಿತಾಃ॥
ಪರಿಭ್ರಮಂತಿ ಸಂಸಾರೇ ನಿಜಕರ್ಮಾನುಸಾರತಃ॥ (ಸಿ.ಶಿ. ೫,೪೭-೪೮)

ಎಂಬಲ್ಲಿ ರೇಣುಕ ಭಗವತ್ಪಾದರು ಜೀವನ ಲಕ್ಷಣ ಮತ್ತು ಸ್ವರೂಪವನ್ನು ಉಪದೇಶಿಸಿದ್ದಾರೆ. ಈ ಜೀವವು ದೇಹ-ಇಂದ್ರಿಯಾದಿಗಳಿಗಿಂತ ಭಿನ್ನವಾದುದು.

ಸಾಮಾನ್ಯವಾಗಿ ದರ್ಶನಶಾಸ್ತ್ರದಲ್ಲಿ ವಿಭುಪರಿಮಾಣ, ಮಧ್ಯಮ ಪರಿಮಾಣ ಮತ್ತು ಅಣುಪರಿಮಾಣ ಎಂಬುದಾಗಿ ಮೂರುವಿಧ ಪರಿಮಾಣಗಳನ್ನು ಆತ್ಮನಿಗೆ ಹೇಳಲಾಗುತ್ತದೆ. ಇವುಗಳಲ್ಲಿ ವಿಭಿನ್ನ ದಾರ್ಶನಿಕರು ವಿಭಿನ್ನ ಪರಿಮಾಣಗಳನ್ನು ಅಂಗೀಕರಿಸುತ್ತಾರೆ. ಸಿದ್ಧಾಂತ ಶಿಖಾಮಣಿಯು "ಅಣುಭೂತೋಽಮಲಾಸಿಂಗಾದಾದಿಕರ್ಮ ನಿಯಂತ್ರಿತಃ" (೧೮-೭೭) ಎಂದು ಹೇಳುವ ಮೂಲಕ ಜೀವಾತ್ಮನಿಗೆ ಅಣುಪರಿಮಾಣವನ್ನು ಅಂಗೀಕರಿಸುತ್ತದೆ. ಅಣುರೂಪನಾದ ಜೀವಾತ್ಮನು ದೇಹದ ಹೃದಯ ಸ್ಥಾನದಲ್ಲಿ ನೆಲೆಸಿ ತಾನು ಹಿಂದೆ ಮಾಡಿದ ಕರ್ಮದ ಫಲವನ್ನು ಅನುಭವಿಸುತ್ತದೆ. ಅಣುರೂಪನಾದ ಜೀವಾತ್ಮನು ದೇಹದ ಒಂದು (ಹೃದಯ) ಭಾಗದಲ್ಲಿ ನೆಲೆಸಿದ್ದರೆ ಅವನಿಗೆ ಶರೀರದ ಇನ್ನೊಂದು (ಪಾದ, ಶಿರಸ್ಸು ಮುಂತಾದ) ಭಾಗದಲ್ಲಿ ಉಂಟಾಗುವ ಸುಖ-ದುಃಖಗಳ ಅರಿವು ಹೇಗೆ ಉಂಟಾಗುತ್ತದೆ? ಎಂಬ ಸಂದೇಹಕ್ಕೆ ಸಿದ್ಧಾಂತ ಶಿಖಾಮಣಿಯು "ಅಶ್ನನ್ ಕರ್ಮಫಲಂ ಸರ್ವಮಾತ್ಮಾ ಸ್ಫುರತಿ ದೀಪವತ್" (೧೮-೬) ಎಂಬುದಾಗಿ ದೀಪದ ದೃಷ್ಟಾಂತದ ಮೂಲಕ ಸಮಾಧಾನಿಸುತ್ತದೆ. ದೀಪವು ಕೋಣೆಯ ಒಂದು ಭಾಗದಲ್ಲಿ ಮಾತ್ರ ನೆಲೆಸಿದ್ದರೂ ಅದರ ಪ್ರಭೆ(ಬೆಳಕು) ಕೋಣೆಯ ತುಂಬೆಲ್ಲ ವ್ಯಾಪಿಸಿರುವಂತೆ ದೇಹದ ಒಂದು ಭಾಗದಲ್ಲಿ ಜೀವಾತ್ಮವು ನೆಲೆಸಿದ್ದರೂ ಅದರ ಜ್ಞಾನಪ್ರಭೆ ದೇಹದ ಎಲ್ಲೆಡೆ ವ್ಯಾಪಿಸಿರುತ್ತದೆ. ಆ ಜ್ಞಾನ ಪ್ರಭೆಯ ಮೂಲಕ ದೇಹದ ಎಲ್ಲ ಭಾಗಗಳಲ್ಲಿ ಉಂಟಾಗುವ ಸುಖ-ದುಃಖಗಳನ್ನು ಆತ್ಮವು ಅನುಭವಿಸುತ್ತದೆ.

ಈ ಅಣುಪರಿಮಾಣವನ್ನು ಅಂಗೀಕರಿಸುವುದರಿಂದ ಶ್ರುತಿಯಲ್ಲಿ ಹೇಳಲಾದ ಜೀವಾತ್ಮದ ಗಮನಾಗಮನವಾಗಲಿ, ಉತ್ಕ್ರಮಣವಾಗಲಿ ಘಟಿಸಲು ಪ್ರಾಶಸ್ತ್ಯವಿರುತ್ತದೆ. ಹೀಗೆ ಸಿದ್ಧಾಂತಶಿಖಾಮಣಿಯು ಜೀವಾತ್ಮ ಪರಶಿವನ ಅಂಶವೂ, ತ್ರಿಮಲಗಳಿಂದ ಆವೃತವೂ, ಸಂಸಾರ ಬಂಧಿತವೂ, ಕರ್ಮಫಲ ಭೋಕ್ತೃವೂ ಅಣುರೂಪವೂ ಆಗಿದೆಯೆಂದು ನಿರೂಪಿಸುತ್ತದೆ. ಸಂಸಾರ ದಿಶೆಯಲ್ಲಿ ಹೀಗಿದ್ದರೂ ತನ್ನ ಆತ್ಮವಿಕಾಸದ ಶಿವಯೋಗ ಸಾಧನೆಯ ಬಲದಿಂದ ಜೀವಾತ್ಮವು ಮೋಕ್ಷ ದಿಶೆಯಲ್ಲಿ ಪರಶಿವ ಸ್ವರೂಪಿ ಆಗುವುದು.

12091

III. ಜಗತ್ತು: ಜಗತ್ತನ್ನು ಕುರಿತು ಆಲೋಚಿಸುವ ದಾರ್ಶನಿಕರು ಪರಿಣಾಮ ಮತ್ತು ವಿವರ್ತ ಎಂಬ ಎರಡು ವಾದಗಳನ್ನು ಮಂಡಿಸುತ್ತಾರೆ. ಮೂಲವಸ್ತುವೇ ಪರಿಣಾಮ ಹೊಂದಿ ಇನ್ನೊಂದು ರೂಪವನ್ನು ಪಡೆದುಕೊಳ್ಳುವುದೇ ಪರಿಣಾಮ ವಾದ. ಮೂಲವಸ್ತುವಿನಲ್ಲಿ ಯಾವ ಬದಲಾವಣೆಯಿಲ್ಲದೆ ನೋಡುವವನ ದೃಷ್ಟಿದೋಷದಿಂದ ಅದರಲ್ಲಿ ಮತ್ತೊಂದು ವಸ್ತು ಪ್ರತಿಭಾಷಿಕವಾಗಿ ತೋರುವುದೇ ವಿವರ್ತ. ಈ ಜಗತ್ತು ಅನುಭವಸಿದ್ಧವಿರುವುದರಿಂದ ಅದರ ಅಸ್ತಿತ್ವವನ್ನು ಪ್ರಾತಿಭಾಷಿಕವೆಂದು ಹೇಳಿ ಅಲ್ಲಗಳೆಯುವುದು ಸುಲಭವಲ್ಲ; ಹಾಗೆಂದು ವಿಚಾರಿಸಿ ಪರಿಣಾಮವಾದವನ್ನು ಅಂಗೀಕರಿಸಿದರೆ ಪರಶಿವನಲ್ಲಿ ವಿಕಾರ ದೋಷ ಬರುತ್ತದೆ. ಅದಕ್ಕಾಗಿಯೇ ಸಿದ್ಧಾಂತ ಶಿಖಾಮಣಿಯು ಇವೆರಡರ ಮಧ್ಯದ ಅವಿಕೃತ ಪರಿಣಾಮ ವಾದವನ್ನು ಮಂಡಿಸುತ್ತದೆ. ಅವಿಕೃತ ಪರಿಣಾಮವಾದವೆಂದರೆ ವಸ್ತುವಿನ ಮೂಲಸ್ವರೂಪದಲ್ಲಿ ಯಾವ ಬದಲಾವಣೆಯಿಲ್ಲದೆ ಮೇಲಿನ

ಆಕಾರದಲ್ಲಿ ಮಾತ್ರ ಪರಿಣಾಮ ಹೊಂದಿರುವುದು. ಸಿದ್ಧಾಂತ ಶಿಖಾಮಣಿಯು ಈ ವಾದವನ್ನು ಉದಾಹರಣೆಪೂರ್ವಕ ಸಮರ್ಥಿಸುತ್ತದೆ.

ಆತ್ಮಶಕ್ತಿವಿಕಾಸೇನ ಶಿವೋ ವಿಶ್ವಾತ್ಮನಾ ಸ್ಥಿತಃ।
ಕುಟೀಭಾವಾದ್ಯಥಾ ಭಾತಿ ಪಟಃ ಸ್ವಸ್ಯ ಪ್ರಸಾರಣಾತ್॥ (ಸಿ.ಶಿ. ೧೦.೬೬)

ಒಂದು ವಿಶಾಲವಾದ ವಸ್ತ್ರವನ್ನು ವಿಶಿಷ್ಟವಾಗಿ ನಿಲ್ಲಿಸಿದ ಬಿದಿರುಗಳ ಮೇಲೆ ಬಿಚ್ಚಿ ಹಾಕಿದಾಗ ಅದು ಕುಟೀರದಂತಾಗುತ್ತದೆ. ಅದನ್ನು ತೆಗೆದು ಮಡಚಿ ಇಟ್ಟಾಗ ವಸ್ತ್ರವೇ ಇರುತ್ತದೆ. ಹೀಗೆ ಬಿಚ್ಚಿ ಹಾಕಿದಾಗಲೂ ಮತ್ತು ಮಡಚಿ ಇಡುವಾಗಲೂ ವಸ್ತ್ರದ ಮೂಲ ಸ್ವರೂಪದಲ್ಲಿ ಯಾವ ವಿಕಾರವೂ ಉಂಟಾಗುವುದಿಲ್ಲ. ಇದರಂತೆ ಪರಶಿವನು ತನ್ನ ಶಕ್ತಿಯ ವಿಕಾಸದಿಂದ ಜಗತ್ತಿನ ರೂಪದಲ್ಲಿ ಪರಿಣಾಮ ಹೊಂದಿದರೂ ಅವನ ಮೂಲಸ್ವರೂಪದಲ್ಲಿ ಮಾತ್ರ ಯಾವ ವಿಕಾರ ಉಂಟಾಗುವುದಿಲ್ಲ. ಇದುವೆ ಅವಿಕೃತ ಪರಿಣಾಮ ವಾದ.

ಸಿದ್ಧಾಂತ ಶಿಖಾಮಣಿಯ ಪ್ರಕಾರ ಶಕ್ತಿವಿಶಿಷ್ಟನಾದ ಪರಶಿವನು ಈ ಪ್ರಪಂಚಕ್ಕೆ ಕಾರಣನು. ಅವನಿಂದ ನಿರ್ಮಾಣಗೊಂಡ ಈ ಜಗತ್ತು ಅವನಿಗಿಂತ ಭಿನ್ನವಲ್ಲ. "ಶಿವತತ್ತ್ವಾತ್ ಸಮುತ್ಪನ್ನಂ ಜಗದಸ್ಮಾನ್ನಭಿದ್ಯತೇ" (೧೦-೬೪) "ತಥಾ ಶಿವಾತ್ ಸಮುತ್ಪನ್ನಂ ಶಿವ ಏವ ಚರಾಚರಂ" (೧೦-೬೫) ಇತ್ಯಾದಿ ಅನೇಕ ಸ್ಥಾನದಲ್ಲಿ ಸಿದ್ಧಾಂತ ಶಿಖಾಮಣಿಯು ಈ ಜಗತ್ತು ಶಿವರೂಪವೆಂಬುದನ್ನು ಸ್ಪಷ್ಟಪಡಿಸಿದೆ. ಹೀಗೆ ಶಿವರೂಪವೆಂದು ಪ್ರತಿಪಾದಿಸುವ ಮೂಲಕ ಜಗತ್ತು ಮಿಥ್ಯೆಯಲ್ಲ ಸತ್ಯವೆಂಬುದನ್ನು, ಪ್ರಾತಿಭಾಷಿಕವಲ್ಲ ವಾಸ್ತವಿಕವೆಂಬುದನ್ನು ಮಂಡಿಸುತ್ತದೆ. ಬ್ರಹ್ಮಸೂತ್ರದ ಶ್ರೀಕರಭಾಷ್ಯದಲ್ಲಿ ಶ್ರೀಪತಿ ಪಂಡಿತಾರಾಧ್ಯರು ಈ ನಿಲುವನ್ನು ಸಮರ್ಥಿಸುತ್ತ-

ಜೀವಃ ಸತ್ಯಂ ಜಗತ್‌ಸತ್ಯಂ ಶಿವಃ ಸತ್ಯಂ ಸ್ವಭಾವತಃ।
ತಯೋರಭೇದ ಸತ್ಯಂ ವಾ ಕ್ರಿಮಿಭ್ರಮರಯೋರಿವ॥ (ಬ್ರ.ಸೂ. ಶ್ರೀಕರಭಾಷ್ಯ ೨.೩.೪೦)

ಎಂಬ ಆಗಮದ ಉಕ್ತಿಯನ್ನು ಉಲ್ಲೇಖ ಮಾಡಿರುವರು. ಒಟ್ಟಿನಲ್ಲಿ ಚರಾಚರವಾಗಿ ಈ ಪ್ರಪಂಚವು ಶಕ್ತಿವಿಶಿಷ್ಟವಾದ ಪರಶಿವನಿಂದ ಅವಿಕೃತ ಪರಿಣಾಮದ ಮೂಲಕ ತೀರ್ಮಾನಗೊಂಡಿದ್ದು ಸತ್ಯರೂಪವಾಗಿದೆ.

IV. ಬಂಧ-ಮೋಕ್ಷ: "ಜೀವತ್ವಂ ದುಃಖಸರ್ವಸ್ವಂ ತದಿದಂ ಮಲಕಲ್ಪಿತಂ (೧೮.೧೭)" ಎಂಬುದಾಗಿ ಸಿದ್ಧಾಂತ ಶಿಖಾಮಣಿಯು ಜೀವ ಭಾವಕ್ಕೆ ಮತ್ತು ತಜ್ಜನ್ಯವಾದ ಎಲ್ಲ ದುಃಖಗಳಿಗೆ ಮಲವೇ ಕಾರಣವೆಂದು ಹೇಳುತ್ತದೆ. ಇದರಿಂದ ಮಲಗಳೇ ಬಂಧಗಳೆಂಬುದು ಈ ಗ್ರಂಥದ ನಿರ್ಣಯವೆಂದು ಭಾವಿಸಬಹುದು. ಪಾಶಗಳಂತೆ ಜೀವಿಗಳನ್ನು ಇವು ಬಂಧನಕ್ಕೊಳಪಡಿಸುವುದರಿಂದ ಆಗಮಶಾಸ್ತ್ರದಲ್ಲಿ ಮಲಗಳನ್ನು ಪಾಶವೆಂತಲೂ ಕರೆಯಲಾಗುತ್ತದೆ. ಆಣವ, ಮಾಯೀಯ ಮತ್ತು ಕಾರ್ಮಿಕವೆಂಬುದಾಗಿ ಮಲಗಳು ಮೂರು ಪ್ರಕಾರಗಳು.

ಪರಶಿವನಲ್ಲಿಯ ಇಚ್ಛಾಶಕ್ತಿಯು ಸಂಕೋಚಗೊಂಡು ಜೀವವನ್ನು ಆವರಿಸಿದಾಗ ಅದಕ್ಕೆ ಆಣವ ಮಲವೆಂದು ಕರೆಯುತ್ತಾರೆ. ಇದರ ಆವರಣದಿಂದ ಜೀವನು ತನ್ನ ಸ್ವರೂಪದ ವ್ಯಾಪಕತೆಯನ್ನು ಮರೆತು, ನಾನು ಅಪೂರ್ಣನು, ಚಿಕ್ಕವನು ಎಂಬ ಅಣುತ್ವಭಾವವುಳ್ಳವನಾಗುತ್ತಾನೆ. ತನ್ನ ಈ ಅಪೂರ್ಣತೆಯ ಭಾವವನ್ನು ಮಣೆಯುವುದಕ್ಕಾಗಿಯೆ, ಯಾವಾಗಲೂ ತನ್ನ ಜೊತೆಗೆ ಇನ್ನೊಬ್ಬರು ಬೇಕು ಎಂದು ಅಪೇಕ್ಷಿಸುತ್ತಾನೆ. ಮನುಷ್ಯ ಸಾಮಾನ್ಯವಾಗಿ ಒಂಟಿತನವನ್ನು ಅಪೇಕ್ಷಿಸದೆ ಸಂಗಜೀವಿಯಾಗಿ ಬದುಕುವುದಕ್ಕೆ ಈ ಆಣವ ಮಲದ ಪೀಡೆಯೇ ಕಾರಣವಾಗಿರಬಹುದು.

ಪರಶಿವನಲ್ಲಿಯ ಜ್ಞಾನಶಕ್ತಿಯು ಸಂಕುಚಿತಗೊಂಡು ಜೀವವನ್ನು ಆವರಿಸಿದಾಗ ಅದಕ್ಕೆ ಮಾಯೀಯ ಮಲವೆಂದು ಕರೆಯಲಾಗುತ್ತದೆ. ಇದರ ಆವರಣದಿಂದ ಜೀವನು ತನ್ನನ್ನು ಪರಶಿವನಿಂದ ಭಿನ್ನವೆಂಬುದಾಗಿ ಭಾವಿಸಿ ತಾನಲ್ಲದ ಶರೀರಾದಿಗಳೇ

ತಾನೆಂದು ಮತ್ತು ಸತಿ-ಸುತ, ಮನೆ-ಮಠಗಳು ತನ್ನವು ಎಂದು ನಂಬಿ ಬಂಧನಕ್ಕೊಳಪಡುತ್ತಾನೆ. ಎಲ್ಲ ಕಡೆಯಲ್ಲೂ ಭೇದಬುದ್ಧಿಯಿಂದ ವ್ಯವಹರಿಸಲು ಈ ಮಾಯೀಯ ಮಲವೇ ಕಾರಣ.

ಪರಶಿವನಲ್ಲಿಯ ಕ್ರಿಯಾಶಕ್ತಿಯು ಸಂಕುಚಿತಗೊಂಡು ಜೀವವನ್ನು ಆವರಿಸಿದಾಗ ಅದು ಕಾರ್ಮಿಕ ಮಲವೆಂದೆನಿಸುತ್ತದೆ. ಇದು ಶುಭಾಶುಭ ವಾಸನಾರೂಪವಾದುದು. ಇದರ ಆವರಣದಿಂದ ಜೀವವು ಶುಭ ಮತ್ತು ಅಶುಭ ಕರ್ಮಗಳನ್ನು ಆಚರಿಸುತ್ತ ಆ ಕರ್ಮಗಳ ಫಲವಾದ ಸುಖ ಮತ್ತು ದುಃಖಗಳನ್ನು ಅನುಭವಿಸುತ್ತ ಅನೇಕ ಯೋನಿಗಳಲ್ಲಿ ಪರಿಭ್ರಮಿಸುತ್ತಾನೆ. "ನ ಹಿ ಕಶ್ಚಿತ್ ಕ್ಷಣಮಪಿ ಜಾತು ತಿಷ್ಠತ್ಯಕರ್ಮಕೃತ್" ಎಂಬ ಗೀತೆಯ ಉಕ್ತಿಯಂತೆ ಪ್ರತಿಯೊಬ್ಬ ಜೀವಿಯು ಯಾವುದಾದರೊಂದು ಕೆಲಸದಲ್ಲಿ ತೊಡಗಿಕೊಂಡಿರುತ್ತಾನೆ. ಇದಕ್ಕೆ ಈ ಕಾರ್ಮಿಕ ಮಲದ ಪ್ರೇರಣೆಯೇ ಕಾರಣ.

ಸಿದ್ಧಾಂತ ಶಿಖಾಮಣಿಯ ಪ್ರಕಾರ ಈ ಮೂರು ಮಲಗಳ ಆವರಣವೇ ಬಂಧನ, ನಿವೃತ್ತಿಯೇ ಮೋಕ್ಷ. ಈ ಮೂರು ಮಲಗಳ ನಿವೃತ್ತಿಗೋಸ್ಕರ ಮೂರುಪ್ರಕಾರದ ದೀಕ್ಷೆಗಳನ್ನು ಇಲ್ಲಿ ಪ್ರತಿಪಾದಿಸಲಾಗಿದೆ. ಸಾಮಾನ್ಯವಾಗಿ ದೀಕ್ಷೆಯೆಂದರೆ-

ದೀಯತೇ ಚ ಶಿವಜ್ಞಾನಂ ಕ್ಷೀಯತೇ ಪಾಶಬಂಧನಮ್।
ಯಸ್ಮಾದತಃ ಸಮಾಖ್ಯಾತಾ ದೀಕ್ಷೇತೀಯಂ ವಿಚಕ್ಷಣೈಃ॥ (ಸಿ.ಶಿ., ೬-೧೧)

ಶ್ರೀ ಸಿದ್ಧಾಂತ ಶಿಖಾಮಣಿಯ ಉಕ್ತಿಯಂತೆ ಶ್ರೀಗುರುವು ಶಿಷ್ಯನಿಗೆ ಶಿವಜ್ಞಾನವನ್ನು ಕರುಣಿಸುವ ಮತ್ತು ಅವನ ಮಲಪಾಶಗಳನ್ನು ದೂರಗೊಳಿಸುವ ಸಂಸ್ಕಾರ ವಿಶೇಷಕ್ಕೆ ದೀಕ್ಷೆಯೆಂದು ಹೆಸರು. ಇದು ವೇಧಾ, ಮಂತ್ರ ಮತ್ತು ಕ್ರಿಯಾ ಎಂದು ಮೂರು ವಿಧ. ಶ್ರೀಗುರುವು ತನ್ನ ತಪಃಪೂತವಾದ ದಿವ್ಯದೃಷ್ಟಿಯನ್ನು ಶಿಷ್ಯನ ಮೇಲೆ ಬೀರಿ, ತನ್ನ ಪವಿತ್ರ ಹಸ್ತಗಳಿಂದ ಅವನ ಮಸ್ತಕವನ್ನು ಸ್ಪರ್ಶಮಾಡುವ ಮೂಲಕ ಅವನಿಗೆ ತನ್ನ ಚಿದ್ರೂಪದ ಬೋಧವಾಗುವಂತೆ ಮಾಡುವ ಸಂಸ್ಕಾರಕ್ಕೆ ವೇಧಾದೀಕ್ಷೆಯೆಂದು ಕರೆಯಲಾಗುತ್ತದೆ. (ಸಿ.ಶಿ. ೬-೧೩) ಇಲ್ಲಿ ಶಿಷ್ಯನ ಯೋಗಾಂಗ (ಕಾರಣಶರೀರ)ದಲ್ಲಿ ಭಾವಲಿಂಗ ಸಂಬಂಧಗೊಳಿಸಲಾಗುತ್ತದೆ ಮತ್ತು ಅವನ ಆಣವ ಮಲದ ನಿವೃತ್ತಿಯಾಗುತ್ತದೆ.

ಶ್ರೀಗುರುವು ಶಿಷ್ಯನ ಬಲ ಕಿವಿಯಲ್ಲಿ ಪ್ರಣವಸಹಿತ ಪಂಚಾಕ್ಷರ ಮಹಾಮಂತ್ರವನ್ನು ಉಪದೇಶಿಸುವುದರ ಜೊತೆಗೆ ಅವನಿಗೆ ಮಂತ್ರಕ್ಕೆ ಸಂಬಂಧಿಸಿದ ಋಷಿ, ಛಂದ, ಅಧಿದೇವತಾ ಮುಂತಾದುದರ ಪರಿಚಯ ಮಾಡಿಕೊಡುವ ಸಂಸ್ಕಾರವು ಮಂತ್ರದೀಕ್ಷೆ (ಸಿ.ಶಿ. ೬-೧೪,೨೦-೨೧). ಇಲ್ಲಿ ಶಿಷ್ಯನ ಭೋಗಾಂಗ (ಸೂಕ್ಷ್ಮಶರೀರ)ದಲ್ಲಿ ಪ್ರಾಣಲಿಂಗದ ಸಂಬಂಧಗೊಳಿಸಲಾಗುತ್ತದೆ ಮತ್ತು ಅವನ ಮಾಯೀಯ ಮಲದ ನಿವೃತ್ತಿಯುಂಟಾಗುತ್ತದೆ.

ಶಿಷ್ಯನಿಗೆ ಅನುಗ್ರಹಿಸಬೇಕಾದ ಶಿಲಾ ನಿರ್ಮಿತ ಇಷ್ಟಲಿಂಗ ಶುದ್ಧೀಕರಣ ಅದರಲ್ಲಿ ಪ್ರಾಣ ಪ್ರತಿಷ್ಠಾಪನೆ. ಶಿಷ್ಯನ ದೇಹ ಶೋಧನೆ ಮತ್ತು ಇವಕ್ಕೆ ಪೂರ್ವಭಾವಿಯಾಗಿ ಪಂಚಕಲಶ ಸ್ಥಾಪನೆ, ಇತರೆ ಸಲಕರಣೆಗಳ ವ್ಯವಸ್ಥೆ, ಕೊನೆಗೆ ಮಾಂಸಪಿಂಡದಿಂದ ಮಂತ್ರಪಿಂಡನಾದ ಶಿಷ್ಯನಿಗೆ ಇಷ್ಟಲಿಂಗ ಪ್ರಧಾನ -ಇವೆಲ್ಲ ಕ್ರಿಯೆಗಳೇ ಪ್ರಧಾನವಾದ ಸಂಸ್ಕಾರಕ್ಕೆ ಕ್ರಿಯಾದೀಕ್ಷೆಯೆಂದು ಹೆಸರು (ಸಿ.ಶಿ. ೬-೧೪). ಇಲ್ಲಿ ಶಿಷ್ಯನ ತ್ಯಾಗಾಂಗ (ಸ್ಥೂಲಶರೀರ)ಕ್ಕೆ ಇಷ್ಟಲಿಂಗ ಸಂಬಂಧಗೊಳಿಸಲಾಗುತ್ತದೆ ಮತ್ತು ಅವನ ಕಾರ್ಮಿಕ ಮಲದ ನಿವಾರಣೆಯಾಗುತ್ತದೆ. ಹೀಗೆ ಮೂರು ವಿಧ ದೀಕ್ಷೆಗಳಿಂದ ಮೂರು ವಿಧ ಮಲಗಳು ಕ್ಷೀಣಗೊಳ್ಳುತ್ತವೆ.

ವೀರಶೈವ ಸಿದ್ಧಾಂತದ ಪ್ರಕಾರ ಮಲತ್ರಯಗಳ ಆತ್ಯಂತಿಕ ನಿವೃತ್ತಿ ಮತ್ತು ಲಿಂಗಾಂಗ ಸಾಮರಸ್ಯರೂಪವಾದ ಶಿವತ್ವದ ಪ್ರಾಪ್ತಿಯೇ ಮೋಕ್ಷ. ಇದು ಪರಮಾನಂದ ರೂಪವಾದುದು. ಅಂತೆಯೇ ಸಿದ್ಧಾಂತ ಶಿಖಾಮಣಿಯಲ್ಲಿ "ಮುಕ್ತಿರೇವ ಪರಾ ತೃಪ್ತಿಃ ಸಚ್ಚಿದಾನಂದ ಲಕ್ಷಣಾ" (೧೮-೭೪) ಎಂದು ಹೇಳುವ ಮೂಲಕ ಮೋಕ್ಷವು ಪರಮಾನಂದರೂಪವಾದುದು ಎಂದು ಉಪದೇಶಿಸಲಾಗಿದೆ. ಈ ಮೋಕ್ಷದ ಪ್ರಾಪ್ತಿಗೆ ಶಿವದೀಕ್ಷೆಯ ನಂತರವೂ ಕೆಲವು ಸಾಧನೆಗಳನ್ನು ಅಳವಡಿಸಿಕೊಳ್ಳಬೇಕಾಗುತ್ತದೆ.

ಆ ಸಾಧನೆಗಳು ಮೋಕ್ಷೋಪಾಯಗಳೆಂದು ಕರೆಯಲ್ಪಡುತ್ತವೆ. ಶ್ರೀ ಸಿದ್ಧಾಂತ ಶಿಖಾಮಣಿಯು ಮೋಕ್ಷೋಪಾಯಗಳಲ್ಲಿ ಕರ್ಮಜ್ಞಾನ ಸಮುಚ್ಚಯ - ಶಿವಾನುಗ್ರಹ - ಷಟ್‌ಸ್ಥಲ ಸಾಧನೆಗಳನ್ನು ಪ್ರಮುಖವಾಗಿ ಪರಿಗಣಿಸುತ್ತದೆ. "ಭಾವಕರ್ಮ ಸಮಾಯುಕ್ತಂ ಜ್ಞಾನಮೇವ ವಿಮುಕ್ತಿದಂ" (೧೬-೨೫) ಸದ್ಭಾವ ಮತ್ತು ಸತ್ಕರ್ಮಗಳಿಂದ ಯುಕ್ತವಾದ ಶಿವಜ್ಞಾನವೇ ಮೋಕ್ಷಕ್ಕೆ ಕಾರಣ ಎಂದೂ, "ವಿನಾ ಪ್ರಸಾದಮೀಶಸ್ಯ ಸಂಸಾರೋ ನ ನಿವರ್ತ್ಯತೇ" (೧೮-೬೦) ಶಿವಾನುಗ್ರಹವಿಲ್ಲದೆ ಮೋಕ್ಷ ಸಾಧ್ಯವಿಲ್ಲ ಎಂದೂ ಪ್ರತಿಪಾದಿಸುವ ಮೂಲಕ ಸಿದ್ಧಾಂತ ಶಿಖಾಮಣಿಯು ಕರ್ಮ-ಜ್ಞಾನಗಳಿಂದ ಮತ್ತು ಶಿವಾನುಗ್ರಹದಿಂದ ಮೋಕ್ಷ ಕೈಗೂಡುವುದೆಂದು ನಿರೂಪಿಸುತ್ತದೆ. ಷಟ್‌ಸ್ಥಲಾಂತರ್ಗತವಾದ ನೂರೊಂದು ಸ್ಥಲಗಳಂತೂ ಗ್ರಂಥದ ಜೀವಾಳದ ರೂಪದಲ್ಲಿ ನಿರೂಪಿಸಲ್ಪಟ್ಟಿರುವುದರಿಂದ ಅವು ಸಹ ಮೋಕ್ಷೋಪಾಯಗಳಲ್ಲಿ ಅನಿವಾರ್ಯ ಅಂಗವೆಂಬುದು ಇಲ್ಲಿ ಸ್ಮರಣೀಯ.

ಹೀಗೆ ಸಿದ್ಧಾಂತ ಶಿಖಾಮಣಿಯಲ್ಲಿ ದಾರ್ಶನಿಕ ಲೋಕದ ಪದಾರ್ಥಗಳಾದ ಈಶ್ವರ-ಜೀವ-ಜಗತ್ತು-ಬಂಧ-ಮೋಕ್ಷಗಳನ್ನು ಕುರಿತು ಪ್ರಸಂಗಾನುಸಾರ ಚರ್ಚಿಸಲಾಗಿದೆ. ಇದೂ ಅಲ್ಲದೆ ೨೧ನೇ ಶತಮಾನದ ಇಂದಿನ ವೈಚಾರಿಕ ಯುಗದಲ್ಲಿ ಎಲ್ಲರೂ ಬಯಸುವ ಸಾಮಾಜಿಕ ಮೌಲ್ಯ ತುಂಬಿದ ವಿಚಾರ ಪ್ರವಾಹ ಶತಶತಮಾನಗಳ ಮೊದಲೇ ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಹರಿದು ಬಂದಿದೆ. ಅವುಗಳನ್ನಿಲ್ಲಿ ವಿವರಿಸದಿದ್ದರೆ ಬಹುಶಃ ಇಂದಿನ ದಿನಮಾನಗಳಲ್ಲಿ ಈ ಅವಲೋಕನ ಅಪ್ರಸ್ತುತವೆನಿಸಬಹುದು. ಕಾರಣ ಅವನ್ನೂ ಸ್ವಲ್ಪದರಲ್ಲಿಯಾದರೂ ನಿರೂಪಿಸಬೇಕು.

ಸಿದ್ಧಾಂತ ಶಿಖಾಮಣಿಯಲ್ಲಿ ಸಾಮಾಜಿಕ ಮೌಲ್ಯಗಳು:

ಧರ್ಮ ಮತ್ತು ಧರ್ಮದ ಆಚರಣೆಗಳು ನಿಂತ ನೀರಾಗದೆ ಹರಿಯುವ ಗಂಗೆಯಾಗಬೇಕು ಎಂಬ ಮಾತೊಂದಿದೆ. ಗಂಗೋತ್ರಿಯಲ್ಲಿ ಉಗಮಿಸುವ ಗಂಗೆಯೇ ಸಾಗರವನ್ನು ಸೇರುವುದೇನೋ ನಿಜ. ಆದರೆ ಆ ಗಂಗೆ ತನ್ನಷ್ಟಕ್ಕೆ ತಾನೇ ಒಬ್ಬಳೇ ಹೋಗುವುದಿಲ್ಲ. ತನ್ನ ಬಳಿಗೆ ಬಂದ ಎಲ್ಲರನ್ನು (ನದಿಗಳನ್ನು) ತನ್ನಲ್ಲಿ ಸೇರಿಸಿಕೊಂಡು ಅಲ್ಲಿಯ ಪರಿಸರಕ್ಕೆ ತಕ್ಕಂತೆ ತಾನೂ ಪರಿಣಾಮ ಹೊಂದುತ್ತ ಕೊನೆಗೆ ಸಾಗರ ಸೇರುವುದು. ಧರ್ಮವೂ ಸಹ ತನ್ನ ಮೂಲ ಪರಂಪರೆಯನ್ನು ಪರಿತ್ಯಜಿಸದೆ ಇದ್ದರೂ ಕಾಲ-ದೇಶ-ಪರಿಸರಕ್ಕೆ ಅನುಗುಣವಾಗಿ ಸಮಾಜದ ಸ್ವಾಸ್ಥ್ಯ ಪರಿರಕ್ಷಣೆಗಾಗಿ ಕೆಲವು ಪರಿವರ್ತನೆಗಳನ್ನು ಅನಿವಾರ್ಯವಾಗಿ ಮಾಡಿಕೊಳ್ಳಲೇ ಬೇಕಾಗುತ್ತದೆ. ಅದರಲ್ಲೂ ಇಂದಿನ ವೈಜ್ಞಾನಿಕ ಯುಗದಲ್ಲಿ ಇದು ಅನಿವಾರ್ಯ. ಇಂದಿನ ಸಮಯದಲ್ಲಿ ಅನಿವಾರ್ಯವೆನಿಸುವ ಮೌಲ್ಯಗಳನ್ನು ಸಿದ್ಧಾಂತ ಶಿಖಾಮಣಿಯು ಶತಮಾನಗಳ ಪೂರ್ವದಲ್ಲೇ ನಿರೂಪಿಸಿದ್ದನ್ನು ಅವಲೋಕಿಸಿದರೆ ಈ ಗ್ರಂಥವು ಇಂದಿಗೂ ಸಹ ಎಷ್ಟು ಪ್ರಸ್ತುತವೆನ್ನುವುದನ್ನು ಮನಗಾಣಬಹುದು.

ಒಂದು ಸಮಾಜವು ತನ್ನಲ್ಲಿಯ ಎಲ್ಲ ವರ್ಗದವರಿಗೂ (ಬಡವ-ಬಲ್ಲಿದ, ಉಚ್ಚ-ನೀಚ, ಸ್ತ್ರೀ-ಪುರುಷ ಮುಂತಾದ ಎಲ್ಲರಿಗೂ) ಆತ್ಮೋನ್ನತಿಯ ಸಾಧನೆಯಲ್ಲಿ ಸಮಾನವಾದ ಅವಕಾಶಗಳನ್ನು ಕಲ್ಪಿಸುವುದರ ಜೊತೆಗೆ ಇನ್ನೊಂದು ಸಮಾಜಕ್ಕೆ ಹಾನಿಯಾಗದಂತೆ ತನ್ನ ನಿಯಮಾವಳಿಗಳನ್ನು ಗೊತ್ತುಪಡಿಸುವ ತತ್ವಗಳಿಗೆ ಸಾಮಾಜಿಕ ಮೌಲ್ಯಗಳೆಂದು ಕರೆಯಬಹುದು. ಇಂತಹ ಹತ್ತು ಹಲವು ವಿಚಾರಗಳನ್ನು ಶ್ರೀ ಸಿದ್ಧಾಂತ ಶಿಖಾಮಣಿಯು ನಿರೂಪಿಸುತ್ತದೆ. ಅವುಗಳಲ್ಲಿ ಪ್ರಮುಖವಾದ ಕೆಲವನ್ನು ಇಲ್ಲಿ ನಿರೂಪಿಸಬಹುದು:

I. ಜಾತಿವಾದ ಪರಿಷ್ಕರಣ: ಜನ್ಮದಿಂದ ಜಾತಿಯನ್ನು ನಿರ್ಧರಿಸುವ ಪದ್ಧತಿಯನ್ನು ಸಿದ್ಧಾಂತ ಶಿಖಾಮಣಿಯು ಅಲ್ಲಗಳೆಯುತ್ತದೆ. ಉದ್ಯೋಗಗಳಿಂದ ಜಾತಿಯ ನಿರ್ಣಯವಾಗಬೇಕು ಮತ್ತು ಅದು ಅವರ ವ್ಯಕ್ತಿತ್ವವನ್ನು ಅಳೆಯುವ ಮಾಪಕವಾಗಬಾರದು. ಬದುಕುವುದಕ್ಕೆ ಒಂದು ಉದ್ಯೋಗಬೇಕು. ಪ್ರತಿಯೊಬ್ಬರೂ ಅವರವರಿಗೆ ಅನುಕೂಲವಾದ ಉದ್ಯೋಗವನ್ನು ಆಶ್ರಯಿಸಿಕೊಂಡು ತನ್ನ ಉಪಜೀವನವನ್ನು ಸಾಗಿಸುವರು. ಇದರಲ್ಲಿ ಶ್ರೇಷ್ಠತೆಯ ಇಲ್ಲವೆ ಕನಿಷ್ಠತೆಯ ಮಾತೆಲ್ಲಿ! ತನ್ನ ಉಪಜೀವನಕ್ಕಾಗಿ ಪರಹಿಂಸೆ, ಅನ್ಯಾಯ, ಅತ್ಯಾಚಾರಗಳಿಗೆ ಅವಕಾಶವಿರದ ಯಾವುದೇ

ಉದ್ಯೋಗವನ್ನಾಶ್ರಯಿಸಿಕೊಂಡ ಪ್ರತಿಯೊಬ್ಬರಿಗೂ ಆತ್ಮೋನ್ನತಿಯನ್ನು ಸಾಧಿಸುವ ಹಕ್ಕು ಇದ್ದೇ ಇದೆ. ಧರ್ಮ ಹುಟ್ಟಿಕೊಂಡಿರುವುದೇ ಸರ್ವರ ಉದ್ಧಾರಕ್ಕಾಗಿ. ಧರ್ಮದಲ್ಲಿಯೂ ಶೋಷಣೆ, ಮೇಲು-ಕೀಳು, ಉಚ್ಚ-ನೀಚ ಭಾವ ಬಂದರೆ ಅದರ ನಿವಾರಣೆ ಎಲ್ಲಿ ಸಾಧ್ಯ? ಕಾರಣ ಧರ್ಮಸಾಧನೆಯಲ್ಲಿ ಎಲ್ಲರಿಗೂ ಸಮಾನ ಅವಕಾಶ ಬೇಕು. ಇದು ಸಿದ್ಧಾಂತ ಶಿಖಾಮಣಿಯ ದೃಷ್ಟಿ. ಅಂತೆಯೇ ಇಲ್ಲಿ-

ಬ್ರಾಹ್ಮಣಃ ಕ್ಷತ್ರಿಯೋ ವಾಽಪಿ ವೈಶ್ಯೋ ವಾ ಶೂದ್ರ ಏವ ವಾ।
ಅಂತ್ಯಜೋ ವಾ ಶಿವೇ ಭಕ್ತಃ ಶಿವವನ್ಮಾನ್ಯ ಏವ ಸಃ॥
ಶಿವಭಕ್ತಿ ಸಮಾವೇಶೇ ಕ್ವ ಜಾತಿ ಪರಿಕಲ್ಪನಾ।
ಇಂಧನೇಷ್ವಗ್ನಿಧಗ್ಧೇಷು ಕೋ ವಾ ಭೇದಃ ಪ್ರಕೀರ್ತ್ಯತೇ॥ (ಸಿ.ಶಿ, ೧೧.೫೪-೫೫)

ಎಂಬುದಾಗಿ ಆಧ್ಯಾತ್ಮಿಕ ಸಾಧನೆಯ ಪಥದಲ್ಲಿ ಎಲ್ಲರಿಗೂ ಸಮಾನ ಅವಕಾಶ ನೀಡಲಾಗಿದೆ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ಅಂತ್ಯಜ ಇವರಲ್ಲಿ ಯಾರಾದರೂ ತಮ್ಮ ಸದ್ಗುಣ ಮತ್ತು ಸತ್ಕ್ರಿಯೆಗಳ ಯೋಗ್ಯತೆಯನ್ನವಲಂಬಿಸಿ ಶಿವದೀಕ್ಷೆಯನ್ನು ಹೊಂದಿ ಶಿವಭಕ್ತರಾಗಬಹುದು. ಹೀಗೆ ಶಿವಭಕ್ತರಾದ ನಂತರ ಅವರು ಶಿವಸ್ವರೂಪಿಗಳೆಂದೇ ಭಾವಿಸಬೇಕು. ಅಗ್ನಿಯಲ್ಲಿ ಹಾಕಿದ ವಿಭಿನ್ನ ಜಾತಿಯ ಕಟ್ಟಿಗೆಗಳು ಸುಟ್ಟ ಮೇಲೆ ಒಂದೇ ಬೂದಿಯಾಗಿಬಿಡುತ್ತದೆ. ಬೂದಿಯಲ್ಲಿ ಇದು ಬೇವಿನ ಗಿಡದ ಕಟ್ಟಿಗೆಯ ಬೂದಿ, ಇದು ಹುಣಸಿ ಗಿಡದ ಕಟ್ಟಿಗೆಯ ಬೂದಿ ಎಂಬ ಭೇದ ಉಳಿಯುವುದಿಲ್ಲ. ಇದರಂತೆ ಶಿವದೀಕ್ಷೆ ಮತ್ತು ಶಿವಭಕ್ತಿಯೆಂಬ ಅಗ್ನಿಯಲ್ಲಿ ಮನುಷ್ಯನ ಎಲ್ಲ ಜಾತಿಗಳು ದಹಿಸಿ ಭಕ್ತ ಮಾತ್ರ ಉಳಿಯುತ್ತಾನೆ. ಅಲ್ಲಿ ಈ ಜಾತಿಯ ಭಕ್ತ ಆ ಜಾತಿಯ ಭಕ್ತ ಎಂಬ ತರತಮಭಾವ ತರವಲ್ಲ. ಹೀಗೆ ಸಿದ್ಧಾಂತ ಶಿಖಾಮಣಿಯು ಶಿವದೀಕ್ಷೆ ಮತ್ತು ಶಿವಭಕ್ತಿಯೆಂಬ ಬ್ರಹ್ಮಾಸ್ತ್ರದ ಮೂಲಕ ಅಸಮಾನತೆ, ಜಾತೀಯತೆಗಳೆಂಬ ಸಮಾಜದ ಕಂಟಕಗಳನ್ನು ಹೊಡೆದೋಡಿಸುವ ಪ್ರಯತ್ನ ಮಾಡಿದೆ. ಇದು ಕೇವಲ ಉಪದೇಶ ಮಾತ್ರವಲ್ಲ, ಈ ಗ್ರಂಥದ ಉಪದೇಶಕರಾದ ಜಗದ್ಗುರು ರೇಣುಕಾಚಾರ್ಯರು ಕಬ್ಬಲಿಗನಾದ ಅಗಸ್ತ್ಯ ಮಹರ್ಷಿಗೆ ವೀರಶೈವ ತತ್ವೋಪದೇಶ ಮಾಡುವ ಮೂಲಕ ತಮ್ಮ ನಿಜಜೀವನದಲ್ಲಿ ಆಚರಿಸಿ ತೋರಿದ್ದಾರೆ. ಶ್ರೀ ಸಿದ್ಧಾಂತ ಶಿಖಾಮಣಿಯು ಆ ಉಪದೇಶದ ಸಾರವೇ ಎಂಬುದು ಇಲ್ಲಿ ಸ್ಮರಣೀಯ.

ಹನ್ನೆರಡನೆಯ ಶತಮಾನದ ಬಸವಾದಿ ಶರಣರು ಜಾತಿಯ ನಿರ್ಮೂಲನೆಗಾಗಿ ನಡೆಸಿದ ಕಲ್ಯಾಣಕ್ರಾಂತಿಯ ಕಲ್ಪನೆಯ ಹಿಂದೆ ಸಿದ್ಧಾಂತ ಶಿಖಾಮಣಿಯ ಪ್ರಭಾವ ಎದ್ದು ತೋರುತ್ತದೆ. ಚನ್ನಬಸವಣ್ಣನವರು ತಮ್ಮ ವಚನದಲ್ಲಿ ಜಾತಿವಾದವನ್ನು ನಿರಾಕರಿಸುವ ಪ್ರಸಂಗದಲ್ಲಿ ಸಿದ್ಧಾಂತ ಶಿಖಾಮಣಿಯ ಉಕ್ತಿಗಳನ್ನು ಉಲ್ಲೇಖಿಸಿದ್ದು ಇದಕ್ಕೆ ನಿದರ್ಶನ.

ಸಾಧಕದೆಸೆಯಲ್ಲಿ ಕುಲವನರಸಲಹುದಲ್ಲದೆ
ಸಿದ್ಧದೆಸೆಯಲ್ಲಿ ಅರಸಲಹುದೆ?
ಹಲವು ಜಾತಿಯ ಕಟ್ಟಿಗೆಯ ಸುಟ್ಟಲ್ಲಿ ಅಗ್ನಿಯೊಂದಲ್ಲದೆ
ಅಲ್ಲಿ ಕಟ್ಟಿಗೆಗಳ ಕುರುಹು ಕಾಂಬುದೆ?
'ಶಿವಭಕ್ತಿ ಸಮಾವೇಶಿ ನ ಜಾತಿ ಪರಿಕಲ್ಪನಾ।
ಇಂಧನೇಷ್ವಗ್ನಿದಗ್ಧೇಷು ಕೋ ವಾ ಭೇದಃ ಪ್ರಕೀರ್ತ್ಯತೇ॥'
ಎಂದುದಾಗಿ
ಶಿವಜ್ಞಾನಸಿದ್ಧ ಶಿವಭಕ್ತರಲ್ಲಿ ಪೂರ್ವಜಾತಿಯನರಸುವ
ಅರೆಮರುಳರನೇನೆಂಬೆ ಕೂಡಲಚನ್ನಸಂಗಮದೇವಾ.

ಈ ವಚನದಲ್ಲಿ ಬರುವ ಸಂಸ್ಕೃತ ಶ್ಲೋಕವು ಸಿದ್ಧಾಂತ ಶಿಖಾಮಣಿಯ ಹನ್ನೊಂದನೆಯ ಪರಿಚ್ಛೇದದ ಐವತ್ತೈದನೆಯ ಶ್ಲೋಕ.

ಮಹಿಳಾ ಸ್ವಾತಂತ್ರ್ಯ

ಬಹುತೇಕ ಧರ್ಮಗಳಲ್ಲಿ ಶೂದ್ರರಂತೆ ಸ್ತ್ರೀಯರನ್ನೂ ಧರ್ಮದಿಂದ ಹೊರಗಿಡಲಾಗುತ್ತದೆ. ಧರ್ಮಾಚರಣೆಗಳಲ್ಲಿ ಪುರುಷರಂತೆ ಅವರಿಗೆ ಮುಕ್ತವಾದ ಅವಕಾಶಗಳಿಲ್ಲ. "ಸ್ತ್ರೀ ಶೂದ್ರೌ ನಾದಿಯೇತಾಂ" ಎಂದು ಹೇಳುವ ಮೂಲಕ ಮನುಸ್ಮೃತಿಯು ಮಹಿಳೆ ಮತ್ತು ಶೂದ್ರರು ವೇದವನ್ನು ಓದಲಾಗದೆಂದು ಮಹಿಳೆಯನ್ನು ವೇದಾಧ್ಯಯನದಿಂದ ನಿಷೇಧಿಸುತ್ತದೆ. ಆದರೆ ಸಿದ್ಧಾಂತ ಶಿಖಾಮಣಿಯು ಇಂತಹ ಅಸಮಾನತೆಯಿಂದ ಕೂಡಿದ ಯಾವ ನಿಯಮಗಳಿಗೂ ಸೊಪ್ಪು ಹಾಕದೆ ಶಾಸ್ತ್ರಾಧ್ಯಯನದಲ್ಲಿ ಮತ್ತು ಧಾರ್ಮಿಕಾಚರಣೆಯ ತಳಹದಿಯಾದ ಶಿವದೀಕ್ಷೆಯಲ್ಲಿ ಸ್ತ್ರೀ-ಪುರುಷರಿಗೆ ಸಮಾನವಾದ ಅವಕಾಶವನ್ನು ಕಲ್ಪಿಸಿಕೊಟ್ಟಿದೆ. ಕೇವಲ ಅವಕಾಶವನ್ನು ಕಲ್ಪಿಸಿಕೊಡುವುದು ಮಾತ್ರವಲ್ಲದೆ ಧರ್ಮದ ಆಚರಣೆಯ ಪ್ರಸಂಗದಲ್ಲಿ ಮಹಿಳೆಯ ಬದುಕಿನಲ್ಲಿ ಬರುವ ಸೂತಕಗಳು ಸಹ ಆ ಧರ್ಮಾಚರಣೆಗೆ ಅಡಚಣೆಯುಂಟುಮಾಡಲಾರವು. ಅಂದರೆ ಸೂತಕಗಳು ಒದಗಿದಾಗಲೂ ಸಹ ಮಹಿಳೆ ಗುರು-ಲಿಂಗ-ಜಂಗಮರ ಪೂಜೆಯನ್ನು ಮಾಡಬಹುದು ಎಂದು ಹೇಳುತ್ತದೆ:

> **ಲಿಂಗಾರ್ಚನರತಾಯಾಶ್ಚ ಋತೌ ನಾರ್ಯಾ ನ ಸೂತಕಮ್।**
> **ತಥಾ ಪ್ರಸೂತಿಕಾಯಾಶ್ಚ ಸೂತಕಂ ನೈವ ವಿದ್ಯತೇ॥**
> **ಗೃಹೇ ಯಸ್ಮಿನ್ ಪ್ರಸೂತಾ ಸ್ತ್ರೀ ಸೂತಕಂ ನಾತ್ರ ವಿದ್ಯತೇ।**
> **ಶಿವಪಾದಾಂಬುಸಂಸ್ಪರ್ಶಾತ್ ಸರ್ವಪಾಪಂ ಪ್ರಣಶ್ಯತಿ॥** (ಸಿ.ಶಿ, ೬.೪೭-೪೭)

ಇಷ್ಟಲಿಂಗ ಪೂಜೆಯು ವೀರಶೈವರ ನಿತ್ಯಕರ್ಮ. ಇದನ್ನು ಯಾವ ಕಾರಣಕ್ಕೂ ತಪ್ಪಿಸಲಾಗದು. ನಾರಿಯೂ ಸಹ ಇದಕ್ಕೆ ಹೊರತಲ್ಲ. ಅವಳಿಗೂ ದೀಕ್ಷೆಯ ಅಧಿಕಾರವಿರುವುದರಿಂದ ಅವಳೂ ಲಿಂಗಧಾರಿಯಾಗಿ ಪ್ರತಿದಿನ ಲಿಂಗಪೂಜೆ ತಪ್ಪದೇ ಮಾಡಬೇಕಾಗುತ್ತದೆ. ಮಾಸಿಕ ಧರ್ಮಕ್ಕನುಗುಣವಾಗಿ ಮಹಿಳೆಯು ಋತುಮತಿಯಾದಾಗ ಮತ್ತು ಮಗುವಿಗೆ ಜನ್ಮ ಕೊಟ್ಟಾಗ ಅವಳಿಗೆ ಸೂತಕ ಬರುತ್ತದೆಂದು ಧರ್ಮಶಾಸ್ತ್ರವು ಹೇಳುತ್ತದೆ. ಈ ಪ್ರಸಂಗದಲ್ಲಿ ಅವಳಿಗೆ ಧರ್ಮದ ಆಚರಣೆಯಲ್ಲಿ ನಿಷೇಧಿಸಲಾಗುತ್ತದೆ. ಆದರೆ ಸಿದ್ಧಾಂತ ಶಿಖಾಮಣಿಯು ಗುರು-ಲಿಂಗ-ಜಂಗಮರ ಪಾದಸ್ಪರ್ಶ ಮಾತ್ರದಿಂದ ಎಲ್ಲ ಸೂತಕಗಳು ನಿವಾರಣೆಯಾಗುತ್ತವೆಯಾದ್ದರಿಂದ ಗುರು-ಲಿಂಗ-ಜಂಗಮರ ಪಾದ ತೊಳೆದ ನೀರನ್ನು ಎಲ್ಲೆಡೆ ಸಿಂಪಡಿಸಿ ಪ್ರತಿದಿನದಂತೆ ಲಿಂಗಪೂಜೆ ಮುಂತಾದ ಧಾರ್ಮಿಕ ಆಚರಣೆಯಲ್ಲಿ ಮಹಿಳೆಯು ತೊಡಗಬಹುದೆಂದು ಪ್ರತಿಪಾದಿಸುತ್ತದೆ. ಈ ಮೂಲಕ ಧರ್ಮಾಚರಣೆಯಲ್ಲಿ ಸ್ತ್ರೀಗೆ ಮುಕ್ತವಾದ ಸ್ವಾತಂತ್ರ್ಯ ನೀಡಲಾಗಿದೆ.

ಇಲ್ಲಿಯ ಈ ದರ್ಶನಕ್ಕೆ "ಶಕ್ತಿ ವಿಶಿಷ್ಟಾದ್ವೈತ ದರ್ಶನ" ವೆಂದು ಹೆಸರಿಸುವುದು ಸ್ತ್ರೀಗೆ ಪ್ರಾಮುಖ್ಯತೆಯನ್ನು ಒದಗಿಸಿರುವುದರ ಸಂಕೇತವಾಗಿದೆ. ಅದ್ವೈತ ಮತದಂತೆ ಶಿವನಲ್ಲಿರುವ ಶಕ್ತಿಯನ್ನು ಮಾಯೆಯೆಂದು ಅವಳನ್ನು ತಿರಸ್ಕರಿಸದೆ ಮಾತೆಯೆಂದು ಕರೆದು ಪುರಸ್ಕರಿಸಲಾಗಿದೆ. ಇವೆಲ್ಲ ಮಹಿಳೆಯನ್ನು ಗೌರವಿಸುವುದರ ಕುರುಹು ಎಂದು ಅಂದುಕೊಂಡರೆ ತಪ್ಪಾಗಲಾರದು.

ಪರಧರ್ಮ ಸಹಿಷ್ಣುತಾ:

ಶಿವಯೋಗಿ ಶಿವಾಚಾರ್ಯರು ಗ್ರಂಥದ ಪ್ರಾರಂಭದಲ್ಲಿ-

> **ಸಾಂಖ್ಯಂ ಯೋಗಃ ಪಾಂಚರಾತ್ರಂ ವೇದಾಃ ಪಾಶುಪತಂ ತಥಾ।**
> **ಏತಾನಿ ಮಾನಭೂತಾನಿ ನ ಹಂತವ್ಯಾನಿ ಯುಕ್ತಿಭಿಃ॥**
>
> (ಸಿ.ಶಿ, ೫-೪)

ಸಾಂಖ್ಯ, ಯೋಗ, ಪಾಂಚರಾತ್ರ, ಪಾಶುಪತ ಮೊದಲಾದ ಧರ್ಮಗಳನ್ನು ಲೌಕಿಕ ಯುಕ್ತಿಗಳನ್ನು ಉಪಯೋಗಿಸಿ ಖಂಡನ ಮಾಡುವುದು ಸೂಕ್ತವಲ್ಲ ಎಂದು ಹೇಳುವ ಮೂಲಕ ಇನ್ನೊಂದು ಧರ್ಮದ ನಿಂದೆ ಸಲ್ಲದು ಎಂಬ ಅಭಿಪ್ರಾಯವನ್ನು

ವ್ಯಕ್ತಪಡಿಸಿದ್ದಾರೆ. ಈ ಪ್ರತಿಜ್ಞೆಯನ್ನು ಶಿವಯೋಗಿ ಶಿವಾಚಾರ್ಯರು ಗ್ರಂಥದುದ್ದಕ್ಕೂ ಪಾಲಿಸಿಕೊಂಡು ಬಂದಿರುವರು. ಇಲ್ಲಿ ಯಾವುದೇ ಧರ್ಮದ ಹಿಂದೆ ಅವಹೇಳನ ಕಂಡುಬರುವುದಿಲ್ಲ. "ಪಿಂಡೇ ಪಿಂಡೇ ಮತಿರ್ಭಿನ್ನಾ" ಎಂಬ ಉಕ್ತಿಯಂತೆ ಧ್ಯೇಯ ಒಂದೇ ಆಗಿದ್ದರೂ ಅದನ್ನು ತಲುಪಲು ಅನುಸರಿಸುವ ಮಾರ್ಗಗಳು ವಿಚಾರಗಳು ಆಚಾರಗಳು ಭಿನ್ನ ಭಿನ್ನ. ಇದೇ ಮಾತು ಪುಷ್ಪದಂತನ ಶಿವಮಹಿಮ್ನ ಸ್ತೋತ್ರದಲ್ಲಿ ಕಂಡುಬರುತ್ತದೆ. "ರುಚೀನಾಂ ವೈಚಿತ್ರ್ಯಾದ್ ಋತುಕುಟಿಲ ನಾನಾ ಪಥಜುಷಾರಿ ನೃಣಾಮೇಕೋ ಗಮ್ಯಸ್ತ್ವಮಸಿ ಪಯಸಾಮರ್ಣವ ಇವ". ಎಲ್ಲರೂ ಕೊನೆಗೆ ಒಂದೇ ಗುರಿಯನ್ನು ತಲುಪಬೇಕಾಗಿರುವುದರಿಂದ ಅವರವರಿಗೆ ಅನುಕೂಲವೆನಿಸಿದ ಮಾರ್ಗದಲ್ಲಿ ಅವರು ಬರಲಿ. ಆ ಮಾರ್ಗವನ್ನೇಕೆ ತುಚ್ಛವಾಗಿ ಕಾಣಬೇಕು! ಇದು ಸಿದ್ಧಾಂತ ಶಿಖಾಮಣಿಯ ಉದಾತ್ತ ಉದ್ದೇಶ; ಅನುಪಮ ಸಮನ್ವಯ ದೃಷ್ಟಿ.

ನೀತಿಸಂಹಿತೆ:

ಧರ್ಮದ ಲಕ್ಷಣಗಳನ್ನು ಪ್ರತಿಪಾದಿಸುವ ಸಂದರ್ಭದಲ್ಲಿ-

ಅಹಿಂಸಾ ಸತ್ಯಮಸ್ತೇಯಂ ಬ್ರಹ್ಮಚರ್ಯಂ ದಯಾ ಕ್ಷಮಾ।
ದಾನಂ ಪೂಜಾ ಜಪೋ ಧ್ಯಾನಮಿತಿ ಧರ್ಮಸ್ಯ ಸಂಗ್ರಹಃ॥ (ಸಿ.ಶಿ, ೧೬.೫೯)

ಎಂಬುದಾಗಿ ಧರ್ಮದ ಹತ್ತು ಅಂಶಗಳನ್ನು ಹೇಳಲಾಗಿದೆ. ೧) ಅಹಿಂಸಾ ೨) ಸತ್ಯ ೩) ಅಸ್ತೇಯ (ಕಳ್ಳತನ ಮಾಡದಿರುವಿಕೆ) ೪) ಬ್ರಹ್ಮಚರ್ಯ ೫) ದಯಾ ೬) ಕ್ಷಮಾ ೭) ದಾನ ೮) ಪೂಜೆ ೯) ಜಪ ೧೦) ಧ್ಯಾನ -ಇವು ಧರ್ಮದ ಹತ್ತು ಲಕ್ಷಣಗಳು. ಇವು ಪ್ರತಿಯೊಬ್ಬ ವ್ಯಕ್ತಿಯ ಜೀವನದ ಮೌಲ್ಯಗಳು. ಎಲ್ಲರೂ ಇವುಗಳನ್ನು ಅಳವಡಿಸಿಕೊಂಡರೆ ಸಾಮಾಜಿಕ ನೆಮ್ಮದಿ ಕೆಡುವ ಕಾರಣವೇ ಉಳಿಯುವುದಿಲ್ಲ. ನಮ್ಮ ಸಮಾಜಕ್ಕೆ ಇಂದು ಇವು ತುಂಬ ಅವಶ್ಯಕಗಳು. ಪ್ರತಿಯೊಬ್ಬ ಧರ್ಮದವನಿಗೂ ಬೇಕಾದ ನೈತಿಕ ವಿಚಾರಗಳಿವು.

ಹೀಗೆ ಈ ಗ್ರಂಥದಲ್ಲಿ ತತ್ತ್ವ, ಸಿದ್ಧಾಂತ, ದರ್ಶನ, ಸಾಮಾಜಿಕ ಮೌಲ್ಯ ಇವೆಲ್ಲ ತುಂಬಿಕೊಂಡಿವೆ. ನೂರೊಂದು ಸ್ಥಲಗಳ ಜೊತೆಯಲ್ಲೇ ಈ ಎಲ್ಲ ವಿಚಾರಗಳನ್ನು ಇಲ್ಲಿ ಸಂದರ್ಭಾನುಸಾರ ನಿರೂಪಿಸಿರುವುದು ಈ ಗ್ರಂಥದ ವೈಶಿಷ್ಟ್ಯ. ಇದೂ ಅಲ್ಲದೆ ಇಲ್ಲಿ ಪ್ರಸಂಗಾನುಸಾರ ಅಷ್ಟಾವರಣಗಳೂ, ಪಂಚಾಚಾರಗಳೂ ನೇರವಾಗಿಯಲ್ಲದಿದ್ದರೂ ಪರೋಕ್ಷವಾಗಿ ನಿರೂಪಿಸಲ್ಪಟ್ಟಿವೆ. ಒಟ್ಟಿನಲ್ಲಿ ಈ ಗ್ರಂಥವು ಒಂದು ಧರ್ಮಕ್ಕೆ ಮತ್ತು ಸಮಾಜಕ್ಕೆ ಅವಶ್ಯವಿರುವ ಎಲ್ಲ ಅಂಶಗಳನ್ನು ಗಮನದಲ್ಲಿರಿಸಿಕೊಂಡು ರಚಿಸಲ್ಪಟ್ಟ ಗ್ರಂಥ. ಇದನ್ನು ಶಿವಯೋಗಿ ಶಿವಾಚಾರ್ಯರು ರಚಿಸಿರುವರು.

ಶಿವಯೋಗಿ ಶಿವಾಚಾರ್ಯ:

ಗ್ರಂಥಕಾರರಾದ ಶಿವಯೋಗಿ ಶಿವಾಚಾರ್ಯರು ಸಂಸ್ಕೃತ ಸಾಹಿತ್ಯದ ಶ್ರೇಷ್ಠ ವಿದ್ವಾಂಸರು, ಶಿವಾಗಮ ಕೋವಿದರು, ವೀರಶೈವ ತತ್ತ್ವರಸಋಷಿಗಳು. ಇವರದು ವಿದ್ವಾಂಸರ ಪರಂಪರೆಯಿಂದ ತುಂಬಿದ ಮನೆತನ. ಇವರು ತಮ್ಮ ವಂಶಾವಳಿಯನ್ನು ಹೀಗೆ ಉಲ್ಲೇಖಿಸಿರುವರು: ಶಿವಯೋಗಿ ಎಂಬುವವನು ಇವರ ವಂಶದಲ್ಲಿ ಮೊದಲಿಗನು. (ಗ್ರಂಥದಲ್ಲಿ ಉಲ್ಲೇಖಗೊಂಡ ಪ್ರಕಾರ) ಅವರ ಮಗ ಮುದ್ದದೇವ. ಮುದ್ದದೇವನ ಮಗ ಸಿದ್ಧನಾಥ. ಈ ಸಿದ್ಧನಾಥನ ಮಗನೇ ಗ್ರಂಥಕಾರರಾದ ಶಿವಯೋಗಿ ಶಿವಾಚಾರ್ಯರು. ಇದು ಇವರ ವಂಶಾವಳಿ.

ಈ ಗ್ರಂಥದ ಪ್ರಥಮ ಟೀಕಾಕಾರರಾದ ಮರಿತೋಂಟದಾರ್ಯರು ಈ ವಂಶಾವಳಿಯನ್ನು ನೋಡಿ ತಮ್ಮ ಅವತರಣಿಕೆಯಲ್ಲಿ "ರೇವಣಸಿದ್ಧೇಶ್ವರ ವರಪ್ರಸಾದದಿಂದ ಜನಿಸಿದ ಶಿವಯೋಗಿ ಸಿದ್ಧರಾಮೇಶ್ವರ (೧೨ನೇ ಶತಮಾನದ) ವಂಶಜನಾದ ಶಿವಯೋಗಿ ಶಿವಾಚಾರ್ಯನು" ಎಂದು ಉಲ್ಲೇಖಿಸುತ್ತಾರೆ. ಮರಿತೋಂಟದಾರ್ಯರ ಪ್ರಕಾರ ಗ್ರಂಥಕಾರನಾದ

ಶಿವಯೋಗಿ ಶಿವಾಚಾರ್ಯರು ಸಿದ್ಧರಾಮೇಶ್ವರರ ವಂಶಜರು. ಅವರು ಹೀಗೆ ಹೇಳಲು ನಾಮಗಳಲ್ಲಿಯ ಸಾಮ್ಯ ಕಾರಣವಾದುದು. ಸಿದ್ಧರಾಮೇಶ್ವರರ ತಂದೆ ಮುದ್ದಗೌಡ. ಈ ಮುದ್ದಗೌಡನನ್ನೇ ಮುದ್ದದೇವನೆಂದು ಭಾವಿಸಿ ಸಿದ್ಧರಾಮೇಶ್ವರರನ್ನು ಸಿದ್ಧನಾಥನೆಂದು ಭಾವಿಸಿ ಮರಿತೋಂಟದಾರ್ಯರು ಹೀಗೆ ಹೇಳಿರಲು ಸಾಕು. ಆದರೆ ಪಾರದರ್ಶಕ ದೃಷ್ಟಿಯಿಂದ ವಿಚಾರಿಸಿದರೆ ಮರಿತೋಂಟದಾರ್ಯರ ಈ ನಿಲುವು (ಈ ವಿಷಯದಲ್ಲಿ ಮಾತ್ರ) ಸಮಂಜಸವಾಗಿ ತೋರುವುದಿಲ್ಲ. ಏಕೆಂದರೆ ಸಿದ್ಧರಾಮೇಶ್ವರರು ಮದುವೆಯಾಗಿದ್ದರೆನ್ನುವ ವಿಷಯ ಎಲ್ಲಿಯೂ ಪ್ರತಿಪಾದಿಸಲ್ಪಟ್ಟಿಲ್ಲ. ವಿವಾಹವೇ ಇಲ್ಲವಾದ ಮೇಲೆ ಅವರಿಗೆ ಮಗನೆಲ್ಲಿ? ಇನ್ನು ಶಿವಯೋಗಿ ಶಿವಾಚಾರ್ಯನ ಅಜ್ಜ ಸಿದ್ಧರಾಮೇಶ್ವರನ ತಂದೆಯಾದ ಮುದ್ದೆಗೌಡನೇ ಆಗಿದ್ದಲ್ಲಿ 'ಮುದ್ದದೇವ' ಎಂದು ಹೇಳದೇ ಮುದ್ದಗೌಡನೆಂದೇ ಹೇಳಬಹುದಿತ್ತು. ಇದರಂತೆ ಶಿವಯೋಗಿ ಶಿವಾಚಾರ್ಯರ ತಂದೆ ಸಿದ್ಧರಾಮೇಶ್ವರರೇ ಆಗಿದ್ದಲ್ಲಿ 'ಸಿದ್ಧನಾಥ' ಎನ್ನುವ ಬದಲು 'ಸಿದ್ಧರಾಮ' ಎಂದು ಉಲ್ಲೇಖಿಸಬಹುದಿತ್ತು. ಇದರಿಂದ ಛಂದೋ ಭಂಗವೂ ಉಂಟಾಗುವ ಸಾಧ್ಯತೆಯಿರಲಿಲ್ಲ. ಕಾರಣ ಶಿವಯೋಗಿ ಶಿವಾಚಾರ್ಯರಿಗೂ ಸಿದ್ಧರಾಮೇಶ್ವರರಿಗೂ ಸಂಬಂಧ ಕಲ್ಪಿಸುವುದು ಸೂಕ್ತವೆನಿಸದು.

ಶಿವಯೋಗಿ ಶಿವಾಚಾರ್ಯರು ಈ ಗ್ರಂಥವನ್ನು ರಚಿಸುವ ಮೊದಲು ಯಾವ ಯಾವ ಗ್ರಂಥಗಳನ್ನು ಅಭ್ಯಸಿಸಿರುವರು ಎಂಬುದನ್ನು ಹೇಳುವಾಗ-

ಆಲೋಕ್ಯ ಶೈವತಂತ್ರಾಣಿ ಕಾಮಿಕಾದ್ಯಾನಿ ಸಾದರಮ್।
ವಾತುಲಾಂತಾನಿ ಶೈವಾನಿ ಪುರಾಣಾನ್ಯಖಿಲಾನಿ ಚ॥
(ಸಿ.ಶಿ, ೧.೨೫)

ಎಂದು ಕಾಮಿಕವೇ ಮೊದಲ್ಗೊಂಡು ವಾತುಲದವರೆಗಿನ ೨೮ ಶಿವಾಗಮಗಳನ್ನು ಮತ್ತು ಶೈವ ಪುರಾಣಗಳನ್ನು ಅಭ್ಯಸಿಸಿ ಈ ಸಿದ್ಧಾಂತ ಶಿಖಾಮಣಿಯನ್ನು ರಚಿಸಿರುವನು ಎಂದು ಪ್ರತಿಪಾದಿಸಿರುವರು. ಗ್ರಂಥಕಾರರು ಸಿದ್ಧರಾಮೇಶ್ವರರ ವಂಶಜರೇ ಆಗಿದ್ದರೆ ಈ ಸಂದರ್ಭದಲ್ಲಿ ಸಿದ್ಧರಾಮೇಶ್ವರ ವಚನಗಳ ಹೆಸರನ್ನು ಉಲ್ಲೇಖಿಸದೇ ಇರುತ್ತಿರಲಿಲ್ಲ. ಕಾರಣ ಇವರು ಸಿದ್ಧರಾಮೇಶ್ವರರ ಸಂಬಂಧಿಗಳಲ್ಲ. ಈ ವಿಷಯವನ್ನು ದೃಢೀಕರಿಸುತ್ತ ಶ್ರೀ ೧೦೦೮ ಕಾಶೀ ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಅನೇಕ ಪ್ರಮಾಣಗಳ ಮೂಲಕ ಶಿವಯೋಗಿ ಶಿವಾಚಾರ್ಯರು ಕ್ರಿ.ಶ. ೮ನೇ ಶತಮಾನಕ್ಕಿಂತ ಪೂರ್ವದಲ್ಲಿ ಇದ್ದರೆಂಬುದನ್ನು ಸ್ಪಷ್ಟವಾಗಿ ನಿರ್ಣಯಿಸಿದ್ದಾರೆ. ಈ ಗ್ರಂಥವೂ ಸಹ ೮ನೇ ಶತಮಾನಕ್ಕಿಂತ ಮೊದಲೇ ನಿರ್ಮಾಣ ಗೊಂಡಿದೆಯೆಂದು ಬೇರೆ ಹೇಳಬೇಕಾಗಿಲ್ಲ.

ಇತಿಹಾಸದ ದೃಷ್ಟಿಯಿಂದ ಈ ಗ್ರಂಥದ ಕಾಲ ನಿರ್ಣಯವು ಪ್ರಮುಖವಾದ ಅಂಶವೆನಿಸಿದರೂ, ವಸ್ತುತಃ ಆ ಗ್ರಂಥದ ಮೌಲ್ಯ ನಿರ್ಧಾರವಾಗುವುದು ಅದರ ಪ್ರಾಚೀನತೆಯ ಆಧಾರದಿಂದಲ್ಲ, ಅದು ನಿರೂಪಿಸುವ ವಿಚಾರಗಳಿಂದ ಅದರ ಶ್ರೇಷ್ಠತೆ ಸಿದ್ಧವಾಗುತ್ತದೆ. ಆ ದೃಷ್ಟಿಯಿಂದ ಸಿದ್ಧಾಂತ ಶಿಖಾಮಣಿಯು ವೀರಶೈವ ಸಾಹಿತ್ಯದಲ್ಲೇ ಒಂದು ಮೈಲುಗಲ್ಲು. ವೀರಶೈವ ಸಾಹಿತ್ಯದ ಮೇರುಕೃತಿಗಳಲ್ಲಿ ಇದೂ ಒಂದು. ಇದನ್ನು ಅಭ್ಯಸಿಸಿದಾಗಲೇ ಇದರ ತತ್ತ್ವರಸಾನುಭೂತಿ ಹೃದಯಾಂತರಾಳಕ್ಕೆ ಇಳಿಯುವುದು.

■■

ನೇಪಾಳದಲ್ಲಿ ವೀರಶೈವ 'ಜಂಗಂ' ಜನ

✍ ಡಾ. ಎಂ. ಚಿದಾನಂದ ಮೂರ್ತಿ

ನೇಪಾಳಕ್ಕೂ ಕರ್ನಾಟಕಕ್ಕೂ ಇರುವ ಸಾಂಸ್ಕೃತಿಕ ಸಂಬಂಧ ಅತ್ಯಂತ ವಿನೂತನವೂ ಆಶ್ಚರ್ಯಕಾರಕವೂ ಆಳವೂ ಆದದ್ದು. ಕ್ರಿ.ಪೂ. ೩-೨ ನೇ ಶತಮಾನದಲ್ಲಿ ಬಿಹಾರ ಪ್ರದೇಶದಿಂದ ಕ್ಷಾಮಕಾರಣವಾಗಿ ದಕ್ಷಿಣ ಭಾರತಕ್ಕೆ ಬಂದು ಶ್ರವಣಬೆಳಗೊಳದಲ್ಲಿ ನೆಲೆಸಿದ ಜೈನಮುನಿ ಭದ್ರಬಾಹುವು, ದಿಗಂಬರ ಪರಂಪರೆಯ ಕಥೆಯ ಪ್ರಕಾರ, ಶ್ರವಣ ಬೆಳ್ಗೊಳದಲ್ಲಿ ಕಣ್ಣು ಮುಚ್ಚಿದನು. ಆದರೆ ಶ್ವೇತಾಂಬರ ಪರಂಪರೆಯ ಪ್ರಕಾರ, ಉತ್ತರದಲ್ಲಿ ಕ್ಷಾಮವು ಪರಿಹಾರಗೊಂಡ ವಿಷಯ ತಿಳಿದ ಭದ್ರಬಾಹುವು ವಾಪಸ್ ಉತ್ತರ ಭಾರತಕ್ಕೆ ತೆರಳಿ ಅಲ್ಲಿ ತನ್ನ ಗೈರುಹಾಜರಿಯಲ್ಲಿ ಜೈನ ಧಾರ್ಮಿಕ ಗ್ರಂಥಗಳನ್ನು ಸಂಕಲಿಸಿದ ರೀತಿಯ ಬಗ್ಗೆ ಬೇಸರಗೊಂಡು ನೇಪಾಳಕ್ಕೆ ಹೋಗಿ ಅಲ್ಲಿ ಕೊನೆಯ ದಿನಗಳನ್ನು ಕಳೆದನು. ಇದರಲ್ಲಿ ಯಾವುದು ಐತಿಹಾಸಿಕ ಸತ್ಯವೆಂಬುದು ವಿಚಾರಾರ್ಹ. ಕ್ರಿ.ಪೂ. ೩ನೇ ಶತಮಾನದ ಅಶೋಕನ ಸಾಮ್ರಾಜ್ಯದ ಉತ್ತರ ಗಡಿಯು ದಕ್ಷಿಣ ನೇಪಾಳವಾಗಿದ್ದರೆ ದಕ್ಷಿಣ ಗಡಿಯು ಉತ್ತರ ಕರ್ನಾಟಕವಾಗಿತ್ತು (ಚಿತ್ರದುರ್ಗ ಜಿಲ್ಲೆ). ಕಾಲದ ಉದ್ದಕ್ಕೂ ನೇಪಾಳಕ್ಕೂ ಕರ್ನಾಟಕಕ್ಕೂ ಬಗೆ ಬಗೆಯ ಸಾಂಸ್ಕೃತಿಕ ವಿನಿಮಯ ಸಂಪರ್ಕಗಳು ಏರ್ಪಾಟಾಗಿದ್ದವು. ಕಾರಣ ಸ್ಪಷ್ಟವಾಗಿದೆ. ಇಂದು ರಾಜಕೀಯವಾಗಿ ನೇಪಾಳ ಭಾರತಗಳು ಭಿನ್ನ ರಾಷ್ಟ್ರಗಳಾಗಿದ್ದರೂ ಅವು ಹಿಂದೆ 'ಭಾರತವರ್ಷ'ದ ಸಮಾನ ಸಂಸ್ಕೃತಿಯ ಭಾಗವಾಗಿದ್ದವು. ಕ್ರಿ.ಶ. ೧೧೦೦ ರಲ್ಲಿ ಕರ್ನಾಟಕದಿಂದ ಹೋದ "ಕರ್ನಾಟ" ವಂಶದ ರಾಜರು ನೇಪಾಳವನ್ನು ಮುಂದಿನ ಇನ್ನೂರೈವತ್ತು ವರ್ಷ ಆಳಿದರು.

ನೇಪಾಳದಲ್ಲಿ ವೀರಶೈವರಿರುವುದು ಬಹು ಆಸಕ್ತಿದಾಯಕ ವಿಷಯ. ಅಲ್ಲಿಗೆ ವೀರಶೈವ ಜಂಗಮ ಜನರು ಯಾವಾಗ ಹೋದರೆನ್ನುವುದನ್ನು ಖಚಿತವಾಗಿ ಹೇಳಲು ಸಾಧ್ಯವಿಲ್ಲದಿದ್ದರೂ ಹದಿನಾಲ್ಕನೇ ಶತಮಾನದಲ್ಲಿ ಆ ಹಿಂದೆ ಭಗ್ನಗೊಂಡಿದ್ದ ಕಾಠಮಾಂಡೊದ ಪಶುಪತಿ ಮಹಾದೇವನ ಪುನಃಪ್ರತಿಷ್ಠಾಪನೆ ಕಾರ್ಯದಲ್ಲಿ ಮುಖ್ಯಪಾತ್ರವನ್ನು ವಹಿಸಿದ್ದ ಆರಾಧ್ಯಶರ್ಮ ಎಂಬಾತನೇ ನಮಗೆ ತಿಳಿದಮಟ್ಟಿಗೆ ನೇಪಾಳದ ಮೊದಲ ದಾಖಲಿತ ವೀರಶೈವ. ಅವನು ಕಾಶಿಯಿಂದ ನೇಪಾಳಕ್ಕೆ ಹೋದ ಕನ್ನಡಿಗ ವೀರಶೈವನಿರಬೇಕು. ಕಾಶಿಗೂ ವೀರಶೈವರಿಗೂ ನಿಕಟಸಂಬಂಧವಿದೆ. ಕ್ರಿ.ಶ. ೧೫೬೫-೭೦ರ ಸುಮಾರಿನಲ್ಲಿ ಕೆಳದಿಯ ದೊರೆ ದೊಡ್ಡಸಂಕಣ್ಣನಾಯಕನು ತೀರ್ಥಯಾತ್ರೆ ಹೊರಟು ದೆಹಲಿಯಲ್ಲಿ "ಜಾವಲಿಕೆ ಮಂಡ್ಯೆ" ಎಂಬಲ್ಲಿ ಒಂದು ಜಂಗಂ ಮಠವನ್ನು ಅಕ್ಬರನ ಒಪ್ಪಿಗೆ ಪಡೆದು ಕಟ್ಟಿಸಿ, ಆ ಬಳಿಕ ನೇಪಾಳಕ್ಕೆ ಹೋಗಿ ಅಲ್ಲಿನ ಭಕ್ತಪುರದಲ್ಲಿ ಜಂಗಂ ಮಠವನ್ನು ಕಟ್ಟಿಸಿದನು (ಅಥವಾ ನವೀಕರಿಸಿದನು). ಅವನು ಕಟ್ಟಿಸಿದ (ನವೀಕರಿಸಿದ) ಜಂಗಂ ಮಠವು ಭಕ್ತಪುರದ ಕೇಂದ್ರದಲ್ಲಿ, ಹಿಂದಿನ ರಾಜರ ಅರಮನೆ ಇರುವ ದರ್ಬಾರ್ ಚೌಕ ಪ್ರದೇಶದಲ್ಲಿದ್ದು ಭಕ್ತಪುರದ ಎಲ್ಲಾ ಬಗೆಯ ಧಾರ್ಮಿಕ ಚಟುವಟಿಕೆಗಳಿಗೆ ಕೇಂದ್ರವಾಗಿದೆ. ಅಷ್ಟೇ ಅಲ್ಲ, ನೇಪಾಳದಲ್ಲಿರುವ ಎಂಟು ಜಂಗಂ ಮಠಗಳ ಕೇಂದ್ರ ಸ್ಥಾನವೂ ಹೌದು. (ಚಿತ್ರ ೧ ನೋಡಿ).

ಆ ಹಳೆಯ ವಿಶಾಲವಾದ ದೊಡ್ಡ ಮಠದ ಕಿಟಕಿ ಬಾಗಿಲುಗಳ ಕೆತ್ತನೆಯು ಕಲಾತ್ಮಕವಾಗಿದ್ದು (ಚಿತ್ರ ೨) ನೇಪಾಳದ ಕುಸುರಿ ಕೆಲಸದ ಮಾದರಿಯಾಗಿದೆ. ಆ ಮಠದ ಆವರಣದಲ್ಲಿ ವೀರಭದ್ರ, ವಿಶ್ವೇಶ್ವರ, ನೀಲಕಂಠ, ಮಲ್ಲಿಕಾರ್ಜುನ ಇತ್ಯಾದಿ ಪುಟ್ಟ ಗುಡಿಗಳಿವೆ. ವಿಶ್ವೇಶ್ವರ ಲಿಂಗವು ಮೂಲತಃ ಕಾಶಿಯದೆಂದೂ, ಕಾಶಿಯಿಂದ ವಿಶ್ವೇಶ್ವರ ಲಿಂಗವನ್ನು ಒಬ್ಬ "ಜಂಗಂ" ತಂದು ಅಲ್ಲಿ ಸ್ಥಾಪಿಸಿದನೆಂದೂ ನಂಬಿಕೆಯಿರುವುದರಿಂದ ಅಲ್ಲಿನ ಜನರು ಭಕ್ತಪುರವನ್ನು (ಜಂಗಂ ಮಠವನ್ನು) "ಉತ್ತರ

ಕಾಶಿ"ಯೆಂದು ಭಾವಿಸುತ್ತಾರೆ. ಆ 'ಜಂಗಂ' ಯಾರೂ ಅಲ್ಲ, ಕೆಳದಿ ದೊರೆ ದೊಡ್ಡ ಸಂಕಣ್ಣನಾಯಕನೇ. ಅವನು ಕಾಶಿಯಲ್ಲಿ ಮುಸ್ಲಿಮರಿಂದ ಭಗ್ನಗೊಂಡ ವಿಶ್ವನಾಥಲಿಂಗವನ್ನು ನೇಪಾಳಕ್ಕೆ ಕೊಂಡೊಯ್ದು ಅಲ್ಲಿನ ಜಂಗಂ ಮಠದಲ್ಲಿ ಸ್ಥಾಪಿಸಿದನು. ಅವನು ತನ್ನ ತೀರ್ಥಯಾತ್ರೆಯನ್ನು ರಾಜನಾಗಿ ಕೈಗೊಳ್ಳಲಿಲ್ಲ, ಒಬ್ಬ ಜಂಗಮನಂತೆ ಉಡುಪು ಧರಿಸಿ ಅದನ್ನು ಕೈಗೊಂಡನೆಂದು ಕೆಳದಿನೃಪವಿಜಯವು ಹೇಳುತ್ತದೆ. ಜಂಗಂ ಮಠದ ಆಧಿಪತ್ಯವು ಜಂಗಂ ಜನರ ಕೈಯಲ್ಲಿದೆ.

ನೇಪಾಳದಲ್ಲಿ ಸುಮಾರು ಐವತ್ತು ವೀರಶೈವ ಜಂಗಂ ಕುಟುಂಬಗಳಿವೆ. ಅವರು ಗಂಡಿರಲಿ ಹೆಣ್ಣಿರಲಿ ಎಲ್ಲರೂ "ಜಂಗಂ" ಎಂದು ಕೊನೆಯಾಗುವ ಹೆಸರುಗಳನ್ನಿಟ್ಟುಕೊಳ್ಳುತ್ತಾರೆ. ಉದಾಹರಣೆಗೆ ರಾಮಮಣಿ ಜಂಗಂ, ಭರತ್ ಜಂಗಂ, ಸೀತಾ ಜಂಗಂ, ಅಹಲ್ಯಾ ಜಂಗಂ. ಮೈಮೇಲೆ ಇಷ್ಟಲಿಂಗ, ಯಜ್ಞೋಪವೀತಗಳೆರಡನ್ನೂ ಧರಿಸುತ್ತಾರೆ. ಅವರು ಬ್ರಾಹ್ಮಣ ಮತ್ತು 'ಛೇತ್ರಿ' (ಕ್ಷತ್ರಿಯ) ವರ್ಗದ ಜೊತೆ ಸಂಬಂಧಗಳನ್ನು ಬೆಳೆಸುತ್ತಾರೆ. ಹಲವೆಡೆ ಅವರು ಶಿವದೇವಾಲಯಗಳ ಶಿವಾರ್ಚಕರಾಗಿದ್ದಾರೆ. ಭಕ್ತಪುರದ ಭಾಗವಾಗಿರುವ ಹನುಮಾನ್ ಘಾಟ್ ಎಂಬ ಪ್ರದೇಶದಲ್ಲಿ ಅನಂತಲಿಂಗೇಶ್ವರ ಎಂಬ ದೇವಾಲಯದ ಅರ್ಚಕರು ಜಂಗಂ: ಅದು ಅವರ ಹಿಡಿತದಲ್ಲಿದೆ. ಅಲ್ಲಿ ಎರಡು ವೀರಶೈವ ಸಂತರ ಮೂರಡಿ ಎತ್ತರದ, ಸುಮಾರು ಮುನ್ನೂರು ವರ್ಷದಷ್ಟು ಹಿಂದಿನ ಶಿಲಾಮೂರ್ತಿಗಳಿವೆ. (ಚಿತ್ರ ೩ ನೋಡಿ). ಪನೋತಿ ಎಂಬಲ್ಲಿನ ಇಂದ್ರೇಶ್ವರ ದೇವಾಲಯವು ಬಹು ಸುಂದರವಾಗಿದ್ದು ಅದರ ಆವರಣಲ್ಲಿ ನೇಪಾಳದ ಪುರಾತತ್ವ ವಿಭಾಗವು ಒಂದು ಮ್ಯೂಜಿಯಮ್ ಮಾಡಿದೆ; ಅದರ ಒಡೆಯರು ಜಂಗಂ ಜನರು. ಅಲ್ಲಿಗೆ ಸುಮಾರು ಇಪ್ಪತ್ತು ಕಿಲೋ ಮೀಟರ್ ದೂರದ ಧೂಲಿಖೇಲ್ ಎಂಬ ಅತ್ಯಂತ ನಯನ ಮನೋಹರ ಊರಿದೆ. ದೊಡ್ಡ ಪರ್ವತ ಶ್ರೇಣಿಯ ಬುಡ; ಅಲ್ಲೇ ಒಂದು ಕಣಿವೆಯ ಸಂದಿಯಲ್ಲಿ ನೀರು ಮೇಲಿಂದ ಧುಮ್ಮಿಕ್ಕುತ್ತದೆ. ಇಳಿದು ಹೋದರೆ ಅಲ್ಲಿರುವುದೇ ಗೋಖುರೇಶ್ವರ ದೇವಾಲಯ; ಅದರ ಒಡೆಯರು ಜಂಗಂ ಜನರು. ಸಾಹಿತ್ಯ, ಕಲೆ, ವ್ಯಾಪಾರ, ಪತ್ರಿಕೋದ್ಯಮಗಳಲ್ಲಿ ಕೆಲವರು ಒಳ್ಳೆಯ ಹೆಸರುಮಾಡಿದ್ದಾರೆ.

ಭಕ್ತಪುರದ ಜಂಗಂ ಮಠದಲ್ಲಿ ಕ್ರಿ.ಶ. ೧೭೦೦ ರ ಕಾಲದ ತಾಮ್ರಪಟ (ಚಿತ್ರ ೪) ಮತ್ತು ಒರಳುಕಲ್ಲುಗಳ (ಚಿತ್ರ ೫) ಮೇಲೆ ಚನ್ನವೀರದೇವ ಎಂಬ ಮಠಪತಿ ಕೆತ್ತಿಸಿದ ಚಿಕ್ಕ ಕನ್ನಡ ಶಾಸನಗಳಿವೆ; ಭಾಷೆ, ಲಿಪಿಗಳೆರಡೂ ಕನ್ನಡವೇ. "ಮಟಪತ್ತಿ ಶ್ರೀ ಚೆನ್ನವೀರ ದೇವರಿಗೆ ಮಹಾಮಹಂತ್ತಿನ ಪಾದೇಗತಿ ರುದ್ರಾಕ್ಷಿ ೧೩೦೦೦ ವಿಭೂತಿ ೩೦೦೦" ಎಂಬ ತಾಮ್ರ ಶಾಸನವು (ಕಾಲ ಕ್ರಿ.ಶ. ೧೭೦೫), ಒರಳು ಕಲ್ಲಿನ ಮೇಲೆ "ಮಠದ ಶ್ರೀ ಚನ್ನವೀರದವರು ಸಮ ೮೧೯ ಭಾದ್ರ ಶುದಿ ೨" ಎಂಬ ಶಿಲಾಶಾಸನವು (ಕಾಲ ಕ್ರಿ.ಶ. ೧೬೯೯) ಕನ್ನಡ ಶಾಸನಗಳಾಗಿದ್ದು ೧೭೦೦ ರಲ್ಲಿದ್ದ ಮಠಪತಿ ಚನ್ನವೀರ ದೇವನು ಜಂಗಂ ಮಠಕ್ಕೆ ನೀಡಿದ್ದ ವಿಭೂತಿ ರುದ್ರಾಕ್ಷಿಗಳ ವಿಷಯ ಹೇಳುತ್ತದೆ. ಮುನ್ನೂರು ವರ್ಷಗಳ ಹಿಂದಿನ ವಿಭೂತಿ ರುದ್ರಾಕ್ಷಿಗಳು ಇನ್ನೂ ಇವೆ. ಅದಲ್ಲದೆ ಬೇರೆ ಬೇರೆ ನೇಪಾಳಿ ಶಾಸನಗಳಲ್ಲಿ ಧರ್ಮಲಿಂಗ ದೇವರು, ಮಹದ್ದೇವರು ಮುಂತಾದ ಹೆಸರುಗಳಿವೆ. "-ದೇವರು" ಎಂದು ಕೊನೆಯಾಗುವ ಹೆಸರುಗಳು ನಮಗೆ ದಕ್ಷಿಣ ಕರ್ನಾಟಕದ ಲಿಂಗದೇವರು, ಮರಿದೇವರು, ಮಲ್ಲೇದೇವರು ಎಂಬಂತಹ ಹೆಸರುಗಳನ್ನು ಜ್ಞಾಪಿಸುತ್ತವೆ. ಭಕ್ತಪುರದ ಕನ್ನಡ ಶಾಸನಗಳು ಕರ್ನಾಟಕದಿಂದ ಬಹುದೂರದಲ್ಲಿ ದೊರಕಿರುವ ಕನ್ನಡ ಶಾಸನಗಳೂ ಹೌದು.

ನೇಪಾಳದ ಜಂಗಂ ವೀರಶೈವರಿಗೆ ಕನ್ನಡ ಭಾಷೆ ತಿಳಿಯದಿದ್ದರೂ ಅವರು ತಮ್ಮ ಪೂರ್ವಜರು ಕರ್ನಾಟಕದವರೆಂಬ ಅರಿವುಳ್ಳವರಾಗಿದ್ದಾರೆ. ಅವರೆಲ್ಲ ನೇಪಾಳಿಯರೇ ಆಗಿದ್ದಾರೆ, ಎಲ್ಲಾ ದೃಷ್ಟಿಗಳಿಂದ.

■■



ಚಿತ್ರ-೧ : ಜಂಗಂ ಮಠ [illegible]ತಪುರ)




ಚಿತ್ರ-೨ : ಜಂಗಂ ಮಠ : ಕಲಾತ್ಮಕ ಜಾಲರಿ



ಚಿತ್ರ-೩ : ಭಕ್ತಪುರದ ಹನುಮಾನ್ ಘಾಟ್ : ವೀರಶೈವ ಸಂತ



ಚಿತ್ರ-೩ : ಭಕ್ತಪುರದ ಹನುಮಾನ್ ಘಾಟ್ : ಇನ್ನೊಬ್ಬ ವೀರಶೈವ ಸಂತ



ಚಿತ್ರ-೪ : ಭಕ್ತಪುರದ ಜಂಗಂ ಮಠದ ತಾಮ್ರ ಶಾಸನ - ಕೊನೆಯ ಸಾಲು
"ಮಟಪತ್ತಿ ಶ್ರೀ ಚಂನ್ನವೀರ ದೇವರಿಗೆ ಮಹಾಮಹಂತ್ತಿನ ಪಾದೇ ಗತಿ ರುದ್ರಾಕ್ಷಿ ೧೩೦೦೦ ವಿಭೂತಿ ೩೦೦೦"



ಚಿತ್ರ-೫ : ಒರಳುಕಲ್ಲು ಶಾಸನ (ಭಕ್ತಪುರ) - "ಮಠದ ಶ್ರೀ ಚಂನವಿರದವರು"

ಆಂಧ್ರದ ವೀರಶೈವ ಭಕ್ತೆಯರಲ್ಲಿ ಪ್ರತಿಭಟನೆಯ ಧ್ವನಿ

✍ ಡಾ. ನಿರುಪಮಾ

ಭಾರತದ ದೇಶದ ಇತಿಹಾಸದಲ್ಲಿ ಮಧ್ಯಯುಗದಲ್ಲಿ ಇಡೀ ದೇಶವನ್ನೇ ಆವರಿಸಿ ಬಂದ ಭಕ್ತಿಮಾರ್ಗ ಒಂದು ಚಳುವಳಿಯ ರೂಪವನ್ನು ತಾಳಿದ್ದಲ್ಲದೇ ವಿವಿಧ ಮತ, ಪಂಥ ಇತ್ಯಾದಿಗಳ ಹುಟ್ಟಿಗೆ ಕಾರಣವಾಯಿತು. ವರ್ಗಭೇದ, ವರ್ಣಭೇದಗಳಿಲ್ಲದೇ ಗಂಡು ಹೆಣ್ಣೆಂಬ ವ್ಯತ್ಯಾಸವನ್ನು ತೊಡೆದುಹಾಕಿ ಕರ್ಮಕಾಂಡದ ಪ್ರಸಕ್ತಿಯಿಲ್ಲದೇ ಭಕ್ತಿಯ ಮೂಲಕ ಭಗವಂತನ ಸಾನ್ನಿಧ್ಯ ಪಡೆಯಬಹುದೆಂಬ ಭಾವನೆಯ ನೆಲೆಯಲ್ಲಿ ಈ ಚಳುವಳಿ ಸಾರ್ಥಕ್ಯವನ್ನು ಪಡೆಯಿತು. ಅಷ್ಟೇ ಅಲ್ಲ, ಈ ಮಾರ್ಗ ನಿಮ್ನ ಕುಲದವರಲ್ಲಿ, ಸ್ತ್ರೀಯರಲ್ಲಿ, ಶೋಷಿತರಲ್ಲಿದ್ದ ನ್ಯೂನತಾ ಭಾವವನ್ನು ಹೋಗಲಾಡಿಸಿ ಆತ್ಮವಿಶ್ವಾಸ ಹಾಗೂ ಆತ್ಮಗೌರವವನ್ನು ಹೆಚ್ಚಿಸಿತು.

ಭಕ್ತಿಮಾರ್ಗ ಒಂದು ಚಳುವಳಿಯಾಗಿ ಮತ, ಪಂಥಗಳಿಗೆ ಕಾರಣವಾದುದಲ್ಲದೇ ಸಮಾಜ ಸುಧಾರಣೆಗೂ ಆಲಂಬನವಾಗಿ ಪಸರಿಸಿದ್ದು ಕರ್ನಾಟಕದ ಬಸವೇಶ್ವರನಿಂದಾಗಿ. ಮಧ್ಯಯುಗದ ಆರಂಭದಲ್ಲಿ ಕರ್ನಾಟಕದಲ್ಲಿ ಬಸವೇಶ್ವರನಿಂದ ಆರಂಭವಾದ ವೀರಶೈವಮತ ಆಂಧ್ರದಲ್ಲಿ ಮಲ್ಲಿಕಾರ್ಜುನ ಪಂಡಿತನಿಂದ ಹೆಚ್ಚಿನ ಪ್ರಚಾರ ಪಡೆಯಿತು.

ಸಾಮಾನ್ಯವಾಗಿ ಯಾವುದೇ ಒಂದು ಚಳುವಳಿಯ ರೂಪದಲ್ಲಿ ಬಂದ ಸುಧಾರಣೆ ಪೂರ್ವದ ವ್ಯವಸ್ಥೆಯಲ್ಲಿದ್ದ ಲೋಪದೋಷಗಳನ್ನು ಬಿಟ್ಟುಕೊಟ್ಟು ಸಮಕಾಲೀನ ಸ್ಥಿತಿಯಲ್ಲಿ ಜನಪರವಾದ ಒಳ್ಳೆಯ ಅಂಶಗಳನ್ನು ತನ್ನಲ್ಲಿ ವಿಲೀನಗೊಳಿಸಿಕೊಂಡು ಮುಂದುವರೆಯುತ್ತದೆ. ಹೀಗೆಯೇ ಭಾರತದ ವೈದಿಕ ಮತದ ಒಂದು ಭಾಗವಾಗಿ ಬಂದ ವೀರಶೈವ ಮತವೂ ಸಹ ಬೌದ್ಧ, ಜೈನ ಮತಗಳ ಕುಲರಾಹಿತ್ಯವನ್ನೂ, ಸ್ತ್ರೀಪುರುಷ ಸಮಾನತೆಯನ್ನೂ, ಪ್ರಜಾ ಸಾಮಾನ್ಯರಿಗೆ ಅರ್ಥವಾಗುವಂತಹ ಲೌಕಿಕ ಭಾಷೆ, ಸಾಹಿತ್ಯವನ್ನೂ ತನ್ನಲ್ಲಿ ಅಡಗಿಸಿಕೊಂಡು ಜನಪ್ರಿಯತೆ ಪಡೆಯಿತು.

ಆಂಧ್ರದಲ್ಲಿ ವೀರಶೈವ ಮತದ ಪ್ರಾಬಲ್ಯದಿಂದಾಗಿ ಸ್ತ್ರೀ ಪುರುಷ ಸಮಾನತೆ ಬೆಳೆದು ಕಾಕತೀಯ ಸಾಮ್ರಾಜ್ಯವನ್ನು ಸ್ತ್ರೀ ಪುರುಷರು ಸಮಾನವಾಗಿ ಪಾಲಿಸುವಂತಾಯಿತು. ಸ್ತ್ರೀಯರು ಎಲ್ಲ ಬಗೆಯ ಮತ ಕಲಾಪಗಳಲ್ಲಿ ಭಾಗವಹಿಸುತ್ತಿದ್ದರು. ದಾನ, ಧರ್ಮಗಳನ್ನೂ ಮಾಡಿ ವಿಖ್ಯಾತರಾದರು. ರುದ್ರಮದೇವಿ, ಈಕೆಯ ತಂಗಿ ಗಣಪಾಂಬ ೩೫-೪೦ ವರುಷಗಳ ಕಾಲ ಕಾಕತೀಯ ಸಾಮ್ರಾಜ್ಯಕ್ಕೆ ಚಕ್ರವರ್ತಿನಿಯರಾಗಿ ಆಳಿದರು. ಎರುಕ ಸಾನಮ್ಮನಂತಹ ಸಾಮಾನ್ಯ ಮಹಿಳೆಯರೂ ಸಹ ಕೆರೆ, ಕಾಲುವೆಗಳನ್ನು ನಿರ್ಮಿಸಿ ಜನೋಪಕಾರ ಮಾಡಿದರು. ಈ ಕಾಲದಲ್ಲಿ ರಚಿತವಾದ 'ವಿಜ್ಞಾನೇಶ್ವರಿಯ' ದಲ್ಲಿ ಸ್ತ್ರೀಯರಿಗೆ ಆಸ್ತಿಯ ಹಕ್ಕನ್ನು ಕಲ್ಪಿಸಿ ಕೊಡಲಾಯಿತು.

ಇದರ ಪರಿಣಾಮವಾಗಿ ಸಮಕಾಲೀನ ದೇಶಿ ಮತ್ತು ಶಿಷ್ಟ ಸಾಹಿತ್ಯಗಳಲ್ಲಿ ಮಹಿಳೆಯರು, ಅದರಲ್ಲೂ ನಿಮ್ನ ವರ್ಗದ ವೀರಶೈವ ಭಕ್ತೆಯರು ಮಾನ್ಯರಾಗಿ, ಕಥಾನಾಯಕಿಯರಾಗಿ ಮಾನ್ಯರ, ಸಾಮಾನ್ಯರ ಗೌರವಕ್ಕೆ ಪಾತ್ರರಾದರು. ವೀರಶೈವ ಮತದ ಪ್ರಚಾರದ ಸಲುವಾಗಿ ಪಾಲ್ಕುರಿಕೆ ಸೋಮನಾಥ ಬರೆದ ಬಸವ ಪುರಾಣದಲ್ಲೂ, ಪಂಡಿತಾರಾಧ್ಯ ಚರಿತ್ರೆಯಲ್ಲೂ ವೀರಶೈವ ಭಕ್ತೆಯರ ಕಥೆಗಳು ಹೇರಳವಾಗಿವೆ. ಪ್ರಜೆಗಳಲ್ಲಿ ಪ್ರಚಾರವಿದ್ದ ಜಾನಪದ ಕಥೆಗಳನ್ನು ತಾನು ಸಂಗ್ರಹಿಸಿದ್ದಾಗಿ ಸೋಮನಾಥನು ಹೇಳಿಕೊಂಡಿದ್ದಾನೆ. ಅವುಗಳನ್ನೇ ಅಲ್ಲಿಯ ಜನರು ಅಲ್ಪ ಸ್ವಲ್ಪ ಮಾರ್ಪಾಟುಗಳಿಂದ ಜಾನಪದ ಧಾಟಿಯಲ್ಲಿ ಹೇಳುತ್ತಾರೆ. ಈ ಕಥೆಗಳಲ್ಲಿನ ಸಾರಾಂಶವೆಂದರೆ ಭಕ್ತಿಯೊಂದೇ ಮುಖ್ಯ ಹೊರತು ಅಂಗ, ಕುಲ, ಧನ, ಪದವಿ

ಪ್ರಧಾನವಲ್ಲವೆಂದು ಒತ್ತಿ ಒತ್ತಿ ಹೇಳುತ್ತಾರೆ. ಪುರುಷರು ಮಾತ್ರವಲ್ಲದೇ ಸ್ತ್ರೀಯರು, ಪತಿತೆಯರು, ಕೆಳವರ್ಗದವರೂ ಸಹ ಮೋಕ್ಷಕ್ಕೆ ಅರ್ಹರೆಂದು ಸಾರಿ ಹೇಳುತ್ತಾರೆ. ಮಹಿಳೆಯರು ತಮ್ಮ ಭಕ್ತಿಮಾರ್ಗಕ್ಕೆ ಅಡ್ಡವಾಗುವ ಹಳೆಯ ನಂಬಿಕೆ, ಸಂಪ್ರದಾಯಗಳನ್ನು ಮುರಿಯಬಹುದೆಂದೂ ಪತಿಯು ದುರ್ಮಾರ್ಗನಾದಲ್ಲಿ ಅದನ್ನು ಪ್ರತಿಭಟಿಸಿ ಪರಮೇಶ್ವರನನ್ನೇ ನಂಬಿ ಮೋಕ್ಷ ಸಾಧಿಸಬಹುದೆಂದೂ ತಿಳಿಸುತ್ತಾರೆ. ಇನ್ನೂ ಒಂದು ಹೆಜ್ಜೆ ಮುಂದೆ ಇಟ್ಟು ಪರಮೇಶ್ವರನನ್ನೇ ಪತಿಯನ್ನಾಗಿ ಭಾವಿಸಿ ಭಕ್ತಿಮಾರ್ಗದಲ್ಲಿ ನಡೆದ ಸತಿಯರು ದೇವತೆಗಳಿಗೆ ಸಮಾನರೆಂದು ಬೋಧಿಸುತ್ತವೆ. ಸ್ತ್ರೀಯರ ವ್ಯಕ್ತಿತ್ವವನ್ನು ಗೌರವಿಸಿ, ಶಿವಭಕ್ತೆಯರ ಅನನ್ಯ ಭಕ್ತಿಭಾವದ ಜೊತೆಯಲ್ಲೇ ಅವರು ಸಾಂಪ್ರದಾಯವನ್ನು ಮುರಿದು ಪ್ರತಿಭಟಿಸಿದ ರೀತಿ ಆ ಕೆಳಕಂಡ ಕಥೆಗಳ ಮೂಲಕ ತಿಳಿಯಬಹುದು:

ಒಂದನೆಯದಾಗಿ ತೆಲುಗು ಜಾನಪದ ಸಾಹಿತ್ಯದಲ್ಲಿ ಪ್ರಚಲಿತವಿರುವ ಈ ಕಥೆ ನಿಮ್ಮವ್ವ ಎಂಬ ಶಿವಭಕ್ತೆಯದು.

ನಿಮ್ಮವ್ವ ಬಡ ಕೂಲಿ ಹೆಂಗಸು. ಇದ್ದ ಒಬ್ಬ ಮಗಳೊಂದಿಗೆ ಕೂಲಿಮಾಡಿಕೊಂಡು ಬದುಕಿದ್ದಾಕೆ. ಇದ್ದುದರಲ್ಲೇ ಜಂಗಮರಿಗೆ ದಾಸೋಹ ನೀಡಿ ಭಕ್ತಿಯಿಂದ ಶಿವನನ್ನು ಪೂಜಿಸುತ್ತಿದ್ದಳು. ಒಂದು ದಿನ ಅವಳ ಮನೆಗೆ ಇಬ್ಬರು ಬರುತ್ತಾರೆ. ಮನೆಯಲ್ಲಿ ಏನೂ ಇರಲಿಲ್ಲ. ಆಗ ನಿಮ್ಮವ್ವ-

ಪಾಯನೇ ನಿಮ್ಮವ್ವ ವಾಡ ವಾಡಂಪ್ಲೆ
ಮೊಯಿಂಟಿಕಿದ್ದರಯ್ಯ ವಾರ್ಲೋಚ್ಚಾರು
ಕಮ್ಮನಿ ಭೋಜನಮ್ಮು ಕಾವಿಂಚವಲೆ
ನೇಟಿದಿ ಕೂಲಿ ನಿನ್ನಟವಿ ಕೂಲಿ
ಇಚ್ಚಿ ವೈಚೇಯಂಡಿ ನಾತಲ್ಲುಲಾರ
ಭಾಂಡವಲ ವರಿಸಾಲು ಬಾಟುಲಕುಪೋತು
ಚಿನಿ ನಿಮ್ಮವ್ವಕು ಒಡಿನಿಂಪಿರಿ.

ಎಂದು ನಿಮ್ಮವ್ವ ತಾನು ಕೆಲಸಕ್ಕೆ ಹೋಗುವ ಮನೆಗಳಿಗೆ ಹೋಗಿ ಹಿಂದಿನ ದಿನದ, ಅಂದಿನ ದಿನ ಕೂಲಿಯನ್ನು ಕೊಡುವಂತೆ ಕೇಳಿಕೊಳ್ಳುತ್ತಾಳೆ. ಅವರು ಕೊಟ್ಟ ಪದಾರ್ಥಗಳನ್ನು ತಂದು ಅನ್ನ ಮಾಡಿಟ್ಟು ನೀರು ತರಲು ಹೊಳೆಗೆ ಹೋಗುತ್ತಾಳೆ. ದನ ಕಾಯಲು ಹೋಗಿದ್ದ ಮಗ ಹಿಂದಿರುಗಿ ಬಂದವನೇ ಹಸಿವೆ ತಡೆಯಲಾಗದೇ ಒಲೆಯ ಮೇಲಿದ್ದ ಅನ್ನದ ಪಾತ್ರೆಯಲ್ಲಿದ್ದ ಮೂರು ಮುದ್ದೆ ಅನ್ನವನ್ನು ತಿಂದು ಬಿಡುತ್ತಾನೆ. ಹಿಂದಿರುಗಿ ಬಂದ ನಿಮ್ಮವ್ವ ಅತಿಥಿಗಳಿಗಾಗಿ ಮಾಡಿದ್ದ ಅಡುಗೆಯನ್ನು ಮಗ ಎಂಜಲು ಮಾಡಿದನೆಂಬ ಕೋಪದಿಂದ ಹಾರೆ ತೆಗೆದುಕೊಂಡು ತಲೆಯ ಮೇಲೆ ಹೊಡೆದು ಅವನನ್ನು ಸಾಯಿಸಿ, ದನದ ಕೊಟ್ಟಿಗೆಯಲ್ಲಿ ಆತನನ್ನು ಹೂಳುತ್ತಾಳೆ. ಪುನಃ ಮನೆ ಶುದ್ಧಗೊಳಿಸಿ, ಪಾತ್ರೆ ತೊಳೆದು ಅಡುಗೆ ಮಾಡಿ ಜಂಗಮರಿಗೆ ಊಟ ನೀಡಲು ಸಿದ್ಧವಾಗುತ್ತಾಳೆ. ಅತಿಥಿಗಳು "ಮಗುವಿಲ್ಲದ ಮನೆಯಲ್ಲಿ ಊಟ ಮಾಡುವುದಿಲ್ಲ. ನಿನ್ನ ಮಗನನ್ನು ಕರೆ" ಎನ್ನುತ್ತಾರೆ. "ಅವನು ಆಡಲು ಹೋಗಿದ್ದಾನೆ. ನೀವು ಊಟ ಮಾಡಿ" ಎಂದು ಬೇಡಿಕೊಳ್ಳುತ್ತಾಳೆ. ಅವರು ಹಠಹಿಡಿದು ಕುಳಿತು ಬಿಡುತ್ತಾರೆ. ನಂತರ ಜಂಗಮಯ್ಯನು "ನಿನ್ನ ಮಗನ ಹೆಸರನ್ನು ಹಿಡಿದು ಕರೆ. ಬಂದಾನು". ಅವಳು ನಿರುಪಾಯಳಾಗಿ "ಚಿನ್ನ ಮಲ್ಲಯ್ಯ ರಾರಾ!" (ಚಿಕ್ಕ ಮಲ್ಲಯ್ಯ ಬಾರೋ!) ಎಂದು ಕರೆದೊಡನೆ ಗೆಜ್ಜೆಕಾಲಿನಿಂದ ಕುಣಿಯುತ್ತ ಪುಟ್ಟ ಬಾಲಕ ಬಂದು ಜಂಗಮರ ಪಂಕ್ತಿಯಲ್ಲಿ ಕುಳಿತುಕೊಳ್ಳುತ್ತಾನೆ. ಜಂಗಮ ವೇಷದಲ್ಲಿದ್ದ ಶಿವನು ಪ್ರತ್ಯಕ್ಷನಾಗಿ "ನಿಮ್ಮವ್ವ, ನಿನ್ನ ಭಕ್ತಿಗೆ ಮೆಚ್ಚಿದೆ, ಏನು ವರಬೇಕೋ ಕೇಳಿಕೋ" ಎನ್ನುವನು. ಆಗ ನಿಮ್ಮವ್ವ ಸಶರೀರಳಾಗಿ ಮೋಕ್ಷಕ್ಕೆ ಹೋಗಬೇಕೆಂದು ಕೇಳಿಕೊಳ್ಳುವಳು. ಶಿವನು ಅವಳಿಗೆ, ಅವಳ ಮಗನಿಗೆ ಮೋಕ್ಷ ಕೊಡುವನು.

ಈ ಜಾನಪದ ಕಥೆಯನ್ನು ಇನ್ನೊಂದು ತೆರನಾಗಿ ಜನರು ಹಾಡಿಕೊಳ್ಳುವುದುಂಟು. ನಿಮ್ಮವ್ವ ಒಬ್ಬ ಶಿವಭಕ್ತ ದಂಪತಿಗಳ ಮನೆಯಲ್ಲಿ ಕೆಲಸಮಾಡುತ್ತಲಿದ್ದು ಆ ಪ್ರಭಾವದಿಂದ ತಾನೂ ಶಿವನ ಪೂಜೆಯನ್ನು ಅತ್ಯಂತ ಭಕ್ತಿಯಿಂದ ಮಾಡುತ್ತಿರುತ್ತಾಳೆ. ಅವಳ ಭಕ್ತಿಗೆ ಮೆಚ್ಚಿ ಒಂದು ದಿನ ಶಿವನು ಪ್ರತ್ಯಕ್ಷನಾಗಿ "ನಿನಗೇನು ವರಬೇಕೋ ಕೇಳಿಕೋ" ಎಂದಾಗ "ನನಗೊಬ್ಬ ಮಗನನ್ನು ಕೊಡು" ಎಂದು ಕೇಳಿಕೊಳ್ಳುತ್ತಾಳೆ. ಶಿವನ ವರಪ್ರಸಾದದಿಂದ ಅವಳು ಕೂಡಲೇ ಗರ್ಭಿಣಿಯಾಗಿ ಒಂಬತ್ತು ಘಳಿಗೆಗಳಲ್ಲೇ ಒಬ್ಬ ಪುತ್ರನನ್ನು ಪಡೆಯುತ್ತಾಳೆ. ನಿಮ್ಮವ್ವ ಆ ಮಗುವನ್ನು ಪ್ರೀತಿಯಿಂದ ಸಾಕುತ್ತಾಳೆ. ಒಂದು ದಿನ ಮನೆಗೆ ಬಂದ ಅತಿಥಿಗಳಿಗೆಂದು ಮಾಡಿದ ಅಡುಗೆಯನ್ನು ಮಗ ಎಂಜಲು ಮಾಡಿದನೆಂದು ಕೋಪದಿಂದ ಒನಕೆಯಿಂದ ಅವನ ತಲೆಗೆ ಪೆಟ್ಟು ಕೊಟ್ಟು ಕೊಂದು ಬಿಡುತ್ತಾಳೆ. ಅವಳ ಭಕ್ತಿಗೆ ನಿಷ್ಠೆಗೆ ಮೆಚ್ಚಿದ ಶಿವನು ಅವರಿಬ್ಬರಿಗೂ ಮೋಕ್ಷವೀಯುತ್ತಾನೆ.

ಈ ಜಾನಪದ ಕಥೆಯಲ್ಲಿನ ಸಾಂಸ್ಕೃತಿಕ ಅಂಶಗಳು ನಮ್ಮ ಗಮನ ಸೆಳೆಯುತ್ತವೆ. 'ಅಪುತ್ರಸ್ಯ ಗತಿರ್ನಾಸ್ತಿ' ಎಂದು ನಂಬಿಕೊಂಡು ಬಂದ ಪರಂಪರೆಯಾಚರೂ ವೃದ್ಧಾಪ್ಯದಲ್ಲಿ ತನ್ನನ್ನು ರಕ್ಷಿಸಬೇಕಾದ ಮಗನನ್ನು, ಅದರಲ್ಲೂ ಶಿವನ ವರಪ್ರಸಾದಿಯಾಗಿದ್ದ ಪುತ್ರನನ್ನು ತನ್ನ ಧರ್ಮನಿಷ್ಠೆಗಾಗಿ ಬಲಿಕೊಟ್ಟಿದ್ದು ಒಂದು ಕತೆಯಾದರೆ ಹೆಣ್ಣು ತನ್ನ ಮನೆಗಾಗಿ ಸಂಸಾರಕ್ಕಾಗಿ ತನ್ನನ್ನು ಬಲಿಕೊಟ್ಟು ಜೀವಿಸುವ ಸನಾತನ ಪರಂಪರೆಯ ನಂಬಿಕೆಯನ್ನು ತೊರೆದು ಸ್ವತಂತ್ರಳಾಗಿ ಜಂಗಮರಿಗೆ ದಾಸೋಹ ನೀಡುವ, ಆ ಮೂಲಕ ಶಿವನನ್ನು ಮೆಚ್ಚಿಸುವ ಭಕ್ತಿ ತತ್ಪರತೆಯತ್ತ ನಿಮ್ಮವ್ವ ನಿಷ್ಠಳಾಗಿದ್ದುದು ಒಂದು ಅಪೂರ್ವ ಸನ್ನಿವೇಶ.

ಜೊತೆಗೆ ಕನ್ಯೆಯಾಗಿಯೇ ಪಡೆದ ಪುತ್ರನನ್ನು ನಿಮ್ಮವ್ವ ಕುಂತಿಯ ಹಾಗೆ ಸಮಾಜಕ್ಕೆ ಹೆದರದೆ ಧೈರ್ಯವಾಗಿ ಸಾಕಿದಳು. ಹುಟ್ಟಿದಾಗಿನಿಂದ ಹೆಣ್ಣು ಪರಾಧೀನಳೆಂಬ ಸನಾತನ ನಿಯಮವನ್ನು ಧಿಕ್ಕರಿಸಿ ತಾನೇ ಸ್ವತಂತ್ರಳಾಗಿ ತಾನು ನಂಬಿದ ದೈವವನ್ನು ಆರಾಧಿಸುವ, ಜಂಗಮರನ್ನು ಸತ್ಕರಿಸುವ ಮನೋಧರ್ಮದವಳಾಗಿರುವುದು ಒಂದು ವಿಶೇಷ. ಹೆಣ್ಣಿನ ಗುರಿ ಮುಕ್ತಿಯೇ ಹೊರತು ಸಂಸಾರ ಬಂಧನವಲ್ಲ ಎಂಬ ಶೈವಮತದ ತತ್ವವನ್ನು ನಿಮ್ಮವ್ವ ಸಾಕಾರಗೊಳಿಸುತ್ತಾಳೆ.

ತೆಲುಗಿನ ಜಾನಪದ ಹಾಡುಗಳಲ್ಲಿ 'ಕುಂಬಾರ ಗುಂಡಮ್ಮ'ನ ಕಥೆ ಪ್ರಚಾರದಲ್ಲಿದೆ. ಈ ಜಾನಪದ ಕಥೆಯಲ್ಲಿ ಒಬ್ಬ ಗಂಧರ್ವನು ಮುನಿಯ ಶಾಪದಿಂದ ಕುಂಬಾರರ ಮನೆಯಲ್ಲಿ ಹುಟ್ಟುತ್ತಾನೆ, ಶಿವಭಕ್ತನಾಗಿರುತ್ತಾನೆ. ಅವನ ಹೆಂಡತಿ ಗುಂಡಮ್ಮ ಅರುಂಧತಿಯ ಸಮಾನಳಾದ ಪತಿವ್ರತೆ.

ಅತನಿ ಸತಿ ಗುಣಮುಲು ಅರುಂಜೋತಿನಿ ಪೋಲು
ಪತಿಭಕ್ತಿ ಪ್ರಿಯುರಾಲು ಪರಮ ಧರ್ಮಿಷ್ಠಿ
ಮೊಗುನಿ ಎಂಗಿಲಿ ಲೇಕ ಕುಡುನವೆಪ್ಪಟಿಕಿ
ಮೊಗುನಿತೋ ಕೊಟ್ಟುಪಡಿ ವಗುವದೆನ್ನಟಿತಿ
ಈ ಮೂಡುಲೋಕಮುಲಕು ಈಶ್ವರುಡು ಕರ್ತ
ತನಕು ಪುರುಷುಡು ಕರ್ತ ತನ ಪ್ರಾಣನಾಥ
ಅತಿವಲಕು ಪತಿದೆಪ್ಪ ಧರ್ಮ ಮಿಗಲೇದು...
ಅನಿ ಇಟ್ಲು ಪತಿಲೋನಿ ಪತಿನಿ ಪೂಜಿಂಪು...

ಹೀಗೆ ಗುಂಡಮ್ಮ ಪತಿಭಕ್ತಿ ತತ್ಪರಳಾಗಿ ಪತಿಯೊಳಗಿನ ಪತಿಯಾದ ಈಶ್ವರನನ್ನು ಅನನ್ಯ ಭಕ್ತಿಯಿಂದ ಪೂಜಿಸುತ್ತಾ ಸುಖದಿಂದಿರುವಾಗ ಒಂದು ದಿನ.... ಗುಂಡಯ್ಯನು ಇಡೀ ದಿನ ನೀಲಕಂಠನನ್ನು ಪೂಜಿಸಿ ರಾತ್ರಿಯ ಹೊತ್ತಿನಲ್ಲಿ ಗುಡಿಯಿಂದ ಮನೆಗೆ ಹಿಂದಿರುಗುತ್ತಿದ್ದಾಗ ಒಬ್ಬ ವೇಶ್ಯೆ ತಾನು ಊಟಮಾಡಿದ ತಟ್ಟೆಯನ್ನು ತೊಳೆದು ಆ ಎಂಜಲು ನೀರನ್ನು ಮಹಡಿಯಿಂದ ಕೆಳಕ್ಕೆ ಚೆಲ್ಲುತ್ತಾಳೆ. ಆ ನೀರು ಬೀದಿಯಲ್ಲಿ ಹೋಗುತ್ತಿದ್ದ ಗುಂಡಯ್ಯನ ತಲೆಯ ಮೇಲೆ ಬೀಳುತ್ತದೆ. ಗುಂಡಯ್ಯನು "ಶಿವ! ಶಿವ!" ಎಂದು ಜಪಿಸಿದ್ದನ್ನು ಕೇಳಿಸಿಕೊಂಡ ಆ ವೇಶ್ಯೆ ಶಿವಭಕ್ತನ ಮೇಲೆ ತಾನು ಎಂಜಲು ನೀರು ಚೆಲ್ಲಿದೆನೆಂದು ಪಶ್ಚಾತ್ತಾಪ

ಪಟ್ಟು ಕೆಳಕ್ಕೆ ಓಡಿ ಬಂದು ಆತನ ಕ್ಷಮೆ ಕೇಳುತ್ತಾಳೆ. ತನ್ನಿಂದ ಆತನಿಗೆ ಅಪಚಾರವಾಯಿತೆಂದು ಚಿಂತಿಸುತ್ತಾ ಆತನನ್ನು ತನ್ನ ಮನೆಯ ಒಳಕ್ಕೆ ಕರೆದುಕೊಂಡು ಹೋಗಿ ಆತನಿಗೆ ಸ್ನಾನಮಾಡಿಸಿ ಹೊಸ ಉಡುಪುಗಳನ್ನು ಕೊಟ್ಟು ಅಂದಿನ ರಾತ್ರಿ ತನ್ನ ಮನೆಯಲ್ಲಿಯೇ ಇರುವಂತೆ ಕೇಳಿಕೊಳ್ಳುತ್ತಾಳೆ. ಅದಕ್ಕೆ ಗುಂಡಯ್ಯ-

ಏಕ ಪತ್ನೀವ್ರತುಡನಿ ಎರುಗವಾ ಲಕ್ಷ್ಮಿ
ಚೆಟ್ಟಿ ಪಟಿನ ಚೇಡೇ ತಪ್ಪ ನೇನು
ಯಲ್ಲ ಕಾಂತಲನಲ್ಲ ತಲ್ಲಿಗಾಚೂತು
ಅಪರಾಧಿನಿ ಆನಗಾನೆ ಪಲಿತಿಲೆನಿಗಾನಿ
ಏಕಪತ್ನಿವ್ರತಮು ಎರುಗನಾನೇನು
ಪೋಮಿವಸ್ತಾನು ಪೋಬೋಣೆ ಚೇತ
ಅನಿಪಿಂಚುಕುನಿ ತನ ಗೃಹಂ ಪೇರೆ....

"ನಾನು ಏಕಪತ್ನೀ ವ್ರತಸ್ಥನೆಂದು ನಿನಗೆ ತಿಳಿಯದೇ ಲಕ್ಷ್ಮಿ! ಕೈಹಿಡಿದ ಕಾಂತೆಯೊಬ್ಬಳನ್ನು ಬಿಟ್ಟು ಉಳಿದ ಸ್ತ್ರೀಯರನ್ನು ನಾನು ತಾಯಿಯಂತೆ ಕಾಣುವೆ. ನೀನು ಅಪರಾಧಿನಿ ಎಂದು ಹೇಳಿಕೊಂಡು ಕ್ಷಮೆ ಕೇಳಿದ್ದರಿಂದ ನಿನ್ನೊಡನೆ ಮಾತನಾಡಿ ಒಳಕ್ಕೆ ಬಂದೆನೇ ಹೊರತು ನಾನು ಏಕಪತ್ನಿ ವ್ರತವನ್ನು ಬಿಟ್ಟು ನಡೆಯುವಂಥವನಲ್ಲ. ಮನೆಗೆ ಹೋಗುತ್ತೇನೆ" ಎಂದು ಹೇಳಿ ಗುಂಡಯ್ಯನು ಮನೆಗೆ ಹೋಗಿ ಸೇರಿಕೊಂಡ.

ತನ್ನ ಗಂಡನ ಕಾಲು ಸಪ್ಪಳ ಕೇಳಿಸಿಕೊಂಡ ಗುಂಡಮ್ಮ ಪತಿಯ ಪಾದಗಳನ್ನು ಪನ್ನೀರಿನಿಂದ ತೊಳೆಯುವಳು. ಗಂಡನು ಧರಿಸಿದ ಹೊಸ ಪೋಷಾಕನ್ನು ಮೈಗೆ ಪೂಸಿದ ಪರಿಮಳವನ್ನು ಗಮನಿಸಿದಾಗ ಆಕೆಗೆ ಕೋಪ ಬಂತು "ಪರಕಾಂತೆಯನ್ನು ಮುಟ್ಟಿ ಅವಳಿತ್ತ ಬಟ್ಟೆಯನ್ನು ಧರಿಸಿದ್ದೀಯೆ. ಇನ್ನು ಮುಂದೆ ನಿನ್ನನ್ನು ನಾನು ಮುಟ್ಟುವುದಿಲ್ಲ. ಶಿವನ ಮೇಲೆ ಆಣೆ" ಎಂದು ಆಣೆ ಇಡುವಳು. ಅಂದಿನಿಂದ ಗಂಡಹೆಂಡಿರಿಬ್ಬರೂ ಮಾತನಾಡದೇ ಒಬ್ಬರನ್ನೊಬ್ಬರು ತಾಕದೇ ಅರವತ್ತು ವರುಷಗಳನ್ನು ಕಳೆಯುತ್ತಾರೆ. ಒಂದು ದಿನ ಈಶ್ವರನು ಜಂಗಮ ವೇಷದಲ್ಲಿ ಅವರ ಮನೆಗೆ ದಾಸೋಹಕ್ಕೆಂದು ಬಂದು ಅವರ ಕೈಗೆ ಒಂದು ಕರಡಿಗೆಯನ್ನಿತ್ತು "ನಾನು ಗಂಗೆಯಲ್ಲಿ ಮಿಂದು ಬರುತ್ತೇನೆ, ನೀವು ಈ ಕರಡಿಗೆಯನ್ನು ಇಟ್ಟುಕೊಂಡಿರಿ" ಎಂದು ಹೇಳಿ ಹೋಗುತ್ತಾನೆ. ಸ್ವಲ್ಪ ಹೊತ್ತಿನ ನಂತರ ಹಿಂದಿರುಗಿ ಬಂದು ತನ್ನ ಕರಡಿಗೆಯನ್ನು ಕೇಳುತ್ತಾನೆ. ಆದರೆ ಕರಡಿಗೆ ಮಾಯವಾಗಿಬಿಟ್ಟಿರುತ್ತದೆ. ಗುಂಡಯ್ಯ ದಂಪತಿಗಳು ಮನೆಯೆಲ್ಲಾ ಹುಡುಕಿದರೂ ಕರಡಿಗೆ ಸಿಗುವುದಿಲ್ಲ. ಅದಕ್ಕೆ ಈಶ್ವರನು "ನೀವು ಗಂಡ ಹೆಂಡತಿಯಿರಬ್ಬರೂ ಒಬ್ಬರ ಕೈ ಒಬ್ಬರು ಹಿಡಿದು 'ನಾವು ಖಂಡಿತವಾಗಿಯೂ ಕರಡಿಗೆಯನ್ನು ತೆಗೆದುಕೊಂಡಿಲ್ಲ' ಎಂದು ಪ್ರಮಾಣ ಮಾಡಿದಲ್ಲಿ ನಾನು ಹೊರಟು ಹೋಗುತ್ತೇನೆ" ಎನ್ನುತ್ತಾನೆ. ಅದಕ್ಕೆ ಗುಂಡಯ್ಯನು "ಬೆಂಕಿಯನ್ನಾದರೂ ಮುಟ್ಟುತ್ತೇನೆ. ಸರ್ಪವನ್ನಾದರೂ ಹಿಡಿದುಕೊಳ್ಳುತ್ತೇನೆ. ಆದರೆ ಹೆಂಡತಿಯನ್ನು ಮುಟ್ಟುವುದಿಲ್ಲ" ಎಂದುತ್ತರವೀಯುತ್ತಾನೆ. "ಉರಿಯುವ ಕೆಂಡವಲ್ಲಾದರೂ ಬಿದ್ದೇನು. ಗಂಡನನ್ನು ತಾಕುವುದಿಲ್ಲ" ಎಂದು ಹೆಂಡತಿ ಹೇಳುತ್ತಾಳೆ. ಜಂಗಮದೇವರಿಗೆ ಕೋಪ ಬಂದು ಅವರಿಬ್ಬರನ್ನು ಹಿಡಿದುಕೊಂಡು ಹೋಗಿ ಗಂಗೆಯಲ್ಲಿ ಎಸೆಯುತ್ತಾನೆ. ಅವರಿಬ್ಬರೂ ನದಿಯಲ್ಲಿ ಮುಳುಗದೇ ನದಿ ನೀರಿನ ಸಮಾನವಾಗಿ ತೇಲುತ್ತಿರುತ್ತಾರೆ. ಆಗ ಪಾರ್ವತಿ-ಪರಮೇಶ್ವರರು ಪ್ರತ್ಯಕ್ಷವಾಗಿ "ನೀವಿಬ್ಬರೂ ಸಮಾನರೇ, ನೀವು ಇನ್ನೂ ಅರವತ್ತು ವರುಷ ಕಾಲ ಮಕ್ಕಳು, ಮೊಮ್ಮಕ್ಕಳು ಮರಿಮಕ್ಕಳೊಂದಿಗೆ ಬದುಕಿ ನಂತರ ಕೈಲಾಸಕ್ಕೆ ಬನ್ನಿ" ಎಂದು ಹರಸಿ ಮಾಯವಾಗುತ್ತಾರೆ.

ಗುಂಡಮ್ಮ ಭಾರತೀಯ ಸಂಪ್ರದಾಯದ ಧರ್ಮವನ್ನು ಅನುಸರಿಸಿ ಪತಿವ್ರತೆಯಾಗಿ ಬಾಳಿದಳು. ಆದರೆ ತನ್ನ ಪತಿ ವೇಶ್ಯೆಯ ಬಳಿಗೆ ಹೋದನೆಂಬ ಅನುಮಾನ ಬಂದೊಡನೆ ಅವನು ತನಗೆ ದ್ರೋಹ ಮಾಡಿದನೆಂದು ಅರವತ್ತು ವರುಷಗಳ ಕಾಲ ಗಂಡನನ್ನು ತಾಕದೇ ಆತ್ಮಾಭಿಮಾನದಿಂದ ಬದುಕಿದಳು. ಗುಂಡಮ್ಮ ಪತಿವ್ರತಾಧರ್ಮದಂತೆ ಗಂಡನನ್ನು ಪೂಜಿಸಿದ್ದರೂ, ತಪ್ಪು ಮಾಡಿದಲ್ಲಿ ಗಂಡನನ್ನು ತಿರಸ್ಕರಿಸುವ ಮಟ್ಟದ ಪ್ರಗತಿಪರ ಧೋರಣೆಯನ್ನು ತೋರಿದ್ದು ಒಂದು ವಿಶೇಷ. ನವೀನತೆಯ

ಹಾದಿ ತುಳಿಯುತ್ತಲೇ ಹಳೆಯ ಸಂಪ್ರದಾಯವನ್ನು ಮನ್ನಿಸುವುದು ಜಾನಪದ ಕಥೆಗಳ ವೈಶಿಷ್ಟ. ಸ್ವಾಭಿಮಾನ, ದಿಟ್ಟನಿಲುವು, ಹಿಡಿದ ಪಟ್ಟು ಬಿಡದಿರುವ ಛಲ -ಇವುಗಳಿಗೆ ಕೆಳವರ್ಗದ ಕುಂಬಾರ ಗುಂಡಮ್ಮ ಒಳ್ಳೆಯ ನಿದರ್ಶನವಾಗುತ್ತಾಳೆ. ಈ ಜಾನಪದ ಕಥೆಯಲ್ಲಿ ಸಾಕ್ಷಾತ್ ಶಿವನೇ ಆಕೆ ಶಿವಭಕ್ತನಾದ ಗುಂಡಯ್ಯನಿಗೆ ಸಮಾನಳಾದವಳೆಂದು ಹೊಗಳಿ ಮುಕ್ತಿಯನ್ನೀಯುತ್ತಾನೆ.

ಮೂರನೆಯದಾಗಿ 'ಅಯ್ಯವಾರಿ ಬಿಡ್ಡ' ಎಂಬ ಕಥೆ. ಈ ಕಥೆ ಕನ್ನಡದಲ್ಲಿ 'ಕೋಳೂರ ಕೊಡಗೂಸು' ಎಂಬ ಹೆಸರಿನಲ್ಲಿ ಪ್ರಚಲಿತವಿದೆ.

ಒಂದೂರಿನ ಒಬ್ಬ ಪೂಜಾರಿಗೆ ಮೂವರು ಗಂಡುಮಕ್ಕಳು, ಒಬ್ಬ ಮಗಳು ಇರುತ್ತಾಳೆ. ಒಂದು ದಿನ ಪೂಜಾರಿ ಪರವೂರಿಗೆ ಹೋಗಬೇಕಾಗಿ ಬಂದಾಗ ಉಂಡಾಡಿ ಗುಂಡರಾದ ಮಕ್ಕಳನ್ನು ಕಡೆಗಣಿಸಿ ಶಿವಭಕ್ತಳಾದ ತನ್ನ ಮಗಳನ್ನು ಕರೆದು "ದಿನಾಗಲೂ ಗುಡಿಯ ಕಸ ಗುಡಿಸಿ ಸ್ವಚ್ಛಮಾಡಿ, ದೀಪ ಹಚ್ಚಿ ಶಿವನಿಗೆ ನೈವೇದ್ಯವಿಡು" ಎಂದು ಹೇಳಿ ಹೋಗುತ್ತಾನೆ. ಪೂಜಾರಿಯ ಮಗಳು ತನ್ನ ತಂದೆ ಹೇಳಿದಂತೆಯೇ ಒಂದು ಬಟ್ಟಲು ತುಂಬಾ ಹಾಲನ್ನು ನೈವೇದ್ಯವಿಟ್ಟು ಶಿವನನ್ನು 'ಹಾಲು ಕುಡಿ' ಎಂದು ಬೇಡಿಕೊಳ್ಳುತ್ತಾಳೆ. ತಾನು ಎದುರಿಗೆ ಕುಳಿತಿದ್ದರೆ ಈಶ್ವರನು ಕುಡಿಯಲಾರನೇನೋ ಎಂದು ಮರೆಯಲ್ಲಿ ನಿಲ್ಲುವಳು. ಆದರೂ ಶಿವ ಕುಡಿಯಲಿಲ್ಲ. ಪುನಃ ಪುನಃ ಬೇಡಿಕೊಳ್ಳುತ್ತಾಳೆ. ಬೇಸರ ಪಟ್ಟುಕೊಂಡು 'ಕುಡಿ' ಎಂದು ಹೇಳುತ್ತಾಳೆ. ಆದರೂ ಶಿವ ಸುಮ್ಮಗಿದ್ದ. ಕೊನೆಗೆ ಅವಳು "ದೇವಾ! ನೀನೀಗ ಈ ಹಾಲನ್ನು ಕುಡಿಯದೇ ಹೋದಲ್ಲಿ ನಾನು ಪ್ರಾಣತ್ಯಾಗ ಮಾಡುತ್ತೇನೆ" ಎಂದು ಲಿಂಗಕ್ಕೆ ತಲೆಯನ್ನು ಹೊಡೆದುಕೊಳ್ಳುವಳು. ಆಗ ಶಿವನು ಪ್ರತ್ಯಕ್ಷನಾಗಿ ಬಟ್ಟಲಲ್ಲಿ ತನಗಾಗಿ ಇಟ್ಟಿದ್ದ ಹಾಲನ್ನು ಕುಡಿದು ಬಿಡುತ್ತಾನೆ. ಹೀಗೆ ಐದಾರು ದಿನಗಳು ಕಳೆದ ನಂತರ ಆ ಹುಡುಗಿಯ ತಂದೆ ಮನೆಗೆ ಬರುತ್ತಾನೆ. ತಂದೆಗೆ ನಡೆದದ್ದನ್ನೆಲ್ಲ ಹೇಳುವಳು. ತಂದೆಗೆ ನಂಬಲಾಗಲಿಲ್ಲ. ನಿಂತು ಗಮನಿಸುತ್ತಿದ್ದ. ಅಂದು ತಂದೆ ಮರೆಯಲ್ಲಿದ್ದು ಗಮನಿಸುತ್ತಿದ್ದಾನೆಂದು ಶಿವನು ಪ್ರತ್ಯಕ್ಷನಾಗುವುದಿಲ್ಲ. ಆ ಹುಡುಗಿ ಬೇಡಿ ಕಾಡಿ, ಅತ್ತು ಅತ್ತು ತನ್ನ ತಲೆಯನ್ನು ಲಿಂಗಕ್ಕೆ ಹೊಡೆದುಕೊಂಡು ಗಾಯವಾಗಿ ರಕ್ತ ಸುರಿದು ಎಚ್ಚರ ತಪ್ಪುವಳು. ಆಗ ಪರಮೇಶ್ವರನು ಆ ಹುಡುಗಿಯನ್ನು ಎತ್ತಿಕೊಂಡು ಹೋಗುವಾಗ ತಟ್ಟನೆ ಆ ಹುಡುಗಿಯ ತಂದೆ ಅವಳ ಕಾಲುಗಳನ್ನು ಹಿಡಿದುಕೊಳ್ಳುವನು, ಪರಮೇಶ್ವರನು ಆ ಇಬ್ಬರನ್ನು ಕೈಲಾಸಕ್ಕೆ ಕರೆದೊಯ್ಯುವನು.

ತೆಲುಗಿನಲ್ಲಿ ಪಾಲ್ಕುರಿಕೆ ಸೋಮನಾಥನು ಬರೆದ ಬಸವ ಪುರಾಣದಲ್ಲಿ 'ಗೋಡಕೊಚಿ ಕಥೆ' ಮತ್ತು ಜಾನಪದ ಕಥೆಯಾಗಿ ಪ್ರಚಾರದಲ್ಲಿರುವ 'ಅಯ್ಯವಾರಿ ಬಿಡ್ಡ ಕಥೆ' ಒಂದೇ ವಿಧವಾಗಿವೆ. ಇದೇ 'ಕೋಳೂರ ಕೊಡುಗೂಸು' ಎಂದು ಕನ್ನಡದಲ್ಲಿ ಪ್ರಸಿದ್ಧವಾಗಿದೆ.

ಹಿಂದೂ ಸಂಪ್ರದಾಯದಲ್ಲಿ ಪೂಜಾರಿವೃತ್ತಿ ವಂಶಪರಂಪರೆಯಾಗಿ ಬರುವ ಗಂಡುಮಕ್ಕಳಿಗೇ ಸಲ್ಲುತ್ತದೆ. ಆದರೆ ಈ ಕಥೆಯಲ್ಲಿ ಪೂಜಾರಿ ತನ್ನ ಗಂಡುಮಕ್ಕಳಿಗೆ ಪೂಜಾರಿಯ ಕೈಂಕರ್ಯವನ್ನು ಒಪ್ಪಿಸದೇ ಹೆಣ್ಣುಮಗಳಿಗೆ ಒಪ್ಪಿಸುತ್ತಾನೆ.

ಭಾರತೀಯ ಧರ್ಮಶಾಸ್ತ್ರಗಳಲ್ಲಿ ತಂದೆಯ ವೃತ್ತಿಗೆ, ಆಸ್ತಿಗೆ ಮಗ ಅಥವಾ ಮೊಮ್ಮಗ ವಾರಸುದಾರನಾಗುತ್ತಾನೆ. 'ಪುತ್' ಎಂಬ ನರಕದಿಂದ ಮಗನು ತನ್ನ ತಂದೆಯನ್ನು ಪಾರುಮಾಡುತ್ತಾನೆ. ಆದ್ದರಿಂದಲೇ ಅವನನ್ನು 'ಪುತ್ರ' ನೆನ್ನುತ್ತಾರೆ. ಧರ್ಮಶಾಸ್ತ್ರಗಳಿಗೆ ವಿರುದ್ಧವಾಗಿ 'ಅಯ್ಯವಾರಿ ಬಿಡ್ಡ ಕಥೆ' ಯಲ್ಲಿ ಮಾತ್ರ ಪೂಜಾರಿಗೆ ಮೋಕ್ಷ ಹೆಣ್ಣುಮಗಳಿಂದಲೇ ದೊರಕುತ್ತದೆ. ಹೀಗೆ ವೀರಶೈವ ಭಕ್ತೆಯರು ತಮ್ಮ ಜೀವನದಲ್ಲಿ ಸಂಪ್ರದಾಯದ ವಿರುದ್ಧ ದನಿ ಎತ್ತಿ ಛಲದಿಂದ ಸಾಧಿಸಿಕೊಂಡದ್ದನ್ನು ಕಾಣಬಹುದು. ಮತಪ್ರಚಾರಕ್ಕಾಗಿ ಹುಟ್ಟಿಕೊಂಡ ಭಕ್ತಸಾಹಿತ್ಯ ಮಹಿಳೆಯರಿಗೆ ಸಂಪೂರ್ಣ ಸ್ವಾತಂತ್ರ್ಯ ಕೊಡಲಾಗದಿದ್ದರೂ, ಅವರಲ್ಲಿ ಚೈತನ್ಯವನ್ನು ತುಂಬಿ ಪ್ರಗತಿಪರ ಧೋರಣೆಗಳನ್ನು ತಳೆಯುವುದಕ್ಕೆ, ಪ್ರತಿಭಟನೆಯ ದನಿಯನ್ನೆತ್ತುವುದಕ್ಕೆ ಬೀಜಾಂಕುರವಾಯಿತು.

■■

ಸಂಸ್ಕೃತದಲ್ಲಿ ವೀರಭದ್ರ ಸಾಹಿತ್ಯ

✍ ಡಾ. ಇಮ್ಮಡಿ ಶಿವಬಸವಸ್ವಾಮಿಗಳು

ವೀರಭದ್ರನಿಗೆ ಸಂಬಂಧಿಸಿದ ಇತಿವೃತ್ತವು ಪ್ರಪ್ರಥಮವಾಗಿ ಅತ್ಯಂತ ವಿಸ್ತಾರವಾಗಿ ಶಿವಪುರಾಣದ ರುದ್ರಸಂಹಿತೆಯಲ್ಲಿ ನಿರೂಪಿತವಾಗಿದೆ. ಅಲ್ಲಿ ಶಿವನ ಪ್ರಮಥ ಗಣಗಳಲ್ಲೊಬ್ಬನಾದ ಕಟ್ಟುಗ್ರ ಸ್ವಭಾವದ ವೀರಭದ್ರದೈವದ ಉತ್ಪತ್ತಿ. ಆತನು ಎಸಗಿದ ಅತ್ಯದ್ಭುತ ಘಟನಾವಳಿಗಳು ಬಹು ರೋಚಕವಾಗಿ ವರ್ಣಿಸಲ್ಪಟ್ಟಿವೆ. ದಕ್ಷಬ್ರಹ್ಮನು ಬೃಹತ್ತಾದ ಯಜ್ಞವನ್ನು ಮಾಡಲುದ್ಯುಕ್ತನಾಗಿ, ಅದನ್ನು ಈಡೇರಿಸುವ ಸಲುವಾಗಿ ಇಂದ್ರಾದಿ ಸಮಸ್ತ ದೇವತೆಗಳಿಗೆ, ಶ್ರೇಷ್ಠ ಋಷಿಗಳಿಗೆ ಆಮಂತ್ರಣವನ್ನೀಯುತ್ತಾನೆ. ಆದರೆ ಹಿಂದೊಮ್ಮೆ ನಡೆದ ಸಭೆಯಲ್ಲಿ ತನ್ನ ಅಳಿಯನಾದ ಶಿವನು ತನಗೆ ತಲೆಬಾಗಿ ನಮಿಸುವುದಂತಿರಲಿ, ಕಾಲೋಚಿತವಾಗಿ ಗೌರವಿಸದಿದ್ದ ಸಂದಿಗ್ಧ ಘಟನೆಯನ್ನು ಸ್ಮರಿಸಿಕೊಂಡು, ಶಿವನಿಗೆ ಅಪಮಾನವೆಸಗಬೇಕೆಂದು ಉದ್ದೇಶಪೂರ್ವಕವಾಗಿ ಆಹ್ವಾನವನ್ನು ನೀಡುವುದಿಲ್ಲ. ಇದನ್ನು ಕಂಡು ಮಗಳಾದ ಸತೀದೇವಿಯು ಶಿವನನ್ನು ಆಹ್ವಾನಿಸಬೇಕೆಂದು ಪರಿಪರಿಯಾಗಿ ಬೇಡಿಕೊಂಡರೂ ಲೆಕ್ಕಿಸದೆ, ಇತರ ದೇವತೆಗಳ ಮತ್ತು ಋಷಿಗಳ ಸಮ್ಮುಖದಲ್ಲಿಯೇ ಶಿವನನ್ನು ಕಟುವಾಗಿ ನಿಂದಿಸಿದುದನ್ನು ಕಂಡು ಸತಿದೇವಿಯು ಯಜ್ಞವು ಆರಂಭವಾದ ನಂತರ ಶಿವನನ್ನೇ ಧ್ಯಾನಿಸುತ್ತ ಯಜ್ಞಕುಂಡಕ್ಕೆ ತನ್ನನ್ನು ಸಮರ್ಪಿಸಿಕೊಳ್ಳುತ್ತಾಳೆ. ಇದರಿಂದ ಕುಪಿತರಾದ ಶಿವನ ಪ್ರಮಥಗಣಂಗಳು ಯಜ್ಞವು ಮುಂದುವರಿಯಬಾರದು ಎಂದು ಹೋರಾಟ ಮಾಡುತ್ತಾರೆ. ನಾರಾಯಣನು ಮತ್ತು ಶಿವನ ಅನುಯಾಯಿಗಳು ಪರಸ್ಪರ ದ್ವೇಷಿಸುತ್ತಾ ಸಂಘರ್ಷಕ್ಕೆ ಇಳಿಯುತ್ತಾರೆ. ಅತ್ಯುಗ್ರಸ್ವರೂಪನೂ ಅತ್ಯಂತ ಪರಾಕ್ರಮಿಯೂ, ಪರಮ ಶಿವಭಕ್ತನೂ ಆದ ವೀರಭದ್ರನು ದಕ್ಷನ ಯಾಗವನ್ನು ಧ್ವಂಸಮಾಡುತ್ತಾನೆ. ಸಾಮಾನ್ಯವಾಗಿ ಶಿವಭಕ್ತರೆಲ್ಲರೂ ಈ ಕಥೆಯನ್ನು ತಿಳಿದಿರುತ್ತಾರೆ.

ಯಜ್ಞವಿರೋಧದ ಈ ಘಟನೆಯ ಹಿನ್ನೆಲೆಯಲ್ಲಿ ಒಂದು ಚಾರಿತ್ರಿಕ ಸತ್ಯ ಅಡಗಿರುವಂತೆ ಭಾಸವಾಗುತ್ತದೆ. ಇಲ್ಲಿ ದಕ್ಷಬ್ರಹ್ಮನಿಗೂ ಸತೀದೇವಿಗೂ ನಡೆದ ವಾದದಲ್ಲಿ ಶಿವಭಕ್ತರಾದ ದಧೀಚಿಯೇ ಮುಂತಾದ ಋಷಿಗಳ ಮಾತನ್ನು ಆಳವಾಗಿ ಪರಿಶೀಲಿಸಿದಲ್ಲಿ ವೇದದ ಮಹತ್ವವನ್ನು ಪ್ರತಿಪಾದಿಸುವವರ ಹಾಗೂ ವೇದದ ಪ್ರಾಮುಖ್ಯವನ್ನು ಒಪ್ಪದವರ ನಡುವೆ ಜರುಗಿರಬಹುದಾದ ಘಟನೆಯ ಮೂಲದ ಸಂಕೇತವು ದೊರೆಯುತ್ತದೆ. ಶಿವನನ್ನು ವೇದವಿರೋಧಿಯೆಂದು ಭೂತ, ಪ್ರೇತಗಳನ್ನು ಕಟ್ಟಿಕೊಂಡು ಸ್ಮಶಾನದಲ್ಲಿ ನರ್ತನಮಾಡುವುದನ್ನು, ಅಲ್ಲದೆ ಆತನ ಮಾತಾಪಿತೃಗಳು ಯಾರೆಂದು ಗೊತ್ತಿಲ್ಲವೆಂದು ದಕ್ಷಬ್ರಹ್ಮನು ಅತ್ಯಂತ ಕಟೂಕ್ತಿಗಳಿಂದ ಮೂದಲಿಸುತ್ತಾನೆ, ನಿಂದಿಸಿತ್ತಾನೆ. ಅಂತೆಯೇ ಶಿವನ ಪ್ರಮಥಗಣಂಗಳು, ವಿಷ್ಣುವಿನ ಅನುಯಾಯಿಗಳನ್ನು ವೇದಸಮರ್ಥರೆಂದು ಬ್ರಾಹ್ಮಣರೆಲ್ಲರೂ ಕರ್ಮಠರೆಂದು, ಯಜ್ಞಯಾಗದ ನೆಪದಲ್ಲಿ ಭೋಗಿಗಳಾಗುತ್ತಿರುವುದನ್ನು ತೋರಿಸಿಕೊಡುತ್ತಾರೆ. ಯಾವ ಜಾತಿಯಲ್ಲೇ ಜನಿಸಿರಲಿ ಶಿವನು ಅವರಲ್ಲಿ ಭೇದಮಾಡದೆ ಅವರ ಭಕ್ತಿಯನ್ನು ಮಾತ್ರವೇ ನೋಡುತ್ತಾನೆ, ಈ ಗುಣವು ನಿಮ್ಮಲಿಲ್ಲ ಎಂದು ಜರೆಯುತ್ತಾರೆ. ಈ ತೆರನಾದ ವಾಕ್ಯಗಳ ಹಿನ್ನೆಲೆಯನ್ನು ಸೂಕ್ಷ್ಮವಾಗಿ ವಿವೇಚಿಸಬೇಕಾಗಿದೆ. ಆದರೆ ಅಂತಿಮವಾಗಿ ವೇದವು ಜ್ಞಾನಮಾರ್ಗವನ್ನು ನಿರೂಪಿಸಿದರೆ, ಆಗಮಗಳು ಭಕ್ತಿಮಾರ್ಗವನ್ನು ಪ್ರತಿಪಾದಿಸುತ್ತವೆ ಎಂಬ ಒಳನೋಟವನ್ನು ಕಾಣಬಹುದು. ಇವೆರಡು ಪರಸ್ಪರ ವಿರೋಧಿ ಭಾವನೆಗಳಲ್ಲ, ಅವು ಒಂದಕ್ಕೊಂದು ಪೂರಕ ಎಂಬ ಸಮನ್ವಯ ಮಾರ್ಗವನ್ನು ಅಂತಿಮವಾಗಿ ತೋರಿಸಿಕೊಟ್ಟಿವೆ.

ಈ ಪೌರಾಣಿಕ ಕಥೆಯನ್ನು ಆಧರಿಸಿ ಮುಂದಿನ ಕವಿಗಳು ವೀರಭದ್ರನ ಮೇಲೆ ಕಾವ್ಯಗಳನ್ನು, ನಾಟಕಗಳನ್ನು, ಸೂತ್ರಗಳನ್ನು ರಚಿಸಿದ್ದಾರೆ. ಕರ್ನಾಟಕದ ಕವಿಗಳು ಬರೆದ ವೀರಭದ್ರನಿಗೆ ಸಂಬಂಧಿಸಿದ ಸಾಹಿತ್ಯದ ಒಂದು ಕಿರುಪರಿಚಯವನ್ನು ಇಲ್ಲಿ ಮಾಡಿಕೊಡಲಾಗಿದೆ.

ಎರಡನೆಯ ಅರುಣಗಿರಿನಾಥ

ಪರಮ ಮಹೇಶ್ವರನೂ, ಚತುರ್ವಿಧ ಕವಿತಾಚತುರನೂ ಆದ ರಾಜನಾಥನ ಮಗನಾದ ಕುಮಾರ ಡಿಂಡಿಮ ಕವಿ ಅಥವಾ ಎರಡನೆಯ ಅರುಣಗಿರಿನಾಥನಿಂದ 'ವೀರಭದ್ರ ವಿಜಯ'ವೆಂಬ ನಾಲ್ಕು ಅಂಕಗಳುಳ್ಳ ನಾಟಕವು ರಚಿತವಾಗಿದೆ. ಇದು ಅಪ್ರಕಟಿತ ಕೃತಿ.[೧] ಈತನು ತುಳುವಂಶದ ವೀರನರಸಿಂಹ ಮತ್ತು ಕೃಷ್ಣದೇವರಾಯನ ಸಮಕಾಲೀನನಾಗಿದ್ದನು. ಇದು ರೂಪಕದ ಪ್ರಭೇದವಾದ ಡಿಮಕ್ಕೆ ಸೇರಿದುದು. ಕವಿಯೇ ಕೃತಿಯ ಪ್ರಾರಂಭದಲ್ಲಿ ಅದರ ಲಕ್ಷಣವನ್ನು ತಿಳಿಸಿದ್ದಾನೆ:

> ಸಂಧ್ಯಂಕಾಶ್ಚತುರೋ ವಿಮರ್ಶನಿಗಮಂ ಸಂಗ್ರಾಮಮಾಯಾದಿಕಂ
> ವಸ್ತುಖ್ಯಾತಮುಶಂತಿ ಯತ್ರ ನಿಖಿಲಾ ವೃತ್ತಿಂ ವಿನಾ ಕೈಶಿಕೀಮ್।
> ಸ್ಥಾಯೀ ರೌದ್ರರಸಸ್ತದೇವ ಹಿ ರಸಾಃಶೃಂಗಾರಹಾಸ್ಯೌವಿನಾ
> ದಿವ್ಯಾಃ ಷೋಡಶನಾಯಕಾಃ ಶಂಭುಜೋ ದೀವ್ಯಂತಿ ಯತ್ರೋದ್ಧತಾಃ॥[೨]

ಈ ರೂಪಕದ ಕಥಾಸಾರವು ಹೀಗಿದೆ:

ಶಿವನು ಕೈಲಾಸದಲ್ಲಿ ಒಮ್ಮೆ ಗೋಷ್ಠಿಯಲ್ಲಿದ್ದಾಗ ಒಳಗೆ ಬರಬಯಸಿದ ದಕ್ಷನನ್ನು ತಡೆದುದರ ಫಲವಾಗಿ ಅಪಮಾನವಾಯಿತೆಂದು ಭಾವಿಸಿದ ಅವನು, ತಾನು ಯಜ್ಞವನ್ನು ಪ್ರಾರಂಭಿಸಿದಾಗ ಶಿವನಿಗೆ ಆಮಂತ್ರಣವನ್ನೀಯುವುದಿಲ್ಲ. ಇದನ್ನರಿತ ಪುತ್ರಿ ದ್ರಾಕ್ಷಾಯಣಿಯು ತಂದೆಯನ್ನು ಓಲೈಸಲು ಬಂದು , ತನ್ನ ಗಂಡನಾದ ಶಿವನ ಬಗೆಗೆ ಅಪಮಾನಕರವಾದ ಮಾತುಗಳನ್ನು ಕೇಳಿ, ಯೋಗದಿಂದ ದೇಹವನ್ನು ತ್ಯಜಿಸಿ ಮತ್ತೊಮ್ಮೆ ಪಾರ್ವತಿಯಾಗಿ ಜನಿಸಿ ತಪಸ್ಸಿನಿಂದ ಪರಶಿವನನ್ನು ಪಡೆಯುತ್ತಾಳೆ.

ಇತ್ತ ದಕ್ಷಬ್ರಹ್ಮನು ವಿಷ್ಣ್ವಾದಿಗಳ ಸಹಾಯದಿಂದ ಯಜ್ಞ ಮಾಡಲು ಪ್ರಾರಂಭಿಸಿದಾಗ ಅದನ್ನು ತಿಳಿದ ಶಿವನ ಕೋಪದಿಂದ ವೀರಭದ್ರ, ಪಾರ್ವತಿಯಿಂದ ಭದ್ರಕಾಳಿ ಮುಂತಾದವರು ಜನಿಸುತ್ತಾರೆ. ಶಿವನಿಗೆ ಅಪಮಾನ ಮಾಡಿದ್ದರಿಂದ ಕುಪಿತರಾಗಿ ವೀರಭದ್ರ ಶುಂಭ, ನಿಶುಂಭ, ಭದ್ರಕಾಳಿ, ಭೃಂಗಿ ಇವರೆಲ್ಲರೂ ದಕ್ಷನಿಗೆ ತಕ್ಕ ಶಾಸ್ತಿ ಮಾಡುವುದಾಗಿ ತಮ್ಮ ಪರಾಕ್ರಮವನ್ನು ಹೇಳಿ ಕಳುಹಿಸುತ್ತಾರೆ. ಉಪಮನ್ಯು ಮುನಿಗಳು ಇದಕ್ಕೆ ಸಮ್ಮತಿಸುತ್ತಾರೆ. ನಂದಿಯು ಪ್ರಥಮದಲ್ಲಿ ಹೋರಾಟಕ್ಕಿಳಿಯದೆ, ಹವಿಸ್ಸಿನ ಮೊದಲನೆಯ ಭಾಗವನ್ನು ಶಿವನಿಗೆ ಅರ್ಪಿಸಲಿ ಎಂದು ದೂತನ ಮೂಲಕ ದಕ್ಷಬ್ರಹ್ಮನಿಗೆ ಸಂದೇಶ ಕಳಿಸುತ್ತಾನೆ. ಈ ಸಾಮೋಪಾಯಕ್ಕೆ ವೀರಭದ್ರನು ಸಮ್ಮತಿಸುತ್ತಾನೆ. ಶಿವನೂ ಸಹ ತನ್ನ ಅಂತರಂಗವನರಿದ ಅನಂತನ ಮೂಲಕ ಯಜ್ಞಾಂಶವನ್ನು ಕೇಳಬೇಕೆಂದು ಹೇಳಿ ಕಳುಹಿಸುತ್ತಾನೆ. ಇದಕ್ಕೊಪ್ಪದಿದ್ದಲ್ಲಿ ಮಾತ್ರ ಆತನಿಗೆ ಶಿಕ್ಷೆ ವಿಧಿಸಬೇಕೆಂದು ಸಲಹೆ ಕೊಡುತ್ತಾನೆ. ಅದರಂತೆ ಹೋಗಿ ಕೇಳಿದಾಗ ದಕ್ಷಬ್ರಹ್ಮನು ಒಪ್ಪದೆ ಅಹಂಕಾರದಿಂದ ವಿಷ್ಣು ತನ್ನ ರಕ್ಷಣೆಗೆ ಇರುವಾಗ ತನಗೆ ಯಾರ ಅಗತ್ಯವಿಲ್ಲವೆಂದು ಮೂದಲಿಸಿದುದನ್ನು ತಿಳಿಸುತ್ತಾನೆ. ಅಲ್ಲದೆ ಇತರ ದೇವತೆಗಳಿಗೆ ಹವಿಸ್ಸನ್ನು ಕೊಡುತ್ತಾನೆ. ಆಗ ಆತನ ಗುಂಪಿನವರು ಆಕ್ರಮಣ ಮಾಡಲು ಇದೇ ಸರಿಯಾದ ಸಮಯವೆಂದು ಭಾವಿಸಿ ತಮ್ಮ ಪರಿವಾರದ ಸಮೇತ ಯಜ್ಞಶಾಲೆಗೆ ಆಗಮಿಸುತ್ತಾರೆ. ಈ ಸಂದರ್ಭದಲ್ಲಿ ವೀರಭದ್ರನಿಗೂ, ನಾರಾಯಣನ ಅನುಯಾಯಿಗಳಿಗೂ ಬಿರುಸಾದ ವಾಗ್ವಾದ ನಡೆದು ಶಿವಪಾರಮ್ಯ-ವಿಷ್ಣುಪಾರಮ್ಯದ ಮಾತುಗಳು ಹುಟ್ಟುತ್ತವೆ. ವಿಷ್ಣುವು ಯಜ್ಞದ ಸಂರಕ್ಷಣೆಯಲ್ಲಿ ತತ್ಪರನಾಗಿರುತ್ತಾನೆ. ಎರಡೂ ಕಡೆಯವರಲ್ಲಿ ಘೋರವಾದ ಹೋರಾಟ ನಡೆಯುತ್ತದೆ. ವೀರಭದ್ರನ ಕಡೆಯವರದೇ ಮೇಲುಗೈಯಾಗಿ ಅಷ್ಟದಿಕ್ಪಾಲಕರು ಪಲಾಯನಗೈಯ್ಯುತ್ತಾರೆ. ಈಗ ನೇರವಾಗಿ ವೀರಭದ್ರನಿಗೂ, ನಾರಾಯಣನಿಗೂ ಪರಸ್ಪರ ಮೂದಲಿಕೆಯ ಮಾತುಗಳು ನಡೆದ ಮೇಲೆ ಘರ್ಷಣೆಯು ಪ್ರಾರಂಭವಾಗಿ ಒಂದು ಘಟ್ಟದಲ್ಲಿ ನಾರಾಯಣನು ತನ್ನ ಬಲವನ್ನು

ಪ್ರದರ್ಶಿಸುವ ಸಲುವಾಗಿ ವಿಶ್ವರೂಪವನ್ನು ತೋರಿಸುತ್ತಾನೆ. ಆಗ ತಾನು ವಿಷ್ಣುವಿನ ಮಹೇಂದ್ರಜಾಲಕ್ಕಂಜುವವನಲ್ಲವೆಂದೂ, ನಾರಾಯಣನು ತನ್ನ ಜ್ಞಾನದ ಕಣ್ಣನ್ನು ತೆರೆದು ನೋಡಬೇಕೆಂದೂ ವೀರಭದ್ರನು ಎಚ್ಚರಿಸುತ್ತಾನೆ. ಆಗ ಕುಪಿತನಾದ ನಾರಾಯಣನು ತನ್ನ ಚಕ್ರಾಯುಧವನ್ನು ಪ್ರಯೋಗಿಸಿದಾಗ ವೀರಭದ್ರನು ತನ್ನ ಶಕ್ತಿಯಿಂದ ಅದನ್ನು ತಡೆಯುತ್ತಾನೆ. ಅಂತ್ಯದಲ್ಲಿ ವೀರಭದ್ರನಿಗೆ ಜಯ ದೊರೆತು, ನಾರಾಯಣ ಹಾಗೂ ಅಷ್ಟದಿಕ್ಪಾಲಕರ ಸಮೇತ ಎಲ್ಲರನ್ನೂ ಶಿವನ ಹತ್ತಿರಕ್ಕೆ ಸೆಳೆದು ತರುತ್ತಾನೆ. ಲಜ್ಜಿತನಾಗಿದ್ದ ನಾರಾಯಣನನ್ನು ನೋಡಿ, ದಧೀಚಿಯ ಶಾಪದಿಂದ ಅವನು ಹಾಗೆ ವರ್ತಿಸಿದನೆಂದೂ ಶಿವನು ಅವನನ್ನು ಸಾಂತ್ವನಗೊಳಿಸುತ್ತಾನೆ. ನಾರಾಯಣನು ಅಪರಾಧವನ್ನು ಕ್ಷಮಿಸಬೇಕೆಂದು ಬೇಡಿಕೊಂಡಾಗ, ಶಿವನು ಆತನ ಅವ್ಯಭಿಚರಿತ ಭಕ್ತಿಯನ್ನು ಗುರುತಿಸುತ್ತಾ ಆತನು ತನ್ನ ಆದಿಶಕ್ತಿ ಎಂದೂ, ವಾಹನವೆಂದೂ, ಬಾಣವೆಂದೂ ಪ್ರಶಂಸಿಸುತ್ತಾನೆ. ಬ್ರಹ್ಮಾದಿ ದೇವತೆಗಳು ಶಿವನ ಕ್ಷಮಾಗುಣವನ್ನೂ ಔದಾರ್ಯವನ್ನೂ ಹೊಗಳಿ ತಾವು ಧನ್ಯರಾದೆವೆಂದು ತೃಪ್ತಿಪಡುತ್ತಾರೆ.

ಈ ನಾಟಕದಲ್ಲಿ ವೀರಭದ್ರ ಮತ್ತು ನಾರಾಯಣನ ನಡುವೆ ನಡೆದ ಘೋರ ಯುದ್ಧವನ್ನು, ಶಿವನು ಪಾರ್ವತಿಗೆ ವರ್ಣಿಸುವ ರೀತಿಯಲ್ಲಿ ಕವಿಯು ಅಳವಡಿಸಿದ್ದಾನೆ. ದಕ್ಷಬ್ರಹ್ಮನು ತಾನು ಮಾಡುವ ಯಜ್ಞದಲ್ಲಿ ಶಿವನಿಗೆ ಭಾಗವಹಿಸಲು ಅಧಿಕಾರ, ಅರ್ಹತೆ ಇಲ್ಲವೆಂದೂ ಆದ್ದರಿಂದ ಅವನಿಗೆ ಹವಿಸ್ಸಿನ ಪ್ರಥಮ ಭಾಗವನ್ನು ಕೊಡುವ ಅವಶ್ಯಕತೆ ಇಲ್ಲವೆಂದೂ ಅವನ ಸಾಂಪತ್ತಿಕ ಸ್ಥಿತಿಯನ್ನು ನೋಡಿದರೆ ಅದಕ್ಕೆ ತಕ್ಕ ಪಾತ್ರನಲ್ಲವೆಂದೂ ಬಹಳ ಸ್ವಾರಸ್ಯವಾಗಿ ಮೂದಲಿಸುತ್ತಾನೆ.

ಚೇಲಂ ಚರ್ಮಾಸ್ಥಿಜಾಲಂ ಸೃಗಶಿವಶಭಸ್ಮಾವಿಲೇಪಃ ಸ್ಮಶಾನಮ್।
ಸ್ಥಾನಂ ಯಾನಂ ಮಹೋಕ್ಷಃ ಸಹಚರನಿಚಯೋ ಭೂತವೇತಾಲಜಾತಿಃ॥
ಆಕಲ್ಪಾ ಯಸ್ಯ ಸರ್ಪಾ ವಿಷಮತಿಪರುಷಂ ಜೇಮನಂ ತಾಮಸೋಽಪಿ।
ವ್ಯಾಪಾರಸ್ತಸ್ಯ ಕಾಪಾಲಿಕಕುಲತಿಕಸ್ಯಾಧ್ವರೇ ಕೋಽಧಿಕಾರಃ॥

ಈ ರೂಪಕದ ಮುಖ್ಯ ರಸ, ಡಿಮದ ಲಕ್ಷಣಕ್ಕನುಸಾರವಾಗಿದೆ. ಮೊದಲೇ ಕವಿಯು ಹೇಳಿರುವಂತೆ ರೌದ್ರ. ಇದರ ನಾಯಕನಾದ ವೀರಭದ್ರ, ಅವನ ಅನುಯಾಯಿಗಳು ಮತ್ತು ದಕ್ಷಬ್ರಹ್ಮ, ಅವನ ಅನುಯಾಯಿಗಳು, ಇವರಿಬ್ಬರ ನಡುವೆ ನಡೆಯುವ ಕ್ರೋಧೋದ್ದೀಪಿತವಾದ ಮಾತುಗಳು ರೌದ್ರರಸವನ್ನು ಅಭಿವ್ಯಕ್ತಿಸುತ್ತವೆ.

ವೀರಭದ್ರನ ಕಡೆಯ ಭಸಿತಪ್ರಿಯನು ಹೀಗೆನ್ನುತ್ತಾನೆ:

ಯೇನಾಗ್ರಾಹಿ ಪ್ರಮೋದಾತ್ಪಶುಪತಿರಹಿತೇ ಯಜ್ಞಶಾಲಾಂತರಾಲೇ
ಹವ್ಯಂ ದಿವ್ಯರ್ಷಿಮಂತ್ರಾಹುತಮಪಿ ಚ ಯಯಾ ಸ್ವಾದಿತಂ ನಿರ್ವಿಮರ್ಶಮ್।
ಪಾಣೀ ಚಕ್ರಪಾಣೇಸ್ಸಪದಿ ಹುತಭುಜಸ್ತಾಂ ರಸಜ್ಞಾಮಿದಾನೀಂ
ಛಿಂದೇಽಹಂ ದೇವಲೋಕಾ ಯದಿ ಭವತಿ ಭುಜಾ ಗೌರವಂ ವಾರಯಧ್ವಮ್॥

'ಶಿವನಿಲ್ಲದ ಯಜ್ಞಶಾಲೆಯಲ್ಲಿ ದಿವ್ಯರ್ಷಿಪ್ರಣೀತವಾದ ಮಂತ್ರಗಳ ಮೂಲಕ ನೀಡಿದ ಹವಿಸ್ಸನ್ನು ಯಾವನು ಅತ್ಯಂತ ಸಂತೋಷದಿಂದ ಸ್ವೀಕರಿಸಿದನೋ, ಯಾವನು ವಿಮರ್ಶಿಸದೆ ಅದನ್ನು ಆಸ್ವಾದಿಸಿದನೋ, ಅಂತಹ ಚಕ್ರಪಾಣಿಯ ಕೈಗಳನ್ನೂ, ಅಗ್ನಿಯ ನಾಲಿಗೆಯನ್ನೂ ನಾನು ಕತ್ತರಿಸುತ್ತೇನೆ. ದೇವತೆಗಳೇ ನಿಮಗೆ ಬಾಹುಬಲದಲ್ಲಿ ಅಭಿಮಾನವಿದ್ದರೆ ಇದನ್ನು ತಡೆಯಿರಿ.'

ಪೌರಾಣಿಕ ವಸ್ತುವನ್ನಿಟ್ಟುಕೊಂಡು ಕವಿಯು ತನ್ನ ಕಲ್ಪನೆಯನ್ನು ಬೆರೆಸಿ ಕಾವ್ಯಾಂಶಗಳನ್ನು ಅಳವಡಿಸಿ, ವೀರ, ರೌದ್ರ, ರಸಗಳ ಸಮೇತ ಸುಂದರವಾದ ದೃಶ್ಯಕಾವ್ಯವನ್ನು ನೀಡಿದ್ದಾನೆ. ಶಿವಪಾರಮ್ಯವನ್ನು ಎತ್ತಿಹಿಡಿಯುವುದೇ ಶೈವಮತಾವಲಂಬಿಯಾದ ಕವಿಯ ಮೂಲ ಉದ್ದೇಶ.

ಮಲ್ಲಿಕಾರ್ಜುನ

ಮಲ್ಲಿಕಾರ್ಜುನ ಅಥವಾ ಸ್ಫುಲಿಂಗ ಕವಿಯು ವೀರಭದ್ರವಿಜಯವೆಂಬ ಅಪ್ರಕಟಿತ ಚಂಪೂಕಾವ್ಯವನ್ನು ರಚಿಸಿದ್ದಾನೆ. ಭಾರದ್ವಾಜ ಗೋತ್ರದ ದ್ರಾಹ್ಯಾಯಣಸೂತ್ರಕ್ಕೆ ಸೇರಿದ ಈತನು ಸಾವಿತ್ರಿ-ಲಕ್ಷ್ಮಣಭಟ್ಟ ದಂಪತಿಗಳ ಸುಪುತ್ರ. ಡಿಂಡಿಮ ವಂಶಕ್ಕೆ ಸೇರಿದ ಕುಮಾರಡಿಂಡಿಮ ಅಥವಾ ಶೋಣಾದ್ರಿನಾಥನ ಅಳಿಯ. ಈತನು ರಚಿಸಿರುವ ಈ ಚಂಪೂಕಾವ್ಯದಲ್ಲಿ ನಾಲ್ಕು ಅಧ್ಯಾಯಗಳಿವೆ. ಆದರೆ ಮೊದಲನೆಯ ಅಧ್ಯಾಯದಲ್ಲಿ ಮಾತ್ರ ಕೈಲಾಸ ಶಿವಯೋಃ ವರ್ಣನಂ ಎಂಬ ಹೆಸರಿದೆ.

ಕವಿಯು ಪ್ರಾರಂಭದಲ್ಲಿ ಶಿವಪಾರ್ವತಿಯನ್ನು ಸ್ತುತಿಸಿ ಅನಂತರ ವಾಲ್ಮೀಕಿ, ವ್ಯಾಸ, ಕಾಳಿದಾಸ, ಮಾಘ, ಸುಬಂಧು, ಬಾಣಕವಿಗಳನ್ನು ಹಾಗೂ ತನ್ನ ಬಂಧುವಾದ ಕವಿ ಸಭಾಪತಿಯನ್ನು ಗೌರವದಿಂದ ಸ್ಮರಿಸಿದ್ದಾನೆ.[೧]

ಕವಿಯು ವಸಂತಋತು, ಸೂರ್ಯೋದಯ, ಸೂರ್ಯಾಸ್ತ, ಚಂದ್ರೋದಯ, ರಾತ್ರಿ, ಪ್ರೇಮಕ್ರೀಡೆ ಮುಂತಾದವುಗಳನ್ನು ಕಾವ್ಯದಲ್ಲಿ ಸೌಂದರ್ಯ ದೃಷ್ಟಿಯಿಂದ ಚಿತ್ರಿಸಿದ್ದಾನೆ. ಈ ಕಥಾನಕದಲ್ಲಿ ಕವಿಯು ಹೇಗೆ ಗದ್ಯ ಮತ್ತು ಪದ್ಯವನ್ನು ಸಮರ್ಥವಾಗಿ ವರ್ಣನೆಗೆ ಬಳಸಿಕೊಳ್ಳಬಹುದು ಎಂಬುದನ್ನು ಪ್ರದರ್ಶಿಸಿದ್ದಾನೆ. ಈತನ ವರ್ಣನಾಸಾಮರ್ಥ್ಯಕ್ಕೆ ಇಲ್ಲಿ ಒಂದೆರಡು ನಿದರ್ಶನಗಳನ್ನು ನೀಡಿದೆ:

ಪ್ರಕೀರ್ಣಭಸ್ಮಾಧಿಕಪಾಂಡುರಾಣಿ
ಪರ್ಯಂತದಿವ್ಯ ಪ್ರಸರಾಂತರಾಣಿ।
ಶೃಂಗಾರಗರ್ಭಚ್ಛವಯೋರ್ವಿಹಾರಾನ್
ಶಂಸಂತಿ ಯತ್ ಸಾನುಶಿಲಾತಲಾನಿ।।[೨]

ಭಸಿತದ ಪುಡಿಯು ಅಲ್ಲಲ್ಲಿ ಚೆಲ್ಲಿ ಬಿಳುಪಾಗಿರುವ ಮತ್ತು ಸುತ್ತಲೂ ಪರಿಮಳವು ಹರಡಿರುವ ಆ ಹಿಮವತ್ಪರ್ವತದ ತಪ್ಪಲಿನ ಶಿಲಾಭಾಗಗಳು ಶಿವ-ಪಾರ್ವತಿಯರು ಅಲ್ಲಿ ವಿಹರಿಸಿದರು ಎಂಬುದನ್ನು ಹೇಳುತ್ತಿವೆ.

ವಸಂತಮಾಸದ ರಮಣೀಯವಾದ ವರ್ಣನೆ:

ಆವಾಸಿತಂ ಕುಸುಮಸೌರಭವೀಚಿಕಾಭಿ
ರಾಲಾಪಕೋರಕಿತಮಂದಭೃತಾಂಗನಾನಾಮ್
ಶೃಂಗಾರಮಂಡಪಮಿವ ತ್ರಿಜಗಜ್ಜಿಗೀಷೋ-
ಶ್ಚೇತೋಭುವಃ ಕಿಮಪಿ ಚೈತ್ರ ರಥಶ್ಚಕಾಶೇ।।[೩]

ಕುಸುಮಗಳ ಸೌರಭದ ಅಲೆಗಳಿಂದ ಸುಗಂಧಿತವಾಗಿದ್ದು, ಕೋಗಿಲೆಗಳ ಇಂಚರದಿಂದ ಮೊಗ್ಗು ಕಚ್ಚಿರುವ, ಮೂರು ಲೋಕವನ್ನೂ ಜಯಿಸಬಯಸುವ, ಮನ್ಮಥನ ಶೃಂಗಾರಮಂಟಪದಂತಿರುವ ಯಾವುದೋ ಒಂದು ಚೈತ್ರರಥದಂತೆ ವಸಂತಮಾಸವು ಶೋಭಿಸಿತು.

ಈತನು ಪ್ರಯೋಗಿಸಿರುವ ಅಲಂಕಾರದ ಕೆಲವು ಉದಾಹರಣೆಗಳು:

ಉತ್ಪ್ರೇಕ್ಷಾ

ಕರಂಬಿತಾ ಯನ್ಮಣಿತುಂಗಶೃಂಗೇ ಕಾದಂಬಿನೀ ಭಾತಿ ಸುರಾಂಗನಾಭಿಃ।
ದೇವಸ್ಯ ಸಾಕ್ಷಾದ್ವರಚಂದ್ರಮೌಲೇ ಪ್ರವರ್ತಿತಾ ಧೂಪಪರಂಪರೇವ।।[೪]

ಕೈಲಾಸದಲ್ಲಿದ್ದ ಮಣಿಮಯವಾದ ಅತಿ ಎತ್ತರವಾದ ಮನೆಗಳ ತುದಿಯಲ್ಲಿ ಅಂಟಿಕೊಂಡಿದ್ದ ಮೋಡವು, ಮಹಾಪ್ರಭುವಾದ ಚಂದ್ರಮೌಳಿಯನ್ನು ಪೂಜಿಸಲು, ಸುರಾಂಗನೆಯರು ಉಪಯೋಗಿಸಿದ ಧೂಪದ ಪರಂಪರೆಯೋ ಎಂಬಂತೆ ಕಾಣುತ್ತಿತ್ತು.

ಪ್ರತೀಕ್ಷ್ಯದಿಕ್ಷು ಪ್ರಸೃತಾನ್ಮದೀಯಾನ್ ಪ್ರಕಾಶರಾಶೀನ್ ಬಹುಲೇಽಪಿಪಕ್ಷೇ।
ಚಂದ್ರಾತಪಭ್ರಾಂತಜುಷಾಶ್ಚಕೋರಾಶ್ಚಂಚೂಪುಟೈಶ್ಚರ್ವಿತುಮಾರಭಂತೇ॥[೧೦]

ಈ ಊರಿನ ಎತ್ತರದಲ್ಲಿ ಗೃಹದಲ್ಲಿದ್ದ ರತ್ನಗಳಿಂದ, ಎಲ್ಲ ದಿಕ್ಕುಗಳಿಗೂ ಹೊರಹೊಮ್ಮಿದ ಬೆಳಕನ್ನು ಕಂಡು, ಚಕೋರ ಪಕ್ಷಿಗಳು ಅದು ಚಂದ್ರನ ಬೆಳುದಿಂಗಳೋ ಎಂಬ ಭ್ರಾಂತಿಯಿಂದ ತಮ್ಮ ಕೊಕ್ಕುಗಳಿಂದ ಜಗಿಯಲು ಪ್ರಾರಂಭಿಸುತ್ತಿವೆ.

ಚಕೋರಪಕ್ಷಿಯು ಚಂದ್ರನ ಬೆಳದಿಂಗಳನ್ನು ಮಾತ್ರ ಆಹಾರವಾಗಿ ಸೇವಿಸುತ್ತದೆ ಎಂಬುದು ಒಂದು ಕವಿಸಮಯ. ಈ ಕಾವ್ಯದ ಪ್ರಧಾನ ರಸ ರೌದ್ರ.

ಕುಂಡಲೀಕೃತ್ಯ ಕೋದಂಡದಂಡಂ ಕರೇ ಚಂಡಮಾಕಲ್ಪಯಂತಂ ನದಂತಂ ಮುಹುಃ।
ವೀರಭದ್ರಂ ಸಮೀಕ್ಷ್ಯಾತಿರೌದ್ರಂ ಭಯಾದದ್ರವದ್ರಂಕುರೂಪೋರಯಾಧ್ವರಃ॥[೧೧]

ಕೈಯಲ್ಲಿ ಹಿಡಿದ ಬಿಲ್ಲನ್ನು ಜೋರಾಗಿ ಎಳೆದು, ಶಬ್ದ ಮಾಡುತ್ತಿರುವ ಅತಿಭಯಂಕರವಾದ ವೀರಭದ್ರನನ್ನು ನೋಡಿ, ಭಯದಿಂದ ಜಿಂಕೆಯ ರೂಪವನ್ನು ತಾಳಿ ಯಜ್ಞವು ಓಡಿಹೋಯಿತು.

ರಾಜನಾಥ ಡಿಂಡಿಮನ ಕೈಯಲ್ಲಿ ನಾಟಕ ರೂಪದಲ್ಲಿ ಒಡಮೂಡಿರುವ ವೀರಭದ್ರನ ಕಥೆಯು ಹೆಚ್ಚೂಕಡಿಮೆ ಮಲ್ಲಿಕಾರ್ಜುನನ ಚಂಪೂಕಾವ್ಯಪ್ರಕಾರದಲ್ಲಿ ಅದೇ ರೀತಿ ನಿರೂಪಿತವಾಗಿದೆ. ಆದರೆ ರಾಜನಾಥ ಡಿಂಡಿಮನ ನಾಟಕದಲ್ಲಿ ನಿರೂಪಿತವಾಗಿರುವ ಕಥೆಗಿಂತ ಈ ಕಾವ್ಯದ ಕೆಲವು ವಿಷಯಗಳಲ್ಲಿ ವ್ಯತ್ಯಾಸವಿರುವುದನ್ನು ಗಮನಿಸಬಹುದು. ಅವುಗಳಲ್ಲಿ ಕೆಲವು ಇಂತಿವೆ. ಕೃತಿಯ ಆರಂಭದಲ್ಲಿ ಕೈಲಾಸದ ವರ್ಣನೆ: ದಕ್ಷಬ್ರಹ್ಮನಿಗೆ ಅಪಮಾನವಾಗುವ ಘಟನೆಯ ನಿರೂಪಣೆಯಲ್ಲಿ ವ್ಯತ್ಯಾಸವಿದೆ. ರಾಜನಾಥ ಕವಿಯ ಕೃತಿಯಲ್ಲಿ ಮಗಳನ್ನು ಪ್ರೀತಿಯಿಂದ ನೋಡಲು ಹೋದಾಗ ತನಗೆ ಸರಿಯಾದ ಗೌರವ ತೋರಿಸಲಿಲ್ಲವೆಂದು ದಕ್ಷಬ್ರಹ್ಮನು ನೆರವೇರಿಸಿದ ಯಜ್ಞದಲ್ಲಿ ಹವಿಸ್ಸಿನ ಪ್ರಥಮ ಪಾಲನ್ನು ಶಿವನಿಗೆ ಅರ್ಪಿಸದಿರುವುದನ್ನು ಕಂಡ ದಧೀಚಿಯು ಪ್ರತಿಭಟಿಸುತ್ತಾನೆ. ಈ ಪ್ರಸಂಗ ಅಲ್ಲಿ ಬಂದಿಲ್ಲ. ಇಲ್ಲಿ ವೀರಭದ್ರ ಮತ್ತು ನಾರಾಯಣನೊಡನೆ ಯುದ್ಧ ನಡೆಯುತ್ತಿದ್ದ ಸಂದರ್ಭದಲ್ಲಿ ವಿಷ್ಣುವು ತನ್ನ ಚಕ್ರಾಯುಧವನ್ನು ಪ್ರಯೋಗಿಸಿದಾಗ ವೀರಭದ್ರನ ಸಹಾಯಕ್ಕೆ ಶಿವನು ರಥವನ್ನು ಒದಗಿಸುತ್ತಾನೆ. ಈ ಅಂಶ ಅಲ್ಲಿ ಮರೆಯಾಗಿದೆ. ಶಿವನು ಪಾರ್ವತಿಗೆ ವೀರಭದ್ರ-ನಾರಾಯಣರ ನಡುವಣ ಹೋರಾಟವನ್ನು ಅಲ್ಲಿ ವರ್ಣಿಸುತ್ತಾನೆ. ಆದರೆ ಈ ಕಾವ್ಯದಲ್ಲಿ ಈ ಸಂವಿಧಾನವಿಲ್ಲ.

ಇಬ್ಬರು ಕವಿಗಳೂ ಒಂದೇ ಕಥಾವಸ್ತುವನ್ನು ಆರಿಸಿಕೊಂಡಿದ್ದರೂ ರಾಜನಾಥನು ರೂಪಕದ ತಂತ್ರವನ್ನು ಬಳಸಿಕೊಂಡಿರುವುದರಿಂದಾಗಿ ಅವನಿಗೆ ಕೆಲವು ಇತಿಮಿತಿಗಳಿವೆ. ಆದರೆ ಮಲ್ಲಿಕಾರ್ಜುನನು ಕಾವ್ಯಮಾಧ್ಯಮವನ್ನು ಬಳಸಿಕೊಂಡಿದ್ದರಿಂದ ಹೆಚ್ಚಿನ ಸ್ವಾತಂತ್ರ್ಯ ದೊರಕಿ, ವರ್ಣನೆ, ಅಲಂಕಾರ ಮತ್ತು ವಿವಿಧ ರಸಗಳ ಪೋಷಣೆ ಮಾಡುವುದಕ್ಕೆ ಸಹಾಯಕವಾಗಿದೆ.

ಏಕಾಮ್ರದೀಕ್ಷಿತ

ಇಂದಿನ ಬೆಂಗಳೂರನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಅದರ ಸುತ್ತಮುತ್ತಣ ಕೆಲವು ಪ್ರದೇಶಗಳನ್ನು ಆಳಿದ ಯಲಹಂಕ ವಂಶದ ಅರಸರಲ್ಲೊಬ್ಬನಾದ ಮುಮ್ಮಡಿ ಕೆಂಪವೀರಪ್ಪಗೌಡನ (ಕ್ರಿ.ಶ. ಸು. ೧೭೦೫-೧೭೨೮) ಆಶ್ರಯದಲ್ಲಿದ್ದ

ಏಕಾಮ್ರದೀಕ್ಷಿತ ಕವಿಯು ವೀರಭದ್ರವಿಜಯವೆಂಬ ಚಂಪೂಕಾವ್ಯವನ್ನು ರಚಿಸಿದ್ದಾನೆ. ಇದು ಅಪ್ರಕಟಿತ ಕೃತಿ[೧೨] (ಈ ಕೃತಿಯು ಸದ್ಯದಲ್ಲಿಯೇ ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚ್ಯವಿದ್ಯಾ ಸಂಶೋಧನಾಲಯದಿಂದ ಪ್ರಕಟವಾಗಲಿದೆ).

ಈತನು ಕೃತಿಯ ಪ್ರಾರಂಭದ ಪೀಠಿಕಾ ಪದ್ಯಗಳಲ್ಲಿ ತನ್ನ ವಂಶದ ಬಗೆಗೆ ಮಾಹಿತಿಯನ್ನು ನೀಡಿದ್ದಾನೆ. ಇವನು ರಾಮಲಿಂಗಾಧ್ವರಿಕುಲತಿಲಕನಾದ ಸರ್ವತಂತ್ರಸ್ವತಂತ್ರನಾದ ಮುಕ್ತೀಶ್ವರ ದೀಕ್ಷಿತನ ಮಗ.[೧೩] ಕಾರುಣ್ಯಶೀಲನಾದ ತನ್ನ ಗುರು 'ಚಿದ್ರೂಪ ಭಾರತಿ'ಯನ್ನು ಭಕ್ತಿಯಿಂದ ಸಂಸ್ಮರಿಸಿದ್ದಾನೆ.[೧೪] ಬೆಂಗಳೂರು ಜಿಲ್ಲೆ, ಮಾಗಡಿ ತಾಲ್ಲೂಕು ಸಾವನದುರ್ಗದಲ್ಲಿರುವ ವೀರಭದ್ರ ದೇವಸ್ಥಾನದ ರಥೋತ್ಸವದ ವರ್ಣನೆಯೇ ಈ ಚಂಪೂಕಾವ್ಯದ ಪ್ರಮುಖ ವಿಷಯ. ಇದರಲ್ಲಿ ಒಟ್ಟು ಐದು ಉಲ್ಲಾಸಗಳಿವೆ. ಕೃತಿಯ ವಿಷಯವನ್ನು ಕೆಳಕಂಡಂತೆ ಸಂಕ್ಷೇಪಿಸಬಹುದು: ಮೊದಲನೆಯ ಉಲ್ಲಾಸದಲ್ಲಿ ಉಪೋದ್ಘಾತ ರೂಪದಲ್ಲಿರುವ ಹನ್ನೊಂದು ಪದ್ಯಗಳಲ್ಲಿ ವ್ಯಾಸಾದಿ ಕವಿಗಳು ಹಾಗೂ ಸ್ವಗುರುವಿಗೆ ನಮಿಸಿದ್ದಾನೆ. ಹನ್ನೆರಡನೆಯ ಪದ್ಯದಿಂದ ಜಂಬೂದ್ವೀಪ, ಮೇರು, ಹಿಮವತ್ಪರ್ವತ ಕರ್ಮಭೂಮಿ (ಆರ್ಯಾವರ್ತ) ಕರ್ಣಾಟದೇಶ, ಅರ್ಕಾವತೀ ನದಿ, ಸಾವನ ದುರ್ಗ, ಅಲ್ಲಿನ ಪಟ್ಟಣದಲ್ಲಿರುವ ವೀರಭದ್ರದೇವ, ಭದ್ರಕಾಳಿಯ ವರ್ಣನೆ ನಿರೂಪಿತವಾಗಿವೆ. ಎರಡನೆಯ ಉಲ್ಲಾಸದಲ್ಲಿ ವೀರಭದ್ರ ದೇವರ ಉಗಮವನ್ನು ಹೇಳುವುದಕ್ಕೆ ಪೀಠಿಕೆಯಾಗಿ ಮಂದರಾದ್ರಿಯಲ್ಲಿ ನಡೆಯುವ ಶಿವನ ಸಭೆಯು ವರ್ಣಿತವಾಗಿದೆ. ಶಿವಸಭೆಗೆ ದಕ್ಷಬ್ರಹ್ಮನ ಆಗಮನ, ಆತನು ತನ್ನನ್ನು ಪುರಸ್ಕರಿಸಲಿಲ್ಲವೆಂದು ಭಾವಿಸಿ ಶಿವನಿಗೆ ಅಪಮಾನ ಮಾಡುವ ಸಲುವಾಗಿ ಯಜ್ಞವನ್ನು ಪ್ರಾರಂಭಿಸುವುದು, ಶಿವನಿಗೆ ಆಹ್ವಾನ ನೀಡದಿರುವುದು, ಪಾರ್ವತಿಯು ತಂದೆಯ ಮನೆಗೆ ಬಂದಾಗ ಪತಿನಿಂದನೆಯನ್ನು ಕೇಳಿ ಯಜ್ಞಕುಂಡದಲ್ಲಿ ಬೀಳುವುದು, ಇದನ್ನರಿತು ಕುಪಿತನಾದ ಶಿವನು ಜಟೆಯಿಂದ ವೀರಭದ್ರನನ್ನು ಸೃಷ್ಟಿಸುವುದು, ಅವನಿಂದ ಯಜ್ಞಧ್ವಂಸ ಈ ವಿಷಯವು ಮೂರನೆಯ ಉಲ್ಲಾಸದಲ್ಲಿ ನಿರೂಪಿತವಾಗಿದೆ. ನಾಲ್ಕನೆಯ ಉಲ್ಲಾಸದಲ್ಲಿ ಸಾವನ ದುರ್ಗದಲ್ಲಿ ನಡೆಯುವ ವೀರಭದ್ರ ರಥೋತ್ಸವದಲ್ಲಿ ಪಾಲ್ಗೊಳ್ಳಲು, ಯಲಹಂಕ ಪ್ರಭುವಾದ ವೀರಭೂಪಾಲನ ಆಗಮನವನ್ನೂ, ಈ ಸಂದರ್ಭವನ್ನುಪಯೋಗಿಸಿಕೊಂಡು ಆತನ ವಂಶಚರಿತ್ರೆಯನ್ನೂ ಕವಿಯು ವರ್ಣಿಸಿದ್ದಾನೆ. ಈ ಉಲ್ಲಾಸದಲ್ಲಿ ಇಮ್ಮಡಿ ಕೆಂಪನು ಅನೇಕ ಬಾರಿ ಶಿವಾಜಿಯ ಮಗನಾದ ಶಹಜಿಯನ್ನು ಸೋಲಿಸಿ ಅವನ ಬಿರುದನ್ನು ಕಿತ್ತುಕೊಂಡದ್ದನ್ನೂ, ಅಂತೆಯೇ ಮೈಸೂರಿನ ನರಸರಾಜನ ಸೈನ್ಯವನ್ನು ಪಲಾಯನಗೊಳಿಸಿದ ಯಲಹಂಕ ವಂಶದ ಅರಸರ ಸಾಹಸ, ವೀರತನಗಳನ್ನು ದಾಖಲಿಸಿದ್ದಾನೆ. ಐದನೆಯ ಉಲ್ಲಾಸದಲ್ಲಿ ವೀರಭೂಪಾಲನಿಂದ ವೀರಭದ್ರ ದರ್ಶನ, ದೇವರ ಸ್ತೋತ್ರ, ಪೂಜಾದಿಗಳು, ನಾನಾವಾಹನಗಳು, ರಥೋತ್ಸವ ಇವುಗಳ ವರ್ಣನೆ ನಿರೂಪಿತವಾಗಿದೆ.

ಕವಿಗೆ ಕರ್ಣಾಟಕ ದೇಶದ ಬಗೆಗೆ ಅತೀವ ಹೆಮ್ಮೆ. ಕಾವ್ಯದ ಪ್ರಾರಂಭದಲ್ಲಿ ವಿನಯದ ಉಗಮಸ್ಥಳ, ವಿವೇಕದ ಗಣಿ, ರಸಿಕತೆಯ ಕನ್ನಡಿ, ವೇದಶಾಸ್ತ್ರಗಳ ಅಂಗಡಿ, ವೈದಿಕ ಕರ್ಮಗಳ ತವರುಮನೆ, ದಾಕ್ಷಿಣ್ಯವೆಂಬ ತರುವಿನ ಪಾತಿ ಎಂದು ವರ್ಣಿಸುತ್ತಾನೆ.

ತತ್ರ ಚ ವಿಚಿತ್ರಾಣಾಮಾವಾಸೋ, ವಿನಯಸ್ಯ ಜನ್ಮಭೂಮಿರ್ವಿವೇಕಸ್ಯಾಕರೋ, ವೈದಗ್ಧ್ಯಸ್ಯಾದರ್ಶೋ, ವೇದಶಾಸ್ತ್ರಾಣಾಮಾಪಣೋ, ವೈದಿಕಕರ್ಮಣಾಮಾಯತನಂ, ದಾಕ್ಷಿಣ್ಯದ್ರುಮಸ್ಯಾಲವಾಲಂ, ದಯಾನಿತಂಬಿನ್ಯಾ ವಿಲಾಸ ಪ್ರಸಾದಃ ಕಾಮಿತಾರ್ಥಾನಾಂ ಕೋಶಃ ಕರ್ಣಾಟಕೋ ದೇಶಃ।[೧೫]

ಅಲ್ಲಿ ಹರಿಯುತ್ತಿರುವ ಅರ್ಕಾವತೀ ನದಿಯಲ್ಲಿ ಸುಂದರವಾದ ಅಂಗನೆಯ ಅಂಗಗಳ ಸಾದೃಶ್ಯವನ್ನು ಸಾವಯವರೂಪಕಾಲಂಕಾರದ ಮೂಲಕ ಕವಿಯು ಹೀಗೆ ಬಣ್ಣಿಸುತ್ತಾನೆ:

ಭಂಗಪಾಂಗಾ ಪುಲಿನಜಘನಾ ಪೀನಕೋಕಸ್ತನಾಢ್ಯಾ
ಹಲ್ಲದ್ವೀಚೀಮೃದುಭುಜಲತಾ ವರ್ತುಲಾವರ್ತನಾಭಿ।
ಅಂಭೋಜಾಸ್ಯಾ ಶಫರನಯನಾ ಹಂಸಯಾನಾಭಿರಾಮಾ
ಪ್ರಾಂತೇ ಯಸ್ಯ ಪ್ರವಹತಿ ನದೀ ಭಾಷಿತಾರ್ಕಾವತೀತಿ॥[೧೬]

ಅರ್ಥಾಂತರನ್ಯಾಸ

ಅಂತಶ್ಚರಾ ಮಧುಲಿಹಂತ್ಯಲಯೋऽಬ್ಜಷಂಡೇ
ಬಾಹ್ಯಾಶ್ರಯಃ ಕವಳಯಂತಿ ಬಿಸಾನಿ ಹಂಸಾಃ।
ಭೋಗಃ ಫಲಸ್ಯ ಮಲಿನೇಷ್ವಪಿ ನಿರ್ಮಲೇಷು
ಲಕ್ಷ್ಮೀವತಾಂ ಪರಿಚಯಾನುಗುಣೋ ಹಿ ದೃಷ್ಟಃ॥[೧೭]

ಆ ಅರ್ಕಾವತೀ ನದಿಯ ಕಮಲಗಳಲ್ಲಿದ್ದ ಮಕರಂದವನ್ನು ದುಂಬಿಗಳು ಹೀರುತ್ತಿದ್ದವು. ಹಂಸಗಳು ಕಮಲಗಳ ಹೊರಗಿನ ಗೆಡ್ಡೆಯನ್ನು ತಿನ್ನುತ್ತಿದ್ದವು. ಒಳ್ಳೆಯವರಾಗಿರಲಿ ಅಥವಾ ಕೆಟ್ಟವರಾಗಿರಲಿ, ಸಿರಿವಂತರ ಪರಿಚಯಕ್ಕೆ ತಕ್ಕಂತೆ ಫಲಾನುಭವವು ಆಗುತ್ತದೆ.

ಸಾರಾಲಂಕಾರ

ಕ್ಲೇಶಾಶ್ರಯಾ ಸಂಸೃತಿರೇವ ಕಷ್ಟಾ ಕನ್ಯಾಪಿತೃತ್ವಂ ಖಲು ತತ್ರ ಕಷ್ಟಮ್।
ತತ್ರಾಪಿ ದುಷ್ಟೋದುಹಿತುಃ ಪತಿಶ್ಚೇನ್ನ ವಿಕ್ರಿಯೇತಾದ್ಯ ಮನಃ ಕಥಂ ಮೇ॥[೧೮]

ದಕ್ಷಬ್ರಹ್ಮನು ತನಗಾದ ಅವಮಾನವನ್ನು ಮಡದಿಯೊಡನೆ ತೋಡಿಕೊಳ್ಳುತ್ತಾನೆ. ಹೀಗೆ ಸಂಸಾರವೇ ಕ್ಲೇಶಗಳ ತವರುಮನೆ, ಅದರಲ್ಲೂ ಕನ್ಯೆಯ ತಂದೆಯಾಗುವುದು ಕಷ್ಟ. ಅದರಲ್ಲೂ ಅಳಿಯ ದುಷ್ಟನಾಗಿದ್ದರೆ ತಂದೆಯ ಮನಸ್ಸು ಹೇಗೆ ನೆಮ್ಮದಿಯಿಂದಿದ್ದೀತು?

ಯಲಹಂಕದ ಅರಸನಾದ ವೀರಭೂಪಾಲನನ್ನು ವಿರೋಧಾಭಾಸಾಲಂಕಾರದ ಮೂಲಕ ಹೀಗೆ ವರ್ಣಿಸಿದ್ದಾನೆ:

ಯಶ್ಚ ಪುಂಡರೀಕಾಕ್ಷೋऽಪಿ ನ ಜನಾರ್ದನಃ, ಚತುರಾನನೋಽಪಿ ನ ಪಂಕಜಾತಪ್ರಭವಃ,
ಸ್ನಿಗ್ಧತೇಜಾ ಅಪಿ ನ ಕುವಲಯಾಹಿತಃ, ಕಲಾನಿಧಿರಪಿ ನ ಪಂಕಜಾತಪ್ರಭವಃ,
ವಿಷಮಾಯುಧೋऽಪಿ ನ ಸುಮನಃ ಪ್ರಹರಣಃ, ಜಿಷ್ಣುರಪಿ ನ ಗೋತ್ರಭೇದೀ,
ಶುಚಿರಪಿ ನ ದೇವಸ್ವಹರ್ತಾ, ಧರ್ಮರಾಜೋऽಪಿ ನ ಕಾಲಸಮಾಖ್ಯಃ,
ಕರ್ಮರಾಭಿಖ್ಯೋऽಪಿ ನ ಸನ್ನಿಕರ್ಷೋದಯಃ, ಪ್ರಚೇತಾ ಅಪಿ ನ ಜಲಾಧಿಪಃ,
ಸದಾಗತಿರಪಿ ನಾನಿಲಃ, ಧನದೋऽ ಪಿ ನ ಕುಬೇರಃ,
ರಾಜಶೇಖರೋऽಪಿ ನ ಕ್ರತುಧ್ವಂಸೀ ವಿಚಿತ್ರಚಾರಿತ್ರಃ[೧೯]

ಪುಂಡರೀಕಾಕ್ಷನಾದವನು, ಜನಾರ್ಧನನಾಗಿರಲೇ ಬೇಕು. ಏಕೆಂದರೆ ಅವನು ಕಮಲದಂತೆ ಕಣ್ಣುಳ್ಳವನು ಎಂಬುದು ಪ್ರಸಿದ್ಧ, ಅಲ್ಲದೆ ಅವೆರಡೂ ಪರ್ಯಾಯ ಪದಗಳು. ಆದರೆ ಜನಾರ್ಧನನಲ್ಲ ಎಂದಾಗ ವಿರೋಧ ಉಂಟಾಗುತ್ತದೆ. ಜನಾರ್ದನ ಎಂದರೆ, ಜನಾನ್+ಆರ್ದಯತಿ=ಪೀಡಯತಿ ಎಂದು ಬಿಡಿಸುವುದರಿಂದ, ಆ ರಾಜನು ಸುಂದರವಾದ ಕಣ್ಣುಳ್ಳವನಾಗಿದ್ದು ಜನಗಳನ್ನು ಪೀಡಿಸುತ್ತಿರಲಿಲ್ಲ ಎಂದಾಗ ವಿರೋಧಿ ಪರಿಹಾರವಾಗುತ್ತದೆ. ಇದೇ ರೀತಿ ಎಲ್ಲಾ ವಾಕ್ಯಖಂಡಗಳಿಗೂ ಅರ್ಥೈಸಬಹುದು.

ಏಕಾಮ್ರದೀಕ್ಷಿತನಿಗೆ ನ್ಯಾಯಶಾಸ್ತ್ರದಲ್ಲಿ ಉತ್ತಮ ಪಾಂಡಿತ್ಯವಿತ್ತು ಎಂಬುದನ್ನು ಮುಂದಿನ ಪದ್ಯದಿಂದ ಮನಗಾಣಬಹುದು. ಇಲ್ಲಿ ತರ್ಕಶಾಸ್ತ್ರದ ಪಾರಿಭಾಷಿಕ ಪದಗಳನ್ನು ಬಳಸಿಕೊಂಡು ಒಬ್ಬ ಸ್ತ್ರೀಯ ಬಡನಡುವನ್ನು ಹೀಗೆ ಚಿತ್ರಿಸುತ್ತಾನೆ:

ನಿರಾಶ್ರಯೋ ನೈವ ಗುಣೋ ಗುಣತ್ವಾತ್ ಅಧಿಶ್ರಿತಾ ಕಾಂಚದಿಯಂ ಚ ಕಾಂಚಮ್।
ಸ ಚಾಯಮುಸ್ಯಾಃ ಪರಿಶೇಷಸಿದ್ಧೇರ್ಮಧ್ಯೇ ವಿಪಕ್ಷೇ ಖಲು ಹೇತುಲೋಪಃ॥[೨೦]

ನೈಯಾಯಿಕರ ದೃಷ್ಟಿಯಲ್ಲಿ ಗುಣವು ಆಶ್ರಯವಿಲ್ಲದೆ ಇರಲಾರದು. ಗುಣವಾಗಿರುವುದರಿಂದ ವಸ್ತುವನ್ನಾಶ್ರಯಿಸಿಯೇ ಇರಬೇಕು. ಈ ಒಡ್ಯಾಣವು ಯಾರೋ ಒಬ್ಬಳನ್ನು ಆಶ್ರಯಿಸಿಯೇ ಇದೆ. ಪರಿಶೇಷಾನುಮಾನದಿಂದ ಇವಳಿಗೆ ನಡು (ಇದೆ ಎಂಬುದು) ಸಿದ್ಧವಾಯಿತು. ಇದಕ್ಕೆ ವಿರುದ್ಧವಾಗುವುದಾದರೆ ಹೇತುವೂ ಹೋಗಬೇಕಾಗುತ್ತದೆ (ವಿಪಕ್ಷವಿಲ್ಲದೆ ಹೇತು ಇರುವಂತಿಲ್ಲ).

ಕವಿಯು ಕೆಲವೆಡೆ ಇಮ್ಮಡಿ, ಮುಮ್ಮಡಿ, ಹಿರಿಯ ಮುಂತಾದ ಕನ್ನಡ ಪದಗಳನ್ನು ಸಂಸ್ಕೃತ ಪದ್ಯದಲ್ಲಿ ಸೇರಿಸಿದ್ದಾನೆ.[೨೧] ಯಲಹಂಕ ವಂಶದ ಅರಸರ ಇತಿಹಾಸವನ್ನು ಹಾಗೂ ಸಮಕಾಲೀನ ಮರಾಠರ, ಮೈಸೂರು ಅರಸರುಗಳ ವಿಷಯವನ್ನು ತಿಳಿಸುವ ಈ ಕೃತಿಗೆ ಚಾರಿತ್ರಿಕ ಮಹತ್ವವಿದೆ.

ಕರ್ನಾಟಕದ ೧೭ನೇ ಶತಮಾನದ ಸುಪ್ರಸಿದ್ಧ ಮಹಾಕವಿ ಷಡಕ್ಷರ ದೇವನು ಸಂಸ್ಕೃತ, ಕನ್ನಡ ಉಭಯ ಭಾಷೆಗಳಲ್ಲಿ ಮಹಾಕಾವ್ಯಗಳನ್ನು ರಚಿಸಿರುವುದು ಸುವಿದಿತ. ಇವನೂ ಸಹ **ವೀರಭದ್ರೋದಾಹರಣ ಗದ್ಯ** ಎಂಬ ವಿಶಿಷ್ಟ ಪ್ರಕಾರವಾದ ಸ್ತೋತ್ರವನ್ನು ರಚಿಸಿದ್ದಾನೆ. ಇದಕ್ಕೆ ಗದ್ಯವೆಂಬ ಹೆಸರಿದ್ದರೂ ಇದು ಪದ್ಯ ಸ್ವರೂಪವೆ. ಈ ವಿಶಿಷ್ಟ ಮಾರ್ಗವನ್ನು ಪ್ರಪ್ರಥಮವಾಗಿ ರೂಪಿಸಿದವನು ಆಂಧ್ರಪ್ರದೇಶದ ಪಾಲ್ಕುರಿಕೆ ಸೋಮನಾಥ (ಕ್ರಿ.ಶ. ಸು. ೧೨೯೦). ಈ ಮಾದರಿಯ ಕೃತಿ 'ಬಸವೋದಾಹರಣ ಗದ್ಯ'. ಇದರ ವೈಶಿಷ್ಟವೇನೆಂದರೆ ಪ್ರಥಮ ವಿಭಕ್ತಿ ಮೊದಲುಗೊಂಡ ಸಪ್ತಮಿ ವಿಭಕ್ತಿಗಳು, ಸಂಬೋಧನೆ, ಪ್ರಥಮ ಮತ್ತು ಕಡೆಯ ಪದ್ಯದಲ್ಲಿ ಎಲ್ಲಾ ವಿಭಕ್ತಿ (ಸಾರ್ವವಿಭಕ್ತಿಕ) ಪದಗಳು ಕ್ರಮವಾಗಿ ಬರುತ್ತವೆ. ಷಡಕ್ಷರಿದೇವನ ಈ ಸೂತ್ರದಲ್ಲಿರುವ ಒಟ್ಟು ೨೬ ಪದ್ಯಗಳಲ್ಲಿ ಮಾಲಿನಿ, ತಾಮರಸ, ಕುಸುಮವಿಚಿತ್ರಾ, ದ್ರುತವಿಲಂಬಿತ, ಸ್ರಗ್ಧರಾ, ಶಾರ್ದೂಲವಿಕ್ರೀಡಿತ ಮೊದಲಾದ ವೃತ್ತಗಳನ್ನು ಪ್ರಯೋಗಿಸಿದ್ದಾನೆ. ಅವನ ಸ್ತೋತ್ರ ಕೃತಿಗಳಲ್ಲಿ ಈ ಕೃತಿಯು ಅಧಿಕ ಸಂಖ್ಯೆಯ ವೃತ್ತಿಗಳನ್ನು ಒಳಗೊಂಡಿದೆ.

'ವೀರಭದ್ರೋದಾಹರಣ ಗದ್ಯ'ದಲ್ಲಿ ವೀರಭದ್ರನ ಜನನ, ದಕ್ಷಯಜ್ಞ ಧ್ವಂಸ ಮೊದಲಾದ ಪರಶಿವನ ಪಾರಮ್ಯವನ್ನು ಷಡಕ್ಷರಿದೇವನು ಬಣ್ಣಿಸಿದ್ದಾನೆ. ವೀರಭದ್ರನ ರೌದ್ರರೂಪವನ್ನು ಪ್ರದರ್ಶಿಸುವ ಪದ್ಯವೊಂದು ಹೀಗಿದೆ:

ಶುಂಭದ್ಬ್ರೋಸ್ತಂಭ ಜೃಂಭತ್ತ್ರಿ ಶಿಖಿವಿದಲಿ
ತೋತ್ತುಂಬಿಕುಂಭಾಗ್ರ ನಿರ್ಯ
ದ್ರಕಾಂಭಃ ಸಿಕ್ತ ಮುಕ್ತಾ ಫಳಕುಳವಿಳ ಸದ್ಗುಂಜಿಕಾರಂಜಿತಾಂಗ
ಚಂಚತ್ಪಟ್ಟಗ್ರ ಬದ್ಧಾರ್ಧ ತದಜಿನ ಲಸತ್ತಲ್ಲ ವಾಚ್ಛಾಪಹಸ್ತಾತ್
ಸತ್ರಟಿಪ್ಯಾಂ ವಿಭೀತಾ ಭವದಮರಶ್ರೇಣಿಕ ವೀರಭದ್ರಾತ್

ಈ ಪದ್ಯದಲ್ಲಿ ವೀರಭದ್ರನ ಉಗ್ರಸ್ವರೂಪವು ಅದಕ್ಕೆ ಸೂಕ್ತವಾದ ಪದಗಳಿಂದ ಸಮರ್ಥವಾಗಿ ಅಭಿವ್ಯಕ್ತವಾಗಿದೆ. ಇದು ಪ್ರಾಯಶಃ ಷಡಕ್ಷರಿದೇವನು ಕೆಳದಿಗೆ ಭೇಟಿಕೊಟ್ಟ ಸಂದರ್ಭದಲ್ಲಿ ಅಲ್ಲಿನ ವೀರಭದ್ರೇಶನನ್ನು ಕುರಿತು ರಚಿಸಿದ್ದು ಎಂದು ಭಾವಿಸಲಾಗಿದೆ.

ಹೀಗೆ ಕನ್ನಡನಾಡಿನಲ್ಲಿ, ಸಂಸ್ಕೃತದಲ್ಲಿ ವೀರಭದ್ರ ಸಾಹಿತ್ಯವು ವಿವಿಧ ರೂಪದಲ್ಲಿ ಮೈದಾಳಿರುವುದನ್ನು ಕಾಣಬಹುದು. ಈ ದಿಸೆಯಲ್ಲಿ ಹೆಚ್ಚು ಅನ್ವೇಷಿಸಿದಲ್ಲಿ ವೀರಭದ್ರನಿಗೆ ಸಂಬಂಧಿಸಿದ ಇನ್ನಿತರ ಕೃತಿಗಳು ಲಭಿಸಬಹುದು.

■■

ವೀರಶೈವ ಶಾಸನ ಶಿಲ್ಪ

✍ ಡಾ. ಡಿ.ವಿ. ಪರಮಶಿವಮೂರ್ತಿ

ಕರ್ನಾಟಕ ಶಾಸನಗಳಲ್ಲಿ ವೀರಶೈವ ಧರ್ಮಕ್ಕೆ ಸಂಬಂಧಪಟ್ಟ ಶಾಸನಗಳದ್ದೇ ಸಿಂಹಪಾಲು. ಇದಕ್ಕೆ ಕಾರಣ, ಕರ್ನಾಟಕದ ಚರಿತ್ರೆಯಲ್ಲಿ ಸುವರ್ಣಯುಗವೆಂದು ಗುರುತಿಸಿಕೊಳ್ಳುವ ಮಧ್ಯಕಾಲೀನ ಕರ್ನಾಟಕದಲ್ಲಿ ವೀರಶೈವ ಧರ್ಮವು ಬಹುವ್ಯಾಪಕವಾಗಿ ಹಬ್ಬಿದುದು. ಅನೇಕ ರಾಜಮನೆತನಗಳು ಈ ಧರ್ಮಕ್ಕೆ ಪ್ರೋತ್ಸಾಹ ನೀಡಿದ್ದೂ ಇದಕ್ಕೆ ಮತ್ತೊಂದು ಕಾರಣ.

ಕರ್ನಾಟಕದಲ್ಲಿ ಕ್ರಿ.ಶ. ೧೨ನೇ ಶತಮಾನಕ್ಕೂ ಪೂರ್ವದಲ್ಲಿದ್ದ ಶೈವಧರ್ಮದ ಶಾಸನಶಿಲ್ಪಕ್ಕೂ ನಂತರದ ಅವಧಿಯ ವೀರಶೈವ ಧರ್ಮದ ಶಾಸನಶಿಲ್ಪಕ್ಕೂ ವ್ಯತ್ಯಾಸಗಳನ್ನು ಗುರುತಿಸುವುದು ಬಹಳ ಕಷ್ಟ. ಇದಕ್ಕೆ ಕಾರಣ ಎರಡೂ ರೀತಿಯ ಶಾಸನಶಿಲ್ಪಗಳು ಒಂದೇ ತೆರನಾಗಿರುತ್ತವೆ. ಆದರೆ ಸೂಕ್ಷ್ಮವಾಗಿ ಗಮನಿಸಿದರೆ, ಒಂದು ವ್ಯತ್ಯಾಸ ಕಂಡುಬರುತ್ತದೆ. ಅದೇನೆಂದರೆ ಹತ್ತು ಮತ್ತು ಹನ್ನೊಂದನೇ ಶತಮಾನದ ಶಾಸನಗಳಲ್ಲಿ ಶಿವಲಿಂಗವನ್ನು ಪೂಜೆ ಮಾಡುತ್ತಿರುವ ಯತಿಯ ತಲೆಗೂದಲು ಕಾಲಿನ ಹಿಮ್ಮಡಿಯವರೆಗೂ ಉದ್ದವಾಗಿರುತ್ತದೆ. ಉದ್ದವಾಗಿ ಬಿಡುತ್ತಿದ್ದರೆಂಬುದಕ್ಕೆ ಸಾಹಿತ್ಯಾಧಾರವಿದೆ. ಕಾಪಾಲಿಕ ಯತಿಗಳು ತಮ್ಮ ತಲೆಗೂದಲನ್ನು ಉದ್ದವಾಗಿ ಬಿಡುತ್ತಿದ್ದರು. ಇಂತಹ ಶಾಸನಗಳನ್ನು ಶೈವ ಧರ್ಮದ ಶಾಸನಗಳೆಂದು ಕರೆಯಬಹುದು. ಆದರೆ ಹೊಯ್ಸಳರ ಅನೇಕ ಶಾಸನಗಳಲ್ಲೂ ಉದ್ದನೆಯ ಜಡೆಯಿರುವ ಯತಿಯ ಶಿಲ್ಪಗಳು ಕೆತ್ತನೆಯಾಗಿವೆ. ಈ ಕಾರಣದಿಂದ ಶಾಸನಶಿಲ್ಪದ ಅಧ್ಯಯನದಲ್ಲಿ ಶೈವ-ವೀರಶೈವವೆಂಬ ಭೇದವು ಸಮಂಜಸವಲ್ಲ. ಆಯಾ ಕಾಲದ ವೀರಶೈವ ಶಾಸನಗಳಲ್ಲಿ ಅದರ ಶಿಲ್ಪಶೈಲಿಯಲ್ಲಿ ವ್ಯತ್ಯಾಸಗಳನ್ನು ಗುರುತಿಸಬಹುದೇ ಹೊರತು, ನಿರೂಪಣಾಶೈಲಿ, ವಿಧಾನಗಳು, ವಸ್ತುಚಿತ್ರ ಒಂದೇ ತೆರನಾಗಿ ಮುಂದುವರಿದಿರುವುದನ್ನು ಕಾಣಬಹುದು. ಶಿಲ್ಪಶೈಲಿಯೇ ಅಲ್ಲದೆ ಶಾಸನಪಾಠವೂ ಸಹ ಪಾರಂಪರಿಕ ರೀತಿಯಲ್ಲೇ ಮುಂದುವರಿದು ಬಂದಿದೆ. ಶಾಸನ ಶಿಲ್ಪದಲ್ಲಿ ಶಿವಲಿಂಗದ ಚಿತ್ರಣವಿದ್ದರೆ ಅಥವಾ ಶಾಸನ ಪಾಠದಲ್ಲಿ ಶಿವಸ್ತುತಿಯಿದ್ದರೆ ಅದು ವೀರಶೈವ ಶಾಸನವೆಂದು ಸ್ಥೂಲವಾಗಿ ವಿಂಗಡಿಸಬಹುದು. ಅನೇಕ ಶಾಸನಗಳಲ್ಲಿ ಶಿವಲಿಂಗದ ಬದಲಿಗೆ ಗಣೇಶನ ಚಿತ್ರವಿರುತ್ತದೆ. ಆದರೆ ಗಣೇಶನ ಚಿತ್ರವಿರುವ ಶಾಸನಗಳನ್ನು ಶಾಸನ ಪಾಠವನ್ನು ನೋಡಿಯೇ ಅದು ವೀರಶೈವ ಶಾಸನವೆಂದು ನಿರ್ಧರಿಸಬೇಕಾಗುತ್ತದೆ. ಏಕೆಂದರೆ ವರುಣ ಮತ್ತು ಇತರೆಡೆ ದೊರೆಯುವ ಮೈಸೂರು ಅರಸರ ಅನೇಕ ಶಾಸನಗಳಲ್ಲಿ ಗಣಪತಿಯ ಶಿಲ್ಪವಿದ್ದು ಶಾಸನ ಪಾಠವು ವೈಷ್ಣವ ಧರ್ಮದ್ದಾಗಿದೆ. ಶಾಸನಪಾಠದಲ್ಲಿ ಕಂಡುಬರುವ ಶ್ಲೋಕ ಹೀಗಿದೆ:

ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೇ
ತ್ರೈಲೋಕ್ಯನಗರಾರಂಭ ಮೂಲಸ್ತಂಭಾಯ ಶಂಭವೇ

ಈ ಶ್ಲೋಕವು ಸಂಸ್ಕೃತದ ಪ್ರಸಿದ್ಧ ಕವಿ ಬಾಣಭಟ್ಟನ ಹರ್ಷಚರಿತದ ಮಂಗಳ ಪದ್ಯವಾಗಿದೆ. ವಿಜಯನಗರ ಅರಸರ ಅನೇಕ ಶಿಲಾಶಾಸನಗಳು ಶ್ರೀ ಗಣಾಧಿಪತಯೇ ನಮಃ ಎಂದು ಆರಂಭವಾಗಿರುತ್ತವೆ.

ವೀರಶೈವ ಶಾಸನಗಳಲ್ಲಿ ಬಹಳ ಹೆಚ್ಚಿನ ಸಂಖ್ಯೆಯಲ್ಲಿರುವುವು ದಾನ ಶಾಸನಗಳು. ದಾನಶಾಸನಗಳಲ್ಲೂ ಅತಿ ಹೆಚ್ಚಾಗಿ ದೇವಾಲಯ ನಿರ್ಮಾಣ ಮತ್ತು ದೇವಾಲಯ ನಿರ್ವಹಣೆಗೆ ದಾನ-ದತ್ತಿಗಳನ್ನು ನೀಡಿದ ಶಾಸನಗಳೇ ಕಂಡುಬರುತ್ತವೆ. ಇವುಗಳ ಶಿಲ್ಪವನ್ನು ಈ ಕೆಳಗಿನಂತೆ ವಿಭಾಗಿಸಿಕೊಂಡು ಅಧ್ಯಯನ ನಡೆಸಬಹುದು:

ದಾನಶಾಸನಗಳ ಮೇಲ್ಭಾಗದಲ್ಲಿ ಕಮಾನಿನಾಕಾರದಲ್ಲಿ ಸ್ಥಳವನ್ನು ಬಿಡಿಸಿಕೊಂಡು ಸೂರ್ಯ, ಚಂದ್ರ, ಶಾಪಾಶಯದ ಸಂಕೇತವಾಗಿ ಹಸು-ಕರು, ನಂದಿ, ಮಂಟಪದಲ್ಲಿರುವ ಶಿವಲಿಂಗ, ಶಿವಲಿಂಗವನ್ನು ಪೂಜಿಸುತ್ತಿರುವ ಯತಿಯನ್ನು ಚಿತ್ರಿಸಲಾಗಿರುತ್ತದೆ. ಇದು ದಾನಶಾಸನಗಳಲ್ಲಿ ಸಾಮಾನ್ಯವಾದ ಚಿತ್ರಣ. ಪ್ರತಿಯೊಂದು ಶಾಸನಶಿಲೆಯಲ್ಲೂ ಶೇಕಡಾ ಇಪ್ಪತ್ತು ಅಥವಾ ಇಪ್ಪತ್ತೈದರಷ್ಟು ಸ್ಥಳವನ್ನು ಇದು ಆಕ್ರಮಿಸಿರುತ್ತದೆ. ಶಾಸನ ಶಿಲೆಗೆ ಒಂದು ಅಂದವನ್ನು ತಂದುಕೊಡುವ ಈ ಭಾಗವು ಇದರಲ್ಲಿರುವ ಶಿವಲಿಂಗದ ಕಾರಣದಿಂದ ಅನೇಕ ಕಡೆ ಇಂದಿಗೂ ಪೂಜೆಗೊಂಡು, ಇದಕ್ಕೆ ಸುರಿಯುವ ಎಣ್ಣೆ, ಕುಂಕುಮಗಳಿಂದ ಕೆಳಭಾಗದ ಶಾಸನ ಪಾಠಗಳು ಮುಚ್ಚಿಹೋಗಿರುತ್ತವೆ. ನೂರಾರು ವರ್ಷಗಳಿಂದ ಈ ಶಾಸನಗಳನ್ನು ಭಕ್ತಿ-ಭಯಗಳಿಂದ ರಕ್ಷಿಸಿಕೊಂಡು ಬಂದಿರುವ ಕಾರಣವೂ ಇದೇ ಆಗಿದೆ.

ವೀರಶೈವ ಶಾಸನಶಿಲ್ಪವನ್ನು ಅಧ್ಯಯನದ ದೃಷ್ಟಿಯಿಂದ-

೧. ಶಿವಲಿಂಗದ ಚಿತ್ರ.

೨. ಶಿವಲಿಂಗದ ಜೊತೆ ಆಕಳು ಮತ್ತು ನಂದಿ ಶಿಲ್ಪ

೩. ಮಂಟಪದಲ್ಲಿ ಶಿವಲಿಂಗ, ಭಕ್ತ ಮತ್ತು ಆಕಳು ಶಿಲ್ಪ ಎಂದು ವಿಂಗಡಿಸಬಹುದು.

೧. ಶಿವಲಿಂಗದ ಚಿತ್ರಣ

ಶೈವ ವೀರ ದಾನಶಾಸನಶಿಲ್ಪಗಳನ್ನು ಗುರುತಿಸುವ ಪ್ರಮುಖ ಲಕ್ಷಣವೆಂದರೆ ಶಿಲ್ಪಭಾಗದಲ್ಲಿ ಶಿವಲಿಂಗದ ಚಿತ್ರವಿರುವುದು. ಶಿವಲಿಂಗದ ಅಕ್ಕ ಪಕ್ಕ ಸೂರ್ಯ ಮತ್ತು ಚಂದ್ರರನ್ನು ಚಿತ್ರಿಸಿರುತ್ತಾರೆ. ಸೂರ್ಯ ಮತ್ತು ಚಂದ್ರರ ಶಿಲ್ಪವು ಈ ಶಾಸನದ ದಾನವು ಸೂರ್ಯ ಚಂದ್ರರಿರುವವರೆಗೂ ಶಾಶ್ವತವಾಗಿರಲಿ ಎಂಬ ನಂಬಿಕೆಯನ್ನು ಸೂಚಿಸುತ್ತದೆ. ಹೆಚ್ಚಿನ ಶಾಸನಗಳಲ್ಲಿ ಶಿವಲಿಂಗದ ಚಿತ್ರಣ ಶಾಸನ ಪಾಠದ ಮೇಲ್ಭಾಗದಲ್ಲಿರುತ್ತದೆ. ಅಪರೂಪಕ್ಕೆಂಬಂತೆ ಕೆಲವು ಶಾಸನಗಳಲ್ಲಿ ಶಾಸನ ಪಾಠದ ನಡುವೆ ಶಿವಲಿಂಗವನ್ನು ಚಿತ್ರಿಸಿರುತ್ತಾರೆ. ಈ ರೀತಿಯ ಒಂದು ಶಾಸನ ಕನಕಪುರ ತಾಲೂಕಿನ ಯಡಮಾರನ ಹಳ್ಳಿಯಲ್ಲಿದೆ. ಉಬ್ಬುಶಿಲ್ಪದ ಮಾದರಿಯ ಜೊತೆಗೆ ರೇಖಾಚಿತ್ರದ ಮಾದರಿಗಳೂ ದೊರಕುತ್ತವೆ. ಚನ್ನಗಿರಿ ತಾಲ್ಲೂಕಿನ ನಲ್ಕುದರೆಯ ಒಂದು ದಾನಶಾಸನದಲ್ಲಿ ರೇಖೆಯಲ್ಲಿಯೇ ಶಾಸನಶಿಲ್ಪವನ್ನು ಚಿತ್ರಿಸಲಾಗಿದೆ. ವಿಜಯನಗರದ ಮತ್ತು ನಂತರದ ಅವಧಿಯ ಬಹುತೇಕ ದಾನಶಾಸನಗಳಲ್ಲಿ ಶಿವಲಿಂಗಗಳನ್ನು ರೇಖೆಯಲ್ಲಿಯೇ ಬಿಡಿಸಿರುವುದು ಕಂಡುಬರುತ್ತದೆ. ಶಾಸನಶಿಲ್ಪದಲ್ಲಿ ಶಿವಲಿಂಗದ ಚಿತ್ರಣದ ಅತ್ಯುತ್ತಮ ಮಾದರಿ ನಮಗೆ ಹಾವೇರಿ ತಾಲ್ಲೂಕಿನ ದೇವಗಿರಿಯಲ್ಲಿದೆ. ಇಲ್ಲಿನ ಶಾಸನವೊಂದರಲ್ಲಿ ಸುಂದರವಾದ ಶಿವಲಿಂಗವನ್ನು ಬಿಡಿಸಿದ್ದು, ಆ ಶಿವಲಿಂಗವು ಹೂವಿನ ಕಿರೀಟದಿಂದ ಅಲಂಕೃತಗೊಂಡಿದೆ. ಮೇಲ್ಭಾಗದಲ್ಲಿ ಎರಡು ಚಾಮರಗಳನ್ನು ಚಿತ್ರಿಸಲಾಗಿದ್ದು, ಇದು ಭಕ್ತಿಯ ದ್ಯೋತಕವಾಗಿದೆ. ಈ ರೀತಿಯ ಶಿಲ್ಪ ಹರಪನಹಳ್ಳಿ ತಾಲ್ಲೂಕಿನ ಬಾಗಳಿ ಗ್ರಾಮದಲ್ಲೂ ದೊರಕಿದೆ.

೨. ಶಿವಲಿಂಗದ ಜೊತೆ ಆಕಳು ಮತ್ತು ನಂದಿಯ ಶಿಲ್ಪ

ಹೆಚ್ಚಿನ ವೀರಶೈವ ಶಾಸನಗಳಲ್ಲಿ ಈ ರೀತಿಯ ಚಿತ್ರಣ ಕಂಡುಬರುತ್ತದೆ. ಇದು ಕಲ್ಯಾಣ ಚಾಲುಕ್ಯ ಮತ್ತು ಹೊಯ್ಸಳರ ಅವಧಿಯ ಶಾಸನಗಳಲ್ಲಿ ಹೆಚ್ಚು ಕಂಡುಬರುತ್ತದೆ. ಶಾಸನಗಳ ಮೇಲ್ಭಾಗದಲ್ಲಿ ಪ್ರಭಾವಳಿಯೊಂದನ್ನು ಬಿಡಿಸಿ, ಅದರ ನಡುವಿನ ಸ್ಥಳದಲ್ಲಿ ಮಧ್ಯ ಶಿವಲಿಂಗ, ಒಂದು ಪಕ್ಕ ನಂದಿ ಮತ್ತೊಂದು ಪಕ್ಕ ಆಕಳನ್ನು ಚಿತ್ರಿಸಿರುತ್ತಾರೆ. ಕೆಲವು ಶಾಸನಗಳಲ್ಲಿ ಆಕಳು ಕರುವಿಗೆ ಹಾಲುಣಿಸುತ್ತಿರುವ ದೃಶ್ಯವಿರುತ್ತದೆ. ನಂದಿಯನ್ನೂ ಚಿತ್ರಿಸಿರುವುದು ಧರ್ಮಸಹಜವಾಗಿದೆ. ಆಕಳು ಅಥವಾ ಕರುವಿಗೆ

ಹಾಲುಣಿಸುತ್ತಿರುವ ಆಕಳ ಶಿಲ್ಪವು ಶಾಪಾಶಯ ಸಂಕೇತವಾಗಿ ಮೂಡಿದೆ. ದಾನವನ್ನು ಹಾಳುಮಾಡಿದರೆ ಈ ಹಸು ಮತ್ತು ಕರುವನ್ನು ಕಾಶಿಯಲ್ಲಿ ಕೊಂದಂತೆಯೂ, ದಾನವನ್ನು ಕಾಪಾಡಿದರೆ, ಸಹಸ್ರ ಗೋವುಗಳನ್ನು ದಾನಮಾಡಿದ ಪುಣ್ಯವು ಬರುತ್ತದೆಂಬುದರ ಸಂಕೇತವಾಗಿ ಈ ರೀತಿ ಆಕಳಿನ ಶಿಲ್ಪವಿರುತ್ತದೆ. ಹರಿಹರದ ಹರಿಹರೇಶ್ವರ ದೇವಾಲಯದ ಆವರಣದಲ್ಲಿ ಈ ರೀತಿಯ ಉತ್ತಮ ಶಿಲ್ಪಗಳಿವೆ. ಹಂಪಿಯ ವಿರೂಪಾಕ್ಷ ದೇಗುಲದ ಮುಂದಿನ ಶಾಸನದಲ್ಲಿ ಕೃಷ್ಣದೇವರಾಯನ ಶಾಸನದಲ್ಲಿ ಕುಳಿತ ನಂದಿಯ ಶಿಲ್ಪವನ್ನು ಮಾತ್ರ ಚಿತ್ರಿಸಲಾಗಿದೆ. ನಿಜಗಲ್ಲು, ಹಾಗಲವಾಡಿ ಮುಂತಾದೆಡೆ ಚೌಕ ಆಕಾರದ ಶಾಸನಸ್ತಂಭದಲ್ಲಿ ನಂದಿಯನ್ನು ಚಿತ್ರಿಸಿರುತ್ತಾರೆ. ದಾವಣಗೆರೆ ಜಿಲ್ಲೆಯ ಬಾಗಳಿ ಗ್ರಾಮದ ದಾನಶಾಸನದಲ್ಲಿ ಹೂವಿನ ಕಿರೀಟ ಧರಿಸಿದ ಶಿವಲಿಂಗ ಮತ್ತು ಅಕ್ಕ-ಪಕ್ಕ ನಂದಿ ಮತ್ತು ಹಾಲುಣಿಸುತ್ತಿರುವ ಆಕಳ ಸುಂದರವಾದ ಶಿಲ್ಪವಿದೆ.

೩. ಮಂಟಪದಲ್ಲಿ ಶಿವಲಿಂಗ-ಭಕ್ತ, ನಂದಿ ಮತ್ತು ಆಕಳ ಶಿಲ್ಪ

ಕಲ್ಯಾಣ ಚಾಲುಕ್ಯರ ಬಹುತೇಕ ದಾನಶಾಸನಗಳಲ್ಲಿ ಸುಂದರವಾದ ಮಂಟಪದ ನಡುವೆ ಶಿವಲಿಂಗ, ಅದನ್ನು ಪೂಜಿಸುತ್ತಿರುವ ಯತಿ, ಮಂಟಪದ ಅಕ್ಕ-ಪಕ್ಕ ನಂದಿ ಮತ್ತು ಆಕಳ ಶಿಲ್ಪ, ಮೇಲ್ಭಾಗದಲ್ಲಿ ಸೂರ್ಯ ಚಂದ್ರರ ಶಿಲ್ಪವಿರುತ್ತದೆ. ಕೆಲವು ಶಾಸನಗಳಲ್ಲಿ ಇವೆಲ್ಲಕ್ಕೂ ಒಂದು ಅರ್ಧವೃತ್ತಾಕಾರದ ಕಮಾನನ್ನು ಸುಂದರವಾದ ಪ್ರಭಾವಳಿಯನ್ನು ಚಿತ್ರಿಸಿರುತ್ತಾರೆ. ಮಂಟಪವು ನಾಲ್ಕುಕಂಬಗಳ ಆಧಾರದಲ್ಲಿ ನಿಂತಿದ್ದು, ಅದರ ಗೋಪುರವನ್ನು ಕನಿಷ್ಠ ಎರಡು ಹಂತದಿಂದ ನಾಲ್ಕು ಅಥವಾ ಐದು ಹಂತಗಳಲ್ಲಿ ಚಿತ್ರಿಸಿರುತ್ತಾರೆ. ಇವು ದೇವಾಲಯದ ರಚನೆಯಂತೆಯೇ ಕಂಡುಬರುತ್ತವೆ. ಶಿವಮೊಗ್ಗ ಪ್ರದೇಶದ ಕೆಲವು ಶಾಸನಗಳಲ್ಲಿ ಶಿವಲಿಂಗಗಳಷ್ಟೇ ಅಲ್ಲದೆ ನಂದಿ ಮತ್ತು ಆಕಳಿಗೂ ಮಂಟಪವನ್ನು ರಚಿಸಿರುವುದುಂಟು. ಸಾಮಾನ್ಯವಾಗಿ ಈ ರೀತಿಯ ಮಂಟಪದ ಗೋಪುರಗಳು ದ್ರಾವಿಡ ಶೈಲಿಯಲ್ಲಿದ್ದರೂ ಅಪರೂಪಕ್ಕೆಂಬಂತೆ ಸೊರಬ ಗ್ರಾಮದ ಒಂದು ಶಾಸನದಲ್ಲಿ ನಾಗರಶೈಲಿಯ ಗೋಪುರವಿದೆ. ಈ ರೀತಿಯ ಶಿಲ್ಪಗಳಿಂದ ತಿಳಿದುಬರುತ್ತದೆ. ಹಾವೇರಿ ಜಿಲ್ಲೆಯ ಕಾಗಿನೆಲೆ, ಹಿರೇಕೆರೂರು ತಾಲೂಕಿನ ಅಬ್ಬಲೂರು ಮೊದಲಾದೆಡೆ ಬಹಳ ಸುಂದರವಾದ ಮೇಲಿನ ರೀತಿಯ ಶಾಸನಶಿಲ್ಪಗಳು ದೊರಕಿವೆ.

೪. ಶಿವಲಿಂಗ, ಭಕ್ತ ಮತ್ತು ಆಕಳ ಶಿಲ್ಪ

ಇವು ಕ್ರಿ.ಶ. ೧೧ ರಿಂದ ೧೬ನೇ ಶತಮಾನದವರೆಗೆ ದೊರಕುವ ಸಾಮಾನ್ಯ ಶೈಲಿಯ ಶೈವ-ವೀರಶೈವ ಶಾಸನಶಿಲ್ಪಗಳಾಗಿವೆ. ಹಾಸನ ಜಿಲ್ಲೆ, ಚಿಕ್ಕಮಗಳೂರು ಜಿಲ್ಲೆ ಮತ್ತು ಧಾರವಾಡ ಜಿಲ್ಲೆಯ ಬಹುತೇಕ ಕಡೆ ಈ ರೀತಿಯ ಶಾಸನಶಿಲ್ಪಗಳು ಕಂಡುಬರುತ್ತವೆ. ಶಿವಲಿಂಗದ ಪಕ್ಕ ಯತಿ ಅಥವಾ ಭಕ್ತ ನಿಂತು ಅಥವಾ ಕುಳಿತು ಶಿವಲಿಂಗವನ್ನು ಪೂಜಿಸುತ್ತಿರುವಂತಿರುತ್ತದೆ. ಒಂದು ಪಕ್ಕದಲ್ಲಿ ಆಕಳನ್ನು ಚಿತ್ರಿಸಲಾಗಿರುತ್ತದೆ. ಮತ್ತೊಂದು ಗ್ರಾಮದ ಶಾಸನ ಶಿಲ್ಪವೊಂದರಲ್ಲಿ ಮೋಡಗಳ ನಡುವೆ ಸೂರ್ಯಚಂದ್ರರಿರುವಂತೆ ಚಿತ್ರಿಸಲಾಗಿದ್ದು, ಇದು ಶಿಲ್ಪಿಯ ಸೃಜನಶೀಲತೆಯನ್ನು ತೋರಿಸುತ್ತದೆ.

ಹರಿಹರದ ಎರಡು ಶಾಸನಗಳಲ್ಲಿ ಶಿವಲಿಂಗದ ಮೇಲ್ಭಾಗದಲ್ಲಿ ಇಬ್ಬರು ಅಪ್ಸರೆಯರು ಪುಷ್ಪಮಾಲೆ ಹಿಡಿದು ನಿಂತಿರುವರು. ಶಾಸನಶಿಲ್ಪಕ್ಕೆ ಸುಂದರವಾದ ಪ್ರಭಾವಳಿಯನ್ನು ಚಿತ್ರಿಸಲಾಗಿದೆ. ಪ್ರಭಾವಳಿಯಲ್ಲಿ ಯಾಳಿಯ ಬಾಯಿಯಿಂದ ಹೂವಿನ ಗೊಂಚಲೊಂದು ಶಿವಲಿಂಗದ ಮೇಲ್ಭಾಗಕ್ಕೆ ಇಳಿಬಿದ್ದಿದೆ. ಇದೊಂದು ಶಿಲ್ಪಿಯ ಸೃಜನಶೀಲ ಕಲ್ಪನೆಗೆ ಸಾಕ್ಷಿಯಾದ ಅತ್ಯುತ್ತಮ ಶಾಸನ ಶಿಲ್ಪವಾಗಿದೆ.

ಲಿಂಗಮುದ್ರೆ ಕಲ್ಲುಗಳು

ಶೈವ ವೀರಶೈವ ದೇವಾಲಯಗಳು, ಮಠಗಳು ಅಥವಾ ವ್ಯಕ್ತಿಗಳಿಗೆ ಕೊಟ್ಟ ದಾನದ ಭೂಮಿಯನ್ನು ಗುರುತಿಸಲು ಆ ಭೂಮಿಯ ಗಡಿಭಾಗದಲ್ಲಿ ಲಿಂಗಮುದ್ರೆಯ ಕಲ್ಲುಗಳನ್ನು ನೆಡುತ್ತಿದ್ದರು. ಇದರಿಂದ ಈ ಭೂಮಿ ಶೈವ ವೀರಶೈವ ಧರ್ಮೀಯರ

ಸ್ವತ್ತೆಂದು ತಿಳಿದುಬರುತ್ತಿತ್ತು. ಈ ರೀತಿಯ ನೂರಾರು ಲಿಂಗಮುದ್ರೆಯ ಕಲ್ಲುಗಳು ದೊರೆಯುತ್ತವೆ. ಲಿಂಗಮುದ್ರೆಯ ಕಲ್ಲುಗಳು ಎಂದರೆ ಕಲ್ಲಿನ ಮೇಲೆ ಸೂರ್ಯಚಂದ್ರರ ನಡುವೆ ಶಿವಲಿಂಗವನ್ನು ಚಿತ್ರಿಸಲಾಗಿರುತ್ತದೆ. ಇದರಲ್ಲಿ ಶಾಸನ ಪಾಠವಿರುವುದಿಲ್ಲ. ಇದ್ದರೂ ಅದು ಬಹಳ ಅಪರೂಪವಾಗಿರುತ್ತದೆ. ಇಲ್ಲಿ ಉಬ್ಬುಶಿಲ್ಪದ ತಂತ್ರಕ್ಕಿಂತ ರೇಖೆಯಲ್ಲಿ ಶಿವಲಿಂಗ ಮತ್ತು ಸೂರ್ಯ-ಚಂದ್ರರನ್ನು ಚಿತ್ರಿಸಿರಲಾಗಿರುತ್ತದೆ. ಈ ಕಾರಣದಿಂದಲೇ ಇವುಗಳ ಕಾಲವನ್ನು ಗುರುತಿಸುವ ಸಮಸ್ಯೆ ಉಂಟಾಗುತ್ತದೆ.

ವೀರಗಲ್ಲುಗಳು

ಯಾವುದಾದರೂ ಹೋರಾಟದಲ್ಲಿ ಮಡಿದ ವೀರನ ನೆನಪಿಗೆ ನಿಲ್ಲಿಸಿರುವ ಕಲ್ಲುಗಳು ವೀರಗಲ್ಲುಗಳಾಗುತ್ತವೆ. ಯುದ್ಧದಲ್ಲಿ, ಗಡಿಕಾಳಗದಲ್ಲಿ, ಬೇಟೆಯ ಸಂದರ್ಭದಲ್ಲಿ, ದನ-ಕರುಗಳನ್ನು ರಕ್ಷಿಸುವ ಕಾಳಗದಲ್ಲಿ, ಸ್ತ್ರೀಯರ ಮಾನ ಕಾಪಾಡುವ ಸಮಯದಲ್ಲಿ ಹೋರಾಡಿ ಮಡಿದವರ ಸ್ಮಾರಕಗಳೇ ಈ ವೀರಗಲ್ಲುಗಳು. ಇವುಗಳಲ್ಲೂ ಶೈವ ವೀರಶೈವ ಧರ್ಮದ ಲಕ್ಷಣಗಳನ್ನು ಕಾಣಬಹುದು. ಯಾವುದೇ ಶಾಸನ ಪ್ರಕಾರದಲ್ಲಿ ಧರ್ಮವನ್ನು ಸೂಚಿಸುವ ಭಾಗವು ಮೇಲ್ತುದಿಯಲ್ಲಿರುತ್ತದೆ. ವೀರಗಲ್ಲುಗಳಲ್ಲಿಯೂ ಅಷ್ಟೇ. ವೀರಗಲ್ಲುಗಳು ಎಷ್ಟೇ ಹಂತದಲ್ಲಿರಲಿ ಈ ಭಾಗದಲ್ಲಿ ಶಿವಲಿಂಗ, ಪೂಜಿಸುತ್ತಿರುವ ಯತಿ, ಪಕ್ಕದಲ್ಲಿ ಕೈಮುಗಿದುಕೊಂಡು ವಿನೀತರಾಗಿ ಕುಳಿತಿರುವ ವೀರರ ಶಿಲ್ಪವಿರುತ್ತದೆ. ಅಕ್ಕಪಕ್ಕ ಆಕಳಿನ ಶಿಲ್ಪ ಮತ್ತು ಕತ್ತಿಯ ಶಿಲ್ಪವಿರುತ್ತದೆ. ಶಾಸನ ಪಾಠದಲ್ಲಿ ಒಬ್ಬರಿಗಿಂತ ಹೆಚ್ಚು ವೀರರ ವಿಷಯವಿದ್ದರೆ ಶಿವಲಿಂಗದ ಬಳಿಯೂ ಅವರನ್ನು ಚಿತ್ರಿಸಿರಲಾಗುತ್ತದೆ. ಈ ಲಕ್ಷಣವು ವೀರನೊ, ವೀರನಿಗೆ ದಾನ ನೀಡಿದವರೋ ಅಥವಾ ಆ ಅವಧಿಯ ಅರಸ ಶೈವ ವೀರಶೈವ ಧರ್ಮೀಯನೆಂದು ಅರ್ಥ. ಅಲ್ಲದೆ ಅವರು ತಮ್ಮ ವೀರತ್ವದಿಂದ ಸ್ವರ್ಗಪಡೆದರೆಂದೂ ಸಂಕೇತಿಸುತ್ತದೆ. ರಟ್ಟಿಹಳ್ಳಿ, ಅಬ್ಬಲೂರು, ಹಾಸನ ವಸ್ತುಸಂಗ್ರಹಾಲಯ, ಹಳೇಬೀಡು, ಹಾವೇರಿ ಸಿದ್ಧೇಶ್ವರ ಗುಡಿ ಆವರಣ, ಬಳ್ಳಿಗಾವಿಗಳಲ್ಲಿ ಈ ರೀತಿಯ ಅತ್ಯುತ್ತಮ ಮಾದರಿಯ ವೀರಗಲ್ಲುಗಳಿವೆ.

ಮಹಾಸತಿ ಕಲ್ಲುಗಳು

ಪತಿಯ ಮರಣಾನಂತರ ಅವರ ಸತಿಯರೂ ಪ್ರಾಣವನ್ನು ಅರ್ಪಿಸುತ್ತಿದ್ದರು. ಇಂತಹ ಆಚರಣೆಯನ್ನು ಮಹಾಸತಿ ಆಚರಣೆಯೆಂದು ಕರೆಯುತ್ತಾರೆ. ಇವರ ನೆನಪಿನ ಕಲ್ಲುಗಳನ್ನೇ ಮಹಾಸತಿ ಕಲ್ಲುಗಳು ಅಥವಾ ಮಾಸ್ತಿಕಲ್ಲುಗಳು ಎಂದು ಕರೆಯುವರು. ಮಹಾಸತಿ ಕಲ್ಲುಗಳ ವೈಶಿಷ್ಟ್ಯವೆಂದರೆ ಇಲ್ಲಿ ಸ್ತ್ರೀಪ್ರಾಧಾನ್ಯತೆಯ ಚಿತ್ರಣ ಕಂಡುಬರುತ್ತದೆ. ಇಲ್ಲಿ ಅವಳ ಗಂಡ ಎಷ್ಟೇ ವೀರನಾಗಿದ್ದರೂ ಸತಿ ಹೋದ ಹೆಂಡತಿ ಅವನಿಗಿಂತಲೂ ತ್ಯಾಗಮಯಿಯೆಂದು ನಮ್ಮ ಸಮಾಜ ಗುರುತಿಸುತ್ತಿತ್ತು. ಅದನ್ನು ಮಹಾಸತಿ ಶಿಲ್ಪದ ಚಿತ್ರಣದಲ್ಲೂ ವ್ಯಕ್ತಪಡಿಸಲಾಗಿದೆ. ಕೆಲವು ಸ್ಮಾರಕ ಶಿಲೆಗಳಲ್ಲಿ ಕೇವಲ ಮಹಾಸತಿಯೊಬ್ಬಳನ್ನೇ ದೊಡ್ಡದಾಗಿ, ಪೂರ್ಣಪ್ರಮಾಣದಲ್ಲಿ ಚಿತ್ರಿಸಲಾಗಿದ್ದು, ಮೇಲ್ಭಾಗದಲ್ಲಿ ಶಿವಲಿಂಗ, ಪೂಜಿಸುತ್ತಿರುವ ಯತಿ, ವೀರ, ಮಹಾಸತಿ, ನಂದಿ, ಸೂರ್ಯ, ಚಂದ್ರರ ಶಿಲ್ಪವಿರುತ್ತದೆ. ಇದು ಮಹಾಸತಿ ತನ್ನ ತ್ಯಾಗದಿಂದ ಸ್ವರ್ಗವನ್ನು ಪಡೆದಳೆಂದು ತಿಳಿಸುವುದರ ಜೊತೆಗೆ ಅವಳ ಧರ್ಮವನ್ನು ಸೂಚಿಸುತ್ತದೆ. ಹಿರೇಕೆರೂರು ತಾಲೂಕಿನ ವರ ಗ್ರಾಮದ ಹಲವಾರು ಮಹಾಸತಿ ಶಾಸನಗಳು ಈ ರೀತಿಯ ಚಿತ್ರಣವನ್ನು ಹೊಂದಿವೆ. ವೀರರ ಜೊತೆ ಚಿತ್ರಿಸಿರುವ ಮಹಾಸತಿ ಕಲ್ಲುಗಳಾದ ವೀರಮಾಸ್ತಿ ಕಲ್ಲುಗಳಲ್ಲಿಯೂ ಇದೇ ರೀತಿ ಶಿವಲಿಂಗ, ಅದನ್ನು ಪೂಜಿಸುತ್ತಿರುವ ಯತಿ, ಬಳಿಯಲ್ಲಿ ಕುಳಿತ ವೀರ-ಮಹಾಸತಿಯರ ಚಿತ್ರಣವಿರುತ್ತದೆ. ರಟ್ಟಿಹಳ್ಳಿಯ ಒಂದು ಮಹಾಸತಿ ಕಲ್ಲಿನಲ್ಲಿ ಸುಂದರವಾದ ಪ್ರಭಾವಳಿಯ ನಡುವೆ ಮೂರುಮಂಟಪಗಳು, ಅದರೊಳಗೆ ವೀರ-ಮಹಾಸತಿ, ಶಿವಲಿಂಗ, ನಂದಿಯ ಶಿಲ್ಪವನ್ನು ಚಿತ್ರಿಸಲಾಗಿದೆ. ಈ ಮಂಟಪಗಳಿಗೆ ಸುಂದರವಾದ ಗೋಪುರಗಳನ್ನೂ ಚಿತ್ರಿಸಲಾಗಿದೆ. ಈ ಗೋಪುರ ನಾಗರಶೈಲಿಯಲ್ಲಿರುವುದು ಗಮನಾರ್ಹವಾದುದು.

ಮಹಾಸತಿ ಶಿಲೆಗಳ ಮತ್ತೊಂದು ರೂಪವಾದ ಕೇವಲ ಸತಿಯ ಬಲಕೈಯನ್ನು ಚಿತ್ರಿಸಿರುವ ಒಕ್ಕೈ ಮತ್ತು ಬಹುಕೈ ಶಿಲ್ಪಗಳಲ್ಲೂ ಮೇಲ್ಭಾಗದಲ್ಲಿ ಶಿವಲಿಂಗ, ಪೂಜಿಸುತ್ತಿರುವ ಯತಿಯ ಚಿತ್ರವಿರುತ್ತದೆ. ರಾಮನಗರ ತಾಲೂಕಿನ ಕೈಲಂಚ, ಹಾವೇರಿ ಜಿಲ್ಲೆಯ ಬೆನಕನಕೊಂಡ, ಸೊರಬ, ತವನಂದಿ ಮೊದಲಾದೆಡೆ ಈ ರೀತಿಯ ಸುಂದರವಾದ ಶಾಸನಶಿಲ್ಪಗಳಿವೆ.

ಆತ್ಮಬಲಿ ಶಿಲ್ಪಗಳು

ಕೊಟ್ಟಮಾತಿನ ಸಲುವಾಗಿ ಅಥವಾ ಧರ್ಮದ ಸಲುವಾಗಿ ಹರಕೆ ಹೊತ್ತು ಅದರಂತೆ ತಮ್ಮ ಪ್ರಾಣವನ್ನು ಅರ್ಪಿಸಿದ ತ್ಯಾಗಿಗಳ ನೆನಪಿನ ಅನೇಕ ಸ್ಮಾರಕ ಶಿಲೆಗಳು ಕರ್ನಾಟಕದಲ್ಲಿವೆ. ಶೂಲದ ಮೇಲೆ ಬಿದ್ದು, ಕೈಯ್ಯಾರೆ ಕುತ್ತಿಗೆಯನ್ನು ಕತ್ತರಿಸಿಕೊಂಡ ವಿವರ ತಿಳಿಸುವ ಅನೇಕ ಸ್ಮಾರಕ ಶಿಲೆಗಳು ದೊರಕಿವೆ. ಕ್ರಿ.ಶ. ೧೨ನೇ ಶತಮಾನದ ಅವಧಿಯ ಬಳ್ಳಿಗಾವಿಯ ಸ್ಮಾರಕ ಶಿಲೆಯೊಂದರಲ್ಲಿ ವೀರನೊಬ್ಬನು ಎತ್ತರವಾದ ಸ್ತಂಭವನ್ನೇರಿ ಕೆಳಗೆ ಚುಚ್ಚಿರುವ ಶೂಲದ ಮೇಲೆ ಬಿದ್ದು ಪ್ರಾಣ ಅರ್ಪಿಸಿರುವ ಶಿಲ್ಪ ಮನಕಲಕುವಂತಿದೆ. ಇದರ ಮೇಲ್ಭಾಗದಲ್ಲಿ, ಶಿವಲಿಂಗ ಮತ್ತು ಪೂಜಿಸುತ್ತಿರುವ ವೀರನ ಶಿಲ್ಪವಿದೆ. ಅನೇಕ ಸಿಡಿತಲೆ ಆಚರಣೆಯ ಶಿಲ್ಪದಲ್ಲೂ ಶಿವಲಿಂಗ ಮತ್ತು ಯತಿಯ ಚಿತ್ರಣಗಳು ದೊರೆಯುತ್ತವೆ.

ಹೀಗೆ ಕರ್ನಾಟಕದಲ್ಲಿ ದೊರೆಯುವ ಬಹುತೇಕ ಶಾಸನ ಪ್ರಕಾರಗಳಲ್ಲಿ ಶೈವ ವೀರಶೈವ ಧರ್ಮದ ಲಕ್ಷಣಗಳನ್ನು ಕಾಣಬಹುದು. ಆದರೆ ಒಂದು ಪ್ರಮುಖವಾದ ತೊಡಕೆಂದರೆ ಕಲ್ಯಾಣ ಚಾಲುಕ್ಯ ಮತ್ತು ಹೊಯ್ಸಳರ ಬಹುತೇಕ ಶಾಸನಗಳಲ್ಲಿ ವೀರಶೈವ ಲಕ್ಷಣಗಳ ಶಿಲ್ಪವಿದ್ದರೂ ಶಾಸನ ಪಾಠದಲ್ಲಿ ಶೈವ ಬ್ರಾಹ್ಮಣರ ವರ್ಣನೆಯಿರುತ್ತದೆ. ದಾನ ಪಡೆದವರಲ್ಲಿ ಅವರೇ ಹೆಚ್ಚು ಸಂಖ್ಯೆಯಲ್ಲಿದ್ದಾರೆ. ಇಂತಹ ಶಾಸನಗಳನ್ನು ಶಿವನಿಗೆ ಸಂಬಂಧಿಸಿದ ಶಾಸನಗಳೆಂದು ಮಾತ್ರ ನಾವು ತೃಪ್ತಿಪಟ್ಟುಕೊಳ್ಳಬೇಕಾಗಿದೆ. ವೀರಶೈವ ಧರ್ಮದ ಶಾಸನಪಾಠಗಳನ್ನು ಮೊದಲು ಸಂಗ್ರಹಿಸಿ ಆ ನಂತರ ಅವುಗಳ ಶಿಲ್ಪವನ್ನು ಅಧ್ಯಯನ ಮಾಡಿದಾಗ ನಮಗೆ ಹೊಸ ಸಂಗತಿಗಳು ದೊರೆಯಬಹುದು. ಇದಕ್ಕೆ ವ್ಯಾಪಕ ಕ್ಷೇತ್ರಕಾರ್ಯ, ಹೆಚ್ಚು ಸಮಯದ ಅಗತ್ಯವಿದೆ. ಆದರೆ ಇದು ಜರೂರಾಗಿ ಆಗಬೇಕಾದ ಕಾರ್ಯವಾಗಿದೆ.

ಆಧಾರ ಗ್ರಂಥಗಳು

೧. ಚಿದಾನಂದಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ

೨. ಕಲಬುರ್ಗಿ ಎಂ.ಎಂ., ಶಾಸನಗಳಲ್ಲಿ ಶಿವಶರಣರು

೩. ಪರಮಶಿವಮೂರ್ತಿ ಡಿ.ವಿ., ಕನ್ನಡ ಶಾಸನಶಿಲ್ಪ

ಕರ್ನಾಟಕದ ವೀರಶೈವ ಅರಸುಮನೆತನಗಳು

✍ ಡಾ. ಡಿ.ಎಸ್. ಯೋಗೀಶ್ವರಪ್ಪ

ಒಂದು ಪ್ರದೇಶವನ್ನು ಆಳಿದ ಮನೆತನವನ್ನು ಸಾಮಾನ್ಯವಾಗಿ ಅರಸು ಮನೆತನ ಎಂದು ಕರೆಯಲಾಗಿದೆ. ಅವನ ಪ್ರದೇಶ ಪ್ರಾಂತ್ಯ, ನಾಡು, ಮಹಾನಾಡು, ಸೀಮೆ ಎಂಬ ಭೇದ ಭಾವ ಇಲ್ಲದೆ ಇರಬಹುದು. ಆದರೂ ಅದಕ್ಕೆ ರಾಜ್ಯ ಹಾಗೂ ರಾಜ ಎಂಬ ಪದವನ್ನು ಬಳಸುತ್ತಲೇ ಇದ್ದೇವೆ. ಆದುದರಿಂದ ರಾಜ್ಯದ ಹುಟ್ಟು ಎಂದರೆ ಒಂದು ರಾಜಕೀಯ ಸಂಸ್ಥೆಯ ಹುಟ್ಟೆಂದು ಪರಿಗಣಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಕರ್ನಾಟಕವನ್ನಾಳಿದ ಅನೇಕ ರಾಜ್ಯಗಳು ತಮ್ಮದೇ ಆದ ಧರ್ಮವನ್ನು ಅನುಸರಿಸುತ್ತಿರುವುದನ್ನು ನೋಡುತ್ತೇವೆ. ಅವುಗಳನ್ನು ನಾವು ಶೈವ, ವೈಷ್ಣವ, ವೀರಶೈವ, ಜೈನ, ಮುಸ್ಲಿಂ ಮುಂತಾದ ಧರ್ಮಗಳ ಹಿನ್ನೆಲೆಯಲ್ಲಿ ವಿಂಗಡಿಸಬಹುದು. ವೀರಶೈವ ಕರ್ನಾಟಕದ ಬಹು ದೊಡ್ಡ ಜನಾಂಗ. ಆದುದರಿಂದಲೇ ಈ ರಾಜ್ಯದ ರಾಜಕೀಯ ಚಟುವಟಿಕೆಗೆ ಅವರ ನೆರವು ಎಲ್ಲಾ ಕಾಲಕ್ಕೂ ಅನಿವಾರ್ಯವಾಗಿತ್ತು. ವೀರಶೈವ ಧರ್ಮ ೧೨ನೇ ಶತಮಾನದಲ್ಲಿ ಪೂರ್ಣಪ್ರಕಟಗೊಂಡಾಗ ರಾಜಕೀಯ ವಿಚಾರದಲ್ಲಿ ವೀರಶೈವರು ಹೆಚ್ಚು ಹೆಚ್ಚಾಗಿ ಕಾಣಿಸಿಕೊಂಡರು. ಕಲ್ಯಾಣ ಚಾಲುಕ್ಯರು, ಕಲಚೂರಿಗಳು, ಹೊಯ್ಸಳರು, ಯಾದವರು, ವಿಜಯನಗರ ಕಾಲಗಳಲ್ಲಿ ಅವರ ಪ್ರಾಬಲ್ಯವನ್ನು ಕಾಣಬಹುದು. ನಂತರ ವಿಜಯನಗರೋತ್ತರ ಕಾಲದಲ್ಲಿ ಬಂದಂತಹ ಅಮರನಾಯಕರ ಮನೆತನಗಳಲ್ಲಿ ಈ ಧರ್ಮದ ಪಾತ್ರ ಅಗಾಧವಾಗಿದೆ. ದಾಖಲೆಗಳಲ್ಲಿ ಸಿಗುವ ಈ ನಾಡಿನ ಶೈವ ಮತ್ತು ವೀರಶೈವ ಸೂಚನೆಗಳನ್ನು ಪ್ರತ್ಯೇಕಿಸುವುದು ಕಷ್ಟವಾಗಿರುವುದರಿಂದ ಪ್ರಾಚೀನ ವೀರಶೈವ ಅರಸು ಮನೆತನಗಳನ್ನು, ವೀರಶೈವ ಅರಸರನ್ನು ನಿರ್ದಿಷ್ಟವಾಗಿ ಗುರುತಿಸುವುದು ಸುಲಭ ಸಾಧ್ಯವಲ್ಲ, ಹೀಗಿದ್ದೂ ವೀರಶೈವ ಕಾವ್ಯಗಳ ಬಲದಿಂದ ಈ ಕಾರ್ಯವನ್ನು ಸ್ವಲ್ಪಮಟ್ಟಿಗೆ ಮಾಡಬಹುದಾಗಿದೆ. ಪ್ರಸ್ತುತವಾಗಿ ಹೇಳಬೇಕೆಂದರೆ ಕಲ್ಯಾಣಿ ಚಾಲುಕ್ಯರಿಗೆ ಪೂರ್ವದಲ್ಲಿಯೇ (ವೀರ)ಶೈವ ದೊರೆಗಳನ್ನು ಊಹಿಸಬಹುದು.

ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡು, ಕೇರಳ ಪ್ರಾಂತ್ಯಗಳಲ್ಲಿ ಹರಡಿಕೊಂಡಿರುವ ಕರ್ನಾಟಕದಲ್ಲಿ ಸಾಂದ್ರವಾಗಿರುವ ವೀರಶೈವವು ಸಮಗ್ರ ದಕ್ಷಿಣ ಭಾರತದಲ್ಲಿ ಭೌಗೋಳಿಕವಾಗಿ ಒಂದು ಪ್ರಧಾನ ಸಮಾಜ, ಸಾಂಸ್ಕೃತಿಕವಾಗಿ ಒಂದು ಪರಿಪೂರ್ಣ ಸಮಾಜ. ಕರ್ನಾಟಕದಲ್ಲಿ ಕೆಲವು ಸಮಾಜಗಳು ಸಂಖ್ಯಾತ್ಮಕವಾಗಿ ಗಣ್ಯವಾಗಿರಬಹುದು. ವೀರಶೈವ ಸಂಖ್ಯಾತ್ಮಕದೊಂದಿಗೆ ಧಾರ್ಮಿಕ, ಸಾಹಿತ್ಯಕ, ಶೈಕ್ಷಣಿಕ, ರಾಜಕೀಯ ಮೊದಲಾದ ಆಯಾಮಗಳನ್ನು ಅಳವಡಿಸಿಕೊಂಡು ಗುಣಾತ್ಮಕವಾಗಿಯೂ ಗಣ್ಯವೆನಿಸಿದೆ. ಈ ಅರ್ಥದಲ್ಲಿ ಪರಿಪೂರ್ಣ ಸಮಾಜವೆನಿಸುತ್ತದೆ. ಆಧುನಿಕ ಕರ್ನಾಟಕದಲ್ಲಿ ಈ ಸಮಾಜದ ಧಾರ್ಮಿಕ ಮತ್ತು ಸಾಹಿತ್ಯಕ ಆಯಾಮಗಳ ಅಧ್ಯಯನ ಮಾತ್ರ ನಡೆದು ರಾಜಕೀಯ ಅಧ್ಯಯನ ಉಪೇಕ್ಷೆಗೆ ಗುರಿಯಾಗಿದೆ. ಇತ್ತೀಚಿನ ಕಾಲಗಳಲ್ಲಿ ಉಪಸಂಸ್ಕೃತಿಗಳ ಅಧ್ಯಯನ ವೇಗವಾಗಿ ಸಾಗುತ್ತಿರುವುದರಿಂದ ಮುಖ್ಯ ಅರಸು ಮನೆತನಗಳ ಜೊತೆ ಸೂಕ್ಷ್ಮ ಅರಸು ಮನೆತನಗಳ ಅಧ್ಯಯನವೂ ಆಗಬೇಕಾಗಿದೆ. ಇದರ ಪರಿಣಾಮವೆಂಬಂತೆ ವೀರಶೈವ ಅರಸು ಮನೆತನಗಳ ಅಧ್ಯಯನವೂ ಅಲ್ಲಲ್ಲಿ ಕಾಣಿಸಿಕೊಳ್ಳುತ್ತಿದೆ. ಹೊಯ್ಸಳ ಪತನಾನಂತರ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾದಾಗ ಕೇಂದ್ರೀಕರಣಕ್ಕಿಂತ ವಿಕೇಂದ್ರೀಕರಣಕ್ಕೆ ಅವರು ಹೆಚ್ಚಿನ ಆದ್ಯತೆ ನೀಡಿದಾಗ ಆ ಕಾಲದಲ್ಲಿ ಅನೇಕ ಪಾಳೆಯಗಾರ ಮನೆತನಗಳು ಅಲ್ಲಲ್ಲಿ ಹುಟ್ಟಿದವು. ಆ ವೇಳೆಗೆ ಸಂಖ್ಯಾತ್ಮಕವಾಗಿ ದೊಡ್ಡದೂ, ಗುಣಾತ್ಮಕವಾಗಿ ಗಮನಾರ್ಹವೂ ಆದ ವೀರಶೈವ ಸಮಾಜ ಸಹಜವಾಗಿಯೇ ರಾಜಕೀಯದಲ್ಲಿ ಅನಿವಾರ್ಯ ಎನಿಸಿ ಪಾಳೆಯಗಾರರನ್ನು ಮತಾಂತರಿಸಿಕೊಳ್ಳುವಲ್ಲಿ ಆ ಸಂಖ್ಯೆ ಇನ್ನೂ ಹೆಚ್ಚಾಯಿತು.

ಆಧಾರಗಳು:

ಕರ್ನಾಟಕದಲ್ಲಿ ಉದಯಿಸಿದ ವೀರಶೈವ ಅರಸು ಮನೆತನಗಳ ಚರಿತ್ರೆಯ ನಿರ್ಮಾಣಕ್ಕೆ ನೆರವಾಗುವ ಆಧಾರಗಳು ಭಾಷೆಗಳ ದೃಷ್ಟಿಯಿಂದ ವೈವಿಧ್ಯಪೂರ್ಣವಾಗಿವೆ. ಆಕರ ಸಾಮಗ್ರಿಯಾದ ಶಾಸನಗಳು, ವಾಸ್ತುಶಿಲ್ಪ, ಕಾವ್ಯ, ಹಸ್ತಪ್ರತಿಗಳ ಅಂತ್ಯ, ವದಂತಿ ಇನ್ನೂ ಉಳಿದು ಬಂದಿರುವ ರಾಜಕುಟುಂಬದವರ ಸಂದರ್ಶನ ಇತ್ಯಾದಿಗಳ ಸಹಾಯದಿಂದ ರೂಪಿಸಬೇಕಾಗುತ್ತದೆ. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯಗಳಂಥ ಚಾರಿತ್ರಿಕ ಕೃತಿಗಳು, ಆರಾಧ್ಯ ಚಾರಿತ್ರ್ಯ, ಮಳೆಯರಾಜನ ಕಾವ್ಯಗಳ ಪೀಠಿಕೆಯಂಥ ಅವತರಣಿಕೆಗಳು, ಮೆಕಂಜಿಯ ಹಸ್ತಪ್ರತಿಗಳು, ವಂಶಾವಳಿ, ಕೈಫಿಯತ್ತು, ಬಖೈರುಗಳು, ಜಾನಪದ ಸಾಹಿತ್ಯ, ಆಚರಣೆಗಳೂ ಕೂಡಾ ಮುಖ್ಯ ಎನಿಸುತ್ತವೆ. ಕನ್ನಡ, ಸಂಸ್ಕೃತ, ಪ್ರಾಕೃತ ಭಾಷೆಗಳ ಸಾಹಿತ್ಯದ ಜೊತೆಗೆ, ತಮಿಳು, ತೆಲುಗು, ಮರಾಠಿ ಸಾಹಿತ್ಯ ಕೃತಿ-ದಾಖಲೆಗಳು, ಪೋರ್ಚುಗೀಸ್, ಡಚ್, ಫ್ರೆಂಚ್, ಇಂಗ್ಲೀಷ್ ಭಾಷೆಯ ದಾಖಲೆಗಳೂ ಕೂಡಾ ನೆರವಾಗುತ್ತವೆ. ಹೀಗೆ ವೀರಶೈವ ಅರಸು ಮನೆತನಗಳ ಅಧ್ಯಯನದಲ್ಲಿ ನಾವು ವಿಭಿನ್ನ ಆಕರಗಳನ್ನು ಅವಲಂಬಿಸಬೇಕಾಗುತ್ತದೆ.

ಅಧ್ಯಯನ:

ವೀರಶೈವ ಅರಸು ಮನೆತನಗಳ ಒಟ್ಟಾರೆಯ ಅಧ್ಯಯನ ಇದುವರೆಗೆ ನಡೆದಿಲ್ಲವೆಂದೇ ಹೇಳಬಹುದು. ಅಲ್ಲಲ್ಲಿ ಈ ಮನೆತನಗಳನ್ನು ಕುರಿತಂತೆ ಲೇಖನಗಳು ಪ್ರಕಟಗೊಂಡಿವೆ. ಪದ್ಮಶ್ರೀ ಬಿ. ಶಿವಮೂರ್ತಿಶಾಸ್ತ್ರಿಗಳು ವೀರಶೈವ ರಾಜಮನೆತನಗಳು ಎಂಬ ಲೇಖನ ೧೯೭೭ರಲ್ಲಿ ಪ್ರಕಟಗೊಂಡಿದೆ. ಡಾ. ಎಂ.ಎಂ. ಕಲಬುರ್ಗಿಯವರು ತಮ್ಮ ಮಾರ್ಗ-೧ರಲ್ಲಿ ಈ ಮನೆತನಗಳ ಒಟ್ಟಾರೆ ಅಧ್ಯಯನಕ್ಕೆ ಪ್ರಯತ್ನಿಸಿದ್ದಾರೆ. ಪ್ರೊ. ಲಕ್ಷ್ಮಣ ತೆಲಗಾವಿಯವರು "ಸಿದ್ಧಗಂಗಾಶ್ರೀ"ಯಲ್ಲಿ, ಪ್ರೊ. ಎಂ.ಜಿ. ನಾಗರಾಜು "ನಿಜಗುಣ" ಸಂಸ್ಮರಣ ಸಂಪುಟದಲ್ಲಿ ವೀರಶೈವ ಅರಸು ಮನೆತನಗಳ ಬಗ್ಗೆ ಅಧ್ಯಯನ ನಡೆಸಿ ಲೇಖನ ರಚಿಸಿದ್ದಾರೆ. ಆದರೆ ಇದಕ್ಕಿಂತ ಮಿಗಿಲಾಗಿ ಬಿಜಾಪುರ ಜಿಲ್ಲೆಯ ಸಿಂಧಗಿಯ ಸಾರಂಗ ಮಠದವರು ಡಾ. ಎಂ.ಎಂ. ಕಲಬುರ್ಗಿಯವರ ಸಂಪಾದಕತ್ವದಲ್ಲಿ ೨೫ ವೀರಶೈವ ಮನೆತನಗಳನ್ನು ಕುರಿತಂತೆ ವಿವಿಧ ಲೇಖಕರಿಂದ ಲೇಖನಗಳನ್ನು ಬರೆಯಿಸಿ 'ಸಾರಂಗಶ್ರೀ' ಎಂಬ ಶೀರ್ಷಿಕೆಯಡಿ ಪುಸ್ತಕ ರೂಪದಲ್ಲಿ ಹೊರತಂದಿದ್ದಾರೆ.

ವೀರಶೈವ ಅರಸುಮನೆತನ ಕುರಿತಂತೆ ಒಂದೊಂದೇ ಮನೆತನಗಳ ಸಮಗ್ರ ಅಧ್ಯಯನ ಕೈಗೊಳ್ಳಲಾಗಿದ್ದು ಮೊದಲಿಗೆ ಡಾ. ಡಿ.ಎನ್. ಯೋಗೀಶ್ವರಪ್ಪನವರು ಹಾಗಲವಾಡಿ ನಾಯಕರು, ಡಾ. ಕೆಳದಿ ವೆಂಕಟೇಶ್ ಜೋಯಿಸ್‌ರವರು ಕೆಳದಿ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಡಾ. ಎಂ.ಜಿ. ವಾರಿಯವರ ಸೋದೆ ಅರಸುಮನೆತನ -ಒಂದು ಅಧ್ಯಯನ, ಡಾ. ಮಲ್ಲಿಕಾರ್ಜುನ ಫ. ಕುಲಕರ್ಣಿಯವರ ಬಿಜ್ಜಾವರ ಮಹಾನಾಡ ಪ್ರಭುಗಳ ಅಧ್ಯಯನ ಮುಂತಾದವನ್ನು ಹೆಸರಿಸಬಹುದು. ಅನೇಕ ಕಡೆ ಈ ಮನೆತನಗಳ ಬಗೆಗೆ ವಿಚಾರ ಸಂಕಿರಣಗಳು ನಡೆದು ಅಲ್ಲಿನ ಉಪನ್ಯಾಸಗಳು ಪುಸ್ತಕ ರೂಪದಲ್ಲಿ ಪ್ರಕಟಗೊಂಡಿದೆ. ಅವುಗಳಲ್ಲಿ ಡಾ|| ಎಂ.ಎಂ. ಕಲಬುರ್ಗಿಯವರ ಸಂಪಾದಕತ್ವದ ಮಲೆನಾಡು ವೀರಶೈವ ಅಧ್ಯಯನ ಸಂಸ್ಥೆ, ಶಿವಮೊಗ್ಗದಿಂದ ಪ್ರಕಟಗೊಂಡಿರುವ ಕೆಳದಿ ಸಂಸ್ಥಾನ-ಸಮಗ್ರ ಅಧ್ಯಯನ, ನೊಳಂಬ ವೀರಶೈವ ಸಂಘ ಬೆಂಗಳೂರು ಪ್ರಕಟಿಸಿರುವ ಡಾ. ಎಂ.ಎಂ. ಕಲಬುರ್ಗಿಯವರ ಸಂಪಾದಕತ್ವದ ಮಹಾನಾಡ ಪ್ರಭುಗಳು, ಡಾ. ಅ. ಸುಂದರ, ಡಾ. ಎಂ.ಎಂ. ಕಲಬುರ್ಗಿಯವರ ಸಂಪಾದಕತ್ವದ ವೀರಶೈವ ಅಧ್ಯಯನ ಸಂಸ್ಥೆ-ಗದಗಿನ ಸ್ವಾದಿ ಅರಸು ಮನೆತನ, ಡಾ. ಹೆಚ್. ರಘುನಾಥ್ ಭಟ್ಟರ ಸಂಪಾದಕತ್ವದ ವೀರಶೈವ ಅಧ್ಯಯನ ಆಕಾಡೆಮಿ, ಬೆಳಗಾವಿ ಪ್ರಕಟಿಸಿರುವ ಬೀಳಗಿ ಅರಸು ಮನೆತನ, ಡಾ. ಕೆ.ಎಸ್. ಶಿವಣ್ಣ ಸಂಪಾದಕತ್ವದ ಜಗದ್ಗುರು ಶಿವರಾತ್ರೀಶ್ವರ ಗ್ರಂಥಮಾಲೆ ಮೈಸೂರು ಪ್ರಕಟಿಸಿರುವ ಕಳಲೆ ಮನೆತನದ

ವೀರಶೈವ ದಳವಾಯಿಗಳು, ಡಾ. ಎಸ್. ವಿದ್ಯಾಶಂಕರ್ ಸಂಪಾದಿಸಿರುವ ಹದಿನಾಡು ವೀರಶೈವ ಅರಸು ಮನೆತನ, ಪಿ.ವಿ. ಕೃಷ್ಣಮೂರ್ತಿಯವರ ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ ಪ್ರಕಟಿಸಿರುವ ಸುಗುಟೂರು ವೀರಶೈವ ಅರಸು ಮನೆತನ ಇತ್ಯಾದಿ.

ಇದೇ ರೀತಿ ಒಂದೊಂದು ಮನೆತನದ ಬಗೆಗೂ ಅನೇಕ ಬಿಡಿ ಲೇಖನಗಳು ವಿವಿಧ ಕಡೆ ಪ್ರಕಟಗೊಂಡಿವೆ. ಪುಟ ಮಿತಿಯಿಂದ ಕೈಬಿಡಲಾಗಿದೆ. ಇತ್ತೀಚಿನ ಹಂಪೆಯ ಕನ್ನಡ ವಿಶ್ವವಿದ್ಯಾಲಯದವರು ವಿವಿಧ ಕಡೆ ಸಣ್ಣ ಅರಸು ಮನೆತನಗಳ ಬಗ್ಗೆ ವಿಚಾರ ಸಂಕಿರಣ ನಡೆಸಿ ಅದರ ಫಲಶ್ರುತಿಯನ್ನು ದಕ್ಷಿಣಕರ್ನಾಟಕದ ಸ್ಥಾನಿಕ ಪ್ರಭುಗಳು, ಮಲೆಕರ್ನಾಟಕ ಅರಸು ಮನೆತನಗಳು, ತುಳುಕರ್ನಾಟಕ ಅರಸು ಮನೆತನಗಳು, ಎಂಬ ಶೀರ್ಷಿಕೆಯಡಿ ಮೂರು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಹೀಗೆ ಈ ಅರಸು ಮನೆತನಗಳ ಬಗೆಗೆ ಹಲವು ನಿಟ್ಟಿನ ಅವಲೋಕನದಿಂದ ಈ ಲೇಖನವನ್ನು ಬರೆಯಲಾಗಿದೆ.

ವೀರಶೈವ ಅರಸು ಮನೆತನಗಳ ಬೆಳವಣಿಗೆಯನ್ನು ನಾವು ಎರಡು ಹಂತಗಳಲ್ಲಿ ಗುರುತಿಸಬಹುದು:

೧. ವಿಜಯನಗರ ಪೂರ್ವ ಕಾಲದ ವೀರಶೈವ ಅರಸರು

೨. ವಿಜಯನಗರ - ನಗರೋತ್ತರ ಕಾಲದ ವೀರಶೈವ ಅರಸರು

ಈ ವೀರಶೈವ ಅರಸು ಮನೆತನಗಳು ಎಲ್ಲಿಯೂ ತಮ್ಮ ಧರ್ಮವನ್ನು ಬಲವಂತವಾಗಿ ಸಾಮಾನ್ಯ ಜನತೆಯ ಮೇಲೆ ಹೇರಿದಂತೆ ಕಂಡುಬಂದಿಲ್ಲ. ಕರ್ನಾಟಕದಲ್ಲಿ ಆಳ್ವಿಕೆ ನಡೆಸಿದ ವೀರಶೈವ ರಾಜಮನೆತನಗಳನ್ನು ಮೂರು ಬಗೆಗಳಲ್ಲಿ ಗುರುತಿಸಬಹುದು:

೧. ಮೂಲದಿಂದ ವೀರಶೈವ ಧರ್ಮ ಅವಲಂಬಿಸಿದವರು.

೨. ಅವೀರಶೈವ ರಾಜಮನೆತನ ಒಂದು ಹಂತದಲ್ಲಿ ವೀರಶೈವ ರಾಜಮನೆತನವಾದುದು.

೩. ಅವೀರಶೈವ ರಾಜಮನೆತನದಲ್ಲಿ ಒಂದೆರಡು ಮಂದಿ ಅರಸರು ವೀರಶೈವರಾದುದು.

ಇವುಗಳಲ್ಲಿ ಎರಡನೆ ಬಗೆಯ ವೀರಶೈವ ರಾಜಮನೆತನಗಳ ಸಂಖ್ಯೆ ಅಧಿಕವಾಗಿದೆ. ಈ ರೀತಿಯ ವರ್ತನೆಗೆ ಕೇವಲ ಆ ಧರ್ಮದ ಮೇಲಿದ್ದ ನಂಬಿಕೆ, ಪ್ರೀತಿ ಕಾರಣವಾಗಿರದೆ ರಾಜಕೀಯ, ಸಾಮಾಜಿಕ, ಆರ್ಥಿಕ ಕಾರಣಗಳೂ ಇದ್ದವೆಂಬುದನ್ನು ಅಲ್ಲಗಳೆಯಲಾಗದು.

ವಿಜಯನಗರ ಪೂರ್ವಕಾಲದ ವೀರಶೈವ ಅರಸರು

ಕಲ್ಯಾಣಿ ಚಾಲುಕ್ಯರು:

ಕಲ್ಯಾಣಿ ಚಾಲುಕ್ಯರ ಕಾಲದ ವೀರಶೈವ ಅರಸರನ್ನು ಕಾವ್ಯಗಳಿಂದ ಗುರ್ತಿಸಬಹುದು. ಕುಮಾರ ಪದ್ಮರಸ ಎಂಬ ಕವಿಯು ಬರೆದಿರುವ ಸಾನಂದ ಚರಿತೆಯು ಶಿವನ ಒಡ್ಡೋಲಗದೊಳಗೆ ಬಸವ, ಚೆನ್ನಬಸವ ಮುಂತಾದ ಶರಣರ ಮಧ್ಯ "ಅಹವ ಮಲ್ಲನುಪ್ಪಳನುಂ" ಎಂದು ತಿಳಿಸುತ್ತದೆ. ಅಂದರೆ ಕಲ್ಯಾಣಿ ಚಾಲುಕ್ಯ ಮನೆತನದ ಸ್ಥಾಪಕನಾದ ಇಮ್ಮಡಿ ತೈಲಪನೇ ಆಹಮಮಲ್ಲನೆಂದೂ ಹೇಳಬಹುದು. ಈತನ ತಾಯಿ ಬೊಂತಾದೇವಿ. ಇವಳ ಹೆಸರನ್ನು ವೀರಶೈವ ಪುರಾಣಗಳು ಪ್ರಸ್ತಾಪಿಸುತ್ತವೆ. ಆದುದರಿಂದ ಈ ಪುರಾಣಗಳ ಪ್ರಕಾರ ಕಲ್ಯಾಣಿ ಚಾಲುಕ್ಯರ ಆರಂಭಿಕ ಅರಸರಲ್ಲಿ ಒಬ್ಬಿಬ್ಬರು ವೀರಶೈವರಾಗಿರಬಹುದು. ದೇವರ ದಾಸಿಮಯ್ಯ ಆ ಕಾಲಕ್ಕೆ ಸೇರಿದವನಾಗಿದ್ದು ತೈಲಪನ ಮೊಮ್ಮಗ ಜಯಸಿಂಹನ ಪತ್ನಿ ಸುಗ್ಗಲೆಯ ಗುರುವಾಗಿದ್ದನು. ಇವನು ಶಿವಭಕ್ತನಾಗಿರದೆ, ವೀರಶೈವ ಧರ್ಮದ ಮಹಿಮಾನ್ವಿತನಾಗಿದ್ದನು. ಇವನ ಪ್ರಭಾವದಿಂದ ಇವರಿಬ್ಬರೂ ವೀರಶೈವ

ದೀಕ್ಷೆ ಪಡೆದರೆಂದು ನಮ್ಮ ಪುರಾಣಗಳು ತಿಳಿಸುತ್ತವೆ. ಜಯಸಿಂಹ-ಸುಗ್ಗಲೆಯರ ಮಗನಾದ ಸೋಮೇಶ್ವರ' ಕಲ್ಯಾಣವನ್ನು ಶಿವಶರಣರ ಪಟ್ಟಣವನ್ನಾಗಿ ಮುಂದೆ ಬೆಳೆಸಿದನು.

ಕಲ್ಯಾಣಿ ಚಾಲುಕ್ಯ ಚಕ್ರವರ್ತಿ ಆರನೇ ವಿಕ್ರಮಾದಿತ್ಯನ ಪಿರಿಯರಸಿ ಎಂದೇ ಖ್ಯಾತಳಾದ ರಾಣಿ ಲಕ್ಷ್ಮಾದೇವಿಯ ಬಗೆಗೆ ಹರಿಹರನ ತೆಲುಗು ಜೊಮ್ಮಯ್ಯನ ರಗಳೆ ಅವಳ ಶಿವಭಕ್ತಿಯ ಬಗೆಗೆ ಅನೇಕ ವಿವರಗಳನ್ನು ನೀಡುತ್ತದೆ. ಇಂಡಿ ತಾಲೂಕಿನ ಖೇಡಗಿ ಗ್ರಾಮದವಳಾದ ಈಕೆಯ ತಂದೆ ಕಂಕೋಜ, ತಾಯಿ ಮಸಣಿಕವೆ ನಾಯಕಿತಿ. ಇವಳು ದ್ರೋಣಪುರ, ಧರ್ಮಾಪುರದಲ್ಲಿ ಆಳ್ವಿಕೆ ನಡೆಸಿದ್ದಾಳೆ. ಶಿವಭಕ್ತೆಯಾದ ಈಕೆ ತೆಲುಗು ಜೊಮ್ಮಯ್ಯನಿಗೆ ನಿತ್ಯ ವಸ್ತ್ರ, ಧೂಪ, ಕಸ್ತೂರಿ, ಹೂವು ಮುಂತಾದ ಪೂಜಾ ಸಾಮಗ್ರಿಗಳನ್ನು ಕಳುಹಿಸುತ್ತಿದ್ದಳು. ಇವಳು ತಮ್ಮ ಮನೆದೇವರಾದ ಕಂಕೇಶ್ವರ ದೇವರಿಗೆ ಭೂಮಿ, ನಿವೇಶನ, ಹೂವಿನ ತೋಟ ದಾನಮಾಡಿದ್ದಾಳೆ. ಆದ್ದರಿಂದಲೇ ಡಂಬಳ ಶಾಸನ ಈಕೆಯನ್ನು 'ಮಹಾದಾನ ವಿನೋದೆ' ಎಂದು ಕರೆದಿದೆ.

ಹರಿಹರ ಕವಿಯ ಪ್ರಕಾರ, ಸಾಮಂತನಾಗಿದ್ದ ತೆಲುಗು ಜೊಮ್ಮಯ್ಯ "ವೇಳೆವಾಳಿಯೊಳಿರ್ಪನಾ ಭೀಮನಾಥಂಗೆ, ಜೋಳವಾಳಿಯೊಳಿರ್ಪನಾ ದರನಾಥಂಗೆ" ಎಂಬ ಹರಿಹರನ ಉಲ್ಲೇಖದಂತೆ ಜೊಮ್ಮಯ್ಯನು ಆರನೇ ವಿಕ್ರಮಾದಿತ್ಯನಲ್ಲಿ ಅಧಿಕಾರಿಯಾಗಿ ಆಡಳಿತ ನಡೆಸಿದ್ದಾನೆ ಎನ್ನಬಹುದು.

ಆರನೇ ವಿಕ್ರಮಾದಿತ್ಯನ ಮಂತ್ರಿಯಾದ ಕೊಂಡಗುಳಿ ಕೇಶಿರಾಜನು ಮಂತ್ರಿಯಾಗಿದ್ದು ನಿಂಬಣ ದಂಡನಾಥನ ಮಗನಾಗಿದ್ದನು. ಕ್ರಿ.ಶ. ೧೧೦೭ರ ಕೊಂಡಗುಳಿ ಶಾಸನವು ಇವನನ್ನು ಮಹಾಸಾಮಂತಾಧಿಪತಿ ಎಂದು ಬಣ್ಣಿಸಿದೆ. ವೀರಶೈವ ಪುರಾಣಗಳ ಪ್ರಕಾರ ಅರಸನಿಗೆ ಮಣಿಯದೆ ದಂಡನಾಯಕ ಪದವಿಯನ್ನು ತ್ಯಜಿಸಿದ ನಿರ್ಮೋಹಿ, ನಿರ್ಭಿಡೆಯ ಶರಣನಾಗಿದ್ದಾನೆ. ಇವನು ಆಡಳಿತ ಶ್ರೇಷ್ಠ ಅಲ್ಲದೆ, ಕವಿಶ್ರೇಷ್ಠನೂ ಆಗಿದ್ದು ೭ ಕೃತಿಗಳನ್ನು ರಚಿಸಿದ್ದಾನೆ. ಉದಾಹರಣೆಗೆ ಮಂತ್ರ ಮಹತ್ವದ ಕಂದ, ಲಿಂಗಸ್ತೋತ್ರದ ಕಂದ, ಶೀಲಮಹತ್ವದ ಕಂದ, ನವರತ್ನಮಾಲೆ. ಇವುಗಳಲ್ಲಿ ದಾಸೋಹ, ಕಾಯಕ, ಗುರು, ಲಿಂಗ, ಜಂಗಮ ಇತ್ಯಾದಿ ವೀರಶೈವ ಪಾರಿಭಾಷಿಕ ಪದಗಳು ವ್ಯಾಖ್ಯೆ ಸಹಿತ ಕಂಡುಬರುತ್ತವೆ. ಇವನ ಕೆಲವು ಕಂದಪದ್ಯಗಳು ಬಸವಣ್ಣನಲ್ಲಿ ವಚನಗಳಾಗಿ ನಿಂತಿವೆ ಎಂದು ಡಾ. ಎಂ.ಎಂ. ಕಲಬುರ್ಗಿ ತೋರಿಸಿಕೊಟ್ಟಿದ್ದಾರೆ.

ಹರಿಹರನ ರಗಳೆಯಲ್ಲಿ ಕೋವೂರ ಬ್ರಹ್ಮಯ್ಯ ಎಂಬ ವ್ಯಕ್ತಿಯ ಉಲ್ಲೇಖವಿದ್ದು ಅವನನ್ನು ಅಲ್ಲಿ ಚಾಲುಕ್ಯ ವಂಶದವನೆಂದು ಹೇಳಲಾಗಿದೆ. ಗಣಸಹಸ್ರನಾಮಾವಳಿಯು ಚಾಲುಕ್ಯ ಭೀಮನನ್ನು ಹೆಸರಿಸುವುದರಿಂದ ಇಬ್ಬರ ಬಗೆಗೂ ಹೆಚ್ಚಿನ ಆಧಾರಗಳು ಲಭ್ಯವಾಗದೆ ಇರುವುದರಿಂದ ಸದ್ಯಕ್ಕೆ ಯಾವುದೇ ತೀರ್ಮಾನ ಮಾಡಲು ಸಾಧ್ಯವಾಗದು. ಇವರೆಲ್ಲರೂ ಬಸವಪೂರ್ವ ಯುಗದಲ್ಲಿ ಆಗಿಹೋದ ಅರಸರು, ಸಾಮಂತರು, ಅಧಿಕಾರಿಗಳಾಗಿದ್ದಾರೆ.

ಕಲಚೂರಿಗಳ ಕಾಲದಲ್ಲಿ:

ಕಲಚೂರಿಗಳ ಕಾಲದಲ್ಲಿ ವೀರಶೈವದ ಕ್ರಾಂತಿಯು ಸಂಭವಿಸಿದಾಗ ಬಸವಣ್ಣ ಅದರ ನಾಯಕನಾಗಿದ್ದ. ಆತ ಕಲಚೂರಿ ಚಕ್ರವರ್ತಿ ಬಿಜ್ಜಳನ ಮಹಾಮಂತ್ರಿಯಾಗಿದ್ದನು. ಶರಣರ ಸಂಘಟನೆಯ ಮುಖಾಂತರ ಸಮಾಜದಲ್ಲಿನ ಭೇದಗಳ ಮುಸುಕನ್ನು ತೆಗೆದುಹಾಕಿದ ಮಹಾನ್ ವ್ಯಕ್ತಿ. ಯುಗಪುರುಷನೆನಿಸಿದ ಬಸವಣ್ಣನ ಬಗ್ಗೆ ಅರ್ಜುನವಾಡ ಶಾಸನ ಬೆಳಕನ್ನು ಚೆಲ್ಲುತ್ತದೆ.

ಇವನ ತರುವಾಯ ಚೆನ್ನಬಸವಣ್ಣ ಬಿಜ್ಜಳನ ಮಂತ್ರಿಯಾದವನು ಬಿಜ್ಜಳನನ್ನು ಕೊಂದ ಜಗದೇವನನ್ನು ಶಾಸನಗಳು "ಜಗದೇವ ದಣ್ಣಾಯಕ" ಎಂದು ಕರೆದಿರುವುದರಿಂದ ಈತನು ದಂಡನಾಯಕನೆಂದು ವ್ಯಕ್ತವಾಗುತ್ತದೆ. ಬಿಜ್ಜಳನ ಕಾಲದ ಶರಣ ಸೊಡ್ಡಳಬಾಚರಸ ಕರಣಿಕನಾಗಿದ್ದನು. ಶರಣರಾದ ರಾಯಸದ ಮಂಚಣ್ಣ, ಬೊಕ್ಕಸದ ಸಂಗಣ್ಣ ಆ ಕಾಲದ ಅಧಿಕಾರಿಗಳೇ

ಆಗಿದ್ದರು. ಸಕಲೇಶ ಮಾದರಸನು ಕಲ್ಲುಕುರಿಕೆಯ ಅರಸನೆಂದು ತಿಳಿದುಬರುತ್ತದೆ. ಸಿಮ್ಮಲಿಗೆಯ ಚಂದಿಮರಸ ಹೆಸರೇ ಸೂಚಿಸುವಂತೆ ಅರಸನಾಗಿದ್ದಿರಬೇಕು ಎಂದು ಡಾ. ಎಂ.ಎಂ. ಕಲಬುರ್ಗಿ ಅಭಿಪ್ರಾಯಪಟ್ಟಿದ್ದಾರೆ.

ದೇವಗಿರಿಯ ಯಾದವರು:

ಭಿಲ್ಲಮರಾಯ ಚರಿತ್ರೆಯಲ್ಲಿ ಉಲ್ಲೇಖವಾಗಿರುವ ಅದರ ನಾಯಕನು ಯಾದವಚಕ್ರವರ್ತಿ ಭಿಲ್ಲಮನೇ ಆಗಿರಬೇಕೆಂದು ವಿದ್ವಾಂಸರ ಊಹೆಯಾಗಿದೆ. ಸೊಲ್ಲಾಪುರದ ಕಪಿಲಸಿದ್ಧ ಮಲ್ಲಿಕಾರ್ಜುನ ದೇವರಿಗೆ ಕರ್ನಾಟಕ, ಮಹಾರಾಷ್ಟ್ರದ ಬೇರೆ ಬೇರೆ ಪ್ರದೇಶಗಳಲ್ಲಿ ದಾನ ನೀಡಿದವರು ಈ ಯಾದವರ ಅಧಿಕಾರಿಗಳಾಗಿರುವುದು ವಿಶೇಷ ಸಂಗತಿಯಾಗಿದೆ. ಯಾದವ ಮನೆತನದ ಕೊನೆಯ ದೊರೆ ರಾಮಚಂದ್ರ. ಈತ ವೀರಶೈವನಾಗಿದ್ದ ಎನ್ನುವ ವಿಚಾರ ನಮಗೆ ಕಾವ್ಯಗಳಲ್ಲಿ ತಿಳಿದು ಬರುತ್ತದೆ ಎಂದಿದೆ. ಲಕ್ಕಣ್ಣ ದಂಡೇಶನ ಶಿವತತ್ವ ಚಿಂತಾಮಣಿ ಕೃತಿಯಲ್ಲಿ 'ತಾನೊಂದನುಂಡು ಜಂಗಮಕೊಂದನಿಕ್ಕದತಿಮಾನನಿಧಿ ರಾಮಚಂದ್ರ' ಎಂದಿದೆ. ಇತ್ತೀಚೆಗೆ ಶಿವಮೊಗ್ಗ ಜಿಲ್ಲೆಯ ಒಂದು ಹಳ್ಳಿಯಲ್ಲಿ ಯಾದವ ರಾಮಚಂದ್ರನ ಶಿಲ್ಪ ದೊರೆತಿದ್ದು ಕೆಳಗೆ ಯಾದವ ರಾಮಚಂದ್ರರಾಯ ಎಂದು ಬರೆದಿರುವುದರಿಂದ ಹಾಗೂ ಕೈಯಲ್ಲಿ ಇಷ್ಟಲಿಂಗ ಹಿಡಿದಿರುವುದರಿಂದ ಯಾದವ ರಾಜ ರಾಮಚಂದ್ರ ವೀರಶೈವನೇ ಎಂದು ಡಾ. ಎಂ.ಎಂ. ಕಲಬುರ್ಗಿ ನಿರ್ಧರಿಸಿದ್ದಾರೆ.

ಗೋವೆಯ ಕದಂಬರು:

ಕಲ್ಯಾಣಿ ಚಾಲುಕ್ಯರ ಸಾಮಂತರಾಗಿದ್ದ ಈ ವಂಶದ ಇಮ್ಮಡಿ ಚಟ್ಟಯ್ಯನನ್ನು ಶಾಸನಗಳು 'ಧರ್ಮಾವತಾರ' ಎಂದು ಕರೆದಿದ್ದು ಈತನು ವಿರಕ್ತನಾದನೆಂದು ತಿಳಿದು ಬರುತ್ತದೆ. ಕುಮಾರ ಪದ್ಮರಸನ ಸಾನಂದ ಚರಿತೆಯು ಗೋವೆಯ ವಜ್ರರಾಯನನ್ನು (ಕ್ರಿ.ಶ. ೧೨೧೪-೧೨೩೬) ಶಿವನ ಒಡ್ಡೋಲಗದಲ್ಲಿ ವೀರಶೈವ ಶರಣರ ಜೊತೆ ಈ ಅರಸು ಇದ್ದ ಸಂಗತಿಯನ್ನು ತಿಳಿಸುತ್ತದೆ. ಶಾಸನಗಳು ಇವನನ್ನು "ಕಾದಂಬ ಶಿವ ಚಿತ್ತಶ್ರೀ ವೀರವಜ್ರದೇವ" ಎಂದು ಕರೆದಿವೆ. ಈ ಕದಂಬರು ಶರಣಧರ್ಮದ ಪಕ್ಷಪಾತಿಗಳಾಗಿದ್ದರಿಂದಲೇ ಏನೋ ಕಲ್ಯಾಣ ಕ್ರಾಂತಿಯ ಕಾಲದಲ್ಲಿ ಶರಣ ಸಮೂಹ ಇವರ ಅಧೀನದ ಉಳವಿ ಪ್ರಾಂತ್ಯಕ್ಕೆ ಬಂದರೆಂದು ಊಹಿಸಬಹುದು.

ಹೊಯ್ಸಳರು

ಹೊಯ್ಸಳ ಚಕ್ರವರ್ತಿ ನರಸಿಂಹ ಬಲ್ಲಾಳನ ಕಾಲದಲ್ಲಿ ಕೆರೆಯ ಪದ್ಮರಸ ಹಾಗೂ ಅವನ ಸೋದರಮಾವ ಗೌರಪ ದಣ್ಣಾಯಕರು ಮಂತ್ರಿಗಳಾಗಿದ್ದರೆಂದು ಪದ್ಮರಾಜ ಪುರಾಣ ಮೊದಲಾದ ವೀರಶೈವ ಕಾವ್ಯಗಳು ವರ್ಣಿಸುತ್ತವೆ. ಮಹಾಕವಿ ಹರಿಹರನೂ ಹೊಯ್ಸಳರಲ್ಲಿ ಕರಣಿಕನಾಗಿದ್ದನೆಂಬ ಸಂಗತಿ ತಿಳಿಯುತ್ತದೆ.

ಮೋಪೂರಿನ ಅರಸರು

ಆಂಧ್ರಪ್ರದೇಶದ ಕಡಪಾ ಜಿಲ್ಲೆಯ ಪುಲಿವೆಂದ್ಲು ತಾಲ್ಲೂಕಿನ ಮೋಪುರದಲ್ಲಿ ಆಳುತ್ತಿದ್ದ ವಂಶವಿದು. ಅಲ್ಲಿನ ಸಂಗಮರಾಜನ ಮಗ ಭೈರವರಾಜನನ್ನು ಕುರಿತಂತೆ ಭೈರವೇಶ್ವರ ಕಾವ್ಯ, ಭೈರವೇಶ್ವರ ಪುರಾಣಗಳು ಕನ್ನಡದಲ್ಲಿ ಹುಟ್ಟಿಕೊಂಡಿವೆ. ಆ ಕಾವ್ಯಗಳ ಪ್ರಕಾರ ಕ್ರಿ.ಶ. ೧೨೦೦ರ ಸುಮಾರಿನಲ್ಲಿದ್ದ ಈತ ತನ್ನ ಹೆಂಡತಿ ಮಹಾದೇವಿಯೊಂದಿಗೆ ಮೋಪುರವನ್ನು ಬಿಟ್ಟು ಕರ್ನಾಟಕದಲ್ಲಿ ಮಲ್ಲಿಪಟ್ಟಣಕ್ಕೆ ಬಂದು ನಂತರ ಸಾಸಲು ಗ್ರಾಮದಲ್ಲಿ ಐಕ್ಯನಾದನೆಂದು ತಿಳಿಸುತ್ತದೆ. ಕರ್ನಾಟಕದಲ್ಲಿದ್ದಾಗ ಹಾಲ ಸೋಮೇಶ್ವರನು ಈತನ ಗುರುವಾಗಿದ್ದನು. ಮಲ್ಲಿಪಟ್ಟಣವು ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನ ಮಲ್ಲಾಪುರವಾಗಿದೆ ಎಂದೂ, ಸಾಸಲು ಶ್ರವಣಬೆಳಗೊಳದ ಹತ್ತಿರದ ಸೋಸಲೆಯಾಗಿದೆ ಎಂದೂ ಡಾ. ಎಂ.ಎಂ. ಕಲಬುರ್ಗಿಯವರು ಊಹಿಸಿದ್ದಾರೆ.

ಕುರಗೋಡ ಸಿಂಧರು:

ಬಳ್ಳಾರಿ ಜಿಲ್ಲೆಯ ಪ್ರಾಚೀನ ರಾಜಕೀಯ ವಿಭಾಗದ ಬಲ್ಲಕುಂದೆ-೩೦೦ ಪ್ರಾಂತ್ಯವನ್ನು ಸಿಂಧರಾಜ ವಂಶದವರು ಕುರಗೋಡಿನಿಂದ ಆಳುತ್ತಿದ್ದರು. ಬಸವಾದಿ ಶರಣರ ಸಮಕಾಲೀನರಾದ ಇವರು ಅವರ ಪ್ರಭಾವಕ್ಕೆ ಸಿಲುಕಿ ವೀರಶೈವರಾದರು. ಈ ವಂಶದ ಸೋವಿದೇವನ ನಂತರ ಅವನ ಮಗ ಒಂದನೆ ರಾಚಮಲ್ಲ (ಕ್ರಿ.ಶ. ೧೧೪೧- ೧೧೭೩) ಶಿವಪಾದ ಶಿಖಾಮಣಿ, ಶಿವೈಕ್ಯ ಚೂಡಾಮಣಿ, ಅರ್ಚಿತ ಶಿವಪಾದ ಎಂದು ಕೀರ್ತಿ ಗಳಿಸಿದ್ದಾನೆ. ಈ ರಾಚಮಲ್ಲನ ಹೆಂಡತಿ ಸೋವಲದೇವಿ, ಇವರ ಮಗ ಇರುಂಗೊಳ, ಈತನ ಪತ್ನಿ ಏಚಲದೇವಿ. ಈ ಅತ್ತೆ ಸೊಸೆಯರು ಮಾಡಿಸಿದ ಎರಡು ದ್ವಾರಪಾಲಕ ವಿಗ್ರಹಗಳು ಕುರುಗೋಡಿನ ಉಜ್ಜಾಳೇಶ್ವರ ದೇವಾಲಯದಲ್ಲಿ ಈಗಲೂ ಇವೆ. ಇರುಂಗೊಳನಿಗೆ, ಇಮ್ಮಡಿ ರಾಚಮಲ್ಲ, ಸೋಮಭೂಪಾಲ ಎಂಬ ಇಬ್ಬರು ಮಕ್ಕಳು ಇದ್ದರು. ಇಮ್ಮಡಿ ರಾಚಮಲ್ಲನಿಗೆ ಸಿಂಧಕುಳಕಮಳಮಾರ್ತಾಂಡ, ಸಿತಗರ ಗಂಡ, ದಶಾದಿಶವರ್ತಿತ ಧವಳಕೀರ್ತಿ, ಪಾತಾಳ ಚಕ್ರವರ್ತಿ ಎಂಬ ಬಿರುದುಗಳಿದ್ದವು. ಈತನ ಕೊನೆಯ ಉಲ್ಲೇಖ ಕ್ರಿ.ಶ. ೧೧೯೯ರ ಓರುವಾಯಿ ಶಾಸನದಲ್ಲಿದೆ.

ಕುರುಗೋಡ ಸಿಂಧರು ಬಸವಾದಿ ಶರಣರ ಪ್ರಭಾವಕ್ಕೆ ಸಿಲುಕಿದ್ದರಿಂದಲೇ ಸಾನಂದ ಚರಿತೆ, ವೀರಶೈವಾಮೃತ ಮಹಾಪುರಾಣ ಮೊದಲಾದ ವೀರಶೈವ ಕೃತಿಗಳು ರಾಚಮಲ್ಲರನ್ನು ಬಸವಾದಿ ಶರಣರ ಸಾಲಿನಲ್ಲಿ ಸೇರಿಸಿವೆ. ಬಸವಣ್ಣನು ವರ್ಣಾಶ್ರಮ ಪದ್ಧತಿಯ ನಿಯಮವನ್ನು ಮುರಿದು ಬ್ರಾಹ್ಮಣ ಹರಿಜನರಿಗೆ ವಿವಾಹ ಮಾಡಿಸಿದಂತೆ ರಾಚಮಲ್ಲನು ಬ್ರಾಹ್ಮಣರಿಗೆ ಮಾತ್ರ ಸೀಮಿತವಾಗಿದ್ದ ಅಗ್ರಹಾರವನ್ನು ಕಾಳಾಮುಖ ಶೈವಗುರುವಿಗೂ ನೀಡಿದ್ದಾನೆ. ಒಟ್ಟಿನಲ್ಲಿ ಈ ವಂಶ ವೀರಶೈವ ಅರಸು ಮನೆತನಗಳಲ್ಲಿ ಮಹತ್ವ ಪಡೆದಿದೆ. ಈ ವಂಶದ ಇಬ್ಬರು ರಾಚಮಲ್ಲರು ಶಿವಭಕ್ತರಾಗಿದ್ದು ವಚನಕಾರರಿಗೆ ಬೆಂಗಾವಲಾಗಿ ಕಲ್ಯಾಣ ಕ್ರಾಂತಿಯ ನಂತರ ಅವರಿಗೆ ಆಶ್ರಯ ನೀಡಿ ತಮ್ಮ ಪ್ರಾಣಕ್ಕೆ ಆಪತ್ತು ಬಂದರೂ ಲೆಕ್ಕಿಸದೆ ಧೈರ್ಯದಿಂದ ಹೋರಾಡಿ ಕೀರ್ತಿಶೇಷರಾಗಿದ್ದಾರೆ. ಇವರ ಅಧ್ಯಯನ ಕಲ್ಯಾಣ ಕ್ರಾಂತಿಯ ಕೊನೆಯ ಹಂತವನ್ನು ಅರಿಯಲು ತುಂಬಾ ನೆರವಾಗುತ್ತದೆ ಎಂದು ಹೇಳಬಹುದು.

ಕಾಕತೀಯರು

ಆಂಧ್ರದ ಪ್ರಸಿದ್ಧ ರಾಜಮನೆತನವಾದ ಕಾಕತೀಯರು ಆರಂಭದಲ್ಲಿ ರಾಷ್ಟ್ರಕೂಟರ, ಕಲ್ಯಾಣಿಚಾಲುಕ್ಯರ ಸಾಮಂತರಾಗಿ ದುರ್ಜಯ ವಂಶದವರೆಂದು ಕ್ರಿ.ಶ. ೧೨ನೇ ಶತಮಾನದಲ್ಲಿ ಸ್ವತಂತ್ರರಾಗಿ ಪ್ರಸಿದ್ಧರಾದರು. ಇಮ್ಮಡಿ ಪ್ರೋಲನ (೧೧೧೬-೧೧೫೭) ಕಾಲದಲ್ಲಿ ಇವರು ವೀರಶೈವರಾಗಿ; ನಂತರದವರು ಅದರ ಅಭಿವೃದ್ಧಿಯಲ್ಲಿ ತೊಡಗಿದರು. ಪ್ರತಾಪರುದ್ರದೇವನ ಕಾಲದಲ್ಲಿ (೧೧೫೮-೧೧೯೫) ವೀರಶೈವ ಧರ್ಮ ಆಂಧ್ರದಲ್ಲೆಲ್ಲಾ ಹರಡಿತು. ಅನೇಕ ವೀರಶೈವಮಠಗಳು ಕೊಲ್ಲಿಪಾಕಿ, ಶ್ರೀಶೈಲದಲ್ಲಿ ಸ್ಥಾಪನೆಯಾದವು. ಶಿವತತ್ವಸಾರ, ಗಣಸಹಸ್ರನಾಮಾವಳಿ ಕೃತಿಗಳು ರಚನೆಯಾದವು. ಗಣಪತಿ ದೇವನ ಕಾಲ ವೀರಶೈವರ ಸುವರ್ಣಯುಗವಾಗಿತ್ತು. ೧೨೬೧ರ ಮಲ್ಲಾಪುರ ಶಾಸನವು ವೀರಶೈವಾಚಾರ್ಯ ಶತೈರ್ವತಃ (ನೂರಾರು ವೀರಶೈವಾಚಾರ್ಯರಿಗೆ ಮುಖ್ಯಸ್ಥನಾದ) ವಿಶ್ವೇಶ್ವರ ಶಿವಾಚಾರ್ಯನು ಗಣಪತಿ ದೇವನ ಕಾರುಣ್ಯಗುರುವಾಗಿದ್ದ ಎಂದು ತಿಳಿಸುತ್ತದೆ. ಆತನು ಸ್ತ್ರೀಯಾದರೂ ಪಟ್ಟಕ್ಕೆ ಹಕ್ಕಿದೆ ಎಂದು ರಾಜಕುಮಾರಿ ರುದ್ರಮ್ಮನಿಗೆ ಪಟ್ಟಗಟ್ಟಲು ಗಣಪತಿದೇವನಿಗೆ ಸಲಹೆ ನೀಡಿದ್ದನು. ಯುವರಾಣಿ ಪದವಿ ಪಡೆದ ರುದ್ರಾಂಬೆಯು ರಾಜಕೀಯ ವ್ಯವಹಾರನಿಪುಣೆಯಾಗಿ ಶೂರಳೂ ಆಗಿದ್ದು ಜನಹಿತ ಕಾರ್ಯ ಮಾಡಿ ಖ್ಯಾತಳಾಗಿದ್ದಾಳೆ. ಈಕೆಯು ಕೃಷಿ, ನೀರಾವರಿ ವ್ಯವಸ್ಥೆ, ವಜ್ರದ ಗಣಿಗಾರಿಕೆ ನಿರ್ವಹಣೆ ಬಗ್ಗೆ, ಆಡಳಿತದ ಬಗ್ಗೆ, ವೆನಿಷಿಯನ್ ಪ್ರವಾಸಿ ಮಾರ್ಕೋಪೋಲೋ ಮುಕ್ತಕಂಠದಿಂದ ಹೊಗಳಿದ್ದಾನೆ. ಈಕೆ ರೈತ ಹಾಗೂ

ಗಿರಿಜನ ಹೆಂಗಸರಿಗೆ ಶಸ್ತ್ರಬಳಕೆಯ ತರಬೇತಿಯನ್ನು ನೀಡಿದ್ದಳೆಂದು ಪ್ರವಾಸಿ ತಿಳಿಸುತ್ತಾನೆ. ಇವಳ ಮೊಮ್ಮಗ ಪ್ರತಾಪರುದ್ರ, ಖಾಯಂ ಕರಪದ್ಧತಿಯನ್ನು ಜಾರಿಗೆ ತಂದು, ಬಾಹತ್ತರ ನಿಯೋಗ ಪದ್ಧತಿಯನ್ನು ದೇಗುಲ ಮತ್ತು ಅರಮನೆ ಆಡಳಿತಕ್ಕೆ ವಿಸ್ತರಿಸಿದನು. ಶ್ರೀಶೈಲದ ಶಾಖಾಮಠದ ಪಟ್ಟದ ಈಶ್ವರ ಶಿವಾಚಾರ್ಯರು ಇವನ ಗುರುಗಳಾಗಿದ್ದರು.

ಹಗರಟಗಿಯ ಭೈಸರರಸರು:

ಇವರು ಕಲ್ಯಾಣಿ ಚಾಲುಕ್ಯ ಇಮ್ಮಡಿ ಜಯಸಿಂಹನ ಕಾಲದಲ್ಲಿ ಏಳಿಗೆಗೆ ಬಂದ ವೀರಶೈವ ದೊರೆಗಳಾಗಿದ್ದಾರೆ. ಜಯಸಿಂಹನ ಮಹಾಸಾಮಂತನಾಗಿದ್ದ ರೆಬ್ಬರಸನು ಈ ವಂಶದ ಪ್ರಸಿದ್ಧ ಅರಸು. ನಂತರ ಆಳ್ವಿಕೆ ಮಾಡಿದ ವಿರುಪರಸನು ವೀರಶೈವ ಧರ್ಮಾಭಿವೃದ್ಧಿಗೆ ಹಲವು ಕ್ರಮಗಳನ್ನು ಕೈಗೊಂಡನೆಂದು ತಾಳಿಕೋಟೆ, ಮಿಣಜಗಿ, ಕಲಕೇರಿ ಶಾಸನಗಳು ತಿಳಿಸುತ್ತವೆ. ಯುದ್ಧ ಭೈರವನಾದ ವಿರುಪರಸ ಬಯ್ಲೇಶ್ವರ ದೇಗುಲ ಕಟ್ಟಿಸಿ ಅದನ್ನು ಗಣಮಠವನ್ನಾಗಿ ಮಾಡಿ ಗಣಾಚಾರಕ್ಕೆ ಅನುವು ಮಾಡಿಕೊಟ್ಟನೆಂದು ತಾಳಿಕೋಟೆ ಶಾಸನವು ತಿಳಿಸುತ್ತದೆ. ಈ ಮಠವನ್ನು ವೀರದಾಸನಿಗೆ ನೀಡಿ ಅದರ ಮೇಲ್ವಿಚಾರಣೆಗೆ ಹೆಗ್ಗಡೆ ಸಂಕಯ್ಯನನ್ನು ನೇಮಿಸಿದ ಸಂಗತಿ ಅದೇ ಶಾಸನದಲ್ಲಿ ಕಂಡುಬರುತ್ತದೆ. ಇದು ವಿರುಪರಸನ ಶರಣ ಭಕ್ತಿಗೆ ವೀರಶೈವ ಧರ್ಮನಿಷ್ಠೆಗೆ ಸ್ಪಷ್ಟ ನಿದರ್ಶನವಾಗಿದೆ.

ಚಂಗಾಳ್ವರು

ಮೈಸೂರು, ಕೊಡಗು ಜಿಲ್ಲಾ ಪ್ರದೇಶಗಳಲ್ಲಿ ಆಳಿದ ಚೆಂಗಾಳ್ವರು ಮೂಲತಃ ಚೆಂಗನಾಡು ಎಂದು ಪರಿಚಿತವಾದ ಚಿಕ್ಕಮಗಳೂರು-ಹಾಸನ ಜಿಲ್ಲೆಯೊಳಗಿನ ಸಹ್ಯಾದ್ರಿಯಲ್ಲಿ ಹರಡಿದ್ದ ಪ್ರದೇಶವೊಂದಕ್ಕೆ ಸೇರಿದವರಾಗಿದ್ದಾರೆ. ಇವರಲ್ಲಿ ಕೊಡಗಿನ ಭಾಗದಲ್ಲಿದ್ದವರು ವೀರಶೈವರಾದರು. ಮೂಲತಃ ಇವರು ಜೈನರು. ಚೋಳಮಾಂಡಲೀಕರಾದ ಮೇಲೆ ಕಾಲಕ್ರಮೇಣ ಅವರು ಶಿವಧರ್ಮಕ್ಕೆ ತೆರೆದುಕೊಂಡರು. ಆರಂಭದಲ್ಲಿ ಚಂಗಾಳ್ವರು ಬೆಟ್ಟದಪುರದ ಅನ್ನದಾನಿ ಮಲ್ಲಿಕಾರ್ಜುನ ದೇವರನ್ನು ತಮ್ಮ ಕುಲದೇವರನ್ನಾಗಿ ಮಾಡಿಕೊಂಡು, ಅಲ್ಲಿನ ವೀರಶೈವ ಗುರುಗಳನ್ನು ತಮ್ಮ ಕುಲಗುರುಗಳನ್ನಾಗಿ ಮಾಡಿಕೊಂಡರು. ಆ ಸಮಯದಲ್ಲಿ ಅವರು ಕೊಡಗಿನ ಉತ್ತರ, ಪೂರ್ವ ಹಾಗೂ ದಕ್ಷಿಣ ಭಾಗಗಳನ್ನು ಆಳುತ್ತಿದ್ದರು. ಇವರ ಕಾಲದ ವೀರಶೈವ ಮಠಗಳು, ವೀರಭದ್ರ ದೇವಾಲಯಗಳು, ಮಲ್ಲಿಕಾರ್ಜುನ, ಸಿದ್ಧೇಶ್ವರ ದೇಗುಲಗಳು ನಿರ್ಮಾಣವಾದವು. ದಾನದತ್ತಿ ಹಾಗೂ ಗಣಾಚಾರ ಪ್ರಚಲಿತವಾಗಿದ್ದಿತು. ಕೆಳದಿಯ ಅರಸು ಮನೆತನದಿಂದ ಸಿಡಿದುಬಂದ ರಾಜಕುಮಾರ ವೀರ ಒಡೆಯನಿಂದ ಹಾಲೇರಿ ವಂಶ ಕೊಡಗಿನಲ್ಲಿ ಉದಯಿಸಿತು. ಇವರ ಕಾಲದಲ್ಲಿ ಮಂಗರಸನ ನಿಘಂಟು, ನಂಜುಂಡ ಕವಿಯ ಕುಮಾರರಾಮ ಸಾಂಗತ್ಯ, ದೊಡ್ಡಯ್ಯ ಕವಿಯ ಚಂದ್ರಪ್ರಭ ಸಾಂಗತ್ಯ, ಭುಜಬಲಿಶತಕ, ಇತ್ಯಾದಿ ಹೊರಬಂದವು. ಇವು ಚಂಗಾಳ್ವರ ಕವಿ ಜನಾಶ್ರಯದ ಚಿತ್ರ ನೀಡುತ್ತವೆ.

ಈವರೆಗೆ ವಿವೇಚಿಸಿದ ರಾಜಮನೆತನಗಳೆಲ್ಲಾ ವಿಜಯನಗರ ಅರಸು ಮನೆತನ ಅಸ್ತಿತ್ವಕ್ಕೆ ಬರುವ ಪೂರ್ವದಲ್ಲಿದ್ದವು. ಇವುಗಳಲ್ಲಿ ಕೆಲವು ೧೨ನೇ ಶತಮಾನಕ್ಕಿಂತ ಪೂರ್ವದಲ್ಲಿಯೇ ಹುಟ್ಟಿ ನಂತರವೂ ಬಾಳಿದವು.

ವಿಜಯನಗರ - ನಗರೋತ್ತರ ವೀರಶೈವ ಅರಸುಮನೆತನಗಳು:

ಹೊಯ್ಸಳ ಸಾಮ್ರಾಜ್ಯ ಪತನಾನಂತರ ಕರ್ನಾಟಕದಲ್ಲಿ ವಿಜಯನಗರ ಸಾಮ್ರಾಜ್ಯ ಉದಯವಾಯಿತು. ಈ ವೇಳೆಗೆ ಯಾವುದೇ ರಾಜಕೀಯ ಸಂಘಟನೆಗೆ ವೀರಶೈವರ ಸಹಾಯ ಅನಿವಾರ್ಯವೆನ್ನುವಂತೆ ಪ್ರಭಾವಶಾಲಿಯಾಗಿ ವೀರಶೈವ ಜನಾಂಗ ಬೆಳೆದಿತ್ತು. ವೀರಶೈವನೆಂದೇ ಹೇಳಲಾಗುತ್ತಿರುವ ಕಾಶೀ ವಿಲಾಸ ಕ್ರಿಯಾಶಕ್ತಿಗಳ ಆಶೀರ್ವಾದದಿಂದ ಹರಿಹರ

ಬುಕ್ಕರಿಂದ ವಿಜಯನಗರ ಸಾಮ್ರಾಜ್ಯ ಹುಟ್ಟಿತು. ಶಾಸನಗಳು ಇವರನ್ನು ರಾಜಗುರು, ಕುಲಗುರು ಎಂದು ಸಂಬೋಧಿಸಿವೆ. ಇವರು ಎರಡನೇ ಹರಿಹರನ ಕಾಲದಲ್ಲಿಯೂ ಅವರ ಕುಲಗುರುವಾಗಿದ್ದರು. ಸಂಗಮವಂಶದಲ್ಲಿ ವೀರಶೈವ ಧರ್ಮದೊಲವಿನಿಂದ "ವೀರಶೈವ ಸಮುದ್ಧರಣ ಯುಗ"ವೆನಿಸಿ ಅದರ ಹೆಚ್ಚಿನ ಪ್ರಸಾರಕ್ಕೆ ಕಾರಣನಾದವನು ಇಮ್ಮಡಿ ದೇವರಾಯ. ವೀರಶೈವ ಪುರಾಣಗಳು ಇವನು ವೀರಶೈವನಾಗಿದ್ದನೆಂದು ಹೇಳುತ್ತವೆ. ಶಾಸನಗಳಲ್ಲಿ "ಶ್ರೀವೀರಶೈವ ಶ್ರೀವೀರಪ್ರತಾಪ ಚೋಳರಾಯ"ನೆಂದು ಉಲ್ಲೇಖವಾಗಿದೆ. ಈತನ ಅಧಿಕಾರಿಗಳಾದ ಕರಸ್ಥಲದ ವೀರಣ್ಣ, ಜಕ್ಕಣಾರ್ಯ, ಲಕ್ಕಣ್ಣ ದಂಡೇಶ, ಮೊದಲಾದವರು ವೀರಶೈವಕ್ಕೆ ಸಲ್ಲಿಸಿದ ಸೇವೆ ಅಮೋಘವಾಗಿದೆ.

ಕರಸ್ಥಲದ ವೀರಣ್ಣ, ಪ್ರೌಢದೇವರಾಯನ ಮಂತ್ರಿಯೂ ಅಳಿಯನೂ ಆಗಿದ್ದನು. ಪ್ರೌಢದೇವರಾಯನ ರಾಜಕೀಯ ಕ್ಷೇತ್ರಕ್ಕೆ ಮುಖ್ಯಪಾತ್ರ ವಹಿಸಿದವನೆಂದರೆ ಮಹಾಮಂತ್ರಿ ಲಕ್ಕಣ್ಣ ದಂಡೇಶ. ಇವನ ೨೧ ಶಾಸನಗಳು ದೊರೆತಿವೆ. ಇವನು ತನ್ನ ಹೆಸರಿನಲ್ಲಿ ನಾಣ್ಯಗಳನ್ನು ಹಾಕಿಸುವಷ್ಟರ ಮಟ್ಟಿಗೆ ಪ್ರಭಾವಶಾಲಿಯಾಗಿದ್ದನು. ಶಿವತತ್ವ ಚಿಂತಾಮಣಿ ಎಂಬ ಹೆಸರಿನ 'ವೀರಶೈವ ವಿಶ್ವಕೋಶ' ಎಂಬ ಕೃತಿ ರಚಿಸಿದ್ದಾನೆ. ಇವನ ತಮ್ಮ ಮಾರಣ್ಣನಾಯಕನು ತೇಕಲರಾಜ್ಯದ ಅಧಿಕಾರಿಯಾಗಿದ್ದನು. ಪ್ರಭುಲಿಂಗಲೀಲೆ ಕೃತಿಯ ಚಾಮರಸನೂ ಪ್ರೌಢದೇವರಾಯನಲ್ಲಿ ಮಂತ್ರಿಯಾಗಿದ್ದನೆಂದು ವೀರಶೈವ ಕೃತಿಗಳು ತಿಳಿಸುತ್ತವೆ. ಈ ಅರಸು ಅಧಿಕಾರಿಗಳಿಂದಾಗಿ ವಿಜಯನಗರಕ್ಕೆ "ಪರತರ ಶಿವಾನುಭವಿಗಳ ಪರಿಮಿತ ಗೃಹಂ ಪರಿಕಿಪರಿಗಿದು ವಿಜಯಕಲ್ಯಾಣ" ಎಂಬ ಕೀರ್ತಿ ಪ್ರಾಪ್ತವಾಯಿತು.

ವಿಜಯನಗರ ಸಾಮ್ರಾಜ್ಯದ ಉದಯಕ್ಕೆ ವೀರಶೈವ ಗುರುಗಳು ನೆರವಾಗಿ, ವೀರಶೈವರ ಸಹಕಾರ ಅನಿವಾರ್ಯ ಎನ್ನುವ ವಾತಾವರಣವನ್ನು ಸೃಷ್ಟಿಸಿದರೆ, ಆ ಸಾಮ್ರಾಜ್ಯದ ಪತನಾನಂತರ ಸಣ್ಣಸಣ್ಣ ರಾಜ್ಯ ಕಟ್ಟುವುದು ವೀರಶೈವರಿಗೆ ಅನಿವಾರ್ಯವಾಯಿತು. ವಿಜಯನಗರ ಪೂರ್ವದಲ್ಲಿ ಒಂದು ಮನೆತನದ ಕೇವಲ ಒಬ್ಬೊಬ್ಬ ಅರಸರು ವೀರಶೈವರಾಗಿ ಆಳ್ವಿಕೆ ನಡೆಸಿದ್ದರೆ, ನಿಜವಾಗಿಯೂ ವೀರಶೈವ ಅರಸು ಮನೆತನಗಳೇ ಹುಟ್ಟಿದ್ದು ವಿಜಯನಗರ ಪತನಾನಂತರವೆಂದೇ ಹೇಳಬಹುದು. ಇವರಲ್ಲಿ ಬೇಡ ಮತ್ತು ವೀರಶೈವ ಜನಾಂಗದವರೇ ಅಧಿಕ ಸಂಖ್ಯೆಯಲ್ಲಿದ್ದಾರೆ.

ಕೆಳದಿಯರಸರು:

ವೀರಶೈವ ಧರ್ಮಕ್ಕೋಸ್ಕರ ಕೆಲಸ ಮಾಡಿದ ಮೊದಲ ಮತ್ತು ದೊಡ್ಡ ಮನೆತನವೆಂದರೆ ಕೆಳದಿ ಅರಸು ಮನೆತನವೇ ಆಗಿತ್ತು. ಮೂಲತಃ ವೀರಶೈವರಾಗಿದ್ದ ಕೆಳದಿ ಅರಸರು ಧರ್ಮದ ತಳಪಾಯದ ಮೇಲೆ ರಾಜ್ಯಕಟ್ಟಿದವರು. ಸುಮಾರು ೩೦೦ ಶಾಸನಗಳು ಇವರ ಇತಿಹಾಸದ ರಚನೆಗೆ ನೆರವಾಗುತ್ತವೆ. ಇದನ್ನು ೧೮ ರಾಜರು, ಇಬ್ಬರು ರಾಣಿಯರು ಕ್ರಿ.ಶ. ೧೫೦೦ ರಿಂದ ೧೭೬೩ರವರೆಗೆ ಆಳ್ವಿಕೆ ನಡೆಸಿದ್ದಾರೆ. "ಶ್ರೀ ಮತ್ಸಜ್ಜನ ಶುದ್ಧ ಶಿವಾಚಾರ ಸಂಪಂನ ವಿಶುಧ ವೈದಿಕಾದ್ವೈತ ಸಿದ್ಧಾಂತ ಪ್ರತಿಷ್ಠಾಪಕ ಶಿವಗುರುಭಕ್ತಿಪರಾಯಣ" ಎಂಬ ಬಿರುದಾಂಕಿತರು. ಇವರ ಕಾಲದಲ್ಲಿ ನೂರಾರು ವೀರಶೈವ ಮಠಗಳು ಸ್ಥಾಪನೆಯಾದವು. ಈ ಧರ್ಮವನ್ನು ವ್ಯಾಪಕವಾಗಿ ಮಲೆನಾಡು, ಪಶ್ಚಿಮಘಟ್ಟ ಪ್ರದೇಶಗಳಲ್ಲಿ ಪ್ರಚಾರ ಮಾಡಿದರು. ಮರಿತೋಂಟದಾರ್ಯರಂತಹ ತತ್ವವೇತ್ತರೂ, ಶಿವತತ್ವರತ್ನಾಕರದಂಥ ಅಪೂರ್ವ ಕೃತಿಗಳೂ ಈ ಅವಧಿಯಲ್ಲಿ ರಚನೆಯಾದವು. ಈ ಮನೆತನದ ಶಿವಪ್ಪನಾಯಕ, ಕಿರಿಯ ಬಸವಪ್ಪನಾಯಕರು ಕೊಡುಗೈ ದಾನಿಗಳೆಂದೇ ಪ್ರಖ್ಯಾತರಾಗಿದ್ದಾರೆ. ಕಿರಿಯ ಬಸವಪ್ಪ ನಾಯಕನು ೧ ಲಕ್ಷ ೯೬ ಸಾವಿರ ಜಂಗಮರಿಗೆ ನಾನಾ ವಿಧದ ಭಕ್ಷ್ಯ, ಭೋಜ್ಯ ಮತ್ತು ರಸಾಯನ ಫಲಗಳನ್ನು ನೀಡಿ ಬಟ್ಟೆ, ಕಂಬಳಿ, ಕಂಥೆ, ಶಿವದಾರ, ವಿಭೂತಿ, ಭಸ್ಮ, ರುದ್ರಾಕ್ಷಿ, ಆಗಮಶಾಸ್ತ್ರ ಗ್ರಂಥಗಳು, ಹಾಸಿಗೆ, ಛತ್ರಿ, ಪಾದುಕೆ, ಹಸ್ತಾಧಾರ ಮತ್ತು ದಂಡವನ್ನು ಕೊಟ್ಟು ಸತ್ಕರಿಸಿದನು. ಇದೊಂದು ಅಪೂರ್ವ ದಾನವಾಗಿದೆ.

ಹಾಲೇರಿ ಅರಸರು

ಕ್ರಿ.ಶ. ೧೫೮೦ ರಿಂದ ಕ್ರಿ.ಶ. ೧೮೩೪ ರವರೆಗೆ ೧೪ ಜನ ರಾಜರು ಹಾಲೇರಿ ಅರಸರಾಗಿ ಇಂದಿನ ಕೊಡಗು ಜಿಲ್ಲೆಯಲ್ಲಿ ಆಳ್ವಿಕೆ ನಡೆಸಿದ್ದಾರೆ. ಮೂಲತಃ ವೀರಶೈವರಾಗಿದ್ದ ಇವರು, ಕೆಳದಿ ವಂಶದ ರಾಮರಾಜನಾಯಕನ ಹಿರಿಯ ಮಗ ವೀರರಾಜ ಈ ರಾಜ್ಯವನ್ನು ಕೊಡಗಿನ ಹಾಲೇರಿ ಗ್ರಾಮದಲ್ಲಿ ಕಟ್ಟಿದನು. ಇವನ ಮೊಮ್ಮಗ ಮುದ್ದುರಾಜ ಮಡಿಕೇರಿಯನ್ನು ಕ್ರಿ.ಶ. ೧೬೮೧ರಲ್ಲಿ ನಿರ್ಮಿಸಿದನು. ರಾಜ ಚಿಕ್ಕವೀರ ರಾಜೇಂದ್ರ ಈ ಮನೆತನದ ಕೊನೆಯ ದೊರೆಯಾಗಿದ್ದು ಶೂರ, ದಕ್ಷನಾಗಿದ್ದನು. ಕೊನೆಗೆ ಬ್ರಿಟೀಷರಿಂದ ರಾಜ್ಯ ಕಳೆದುಕೊಂಡು ಅದನ್ನು ಪುನಃ ಪಡೆಯಲಿಕ್ಕಾಗಿ ಲಂಡನ್ನಿಗೆ ಹೋಗಿ ಅಲ್ಲಿಯೇ ಕ್ರಿ.ಶ. ೧೮೫೯ರಲ್ಲಿ ಮರಣ ಹೊಂದಿದನು. ಅವನ ಪಾರ್ಥಿವ ಶರೀರವನ್ನು ಕಾಶಿಯ ಜಂಗಮವಾಡಿ ಮಠಕ್ಕೆ ತಂದು ಅಂತ್ಯಕ್ರಿಯೆ ಮಾಡಿ ರಾಜಗದ್ದುಗೆಯನ್ನು ನಿರ್ಮಿಸಲಾಯಿತು. ಇವರು ಜಂಗಮೇಶ್ವರರು ಹರಡಿದ್ದ ಶಿವಸಂಸ್ಕೃತಿಯನ್ನು ವ್ಯಾಪಕವಾಗಿ ಬೆಳೆಸಿದರು. ೧೦೮ ವೀರಶೈವ ಮಠಗಳನ್ನು ನಿರ್ಮಿಸಿದರು. ಗುರು ವಿರಕ್ತಮಠಗಳ ಸಮನ್ವಯ ಇವರ ಕಾಲದಲ್ಲಿ ಕಾಣುತ್ತದೆ. ಇವರ ಕಾಲದಲ್ಲಿ ಗೌಡ ಮತ್ತು ಇತರ ಜನಾಂಗಗಳು ಅರಸರ ಶಿವಾಚರಣೆಯಿಂದ ಪ್ರಭಾವಿತವಾಗಿದ್ದವು. ಈ ವಂಶದ ದೊಡ್ಡವೀರರಾಜೇಂದ್ರ ಜನಪ್ರಿಯ ಆಡಳಿತಗಾರನಾಗಿದ್ದು ನಿಜಗುಣ ಶಿವಯೋಗಿಯ ವಿವೇಕ ಚಿಂತಾಮಣಿಯನ್ನು ಸಂಸ್ಕೃತಕ್ಕೆ ಅನುವಾದಿಸಿದನು. 'ಬಸವರಾಜ ವಿಜಯ' ಎಂಬ ಕೃತಿಯನ್ನು ರಚಿಸಿದ್ದಾನೆ ಎನ್ನಲಾಗಿದೆ.

ಸ್ವಾದಿ ಅರಸರು:

ಉತ್ತರ ಕನ್ನಡ ಜಿಲ್ಲೆಯ ಸಿರ್ಸಿ ತಾಲ್ಲೂಕಿನ ಸ್ವಾದಿ ಅಥವಾ ಸೋದೆ ಅರಸು ಮನೆತನವು ಮೂಲತಃ ಬ್ರಾಹ್ಮಣವಾಗಿದ್ದು ಆ ವಂಶದ ರಘುನಾಥನಾಯಕನ ಕಾಲದಲ್ಲಿ (೧೬೧೮-೧೬೩೮) ವೀರಶೈವರಾದರು. ಆದುದರಿಂದ ಈ ಮನೆತನ ಒಂದು ಹಂತದಲ್ಲಿ ವೀರಶೈವ ಮನೆತನವಾಗಿದ್ದುದು ಸ್ಪಷ್ಟವಾಗುತ್ತದೆ. ೧೬ನೇ ಶತಮಾನದಲ್ಲಿ ಇವರ ಇತಿಹಾಸ ಆರಂಭವಾಗಿ ೧೮ನೇ ಶತಮಾನದ ಕೊನೆಯವರೆಗೂ ಮುಂದುವರಿಯುತ್ತದೆ. ಸೋದೆ ಅರಸು ಮನೆತನದಲ್ಲಿ ರಾಮಚಂದ್ರನಾಯಕನ ತರುವಾಯ ಕ್ರಿ.ಶ. ೧೬೧೮ ರಿಂದ ೧೬೩೮ ರವರೆಗೆ ಆಳಿದ ರಘುನಾಥನಾಯಕ, ವೀರಶೈವ ಧರ್ಮ ಅಳವಡಿಸಿಕೊಂಡನೆಂದು ಶಿವಚರಿತ್ರ ಸಾಹಿತ್ಯದಿಂದ ಸ್ಪಷ್ಟವಾಗಿ ತಿಳಿಯುತ್ತದೆ. ಅದರ ವಿವರಣೆ ಹೀಗಿದೆ "...ದೇವರು ತನ್ನ ವರದ ಹಸ್ತವನ್ನು ಅರಸನ ಮಸ್ತಕದ ಲಿಂಗಧಾರಣಾದಿ ಶಿವದೀಕ್ಷೆಯನ್ನು ಕೊಟ್ಟನು." ಅನಂತರ ಸೋದೆಯಲ್ಲೇ ಖ್ಯಾತನಾದ ಇಮ್ಮಡಿ ಸದಾಶಿವರಾಯನು ಕವಿಯೂ, ಕಲಿಯೂ ಆಗಿದ್ದನು. ಇವನು ಬನವಾಸಿಯ ಮಧುಕೇಶ್ವರ ಗುಡಿಯ ಪ್ರಾಕಾರದ ಬಲಭಾಗದಲ್ಲಿ ತನ್ನ ತಂದೆಯ ಸ್ಮರಣಾರ್ಥವಾಗಿ ಬಸವಲಿಂಗ ದೇವಾಲಯ ನಿರ್ಮಿಸಿದನು. ೧೮ ಕೃತಿಗಳನ್ನು ಈತನು ರಚಿಸಿದ್ದಾನೆ. ಶಿವಭಕ್ತ, ವಿದ್ಯಾಪಕ್ಷಪಾತಿಯಾದ ಈತನ ಗಮನಾರ್ಹ ಕೃತಿ "ಸದಾಶಿವ ನೀತಿ". ಕೆಳದಿಯ ಸಮಕಾಲೀನರಾಗಿದ್ದ ಇವರು ಅನೇಕ ವೀರಶೈವ ಮಠಗಳನ್ನು ಅವರ ಮಾದರಿಯಲ್ಲೇ ಸ್ಥಾಪಿಸಿದ್ದಾರೆ.

ಬೀಳಗಿ ಅರಸರು

ಇದು ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲ್ಲೂಕು ಪ್ರದೇಶವನ್ನೊಳಗೊಂಡ ಒಂದು ಪುಟ್ಟ ರಾಜಮನೆತನ. ವಿಜಯನಗರೋತ್ತರ ಕಾಲದಲ್ಲಿ ಬೀಳಗಿಯನ್ನು ತಮ್ಮ ರಾಜಧಾನಿಯಾಗಿ ಮಾಡಿಕೊಂಡು ೧೫ರಿಂದ ೧೮ನೇ ಶತಮಾನದವರೆಗೆ ಸುಮಾರು ೩೦೦ ವರ್ಷಗಳ ಕಾಲ ಆಳಿದರು. ಮೂಲತಃ ಜೈನರಾಗಿದ್ದ ಇವರು ಒಂದು ಹಂತದಲ್ಲಿ ವೀರಶೈವರಾದರು. ಕ್ರಿ.ಶ. ೧೬೪೨ರ ಬೀಳಗಿ ಅರಸರ ಶಾಸನವು "ಶಿವಭಕ್ತನಾದ ಘಂಟೇಂದ್ರನು ಕಾಡುಗಿ ಮಠದ ಶಾಂತಬಸವ ರಾಜದೇವ ಶಿಷ್ಯನಾದ ಮಹಾಪ್ರಭು ಮಹತ್ತಿನ ಮಠದ ಬಸವಲಿಂಗದೇವರಿಗೆ ಅವರ ಕೇಳಿಕೆಯಂತೆ ಸಿದ್ದಾಪುರದ ತಮ್ಮ ಮಠದಲ್ಲಿನ

ಧರ್ಮಕಾರ್ಯ ನಡೆಸಲು ೧೦೪ ವರಹ ಭೂಮಿಯನ್ನು ಶಿರಗಲಿ, ಚಿಕ್ಕಬೈಲಹಳ್ಳಿ ಮತ್ತು ಹೊರಕಾಡುಗಳಲ್ಲಿ ಕೊಟ್ಟನು" ಎಂದು ತಿಳಿಸುತ್ತದೆ. ಈ ಶಾಸನ ಬೀಳಗಿ ಅರಸರು ವೀರಶೈವ ಮತಾವಲಂಬಿ ಎಂದು ತಿಳಿಸುವುದರೊಂದಿಗೆ ಈ ಮತದ ಸ್ವರೂಪವನ್ನು ತಿಳಿಸುತ್ತದೆ. ಕೆಲ ವಿದ್ವಾಂಸರು ಇವನಿಗಿಂತ ಮೊದಲೇ ಬೀಳಗಿಯವರು ವೀರಶೈವ ಮತವನ್ನು ಸ್ವೀಕರಿಸಿದ್ದರೆಂದು ಹೇಳುತ್ತಾರೆ. ಬೀಳಗಿಯನ್ನಾಳಿದ ದೊರೆ ಶಿವಪ್ಪನಾಯಕನು ಕ್ರಿ.ಶ. ೧೬೬೭ರಲ್ಲಿ ಶಿವಾಚಾರ ಸಂಪನ್ನರಾದ ಸೋಮಣ್ಣದೇವರಿಗೆ ಗದ್ದೆ, ತೋಟಗಳನ್ನು ಬಿಟ್ಟು ಈ ಜಂಗಮ ಗುರುಗಳು ವಂಶಪಾರಂಪರ್ಯವಾಗಿ ಅನುಭವಿಸತಕ್ಕದೆಂದು ಶಾಸನ ಹೊರಡಿಸಿದ್ದನು. ಬೀಳಗಿ ರಾಣಿಯರೂ ವೀರಶೈವ ಗುರುಗಳಿಗೆ ದಾನ ನೀಡುವುದರಲ್ಲಿ ಹಿಂದೆ ಬೀಳಲಿಲ್ಲವೆಂದು ಶಾಸನ ಮತ್ತು ಸಾಹಿತ್ಯ ಕೃತಿಗಳು ತಿಳಿಸುತ್ತವೆ. ೧೭ನೇ ಶತಮಾನದ ಮಧ್ಯಾವಧಿಯಿಂದ ವೀರಶೈವ ಮತ ಹೀಗೆ ಬೀಳಗಿ ರಾಜ್ಯದಲ್ಲಿ ಪ್ರಬಲವಾಗಿ ಅದು ಜ್ಞಾನದೀವಟಿಗೆಯಾಗಿ ಕಲೆ, ಸಾಹಿತ್ಯ ವಿದ್ವತ್ತನ್ನು ಬೆಳೆಸಲು ಸ್ಫೂರ್ತಿಯನ್ನಿತ್ತಿತು.

ಹಾಗಲವಾಡಿ ನಾಯಕರು:

ಉತ್ತರ ಕರ್ನಾಟಕವು ಮುಸ್ಲಿಂ ಸುಲ್ತಾನರುಗಳ ಪ್ರಾಬಲ್ಯದಲ್ಲಿದ್ದರೆ, ದಕ್ಷಿಣ ಕರ್ನಾಟಕವು ಹಿಂದೂರಾಜ ವಿಜಯನಗರದವರ ಪ್ರಾಬಲ್ಯದಲ್ಲಿತ್ತು. ವಿಜಯನಗರ ಪತನಾನಂತರ ಅನೇಕ ರಾಜಮನೆತನಗಳು ಇಲ್ಲಿ ಕಾಣಿಸಿಕೊಂಡವು. ಅದರಲ್ಲಿ ಹಾಗಲವಾಡಿ ನಾಯಕ ಮನೆತನವೂ ಒಂದಾಗಿದೆ. ತುಮಕೂರು ಜಿಲ್ಲೆಯಲ್ಲಿನ ಎರೆಕಟ್ಟೆ, ಚಿಕ್ಕನಾಯಕನಹಳ್ಳಿ, ಹಾಗಲವಾಡಿಯನ್ನು ಕ್ರಮವಾಗಿ ಆಡಳಿತ ಕೇಂದ್ರವನ್ನಾಗಿ ಮಾಡಿಕೊಂಡು ಕ್ರಿ.ಶ. ೧೫೦೦ ರಿಂದ ೧೭೭೯ ರವರೆಗೆ ೧೪ ಜನ ಅರಸರು ಆಳ್ವಿಕೆ ನಡೆಸಿದರು. ಮೂಲತಃ ಬೇಡರಾಗಿದ್ದ ಇವರು ಒಂದು ಹಂತದಲ್ಲಿ ವೀರಶೈವರಾಗಿ ಆ ಧರ್ಮಕ್ಕೆ ವೈಶಿಷ್ಟ್ಯಪೂರ್ಣ ಕೊಡುಗೆ ನೀಡಿದ್ದಾರೆ.

ಈ ಮನೆತನದ ಮೂರನೇ ದೊರೆ ಬೈರವನಾಯಕ (೧೫೪೪-೧೫೭೮)ನ ಕಾಲದಿಂದ ಇವರು ವೀರಶೈವ ಧರ್ಮವನ್ನು ಸ್ವೀಕರಿಸಿದರು. ಆಗ ಎಡೆಯೂರ ಸಿದ್ಧಲಿಂಗೇಶ್ವರರು ನಿಟ್ಟೂರಿಗೆ ಆಗಮಿಸಿದಾಗ ಭೈರಪ್ಪನಾಯಕ ಅವರನ್ನು ಭೇಟಿಯಾಗಿ ಅವರಿಂದ ಧರ್ಮೋಪದೇಶವನ್ನು ಆಲಿಸಿದ್ದನು. ಹೀಗೆ ಈ ಮನೆತನಕ್ಕೆ ಭೈರಪ್ಪನಾಯಕನು ವೀರಶೈವದ ಸೂರ್ಯನಾಗಿ ಉದಯಿಸಿ ತನ್ನ ಶಿವಭಕ್ತಪರ ವ್ಯಕ್ತಿತ್ವದ ಮೂಲಕ ವೀರಶೈವ ಧರ್ಮ ಹರಡಿದನು. ಆತನ ಹಿರಿಯ ಮಗ ಮುದಿಯಪ್ಪನಾಯಕನು ತನ್ನ ಆಸ್ಥಾನದಲ್ಲಿ ಸೋಸಲೆ ರೇವಣ್ಣಾರಾಧ್ಯರನ್ನು ಇಟ್ಟುಕೊಂಡು ವೀರಶೈವಪರ ಕೃತಿರಚನೆಗೆ ಅನುವು ಮಾಡಿಕೊಟ್ಟನು. ಈ ಮನೆತನದ ೯ನೇ ದೊರೆ ಇಮ್ಮಡಿ ಮುದಿಯಪ್ಪನಾಯಕನು ವೀರಶೈವ ಆಚಾರದಲ್ಲಿ ಬಹುನಿಷ್ಠನಾಗಿ ಮಹಾಜ್ಞಾನಿಗಳಾದ ಮುದುವೀರಸ್ವಾಮಿಯವರಿಂದ ವೀರಶೈವ ತತ್ವೋಪದೇಶ ಪಡೆದುಕೊಂಡು ತನ್ನ ಸಕಲ ಸಾಮ್ರಾಜ್ಯ ತ್ಯಜಿಸಿ ಸನ್ಯಾಸ ಸ್ವೀಕರಿಸಿ, ವೀರಶೈವ ಧರ್ಮಬೋಧನೆ ಮಾಡುತ್ತಾ ದೇಶಯಾತ್ರೆಗೆ ಹೊರಟುಹೋದನು. ಅವರ ಕಾಲದಲ್ಲಿ ಅಧಿಕ ವೀರಶೈವ ಮಠಗಳ ಸ್ಥಾಪನೆ, ಅವುಗಳಿಗೆ ದಾನ ಮುಂತಾದ ಕಾರ್ಯಗಳಿಂದ ವೀರಶೈವ ವಾತಾವರಣ ಜಿಲ್ಲೆಯಾದ್ಯಂತ ಪಸರಿಸಿತು. ಮಠಗಳನ್ನು ಸ್ಥಾಪಿಸುವುದರ ಮುಖಾಂತರ ತಮ್ಮ ರಾಜಕೀಯ ಪ್ರಭಾವವನ್ನು ವಿಸ್ತರಿಸಿಕೊಂಡಿದ್ದ ಇವರು ಅಷ್ಟೇ ಜನಪ್ರಿಯ ನಾಯಕರಾಗಿ ಆಳಿದ್ದಾರೆ. ಎಲ್ಲಾ ಪಾಳೆಯಪಟ್ಟುಗಳಂತೆ ಇದೂ ಕೂಡಾ ಹೈದರಾಲಿಯ ಕುತಂತ್ರಕ್ಕೆ ಬಲಿಯಾಗಿ ಮೂರನೇ ಮುದಿಯಪ್ಪ ನಾಯಕನೊಂದಿಗೆ ಕ್ರಿ.ಶ. ೧೭೭೯ರಲ್ಲಿ ಅಂತ್ಯಗೊಂಡಿತು. ಹಾಗಲವಾಡಿ ಅರಸರಿಗೆ ಗುರುವರ್ಗದವರೂ ಹಾಗೂ ವಿರಕ್ತವರ್ಗದವರೂ ಗುರುಗಳಾಗಿ ಅವರಿಂದ ಸೇವೆ ಪಡೆದುಕೊಂಡರು. ಈ ಎರಡೂ ವರ್ಗದವರ ಪ್ರಯತ್ನದಿಂದ ಮತ್ತು ಅವರ ಸಾಹಿತ್ಯ ರಾಶಿಯಿಂದ ಹಾಗಲವಾಡಿ ಸಂಸ್ಥಾನದಲ್ಲಿ ವೀರಶೈವ ಧರ್ಮಕ್ಕೆ ಭದ್ರವಾದ ಬುನಾದಿ ಸ್ಥಾಪಿತವಾಯಿತು. ವೀರಶೈವ ಧರ್ಮದ ಬೇರುಗಳು ಆಳಕ್ಕೆ ಇಳಿಯಲು ಕಾರಣವಾಯಿತು.

ಮಹಾನಾಡ ಪ್ರಭುಗಳು:

ಮೂಲತಃ ವೀರಶೈವರಾದ ಇವರು ತುಮಕೂರು ಜಿಲ್ಲಾ ಮಧುಗಿರಿ ತಾಲ್ಲೂಕಿನ ಮುಮ್ಮಡಿ ಪಟ್ಟಣ, ಬಿಜ್ಜಾವರ, ಮಧುಗಿರಿಯನ್ನು ಕ್ರಮವಾಗಿ ರಾಜಧಾನಿ ಮಾಡಿಕೊಂಡು ಕ್ರಿ.ಶ. ೧೪೦೦ ರಿಂದ ಕ್ರಿ.ಶ. ೧೮೦೦ ರವರೆಗೆ ಒಟ್ಟು ೧೩ ಜನ ರಾಜರು ಆಳ್ವಿಕೆ ನಡೆಸಿದರು. ಮೂಲತಃ ವೀರಶೈವ ನೊಳಂಬ ಪಲ್ಲವರಾದ ಇವರ ಮನೆತನದ ಕರಿತಿಮ್ಮ ಚಿಕ್ಕಭೂಪಾಲ ತೋಂಟದ ಸಿದ್ಧೇಶ್ವರನ ಭಕ್ತ. ಇವರಲ್ಲಿ ಪ್ರಸಿದ್ಧನಾದವನು ಇಮ್ಮಡಿ ಚಿಕ್ಕಭೂಪಾಲ. ಇವನು ನೆರೆಯ ಮಿಡಿಗೇಸಿ, ಕೊರಟಗೆರೆಯ ನಾಯಕರೊಂದಿಗೆ ಯುದ್ಧ ನಡೆಸಿ ಯಶಸ್ವಿಯಾದನು. ಚಿಕ್ಕಬಳ್ಳಾಪುರದ ಹಾವಳಿ ಭೈರೇಂದ್ರನ ಮೇಲೆ ತನ್ನ ಮಗ ಯುವರಾಜ ತೋಂಟೇಂದ್ರ ಯುದ್ಧ ಮಾಡುವಾಗ ಮೋಸದಿಂದ ಅವನನ್ನು ಕೊಲ್ಲುತ್ತಾನೆ. ಈ ಕೊರಗಿನಲ್ಲೇ ಇಮ್ಮಡಿ ಚಿಕ್ಕಭೂಪಾಲ ಮರಣ ಹೊಂದುತ್ತಾನೆ. ಧರ್ಮಾಭಿಮಾನಿಗಳೂ, ಸಾಹಿತ್ಯಪ್ರಿಯರೂ ಆಗಿದ್ದ ಇವರ ಅರಮನೆಯಲ್ಲಿ ಸರಸ್ವತಿ ಭಂಡಾರ ಇತ್ತೆಂದು ತಿಳಿಯುತ್ತದೆ. ಈ ಮನೆತನದ ಮುಮ್ಮಡಿ ಚಿಕ್ಕಭೂಪಾಲ "ಅಭಿನವ ಭಾರತ ಸಾರಸಂಗ್ರಹ" ಕೃತಿ ರಚಿಸಿದ್ದಾನೆ. ಇವರ ಆಶ್ರಯದಲ್ಲಿದ್ದ ಮಲ್ಲಿಕಾರ್ಜುನ ಕವಿ "ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ", ವಿರಕ್ತತೋಂಟದಾರ್ಯ "ಶ್ರೀ ಸಿದ್ಧೇಶ್ವರ ಪುರಾಣ", "ತೋಂಟದಾರ್ಯ ರಗಳೆ" ಸಹಿತ ೨೪ ಕೃತಿ ರಚಿಸಿದ್ದಾನೆ. ಇವರು ತೋಂಟದ ಸಿದ್ಧಲಿಂಗೇಶ್ವರರ ಪರಮ ಶಿಷ್ಯರಾಗಿದ್ದು ಅವರ ಭಕ್ತಿಯ ಕುರುಹಾಗಿ ತಾವು ನಿರ್ಮಿಸಿದ ಹೊಸ ಊರಿಗೆ ಸಿದ್ಧಾಪುರ ಎಂದು ಹೆಸರಿಟ್ಟಿದ್ದಾರೆ. ಇವರ ಕಾಲದಲ್ಲಿ ಗುರಮ್ಮನಮಠ, ಭಿಕ್ಷಾವರ್ತಿಮಠ, ಇನ್ನೂ ಅನೇಕ ಮಠಗಳು ನಿರ್ಮಾಣವಾದವು.

ಹದಿನಾಡ ಪ್ರಭುಗಳು:

ಮೂಲತಃ ಗೌಡರಾಗಿದ್ದ ಹದಿನಾಡ ಅರಸರು ಮೈಸೂರು ಜಿಲ್ಲೆಯ ಯಳಂದೂರಿನಿಂದ ಆಳ್ವಿಕೆ ಮಾಡುತ್ತಿದ್ದರು. ಇವರು ಕ್ರಿ.ಶ. ೧೫೭೨ ರಲ್ಲಿ ಚನ್ನರಾಜನ ಕಾಲದಲ್ಲಿ ವೀರಶೈವರಾದರು ಎಂದು ಎಂ.ಎಂ. ಕಲಬುರ್ಗಿ ಹೇಳಿದ್ದಾರೆ. ಆದರೆ ಎಂ.ಜಿ. ನಾಗರಾಜ್ ಅವರು ಚನ್ನರಾಜನಿಗಿಂತ ಮೊದಲೇ ಅವರು ವೀರಶೈವರಾಗಿದ್ದಾರೆಂದು ಸಾಬೀತು ಪಡಿಸಿದ್ದಾರೆ. ಈ ವಂಶದ ತಿರುಮಲರಾಜನಾಯಕನು (೧೬೦೮-೨೮) ಶಿವನಸಮುದ್ರದ ವೀರೇಶ್ವರ ದೇವಾಲಯದಲ್ಲಿ ಮಹತ್ತಿನ ಮಠವನ್ನು ಸ್ಥಾಪಿಸಿದ ಬಗ್ಗೆ ನಂಜನಗೂಡಿನ ಶಾಸನದಲ್ಲಿ ತಿಳಿಯುತ್ತದೆ. ಇವರ ಕಾಲದಲ್ಲಿ ಷಡಕ್ಷರದೇವ, ನಿಜಗುಣ ಶಿವಯೋಗಿ, ಮುಪ್ಪಿನಷಡಕ್ಷರಿ ಮುಂತಾದ ವೀರಶೈವ ಕವಿಗಳು ಇದ್ದರು. ಧನಗೂರಿನ ಷಡಕ್ಷರದೇವನು ಇವರ ರಾಜಗುರುವಾಗಿದ್ದು ಆ ವಂಶದ ಮುದ್ದುರಾಜನಿಂದ ಯಳಂದೂರಿನಲ್ಲಿ ತನಗಾಗಿ ಒಂದು ಮಠವನ್ನು ನಿರ್ಮಿಸಿಕೊಂಡನಂತೆ. ರಾಮರಾಜನಾಯಕನು ಸುತ್ತೂರು ಸಿಂಹಾಸನಕ್ಕೆ ಕರ್ತರಾದ ಶಿವರಾತ್ರಿ ದೇವರ ಶಿಷ್ಯನಾಗಿ ಚನ್ನಬಸವರಾಜ ದೇವರಿಗೆ ಹಸುರಹಳ್ಳಿ ಗ್ರಾಮವನ್ನು ಕೊಟ್ಟನೆಂದು ತಿಳಿದುಬರುತ್ತದೆ.

ದಾನಿವಾಸ ಒಡೆಯರು:

ದಾನಿವಾಸ ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜಪುರ ತಾಲ್ಲೂಕಿನಲ್ಲಿದೆ. ಈಗ ಇದು ಲಿಂಗನಮಕ್ಕಿಯ ಹಿನ್ನೀರಿನಲ್ಲಿ ಮುಳುಗಿಹೋಗಿದೆ. ದಾನಿವಾಸ ಚಿಕ್ಕಮನೆತನದ ಆಡಳಿತ ಕೇಂದ್ರವಾಗಿದ್ದು ಹೊಯ್ಸಳ, ವಿಜಯನಗರ, ಕೆಳದಿ ನಾಯಕರಿಗೆ ಅಧೀನವಾಗಿತ್ತು. ಹೊಯ್ಸಳ ವೀರಬಲ್ಲಾಳನ ಕಾಲದಲ್ಲಿ ಏಳಿಗೆಗೆ ಬಂದ ಇವರು ಕೆಳದಿಯ ಹಿರಿಯ ವೆಂಕಟಪ್ಪನಾಯಕನಿಗೆ ತಮ್ಮ ರಾಜ್ಯ ಕಳೆದುಕೊಂಡರು. ಒಟ್ಟು ೮ ಜನರ ಆಳ್ವಿಕೆಯನ್ನು ಇವರಲ್ಲಿ ಕಾಣಬಹುದು. ಇವರು ಮೂಲತಃ ಶೈವ ವೀರಶೈವರಾಗಿದ್ದು ಆ ಧರ್ಮದ ಪ್ರಗತಿಗೆ ಸೇವೆ ಸಲ್ಲಿಸಿರುವುದು ಕಂಡುಬರುತ್ತದೆ. ದಾನಿವಾಸದ ಒಡೆಯ ಚನ್ನವೀರಪ್ಪ (ಕ್ರಿ.ಶ. ೧೫೮೮) ತೋಂಟದ ಸಿದ್ಧಲಿಂಗೇಶ್ವರರ ಪರಮಭಕ್ತನಾಗಿದ್ದು ಆ ಸ್ವಾಮಿಗೆ ಕಲ್ಲಿನ ಮಠವನ್ನು ಕಟ್ಟಿಸಿಕೊಡುವುದರ

ಮುಖಾಂತರ ತನ್ನ ಜೀವನವನ್ನು ಸಾರ್ಥಕಗೊಳಿಸಿಕೊಂಡಿರುವುದು ಸ್ಪಷ್ಟವಾಗುತ್ತದೆ. ಅಲ್ಲದೆ ಸ್ವಾಮಿಯ ಪೂಜೆಗೆ ಸೀಮೆಯ ಮೇಲೆ ಸಂಗ್ರಹಿಸಿದ ನಂದಾದೀಪದ ಕಾಣಿಕೆಯನ್ನು ಅರ್ಪಿಸಿರುವುದು, ಮಠಕ್ಕೆ ಬಂದ ಭಕ್ತರಿಗೆ ದಾಸೋಹ ವ್ಯವಸ್ಥೆಗಾಗಿ ಅಡಿಗೆ ಮನೆ, ಉಗ್ರಾಣ ಮುಂತಾದವನ್ನು ನಿರ್ಮಿಸಿ ಅನುಕೂಲ ಕಲ್ಪಿಸಿರುವುದು ಎಡೆಯೂರಿನ ದೇವಾಲಯದ ಆವರಣದಲ್ಲಿನ ಶಾಸನದಿಂದ ತಿಳಿಯುತ್ತದೆ. ದಾನಿವಾಸದ ಒಡೆಯರಾಗಿದ್ದ ಲಿಂಗಣ್ಣನಾಯಕ, ಮಲ್ಲಣ್ಣನಾಯಕ, ಚಿಕ್ಕಮಲ್ಲಣ್ಣನಾಯಕರು ತಮ್ಮ ಪೂರ್ವಜರು ಬಾಳೆಹಳ್ಳಿಮಠದಿಂದ ತಮ್ಮ ಆರ್ಥಿಕ ಸಂಕಷ್ಟವನ್ನು ನಿವಾರಿಸಿಕೊಳ್ಳಲು ೧೨೦೦ ವರಹಗಳನ್ನು ಸಾಲವಾಗಿ ಪಡೆದಿದ್ದರಿಂದ ಅವರು ಅದಕ್ಕೆ ಪ್ರತಿಯಾಗಿ ಆ ಮಠಕ್ಕೆ ತಮ್ಮ ಸೀಮೆಯೊಳಗಣ ಆ ಮೂರು ಗ್ರಾಮಗಳನ್ನು ದತ್ತಿಯಾಗಿ ಬಿಟ್ಟುಕೊಟ್ಟಿರುವುದು ಶಾಸನಗಳಿಂದ ತಿಳಿದು ಬರುತ್ತದೆ. ದಾನಿವಾಸದ ಲಿಂಗಣ್ಣನಾಯಕನು ಕ್ರಿ.ಶ. ೧೫೫೩ರಲ್ಲಿ ಪಟ್ಟಣದಲ್ಲಿ ವಿರೂಪಾಕ್ಷ ಲಿಂಗ ಪ್ರತಿಷ್ಠಾಪನೆ ಮಾಡಿಸಿದ್ದಲ್ಲದೆ ಬಸವೇಶ್ವರ ದೇವರ ಗುಡಿ ಕಟ್ಟಿಸಿದನು. ಒಟ್ಟಿನಲ್ಲಿ ದಾನಿವಾಸ ಒಡೆಯರ ಮನೆತನ ಅತಿ ಶ್ರೀಮಂತ ರಾಜಮನೆತನವಾಗದಿದ್ದರೂ ಕೂಡಾ ತನ್ನ ಇತಿಮಿತಿಯಲ್ಲಿ ಇದು ಮಲೆನಾಡ ಸಂಸ್ಕೃತಿಗೆ ತನ್ನದೇ ಆದ ಕೊಡುಗೆ ಸಲ್ಲಿಸಿದೆ.

ಬೂದಿಹಾಳು ಪಾಳೆಯಗಾರರು:

ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕಿನ ಒಂದು ಹೋಬಳಿ ಗ್ರಾಮ ಬೂದಿಹಾಳು (ಶ್ರೀರಾಮಪುರ) ೧೫ನೇ ಶತಮಾನದ ಪೂರ್ವಾರ್ಧದಲ್ಲಿ ಇಲ್ಲಿ ಪಾಳೆಯಪಟ್ಟೊಂದು ಸ್ಥಾಪನೆಗೊಂಡಿತ್ತು. ಸಿರುಮನಾಯಕನ ಕಾಲದಲ್ಲಿ ಅತ್ಯಂತ ಉಚ್ಛ್ರಾಯ ಸ್ಥಿತಿಗೇರಿತು. ಮೂಲತಃ ಗೊಲ್ಲರಾಗಿದ್ದ ಇವರು ಸಿರುಮನಾಯಕನ ಕಾಲದಲ್ಲಿ ವೀರಶೈವರಾದರು. ಇವನನ್ನು ಕುರಿತಂತೆ ಮೂರು ಕಾವ್ಯಗಳು ಹುಟ್ಟಿವೆ. ಈ ಕೃತಿಗಳು ಸಿರುಮನನ್ನು ಶಿವಭಕ್ತನೆಂದೂ, ಬೂದಿಹಾಳನ್ನು ಪ್ರಥಮ ಕಲ್ಯಾಣವೆಂದೂ ಹೇಳುತ್ತವೆ. ಈ ಮನೆತನದ ಗೊಲ್ಲಜಾತಿಯ ಕಾಚನಾಯಕ ವಿಜಯನಗರದ ಪ್ರೌಢದೇವರಾಯನಿಂದ ಸೂಜಿಗಲ್ಲು ಪ್ರದೇಶವನ್ನು ಬಳುವಳಿಯಾಗಿ ಪಡೆದು ರಾಜ್ಯ ಸ್ಥಾಪಿಸಿದನು. ಸೂಜಿಗಲ್ಲಿನಿಂದ ಸಿರುಮನು ತನ್ನ ರಾಜಧಾನಿಯನ್ನು ಬೂದಿಹಾಳಿಗೆ ಬದಲಾಯಿಸಿದನು. ಅಲ್ಲಿ ಆಗಲೇ ಪ್ರಸಿದ್ಧವಾಗಿದ್ದ ಈಶ್ವರ ದೇವಾಲಯ, ನಿರಾಸೆ ಮಠ, ವೀರಶೈವ ವಾತಾವರಣದಿಂದ ಪ್ರಭಾವಿತನಾದ ಸಿರುಮನು ವೀರಶೈವ ಧರ್ಮಾನುಯಾಯಿಯಾದ. ಜಾತಿಗೌರವ ಸಂಪಾದನೆಯೂ ಇದಕ್ಕೆ ಕಾರಣವಿರಬಹುದು. ಅವನ ಮೊದಲಿಬ್ಬರು ಮಕ್ಕಳು ಕಾಚನಾಯಕ ಮತ್ತು ಮಲ್ಲಣ್ಣ ಅವರನ್ನು ಮೊದಲಿನ ಮತದಲ್ಲಿ ಇದ್ದುದನ್ನು ಸೂಚಿಸುತ್ತವೆ. ತನ್ನ ಮೂರನೆಯ ಮಗ ವೀರಭದ್ರನ ಜನನದ ವೇಳೆಗೆ ಈ ಕುಟುಂಬ ವೀರಶೈವ ಧರ್ಮ ಸ್ವೀಕರಿಸಿರಬೇಕು. ಮುಂದೆ ಈ ಕುಟುಂಬ ಪರಮ ವೀರಶೈವ ಶಿವಭಕ್ತ ಕುಟುಂಬವಾಗಿ ಬಾಳಿದೆ ಎಂದು ಹೇಳಬಹುದು. ಇವನ ಕಾಲದಲ್ಲಿ ಬೂದಿಹಾಳು ಪ್ರಸಿದ್ಧ ವೀರಶೈವ ಕೇಂದ್ರವಾಯಿತು. ಆದುದರಿಂದಲೇ ಕವಿಗಳು ಬೂದಿಹಾಳನ್ನು ಪ್ರಥಮ ಕಲ್ಯಾಣವೆಂದೂ, ಸಿರುಮನನ್ನು ಪರಮಶಿವಭಕ್ತನೆಂದೂ ವರ್ಣಿಸಿವೆ. ಹೀಗೆ ಬೂದಿಹಾಳು ಪಾಳೆಯಪಟ್ಟು ೧೫ನೇ ಶತಮಾನದ ಉತ್ತರಾರ್ಧ ಭಾಗದಲ್ಲಿ ಉಚ್ಛ್ರಾಯ ಸ್ಥಿತಿಗೇರಿ, ಪತನಾನಂತರ ವಿವಿಧ ಆಡಳಿತಗಾರರ ವಶಕ್ಕೆ ಒಳಪಟ್ಟು ಸಾಗಿತು.

ಉಮ್ಮತ್ತೂರಿನ ದೊರೆಗಳು:

ಉಮ್ಮತ್ತೂರು ಈಗಿನ ಚಾಮರಾಜನಗರದ ಕಾವೇರಿ-ಕಪಿಲಾನದಿ ಪರಿಸರದಲ್ಲಿ ಅರಳಿದ ಒಂದು ಚಿಕ್ಕ ಅರಸು ಮನೆತನ. ಒಟ್ಟು ೨೨ ಮಂದಿ ಪಾಳೆಯಗಾರರು ಈ ರಾಜ್ಯವನ್ನಾಳಿದರು. ೧೫ನೇ ಶತಮಾನದ ಕೊನೆಯ ದಶಕದಲ್ಲಿ ಈ ಪಾಳೆಯಗಾರರು ಪ್ರಾಬಲ್ಯಕ್ಕೆ ಬಂದು ದೇಪಣ್ಣ ಒಡೆಯನು ವಿಜಯನಗರದ ಅಧಿಪತ್ಯವನ್ನು ಧಿಕ್ಕರಿಸಿದನು. ಇವರು ಪ್ರಾರಂಭದಲ್ಲಿ ಶೈವರಾಗಿದ್ದು ಕ್ರಮೇಣ ವೀರಶೈವರಾದರು. ಈ ಅರಸರು ಪ್ರಾಯಶಃ ೧೪೬೩ರ ನಂತರದ ಕಾಲದಲ್ಲಿ ವೀರಶೈವ ಧರ್ಮದ ಪ್ರಭಾವಕ್ಕೆ ಒಳಗಾಗಿರಬಹುದು. ಕ್ರಿ.ಶ ೧೪೬೩ರಲ್ಲಿ ಜೀವಿಸಿದ್ದ ರಾಜಗುರುಗಳಾದ ಶ್ರೀ ಗುರುರುದ್ರಾಕ್ಷಿ ಒಡೆಯರು ಕಾರಣ

ಎಂಬುದಾಗಿ ಎರಡು ಶಾಸನಗಳಿಂದ (ಎ.ಕ. III, GP 151-176) ಸ್ಪಷ್ಟವಾಗುತ್ತದೆ. ಈ ಮನೆತನದ ಮತ್ತು ಪ್ರಸಿದ್ಧ ಅರಸನಾದ ನಂಜರಾಜ ಒಡೆಯನು ಶಿವರಾತ್ರೆಯಾರ್ಯನಿಂದ ವೀರಶೈವದೀಕ್ಷೆಯನ್ನು ಪಡೆದು ಶಿವನಸಮುದ್ರ ಪಟ್ಟಣವನ್ನು, ನಂಜನಗೂಡಿನ ನಂಜುಂಡೇಶ್ವರ ದೇವಾಲಯದ ಸಮೀಪ ಗುಡಿಯೊಂದನ್ನು ಕಟ್ಟಿಸಿದನೆಂದು ತಿಳಿದುಬರುತ್ತದೆ. ಶಿವರಾತ್ರೆಯಾರ್ಯ (ಸುತ್ತೂರು), ಶಿವಪೂಜೆಯಾರ್ಯ (ನಂಜನಗೂಡು), ತೊಗಾಡಿಯ ಬಸವೇಶ್ವರ (ಉಮ್ಮತ್ತೂರು), ಮರಳುಸಿದ್ದೇಶ್ವರ (ಶಿವನಸಮುದ್ರ), ಬಾಲಬ್ರಹ್ಮಚಾರಿ ಸಾಲೂರು ಶಾಂತೇಶ್ವರರಿಗೆ ಮಠಗಳನ್ನು ಕಟ್ಟಿಸಿಕೊಟ್ಟನು. ಈ ಮಠಗಳಲ್ಲದೆ ಯರಗಂಬಳ್ಳಿಮಠ ಮತ್ತು ಸಾಲೂರು ಮಠ ಮುಂತಾದವುಗಳಿಗೆ ಯಥೇಚ್ಛವಾಗಿ ದಾನನೀಡಿದನು. ಸಾಲೂರು ಮಠದ ಸ್ವಾಮಿಗಳಾದ ಶ್ರೀ ಶಾಂತದೇವರು ಮತ್ತು ಅವರ ಜೊತೆಗಿದ್ದ ಐವತ್ತು ಜನ ಶಿಷ್ಯರು ಮೇಲ್ವಿಚಾರಣೆಗಾಗಿ ಕುಂತೂರು ಗ್ರಾಮವನ್ನು ದಾನವಾಗಿ ನೀಡಿದರು. ಹೀಗೆ ವೀರಶೈವ ಗುರುಗಳು ಮತ್ತು ವೀರಶೈವ ಮಠಗಳು ಉಮ್ಮತ್ತೂರು ದೊರೆಗಳ ವಿಶೇಷ ಮನ್ನಣೆಗೆ ಪಾತ್ರರಾಗುವುದರ ಮೂಲಕ ಸಾಮಾಜಿಕ ಕ್ರಿಯಾಶೀಲತೆಯ ಅನುಷ್ಠಾನಕ್ಕೆ ಕಾರಣವಾಯಿತು. ಮರುಳಸಿದ್ಧ ವಿರಚಿತ ಗುರುಲಿಂಗಜಂಗಮ ಚಾರಿತ್ರ್ಯ ಈ ಮನೆತನದ ಚಟುವಟಿಕೆಗಳನ್ನು ವಿವರವಾಗಿ ನೀಡುತ್ತದೆ. ನಂಜರಾಜನಿಂದ ಪೂಜಿತನಾದ ನೀಲಕಂಠಾಚಾರ್ಯನು (ಕ್ರಿ.ಶ ೧೪೮೫) ಆರಾಧ್ಯ ಚರಿತ್ರೆ ಬರೆದಿದ್ದಾನೆ.

ಸುಗುಟೂರು ಪ್ರಭುಗಳು:

ಕೋಲಾರ ಜಿಲ್ಲೆಯ ಶಿಡ್ಲಘಟ್ಟ ತಾಲ್ಲೂಕಿನ ಜಂಗಮಕೋಟೆ ಸಮೀಪದ ಸುಗುಟೂರು ಗ್ರಾಮವೇ ಈ ಪ್ರಭುಗಳ ಆಳ್ವಿಕೆಯ ಮೂಲ ನೆಲೆ. ಈ ಮನೆತನಕ್ಕೆ ಸಂಬಂಧಪಟ್ಟ ೧೦೧ ಶಾಸನಗಳು ಲಭ್ಯವಿದ್ದು ಅವು ಈ ಪ್ರಭುಗಳು ೧೫ನೇ ಶತಮಾನದ ಮಧ್ಯಕಾಲದಿಂದ ೧೯ನೇ ಶತಮಾನದವರೆಗಿನ ಚರಿತ್ರೆಯನ್ನು ಹೇಳುತ್ತವೆ. ಇವರು ಆರಂಭದಿಂದಲೇ ವೀರಶೈವ ಧರ್ಮಾನುಯಾಯಿಗಳು. ಈ ವಂಶದ ಮೊದಲ ಪ್ರಭು ದೇವಯ್ಯಗೌಡ. ಈ ಅರಸರು ವೀರಶೈವ ಧರ್ಮದ ಗುರುಗಳಿಗೆ ಅನೇಕ ಮಠಗಳನ್ನು ಕಟ್ಟಿಸಿಕೊಟ್ಟಿರುವ ಉಲ್ಲೇಖಗಳಿವೆ. ಕೋಟೂರು, ಹೊಸಹಳ್ಳಿ ಶಾಸನದಲ್ಲಿ ಮಹಾದೇವರು ಎಂಬುವನಿಗೆ ಗೊನಕನಹಳ್ಳಿ ಶಾಸನದಲ್ಲಿ ಸೆಜ್ಜೆ ಸಿದ್ದಲಿಂಗದೇವನ ಮಗ ಗುರು ಬಸವಣ್ಣನಿಗೆ ಹೊಸಕೋಟೆ ತಾಲ್ಲೂಕು ಕಟ್ಟಿಗೇನಹಳ್ಳಿ ಶಾಸನದಲ್ಲಿ ವಿರಕ್ತ ದೇವನೆಂಬ ಶುದ್ಧ ಶಿವಾಚಾರ ಪಾಲಕನಿಗೆ ಮಠಗಳನ್ನು ಕಟ್ಟಿಸಿಕೊಟ್ಟು ಪಟ್ಟಾಭಿಷಕ್ತರನ್ನಾಗಿಸಿರುವುದು ಕಂಡುಬರುತ್ತದೆ. ಸುಜ್ಞಾನ ಮೂರ್ತಿ ದೇಶಿಕ ಎಂಬುವನು ಈ ಅರಸರಿಗೆ ರಾಜಗುರುವಾಗಿದ್ದನು. ಈ ಪರಂಪರೆಯ ಮಠಗಳಿಗೆ ಸುಗುಟೂರು ಅರಸರು ವಿಶೇಷ ಸೇವೆ ಸಲ್ಲಿಸಿದ್ದಾರೆ. ಕ್ರಿ.ಶ. ೧೫೭೭ರ ಗುಮ್ಮಲಾಪುರದ ಶಾಸನ ರಾಯಸಮುದ್ರ ಹಾಗೂ ತಮ್ಮಾಪುರ ಗ್ರಾಮಗಳನ್ನು ಶರಣ ಶಾಂತದೇವರು ವೀರಣ್ಣದೇವರುಗಳಿಗೆ ದತ್ತಿಕೊಟ್ಟಿದ್ದ ವಿವರವಿದೆ. ಕ್ರಿ.ಶ. ೧೬೦೯ರಲ್ಲಿ ಬೂಸನಹಳ್ಳಿ ಗ್ರಾಮವನ್ನು ಮುಮ್ಮಡಿ ತಮ್ಮೇಗೌಡನು ಸೋಸಲೆಯ ಗುರುಮಠದ ದೇವಣಾರಾಧ್ಯರಿಗೆ ಸರ್ವಮಾನ್ಯವಾಗಿ ಸಮರ್ಪಿಸುತ್ತಾನೆ. ಹೀಗೆ ಸುಗುಟೂರು ಪ್ರಭುಗಳು ವೀರಶೈವರಾಗಿ ಅನೇಕ ಗುರು ಶರಣರಿಗೆ ತಮ್ಮ ಆಳ್ವಿಕೆಯ ಪ್ರದೇಶಗಳಲ್ಲಿ ದಾನ ದತ್ತಿ ನೀಡಿ ಪೋಷಿಸಿರುವುದು ಕಂಡುಬರುತ್ತದೆ.

ಮತ್ತೋಡು ಪಾಳೆಯಗಾರರು:

ಮತ್ತೋಡು ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕಿನ ಹೋಬಳಿ ಕೇಂದ್ರ. ಮೂಲತಃ ಬೇಡಕುಲಕ್ಕೆ ಸೇರಿದ ಇವರು ಮಧ್ಯದಲ್ಲಿ ವೀರಶೈವರಾದರು. ಇವರು ಕ್ರಿ.ಶ. ೧೬೦೪ರಿಂದ ೧೭೭೯ರವರೆಗೆ ೧೭೫ ವರ್ಷಗಳ ಕಾಲ ಹತ್ತು ಮಂದಿ ರಾಜರು ಮತ್ತೋಡು ಪ್ರಾಂತ್ಯದಲ್ಲಿ ಆಳ್ವಿಕೆ ನಡೆಸಿದ್ದಾರೆ. ಶ್ರೀಶೈಲದ ಕಡೆಯಿಂದ ಬಂದ ಪರ್ವತ ಮಲ್ಲಿಕಾರ್ಜುನ ಸ್ವಾಮಿಗಳ ಪ್ರಭಾವದಿಂದ ಮತ್ತೋಡಿನ ಪ್ರಮುಖ ದೊರೆ ಹಾಲಪ್ಪನಾಯಕ ಅವರಿಂದ ವೀರಶೈವ ದೀಕ್ಷೆಯನ್ನು ಪಡೆದುಕೊಂಡನೆಂದು ಹೇಳಲಾಗಿದೆ. ನಂತರ ಅವನು ಈ ಧರ್ಮದಲ್ಲಿ ಅಪಾರ ನಂಬಿಕೆಯನ್ನಿಟ್ಟುಕೊಂಡು ತನ್ನ ತಂದೆ

ತಾಯಿಗೆ ಶಿವಸಾನಿಧ್ಯ ಲಭಿಸಲೆಂದು ಕ್ರಿ.ಶ. ೧೬೦೭ರಲ್ಲಿ ಮುರಿಗೆ ಸ್ವಾಮಿಗಳ ಮಠವನ್ನು ಮತ್ತೋಡಿನಲ್ಲಿ ಕಟ್ಟಿಸಿ ಅದರ ನಿರ್ವಹಣೆಗಾಗಿ ಅರೆಹಳ್ಳಿ ಗ್ರಾಮವನ್ನು ದತ್ತಿಯಾಗಿ ನೀಡಿದನು. ತನ್ನ ಹೆಂಡತಿ ನಾಗಕೆಂಚಾಂಬೆಯ ಸೀಮಂತ ಸಮಾರಂಭದ ಶುಭಸಂದರ್ಭದಲ್ಲಿ ಹಾಲಪ್ಪನಾಯಕನು ಚಿಗತಮ್ಮಣ್ಣ ಎಂಬುವನಿಗೆ ಶಿವಾರ್ಪಿತವಾಗಿ ಗದ್ದೆಯನ್ನು ಕ್ರಿ.ಶ. ೧೬೮೯ರಲ್ಲಿ ನೀಡಿದನೆಂದು ಶಾಸನ ತಿಳಿಸುತ್ತದೆ. ದೊರೆ ಹಾಲಪ್ಪನಾಯಕನು ಶೈವಶಾಸ್ತ್ರ ಪಾರಂಗತನಾಗಿದ್ದು ವೀರಶೈವ ಮಠಗಳ ಸ್ಥಾಪನೆ ಮಾಡಿದ್ದನು. ಹಾಲಪ್ಪನಾಯಕ ಅತ್ಯಂತ ಪ್ರಭಾವವುಳ್ಳ ವ್ಯಕ್ತಿಯಾಗಿದ್ದು, ಅವನ ಅರಮನೆಯ ಗೋಡೆಗಳು ಚಿತ್ರಗಳಿಂದ ಅಲಂಕೃತವಾಗಿದ್ದವು. ಹೊಳೆಯುವ ಹೊಂಗಲಶಗಳ ಉಪ್ಪರಿಗೆಗಳಿಂದ ಮತ್ತೋಡು ಪಟ್ಟಣ ಶೋಭಿಸುತ್ತಿತ್ತು. ಇಲ್ಲಿ ರತ್ನದ ಅಂಗಡಿಗಳೂ, ಮುತ್ತಿನ ಅಂಗಡಿಗಳೂ ಚಿನಿವಾರರ ಅಂಗಡಿಗಳೂ ಇದ್ದವೆಂದು ಹೇಳಲಾಗಿದೆ. ಒಟ್ಟಿನಲ್ಲಿ ಪಾಳೆಯಪಟ್ಟು ಚಿಕ್ಕದಾಗಿದ್ದರೂ ಅವರು ಉದಾತ್ತವಾದ ಧರ್ಮವೊಂದನ್ನು ಸ್ವೀಕರಿಸಿ ಅದಕ್ಕೆ ನಿಷ್ಠರಾಗಿ ಬದುಕಿ ಚರಿತ್ರೆಯಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿದ್ದಾರೆ.

ಚಿತ್ರದುರ್ಗದ ನಾಯಕರು:

ಮೂಲತಃ ಬೇಡರಾಗಿದ್ದ ಚಿತ್ರದುರ್ಗ ನಾಯಕರು ತಾತ್ಕಾಲಿಕವಾಗಿ ವೀರಶೈವರಾದವರ ಗುಂಪಿಗೆ ಸೇರುತ್ತಾರೆ. ಈ ದುರ್ಗವನ್ನಾಳಿದ ನಾಯಕರಲ್ಲಿ ಚಿಕ್ಕಣ್ಣನಾಯಕ ಎಂಬುವನು (೧೬೭೪-೧೬೮೬) ಮಾತ್ರ ತಾತ್ಕಾಲಿಕವಾಗಿ ವೀರಶೈವ ಧರ್ಮ ಸ್ವೀಕರಿಸಿದ ವ್ಯಕ್ತಿ. ಹಟ್ಟಿ ಪಾಳೆಯಗಾರರ ಹೆಣ್ಣು ಮಗಳು ಮಲ್ಲವ್ವನಾಗತಿಯೊಂದಿಗೆ ವಿವಾಹವಾದ ಮೇಲೆ ಅವನು ಪತ್ನಿ ಸಮೇತ ವೀರಶೈವ ಧರ್ಮ ಸ್ವೀಕರಿಸಿದನು. ಇದರ ನೆನಪಿಗೋಸ್ಕರ ಲಾಲಕೋಟೆ ಬಾಗಿಲು ಬಳಿಯಲ್ಲಿ ತನ್ನ ಗುರುವಾದ ಉಗ್ಗ ಚನ್ನವೀರ ಸ್ವಾಮಿಗಳಿಗೆ ವೀರಶೈವ ಮಠ ಕಟ್ಟಿಸಿಕೊಟ್ಟನು. ನಂತರ ಈ ಮಠದಲ್ಲಿ ಸುಲೇಗಾವಿಯ ಮಹಾಂತದೇವರು ನಿಂತರು. ಆದರೆ ಆ ಕುಟುಂಬ ಕೇವಲ ಕೆಲವೇ ದಿನಗಳಲ್ಲಿ ಆ ಧರ್ಮ ತ್ಯಜಿಸಿದರೂ ನಾಯಕನ ಪತ್ನಿ ಮಲ್ಲವ್ವನಾಗತಿ ಮಾತ್ರ ಆ ಧರ್ಮದಲ್ಲಿಯೇ ಮುಂದುವರಿದಳು. ಭರಮಣ್ಣ ನಾಯಕನ ಕಾಲದಲ್ಲಿ ೧ನೇ ಮುರಿಗೆ ಶಾಂತವೀರ ಸ್ವಾಮಿಗಳಿಗೆ ಬಹಳ ಭಯಭಕ್ತಿಯಿಂದ ನಡೆದುಕೊಳ್ಳಲಾಯಿತು. ಬಿಚ್ಚುಗತ್ತಿ ಭರಮವ್ವ ೩೦೦ ಅಂಕಣದ ಬೃಹನ್ಮಠವನ್ನು ಕಟ್ಟಿಸಿಕೊಟ್ಟಿದ್ದಲ್ಲದೆ ತನ್ನ ಒಬ್ಬ ಮಗನನ್ನು ಆ ಮಠದ ಸೇವೆಗೆ ನಿಯೋಜಿಸಿದ್ದಳು.

ಕಳಲೆ ದಳವಾಯಿಗಳು:

ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನಲ್ಲಿ ಇಂದು ಕುಗ್ರಾಮವಾಗಿರುವ ಕಳಲೆಯು ಮೈಸೂರು ಒಡೆಯರ್ ಸಂತತಿಯವರಿಗೆ ದಳವಾಯಿಗಳನ್ನು ಪೂರೈಸಿದ್ದರಿಂದ ಚರಿತ್ರೆಯಲ್ಲಿ ತನ್ನದೇ ಆದ ಸ್ಥಾನ ಪಡೆದಿದೆ. ಮೂಲತಃ ವೀರಶೈವರಾಗಿದ್ದ ಇವರ ಬಗ್ಗೆ ದೇವಚಂದ್ರನ ರಾಜಾವಳಿ ಕಥೆಯು ಈ ರೀತಿ ಹೇಳುತ್ತದೆ "ಕಳಲೆಯರಸುಗಳು ವೀರಶೈವ ಧರ್ಮವನ್ನಾಚರಿಸಿ ನಂಜುಂಡೇಶ್ವರಂ ಇಷ್ಟದೇವರಾಗೆ... ಕ್ರಿ.ಶ. ೧೬೭೪ರಲ್ಲಿ ಕಳಲೆ ದಳವಾಯಿ ಕುಮಾರಯ್ಯನಿಗೆ ಮಲ್ಲಿಕಾರ್ಜುನಸ್ವಾಮಿಗಳು ಲಿಂಗಧಾರಣೆ ಮಾಡಿದರು" ಎಂಬ ಮಾಹಿತಿ "ಕಳಲೆ ಗುರುಗಳಿಗೆ ಸಲ್ಲುವ ಶಿಷ್ಯ ಸಂಪ್ರದಾಯದ ವಿವರ" ಎಂಬ ದಾಖಲೆಯಲ್ಲಿ ದೊರೆಯುತ್ತದೆ. ೧೭ನೇ ಶತಮಾನದ ಆರಂಭದಲ್ಲಿ ಮೈಸೂರಿನ ರಾಜಒಡೆಯರು ಕೇವಲ ೩೩ ಹಳ್ಳಿಗಳಿಗೆ ಒಡೆಯರಾಗಿ ೨೫೦೦೦ ಗದ್ಯಾಣಗಳ ಉತ್ಪತ್ತಿಯನ್ನು ಹೊಂದಿದ್ದಾಗ, ಕಳಲೆ ಮನೆತನದವರಿಗೆ ೪೦೦೦೦ ಗದ್ಯಾಣಗಳ ಆದಾಯವಿತ್ತು ಎಂಬುದು ಅವರ ಆಧಿಕ್ಯವನ್ನು ಸೂಚಿಸುತ್ತದೆ. ಹೀಗಿರುವಾಗ ಹಾಲಿಗೆ ಜೇನು ಸೇರಿದಂತೆ ಈ ಎರಡೂ ಮನೆತನಗಳ ನಡುವೆ ವಿವಾಹ ಬಾಂಧವ್ಯ ಏರ್ಪಟ್ಟಿದ್ದಲ್ಲದೆ ಕಳಲೆ ಮನೆತನದವರು ವಂಶಪಾರಂಪರ್ಯವಾಗಿ ಮೈಸೂರು ರಾಜ್ಯಕ್ಕೆ ದಳವಾಯಿಗಳಾಗಿ ನೇಮಿಸಲ್ಪಡುವ ಒಪ್ಪಂದವೂ ಈ ಮನೆತನಗಳ ನಡುವೆ ಆದದ್ದು ಮತ್ತೊಂದು ವಿಶೇಷವಾಗಿದೆ. ಈ ಮನೆತನದಲ್ಲಿ ಅತ್ಯಂತ ದಕ್ಷರೂ ಹಾಗೂ ಶ್ರೇಷ್ಠರೂ ಆದವರು ನಿಷ್ಠಾವಂತ ವೀರಶೈವರಾಗಿದ್ದ ದೇವರಾಜಯ್ಯ ಮತ್ತು ನಂಜರಾಜಯ್ಯ. ಇವರು ಮೈಸೂರು ಒಡೆಯರ ರಾಜ್ಯ ವ್ಯವಸ್ಥೆಯಲ್ಲಿ ಕ್ರಮವಾಗಿ ಸರ್ವಾಧಿಕಾರಿ ಮತ್ತು ದಳವಾಯಿ.

೧೮ನೇ ಶತಮಾನದ ಆರಂಭದಲ್ಲಿ ಮೊಘಲ್ ಸಾಮ್ರಾಜ್ಯ ಪತನದ ಹಾದಿ ಹಿಡಿದಾಗ ಅದರ ಲಾಭವನ್ನು ಐರೋಪ್ಯ ಶಕ್ತಿಗಳು ಪಡೆದುಕೊಳ್ಳಲು ಹಾತೊರೆಯುತ್ತಿದ್ದಾಗ ಮೈಸೂರು ರಾಜ್ಯವನ್ನು ಪ್ರತಿಷ್ಠೆಯ ಪಥಕ್ಕೆ ಕೊಂಡೊಯ್ಯಲು ಪ್ರಯತ್ನಿಸಿದವರು ಈ ಕಳಲೆ ಮನೆತನದ ವೀರಶೈವ ದಳವಾಯಿಗಳಾದ ನಂಜರಾಜಯ್ಯ ಮತ್ತು ದೇವರಾಜಯ್ಯ. ಹೈದರಾಲಿ ಕೂಡಾ ಬೆಳೆದದ್ದು ಈ ದಳವಾಯಿಗಳ ಗರಡಿಯಲ್ಲೇ. ಟಿಪ್ಪೂವಿನ ವಿದೇಶಾಂಗ ನೀತಿಯ ಮೂಲ ಸೂತ್ರವಾದ ಬ್ರಿಟೀಷ್ ವಿರೋಧಿ ಫ್ರೆಂಚ್ ಪರ ಧೋರಣೆಯನ್ನು ಮೊದಲು ನಿರೂಪಿಸಿದವರೂ ಈ ದಳವಾಯಿಗಳೇ ಆಗಿದ್ದರು.

ಯಲಹಂಕ ನಾಡಪ್ರಭುಗಳು:

ಯಲಹಂಕ ನಾಡಪ್ರಭುಗಳಲ್ಲಿ ತಾತ್ಕಾಲಿಕವಾಗಿ ಕೆಲವು ಅರಸರು ಮಾತ್ರ ವೀರಶೈವರಾಗಿದ್ದುದು ಕಂಡುಬರುತ್ತದೆ. ಈ ವಂಶದ ಮಾಗಡಿಯ ಇಮ್ಮಡಿ ಕೆಂಪೇಗೌಡ (೧೫೮೩-೧೬೫೮) ನಿಂದ ಆ ಮನೆತನದಲ್ಲಿ ವೀರಶೈವ ಪ್ರಭಾವವನ್ನು ಗಮನಿಸಬೇಕಾಗುತ್ತದೆ. ನಿರಂಜನವಂಶರತ್ನಾಕರ ಕೃತಿಯ ಪ್ರಕಾರ ಕಲ್ಯಾಣದ ಗಗನಾಧಾರ್ಯರು ಕ್ರಿ.ಶ. ೧೬೦೭ರಲ್ಲಿ ಮಾಗಡಿಗೆ ಬಂದಾಗ ಕೆಂಪೇಗೌಡನು ಲಿಂಗದೀಕ್ಷೆ ಪಡೆದು ಶಿಷ್ಯನಾದನು. ನಂತರ ಮಾಗಡಿಯ ಸುತ್ತಮುತ್ತ ಅನೇಕ ಮಠಗಳನ್ನು ಕಟ್ಟಿಸಿದನು. ವಿರೂಪಾಕ್ಷ ಪಂಡಿತನ ಚನ್ನಬಸವ ಪುರಾಣದ ರೀತ್ಯ ಯಲಹಂಕದ ದೊರೆಗಳು ವೀರಶೈವ ಭಕ್ತರಾಗಿ ಮಾಗಡಿಯಲ್ಲಿ ಜಂಗಮ ದಾಸೋಹ ನಡೆಸುತ್ತಿದ್ದರೆಂದು ತಿಳಿಯುತ್ತದೆ. ಮುಮ್ಮಡಿ ಕೆಂಪವೀರಪ್ಪನು (೧೭೦೫-೨೮) ವೀರಶೈವನಾಗಿದ್ದು ತನ್ನ ಗೋತ್ರವನ್ನು ಸದಾಶಿವಗೋತ್ರವೆಂದು ಪರಿವರ್ತಿಸಿಕೊಂಡುದಲ್ಲದೆ ಅನೇಕ ವೀರಶೈವ ಮಠಗಳನ್ನು ನಿರ್ಮಿಸಿದನು. ಏಕಾಂಬರ ದೀಕ್ಷಿತನೆಂಬ ಈತನ ಆಸ್ಥಾನ ಕವಿ ಬರೆದಿರುವ 'ವೀರಭದ್ರ ವಿಜಯ'ದಲ್ಲಿ ಮಾಗಡಿಯ ವೀರಭದ್ರೋತ್ಸವ ಮತ್ತು ಯಲಹಂಕ ಪ್ರಭುಗಳ ವರ್ಣನೆ ಇದೆ. ಹೀಗೆ ಯಲಹಂಕ ನಾಡಪ್ರಭುಗಳ ವಂಶೀಕರಲ್ಲಿ ಕೆಲವು ಅರಸರು ಮತ್ತು ರಾಣಿಯರು ಶಿವಾಚಾರಸ್ಥರಾಗಿ ವೀರಶೈವ ಧರ್ಮದೊಲವನ್ನು ಪಡೆದಿದ್ದಾರೆ.

ಗುಬ್ಬಿಹೊಸಹಳ್ಳಿ ಪಾಳೆಯಗಾರರು:

ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನಲ್ಲಿ ಒಂದು ಗ್ರಾಮವಾಗಿರುವ ಗುಬ್ಬಿ ಹೊಸಹಳ್ಳಿ ಒಂದು ಚಿಕ್ಕ ಪಾಳೆಯಪಟ್ಟಾಗಿತ್ತು. ಮೂಲತಃ ವೀರಶೈವರಾಗಿದ್ದ ಈ ಪಾಳೆಯಗಾರರು ವಿಜಯನಗರ ಹಾಗೂ ಮೈಸೂರು ಒಡೆಯರ ಸಮಕಾಲೀನರಾಗಿ ಆಳ್ವಿಕೆ ನಡೆಸಿದರು. ನೊಳಂಬ ವೀರಶೈವರಾದ ಇವರ ಪರಂಪರೆಯಲ್ಲಿ ಕಾಳಚಿಕ್ಕಪ್ಪಗೌಡ, ಹೊನ್ನಪ್ಪನಾಯಕಗೌಡ, ವೀರಪ್ಪಗೌಡ, ತೋಟಪ್ಪಗೌಡ, ಓರೇಹೊನ್ನಪ್ಪಗೌಡ, ಮುಮ್ಮಡಿ ಹೊನ್ನಪ್ಪಗೌಡ ಇತ್ಯಾದಿ ಇವರು ಮೈಸೂರು ಒಡೆಯರಿಗೆ ನಿಷ್ಠೆಯಿಂದಿದ್ದು ವರ್ಷವೊಂದಕ್ಕೆ ೫೦೦ ಪಗೋಡಗಳ ರಾಜಕಾಣಿಕೆ ಸಲ್ಲಿಸುತ್ತಿದ್ದರು. ಆದರೆ ಹೈದರಾಲಿಯು ಇದನ್ನು ೨೫೦೦ ಪಗೋಡಗಳಿಗೆ ಹೆಚ್ಚಿಸಿದನು. ಅವನ ಮಗ ಟಿಪ್ಪೂ ಸುಲ್ತಾನನು ಕಪ್ಪ ಉಂಬಳಿಯನ್ನು ಒಟ್ಟಿಗೆ ರದ್ದುಪಡಿಸಿ ಆ ಸಂಸ್ಥಾನವನ್ನು ತನ್ನ ಅಧೀನಕ್ಕೆ ಒಳಪಡಿಸಿಕೊಂಡನು. ಈಗಲೂ ಆ ವಂಶಸ್ಥರು ಸಾಮಾನ್ಯ ರೈತರಂತೆ ಹೊಲ ಗದ್ದೆಗಳಲ್ಲಿ ಉಳುಮೆ ಮಾಡುತ್ತಿದ್ದಾರೆ. ಗುಬ್ಬಿ ಚನ್ನಬಸವೇಶ್ವರು ಇವರ ಗುರುಗಳಾಗಿದ್ದರು.

ಹರಪನಹಳ್ಳಿ ಪಾಳೆಯಗಾರರು:

ಮೂಲತಃ ಬೇಡರಾದ ಈ ನಾಯಕರು ತಾತ್ಕಾಲಿಕವಾಗಿ ವೀರಶೈವಧರ್ಮ ಸ್ವೀಕರಿಸಿದವರು. ಈ ಮನೆತನದ ಮೊದಲ ಬಸವಂತ ನಾಯಕ (೧೬೮೭-೧೭೦೫) ವೀರಶೈವಧರ್ಮ ಸ್ವೀಕರಿಸಿದ್ದನೆಂಬುದಕ್ಕೆ ಅನೇಕ ಹೇಳಿಕೆಗಳಿರುವುದನ್ನು ಕುಂಬಾ ಸದಾಶಿವಪ್ಪನವರ 'ಹರಪನಹಳ್ಳಿ ಪಾಳೆಯಗಾರರು' ಕೃತಿಯಲ್ಲಿ ಕಾಣಬಹುದು. ವೀರಶೈವನಾದ ನಂತರ ಇವನು ತನ್ನ ಹೆಸರನ್ನು ಕೊಟ್ರಪ್ಪನಾಯಕನೆಂದು ಬದಲಾಯಿಸಿಕೊಂಡನು. ಕೊಟ್ಟೂರಿನ ಶ್ರೀ ಗುರು ಬಸವೇಶ್ವರರೇ ಇವರ ಗುರುಗಳಾಗಿದ್ದರು. ಅನೇಕ ಮಠ ಮಾನ್ಯಗಳನ್ನು ನಿರ್ಮಿಸಿ ಅವುಗಳಿಗೆ ದಾನ ನೀಡಿರುವ ಸಂಗತಿ ಶಾಸನಗಳಿಂದ ತಿಳಿದುಬರುತ್ತವೆ. ರಾಜಗುರುಗಳ

ಮಾರ್ಗದರ್ಶನದಂತೆ ತಮ್ಮ ವಂಶದಲ್ಲಿ ಯಾರಾದರೂ ನಿಧನರಾದರೆ ವೀರಶೈವ ಸಂಪ್ರದಾಯದಂತೆ ಅಂತ್ಯ ಸಂಸ್ಕಾರ ಮಾಡುತ್ತಿದ್ದರು. ಅರಸನು ನಿಧನ ಹೊಂದಿದರೆ ಮಠ, ಬಾವಿ, ಹೂತೋಟಗಳನ್ನು ನಿರ್ಮಿಸುತ್ತಿದ್ದರು. ಈಗಲೂ ಈ ಮಠಗಳಿಗೆ ಜನರು ಅರಸು ಮಠಗಳೆಂದು ಕರೆಯುವರು. ನಿರೂಪಗಳನ್ನು ಕಳಿಸುವಾಗ ಮುದ್ರೆಯಲ್ಲಿ "ಬಸವ" ಎಂಬ ಬರಹವಿರುವುದು ಅದು ಆ ಧರ್ಮದ ಮೇಲಿನ ವ್ಯಾಮೋಹವಾಗಿತ್ತೆಂದು ಹೇಳಬಹುದು.

ಜರಿಮಲೆ ನಾಯಕರು:

ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲ್ಲೂಕಿನ ಜರಿಮಲೆ ಇಂದು ಕುಗ್ರಾಮವಾಗಿದೆ. ಮೂಲತಃ ಬೇಡರಾಗಿದ್ದ ಜರಿಮಲೆ ನಾಯಕರು ತಾತ್ಕಾಲಿಕವಾಗಿ ವೀರಶೈವ ಧರ್ಮವನ್ನು ಅನುಸರಿಸಿದವರು. ಕ್ರಿ.ಶ ೧೫೦೦ ರಿಂದ ೧೮೦೦ ರವರೆಗೆ ತಮಗಿಂತ ವಿವಿಧ ಬಲಾಢ್ಯರ ಆಡಳಿತಕ್ಕೆ ಒಳಪಟ್ಟ ಮನೆತನದ ಪೂರ್ಣ ಚರಿತ್ರೆಯನ್ನು ಇತ್ತೀಚೆಗೆ ಡಾ. ಡಿ.ಎನ್. ಯೋಗೀಶ್ವರಪ್ಪನವರು ಜರಿಮಲೆ ನಾಯಕರು ಎಂಬ ಶೀರ್ಷಿಕೆಯಡಿ ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ಸಂಪುಟ ೮೦ ಸಂಚಿಕೆ ೨ ಕ್ರಿ.ಶ. ೨೦೦೨ ರಲ್ಲಿ ಪ್ರಕಟಿಸಿದ್ದಾರೆ. ಈ ಮನೆತನದ ಭೂಮಿರಾಜ ವೀರಶೈವದತ್ತ ಒಲವು ತೋರಿಸಿದ್ದಾನಲ್ಲದೆ ಜರಿಮಲೆ ಸಂಸ್ಥಾನದ ವಂಶಾವಳಿಯಲ್ಲಿ ಮಳೆಬಗಿ ಚನ್ನಬಸವಸ್ವಾಮಿ, ಮನೆಯ ಗುರು ಉಜ್ಜಯಿನಿ ಮರುಳಸಿದ್ಧನ ಮಠಗಳ ಪ್ರಸ್ತಾಪವಿದೆ. ಭೂಮಿರಾಜನು ಉಜ್ಜಯನಿ ಮಠದ ಕಸಗುಡಿಸುವ ಮೂಲಕ ತನ್ನ ಭಕ್ತಿಯನ್ನು ತೋರಿಸಿದ್ದಾನೆ.

ದೇಸಾಯಿ, ದೇಶಮುಖ ಮುಂತಾದ ಅರಸು ಮನೆತನವೆಂದರೆ ಕಿತ್ತೂರು ಅರಸು ಮನೆತನ. ಈ ಸಂಸ್ಥಾನದ ಇತಿಹಾಸ ಕ್ರಿ.ಶ. ೧೫೮೫ರಿಂದ ಆರಂಭವಾಯಿತೆಂದು, ಮಲ್ಲಪ್ಪಗೌಡ ಸರದೇಸಾಯಿ ಕ್ರಿ.ಶ. ೧೬೬೦ರಲ್ಲಿ ಕಿತ್ತೂರಿನಲ್ಲಿ ಕೋಟೆ ಕಟ್ಟಿಸಿ ಆಳ್ವಿಕೆ ಮಾಡಲಾರಂಭಿಸಿದನು. ಈ ಮನೆತನದಲ್ಲಿ ಶಿವಲಿಂಗ ಸರ್ಜನವರೆಗೆ ೧೨ ಜನ ಅರಸರು ೨೪೯ ವರ್ಷ ಆಳಿದ್ದಾರೆ. ಈ ಸಂಸ್ಥಾನದ ಹಿರಿಯ ಮಲ್ಲಸರ್ಜನ ಕಾಲಕ್ಕೆ ಅತ್ಯುನ್ನತ ಸ್ಥಿತಿ ತಲುಪಿತು. ೧೮೧೬ರಲ್ಲಿ ಅವನು ಮರಣ ಹೊಂದಿದ ನಂತರ ಅವನ ಮಗ ಶಿವಲಿಂಗ ರುದ್ರಸರ್ಜ ಅಧಿಕಾರಕ್ಕೆ ಬಂದಾಗ ಮಕ್ಕಳಿಲ್ಲದ ಪ್ರಯುಕ್ತ ದತ್ತುಸ್ವೀಕಾರ ಮಾಡಿದಾಗ ನಂತರ ಇದು ಕ್ರಾಂತಿಗೆ ನಾಂದಿಯಾಯಿತು. ಈ ಕ್ರಾಂತಿಯ ಕೇಂದ್ರಶಕ್ತಿ ಮಲ್ಲಸರ್ಜ ದೊರೆಯ ಕಿರಿಯ ಪತ್ನಿ ರಾಣಿ ಚನ್ನಮ್ಮ. ಈ ಮನೆತನದ ಮಲ್ಲಸರ್ಜ ದೊರೆಯ ಆಸ್ಥಾನ ಕವಿಯ ಕಾವ್ಯಗಳು ಈತನನ್ನು ಜಂಗಮದಾಸೋಹಿ ಎಂದು ವರ್ಣಿಸಿವೆ. ಕಲ್ಲುಮಠದ ಸ್ವಾಮಿಗಳು ರಾಜಗುರುಗಳಾಗಿದ್ದರು.

ಬೆಳವಡಿಯ ಅರಸರು:

ಬೆಳವಡಿಯ ಅರಸು ಮನೆತನದವರು ಮೂಲತಃ ಜೈನರಾಗಿದ್ದು ಸವದತ್ತಿಯ ರಟ್ಟವಂಶಕ್ಕೆ ಸೇರಿದವರೆಂದು ಹೇಳಲಾಗಿದೆ. ಆದಿಲ್‌ಶಾಹಿಗಳು, ಮರಾಠರ ವಿರೋಧವನ್ನು ಎದುರಿಸುತ್ತಾ ಬಂದ ಈ ಮನೆತನ ಮಲ್ಲಮ್ಮನ ಕಾಲದಲ್ಲಿ ಪತನ ಹೊಂದಿತು. ಬೆಳವಡಿ ಮಲ್ಲಮ್ಮ ಮೂಲತಃ ಸ್ವಾದಿ ಮನೆತನದ ಹೆಣ್ಣುಮಗಳಾಗಿದ್ದು ಶೂರ ಸೈನಿಕಳಾಗಿದ್ದುದಲ್ಲದೆ ಸ್ತ್ರೀ ಸೇನಾಪಡೆಯ ಮುಖ್ಯಸ್ಥಳಾಗಿದ್ದಳು. ಮರಾಠರ ಶಿವಾಜಿಯನ್ನು ದಿಟ್ಟತನದಿಂದ ಎದುರಿಸಿದ ವೀರಮಹಿಳೆ ಈ ಚೆನ್ನಮ್ಮಳಾಗಿದ್ದಳು. ಇವಳು ಹೂಲಿಯ ಬೃಹನ್ಮಠದ ಮಹಾಸ್ವಾಮಿಗಳ ಅನುಗ್ರಹಕ್ಕೆ ಪಾತ್ರಳಾಗಿದ್ದಳು. ಪಾತಿವ್ರತ್ಯದಲ್ಲಿ ಪಾರ್ವತಿ, ಕ್ರೋಧದಲ್ಲಿ ಕಾಳೀ, ಯುದ್ಧದಲ್ಲಿ ದುರ್ಗಾ, ರಾಜತಂತ್ರದಲ್ಲಿ ಪ್ರಮೀಳೆ, ಸೌಂದರ್ಯದಲ್ಲಿ ರತಿ, ವಿದ್ಯೆಯಲ್ಲಿ ಸರಸ್ವತಿ, ವೇದಾಂತದಲ್ಲಿ ಬ್ರಹ್ಮಜ್ಞಾನ ಸಂಪನ್ನಳಾದ ಗಾರ್ಗಿ, ದಾನದಲ್ಲಿ ಕಲ್ಪಲತೆ ಎಂದು ೧೬೮೦ರ ಶಾಸನದಲ್ಲಿ ವಿವರಿಸಲಾಗಿದೆ. ಇವಳ ಆರಾಧ್ಯ ದೈವ ಸೊಗಲದ ಸೋಮೇಶ್ವರ. ಅವಳು ಅಲ್ಲಿ ವಿವಾಹ ಮಂಟಪವನ್ನು ಕಟ್ಟಿಸಿ ಅದರಲ್ಲಿ ತನ್ನ ಮಗ ನಾಗಭೂಷಣನ ವಿವಾಹ ಮಾಡಿ ಸೋಮೇಶ್ವರನಿಗೆ ದಾನಮಾಡಿದಳೆಂಬ ಪ್ರತೀತಿ ಇದೆ.

ಸಿರಸಂಗಿ ಸಂಸ್ಥಾನವನ್ನು ದಾಖಲೆಗಳು "ಕೊಕಟನೂರ-ನವಲಗುಂದ-ಸಿರಸಂಗಿ-ದೇಸಾಯರ ಮನೆತನ" ಎಂದು ತಿಳಿಸುತ್ತವೆ. ಇದು ವೀರಶೈವ ಕುಡುವಕ್ಕಲಿಗ ರಾಜಮನೆತನವಾಗಿದೆ. ಇದರ ಚರಿತ್ರೆ ಕ್ರಿ.ಶ. ೧೩೦೧ ರಿಂದ ೧೯೦೬ರವರೆಗೆ

ಮುಂದುವರೆದು, ಒಟ್ಟು ೨೭ ಜನ ದೇಸಾಯಿಯರು ಮತ್ತು ೫ ಜನ ದೇಸಾಯಿಣಿಯರು ಆಳ್ವಿಕೆ ನಡೆಸಿದ್ದಾರೆ. ಎತ್ತಪ್ಪಗೌಡನಿಂದ ಅಸ್ತಿತ್ವಕ್ಕೆ ಬಂದ ಈ ಮನೆತನ ತನ್ನ ಅವಧಿಯಲ್ಲಿ ಸುತ್ತಲಿನ ಮುಸಲ್ಮಾನ, ಮರಾಠ ಅರಸರೊಂದಿಗೆ ರಾಜಕೀಯವಾಗಿ ಮುಖ್ಯಪಾತ್ರ ವಹಿಸಿತು. ಈ ಮನೆತನದ ಕೊನೆಯ ದೇಸಾಯಿಗಳಾದ ಲಿಂಗರಾಜರು ಮಹಾದಾನಿಗಳೆನಿಸಿಕೊಂಡಿದ್ದಾರೆ. ಇವರು ತಮ್ಮ ಆಸ್ತಿಯನ್ನೆಲ್ಲಾ ನವಲಗುಂದ ಸಿರಸಂಗಿ ಸರದೇಸಾಯಿ "ಧರ್ಮರಾವ ಟ್ರಸ್ಟ್ ಫಂಡ್, ಬೆಳಗಾವ" ಹೆಸರಿನಿಂದ ಸಮಾಜಕ್ಕೆ ದಾನಮಾಡಿರುವುದು ಐತಿಹಾಸಿಕವೆನಿಸಿದೆ.

ಬೆಳಗಾವಿ ಜಿಲ್ಲೆಯ **ವಂಟಮುರಿ** ಒಂದು ವೀರಶೈವ ಸಂಸ್ಥಾನ. ೩೦೦ ಗ್ರಾಮಗಳ ಪ್ರಾಂತ್ಯವನ್ನಾಳುತ್ತಿದ್ದ ಇವರು ಮೂಲತಃ ಬಿಜಾಪುರ ಕಡೆಯ ವ್ಯಾಪಾರಿಗಳಾಗಿದ್ದು ನಾಣದಿಯ ದೇಸಾಯಿಯರ ಸಂಪರ್ಕದಲ್ಲಿ ದೇಸಗತಿಯನ್ನು ಸಂಪಾದಿಸಿದರು ಎಂಬ ಅಭಿಪ್ರಾಯವಿದೆ. ನಂತರ ಹುಕ್ಕೇರಿಯನ್ನು ಆಡಳಿತ ಕೇಂದ್ರ ಮಾಡಿಕೊಂಡು ಕ್ರಮೇಣ ವಂಟಮುರಿಗೆ ಸ್ಥಳಾಂತರಗೊಂಡರೆಂದು ಹೇಳಲಾಗಿದೆ. ತೇರದಾಳ ಮಗೆಯ ಪ್ರಭುಗಳ ಆಶೀರ್ವಾದದಲ್ಲಿ ಇದು ಸುಪ್ರಸಿದ್ಧ ವೀರಶೈವ ಸಂಸ್ಥಾನವಾಯಿತು.

ಭಾರತದ ರಾಜಕೀಯ ಕ್ಷೇತ್ರದ ಚರಿತ್ರೆಯನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಮೊದಲು ರಾಜಪ್ರಭುತ್ವ, ನಂತರ ಸಾಮಂತಪ್ರಭುತ್ವ, ಕೊನೆಗೆ ಪ್ರಜಾಪ್ರಭುತ್ವವಾಗಿ ಮೂರು ಹಂತಗಳಲ್ಲಿ ಮಾರ್ಪಾಟಾಗಿರುವುದನ್ನು ಕಾಣುತ್ತೇವೆ. ೧೭ನೆ ಶತಮಾನದಲ್ಲಿ ರಾಜಪ್ರಭುತ್ವ ಮಾಯವಾಗಿ ಸಾಮಂತಪ್ರಭುತ್ವ ಉದಯವಾಗಿತ್ತು. ಆದುದರಿಂದಲೇ ದೊಡ್ಡ ದೊಡ್ಡ ರಾಜಮನೆತನಗಳು ಆಳ್ವಿಕೆಯನ್ನು ಸಾಮಂತ ಮನೆತನಗಳ ಮುಖಾಂತರವೇ ನಡೆಸುತ್ತಿದ್ದರು. ಆ ದೊಡ್ಡ ದೊಡ್ಡ ರಾಜಮನೆತನಗಳು ಸಂಪೂರ್ಣವಾಗಿ ಪತನ ಹೊಂದಿದಾಗ ಈ ಸಾಮಂತ ಮನೆತನಗಳೇ ಮುಂದೆ ಅರಸು ಮನೆತನಗಳಾಗಿ ಮಾರ್ಪಟ್ಟವು. ವಿಜಯನಗರದವರ ಹೊಸ ಬಗೆಯ ಆಡಳಿತದಿಂದಾಗಿ ಅನೇಕ ಅಮರನಾಯಕ ಮನೆತನಗಳು ಉದಯವಾದವು. ಇವರಲ್ಲಿ ಬಹುಪಾಲು ಸಮಾಜದ ಕೆಳವರ್ಗದಿಂದ ಬಂದವರಾಗಿದ್ದರು. ಇವರಿಗೆ ರಾಜಕೀಯದಲ್ಲಿ ಉನ್ನತ ಅಧಿಕಾರ ಪ್ರಾಪ್ತವಾಗಿದ್ದರೂ, ಸಮಾಜದಲ್ಲಿ ಅವರಿಗ ಅಂತಹ ಗೌರವವಿರಲಿಲ್ಲ. ಈ ಸಂದರ್ಭದಲ್ಲಿ ತೋಂಟದಸಿದ್ಧಲಿಂಗ ಯತಿಗಳು ವೀರಶೈವ ನೇತಾರರಾಗಿ ಅಲ್ಲಮಪ್ರಭು ಸಂಪ್ರದಾಯವನ್ನು ಮರುಸ್ಥಾಪನೆ ಮಾಡಿ ೧೨ನೇ ಶತಮಾನದ ಶರಣ ಚಳುವಳಿಯನ್ನು ಮತ್ತೆ ಹುಟ್ಟುಹಾಕಿದರು. ಆಗ ಜಾತಿಯ ಕೀಳರಿಮೆಯಿಂದ ಮುಕ್ತರಾಗಲು ತುದಿಗಾಲ ಮೇಲೆ ನಿಂತಿದ್ದ ಕೆಳವರ್ಗದ ಪಾಳೆಯಗಾರರು ಇವರ ಪ್ರಭಾವದಿಂದ ವೀರಶೈವಕ್ಕೆ ಮತಾಂತರಗೊಂಡು ಸಮಾಜದಲ್ಲಿ ಪ್ರತಿಷ್ಠಿತ ಸ್ಥಾನ ಪಡೆದುಕೊಂಡರು. ಜೊತೆಗೆ ಶ್ರೇಷ್ಠವರ್ಗದ ಜೈನ ಅರಸರೂ ಅನ್ಯಧರ್ಮಗಳ ದಾಳಿಯಿಂದ ಜೈನಧರ್ಮ ದುರ್ಬಲವಾಗಲು ತೊಡಗಿದಾಗ ಅದನ್ನು ತ್ಯಜಿಸಿ ವೀರಶೈವರಾದರು. ಹೀಗೆ ಮತಾಂತರಿತ ವೀರಶೈವ ಅರಸು ಮನೆತನದಲ್ಲಿ ಕೆಳವರ್ಗದಿಂದಲೂ, ಜೈನಧರ್ಮದಿಂದಲೂ ಬಂದವರ ಸಂಖ್ಯೆ ಅಧಿಕವಾಗಿರುವುದು ಗೊತ್ತಾಗುತ್ತದೆ. ಈ ಅರಸರು ಕವಿಗಳಿಗೆ ಆಶ್ರಯ ನೀಡುವುದರ ಮುಖಾಂತರ, ಕೆಲವರು ಸ್ವತಃ ಸಾಹಿತ್ಯರಚನೆ ಮಾಡಿ ಮೌಲಿಕವಾದ ಕೃತಿಗಳನ್ನು ಉಭಯಭಾಷೆಗಳಲ್ಲಿ ರಚಿಸಿರುವುದು ಕಂಡುಬರುತ್ತದೆ. ಇವರು ವೀರಶೈವ ಸಾಹಿತ್ಯ ಸಂಸ್ಕೃತಿ ಪೋಷಣೆಗಷ್ಟೇ ಸೀಮಿತವಾಗದೆ ಅನ್ಯಧರ್ಮವನ್ನು ಪ್ರೀತಿಸಿರುವುದು ತಿಳಿಯುತ್ತದೆ. ವೀರಶೈವ ಮಠಗಳ ಸ್ಥಾಪನೆಯ ಮುಖಾಂತರ ವೀರಶೈವ ಧರ್ಮಪ್ರಚಾರಕ್ಕೆ ಜೊತೆಗೆ ಪ್ರಾಮುಖ್ಯತೆ ನೀಡಿದ ಅರಸರು ಅವುಗಳನ್ನು ವಿದ್ಯಾಕೇಂದ್ರ, ದಾಸೋಹ ಕೇಂದ್ರಗಳನ್ನಾಗಿ ಮಾಡುವುದಕ್ಕೆ ದಾನದತ್ತಿಗಳನ್ನು ನೀಡಿದರು. ಕರ್ನಾಟಕದ ಕಲೆ, ಸಂಸ್ಕೃತಿಗೆ ಸಾಕಷ್ಟು ಕಾಣಿಕೆ ನೀಡಿ ಈ ವೀರಶೈವ ಅರಸರು ಆಡಳಿತದಲ್ಲಿ ರಾಜಕೀಯ ತರದ, ರಾಜಕೀಯ ಸತ್‌ಪ್ರಗತಿಯ ಹಜ್ಜೆ ಒಂದು ಛಾಪಿಸಿದ್ದರು. ಆದರೆ ಪ್ರಜೆಗಳ ಹಿತಾಸಕ್ತಿಗಳಿಗೆ ಆಡಳಿತ ಸ್ಪಂದಿಸಬೇಕೆಂಬುದು ಈ ಅರಸರ ಆಲೋಚನೆಯಾಗಿತ್ತು. ಅಷ್ಟರಮಟ್ಟಿಗೆ ಅವರು ಯಶಸ್ವಿಯಾಗಿರುವುದು ಕಂಡುಬರುತ್ತದೆ.

■■

ವೀರಶೈವ ಕ್ಷೇತ್ರಗಳು

✍ ಡಾ. ಬಿ.ಎಸ್. ಸ್ವಾಮಿ

ಕರ್ನಾಟಕ ಬಹಳ ಹಿಂದಿನಿಂದಲೂ ಹಲವಾರು ಪುಣ್ಯಕ್ಷೇತ್ರಗಳಿಂದ ತುಂಬಿ ತುಳುಕಾಡುತ್ತಿದೆ. ಅನೇಕ ವೀರಶೈವ ವಿಭೂತಿ ಪುರುಷರು, ಶರಣರು, ಮಹಾಮಹಿಮರು, ಅವತಾರ ಪುರುಷರು ಉದಿಸಿ ತಮ್ಮ ಪಾದಧೂಳಿಯಿಂದ ಕರ್ನಾಟಕವನ್ನು ಪಾವನಗೊಳಿಸಿದ್ದಾರೆ. ಧರ್ಮಪ್ರಚಾರಮಾಡಿ ಭಕ್ತರನ್ನು ಉದ್ಧರಿಸಿ, ಕೊನೆಯಲ್ಲಿ ಲಿಂಗೈಕ್ಯ ಹೊಂದಿದ್ದಾರೆ. ಅವುಗಳನ್ನು ಗದ್ದುಗೆಗಳೆಂದು ಕರೆಯುವರು.

"ಗದ್ದುಗೆ" ಎಂದರೆ ವೀರಶೈವ ಸ್ವಾಮಿಗಳ ಸಮಾಧಿಯ ಮೇಲೆ ಒಂದು ಚಪ್ಪಡಿ ಹಾಸಿ ಅದರ ಮೇಲೆ ಒಂದು ಕಂಭವನ್ನು ಸ್ಥಾಪಿಸುವುದು ಎಂದರ್ಥ. ಕರ್ನಾಟಕ ಶರಣರ ಗದ್ದುಗೆಗಳ ಆಗರ. ಶರಣರು ಅಮರತ್ವ ಹೊಂದಿದಾಗ ಅವರನ್ನು 'ನಿರ್ವಯಲಾದರು' ಎಂದು ಹೇಳಿ ಸಮಾಧಿ ಮಾಡುವರು. ಅದೇ 'ಗದ್ದುಗೆ'. ಕಾಲ ಕ್ರಮೇಣ ಸಮಾಧಿಯ ಮೇಲೆ ಲಿಂಗ ಸ್ಥಾಪಿಸಿ ಲಿಂಗೈಕ್ಯರಾದರು 'ಲಿಂಗರೂಪ' ತಾಳಿದರು ಎಂದು ಹೇಳುವರು. ಆಮೇಲೆ ಲಿಂಗದ ಮುಂದೆ ಒಂದು ಬಸವನನ್ನು ಪ್ರತಿಷ್ಠಾಪನೆ ಮಾಡುವರು. ಇದಕ್ಕೆ ಗುಡಿ ಗೋಪುರ ಕಟ್ಟಿದಾಗ ದೇವಾಲಯವಾಗಿ ಪರಿಣಮಿಸುವುದು. ಇದು ಜಾಗೃತ ಸ್ಥಾನವಾಗಿ ಪವಿತ್ರ ಪುಣ್ಯಕ್ಷೇತ್ರವೆಂದು ಕರೆಸಿಕೊಂಡು ಭಕ್ತಾದಿಗಳು ದೇವಾಲಯ ಮಠಗಳನ್ನು ನಿರ್ಮಾಣ ಮಾಡಿ, ಪೂಜೆ-ಪುರಸ್ಕಾರ ಸಾಗುವಂತೆ ಮಾಡಿ ಭಕ್ತಿ ನಮನ ಸಲ್ಲಿಸುತ್ತಾರೆ. ಈ ಪುಣ್ಯಕ್ಷೇತ್ರಗಳಿಂದ ಮನುಷ್ಯನಿಗೆ ಶಾಂತಿ, ನೆಮ್ಮದಿ ದೊರೆಯುವುದು.

ಗದ್ದುಗೆಗಳಲ್ಲಿ ಹಲವಾರು ವಿಧಗಳುಂಟು. ಅವುಗಳೆಂದರೆ ತೋರುಗದ್ದುಗೆ, ಉರಿಗದ್ದುಗೆ, ಜಲ ಗದ್ದುಗೆಗಳೆಂದು. ಜನಪದ ಕವಿಗಳು ಜಲಗದ್ದುಗೆಗಳೆಂದು ಕರೆಯುವರು.

ಸತ್ತ ಮೇಲೆ ಸಮಾಧಿ ಮಾಡುವುದು ಒಂದು ವಿಧ. ಜೀವಂತವಾಗಿ ಸಮಾಧಿಯಾಗುವುದು ಮತ್ತೊಂದು ವಿಧ. ಜೀವಂತ ಸಮಾಧಿ ಎಂದರೆ ಕಾಯ ಸಮೇತ ಕೈಲಾಸ ಸೇರಿದವರೆಂದು ಅರ್ಥ. ಉದಾಹರಣೆಗೆ ತೋಂಟದ ಸಿದ್ಧಲಿಂಗೇಶ್ವರ, ಚಿತ್ರದುರ್ಗ ಜಿಲ್ಲೆಯ ನಾಯಕನ ಹಟ್ಟಿಯ ತಿಪ್ಪೇರುದ್ರಸ್ವಾಮಿ, ಎರ್ರಿ ತಾತ, ಮಾದೇಶ್ವರ, ಸಿದ್ಧರಾಮ, ಪಾಲ್ಕುರಿಕೆ ಸೋಮನಾಥ, ಮರಳು ಸಿದ್ಧೇಶ್ವರ (ಕುಪ್ಪೂರು), ಚಂದ್ರಗುಂಡ ದೇಶಿಕರು (ಕೋಲಾರ ಜಿಲ್ಲೆಯ ಗೂಳೂರು), ತೋಪಿನ ಮಠದ ಶಿವಯೋಗಿಗಳು ಮುಂತಾದವರು ಜೀವಂತ ಸಮಾಧಿ ಹೊಂದಿದವರು.

"ಉರಿಗದ್ದುಗೆ" ಶರಣರು ಕುಳಿತುಕೊಳ್ಳುವ ಪವಿತ್ರ ತಾಣ. ಅದರ ಮೇಲೆ ಬತ್ತವನ್ನೋ, ಜೀರಿಗೆಯನ್ನೋ ಎಸೆದರೆ ಅವು ಅವಲಾಗುತ್ತಿದ್ದುವಂತೆ. ಅದರ ಮೇಲೆ ಆಮೇಲೆ ಗುರುಗಳು ಕುಳಿತು ತಮ್ಮ ಪೀಠದ ಕರ್ತವ್ಯವನ್ನು ನೆರವೇರಿಸುವರು. ಇದು ಭಕ್ತಾದಿಗಳು ಕುಳಿತುಕೊಳ್ಳುವುದಕ್ಕಿಂತ ಮೇಲಿರುತ್ತದೆ. ಇದರ ವಿನ್ಯಾಸ ಹೀಗೆಯೇ ಇರಬೇಕೆಂಬ ನಿಯಮವೇನಿಲ್ಲ. ಇದನ್ನು ಯಾರೂ ತುಳಿಯುವಂತಿಲ್ಲ. ಇದು ಗುರುಗಳ ಮಹತ್ವವನ್ನು ಎತ್ತಿಹಿಡಿಯುತ್ತದೆ. ಇದನ್ನು ಭಕ್ತಾದಿಗಳು ಪೂಜ್ಯ ಭಾವನೆಯಿಂದ ಪೂಜಿಸುವರು.

ಕೆಲವು ಶರಣರು 'ಜಲಸಮಾಧಿ' ಹೊಂದುವುದೂ ಉಂಟು. ಸಿದ್ಧರಾಮನು ಕೆರೆಯಲ್ಲಿ ಐಕ್ಯನಾದರೆ, ಬಸವಣ್ಣನವರು ಕೂಡಲಸಂಗಮದಲ್ಲಿ ಐಕ್ಯರಾದರು. ಹಾಗೆಯೇ ಮಾದೇಶ್ವರರೂ ಜಲೈಕ್ಯರಾದರು ಎಂಬುದು ಕಂಸಾಳೆ ಗುಡ್ಡರ ಅಭಿಪ್ರಾಯ. ಇದರ ಮೇಲೆ ಗುಡಿ ಗೋಪುರ ಕಟ್ಟಿ, ಸೋಪಾನಗಳನ್ನು ನಿರ್ಮಿಸುವರು.

ಕೆಲವು ಶರಣರು ಹಲವೆಡೆ ಪರ್ಯಟನೆ ಮಾಡಿ ಅಲ್ಲಲ್ಲಿ ತಪ, ಅನುಷ್ಠಾನವೆಸಗಿ ಪವಿತ್ರಗೊಳಿಸಿದ್ದಾರೆ. ಅವೇ ತೋರು ಗದ್ದುಗೆಗಳು. ಕರ್ತೃ ಗದ್ದುಗೆಗೆ ಹೋಗಲು ಆಗದವರು ಇಲ್ಲಿ ಬಂದು ತಮ್ಮ ಪೂಜೆಯನ್ನು ಸಲ್ಲಿಸುತ್ತಾರೆ. ಸ್ಮೃತಿಗೋಸ್ಕರ ಆದ ಗದ್ದುಗೆಗಳೇ ತೋರುಗದ್ದುಗೆಗಳು. ಮಾದೇಶ್ವರ, ತೋಂಟದ ಸಿದ್ಧಲಿಂಗೇಶ್ವರ ಮುಂತಾದವರ ತೋರುಗದ್ದುಗೆಗಳನ್ನು ಅನೇಕ ಸ್ಥಳಗಳಲ್ಲಿ ಕಾಣಬಹುದು.

ಬಿ. ಶಿವಮೂರ್ತಿ ಶಾಸ್ತ್ರೀಗಳು ಪುಣ್ಯಕ್ಷೇತ್ರದ ಬಗೆಗೆ ವಿಶ್ಲೇಷಣೆ ನೀಡುತ್ತಾ, "ಹಿಂದೂ ಧರ್ಮದಲ್ಲಿ ಕ್ಷೇತ್ರ ಮಹಾತ್ಮ್ಯವು ಎಲ್ಲ ಪುರಾಣೇತಿಹಾಸಗಳಲ್ಲಿಯೂ ನಿರೂಪಿತವಾಗಿದೆ. ಭಗವದ್ಗೀತೆಯ ಮೊದಲನೆಯ ಶ್ಲೋಕವೇ "ಧರ್ಮಕ್ಷೇತ್ರೇ ಕುರುಕ್ಷೇತ್ರೇ" ಎಂಬ ಕ್ಷೇತ್ರ ಮಹಾತ್ಮ್ಯದಿಂದ ಆರಂಭವಾಗಿದೆ. "ಬಂದ ಕಾಲದ ಗುಣವೋ ನಿಂದ ನೆಲದ ಗುಣವೋ" ಎಂಬ ರಾಘವಾಂಕ ಕವಿಯ ಮಾತಲ್ಲಿ ನೆಲಕ್ಕೆ ಒಂದು ಗುಣ, ಶಕ್ತಿ ಇದೆ ಎಂಬುದು ವ್ಯಕ್ತವಾಗುತ್ತದೆ ಎಂದು ಹೇಳಿದ್ದಾರೆ.

ವೀರಶೈವ ಕ್ಷೇತ್ರಗಳಲ್ಲಿ ಜ್ಯೋತಿರ್ಲಿಂಗವಿರಬಹುದು, ಶರಣರು ವಿರಕ್ತರು, ಮಹಾಮಹಿಮರು, ವಿಭೂತಿ ಪುರುಷರು ಆಗಿಹೋಗಿರಬಹುದು, ಲಿಂಗರೂಪವಾಗಿರಬಹುದು, ಅವುಗಳಿಗೆಲ್ಲ ವೀರಶೈವರು ಭಕ್ತಿಯಿಂದ ನಡೆದುಕೊಳ್ಳುತ್ತಾರೆ.

ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲೂ ಹಲವಾರು ವೀರಶೈವ ಕ್ಷೇತ್ರಗಳಿವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶಿವಶರಣರ, ವೀರಶೈವ ಕ್ಷೇತ್ರಗಳಿಲ್ಲ. ಇಲ್ಲಿ ಬಳ್ಳಾರಿಯ ಅಲ್ಲಿಪುರ ತಾತ ಎಂಬ ಶರಣರು ತಿರುಗಾಡಿ ಹೋಗಿದ್ದಾರೆ. ಧರ್ಮಸ್ಥಳದ ಮಂಜುನಾಥನಿಗೆ ನಡೆದುಕೊಳ್ಳುವ ವೀರಶೈವರಿದ್ದಾರೆ. ಕರ್ನಾಟಕದಲ್ಲಿ ಅನೇಕ ವೀರಶೈವ ಕ್ಷೇತ್ರಗಳಿದ್ದರೂ ಪ್ರಮುಖವಾದ ಕೆಲವು ಪುಣ್ಯಕ್ಷೇತ್ರಗಳ ಪಕ್ಷಿನೋಟವನ್ನು ಇಲ್ಲಿ ನೀಡಲಾಗಿದೆ.

೧. ಮೈಸೂರು ಜಿಲ್ಲೆ:

ಗುರುಮಲ್ಲೇಶ್ವರರ ಗದ್ದುಗೆ: ಗುರು ಮಲ್ಲೇಶ್ವರರ ಗದ್ದುಗೆ ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕಿನ ದೇವನೂರಿನಲ್ಲಿದೆ. ಶಿವಮೊಗ್ಗ ಜಿಲ್ಲೆಯ ನ್ಯಾಮತಿ ಶರಣ ಬಸವಯ್ಯನವರು ಶಿವಮ್ಮ, ಶರ್ವಾಣಮ್ಮ ಎಂಬ ಪತ್ನಿಯರೊಡಗೂಡಿ ಮೈಸೂರಿಗೆ ಬಂದರು. ಆಗ ಮುಮ್ಮಡಿ ಕೃಷ್ಣರಾಜ ಒಡೆಯರು ರಾಜ್ಯಭಾರ ಮಾಡುತ್ತಿದ್ದರು. ಶರ್ವಾಣಮ್ಮನಿಗೆ ಒಂದು ಗಂಡು ಮಗುವಾಯಿತು. ಅದಕ್ಕೆ 'ಗುರುಮಲ್ಲೇಶ್ವರ' ಎಂದು ನಾಮಕರಣ ಮಾಡಿದರು. ಗುರುಮಲ್ಲೇಶ್ವರರು ಭಕ್ತ ಸುಬ್ಬಯ್ಯನ ಪ್ರಾರ್ಥನೆಯಂತೆ ಆತನ ಹೆಂಡತಿಗೆ ಹಿಡಿದಿದ್ದ ಭೂತವನ್ನು ತಮ್ಮ ಮಂತ್ರಶಕ್ತಿಯಿಂದ ಬಿಡಿಸಿ ಕಾಪಾಡಿದರು. ದಾಸೋಹ ಕಾರ್ಯ ಮಾಡುತ್ತಾ ಶಾಲಿವಾಹನ ಶಕ ೧೮೨೧ರ ಜ್ಯೇಷ್ಠ ಬಹುಳ ತೃತೀಯ ಸೋಮವಾರದ ದಿನ ಲಿಂಗೈಕ್ಯರಾದರು. ಈಗಲೂ ಅವರ ಗದ್ದುಗೆ ಪುಣ್ಯಸ್ಥಳವೆನಿಸಿ ಭಕ್ತಾದಿಗಳಿಂದ ಪೂಜಿಸಿಕೊಳ್ಳುತ್ತಿದೆ.

ನಂಜನಗೂಡಿನ ಶ್ರೀಕಂಠೇಶ್ವರ (ನಂಜುಂಡೇಶ್ವರ): ಕರ್ನಾಟಕದ ಅತಿ ದೊಡ್ಡ ಪ್ರಸಿದ್ಧ ದೇವಾಲಯ, ನಂಜುಂಡೇಶ್ವರನಲ್ಲಿ ಪರಶುರಾಮ ತನ್ನ ತಾಯಿಯನ್ನು ಕೊಂದ ಪಾಪವನ್ನು ಪರಿಹರಿಸಿಕೊಂಡನೆಂಬ ಪ್ರತೀತಿ ಇದೆ. ಇಲ್ಲಿ ವೀರಶೈವ ಮಠವಿದೆ. ವೀರಶೈವರ ಪುಣ್ಯಕ್ಷೇತ್ರವಾಗಿ ರಾರಾಜಿಸುತ್ತಿದೆ.

ಕೆಂಡಗಣ್ಣ ಸ್ವಾಮಿ ಗದ್ದುಗೆ: ಹುಣಸೂರು ತಾಲ್ಲೂಕಿನಲ್ಲಿ ಕೆಂಡಗಣ್ಣ ಸ್ವಾಮಿಯವರ ಗದ್ದುಗೆ ಇದೆ. ಕೆಂಡಗಣ್ಣ ಸ್ವಾಮಿಗಳು ಧಾರವಾಡ ಜಿಲ್ಲೆ ಶಿಗ್ಗಾವಿಯ ಶ್ರೀಶೈಲ ರಾಜೇಂದ್ರ, ಬಂಕಾಪುರದ ಕಾಶಿಯಮ್ಮ ಅವರ ಪುತ್ರನಾಗಿ ರಾಜಮನೆತನದಲ್ಲಿ ಜನಿಸಿದ. ಅರವತ್ತು ಅಂಕಣದ ಅರಮನೆ ವೈರಿಗಳಿಂದ ಸುಟ್ಟುಹೋಗಲು ವಿರಕ್ತಿ ಉಂಟಾಗಿ ನಂಜನಗೂಡು ನಂಜುಂಡೇಶ್ವರ ದೇವಾಲಯದ ಮುಂಭಾಗದ ನದಿಯ ಹತ್ತಿರ ಮಠವನ್ನು ನಿರ್ಮಿಸಿಕೊಂಡಿದ್ದರು. ಒಂದೇ ಸಾರಿ ಇಬ್ಬರು ಶಿವಭಕ್ತರ ಮನೆಯಲ್ಲಿ

ಬಿನ್ನಹ ತೀರಿಸಿದರು. ವೈಷ್ಣವರು ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಚಾಡಿ ಹೇಳುವರು. ಆಗ ಅವರು ಬಂದು ಗದ್ದುಗೆಗೆ ಬೆಂಕಿ ಹಾಕಿ ಅದರ ಮೇಲೆ ಕುಳಿತುಕೊಳ್ಳುವಂತೆ ಹೇಳಿದರು. ಆಗ ಅವರು ಅದರ ಮೇಲೆ ಕುಳಿತಾಗ ಕಣ್ಣುಗಳು ಕೆಂಪಾದವು. ಅಂದಿನಿಂದ 'ಕೆಂಡಗಣ್ಣ ಸ್ವಾಮಿ' ಎಂದು ಹೆಸರಾಯಿತು. ಹುಣಸೂರಿಗೆ ೧೮ ಮೈಲು ದೂರದಲ್ಲಿ ಗದ್ದುಗೆಯಾದರು. ವೀರಶೈವರು ಈ ಶರಣನಿಗೆ ನಡೆದುಕೊಳ್ಳುತ್ತಾರೆ.

ಸುತ್ತೂರಿನಲ್ಲಿ ಶ್ರೀ ಶಿವರಾತ್ರಿ ಸ್ವಾಮಿಗಳ ಗದ್ದುಗೆ ಇದೆ. ಮಾದೇಶ್ವರರು ಇಲ್ಲಿ ರಾಗಿ ಬೀಸುವ ಪವಾಡವೆಸಗಿ, ದನಗಳಿಗೆ ಆಶೀರ್ವದಿಸಿ ಆರೋಗ್ಯವಾಗುವಂತೆ ಮಾಡಿದರು. ಈ ಮಠಕ್ಕೆ ಸೇವೆ ಮಾಡುವವರು ಹಲವಾರು ಜನ.

ತೋಪಿನ ಮಠದ ಷಡಕ್ಷರ ಶಿವಯೋಗಿಗಳು: ತಿರುಮ ಕೂಡಲು ನರಸೀಪುರಕ್ಕೆ ಆರು ಮೈಲು ದೂರದಲ್ಲಿ ಶಿವೈಕ್ಯ ಹೊಂದಿದರು. ಇವರು ವಾಕ್‌ಸಿದ್ಧಿ ಪಡೆದಿದ್ದರು. ಹೆಂಗಸರ ಮುಖವನ್ನು ನೋಡುತ್ತಿರಲಿಲ್ಲ. ಶರಣಮ್ಮ ಎಂಬವರು ಗುರುಗಳ ದರ್ಶನ ಮಾಡಬೇಕೆಂದು ಬಂದಾಗ ಪೂಜ್ಯರು ಒಪ್ಪಲಿಲ್ಲ. ಆಕೆಯ ಅಣ್ಣ ಬಂದು ಗುರುಗಳ ದರ್ಶನ ನೀಡಬೇಕೆಂದು ಬೇಡಿಕೊಂಡ. ಆಗ ಗುರುಗಳು "ಸೋಮವಾರ ಹತ್ತು ಗಂಟೆಗೆ ನಾವು ಪೂಜೆಯಲ್ಲಿರುತ್ತೇವೆ. ಗಂಟೆ ಬಾರಿಸಿದಾಗ ಬನ್ನಿ" ಎಂದರು. ಹಾಗೆಯೇ ಗಂಟೆ ಬಾರಿಸಲು ಸಂತೋಷದಿಂದ ಬಂದು ಶರಣಮ್ಮ ಸಾಷ್ಟಾಂಗವೆರಗಿದರು. ಶರಣಮ್ಮ ಅಂತರಂಗದಲ್ಲಿ ಬಂದು ಪಾದದರ್ಶನ ಮಾಡಿ, ಅಂಗೈನ ಲಿಂಗದಲ್ಲೇ ದೃಷ್ಟಿ ನೆಟ್ಟು ಶಿವನೊಳಗಾದರು. ಇದೂ ಒಂದು ಜಾಗೃತ ಸ್ಥಳವಾಗಿದೆ.

ತಲಕಾಡಿನಲ್ಲಿ ಮೂವತ್ತಕ್ಕೂ ಹೆಚ್ಚು ದೇವಾಲಯಗಳಿವೆ. ಇವು ಗಂಗ, ಚೋಳ, ಹೊಯ್ಸಳ, ಮೈಸೂರು ಅರಸರ ಕಾಲದವು. ಪಂಚಲಿಂಗೇಶ್ವರ ದೇವಾಲಯಗಳಾದ ಅರ್ಕೇಶ್ವರ, ಮರುಳೇಶ್ವರ, ಮಲ್ಲಿಕಾರ್ಜುನೇಶ್ವರ, ವಾಸುಕೀಶ್ವರ, ವೈದ್ಯನಾಥೇಶ್ವರ ದೇವಾಲಯಗಳು ಪ್ರಸಿದ್ಧಿಯಾಗಿವೆ. ಇಲ್ಲಿ ಹನ್ನೆರಡು ವರ್ಷಗಳಿಗೊಮ್ಮೆ ಪಂಚಲಿಂಗ ದರ್ಶನವಾಗುತ್ತದೆ. ಮರಳಲ್ಲಿ ಹೂತುಕೊಳ್ಳುವ ದೇವಾಲಯಗಳನ್ನು ಬಿಡಿಸಿ ಪೂಜಿಸಲ್ಪಡುತ್ತಾರೆ.

ಮಲ್ಲನ ಮೂಲೆಯಲ್ಲಿ ಕಂಬಳಿಸ್ವಾಮಿಗಳ ಗದ್ದುಗೆ, ಯಳಂದೂರಲ್ಲಿ ಷಡಕ್ಷರದೇವನ ಗದ್ದುಗೆ ಇದೆ. ಇವು ವೀರಶೈವರ ಪವಿತ್ರ ತಾಣಗಳಾಗಿವೆ.

ಚಿಕ್ಕಮಗಳೂರು ಜಿಲ್ಲೆ: ಮುಳ್ಳಯ್ಯನ ಗಿರಿ ಸೀತಾಳ ಮಲ್ಲಯ್ಯ ಶರಣರು ಐಕ್ಯವಾದ ಸ್ಥಳ. ಇಲ್ಲಿ ಸೀತಾಳ ಮಲ್ಲಿಕಾರ್ಜುನ ಮಠವಿದೆ. ಇಲ್ಲಿ ಬಿಸಿಗ್ನಿ ಮಠದ ಪ್ರಭುಲಿಂಗ ಶಿವಾಚಾರ್ಯ ಸ್ವಾಮಿಗಳು ಕುದಿವ ನೀರಿನಲ್ಲಿ ಸ್ನಾನ ಮಾಡಿದರಂತೆ. ಅವರ ಗದ್ದುಗೆಯೂ ಇಲ್ಲಿದೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ನಿರ್ವಾಣ ಸ್ವಾಮಿ ಮಠ, ಕಾವಿಕಲ್ ಮಠ, ಫಲಹಾರ ಸ್ವಾಮಿಗಳ ಮಠ, ಚನ್ನದೇವರ ಮಠ, ಪರದೇಶಪ್ಪನ ಮಠ, ವೀರಶೈವ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ರೇಣುಕಾ ಶಿವಾಚಾರ್ಯರು ಸ್ಥಾಪಿಸಿದ ಬಾಳೆಹೊನ್ನೂರು ಮಠ, ಇಂದಾವರ ಗ್ರಾಮದಲ್ಲಿ ಚೌಕಿಮಠ, ಚೆನ್ನಗೊಂಡನ ಹಳ್ಳಿಯ ಹೊಸ ಮಠ, ಚೇರು ಗುಂಡಿಯ ಮಠಗಳಿವೆ. ವಸ್ತಾರೆ ಕೆಳಗೂರು ಮಠ, ಶಿವಾನಂದರ ಸಮಾಧಿ ಅಜ್ಜಂಪುರದಲ್ಲಿದೆ. ಚಕ್ಕರೆಪುಡಿಯಲ್ಲಿ ಶರಣರ ಗದ್ದುಗೆಗಳು, ಕಡೂರಿನಲ್ಲಿ ಯಳನಾಡು ಮಠ, ನರಸಿಂಹರಾಜಪುರದಲ್ಲಿ ವೀರಭದ್ರೇಶ್ವರ ದೇವಾಲಯ, ಮೂಡಿಗೆರೆ ತಾಲ್ಲೂಕಿನಲ್ಲಿ ಹಾಂದಿ ಹೊಸಮಠ. ಮುಗುವಳ್ಳಿಯ ಹತ್ತಿರ ಸಪ್ಪೆ ದೇವರ ಮಠ, ಆರದವಳ್ಳಿಯಲ್ಲಿ ಶಂಕರದೇವರ ಮಠ, ದೊಡ್ಡ ಕುರುಬರ ಹಳ್ಳಿಯ ಜಬಾಲಿಪುರ ಮಠ, ಮೂಡಿಗೆರೆ ರುದ್ರಾಕ್ಷಿ ಮಠ, ಸಿಂದಗೆರೆ ಕದಡಿ ಗವಿಮಠ, ಹುಲಿಕೆರೆ ದೊಡ್ಡ ಮಠ, ಹುಲಿಗೆರೆ ಪಂಚಪೀಠಗಳಲ್ಲೊಂದಾದ ಶ್ರೀಶೈಲ ಪೀಠದ ಶಾಖಾಮಠದ ದೊಡ್ಡ ಮಠದಲ್ಲಿ ಶ್ರೀ ಮರುಳಸಿದ್ಧ ಶಿವಾಚಾರ್ಯರು ಐಕ್ಯವಾದ ಸ್ಥಳವೇ ಮೊದಲಾದುವು ಇವೆ. ಈ ಮಠಗಳು, ಗದ್ದುಗೆಗಳಲ್ಲಿ ಪೂಜೆ ಸದಾ ನಡೆಯುತ್ತಿವೆ.

ಉತ್ತರ ಕರ್ನಾಟಕದಿಂದ ಬಂದ ಶಿವಶರಣರೊಬ್ಬರು ಕರಡಿ ಗವಿಮಠದಲ್ಲಿ ಅನುಷ್ಠಾನ ಮಾಡಿ ಗದ್ದುಗೆಯಾದರು. ತರೀಕೆರೆ ತಾಲ್ಲೂಕು ಬಾಳೆಹೊನ್ನೂರು ಶಾಖಾಮಠವೇ ಹಾಲು ಸ್ವಾಮಿ ಮಠ. ಕಡೂರು ತಾಲ್ಲೂಕು ಕಂಚುಗಲ್ಲು ದೊಡ್ಡ ಮಠವಿದೆ. ಹೆಣ್ಣೆ ಮಠವು ತರೀಕೆರೆ ತಾಲ್ಲೂಕಿನ ಅಜ್ಜಂಪುರದಲ್ಲಿದೆ. ಇದು ಶ್ರೀಶೈಲದ ಶಾಖಾಮಠವಾಗಿದೆ. ಎಣ್ಣೆ ಹೊಳೆಮಠ, ಶರಣೆ ಅಕ್ಕನಾಗಮ್ಮ ಐಕ್ಯವಾದ ಸ್ಥಳ, ನುಲಿಯ ಚಂದಯ್ಯ ಅನುಷ್ಠಾನ ಮಾಡಿದ ಸ್ಥಳ, ಹುಬ್ಬಳ್ಳಿ ಮೂರು ಸಾವಿರ ಮಠದ ಶಾಖಾಮಠಗಳಿವೆ. ಯಗಟಿ ಪುರದಲ್ಲಿ ಮಲ್ಲಿಕಾರ್ಜುನ ದೇವಾಲಯವಿದೆ. ತುರುವನ ಹಳ್ಳಿಯಲ್ಲಿ ಗುರು ನಿರ್ವಾಣಸ್ವಾಮಿ ಮಠ, ಒಪ್ಪುಣಸೆ ಮರುಳಸಿದ್ಧೇಶ್ವರ ಮಠವು ತರೀಕೆರೆ ತಾಲ್ಲೂಕಿನಲ್ಲಿದೆ. ಹೊಗರೆ ಖಾನ್ ಗವಿಮಠದಲ್ಲಿ ಸಿದ್ಧೇಶ್ವರ ಸ್ವಾಮಿಯ ಗದ್ದುಗೆ ಇದೆ. ಹೀಗೆ ಚಿಕ್ಕಮಗಳೂರು ಜಿಲ್ಲೆ ಶರಣರ ಐಕ್ಯಸ್ಥಾನಗಳಾಗಿ ಶೋಭಿಸುತ್ತಿವೆ. ವೀರಶೈವರಿಂದ ಪೂಜಿಸಿಕೊಳ್ಳುತ್ತಿವೆ.

ಕೊಡಗು ಜಿಲ್ಲೆ:

ಕೊಡಗಿನ ಲಿಂಗರಾಜ ೧೮೨೦ರಲ್ಲಿ ಕಟ್ಟಿಸಿದ ಓಂಕಾರೇಶ್ವರ ದೇವಾಲಯ, ಸೋಮವಾರ ಪೇಟೆ ತಾಲ್ಲೂಕಿನಲ್ಲಿ ನಂಜುಂಡೇಶ್ವರ ದೇವಾಲಯ, ಸೋಮೇಶ್ವರ, ಬಸವೇಶ್ವರ ದೇವಾಲಯಗಳಿವೆ. ಪವಿತ್ರ ಕಾವೇರಿಯ ಉಗಮವೂ ಇಲ್ಲೇ ಇದ್ದು ವೀರಶೈವ ಭಕ್ತಾದಿಗಳನ್ನು ಆಕರ್ಷಿಸುತ್ತಿವೆ.

ಬಳ್ಳಾರಿ ಜಿಲ್ಲೆ:

ಕೊಟ್ಟೂರು ಬಸವೇಶ್ವರ: ಕೂಡ್ಲಿಗಿ ತಾಲ್ಲೂಕಿನ ಹೊಸಪೇಟೆಗೆ ೪೦ ಮೈಲಿ ದೂರದಲ್ಲಿನ ಕೊಟ್ಟೂರಿನಲ್ಲಿ ಬಸವಪ್ಪಸ್ವಾಮಿ ಎಂಬುವರು ಸಮಾಧಿಯಾದ ಸ್ಥಳವೇ ಕೊಟ್ಟೂರು ಬಸವೇಶ್ವರ ದೇವಾಲಯ. ಕೊಟ್ಟೂರು ಬಸವೇಶ್ವರರ ಕಾಲ ೧೭ನೇ ಶತಮಾನ. ಇವರು ಜನರ ರೋಗ ವಾಸಿಮಾಡಿ, ಮಕ್ಕಳಿಲ್ಲದವರಿಗೆ ಸಂತಾನ ಭಾಗ್ಯ ಕರುಣಿಸಿದ್ದಾರೆ. ಕಣ್ಣಿಲ್ಲದವರಿಗೆ ದೃಷ್ಟಿ ನೀಡಿದ್ದಾರೆ. ಅನೇಕ ಪವಾಡಗಳನ್ನೆಸಗಿ ದೇವರಾಗಿ ಮೆರೆಯುತ್ತಿದ್ದಾರೆ.

ಉಜ್ಜಯನಿ: ಇಲ್ಲಿ ವೀರಶೈವ ಪಂಚಪೀಠಗಳಲ್ಲಿ ಒಂದಾದ ಧರ್ಮಸಿಂಹಾಸನ ಮಠವಿದೆ. ಮರುಳಸಿದ್ಧೇಶ್ವರ ದೇವಾಲಯವಿದೆ.

ಪಂಪಾಕ್ಷೇತ್ರ: ಹಂಪಿಯಲ್ಲಿರುವ ಹೇಮಕೂಟ ಪರ್ವತದಲ್ಲಿ ವಿರೂಪಾಕ್ಷ, ಪಂಪಾಂಬಿಕೆ, ಭುವನೇಶ್ವರಿ ದೇವಾಲಯಗಳಿವೆ. ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಇನ್ನೂ ಅನೇಕ ದೇವಾಲಯಗಳು ನಿರ್ಮಿತವಾಗಿವೆ. ಇಲ್ಲಿ ಮಹಾಕವಿ ಹರಿಹರ, ರಾಘವಾಂಕ, ಚಾಮರಸ, ವಿರೂಪಾಕ್ಷ ಪಂಡಿತ ಮೊದಲಾದ ಶರಣ ಕವಿಗಳು ಆಗಿಹೋಗಿದ್ದಾರೆ. ಹೊಸಪೇಟೆಯ ಹತ್ತಿರ ಜಂಬೂನಾಥದಲ್ಲಿ ಜಂಬೂನಾಥೇಶ್ವರ ದೇವಾಲಯವಿದೆ. ಕುರುಗೋಡಿನಲ್ಲಿ ಬೃಹದಾಕಾರದ ವೃಷಭ ವಿಗ್ರಹವಿದೆ. ಸೊಂಡೂರಿನಲ್ಲಿ ಸುಬ್ರಹ್ಮಣ್ಯ ದೇವಾಲಯವಿದೆ. ಲೇಪಾಕ್ಷದಲ್ಲಿ ವೀರಭದ್ರ ದೇವಾಲಯವಿದೆ. ಗವಿಸಿದ್ಧೇಶ್ವರ ತಪೋಭೂಮಿ ಇದೆ. ಕಾನಾಮಡು ದಾಸೋಹಮಠ, ಬಳ್ಳಾರಿ ಪಟ್ಟಣದಲ್ಲಿ ಮರಿಸ್ವಾಮಿಗಳ ಮಠವಿದೆ ಎಮ್ಮೆ ಬಸವ ಎಂಬ ಕಾಲಜ್ಞಾನಿಯು ಇದ್ದ ಜಿಲ್ಲೆ ಇದು.

ಎರ್ರಿ ತಾತ: ಬಳ್ಳಾರಿ ತಾಲ್ಲೂಕಿನ ಚಳ್ಳಕುರ್ಕಿಯಲ್ಲಿ ಎರ್ರಿ ತಾತ ಶಿವಯೋಗಿಗಳ ಜೀವಂತ ಸಮಾಧಿ ಇದೆ. ಇವರು ೧೮೯೭ರಲ್ಲಿ ಇಲ್ಲಿಗೆ ಬಂದು ೨೫ ವರ್ಷಗಳು ಜೀವಿಸಿದ್ದು ಅನೇಕ ಪವಾಡಗಳನ್ನೆಸಗಿದ್ದಾರೆ. ಸತ್ತ ಎಮ್ಮೆ ಬದುಕಿಸಿದ್ದಾರೆ. ನದಿಯ ಪ್ರವಾಹದಲ್ಲಿ ಅಚಲವಾಗಿ ಕುಳಿತು ಪವಾಡವೆಸಗಿ ಈಗಲೂ ಭಕ್ತಾದಿಗಳನ್ನು ಆಶೀರ್ವದಿಸುತ್ತಿದ್ದಾರೆ.

ಮೈಲಾರದ ಬಸವಲಿಂಗ ಶರಣರು: ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿ ತಾಲ್ಲೂಕಿನ ಮೈಲಾರ ಗ್ರಾಮದಲ್ಲಿ ನಿಷ್ಠಾವಂತ ವರ್ತಕ ಬಸವಪ್ಪಶೆಟ್ಟಿ ಎಂಬುವವರಿದ್ದರು. ಒಮ್ಮೆ ಹಾಲವರ್ತಿ ಚೆನ್ನವೀರಸ್ವಾಮಿಗಳು ಲಿಂಗನಾಯಕನ ಹಳ್ಳಿಗೆ

ಬಂದರು. ಬಸವಪ್ಪ ಶೆಟ್ಟರು ಇವರ ಶಿಷ್ಯರಾಗಿ ಶಿವಾನುಭವ ದರ್ಪಣ, ಗುರುಕರಣ ತ್ರಿವಿಧಿ, ಲಿಂಗ ಪೂಜಾವಿಧಾನ, ಕೃತಿಗಳನ್ನು ರಚಿಸಿ ಕೈವಲ್ಯ ಹೊಂದಿದರು. ಇದೇ ಮೈಲಾರಲಿಂಗರ ಗದ್ದುಗೆ.

ಬೀದರ್ ಜಿಲ್ಲೆ:

ಬಸವ ಕಲ್ಯಾಣ: ಕಲ್ಯಾಣದಲ್ಲಿ ಚಾಲುಕ್ಯರು ಆಳಿದರು. ಕಳಚುರಿಯ ಬಿಜ್ಜಳ ಆಳುತ್ತಿದ್ದಾಗ ಬಸವಣ್ಣನವರು ಮಂತ್ರಿಯಾಗಿ, ಕ್ರಾಂತಿಕಾರಿಯಾಗಿ, ಧರ್ಮಪ್ರಚಾರಕರಾಗಿ ಗುರುತಿಸಿಕೊಂಡರು. ಬಸವಣ್ಣ ಹಾಗೂ ಅನೇಕ ಶರಣರ ಪಾದಧೂಳಿಯಿಂದ ಕಲ್ಯಾಣ ಪಾವನವಾಯಿತು. ಪರುಷಕಟ್ಟೆಯಲ್ಲಿ ಪ್ರಭುದೇವರು ಪ್ರವಚನ ಮಾಡುತ್ತಿದ್ದರಂತೆ. ಬಸವಣ್ಣನವರು ಜನರ ಕಷ್ಟ-ಸುಖಗಳನ್ನು ವಿಚಾರಿಸಲು ಇಲ್ಲಿ ಕುಳಿತುಕೊಳ್ಳುತ್ತಿದ್ದರಂತೆ. ಇಲ್ಲಿ ವೀರಶೈವ ಮಠಗಳಿವೆ. ಅಲ್ಲಮಪ್ರಭುಗಳು ವಾಸವಾಗಿದ್ದ ಸ್ಥಳವೇ ಪ್ರಭುದೇವರ ಗದ್ದುಗೆ. ಮೋಳಿಗೆ ಮಾರಯ್ಯ, ಹರಳಯ್ಯ, ಅಕ್ಕನಾಗಮ್ಮ ಇವರ ಗವಿಗಳು, ಬಸವಣ್ಣನ ಮಹಾಮನೆ, ಅಕ್ಕನಾಗಮ್ಮನ ಗವಿಯ ಹಿಂದೆ ಇದ್ದಿತೆಂಬ ಪ್ರತೀತಿ. ತ್ರಿಪುರಾಂತಕ ಕೆರೆಯ ಸುತ್ತಮುತ್ತ ನುಲಿಯ ಚಂದಯ್ಯನ ಗವಿ, ಮಡಿವಾಳ ಮಾಚಯ್ಯನ ಹೊಂಡ, ರುದ್ರಮುನಿ ಗವಿ, ಅನುಭವ ಮಂಟಪ, ಉರಿಲಿಂಗ ಪೆದ್ದಿ ಮಠ ಮುಂತಾದವುಗಳಿವೆ. ಹಲಸೂರಿನಲ್ಲಿ ವೀರಭದ್ರೇಶ್ವರ ದೇವಾಲಯವಿದೆ.

ಭಾಲ್ಕಿ: ೧೩ನೇ ಶತಮಾನದಲ್ಲಿದ್ದ ಶಾಂತೇಶ್ವರ ಮಹಾಸ್ವಾಮಿಗಳು ಭಾಲ್ಕಿ ತಾಲ್ಲೂಕಿನ ಹುಲಕುಂಟೆಯಲ್ಲಿ ಮಠ ಸ್ಥಾಪಿಸಿದ್ದಾರೆ. ಖಟಕ ಚಿಂಚೋಳಿಯ ಶರಣ ಮಡಿವಾಳಪ್ಪ ೧೯ನೇ ಶತಮಾನದಲ್ಲಿ ಪ್ರಸಿದ್ಧರಾಗಿದ್ದರು. ಭಾಲ್ಕಿಯಲ್ಲಿ ಭಾಲ್ಕೇಶ್ವರ ದೇವಾಲಯ, ಕುಂಬಾರ ಗುಂಡಯ್ಯ, ಕೇತಲ ದೇವಿಯರ ಸ್ಮಾರಕವಾಗಿ ಕುಂಭೇಶ್ವರ ದೇವಾಲಯವಿದೆ. ಶರಣ ಉರಿಲಿಂಗಪೆದ್ದಿ ಮಠವೂ ಭಾಲ್ಕಿಯಲ್ಲಿದೆ.

ನಾವದಿಗಿಯ ರೇವಪ್ಪಯ್ಯ ಶರಣರು ಬಸವಣ್ಣನವರ ಪರಮಭಕ್ತರಾಗಿದ್ದರು. ಸಿದ್ಧೇಶ್ವರ ಗ್ರಾಮದಲ್ಲಿ ಸಿದ್ಧೇಶ್ವರ ದೇವಾಲಯವಿದೆ.

ಬಸವತೀರ್ಥ: ೧೨ನೇ ಶತಮಾನದ ಶಿವಶರಣರ ತಪಸ್ಸಿನ ಕೇಂದ್ರ. ಬಸವಣ್ಣನವರೂ ಇಲ್ಲಿ ತಂಗಿದ್ದರೆಂಬ ಅಭಿಪ್ರಾಯವಿದೆ. ಮೋಳಖೇರಾದಲ್ಲಿ ಮೋಳಿಗೆ ಮಾರಯ್ಯನ ಗವಿ ಇದೆ. ಕರಕನ ಹಳ್ಳಿಯಲ್ಲಿ ಬಕ್ಕಪ್ರಭುಗಳೆಂಬ ಶಿವಯೋಗಿ ಗಳಿದ್ದರು. ಚಿಟಗುಪ್ಪಾದಲ್ಲಿ ಕರಿಬಸಪ್ಪನವರ ಶಿಷ್ಯ ಮಡಿವಾಳಪ್ಪನ ಐಕ್ಯಸ್ಥಳವಿದೆ. ಬೆಳಖೇರಾದಲ್ಲಿ ಶರಣರ ಗದ್ದುಗೆಗಳಿವೆ. ಹಾರಕೂಡ ಚನ್ನಬಸವ ಶಿವಯೋಗಿಗಳು ೧೮೫೨ರಲ್ಲಿ ಗುಲ್ಬರ್ಗಕ್ಕೆ ೧೮ ಮೈಲು ದೂರದ ಮಗ್ಗ ಎಂಬ ಊರಿನ ಮಠದ ಚನ್ನಯ್ಯ-ಶಿವಮ್ಮ ಅವರ ಮಗನಾಗಿ ಜನಿಸಿದರು. ಬಸವಕಲ್ಯಾಣ ತಾಲ್ಲೂಕಿನ ಹಾರಕೂಡ ಗ್ರಾಮದ ಬಸವಲಿಂಗ ಸ್ವಾಮಿಗಳು ತಮ್ಮ ಮಠಕ್ಕೆ ಇವರನ್ನು ಅಧಿಕಾರಿಯಾಗಿ ಮಾಡಿದರು. ಇವರು ಹಾರಕೂಡದಲ್ಲಿ ಗದ್ದುಗೆಯಾದರು.

ಗುಲ್ಬರ್ಗ ಜಿಲ್ಲೆ:

ಶರಣ ಬಸವೇಶ್ವರ ಗದ್ದುಗೆ: ಇದು ಗುಲ್ಬರ್ಗದಲ್ಲಿದೆ. ಮಕ್ಕಳಿಲ್ಲದವರು ಸಾವಿರ ರೂಪಾಯಿ ಕಾಣಿಕೆ ಕೊಡುವೆ ಎಂದು ಹರಕೆ ಕಟ್ಟಿಕೊಂಡರೆ ಮಕ್ಕಳಾಗುವುವು ಎಂಬ ನಂಬಿಕೆ ಇಲ್ಲಿನ ಸುತ್ತಮುತ್ತಣ ಜನರಿಗಿದೆ. ಅದಕ್ಕೆ 'ಸಾವಿರ ರೂಪಾಯಿ ಶರಣ ಬಸವಪ್ಪ' ಎಂಬ ಖ್ಯಾತಿ. ಶರಣ ಬಸವೇಶ್ವರರು ಹೊತ್ತಿಸಿದ ನಂದಾದೀಪ ಇನ್ನೂ ಪ್ರಜ್ವಲಿಸುತ್ತಿದೆ. ಅವರು ಆರಂಭಿಸಿದ ದಾಸೋಹ ಈಗ ಇಲ್ಲವಾಗಿದೆ. ಪ್ರತಿ ವರ್ಷ ಇಲ್ಲಿ ಜಾತ್ರೆ ನಡೆಯುತ್ತದೆ. ಶರಣ ಬಸವಪ್ಪನವರು ಅರಳಗುಂಡಿಗೆ ಎಂಬ ಗ್ರಾಮದಲ್ಲಿ ಆದೆಪ್ಪ-ಮಡಿಯಮ್ಮ ದಂಪತಿಗಳಿಗೆ ಮಗುವಾಗಿ ಜನಿಸಿದರು. ತಂದೆ ತಾಯಿಯರು ಮಗುವಿಗೆ ಬಸಪ್ಪ ಎಂದು

ನಾಮಕರಣ ಮಾಡಿದರು. ಬೆಳೆದು ದೊಡ್ಡವರಾದ ಬಸಪ್ಪನಿಗೆ ಮಹಾದೇವಿ ಎಂಬಾಕೆಯೊಡನೆ ವಿವಾಹ ಮಾಡಿದರು. ಕೃಷಿಯಿಂದ ಜೀವನ ಸಾಗುತ್ತಿತ್ತು. ಇವರು ಬಾಳುವುದನ್ನು ಸೋದರರು ನೋಡಿ ಸಹಿಸದಾದರಾದರು. ಇವರಿಂದ ದೂರವಾದರಲ್ಲದೆ, ಸಾಲದ ಹೊರೆಯನ್ನು ಹೊರಿಸಿದರು. ಬಸಪ್ಪ ಸಾಲ ತೀರಿಸುವ ಹೊತ್ತಿಗೆ ಹೆಂಡತಿ-ಮಗ ಕೈಲಾಸವಾಸಿಯಾದರು. ಸನ್ಯಾಸ ಕೈಗೊಂಡ ಬಸಪ್ಪ ಗುಲ್ಬರ್ಗಕ್ಕೆ ಬಂದರು. ಅಲ್ಲಿ ಪವಾಡಗಳಿಂದ ಮೆರೆದರು. ಬ್ರಾಹ್ಮಣ ಹೆಣ್ಣುಮಗಳಿಗೆ ಇಪ್ಪತ್ತೊಂದು ತಿಂಗಳಾದರೂ ಹೆರಿಗೆ ಆಗದಿರಲು, ಇವರ ಕೃಪೆಯಿಂದ ಆಕೆಗೆ ಪ್ರಸವವಾಯಿತು. ಕುರುಡನಿಗೆ ಕಣ್ಣು ಬಂತು. ದೆವ್ವ ಹಿಡಿದವಳಿಗೆ ದೆವ್ವ ಬಿಟ್ಟಿತು. ಒಂದು ದಿನ ದಾಸೋಹಕ್ಕೆ ತುಪ್ಪ ಇಲ್ಲದಿರಲು, ಬಾವಿಯ ನೀರನ್ನೇ ಹಾಕಲು ಅದು ತುಪ್ಪವಾಗಿ ಪರಿಣಮಿಸಿತು. ಹೀಗೆ ಹಲವಾರು ಪವಾಡಗಳನ್ನು ಮಾಡಿ ಅಲ್ಲೇ ಗದ್ದುಗೆಯಾದರು. ಅದೇ ಇಂದು ಶರಣ ಬಸವೇಶ್ವರ ದೇವಾಲಯ ಎಂದು ಪ್ರಸಿದ್ಧಿಯಾಗಿದೆ.

ಷಣ್ಮುಖ ಸ್ವಾಮಿಯ ಗದ್ದುಗೆ: ವಚನ ಸಾಹಿತ್ಯದಲ್ಲಿ ಶರಣ ಷಣ್ಮುಖ ಸ್ವಾಮಿಗಳ ಹೆಸರು ದೊಡ್ಡದು. ಗುರು ಅಖಂಡೇಶ್ವರರ ಅಂಕಿತದಲ್ಲಿ ವಚನಗಳನ್ನು ರಚಿಸಿದ್ದಾರೆ. ಗುಲ್ಬರ್ಗ ಜಿಲ್ಲೆಯ ಜೇವರ್ಗಿಯ ಮಲ್ಲಶೆಟ್ಟಪ್ಪ ಮತ್ತು ದೊಡ್ಡಮಾಂಬೆಯರ ಮಗನಾಗಿ ೧೬೩೯ರಲ್ಲಿ ಜನಿಸಿದರು. ಇವರಿಗೆ ಧಾರ್ಮಿಕ ಒಲವು, ವೈರಾಗ್ಯ ಅಪಾರವಾಗಿತ್ತು. ಗುರು ಅಖಂಡೇಶ್ವರರು ದೀಕ್ಷೆನೀಡಿ ಜೇವರ್ಗಿ ಮಠಕ್ಕೆ ಪಟ್ಟಾಧಿಕಾರಿಗಳಾಗಿ ಮಾಡಿದರು. ೧೭೧೧ರಲ್ಲಿ ಷಣ್ಮುಖ ಸ್ವಾಮಿಗಳು ಬಯಲಾದರು. ಇಂದಿಗೂ ಈ ಶರಣರ ಗದ್ದುಗೆಯು ಪ್ರಸಿದ್ಧ ವೀರಶೈವ ಕ್ಷೇತ್ರವಾಗಿ ಮೆರೆಯುತ್ತಿದೆ.

ನೆಲೋಗಿಯಲ್ಲಿ ಕೋಲಶಾಂತಯ್ಯನ ಗದ್ದುಗೆ ಇದೆ. ಹೊಸಗುಂಟೆಯಲ್ಲಿ ಉಂಡು ಉಪವಾಸಿ, ಬಳಸಿ ಬ್ರಹ್ಮಚಾರಿ, ಇದ್ದ. ಕೋಳೂರಿನಲ್ಲಿ ಸೊಪ್ಪೆ ಸಿದ್ಧ ಮಠವಿದೆ. ಸೊನ್ನದಲ್ಲಿ ಸಿದ್ಧಲಿಂಗ ಶಿವಯೋಗಿಗಳ ಮಠವಿದೆ. ಶಹಪುರ ತಾಲ್ಲೂಕಿನ ಶಿರವಾಳ ಸಿರಿಯಾಳ ಶೆಟ್ಟಿಯ ಹುಟ್ಟೂರೆಂಬ ಪ್ರತೀತಿ. ಶಹಪುರ ಶರಣರ ಬೀಡು. ಕೋಳೂರು ಕೊಡಗೂಸು, ಶರಣ ಸಗರ ಬ್ರಹ್ಮಯ್ಯ, ಸಗರ ನಾಚಯ್ಯ, ಶಿರವಾಳದ ಸಿದ್ಧ ಫಕೀರೇಶ್ವರ, ಇಟಗಿಯ ನಿಜಗುಣ ಶಿವಯೋಗಿ ಮುಂತಾದವರೇ ಈ ಕೇತ್ರದಲ್ಲಿ ಉದಿಸಿದವರು. ಕ್ಷೇತ್ರಫಲದಲ್ಲಿ ಕ್ಷೇಮ ಲಿಂಗೇಶ್ವರ ದೇವಾಲಯವಿದೆ. ಗುಪ್ತನಾರಸಿಂಹ, ಲಕ್ಷ್ಮಿ, ಸರ್ವ, ಭಾವನಾಶ, ರುದ್ರ ಹಾಗೂ ರಾಮತೀರ್ಥಗಳಿವೆ.

ಚಿಂಚೋಳಿಯಲ್ಲಿ ಮಹಾಂತೇಶ್ವರ ಮಠವಿದೆ. ಮಹಂತೇಶ್ವರರು ತಪೋನಿಷ್ಠರಾಗಿದ್ದು ಜನರಿಗೆ ಉಪಕಾರವೆಸಗಿದರು.

ಶೋರಾಪುರ ತಾಲ್ಲೂಕಿನ ಕೊಡೆಕಲ್ಲಿನಲ್ಲಿ ಚನ್ನಬಸವಣ್ಣನ ಮಠವಿದೆ. ಮುದನೂರು ದೇವರ ದಾಸಿಮಯ್ಯನ ಹುಟ್ಟೂರು. ಕೆಂಭಾವಿಯಲ್ಲಿ ಭೋಗಣ್ಣನೆಂಬ ಶರಣನಿದ್ದ.

ಗುಲ್ಬರ್ಗದ ಹತ್ತಿರ ನಂದೂರು ಮಠ, ಕೋರಿ ಸಿದ್ಧೇಶ್ವರ ಮಠ, ಸಾವಳಗಿಯ ಶಿವಲಿಂಗೇಶ್ವರ, ಕಡಕೋಳ ಮಡಿವಾಳಪ್ಪನ ಐಕ್ಯಸ್ಥಳ, ಕೃಷ್ಣಾಪುರದ ಹತ್ತಿರ ಆಂದೇಲಿಯ ಕರುಣೇಶ್ವರ, ಗೂಗಲ್ಲು ಪರಪ್ಪಯ್ಯ ಮುಂತಾದ ಶರಣರ ಆಗರವೇ ಆಗಿದೆ ಗುಲ್ಬರ್ಗ ಜಿಲ್ಲೆ.

ಚರಬಸವೇಶ್ವರರು: ಶೀಲವಂತಯ್ಯ, ಅಮ್ಮವ್ವೆಯರಿಗೆ ಅನವಾರದ ಚನ್ನವೀರ ಸ್ವಾಮಿಗಳ ಆಶೀರ್ವಾದಿಂದ ಇಳಿವಯಸ್ಸಿನಲ್ಲಿ ಬಸವ ಎಂಬ ಮಗ ಜನಿಸಿದ. ಈತನಿಗೆ ಸೂಗಮ್ಮನವರೊಡನೆ ವಿವಾಹವಾಯಿತು. ಜವಳಿ ವ್ಯಾಪಾರದಿಂದ ಜೀವನ ಸಾಗುತ್ತಿತ್ತು. ಇವರು ಕಳ್ಳರನ್ನು ಪರಿವರ್ತಿಸಿದರು. ನೀರಿನ ಮೇಲೆ ಪವಾಡವೆಸಗಿದರು. ಶಹಪುರದಲ್ಲಿ ಭಕ್ತರ ಮನೆಯಲ್ಲಿ ನೀರಿನಲ್ಲಿ ದೀಪ ಉರಿಸಿದರು. ಚರಬಸವೇಶ್ವರರೆಂದು ಖ್ಯಾತರಾಗಿ ೧೮೪೪ರಲ್ಲಿ ಶಿವೈಕ್ಯರಾದರು.

ಚನ್ನವೃಷಭೇಂದ್ರ ಸ್ವಾಮಿಗಳು: ಗುಲ್ಬರ್ಗ ಜಿಲ್ಲೆ ಜೇವರ್ಗಿ ತಾಲ್ಲೂಕಿನ ಮಾಣಗೇರಿಯಲ್ಲಿ ೧೮೪೫ರಲ್ಲಿ ಜನಿಸಿದರು. ಇವರು ದೆವ್ವ ಬಿಡಿಸಿದರು. ಭೀಮಶ್ಯಾ ಎಂಬುವನು ಗುರುಗಳ ಪಾದಸ್ಪರ್ಶದಿಂದ ಗಂಗೆ ಉದ್ಭವಿಸಿದುದನ್ನು ಕಂಡ. ಅನೇಕ ಪವಾಡವೆಸಗಿ, ಧರ್ಮಪ್ರಚಾರ ಮಾಡಿ ೧೯೪೫ರಲ್ಲಿ ಲಿಂಗೈಕ್ಯರಾದರು.

ಅಬ್ಬೆ ತುಮಕೂರಿನ ವಿಶ್ವಾರಾಧ್ಯರು ಜೇವರ್ಗಿ ತಾಲ್ಲೂಕು ಗಂವ್ಹಾರದಲ್ಲಿ ೧೮೬೨ರಲ್ಲಿ ಜನಿಸಿ ಶರಣರಾಗಿ ಮೆರೆದರು.

ಚರಲಿಂಗೇಶ್ವರರು ಕಲ್ಬುರ್ಗಿ ಜಿಲ್ಲೆಯ ವರ್ತೂರು ಗ್ರಾಮದಲ್ಲಿ ೧೮೬೨ರಲ್ಲಿ ಜನಿಸಿದರು. ಇವರು ಧರ್ಮೋಪದೇಶ ಮಾಡಿ, ಔಷಧ ಕೊಡುತ್ತಿದ್ದರು. ೧೯೧೭ರಲ್ಲಿ ಶಿವೈಕ್ಯರಾದರು.

ಜಡೆಯ ಸಿದ್ಧಬಸವ ಶಿವಯೋಗಿಗಳು ಬೆಳಗಾಂ ಜಿಲ್ಲೆಯ ಚಿಕ್ಕಳ್ಳಿಯಲ್ಲಿ ೧೮೬೮ರಲ್ಲಿ ಜನಿಸಿದರು. ಶಹಪುರದ ಮೇಲಗಿಗಲ್ಲಿಯ ಜಡೆಮಠಕ್ಕೆ ಮರಿಯಾಗಿ ೧೯೬೩ರಲ್ಲಿ ಶಿವೈಕ್ಯರಾದರು.

ಚಾಮರಾಜನಗರ ಜಿಲ್ಲೆ:

ಮಾದೇಶ್ವರ ಕ್ಷೇತ್ರ: ಮಾದೇಶ್ವರರು ಕೊಳ್ಳೇಗಾಲಕ್ಕೆ ಐವತ್ತು ಮೈಲು ದೂರದ ಬೆಟ್ಟದ ವಜ್ರಮಲೆಯಲ್ಲಿ ಗದ್ದುಗೆ ಹೊಂದಿದ್ದಾರೆ. ಕ್ರಿ.ಶ. ೧೫೦೦ರ ಸುಮಾರಿಗೆ ಇದ್ದವರು ಇವರು. ಇವರ ಬಾಲ್ಯ ಸುತ್ತೂರು, ಕುಂತೂರು ಮಠಗಳಲ್ಲಿ ಕಳೆಯಿತು. ಕುಂತೂರಿನ ಪ್ರಭುಸ್ವಾಮಿಗಳು ಇವರ ದೀಕ್ಷಾಗುರುಗಳು. ಅನೇಕ ಊರುಗಳ ಪರ್ಯಟನೆ ಮಾಡಿ ಹಲವಾರು ಪವಾಡಗಳನ್ನೆಸಗಿದರು. ಗೊದ್ದೆ ಗೋಸಂಬೆಗಳನ್ನು ನೀರಲ್ಲಿ ಅದ್ದಿ ಹೂವು ಮಾಡಿದರು. ಸೋರೆ ಬುರುಡೆಯಲ್ಲಿದ್ದ ನೀರನ್ನು ನಂಜರಾಜ ಒಡೆಯರ ಚತುರಂಗ ಬಲಕ್ಕೆ ನೀಡಿ ದಾಹ ಇಂಗಿಸಿದರು. ಜುಂಜೇಗೌಡನಿಂದ ಹಾಲರುವೆ ಸೇವೆ ಮಾಡಿಸಿಕೊಂಡರಲ್ಲದೆ ಒಂದು ಅಂಕಣ ದೇವಾಲಯವನ್ನು ಮಾಡಿಸಿಕೊಂಡರು. ಶ್ರವಣನನ್ನು ಭಸ್ಮಮಾಡಿದರು. ಜಿಪುಣ ಬೇವಿನ ಕಾಳಿಯ ನಾಶಮಾಡಿದರು. ಇಕ್ಕೇರಿ ದೇವಮ್ಮನ ಗರ್ವ ಮುರಿದರು. ಮೂಗಯ್ಯನೆಂಬ ಭಕ್ತನಿಂದ ಎಣ್ಣೆ ಮಜ್ಜನ ಮಾಡಿಸಿಕೊಂಡರು. ಕಾರಯ್ಯ, ಬಿಲ್ಲಯ್ಯರೇ ಮೊದಲಾದ ಕಾಡುಜನರಿಗೆ ವೀರಶೈವ ಧರ್ಮ ಬೋಧಿಸಿ ಅವರನ್ನೆಲ್ಲ ಸುಸಂಸ್ಕೃತರೂ, ನಾಗರಿಕರೂ ಆಗುವಂತೆ ಮಾಡಿದರು. ಆನೆಮಲೆ, ಜೇನುಮಲೆ, ಕಾನುಮಲೆ, ಸುತ್ತಮಲೆ, ಗುಲಗಂಜಿ ಮಲೆ, ಏಳುಮಲೆ, ಎಪ್ಪತ್ತೇಳು ಮಲೆಯ ನಡುವಿನ ವಜ್ರಮಲೆಯಲ್ಲಿ ತಪವೆಸಗಿ ಲಿಂಗವಾದರು. ಇವರ ಕಥೆಯನ್ನು ಕಂಸಾಳೆಯವರು ಏಳು ರಾತ್ರಿ ಹಾಡುತ್ತಾರೆ. ದೀಪಾವಳಿ, ಉಗಾದಿ, ಶಿವರಾತ್ರಿ ಮುಂತಾದ ಹಬ್ಬಗಳಲ್ಲಿ ಜಾತ್ರೆ ಆಗುತ್ತವೆ. ಎಲ್ಲ ಕೋಮಿನವರೂ ಈತನಿಗೆ ನಡೆದುಕೊಳ್ಳುತ್ತಾರೆ. ಇಲ್ಲಿ ಸಾಲೂರು ಮಠವಿದ್ದು ಧರ್ಮಪ್ರಚಾರ, ಜ್ಞಾನಾನ್ನ ದಾಸೋಹ ನಡೆಯುತ್ತದೆ.

ಶಂಭುಲಿಂಗನ ಬೆಟ್ಟ ಕೊಳ್ಳೇಗಾಲ ತಾಲ್ಲೂಕಿನ ಚಿಲಕವಾಡಿಯಲ್ಲಿದ್ದು ನಿಜಗುಣ ಶಿವಯೋಗಿಗಳ ಇಷ್ಟದೈವವಾದ ಶಂಭುಲಿಂಗನ ದೇವಾಲಯವಿದೆ. ಮುಪ್ಪಿನ ಷಡಕ್ಷರಿಗಳ ಗವಿಯೂ ಇದೆ. ಕುಂತೂರಿನಲ್ಲಿ ಮಾದೇಶ್ವರರ ಗುರುಗಳಾದ ಪ್ರಭುಲಿಂಗದೇವರ ಬೆಟ್ಟವಿದ್ದು ಅಲ್ಲೇ ಪ್ರಭುದೇವರು ಐಕ್ಯರಾಗಿದ್ದಾರೆ.

ಹರದನಹಳ್ಳಿಯಲ್ಲಿ ಗೋಸಲ ಸಿದ್ಧೇಶ್ವರ, ಚನ್ನಬಸವೇಶ್ವರ, ಸಿದ್ಧಲಿಂಗೇಶ್ವರ ಮಠಗಳಿವೆ. ದಿವ್ಯ ಲಿಂಗೇಶ್ವರ ದೇವಾಲಯವಿದೆ.

ಸಿದ್ಧೇಶ್ವರ ಬೆಟ್ಟ ಕೊಳ್ಳೇಗಾಲ ತಾಲ್ಲೂಕಿನ ಮಧುವನ ಹಳ್ಳಿಗೆ ಮೂರು ಕಿಲೋಮೀಟರ್ ದೂರದಲ್ಲಿದೆ. ಸಿದ್ಧೇಶ್ವರರೆಂಬ ಶರಣರು ಉತ್ತರದ ಕಡೆಯಿಂದ ಬಂದು ಇಲ್ಲಿ ತಪವೆಸಗಿ ಐಕ್ಯರಾಗಿದ್ದಾರೆ. ಇವರು ಮಕ್ಕಳಿಲ್ಲದವರಿಗೆ ಮಕ್ಕಳ ಫಲ ನೀಡಿದ್ದಾರೆ. ಅನೇಕ ಪವಾಡಗಳನ್ನೆಸಗಿದ್ದಾರೆ. ಹೊಂಡರಬಾಳಲ್ಲಿ ಉಗಾದಿಯಂದು ಜಾತ್ರೆ ಕೊಂಡೋತ್ಸವಗಳು ನಡೆಯುತ್ತವೆ.

ತುಮಕೂರು ಜಿಲ್ಲೆ:

ಗುಬ್ಬಿಯಲ್ಲಿ ಚನ್ನಬಸವೇಶ್ವರ ಶಿವಯೋಗಿಗಳ ಸಮಾಧಿ ಇದೆ. ಗುಬ್ಬಿಯಪ್ಪಗಳ ದೇವಸ್ಥಾನವೆಂದೇ ಪ್ರಸಿದ್ಧಿ. ಇಲ್ಲಿ ಓಹಿಲಯ್ಯನ ಗುಡಿ ಇದೆ. ಗುಬ್ಬಿ ಆಚಾರ್ಯ ಅಮರಗೊಂಡಾರ್ಯ, ಮಲ್ಲಣ, ಮಲ್ಲೇಶ್ವರ ಭಕ್ತ, ಗುರುಭಕ್ತಯ್ಯನ ಮಗ ದೇಶಿಕ ಪಟ್ಟವರ್ಧನ ಮಲ್ಲಿಕಾರ್ಜುನ ಪಂಡಿತ, ಇವನ ಮಗ ನಾಗನಾಥಾಚಾರ್ಯ, ಸಪ್ಪೆಯಮ್ಮ ಎಂಬ ಶರಣೆ, ಮಲ್ಲಣಾರ್ಯ, ಶಾಂತೇಶ ಮುಂತಾದವರ ಸ್ಥಳ. ಗುಬ್ಬಿಯ ಕೆರೆಯ ಮಡುವಿನ ದಡದಲ್ಲಿ ಅಡವಿ ಸ್ವಾಮಿಗಳ ಮಠವಿದೆ.

ತೋಂಟದ ಸಿದ್ಧಲಿಂಗೇಶ್ವರರ ಗದ್ದುಗೆ:

ಹರದನಹಳ್ಳಿಯ ಗೋಸಲ ಚನ್ನಬಸವೇಶ್ವರರ ದೃಷ್ಟಿಗೆ ಮಗುವೊಂದು ಗೋಚರವಾಯಿತು. ಮುಂದೆ ಅದು ತೋಂಟದ ಸಿದ್ಧಲಿಂಗೇಶ್ವರ ಎಂಬ ಹೆಸರಿನಿಂದ ಪ್ರಸಿದ್ಧವಾಯಿತು. "ಷಟ್ಸ್ಥಲಜ್ಞಾನ ಸಾರಾಮೃತ" ಎಂಬ ವಚನಗಳನ್ನು ಸೃಷ್ಟಿಸಿದ ಶಿವಯೋಗಿಯ ಕಾಲ ಸುಮಾರು ಕ್ರಿ.ಶ. ೧೫೦೦. ಈತ ಮಾಡಿದ ಪವಾಡಗಳು ಹಲವಾರು. ಹರದನ ಹಳ್ಳಿಯಲ್ಲಿ ಜಲದಲ್ಲಿ ದೀಪವನ್ನು ಉರಿಸಿದ. ಅರುಣಾದ್ರಿ, ಕುಂಬಳೇಶ್ವರಕ್ಕೆ ಹೋಗಿ ಮಹಿಮೆಯನ್ನು ಪ್ರದರ್ಶಿಸಿದ. ತ್ರ್ಯಂಬಕೇಶ್ವರಕ್ಕೆ ಹೋಗಿ ಶಿವಲಿಂಗದೊಡನೆ ಮಾತಾಡಿದ. ಮಹಾಬಲೇಶ್ವರದಲ್ಲಿ ಕೃಷ್ಣಾ ನದಿ ಬತ್ತುವಂತೆ ಮಾಡಿದ. ಮತ್ತೆ ಪ್ರವಾಹ ಬರುವಂತೆ ಮಾಡಿದ. ಉತ್ತುಂಗ ಯೋಗಿಯ ಗರ್ವವನ್ನು ಮುರಿದು ತತ್ವವನ್ನು ಉಪದೇಶಿಸಿದ. ಉಳವಿಗೆ ಹೋಗಿ ಅಲ್ಲಿ ವೈಷ್ಣವ ಜನಾರ್ದನ ಜೀಯನೊಡನೆ ವಾದಿಸಿ ಜಯ ಪಡೆದ. ಕಾರ್ಕಳ ಪಟ್ಟಣದಲ್ಲಿ ಶ್ರವಣಸೇಂಬವನನ್ನು ಗೆದ್ದು ತುಮಕೂರು ಜಿಲ್ಲೆಯ **ನಾಗಿಣಿ ನದಿ** ತೀರದ ಕಗ್ಗೆರೆಗೆ ಬಂದು ಅಲ್ಲಿ ಹೂದೋಟದಲ್ಲಿ ತಪಮಾಡಲು, ಮೈ ಸುತ್ತಾ ಹುತ್ತ ಬೆಳೆಯಿತು. ಬೋಳ **ಬಸವೇಶನಿಗೆ ದೀಕ್ಷೆ ನೀಡಿ** ಕಲ್ಲುಮಠದಲ್ಲಿ ಶಿವಯೋಗಾನಿದ್ರಾಮುದ್ರೆಯಲ್ಲಿ ಅಂತರ್ಮುಖಿಯಾಗಿ, ಸಮಾಧಿ ಹೊಂದಿದರು. ಇದು **ಈಗ ಯಡೆಯೂರು ಕ್ಷೇ**ತ್ರವೆಂದು ಪ್ರಸಿದ್ಧಿ ಪಡೆದಿದೆ. ಇದು ಭಕ್ತಾದಿಗಳನ್ನು ಆಕರ್ಷಿಸಿದೆ. ದೇವರೆಂದೇ ಪೂಜಿಸಿ ಭಕ್ತರು ಭಕ್ತಿಯಿಂದ **ನಡೆದುಕೊ**ಳ್ಳುತ್ತಾರೆ. ಇಲ್ಲಿ ಜಾತ್ರೆಯು ನಡೆಯುತ್ತದೆ.

ಕುಪ್ಪೂರು ಗದ್ದುಗೆ: ತುಮಕೂರು ಜಿಲ್ಲೆಯ ಎಡುವಳ್ಳಿ ಬಸವಲಿಂಗಾರಾಧ್ಯ- ಸಿದ್ಧಾಂಬೆ ದಂಪತಿಗಳಿಗೆ ಮರುಳಸಿದ್ಧನೆಂಬ ಮಗನಾದ. ಈತನಿಗೆ ದೊಡ್ಡ ಮಠದ ಪ್ರಭುಗಳು ದೀಕ್ಷಾ ಸಂಸ್ಕಾರ ಮಾಡಿದರು. ಮುಂದೆ ನಿಡುವಳ್ಳಿ ಮಠದ ಅಧಿಕಾರಿಯಾಗಿ ವೀರಶೈವ ಧರ್ಮಪ್ರಚಾರ ಮಾಡಿ ಕುಪ್ಪೂರಲ್ಲಿ ಗದ್ದುಗೆಯಾದರು. ಸತ್ತ ಮಗುವನ್ನು ಬದುಕಿಸಿದರು. ಭೂತ ಹಿಡಿದವರಿಗೆ ಭೂತವನ್ನು ಬಿಡಿಸಿದರು. ಬರಗಾಲದಲ್ಲಿ ಬೆತ್ತದಿಂದ ಬಂಡೆ ನಡುವೆ ಚುಚ್ಚಲು ನೀರು ಉದ್ಭವಿಸಿತು. ಅದೇ ಮರಳು ಸಿದ್ಧೇಶ್ವರ ದೊಣೆಯಾಯಿತು.

ಸಿದ್ಧಗಂಗಾ ಮಠ ಜ್ಞಾನಾನ್ನದಾಸೋಹಕ್ಕೆ ಹೆಸರಾದುದು. ಇಲ್ಲಿ ಗಂಗೆಯುದಿಸಿದ ತಾಣ. ಗೋಸಲ ಸಿದ್ಧೇಶ್ವರರು ತಪವೆಸಗಿದ ತಾಣ. ನಿಜಗಲ್ಲಿನಲ್ಲಿ ವೀರಭದ್ರ ದೇವಾಲಯವಿದೆ. ಗೂಳೂರು ಸಿದ್ಧವೀರ, ಪರ್ವತೇಶ್ವರ, ವಿರಕ್ತ ತೋಂಟದಾರ್ಯ ಕವಿಗಳಿದ್ದ ಸ್ಥಳ. ಚಿಕ್ಕನಾಯಕನಹಳ್ಳಿ ತಾಲ್ಲೂಕು ದಬ್ಬೇಘಟ್ಟದಲ್ಲಿ ಮಹಾಲಿಂಗೇಶ್ವರ ದೇವಾಲಯ, ದೊಡ್ಡ ಬಿದಿರೆಯಲ್ಲಿ ಪಾತಾಳ ಲಿಂಗೇಶ್ವರ, ಪಂಕಜನ ಹಳ್ಳಿಯಲ್ಲಿ ಮಲ್ಲಿಕಾರ್ಜುನ ದೇವಾಲಯವಿದೆ. ಗೋಡೆಕೆರೆಯಲ್ಲಿ ಸಿದ್ಧರಾಮೇಶ್ವರ ದೇವಾಲಯವಿದೆ.

ಗೋಸಲ ಸಿದ್ಧೇಶ್ವರ: ಕೊರಟಗೆರೆ ತಾಲ್ಲೂಕಿನ ಸಿದ್ಧರ ಬೆಟ್ಟದಲ್ಲಿ ಗೋಸಲ ಸಿದ್ಧೇಶ್ವರರ ಗದ್ದುಗೆ ಇದೆ. ಗುಹಾಂತರ ದೇವಾಲಯವಿದ್ದು ಇದರೊಳಗೆ ಲಿಂಗವಿದೆ. ದೇವಾಲಯದ ತಪ್ಪಲಲ್ಲಿ ಒಂದು ಬಾವಿಯಾಕಾರದ ಚಿಲುಮೆ ಇದೆ. ಇಲ್ಲಿ ಸುವರ್ಣಮುಖಿ ನದಿ ಹುಟ್ಟುವುದೆಂದು ಹೇಳುತ್ತಾರೆ. ವೀರಶೈವರು ಈ ಗದ್ದುಗೆಯನ್ನು ಭಕ್ತಿಯಿಂದ ಪೂಜಿಸುತ್ತಾರೆ.

ಮತಕೂರು ನಂಜುಂಡ ಶಿವಯೋಗಿಗಳು ಸಿದ್ಧಗಂಗೆಯ ಅಟವೀಶ್ವರರ ಸೇವೆ ಮಾಡಿ ತಮ್ಮ ೯೬-೯೭ನೇ ವಯಸ್ಸಿನಲ್ಲಿ ಉಸ್ಕೂರಿನಲ್ಲಿ ಶಿವೈಕ್ಯರಾಗಿ ಗದ್ದುಗೆಯಾದರು. ಇವರು ಕವಿ, ಕಲಾವಿದ, ಶರಣರು. ಮೈದಾಳದಲ್ಲೂ ಇವರ ಗದ್ದುಗೆ ಇದೆ. ಇವರು ಅಟವೀಶ್ವರ ಗೀತಾಂಜಲಿ, ಮಾರ್ಕಂಡೇಯ ವಿಳಾಸ, ಸುರಭಾಂಡೇಶ್ವರಾಖ್ಯಾನ, ಹಾಲಾಹಲ ಭಕ್ಷಣೆಯ ಕಥೆ ಮುಂತಾದ ಕೃತಿಗಳನ್ನು ರಚಿಸಿದ್ದಾರೆ.

ಬೆಂಗಳೂರು ಜಿಲ್ಲೆ:

ಸರ್ಪಭೂಷಣ ಶಿವಯೋಗಿಗಳು: ಬೆಂಗಳೂರು ಜಿಲ್ಲೆಯ ಚಿಕ್ಕಬಾಣಾವರದ ಶರಣ ದಂಪತಿಗಳಾದ ಮಲ್ಲಿಕಾರ್ಜುನಪ್ಪ ಹಾಗೂ ಚನ್ನಮ್ಮನವರ ಮಗುವಾಗಿ ೧೭೯೫ರಲ್ಲಿ ಜನಿಸಿದ ಸಪ್ಪಣ್ಣ ತಿಪ್ಪಶೆಟ್ಟರ ಮಠದ ಗುರುಸ್ವಾಮಿಗಳಿಂದ ದೀಕ್ಷೆ ಪಡೆದು ಪಟ್ಟಾಧಿಕಾರ ಸ್ವೀಕರಿಸಿದರು. ದೇಶಪರ್ಯಟನೆಯಿಂದ ಜ್ಞಾನ ಪಡೆದರು. ಆ ಸಂದರ್ಭದಲ್ಲಿ ಹಲವಾರು ಪರಿವರ್ತನಾ ಕಾರ್ಯಗಳನ್ನು ಎಸಗಿದರು. ಹೊಲೆಯರ ಕೆಂಪನಿಂದ ಕಾಲ್ಮುಟ್ಟಿ ನಮಸ್ಕಾರ ಸ್ವೀಕರಿಸಿದರು ಎಂದರೆ ಅಂದಿನ ದಿನಗಳಲ್ಲಿ ಅಸ್ಪೃಶ್ಯತಾ ನಿವಾರಣೆಯ ಬಗೆಗೆ ಅವರು ಎಷ್ಟು ಕಾಳಜಿ ವಹಿಸಿದ್ದರು ಎಂಬುದು ವ್ಯಕ್ತವಾಗುವುದು. ಕನ್ನಡದಲ್ಲಿ 'ಕೈವಲ್ಯ ಕಲ್ಪವಲ್ಲರಿ', ಸಂಸ್ಕೃತದಲ್ಲಿ 'ಜ್ಞಾನ ಶತಕಂ' ಎಂಬ ಕೃತಿಗಳನ್ನು ರಚಿಸಿದರು. ಕವಿಯಾಗಿ, ಮಹಾಶರಣರಾಗಿ, ಅಧ್ಯಾತ್ಮಲೋಕಕ್ಕೆ ಮಹಾ ತತ್ತ್ವಜ್ಞಾನಿಯಾಗಿ, ಸಂಗೀತ ಲೋಕಕ್ಕೆ ವಾಗ್ಗೇಯಕಾರರಾಗಿದ್ದಾರೆ. ಇವರು ಬೆಂಗಳೂರಲ್ಲಿ ಗದ್ದುಗೆಯಾಗಿದ್ದಾರೆ.

ಪಾಲ್ಕುರಿಕೆ ಸೋಮನಾಥ:

ಬೆಂಗಳೂರು ಜಿಲ್ಲೆಯ ಮಾಗಡಿ ತಾಲ್ಲೂಕಿನ ಕಲ್ಯದಲ್ಲಿ ಪಾಲ್ಕುರಿಕೆ ಸೋಮನಾಥನ ಸಮಾಧಿ ಇದೆ. ಈತ ಆಂಧ್ರದ ಓರಂಗಲ್ಲಿನ ಕಾಕತೀಯ ರಾಜರ ಆಸ್ಥಾನ ಕವಿಯಾಗಿದ್ದ. ಕಲ್ಯದಲ್ಲಿ ತಾರಕಾಸುರನ ಮಕ್ಕಳು ತಪ ಮಾಡಿದಾಗ ಈಶ್ವರ ಪ್ರತ್ಯಕ್ಷನಾಗಿ ವರ ನೀಡಿ ಅಲ್ಲಿ ಕಲ್ಲೇಶ್ವರನೆಂದು ನೆಲೆಯಾದ. ಚನ್ನಮ್ಮನೆಂಬ ಶರಣೆ ಅರವತ್ತನಾಲ್ಕು ಆಚಾರಗಳನ್ನು ಆಚರಿಸಿಕೊಂಡು ವ್ರತಾಚಾರಣೆಯಲ್ಲಿದ್ದರು. ಆಕೆಯನ್ನು ನೋಡಲು ಬಂದ ಪಾಲ್ಕುರಿಕೆ ಸೋಮನಾಥ ಇಲ್ಲೇ ಐಕ್ಯನಾದ. ಈತ ಕವಿ, ಶರಣ. ಪಾಲ್ಕುರಿಕೆ ಸೋಮನಾಥನ ಮಗ ಗುರುಲಿಂಗಾರ್ಯನ ಗದ್ದುಗೆಯೂ ಈ ಬೆಟ್ಟದಲ್ಲೇ ಇದೆ.

ಶಿವಗಂಗೆಯಲ್ಲಿ ಗಂಗಾಧರೇಶ್ವರ, ಹೊನ್ನಮ್ಮನ ದೇವಾಲಯಗಳಿವೆ. ಇದಕ್ಕೆ "ದಕ್ಷಿಣ ಕಾಶಿ" ಎಂದು ಕರೆವರು. ಇಲ್ಲಿ ಒಂದು ವೀರಶೈವ ಮಠ, ವೀರಭದ್ರ ದೇವಾಲಯ, ಪಾತಾಳಗಂಗೆ ಇದೆ.

ಬೆಂಗಳೂರು ರಾಮನಗರದ ಮಧ್ಯೆ ರೇವಣಸಿದ್ಧೇಶ್ವರ ಬೆಟ್ಟವಿದೆ. ಇಲ್ಲಿ ರೇವಣಸಿದ್ಧೇಶ್ವರರು ಲಿಂಗರೂಪ ತಾಳಿದ್ದಾರೆ.

ಬೆಂಗಳೂರು ನಗರದಲ್ಲಿ ಗವಿಗಂಗಾಧರೇಶ್ವರ, ಕಾಡು ಮಲ್ಲೇಶ್ವರ, ಅಲಸೂರಿನ ಸೋಮೇಶ್ವರ, ಬಸವಣ್ಣನ ದೇವಾಲಯಗಳು ಮುಖ್ಯವಾಗಿವೆ. ಇವುಗಳೆಲ್ಲಕ್ಕೂ ವೀರಶೈವರು ನಡೆದುಕೊಳ್ಳುತ್ತಾರೆ.

ದೇಗುಲ ಮಠ: ಇದು ಕನಕಪುರದಲ್ಲಿ ರಾರಾಜಿಸುತ್ತಿದೆ. ಇದರ ಹತ್ತಿರವೇ ಅರ್ಕಾವತಿ ನದಿ ಹರಿಯುತ್ತಿದೆ. ಮಠದ ಆಗ್ನೇಯಕ್ಕೆ ಶ್ರೀಮಠದ ಪೀಠಾಧಿಕಾರಿಗಳ ಹತ್ತು ಗದ್ದುಗೆಗಳಿವೆ. ಹಲವಾರು ಕಾಣೆಯಾಗಿವೆ. ನಿರ್ವಾಣ ಸ್ವಾಮಿಗಳೇ ಆದಿಯಾಗಿ ಮುಮ್ಮಡಿ ಮಹಾಲಿಂಗ ಸ್ವಾಮಿಗಳವರೆಗೆ ಹದಿನಾಲ್ಕು ವಿರಕ್ತ ಪೀಠಾಧಿಕಾರಿಗಳು ಶೋಭಿಸಿದ್ದಾರೆ. ಮೂಲ ದೇಗುಲ ಮಠವನ್ನು ದೊಡ್ಡ ಮಠವೆಂದು ಕರೆದರೆ ಗವಿಮಠ ಅಥವಾ ಚಿಕ್ಕಮಠ ಈ ಮಠದ ಅಂಗವಾಗಿದೆ. ದೇವಲಿಂಗ ಸ್ವಾಮಿಗಳು, ನಾಗಲಿಂಗ ಸ್ವಾಮಿಗಳು, ನಿರ್ವಾಣ ಸ್ವಾಮಿಗಳು, ಮಹಾಲಿಂಗ ಸ್ವಾಮಿಗಳು ಇಲ್ಲಿ ಮೆರೆದಿದ್ದಾರೆ. ಇದು ಜ್ಞಾನಾನ್ನ ದಾಸೋಹ ಮಠವಾಗಿ ಪ್ರಸಿದ್ಧವಾಗಿದೆ.

ಆದಿಯ ಗುರು ನಿರ್ವಾಣ ಸ್ವಾಮಿಗಳು ಶಿವಯೋಗ ನಿಷ್ಠೆಯುಳ್ಳವರು, ವಿರಕ್ತರು, ಲಿಂಗಭೋಗೋಪಭೋಗಿಗಳು, ವೈರಾಗ್ಯ ಮೂರ್ತಿಗಳು, ಶಿವಜ್ಞಾನ ಸಂಪತ್ತುಳ್ಳವರು, ಅಣಿಮಾದಷ್ಟಸಿದ್ಧಿಗಳನ್ನು ಸಾಧಿಸಿದವರು. ಲೌಕಿಕ ಬಯಸದವರಾಗಿದ್ದರೂ ಸಾಧಕರಿಗೆ ದಾರಿದೀಪವಾಗಿದ್ದರು. ಮನದ ಸಂಕಲ್ಪ ವಿಕಲ್ಪಗಳನ್ನು ಅಳಿದವರು, ಪ್ರಾಣಿಗಳಲ್ಲಿ ದಯೆಯನ್ನು ತೋರಿದವರು. ಅವರ ದಿವ್ಯಮೂರ್ತಿ ಸ್ವರೂಪ ಶಿವತೇಜಸ್ಸಿನಿಂದ ಉಜ್ವಲವಾಗಿತ್ತು. ಪರಿಪೂರ್ಣವಾದ ಶಿವಜ್ಞಾನ ಸಂಪತ್ತು, ಜ್ಞಾನಕ್ರಿಯಾ ಸಮನ್ವಯ ದೃಷ್ಟಿ, ನಡೆನುಡಿಗಳ ಹೊಂದಾಣಿಕೆ, ವಿಶಾಲ ದೃಷ್ಟಿ, ಸದ್ಭಕ್ತಿ ಭಾವಗಳಿಂದಾದ ನಿರ್ಮಲ ಚರಿತೆ, ಇವು ಅವರ ವ್ಯಕ್ತಿತ್ವವನ್ನು ರೂಪಿಸಿದ್ದವು. ಪುಣ್ಯಪುರುಷರ ದರುಶನ ಮಾಡಿ ಕೃತಾರ್ಥರಾಗಲು ಈ ಕ್ಷೇತ್ರ ಒಂದು ರೀತಿಯಲ್ಲಿ ದೇವರ ಬೀಡಾಗಿ 'ದೇಗುಲ ಮಠ' ಎಂದು ಹೆಸರಾಯಿತು. ನೂರೊಂದು ವಿರಕ್ತರಲ್ಲಿ ಒಬ್ಬರಾದ ನಿರ್ವಾಣ ಸ್ವಾಮಿಗಳೇ ಈ ಮಠದ ಆದಿಗುರುಗಳು.

ಫಿರಂಗಿ ಸ್ವಾಮಿಗಳು ಐಕ್ಯವಾದ ಮಾಗಡಿ ತಾಲ್ಲೂಕಿನ ಅಂಕನಹಳ್ಳಿ ಮಠ, ಸೋಲೂರು ಹೋಬಳಿಯ ಬಂಡೆ ಮಠ, ಬೆಟ್ಟಳ್ಳಿ ಮಠ, ಆನೇಕಲ್ಲು ತಾಲ್ಲೂಕಿನ ಶ್ರೀಮದ್ ರಾಜಾಪುರ ಸಂಸ್ಥಾನ ಮಠ, ವಿಭೂತಿಪುರದ ಮಠ ಮುಂತಾದವು ವೀರಶೈವಮಠಗಳಲ್ಲಿ ಪ್ರಮುಖವಾದವು. ನಂದಿ ಬೆಟ್ಟದಲ್ಲಿ ಯೋಗನಂದಿ, ಭೋಗನಂದಿ ದೇವಾಲಯಗಳಿವೆ.

ಧಾರವಾಡ ಜಿಲ್ಲೆ:

ಹುಬ್ಬಳ್ಳಿಯಲ್ಲಿ ಸಿದ್ಧಾರೂಢರ ಮಠ, ಹಾವೇರಿಯಲ್ಲಿ ಸಿದ್ಧೇಶ್ವರ ದೇವಾಲಯ, ರಾಣೇಬೆನ್ನೂರು ತಾಲ್ಲೂಕಿನ ಚೌಡದಾನಪುರದಲ್ಲಿ ರುದ್ರಮುನಿ, ವೀರಭದ್ರ ದೇವಾಲಯಗಳಿವೆ. ಅಂಬಿಗರ ಚೌಡಯ್ಯ ಈ ಊರಿನ ಶರಣ. ಐರಣಿಯಲ್ಲಿ ಕೊಟ್ಟೂರೇಶ್ವರ ಮಠ, ನವಲಗುಂದದಲ್ಲಿ ಗವಿಮಠ, ಧಾರವಾಡದಲ್ಲಿ ಮುರುಘಾಮಠ ಪ್ರಸಿದ್ಧಿ. ಲಕ್ಷ್ಮೇಶ್ವರದಲ್ಲಿ ಸೋಮೇಶ್ವರ ದೇವಾಲಯ, ಲಕ್ಕುಂಡಿಯಲ್ಲಿ ಮಲ್ಲಿಕಾರ್ಜುನೇಶ್ವರ, ಮಣಿಕೇಶ್ವರ, ಕುಂದಗೋಳದಲ್ಲಿ ಶಂಭುಲಿಂಗ ದೇವಾಲಯವಿದೆ.

ಫಕೀರ ಸ್ವಾಮಿಗಳ ಮಠ: ಶಿರಹಟ್ಟಿ ತಾಲ್ಲೂಕಿನಲ್ಲಿ ಫಕೀರ ಸ್ವಾಮಿಗಳ ಗದ್ದುಗೆ, ಅವ್ವ ಲಿಂಗನ ಮಠದ ವಾಯುವ್ಯಕ್ಕೆ ಎರಡು ಫರ್ಲಾಂಗ್ ದೂರದಲ್ಲಿದೆ. ಇಲ್ಲಿ ಆರು ಜನ ಫಕೀರರ ಸಮಾಧಿಗಳಿವೆ. ಈ ಮಠವು ಮುಸಲ್ಮಾನರ ಶೈಲಿಯಲ್ಲಿದೆ. ಈ ಮಠಕ್ಕೆ ಹಿಂದೂ ಮುಸಲ್ಮಾನರಿಬ್ಬರೂ ನಡೆದುಕೊಳ್ಳುತ್ತಾರೆ. ಇದೇ ಒಂದು ವಿಶೇಷ.

ಹಾನಗಲ್ಲು ಶಿವಕುಮಾರ ಸ್ವಾಮಿಗಳು: ರಾಣೇಬೆನ್ನೂರು ತಾಲ್ಲೂಕಿನ ಜೋಯಿಸರ ಹಳ್ಳಿಯ ಬಸವಯ್ಯ-ನೀಲಮ್ಮ ಎಂಬ ಶರಣರಿಗೆ ೧೮೬೭ರಲ್ಲಿ ಮಗನಾಗಿ ಜನ್ಮ ತಾಳಿದರು. ಶಿವಕುಮಾರ ಮಹಾಸ್ವಾಮಿಗಳು ಮಗುವು ಹಾಲು ಕುಡಿಯದಿದ್ದುದರಿಂದ ಹಾಲಯ್ಯ ಎಂದು ಕರೆದರು. ಮದುವೆಯಾಗಬೇಕೆಂದು ಮಗನನ್ನು ತಾಯಿ ಕೇಳಲು ಆತ ಒಪ್ಪದೆ ಯಳಂದೂರು ಬಸವಲಿಂಗ ಸ್ವಾಮಿಗಳ ಶಿಷ್ಯರಾದರು. ಧಾರವಾಡ ಜಿಲ್ಲೆಯ ಹಾನಗಲ್ಲು ವಿರಕ್ತ ಪಟ್ಟಾಧಿಕಾರಿಯಾಗಿ ಅನ್ನ-ಜ್ಞಾನ ದಾಸೋಹ ನಡೆಸಿ ಧರ್ಮಪ್ರಚಾರ ಮಾಡಿ ಗದ್ದುಗೆಯಾದರು.

ಮೂರು ಸಾವಿರ ಮಠ, ಹುಬ್ಬಳ್ಳಿ: ಹಿಂದೆ ಒಂದು ಚಿಕ್ಕಗ್ರಾಮವಾಗಿದ್ದು ಅದಕ್ಕೆ ಹೂವಳ್ಳಿ ಎಂದು ಹೆಸರಿತ್ತು. ಇಲ್ಲಿ ಗುರುಸಿದ್ಧೇಶ್ವರರು ಇದ್ದರು. ೧೨ನೇ ಶತಮಾನದ ಶರಣರು ಕಲ್ಯಾಣ ಕ್ರಾಂತಿಯಾದ ಮೇಲೆ ಹೊರಬಂದಾಗ ಅವರಿಗೆ ಆಶ್ರಯ ನೀಡಿದರು. ವಚನ ಸಾಹಿತ್ಯದ ತಾಳೆಯೋಲೆಯನ್ನು ಕಾಪಾಡಿದರು. ಆಮೇಲೆ ಅವರನ್ನು ಮುಂದೆ ಬೀಳ್ಕೊಟ್ಟರು. ಚನ್ನಬಸವಣ್ಣನವರು ಗುರು ಸಿದ್ಧೇಶ್ವರರನ್ನುದ್ದೇಶಿಸಿ "ನೀವು ಜಗದ್ಗುರುವಾಗಿ ಶೂನ್ಯಸಿಂಹಾಸನ ಸ್ಥಾಪನೆ ಮಾಡಿ" ಎಂದು ಪ್ರೋತ್ಸಾಹಿಸಿ ಹೊರಟರು. ಮೂರುಸಾವಿರ ವಿರಕ್ತರಿಗೆ ಈ ಮಠ ಆಶ್ರಯವನ್ನಿತ್ತುದುದರಿಂದ ಮೂರುಸಾವಿರ ಮಠವಾಯಿತು. ಮೂರುಸಾವಿರದಪ್ಪನವರಿಗೆ ಅಧಿಕಾರ ವಹಿಸಿ ಗುರುಸಿದ್ಧೇಶ್ವರರು ಜೀವಂತ ಸಮಾಧಿಯಾದರು.

ಬಸವೇಶ: ಧಾರವಾಡ ಜಿಲ್ಲೆ ನವಲಗುಂದದ ದಕ್ಷಿಣಕ್ಕೆ ನಾಗರಹಳ್ಳಿ ಇದೆ. ಶ್ರೀಮಂತ ದ್ಯಾಮಪ್ಪ ಹೊಸೂರು-ದೇವಮ್ಮ ಶರಣರಿಗೆ ನಂದೀ ವ್ರತದಿಂದ ಒಂದು ಮಗುವಾಯಿತು. ಅದೇ ಬಸವೇಶ. ಈತನ ಕಾಲ ೧೯ನೇ ಶತಮಾನ. ಬಾಲ್ಯದಲ್ಲಿ ಈತ ಪವಾಡ ಮಾಡುತ್ತಿದ್ದ. ಮಣಕವಾಡ ಗ್ರಾಮದ ವೀರಪ್ಪ ಕುಂದಗೋಳ ಅವರ ಮಗಳಾದ ಅಡಿವೆವ್ವನನ್ನು ಮದುವೆ ಆದ. ಚನ್ನವೀರ ಸ್ವಾಮಿಗಳಿಂದ ಉಪದೇಶವಾಯಿತು. ಇವರ ಅನುಗ್ರಹ, ಪಂಪಾ ವಿರೂಪಾಕ್ಷನ ದರ್ಶನದಿಂದ ಜೀವನದಲ್ಲಿ ಅಪೂರ್ವ ಬದಲಾವಣೆ ಆಯಿತು. ಇವರು ಅನೇಕರ ರೋಗ ನಿವಾರಣೆ ಮಾಡಿದರು. ಹಾಲು ಕರೆಯದ ಎಮ್ಮೆಯನ್ನು ಹಾಲು ಕರೆವಂತೆ ಆಶೀರ್ವದಿಸಿದರು. ಇವರು ೧೯೨೨ರಲ್ಲಿ ಐಕ್ಯರಾದರು.

ಮುಂಡರಗಿ ಅನ್ನದಾನೀಶ್ವರರು ಗದುಗಿನ ತೋಂಟದಾರ್ಯರ ಮರಿಗಳಾಗಿದ್ದರು. ಇವರು ವಾಕ್‌ಸಿದ್ಧಿ ಪಡೆದಿದ್ದರು. ಮುಂಡರಗಿಯಲ್ಲಿ ಇವರ ಗದ್ದುಗೆ ಇದೆ.

ಉತ್ತರ ಕರ್ನಾಟಕ ಜಿಲ್ಲೆ:

ಗೋಕರ್ಣದಲ್ಲಿ ಮಹಾಬಲೇಶ್ವರ ದೇವಾಲಯವಿದೆ. ವೀರಶೈವ ಮತಾಚಾರ್ಯರಾದ ಶ್ರೀ ನೀಲಕಂಠ ಶಿವಾಚಾರ್ಯರು ಈ ಕ್ಷೇತ್ರದಲ್ಲಿದ್ದರು.

ಚನ್ನಬಸವಣ್ಣನವರ ಗದ್ದುಗೆ: ಕಾರವಾರ ಜಿಲ್ಲೆಯ ಉಳವಿಯಲ್ಲಿದೆ. ಕಲ್ಯಾಣದ ಕ್ರಾಂತಿಯಾದ ಮೇಲೆ ಚನ್ನಬಸವಣ್ಣನವರ ಮುಂದಾಳತ್ವದಲ್ಲಿ ಅನೇಕ ಶರಣರು ಉಳವಿಗೆ ಬಂದರು. ಇವರೆಲ್ಲ ಇಲ್ಲಿ ಉಳಿದುಕೊಂಡಿದುದಕ್ಕೆ 'ಉಳವಿ' ಎಂಬ ಹೆಸರಾಯಿತು.

ಬನವಾಸಿಯಲ್ಲಿ ಮಧುಕೇಶ್ವರ ದೇವಾಲಯವಿದೆ. ಇಲ್ಲೇ ಮಾಯೆ ನೃತ್ಯ ಮಾಡಿ ಅಲ್ಲಮನನ್ನು ಮಾಯೆಗೊಳಗಾಗಿಸಬೇಕೆಂದು ಪ್ರಯತ್ನಿಸಿ ಸೋತಳು. ಅಲ್ಲಮನ ದೇವಾಲಯವೂ ಇಲ್ಲಿದೆ. ಸ್ವಾದಿಯಲ್ಲಿ ಸದಾಶಿವ ಮಂದಿರವಿದೆ; ಹರಳಯ್ಯನ ಚಿಲುಮೆ, ನಾಗಮ್ಮನ ಗವಿ, ಆಕಳ ಗವಿಗಳಿವೆ.

ಬಿಜಾಪುರ ಜಿಲ್ಲೆ:

ಬಾಲಲೀಲ ಮಹಾಂತ ಶಿವಯೋಗಿಗಳ ಗದ್ದುಗೆ: ಬಾಲಲೀಲ ಮಹಾಂತ ಶಿವಯೋಗಿಗಳು ಬಾಲಲೀಲೆ ಮಾಡಿ ಬಾಲಲೀಲಾ ಮಹಾಂತ ಶಿವಯೋಗಿಗಳಾಗಿ ಮೆರೆದರು. ವಿಜಾಪುರ ಜಿಲ್ಲೆಯ ಆಲಮಟ್ಟಿ (ಎಡನಾಳ)ಯ ಮಲ್ಲಿಕಾರ್ಜುನ-ಅನ್ನಪೂರ್ಣಾಂಬೆಯರ ಮಗನಾಗಿ ಜನಿಸಿದರು. ಮಗುವಿಗೆ ಮಹಾಂತಲಿಂಗ ಎಂದು ನಾಮಕರಣ ಮಾಡಿದರು. ಎಂಟು ವರ್ಷದ ಬಾಲಕ ವೈರಾಗ್ಯ ತಾಳಿ ಮನೆ ಬಿಟ್ಟು ಹೊರಟ. ಲಿಂಗನಾಯಕನ ಹಳ್ಳಿಯ ಚನ್ನವೀರ ಸ್ವಾಮಿ ಮಠಕ್ಕೆ ಬಂದು ದೀಕ್ಷೆ ಪಡೆದ. ಮಹಾಂತ ಶಿವಯೋಗಿಗಳು ಭಕ್ತರನ್ನು ತಿದ್ದಿ ಒಳ್ಳೆಯ ಮಾರ್ಗಕ್ಕೆ ಎಳೆಯುತ್ತಾ ಬಂದರು. ಗುದ್ದಲಿಯ ಸ್ಪರ್ಶದಿಂದ ನೀರು ಬರುವಂತೆ ಮಾಡಿದರು. ಶ್ರೀಶೈಲದವರೆಗೆ ಹೋಗಿಬಂದು ಚಿತ್ರದುರ್ಗದ ಕಲ್ಮಠದ ಅಧಿಕಾರ ವಹಿಸಿಕೊಂಡರು. ಮುಗ್ಧ ಮಗುವಿನ ವೇಷ ಧರಿಸುವುದು, ತೊಟ್ಟಿಲಲ್ಲಿ ಮಲಗುವುದು ಇವರ ಬಾಲಲೀಲೆಗಳಾಗಿದ್ದುವು. ಇವರು ಕೈವಲ್ಯ ದರ್ಪಣ, ತತ್ವಪದಗಳನ್ನು ರಚಿಸಿದರು. ಮುಳಗುಂದ ಮಠಕ್ಕೆ ಬಂದು, ೧೭೮೧ರ ಸಿದ್ಧಾರ್ಥಿ ಸಂವತ್ಸರ ಮಾಘ ಶುದ್ಧ ೧೩ರ ಸೋಮವಾರ ಮುಂಜಾನೆ ಬಯಲಾದರು.

ಸಾರವಾಡವು ವಿಜಾಪುರದಿಂದ ಹೋಗುವಾಗ ಒಂಬತ್ತು ಮೈಲು ದೂರದಲ್ಲಿ ಸಿಗುತ್ತದೆ. ಸಾರವಾಡದ ಚಿಕ್ಕಪ್ಪಯ್ಯ ವೀರಯ್ಯನವರ ಮಗ. ಕಾಲಜ್ಞಾನ, ತತ್ವಪದಗಳನ್ನು ಬರೆದು ೧೭೭೫ರಲ್ಲಿ ತಮ್ಮ ಲಿಂಗೈಕ್ಯರಾದರು.

ಘನಮಠಾರ್ಯರು ಆಂಧ್ರಪ್ರದೇಶದ ಅನಂತಪುರ ಜಿಲ್ಲೆ ಪುಟ್ಟೂರು ತಾಲ್ಲೂಕಿನ ದಾರೂರುಮು (ದೋರ್ವಾಡ)ವಿನ ಹಿರೇಮಠದ ವೀರಯ್ಯ-ವೀರಮ್ಮ ದಂಪತಿಗಳಿಗೆ ೧೮೨೬ರಲ್ಲಿ ಜನಿಸಿದರು. ಇವರ ಮೊದಲ ಹೆಸರು ನಾಗಭೂಷಣ. ಇವರು ಸಂಗಮ್ಮ ಶರಣೆಯೊಡನೆ ವಿವಾಹವಾದರು. ಕೆಲವು ದಿನಗಳಲ್ಲಿಯೇ ಸಂಸಾರ ತ್ಯಜಿಸಿ ಮನೆಬಿಟ್ಟು ಹೊರಟರು. ವಿಜಾಪುರ ಜಿಲ್ಲೆ ಸಿಂಧಗಿ ತಾಲ್ಲೂಕಿನ ಎಲಗೋಡು ಎಂಬ ಹಳ್ಳಿಗೆ ಬಂದರು. ಇಲ್ಲಿ ಕನ್ನಡ, ಸಂಗೀತ, ವಚನಾಭ್ಯಾಸ ಮಾಡಿ ಧರ್ಮಪ್ರಚಾರ ಮಾಡಿದರು. ಕೃಷಿಜ್ಞಾನ ಪ್ರದೀಪಿಕೆ, ಜಾನಪದ ಶೈಲಿಯ ಹಾಡುಗಳನ್ನು ಬರೆದರು. ಇವರು ಸಂತೆಕಲ್ಲೂರಲ್ಲಿ ಶಿವೈಕ್ಯರಾದರು.

ಬಾಗಲಕೋಟೆ ಜಿಲ್ಲೆ:

ಬಾಗಲಕೋಟೆಯಲ್ಲಿ ಕಲಾದಗಿಯ ಗುರುಲಿಂಗೇಶ್ವರ ಮಠ, ಮೋಟಗಿ ಬಸವೇಶ್ವರ ಗುಡಿ, ಕೊತ್ತಲೇಶ ಗುಡಿ, ಮುಧೋಳದಲ್ಲಿ ಬ್ರಹ್ಮಗಿರಿ ಮಠ, ಮಹಲಿಂಗಪುರದಲ್ಲಿ ಮಹಾಲಿಂಗೇಶ್ವರ ದೇವಾಲಯ, ಮಾಚೂರಿನಲ್ಲಿ ಹೊಳೆ ಬಸವೇಶ್ವರ ದೇವಸ್ಥಾನಗಳಿವೆ. ಬಾಗೇವಾಡಿ ಬಸವಣ್ಣ ಹುಟ್ಟಿದ ಸ್ಥಳ. ಇಲ್ಲಿ ರೇವಣ ಸಿದ್ಧೇಶ್ವರ ದೇವಾಲಯ, ಗಣಪತಿ, ಮಲ್ಲಿಕಾರ್ಜುನ, ಸಂಗಮೇಶ್ವರ, ಅಕ್ಕನಾಗಮ್ಮನ ಗವಿ, ಬಸವಣ್ಣನ ದೇವಾಲಯಗಳಿವೆ. ಬನಶಂಕರಿ ದೇವಾಲಯ, ಹಾಟಕೇಶ್ವರ, ಭೈರವೇಶ್ವರ, ಪಿನಾಕನಾಥ, ರಾಮಲಿಂಗ, ಕಪಿಲೇಶ, ಮಲ್ಲಿಕಾರ್ಜುನ, ಮಾಕುಟೇಶ್ವರ, ವೀರಭದ್ರ, ಕೋಣೆ ಶಂಕರ ದೇವಾಲಯ, ಶಿವಯೋಗ ಮಂದಿರಗಳಿವೆ. ಚರಂತಿ ಮಠವನ್ನು ಪೂಜ್ಯ ಮಳೇಂದ್ರ ಸ್ವಾಮಿಗಳು ಸ್ಥಾಪಿಸಿದರು. ಮಲ್ಲಾಪುರದಲ್ಲಿ ದುರದುಂಡೇಶ್ವರ ಮಠ, ಇಲಾಳದಲ್ಲಿ ಬಮ್ಮಯ್ಯ ಶರಣನ ಗದ್ದುಗೆ, ಅರಭಾವಿ ಶಿವಯೋಗಿಗಳು, ಬೀಳೂರು ಮಹಾಸ್ವಾಮಿಗಳು, ಬಂಥನಾಳ ಪೂಜ್ಯ ಸಂಗನ ಬಸವ ಶಿವಯೋಗಿಗಳು, ಮುಧೋಳದ ಮೃತ್ಯುಂಜಯ ಅಪ್ಪಗಳ ಪಾದಧೂಳಿಯಿಂದ ಪವಿತ್ರವಾದುವು. ಬಾಗಲಕೋಟೆ, ಧಾರ್ಮಿಕ, ಆಧ್ಯಾತ್ಮಿಕ ಕೇಂದ್ರವಾಗಿ ಇಂದಿಗೂ ಮೆರೆಯುತ್ತಿದೆ. ಜಮಖಂಡಿ ವೀರಭದ್ರೇಶ್ವರ ದೇವಾಲಯ, ಬೀಳಗಿಯಲ್ಲಿ ಸಿದ್ಧೇಶ್ವರ ದೇವಾಲಯ, ಕಮತಗಿಯ ಹೊಳೆ ಹುಚ್ಚೇಶ್ವರ ಮಠ, ಬನಹಟ್ಟಿಯ ಕಾಡ ಸಿದ್ಧೇಶ್ವರ, ಕಡಪಟ್ಟಿಯ ಬಸವೇಶ್ವರ ಗುಡಿ, ಮಹಲಿಂಗಪುರದಲ್ಲಿ ಮಹಾಲಿಂಗೇಶ್ವರ ಮಠ ಮುಂತಾದವುಗಳಿಂದ ಕೂಡಿದೆ. ಕೂಡಲ ಸಂಗಮ ಬಸವಣ್ಣ ಐಕ್ಯವಾದ ಪವಿತ್ರ ಸ್ಥಳ. ರಕ್ಕಸತಂಗಡಿಯಲ್ಲಿ ಬಸವಣ್ಣನವರ ಹೆಂಡತಿ ನೀಲಾಂಬಿಕೆಯ ಸಮಾಧಿ ಇದೆ. ಕೂಡಲ ಸಂಗಮದಲ್ಲಿ ಬಸವಣ್ಣ ಜಾತವೇದಮುನಿಯಿಂದ ವಿದ್ಯಾಭ್ಯಾಸ ಮಾಡಿದ. ಇಲ್ಲಿ ಜಾತವೇದ ಮುನಿಗಳ ಸಮಾಧಿಯೂ ಇದೆ. ಕೃಷ್ಣ-ಮಲಪ್ರಭಾ ನದಿಗಳ ಸಂಗಮದಲ್ಲಿ ಸಂಗಮೇಶ್ವರ ದೇವಾಲಯವಿದೆ. ಇದು ವೀರಶೈವರ ಪುಣ್ಯಕ್ಷೇತ್ರ.

ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲ್ಲೂಕಿನ ಉತ್ತೂರಜ್ಜ ಜಾಲಿಕೇರಿ ಗ್ರಾಮದಲ್ಲಿ ಚನ್ನಯ್ಯ-ಸಾವಂತ್ರವ್ವಳ ಮಗನಾಗಿ ಜನಿಸಿದರು. ಸಂಸಾರದಲ್ಲಿದ್ದರೂ ಸಂಸಾರಕ್ಕೆ ಅಂಟಿಕೊಳ್ಳದೆ ಅಧ್ಯಾತ್ಮದ ಹಾದಿಯಿಂದ ದೇವಮಾನವರಾಗಿ ಪವಾಡವೆಸಗಿದರು. ಇವರು ೧೯೯೧ರಲ್ಲಿ ಉತ್ತೂರಿನಲ್ಲಿ ಶಿವೈಕ್ಯರಾದರು.

ಹಾದಿಮನಿ ಶರಣರ ಕಾಲ ೧೯೦೦. ಇವರು ಹುನಗುಂದ ತಾಲ್ಲೂಕಿನ ಹಿರೇಬಾಗೇವಾಡಿಯಲ್ಲಿ ವೀರಪ್ಪ-ವೀರಮ್ಮರ ಮಗನಾಗಿ ಜನಿಸಿದರು. ಅಯ್ಯಪ್ಪ ಕೋರಿಯವರ ಮಗಳಾದ ಅಮರಮ್ಮನೊಡನೆ ವಿವಾಹವಾಯಿತು. ಇವರು ಯಾರ ಹೊಲದಲ್ಲಾದರೂ ಕಳೆಯಿದ್ದರೆ ಕೀಳುತ್ತಿದ್ದರು; ಗರಿಕೆ ತೆಗೆಯುತ್ತಿದ್ದರು. ಇವರು ಸಾಲಿಮಠದ ರಾಚೋಟೇಶ್ವರ ಸ್ವಾಮಿಗಳಿಂದ ದೀಕ್ಷೆ ಪಡೆದರು. ಅನುಷ್ಠಾನ, ಮೌನವ್ರತ, ಬಡವರಿಗೆ ದಾಸೋಹ ಮಾಡಿ ೧೯೯೧ರಲ್ಲಿ ಲಿಂಗೈಕ್ಯರಾದರು.

ವಿಜಯಮಹಾಂತ ಶಿವಯೋಗಿಗಳು: ಹಾಸನ ಜಿಲ್ಲೆಯ ಹೊಳಕೇರಿ ಹತ್ತಿರದ ಸಸಿನಾಳ ಗ್ರಾಮದ ವೀರಪ್ಪ ದೇವರು-ಗೌರಮ್ಮನವರ ಮಗನಾಗಿ ೧೭೭೨ರಲ್ಲಿ ಮಳೆಯಪ್ಪ ಜನಿಸಿದ. ಚಿಕ್ಕಂದಿನಲ್ಲೇ ಏಕಾಂತವಾಗಿರುತ್ತಿದ್ದ. ಬಳ್ಳಾರಿಯಲ್ಲಿ ತಪವೆಸಗಿದರು. ಇವರನ್ನು ಚಿತ್ತರಗಿ ಮಹಂತ ಶಿವಯೋಗಿಗಳು ತಮ್ಮ ಮಠಕ್ಕೆ ಮರಿಮಾಡಿಕೊಂಡರು. ಅವರೇ ವಿಜಯ ಮಹಾಂತ ಶಿವಯೋಗಿಗಳು. ಇವರು ಲೋಕಕಲ್ಯಾಣ ಕೆಲಸ ನಿರ್ವಹಿಸಿ ೧೮೩೩ರಲ್ಲಿ ಇಳಕಲ್ಲಿನಲ್ಲಿ ಲಿಂಗೈಕ್ಯರಾದರು.

ನೀರಲಕೇರಿ ಬಸವಲಿಂಗ ಶರಣರು ವಿಜಾಪುರ ಜಿಲ್ಲೆಯ ಹುನಗುಂದ ತಾಲ್ಲೂಕು ಗುಡದೂರದಲ್ಲಿ ಜನಿಸಿದರು. ಇವರ ಸಾಧನೆ ಸಿದ್ಧಿ, ಜನಸೇವೆ ರಾಯಚೂರು ಜಿಲ್ಲೆ ಲಿಂಗಸಗೂರು ತಾಲ್ಲೂಕಿನ ನೀರಲಕೇರಿ ಮತ್ತು ಐದನಾಳುಗಳಲ್ಲಿ ಸಂದಿದೆ. ೧೮೧೨ರಲ್ಲಿ ರಾಚಯ್ಯ-ಮಹಾದೇವಮ್ಮನ ಮಗನಾಗಿ ಜನಿಸಿ, ಚಿತ್ತರಗಿ ಮಹಾಂತ ಸ್ವಾಮಿಗಳಲ್ಲಿ ವಿದ್ಯಾಭ್ಯಾಸ, ಯೋಗಾಭ್ಯಾಸ ಪಡೆದು ಶರಣತತ್ತ್ವ ಅನುಸರಿಸಿ ೧೮೭೨ರಲ್ಲಿ ಐಕ್ಯರಾದರು.

ಕೊಪ್ಪಳ ಜಿಲ್ಲೆ:

ದೊಡ್ಡ ಬಸವಾರ್ಯರು: ಧಾರವಾಡ ಜಿಲ್ಲಾ ಎಡಗುಂದಿ ಗ್ರಾಮದ ಬಸವಲಿಂಗಯ್ಯ-ಗುರುಬಸಮ್ಮ ಶರಣ ದಂಪತಿಗಳಿಗೆ ಕುಡುತಿನಿಯ ಚನ್ನಬಸವ ಸ್ವಾಮಿಗಳ ಆಶೀರ್ವಾದದಿಂದ ದೊಡ್ಡ ಬಸವಯ್ಯನೆಂಬ ಮಗ ಜನಿಸಿದ. ಪೂಜಾರಿಗಳು ವಿರೂಪಾಕ್ಷ ದೇವಾಲಯದ ಬಾಗಿಲು ಮುಚ್ಚಿ ಹೋಗಲು ಇದ್ದಕ್ಕಿದ್ದಂತೆ ಬಾಗಿಲು ತೆರೆದು ವಿರೂಪಾಕ್ಷನ ದರ್ಶನವಾಯಿತು. ತೀರ್ಥ ಕೊಟ್ಟು ಲಕ್ಕವ್ವೆಯ ರೋಗ ಪರಿಹಾರ ಮಾಡಿದರು. ಕಳ್ಳರನ್ನು ಪರಿವರ್ತಿಸಿದರು. ಸಜ್ಜಲಗುಡ್ಡದ ಶರಣಮ್ಮನಿಗೆ ದೀಕ್ಷೆ ನೀಡಿದರು. ೧೮೪೫ರಲ್ಲಿ ಗುಡದೂರದಲ್ಲಿ ಗದ್ದುಗೆಯಾದರು.

ಗುಡದೂರು ಬಸವಯ್ಯ ತಾತ ವಾಕ್‌ಸಿದ್ಧಿ ಪಡೆದಿದ್ದರು. ಭಸ್ಮದಿಂದ ರೋಗ ಪರಿಹಾರ ಮಾಡುತ್ತಿದ್ದರು. ಗವಿ ಸಿದ್ಧೇಶ್ವರನಿಗೆ ಬೆಟ್ಟದ ಮೇಲಿಂದ ಕೆಳಗಿನವರೆಗೆ ನಮಸ್ಕಾರ ಮಾಡಿ ಬರುತ್ತಿದ್ದರು. ಇವರು ದೆವ್ವ ಭೂತ, ಹುಚ್ಚು ಬಿಡಿಸಿದ್ದಾರೆ. ಮಕ್ಕಳಿಲ್ಲದವರಿಗೆ ಮಕ್ಕಳನ್ನು ಕರುಣಿಸಿದ್ದಾರೆ.

ಗದಗ ಜಿಲ್ಲೆ:

ಜಗದ್ಗುರು ತೋಂಟದಾರ್ಯ ಪೀಠದ ೯ನೇ ಜಗದ್ಗುರು ಶ್ರೀಮದರ್ಧನಾರೀಶ್ವರ ಸ್ವಾಮಿಗಳು ಕೆಳದಿಯಲ್ಲಿ ಮಲ್ಲಾಂಬೆಗೆ ಪುತ್ರ ಸಂತಾನ ಕರುಣಿಸಿದರು. ಇವರು ಗದಗಿನಲ್ಲಿ ಗದ್ದುಗೆಯಾದರು.

ಹಾವೇರಿ ಜಿಲ್ಲೆ

ಗುದ್ದಲೀಶ್ವರರು ಹಾವೇರಿಯ ಹೊಸರತ್ತಿ ಗ್ರಾಮದಲ್ಲಿ ಗುದ್ದಲೀಶ್ವರ ಮಠವನ್ನು ಮಾಡಿ ಅಲ್ಲೇ ಗದ್ದುಗೆಯಾಗಿದ್ದಾರೆ.

ಬೆಳಗಾಂ ಜಿಲ್ಲೆ:

ಅಥಣಿ ಶಿವಯೋಗಿಗಳು: ಇವರು ೨೦ನೆಯ ಶತಮಾನದ ವಿಭೂತಿ ಪುರುಷರು. ಬೆಳಗಾಂ ಜಿಲ್ಲೆಯ ಅಥಣಿಯಲ್ಲಿ ರಾಚಯ್ಯ-ನೀಲಯ್ಯ ದಂಪತಿಗಳ ಮೂರನೇ ಮಗನಾಗಿ ಮುರುಘೇಂದ್ರ ಶಿವಯೋಗಿಗಳು ಜನಿಸಿದರು. ಇವರ ತಾಯಿಯವರ ಕನಸಿನಲ್ಲಿ "ಮುರುಘೇಂದ್ರರನ್ನು ತಮಗೆ ಅರ್ಪಿಸಬೇಕು" ಎಂದು ಗುರುಗಳು ತಿಳಿಸಿದಾಗ ತಾಯಿ ತಮ್ಮ ಮಗನನ್ನೇ ಗುರುಗಳಿಗೆ ಅರ್ಪಿಸಿದರು. ಆಗ ಆಕೆಯ ಹೊಟ್ಟೆಶೂಲೆ ಮಾಯವಾಯಿತು. ಮುರುಘೇಂದ್ರ ಶಿವಯೋಗಿಗಳು ಜನರ ರೋಗವನ್ನು ಪರಿಹರಿಸಿ, ಬಡತನ ಬಯಲು ಮಾಡಿದರು. ಎಣ್ಣೆಯಿಲ್ಲದ ದೀಪ ಉರಿಸಿದರು. ಇವರು ಗಚ್ಚಿನ ಮಠದಲ್ಲಿ ಗದ್ದುಗೆಯಾದರು.

ಪ್ರಭುದೇವರ ಗದ್ದುಗೆ: ಬೆಳಗಾವಿ ಹತ್ತಿರದ ಶಿವಪುರದಲ್ಲಿ ಪ್ರಭುದೇವರು ಅನಿಮಿಷರಿಂದ ಪಡೆದ ಇಷ್ಟಲಿಂಗವನ್ನು ಪೂಜೆ ಮಾಡಿ ಅನುಷ್ಠಾನಕ್ಕೆ ಕುಳಿತರು. ಇದು ಇಂದು ಜಾಗೃತ ಸ್ಥಳವಾಗಿದೆ. ಇದೊಂದು ತೋರು ಗದ್ದುಗೆ.

ಅರಭಾವಿಯಲ್ಲಿ ದುರದುಂಡೇಶ್ವರ ಸ್ವಾಮಿಗಳ ಗದ್ದುಗೆ, ನಿಡಸೋಸಿಯಲ್ಲಿ ಶಿವಲಿಂಗೇಶ್ವರ ಮಹಾತ್ಮರ ಗದ್ದುಗೆ ಇದೆ.

ಸಾವಳಗಿ ಶಿವಲಿಂಗೇಶ್ವರ: ಕಲ್ಬುರ್ಗಿ ಜಿಲ್ಲೆಯ ಕೊಳ್ಳೂರು ಗ್ರಾಮದಲ್ಲಿ ಲಿಂಗಬಸಪ್ಪ-ಮಲ್ಲಮ್ಮನವರ ಮಗನಾಗಿ ಜನಿಸಿದವನೇ ಶಿವಲಿಂಗ. ಶಿವಧ್ಯಾನದಲ್ಲಿ ತೊಡಗಿದ್ದಾಗ ಕಾಳಗನೆಂಬ ಬ್ರಹ್ಮರಾಕ್ಷಸನು ಇವರ ಪಾದಗಳ ಮೇಲೆ ಬಿದ್ದು ಶಾಪ ವಿಮೋಚನೆ ಪಡೆದು ಗುರುಮಠ ಸೇರಿ ಅವರ ಸೇವೆ ಮಾಡತೊಡಗಿದ. ಶಿವಲಿಂಗೇಶ್ವರರು ಹೊಲೆಯರ ಲಿಂಗಮ್ಮನಿಗೆ ದೀಕ್ಷೆ ನೀಡಿದರು. ಮಕ್ಕಳಿಲ್ಲದವರಿಗೆ ಮಕ್ಕಳ ಫಲ ನೀಡಿದರು. ದಿಲ್ಲಿಯ ಔರಂಗಜೇಬ ಬಾದಶಹನು ನೀರಿನ ಮೇಲೆ ನಮಾಜು ಮಾಡಿದರೆ ಇವರು ಅಂತರಿಕ್ಷದಲ್ಲಿ ಪದ್ಮಾಸನ ಹಾಕಿ ಪ್ರಾರ್ಥನೆ ಮಾಡಿದರು. ಹಿರೇಸಾವಳಗಿಯಲ್ಲಿ ಘೋರ ತಪವೆಸಗಿ ಗೋಕಾಕ ಜಿಲ್ಲೆ ಸಾವಳಗಿಯಲ್ಲಿ ಐಕ್ಯರಾದರು.

ಅಂಕಲಗಿ ಅಡವಿಸ್ವಾಮಿಗಳು ಗೋಕಾಕ ತಾಲ್ಲೂಕಿನ ಅಂಕಲಗಿ ಗ್ರಾಮದವರು. ೧೮೧೮ರಲ್ಲಿ ಜನಿಸಿ, ಅನೇಕ ಪವಾಡಗಳನ್ನೆಸಗಿ ೧೮೫೬ರಲ್ಲಿ ಶಿವೈಕ್ಯರಾದರು.

ಹಾವೇರಿ ಶಿವಬಸವ ಸ್ವಾಮಿಗಳು ಅಥಣಿ ತಾಲ್ಲೂಕು ಸತ್ತಿನಾಗರದ ಗ್ರಾಮದಲ್ಲಿ ೧೭೭೯ರಲ್ಲಿ ಜನಿಸಿ ೮೯ ವರ್ಷಗಳ ತುಂಬುಜೀವನ ಸಾಗಿಸಿ ಮುಕ್ತಿಗಾಗಿ ಶ್ರಮಿಸಿ ಶಿವೈಕ್ಯರಾದರು.

ಮುರಗೋಡ ಮಹಾಂತ ಶಿವಯೋಗಿಗಳು ಬೆಳಗಾಂ ಜಿಲ್ಲೆಯ ರಾಮದುರ್ಗ ತಾಲ್ಲೂಕಿನ ಕದಮ್ ಪುರದಲ್ಲಿ ೧೭೯೪ರಲ್ಲಿ ಜನಿಸಿದರು. ಇವರು ಹೆಣ್ಣನ್ನು ಪಾರ್ವತಿ ಎಂದು ಕಾಣುತ್ತಿದ್ದರು. ಬೇರೆ ಧರ್ಮಗಳನ್ನು ಪ್ರೀತಿಸುತ್ತಿದ್ದರು. ಅಂತರ್ಜಾತಿ ವಿವಾಹ ಮಾಡಿಸಿದರು. ಇವರು ೧೯೭೨ರಲ್ಲಿ ಲಿಂಗೈಕ್ಯರಾದರು.

ಶ್ರೀ ರೇವಣಸಿದ್ಧೇಶ್ವರ ಮಠ, ಮುಗಳವಾಡ ಕ್ಷೇತ್ರ, ರಾಮದುರ್ಗ ತಾಲ್ಲೂಕಿನ ಗೊಡಚಿಯ ವೀರಭದ್ರ ದೇವಾಲಯ, ನಿಡಸೋಸಿ ಮಠ, ಚಿಕ್ಕೋಡಿ ತಾಲ್ಲೂಕಿನ ಎಡೂರ ವಿರೂಪಾಕ್ಷ ದೇವಾಲಯ, ಅರಭಾವಿ, ಮರಡಿ ಮಠ, ತವಗ ಕ್ಷೇತ್ರ, ಬೆಳಗಾಂ ನಗರದಲ್ಲಿನ ಶಿವಮಂದಿರ, ಕಪಿಲೇಶ್ವರ. ಕಪಿಲೇಶ್ವರವನ್ನು ದಕ್ಷಿಣ ಕಾಶಿ ಎಂದು ಕರೆಯಲಾಗುವುದು. ಭಾರತದ ೧೨ ಜ್ಯೋತಿರ್ಲಿಂಗಗಳ ದರ್ಶನ ಮಾಡಿ ಕಪಿಲೇಶ್ವರನಿಗೆ ಪೂಜೆ ಸಲ್ಲಿಸಿದಾಗಲೇ ಈ ಕ್ಷೇತ್ರ ಯಾತ್ರೆ ಸಂಪೂರ್ಣವಾಗುವುದೆಂಬ ಪ್ರತೀತಿ. ಅಥಣಿಯ ಅಮೃತೇಶ್ವರ ಲಿಂಗವು ಅತ್ಯಂತ ಪ್ರಸಿದ್ಧವಾದುದು, ಮುರುಗೋಡ ಪಕ್ಕದಲ್ಲಿ ಸೋಗಲ ಸೋಮೇಶ್ವರ, ಹೂಲಿಯ ಸ್ವಾಮಿಯ ಮಠ, ಪಂಚ ಬಾಳಿಕುಂದ್ರಿ, ಖಾನಾಪುರ ತಾಲ್ಲೂಕಿನ ಅಸೋಗಾ ಕ್ಷೇತ್ರದಲ್ಲಿನ ಈಶ್ವರ ದೇವಾಲಯ, ಮುರುಗೋಡದ ಚಿದಂಬರೇಶ್ವರ, ಘಟಪ್ರಭಾ ನದಿಯ ದಂಡೆಯಲ್ಲಿನ ಮರಡಿ ಮಠ, ಅಮ್ಮಣಗಿ ಮಲ್ಲಯ್ಯ ಮಂದಿರ, ಆದಿ ಮಲ್ಲಿಕಾರ್ಜುನ ದೇವಾಲಯ ಮುಂತಾದುವು ಬೆಳಗಾಂ ಜಿಲ್ಲೆಯ ಪ್ರಮುಖ ವೀರಶೈವ ಕ್ಷೇತ್ರಗಳಾಗಿ ಮೆರೆಯುತ್ತಿವೆ.

ಚಿತ್ರದುರ್ಗ ಜಿಲ್ಲೆ:

ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕು ನಾಯಕನಹಟ್ಟಿಯಲ್ಲಿ ತಿಪ್ಪೇರುದ್ರಸ್ವಾಮಿಗಳ ಗದ್ದುಗೆ ಇದೆ. ಇವರು ಅಂದಿನ ಪಾಳೆಯಗಾರರ ಧರ್ಮಗುರುಗಳಾಗಿದ್ದರು. ಆಗ ಹಟ್ಟಿ ಮಲ್ಲಪ್ಪ ನಾಯಕನೆಂಬ ಪಾಳೆಯಗಾರ ಆಳುತ್ತಿದ್ದ. ಆ ಊರಿನಲ್ಲಿ ಆಗ ನೀರಿನ ಅಭಾವವಿತ್ತು. ಕೆರೆಯನ್ನು ಕಟ್ಟಿಸಬೇಕೆಂದು ತಿಪ್ಪೇರುದ್ರ ಸ್ವಾಮಿಗಳು ದನಕಾಯುವ, ವಡ್ಡರ ಹುಡುಗರನ್ನು ಹಿಡಿದು ಕೆಲಸ ಆರಂಭಿಸಿದರು. ಎಲ್ಲರೂ ಮರಳ ರಾಶಿ ಮಾಡುತ್ತಿದ್ದರು. ತಿಪ್ಪೇರುದ್ರ ಸ್ವಾಮಿಗಳು ತಮ್ಮ ದಂಡದಿಂದ ಮರಳು ಗುಡ್ಡೆಯನ್ನ ಮುಟ್ಟಿಸಿದಾಗ ಯಾರು ಯಾರು ಎಷ್ಟು ಶ್ರಮದಿಂದ ಕೆಲಸ ಮಾಡಿದರೋ ಅಷ್ಟು ಹಣ ದೊರೆಯುತ್ತಿತ್ತು. ಶಿಷ್ಯರಿಂದ ಬಂದ ಹಣದಿಂದ ಊರಲ್ಲಿ ಐದು ಕೆರೆಗಳನ್ನು ನಿರ್ಮಿಸಿದರು. ವೀರಶೈವ ಧರ್ಮಪ್ರಚಾರ ಮಾಡಿದರು. ಅನೇಕ ಪವಾಡಗಳನ್ನು ಮಾಡಿ ಅನೇಕ ಭಕ್ತರನ್ನು ಸಂಪಾದಿಸಿದರು. ಇವರು ಕೆಲವು ಕಾಲವಾದ ಮೇಲೆ ಜೀವಂತ ಸಮಾಧಿ ಹೊಂದಿದರು. ಇದೇ ತಿಪ್ಪೇರುದ್ರ ಸ್ವಾಮಿಗಳ ಗದ್ದುಗೆ. ಈಗ ತಿಪ್ಪೇರುದ್ರ ಸ್ವಾಮಿ ದೇವಾಲಯವಾಗಿದೆ. ನಾಯಕರು (ಬೇಡರು), ವೀರಶೈವರು ಈ ದೇವರಿಗೆ ನಡೆದುಕೊಳ್ಳುವರು. ಇಲ್ಲಿ ಜಾತ್ರೆಯೂ ನಡೆಯುತ್ತದೆ.

ದಾವಣಗೆರೆ ಜಿಲ್ಲೆ:

ದಾವಣಗೆರೆಯಲ್ಲಿ ವೀರಭದ್ರ ದೇವಾಲಯ; ಈಶ್ವರ ದೇವಾಲಯ, ಶಿವಶರಣ ಬಂಕೇಶ್ವರರ ಸಮಾಧಿಗಳಿವೆ.

ರಾಯಚೂರು ಜಿಲ್ಲೆ:

ನಾರದ ಗಡ್ಡೆಯಲ್ಲಿ ವೈರಾಗ್ಯ ಚನ್ನಬಸವ ಸ್ವಾಮಿಗಳ ಗದ್ದುಗೆ ಪ್ರಖ್ಯಾತವಾದುದು. ಇದನ್ನು ಮರ್ಚೇಡಿನ ವಿರೂಪಾಕ್ಷಪ್ಪರಾಯ ಕಟ್ಟಿಸಿದ. ೧೭ನೇ ಶತಮಾನದ ಆದಿಯಲ್ಲಿ ಬೀದರ್ ಜಿಲ್ಲೆಯಿಂದ ಬಂದ ಇವರು ಪವಾಡವೆಸಗಿ ಧರ್ಮಪ್ರಸಾರ ಮಾಡಿ ಗದ್ದುಗೆಯಾದರು.

ಅಮರೇಶ್ವರ ಕ್ಷೇತ್ರ ಲಿಂಗಸುಗೂರು ತಾಲ್ಲೂಕಿನಲ್ಲಿ ಪ್ರಸಿದ್ಧವಾದುದು. ೫೦೦ ವರ್ಷಗಳ ಹಿಂದೆ ಅಮರೇಶ್ವರರು ತಪವೆಸಗಿ ಸಮಾಧಿಯಾದರು. ಅದೇ ಅಮರಲಿಂಗೇಶ್ವರ. ವರ್ಷಕ್ಕೊಮ್ಮೆ ಫಾಲ್ಗುಣ ಮಾಸದ ಹುಣ್ಣಿಮೆ ದಿನ ಇಲ್ಲಿ ಜಾತ್ರೆ ನಡೆಯುತ್ತದೆ.

ಸಜ್ಜಲಗುಡ್ಡದಲ್ಲಿ ಶರಣಮ್ಮನ ಸಮಾಧಿ ಇದೆ. ಯಲಬುರ್ಗಿ ತಾಲ್ಲೂಕಿನ ಇಟಗಿಯಲ್ಲಿ ಮಹಾದೇವ ದೇವಾಲಯ, ಸೋಮಪುರದಲ್ಲಿ ಶರಣಬಸವೇಶ್ವರ ಮಠ, ಚಿಕೇನಕೊಪ್ಪದಲ್ಲಿ ಚನ್ನವೀರ ಶರಣರ ಗದ್ದುಗೆ, ಕರ್ಮಾಡಿಯಲ್ಲಿ ವೀರಭದ್ರೇಶ್ವರ ದೇವಾಲಯ, ಎಡಿಯಾಪುರದ ಸಿದ್ಧಲಿಂಗೇಶ್ವರ, ಕೋನಾಪುರದಲ್ಲಿ ಶರಣ ಬಸವೇಶ್ವರ ದೇವಾಲಯ, ಮುಧೋಳದಲ್ಲಿ ತ್ರಿಲಿಂಗೇಶ್ವರ ದೇವಾಲಯಗಳಿವೆ.

ಗಂಗಾವತಿ ತಾಲ್ಲೂಕಿನ ಹಿರೇಜಂತಕಲ್ಲಿನ ಹತ್ತಿರ ವಿರೂಪಾಕ್ಷೇಶ್ವರ ದೇವಾಲಯ, ನವಲಿ ಗ್ರಾಮದಲ್ಲಿ ಭೋಗಾಪುರೇಶ ದೇವಾಲಯವಿದೆ. ಸಿಂಧನೂರು ತಾಲ್ಲೂಕಿನ ಒಳ ಬಳ್ಳಾರಿಯಲ್ಲಿ ಮಲ್ಲಿಕಾರ್ಜುನ ದೇವಾಲಯವಿದೆ. ಹಾಗೂ ವೀರಶೈವ ಮಠವಿದೆ. ಮುಕ್ಕುಂದದಲ್ಲಿ ಕರವೀರಯ್ಯ ಶರಣನ ಸಮಾಧಿ ಇದೆ. ದೇವರಗುಡಿ ೧೨ನೇ ಶತಮಾನದ ಶಿವಶರಣರ ಧಾರ್ಮಿಕ ಆಂದೋಲನಕ್ಕೆ ಸಂಬಂಧಿಸಿದ ಮಹತ್ವದ ಸ್ಥಳ. ವಚನಕಾರ ಚಿಕ್ಕಯ್ಯ ಪಂಡಿತ ಇಲ್ಲಿಯ ಮಠಾಧಿಪತಿಯಾಗಿದ್ದ ಜಾಲಿಹಾಳದಲ್ಲಿ ಮಲ್ಲಿಕಾರ್ಜುನ ದೇವಾಲಯವಿದೆ.

ಹಾಸನ ಜಿಲ್ಲೆ:

ಬೇಲೂರಿನಲ್ಲಿ ರಾಘವಾಂಕನ ಸಮಾಧಿ ಇದೆ. ಅರಸೀಕೆರೆ ತಾಲ್ಲೂಕಿನಲ್ಲಿ ಕೋಡಿಹಳ್ಳಿ ಮಠವಿದೆ.

ಮಂಡ್ಯ ಜಿಲ್ಲೆ:

ಕೃಷ್ಣರಾಜ ಪೇಟೆಗೆ ಐದು ಮೈಲು ದೂರದ ಬೆಟ್ಟ, ನದಿ, ಪ್ರದೇಶದಲ್ಲಿ ೧೫ನೇ ಶತಮಾನದಲ್ಲಿದ್ದ ಸ್ವತಂತ್ರ ಸಿದ್ಧಲಿಂಗೇಶ್ವರರ ತಪೋಭೂಮಿ ಇದೆ.

ಶಿವಮೊಗ್ಗ ಜಿಲ್ಲೆ:

ಕೆಳದಿಯಲ್ಲಿ ರಾಮೇಶ್ವರ, ಪಾರ್ವತಿ, ವೀರಭದ್ರ ದೇವಾಲಯಗಳಿವೆ. ಇಕ್ಕೇರಿಯಲ್ಲಿ ಅಘೋರೇಶ್ವರ ದೇವಾಲಯವಿದೆ. ಅಕ್ಕಮಹಾದೇವಿ, ಪ್ರಭುದೇವರ ಪಾದಧೂಳಿಯಿಂದ ಪಾವನವಾದ ತಾಣ ಶಿವಮೊಗ್ಗ ಜಿಲ್ಲೆ.

ಸೊಲ್ಲಾಪುರ:

ಸೊಲ್ಲಾಪುರದಲ್ಲಿ ಸಿದ್ಧರಾಮೇಶ್ವರ ದೇವಾಲಯವಿದೆ. ೧೨ನೆಯ ಶತಮಾನದ ಸಿದ್ಧರಾಮ ಅನೇಕ ಪವಾಡಗಳನ್ನೆಸಗಿದ ಸಿದ್ಧಪುರುಷ, ಕೆರೆಯನ್ನು ಕಟ್ಟಿಸಿ ಅಲ್ಲೇ ಐಕ್ಯವಾಗಿದ್ದಾನೆ. ಇಲ್ಲಿ ಮಲ್ಲಿಕಾರ್ಜುನ ದೇವಾಲಯವಿದೆ. ಇಲ್ಲಿ ಅನೇಕ ಶರಣ ಶರಣೆಯರು ಆಗಿಹೋಗಿದ್ದಾರೆ.

ವೀರೇಶ್ವರ ಶರಣರು: ವಿಜಾಪುರ ಜಿಲ್ಲೆಯ ನಾಲತ್ವಾಡದ ದೊಡ್ಡಾರ್ಯ-ರುದ್ರಾಂಬೆಯರ ಮಗನಾಗಿ ೧೭೭೦ರಲ್ಲಿ ವೀರೇಶ್ವರರು ಜನಿಸಿದರು. ವೀರೇಶ್ವರರಿಗೆ ವೀರ ಮಾಹೇಶ್ವರ ಮನೆತನದ ಗುರುದೇವಿ ಎಂಬಾಕೆಯೊಡನೆ ವಿವಾಹವಾಯಿತು. ಜಂಗಮ ದಾಸೋಹದಿಂದ ಸಂತೋಷ ಪಡುತ್ತಿದ್ದರು. ಇವರು ಶಿಕ್ಷಕ ವೃತ್ತಿಯನ್ನು ಬಿಟ್ಟು ಅಧ್ಯಾತ್ಮಕ್ಕಿಳಿದರು. ಪ್ರಾಣಿಹಿಂಸೆ ಮಾಡಬಾರದು, ಬಲಿ ಕೊಡಬಾರದು ಎಂಬುದನ್ನು ಸಾರಿದರು. ೧೯೨೦ರಲ್ಲಿ ಸೊಲ್ಲಾಪುರದ ಸಿದ್ಧರಾಮನ ದೇವಾಲಯದ ಮುಂದೆ ಗದ್ದುಗೆಯಾದರು.

ಇದುವರೆಗೆ ವೀರಶೈವ ಕ್ಷೇತ್ರಗಳ ಬಗೆಗೆ, ಅದರಲ್ಲೂ ಕರ್ನಾಟಕದ ಕೆಲವು ಪ್ರಮುಖ ವೀರಶೈವ ಕ್ಷೇತ್ರಗಳ ಬಗೆಗೆ ಒಂದು ಅವಲೋಕನ ಮಾಡಿಯಾಯಿತು. ಕರ್ನಾಟಕದಲ್ಲಿ ಅನೇಕ ಶರಣರು ಆಗಿಹೋಗಿದ್ದಾರೆ. ಆದರೆ ಅವರ ಗದ್ದುಗೆಗಳು ಶಾಶ್ವತವಾಗಿ ಉಳಿದು, ಶರಣರು ಮಹಾಪುರುಷರು, ವಿಭೂತಿ ಪುರುಷರು ದೇವರೆಂದು ಪೂಜಿಸಿಕೊಂಡು, ದೇವಾಲಯವನ್ನು ಕಟ್ಟಿಸಿಕೊಂಡರು. ಅವುಗಳೇ ಇಂದು ಪುಣ್ಯಕ್ಷೇತ್ರಗಳಾಗಿ ಮೆರೆಯುತ್ತಿವೆ. ಈ ಶರಣರ ಆದರ್ಶಗಳು ನಮ್ಮನ್ನು ಸದಾ ಬೆಳಕಿನೆಡೆಗೆ, ಜ್ಞಾನದೆಡೆಗೆ ಕೊಂಡೊಯ್ಯುತ್ತಿವೆ. ಉತ್ತಮ ಮಾರ್ಗದಲ್ಲಿ ನಡೆಯಲು ಸಹಾಯವಾಗುತ್ತಿವೆ. ವೀರಶೈವರಿರುವ ಊರಿನಲ್ಲಿ ಸಾಮಾನ್ಯವಾಗಿ ಒಂದು ಮಠ ಇಲ್ಲವೇ ಒಂದು ಶಿವಾಲಯವಿದ್ದೇ ಇರುತ್ತದೆ. ಕರ್ನಾಟಕದ ಒಂದೊಂದು ಮಠ, ದೇವಾಲಯ, ಶರಣರ ಬಗೆಗೆ ಬರೆಯುತ್ತಾ ಹೋದರೆ ಒಂದೊಂದು ಹೊತ್ತಿಗೆಯಾಗುತ್ತದೆ. ಈ ಲೇಖನದಲ್ಲಿ ವೀರಶೈವ ಕ್ಷೇತ್ರಗಳ ಬಗೆಗೆ ಸಮಗ್ರ ಪರಿಚಯ ಮಾಡಿಸುವುದು ಕಷ್ಟದ ಕೆಲಸವೇ ಸರಿ. ಇಲ್ಲಿ ಕೆಲವು ಪ್ರಮುಖ ಕ್ಷೇತ್ರಗಳ ಪರಿಚಯವನ್ನು ಟಿಪ್ಪಣಿಯ ರೂಪದಲ್ಲಿ ಬರೆದರ ಮತ್ತೆ ಕೆಲವುಗಳನ್ನು ಹಾಗೆಯೇ ಹೆಸರಿಸಲಾಗಿದೆ.

ಭಕ್ತಾದಿಗಳು ತೀರ್ಥಕ್ಷೇತ್ರಕ್ಕೆ ಹೋಗುವ ಉದ್ದೇಶ ಅದರ ದರ್ಶನದಿಂದ ಪಾಪ ಪರಿಹಾರವಾಗಲಿ, ಕಷ್ಟ ನೀಗಲಿ, ತಮ್ಮ ಅಭೀಷ್ಟೆಗಳು ನೆರವೇರಲಿ ಎಂದು. ಮಕ್ಕಳಾಗದವರು ಮಕ್ಕಳ ಫಲ ಬೇಡಲು, ದೆವ್ವ ಹಿಡಿದವರು ಅದನ್ನು ಬಿಡಿಸಲೆಂದು ಹೋಗುವರು. ತಮ್ಮ ಬೇಡಿಕೆ ಈಡೇರಿದರೆ ಆತನಿಗೆ ಹರಕೆ ಕಟ್ಟಿಕೊಂಡಿರುವುದನ್ನು ತೀರಿಸಲು ಕಾಣಿಕೆ ರೂಪದಲ್ಲಿ ತಂದೊಪ್ಪಿಸುವರು. ಕೆಲವು ದೇವರುಗಳನ್ನು ಮನೆದೇವರೆಂದು, ವರ್ಷಕ್ಕೊಮ್ಮೆ ಜಾತ್ರೆ ಹಬ್ಬ ಅಥವಾ ಬಿಡುವಿನ ದಿನಗಳಲ್ಲಿ ಬಂದು ಪೂಜಿಸಿ ಹೋಗುತ್ತಾರೆ. ಎಷ್ಟು ದೂರವಿರಲಿ, ಕೈಯಲ್ಲಿ ಹಣವಿರಲಿ, ಇಲ್ಲದಿರಲಿ, ಸಾಲ ಸೋಲ ಮಾಡಿಯಾದರೂ ಆ ದೇವರ ಸೇವೆಯನ್ನು ಮಾಡುತ್ತಾರೆ. ಯಾವ ಶುಭಕಾರ್ಯ ಮಾಡಬೇಕಾದರೂ ತಮ್ಮ ಇಷ್ಟದೇವರಿಂದ ಪ್ರಸಾದ ಕೇಳಿ, ಬಲಗಡೆ ಹೂ ಬಿದ್ದರೆ ಮಾತ್ರ ಮುಂದುವರಿಯುತ್ತಾರೆ. ಅದು ಮನೆ ಕಟ್ಟುವುದಿರಬಹುದು, ಮದುವೆ ವಿಷಯವಿರಬಹುದು, ಯಾವುದೇ ಆಗಲಿ ಆತನ / ಆಕೆಯ ಅಪ್ಪಣೆಯಿಲ್ಲದೆ ಮಾಡುವುದಿಲ್ಲ.

ಪವಿತ್ರ ಕ್ಷೇತ್ರಗಳೆಂದರೆ ದೇವರ ಕ್ಷೇತ್ರವಾಗಿರಬಹುದು. ದೇವಿಯ ಕ್ಷೇತ್ರವಾಗಿರಬಹುದು, ಆದಿಶಕ್ತಿ, ಪಾರ್ವತಿ ಮುಂತಾದ ದೇವಿ ಕ್ಷೇತ್ರಗಳಾಗಿರಬಹುದು. ಮುಡುಕುತೊರೆ ಮಲ್ಲಿಕಾರ್ಜುನ, ಪಾರ್ವತಿ-ಶ್ರೀಶೈಲ ಮಲ್ಲಿಕಾರ್ಜುನ-ಭ್ರಮರಾಂಬೆ, ವಿರೂಪಾಕ್ಷ-ಪಂಪಾಂಬಿಕೆ, ನಂಜುಂಡೇಶ್ವರ-ದೇವೀರಮ್ಮ ಹೀಗೆ ನಾನಾ ಹೆಸರುಗಳಲ್ಲಿ ಈಶ್ವರ ಪಾರ್ವತಿಯರು ಮೆರೆಯುತ್ತಿರುವುದನ್ನು ಕಾಣಬಹುದು. ವೀರಶೈವರೇ ಅಲ್ಲದೆ ಬೇರೆ ಎಲ್ಲ ಜನಾಂಗಗಳೂ ಈ ದೇವರುಗಳಿಗೆ ನಡೆದುಕೊಳ್ಳುತ್ತಾರೆ.

ವೀರಶೈವ ಕ್ಷೇತ್ರಗಳು ಬರೇ ಕರ್ನಾಟಕದಲ್ಲೇ ಅಲ್ಲ, ಹೊರರಾಜ್ಯಗಳಲ್ಲಿರುವುದನ್ನೂ ಕಾಣಬಹುದು. ಆಂಧ್ರ ಪ್ರದೇಶ, ಮಹಾರಾಷ್ಟ್ರ, ತಮಿಳು ನಾಡು. ಹೆಚ್ಚಿಗೆ ಹೇಳಬೇಕೆಂದರೆ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೂ ಶೈವಕ್ಷೇತ್ರಗಳಲ್ಲಿ ಶಕ್ತಿದೇವತೆಗಳ ಆರಾಧನೆ ಮಾಡುವುದನ್ನು ಕಾಣುತ್ತೇವೆ. ಇಂಥ ಕ್ಷೇತ್ರಗಳಿಗೂ ವೀರಶೈವರು ನಡೆದುಕೊಳ್ಳುತ್ತಾರೆ. ಆದ್ದರಿಂದ ಒಂದು ರೀತಿಯಲ್ಲಿ ಅವೂ ವೀರಶೈವ ಕ್ಷೇತ್ರಗಳೇ ಆಗುತ್ತವೆ. ಉದಾಹರಣೆಗೆ ಕಾಶಿ, ಶ್ರೀಶೈಲ, ಜ್ಯೋತಿರ್ಲಿಂಗಗಳು, ತುಂಗಾ, ಗಂಗಾ, ಕಾವೇರಿ ಮುಂತಾದ ನದಿಗಳೂ ಪುಣ್ಯಕ್ಷೇತ್ರಗಳೇ. ಪುಣ್ಯನದಿಗಳಲ್ಲಿ ಮಿಂದರೆ ಪಾಪ ಪರಿಹಾರವೆಂಬ ನಂಬಿಕೆ ನಮ್ಮ ಜನರಲ್ಲಿ ಬೆಳೆದುಬಂದಿದೆ. ಶಿವ-ಪಾರ್ವತಿ, ಶಕ್ತಿದೇವತೆಗಳಾದ ಬನಶಂಕರಿ, ಚಾಮುಂಡಿ, ಸುಬ್ರಹ್ಮಣ್ಯ, ಗಣಪತಿ, ಶಾರದೆ, ಲಕ್ಷ್ಮಿ, ಮುಂತಾದ ದೇವತೆಗಳನ್ನು ವೀರಶೈವರು ಪೂಜಿಸುತ್ತಾ ಬಂದಿದ್ದಾರೆ. ವೀರಶೈವಧರ್ಮ ಇಷ್ಟಲಿಂಗವೇ ಸಾಕೆಂದು ಸಾರಿದರೂ ಸ್ಥಾವರ ಲಿಂಗಕ್ಕೆರಗುವುದು ಮುಂದುವರಿಯುತ್ತಲೇ ಬಂದಿದೆ. ಒಟ್ಟಿನಲ್ಲಿ ಆಸ್ತಿಕರಾಗಿ ದೇವರ ಆರಾಧನೆ ಮಾಡಿ ಭಕ್ತಿ ಸಲ್ಲಿಸುತ್ತಾ ಬಂದಿದ್ದಾರೆ.

ಆಧಾರ ಗ್ರಂಥಗಳು

೧. ಕಾಯಕ ಪರಿಣಾಮಿ, ಪ್ರಧಾನ ಸಂಪಾದಕರು: ಶಾಂತರಸ, ಚೆನ್ನಬಸವಪ್ಪ ಬೆಟ್ಟದೂರು, ಪೂಜ್ಯ ಚನ್ನಬಸವ ಪಟ್ಟದ್ದೇವರ ಶತಮಾನೋತ್ಸವ ಸಮಿತಿ, ಬಾಲ್ಕಿ, ಬೀದರ್ ಜಿಲ್ಲೆ, ೧೯೯೧.

೨. ವೀರಶೈವ ಧರ್ಮ ಮತ್ತು ಸಂಸ್ಕೃತಿ : ಸಂಪಾದಕರು ಮತ್ತು ಪ್ರಕಾಶಕರು: ಬಿ. ಶಿವಮೂರ್ತಿ ಶಾಸ್ತ್ರೀ, ಶರಣ ಸಾಹಿತ್ಯ ಕಾರ್ಯಾಲಯ, ೧೪೧, ರಂಗಸ್ವಾಮಿ ಗುಡಿ ಬೀದಿ, ಬೆಂಗಳೂರು, ೧೯೭೦.

೩. ಕರ್ನಾಟಕ ಸಂದರ್ಶನ : ಆಸ್ಥಾನ ವಿದ್ವಾನ್ ಪಂಡಿತರತ್ನಂ ಬಿ. ಶಿವಮೂರ್ತಿಶಾಸ್ತ್ರಿ, ೧೯೬೨.

೪. ಗುಬ್ಬಿ ತಾಲ್ಲೂಕು ದರ್ಶನ : ಟಿ.ಆರ್. ಮಹಾದೇವಯ್ಯ, ಐ.ಬಿ.ಹೆಚ್. ಪ್ರಕಾಶನ, ಗಾಂಧಿ ನಗರ, ಬೆಂಗಳೂರು-೫, ೧೯೮೪.

೫. ಬಾಗಲಕೋಟೆ ತಾಲ್ಲೂಕು ದರ್ಶನ : ಪಿ.ವೈ. ಗಿರಿ, ಸಾಗರ, ೧೯೮೭.

೬. ಬೀಳಗಿ ತಾಲ್ಲೂಕು ದರ್ಶನ, ಆನಂದ ಕುಮಾರ, ೧೯೮೬.

೭. ಸಿಂಧನೂರು ತಾಲ್ಲೂಕು ದರ್ಶನ, ಮಂದಾಕಿನಿ, ೧೯೮೭.

೮. ಗಂಗಾವತಿ ತಾಲ್ಲೂಕು ದರ್ಶನ, ಪ್ರಕಾಶ ಹುಣಸಗಿ, ೧೯೮೭.

೯. ಯಲಬುರ್ಗಿ ತಾಲ್ಲೂಕು ದರ್ಶನ, ಶ್ರೀ ಶಾಮಾಚಾರ್ಯ ೧೯೮೬.

೧೦. ಲಿಂಗಸಗೂರು ತಾಲ್ಲೂಕು ದರ್ಶನ, ಗಿರಿರಾಜ ಹೊಸಮನಿ, ೧೯೮೭.

೧೧. ಮುಧೋಳ ತಾಲ್ಲೂಕು ದರ್ಶನ, ಆನಂದ ಝುಂಜರವಾಡ, ೧೯೮೭.

೧೨. ಶೋರಾಪುರ ತಾಲ್ಲೂಕು ದರ್ಶನ, ಆರ್. ರೇವಣಸಿದ್ಧಯ್ಯ, ೧೯೮೬.

೧೩. ಚಿಂಚೋಳಿ ತಾಲ್ಲೂಕು ದರ್ಶನ, ಎ.ಕೆ. ರಾಮೇಶ್ವರ, ೧೯೮೬.

೧೪. ಆಳಂದ ತಾಲ್ಲೂಕು ದರ್ಶನ, ರವೀಂದ್ರ ಪ್ರ. ಕರ್ಜಿ, ೧೯೮೭.

೧೫. ಶಹಪುರ ತಾಲ್ಲೂಕು ದರ್ಶನ, ಡಿ.ಎನ್. ಅಕ್ಕಿ, ೧೯೮೬.

೧೬. ಜೇವರಗಿ ತಾಲ್ಲೂಕು ದರ್ಶನ, ಕೆ.ಎನ್. ರಾಜ, ೧೯೮೭.

೧೭. ಹುಮನಾಬಾದ್ ತಾಲ್ಲೂಕು ದರ್ಶನ, ಪ್ರೊ. ಸೋಮನಾಥ ಯಾಳವಾಡ, ೧೯೮೯.

೧೮. ಭಾಲ್ಕಿ ತಾಲ್ಲೂಕು ದರ್ಶನ, ಬಿ.ಜಿ. ವಿಸಾಜಿ, ೧೯೮೭.

೧೯. ಬಸವ ಕಲ್ಯಾಣ ತಾಲ್ಲೂಕು ದರ್ಶನ, ಡಾ. ಶಂಕರ ಡಿ. ಮೂಗಿ, ೧೯೮೫.

೨೦. ಶರಣ ಸಂಪದ : ಅಖಿಲ ಭಾರತ ಶರಣ ಸಾಹಿತ್ಯ ಸಮ್ಮೇಳನ, ಚಿಕ್ಕಮಗಳೂರು, ಸ್ಮರಣ ಸಂಚಿಕೆ, ೧೯೯೬.

೨೧. ಹೊನ್ನ ಕಳಸ : ಸ್ಮರಣ ಸಂಚಿಕೆ, ಅಖಿಲ ಭಾರತ ಏಳನೇ ಶರಣ ಸಾಹಿತ್ಯ ಸಮ್ಮೇಳನ, ಬಾಗಲಕೋಟೆ, ೨೦೦೩.

೨೨. ಉತ್ತರ ಕನ್ನಡ ಜಿಲ್ಲೆಯ ದೇವಾಲಯಗಳು, ಎಂ.ಆರ್. ಶಾಸಭಾಗ, ಮಹಾಯಾನ ಪ್ರಕಾಶನ, ಕುಮಟಾ, ಉತ್ತರ ಕನ್ನಡ, ೧೯೯೧.

೨೩. ಕರ್ನಾಟಕದ ದೇವಾಲಯಗಳು: ಸಂ. ಸು. ರಂಗಸ್ವಾಮಿ, ನಿರೂಪಣೆ: ಕಾಕೋಳು ರಾಘವೇಂದ್ರ, ಬೆ.ಗೊ. ರಮೇಶ್, ಹಂಸ ಧ್ವನಿ ಪ್ರಕಾಶನ, ನಂ. ೨೦, ವಿಜಯನಗರ ೨ನೇ ಹಂತ, ಬೆಂಗಳೂರು-೪೦, ೧೯೯೪.

೨೪. ಸಾಹಿತ್ಯ ಸಂಚಯ : ಡಾ. ಬಿ.ಎಸ್. ಸ್ವಾಮಿ, ನವೀನ ಪ್ರಕಾಶನ, ೨೦೧, ೭ನೇ 'ಎ' ಮುಖ್ಯರಸ್ತೆ, ಆರ್.ಪಿ.ಸಿ. ಬಡಾವಣೆ, ಬೆಂಗಳೂರು-೫೬೦೦೪೦, ೧೯೯೫.

೨೫. ಶರಣ ಪ್ರದೀಪ : ಡಾ. ಬಿ.ಎಸ್. ಸ್ವಾಮಿ, ನವೀನ ಪ್ರಕಾಶನ, ೨೦೧, ೭ನೇ 'ಎ' ಮುಖ್ಯರಸ್ತೆ, ಆರ್.ಪಿ.ಸಿ. ಬಡಾವಣೆ, ಬೆಂಗಳೂರು-೫೬೦೦೪೦, ೧೯೯೬.

■■

ಇಪ್ಪತ್ತನೆಯ ಶತಮಾನದ ವೀರಶೈವ ಮಹಾಕಾವ್ಯಗಳು

✍ ಡಾ. ಎಸ್.ಆರ್. ಗುಂಜಾಳ

ರಾಮಾಯಣದಲ್ಲಿ ಶಬರಿಯ ಕಥೆ ಬರುತ್ತದೆ. ಅವಳು ಬೇಡರವಳು, ಬಡವಿ, ಅಡವಿಯಲ್ಲಿ ವಾಸವಾಗಿದ್ದಳು. ಶ್ರೀರಾಮನ ಬಗ್ಗೆ ಅಪಾರ ಭಕ್ತಿಯನ್ನು ತಾಳಿದ್ದಳು. ಅವಳಲ್ಲಿ ಅವನ ಬಗೆಗೆ ಅನುಪಮ ಗೌರವ. ಅವಳು ವಾಸವಾಗಿದ್ದ ಅಡವಿಯ ಮಾರ್ಗವಾಗಿ ಅವನು ಪ್ರಯಾಣಿಸುತ್ತಿರುವ ಸುದ್ದಿ ಆಕೆಗೆ ತಲುಪಿತು. ಪುರುಷೋತ್ತಮನಾದ ಶ್ರೀರಾಮನನ್ನು ತನ್ನ ಗುಡಿಸಲಿಗೆ ಆಮಂತ್ರಿಸಿ, ಅತಿಥಿ ಸತ್ಕಾರ ಮಾಡಬೇಕೆಂಬ ಉತ್ಕಟ ಇಚ್ಛೆ ಉಂಟಾಯಿತು. ಅಡವಿಯಲ್ಲಿ ಜೀವಿಸಿದ್ದ ಬಡವಿ ಶಬರಿಗೆ ಅಲ್ಲಿ ಏನು ಸಿಗುತ್ತದೆ? ಅವನಿಗೆ ಏನು ಕೊಟ್ಟು ಸತ್ಕಾರ ಮಾಡಬೇಕು ಎಂಬ ಚಿಂತೆ ಕಾಡತೊಡಗಿತು. ಆಕೆ ವಾಸವಾಗಿದ್ದ ಅಡವಿಯಲ್ಲಿ ಬೋರೆಹಣ್ಣಿನ ಗಿಡಗಳು ಇದ್ದವು. ಬೋರೆಯ ಹಣ್ಣುಗಳನ್ನೇ ಶ್ರೀರಾಮನಿಗೆ ಅರ್ಪಿಸಿ ಧನ್ಯತೆ ಪಡೆಯಬೇಕೆಂಬ ಇಚ್ಛೆ ಉಂಟಾಯಿತು. ಆ ಕೂಡಲೇ ಬುಟ್ಟಿ ತುಂಬ ಹಣ್ಣುಗಳನ್ನು ಹರಿದು ತಂದಳು. ಆಗ ಆಕೆಗೆ ಮತ್ತೊಂದು ಸಂಶಯ ಹುಟ್ಟಿತು. ಈ ಬೋರೆ ಹಣ್ಣುಗಳಲ್ಲಿ ಹುಳಿ ಬೋರೆ ಹಣ್ಣುಗಳೂ ಇರುತ್ತವೆ, ಸಿಹಿ ಬೋರೆ ಹಣ್ಣುಗಳೂ ಇರುತ್ತವೆ. ತನ್ನ ಆರಾಧ್ಯಮೂರ್ತಿಯಾದ ಶ್ರೀರಾಮನಿಗೆ ಸಿಹಿ ಹಣ್ಣುಗಳನ್ನು ಮಾತ್ರ ಕೊಟ್ಟು ಸಂತೋಷಪಡಿಸಬೇಕೆಂದು ಬಗೆದಳು. ಹುಳಿ ಹಣ್ಣುಗಳನ್ನು ಹುಡುಕುವದು ಹೇಗೆ? ಅದಕ್ಕಾಗಿ ಒಂದೊಂದೇ ಹಣ್ಣನ್ನು ತನ್ನ ಹಲ್ಲಿನಿಂದ ಕಚ್ಚಿ ರುಚಿ ನೋಡಹತ್ತಿದಳು. ಸಿಹಿ ಹಣ್ಣುಗಳನ್ನು ಒಂದು ಕಡೆ, ಹುಳಿ ಹಣ್ಣುಗಳನ್ನು ಮತ್ತೊಂದು ಕಡೆ ಇಟ್ಟಳು. ಸ್ವಲ್ಪ ಹೊತ್ತಿನ ನಂತರ ಶ್ರೀರಾಮಚಂದ್ರನು ಅಲ್ಲಿಗೆ ಬಂದನು. ಅವನನ್ನು ಸಂತೋಷದಿಂದ ಬರಮಾಡಿಕೊಂಡು ತನ್ನ ಪುಟ್ಟ ಗುಡಿಸಲಿನಲ್ಲಿ ಕುಳ್ಳಿರಿಸಿಕೊಂಡಳು. ತಾನು ಕಚ್ಚಿದ ಹಣ್ಣುಗಳನ್ನು ಆತನಿಗೆ ತಿನ್ನಲು ಅರ್ಪಿಸಿದಳು. ತಿನ್ನಲು ಹೋದ ಶ್ರೀರಾಮನಿಗೆ ಎಲ್ಲ ಹಣ್ಣುಗಳಿಗೂ ಕಚ್ಚಾಗಿರುವುದು ಕಂಡಿತು. ಹೀಗೇಕೆ ಎಂದು ಆಕೆಯನ್ನು ಪ್ರಶ್ನಿಸಿದನು. ಆಗ ಆಕೆ "ನಾನು ನಿಮಗೆ ಸಿಹಿ ಹಣ್ಣುಗಳನ್ನೇ ಕೊಡಬೇಕೆಂಬ ಆತುರದಲ್ಲಿ ಅವುಗಳನ್ನೆಲ್ಲ ಕಚ್ಚಿ ಕಚ್ಚಿ ರುಚಿ ನೋಡಿ ಸಿಹಿಯಾದವುಗಳನ್ನೇ ತಮಗೆ ಕೊಟ್ಟಿದ್ದೇನೆ. ತಾವು ಸ್ವೀಕರಿಸಬೇಕೆಂದು" ಬೇಡಿಕೊಂಡಳು. ಶ್ರೀರಾಮನಿಗೆ ಆಕೆಯ ಮುಗ್ಧಭಕ್ತಿಯನ್ನು ನೋಡಿ ಹಿಡಿಸಲಾರದಷ್ಟು ಹಿಗ್ಗಾಯಿತು. ಆಗ ಕಚ್ಚಿದ ಆ ಸಿಹಿಹಣ್ಣುಗಳನ್ನು ಸಂತೋಷದಿಂದ ತಿಂದು ತೃಪ್ತಿಪಟ್ಟನು.

ಮೇಲಿನ ಶಬರಿಯ ಕಥೆಯು ಗ್ರಂಥಪಾಲರಿಗೆ ಒಪ್ಪವಾಗಿ ತೋರುತ್ತದೆ. ಗ್ರಂಥಾಲಯಕ್ಕೆ ಬರುವ ಜ್ಞಾನದಾಹಿಗಳಾದ ಓದುಗರಿಗೆ ಗ್ರಂಥಪಾಲನು ಉತ್ತಮವಾದ ಗ್ರಂಥಗಳನ್ನೇ ಆಯ್ಕೆಮಾಡಿ ಕೊಡುವುದು ಆತನ ಕರ್ತವ್ಯ. ಅವುಗಳ ಅವಲೋಕನಗಳಿಂದ ಓದುಗರು ತೃಪ್ತಿಪಡುತ್ತಾರೆ. ಹಾಗೆ ತೃಪ್ತಿಪಡಿಸುವುದೇ ಗ್ರಂಥಪಾಲನ ಪ್ರಮುಖ ಉದ್ದೇಶ.

ಪ್ರಸ್ತುತ "ಇಪ್ಪತ್ತನೆಯ ಶತಮಾನದ ವೀರಶೈವ ಮಹಾಕಾವ್ಯಗಳು" ಎಂಬ ಈ ಲೇಖನದಲ್ಲಿ ೪ ಕನ್ನಡ, ೧ ಇಂಗ್ಲೀಷ ಕೃತಿಗಳ ಸಂಕ್ಷಿಪ್ತ ಪರಿಚಯವನ್ನು ಮಾಡಿಕೊಡಲು ಯತ್ನಿಸಿದ್ದೇನೆ. ನಾನು ಶಬರಿ. ಓದುಗರು ಶ್ರೀರಾಮಚಂದ್ರ.

ಪೀಠಿಕೆ:

ಕನ್ನಡದಲ್ಲಿ ಅನೇಕ ಮಹಾಕಾವ್ಯಗಳು ಕಳೆದ ೯೦೦ ವರ್ಷಗಳಿಂದ ಮೂಡುತ್ತಾ ಬಂದಿವೆ. ಮಹಾಕಾವ್ಯವನ್ನು ಬರೆದವರಲ್ಲಿ ಪಂಪ ಕವಿಯೇ ಮೊದಲಿಗ. ಅವನಿಗೆ ಕನ್ನಡದ ಆದಿ ಮಹಾಕವಿ ಎಂದು ಕರೆದಿದ್ದಾರೆ. ಪಂಪನ ನಂತರದಲ್ಲಿ ಅನೇಕ ಕವಿಗಳು ಜನಿಸಿ ತಮ್ಮ ಕಾವ್ಯಕೃತಿಗಳಿಂದ ಕನ್ನಡ ದೇವಿಯ ಸಿರಿಮುಡಿಯನ್ನು ಶೃಂಗರಿಸಿದ್ದಾರೆ. ಆದರೆ ಮಹಾಕಾವ್ಯಗಳನ್ನ

ರಚಿಸಿದ ಕವಿಗಳ ಸಂಖ್ಯೆ ಕಡಿಮೆ. ಮಹಾಕಾವ್ಯಗಳು ವಿಶೇಷ ಗುಣಲಕ್ಷಣಗಳನ್ನು ಒಳಗೊಂಡು ಬರೆಯಲ್ಪಡುತ್ತವೆ. ಅವು ಪಂಡಿತರಿಂದಲೂ ಸೈ ಎನಿಸಿಕೊಳ್ಳುತ್ತವೆ. ಇಂತಹ ಮಹಾಕವಿಗಳನ್ನು ಕನ್ನಡದಲ್ಲಿ ಕೈಬೆರಳಿನಿಂದ ಎಣಿಸಬಹುದು.

ಸಮಗ್ರ ಲಿಂಗಾಯತ ಸಾಹಿತ್ಯದ ನಭೋಮಂಡಲದಲ್ಲಿ ಬೆಳ್ಳಿಯ ಚುಕ್ಕೆಯಂತೆ ಕಣ್ಣು ಕುಕ್ಕಿಸುವ ವೀರಶೈವ ಮಹಾಕಾವ್ಯಗಳು ಕಾಣಿಸಿಕೊಂಡಿವೆ. ಇವುಗಳಲ್ಲಿ ಹರಿಹರನ 'ಗಿರಿಜಾ ಕಲ್ಯಾಣ', ರಾಘವಾಂಕನ 'ಹರಿಶ್ಚಂದ್ರ ಕಾವ್ಯ', ಭೀಮಕವಿಯ 'ಬಸವ ಪುರಾಣ', ಚಾಮರಸನ 'ಪ್ರಭುಲಿಂಗಲೀಲೆ', ಷಡಕ್ಷರ ದೇವನ 'ವೃಷಭೇಂದ್ರ ವಿಜಯ' ಮುಂತಾದ ಮಹಾಕಾವ್ಯಗಳನ್ನು ಹೆಸರಿಸಬಹುದು. ಆದರೆ ನಾವು ಇಪ್ಪತ್ತನೆಯ ಶತಮಾನದ ಅವಧಿಗೆ ಸೀಮಿತಗೊಳಿಸಿ ಐದು ವೀರಶೈವ ಮಹಾಕಾವ್ಯಗಳನ್ನು ಪ್ರಸ್ತುತ ಲೇಖನದಲ್ಲಿ ಗಣನೆಗೆ ತೆಗೆದುಕೊಂಡಿದ್ದೇವೆ. ಅವುಗಳಲ್ಲಿ ಕೆಳಗೆ ಕಂಡ ಐದು ಮಹಾಕಾವ್ಯಗಳನ್ನು ಮಾತ್ರ ನಾವು ಪರಿಚಯಿಸಿದ್ದೇವೆ.

೧. ಸದಾ-ಶಿವ-ರುದ್ರಂ: ಜ.ಚ.ನಿ. ೧೯೭೩.

೨. ಭವ್ಯಮಾನವ: ಎಸ್.ಎಸ್. ಭೂಸನೂರಮಠ, ೧೯೮೩.

೩. ವಿಶ್ವಬಂಧು ಮರುಳಸಿದ್ಧ ಕಾವ್ಯ: ಮಹಾದೇವ ಬಣಕಾರ ೧೯೮೯.

೪. ಸಜ್ಜಲ ಗುಡ್ಡದ ಶರಣಮ್ಮ: ಜ.ಚ.ನಿ. ೧೯೮೯.

೫. Basava Darshana: S.M.Angadi, 1986.

೧. ಸದಾ-ಶಿವ ರುದ್ರಂ:

ಪ್ರಸ್ತುತ ಮಹಾಕಾವ್ಯವನ್ನು ಖ್ಯಾತ ಸಾಹಿತಿಗಳಾದ ಜಚನಿಯವರು ರಚಿಸಿದ್ದಾರೆ. ಅವರ ಪ್ರತಿಭೆ ಅನುಪಮವಾದದ್ದು, ವಿಶಿಷ್ಟವಾದದ್ದು, ಸಮಾಜವನ್ನು ನೀತಿಯ ನೆಲಗಟ್ಟಿನ ಮೇಲೆ ಧರ್ಮದ ಆಧಾರದ ಮೇಲೆ ಕಟ್ಟಬೇಕೆಂಬ ಸಾಹಿತಿಗಳಲ್ಲಿ ಇವರು ಪ್ರಮುಖರು. ಹೀಗಾಗಿ ಚಿರಂತನ ಮೌಲ್ಯಗಳನ್ನು ಒಳಗೊಂಡು ಆಧುನಿಕ ಮೌಲ್ಯಗಳನ್ನು ಜತೆಜತೆಯಾಗಿ ಇಲ್ಲಿ ಹೆಣೆದಿದ್ದಾರೆ. ಗ್ರಾಮೀಣ ಜೀವನವು ಇಲ್ಲಿ ಹೃದಯಂಗಮವಾಗಿ ಚಿತ್ರಿತವಾಗಿದೆ. ಜನಜೀವನದಲ್ಲಿ ಕಾಣುವ ಮದುವೆ, ಬೇಸಾಯ, ಶಿಕ್ಷಣ ಮುಂತಾದವುಗಳನ್ನು ಕಣ್ಣಿಗೆ ಕಟ್ಟುವಂತೆ ಬಣ್ಣಿಸಿದ್ದಾರೆ.

ಇಲ್ಲಿ ಗುರು ಮತ್ತು ಶಿಷ್ಯ ಇವರಿಬ್ಬರ ನಡುವೆ ನಡೆದ ಪ್ರಶ್ನೋತ್ತರಗಳು ಇಡೀ ಕಾವ್ಯವನ್ನು ಆವರಿಸಿಕೊಂಡಿವೆ. ಗುರುಗಳ ಹೆಸರು ಸದಾಶಿವ, ಶಿಷ್ಯನ ಹೆಸರು ಶಿವರುದ್ರ. ಇವರು ನಿಜಜೀವನದಲ್ಲಿ ಇದ್ದವರು. ಶಿವಯೋಗ ಮಂದಿರದ ಅಧಿಪತಿಗಳಾಗಿದ್ದ ಶ್ರೀ ಸದಾಶಿವ ಮಹಾಸ್ವಾಮಿಗಳು ತಮ್ಮ ಶಿಷ್ಯನಾದ ಶಿವರುದ್ರಪ್ಪನವರಿಗೆ ಹೇಳಿದ ಉತ್ತರಗಳು.

ಜ್ಞಾನಪೀಠ ಪ್ರಶಸ್ತಿ ವಿಜೇತರಾದ ಪ್ರೊ. ವಿ.ಕೆ. ಗೋಕಾಕರು ಈ ಕಾವ್ಯವನ್ನು ಅದ್ಯಂತವಾಗಿ ದೃಷ್ಟಿಸಿ ಹೇಳಿದ ಅಭಿಪ್ರಾಯವು ಸಮಯೋಚಿತವಾಗಿದೆ.

"ಈ ಕೃತಿಯ ಸಾರ್ವತ್ರಿಕತೆಯು ಅವರ ಕಾವ್ಯದಲ್ಲಿದೆ. ಈ ಕಾವ್ಯಗುಣ ಹೃದಯಸ್ಪರ್ಶಿಯಾಗಿ ಸರ್ವಸಮ್ಮತವಾಗಿ ಸ್ಪಂದಿಸುವುದರಲ್ಲಿ ಸಂಶಯವಿಲ್ಲ. ಒಂದು ದೃಷ್ಟಿಯಿಂದ ಇಲ್ಲಿಯ ಕಥೆಗಳು ಸಹ ಈ ಕಾವ್ಯ ಗುಣವ್ಯಕ್ತವಾಗುವಂತೆ ಸನ್ನಿವೇಶ ಮಾಲೆಯ ಆಸ್ಪದವನ್ನೊದಗಿಸುವ ಚೌಕಟ್ಟೆನ್ನಬಹುದು. ಶಿವ-ರುದ್ರರ ಚರಿತ್ರೆಯಲ್ಲಿ ಬಾಲ್ಯ, ಗ್ರಾಮೀಣ ಜೀವನ, ಶಿಕ್ಷಕನ ಧ್ಯೇಯ, ಮದುವೆ, ಗೃಹಿಣಿ, ಹೆಣ್ಣು, ಬೇಸಾಯ, ಕನ್ನಡ ನಾಡು, ಗಿರಿಪುರ, ಗುರುದೇವನ ಆಗಮನ, ಪ್ರಸಾದಿಯ ಬಾಳು,

ದಾನಿ, ಸದ್ಗುಣಿ, ಗುರುಭಕ್ತಿಯೆಂಬ ವಿಷಯಗಳು ಬರುತ್ತವೆ. ಕಥೆಗೆ ಒಂದು ರೀತಿಯಲ್ಲಿ ಇವುಗಳ ಸಂಬಂಧವಿದ್ದರೂ ಇವು ಕಾವ್ಯಕ್ಕೆ ಸ್ವತಂತ್ರ ವಿಷಯಗಳಾಗಿ ಸಹ ಇರಬಹುದು. ಈ ವಿಷಯಗಳ ಮೇಲಿನ ಕಾವ್ಯ ಇಲ್ಲಿ ರಸವತ್ತಾಗಿ ಹರಿಯುತ್ತದೆ. ಹೀಗೆಯೇ ಎರಡನೆಯ ಕಥೆಯಲ್ಲಿ ಶಿವನ ಸಮಷ್ಟಿ ರೂಪ, ಶಿವಯೋಗಮಂದಿರ, ವಿದ್ಯಾರ್ಥಿ ಜೀವನ, ಸಾಧಕನ ನೆಲೆ, ಗುರುಪಟ್ಟಾಭಿಷೇಕ, ಗುರುಮಹಿಮೆ, ಮಠದ ಇತಿಹಾಸ, ಸ್ಫೂರ್ತಿದೇವಿಗೆ ಪ್ರಾರ್ಥನೆ, ಜನತೆಯಿಂದ ಆಶ್ರಮ ನಿರ್ಮಾಣ, ಪೂಜೆ, ಹಾಗೂ ಅದರ ಶಾಸ್ತ್ರಗ್ರಂಥಗಳ ವಿಹಂಗಮಾವಲೋಕನ, ಶೀಲಸಂಪದ, ಆಚಾರಗಳ ಮಹಿಮೆ, ಯೋಗದ ವಿಧಾನ, ಶಿವಯೋಗ, ಷಡ್‌ದರ್ಶನ ಮೊದಲಾದವುಗಳ ವಿವರಣೆ ಇವು ಕಾವ್ಯವಸ್ತುಗಳಾಗಿ ಬರುತ್ತವೆ.

ಡಾ. ವಿ.ಕೆ. ಗೋಕಾಕರು ಈ ಮಹಾಕಾವ್ಯವನ್ನು ಆರು ದೃಷ್ಟಿಯಲ್ಲಿ ವಿಶ್ಲೇಷಿಸಿದ್ದಾರೆ: (೧) ಇದರಲ್ಲಿ ಸೂಕ್ಷ್ಮವಾದ, ನಯವಾದ ತತ್ವ ನಿರೂಪಣೆ ಮನಸ್ಸನ್ನು ಸೆರೆ ಹಿಡಿಯುತ್ತದೆ. ಆಂಗ್ಲ ಭಾಷೆಯಲ್ಲಿ ಇದು ಡ್ರೈಡನ್ ಹಾಗೂ ಪೋಪ ಕವಿಗಳ ದಾರಿಯಾಗಿದೆ. (೨) ಇದು ಒಂದು ಕಥನ ಕಾವ್ಯವಾಗಿದೆ. (೩) ವಾಸ್ತವಿಕ ನಿರೂಪಣೆಯ ಜೊತೆಗೆ ಒಮ್ಮೊಮ್ಮೆ ವಿಡಂಬನೆಯು ತಲೆ ಎತ್ತುತ್ತದೆ. (೪) ಭಾವಪೂರಿತ ವರ್ಣನಪರ ಕಾವ್ಯ ಅಲ್ಲಲ್ಲಿ ರೂಪಗೊಂಡಿದೆ. (೫) ಚಿಂತನಪರ ಸೊಬಗಿನ ಕಾವ್ಯವಾಗಿದೆ. (೬) ಕಲ್ಪಕತೆಯನ್ನು ಒಳಗೊಂಡಿದೆ. ಈ ಆರು ತರಹದ ರಸ ಕವನಗಳು ಸದಾಶಿವರುದ್ರಂ ತುಂಬೆಲ್ಲಾ ಹರವಿಕೊಂಡಿವೆ. ಮತ್ತೊಬ್ಬ ಜ್ಞಾನಪೀಠ ಪ್ರಶಸ್ತಿ ವಿಜೇತರಾದ ಡಾ. ದ.ರಾ. ಬೇಂದ್ರೆಯವರು ಪ್ರಸ್ತುತ ಕಾವ್ಯದಲ್ಲಿಯ ದಾರ್ಶನಿಕತೆಯ ಒಲವು 'ರಾಮಾಯಣ ದರ್ಶನಂ' ನಿಲುವಿಗಿಂತ ನಿಚ್ಚಳವಾಗಿದೆ ಎಂದೂ, ಈ ಕಾವ್ಯವು ಈ ವರ್ಷದ ಮಹಾಕೃತಿಯೆಂದೂ ಹೇಳಿರುವರು.

೨. ಭವ್ಯಮಾನವ:

ವೀರಶೈವ ಮಹಾಕಾವ್ಯಗಳಲ್ಲಿ ಪ್ರೊ. ಭೂಸನೂರಮಠ ಅವರ ಕವಿಹೃದಯದಿಂದ ಮೂಡಿ ಬಂದ ಭವ್ಯಮಾನವ ಕನ್ನಡ ಮಹಾಕಾವ್ಯ ಪರಂಪರೆಯಲ್ಲಿ ಬರೆಯಲ್ಪಟ್ಟ ಮಹತ್ವದ ಕೃತಿಯಾಗಿದೆ. ಬೆಳಗಾವಿಯ ಲಿಂಗರಾಜ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ತಮ್ಮ ಜೀವನದ ಬಹುಪಾಲು ಸೇವೆಯನ್ನು ಪ್ರೊ. ಭೂಸನೂರಮಠರು ಸಲ್ಲಿಸಿದರು. ಅವರಲ್ಲಿಯ ಸ್ವಾನುಭಾವವು ಈ ಕಾವ್ಯದ ಆದ್ಯಂತವಾಗಿ ಓತಪ್ರೋತವಾಗಿ ಹರಿದು ಬಂದಿದೆ. ಅವರ ದೀರ್ಘಕಾಲದ ಅಭ್ಯಾಸ, ಅಂತರಂಗದಲ್ಲಿಯ ಆತ್ಮ ನಿರೀಕ್ಷಣೆ, ಪರಿಪಕ್ವ ಮನಸ್ಸು, ಅಪ್ರತಿಮ ಪ್ರತಿಭೆ -ಇವು ಪ್ರಸ್ತುತ ಮಹಾಕಾವ್ಯದಲ್ಲಿ ಮೇರುಗಿರಿಯನ್ನು ಮುಟ್ಟಿವೆ. ಚನ್ನಮಲ್ಲಿಕಾರ್ಜುನನ್ನು ತನ್ನ ಹೃದಯಕಮಲದಲ್ಲಿ ಕುಳ್ಳಿರಿಸಿಕೊಂಡ ಅಕ್ಕನ ಭವ್ಯವ್ಯಕ್ತಿತ್ವವನ್ನು ಕಂಡರಿಸಿದ್ದಾರೆ. ಪ್ರೊ. ಭೂಸನೂರಮಠರು ಅಮೃತ ರಸವನ್ನು ಹರಿಸಿದ್ದಾರೆ. ಮಹಾದೇವಿಯಕ್ಕನು ಕಾವ್ಯದ ಅಧಿದೇವತೆಯಾಗಿದ್ದರೂ ಪ್ರೊ. ಭೂಸನೂರಮಠರು ತಮ್ಮ ಕಾವ್ಯದ ಹರವನ್ನು ವಿಶ್ವವ್ಯಾಪಿಯಾಗಿ ಕಂಡಿದ್ದಾರೆ. ವಿಶ್ವದ ಒಳಹೊರಗುಗಳನ್ನು ವೈಜ್ಞಾನಿಕ ದೃಷ್ಟಿಯ ಒರೆಗಲ್ಲಿಗೆ ಹಚ್ಚಿ ವೈಚಾರಿಕ ದೃಷ್ಟಿಯಿಂದ ಈ ಕಾವ್ಯವನ್ನು ಹೆಣೆದಿದ್ದಾರೆ. ಭವ್ಯಮಾನವ ಮಹಾಕಾವ್ಯದಲ್ಲಿ ಮಾನವನು ದೇವಮಾನವನಾಗುವ ಪರಿಕಲ್ಪನೆಯನ್ನು ತೋರಿಸಿದ್ದಾರೆ, ಮಾರ್ಗದರ್ಶನ ಮಾಡಿದ್ದಾರೆ. ಇದೊಂದು ಸಾಧಕನು ಭೂಲೋಕದಿಂದ ದೇವಲೋಕಕ್ಕೆ ಹೊರಟ ಮಾನವನ ಮಹಾಪಯಣ, ಮಹಾಯಾತ್ರೆ.

ಇದರಲ್ಲಿ ಒಟ್ಟು ಆರು ಭಾಗಗಳಿವೆ. ಪ್ರತಿಯೊಂದು ಭಾಗಕ್ಕೂ ವಿಶೇಷ ಅರ್ಥವನ್ನೊಳಗೊಂಡ ತಲೆಬರಹವನ್ನು ಕೊಟ್ಟಿದ್ದಾರೆ.

(i) ಕಲ್ಯಾಣ ಕಾಂಡ, (ii) ಶ್ರೀಶೈಲ ಕಾಂಡ, (iii) ಕತ್ತಲೆಯ ಕಾಂಡ, (iv) ಉದಯ ಕಾಂಡ, (v) ಉಜ್ವಲ ಕಾಂಡ, (vi) ಭವ್ಯ ಕಾಂಡ.

ಈ ಮಹಾಕಾವ್ಯವನ್ನು ಮುಕ್ತ ಛಂದಸ್ಸಿನಲ್ಲಿ ಲೀಲಾಜಾಲವಾಗಿ ಬರೆದಿರುವರು.

i. ಕಲ್ಯಾಣ ಕಾಂಡದಲ್ಲಿ

ಮಹಾನುಭಾವಿ ಮಹಾದೇವಿಯಕ್ಕನ ಮೂರ್ತಿ ಸ್ವರೂಪವನ್ನು ತೋರಿಸಿಕೊಡಲಾಗಿದೆ. ಆಕೆಯ ಅತುಲ ಭಕ್ತಿಯನ್ನು ಅಲೌಕಿಕ ಪ್ರೇಮವನ್ನು ವೈರಾಗ್ಯದ ವೈಶಿಷ್ಟ್ಯವನ್ನು ಇಲ್ಲಿ ಟಂಕಿಸಿದ್ದಾರೆ. ಬಸವಣ್ಣ, ಪ್ರಭುದೇವ ಇತ್ಯಾದಿ ಶರಣರ ಸಂಗದಲ್ಲಿ ಎದ್ದ ಸಂಶಯಗಳನ್ನು ಸಂಭಾಷಣೆಯ ಮುಖಾಂತರ ನಾಟಕೀಯವಾಗಿ ವಿವರಿಸಿದ್ದಾರೆ. ಮಹಾದೇವಿಯಕ್ಕ, ಆಕೆಯ ಕೆಳದಿಯರು ಕೌಶಿಕ ಪ್ರಭುದೇವರೊಂದಿಗೆ ನಡೆಸುವ ಸಂಭಾಷಣೆಗಳು ಕಂಗೊಳಿಸುತ್ತವೆ.

ii. ಶ್ರೀಶೈಲ ಕಾಂಡದಲ್ಲಿ

ಮಾನವನನ್ನು ಮಹಾಂತನನ್ನಾಗಿ ಮಾಡುವ ಶಿವಶರಣರ ದೃಷ್ಟಿ ಇಲ್ಲಿಯ ಪ್ರಮುಖ ವಸ್ತುವಾಗಿದೆ. ರಸವು ಸರಳ ಭಾಷೆಯಲ್ಲಿ ಗಂಗಾನದಿಯಂತೆ ಗಂಭೀರವಾಗಿ ಹರಿಯುತ್ತಿದೆ.

iii. ಕತ್ತಲೆಯ ಕಾಂಡದಲ್ಲಿ

ಈ ಭಾಗದಲ್ಲಿ ಪ್ರೊ. ಭೂಸನೂರಮಠರು ವಿನೂತನವಾದ ದೃಷ್ಟಿಯನ್ನು ತೋರಿಸಿದ್ದಾರೆ. ಇದರಲ್ಲಿ ಅಕ್ಕಮಹಾದೇವಿ, ಆಕೆಯ ಗುರು ಚನ್ನಮಲ್ಲ ಹಾಗೂ ಆತನ ಶಿಷ್ಯ ಗಿರಿಮಲ್ಲ ಇವರೊಂದಿಗೆ ಭವ್ಯಮಾನವತ್ವದ ಕಡೆಗೆ ಏರಿಹೋಗುವ ಸ್ಥಿತಿಯನ್ನು ಬಣ್ಣಿಸಿದ್ದಾರೆ. ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ, ಸುಖ-ದುಃಖ, ಹಸಿವು ತೃಷೆ, ರೋಗ-ರುಜಿನ, ಕಪಟ, ವಂಚನೆ, ದುರ್ಗುಣ, ದುರಾಚಾರ -ಇವುಗಳ ದಟ್ಟಾರಣ್ಯದಲ್ಲಿ ಪಯಣಿಸುವ ಭೀಕರ ಪರಿಯನ್ನು ಬಿಡಿಬಿಡಿಸಿ ಬಣ್ಣಿಸಿದ್ದಾರೆ. ಇದರ ಹರವು ಅತ್ಯಂತ ವಿಶಾಲವಾಗಿದ್ದು ಇಡೀ ವಿಶ್ವವನ್ನೇ ತನ್ನ ತೋಳತೆಕ್ಕೆಯಲ್ಲಿ ಪ್ರೀತಿಯಿಂದ ಅಪ್ಪಿಕೊಳ್ಳುವ ಭಾವನೆ ವ್ಯಕ್ತವಾಗುತ್ತವೆ. ಇಲ್ಲಿ ಗುರುಶಿಷ್ಯರ ಸಂವಾದವು ಮನಮೋಹಕವಾಗಿದೆ. ಗುರುವಿನ ಉಪದೇಶವು ದಿಕ್ಕುಗೆಟ್ಟಿದ್ದ ಶಿಷ್ಯರಾದ ಮಹಾದೇವಿಯಕ್ಕ ಮತ್ತು ಗಿರಿಮಲ್ಲರನ್ನು ಸಾಂತ್ವನಗೊಳಿಸುತ್ತದೆ.

iv. ಉದಯ ಕಾಂಡ

ಈ ಭಾಗದಲ್ಲಿಯ ಮುಖ್ಯ ನಾಯಕನು ಮಾನವನಾಗಿದ್ದಾನೆ. ಈ ಕಾಂಡದ ತುಂಬೆಲ್ಲಾ ಹಬ್ಬಿ ಹರಡಿಕೊಂಡಿದ್ದಾನೆ. ಇಹಲೋಕದಲ್ಲಿ ನಡೆದಿರುವ ತಾಂಡವ ನೃತ್ಯವು ಇಡೀ ಜಗತ್ತನ್ನೇ ನಾಶಮಾಡುವ ಸ್ಥಿತಿಯಲ್ಲಿದೆ. ಇಲ್ಲಿ ಗುರುಚನ್ನಮಲ್ಲ ಮತ್ತು ಶಿಷ್ಯ ಗಿರಿಮಲ್ಲ ಇವರ ಪ್ರಶ್ನೋತ್ತರಗಳು ಓದುಗನ ಸಂಶಯಗಳಿಗೆ ಕೊಟ್ಟ ಸಮಾಧಾನಕರ ಉತ್ತರದಂತಿವೆ. ಮಾನವನು ಭವ್ಯಮಾನವನಾಗಬೇಕು; ಇಹಲೋಕಕ್ಕೆ ದಿವ್ಯತೆಯನ್ನು ತರಬೇಕು ಎಂಬ ಉದ್ದೇಶವನ್ನು ಇದರಲ್ಲಿ ಮನಂಬುಗುವಂತೆ ಮೂಡಿಸಿದ್ದಾರೆ.

v. ಉಜ್ವಲ ಕಾಂಡದಲ್ಲಿ

ಪ್ರೊ. ಭೂಸನೂರಮಠರು ವಿಶ್ವಮಾನವ ತತ್ವವನ್ನು ವೈಶಿಷ್ಟ್ಯಪೂರ್ಣವಾಗಿ ವರ್ಣಿಸಿದ್ದಾರೆ. ಇಲ್ಲಿ ಚಿತ್ರಿಸುವ ವಿಶ್ವಮಾನವನು ಪಶು-ಪಕ್ಷಿ, ಗಿಡ-ಬಳ್ಳಿ, ನೀರು, ಮಣ್ಣು, ಗಾಳಿ, ಬೆಳಕು, ಮಳೆ, ಚಳಿ -ಇವೆಲ್ಲವುಗಳನ್ನು ಗರ್ಭೀಕರಿಸಿಕೊಂಡು ಏಕ ಭಾವನೆಯನ್ನು ತಳೆದಿದೆ. ಇಲ್ಲಿ 'ಎಲ್ಲರೂ ಒಂದೇ, ಎಲ್ಲವೂ ಒಂದೇ' ಎಂಬ ಮಹಾತತ್ವವನ್ನು ವಿವರಿಸಿದ್ದಾರೆ. ಇಲ್ಲಿ ಮಾನವನ ಮನದ ಆಳದಲ್ಲಿ ಹುದುಗಿಕೊಂಡಿರುವ ಮಹಾದೇವನ ಅಸ್ತಿತ್ವವನ್ನು ಪ್ರಕಟಿಸಿದ್ದಾರೆ. ಇಲ್ಲಿ ಕಾಣಿಸಿಕೊಳ್ಳುವ ಭವ್ಯ ಮಾನವನು ಕೇವಲ ಕೈಲಾಸಕ್ಕೆ ಸಂಬಂಧಪಡದೆ ನಮ್ಮೆಲ್ಲರ ಮಧ್ಯದಲ್ಲಿಯೇ ಜೀವಿಸಿ ಮಾರ್ಗದರ್ಶನ ನೀಡುತ್ತಾನೆ.

vi. ಭವ್ಯಕಾಂಡದಲ್ಲಿ

ಮನುಷ್ಯನಿಗೆ ಪಂಚಜ್ಞಾನೇಂದ್ರಿಯಗಳು ಇವೆ. ಕಣ್ಣು, ಕಿವಿ, ನಾಸಿಕ, ನಾಲಿಗೆ, ತ್ವಚೆ -ಈ ಐದು ಇಂದ್ರಿಯಗಳಿಂದಲೇ ಆತನು ತನ್ನ ಇಹಲೋಕದ ಜ್ಞಾನವನ್ನು ಪಡೆಯುತ್ತಾನೆ. ಈ ಪಂಚೇಂದ್ರಿಗಳೆಲ್ಲವೂ ಬಹಿರ್ಮುಖವಾಗಿರುತ್ತವೆ. ಇವುಗಳನ್ನು ಮೀರಿ ಆರನೆಯದಾದ ಒಂದು ಇಂದ್ರಿಯವಿದೆ. ಅದಕ್ಕೆ ಅತೀಂದ್ರಿಯವೆಂದು, ಜ್ಞಾನೇಂದ್ರಿಯವೆಂದೂ ಕರೆಯುತ್ತಾರೆ. ಇದರ ದ್ಯೋತಕವಾಗಿಯೇ ಶಿವನ ಹಣೆಯಲ್ಲಿ ಕಣ್ಣನ್ನು ತೋರಿಸಿದ್ದಾರೆ. ವಿಶ್ವಾತ್ಮವಾಗಿರುವ ಶಿವನ ಅಂಶವೇ ಜೀವಾತ್ಮನೆಂಬ ಮಾತನ್ನು ನಾವು ಅರಿತುಕೊಳ್ಳುವುದು ಅವಶ್ಯ. ಅಧೋಮುಖಿಯಾದ ಜೀವಾತ್ಮನು ಊರ್ಧ್ವಮುಖಿಯಾದಾಗ ಮಾನವನು ಭವ್ಯಮಾನವನಾಗುವ ಮಾತನ್ನು ಪ್ರೊ. ಎಸ್.ಎಸ್. ಭೂಸನೂರಮಠರು ತಮ್ಮ ಮಹಾಕಾವ್ಯದಲ್ಲಿ ದಿಗ್ದರ್ಶಿಸಿದ್ದಾರೆ.

೩. ವಿಶ್ವಬಂಧು ಮುರುಳಸಿದ್ಧ ಕಾವ್ಯ:

ಇದೊಂದು ವಿಶಿಷ್ಟವಾದ ಮಹಾಕಾವ್ಯ. ಕುವೆಂಪುರವರ 'ಶ್ರೀ ರಾಮಾಯಣ ದರ್ಶನಂ' ಪ್ರೊ. ವಿ.ಕೆ. ಗೋಕಾಕರ 'ಭಾರತ ಸಿಂಧುರಶ್ಮಿ', ಪ್ರೊ. ಭೂಸನೂರಮಠರ 'ಭವ್ಯಮಾನವ', ಶ್ರೀ ಪುತಿನ ಅವರ 'ಶ್ರೀ ಹರಿಚರಿತೆ'. ಡಾ. ಜಚನಿಯವರ 'ಸಜ್ಜಲ ಶರಣವ್ವೆ', 'ಸದಾ-ಶಿವರುದ್ರಂ' ಮತ್ತು 'ಚಂದ್ರಪ್ರಭಾ' ಮಹಾಕಾವ್ಯಗಳ ಸಾಲಿನಲ್ಲಿ ನಿಲ್ಲತಕ್ಕ ಮತ್ತೊಂದು ಮಹಾಕಾವ್ಯ ವಿಶ್ವಬಂಧು ಮರುಳಸಿದ್ಧ ಕಾವ್ಯ. ಇದರ ಕರ್ತೃ ಮಹಾದೇವ ಬಣಕಾರ. ಇದೇ ಹೆಸರಿನ ಮತ್ತೊಂದು ಕಾವ್ಯವು ದೇವಕವಿಯಿಂದ ೧೫೪೮೨ರಲ್ಲಿ ರಚಿತವಾಗಿದೆ. ಅದರಲ್ಲಿ ಮರುಳಸಿದ್ಧ ಶಿವಯೋಗಿಯ ಜೀವನ ಚರಿತ್ರೆಯನ್ನು ಹೆಚ್ಚಾಗಿ ಪವಾಡಗಳ ಹಂದರದಲ್ಲಿ ಹೆಣೆಯಲಾಗಿದೆ. ಆದರೆ ೧೯೮೯ರಲ್ಲಿ ಕವಿ ಮಹಾದೇವ ಬಣಕಾರರು 'ವಿಶ್ವಬಂಧು ಮರುಳಸಿದ್ಧ ಕಾವ್ಯ'ವನ್ನು ಬೇರೊಂದು ದೃಷ್ಟಿಯಿಂದ-ವೈಜ್ಞಾನಿಕ ಮನೋಭಾವನೆಯಿಂದ ಹೆಣೆದಿದ್ದಾರೆ. ಭಾಮಿನಿ ಷಟ್ಪದಿಯಲ್ಲಿ ಬರೆಯಲ್ಪಟ್ಟ ಈ ಕೃತಿಯು ಮಂಗಳ ಸಂಧಿಯನ್ನೊಳಗೊಂಡು ೨೨ ಸಂಧಿಗಳಲ್ಲಿ ಹರವಿಕೊಂಡಿದೆ. ಇದಕ್ಕೆ ಲೇಖಕರು ೩೦೦ ಪುಟಗಳ ವಿಸ್ತಾರವಾದ ಪ್ರಸ್ತಾವನೆಯನ್ನು ತಮ್ಮ ಮಹಾಕಾವ್ಯಕ್ಕೆ ಬರೆದಿದ್ದಾರೆ. ಕಾವ್ಯದ ನಾಯಕರು ಮರುಳಸಿದ್ಧ ಶಿವಯೋಗಿ, ಮರುಳಸಿದ್ಧರ ತಂದೆ-ತಾಯಿ, ಕಗ್ಗಲ್ಲುಪುರದ ಮಟ್ಟೆಯ ಕಾಯಕದ ಮಾರಯ್ಯ ಮತ್ತು ಹೆಂಡತಿ ಸುಪ್ರಭೆ. ಈ ಸದಾಚಾರಿಗಳ ಕಾಯಕನಿಷ್ಠರ ಹೊಟ್ಟೆಯಲ್ಲಿ ಮರುಳಸಿದ್ಧರು ಜನಿಸಿದರು. ದುರ್ದೈವಕ್ಕೆ ತಂದೆ-ತಾಯಿಗಳಿಬ್ಬರೂ ಕೈಲಾಸವಾಸಿಗಳಾದರು. ಈ ಪರದೇಶಿ ಮಗುವನ್ನು ಅದೇ ಊರಿನ ಬಾಚಿಗೌಡ ಮತ್ತು ಮಲ್ಲಮ್ಮ ದಂಪತಿಗಳು ಸ್ವಂತ ಮಗನಂತೆ ಸಂರಕ್ಷಿಸಿ ಬೆಳೆಸಿದರು. ಮರುಳಸಿದ್ಧರು ತತ್ವನಿಷ್ಠರು, ದುರಾಚಾರದ ವಿರೋಧಿಗಳು, ಲೋಕೋಪಕಾರಿಗಳು. ವೀರಶೈವ ಧರ್ಮವನ್ನು ದೇಶಾದ್ಯಂತ ಸಂಚರಿಸಿ ಪ್ರಸಾರ ಮಾಡಿದ ಹನ್ನೆರಡನೆಯ ಶತಮಾನದ ಶಿವಯೋಗಿಗಳು. ಇಂಥ ಮಹಾಪುರುಷನ ಜೀವನದ ವಿವಿಧ ಮುಖಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ಶ್ರೀ ಮಹಾದೇವ ಬಣಕಾರರು ವಿಜ್ಞಾನದ ಒರೆಗಲ್ಲಿಗೆ ಹಚ್ಚಿ ವಿವರಿಸಿದ್ದಾರೆ. ಇದರಲ್ಲಿ ಅವರ ಅಪಾರ ಅನುಭವವನ್ನು ಕಾಣಬಹುದು. ಭಾಷೆ ಮಾತ್ರ ಸುಲಿದ ಬಾಳೆಯ ಹಣ್ಣಿನಂತೆ, ಅಳಿದ ಉಷ್ಣದ ಹಾಲಿನಂತೆ ಸುಲಲಿತವಾಗಿ ಹರಿದು ಬಂದಿದೆ. ಖ್ಯಾತ ಪತ್ರಕರ್ತ, ೭೦ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ಡಾ. ಪಾಟೀಲ ಪುಟ್ಟಪ್ಪನವರ ಅಭಿಪ್ರಾಯ ಹೀಗಿದೆ: "ಎಣ್ಣೆಯನ್ನು ನೀರಿನಲ್ಲಿ ಎಷ್ಟೇ ತಳಕ್ಕೆ ಹಾಕಿದರೂ ಅದು ತೇಲಿಕೊಂಡು ಮೇಲಕ್ಕೆ ಬರುತ್ತದೆ. ಅದೇ ರೀತಿ ವಿಶ್ವಬಂಧು ಶ್ರೀ ಮರುಳಸಿದ್ಧರ ಮಹಾತೇಜಸ್ಸು ಕಾಲಗರ್ಭದಲ್ಲಿ ಮುಚ್ಚಿಹೋಗದೆ, ಮೇಲಕ್ಕೆ ಬಂದು ಪ್ರಖರ ತೇಜಸ್ಸಿನಿಂದ ಕಂಗೊಳಿಸುತ್ತದೆ. ಆ ರೋಮಾಂಚಕ ಕಥೆಯನ್ನು ಹೊರಗೆ ತಂದು, ಅದರ ಮೇಲೆ ಹೊಸಬೆಳಕನ್ನು ಚೆಲ್ಲಿ, ದೀನದಲಿತರೆಲ್ಲರೂ ಕಣ್ಣು ತೆರೆದು ನೋಡುವಂತೆ ಮತಾಂಧರೆಲ್ಲರೂ ತಮ್ಮ ಹುರುಡು ಬಯಲಾಯಿತೆಂದು ಕಕ್ಕಾವಿಕ್ಕಿಯಾಗುವಂತೆ ಶ್ರೀ ಮಹಾದೇವ ಬಣಕಾರರು ಈ ಕೃತಿಯನ್ನು ರಚಿಸಿ ಕೃತಕೃತ್ಯರಾಗಿದ್ದಾರೆ. ಇದು ಹೊಳೆಯುವ ಕೃತಿ, ಉಳಿಯುವ ಕೃತಿ."

ಈ ಮಹಾಕಾವ್ಯಕ್ಕೆ ಮೂಲಪ್ರೇರಕ ಶಕ್ತಿಯಾಗಿದ್ದವರು ಸಿರಿಗೆರೆಯ ಲಿಂಗೈಕ್ಯ ಜಗದ್ಗುರು ಡಾ. ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳು. ಅವರ ವಿಶೇಷ ಕೃಪೆಗೆ ಪಾತ್ರರಾದವರು ಕವಿ ಮಹಾದೇವ ಬಣಕಾರರು. ತಮ್ಮ ಕಾವ್ಯದ ಕೊನೆಯಲ್ಲಿ ತಮ್ಮ ಪೂಜ್ಯ ಗುರುಗಳಿಗೆ ಮಂಗಳವನ್ನು ಹಾಡಿ ಬರೆದಿರುವ ಪದ್ಯ ಮತ್ತು ಕೊನೆಯ ವಾಕ್ಯ ಹೀಗಿವೆ:

ಮಂಗಳವು ಶ್ರೀ ಮರುಳಸಿದ್ಧಗೆ
ಮಂಗಳವು ಸದ್ಧರ್ಮ ಪೀಠಕೆ
ಮಂಗಳವು ಶ್ರೀ ತರಳು ಬಾಳಿನ ಸಿದ್ಧಯತಿವರಗೆ
ಮಂಗಳವು ಮಹಕಾವ್ಯ ರಚನೆಗೆ
ಮಂಗಳವು ಬರೆದೊರೆದ ಶಕ್ತಿಗೆ
ಮಂಗಳಂ ಶ್ರೀ ಎನ್ನವರಗುರು ಶಿವಕುಮಾರನಿಗೆ.

ಇದು ಶ್ರೀ ಮಂಗಳ ಮನೋಹರ ಮೂರ್ತಿ, ಶಿವಸಿದ್ಧಕುಲಸಾರ್ವಭೌಮ ಶ್ರೀಮದ್ ರೇವಣಸಿದ್ಧ ಗುರು ಕರಕಮಲ ಸಂಜಾತ ವೀರಶೈವ ಷಟ್‌ಸ್ಥಲ ಸಿದ್ಧಾಂತ ರಹಸ್ಯಾರ್ಥ ಸ್ವರೂಪರಪ್ಪ ಶ್ರೀಮದ್ ಉಜ್ಜಯನಿ ಸದ್ಧರ್ಮ ಸಿಂಹಾಸನಾ ಪ್ರತಿಷ್ಠಾಪನಾಚಾರ್ಯ ಆಚಾರ್ಯವರ್ಯ ತೆಲಗುಬಾಳು ಶಿವಸಿದ್ಧ ಕುಲಕೇತ ನಾಯಮಾನ, ಮಾಯಾ ಕೋಲಾಹಲ ಶ್ರೀ ಮರುಳಸಿದ್ಧ ಯತೀಶ್ವರ ಪಾದಕಮಲ ಭೃಂಗ ಶರಣ ಸಾಹಿತ್ಯಾನುಷ್ಠಾನನಿಷ್ಠ ಶ್ರೀ ಮದುಜ್ಜಯನಿ ಸದ್ಧರ್ಮ ಸಿಂಹಾಸನಾಧೀಶ ಶ್ರೀ ತರಳಬಾಳು ಜಗದ್ಗುರು ೧೦೦೮ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮ್ಯಾನುಗ್ರಹಿ ವಚನ ರಚನಾಚತುರ, ಸಾಹಿತ್ಯ ಶ್ರೇಷ್ಠ ಸನ್ಮಾನಿತ ಮೋಟೇಬೆನ್ನೂರ ಮಹಾದೇವ ಬಣಕಾರ ವಿರಚಿತ ಶ್ರೀ ಮರುಳಸಿದ್ಧ ಕಾವ್ಯದೋಳ್ ೨೨ನೆಯ ಸಂಧಿ ಸಂಪೂರ್ಣ.

ಸಂಧಿ ಇಪ್ಪತ್ತೆರಡಕ್ಕಂ ಪದಂಗಳ್ ಒಟ್ಟು ೧೨೬೪ಕ್ಕಂ ಮಂಗಳ ಮಹಾಶ್ರೀ.

೪. ಸಜ್ಜಲಗುಡದ ಶರಣವ್ವ:

ಸಜ್ಜಲ ಗುಡ್ಡದ ಶರಣಮ್ಮ ಇಪ್ಪತ್ತನೆಯ ಶತಮಾನದಲ್ಲಿ ಬಾಳಿ ಬೆಳಗಿದರು. ಅವರನ್ನು ಹನ್ನೆರಡನೆಯ ಶತಮಾನದ ಅಕ್ಕಮಹಾದೇವಿಗೆ ಹೋಲಿಸಿದವರೂ ಉಂಟು. ಶರಣಮ್ಮನವರು ಅಕ್ಕಮಹಾದೇವಿಯಂತೆ ವಚನಗಳನ್ನು ರಚಿಸಲಿಲ್ಲ. ಆದರೆ ಅನುಭಾವ ರಸದ ಸರೋವರದಂತಿದ್ದ ಅವರ ಬಾಳು ಸರ್ವರ ಉದ್ಧಾರ ಮಾಡುವಲ್ಲಿ ಸಫಲವಾಯಿತು. ಅವರ ಬಹಿರಂಗ ಅಂತರಂಗಗಳೆರಡೂ ಪರಿಶುದ್ಧವಾಗಿದ್ದವು. ಅವರ ಬಹಿರಂಗದ ಉಡುಗೆ-ತೊಡುಗೆ, ಲಲಾಟದಲ್ಲಿಯ ಭಸ್ಮ, ಮುಂಗೈಯಲ್ಲಿ ಧರಿಸಿದ ರುದ್ರಾಕ್ಷಿ, ಸಾದಾ ಉಡುಗೆ-ತೊಡುಗೆ, ಸೀದಾ ನಡೆ-ನುಡಿಯ ಶರಣಮ್ಮನವರು ಪರಾಶಕ್ತಿಯಾಗಿದ್ದರು, ಕ್ರಿಯಾಶಕ್ತಿಯಾಗಿದ್ದರು, ಜ್ಞಾನಶಕ್ತಿಯಾಗಿದ್ದರು. ಹೆಣ್ಣಿನ ಬಗೆಗೆ ಇದ್ದ ಕೀಳು ದೃಷ್ಟಿಯನ್ನು ನಿವಾರಿಸಿ ಭಕ್ತರಿಗೆ ಭವ್ಯ ವ್ಯಕ್ತಿಯಾಗಿ ಕಾಣಿಸಿಕೊಂಡರು. ಇಂತಹ ಮಹಾಶರಣೆಯ ಉಜ್ವಲ ಜೀವನವನ್ನು ಈ ಮಹಾಕಾವ್ಯದಲ್ಲಿ ಡಾ. ಜ.ಚ.ನಿ.ಯವರು ಒಡಮೂಡಿಸಿದ್ದಾರೆ. ಇದು ಮುಕ್ತ ಛಂದಸ್ಸಿನಲ್ಲಿದ್ದು ಶರಣಮ್ಮನವರ ನಿಮಿತ್ತ ವೀರಶೈವ ಧರ್ಮದ ನಿಜತತ್ವಗಳನ್ನು ಓದುಗರ ಮನಸ್ಸಿನಲ್ಲಿ ಅಚ್ಚೊತ್ತುವಂತೆ ಡಾ. ಜ.ಚ.ನಿಯವರು ವಿಶದೀಕರಿಸಿದ್ದಾರೆ. ಇದು ಭಾಷೆಯ ದೃಷ್ಟಿಯಿಂದ ಅತ್ಯಂತ ಸುಲಭವಾಗಿದೆ.

೫. Basava Darshana:

ಶ್ರೀ ಎಸ್.ಎಂ. ಅಂಗಡಿಯವರದು ವೀರಶೈವ ಸಾಹಿತ್ಯದಲ್ಲಿ ಪ್ರಸಿದ್ಧವಾದ ಹೆಸರು. ಬಸವಣ್ಣ, ಸಿದ್ಧರಾಮ, ಅಕ್ಕಮಹಾದೇವಿ ಮತ್ತು ಎಡೆಯೂರು ಸಿದ್ಧಲಿಂಗೇಶ್ವರ ಇತ್ಯಾದಿ ಶರಣರ ವಚನಗಳನ್ನು ಇಂಗ್ಲೀಷಿಗೆ ಅನುವಾದಿಸಿದ ಮಹಾಮೇಧಾವಿಗಳು. ವೀರಶೈವ ಸಾಹಿತ್ಯದ ಮೇರುಕೃತಿ ಶೂನ್ಯಸಂಪಾದನೆಯನ್ನು ನವಕಲ್ಯಾಣ ಮಠದ ಶ್ರೀ ಕುಮಾರ ಸ್ವಾಮಿಗಳೊಂದಿಗೆ ಇಂಗ್ಲೀಷಿಗೆ

ಪರಿವರ್ತಿಸುವಲ್ಲಿ ಅವರು ತೋರಿದ ನಿಷ್ಠೆ ಅನುಪಮವಾದದ್ದು. ಅದರ ಬಹಳಷ್ಟು ಭಾಗವನ್ನು ಅನುವಾದಿಸಿದ ಶ್ರೇಯಸ್ಸು ಅವರಿಗೆ ಸಲ್ಲುತ್ತದೆ. ಡಾ. ಎಚ್. ತಿಪ್ಪೇರುದ್ರಸ್ವಾಮಿ ಅವರ ಪಿಎಚ್.ಡಿ. ಮಹಾಪ್ರಬಂಧ 'ಶರಣರ ಅನುಭಾವ: ಒಂದು ಅಧ್ಯಯನ' ಎಂಬ ಮೌಲಿಕ ಗ್ರಂಥವನ್ನು "Veerashaiva Saints : A study" ಎಂಬ ತಲೆಬರಹದಲ್ಲಿ ಅನುವಾದಿಸಿದ್ದಾರೆ. ಡೆಸ್ಟೊ ವೆಸ್ಕಿ ಬರೆದ ಸುಪ್ರಸಿದ್ಧ "Crime and Punishment" ಎಂಬ ಕಾದಂಬರಿಯನ್ನು ಹೆರಾಲ್ಡ್ ಲಾಸ್ಕಿ ಎಂಬ ಸುಪ್ರಸಿದ್ಧ ಲೇಖಕನು ಬರೆದ "Grammer of Politics" ಎಂಬ ಗ್ರಂಥವನ್ನು ಕನ್ನಡಕ್ಕೆ ಸಮರ್ಥ ರೀತಿಯಲ್ಲಿ ಅನುವಾದಿಸಿರುವರು. ಇವರ ಹಸ್ತದಿಂದಲೇ ಬಸವಣ್ಣನವರನ್ನು ಕುರಿತ 'Basava Darshana' 'ಬಸವ ದರ್ಶನ' ಎಂಬ ಮಹಾಕಾವ್ಯವು ಆಂಗ್ಲದಲ್ಲಿ ಸ್ವತಂತ್ರವಾಗಿ ರಚಿಸಲ್ಪಟ್ಟಿದೆ. ಇದಕ್ಕೆ ನಮ್ಮ ದೇಶದ ಸುಪ್ರಸಿದ್ಧ ಆಂಗ್ಲ ಪಂಡಿತರಾದ ಕೆ.ಆರ್. ಶ್ರೀನಿವಾಸ ಅಯ್ಯಂಗಾರ ಇವರು ಪ್ರಸ್ತಾವನೆಯನ್ನು ಅತ್ಯಂತ ಹೃದಯಂಗಮವಾಗಿ ಬರೆದಿದ್ದಾರೆ. ಇದೊಂದು ಅಪೂರ್ವವಾದ ಪುರಾಣ ಕಾವ್ಯವೆಂದೂ ಪ್ರಶಂಸಿಸಿದ್ದಾರೆ. 'Epic Poem' ಎಂಬ ದೃಷ್ಟಿಯಿಂದ ವಿಮರ್ಶೆ ಮಾಡಿರುವರು.

ಇದರಲ್ಲಿ ಈ ಮಹಾಕಾವ್ಯವು ಮುಕ್ತಛಂದಸ್ಸಿನಲ್ಲಿ ಬರೆಯಲ್ಪಟ್ಟಿದೆ. ೧೨ ಅಧ್ಯಾಯಗಳನ್ನು ೪೫೭ ಪುಟಗಳಲ್ಲಿ ವರ್ಣಿಸಿರುವರು. ಬಸವ ಪುರಾಣವನ್ನು ಹೆಚ್ಚಾಗಿ ಅವಲಂಬಿಸಿದ್ದರೂ ಇದೊಂದು ಸ್ವತಂತ್ರವಾದ ಮಹಾಕಾವ್ಯವೆಂದು ಹೇಳಬಹುದು. ಈ ಮಹಾಕಾವ್ಯವನ್ನು ಕೆಳಗಿನಂತೆ ಸಂಕ್ಷೇಪಿಸಿ ಹೇಳಲಾಗಿದೆ:

"It is a narrative in verse in twelve cantos on Basavanna's life and work. It traces his birth at Bagewadi, education, experience of the Divine, concept of Istalinga, encounter with his teachers leading to tearing the sacred thread off at Kudala Sangama and his departure to Mangalwad, entry into the treasury service, wedding with Nilamma and Gangamma simultaneously, establishment of the Anubhava Mantapa, social revolution there through on principles of Kayaka, Prasada and Dasoha, shift to Kalyan with Bijjala, arrival of Prabhu, Akkamahadevi and other Sharanas, their communion and its culmination into the Pratiloma wedding, its trial and Basavanna's exile to Kudala by the royal order."

ಮಹದೇವ ಬಣಕಾರರ ಕಾವ್ಯ ಮತ್ತು ಮಹಾಕಾವ್ಯ

✍ ಡಾ. ವ್ಹಿ.ಜಿ. ಪೂಜಾರ

ಮಹದೇವ ಬಣಕಾರರು ಆಧುನಿಕ ವಚನಕಾರರೆಂದೇ ಖ್ಯಾತಿಯನ್ನು ಪಡೆದಿದ್ದಾರೆ. ಅವರದು ಬಹುಮುಖ ಆಸಕ್ತಿಗಳ ಪ್ರತಿಭೆ. ಕವಿಗಳಾಗಿ, ಪತ್ರಕರ್ತರಾಗಿ, ರಾಜಕಾರಣಿಗಳಾಗಿ, ವಚನಕಾರರಾಗಿ, ಕನ್ನಡ ನಾಡು-ನುಡಿಗಳ ಅಭಿಮಾನಿಗಳಾಗಿ ಅವರು ಮಾಡಿದ ಕಾರ್ಯ ಮಹತ್ವದ್ದಾಗಿದೆ. ಅವರು ಶಾಲೆಗೆ ಹೋಗಿ ಕಲಿತುದು ಕಡಿಮೆ. ಬಡತನದ ಪರಿಸ್ಥಿತಿಯಲ್ಲಿ ಓದನ್ನು ಅರ್ಧಕ್ಕೆ ನಿಲ್ಲಿಸಿದರೂ ಲೋಕಾನುಭವದಿಂದ ಬಹಳಷ್ಟು ಕಲಿತುಕೊಂಡರು. ಬಸವಾದಿ ಶರಣರ ವಚನಗಳಿಂದ ಪ್ರಭಾವಗೊಂಡರು. ತರಳಬಾಳು ಜಗದ್ಗುರುಗಳ ಆಶೀರ್ವಾದ ದೊರೆತಂದಿನಿಂದ ಅವರು ವಚನ ರಚನೆಗೆ ತೊಡಗಿದರು. ಅವರು ಪ್ರೌಢಶಾಲಾ ವಿದ್ಯಾರ್ಥಿಯಾಗಿದ್ದಾಗಲೇ ಕವನಗಳನ್ನು, ಕಥೆ, ನಾಟಕಗಳನ್ನು ಬರೆಯತೊಡಗಿದ್ದರು. ಮುಂದೆ ಸಿರಿಗೆರೆಯ ತರಳಬಾಳು ಮಠದ ಮೂಲಪುರುಷರನ್ನು ಕುರಿತು ಮಹಾಕಾವ್ಯ ರಚಿಸಿದರು. ಸಾರ್ವಜನಿಕ ಹಾಗೂ ರಾಜಕೀಯ ಜೀವನದಲ್ಲೂ ಅವರದು ಸಕ್ರಿಯ ಪಾತ್ರ. ಕಾವಲು ಸಮಿತಿಯ ಸದಸ್ಯರಾಗಿ ಕನ್ನಡ ನಾಡು-ನುಡಿಗಾಗಿ ಹೋರಾಟ ನಡೆಸಿದರು. ರಾಜಕೀಯ ಹಾಗೂ ಸಾಹಿತ್ಯಕ ಜೀವನದಲ್ಲಿ ಅವರು ಯಶಸ್ಸು ಸಂಪಾದಿಸಿದರು. ಆಧುನಿಕ ಕನ್ನಡ ಸಾಹಿತ್ಯಕ್ಕೆ ತಮ್ಮದೇ ಆದ ಕೊಡುಗೆಯನ್ನು ಅವರು ನೀಡಿದ್ದಾರೆ. ಇವರ ಬಗೆಗೆ ನಡೆಯಬೇಕಾದಷ್ಟು ಅಧ್ಯಯನ ನಡೆದಿಲ್ಲವೆಂದೇ ಹೇಳಬಹುದು.

ಮಹದೇವ ಬಣಕಾರರು ಹುಟ್ಟು ಪ್ರತಿಭಾನ್ವಿತರು. ಕಾವ್ಯ-ಸೃಷ್ಟಿಯ ಕಲೆ ಅವರಿಗೆ ಜನ್ಮಜಾತವಾಗಿ ಸಿದ್ಧಿಸಿದೆ. ಪ್ರಕೃತಿಯ ಮಡಿಲಲ್ಲಿ, ಹೊಲಗದ್ದೆಗಳ ಕೆಲಸದಲ್ಲಿ, ದನಕಾಯುವಾಗ ಅವರು ಕಾವ್ಯ ರಚಿಸಿದ್ದುಂಟು. ಬಾಲ್ಯದ ದಿನಗಳಿಂದಲೇ ಅವರು ಕಾವ್ಯಕೃಷಿಯಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. 'ಕಾವ್ಯೋದಯ' 'ಬಣ್ಣದ ಕಾರಂಜಿ' 'ಅಪರಂಜಿ' 'ಹೊಸ ಹುಟ್ಟು' ಎಂಬ ನಾಲ್ಕು ಕಾವ್ಯಕೃಷಿಗಳಿಂದ ಇವರು ತಮ್ಮ ಕವನಗಳಲ್ಲಿ ಪ್ರಕೃತಿಪ್ರೇಮ, ಪ್ರಣಯ, ಬಡತನ, ನೋವು, ದೇಶಾಭಿಮಾನ, ಭಾಷಾಭಿಮಾನ ಮುಂತಾದ ವಿಷಯಗಳನ್ನು ಪ್ರಸ್ತಾಪಿಸಿದ್ದುಂಟು. 'ಕಾವ್ಯೋದಯ' ೩೪ ಕವನಗಳನ್ನು ಒಳಗೊಂಡಿದ್ದು, ೧೯೫೧ ರಲ್ಲಿ ಪ್ರಕಟಗೊಂಡಿದೆ. ಇದಕ್ಕೆ ಸಾಲಿ ರಾಮಚಂದ್ರರಾಯರು ಮುನ್ನುಡಿ ಬರೆದು ಹರಸಿದ್ದಾರೆ.

ತಾಯಿಯನ್ನು ಕಳೆದುಕೊಂಡು ತಬ್ಬಲಿಯಾಗಿ ನಿಂತ ಬಣಕಾರರು 'ಮುಂದಕೆಲ್ಲಿಗೆ' ಎಂಬ ಕವನದಲ್ಲಿ ತಾಯಿಯ ಪ್ರೀತಿ ಅಂತಃಕರಣದಿಂದ ದೂರಾದೆನೆಂದು ಪರಿತಪಿಸುವರು. "ಹಾಸಿ ಹೊದಿಸಿ ಮುತ್ತನಿಟ್ಟು ಬೆಳೆಸಿದ ತಾಯಿ ನನ್ನನಿಲ್ಲೇ ಬಿಟ್ಟು ಹೋದಳೆಲ್ಲಿಗೆ?" ಎಂದು ಪ್ರಶ್ನಿಸುವರು. ಬಾಲ್ಯದಲ್ಲಿ ತಾಯಿಯನ್ನು ಕಳೆದುಕೊಂಡು ಆಘಾತಕ್ಕೆ ಒಳಗಾದುದನ್ನಿಲ್ಲಿ ಮಾರ್ಮಿಕವಾಗಿ ಚಿತ್ರಿಸಿದ್ದಾರೆ. ಕವಿಯ ಬಾಲ್ಯದ ಕಷ್ಟದ ಜೀವನ 'ನಾನು ಕತ್ತೆ' ಎಂಬ ಕವನದಲ್ಲಿ ಹೃದಯಸ್ಪರ್ಶಿಯಾಗಿ ಮೂಡಿ ಬಂದಿದೆ. "ನಾನು ಕತ್ತೆ ದುಡಿದು ಸತ್ತೆ, ಇದುವೆ ತಪ್ಪದೆಂದೆ ಮತ್ತೆ ಬವಣೆ ಬಿಟ್ಟುಹೋಗದೆಂದೆ ಹುಟ್ಟಿ ಬರಲು ಸಾಕು ಎಂದೆ." ಬಾಲ್ಯದ ಕಷ್ಟದ ದಿನಗಳನ್ನು ಅವರು ವರ್ಣಿಸಿದ್ದು ಎಂಥ ಕಲ್ಲೆದೆಯವರನ್ನೂ ಕರಗಿಸುವುವು. ಬಾಲ ಕವಿ ಕೇವಲ ಕಷ್ಟಗಳನ್ನಷ್ಟೇ ತನ್ನ ಕಾವ್ಯದಲ್ಲಿ ವರ್ಣಿಸದೆ ಪ್ರಕೃತಿಸೌಂದರ್ಯವನ್ನು ವೀಕ್ಷಿಸುತ್ತ ಭಾವಪರವಶನಾಗುವನು. 'ಹಾರುವ ಹಕ್ಕಿ,' 'ಹಾಡುವ ಕೋಗಿಲೆ, 'ಮೂಡುವ ರವಿ' -ಬಾಲ ಕವಿಯಲ್ಲಿ ಹಲವು ಹತ್ತಾರು ಭಾವನೆಗಳನ್ನು ಮೂಡಿಸಿ ಕವಿತೆ ಬರೆಯಲು ಪ್ರೇರಣೆ ನೀಡಿವೆ. ಬಾನಿನಲ್ಲಿ ಸ್ವಚ್ಛಂದವಾಗಿ ಹಾರಾಡುವ ಹಕ್ಕಿಯನ್ನು ಕಂಡಾಗ ನಾನೂ ಹಕ್ಕಿಯಾಗಿದ್ದರೆ ಚೆನ್ನಾಗಿತ್ತು. ಎನ್ನುವನು. "ತಾ ತಾ ನಿನ್ನ ರೆಕ್ಕೆಯ ಇಕ್ಕೆಲ ನನಗೂ ಹಾರಲಿಕೆ" ಎಂದು ಹಾರುವ ಹಕ್ಕಿಯನ್ನು ಕೇಳುವನು. ಒಕ್ಕಲು ಮಗನಾಗಿ ಹುಟ್ಟಿದ ಬಣಕಾರರು ಒಕ್ಕಲಿಗರ ಕಷ್ಟ-ಸುಖಗಳನ್ನು ತಮ್ಮ ಕವನದಲ್ಲಿ ಹೀಗೆ ಹಿಡಿದಿಟ್ಟಿದ್ದಾರೆ. "ಕಸದಾ ಎದೆಯಿಂ

ರಸದಾ ಬುಗ್ಗೆಯನುಕ್ಕಿಸುತಿರುವವನು ನೇಗಿಲಯೋಗಿ! ಚಳಿಯಿಂ ಬಗ್ಗನು, ಮಳೆಯಿಂ ಕುಗ್ಗನು ಇಳೆಯೊಳಗವನೇ ಹೆಚ್ಚಿನ ತ್ಯಾಗಿ!" ಚಳಿ, ಮಳೆ, ಬಿಸಿಲು ಎನ್ನದೆ ಒಕ್ಕಲಿಗ ಹಗಲಿರುಳು ದುಡಿದು ಎಲ್ಲರಿಗೂ ಅನ್ನಹಾಕುವ ಅನ್ನದಾನಿಯಾಗಿ ಮರೆಯುವನು. ಅವನೇ ನಿಜವಾಗಿ ತ್ಯಾಗಿ -ಎನ್ನುವಲ್ಲಿ ಅವರು ಒಕ್ಕಲಿಗರ ಬಗ್ಗೆ ತೋರುವ ಮಮತೆ ಸಮಂಜಸವಾಗಿದೆ. ದೇವರಿಗಾಗಿ ಗುಡಿ ಗುಂಡಾರ ಸುತ್ತುವುದು ಸರಿಯಲ್ಲ. ನಮ್ಮ ದೇಹವೇ ನಿಜವಾದ ದೇವಾಲಯವಾಗಿದೆ ಎನ್ನುವರು, ತಮ್ಮೊಂದು ಪದ್ಯದಲ್ಲಿ ಬಣಕಾರರು. "ದೇಹದಲ್ಲಿ ದೇವನಿಹನು, ದಿನವು ದಿನವು ಪೂಜಿಸು! ನಿನ್ನ ಎದೆಯ ಬಟ್ಟಲಲ್ಲಿ, ಭಕ್ತಿತೈಲ ತುಂಬಿಸು! ಚಿತ್ತವೆಂಬ ಬತ್ತಿಯನ್ನು ಹೊಸೆದು ಬಟ್ಟಲಲ್ಲಿಡು" ಎಂಬ ಬಾಲಕವಿಯ ವಿಚಾರ ನಿಜಕ್ಕೂ ಸ್ವಾಗತಾರ್ಹವೂ, ವೈಚಾರಿಕವೂ ಆದುದಾಗಿದೆ. ಈ ಕವನ ಸಂಕಲನಕ್ಕೆ ಮುನ್ನುಡಿ ಬರೆಯುತ್ತ ಹಿರಿಯ ಕವಿ ಸಾಲಿ ರಾಮಚಂದ್ರರಾಯರು "ಚಿ॥ ಮಹದೇವನ ವಯಸ್ಸು ಚಿಕ್ಕದಾದರೂ ಆತನ ಪ್ರತಿಭೆ ಆಶ್ಚರ್ಯಕರವಾದುದು. ಕವಿಹೃದಯ ತನ್ನದೇ ಆದ ಮಾರ್ಗದಲ್ಲಿ, ತನ್ನದೇ ಆದ ಒಂದು ಬೆಳಕಿನಲ್ಲಿ ಸೃಷ್ಟಿಯ ವಸ್ತುಗಳನ್ನು ಕಂಡು, ಅವಕ್ಕೆ ತನ್ನ ಭಾವದ ರೂಪವನ್ನು ತೊಡಿಸಿರುವನು. ಈ ರೂಪು ಹೃದಯಾಕರ್ಷಿಯಾಗಿ, ಜನರ ಅಂತಃಕರಣವನ್ನು ಅರಳಿಸಿ, ಒಂದು ಬಗೆಯ ಆನಂದವನ್ನು ಒದಗಿಸುತ್ತದೆ. ಕವಿಯ ಹೃದಯ ಕೋಮಲವಾಗಿರುವಂತೆ, ಅಂತಃಕರಣ ಉದಾರವಾಗಿರುವುದು. ಪ್ರತಿಯೊಂದು ಕವನದಲ್ಲಿಯೂ ಪಾವಿತ್ರ್ಯದ ಸವಿಯನ್ನು ಓದುಗರು ಸವಿಯಬಹುದು" ಎಂದು ಬಣಕಾರರ ವಚನಗಳನ್ನು ಕುರಿತು ವ್ಯಕ್ತಪಡಿಸಿದ ಅಭಿಪ್ರಾಯ ಯಥಾರ್ಥವಾಗಿದೆ. 'ಬೆಳೆವ ಸಿರಿಯನ್ನು ಮೊಳಕೆಯಲ್ಲಿ ಕಾಣು' ಎಂಬ ನಾಣ್ಣುಡಿಗೆ ಸಾಕ್ಷಿಯಂತಿವೆ ಕಾವ್ಯದಲ್ಲಿನ ಕವನಗಳು. ಕಾವ್ಯೋದಯದ ಬಣಕಾರರ ಬಾಲ್ಯದ ಆತ್ಮಕಥನದಂತಿದ್ದು, ಅವರ ಬಾಲ್ಯದ ನೋವೇ ಇಲ್ಲಿ ಹಾಡಾಗಿ ಹರಿದುದನ್ನು ಕಾಣುವೆವು

ಬಣಕಾರರು ಮುಂದೆ ೧೯೭೮ ರಲ್ಲಿ 'ಹೊಸ ಹುಟ್ಟು' ಎಂಬ ಸಂಕಲನವನ್ನು ಪ್ರಕಟಿಸಿರುವರು. ಇದರಲ್ಲಿ ಅವರ ೪೫ ಪದ್ಯಗಳು ಇವೆ. ಈ ಸಂಕಲನದ ಪದ್ಯಗಳಲ್ಲಿ ಬಣಕಾರರ ರಾಷ್ಟ್ರಪ್ರೇಮ, ನಾಡು ನುಡಿಯ ಮೇಲಿನ ಅಭಿಮಾನ ವಿಶೇಷವಾಗಿ ವ್ಯಕ್ತಗೊಂಡುದನ್ನು ಗುರುತಿಸುವೆವು. "ಏಳಿರೈ ಕರುನಾಡು ಕುವರರೆ! ಏಳಿರೈ ರಣರಂಗಕೆ ಕೇಳಿಂದೋ ತಾಯ್ ಕರುಳ ಕೂಗನು! ಏಳಿರಿ ಕ್ಷಣ ಮಾತ್ರಕೆ?" ಕರ್ನಾಟಕ ಏಕೀಕರಣ ಸಂದರ್ಭದಲ್ಲಿ ಬರೆದ ಕವನವಿದು. ಬಣಕಾರರ ಕನ್ನಡ ಪ್ರೇಮ ಅನ್ಯಾದೃಶವಾದುದು. ಕನ್ನಡ ಕೆಚ್ಚು ಮೆಚ್ಚುವಂಥದು. "ಏಕೆ ಬಾಳ್ವೆಣದಂತೆ ಬದುಕುತ ನೂಕುವಿರಿ ಬಾಳನು? ಹೇಡಿ ಜೀವನ ಯುಗಯುಗಾಂತರ ತಲುಪಲಾರದು ಗುರಿಯನು!" ಇದ್ದೂ ಸತ್ತಂತೆ ಬಾಳುವುದು ಹೇಡಿತನ. ಕನ್ನಡಿಗರ ಇಂಥ ಬಾಳು ಸಲ್ಲದು. "ಇಲಿಯಾಗಿ ನೂರುವರ್ಷ ಬಾಳುವುದಕ್ಕಿಂತ ಹುಲಿಯಾಗಿ ಮೂರುದಿನ ಬದುಕುವುದು ಲೇಸು" ಎನ್ನುವರು ಬಣಕಾರರು. ತಮ್ಮ ದೇಶಭಕ್ತಿ ಕವನಗಳ ಮೂಲಕ ಕನ್ನಡಿಗರಲ್ಲಿ ದೇಶಾಭಿಮಾನ ಹಾಗೂ ಭಾಷಾಭಿಮಾನವನ್ನು ತುಂಬುವರು. ಕನ್ನಡ ನಾಡಿನಲ್ಲಿ ಅನೇಕ ಶೂರರು ಹುಟ್ಟಿ ಬಾಳಿ ಹೋಗಿದ್ದಾರೆ. ಇಲ್ಲಿ ಕೆಚ್ಚೆದೆಗೆ, ಕಲಿತನಕ್ಕೆ ಕೊರತೆಯೇ ಇಲ್ಲ. "ಕನ್ನಡದ ಕಣಕಣಕೂ, ನೆಲ ಜಲಕೂ ಹರಿದಿರ್ದ ವೀರ ರಸವಾಹಿನಿಯು ಸದಾ ಧುಮುಕುತ್ತಿದೆ. ಇದು ಎಂದೂ ಬತ್ತದ ಹೆದ್ದೊರೆ. ಇದು ಕನ್ನಡಿಗರ ಜಾಯಮಾನ. ನಾಡ ಗತವೈಭವದತ್ತ ಒಮ್ಮೆ ತಿರುಗಿ ನೋಡಿದರೆ-ವೀರಗಲ್ಲು, ಮಾಸ್ತಿಗಲ್ಲು, ಗುಡಿ-ಗೋಪುರಗಳು, ಶಿಲಾಶಾಸನಗಳು ಸಾರಿಹೇಳುತ್ತವೆ- ಸತ್ತವರು ನಾವಲ್ಲ ನೀವೆಂದು. ಅಂತೆಯೇ ಕವಿ, ಇದ್ದೂ ಸತ್ತವರಂತೆ, ಬಾಳ್ವೆಣದ ರೂಪದಲ್ಲಿ ನಡೆಸುವ ಜೀವನ ಸಾಕೆನ್ನುವನು. "ಮುನ್ನುಗ್ಗು ಕನ್ನಡಿಗ ನೀ ಮುಂದೆ ಮುಂದೆ ಬಂದಿರಲಿ, ನಿಂದಿರಲಿ ರಣಚಂಡಿ ಹಿಂದೆ? ತೊಡು ಇಂದು ಪಣವನ್ನು ನಿನ್ನಾಣೆಯಾಗಿ ಇಡು ಅಚಲಭಕ್ತಿಯನ್ನು ಅದರೇಳ್ಗೆಗಾಗಿ." ನಾಡು ನುಡಿಯ ಏಳ್ಗೆಗಾಗಿ ಹೋರಾಡು, ನಿನ್ನ ಜೀವನವನ್ನು ಅದಕ್ಕಾಗಿ ಮೀಸಲಿಡು ಎಂದು ನಾಡಬಂಧುಗಳಿಗೆ ಕರೆ ಕೊಡುವರು. "ಇಂದಿನ ಕನ್ನಡ ನವರಾಜ್ಯೋದಯ, ನಮ್ಮ ಬಾಳಿನ ಭಾಗ್ಯೋದಯವಾಗಲಿ, ನರ ನಾಡಿಗಳಲ್ಲೆಲ್ಲ ನಾಡಪ್ರೇಮ ಉಕ್ಕಿ ಹರಿಯಲಿ" ಎಂದು ದೇಶಾಭಿಮಾನ, ನಾಡಪ್ರೇಮ ಎಲ್ಲರಲ್ಲಿ ಉದಿಸಲಿ ಎಂದು ಆಶಿಸುವರು. ಇನ್ನೊಂದೆಡೆ ಕವಿ ಅನ್ಯಾಯದ ವಿರುದ್ಧ

ಸೆಟೆದೇಳಬೇಕು ಎಂದು ಹುರಿದುಂಬಿಸುತ್ತಾರೆ. "ಬಡವರೊಡಲಿನ ರಕ್ತ, ಬೆವರು ಕಣ್ಣೀರುಗಳ ಕುಡಿದು ತಣಿಯುವ ಆಸೆ ಅನಿಬರಲಿ." ದಾನ, ಧರ್ಮ, ಸತ್ಯ, ನ್ಯಾಯ, ಸಂಪ್ರೀತಿ ಮುಂತಾದ ಆದರ್ಶದ ಮಾತುಗಳು ಕೇವಲ ಭಾಷಣದ ಘೋಷಣೆಗೆ ಬಲಿಯಾಗಿವೆ. ಒಂದು ಕಣ್ಣಲಿ ಬೆಣ್ಣೆ, ಇನ್ನೊಂದರಲಿ ಸುಣ್ಣ, ಇದುವೆ ಸಭ್ಯತೆಯಾಗಿ ಮೆರೆಯುತಿದೆ. "ಓ ಗೆಳೆಯ ಇಳೆಯ ಕೊಳೆಯ ತೊಳೆಯ ಮೇಲೇಳೆಂದು ಕರುಳನಿರಿವ ದೃಶ್ಯ ನಡೆದುದಿಲ್ಲಿ" ಎಂದು ವಾಸ್ತವಿಕತೆಯ ಚಿತ್ರ ನೀಡುವನು. ಬಡವರ ದೀನ ದಲಿತರ ಹೆಸರಿನಲ್ಲಿ, ಉದ್ಧಾರದ ಹೊಣೆ ಹೊತ್ತು ಮುಂದೆ ಬರುವ ರಾಜಕೀಯ ಮುಂದಾಳುಗಳು, ಕೇವಲ ಭಾಷಣದ ಭರವಸೆಗಳ ಮೂಲಕ ಅವರನ್ನು ಶೋಷಿಸುವರು. ಬಡವರ ಬಗ್ಗೆ ಇವರಿಗೆ ನಿಜವಾದ ಕಳಕಳಿ ಇರದು ಎಂದು ಕವಿ ನೋವು ವ್ಯಕ್ತಪಡಿಸಿದುದಿನ್ನಿಲ್ಲಿ ಕಾಣಬಹುದು. "ಮುಳ್ಳು ಮಾತಿನ ಸಿಳ್ಳು ಹಾಕುತ ಕೊಳ್ಳೆ ಹೊಡೆವಿರಿ ನಾಡನು! ನಿಮ್ಮ ಸ್ವಾರ್ಥದ ಅಗ್ನಿಕುಂಡಕೆ ನಾಡ ಬಲಿಯನು ಕೊಂಡಿರಿ; ಬಡವ ಬಲ್ಲಿದನೆಂದು ತೋರಿಸಿ ನೀವೆ ಎಲ್ಲವ ತಿಂದಿರಿ! ಬಳಲಿ ಬಸವಳಿದೆಮ್ಮ ಬೆನ್ನಿಗೆ ಹತ್ತಿ ನಿಂತಿದೆ ಹೊಟ್ಟೆಯ ಬರಿಯ ಆಶ್ವಾಸನದ ಅನ್ನವನುಂಡು ಬದುಕಿದೆ ಜನತೆಯು." ಇಂದಿನ ರಾಜಕಾರಣಿಗಳ ಕುರಿತ ವಿಡಂಬನೆ ಇಲ್ಲಿದೆ. ಇವರ ನಂಬುಗೆ ಆಶ್ವಾಸನೆಗಳೆಲ್ಲ ಜನತೆಗೆ ಭ್ರಮೆಯನ್ನುಂಟುಮಾಡುತ್ತಿವೆ. ಇಂದಿನ ಸ್ಥಿತಿಗತಿಗೆ ಬಣಕಾರರು ಹೀಗೆ ಸ್ಪಂದಿಸಿದ್ದು ಅವರ ಸಾಮಾಜಿಕ ಪ್ರಜ್ಞೆಗೆ ಸಾಕ್ಷಿಯಾಗಿದೆ. ಶೋಷಣೆಗೆ ಒಳಗಾದವರ ಬಗ್ಗೆ ಅನುಕಂಪೆಯನ್ನು ಶೋಷಿಸುವವರ ಬಗ್ಗೆ ಆಕ್ರೋಶವನ್ನು ವ್ಯಕ್ತಪಡಿಸಿದ್ದಾರೆ. ಬಣಕಾರರ ಕವಿತೆಗಳು ತುಂಬ ಸೊಗಸಾಗಿವೆ. ಅವರ ಶೈಲಿ ಸರಳತೆಯಿಂದ ಕೂಡಿರುವಂಥದು. ಮುನ್ನುಡಿಯಲ್ಲಿ ಜಿ.ಎಸ್. ಶಿವರುದ್ರಪ್ಪನವರು ಬಣಕಾರರ ಕವನಗಳ ಬಗ್ಗೆ ಹೀಗೆ ಅಭಿಪ್ರಾಯ ಪಟ್ಟಿರುವರು: "ಈ ಕವನ ಸಂಗ್ರಹದಲ್ಲಿ ಸೌಂದರ್ಯ ದೃಷ್ಟಿಯಿದೆ, ಆದರ್ಶದ ನಿಲುವಿದೆ, ಸುತ್ತಣ ಸಾಮಾಜಿಕ ಪರಿಸರದ ಅರೆಕೊರೆಗಳ ಅರಿವಿದೆ. ತಮ್ಮ ಅನುಭವಗಳನ್ನು ತುಂಬ ಸಲೀಸಾಗಿ, ರಮ್ಯವಾಗಿ ಹೇಳಬಲ್ಲ ಅಭಿವ್ಯಕ್ತಿ ಶಕ್ತಿ ಇದೆ"ಯೆಂಬುದು ಯಥಾರ್ಥವಾಗಿದೆ.

'ಬಣ್ಣದ ಕಾರಂಜಿ' ಬಣಕಾರರ ಪ್ರೇಮಗೀತೆಗಳ ಸಂಕಲನ. ಈ ಸಂಕಲನ ೧೯೫೩ ರಲ್ಲಿ ಮೊದಲು ಪ್ರಕಟಗೊಂಡಿದ್ದು, ಅನಂತರ ಮೂರು ಮುದ್ರಣಗಳನ್ನು ಕಂಡಿದೆ. 'ಬಣ್ಣದ ಕಾರಂಜಿ' ಈ ಹೆಸರೇ ತುಂಬ ಆಕರ್ಷಕವಾದುದಾಗಿದೆ. ಇಲ್ಲಿನ ಪದ್ಯಗಳು ಓದುಗರ ಕಣ್ಣೆದುರು ರಂಗುರಂಗಿನ ಬಣ್ಣ ಬಣ್ಣದ ಕಾರಂಜಿಯನ್ನೇ ಸೃಷ್ಟಿಸುವವು. ಬಣಕಾರರ ಈ ಶೃಂಗಾರ ಕವನಗಳು, ಪ್ರತಿಯೊಂದು ಗಂಡು ಹೆಣ್ಣಿನ ಜೀವನ ಪ್ರವಾಹದಲ್ಲಿನ ಅತಿರಮ್ಯಗಳಿಗೆಗಳ ಸ್ಮರಣೆಯನ್ನು ಜಾಗ್ರತಗೊಳಿಸುತ್ತವೆ. ಬದುಕಿನಲ್ಲಿ ಭರವಸೆ ಮೂಡಿಸಿ ಪ್ರೋತ್ಸಾಹಿಸುತ್ತವೆ. ಯೌವನದಲ್ಲಿ ಗಂಡು ಹೆಣ್ಣು ಪ್ರಕೃತಿ ಸಹಜವಾಗಿ ಪರಸ್ಪರರಲ್ಲಿ ಆಕರ್ಷಣೆಗೊಳಗಾಗುವುದು ಸಹಜ. ಹರೆಯದ ಯುವಕ ಯುವತಿಯರು ಒಂದೆಡೆ ಸೇರಿದಾಗ ಅವರ ಮಧ್ಯೆ ನಡೆಯುವ ಮಾತುಗಳು ಪ್ರೀತಿಯ ಪ್ರಣಯಕ್ಕೆ ಸಾಮಾನ್ಯವಾಗಿ ಸಂಬಂಧಿಸಿದಂತೆಯೇ ನಡೆಯುವವು. "ಓರಗೆಯ ಗೆಳತಿಯರು" ಎಂಬ ಪದ್ಯದಲ್ಲಿ ಪ್ರಣಯ ಭಾವ ವ್ಯಕ್ತಗೊಂಡದ್ದನ್ನಿಲ್ಲಿ ಉದಾಹರಿಸಬಹುದು: "ಓರಗೆಯ ಗೆಳತಿಯರು ಒಂದೆಡೆಗೆ ಕಲೆತಾಗ ಮನಸಿನೊಳು ಇನಿಯರ ಕಂಡಿದ್ದರು, ಅವರವರ ಕೈಹಿಡಿದು ಸಂಪ್ರೀತಿಯೊಳಗಲೆದು ದಾಂಪತ್ಯದ ರಸವನುಂಡಿದ್ದರು." ವರನೊಬ್ಬ ತನಗೆ ಎಂಥ ಹೆಣ್ಣು ಬೇಕು ಎಂದು ಹೇಳುತ್ತಾನೆ ಎಂಬುದನ್ನಿಲ್ಲಿ ಬಣಕಾರರು ತಮ್ಮ ಪದ್ಯದಲ್ಲಿ ಹಿಡಿದಿಟ್ಟುದುದನ್ನಿಲ್ಲಿ ನೋಡಬಹುದು: "ಅತ್ತೆ ಭಾವರಿಗಂಜಿ, ಪತಿಭಕ್ತಿಯೊಳು ನಡೆವ ಮುಗ್ಧಕನ್ಯೆಯ ಮದುವೆ ಮಾಡು ನನಗೆ, ಹುಬ್ಬಳ್ಳಿ, ಧಾರ್ವಾಡ, ಮಂಗ್ಳೂರು, ಬೆಂಗ್ಳೂರು, ಮಂಡ್ಯ ಮೈಸೂರೆಂಬುದೇಕೆ ಬೇಕು? ಭಯ ಭಕ್ತಿ ನಯ ವಿನಯ ಗುಣಶೀಲ ಕಂಪುಳ್ಳ ಹಳ್ಳಿಯೊಂದರ ಬಳ್ಳಿ ಹೂವೇ ಸಾಕು." ಕವಿ ತನ್ನ ಬಾಳಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವಾಗ ತಳೆದ ನಿಲುವು, ತೋರಿಸಿದ ಒಲವು, ತಾನು ಮೆಚ್ಚಿದ ಹಳ್ಳಿಜೀವನದ ಚೆಲುವು ಇಲ್ಲಿ ಒಡಮೂಡಿದೆ. ನಗರ ನಾಗರಿಕತೆಯ ಸೋಗಲಾಡಿಯರು

ಬಾಳಸಂಗಾತಿಯಾಗಲಾರರು. ಹಳ್ಳಿಯಲ್ಲಿ ಬೆಳೆದ ಮುಗ್ಧ ಹುಡುಗಿಯರಲ್ಲಿ ಭಯ-ಭಕ್ತಿ, ನಯ-ವಿನಯ, ಗುಣ-ಶೀಲ ಗೌರವಗಳಿರಲು ಸಾಧ್ಯ. ಇಂಥ ಹೆಣ್ಣು ಮಕ್ಕಳೇ ಬಾಳಿಗೆ ಕಂಪು, ಮನಕ್ಕೆ ತಂಪು, ಜೀವಕ್ಕೆ ಪೆಂಪನ್ನು ನೀಡಬಲ್ಲರು. ಎಂಬುದು ಕವಿಯ ಅಭಿಪ್ರಾಯ. ಇದು ಗಂಡಿನ ಆಯ್ಕೆಯಾಯಿತು. ಇನ್ನು ಹೆಚ್ಚಿನ ವಿಷಯದಲ್ಲೂ ಆಕೆ ವರಗಳನ್ನು ಒಪ್ಪಬೇಕು. ಒಂದು ವೇಳೆ ಆಕೆ ವರಗಳನ್ನು ಒಪ್ಪದೇ ಇದ್ದಾಗ ಬದುಕಿನಲ್ಲಿ ಅನಾಹುತಗಳೂ ಆಗುವುದುಂಟು. ಊರ ಗೌಡರ ಮಗಳು ಬಂದ ವರಗಳನ್ನು ಒಪ್ಪದೇ ಇದ್ದಾಗ "ಆರು ವರ್ಷಗಳಾಯ್ತು ಬರಲಿಲ್ಲ ವರನು, ಹೊಟ್ಟೆಯಲ್ಲಿ ಮೂಡಿದನು ಚೆಂದುಳ್ಳ ಮಗನು. ಗೌಡರಳಿಯನು ಬೇರೆ ಎಲ್ಲಿಯೂ ಇಲ್ಲ. ಹಾಳು ಹಾಸಿಗೆ ತೆಗೆಯುವ ಮಲ್ಲನೇ ನಲ್ಲ". ವಿದ್ಯೆ ಸಂಸ್ಕಾರ ಇಲ್ಲದೆ ಬೆಳೆವ ಹಳ್ಳಿಯ ಹೆಣ್ಣು ಮಕ್ಕಳ ಬಾಳು ಈ ರೀತಿ ದುರಂತಮಯವಾಗುವುದನ್ನು ತಮ್ಮ ಕೆಲ ಕವನಗಳಲ್ಲಿ ಸೆರೆ ಹಿಡಿದಿದ್ದಾರೆ. ಇನ್ನೊಂದೆಡೆ "ನಮ್ಮೂರ ಶೆಟ್ಟರಿಗೆ ಮೂರನೇ ಮದುವೆ, ಹಚ್ಚಿದ ಅರಿಷಿಣವಿನ್ನೂ ಆರಲಿಲ್ಲ ಹಸಿರು ಬಾಳೆಯ ಕಂಬ ಒಣಗಲಿಲ್ಲ, ಶೆಟ್ಟಿಗಾಗಲೇ ಗಂಡು ಮಗನ ಜನನ, ವಿಷಯ ಕೇಳಿದ ಒಡನೆ ಅವಗಾಯ್ತು ಮರಣ". ಹದಿಹರೆಯದ ಹೆಣ್ಣುಮಕ್ಕಳ ಮನದಿಂಗಿತವನ್ನು ಅರಿಯದೇ ಅವರ ಆಸೆ-ಆಕಾಂಕ್ಷೆಗಳನ್ನು ಅರ್ಥಮಾಡಿಕೊಳ್ಳದೇ ಬಡತಾಯ್ತಂದೆಗಳು ತಮ್ಮ ಭಾರ ಇಳಿಸಿಕೊಂಡರಾಯ್ತೆಂದು ವರನ ವಯಸ್ಸು ನೋಡದೇ ಅವರ ಸಂಪತ್ತಿಗೆ ಆಸೆಪಟ್ಟು ಮುದುಕನಿಗೆ ಮದುವೆ ಮಾಡಿದಾಗ ಇಂಥ ಅನರ್ಥಗಳು ಆಗುವುದುಂಟು. ಮುದುಕರು ಹರೆಯದ ಹೆಣ್ಣುಮಕ್ಕಳ ಜೀವನವನ್ನು ಹಾಳುಮಾಡುವ ಚಿತ್ರಣವಿಲ್ಲಿ ಸೊಗಸಾಗಿ ಮೂಡಿಬಂದಿದೆ.

ಪ್ರೀತಿಸುವ ಹೃದಯಗಳೆರಡೂ ಒಂದಾದಾಗ ಅದುವೇ ನಿಜವಾದ ಸ್ವರ್ಗಸುಖವೆಂಬುದು ಕವಿಯ ಭಾವನೆ. ನಲ್ಲ-ನಲ್ಲೆಯರ ನೋಟಕ್ಕೆ ನೋಟ ಬೆರೆತಾಗ, ಮನಕ್ಕೆ ಮನ ಕಲೆತಾಗ ಬದುಕು ಸುಂದರವೆನಿಸುತ್ತದೆ. ಪರಸ್ಪರ ಜೀವಿಗಳೆರಡೂ ಒಂದಾದಾಗ ದೇಹವೆರಡಾದರೂ ಜೀವ ಒಂದೆಂಬ ಭಾವ ಬಲಿಯುವುದು. ಸಂಗಸುಖ ಅಂಗಸುಖವನ್ನಿತ್ತಾಗ "ನಿನ್ನ ಸಂಗದಿ ನಲ್ಲೆ ಇಹುದೆನಗೆ ನಾಕ. ನಿನ್ನಧರಚುಂಬನದಿ ಅಮೃತರಸಪಾಕ". ಪ್ರಣಯಿಗಳು ಒಂದಾದಾಗ, ಅವರು ಯಾವುದೋ ಒಂದು ಸುಂದರಲೋಕದಲ್ಲಿ ವಿಹರಿಸುವರು. ಆಗ ಅವರು ಸೊಗದ ಸ್ನಾನ ಮಾಡುವರು. "ಉಕ್ಕುತಲಿಹುದು ಆನಂದಾವೇಶದಿ ಬಾಳಿನ ಕಾರಂಜಿ! ಉಕ್ಕುವ ಬಣ್ಣದ ಬುಗ್ಗೆಯಲಿ ನೈಜ ಪ್ರೇಮ ತುಷಾರದಲಿ! ಮಳೆಬಿಲ್ಲಿನ ಮಳೆಗೆರೆಯುವುದು. ನವ ಅರುಣೋದಯವಾಗುವುದು! ಉಕ್ಕಲಿ ನಿಮಿಷಂಗಳಲಿ ಪ್ರೇಮಿಗಳೆದೆಯೂ ನಾಕದಲಿ! ಉಕ್ಕುತಲಿರಲಾನಂದಾವೇಶದಿ ಬಾಳೊಳು ಬಣ್ಣದ ಕಾರಂಜಿ". ಕಾಮದ ಕಾವು ಇಳಿದಾಗಲೇ ನಿಜವಾದ ಪ್ರೇಮದ ಅನುಭವವಾಗುವುದು.

"ಕಾಮವೆನ್ನುವುದೆಲ್ಲ ಸುಟ್ಟು ಬರಿಯ ಪ್ರೇಮ ಉಳಿಯಲಿ ನೀನೆ ಹೃದಯ ದೇವಿಯಾಗಿ ದೇವನೆದುರು ಬಾಗಿ, ತೂಗಿ, ನಿಲ್ಲು ನಲ್ಮೆಭಾವದಿ" ಎಂದು ನಲ್ಲೆಯನ್ನು ಸಂಬೋಧಿಸಿದ್ದು ಅವರ ಪ್ರೀತಿಗೆ ಸಾಕ್ಷಿಯಾಗಿದೆ. ನಲ್ಲೆ ಸುಖ-ದುಃಖಗಳಲ್ಲಿ ಭಾಗಿಯಾಗಿ ಬಾಳಸಂಕಟದಲ್ಲಿ ಒದ್ದಾಡುವಾಗ ತಿಳಿ ಹೇಳಿ ಸಹಕರಿಸುವ ಪತಿಗಾಗಿ ತನ್ನ ಸರ್ವಸ್ವವನ್ನೇ ಅರ್ಪಿಸಿಕೊಂಡ ಸತಿಯ ತ್ಯಾಗವನ್ನು ಕವಿ ಇಲ್ಲಿ ಕೊಂಡಾಡಿದ್ದು ಹೀಗೆ:

> "ಬೇಸತ್ತು ಬಂದಾಗ, ಕೈಸೋತು ನಿಂದಾಗ, ನಗುಮೊಗದಿ ಸಂಕಷ್ಟ
> ಮರೆಸುವರೆ! ಈ ಬಾಳ ಜಂಜಡದಿ ಅಲುಗಾಡಿ ನಾಮಿಡಿಗೆ
> ಎಲ್ಲವನು ಬಿಡಿ ಬಿಡಿಸಿ ತಿಳಿಸುವರೆ ಬಂದದ್ದು ಬರಲಿ ನಾವಿರ್ವ
> ರೊಂದಿರಲಿ ಎನ್ನುವಾಕಿ ಸುಖವನ್ನು ಬೇಡೆ ನಾ, ಸ್ವರ್ಗವನು ಬೇಡೆ ನಾ
> ನಿಮ್ಮನ್ನೇ ಬೇಡುವೆನು ಎನ್ನುವಾಕಿ!

'ಸತಿ ಪತಿಗಳು ಒಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ' ಎನ್ನುವ ಮಾತಿಗೆ ಸಾಕ್ಷಿಯೇನೋ ಎಂಬಂತಿವೆ.

ಹೊಸಗನ್ನಡ ಸಾಹಿತ್ಯದಲ್ಲಿ ಬಣಕಾರರಿಗೆ ಪ್ರಣಯ ಗೀತೆಗಳು ಮುಖಾಂತರ ಶಾಶ್ವತ ಸ್ಥಾನ ಲಭ್ಯವಾಗಿದೆ. "ಪ್ರೇಮವನ್ನು ಬರಿ ಕಾಮವಾಗಿಸಿದರೆ, ಮಾನವನು ತನ್ನ ಸಂಸ್ಕೃತಿಯನ್ನು ಕಳೆದುಕೊಳ್ಳುತ್ತಾನೆ. ನಿಸರ್ಗ ಸಹಜವಾದ ಕಾಮಕ್ಕೆ ಪ್ರೇಮದ ಹದವನ್ನು ತಂದು ಕೊಟ್ಟರೆ ಹಿರಿಯ ಸಂಸ್ಕೃತಿಯ ಅಡಿಗಲ್ಲನ್ನು ಅವನಿಗಿಡುತ್ತಾನೆ" ಎಂಬ ವಿ.ಕೃ. ಗೋಕಾಕ ಅವರ ನುಡಿಯಂತೆ ಬಣಕಾರರ ಪ್ರೇಮಗೀತೆಗಳಲ್ಲಿ ಸಾತ್ವಿಕತೆ ಮತ್ತು ಸಫಲತೆ ಎದ್ದು ಕಾಣುವ ಗುಣಗಳು. ಬಣಕಾರರ ಬಣ್ಣದ ಕಾರಂಜಿ ಯುವಕ ಯುವತಿಯರನ್ನು ಬಹಿರಂಗವಾಗಿ ಆಕರ್ಷಿಸಿದರೆ, ವಯಸ್ಸಾದವರನ್ನು, ನೆನಪಿನ ದೋಣಿಯಲ್ಲಿ ಕುಳ್ಳಿರಿಸಿಕೊಂಡು ಗತಕಾಲಕ್ಕೆ ಕರೆದೊಯ್ಯುವುದು ಬಣಕಾರರ ವಿಶಿಷ್ಟ ವ್ಯಕ್ತಿತ್ವ. ಅವರು ಕೇವಲ ವಚನಕಾರರು, ಆದರ್ಶವಾದಿಗಳು ಅಷ್ಟೇ ಅಲ್ಲ. ಅವರೊಬ್ಬ ರಸಿಕರೂ ಆಗಿದ್ದರೆಂಬುದು ಈ ಕವನಗಳಿಂದ ವಿದಿತವಾಗುವುದು.

ಬಣಕಾರರು 'ಕಾವ್ಯೋದಯ'ದಿಂದ ಕಾವ್ಯಕೃಷಿಗಿಳಿದು 'ಹೊಸ ಹುಟ್ಟು' ಪಡೆದುಕೊಂಡರು. ಮುಂದೆ ಅವರು ಕಾವ್ಯ ಲೋಕದಲ್ಲಿ 'ಬಣ್ಣದ ಕಾರಂಜಿ'ಯಾಗಿ ಪುಟಿದು ಎಲ್ಲರ ಗಮನಕ್ಕೆ ಬಂದರು. ಅವರ ಕಾವ್ಯದಲ್ಲಿ ಕನ್ನಡದ ಕೆಚ್ಚು, ಪ್ರೇಮದ ನೆಚ್ಚು ಹೊಳೆಯಾಗಿ ಪ್ರವಹಿಸಿದೆ. ಬಡತನದ ಬವಣೆ -ಚಿಂತೆ ಕಳವಳ ಅವರ ಕವನಗಳಲ್ಲಿ ಹರಿದಿದೆ.

ಮಹಾಕಾವ್ಯ

ಬಣಕಾರರು "ವಿಶ್ವಬಂಧು ಮರುಳಸಿದ್ಧ ಕಾವ್ಯ" ಹಾಗೂ "ಶಿವಕುಮಾರ ಚರಿತೆ" ಎಂಬೆರಡು ಮಹಾಕಾವ್ಯಗಳನ್ನು ಭಾಮಿನಿ ಷಟ್ಪದಿಯಲ್ಲಿ ಬರೆದಿದ್ದಾರೆ. ತರಳಬಾಳು ಶ್ರೀ ಮಠದ ಮೂಲಪುರುಷನಾದ ವಿಶ್ವಬಂಧು ಮರುಳಸಿದ್ಧ ಮಾದರ ಜಾತಿಯಲ್ಲಿ ಹುಟ್ಟಿದವ. ಇವರನ್ನು ಕುರಿತು ಬರೆದುದೇ ವಿಶ್ವಬಂಧು ಮರುಳಸಿದ್ಧ ಕಾವ್ಯ. ತರಳಬಾಳು ಮಠದ ಶಿವಕುಮಾರ ಸ್ವಾಮಿಗಳ ಅಣತಿಯ ಮೇರೆಗೆ ಬಣಕಾರರು ಮರುಳಸಿದ್ಧನ ಪ್ರಗತಿಪರ ವಿಚಾರಗಳನ್ನು, ಆತನ ತತ್ವಗಳನ್ನು ಜನತೆಗೆ ತಿಳಿಸುವ ಉದ್ದೇಶದಿಂದ ಭಾಮಿನಿ ಷಟ್ಪದಿಯಲ್ಲಿ ಮಹಾಕಾವ್ಯವನ್ನು ರಚಿಸಿದ್ದಾರೆ. ಬಣಕಾರರು ಎರಡು ಮೂರು ವರ್ಷ ಮರುಳಸಿದ್ಧ ಹುಟ್ಟಿದ ಊರು ಸುತ್ತಿ ಆತನ ಬಗೆಗೆ ಇದ್ದ ಮಾಹಿತಿಗಳನ್ನೆಲ್ಲ ಸಂಗ್ರಹಿಸಿ ಕಾವ್ಯರಚನೆ ಮಾಡಿರುವರು. ಈ ಕಾವ್ಯ ಒಟ್ಟು ೨೩ ಸಂಧಿಗಳನ್ನು, ೧೨೬೯ ಪದ್ಯಗಳನ್ನು ಒಳಗೊಂಡಿದೆ.

ದೇವಕವಿಯ 'ಮರುಳಸಿದ್ಧಕಾವ್ಯ' ಕ್ರಿ.ಶ. ೧೫೮೨ರಲ್ಲಿ ರಚನೆಗೊಂಡಿದೆ. ಈ ಕಾವ್ಯದ ಆಧಾರದಿಂದ ನಾಲ್ಕು ಸಾಂಗತ್ಯಕೃತಿಗಳು ರಚನೆಗೊಂಡಿವೆ. ಅವು ಯಾವುವೆಂದರೆ ರೇವಣಸಿದ್ಧಕವಿಯ 'ಮರುಳಸಿದ್ಧ ಸಾಂಗತ್ಯ,' ನಾಗಭೂಷಣನ 'ಮರುಳಸಿದ್ಧೇಶ್ವರ ಸಾಂಗತ್ಯ' 'ಗುರುಸಿದ್ಧಸ್ವಾಮಿಗಳ ಸಾಂಗತ್ಯ'. ತರಳಬಾಳು ಶಿವಕುಮಾರ ಸ್ವಾಮಿಗಳು 'ವಿಶ್ವಬಂಧು ಮರುಳಸಿದ್ಧ ನಾಟಕ' ರಚಿಸಿದ್ದಾರೆ. ಈ ಎಲ್ಲಾ ಕೃತಿಗಳು ಮರುಳಸಿದ್ಧನ ಚರಿತ್ರ ಗ್ರಂಥಗಳು. ಇವುಗಳನ್ನು ಆಧರಿಸಿ ಮತ್ತು ಕ್ಷೇತ್ರಕಾರ್ಯ ನಡೆಸಿ ಮಹಾದೇವ ಬಣಕಾರರು ವಿಶ್ವಬಂಧು ಮರುಳಸಿದ್ಧ ಮಹಾಕಾವ್ಯ ರಚಿಸಿದ್ದಾರೆ. ಈ ಕಾವ್ಯದಲ್ಲಿ ಮರುಳಸಿದ್ಧನನ್ನು ಪವಾಡಪುರುಷನಾಗಿ ಚಿತ್ರಿಸದೆ, ಆತ ಸಾಮಾನ್ಯ ವ್ಯಕ್ತಿ, ಸಾಧನೆಯ ಬಲದಿಂದ ದೇವತ್ವದ ಮಟ್ಟಕ್ಕೆ ಏರಿದುದನ್ನು ಚಿತ್ರಿಸಿದ್ದಾರೆ. ದೇವಕವಿಯ (ಕ್ರಿ.ಶ. ೧೫೮೨) "ಮರುಳಸಿದ್ಧ ಕಾವ್ಯ" ಬಣಕಾರರ ಮಹಾಕಾವ್ಯಕ್ಕೆ ಆಕರಗ್ರಂಥವಾಗಿದ್ದರೂ ಈ ಕಾವ್ಯದಲ್ಲಿ ಬಣಕಾರರು ಮರುಳಸಿದ್ಧನನ್ನು ಒಬ್ಬ ಪ್ರಗತಿಪರ ವಿಚಾರವಾದಿ, ವಾಸ್ತವಿಕವಾದಿಯಾಗಿ ಚಿತ್ರಿಸಿದ್ದು ಈ ಕಾವ್ಯದ ಮೇಲ್ಮೆಯಾಗಿದೆ.

ಮರುಳಸಿದ್ಧ ದಲಿತ ವರ್ಗದಿಂದ ಬಂದವ. ಸಾಮಾನ್ಯರಂತೆ ಹುಟ್ಟಿದವ. ಪವಾಡ, ಅವತಾರಗಳಲ್ಲಿ ನಂಬಿಕೆ ಇಲ್ಲದ ಬಣಕಾರರು ಮರುಳಸಿದ್ಧನ ಜನನವನ್ನು ಕುರಿತು, 'ಎಲ್ಲರಂದದಿ ಹುಟ್ಟಿ ಮರುಳನು ಎಲ್ಲರೊಳಗೊಂದಾಗಿ ಬೆಳೆವನು' ಎಂದು ಮಾತ್ರ ಹೇಳಿ ಕಾವ್ಯಕ್ಕೆ ಸಹಜ ಸೊಬಗನ್ನುಂಟು ಮಾಡುತ್ತಾರೆ. ಕಗ್ಗಲ್ಲುಪುರದ ಮಚ್ಚಿಕಾಯಕದ ಕೂಚಿಮಾರ -ಸುಪ್ರಭೆಯರ ಮಗನಾಗಿ ಮರುಳಸಿದ್ಧ ಜನಿಸಿದ. ಕಗ್ಗಲ್ಲುಪುರದ ಬಾಚಿವಾಡ ಜಾತಿ ಕುಲಗಳನ್ನು ಎಣಿಸದೆ ನೀತಿ-ನಿಯಮಗಳನ್ನು ಬಿಡದೆ ಎಲ್ಲರಿಗೂ ಬೇಕಾಗಿ ಬಾಳಿದವ. ಈತನ ಪತ್ನಿ ಮಲ್ಲಮ್ಮ ಗೌಡತಿ. ಊರ ಮಕ್ಕಳನ್ನೇ ತನ್ನ ಮಕ್ಕಳೆಂದು ಭಾವಿಸಿ, ಬಂಜೆತನದ ನೋವನ್ನು ನೀಗಿಸಿಕೊಂಡವಳು. ಇವರ ಮನೆಯ ಆಳೇ ಕೂಚಿಮಾರ. ಈತ ಮನೆ ಮಗನಂತೆ ಇದ್ದನು. ಜೊತೆಗೆ ಮಚ್ಚಿ

ಕಾಯಕ ಮಾಡುತ್ತಿದ್ದನು. ಈ ಕಾಯಕದಿಂದ ಪರಶಿವನನ್ನು ಈತ ಒಲಿಸಿದ್ದ. ಕಾಯಕವೇ ದೇವಪೂಜೆ ಎಂದೂ ಈತ ತಿಳಿದು ನಡೆದವ. ಈತನ ಪತ್ನಿ ಸುಪ್ರಭೆಯೂ ಶಿವಭಕ್ತೆ. ಒಂದು ದಿನ ಇವರ ಗುಡಿಸಲಿಗೆ ಒಬ್ಬ ಜಂಗಮ ಬಂದು 'ಭವತಿ ಭಿಕ್ಷಾಂದೇಹಿ' ಎನ್ನುತ್ತ, 'ಕಲ್ಲುಲಿಂಗಕ್ಕೆ ನೈವೇದ್ಯ ಹಿಡಿದರೆ ಬಂತೇನು? ಹಸಿದ ಜಂಗಮರಿಗೆ ಉಣಲಿಕ್ಕಿರಿ, ನನಗೆ ಈಗ ಹಸಿವೆಯಾಗಿದೆ ನೀಡಿ' ಎಂದ. ಆಗ ಅವರು ಅವನಿಗೆ ಉಣಲಿಕ್ಕಿದರು. ಇದರಿಂದ ಸಂತೃಪ್ತನಾದ ಆತ ಅವರಿಗೆ ಮಕ್ಕಳಫಲವಾಗುವುದು ಎಂದ. ಮಗು ಹುಟ್ಟಿದ ತಕ್ಷಣ ನೀವು ದೀಪ ನಂದುವ ಹಾಗೆ ನಂದಿ ಹೋಗುವಿರಿ ಎಂದ. ಮುಂದೆ ಸುಪ್ರಭೆ ಗರ್ಭಿಣಿಯಾಗುವಳು. ಆಕೆ ಮರುಳಸಿದ್ಧನಿಗೆ ಜನ್ಮ ನೀಡಿ ಅಸುನೀಗಿದಳು. ಆಕೆಯನ್ನು ಕಂಡು ಕೂಚಿಮಾರನೂ ಮರಣ ಹೊಂದುವನು. ತಬ್ಬಲಿಯಾದ ಮಗುವನ್ನು ಬಾಚಿಗೌಡ -ಮಲ್ಲಮ್ಮ ತಮ್ಮ ಮಗುವಿನಂತೆಯೇ ಸಾಕಿ ಬೆಳೆಸುವರು. ಹರಿಜನರ ಮಗುವನ್ನು ಸಾಕಿ ಬೆಳೆಸಿದುದಕ್ಕೆ ಊರ ಜನ ಬಾಚಿಗೌಡನಿಗೆ ಬಹಿಷ್ಕಾರ ಹಾಕಿದರು. ಇದನ್ನಾತ ಲೆಕ್ಕಿಸಲಿಲ್ಲ. ಮುಂದೆ ಆ ಮಗುವಿಗೆ ಬಾಚಿಗೌಡನೇ ಲಿಂಗದೀಕ್ಷೆ ಕೊಡಿಸಿದ. ಮರುಳು ಮಾಡುವ ರೂಪ ಆ ಮಗುವಿಗಿರುವುದರಿಂದ ಅದಕ್ಕೆ 'ಮರುಳಸಿದ್ಧ' ಎಂದು ಹೆಸರಿಟ್ಟರು.

ಮರುಳಸಿದ್ಧ ಕ್ರಾಂತಿಕಾರಿಯಾಗಿ ಬೆಳೆಯತೊಡಗಿದ. ಪ್ರಗತಿಪರ ವಿಚಾರವಾದಿಯಾಗಿ ಜಾತಿ ಮತಗಳನ್ನು ನೆಲಸಮ ಮಾಡುವ ತೆರವನ್ನು ತನ್ನ ಪರಿಸರದ ಜನತೆಗೆ ಬೋಧಿಸಿದ. ಬೆಳೆದಂತೆಲ್ಲ ಆತ ಮೌಢ್ಯ ಕಂದಾಚಾರಗಳನ್ನು ವಿರೋಧಿಸತೊಡಗಿದ. ಯಜ್ಞಗಳ ಖಂಡನೆ, ಪ್ರಾಣಿಬಲಿ ಖಂಡನೆ, ಮಾರಿಮಸಣಿ ಕ್ಷುದ್ರದೇವತೆಗಳ ಖಂಡನೆಯನ್ನು ಮಾಡಿದ. "ಮಾರಿ ಬಂದರೆ ಮಳೆ ಬರುತ್ತದೆ. ಕಾಳು ಹುಲುಸಾಗುತ್ತದೆ ಕೋಣನ ರಕ್ತ ಬೆರೆತ ಚರಗ ಚೆಲ್ಲಿದರೆ ಹೊನ್ನಿನ ರಾಶಿಯಾಗುತ್ತದೆ' ಎಂಬ ಮೌಢ್ಯವನ್ನು ವಿರೋಧಿಸಿದರು. ಕುರಿ, ಕೋಳಿ, ಕೋಣಗಳನ್ನು ದೇವತೆ ಹೆಸರಿನಲ್ಲಿ ಬಲಿಕೊಡುವುದು ಮೂರ್ಖತನವೆಂದು ಅದನ್ನು ವಿರೋಧಿಸುವರು. ಅದನ್ನು ತಡೆಯುವರು. ಮರುಳಸಿದ್ಧನ ಮಾತನ್ನು ಕೇಳಿ ಮೂಢಭಕ್ತಿಯಿಂದ ಬಲಿಕೊಡುವುದನ್ನು ಜನ ಬಿಟ್ಟುಬಿಡುವರು; ಈ ಘಟನೆಯ ನಂತರ ಮರುಳಸಿದ್ಧ ಊರು ಬಿಟ್ಟು ಲೋಕ ಸಂಚಾರ ಕೈಕೊಳ್ಳುವನು. ಆತ ಚೆನ್ನೂಲಾದ್ರಿಗೆ ಬರುವನು. ಇಲ್ಲಿನ ನಿಸರ್ಗಸೌಂದರ್ಯಕ್ಕೆ ಮಾರುಹೋಗಿ ಕೆಲಕಾಲ ಇಲ್ಲಿಯೇ ಕಾಲ ಕಳೆಯುವರು. ಇಲ್ಲಿಯೇ ಗುರು ರೇವಣಸಿದ್ಧರನ್ನು ಕಾಣುವರು. ಗುರುರೇವಣಸಿದ್ಧರು ಸಾತ್ವಿಕ ಭಕ್ತಿಯ ಶಿಷ್ಯ ಮರುಳಸಿದ್ಧನಿಗೆ ಅಭಯವನ್ನೀಯುತ್ತ ಆಶೀರ್ವದಿಸಿ 'ಪ್ರಭುವು ನೀನಾಗು' ಎಂದು ಹರಸುವರು. ಗುರುವಿನಿಂದ ಮರುಳಸಿದ್ಧ ಲಿಂಗದೀಕ್ಷೆ ಪಡೆದು ಶಿವಯೋಗ ಸಾಧನೆಯಲ್ಲಿ ತೊಡಗುವನು. ಇಷ್ಟಲಿಂಗದ ಮಾಹಿತಿಯನ್ನು ಅರಿತುಕೊಳ್ಳುವನು. ಮುಂದೆ ಆತ ತೆಲುಗುಬಾಳಿಗೆ ಬರುವನು. ಅಲ್ಲಿಂದ ಸಿಂದೋಗಿಗೆ ಬರುವನು. ಆತ ಬಂದೊಡನೆ ಅಲ್ಲಿ ಮಳೆ ಬರುವುದು. ಅಸ್ಪೃಶ್ಯತೆಯ ನಿವಾರಣೆ, ಸಮಾನತೆಯ ಅನುಷ್ಠಾನ, ಮೌಢ್ಯಗಳ ನಿವಾರಣೆ ಮಾಡುವ ಕುರಿತು ಜನರಿಗೆ ಮನವರಿಕೆಯಾಗುವಂತೆ ತಿಳಿಸಿದ. ಲೋಕಸಂಚಾರದ ಸಮಯದಲ್ಲಿ ಜನತೆಯನ್ನೂ ಉದ್ಧರಿಸಿದ. ಅವರಲ್ಲಿನ ಮೌಢ್ಯ, ರೋಗರುಜಿನಗಳು ಹೋಗುವಂತೆ ಮಾಡಿದ. ಬಾದಾಮಿ, ಬನಶಂಕರಿ, ಕೂಡಲಸಂಗಮ, ಹೆಗ್ಗಣದೊಡ್ಡಿ, ಕೆಂಭಾವಿ, ಮುದನೂರು ಮಂತಾದ ಸ್ಥಳಗಳಿಗೂ ಭೆಟ್ಟಿ ಕೊಟ್ಟನೆಂಬ ವರ್ಣನೆ ಬರುತ್ತದೆ. ಸೊಲ್ಲಾಪುರ ಕೊಲ್ಲಾಪುರ ಮಾಸೂರು ಸೌದತ್ತಿ ಮೊದಲಾದ ಕ್ಷೇತ್ರಗಳ ದರ್ಶನ ಮಾಡಿದ. ಅಲ್ಲಿದ್ದ ಜನತೆಯ ಮೌಢ್ಯವನ್ನು ನಿವಾರಿಸಿದ. ಸೌದತ್ತಿ ಎಲ್ಲಮ್ಮನ ಗುಡ್ಡದಲ್ಲಿ ನಡೆಯುವ ಬೆತ್ತಲೆ ಸೇವೆ, ದೇವದಾಸಿ ಪದ್ಧತಿಗಳನ್ನು ಖಂಡಿಸಿದ. ಲೋಕ ಸಂಚಾರ ಮಗಿಸಿ ಮರುಳಸಿದ್ಧ ತರಳಬಾಳುವಿಗೆ ಬರುವನು. ಅಲ್ಲಿ ಬಾಚಿಗೌಡನಿಂದ ಭೂಮಿ ಪಡೆದು ಮಠ ನಿರ್ಮಿಸುವನು. ಅಲ್ಲಿಂದ ಮತ್ತೆ ಲೋಕ ಸಂಚಾರಕ್ಕೆ ಹೊರಡಲು ಸಿದ್ಧನಾದಾಗ ಕಗ್ಗಲ್ಲುಪುರ ಹಾಗೂ ಕೇತನಹಳ್ಳಿಯ ಜನ ಆತನನ್ನು ಬೇಡ ಎಂದು ತಡೆಯುವರು. ಅಲ್ಲಿ ನಿರ್ಮಾಣಗೊಂಡ ಮಠಕ್ಕೆ ತೆಲುಗುಬಾಳ ಸಿದ್ಧನಿಗೆ ಪಟ್ಟಗಟ್ಟಿ 'ತರಳಾ ಬಾಳು' ಎಂದು ಆಶೀರ್ವದಿಸಿದರು. ಊರಿಗೆ ಊರೇ ಆಗ ತೋರಣಗಟ್ಟಿ ಹಬ್ಬವನ್ನು ಆಚರಿಸಿದರು. ಈ ಸದ್ಧರ್ಮಪೀಠವು ಗಾಳಿ, ಮಳೆ, ಬೆಳಕು, ಬಿಸಿಲು, ಬೆಂಕಿ, ನೀರು, ನೆಲ ಎಲ್ಲರಿಗೂ ಸಮವಿರುವಂತೆ ಕುಲಜಾತಿಗಳನ್ನು ಎಣಿಸದೇ ಮಾನವರೆಲ್ಲ ಒಂದೇ

ಎಂಬ ತತ್ವವನ್ನು ಎತ್ತಿ ಹಿಡಿದು ಸದ್ಧರ್ಮಪೀಠವೆನಿಸಲಿ ಎಂದು ತಮ್ಮ ಕೊನೆಯ ಸಂದೇಶವನ್ನು ಬೀರಿ, ಮರುಳಸಿದ್ಧನು ಐಕ್ಯನಾದನು. 'ಈ ಪೀಠವೇ ಶ್ರೀ ತರಳಬಾಳು ಜಗದ್ಗುರು ಸದ್ಧರ್ಮ ಸಿಂಹಾಸನವು.'

ಮರುಳಸಿದ್ಧನ ಧ್ಯೇಯ -ಧೋರಣೆಗಳು ಬಸವಣ್ಣನವರ ಧ್ಯೇಯ ಧೋರಣೆಗಳನ್ನೇ ಹೋಲುವಂಥವು. ಮರುಳಸಿದ್ಧನ ಕಾವ್ಯದ ತುಂಬೆಲ್ಲ ಶರಣತತ್ವಗಳೇ ತುಂಬಿಕೊಂಡಿವೆ. ಮರುಳಸಿದ್ಧ ಬಾಲ್ಯದಲ್ಲಿ 'ಕರುವಿನ ಕಲ್ಲುಗುಡ್ಡ'ದಲ್ಲಿ ದನ ಕಾಯ್ದ. ಮುಂದೆ ಲೋಕ ಸಂಚಾರ ಕೈಗೊಂಡ. ಕೃಷಿ ಕಾಯಕವನ್ನೂ ಮಾಡಿದ. "ಗುರುವಾದಡೂ ಕಾಯಕದಿಂದಲೇ ಜೀವನ್ಮುಕ್ತಿ, ಲಿಂಗವಾದಡೂ ಕಾಯಕದಿಂದಲೇ ಶಿಲೆಯ ಕುಲ ಹರಿವುದು, ಜಂಗಮವಾದಡೂ ಕಾಯಕದಿಂದಲೇ ವೇಷದ ಪಾಶ ಹರಿವುದು" ಎಂಬ ಶರಣರ ತತ್ವವನ್ನು, ಮರುಳಸಿದ್ಧ ತನ್ನ ಬದುಕಿನಲ್ಲಿ ಅಳವಡಿಸಿಕೊಂಡುದನ್ನು ಗುರುತಿಸುವೆವು. ಕಗ್ಗಲ್ಲುಪುರದಲ್ಲಿ ನಡೆದ ಮಾರಿಹಬ್ಬದಲ್ಲಿ ಪ್ರಾಣಿ ಬಲಿ ಕೊಡುವುದನ್ನು ವಿರೋಧಿಸಿ ನಿಲ್ಲಿಸಿದ. ಜನತೆಗೆ 'ತಾಯಿ ಮಕ್ಕಳ ಪ್ರಾಣ ಕೇಳುವಳೇ? ದೇವರ ಹೆಸರಿನಲ್ಲಿ ಈ ರೀತಿ ಪ್ರಾಣಿ ಬಲಿಕೊಡುವುದು ಅವಿವೇಕದ ಕೆಲಸ' ಎಂದು ತಿಳಿಸಿ ಹೇಳಿದಾಗ ಜನ ಹಾಗೆಯೇ ಮಾಡುವರು. ಹಿಂಸೆಯನ್ನು ಬೋಧಿಸುವುದು ಧರ್ಮವೇ ಅಲ್ಲ ಎಂದು ಸಾರಿ ಹೇಳುವನು. ಕುರುಡಿ ಬೇತೂರಿನಲ್ಲಿ ನಡೆಸಿದ ಯಜ್ಞಯಾಗಗಳಲ್ಲಿ ಧಾನ್ಯರಾಶಿ ಸುಡುವುದನ್ನು ನಿಲ್ಲಿಸಿ ಹಸಿದವರಿಗೆ ಅನ್ನ ನೀಡಿರೆಂದು ಬೋಧಿಸಿದ. ಮರುಳಸಿದ್ಧ ಮಾದಿಗ ಕುಲದಲ್ಲಿ ಜನಿಸಿದರೂ, ಆತ ಲಿಂಗದೇವನಲ್ಲಿ ನಿಷ್ಠೆಯುಳ್ಳವನಾದುದರಿಂದ ಶ್ರೇಷ್ಠಭಕ್ತನೆನ್ನಿಸಿದ, ಜಂಗಮವೆನ್ನಿಸಿದ. ಮಠದ ಮೂಲಪುರುಷನಾದ ಆತ ಲಿಂಗತತ್ವದ ಮಾಹಿತಿಯನ್ನು ಸಾರಿದ್ದು ಹೀಗಿದೆ:

"ತುಂಬಿದಾ ಜನರೊಳಗೆ ಮರುಳನು ಬಿಂಬಿಸಿದನು ಶಿವತತ್ವ ಚಿಂತನ
ನಂಬಿ ನಡೆಯಲು ಹೇಳಿದನು ಕರದಿಷ್ಟಲಿಂಗದಲಿ
ನಂಬಿ ಕೆಟ್ಟವರಿಲ್ಲ ಲಿಂಗದಿ ನಂಬಿ ನಡೆದವಗಿಲ್ಲ ಮರಣವು
ನಂಬಿದರೆ ಲಿಂಗದೊಳಗಿಂಬಿಹುದೆಂದು ಸಾರಿದನು"

ಮರುಳಸಿದ್ಧನು ಬಸವಾದಿ ಶರಣರಂತೆ ಏಕದೈವೋಪಾಸನೆ ಹಾಗೂ ಲಿಂಗನಿಷ್ಠೆಯ ಮಹತ್ವವನ್ನು ಜನರಲ್ಲಿ ಬಿಂಬಿಸಿದ್ದನ್ನು ಅರಿಯಬಹುದು.

ಮರುಳಸಿದ್ಧ ಮಹಾಕಾವ್ಯದಲ್ಲಿ ವ್ಯಕ್ತಗೊಂಡ ಸಂದೇಶ ಹೀಗಿದೆ:

ಇಲ್ಲ ಕುಲಜಾತಿಗಳ ಸಂಕರ
ಇಲ್ಲ ಕೆಳ ಮೇಲೆಂಬುವಂತರ
ಇಲ್ಲ ಮಾನವ ಕುಲದಿ ರಾಗ ದ್ವೇಷವೆಂಬುದು
ಇಲ್ಲ ಶಿವಸೃಷ್ಟಿಯಲಿ ತರತಮ
ಇಲ್ಲ ಜೀವಾತ್ಮನಲಿ ಭೇದವ
ದಿಲ್ಲವೈ ಸದ್ಧರ್ಮಪೀಠದಿ ಜಾತಿ ಎಂಬುವದು"

ಇದು ಕಾವ್ಯದುದ್ದಕ್ಕೂ ವ್ಯಕ್ತವಾದ ಸಂದೇಶ. ಈ ವಿಶ್ವಮಾನವ ದರ್ಶನಕ್ಕಾಗಿಯೇ ಮರುಳಸಿದ್ಧರು ವಿಶ್ವಬಂಧುವಾಗಿ ಮೂಡಿ ಬಂದು, ಜಗತ್ತಿಗೆ ಚಿರಂತನ ಸಂದೇಶವನ್ನು ತಮ್ಮ ಜೀವನ ಮತ್ತು ಸಾಧನೆಗಳ ಮೂಲಕ ಸಾರಿದರು. ಲೋಕದಲ್ಲಿ ತುಂಬಿ ತುಳುಕುತ್ತಿರುವ ಅಂಧಶ್ರದ್ಧೆ ಮೂಢಭಕ್ತಿ ಕಂದಾಚಾರ ವಾಮಾಚಾರಗಳ ಹುಟ್ಟಡಗಿಸಿ, ಶುದ್ಧಾಂತರಂಗದಲ್ಲಿ ನೈಜಭಕ್ತಿ, ಸಮ್ಯಗ್ ಜ್ಞಾನ, ಶುದ್ಧಮಾನವತೆ, ಸಮಾನ ಜೀವನ ಕ್ರಮಗಳು ನೆಲೆಗೊಂಡು ಲೋಕದ ತರಳರೆಲ್ಲ ಸುಖವಾಗಿ ಬಾಳಬೇಕೆಂಬುದೇ ಮರುಳಸಿದ್ಧನ ನೀತಿಯಾಗಿತ್ತು. ಜಾತಿಯ ತಳಹದಿಯ ಮೇಲೆ ನಡೆದಿರುವ ಧರ್ಮಾಚರಣೆಯು ಕೊನೆಗೊಂಡು, ವ್ಯಕ್ತಿಗಳ ಹಿರಿಮೆಯು ಅವರ ಯೋಗ್ಯತೆಯ ಮೇಲಿಂದ ನಿರ್ಣಯಿಸಲ್ಪಡಬೇಕೆಂಬುದೇ ಅವರ ಧ್ಯೇಯವಾಗಿತ್ತು. ಈ ಕಾರಣಕ್ಕಾಗಿಯೇ ಅವರು ಹೋರಾಟ ನಡೆಸಿದರು; ಅದರಲ್ಲಿ ಯಶಸ್ವಿಯೂ ಆದರು.

ಇಂದಿನ ಸಾಮಾಜಿಕ ಬದುಕಿಗೆ ಅವಶ್ಯವಾಗಿ ಬೇಕಾಗಿದ್ದ ಸಮತಾವಾದದ ಮೂಲಮಂತ್ರವನ್ನುಳ್ಳ ಮರುಳಸಿದ್ದರ ಕಥೆಯನ್ನು ಸಮಯೋಚಿತವಾಗಿ ಮಹಾಕಾವ್ಯರೂಪದಲ್ಲಿ ಓದುಗರಿಗೆ ನೀಡಿದ ಬಣಕಾರರ ಸಾಮಾಜಿಕ ಪ್ರಜ್ಞೆ ಮೆಚ್ಚುವಂತಹುದಾಗಿದೆ.

ಸಮಕಾಲೀನ ಸಮಾಜಕ್ಕೆ, ಮರುಳಸಿದ್ಧನ ಚರಿತ್ರೆಯೇ ಒಂದು ದಿವ್ಯಸಂದೇಶವಾಗಿದೆ. ಮಾದಿಗರ ಮನೆಯ ಮಗನೊಬ್ಬ, ಜಗದ್ಗುರುವಾಗಿ ಮಾನ್ಯನೆನಿಸಿಕೊಂಡಿರುವುದು ಭಾರತದ ಸನಾತನ ಸಂಸ್ಕೃತಿಯಲ್ಲಿ ಅವಿಸ್ಮರಣೀಯವಾದುದು. ಶರಣರ ಕ್ರಾಂತಿ ಫಲದ ಜ್ವಲಂತ ನಿದರ್ಶನವಿದು. ಈ ಸತ್ಯವನ್ನು ಎತ್ತಿ ಹಿಡಿದ 'ತರಳ ಬಾಳು ಸಂತಾನಶ್ರೀ' ಜಗದ ಮೊದಲಸ್ಥಾನದಲ್ಲಿದೆ, ಎಂದರೆ ತಪ್ಪಾಗಲಾರದು. ಸಮಾನತೆ, ಸೋದರತೆ, ಮಾನವೀಯತೆ, ವಿಶ್ವಬಂಧುತ್ವದಂಥ ವಿಶ್ವಮಾನ್ಯವಾದ ಸಾರ್ವಕಾಲಿಕ ಮೌಲ್ಯಗಳನ್ನು ಸಾರುವುದೇ ಈ ಕಾವ್ಯದ ಮೂಲಸಂದೇಶವಾಗಿದೆ.

ಶಿವಕುಮಾರ ಚರಿತೆ

ಲಿಂ. ಜಗದ್ಗುರು ಶ್ರೀ ಶಿವಕುಮಾರ ಶಿವಾಚಾರ್ಯರ ಹೋರಾಟದ ಬದುಕು, ಭವ್ಯವ್ಯಕ್ತಿತ್ವವನ್ನು ಒಳಗೊಂಡ 'ಶಿವಕುಮಾರ ಚರಿತೆ' ಭವ್ಯ -ಬೃಹತ್ ಕಾವ್ಯವಾಗಿದೆ. ೨೦ ಸಂಧಿಗಳು ೧೨೧೫ ಪದ್ಯಗಳಲ್ಲಿ ವಿನ್ಯಾಸಗೊಂಡ ಈ ಕಾವ್ಯ ಭಾಮಿನಿ ಷಟ್ಪದಿಯಲ್ಲಿದೆ. ಲಿಂ. ಶ್ರೀ ಶಿವಕುಮಾರ ಸ್ವಾಮಿಗಳು ಮಹಾದೇವ ಬಣಕಾರರ ಬಾಳಿಗೆ ಬೆಳಕನ್ನಿತ್ತವರು. ಅವರ ಸಾಹಿತ್ಯಕ್ಕೆ ಪ್ರೇರಕ ಶಕ್ತಿಯಾದವರು, ವಚನಕ್ಕೆ ಅಂಕಿತವಾದವರು, ಜೀವಕ್ಕೆ ಉಸಿರಾದವರು, ಅಂತರಂಗದ ಚೇತನವಾದವರು. ಜಗದ್ಗುರುಗಳ ಪ್ರಗತಿಪರ ಧೋರಣೆಗಳನ್ನು ಬಹುವಾಗಿ ಮೆಚ್ಚಿಕೊಂಡ ಬಣಕಾರರು ಅವರು ಲಿಂಗೈಕ್ಯರಾದೊಡನೆ ಅವರನ್ನು ಕುರಿತು ಈ ಬೃಹತ್‌ಕಾವ್ಯ ರಚಿಸಿರುವರು.

ಕಾವ್ಯದ ಆರಂಭದಲ್ಲಿಯೇ ಬಣಕಾರರು ಶ್ರೀಗಳವರ ಹೋರಾಟದ ಬದುಕನ್ನು ಹೀಗೆ ವರ್ಣಿಸಿದ್ದಾರೆ: "ಇಟ್ಟು ಧೀರೋದಾತ್ತ ಹೆಜ್ಜೆಯ, ಮೆಟ್ಟಿ ಕುಲಜಾತಿಗಳ ಸಂಕರ ಇಟ್ಟು ಹರನೈಸಿರಿಯ ಭಕ್ತರ ಬಾಳ ಬೆಳಗಿಸಲು, ಕೊಟ್ಟು ಪ್ರಾಣವ ಧರ್ಮಪೀಠವ ಕಟ್ಟಿ ಬೆಳೆಸಿದ". ಮೊದಲ ಸಂಧಿಯಲ್ಲಿ ಸಿರಿಗೆರೆ ಮಠದ ಹುಟ್ಟು ಹಾಗೂ ಗುರುಪರಂಪರೆಯನ್ನು ನಾಶಪಡಿಸಲು ಕೆಲ ಕುಹಕಿಗಳು ಹೊಂಚುಹಾಕುತ್ತಾ ಇದ್ದರು. ಜಾತಿವಾದಿಗಳು, ಸ್ವಾರ್ಥಿಗಳು ಮಠದ ಸುತ್ತ ಮುತ್ತಿಕೊಂಡ ಸಮಯದಲ್ಲಿ ಶ್ರೀ ಶಿವಕುಮಾರ ಸ್ವಾಮಿಗಳು ಪೀಠಾಧಿಪತಿಗಳಾದರು. ಇವರ ಪಟ್ಟಾಭಿಷೇಕದ ವರ್ಣನೆಯನ್ನು ಬಣಕಾರರು ಹೀಗೆ ಮಾಡಿರುವರು:

"ಪಟ್ಟದಾನೆ ಅಬ್ಬರಿಸಿ, ಬಂದ ಭಕ್ತರಿಗೆಲ್ಲ ಅಂಜದಿರೆಂದು ಧೈರ್ಯ ತುಂಬಿತಂತೆ, ನಮ್ಮ ಗುರುವರ ಶೂರ ಸಾಹಸಿ, ಎಂಬ ಠೀವಿಯ ತೋರಿ ಕುದುರೆಗಳು ಹೂಂಕರಿಸಿದುವಂತೆ!" "ಕೊಂಬು ಕಹಳೆಯ ನಾದ ಗಗನದಿ ತುಂಬಿ ಮಾರ್ನುಡಿದಿತ್ತು ಎಲ್ಲೆಡೆ, ಸಾಕ್ಷಾತ್ ಶಿವನೇ ಬಂದು ನಿಂದಿಹನೆಂದು ಮನಗಂಡ ಭಕ್ತರು, ಗುರುವನ್ನು ಮನುದುಂಬಿ ನುತಿಸಿದರು" ಶಿವಕುಮಾರರು ಪೂರ್ವದ ಗುರುಗಳನ್ನು ಸ್ಮರಿಸಿ ಪೀಠಾರೋಹಣ ಮಾಡಿದರು.

"ಶುಭವು ಶ್ರೀಗುರು ಬಸವ ತತ್ವಕೆ
ಶುಭವು ಅನುಭಾವಿಗಳ ಚರಣಕೆ
ಶುಭವು ದುರ್ಬಲ ದೀನ ದಲಿತರ ಬಾಳಿನೇಳಿಗೆಗೆ"

ಎಂದು ಆಶಿಸುತ್ತ, ಲೋಕದ ತರಳರೆಲ್ಲರಿಗೆ ಶುಭವನ್ನು ಕೋರಿದರು. ಶ್ರೀಗಳು ನಲವತ್ತು ವರ್ಷ ಪೀಠಾಧಿಪತಿಗಳಾಗಿದ್ದು, ಈ ಅವಧಿಯಲ್ಲಿ ಅವರು ಸಾಧಿಸಿದ ಸಾಧನೆಗಳನ್ನು, ಲೋಕ ಕಲ್ಯಾಣ ಕಾರ್ಯಗಳನ್ನು ಬಣಕಾರರು ಇಲ್ಲಿ ಕಣ್ಣಿಗೆ ಕಟ್ಟುವ ಹಾಗೆ ಹಿಡಿದಿಟ್ಟಿದ್ದಾರೆ. ಹನ್ನೆರಡನೇ ಶತಮಾನದಲ್ಲಿ ಬಸವಾದಿ ಶರಣರಿಂದ ನಡೆದ ಧಾರ್ಮಿಕ -ಸಾಮಾಜಿಕ ಕ್ರಾಂತಿ ೨೦ನೇ ಶತಮಾನದಲ್ಲಿ ಸಿರಿಗೆರೆಯಲ್ಲಿ ನಡೆಯಬೇಕೆಂಬುದು ಶ್ರೀಗಳ ಸಂಕಲ್ಪವಾಗಿತ್ತು. ವರ್ಣ-ವರ್ಗರಹಿತ ಮಾನವತಾವಾದಿ

ಸಮಾಜವನ್ನು ನಿರ್ಮಿಸಿ, ಮುಗ್ದಜನರಲ್ಲಿರುವ ಅಂಧಶ್ರದ್ಧೆಯನ್ನು ದೂರೀಕರಿಸಿ, ಏಕದೇವೋಪಾಸನೆಯಿಂದ, ಸಕಲ ಜೀವಾತ್ಮರಿಗೆ, ಕಾಯಕದ ಮೂಲಕ ಕೈಲಾಸವನ್ನು ದೊರಕಿಸಿಕೊಡುವುದು ಅವರ ಉದ್ದೇಶವಾಗಿತ್ತು.

ಹಳ್ಳಿಗಳ ಸುಧಾರಣೆಯಾದರೆ, ದೇಶ ಸುಧಾರಿಸುವುದು ಅದು ವಿದ್ಯೆಯಿಂದ ಮಾತ್ರ ಸಾಧ್ಯವೆಂದು ಹಳ್ಳಿ ಹಳ್ಳಿಗೂ ಶಾಲೆಗಳನ್ನು ಸ್ಥಾಪಿಸಿ ಎಲ್ಲರಿಗೂ ವಿದ್ಯೆ ಕಲಿಯುವ ಅವಕಾಶ ಕಲ್ಪಿಸಿದರು, ಶ್ರೀ ಶಿವಕುಮಾರ ಶ್ರೀಗಳು.

"ಬಂದ ಬಡಮಕ್ಕಳಿಗೆ ಜಾತಿಯ
ತಂದು ತರತಮ ತೋರದಂತೆಯೇ
ಒಂದೆ ಪಂಕ್ತಿಯೊಳೆಲ್ಲರೂಟವು ನಡೆವುದಂದದಲಿ" (ವ: ೭-೫೬)

ಎಲ್ಲರೂ ಒಂದೇ ಪಂಕ್ತಿಯಲ್ಲಿ ಕುಳಿತು ಉಣ್ಣುವಂತೆ ವ್ಯವಸ್ಥೆ ಮಾಡಿದಾಗ ಕೆಲವರು ಇದನ್ನು ವಿರೋಧಿಸಿದರು. ಆಗ ಗುರುಗಳು ಅವರಿಗೆ ತಿಳಿಹೇಳಿ

"ಎಮ್ಮ ಪೀಠದ ಗುರು ಪರಂಪರೆಗೆಮ್ಮ ನಿಷ್ಠೆಯು ಮೀಸಲಾಗಿಹು
ದೆಮ್ಮನಲುಗಾಡಿಸುವ ದುಃಸಾಹಸವು ಬೇಡೆನುತ" (ವ: ೭-೬೩)

ಎಚ್ಚರಿಸಿದರು. 'ಗುರುಮಠ ಪೀಠಕ್ಕಿಂತ ಲೋಕದ ಮಕ್ಕಳು ಅಧಿಕರು. ಅವರೇ ಅಧಮರಾದರೆ, ರಾಷ್ಟ್ರಘಾತುಕರಾಗುವರು. ಕುಲಜಾತಿ ಭೇದವಿಲ್ಲದೇ ಒಂದೆಡೆ ಬೆಳೆದ ಮಕ್ಕಳು ರಾಷ್ಟ್ರದ ಸಂಪತ್ತಾಗುವರು' ಎಂದು ತಿಳಿಸಿ ಹೇಳಿದರು.

ದೇಶದಲ್ಲೆಲ್ಲಾ ಸ್ವಾತಂತ್ರ್ಯ ಚಳುವಳಿ ನಡೆದಾಗ ಶ್ರೀಗಳವರು ಮಠ ಹಿಡಿದು ಕೂಡ್ರಲಿಲ್ಲ. ವೀರಯೋಧನ ತೆರದಿ ಎಲ್ಲೆಡೆ ತೆರಳಿ ದೇಶಪ್ರೇಮದ ಸಂದೇಶವನ್ನು ಸಾರಿದರು. ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಲು ಭಕ್ತರನ್ನು ಹುರಿದುಂಬಿಸಿದರು. ಶ್ರೀಗಳ ವೀರವಾಣಿಯಿಂದ ಪ್ರೇರಿತರಾಗಿ ಅನೇಕ ಭಕ್ತರು ಮನೆಮಾರು ತೊರೆದು ಸ್ವಾತಂತ್ರ್ಯ ಸಮರಕ್ಕಿಳಿದರು. ಅದರಲ್ಲಿ ಮಾದರ ಕೆಂಚ ಸ್ವಾತಂತ್ರ್ಯಕ್ಕಾಗಿ ಹೋರಾಡಿ ಶ್ರೀಗಳ ಮನಸ್ಸನ್ನು ಗೆದ್ದುಕೊಂಡ. ಮುಂದೊಂದು ದಿನ ಆತ ತನ್ನ ಮಕ್ಕಳ ಮದುವೆಗೆ ಶ್ರೀಗಳನ್ನು ಆಹ್ವಾನಿಸಿದಾಗ ಶ್ರೀಗಳು ಹೋಗಿ ಆಶೀರ್ವದಿಸಿದರು. ಇದು ಮುಂದುವರಿದ ಕೆಲವರಿಗೆ ನುಂಗಲಾರದ ತುತ್ತಾಯ್ತು; ವಿರೋಧಿಸಿದರು. ಅದಕ್ಕೆ ಶ್ರೀಗಳು

"ನಮ್ಮ ನಂಬುಕೆ ಶರಣತತ್ವದಿ
ನಮ್ಮ ಜೀವನ ಶರಣ ಜೀವನ
ನಮ್ಮ ಗುರಿಯೇ ಸಕಲ ಜೀವರ ಲೇಸ ಬಯಸುವುದು
ನಮ್ಮ ನೀತಿಯು ಬೇಡವಾದರೆ
ನಿಮ್ಮ ಮಠ ನೀವಿಟ್ಟುಕೊಳ್ಳಿರಿ
ಹಮ್ಮು ಬಿಮ್ಮಿಗೆ ಮಣಿಯೆ

ಎಂದು ಜನರನ್ನು ಎಚ್ಚರಿಸಿದರು. 'ಎಲ್ಲಿ ಮಾನವತೆ ಇದೆಯೋ ಅಲ್ಲಿ ದೇವತ್ವವಿದೆ. ಎಲ್ಲ ಧರ್ಮಕ್ಕೂ ದಯೆಯೇ ಮೂಲ' ಎಂದು ಸಾರಿ ಶಿಷ್ಯರಲ್ಲಿ ತಿಳುವಳಿಕೆ ಮೂಡಿಸಿದರು. ಒಂದು ದಿನ ಭರಮಸಾಗರದಿಂದ ಕೆಲ ಮುಸ್ಲಿಮರು ಬಂದು ತಾವು ಹೊಸದಾಗಿ ಕಟ್ಟಿಸಿದ ಮಸೀದಿಯನ್ನು ಉದ್ಘಾಟಿಸಲು ಆಗಮಿಸಬೇಕೆಂದು ಶ್ರೀಗಳನ್ನು ಆಹ್ವಾನಿಸಿದರು. ಆಗ ಶ್ರೀಗಳು ಸಂತೋಷದಿಂದ ಒಪ್ಪಿ ಹೋಗಿ ಮಸೀದಿಯನ್ನು ಉದ್ಘಾಟಿಸಿದರು. ಹಿಂದೂ ಗುರುಗಳೊಬ್ಬರು ಮುಸಲ್ಮಾನರ ಮಸೀದಿಯನ್ನು ಉದ್ಘಾಟಿಸಿದ್ದು ಭಾರತದ ಇತಿಹಾಸದಲ್ಲಿ ಬೇರೊಂದಿಲ್ಲ. ಶ್ರೀ ಶಿವಕುಮಾರ ಸ್ವಾಮಿಗಳು ಸಕಲ ಕುಲಬಾಂಧವರಿಗೆ ತಂದೆಯೋಪಾದಿಯಲ್ಲಿ ಇದ್ದರು. ಒಂದು ದಿನ ಅರಸೀಕೆರೆ ತಾಲ್ಲೂಕಿನ ದೊಡ್ಡಮೇಟಿ ಕುರ್ಕಿಯಿಂದ ಕೆಲ ಭಕ್ತರು ಬಂದು ಗುರುಗಳಿಗೆ ಎರಗಿ ಮಾದಿಗ ಸ್ವಾಮಿಯೊಬ್ಬನನ್ನು ನಮ್ಮೂರಲ್ಲಿ ಮೆರವಣಿಗೆ ಮಾಡಬೇಕಾಗಿದೆ. ಇದಕ್ಕೆ ವೀರಶೈವರು

ತಡೆಯೊಡ್ಡಿದ್ದಾರೆ. ನೀವೇ ಪರಿಹಾರ ನೀಡಬೇಕೆಂದು ವಿನಂತಿಸಿಕೊಂಡರು. ಆಗ ಶ್ರೀಗಳು ಆ ಮುಂದುವರಿದ ಜಾತಿಯವರಿಗೆ "ಮಾನವರಾದ ನೀವು, ನಾಯಿ-ನರಿ-ಹಂದಿಗಳಿಗಿಂತ ಕೀಳು ಬಾಳು ಬಾಳುತ್ತಿರುವಿರಿ. ಕಲ್ಲು ಮಣ್ಣಿನ ನೂರಾರು ದೇವರ ಪೂಜಿಸುವ ನೀವು, ಒಬ್ಬ ಒಳ್ಳೆಯ ಮಾನವನನ್ನೇಕೆ ಗೌರವಿಸಬಾರದು? ಸಂತರಲ್ಲಿ ಕುಲಜಾತಿ ಭೇದವೆಲ್ಲಿದೆ? ಮಾದಿಗರಲ್ಲಿ ಹುಟ್ಟಿದ ಮರುಳಸಿದ್ಧ ವಿಶ್ವ-ಬಂಧುವಾಗಲಿಲ್ಲವೇ?" ಎಂದು ತಿಳಿಹೇಳಿ ಆ ಸ್ವಾಮಿಯನ್ನು ಮೆರೆಸಲು ಅನುವು ಮಾಡಿಕೊಟ್ಟರು. ಇದು ಶ್ರೀಗಳ ಧಾರ್ಮಿಕ ಸಮಾನತೆ ಹಾಗೂ ಜಾತ್ಯಾತೀತ ಮನೋಭಾವದ ದ್ಯೋತಕವಾಗಿದೆಯೆಂಬುದನ್ನು ಬಣಕಾರರು ಮನೋಜ್ಞವಾಗಿ ನಿರೂಪಿಸಿದ್ದಾರೆ.

"ಅಳಿಯಲಿ ಅಂತರ್ಜಾತಿ ಕಲಹ, ಉಳಿಯಲಿ ಶರಣತತ್ವ" ಎಂದು ಸಾರಿದ "ಕಾಣದಿಹ ಸ್ವರ್ಗವನ್ನು ಬೇಡದೆ, ಕಾಣದಿಹ ನರಕಕ್ಕೆ ಅಂಜದೆ, ಕಾಣದಿಹ ಮುಕ್ತಿಯನು ಬಯಸದೆ, ಭಕ್ತಿಯಲಿ ಬೆರೆತು, ಕಾಯಕದಲ್ಲಿಯೇ ಕೈಲಾಸ ಕಾಣಬೇಕೆಂಬ ಶ್ರೀಗಳ ಶರಣತತ್ವವನ್ನು ಬದುಕಿಗೆ ಅಳವಡಿಸಿಕೊಂಡು, ಸ್ವಾಮಿಗಳು ವ್ಯಕ್ತಿತ್ವಕ್ಕೆ ತಲೆಬಾಗಿ, ಅಸಂಖ್ಯಾತ ಭಕ್ತರು ಸಿರಿಗೆರೆ ಮಠದ ಭಕ್ತರಾದರು, ಅಭಿಮಾನಿಗಳಾದರು ಎಂಬುದನ್ನಿಲ್ಲಿ ಬಣಕಾರರು ನಿರೂಪಿಸಿದುದರಲ್ಲಿ ಅತಿಶಯೋಕ್ತಿಯೇನಿಲ್ಲ.

ಶ್ರೀಗಳ ಬಳಿ ಆಶೀರ್ವಾದ ಬೇಡಿ ಬಂದ ಭಕ್ತರಿಗೆ ಅವರು ಹೇಳುವ ಮಾತುಗಳು ಗಮನಾರ್ಹವಾಗಿವೆ. "ನಡೆ-ನುಡಿಗಳನ್ನು ಶುದ್ಧವಾಗಿಟ್ಟುಕೊಂಡು, ಇಹದ ಸುಖ, ಪರದ ಶ್ರೇಯಸ್ಸನ್ನು ನೀವೇ ಪಡೆಯಬೇಕೇ ಹೊರತು ಇವು ಇನ್ನೊಬ್ಬನಿಂದ ಕೊಡಲ್ಪಡುವುದಿಲ್ಲ. ತನ್ನ ಪಾಪ-ಪುಣ್ಯಕ್ಕೆ ತಾನೇ ಹೊಣೆಗಾರ. ಗುರುಗಳಾದವರು ಕೇವಲ ಮಾರ್ಗದರ್ಶಕರು ಮಾತ್ರ. ಮಂತ್ರ-ತಂತ್ರಗಳಿಂದ ಮಕ್ಕಳ ಫಲ ಕೊಡುವ ಮಠಗಳ ಸಹವಾಸ ಮಾಡಬೇಡಿ. ದೇವರನ್ನು ಹೊರಗೆ ಅರಸದೆ, ನಿಮ್ಮ ಆತ್ಮದಲ್ಲಿಯೇ ಅವನನ್ನು ಕಾಣಲು ಪ್ರಯತ್ನಿಸಿ, ಸದಾ ಒಳ್ಳೆಯ ಕಾರ್ಯಗಳಲ್ಲಿ ತೊಡಗಿ, ನಿಮ್ಮ ಬಾಳು ಹಸನು ಮಾಡಿಕೊಳ್ಳಿ" ಎಂಬ ಮಾತುಗಳು ಅರ್ಥಗರ್ಭಿತವೂ, ಪ್ರಗತಿಪರ ಧೋರಣೆಯನ್ನು ಹೊಂದಿದುವೂ ಆಗಿವೆ. ಸಕಲ ದುಃಖಕ್ಕೆ ಅಜ್ಞಾನ ಮೂಲ. ಈ ಅಜ್ಞಾನವನ್ನು ಹೊಡೆದೋಡಿಸಲು ವಿದ್ಯೆ ಬೇಕು. ವಿದ್ಯೆಯ ಮಹತ್ವವನ್ನು ಹಳ್ಳಿ ಹಳ್ಳಿಗೆ ಹೋಗಿ ಸಾರಿದುದಲ್ಲದೆ ಅಲ್ಲಿ ಶಾಲೆಗಳನ್ನು ಸ್ಥಾಪಿಸಿ ವಿದ್ಯಾದಾನಕ್ಕೆ ಅನುಕೂಲಮಾಡಿಕೊಟ್ಟರು. ವಿದ್ಯೆ ಎಲ್ಲ ಮಾನವ ಕುಲದ ಸೊತ್ತೆಂಬುದನ್ನು ಸಾರಿದರು. ತಮ್ಮ ಪೀಠಾಧಿಕಾರದ ನಲವತ್ತು ವರ್ಷಗಳ ಅವಧಿಯಲ್ಲಿ ಅನೇಕ ಪ್ರಗತಿಪರ ಕಾರ್ಯಗಳನ್ನು ಮಾಡಿದರು. ಶ್ರೀಮಠದ ಉಸ್ತುವಾರಿಯಲ್ಲಿ ಇಂದು ೨೦೫ ಶಾಲೆಗಳು ನಡೆಯುತ್ತಿವೆ. ೩೫,೦೦೦ಕ್ಕೂ ಹೆಚ್ಚು ವಿದ್ಯಾರ್ಥಿಗಳು ಈ ಶಾಲೆಯಲ್ಲಿ ವಿದ್ಯಾರ್ಜನೆ ಮಾಡುತ್ತಿದ್ದಾರೆ. ೧೧,೦೦೦ ವಿದ್ಯಾರ್ಥಿಗಳಿಗೆ, ಯಾವುದೇ ಜಾತಿ ಭೇದವಿಲ್ಲದೆ ಉಚಿತ ಊಟ ಒದಗಿಸುವ ೭೦ ವಿದ್ಯಾರ್ಥಿನಿಲಯಗಳಿವೆ. ಇದರ ಪ್ರಯೋಜನವನ್ನು ಪ್ರತಿಶತ ಶೇ. ೯೦ ರಷ್ಟು ಗ್ರಾಮೀಣ ಭಾಗದ ಬಡಮಕ್ಕಳು ಪಡೆಯುತ್ತಿದ್ದಾರೆ. ಒಂದು ಸರ್ಕಾರ ಮಾಡುವ ಕೆಲಸವನ್ನು ಶ್ರೀಗಳವರು ಮಠದ ಮೂಲಕ ಮಾಡಿದುದನ್ನಿಲ್ಲಿ ಬಣಕಾರರು ವರ್ಣಿಸಿರುವರು.

ಬಸವಣ್ಣ ಬಯಸಿದ ಸಮಗ್ರ ಸಾಮಾಜಿಕ ಪರಿವರ್ತನೆ ಶ್ರೀಗಳ ಕನಸಾಗಿತ್ತು. ಈ ಕನಸನ್ನು ನನಸಾಗಿಸಲು ಅವರು ಅವಿರತ ಶ್ರಮಿಸಿದರು. ಶ್ರೀಮಠದಲ್ಲಿ ಹರಿಜನ ಅಡಿಗೆಯವನೊಬ್ಬನನ್ನು ನೇಮಿಸಿಕೊಂಡದ್ದು ಸಾಮಾನ್ಯ ವಿಷಯವೇನಲ್ಲ, ಇದು ಸಂಪ್ರದಾಯವಾದಿ ಮಠಾಧೀಶರು ಕೆರಳಲು ಕಾರಣವಾಯಿತು. ಆದರೆ ಶ್ರೀಗಳು ಧೃತಿಗೆಡಲಿಲ್ಲ. ಇಡೀ ಸಮಾಜವೇ ವಿರೋಧಗೊಂಡರೂ ಲೆಕ್ಕಿಸದೆ, ತಮಗೆ ಸರಿಕಂಡದ್ದನ್ನು ಕಾರ್ಯರೂಪದಲ್ಲಿ ಇಳಿಸಿದುದನ್ನು ಬಣಕಾರರು ಚಿತ್ರಿಸಿದ್ದು ಸಮಂಜಸವಾಗಿದೆ.

ಶ್ರೀಗಳು ಕಾಯಕದಲ್ಲಿ ಕೈಲಾಸ ಕಂಡವರು. ಅವರು ಸ್ವತಃ ವಿದ್ಯಾರ್ಥಿಗಳೊಂದಿಗೆ ಕಲ್ಲು ಮಣ್ಣು ಹೊತ್ತು ಶಿಕ್ಷಣ ಸಂಸ್ಥೆಗಳನ್ನು ಕಟ್ಟಿದರು. ಶಿಸ್ತು, ಸಮಯಪಾಲನೆ, ಪ್ರಾಮಾಣಿಕತೆ ಅವರ ಜೀವನದ ಉಸಿರಾಗಿದ್ದುವು. ಶ್ರೀಗಳು ನ್ಯಾಯನಿಷ್ಠುರರು, ಸತ್ಯ ಪ್ರತಿಪಾದಕರು. ಅನ್ಯಾಯ ಎಲ್ಲೇ ನಡೆಯಲಿ ಅದನ್ನು ಪ್ರತಿಭಟಿಸದೇ ಬಿಡುತ್ತಿರಲಿಲ್ಲ. ಅವರು ಸಾಹಿತ್ಯಪ್ರೇಮಿಗಳಾಗಿದ್ದರು.

ಸ್ವತಃ ಸಾಹಿತಿಗಳೂ ಆಗಿದ್ದರು. 'ವಿಶ್ವಬಂಧುಮರುಳಸಿದ್ಧ', 'ಮರಣವೇ ಮಹಾನವಮಿ', 'ಶರಣಸತಿ-ಲಿಂಗಪತಿ', 'ಶಿವಕುಲ' ಮುಂತಾದ ನಾಟಕಗಳನ್ನು ರಚಿಸಿದ್ದಾರೆ. ವಿಶ್ವಬಂಧು ಮರುಳಸಿದ್ಧನ ಜೀವನಕ್ಕೆ ಸಂಬಂಧಪಟ್ಟ ಹಲವಾರು ಲೇಖನಗಳನ್ನು ಬರೆದಿದ್ದಾರೆ. ಶ್ರೀಗಳವರ ಆಶೀರ್ವಚನಗಳ ಸಂಗ್ರಹ 'ಶತಮಾನೋತ್ಸವ ಸಂದೇಶ'ಗಳು ಮೌಲಿಕವಾಗಿವೆಯೆಂಬುದನ್ನಿಲ್ಲಿ ನಿರೂಪಿಸಲಾಗಿದೆ.

ಜನ ಮಾನಸದಲ್ಲಿ ಧಾರ್ಮಿಕ ಪ್ರಜ್ಞೆಯನ್ನು ಜಾಗ್ರತಗೊಳಿಸಲು ಶ್ರೀಗಳವರು ಶ್ರೀಮಠದಲ್ಲಿ ಪ್ರವಚನ, ವಚನ ಸಂಗೀತ, ನಾಟಕ, ಶರಣ ಸಮ್ಮೇಳನ, ತರಳಬಾಳು ಹುಣ್ಣಿಮೆಯಂಥ ಕಾರ್ಯಕ್ರಮಗಳನ್ನು ನಡೆಸಿದರು. ಇವು ಇಂದಿಗೂ ಮುಂದುವರಿದುಕೊಂಡು ಬಂದುದನ್ನು ಕಾಣುವೆವು.

ಶ್ರೀಗಳವರು 'ಮಠದಿಂದ ಘಟವಲ್ಲ, ಘಟದಿಂದ ಮಠ'ವೆಂದು ನಂಬಿ ನಡೆದವರು. ಪೀಠಕ್ಕೆ ಅಂಟಿಕೊಂಡು ಕೂತವರಲ್ಲ. ತಮಗೆ ಅರವತ್ತು ವರ್ಷ ವಯಸ್ಸಾದೊಡನೆ ಅಧಿಕಾರದಲ್ಲಿ ಮುಂದುವರಿಯಲಾರೆ ಎಂದು ಪ್ರಕಟಿಸಿದರು. ತಮ್ಮ ನಂತರ ೧೧.೦೨.೧೯೭೯ ರಂದು ಡಾ. ಶಿವಮೂರ್ತಿ ಶಿವಾಚಾರ್ಯರಿಗೆ ಪಟ್ಟಗಟ್ಟಿ, ಅಧಿಕಾರ ವಹಿಸಿಕೊಟ್ಟು ತಾವು ಮುತ್ತುಗದೂರ ಹಳ್ಳದ ದಂಡೆಯ ಮೇಲಿರುವ ಗುರುಶಾಂತ ಶಾಂತಿನಿಕೇತನಕ್ಕೆ ತೆರಳಿದರು. ಅಲ್ಲಿ ಪೂಜೆ ಧ್ಯಾನದಲ್ಲಿ ನಿರತರಾದರು. ಈ ರೀತಿ ತಮ್ಮ ಬದುಕನ್ನು ಸಾರ್ಥಕ ಪಡಿಸಿಕೊಂಡು ೨೪.೦೯.೧೯೯೨ ರಂದು ಲಿಂಗೈಕ್ಯರಾದರು.

ಬಣಕಾರರು ಶ್ರೀ ಶಿವಕುಮಾರ ಸ್ವಾಮಿಗಳ ಬದುಕು-ಸಾಧನೆ ಸಿದ್ಧಿಗಳನ್ನು ತಮ್ಮ ಕಾವ್ಯದಲ್ಲಿ ಕಣ್ಣಿಗೆ ಕಟ್ಟುವ ಹಾಗೆ ಚಿತ್ರಿಸಿದ್ದಾರೆ. ಶ್ರೀಗಳವರ ಪ್ರಗತಿಪರ ವಿಚಾರಗಳನ್ನು, ಶೈಕ್ಷಣಿಕ ಸಾಧನೆಗಳನ್ನು ಇಲ್ಲಿ ದಾಖಲಿಸಲಾಗಿದೆ. 'ಮಠಾಧೀಶನೂ ಒಬ್ಬ ಸಾರ್ವಜನಿಕ ಸೇವಕ'ನೆಂದು ಶ್ರೀಗಳು ನಂಬಿ ನಡೆದವರು. ಅವರು ಮಠಗಳ ಮೇಲಿದ್ದ ಜಾತಿವಾದದ ಕಳಂಕವನ್ನು ತಮ್ಮ ಕಾರ್ಯವೈಖರಿಯಿಂದ ತೊಡೆದು ಹಾಕಿದುದರ ವರ್ಣನೆಯನ್ನು ಈ ಕಾವ್ಯದುದ್ದಕ್ಕೂ ಕಾಣುವೆವು. ಶ್ರೀಗಳು ಶೋಷಣೆಯ ವಿರುದ್ಧ ಬಂಡೆದ್ದು, ಕ್ರಾಂತಿಕಾರಿ ಆಚಾರ-ವಿಚಾರಗಳ ಮೂಲಕ, ಧಾರ್ಮಿಕ-ಶೈಕ್ಷಣಿಕ-ಸಾಮಾಜಿಕ ರಂಗಗಳಿಗೆ ಹೊಸ ಆಯಾಮ ನೀಡಿದವರು. ಇಂಥ ಅಪರೂಪದ ವ್ಯಕ್ತಿತ್ವವನ್ನು ಹೊಂದಿದ ಲಿಂ. ಜಗದ್ಗುರು ಶಿವಕುಮಾರ ಶಿವಾಚಾರ್ಯರ ಹೋರಾಟಮಯ ಜೀವನವನ್ನು ಕಾವ್ಯರೂಪದಲ್ಲಿ ಬರೆದು ಮಹದೇವ ಬಣಕಾರರು ಮಹದುಪಕಾರ ಮಾಡಿದ್ದಾರೆ. ಶ್ರೀಗಳ ವಿಚಾರಗಳು ಆದರ್ಶಪ್ರಾಯವೂ, ಅನುಕರಣೀಯವೂ ಆಗಿವೆ. ಇಂಥವರ ಚರಿತ್ರೆಯನ್ನು ಕಾವ್ಯರೂಪದಲ್ಲಿ ಹಿಡಿದಿಟ್ಟು ಬಣಕಾರರು ಶ್ರೀಗಳವರನ್ನು ಅಮರರಾಗಿಸಿದ್ದಾರೆ; ತನ್ಮೂಲಕ ತಾವೂ ಅಮರರಾಗಿದ್ದಾರೆ.

■■

ಕನ್ನಡ ನಾಡಿನ ವೀರಶೈವ ಚಿತ್ರಕಲಾವಿದರು

✍ ಎಲ್. ಶಿವಲಿಂಗಪ್ಪ

ಕಲೆಯು ಜಾತಿ, ಮತ, ಪಂಥವನ್ನು ಮೀರಿದುದು. ಅದಕ್ಕೆ ಜಾತಿಯ ಸಂಕೋಲೆಗಳನ್ನು ತೊಡಿಸಿ, ಆ ಮೂಲಕ ಗುರ್ತಿಸುವುದು ಸಮಂಜಸವಲ್ಲ ಎಂಬುದು ಸರ್ವಮಾನ್ಯವಾದ ವಿಷಯ. ಒಂದು ಸಮಾಜದ ಅಥವಾ ಸಂಸ್ಕೃತಿಯ ಬೆಳವಣಿಗೆಯಲ್ಲಿ ಅದು ವಹಿಸಿದ ಪಾತ್ರವನ್ನು ವಿವೇಚಿಸುವಾಗ, ನಾವು, ನಮ್ಮಲ್ಲಿರುವವರು ಎಷ್ಟರಮಟ್ಟಿಗೆ ಸ್ಪಂದಿಸಿದ್ದಾರೆ, ಅವರ ಕಾಣ್ಕೆಯೇನು ಎಂಬುದನ್ನು ತಿಳಿಯಲು, ಇತರರೊಡನೆ ಹೋಲಿಸಿ ಪರಾಮರ್ಶಿಸಿಕೊಳ್ಳಲು, ನಾವು ನಮ್ಮಲ್ಲಿರುವ ಕಲಾವಿದರನ್ನು ಗುರುತಿಸಿಕೊಳ್ಳುವ, ಅವರ ಸಾಧನೆ ಸಿದ್ಧಿಗಳನ್ನು ಮುಂದಿನ ಪೀಳಿಗೆಗೆ ತಿಳಿಯಪಡಿಸುವ ಕೆಲಸ ಅಗತ್ಯವಾಗಿದೆ.

ಅಖಂಡ ಕರ್ನಾಟಕವಾಗುವ ಮುನ್ನ ಕನ್ನಡ ಪ್ರದೇಶಗಳು ಹೈದ್ರಾಬಾದ್ ಕರ್ನಾಟಕ, ಮುಂಬೈ ಕರ್ನಾಟಕ, ಹಳೇಮೈಸೂರು, ದಕ್ಷಿಣ ಕನ್ನಡ, ಉತ್ತರಕನ್ನಡ -ಹೀಗೆ ಹರಿದು ಹಂಚಿಹೋಗಿ, ಮಹಾರಾಷ್ಟ್ರ, ಆಂಧ್ರ, ತಮಿಳುನಾಡು, ಕೇರಳದಂತಹ ಪಕ್ಕದ ರಾಜ್ಯಗಳಿಗೆ ಸೇರಿ ಹೋಗಿದ್ದವು. ಬಹುತೇಕ ಹಿಂದಿನ ಕಲಾವಿದರು ಅಲ್ಲಲ್ಲಿಯೇ ನೆಲೆಸಿ, ಆ ಮಣ್ಣಿನ ಗುಣಲಕ್ಷಣದೊಳಗೆ ಬೆರೆತು ತಮ್ಮತನವನ್ನು ಆ ವ್ಯಾಪ್ತಿಯೊಳಗೆ ಸಮ್ಮತಿಸಿಕೊಂಡ ಕಾರಣ ಗುರುತಿಸುವುದು ಕಷ್ಟಸಾಧ್ಯವಾದ ಕೆಲಸವಾಗಿದೆ. ೧೯ನೇ ಶತಮಾನದಿಂದೀಚೆಗಿನ ಚಿತ್ರ ಅಥವಾ ಶಿಲ್ಪ ಕಲಾವಿದರನ್ನು ಗುರ್ತಿಸಬಹುದೇ ಹೊರತು ಅದರ ಹಿಂದಿನದು ಬಹಳ ಕಷ್ಟಸಾಧ್ಯವಾದುದು. ಸ್ವಾತಂತ್ರ್ಯದ ನಂತರದಲ್ಲಿ ಕಲಾಶಾಲೆಗಳು ಬೆಳೆದ ಪ್ರಯುಕ್ತ ಕಲಾಕಾರರ ಸಂಖ್ಯೆಯೂ ಬೆಳೆಯಿತು; ಬೆಳೆಯುತ್ತಲೂ ಇವೆ. ಮುದ್ರಣದ ತಂತ್ರಜ್ಞಾನ, ಪ್ರಚಾರ ಬೆಳೆದಂತೆ ಕಲೆ, ಕಲಾವಿದರು ಬೆಳೆಯುತ್ತಿದ್ದಾರೆ. ಇವರೆಲ್ಲರನ್ನು ಗುರ್ತಿಸುವಾಗಲೂ ನಮಗೊಂದು ತೊಡಕು ಕಾಣುತ್ತಿದೆ. ಅದೇ ಪುಟಸಂಖ್ಯಾಮಿತಿ. ನಮ್ಮವರ ಸಾಧನೆ ಸಾಕಷ್ಟಿದ್ದರೂ, ಒಂದು ಬೃಹತ್ ಗ್ರಂಥಕ್ಕೆ ಸಾಕಾಗುವಷ್ಟು ವಿಷಯವಿದ್ದರೂ ಸಂಕ್ಷಿಪ್ತಗೊಳಿಸಬೇಕಾಗಿದೆ. ನಮ್ಮೊಡನೆ ಇರುವ ಎಲ್ಲಾ ಕಲಾವಿದರುಗಳಿಗೆ ಗುರುಗಳಾಗಿದ್ದವರ ಕೆಲವರ ವಿಚಾರಗಳನ್ನು ಸ್ವಲ್ಪ ವಿವರವಾಗಿ ತಿಳಿಸಿ, ಉಳಿದಂತೆ ಸಂಕ್ಷಿಪ್ತಗೊಳಿಸಿ ಅವರ ಊರು, ಹೆಸರು, ಪಡೆದ ಪ್ರಶಸ್ತಿ, ಜೊತೆಗೆ ಎಲ್ಲಿ ಕಲಾವಿದರಾಗಿ ಕಾರ್ಯನಿರ್ವಹಿಸುತ್ತಿದ್ದಾರೆಂಬುದರ ಮಾಹಿತಿಯನ್ನು ಒಂದೆರಡು ಸಾಲಿನಲ್ಲಾದರೂ ತಿಳಿಸುವ ಯತ್ನ ನಮ್ಮದಾಗಿದೆ. ಈ ಸಂದರ್ಭದಲ್ಲಿ ನಮ್ಮ ಅರಿವಿಗೆ ಬಾರದೆ ಕೆಲವರು ಬಿಟ್ಟುಹೋಗಿರಲೂ ಬಹುದು ಅಥವಾ ಸಾಧನೆಗಳ ಮಾಹಿತಿ ಸಂಗ್ರಹದಲ್ಲಿ ವ್ಯತ್ಯಯಗೊಂಡಿರಲೂಬಹುದು. ಮಾನ್ಯ ಓದುಗರು ಲಿಖಿತ ಮೂಲಕ ತಿಳಿಸಿದಲ್ಲಿ ತಿದ್ದಿಕೊಳ್ಳಲು ಸಹಾಯವಾಗುತ್ತದೆ.

ಮತಕೂರು ನಂಜುಂಡ ಶಿವಯೋಗಿಗಳು (೧೮೨೭-೧೯೨೫)

ಕಾವ್ಯ ರಚನೆಗೆ ರಸ, ಅಲಂಕಾರ ಮುಖ್ಯವೆನಿಸಿದಂತೆ ಚಿತ್ರರಚನೆಗೆ ರೂಪ, ವರ್ಣ ಮುಖ್ಯವೆನಿಸುತ್ತದೆ. ಕಾವ್ಯ - ಚಿತ್ರರಚನೆಗೆ ಪ್ರೇರಕವಾಗಬಹುದು. ಹಾಗೆಯೇ ಚಿತ್ರವೂ ಕಾವ್ಯಕ್ಕೆ ಪ್ರೇರಕವಾಗಬಹುದು. ಈ ಎರಡೂ ವಿಭಿನ್ನ ನೆಲೆಯವು. ಈ ಎರಡೂ ಒಬ್ಬರಲ್ಲಿಯೇ ಸಮ್ಮಿಳನಗೊಳ್ಳುವುದು ಅಪರೂಪ. ಇದೆಲ್ಲದರ ಜೊತೆಗೆ ಸನ್ಯಾಸಿತನ ಸೇರುವುದಂತೂ ಅತಿ ವಿರಳ. ಈ ಮೂರು ಮುಪ್ಪುರಿಗೊಂಡು ಅದ್ವಿತೀಯ ಸಾಧನೆಗೈದ ಮತಕೂರಿನ ನಂಜುಂಡ ಶಿವಯೋಗಿಗಳ ಸಾಧನೆ ಅನನ್ಯ.

ಬೆಂಗಳೂರು ಗ್ರಾಮಾಂತರ ಜಿಲ್ಲೆ ಹೆಸರಘಟ್ಟದ ಬಳಿಯ ಮತಕೂರಿನವರು. ಇವರು ಅಲ್ಲಿನ ಸೋಮೇಶ್ವರ ದೇವಾಲಯದಲ್ಲಿ ಕಾವ್ಯಾಭ್ಯಾಸ, ಶಾಸ್ತ್ರಗಳ ಅಧ್ಯಯನ ಮಾಡಿ, ಹೆಚ್ಚಿನ ಶಿಕ್ಷಣಕ್ಕಾಗಿ ಕಾರದ ಸ್ವಾಮಿಗಳೊಡನೆ ಕಾಶಿಗೆ ಪಯಣ ಬೆಳೆಸಿದರು. ಅಲ್ಲಿ ಇತರ ಭಾಷಾಕಲಿಕೆಗೆ ಅವಕಾಶ, ನಂತರ ಕಾವ್ಯರಚನೆಗೆ ಪ್ರೇರಣೆ. ಅದು ರಾಜರ ಹೊಗಳಿಕೆಗಾಗಿ ಅಲ್ಲ, ಮಂತ್ರಿ ಮಹೋದಯರ ಮರ್ಜಿಯಂತೂ ಬೇಕಿಲ್ಲ, ಅಪ್ಪಟ ದೈವಭಕ್ತಿಯೇ ಕಾವ್ಯದ ಜೀವಾಳ. ಸುರಭಾಂಡೇಶ್ವರ ಉಪಾಖ್ಯಾನ, ಹಾಲಾಹಲ ಭಕ್ಷಣೆಯ ಕತೆ, ಮಾರ್ಕಂಡೇಯ ಚರಿತೆ, ಶ್ರೀ ಅಟವಿಸ್ವಾಮಿಗಳ ಶಿಷ್ಯರಾದ ನಂತರ 'ಅಟವೀಶ್ವರ ಗುರುಭಕ್ತಿಸಾರ', ನಂತರ ಉದ್ವಾನ ಶ್ರೀಗಳನ್ನು ಕುರಿತ 'ಉದ್ದಾನೇಶ್ವರ ಕಂದ' -ಇವು ಸಾಹಿತ್ಯ ದೃಷ್ಟಿಯಿಂದ ಮುಖ್ಯವೆನಿಸುತ್ತವೆ.

ಚಿತ್ರಕಲಾ ದೃಷ್ಟಿಯಿಂದ ಇವರು ಯಾರ ಬಳಿಯಲ್ಲಿ ಕಲಿತರೆಂಬುದು ತಿಳಿಯುವುದಿಲ್ಲ ಎಂಬುದನ್ನು, ನಂಜುಂಡ ಶಿವಯೋಗಿಗಳನ್ನು ತಮ್ಮ ಪತ್ರಿಕೆಯ ಮೂಲಕವಾಗಿ ಪರಿಚಯಿಸಿದ ಡಾ. ಶಿವಮೂರ್ತಿ ಶಾಸ್ತ್ರಿಗಳು ಹೇಳುತ್ತಾರೆ. ಸ್ವಾಮಿಗಳ ಕಲಾರಚನೆ ಸಾಂಪ್ರದಾಯಿಕ ಶೈಲಿಯದು. ಕರ್ನಾಟಕ ಶೈಲಿ, ತಂಜಾವೂರು ಶೈಲಿ ಎಂಬೆರಡು ವಿಧಾನವಿದ್ದರೂ ಅದರ ಒಟ್ಟಾರೆ ವೀಕ್ಷಣೆಯಲ್ಲಿ ಒಂದೇ ತೆರನಾದಂತಿರುತ್ತವೆ. ಸ್ವಾಮಿಗಳದ್ದು ಕರ್ನಾಟಕ ಶೈಲಿ ಅಥವಾ ಮೈಸೂರು ಶೈಲಿಗೆ ಸಂಬಂಧಿಸಿದ್ದು. ನೂರಾರು ಚಿತ್ರ ರಚಿಸಿದ್ದರೂ, ಅವು ಎಲ್ಲೆಲ್ಲಿ ಅಡಕಗೊಂಡಿವೆಯೆಂಬುದು ನಿಗೂಢವಾಗಿದೆ. ಲಭ್ಯವಿರುವುದು ಸರ್ವಸಿದ್ಧಿ ಗಣಪತಿ, ಚಂದ್ರಶೇಖರ, ಉಮಾಮಹೇಶ್ವರ, ನಂದಿವಾಹನ, ಅಂಧಕಾಸುರ ಸಂಹಾರ, ಸುಂದರೇಶ್ವರ, ಕಲ್ಯಾಣ ಸುಂದರ ಮೂರ್ತಿ, ತಾಂಡವಮೂರ್ತಿ ಮುಖ್ಯವೆನಿಸುತ್ತವೆ. ಯಾರ ಯಾರ ಮನೆಯಲ್ಲಿವೆ ಎಂಬುದರ ಕ್ಷೇತ್ರಕಾರ್ಯ ನಡೆದರೆ ಹೆಚ್ಚಿನ ಮಾಹಿತಿಗೆ ಅವಕಾಶವಾದೀತು. ಒಟ್ಟಾರೆ ಲಭ್ಯವಿರುವ ವೀರಶೈವ ಚಿತ್ರಕಲಾವಿದರಲ್ಲಿ ಇವರು ಮೊದಲಿಗರಾಗುತ್ತಾರೆ.

ಶಾಂತಲಿಂಗಪ್ಪ ಪಾಟೀಲ್ (೧೮೮೨-೧೯೭೬)

ಗುಲ್ಬರ್ಗ ಜಿಲ್ಲೆ ಆಳಂದ ತಾಲ್ಲೂಕಿನ ನಿಂಬಾಳ ಗ್ರಾಮದವರು. ಮುಂಬೈನ ಜೆ.ಜೆ. ಕಲಾ ಶಾಲೆಯಲ್ಲಿ ಶ್ರೇಷ್ಠ ವರ್ಣ ಚಿತ್ರಗಾರ ಹಲದಂಕರರವರ ಮಾರ್ಗದರ್ಶನದಲ್ಲಿ ಕಲಾಭ್ಯಾಸ, ಘಡಕೆ ಎಂಬುವವರಿಂದ ಮಾಡಲಿಂಗ್ ಕಲಿಕೆ, ಹೈದರಾಬಾದಿನ ಸಾಲಾರಜಂಗ ಮ್ಯೂಸಿಯಂನಲ್ಲಿ ಅಂದಿನ ನವಾಬರ, ನಿಜಾಮರ ಮನೆಯಲ್ಲಿ ಸಾಕಷ್ಟು ಚಿತ್ರಗಳಿವೆ. ಸ್ವಾತಂತ್ರ ಪೂರ್ವದಲ್ಲಿ ಹೋರಾಟಗಾರರ ಚಿತ್ರ ಬರೆದು ಪ್ರದರ್ಶಿಸುತ್ತಿದ್ದ ಪರಿಣಾಮ ಬ್ರಿಟಿಷ್ ಸೈನ್ಯ ಸಾಕಷ್ಟು ಧ್ವಂಸ ಮಾಡಿದ ಕಾರಣ ಹೆಚ್ಚಿನ ಚಿತ್ರಗಳು ಲಭ್ಯವಿಲ್ಲ.

ಕಲಾಗುರು ದಂಡಾವತಿಮಠ (೧೯೦೦-೧೯೭೮)

ದಿನದಲ್ಲಿ ಕನಿಷ್ಟ ಒಂದು ಗಂಟೆಯಾದರೂ ಚಿತ್ರ ರಚಿಸಲೇಬೇಕೆಂಬ ನಿಯಮವನ್ನು ಪಾಲಿಸಿಕೊಂಡು ಬಂದವರಿವರು. ಇದು ನನ್ನ ಗುರುವಿನಾಣತಿ ಎನ್ನುತ್ತಿದ್ದರು. ವ್ಯಕ್ತಿಯನ್ನು ಕೂರಿಸಿಕೊಂಡು ಅವರಂತೆ ಚಿತ್ರಿಸಿರುವುದು, ಅಥವಾ ಛಾಯಾಚಿತ್ರವೊಂದನ್ನು ಪಡೆದು ಅದರಂತೆ ಬರೆದುಕೊಡುವುದು ನಾವೆಲ್ಲಾ ಕಲಿತಿರುವ ವಿಧಾನ. ಆದರೆ ಆ ವ್ಯಕ್ತಿಯ ಚಹರೆ, ರೂಪ, ಬಣ್ಣ, ಆಕಾರ ಇವುಗಳನ್ನು ಕೇಳಿ ಅದರಂತೆ ಅವರ ಮನಸ್ಸಿಗೆ ಒಮ್ಮತವಾಗುವಂತೆ ಚಿತ್ರಿಸಿಕೊಡುವುದು ಕಷ್ಟದಾಯಕವಾದದ್ದು. ಆದರೆ ದಂಡಾವತಿ ಮಠರವರಿಗೆ ಅದು ಸಾಧ್ಯವಾಗಿತ್ತು. ಅಂದರೆ ಗ್ರಹಿಕೆ, ಅದರಂತೆ ಬರೆಯುವಿಕೆಗಳನ್ನು ಸಿದ್ಧಿಸಿಕೊಂಡಿದ್ದ ಮಹಾಗುರು. ಕಡುಬಡತನದಿಂದಲೇ ಬಂದ ಇವರು ಮುಂಬೈನ ಜೆ.ಜೆ. ಸ್ಕೂಲಿನಲ್ಲಿ ಸೇರಿ ತಮ್ಮ ಕಲಾಭ್ಯಾಸ ಪೂರೈಸಿ, ಅಲ್ಲಿಯೇ ನೆಲೆನಿಂತು ನೂತನ ಕಲಾಮಂದಿರ ಸ್ಥಾಪಿಸಿ (೧೯೩೨) ಕರ್ನಾಟಕದಿಂದ ಬಂದವರಿಗೊಂದು ದಾರಿದೀಪವಾದರು. ತಾವು ಅನುಭವಿಸಿದ ನೋವಿನ ಅರಿವು ಅವರಿಗೆ ಸದಾ ನೆನಪಾಗುತ್ತಿದ್ದ ಕಾರಣ, ಜೆ.ಜೆ. ಸ್ಕೂಲಿನಲ್ಲಿ

ಕಲಿಯಲು ಅವಕಾಶ ಸಿಗದೆ ವಂಚಿತರಾದವರಿಗೆ, ಶಾಲಾ ಶುಲ್ಕ ಕಟ್ಟಲು ಶಕ್ಯವಿಲ್ಲದವರಿಗೆ ದಂಡಾವತಿಮಠರವರೇ ಗುರು, ಆಶ್ರಯದಾತ, ತಂದೆ. ಹೀಗೆ ಎಲ್ಲವೂ ಆದ ಗುರುತ್ವದ ಹಿರಿಯ ಗುಣ ಅವರದು. ಇವರ ಶಿಷ್ಯ ಸಮೂಹ ದೊಡ್ಡದೇ. ಅಂತರರಾಷ್ಟ್ರೀಯ ಖ್ಯಾತಿ ಪಡೆದ ಕೆ.ಕೆ. ಹೆಬ್ಬಾರ್. ಎ.ಎಂ. ಅಲಮೇಲಕರ, ಎಸ್.ಎಂ. ಪಂಡಿತ, ಲಕ್ಷ್ಮಣ ಪೈ ಗಾಯತೊಂಡೆ, ಬರಾಸ್ಕರ, ದಯಾನಂದ ಶೆಟ್ಟಿ, ಸಾಬನ್ನವರ್, ಇಂತಹ ಅನೇಕರು. ಇವರು ಕಟ್ಟಿದ ಸಂಸ್ಥೆ ೧೯೫೮ ರಲ್ಲಿ ಬೆಳ್ಳಿ ಹಬ್ಬ ಆಚರಿಸಿತು. ೧೯೬೭ರಲ್ಲಿ ಪ್ರಿನ್ಸಿಪಾಲ್ ಪದವಿಯಿಂದ ನಿರ್ಗಮಿಸಿ ತಾಯ್ನಾಡಾದ ಧಾರವಾಡದಲ್ಲಿ ಸಣ್ಣ ಮನೆಯಲ್ಲಿ ನೆಲೆಸಿ ಜೀವಿತದ ಕೊನೆಯವರೆಗೂ ಕಲಿಸುವ ಕೆಲಸ ಮಾಡುತ್ತಲೇ ಇದ್ದರು. ಕಲೆಗೆ ಸಂಬಂಧಿಸಿದ ಪರೀಕ್ಷಾ ಮಂಡಲಿ, ಪಠ್ಯವಿವೇಚನ ಸಮಿತಿ, ಪ್ರದರ್ಶನ ಸಮಿತಿ -ಹೀಗೆ ಹಲವಾರು ಸಮಿತಿಗಳಲ್ಲಿ ಅವರು ಸೇವೆಸಲ್ಲಿಸಿದ್ದು ಇವರಿಗೆ ೧೯೬೯ರಲ್ಲಿ, ಕರ್ನಾಟಕ ಲಲಿತ ಕಲಾ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಿತು. ಈಗಿನ ಹಾಗೆ ಪ್ರಶಸ್ತಿಗಳಿದ್ದರೆ ಪ್ರಥಮವಾಗಿ ವೆಂಕಟಪ್ಪ ಪ್ರಶಸ್ತಿ, ದೊರಕುತ್ತಿತ್ತೋ ಏನೋ! ಆದರೆ ಕಲಾವಿದರೆಲ್ಲರೂ ನೆನಸಬಹುದಾದ ರೀತಿಯಲ್ಲಿ ಇರುವುದೇ ಎಲ್ಲಾ ಪ್ರಶಸ್ತಿಗಳಿಗಿಂತ ದೊಡ್ಡದು ಎಂಬುದನ್ನು ಮರೆಯುವ ಹಾಗಿಲ್ಲ.

ಎಂ.ವಿ. ಮಿಣಜಗಿ (೧೯೦೧-೧೯೭೯)

ಹಿಂದಿನ ತಲೆಮಾರಿನ ಕರ್ನಾಟಕದ ಕಲಾವಿದರಲ್ಲಿ ವಿದೇಶಕ್ಕೆ ಹೋಗಿ ಕಲಾಭ್ಯಾಸ ಮಾಡಿ ಬಂದವರೊಬ್ಬರೇ ಎಂ.ವಿ. ಮಿಣಜಗಿಯವರು ಎನ್ನಬಹುದು. ಮುಂಬೈನ ಜೆ.ಜೆ. ಸ್ಕೂಲ್ ಆಫ್ ಆರ್ಟ್‌ನಲ್ಲಿ ಆರ್ಟ್‌ಮಾಸ್ಟರ್ ಮತ್ತು ಡಿಪ್ಲೋಮೊ ಇನ್ ಪೇಂಟಿಂಗ್‌ಗಳಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿ ಇಂಗ್ಲೆಂಡಿನ ರಾಯಲ್ ಕಾಲೇಜ್ ಆಫ್ ಆರ್ಟ್ಸ್‌ನಲ್ಲಿ ಉಚ್ಚವ್ಯಾಸಂಗ ಮಾಡಲು ಅವಕಾಶ ಪಡೆದು, (೧೯೨೯) ಮೂರು ವರ್ಷದ ಅಲ್ಲಿನ ಶಿಕ್ಷಣದ ನಂತರ ಎ.ಆರ್.ಸಿ. (ಲಂಡನ್) ಪದವಿ ಗಳಿಸಿದರು. (೧೯೩೨) ಫೋಟೋಲಿಥೊ, ಕ್ರೊಮೋಲಿಥೊ ಗ್ರಾಫ್‌ಗಳಂತಹ ಹೊಸ ಕಲಾ ಸಾಧನೆಯನ್ನು ಬೆಳೆಸಿಕೊಳ್ಳುವ ಸದಿಚ್ಛೆಯಿಂದ ಹುಬ್ಬಳ್ಳಿಯ ಮೂರು ಸಾವಿರ ಮಠದ ಅಂದಿನ ಜಗದ್ಗುರುಗಳಾದ ಗುರುಸಿದ್ಧ ಮಹಾಸ್ವಾಮಿಗಳವರು ಮಿಣಜಗಿಯವರ ನೇತೃತ್ವದಲ್ಲಿ ಕರ್ನಾಟಕ ಆರ್ಟ್ಸ್ ಎಜ್ಯುಕೇಷನ್ ಎಂಬ ಸಂಸ್ಥೆ ಸ್ಥಾಪಿಸಿದರು. ಇವರು ಅದರ ಮೊದಲ ಪ್ರಿನ್ಸಿಪಾಲ್ ಆಗಿ ಸಂಸ್ಥೆಯನ್ನು ಬೆಳೆಸಿದರು. ಅದೇ ಸಂಸ್ಥೆ ಮುಂದೆ ವಿಜಯ ಮಹಾಂತೇಶ ಕಲಾಮಹಾವಿದ್ಯಾಲಯವಾಗಿ ಉತ್ತಮ ಬೆಳವಣಿಗೆ ಕಂಡಿದೆ. ಇದರ ನೇತೃತ್ವದಲ್ಲೇ ಡ್ರಾಯಿಂಗ್ ಟೀಚರ್ಸ್ ಟ್ರೈನಿಂಗ್ ಇನ್ಸಿಟ್ಯೂಟ್ ಬೆಂಗಳೂರಿನಲ್ಲಿಯೂ, ಚಿತ್ರಕಲೆ ಮತ್ತು ಕೈಗಾರಿಕಾ ಕಲಾಶಾಲೆಯು ದಾವಣಗೆರೆಯಲ್ಲಿಯೂ ಆರಂಭವಾಯಿತು.

ಮಿಣಜಗಿಯವರ ಕಲಾರಚನೆಯನ್ನು ಗುರುತಿಸುವುದು ಅವರ ರಾಗಮಾಲಿಕಾ ಚಿತ್ರಗಳ ಮೂಲಕ (ಪೇಂಟಿಂಗ್ ಇನ್ ಮ್ಯೂಸಿಕ್) ಮಾಲಕಾಂಸ, ತೋಡಿ, ಗುರ್ಜರಿ, ಮೇಘ, ಮಲ್ಹಾರ, ಪಟಮಂಜರಿ, ಜೋಗಿಯಾ, ಅಸಾವೇರಿ ರಾಗಗಳಲ್ಲಿ ಬರುವ ಮಾಧುರ್ಯತೆ, ಶೃಂಗಾರ ಭಾವಗಳನ್ನು ಸೂಕ್ತ ವರ್ಣದೊಡನೆ ಚಿತ್ರಿಸಿದ್ದಾರೆ. ಶರಣಸಾಹಿತ್ಯ ಕುರಿತಂತೆ ಸುಮಾರು ಐವತ್ತು ಚಿತ್ರಗಳನ್ನು ರಚಿಸಿರುವರೆಂದು ತಿಳಿದು ಬರುತ್ತವೆಯಾದರೂ ಅವುಗಳು ಕ್ಯಾಲೆಂಡರ್ ರೂಪದಲ್ಲಿ ಅಥವಾ ಎಲ್ಲಿ ಮುದ್ರಣವಾಗಿವೆ ಎಂಬುದು ತಿಳಿದುಬರುವುದಿಲ್ಲ. ಭಿತ್ತಿಚಿತ್ರ ರಚನೆಯಲ್ಲಿ ಸಹ ಮೊದಲಿಗರಾದ ಇವರು ೧೯೬೪ರಲ್ಲಿ ಮೈಸೂರು ದಸರಾ ಮಹೋತ್ಸವದಲ್ಲಿ ಕುಂಚಬ್ರಹ್ಮ ಎಂಬ ಬಿರುದನ್ನು, ೧೯೬೭ರಲ್ಲಿ ಮೈಸೂರು ಲಲಿತಕಲಾ ಆಕಾಡೆಮಿ ಪ್ರಶಸ್ತಿ, ೧೯೭೬ ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್, ೧೯೭೮ರಲ್ಲಿ ಇಲಕಲ್ ಚಿತ್ತರಗಿ ವಿಜಯ ಮಹಾಂತೇಶ ಸಂಸ್ಥಾನದಿಂದ 'ಕರ್ನಾಟಕ ಕಲಾ ಸಾರ್ವಭೌಮ' ಮುಂತಾದ ಗೌರವಕ್ಕೆ ಪಾತ್ರರಾದ ಮಿಣಜಗಿಯವರು ಈಗ ಒಂದು ನೆನಪು ಮಾತ್ರ.

ಟಿ.ಪಿ. ಅಕ್ಕಿ (೧೯೦೮-೧೯೯೪)

ಅಕ್ಕಿಯವರ ಕುಟುಂಬ ಚಿತ್ರಕಲಾ ಶಿಕ್ಷಣಕ್ಕೆ ಮಹತ್ತರ ಕೊಡುಗೆ ನೀಡಿದೆ, ನೀಡುತ್ತಲೂ ಇದೆ. ಕುಟುಂಬದ ಹಿರಿಯ ಶಿವಾನಂದ ಅಕ್ಕಿ, ತಮ್ಮಂದಿರಾದ ಟಾಕಪ್ಪ ಪ್ರಭಪ್ಪ ಅಕ್ಕಿ (ಟಿ.ಪಿ. ಅಕ್ಕಿ), ಈಶ್ವರ ಅಕ್ಕಿ ಮುಂಬೈನ ಜೆ.ಜೆ. ಸ್ಕೂಲ್ ಆಫ್ ಆರ್ಟ್‌ನಲ್ಲಿ ಕಲಾಭ್ಯಾಸ ಮಾಡಿ, ನಂತರದಲ್ಲಿ ತಾವು ಕಲಿತಿರುವುದನ್ನು ಇತರರಿಗೂ ಕಲಿಸಬೇಕೆಂಬ ಹಂಬಲದವರಾಗಿದ್ದರು. ಶಿವಾನಂದ ಅಕ್ಕಿಯವರು ಮುಂಬೈನಲ್ಲಿಯೇ ಕಲಾಶಾಲೆ ತೆರೆದು, ಅದು ಹೆಚ್ಚುಕಾಲ ನಡೆಯಲಾರದೇ ಹೋದುದರಿಂದಾಗಿ ಜೊತೆಗೆ ಅವರಿಗೆ ಮಾನಸಿಕ ಅನಾರೋಗ್ಯವುಂಟಾಗಿ ಜೀವಿತದ ಬಹುಭಾಗವನ್ನು ಆ ಅವಸ್ಥೆಯಲ್ಲಿಯೇ ಕಳೆಯುವಂತಾದುದು ವಿಧಿ ಬರೆದ ಬರಹ. ಆದರೆ ಟಿ.ಪಿ. ಅಕ್ಕಿಯವರು ಅಣ್ಣನ ಅಸಾಯಕತೆಗೆ ಹಾಗೂ ಕೌಟುಂಬಿಕ ಸಮಸ್ಯೆಗೆ ತಾವೇ ಜವಾಬ್ದಾರಿ ಹೊತ್ತು ಎಲ್ಲಾ ಕಷ್ಟಗಳನ್ನು ನಿಭಾಯಿಸಿಕೊಂಡು ಗದಗನಲ್ಲಿ ವಿಜಯ ಕಲಾ ಮಂದಿರ ಸ್ಥಾಪಿಸಿ (೧೯೪೭) ಬಹು ಪ್ರಯಾಸದಿಂದ ಮುನ್ನಡೆಸಿದರು. ಎಲಿಮೆಂಟರಿ ಪೇಂಟಿಂಗ್‌ನಿಂದ ಹಿಡಿದು ಗವರ್ನಮೆಂಟ್ ಡಿಪ್ಲೊಮೊದವರೆಗೆ ಎಲ್ಲಾ ಪರೀಕ್ಷೆಗೂ ಮುಂಬೈ ಜೆ.ಜೆ. ಸ್ಕೂಲ್‌ಗೆ ಹೋಗಬೇಕಾದ ಅನಿವಾರ್ಯತೆ ಇತ್ತು. ಅದರ ಅನುಮತಿಯಿಂದಲೇ ಮುನ್ನಡೆಸಲು ಸಾಧ್ಯವಾಗುತ್ತಿತ್ತು. ಇಂತಹ ಸಂಕಷ್ಟಗಳಿಂದ ಮೇಲೆದ್ದು ಕರ್ನಾಟಕದಲ್ಲಿ ತಮ್ಮದೇ ಆದ ಅಸ್ತಿತ್ವ ಬೆಳೆಯಲು ಸಹಕಾರಿಯಾಗಿದ್ದು ಅಕ್ಕಿಯವರ ಪ್ರಯತ್ನದ ಫಲ. ಇಂದು ವಿಜಯ ಕಲಾಮಂದಿರ ವಿಜಯ ಕಲಾ ಮಹಾವಿದ್ಯಾಲಯವಾಗಿದೆ; ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ. ದಕ್ಷಿಣದ ಶಾಂತಿನಿಕೇತನವೆಂಬಂತೆ ಬೆಳವಣಿಗೆಯಾಗಿದೆ. ಅವರ ಪುತ್ರರಾದ ಅಶೋಕ ಅಕ್ಕಿ, ವಸಂತ ಅಕ್ಕಿ ಪ್ರಾಚಾರ್ಯರಾಗಿ ಜವಾಬ್ದಾರಿ ಹೊತ್ತಿದ್ದಾರೆ. ಉಳಿದ ಸಹೋದರರು ಕಲಾಸಂಸ್ಥೆಯ ಸರ್ವೋನ್ನತಿಗಾಗಿ ಸಹಕರಿಸುತ್ತಿದ್ದಾರೆ. ಟಿ.ಪಿ. ಅಕ್ಕಿಯವರು ತಾವು ಮಾತ್ರ ಬೆಳೆಯದೇ ಇತರರನ್ನು ಬೆಳೆಸಿದರು. ರಾಜ್ಯದ ಕಲಾಚರಿತ್ರೆಯಲ್ಲಿ ಗುರುತಿಸಬಹುದಾದ ಜಿ.ಬಿ. ವಾರಿ, ಡಾ. ಬಿ.ಕೆ. ಹೀರೆಮಠ, ಎಂ.ಜಿ. ವಾಡೇದ ಮಠ, ಆರ್.ಎಂ. ಹಡಪದ, ಆರ್.ಎಫ್. ಮಿಸ್ಕಿನ್, ಎಸ್.ಬಿ. ಸುಂಕದ್, ಎಸ್.ಕೆ. ಹೂಗಾರ, ಎಂ.ಆರ್. ಬಾಳಿಕಾಯಿ, ಎಸ್.ಎಂ. ಶಿರಹಟ್ಟಿ, ಇಂತಹ ನೂರಾರು ಪ್ರತಿಭಾನ್ವಿತರು ಈ ಶಾಲೆಯಿಂದ ಬಂದವರು. ರಾಜ್ಯ ಕಲಾಶಿಕ್ಷಣ ಮಂಡಲಿಯ (೧೯೬೨) ಆರಂಭದ ಸದಸ್ಯರಾಗಿ, ಧಾರವಾಡದ ಕರ್ನಾಟಕ ವಿಶ್ವ ವಿದ್ಯಾಲಯದ ಅಭ್ಯಾಸ ಪತ್ರಿಕೆ ಸಲಹೆಗಾರರಾಗಿ (೧೯೭೦), ಕೇಂದ್ರ ಲಲಿತಕಲಾ ಅಕಾಡೆಮಿ ಸದಸ್ಯರಾಗಿ (೧೯೭೨), ವಿಶ್ವ ಕನ್ನಡ ಸಮ್ಮೇಳನದ ಸಾಂಸ್ಕೃತಿಕ ಸಮಿತಿ ಸದಸ್ಯರಾಗಿ (೧೯೮೫), ರಾಜ್ಯದ ಲಲಿತಕಲಾ ಅಕಾಡೆಮಿ ಅಧ್ಯಕ್ಷರಾಗಿ (೧೯೮೧-೧೯೮೪) ತಮ್ಮ ೮೬ ವರ್ಷಗಳ ಇಹದ ಬಾಳನ್ನು ಕಳೆದು ೩೧-೩-೧೯೯೪ ರಲ್ಲಿ ಇಹಲೋಕ ತ್ಯಜಿಸಿದರಾದರೂ ಅವರು ಮಾಡಿದ ಕಲಾಸಂಸ್ಥೆಯಿಂದ ಕಲೆ ಜೀವಂತವಾಗಿ ಉಳಿದಿದೆ. ಅದರ ಮೂಲಕ ಅಕ್ಕಿಯವರ ಕುಟುಂಬವು ರಾಜ್ಯದ ಕಲಾಪ್ರಗತಿಯಲ್ಲಿ ಒಂದು ನೆನಪಾಗಿ ಉಳಿದಿದೆ.

ದಾನಪ್ಪ ಹಾಲಭಾವಿ (೧೯೦೭-)

ಕಲೆ ಮತ್ತು ಧಾರವಾಡ ಎರಡೂ ಅವಿನಾಭಾವ ಸಂಬಂಧವುಳ್ಳವು. ಧಾರವಾಡದ ಕರಿಮಣ್ಣಿನಿಂದ ಅರಳಿದ ಕಲಾಕುಸುಮಗಳು ನಾಡಿನೆಲ್ಲೆಡೆ ಕಂಪುಬೀರುತ್ತವೆ. ಆ ಮಣ್ಣಿನಲ್ಲಿ ಪ್ರಪ್ರಥಮವಾಗಿ ಕಲಾಮಂದಿರವನ್ನು ಸ್ಥಾಪಿಸಿದ ಕೀರ್ತಿ ಹಾಲಭಾವಿಯವರದು (೧೯೩೫). ಉತ್ತರ ಕರ್ನಾಟಕ ಭಾಗಕ್ಕೆ ಅದೇ ಮೊದಲ ಸಂಸ್ಥೆ. ಈ ಸಂಸ್ಥೆ ೧೯೬೨ರಲ್ಲಿ ಬೆಳ್ಳಿಹಬ್ಬವನ್ನು, ೧೯೮೫ ರಲ್ಲಿ ಸ್ವರ್ಣ ಮಹೋತ್ಸವವನ್ನು ಆಚರಿಸಿಕೊಂಡು ತನ್ನ ಹಿರಿಮೆಯನ್ನು ಎತ್ತಿ ಸಾರಿದೆ. ಶರಣ ಮನೆತನದಿಂದ ಬಂದ ಇವರು ತಮ್ಮ ತಂದೆ ಸಂಗ್ರಹಿಸಿದ, ಪೂಜಿಸಲ್ಪಡುತ್ತಿದ್ದ ಹಳೆಯ ಓಲೆಗರಿ ಗ್ರಂಥಗಳನ್ನು ಪರಿಶೀಲಿಸಿ ಚೆನ್ನಬಸವ ಪುರಾಣದ ಸನ್ನಿವೇಶಗಳನ್ನು ಚಿತ್ರಿಸುವ ಕೆಲಸ ಮಾಡಿದರು. ಪ್ರಭುಲಿಂಗಲೀಲೆ. ಶಂಕರ ದಾಸಿಮಯ್ಯ, ಗೋರಕನಾಥ, ಬಸವೇಶ್ವರ ಇತ್ಯಾದಿ ಶರಣರನ್ನು ಕುರಿತ ಚಿತ್ರಗಳಲ್ಲದೆ, ಕಿರಾತವೇಷದ ಶಿವ ಶಿವೆಯರ ಚಿತ್ರ, ವ್ಯಕ್ತಿಚಿತ್ರಗಳಾದ ರಾಜಾ

ಲಕಮನಗೌಡ, ಮಹಾತ್ಮಗಾಂಧಿ, ಬಿ.ಡಿ. ಜತ್ತಿ, ಡಾ. ಡಿ.ಸಿ. ಪಾವಟೆ ಮುಂತಾದ ಪ್ರಮುಖರ ಚಿತ್ರ ರಚಿಸಿದ್ದಾರೆ. ವಿದ್ಯೆ ಕಲಿಯಲು ವಯಸ್ಸು ಅಡ್ಡಬರುವುದಿಲ್ಲ. ಕಲಿಯಬೇಕೆನ್ನುವವರಿಗೆ ಎಲ್ಲವೂ ಸಾಧ್ಯ ಅನ್ನುವುದಕ್ಕೆ ಉದಾಹರಣೆಯಾಗಿ ತಮ್ಮ ೫೦ನೇ ವಯಸ್ಸಿನಲ್ಲಿ ಮೆಟ್ರಿಕ್ ಪೂರೈಸಿ ನಂತರ ಬಿ.ಎ. ಮಾಡಿದರೆಂಬುದು ತಿಳಿದುಬರುವ ಅಂಶ. ಜಮ್ಮು ಕಾಶ್ಮೀರಗಳಿಗೆ ಹೋಗಿ, ಡೊಗ್ರಾ ಕಾಂಗ್ರಾ ಕಲೆಯನ್ನರಿತು ಬಂದರು. ಉತ್ತರ ಕರ್ನಾಟಕದ ಪ್ರವಾಸಿ ತಾಣಗಳಾದ ಗೋಲಗುಮ್ಮಟ, ಹಂಪೆಯ ಚಿತ್ರಗಳನ್ನು ರಚಿಸಿದ್ದು ಅವುಗಳು ಇಂಗ್ಲೆಂಡ್, ಡೆನ್‌ಮಾರ್ಕ್, ಜಪಾನ್‌ಗಳಿಗಲ್ಲದೆ, ಭಾರತೀಯ ಒಕ್ಕಲುತನವನ್ನು ಕುರಿತು ರಚಿಸಿದ ಮೂವತ್ತು ಚಿತ್ರಗಳು ಅಮೆರಿಕಕ್ಕೆ ಮಾಡಿಕೊಟ್ಟಿದ್ದಾರೆ. ಕರ್ನಾಟಕದಲ್ಲಿ ಆ ಭಾಗದ ಮಠಗಳಿಗೆ ಸಹ ಸಾಕಷ್ಟು ಚಿತ್ರ ಮಾಡಿಕೊಟ್ಟಿದ್ದು, ಅವೆಲ್ಲವನ್ನು ಸಂಗ್ರಹಿಸುವ, ಒಂದೆಡೆ ನೋಡುವ ಅವಕಾಶ ಮಾತ್ರ ಆಗಿಲ್ಲವೆಂಬುದು ವಾಸ್ತವ ಸತ್ಯ. ಈ ಸಂಸ್ಥೆಯಿಂದ 'ಆರ್ಟವರ್ಲ್ಡ್' ಮಾಸಪತ್ರಿಕೆಯು ಕಾಂಟೆಂಪರರಿ ಆರ್ಟಿಸ್ಟ, ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು, ಸಿಲೋನ, ಜಮ್ಮು, ಕಾಶ್ಮೀರ ಕುರಿತ ಪ್ರವಾಸ ಕಥನಗಳು ಪ್ರಕಟವಾಗಿವೆ. ಹಾಲಭಾವಿಯವರ ಶಿಷ್ಯ ಸಂಪತ್ತು ಅಧಿಕ. ಅವರ ಪುತ್ರ ಸುರೇಶ ಹಾಲಭಾವಿ ಕಲಾಸಂಸ್ಥೆಯ ಪ್ರಾಚಾರ್ಯರಾಗಿ ಮುನ್ನಡೆಸುತ್ತಿದ್ದಾರೆ.

ಎಂ.ಎ. ಚೆಟ್ಟಿ (೧೯೦೭-೨೦೦೨)

ಶರಣರ ಬದುಕನ್ನು ಸಚಿತ್ರವನ್ನಾಗಿ ತೋರಿಸಿದ ಕಲಾವಿದರು ಯಾವುದೇ ವಸ್ತು ವಿಷಯಗಳ ಬಗ್ಗೆ, ಸಾಹಿತಿಯ ಬಗ್ಗೆ ಅಥವಾ ಸಂಶೋಧಕನೊಬ್ಬನ ಬಗ್ಗೆ ಪಿ.ಎಚ್.ಡಿ. ಮಾಡಿರುವುದನ್ನು ನಾವು ನೋಡಿದ್ದೇವೆ, ಕೇಳಿದ್ದೇವೆ. ಆದರೆ ಕರ್ನಾಟಕದ ಕಲಾವಿದರೋರ್ವರ ಬಗ್ಗೆ ಪಿ.ಎಚ್.ಡಿ ಮಾಡಿರುವ ಉದಾಹರಣೆಯಂತೂ ಇದುವರೆಗೆ ಇರಲಿಲ್ಲ, ಆದರೆ ಅದು ಸಾಧ್ಯವಾಗಿದೆ. ಆ ಸ್ಮರಣೀಯ ಕಲಾವಿದ ಬೇರಾರೂ ಅಲ್ಲ, ಶರಣ, ಸಂತನಂತಿದ್ದ ಮುರಿಗೆಪ್ಪ ಅಡಿವೆಪ್ಪ ಚೆಟ್ಟಿ. ಅಥಣಿಯಲ್ಲಿ ಶಿವಯೋಗಿಗಳ ಕೃಪಾಶೀರ್ವಾದದಿಂದ ಜನಿಸಿದರು (೮-೨-೧೯೦೭). ಗುರುಲಿಂಗಜಂಗಮ ಪ್ರೇಮಿಗಳು, ಅವರ ಮಾತಾ ಪಿತೃಗಳ ಆ ಸಂಸ್ಕಾರವೇ ಜೀವಿತದ ಕೊನೆಯವರೆಗೂ ಇತ್ತು. ತತ್ಫಲವಾಗಿಯೇ ಅವರು ಬರೆಯಲು ಆರಂಭಿಸಿದ ಯಾವ ಚಿತ್ರವೇ ಆಗಲಿ, ಕೆಟ್ಟದ್ದು, ಬೇಡವಾದದ್ದು ಎಂಬ ಭಾವನೆಯೇ ಬರದಂತೆ ಜನರನ್ನು ಆಕರ್ಷಿಸಿವೆ. ಕಲಾಶಿಕ್ಷಣ ಪಡೆದ ಜೆ.ಜೆ. ಸ್ಕೂಲ್ ಆಫ್ ಆರ್ಟ್‌ನಲ್ಲಿಯೇ, ಫೆಲೋ ಆಗಿ ಆಯ್ಕೆಗೊಂಡು (೧೯೩೨-೩೪) ಪ್ರಾರಂಭದಲ್ಲಿಯೇ ಇವರು ಬರೆದ ಮರದ ಬೊಡ್ಡೆ ಚಿತ್ರ, ಅದರ ನೈಜತೆಯನ್ನು ಯಥಾವತ್ತಾಗಿ ಬಿಂಬಿಸುವಂತಿದ್ದು, ಭಾರತದಲ್ಲಿ ಮಾತ್ರವಲ್ಲದೆ ಇಂಗ್ಲೆಂಡಿನಲ್ಲಿ ಸಹ ಪ್ರದರ್ಶಿಸಿತವಾಗಿ ಪ್ರಶಂಸಿಸಲ್ಪಟ್ಟಿತು. ಇವರು ಸುಮಾರು ಹತ್ತು ಸಾವಿರ ಕಲಾಚಿತ್ರಗಳನ್ನು ರಚಿಸಿದ ಧೀಮಂತ ಕಲಾವಿದ. ಛಾಯಾಚಿತ್ರ (ಫೋಟೋಗ್ರಫಿ) ಅಂದು ಜನಪ್ರಿಯವಾಗಿರಲಿಲ್ಲವಾದ್ದರಿಂದ ಭಾವಚಿತ್ರವನ್ನು ಬರೆಸುತ್ತಿದ್ದುದೇ ಹೆಚ್ಚು. ಬಹುತೇಕ ಉತ್ತರ ಕರ್ನಾಟಕದ ಸಾರ್ವಜನಿಕ ಸಂಪರ್ಕ ಸ್ಥಳಗಳಾದ ಆಸ್ಪತ್ರೆಗಳು, ಛತ್ರಗಳು, ಮಠಗಳು, ಕಲ್ಯಾಣ ಮಂಟಪಗಳು, ಸರ್ಕಾರಿಕಛೇರಿ, ಅಲ್ಲದೇ ಖಾಸಗಿಯಾಗಿ ಅನೇಕ ಮನೆಗಳಲ್ಲಿವೆ. ಹತ್ತು ಸಾವಿರ ಕಲಾಕೃತಿ ರಚಿಸಿದ್ದಾರೆಂಬುದು ಉತ್ಪ್ರೇಕ್ಷೆ ಮಾತಲ್ಲ. ಗದಗಿನ ತೋಂಟದಾರ್ಯಮಠ, ಹುಬ್ಬಳ್ಳಿಯ ಮೂರುಸಾವಿರ ಮಠ, ಧಾರವಾಡದ ಮುರುಘಾಮಠ, ಅಥಣಿ ಶಿವಯೋಗಿಗಳ ಮಠ, ಬಾಲಲೀಲಾ ಮಹಾಂತ ಶಿವಯೋಗಿಗಳ ಮಠ, ಚಿತ್ರದುರ್ಗದ ಬೃಹನ್ಮಠ -ಹೀಗೆ ಆ ಭಾಗದ ಹಲವಾರು ಮಠದ ಹಿಂದಿನ ಮಹಾಪುರುಷರ ಜೀವನ ಕಥೆಗೆ ಸಂಬಂಧಿಸಿದಂತೆ ಚಿತ್ರಸರಣಿ ರಚಿಸಿದ್ದಾರೆ.

ಚಾಮರಸನ ಪ್ರಭುಲಿಂಗಲೀಲೆ, ವಿರೂಪಾಕ್ಷ ಪಂಡಿತನ ಚೆನ್ನಬಸವ ಪುರಾಣ, ಎಡೆಯೂರು ಸಿದ್ಧಲಿಂಗೇಶ್ವರ ಪುರಾಣ, ಪುಟ್ಟರಾಜ ಗವಾಯಿಗಳು ಬರೆದ ಬಸವಪುರಾಣ, ಸಾವಳಗಿ ಶಿವಲಿಂಗೇಶ್ವರ ಪುರಾಣ, ದುರದುಂಡೇಶ್ವರ ಪುರಾಣ, ಜೇವರಗಿ ಷಣ್ಮುಖ ಶಿವಯೋಗಿಗಳ ಪುರಾಣ, ಸೊನ್ನಲಾಪುರದ ಸಿದ್ಧರಾಮನ ಪುರಾಣ, ವೀರೇಶ ಪುರಾಣ, ಇಳಕಲ್ಲ ಮಹಾಂತ ಶಿವಯೋಗಿಗಳ ಪುರಾಣ, ಅವರಾದಿ ಫಲಹಾರ ಸ್ವಾಮಿಗಳ ಪುರಾಣ, ಉಳವಿ ಶಿವಶರಣರ ಕುರಿತಂತೆ ೫೦೦ ಚಿತ್ರಗಳು

ಭಗವಾನ್ ಶ್ರೀಕೃಷ್ಣನನ್ನು ಕುರಿತ, ನಾರದಗಡ್ಡೆ ತಾತನ ಕುರಿತ ಜೀವನ ಚಿತ್ರ ಇವುಗಳಲ್ಲದೆ ಪೂರ್ಣಪ್ರಮಾಣದ ರಾಜ್ಯ, ರಾಷ್ಟ್ರನಾಯಕರ ಚಿತ್ರಗಳು, ಆ ಭಾಗದ ಮಠಗಳ ಹಿಂದಿನ ಗುರುಗಳ ಪೂರ್ಣಪ್ರಮಾಣದ ಚಿತ್ರಗಳನ್ನು ಹೇರಳವಾಗಿ ಚಿತ್ರಿಸಿದ್ದಾರೆ. ಚಿಟ್ಟಿಯವರನ್ನು ಕುರಿತು ಪಾಟೀಲ ಪುಟ್ಟಪ್ಪನವರು ಹೇಳಿದ ಮಾತು "ಕಲಾವಿದರಲ್ಲಿಯೇ ಕಲಾವಿದರೆನಿಸಿದ ಚಿಟ್ಟಿಯವರ ಕುಂಚಕ್ಕೆ ವಿಶ್ರಾಂತಿ ಎಂಬುದೇ ಇಲ್ಲ. ಅವರು ಬರೆದ ಗೆರೆಗಳೆಲ್ಲವೂ ಚಿತ್ರಗಳಾಗಿವೆ. ಈ ಕಲಾತಪಸ್ವಿಯ ಕೈಯಿಂದ ಸಾಧು ಸತ್ಪುರುಷರು ಮತ್ತೆ ಜೀವ ಪಡೆದು ಕಾಣಿಸಿಕೊಂಡಿದ್ದಾರೆ." ಈ ಮಾತಿನಲ್ಲಿ ಯಾವ ಉತ್ಪ್ರೇಕ್ಷೆಯೂ ಇಲ್ಲ. ಬಹುತೇಕ ಎಲ್ಲಾ ಮಠಗಳು ಗೌರವಿಸಿ ಅನೇಕ ಬಿರುದುಗಳನ್ನು ನೀಡಿವೆ. ಕುಂಚ ಕಲಾಬ್ರಹ್ಮ, ೧೯ನೇ ಶತಮಾನದ ಕರ್ನಾಟಕದ ರವಿವರ್ಮ, ಕಲಾತಪಸ್ವಿ ಇಂತಹವು ಹಲವು. ಗದುಗಿನ ಟಿ.ಪಿ. ಅಕ್ಕಿಯವರ ವಿಜಯ ಕಲಾಮಂದಿರದಲ್ಲಿ ಕಲಾಶಿಕ್ಷಕರಾಗಿದ್ದ ಶ್ರೀಯುತ ಚಿಟ್ಟಿಯವರಿಗೆ ರಾಜ್ಯ ಲಲಿತಕಲಾ ಅಕಾಡೆಮಿ ಪ್ರಶಸ್ತಿ (೧೯೬೫-೬೬), ಎಂ.ಟಿ.ವಿ. ಆಚಾರ್ಯ ಪ್ರಶಸ್ತಿ ಮತ್ತು ರಾಜ್ಯದ ಅತ್ಯುನ್ನತ ಪ್ರಶಸ್ತಿಯಾದ ವರ್ಣಶಿಲ್ಪಿ ವೆಂಕಟಪ್ಪ ಪ್ರಶಸ್ತಿಗಳು (೧೯೯೬) ಅವರನ್ನರಸಿ ಬಂದಿವೆ. ಆದರೆ ಅದೇ ಭಾಗದಲ್ಲಿರುವ ಯಾವ ಯೂನಿವರ್ಸಿಟಿಗಳಿಗೂ ಡಾಕ್ಟರೇಟ್ ಕೊಡುವ ವಿಚಾರ ಹೊಳೆಯಲಿಲ್ಲ. ಇನ್ನು ಮಠಮಾನ್ಯಗಳು ಚಿತ್ರ ಬರೆಸಿಕೊಂಡು ಎರಡು ಹೊತ್ತು ಊಟ ಹಾಕಿ ಕೊನೆಯಲ್ಲಿ ಒಂದು ಶಾಲು ಹೊದ್ದಿಸಿ ಕಳಿಸಿರುವರೇ ವಿನಃ ಇಂತಹ ಅಪೂರ್ವ ಕಲಾವಿದನ ಬಗ್ಗೆ ಏನಾದರೂ ಸ್ಮಾರಕವಾಗಿ ಕಲಾಸಂಗ್ರಹಾಲಯವನ್ನಾಗಲೀ, ಅವರ ಹೆಸರಿನ ಪ್ರಶಸ್ತಿಯಾಗಲೀ ಮಾಡಿರುವುದು ಕಂಡು ಬರುವುದಿಲ್ಲ; ಅವರ ಪುತ್ರರು ಸಹ ಗಂಭೀರ ಚಿಂತನೆ ನಡೆಸಿದಂತಿಲ್ಲ. ಕರ್ನಾಟಕದ ಈ ಕಲಾವಿದನ ಬಗ್ಗೆ ಪಿ.ಎಚ್.ಡಿ. ಯನ್ನು ಮಾಡಿದ್ದಾರೆಂದರೆ ನಾವೆಲ್ಲರೂ ಹೆಮ್ಮೆಪಡಬೇಕಾದ ವಿಚಾರ.

ಇನ್ನು ಅನೇಕ ಹಿರಿಯ ಕಲಾವಿದರು ಇಂದು ನಮ್ಮೊಡನೆ ಇಲ್ಲ. ಅವರೆಲ್ಲರ ಪೂರ್ಣ ವಿವರ ಒದಗಿಸುವುದು ಕಷ್ಟ. ಅವರೊಡನೆ ಅವರ ಅಸ್ತಿತ್ವವೂ ಅಳಿದಂತಾಗಿದೆ. ದಿವಂಗತರಾದ ಹಳಿಜೋಳ, ಎಸ್.ಜಿ. ಚಿನ್ನಣ್ಣನವರ್, ಕಾರಡಗಿ, ಎಂ.ಸಿ. ತಂಬದ್, ಎನ್.ಜಿ. ಬಡಿಗೇರ್, ಹಲಸಂಗಿ ಗೆಳೆಯರ ಬಳಗದವರಲ್ಲಿ ಒಬ್ಬರಾದ ಜಾನಪದ ಬರಹಗಾರ ಮತ್ತು ಚಿತ್ರಕಲಾವಿದರಾದ ಕಾಪಸೆ ರೇವಪ್ಪ, ಬಿ.ಎ. ಮಾಲಿ, ಮುರಗೋಡ (ನವದೆಹಲಿ) ಡಿ.ಎಂ. ಶಂಬು, ಎಂ.ಎಸ್. ಜತ್ತಿ, ಸಿ.ಸಿ. ಮೈದರಗಿ, ಆಫ್ರಿಕಾದ ನೈರೋಬಿಯಲ್ಲಿದ್ದ ಭದ್ರಶೆಟ್ಟಿ, ವಿ.ಆರ್.ಹಿರೇಮಠ (ಮುಂಬೈ) ಅನ್ನಪೂರ್ಣ ಸುಳ್ಯದ ಮಠ (ನವದೆಹಲಿ) ಪ್ರಮೀಳಾ ಜೋಳಯ್ಯ (ದ. ಕನ್ನಡ) ಮುಂತಾದವರು ನೆನಪಾಗಿ ಉಳಿಯುತ್ತಾರೆ.

ಸಿದ್ಧಲಿಂಗ ಸ್ವಾಮಿಗಳು (೧೮೮೫-೧೯೫೪)

ಶ್ರೀ ರೇಣುಕಾಚಾರ್ಯರಿಗೆ ಮೂರ್ತರೂಪ ಕೊಟ್ಟವರು ಹಳೆ ಮೈಸೂರಿನ ಭಾಗದ ಅತ್ಯುನ್ನತ ಕಲಾವಿದರೂ ಶಿಲ್ಪಿಗಳೂ ಆದ ಸಿದ್ಧಲಿಂಗ ಸ್ವಾಮಿಗಳು. ಮೂಲತಃ ಕೊಳ್ಳೆಗಾಲದವರು. ಇವರು ಶೈವ ವಿಶ್ವಕರ್ಮ ಸಂಪ್ರದಾಯದವರಾದರೂ ಅವರ ದಿನನಿತ್ಯದ ಲಿಂಗಪೂಜೆಯೂ ಇತರ ಸ್ವಾಮಿಗಳಿಗೆ ಮಾದರಿಯಾಗುವಂತಹದ್ದು. ಶ್ರೀಮಾನ್ ಮಹಾರಾಜ ಜಯಚಾಮರಾಜ ಒಡೆಯರಿಗೆ ಲಿಂಗಧಾರಣೆ ಮಾಡಿ ಅವರನ್ನು ನಿತ್ಯ ಲಿಂಗ ಪೂಜಿಸಲು ದಾರಿತೋರಿಸಿದರು. ಪ್ರಾತಃಕಾಲದಲ್ಲಿ ಮಹಾರಾಜರು ಲಿಂಗಪೂಜೆಗೆ ಕುಳಿತರೆ ಹೊರಗೆ ಆಸ್ಥಾನದ ಸಂಗೀತದ ವಿದ್ವಾಂಸರು ಶಿವ ಕೀರ್ತನೆಯನ್ನು ಹಾಡುತ್ತಿದ್ದರು. ಗಂಟೆಗಟ್ಟಲೆ ಪೂಜಿಸುತ್ತಿದ್ದ ಮಹಾರಾಜರು ಶ್ರೀಸಿದ್ಧಲಿಂಗಸ್ವಾಮಿಗಳು ತಮ್ಮ ಗುರುಕುಲದಲ್ಲಿ ಲಿಂಗಪೂಜೆ ಪೂರೈಸಿ ಕಳಿಸಿದ ಪಾದೋದಕ ಪ್ರಸಾದ ಸ್ವೀಕರಿಸಿದ ನಂತರವೇ ದೈನಂದಿನದ ಮಹಾರಾಜರ ಚಟುವಟಿಕೆ ಆರಂಭವಾಗುತ್ತಿತ್ತು. ಶ್ರೀಗಳ ಆಣತಿಯಂತೆ ಪ್ರತಿನಿತ್ಯ ಓರ್ವ ಜಂಗಮರು, ಅವರಿಗೆ ಮೂವರು ಶಿಷ್ಯರಂತೆ ಪೂಜೆ ಪ್ರಸಾದ ಅರಮನೆಯಲ್ಲಿ ನಡೆಯುವಂತಾಗಿತ್ತು. ಆಗಾಗ್ಗೆ ಗುರುಗಳಿಗೆ ೮ ಆಣೆ (ಈಗಿನ ೫೦ ಪೈಸೆ) ಶಿಷ್ಯರಿಗೆ ೪ ಆಣೆ (ಈಗಿನ ೨೫ ಪೈಸೆ) ದಕ್ಷಿಣೆ ಕೊಡುತ್ತಿದ್ದರು. ಇದೇನು ಸಾಮಾನ್ಯ ವಿಷಯವಲ್ಲ. ವೈದಿಕ ವಾತಾವರಣವೇ ತುಂಬಿದ್ದ ಅರಮನೆಯ ಅಂಗಳವನ್ನು ಶಿವಮಯವನ್ನಾಗಿ ಮಾಡಿದುದು, ಲಿಂಗಧಾರಣೆ ಮಾಡಿಕೊಳ್ಳುವಂತೆ ಮಾಡಿದುದು, ಇದು ಅವರ ಸಾಧನೆಯ ಒಂದು ಮುಖ.

ರೇಣುಕಾಚಾರ್ಯಮೂರ್ತಿ ವಿಕಾಸಕ್ಕೆ ಕಾರಣಪುರುಷ: ಈಗ ನಾವು ಎಲ್ಲೆಲ್ಲೂ ಕಾಣುವ ಲಿಂಗೋದ್ಭವ ಮೂರ್ತಿಯ ರೂಪಗಳಾದ ಶ್ರೀ ರೇಣುಕಾಚಾರ್ಯರ ವಿಗ್ರಹಗಳಿಗೆ ಒಂದು ರೂಪು, ಆಕಾರ, ಬಣ್ಣಗಳನ್ನು ಕೊಟ್ಟವರು ಸಿದ್ಧಲಿಂಗಸ್ವಾಮಿಗಳು. ಇದರ ನಿರ್ಮಾಣ ಕಾಲ ೧೯೪೧. ಈ ಲಿಂಗೋದ್ಭವದ ಪರಿಕಲ್ಪನೆಯು ಪುರಾಣದ್ದು. ಪರಮೇಶ್ವರನ ೨೧ ಅವತಾರಗಳಲ್ಲಿ ಒಂದಾದ ಲಿಂಗೋದ್ಭವ ಮೂರ್ತಿಯ ರೂಪದಿಂದ ಬಂದದ್ದು. ಆ ಮೂಲ ಸ್ವರೂಪವನ್ನು ಮಾರ್ಪಡಿಸಿ ಸ್ಥಾವರಲಿಂಗದಿಂದ ಉದಯಿಸುವಂತೆ ಮಾಡಿ ಅಂದರೆ ಈಗ ಪ್ರಚಲಿತವಿರುವ ರೂಪದಲ್ಲಿ ಚಿತ್ರ ರಚಿಸಿ ಕೊಟ್ಟವರಿವರು. ಅದು ಸಂಬಂಧಿಸಿದವರೆಲ್ಲರಿಗೂ ಬಹಳ ಮೆಚ್ಚುಗೆಯಾದ ಕಾರಣ ಕ್ಯಾಲೆಂಡರ್ ರೂಪದಲ್ಲಿ ಚಿತ್ರಿಸಿ ಕೊಟ್ಟರು; ಅದನ್ನೇ ವಿಗ್ರಹವನ್ನಾಗಿ ಸಹ ಮಾಡಿಕೊಟ್ಟರು. ಈಗ ನಾವು ನೋಡಬಹುದಾದ ಕಾಶಿ, ಕೇದಾರ, ಉಜ್ಜಯಿನಿ, ರಂಭಾಪುರಿ, ಶ್ರೀಶೈಲ -ಈ ಎಲ್ಲಾ ಪೀಠಗಳಲ್ಲಿ ಇರುವ ಮೂರ್ತಿಗಳು ಸಿದ್ಧಲಿಂಗಸ್ವಾಮಿಗಳೇ ಮಾಡಿ ಕೊಟ್ಟಂಥವುಗಳು. ಅದಕ್ಕಿಂತ ಪೂರ್ವದಲ್ಲಿ ಎಲ್ಲಿಯೂ ರೇಣುಕಾಚಾರ್ಯಮೂರ್ತಿಗಳಿರುವುದು ಕಂಡುಬರುವುದಿಲ್ಲ. ಆದ್ದರಿಂದ ರೇಣುಕಾಚಾರ್ಯಮೂರ್ತಿಯ ವಿಕಾಸಕ್ಕೆ ಅಥವಾ ಜನನಕ್ಕೆ ಕಾರಣರಿವರು ಎಂದರೆ ತಪ್ಪಾಗಲಾರದು. ಇದಲ್ಲದೆ ಶಿವಲೀಲೆ ಕುರಿತ ಕ್ಯಾಲೆಂಡರ್ ಮುದ್ರಿತವಾದವು. ಇಂದಿಗೂ ಅವು ನಮ್ಮ ಪೂರ್ವಜರ ಮನೆಯಲ್ಲಿವೆ. ವೈರಾಗ್ಯನಿಧಿ ಶ್ರೀ ನಂಜುಂಡ ಶಿವಯೋಗಿಗಳ ಶಿಷ್ಯರಾದ ಇವರು ಆಗಮಶಾಸ್ತ್ರ ವಿಶಾರದರು. ಚಿತ್ರಕಲೆ, ಶಿಲ್ಪಕಲೆಗಳಲ್ಲಿ ಅಗಾಧ ಪಾಂಡಿತ್ಯ ಪಡೆದಿದ್ದರು. ಅರಮನೆಯ ದರ್ಬಾರ ಹಾಲಿನಲ್ಲಿ ಕಂಗೊಳಿಸುವ ಸುಮಾರು ಎಂಟು ಅಡಿ ಎತ್ತರವಿರುವ ಲಕ್ಷ್ಮಿ, ಸರಸ್ವತಿ, ನವದುರ್ಗಿ, ಗಾಯತ್ರಿ, ಭುವನೇಶ್ವರಿ, ರಾಜರಾಜೇಶ್ವರಿ, ಚಾಮುಂಡಿ, ಕಾಳಿಕಾಮಾತೆ, ಇವುಗಳಲ್ಲದೆ ಅಲ್ಲಿನ ಸಭಾಂಗಣದ ಕಲಾ ವಿನ್ಯಾಸದ ರೂವಾರಿ ಇವರು. ಅರಮನೆಯೊಳಗಿನ ದೇವಾಲಯಕ್ಕೆ ಮತ್ತು ಮಹಾರಾಜರು ಕಟ್ಟಿಸಿರುವ ರಾಜರಾಜೇಶ್ವರಿ ದೇವಾಲಯಕ್ಕೆ ಸ್ವಾಮಿಗಳ ಕೊಡುಗೆ ಅಪಾರ. ಕೆ.ಆರ್.ಎಸ್. ಕನ್ನಂಬಾಡಿ ಕಟ್ಟೆಯಲ್ಲಿರುವ ಕಾವೇರಿಮಾತೆ, ರಾಧಾಕೃಷ್ಣ ಮೂರ್ತಿಗಳು, ತಮ್ಮ ಹದಿನೆಂಟನೆ ವಯಸ್ಸಿನಲ್ಲೇ ಕೆತ್ತಿರುವ ದಕ್ಷಿಣಮೂರ್ತಿ ಮತ್ತು ನಂದೀಶ್ವರನ ವಿಗ್ರಹ ಮುಖ್ಯವೆನಿಸುತ್ತವೆ. ಈ ವಿಗ್ರಹ ಕೊಳ್ಳೇಗಾಲ ತಾಲ್ಲೂಕಿನ ಶ್ರೀ ನಿಜಗುಣ ಶಿವಯೋಗಿಗಳ ತಪೋಕ್ಷೇತ್ರವಾದ ಶಂಭುಲಿಂಗನ ಬೆಟ್ಟದೊಳಗಿನ ಗುಹೆಯಲ್ಲಿದೆ. ಅದು ಸಿದ್ಧಲಿಂಗಸ್ವಾಮಿಗಳು ಸಹ ಪ್ರಥಮದಲ್ಲಿ ಅನುಷ್ಠಾನ, ತಪಸ್ಸು ಮಾಡುತ್ತಿದ್ದ ಸ್ಥಳ. ಅದರ ನೆನಹಾಗಿ ಅಲ್ಲಿ ಶಿಲ್ಪ ಮಾಡಿರುವುದನ್ನು ಈಗಲೂ ಗುಹೆಯಲ್ಲಿ ಕಾಣಬಹುದು. ಈ ಸ್ಥಳ ಇಂದಿನ ಸ್ವಾಮಿಗಳಾದ ಕುಮಾರ ನಿಜಗುಣರ ಅರಿವಿನ ಕ್ಷೇತ್ರವೂ ಹೌದು. ಅದನ್ನೀಗ ವಿಶಾಲವಾಗಿ ಬೆಳೆಸಿ ಪ್ರವಾಸಿಗರ ತಾಣವನ್ನಾಗಿ ಮಾಡಿದ್ದಾರೆಂಬುದು ನೆನಪಿಸಿಕೊಳ್ಳಬೇಕಾದ ವಿಷಯ.

ಸಂಸ್ಕೃತದ ಸಾರ್ವಭೌಮತ್ವ ಹೊಂದಿ ಅನ್ಯಭಾಷಿಕರಿಗೆ, ಅದರಲ್ಲೂ ಕನ್ನಡಿಗರಿಗೆ ಎಟುಕದ ಕಗ್ಗಂಟಾಗಿದ್ದ ವೇದಗಳನ್ನು ಕನ್ನಡಕ್ಕೆ ಭಾಷಾಂತರಿಸುವ, ಅರ್ಥೈಸುವ ಕೆಲಸ ಮಾಡಿದ ಮೊದಲಿಗರು ಸ್ವಾಮಿಗಳು. ಮಹಾರಾಜರ ಮನವೊಲಿಸಿ ನಾಲ್ಕು ವೇದಗಳನ್ನು ಕನ್ನಡದಲ್ಲಿ ಪ್ರಕಟಿಸುವ ಯೋಜನೆ ಸಿದ್ಧಪಡಿಸಿದವರು ಇವರು. ಪ್ರಥಮವಾಗಿ ಇಪ್ಪತ್ತೈದು ಸಂಪುಟಪುಳ್ಳ ಋಗ್ವೇದ ಸಂಹಿತೆ ಸ್ವಾಮಿಗಳ ಅಧ್ಯಕ್ಷತೆಯಲ್ಲೇ ಮುದ್ರಣಗೊಂಡು ಬಿಡುಗಡೆಯಾಯಿತು. ನಂತರದಲ್ಲಿ ಸ್ವಾಮಿಗಳು ಕಾಲವಾದರು. ಅರಸೊತ್ತಿಗೆಯೂ ಹೋಯಿತು; ಆ ಕೆಲಸ ನಿಂತು ಹೋಯಿತು.

ಸಂಸ್ಕೃತ ವಾಙ್ಮಯ, ಶಿಲ್ಪ, ಚಿತ್ರಕಲೆ -ಇವುಗಳಲ್ಲಿ ಪಾಂಡಿತ್ಯ ಪಡೆದಿದ್ದ ಸ್ವಾಮಿಗಳು ರಾಜಾ ರವಿವರ್ಮನಿಗಿಂತ ಉತ್ತಮ ಕಲಾವಿದರಾದರೂ, ಅವರ ಕಾಲಾನಂತರ ಪ್ರಚಾರಗೊಳ್ಳಲಿಲ್ಲ. ಹೂವೊಂದು ಅರಳಿ ಕೆಲ ಗಂಟೆಯಲ್ಲೇ ಬಾಡಿ ನೆಲಕಚ್ಚಿದಂತಾಯ್ತು ಎಂಬುದು ವಿಷಾದದ ಸಂಗತಿ.

ಎಂ. ವೀರಪ್ಪ (೧೯೦೧-೧೯೬೯)

ವಚನಗಳಿಗೆ ದೃಶ್ಯರೂಪ ಕೊಟ್ಟ ಈ ಕಲಾವಿದರು ಮೂಲತಃ ಸೇಲಂ ಜಿಲ್ಲೆಯ ಡೆಂಕಣಿಕೋಟೆಯವರಾದರೂ ಬೆಳೆದದ್ದು, ಬಾಳಿದ್ದು ಮೈಸೂರಿನಲ್ಲಿ. ಮುಂಬೈನ ಜೆ.ಜೆ. ಸ್ಕೂಲ್ ಆಫ್ ಆರ್ಟ್ಸ್‌ನಲ್ಲಿಯೇ ಅಭ್ಯಾಸ ಮಾಡಿ ಬಂದು, ನಂತರದಲ್ಲಿ ಮಕ್ಕಳಿಗಾಗಿ ಆಟಿಕೆವಸ್ತುಗಳನ್ನು ತಯಾರಿಸುವ ಉದ್ಯಮ ಮಾಡಿದರು. ಅದು ಜನಪ್ರಿಯವೂ ಆಯಿತು. ಮೈಸೂರಿನ ಜಯಚಾಮರಾಜೇಂದ್ರ ವೃತ್ತಿಶಿಕ್ಷಣ ಶಾಲೆಗೆ ಶಿಕ್ಷಕರಾಗಲು ಅವಕಾಶ ದೊರೆಯಿತು. ನಂತರದಲ್ಲಿ ಈ ಉದ್ಯಮ ಕಲೆಯ ಖ್ಯಾತಿಯನ್ನು ಗಮನಿಸಿದ ಕಮಲಾದೇವಿ ಚಟ್ಟೋಪಾಧ್ಯಾಯರು ಅವರನ್ನು ಜಪಾನಿಗೆ ಕಳಿಸಿ ಕರಕುಶಲಕಲೆಯ ವಿಶೇಷ ಅಧ್ಯಯನಕ್ಕೆ ದಾರಿ ಮಾಡಿದರು. ಅದನ್ನು ಕರ್ನಾಟಕದಲ್ಲಿ ಉದ್ಯಮವಾಗಿ ಬೆಳೆಸಲು ಸಹಕಾರಿಯಾದರು. ಹೀಗೆ ಆಟಿಕೆ ಸಾಮಾನುಗಳ ಆವಿಷ್ಕಾರಕ್ಕೆ ನಾಂದಿ ಹಾಡಿದ ಮೊದಲಿಗರಿವರು.

ಎಂ. ವೀರಪ್ಪನವರು ಹಲವಾರು ರಾಷ್ಟ್ರ ಧುರೀಣರ, ನಿಸರ್ಗಚಿತ್ರಗಳನ್ನು ರಚಿಸಿದ್ದರು. ಆದರೆ ವಚನ ಸಾಹಿತ್ಯಕ್ಕೆ ಚಿತ್ರದ ರೂಪ ಕೊಟ್ಟ ಮೊದಲಿಗರು ಇವರು ಎಂಬುದನ್ನು ಮರೆಯುವಂತಿಲ್ಲ. ಹುತ್ತವ ಬಡಿದೊಡೆ ಹಾವು ಸಾಯಬಲ್ಲುದೇ, ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೋ, ಕಲ್ಲನಾಗರ ಕಂಡರೆ ಹಾಲನೆರೆ ಎಂಬರಯ್ಯ, ಇತ್ಯಾದಿ ವಚನಗಳಿಗೆ ಚಿತ್ರ ರಚಿಸಿದ್ದರು. ಬಸವಣ್ಣನವರು ವಚನ ರಚಿಸುತ್ತಿರುವ (ಕಿರೀಟ ರಹಿತವಾಗಿರುವ) ಚಿತ್ರ ಮತ್ತು ಬಸವಣ್ಣನವರ ಜೀವನ ಸಂದೇಶ ತಿಳಿಸುವ ಚಿತ್ರಗಳನ್ನು ಹಲವಾರು ಜಲ ಮತ್ತು ತೈಲ ವರ್ಣದಲ್ಲಿ ರಚಿಸಿದ್ದರು. ಅವರಿಗೆ ಬಸವಣ್ಣನವರ ಜೀವನಕ್ಕೆ ಸಂಬಂಧಿಸಿದ ಪೂರ್ಣಚಿತ್ರ ರಚಿಸಬೇಕೆಂಬ ಆಸೆಯಿತ್ತು. ಮಠ ಮಾನ್ಯಗಳ ಪ್ರೋತ್ಸಾಹ ದೊರಕಲಿಲ್ಲ, ಉಚಿತವಾಗಿ ಮಾಡಿಕೊಟ್ಟರೆ ನಿಮ್ಮ ಹೆಸರಲ್ಲಿ ಇಡುತ್ತೇವೆ ಎಂಬಷ್ಟೆ ಪ್ರೋತ್ಸಾಹ ದೊರಕಿದ ಕಾರಣ ಚಿತ್ರರಚನೆಯನ್ನು ಕೈಬಿಟ್ಟರು. ಸಂಘ ಸಂಸ್ಥೆಗಳು, ಮಠಗಳು ಅವರ ಚಿತ್ರರಚನೆಗೆ ಪ್ರೋತ್ಸಾಹಿಸಿದ್ದರೆ ಶರಣರ ಜೀವನ ಕುರಿತ ಉತ್ತಮ ಚಿತ್ರಸರಣಿ ಬರುತ್ತಿತ್ತು.

ರುಮಾಲೆ ಚೆನ್ನಬಸವಯ್ಯ (೧೯೧೦-೧೯೮೮)

ಬೆಂಗಳೂರು ಜಿಲ್ಲೆ ದೊಡ್ಡ ಬಳ್ಳಾಪುರದ ಚೆನ್ನಬಸವಯ್ಯನವರು. ಪ್ರಥಮ ಕಲಾಭ್ಯಾಸ ಬೆಂಗಳೂರಿನ ಕಲಾ ಮಂದಿರದಲ್ಲಿ. ನಂತರ ಮೈಸೂರಿನ ಜಯಚಾಮರಾಜೇಂದ್ರ ವೃತ್ತಿಶಿಕ್ಷಣಶಾಲೆ. ಕಲೆ ಮತ್ತು ರಾಜಕೀಯ ಈ ಎರಡೂ ಅವರಲ್ಲಿನ ದ್ವಿಮುಖಗಳು. ಸ್ವಾತಂತ್ರ್ಯ ಪೂರ್ವದ ಚಳುವಳಿಯಲ್ಲಿ ಸಕ್ರಿಯ ಭಾಗವಹಿಸಿ, ಬಿಜಾಪುರ, ವಿಸಾಪುರಗಳಲ್ಲಿ ೯ ತಿಂಗಳು ಜೈಲು ಶಿಕ್ಷೆ. ಮೈಸೂರು ಸತ್ಯಾಗ್ರಹ ಚಳುವಳಿಯಲ್ಲಿ ಭಾಗಿ. ಬೆಂಗಳೂರು ಸೆಂಟ್ರಲ್ ಜೈಲು, ಬೈರಮಂಗಲ ಕ್ಯಾಂಪ್‌ಗಳಲ್ಲಿ ಕಠಿಣ ಸೆರೆಮನೆವಾಸ. ಸ್ವಾತಂತ್ರ್ಯಾನಂತರ ಆಗಿನ ಮೈಸೂರು ರಾಜ್ಯದ ಕಾಂಗ್ರೆಸ್ ಸೇವಾದಳ, ಭಾರತ ಸೇವಾದಳಗಳ ವ್ಯವಸ್ಥಾಪಕ ಕಾರ್ಯದರ್ಶಿ (೧೯೪೬-೫೬), ಮೈಸೂರು ರಾಜ್ಯದ ಶಾಸಕ ಸಮಿತಿ ಸದಸ್ಯ (೧೯೫೨-೬೦) ಆಗಿದ್ದರು. ಅಂದಿನ ಜನಪ್ರಿಯ ಪತ್ರಿಕೆ "ತಾಯಿನಾಡು" ಸಂಪಾದಕರಾಗಿದ್ದರು. ಸದಾ ಖಾದಿಧಾರಿ.

ಕರ್ನಾಟಕದ ಕೋರಿಕೆಯ ಮೇರೆಗೆ ಹಲವು ನೀರಾವರಿ ಯೋಜನೆಗಳ ಚಿತ್ರ ರಚಿಸಿ ಕೊಟ್ಟಿದ್ದಾರೆ ಸರ್ಕಾರಕ್ಕೆ. ಕಾವೇರಿಯ ಉಗಮ ಸ್ಥಾನದಿಂದ ಮೇಕೆದಾಟುವಿನವರೆಗೆ ೫ ವರ್ಷಗಳಲ್ಲಿ ಸುಮಾರು ೫೦ ಚಿತ್ರ ರಚಿಸಿ ಕೊಡಲು ಸರ್ಕಾರದ ಕೋರಿಕೆ. ಶ್ರೀಯುತರು ಪ್ರತಿವರ್ಷ ಏನಾದರೊಂದು ಸಂಘಟನೆ ಅಥವಾ ಚಿತ್ರ ರಚಿಸುವ ಮೂಲಕ ಸುದ್ದಿಯಾಗುತ್ತಿದ್ದರು. ದಸರಾ ವಸ್ತು ಪ್ರದರ್ಶನದಲ್ಲಿ ಪ್ರಶಸ್ತಿ, ರಾಜ್ಯ ಲಲಿತಕಲಾ ಅಕಾಡೆಮಿ ಪ್ರಶಸ್ತಿ, ಕೇಂದ್ರ ಸರ್ಕಾರದ ತಾಮ್ರ ಪತ್ರ ಪ್ರಶಸ್ತಿ(೧೯೭೨), ರಾಜ್ಯೋತ್ಸವ ಪ್ರಶಸ್ತಿ (೧೯೮೩) ದೊರಕಿತ್ತು. ತಮ್ಮದೇ ಆದ ರುಮಾಲೆ ವಸ್ತು ಸಂಗ್ರಹಾಲಯ (೧೯೭೩) ಮಾಡಿದ್ದುದು ನೆನಪಾಗಿ ಉಳಿದಿದೆ, ಆದರೆ ಪ್ರಚಾರ ಕಾಣದಾಗಿದೆ.

ಹಳೇ ಮೈಸೂರಿನ ವಿಭಾಗದಲ್ಲಿ ವೀರಶೈವರೆಂದೆನ್ನುವ ಕಲಾವಿದರ, ಶಿಲ್ಪಿಗಳ ಸಂಖ್ಯೆ ಬಹಳ ಕಡಿಮೆ. ಬೇರೆ ಕಡೆಯಿಂದ ಬಂದು ತಮ್ಮ ಅಸ್ತಿತ್ವವನ್ನು ಇಲ್ಲಿ ಕಂಡುಕೊಂಡಿರುವವರು ಮಾತ್ರ ಅಧಿಕವಾಗಿದ್ದಾರೆ. ಅದಕ್ಕೆ ಮುಖ್ಯ ಕಾರಣ ಚಿತ್ರಕಲೆ ಕಲಿಸುವ ಕಲಾಶಾಲೆಗಳು ಮೈಸೂರು-ಬೆಂಗಳೂರುಗಳಲ್ಲಿ ಇದ್ದದ್ದು ಒಂದೆರಡು ಮಾತ್ರ. ಅಕ್ಷರ ಕಲಿಕೆಯ, ಅದರಲ್ಲೂ ಆಂಗ್ಲ ಮಾಧ್ಯಮದ ಶಾಲೆಗಳೇ ಅಧಿಕವಿಲ್ಲಿ. ಹಾಗಾಗಿ ಒಲವು ಶಾಲಾ ಓದಿನ ಕಡೆಗೆ. ಇಂಜನೀಯರಿಂಗ್, ವೈದ್ಯವೃತ್ತಿಯನ್ನರಸುವವರೇ ಅಧಿಕವಾದರು. ಈ ಮೂಲಭೂತ ಅಸೌಕರ್ಯವೇನೇ ಇರಲಿ, ಪ್ರಸ್ತುತ ನಮ್ಮೊಡನೆ ಇರುವ ಕಲಾವಿದರನ್ನು ಹುಡುಕುತ್ತಾ ಹೊರಟಂತೆ ನೂರಾರು ಜನ ನಮ್ಮ ಕಣ್ಣ ಮುಂದೆ ಸುಳಿಯುತ್ತಾರಾದರೂ, ಶಾಲೆಯಲ್ಲಿ ತಮ್ಮ ಅಸ್ತಿತ್ವವನ್ನು ಗಳಿಸಿಕೊಂಡವರನ್ನು ಗುರುತಿಸಿ ಉಲ್ಲೇಖಿಸುವುದು ಅತ್ಯವಶ್ಯವೆನಿಸುತ್ತದೆ.

ಎಲ್. ಶಿವಲಿಂಗಪ್ಪ (೧೯೪೬-)

ಮೈಸೂರಿನ ಶಿಲ್ಪಿ ಸಿದ್ಧಾಂತಿ ಸಿದ್ಧಲಿಂಗ ಸ್ವಾಮಿಗಳ ಗುರುಕುಲದಲ್ಲಿ ಹಾಗೂ ಎಂ.ಟಿ.ವಿ. ಆಚಾರ್ಯರಲ್ಲಿ ಚಿತ್ರಕಲಾಭ್ಯಾಸ, ಸ್ವತಂತ್ರವಾಗಿ ಛಾಯಾಚಿತ್ರಕಲೆ, ಸಾಹಿತ್ಯ ಶಿಲ್ಪವನ್ನು ಅಭ್ಯಸಿಸಿ ಪ್ರಸ್ತುತ ಅಂಚೆ ಮೂಲಕ ಕಲಾಶಿಕ್ಷಣವನ್ನು ನೀಡುವ ಸಂಸ್ಥೆಯಾದ, ಬೆಂಗಳೂರಿನಲ್ಲಿರುವ ಆಚಾರ್ಯ ಚಿತ್ರಕಲಾ ಭವನದ ಪ್ರಾಚಾರ್ಯರಾಗಿದ್ದಾರೆ. ಕರ್ನಾಟಕ, ಕೇರಳ, ಮದ್ರಾಸ್, ಆಂಧ್ರಗಳಲ್ಲಿ ಕಲಾಪ್ರದರ್ಶನ ಮಾಡಿರುವುದಲ್ಲದೆ ತಮ್ಮ ಕಲೆಯಲ್ಲಿ ಏನಾದರೊಂದು ಹೊಸತನ ತೋರಿಸುವ ಹಂಬಲ. ಮರಳಚ್ಚಿನಲ್ಲಿ ಮಾಡಿದ ಶಿಲ್ಪ, ಥರ್ಮಾಕೊಲ್‌ನಲ್ಲಿ ಮಾಡಿದ ಶಿಲ್ಪ, ಸಿಂಪರಣೆಯ ಮೂಲಕವೇ ಪೂರ್ಣ ಪ್ರಮಾಣದ ಚಿತ್ರ ರಚಿಸಿದುದು ಇವೆಲ್ಲಾ ಅವರ ಹೊಸ ಆವಿಷ್ಕಾರಗಳು ರಾಜ್ಯಾದ್ಯಂತ ಪ್ರದರ್ಶಿಸಿ ಪ್ರಶಂಸೆ ಗಳಿಸಿವೆ. ರಾಜ್ಯ ಶಿಲ್ಪಕಲಾ ಅಕಾಡೆಮಿಯ ಸದಸ್ಯರಾಗಿ (೧೯೯೭-೨೦೦೦) ಸೇವೆ ಸಲ್ಲಿಸಿರುವ ಇವರು ಶಿಲ್ಪಿ ಸಿದ್ಧಾಂತಿ ಸಿದ್ಧಲಿಂಗಸ್ವಾಮಿಗಳು, ನಾಗೇಂದ್ರ ಸ್ಥಪತಿ, ನೀಲಕಂಠಾಚಾರ್ ಇವರುಗಳ ವ್ಯಕ್ತಿ ಪರಿಚಯ ಪುಸ್ತಕಗಳು ಅಕಾಡೆಮಿಯಿಂದ ಮುದ್ರಣವಾಗಿವೆ. ಪತ್ರಿಕೆಗಳಲ್ಲಿ ಸ್ಥಳಪರಿಚಯ, ವ್ಯಕ್ತಿಪರಿಚಯ, ಚಿತ್ರ, ಶಿಲ್ಪ, ನರ್ತನ, ಕುರಿತಂತೆ ಹಲವಾರು ಲೇಖನಗಳು ಪ್ರಕಟವಾಗಿವೆ. ಉದಯವಾಣಿ ಪತ್ರಿಕೆಯ ಕರ್ನಾಟಕ ಸಂಪದದಲ್ಲಿನ ಅಂಕಣ ಬರಹಗಾರರಾಗಿ ನಾಡಿನ ಕಲಾವಿದರನ್ನು ಪರಿಚಯಿಸುತ್ತಿದ್ದಾರೆ. (ಈ ಲೇಖನದ ಬರಹಗಾರರು).

ಎಂ.ಇ. ಗುರು (೧೯೨೩-)

ಬಳ್ಳಾರಿಯಿಂದ ಬಂದು ಬೆಂಗಳೂರು, ಮೈಸೂರುಗಳಲ್ಲಿ ಕಲಿತು ಮೈಸೂರಿನಲ್ಲೇ ನೆಲೆಸಿರುವ ಮಠದ ಈಶ್ವರಯ್ಯ ಗುರು ಅವರನ್ನು ಗುರುತಿಸಬಹುದಾದದ್ದು, ಸಿದ್ಧಯ್ಯ ಪುರಾಣಿಕರು ಬರೆದ 'ಶರಣ ಚರಿತಾಮೃತ' ಪುಸ್ತಕಕ್ಕೆ ಬರೆದ ಅನೇಕ ಶರಣರ ರೇಖಾ ಚಿತ್ರದ ಮೂಲಕ. ಚಲನಚಿತ್ರ ತಯಾರಿಕಾ ಕೇಂದ್ರವಾದ ಮೈಸೂರಿನ ನವಜ್ಯೋತಿ ಸ್ಟುಡಿಯೋ ಕಲಾವಿದರಾಗಿ, ವಯಸ್ಕರ ಶಿಕ್ಷಣ ಸಮಿತಿ ಕಲಾವಿದರಾಗಿ, ರಾಷ್ಟ್ರೀಯ ಪಠ್ಯಪುಸ್ತಕ ಸಮಿತಿ ಸದಸ್ಯರಾಗಿ, ರಾಜ್ಯ ಲಲಿತ ಕಲಾ ಅಕಾಡೆಮಿ ಸದಸ್ಯರಾಗಿ ಸೇವೆ ಸಲ್ಲಿಸಿರುವುದರ ಜೊತೆಗೆ ಅವರು ಸ್ವಾತಂತ್ರ ಹೋರಾಟಗಾರರೂ ಸಹ. ಬ್ರಹ್ಮಚಾರಿಯಾದ ಇವರಿಗೆ ಲಲಿತಕಲಾ ಅಕಾಡೆಮಿ ಪ್ರಶಸ್ತಿಯೂ ಸೇರಿದಂತೆ ಅನೇಕ ಸಂಘ ಸಂಸ್ಥೆಗಳು, ಮಠಗಳು ಗೌರವಿಸಿವೆ.

ಶಿಲ್ಪಿ ಸಿದ್ಧಲಿಂಗಯ್ಯ (೧೯೨೯-)

ವೀರಶೈವರಲ್ಲಿ ಶಿಲ್ಪಿಗಳ ಸಂಖ್ಯೆ ಅತಿ ವಿರಳವೆಂಬುದಕ್ಕೆ ಸಿದ್ಧಲಿಂಗಯ್ಯ ಸಾಕ್ಷಿಯಾಗುತ್ತಾರೆ. ಬಹುಶಃ ಕರ್ನಾಟಕದಲ್ಲಿರುವ ಒರಿಯ ಶಿಲ್ಪಿಗಳಲ್ಲಿರುವವರು ಇವರೋರ್ವರೆ. ಶಿವಮೊಗ್ಗದಿಂದ ಬಂದು ಮೈಸೂರು ಸರ್ಕಾರದ ಕೈಗಾರಿಕಾ ಇಲಾಖೆ

ಸಹಾಯದಿಂದ ಜಯಪುರದಲ್ಲಿ ಶಿಲ್ಪಕಲೆ ಕಲಿತು, ನಂತರ ಮುಂಬೈ ಜೆ.ಜೆ. ಕಲಾಶಾಲೆಯಲ್ಲಿ ಮಾಡಲಿಂಗ್ ಅಭ್ಯಾಸಿಸಿ ಮೈಸೂರಿನಲ್ಲಿ ನೆಲೆನಿಂತು ಅಲ್ಲಿನ ಜಯ ಚಾಮರಾಜೇಂದ್ರ ವೃತ್ತಿ ಶಿಕ್ಷಣ ಶಾಲೆಯ ಪ್ರಾಧ್ಯಾಪಕರಾಗಿದ್ದು ನಿವೃತ್ತಿ ಹೊಂದಿದರು (೧೯೮೭). ಸ್ವತಂತ್ರ ಶಿಲ್ಪಿಯಾಗಿ ಕಾರ್ಯನಿರ್ವಹಿಸುತ್ತಿರುವ ಇವರಿಗೆ ಮೈಸೂರು ದಸರಾ ಪ್ರದರ್ಶನದಲ್ಲಿ ೮ ಬಾರಿ ಬಹುಮಾನ, ಶಿಲ್ಪಕಲಾ ಅಕಾಡೆಮಿ ಪ್ರಶಸ್ತಿ (೧೯೯೭) ರಾಜ್ಯೋತ್ಸವ ಪ್ರಶಸ್ತಿ (೧೯೯೮) ದೊರಕಿವೆ. ರಾಜ್ಯದ ಲಲಿತಕಲಾ ಅಕಾಡೆಮಿ, ಶಿಲ್ಪಕಲಾ ಅಕಾಡೆಮಿಗಳ ಸದಸ್ಯರಾಗಿ ಸೇವೆ ಸಲ್ಲಿಸಿರುವ ಇವರು ಮೃದುಮಾತಿಗೆ ಮಾದರಿ.

ಮಣ್ಣೂರ ಗುರಪ್ಪ (೧೯೨೩-)

ಬಿಜಾಪುರ ಜಿಲ್ಲೆ ಸಿಂದಗಿಯವರು. ದೇಶದ ರಕ್ಷಣಾ ಇಲಾಖೆ, ವ್ಯವಸಾಯ ಇಲಾಖೆಗಳಲ್ಲಿ ಸೇವೆಸಲ್ಲಿಸಿ ನಿವೃತ್ತರಾಗಿ ಮೈಸೂರಿನಲ್ಲಿ ನೆಲೆಸಿದ್ದಾರೆ. ವೈಜ್ಞಾನಿಕ ಚಿಂತನೆಯ ಮೂಲಕ ಶರಣಸಂಸ್ಕೃತಿಯನ್ನು ಕಂಡವರಿವರು. ಶರಣ ಸಾಹಿತ್ಯ ಮತ್ತು ವಿಜ್ಞಾನ ಎಂಬ ಪುಸ್ತಕವನ್ನು ೨ ಭಾಗಗಳಲ್ಲಿ ಪ್ರಕಟಿಸಿ ಅಂಗ, ಲಿಂಗ ಮತ್ತು ಶರೀರ ಶಾಸ್ತ್ರದ ತುಲನೆಯನ್ನು ಕರಾರುವಾಕ್ಕಾಗಿ ಮಾಡಿದ್ದಾರೆ. 'ಬಣ್ಣಗಳ ಮೇಲೆ ಬೆಳಕಿನ ಪ್ರಭಾವ' ಎಂಬ ಶೀರ್ಷಿಕೆಯಲ್ಲಿ ಅನೇಕ ಚಿತ್ರ ರಚಿಸಿದ್ದು, ಮುಖ್ಯವಾಗಿ ವಚನಗಳಿಗೆ ಚಿತ್ರ ರಚಿಸಿರುವುದನ್ನು ಉಲ್ಲೇಖಿಸುವುದು ಅಗತ್ಯ. 'ನೀನೊಲಿದರೆ ಕೊರಡು ಕೊನರುವುದಯ್ಯ, ನೀನೊಲಿದರೆ ಬರಡು ಹಯನವುದಯ್ಯ' ಎಂಬ ಪದಗಳಲ್ಲಿ ಎರಡು ಬಗೆಯನ್ನು ಕಾಣುತ್ತೇವೆ. ಒಲಿದಾಗ ಮತ್ತು ಒಲಿಯದಿದ್ದಾಗ ಹೇಗಿರುತ್ತದೆ. ಚಿತ್ರವನ್ನು ಸಾಮಾನ್ಯವಾಗಿ ನೋಡಿದಾಗ ಒಣಗಿದ ಮರ, ಬರಡಾದ ನೆಲ ಕಾಣುತ್ತದೆ. ಅದನ್ನೇ ವಿದ್ಯುತ್ ಗುಂಡಿ ಒತ್ತಿದಾಗ ಹಸಿರು ತುಂಬಿದ ಮರ, ಬೆಳೆ ಬೆಳೆದ ನೆಲ ಕಾಣುತ್ತೇವೆ. ಈ ತೆರನಾದ ಕಲಾತಂತ್ರದಿಂದ ರಚಿಸುವವರು ಯಾರೂ ಇಲ್ಲ ಎನ್ನಬಹುದು. ಪ್ರೋತ್ಸಾಹಿಸಿದ್ದರೆ ವಚನ ಸಾಹಿತ್ಯವನ್ನು ದೃಷ್ಟಾಂತದ ಮೂಲಕ ತಿಳಿಸಲು ನೂರಾರು ಚಿತ್ರ ರಚಿಸುತ್ತಿದ್ದರು. ಆ ಕಲಾತ್ಮಕ ಗುಣದ ಪ್ರೋತ್ಸಾಹ ನಮ್ಮ ಧರ್ಮಪೀಠಗಳಿಗಿಲ್ಲ ಎಂಬ ಕೊರಗು ಅವರನ್ನು ಕಾಡುತ್ತಿದೆ.

ಡಿ.ಎ. ಉಪಾಧ್ಯ (೧೯೫೨-)

ಕವಿ, ಸಾಹಿತಿ, ನಾಟಕಕಾರ, ನಿರ್ದೇಶಕ, ನಟ -ಹೀಗೆ ಹಲವು ತೆರನಾದ ಪ್ರತಿಭೆಯುಳ್ಳವರು. ಪ್ರಸ್ತುತ ಮೈಸೂರಿನ ಜಯ ಚಾಮರಾಜೇಂದ್ರ ದೃಶ್ಯ ಕಲಾ ಅಕಾಡೆಮಿ (ಕಾವಾ) ಹಿರಿಯ ಕಲಾ ಉಪನ್ಯಾಸಕರಾಗಿರುವ ಡಿ.ಎ. ಉಪಾಧ್ಯ ವಚನಾಧಾರಿತ ಚಿತ್ರ ರಚಿಸಿದ್ದಾರೆ. ಅವರು ಯಾವುದೇ ಚಿತ್ರ ರಚಿಸಿದರೂ ಅದಕ್ಕೊಂದು ಅರ್ಥವಿರುತ್ತದೆ. ಅವರ ಅನೇಕ ಪುಸ್ತಕಗಳು ಪ್ರಕಟವಾಗಿವೆ. ಸಾಕ್ಷ್ಯಚಿತ್ರಗಳನ್ನು ನಿರ್ಮಿಸಿದ್ದಾರೆ. ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ, ಗುಂಪು ಚಿತ್ರಪ್ರದರ್ಶನ ಮಾಡಿರುವ ಇವರು ಹೋರಾಟ ಗುಣವುಳ್ಳವರು.

ಶಂಕರಪಾಟೀಲ್ (೧೯೪೭-೨೦೦೨)

ಅತ್ಯಂತ ಪ್ರತಿಭಾವಂತ ಕಲಾವಿದನಾಗಿ, ಕವಿ ಮನಸುಳ್ಳ ಲೇಖಕನಾಗಿ 'ಚಿತ್ರಕಲಾ ಚಿಂತನ' ಮತ್ತು 'ಚಿತ್ರಾಂತರಂಗ' ಎಂಬೆರಡು ಪುಸ್ತಕ ಪ್ರಕಟಿಸಿ, ಪ್ರಗತಿಪರ ಚಿಂತನೆ ಮತ್ತು ಕಲಾರಚನೆಯಲ್ಲೇ ತೊಡಗಿರುತ್ತಿದ್ದ ಶಂಕರ ಪಾಟೀಲರು ಬಹುಜಾಗ್ರತೆ ನಮ್ಮನ್ನು ಅಗಲಿದರು. ಶ್ರೀಯುತರು ದೇಶ ಮತ್ತು ವಿದೇಶಗಳಲ್ಲಿ ಪ್ರದರ್ಶನ ಮಾಡಿದರು; ಉಪನ್ಯಾಸ ನೀಡಿದರು. ರಾಜ್ಯಲಲಿತಕಲಾ ಅಕಾಡೆಮಿ ಪ್ರಶಸ್ತಿ (೧೯೯೮) ದೊರಕಿತ್ತು. ದಾವಣಗೆರೆಯಲ್ಲಿ ತಮ್ಮದೇ ಆದ ಕಲಾಗುರು ಆರ್ಟ್‌ಗ್ಯಾಲರಿ ಸಹ ಮಾಡಿದ್ದರು.

ವಿ.ಜಿ. ಅಂದಾನಿ (೧೯೪೭-)

ಇವರು ಗುಲ್ಬರ್ಗಾ ಐಡಿಯಲ್ ಕಲಾ ಕಾಲೇಜಿನ ಪ್ರಾಚಾರ್ಯರಾಗಿ, ಅದರ ಸರ್ವೋನ್ನತಿಗಾಗಿ ಶ್ರಮಿಸುತ್ತಿರುವವರು. ಸರ್ಕಾರದ ಎಲ್ಲಾ ಸವಲತ್ತು ಪಡೆದ ಇವರು ಸರ್ಕಾರ ರಚಿಸಿರುವ ಅನೇಕ ಸಮಿತಿಗಳಲ್ಲಿ ಇದ್ದಾರೆ. ಸಂಸ್ಥೆಯನ್ನು ಕಟ್ಟಿ ಬೆಳೆಸುವ ಕನಸುಗಾರ. ನಿರಂತರ ಆ ದಿಸೆಯಲ್ಲಿ ಪ್ರಯತ್ನ. ಅಕಾಡೆಮಿ ಪ್ರಶಸ್ತಿ (೧೯೯೪), ರಾಜ್ಯೋತ್ಸವ ಪ್ರಶಸ್ತಿ (೧೯೯೨), ಕೇಂದ್ರ ಹಾಗೂ ರಾಜ್ಯದ ಇತರ ಬಹುಮಾನ ಸಂದಿವೆ. ರಾಜ್ಯ ಲಲಿತಕಲಾ ಅಕಾಡೆಮಿ ಅಧ್ಯಕ್ಷರಾಗಿ (೧೯೯೮-೨೦೦೧) ಸೇವೆ ಸಲ್ಲಿಸಿರುವ ಉತ್ಸಾಹವುಳ್ಳ ವ್ಯಕ್ತಿ.

ಖಂಡೇರಾವ್ (೧೯೪೦-)

ಮೃದು ಮಾತಿನ ಸಜ್ಜನ, ವಿಶ್ವಾಸಾರ್ಹತೆಯುಳ್ಳ ವ್ಯಕ್ತಿತ್ವ. ಗುಲ್ಬರ್ಗದ ಐಡಿಯಲ್ ಫೈನ್ ಆರ್ಟ್ ಇನ್ಸ್‌ಟಿಟ್ಯೂಟ್ ಸ್ಥಾಪಕ- ಪ್ರಾಚಾರ್ಯ. ಪ್ರಾರಂಭದಲ್ಲಿ ಹಲವು ತೊಂದರೆ ಅನುಭವಿಸಿ, ನಂತರದಲ್ಲಿ ಗುಲ್ಬರ್ಗ ಶರಣ ಬಸವೇಶ್ವರ ಕಾಲೇಜಿನಲ್ಲಿ ಖಾಯಂ ಕಲಾ ಉಪನ್ಯಾಸಕ ಉದ್ಯೋಗ ದೊರಕಿದ ನಂತರ ತಾವು ಸ್ಥಾಪಿಸಿದ ಸಂಸ್ಥೆ ಐಡಿಯಲ್ ಫೈನ್ ಆರ್ಟ್ಸ್‌ನ್ನು ಅವರ ಶಿಷ್ಯ ಅಂದಾನಿಗೆ ಒಪ್ಪಿಸಿದರು. ೨೦೦೦ನೇ ಇಸವಿಯಲ್ಲಿ ಗುಲ್ಬರ್ಗ ಶರಣ ಬಸವೇಶ್ವರ ಕಲಾ ಕಾಲೇಜಿನಿಂದ ನಿವೃತ್ತಿ ಹೊಂದಿದರು. ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಪ್ರದರ್ಶನ ನಡೆದು, ಅನೇಕ ಬಹುಮಾನಗಳು ಬಂದಿವೆ. ಅಕಾಡೆಮಿ ಪ್ರಶಸ್ತಿ (೧೯೮೮), ರಾಜ್ಯೋತ್ಸವ ಪ್ರಶಸ್ತಿ (೧೯೯೫) ಅವರಿಗೆ ದೊರೆತಿವೆ.

ವಿಜಯ ಹಾಗರಗುಂಡಗಿ (೧೯೫೭-)

ಇವರು ಗುಲ್ಬರ್ಗ ಐಡಿಯಲ್ ಫೈನ್ ಆರ್ಟ್ಸ್ ಇನ್ಸಿಟ್ಯೂಟಿನಲ್ಲೇ ಅಭ್ಯಾಸ ಮಾಡಿ ಬಂದವರು. ಸಾಂಪ್ರದಾಯಿಕ ಕಲಾರಚನಾಶೈಲಿ ಇವರದು. ಹೈದರಾಬಾದ್, ತ್ರಿವೇಂಡ್ರಂ, ಮದ್ರಾಸ್‌ಗಳ ರೀಜನಲ್ ಸೆಂಟರ್‌ಗಳ ಬಹುಮಾನ, ಪ್ರಶಸ್ತಿಗಳು ದೊರಕಿವೆ. ಪುರಾಣ ಪ್ರಸಂಗಗಳನ್ನು ಸಾಂಪ್ರದಾಯಿಕ ಕಲಾ ರೀತಿ ಚಿತ್ರಿಸುವುದರೊಂದಿಗೆ ಅವುಗಳ ಸಂಗ್ರಹ ಮಾಡಿ ಗ್ಯಾಲರಿ ಮಾಡಿದ್ದಾರೆ.

ವಿ.ಜಿ. ಸಿಂಧೂರ (೧೯೪೦-)

ಜಮಖಂಡಿಯವರಾದ ಇವರು ಭಿತ್ತಿ ಚಿತ್ರಣದ ವಿಷಯವಾಗಿ ಜೆ.ಜೆ. ಸ್ಕೂಲ್‌ನಿಂದ ಡಿಪ್ಲೊಮೋ ಪಡೆದು ಕರ್ನಾಟಕ, ಮುಂಬೈ, ದೆಹಲಿ, ಕೊಲ್ಕತ್ತ, ಚೆನ್ನೈ, ಹೈದ್ರಾಬಾದ್, ಭೂಪಾಲ್‌ಗಳಲ್ಲಿ ಪ್ರದರ್ಶನ ಮಾಡಿದ್ದಾರೆ ವಿಶ್ವ ಕನ್ನಡ ಸಮ್ಮೇಳನ, (೧೯೮೫) ಅಪ್ನ ಉತ್ಸವ್, ಮುಂಬೈ (೧೯೮೯) ಈ ಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿ (೧೯೮೫), ರಾಜ್ಯೋತ್ಸವ ಪ್ರಶಸ್ತಿ (೧೯೯೧)ರಲ್ಲಿ ಇವರಿಗೆ ಸಂದಿವೆ.

ಸಿ.ಎನ್. ಪಾಟೀಲ್ (೧೯೨೩-)

ಬಾಲ್ಯದಿಂದಲೂ ಚಿತ್ರದಲ್ಲಿ ಆಸಕ್ತಿಯನ್ನು ಹೊಂದಿದ ಇವರು ೧೦ನೇ ವಯಸ್ಸಿಗೆ ಮಂತ್ರಿಯೋರ್ವರ ಚಿತ್ರ ಬರೆದು ಎಲ್ಲರನ್ನು ಆಕರ್ಷಿಸಿದವರು. ಟಿ.ಪಿ. ಅಕ್ಕಿಯವರ ಶಿಷ್ಯರಾಗಿ, ನಂತರ ಅವರ ವಿಜಯ ಕಲಾಮಂದಿರದ ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿ, ರಾಜ್ಯದ ಏಕೀಕರಣ ಆಂದೋಲನದ ಸಂದರ್ಭದಲ್ಲಿ, ರಾಜ್ಯವನ್ನು ಪ್ರತಿನಿಧಿಸುವ ರಾಜರಾಜೇಶ್ವರಿಯ ಬೃಹತ್ ಚಿತ್ರವನ್ನು ರಚಿಸಿಕೊಟ್ಟರು. ಕರ್ನಾಟಕದ ನಾಮಕರಣದ ಸಂದರ್ಭದಲ್ಲಿ ಅದನ್ನು ರಾಜ್ಯದ ಅಂಗೀಕೃತವಾದ ಚಿತ್ರವೆಂದು ಪ್ರಜಾಮತ ಮುಖಪುಟದಲ್ಲಿ ಪ್ರಕಟಿಸಿದರು. ತದ್ರೂಪ ಚಿತ್ರ ರಚನೆಯಲ್ಲಿ ಸಿದ್ಧಹಸ್ತರು. ನಾಟಕಕಾರ, ನಟ, ನಿರ್ದೇಶಕ -ಹೀಗೆ ಅವರದು ಬಹುಮುಖ ವ್ಯಕ್ತಿತ್ವ.

ಎಸ್.ಎಸ್. ಮುನೋಲಿ (೧೯೪೧-)

ಬರೋಡಾ ವಿಶ್ವವಿದ್ಯಾಲಯದಿಂದ ಲಲಿತಕಲೆಯಲ್ಲಿ ಬಿ.ಎ. ಗಳಿಸಿದ ಇವರ ಪ್ರದರ್ಶನಗಳು ರಾಜ್ಯದಲ್ಲಿ ಮಾತ್ರವಲ್ಲದೆ ಪ್ಯಾರಿಸ್, ಬೆಲ್ಜಿಯಂ, ಬ್ರೆಸಲ್, ಆಮ್‌ಸ್ಟರಡ್ಯಾಮ್, ಡೆನ್ಮಾರ್ಕ್, ದಿಹೇಗ್, ಕೂಪನ್‌ಹೇಗನ್‌ಗಳಲ್ಲಿ ನಡೆದಿವೆ. ಪ್ರಸ್ತುತ ಗುಲ್ಬರ್ಗದಲ್ಲಿರುವ ಇವರಿಗೆ ರಾಜ್ಯೋತ್ಸವ ಪ್ರಶಸ್ತಿ ಸಂದಿದೆ. ರಾಜ್ಯ ಲಲಿತಕಲಾ ಅಕಾಡೆಮಿ ಸದಸ್ಯರಾಗಿದ್ದಾರೆ.

ಶಂಕರಗೌಡ ಬೆಟ್ಟದೂರು (೧೯೨೮-)

ರಾಯಚೂರು ಜಿಲ್ಲೆಯವರಾದ ಇವರು ಬರೋಡಾದಲ್ಲಿರುವ ಶಾಂತಿನಿಕೇತನದ ನಂದಲಾಲ್ ಬಸುರವರ ಶಿಷ್ಯರಾಗಿ ಡಿಪ್ಲೋಮೊ ಗಳಿಸಿದ್ದಾರೆ. ಮಹಾತ್ಮ ಗಾಂಧಿಯವರ ಜೀವನ ಚಿತ್ರಣವನ್ನು ಬಿರ್ಲಾಭವನದ ಭಿತ್ತಿಯಲ್ಲಿ ರಚಿಸಿದ್ದಾರೆ. ದೆಹಲಿ, ಮುಂಬಯಿಗಳಲ್ಲಿ ಚಿತ್ರ ಪ್ರದರ್ಶಿಸಿದ್ದಾರೆ, ಲಲಿತಕಲಾ ಅಕಾಡೆಮಿ ಪ್ರಶಸ್ತಿ (೧೯೯೩), ರಾಜ್ಯೋತ್ಸವ ಪ್ರಶಸ್ತಿ (೧೯೯೫), ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ (೧೯೯೫) ಗಳಿಸಿರುವ ಹಿರಿಯಜೀವ ಇವರು.

ವಾಚೇದಮಠ (೧೯೩೫-)

ಮುಂಬೈನ ನೂತನ ಕಲಾಮಂದಿರದಿಂದ ಡಿಪ್ಲೊಮೊ, ವಿಜಯಕಲಾಮಂದಿರ ಗದಗದಲ್ಲಿ ಮಾಡಲಿಂಗ್ ತರಬೇತಿಯಲ್ಲಿ ತೇರ್ಗಡೆಯಾಗಿ ಧಾರವಾಡದಲ್ಲಿ ಚಿತ್ರ ಪ್ರದರ್ಶಿಸಿದ್ದಾರೆ. ಹೆಚ್ಚಿನ ಸಂಖ್ಯೆಯ ಪ್ರದರ್ಶನ ಮಾಡದಿದ್ದರೂ, ಕಲಾಶಿಕ್ಷಕರಾಗಿ, ಪಠ್ಯಪುಸ್ತಕ ಸಮಿತಿಯ ಕಲಾವಿದರಾಗಿ ಶ್ರಮಿಸಿದ್ದಾರೆ. ಕರ್ನಾಟಕ ವಿಶ್ವವಿದ್ಯಾಲಯದ ಪದಕ, ಕರ್ನಾಟಕ ಲಲಿತಕಲಾ ಅಕಾಡೆಮಿಯ ಪ್ರಶಸ್ತಿ ದೊರಕಿದೆ.

ವಿ.ಸಿ. ಮಾಲಗಿತ್ತಿ (೧೯೨೨-)

ವಿ.ಸಿ. ಮಾಲಗಿತ್ತಿ ಎಂದೊಡನೆ ಬೆಳಗಾಂ ನೆನಪಿಗೆ ಬರುತ್ತದೆ. ಜೀವನದ ಬಹು ಸಮಯವನ್ನು ಬೆಳಗಾಂನಲ್ಲಿನ ಕಲೆ, ಸಾಹಿತ್ಯ, ಸಂಸ್ಕೃತಿ ಸಂವರ್ಧನೆಗೆ ಮೀಸಲಿರಿಸಿದ್ದಾರೆ. ಕುಶಲ ಕಲೆಗಳ ಪರೀಕ್ಷಾಮಂಡಲಿ, ಪಠ್ಯಪುಸ್ತಕ ಸಮಿತಿ, ದಸರಾಪ್ರದರ್ಶನ ಅನುದಾನ ಸಮಿತಿ, ರಾಜ್ಯ ಕಲಾಶಿಕ್ಷಣ ಮಂಡಲಿ, ಉಚ್ಚ ಕಲಾಶಿಕ್ಷಣ ಮಂಡಲಿ ಮತ್ತು ರಾಜ್ಯ ಲಲಿತಕಲಾ ಅಕಾಡೆಮಿ -ಹೀಗೆ ಹಲವು ಸಮಿತಿಗಳ ಸದಸ್ಯರು. ಕನ್ನಡ ಪರವಾದ ಹೋರಾಟ, ಅಲ್ಲಿನ ಕ.ಸಾ.ಪರಿಷತ್ತಿನ ಕಾರ್ಯದರ್ಶಿಯಾಗಿ, ಅಧ್ಯಕ್ಷರಾಗಿ ಹಲವಾರು ವರ್ಷಗಳವರೆಗೆ ಸೇವೆ, ಸಾಹಿತ್ಯಕವಾಗಿ 'ಕಲಾಗುರು ದಂಡಾವತಿಮಠ', 'ಬೆಳಗಾಂನ ಚಳುವಳಿ', 'ಕುಮಾರ ಗಂಧರ್ವ', 'ಕನ್ನಡಿಗರು ಕಂಡ ಗಾಂಧೀಜಿ' ಮೊದಲಾದ ಪುಸ್ತಕ ಬರೆದು ಪ್ರಕಟಿಸಿದ್ದಾರೆ. ಅಕಾಡೆಮಿ ಪ್ರಶಸ್ತಿ (೧೯೮೦), ರಾಜ್ಯೋತ್ಸವ ಪ್ರಶಸ್ತಿ (೧೯೯೭) ಸಂದಿವೆ.

ಎಂ.ಬಿ. ಪಾಟೀಲ್ (೧೯೩೯-)

ಬಿಜಾಪುರದ ತ್ರಿಕೋಟಾದವರು. ಕಲಾಗುರು ದಂಡಾವತಿ ಮಠರವರ ಮಾರ್ಗದರ್ಶನದಲ್ಲಿ ಚಿತ್ರಕಲೆ ಕಲಿತು, ರಾಜ್ಯದ ಪ್ರತಿಭಾನ್ವಿತ ಕಲಾವಿದರಲ್ಲಿ ಒಬ್ಬರಾಗಿದ್ದಾರೆ. ವಾರ್ತಾ ಮತ್ತು ಪ್ರಚಾರ ಇಲಾಖೆಯಲ್ಲಿ ಕಲಾವಿದರಾಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ್ದು, ಪ್ರಸ್ತುತ ಲಲಿತಕಲಾ ಅಕಾಡೆಮಿಯ ಸದಸ್ಯರಾಗಿದ್ದಾರೆ. ವ್ಯಕ್ತಿಯ ರೂಪ ಚಿತ್ರ ಬರೆಯುವುದರಲ್ಲಿ ಪ್ರಭುತ್ವ ಸಾಧಿಸಿದ್ದಾರೆ. ಸಮಕಾಲೀನ ಕಲೆಯ ಮರ್ಮ ತಿಳಿದಿದ್ದು ಅನೇಕ ಪ್ರಾತ್ಯಕ್ಷಿಕೆ ನಡೆಸಿಕೊಟ್ಟಿದ್ದಾರೆ. 'ಶಂಖನಾದ' ಎಂಬ ಚಲನಚಿತ್ರಕ್ಕೆ ಕಲಾನಿರ್ದೇಶಕರಾಗಿದ್ದರು. ರಾಜ್ಯ ಲಲಿತಕಲಾ ಅಕಾಡಮಿ ಪ್ರಶಸ್ತಿ (೧೯೮೬), ಎಂ.ಟಿ.ವಿ. ಆಚಾರ್ಯ ಪ್ರಶಸ್ತಿ (೨೦೦೨) ದೊರಕಿವೆ.

ಎಂ.ಕೆ. ಸುಂಕದ್ (೧೯೩೨-)

ಎಂ.ವಿ. ಮಿಣಜಿಗಿಯವರ ಶಿಷ್ಯರಾಗಿ ಜೆ.ಜೆ. ಸ್ಕೂಲ್‌ನಿಂದ ಚಿತ್ರಕಲೆ ಡಿಪ್ಲೋಮೊ ಪಡೆದು ಪ್ರಸ್ತುತ ಬೆಂಗಳೂರಿನಲ್ಲೇ ವಾಸವಾಗಿದ್ದು ಕಲಾಬೋಧನ ವೃತ್ತಿಯಲ್ಲಿದ್ದಾರೆ. ಕರ್ನಾಟಕದ ಹಲವು ಕಡೆ ಮತ್ತು ನವದೆಹಲಿಯಲ್ಲಿ ಚಿತ್ರ ಪ್ರದರ್ಶನ ಮಾಡಿದ್ದು, ರಾಜ್ಯ ಲಲಿತಕಲಾ ಅಕಾಡೆಮಿಯ ಸದಸ್ಯರೂ ಸಹ ಆಗಿದ್ದರು.

ಆರ್.ಎಂ. ಹಡಪದ್ (೧೯೩೨-)

ಮಿಣಜಿಗಿಯವರ ಶಿಷ್ಯ, ಜೆ.ಜೆ. ಸ್ಕೂಲಿನಿಂದ ಡಿಪ್ಲೊಮೊ, ಪ್ರಸ್ತುತ ಕೆನ್‌ಕಲಾಶಾಲೆಯ ನಿವೃತ್ತ ಪ್ರಾಚಾರ್ಯ. ಕೆನ್ ಕಲಾಶಾಲೆಯನ್ನು ಬೆಂಗಳೂರಿನಲ್ಲಿ ಸ್ಥಾಪಿಸಿ ನೂರಾರು ಪ್ರತಿಭಾವಂತ ವಿದ್ಯಾರ್ಥಿಗಳನ್ನು ತಯಾರುಮಾಡಿದ್ದಾರೆ. ರಾಜ್ಯ ಲಲಿತಕಲಾ ಅಕಾಡೆಮಿ ಅಧ್ಯಕ್ಷರಾಗಿ (೧೯೮೭-೯೦) ಸೇವೆ ಸಲ್ಲಿಸಿದ್ದಾರೆ. ಕನ್ನಡ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿ, ಕರ್ನಾಟಕದ ವರ್ಣಶಿಲ್ಪಿ ವೆಂಕಟಪ್ಪ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ -ಹೀಗೆ ಹಲವು ಪ್ರಶಸ್ತಿಗಳು ಇವರ ಮಡಿಲಿಗೆ ಸಂದಿವೆ. ನವ್ಯ ಚಿತ್ರಕಲಾ ಪರಂಪರೆಯನ್ನು ಬೆಳೆಸಿದ ಕೀರ್ತಿ ಇವರದು.

ಜಿ.ವೈ. ಹುಬ್ಬೀಕರ್

ರಾಜ್ಯದ ವ್ಯಂಗ್ಯ ಚಿತ್ರಕಲಾವಿದರಾಗಿ ನಾಡಿನ ಪ್ರಮುಖ ಪತ್ರಿಕೆಗಳಲ್ಲಿ ಇವರ ಕಲಾಕೃತಿ ಪ್ರಕಟವಾಗುತ್ತಿವೆ. ಪ್ರಜಾವಾಣಿ, ಸುಧಾ, ಹಿಂದಿನ ಪ್ರಜಾಮತ ಮತ್ತಿತರ ಪತ್ರಿಕೆಗಳಲ್ಲಿ ಸದಾ ಇವರ ಚಿತ್ರಗಳನ್ನು ಕಾಣಬಹುದು. ರಾಜ್ಯಲಲಿತಕಲಾ ಅಕಾಡೆಮಿ ಸದಸ್ಯರಾಗಿ (೧೯೮೪-೯೦) ಸೇವೆ ಸಲ್ಲಿಸಿರುವ ಇವರಿಗೆ ಅಕಾಡೆಮಿ ಪ್ರಶಸ್ತಿ (೧೯೯೨), ರಾಜ್ಯೋತ್ಸವ ಪ್ರಶಸ್ತಿ (೨೦೦೨) ದೊರೆತಿವೆ.

ವಿ.ಬಿ. ಹಿರೇಗೌಡರ (೧೯೪೩-)

ಧಾರವಾಡದ ಡಿ.ವಿ. ಹಾಲಬಾವಿಯವರ ಕಲಾಶಾಲೆ, ನಂತರದಲ್ಲಿ ಎಂ. ವಿ. ಮಿಣಜಗಿ ಅವರ ಹುಬ್ಬಳ್ಳಿಯ ವಿಜಯ ಮಹಾಂತೇಶ ಕಲಾಶಾಲೆಯಲ್ಲಿ ಉತ್ತೀರ್ಣರಾಗಿ ದಾವಣಗೆರೆ ಕಲಾಶಾಲೆಯಲ್ಲಿ ಶಿಕ್ಷಕರಾಗಿ, ಬಡ್ತಿ ಪಡೆದು ಪ್ರಾಚಾರ್ಯರಾಗಿದ್ದಾರೆ. ನಿತ್ಯಜೀವನದಲ್ಲಿ ಕಾಣುವ ಕಥಾವಸ್ತುಗಳೇ ಅವರ ಚಿತ್ರದ ಜೀವಾಳ. ಸಾವಿರ ಸಂಖ್ಯೆಯಲ್ಲಿ ರೇಖಾಚಿತ್ರ ರಚಿಸಿದ್ದಾರೆ. ರಾಜ್ಯದಲ್ಲಿ ನಡೆಯುವ ಹಾಗೂ ಕೇಂದ್ರ ಅಕಾಡೆಮಿಯ ಎಲ್ಲಾ ಪ್ರದರ್ಶನಗಳಲ್ಲಿ ಭಾಗವಹಿಸಿರುವುದಲ್ಲದೆ, ಅತಿ ಹೆಚ್ಚಿನ ಸಂಖ್ಯೆಯ ಕಲಾಶಿಬಿರಗಳಲ್ಲಿ ಭಾಗವಹಿಸಿದ ಹೆಗ್ಗಳಿಕೆ ಇವರದು. ರಾಜ್ಯ ಲಲಿತಕಲಾ ಅಕಾಡೆಮಿಯಲ್ಲಿ ಅನೇಕ ಬಾರಿ ಸದಸ್ಯರಾಗಿದ್ದು, ಪ್ರಶಸ್ತಿ ಸಹ ಪಡೆದಿದ್ದಾರೆ.

ಚ.ಪ. ನಾಗೋಡ, ಬೆಳಗಾಂ

ಮುಂಬೈ ಚಿತ್ರಕಲಾ ಜಗತ್ತಿನಲ್ಲಿ ಬಹು ಕಾಲವನ್ನು ಕಳೆದ ಇವರು, ಹಿನ್ನೆಲೆ ಚಿತ್ರಕಲಾವಿದರಾಗಿ ದುಡಿದದ್ದೇ ಹೆಚ್ಚು. ಹೊರ ಜಗತ್ತಿನ ಸಂಪರ್ಕ ಕಡಿಮೆ. ಬೆಳಗಾಂನಲ್ಲಿನ ಕೆಲವು ಮಠಗಳಿಗೆ, ರಾಜಕೀಯ ಧುರೀಣರಿಗೆ ಮುಖಚಿತ್ರ ಮತ್ತು ಪೂರ್ಣ ಪ್ರಮಾಣದ ಚಿತ್ರ ರಚಿಸಿಕೊಟ್ಟಿದ್ದಾರೆ. ಇವರು ಬರೆದ ಅನ್ನಪೂರ್ಣೇಶ್ವರಿ ಚಿತ್ರ ಕ್ಯಾಲೆಂಡರ್ ಆಗಿದೆ. ಶ್ರೀಯುತರಿಗೆ ಆಚಾರ್ಯ ಚಿತ್ರಕಲಾಭವನದ ಪ್ರಶಸ್ತಿ ಮತ್ತು ರಾಜ್ಯೋತ್ಸವ ಪ್ರಶಸ್ತಿ (೨೦೦೧)ಗಳು ದೊರೆತಿವೆ.

ಸೋಮಶೇಖರ ಸಾಲಿ (೧೯೨೩-)

ಇವರು ಬಾಗಲಕೋಟೆಯ ಸಾಲಿ ಮನೆತನದವರು. ವೃತ್ತಿಯಲ್ಲಿ ವಣಿಕರಾದರೂ ಪ್ರವೃತ್ತಿಯಲ್ಲಿ ಕಲಾರಾಧಕರು, ಕಲಾವಿದರು. ಮುಂಬೈ ಜೆ.ಜೆ. ಸ್ಕೂಲ್‌ಗಳಿಂದ ಕಲಾ ಡಿಪ್ಲೊಮೊ ಮಾಡಿ ವಿಜಯ ಮಹಾಂತೇಶ ಕಲಾಮಂದಿರದಲ್ಲಿ ಕೆಲವು ಕಾಲ ಕಲಾಶಿಕ್ಷಕರಾಗಿದ್ದುದಲ್ಲದೇ ಆ ಭಾಗದ ಎಲ್ಲಾ ಸಮಿತಿಗಳಲ್ಲಿ ಇವರ ಹೆಸರು ಇದ್ದದ್ದೆ ರಾಜಕೀಯದ ರಂಗ, ಧಾರ್ಮಿಕ ನಂಟು, ವ್ಯಾಪಾರಿ ಪ್ರವೃತ್ತಿ, ಸರ್ವಜನಾದರಣೀಯ ನಡೆ -ಇವೆಲ್ಲವೂ ಅವರಿಗೆ ಕರಗತ. ಬೆಂಗಳೂರಿನ ಚಿತ್ರಕಲಾ ಪರಿಷತ್ತಿನ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ರಾಜ್ಯ ಲಲಿತಕಲಾ ಅಕಾಡೆಮಿ ಅಧ್ಯಕ್ಷರೂ (೧೯೮೪-೮೭) ಸಹ ಆಗಿದ್ದರು.

ಡಾ. ಎಸ್.ಸಿ. ಪಾಟೀಲ್ (೧೯೫೫-)

ಪ್ರಸ್ತುತ ಕನ್ನಡ ವಿಶ್ವವಿದ್ಯಾಲಯದ ಶಿಲ್ಪ ಮತ್ತು ವರ್ಣಚಿತ್ರಕಲಾ ವಿಭಾಗದ ಪ್ರವಾಚಕರೂ, ಮುಖ್ಯಸ್ಥರೂ ಆಗಿದ್ದಾರೆ. ಇವರ ಸಾಧನೆ ಅಪಾರ. ಗುಲಬರ್ಗಾ ಜಿಲ್ಲೆಯ ಮಾಣಶಿವಣಗಿಯಲ್ಲಿ ಹುಟ್ಟಿ ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದಿಂದ ಎಂ.ಎ. ಪದವಿ ಮತ್ತು ಶಾಸನ ಶಾಸ್ತ್ರದ ಡಿಪ್ಲೊಮಾ, ಕುಮುಟಾ ಕಾಲೇಜನಿಂದ ಬಿ.ಈಡಿ., ಅಂತಿಮವಾಗಿ ಕ.ವಿ.ವಿ.ದಿಂದ ಚಿನ್ನದ ಪದಕದೊಂದಿಗೆ ಪಿಎಚ್.ಡಿ. (೧೯೯೧) ಪಡೆದರು. ಚಿತ್ರಕಲೆಗೆ ಸಂಬಂಧಿಸಿದಂತೆ ಗದಗ ವಿಜಯ ಕಲಾ ಮಂದಿರದಿಂದ ಕಲಾ ಡಿಪ್ಲೊಮಾ ಮತ್ತು ಜಿ.ಡಿ. ಆರ್ಟ್ ಮಾಡಲಿಂಗ್‌ನಲ್ಲಿ ರ್‍ಯಾಂಕ್ ಗಳಿಕೆ. ಧಾರವಾಡ ಭಾರತೀಯ ಕಲಾ ಕೇಂದ್ರದಿಂದ ಆರ್ಟ್ ಮಾಸ್ಟರ್ ಪದವಿ. ಇವರು ಬರೆದ "ಕರ್ನಾಟಕ ಜನಪದ ಚಿತ್ರಕಲೆ" ಒಂದು ಸಂಶೋಧನ ಗ್ರಂಥವು ಗದಗಿನ ತೋಂಟದಾರ್ಯಮಠದ ವೀರಶೈವ ಅಧ್ಯಯನ ಸಂಸ್ಥೆಯ ಮೂಲಕ ಪ್ರಕಟವಾಗಿದೆ. ಬಾರೋಕ್ ಚಿತ್ರಕಲಾವಿದರು ಎಂಬ ಪುಸ್ತಕ ರಾಜ್ಯ ಲಲಿತಕಲಾ ಅಕಾಡೆಮಿ ಪ್ರಶಸ್ತಿ ಪಡೆದುಕೊಂಡಿದೆ. ಇದೀಗ ಕರ್ನಾಟಕದ ಶಾಲಾ ಹಂತದಲ್ಲಿ ಚಿತ್ರಕಲಾ ಶಿಕ್ಷಣ -ಒಂದು ವಿಮರ್ಶಾತ್ಮಕ ಅಧ್ಯಯನ (A critical analysis of Art education of School level in Karnataka for special reference to drawing and painting) ಈ ಇಂಗ್ಲಿಷ್ ಪ್ರಬಂಧಕ್ಕೆ ಎರಡನೇ ಪಿಎಚ್‌ಡಿ ಬಂದಿದೆ. ಪ್ರಸ್ತುತ ಲಲಿತಕಲಾ ಅಕಾಡೆಮಿ ಸದಸ್ಯರೂ ಮತ್ತು ಯು.ಜಿ.ಸಿ. ಸದಸ್ಯರೂ ಆಗಿದ್ದಾರೆ. ರಾಷ್ಟ್ರೀಯ, ಅಂತರ್‌ರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿದ್ದಾರೆ. ಸರಳ, ಸಜ್ಜನ ಕಲಾವಿದರಾದ ಇವರು ಬಾದಾಮಿಯಲ್ಲಿ ವಾಸವಾಗಿದ್ದಾರೆ. ಹೆಚ್ಚಿನ ಕಲಾಶಿಕ್ಷಣ ಪಡೆದಿರುವ ರಾಜ್ಯದ ಏಕೈಕವ್ಯಕ್ತಿ ಇವರು.

ಡಾ. ಬಿ.ಕೆ. ಹಿರೇಮಠ (೧೯೪೧-)

ಹಾವೇರಿ ಜಿಲ್ಲೆಯ ಸವಣೂರಿನಲ್ಲಿ ಹುಟ್ಟಿ ೧೯೬೬ರಲ್ಲಿ ಎಂ.ಎ. ೧೯೮೮ರಲ್ಲಿ 'ಕನ್ನಡ ಹಸ್ತಪ್ರತಿಗಳು -ಒಂದು ಅಧ್ಯಯನ' ಎಂಬ ಮಹಾಪ್ರಬಂಧಕ್ಕೆ ಕ.ವಿ.ವಿ. ದಿಂದ ಪಿಎಚ್.ಡಿ. ಶಾಸನ, ಶಾಸ್ತ್ರದಲ್ಲಿ ಡಿಪ್ಲೊಮಾ ಗಳಿಕೆ (೧೯೬೭), ಪಡೆದರು. ಕಲಾ ಅಧ್ಯಯನದಲ್ಲಿ ಜಿ.ಡಿ. ಮಾಡಲಿಂಗ್ (೧೯೬೬), ಜಿ.ಡಿ. ಆರ್ಟ್ (೧೯೬೭), ಆರ್ಟ್ ಮಾಸ್ಟರ್ (೧೯೬೮) ಇಡೀ ರಾಜ್ಯಕ್ಕೆ ಪ್ರಥಮರಾದರು. ರಾಜ್ಯದ ಹಲವಾರು ಕಡೆ ಚಿತ್ರ ಪ್ರದರ್ಶನ ಮಾಡಿರುವ ಇವರ ಚಿತ್ರರಚನಾ ಶೈಲಿ ಆಧ್ಯಾತ್ಮದ ಹಿನ್ನೆಲೆಯಲ್ಲಿ ಸಾಂಕೇತಿಕ ರೂಪಗಳನ್ನು ತಂದು ನವ್ಯತೆಯ ಬೆಡಗನ್ನು ನೀಡಿದ್ದಾರೆ. ಕಲಾವಿದರನ್ನೇ ಕುರಿತು ಬರೆದ ಕಲಾಗುರು ದಂಡಾವತಿ ಮಠ, ಅಮಿನ್ ಸಾಬ್ ಕಮಡೊಳ್ಳಿ, ಸೋಮಶೇಖರ ಸಾಲಿ ಲಲಿತಕಲಾ ಅಕಾಡೆಮಿಯಿಂದ ಪ್ರಕಟವಾಗಿವೆ. ಹಲವು ಕಲಾ ವಿದ್ವತ್ಪೂರ್ಣ ಲೇಖನಗಳನ್ನು ನಿಯತಕಾಲಿಕೆಗಳಿಗೆ, ಗ್ರಂಥಗಳಿಗೆ ಬರೆದಿದ್ದಾರೆ. 'ಈಶ್ವರ ಸಣಕಲ್ಲ' ಅವರ ಸ್ವತಂತ್ರ ಕೃತಿಗಳು, "ಅತ್ಯುನ್ನತಿಯೊಳ್ ಅಮರ ಸಿಂಧೂದ್ಭವಂ" ಇವರ ಸಂಪಾದಿತ ಕೃತಿ. ರಾಜ್ಯ ಲಲಿತಕಲಾ ಅಕಾಡೆಮಿ ಸದಸ್ಯರು ಸಹ ಆಗಿದ್ದರು (೧೯೯೧-೯೫). ಕಳೆದ ವರ್ಷವಷ್ಟೇ ಅವರನ್ನು ಕುರಿತ ಅಭಿನಂದನಾ ಗ್ರಂಥ ಪ್ರಕಟವಾಯಿತು. ಅದರಲ್ಲಿ ಎಲ್ಲ ಕಲಾ ಸಾಧನೆಗಳ ಸಮೀಕ್ಷೆ, ಕಲೆ, ಸಾಹಿತ್ಯ ಕುರಿತ ಲೇಖನಗಳಿವೆ. ೧೯೫ರಲ್ಲಿ ಅಕಾಡೆಮಿ ಪ್ರಶಸ್ತಿ ಸಹ ದೊರಕಿದೆ. ಅವರದು ಸಕ್ರಿಯವಾಗಿ ಕಲೆ, ಸಾಹಿತ್ಯದಲ್ಲಿ ತೊಡಗಿಕೊಂಡಿರುವ ಚೇತನ.

ಎ.ಎಸ್. ಪಾಟೀಲ್ (೧೯೪೨-)

ಅಪ್ಪಾರಾವ್ ಶಿವಶಂಕರಪ್ಪ ಪಾಟೀಲ್ ಗುಲಬರ್ಗಾ ಜಿಲ್ಲೆಯ ಭಂಕೂರ ಎಂಬ ಗ್ರಾಮದಲ್ಲಿ ಹುಟ್ಟಿದರು. ಚಿತ್ರಕಲೆಯಲ್ಲಿ ಡಿಪ್ಲೊಮಾ ೧೯೬೬, ಆರ್ಟ್ ಮಾಸ್ಟರ್ ೧೯೭೫, ಕಲಾನಿಪುಣ ೧೯೭೯ ಎಂಎ. ಫೈನ್ ಆರ್ಟ್ಸ್ ಗುಲಬರ್ಗಾ ವಿಶ್ವವಿದ್ಯಾಲಯ ೧೯೮೨. ಈಗ ವೀರಶೈವ ಸಂಸ್ಕೃತಿಯ ಕಲಾಪ್ರಕಾರಗಳು ಕುರಿತಂತೆ ಪಿಎಚ್‌ಡಿಗಾಗಿ ಅಧ್ಯಯನ ಮಾಡುತ್ತಿದ್ದಾರೆ. ಇತ್ತೀಚೆಗೆ ಶರಣ ಬಸವೇಶ್ವರ ಸ್ನಾತಕೋತ್ತರ ಚಿತ್ರಕಲಾ ವಿಭಾಗದಲ್ಲಿ ಗೌರವ ಪ್ರಾಧ್ಯಾಪಕರಾಗಿ ನಿವೃತ್ತಿ ಹೊಂದಿ ತಮ್ಮದೇ ಆದ ಚೈತನ್ಯಮಯಿ ಆರ್ಟ್ ಗ್ಯಾಲರಿ ತೆಗೆದಿದ್ದಾರೆ. ಲಲಿತ ಅಕಾಡೆಮಿ ಪ್ರಶಸ್ತಿ (೧೯೯೧), ಗುಲಬರ್ಗಾ ವಿಶ್ವವಿದ್ಯಾಲಯ ಪ್ರಶಸ್ತಿ (೧೯೯೨), ದಾಸೋಹ ರತ್ನ ಉತ್ತಮ ಶಿಕ್ಷಕ ಪ್ರಶಸ್ತಿ, ಬಂಗಾರದ ಪದಕ (೧೯೯೪) -ಇವು ಸಂದ ಅಮೂಲ್ಯ ಪ್ರಶಸ್ತಿ ಗೌರವಗಳು. ರಾಜ್ಯ ಮತ್ತು ರಾಷ್ಟ್ರಮಟ್ಟದ ಕಲಾಪ್ರದರ್ಶನಗಳಲ್ಲಿ ಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ಇತ್ತೀಚೆಗೆ ಪಾಂಡಿಚೆರಿಯ ಅರವಿಂದಾಶ್ರಮದ ಕಡೆಗೆ ಒಲವು ತೋರಿ ಪುಷ್ಪಗಳ ಬಗ್ಗೆ ಅಧ್ಯಯನ ಮಾಡುತ್ತಿದ್ದಾರೆ.

ಶ್ರೀಮತಿ ಮೀರಾಕುಮಾರ್

ಬೆಂಗಳೂರಿನಲ್ಲಿ ವಾಸವಾಗಿರುವ ಇವರು ಬಿಎಸ್ಸಿ ಪದವೀಧರೆ, ಕಲಾ ಡಿಪ್ಲೊಮಾ ಮಾಡಿದ್ದಾರೆ. ಇವರ ಒಲವು ಸಾಂಪ್ರದಾಯಿಕ ಚಿತ್ರರಚನೆಗಳತ್ತ. ಇವರ ಕಲಾಕುಂಚದಿಂದ ಮೂಡಿದ ನೂರಾರು ದೇವತೆಗಳು ಸ್ವರ್ಣಮಯ ವರ್ಣಗಳಿಂದ ಕಂಗೊಳಿಸುತ್ತಿವೆ. ಇವರು ಕಲಾಪ್ರದರ್ಶನವು ರಾಜ್ಯ, ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ನಡೆದಿದೆ. ಪ್ಯಾರಿಸ್, ಲಂಡನ್, ಆಮಸ್ಟರ್ಡಂ, ಆಸ್ಟ್ರಿಯಾಗಳಲ್ಲಿ ಪ್ರವಾಸ ಮಾಡಿ ಕಲಾನುಭವ ಪಡೆದಿದ್ದಾರೆ. ಹಿಂದೂ ದೇವಾಲಯ ನಿರ್ಮಾಣ ಸಂಸ್ಥೆ, ಚಿಕಾಗೋ ಈ ಸಂಸ್ಥೆಯವರು ಇವರು ಬರೆದ ಶಕ್ತಿದೇವತೆಯನ್ನೊಳಗೊಂಡ ಕ್ಯಾಲೆಂಡರ್ ಬಿಡುಗಡೆ ಮಾಡಿದೆ (೨೦೦೪). ಸ್ವಾನಂದಾಶ್ರಮ ಸಂಸ್ಥೆಯವರು "ಕಲಾಕಸ್ತೂರಿ" ಎಂಬ ಬಿರುದು ನೀಡಿ ಗೌರವಿಸಿದ್ದಾರೆ (೨೦೦೨).

ಇವರಲ್ಲದೆ ಚಿತ್ರಕಲಾ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿರುವವರ ಸಂಖ್ಯೆ ಅಧಿಕವಾಗಿಯೇ ಇದೆ. ಪೂರ್ಣ ವಿವರವನ್ನು ಪುಟದ ಸಂಖ್ಯಾಮಿತಿಯಿಂದ ವಿವರಿಸಲಾಗದಿದ್ದರೂ ಹೆಸರನ್ನಾದರೂ ಹೇಳುವ ಮೂಲಕ ನಮ್ಮವರು ಎಷ್ಟು ಜನ ಕಲಾ ರಂಗದಲ್ಲಿ ಇದ್ದಾರೆಂಬುದರ ಅರಿವು ಮೂಡಲಿಕ್ಕೆ ಸಹಾಯವಾಗಲಿ ಎಂಬ ಕಾರಣದಿಂದ ಅತ್ಯಂತ ಸಂಕ್ಷಿಪ್ತವಾಗಿ ಉಲ್ಲೇಖಿಸಲಾಗಿದೆ.

ದಾವಣಗೆರೆಯಲ್ಲಿ ನೆಲೆಸಿರುವ ಕಲಾವಿದರುಗಳಾದ, ಎ. ಮಹಾಲಿಂಗಪ್ಪ, ಎಂ.ಎಂ. ಸ್ವಾಮಿ, ಜೆ.ಜೆ.ಎಂ. ಮೆಡಿಕಲ್ ಕಾಲೇಜಿನಲ್ಲಿರುವ ಶಿವಯೋಗಿಮಠ, ಲಲಿತಕಲಾ ವಿದ್ಯಾಲಯದ ಕಲಾ ಉಪನ್ಯಾಸಕರಾದ ಸೋಮಶೇಖರಪ್ಪ ಹಿರೇಮಠ, ಸಂತೋಷ ಕುಲಕರ್ಣಿ, ಗುಲ್ಬರ್ಗದಲ್ಲಿರುವ ಐಡಿಯಲ್ ಕಲಾಶಾಲೆಯ ಕಲಾ ಉಪನ್ಯಾಸಕರಾಗಿರುವ ರಾಜಶೇಖರ ಲೋಕಯ್ಯ, ಶ್ರೀಮತಿ ಪೂರ್ಣಿಮಾ ಪಾಟೀಲ್, ಸರ್ಕಾರಿ ಪ್ರೌಢಶಾಲೆಯಲ್ಲಿನ ಶಿಕ್ಷಕರಾಗಿರುವ ಎಸ್.ಬಿ. ಉಪ್ಪಿನ್, ಗೋದುಬಾಯಿ ಮಹಿಳಾ ವಿದ್ಯಾಲಯದ ಶಿಕ್ಷಕ ಎ.ಎಸ್. ಪಾಟೀಲ್, ಎಸ್.ಬಿ. ಕಾಲೇಜಿನಲ್ಲಿರುವ ವಿ.ಬಿ. ಬಿರಾದಾರ್, ಎಸ್.ಎಂ. ನೀಲಾ ಮತ್ತು ಶ್ರೀಮತಿ ಲಕ್ಷ್ಮಿ ಜಂಬಲದಿನ್ನಿ.

ಗದಗನಲ್ಲಿರುವ ವಿಜಯ ಕಲಾ ಮಂದಿರದ ಪ್ರಾಚಾರ್ಯರಾದ ಅಶೋಕ ಅಕ್ಕಿ, ವಸಂತ ಅಕ್ಕಿ, ಶ್ರೀಮತಿ ವಿಜಯ ಹಿರೇಮಠ ಮತ್ತು ಹರ್ಲಾಪುರ. ಹುಬ್ಬಳ್ಳಿಯ ವಿಜಯ ಮಹಾಂತೇಶ ಕಲಾಮಂದಿರದ ಉಪನ್ಯಾಸಕರಾಗಿರುವ ಪಿ.ಎಸ್. ಹಿರೇಮಠ, ಎಂ.ಸಿ. ಚೆಟ್ಟಿ, ಇಳಕಲ್‌ನಲ್ಲಿ ಪ್ರಾಚಾರ್ಯರಾಗಿರುವ ಗವಿಮಠ, ಎಸ್.ಎಂ. ಪಾಟೀಲ್, ಬಿಜಾಪುರದ ಸಿದ್ಧೇಶ್ವರ ಕಲಾಶಾಲೆಯ ಪ್ರಾಚಾರ್ಯ ಬಿ.ಸಿ. ಕಾಚಾಪುರ, ಬೆಳಗಾಂನಲ್ಲಿನ ಕೆ.ಎಲ್.ಇ. ಸೊಸೈಟಿ ಮೆಡಿಕಲ್ ಕಾಲೇಜಿನ ಕಲಾವಿದರಾಗಿರುವ ವಿಶ್ವನಾಥ ಗುಗ್ಗರಿ, ಕೃಷಿ ಇಲಾಖೆಯಲ್ಲಿರುವ ಶಂಕರ ಗಾಡಗೊಳ್ಳಿ, ಚಿತ್ರ ಕಲಾವಿದರಾಗಿ ಸಾಹಿತ್ಯ ಬರವಣಿಗೆಯನ್ನು ಮೈಗೂಡಿಸಿಕೊಂಡಿರುವ ಬೆಳಗಾವಿಯ ಶಿವ ಎಸ್. ಹಿರೇಮಠ, ಬಾದಾಮಿಯಲ್ಲಿರುವ ಡಾ. ಎಸ್.ಸಿ.

ಪಾಟೀಲ್ ಮತ್ತು ಶಿವಾನಂದ ಬಂಟನೂರು, ಲಲಿತಕಲಾ ವಿದ್ಯಾಲಯದ ಉಪನ್ಯಾಸಕರಲ್ಲದೆ ಆ ಭಾಗದಲ್ಲಿರುವ ಏಕೈಕ ಶಿಲ್ಪಿ ದಾನೇಶ್ವರ ಮಠ.

ಬಾಗಲಕೋಟೆಯಲ್ಲಿ ಸೋಮಶೇಖರ ಸಾಲಿಯವರ ಪುತ್ರರಾದ ವಿದ್ಯಾಧರ ಸಾಲಿ ಅವರನ್ನು ಹೆಸರಿಸಬಹುದಾದರೆ, ಮೈಸೂರಿನ ಕಾವಾದಲ್ಲಿ ಕಲಾ ಉಪನ್ಯಾಸಕರಾಗಿರುವ ಬಸವರಾಜ ಮಳಸಾವಳಗಿ, ಬಿಂದುರಾಯ್ ಬಿರಾದಾರ್, ಶ್ರೀ ಕಲಾನಿಕೇತನದ ಕಲಾಶಾಲೆಯ ಉಪನ್ಯಾಸಕ ಪರಮೇಶ್ವರ ಕಲಕಟ್ಟೆ, ಕಲಾವಿದ ಮತ್ತು ಛಾಯಾಗ್ರಾಹಕರಾದ ಜಂಬುಕೇಶ್ವರ ಮಠ್ಕಳ, ಕಲಾ ಆಟಿಕೆ ತಯಾರಿಸುವ ಕಲಾವಿದ ಇತ್ತೀಚೆಗಷ್ಟೇ ನಿಧನರಾದ ಎಂ. ಶಿವಣ್ಣ, ಜೆ.ಎಸ್.ಎಸ್. ಪಾಲಿಟೆಕ್ನಿಕ್ ಗಂಗೋತ್ರಿ ಕಲಾ ಉಪನ್ಯಾಸಕ ಕುಬೇರಪ್ಪ ಮತ್ತು ನಿಡೋಣಿ, ತುಮಕೂರಿನ ರವೀಂದ್ರ ಕಲಾನಿಕೇತನ ಎಂಬ ಸಂಸ್ಥೆಯ ಕಲಾ ಉಪನ್ಯಾಸಕರಾಗಿರುವ ಅಶೋಕ ಕಲ್ಲಕಟ್ಟಿ, ಸಿದ್ಧಗಂಗಾ ಪ್ರೌಢಶಾಲೆಯ ಕಲಾ ಶಿಕ್ಷಕ ಮತ್ತು ವೀರಭದ್ರನ ವೇಷಧಾರಿ ಜನಪದ ಕಲಾವಿದ ನೀಲಕಂಠಯ್ಯ.

ಬಿಜಾಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ ಜಿ.ಆರ್. ಈರಣ್ಣ, ಶಿಗ್ಗಾಂವ್‌ನಲ್ಲಿರುವ ಟಿ.ಬಿ. ಸೊಲಬಕ್ಕನವರ್, ರಾಯಚೂರಿನ ಎ.ಬಿ.ಪಿ. ಈಶ್ವರ್ ಮುಖ್ಯರೆನಿಸುತ್ತಾರೆ.

ಇನ್ನು ನಮ್ಮಲ್ಲಿ ಕಲಾ ಪರೀಕ್ಷಕರು, ತನಿಖಾಧಿಕಾರಿಗಳು ಸಹ ಅನೇಕರಿದ್ದಾರೆ. ಲಕ್ಷ್ಮೇಶ್ವರದಿಂದ ಬಂದು ಬೆಂಗಳೂರಿನಲ್ಲೇ ವಾಸವಾಗಿರುವ ನಿವೃತ್ತ ಅಧಿಕಾರಿ ಎಸ್.ವಿ. ಕಮತರ್ ಮತ್ತು ವ್ಯಂಗ್ಯಚಿತ್ರ ಕಲಾವಿದ ಎಂ. ಮಲ್ಲೇಶ, ಜಮಖಂಡಿಯ ಬಿ.ಆರ್. ಪಾಟೀಲ್, ಗುಲ್ಬರ್ಗಾದ ನರಸಪ್ಪ, ಬೆಳಗಾಂನ ಸಿರಿಯಣ್ಣನವರ್, ಮೈಸೂರು ವಿಭಾಗದ ತನಿಖಾಧಿಕಾರಿ ನಂದಲರ್ ಅಲ್ಲದೆ, ವಿವಿಧ ಪ್ರೌಢಶಾಲೆಗಳಲ್ಲಿ ಕಲಾಶಿಕ್ಷಕರಾಗಿರುವ ಟಿ.ಡಿ. ಶೆರ್‌ವಾಡ, ಮೈಸೂರು ಬೆಂಗಳೂರಿನ ಜಯನಗರ ಪ್ರೌಢಶಾಲೆಯ ಹಿರಿಯ ಕಲಾ ಶಿಕ್ಷಕ ನಿಂಗಪ್ಪ ಹಡಪದ್, ಶಿವಮೊಗ್ಗ ಸರ್ಕಾರಿ ಪ್ರೌಢಶಾಲೆಯ ಕಲಾ ಶಿಕ್ಷಕ ಚಿಕ್ಕಮಠ, ಮತ್ತೊಬ್ಬ ಶಿವಮೊಗ್ಗದ ಸೇಕ್ರೆಡ್ ಆರ್ಟ್ ಶಾಲೆಯ ಕಲಾ ಶಿಕ್ಷಕ ಐ.ಎಚ್. ರೋಣ್ ಮುಂತಾದವರನ್ನು ಹೆಸರಿಸಬಹುದಾಗಿದೆ.

ಮುಂಬೈ, ದೆಹಲಿ ಕಲಾವಿದರು 12091

ವೀರಶೈವ ಕಲಾವಿದರಲ್ಲಿ ಕರ್ನಾಟಕದಿಂದ ಹೊರಗೆ ಹೋಗಿ ತಮ್ಮ ಪ್ರತಿಭೆಯನ್ನು ಬೆಳೆಸಿರುವವರ ಹೆಸರನ್ನು ಹೇಳದಿದ್ದರೆ ಈ ಲೇಖನ ಅಪೂರ್ಣವೆನಿಸುತ್ತದೆ. ಅವರೇ ಬುರಾನಪುರ ಮತ್ತು ಭೀಮರಾವ್ ಮುರುಗೋಡ. ಬುರಾನಪುರ ಅವರು ಮೂಲತಃ ಬಿಜಾಪುರದವರಾದರೂ ನೆಲೆಸಿರುವುದು ಮುಂಬೈನ ಬಾಂದ್ರಾದಲ್ಲಿ. ಚುಕ್ಕಿಚಿತ್ರರಚನೆಯಲ್ಲಿ ಅಗ್ರಗಣ್ಯ ಸ್ಥಾನ ಅವರದು. ಕರ್ನಾಟಕ ಸರ್ಕಾರ ಅವರು ಚುಕ್ಕಿ ಮಾಧ್ಯಮದಿಂದ ರಚಿಸಿದ ಚಿತ್ರಗಳನ್ನು ಕೊಂಡು ವಾರ್ಷಿಕ ದಿನಚರಿಯಾಗಿ ಪ್ರಕಟಿಸಿವೆ. ಮೂರು-ನಾಲ್ಕು ವರ್ಷ ಈ ರೀತಿಯಾಗಿ ಪ್ರಕಟವಾಗಿವೆ. ಜ್ಞಾನಪೀಠ ಪುರಸ್ಕೃತರ ಅಂಚೆಚೀಟಿ ಬಿಡುಗಡೆ ಮಾಡಲು, ಕೇಂದ್ರ ಸರ್ಕಾರಕ್ಕೆ ಚುಕ್ಕಿಚಿತ್ರಗಳ ಮೂಲಕ ಜ್ಞಾನಪೀಠ ಪುರಸ್ಕೃತರ ಚಿತ್ರ ಬಿಡಿಸಿ ಕೊಟ್ಟಿದ್ದಾರೆ. ಇವರು ಅಂಗವಿಕಲರು, ಅಂಗವಿಕಲ ಕಲ್ಯಾಣ ನಿಧಿಗೆ ಹಣ ಕೂಡಿಸಿಕೊಟ್ಟಿದ್ದಾರೆ. ಸಂಚಾರಿ ಕಲಾಪ್ರದರ್ಶನದ ಮೂಲಕ ಭಾರತದ ಬಹುಭಾಗ ಸುತ್ತಾಡಿದ್ದಾರೆ. ರಾಜ್ಯ ಹಾಗೂ ರಾಷ್ಟ್ರದ ಬಹುತೇಕ ರಾಜಕೀಯ ನಾಯಕರ, ಧರ್ಮಪೀಠಸ್ಥರ ಚಿತ್ರ ರಚಿಸಿಕೊಂಡಿದ್ದಾರೆ. ಇವರಿಗೆ ರಾಜ್ಯೋತ್ಸವ ಪ್ರಶಸ್ತಿ ದೊರಕಿದೆ. ಅವರ ಸಾಧನೆಗೆ ಇದು ಏನೇನೂ ಸಾಲದು.

ಭೀಮರಾವ್ ಮುರುಗೋಡ: ಮೂರು ಜನ ಮುರುಗೋಡ ಸಹೋದರರಲ್ಲಿ ಒಬ್ಬರಾದ ಇವರು ನವದೆಹಲಿಯಲ್ಲಿ ವಾಸವಾಗಿದ್ದು, ಅನೇಕ ರಾಷ್ಟ್ರನಾಯಕರ ಭಾವಚಿತ್ರ, ಪೂರ್ಣಪ್ರಮಾಣದ ಚಿತ್ರ ಬರೆದಿದ್ದಾರೆ, ಪಾರ್ಲಿಮೆಂಟ್ ಭವನ, ರಾಷ್ಟ್ರಪತಿಭವನ, ವಿದೇಶಿಯರ ಆಗಮನವಾದಾಗ ಅವರ ಸಮಯವನ್ನು ನಿರೀಕ್ಷಿಸಿ ಅವರನ್ನು ಎದುರಿಗೆ ಕೂರಿಸಿಕೊಂಡು ರಚಿಸಿದ ವಿದೇಶೀ ರಾಷ್ಟ್ರನಾಯಕರ ಚಿತ್ರಗಳೂ ಸೇರಿದಂತೆ ಹಲವಾರು ಚಿತ್ರ ರಚಿಸಿದ ಅಚ್ಚಕನ್ನಡಿಗ ಎಂಬುದು ಹೆಮ್ಮೆಯ ವಿಷಯ.

■■

ಭಾಗ-೩

ಶರಣರು-ವಚನ ವಾಙ್ಮಯ

ವಚನ ಚಳುವಳಿ

✍ ಡಾ. ಎಚ್. ತಿಪ್ಪೇರುದ್ರಸ್ವಾಮಿ

ಇದು ಚಳುವಳಿಗಳ ಯುಗ. ಬೆಳಿಗ್ಗೆ ಎದ್ದರೆ ಒಂದಲ್ಲ ಒಂದು ಕಾರಣಕ್ಕಾಗಿ ಒಂದಲ್ಲ ಒಂದು ಕಡೆ ಚಳುವಳಿ ಪ್ರಾರಂಭವಾಗುವದನ್ನು ನೋಡುತ್ತೇವೆ. ವಿದ್ಯಾರ್ಥಿಗಳು, ನೌಕರರು, ಕಾರ್ಮಿಕರು, ರೈತರು ಯಾವುದೋ ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಚಳುವಳಿಗಿಳಿಯುವುದನ್ನು ಪತ್ರಿಕೆಗಳಲ್ಲಿ ಓದುತ್ತೇವೆ. ಆ ಮಾತಿನ ಮಹತ್ವವೇ ಮರೆಯಾಗುವಷ್ಟರಮಟ್ಟಿಗೆ ಚಳುವಳಿಗಳು ತಲೆಯೆತ್ತುತ್ತಿವೆ. ನಮ್ಮ ಸ್ವಾತಂತ್ರ್ಯದ ಹೋರಾಟವನ್ನೂ 'ಚಳುವಳಿ' ಎಂದೇ ಕರೆದೆವು. ಆ ಸ್ವಾತಂತ್ರ್ಯ ಚಳುವಳಿ ಮಹತ್ತರವಾದ ಉದ್ದೇಶ- ಆಶಯಗಳಿಂದ ಪ್ರೇರಿತವಾಗಿತ್ತು. ಮಹಾತ್ಮಾಗಾಂಧೀಜಿಯವರ ನೇತೃತ್ವದಲ್ಲಿ ಸತ್ಯ-ಅಹಿಂಸೆಗಳ ಪ್ರಖರ ಆಯುಧಗಳಿಂದ ಅದು ಜಾಜ್ವಲ್ಯಮಾನವಾಗಿ ಬೆಳಗಿತು. 'ಚಳುವಳಿ' ಎಂಬ ಮಾತು ಒಂದು ಹೊಸ ಆಯಾಮವನ್ನೇ ಅಲ್ಲಿ ಪಡೆಯಿತು..

ಪ್ರಪಂಚದ ಬೇರೆ ಬೇರೆ ರಾಷ್ಟ್ರಗಳಲ್ಲಿ ವಿವಿಧ ರಂಗಗಳಲ್ಲಿ ಚಳುವಳಿ ನಡೆಯುತ್ತಲೇ ಬಂದಿದೆ. ಜಾಗತಿಕ ಇತಿಹಾಸದ ಅತಿಸ್ಥೂಲವಾದ ಸಮೀಕ್ಷೆಯೂ ಕಾಲಕಾಲಕ್ಕೆ ನಡೆದ ಇಂತಹ ಚಳುವಳಿಗಳಿಂದ ವರ್ಣರಂಜಿತವಾಗಿ ಕಾಣುತ್ತದೆ. ರಾಜಕೀಯ ದಾಸ್ಯದಿಂದ ವಿಮುಕ್ತಿಗೊಳ್ಳಲು ಚಳುವಳಿಗಳು ನಡೆದಿವೆ. ಆರ್ಥಿಕ ವಿಷಮತೆಯನ್ನು ಪ್ರತಿಭಟಿಸಿ ಸಮಾನ ಹಂಚಿಕೆಗಾಗಿ ಚಳುವಳಿಗಳು ನಡೆದಿವೆ. ಅಂತೆಯೇ ಮಾನವನ ಹಕ್ಕುಬಾಧ್ಯತೆಗಳಿಗಾಗಿ, ಸಾಮಾಜಿಕ ಸಮಾನತೆಗಾಗಿ, ಅಧಿಕಾರಗಳಿಗಾಗಿ, ಜನಾಂಗಜಾಗೃತಿಗಾಗಿ, ಮತ ಧರ್ಮಗಳಿಗಾಗಿ ಚಳುವಳಿಗಳು ನಡೆಯುತ್ತಲೇ ಬಂದಿವೆ. ೧೨ನೇ ಶತಮಾನದಲ್ಲಿ ಕರ್ನಾಟಕದಲ್ಲಿ ನಡೆದ ಧಾರ್ಮಿಕ ಮತ್ತು ಸಾಮಾಜಿಕ ಚಳುವಳಿಯನ್ನು ಇವುಗಳ ಒಟ್ಟು ಹಿನ್ನೆಲೆಯಲ್ಲಿ ನೋಡಿದಾಗ, ಅದರ ವಿಶಿಷ್ಟತೆ, ವ್ಯಾಪ್ತಿ ಮತ್ತು ಪೂರ್ಣದೃಷ್ಟಿಗಳು ಮನದಟ್ಟಾಗುತ್ತವೆ.

ಆಧುನಿಕ ಚಳುವಳಿಗಳನ್ನು, ಅದರಲ್ಲೂ ಅದರ ಯಾವುದೋ ಒಂದು ಮುಖವನ್ನಷ್ಟೇ ದೃಷ್ಟಿಯಲ್ಲಿಟ್ಟುಕೊಂಡ ಕೆಲವರ ಪ್ರಕಾರ ಅಂದು ಬಸವಣ್ಣನವರ ನೇತೃತ್ವದಲ್ಲಿ ನಡೆದದ್ದು ಅಂತಹ ಮಹತ್ತರವಾದ ಚಳುವಳಿಯೇನಲ್ಲ; ಕ್ರಾಂತಿ ಎನ್ನುವ ಮಾತಂತೂ ದೂರವೇ ಉಳಿಯಿತು. ದೇವರು-ಧರ್ಮ ಇತ್ಯಾದಿ 'ಕೆಲಸಕ್ಕೆ ಬಾರದ ವಿಷಯಗಳನ್ನು' ಜನತೆಯ ಮುಂದಿಟ್ಟು, ಬಸವಣ್ಣ ಆಗಬೇಕಾಗಿದ್ದ ಕ್ರಾಂತಿಯನ್ನು ತಪ್ಪಿಸಿ ಜನತೆಯನ್ನು ಅಡ್ಡಹಾದಿಗೆಳೆದ ಎಂಬರ್ಥದ ಮಾತನ್ನಾಡಿ ತಮ್ಮ ಆ 'ವಿಚಾರಶೀಲತೆ'ಗೆ ತಾವೇ ಮೆಚ್ಚಿಕೊಳ್ಳುವವರೂ ಇದ್ದಾರೆ. ಆದರೆ ನಿಜವಾದ ವೈಚಾರಿಕತೆಗೆ, ಪೂರ್ಣದೃಷ್ಟಿಯ ಸ್ವತಂತ್ರ ವಿವೇಚನೆಗೆ ಆ ಶರಣಯುಗ ಹೇಗೆ ಕಾಣುತ್ತದೆ? ಅಂದು ಬಸವಣ್ಣ ಮತ್ತು ಆತನ ಸಂಗಡಿಗ ಶರಣರು ಕೈಕೊಂಡು ನಿರ್ವಹಿಸಿದ ಕಾರ್ಯವಿಧಾನ ಮತ್ತು ಸ್ವರೂಪಗಳು ವಿಫಲವೇ? ವ್ಯರ್ಥವೇ? ಆಗಬೇಕಾಗಿದ್ದ ಕ್ರಾಂತಿಯನ್ನು ತಪ್ಪಿಸಿದುವೇ? ಇದನ್ನು ಸಂಕ್ಷೇಪವಾಗಿ ಪರಿಶೀಲಿಸಬಹುದು.

ಇದಕ್ಕೆ ಮೊದಲು ಚಳುವಳಿ ಮತ್ತು ಅದರ ಪರಿಣಾಮವಾದ "ಕ್ರಾಂತಿ" ಎಂದರೇನೆಂಬುದನ್ನು ಮೊದಲು ಮನಗಾಣಬೇಕು. ಸಾಮೂಹಿಕವಾಗಿ ಸಮಷ್ಟಿಮನಸ್ಸನ್ನು ಜಾಗ್ರತಗೊಳಿಸಿ, ಕಾರ್ಯೋನ್ಮುಖವಾಗುವಂತೆ ಮಾಡಲು ಕೈಗೊಳ್ಳುವ ಬಹುಜನರ ಬಹುಮುಖ ಪ್ರಯತ್ನಗಳ ನಿರಂತರ ಸರಣಿಯೇ ಚಳುವಳಿ; ಅದರ ಫಲವಾಗಿ ಸಮಾಜದಲ್ಲಿ ಮೂಡುವ ತೀವ್ರವಾದ ಪ್ರತಿಕ್ರಿಯೆ ಮತ್ತು ಬದಲಾವಣೆಗಳನ್ನು 'ಕ್ರಾಂತಿ' ಎನ್ನಬಹುದು. ಅನೇಕ ವೇಳೆ 'ಕ್ರಾಂತಿ' ಎಂಬ ಮಾತು ರಕ್ತಪಾತದೊಡನೆ ಸಂಗತಗೊಂಡೇ ಬೆಳೆದುಬಂದಿರುವುದು ಕಾಣುತ್ತದೆ. ಆದರೆ ಅದು ಕ್ರಾಂತಿಯ ಅನಿವಾರ್ಯವಾದ ಅಂಶವೇನಲ್ಲ. ಹಾಗೆ ನೋಡಿದರೆ

ಒಂದರ್ಥದಲ್ಲಿ ರಕ್ತಕ್ರಾಂತಿ ಪುಕ್ಕಲುತನದ ಒಂದು ಮೆಟ್ಟಿಲು. ಎದುರಾಳಿಯನ್ನು ವೈಚಾರಿಕವಾಗಿ ಎದುರಿಸಿ ಅವನನ್ನು ಪರಿವರ್ತಿಸಲು ಅಸಾಧ್ಯವೆಂಬ ಹೆದರಿಕೆಯೇ ಅವನನ್ನು ಮುಗಿಸಿಬಿಡಬೇಕೆಂಬ ಪ್ರೇರೇಪಣೆಗೆ ಕಾರಣವಾಗುತ್ತದೆ. ಅದರಿಂದಲೇ ಗಾಂಧೀಜಿ ಹೇಳುತ್ತಿದ್ದರು, ಹಿಂಸೆ ಮೂಡಿಬರುವುದು ಭೀತಿಯಿಂದ ಅಥವಾ ಹೇಡಿತನದಿಂದ ಎಂದು. ಕತ್ತಿ, ಬಂದೂಕಗಳನ್ನು ಹಿಡಿದ ಯೋಧನಿಗಿಂತ ಬರಿಗೈ ಬಂಟನಾದ ಸತ್ಯಾಗ್ರಹಿ ಹೆಚ್ಚು ಧೀರನೂ, ಸಮರ್ಥನೂ ಆಗಬೇಕಾಗುತ್ತದೆ. ಅದು ಕೇವಲ ದೈಹಿಕ ಶಕ್ತಿಯಲ್ಲ; ಆಂತರಿಕ ಶಕ್ತಿ, ಆತ್ಮಶಕ್ತಿ. ಆದ್ದರಿಂದ ವೈಚಾರಿಕ ಕ್ರಾಂತಿ, ರಕ್ತಕ್ರಾಂತಿಗಿಂತ ಮುಂದಿನ ಹೆಜ್ಜೆ.

೧೨ನೇ ಶತಮಾನದ ಶರಣರು ತಮ್ಮ ಕಾಲದ ಪರಿಸ್ಥಿತಿಗನುಗುಣವಾಗಿ ಅಂತಹ ಧೀರ ವೈಚಾರಿಕ ಆಂದೋಲನವನ್ನು ಕೈಕೊಂಡರು. ಅದರ ನೇತಾರನಾದ ಬಸವಣ್ಣ ಜೀವನವನ್ನು ಸಮಗ್ರಸ್ವರೂಪದಲ್ಲಿ ನೋಡಿದವನು. ಅಂದಿನ ಧರ್ಮ, ಪೂರ್ಣ ಜೀವನಕ್ಕೆ ಮಾರಕವಾಗಿ, ಶೋಷಣೆಯ ಮಾಧ್ಯಮವಾಗಿದ್ದುದನ್ನು ಕಂಡು ಕೆರಳಿದವನು, ಸಕ್ರಿಯವಾಗಿ ಅದನ್ನು ಪ್ರತಿಭಟಿಸಿದವನು. ಆದರೆ ಆ ಪ್ರತಿಭಟನೆ ರಾಜಕೀಯ ಸ್ವರೂಪದ್ದಾಗಿರಲಿಲ್ಲ. ರಾಜ್ಯದ ಭಂಡಾರಿಯಾಗಿ, ರಾಜಕೀಯದಲ್ಲಿ ಆತ ಪ್ರಧಾನ ಅಧಿಕಾರದಲ್ಲಿದ್ದರೂ ಆತ ತನ್ನ ಕ್ರಾಂತಿಗೆ ಅವಲಂಬಿಸಿದ ಮಾರ್ಗ ವೈಚಾರಿಕವಾದದ್ದು. ಜನಜಾಗೃತಿಯ ಕಷ್ಟಕರವಾದ ಮಾರ್ಗವನ್ನು ಶಿವಪರವಾದ ಆತನ ಮನಸ್ಸು ಎತ್ತಿಕೊಂಡಿತು.

ಜನರ ಮನಸ್ಸನ್ನು ಮುಟ್ಟಿ ಸದ್ವಿಚಾರಗಳಿಂದ ಅದನ್ನು ಉನ್ಮುಖಗೊಳಿಸುವುದು ಕತ್ತಿಯನ್ನು ಝಳಪಿಸುತ್ತ ಅಥವಾ ಗುಂಡನ್ನು ಹಾರಿಸುತ್ತಾ ನುಗ್ಗುವ ವಿನಾಶಾತ್ಮಕವಾದ ಮಾರ್ಗವಲ್ಲ. ವಿಚಾರದ ಪ್ರಭೆಯಿಂದ ಮನಸ್ಸಿನ ಕತ್ತಲನ್ನು ಕಳೆಯುವುದು, ನಿಧಾನವಾಗಿ ಬೆಳೆಯುವ ಸೃಷ್ಟ್ಯಾತ್ಮಕ ಕ್ರಾಂತಿ (Creative Revolution) ಮಾರ್ಗ. ಅದಕ್ಕಾಗಿ ಬಸವಣ್ಣ ಕೈಗೆತ್ತಿಕೊಂಡದ್ದು ಖಡ್ಗವನ್ನಲ್ಲ; ವಚನಗಳನ್ನು. ಕನ್ನಡದಲ್ಲಿ ಆಗಲೇ ವಚನ ಪ್ರಕಾರ ದಾಸಿಮಯ್ಯಾದಿಗಳಿಂದ ಉಗಮಗೊಂಡಿತ್ತು. ನೇರವಾದ ಭಾಷೆಯಲ್ಲಿ ಜನತೆಯನ್ನು ಮುಟ್ಟಿ ಜಾಗೃತಗೊಳಿಸುವ ಸಶಕ್ತ ಮಾಧ್ಯಮವನ್ನು ಬಸವಣ್ಣ ಅವುಗಳಲ್ಲಿ ಕಂಡುಕೊಂಡ. ಲೇಖನಿ ಕತ್ತಿಗಿಂತ ಬಲಶಾಲಿಯಾದದ್ದು, ಹರಿತವಾದದ್ದು ಎಂಬುದನ್ನು ಆ ಮೂಲಕ ತೋರಿಸಲು ನಿರ್ಧರಿಸಿದ. ಆತನ ಜೀವಿತದ ಕೆಲವೇ ವರ್ಷಗಳಲ್ಲಿ ಅದು ತನ್ನ ಸಾಧ್ಯತೆಯನ್ನೂ ಮೀರಿ ಆ ಸತ್ಯವನ್ನು ಸಾಬೀತುಗೊಳಿಸಿತು. ಪುರಾಣದಲ್ಲಿ ರಕ್ತಬೀಜಾಸುರನ ಕಥೆಯೊಂದುಂಟು. ಅದರ ಪ್ರಕಾರ ಆತನ ದೇಹದಿಂದ ಭೂಮಿಗೆ ಬಿದ್ದ ಒಂದೊಂದು ಹನಿ ರಕ್ತಕ್ಕೂ ಸಹಸ್ರಾರು ರಕ್ಕಸರು ಉದ್ಭವವಾಗುತ್ತಿದ್ದರು. ಅದನ್ನು ಇಲ್ಲಿ ಸತ್‌ಪರವಾಗಿ ಅನ್ವಯಿಸಬಹುದು. ಒಂದು ವಚನಕ್ಕೆ ಸಾವಿರ ವಚನಗಳು ಹುಟ್ಟಿದುವು. ಜೀವನದ ಎಲ್ಲ ಸ್ತರಗಳಿಂದಲೂ ಜಾಗ್ರತಗೊಂಡ ಜನ ವಚನಗಳನ್ನು ರಚಿಸಿದರು. ಅನುಭವ ಮಂಟಪದಲ್ಲಿ ವಚನಗಳ ಮಸೆದಾಟದಿಂದ ಕ್ರಾಂತಿಯ ಕಿಡಿಗಳು ಸಿಡಿದುವು. ಅದನ್ನು ನಾಡಿನ ಉದ್ದಗಲಕ್ಕೂ ಹರಡುವುದಕ್ಕೆ ವಚನಗಳೇ ಮಾಧ್ಯಮಗಳಾದವು. ಈ ಅರ್ಥದಲ್ಲಿ ಶರಣರ ಆಂದೋಲನವನ್ನು 'ವಚನ ಚಳುವಳಿ' ಎಂದು ಕರೆಯುವುದು ಸಮಂಜಸವಾಗಿದೆ.

ಬಸವಣ್ಣನ ಮುಂದಿದ್ದ ಸಮಸ್ಯೆ ಸರಳವಾಗಿರಲಿಲ್ಲ; ತುಂಬಾ ಸಂಕೀರ್ಣವಾಗಿತ್ತು. ಒಂದುಕಡೆಯಲ್ಲಿ ಮಾನವತೆಯೆಲ್ಲಾ, ಅಷ್ಟೇ ಏಕೆ ಇಡೀ ಜೀವರಾಶಿಯೇ, ದೈವ ಸ್ವರೂಪವೆಂಬ ವಿಶ್ವವ್ಯಾಪಕವಾದ ದೊಡ್ಡ ಆದರ್ಶ; ಉಪನಿಷತ್ತು, ಗೀತೆ ಮೊದಲಾದ ಧಾರ್ಮಿಕ ಗ್ರಂಥಗಳಲ್ಲಿ; ಇನ್ನೊಂದು ಕಡೆ ಮಾನವತೆ ನಾಚಿಕೊಳ್ಳುವಷ್ಟು ಕುಟಿಲ ಕ್ಷುದ್ರತೆ ಕುಹಕಗಳು ಧರ್ಮದ ಹೆಸರಿನಲ್ಲಿ ಬೆಳೆದು, ಸಮಾಜವನ್ನು ಹೋಳು ಹೋಳು ಮಾಡಿದ್ದುವು. ವರ್ಣಗಳೂ, ಜಾತಿಗಳೂ ಧಾರ್ಮಿಕ ಮುದ್ರೆಯನ್ನು ಪಡೆದು ಮೀರಲಾಗದ ತಾರತಮ್ಯವನ್ನೂ, ಮೇಲು-ಕೀಳುಗಳನ್ನೂ ಸಮಾಜದಲ್ಲಿ ಸೃಷ್ಟಿಸಿದ್ದುವು. ಎಲ್ಲೆಲ್ಲೂ ವಿಷಮತೆ ತಾಂಡವವಾಡುತ್ತಿತ್ತು. ಧರ್ಮದ ಅನಿಷ್ಟ ದುಷ್ಪರಿಣಾಮಗಳು ಸಮಾಜದ ಕೆಳವರ್ಗವನ್ನು ತಲೆಯೆತ್ತದಂತೆ ಮೆಟ್ಟಿ ಅದುಮಿಟ್ಟಿದ್ದುವು. ತಲೆಯೆತ್ತಿ ಮೆರೆಯುವ ಕೆಲವರ ಸುಖಭೋಗಗಳಿಗಾಗಿ ದುಡಿಯುವುದೇ ಅವರ ಕರ್ಮವಾಗಿತ್ತು. 'ಕರ್ಮಸಿದ್ಧಾಂತ'ವನ್ನು ಅವರ ರಕ್ತದ ಕಣಕಣಗಳಲ್ಲಿಯೂ ತೂರಿಸಿ, ಆ ವ್ಯವಸ್ಥೆಯನ್ನು ಶಾಶ್ವತಗೊಳಿಸಲಾಗಿತ್ತು. ಅದಕ್ಕೆ ತಕ್ಕಹಾಗೆ ಧಾರ್ಮಿಕ, ಸಾಮಾಜಿಕ ಮೌಲ್ಯಗಳನ್ನು ರೂಪಿಸಲಾಗಿತ್ತು. ಇಂತಹ ವ್ಯವಸ್ಥೆಯ ವಿರುದ್ಧ ಪ್ರಬಲವಾಗಿ ಪ್ರತಿಭಟನೆಯ ಧ್ವನಿಯೆತ್ತಿದುದು

ಮಾತ್ರವಲ್ಲದೆ ಅದನ್ನು ಒಡೆಯಲು ಉದ್ಯುಕ್ತನಾದವನು ಬಸವಣ್ಣ. ಅವನೆತ್ತಿದ ಕೊರಳು ಕ್ರಮೇಣ ಜನಸಾಮಾನ್ಯರಲ್ಲಿ ಮಾರ್ದನಿಗೊಂಡು, ಹತ್ತುಮಡಿ ನೂರುಮಡಿಯಾಗಿ ಅವರ ಉದ್ಧಾರದ ಪಾಂಚಜನ್ಯವಾಗಿ ಮೊಳಗಿತು. ಕರ್ನಾಟಕದಿಂದ ಮಾತ್ರವಲ್ಲ ಇಡೀ ಭಾರತದ ನಾನು ಭಾಗಗಳಿಂದ ಸಾಧಕರನ್ನು ಆಕರ್ಷಿಸಿತು. ಇತಿಹಾಸದಲ್ಲೇ ಅಪೂರ್ವವಾದ ಮಹಾ ಬಂಡಾಯವಾಗಿ ಪರಿಣಮಿಸಿತು.

ಬಸವಣ್ಣನ ಮಹತ್ವ ಇರುವುದು ತತ್ವಗಳ ಆವಿಷ್ಕಾರಕ್ಕಿಂತ ಹೆಚ್ಚಾಗಿ ಆಗಲೇ ಸಿದ್ಧವಾಗಿದ್ದ ತತ್ವಗಳನ್ನು ಉಜ್ಜಿ, ಅಂದಿನ ಜೀವನಕ್ಕೆ ಅವನ್ನು ಅನ್ವಯಿಸಿ ಕ್ರಿಯಾತ್ಮಕವಾಗಿ ಕಾರ್ಯಗತಗೊಳಿಸಿದುದರಲ್ಲಿ. ಯಾವುದೇ ಕ್ರಾಂತಿಕಾರಕ ಚಳುವಳಿಯಲ್ಲಿ ನಾವು ಮುಖ್ಯವಾಗಿ ಕಾಣುವುದು ಇದನ್ನೇ. ಸ್ವಾತಂತ್ರ್ಯದ ಹೋರಾಟದಲ್ಲಿ ಗಾಂಧೀಜಿ ಪ್ರಯೋಗಿಸಿದ ಸತ್ಯ, ಅಹಿಂಸೆಗಳು ಹೊಸವೇನಲ್ಲ. ಆದರೆ ಅವುಗಳಿಂದ ಸತ್ಯಾಗ್ರಹ ಅಸ್ತ್ರವನ್ನು ಸಿದ್ಧಗೊಳಿಸಿ, ಸ್ವಾತಂತ್ರ್ಯ ಚಳುವಳಿಗೆ ಆ ಮೂಲಕ ಇಡೀ ಮಾನವ ಜೀವನದ ಹೋರಾಟಕ್ಕೆ ಹೊಸ ಆಯಾಮವನ್ನಿತ್ತುದು ಗಾಂಧೀಜಿಯ ಸಾಧನೆ. ಇನ್ನೂ ಒಂದು ಒಳ್ಳೆಯ ಉದಾಹರಣೆ ಹೇಳಬಹುದಾದರೆ ಲೆನಿನ್ ಅವರ ಕಾರ್ಯಸಾಧನೆಯನ್ನು ಜ್ಞಾಪಿಸಿಕೊಳ್ಳಬಹುದು.

ಲೆನಿನ್ ಬರುವ ವೇಳೆಗಾಗಲೇ ಮಾರ್ಕ್ಸ್,.ಆರ್ಥಿಕತೆಯಮೇಲೆ ಆಧಾರಿತವಾದ ತನ್ನ ಸಿದ್ಧಾಂತವನ್ನು ಸಮರ್ಥವಾಗಿ ಪ್ರತಿಪಾದಿಸಿದ್ದ. ಆದರೆ ಅದನ್ನು ಕ್ರಾಂತಿಕಾರೀ ಹೋರಾಟದ ರಚನಾತ್ಮಕ ಕಾರ್ಯಗಳಿಗೆ ಅನ್ವಯಿಸಿ, ಆ ಮೂಲಕ ಸಾಮಾಜಿಕ ಬದಲಾವಣೆಯನ್ನುಂಟುಮಾಡುವ ಚಳುವಳಿ ನಡೆದಿರಲಿಲ್ಲ. ಮಾರ್ಕ್ಸ್‌ವಾದದ ಹಿನ್ನೆಲೆಯಲ್ಲಿ ಜನರನ್ನು ಹೋರಾಟದ ಶಕ್ತಿಯನ್ನಾಗಿ ಬೆಸೆದು, ಒಂದುಗೂಡಿಸಬಲ್ಲ ಸಂಘಟನೆಯ ಅಗತ್ಯವಿತ್ತು. ಆ ಮಹಾಕಾರ್ಯವನ್ನು ಸಾಧಿಸಿದವರು ಲೆನಿನ್. ಮಾರ್ಕ್ಸ್‌ಸಿದ್ಧಾಂತವನ್ನು ಕ್ರಾಂತಿಕಾರೀ ಹೋರಾಟದ ಆಚರಣೆಯೊಡನೆ ಏಕತ್ರಗೊಳಿಸಿ, ಅಂದಿನ ರಷ್ಯದ ವಾಸ್ತವ ಪರಿಸ್ಥಿತಿಗೆ ತಕ್ಕಂತೆ ಅನ್ವಯಿಸುವ ಶಕ್ತಿಯನ್ನು ಲೆನಿನ್ ಬೃಹತ್ ಪ್ರಮಾಣದಲ್ಲಿ ಪ್ರಕಟಪಡಿಸಿದರು. ಇದೇ ಕೆಲಸವನ್ನು ಬೇರೆ ತಾತ್ವಿಕ ಹಿನ್ನೆಲೆಯಲ್ಲಿ, ಬೇರೆ ಜೀವನಸಿದ್ಧಾಂತದ ಪರಿಸರದಲ್ಲಿ ಭಿನ್ನವಾದ ನಿಲುವಿನಿಂದ ಸಾಧಿಸಿದವರು ಬಸವಣ್ಣನವರು. ಆದರೆ ಒಂದು ಸಿದ್ಧಾಂತವನ್ನು ಸಮಷ್ಟಿ ಜಾಗೃತಿಯ ಪರಿಣಾಮಕಾರೀ ಕೈದುವನ್ನಾಗಿ ಪರಿವರ್ತಿಸಿ ಚಲನಶೀಲ ಆಂದೋಲನವನ್ನಾಗಿಸುವ ಸಾಹಸ ಈ ಇಬ್ಬರಲ್ಲೂ ಗೋಚರಿಸುತ್ತದೆ.

ನಮ್ಮ ಆಧುನಿಕರಲ್ಲಿ ಕೆಲವರು ಇನ್ನೂ ಹೆಚ್ಚಿನ ಸಾದೃಶ್ಯವನ್ನು ಕಂಡುಕೊಳ್ಳಲು ಬಯಸುತ್ತಾರೆ. ಮಾರ್ಕ್ಸ್‌ವಾದದಿಂದ ಆಕರ್ಷಿತರಾದ ಅವರು ಅಲ್ಲಿ ಆದದ್ದನ್ನೆಲ್ಲಾ ಬಸವಣ್ಣ ಮಾಡಬೇಕಾಗಿತ್ತೆಂದು ನಿರೀಕ್ಷಿಸಿ, ಆ ದೃಷ್ಟಿಯಿಂದ ಅದನ್ನು ನೋಡತೊಡಗುತ್ತಾರೆ. ಆಗ ಬಸವಣ್ಣನ ಮೇಲಿನ ಅಭಿಮಾನ ಹೆಚ್ಚಾದರೆ ಆತನ ತಲೆಗೆ ಇಲ್ಲದುದನ್ನೆಲ್ಲಾ ಕಟ್ಟಿ, ಆ ಕ್ರಾಂತಿಗೆ ಇದು ಸಮಾನ ಎಂಬ ವ್ಯರ್ಥವಾದಕ್ಕೆ ಕೈಹಾಕಬೇಕಾಗುತ್ತದೆ; ಇಲ್ಲವೆ ಬಸವಣ್ಣ ಕೆಲವು ಹುಸಿಮೌಲ್ಯಗಳನ್ನು ಒಪ್ಪಿಕೊಂಡು ಕ್ರಾಂತಿಯನ್ನು ವಿಫಲಗೊಳಿಸಿದ ಎಂಬ ತೀರ್ಮಾನಕ್ಕೆ ಬರಬೇಕಾಗುತ್ತದೆ. ವಾಸ್ತವವಾಗಿ. ಸತ್ಯ ಇವೆರಡರ ಆಚೆಯಿದೆ.

ಮಾರ್ಕ್ಸ್‌ವಾದ ಮತ್ತು ಬಸವತತ್ವಗಳಲ್ಲಿ ಇರುವ ಸಮಾನ ಅಂಶವೆಂದರೆ ಮಾನವತಾವಾದ. ಮಾರ್ಕ್ಸ್ ಮತ್ತು ಬಸವ ಇಬ್ಬರೂ ಮಾನವನ ದುಃಖಕ್ಕಾಗಿ ಮರುಗಿ, ಅದನ್ನು ತೊಡೆದುಹಾಕುವುದಕ್ಕಾಗಿ ಕಂಕಣ ಕಟ್ಟಿದವರು. ಆದರೆ ಮಾರ್ಗಗಳು ಮಾತ್ರ ಭಿನ್ನ. ಮಾರ್ಕ್ಸ್ ಹೇಳುವುದು ಆರ್ಥಿಕ ವಿಷಮತೆಯೇ ಮಾನವನ ದುಃಖಕ್ಕೆಲ್ಲಾ ಮೂಲ. ಶೋಷಣೆಯ ಮಾಧ್ಯಮಗಳನ್ನು ತೆಗೆದುಹಾಕಿದರೆ, ಉತ್ಪಾದನೆಯ ಮೂಲಗಳನ್ನು ನಿಯಂತ್ರಿಸಿ, ಸಂಪತ್ತಿನ ಹಂಚಿಕೆಯನ್ನು ಸಾಮಾಜಿಕ ನ್ಯಾಯದ ಮೇಲೆ ವ್ಯವಸ್ಥೆಗೊಳಿಸಿದರೆ ಆದರ್ಶ ನವಸಮಾಜ ನಿರ್ಮಾಣ ಸಾಧ್ಯವಾಗುತ್ತದೆ. "ಒಂದು ದೇಶದ ಸಾಮಾಜಿಕ ಸಂಘ-ಸಂಸ್ಥೆಗಳು ಆ ದೇಶದ ಆರ್ಥಿಕ ಸಂಗತಿಗಳಿಂದ ರೂಪಿತವಾಗಿರುತ್ತವೆ"- ಎಂದು ಸಮಾಜದ ಎಲ್ಲ ವ್ಯವಸ್ಥೆಯನ್ನೂ ಆರ್ಥಿಕ ತಳಹದಿಯ ಮೇಲೆ ನಿಲ್ಲಿಸುತ್ತಾನೆ ಮಾರ್ಕ್ಸ್.

ಸಾಮಾಜಿಕ ಸಮಾನತೆಯಲ್ಲಿ ಆರ್ಥಿಕತೆಯ ಮಹತ್ವವನ್ನು ಅಲ್ಲಗಳೆಯುವಂತಿಲ್ಲ ನಿಜ. ಆದರೆ ಅದೊಂದೇ ಎಲ್ಲವನ್ನೂ ನಿರ್ಧರಿಸುವ, ಎಲ್ಲ ಸಮಸ್ಯೆಗಳನ್ನೂ ಪರಿಹರಿಸುವ ಏಕೈಕ ಸಾಧನವೆನ್ನುವುದು ಅದರ ಮೇಲೆ ಸಲ್ಲದ ಅತಿಯಾದ ಒತ್ತನ್ನು ಕೊಟ್ಟಂತಾಗುತ್ತದೆ ಎಂಬುದು ಭಾರತೀಯ ದೃಷ್ಟಿ. ವರ್ಗರಹಿತ ಆರ್ಥಿಕ ಸಮಾನತೆಯನ್ನು ಸಾಧಿಸಿದ ಮಾತ್ರಕ್ಕೆ ಅಲ್ಲಿನ ಜನರೆಲ್ಲಾ ಒಂದೇ ತೆರದವರಾಗಿ ಶಾಂತಿ ನೆಲೆಸಿಬಿಡುವುದಿಲ್ಲ. ರಷ್ಯಾದ ಸಮಾಜವನ್ನೇ ತೆಗೆದುಕೊಂಡರೂ ಅಲ್ಲಿ ಎಲ್ಲ ವರ್ಗದ ಜನರಲ್ಲಿ ಭ್ರಾತೃಭಾವ ಏರ್ಪಟ್ಟು, ಸಮಸ್ಯೆಗಳೆಲ್ಲಾ ಸಂಪೂರ್ಣವಾಗಿ ಪರಿಹಾರವಾಗಿಲ್ಲ. ಸಾಮಾಜಿಕ ಅಡ್ಡಗಟ್ಟುಗಳು ಇನ್ನೂ ಇವೆ. ಆ ಸಮತಾವಾದವನ್ನು ಅಂಗೀಕರಿಸಿರುವ ರಾಷ್ಟ್ರಗಳಲ್ಲೇ ಭಿನ್ನಾಭಿಪ್ರಾಯವಿದ್ದು, ರಾಗ-ದ್ವೇಷಗಳು ಹೊಗೆಯಾಡುತ್ತಿವೆ. ಏಕೆ ಹೀಗೆ?

ಏಕೆಂದರೆ ಮನುಷ್ಯ ಕೇವಲ ಆರ್ಥಿಕ ಜೀವಿಯಲ್ಲ. ಆತನ ಇತರ ಶಕ್ತಿಗಳ ಕಡೆಗೂ ದೃಷ್ಟಿ ಹರಿಸಬೇಕಾಗುತ್ತದೆ. ಆತನಿಗೆ ಹೊರಗಡೆ ಒಂದು ದೇಹ ಇರುವಂತೆ ಅದರ ಒಳಗಡೆ ಒಂದು ಮನಸ್ಸಿದೆ. ಬಾಹ್ಯ ಸನ್ನಿವೇಶದಲ್ಲಿ ಬದಲಾವಣೆ ಮಾಡುವಷ್ಟರಿಂದಲೇ ಆತನ ಸ್ವಭಾವದ ರೂಕ್ಷತೆಯನ್ನೂ, ಮೊಂಡುತನವನ್ನೂ ತಿದ್ದುವುದು ಸಾಧ್ಯವಿಲ್ಲ. ಆಂತರಿಕ ಹಸಿವೆಯೂ ಆಹಾರವನ್ನು ಬಯಸುತ್ತದೆ. ಒಂದಲ್ಲ ಒಂದು ರೀತಿಯಲ್ಲಿ ಅಂತರ್‌ನಿರೀಕ್ಷಣೆಯನ್ನು ಆತ ಮಾಡಿಕೊಳ್ಳಲೇಬೇಕಾಗುತ್ತದೆ. ಅದಕ್ಕೇನನ್ನು ಕೊಡಬೇಕೆಂದು ತಡಕಾಡಲೇ ಬೇಕಾಗುತ್ತದೆ. ಪೂರ್ಣ ಪ್ರಾಪಂಚಿಕವಾದ ಮಾರ್ಕ್ಸ್‌ವಾದ ಅದಕ್ಕೆ ಉತ್ತರವನ್ನು ಕಂಡುಕೊಳ್ಳಲಾರದು. ಧರ್ಮಗಳು ಶೋಷಣೆಗೆ ಕಾರಣವಾಗಿ ದೈವಿಕವಾದ ಅಧಿಕಾರದ ಸೋಗಿನಿಂದ ಮಾನವತೆಯನ್ನು ಒಡೆದು ಆಳುವ ಒಂದು ಅತಿರೇಕಕ್ಕೆ ಹೋದರೆ, ನಾಸ್ತಿಕ್ಯ ಭೌತಿಕ ಸುಖದಲ್ಲಿಯೇ ಎಲ್ಲವನ್ನೂ ಹುಡುಕುವ ಇನ್ನೊಂದು ಅತಿರೇಕಕ್ಕೆ ಹೋಯಿತು. ಬಹುಶಃ ಪೂರ್ಣಸತ್ಯವನ್ನು ಕಂಡುಕೊಳ್ಳುವ ಯಾವುದೇ ಕ್ರಾಂತಿ ಈ ಎರಡನ್ನೂ ಶೋಧಿಸಿ, ಮೂಲಭೂತ ಮೌಲ್ಯಗಳನ್ನು ಸಾಮಾಜಿಕ ಪರಿಸರಕ್ಕೆ ಅಳವಡಿಸಿಕೊಂಡು, ಮಾನವತೆಯ ನಿರಂತರ ಹೋರಾಟದ ಅನ್ವೇಷಣೆಗೆ ಖಚಿತವಾದ ದಿಕ್ಕನ್ನು ಕಂಡುಕೊಳ್ಳುತ್ತದೆ. ಬಸವಣ್ಣ ಸಾಮಾಜಿಕ ವಿಜ್ಞಾನಿಯಾಗಿ ಧಾರ್ಮಿಕ ಪ್ರವಾದಿಯಾಗಿ ಮಾಡಿದ್ದು ಇದನ್ನೇ.

ಮಾನವೀಯತೆ (Humanism) ಬಸವಣ್ಣನವರ ಆಂದೋಲನದ ತಳಹದಿ. ಆದರೆ ಆ ತಳಹದಿಯಲ್ಲೇ ಅದು ನಿಲ್ಲುವುದಿಲ್ಲ. ಅದರ ಮೇಲೆ ಮಾನವನ ಸರ್ವಾಂಗೀಣ ಉದ್ಧಾರದ ಭವ್ಯ ಸೌಧವನ್ನು ಅದು ನಿರ್ಮಿಸುತ್ತದೆ. ಮಾನವೀಯತೆಯ ಸಿದ್ಧಾಂತಕ್ಕೆ ಮಾನವನ ಒಳಿತಿಗಾಗಿ ದುಡಿಯುವುದು, ಮಾನವನ ಉದ್ಧಾರ-ಇವುಗಳೇ ಪರಮಧರ್ಮ. ಆದರೆ ಮಾನವನ 'ಒಳಿತು' ಯಾವುದು? ಆತನ 'ಉದ್ಧಾರ' ಎಂದರೇನು? -ಎಂಬ ಪ್ರಶ್ನೆಗಳನ್ನು ಎದುರಿಸಬೇಕಾಗುತ್ತದೆ. ಅನ್ನ, ಬಟ್ಟೆ ಮತ್ತು ಇತರ ಭೌತಿಕ ಆವಶ್ಯಕತೆಗಳ ವಿತರಣೆಯ ವ್ಯವಸ್ಥೆ ಬಹಳ ಮುಖ್ಯ ಎಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಆದರೆ ಅದೇ ಕೊನೆಯಾಗಲಾರದು. ಈ ಬಾಹ್ಯ ಪರಿಸರಗಳನ್ನಷ್ಟೇ ಸರಿಪಡಿಸಿದ ಮಾತ್ರಕ್ಕೆ ಆತನ ಪೂರ್ಣವಿಕಾಸವಾಗುತ್ತದೆಂಬುದನ್ನು ಒಪ್ಪುವುದಕ್ಕಾಗುವುದಿಲ್ಲ. ಈ ಪೂರ್ಣವಿಕಾಸದ ಆವಿಷ್ಕಾರ ಹೇಗೆಂಬ ಪ್ರಶ್ನೆ ಬಂದಾಗ ಮತಧರ್ಮ ಅನಿವಾರ್ಯವಾಗುತ್ತದೆ.

ಮತಧರ್ಮದಿಂದ ಸಾಕಷ್ಟು ಕೆಡುಕೂ ಆಗಿದೆ ಎಂಬುದನ್ನು ಒಪ್ಪಬೇಕು. ಅದು ಸ್ವಾರ್ಥದ ಮುಖವಾಡವಾಗಿ ಒಂದುಕಡೆ ಶೋಷಣೆಯ ಮಾಧ್ಯಮವಾಗಿದ್ದರೆ, ಇನ್ನೊಂದು ಕಡೆ ಭಾವುಕರ ಅಂಧಶ್ರದ್ಧೆಗೆ ನೀರು-ಗೊಬ್ಬರವಾಗಿ ವಿವೇಚನೆಯನ್ನು ಕುಗ್ಗಿಸುವ ಆವೇಶವಲ್ಲದೆ ಮತ್ತನ್ನು ಬರಿಸುವ ಅಫೀಮಿನಂತೆಯೂ ಆಗಿ ಪರಿಣಮಿಸಿರುವುದನ್ನು ಇತಿಹಾಸದ ಉದ್ದಕ್ಕೂ ಕಂಡುಕೊಳ್ಳಬಹುದು. ಬಸವಣ್ಣನವರ ಕಾಲದಲ್ಲಿ ಧರ್ಮದ ಈ ಗುಣಗಳೇ ಪ್ರಮುಖವಾಗಿ ವಿಜೃಂಭಿಸುತ್ತಿದ್ದುವು. ಬಸವಣ್ಣ ಅವುಗಳನ್ನು ಕಟುವಾಗಿ ಖಂಡಿಸಿದ; ಅವುಗಳಿಂದ ಸಿಡಿದು ನಿಂತ. ಯಾವ ಮುಲಾಜೂ ಇಲ್ಲದೆ ಅವುಗಳನ್ನು ಕತ್ತರಿಸಿಹಾಕುವ ಶಸ್ತ್ರಚಿಕಿತ್ಸೆಯನ್ನು ಕೈಕೊಂಡ. ಅನಗತ್ಯವಾದ ಭಾಗಗಳನ್ನು ಕತ್ತರಿಸಿ, ಉಳಿದುವಕ್ಕೆ ಎಚ್ಚರಿಕೆಯಿಂದ ಹೊಲಿಗೆ ಹಾಕಿ ಆರೋಗ್ಯಕರವಾದ ಬೆಳವಣಿಗೆಗೆ ಕಾರಣವಾಗಬೇಕಾಗುತ್ತದೆ ಶಸ್ತ್ರಚಿಕಿತ್ಸೆ. ಎಲ್ಲವನ್ನೂ ಕತ್ತರಿಸಿ ಕೊಚ್ಚಿಹಾಕುತ್ತಾ ಹೋಗುವುದು ಶಸ್ತ್ರಚಿಕಿತ್ಸೆಯಲ್ಲ; ಕೊಲೆ. ಸಮಾಜಪುರುಷನ ವಿಚಾರದಲ್ಲಿಯೂ ಕ್ರಾಂತಿಕಾರರು ಈ ಮಾತನ್ನು ಗಮನಿಸಬೇಕು.

ಮನುಷ್ಯ ಶತಶತಮಾನಗಳ ಅನುಭವದಿಂದ ಕೆಲವು ಮೌಲ್ಯಗಳನ್ನು ಬೆಳಸಿಕೊಂಡು ಬಂದಿದ್ದಾನೆ. ಇತರ ಪ್ರಾಣಿಗಳಂತೆಯೇ ಜೀವನ ನಡೆಸುತ್ತಿದ್ದ ಆದಿಮಾನವ ಇಂದು ಅವುಗಳಿಂದ ಬೇರೆಯಾಗಿ ನಾಗರಿಕನಾಗಿದ್ದಾನೆ. ತನ್ನ ಅಂತರಿಂದ್ರಿಯಗಳ ಪ್ರಭಾವದಿಂದ ಸಂಸ್ಕೃತಿಯನ್ನು ಬೆಳಸಿಕೊಂಡಿದ್ದಾನೆ. ಅದರ ಜೊತೆಗೆ ಕಳೆಯೂ ಸೇರುತ್ತಾ ಬಂದಿವೆ ಎಂಬುದು ನಿಜ. ಬೆಳೆಯೊಡನೆ ಕಳೆಯೂ ಸಮೃದ್ಧವಾಗಿದೆ. ಆದರೆ ಕಳೆ ಬೆಳೆಗಳನ್ನು ಗುರುತಿಸುವ ವಿವೇಚನೆಯೂ ಮಾನವನ ಒಂದು ವಿಶಿಷ್ಟ ಶಕ್ತಿ. ಆ ಶಕ್ತಿಯನ್ನು ಬೆಳೆಸಿಕೊಂಡು, ಬಳಸಿಕೊಂಡು, ಆತನ ಸಾಮಾಜಿಕ ಕ್ರಾಂತಿ ರೂಪುಗೊಳ್ಳಬೇಕಾಗುತ್ತದೆ.

ಬ್ರಾಹ್ಮಣ್ಯದ ಕರ್ಮಠತನವನ್ನೂ, ಕರ್ಮಸಿದ್ಧಾಂತವನ್ನೂ, ವರ್ಣವ್ಯವಸ್ಥೆಯನ್ನೂ, ಯಜ್ಞ-ಯಾಗಾದಿಗಳನ್ನೂ, ಅಂಧಶ್ರದ್ಧೆಗಳನ್ನೂ, ಮೇಲು-ಕೀಳುಗಳನ್ನೂ ಅದರಲ್ಲೂ ಅಸ್ಪೃಶ್ಯತೆಯನ್ನು ತೀವ್ರವಾಗಿ ತಿರಸ್ಕರಿಸಿದ ಬಸವಣ್ಣ ಉಪನಿಷತ್ತುಗಳ ದಿವ್ಯದರ್ಶನವನ್ನೂ, ಆಗಮಗಳ ಶಿವತತ್ವವನ್ನೂ, ಸರ್ವಸಮಾನತೆಯ ಸಾಧನವಾದ ಇಷ್ಟಲಿಂಗೋಪಾಸನೆಯನ್ನೂ, ಆಂತರಿಕ ವಿಕಾಸದ ಷಟ್‌ಸ್ಥಲ ಮಾರ್ಗವನ್ನೂ ಒಪ್ಪಿಕೊಂಡಿದ್ದಕ್ಕೆ ಕಾರಣ ಈ ವಿವೇಚನೆಯೇ. ಈ ವಿಚಾರದಲ್ಲಿ ಬಸವಣ್ಣನವರದು ಖಚಿತವಾದ ನಿಲವು. ಆತನ ವಿವೇಚನೆ ಮೌಲ್ಯಗಳನ್ನು ಅಗ್ನಿಪರೀಕ್ಷೆಗೆ ಗುರಿಪಡಿಸಿ, ಕಾಳಿಕೆಗಳನ್ನು ಕಳೆದುಕೊಂಡು ಬಂದವುಗಳನ್ನು ಮಾತ್ರ ಸ್ವೀಕರಿಸಿತು. ಇಹ-ಪರಗಳೆರಡರ ಮೌಲ್ಯಗಳನ್ನೂ ಶೋಧಿಸಿತು. ಆದ್ದರಿಂದಲೇ ಅದು ಇಹವನ್ನು ತಿರಸ್ಕರಿಸದೆ ಆರ್ಥಿಕ ಸಮಾನತೆಯ ಆಧಾರದ ಮೆಲೆ ರೂಪಿತವಾದ ಧರ್ಮವಾಯಿತು. ಪ್ರತಿಯೊಬ್ಬನೂ ದೇಹಶ್ರಮದಿಂದ ದುಡಿದು, ಬಂದುದನ್ನು ಹಂಚಿ ತಿನ್ನುವುದೇ ಈ ಧರ್ಮದ ಪ್ರಾಥಮಿಕ ಆವಶ್ಯಕತೆಯಾಯಿತು. ಇದನ್ನು 'ಕಾಯಕ' ಎಂದು ಕರೆದರು. ಅದರ ಸುತ್ತ ಒಂದು ತಾತ್ವಿಕ ಪರಿಧಿಯೇ ನಿರ್ಮಿತವಾಯಿತು. ನೂರಾರು ಶರಣರ ಆಚರಣೆಯಿಂದ ಅದು ಘಟ್ಟಿಗೊಂಡಿತು.

ಅಂದಿನ ಚಳುವಳಿ ವಚನ ರಚನೆಗೆ ಸೀಮಿತವಾಗಿ ಬೌದ್ಧಿಕವಾಗಿ ಉಳಿಯಲಿಲ್ಲ. ವಚನಗಳಲ್ಲಿ ಮೂಡಿದ ತತ್ವದರ್ಶನ ಜನಸಾಮಾನ್ಯರನ್ನು ಮುಟ್ಟಿ ವ್ಯಾಪಕವಾಗಿ ಬೆಳೆಯಿತು. "ಅಂದಂದಿನ ಕಾಯಕ ಅಂದಂದು ಮಾಡಿ ಶುದ್ಧರಾಗಬೇಕು" -ಎಂಬ ಮಾತು ದಿನನಿತ್ಯದ ಆಚರಣೆಯಲ್ಲಿ ಅಳವಟ್ಟಿತು. "ಆಸೆಯೆಂಬುದು ಅರಸಿಂಗಲ್ಲದೆ ಶಿವಭಕ್ತರಿಗೆ ಉಂಟೇ ಅಯ್ಯ?"; "ಈಸಕ್ಕಿಯ ಆಸೆ ನಿಮಗೇಕೆ ಈಶ್ವರನೊಪ್ಪ" ಎಂದು ಹೆಚ್ಚಾಗಿ ತಂದ ಅಕ್ಕಿಯನ್ನು ಹಿಂದಕ್ಕೆ ಸುರಿಸಿದ ಲಕ್ಕಮ್ಮನ ನಿಷ್ಠೆಯನ್ನು ಕಂಡಾಗ ಈ ಚಳುವಳಿಯಿಂದಾದ ಕಾಯಕದ ಜಾಗೃತಿ ಮನವರಿಕೆಯಾಗುತ್ತದೆ. ಇಂತಹ ನೂರಾರು ಜನ ಶರಣ- ಶರಣೆಯರು ತಮ್ಮ ತಮ್ಮ ನಮ್ರ ಕಾಯಕಗಳಲ್ಲಿ ಮಗ್ನರಾಗಿದ್ದುಕೊಂಡು ಪೂರ್ಣವ್ಯಕ್ತಿತ್ವದ ಆವಿಷ್ಕಾರವನ್ನು ಸಾಧಿಸಿದರು. ಪ್ರಸಿದ್ಧರಾದ ಮಡಿವಾಳ ಮಾಚಯ್ಯ, ಅಂಬಿಗರ ಚೌಡಯ್ಯ, ಮೋಳಿಗೆಯ ಮಾರಯ್ಯ ಮೊದಲಾದವರು ಹಾಗಿರಲಿ, ಮೆಟ್ಟು ಹೊಲಿಯುವ ಕಾಯಕದ ಮಾದರ ಧೂಳಯ್ಯ, ದನಕಾಯುವ ಕೆಲಸದ ತುರುಗಾಹಿ ರಾಮಣ್ಣ, ಬಾಗಿಲು ಕಾಯುವ ಪಡಿಹಾರಿ ಉತ್ತಣ್ಣ, ಹಗ್ಗ ಹೊಸೆಯುವ ನುಲಿಯ ಚಂದಯ್ಯ -ಹೀಗೆ ಹಲವಾರು ಶರಣರನ್ನು ಹೆಸರಿಸುತ್ತಾ ಹೋಗಬಹುದು. ಇವರು ವಚನಗಳನ್ನು ರಚಿಸಿ, ಆಂತರಿಕವಾಗಿ ತಾವು ಏರಿದ ನಿಲವನ್ನು ಅವುಗಳಲ್ಲಿ ವ್ಯಕ್ತಪಡಿಸಿದ್ದಾರೆ. ಧೂಳಯ್ಯ ಮೆಟ್ಟು ಹೊಲಿಯುವ ಕಾಯಕವನ್ನೇ ಆಧ್ಯಾತ್ಮಿಕ ಸಾಧನೆಯ ಸಾಂಕೇತಿಕಮಟ್ಟಕ್ಕೆ ಏರಿಸಿದರೆ, ರಾಮಣ್ಣ ದನ ಕಾಯುವುದನ್ನು ಅರ್ಥವತ್ತಾಗಿ ತನ್ನ ಸಾಧನೆಗೆ ಹೋಲಿಸಿದ್ದಾನೆ. 'ಕಾಯಕವೇ ಕೈಲಾಸ' ಎಂಬುದರ ಅರ್ಥವ್ಯಾಪ್ತಿ ಏನೆಂಬುದು ಇಂತಹ ಶರಣರ ವಚನಗಳನ್ನು ಕಂಡಾಗ ಮನದಟ್ಟಾಗುತ್ತದೆ. ಸಂಸ್ಕಾರ ಯಾವುದೇ ಒಂದು ಜನಾಂಗಕ್ಕೆ ಮೀಸಲಾಗಿಲ್ಲದೆ ಅವಕಾಶವನ್ನು ಕೊಟ್ಟರೆ ಸಮಾಜದ ಅತಿ ಕೆಳಸ್ತರದಿಂದಲೂ ಅದ್ಭುತ ಪ್ರತಿಭೆ ಹೇಗೆ ಅರಳಬಹುದೆಂಬುದಕ್ಕೆ ಈ ವಚನ ಚಳುವಳಿ ಇಂತಹ ಹಲವಾರು ಉದಾಹರಣೆಗಳಿಂದ ಐತಿಹಾಸಿಕ ಸಾಕ್ಷಿಯನ್ನು ಒದಗಿಸುತ್ತದೆ.

ಕಾಯಕ ಮೀಮಾಂಸೆ ಇಲ್ಲಿ ನಡೆದದ್ದು ಬೌದ್ಧಿಕವಾಗಿ ಮಾತ್ರವಲ್ಲ; "ಕುರ್ವನ್ನೇ ವೇಹ ಕರ್ಮಾಣಿ..." ಇತ್ಯಾದಿ ಮಾತುಗಳಲ್ಲಿ ಉಪನಿಷತ್ತು ಅದನ್ನು ಆಗಲೇ ಸೂಚಿಸಿತ್ತು. ಇಲ್ಲಿ ನಡೆದದ್ದು ಅದನ್ನು ಸಾಮಾಜಿಕ ಜೀವನದಲ್ಲಿ ಅನ್ವಯಿಸಿ, ಜೀವಂತ ಸತ್ಯವನ್ನಾಗಿಸುವ ಚಳುವಳಿ. ಬಸವಣ್ಣ ಮಂತ್ರಿಯಾಗಿದ್ದ ವೃತ್ತಿಯಿಂದ; ಬ್ರಾಹ್ಮಣನಾಗಿದ್ದ ಜಾತಿಯಿಂದ. ಹರಳಯ್ಯ,

ಧೂಳಯ್ಯ, ನಾಗಮಯ್ಯ ಮೊದಲಾದವರು ಸಮಾಜ ಕೀಳೆಂದು ಕಾಣುವ ಕೆಲಸದಲ್ಲಿದ್ದವರು; ಅಸ್ಪೃಶ್ಯರಾಗಿದ್ದವರು. ಬಸವಣ್ಣನ ಧರ್ಮ ಆ ತಾರತಮ್ಯಗಳನ್ನು ತೊಡೆದುಹಾಕಿ, ಸಾಧಕನ ಮೂಲಭೂತ ಮೌಲ್ಯಗಳನ್ನು ಮಾತ್ರ ಲಕ್ಷಿಸಿ ಸರ್ವಸಮಾನತೆಯನ್ನು ಸಾಧಿಸಿ ತೋರಿಸಿತು. ಅನುಭವಮಂಟಪದಲ್ಲಿ ಎಲ್ಲರೂ ಸಮಾನಸ್ಕಂಧರಾಗಿ ಕುಳಿತು ಜಿಜ್ಞಾಸೆಯಲ್ಲಿ ತೊಡಗುತ್ತಿದ್ದರು.

ಆ ಯುಗದಲ್ಲಿ ಇದು ಊಹೆಗೂ ಮೀರಿದ ಆಚರಣೆಯಾಗಿತ್ತು. ಧರ್ಮ-ಶಾಸ್ತ್ರಗಳ ಸಾಂಪ್ರದಾಯಿಕ ಆಚರಣೆಗಳು ಉಕ್ಕಿನ ಕೋಟೆಯಂತಾಗಿ ಜನಸಾಮಾನ್ಯರು ವಿದ್ಯೆಯಿಂದ, ಧರ್ಮದಿಂದ ವಂಚಿತರಾಗಿದ್ದರು. ಅಸ್ಪೃಶ್ಯರಂತೂ ತೀರಾ ತಿರಸ್ಕೃತ ಜೀವನದಲ್ಲಿದ್ದರು. ಅವರ ನೆರಳೂ ಉತ್ತಮರ ಮೇಲೆ ಬೀಳುವಂತಿರಲಿಲ್ಲ. ವೇದಾದಿಗಳ ಮಂತ್ರಗಳನ್ನು ಅವರು ಕೇಳಿದರೆ ಕಾದ ಸೀಸವನ್ನು ಅವರ ಕಿವಿಯಲ್ಲಿ ಹಾಕಬೇಕೆನ್ನುವವರೆಗೂ ಹೋಗಿದ್ದುವು ಧರ್ಮಶಾಸ್ತ್ರಗಳು. ಆ ಪರಿಸರದಲ್ಲಿ ಬಸವಣ್ಣ ಅಸ್ಪೃಶ್ಯರ ಕೇರಿಗೆ ಹೋಗಿ, ಹರಳಯ್ಯ ಮೊದಲಾದವರನ್ನು ಮೇಲೆತ್ತಿ ತಂದುದಲ್ಲದೆ ಶಿವನಾಗಮಯ್ಯಾದಿಗಳಿಂದ ವೇದವನ್ನೂ ಹೇಳಿಸಿದ, ಧೂಳಯ್ಯ ವಚನಕಾರನಾದ- ಎಂಬ ಅಂಶಗಳನ್ನು ಗಮನಿಸಿದರೆ ಅಂದು ಆ ಚಳುವಳಿ ಸಾಧಿಸಿದುದೇನೆಂಬುದು ಸ್ಪಷ್ಟವಾಗುತ್ತದೆ. "ಕೊಲ್ಲುವವನೇ ಮಾದಿಗ, ಹೊಲಸು ತಿಂಬುವನೇ ಹೊಲೆಯ, ಕುಲವೇನೋ ಅವಂದಿರ ಕುಲವೇನೋ! ಸಕಲ ಜೀವಾತ್ಮರಿಗೆ ಲೇಸನು ಬಯಸುವ ನಮ್ಮ ಕೂಡಲ ಸಂಗನ ಶರಣರೇ ಕುಲಜರು" ಎಂಬ ಸೂತ್ರ ಕ್ರಾಂತಿಕಾರಕವಾದದ್ದು. ಅದನ್ನು ಅಕ್ಷರಶಃ ಆಚರಿಸುವ ದಿಟ್ಟತನವನ್ನು ತೋರಿದಾಗ "ಪಂಡಿತಾಃ ಸಮದರ್ಶಿನಃ" ಎಂಬಂತಹ ಗೀತೆ ಉಪನಿಷತ್ತುಗಳ ಮಾತುಗಳನ್ನು ಬಾಯಿಪಾಠಮಾಡಿ ಉಗ್ಘಡಿಸುತ್ತಿದ್ದ ಪುರೋಹಿತರಿಗೇನೂ ಕಡಿಮೆಯಿರಲಿಲ್ಲ. ಆದರೆ ಅವು ಹೇಳುವುದಕ್ಕೆ ಮಾತ್ರ ಇದ್ದ ಅಲಂಕಾರ ಇಲ್ಲವೆ ವಂಚಕ ಸಾಮಗ್ರಿಯಾಗಿದ್ದುವು. ಅವುಗಳನ್ನು ಆಚರಣೆಗೆ ತರುವುದಕ್ಕಾಗಿ ಬಸವಣ್ಣ ದೊಡ್ಡ ಆಂದೋಳನವನ್ನೇ ಹೂಡಬೇಕಾಯಿತು. ಕಾಯಕದಲ್ಲಿ ಮೇಲು-ಕೀಳುಗಳು ಇಲ್ಲ: "ಕಾಸಿ ಕಮ್ಮಾರನಾದ ಬೀಸಿ ಮಡಿವಾಳನಾದ...." ಇತ್ಯಾದಿಯಾದ ವಚನಗಳು ಕೇವಲ ವಚನಗಳಾಗಿ ಉಳಿಯದೆ ಚಳುವಳಿಗೆ ನಾಂದಿಯಾದುವು. ಆ ಆಶಯ ಈಡೇರುವಂತೆ ನೂರಾರು ಕಾಯಕಗಳನ್ನು ಕೈಕೊಂಡ ಶರಣರು ಅದನ್ನು ದೊಡ್ಡ ಪ್ರಮಾಣದಲ್ಲಿ ಸಾಧಿಸಿ ತೋರಿಸಿದರು.

ತತ್ತ್ವವನ್ನು ಕ್ರಿಯೆಯನ್ನಾಗಿಸುವಲ್ಲಿ ಈ ಚಳುವಳಿ ಯಶಸ್ವಿಯಾಯಿತು. ಬಸವಣ್ಣನ ವಚನ ಪರುಷವಾಯಿತು. ಅದರಿಂದ ಆಕರ್ಷಿತರಾಗಿ ದೇಶದ ನಾನಾ ಭಾಗಗಳಿಂದ ಜನ ಬಂದು ಸೇರಿದರು. ಸ್ವತಃ ಸಾಧಕನಾಗಿ ಭಕ್ತಿಭಂಡಾರಿಯಾಗಿದ್ದ ಬಸವಣ್ಣ ಕೇವಲ ಭಾವುಕನಾಗಿರದೆ, ಚಿಂತನಶೀಲನಾದ ಸಮಾಜವಿಜ್ಞಾನಿಯೂ ಆಗಿದ್ದ. ಒಂದುಕಡೆ ಸರ್ವಸಮರ್ಪಣೆಯ ಭಕ್ತಿಮಾರ್ಗ; ಇನ್ನೊಂದುಕಡೆ ಸಾಮಾಜಿಕ ಸಮಸ್ಯೆಗಳ ವಿಶ್ಲೇಷಣೆ ಮತ್ತು ಅದನ್ನು ಸಾಕಾರಗೊಳಿಸುವ ಕರ್ತೃತ್ವಶಕ್ತಿ ಇವುಗಳಿಂದ ವಿಶಿಷ್ಟ ರೀತಿಯ ನಾಯಕನಾಗಿ ಈ ಚಳುವಳಿಯನ್ನು ಸಂಘಟಿಸಿದ. ಇದಕ್ಕೆ ಚೆನ್ನಬಸವಣ್ಣ ತಾತ್ತ್ವಿಕ ಹಿನ್ನೆಲೆಯನ್ನು ಒದಗಿಸಿದರೆ, ಅಲ್ಲಮಪ್ರಭು ತನ್ನ ವೈರಾಗ್ಯಪ್ರಭೆಯ ನಿಷ್ಠುರ ನಿಯಮದಿಂದ ಬೆನ್ನೆಲುಬಾಗಿ ನಿಂತ. ಸಿದ್ಧರಾಮ ಸಕಲೇಶ ಮಾದರಸ, ಉರಿಲಿಂಗದೇವ, ಘಟ್ಟಿವಾಳಯ್ಯ, ಕಿನ್ನರಿ ಬೊಮ್ಮಣ್ಣ, ಹಡಪದ ಅಪ್ಪಣ್ಣ, ಮಡಿವಾಳ ಮಾಚಯ್ಯ, ಅಂಬಿಗರ ಚೌಡಯ್ಯ, ಅಕ್ಕಮಹಾದೇವಿ, ಲಿಂಗಮ್ಮ, ನೀಲಮ್ಮ ಮೊದಲಾದ ಅನುಭಾವಿಗಳೂ ತಮ್ಮ ಸಾಧನೆಯನ್ನು ಧಾರೆಯೆರೆದು ಈ ಚಳುವಳಿಯ ಎತ್ತರ ಬಿತ್ತರಗಳನ್ನು ಹೆಚ್ಚಿಸಿದರು.

ಇದು ಸಾಧಿಸಿದ ಸಮಾನತೆ ಕೇವಲ ಸಾಮಾಜಿಕವಾದ ಬಾಹ್ಯ ಆಚರಣೆ ಮಾತ್ರವಾಗಿ ಉಳಿಯಲಿಲ್ಲ. ಅಸ್ಪೃಶ್ಯರನ್ನು ಮುಟ್ಟಿಸಿಕೊಂಡರೆ, ದೇವಾಲಯ ಪ್ರವೇಶ ಮಾಡಿಸಿದರೆ ಸಾಕೆಂಬ ಸ್ಥಿತಿ ಈಗಲೂ ಇರುವಾಗ ಆ ಯುಗದಲ್ಲಿಯೇ ಬಸವಣ್ಣ ಇಷ್ಟಕ್ಕೆ ಸೀಮಿತಗೊಳಿಸದೆ ಆಂತರಿಕ ಏಕತೆಗೆ ಕಾರಣವಾಗುವ ಧಾರ್ಮಿಕ ಸಮತೆಯನ್ನು ರೂಢಿಸಿದ. ಹುಟ್ಟಿನಿಂದಲೇ ಜಾತಿಯನ್ನು ನಿರ್ಧರಿಸುವ ಮತ್ತು ಅದನ್ನು ಮೀರಲಾಗದ ಉಕ್ಕಿನ ಕೋಟೆಯಾಗಿ ಉಳ್ಳ ಹಿಂದೂಧರ್ಮದಲ್ಲಿ ಬಸವಣ್ಣ ಗುಣದಿಂದ ಜಾತಿಯನ್ನು ಅಳೆಯುವ ಚಲನಶೀಲತೆಯನ್ನು ತಂದುದು ಸಾಮಾನ್ಯ ಸಾಧನೆಯಲ್ಲ. ಅಸ್ಪೃಶ್ಯನಾಗಿದ್ದ ಹರಳಯ್ಯ ಅದೇ

ಜನ್ಮವಲ್ಲಿಯೇ ತನ್ನ ಆಚರಣೆಯಿಂದ ಪರಿವರ್ತಿತನಾಗಿ ಬ್ರಾಹ್ಮಣ ಮಧುವರಸನೊಡನೆ ಧಾರ್ಮಿಕ ಸಮಾನತೆಯನ್ನು ಪಡೆಯುವಂತಾಯಿತು. ಇದಕ್ಕೆ ಅಡ್ಡಿಯಾಗಿದ್ದ ಅಂದಿನ ಸಂಪ್ರದಾಯಗಳ ವಿಕೃತಿ ಗ್ರಂಥಿಗಳನ್ನು ಕತ್ತರಿಸಿಹಾಕಿ ಆರೋಗ್ಯಕರವಾದ ಮಾರ್ಗವನ್ನು ರೂಪಿಸಲು ನೆರವಾಯಿತು ಈ ಚಳುವಳಿ.

ಇನ್ನೊಂದು ಮುಖ್ಯವಾದ ಅಂಶವೆಂದರೆ, ಸಮಾನತೆಯನ್ನು ಬಾಯಲ್ಲಿ ಹೇಳಿದರೆ ಸಾಲದು. ಕಾರ್ಯತಃ ಆಚರಿಸಿ ದೀನರಿಗೂ, ದಲಿತರಿಗೂ ಸಮಾನತೆಯ ಅನುಭವವನ್ನು ತಂದುಕೊಡಬೇಕಾಗಿತ್ತು. ಇದಕ್ಕಾಗಿ ಬಸವಣ್ಣ ಇಷ್ಟಲಿಂಗವನ್ನು ಬಳಸಿಕೊಂಡ. ಉದ್ಧಾರದ ಅಭೀಪ್ಸೆಯುಳ್ಳವರೆಲ್ಲರಿಗೂ ಯಾವ ತಾರತಮ್ಯವೂ ಇಲ್ಲದೆ ಇಷ್ಟಲಿಂಗದೀಕ್ಷೆಯನ್ನು ಕೊಟ್ಟ. ಶೂದ್ರರನ್ನೂ, ಅಸ್ಪೃಶ್ಯರನ್ನೂ ಈ ಸಂಸ್ಕಾರಕ್ಕೆ ಒಳಗುಪಡಿಸಿದ.

ಆಧುನಿಕರಲ್ಲಿ ಕೆಲವರು ಎತ್ತಬಹುದಾದ ಆಕ್ಷೇಪ ಇಲ್ಲಿಯೇ: ಒಂದು ಅಂಧಶ್ರದ್ಧೆಯಿಂದ ಇನ್ನೊಂದಕ್ಕೆ ಅವರನ್ನು ತಳ್ಳಿದ ಎಂಬುದಾಗಿ. ಇದನ್ನು ದೀರ್ಘವಾಗಿ ವಿವೇಚಿಸುವ ಅಗತ್ಯವಿದೆ. ಇಲ್ಲಿ ಅದಕ್ಕೆ ತೊಡಗದೆ ಒಂದು ಮಾತಿನಲ್ಲಿ ಹೇಳಬಹುದಾದರೆ: ಬಸವಣ್ಣ ಉದ್ದೇಶಿಸಿದ್ದು ದೀನರನ್ನೂ, ದಲಿತರನ್ನೂ, ದುಃಖಿಗಳನ್ನೂ ಎಚ್ಚರಗೊಳಿಸುವುದಷ್ಟೇ ಆಗಿರಲಿಲ್ಲ; ಎಚ್ಚರಗೊಂಡ ಅವರನ್ನು ಸನ್ಮಾರ್ಗದಲ್ಲಿ ಮುನ್ನಡೆಸಿ, ಸ್ವಾವಲಂಬನೆಯ ಪೂರ್ಣ ಬದುಕನ್ನೂ ಅವರು ಕಾಣುವಂತೆ ಮಾಡುವುದು ಆತನ ಆಶಯವಾಗಿತ್ತು. ನಿರ್ದಿಷ್ಟವಾದ ಗುರಿಯಿಲ್ಲದ ಎಚ್ಚರ ಅಥವಾ ಉತ್ಸಾಹ ಎಷ್ಟೆಷ್ಟು ಅಡ್ಡದಾರಿಗಳನ್ನು ಹಿಡಿಯಬಲ್ಲುದೆಂಬುದನ್ನು ಉದ್ದೇಶರಹಿತ ಸಾರ್ವತ್ರಿಕ ವಿದ್ಯಾಭ್ಯಾಸದ ಇಂದಿನ ದಿನಗಳಲ್ಲಿ ನಾವು ಹೆಜ್ಜೆ ಹೆಜ್ಜೆಗೂ ಮನಗಾಣಬಹುದಾಗಿದೆ. ಗಾಂಧೀಜಿ ಸತ್ಯ, ಅಹಿಂಸೆಗಳ ಹಿನ್ನೆಲೆಯಲ್ಲಿ ರಚನಾತ್ಮಕ ಕಾರ್ಯಕ್ರಮಗಳ ಮೂಲಕ ಆ ಉದ್ದೇಶವನ್ನು ರೂಪಿಸುವ ಪ್ರಯತ್ನಕ್ಕೆ ಅತಿ ಹೆಚ್ಚಿನ ಮಹತ್ವಕೊಟ್ಟಿದ್ದರು. ಸಾಮೂಹಿಕ ಜಾಗೃತಿಯ ಪರಿಣಾಮಗಳನ್ನು ಬಲ್ಲ ಬಸವಣ್ಣ ಮಾನವೀಯ ಮೌಲ್ಯಗಳನ್ನು ಎತ್ತಿಹಿಡಿಯುವ ಉದಾತ್ತ ಆದರ್ಶದ ಧಾರ್ಮಿಕ ಸೂತ್ರಗಳಿಂದ ಆ ಶಕ್ತಿಸಂಚಯನದ ಕೇಂದ್ರಗಳನ್ನು ರಚನಾತ್ಮಕವಾಗಿ ನಿಯಂತ್ರಿಸಲು ಸಮರ್ಥನಾದ. ಅದೆಲ್ಲವನ್ನೂ ನಿರಾಕರಿಸಿದ ಪ್ರಾಣಿಜೀವನದ ಸಮತೆ ಬಸವಣ್ಣನ ಆಶಯವಾಗಿರಲಿಲ್ಲ. ಮನುಷ್ಯನಿಗೆ ಮೃಗೀಯ ಧೈರ್ಯವನ್ನು ತುಂಬುವ ಕ್ರಾಂತಿಯನ್ನು ಆತ ಮಾಡಲಿಲ್ಲ. ಧೈರ್ಯ ಒಂದು ಮೌಲ್ಯವಾಗಿರುವಂತೆ ಸಂಯಮವೂ ಒಂದು ಮೌಲ್ಯ ಎಂಬುದನ್ನು ಆತ ಪ್ರತಿಪಾದಿಸಿದ. ದಿಟ್ಟತನ-ಸದುವಿನಯಗಳ ಸಾಮರಸ್ಯ, ಸ್ವತಂತ್ರ ವಿವೇಚನೆಯಿಂದ ಹದಗೊಳ್ಳಬೇಕೆಂಬ ಮಾನವ ವಿವೇಕವನ್ನು ಹರಿತಗೊಳಿಸಿದ. ಜನ ಸಾಮಾನ್ಯರಲ್ಲಿಯೂ ಅದನ್ನು ಬಿತ್ತಿದ. ಅದರ ಪರಿಣಾಮ ಆಶ್ಚರ್ಯಕರ. ನೂರಾರು ಜನ, ತೀರಾ ಕೆಳಗಿನ ಸ್ತರದವರೆಂದು ಭಾವಿಸಲಾದವರು ಕೂಡ, ಶರಣಜೀವನದ ಉನ್ನತಿಗೇರಿದರು. ಅಸ್ಪೃಶ್ಯನಾಗಿದ್ದ ಉರಿಲಿಂಗಪೆದ್ದಿ, ಉರಿಲಿಂಗದೇವನ ಶಿಷ್ಯನಾಗಿ ಮಠಕ್ಕೆ ಸ್ವಾಮಿಯಾಗುವುದೂ ಸಾಧ್ಯವಾಯಿತೆಂದರೆ ಹಿಂದೂಸಮಾಜದ ಸಾಂಪ್ರದಾಯಿಕ ಮನಸ್ಸು ಇಂದೂ ನಂಬಲಾರದು. ಆದರೆ ಅಂದು ಬಸವಣ್ಣನ ಚಳುವಳಿಯ ಪರಿಣಾಮವಾಗಿ ಅದು ಸಾಧ್ಯವಾಯಿತು.

ಜಾತಿಭೇದವನ್ನು ತೊಡೆದಂತೆ ಸ್ತ್ರೀ- ಪುರುಷರೆಂಬ ಲಿಂಗಭೇದವನ್ನೂ ತೊಡೆದು ಹಾಕಿದುದು ಈ ಚಳುವಳಿಯ ಇನ್ನೊಂದು ಮಹತ್ವದ ಸಾಧನೆ. "ನಡುವೆ ಸುಳಿವಾತ್ಮ ಹೆಣ್ಣೂ ಅಲ್ಲ, ಗಂಡೂ ಅಲ್ಲ" ಎಂಬುದನ್ನು ಇದು ಸಾಧಿಸಿ ತೋರಿಸಿತು. ಅಕ್ಕನಾಗಮ್ಮ, ಗಂಗಾಂಬಿಕೆ, ನೀಲಾಂಬಿಕೆ, ಅಕ್ಕಮಹಾದೇವಿ ಮೊದಲಾದ ಪ್ರಮುಖರ ಮಾತು ಹಾಗಿರಲಿ ಸಾಮಾನ್ಯ ನಮ್ರ ಕಾಯಕದಲ್ಲಿ ತೊಡಗಿದ್ದ ಸಾಧ್ವಿಯರು, ನಿಷ್ಠಾವಂತ ತೇಜೋಮೂರ್ತಿಗಳಾಗಿ ಬೆಳಗಿದರು; ಪತಿಯ ಸಾಧನೆಯಲ್ಲಿ ಊರುಗೋಲಾಗಿದ್ದುಕೊಂಡೇ ತಮ್ಮ ಸ್ವತಂತ್ರ ವ್ಯಕ್ತಿತ್ವವನ್ನು ರೂಪಿಸಿಕೊಂಡರು. ಮಹಾದೇವಮ್ಮ, ಲಕ್ಕಮ್ಮ, ಲಿಂಗಮ್ಮ -ಹೀಗೆ ಹೆಸರುಗಳನ್ನು ಬೆಳಸುತ್ತಾ ಹೋಗಬಹುದು. ಯೋಗಸಾಧನೆಯಿಂದ ಸಾಮಾಜಿಕ ಸ್ವಾಸ್ಥ್ಯದ ನಿರ್ವಹಣೆಯವರೆಗೆ ಅವರ ಕಾರ್ಯವ್ಯಾಪ್ತಿ ಬೆಳೆದುದಲ್ಲದೆ ವಚನ ರಚನೆಯಲ್ಲಿಯೂ ಗಮನಾರ್ಹವಾದ ಕೊಡುಗೆಯನ್ನಿತ್ತಿದೆ.

ವಚನ ರಚನೆ ಬಸವಣ್ಣನವರಿಗಿಂತ ಪೂರ್ವದಲ್ಲಿ ಹನಿಯಾಗಿ ಕಾಣಿಸಿಕೊಂಡದ್ದು ಅವರು ಅದನ್ನು ಕೈಗೆತ್ತಿಕೊಂಡ ಮೇಲೆ ಮಹಾಪೂರವಾಗಿ ಭೋರ್ಗರೆಯಿತು. ತಮ್ಮ ಸ್ವತಂತ್ರ ವಿಚಾರ ವಿಶ್ಲೇಷಣೆಯನ್ನೂ, ತಮ್ಮ ಧಾರ್ಮಿಕ ಸಾಧನೆಯ ಅನುಭವಗಳನ್ನೂ ಶರಣರು ವಚನಗಳಲ್ಲಿ ಅಭಿವ್ಯಕ್ತಪಡಿಸಿದರು. ಅನುಭವ ಮಂಟಪದಲ್ಲಿ ವಚನ ರಚನೆಗಳ ಚಕಮಕಿಯಿಂದ, ವಿಚಾರಗಳ ತಾಕಲಾಟ, ಸಂಘರ್ಷಗಳಿಂದ ಹೊಸ ಹೊಸ ಕಿಡಿಗಳು ಸಿಡಿಯುತ್ತಿದ್ದುವು. ಆ ವಚನ ಸಂಪತ್ತನ್ನು ಸಂಗ್ರಹಿಸಿ ಅದನ್ನು ಉಳಿಸುವ ವ್ಯವಸ್ಥೆಯೂ ಅನುಭವ ಮಂಟಪದಲ್ಲಿತ್ತೆಂಬುದಕ್ಕೆ ವಚನಭಂಡಾರಿ ಶಾಂತರಸ ಸಾಕ್ಷಿಯಾಗಿದ್ದಾನೆ.

ಶರಣರ ಕಾರ್ಯಕ್ಷೇತ್ರದ ಎಲ್ಲ ಸಾಧನೆಗಳನ್ನೂ ವಚನಸಾಹಿತ್ಯ ಪ್ರತಿಬಿಂಬಿಸಿದೆ. ಬಸವ, ಅಲ್ಲಮ, ಅಕ್ಕ, ಸಿದ್ಧರಾಮ ಮೊದಲಾದ ಅನೇಕ ಶರಣರ ವಚನಗಳು ಅನುಭಾವದ ಔನ್ನತ್ಯವನ್ನೂ, ಸಾಹಿತ್ಯ ಸೌಂದರ್ಯದ ಉತ್ತುಂಗ ಶಿಖರವನ್ನೂ ಸಾಧಿಸಿಕೊಂಡಿವೆ. ಸಾಹಿತ್ಯಸೃಷ್ಟಿ ಅವರ ಮುಖ್ಯ ಉದ್ದೇಶವಾಗಿರಲಿಲ್ಲವಾದರೂ ತೀವ್ರವಾದ ತಮ್ಮ ಅನುಭವಗಳನ್ನೂ, ಅನಿಸಿಕೆಗಳನ್ನೂ ಅನ್ಯಹೃದಯ ವೇದ್ಯವಾಗಿಸುವ ಅವರ ಸಾಹಸ ಸಹಜವಾಗಿಯೇ ಶಕ್ತಿಯುತ ಸಾಹಿತ್ಯವಾಗಿ ಪರಿಣಮಿಸಿದೆ. ಆದರಿಂದ ಈ ವಚನ ಚಳುವಳಿ ತಾನರಿಯದಂತೆಯೇ ಸಾಹಿತ್ಯ ಚಳುವಳಿಯೂ ಆಯಿತು. ಇದು ವಚನ ಚಳುವಳಿಯ ಸಾಮಾಜಿಕ, ಧಾರ್ಮಿಕ ಪರಿವರ್ತನೆಯ ಮಹಾಸಾಹಸ ಕಾರ್ಯದಲ್ಲಿ ಸಂಭವಿಸಿದ ಒಂದು ಉಪ ಸರಕು (By- product) ಎಂದು ಹೇಳಬಹುದು. ಆದರೆ ಮಹತ್ವದ ದೃಷ್ಟಿಯಿಂದ ಕಡಿಮೆಯಾದುದೇನಲ್ಲ. ಅದುವರೆಗಿನ ಕನ್ನಡ ಸಾಹಿತ್ಯದ ದಿಕ್ಕನ್ನೇ ಬದಲಾಯಿಸಿ ಒಂದು ಹೊಸ ಆಯಾಮವನ್ನು ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ಇದು ತಂದುಕೊಟ್ಟಿತು. ವಚನ ಚಳುವಳಿಯ ಮಹತ್ವವನ್ನು ಈ ದೃಷ್ಟಿಯಿಂದಲೂ ದೀರ್ಘವಾಗಿ ವಿವೇಚಿಸಬಹುದಾಗಿದೆ.

'ಒಟ್ಟಿನಲ್ಲಿ ವಚನ ಚಳುವಳಿ ಅಂದಿನ ಜನಜೀವನದಲ್ಲಿ ಸಮಗ್ರ ಕ್ರಾಂತಿಗೆ (Total Revolution) ಕಾರಣವಾದ ಒಂದು ರಚನಾತ್ಮಕ ಮತ್ತು ವಿಧಾಯಾತ್ಮಕ ಆಂದೋಳನ. ಇದು ಜೀವನವನ್ನು ಪೂರ್ಣದೃಷ್ಟಿಯಿಂದ ನೋಡಿತು. ವ್ಯಷ್ಟಿ-ಸಮಷ್ಟಿಗಳ, ಸಮಾಜ- ಧರ್ಮಗಳ, ಅಂತರಂಗ- ಬಹಿರಂಗಗಳ, ಇಹ-ಪರಗಳ, ವಿಧಿ- ನಿಷೇಧಿಗಳ, ಬುದ್ಧಿ-ಭಾವಗಳ, ನಡೆ-ನುಡಿಗಳ, ನಿಷ್ಠೆ- ನಿಯಮಗಳ, ಆಚಾರ -ವಿಚಾರಗಳ -ಹೀಗೆ ಒಟ್ಟು ಮಾನವ ಜೀವಿತದ ಎಲ್ಲ ಸಮಸ್ಯೆಗಳ ಎಲ್ಲ ಪದರಗಳನ್ನೂ ವಿಶ್ಲೇಷಿಸಿ, ಸಾರ್ವತ್ರಿಕವಾದ ವಿಚಾರಸಮ್ಮತವಾದ ಉತ್ತರವನ್ನು ಕಂಡುಕೊಳ್ಳಲು ನಡೆದ ಸಾಮೂಹಿಕ ಚಳುವಳಿ ಇದು.

ಯಾವೊಂದನ್ನೂ ಹಿಂದಿನ ಗ್ರಂಥಗಳಲ್ಲಿ ಹೇಳಿದೆ ಎಂದ ಮಾತ್ರಕ್ಕೆ ಶರಣರು ಒಪ್ಪಿಕೊಂಡವರಲ್ಲ. ಕೃಷ್ಣಪರಮಾತ್ಮ ಹೇಳಿದನೆಂದು ಗೀತೆಯನ್ನು ನಾವು ಒಪ್ಪಬೇಕಿಲ್ಲ; ಇಂದಿಗೂ ಒಪ್ಪುವ ಮಾತನ್ನು ಹೇಳಿದ್ದರಿಂದ ಆತ ಪರಮಾತ್ಮನಾಗುತ್ತಾನೆ ಎಂಬ ವಿಚಾರಶೀಲವಾದ ಆಧುನಿಕ ವೈಜ್ಞಾನಿಕ ದೃಷ್ಟಿಯನ್ನು ಆ ಯುಗದಲ್ಲಿಯೇ ಶರಣರು ಪ್ರಕಟಪಡಿಸಿದರು. ಧರ್ಮದ ಹೆಸರಿನಲ್ಲಿ ಶ್ರದ್ಧೆ ಹರಿದು ಹಂಚಿಹೋಗಿರುವುದನ್ನೂ, ತಿಥಿ, ವಾರ, ನಕ್ಷತ್ರ, ಶಕುನಾದಿಗಳನ್ನು ನಂಬಿದ ಪರಾವಲಂಬನೆಯ ಅಂಧಶ್ರದ್ಧೆಯನ್ನೂ ಖಂಡಿಸಿ ಏಕೈಕ ನಿಷ್ಠೆಯ ಆಂತರಿಕ ಸಾಧನೆಗೆ ಮಹತ್ವಕೊಟ್ಟರು. "ನೀರ ಕಂಡಲ್ಲಿ ಮುಳುಗುವರಯ್ಯ, ಮರನ ಕಂಡಲ್ಲಿ ಸುತ್ತುವರಯ್ಯ...." ಎಂಬ ವಚನವಲ್ಲಾಗಲೀ, "ಬೀರಯ್ಯ, ಕೇತಯ್ಯ, ಘೂಳಯ್ಯ ಮೊದಲಾದ ನೂರಾರು ಮಡಕೆಗಳಿಗೆ ಕೂಡಲಸಂಗಮದೇವ ಶರಣೆಂಬ ಒಂದು ದೊಣ್ಣೆ ಸಾಲದೆ" ಎಂಬ ವಿಡಂಬನೆಯಲ್ಲಾಗಲೀ ಬಸವಣ್ಣ ವ್ಯಕ್ತಪಡಿಸಿದ ಏಕಮೇವ ನಿಷ್ಠೆ ಆಂತರಿಕ ಸಾಧಕಶಕ್ತಿಯನ್ನು ಜಾಗೃತಗೊಳಿಸುವಂತಹುದು. ಈ ಅಚಲನಿಷ್ಠೆಯೇ ನೂರಾರು ಶರಣರ ವಚನಗಳಲ್ಲಿ ಪ್ರತಿಧ್ವನಿಸಿದೆ. ವಾರಗಳಲ್ಲಿ ಒಳಿತು-ಕೆಡಕುಗಳನ್ನಾಗಲೀ, ರಾಹುಕಾಲ-ಗುಳಿಕಕಾಲಾದಿಗಳನ್ನಾಗಲೀ, ಭವಿಷ್ಯವನ್ನಾಗಲಿ ಅತಿಯಾಗಿ ನಂಬಿ ಅವಕ್ಕೆ ಅಡಿಯಾಳಾದವರನ್ನು ಕಂಡು ಅವರು ಹಾಸ್ಯ ಮಾಡುತ್ತಾರೆ. ಸಣ್ಣಪುಟ್ಟ ವಿಷಯಗಳಿಗಿರಲಿ ಮದುವೆಯಂತಹ ಮಹತ್‌ಕಾರ್ಯಕ್ಕೂ "ಎಮ್ಮವರೊಲಿದುದೇ ಶುಭಲಗ್ನವೆನ್ನಿರಯ್ಯ" ಎಂದು ಮುಂತಾಗಿ ಹೇಳುವಂತಹ ಮಾತುಗಳ ಆಚರಣೆ ಇಂದಿನ ವೈಜ್ಞಾನಿಕ ಯುಗದ ವಿಚಾರವಂತರಿಗೂ ಪೂರ್ಣವಾಗಿ ಸಾಧ್ಯವಾಗುವಂತಿಲ್ಲ ಎಂಬುದನ್ನು ನೆನೆದರೆ ಶರಣರ ಧೀರನಿಷ್ಠೆ ಸ್ಪಷ್ಟವಾಗುತ್ತದೆ.

ಹೀಗೆ ಜೀವನದ ಎಲ್ಲ ಹಂತಗಳಲ್ಲಿಯೂ ಶರಣರ ವಚನ ಚಳುವಳಿ ಆತ್ಮಸತ್ವಕ್ಕೆ, ಸತ್ಯನಿಷ್ಠೆಗೆ ಒತ್ತುಕೊಟ್ಟಿತು. ಮೂರ್ತಿಪೂಜೆಯನ್ನು ತಿರಸ್ಕರಿಸಿ ಆಂತರಂಗಿಕ ಅನುಸಂಧಾನವನ್ನೂ, ಆ ಮೂಲಕ ದೇವಾಲಯಗಳನ್ನೂ, ಪುರೋಹಿತಶಾಹಿಯನ್ನೂ, ಧರ್ಮದ ದಳ್ಳಾಳಿಗಳನ್ನೂ ಶೋಷಣೆಯನ್ನೂ ಒಂದೇ ಏಟಿಗೆ ಹೊಡೆದುಹಾಕಿತು. ಇದರ ಒಂದೊಂದು ಅಂಶವನ್ನೂ, ಅದು ಶರಣರ ಆಚರಣೆಯಿಂದ ವಚನಗಳಲ್ಲಿ ಮೂಡಿ ಚಳುವಳಿಯಾಗಿ ವ್ಯಾಪಿಸಿದುದನ್ನೂ ವಿವರವಾಗಿ ಚರ್ಚಿಸುತ್ತಾ ಹೋಗಬಹುದು. ಆದರೆ ಈ ಲೇಖನ ಈ ವ್ಯಾಪ್ತಿಯನ್ನು ಹಾಕಿಕೊಂಡಿಲ್ಲ. ಆ ಒಂದೊಂದು ವಿಷಯವನ್ನೂ ಕುರಿತ ಸ್ವತಂತ್ರ ಲೇಖನಗಳು ಈ ಸಂಭಾವನಾಗ್ರಂಥದಲ್ಲಿ ಬರುವುದರಿಂದ ಅದಕ್ಕೆ ನಾಂದಿ ತೋರಣವನ್ನು ಕಟ್ಟುವುದು ಮಾತ್ರ ಈ ಲೇಖನದ ಉದ್ದೇಶ.

ಇದುವರೆಗೂ ಇಲ್ಲಿ ಹೇಳಿದುದರ ಮಥಿತಾರ್ಥ ಇಷ್ಟೆ: ಬಸವಣ್ಣನ ನೇತೃತ್ವದಲ್ಲಿ ಪ್ರಾರಂಭವಾದ ಸಾಮಾಜಿಕ, ಧಾರ್ಮಿಕ ಪರಿವರ್ತನೆಯ ಕಾರ್ಯ ಕ್ರಮೇಣ ವಚನಗಳ ಮಾಧ್ಯಮದಿಂದ ಒಂದು ದೊಡ್ಡ ಆಂದೋಳನವಾಗಿ ಬೆಳೆಯಿತು. ಇದು ಬೌದ್ಧಿಕ ಜಿಜ್ಞಾಸೆಯಲ್ಲಾಗಲೀ, ಸಾಹಿತ್ಯರಚನೆಯ ಕೌಶಲ್ಯದಲ್ಲಾಗಲೀ ಪರ್ಯವಸಾನಗೊಳ್ಳದೆ ಸಮಾಜದ ಕುಂಡಲಿನಿಯನ್ನು ಜಾಗ್ರತಗೊಳಿಸುವ ಸಾಮೂಹಿಕ ಶಕ್ತಿಯಾಗಿ ಉನ್ಮುಖಗೊಂಡು, ಸಮಗ್ರವಾದ ಒಂದು ಚಳುವಳಿಗೆ ಕಾರಣವಾಯಿತು. ತಾರತಮ್ಯದಿಂದ ಕೂಡಿದ ಸಂಕೀರ್ಣ ಶ್ರೇಣಿಯೇ ನಿಯಮವಾಗಿದ್ದ ಅಂದಿನ ಸಮಾಜದಲ್ಲಿ ಇದ್ದಕ್ಕಿದ್ದಂತೆ ಸರ್ವಸಮಾನತೆಯ ಆಧಾರದ ಮೇಲೆ ನಿರ್ಮಿತವಾದ ಚಲನಶೀಲ ಜಂಗಮ ಸಮಾಜವನ್ನು ನಿರ್ಮಿಸುವಲ್ಲಿ ಆ ಚಳುವಳಿ ಯಶಸ್ವಿಯಾದದ್ದು ಒಂದು ಪವಾಡವೇ ಸರಿ. ಅದು ಹಾಗೇ ಮುಂದುವರಿದು ಬರಲಿಲ್ಲ ಎಂಬ ಮಾತು ಅದರ ಮಹತ್ವವನ್ನು ಕುಗ್ಗಿಸಲಾರದು. ಅದು ಮಾನವ ಸ್ವಭಾವದ ದೌರ್ಬಲ್ಯಕ್ಕೆ ಸಾಕ್ಷಿಯಾಗಬಹುದು. ಗಾಂಧೀಜಿ ಯಾವ ಮೌಲ್ಯಗಳಿಗಾಗಿ ಜೀವ ತೆತ್ತರೋ, ಅವೆಲ್ಲಾ ಅವರ ಶಿಷ್ಯರಿಂದಲೇ ಮಣ್ಣುಗೂಡುತ್ತಿರುವುದನ್ನು ಕಣ್ಣಾರೆ ಕಾಣುತ್ತಿರುವ ನಾವು ಆ ಸತ್ಯವನ್ನು ಅರ್ಥಮಾಡಿಕೊಳ್ಳಬಹುದು. ಆದರೆ ಅದರಿಂದ ಮೂಲ ಚಳುವಳಿಯ ಮಹತ್ವ ಕುಗ್ಗುವುದಿಲ್ಲ. ಬಹುಶಃ ಇನ್ನೂ ಹೆಚ್ಚುತ್ತದೆ. ಆದ್ದರಿಂದ ಇಂದಿನ ವೀರಶೈವದಿಂದ ಅಂದಿನ ವಚನ ಚಳುವಳಿಯನ್ನು ಅಳೆಯಬಾರದು. ಅಂದಿನ ಅದರ ಸಾಧನೆಯನ್ನು ವೈಚಾರಿಕವಾಗಿ ನೋಡಬೇಕು. ಆದರೆ ವಿಚಾರಶೀಲತೆಯ ಹೆಸರಿನಲ್ಲಿ ಮೂಲ ಮೌಲ್ಯಗಳನ್ನು ಗಾಳಿಗೆ ತೂರುವ ಅವಿಚಾರವನ್ನು ಶರಣರು ಮಾಡಲಿಲ್ಲ. ಇಂದಿನ ಪ್ರೌಢವಾದ, ಪ್ರಬುದ್ಧವಾದ ಆಲೋಚನೆಯಿಂದ ಅಂದಿನ ಶರಣರ ವಿಚಾರನಿಷ್ಠೆಯನ್ನು ಹೆಚ್ಚು ಹೆಚ್ಚಾಗಿ ಕಂಡುಕೊಳ್ಳಬಹುದು. ಅತ್ತ ಗಮನ ಸೆಳೆಯುವ ಆ ಚಳುವಳಿಯ ರೂಪರೇಷೆಯನ್ನು ಮಾತ್ರ ಇಲ್ಲಿ ಮಾಡಿಕೊಡಲಾಗಿದೆ.

(ವೀರಶೈವ ದೀಪ್ತಿ ಭಾಗ-IIರಿಂದ)

ವಚನ ಸಾಹಿತ್ಯದ ಅಭಿವ್ಯಕ್ತಿಯ ಹೊಸ ಸವಾಲುಗಳು

✍ ಡಾ. ಸಾ.ಶಿ. ಮರುಳಯ್ಯ

೧

'ವಚನ' ಎಂದ ಕೂಡಲೆ ನಮ್ಮ ನೆನಪಿಗೆ ಬರುವುದು ಹನ್ನೆರಡನೆಯ ಶತಮಾನವು ವಿಶ್ವಸಾಹಿತ್ಯಕ್ಕೆ ಕೊಟ್ಟ ಕನ್ನಡದ ವಿನೂತನ ಹಾಗೂ ವಿಶಿಷ್ಟ ಕೊಡುಗೆ. ಸುಮಾರು ಒಂದು ಸಾವಿರ ವರ್ಷಗಳಿಂದಲೂ ಬದುಕು ಮಾಡಿಕೊಂಡು ಬಂದಿರುವ ವಚನ ಸಾಹಿತ್ಯ ಇಂದಿಗೂ ಹಚ್ಚ ಹಸುರಾಗಿದೆ, ಹೊಚ್ಚ ಹೊಸದಾಗಿದೆ, ನಿತ್ಯನೂತನವೂ ಆಗಿದೆ. ಅದಕ್ಕೆ ಕಾರಣ ಅದು ನಿಂತ ನೀರಾಗದೆ, ಹರಿಯುವ ಜೀವವಾಹಿನಿಯಾಗಿರುವುದು. ಹರಿಯುವ ನದಿ ಯಾವಾಗಲೂ ತೀರ್ಥವೆ! ಅಂತಹ ತೀರ್ಥಸಾಹಿತ್ಯವೆನಿಸಿದ ವಚನ ಈವರೆಗೆ ಮೂರು ಘಟ್ಟಗಳಲ್ಲಿ ವಿಕಾಸಗೊಂಡಿದೆ. ಅನುಕ್ರಮವಾಗಿ ಇದನ್ನು,

೧. ಬಸವಯುಗ (೧೨ನೆಯ ಶತಮಾನ)

೨. ಎಡೆಯೂರು ಸಿದ್ಧಲಿಂಗೇಶ್ವರಯುಗ (೧೫ ರಿಂದ ೧೮ನೆಯ ಶತಮಾನದವರೆಗೆ)

೩. ಸಿದ್ಧಯ್ಯ ಪುರಾಣಿಕಯುಗ (೨೦ನೆಯ ಶತಮಾನದ ಉತ್ತರಾರ್ಧದಿಂದ) ಎಂದು ವಿಭಜಿಸಬಹುದು.

ಬಸವ ಯುಗದ ಪೂರ್ವ ವಚನಸಾಹಿತ್ಯದ ಉಗಮ ಕಾಲವೆನಿಸಿದರೆ, ಬಸವಯುಗ ಅದರ ವೈಭವದ ಕಾಲ, ಸೃಜನಾತ್ಮಕ ಸೃಷ್ಟಿ ಅದರ ಕಾರ್ಯ, ಎಡೆಯೂರು ಸಿದ್ಧಲಿಂಗೇಶ್ವರಯುಗ ಸಂಕ್ರಮಣ ಕಾಲ; ಅದರದು ಹಳತನ್ನು ಆಧರಿಸಿ ಹೊಸತನ್ನು ನಿರ್ಮಿಸುವ ಮತ್ತು ಹಳೆಯದನ್ನು ಒಪ್ಪ ಓರಣಗೈವ ಕಿರಿಯ ಕೈಂಕರ್ಯ. ಸಿದ್ಧಯ್ಯ ಪುರಾಣಿಕಯುಗ ವೈವಿಧ್ಯ ನಿರ್ಮಿತಿಯ ಕಾಲ; ಇದಕ್ಕೆ ವೈಲಕ್ಷಣ್ಯ (Fashion) ಮೆರೆಯುವ ಹಂಬಲ. ಬಸವಯುಗದ ವಚನ ಸಾಹಿತ್ಯ ಒಂದು ಸಾಮೂಹಿಕ ಆಂದೋಲನದ ಫಲ. ಸಾಮಾಜಿಕ, ರಾಜಕೀಯ ಕ್ಷೇತ್ರಗಳಲ್ಲಿ ಕ್ರಾಂತಿಕಾರಕ ಬದಲಾವಣೆ ತರುವ ತುರ್ತು. ಸಿದ್ಧಲಿಂಗೇಶ್ವರ ಯುಗದ ವಚನಕ್ಕೆ ಶಿವಪಾರಮ್ಯವನ್ನು ಮೆರೆಯುವ, ಶಿವಧರ್ಮವನ್ನು ಸಂಸ್ಥೀಕರಿಸುವ (Institutalise) ಕಾಳಜಿ. ಪುರಾಣಿಕ ಯುಗದ್ದು ಸಂಸ್ಕೃತಿಯ ಸಂವರ್ಧನೆಯ ಕನಸು. ಒಂದು ಮತ್ತು ಮೂರನೆಯ ಯುಗಗಳದು ಚಲನಶೀಲ (Dynamic) ಪ್ರವೃತ್ತಿ. ಎರಡನೆಯದರದು ಸ್ಥಾವರ (Static) ಸ್ಥಿತಪ್ರಜ್ಞತೆ. ಈ ಭಿನ್ನಭಾವ ಮನೋಧರ್ಮದ ಯುಗಗಳ ಆಶಯ ಅಭಿವ್ಯಕ್ತಿಗಳ ತುಲನೆ ನಮಗಿಲ್ಲಿ ಪ್ರಕೃತವಲ್ಲವಾದರೂ ಆಧುನಿಕ ವಚನಕಾರರ ವಚನ ರಚನಾಭಿವ್ಯಕ್ತಿಯ ಸವಾಲುಗಳಿಗೆ ಇದು ಹಿನ್ನೆಲೆಯನ್ನೊದಗಿಸುವ ಕಾರಣ. ಇದನ್ನು ಕುರಿತ ತನಿಯಾದ ಒಂದು ಹಕ್ಕಿನೋಟ ಹರಿಸುವ ಅನಿವಾರ್ಯತೆ ಇದೆ.

೨

ಬಸವಯುಗದ ವಚನಕಾರರ ಉದ್ದೇಶ ವೀರಶೈವ ಧರ್ಮದ ಪ್ರಚಾರ ಅಲ್ಲ, ಕನ್ನಡ ಸಾಹಿತ್ಯದ ಪ್ರಸಾರವೂ ಅಲ್ಲ. ಬದುಕನ್ನು ಕುರಿತು ಅದು ತಳೆದ ಗಂಭೀರ ವಿಚಾರ. ಮಾನವ ಜೀವನವನ್ನು ಹಸನಾಗಿಸುವುದಷ್ಟೇ ಅದರ ಮುಖ್ಯ ಗುರಿ. ಅದು ಅವರ ಅಭಿವ್ಯಕ್ತಿಯ ಮೂಲಸ್ಥಾಯಿ ಕೂಡ. ಉಳಿದ ಅಂಶಗಳು ಅನುಷಂಗಿಕಗಳು. ಬದುಕಿಗೆ ಒಳಿತನ್ನು ಒದಗಿಸುವ ದಿಸೆಯಲ್ಲಿ ವಚನ ರಚನೆ ಅಂತಹ ಸಮರ್ಥ ಸಾಧನವಾಯಿತು.

ವಚನಕಾರರ ಅಂದಿನ ಮೊದಲ ಅಭಿವ್ಯಕ್ತಿ ಸವಾಲು ಜಾತೀಯತೆಯ ಮೂಲೋತ್ಪಾಟನೆ; ಎರಡನೆಯದು ಮಹಿಳೆಯ ಸ್ವಾತಂತ್ರ್ಯ ರಕ್ಷಣೆ. ಈ ಎರಡೂ ವರ್ಗಗಳಲ್ಲಿ ಸರ್ವಸಮಾನತೆ, ಸ್ವಾಭಿಮಾನ, ಸ್ವಾವಲಂಬನೆ, ಆತ್ಮಪ್ರಜ್ಞೆ(Self awareness), ಆತ್ಮಪ್ರತ್ಯಯ (Self confidence) ಗಳನ್ನು ಸಂಸ್ಥಾಪಿಸುವುದು; ವರ್ಣಭೇದ, ವರ್ಗಭೇದ, ಲಿಂಗಭೇದಗಳೆಂಬ ಸಾಮಾಜಿಕ ಪಿಡುಗುಗಳ ನಿವಾರಣೆ, ಆರ್ಥಿಕ ಅಸಮಾನತೆಯ ನಿರ್ಮೂಲನಕ್ಕಾಗಿ ಕಾಯಕ-ದಾಸೋಹ ತತ್ವಗಳ ಚಾಲನೆ, ದಿಟದ ದೇವರುಗಳನ್ನು ಕಡೆಗಣಿಸಿ, ಕಲ್ಲುದೇವರುಗಳಿಗೆ ಸಲ್ಲಿಸುವ ವ್ಯರ್ಥಪೂಜೆಯ ಅರ್ಥಹೀನತೆಯ ಅರಿವು ಮೂಡಿಸುವ, ಹಲವು ದೇವರುಗಳ ಆರಾಧನೆಯ ಹಾದರ ತಪ್ಪಿಸಿ, ಏಕದೇವೋಪಾಸನೆಯ ಮಹತ್ವವನ್ನು ಅನುಷ್ಠಾನಗೊಳಿಸುವಂತೆಸಗುವ, ದೇಹವೇ ದೇವಾಲಯ, ಪರಶಿವನ ಚಿದಂಶ ಸ್ವರೂಪನಾದ ಆತ್ಮನೇ ಅದರಲ್ಲಿ ಪ್ರತಿಷ್ಠಾಪಿತನಾಗಿರುವ ಪರಮೇಷ್ಠಿ ಎಂಬ ಸದ್ಭಾವನೆಯನ್ನು ಮೂಡಿಸಿ, ಅನಾದಿಕಾಲದಿಂದಲೂ ಜನಮನದಲ್ಲಿ ಆಳವಾಗಿ ಬೇರುಬಿಟ್ಟಿದ್ದ ದೇವಾಲಯ ಸಂಸ್ಕೃತಿಯನ್ನು ದೂರಮಾಡಿ, ದೇಹವನ್ನೇ ಅತ್ಯಂತ ಪವಿತ್ರ ಜಂಗಮ ದೇವಾಲಯವಾಗಿಸುವ ಮೂಲಕ ವಿನೂತನ ಸಂಸ್ಕೃತಿಗೆ ಚಾಲನೆ ನೀಡುವ, ಸತ್ತ ಮೇಲೆ ತೆರೆಯುತ್ತದೆಂಬ ಕಲ್ಪನಾ ಸ್ವರ್ಗದ ಭ್ರಮನಿರಸನಗೈದು ಮಾನವ ಮೇದಸ್ಸಿನಲ್ಲಿ ವೈಚಾರಿಕತೆಯನ್ನು ಜ್ವಲನಗೊಳಿಸುವ, 'ಇಹವಿಲ್ಲದೆ ಪರವಿಲ್ಲ, ಇಹವೇ ಎಲ್ಲ ಮೊದಲು ಇಲ್ಲಿ ಸಂದರೆ ಸಾಕು, ಅರ್ಥವಿಲ್ಲದ ಸ್ವರ್ಗ ನರಕಗಳ ಮೋಹ-ಭೀತಿಗಳು ಬೇಡ' ಎಂಬ ಆತ್ಮಜ್ಞಾನ ಬೆಳೆಸುವ ದೇವನಿಗಿಂತ ಜೀವ ಶ್ರೇಷ್ಠ, ಕೈಲಾಸಕ್ಕಿಂತ ಕಲ್ಯಾಣ ಶ್ರೇಷ್ಠ ಎಂದು ಇಹದ ಬಗೆಗಿನ ಆಸೆ ಅಭಿಮಾನಗಳನ್ನು ಮೂಡಿಸುವ, ಮೇಲು-ಕೀಳು, ಬಡವ-ಬಲ್ಲಿದ, ಗಂಡು-ಹೆಣ್ಣು ಎಂಬ ಭೇದವಿಲ್ಲದೆ ಸಕಲರಿಗೂ ಬಿನ್ನಹಕ್ಕೆ ಬಾಯಿ ಕೊಡುವ, ಅರ್ಥಾತ್ ಅಭಿವ್ಯಕ್ತಿ ಸ್ವಾತಂತ್ರ್ಯವೀವ, ಧರ್ಮವನ್ನು ಮಾನವೀಯ ನೆಲೆಯಲ್ಲಿ ಅರ್ಥೈಸುವ, 'ಮಾತು ಜ್ಯೋತಿರ್ಲಿಂಗ'ವೆಂದು ಘೋಷಿಸಿ, ಮಾತಿನ ಮಹತ್ವ ಮತ್ತು ಭಾವಸಂವಹನ ಸಂದರ್ಭದಲ್ಲಿ ಅದಕ್ಕಿರುವ ಪ್ರಭುತ್ವ -ಇವುಗಳನ್ನು ಪ್ರಯೋಗಿಸಿ ತೋರಿಸುವ, ಮರದ ನೆರಳಲ್ಲಿದ್ದೂ ತನ್ನ ನೆರಳನ್ನರಸುವ ಅತಿ ಬುದ್ಧಿವಂತಿಕೆಯನ್ನು ಅಲ್ಲಗಳೆದು, ಡಾಂಭಿಕ ವಿದೂರನಾಗಿ, ನಡೆನುಡಿಗಳಲ್ಲಿ ಮಡಿಯಾಗಿರುವುದನ್ನು ತಾನು ಆಚರಿಸಿ, ಮಂದಿಯೂ ಆಚರಿಸುವಂತೆ ಪ್ರೇರೇಪಿಸುವ, ದೇವಭಾಷೆಗಿಂತ ದೇಶಭಾಷೆ ಅಭಿವ್ಯಕ್ತಿಗೆ ಉತ್ತಮೋತ್ತಮ ಮಾಧ್ಯಮವೆಂದು ನುಡಿದು, ಅದರಂತೆ ನಡೆದು, ಬನಿ ತುಂಬಿದ ಕನ್ನಡದ ಆಡುನುಡಿಯ ದುಡಿಮೆಯ ಸಾರ್ಥಕ ಸಾಹಿತ್ಯವನ್ನು ಬರೆದೂರೆದು ತೋರಿಸುವ, ಮಿಡಿದ ಭಾವಕ್ಕೊಂದು ನುಡಿ ನೀಡುವಾಗ ಛಂದದ ಬಂಧನ ಬೇಡ, ಅದಕ್ಕೊಂದು ಮುಕ್ತ ವಾತಾವರಣವಿರಲಿ ಎಂಬ, ತನ್ಮೂಲಕ ಕವಿಗಳ ಭಾವಾಭಿವ್ಯಕ್ತಿಗೆ ಸ್ವಾಚ್ಛಂದ್ಯವೇರ್ಪಡಿಸುವ, ಮನ, ಭಾವ, ಆತ್ಮಗಳನ್ನು ಅನಿಕೇತನ ವಿಹಾರಿಗಳನ್ನಾಗಿಸುವ ಸತ್‌ಸಂಕಲ್ಪ -ಇವೇ ಮೊದಲಾದವು ಅವರ ಅಭಿವ್ಯಕ್ತಿ ಸವಾಲುಗಳಾಗಿದ್ದವೆಂದು ಕ್ರೋಡೀಕರಿಸಬಹುದು.

ಹನ್ನೆರಡನೆಯ ಶತಮಾನಕ್ಕೆ ಹೋಲಿಸಿದರೆ, ಮಧ್ಯಕಾಲೀನ ಯುಗಮನಸ್ಸು ತುಂಬಾ ಭಿನ್ನವಾದದ್ದು. ಹನ್ನೆರಡನೆಯ ಶತಮಾನದ ಸಾಮಾಜಿಕ ಸಂಘರ್ಷ ಇದನ್ನು ಕಾಡಲಿಲ್ಲ, ಸಮಾಜ ಸುಧಾರಣೆಯ ಆಶಯ ಇದನ್ನು ಬೇಡಲಿಲ್ಲ, ಧರ್ಮದ ಮೇಲಣ ಕಟ್ಟಾಭಿಮಾನವುಳಿದು ಬೇರಾವ ಮಹತ್ವದ ಕಾಳಜಿಯೂ ಇದಕ್ಕಿದ್ದಂತಿಲ್ಲ. ವಚನ ವಿನ್ಯಾಸದಲ್ಲೂ ಅಷ್ಟೇ, ಹಿಂದಿನದರ ಪಡಿಯಚ್ಚು. ಹೊಸತನ ತೋರಲಿಲ್ಲ, ಹೊಸಭಾವ ಬೀರಲಿಲ್ಲ. ಬಸವಣ್ಣ, ವೀರಶೈವವನ್ನು ಸಮಾಜಮುಖಿಯಾಗಿಸಿ, ಅಧ್ಯಾತ್ಮವನ್ನು ಸಾಮಾಜೀಕರಣ (Socialisation) ಗೈದಿದ್ದರೆ, ಈ ಮಧ್ಯಕಾಲೀನ ಯುಗದ ವಚನಕಾರರು ಅಧ್ಯಾತ್ಮ ಅನುಭಾವಗಳನ್ನು ಮತ್ತೆ ಸಂಸ್ಥೀಕರಣ (Institutatisation) ಗೊಳಿಸಿದರು. ಬಸವ ಯುಗದ ವಚನ ಸೃಷ್ಟಿ ಸಾಮುದಾಯಿಕ. ಶಿಕ್ಷಿತ-ಅಶಿಕ್ಷಿತ, ಗಂಡು-ಹೆಣ್ಣು, ಧನಿಕ-ದರಿದ್ರ, ಉನ್ನತ ಸಂಸ್ಕೃತಿ (Great Culture)ಯವನು - ನಿಮ್ನ ಸಂಸ್ಕೃತಿ (Little Culture)ಯವನು ಎಲ್ಲರೂ ವಚನ ರಚನೆಯಲ್ಲಿ ಕೈಜೋಡಿಸಿದರು. ತಮ್ಮ ತಮ್ಮ ವೈಯಕ್ತಿಕ ಅನುಭಾವವನ್ನು ಅರ್ಥಪೂರ್ಣ ಕಾಯಕ ಪ್ರತಿಮೆಗಳ ಮೂಲಕ ಅಭಿವ್ಯಕ್ತಿಸಿದರು. ಆದರೆ ಈ ಯುಗದವರು ಹೆಣ್ಣನ್ನು ಕಡೆಗಣಿಸಿದರು. ದಲಿತನನ್ನು ದೂರವಿಟ್ಟರು.

ವಚನ ಸಾಹಿತ್ಯದ ಕೃಷಿ ಸಕಲರ ಶ್ರಮವಾಗಲಿಲ್ಲ, ಕೆಲವೇ ಸ್ವಾಮಿಗಳ ಸಾಧನೆಯಾಯಿತು. ಇಂತಿದ್ದರೂ ಹಲವಾರು ಅನುಭಾವಿಗಳ ಸತತ ದುಡಿಮೆಯಿಂದಾಗಿ ಸ್ವರವಚನ ಮಾತ್ರ ಹೇರಳವಾಗಿ ಸೃಷ್ಟಿಯಾಯಿತು.

ಈ ಯುಗದ ಶ್ರೇಷ್ಠಸಾಧನೆಯೆಂದರೆ ಸಹಜಭಕ್ತಿಯ ಪುನರುತ್ಥಾನ. ಎಡೆಯೂರ ಜಡೆಮುಡಿಯ ವರಸಿದ್ಧಲಿಂಗ ಯತಿಗಳು ಕೈಗೆತ್ತಿಕೊಂಡ ಭಕ್ತಿಚಳವಳಿಯಲ್ಲಿ ನೂರೊಂದು ಜನ ವಿರಕ್ತರು ಪಾಲ್ಗೊಂಡರು; ಭಕ್ತಿಯ ಭಾಗೀರಥಿಯನ್ನು ಹರಿಸಿದರು. ಅದರಿಂದಾಗಿ ವೀರಶೈವ ಪುನರುಜ್ಜೀವನ ಕಂಡಿತು. ಪೋಷಕವಾಗಿ ರಾಜಾಶ್ರಯವೂ ಅದಕ್ಕೆ ಸಿಕ್ಕಿತು. ವಿಜಯನಗರದ ಪ್ರೌಢದೇವರಾಯ ಮೊದಲಾದ ಚಕ್ರವರ್ತಿಗಳು, ಅನಂತರದ ಕೊಡಗು, ಕೆಳದಿ, ಹಾಗಲ್ವಾಡಿ, ಬಿಜ್ಜಾವರ, ಸ್ವಾದಿ, ಬೀಳಗಿ, ಮತ್ತೋಡು ಮೊದಲಾದ ವೀರಶೈವ ಪಾಳೆಪಟ್ಟುಗಳು ಈ ಧರ್ಮ ಮತ್ತು ಸಾಹಿತ್ಯಗಳನ್ನು ಪ್ರೋತ್ಸಾಹಿಸಿದವು.

ವಚನ ಸಾಹಿತ್ಯದ ಈ ದ್ವಿತೀಯ ಘಟ್ಟದ ಮತ್ತೊಂದು ಮಹೋನ್ನತ ಸಾಧನೆಯೆಂದರೆ ಕಲ್ಯಾಣದ ಕ್ರಾಂತಿಯ ನಂತರ ಅಲ್ಲಿ ಇಲ್ಲಿ ಚಿದುರಿಹೋಗಿದ್ದ ವಚನಗಳನ್ನು ಸಂಗ್ರಹಿಸಿ, ಅವುಗಳಿಗೊಂದು ರೂಪುಕೊಟ್ಟು, ಅಧ್ಯಯನಯೋಗ್ಯವಾಗಿಸಿದ್ದು. ಅಂದಿನ ಕವಿಗಳು, ವಚನಕಾರರು, ವಿರಕ್ತರು, ಚರಮೂರ್ತಿಗಳು ಒಂದು ಚಳವಳಿಯ ರೂಪದಲ್ಲಿ ಪ್ರಾಚೀನ ವಚನಗಳನ್ನು ಸಂಕಲಿಸಿದರು, ಸಂಸ್ಕರಿಸಿದರು, ಸ್ಥಲಾಧಾರಿತ ವಿಂಗಡಣೆಯ ಮೂಲಕ ಸುವ್ಯವಸ್ಥೆಗೊಳಿಸಿದರು.

'ಬಸವೇಶ್ವರನ ಕಾಲದಲ್ಲಿ ವಚನಗಳು ಶರಾವತಿಯ ಪ್ರವಾಹದಂತೆ ತುಂಬಿಕೊಂಡು ಬಂದವು. ಆದರೆ ಒಮ್ಮಿಂದೊಮ್ಮೆಲೆ ರೂಪುಗೊಳ್ಳುತ್ತಿದ್ದ ಸಂಘಟನೆ ಒಡೆಯಿತು. ವಚನಗಳ ಪ್ರವಾಹ ಹತ್ತು ಕಡೆಗೆ ಹರಿದು ತಡಸಲಾಗಿ ಬೀಳತೊಡಗಿತು. ತೇಜೋಗರ್ಭಿತವಾದ ಈ ಜಲವನ್ನು ಸಂಗ್ರಹಿಸಿ ತೇಜಸ್ಸನ್ನು ಹೊರಗೆಡಹುವ ಕಾರ್ಯವು ವಿಜಯನಗರ ಕಾಲದ ಶಿವಶರಣರಿಗೆ ಮೀಸಲಾಗಿತ್ತು.'[೭] ಇದನ್ನು ಆಗುಮಾಡಿದ ಆ ಪುಣ್ಯಪುರುಷರಿಗೆ ಕರ್ನಾಟಕ ಎಷ್ಟು ಋಣಿಯಾಗಿದ್ದರೂ ಸಾಲದು.

ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಇಪ್ಪತ್ತನೆಯ ಶತಮಾನ ಅತ್ಯಂತ ಪ್ರಗತಿಪರ ಯುಗ. ಸಿಕ್ಕಿದ್ದನ್ನು ದಕ್ಕಿಸಿಕೊಳ್ಳುವ ಮಹತ್ವಾಕಾಂಕ್ಷೆ ಅವರದು. ಪಾಶ್ಚಾತ್ಯ ಸಾಹಿತ್ಯ ಸಂಪರ್ಕದಿಂದ ಸರ್ವಾಂಗ ಸುಂದರವಾದದ್ದಲ್ಲದೆ, ಪ್ರಾಚೀನವಾದ ದೇಶೀಯ ಕಾವ್ಯಪ್ರಕಾರಗಳಿಗೆ ಮರುಚಾಲನೆ ಕೊಟ್ಟಿತು. ಅಂಥವುಗಳಲ್ಲಿ ವಚನ ವಿನ್ಯಾಸವೂ ಒಂದು. ಆದರೆ ವಚನ ಆಧುನಿಕ ವಚನಕಾರರ ಅನಿವಾರ್ಯ ಅಭಿವ್ಯಕ್ತಿ ಮಾಧ್ಯಮವೇನೂ ಆಗಲಿಲ್ಲ; ಹತ್ತರಲ್ಲಿ ಹನ್ನೊಂದನೆಯದಾಯಿತು. ಇದು ಇಂದಿನವರಿಗೊಂದು ಹವ್ಯಾಸವಾಯಿತೇ ಹೊರತು ಹಿಂದಿನವರಂತೆ ಅನಿವಾರ್ಯ ಅಭಿವ್ಯಕ್ತಿ ಮಾಧ್ಯಮ ಆಗಲಿಲ್ಲ. ಇದನ್ನು ತಮ್ಮ ಕಾವ್ಯಾಭಿವ್ಯಕ್ತಿಯ ಖುಷಿಗೆ ಬಳಸಿದರು; ಸಾಕಷ್ಟು ಪ್ರಮಾಣದಲ್ಲಿ ಬೆಳೆಸಿದರು. ಸಂಖ್ಯೆಯಲ್ಲಿ ಇದು ಬೆಳೆಯಿತು; ಆದರೆ ಸತ್ವದಲ್ಲಿ ಸೊರಗಿತು. ಹನ್ನೆರಡನೆಯ ಶತಮಾನದ ವಚನಸಾಹಿತ್ಯ ಶಿಲ್ಪದೊಡನೆ ಹೋಲಿಸಿ ನೋಡಿದಾಗ ವ್ಯತ್ಯಾಸ ವೇದ್ಯವಾಗುತ್ತದೆ.

ಪ್ರತಿಭಟನೆ ಇಲ್ಲದೆ ಪ್ರಗತಿ ಇಲ್ಲ;
ಚಳವಳಿ ಇಲ್ಲದೆ ಚಾಲನೆ ಇಲ್ಲ;
ಸವಾಲುಗಳಿಲ್ಲದೆ ಸಾಧನೆ ಸಿದ್ಧಿಗಳೂ ಇಲ್ಲ.

ಈ ಎಲ್ಲ 'ಇಲ್ಲ'ಗಳಲ್ಲಿ ಹಲವು ಇಲ್ಲಿಲ್ಲ. ಪ್ರಮುಖವಾಗಿ ಪ್ರಾಚೀನ ವಚನಕಾರರಲ್ಲಿದ್ದ ತೀವ್ರ ಸಂವೇದನೆಯ ಅಭಾವ ಮತ್ತು ವಚನ ಪ್ರಕಾರ ಅನನ್ಯ ಅನಿವಾರ್ಯ ಅಭಿವ್ಯಕ್ತಿ ಮಾಧ್ಯಮವೆನಿಸದ್ದು -ಇವು ಇಂದಿನವರಲ್ಲಿ ಎದ್ದು ಕಾಣುತ್ತವೆ. 'ಆಧುನಿಕ ಯುಗದಲ್ಲಿ ವಚನಗಳು ಒಂದು ಸಾಹಿತ್ಯ ಪ್ರಕಾರವಾಗಿ ಸಾಕಷ್ಟು ಸಮೃದ್ಧವಾಗಿಯೇ ಬೆಳೆದು ನಿಂತಿವೆ. ಬಹುಶಃ ೧೨ನೇ ಶತಮಾನವಾದ ಮೇಲೆ ವಚನಸಾಹಿತ್ಯ ವಿಪುಲವಾಗಿ ಬೆಳೆದದ್ದು ಈ ೨೦ನೇ ಶತಮಾನದಲ್ಲಿಯೇ. ಆದರೆ ಈ ಎರಡು ಯುಗಗಳಿಗೂ ಇರುವ ಅಂತರವನ್ನು ಮರೆಯುವಂತಿಲ್ಲ. ಬಸವಾದಿ ಶರಣರ ಕೈಯಲ್ಲಿ ವಚನಗಳು ಕೇವಲ ಒಂದು ಸಾಹಿತ್ಯ ಪ್ರಕಾರವೆಂಬಂತೆ ಬೆಳೆದುಬರಲಿಲ್ಲ. ಪೂರ್ಣಜೀವನ ವಿಧಾನವೊಂದನ್ನು ರೂಪಿಸುವ ಸಮಗ್ರ ಕ್ರಾಂತಿಯ ಅನಿವಾರ್ಯವಾದ

ಸಾಮೂಹಿಕ ಅಂಗಗಳಾಗಿ ಮೂಡಿಬಂದವು. ಎಲ್ಲಿ ಸಾಹಿತ್ಯ ಮಹೋದ್ದೇಶವೊಂದರ ಈಡೇರಿಕೆಯ ಸಾಧನವಾಗಿ ಉಪಸರಕಿನಂತೆ (by-product) ಮೂಡಿಬರುತ್ತದೆಯೋ ಅಲ್ಲಿ ಅದು ಅತ್ಯಂತ ಸತ್ವಶಾಲಿಯಾಗಿ ಜೀವನವನ್ನು ರೂಪಿಸುವ ಶಕ್ತಿಯಾಗುತ್ತದೆಂಬ ಮಾತು ಆ ಕಾಲದ ವಚನ ಸಾಹಿತ್ಯಕ್ಕೆ ಸಂಪೂರ್ಣವಾಗಿ ಅನ್ವಯಿಸುತ್ತದೆ. ಈ ಶತಮಾನದ ವಚನ ಸಾಹಿತ್ಯವನ್ನು ಈ ಎರಡು ಘಟ್ಟಗಳಿಗಿಂತ ಬೇರೆಯಾದ ರೀತಿಯಲ್ಲಿ ನೋಡಬೇಕು. ೧೨ನೇ ಶತಮಾನದ ಆಂದೋಲನಕ್ಕಾಗಲೀ, ೧೫ ಮತ್ತು ೧೭ನೇ ಶತಮಾನಗಳ ಧಾರ್ಮಿಕ ಶ್ರದ್ಧೆಯ ಸಾಧನೆಗಾಗಲೀ ಮಾಧ್ಯಮವಾದಂತೆ ವಚನಗಳು ಇಂದು ಯಾವುದೇ ಸಾಮಾಜಿಕ ಹಾಗೂ ಧಾರ್ಮಿಕ ಶ್ರದ್ಧೆಗೆ ಬದ್ಧವಾಗಿಲ್ಲ. ಇಂದಿನ ಬದಲಾದ ಸಂದರ್ಭಕ್ಕನುಗುಣವಾಗಿ ಹಾಗಾಗಬಹುದಾದ ಸಾಧ್ಯತೆಯೇನೋ ಇತ್ತು. ಅದು ಆಗಲಿಲ್ಲ. ಅಂದಿನ ಆ ವಚನಗಳ ಅಭಿವ್ಯಕ್ತಿಯ ಸಾಧ್ಯತೆಗಳು ಮಾತ್ರ ಇಂದಿನ ವಿಚಾರವಂತರನ್ನು ಆಕರ್ಷಿಸಿದವು. ಅವುಗಳನ್ನು ಬಳಸಿಕೊಳ್ಳುವ ವೈಯಕ್ತಿಕ ಪ್ರಯತ್ನಗಳೂ ನಡೆದವು. ಆದರೆ ಹೆಸರು ಅದೇ ಆದರೂ ಉಸಿರು ಬೇರೆಂಬುದನ್ನು ಗಮನಿಸಬೇಕು. ಅಂದಿನಂತೆ ಇಂದು ವಚನಗಳು ಸಾಮೂಹಿಕ ಜನಜಾಗೃತಿಗೆ ಕಾರಣವಾದ ಧಾರ್ಮಿಕ ಕಿಡಿಗಳಾಗಿ ಬೆಳಗದೆ, ವೈಯಕ್ತಿಕ ಸಾಧನೆಯ ಅಭಿವ್ಯಕ್ತಿ ಮಾಧ್ಯಮಗಳಾಗಿ ಬೆಳೆದು ಬಂದಿವೆ. ಇದು ಆಧುನಿಕ ಸಾಹಿತ್ಯಕ್ಕೆಲ್ಲಾ ಒಟ್ಟಾಗಿ ಅನ್ವಯಿಸುವ ಮಾತು.'[೩] ಪ್ರಾಚೀನ ವಚನಕಾರರಲ್ಲಿದ್ದ ಸಮಾಜ ಸುಧಾರಣೆಯ ಒತ್ತಡ, ಧರ್ಮವನ್ನು ಸಮಾಜಮುಖಿಯಾಗಿಸುವ ತುರ್ತು, ಭಕ್ತಿ ತೀವ್ರತೆ ಹಾಗೂ ಅರ್ಪಣಾಮನೋಭಾವ, ಸಮಕಾಲೀನ ಆರ್ಥಿಕ ಅಸಮತೋಲನದ ಕಳಕಳಿ, ಸಂಸ್ಕೃತ ಮೋಹಕರಿಗೆ ಅಚ್ಚಗನ್ನಡ ಭಾಷಾದೀಕ್ಷೆ ಹಿಡಿಸುವ ಹಂಬಲ -ಇವೇ ಮೊದಲಾದ ಅನಿವಾರ್ಯ ಸವಾಲುಗಳು ಇಂದಿನವರ ಮುಂದೆ ಸುಳಿಯಲೇ ಇಲ್ಲ. ಅಭಿವ್ಯಕ್ತಿ ಸಂದರ್ಭದಲ್ಲೂ ಅಷ್ಟೆ, ಇಂದಿನವರನೇಕರಿಗೆ ಭಾಷೆಯ ಮೇಲೆ ಹಿಡಿತ ಇಲ್ಲ; ಲೇಖಣಿಯ ಬಾಲಕ್ಕೆ ಭಾಷೆಯನ್ನು ಗಂಟು ಹಾಕಿರುವುದುಂಟು. ಅಲ್ಲದೆ, ಶಿವಯೋಗಿ ಸಿದ್ಧರಾಮ ಹೇಳುವಂತೆ, ಅಂದು ವೀರಶೈವವನ್ನು ಬಿಟ್ಟು ವಚನ ಇಲ್ಲ, ವಚನ ಬಿಟ್ಟು ವೀರಶೈವ ಇಲ್ಲ ಎಂಬ ವಸ್ತು ಮತ್ತು ಭಾಷೆಗಳಿಗೆ ಅವಿನಾ ಸಂಬಂಧವಿತ್ತು. ಈಗಿನವರಲ್ಲಿ ಆ ಬಗೆಯ ಅನ್ಯೋನ್ಯ ಬಾಂಧವ್ಯ ಇದ್ದಂತೆ ತೋರುವುದಿಲ್ಲ. ಅವರು ತಮ್ಮ ಸಮಕಾಲೀನ ಆಡುನುಡಿಯನ್ನು ಔಚಿತ್ಯವರಿತು ದುಡಿಸಿಕೊಂಡರೆ, ಇವರು ನಡುಗನ್ನಡ ಭಾಷಾ ಬಳಕೆಗೆ ಕೈ ಹಚ್ಚಿದ್ದಾರೆ. ಕೆಲವರ ರಚನೆಗಳಲ್ಲಿ ಸಹಜತೆಯೂ ಇಲ್ಲ, ಸತ್ಯತೆಯೂ ಇಲ್ಲ. ವಚನಾಂತ್ಯದಲ್ಲೊಂದು 'ಅಂಕಿತ', ಪಾದಾಂತ್ಯದಲ್ಲೊಂದು 'ಅಯ್ಯಾ' ಎಂಬ ಸಂಬೋಧನೆ ಇದ್ದರೆ ಸಾಕು ಅದು ವಚನವೆನಿಸುತ್ತದೆ ಎಂಬ ಭ್ರಮೆಯೂ ಅನೇಕರಿಗಿದೆ. ಹಿಂದಿನವರು ಬರೆದಂತೆ ಬದುಕಿದರು. ಇಂದಿನವರದು ಬರಹವೆ ಬೇರೆ, ಬದುಕೇ ಬೇರೆ! ಮಾತಿಗೂ ಕೃತಿಗೂ ತಾಳೆಯೇ ಇಲ್ಲ. ಅವರಲ್ಲಿ ಮಾತೇ ಕೃತಿಯಾಗಿತ್ತು, ಕೃತಿಯೇ ಮಾತಾಗಿತ್ತು. ಅವೆರಡರ ಬಾಂಧವ್ಯ-ಬೆಸುಗೆ ಆಧುನಿಕ ವಚನಕಾರರಲ್ಲಿ ಕಾಣಸಿಗುವುದಿಲ್ಲ. ಇಂದಿನ ವಚನಕಾರರಲ್ಲಿ, 'ಅನುಭವದ ತೀವ್ರ ತುಡಿತ ಮತ್ತು ವಚನ ಸೃಷ್ಟಿಯ ಅನಿವಾರ್ಯತೆ ಇಲ್ಲವಾದ್ದರಿಂದ ಇವರ ವಚನಗಳೆಲ್ಲ ದುರ್ಬಲವಾದವು. ಅರ್ಥಾತ್ ವಚನಗಳ ದುರ್ಬಲ ಅನುಕರಣೆ ಎಂದು ಹೇಳಬೇಕಾಗುತ್ತದೆ'[೪] ಎಂಬ ಹೇಳಿಕೆ ಪೂರ್ಣ ಸತ್ಯ ಅಲ್ಲ. ಅನುಕರಣೆಯ ಪ್ರಮಾಣ ಹೆಚ್ಚಿ ಸ್ವೋಪಜ್ಞತೆ ಸೊರಗಿರಬಹುದು; ಅಷ್ಟೆ. ಆದರೆ ಸಾರಾಸಗಟು ಅಲ್ಲಗಳೆಯುವಷ್ಟು ದುಃಸ್ಥಿತಿಯಲ್ಲಿಲ್ಲ ಎಂದೇ ಹೇಳಬೇಕಾಗುತ್ತದೆ.

ಪ್ರಸ್ತುತದಲ್ಲಿ ಮೂರನೇ ಘಟ್ಟದ ವಚನಗಳ ಅಪ್ಪಟತನವನ್ನು ನಿರ್ಧರಿಸಿಕೊಳ್ಳುವ ಅಗತ್ಯ ಇದೆ.

ಕವಿ ಬೇಂದ್ರೆಯವರ 'ಉಯ್ಯಾಲೆ'ಯ 'ಕರುಳಿನ ವಚನಗಳು' ವಚನಗಳಲ್ಲ; ಭಾವಗೀತಗಳು (Lyrics); ಕೆಲವು ಶೋಕಗೀತಗಳು (Elegies), ಮತ್ತೆ ಕೆಲವು ಕೌಟುಂಬಿಕ ಪರಿಸರದ ವಾತ್ಸಲ್ಯಭರಿತ ಪ್ರೀತಿ ಗೀತಗಳು, ರಚನೆಯಲ್ಲಿ ಕೆಲವಂತೂ ಉಗಾಭೋಗ ಮಿಶ್ರಿತ ಮಿಸಳಬಾಜಿ ಹಾಡುಗಬ್ಬಗಳು. ಎಸ್.ವಿ. ರಂಗಣ್ಣನವರ ರಚನೆಗಳು ಗದ್ಯಗಂಧಿಗಳು. ಅವರ ಮಾತನ್ನೇ ಅನ್ವಯಿಸಿ ಹೇಳುವುದಾದರೆ, 'ನಾಲಗೆಯಿಂದ ಜಾರುವುದೆಲ್ಲ ಗದ್ಯವಲ್ಲ, ಜೊಲ್ಲು',[೫] ಅದರಂತೆ ಅವರವು ಹೆಚ್ಚು ಪಾಲು

ವಚನಗಳಲ್ಲ, ವಾಚನಗಳು! ಬಣಕಾರರ ವಚನಗಳು ಆಧುನಿಕತೆಯನ್ನು ಅರಗಿಸಿಕೊಳ್ಳದ ಪ್ರಾಚೀನ ವಚನಗಳ ಅನುಕರಣೆಗಳು ಮತ್ತು ಸ್ಥೂಲ ಸ್ಥಲವಿಭಜನೆಗಳು. 'ಜಚನಿ'ಯವರವು ಮಧ್ಯಕಾಲೀನ ರಚನೆಗಳ ಮುಂದುವರಿಕೆಗಳು, ಎಸ್.ವಿ. ಪರಮೇಶ್ವರಭಟ್ಟರವು ಭಾವನಾಲಹರಿಗಳು. ಆದರೆ ಸಿದ್ಧಯ್ಯ ಪುರಾಣಿಕರ ವಚನಗಳು ಪ್ರಾಚೀನ ಜೀವಸತ್ವವನ್ನು ಮೈಗೂಡಿಸಿಕೊಂಡು, ಸಮಕಾಲೀನ ಬದುಕಿನ ಸಾರವನ್ನು ಹೀರಿ ಬೆಳೆದ, ವಚನದ ಘನತರ ಮೌಲ್ಯಗಳನ್ನು ಗರ್ಭೀಕರಿಸಿಕೊಂಡ ಶ್ರೇಷ್ಠ ಅಭಿವ್ಯಕ್ತಿಗಳು. ಅವರ ರಚನೆ ಆಧುನಿಕ ವಚನ ವಾರಾಶಿಯ ನಿಧಿಯೂ ಅಹುದು, ಪ್ರತಿನಿಧಿಯೂ ಅಹುದು. ಆತ್ಮಸಂಬೋಧಿತ ಹೃದಯ ಬೋಧಕ ಸ್ತರದಲ್ಲಿ ಅಮೃತ ಸೋಮೇಶ್ವರರು ಪುರಾಣಿಕರನ್ನು ತುಸು ಸಮೀಪಿಸುತ್ತಾರೆ. ಅವರೇ ಹೇಳಿರುವಂತೆ, 'ಸಾಂಪ್ರದಾಯಿಕ ವಚನ ಸಾಹಿತ್ಯ ಬಿಗಿ ಬನಿಗಳನ್ನು ಇಲ್ಲಿ ನಿರೀಕ್ಷಿಸುವಂತಿಲ್ಲ. ಆದರೆ ಬದುಕಿನ ವಿವಿಧ ತುಡಿತಗಳಿಗೆ ಸ್ಪಂದಿಸುವ ಹೃದಯವೊಂದರ ದನಿಯನ್ನು ಆಲಿಸಬಹುದಾಗಿದೆ.'[೬]

ಈ ಎಲ್ಲ ಅಂಶಗಳ ಹಿನ್ನೆಲೆಯಲ್ಲಿ ವೀಕ್ಷಿಸಿದರೆ ಸಿದ್ಧಯ್ಯ ಪುರಾಣಿಕಯುಗದ ವಚನ ಸಾಹಿತ್ಯದ ಅಭಿವ್ಯಕ್ತಿಯ ಹೊಸ ಸವಾಲುಗಳು ಎಂದರೆ, ಅದರ ಅಭಿವ್ಯಕ್ತಿಗಿರುವ ಮಿತಿಗಳು ಎಂದೇ ಅರ್ಥ.

೩

ಆಧುನಿಕ ವಚನ ವಾಙ್ಮಯ ಸಂದರ್ಭದಲ್ಲಿ ಪುರಾಣಿಕಯುಗ ಎದುರಿಸಿದ ಸಮಸ್ಯೆಗಳು ಹಲವು, ಎದುರುಗೊಂಡ ಸವಾಲುಗಳು ಕೆಲವು. ಈ ಯುಗದ ಪೂರ್ವಾರ್ಧದ ಕನಸು ಒಂದೇ ಆಗಿತ್ತು. ಅದು ದೇಶ ಸ್ವಾತಂತ್ರ್ಯ ಪಡೆವ ಹಂಬಲ. ಆದರೆ ಅದರ ಉತ್ತರಾರ್ಧದ ಹಸಿವಿಗೆ ಬೆನ್ನೆಲ್ಲಾ ಬಾಯಿ! ಬಯಕೆಗಳು ಹೆಚ್ಚಾದಂತೆ ಬದುಕು ಸಂಕೀರ್ಣಗೊಳ್ಳುತ್ತಾ ಬಂತು. ಸಮಸ್ಯೆಗಳ ಸಂತಾನ ಬೆಳೆಯುತ್ತಾ ಹೋಯಿತು. ಅದರ ಹಸಿವು ನೀರಡಿಕೆಗಳಿಗೆ, ಅನ್ನ ನೀರು ಒದಗಿಸುವುದು ಕಷ್ಟವಾಯಿತು. ಭರತಖಂಡಕ್ಕೆ 'ನೀರಿಗೆ ದಾಹ, ಹಿಮಾಲಯಕ್ಕೆ ನೆಗಡಿ, ಸೂರ್ಯನಿಗೆ ಸೆಕೆ, ಚಂದ್ರನಿಗೆ ಚಳಿ, ಅನ್ನಕ್ಕೆ ಹಸಿವು! ಮಂತ್ರಿಗಳ ಮನೆಗೆ ಎಡತಾಕುವ ಸ್ವಾಮಿಗಳು, ರಾಜಕಾರಣಿಗಳ ಬಾಲ ಹಿಡಿದು ತಿರುಗುವ ಬುದ್ಧಿಜೀವಿಗಳು, ಭ್ರಷ್ಟಾಚಾರವೇ ಶಿಷ್ಟಾಚಾರದ ವೇಷ ತೊಟ್ಟು ದುರ್ನೀತಿ ನೀತಿಪ್ರೀತಿಗಳ ಎದೆ ಮೆಟ್ಟಿ ತುಳಿದದ್ದುಂಟು.'[೭] ಸ್ವಾರ್ಥ, ಸುಲಿಗೆ, ಕೊಲೆ, ದರೋಡೆ ಮೊದಲಾದ ರಾಕ್ಷಸೀ ಮನೋಭಾವ ತಾಂಡವವಾಡುತ್ತಿರುವುದುಂಟು. ಭಾರತದ ಪರಿಸ್ಥಿತಿ ಇಂದು ಯಾವ ಮಟ್ಟದಲ್ಲಿದೆಯೆಂದರೆ,

ಇಂದು ಸಮಸ್ತ ಹಿಂದೂಸ್ತಾನವೇ
ಹಿರಿಯ ಹರಾಜುಖಾನೆ!
ಎಲ್ಲವೂ, ಎಲ್ಲರೂ ಹರಾಜಿಗಿಲ್ಲಿ-
ಏನೂ ಸಿಕ್ಕದು ಮುಲಾಜಿಗಿಲ್ಲಿ!

ರಾಷ್ಟ್ರಪತಿಯ ಅಂತಃಸಾಕ್ಷಿ ಹರಾಜಿಗಿದೆ,
ಪ್ರಧಾನಿಯ ಪ್ರಸಾದ ಹರಾಜಿಗಿದೆ,
ಮಂತ್ರಿಗಳ ರುಜುವಾತುಗಳು ಹರಾಜಿಗಿವೆ
ಶಾಸನಕಾರನ ಶಿಫಾರಸುಗಳು ಹರಾಜಿಗಿವೆ,
ಅಧಿಕಾರಿಗಳ ಆಜ್ಞೆಗಳು ಹರಾಜಿಗಿವೆ,
ನ್ಯಾಯಾಲಯಗಳ ತೀರ್ಪುಗಳು ಹರಾಜಿಗಿವೆ,
ಜನರ ಮಾನಪತ್ರಗಳು ಹರಾಜಿಗಿವೆ,
ಶಿಶುವಿಹಾರದಿಂದ ವಿಶ್ವವಿದ್ಯಾಲಯದವರೆಗೆ
ಪ್ರವೇಶಗಳು ಹರಾಜಿಗಿವೆ,
ಲೋಕಸೇವಾ ಆಯೋಗದ
ನೇಮಕಾತಿಗಳು ಹರಾಜಿಗಿವೆ!

ಎಲ್ಲಕ್ಕೂ ಸರಕಾರಿ ಸವಾಲು,
ಇದು ಓಪೆನ್-ಟು-ಅಲ್ ಲಿಲಾವು!
ಏಕ್ ಬಾರ್, ದೋ ಬಾರ್, ತೀನ್ ಬಾರ್-
'ಬಿಡ್' ಬೆಸಸು
ಸ್ವತಂತ್ರಧೀರ ಸಿದ್ಧೇಶ್ವರಾ.[೮]

ಇಂದು ನಮ್ಮ ದೇಶದಲ್ಲಿ ಸತ್ಯ, ಧರ್ಮ, ಪ್ರಾಮಾಣಿಕತೆ, ಕರ್ತವ್ಯನಿಷ್ಠೆ, ಸ್ವಾಮಿಭಕ್ತಿ ಎಲ್ಲಾ ಸತ್ತುಹೋಗಿವೆ. ವ್ಯಕ್ತಿ ವ್ಯಕ್ತಿಯ ನಡುವಣ ವಿಶ್ವಾಸವಂತೂ ಪಂಜುಹಿಡಿದು ಹುಡುಕಿದರೂ ಸಿಕ್ಕುವುದಿಲ್ಲ. ಭಾರತ ತನ್ನ ಜೀವನ ಮೌಲ್ಯಗಳನ್ನೆಲ್ಲಾ ಹರಾಜು ಹಾಕಿ, ಮಾನ ಮುಚ್ಚುವಷ್ಟು ಬಟ್ಟೆಯಿಲ್ಲದೆ ಬೆತ್ತಲೆ ನಿಂತಿದೆ! ಭ್ರಷ್ಟಾಚಾರ, ಅತ್ಯಾಚಾರ, ಅನಾಚಾರ, ಜಾತಿಸೂತಕ, ಹಣದ ದಾಹ, ಹೆಸರಿನ ಮೋಹ, ಅಧಿಕಾರ ಲಾಲಸೆ, ಸ್ವೇಚ್ಛಾಚಾರಗಳ ಅವಾಂತರದಿಂದಾಗಿ ಈ ದೇಶದಲ್ಲಿ ಯಾವ ಸಭ್ಯನೂ ಮರ್ಯಾದೆಯಿಂದ ಬದುಕು ಮಾಡುವ ವಾತಾವರಣ ಕಲ್ಪಿತವಾಗಿಲ್ಲ. ಪಕ್ಕದ ಮನೆ ಹಾಳಾದರೆ ಸಾಕು, ತನ್ನ ಕತ್ತೆ ಕಟ್ಟೋದಕ್ಕೆ ಜಾಗ ಆಯ್ತು ಎಂಬ ಸ್ವಾರ್ಥ ಹಿಮಾಲಯದೆತ್ತರಕ್ಕೆ ಬೆಳೆದು ನಿಂತಿದೆ. ಇದೆಲ್ಲದರ ಪರಿಣಾಮ ಏನಾಯ್ತು?

ವಿದ್ಯೆ ಬಂತು, ವಿನಯ ಹೋಯ್ತು;
ಬುದ್ಧಿ ಬಂತು, ಶ್ರದ್ಧೆ ಹೋಯ್ತು;
ಶ್ರದ್ಧೆ ಬಂತು, ವಿವೇಚನೆ ಹೋಯ್ತು;
ಸಮೃದ್ಧಿ ಬಂತು, ಸಂಸ್ಕೃತಿ ಹೋಯ್ತು;
ವಿಜ್ಞಾನ ಬಂತು, ಸಮಾಧಾನ ಹೋಯ್ತು;
ಶರೀರ ಸ್ವಾಸ್ಥ್ಯ ಬಂತು, ಚಿತ್ತ ಸ್ವಾಸ್ಥ್ಯ ಹೋಯ್ತು;
ದೀರ್ಘಾಯುಷ್ಯ ಬಂತು, ಜೀವನ ಸ್ವಾರಸ್ಯ ಹೋಯ್ತು;
ಬೋಧನೆ ಬಂತು, ಸಾಧನೆ ಹೋಯ್ತು;
ಮಾತು ಬಂತು, ಕೃತಿಯು ಹೋಯ್ತು;
ಜಾತಿ ಬಂತು, ಪ್ರೀತಿ ಹೋಯ್ತು;
ಸ್ವಾತಂತ್ರ್ಯ ಬಂತು, ಸೌಜನ್ಯ ಹೋಯ್ತು;
ಸಿದ್ಧಯ್ಯ ಪುರಾಣಿಕ ಬಂದ
ಸ್ವತಂತ್ರಧೀರ ಸಿದ್ಧೇಶ್ವರ ಹೋದ![೯]

ಅಂದರೆ ಯಾವುದು ಮೌಲಿಕವೋ ಅದು ಹೋಯ್ತು, ಮೌಲಿಕವಲ್ಲದ ಹೊಲ್ಲ ತಲೆ ಹಾಕಿತು. ಅದರಿಂದಾಗಿ, 'ಗಾಳಿಯನ್ನು ಬಿತ್ತಿ ಬಿರುಗಾಳಿಯನ್ನು ಒಕ್ಕಿಕೊಂಡೆವು, ಹಿಂಸೆಯನ್ನು ಬಿತ್ತಿ ವಿಧ್ವಂಸಕತೆಯನ್ನು ಹೆಕ್ಕಿಕೊಂಡೆವು, ವಿಕಾರಗಳ ಬಿತ್ತಿ ವಿನಾಶದ ತೆಕ್ಕೆಗೊಳಗಾದೆವು, ಅಶಿಸ್ತನ್ನು ಬಿತ್ತಿ ಅರಾಜಕತೆಯ ಚಕ್ರತೀರ್ಥಕ್ಕೆ ಸಿಲುಕಿದೆವು! ಇತಿಹಾಸದಿಂದ ಏನೂ ಕಲಿಯಲಿಲ್ಲ ಎಂಬುದೇ ಇತಿಹಾಸದಿಂದ ನಾವು ಕಲಿತ ಪಾಠವಾಯಿತು.'[೧೦]

ಈ ಎಲ್ಲ ಸಮಸ್ಯೆಗಳೇ ಇಂದಿನ ಹೊಸ ಸವಾಲುಗಳಿಗೆ ಮುಖ್ಯ ಪ್ರೇರಣೆಗಳು. ಒಂದರ್ಥದಲ್ಲಿ ಇವು ಪ್ರಚೋದನಾ ಶಕ್ತಿಗಳು; ಮರೆಯ ಆಶೀರ್ವಾದಗಳು (Blessings in disguise) ಕೂಡ. ಇವುಗಳ ಅನಿವಾರ್ಯತೆ ಇದ್ದಾಗಲೇ ದೇಶದೇಳ್ಗೆಯ ಚಿಂತನೆ. ಇರುಳು ಇರುವುದರಿಂದಲೇ ಹಗಲಿಗೆ ಬೆಲೆ. 'ನೆಲಕ್ಕೆ ಬಿದ್ದೇ ಮೇಲಕ್ಕೆ ಪುಟಿಯ ಬೇಕು ಪ್ರಗತಿಯ ಚೆಂಡು'. ಅದರಿಂದಾಗಿ ಪುರಾಣಿಕ ಯುಗದ ಧ್ಯೇಯ ಧೋರಣೆಗಳು, ಆಶೆ ಆಶೋತ್ತರಗಳು ಅಮೃತಸ್ಯಂದಿ ಸ್ವರೂಪಿಗಳು. ಈ ಯುಗ ಮನಸ್ಸು,

ಓ ಸ್ವಾತಂತ್ರ್ಯವೆ
ಪರಮಾತ್ಮನಾತ್ಮವೆ

ಬದುಕಿನ ಹೆಡೆಯ ರತ್ನವೆ
ಸೃಷ್ಟಿಗಿಹ ಅರ್ಥವೆ
ನಿನ್ನ ಪ್ರಾಪ್ತಿ ಜೀವ, ನಿನ್ನ ಲುಪ್ತಿ ಮರಣ;

ಸೃಜನಶೀಲತೆಗೆ ಶ್ರಮನಿಷ್ಠೆಗೆ ಸಂವೇದನೆಯ ನೀಡು,
ಸಮೃದ್ಧ ಸುಸಂಸ್ಕೃತ ಜೀವನಕ್ಕೆ ಸುಪ್ರೇರಣೆಯನ್ನು ನೀಡು,
ಸ್ನೇಹ ಸಹಕಾರ ಸಹೋದರತೆ ಸಹೃದಯತೆಗಳಿಗೆ
ಪ್ರಬಲ ಪ್ರಚೋದನೆಯನ್ನು ನೀಡು!
ಮೃತಸಂಜೀವಿನಿಯಾಗು, ಸಹಜೀವವಾಹಿನಿಯಾಗು,
ಸಾಹಸೋತ್ತೇಜನಿಯಾಗು, ಸ್ವರಾಜ್ಯಗೇಹಿನಿಯಾಗು,
ಮೇಲು ಮೇಲಿನ ಗತಿಗೆ ಮೆಟ್ಟಿಲಾಗು,
ಸಂಸ್ಕೃತಿ ಶಿಶುವಿನ ತೊಟ್ಟಿಲಾಗು,
ಅರಿವಿನ ಅಮೃತದ ಬಟ್ಟಲಾಗು,
ಸ್ವತಂತ್ರಧೀರ ಸಿದ್ಧೇಶ್ವರನ
ಸಂಕಲ್ಪಗಳ ಸಂಪೂರ್ತಿ ಸಾಧನವಾಗು![೧೩]

ಎಂದು ಹಂಬಲಿಸಿ, ತನ್ನ ಆಶಯಗಳನ್ನು ಅಭಿವ್ಯಕ್ತಿಸುವ ಮೂಲಕ ಹಲವು ಸವಾಲುಗಳನ್ನು ನಮ್ಮ ಮುಂದಿರಿಸಿದೆ ಪುರಾಣಿಕ ಯುಗ. ಈ ಯುಗದ ಅಂತರ್ಯದಲ್ಲಿ ಒಂದು ನಿತ್ಯ ಸತ್ಯ ಅಡಗಿದೆ. ಅದು ಬಂಗಾರದ ಬಾಳನ್ನು ಸಿಂಗಾರಗೊಳಿಸುವುದು. 'ಸರ್ವೇ ಜನಾಃ ಸುಖಿನೋ ಭವಂತು' ಎಂಬ ಋಷಿವಾಕ್ಯಕ್ಕೆ ವ್ಯಾಖ್ಯಾನವಾಗುವುದು. ಏಕೆಂದರೆ ಬದುಕು ಬಹು ದೊಡ್ಡ ಕಲೆ, ಶ್ರೇಷ್ಠ ಕಲೆ, ರಾಜಕಲೆ. ಇತರ ಎಲ್ಲ ಕಲೆಗಳೂ, ವಿಜ್ಞಾನ ಸುಜ್ಞಾನಗಳೂ ಆತ್ಮಜ್ಞಾನ ಅಧ್ಯಾತ್ಮ ಚಿಂತನೆಗಳವು. ಎಲ್ಲ ಎಲ್ಲವೂ ದುಡಿಯುತ್ತಿರುವುದು ಆ ಜೀವನ ಕಲೆಯ ಒಳಿತಿಗಾಗಿ. ಅವೆಲ್ಲವಿರುವುದೂ ಜೀವನಾಭ್ಯುದಯಕ್ಕಾಗಿ, ಆದರೆ ಜೀವನವಿರುವುದು ಯಾವುದಕ್ಕಾಗಿಯೂ ಅಲ್ಲ. 'ಎಲ್ಲ ಇರುವುದು ಬದುಕಿಗಾಗಿ, ಬದುಕು ಅದಕಾಗಿ, ಇದಕಾಗಿ ಅಲ್ಲ!'[೧೪] ಅವರ ಸ್ಮೃತಿಗೆ ಉಳಿದೆಲ್ಲವೂ ಶ್ರಮಿಸಬೇಕು. ಆದರೆ ಬದುಕು ಕೇವಲ ವ್ಯಷ್ಟಿಗತ ಅಲ್ಲ, ಸಮಷ್ಟಿಯನ್ನೂ ಸಮೀಕರಿಸಿಕೊಂಡದ್ದು. ಇಲ್ಲಿ ವ್ಯಷ್ಟಿ ಮತ್ತು ಸಮಷ್ಟಿಗಳ ಅಭ್ಯುದಯ ಅನಿವಾರ್ಯ ಹಾಗೂ ಸಾಪೇಕ್ಷಿತ. ವ್ಯಷ್ಟಿ ಪ್ರಗತಿಯೇ ಸಮಷ್ಟಿ ಶುದ್ಧಿ, ಸಮಷ್ಟಿ ಶುದ್ಧಿಯೇ ವ್ಯಷ್ಟಿ ಸಿದ್ಧಿ. ಹಾಗಲ್ಲದೆ, 'ವ್ಯಷ್ಟಿಯ ಅಭ್ಯುದಯಕ್ಕೂ ಇಲ್ಲ, ಸಮಷ್ಟಿಯ ಸುಸ್ಥಿತಿಗೂ ಇಲ್ಲ, ನಾಡಿನೇಳ್ಗೆಗೂ ಇಲ್ಲ, ನುಡಿಯ ಮೇಲ್ಮೆಗೂ ಇಲ್ಲ -ಎಂದಾದರೆ ಜೀವನಕ್ಕೆ ಬೆಲೆಯಾವುದಯ್ಯಾ?' ಎಂಬ ಪ್ರಶ್ನೆ ಉದ್ಭವಿಸುತ್ತದೆ. ಆದ್ದರಿಂದ 'ಆಗಬೇಕು, ಆಗಬೇಕು, ಮೊದಲು ತಾನು ತಾನಾಗಬೇಕು. ಅನಂತರ ನಾಲ್ಕು ಜನರಿಗೆ ಆಗಬೇಕು. ಅದಿರು ಅಪರಂಜಿಯಾಗಬೇಕು; ಪ್ರಕೃತಿ ಸಂಸ್ಕೃತಿಯಾಗಬೇಕು; ಅನ್ನಮಯ ಆನಂದಮಯವಾಗಬೇಕು.' ಬದುಕಿನ ಸಾರ್ಥಕತೆ ವ್ಯಷ್ಟಿಯ ಅಭ್ಯುದಯದಲ್ಲೂ ಇದೆ, ಸಮಷ್ಟಿಯ ಶ್ರೇಯಸ್ಸಿನಲ್ಲೂ ಇದೆ. ಮೂಲತಃ ಅಲ್ಲಿ ವ್ಯಷ್ಟಿಯ ದುಡಿಮೆಯ ಸ್ಥಾಯಿತ್ವ ಅಡಗಿದೆ. ಅದು ಸಮಷ್ಟಿ ಶ್ರೇಯಕ್ಕಾಗಿ ಅರ್ಪಿತವಾಗಿದೆ. ಅಂತಾದಾಗಲೇ ವ್ಯಷ್ಟಿಗೆ ಬೆಲೆ.

ಅಂಬುಧಿಯಲ್ಲಿರುವಾಗ ಅಲೆಗೊಂದು ಚೆಲುವು.
ಅಂಬುಧಿಯ ಹೊರಗೆ ಅಲೆ ಅಲೆಯಬಲ್ಲುದೇನಯ್ಯಾ?
ಸಮಷ್ಟಿಯಲ್ಲಿರುವಾಗ ವ್ಯಷ್ಟಿಗೆ ಕಳೆ, ಬೆಲೆ,
ಸಮಷ್ಟಿಯನ್ನುಳಿದ ವ್ಯಷ್ಟಿಗೆಲ್ಲಿಯ ತುಷ್ಟಿಯಯ್ಯಾ?
ಹಿಂಡಿನಲ್ಲಿರುವಾಗ ಕುಂಜರಕ್ಕೆ ಭೀಮ ಬಲ,
ಹಿಂಡನಗಲಿದ ಹಸ್ತಿಗೆ ಬಲೆ, ಇಲ್ಲವೇ ಬಿಲವಯ್ಯಾ!
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನೊಳಿರೆ ನನಗೆ ಮಾನ್ಯತೆ,
ನಿನ್ನನುಳಿದೆನಗಾವ ಗಣ್ಯತೆಯಯ್ಯಾ![೧೫]

ಆ ಕಾರಣ ಸರ್ವರ ಸರ್ವತೋಮುಖ ಪ್ರಗತಿ ಆಗಬೇಕು, ಸಕಲ ಕ್ಷೇತ್ರಗಳೂ ಸರ್ವೋದಯ ಕಾಣಬೇಕು. ಈ ವಿಶಾಲ ವಿಶ್ವದಲ್ಲಿ ನಾನೊಬ್ಬನೇ ಬದುಕಿಲ್ಲ, ನನಗೊಬ್ಬನಿಗಾಗಿಯೇ ಈ ಲೋಕವೂ ಇಲ್ಲ. ನಾನು ಜಗತ್ತಿಗಾಗಿ, ನಾನು ಈ ದೇಶಕ್ಕಾಗಿ, ನಾನು ಎಲ್ಲರಿಗಾಗಿ[೧೭] ಎಂಬ ಸರ್ವ ಸಮರ್ಪಣಭಾವದ ಸಮದರ್ಶಿತ್ವದ ಮೂಲಕ ವಿಶ್ವವಿಕಾಸ ರಥಕ್ಕೆ ಹೆಗಲು ಕೊಡುವ, ಜೀವನ ಪರಿಪೂರ್ಣತೆಯ ಹೋರಾಟಕ್ಕಿಳಿಯುವ, ಜೀವರಾಶಿಗಳ ಲೇಸಿಗಾಗಿ ಹೆಣಗುವ ಸಾಹಸ, ಶ್ರದ್ಧೆ, ಶಕ್ತಿಗಳನ್ನು ಪ್ರತಿ ವ್ಯಕ್ತಿಯೂ ತನ್ನದಾಗಿಸಿಕೊಳ್ಳಬೇಕು.[೧೮] ಇದು ಈ ಯುಗದ ವಚನಕಾರನ ಆಶಯ.

ಜಗತ್ತಿನ ಯಾವುದೇ ವಸ್ತುವಿರಲಿ, ಅದಕ್ಕೆ ನೆಲಬಿಟ್ಟು ಸಾಧನೆ ಇಲ್ಲ. ಗರುಡ ಪಕ್ಷಿ ಇಡೀ ಹಗಲು ಆಕಾಶದಲ್ಲಿ ಹಾರಾಡಿದರೂ ಸಂಜೆಗೆ ನೆಲದ ಮರ ಮರೆಯುವಂತಿಲ್ಲ. ಆದ್ದರಿಂದ ಭಾವನಾಲೋಕ ವಿಹಾರಕ್ಕಿಂತ ವಾಸ್ತವಲೋಕದ ಬದುಕು ದೊಡ್ಡದು. ಅಣ್ಣ ಹೇಳುವಂತೆ ಇಹವನ್ನು ಬಿಟ್ಟು ಪರ ಎಂಬುದಿಲ್ಲ; ಇಹವೇ ಎಲ್ಲ. 'ಏನನ್ನು ಕಂಡರೂ ಈ ಲೋಕದಲ್ಲಿಯೇ ಕಾಣಬೇಕು. ಏನನ್ನು ಪಡೆಯುವಾಗ ಈ ಲೋಕದವರಿಂದಲೇ ಪಡೆಯಬೇಕು. 'ನಾನ್ಯಃ ಪಂಥಾಃ ಅಯನಾಯ ವಿದ್ಯತೇ'[೧೯] ಆದ್ದರಿಂದ ಇಹದಲ್ಲಿ ಹುಟ್ಟಿ ಬೆಳೆಯುವ ಮಾನವ ಇಹಕ್ಕಾಗಿ ದುಡಿಯಬೇಕು; ಪರಕ್ಕಾಗಿ ಹೆಣಗುವುದಲ್ಲ. ಸ್ವರ್ಗ-ನರಕಗಳಿರುವುದು ಇಲ್ಲಿಯೇ, ಬೇರೆಲ್ಲೂ ಅಲ್ಲ.

> ಸ್ವದೇಶ ಸ್ವರ್ಗ
> ಸ್ವಭಾಷೆ ಸ್ವರ್ಗ
> ಸ್ವಧರ್ಮ ಸ್ವರ್ಗ
> ಸ್ವಾತಂತ್ರ್ಯ ಸ್ವರ್ಗ
> ಸ್ವಾವಲಂಬನ ಸ್ವರ್ಗ
> ಸ್ವಕಾಯಕ ಸ್ವರ್ಗ
> ಸ್ವಾನುಭವ ಸ್ವರ್ಗ
> ಇವಿಲ್ಲದುದು ನರಕ ನೋಡಾ, ಸ್ವತಂತ್ರಧೀರ ಸಿದ್ಧೇಶ್ವರಾ.[೨೦]

ಈ ವಿವೇಚನೆ ಎಲ್ಲರಲ್ಲೂ ಹೊಳೆಯಬೇಕು, ಬೆಳೆಯಬೇಕು. ಅದರಿಂದ ಪಡೆಯುವ ಜೀವನ ದರ್ಶನವಾದರೂ ಏನು? 'ವಿಜ್ಞಾನಿಯ ಬುದ್ಧಿ, ತತ್ತ್ವಜ್ಞಾನಿಯ ಮನ, ಕವಿಯ ಹೃದಯ, ದುಡಿತದ ಬಟ್ಟಲು, ತಿಳಿವಿನ ಹಾಲು, ಒಲವಿನ ಸಕ್ಕರೆ, ನಯದ ನೌಕೆ, ನಂಬಿಕೆಯ ಹುಟ್ಟು, ದಿಟದ ದಿಕ್ಸೂಚಿ, ಛಲದ ಕುದುರೆ, ಹದುಳದ ಹಲ್ಲಣ, ವಿವೇಕದ ಕಡಿವಾಣ!'[೨೧]

ಇವುಗಳನ್ನು ಪ್ರಾಪ್ತಿಸಿಕೊಳ್ಳಬೇಕಾದರೆ ಬದುಕಿನಲ್ಲಿ ನೆಮ್ಮದಿ ತುಂಬಿರಬೇಕು. ಆದರೆ ಅದು ಇಂದು ತುಂಬಾ ಅಲಭ್ಯ ವಸ್ತು. ನಮಗೆ ಹಣದ ದಾಹ, ಅಧಿಕಾರ ಮೋಹ, ಇನ್ನೊಬ್ಬರನ್ನು ತಿಂದಾದರೂ ಬದುಕಬೇಕೆಂಬ ರಾಕ್ಷಸೀ ಮನೋಭಾವ. ಹೀಗಾಗಿ ತಾನೂ ಬದುಕುವುದಿಲ್ಲ, ನೆರೆಯವನನ್ನೂ ಬದುಕ ಬಿಡುವುದಿಲ್ಲ! ಅಲ್ಲದೆ ಇಂದಿನ ಸಂಕೀರ್ಣ ಬದುಕಿನ ಸಂಕೋಲೆಯಲ್ಲಿ ವ್ಯಕ್ತಿಯ ವಿಚಾರಶಕ್ತಿ ಸ್ಥಗಿತಗೊಂಡು, ತನ್ನ ಮೂಲ ಸತ್ತ್ವವನ್ನೇ ನೀಗಿಕೊಂಡಿದೆ; ಇಲ್ಲವೇ ಸಲ್ಲದಕ್ಕೋ ಇಲ್ಲದಕ್ಕೋ, ಎಲ್ಲದಕ್ಕೋ ವ್ಯಯವಾಗಿದೆ. ವಿವರ ಹೀಗಿದೆ ನೋಡಿ:

> ಸಹನಶೀಲತೆಗೊಮ್ಮೆ, ಸೃಜನಶೀಲತೆಗೊಮ್ಮೆ
> ಸುಗುಣಲೋಲತೆಗೊಮ್ಮೆ ಶರಣಾದೆ ತಂದೆ!
> ಭಾವಯಾಗಕ್ಕೊಮ್ಮೆ, ಬುದ್ಧಿಯಾಗಕ್ಕೊಮ್ಮೆ
> ಲಿಂಗಭೋಗೋಪಭೋಗಕ್ಕೊಮ್ಮೆ ಮಣಿದೆ ತಂದೆ!
> ಆತ್ಮಮಂಥನಕೊಮ್ಮೆ, ತತ್ತ್ವಚಿಂತನಕೊಮ್ಮೆ
> ಸರ್ವಸಾಂತ್ವನಕೊಮ್ಮೆ ಒಲಿದೆ ವಿಭುವೆ!

ಸತ್ಯಶೋಧನೆಗೊಮ್ಮೆ, ನೀತಿಬೋಧನೆಗೊಮ್ಮೆ
ಸುಗತಿ ಸಾಧನೆಗೊಮ್ಮೆ ಮನವಿತ್ತೆ, ಪ್ರಭುವೆ!
ಏನು ಏನೋ ತಿಳಿದು,
ಎಲ್ಲೆಲ್ಲಿಯೋ ಸುಳಿದು,
ಕೊನೆಗೆ ತಂದೆ
ನಿನ್ನ ಬಳಿ ಬಂದೆ[೨೨]

ಈ ರೀತಿ ವ್ಯಕ್ತಿ ಹಂಚಿಹೋಗಿದ್ದಾನೆ. ಅದನ್ನು ಸರಿಪಡಿಸಲು ಇರುವ ಏಕೈಕಮಾರ್ಗ ಅತೀತಶಕ್ತಿಗೆ ಶರಣು ಹೋಗುವುದು. ಶರಣು ಹೋಗುವುದು ಎಂಬುದರ ಅರ್ಥ ಮೌಢ್ಯ ಮೆರೆಯುವುದು ಎಂದಲ್ಲ, ಕಲ್ಲು ದೇವರ ಮುಂದೆ ಕುಳಿತು ಮಣಮಣ ಮಂತ್ರ ಪಠಿಸುವುದಲ್ಲ, ಆತ್ಮೋಪಾಸನೆಯ ಮೂಲಕ ಆತ್ಮಸಾಕ್ಷಾತ್ಕಾರ (Self realisation) ಪಡೆದುಕೊಳ್ಳುವುದು. ಬೆಳಗಾದ ಕೂಡಲೇ ಸುಪ್ರಭಾತ ಹಾಡು ದೇವರನ್ನು ಎಬ್ಬಿಸುವುದಕ್ಕಲ್ಲ, ನಮ್ಮನ್ನು ನಾವು ಎಚ್ಚರಿಸಿಕೊಳ್ಳುವುದಕ್ಕೆ. ದೇವರು ಬಿಡುಗಣ್ಣ; ಯಾವಾಗಲೂ ಎದ್ದೇ ಇರುತ್ತಾನೆ. ಅವನು ನಿದ್ದೆಗೈದರೆ ವಿಶ್ವವೇ ಅಂತ್ಯದ ಅಂಚು ಮುಟ್ಟಿದಂತೆ! ಆದ್ದರಿಂದ ನಮ್ಮ ಔಪಾಸನೆ ಆತ್ಮಸಾಂತ್ವನಕ್ಕೆ, ಅಪಚಾರ ವಿದೂರಗೈಯಲಿಕ್ಕೆ. ಬಸವಣ್ಣ ತನ್ನ ಸಂಗಮನಾಥನನ್ನು ಕಂಡದ್ದು ಕಲ್ಲಿನಲ್ಲಲ್ಲ, ಮಣ್ಣಿನಲ್ಲಲ್ಲ, ಬೆಟ್ಟದಲ್ಲಲ್ಲ, ಗುಡ್ಡದಲ್ಲಲ್ಲ, ಮರಗಿಡಗಳಲ್ಲಲ್ಲ, ನದಿ ನದಗಳಲ್ಲೂ ಅಲ್ಲ, ಸರ್ವರ ಹೃದಯ ಮಂದಿರದಲ್ಲಿ. ಹಾಗೆ ನೀನೂ ಸಹ ನಿನ್ನ ದೇವನನ್ನು ಕಾಣುವ ಪ್ರಯತ್ನ ಮಾಡು. ಸೇವೆಯಲ್ಲಿ ಸ್ವರ್ಗವಿದೆ; ಮಾನವತೆಯಲ್ಲಿ ಮಹಾದೇವನಿದ್ದಾನೆ. ಯಾವ ರೂಪದಲ್ಲಿ?

ಬಡವನ ದೃಢಮನದ ದುಡಿಮೆಯಲ್ಲಿ,
ದುಃಖಿತರ ಕಂಬನಿ ತೊಡೆವರಲ್ಲಿ,
ನಿಜಭಕ್ತರ ನೀರವ ಪ್ರಾರ್ಥನೆಯಲ್ಲಿ,
ತಾಯಿಯ ಪರಿಶುದ್ಧ ಪ್ರೀತಿಯಲ್ಲಿ,
ಮಗುವಿನ ನಗೆ, ನಯನ ದೀಧಿತಿಯಲ್ಲಿ,
ಶ್ರೀಸಾಮಾನ್ಯರ ನಿರ್ಮಲ ನೀತಿಯಲ್ಲಿ,
ಪತಿತರೆದೆಯಲ್ಲೂ ಬೆಳಗುವ
ಸದ್ಭಾವ ಜ್ಯೋತಿಯಲ್ಲಿ,
ನಿರ್ಗತಿಕರಿಗೆ ನಿರ್ಗತಿಕರು ನೆರವಾಗುವ
ನಿರುಪಮ ರೀತಿಯಲ್ಲಿ,
ನಿನ್ನನ್ನು ನಿಜವಾಗಿ ನಂಬಿದವರ
ನಿಶ್ಚಿಂತೆ, ನಿರ್ಭೀತಿಯಲ್ಲಿ,
ಸ್ವಾರ್ಥವನ್ನು ಮೆಟ್ಟಿ ನಿಲ್ಲುವ
ಪಾವನ ಸಹಾನುಭೂತಿಯಲ್ಲಿ
ಸ್ವತಂತ್ರಧೀರ ಸಿದ್ಧೇಶ್ವರಾ![೨೩]

ಇಂಥವೆನಿತೋ ಹೊಸ ಕನಸುಗಳನ್ನು ಮುಂದಿರಿಸಿಕೊಂಡು ಹೊರಹೊರಟ ಈ ಮೂರನೆಯ ಘಟ್ಟ ಸಾಕಷ್ಟು ಪ್ರಮಾಣದಲ್ಲಿ ಕೃತಾರ್ಥವಾಗಿದೆ. ಅದರ ಸಾಹಸಗಾಥೆಯನ್ನು ಹೀಗೆ ಪಟ್ಟಿಸಬಹುದು:

* ಆತ್ಮಾನುಭೂತಿ ಮತ್ತು ಸಾಮಾಜಿಕ ಪ್ರಜ್ಞೆಗಳ ಸಮೀಕರಣ.

* ಸನಾತನ ಸಂಸ್ಕೃತಿಯ ಸಂರಕ್ಷಣೆ ಮತ್ತು ಅದರ ಪುನರುತ್ಥಾನ.

* ಧರ್ಮವನ್ನು ಮಾನವೀಯತೆಯ ನೆಲೆಯಲ್ಲಿ ಅರ್ಥೈಸುವ ಮೂಲಕ ಅದನ್ನು 'ವಿಶ್ವಮಾನವ ಧರ್ಮ'ವನ್ನಾಗಿಸಿ, ಅದರ ಅನುಷ್ಠಾನಯೋಗ್ಯ ತತ್ತ್ವಗಳನ್ನು ಸಾರ್ವತ್ರೀಕರಣಗೊಳಿಸುವುದು. 'ಏನಾದರೂ ಆಗು ಮೊದಲು ಮಾನವನಾಗು' ಎಂಬ ಧ್ಯೇಯವಾಕ್ಯವನ್ನು ಅನುಷ್ಠಾನಗೊಳಿಸುವ ತುರ್ತು.
* ಆರ್ಥಿಕ ಅಸಮಾನತೆಯನ್ನು ನೀಗುವ ಸಲುವಾಗಿ, ಕಾಯಕ ತತ್ತ್ವದ ಅರ್ಥಪೂರ್ಣ ಪ್ರತಿಪಾಲನೆ.
* ನಾಡು ಮತ್ತು ನುಡಿಗಳ ಬಗೆಗೆ ತಳೆಯಲೇಬೇಕಾದ ವಿಶೇಷ ಕಾಳಜಿ.
* ವಿಶ್ವಶಾಂತಿ, ವಿಶ್ವಪ್ರೇಮ, ವಿಶ್ವಸೌಹಾರ್ದಗಳ ಸಕಲಜೀವಾತ್ಮರಿಗೆ ಲೇಸನೇ ಬಯಸುವ ಸದ್ಭಾವನೆಗೆ ಚಾಲನೆ.
* ಸ್ವಾಭಿಮಾನ, ಸ್ವೋಪಜ್ಞ ಚಿಂತನ, ಸದ್ಭಾವದುದ್ಬೋಧ, ಭಾವೈಕ್ಯತೆ ಬೆಳೆಸುವುದು.

-ಇವೇ ಮೊದಲಾದ ಪ್ರಮುಖ ಆಶಯಗಳನ್ನು ಮುಂದಿಟ್ಟುಕೊಂಡು ನಡೆದಿದೆ ಪುರಾಣಿಕಯುಗದ ವಚನ ಸಾಹಿತ್ಯ.

೪

ಒಂದು ಯುಗದ ಸಾಹಿತ್ಯ ತನ್ನ ಸಮಕಾಲೀನ ಬದುಕಿನ ಪ್ರತಿಬಿಂಬ ಅಲ್ಲ, 'ಗತಿ ಬಿಂಬ.'[೨೪] ತೌಲನಿಕ ಸಾಹಿತ್ಯಾಧ್ಯಯನ ಸಂದರ್ಭದಲ್ಲಿ ಇಂಗ್ಲಿಷ್‌ನ ಖ್ಯಾತ ವಿಮರ್ಶಕ-ಸಾಹಿತಿ, 'Works of literature are monuments and not documents' (ಸಾಹಿತ್ಯ ಕೃತಿಗಳು ದಾಖಲೆಗಳಲ್ಲ, ಸ್ಮಾರಕಗಳು) ಎಂದಿದ್ದಾನೆ. ಈ ಹೇಳಿಕೆ ತುಂಬಾ ಅರ್ಥಪೂರ್ಣವಾದದ್ದು. ಆಯಾಯ ಯುಗ ಮನಸ್ಸಿನ ಕನಸುಗಳೇನು? ಅವು ಯಾವ ರೂಪದವು? ಅವು ಪಟ್ಟ ಪರಿಶ್ರಮಗಳೆಂಥದು? ಎಂಬೆಲ್ಲ ಅಂಶಗಳನ್ನು ಗರ್ಭೀಕರಿಸಿಕೊಂಡಿರುವ 'ನೆಲದ ಮರೆಯ ನಿಧಾನ!' ಸಿದ್ಧಯ್ಯ ಪುರಾಣಿಕರು ತಮ್ಮ ದಿನಗಳಲ್ಲಿ ಚಲಾವಣೆಯಲ್ಲಿದ್ದ ಹೊಸತನವನ್ನು-

ಇದ್ದುದರ ವಿರುದ್ಧ ಹೇಳುವುದೇ ಹೊಸತನವಲ್ಲ;
ಇದ್ದುದ ವಿಡ್ರೂಪಗೊಳಿಸುವುದೂ ಹೊಸತನವಲ್ಲ;
ಇದ್ದುದ ಇದ್ದಂತೆ ಸಾಧಿಸುವುದೂ ಹೊಸತನವಲ್ಲ;
ಹೊಸ ನೋಟದಿಂದ ಹೊಸತನ;
ಹೊಸ ಕಾಣ್ಕೆಯಿಂದ ಹೊಸತನ;
ಹೊಸ ಹುರುಳಿನಿಂದ ಹೊಸತನ;
ಸ್ವತಂತ್ರಧೀರ ಸಿದ್ಧೇಶ್ವರಾ,
ಹೊಸ ಸಂಜ್ಞೆಯಿಂದ ಹೊಸತನ.[೨೫]

ಎಂದು ಹೊಸ ಅರ್ಥದ ವ್ಯಾಖ್ಯಾನ ನೀಡಿದ್ದಾರೆ. ಅಂತೆಯೇ ಆ ಬಗೆಯ 'ನವೀಕರಣ' (modernisation)ವನ್ನು 'ಮಾನವೀಕರಣ' (Humanisation)ವಾಗಿ ಪರಿವರ್ತಿಸಿಕೊಳ್ಳಲು ಸಲಹೆ ಸೂಚಿಸಿದ್ದಾರೆ.

'ನವೀಕರಣ, ನವೀಕರಣ'ವೆಂದು
ನಲುಗುತ್ತಲಿಹರಯ್ಯ ನವಯುವಕರು,
ಮಾನವೀಕರಣ, ಮಾನವೀಕರಣ ಎಂದು
ಯಾರೆನ್ನುವರು
ನಾನಂತೂ ಎನ್ನಲಾರೆ!
ಆದರೆ 'ಮಾನವೀಕರಣ, ಮಾನವೀಕರಣ'
ಎನ್ನದಿರಲಾರೆ!

ನವೀಕರಣದೊಡನೆ
ಮಾನವೀಕರಣವೂ ಸಾಗಿದರೆ ಸರಿ
ಇಲ್ಲದಿದ್ದರೆ ಬಲು ಬರಿ!
ನನ್ನ ದೇಶದಲ್ಲಿ ಇವೆರಡೂ
ಒಟ್ಟಿಗೆ ನಡೆಯುವಂತೆ ಮಾಡಾ
ಸ್ವತಂತ್ರಧೀರ ಸಿದ್ದೇಶ್ವರಾ.[೨]

ಈ ರೀತಿ ತಮ್ಮ ಸಮಕಾಲೀನ ಜೀವನಕ್ಕೆ ಸ್ಪಂದಿಸುವ, ಪ್ರತಿಕ್ರಿಯಿಸುವ ಔದಾರ್ಯ ಅವರಲ್ಲಿದೆ. ಅವರ ಸಮಕಾಲೀನರಲ್ಲಿ ಅದಿಲ್ಲ. ಪುರಾಣಿಕ ಸಿದ್ಧಯ್ಯನವರು ತಮ್ಮ ಜೀವಿತಾವಧಿಯ ಬದುಕಿಗೆ ಸೂಕ್ತ ನ್ಯಾಯ ದೊರಕಿಸಿಕೊಟ್ಟಿದ್ದಾರೆ. ಆದರೆ ಅವರ ಹಿರಿಕಿರಿಯ ಸಮಕಾಲೀನರೂ ೨೧ನೆಯ ಶತಮಾನದ ಬದುಕಿನಲ್ಲಿ ಆದ ಬದಲಾವಣೆಗಳ ಬಗೆಗೆ ಬಹುಮುಖ್ಯವಾಗಿ, ಇಂದು ಪ್ರಚಲಿತವಿರುವ 'ಜಾಗತೀಕರಣ' (Globalisation) 'ಮರ್ಕಟ ನ್ಯಾಯ'ದಂತೆ ಅದರ ಹೊಟ್ಟೆಯನ್ನು ಪಟ್ಟಾಗಿ ಅಪ್ಪಿಕೊಂಡು, ಅದರ ಜೊತೆಯಲ್ಲಿ ಕೊಂಬೆಯಿಂದ ಕೊಂಬೆಗೆ (ದೇಶದಿಂದ ದೇಶಕ್ಕೆ) ನೆಗೆದಾಡುತ್ತಿರುವ 'ಉದಾರೀಕರಣ' (Liberalisation)ಗಳ ಬಗೆಗೆ ಯಾರೂ ತಲೆ ಕೆಡಿಸಿಕೊಂಡಿಲ್ಲ; ತಮ್ಮದಾದ ಹೊಸ ಖಾತೆ ತೆರೆದಿಲ್ಲ. ಇದರಿಂದ ವೇದ್ಯವಾಗುತ್ತದೆ- ಇಂದಿನವರು ಸಮಕಾಲೀನತೆಗೆ ಸ್ಪಂದಿಸಿಲ್ಲ ಎಂಬುದು.

೫

ಆತ್ಮೀಯರೆ,

ಮನೆ ಮನೆಯ ವನಗಳಲ್ಲಿ
ಮನ-ಸುಮಗಳು ಅರಳಲಿ;
ಮನ-ಸುಮಗಳ ಎದೆಗಳಿಂದ
ಸ್ನೇಹಬಿಂದು ಉರುಳಲಿ;
ಸ್ನೇಹವೆ ಸಹಕಾರವಾಗಿ
ಸ್ವ-ಪರ ಸುಗತಿ ಮರಳಲಿ;
ಸುಗತಿಯು ಸಂಸ್ಕೃತಿಯ ಗಳಿಸಿ
ಕಾಡುತನವು ತೆರಳಲಿ;
ಸ್ವತಂತ್ರಧೀರ ಸಿದ್ದೇಶ್ವರಾ,
ನರರ ಚಿತ್ತವೃತ್ತಿಯಾಗಿ,
ನರರು ನರರಿಗೆ ನೆರವಾಗಿ,
ನರೋತ್ತಮ ಕುಲವು ಅಲರಲಿ.[೫]

- ನಮಸ್ಕಾರ -

ಅಡಿಟಿಪ್ಪಣಿಗಳು

೧. ರಂ.ಶ್ರೀ. ಮುಗಳಿ, ಕನ್ನಡ ಸಾಹಿತ್ಯ ಚರಿತ್ರೆ, ಪು. ೩೧೫, (೧೯೫೩).

೨. ಪ್ರಾಚೀನ ಮತ್ತು ಮಧ್ಯಕಾಲೀನ

೩. ಡಾ. ಎಚ್. ತಿಪ್ಪೇರುದ್ರಸ್ವಾಮಿ, ಸಿದ್ಧಯ್ಯ ಪುರಾಣಿಕರ 'ವಚನ ನಂದನ' ಪುಸ್ತಕದ ಮುನ್ನುಡಿ, ಪು. vii-viii (೨೦೦೦).

೪. ಡಾ. ವಿಜಯಕುಮಾರ್, ಹಾಲತೊರೆಗೆ ಬೆಲ್ಲದ ಕೆಸರು, ಪು. ೧೫, (೧೯೭೬).

೫. ಎಸ್.ವಿ. ರಂಗಣ್ಣ, ರಂಗಬಿನ್ನಪ, ವಚನ ೨೫೬ (೧೯೬೩).

೬. ಅಮೃತ ಸೋಮೇಶ್ವರ, ಹೃದಯದ ವಚನಗಳು, (೧೯೯೯)

೭. ಸಿದ್ಧಯ್ಯ ಪುರಾಣಿಕ, ವಚನೋದ್ಯಾನ, ವಚನ ೪೧೫, ೪೫೪ ಮತ್ತು ೪೪೭, (೧೯೭೭).

೮. ವಚನಂ ವಚ. ೨೯೩, (೨೦೦೦)

೯. ಪೂರ್ವೋಕ್ತ, ವಚನೋ, ವಚ. ೧೦೦.

೧೦. ಪೂರ್ವೋಕ್ತ, ವಚನ ನಂದನ, ವಚ. ೪೬೬.

೧೧. ಪೂರ್ವೋಕ್ತ, ವಚನೋ, ವಚ. ೪೫೪. ಇಲ್ಲಿ ವಚನಕಾರರ ನಕಾರಾತ್ಮಕ ಪ್ರಶ್ನೆಯನ್ನು ಸಕಾರಾತ್ಮಕವಾಗಿ ಬಳಸಿಕೊಳ್ಳಲಾಗಿದೆ.

೧೨. ಅದೇ, ವಚ ೪೫೬.

೧೩. ಪೂರ್ವೋಕ್ತ, ವಚನಂ. ವಚ ೧೭೧, (೨೦೦೦).

೧೪. ಪೂರ್ವೋಕ್ತ, ವಚನೋ, ವಚ. ೨೩೯.

೧೫. ಅದೇ, ವಚ ೫೧.

೧೬. ಅದೇ, ವಚ ೮೮.

೧೭. ಅದೇ, ವಚ. ೨೯೩.

೧೮. ಅದೇ, ವಚ. ೨೪೩.

೧೯. ಪೂರ್ವೋಕ್ತ, ವಚನಂ. ವಚ. ೧೧೪.

೨೦. ಅದೇ, ವಚ. ೨೬೬.

೨೧. ಪೂರ್ವೋಕ್ತ, ವಚನೋ, ವಚ. ೧೫೭.

೨೨. ಅದೇ, ವಚ ೮೨.

೨೩. ಪೂರ್ವೋಕ್ತ, ವಚನಂ. ವಚ. ೬೫.

೨೪. ಜಿ.ಎಸ್. ಶಿವರುದ್ರಪ್ಪ ‘ಗತಿಬಿಂಬ’

೨೫. ಸಿದ್ಧಯ್ಯ ಪುರಾಣಿಕ, ವಚನಾರಾಮ, ವಚ. ೪೭೪ (೧೯೯೨).

೨೬. ಪೂರ್ವೋಕ್ತ, ವಚನೋ. ವಚ. ೨೦೩.

೨೭. ಪೂರ್ವೋಕ್ತ, ವಚನಂ. ವಚ. ೪೭೫.

■■

ಶರಣರ ಆರ್ಥಿಕ ಚಿಂತನೆಗಳು ಹಾಗೂ ಕಾಯಕ ಸಿದ್ಧಾಂತ

✍ ಡಾ. ಕೆ.ಎಸ್. ರತ್ನಮ್ಮ

ವೀರಶೈವ ಧರ್ಮ ಹನ್ನೆರಡನೆಯ ಶತಮಾನದಲ್ಲಿ ಶಿವಶರಣ ಚಳುವಳಿಯ ಮೂಲಕ ರೂಪುಗೊಂಡ ವೈಚಾರಿಕ ನೆಲೆಗಟ್ಟಿನ ವಿಶಿಷ್ಟ ವಿಶ್ವಧರ್ಮ. ವಿಚಾರವಾದಿ ಶರಣರ ಸಹಜ ಚಿಂತನಶೀಲತೆಯ ಫಲವಾಗಿ ಆ ಯುಗದ ಸಮಾನತೆಯ ಪರಿಕಲ್ಪನೆಯಿಂದ, ಜಾತಿ ಮತ್ತು ಲಿಂಗಭೇದಗಳನ್ನು ತೊಡೆಯಲು ಆಂದೋಲನವೇ ನಡೆಯಿತು. ಶಿವಭಕ್ತಿ ಮತ್ತು ಶಿವಪಾರಮ್ಯ ಪ್ರಮುಖ ಗುರಿಯಾದರೂ ಧಾರ್ಮಿಕ, ಆಧ್ಯಾತ್ಮಿಕ ಅವಶ್ಯಕತೆಗಳಿಗೆ ಸ್ಪಂದಿಸಲು ಸಮಾಜದಲ್ಲಿ ತುಳಿತಕ್ಕೆ ಒಳಗಾಗಿದ್ದ ವಿವಿಧ ಕೆಳಜಾತಿ, ವರ್ಗಗಳ ಜನರಲ್ಲಿ ಮೂಡಿಸಿದ ಜಾಗೃತಿಯು ಕ್ರಾಂತಿಯನ್ನೇ ಉಂಟುಮಾಡಿತು. ದುಡಿಮೆಯೇ ಸರ್ವಸ್ವವಾಗಿದ್ದ ಜನರು ಸ್ತ್ರೀ-ಪುರುಷರೆಂಬ ಭೇದವಿಲ್ಲದೆ ಒಟ್ಟಾಗಿ ಧಾರ್ಮಿಕ, ಸಾಮಾಜಿಕ, ಆರ್ಥಿಕ, ಆಧ್ಯಾತ್ಮಿಕ ಹೋರಾಟದಲ್ಲಿ ಪಾಲ್ಗೊಂಡರು. ಆ ಚಳುವಳಿಯ ನೇತಾರ ಬಸವಣ್ಣನಂತಹ ಸಾಂಸ್ಕೃತಿಕ ಮಾನವತಾವಾದಿಯನ್ನು ರೂಪಿಸಿ, ಮುನ್ನಡೆಸಿತು. ಕಾಯಕತತ್ವಕ್ಕೆ ಆದ್ಯತೆ ನೀಡಿದ ಬದುಕಿನ ಕ್ರಮದ ಬಗ್ಗೆ ನಡೆದ ಚಿಂತನೆಗಳು ಅರ್ಥಪೂರ್ಣವಾಗಿ ವ್ಯಕ್ತವಾದವು. ವೀರಶೈವಧರ್ಮ ಧಾರ್ಮಿಕವಾಗಿ ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತ ಮತ್ತು ಸಾರ್ವತ್ರಿಕವಾಗಿ ದುಡಿಮೆಯನ್ನು ಕುರಿತಂತೆ ಕಾಯಕ-ದಾಸೋಹ ತತ್ವ ಸಿದ್ಧಾಂತಗಳನ್ನು ತಾರ್ಕಿಕ ಅನುಕ್ರಮದಲ್ಲಿ ಆಧಾರಗಳೊಂದಿಗೆ ನಿರೂಪಿಸಿ ಪಡೆದದ್ದು ಶರಣರ ಪ್ರಜ್ಞಾವಂತಿಕೆಯ ಫಲವೇ ಆಗಿದೆ.

ಶರಣರು ರೂಪಿಸಿದ ಶಕ್ತಿ ವಿಶಿಷ್ಟಾದ್ವೈತ ಸಿದ್ಧಾಂತದ ಪ್ರಕಾರ ಶಕ್ತಿಯುತನಾದ ಪರಶಿವನ ಶಕ್ತಿಯ ಆವಿಷ್ಕಾರವೇ ಈ ವಿಶ್ವದ ರೂಪವನ್ನು ಪಡೆದಿದೆ. ಆದ್ದರಿಂದ ಪರಶಿವನೇ ವಿಶ್ವವ್ಯಾಪಿ, ಸಕಲ ವಿಸ್ತಾರದ ರೂಹು ಎನಿಸಿದರೆ, ಜೀವನಿಗೆ ಸಾಧನಕ್ಷೇತ್ರ ಈ ಜಗತ್ತು. ಸೃಷ್ಟಿಕರ್ತನ ಟಂಕಸಾಲೆ. ಇಲ್ಲಿ ಸಲ್ಲುವವನು ಅಲ್ಲಿಯೂ ಸಲ್ಲುತ್ತಾನೆ ಎಂಬ ನೀತಿ. ಸ್ವರ್ಗ, ಕೈಲಾಸ ಬೇರೆ ಇಲ್ಲ. ಬದುಕಿನ ಸಾರ್ಥಕತೆ ಇಲ್ಲಿಯೇ ಇದೆ ಎಂಬುದನ್ನು ಸಾರುವುದು ವೀರಶೈವ ಧರ್ಮದ ಗುರಿ ಆಯಿತು. ಶಕ್ತಿ ವಿಶಿಷ್ಟನಾದ ಶಿವನು ಪೂಜ್ಯ ಪೂಜಕನಾಗಿ ಲಿಂಗ-ಅಂಗ ಎಂದು ಎರಡಾಗಿ ಪರಿಣಮಿಸಿದ್ದು, ಜೀವನೇ ಅಂಗವೆಂಬ ಅಂಶದಲ್ಲಿ ಉಪಾಸಕನೂ ಆಗಿ, ಶಿವನೇ ಆಗಿ ಶಿವನನ್ನೇ ಪೂಜಿಸುತ್ತ ಶಿವನೇ ನಾನೆಂಬ ಭಾವ ಬೆಳೆಸಿಕೊಂಡು ಶಕ್ತಿ ವಿಶಿಷ್ಟವಾದ ಶಿವ ಮತ್ತು ಜೀವರಲ್ಲಿ ಉಂಟಾಗುವ ಅದ್ವೈತದ ಭಾವವೇ ಶಕ್ತಿವಿಶಿಷ್ಟಾದ್ವೈತ. ಈ ತತ್ವವೇ ಶಿವಾದ್ವೈತ ಎಂದು ಅದ್ವೈತವು ಲಿಂಗಾಂಗ ಸಾಮರಸ್ಯ ಎಂದು ಕರೆಯಲ್ಪಟ್ಟಿದೆ. ಇದಕ್ಕೆ ಸಂಬಂಧಿಸಿದ ವಿಚಾರಗಳೇ ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತವಾಯಿತು.

ವೀರಶೈವ ಧರ್ಮದ ಧಾರ್ಮಿಕ ಸಿದ್ಧಾಂತವಾದ ಈ ಶಕ್ತಿ ವಿಶಿಷ್ಟಾದ್ವೈತವು ಹಲವು ಅಂಶಗಳನ್ನು ಒಳಗೊಂಡಿದೆ. ಅಷ್ಟಾವರಣಗಳಾಗಿ- ಗುರು, ಲಿಂಗ, ಜಂಗಮ, ವಿಭೂತಿ, ರುದ್ರಾಕ್ಷಿ, ಮಂತ್ರ, ಪಾದೋದಕ, ಪ್ರಸಾದ ಎಂದೂ, ಪಂಚಾಚಾರಗಳಾಗಿ - ಲಿಂಗಾಚಾರ, ಸದಾಚಾರ, ಗಣಾಚಾರ, ಶಿವಾಚಾರ, ಭೃತ್ಯಾಚಾರವೇ ಮೊದಲಾಗಿ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂಬ ಷಟ್ಸ್ಥಲದಲ್ಲಿ, ಸತಿ ಪತಿ ಭಕ್ತಿ ಭಾವದಿಂದ ಲಿಂಗಾಂಗ ಸಾಮರಸ್ಯ ಸಿದ್ಧಿ ಪಡೆಯುವ ವಿಕಾಸ ಮಾರ್ಗವಾಯಿತು. ಇದು ವೀರಶೈವ ಧರ್ಮದ ಪೂರ್ಣ ಸ್ವರೂಪ.

ಶರಣರು ಜೀವನವನ್ನು ಪೂರ್ಣದೃಷ್ಟಿಯಿಂದ ನೋಡಿ, ಅನುಸರಿಸಿ, ಆದರ್ಶಮಾರ್ಗ ತೋರಿದರು. ವ್ಯಕ್ತಿಯ ಪೂರ್ಣವಿಕಾಸ, ಸಮಾಜದ ಹಿತಸಾಧನೆಗಳ ಸಮನ್ವಯ ಮನೋಧರ್ಮಕ್ಕೆ ಸಾಕ್ಷಿಯಾಗಿ ಅವರ ಕಾಯಕ-ದಾಸೋಹ ಸಿದ್ಧಾಂತಗಳೂ, ಆರ್ಥಿಕ ಚಿಂತನೆಗಳೂ ಅಭಿವ್ಯಕ್ತಿಗೊಂಡಿವೆ. ಬೇರಾವ ಧರ್ಮದಲ್ಲೂ, ದರ್ಶನದಲ್ಲೂ, ಮಹತ್ವ ಪಡೆಯದ

'ಕಾಯಕ'ಕ್ಕೆ ಶರಣರು ವಿಶೇಷ ಪ್ರಾಮುಖ್ಯತೆ ನೀಡಿದರು. ಸರ್ವರೂ ನಿತ್ಯ ಕಸುಬಿನಲ್ಲಿ ತೊಡಗಿ ಸಂಪತ್ತಿನ ಉತ್ಪಾದನೆಯಲ್ಲಿ ಭಾಗಿಯಾದರು. ಇದರ ಜೊತೆಗೆ ವ್ಯಕ್ತಿ ಹಾಗೂ ಸಮಾಜದ ನಡುವಣ ಸಂಬಂಧದ ಬಗ್ಗೆ ಚಿಂತಿಸಿದರು. 'ಸಮಾಜ ದರ್ಶನ' ಅವರಿಗೆ ಸಾಧ್ಯವಾಯಿತು. ಪ್ರಜಾಪ್ರಭುತ್ವ ಮಾದರಿಯ ಮೌಲ್ಯಗಳುಳ್ಳ ಸಮತಾವಾದದ ಸಮಾಜ ನಿರ್ಮಾಣದ ಆಶಯ ಆದರ್ಶಗಳನ್ನು ಸಾಧಿಸಿದರು. ಇದೊಂದು ವಿಶ್ವದಲ್ಲೇ ಐತಿಹಾಸಿಕವಾದ ದಾಖಲೆಯ ಚಳುವಳಿಯೇ ಆಯಿತು. ಶರಣರ ಆರ್ಥಿಕ ಚಿಂತನೆಯ ಅಂಶಗಳನ್ನು, ಕಾಯಕ-ದಾಸೋಹ ಸಿದ್ಧಾಂತಗಳನ್ನು ಪರಿಭಾವಿಸುವ ಮುನ್ನ ವಿಶ್ವ ಇತಿಹಾಸದ ಆರ್ಥಿಕ ಚಿಂತನೆಯ ಬಗ್ಗೆ ಸ್ಥೂಲ ಪರಿಚಯ ಪಡೆಯುವುದು ಇಲ್ಲಿ ಪ್ರಸ್ತುತವೆನಿಸುತ್ತದೆ.

ಆರ್ಥಿಕಚಿಂತನೆಯ ಅವಲೋಕನ

ಸಾಮಾಜಿಕ ಜೀವನದ ಅವಿಭಾಜ್ಯ ಅಂಗ ಆರ್ಥಿಕ ವ್ಯವಹಾರ. ಈ ವ್ಯವಹಾರಗಳು ಮಾನವನು ನೆಲೆಗೊಂಡ ನಂತರದಲ್ಲಿ ಭೂಮಿಯ ಒಡೆತನ, ಶ್ರಮ, ಸಂಪತ್ತಿನ ಗಳಿಕೆ, ಉತ್ಪಾದನೆ, ಲಾಭ, ಶೇಖರಣೆ, ಅನುಭೋಗ ಎಲ್ಲವೂ ಹಂತ ಹಂತವಾಗಿ ಸೇರಿಹೋದವು. ವೇದಗಳ ವಿವರಣೆಯು ಆರ್ಥಿಕ ಚಿಂತನೆಯ ಮೇಲೆ ಬೆಳಕು ಚೆಲ್ಲುತ್ತದೆ. ಕ್ರಿ.ಪೂ. ಅಥವಾ ಕ್ರಿಸ್ತಶಕೆಯ ಆರಂಭದಲ್ಲಿ ರಚಿತವಾಗಿರುವುದು ಎನ್ನಲಾದ ಮನುಸ್ಮೃತಿಯಲ್ಲಿ ಈ ಚಿಂತನೆಗಳು ಮತ್ತಷ್ಟು ಸ್ಫುಟವಾಗಿವೆ. ಕ್ರಿ.ಪೂ. ೩೭೧ರಲ್ಲಿ ರಚಿಸಲ್ಪಟ್ಟಿರುವ ಭಾರತೀಯ ಅರ್ಥಶಾಸ್ತ್ರಜ್ಞ ಕೌಟಿಲ್ಯನ ಅರ್ಥಶಾಸ್ತ್ರವು ಪ್ರಾಚೀನ ಭಾರತದ ಸಾಮಾಜಿಕ, ಆರ್ಥಿಕ, ರಾಜಕೀಯ ಚಿಂತನೆಗಳ ವೈಜ್ಞಾನಿಕ ವಿವರಣೆಯನ್ನು ಹೊಂದಿದೆ. ಅರ್ಥಶಾಸ್ತ್ರದ ಮೊಟ್ಟ ಮೊದಲ ವ್ಯಾಖ್ಯಾನ ಇದೆ: "ಮನುಷ್ಯಾಣಾಂ ವೃತ್ತಿಃ ಅರ್ಥಃ / ಮನುಷ್ಯನತಿ ಭೂಮಿರಿತ್ಯರ್ಥ್ಯಃ / ತಸ್ಯಾಃ ಲಾಭಪಾಲನೋಪಾಯಂ ಶಾಸ್ತ್ರಂ ಅರ್ಥಶಾಸ್ತ್ರಂ" ಎಂದರೆ ಭೂಮಿಯ ಲಾಭ ಪಾಲನೋಪಾಯಗಳನ್ನು ತಿಳಿಸುವುದೇ ಅರ್ಥಶಾಸ್ತ್ರ ಎನ್ನುತಾನೆ ಕೌಟಿಲ್ಯ.

ಪುರಾತನ ಭಾರತದ ಪ್ರಾಚೀನ ಬ್ಯಾಬಿಲೋನಿಯಾದ ಹೆಸರಾಂತ ಚಕ್ರವರ್ತಿ ಹಮ್ಮಿರಬಿಯ ಶಿಲಾಶಾಸನದಲ್ಲಿ ಆರ್ಥಿಕ ವ್ಯವಹಾರಗಳ ಪ್ರಸ್ತಾಪವಿದೆ. ಕ್ರಿಸ್ತಪೂರ್ವದಲ್ಲಿದ್ದ ಪುರಾತನ ಗ್ರೀಸಿನ ಆರ್ಥಿಕ ಚಿಂತನೆಗಳೂ ಸಹಾ ಪ್ರಸಿದ್ಧವಾದುವು.

ಸಾಮಾಜಿಕ, ಆರ್ಥಿಕ ಚಿಂತನಕಾರರು ವಿಶ್ವದ ಎಲ್ಲ ಭಾಗಗಳಿಂದಲೂ ಜನರ ಬದುಕನ್ನು ಹಸನುಗೊಳಿಸಲು ಬದುಕಿನ ನೆಮ್ಮದಿಗೆ ಆರ್ಥಿಕ ವ್ಯವಸ್ಥೆಯನ್ನು ಉತ್ತಮಪಡಿಸಲು ಧರ್ಮ ಮತ್ತು ನೈತಿಕ ಚೌಕಟ್ಟಿನ ಒಳಗೆ ವ್ಯವಹರಿಸಬೇಕೆಂದು ಎಚ್ಚರಿಕೆ ನೀಡುತ್ತಲೇ ಬಂದಿದ್ದಾರೆ. ಸಮಾಜದ ಎಲ್ಲ ವರ್ಗಗಳ ಜನರ ಬದುಕಿಗೆ ಮಾರ್ಗದರ್ಶನ ನೀಡುತ್ತಲೇ ಬಂದಿದ್ದಾರೆ.

ಪ್ಲೇಟೊ ತನ್ನ ಕೃತಿ 'ದಿ ರಿಪಬ್ಲಿಕ್' ದಲ್ಲಿ ಆದರ್ಶರಾಜ್ಯದ ಪರಿಕಲ್ಪನೆಗಳನ್ನು ವರ್ಣಿಸುವಾಗ ರಾಜಕೀಯ, ಸಾಮಾಜಿಕ, ಆರ್ಥಿಕ ಚಿಂತನೆಗಳನ್ನು ಪ್ರಸ್ತಾಪಿಸಿದ್ದಾನೆ. ರಾಷ್ಟ್ರದ ಜನತೆಯನ್ನು ಸಂಪತ್ತನ್ನು ಉತ್ಪಾದಿಸುವ ಆರ್ಥಿಕ ವರ್ಗ ಎಂದು ಗುರುತಿಸಿದ್ದಾನೆ. ಬಡವರು ಶ್ರೀಮಂತರ ನಡುವೆ ಅಂತರವಿರಬಾರದು. ಇದರಿಂದ ಅತೃಪ್ತಿ ಉಂಟಾಗುತ್ತದೆ. ಬಡತನ ಕೆಟ್ಟದ್ದು ಎಂದಿದ್ದಾನೆ. ನಂತರ ಬಂದ ಅರಿಸ್ಟಾಟಲ್‌ನ 'ಪಾಲಿಟಿಕ್ಸ್ ಅಂಡ್ ಎಥಿಕ್ಸ್' ಎಂಬ ಕೃತಿಯಲ್ಲಿ ಶ್ರಮವಿಭಜನೆಯ ಬಗ್ಗೆ ದೀರ್ಘ ಲೇಖನದಲ್ಲಿ ಆರ್ಥಿಕ ಚಿಂತನೆಗಳಿವೆ.

ಮಧ್ಯಯುಗ ಎಂದರೆ ಒಂದನೆಯ ಶತಮಾನದ ಕಾಲ ಕಗ್ಗತ್ತಲ ಯುಗವೆಂದು ಕರೆಯುತ್ತಾರೆ. ಈ ಕಾಲದಲ್ಲಿ ಸ್ವತಂತ್ರ ಆಸ್ತಿಪಾಸ್ತಿ ಇಲ್ಲದ ಗುಲಾಮ ವರ್ಗವೊಂದು ಸೃಷ್ಟಿಸಲ್ಪಟ್ಟಿತ್ತು. ದೊಡ್ಡ ಭೂಹಿಡುವಳಿದಾರರು ಗೇಣಿ ಒಪ್ಪಂದದ ಮೇಲೆ ವ್ಯವಸಾಯ ಮಾಡುವ ಬಳಕೆ ತಂದರು. ಹೀಗೆ ದೊಡ್ಡ ಜಹಗೀರುಗಳು - ಅದರ ಅಡಿಯಲ್ಲಿ ಅಸಂಖ್ಯಾತ ಗೇಣಿದಾರರು ಕಂಡುಬರುತ್ತಾರೆ. ಇವರ ಅಧೀನದಲ್ಲಿ ಅಸಂಖ್ಯಾತ ಗುಲಾಮವರ್ಗದ ಶೋಷಿತ ಜೀವನ ಸ್ಥಿತಿ ಶೋಚನೀಯವಾಗಿ ವರ್ಗತಾರತಮ್ಯದ ಪರಮಾವಧಿಯಲ್ಲಿತ್ತು.

ಮಧ್ಯಯುಗದಲ್ಲಿ ರೋಂ ಸಾಮ್ರಾಜ್ಯದ ಪತನಾನಂತರ ಚರ್ಚ್‌ಗಳು ಸಮಾಜದ ಮೇಲೆ ಧಾರ್ಮಿಕ ಪ್ರಭಾವವನ್ನು ಬೀರತೊಡಗಿದವು. ರೋಮನ್ ಕ್ಯಾಥೊಲಿಕ್ ಚರ್ಚ್ ಆರ್ಥಿಕವಾಗಿ ಬಲಾಢ್ಯವಾಗಿತ್ತು. ವಿಸ್ತಾರವಾದ ಜಮೀನು ಹಿಡುವಳಿಯಿಂದ ಅಪಾರ ಹತೋಟಿ ಬೆಳೆಸಿಕೊಂಡಿತು. ಆರ್ಥಿಕ ಜಟಿಲತೆಯಿಂದ ಜನರು ಇವರಿಂದ ಶೋಷಣೆಗೆ ಒಳಗಾದ ವಿಷಮ ಪರಿಸ್ಥಿತಿ ನಿರ್ಮಾಣವಾಯಿತು. ಇದನ್ನು ಗಮನಿಸಿದ ಸಾಮಾಜಿಕ ಚಿಂತಕರು ಆರ್ಥಿಕ ಸ್ಥಿತಿಯ ಸುಧಾರಣೆಗೆ ಪ್ರಯತ್ನಿಸಿದರು.

ಆರ್ಥಿಕ ಚಟುವಟಿಕೆಗಳು ಪ್ರಗತಿಗೆ ಮೂಲವೆಂದು ಮನಗಂಡು ಕ್ರಮಕ್ರಮವಾಗಿ ಧಾರ್ಮಿಕ ಕಟ್ಟಳೆಗಳನ್ನು ಸಡಿಲಿಸಿ, ಮತೀಯ ಸಾಮರಸ್ಯದೊಡನೆ ಆರ್ಥಿಕ ಬೆಳವಣಿಗೆಯನ್ನು ಸಾಧ್ಯಮಾಡುವ ಪ್ರಯತ್ನಗಳೂ ನಡೆದವು. ಇತರ ರಾಷ್ಟ್ರಗಳಲ್ಲಿಯೂ ಧಾರ್ಮಿಕತೆ ಹಾಗೂ ಆರ್ಥಿಕ ಅವಕಾಶಗಳು ಜತೆಗೂಡಿದ ಪರಿಣಾಮ ಶೋಷಣೆಗೆ ಎಡೆ ನೀಡಿದ್ದವು. ಭಾರತದ ವ್ಯವಸ್ಥೆಯಲ್ಲಿಯೂ ಧಾರ್ಮಿಕತೆ ಹಾಗೂ ಆಸ್ತಿ ಸಂಗ್ರಹದಿಂದಾಗಿ ನಾನಾ ವಿಧವಾದ ಶೋಷಣೆಗೆ ಅವಕಾಶವಾಗಿತ್ತು. ಧಾರ್ಮಿಕ ಸಂಪ್ರದಾಯಗಳ ಅಂಧ ಅನುಸರಣೆಗೆ ಜನರ ಮೌಢ್ಯ ಅಜ್ಞಾನವು ಕಾರಣವಾಗಿತ್ತು. ಒಟ್ಟಾರೆ ಜನರಲ್ಲಿ ಜ್ಞಾನದ ಬೆಳಕು ಮಂಕಾಗಿ ಆತ್ಮವಿಶ್ವಾಸದ ಕೊರತೆ ಉಂಟಾಗಿ ಶೋಷಣೆ ಮನೆ ಮಾಡಿದ್ದ ಪರಿಸ್ಥಿತಿ ಐತಿಹಾಸಿಕ ವಿಚಾರವೇ ಆಗಿದೆ.

ಧಾರ್ಮಿಕ ಕಟ್ಟಳೆಯಿಂದ ಜನರು ಚರ್ಚಿನ ಎಲ್ಲ ಆಜ್ಞೆಗಳಿಗೂ ತಲೆಬಾಗುವ ಪ್ರವೃತ್ತಿ ಹೆಚ್ಚಿ ಶೋಷಣೆ ಪರಾಕಾಷ್ಠೆಗೇರಿತ್ತು. ಸೆಂಟ್ ಆಗಸ್ಟಸ್ ಮುಂತಾದ ಮತಾಧಿಕಾರಿಗಳು ಖಾಸಗಿ ಸಂಪತ್ತನ್ನು ಬಹಿಷ್ಕರಿಸಿದರು. ಧಾರ್ಮಿಕ ಕಟ್ಟುಕಟ್ಟಳೆಗಳು ಸಡಿಲಗೊಂಡವು. ಸಂಪತ್ತಿನ ಸಂಗ್ರಹಣೆ ಹೆಚ್ಚಿತ್ತು ಅದು ದೋಷಯುಕ್ತವಾದರೂ ತನ್ನ ಉಪಯೋಗದ ವಿಧಾನದಲ್ಲಿಯೇ ದೋಷಮೂಲವಾಗಿರುತ್ತದೆಯೇ ಹೊರತು ಸಂಪತ್ತಿನ ಆರ್ಜನೆಯಲ್ಲಿ ಅಲ್ಲ ಎಂಬ ಅಭಿಪ್ರಾಯವಿತ್ತು. ಧರ್ಮಬದ್ಧವಾಗಿ ದುಡಿದ ಸಂಪಾದನೆ, ಸಂಗ್ರಹಣೆ, ಧರ್ಮಕ್ಕೆ ವಿರುದ್ಧವಾದುದಲ್ಲ ಎಂಬ ಚಿಂತನೆಯಿಂದ ಪ್ರಗತಿಪರ ಧೋರಣೆ ಬೆಳೆದು ಮಾನ್ಯವಾಗುತ್ತಾ ಬಂದಿತು. ಆರ್ಥಿಕ ಕ್ಷೇತ್ರದ ಮೇಲೆ ಧರ್ಮದ ಪ್ರಭಾವ ಇಳಿಮುಖವಾದ ಪರಿಣಾಮ ಬಡ್ಡಿ ತೆಗೆದುಕೊಳ್ಳುವ ಪ್ರವೃತ್ತಿ ಬೆಳೆಯಿತು. ಮಿತಿಮೀರಿ ಬಡ್ಡಿ ತೆಗೆದುಕೊಳ್ಳುವುದು ಅತ್ಯಂತ ಹೀನ ರೀತಿಯ ಸಂಪಾದನೆ ಎಂದು ಬೈಬಲ್‌ನ ಹಳೆಯ ಮತ್ತು ಹೊಸ ಒಡಂಬಡಿಕೆಗಳಲ್ಲಿ ತಿಳಿಸಲಾಗಿದೆ.

ಬಡ್ಡಿಯನ್ನು ಧರ್ಮಬಾಹಿರ ಎಂದು ಪರಿಗಣಿಸಲಾಯಿತು. ಎಕ್ವಿನಾಸ್, ಹಣ ಮೂಲಭೂತವಾಗಿ ನಿರುತ್ಪಾದಕ, ಆದ್ದರಿಂದ ಬಡ್ಡಿ ಸಂಪಾದನೆಗೆ ಹಣವನ್ನು ಸ್ವತಃ ಉತ್ಪಾದಕ ವಸ್ತುವನ್ನಾಗಿ ಬಳಸಲಾಗುತ್ತದೆ ಎಂದು ವಾದಿಸಿದನು. ಆರ್ಥಿಕ ಪ್ರಗತಿಯೊಡನೆ ಬಂಡವಾಳ ಪ್ರಾಮುಖ್ಯತೆ ಹೆಚ್ಚಿ ಹಣ ದ್ವಿಗುಣಗೊಳಿಸಲು ಬಡ್ಡಿ ತೆಗೆದುಕೊಳ್ಳುವ ಪದ್ಧತಿ ಸ್ಥಿರವಾಗಿ ನೆಲೆಗೊಂಡಿತು.

ಈ ಆರ್ಥಿಕ ಗಳಿಕೆಯ ಮುನ್ನಡೆಯನ್ನು ಮಿತಿಗೊಳಿಸಲು ಚರ್ಚ್ ಒಂದು ಮಿತಿ ವಿಧಿಸಿ ಅದಕ್ಕಿಂತ ಹೆಚ್ಚು ತೆಗೆದುಕೊಳ್ಳಬಾರದೆಂದು ನಿಗದಿಪಡಿಸಿತು. ಆದರೂ ಕ್ರಮೇಣ ಲಾಭ ಗಳಿಸುವುದೇ ಆರ್ಥಿಕ ಬೆಳವಣಿಗೆಯ ಮುಖ್ಯ ಉದ್ದೇಶವೆನಿಸಿ ಬಡ್ಡಿ ತೆಗೆದುಕೊಳ್ಳುವುದು ಧರ್ಮಸಮ್ಮತವೆನಿಸಿತು. ಆರ್ಥಿಕ ಬೆಳವಣಿಗೆಯ ಮೇಲೆ ಚರ್ಚ್‌ಗಳ ನಿಯಂತ್ರಣ ಕ್ಷೀಣಿಸಿ ಮಧ್ಯಯುಗದ ಅಂತ್ಯದ ವೇಳೆಗೆ ಆರ್ಥಿಕ ಚಿಂತನೆ ವಾಸ್ತವತೆಯ ಭದ್ರ ಬುನಾದಿಯ ಮೇಲೆ ಧಾಳಿ ಪ್ರಾರಂಭಿಸಿತು. ಈ ಅವಧಿಯಲ್ಲಿ ಭಾರತದ ಕರ್ನಾಟಕ ಭಾಗದಲ್ಲಿ ಶಿವಶರಣರು ಆರ್ಥಿಕ ಸಾಮಾಜಿಕ ಚಿಂತನೆಗಳ ಬೆಳಕನ್ನು ನೀಡಿ ಧಾರ್ಮಿಕತೆಯಿಂದ ಸಮಾಜದ ಪ್ರಗತಿ ಸಾಧಿಸಿದ್ದುದು ದಾಖಲಾರ್ಹ ಅಂಶ.

ಮಧ್ಯಯುಗದ ನಂತರ ೧೫ ನೆಯ ಶತಮಾನದಿಂದ ೧೭ನೆಯ ಶತಮಾನದವರೆಗೆ ಆರ್ಥಿಕ ಚಿಂತನೆಯ ಬೆಳವಣಿಗೆಯ ಕೃಷಿಯಲ್ಲಿ ಬದಲಾವಣೆಗಳಾದವು. ಚರ್ಚಿನ ಧಾರ್ಮಿಕ ಸಂಕೋಲೆಗಳಿಂದ ಸ್ವಾತಂತ್ರ್ಯ ಪಡೆದು ವಾಣಿಜ್ಯ ಪ್ರಮುಖ ಆರ್ಥಿಕ

ಚಿಂತನೆಯಾಗಿ ಬೆಳೆಯಿತು. ವ್ಯಾಪಾರಿ ವರ್ಗಕ್ಕೆ ಪ್ರಮುಖ ಸ್ಥಾನ ದೊರೆತು ದೇಶ ವಿದೇಶಗಳ ನಡುವೆ ವ್ಯಾಪಾರ ಪ್ರಯತ್ನಗಳು ಹೆಚ್ಚಿದವು.

೧೬ನೆಯ ಶತಮಾನದ ಅಂತ್ಯದವರೆಗೂ ಪ್ರಬಲವಾಗಿದ್ದ ವೃತ್ತಿಪರ ಸಂಘಗಳು ಅವನತಿ ಹೊಂದ ತೊಡಗಿದವು. ಬಡಗಿ, ಚಮ್ಮಾರ, ಅಕ್ಕಸಾಲೆ ಮುಂತಾದವರು ತಮ್ಮ ವೃತ್ತಿಯ ಮೇಲೆ ಏಕಸ್ವಾಮ್ಯ ಅಧಿಕಾರ ಹೊಂದಿದ್ದರು. ವಿದೇಶ ವ್ಯಾಪಾರ ಅಧಿಕವಾದ ಕಾರಣ ವ್ಯಾಪಾರಿ ಬಂಡವಾಳ ಧೋರಣೆಯಿಂದ ವೃತ್ತಿ ಸಂಘಗಳು ಸಂಕುಚಿತಗೊಂಡು ೧೮ನೇ ಶತಮಾನದ ವೇಳೆಗೆ ಅವನತಿ ಹೊಂದಿದವು. ವಾಣಿಜ್ಯ ವ್ಯಾಪಾರವು ಹಣ ಅಥವಾ ಚಿನ್ನ ಸಂಗ್ರಹದಲ್ಲಿ ತೊಡಗಿದ ಕಾರಣ ಆರ್ಥಿಕ ಸಂಗ್ರಹವೇ ರಾಷ್ಟ್ರೀಯ ಸಂಪತ್ತು ಎಂದು ಪರಿಗಣಿತವಾಯಿತು.

೧೭೭೬ರಲ್ಲಿ ಇಂಗ್ಲೆಂಡಿನಲ್ಲಿ ಆಡಂ ಸ್ಮಿತ್ ಎಂಬ ಅರ್ಥಶಾಸ್ತ್ರಜ್ಞನಿಂದ ಫ್ರೆಂಚ್‌ಕ್ರಾಂತಿಯ ನಂತರ ಹೊಸ ಬೆಳವಣಿಗೆಯೂ ಉಂಟಾಯಿತು. ಫ್ರೆಂಚ್ ಅರ್ಥಶಾಸ್ತ್ರಜ್ಞರು ನಡೆಸಿದ ವ್ಯವಸಾಯ ಅಥವಾ ಕೃಷಿ ವರಮಾನವನ್ನು ಕುರಿತ ಆರ್ಥಿಕ ಚಿಂತನೆ ಒಂದು ಮೈಲಿಗಲ್ಲಾಯಿತು. ವ್ಯವಸಾಯವೇ ಸಂಪತ್ತಿನ ನಿಜವಾದ ಮೂಲ ಎಂದು ಗಮನಿಸಿ ದುಡಿಮೆಯಲ್ಲಿ ಸಾರ್ಥಕ ಶ್ರಮ, ನಿರರ್ಥಕ ಶ್ರಮ ಎಂಬ ವಿಭಜನೆಯ ವಿಚಾರಧಾರೆಗಳು ಆಡಂಸ್ಮಿತ್ ರೆಕಾರ್ಡೊ ಮುಂತಾದವರಿಂದ ಪ್ರಚುರಗೊಂಡವು. ೧೮ ನೆಯ ಶತಮಾನದ ಉತ್ತರಾರ್ಧದಲ್ಲಿ ಇಂಗ್ಲೆಂಡ್, ಯೂರೋಪಿನ ಮೂಲಕ ಭೂಮಿಯ ಒಡೆತನ ವಿಷಯವು ರಾಜಕೀಯ, ಆರ್ಥಿಕ ರಂಗದಲ್ಲಿ ಮಹತ್ವದ ಬದಲಾವಣೆ ತಂದಿತು. ಹೀಗೆ ಮಾನವ ಜೀವನದಲ್ಲಿ ಸಂಪತ್ತಿನ ಸಂಗ್ರಹ, ಬಡ್ಡಿ ತೆಗೆದುಕೊಳ್ಳುವುದು, ಜಮೀನು ಹಿಡುವಳಿ, ಭೂಮಿಯ ಒಡೆತನ, ದುಡಿಮೆ, ವ್ಯಾಪಾರವೃತ್ತಿ ಮುಂತಾದ ಅನೇಕ ಬೆಳವಣಿಗೆಗಳು ಸಾಮಾಜಿಕ ಸಿದ್ಧಾಂತಗಳಲ್ಲಿ ಹೊಸ ಆಯಾಮ ಪಡೆದದ್ದೂ ಇತಿಹಾಸದಲ್ಲಿ ತಿಳಿದ ವಿಷಯವೇ ಆಗಿದೆ.

ಹೀಗೆ ಅರಿಸ್ಟಾಟಲ್‌ನಿಂದ ಹಿಡಿದು ಆಡಂಸ್ಮಿತ್, ಆಗಸ್ಟ್ ಕಾಮ್ಟೆ, ಹರ್ಬರ್ಟ್ ಸ್ಪೆನ್ಸರ್, ಎಮಿಲಿ ಡರ್ಕಿಂ, ಜಾನ್‌ಲಾರ್ಕ್, ರಾಬರ್ಟ್‌ಮಾಲ್ಥಸ್, ಕಾರ್ಲ್‌ಮಾರ್ಕ್ಸ್, ಜಾರ್ಜ್ ಸಿಮ್ಮಲಿ, ಮ್ಯಾಕ್ಸ್‌ವೆಬರ್, ಜೋನ್ ರಾಬಿನ್‌ಸನ್ ಮುಂತಾದ ಅಸಾಧಾರಣ ಪ್ರತಿಭೆಯ ಮಹಿಳಾ ಅರ್ಥವಿಜ್ಞಾನಿಗಳವರೆಗೂ ಸಾಮಾಜಿಕ, ಆರ್ಥಿಕ ಚಿಂತನೆಗಳ ಪ್ರವಾಹವೇ ಹರಿದು ಬಂದಿದೆ. ಕ್ರಿಸ್ತಪೂರ್ವ ಕಾಲದಿಂದ ಆಧುನಿಕ ಕಾಲದವರೆಗೂ ಆರ್ಥಿಕ ಚಿಂತನೆಗಳು ಕಂಡು ಬರುತ್ತಿವೆ, ವ್ಯಾಪಕ ಚಿಂತನೆ ನಡೆದಿವೆ.

ವಿಶ್ವ ಇತಿಹಾಸದ ಈ ಆರ್ಥಿಕ ಚಿಂತನೆಯ ಬೆಳವಣಿಗೆ ಭಾರತದಲ್ಲಿಯೂ ಆಧುನಿಕ ಕಾಲದಲ್ಲಿ ಕಂಡುಬರುತ್ತಿದೆ. ಅರ್ಥವಿಜ್ಞಾನಿಗಳು ಸುತ್ತಮುತ್ತಲ ಆರ್ಥಿಕ ಚಟುವಟಿಕೆಗಳ ಜತೆಗೆ ನಿರುದ್ಯೋಗ, ಬಡತನ, ಹಸಿವು, ಆಹಾರ ಸಮಸ್ಯೆಗಳಿಂದ ತೊಳಲುತ್ತಿರುವ ಭಾರತದ ಆರ್ಥಿಕ ಚಿಂತನೆಗೆ ನಿವಾರಣ ರೂಪದ ಸಾಕಷ್ಟು ಕೊಡುಗೆಯನ್ನು ನೀಡಿದ್ದಾರೆ. ಇದರ ಜೊತೆಗೆ ಸಮಾಜ ಸುಧಾರಕರು, ರಾಜಕೀಯ ಚಿಂತಕರೂ ಸಹಾ ಈ ಬಗ್ಗೆ ತಮ್ಮ ಸ್ಪಂದನಶೀಲ ವಿಚಾರಧಾರೆಗಳನ್ನು ವ್ಯಕ್ತಪಡಿಸಿದ್ದಾರೆ. ಮಹಾತ್ಮಗಾಂಧಿ, ನೆಹರು, ಅಂಬೇಡ್ಕರ್, ಲೋಹಿಯಾ, ಜಯಪ್ರಕಾಶ ನಾರಾಯಣ್ ಮುಂತಾದ ಚಿಂತಕರು, ಮಹಾತ್ಮರು ಸಾಮಾನ್ಯಜನತೆಯ ಆರ್ಥಿಕ ಸ್ಥಿತಿಗತಿ ಸುಧಾರಣೆ, ಪ್ರಗತಿ ಹಾಗೂ ಸಮಾನತೆಗಳ ಬಗ್ಗೆ ಸಮಾಲೋಚನೆ, ಚಿಂತನೆಗಳ ಮೂಲಕ ಪರಿಹಾರೋಪಾಯಗಳನ್ನು ತಿಳಿಸಿದ್ದಾರೆ.

ಈ ಎಲ್ಲಾ ಆರ್ಥಿಕ ಚಿಂತನೆಯ ಹಿನ್ನೆಲೆಯಲ್ಲಿ ಭಾರತ ದೇಶದ ಕರ್ನಾಟಕ ರಾಜ್ಯದಲ್ಲಿ ಹನ್ನೆರಡನೆಯ ಶತಮಾನದ ಶರಣ ಚಳುವಳಿಯ ಸಂದರ್ಭದಲ್ಲಿ ಕಂಡುಬರುವ ಆರ್ಥಿಕ ಪರಿಕಲ್ಪನೆಗಳು, ಕಾಯಕ-ದಾಸೋಹ ಸಿದ್ಧಾಂತಗಳು ಅರ್ಥಪೂರ್ಣವಾಗಿದ್ದು, ವಿಶ್ವವ್ಯಾಪಕ ತತ್ವಗಳನ್ನು ನೀಡಬಲ್ಲ ಮಹತ್ತರ ಸಂದೇಶಗಳಾಗಿವೆ. ಇವುಗಳು ಹೆಚ್ಚು ಪ್ರಚಾರವಾಗದ

ದುಸ್ಥಿತಿಯಿಂದ ಶರಣರ ಚಳುವಳಿಯ ಪ್ರಮುಖ ಅಂಶಗಳಲ್ಲಿ ಆರ್ಥಿಕ ಚಿಂತನೆಗಳು ಪರಿಚಿತವಾಗದೆ ಉಳಿದಿರುವುದು ವಿಷಾದನೀಯ. ವಿಶ್ವ ಇತಿಹಾಸದಲ್ಲಿ ದಾಖಲಾಗದೆ ಉಳಿದಿರುವ ಈ ಅಮೂಲ್ಯ ಚಿಂತನೆಗಳು ಎಲ್ಲೆಡೆ ತಿಳಿಸಬೇಕಾದುದರ ಬಗ್ಗೆ ಗಮನ ಹರಿಸಬೇಕಾದ ಅನಿವಾರ್ಯತೆ ಇದೆ. ಬಸವಣ್ಣನವರಂತಹ ಸ್ವತಂತ್ರ ವಿಚಾರಶೀಲ ಸಮಾಜ ಸುಧಾರಕರ ದರ್ಶನದ ಫಲವಾಗಿ ಶಿವಶರಣರೆಲ್ಲರೂ ಒಂದುಗೂಡಿ ನಡೆಸಿದ ಸಾಮಾಜಿಕ, ಆರ್ಥಿಕ, ನೈತಿಕ, ಧಾರ್ಮಿಕ, ಆಧ್ಯಾತ್ಮಿಕ ಸಾಧನೆಗಳು ಕರ್ನಾಟಕದ ರಾಜಕೀಯ, ಸಾಮಾಜಿಕ, ಸಾಹಿತ್ಯಿಕ, ಧಾರ್ಮಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಇತಿಹಾಸದಲ್ಲಿ "ಬಸವಯುಗ"ವೆಂದೂ, ಪರ್ವಕಾಲವೆಂದೂ ಪ್ರಸಿದ್ಧವಾಗಿದೆ.

ಸಂಕೀರ್ಣವಾದ ಸಮಾಜವೊಂದರ ಸಂದರ್ಭದಲ್ಲಿ ಜಾತಿಮತಗಳ, ಗೊಂದಲದ ನಡುವೆ ಅಂದು ಅಸಮಾನತೆ, ಶೋಷಣೆಗಳು ಸಹಜವೆಂಬಂತೆ ಬೇರು ಬಿಟ್ಟಿದ್ದವು. ಅಂದಿನ ಸಮಸ್ಯೆಗಳಲ್ಲಿ ಇಂದೂ ಕೆಲವು ಬದಲಾವಣೆಗೊಂಡಿರಬಹುದು; ಸುಧಾರಣೆ ಆಗಿರಬಹುದು. ಆದರೂ ಮೂಲಭೂತ ಸಮಸ್ಯೆಗಳು ಜಾಗತಿಕ ಪ್ರಪಂಚದಲ್ಲಿ ಉಳಿದೇ ಇವೆ. ಜಾಗತೀಕರಣದ ಫಲ ಉದಾತ್ತೀಕರಣ, ವಸಾಹತುಶಾಹಿ ನೆಲೆಗಳು ಮತ್ತೆ ಬೇರುಬಿಡಲು ಹುನ್ನಾರಗೊಂಡಿರುವ ಪರಿಸ್ಥಿತಿ ಇರುವ ಪ್ರಪಂಚದಲ್ಲಿ ಸಮಸ್ಯೆಗಳೂ ಹೊಸ ರೂಪಗಳನ್ನು ಪಡೆಯುತ್ತಿವೆ. ಸಾರ್ವತ್ರಿಕ ಸಮಸ್ಯೆಗಳಿಗೆ ಶಾಶ್ವತ ಮೌಲ್ಯಗಳ ಅವಶ್ಯಕತೆಯಿದೆ. ಶರಣರು ಕಂಡುಕೊಂಡ ಪರಿಹಾರ ಮಾರ್ಗದಲ್ಲಿ ಶಾಶ್ವತ ಜೀವನ ಮೌಲ್ಯಗಳು ಅಡಗಿವೆ. ಸಮಾಜದಲ್ಲಿ ಸಾಮಾಜಿಕ, ಆರ್ಥಿಕ, ಧಾರ್ಮಿಕ ಸಮಾನತೆ ತರುವುದೇ ಶರಣರ ಮತ್ತು ಆಧುನಿಕ ವಿಚಾರವಾದಿಗಳ ಮೂಲ ಉದ್ದೇಶವಾಗಿತ್ತು. ಇಂದಿಗೂ ಸಾಧಿಸಲು ಸಾಧ್ಯವಿಲ್ಲ ಎನ್ನುವ ಕೆಲಸಗಳು ೧೨ನೇ ಶತಮಾನದಲ್ಲಿ ನಡೆದು ಸಮಾಜವನ್ನು ಒಂದು ರೂಪಕ್ಕೆ ತಂದವು. ಶರಣರು ತಮ್ಮ ಜೀವಿತದ ಸಾಧನೆಯಲ್ಲಿ ಹೇಳಿದ್ದನ್ನು ಮಾಡಿ ಹಾಗೇ ಬದುಕಿ ತೋರಿಸಿದರು. ಶರಣರು ದುಡಿಮೆಗೆ ಪ್ರಾಶಸ್ತ್ಯ ನೀಡಿದರು. ಆರ್ಥಿಕ ಚಿಂತನೆಗಳ ಬಗ್ಗೆ ಗಮನ ಹರಿಸಿ ಸಮಸ್ಯೆಗಳ ಮೂಲವನ್ನು ಜಾಲಾಡಿ ಅದ್ವೈತಾನುಸಾರ ಮಾನವ ಮನಸ್ಸನ್ನು ತಿದ್ದುವ ಮೂಲಕ ಜನಜಾಗೃತಿ ಮೂಡಿಸಿ ಸಾಮಾಜಿಕ ಸಮಾನತೆಯನ್ನು ಸಾಧಿಸಿದರು. ಈ ಹಿನ್ನೆಲೆಯಲ್ಲಿ ಆರ್ಥಿಕ ಚಿಂತನೆಗಳ ಬಗ್ಗೆ ಹಾಗೂ ಶರಣರ ಕಾಯಕ, ದಾಸೋಹ ತತ್ವಗಳ ಬಗ್ಗೆ ಪರಿಶೀಲನೆ ಈ ಪ್ರಬಂಧದ ಉದ್ದೇಶ.

ಆರ್ಥಿಕ ಚಿಂತನೆ

ಅರ್ಥವ್ಯವಸ್ಥೆಯು ಮಾನವ ಜೀವನದಲ್ಲಿ ವಿನಿಮಯ ಸಾಧನವಾಗಿ ವ್ಯವಹಾರದಲ್ಲಿ ಬಳಕೆಯಲ್ಲಿದೆ. ಎಲ್ಲರೂ ಹೆಚ್ಚು ಹೆಚ್ಚು ಹಣವನ್ನು ತಮ್ಮ ಬಳಿಯಲ್ಲಿ ಇಟ್ಟುಕೊಳ್ಳಲು ಬಯಸುವರು. ಜತೆಗೆ ಈ ಹಣ ಬಹುರೂಪಿ ಆಸ್ತಿಯೂ ಆಗಿದೆ. ಎಲ್ಲಾ ಆದಾಯಗಳೂ ಹಣದ ಸ್ವರೂಪದಲ್ಲಿ ವ್ಯಕ್ತವಾಗುತ್ತವೆ. ಹಣವು ನಿರುತ್ಪಾದಕವಾದುದು. ಆದರೂ ಸರ್ವಜನಪ್ರಿಯ ಸರ್ವಕಾಲ ಮಾನ್ಯವಾದುದು. ಸರ್ವರಿಂದಲೂ ಸ್ವೀಕೃತವಾಗಿ ಸಾರ್ವತ್ರಿಕವಾಗಿ ಕೊಟ್ಟು ಕೊಳ್ಳುವ ಒಂದು ಮಾಧ್ಯಮವೂ ಹೌದು.

ಹಣಕ್ಕೆ ಒಂದು ವಿಶಿಷ್ಟ ಭೂಮಿಕೆ ಇದೆ. "ಹಣವೆ ನಿನ್ನಯ ಗುಣವ ಎಷ್ಟು ವರ್ಣಿಸಲಿ" ಎಂಬ ದಾಸರ ಮಾತಿನಲ್ಲಿ ಸತ್ಯವಿದೆ. ಹಣದ ವಿವಿಧ ಉಪಾಧಿಗಳು ವಿವಿಧ ಸಾಮಾಜಿಕ ವ್ಯವಸ್ಥೆಯಲ್ಲಿ ಪ್ರಾಧಾನ್ಯತೆ ಪಡೆದಿವೆ. ಉಪಾಧಿ ಎಂದರೆ ನಿಯಮಿತವಾದ ಕಾರ್ಯಗಳು ಎಂಬ ಅರ್ಥವಿದೆ. ಹಣದ ಬೆಂಬಲವಿಲ್ಲದೆ ಯಾವ ಕೆಲಸವನ್ನೂ ಸಮರ್ಪಕವಾಗಿ ಮಾಡಲಾಗದು. ಎಲ್ಲಾ ಆರ್ಥಿಕ ಚಟುವಟಿಕೆಗಳ ಮೂಲವೇ ಹಣ. ಕೇಂದ್ರೀಕೃತ ಅರ್ಥವ್ಯವಸ್ಥೆಯಲ್ಲಿ ಹಣ ತುಂಬಾ ಪ್ರಮುಖವಾಗಿದೆ. ಸಾರ್ವಜನಿಕ ಜೀವನದಲ್ಲಿಯೂ 'ದುಡ್ಡಿದ್ದವನೇ ದೊಡ್ಡಪ್ಪ' ಎಂಬ ನಾಣ್ನುಡಿ ಪ್ರಚಲಿತವಾಗಿರುವುದು ಹಣದ ಪ್ರಾಮುಖ್ಯತೆಗೆ ನಿದರ್ಶನ. ಒಟ್ಟಿನಲ್ಲಿ ಹಣ ಎಲ್ಲಾ ರೀತಿಯ ಅರ್ಥವ್ಯವಸ್ಥೆಗಳಲ್ಲಿ ಹಿಂದಿನ ಕಾಲದಿಂದ ಹಿಡಿದು ಇಂದಿನ ಆಧುನಿಕ ಕಾಲದಲ್ಲಿಯೂ, ಮುಂದೆಯೂ ಪ್ರಮುಖ ಪಾತ್ರ ವಹಿಸುತ್ತಲೇ ಇದೆ. ಹಣವು ವರ್ತಮಾನ ಹಾಗೂ ಭವಿಷ್ಯವನ್ನು ಬೆಸೆಯುವ ಸೇತುವೆಯೂ ಆಗಿದೆ.

ಹಿಂದಿನ ಕಾಲದಲ್ಲಿ ಹಣವೇ ಇಲ್ಲದಿದ್ದಾಗ ಸರಕು ಮತ್ತು ಸೇವೆಗಳಿಗೆ ಪ್ರತಿಯಾಗಿ ಅವುಗಳ ವಿನಿಮಯವೇ ಹಣದ ರೂಪದಲ್ಲಿದ್ದು ಸಾಟಿಪದ್ಧತಿ ಎನಿಸಿಕೊಂಡಿತ್ತು. ಧಾನ್ಯ, ದನಕರುಗಳೂ ಹಣವೆಂದೇ ಭಾವಿಸಲಾಗಿತ್ತು, ಆದರೆ ಇವುಗಳ ವಿಭಜನೆ ದುಸ್ಸಾಧ್ಯವಾದ್ದರಿಂದ ವಿನಿಮಯ ಕಾರ್ಯದಲ್ಲಿ ಅಡ್ಡಿಯಾಯಿತು. ನಂತರ ಅವುಗಳ ಸ್ಥಾನದಲ್ಲಿ ಚಿನ್ನ, ಬೆಳ್ಳಿ, ತಾಮ್ರದ ನಾಣ್ಯ, ನಿಕ್ಕಲ್ ಮುಂತಾದ ಲೋಹಗಳು ಬಳಕೆಗೆ ಬಂದವು. ಇವುಗಳು ಹಣದ ರೂಪದಲ್ಲಿ ನಿರ್ವಹಿಸಿದರೂ ಅವುಗಳು ಅದರ ಸಾಂಕೇತಿಕ ಪ್ರತಿನಿಧಿಗಳು ಮಾತ್ರ. ಅದು ವಿನಿಮಯ ಪ್ರತಿನಿಧಿ. ಅದೇ ಹಣ.

ಹಣ ಎಂಬುದಕ್ಕೆ ನಾನಾ ರೀತಿಯ ವ್ಯಾಖ್ಯೆಗಳೂ ಇವೆ. ಹಣ ಎಂಬುದಕ್ಕೆ ನಿರ್ದಿಷ್ಟ ಅರ್ಥ ಕಲ್ಪಿಸುವುದು ಅಷ್ಟು ಸುಲಭದ ಕೆಲಸವಲ್ಲ. ಅರ್ಥಶಾಸ್ತ್ರಜ್ಞರು ಅನೇಕ ರೀತಿಯಲ್ಲಿ ಈ ಪದದ ಅರ್ಥವನ್ನು ನಿರೂಪಿಸಲು ಯತ್ನಿಸಿದ್ದಾರೆ. ಆದರೂ ಸ್ಪಷ್ಟವಾಗಿ ಒಂದೇ ಪದದಲ್ಲಿ ಹೇಳಲು ಸಾಧ್ಯವಿರುವುದು ಅದೇ ಪದ. ಒಟ್ಟಿನಲ್ಲಿ ಅದೊಂದು ಆಸ್ತಿ ರೂಪದ ಪ್ರತಿನಿಧಿ. ಹಣ ಪ್ರಮಾಣದ ಆಧುನಿಕ ಸಿದ್ಧಾಂತಕ್ಕೆ ಸಂಬಂಧಿಸಿದಂತೆ ಅರ್ಥಶಾಸ್ತ್ರಜ್ಞರು ಒಂದು ಪಂಥವನ್ನೇ ನಿರ್ಮಿಸಿದ್ದಾರೆ. ಆರ್ಥಿಕ ಚಿಂತನೆಯ ಹಾದಿಯಲ್ಲಿ ಹಣದ ಮೌಲ್ಯಕ್ಕೆ ಸಂಬಂಧಿಸಿದ ಅನೇಕ ಸಿದ್ಧಾಂತಗಳಲ್ಲಿ ಇಷರ್‌ನ ಹಣ ಪ್ರಮುಖ ಸಿದ್ದಾಂತ, ಕೇಂಬ್ರಿಡ್ಜ್ ಸಮೀಕರಣ, ಹಣ ಪ್ರಮಾಣದ ಆಧುನಿಕ ಸಿದ್ಧಾಂತ, ಕೇನ್ಸ್‌ನ ಮೀಮಾಂಸೆ ಇತ್ಯಾದಿಗಳನ್ನು ಹೆಸರಿಸಬಹುದು. ಮಾರ್ಕ್ಸ್, ಲೆನಿನ್ ಮೊದಲಾದ ಸಮಾಜವಾದಿ ಚಿಂತಕರು ಸಮಾಜವಾದಿ ವ್ಯವಸ್ಥೆಯಲ್ಲಿ ಹಣವೇ ಬೇಕಾಗಿಲ್ಲವೆಂದು ವಾದಿಸಿದರು. ವಾಸ್ತವವಾಗಿ ಮಾರ್ಕ್ಸ್ ಹಣವೇ ಇಲ್ಲದಿರುವ, ಸರಕುಗಳಿಗೆ ಪ್ರತಿಯಾಗಿ ಸರಕುಗಳು ವಿನಿಮಯವಾಗುವ ಒಂದು ಆದರ್ಶ ಕಮ್ಯೂನಿಸ್ಟ್ ಅರ್ಥವ್ಯವಸ್ಥೆಯನ್ನೂ ಕಲ್ಪಿಸಿಕೊಂಡಿದ್ದರು. ಹಣವನ್ನು ಸಂಪೂರ್ಣವಾಗಿ ತೆಗೆದು ಹಾಕುವ ಪ್ರಯತ್ನ ನಡೆದು ವಿಫಲವಾದದ್ದು ಹಣದ ಮಹಿಮೆಯಿಂದಲ್ಲವೇ? ಮತ್ತೆ ಹಣ ಜಾರಿಗೆ ಬರಬೇಕಾಯಿತು.

ಹಣದ ಆಸೆ ಮಾನವನಿಗೆ ಸಹಜ. ಹಣವೆಂದರೆ ಹೆಣವೂ ಬಾಯಿಬಿಡುತ್ತದೆ. ಹಣವನ್ನು ಯಾರೂ ತಿರಸ್ಕರಿಸುವುದಿಲ್ಲ. ಹಣವನ್ನು 'ಒಳ್ಳೆಯ ನೌಕರ, ಕೆಟ್ಟ ಯಜಮಾನ' ಎಂದೂ ಕರೆಯುತ್ತಾರೆ. ಅದರ ಗಳಿಕೆ ಭೌತಿಕ ಸುಖ ಸಂತೋಷ ನೀಡುತ್ತದೆ. ಆದ್ದರಿಂದಲೇ ಜನರಲ್ಲಿ ಹಣ ಸಂಗ್ರಹ, ಸಂಪತ್ತನ್ನು ಕೂಡಿಡುವ ಪರಿಪಾಠ ಬೆಳೆದಿದೆ. ಇದು ಕೆಟ್ಟು ಹೋಗದ ವಸ್ತುವಾದ್ದರಿಂದ ಸಂಗ್ರಹ ಬುದ್ಧಿಗೆ ಒತ್ತು ನೀಡಿತು. ಚರ ಸ್ಥಿರ ಆಸ್ತಿಗೆ ಭದ್ರತೆಯನ್ನು ತಂದು ಕೊಡುವ ಸಾಧನವೂ ಆಯಿತು. ಇದರಿಂದ ಸಂಗ್ರಹಿತ ಹಣವೇ ಒಂದು ಆಸ್ತಿ ಎನಿಸಿತು.

ಹಣವನ್ನು ಸುಲಭವಾಗಿ ಅತಿ ಜಾಗ್ರತೆಯಾಗಿ ಯಾವ ಸಂಪತ್ತಿನ ರೂಪಕ್ಕಾದರೂ ಬಳಸಿ, ವರ್ಗಾಯಿಸಿಕೊಳ್ಳಲು ಸಾಧ್ಯ. ಆದ್ದರಿಂದ ಅನೇಕ ಆಸ್ತಿ ಪಾಸ್ತಿಗಳನ್ನು ಹಣದ ರೂಪದಲ್ಲಿಯೇ ಸಂಗ್ರಹಿಸಲು ಬಯಸುತ್ತಾರೆ. ಕೀನ್ಸ್ ಎಂಬ ಅರ್ಥಶಾಸ್ತ್ರಜ್ಞ ಹಣದ ಇಂತಹ ಗುಣವನ್ನು 'ನಗದಿನ ರಿಯಾಯಿತಿ' ಎಂದು ಕರೆದಿದ್ದಾನೆ. ಇದು ಬಂಡವಾಳ ಹೂಡುವುದನ್ನೂ ಬಡ್ಡಿದರವನ್ನೂ ನಿರ್ಧರಿಸಬಲ್ಲದು. ಹೀಗಾಗಿ "ಹಣ ವಿನಿಮಯ ಮಾಧ್ಯಮವೂ ಹೌದು. ಮೌಲ್ಯದ ಮಾನದಂಡವೂ ಹೌದು." (ಹಣದ ಸ್ವಭಾವ ಮತ್ತು ಕಾರ್ಯಗಳು; ಬಿ.ಎಸ್. ಸಿದ್ಧೇಗೌಡ, ಪು. ೧೬).

ಹಣವು ಸಂಚರಿಸುತ್ತದೆ. ಈ ಕಾರಣದಿಂದ ಸಂಗ್ರಹಿತ ಹಣವು ಬಂಡವಾಳರೂಪವಾಗಿ ಇರುತ್ತದೆ. ಬಂಡವಾಳ ವ್ಯವಹಾರವಾಗಿ ತೊಡಗಿಸಿಕೊಂಡಾಗ ಇವುಗಳ ಸಂಬಂಧ ತಿರುವುಮುರುವಾಗಿಬಿಡುತ್ತದೆ. ವಿನಿಮಯ ದರದಲ್ಲಿ ಮೂಲ ಧನವಾಗಿ ಕೆಲಸ ಮಾಡುವಾಗ ಅದು ಧರ್ಮದ ವ್ಯವಹಾರ ಆಗುತ್ತದೆ. ದ್ಯೂತ ವ್ಯವಹಾರಗಳಲ್ಲಿ ಹಾನಿ ಉಂಟುಮಾಡುವ ಕಾರಣ ಅಧರ್ಮ ವ್ಯವಹಾರವೆನಿಸಿಕೊಳ್ಳುತ್ತದೆ. ವ್ಯಾಪಾರದಲ್ಲಂತೂ ಹಣವೂ 'ವ್ಯಾಪಾರಂ ದ್ರವ್ಯ ಚಿಂತನಂ' ಎಂಬಂತಾಗಿದೆ.

ಹಣವು ಸಾಮಾಜಿಕ ಸೌಖ್ಯಕ್ಕಾಗಿ ಇರುವ ಸಾಧನ. ಸಾಮಾಜಿಕ ಸಮಾನತೆಯನ್ನು ತರುವಲ್ಲಿ ಅರ್ಥವ್ಯವಸ್ಥೆಯ ಪಾತ್ರ ಮಹತ್ವದ್ದಾಗಿ ಕಂಡುಬರುತ್ತದೆ. ಶರಣರು ಸಿರಿ, ಹೊನ್ನು, ದ್ರವ್ಯಗಳನ್ನು ಸಂಕುಚಿತ ಅರ್ಥದಿಂದ ಪರಿಭಾವಿಸಲಿಲ್ಲ. ಇವೆಲ್ಲಾ

ಮಾಯೆ, ಅಹಂಕಾರದ ಪ್ರತೀಕವೆಂದೂ ಸ್ವೀಕರಿಸಲಿಲ್ಲ. ಸಾತ್ವಿಕ ಅಭಿಮಾನವನ್ನು ಅರ್ಥದ ಬಗ್ಗೆ ಹೊಂದಿದ್ದರು. ಹಣ ಭೌತಿಕ ಸುಖ ನೀಡುತ್ತದೆ. ಆದರೆ ಮಾನಸಿಕ ಮತ್ತು ನೈತಿಕ ಸುಖ ನೀಡಲಾರದು. ಭೌತಿಕ ಸುಖ ಹೆಚ್ಚಿದಷ್ಟೂ ಹಣದಿಂದ ಶ್ರೀಮಂತಿಕೆ, ಪ್ರತಿಷ್ಠೆ ಹೆಚ್ಚಿ ಅಹಂಕಾರ ಬೆಳೆಯುತ್ತದೆ. ಆದ್ದರಿಂದ ಹಣ ಸಂಗ್ರಹ, ಬಚ್ಚಿಡುವ ಪ್ರವೃತ್ತಿಯನ್ನು ಶರಣರು ವಿರೋಧಿಸಿದರು. 'ಧನವನಿರಿಸದಿರಾ; ಇರಿಸಿದರೆ ಭವ ತಪ್ಪದು' ಎಂದಿದ್ದಾರೆ ಬಸವಣ್ಣ. ಅವರು ಹಣವನ್ನು ಸಂಗ್ರಹಿಸುವ, ನೆಲದಲ್ಲಿ ಹೂಳಿಡುತ್ತಿದ್ದ ಅಂದಿನ ಕಾಲದ ಜನರ ವರ್ತನೆಯನ್ನು ವಿರೋಧಿಸಿರುವುದು ಕಂಡುಬರುತ್ತದೆ.

ಆಯುಷ್ಯವುಂಟು ಪ್ರಳಯವಿಲ್ಲೆಂದು ಅರ್ಥವ ಮಡುಗುವಿರಿ
ಆಯುಷ್ಯವು ತೀರಿ ಪ್ರಳಯ ಬಂದಡೆ ಅರ್ಥವನುಂಬುವರಿಲ್ಲ
ನೆಲನನಗೆದು ಮಡುಗದಿರಾ ನೆಲ ನುಂಗಿದಡುಗುಳುವುದೇ?
ಕಣ್ಣಿನಲ್ಲಿ ನೋಡಿ, ಮಣ್ಣಿನಲ್ಲಿ ನೆರಹಿ, ಉಣ್ಣದೇ ಹೋಗುವಿರಾ!
ಹೆರಂಗಿಕ್ಕಿ ಹೆಗ್ಗುರಿಯಾಗಿ ಕೆಡಬೇಡ
ಕೂಡಲ ಸಂಗನ ಶರಣರಿಂಗೆ ಒಡನೆ ಸವೆಸುವುದಿಲ್ಲ.

ಹಣ ಸಂಗ್ರಹವು ವ್ಯರ್ಥವೇ ಹೊರತು ಮತ್ತೊಂದಲ್ಲ. ಬಚ್ಚಿಟ್ಟರೂ ಪರರಿಗೇ ಸೇರುತ್ತದೆ. ಆದ್ದರಿಂದ 'ಧನವನಿರಿಸದಿರಿ' ಎಂಬ ಎಚ್ಚರಿಕೆ ನೀಡಿದರು. ಸರಳ ಜೀವನ, ದೈನಂದಿನ ಬದುಕಿನ ಅವಶ್ಯಕತೆಗೆ ಸಾಕಷ್ಟು ಇದ್ದರೆ ಸಾಕು. ಸಂಗ್ರಹ ಬುದ್ಧಿಹೀನವಾದುದು ಎಂಬುದು ಶರಣರ ನಿಚ್ಚಳ ನಿಲುವು. ಅದಕ್ಕಾಗಿ 'ನೀ ಕೊಟ್ಟ ದ್ರವ್ಯವ ನಿಮಗಲ್ಲದೆ ಮತ್ತೊಂದು ಕ್ರೀಯ ಮಾಡೆನು, ನಿಮ್ಮ ಸೊಮ್ಮಿಂಗೆ ಸವೆಸುವೆನು ನಿಮ್ಮಾಣೆ ಕೂಡಲ ಸಂಗಮದೇವ' ಎಂದು ಗಳಿಕೆಯನ್ನು ಗುರು ಲಿಂಗ ಜಂಗಮ ಎಂಬ ಸಮಾಜದ ತ್ರಿಮುಖ ಧಾರ್ಮಿಕ ಕ್ರಿಯೆಗಳಿಗೆ ಸಲ್ಲಿಸುವ ಮೂಲಕ ಸಾರ್ಥಕಗೊಳಿಸಬೇಕು ಎಂಬ ಪ್ರಮಾಣ ಬಸವಣ್ಣನವರದು. ಅಲ್ಲದೆ ' ಕೂಡಲ ಸಂಗನ ಶರಣರಿಗಲ್ಲದೆ ಮಾಡುವ ಅರ್ಥ ವ್ಯರ್ಥ ಕಂಡಯ್ಯ' ಎಂದು ಅರ್ಥದ ಸರಿಯಾದ ಉಪಯೋಗವನ್ನು, ಹಣ ಕೈ ಸೇರಿದಾಗ ಸಾತ್ವಿಕ ಗುಣಗಳು ನಾಶವಾಗುವುದನ್ನು ಹೇಳಿದ್ದಾರೆ.

ಹಣ ಸಂಗ್ರಹ, ದ್ವಿಗುಣಗೊಳಿಸುವ ಪ್ರವೃತ್ತಿಯ ಬಗ್ಗೆ ಸಹಾ ಶರಣರು ಚಿಂತಿಸಿದ್ದಾರೆ. ಅಂತಹ ಪ್ರವೃತ್ತಿಯನ್ನು ನಿಗ್ರಹಿಸುವ ದಿಸೆಯಲ್ಲಿ ತಮ್ಮ ಆಲೋಚನೆಗಳನ್ನು ಹರಿಸಿದ್ದಾರೆ. ಆಯ್ದಕ್ಕಿ ಮಾರಯ್ಯನವರು "ಹಾಗದ ಕಾಯಕವ ಮಾಡಿ ಹಣವಡ್ಡವ ತಾ ಎಂಬಲ್ಲಿ ಸತ್ಯದ ಕಾಯಕವುಂಟೇ?" ಹಾಗ ಎಂದರೆ ಅಂದಿನ ಹಣದ ಒಂದು ಪ್ರಮಾಣ. ಅಡ್ಡ ಎಂಬುದು ಹಾಗದ ಎರಡು ಪಟ್ಟು. ಒಂದಾಣೆಯ ಶ್ರಮದ ಕೆಲಸ ಮಾಡಿ ಎರಡು ಪಟ್ಟು ಪ್ರತಿಫಲ ಬಯಸುವುದು ಸತ್ಯಶುದ್ಧ ಕಾಯಕವಲ್ಲ. ಹೀಗೆ ಆಸೆಬುರುಕರಾಗಿ ಹಣವನ್ನು ಹೆಚ್ಚು ಹೆಚ್ಚು ಸಂಪಾದಿಸುವ ಪ್ರವೃತ್ತಿಯನ್ನು ವಿರೋಧಿಸುವ ಶರಣರು ಚಿತ್ತಶುದ್ಧ ಕಾಯಕವನ್ನು ಬಯಸುತ್ತಾರೆ. ಜತೆಗೆ 'ಗರ್ವದಿಂದ ಮಾಡುವ ಭಕ್ತಿ ದ್ರವ್ಯದ ಕೇಡು' ಎಂದು, ನಡೆನುಡಿಯಲ್ಲಿ ಶುದ್ಧತೆಯಿದ್ದಾಗ, ಅಹಂಕಾರ ದೂರವಾಗಿದ್ದಾಗ ಮಾತ್ರ ಧಾರ್ಮಿಕ ಕಾರ್ಯಕ್ಕೆ ಹಣವನ್ನು ಉಪಯೋಗಿಸಿದರೆ ಅದು ಸಾರ್ಥಕವಾಗುತ್ತದೆ. ಇಲ್ಲವಾದರೆ ಅದು 'ಅಡಿ ಒಡೆದ ಕುಂಭದಲ್ಲಿ ಸುಜಲವ ತುಂಬಿದಂತೆ' ಎನ್ನುತ್ತಾರೆ. 'ಕಾಂಚನವೆಂಬ ನಾಯ ನೆಚ್ಚಿ ನಾ ನಿಮ್ಮ ಮರೆದೆನಯ್ಯ' ಎಂದ ಬಸವಣ್ಣನವರು ಭಕ್ತಿಗೆ ಆದ್ಯತೆ ನೀಡಿದ್ದಾರೆ.

ಹಣವನ್ನು ಹೊಂದಿರುವ ವ್ಯಕ್ತಿಯಲ್ಲಿ ಸ್ವಾರ್ಥ ತಾಂಡವವಾಡುತ್ತಿರುತ್ತದೆ. ಯಥೇಚ್ಛ ಹಣದಿಂದ ಮದ, ಮೋಹ, ಮೋಸ, ದುರಹಂಕಾರಗಳು ಬೇರೂರುತ್ತವೆ. ಇದನ್ನೆ ೧೯ನೇ ಶತಮಾನದ ಅರ್ಥಶಾಸ್ತ್ರಜ್ಞ ಬೇಜ್ ಹಾಲ್ ಎಂಬುವನು 'ಹಣ ತನ್ನಷ್ಟಕ್ಕೆ ತಾನೇ ಸರಿಯಗಿ ನಡೆದುಕೊಳ್ಳುವುದಿಲ್ಲ' ಎಂದು ಹೇಳಿರುವುದು. ಬಸವಣ್ಣನವರೂ ಸಹಾ ತಮ್ಮದೇ ಆದ ನಿಲುವಿನಲ್ಲಿ ಹಣದಿಂದ ದುಷ್ಪ್ರವೃತ್ತಿಗಳು ತಲೆ ಎತ್ತದಂತೆ ಎಚ್ಚರಿಕೆ ವಹಿಸಿದ್ದಾರೆ. 'ಕಾಡ ಬೆಳದಿಂಗಳ ಸಿರಿ ಸ್ಥಿರವಲ್ಲ' ಎಂಬ ಶ್ರೀಮಂತಿಕೆಯ ಅಶಾಶ್ವತತೆಯನ್ನು ತಿಳಿದವರಾದರೂ' 'ನಿಧಾನ ತಪ್ಪಿ ಬಂದಡೆ ಒಲ್ಲೆನೆಂಬುವರಿಲ್ಲ,' ಪ್ರಮಾದವಶ ಬಂದಡೆ

ಹುಸಿಯನೆಂಬುವರಿಲ್ಲ, ನಿರಾಶೆ ನಿರ್ಭಯ ಕೂಡಲ ಸಂಗಮದೇವ ನೀನೊಲಿದ ಶರಣರಿಗಿಲ್ಲಯ್ಯ' ಎಂಬ ಛಲವನ್ನು ಮೆರೆಯುತ್ತಾರೆ. ಅಲ್ಲದೆ ಹಣದ ಬಗ್ಗೆ ತಮ್ಮ ಪ್ರಾಮಾಣಿಕ ನಿಲುವನ್ನು ಹೀಗೆ ಹೇಳುತ್ತಾರೆ.

ಹೊತ್ತಾರೆ ಎದ್ದು ಕಣ್ಣು ಹೊಸೆಯುತ್ತಾ
ಎನ್ನ ಒಡಲಿಂಗೆ ಎನ್ನ ಒಡವೆಗೆ ಎನ್ನ ಮಡದಿ ಮಕ್ಕಳಿಗೆಂದು
ಕುದಿವೆನಾದಡೆ ಎನ್ನ ಮನಕ್ಕೆ ಮನವೇ ಸಾಕ್ಷಿ!

ದಿನ ಬೆಳಗಾದರೆ ಹಣ ಸಂಪಾದನೆಯ ಗುರಿ ಮಾನವರನ್ನು ಕಾಡುತ್ತಲೇ ಇದೆ. ಇದಕ್ಕಾಗಿ ಸಾಲ ಪಡೆಯುವ, ಕೊಡುವ, ಬಡ್ಡಿಪಡೆಯುವ ಮೂಲಕ ಗಳಿಸುವ ಸಂಪತ್ತನ್ನು ಶರಣರು ವಿರೋಧಿಸುತ್ತಾರೆ.

ಹಣದ ವ್ಯವಹಾರಕ್ಕೂ ಧಾರ್ಮಿಕ ಚೌಕಟ್ಟನ್ನು ಅಳವಡಿಸಿದ ಶರಣರು ಅದನ್ನು ಒಂದು ಮಿತಿಗೆ ತಹಬಂದಿಗೆ ತರಲು ಯತ್ನಿಸಿದ್ದಾರೆ. ಬಡ್ಡಿರೂಪದ ಸುಲಿಗೆಯನ್ನು, ಶೋಷಣೆಯನ್ನು ಖಂಡಿಸಿದ್ದಾರೆ. ಅಲ್ಲದೆ-

ಹಣದೊಡವೆ ವಸ್ತುವನು ಮೃಢಭಕ್ತರಿಗಲ್ಲದೆ
ಕಡ ಬಡ್ಡಿಯ ಕೊಡಲಾಗದು
ಒಂದಕ್ಕೊಂದು ಲೇಸು ಬಾರದಿದ್ದರೆರಡು ಲೇಸು

ಎಂದಿದ್ದಾರೆ. ಹಣ ಕೊಟ್ಟರೂ ಶಿವಭಕ್ತರಿಗೆ ದಾನವಾಗಿ ಕೊಡಬೇಕು. ಆದರೆ ಅವರಿಗೆ ಸಾಲ ಕೊಟ್ಟು, ಬಡ್ಡಿಯ ಹಣವನ್ನು ವಸೂಲು ಮಾಡಬಾರದು ಎಂಬ ಶಿಸ್ತನ್ನು ನಿಯಮವಾಗಿ ಮಾಡಿದ್ದರು. ಶರಣರಲ್ಲಿ ಬಡ್ಡಿ ವ್ಯವಹಾರ ಇರುವುದು ಅಸಂಗತ ಎಂಬ ನಿಲುವು ಇತ್ತು. ಶರಣರಿಗೆ ಹಣದ ಅವಶ್ಯಕತೆ ತಿಳಿದಿದೆ. ಆದ್ದರಿಂದ 'ಒಲ್ಲೆನೆಂಬುದು ವೈರಾಗ್ಯ, ಒಲಿವೆನೆಂಬುದು ಕಾಯಗುಣ' ಎಂಬುದು ಅವರ ದೃಷ್ಟಿ. 'ಆವ ಪದಾರ್ಥವಾದರೇನು? ತಾನಿದ್ದೆಡೆಗೆ ಬಂದುದ ಲಿಂಗಾರ್ಪಿತವ ಮಾಡಿ ಭೋಗಿಸುವುದೇ ಆಚಾರ. ಕೂಡಲ ಸಂಗಮದೇವನನೊಲಿಸಲು ಬಂದ ಪ್ರಸಾದ ಕಾಯವ ಕೆಡಿಸಲಾಗದು' ಎಂದು ಕೂಡಲ ಸಂಗನನ್ನು ಒಲಿಸಲು ಬಂದ ದೇಹ ಪವಿತ್ರ-ಅದರ ಅಂತರಂಗ ಬಹಿರಂಗ ಶುದ್ಧಿಗಳಿಂದ. ಶರಣರು-

ಲಿಂಗಕ್ಕಲ್ಲದೆ ಮಾಡೆನೀ ಮನವನು
ಜಂಗಮಕ್ಕಲ್ಲದೆ ಮಾಡೆನೀ ಧನವನು
ಪ್ರಸಾದಕ್ಕಲ್ಲದೆ ಮಾಡೆನೀ ತನುವನು.

ಎಂಬ ಅಚಲನಿಷ್ಠರು. ಇದಕ್ಕಾಗಿ ಮನದ ಮತ್ಸರವ ಕಳೆದು, ಧನಲೋಭವ ಕಳೆದು ಮನ ಧನಕ್ಕಿಂತ ಮೇಲಾಗಿ ಭಗವಂತನನ್ನು ಪ್ರೀತಿಸಿ ಆರಾಧಿಸುವುದೇ ಅವರ ಆದ್ಯತೆ ಆಯಿತು. ಶರಣರಿಗೆ ಯಾವ ಆಸೆಯು ಇರಬಾರದೆನ್ನುವ ನಿಲುವಿಲ್ಲ. ಆಸೆ ಸೂಕ್ತವಾದುದು. ಆದರೆ ಆ ಫಲ ತನ್ನೊಬ್ಬನಿಗೆ ಮಾತ್ರವೇ ಅಲ್ಲ, ಸಮಾಜದ ಹಿತಕ್ಕೆ ತಿರುಗಬೇಕು ಎಂಬ ಉದಾತ್ತ ದೃಷ್ಟಿಯಿಂದ ಕೂಡಿದ್ದು.

ಒಡವೆ ಭಂಡಾರ ಕಡವರ ದ್ರವ್ಯವ
ಬಡ್ಡಿಯ ವ್ಯವಹಾರಕ್ಕೆ ಕೊಟ್ಟು
ಮನೆಯ ಗೊಂಟಿನಲ್ಲಿ ಹೊಯ್ದುಕೊಂಡಿದ್ದೆನಾದರೆ
ಅದು ಎನ್ನರ್ಥವಲ್ಲ, ಅನರ್ಥವೆಂಬೆ

"ಬಡ್ಡಿಕಾರನಂತೆ ಒಂದು ಕೊಟ್ಟು ಎರಡು ಪಡೆವ ಜಡಜೀವಿಗಳ ಭಕ್ತರೆನ್ನಬಹುದೇನಯ್ಯಾ ಅಖಂಡೇಶ್ವರಾ" ಎನ್ನುವ ಷಣ್ಮುಖ ಸ್ವಾಮಿಯ ವಚನ. ಧನವಂತರು ದುಡಿದವರಿಂದ ಪಡೆದ ಹಣವನ್ನು ದುಡಿವವರಿಗೆ ಕೊಟ್ಟು ಬಡ್ಡಿ ಪಡೆಯುವುದು ಎಲ್ಲಾ ಕಾಲದಲ್ಲೂ ಕಂಡುಬರುತ್ತದೆ. ಶರಣರು ದುಡಿಯದೆ ಗಳಿಸುವ ಸಂಪತ್ತು ಲಿಂಗಕ್ಕೆ ಅನರ್ಪಿತ ಎಂದು ಎಚ್ಚರಿಸಿದ್ದಾರೆ.

ದೈಹಿಕ ಶ್ರಮದಿಂದ ಗಳಿಸಿದ ಹಣವನ್ನು ಸಮಾಜಕ್ಕೆ ದಾಸೋಹಭಾವದಿಂದ ಅರ್ಪಿಸಿದಾಗ ಅದರ ಶ್ರೇಷ್ಠತೆ ಇರುತ್ತದೆ ಎಂಬ ವಿಚಾರ ಪ್ರಣಾಲಿಕೆ ಶರಣರ ಆರ್ಥಿಕ ನೀತಿಯಲ್ಲಿ ಪ್ರಮುಖ ಸುಧಾರಣಾ ತತ್ವವಾಗಿದೆ. ಶರಣ ಸಮಾಜದಲ್ಲಿ ಆರ್ಥಿಕ ಅಸಮಾನತೆಗೆ ಕಾರಣವಾದ ಸಂಪತ್ತಿನ ಸಂಗ್ರಹ ಮತ್ತು ಆರ್ಥಿಕ ಶೋಷಣೆಗೆ ಅವಕಾಶವಿರಲಿಲ್ಲ. ಜತೆಗೆ 'ಸಿರಿಯೆಂಬುದೊಂದು ಸಂತೆಯ ಮಂದಿ ಕಂಡಯ್ಯಾ. ಇದ ನೆಚ್ಚಿ ಕೆಡಬೇಡ' ಎಂಬ ನಿತ್ಯಸತ್ಯದ ಎಚ್ಚರ ಅವರಿಗಿತ್ತು.

ಬಡತನ:

ಪ್ರಮುಖ ಸಾಮಾಜಿಕ ಸಮಸ್ಯೆಗಳಲ್ಲಿ ಒಂದಾದ ಬಡತನವು ಆರ್ಥಿಕ ಅಸಮಾನತೆಯ ಕಾರಣದಿಂದ ಸೃಷ್ಟಿಯಾದದ್ದು ಎಂಬುದರಲ್ಲಿ ಸಂದೇಹವಿಲ್ಲ. ಇದಕ್ಕೆ ಸಂಪತ್ತಿನ ಸಂಗ್ರಹವು ಮುಖ್ಯ ಕಾರಣವಾದಂತೆ ದುಡಿವ ಅವಕಾಶಗಳಿಲ್ಲದ್ದು, ದುಡಿದರೂ ಹೆಚ್ಚಿನ ಗಳಿಕೆಯಾಗದ ಹಾಗೂ ಸೋಮಾರಿತನ, ಅಲಸ್ಯ ಮುಂತಾದವು ಕಾರಣಗಳೆಂಬುದರಲ್ಲಿ ಸಂದೇಹವಿಲ್ಲ. ಜಗತ್ತಿನ ಆರ್ಥಿಕ ಚಿಂತನೆಯಲ್ಲಿ ಬಡತನದ ನಿವಾರಣೆಯು ಪ್ರಮುಖ ಗುರಿಯಾಗಿದೆ. ಬಡತನದ ನಿವಾರಣೆಗೆ ವರ್ಗ ತಾರತಮ್ಯ ನಿವಾರಣೆ, ಆರ್ಥಿಕ ಅಸಮಾನತೆಯ ನಿವಾರಣೆಗೆ ಉದ್ಯೋಗ ಸೃಷ್ಟಿಯು ಅತ್ಯವಶ್ಯವಾದವು. ಒಟ್ಟಾರೆ ನಾಡಿನ ಬಡತನಕ್ಕೆ ಸಮಾಜದ ದುರ್ಗತಿಗೆ ಬಹುಪಾಲು ಸಿರಿವಂತರೇ ಕಾರಣ. ಶೋಷಣೆ ಶ್ರೀಮಂತರ ತತ್ವ. ಸ್ವಾರ್ಥವೇ ಗುರಿಯಾಗಿ ಬಡವರು ಅವರಿಗೆ ಬಲಿಪಶುಗಳು. ಶ್ರೀಮಂತಿಕೆಯ ಬಗ್ಗೆ 'ಹಾವು ತಿಂದವರ ನುಡಿಸಬಹುದು, ಗರ ಹೊಡೆದವರ ನುಡಿಸಬಹುದು ಸಿರಿಗರ ಹೊಡೆದವರ ನುಡಿಸಲು ಬಾರದು ನೋಡಯ್ಯಾ' ಎಂಬಲ್ಲಿ ಬಸವಣ್ಣನವರು ಶ್ರೀಮಂತರ ವರ್ತನೆಯನ್ನು ವಿಡಂಬಿಸಿದ್ದಾರೆ.

ಪದವಿ, ಶ್ರೀಮಂತಿಕೆಗಳ ಮೆರೆತದಿಂದ ಹಿಂಸೆ, ಶೋಷಣೆಯತ್ತ ಸೊಕ್ಕಿನಿಂದ ಸಾಗುವ ಪ್ರವೃತ್ತಿ ಸಮಾಜದಲ್ಲಿ ಕಂಡುಬರುತ್ತದೆ. ಬಡವರನ್ನು ಕಂಡರೆ ನಿಕೃಷ್ಟಭಾವ ಎಂದಿಗೂ ಶ್ರೀಮಂತರ ಸಹಜ ಅವಗುಣವೇ ಆಗಿದೆ. 'ಕುದುರ ಸತ್ತಿಗೆಯವರ ಕಂಡರೆ ಹೊರಳಿ ಬಿದ್ದು ಕಾಲ ಹಿಡಿವರು, ಬಡಭಕ್ತರು ಬಂದಡೆ ಎಡೆಯಿಲ್ಲ, ಅತ್ತ ಸರಿಯೆಂಬರು' ಎಂಬ ಲೋಕರೂಢಿಯಿದೆ. ಸನ್ಯಾಸಿಗಳೂ ಶ್ರೀಮಂತರನ್ನು ಆದರಿಸುತ್ತಾರೆ. ಆತ್ಮಗೌರವ, ಸ್ವಾತಂತ್ರ್ಯ ಕಳೆದುಕೊಂಡ ಹಣವಿಲ್ಲದ ಜನರಲ್ಲಿ ಸಮಾನತೆಯೂ ಸಮಾಧಿಯಾಗುತ್ತದೆ. ಅಹಂಕಾರ ಶ್ರೀಮಂತಿಕೆಗಳಲ್ಲಿ ಆನೆ, ಕುದುರೆಯ ಮೇಲೆ ಹೋಗುವ ಜನರು ಸದ್ಗುಣವೆಂಬ ಫಲವ ಬಿತ್ತದೆ ಬೆಳೆಯದೆ ಹೋಗುವ ಬಗ್ಗೆ ಶರಣರಿಗೆ ವಿಷಾದವಿದೆ. ಬಡವರಿಂದ ಬಡ್ಡಿಯನ್ನು ಪಡೆದು ಮತ್ತಷ್ಟೂ ಬಡತನಕ್ಕೆ ದೂಡುವ ಪ್ರವೃತ್ತಿಯನ್ನು ವಿರೋಧಿಸುತ್ತಾರೆ. ಹಣದುಬ್ಬರದ ಕಾವು ಮೊದಲು ತಟ್ಟುವುದು ಬಡವರನ್ನು ಎಂಬುದು ಗಮನಾರ್ಹ.

ಬಡತನದಿಂದ ನರಳುತ್ತಿರುವ ಜನರನ್ನು ಹಣವುಳ್ಳ ಬಂಧುಬಾಂಧವರು ಅನುಕಂಪದಿಂದ ಕಾಪಾಡಿದರೆ ಬಡತನ ಕಡಿಮೆಯಾಗುವುದು. ಬಡವರ ಅನ್ನದ, ಹಸಿವಿನ ಸಮಸ್ಯೆ ನಿವಾರಣೆಯಾಗಲು ಸಾಧ್ಯ. 'ಕಾಗೆಯೊಂದಗುಳ ಕಂಡಡೆ ಕರೆಯದೆ ತನ್ನ ಬಳಗವನು? ಕೋಳಿ ಒಂದು ಗುಟುಕ ಕಂಡರೆ ಕೂಗಿ ಕರೆಯದೆ ತನ್ನ ಕುಲವೆಲ್ಲವನು". ಹಾಗೆ ಉಳ್ಳವರು ಕಾಗೆ ಕೋಳಿಗಳಂತೆ ಅನುಕಂಪ ತೋರಿದರೆ ಜಗತ್ತಿನಲ್ಲಿ ಎಲ್ಲೂ ಬಡತನವಿರುತ್ತಿರಲಿಲ್ಲ. ಉಳ್ಳವರು ಸರಳಜೀವನ ನಡೆಸಿದರೆ ಬಡವರ ಬೇಡಿಕೆಗಳು ಪೂರೈಸುತ್ತವೆ. ಇದ್ದುದನ್ನೆ ಹಂಚಿಕೊಂಡಾಗ ಸಮಾನತಾ ತತ್ವ ಜಾರಿಗೆ ಬರುತ್ತದೆ. ಸುತ್ತಮುತ್ತ ಬಡತನವಿರುವಾಗ "ಹಾಲನೇಮ, ಹಾಲಕೆನೆಯ ನೇಮ; ಕೆನೆ ತಪ್ಪಿದ ಬಳಿಕ ಕಿಚ್ಚಡಿಯ ನೇಮ; ....ಅಂಬಲಿಯ ನೇಮದವರಾರನೂ ಕಾಣೆ" ಎಂಬಲ್ಲಿ ಕಾರ್ಲ್‌ಮಾರ್ಕ್ಸ್ ಸಮಾಜವಾದವಾಗಲಿ, ಶರಣರ ಸಮಾನತಾ ತತ್ವವಾಗಲಿ ಎಲ್ಲಿ ಉಳಿದೀತು? ಬಡತನವೆಂಬುದು ಲೌಕಿಕ ಜಗತ್ತಿನಲ್ಲಿ ತಾರತಮ್ಯ ನೀತಿಯಿಂದ ಉಂಟಾದದ್ದು, ಸೋಮಾರಿತನದಿಂದ, ಅಸಹಾಯಕತೆಯಿಂದ ಉಂಟಾದದ್ದು. ಆದರೆ ಶರಣರ ದೃಷ್ಟಿಯಲ್ಲಿ ಭಕ್ತನಿಗೆ ಬಡತನವೇ ಇರುವುದಿಲ್ಲ. ಪರಮಾತ್ಮ ಅಂತರಂಗದಲ್ಲಿರುವಾಗ ಲೋಕ ಜೀವನದ ಯಾವ ಕೊರತೆಯೂ ಬಾಧಿಸದು. ಆದ್ದರಿಂದಲೇ "ಭಕ್ತಂಗೆ ಬಡತನವುಂಟೇ....... ಭಕ್ತರು ಬಡವರೆಂದು ಮತ್ತೊಂದ ಕೊಟ್ಟೆನೆನೆಂಬೆಡೆ ಮಾರಯ್ಯ ಪ್ರಿಯ ಅಮರೇಶ್ವರ ಲಿಂಗವು ಸತ್ತಂದಿಗಲ್ಲದೆ ಬಡತನವಿಲ್ಲ"

ಎಂಬ ಶರಣೆ ಲಕ್ಕಮ್ಮನ ದೃಷ್ಟಿಯಲ್ಲಿ, ಆತ್ಮಾಭಿಮಾನದ ಭಕ್ತಿಯೇ ಶ್ರೀಮಂತಿಕೆ. ಬಡತನ ಕಾರಣದಿಂದ ಅನುಕೂಲ ಪಡೆಯಲು ಇತರರು ಇತ್ತದ್ದು ತೃಪ್ತಿ ನೀಡದು. ಆಂತರಂಗಿಕ ದೃಷ್ಟಿಯಲ್ಲಿ ಬಡಭಕ್ತನಿಗೆ ನಿತ್ಯತೃಪ್ತಿ ಇರುತ್ತದೆ. ಚಿತ್ತಶುದ್ಧ ಕಾಯಕ ಮಾಡುವ ಭಕ್ತನು ಸಂತೃಪ್ತ ಎಂಬ ನಿಲುವು ಮಾನಸಿಕ ಔನ್ನತ್ಯದ ಪರಿಣಾಮ. ಇದನ್ನು ಸಾಧಿಸಬೇಕೆಂಬುದೇ ಜೀವನದ ನೀತಿಯಾಗಬೇಕು ಎಂಬ ನಿಲುವು ಶರಣರದು. ಇದರ ಜತೆಗೆ ಶರಣರು ತಮ್ಮ ಅರ್ಥತತ್ವದಲ್ಲಿ ಕಾಯಕ ಮತ್ತು ದಾಸೋಹ ತತ್ವಗಳನ್ನು ಪ್ರತಿಪಾದಿಸಿ ಬಡತನ ನಿವಾರಣೆಗೆ ಮಾರ್ಗ ತೋರಿದರು. 'ಎಲ್ಲ ಕಾಯಕವೂ ಒಂದೇ' ಎಂದು ದುಡಿಮೆಗೆ ಗೌರವ ನೀಡಿ, ಎಲ್ಲರನ್ನು ಸ್ವಾವಲಂಬಿಗಳಾಗಲು ಉತ್ತೇಜಿಸಿದರು. ಇದಕ್ಕಾಗಿ ಸಮಾಜದ ಭದ್ರತೆಗೆ ಬೇಕಾದ ಎಲ್ಲಾ ಉದ್ಯೋಗಗಳನ್ನೂ ಪ್ರೋತ್ಸಾಹಿಸಿದರು. ಇದರಿಂದ ಸಮಾಜದ ಸಂಪತ್ತು ಸಮಾಜದಲ್ಲಿಯೇ ಉಳಿದು ಆರ್ಥಿಕ ಅಭಿವೃದ್ಧಿಗೆ ಕಾರಣವಾಯಿತು. ಕಾಯಕತತ್ವದ ಬಂಧುರತೆ, ಜತೆಗೆ 'ಮಾಡುವುದು ಮಾಡುವುದು ಮನಮುಟ್ಟಿ' ಎಂಬ ತಲ್ಲೀನತೆಯ ದುಡಿಮೆಗೆ ಹುರಿದುಂಬಿಸಿದ ಕಾರಣ ಸಂತೃಪ್ತ ಸುಖೀಸಮಾಜದ ಕನಸು ನನಸಾಗಿಸುವ ದಿಸೆಯಲ್ಲಿ ಶರಣರ ಆರ್ಥಿಕ ಚಿಂತನೆಗಳು ಫಲ ನೀಡಿದವು. ದಾಸೋಹದ ಮೂಲಕ ಸಮಾಜದಲ್ಲಿ ಅತಿ ಅವಶ್ಯವಿರುವ ಬಡವರಿಗೆ ವಿನಿಯೋಗವಾಗಬೇಕು ಎಂಬ ಸಹಕಾರ ತತ್ವವೂ ನೀತಿಯಾಗಿ ಅಂಗವಿಕಲರಿಗೆ, ಅನಾಥರಿಗೆ, ದುರ್ಬಲರಿಗೆ ಸಲ್ಲುವಂತಾಯಿತು. ಹೀಗೆ ಹಸಿವು, ಬಡತನ ನಿವಾರಣೆ ಆರ್ಥಿಕ ಸಮಾನತೆಯತ್ತ ಒಂದು ಪ್ರಮುಖ ಹೆಜ್ಜೆ ಆಯಿತು. ವರ್ಗರಹಿತ, ವರ್ಣರಹಿತ ಸಮಾಜದ ಕನಸು ನನಸಾಗಿಸಲು ಅನೇಕ ಆರ್ಥಿಕ ತತ್ವಗಳನ್ನು ಜಾರಿಗೊಳಿಸಿ ಸಂಪೂರ್ಣವಾಗಿ ಅಲ್ಲದಿದ್ದರೂ ಸಾಧ್ಯವಾದಷ್ಟು ಯಶಸ್ಸನ್ನು ಕಂಡರು.

ದುಡಿಮೆ-ಕೂಲಿ-ಶ್ರಮ:

ಶರಣರು ಸರ್ವೋದಯ ಸಮಾಜವನ್ನು ಧಾರ್ಮಿಕ ತಳಹದಿಯಲ್ಲಿ ಕಟ್ಟಬಯಸಿದವರು. ಅದನ್ನು ಸಾಧಿಸಿ ತೋರಿದವರು. ಅವರು ಕಾಯಕವಿಲ್ಲದೆ ಯಾವ ವ್ಯಕ್ತಿಯೂ ಸಮಾಜದಲ್ಲಿ ಇರಕೂಡದೆಂಬ ಸಿದ್ಧಾಂತ ಪ್ರತಿಪಾದಕರು. 'ಶರೀರವಿರುವವರೆಗೂ ಎಂತಹ ಶಿವಯೋಗಿಯಾದರೂ ಅನುಗೊಂಬನಿತು ಕಾಯಕವನ್ನು ಮಾಡಲೇ ಬೇಕು' ಎಂಬ ಕಟ್ಟಳೆಯನ್ನು ರೂಪಿಸಿದರು. ಕಾಯಕವು ಅವರಿಗೆ ಗುರುದರ್ಶನ ಲಿಂಗಪೂಜೆಗಿಂತಲೂ ಮಹತ್ವದಾಗಿತ್ತು. 'ಕಾಯಕವಿಲ್ಲದೆ ಭಕ್ತಿ ಹೋಯಿತ್ತು' ಎಂದು ಹೇಳಿ ಭಕ್ತಿಯಲ್ಲೂ ಕಾಯಕ ತತ್ವವನ್ನು ಸಮರಸಗೊಳಿಸಿದರು. ಕಾಯಕದಲ್ಲಿ ಹಿರಿದು ಕಿರಿದು ಎಂಬುದನ್ನು ತೊಡೆದು ಹಿರಿಮೆ ಗರಿಮೆಗಳನ್ನು ತಂದುಕೊಟ್ಟರು.

ಶರಣರು ನಿಷ್ಠುರವಾದ ಕಾರ್ಯಶ್ರದ್ಧೆಯನ್ನು ಪ್ರತಿಪಾದಿಸಿದರು. ಗಳಿಕೆ ಮತ್ತು ದಾಸೋಹ ಅದರ ಮೂಲ ಉದ್ದೇಶವಾಗಿತ್ತು. ಶ್ರಮಜೀವನವನ್ನು ಅವರ ಕಾಯಕ ತತ್ವವು ಪ್ರತಿಪಾದಿಸಿತು. ಈ ಹಿನ್ನೆಲೆಯಲ್ಲಿ ಅರ್ಥಶಾಸ್ತ್ರಜ್ಞರ ಚಿಂತನೆಗಳನ್ನು ಪರಿಭಾವಿಸುವುದು ಇಲ್ಲಿ ಸೂಕ್ತವಾಗಿದೆ. ಜಗತ್ತಿನ ಎಲ್ಲ ಚಿಂತಕರೂ, ಮಹಾತ್ಮರೂ ಸೃಜನಶೀಲರು. ಅವರ ಚಿಂತನೆಗಳ ಗುರಿ ಸಾಮಾಜಿಕ ಸೌಖ್ಯ. ಈ ದಿಸೆಯಲ್ಲಿ ಶರಣರು ಎಂಟು ನೂರು ವರ್ಷಗಳ ಹಿಂದೆಯೇ ಆಧುನಿಕ ದೃಷ್ಟಿಕೋನಗಳನ್ನು ಹೊಂದಿದ್ದ ವೈಚಾರಿಕತೆ ಬೆರಗುಗೊಳಿಸುವಂಥದು. ಅವರದು ಕೇವಲ ಅರ್ಥಶಾಸ್ತ್ರೀಯವಾಗಿ ಮಾತ್ರವಲ್ಲದೆ ಸಮಾಜವನ್ನು ಬಹುಮುಖವಾಗಿ ಕಟ್ಟುವ ದೂರದೃಷ್ಟಿಯನ್ನು, ದರ್ಶನವನ್ನು ಹೊಂದಿದ್ದ ಉದಾತ್ತ, ವ್ಯಾಪಕದೃಷ್ಟಿ ಎಂಬುದು ಗಮನಾರ್ಹ. ಶರಣರ ಆರ್ಥಿಕ ಚಿಂತನೆ, ಸಾರ್ಥಕ ಸಿದ್ಧಾಂತಗಳು ಎಲ್ಲಾ ಕಾಲಕ್ಕೂ ಪ್ರಸ್ತುತವೇ ಆಗಿವೆ.

ಅರ್ಥಶಾಸ್ತ್ರಜ್ಞರ ನಿಲುವುಗಳು:

ಅರ್ಥಶಾಸ್ತ್ರಜ್ಞರ ನಿಲುವುಗಳನ್ನು ಗಮನಿಸುವುದು ಶರಣರ ಆರ್ಥಿಕ ಚಿಂತನೆಯ ಮಹತ್ವ ಗುರುತಿಸಲು ಅವಶ್ಯವೇ ಆಗಿದೆ. ಹಣ ಸಂಪಾದನೆಗೆ ತೊಡಗುವ ದೈಹಿಕ ಕ್ರಿಯೆಯೇ ದುಡಿಮೆ. ದುಡಿಮೆ ಶ್ರಮದಿಂದ ಗುರುತಿಸಲ್ಪಡುತ್ತದೆ. ದುಡಿಮೆಯ

ಶ್ರಮದಿಂದ ಪಡೆದ ಹಣ ಮಾನ್ಯವಾದುದು. ದುಡಿಮೆಯಿಲ್ಲದೆ ಪರರ ಶ್ರಮದಿಂದ ಪಡೆದ ಹಣಕ್ಕೆ ಗೌರವವಿಲ್ಲ. ಆದ್ದರಿಂದಲೇ 'ಕಷ್ಟಪಟ್ಟಿದ್ದು ತನಗೆ, ಶ್ರಮ ಪಡದೆ ಬಂದದ್ದು ಪರರಿಗೆ' ಎಂಬ ನಾಣ್ಣುಡಿಯೂ ಆಗಿದೆ. ಈ ಶ್ರಮವನ್ನು ಸ್ವತಂತ್ರ ಶ್ರಮ ಮತ್ತು ಸ್ವತಂತ್ರ ಉದ್ದಿಮೆಯ ಶ್ರಮ ಎಂಬ ಉದ್ಯಮಶೀಲತಾ ಗುಣವನ್ನು ಗುರುತಿಸಿದ್ದಾರೆ.

೧೭೭೬ರಲ್ಲಿ ಆಡಂ ಸ್ಮಿತ್ 'ಶ್ರಮವೇ ರಾಷ್ಟ್ರದ ಸಂಪತ್ತನ್ನು ವೃದ್ಧಿಸುವ ಮುಖ್ಯ ಸಾಧನ' ಎಂದು ದುಡಿಮೆಗೆ ಆದ್ಯತೆ ನೀಡಿರುವುದು ಸರಿಯಾಗಿಯೇ ಇದೆ. ಆದರೆ ವ್ಯವಸಾಯ ಪಂಥದ ಚಿಂತಕರಾದ ಸ್ಮಿತ್, 'ಕೃಷಿಯನ್ನೇ ಸಂಪತ್ತಿನ ಮೂಲ' ಎಂದು ಭಾವಿಸಿದರೆ, ಈತ ಅದನ್ನು ವಿರೋಧಿಸುತ್ತಾನೆ. ವಿನಿಮಯ ಮೌಲ್ಯಗಳನ್ನು ವೃದ್ಧಿಸುವ ಎಲ್ಲಾ ಕೆಲಸಗಳನ್ನು ಸ್ಮಿತ್ ಉತ್ಪಾದಕವೆಂದು ಶ್ರಮದ ವಿಶ್ಲೇಷಣೆಯಲ್ಲಿ ಶ್ರಮ ವಿಭಜನೆಯ ಅಂಶಗಳನ್ನು ಪರಿಗಣಿಸಿದ್ದಾನೆ. ಶ್ರಮದ ಫಲ ಹೇಗೆ ಎಲ್ಲರಿಗೆ ತಲುಪಬೇಕು, ತಲುಪುವ ವ್ಯವಸ್ಥೆಯಿದೆ ಎಂಬ ಆಲೋಚನೆ ಕ್ರಮಬದ್ಧ ಚಿಂತನೆಗಳೂ ಇವೆ. ಶರಣರಲ್ಲಿ ಇಂತಹ ಆರ್ಥಿಕ ಚಿಂತನೆಯ ಸಾಮ್ಯತೆಯನ್ನು ಕಾಣಬಹುದಾಗಿದೆ. ಕಾಯಕದ ಫಲ ಎಲ್ಲರಿಗೂ ತಲುಪಬೇಕು. ಅದನ್ನು ಹೇಗೆ ತಲುಪಿಸಲು ಸಾಧ್ಯ ಎಂಬ ನೇರ ಚಿಂತನೆಗೆ ತೊಡಗಿದ ಫಲವೇ 'ದಾಸೋಹ'ದಂತಹ ವಿತರಣಾ ತತ್ವ, ನೀತಿಯಾಗಿ ಹೊರಬಂದದ್ದು ಎಂಬುದನ್ನು ಇಲ್ಲಿ ಗಮನಿಸಬಹುದಾಗಿದೆ. ಅಂದಿನ ದಾಸೋಹ ತತ್ವದ ದುರುಪಯೋಗದಂತಹ ವಿಮರ್ಶೆಯನ್ನು ಹೊರತುಪಡಿಸಿ ಈ ಪ್ರಬಂಧದಲ್ಲಿ ಕೇವಲ ಆರ್ಥಿಕ ಸಮಾನತೆ, ಉತ್ಪಾದನೆ, ವಿತರಣೆಯ ಅಂಶಗಳ ಬಗ್ಗೆ ಮಾತ್ರ ಗಮನವಿರಿಸಿ ವಿಶ್ಲೇಷಿಸಲು ಯತ್ನಿಸಲಾಗಿದೆ ಎಂಬ ಮಿತಿಯನ್ನು ಗಮನಿಸಬಹುದು.

೧೮೯೪ ರಲ್ಲಿ ರಿಕಾರ್ಡೋ ಎಂಬ ಅರ್ಥಶಾಸ್ತ್ರಜ್ಞ ಶ್ರಮ ಮೌಲ್ಯ ಸಿದ್ಧಾಂತವನ್ನು ಪ್ರತಿಪಾದಿಸಿದನು. ಒಂದು ಸಮಾಜದ ಆದಾಯವು ನಾನಾ ವರ್ಗಗಳ ಜನರಿಗೆ ವಿತರಣೆಯಾಗುವ ವಿಧಾನ ಮತ್ತು ಕಾರಣಗಳನ್ನು ವಿವರಿಸಿದ್ದಾನೆ. ಅದೇ ರೀತಿ ಆಸ್ತಿ ಇರುವುದು ಮನುಷ್ಯನ ಸುಖಸಾಧನೆಗೆ, ಸಮಾಜೋನ್ನತಿಗೆ. ಬಹುಸಂಖ್ಯಾತರನ್ನು ವಂಚಿಸಿ, ದಾಸ್ಯದಲ್ಲಿಟ್ಟು ಮೇಲ್ವರ್ಗದ ಜನರು ಅನುಭವಿಸುತ್ತಿರುವ ಆಸ್ತಿಯು ಅಸಮಾನತೆಗೆ ಕಾರಣ ಎಂದು ಜಾನ್ ಸ್ಟುವರ್ಟ್ ಎಂಬ ಅರ್ಥಶಾಸ್ತ್ರಜ್ಞ ಹೇಳಿದ್ದಾನೆ. ವ್ಯಕ್ತಿ ಮತ್ತು ಸಮಾಜಗಳ ನಡುವೆ ಇರುವ ಸಾಮಾಜಿಕ ಆರ್ಥಿಕ ಹೊಣೆಗಳನ್ನು ಶುದ್ಧರೂಪದಲ್ಲಿ ಯೋಜಿಸಿ ಪ್ರಕಟಿಸಿದ ಪ್ರಮುಖ ಚಿಂತಕ ಈತ. ಇಂತಹುದೇ ವಿಚಾರಗಳನ್ನು ಬಸವಣ್ಣನವರ ಆರ್ಥಿಕ ಚಿಂತನೆ ಪ್ರಬುದ್ಧವಾಗಿ ಪ್ರತಿಪಾದಿಸಿದೆ. ವ್ಯಕ್ತಿಯ ಆದಾಯ ಸಮಾಜಕ್ಕೂ ಸಲ್ಲುವಂತಾಗಬೇಕು, ವ್ಯಕ್ತಿಯ ಆಸ್ತಿ ಸಮಾಜದ ಉನ್ನತಿಗೂ ಪೋಷಕವಾಗಬೇಕು, ಎಂಬ ವಿಚಾರಗಳನ್ನು ಕಾಯಕ ದಾಸೋಹ ಸಿದ್ಧಾಂತಗಳ ವಿವರಗಳಲ್ಲಿ ಶರಣರು ಅರ್ಥಪೂರ್ಣವಾಗಿ ಹೇಳುವ ಮೂಲಕ ಅದಕ್ಕೆ ಧಾರ್ಮಿಕ ನೈತಿಕ ನೆಲೆಗಟ್ಟಿನ ಮೇಲೆ ಸಂಯೋಜಿಸಿರುವುದು ಹೆಚ್ಚು ಬಂಧುರವಾಗಲು ಕಾರಣವಾಗಿದೆ. ವ್ಯಕ್ತಿಗೆ ಸಾಮಾಜಿಕ ಆರ್ಥಿಕ ಹೊಣೆಗಾರಿಕೆ ಸಹಾ ಕರ್ತವ್ಯವೇ ಆಗಿದೆ ಎಂಬ ಆಧುನಿಕ ಪ್ರಜ್ಞೆಯನ್ನು ಬಹು ಹಿಂದೆಯೇ ಶರಣರು ತಮ್ಮ ಆರ್ಥಿಕ ಚಿಂತನೆಗಳಲ್ಲಿ ದೃಢೀಕರಿಸಿದ್ದಾರೆ.

ಆರ್ಥಿಕ ಚಿಂತನೆಯ ಇತಿಹಾಸದಲ್ಲಿ ಮಾನವ ಜನಾಂಗದ ಬಗ್ಗೆ ಪ್ರೀತಿಯುಳ್ಳ ಅರ್ಥಶಾಸ್ತ್ರಜ್ಞ ಕಾರ್ಲ್‌ಮಾರ್ಕ್ಸ್‌ನು ಶ್ರಮಿಕ ವರ್ಗವೆಂಬ ಶೋಷಕ ಜನತೆಯ ಬಗ್ಗೆ ಮಿಡಿದು ಮಾನವಧರ್ಮವನ್ನು ಸಾರಿದ ಆಧುನಿಕ ಮನುಮಹರ್ಷಿ ಎನ್ನಬಹುದು. ಶ್ರಮಿಕ ವರ್ಗ, ಶರೀರ ಶ್ರಮ ಮಾಡುವ ಜನರ ಬಗ್ಗೆ ಮಾರ್ಕ್ಸ್‌ನ ವಿಚಾರಗಳು ವಿಶ್ವಮಾನ್ಯವಾಗಿವೆ.

೧೮೬೭ರಲ್ಲಿ 'ದಾಸ್ ಕ್ಯಾಪಿಟಲ್' ಎಂಬ ಕೃತಿಯಲ್ಲಿ ವರ್ಗ ತಾರತಮ್ಯ, ಬಂಡವಾಳಶಾಹಿ ಹಾಗೂ ಕಾರ್ಮಿಕ ವರ್ಗದ ಬಗೆಗಿನ ಚಿಂತನೆಗಳಿವೆ. ವರ್ಗ ಮಾಲೀಕತ್ವವು ಬಂಡವಾಳ ಸ್ಥಿರಪಡಿಸಿಕೊಂಡಂತೆಲ್ಲಾ ಬಡತನ, ಸುಲಿಗೆ, ದಬ್ಬಾಳಿಕೆ, ಶೋಷಣೆ ವೃದ್ಧಿಸುತ್ತದೆ. ಫಲವಾಗಿ ಸಮಾಜದಲ್ಲಿ ಬಡತನ, ಹಸಿವು, ಶೋಷಣೆಗಳ ನಿವಾರಣೆಗೆ, ವರ್ಗಸಂಘರ್ಷ

ತೊರೆಯಲು ಪರಿಹಾರೋಪಾಯಗಳನ್ನು ಹೇಳಿದ್ದಾನೆ. ಶರಣರೂ ಸಹಾ ಹಣದ ಸಂಗ್ರಹ, ದುರಾಸೆ, ಲೋಭಗಳ ಪರಿಣಾಮವನ್ನು, ಶ್ರೀಮಂತರ ನಡವಳಿಕೆಯನ್ನು ವಿರೋಧಿಸಿ ವಿಡಂಬಿಸಿದ್ದಾರೆ. ಸತ್ಯಶುದ್ಧ ಕಾಯಕದಿಂದ ಇದರ ನಿವಾರಣೆ ಸಾಧ್ಯ ಎಂಬುದನ್ನು ಪ್ರತಿಪಾದಿಸಿ ಕಾರ್ಲ್‌ಮಾರ್ಕ್ಸ್‌ನಿಗಿಂತ ಹಿಂದೆಯೇ ಮಾನವತಾವಾದಿಗಳಾಗಿ ಅಲ್ಲದೆ ಆರ್ಥಿಕ ಚಿಂತಕರಾಗಿ ದಾಖಲೆ ನಿರ್ಮಿಸಿರುವ ಅವರ ವೈಜ್ಞಾನಿಕ ನಿಲುವು ಮೆಚ್ಚುಗೆ ಗಳಿಸುತ್ತದೆ.

ಶ್ರಮದ ಬಗ್ಗೆ ಮಾರ್ಕ್ಸ್‌ನ ಚಿಂತನೆ ವಿಶಿಷ್ಟವಾಗಿದೆ. ಶ್ರಮಿಕ ವರ್ಗವೇ ವಿಶಿಷ್ಟವಾದುದು. ಇದು ಕ್ರಾಂತಿಕಾರಿ ವರ್ಗ ಎಂಬ ಹಿನ್ನೆಲೆಯಲ್ಲಿ ಮಾರ್ಕ್ಸ್ ಶ್ರಮ ಮೌಲ್ಯ ಸಿದ್ಧಾಂತವನ್ನು ಮಂಡಿಸಿದ್ದಾನೆ. ಶ್ರಮವೇ ವಸ್ತುವಿಗೆ ಮೌಲ್ಯ ತಂದುಕೊಡುತ್ತದೆ. ದುಡಿಮೆಯೇ ಸರಕುಗಳ ಬೆಲೆಯ ನೆಲೆ. ಕೆಲಸಗಾರನ ಶ್ರಮಕ್ಕೆ ಹಣವೇ ಬೆಲೆ ಎಂದು ಶ್ರಮ ಹಾಗೂ ಶ್ರಮಶಕ್ತಿಯ ನಡುವೆ ಇರುವ ವ್ಯತ್ಯಾಸವನ್ನು ಗುರುತಿಸಿ ಶ್ರಮಶಕ್ತಿ ಮೌಲ್ಯವನ್ನು ಸ್ಪಷ್ಟಪಡಿಸಿದ್ದಾನೆ. ಇದು ಶರಣರ 'ಕಾಯಕ ಸಿದ್ಧಾಂತ'ದಲ್ಲಿಯೇ ವ್ಯಕ್ತವಾಗಿದೆ. ಶರಣರು ಕಾಯಕ ಎಂದರೆ ದುಡಿಮೆ ಅಥವಾ ಶ್ರಮದ ಬಗ್ಗೆ ಅತ್ಯಂತ ಸ್ಪಷ್ಟವಾಗಿ ಹೇಳಿ ಕಾಯಕಕ್ಕೆ ಗೌರವ ನೀಡಿದರು. ಅದನ್ನೇ ಮೌಲ್ಯಗಳಲ್ಲಿ ಒಂದೆಂದು ನಿಖರವಾಗಿ ಗುರುತಿಸಿ, ಅದಕ್ಕೆ ಆರ್ಥಿಕ, ಧಾರ್ಮಿಕ, ಸಾಮಾಜಿಕ ನೆಲೆಗಳಲ್ಲಿ ಉನ್ನತ ಸ್ಥಾನವನ್ನು ನೀಡಿ ಗೌರವಿಸಿರುವುದು ಬಹುಶಃ ವಿಶ್ವದಲ್ಲಿಯೇ ಪ್ರಪ್ರಥಮ ಎನ್ನಬಹುದಾಗಿದೆ. ಅರ್ಥಶಾಸ್ತ್ರದ ನೀತಿಯನ್ನು ಸಮರ್ಪಕವಾಗಿ ಅರ್ಥೈಸಿಕೊಂಡು ಸಮಾಜದಲ್ಲಿ ಜಾರಿಗೊಳಿಸಿ ಯಶಸ್ವಿಯಾದ ನಿದರ್ಶನವಾಗಿ ಇದು ಹೆಮ್ಮೆಯ ವಿಷಯವೇ ಆಗಿದೆ.

ಅರ್ಥಶಾಸ್ತ್ರಕ್ಕೆ ಜನಸಾಮಾನ್ಯರ ಸೌಖ್ಯದ ಗುರಿಯನ್ನು ಹಾಕಿಕೊಟ್ಟ ಆಲ್‌ಫ್ರೆಡ್ ಮಾರ್ಷಲ್ ೧೮೪೨ರಲ್ಲಿ ಬಡ ಜನರ ಆರ್ಥಿಕ ಮಟ್ಟವನ್ನು ಸುಧಾರಿಸಬೇಕೆಂಬ ಚಿಂತನೆಗಳಿಂದ ಅರ್ಥಶಾಸ್ತ್ರದ ವ್ಯಾಖ್ಯೆಗಳನ್ನು ಬರೆದರು. ಆರ್ಥಿಕ ಕಲ್ಯಾಣ ಅಥವಾ ಆರ್ಥಿಕ ಸೌಖ್ಯದ ಪರಿಕಲ್ಪನೆ ಕುರಿತಾಗಿ ಆಡಂ ಸ್ಮಿತ್, ರಿಕಾರ್ಡೋ, ಮಿಲ್ ಮುಂತಾದ ಎಲ್ಲ ಅರ್ಥಶಾಸ್ತ್ರಜ್ಞರೂ, ಜನಸಾಮಾನ್ಯರ ಜೀವನ ಮಟ್ಟದ ಸುಧಾರಣೆಗೆ ಯತ್ನಿಸಿದರೂ ನೈತಿಕ ಬದ್ಧತೆ ಗಳಿಕೆಯಲ್ಲಿ ಇರಬೇಕೆಂಬುದು ಅವರ ಚಿಂತನೆಗಳಲ್ಲಿ ಕಂಡುಬರುತ್ತದೆ. ನಿರುದ್ಯೋಗ, ಕಾರ್ಮಿಕ ಶೋಷಣೆ, ಕೆಲವೇ ಜನರಿಂದ ಸಂಪತ್ತಿನ ಸಂಗ್ರಹ, ಶ್ರೀಮಂತ-ಬಡವರ ನಡುವಣ ಕಂದರ ಹೆಚ್ಚಿ ಸಾಮಾಜಿಕ ವ್ಯಾಧಿಗಳು ಇಂದಿಗೂ ಎಲ್ಲ ದೇಶಗಳಲ್ಲೂ ಉಳಿದಿರುವುದು ವಿಷಾದನೀಯ. ಅರ್ಥವಿಜ್ಞಾನಿಗಳು ಮೂಲಭೂತವಾಗಿ ಮಾನವನ ಅಪರಿಮಿತ ಬಯಕೆಗಳು ಮತ್ತು ಮಿತವಾದ ಸಂಪನ್ಮೂಲಗಳ ಹೊಂದಾಣಿಕೆಯ ವಿಶ್ಲೇಷಣೆಗೆ ಒತ್ತು ನೀಡಿದ್ದಾರೆ.

ಅದೇ ರೀತಿ ಗಾಂಧೀಜಿಯವರೂ ಸಹಾ ಮಾನವ ಕಲ್ಯಾಣವನ್ನು ವೃದ್ಧಿಸಲು ಪ್ರಯತ್ನಿಸಿದರು. ನೈತಿಕತೆ ಇಲ್ಲದ ಐಶ್ವರ್ಯವನ್ನು ತಿರಸ್ಕರಿಸಿದರು. ಗಾಂಧಿಯವರ ಆರ್ಥಿಕ ಚಿಂತನೆಯು ನೈತಿಕತೆ, ಧಾರ್ಮಿಕತೆಗೆ ಪ್ರಾಧಾನ್ಯತೆ ನೀಡಿರುವುದು ಶರಣದೃಷ್ಟಿಗೆ ಸಂವಾದಿಯಾಗಿಯೇ ಇದೆ. ಈ ವಿಚಾರಗಳಿಂದ ಗಾಂಧಿ ಇತರ ಅರ್ಥಶಾಸ್ತ್ರಜ್ಞರಿಗಿಂತ ವಿಭಿನ್ನ ನಿಲುವಿನ ಅರ್ಥವಿಜ್ಞಾನಿಯಾಗಿ ಕಂಡು ಬರುತ್ತಾರೆ. ಗಾಂಧೀಜಿಯವರು ಭಾರತೀಯ ಅರ್ಥವ್ಯವಸ್ಥೆಯ ನಾಡಿ ಮಿಡಿತವನ್ನು ಶರಣರಂತೆಯೇ ಅರಿತಿದ್ದವರು. ಎಲ್ಲ ಉದ್ಯೋಗವೂ ಒಂದೇ ಆದಾಯ ತರುವಂತಿರಬೇಕು. ಕುಟುಂಬದ ಅವಶ್ಯಕತೆಗೆ ತಕ್ಕಂತೆ ಆದಾಯ ಪಡೆಯಬೇಕು. ಪ್ರತಿಯೊಬ್ಬರೂ ನೈತಿಕತೆಯ ಆಧಾರದ ಮೇಲೆ ಇಡೀ ಸಮಾಜದ ಒಳಿತಿಗೆ ದುಡಿಯಬೇಕು ಎಂಬ ವಿಚಾರಧಾರೆಗಳು ಶರಣರ ವಿಚಾರಗಳಿಗೆ ಸಂವಾದಿಯಾಗಿಯೇ ಇರುವುದು ಸುಸ್ಪಷ್ಟ. ಸರ್ವೋದಯ ವಿಚಾರವಾಗಲಿ, ಅನ್ನಕಾಯಕದ ಮಹತ್ವ, ಶರೀರ ಶ್ರಮದ ಬಗ್ಗೆ ಅವರ ಚಿಂತನೆಗಳು ಶರಣ ತತ್ವದ ಹಾದಿಯಲ್ಲಿಯೇ ಸಾಗಿರುವುದು ಮಹಾತ್ಮರ ಚಿಂತನೆಗಳು ಸದಾ ಸಾಮಾಜಿಕ ಸೌಖ್ಯದ ಉನ್ನತಿಗಾಗಿ ನಡೆಸಿದ ಚಿಂತನೆಗಳು ಎಂಬುದಕ್ಕೆ ನಿದರ್ಶನವೇ ಆಗಿದೆ.

ಆದರ ಮಹಾತ್ಮರು ನಾನಾ ರೀತಿಯಲ್ಲಿ ಶ್ರಮದ ಮಹತ್ವ, ಗೌರವಗಳನ್ನು ಪ್ರತಿಪಾದಿಸಿದ್ದಾರೆ. ಲ್ಯಾಟಿನ್‌ನಲ್ಲಿ 'ಶ್ರಮಿಸುವುದೆಂದರೆ ಪ್ರಾರ್ಥಿಸುವುದು' ಎಂದು ಹೇಳುವಂತೆಯೇ ರಸ್ಕಿನ್ 'ಶ್ರಮವೇ ಬಂಡವಾಳ' ಎಂದಿದ್ದಾನೆ. ಗಾಂಧೀಜಿ 'ದುಡಿಮೆಯೇ ಸಂಪತ್ತು' ಎಂದು ಶ್ರಮದ ಮಹತ್ತನ್ನು ಗುರುತಿಸುತ್ತಾರೆ. ಭಗವದ್ಗೀತೆಯಲ್ಲಿ ಯಜ್ಞ ಮಾಡದೆ ಉಣ್ಣುವವನು ಕದ್ದ ಆಹಾರವನ್ನು ಉಣ್ಣುತ್ತಾನೆ ಎಂದಿದೆ. ಇಲ್ಲಿ ಯಜ್ಞ ಎಂದರೆ ಪರಿಶ್ರಮ, ಪ್ರತಿಯೊಬ್ಬ ವ್ಯಕ್ತಿಯೂ ಶ್ರಮಕ್ಕೆ ಗೌರವ ನೀಡಿ, ಶ್ರಮದ ಕೆಲಸ ಮಾಡಿದಾಗ ಸಮಾನತೆ ಏರ್ಪಡುತ್ತದೆ. ಆದ್ದರಿಂದ ಶ್ರಮ ಮಾಡದೆ ಉಣ್ಣುವವನು ಪಾಪವನ್ನು ಭುಂಜಿಸುತ್ತಾನೆ. ನಿಜವಾಗಿ ಆತನೊಬ್ಬ ಕಳ್ಳ ಎಂದು ಭಗವದ್ಗೀತೆಯಲ್ಲಿ ಹೇಳಿದೆ. ಭಗವದ್ಗೀತೆ, ರಸ್ಕಿನ್, ಟಾಲ್‌ಸ್ಟಾಯ್ ಗ್ರಂಥಗಳಿಂದ ಪ್ರಭಾವಿತರಾಗಿದ್ದ ಗಾಂಧೀಜಿಯವರು 'ಶ್ರಮಿಕರ ಶ್ರಮವು ಹಣಕ್ಕಿಂತ ಮಿಗಿಲಾದುದು' ಎಂದು ಅಭಿಪ್ರಾಯ ಪಟ್ಟಿರುವರು. ಜತೆಗೆ ಮಾನವ ಕಲ್ಯಾಣವನ್ನು ನೈತಿಕ, ಆಧ್ಯಾತ್ಮಿಕ ನೆಲೆಯಲ್ಲಿ ಗುರುತಿಸಿದ್ದಾರೆ. ಜಯಪ್ರಕಾಶ್ ನಾರಾಯಣ್, ಲೋಹಿಯಾ ಮುಂತಾದವರೂ ಸಹಾ ಸರ್ವೋದಯ ತತ್ವಗಳ ಆದರ್ಶವನ್ನು ಎತ್ತಿಹಿಡಿದವರು.

ಒಟ್ಟಾರೆ ವಿಶ್ವ ಇತಿಹಾಸದಲ್ಲಿ, ಆರ್ಥಿಕ ಚಿಂತನೆಯು ಸಮಾಜ ಸುಧಾರಕರ ಚಿಂತನೆಗಳಿಂದಲೂ ಪುಷ್ಟಿ ಪಡೆದಿದೆ. ಸಮಾಜದಲ್ಲಿನ ಮೇಲು-ಕೀಳು, ಬಡವ-ಬಲ್ಲಿದ ಬೇಧಭಾವಗಳು, ಫಲವಾಗಿ ಕಂಡ ಅಸಮಾನತೆ, ಶೋಷಣೆ, ದುಡಿಮೆಯ ಬಗ್ಗೆ ಕೀಳರಿಮೆ, ದುಡಿವವರ ಬಗ್ಗೆ ಅನಾದರ, ಸಾಮಾಜಿಕ ಅಸಮತೋಲನ, ವಿಪ್ಲವದ ಪರಿಸ್ಥಿತಿಗಳು ಚಿಂತಕರ ಮನದಲ್ಲಿ ಪುಟಿದೆದ್ದಿವೆ; ತಾರ್ಕಿಕವಾಗಿ, ಮಾನವೀಯವಾಗಿ, ವೈಜ್ಞಾನಿಕವಾಗಿ ವಿಶ್ಲೇಷಿಸಿ ಪರಿಹಾರೋಪಾಯಗಳ ಮೂಲಕ ಸ್ಪಂದಿಸಿವೆ. ಶರಣರು ನಡೆಸಿದ ಎಂಟು ನೂರು ವರ್ಷಗಳ ಹಿಂದಿನ ಆರ್ಥಿಕ ಚಿಂತನೆಗಳು ವೈಚಾರಿಕವಾಗಿ ಸಮರ್ಥವಾಗಿವೆ, ಸದೃಢವಾಗಿವೆ. ದುಡಿಮೆಯಿಲ್ಲದೆ ಬದುಕುವ ಹಕ್ಕಿಲ್ಲ, ದುಡಿಮೆ ತನಗೆ ಮಾತ್ರವಲ್ಲ ಸಮಾಜದ ಉದ್ಧಾರಕ್ಕೆ ಎಂಬ ಚಿಂತನ ಮಂಥನದಲ್ಲಿ 'ಕೆರೆಯ ನೀರನ್ನು ಕೆರೆಗೆ ಚೆಲ್ಲಿ' ಎಂಬಂತೆ ಶರಣರ ಕಾಯಕ-ದಾಸೋಹ ಚಿಂತನೆಗಳು ಉದಾತ್ತ ಮಾರ್ಗದರ್ಶನ ನೀಡುತ್ತಿವೆ. ಆದರ್ಶದ ನೆಲೆಗಿಂತಲೂ ವಾಸ್ತವಿಕ ನೆಲೆಯಲ್ಲಿ ಸಂಸ್ಕೃತಿಯ ಆರಾಧಕರೂ ಆಗಿರುವ ಶರಣರು ಭೌತಿಕ ಸಂಸ್ಕೃತಿಯೊಡನೆ ಆಧ್ಯಾತ್ಮಿಕ ಅಂಶಗಳನ್ನು ನೈತಿಕ-ಧಾರ್ಮಿಕ ತಳಹದಿಯ ಮೇಲೆ ಸಮ್ಮಿಲನಗೊಳಿಸಿ ಸಂಸ್ಥಾಪಿಸಿರುವ ವೈಚಾರಿಕತೆ ನವನವೋನ್ಮೇಷಶಾಲಿನಿ' ಪ್ರತಿಭೆಯಿಂದ ಮೂಡಿ ಬಂದಂಥಹುದು.

ಶರಣರ ಕಾಯಕ-ದಾಸೋಹ ಸಿದ್ಧಾಂತ:

ಶರಣರಿಗೆ ಕಾಯಕ ಎಂದರೆ ದುಡಿಮೆ. ಹಾಗೆಯೇ ದಾಸೋಹವು ಸಮಾಜದ ಸಂಬಂಧದ ಸ್ವರೂಪಕ್ಕಾಗಿ ತಳುಕು ಹಾಕಿಕೊಂಡ ಕರ್ತವ್ಯವೂ ಆಗಿ ವ್ಯಕ್ತಿ ಮತ್ತು ಸಮಾಜದ ಪರಸ್ಪರ ಪೂರಕ ಪೋಷಕ ತತ್ವಗಳಾದವು. ಸಮಾಜದ ಸದಸ್ಯನಾದ ವ್ಯಕ್ತಿಯು ಸಮಾಜಕ್ಕೆ ಹೊರೆಯಾಗಿ ಬಾಳದೆ ಸಮಾಜದ ಸ್ವಾಸ್ಥ್ಯವನ್ನು ವೃತ್ತಿಯ ಮೂಲಕ ಅನುಸರಿಸಿ ಉಪಯುಕ್ತನಾಗಬೇಕು. ಇದು ದೇಹ ಮತ್ತು ಬುದ್ಧಿಯ ಬಳಲಿಕೆಯಿಂದ ಆದ ಶ್ರದ್ಧಾಭಕ್ತಿ-ಗೌರವದಿಂದ ಕೂಡಿರುವಂಥ ಕ್ರಿಯೆ. ಇವು ಕಾಯಕ ತತ್ವದ ಪ್ರಮುಖ ಅಂಶಗಳು. ಆಧ್ಯಾತ್ಮಿಕ ಸಾಧನೆ ಇದರ ಮತ್ತೊಂದು ಆಶಯ. ಹೀಗಾದಾಗ ಕಾಯಕದಲ್ಲಿ ಮೇಲು-ಕೀಳು ಇರುವುದಿಲ್ಲ. ಅದೇ ರೀತಿ ಕಾಯಕದ ಉತ್ಪಾದನೆ, ಸಮಾಜಕ್ಕೆ ವಿತರಣೆಯಾಗಲು ದಾಸೋಹ ರೂಪದಲ್ಲಿ ನಡೆಯಬೇಕು. ಕಾಯಕದ ಮತ್ತೊಂದು ಮುಖ ದಾಸೋಹ. ಇವು ಪರಸ್ಪರ ಪೂರಕ. ದಾಸೋಹವಿಲ್ಲದೆ ಕಾಯಕ ಸಾರ್ಥಕವಲ್ಲ, ದಾಸೋಹವೆಂದರೆ ದಾನವಲ್ಲ, ದಾನವೆಂದರೆ ಕೊಡುವುದು. ಆದರೆ ದಾಸೋಹವು ಸೇವೆ ಮಾಡುವ ವಿಧಾನ. ಹೆಚ್ಚು ಹಣ ವ್ಯಯಿಸಿ ಗುರುಲಿಂಗ ಜಂಗಮರಿಗೆ ನೀಡುವುದೇ ಮುಖ್ಯವಲ್ಲ. ಅದರ ಹಿಂದೆ ಕಾಯಕದ ಶ್ರಮದಿಂದ ಬಂದ ಗಳಿಕೆ ದಾಸೋಹ ಯೋಗ್ಯ ಎಂಬ ನೈತಿಕ ತತ್ವ ಕೊಡುವುದರಿಂದ ಹೆಚ್ಚಾಗಿ ನಿಸ್ಪೃಹತೆಗೆ ಒತ್ತು ನೀಡಿದೆ. ಶರಣರ ಕಾಯಕ-ದಾಸೋಹ ಸಿದ್ಧಾಂತಗಳು ವೀರಶೈವ ಧರ್ಮವು ವಿಶ್ವಕ್ಕೆ ನೀಡಿದ ಅಮೂಲ್ಯ ಕೊಡುಗೆಗಳು. ಸಾರ್ವಕಾಲಿಕ ಪ್ರಸ್ತುತತೆ ಹೊಂದಿದ ಶ್ರೇಷ್ಠ ನಿಲುವುಗಳು.

ಭಾರತೀಯ ಸಮಾಜದಲ್ಲಿ ವೃತ್ತಿಗಳಲ್ಲಿ ಸಮಾನ ಗೌರವ ಇರಲಿಲ್ಲ. ಸ್ಥಾನಮಾನಗಳಲ್ಲಿ ಅಪಾರ ಅಂತರವಿದ್ದ ಸಾಮಾಜಿಕ ಪರಿಸ್ಥಿತಿ, ಶ್ರಮ ಪಡದ ಜನರು ಶ್ರೇಷ್ಠರು, ಶ್ರಮ ಪಡುವ ಜನರು ಕನಿಷ್ಠರು, ಶೂದ್ರರೆಂದೂ ಗುರುತಿಸುತ್ತಿದ್ದ ಸಾಮಾಜಿಕ ಅಸಮಾನತೆ ತಾಂಡವವಾಡುತ್ತಿದ್ದ ವ್ಯವಸ್ಥೆ ರೂಢಿಯಲ್ಲಿತ್ತು. ಅತೃಪ್ತ ಜನರ ಅರೆಮನಸ್ಸಿನ ದುಡಿಮೆಯಿಂದ ಸಾಮಾಜಿಕ ಪ್ರಗತಿ ಕುಂಠಿತವಾಗಿತ್ತು,. ಉತ್ಪತ್ತಿಯ ದೃಷ್ಟಿಯಿಂದ ಶ್ರಮ ವಿಭಜನೆ ಅನಿವಾರ್ಯವೆನಿಸಿದರೂ ಶ್ರಮಿಕರಲ್ಲೇ ವಿಭಜನೆ ಆಗಿತ್ತು. ಸಹಭೋಜನ, ಸಹಜೀವನ, ಸಮಾಗಮಗಳಿಗೆ ಅವಕಾಶವಿರದೆ ಬಹಿಷ್ಕರಿಸಿದಂತೆ ಇದ್ದ ಕಳಂಕಿತ ವಾತಾವರಣವಿತ್ತು. ಇಂತಹ ಪರಿಸ್ಥಿತಿಯ ಅವಲೋಕನ ಮಾಡಿದ ಬಸವಣ್ಣನವರು ಶರಣರೊಡನೆ ವಿಚಾರ ಮಂಥನಗೈದರು. ಧಾರ್ಮಿಕ ಸೂತ್ರ ಹಿಡಿದು ವರ್ಣ, ಧರ್ಮ, ವೃತ್ತಿಗಳನ್ನು, ಬೆಸೆಯುವಂತಹ ಕ್ರಿಯಾಶೀಲತೆಯನ್ನು ಒಳಗೊಂಡ ಕಾಯಕ-ದಾಸೋಹ ತತ್ವಗಳನ್ನು ಆಚರಣೆಗೆ ತಂದರು. ಇದರಿಂದ ಉತ್ಪತ್ತಿ - ಹಂಚಿಕೆ ಹಾಗೂ ಶ್ರಮದ ಮೌಲ್ಯಗಳ ನಡುವೆ ಅನುಸಂಧಾನ ಏರ್ಪಟ್ಟಿತ್ತು. ಶರಣ ಪಥದ ಅರ್ಥಶಾಸ್ತ್ರೀಯ ನಿಲುವು ನಿಚ್ಚಳವಾಗಿ ಸಾಮಾಜಿಕ ಪ್ರಗತಿಗೆ ಕಾಣಿಕೆ ನೀಡಿತು. ಶರಣರು ಆರ್ಥಿಕ ಚಿಂತನೆಗಳ ಜತೆ ತಳುಕು ಹಾಕಿಕೊಂಡ ಕಾಯಕ-ದಾಸೋಹ ವಿಚಾರಗಳನ್ನು ತಾತ್ವಿಕ ಸೂತ್ರದಿಂದ ಬೆಸೆದರು. ಅರ್ಥಶಾಸ್ತ್ರೀಯ ಚಿಂತನೆಗಳನ್ನು ತಾತ್ವಿಕ ಸೂತ್ರದಿಂದ ಬೆಸೆದ ಅದ್ಭುತ ಅರ್ಥಶಾಸ್ತ್ರಜ್ಞರು ಬಸವಣ್ಣನವರು ಹಾಗೂ ಅವರ ಅನುಚರರಾದ ಶಿವಶರಣರು!

ಕಾಯಕತತ್ವ ವಿಚಾರಗಳು

ಧಾರ್ಮಿಕವಾಗಿ, ಸಾಮಾಜಿಕವಾಗಿ ಸಮಾನತೆ ಸಾಧಿಸಲು ಶರಣರು ಆರಿಸಿಕೊಂಡ ಕಾಯಕ ತತ್ವ, ವ್ಯಷ್ಟಿ-ಸಮಷ್ಟಿಗಳ ಹಿತವನ್ನು ಒಳಗೊಂಡು ವಿಶಿಷ್ಟವಾಗಿದೆ. ಕಾಯಕದ ಬಗ್ಗೆ ಶರಣರು ನಡೆಸಿದ ಚರ್ಚೆ, ಚಿಂತನ-ಮಂಥನ, ಸಂವಾದಗಳು ಶೂನ್ಯಸಂಪಾದನೆಗಳಲ್ಲಿ ಸೊಗಸಾಗಿ ಮೂಡಿಬಂದಿವೆ. ಕಾಯಕ ಎಂದರೇನು? ಎಂಬುದರಿಂದ ಹಿಡಿದು ಅದರ ನೀತಿ ನಿಯಮ, ಅದರ ತತ್ವಗಳನ್ನು ರೂಪಿಸುವವರೆಗೆ ಶರಣರ ವೈಚಾರಿಕ, ವೈಜ್ಞಾನಿಕ, ಬುದ್ಧಿಮತ್ತೆ ತಿಣುಕಿವೆ. ತಾತ್ವಿಕ ಆಧ್ಯಾತ್ಮಿಕ ಸಂಸ್ಪರ್ಶ ನೀಡಿ ಕಾಯಕ ಸಿದ್ಧಾಂತವನ್ನು ರೂಪಿಸಿದ ಶರಣರು ವಿಶ್ವದ ವಿಚಾರ ಪ್ರಪಂಚಕ್ಕೆ ನೀಡಿದ ಅಮೂಲ್ಯ ಕಾಣಿಕೆಯೂ ಆಗಿದೆ. ಇದರ ಪ್ರಚಾರ ಆಗಬೇಕಾದ ಅವಶ್ಯಕತೆ ಇಂದಿನ ದಿನಗಳಲ್ಲಿ ಪ್ರಸ್ತುತವೇ ಆಗಿದೆ.

ಶರಣರಿಗೆ ದುಡಿಮೆಯ ಹೊಳಹುಗಳು ನೂರಾರು. ಅವುಗಳಿಂದ ಹುಟ್ಟಿದ ಫಲಗಳೂ ಸಹ ನೂರಾರು. ಏಕಾಗ್ರತೆಯ ನಿಷ್ಠೆಯಿಂದ ಕ್ರಿಯಾಶೀಲರಾಗಿ ದುಡಿಯುವ ಕ್ರಿಯೆಯೇ ಕಾಯಕ. ಕ್ರಿಯೆಯಿಲ್ಲದೆ ಜ್ಞಾನವಿಲ್ಲ . ಜ್ಞಾನವಿಲ್ಲದೆ ಕ್ರಿಯೆ ಸಾರ್ಥಕವಲ್ಲ. ಹಾಗೆಯೇ ದುಡಿಮೆ ಶ್ರಮವಲ್ಲ. ಬೆವರು ಸುರಿಸುವುದೂ ಕಾಯಕವಲ್ಲ. ಅದು ವೃತ್ತಿ ಎನಿಸಿಕೊಳ್ಳುತ್ತದೆ. ಗಳಿಸುವುದೆಲ್ಲಾ ಗಳಿಕೆಯಲ್ಲ. ಗಳಿಕೆಯು ಉಪಜೀವನ ಕ್ರಮವಾಗುತ್ತದೆ. ಬೆವರು ಸುರಿಸುವುದು ಶ್ರಮವೆನಿಸಬಲ್ಲದು. ಈ ದೃಷ್ಟಿಯಿಂದ ಶ್ರಮಿಕ ವರ್ಗ ಮತ್ತು ಶರೀರ ಶ್ರಮ ಮಾಡುವ ಬಗ್ಗೆ ಕಾರ್ಲ್‌ಮಾರ್ಕ್ಸ್ ಮುಂತಾದ ಅರ್ಥಶಾಸ್ತ್ರಜ್ಞರ ವಿಚಾರಗಳು ಭೌತಿಕ ಶ್ರಮಕ್ಕೆ ಒತ್ತು ನೀಡುವ ತತ್ವಗಳಾದರೆ, ಬಸವಾದಿ ಶರಣರ ಆರ್ಥಿಕ ಕ್ರಾಂತಿ, ವಿಚಾರಕ್ರಾಂತಿ, ವರ್ಗ ಸಂಘರ್ಷವನ್ನು ತೊಡೆದು ಹಾಕಿ ಸಮಾನತೆಯ ಸೌಹಾರ್ದದ ಆದರ್ಶ ಸಮೂಹವನ್ನು ನಿರ್ಮಿಸಿದ ಅದ್ಭುತಸಾಧನೆ. ಇದನ್ನೆ ಕ್ರಾಂತಿಯೆನ್ನುವುದು! ಇದು ವಿಶ್ವದ ಇತಿಹಾಸದಲ್ಲಿ ಗುರುತಿಸಲ್ಪಡಬೇಕಾದ ಮಹತ್ವದ ವಿಚಾರಗಳಲ್ಲಿ ಒಂದಾಗಿದೆ.

ಶರಣರು 'ಕಾಯಕ 'ಪದಕ್ಕೆ ನೀಡಿದ ಅರ್ಥವಿಸ್ತಾರ ಹಿರಿದಾದುದು, ಕಾಯಕವು ಬದುಕಲು ಮಾಡುವ ಸಂಪಾದನೆಗೆ ಅನ್ವಯಿಸದು. ಅದು ಸಾಮಾಜಿಕ ಹಿತ, ವೈಯಕ್ತಿಕ ವಿಕಾಸವನ್ನು ಸಮನ್ವಯಗೊಳಿಸಿಕೊಳ್ಳಬೇಕು. ಬರಿಯ ದುಡಿಮೆ ಕಾಯಕವೆನಿಸುವುದಿಲ್ಲ. ಈ ಕಾರಣದಿಂದ ವೃತ್ತಿಯನ್ನು ಕಾಯಕ ಎನ್ನಲಾಗದು. ಕಾಯಕವು ವಿಶೇಷತೆಯನ್ನು ಒಳಗೊಂಡಿರಬೇಕು. ಹೀಗೆ ದುಡಿಮೆಗೆ ಅರ್ಥವನ್ನು, ಮಹತ್ವನ್ನು ತಂದವರು ಶರಣರು.

ಶರಣರ ಆರ್ಥಿಕ ಚಿಂತನೆಯ ಪರಿಕಲ್ಪನೆಗಳಲ್ಲಿ ಕಾಯಕ - ದಾಸೋಹಗಳು ಪ್ರಮುಖವಾದವು, ಅವುಗಳ ನಡುವೆಯೇ ಅವರು ಹಸಿವು-ಬಡತನ-ನಿರುದ್ಯೋಗ ನಿವಾರಣೆ, ಉತ್ಪಾದನೆ, ವಿತರಣೆ ಮುಂತಾದ ಆರ್ಥಿಕ ವಿಚಾರಾಂಶಗಳನ್ನು ಬೆಸೆದು ಪರಸ್ಪರ ಬೆರೆತು ವ್ಯಕ್ತಿಯ ಉದ್ಧಾರ - ಸಮಾಜದ ಉದ್ಧಾರಗಳ ಸಮನ್ವಯ ಸಾಧಿಸಿದರು. 'ಹಸಿದ ಒಡಲಿಗೆ ವೇದಾಂತ ರುಚಿಸದು' ಎಂಬಂತೆ ಮೊದಲು ದುಡಿದು ಗಳಿಸಿ ಹಸಿವನ್ನು ನಿವಾರಿಸಿಕೊಳ್ಳಬೇಕು. ಆದರೆ ಮಾನವ ತಿನ್ನಲಿಕ್ಕೆ ಬದುಕಿಲ್ಲ. ಅದು ಬದುಕೂ ಅಲ್ಲ. ಅದರ ನಡುವೆಯೇ ಆತ್ಮಸಂತೋಷವ್ದು ಎಂಬ ಅಂಶ ಮಹತ್ವದು. ಅದಕ್ಕಾಗಿ ಗಳಿಕೆಯನ್ನು ದಾಸೋಹಕ್ಕೆ ತೊಡಗಿಸಿದ ಆತ್ಮಸಂತೋಷ ಪಡೆದು ಬದುಕಬೇಕು. ಹಸಿದ ಒಡಲು ತುಂಬಿದಾಗ ಧಾರ್ಮಿಕ ಚಿಂತನೆಗೆ ಎಡೆ ನೀಡುತ್ತದೆ ಎಂಬ ಮನೋವೈಜ್ಞಾನಿಕ ನೆಲೆಯಲ್ಲಿಯೂ ಶರಣರ ಚಿಂತನೆಗಳು ಹರಿದಾಡಿರುವುದು ಸ್ಪಷ್ಟ.

ಶರಣರು ಕಾಯಕವನ್ನು ಒಂದು ಧಾರ್ಮಿಕ ಕ್ರಿಯೆ ಎಂದು ಭಾವಿಸಿದವರು, ಉಪಾಸನೆಯ ಜತೆಗೆ ಅಳವಡಿಸಿಕೊಂಡರು. ಹೀಗಾಗಿ "ಗುರು-ಲಿಂಗ-ಜಂಗಮ ಇವುಗಳಿಗೆ ತನು ಮನ ಧನವನ್ನರ್ಪಿಸುವ ತ್ರಿವಿಧ ದಾಸೋಹದ ಕಲ್ಪನೆ ಶರಣರ ಷಟ್‌ಸ್ಥಲಮಾರ್ಗದ ವೈಶಿಷ್ಟ್ಯ. ಲಿಂಗಪೂಜೆ ಸಾರ್ಥಕವಾಗಬೇಕಾದರೆ ಕಾಯಕದಿಂದ ಬಂದ ಕಾರೆಯ ಸೊಪ್ಪಾದರೂ ಅದಕ್ಕೆ ಅರ್ಪಿತವಾಗಬೇಕು. ದೇಹಶ್ರಮದ ದುಡಿಮೆಯಿಂದಲ್ಲದೆ ಬದುಕುವ ಹಕ್ಕಿಲ್ಲ. ಆ ದುಡಿಮೆ ತನಗೆ ಮಾತ್ರವಲ್ಲ, ಸಮಾಜಕ್ಕೂ ವಿನಿಯೋಗವಾಗಬೇಕು. ಹೀಗೆ ಒಂದೇ ಹಂತದಲ್ಲಿ ಸಮಾಜ ಮತ್ತು ವ್ಯಕ್ತಿಗಳೆರಡರ ಉದ್ಧಾರದ ಕಲ್ಪನೆಯನ್ನು ಶರಣರು ಕಂಡರು. ಜಾತಿ ಭೇದಗಳನ್ನು ಇತರ ತಾರತಮ್ಯಗಳನ್ನು ಹರಿದೊಗೆದರು. ಈ ಸಾಧನೆಯನ್ನು ದಿಟ್ಟತನದ ಆಚರಣೆಯಲ್ಲಿ ತಂದುದರಿಂದ ಕ್ರಾಂತಿಕಾರವೂ ಆಗಿ ಪರಿಣಮಿಸಿದವು ಅವರ ಭಾವನೆಗಳು' (ಡಾ. ಎಚ್. ತಿಪ್ಪೇರುದ್ರಸ್ವಾಮಿ. ವಚನಗಳಲ್ಲಿ ವೀರಶೈವ ಧರ್ಮ, ಪು. ೧೪೨) ಎಂಬ ಅಭಿಪ್ರಾಯ ಸಮಂಜಸವೇ ಸರಿ.

ಶರಣರ ಕಾಯಕ ತತ್ವವು ಆರ್ಥಿಕ ಸಮಾನತೆಯನ್ನು ಸ್ಥಾಪಿಸುವ ಸಾಧನವಾಗಿದೆ. ಸಮಾಜ ಭದ್ರತೆಗೆ ಎಲ್ಲ ಉದ್ಯೋಗಗಳೂ ಸಮಾಜದಲ್ಲಿಯೇ ಆಗಬೇಕು ಎಂಬ ಆರ್ಥಿಕಾಭಿವೃದ್ಧಿ ನಿಲುವು ಶರಣರದು. ಈ ಕಾಯಕ ತತ್ವವು ಅರ್ಥಶಾಸ್ತ್ರದ ಜೀವಾಳವಾದ ಶ್ರಮ ವಿಭಾಗ (Division of labour) ತತ್ವವನ್ನು ಒಳಗೊಂಡಿದೆ. ಕಾಯಕದಲ್ಲಿ ತಾರತಮ್ಯ ಇರಬಾರದು. 'ಕಾಸಿ ಕಮ್ಮಾರನಾದ ಬೀಸಿ ಮಡಿವಾಳನಾದ ಹಾಸನಿಕ್ಕಿ ಸಾಲಿಗನಾದ' ಎಲ್ಲ ವೃತ್ತಿ ವ್ಯವಸಾಯಗಳು ಪರಮಾತ್ಮನ ಆರಾಧನೆ. ಎಲ್ಲ ಒಂದೇ ಮಾನವ ಕುಲಕ್ಕೆ ಸಂಬಂಧಪಟ್ಟಿವೆ ಎಂಬ ಕಾಯಕ ನೀತಿಗಳನ್ನು ಪ್ರತಿಪಾದಿಸಿದರು.

ಕಲ್ಯಾಣದ ಶರಣ ಸಮೂಹದಲ್ಲಿ ಎಲ್ಲ ಸ್ತರಗಳಿಗೆ ಸೇರಿದ ಜನರೂ ಇದ್ದರು. ಇದರ ಪ್ರಧಾನ ನೇತೃತ್ವ ವಹಿಸಿದ ಬಸವಣ್ಣನವರು ಜತೆಗೆ ಅಲ್ಲಮಪ್ರಭು, ಚೆನ್ನಬಸವಣ್ಣ, ಸಿದ್ಧರಾಮ, ಮಡಿವಾಳ ಮಾಚಯ್ಯ, ನುಲಿಯ ಚಂದಯ್ಯ, ತುರುಗಾಹಿ ರಾಮಣ್ಣ, ಮೋಳಿಗೆ ಮಾರಯ್ಯ, ನೀಲಮ್ಮ, ಲಿಂಗಮ್ಮ, ಕಾಳವ್ವೆ ಮುಂತಾದ ಅಸಂಖ್ಯಾತ ಶರಣರು ಜತಗೂಡಿದರು. ಇವರೆಲ್ಲರ ವಚನಗಳಲ್ಲಿ ಕಾಯಕ ತತ್ವ ಅರಳಿದೆ. ಅಂದಿನ ಶರಣ ಸಮೂಹದಲ್ಲಿ ನಾನಾ ವೃತ್ತಿ-ಕಾಯಕದ ಜನರು ಇದ್ದರು. ಹಲವರ ಹೆಸರುಗಳು ಅವರ ಕಾಯಕದ ಜತೆಗೆ ಅಂಟಿಕೊಂಡಿದೆ. ಈ ಹೆಸರುಗಳಲ್ಲಿ ಅಂದಿನ ಸಮಾಜದ ಗೃಹ ಕೈಗಾರಿಕೆಗಳು, ಸ್ಥಳೀಯ ಅವಶ್ಯಕತೆಗಳ ಕಾಯಕಗಳು ಸೇರಿಕೊಂಡಿರುವುದು ಸ್ಪಷ್ಟ. ದನಗಾಹಿಗಳಾದ ರಾಮಣ್ಣ, ಗೋರಕ್ಷ, ತೆಲಗಹಾಲ ಮಸಣಯ್ಯ, ಚರ್ಮ ಹದಮಾಡುವ ಧೂಳಯ್ಯ, ಚನ್ನಯ್ಯ, ಹಡಪದ ಅಪ್ಪಣ್ಣ, ಅಗ್ಘವಣಿ ಹೊನ್ನಯ್ಯ, ಕುರಿಕಾಯುವ ಗೊಲ್ಲಾಳ, ಅಮ್ಮುಗಯ್ಯ, ಜೇಡರ ದಾಸಿಮಯ್ಯ ಮುಂತಾದ ನೇಯ್ಗೆಯವರು, ಸಪ್ಪೆಯಲ್ಲಮದೇವ, ಅಣ್ಣಲದೇವಿ, ಮೋಳಿಗೆ ಮಾರಯ್ಯ ಮುಂತಾದ ಕಟ್ಟಿಗೆ, ಕುರುಳ ಮಾರುವವರು, ಒಕ್ಕಲುತನದ ಇಳಿಹಾಳ ಬೊಮ್ಮಯ್ಯ, ಮುದ್ದಯ್ಯ, ಅಜಗಣ್ಣ, ಮುಕ್ತಾಯಿ, ರೆಮ್ಮವ್ವೆ, ಬಾಹೂರ ಬೊಮ್ಮಯ್ಯ, ಕನ್ನಡಿ ಕಾಯಕದ ರೆಮ್ಮವ್ವೆ, ಅಮ್ಮಿದೇವಯ್ಯ, ಕಾಮಾಟಿ ಭೀಮಣ್ಣ, ದಾಸೋಹದ ಸಂಗಣ್ಣ, ನಗೆಯ ಮಾರಿತಂದೆ, ತಳವಾರ ಕಾಮಿದೇವಯ್ಯ, ಕಿನ್ನರಿ ಬೊಮ್ಮಯ್ಯ -ಮುಂತಾಗಿ ನೂರೈವತ್ತಕ್ಕೂ

ಹೆಚ್ಚು ವಿವಿಧ ಕಾಯಕದ ಶರಣರನ್ನು ಅವರವರ ಕಾಯಕದಲ್ಲಿ ಗುರುತಿಸಬಹುದಾಗಿದೆ. ಈ ಕಾಯಕಗಳು ಪ್ರತಿ ಹಳ್ಳಿಯಲ್ಲಿಯೂ ಬದುಕಿನ ಅವಿನಾಭಾಗಗಳಾಗಿದ್ದವು.

ಕಾಯಕದ ಜೊತೆಗೆ ಅವರ ಜಾತಿಗಳು ಬೆಸೆದುಕೊಂಡಿದ್ದವು. ವಂಶಪಾರಂಪರ್ಯವಾಗಿ ಅದೇ ವೃತ್ತಿಗಳನ್ನು ಮಾಡುತ್ತಾ ಬಂದ ಕಾರಣ ಜಾತಿಸೂಚಕವಾಗಿ ವೃತ್ತಿಗಳು ಗುರುತಿಸಲ್ಪಡುತ್ತಿದ್ದವು. ಹಲವು ವೃತ್ತಿಗಳು ಕೀಳು ಎಂಬ ಭಾವನೆ ಇದ್ದ ಪರಿಸ್ಥಿತಿಯಲ್ಲಿ ಕೀಳರಿಮೆ ಕಾಡುತ್ತಿದ್ದ ಜನರಲ್ಲಿ ಆತ್ಮವಿಶ್ವಾಸ ತುಂಬುವ ಪ್ರಯತ್ನ ಶರಣರಲ್ಲಿ ನಡೆದಿದೆ. ವರ್ಗೀಕೃತ ವರ್ಣಾಶ್ರಮ ವ್ಯವಸ್ಥೆಯಲ್ಲಿ ಶೂದ್ರರು, ದಲಿತರು ಶೋಷಿತರಾಗಿದ್ದು ಆ ಜಾತಿಯಿಂದ ಹೊರಬಂದು ವೀರಶೈವ ಧರ್ಮಕ್ಕೆ ಸೇರಿ ಸಮಾನತೆಯ ಅವಕಾಶ ಪಡೆದಿದ್ದರು. ಆದರೆ ಅವರನ್ನು ಹೀನಾಯವಾಗಿ ಕಾಣುವವರಿಗೆ 'ದೇವಸಹಿತ ಭಕ್ತ ಮನೆಗೆ ಬಂದೊಡೆ ಕಾಯಕವಾವುದು' ಎಂದು ಕೇಳಿದರೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ, 'ತಲೆ ದಂಡ' ಎಂಬ ಎಚ್ಚರಿಕೆಯನ್ನು ಬಸವಣ್ಣನವರು ಉಗ್ರವಾಗಿಯೇ ಹೇಳಿರುವುದು ಈ ಹಿನ್ನೆಲೆಯಲ್ಲಿ. ಆದ್ದರಿಂದ ಕಾಯಕಕ್ಕೆ ಗೌರವ ನೀಡಲು ಶರಣರ ಚಿಂತನೆಗಳು ಮಿಡಿದಿವೆ. ಪ್ರತಿ ಕಾಯಕವೂ ಶ್ರೇಷ್ಠ, ಅದರದೇ ಆದ ಕೌಶಲ, ವೈಶಿಷ್ಟ್ಯಗಳಿಂದ ಉನ್ನತವಾದುದು. ವ್ಯಕ್ತಿಗಳಿಗೆ ಕಾಯಕದಿಂದ ಮಾನ್ಯತೆ ನೀಡಬೇಕು; ಕುಲ, ಜಾತಿ ಗಮನಿಸಬಾರದು ಎಂಬ ನಿಯಮಗಳನ್ನು ರೂಢಿಸಿದರು. ಬೆವರು ಹರಿಸದೆ ಗಳಿಸಿದ ಹಣ ತ್ಯಾಜ್ಯ ಎಂದು ನಿರ್ಲಕ್ಷ್ಯ ತೋರಿದರು. ಬಸವಾದಿ ಪ್ರಮಥರಿಂದ ಸ್ಫೂರ್ತಿ ಪಡೆದ ವಿವಿಧ ಕಾಯಕಗಳ ಶರಣರು ತಮ್ಮನ್ನು ವೃತ್ತಿಗಳ ಮೂಲಕ ಗುರುತಿಸಿಕೊಂಡು ಹೆಮ್ಮೆ ಪಡೆದರು.

ಶರಣರು ಕಾಯಕಕ್ಕೆ ವ್ರತಗಳನ್ನು, ನಿಯಮಗಳನ್ನು ರೂಪಿಸಿದರು. 'ಕೊಲುವವನೆ ಮಾದಿಗ, ಹೊಲಸ ತಿಂಬುವವನೇ ಹೊಲೆಯ. ಕುಲವೇನೋ ಆವದಿರ ಕುಲವೇನೋ' ಎಂದು ಕುಲದ ಬಗ್ಗೆ ಸ್ಪಷ್ಟನೆ ನೀಡಿದರು. "ಆವಾವ ಜಾತಿಗೋತ್ರದಲಿ ಬಂದಡೂ ತಂತಮ್ಮ ಕಾಯಕಕ್ಕೆ ಭಕ್ತಿಸೂತಕವಿಲ್ಲದಿರಬೇಕು. ಆವಾವ ವ್ರತ ಹಿಡಿದಡೂ ಇತರ ದಾಕ್ಷಿಣ್ಯ ಮರೆದು ತನ್ನಯ ತ್ರಿಕರಣ ಶುದ್ಧವಾಗಿ ನಡೆಯಬೇಕು. ಪುರುಷಾರ್ಥಕ್ಕೆ ಅರಿಯಿಸಿಕೊಂಬಡೆ ಮೂಗ, ಅದು ಹಿರಿಯರು ಹೇಳಿದರೆಂದು ಕಲಸಬಹುದೆ ಅಮಂಗಲವ. ಇಂತೀ ಕ್ರಿಯೆಯಲ್ಲಿ ಭಾವಶುದ್ಧವಾಗಿ ಭಾವದಲ್ಲಿ ದಿವ್ಯಜ್ಞಾನ ಪರಿಪೂರ್ಣನಾಗಿರ್ಪ ಗುರುಚರಭಕ್ತರಿಗೆ ಚೆನ್ನಬಸವಣ್ಣ ಸಾಕ್ಷಿಯಾಗಿ ಕಮಲೇಶ್ವರ ಲಿಂಗವು ತಾನೆ ಎಂದು ಭಾವಿಸುವನು." -ಹೀಗೆ ತ್ರಿಕರಣಶುದ್ಧಿಯ ಭಕ್ತಿ ನಿಯಮಗಳನ್ನು ಪಾಲಿಸುತ್ತಾ ಕಾಯಕದಲ್ಲಿ ತಲ್ಲೀನನಾದರೆ ಆತ ಜ್ಞಾನಪರಿಪೂರ್ಣನು ಎಂಬ ಮಹತ್ ಸತ್ಯವನ್ನು ಸಾರಿ ಸ್ಫೂರ್ತಿ ನೀಡಿದರು. ಶರಣರ ಈ ಉದಾತ್ತ ಚಿಂತನೆಗಳು ಸಮಾಜದ ಕೆಳವರ್ಗದ ಜನರಲ್ಲಿ ಆತ್ಮವಿಶ್ವಾಸ ತುಂಬಿತು, ಸ್ಫೂರ್ತಿನೀಡಿತು. ತಮಗೆ ಇಚ್ಛೆಯಾದ ವೃತ್ತಿಗಳಲ್ಲಿ ತೊಡಗಿ, ಶರಣಪಥದಲ್ಲಿ ತೊಡಗಿ ಅದರ ನೀತಿ, ತತ್ವಗಳನ್ನು ಪಾಲಿಸಿದರು. ಬಡತನ ನಿವಾರಣೆಯಾಯಿತು. ದುಡಿದು ತಿನ್ನುವ ಛಲ ಮೂಡಿತು. ನಿರುದ್ಯೋಗ ನಿವಾರಣೆಯಾಗಿ ಹಸಿವು ದೂರವಾಯಿತು, ನೆಮ್ಮದಿ ಮೂಡಿ ಮನಸ್ಸು ಧಾರ್ಮಿಕತೆಗೆ ಎಡೆ ನೀಡಿತು. ಧಾರ್ಮಿಕ ತತ್ವಗಳಲ್ಲಿ ಆಸಕ್ತಿ ವೃದ್ಧಿಸಿತು. ಭಕ್ತಿ ಅರಳಿತು, ಬಾಳು ಬೆಳಗಿತು. ಶರಣರ ಆರ್ಥಿಕ ಚಿಂತನೆಗಳಲ್ಲಿ ಪ್ರಮುಖವಾದ ಕಾಯಕವು ಸಮಾಜದ ಹಸಿವು, ಬಡತನ, ನಿರುದ್ಯೋಗ ನಿವಾರಣೆಯ ಪ್ರಮುಖ ಅಸ್ತ್ರವಾಯಿತು. ಶ್ರಮಗೌರವ, ಆಧ್ಯಾತ್ಮಿಕ ಅನುಸಂಧಾನ, ಧಾರ್ಮಿಕತೆಗಳ ದಿವ್ಯತೆಯು ದೊರೆಯಿತು. ಎಂತಹ ಮಹತ್ವದ ಪರಿವರ್ತನೆ ಶರಣರಿಂದ ಸಾಧ್ಯವಾಯಿತು ಎಂಬುದು ಅಚ್ಚರಿ ತರುತ್ತದೆ!

ಬಸವಣ್ಣ, ಚೆನ್ನಬಸವಣ್ಣ, ಅಲ್ಲಮ, ಆಯ್ದಕ್ಕಿ ಮಾರಯ್ಯ ಮುಂತಾದವರು ಶರಣರೊಡನೆ ಮಹಾಮನೆಯ ಅನುಭವ ಮಂಟಪದಲ್ಲಿ ಒಂದಾಗಿ ಕಲೆತು ಧಾರ್ಮಿಕ ಚಿಂತನೆಗೆ ತೊಡಗಿದರು. ಕಾಯಕದ ಬಗ್ಗೆ ಚರ್ಚಿಸಿದರು. ಕಾಯಕದ ಮಹತ್ವದ ಬಗ್ಗೆ ಎಲ್ಲರಲ್ಲೂ ಒಮ್ಮತವಿದ್ದರೂ ಭಿನ್ನ ದೃಷ್ಟಿಕೋನಗಳು ಇಲ್ಲದೇ ಇಲ್ಲ. ಅಲ್ಲಮಪ್ರಭು 'ಕಾಯಕ'ದ ಬಗ್ಗೆ ಒಂದೇ ವಚನದಲ್ಲಿ ಹೇಳಿದ್ದು, ಕಾಯಕ ಸಮಾನತೆಯನ್ನು ಹೇಳುತ್ತಾರೆ. ಉಳಿದಂತೆ ಬಸವಣ್ಣ, ಚನ್ನಬಸವಣ್ಣ, ನುಲಿಯ ಚೆಂದಯ್ಯ,

ಕಾಳವ್ವೆ, ರೆಮ್ಮವ್ವೆ, ಮೆರೆಮಿಂಡದೇವ, ಸಿದ್ಧರಾಮ ಮುಂತಾದ ಶರಣರು ಹೆಚ್ಚು ಒತ್ತನ್ನು ಕೊಟ್ಟು ಹೇಳಿದರೂ, ಆಯ್ದಕ್ಕಿ ಮಾರಯ್ಯನ ಕಾಯಕನಿಷ್ಠೆ ಪರಾಕಾಷ್ಠೆಯದು ಎಂಬುದು ಗಮನಾರ್ಹ. ಕಾಯಕವನ್ನು ಗೌರವವೆಂದು ಒಪ್ಪಿಕೊಂಡ ದುಡಿಮೆಯ ಕಾಯಕವನ್ನು ಲಿಂಗಾರಾಧನೆ ಎಂದು ಭಾವಿಸಿದ್ದು ಅತಿ ದೊಡ್ಡ ಕ್ರಾಂತಿಯೇ ಸರಿ. ಶರಣರ ಜೊತೆಗೂಡಿದ ಹಡಪದ ಅಪ್ಪಣ್ಣ - ಲಿಂಗಮ್ಮನಂತಹ ಬಡದಂಪತಿಗಳಿಗೆ ಜೀವನದಲ್ಲಿ ಕೆಳಜಾತಿಯ ಹೀನತೆ, ಬಡತನಗಳೆಂದೂ ಬಾಧಿಸಲಿಲ್ಲ. ಅಕ್ಷರವಂಚಿತರು ಅಕ್ಷರಸ್ಥರಾಗಿ ವಚನ ರಚಿಸುವ ಮಟ್ಟಕ್ಕೆ ಬೆಳೆದರು. ವ್ಯಕ್ತಿತ್ವ ವಿಕಾಸವಾಯಿತು. "ಕನಿಷ್ಠದಲಿ ಹುಟ್ಟಿ, ಉತ್ತಮರಲಿ ಬೆಳೆದೆ, ಸತ್ಯ ಶರಣರ ಪಾದವಿಡಿದೆ, ತನ್ನ ಕಂಗಳ ಮುಂದಣ ಕತ್ತಲು ಹರಿಯಿತು' ಎಂದು ಹೇಳಿದ್ದು ಪರಿವರ್ತನೆಯ ಸತ್ಯದ ನುಡಿಗಳು! ಕ್ಷೌರಿಕ ವೃತ್ತಿಯಲ್ಲಿ ಗುರುಲಿಂಗ ಜಂಗಮ ಪ್ರಸಾದ ಪಡೆದು, ಕೀಳುತನ ತೊಡೆದುಕೊಂಡ ದಂಪತಿಗಳು ಅಗಾಧ! ಕಸಗುಡಿಸುವ ಕಾಯಕದಲ್ಲಿ 'ಲಂಚ ವಂಚನಕ್ಕೆ ಕೈಯಾನದ ಭಾಷೆ' ಸತ್ಯಕ್ಕನದಾದರೆ, ಕದಿರ ಕಾಯಕದ ರೆಮ್ಮವ್ವೆ ನೂಲುತ್ತಲೇ ಶಿವಜ್ಞಾನ ಗಳಿಸಿದಳು. ಹೀಗೆ ಶರಣರು ರೂಢಿಸಿದ ಕಾಯಕ ತತ್ವಗಳು ಸ್ವಾಭಿಮಾನದ ಜತೆಗೆ ಧಾರ್ಮಿಕ ಪರಿವರ್ತನೆ ತಂದಿತು.

ಕಾಯಕದ ಬಗ್ಗೆ ಪ್ರತಿಯೊಬ್ಬ ಶರಣನದು ವಿಶಿಷ್ಟ ನಿಲುವು. ಅದನ್ನು ವಚನಗಳ ಮೂಲಕ ದಾಖಲುಗೊಳಿಸಿದ್ದಾರೆ. ಅವು ಕಾಯಕತತ್ವದ ನಿಯಮಗಳೇ ಆಗಿದ್ದು ಅವರವರ ಜೀವನದಲ್ಲಿ ವ್ರತ, ನೇಮ ಎಂದೇ ಪರಿಗಣಿಸುವಂತಹ ಅಂಶಗಳು. ಆದರೂ ಸಾರ್ವತ್ರಿಕ ಪ್ರಸ್ತುತತೆಗೂ ಒಳಗಾಗುವ ಸತ್ಯದ ತತ್ವಗಳು ಅರ್ಥಪೂರ್ಣವಾಗಿವೆ. ಶಿವಲೆಂಕ ಮಂಚಣ್ಣನಿಗೆ ಶಿವತತ್ವ ಪ್ರಚಾರವೇ ಕಾಯಕ. ಈತನ ದೃಷ್ಟಿಯಲ್ಲಿ ಕಾಯಕ, ಜ್ಞಾನ ಪರಸ್ಪರ ಪೂರಕ, ಜತೆಗೆ ಶರೀರ ಶ್ರಮವೇ ಮುಖ್ಯ:

ಕಾಯಕವೆಂದು ಕಾಯವ ಬಳಲಿಸದೆ,
ತನು ಕರಗದೆ, ಮನ ನೋಯದೆ
ಬೇಡಿ ಬೇಡಿ ಕಾಡುವುದು ದಾಸೋಹವೇ?
ಹೇಳಾ ಈಶಾನಮೂರ್ತಿ ಮಲ್ಲಿಕಾರ್ಜುನ ಲಿಂಗವೇ.

ಕಾಯಕವಿಲ್ಲದೆ ಜೀವಕ್ಕೆ ನೆಲೆಯಿಲ್ಲ
ಜೀವವಿಲ್ಲದೆ ಜ್ಞಾನಕ್ಕೆ ಕುರುಹಿಲ್ಲ
ಜ್ಞಾನವಿಲ್ಲದೆ ಬೆಳಗಿಗೆ ಒಡಲಿಲ್ಲ,
ಒಂದಕ್ಕೊಂದಂಗಿ ಕಾಂಬ ಠಾವ ಹೇಳಾ
ಈಶಾನಮೂರ್ತಿ ಮಲ್ಲಿಕಾರ್ಜುನಲಿಂಗವೇ.

ನಗೆಯ ಮಾರಿತಂದೆ ಎಂಬ ಭಕ್ತನಿಗೆ ಮತ್ತೊಬ್ಬರನ್ನು ಬೇಡುವುದು ಕರಕಷ್ಟ ಎಂಬ ಭಾವ. "ಹೊತ್ತ ದೇಹಕ್ಕೆ ನಗೆಯ ಚಿತ್ತದ ಕಾಯಕ. ಇದನೊಪ್ಪುಗೋ ಆತುರವೈರಿ ಮಾರೇಶ್ವರಾ" ಎಂದು ಎನ್ನ ಚಿತ್ತದಲಿ ತಲೆದೋರಿ ನೀನಾಡಿಸಿದಂತೆ ಆಡಿದೆ, ನೀ ಕೊಟ್ಟ ಕಾಯಕವ ಹೊತ್ತೆ, ನೀ ಹೇಳಿದ ಬಿಟ್ಟಿಯ ಮಾಡಿದೆ", ಎಂಬ ನಿಲುವು. ನುಲಿಯ ಚಂದಯ್ಯನ ಕಾಯಕ ನಿಷ್ಠೆಯ ಕಲ್ಪನೆ ಅರ್ಥಪೂರ್ಣವಾಗಿದೆ. 'ಕಾಯಕ ಭಾವಶುದ್ಧವಾಗಿರಬೇಕು, ಹಾಗೆ ಬಂದುದನ್ನು ಗುರು ಲಿಂಗ ಜಂಗಮಕ್ಕೆ ವಿನಿಯೋಗಿಸುವುದೇ ಶಿವಪೂಜೆ' ಎಂಬ ನಿಲುವಿನಲ್ಲಿ ನಾವಿನ್ಯತೆಯಿದೆ. ಕಾಯಕ ದಾಸೋಹ ಸಮನ್ವಿತವಾಗಿದ್ದರೆ ಮಾತ್ರ ಪವಿತ್ರವಾಗುತ್ತದೆ, ಎಂಬ ಭಾವವಿದೆ.

ಗುರುವಾದರೂ ಕಾಯಕದಿಂದಲೇ ಜೀವನ್ಮುಕ್ತಿ
ಲಿಂಗವಾದರೂ ಕಾಯಕದಿಂದಲೇ ಶಿಲೆಯ ಕುಲ ಹರಿವುದು
ಜಂಗಮವಾದರೂ ಕಾಯಕದಿಂದಲೇ ವೇಷದ ಪಾಶ ಹರಿವುದು
ಇದು ಚೆನ್ನಬಸವಣ್ಣಪ್ರಿಯ ಚಂದೇಶ್ವರ ಲಿಂಗದ ಅರಿವು.

ಇನ್ನೊಬ್ಬರ ಹಂಗಿನಲ್ಲಿ ಬದುಕುವ ಜೀವನ ಜೀವನವೇ ಅಲ್ಲ. ಮತ್ತೊಬ್ಬರ ಗಳಿಕೆಯಿಂದ ಉದರವನ್ನು ಹೊರೆವ ಭಕ್ತ-ಗುರು-ಜಂಗಮರನ್ನು ತಿರಸ್ಕರಿಸಬೇಕು ಎಂಬ ಕಾಠಿಣ್ಯದ ಸ್ವಾಭಿಮಾನದ ವ್ಯಕ್ತಿತ್ವದ ಚಂದಯ್ಯನ ಕಾಯಕ ಆತ್ಮಾಭಿಮಾನದಿಂದ ಆವೃತ್ತವಾಗಿದೆ.

ಹುಲ್ಲು ಮಾರುವ ಕಾಯಕದ ಹೊಡೆಬಲ್ಲ ಬಂಕಣ್ಣನು ಭಾವಶುದ್ಧ ಕಾಯಕದ ಬಗ್ಗೆ ಹೇಳಿದರೆ, ಕುಂಬಾರ ಗುಂಡಯ್ಯನ ಕಾಯಕದ ಅರ್ಥವು ತಾತ್ವಿಕವಾಗಿದೆ. ಕಾಯಕವು ಯೋಗಾಭ್ಯಾಸದ ಒಂದು ಸಾಧನ ಎಂಬ ಅಂಶ ಕೆಲವರಿಗೆ, ಪತ್ರೆ, ಹೂಗಳನ್ನು ತಂದು ಕೊಡುವ ಕಾಯಕದ ಚಿಕ್ಕಮಾದಯ್ಯನೆಂಬ ಭಕ್ತನು ಕಾಯಕದಲ್ಲಿ ಹಣ ಬಂದರೆ ಹಿಗ್ಗದೆ, ಕಡಿಮೆ ಬಂದರೆ ಕುಗ್ಗದೆ ಯಾವಾಗಲೂ ಸಮಾಧಾನಿಯಾಗಿರಬೇಕು ಎಂಬ ಶಿವಾರ್ಪಣದ ಭಾವದಿಂದ ಕೂಡಿದ್ದನು.

ಹಾವಿನಹಾಳ ಕಲ್ಲಯ್ಯನೆಂಬ ಶರಣನಿಗೆ ಪರಮ ಪದವಿಯನೆ ನಿಮ್ಮ ಕೊರಳಲ್ಲಿ ಕಟ್ಟಿಕೊಳ್ಳಿ. ಪರಮ ಪದವಿಯನೆ ನಿಮ್ಮ ಎದೆಯಲ್ಲಿ ಇರಿದುಕೊಳ್ಳಿ.... ನಿಮ್ಮ ತಲೆಯಲ್ಲಿ ಸುತ್ತಿಕೊಳ್ಳಿ, ನಿಮ್ಮ ತೊತ್ತು ಸೇವೆಯೇ ಸಾಕು ಎನಗೆ ಮಹಾಲಿಂಗ ಕಲ್ಲೇಶ್ವರ ದೇವಾ' ಎಂಬ ಭೃತ್ಯಾಚಾರದ ಕರ್ಮಯೋಗಿಯ ನಿಲುವು, 'ಕಾಯಕದಲ್ಲಿ ನಿಷ್ಕಾಮ ಬುದ್ಧಿಯಿಂದ ಮಾಡುವುದು ಅಗತ್ಯವೇ ಹೊರತು ಮುಕ್ತಿಯ ಬಯಕೆ ಇರಬಾರದು' ಎಂಬ ಭಾವನೆ.

ಕನ್ನಡಿಕಾಯಕದ ಅಮುಗಿದೇವಯ್ಯ 'ಕಾಯಕಕ್ಕೆ ಜಾತಿಗೋತ್ರಗಳ ಸೂತಕವಿಲ್ಲದಿರಬೇಕು' ಎಂದರೆ ಮೆರೆಮಿಂಡದೇವ 'ಅಸಿಯಾಗಲಿ, ದೃಷ್ಟಿಯಾಗಲಿ, ವಾಚಕ, ವಾಣಿಕ, ಮಸಿಯಾಗಲಿ, ಮಾಡುವಲ್ಲಿ ಹುಸಿ ಇಲ್ಲದಿರಬೇಕು' ಎಂಬ ಸತ್ಯಪರ ದೃಷ್ಟಿ.

ಆಯ್ದಕ್ಕಿ ಮಾರಯ್ಯ ದಂಪತಿಗಳ ಕಾಯಕ ಪ್ರೇಮ ಅಸದೃಶ, ಕಟ್ಟಾ ಕಾಯಕ ಪ್ರೇಮ. ಈ ದಂಪತಿಗಳ ಜೀವನ ಮೌಲ್ಯವಾಗಿ ಕಾಯಕ ದರ್ಶನವಿದೆ:

> ಕಾಯಕದಲ್ಲಿ ನಿರತನಾದರೆ ಗುರುದರ್ಶನವಾದರೂ ಮರೆಯಬೇಕು
> ಲಿಂಗಪೂಜೆಯಾದರೂ ಮರೆಯಬೇಕು
> ಜಂಗಮ ಮುಂದಿದ್ದಡೂ ಹಂಗು ಹರಿಯಬೇಕು
> ಕಾಯಕವೇ ಕೈಲಾಸವಾದ ಕಾರಣ
> ಅಮರೇಶ್ವರ ಲಿಂಗವಾಯಿತ್ತಾದಡೂ ಕಾಯಕದೊಳಗು.

ಕರ್ತವ್ಯನಿಷ್ಠನಿಗೆ ಪರಮಾತ್ಮನೇ ಪ್ರತ್ಯಕ್ಷನಾದರೂ ಕಾಯಕವನ್ನು ಬಿಡಲಾಗದು ಎಂಬ ಅತೀವ ಪ್ರೇಮ. ಕಾಯಕ ಜೀವಿ ಮಾರಯ್ಯನಿಗೆ ಶರೀರ ಬಳಲಿಸಿ ತರಬೇಕು. ಇತರರ ಹಂಗಿಗೆ ಒಳಗಾಗದೆ ಗಳಿಸಬೇಕು. ಕಾಯಕದಿಂದಲೇ ಎಲ್ಲ ಸಾಧನೆಗಳೂ ನಡೆಯಬೇಕು ಎಂಬ ಅಭಿಪ್ರಾಯ ಆದ್ದರಿಂದಲೇ

> ತವನಿಧಿಯ ಬೆಳೆವಂಗೆ ಕಣಜದ ಹಂಗುಂಟೇ?
> ವಿರಕ್ತರಿಗೆ ಆರೈಕೆಗೊಂಬವರುಂಟೇ
> ಕಾಯಕವ ಮಾಡುವ ಭಕ್ತರಿಗೆ ಇನ್ನಾರನು ಕಾಡಲೇಕೆ

ಎಂಬ ಸ್ವಾಭಿಮಾನದ ನಿಲುವು. ಅವನ ಭಾವಕ್ಕೆ ಪೂರಕಳಾದ ಸತಿ, ಲಕ್ಕಮ್ಮ. ಕಾಯಕಕ್ಕೆ ವಿಳಂಬವಾಗುತ್ತದೆ ಎಂದು ಎಚ್ಚರಿಸಿ 'ಕಾಯಕ ನಿಂದಿತ್ತು ಹೋಗಯ್ಯಾ, ಎನ್ನಾಳ್ದನೇ' ಎಂಬ ಸಮಯಪ್ರಜ್ಞೆಯುಳ್ಳ ಸತಿ. 'ಕಾಯಕವಿರುವ ಭಕ್ತರಿಗೆ ಬಡತನವೇ ಇಲ್ಲ ಎಂಬ ಸ್ವಾಭಿಮಾನದ ಸಂತೃಪ್ತ ನಿಲುವು ಆಕೆಯದು. ಕಾಯಕ ಮಾಡುವೆನೆಂದು ಹೆಚ್ಚಾಗಿ ಗಳಿಸುವ

ಆಸೆಬುರುಕತನವನ್ನು ವಿರೋಧಿಸುತ್ತಾ 'ಆಸೆ ಎಂಬುದು ಅರಸಿಂಗಲ್ಲದೆ ಶಿವಭಕ್ತರಿಗುಂಟೇ' ಎಂದು ಪ್ರಶ್ನಿಸಿ ಶಿವಭಕ್ತರ ಉನ್ನತ ರೀತಿ ನೀತಿಗಳನ್ನು ಮೆರೆದಿದ್ದಾಳೆ. 'ಕಾಯಕವಳಿದ ಠಾವಿನಲ್ಲಿ ಜೀವನದ ಎಡೆಯಾಟವುಂಟೇ? ಕಾಯಕವಳಿದ ಭಕ್ತಿ ಹೋಯಿತ್ತು' ಎಂಬ ನಿಶ್ಚಿತ ನಿಲುವು ಲಕ್ಕಮ್ಮನ ವೈಚಾರಿಕ ವ್ಯಕ್ತಿತ್ವದಲ್ಲಿ ಕಂಡುಬರುತ್ತದೆ.

ಇದೇ ರೀತಿ ಅನೇಕ ಶರಣೆಯರೂ ಕಾಯಕದ ಬಗ್ಗೆ ತಮ್ಮ ವಿಚಾರಗಳನ್ನು ಹೇಳುವಲ್ಲಿ ಹಿಂದೆ ಬೀಳಲಿಲ್ಲ. ಎಲ್ಲರಿಗೂ ಕಾಯಕ ಸತ್ಯಶುದ್ಧವಾಗಿರಬೇಕು ಎಂಬ ಒಮ್ಮತದ ನಿಲುವು. ಉರಿಲಿಂಗಪೆದ್ದಿ ಎಂಬ ಶರಣನ ಪತ್ನಿ ಕಾಳವ್ವೆಗೆ 'ಕೃತ್ಯ ಕಾಯಕವಿಲ್ಲದವರು ಭಕ್ತರಲ್ಲ. ಸತ್ಯಶುದ್ಧವಲ್ಲದುದು ಕಾಯಕವಲ್ಲ' ಎಂಬ ಏಕಚಿತ್ತದ ಅಭಿಪ್ರಾಯ. ಬಾಚಿ ಕಾಯಕದ ಬಸವಯ್ಯಗಳ ಸ್ತ್ರೀ ಕಾಳವ್ವೆ 'ಕಾಯಕ ತಪ್ಪಿದಡೆ ಸೈರಿಸಬಾರದು, ವ್ರತ ತಪ್ಪಲೆಂತೋ ಸೈರಿಸಬಾರದು' ಎಂದು ಹೇಳಿ ಕಾಯಕಕ್ಕೆ ಆದ್ಯತೆ ನೀಡಿದ್ದಾಳೆ. ಕದಿರ ಕಾಯಕದ ಕಾಳವ್ವೆ ಎಂಬ ಶರಣೆಗೆ 'ಕದಿರು ಮುರಿಯೆ ಏನೂ ಇಲ್ಲ' ಎಂದು ಕಾಯಕವಾದ ಕದಿರು ಮುರಿದು ಹೋದ ಮೇಲೆ ಜೀವನದಲ್ಲಿ ಬೇರೆ ಏನೂ ಆಸಕ್ತಿ ಉಳಿಯುವುದಿಲ್ಲ ಎಂಬ ವೈರಾಗ್ಯಭಾವ. ಅಕ್ಕಮ್ಮನೆಂಬ ಶರಣೆಗೆ ಸತ್ಯಶುದ್ಧ ಕಾಯಕವು ವ್ರತಾಚರಣೆಯಂತೆ ನಿಷ್ಠೆಯಿಂದ ಕೂಡಿರಬೇಕು ಎಂಬ ಅಭಿಪ್ರಾಯ:

ತಾ ಮಾಡುವ ಕೃಷಿಯ ಮಾಡುವನ್ನಬರ ಮಾಡಿ
ಕೃಷಿತೀರಿದ ಮೇಲೆ ಗುರುದರ್ಶನ, ಲಿಂಗಪೂಜೆ, ಜಂಗಮಸೇವೆ
ಶಿವಭಕ್ತನ ಸುಖ ಸಂಭಾಷಣೆ, ಶರಣರ ಸಂಗ

ಎಂಬ ನೇಮವನ್ನು, ಕಾಯಕ ರಹಸ್ಯವನ್ನು ತಿಳಿಸುತ್ತಾಳೆ.

ರೆಮ್ಮವ್ವೆ ಎಂಬ ಶರಣೆ ಸಹಾ "ತಾ ನೇಮವ ಮಾಡಿರೋದು ಕೃಷಿ ಬೇಸಾಯವಲ್ಲದೆ ಒಡೆಯರ ಕಟ್ಟಪ್ಪಣೆಯ ಮಾಡುವುದೆಂತು? ಹೀಂಗಲ್ಲದೆ ಎನ್ನ ಒಡಲ ಹೊರೆವೆನೆಂದು ಹೋದ ಠಾವಿನಲ್ಲಿ ಓಗರವನ್ನಿಕ್ಕುವ ಲಾಗಿನ ಶೀಲವಂತರ ಮನದ ಭೇದವ ನೀವೇ ಬಲ್ಲಿರಿ' ಎಂದು ತನ್ನ ಕಾಯಕ ನೇಮದ ಬಗ್ಗೆ ಹೇಳಿದರೆ, 'ಕಾಯವಿಡಿದಹನ್ನೆಬರ ಶಿವಭಕ್ತರಿಗೆ ಕಾಯಕವೆ ಕೈಲಾಸ' ಎಂದು ಮನಸಂದ ಮಾರಿತಂದೆ ಹೇಳಿದ್ದಾನೆ. ಶರಣ ಸಿದ್ಧರಾಮೇಶ್ವರನಿಗೆ "ಕೃಷಿಯ ಮಾಡಿ ಉಣ್ಣದೆ ಹಸಿವು ಹರಿವ ಪರಿ ಇನ್ನೆಂತೋ ಕರ್ಮಯೋಗವ ಮಾಡದೆ ನಿರ್ಮಲ ಚಿತ್ತವನರಿವ ಪರಿ ಇನ್ನೆಂತೋ" ಎಂದು ತಿಂದದ್ದು ಜೀರ್ಣವಾಗಲಾದರೂ ಕಾಯಕ ಮಾಡಲೇ ಬೇಕು. ದೇಹಪೋಷಣೆ, ಆರೋಗ್ಯವೂ ಕೂಡಿ ಕೃಷಿಯಿಂದ ಆಹಾರೋತ್ಪಾದನೆ ಧಾನ್ಯಸಂವರ್ಧನೆ ಸಹಾ ಹೆಚ್ಚುತ್ತದೆ. ಆಧ್ಯಾತ್ಮಿಕ ಸಾಧನೆಗೂ ಕ್ರಿಯೆ ಅಗತ್ಯ ಎನ್ನುತ್ತಾನೆ.

ಚೆನ್ನಬಸವಣ್ಣನವರು ಸಹಾ 'ತನು ಮನ ಬಳಲಿಸದೆ ಉದ್ದಂಡ ವೃತ್ತಿಯಲ್ಲಿ ಧನ ಗಳಿಸುವನು ಕಳ್ಳ, ಭವಿ, ಭ್ರಷ್ಟನೆಂದು ಕರೆದರೆ, ಆವ ಕಾಯಕವ ಮಾಡಿದಡೂ ಕಾಲಾಂತಕ ಭೀಮೇಶ್ವರ ಲಿಂಗಕ್ಕೆ ಅರ್ಪಿತ' ಎಂದು ಢಕ್ಕೆಯ ಬೊಮ್ಮಣ್ಣ ಹೇಳಿದ್ದಾನೆ.

ಬಸವಣ್ಣನವರು ಧನದಲ್ಲಿ ಶುಚಿ, ಪ್ರಾಣದಲ್ಲಿ ನಿರ್ಭಯ ಇರಬೇಕು. 'ಕಂದಿಸಿ ಕುಂದಿಸಿ ಧನ ಸಂಪಾದನೆ ಮಾಡುವ ಕಾಯಕವಾಗಬೇಕು' "ನಾನು ಆರಂಭವ ಮಾಡುವೆನಯ್ಯ ಗುರುಪೂಜೆಗೆಂದು..... ಲಿಂಗಾರ್ಚನೆಗೆಂದು, ನಾನು ಪರಸೇವೆಯ ಮಾಡುವೆನಯ್ಯ ಜಂಗಮ ದಾಸೋಹವೆಂದು" ಎಂಬ ವಿನಯದ ವ್ಯಕ್ತಿತ್ವ ತೋರಿದರು. ಅಲ್ಲಮಪ್ರಭು 'ಮಾಡುವ ಮಾಟದಿಂದವೆ ಬೇರೊಂದನರಿಯಬೇಕು, ಅರಿವಿಂಗೆ ನೆಮ್ಮುಗೆ ಒಡಗೂಡಬೇಕು' ಎಂಬುದು ಕಾಯಕದ ಮೂಲಕ ಸಮಾಜಕ್ಕೆ ನೀಡುವ ಫಲಗಳ ಬೇರೆ ಬೇರೆ ಅರ್ಥಗಳನ್ನು ಅರಿಯಬೇಕು. ಆಗ ಸ್ವಂತ, ಪರಾರ್ಥ. ಸಮಾಜಕ್ಕೆ ಅದು ಉಪಯೋಗವಾಗುತ್ತದೆ. ಸ್ವಾರ್ಥ ಕಳೆದು ನಿಜದ ಅರಿವು ಉಂಟಾಗಿ ನೆಮ್ಮದಿ ಮೂಡುತ್ತದೆ ಎಂಬ ಔನ್ನತ್ಯದೆಡೆಗೆ ಸೂಚನೆ ನೀಡುತ್ತದೆ. ಅಲ್ಲದೆ ಕಾಯಕದ ಜತೆಗೆ ಆಧ್ಯಾತ್ಮಿಕ ಸಾಧನೆಯ ವೈಶಿಷ್ಟ್ಯವನ್ನೂ ವಿವರಿಸಿದ್ದಾರೆ.

ಹೀಗೆ ಶರಣರು ಕಾಯಕದ ಬಗ್ಗೆ ವಿವಿಧ ವಿಚಾರಗಳನ್ನು ಮಂಡಿಸುವುದರ ಜತೆಗೆ ಅದರ ಅರ್ಥವನ್ನೂ, ಅರ್ಥವಿಸ್ತಾರವನ್ನು ಖಚಿತಪಡಿಸಿದರು. ನಿಯಮಗಳನ್ನು ರೂಪಿಸಿದರು, ತಮ್ಮ ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಅದರ ಸಾಧಕಬಾಧಕಗಳ ಬಗ್ಗೆಯೂ ಅನುಭವಪೂರ್ವಕವಾಗಿ ಚರ್ಚಿಸಿ ಅನುಷ್ಠಾನಗೈದರು. ಕಾಯಕವು ಸ್ವಾವಲಂಬನಕ್ಕೆ ಮಾರ್ಗ. ಪರೋಪಜೀವಿಯಾಗದೆ ದುಡಿದು ಗಳಿಸಿ ತಿನ್ನಬೇಕು. ಕಾಯಕದಲ್ಲಿ ತನುಮನ ಬಳಲಿಸುವ ಶ್ರಮ ಇರಬೇಕು. ಜಾತಿಯ ಪ್ರಶ್ನೆ ಬರಬಾರದು. ಚಿತ್ತಶುದ್ಧಿ ಇರಬೇಕು. ಎಲ್ಲ ಕಾಯಕವೂ ಒಂದೇ ಎಂದರೆ ಸಮಾನ ಮತ್ತು ಕಾಯಕದ ಗಳಿಕೆಯ ಒಂದು ಭಾಗ ಗುರುಲಿಂಗ ಜಂಗಮಕ್ಕೆ ಅಥವಾ ಸಮಾಜಕ್ಕೆ ಸಲ್ಲಬೇಕು ಎಂಬ ತತ್ವಗಳು ರೂಢಿಗೆ ಬಂದವು. ಹೀಗೆ "ಕಾಯಕ ಎಂಬ ಮಾತು ಶರಣರು ವಿಚಾರ ಪ್ರಪಂಚಕ್ಕೆ ಕೊಟ್ಟ ಕಾಣಿಕೆ" (ಡಾ. ಎಚ್. ತಿಪ್ಪೇರುದ್ರಸ್ವಾಮಿ. ಶರಣರ ಅನುಭಾವ ಸಾಹಿತ್ಯ, ಪು. ೧೪೧) ಆಗಿದೆ.

ಶರಣರ ಕಾಯಕ ಚಿಂತನೆಯಲ್ಲಿ ಆರ್ಥಿಕ ಸಮಾನತೆಯೂ ಸ್ಥಾಪಿಸಿ ಸಮಾಜದ ನೆಮ್ಮದಿಗೆ ಕಾರಣವಾಯಿತು. ಅರ್ಥವ್ಯವಸ್ಥೆಯ ಸಮಗ್ರ ಚಿತ್ರಣವು ಶ್ರಮದ ದುಡಿಮೆಯನ್ನು ಅವಲಂಬಿಸಿದೆ. ಆಧುನಿಕ ಕಲ್ಯಾಣ ರಾಜ್ಯದ ಮೌಲ್ಯಗಳಾದ ಶರಣರು, ಆರ್ಥಿಕ ಚಿಂತನೆ, ಸಮಾನತೆ, ಸ್ವಾತಂತ್ರ್ಯ, ಸಾಮರಸ್ಯಗಳ ಪ್ರತಿಪಾದನೆ ಮಾಡಿ; ಅರ್ಥವಿಜ್ಞಾನದ ವ್ಯಾಪ್ತಿಯನ್ನು ವಿಸ್ತರಿಸಿ ತಮ್ಮದೇ ರೀತಿಯಲ್ಲಿ ವಿಶ್ಲೇಷಿಸಿದ್ದು ಮಹತ್ವದ ವಿಚಾರವೇ ಆಗಿದೆ.

ಅರ್ಥವ್ಯವಸ್ಥೆಯಲ್ಲಿ ಶ್ರಮ ಮತ್ತು ಬಂಡವಾಳ ಪ್ರಮುಖ ಪಾತ್ರ ವಹಿಸುತ್ತದೆ. 'ಲಾಭ' ಎಂಬುದು ಅರ್ಥಶಾಸ್ತ್ರದಲ್ಲಿ ನಿವ್ವಳ ಆದಾಯವಾಗಿರುತ್ತದೆ. ಇಂತಹ ಲೋಭದ ಆಕಾಂಕ್ಷೆ ಭೋಗಜೀವಿಗಳಿಗೆ ಮಾತ್ರ, ಶರಣರಿಗಲ್ಲ ಎಂಬ ಆಯ್ದಕ್ಕಿ ದಂಪತಿಗಳ ನಿಲುವು ಸಾಮಾಜಿಕ ಆರ್ಥಿಕ ಹೊಣೆಗಳನ್ನು ಶುದ್ಧರೂಪದಲ್ಲಿ ಆಯೋಜಿಸಿ ಪ್ರಕಟಿಸಿದ ಚಿಂತಕ ರಿಕಾರ್ಡೋವಿನ ನಿಲುವಿಗೆ ಸಮಾನವಾಗಿದೆ. ಪ್ರತಿಯೊಬ್ಬರೂ ನೈತಿಕತೆಯ ಆಧಾರದ ಮೇಲೆ ಸಮಾಜದ ಒಳಿತಿಗಾಗಿ ದುಡಿಯಬೇಕು ಎಂಬ ಗಾಂಧೀಜಿಯವರ ವಿಚಾರವು ಶರಣರ ಆರ್ಥಿಕ ಕಲ್ಪನೆಗೆ ಸಂವಾದಿಯಾಗಿಯೇ ಇದೆ. ಗಾಂಧೀಜಿ ಶ್ರಮವು ಹಣಕ್ಕಿಂತ ಮಿಗಿಲಾದುದು ಎಂಬ ಅಭಿಪ್ರಾಯ ಸಹಾ ಶರಣರ ಕಾಯಕ ತತ್ವಕ್ಕೆ ಸಮೀಪದಲ್ಲಿಯೇ ಇದೆ. ಗಾಂಧೀಜಿಯವರು ಹೇಳಿದಂತೆ "ನಿಜವಾದ ಅರ್ಥಶಾಸ್ತ್ರವು ಸಾಮಾಜಿಕ ನ್ಯಾಯವನ್ನು ಪ್ರತಿಪಾದಿಸುತ್ತದೆ. ಅದು ಎಲ್ಲರ ಹಿತವನ್ನು ವೃದ್ಧಿಸುತ್ತದೆ" (ಸಿ.ಕೆ. ರೇಣುಕಾರ್ಯ, ಅರ್ಥಿಕ ಚಿಂತನೆಯ ಹೊಂಗಿರಣಗಳು, ಪು. ೨೫೧). ಅಸಂಗ್ರಹ ನೀತಿಯನ್ನು ಪ್ರತಿಪಾದಿಸಿದ ಗಾಂಧೀಜಿಯವರ ಜನಪರ ನಿಲುವುಗಳು ಸಾಮಾಜಿಕ ಕಳಕಳಿಯಾದರೆ, ಬಸವಣ್ಣನವರ ಶಾರೀರಿಕ ಶ್ರಮವೇ ಕಾಯಕ ಎಂದು ಶ್ರಮದ ಗಳಿಕೆಯ ಶ್ರೇಷ್ಠತೆಯನ್ನು ಹೇಳಿದ್ದೂ ಸಹಾ ಸಾಮಾಜಿಕ ನ್ಯಾಯವೇ ಆಗಿವೆ. ಬಸವಣ್ಣನವರ ಮತ್ತು ಶರಣರ ನಿಲುವುಗಳ ಪರಿಚಯ ಅವರಿಗಿದ್ದಿದ್ದರೆ ಇನ್ನೂ ಸ್ಪಷ್ಟ ವಿಚಾರಗಳಿಂದ ಗಾಂಧೀಜಿ ಭಾರತದ ಘನತೆಯನ್ನು ವಿಶ್ವದಾದ್ಯಂತ ಎತ್ತಿ ಹಿಡಿಯುವ ಸದವಕಾಶವಾಗುತ್ತಿತ್ತೋ ಏನೋ?

ಇದಲ್ಲದೆ ಕ್ರೈಸ್ತಮತವು ದುಡಿಮೆಯ ರಹಸ್ಯವನ್ನು ಬೋಧಿಸಿದೆ. ಕಾರ್ಲ್‌ಮಾರ್ಕ್ಸ್ ಸ್ವಾವಲಂಬನೆಗೆ ಸಾಮ್ಯವಾದವನ್ನು ರೂಪಿಸಿ ವಿಸ್ತರಿಸಿದರೆ ಬಹು ಹಿಂದೆಯೇ ಶರಣರು ಕರ್ತವ್ಯಪರತೆಯನ್ನು ಬಡಿದೆಬ್ಬಿಸಿದರು. ಈ ದೃಷ್ಟಿಯಲ್ಲಿ ಶರಣರ ಕಾಯಕ ತತ್ವಗಳು 'ಸಿದ್ಧಾಂತ'ಗಳಾಗಿ ರೂಪುಗೊಂಡಿವೆ. ಅಲ್ಲದೆ ಕ್ರಿಯಾತ್ಮಕವಾಗಿ ನಡೆದಿವೆ. ಅವುಗಳ ಬದ್ಧತೆಯನ್ನು ಪ್ರಶ್ನಿಸುವುದು, ಸಾರ್ವಕಾಲಿಕ ಪ್ರಸ್ತುತಿಯನ್ನು ಅಲ್ಲಗಳೆಯುವುದು ಅಸಿಂಧುವೇ ಸರಿ.

ನೇಮದ ಕೂಲಿ:

ಕಾಯಕದ ವಿವರಣೆ ಜತೆಗೆ 'ನೇಮದ ಕೂಲಿ' ಎಂಬ ನುಡಿಗಟ್ಟನ್ನು ಸಹ ಶರಣರು ಅಲ್ಲಲ್ಲಿ ಬಳಸಿರುವುದು ಆಧುನಿಕ ಅರ್ಥಶಾಸ್ತ್ರೀಯ ನೆಲೆಯ 'Minimum wage' ಪದಕ್ಕೆ ಸಂವಾದಿಯಾಗಿದೆ. ಒಂದರ್ಥದಲ್ಲಿ ಎಲ್ಲ ಕಾಯಕವೂ, ವೃತ್ತಿಯೂ ನೇಮದ ಕೂಲಿಯೇ.

ಕಾಯಕ ಮತ್ತು ನೇಮದ ಕೂಲಿ ಎಂಬ ನಾಮಪದಗಳು ಸಂವಾದಿ ಪದಗಳೂ ಹೌದು. ದೈಹಿಕ ಶ್ರಮದ ದುಡಿಮೆ ಮತ್ತು ಆ ದುಡಿಮೆಯನ್ನು ಮಾಡುವಾಗ ಒಂದು ದಿನಕ್ಕೆ ಅಥವಾ ಕೆಲವು ಘಂಟೆಗಳ ಅವಧಿಗೆ ತಗಲುವ ನಿಯಮಿತ ಕೂಲಿಯನ್ನು ಮಾತ್ರ ಪಡೆದು ಕೆಲಸ ಮಾಡಬೇಕೆಂಬ ನಿಯಮಕ್ಕೆ 'ನೇಮದ ಕೂಲಿ' ಎಂದು ಹೇಳುತ್ತಿದ್ದಿರಬಹುದು. ಶ್ರಮದಿಂದಲೇ ಮೌಲ್ಯವು ಆಗುತ್ತದೆ ಎಂಬ ಜಾನ್‌ಲಾರ್ ಎಂಬ ಚಿಂತಕನ ಮಾತಿಗೂ ಶ್ರಮರೂಪದ ಕಾಯಕದ ಭಕ್ತಿಗೂ ಸಂವಾದಿ ಅರ್ಥವಿದೆ.

ನುಲಿಯ ಚಂದಯ್ಯ ಕಾಯಕದ ವಿಶ್ಲೇಷಣೆ ಮಾಡುವ ರೀತಿ ಅನನ್ಯವಾಗಿದೆ. ಅತ್ಯಂತ ಸರಳ, ಸ್ಪಷ್ಟ ವಿಚಾರಧಾರೆ ಅವನ ವಚನಗಳಲ್ಲಿದೆ. 'ಅರ್ಥಿಯ ಮಾಡುವ ಕೃತ್ಯವಂತರೆಲ್ಲ ಭಕ್ತರೇ?' ಎಂದು ವೃತ್ತಿ ಮಾಡುವವರೆಲ್ಲ ಭಕ್ತರಾಗಲು ಸಾಧ್ಯವೇ? ಎಂಬ ವಾಸ್ತವ ಸಮಸ್ಯೆಯನ್ನು ಪ್ರಶ್ನೆ ರೂಪದಲ್ಲಿ ಎತ್ತಿದ್ದಾನೆ. ಅಂದಂದಿನ ದಂದುಗ ಕಳೆಯಲು ದುಡಿಯುವವರೇ ಹೆಚ್ಚು. 'ಸತ್ಯ ಶುದ್ಧ ಕಾಯಕದ ನಿತ್ಯ ದ್ರವ್ಯ ಚಂದೇಶ್ವರ ಲಿಂಗಕ್ಕೆ ನೈವೇದ್ಯ'ವಾಗಲು ಅರ್ಹ ಎನ್ನುವ ಚಂದಯ್ಯ ಮುಂದುವರಿದು ಕಾಯಕದಿಂದ ಅರ್ಥವ್ಯವಸ್ಥೆ ಮತ್ತು ಸಮಾನತೆ ಸಾಧ್ಯ ಎಂದು ಹೇಳುವಾಗ ಆಶಾಪಾಶಗಳನ್ನು ಹರಿಯಬೇಕು ಎಂದಿದ್ದಾರೆ.

ಸತ್ಯಶುದ್ಧ ಕಾಯಕದಲ್ಲಿ ಚಿತ್ತ
ವಿಚ್ಛಂದವಾಗದಿರಬೇಕು
ನೇಮದ ಕೂಲಿ ಅಂದಿನ
ನಿತ್ಯ ಕಾಯಕದಲ್ಲಿ ಸಂದಿರಬೇಕು
ನೇಮದ ಕೂಲಿಯ ಬಿಟ್ಟು
ಹೇಮದಾಶೆಗೆ ಕಾಮಿಸಿ
ದ್ರವ್ಯವ ಹಿಡಿದಡೆ
ತಾ ಮಾಡುವ ಸೇವೆ ನಷ್ಟವಯ್ಯ

ಎಂದು ಹೇಳುವಾಗ 'ನೇಮದ ಕೂಲಿ' ಎಂದರೆ ಕೂಲಿಯ ನಿಯಮದ ಬಗ್ಗೆ ಪ್ರಸ್ತಾಪಿಸಿದ್ದಾನೆ. ಇಲ್ಲಿ ನಿಚ್ಚಳವಾಗಿ ಕಾಯಕದೊಡನೆ ನೇಮದ ಕೂಲಿಯನ್ನು ಸಮೀಕರಿಸಿ ಮಾಡುವ ಕಾಯಕಕ್ಕಿರುವ ಘಂಟೆಗಳ ಅವಧಿಯಲ್ಲಿ ದುಡಿವ ನೇಮದ ಕೂಲಿ ಅಂದಂದಿಗೆ ಎಷ್ಟು ಹಣ ಬೇಕೋ ಸಂಪಾದನೆ ಆಗುತ್ತದೆ ಎಂಬ ನಿಯಮ ಹೊಂದಿದೆ. ಆದ್ದರಿಂದ ಆಶೆಯ ಪ್ರಚೋದನೆಯನ್ನು ಹತ್ತಿಕ್ಕಿ ಚಿತ್ತ ವಿಚ್ಛಂದವಾಗದಂತೆ ಕಾಯಕ ಮಾಡಬೇಕು. ಹೇಮದಾಶೆಗೆ ನೇಮದ ಕೂಲಿಯನ್ನು ಬಿಟ್ಟು ಹೆಚ್ಚು ಹಣ ಬರುವ ಕಡೆ ಹೋದರೆ ಆ ಹಣದಿಂದ ಮಾಡುವ ಸೇವೆ ನಿರರ್ಥಕ ಎನ್ನುತ್ತಾನೆ. ಬಸವಣ್ಣ ಸದಾ 'ಹೊಲೆ ಹೊಲೆಯರ ಮನೆಯ ಹೊಕ್ಕು ಕೈಕೂಲಿಯ ಮಾಡಿಯಾದರೂ' ನಿಮ್ಮ ಭಕ್ತಿ ಸಲ್ಲಿಸುತ್ತೇನೆ ಎಂದರೆ, ಶರಣೆ ಲಕ್ಕಮ್ಮ ಮಾರಯ್ಯನು ಇಹಜೀವನ ಸಾಕೆನಿಸಿ ಅದನ್ನು ಬಿಟ್ಟು ತೆರಳಬೇಕೆಂದು ಹೇಳಿದಾಗ ಕೊಡುವ ಉತ್ತರದಲ್ಲಿ 'ಕೈಕೂಲಿ' ಎಂಬ ಪದವನ್ನು ಬಳಸಿದ್ದಾಳೆ. 'ಮಾಡಿ ನೀಡಿ ಹೋದಹನೆಂಬಾಗ ಕೈಲಾಸವೇನು ಕೈಕೂಲಿಯೇ?' ಎಂದು 'ಕೈಕೂಲಿ' ಕೆಲಸ ಸುಲಭವಾಗಿ ಸಿಗುವಂತಹ ಕೆಲಸ. ಒಂದು ಅಥವಾ ಎರಡು ಘಂಟೆ ಕೆಲಸ ಮಾಡಿದರೆ ಅದು ಮುಗಿಯುತ್ತದೆ. ಕೂಡಲೆ ಅದರ ಕೂಲಿಯ ಹಣವನ್ನು ತಕ್ಷಣವೇ ಪಡೆಯುವ ವ್ಯವಸ್ಥೆಯ ಬಗ್ಗೆ ಆಕೆ ಹೇಳಿದ್ದಾಳೆ. ಕೈಕೂಲಿ ಕೆಲಸದಲ್ಲಿ ಸುದೀರ್ಘ ತಲ್ಲೀನತೆಯ ಅವಕಾಶ ಇರುವುದಿಲ್ಲ. ಇಷ್ಟವಿದ್ದಾಗ ಕೆಲಸ ಮಾಡಬಹುದು. ಇಲ್ಲದಿದ್ದಾಗ ಕೆಲಸ ಮಾಡದೆ ಉಳಿಯಬಹುದು. 'ಕಾಯಕ' ಎಂಬುದು ಕೈಕೂಲಿಯ ಅಥವಾ ನೇಮದ ಕೂಲಿಯ ವ್ಯವಸ್ಥೆ ಅಲ್ಲ. ಅದು ಜೀವನ ಪರ್ಯಂತ ಮಾಡಬೇಕಾದ ದೈಹಿಕ, ಆತ್ಮೋದ್ಧಾರಕ ಕ್ರಿಯೆ. ಒಟ್ಟಾರೆ "ನೇಮದ ಕೂಲಿ" ಎಂಬ ಕಾರ್ಮಿಕ ಮೀಮಾಂಸೆಯ ಪದಗಳ ನಿರಂತರವೂ ನಿರರ್ಗಳವೂ ಆದ ಪ್ರಯೋಗವನ್ನು ನೋಡಿದರೆ ಬಹುಶಃ ಶರಣರಿಗೆ ತಮ್ಮದೇ ಆದ ಆರ್ಥಿಕ ನೀತಿಯ ಸ್ಪಷ್ಟಕಲ್ಪನೆ ಬಸವೇಶ್ವರರಲ್ಲಿತ್ತೆಂದು ತಿಳಿದು ಬರುತ್ತದೆ. (ಪ್ರೊ. ಭೈರಪ್ಪ, ಪು. ೩೫೩).

ದಾಸೋಹ ತತ್ವ

ಕಾಯಕ, ದಾಸೋಹಗಳು ಶರಣಸಮಾಜದ ಎರಡು ಕಣ್ಣುಗಳಿದ್ದಂತೆ. ದಾಸೋಹವೆಂದರೆ ಕೈಂಕರ್ಯ, ಶರಣಭಾವ, ಭಕ್ತಿ, ದಾನ, ತ್ಯಾಗ. ಶರಣರ ದಾಸೋಹ ಕಲ್ಪನೆ ಸಾಮಾಜಿಕ ಅಸಮಾನತೆಯನ್ನು ಹೋಗಲಾಡಿಸುವ ಪರಿಗಳಲ್ಲಿ ಒಂದು. ಜತೆಗೆ ಆರ್ಥಿಕ ಮಿಮಾಂಸೆಯ ಹಿನ್ನೆಲೆಯಲ್ಲಿಯೂ ಶ್ರಮ, ಉತ್ಪಾದನೆಗಳಂತೆ ವಿತರಣೆಯು ವ್ಯವಸ್ಥೆಯ ಪ್ರತಿರೂಪ. ದುಡಿಮೆಯ ಫಲವನ್ನು ತಾನೊಬ್ಬನೇ ಅನುಭವಿಸದೆ, ಸಮಾಜಕ್ಕೂ ಅದರ ಪಾಲನ್ನು ವಿನಿಯೋಗಿಸಿದರೆ ಅದರ ದುಡಿಮೆ ಸಾರ್ಥಕಗೊಳ್ಳುತ್ತದೆ ಎಂಬ ವಿತರಣತತ್ವ ಇದರಲ್ಲಿದೆ.

ಗುರು ಲಿಂಗ ಜಂಗಮ ಎಂಬ ತ್ರಿವಿಧ ದಾಸೋಹದ ಪರಿಕಲ್ಪನೆ ಶರಣರ ವಿತರಣಾ ವ್ಯವಸ್ಥೆಯ ನೀತಿಯಾಗಿದೆ. ಸನ್ಮಾರ್ಗದರ್ಶಿಯಾದ ಗುರುವಿಗೆ ಸಮಾಜದಲ್ಲಿ ವಿಶೇಷ ಸ್ಥಾನವಿದೆ. ಅಜ್ಞಾನವನ್ನು ಅಳಿಸಿ ಜ್ಞಾನವನ್ನು ಬೆಳಗಿಸುವ ಗುರುವಿಗೆ ಜೀವನದಲ್ಲಿ ಪ್ರಥಮ ಸ್ಥಾನ. 'ಗುರುವೆ ಪರತತ್ವವು ನೋಡಾ' ಎಂದೂ ಶ್ರೀಗುರು ಕರುಣಿಸಿ ಅಂಗದ ಮೇಲೆ ಲಿಂಗವ ಧರಿಸಿದ ಕಾರಣ ಸರ್ವಾಂಗವು ಲಿಂಗವಾಯಿತು, 'ಶಿವನೇ ತಾನೆನಗೆ ಗುರುವಾಗಿ ಬಂದ' ಎಂಬಂತಹ ಶರಣರ ನುಡಿಗಳಲ್ಲಿ ಗುರುವಿನ ಮಹಿಮೆಯನ್ನು ಹೇಳಿದ್ದಾರೆ. ಸಮಾಜವನ್ನು ತಿದ್ದಬಲ್ಲ ಮಹತ್ತರ ಶಕ್ತಿ ಗುರು. ಆ ಗುರುವಿಗೆ ತನ್ನದೆ ಮನೆ, ಸಂಸಾರವಿಲ್ಲ. ಅದರ ಜತೆಗೆ ಜಂಗಮರು ಸರ್ವಸಂಗ ಪರಿತ್ಯಾಗಿಗಳಾಗಿ, ಊರಿಂದ ಊರಿಗೆ ಅಲೆಯುತ್ತಾ ಸಮಾಜದಲ್ಲಿ ಮೇಲು ಕೀಳು, ಅಂತರಗಳನ್ನು ತೊಡೆಯುತ್ತಾ, ಸಮತೋಲನ ಕಾಪಾಡುವ ಹೊಣೆ ಹೊತ್ತವರು. ಇಂತಹ 'ಜಂಗಮಕ್ಕೆ ಜಾತಿ ಬಂಧುಗಳಾಗಲಿ, ಮಾತಾಪಿತರಾಗಲಿ ಇಲ್ಲ, ಮಲ ಮಾಯಗಳಿಲ್ಲ' ಎಂಬ ಶರಣರು ಅವರಿಗೆ ಅಗತ್ಯ ಧನವನ್ನು ನೀಡಿ ಅವರ ಸೌಖ್ಯದ ವ್ಯವಸ್ಥೆ ಹೊರುವುದನ್ನು ರೂಢಿಗೈದರು. ಸರ್ವಸಮಾನತೆಯ ರಾಜ್ಯಕ್ಕೆ ಗುರು, ಜಂಗಮ, ಇಷ್ಟಲಿಂಗ ಲಾಂಛನ ಲಿಂಗ -ಮೂರೂ ಅವಶ್ಯ ಎಂಬ ಧಾರ್ಮಿಕ ಬದ್ಧತೆಯಿಂದ ತ್ರಿವಿಧ ದಾಸೋಹದ ಪರಿಕಲ್ಪನೆಯನ್ನು ಅಳವಡಿಸಿದರು. ಶರಣರ ದೃಷ್ಟಿಯಲ್ಲಿ ನೀತಿಯ ನೆಲೆಗಟ್ಟಿಲ್ಲದ ಆಧ್ಯಾತ್ಮ ಹುಸಿ. ಆದ್ದರಿಂದ ನೀತಿಯೆಂಬುದು ಕೇವಲ ಸಿದ್ಧಾಂತವಾಗಿರದೆ ಅನುಷ್ಠಾನದಲ್ಲಿರುವಂಥದು. ಶೋಷಣೆಯನ್ನು ತಪ್ಪಿಸಿದ ಇಷ್ಟಲಿಂಗಪೂಜೆಗೆ ಮನ್ನಣೆ ನೀಡಿದ ಶರಣರ ದೃಷ್ಟಿಯಲ್ಲಿ ದೇವಾಲಯಗಳ ಸ್ಥಾಪನೆ, ಹೋಮ ಹವನಗಳ ಆಚರಣೆ ಪೂಜಾರಿಗಳ ವ್ಯವಸ್ಥೆ - ವಂಚನೆ, ಸುಲಿಗೆಗಳ ಮೂಲವಾಗಿ ಆರ್ಥಿಕ ಶೋಷಣೆ ಅಧಿಕವಾಗಿದ್ದ ಅಂಶವನ್ನು ಗ್ರಹಿಸಿದ್ದ ಕಾರಣ ಲಿಂಗಪೂಜೆಯು ಆತ್ಮದ ಪರಮಾತ್ಮನ ಪೂಜೆಯಾಗುವ ಸಂತೋಷಕ್ಕೆ ಅವಕಾಶ ನೀಡಿದರು.

ಸಂಪಾದನೆಯ ಸಾರ್ಥಕ್ಯ ದಾಸೋಹದಲ್ಲಿದೆ ಎಂಬುದು ಶರಣರ ಅಭಿಪ್ರಾಯ. "ಸಜ್ಜನ ಕಾಯಕದಿಂದ ಗುರುಲಿಂಗ ಜಂಗಮಕ್ಕೆ ಮಾಡಿ ಸತ್ಯನಾಗಿಹುದೇ ಸಮಯಾಚಾರ" ಎಂದು ಚೆನ್ನಬಸವಣ್ಣ ಹೇಳುತ್ತಾನೆ. ಅಹಂಕಾರ ನಿರಸನವಾಗಲು ದಾಸೋಹ ಭಾವನೆ ಬೆಳೆಯಬೇಕು. ಇದು ಸಾಧಕನ ಮಾರ್ಗ. ತನು ಮನ ಧನವನ್ನು ದೈವಕ್ಕೆ ಅರ್ಪಿಸಿ ಶಿವನನ್ನು ಅಂತರಂಗದಲ್ಲಿ ಸ್ಥಾಪಿಸಿ ಪೂಜಿಸುವುದು ಮುಖ್ಯ ಅಂಶ. 'ಸೋಹಂ ಎಂಬುದ ಕೇಳಿ ದಾಸೋಹವ ಮಾಡದಿದ್ದರೆ ಅತಿಗಳೆವನು ಗುಹೇಶ್ವರಾ. ನಾನೆಂಬ ಅಹಂಕಾರದಲ್ಲಿ ನಾನುಂಡೆನಾದರೆ ಎನಗದೇ ಭಂಗ" ಎಂದು ಪ್ರಭುದೇವರು ಹೇಳುತ್ತಾರೆ. 'ಸೋಹಂ ಎಂದೆನಿಸದೆ ದಾಸೋಹಂ ಎಂದೆನಿಸಯ್ಯ' ಎಂದು ಬಸವಣ್ಣ ಹೇಳಿದ್ದಾರೆ. ದಾಸೋಹಂ ಎಂಬ ಪದ ಅಹಂಕಾರದ ಗೋಡೆಗಳನ್ನು ಕೆಡಪಿ ಸಮಾಜಕ್ಕೆ ನಾನು ಸೇವಕ ಎಂಬ ಕರ್ತವ್ಯಪ್ರಜ್ಞೆಯನ್ನು ಸದಾ ಜಾಗೃತವಾಗಿಡುತ್ತದೆ. ಅಲ್ಲದೆ "ಕಾಯದ ಕಳವಳ ದಾಸೋಹ ಮುಖದಿಂದಲ್ಲದೆ ಹರಿಯದು" ಎಂಬ ಬಸವಣ್ಣನವರ ನಿಲುವು ಇಲ್ಲಿ ಮಹತ್ವದ್ದಾಗಿದೆ. ದೈಹಿಕ, ಮಾನಸಿಕ ಆರೋಗ್ಯಕ್ಕೆ ಕಾಯಕ - ದಾಸೋಹ ತತ್ವಗಳು ಶರಣರ ಕೊಡುಗೆ ಹಾಗೂ ಒಂದು ಸಂಕೀರ್ಣ ಮೌಲ್ಯವೂ ಆಗಿದೆ.

ಕಾಯಕದ ಬಗ್ಗೆ ಹೆಚ್ಚು ಅರ್ಥವಂತಿಕೆಯ ವಿವರಣೆ ನೀಡಿರುವ ಮಾರಯ್ಯನಲ್ಲಿ ದಾಸೋಹದ ಅಭಿಪ್ರಾಯಕ್ಕೆ ಹೆಚ್ಚು ಒತ್ತು ತೀವ್ರವಾಗಿಲ್ಲ. ಆದರೆ ಲಕ್ಕಮ್ಮನ ದಾಸೋಹ ನಿಲುವು ಅಷ್ಟೇ ಅರ್ಥವತ್ತಾಗಿದೆ. "ಭಕ್ತರು ಕಾಯಕವೆಂದು

ದಾಯಗಾರಿಕೆಯಲ್ಲಿ ತಂದು ದಾಸೋಹ ಮಾಡಬಹುದೇ? ಒಮ್ಮನದಲ್ಲಿ ತಂದು ಒಮ್ಮನದಲ್ಲಿಯೇ ಮಾಡಿ ಇಮ್ಮನವಾಗದ ಮುನ್ನವೇ ಮಾರಯ್ಯಪ್ರಿಯ ಅಮರೇಶ್ವರ ಲಿಂಗಕ್ಕೆ ಸಲ್ಲಬೇಕು ಮಾರಯ್ಯ" ಎನ್ನುವಲ್ಲಿ ದಾಸೋಹದಲ್ಲಿ ದಾಯಗಾರಿಕೆ ಇರಬಾರದು, ಮನಸ್ಸಿನ ಇಬ್ಬಗೆಯ ನೀತಿ ಇರದೆ ಏಕಚಿತ್ತದಿಂದ ವಿನಿಯೋಗಿಸಬೇಕು. ಅಂದಂದಿನ ಕಾಯಕ ಅಂದಂದಿಗೆ ಸಲ್ಲುವ ಹಾಗೂ ಇಮ್ಮನವಾಗದ ಮುನ್ನವೇ ಅರ್ಪಿಸಿದರೆ ಶ್ರೇಷ್ಠ ಕಾಯಕ, ಶ್ರೇಷ್ಠ ದಾಸೋಹವಾಗುತ್ತದೆ. ಎಲ್ಲಿಯೂ 'ಅತಿ'ಯನ್ನು ಒಲ್ಲದ ಲಕ್ಕಮ್ಮನ ಇತಿಮಿತಿಯ ಪರಿಕಲ್ಪನೆ ಕೂಡಾ ಅರ್ಥಶಾಸ್ತ್ರದ ಮಿತವ್ಯಯಪ್ರಜ್ಞೆಯ ಜೀವಂತ ನಿದರ್ಶನವಾಗಿದೆ.

'ಉನ್ನತ ತತ್ವ ನಿಯಮಗಳನ್ನು ಉಳ್ಳ ಕಾಯಕ-ದಾಸೋಹ' ಶಿವ-ಜೀವರ ಐಕ್ಯದಂತೆ ಎಂಬ ಅಭಿಪ್ರಾಯದಂತೆ ಪರಸ್ಪರ ಕರ್ತವ್ಯಪ್ರಜ್ಞೆಯುಳ್ಳ ವಿಚಾರಗಳೇ ಆಗಿವೆ. ಮನುಷ್ಯ ತಾನು ಗಳಿಸಿ ಬಳಸುವ, ಜತೆಗೆ ಸಮಾಜಕ್ಕೆ ವಿನಿಯೋಗಿಸುವ ಉದಾತ್ತಭಾವ ನೆಲೆಗೊಳ್ಳಲು ಇದರಿಂದ ಪ್ರೇರಣೆ ಉಂಟಾಯಿತು. ಇದರಿಂದ ಪರಸ್ಪರ ಹಂಚಿಕೊಂಡು ತಿನ್ನುವ ಸಹಭೋಜನ ವ್ಯವಸ್ಥೆ , ಸರ್ವರೂ ಸಮಾನರು ಎಂಬ ಭಾವನೆ ಬೇರೂರಿತು. ಹೀಗೆ ಕಾಯಕ ಮತ್ತು ದಾಸೋಹ ತತ್ವಗಳು ಸಿದ್ಧಾಂತಗಳಾದವು. ಆರ್ಥಿಕ ಚಿಂತನೆಯ ಮೂಲಕ ಬಡವ-ಬಲ್ಲಿದ, ಮೇಲು-ಕೀಳು ಎಂಬ ತಾರತಮ್ಯ ನಿವಾರಣೆಗೆ ಅರ್ಥಪೂರ್ಣ ತಳಹದಿ ನಿರ್ಮಿಸಿದ ಶರಣರು ಕಾಯಕ ದಾಸೋಹಗಳ ಮೂಲಕ ವೈಚಾರಿಕ ಕ್ರಾಂತಿಯನ್ನು, ಅರ್ಥಕ್ರಾಂತಿಯನ್ನು, ಸಾಮಾಜಿಕ, ಧಾರ್ಮಿಕ ಕ್ರಾಂತಿಯನ್ನು ಏಕಕಾಲದಲ್ಲಿ ಸಾಧಿಸಿದರು. ಗಾಂಧೀಜಿಯ ಅಸ್ತಶ್ರಮ ಮತ್ತು ದುಡಿಯದೆ ತಿನ್ನುವ ಹಕ್ಕು ಯಾರಿಗೂ ಇಲ್ಲ ಎಂಬ ವಿಚಾರಗಳಿಗಿಂತ ಶರಣರದ್ದು ಒಂದು ಹೆಜ್ಜೆ ಮುಂದಿಟ್ಟ ದರ್ಶನವಾಗಿತ್ತು. ಅದು ದಾಸೋಹದಲ್ಲಿ ವ್ಯಕ್ತವಾಗಿದೆ. ಈ ಒಂದು ತತ್ವದಿಂದ ಧರ್ಮ, ಅರ್ಥ, ಸಮಾಜದ ಸ್ವರೂಪವನ್ನೇ ಬದಲಿಸಿ ಶರಣರು ಸರ್ವಸಮಾನತೆಯ ವಾಸ್ತವ ನನಸನ್ನು, ಸ್ವಯಂಪೂರ್ಣ ಸಮಾಜವನ್ನು ಕಟ್ಟಿದರು.

ಕಾರ್ಲ್‌ಮಾರ್ಕ್ಸ್ ಸಮಾನತೆ ತರುವ ತಂತ್ರ ಆರ್ಥಿಕ ಸಮಾನತೆಯಲ್ಲಿ ಅಡಗಿದೆ ಎಂದು ಅರಿತು ಅದರ ಯಶಸ್ಸಿಗೆ ಹೋರಾಡಿದಂತೆ ಶ್ರಮಜೀವಿಗಳಿಗಾಗಿಯೂ ಮರುಗಿದ. ಶ್ರಮ ಜೀವಿಗಳನ್ನು ಅಗ್ಗದ ಸರಕು ಎಂದು ಕರೆದ ಕಾಳಜಿ ಅಪಾರ. ೧೨ ನೇ ಶತಮಾನದಲ್ಲಿಯೇ ಶರಣರೂ ಸಹಾ ಸಾಮಾಜಿಕ ಸಮಾನತೆಯನ್ನು ತರುವಲ್ಲಿ ಅರ್ಥವ್ಯವಸ್ಥೆಯ ಪಾತ್ರ ಮಹತ್ವದ್ದೆಂದು ಪರಿಗಣಿಸಿದ್ದರು. ಕಾಯಕ ಮತ್ತು ದಾಸೋಹ ತತ್ವಗಳ ಬುನಾದಿಯ ಮೇಲೆ ಸ್ವಯಂ ಸಂಪೂರ್ಣ ಸಮಾಜದಲ್ಲಿ ನಿತ್ಯನೂತನ ಪ್ರಯೋಗಗಳನ್ನು ಮಾಡಿ ಅಂದಿಗೆ ಯಶಸ್ಸು ಪಡೆದರು. ಅವರ ಸ್ವತಂತ್ರ ವಿಚಾರಶೀಲತೆ, ಕ್ರಿಯಾಶೀಲತ, ಸಾರ್ವತ್ರಿಕ, ಸಾರ್ವಕಾಲಿಕ ಮೌಲ್ಯಗಳು ಮಾನವ ಜನಾಂಗಕ್ಕೆ ಆದರ್ಶಪ್ರಾಯವಾಗಿವೆ. ಸಮಾಜ ಅನಾದರಗೊಳಿಸಿದ ಕಾರಣ ಶರಣರ ಮೌಲ್ಯಗಳು ಕಾಲಕ್ರಮೇಣ ಮರೆಯಾದವು.

ಶ್ರಮವು ರಾಷ್ಟ್ರದ ಸಂಪತ್ತನ್ನು ವೃದ್ಧಿಸುವ ಸಾಧನ ಎಂದ ಅರ್ಥಶಾಸ್ತ್ರಜ್ಞ ಆಡಂ ಸ್ಮಿತ್‌ನ ದೃಷ್ಟಿಯಲ್ಲಿ ಶ್ರಮದ ವಿಭಜನೆಗಿಂತ ಶ್ರಮದ ಫಲ ಹೇಗೆ ಎಲ್ಲರಿಗೂ ತಲುಪಬೇಕು, ತಲುಪುವ ವ್ಯವಸ್ಥೆಯಿದೆ ಎಂಬ ಬಗ್ಗೆ ಆಲೋಚಿಸಿರುವುದು ವಸ್ತುವಿನ ವಿನಿಮಯ ವ್ಯವಸ್ಥೆಗೆ ಪ್ರಾಮುಖ್ಯತೆ ನೀಡಿರುವುದು, ದಾಸೋಹ ಚಿಂತನೆಗೆ ಒಂದು ದೃಷ್ಟಿಯಲ್ಲಿ ಸಂವಾದಿಯೆನಿಸುತ್ತದೆ. ದಾಸೋಹ ರೂಪದಲ್ಲಿ ಹಂಚುವ ಮೂಲಕ ಅದರ ವಿತರಣಮೌಲ್ಯ ವೃದ್ಧಿಸುತ್ತದೆ. ವ್ಯಕ್ತಿತ್ವ ವಿಕಾಸವಾಗಿ ಆಂತರಿಕ ಸೌಂದರ್ಯ, ಸುಧಾರಣೆಯ ಮೂಲಕ ವ್ಯಕ್ತವಾಗುತ್ತದೆ. ಹೀಗೆ ಶ್ರಮದ ಮೌಲ್ಯ ಸಿದ್ಧಾಂತ, ಉತ್ಪಾದನಾ ವೆಚ್ಚದ ಮೌಲ್ಯ ಸಿದ್ಧಾಂತಗಳು ಅರ್ಥಶಾಸ್ತ್ರೀಯ ಪಾರಿಭಾಷಿಕಗಳಾಗಿ ಪ್ರಚಲಿತವಾಗಿರುವುದನ್ನು ಶರಣರು ಎಂದೋ ಆ ಪದಗಳ ಬಳಕೆ ಇಲ್ಲದೆ ಅದರ ತಾತ್ವಿಕಾಂಶಗಳನ್ನು ಕಾಯಕ ಮತ್ತು ದಾಸೋಹ ಸಿದ್ಧಾಂತಗಳಲ್ಲಿ ಅಳವಡಿಸಿ ಅನುಸರಿಸಿದ್ದಾರೆ.

ಮಾರ್ಕ್ಸ್ ಶ್ರಮ ಮತ್ತು ಶ್ರಮಶಕ್ತಿಯ ನಡುವಿನ ವ್ಯತ್ಯಾಸವನ್ನು ಗುರುತಿಸಿ ಶ್ರಮಶಕ್ತಿ ಮೌಲ್ಯವನ್ನು ಪ್ರತಿಪಾದಿಸಿದ್ದಾನೆ. ಮಾರ್ಕ್ಸ್‌ನ ಶ್ರಮ ಕುರಿತ ವಾದಕ್ಕೂ ಶರಣರ ದುಡಿಮೆ ಕಾಯಕದ ಅರ್ಥಕ್ಕೂ ಮೇಲ್ನೋಟಕ್ಕೆ ಸಮಾನತೆ ಇದ್ದರೂ ಅದನ್ನು ಮೀರಿದ ಮೌಲಿಕತೆ, ವ್ಯಾಪಕ ಅರ್ಥ ಶರಣರ ಪದದಲ್ಲಿ ಹುದುಗಿದೆ. ಯಾವುದೇ ಆರ್ಥಿಕ ಸಿದ್ಧಾಂತವು ಪರಮ ಸತ್ಯಗಳ

ಸಂಗ್ರಹವಲ್ಲ, ಆದರೆ ಅದು ಪರಮಸತ್ಯದ ಸಂಶೋಧನೆಗೆ ಒಂದು ಸಾಧನ ಮಾತ್ರ ಎಂಬ ಅರ್ಥಶಾಸ್ತ್ರಜ್ಞ ಮಾರ್ಷಲ್ ವಾದವು ಶರಣರ ನಿಲುವನ್ನು ಕುರಿತೇ ಹೇಳಿದಂತಿದೆ.

ಅರ್ಥಶಾಸ್ತ್ರಜ್ಞರಾದ ಆಡಂ ಸ್ಮಿತ್, ರೆಕಾರ್ಡೋ, ಮಿಲ್ ಮುಂತಾದವರಿಂದ ಹಿಡಿದು ಅಮರ್ತ್ಯಸೇನ್‌ರವರೆಗೂ ಜೀವನ ಮಟ್ಟ ಸುಧಾರಣೆಗೆ ಆದ್ಯತೆ ಎನ್ನುವುದು ಕೇವಲ ಅರ್ಥಿಕಮಟ್ಟದ ತನ್ಮೂಲಕ ಜೀವನದ ಸುಧಾರಣೆ ಎಂಬ ಸೀಮಿತ ಸ್ತರದ ಅರ್ಥವನ್ನಷ್ಟೇ ಪ್ರತಿನಿಧಿಸುತ್ತದೆ. ಆದರೆ ಶರಣರ ಆರ್ಥಿಕ ಚಿಂತನೆಯು ವ್ಯಕ್ತಿತ್ವ ವಿಕಾಸ, ಸಾಮಾಜಿಕ, ನೈತಿಕ, ಧಾರ್ಮಿಕ ಪ್ರಗತಿಯ ಸಮಸ್ತ ಸ್ತರಗಳನ್ನು ಒಳಗೊಂಡ ಪರಿಪೂರ್ಣ ನಿಲುವನ್ನು, ವ್ಯಾಪಕ ಚಿಂತನೆಯನ್ನು ಒಳಗೊಂಡಿತ್ತು ಎಂಬುದು ಶರಣ ಚಿಂತನೆಯ ವೈಚಾರಿಕ, ವೈಜ್ಞಾನಿಕ ಬುದ್ಧಿಮತ್ತೆಗೆ ನಿದರ್ಶನವೇ ಆಗಿದೆ. ಶರಣರದು ಸೀಮಿತ ಪ್ರದೇಶದ ಸೀಮಿತ ಗುಂಪಿನಲ್ಲಿ ನಡೆದ ಪ್ರಯೋಗವಾದರೂ ವಿಶ್ವವ್ಯಾಪಕ ದೃಷ್ಟಿ ಉಳ್ಳದ್ದು.

ಶರಣರು ಎಂಟುನೂರು ವರ್ಷಗಳ ಹಿಂದೆ ಕ್ರಿಯಾಶೀಲರಾಗಿ ಪ್ರಾಮಾಣಿಕವಾಗಿ ನಡೆದರು. ಅಸಂಖ್ಯಾತ ಜನರನ್ನು ಮಾತು, ಕ್ರಿಯೆ, ಆದರ್ಶ ಆಧ್ಯಾತ್ಮಗಳಿಗೆ ತೊಡಗಿಸಿ ಕೆಳಸ್ತರದ ಜನರಲ್ಲಿ ಆತ್ಮಸ್ಥೈರ್ಯ ಮೂಡಿಸಿ ವ್ಯಾಪಕ ಚಳುವಳಿ ನಡೆಸಿದರು. ಅವರ ಗುರಿ ಮತದ ದೃಷ್ಟಿಯಿಂದ ಸೀಮಿತ ಎನಿಸಿದರೂ ಭಾರತದ ಅಂದಿನ ಪರಿಸ್ಥಿತಿಯಲ್ಲಿ ಧಾರ್ಮಿಕತೆ ಅನಿವಾರ್ಯ ಐತಿಹಾಸಿಕ ಸತ್ಯವೇ ಆಗಿತ್ತು. ಜನಪರ ಧೋರಣೆ ಉಳ್ಳ ಕಾಯಕ ಸಿದ್ಧಾಂತ, ದಾಸೋಹ ಸಿದ್ಧಾಂತ, ಆಳವಾದ ಆರ್ಥಿಕ ಚಿಂತನೆಗಳು, ಅನುಭವದ ಗ್ರಹಿಕೆ ಮತ್ತು ದರ್ಶನ ಸಮನ್ವಿತವಾದ ಸದೃಢವಾದ ಸಮಾನತಾ ವಾದದ ಸಮಾಜದಲ್ಲಿ ಸರ್ವಸಮರ್ಪಣಭಾವದ ಮೂಲಕ ಸಮಾಜೋದ್ಧಾರದ ಆತ್ಮೋದ್ಧಾರದ ಬೆಳಕನ್ನು ಬೀರಿದರು. ಆರ್ಥಿಕ ಚಿಂತನೆಗೆ ತಮ್ಮ ಅಮೂಲ್ಯ ಕೊಡುಗೆ ನೀಡಿದರು.

'ನಿಜವಾದ ಅರ್ಥಶಾಸ್ತ್ರ ಸಾಮಾಜಿಕ ನ್ಯಾಯವನ್ನು ಪ್ರತಿಪಾದಿಸುತ್ತದೆ. ಅದು ಎಲ್ಲರ ಹಿತವನ್ನು ವೃದ್ಧಿಸುತ್ತದೆ' ಎಂಬ ಗಾಂಧೀಜಿಯವರ ಮಾತಿನಂತೆ ಶರಣರ ಆರ್ಥಿಕ ಚಿಂತನೆಯ ಹೊಂಗಿರಣಗಳು "ಎಲ್ಲರೂ ಸಮಾಜಕ್ಕಾಗಿ ಸಮಾಜವು ಎಲ್ಲರಿಗಾಗಿ" ಎಂಬ ಅರ್ಥಶಾಸ್ತ್ರಜ್ಞರಿಂದಲೇ ನಿರೂಪಿತವಾದ ತತ್ವವನ್ನು ಅರಿವು - ಆಚಾರವಾಗಿ ಅಳವಡಿಸಿಕೊಂಡು ಆಧುನಿಕ ನಿಲುವುಗಳಾಗಿವೆ. ಸಾರ್ವಕಾಲಿಕ, ಸಾರ್ವತ್ರಿಕ ಪ್ರಸ್ತುತತೆ ಉಳ್ಳ ಸಂದೇಶಗಳನ್ನು ಸಾರುತ್ತ ಸದಾ ಬೆಳಕು ಬೀರುತ್ತಲೇ ಇರುತ್ತವೆ.

ಪರಾಮರ್ಶನ ಹಾಗೂ ಗ್ರಂಥಋಣ

೧. ವಚನಗಳಲ್ಲಿ ವೀರಶೈವ ಧರ್ಮ- ಡಾ. ಎಚ್. ತಿಪ್ಪೇರುದ್ರಸ್ವಾಮಿ
೨. ಶರಣರ ಅನುಭಾವ ಸಾಹಿತ್ಯ- ಡಾ. ಎಚ್. ತಿಪ್ಪೇರುದ್ರಸ್ವಾಮಿ.
೩. ವಚನಗಳಲ್ಲಿ ಸಮಾಜವಾದ- ದೇಜಗೌ
೪. ವಚನ ನಿರ್ವಚನ- ಡಾ. ಪಿ.ವಿ. ನಾರಾಯಣ
೫. ಕಾಯಕ ಮತ್ತು ಶರಣರು- ಎಂ.ಟಿ. ವಿಶ್ವನಾಥಯ್ಯ
೬. ಶಿವಶರಣೆಯರ ಸಂಪುಟ- ಕನ್ನಡ ಮತ್ತು ಸಂಸ್ಕೃತಿ ಇಲಾಖೆ
೭. ಶರಣ ಜಗತ್ತು- ವಿದ್ವಾನ್ ಎಂ. ಶಿವಕುಮಾರಸ್ವಾಮಿ
೮. ವಿಶ್ವಸಂಸ್ಕೃತಿಗೆ ವೀರಶೈವ ಸಂಸ್ಕೃತಿಯ ಕಾಣಿಕೆ- ದೇಜಗೌ
೯. ಮಾರ್ಕ್ಸ್‌ವಾದ : ಗೌರೀಶ ಕಾಯ್ಕಿಣಿ.
೧೦. ಆರ್ಥಿಕ ಚಿಂತನೆಯ ಹೊಂಗಿರಣಗಳು: ಸಿ.ಕೆ. ರೇಣುಕಾರ್ಯ.

ವಚನಗಳಲ್ಲಿ ವಿಡಂಬನೆಯ ಸ್ವರೂಪ

✍ ಷಣ್ಮುಖಯ್ಯ ಅಕ್ಕೂರಮಠ

ಭಾರತೀಯ ಕಾವ್ಯ ಮೀಮಾಂಸೆಯಲ್ಲಿ ವಾಚ್ಯಾರ್ಥಕ್ಕಿಂತ ವ್ಯಂಗ್ಯಾರ್ಥಕ್ಕೆ, ಧ್ವನ್ಯಾರ್ಥಕ್ಕೆ, ಮಹತ್ವದ ಸ್ಥಾನವಿದೆ. ಧ್ವನಿಯೆ ಕಾವ್ಯದ ಆತ್ಮವೆಂದು ಅಲಂಕಾರಿಕರ ಮತ. ಹರಿತವಾದ ಧ್ವನ್ಯಾರ್ಥದತ್ತ ಸಾಗುವ ಅಭಿವ್ಯಕ್ತಿಯೇ, ಉತ್ತಮ ವಿಡಂಬನೆ. ತಮಾಷೆ, ತಿರಸ್ಕಾರ, ಮೂದಲಿಕೆ, ಕೋಪ, ಅಪಹಾಸ್ಯ ಇವು ವಿಡಂಬನೆಕಾರನ ಧೋರಣೆಗಳಾಗುತ್ತವೆ. ಸಮಾಜದಲ್ಲಿ ವ್ಯಕ್ತಿ, ವರ್ಗ, ಸಂಸ್ಥೆ ಇಷ್ಟೇ ಅಲ್ಲದೆ ಇಡೀ ಮಾನವಕುಲವೇ ವಿಡಂಬನೆಗೆ ವಸ್ತುವಾಗಬಹುದು. ಮನುಷ್ಯನ ಅಪರಿಪೂರ್ಣತೆ ದೌರ್ಬಲ್ಯ, ದೋಷಗಳು ವಿಡಂಬನೆಗೆ ವಸ್ತುಗಳಾಗುತ್ತವೆ. ವ್ಯಕ್ತಿಗಳಾಗಲೀ, ಸಮಾಜದಲ್ಲಾಗಲೀ ಅಸಂಬದ್ಧವಾದ ಹಾಗೂ ಅಸಭ್ಯವಾದುದನ್ನು ಕಂಡಾಗ ಉಂಟಾಗುವ ಜಿಗುಪ್ಸೆ ಅಥವಾ ಕ್ರೋಧಭಾವನೆಯನ್ನು ಹಾಸ್ಯದ ಮೂಲಕ ಅಭಿವ್ಯಕ್ತಿಗೊಳಿಸಿದಾಗ, ಅದು ವಿಡಂಬನೆ ಆಗುತ್ತದೆ. ವಿಡಂಬನೆಯಲ್ಲಿ ಅನೇಕ ಪ್ರಕಾರಗಳನ್ನು ಹೇಳುತ್ತಾರೆ. ಗೇಲಿ, ವ್ಯಂಗ್ಯ, ಅಪಹಾಸ್ಯ, ವಿಕಟಹಾಸ್ಯ, ಚತುರೋಕ್ತಿ, ವಕ್ರನುಡಿ ಇತ್ಯಾದಿ. ವಿಡಂಬನೆಯಲ್ಲಿ ನಗೆಯು ಪ್ರಧಾನವಾಗಿ ಚತುರನುಡಿಯಿದ್ದರೆ ಪರಿಹಾಸ್ಯವೆಂದೂ; ಹಾಸ್ಯ ಕಡಿಮೆಯಿದ್ದು ಮಾತಿನಲ್ಲಿ ನೇರ ಹಾಗೂ ಖಾರವಿದ್ದರೆ ಅದು ನಿಂದೆ ಹಾಗೂ ಮೂದಲಿಕೆ ಎನ್ನುತ್ತಾರೆ. ವಿಡಂಬನೆಗಳು ಸಾಮಾಜಿಕ, ಧಾರ್ಮಿಕ ಹಾಗೂ ನೈತಿಕ ನೆಲೆಗಳಲ್ಲಿ ಸಮಾಜದ ಆರೋಗ್ಯವನ್ನು ಕಾಪಾಡುವಲ್ಲಿ ಸಹಕಾರಿಗಳಾಗುತ್ತವೆ. ಇವುಗಳಲ್ಲಿ ಅದ್ಭುತ ಶಕ್ತಿಯಿದೆ. ಸಾಂಪ್ರದಾಯಿಕ ವ್ಯವಸ್ಥೆಯನ್ನು ಆರಾಧಿಸುವವರು, ಮತ್ತು ಸಮಾಜದಲ್ಲಿ ಹಾಗೂ ವ್ಯಕ್ತಿಗಳಲ್ಲಿ, ಲೋಪ ದೋಷಗಳನ್ನು ಕಂಡು ಸುಮ್ಮನೆ ಇರುವವರು, ಎಂದೂ ಟೀಕಿಸುವುದಿಲ್ಲ. ವ್ಯಕ್ತಿ, ಸಮಾಜ, ಸಂಸ್ಥೆ, ಧರ್ಮ ಇವುಗಳನ್ನು ಕುರಿತು ವಿಡಂಬಿಸಲು ನೈತಿಕ ಧೈರ್ಯ ಬೇಕು. ಹರಿತವಾದ ವಿಡಂಬನೆ ಎಲ್ಲರಿಂದಲೂ ಸಾಧ್ಯವಿಲ್ಲ. ಅದಕ್ಕೆ ತಕ್ಕ ಯೋಗ್ಯತೆ ಬೇಕು; ವಿಡಂಬನೆಕಾರರಲ್ಲಿ ಪ್ರಾಮಾಣಿಕ ನಡವಳಿಕೆ ಇರಬೇಕು.

ಜಗತ್ತಿನ ಜನಜೀವನದಲ್ಲಿ, ಸಾಮಾಜಿಕ ಬದುಕಿನಲ್ಲಿ ಕುಂದುಕೊರತೆಯಿಲ್ಲದ ವ್ಯಕ್ತಿಯಾಗಲೀ ಸಮಾಜದ ವ್ಯವಸ್ಥೆಯಾಗಲೀ, ಇಲ್ಲವೇ ಇಲ್ಲ. ಸಮಾಜ ಯಾವಾಗಲೂ ಆದರ್ಶದ ಮೇಲೆ ಬದುಕಿರುವುದಿಲ್ಲ. ಅದು ಮನುಷ್ಯ ಸ್ವಭಾವವನ್ನು ಅವಲಂಬಿಸುತ್ತದೆ. ಆದ್ದರಿಂದ ಜನಜೀವನದ ಬದುಕಿನ ಬೆಳವಣಿಗೆಗೆ ವಿಡಂಬನೆ ಆವಶ್ಯಕವಾಗುತ್ತದೆ. ಜನಜೀವನವನ್ನು ತಿದ್ದಿ ತೀಡಿ ಅವರ ಬದುಕನ್ನು ಹಸನುಗೊಳಿಸಿ ಆದರ್ಶದ ಮಾರ್ಗದಲ್ಲಿ ಮುನ್ನಡೆಸಲು ಸಹಾಯಕವಾಗುತ್ತದೆ. ಕರ್ನಾಟಕದ ಧಾರ್ಮಿಕ ಇತಿಹಾಸದಲ್ಲಿ, ಹನ್ನೆರಡನೇ ಶತಮಾನ ಸುವರ್ಣಾಕ್ಷರಗಳಿಂದ ಬರೆದಿಡುವಂತಹುದ್ದಾಗಿದೆ. ಹನ್ನೆರಡನೇ ಶತಮಾನದಲ್ಲಿ ವಚನ ಸಾಹಿತ್ಯ ವಿಡಂಬನೆಯ ಮೂಲಕ, ಸಾಮಾಜಿಕ. ಧಾರ್ಮಿಕ, ನೈತಿಕ ಹಾಗೂ ಸಾಂಸ್ಕೃತಿಕ ರಂಗಗಳಲ್ಲಿ, ಜನಜೀವನವನ್ನು ಹಸನುಗೊಳಿಸಿತು. ವಚನಕಾರರು ಕ್ರಾಂತಿ ಪುರುಷರಾಗಿದ್ದರು. ಬೇರೆಯವರನ್ನು ಸಂತೋಷಪಡಿಸಲಿಕ್ಕಾಗಲಿ; ಬೇರೆಯವರ ಮನಸ್ಸಿಗೆ ನೋವಾಗುತ್ತದೆ ಎಂದಾಗಲೀ ಅವರು ಬರೆಯಲಿಲ್ಲ. ಜನರ ಹೊಗಳಿಕೆ, ತೆಗಳಿಕೆಗಳು ಅವರಿಗೆ ಮುಖ್ಯವಾಗಿರಲಿಲ್ಲ. ಆತ್ಮಸಾಕ್ಷಿಯು ಅವರಿಗೆ ಮುಖ್ಯವಾಗಿತ್ತು. ಅವರು ನುಡಿದಂತೆ ನಡೆದರು; ನಡೆದಂತೆ ನುಡಿದರು. ಶರಣರ ಮುಖ್ಯ ಕಾಳಜಿ ಮನುಷ್ಯನೇ ಆಗಿದ್ದ, ಮನುಷ್ಯನನ್ನು ತಿದ್ದುತ್ತಲೇ ಅವರು ಸಮಾಜವನ್ನು ಕಟ್ಟಿದರು. ವಚನಕಾರರು ಅಜ್ಞಾನ, ಅಂಧಕಾರ, ಮೌಢ್ಯ, ಕಂದಾಚಾರ, ಮತಾಂಧತೆ, ಶೋಷಣೆಗಳಲ್ಲಿ ಮುಳುಗಿ ತೇಲುತ್ತಿದ್ದ ಸಮಾಜವನ್ನು ಸುಧಾರಿಸಲು ಪ್ರಯತ್ನಿಸಿದರು. ಅಷ್ಟೇ ಅಲ್ಲ; ಇವುಗಳ ವಿರುದ್ಧ ದೊಡ್ಡ ಸಮರವನ್ನೇ ಸಾರಿದರು; ವರ್ಣರಹಿತ ಸಮಾಜವನ್ನು ಕಟ್ಟುವ ಕನಸು ಕಂಡರು. ಅವರು ಸಮಾಜದ ವಿಮರ್ಶಕರು. ತಾವು, ತಮ್ಮ ನೆರೆಹೊರೆಯಲ್ಲಿ ಕಂಡ, ಜನಜೀವನದ ಕುಂದುಕೊರತೆಗಳನ್ನು, ದೋಷದಂಭಾಚಾರಗಳನ್ನು ಕಂಡು ಕಿಡಿಕಿಡಿಗೊಂಡು, ವಿಡಂಬನೆಯ ನಿಲುಗನ್ನಡಿಯಲ್ಲಿ ಸಮಾಜದ ವಕ್ರಮುಖವನ್ನು

ತೋರಿಸಿ ಸಮಾಜವನ್ನು ತಿದ್ದಲು ಪ್ರಯತ್ನಿಸಿದರು. ಜನರ ಓರೆ-ಕೋರೆಗಳನ್ನು ತಿದ್ದಲು ಜನರನ್ನು ಎಚ್ಚರಿಸಲು, ಸತ್ಯಾಸತ್ಯಗಳ ನಡುವೆ ರಾಜಿ ಸಲ್ಲದು ಎಂಬುದು ವಚನಕಾರರ ಆಶಯವಾಗಿತ್ತು. ಮನುಷ್ಯ ಉತ್ತಮ ಮನುಷ್ಯನಾಗಲು ಅಡ್ಡಬರುವ ಕೊಳೆಯನ್ನು ಕಳೆಯಲು ಅವರಿಗೆ ವಿಡಂಬನೆ ಮೃದುವಾದ ಪೂರಕೆಯಾಯಿತು.

ವಿಡಂಬನೆ ಸುಲಭ ಕೆಲಸವಲ್ಲ; ಅದಕ್ಕೆ ಸಾಕಷ್ಟು ಸಾಮಾಜಿಕ, ಧಾರ್ಮಿಕ, ನೈತಿಕ ಕ್ಷೇತ್ರಗಳ ಬಗ್ಗೆ ತಿಳುವಳಿಕೆ ಇರಬೇಕು. ಸಮಕಾಲೀನ ಪ್ರಜ್ಞೆ ಆಳವಾಗಿರಬೇಕು. ವಚನಕಾರರಿಗೆ ನುಣ್ಣನೆಯ ಬೆಣ್ಣೆಯ ಮಾತುಗಳು ಒಗ್ಗುವುದಿಲ್ಲ, ಒಮ್ಮೊಮ್ಮೆ ಒರಟುತನ, ನಿಷ್ಕಾಪಟ್ಯ, ತತ್ವನಿಷ್ಠೆ, ಶ್ರದ್ಧೆ, ಉತ್ಸಾಹಗಳು ಅವರ ಪ್ರವೃತ್ತಿಗಳಾಗುತ್ತವೆ. ಶರಣರಿಗೆ ಪೂರ್ವಾಗ್ರಹ ಭಾವನೆ ಇರಲಿಲ್ಲ. ಜನರ ಮೇಲೆ ಪ್ರೀತಿ ಇತ್ತು. ದೋಷ ಕಂಡಾಗ ನಿರ್ದಾಕ್ಷಿಣ್ಯವಾಗಿ ಟೀಕಿಸುವುದು, ಇವರ ಪರಿ. ಇವರದು ಸಾತ್ವಿಕ ಕ್ರೋಧ. ಇವರ "ವಿಡಂಬನೆಯಲ್ಲಿ ಕಹಿ ಇದೆ; ವಿಷವಿಲ್ಲ. ಕೋಪವಿದೆ; ದ್ವೇಷವಿಲ್ಲ. ಮಾತಿನ ಹರಿತವಿದೆ; ನೋವಿಲ್ಲ. ಕಾವಿದೆ; ತಾಪವಿಲ್ಲ. ಹಠವಿದೆ; ವೈರತ್ವವಿಲ್ಲ. ಕರ್ತವ್ಯ ಪ್ರಜ್ಞೆ, ಸತ್ಯನಿಷ್ಠೆ, ಲೋಕಕಾರುಣ್ಯ, ನೈತಿಕ ಶ್ರದ್ಧೆ, ಸ್ವತಂತ್ರ ವಿಚಾರ, ಇವು ವಚನಕಾರರ ವಿಡಂಬನೆಯ ಹಿಂದಿರುವ ಮೂಲಭೂತವಾದ ಪ್ರೇರಕ ಶಕ್ತಿಗಳು" ಎಂಬುದು ವಿಮರ್ಶಕ ವಿದ್ವಾಂಸರ ಅಭಿಪ್ರಾಯ.

ವಚನ ಸಾಹಿತ್ಯವಲ್ಲಿ ಕಂಡುಬರುವ ವಿಡಂಬನೆಯನ್ನು ವ್ಯಕ್ತಿ, ಸಮಾಜ, ಧರ್ಮ ಹಾಗೂ ಸಂಸ್ಕೃತಿ, ಸಂಪ್ರದಾಯಗಳಿಂದು, ಸಾಮಾಜಿಕ, ಧಾರ್ಮಿಕ, ಆರ್ಥಿಕ ಹಾಗೂ ಸಾಂಸ್ಕೃತಿಕವೆಂದು ವಿಭಾಗಿಸಲು ಬರುತ್ತದೆ. ಈಗ ವಚನಕಾರರ ವಿಡಂಬನೆಗಳ ಮೂಲಕ ಅವರ ವಾಸ್ತವಿಕ ದೃಷ್ಟಿಕೋನವನ್ನು ಅರಿಯಬಹುದಾಗಿದೆ. ವಚನಕಾರರು ಪರಂಪರೆಯ ಪ್ರಾಚೀನ ಧಾರ್ಮಿಕ ಸಾಹಿತ್ಯ, ವೇದ, ಪುರಾಣಗಳನ್ನೂ ವಿಡಂಬನೆಗೆ ಗುರಿ ಮಾಡಿದ್ದಾರೆ. ವೇದ ಪುರಾಣಗಳು ಬೋಧಿಸುವ ಯಜ್ಞ-ಯಾಗಾದಿಗಳನ್ನು ಖಂಡಿಸಿದ್ದಾರೆ. ಶರಣರ ವಚನಗಳು ಸಾರ್ವಕಾಲಿಕ ಮತ್ತು ಸಾರ್ವಜನಿಕ ಸತ್ಯದೃಷ್ಟಾಂತಗಳೂ ಹೌದು.

"ವೇದಕ್ಕೆ ಹೊರೆಯ ಕಟ್ಟುವೆ ಶಾಸ್ತ್ರಕ್ಕೆ ನಿಗಳವನಿಕ್ಕುವೆ" ಎಂದು ಸಮಾಜದಲ್ಲಿ ವೇದಶಾಸ್ತ್ರ ಪುರಾಣಗಳು ಕೇವಲ ಗ್ರಂಥಗಳಾಗಿ ಉಳಿದು, ಜನಜೀವನದ ಆಚರಣೆಯಲ್ಲಿ ಅರ್ಥವನ್ನು ಕಳೆದುಕೊಂಡಿವೆ. ಬರೀ ಶಬ್ದಾಡಂಬರಗಳಾಗಿವೆ. ಎಂಬುದನ್ನು ಬಯಲುಗೊಳಿಸುತ್ತಾರೆ. "ಆಗಮದ ಮೂಗು ಕೊಯ್ವೆ" ಎಂದು ಬಳಸುವ ಪದಗಳಲ್ಲಿ ಶರಣರ ಪ್ರತಿಭಟನೆಯನ್ನು ಗುರುತಿಸ ಬಹುದು. "ಶಾಸ್ತ್ರ ಘನವೆಂಬೆನೆ? ವೇದ ಘನವೆಂಬೆನೆ"? ಶ್ರುತಿ ಘನವೆಂಬೆನೆ? ಎಂದು ಪ್ರಶ್ನಿಸುತ್ತಾ ವೇದ ಶಾಸ್ತ್ರ ಶೃತಿಗಳು ಭಗವಂತನನ್ನು ತೋರಿಸಲಾರವು ಎಂದು ಖಂಡಿತವಾಗಿ ಹೇಳುತ್ತಾರೆ. "ವೇದವೆಂಬುದು ಓದಿನ ಮಾತು ಶಾಸ್ತ್ರವೆಂಬುದು ಸಂತೆಯ ಸುದ್ದಿ, ಪುರಾಣವೆಂಬುದು ಪುಂಡರ ಗೋಷ್ಠಿ, ತರ್ಕವೆಂಬುದು ತಗರ ಹೋರಟೆ" ಇಂತಹ ಮಾತುಗಳಲ್ಲಿ ಅನುಭವ ಪ್ರಾಮಾಣ್ಯವಿಲ್ಲದ; ಬದುಕಿನ ಅನುಭವಕ್ಕೆ ಬಾರದ ಕೇವಲ ಓದಿನ ಮಾತಾದ ಶಾಸ್ತ್ರವನ್ನು ಸಂತೆಯ ಸುದ್ದಿಗೆ ಹೋಲಿಸುತ್ತಾರೆ. ಅಕ್ಕಮಹಾದೇವಿ ವೇದಶಾಸ್ತ್ರಾಗಮಗಳನ್ನು "ನುಚ್ಚಿನ ತೌಡು" ಎಂದು ವಿಡಂಬಿಸುತ್ತಾಳೆ. ಆಕೆ ಹೇಳುವ ವಚನ.

"ವೇದಶಾಸ್ತ್ರ ಆಗಮ ಪುರಾಣಗಳೆಲ್ಲವೂ-

ಕೊಟ್ಟಣವ ಕುಟ್ಟುವ ನುಚ್ಚು ತೌಡು ಕಾಣ ಭೋ
ಇವ ಕುಟ್ಟಲೇಕೆ? ಕುಸುಕಲೇಕೆ?

ಹೀಗೆ ಎಲ್ಲಾ ವಚನಕಾರರು ಭಾರತೀಯ ಪ್ರಾಚೀನ ಸಾಹಿತ್ಯವಾದ ವೇದಾಗಮಗಳನ್ನು ಸಾರಾಸಗಟಾಗಿ ತಮ್ಮ ವಿಡಂಬನೆಯ ಮೂಲಕ ತಿರಸ್ಕರಿಸುತ್ತಾರೆ. ಅವರ ನಡೆ ನುಡಿಯೇ ಸಿದ್ಧಾಂತವಾಗಿತ್ತು; ನುಡಿಯೇ ವೇದ, ನಡೆಯೇ ಆಗಮವಾಗಿತ್ತು. ಅವರು ತೋರಿದ ಧೈರ್ಯ ನಮಗೆ ಅಚ್ಚರಿಯನ್ನುಂಟುಮಾಡುತ್ತದೆ.

ವಚನಕಾರರ ಆಶಯ, ಸಮಾಜವನ್ನು ಪರಿವರ್ತನೆಗೊಳಿಸುವುದೇ ಆಗಿತ್ತು. ಸಮಾಜದ ಕಂದಾಚಾರ ಮೂಢನಂಬಿಕೆಗಳ ಹೆಬ್ಬಂಡೆಗಳನ್ನು ವಿಡಂಬನೆಗಳ ಮೂಲಕ ಛಳಾರನೆ ಸೀಳಿಸುವುದು ಅವರ ಉದ್ದೇಶವಾಗಿತ್ತು. ಜಗತ್ತು ಇಂದು ವೈಜ್ಞಾನಿಕವಾಗಿ ಎಷ್ಟೇ ಮುಂದುವರಿದಿದ್ದರೂ ಮಾನವನು ಚಂದ್ರಲೋಕದ ಇಂದ್ರನ ಒಡ್ಡೋಲಗವನ್ನು ಏರಿದ್ದರೂ, ಮಂಗಳಲೋಕದ ಅಂಗಳಕ್ಕೆ ಕಾಲಿಟ್ಟಿದ್ದರೂ, ಜನರ ಮೆದುಳನ್ನು ರಿಪೇರಿ ಮಾಡುವ ತಂತ್ರಜ್ಞಾನ ಇನ್ನೂ ಶೋಧಿಸಿಲ್ಲ. "ನಹಿ ಕದಾಚಿತ್ ಅನಿದ್ರೀಶಂ ಜಗತ್" ಎನ್ನುವ ಮಾತಿನಂತೆ ಹೊರನೋಟದಲ್ಲಿ ಜಗತ್ತು ಬದಲಾಗಿದ್ದರೂ, ಮನುಷ್ಯನ ಮನೋಲೋಕ ಸಂಘರ್ಷ, ದ್ವಂದ್ವಗಳು ಹಾಗೆಯೇ ಇವೆ. ಜನರ ಅಂಧಶ್ರದ್ಧೆ, ಯಜ್ಞ-ಯಾಗಾದಿಗಳನ್ನು ಕುರಿತು ಅಜ್ಞರ ಮನಸ್ಸಿನಲ್ಲಿ ಭಯ ಭೀತಿಗಳನ್ನು ಬಿತ್ತಿ, ಧರ್ಮದ ಹೆಸರಿನಲ್ಲಿ, ಶೋಷಣೆ ಸಾಗಿರುವುದನ್ನು ಕಂಡು ಶರಣರು ಟೀಕಿಸುತ್ತಾರೆ:

ಕಿಚ್ಚು ದೈವವೆಂದು ಹವಿಯನಿಕ್ಕುವ ಹಾರುವನ ಮನೆಯಲ್ಲಿ
ಕಿಚ್ಚೆದ್ದು ಸುಡುವಾಗ
ಬಚ್ಚಲ ನೀರು, ಬೀದಿಯ ಧೂಳ ಹೊಯ್ದು
ಬೊಬ್ಬಿಟ್ಟಲ್ಲರ ಕರೆವರಯ್ಯಾ
ಕೂಡಲಸಂಗಮದೇವಾ ವಂದನೆಯ ಮರೆದು ನಿಂದಿಸುತಿರ್ದರಯ್ಯಾ.

ಎಂದು ಬಸವಣ್ಣನವರು ಬ್ರಾಹ್ಮಣರ ಮನೆಯಲ್ಲಿ ದೈವವೆಂದು ಪೂಜಿಸುವ, ಯಜ್ಞದ ಮನೆಯನ್ನೇ ಸುಡಲಾರಂಭಿಸಿದರೆ, ಬಚ್ಚಲು ನೀರು ಬೀದಿಯ ಧೂಳನ್ನು ಹೊಯ್ದು, ಅದನ್ನು ಆರಿಸುತ್ತಾ ಸಹಾಯಕ್ಕಾಗಿ ಬೊಬ್ಬಿಡುವುದನ್ನು ವ್ಯಂಗ್ಯವಾಗಿ ಚಿತ್ರಿಸಿದ್ದಾರೆ. ವಚನಕಾರರು ಬ್ರಾಹ್ಮಣರ ಕಂದಾಚಾರವನ್ನು ತೀವ್ರವಾಗಿ ಖಂಡಿಸುತ್ತಾರೆ. ಅವರಿಗೆ ಯಾವ ಸಂಕೋಚ ಮುಲಾಜುಗಳೂ ಇಲ್ಲ. ಅವರು ನುಡಿದಂತೆ ನಡೆಯರು, ಎಂಬುದು ಬಸವಣ್ಣನವರ ಅನುಭವ. ಬ್ರಾಹ್ಮಣರು ರಚಿಸಿದ ವೇದ ಶಾಸ್ತ್ರ ಪುರಾಣಗಳು ಅವರಿಗೆ ಅನ್ವಯವಾಗುತ್ತವಲ್ಲದೇ ಬೇರೆ ಯಾರಿಗೂ ಅಲ್ಲ. ತಮಗೊಂದು ಧರ್ಮ; ಇತರರಿಗೊಂದು ಧರ್ಮ. ಇದು ಅವರ ನೀತಿ. "ಏನಯ್ಯಾ ವಿಪ್ರರು ನುಡಿದಂತೆ ನಡೆಯರು, ಇದೆಂತಯ್ಯಾ! ತಮಗೊಂದು ಬಟ್ಟೆ. ಶಾಸ್ತ್ರಕ್ಕೊಂದು ಬಟ್ಟೆ" ಎಂದು ಅವರ ದ್ವಂದ್ವನೀತಿಯನ್ನು ವಿಡಂಬಿಸುತ್ತಾರೆ. ಯಜ್ಞ-ಯಾಗಾದಿಗಳಲ್ಲಿ ಬಲಿಪಶುವಾಗಲಿರುವ ಹೋತನ್ನು ಕಂಡು ವೇದವನೋದಿದವರ ಮುಂದೆ ಅಳು ಕಂಡಾ! ಶಾಸ್ತ್ರವ ಕೇಳಿದವರ ಮುಂದೆ ಅಳುಕಂಡಾ! ಎಂದು, ಯಜ್ಞ-ಯಾಗಾದಿಗಳ ಹೆಸರಿನಲ್ಲಿ ಬಲಿ ಕೊಡುವುದನ್ನು ವಿಡಂಬಿಸುತ್ತಾರೆ. ವೇದನೋದಿದವರ ಮುಂದೆ ಅವರು ಮಾಡುವ ಹಿಂಸೆಗೆ ಅಳು! ಶಾಸ್ತ್ರವನು ಹೇಳುವವರ ಹಿಂಸೆಯನ್ನು ಕಂಡು ಅಳು! ಎಂದು ಹೋತಿಗೆ ಹೇಳುವಂತೆ, ಪರೋಕ್ಷವಾಗಿ ವೈದಿಕರನ್ನು ಛೇಡಿಸುತ್ತಾರೆ. ಅಂಬಿಗರ ಚೌಡಯ್ಯನವರ ವಚನ ಹೀಗಿದೆ:

ಓದಿಹೆನೆಂಬ ಒಡಲು
ಕಂಡಿಹೆನೆಂಬ ಭ್ರಾಂತು
ಸರ್ವರಿಗೆ ಹೇಳಿದೆನೆಂಬ ತೇಜಸ್ಸು
ಇಂತಿವೆಲ್ಲವೂ ಇದಿರಿಂಗೆ ಹೇಳಿ
ತನ್ನ ಉದರದ ಕಕ್ಕುಲತೆಯಲ್ಲದೆ
ಆತ ಅರಿವಿಂಗೆ ಒಡಲಿಲ್ಲ ಎಂದನಂಬಿಗರ ಚೌಡಯ್ಯ.

ಈ ವಚನದಲ್ಲಿ ಓದಿದವರು ತಮ್ಮ ಹೊಟ್ಟೆಯನ್ನು ಹೊರೆಯಲು ಓದಿರುವವರೇ ಹೊರತು, ಪರಮಾತ್ಮನ ಅರಿವಿಗಾಗಿ ಅಲ್ಲ ಎನ್ನುತ್ತಾರೆ. ಇನ್ನೊಬ್ಬ ವಚನಕಾರ ಮಾರೇಶ್ವರನು "ವೇದವ ಕಲಿತಲ್ಲಿ ಪಾತಕನಲ್ಲದೆ ಜ್ಞಾನಿಯಲ್ಲ; ನಿಲ್ಲು". ಬರೀ ವೇದಗಳನ್ನು ಓದಿದರೆ ಪಂಡಿತನಾಗಬಹುದಲ್ಲದೆ ಜ್ಞಾನಿ ಆಗಲಾರ ಎಂದು ವಿಡಂಬಿಸುತ್ತಾರ. ಸಮಾಜದಲ್ಲಿ ಕೆಲವರಿಗೆ ಸ್ವರ್ಗ-ನರಕ, ಕೈಲಾಸ-ವೈಕುಂಠ ಲೋಕಗಳಿವೆ ಎನ್ನುವ ಭ್ರಮೆ ಇದೆ. ಕೈಲಾಸದಲ್ಲಿ ನಂಬಿಕೆ ಇಟ್ಟಿರುವ ಜನಗಳ ಭ್ರಮೆಯನ್ನು ಸಿದ್ಧರಾಮ ತನ್ನ ವಚನದ ಅಲಗಿನಿಂದ ಈ ರೀತಿ ಚುಚ್ಚುತ್ತಾನೆ: "ಕೈಲಾಸ, ಕೈಲಾಸವೆಂದು ಬದಿದಾಡುವ ಅಣ್ಣಗಳಿರಾ, ಕೈಲಾಸವೆಂಬುದು ಒಂದು ಭೂಮಿಯೊಳಗಿರುವ ನಾಳು ಬೆಟ್ಟ. ಅಲ್ಲಿರುವ ಮುನಿಗಳೆಲ್ಲಾ ಜೀವಗಳ್ಳರು. ಲಿಂಗಾಂಗ ಸಾಮರಸ್ಯವ ತಿಳಿದು ನಿಮ್ಮ ಪಾದಪದ್ಮದೊಳು ಬಯಲಾದ ಪದವೇ ಕೈಲಾಸ" ಎಂದು ವಿಡಂಬಿಸುತ್ತಾನೆ. ಅಲ್ಲಮ ಪ್ರಭು ಕೂಡ

ದೇವಲೋಕದ ಭ್ರಮೆಯನ್ನು ಬಿಡಿ, ಅದು ಬಾಲ ಭಾಷೆ. "ಸಾಯದ ಮುನ್ನ ಸ್ವಯುವನರಿದಡೆ ದೇವನೊಲಿವ" ಎಂದು ಬದುಕಿರುವಾಗಲೇ ತನ್ನನ್ನು ತಾನೇ ಅರಿತುಕೊಂಡರೆ ಅದೇ ದೇವಲೋಕವೆಂದು ಹೇಳುತ್ತಾನೆ.

ನಮ್ಮ ದೇಶದಲ್ಲಿ ದೇವರ ಹೆಸರಿನಲ್ಲಿ ನಡೆಯುವಷ್ಟು ಶೋಷಣೆ ಬೇರೆ ಯಾವ ದೇಶದಲ್ಲಿಯೂ ನಡೆಯಲಿಕ್ಕಿಲ್ಲ. ದೇವರ ನಂಬಿಕೆಯ ಸುತ್ತ ಅನೇಕ ಮೌಢ್ಯ ಕಂದಾಚಾರ ಪದ್ಧತಿಗಳು ರೂಢಿಯಲ್ಲಿವೆ. ಇವುಗಳನ್ನು ಬೆಳೆಸಿದವರು ಪುರೋಹಿತರು. ಇಂತಹ ಆಚರಣೆಗಳ ನಿವಾರಣೆಗಾಗಿ, ಶರಣರು ಕ್ರಾಂತಿ ಮಾಡಿದರು. ಈ ದೇಶದಲ್ಲಿರುವ ನಾನಾ ಬಗೆಯ, ಮೂವತ್ಮೂರು ಕೋಟಿ ದೇವತೆಗಳನ್ನು ಅಲ್ಲಗಳೆದು ಏಕದೇವನಲ್ಲಿ ನಿಷ್ಠೆಯನ್ನು ಬೆಳೆಸಿದರು. ಬಸವಣ್ಣನವರು ತಮ್ಮ ಒಂದು ವಚನದಲ್ಲಿ "ಅರುಗು ತಿಂದು ಕರಗುವ ದೈವವ, ಉರಿಯ ಕಂಡರೆ ಮುರುಟುವ ದೈವವ, ಅವಸರ ಬಂದರೆ ಮಾರುವ ದೈವ -ಇವುಗಳನ್ನು ನಂಬಿ ಕೆಡಬೇಡಿರಿ ಎಂದು ವಿಡಂಬಿಸುತ್ತಾರೆ. ಜನರು ಅಂಧಶ್ರದ್ಧೆಯಿಂದ, ನೀರನ್ನು ಕಂಡಲ್ಲಿ ಮುಳುಗುವುದು, ಮರವನ್ನು ಕಂಡಲ್ಲಿ ಸುತ್ತುವುದು ರೂಢಿಯಲ್ಲಿದೆ. ಮರ ಒಣಗುತ್ತದೆ; ಜಲ ಬತ್ತುತ್ತದೆ ಎನ್ನುವ ಅರಿವು ಅವರಿಗಿಲ್ಲ, ಶಾಶ್ವತವಾದ ದೇವರನ್ನು ನಂಬಿ ಎಂದು ವಿಡಂಬಿಸುತ್ತಾರೆ. ಸಂಪ್ರದಾಯಬದ್ಧ ಸಮಾಜದಲ್ಲಿ ವ್ರತನೇಮಾದಿಗಳು ಅಧಿಕ. ಅದಕ್ಕೆ, ಸಿದ್ಧರಾಮ ಹೀಗೆ ವಿಡಂಬಿಸುತ್ತಾನೆ: "ಪತ್ರೆಯ ನೇಮದವರು ಒಂದು ಕೋಟಿ, ಲಿಂಗಾರ್ಚನೆಯ ನೇಮದವರು....ಒಂದು ಕೋಟಿ, ತನ್ನನ್ನು ತಿಳಿಯುವ ನೇಮದವರು ಒಬ್ಬರು ಇಲ್ಲವಯ್ಯಾ" ಎಂದು. ಹಲವು ದೇವರುಗಳನ್ನು ಪೂಜಿಸಿ ಮಾನಸಿಕ ಭ್ರಮೆಗೆ ಒಳಗಾಗುವುದಕ್ಕಿಂತ ಏಕದೇವನ ನಿಷ್ಠೆ ಮನೋವೈಜ್ಞಾನಿಕವಾದುದು ಎಂದು ಬಸವಣ್ಣನವರು ಹೇಳುತ್ತಾರೆ. ಅವರ ವಚನ ಹೀಗಿದೆ: "ಇಬ್ಬರು, ಮೂವರು ದೇವರೆಂದು....ಉಬ್ಬುಬ್ಬಿ ಮಾತನಾಡಬೇಡ ದೇವನೊಬ್ಬನೇ; ಇಬ್ಬರೆಂಬುದು ಹುಸಿ" ಎಂದು ಹೇಳುತ್ತಾರೆ. ದೇವಾಲಯಗಳು ಶೋಷಣೆಯ ಕೇಂದ್ರವಾಗಿದ್ದು, ಜನಗಳಲ್ಲಿ ಮೇಲು ಕೀಳು ಎನ್ನುವ ಭಾವನೆಯನ್ನು ಹುಟ್ಟಿಸಲು ಕಾರಣವಾಗಿ; ಉಳ್ಳವರು, ಇಲ್ಲದವರು ಎನ್ನುವ ತಾರತಮ್ಯವನ್ನು ಸೃಷ್ಟಿಸಿ, ದುಡಿಯದೆ ಉಣ್ಣುವ ಪೂಜಾರಿಗಳ ಜೀವನ ಕ್ರಮವನ್ನು ಕಂಡು, ದೇವಾಲಯ ಸಂಸ್ಕೃತಿಯನ್ನು ವಿರೋಧಿಸಿದರು. ಅದಕ್ಕೆ ಬಸವಣ್ಣನವರು ದೇವಾಲಯಗಳನ್ನು ನಿರಾಕರಿಸಿ, ದೇಹವನ್ನೇ ದೇವಾಲಯವನ್ನಾಗಿ ಮಾಡಿಕೊಳ್ಳಿ ಎಂದು ಡಂಗುರ ಸಾರುತ್ತಾರೆ.

"ಉಳ್ಳವರು ಶಿವಾಲಯ ಮಾಡುವರು
ನಾನೇನ ಮಾಡುವೆ ಬಡವನಯ್ಯಾ
ಎನ್ನ ಕಾಲೇ ಕಂಭ, ದೇಹವೇ ದೇಗುಲ,
ಶಿರ ಹೊನ್ನ ಕಳಸವಯ್ಯಾ ಕೂಡಲ ಸಂಗಮದೇವ ಕೇಳಯ್ಯಾ,
ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ"

ಎಂದು ವಿಡಂಬಿಸುತ್ತಾರೆ. ವಚನಕಾರರು ಸ್ಥಾವರಲಿಂಗ ಪೂಜಿಸುವವರನ್ನು ವಿಡಂಬಿಸುತ್ತಾರ. ಅಲ್ಲಮನ ವಚನ ಒಂದು ಹೀಗಿದೆ: "ಕಲ್ಲ ಮನೆಯ ಮಾಡಿ, ಕಲ್ಲ ದೇವರ ಮಾಡಿ, ಕಲ್ಲ ಮೇಲೆ ಕಲ್ಲ ಕೆಡೆದರೆ ದೇವರೆತ್ತ ಹೋದನೋ, ಲಿಂಗ ಪ್ರತಿಷ್ಠೆಯ ಮಾಡಿದವರಿಗೆ ನಾಯಕ ನರಕ ತಪ್ಪದು" ಎಂದು ಕಟುವಾಗಿ ವಿಡಂಬಿಸುತ್ತಾನೆ.

ಚೆನ್ನಬಸವಣ್ಣನವರು ತಮ್ಮ ವಚನದಲ್ಲಿ-

ಗುರು ಕೊಟ್ಟ ಇಷ್ಟಲಿಂಗವಾ.... ಮರೆದು
ಸ್ಥಾವರಕ್ಕೆ ಹೋಗಿ ದಂಡ ಪ್ರಾಣಾಮವಮಾಡುವರು.
ಆವುದು ಸದಾಚಾರವಯ್ಯ?

ಎಂದು ಖಂಡಿಸುತ್ತಾರೆ. ಕೈಗೆ ಕೊಟ್ಟ ಇಷ್ಟಲಿಂಗವ ಬಿಟ್ಟು ಬೆಟ್ಟದ ಲಿಂಗಕ್ಕೆ ಹೋಗುವವರನ್ನು ಕಂಡು ವಚನಕಾರರು ತುಂಬಾ ನೊಂದುಕೊಳ್ಳುತ್ತಾರೆ; ಎಚ್ಚರಿಕೆ ನೀಡುತ್ತಾರೆ; ವಿನಂತಿಸಿಕೊಳ್ಳುತ್ತಾರೆ. ಇದಾವುದಕ್ಕೂ ಬಗ್ಗದೆ ಇದ್ದಾಗ ಕೊನೆಗೆ ಕೈಗೆ ಪಾದರಕ್ಷೆ ತೆಗೆದುಕೊಳ್ಳುತ್ತಾರೆ. ದೇವಾಲಯದ ಸುತ್ತು ಸುತ್ತುವವರಿಗೆ ಪುಣ್ಯ ಸಿಗುತ್ತದೆ ಎಂದು ಅವರು ನಂಬಿರಲಿಲ್ಲ. ಅವರದು ನಿಜ

ಅರಿವಿನ ಫಲ. ದೇವರು, ದೇವಾಲಯಗಳು ಕೆಲಸವಿಲ್ಲದವರ ಒಂದು ಜೀವನೋಪಾಯದ ಮಾರ್ಗ. ಆದ್ದರಿಂದ ಮನುಷ್ಯನೇ ದೇವಾಲಯವಾಗಬೇಕೆಂದು ಕರೆ ನೀಡುತ್ತಾರೆ. ಇಂದಿನಂತೆ ಹಿಂದೆಯೂ ಡಾಂಭಿಕ ಸ್ವಾಮಿಗಳಿದ್ದರು. ಹೊಟ್ಟೆ ಹೊರೆದುಕೊಳ್ಳಲು ಮಾತುಕಲಿತು, ತಲೆ ಬೋಳಿಸಿಕೊಂಡವರು. ಇವರಿಗೆ ಶಿವಾಗಮವೆಂದರೆ ಗೊತ್ತಿಲ್ಲ. ಕೇವಲ ವೇಷಧಾರಿಗಳು. ಇವರನ್ನು ಕಂಡು ಚನ್ನಬಸವಣ್ಣನವರ ವಚನ ಹೀಗಿದೆ: "ಮಾತು ಕಲಿತು ಮಂಡೆಯ ಬೋಳಿಸಿಕೊಂಡರೇನು.... ವೇಷ ಲಾಂಛನಧಾರಿಯಾಗಿ ಉದರ ಪೋಷಕರಪ್ಪರಲ್ಲದೆ ಶಿವಾಗಮದ ಸುವಿಚಾರದ ಫಲವನರಿಯರು ಕಾಣಿರೇ" ಎಂದು ಕಟುವಾಗಿ ವಿಡಂಬಿಸುತ್ತಾರೆ. ಸಮಾಜದಲ್ಲಿ ನಡೆಯುತ್ತಿದ್ದ ಕಂದಾಚಾರ, ಸೋಗಿನ ಆಚರಣೆಗಳನ್ನು ಶರಣರು ಖಡಾಖಂಡಿತವಾಗಿ ವಿಡಂಬಿಸುತ್ತಾರೆ. ಮಠದ ಕೆಲವು ಢೋಂಗಿ ಸ್ವಾಮಿಗಳು ಶ್ರೀಮಂತ ಭಕ್ತರನ್ನು ಕಂಡರೆ ಓಲೈಸುವುದು, ಬಡಭಕ್ತರನ್ನು ಕಂಡರೆ ಉಪೇಕ್ಷಿಸುವುದು ಅಂದೂ ಇತ್ತು; ಇಂದೂ ಇದೆ. ಇಂತಹವರನ್ನು ಕಂಡು ಅಂಬಿಗರ ಚೌಡಯ್ಯ ಖಾರವಾಗಿ ವಿಡಂಬಿಸುತ್ತಾನೆ: "ದೊಡ್ಡ ದೊಡ್ಡ ಶೆಟ್ಟಿಗಳ ಕಂಡು ಅಡ್ಡಗಟ್ಟಿ ಹೋಗಿ ಶರಣಾರ್ಥಿ ಎಂಬ ಎಡ್ಡುಗಳ್ಳತನಕ್ಕೆ ತಮ್ಮ ಮಠಕ್ಕೆ ಬನ್ನಿ ಹಿರಿಯರೇ ಎಂಬರು, ಹೋಗಿ 'ಶರಣಾರ್ಥಿ' ಭಕ್ತನೆಂದೊಡೆ ಕೇಳದ ಹಾಗೆ ಅಡ್ಡಮೋರೆಯಸಿಕ್ಕಿಕೊಂಡು ಸುಮ್ಮನೆ ಹೋಗುವ ಹೆಡ್ಡ ಮೂಳರಿಗೆ ಮದ್ದೇ ಪ್ರಾಣವಾಯಿತು" ಎಂದು. ವಿರಕ್ತಸ್ವಾಮಿಗಳಲ್ಲಿ ಕೆಲವು ಜನ ಢೋಂಗಿ ಸ್ವಾಮಿಗಳನ್ನು ಕಂಡು, ಅಮುಗೆರಾಯಮ್ಮನೆಂಬ ಶರಣೆ "ವಿರಕ್ತ, ವಿರಕ್ತ ಎಂಬ ಹಾದಿಕಾರರ, ವಿರಕ್ತರೆನ್ನಬಹುದೇ? ಕಾವಿಯ ಹೊದ್ದು ತಿರುಗುವ ಜೀವಗಳ್ಳರು ವಿರಕ್ತರೇ?" ಎಂದು ಪ್ರಶ್ನಿಸಿ, ಚೆನ್ನಾಗಿ ವಿಡಂಬಿಸುತ್ತಾಳೆ. ಅಂಬಿಗರ ಚೌಡಯ್ಯನಂತೂ ವೇಷಧಾರಿಗಳಾದ ಗುರುಗಳನ್ನು, ಜಂಗಮರನ್ನು, ಭಕ್ತರನ್ನು ಕೂಡಾ ವಿಡಂಬಿಸುವುದನ್ನು ಬಿಟ್ಟಿಲ್ಲ.

"ಕಂತೆ ತೊಟ್ಟವ ಗುರುವಲ್ಲ, ಕಾವಿ ಹೊದ್ದವ ಜಂಗಮನಲ್ಲ, ಶಿಲೆ ಕೆತ್ತಿದವ ಶಿವಭಕ್ತನಲ್ಲ" ಎಂದು ಖಡಾಖಂಡಿತವಾಗಿ ವಿಡಂಬಿಸಿದ್ದಾನೆ. ಬಸವಣ್ಣನವರು ಢೋಂಗಿ ಜನರ ಭಕ್ತಿಯನ್ನು ಕಂಡು "ಎನಿಸುಕಾಲ ಕಲ್ಲು ನೀರೊಳಗಿರ್ದರೇನು? ನೆನೆದು ಮೃದುವಾಗಬಲ್ಲದೇ?" ಎಂದು ಕೇಳುತ್ತಾರೆ. ಅಂದರೆ ಢೋಂಗಿ ಜನರು ಶರಣರ ಸಹವಾಸದಲ್ಲಿದ್ದರೂ, ಢೋಂಗಿಗಳಾಗೇ ಇರುತ್ತಾರೆ. ಅವರ ಮನಸ್ಸು ಎಂದೂ ಪರಿವರ್ತನೆಯಾಗುವುದಿಲ್ಲ.

ಶರಣರು ಹನ್ನೆರಡನೆ ಶತಮಾನದಲ್ಲಿ ದೇವಾಲಯಗಳನ್ನು ತಿರಸ್ಕರಿಸಿದಂತೆ ಜನರ ಮೂಢನಂಬಿಕೆಗಳನ್ನು, ಕಸಗುಡಿಸುವಂತೆ ಗುಡಿಸಿಹಾಕಲು ಪ್ರಯತ್ನಿಸಿದರು. ಸಮಾಜದಲ್ಲಿ ವ್ಯಾಪಕವಾಗಿ ಬೆಳೆದಿದ್ದ ಬಳಕೆಯಲ್ಲಿದ್ದ ಮೌಢ್ಯ, ಅಂಧ ಸಂಪ್ರದಾಯಗಳ ವಿರುದ್ಧ ತಮ್ಮ ವಿಡಂಬನೆಯ ಶಸ್ತ್ರವನ್ನು ಝಳಪಿಸಿದರು. ಮೂಢನಂಬಿಕೆಗಳ ವಿರುದ್ಧದ ಹೋರಾಟವೆಂದರೆ ವೈಚಾರಿಕ ಪ್ರಚಾರವೆಂಬುದೇ ಅವರ ನಿಲುವಾಗಿತ್ತು. ವಾರ, ತಿಥಿ, ನಕ್ಷತ್ರ, ಉದಯ, ಅಸ್ತ, ರಾಹುಕಾಲ, ಗುಳಿಕಕಾಲ, ಅಷ್ಟಮಿ, ನವಮಿ, ತಿಥಿ, ಅಮಾವಾಸ್ಯೆ, ಪೌರ್ಣಿಮೆ -ಇವುಗಳ ಶುಭಾಶುಭಗಳನ್ನು ಹೇಳುವ ಜ್ಯೋತಿಷ್ಯ ಶಾಸ್ತ್ರವನ್ನು ಅಲ್ಲಗಳೆಯುತ್ತಾರೆ. "ಅಂದು, ಇಂದು ಮತ್ತೊಂದೆನಬೇಡ ದಿನ ಒಂದೆ ಶಿವ ಶರಣೆಂಬುವಂಗೆ" -ಎಲ್ಲಾ ದಿನವು ಶಿವಶರಣರಿಗೆ ಶುಭ ಎಂದು ಹೇಳುತ್ತಾರೆ.

ಬಸವಣ್ಣನವರು "ಲಿಂಗ ಶ್ರೇಷ್ಠವೋ, ದಿನ ಶ್ರೇಷ್ಠವೋ" ಎಂದು ಪ್ರಶ್ನಿಸುತ್ತಾರೆ. ಹಡಪದ ಅಪ್ಪಣ್ಣ ದಿನ, ವಾರ, ತಿಥಿ, ಮಾಸ, ಸಂವತ್ಸರಗಳು ಹೋಗುವ, ಬರುವ ನೈಸರ್ಗಿಕ ಕ್ರಿಯೆ ಮಾತ್ರ. "ಎನ್ನ ದೇವರಿಗೆ ಇವೊಂದೂ ಇಲ್ಲ" ಎಂದು ಶುಭಾಶುಭ ಮುಹೂರ್ತಗಳನ್ನು ನಿರಾಕರಿಸುತ್ತಾನೆ. ಕೋಟ್ಯಂತರ ಕಿಲೋಮೀಟರ್ ದೂರವಿರುವ ಆಕಾಶಕಾಯಗಳು, ಗ್ರಹಗಳು, ನಕ್ಷತ್ರಗಳು ಭೂಮಿಯ ಮೇಲಿರುವ ಜೀವಿಗಳ ಭವಿಷ್ಯವನ್ನು ನಿಯಂತ್ರಿಸುವುದನ್ನು ವಚನಕಾರರು ಖಡಾಖಂಡಿತವಾಗಿ ಅಲ್ಲಗಳೆಯುತ್ತಾರೆ. ಬಸವಣ್ಣನವರು-

ಎಮ್ಮವರು ಬೆಸಗೊಂಡರೆ ಶುಭಲಗ್ನವೆನ್ನಿರಯ್ಯಾ
ರಾಶಿಕೂಟ, ಗಣ ಸಂಬಂಧ ಉಂಟೆಂದು ಹೇಳಿರಯ್ಯಾ
ಚಂದ್ರಬಲ, ತಾರಾಬಲ ಉಂಟೆಂದು ಹೇಳಿರಯ್ಯಾ
ನಾಳಿನ ದಿನಕ್ಕೆ ಇಂದಿನ ದಿನವೇ ಲೇಸೆಂದು ಹೇಳಿರಯ್ಯಾ.

ಎನ್ನುವ ವಚನದಲ್ಲಿ ಮದುವೆಯ ಸಂದರ್ಭದಲ್ಲಿ ಗಂಡು, ಹೆಣ್ಣುಗಳ ಒಪ್ಪಿಗೆ, ಹಿರಿಯರ ಸಮ್ಮತಿ ಕೂಡಿದರೆ ಸಾಕು; ಅದೇ ಶುಭಲಗ್ನ ನಾಳೆಗಿಂತ ಇಂದಿನ ದಿನವೇ ಲೇಸು. ಎಂದು ಹೇಳಿ ಮಂಗಳಕಾರ್ಯ ಮುಗಿಸಿದರೆ ಕೂಡಲಸಂಗಮನನ್ನು ಪೂಜಿಸಿದ ಫಲ ಬರುತ್ತದೆ, ಶುಭಾಶುಭ ಮುಹೂರ್ತಗಳ ಅವಶ್ಯಕತೆಯೇ ಇಲ್ಲ ಎಂದು ವಿಡಂಬಿಸುತ್ತಾರೆ. ಜಾಗತಿಕ ಧರ್ಮಗಳಲ್ಲಿ ಹೆಣ್ಣಿನ ಸ್ಥಾನ-ಮಾನ ಅಷ್ಟೇನೂ ಚೆನ್ನಾಗಿಲ್ಲ; ಹೆಣ್ಣಿಗೆ ಯಾವ ಗೌರವವೂ ಇಲ್ಲ. ಸ್ವಾತಂತ್ರ್ಯವನ್ನು ಕಳೆದುಕೊಂಡು ಪುರುಷನ ಅಧೀನಳಾಗಿಯೇ ಬಾಳುತ್ತ ಬಂದಿದ್ದಾಳೆ. ಪಾಶ್ಚಾತ್ಯ ದೇಶಗಳಲ್ಲೂ ಒಂದಿಲ್ಲೊಂದು ಕಾರಣಗಳನ್ನು ನೀಡಿ ವ್ಯಕ್ತಿ ಸ್ವಾತಂತ್ರವನ್ನು ಕಿತ್ತುಕೊಳ್ಳಲಾಯಿತು ಎಂಬುದು ಐತಿಹಾಸಿಕ ಸಂಗತಿ. ವಚನಕಾರರಿಗೆ ಗಂಡು-ಹೆಣ್ಣುಗಳೆಂಬ ಭೇದವಿರಲಿಲ್ಲ. ಗಂಡು ಮತ್ತು ಹೆಣ್ಣಿನಲ್ಲಿರುವ ಆತ್ಮ ಒಂದೇ ಎಂದು ಭಾವಿಸಿದರು. "ಮೊಲೆ ಮುಡಿ ಬಂದರೆ ಹೆಣ್ಣೆಂಬರು, ಗಡ್ಡ ಮೀಸೆ ಬಂದರೆ ಗಂಡೆಂಬರು" ಎಂದು ದೇಹದ ರಚನೆಯ ಮೂಲಕ ದೇಹ ಭೇದವನ್ನು ತಿಳಿಸಿ, ಆತ್ಮ ಒಂದೇ ಎಂದು ಸಾರಿದರು. ಹೀಗೆ ಶರಣರದು ವೈಚಾರಿಕ ನಿಲುವಾಗಿತ್ತು. ಸಮಾಜದಲ್ಲಿರುವ ಹಳೆಯ ನಂಬಿಕೆಗಳನ್ನು, ಪರಂಪರಾಗತ ಭಾವನೆಗಳನ್ನು ಕಿತ್ತೊಗೆದು ಸಮಾಜವನ್ನು ಪರಿವರ್ತನೆಗೊಳಿಸುವುದು ಅವರ ಧ್ಯೇಯವಾಗಿತ್ತು. ಎಲ್ಲಕ್ಕಿಂತ ಹೆಚ್ಚಾಗಿ ಮನುಷ್ಯನ ಮನಸ್ಸನ್ನು ತಿದ್ದಿ ಅವರ ಮನಸ್ಸಿನಲ್ಲಿ ವಿಚಾರದ ಬೀಜವನ್ನು ಬಿತ್ತಿ ಆ ಮೂಲಕ ಸಮಾಜವನ್ನು ಸುಧಾರಣೆ ಮಾಡಬೇಕೆಂಬುದು ಅವರ ಆಶಯವಾಗಿತ್ತು.

ಭಾರತದಲ್ಲಿ ಜಾತಿಪದ್ಧತಿ, ಒಂದು ಮಹಾಶಾಪ. ಅದು ಮನುಷ್ಯನ ಯೋಗ್ಯತೆಯ ಮಾನದಂಡವಾಗಿರುವುದು ದುರಂತದ ಸಂಗತಿ. ಜಾತಿಪದ್ಧತಿಯಿಂದ ಸಮಾಜದಲ್ಲಿ ಮೇಲು, ಕೀಳು ಹಂತಗಳು ನಿರ್ಮಾಣವಾದವು. ಮನುಷ್ಯ-ಮನುಷ್ಯರಲ್ಲಿ ಅಡ್ಡಗೋಡೆಗಳು ರಚನೆಯಾದವು. ಇಂತಹ ಸಂದರ್ಭದಲ್ಲಿ ಎಲ್ಲ ಜನರನ್ನು ತಮ್ಮವರೆಂದು ಭಾವಿಸಿ "ಇವನಾರವ ಇವನಾರವ ಎನ್ನದೆ, ಇವ ನಮ್ಮವ ಇವ ನಮ್ಮವ" ಎಂದು ಅಪ್ಪಿಕೊಂಡು ಅವರಿಗೆ ಸಾಮಾಜಿಕ ಸ್ಥಾನ-ಮಾನ ನೀಡಿರುವುದು, ಎಲ್ಲರನ್ನು ಸಮಾನವೆಂದು ಭಾವಿಸಿರುವುದು ವಚನಕಾರರ ವೈಶಿಷ್ಟ್ಯ. ವಚನಕಾರರು ಕುಲದ ಪ್ರಶ್ನೆಯನ್ನು ಎತ್ತಿಕೊಂಡು "ಕೊಲುವವನೆ ಮಾದಿಗ ಹೊಲಸ ತಿಂಬವನೆ ಹೊಲೆಯ ಕುಲವೇನೂ ಅವಂದಿರ ಕುಲವೇನೊ?" ಎಂದು ಪ್ರಶ್ನಿಸಿ ಸಕಲ ಜೀವಾತ್ಮರನ್ನು ಪ್ರೀತಿಸುವವರೇ ನಿಜವಾದ ಕುಲಜರು ಎಂದು ಹೇಳುತ್ತಾರೆ. ಅಂಬಿಗರ ಚೌಡಯ್ಯ ಹೀಗೆ ಹೇಳುತ್ತಾನೆ. "ಹೊಲೆಯ ಹೊಲೆಯ ಎಂದಡೆ ಹೊಲೆಯ ಎಂತಪ್ಪರಯ್ಯಾ? ಹೊಲೆಯ ಹೊರಕೇರಿಯಲ್ಲಿರುವನು ಊರೊಳಗಿಲ್ಲವೇ ಅಯ್ಯಾ ಹೊಲೆಯರು. ತಾಯಿಗೆ ಬೈದವನೇ ಹೊಲೆಯ, ತಂದೆಗೆ ಉತ್ತರ ಕೊಟ್ಟವನೇ ಹೊಲೆಯ" ಎಂದು ಛೇಡಿಸುತ್ತಾನೆ. ಸಿದ್ಧರಾಮನು ತನ್ನ ವಚನದಲ್ಲಿ "ವೇದವನೋದಿ ವೇದಾಧ್ಯಯನವ ಮಾಡಿದಡೇನು ಬ್ರಾಹ್ಮಣನಾಗಬಲ್ಲನೇ? ಬ್ರಹ್ಮಜ್ಞಾನವನ್ನು ತಿಳಿದವನೇ ಬ್ರಾಹ್ಮಣನೆಂದು ಮೇಲುವರ್ಗದವರನ್ನು ಖಂಡಿಸುತ್ತಾನೆ. ಜಾತಿಯನ್ನೇ ಶ್ರೇಷ್ಠವೆಂದು ನಂಬಿ ನಡೆಯುವ ಬ್ರಾಹ್ಮಣರಿಗೆ "ಏನಯ್ಯಾ ವಿಪ್ರರು ನುಡಿದಂತೆ ನಡೆಯರು ಇದೆಂತಯ್ಯಾ?" ಎಂದು ವಿಡಂಬಿಸುತ್ತಾರೆ. ಮತ್ತೆ ಅವರೇ "ಕಾಸಿ ಕಮ್ಮಾರನಾದ ಬೀಸಿ ಮಡಿವಾಳನಾದ ಹಾಸನಿಕ್ಕಿ ಸಾಲಿಗನಾದ ವೇದವನೋದಿ ಹಾರುವನಾದ" ಜಾತಿಗಳು ವೃತ್ತಿಗಳಿಂದ ಬಂದಿವೆ ಎಂದು ಪ್ರತಿಪಾದಿಸುತ್ತಾರೆ. ಭಕ್ತನಿಗೆ ಸಾಧನೆಮಾಡುವಾಗ ದೇವರ ಬಗ್ಗೆ ಸಂದೇಹ ಬಂದಾಗ, ಅವರ ಬಾಯಿಂದ ವಿಡಂಬನೆ ಬರುತ್ತದೆ. "ಹುಟ್ಟೆಂದು ಲೋಕದಲ್ಲಿ ಹುಟ್ಟಿಸಿ ಇಳಿಯಬಿಟ್ಟರೇ ನಿಮ್ಮ ನಗುವರಯ್ಯಾ" ಎನ್ನುತ್ತಾನೆ. ಮನುಷ್ಯನಿಗೆ ಹಸಿವು ಒಂದು ವಾಸ್ತವ ಸತ್ಯ. ದೇಹದ ಧರ್ಮ. ಮನುಷ್ಯ ಹಸಿವನ್ನು ನೀಗಿಸಿಕೊಂಡಾಗ ಸುಸಂಸ್ಕೃತನಾಗಿ ಬಾಳಲು ಸಾಧ್ಯ. ಲೌಕಿಕ ಜೀವನದಲ್ಲಿ ತನ್ನ ಹೊಟ್ಟೆಪಾಡಿಗಾಗಿಯೇ ಅನೇಕ ತಪ್ಪುಗಳನ್ನು ಮಾಡುತ್ತಾನೆ. ಇದು ಸಹಜವೆಂದು ಜೇಡರ ದಾಸಿಮಯ್ಯ ದೇವರನ್ನು ಪ್ರಶ್ನಿಸುತ್ತಾನೆ:

ಒಡಲಗೊಂಡವ ಹಸಿವ
ಒಡಲಗೊಂಡವ ಹುಸಿವ
ಒಡಲುಗೊಂಡವನೆಂದು ನೀನೆನ್ನ
ಜಡಿದೊಮ್ಮೆ ನುಡಿಯದಿರಾ
ನೀನೆನ್ನಂತೆ ಒಮ್ಮೆ, ಒಡಲುಗೊಂಡು ನೋಡ.

ಎಂದು ಸವಾಲೊಡ್ಡುತ್ತಾನೆ.

ಇಷ್ಟಲಿಂಗಧಾರಿಗಳಾಗಿ ನಡೆನುಡಿಗಳು ಸರಿ ಇಲ್ಲವಾದರೆ ಪ್ರಯೋಜನವಿಲ್ಲ. ಇಂತಹವರನ್ನು ಕುರಿತು ಬಸವಣ್ಣನವರು "ನುಡಿಯಲ್ಲಿ ಎಚ್ಚತ್ತು ನಡೆಯಲ್ಲಿ ತಪ್ಪಿದರೆ ಹಿಡಿದಿರ್ಪ ಲಿಂಗ ಘಟಸರ್ಪವಯ್ಯಾ" ಎಂದು ವಿಡಂಬಿಸುತ್ತಾ, ನುಡಿ ಮಾತ್ರ ಚೆನ್ನಾಗಿದ್ದರೆ ಸಾಲದು; ನಡೆಯೂ ಕೂಡ ಚೆನ್ನಾಗಿರಬೇಕು ಎಂದು ಹೇಳುತ್ತಾರೆ. ಕಾಯಕವನ್ನು ಕುರಿತು ವಚನಕಾರರು ಸಮರ್ಥವಾಗಿ ಅದರ ಮೌಲ್ಯವನ್ನು ಪ್ರತಿಪಾದಿಸಿದ್ದಾರೆ. "ನಮ್ಮ ಒಡಲ ಅವಸರಕ್ಕೆ ಕುದಿಯುವುದು ಕಾಯಕವಲ್ಲ ಕೂಡಲ ಸಂಗನ ನಿಲುವಿಗೆ ಕುದಿಯುವುದೇ ಕಾಯಕ" ಎಂದು ಲಕ್ಕಮ್ಮ ಹೇಳುತ್ತಾಳೆ. ಸಜ್ಜನರ ಪೂಜೆ ಸಾರ್ಥಕವಾಗುತ್ತದೆ. ದುರ್ಜನರು ಮಾಡುವ ಪೂಜೆಗೆ ಅರ್ಥವಿಲ್ಲ. "ಕೋಪಿ ಮಜ್ಜನಕ್ಕೆರೆದರೆ ರಕ್ತದ ಧಾರೆ, ಪಾಪಿ ಹೂವನೇರಿಸಲು ಮಸೆದಡಾಯುಧದ ಘಾಯ" ಎಂದು ಅಕ್ಕ ಮಹಾದೇವಿ ಖಾರವಾಗಿ ವಿಡಂಬಿಸುತ್ತಾಳೆ. ಹೀಗೆ ಸಮಾಜದ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಕಂಡ ಎಲ್ಲಾ ಅಂಕು-ಡೊಂಕುಗಳನ್ನು ತಿದ್ದಲು ವಚನಕಾರರು ಪ್ರಯತ್ನಿಸಿದರು. ವಚನಕಾರರಲ್ಲೂ ಒಬ್ಬೊಬ್ಬರದು ಒಂದೊಂದು ಸ್ವಭಾವ ಇತ್ತು, ಇದು ಅವರ ವ್ಯಕ್ತಿ ವೈಶಿಷ್ಟ್ಯ. ಬಸವಣ್ಣನವರದು ಭಾವುಕತೆ, ಬೆಳ್ಳಗಿರುವುದೆಲ್ಲಾ ಹಾಲು ಎನ್ನುವ ಸ್ವಭಾವ. ಅಲ್ಲಮಪ್ರಭುವಿನದು ನಿರ್ದಾಕ್ಷಿಣ್ಯಪರ, ಚೆನ್ನಬಸವಣ್ಣನವರದು ಸಮಾಧಾನಗುಣ. ಅಕ್ಕಮಹಾದೇವಿಯವರದು ಭಾವಾವೇಶ ಹೀಗೆ ಇವರೆಲ್ಲಾ ತಮ್ಮ ವಚನಗಳ ಮೂಲಕ ವ್ಯಕ್ತಿ ಹಾಗೂ ಸಮಾಜದ ಮುಖಕ್ಕೆ ಉಬ್ಬು ತಗ್ಗಿನ ಕನ್ನಡಿ ಹಿಡಿದು, ಅದರ ವಕ್ರತೆಯನ್ನು ಎತ್ತಿ ತೋರಿಸಿದರು.

ವೀರಶೈವರ ಮೂಲತತ್ವಗಳಾದ ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ಮಠ ಸ್ಥಳಗಳನ್ನು ಅಲ್ಲಮ ಪ್ರಭು ವಿಡಂಬನೆಯ ಮೂಲಕವೇ, ಅವುಗಳನ್ನು ವಿಸ್ತಾರವಾದ ನಿಲುವಿಗೆ ಒಯ್ಯಲು ಪ್ರೇರೇಪಿಸುತ್ತಾನೆ.

ವಚನಕಾರರು, ತಮ್ಮ ವಿಡಂಬನೆಯ ಕತ್ತಿಯನ್ನು ಹಿಡಿದುಕೊಂಡು, ಸಮಾಜದಲ್ಲಿದ್ದ ರೂಢಿಮೌಲ್ಯ ಪದ್ಧತಿಗಳೆಂಬ, ಪೊದೆ ಪರೆಯನ್ನು ಸವರುತ್ತಾ ಸವರುತ್ತಾ ದಾರಿ ತೋರಿಸುತ್ತಾ ನಮ್ಮನ್ನು ಒಳ್ಳೆಯ ಮಾರ್ಗಕ್ಕೆ ಕರೆದೊಯ್ಯುತ್ತಾರೆ. ವಚನಗಳಲ್ಲಿ ಕೆಲವು ವಾಕ್ಯಗಳಲ್ಲಿ ವಿಡಂಬನೆ ಕಂಡರೆ, ಮತ್ತೆ ಕೆಲವು ವ್ಯಂಗ್ಯಾತ್ಮಕವಾಗಿವೆ ಮತ್ತು ಕೆಲವು ಪ್ರಶ್ನಾರ್ಥಕ, ಉದ್ಗಾರ ಸೂಚಿತವಾಗಿ, ಆರಂಭಗೊಂಡು ತಪ್ಪು ತಡೆಗಳನ್ನು ಬಯಲಿಗೆಳೆದು, ಅದು ಹೀಗಲ್ಲಾ-ಹೀಗೆ, ಎಂದು ಹೇಳುವ ಶೋಧನಾಕಾರ್ಯ ಮಾಡುತ್ತವೆ. ವಚನಕಾರರು ವಚನಗಳಲ್ಲಿ ಬಳಸುವ ರೂಪಕ, ದೃಷ್ಟಾಂತ, ಉಪಮಾನ, ಶ್ಲೇಷಾಲಂಕಾರ ಹಾಗೂ ವಿರೋಧಾಭಾಸಗಳ ಮೂಲಕ ವಿಷಯವನ್ನು ಮನನಗೊಳಿಸುವ ರೀತಿ ಪರಿಣಾಮಕಾರಿಯಾದುದು. ಅವರು ಬಳಸುವ ದೃಷ್ಟಾಂತಗಳು ಸಮಕಾಲೀನ ಜೀವನದಿಂದ ಎತ್ತಿಕೊಂಡವುಗಳು ಆಗಿರುವುದರಿಂದ ಅಂದಿನ ಸಮಾಜದ ಸ್ವರೂಪ ಹಾಗೂ ವಚನಕಾರರ ಉದ್ದೇಶ ಒಟ್ಟಿಗೆ ಅನುಭವಕ್ಕೆ ಬರುತ್ತವೆ. ಹೀಗೆ, ವಚನಗಳ ಅಧ್ಯಯನದಿಂದ ವಚನಕಾರರು, ತಮ್ಮ ವಿಡಂಬನೆಯ ಮೂಲಕ, ವ್ಯಕ್ತಿಯನ್ನು ಸಮಾಜವನ್ನು ಪರಿವರ್ತಿಸುವ ಮಹತ್ತರವಾದ ಕಾರ್ಯವನ್ನು ಮಾಡಿದರು.

■■

ವಚನಗಳಲ್ಲಿ ವೈಜ್ಞಾನಿಕ ದೃಷ್ಟಿ

✍ ಪ್ರೊ. ಬಿ. ವಿರೂಪಾಕ್ಷಪ್ಪ

ಪ್ರಶ್ನಿಸದೆ ಯಾವುದನ್ನೂ ಒಪ್ಪಿಕೊಳ್ಳದಿರುವದೇ ವೈಜ್ಞಾನಿಕ ದೃಷ್ಟಿ. ಯಾವುದೇ ವಿಷಯವು ಪ್ರಯೋಗದ ಮೂಲಕ ಅನುಭವಕ್ಕೆ ಬಂದ ಮೇಲೆ ಅದನ್ನು ನಂಬುವುದು ವೈಜ್ಞಾನಿಕ ದೃಷ್ಟಿ. ದೇವರು ಇದ್ದಾನೆ. ಅವನು ಕೈಲಾಸದಲ್ಲಿಯೋ ವೈಕುಂಠದಲ್ಲಿಯೋ ಇರುತ್ತಾನೆ. ಅವನು ಜಗತ್ತಿನ ಆಗು-ಹೋಗುಗಳನ್ನು ನೋಡಿಕೊಳ್ಳುತ್ತಾನೆಂದು ಪುರಾಣಗಳು ಹೇಳುವ ಮಾತನ್ನು ವೈಜ್ಞಾನಿಕ ದೃಷ್ಟಿಯುಳ್ಳವರು, ಪುರಾಣಗಳು ಪವಿತ್ರ ಗ್ರಂಥಗಳು ಹೇಳಿದ್ದು ನಿಜವಿರಬೇಕೆಂಬುದನ್ನು ಒಪ್ಪಿಕೊಳ್ಳುವುದಿಲ್ಲ. ಅದರಲ್ಲಿರುವ ಸತ್ಯಾಸತ್ಯತೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಒಪ್ಪಿಕೊಳ್ಳುತ್ತಾರೆ.

ವೈಚಾರಿಕತೆಗೂ ವೈಜ್ಞಾನಿಕತೆಗೂ ಬಹಳ ನಿಕಟವಾದ ಸಂಬಂಧವಿದೆ. ವೈಜ್ಞಾನಿಕ ದೃಷ್ಟಿಯ ಇನ್ನೊಂದು ಹೆಸರು ವೈಚಾರಿಕ ದೃಷ್ಟಿ. ಶರಣರು ವೈಚಾರಿಕ ದೃಷ್ಟಿಯುಳ್ಳವರಾಗಿದ್ದರು. ಅವರು ಅಂಧಶ್ರದ್ಧೆಯಿಂದ ಹಿಂದಿನ ಹಾದಿ ತುಳಿದವರಲ್ಲ. ವೇದಾಗಮಗಳೆಲ್ಲವನ್ನು ಅನುಭಾವದ ಒರೆಗಲ್ಲಿಗೆ ಹಚ್ಚದೆ ಒಪ್ಪಿಕೊಳ್ಳಲಿಲ್ಲ. ಬಸವಣ್ಣನವರು ಹೇಳುವಂತೆ-

ವೇದಕ್ಕೆ ಒರೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳನಿಕ್ಕುವೆ.
ತರ್ಕದ ಬೆನ್ನಬಾರನೆತ್ತುವೆ. ಆಗಮದ ಮೂಗ ಕೊಯ್ಯುವೆ.
ನೋಡಯ್ಯ ಮಹಾದಾನಿ ಕೂಡಲಸಂಗಮದೇವಯ್ಯ
ಮಾದಾರ ಚೆನ್ನಯ್ಯನ ಮನೆಯ ಮಗ ನಾನಯ್ಯ ೧-೯೧

ಕುಲವನ್ನು ಹುಟ್ಟಿನಿಂದ ನಿರ್ಧರಿಸಬಾರದು. ಅದು ಆಕಸ್ಮಿಕ. ವ್ಯಕ್ತಿಯ ಗುಣದಿಂದ ನಡತೆಯಿಂದ ಅದನ್ನು ಪರಿಗಣಿಸಬೇಕು. ಮಾದಾರ ಚೆನ್ನಯ್ಯ ಒಬ್ಬ ಶ್ರೇಷ್ಠ ಶರಣ. ಅವನು ಹುಟ್ಟಿನಿಂದ ಮಾದರನಾದರೂ ಸಾಧನೆಯಿಂದ ದಿವ್ಯಜೀವಿ. ಅವನ ಪರಿಶುದ್ಧ ಭಕ್ತಿಗೆ ಮಾರುಹೋಗಿ ಶಿವನೇ ಅವನ ಅಂಬಲಿಯನ್ನು ಸ್ವೀಕರಿಸುತ್ತಾನೆ. ಹೀಗಿರುವಾಗ ಕುಲವನೆಣಿಸುವದೆಂತು? ಚನ್ನಯ್ಯ ಕೀಳುಕುಲದವ, ಅವನ ಮನೆಯಲ್ಲಿ ಉಚ್ಚಕುಲದವರು ಊಟಮಾಡಬಾರದೆಂದು ವೇದಾಗಮಗಳು ಪ್ರತಿಪಾದಿಸಿದರೆ ಅವುಗಳಿಗೆ ಧಿಃಕಾರವೆಂಬ ಬಸವಣ್ಣನವರ ಈ ಮಾತು ವಾಸ್ತವಿಕ ದೃಷ್ಟಿಯನ್ನು ಪ್ರತಿಪಾದಿಸುತ್ತದೆ. ಆಧುನಿಕ ವಿಜ್ಞಾನ ಬಾಹ್ಯಜಗತ್ತಿನ ವ್ಯವಹಾರಗಳನ್ನು ಅದರ ಸ್ವರೂಪವನ್ನು ಪರಿಶೀಲಿಸಿ ತಿಳಿಯಲು ಮಾತ್ರ ಪ್ರಾಯೋಗಿಕ ಮಾರ್ಗವನ್ನನುಸರಿಸಿತು. ಆದರೆ ಶರಣರು ಜೀವನದ ಅಂತರಂಗ-ಬಹಿರಂಗ ಎಲ್ಲ ವ್ಯವಹಾರಗಳನ್ನು ಈ ದೃಷ್ಟಿಯಿಂದ ನೋಡಿದರು. ಅವರ ಅನುಭಾವ ಮಾರ್ಗ ಇದಕ್ಕೆ ಹೊರತಾಗಿರಲಿಲ್ಲ.

ಶರಣರು ಮೂಲತಃ ಅನುಭಾವಿಗಳು. ಅನುಭವವೆಂದರೆ ವಸ್ತುಗಳನ್ನು ಕುರಿತು, ಘಟನೆಗಳನ್ನು ಕುರಿತು ನಮಗಾಗುವ ಜ್ಞಾನ. ಆದರೆ ಅನುಭಾವ ಅಂತರಂಗ ಜಗತ್ತನ್ನು ಕುರಿತ ಜ್ಞಾನ. ಅಂತಿಮ ಸತ್ಯದ ಬಗ್ಗೆ ನಮಗಾಗುವ ಜ್ಞಾನ. ಇದನ್ನು ಬ್ರಹ್ಮಜ್ಞಾನವೆಂತಲೂ, ಆಧ್ಯಾತ್ಮ ಜ್ಞಾನವೆಂತಲೂ ಕರೆಯಬಹುದು. ಇಂಥ ಅನುಭವವನ್ನು ಶರಣರು ವೈಜ್ಞಾನಿಕ ದೃಷ್ಟಿಯಿಂದ ಅಥವಾ ವಾಸ್ತವಿಕ ದೃಷ್ಟಿಯಿಂದ ನೋಡಿದ್ದಾರೆ. ಇಂಥ ವೈಚಾರಿಕ ಅನುಭಾವವೇ ವಚನಗಳ ರೂಪದಲ್ಲಿ ಅಭಿವ್ಯಕ್ತಗೊಂಡಿದೆ. ಕಾರಣ ಶರಣರ ವಚನಗಳಲ್ಲಿ ವೈಜ್ಞಾನಿಕ ದೃಷ್ಟಿ ಹಾಸುಹೊಕ್ಕಾಗಿ ಸೇರಿಕೊಂಡಿರುವದನ್ನು ನಾವು ನೋಡುತ್ತೇವೆ. ದೇವರ ಪರಿಕಲ್ಪನೆ. ಸೃಷ್ಟಿಯ ಸ್ವರೂಪ, ಮಾನವನ ಉದಯ, ಆಧ್ಯಾತ್ಮ ಸಾಧನೆಯ ಮಾರ್ಗ, ಸಾಮಾಜಿಕ ವ್ಯವಸ್ಥೆ ಹಾಗೂ ಮಾನವೀಯ ವ್ಯವಹಾರಗಳು -ಇವೆಲ್ಲವುಗಳನ್ನು ವೈಜ್ಞಾನಿಕ ಅಥವಾ ವೈಚಾರಿಕ ದೃಷ್ಟಿಯಿಂದಲೇ ಪ್ರತಿಪಾದಿಸಿರುವದನ್ನು ನಾವು ಅವರ ವಚನಗಳಲ್ಲಿ ಕಾಣಬಹುದು.

ದೇವರ ಸ್ವರೂಪ:

ದೇವರಿದ್ದಾನೆಯೆ? ಇಲ್ಲವೆಂದು ವಾದಿಸುವವರೂ ಇದ್ದಾರೆ. ಇದ್ದಾನೆಂದು ಹೇಳುವವರ ಸಂಖ್ಯೆಯೇ ಅಧಿಕ. ದೇವರಿದ್ದರೆ ಅವನ ಸ್ವರೂಪವೇನು? ಅವನೊಬ್ಬ ವ್ಯಕ್ತಿಯೆ? ಅದೊಂದು ತತ್ವವೆ? ಈ ಪ್ರಶ್ನೆಗಳೇಳುತ್ತವೆ. ಇವುಗಳನ್ನು ಕುರಿತು ಅನಾದಿ ಕಾಲದಿಂದ ಜಿಜ್ಞಾಸೆ ನಡೆದಿದೆ; ಚರ್ಚೆ ನಡೆದಿವೆ; ವಾದವಿವಾದಗಳು ಹುಟ್ಟಿಕೊಂಡಿವೆ. ವೇದಾಗಮ ಶಾಸ್ತ್ರ ಪುರಾಣಗಳೂ ರಚನೆಯಾಗಿವೆ. ಆದರೆ ಶರಣರು ಈ ದಿಶೆಯಲ್ಲಿ ನಡೆಸಿದ ಚಿಂತನೆಗಳು ಅಭೂತಪೂರ್ವವಾಗಿವೆ. ಅವುಗಳಲ್ಲಿಯೂ ನಾವು ಶರಣರ ವೈಜ್ಞಾನಿಕ ದೃಷ್ಟಿಯನ್ನು ನೋಡುತ್ತೇವೆ.

ಜಗದ್ವಿಖ್ಯಾತ ವಿಜ್ಞಾನಿಯಾದ ಐನಸ್ಟೈನ್‌ರನ್ನು ಯಾರೋ ಕೇಳಿದರಂತೆ: "ನಿಮಗೆ ದೇವರ ಅಸ್ತಿತ್ವದಲ್ಲಿ ನಂಬಿಕೆ ಇದೆಯೆ? ನೀವು ಆಸ್ತಿಕರೆ ಅಥವಾ ನಾಸ್ತಿಕರೇ" ಎಂದು. ಈ ಪ್ರಶ್ನೆಗೆ ಐನ್‌ಸ್ಟೈನ್‌ರ ಉತ್ತರ ಬಹಳ ಸ್ವಾರಸ್ಯಕರವಾಗಿದೆ:

I believe in spinoza's God who reveals himself in the harmony of what exists, not in God who concern himself with the fate and actions of human beings.

ಅಂದರೆ "ಸ್ಪಿನೋಝಾ ಪರಿಕಲ್ಪನೆಯ ದೇವರಲ್ಲಿ ನನಗೆ ನಂಬಿಕೆ ಇದೆ. ಅವನ ಪರಿಕಲ್ಪನೆಯ ದೇವರು ಸೃಷ್ಟಿಯ ನಿಯಮಬದ್ಧ ವ್ಯವಹಾರಗಳಿಗೆ ಸಂಬಂಧಪಟ್ಟವನಾಗಿದ್ದಾನೆ. ಮಾನವರ ಹಣೆಬರಹ ಬರೆಯುವನು ದೇವರೆಂದು ಹೇಳುವುದಾದರೆ ಅಂಥ ದೇವರಲ್ಲಿ ನನಗೆ ವಿಶ್ವಾಸವಿಲ್ಲ" ಸ್ಪಿನೋಝಾ ಜರ್ಮನ್ ತತ್ವಜ್ಞಾನಿ. ಈತನ ಪರಿಕಲ್ಪನೆಯ ದೇವರು ವಿಶ್ವದ ಆಗು ಹೋಗುಗಳಿಗೆ ಸಂಬಂಧಪಟ್ಟ ಒಂದು ಮೂಲ ತತ್ವ. ಅದು ಮಾನವರ ಹಣೆಬರಹ ಬರೆಯುವ ವ್ಯಕ್ತಿಯಲ್ಲ. ಇಂಥ ತತ್ವವನ್ನು ದೇವರೆಂದು ಹೇಳುವುದಾದರೆ ದೇವರ ಅಸ್ತಿತ್ವವನ್ನು ಒಪ್ಪುತ್ತೇನೆಂದು ಹೇಳಿದ ಐನ್‌ಸ್ಟೈನ್‌ರ ಮಾತು ಬಹಳ ಗಮನಾರ್ಹವಾಗಿದೆ.

ಶರಣರ ಪರಿಕಲ್ಪನೆಯ ದೇವರೂ ಒಂದು ತತ್ವವೇ ಹೊರತು ವ್ಯಕ್ತಿಯಲ್ಲ. ಅದನ್ನು ಅವರು 'ಬಯಲು' ಎಂದು ಕರೆದರು. ಅದನ್ನು ಶೂನ್ಯವೆಂದರು, ಸರ್ವಶೂನ್ಯವೆಂದರು, ನಿರ್ವಯಲೆಂದರು, ಲಿಂಗವೆಂದರು. ಅದೇ ಎಲ್ಲದಕ್ಕೂ ಮೂಲವೆಂದರು. ಅದೇ ಎಲ್ಲವೆಂದರು, ಎಲ್ಲವೂ ಅದರಿಂದ ಉದ್ಭವವಾಗಿ ಅದರಲ್ಲಿಯೇ ಲೀನವೆಂದರು. ಈ ತತ್ವದ ಸ್ವರೂಪ ಅಲ್ಲಮ ಪ್ರಭುದೇವರ ಈ ವಚನದಲ್ಲಿ ಈ ರೀತಿ ಮೂಡಿಬಂದಿದೆ:

> ಬ್ರಹ್ಮ, ವಿಷ್ಣು, ರುದ್ರ, ಈಶ್ವರ, ಸದಾಶಿವ, ಪರಮೇಶ್ವರರೆಂಬ ಸಂದಣಿ
> ತಲೆದೋರದ ಮುನ್ನ ಅಲ್ಲಿಂದತ್ತ ಬಯಲೆ ಸ್ವರೂಪಾಗಿತ್ತು.
> ಆ ಸ್ವರೂಪಿನ ಘನತೆಯನ್ನು ಉಪಮಿಸಬಾರದು.
> ನೋಡಬಾರದ ಬೆಳಗು, ಕೂಡಬಾರದ ಮೂರ್ತಿ.
> ಅಖಂಡ, ಅಪ್ರತಿಮ ನಮ್ಮ ಗುಹೇಶ್ವರ ಲಿಂಗದ ಬೆಳಗಿನ ಮೂಲವ
> ಲಿಂಗಸಂಗಿಗಳಲ್ಲದೆ ಅಂಗವಿಕಾರಿಗಳು ಬಲ್ಲರೋ? ೨-೭೧೭

ಬ್ರಹ್ಮ, ವಿಷ್ಣು, ರುದ್ರ ಮುಂತಾದ ನಾವು ಕಲ್ಪಿಸಿಕೊಂಡ ದೇವತೆಗಳೆಲ್ಲ ಮೂಲತತ್ವವಾದ ಬಯಲಿನಿಂದಲೇ ಉದ್ಭವಿಸುತ್ತವೆ. ಬ್ರಹ್ಮ ಸೃಷ್ಟಿಸಿದರೆ, ವಿಷ್ಣು ರಕ್ಷಿಸುತ್ತಾನೆ. ರುದ್ರ ನಾಶಮಾಡುತ್ತಾನೆಂಬುದು ನಮ್ಮ ನಂಬಿಕೆ. ಇದು ಸರಿಯಲ್ಲ. ಅಪ್ರತ್ಯಕ್ಷವಾಗಿ ಇದೆಲ್ಲ ಬಯಲಿನಿಂದಲೇ ನಡೆಯುತ್ತದೆ. ತ್ರಿಮೂರ್ತಿಗಳು ವ್ಯಕ್ತಿಗಳಲ್ಲ. ಅವರು ಸೃಷ್ಟಿ ಸ್ಥಿತಿ ಹಾಗೂ ಲಯಕಾರಕ ಶಕ್ತಿಗಳ ಪ್ರತೀಕಗಳು. ಈ ಶಕ್ತಿಗಳು ವ್ಯಕ್ತೀಕರಣಗೊಂಡು ದೇವತೆಗಳಾಗಿ ನಮ್ಮ ಮುಂದೆ ನಿಲ್ಲುತ್ತವೆ. ಒಟ್ಟಿನಲ್ಲಿ ಶರಣರ ದೇವರ ಪರಿಕಲ್ಪನೆಯಲ್ಲಿರುವ ವೈಜ್ಞಾನಿಕತೆಯನ್ನು ಮೇಲಿನ ವಚನ ಪ್ರತಿಪಾದಿಸುತ್ತದೆ.

ಸೃಷ್ಟಿರಚನೆ, ಮಾನವನ ಉದಯ

ಇಂದಿನ ಖಗೋಳ ವಿಜ್ಞಾನವು ಬಯಲು ಅಥವಾ ಶೂನ್ಯವೇ (Vacuum or Void) ಮೂಲತತ್ವವೆಂಬುದನ್ನು ಒಪ್ಪಿಕೊಂಡಿದೆ. ಈ ಕುರಿತು ನಡೆದ ಸಂಶೋಧನೆಗಳು ಮೂಲತತ್ವವಾದ ಬಯಲಿನಲ್ಲಿ ಮಹಾಸ್ಫೋಟವುಂಟಾಗಿ ಶಕ್ತಿ ಹೊರಹೊಮ್ಮಿ ಸೃಷ್ಟಿ ರಚನೆಯಾಗುತ್ತವೆಂಬ ಮಾತನ್ನು ಸಮರ್ಥಿಸುತ್ತದೆ. ಸೃಷ್ಟಿಯನ್ನು ಕುರಿತು ಚನ್ನಬಸವಣ್ಣನವರ ಹೇಳಿಕೆ ಈ ರೀತಿ ಇದೆ:

ಪರಾಪರದಲ್ಲಿ ಶಿವ, ಶಿವನಲ್ಲಿ ಶಕ್ತಿ,
ಶಕ್ತಿಯಲ್ಲಿ ನಾದ, ನಾದದಲ್ಲಿ ಬಿಂದು,
ಬಿಂದುವಿನಲ್ಲಿ ಕಳೆ, ಕಳೆಯಲ್ಲಿ ಸದಾಶಿವ,
ಸದಾಶಿವನಲ್ಲಿ ಮಹೇಶ್ವರ, ಮಹೇಶ್ವರನಲ್ಲಿ ರುದ್ರ,
ರುದ್ರನಲ್ಲಿ ವಿಷ್ಣು, ವಿಷ್ಣುವಿನಲ್ಲಿ ಬ್ರಹ್ಮ, ಬ್ರಹ್ಮನಲ್ಲಿ ಆತ್ಮ
ಆತ್ಮನಲ್ಲಿ ಆಕಾಶ, ಆಕಾಶದಲ್ಲಿ ವಾಯು, ವಾಯುವಿನಲ್ಲಿ ಅಗ್ನಿ,
ಅಗ್ನಿಯಲ್ಲಿ ಅಪ್ಪು, ಅಪ್ಪುವಿನಲ್ಲಿ ಪೃಥ್ವಿ,
ಪೃಥ್ವಿಯಲ್ಲಿ ಊಷರಾದಿಗಳು, ಊಷರಾದಿಗಳಲ್ಲಿ ಅನ್ನ,
ಅನ್ನದಲ್ಲಿ ನರ, ಮೃಗ, ಪಕ್ಷಿ, ಸ್ಥಾವರ ಜಂಗಮಾದಿಗಳು
ಉದ್ಭವಿಸಿದ ಕ್ರಮ ಅಡಗಿದವು.

ಪರಾಪರವೇ ಬಯಲು ಅಥವಾ ಶೂನ್ಯ. ಇದೇ ಪರತತ್ವ, ಇದರಿಂದ ಶಕ್ತಿ ಉದಯವಾಗಿ ಹಂತ ಹಂತವಾಗಿ ಅನೇಕ ತತ್ವಗಳು ಉದಯಿಸಿ ಈ ಸೃಷ್ಟಿಗೆ ಕಾರಣವಾಗುತ್ತದೆ. ಇದರಲ್ಲಿ ವಿವರಣೆಗೊಂಡಿರುವ ಶಿವ, ಸದಾಶಿವ, ಮಹೇಶ್ವರ, ಬ್ರಹ್ಮ, ವಿಷ್ಣು ಮುಂತಾದ ಪೌರಾಣಿಕ ದೇವತೆಗಳೆಲ್ಲ ವ್ಯಕ್ತಿಗಳಲ್ಲ, ವಿವಿಧ ಶಕ್ತಿಯ ಪ್ರತೀಕಗಳು. ಶಿವಶಕ್ತಿ ತತ್ವಗಳು ಬಯಲಿನಿಂದ ಹೊರಹೊಮ್ಮಿ ಸೃಷ್ಟಿ ರಚನೆಯಾಗುತ್ತದೆ. ವಿಜ್ಞಾನವೂ ಕೂಡ ಮಹಾಸ್ಫೋಟ (Big bang)ದಿಂದ ಶಕ್ತಿ ಹೊರಹೊಮ್ಮಿ ತನ್ಮೂಲಕ ಸೃಷ್ಟಿ ರಚನೆಯಾಗುವಾಗ ಐದು ಶಕ್ತಿಗಳನ್ನು ಗುರುತಿಸಿದೆ: ಮಹಾಶಕ್ತಿ (Outer force), ವಿದ್ಯುತ್ ಐಯಸ್ಕಾಂತ ಶಕ್ತಿ (Electro magnetic force) ಸಬಲ ಬೀಜಶಕ್ತಿ (Strong nuclear force), ದುರ್ಬಲ ಬೀಜಶಕ್ತಿ (Weak nuclear force) ಹಾಗೂ ಗುರುತ್ವಾಕರ್ಷಣ ಶಕ್ತಿ (Gravity) ಎಂಬ ಪಂಚಶಕ್ತಿಗಳು. ಇತ್ತೀಚಿನ ಶೋಧನೆಗಳಿಂದ ಇವು ಪರಸ್ಪರ ಪರಿವರ್ತನೆಗೊಂಡು ಬೇರೆ ರೂಪ ತಾಳಬಲ್ಲವು ಮತ್ತು ಮೂಲ ಶಕ್ತಿಯಲ್ಲಿ ಸಮಾವೇಶಗೊಳ್ಳಬಲ್ಲವು ಎಂಬುದು ಸಿದ್ಧವಾಗಿದೆ. ಮಹಾಸ್ಫೋಟದಿಂದುಂಟಾಗುವ ಶಕ್ತಿ ಉಷ್ಣ ಹಾಗೂ ಬೆಳಕಿನ ರೂಪದಲ್ಲಿ ಪ್ರಕಟವಾಗುತ್ತದೆ. ಪ್ರಾರಂಭದಲ್ಲಿ ಪ್ರಕಟವಾಗುವ ಉಷ್ಣ ಕೋಟಿ ಕೋಟಿ ಡಿಗ್ರಿ ಸೆಂಟಿಗ್ರೇಡಿನಷ್ಟಿರುತ್ತದೆ. ಈ ಶಕ್ತಿಯ ಸಾಂದ್ರೀಕರಣದಿಂದ ಎಲೆಕ್ಟ್ರಾನ್, ಪ್ರೋಟಾನ್, ನ್ಯೂಟ್ರಾನ್ನಂಥ ಕಣಗಳುಂಟಾಗಿ, ಇವುಗಳಿಂದ ಪರಮಾಣುಗಳು, ಜ್ಯೋತಿರ್ಮೇಘಗಳು, ನಕ್ಷತ್ರ ಪುಂಜಗಳು, ಸೂರ್ಯ ಕುಟುಂಬಗಳು ಭೂಮಿಯಂಥ ಗ್ರಹಗಳುಂಟಾಗಿ, ಅವುಗಳಲ್ಲಿ ಜೀವಿಗಳ ಉದಯವಾಗಿ ಈ ಸೃಷ್ಟಿ ಅಸ್ತಿತ್ವಕ್ಕೆ ಬರುತ್ತದೆ. ಚನ್ನಬಸವಣ್ಣನವರ ಮೇಲಿನ ಹೇಳಿಕೆಯನ್ನು ಈ ವೈಜ್ಞಾನಿಕ ವಿವರಣೆ ಅಕ್ಷರಶಃವಲ್ಲದಿದ್ದರೂ ತಾತ್ವಿಕವಾಗಿ ಎರಡರ ರೀತಿ ಒಂದೇಯಾಗಿದೆ. ಪ್ರಭುದೇವರು ಯಾವ ಸಾಂಪ್ರದಾಯಿಕ ದೇವತೆಗಳನ್ನು ಹೆಸರಿಸದೆ ಸೃಷ್ಟಿರಚನೆ ವಿಷಯವನ್ನು ಬಹಳ ವೈಜ್ಞಾನಿಕವಾಗಿ ವಿವರಿಸಿದ್ದಾರೆ.

"ಅನಾದಿಯ ಮಗನು ಆದಿ, ಆದಿಯ ಮಗ ಅತೀತ, ಅತೀತನ ಮಗನು ಆಕಾಶ, ಆಕಾಶನ ಮಗನು ವಾಯು, ವಾಯುವಿನ ಮಗ ಅಗ್ನಿ, ಅಗ್ನಿಯ ಮಗ ಅಪ್ಪು, ಅಪ್ಪುವಿನ ಮಗ ಪೃಥ್ವಿ. ಪೃಥ್ವಿಯಿಂದ ಸಕಲ ಜೀವರೆಲ್ಲರೂ". ಅನಾದಿಯೆಂದರೆ ಮೂಲತತ್ವ ಅಥವಾ ಬಯಲು. ಇದು ವಿಕಾಸಗೊಂಡು ಅನೇಕ ತತ್ವಗಳು ಉದಯವಾಗಿ ಸೃಷ್ಟಿ ರಚನೆಯಾಗಿ ಅದರಿಂದ ಜೀವಿಗಳು ಉದಯವಾಗುವುದನ್ನು ಬಹಳ ವೈಜ್ಞಾನಿಕವಾಗಿ ಹೇಳಲಾಗಿದೆ.

ಬಯಲಿನಲ್ಲಿ ಮಹಾಸ್ಫೋಟ ಹೇಗೆ ಸಾಧ್ಯ? ಬಯಲು ಅನಂತ ಶಕ್ತಿಯ ಆಗರ. ಈ ಶಕ್ತಿಯಲ್ಲಿ ಸ್ಫೋಟವಾಗುವ ಮುನ್ನ ಕೇವಲ ಒಂದು ಬಿಂದುವಿನಲ್ಲಿ ಅಂತರ್ಗತವಾಗಿರುತ್ತದೆ. ಇಡೀ ವಿಶ್ವವನ್ನು ಸೃಷ್ಟಿಸಲು ಬೇಕಾದ ಶಕ್ತಿಯಲ್ಲಿ ಕೇವಲ ಒಂದು ಬಿಂದುವಿನಲ್ಲಿ ಸಮಾವೇಶವಾಗಿರುವುದೆಂದರೆ ಇದೊಂದು ಅದ್ಭುತವೇ! ಇದು ಬಿಂದುರೂಪದಲ್ಲಿ ಬಹಳ ಕಾಲ ಇರಲಾರದು. ವಿಶಾಲವಾದ ಜಾಗವನ್ನು ಪಡೆಯದ ಇದು ಸ್ಫೋಟವಾಗಿ ಹೊರಬರಲೇಬೇಕು. ಪಟಾಕಿಯಲ್ಲಿ ಸಂಕುಚಿತ ಜಾಗದಲ್ಲಿ ಸಂಗ್ರಹವಾಗಿರುವ ಮದ್ದು ಸಿಡಿದು ಹೊರಬರುವಂತೆ ಬಯಲು ಸಿಡಿದು ಶಕ್ತಿ ಹೊರಬಂದು ಸೃಷ್ಟಿರಚನೆಗೆ ಕಾರಣವಾಗುತ್ತದೆ. ಪ್ರಭುದೇವರು ತಮ್ಮ ಒಂದು ವಚನದಲ್ಲಿ ಬಯಲು ಬಲಿತು ಬಿಂದುವಾಗುವ ರೀತಿಯನ್ನು ಹೀಗೆ ವಿವರಿಸುತ್ತಾರೆ:

> ಅಯ್ಯ ತತ್ವ ವಿತತ್ವಗಳಿಲ್ಲದಂದು,
> ಪ್ರಕೃತಿ ಪುರುಷರಿಲ್ಲದಂದು,
> ಜೀವಪರಮೆಂಬ ಭಾವ ತಲೆದೋರದಂದು.
> ಏನೂ ಏನೂ ಇಲ್ಲದಂದು,
> ಬಯಲು ಬಲಿದು ಬಿಂದುವಾಯಿತು ನೋಡಾ.
> ಆ ಬಿಂದು ಅಕ್ಷರತ್ರಯದ ಗದ್ದುಗೆಯಲ್ಲಿ ಕುಳ್ಳಿರಲು
> ಓಂಕಾರ ಉತ್ಪತ್ತಿಯಾಯಿತು.
> ಆ ನಾದದಲ್ಲಿ ಮೂರ್ತಿಗೊಂಡನೊಬ್ಬ ಶರಣ
> ಆ ಶರಣನಿಂದಾಯಿತ್ತು ಪ್ರಕೃತಿ,
> ಆ ಪ್ರಕೃತಿಯಿಂದಾಯಿತ್ತೀ ಲೋಕ
> ಈ ಲೋಕ ಲೌಕಿಕವನತಿಗಳೆದು ನಿಜದಲ್ಲಿ ನಿವಾಸಿಯಾಗಿಪ್ಪ,
> ಗುಹೇಶ್ವರ ಶರಣ ಚನ್ನಬಸವಣ್ಣನ ಘನವನು
> ಬಸವಣ್ಣನ ಕೃಪೆಯಿಂದರಿದು ನಮೋ ನಮೋ ಎನುತಿರ್ದೆನು. ೧೨-೭೮೫

ಚನ್ನಬಸವಣ್ಣನವರ ಎತ್ತರವನ್ನು ವಿವರಿಸುತ್ತ ಅನಾದಿ ಪರತತ್ವದಿಂದ ಬಯಲು ಬಲಿದು ಬಿಂದುವಾಗುವದನ್ನು ಪ್ರಸ್ತಾಪಿಸುತ್ತಾರೆ ಪ್ರಭುದೇವರು. ಆಕಾರವೇ ನಾದ, ಉಕಾರವೇ ಬಿಂದು, ಮಕಾರವೇ ಕಳೆ. ಈ ಮೂರು ಸೇರಿ ಓಂಕಾರ ಉತ್ಪತ್ತಿಯಾಗುತ್ತದೆ. ಇದು ಬಯಲು ಬಲಿತು ಬಿಂದುವಾಗುವುದರಿಂದ ಪ್ರಾರಂಭವಾಗುತ್ತದೆ. ಓಂಕಾರದ ಅಂಗವಾದ ಈ ಬಿಂದುವೇ ವಿಜ್ಞಾನ ಪ್ರತಿಪಾದಿಸುವ ವಿಶ್ವಸೃಷ್ಟಿಗೆ ಬೇಕಾದ ಶಕ್ತಿಯೆಲ್ಲವನ್ನು ಒಳಗೊಂಡ ಬಿಂದು. ಓಂಕಾರ ಅಥವಾ ಪ್ರಣವವೇ ಸೃಷ್ಟಿಗೆ ಮೂಲ ಎಂದು ವೇದೋಪನಿಷತ್ತುಗಳು ಪ್ರತಿಪಾದಿಸುತ್ತವೆ. ಇದೇ ವಿಷಯವನ್ನು ಬಹಳ ವೈಜ್ಞಾನಿಕವಾಗಿ ಪ್ರಭುದೇವರು ಪ್ರಸ್ತಾಪಿಸಿದ್ದಾರೆ.

ತೋಂಟದ ಸಿದ್ಧಲಿಂಗೇಶ್ವರರು ಓಂಕಾರದ ಉತ್ಪತ್ತಿಯನ್ನು ತಮ್ಮ ಒಂದು ವಚನದಲ್ಲಿ ಈ ರೀತಿ ಪ್ರಸ್ತಾಪಿಸಿದ್ದಾರೆ:

> ನಿಃಕಲ ಶಿವತತ್ವದಲ್ಲಿ ಜ್ಞಾನ ಚಿತ್ತು ಉದಯವಾಯಿತು.
> ಆ ಚಿತ್ತಿನಿಂದ ಆಕಾರ ಉಕಾರ ಮಕಾರಗಳೆಂಬ ಅಕ್ಷರತ್ರಯಂಗಳಾದವು.
> ಆಕಾರವೇ ನಾದ, ಉಕಾರವೇ ಬಿಂದು, ಮಕಾರವೇ ಕಳೆ.
> ಇಂತೀ ತ್ರಿವಿಧಕ್ಕೆ ತಾಯಿಚಿತ್ತ.
> ಇಂತೀ ನಾಲ್ಕು ಒಂದಾದಲ್ಲಿ ಓಂಕಾರವೆಂಬ ಪ್ರಣವದುತ್ಪತ್ತಿಯಾಯಿತ್ತು.
> ಆ ಓಂಕಾರ ಪ್ರಣವೇ ಗೋಳಾಕಾರ ತೇಜೋಮಯವಾಗಿ
> ಮಹಾಲಿಂಗ ನೋಡಾ, ಮಹಾಲಿಂಗಗುರುಶಿವಸಿದ್ಧೇಶ್ವರ ಪ್ರಭುವೆ ೧೧-೩೩

ಶ್ರೀ ಸಿದ್ಧಲಿಂಗೇಶ್ವರರು ಹೇಳುವ ನಿಃಕಲಶಿವತತ್ವ ಶೂನ್ಯಲಿಂಗದಿಂದ ಉದಯವಾಗುತ್ತದೆ. ಶೂನ್ಯಲಿಂಗ ಸರ್ವಶೂನ್ಯ ನಿರಾಲಂಬದಿಂದ ಉದಯವಾಗುತ್ತದೆ. ಸರ್ವಶೂನ್ಯ ನಿರಾಲಂಬವೇ ಅಂತಿಮ ತತ್ವ, ಬಯಲು, ಸರ್ವಶೂನ್ಯ ನಿರಾಲಂಬ ಏನೂ ಇಲ್ಲದಿದ್ದಂತೆ ಕಂಡರೂ ಎಲ್ಲವನ್ನು ಒಳಗೊಂಡ ಸ್ಥಿತಿ... ಇದರಿಂದ ಶೂನ್ಯಲಿಂಗ ಸ್ಥಿತಿ ಉಂಟಾಗುತ್ತದೆ. ಇದು ಸತ್‌ಚಿತ್ ಆನಂದಗಳು ಉದಯವಾಗುವ ಪೂರ್ವಸ್ಥಿತಿ. ಸತ್‌ಚಿತ್ ಆನಂದಗಳ ಉದಯಕ್ಕೆ ಕಾರಣ ನಿಃಕಲಲಿಂಗ ಸ್ಥಿತಿ ಇಲ್ಲವೆ ನಿಃಕಲಶಿವ ತತ್ವ. (ತೋಂಟದ ಸಿದ್ಧಲಿಂಗೇಶ್ವರರ ವಚನಗಳಲ್ಲಿ ಈ ವಿಷಯದ ವಿವರಣೆ ಬರುತ್ತದೆ. ಎಲ್ಲ ವಚನಗಳನ್ನು ಅನವಶ್ಯಕ ವಿವರಣೆಯಾಗಬಾರದೆಂದು ಇಲ್ಲಿ ಪ್ರಸ್ತಾಪಿಸಿಲ್ಲ) ನಿಃಕಲಲಿಂಗ ಸ್ಥಿತಿಯಿಂದಲೇ ಪ್ರಣವವು ಉದಯವಾಗುವದನ್ನು ವಿವರಿಸುವರಲ್ಲದೆ, ಪ್ರಣವ ಅಥವಾ ಓಂಕಾರವೇ ವೀರಶೈವ ಪರಿಭಾಷೆಯಲ್ಲಿ ಮಹಾಲಿಂಗವೆಂದು ಕರೆಯಲ್ಪಟ್ಟಿರುವುದನ್ನು ಸಿದ್ಧಲಿಂಗೇಶ್ವರರು ನಮ್ಮ ಗಮನಕ್ಕೆ ತರುತ್ತಾರೆ.

ಮಹಾಲಿಂಗ ಗೋಳಾಕಾರ ತೇಜೋಮಯವೆಂದು ಪ್ರಸ್ತಾಪಿಸಲ್ಪಟ್ಟಿರುವುದು ವೈಜ್ಞಾನಿಕ ದೃಷ್ಟಿಯಿಂದ ಗಮನಾರ್ಹ ವಿಷಯವಾಗಿದೆ. ಐನ್‌ಸ್ಟೈನ್‌ರ ಸಾಪೇಕ್ಷ ಸಿದ್ಧಾಂತದ ಪ್ರಕಾರ ಈ ವಿಶ್ವ ಸ್ಥಲ ಕಾಲ (space and time) ಗಳ ಮುಂದುವರಿಕೆ. ಐನ್‌ಸ್ಟೈನ್‌ರು ಪ್ರತಿಪಾದಿಸುವ ಸ್ಥಲವೂ ಗೋಲಾಕಾರವಾದದ್ದೇ. ಇದು ಅನಂತ ಶಕ್ತಿಯ ಆಗರ. ಇದು ಗೋಲಾಕಾರವಾಗಲು ಗುರುತ್ವಾಕರ್ಷಣ ಶಕ್ತಿಯೇ ಕಾರಣ. ಶಕ್ತಿ, ವಸ್ತುವಿನ ಸೂಕ್ಷ್ಮರೂಪವಾದುದರಿಂದ ಗುರುತ್ವಾಕರ್ಷಣ ಶಕ್ತಿ ಸಂಭವಿಸಿ ಸ್ಥಲದಲ್ಲಿ ವಕ್ರತೆಯುಂಟಾಗಿ ಅದಕ್ಕೆ ಗೋಲಾಕಾರ ಸ್ಥಿತಿ ಪ್ರಾಪ್ತವಾಗುತ್ತದೆ. ಐನ್‌ಸ್ಟೈನ್‌ರ ಪರಿಕಲ್ಪನೆಯ ಈ ಸ್ಥಲವೇ ಸೃಷ್ಟಿಗೆ ಕಾರಣ. ಇಲ್ಲಿಂದಲೇ ಸೃಷ್ಟಿ ಪ್ರಾರಂಭ. ಇದು ಎಡೆಯೂರು ಸಿದ್ಧಲಿಂಗೇಶ್ವರರು ತಮ್ಮ ವಚನದಲ್ಲಿ ಪ್ರತಿಪಾದಿಸುವ ಮಹಾಲಿಂಗವೇ ಆಗಿದೆಯೆಂದು ಗಮನಿಸಬೇಕು.

ಹೀಗೆ ಅಲ್ಲಮಪ್ರಭು, ಚನ್ನಬಸವಣ್ಣ ಹಾಗೂ ಸಿದ್ಧಲಿಂಗೇಶ್ವರರ ವಚನಗಳಲ್ಲಿ ಬರುವ ದೇವರ ಪರಿಕಲ್ಪನೆ ಹಾಗೂ ಸೃಷ್ಟಿ ರಚನೆಗೆ ಸಂಬಂಧಪಟ್ಟ ವಿಷಯಗಳು ಆಧುನಿಕ ವಿಜ್ಞಾನದ ದೃಷ್ಟಿಕೋನವನ್ನು ಹೋಲುತ್ತವೆ ಎಂಬುದು ಬಹಳ ಗಂಭೀರವಾಗಿ ಪರಿಗಣಿಸುವ ವಿಷಯವಾಗಿದೆ.

ಸಾಧನೆಯ ಮಾರ್ಗದಲ್ಲಿ ವೈಜ್ಞಾನಿಕ ದೃಷ್ಟಿ

ಶರಣರ ವಚನಗಳು ಆಧ್ಯಾತ್ಮ ಸಾಧನೆಗಾಗಿ ವೈಜ್ಞಾನಿಕ ನೆಲೆಯಲ್ಲಿ ರೂಪಿತವಾಗಿರುವ ಷಟ್‌ಸ್ಥಲ ಮಾರ್ಗವನ್ನು ಪ್ರತಿಪಾದಿಸುತ್ತವೆ. ಷಟ್‌ಸ್ಥಲವೊಂದು ಅರಿವಿನ ಯಾತ್ರೆ. ಶರಣರು ಪ್ರತಿಪಾದಿಸಿದ ಮೂಲತತ್ವ ಬಯಲು ಜಡವಾದ ಬಯಲಲ್ಲ. ಅದು ಸತ್‌ಚಿತ್ ಆನಂದ ನಿತ್ಯ ಪರಿಪೂರ್ಣವೆಂಬುದನ್ನು ಈ ಮೊದಲು ಪ್ರಸ್ತಾಪಿಸಿದ ವಚನಗಳಲ್ಲಿ ನೋಡಿದ್ದೇವೆ. ಈ ತತ್ವದಿಂದ ಜಗತ್ತು ಉದಯವಾಗಿ ಮಾನವ ಹೊರಹೊಮ್ಮುವುದನ್ನು ಮನಗಂಡಿದ್ದೇವೆ. ಈ ಪ್ರಕ್ರಿಯೆಯಲ್ಲಿ ಮೂಲತತ್ವದಲ್ಲಿದ್ದ ಚಿತ್ ಅಂದರೆ ಅರಿವು ಸತತವಾಗಿ ಹರಿದು ಬಂದು, ಸ್ಥಾವರ ಜಂಗಮಾದಿಗಳೆಲ್ಲದರಲ್ಲಿ ಅಡಕವಾಗಿರುತ್ತದೆ. ಅದು ಸ್ಥಾವರದಲ್ಲಿ ನಿದ್ರಿಸುತ್ತದೆ. ಪ್ರಾಣಿಗಳಲ್ಲಿ ಚಲಿಸುತ್ತದೆ. ಮಾನವನಲ್ಲಿ ಮಾತನಾಡುತ್ತದೆ. ಮಾನವನಲ್ಲಿ ಮಾತನಾಡುವಷ್ಟು ಅರಿವಿನ ವಿಕಾಸವಾದರೂ ಅದಿನ್ನೂ ಸ್ಥೂಲ(Primitive)ರೂಪದಲ್ಲಿಯೇ ಇರುತ್ತದೆ. ಸೃಷ್ಟಿಯ ರಚನೆಯ ಕ್ರಮದಲ್ಲಿ ಆತ್ಮಕ್ಕಂಟಿಕೊಂಡಿರುವ ದೋಷಗಳೇ ಇದಕ್ಕೆ ಕಾರಣ. ವೀರಶೈವ ಪರಿಭಾಷೆಯಲ್ಲಿ ಇವುಗಳಿಗೆ ಆಣವ ಮಲ, ಮಾಯಾ ಮಲ ಹಾಗೂ ಕಾರ್ಮಿಕ ಮಲವೆಂದು ಹೆಸರು. ಆಣವ ಮಲ ಮೂಲತಃ ಅನಂತವಾದ ಆತ್ಮತತ್ವಕ್ಕೆ ಸಂಕುಚಿತತೆಯನ್ನುಂಟು ಮಾಡುತ್ತದೆ. ಮಾಯಾಮಲ ಆತ್ಮನ ದೈವೀಮೂಲವನ್ನು ಮರೆಯಿಸಿ ಭ್ರಮೆಯನ್ನುಂಟು ಮಾಡುತ್ತದೆ. ಕಾರ್ಮಿಕ ಮಲ ಮೂಲತಃ ಅಘಟಿತ ಘಟನಾ ಸಾಮರ್ಥ್ಯವುಳ್ಳ ಆತ್ಮದ ಶಕ್ತಿಯನ್ನು ಕುಂಠಿತಗೊಳಿಸಿ ಅದಕ್ಕೆ ಸೀಮಿತ ವಲಯವನ್ನು ಕಲ್ಪಿಸಿಕೊಡುತ್ತದೆ. ಮಣ್ಣು ಮಿಶ್ರಿತ

ಖನಿಜಗಳಿಂದ ಶುದ್ಧಚಿನ್ನವನ್ನು ಪಡೆಯಲು ಅದನ್ನು ಅನೇಕ ರಾಸಾಯನಿಕ ಭೌತಿಕ ಪ್ರಕ್ರಿಯೆಗಳಿಗೊಳಪಡಿಸಲಾಗುತ್ತದೆ. ಅದೇ ಪ್ರಕಾರ ಆತ್ಮಕ್ಕಂಟಿಕೊಂಡ ದೋಷಗಳನ್ನು ನಿವಾರಿಸಿ ಅದರ ಮೂಲರೂಪವನ್ನು ಪ್ರಕಟಿಸಲು ಅದನ್ನು ಅನೇಕ ಆಧ್ಯಾತ್ಮಿಕ ಪ್ರಕ್ರಿಯೆಗಳಿಗೆಗೊಳಪಡಿಸಬೇಕಾಗುತ್ತದೆ. ದೀಕ್ಷೆಯಿಂದ ಪ್ರಾರಂಭವಾದ ಈ ಅರಿವಿನ ಯಾತ್ರೆ ಆರು ಹಂತಗಳಲ್ಲಿ ಷಟ್‌ಸ್ಥಲಗಳಲ್ಲಿ ನಡೆಯುತ್ತದೆ. ಈಗಾಗಲೇ ಹೇಳಿರುವಂತೆ ಮಾನವ ದೇಹದ ಪ್ರತಿಯೊಂದು ಕೋಶದಲ್ಲಿ ದೈವೀಶಕ್ತಿಯಡಕವಾಗಿದೆ. ಇದನ್ನು ಜಾಗೃತಗೊಳಿಸುವುದೇ ಈ ಮಾರ್ಗದಲ್ಲಿ ನಡೆಯುವ ಕಾರ್ಯ. ಮನಸ್ಸಿನ ಏಕಾಗ್ರತೆಯಿಂದಲೇ ಇದನ್ನು ಸಾಧಿಸಲಾಗುತ್ತದೆ. ಮನಸ್ಸಿನ ಏಕಾಗ್ರತೆಯೇ ಯೋಗ. ಯೋಗ ಒಂದು ವೈಜ್ಞಾನಿಕ ಪ್ರಕ್ರಿಯೆ. ಅದರಲ್ಲಿ ಶಿವಯೋಗವಂತೂ ಬಹಳ ವೈಜ್ಞಾನಿಕವಾಗಿ ರೂಪಿಸಲ್ಪಟ್ಟು ಪರಿಪೂರ್ಣ ಯೋಗವೆನಿಸುತ್ತದೆ. ಎಡೆಯೂರು ಸಿದ್ಧಲಿಂಗೇಶ್ವರರ ಈ ಕೆಳಗಿನ ವಚನದಲ್ಲಿ ಅದರ ವೈಜ್ಞಾನಿಕ ದೃಷ್ಟಿಯನ್ನು ಕಾಣಬಹುದಾಗಿದೆ:

ಬ್ರಹ್ಮರಂಧ್ರದಲ್ಲಿ ಇಪ್ಪನಾದ ಚೈತನ್ಯವಪ್ಪ
ಪರಮ ಚಿತ್ಕಳೆಯನೇ ಭಾವ ಮನ ಕರದಲ್ಲಿ
ಶ್ರೀ ಗುರು ತಂದು ಸಾಹಿತ್ಯವ ಮಾಡಿದವನಾಗಿ,
ಭಾವದಲ್ಲಿ ಸತ್ಯ್ವರೂಪವಪ್ಪ ಭಾವಲಿಂಗವೆನಿಸಿ,
ಪ್ರಾಣದಲ್ಲಿ ಚಿತ್ ರೂಪವಪ್ಪ ಪ್ರಾಣಲಿಂಗವೆನಿಸಿ,
ಕರಸ್ಥಲದಲ್ಲಿ ಆನಂದ ಸ್ವರೂಪವಪ್ಪ ಇಷ್ಟಲಿಂಗವೆನಿಸಿ,
ಒಂದೇ ವಸ್ತು ತನುಮನಭಾವಂಗಳಲ್ಲಿ
ಇಷ್ಟ, ಪ್ರಾಣ, ಭಾವವಾದ ಭೇದವನರಿದು,
ಇಷ್ಟಲಿಂಗವ ದೃಷ್ಟಿಜ್ಞಾನದಿಂದ ಗ್ರಹಿಸಿ,
ಪ್ರಾಣಲಿಂಗವ ಮನಜ್ಞಾನದಿಂದ ಗ್ರಹಿಸಿ
ತೃಪ್ತಿಲಿಂಗವ ಭಾವಜ್ಞಾನದಿಂದ ಗ್ರಹಿಸಿ,
ಈ ಲಿಂಗತ್ರಯವಿಡಿದು ಆಚರಿಸಿ, ಲಿಂಗದೊಡನೆ ಕೂಡಿ
ಆ ಲಿಂಗವೇ ತಾನೇ ತಾನಾಗಿ ವಿರಾಜಿಸುತಿಪ್ಪುದೀಗ
ಶಿವಯೋಗ ನೋಡಾ, ಮಹಾಲಿಂಗ ಗುರು ಸಿದ್ಧೇಶ್ವರ ಪ್ರಭುವೆ. (ತೃಪ್ತಿ ಲಿಂಗ=ಭಾವಲಿಂಗ)

ಯೋಗಶಾಸ್ತ್ರದಲ್ಲಿ ದೇಹದಲ್ಲಿರುವ ಚಕ್ರಗಳಿಗೆ ಬಹಳ ಮಹತ್ವದ ಸ್ಥಾನವಿದೆ. ಇವು ದಿವ್ಯಶಕ್ತಿಯ ಕೇಂದ್ರಗಳು. ಪತಂಜಲಿಯ ಯೋಗಶಾಸ್ತ್ರದಲ್ಲಿ ಗುದದಲ್ಲಿರುವ ಆಧಾರ ಚಕ್ರ, ಗುಹ್ಯದಲ್ಲಿರುವ ಸ್ವಾಧಿಷ್ಠಾನ ಚಕ್ರ, ನಾಭಿಯಲ್ಲಿರುವ ಮಣಿಪೂರಕ ಚಕ್ರ, ಹೃದಯದಲ್ಲಿರುವ ಅನಾಹತ ಚಕ್ರ, ಕಂಠದಲ್ಲಿರುವ ವಿಶುದ್ಧಿ ಚಕ್ರ. ಎರಡು ಹುಬ್ಬಿನ ಮಧ್ಯದಲ್ಲಿರುವ ಆಜ್ಞಾ ಚಕ್ರ. ಈ ಆರು ಚಕ್ರಕ್ಕೆ ಬ್ರಹ್ಮರಂಧ್ರದಲ್ಲಿರುವ ಸಹಸ್ರಾರ ಚಕ್ರ ಸೇರಿ ಏಳು ಚಕ್ರಗಳಾಗುತ್ತವೆ. ಶರಣರು ಇದಕ್ಕೆ ಬ್ರಹ್ಮಚಕ್ರವೆಂದು ಕರೆದಿದ್ದಾರೆ. ಅವರು ಅಧ್ಯಾತ್ಮಕ್ಕೆ ಸಂಬಂಧಿಸಿದ ದೇಹರಚನೆಯನ್ನು (Anatomy) ಬಲ್ಲವರಾಗಿದ್ದರು. ಅವರು ಒಟ್ಟು ಒಂಬತ್ತು ಚಕ್ರಗಳನ್ನು ಗುರುತಿಸಿದ್ದಾರೆ. ಪತಂಜಲಿಯ ಮೊದಲಿನ ಆರುಚಕ್ರಗಳಲ್ಲದೆ ಇನ್ನೂ ಮೂರು ಹೆಚ್ಚಿನ ಚಕ್ರಗಳನ್ನು ಇವರು ತಮ್ಮ ವಚನಗಳಲ್ಲಿ ಉಲ್ಲೇಖಿಸುತ್ತಾರೆ. ಸಹಸ್ರಾರಕ್ಕೆ ಇವರು ಬ್ರಹ್ಮಚಕ್ರವೆಂದು ಕರೆದಿದ್ದಾರೆ. ಶಿಖೆಯಲ್ಲಿರುವುದು ಶಿಖಾಚಕ್ರ, ತಲೆಯ ಹಿಂಭಾಗದಲ್ಲಿರುವುದು ಪಶ್ಚಿಮ ಚಕ್ರ, ಹೀಗೆ ಒಂಬತ್ತು ಚಕ್ರಗಳು ದೈವೀಶಕ್ತಿಯ ಕೇಂದ್ರಗಳಾಗಿದ್ದು ಇವುಗಳನ್ನು ಒಂದೊಂದು ಲಿಂಗದಿಂದ ಗುರುತಿಸಿದ್ದಾರೆ. ಆಧಾರಚಕ್ರದಲ್ಲಿರುವುದು ಆಚಾರಲಿಂಗವಾದರೆ, ಸ್ವಾಧಿಷ್ಠಾನದಲ್ಲಿರುವುದು ಗುರುಲಿಂಗ, ಮಣಿಪೂರಕದಲ್ಲಿರುವುದು ಶಿವಲಿಂಗವಾದರೆ ಅನಾಹತದಲ್ಲಿರುವುದು ಪ್ರಾಣಲಿಂಗ, ವಿಶುದ್ಧಿಯಲ್ಲಿರುವುದು ಪ್ರಸಾದಲಿಂಗವಾದರೆ, ಆಜ್ಞಾಚಕ್ರದಲ್ಲಿರುವುದು ಮಹಾಲಿಂಗ. ಬ್ರಹ್ಮಚಕ್ರದಲ್ಲಿರುವದು ನಿಃಕಲಲಿಂಗವಾದರೆ ಶಿಖಾಚಕ್ರದಲ್ಲಿರುವುದು ನಿಶ್ಶೂನ್ಯಲಿಂಗ, ಕೊನೆಯದಾದ ಪಶ್ಚಿಮಚಕ್ರದಲ್ಲಿರುವುದು ನಿರಂಜನಲಿಂಗ, ಈ ಚಕ್ರಗಳಲ್ಲಿರುವ ಪ್ರತಿಯೊಂದು ಲಿಂಗವೂ

ಅರಿವಿನ ಯಾತ್ರೆಯಲ್ಲಿ ದೈವೀಶಕ್ತಿಯ ಜಾಗೃತ ಮಟ್ಟವನ್ನು ಸೂಚಿಸುತ್ತದೆ. ದೈವೀಶಕ್ತಿಯ ಜಾಗೃತಿಯ ಪ್ರಕ್ರಿಯೆಯಲ್ಲಿ ಇಷ್ಟಲಿಂಗದ ದೃಷ್ಟಿಯೋಗದ ಪಾತ್ರ ಬಹಳ ಪ್ರಮುಖವಾದದ್ದು.

ಬ್ರಹ್ಮರಂಧ್ರ ಸಹಸ್ರಾರ ಅಥವಾ ಬ್ರಹ್ಮಚಕ್ರದ ವಾಸಸ್ಥಾನ. ಇದರಲ್ಲಿರುವ ಪೈನಿಯಲ್ (Pineal) ಹಾಗೂ ಪಿಟೂಟರಿ (Pitutary) ಗ್ರಂಥಿಗಳು ದೈವಿಶಕ್ತಿಯ ಪ್ರಕಟಣೆಯನ್ನು ಪ್ರಚೋದಿಸುತ್ತವೆ. ಈ ರೀತಿ ಬ್ರಹ್ಮರಂಧ್ರ ವಿಶ್ವಚೇತನದ ವಾಸಸ್ಥಾನವೆಂದು ಗುರುತಿಸಲಾಗಿದೆ. ಇದನ್ನು ಜಾಗೃತಗೊಳಿಸುವದೇ ಯೋಗದ ಮುಖ್ಯ ಉದ್ದೇಶ. ಶಿವಯೋಗದಲ್ಲಿ ಈ ಕಾರ್ಯ ಬಹಳ ಸುಲಭವಾಗಿ ನಡೆಯುತ್ತದೆ.

ಇದಕ್ಕಾಗಿ ಗುರು ಬ್ರಹ್ಮದಲ್ಲಿರುವ ಚಿತ್ಕಳೆ ಅಂದರೆ ಅರಿವನ್ನು ಹಸ್ತಮಸ್ತಕ ಸಂಯೋಗದಿಂದ ಇಷ್ಟಲಿಂಗದಲ್ಲಿ ಸ್ಥಾಪಿಸಿ ದೃಷ್ಟಿಯೋಗದಿಂದ ಅದನ್ನು ಜಾಗೃತಗೊಳಿಸಲು ಶಿಷ್ಯನ ಕೈಗೆ ಕೊಡುತ್ತಾನೆ. ಇದಲ್ಲದೆ ಭಾವನೆಗಳನ್ನು ದೈವೀಕರಿಸಿ ಅವುಗಳಲ್ಲಿ ಭಾವಲಿಂಗವನ್ನು ಸ್ಥಾಪಿಸುತ್ತಾನೆ. ಆತನ ಪ್ರಾಣಚೈತನ್ಯವನ್ನು ದೈವೀಕರಿಸಿ ಅದರಲ್ಲಿ ಪ್ರಾಣಲಿಂಗವನ್ನು ಸ್ಥಾಪಿಸುತ್ತಾನೆ. ಇಷ್ಟಲಿಂಗದ ದೃಷ್ಟಿಯೋಗದ ಮೂಲಕ ಯೋಗ ಪ್ರಕ್ರಿಯೆ ಪ್ರಾರಂಭವಾದಾಗ ದೇಹದ ವಿವಿಧ ಚಕ್ರಗಳಲ್ಲಿರುವ ದೈವೀಶಕ್ತಿ ಜಾಗೃತಗೊಂಡು ಅರಿವಿನ ಯಾತ್ರೆ ಪ್ರಾರಂಭವಾಗುತ್ತದೆ. ಹಂತ ಹಂತದಲ್ಲಿ ಇದು ವಿಕಾಸಗೊಳ್ಳುತ್ತ ಬ್ರಹ್ಮಚಕ್ರಕ್ಕೆ ಮುಟ್ಟಿದಾಗ ವಿಶ್ವಚೈತನ್ಯ ಪ್ರಕಟವಾಗುವ ಸ್ಥಿತಿಗೆ ಬರುತ್ತದೆ. ಪ್ರಯಾಣ ಇನ್ನು ಮುಂದುವರೆದು ಶಿಖಾಚಕ್ರದ ಮೂಲಕ ಪಶ್ಚಿಮ ಚಕ್ರವನ್ನು ತಲುಪಿದಾಗ ಅರಿವು ಅನಂತವಾಗಿ ಸಾಧಕ ತಾನೇ ಲಿಂಗವಾಗುತ್ತಾನೆ. ಈ ಸ್ಥಿತಿಗೆ ಮುಟ್ಟುವುದೇ, ಶಿವಯೋಗದ ಗುರಿ. ಪ್ರಭುದೇವರು ಇಂಥ ಸ್ಥಿತಿಗೆ ಮುಟ್ಟಿದ ತಮ್ಮ ಅನುಭಾವವನ್ನು ಈ ರೀತಿ ಹೇಳಿದ್ದಾರೆ:

> ...ವಾಯುವಾಧಾರದ ಪರನ ಸಂಯೋಗದ ಅನಾಹತ ಚಕ್ರದಿಂ ಮೇಲಣ
> ಆಜ್ಞಾಚಕ್ರದಲ್ಲಿ ನಿಂದು ಕಾಯದ ಕಣ್ಣು ಮುಚ್ಚಿ, ಜ್ಞಾನದ ಕಣ್ಣ ತೆರೆದು ನೋಡಲ್ಕೆ
> ಅಲ್ಲಿ ಒಂದು ನಿರಾಕಾರವುಂಟು.
> ಆ ನಿರಾಕಾರದಲ್ಲಿ ನಿಂತು ನಿರ್ಣಯಿಸಿ ನೋಡಲ್ಕೆ
> ಅಲ್ಲಿ ಒಂದು ನಿಶ್ಶೂನ್ಯವುಂಟು
> ಆ ನಿಶ್ಶೂನ್ಯದಲ್ಲಿ ನಿಂದು ನಿಶ್ಚಯಿಸಿ ನೋಡಲ್ಕೆ
> ಕತ್ತಲೆಯಲ್ಲ ಬೆಳಗಲ್ಲ, ಬಚ್ಚ ಬರಿಯ ಬಯಲು ಗುಹೇಶ್ವರ (೨-೧೫೩೪)

ಹೀಗೆ ಷಟ್‌ಸ್ಥಲ ಮಾರ್ಗದಲ್ಲಿ ಶಿವಯೋಗದ ಮೂಲಕ ಆಧ್ಯಾತ್ಮ ಸಾಧನೆಯ ಕ್ರಮ ಒಂದು ವೈಜ್ಞಾನಿಕ ಪ್ರಕ್ರಿಯೆಯಾಗಿದೆ. ಇದರಲ್ಲಿ ಉಲ್ಲೇಖಗೊಂಡಿರುವ ವಚನಗಳು ವೈಜ್ಞಾನಿಕದೃಷ್ಟಿಯನ್ನು ಬಿತ್ತರಿಸುತ್ತವೆ.

ಸ್ವರ್ಗ, ನರಕಗಳ ಪರಿಕಲ್ಪನೆಯಲ್ಲಿ ವೈಜ್ಞಾನಿಕ ದೃಷ್ಟಿ:

ಪಾಪ ಮಾಡಿದರೆ ನರಕ, ಪುಣ್ಯ ಮಾಡಿದರೆ ಸ್ವರ್ಗ ಎಂಬ ಭಾವನೆ ಭಾರತೀಯ ಸಂಸ್ಕೃತಿಯಲ್ಲಿ ಬೇರೂರಿದೆ. ಸ್ವರ್ಗ, ನರಕ ಬೇರೆ ಲೋಕಗಳೆಂದೂ ತಮ್ಮ ಕರ್ಮಾನುಸಾರ ಜೀವಿಗಳು ಅಲ್ಲಿಗೆ ಹೋಗುವರೆಂಬ ಮಾತನ್ನು ನಮ್ಮ ಪುರಾಣಗಳು ಹೇಳುತ್ತವೆ. ಆದರೆ ಇದು ವೈಜ್ಞಾನಿಕ ದೃಷ್ಟಿಗೆ ದೂರವಾದ ಮಾತಾಗಿದೆ. ಇಂದು ಖಗೋಳ ವಿಜ್ಞಾನ ಬಯಲಿನ ವಿಸ್ತಾರವನ್ನು ಬಹುಮಟ್ಟಿಗೆ ಅಳೆದಿದೆ. ಕೋಟ್ಯಾನುಕೋಟಿ ಮೈಲಿಗಳಾಚೆಗಿರುವ ನಕ್ಷತ್ರಗಳ, ನಕ್ಷತ್ರಪುಂಜಗಳ ಸ್ವರೂಪವನ್ನು ಕಂಡುಹಿಡಿದಿದೆ. ಅದರ ಪ್ರಯೋಗಗಳಿಗೆ ಇಂಥ ಯಾವ ಲೋಕಗಳೂ ಗೋಚರವಾಗಿಲ್ಲ. ಈಗ ತಿಳಿದಿರುವ ಪ್ರಕಾರ ನೀಹಾರಿಕೆಗಳು ಅಂದರೆ ನಕ್ಷತ್ರ ಪುಂಜಗಳ ಸಂಖ್ಯೆ ಒಂದು ಸಾವಿರಕೋಟಿ. ಪ್ರತಿಯೊಂದು ನೀಹಾರಿಕೆಗಳಲ್ಲಿ ನಕ್ಷತ್ರಗಳ ಸಂಖ್ಯೆ ಇಪ್ಪತ್ತೈದು ಸಾವಿರ ಕೋಟಿ. ಇವುಗಳಲ್ಲಿ ಪ್ರತಿ ದಶಲಕ್ಷಕ್ಕೊಂದರಂತೆ ಒಂದು ಸೂರ್ಯಕುಟುಂಬ. ಇಂಥ ಸೂರ್ಯಕುಟುಂಬಗಳಲ್ಲಿ

ಕೆಲವದರಲ್ಲಿಯಾದರೂ ನಮ್ಮ ಭೂಮಿಯನ್ನು ಹೋಲುವ ಗ್ರಹಗಳಿದ್ದು ಜೀವಿಗಳಿರಬಹುದೆಂದು ಊಹಿಸಲಾಗಿದೆಯೇ ಹೊರತು ಆಕಾಶದ ಅನಂತ ವಿಸ್ತಾರದಲ್ಲಿ ಎಲ್ಲಿಯೂ ಜೀವಿಗಳಿರುವ ಮಾಹಿತಿ ದೊರಕಿಲ್ಲ. ಈ ಭೂಮಿಯೊಂದನ್ನು ಬಿಟ್ಟರೆ ಬೇರೆ ಯಾವ ಲೋಕದ ಪರಿಚಯವಾಗಿಲ್ಲ. ಹೀಗಿರುವಾಗ ಸ್ವರ್ಗ ನರಕ ಲೋಕಗಳ ಭೌತಿಕ ಅಸ್ತಿತ್ವ ಒಂದು ಭ್ರಮೆಯೆಂದೇ ಹೇಳಬೇಕು. ಇಂಥ ಭ್ರಮೆಯಿದ್ದವರನ್ನು ಕುರಿತು ಬಸವಣ್ಣನವರು ಈ ರೀತಿ ಹೇಳುತ್ತಾರೆ:

ದೇವಲೋಕ ಮರ್ತ್ಯಲೋಕವೆಂಬುದು ಬೇರೆ ಮತ್ತುಂಟೆ?
ಈ ಲೋಕದೊಳಗೆ ಮತ್ತೆ ಅನಂತಲೋಕ,
ಶಿವಲೋಕ ಶಿವಾಚಾರವಯ್ಯ.
ಶಿವಭಕ್ತನಿದ್ದ ಠಾವೇ ದೇವಲೋಕ,
ಭಕ್ತನಂಗಣವೆ ವಾರಣಾಸಿ, ಕಾಯವೆ ಕೈಲಾಸ
ಇದು ಸತ್ಯ, ಕೂಡಲ ಸಂಗಮದೇವ. ೧-೧೩೯

ಇರುವುದೊಂದೇ ಲೋಕ, ಅದು ಈ ಭೂಮಿ. ನಮ್ಮ ನಡವಳಿಕೆಯಿಂದ ನಾವು ಅನೇಕ ಲೋಕಗಳನ್ನು ಸೃಷ್ಟಿಸಿಕೊಳ್ಳುತ್ತೇವೆ. ಶಿವಾಚಾರಿಗಳಾದರೆ ಈ ಲೋಕ ಶಿವಲೋಕವಾಗುತ್ತದೆ. ನಮ್ಮ ಮನೆಯೇ ದೇವಲೋಕವಾಗುತ್ತದೆ. ಕಾಯವೆ ಕೈಲಾಸವಾಗುತ್ತದೆ. ಪುರಾಣದಲ್ಲಿ ಬರುವ ಕೈಲಾಸವೊಂದು ಹಾಳುಬೆಟ್ಟವೆಂದು ಸಿದ್ಧರಾಮೇಶ್ವರರು ಅದನ್ನು ಅಪಹಾಸ್ಯಗೈದಿದ್ದಾರೆ:

ಕೈಲಾಸ ಕೈಲಾಸವೆಂದು ಬಡಿದಾಡುವ ಅಣ್ಣಗಳಿರಾ, ಕೇಳಿರಯ್ಯ
ಕೈಲಾಸವೆಂಬುದೊಂದು ಭೂಮಿಯೊಳಿರುವ ಹಾಳುಬೆಟ್ಟ.
ಅಲ್ಲಿರುವ ಮುನಿಗಳೆಲ್ಲ ಜೀವಗಳ್ಳರು,
ಅಲ್ಲಿರ್ದ ಚಂದ್ರಶೇಖರನು ಬಹುಎಡ್ಡ
ಇವರಾಡಂಬರವೇಕಯ್ಯ?
ಎಮ್ಮ ಪುರಾತರಿಗೆ. ಸದಾಚಾರದಿಂದ ವರ್ತಿಸಿ,
ಲಿಂಗಾಂಗ ಸಾಮರಸ್ಯವ ತಿಳಿದು,
ನಿಮ್ಮ ಪಾದಪದ್ಮದೊಳು ಬಯಲಾದ ಪದವೆ ಕೈಲಾಸವಯ್ಯ,
ಕಪಿಲಸಿದ್ಧ ಮಲ್ಲಿಕಾರ್ಜುನಾ. ೪-೧೧೬೯

ನಮ್ಮ ಭೂಮಿಯ ಮೇಲಿರುವ ಕೈಲಾಸವನ್ನು ಪುರಾಣಗಳು ವೈಭವೀಕರಿಸಿ ಅದನ್ನು ವರ್ಣಿಸಿರುವುದನ್ನು ಖಂಡಿಸಿ ಲಿಂಗಾಂಗ ಸಾಮರಸ್ಯವನ್ನು, ಅಂದರೆ ನಮ್ಮಂತರಂಗದಲ್ಲಿ ದೈವೀಶಕ್ತಿಯನ್ನು ಪ್ರಕಟಿಸಿಕೊಂಡರೆ ನಮ್ಮಲ್ಲಿಯೇ ಶಿವನ ಕೈಲಾಸ ನೆಲೆಸುತ್ತದೆಯೆಂದು ಹೇಳಿದ್ದಾರೆ. ಸ್ವರ್ಗ ನರಕಗಳ ಸ್ವರೂಪವೂ ಇದೇ ರೀತಿ ಕಾಲ್ಪನಿಕ ಎಂಬ ಮಾತನ್ನು ಬಸವಣ್ಣವರ ಇನ್ನೊಂದು ವಚನ ಈ ರೀತಿ ಪ್ರತಿಪಾದಿಸುತ್ತದೆ:

ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿರೋ!
ಸತ್ಯವ ನುಡಿವುದೇ ದೇವಲೋಕ. ಮಿಥ್ಯವ ನುಡಿವುದೇ ಮರ್ತ್ಯಲೋಕ.
ಆಚಾರವೆ ಸ್ವರ್ಗ, ಅನಾಚಾರವೆ ನರಕ.
ಕೂಡಲಸಂಗಮದೇವ ನೀವೆ ಪ್ರಮಾಣು. ೧-೨೩೯

ಹೀಗೆ ದೇವಲೋಕ ಸ್ವರ್ಗ ನರಕಗಳು ನಮ್ಮ ಭ್ರಮಾತ್ಮಕ ಪರಿಕಲ್ಪನೆಗಳು. ಅವು ಬೇರೆಯಲ್ಲಿಯೂ ಇರದೆ ನಮ್ಮ ನಡವಳಿಕೆಯಲ್ಲಿ ಇವೆ ಎಂದು ಈ ವಚನಗಳಲ್ಲಿ ಪ್ರತಿಪಾದಿತವಾದ ಮಾತು ವೈಜ್ಞಾನಿಕ ದೃಷ್ಟಿಯನ್ನು ಪ್ರತಿಬಿಂಬಿಸುತ್ತವೆ.

ಪರಿಸರಾವಲೋಕನದಲ್ಲಿ ವೈಜ್ಞಾನಿಕ ದೃಷ್ಟಿ

ಅಕ್ಕಮಹಾದೇವಿ ಪರಿಸರ ಪ್ರೇಮಿ. ಆಕೆ ಅದನ್ನು ವೈಜ್ಞಾನಿಕ ದೃಷ್ಟಿಯಿಂದ ನೋಡಿ ಅದನ್ನು ದೈವತ್ವದೊಂದಿಗೆ ಸಮೀಕರಿಸುತ್ತಾಳೆ. ವನವೆಲ್ಲಾ ನೀನೆ, ವನದೊಳಗೊಣ ದೇವತರುವೆಲ್ಲ ನೀನೆ, ತರುವಿನೊಳಗಾಡುವ ಖಗಮೃಗವೆಲ್ಲ ನೀನ (೫-೩೦) ಎಂಬ ಆಕೆಯ ಮಾತು ಆಕೆಯ ಪರಿಸರ ಪ್ರೇಮವನ್ನು ಸೂಚಿಸಿದರೆ, ಈ ಕೆಳಗಿನ ವಚನ ಇನ್ನೊಂದು ರೀತಿಯಲ್ಲಿ ಅದನ್ನು ಸೂಚಿಸಿ ಅದರಲ್ಲಿರುವ ವೈಜ್ಞಾನಿಕ ದೃಷ್ಟಿಯನ್ನು ಎತ್ತಿ ಹಿಡಿಯುತ್ತದೆ.

ಈಳೆ ನಿಂಬೆ ಮಾವು ಮಾದಲಕ್ಕೆ
ಹುಳಿನೀರೆರೆದವರಾರಯ್ಯ?
ಕಬ್ಬು ಬಾಳೆ ಹಲಸು ನಾರಿವಾಳಕ್ಕೆ
ಸಿಹಿನೀರೆರೆದವರಾರಯ್ಯ?
ಕಳವೆ ರಾಜಾನ್ನ ಶಾಲ್ಯನ್ನಕ್ಕೆ
ಓಗರದ ಉದಕವನೆರೆದವರಾರಯ್ಯ?
ಮರುಗಮಲ್ಲಿಗೆ ಪಚ್ಚೆ ಮುಡಿವಾಳಕ್ಕೆ ಪರಿಮಳದುದಕವನೆರೆದವರಾರಯ್ಯ?
ಇಂತೀ ಜಲ ಒಂದೆ, ನೆಲೆ ಒಂದೆ, ಆಕಾಶವು ಒಂದೆ.
ಜಲವು ಹಲವು ದ್ರವ್ಯಂಗಳ ಕೂಡಿ
ತನ್ನ ಪರಿಬೇರಾಗಿಹ ಹಾಗೆ,
ಎನ್ನ ದೇವ ಚೆನ್ನಮಲ್ಲಿಕಾರ್ಜುನಯ್ಯನು
ಹಲವು ಜಗಂಗಳ ಕೂಡಿಕೊಂಡಿರ್ದರೇನು?
ತನ್ನ ಪರಿ ಬೇರೆ. ೫-೬೬

ಈ ವಚನದಲ್ಲಿ ಸಸ್ಯಗಳು ನೀರು, ಭೂಮಿ ಹಾಗೂ ಆಕಾಶಗಳ ಸಹಾಯದಿಂದ ಆಹಾರವನ್ನು ತಯಾರಿಸಿಕೊಳ್ಳುವ ಮೂಲಭೂತ ಪ್ರಕ್ರಿಯೆ ವ್ಯಕ್ತವಾಗಿದೆ. ಇದು ಸಸ್ಯವಿಜ್ಞಾನ ಪ್ರಕ್ರಿಯೆ. ಸಸ್ಯಗಳು ಆಕಾಶದಿಂದ ಗಾಳಿಯಲ್ಲಿರುವ ಕಾರ್ಬನ್ ಡೈಯಾಕ್ಸೈಡನ್ನು ಭೂಮಿಯಿಂದ ಅದರ ಸಾರವನ್ನು ನೀರಿನ ಮೂಲಕ ಹೀರಿಕೊಂಡು ಸೂರ್ಯನ ಬೆಳಕಿನಲ್ಲಿ ಎಲೆಗಳಲ್ಲಿರುವ ಕ್ಲೋರೋಫಿಲ್ ಎಂಬ ಹಸಿರು ದ್ರವ್ಯದ ಸಹಾಯದಿಂದ ಗ್ಲೂಕೋಜನ್ನು ತಯಾರಿಸುತ್ತವೆ. ಈ ಪ್ರಕ್ರಿಯೆಗೆ ರಶ್ಮಿ ಸಂಶ್ಲೇಷಣೆ (Photosynthesis) ಎಂದು ಹೆಸರು. ಗ್ಲೂಕೋಜ ದ್ರವ್ಯ ಕಬ್ಬು ಬಾಳೆ ಹಲಸು ನಾರಿಕೇಳದಲ್ಲಿರುವ ನೀರಿನಲ್ಲಿ ಕರಗಿ ಸಿಹಿ ನೀರನ್ನುಂಟು ಮಾಡುತ್ತದೆ. ಗ್ಲೂಕೋಜನಲ್ಲಿರುವ ಮೂಲವಸ್ತುಗಳೆಂದರೆ ಕಾರ್ಬನ್, ಹೈಡ್ರೋಜನ್ ಹಾಗೂ ಆಕ್ಸಿಜನ್‌ಗಳು. ಈ ವಸ್ತುಗಳೇ ಬೇರೆ ರೀತಿಯಿಂದ ವರ್ತಿಸಿ ವಿವಿಧ ರೀತಿಯ ಆಮ್ಲಗಳನ್ನು ಸೃಷ್ಟಿಸಿ ಈಳೆ ನಿಂಬೆ ಮಾವುಗಳಲ್ಲಿರುವ ಹುಳಿ ನೀರನ್ನು ಸೃಷ್ಟಿಸಲು ಕಾರಣವಾಗುತ್ತವೆ. ಭೂಮಿಯಿಂದ ಹೀರಿಕೊಂಡ ನೀರಿನಲ್ಲಿರುವ ನೈಟ್ರೋಜನ್ ಒಳಗೊಂಡ ಲವಣಗಳು ಪ್ರೋಟೀನ್ ದ್ರವ್ಯಗಳನ್ನು ಸೃಷ್ಟಿಸಲು ಕಾರಣವಾಗುತ್ತವೆ. ಇದೇ ರೀತಿ ಕಳವೆ, ರಾಜಾನ್ನ, ಶಾಲ್ಯನ್ನದಲ್ಲಿರುವ ನೀರು ಓಗರದ ರುಚಿಯನ್ನು ಕೊಟ್ಟರೆ ಮರುಗ ಮಲ್ಲಿಗೆ ಪಚ್ಚೆಯಲ್ಲಿ ಸುಗಂಧ ದ್ರವ್ಯಗಳು ಬೆರತು ಸುಗಂಧದ ನೀರಾಗುತ್ತದೆ. ಹೀಗೆ ಒಂದೇ ನೀರು, ಒಂದೇ ಆಕಾಶ, ಒಂದೇ ಭೂಮಿಯ ಸಹಾಯದಿಂದ ಬೇರೆ ಬೇರೆ ರುಚಿಗಳನ್ನೊಳಗೊಂಡ ಹಲವಾರು ರುಚಿಯನ್ನು ಕೊಡುವ ನೀರಾಗಿ ಪರಿಣಮಿಸುತ್ತವೆ. ಬೇರೆ ಬೇರೆ ದ್ರವ್ಯಗಳಿಂದ ಕೂಡಿದ ನೀರಿನ ರುಚಿ ಬೇರೆ ಬೇರೆಯಾದರೂ ಮೂಲತಃ ನೀರು ನೀರೇ. ಅದು ತನ್ನ ಮೂಲಸ್ವರೂಪವನ್ನು ಬದಲಾಯಿಸುವದಿಲ್ಲ. ವೈಜ್ಞಾನಿಕ ನೆಲೆಯ ಈ ಹೋಲಿಕೆಯಿಂದ ಪರಮಾತ್ಮನ ಸ್ವರೂಪವನ್ನು ನಮಗೆ ಪರಿಚಯಿಸುತ್ತಾಳೆ ಅಕ್ಕ. ಹಲವಾರು ಬ್ರಹ್ಮಾಂಡಗಳು ಶಿವಮಯವಾದರೂ ಅವುಗಳಲ್ಲಿ ಶಿವನಿದ್ದರೂ ಆತ ತನ್ನ ಮೂಲಸ್ವರೂಪವನ್ನು ಕಳೆದುಕೊಳ್ಳದೆ ಒಳಗೂ ಹೊರಗೂ ಇದ್ದು ವಿಶ್ವವ್ಯಾಪಿಯಾಗುತ್ತಾನೆ; ವಿಶ್ವಾತೀತವಾಗುತ್ತಾನೆ. ಒಟ್ಟಾರೆ ಇದೊಂದು ವೈಜ್ಞಾನಿಕ ದೃಷ್ಟಿಯನ್ನು ಬಿಂಬಿಸುವ ಬಹುಮುಖ್ಯವಾದ ವಚನವೆಂದೇ ಹೇಳಬೇಕು.

ಜೇಡರ ದಾಸಿಮಯ್ಯನ ಈ ವಚನ ನಿಸರ್ಗದ ಇನ್ನೊಂದು ರಹಸ್ಯವನ್ನು ಬಯಲಿಗೆಳೆಯುತ್ತದೆ:

ಸಾಗರದೊಳಗಣ ಕಿಚ್ಚಿನ ಸಾಕಾರದಂತೆ.
ಸಸಿಯೊಳಗಣ ಫಲ ಪುಷ್ಪ ರುಚಿಯ ಪರಿಮಳದಂತೆ.
ಮನದ ಮರೆಯ ಮಾತು
ನೆನಹಿನಲ್ಲಿ ಅರಿದು, ನಾಲಿಗೆಯು ನುಡಿದಲ್ಲದೆ
ಕಾಣಬಾರದು ಕೇಳಬಾರದು
ಒಂದಂಗದೊಳಗಡಗಿದ ನೂರೊಂದರ ಪರಿಯ. ೭-೮೭೪

ಸಾಗರದ ನೀರಿನಲ್ಲಿ ಕಿಚ್ಚಿರುವುದನ್ನು ಈ ವಚನದ ಮೊದಲನೆಯ ಸಾಲು ಪ್ರತಿಪಾದಿಸುತ್ತದೆ. ನೀರಿನಲ್ಲಿ ಕಿಚ್ಚಿರುವುದು ಸಾಧ್ಯವೆ? ಉದಕದೊಳಗೆ ಬಚ್ಚಿಟ್ಟ ಬಯಕೆಯ ಕಿಚ್ಚಿನಂತೆ (೧-೧) ಎಂಬ ಬಸವಣ್ಣನವರ ವಚನವೂ ಕೂಡ ಇದೇ ಮಾತನ್ನು ಎತ್ತಿ ಹಿಡಿಯುತ್ತದೆ. ಆದರೆ ಅದು ನಮಗೆ ಗೋಚರವಾಗುವುದಿಲ್ಲ. ಆದರೆ ನೀರಿನಲ್ಲಿ ಕಿಚ್ಚಿರುವುದನ್ನು ಇಂದಿನ ರಸಾಯನ ವಿಜ್ಞಾನ ಬಹಿರಂಗಪಡಿಸಿದೆ. ನೀರಿನ ಒಂದು ಅಣುವಿನಲ್ಲಿ ಎರಡು ಹೈಡ್ರೋಜನ್ ಒಂದು ಆಕ್ಸಿಜನ್‌ನ ಎರಡು ಪರಮಾಣುಗಳು ರಾಸಾಯನಿಕ ಬಂಧದಿಂದ ಬಿಗಿಯಲ್ಲಿಟ್ಟಿರುತ್ತವೆ. ಹೈಡ್ರೋಜನ್ ದಹನಶೀಲ ಮೂಲವಸ್ತು. ಆಕ್ಸಿಜನ್ ದಹನವನ್ನು ಪ್ರಚೋದಿಸುತ್ತದೆ. ಆಮ್ಲ ಮಿಶ್ರಿತ ನೀರಿನಲ್ಲಿ ವಿದ್ಯುತ್‌ನ್ನು ಪ್ರವಹಿಸಿದರೆ ಇವರೆಡೂ ಬಿಡುಗಡೆ ಹೊಂದಿದಾಗ ಹೈಡ್ರೋಜನ್ ಆಕ್ಸಿಜನ್‌ನಿಂದ ಪ್ರಚೋದನೆಗೊಂಡು ಉರಿಯಲು ಪ್ರಾರಂಭಿಸುತ್ತದೆ. ಇದರ ಫಲವಾಗಿ ಮತ್ತೆ ನೀರಿನ ಸೃಷ್ಟಿ. ಪ್ರತ್ಯೇಕವಾದಾಗ ದಹನಶೀಲ ಹಾಗೂ ದಹನಾನುಕೂಲಿಯಾದ ಈ ಅನಿಲ ಮೂಲವಸ್ತುಗಳು ದಹನ ಕ್ರಿಯೆಗೆ ವಿರೋಧವಾದ ನೀರನ್ನು ಸೃಷ್ಟಿಸುವುದು ನಿಸರ್ಗದ ಒಂದು ವೈಚಿತ್ರವೇ ಸರಿ!

ಜೇಡರ ದಾಸಿಮಯ್ಯನವರು ಸಾಗರದೊಳಗಿನ ನೀರಿನಲ್ಲಿ ಕಿಚ್ಚು ಸಾಕಾರಗೊಳ್ಳುವುದನ್ನು ಅಂದರೆ ಹತ್ತಿ ಉರಿಯುವುದನ್ನು ಉಲ್ಲೇಖಿಸಿದ್ದಾರೆ. ಮೀನುಗಾರರು ಸಾಗರ ಹತ್ತಿ ಉರಿಯುವುದ ನೋಡಿರುವುದನ್ನು ಪತ್ರಿಕೆಗಳು ವರದಿ ಮಾಡಿದ್ದವು. ಅಂದರೆ ಇದು ಅನುಭವದ ಮಾತು. ಇದು ಹೇಗೆ ಸಾಧ್ಯ? ಸಮುದ್ರದಲ್ಲಿ ಕಡಿಮೆ ಒತ್ತಡದ ಕ್ಷೇತ್ರಗಳು (Low pressure areas) ಉಂಟಾದಾಗ ನೀರು ಆವಿಯಾಗುವುದನ್ನು ವೈಜ್ಞಾನಿಕ ಪ್ರಯೋಗಗಳು ರುಜುವಾತುಪಡಿಸಿವೆ. ಸಮುದ್ರದ ಮೇಲಿನ ಗಾಳಿಯಲ್ಲಿ ತಾಪಮಾನದ ಏರುಪೇರುಗಳಿಂದ ಒತ್ತಡಗಳಲ್ಲಿ ವ್ಯತ್ಯಾಸಗಳುಂಟಾಗುತ್ತವೆ. ಹೀಗಾದಾಗ ಚಂಡಮಾರುತಗಳು ಸೃಷ್ಟಿಯಾಗುತ್ತವೆ. ಇವು ಸಮುದ್ರದಲ್ಲಿ ಕಡಿಮೆ ಒತ್ತಡದ ಪ್ರದೇಶಗಳನ್ನು ಸೃಷ್ಟಿಸುತ್ತವೆ. ಆಗ ನೀರು ಆವಿಯಾಗಿ ಮೋಡಗಳನ್ನು ಸೃಷ್ಟಿಸಿ ಮಳೆ ತರಿಸುತ್ತದೆ. ಚಂಡಮಾರುತಗಳಲ್ಲಿರುವ ಶಕ್ತಿ ಅಗಾಧವಾದದ್ದು. ಅವು ಗಂಟೆಗೆ ೧೩೦ ಮೈಲಿಗಳಿಗಿಂತಲೂ ಅಧಿಕವೇಗದಲ್ಲಿ ಚಲಿಸಬಲ್ಲವು. ಇಂಥ ಸಂದರ್ಭದಲ್ಲಿ ಚಂಡಮಾರುತ ಹಾಗೂ ನೀರಿನ ಆವಿಯಲ್ಲಿ ಸಂಘರ್ಷದಿಂದ ಉಷ್ಣಮಾನ ಏರಿ ನೀರಿನ ಅಣುಗಳು ವಿಭಜನೆಯಾಗಿ ಹೈಡ್ರೋಜನ್ ಹಾಗೂ ಆಕ್ಸಿಜನ್ ಪರಮಾಣುಗಳನ್ನು ಸೃಷ್ಟಿಸಿದಾಗ ಹೈಡ್ರೋಜನ್ ಆಕ್ಸಿಜನ್ ಸಮ್ಮುಖದಲ್ಲಿ ಉರಿದು ಬೆಂಕಿಯನ್ನು ಸೃಷ್ಟಿಸುತ್ತದೆ. ಇದು ಸಾಗರದ ಕಿಚ್ಚು ಸಾಕಾರವಾಗುವ ರೀತಿ. ಇದೊಂದು ರಾಸಾಯನಿಕ ಪ್ರಕ್ರಿಯೆ. ಇದನ್ನು ಉಪಮಾಲಂಕಾರವನ್ನಾಗಿ ಉಪಯೋಗಿಸಿಕೊಂಡು ಜೇಡರ ದಾಸಿಮಯ್ಯನವರು ನಮ್ಮನ್ನು ಅಂತರಂಗ ಅನುಭಾವ ಪ್ರಕ್ರಿಯೆಗಳ ಕಡೆಗೆ ಕರೆದೊಯ್ಯುತ್ತಾರೆ.

ಇದಲ್ಲದೆ ಈ ವಚನದಲ್ಲಿ ಇನ್ನು ಎರಡು ಸ್ವಾರಸ್ಯಕರವಾದ ಉಪಮೆಗಳಿವೆ. ವಚನದ ಎರಡನೆಯ ಸಾಲಿನಲ್ಲಿ ಕಾಣಸಿಕೊಳ್ಳುವ ಸಸಿಯೊಳಗಣ ಫಲ ಪುಷ್ಪರುಚಿಯ ಪರಿಮಳದಂತೆ ಎಂಬ ಹೋಲಿಕೆ ಸಸ್ಯವಿಜ್ಞಾನಕ್ಕೆ ಸಂಬಂಧಪಟ್ಟದ್ದು. ಸಸಿ ಬೆಳೆದು ಗಿಡವಾಗುವುದು, ಮರವಾಗುವುದು ಒಂದು ನೈಸರ್ಗಿಕ ಪ್ರಕ್ರಿಯೆ. ಹೀಗಾಗುವಾಗ ಇದರಲ್ಲಿ ಅನೇಕ ಭೌತ, ರಾಸಾಯನಿಕ, ಜೀವರಾಸಾಯನಿಕ ಕ್ರಿಯೆಗಳು ನಡೆಯುತ್ತವೆ. ಸಸಿ ದೊಡ್ಡದಾದಾಗ ಹೂ ಬಿಟ್ಟು ಕಾಯಿಗಳಾಗುತ್ತವೆ. ಆಗ

ನಾವು ಇವುಗಳಲ್ಲಿಯ ಪರಿಮಳ ಹಾಗೂ ರುಚಿಯನ್ನು ಅನುಭವಿಸುತ್ತೇವೆ. ಸಸಿಯಾಗಿದ್ದಾಗ ನಮ್ಮ ಅನುಭವಕ್ಕೆ ಬಾರದ ಇವು ವಿಕಾಸದ ಅನೇಕ ಹಂತಗಳನ್ನು ದಾಟಿ ಫಲ ಪುಷ್ಪಗಳಾದಾಗ ನಮ್ಮ ಅನುಭವಕ್ಕೆ ಬರುತ್ತವೆ.

ವಚನದ ಮೂರನೆಯ ಸಾಲಿನಲ್ಲಿ ಬರುವ 'ಮನದ ಮರೆಯ ಮಾತು ನೆನಹಿನಲ್ಲಿ ಅರಿದು, ನಾಲಗೆಯು ನುಡಿದಾಗಲಲ್ಲದೆ ಕಾಣಬಾರದು ಕೇಳಬಾರದೆಂಬ' ಮಾತು ಇನ್ನೂ ಅದ್ಭುತವಾದದ್ದು. ಮನದೊಳಗಿನ ಮಾತು ನಾಲಿಗೆಗೆ ಬರಬೇಕಾದರೆ ಅದು ರಾಸಾಯನಿಕ, ಭೌತಿಕ ಹಾಗೂ ಮನೋವಿಜ್ಞಾನಕ್ಕೆ ಸಂಬಂಧಪಟ್ಟ ಅನೇಕ ಪ್ರಕ್ರಿಯೆಗಳಿಗೆ ಒಳಪಡಬೇಕಾಗುತ್ತದೆ. ಅರ್ಧ ಗೋಲಾಕಾರವನ್ನು ಹೋಲುವ ಮಿದುಳಿನಲ್ಲಿ ಬಲ ಹಾಗೂ ಎಡ ಎಂದು ಎರಡು ಭಾಗಗಳಿದ್ದು ಬಲಭಾಗ ಚಿಂತನಕ್ಕೆ ಮೀಸಲಾದರೆ, ಎಡಭಾಗ ವಿಶ್ಲೇಷಣೆಗೆ ಮೀಸಲು. ಮಾತು ಹೊರಡುವುದು ಎಡಭಾಗದಿಂದಲೇ. ಹೀಗೆ ಮಿದುಳಿನ ಬಲ ಹಾಗೂ ಎಡ ಭಾಗಗಳಲ್ಲಿ ಚಿಂತನೆಯ ಅನೇಕ ಪ್ರಕ್ರಿಯೆಗಳು ನಡೆದು ಎಡಭಾಗದ ಮೂಲಕ ಮಾತು ನಾಲಗೆಯ ಮೇಲೆ ಬರುತ್ತದೆ. ಅದನ್ನು ಕೇಳಿದಾಗಲೇ ಮಾತನಾಡುವ ವ್ಯಕ್ತಿಯ ಮನಸ್ಸಿನಲ್ಲಿ ಏನಿದೆಯೆಂಬುದು ನಮಗೆ ಗೊತ್ತಾಗುತ್ತದೆ.

ವಿಜ್ಞಾನಶಾಸ್ತ್ರದ ಅನೇಕ ತತ್ವಗಳನ್ನುಪಯೋಗಿಸಿಕೊಂಡು ನಡೆಯುವ ಈ ಮೂರು ಹೋಲಿಕೆಗಳ ಮುಖಾಂತರ ನಮ್ಮ ದೇಹದಲ್ಲಿ ಆಧ್ಯಾತ್ಮ ಪ್ರಕ್ರಿಯೆಗಳು ನಡೆದು ಪರತತ್ವ ನಮ್ಮ ಅನುಭವಕ್ಕೆ ಬರುವ ಮಾತನ್ನು ಬಿತ್ತರಿಸುತ್ತಾರೆ ಜೇಡರ ದಾಸಿಮಯ್ಯನವರು. ಇವರು ಹೇಳುವ" ಒಂದಂಗದೊಳಡಗಿದ ನೂರೊಂದರ ಪರಿ" ಎಂಬುವ ಮಾತು ಅಂಗ ನೂರೊಂದು ಸ್ಥಲಗಳನ್ನು ದಾಟಿ ಪರತತ್ವ ದರ್ಶನದ ಮಾತನ್ನು ಹೇಳಿದಂತೆ ತೋರುತ್ತದೆ.

ಸಮಾನತೆಯಲ್ಲಿ ವೈಜ್ಞಾನಿಕ ದೃಷ್ಟಿ

ಬಸವಣ್ಣನವರು ವೈಜ್ಞಾನಿಕ ತಳಹದಿಯ ಮೇಲೆ ಸಾಮಾಜಿಕ ಹಾಗೂ ಧಾರ್ಮಿಕ ಸಮಾನತೆಯನ್ನುಂಟು ಮಾಡಲು ಪ್ರಯತ್ನಿಸಿದರು. ಎಲ್ಲರೂ ಒಂದೇ ರೀತಿಯಲ್ಲಿ ಹುಟ್ಟುತ್ತಾರೆ. ಎಲ್ಲರ ದೇಹ ರಚನೆಯಲ್ಲಿರುವ ವಸ್ತುಗಳು ಒಂದೇ, ಎಲ್ಲರ ಮೂಲಭೂತ ಆವಶ್ಯಕತೆಗಳು, ಆಕಾಂಕ್ಷೆಗಳು ಒಂದೇ ಎಂದು ಹೇಳಿ ಹಾಗಾದರೆ ಕುಲಜನಾರು? ಎಂಬ ಪ್ರಶ್ನೆ ಹಾಕುತ್ತಾರೆ.

ಹೊಲೆಗಂಡಲ್ಲದೆ ಪಿಂಡದ ನೆಲೆಗಾಶ್ರಯವಿಲ್ಲ.
ಜಲಬಿಂದುವಿನ ವ್ಯವಹಾರ ಒಂದೇ,
ಆಶೆಯಾಮಿಷ ರೋಷ ಹರುಷ ವಿಷಯಾದಿಗಳೆಲ್ಲಾ ಒಂದೇ.
ಏನನೋದಿ ಏನ ಕೇಳಿ ಏನು ಫಲ?
ಕುಲಜನೆಂಬುದಕ್ಕೆ ಆವುದು ದೃಷ್ಟ?
ಸಪ್ತಧಾತುಸಮಂ ಪಿಂಡಂ, ಸಮಯೋನಿ ಸಮುದ್ಭವಂ!
ಆತ್ಮಾಜೀವ ಸಮಾಯುಕ್ತಂ ವರ್ಣಾನಾಂ ಕಿಂ ಪ್ರಯೋಜನಂ.
ಎಂಬುದಾಗಿ,
ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ,
ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ,
ಕರ್ಣದಲ್ಲಿ ಜನಿಸಿದವರುಂಟೆ ಜಗದೊಳಗೆ?
ಇದು ಕಾರಣ ಕೂಡಲಸಂಗಮದೇವಾ
ಲಿಂಗಸ್ಥಲವನರಿದವನೆ ಕುಲಜನು. ೧-೫೯೦

ನಮ್ಮ ಪುರಾತನ ಶಾಸ್ತ್ರಗಳು ಹೇಳುವಂತೆ ಮಾನವ ದೇಹ ಏಳು ತತ್ವಗಳು ಅಂದರೆ ರಸ, ರಕ್ತ, ಮಾಂಸ, ಮೇದಸ್ಸು, ಮಜ್ಜೆ, ಅಸ್ಥಿ ಮತ್ತು ಶುಕ್ಲಗಳಿಂದ ಆಗಿದೆ. ಈಗಿನ ವಿಜ್ಞಾನದ ಪ್ರಕಾರ ಕಾರ್ಬನ್, ಹೈಡ್ರೋಜನ್, ಆಕ್ಸಿಜನ್, ನೈಟ್ರೋಜನ್,

ಕ್ಯಾಲ್ಸಿಯಂ, ಕಬ್ಬಿಣ ಮತ್ತು ಪಾಸ್ಪರಸ್ (ರಂಜಕ) ಮುಂತಾದ ಸುಮಾರು ಹನ್ನೆರಡು ವಸ್ತುಗಳಿಗೂ ಮೇಲ್ಪಟ್ಟ ಮೂಲವಸ್ತುಗಳಿಂದಾಗಿದೆ. ಹಸಿವು, ತೃಷೆ, ನಿದ್ರೆ, ಮೈಥುನಗಳು ಎಲ್ಲರಿಗೂ ಒಂದೇ. ಹಾರುವ, ಕಮ್ಮಾರ, ಮಡಿವಾಳ ಮುಂತಾದ ಬೇರೆ ಬೇರೆ ಕಾಯಕಗಳಿಂದ ಬೇರೆ ಬೇರೆ ಕುಲಗಳು ರೂಢಿಯಲ್ಲಿವೆ. ಯಾರೂ ಕಿವಿಯಲ್ಲಿ ಹುಟ್ಟುವುದಿಲ್ಲ. ಹೀಗಿರುವಾಗ ಕುಲದ ಮೇಲುಕೀಳುಗಳನ್ನು ಎಣಿಸುವುದು ಹೇಗೆ? ಕುಲಜರಾರು? ಎಂಬ ಪ್ರಶ್ನೆಗೆ ಯಾರು ತಮ್ಮಲ್ಲಿರುವ ದೈವತ್ವವನ್ನು ಪ್ರಕಟಿಸಿಕೊಂಡು ದಿವ್ಯಜೀವಿಗಳಾಗಿರುವರೋ ಅವರೇ ಶ್ರೇಷ್ಠರೆಂದು ಉತ್ತರಿಸುತ್ತಾರೆ. ಹೀಗೆ ದೈವತ್ವ ಇಲ್ಲಿ ಸಮಾನತೆಯ ಮಾನದಂಡವಾಗಿ ಪರಿಣಮಿಸುತ್ತದೆ. ಸಮಾಜದಲ್ಲಿ ಎಲ್ಲರೂ ದಿವ್ಯಜೀವಿಗಳಾದರೆ ಎಲ್ಲರಲ್ಲಿಯೂ ಧಾರ್ಮಿಕವಾಗಿ ಸಾಮಾಜಿಕವಾಗಿ ಸಮಾನತೆ ತಾನಾಗಿಯೇ ಏರ್ಪಡುತ್ತದೆ.

ಮೂಢನಂಬಿಕೆ ಮತ್ತು ವೈಜ್ಞಾನಿಕ ದೃಷ್ಟಿ

ಸಮಾಜದಲ್ಲಿ ಅನಾದಿಕಾಲದಿಂದಲೂ ಮೂಢನಂಬಿಕೆಗಳು ಬೇರೂರಿವೆ. ಇಂದಿನ ವೈಜ್ಞಾನಿಕ ಯುಗದಲ್ಲಿಯೂ ಅವು ಮುಂದುವರಿದಿವೆ. ಇಂದೂ ನಾವು ಯಾವುದೇ 'ಶುಭ' ಕಾರ್ಯವನ್ನು ಮಾಡುವಾಗ ವಾರ, ತಿಥಿ, ನಕ್ಷತ್ರಗಳನ್ನು ನೋಡುತ್ತೇವೆ. ಮದುವೆ ಮಾಡುವಾಗ ವಧೂ-ವರರ ಜಾತಕವನ್ನು ನೋಡುತ್ತೇವೆ. ನಮ್ಮದೇಶದಲ್ಲಿ ಮುಹೂರ್ತ ನೋಡಿಯೆ ಸರಕಾರಿ ಕಾರ್ಯಗಳನ್ನೂ ಕೂಡ ಪ್ರಾರಂಭಿಸುವ ಸಂಪ್ರದಾಯವಿದೆ. ಆಕಾಶದಲ್ಲಿ ಕ್ಷಿಪಣಿಗಳನ್ನು ಹಾರಿ ಬಿಡುವ ನಮ್ಮ ವಿಜ್ಞಾನಿಗಳು ಮುಹೂರ್ತ ನೋಡಿದರೆಂಬ ವದಂತಿಗಳಿವೆ. ಅಣುಸ್ಫೋಟ ಮಾಡುವಾಗಲೂ ಇದೇ ರೀತಿಯಾಯಿತಂತೆ. ಅಂದರೆ ಮೂಢನಂಬಿಕೆಯ ಪ್ರಭಾವ ಎಷ್ಟು ಗಾಢವಾಗಿದೆಯೆಂಬುದು ಇದರಿಂದ ತಿಳಿದು ಬರುತ್ತದೆ. ಇದು ವೈಜ್ಞಾನಿಕ ದೃಷ್ಟಿಗೆ ವಿರೋಧವಾದ ಮಾತು. ಇದನ್ನು ಖಂಡಿಸುತ್ತ ಬಸವಣ್ಣನವರು ಹೇಳುವ ಮಾತು ಮನನೀಯ:

ಅಂದು ಇಂದು ಮತ್ತೊಂದೆನಬೇಡ
ದಿನವಿಂದೇ ಶಿವ ಶರಣೆಂಬವಂಗೆ;
ದಿನವಿಂದೇ ಹರ ಶರಣೆಂಬವಂಗೆ;
ದಿನವಿಂದೇ ಕೂಡಲಸಂಗಮ ಮಾಣದೆ ನೆನೆವಂಗೆ. ೧-೭೪.

ಕಾಲ ಸ್ವತಂತ್ರ ವಸ್ತುವಲ್ಲ. ಅದು ಪರತತ್ವದ ಅಧೀನ. ಅದರಿಂದಲೇ ಕಾಲ ಉದಯವಾಗುತ್ತದೆ. ಸೃಷ್ಟಿಯಲ್ಲಿ ನಡೆಯುವ ಘಟನೆಗಳನ್ನು ಸೂಚಿಸುವ ತತ್ವವಾಗಿ ಅದು ಸೃಷ್ಟಿ ಇರುವವರೆಗೂ ಮುಂದುವರೆಯುತ್ತದೆ. ಅಂತೆಯೇ ಐನಸ್ಟೈನ್ ಈ ವಿಶ್ವ, ಸ್ಥಲ ಕಾಲಗಳ ಮುಂದುವರಿಕೆ ಎಂದು ಹೇಳಿದ್ದಾನೆ. ಕಾಲ ಅಖಂಡವಾದದ್ದು. ನಮ್ಮ ಅನುಕೂಲಕ್ಕಾಗಿ ಅದನ್ನು ಯುಗ, ಸಂವತ್ಸರ, ಮಾಸ, ಪಕ್ಷ ದಿವಸಗಳೆಂದು ವಿಂಗಡಿಸಿಕೊಂಡಿದ್ದೇವೆ. ನಾವು ಕೆಟ್ಟವರಾಗಿ ಕೆಟ್ಟ ಕೆಲಸಗಳನ್ನು ಮಾಡಿದರೆ ಕಾಲ ಕೆಟ್ಟದಾಗುತ್ತದೆ. ಒಳ್ಳೆಯವರಾಗಿ ಒಳ್ಳೆಯ ಕೆಲಸಗಳನ್ನು ಮಾಡಿದರೆ ಕಾಲ ಒಳ್ಳೆಯದಾಗುತ್ತದೆ. ರಾಹು ಕಾಲ, ಗುಳಿಕ ಕಾಲ ಹಾಗೂ ಯಮಗಂಡ ಕಾಲಗಳು ನಾವು ಕಲ್ಪಿಸಿಕೊಂಡಿರುವ ಭ್ರಮಾತ್ಮಕ ಕಾಲಗಳು. ದೇವರು ದಯಾಮಯ, ದಯಾಸಿಂಧು. ಅವನ ಧ್ಯಾನದಲ್ಲಿದ್ದು ಯಾವುದೇ ಕೆಲಸವನ್ನು ಯಾವ ಕಾಲದಲ್ಲಿ ಮಾಡಿದರೂ ಅದಕ್ಕೆ ಜಯವುಂಟು. ಕಾರಣ ಕಾರ್ಯಗಳನ್ನು ಹಮ್ಮಿಕೊಳ್ಳುವುದಕ್ಕಾಗಿ ಶುಭದಿನಗಳನ್ನು ನೋಡಬೇಕಾಗಿಲ್ಲ. ಎಲ್ಲವೂ ಶುಭದಿನಗಳೆಂದು ತಿಳಿದು ಕಾರ್ಯೋನ್ಮುಖರಾಗಬೇಕು. ಕಾರ್ಯಮಾಡಲು ಇಂದಿನ ದಿನವೇ ಶುಭದಿನವೆಂದು ಭಾವಿಸಿ ಅದನ್ನು ಮಾಡಬೇಕು.

ಮತ್ತೆ ಕೆಲವರು ಮದುವೆ ಮಾಡಲು ಜಾತಕ ನೋಡುತ್ತಾರೆ. ಇದು ಅಪಹಾಸ್ಯಕರ. ಇಂಥವರನ್ನು ಕುರಿತು ಬಸವಣ್ಣನವರು ಹೇಳುವ ಮಾತು ಗಮನಾರ್ಹ:

ಎಮ್ಮವರು ಬೆಸಗೊಂಡರೆ ಶುಭಲಗ್ನವೆನ್ನಿರಯ್ಯ,
ರಾಶಿಕೂಟ ಋಣಸಂಬಂಧವುಂಟೆಂದು ಹೇಳಿರಯ್ಯ.
ಚಂದ್ರಬಲ ತಾರಾಬಲವುಂಟೆಂದು ಹೇಳಿರಯ್ಯ
ನಾಳಿನ ದಿನಕಿಂದಿನ ದಿನ ಲೇಸೆಂದು ಹೇಳಿರಯ್ಯ,
ಕೂಡಲ ಸಂಗಮದೇವನ ಪೂಜಿಸಿದ ಫಲ ನಿಮ್ಮದಯ್ಯಾ ೧-೮೩

ರಾಶಿ ಕೂಟ, ಚಂದ್ರಬಲ, ತಾರಾಬಲ ಇವು ಗ್ರಹ ನಕ್ಷತ್ರಗಳಿಗೆ ಸಂಬಂಧಿಸಿದ ವಿಷಯಗಳು. ಗ್ರಹ ನಕ್ಷತ್ರಗಳ ಪರಿಣಾಮ ನಮ್ಮ ಹುಟ್ಟು ಸಾವು ಹಾಗೂ ಈ ಮಧ್ಯದ ಜೀವನದ ಮೇಲೆ ಆಗುತ್ತದೆಂಬ ನಂಬಿಕೆ ಅವೈಜ್ಞಾನಿಕವಾದದ್ದು. ಗ್ರಹನಕ್ಷತ್ರಗಳಿರುವುದು ಲಕ್ಷಾಂತರ ಕೋಟ್ಯಾಂತರ ಮೈಲಿಗಳಷ್ಟು ದೂರದಲ್ಲಿ. ಅಷ್ಟು ದೂರದಲ್ಲಿರುವ ನಕ್ಷತ್ರಗಳ ಗುರುತ್ವಾಕರ್ಷಣ ಶಕ್ತಿಯಾದರೂ ನಮ್ಮ ಮೇಲೆ ಪ್ರಭಾವ ಬೀರದು. ಇವುಗಳಿಂದ ಹೊರಡುವ ರಶ್ಮಿಯ ಅಲೆಗಳು ನಮ್ಮನ್ನು ತಲುಪಬಹುದು. ಇವು ನಮ್ಮ ದೇಹ ಮನಸ್ಸುಗಳ ಮೇಲೆ ಪರಿಣಾಮ ಬೀರಿ ನಮ್ಮ ವರ್ತನೆಯನ್ನು ಪರಿವರ್ತಿಸಬಲ್ಲವೆಂಬ ಮಾತನ್ನು ನಂಬುವುದು ಕಷ್ಟ ಹಾಗೂ ಆಗುತ್ತದೆಂದು ಇಟ್ಟುಕೊಂಡರೂ ಇವುಗಳ ಸಾಮರ್ಥ್ಯ, ಎಲ್ಲವನ್ನು ನಿಯಂತ್ರಿಸುವ ಕೂಡಲ ಸಂಗಮದೇವ ಅಂದರೆ ಪರತತ್ವದ ಮುಂದೆ ಕಿಂಚಿತ್. ನಾವು ಸದಾ ಪರಮಾತ್ಮನ ಧ್ಯಾನದಲ್ಲಿದ್ದರೆ ಆತನನ್ನು ಪೂಜಿಸುವ ಬಲ ನಮ್ಮ ರಕ್ಷಣೆಗಿದ್ದರೆ ಚಂದ್ರ, ತಾರಾ ಬಲಗಳು, ಗ್ರಹಗಳ ಪೀಡೆಗಳು ನಮ್ಮನ್ನೇನೂ ಮಾಡಲಾರವು. ಯಾಕೆಂದರೆ ಗ್ರಹ ನಕ್ಷತ್ರಗಳೆಲ್ಲ ಪರಮಾತ್ಮನ ಕೂಸುಗಳಲ್ಲವೆ? ಮೂಲದಿಂದ ಹೊರಹೊಮ್ಮಿದ ಇವುಗಳನ್ನು ಪೂಜಿಸದೆ ಇವುಗಳ ಪ್ರಭಾವದಲ್ಲಿ ವಿಶ್ವಾಸವಿಡದೆ ಮೂಲವನ್ನೇ ನಂಬಿದಾಗ ನಮಗೆ ಯಾವ ಕೇಡು ಬಾರದೆಂಬ ಮಾತು ಸತ್ಯಕ್ಕೆ ಹತ್ತಿರವಾಗಿದೆ. ವಾಸ್ತವತೆಗೆ ಹತ್ತಿರವಾಗಿದೆ. ಇದು ವೈಜ್ಞಾನಿಕ ದೃಷ್ಟಿಯಾಗಿದೆ. ಇದು ಪರಮಾತ್ಮನ ಮೇಲೆ ನಂಬಿಕೆ ಇಟ್ಟು ಆತ್ಮವಿಶ್ವಾಸದಿಂದ ಕಾರ್ಯೋನ್ಮುಖರಾಗಬೇಕೆಂಬ ಸಂದೇಶವನ್ನು ಕೊಡುತ್ತದೆ.

ಈ ರೀತಿ ಶರಣರ ವಚನಗಳಲ್ಲಿರುವ ವೈಜ್ಞಾನಿಕ ದೃಷ್ಟಿ ನಮ್ಮ ಜೀವನದ ಎಲ್ಲ ಅಂಗಗಳಿಗೂ ಅನ್ವಯವಾಗುವಂತಿದ್ದು, ನಮ್ಮನ್ನು ಭ್ರಮಾತ್ಮಕ ಜಗತ್ತಿನಿಂದ ಹೊರಗೆಳೆದು ವಾಸ್ತವತೆಯ ಪರಿಚಯ ಮಾಡಿಸುತ್ತದೆ. ನಮ್ಮ ಬಾಳು ಸಫಲವಾಗಲು ಮಾರ್ಗದರ್ಶನ ಮಾಡುತ್ತದೆ.

ತತ್-ತ್ವಂ-ಅಸಿ ಹಾಗೂ ಅಲ್ಲಮಪ್ರಭು

✍ ಬಸವರಾಜ ಪುರಾಣಿಕ

"ನಾನು ಯಾರು?" "ನಾನು ಎಲ್ಲಿಂದ ಬಂದೆ?" ಮತ್ತು "ನಾನು ಮರಳಿ ಎಲ್ಲಿಗೆ ಹೋಗುವೆ?" -ಈ ಮೂರು ಪ್ರಶ್ನೆಗಳು ಮನುಷ್ಯನನ್ನು ಕಾಡುವ ಯಕ್ಷಪ್ರಶ್ನೆಗಳಾಗಿವೆ. ಇವುಗಳಿಗೆ ಉತ್ತರಿಸುವ ಕಾರ್ಯವು ತತ್ವಜ್ಞಾನಿಗಳ ಮೂಲಕ ಅನೂಚಾನವಾಗಿ ನಡೆಯುತ್ತಲಿದೆ. ಈ ಪ್ರಶ್ನೆಗಳ ಆಶಯವನ್ನು ಬಿಂಬಿಸುವಂತೆ ಸಾರ್ವತ್ರಿಕವಾಗಿ ಕೇಳಿಬರುವ ಗಹನ ಪ್ರಶ್ನೆಗಳು ಮೂರು : ಈ ವಿಶ್ವದ ಆದಿ ಯಾವುದು? ಮತ್ತು ಈ ಸೃಷ್ಟಿಯ ಉದ್ದೇಶವೇನು? ಇವುಗಳಿಗೆ ಸಮಾಧಾನ ನೀಡುವ ಪ್ರಕ್ರಿಯೆಯಲ್ಲಿ ಜಗತ್ತಿನ ದಾರ್ಶನಿಕರು ಸದಾ ನಿರತರು. ತಮಗೆ ಸರಿಕಂಡ ರೀತಿಯಲ್ಲಿ ತರ್ಕಸಮ್ಮತವಾದ ವಿವರಣೆ ಕೊಡುವ ಕಾರ್ಯ ನಡೆದೇ ಇದೆ.

ಭಾರತೀಯ ದಾರ್ಶನಿಕರು ದರ್ಶನದ ಈ ಮೂಲಭೂತ ಸಮಸ್ಯೆಗಳಿಗೆ ಒಂದು ಸ್ವರೂಪವನ್ನು ನೀಡಿದರು ಹಾಗೂ ಅವುಗಳಿಗೆ ಜೀವ, ಅಜೀವ ಮತ್ತು ದೇವ ಎಂಬ ಹೆಸರನ್ನು ಕೊಟ್ಟರು. ಅವುಗಳ ಸಂಘಾತವನ್ನು ತ್ರಿಪುಟಿ ಎಂದು ಕರೆಯಲಾಗಿದೆ. ಈ ಮೂರು ತತ್ವಗಳನ್ನು ಸಂಯೋಜಿಸಿ ಒಂದು ಕ್ರಮಬದ್ಧ ವಿವರಣೆ ನೀಡಲು ಸಾಧ್ಯವೇ ಎಂಬ ನಿಟ್ಟಿನ ಚಿಂತನೆಯಲ್ಲಿ ತೊಡಗಿಸಿಕೊಂಡವರು ಆಚಾರ್ಯತ್ರಯರು: ಶಂಕರಾಚಾರ್ಯ, ರಾಮಾನುಜಾಚಾರ್ಯ ಹಾಗೂ ಮಧ್ವಾಚಾರ್ಯರು. ಅವರ ಪ್ರಬುದ್ಧ ವಿವೇಚನೆಯ ಫಲಿತಾಂಶವಾಗಿ ಅದ್ವೈತ, ವಿಶಿಷ್ಟಾದ್ವೈತ, ದ್ವೈತ ದರ್ಶನಗಳು ಮೂಡಿಬಂದವು. ಇವುಗಳ ಜೊತೆಜೊತೆ ಶಕ್ತಿ ವಿಶಿಷ್ಟಾದ್ವೈತ ಮೊದಲಾದ ಇನ್ನಿತರ ದರ್ಶನಗಳು ಕಾಣಬಂದವು.

ಅಲ್ಲಮಪ್ರಭು ಬಹಳ ಸರಳವಾಗಿರುವ, ಆದರೆ ಅರ್ಥಗ್ರಹಿಕೆಗೆ ಕ್ಲಿಷ್ಟಕರವಾಗಿರುವ ಒಂದು ವಚನದಲ್ಲಿ ವಿಶ್ವದ ಆದಿ, ಸೃಷ್ಟಿಗಳ ರಹಸ್ಯವನ್ನು ಮನನೀಯವಾಗಿ ವಿವರಿಸಿದ್ದಾನೆ:

ಮರದೊಳಗಣ ಪತ್ರ ಫಲಂಗಳು
ಮರ ಕಾಲವಶದಲ್ಲಿ ತೋರುವಂತೆ
ಹರನೊಳಗಣ ಪ್ರಕೃತಿ ಸ್ವಭಾವಂಗಳು
ಹರಭಾವದಿಚ್ಛೆಗೆ ತೋರುವವು.
ಲೀಲೆಯಾದಡೆ ಉಮಾಪತಿ
ಲೀಲೆ ತಪ್ಪದೆಡೆ ಸ್ವಯಂಭು, ಗುಹೇಶ್ವರಾ ವ. ೧೪೫

ಮರದೊಳಗೆ ಎಲೆ, ಹೂವು ಮತ್ತು ಹಣ್ಣುಗಳು ಅಡಗಿವೆ. ಮರ ಕಾಲವಶದಲ್ಲಿ, ಅಂದರೆ ಚಿಗುರುವ, ಹೂಬಿಡುವ ಮತ್ತು ಹಣ್ಣಾಗುವ ಋತುಕಾಲದಲ್ಲಿ ಅವು ಹೊರಹೊಮ್ಮುತ್ತವೆ, ತೋರುತ್ತವೆ. ಅದರಂತೆ ಪರಮಾತ್ಮನಲ್ಲಿ ಅಡಗಿರುವ ಪ್ರಕೃತಿಯ (ಭೌತವಿಶ್ವದ ಉಪಾದಾನ ಕಾರಣವಾದ ಮಹಾಶಕ್ತಿ) ಸ್ವಭಾವಗಳು (ಪ್ರಕೃತಿಯಿಂದ ಹೊರಹೊಮ್ಮುವ ತತ್ವಗಳ ಸಮುದಾಯ) ಹರಭಾವದಿಚ್ಛೆಗೆ (ಹಲವಾಗಬೇಕೆಂಬ ಪ್ರಥಮ ಸಂಕಲ್ಪ) ಅನುಗುಣವಾಗಿ ತೋರುತ್ತವೆ. ಅಂದರೆ ಸಕಲ ಚರಾಚರ ಪ್ರಪಂಚವು ಕಾಣಿಸಿಕೊಳ್ಳುತ್ತದೆ. ಈ ವಿಶ್ವದ ಸೃಷ್ಟಿಯೇ ಪರಮಾತ್ಮನ ಲೀಲೆ. ಅಂದರೆ ನಿರ್ನಿಮಿತ್ತವಾದ ವಿಶ್ವಾಭಿವ್ಯಕ್ತಿ ಆಗಿದೆ. ಈ ಲೀಲೆಗೆ ಆಧಾರ ಅವನೇ ಆಗಿರುವುದರಿಂದ ಅವನು ಉಮಾ, ಅಂದರೆ (ವಿಶ್ವವನ್ನು ಅಭಿವ್ಯಕ್ತಿಗೊಳಿಸುವ ಶಕ್ತಿ) ಪತಿ. ಇನ್ನೊಂದು ಸಂದರ್ಭದಲ್ಲಿ ಸೃಷ್ಟಿಯಾದ ಸಮಸ್ತವೂ ಅವನಲ್ಲಿ ಅಡಗಿಹೋಗುತ್ತದೆ. ಅಂದರೆ ಅವನ ಲೀಲೆ ನಿಲ್ಲುತ್ತದೆ.

ಆಗ ಉಮೆ ಇಲ್ಲ. ಉಮಾಪತಿ ಇಲ್ಲ. ಲೀಲಾ ರಹಿತವಾದ ಈ ಅವಸ್ಥೆಯಲ್ಲಿರುವ ಪರಮಾತ್ಮನಿಗೆ "ಸ್ವಯಂಭು" ಎಂಬ ಅನ್ವರ್ಥಕ ನಾಮವಿದೆ. "ಸ್ವಯಂಭು" ಎಂದರೆ ತಾನೇ ತಾನಾಗಿ ನಿಂದ ನಿಲುವು.

ಈ ವಚನದ ಸಾರಾಂಶ ಇಂತಿದೆ : ವಿಶ್ವಕ್ಕೆ ಕಾರಣವಾದ ಮೂಲತತ್ತ್ವವು ಇರುವುದು ಒಂದೇ ಒಂದು. ಅದು ಸಕಲ ಚೇತನ, ಅಚೇತನ ಯುಕ್ತವಾದ ಎಲ್ಲ ವಸ್ತುವೈವಿಧ್ಯತೆಗೂ ತಾನೇ ಕಾರಣವಾಗುತ್ತದೆ. ಮೂಲಸತ್ಯವನ್ನು ಕೇವಲ ಚೇತನವೆಂದು ಕರೆದರೆ, ಶುದ್ಧಾದ್ವೈತದ ನಿರೂಪಣೆಯಂತೆ ಸಚ್ಚಿದಾನಂದ ರೂಪಿಯಾದ ಬ್ರಹ್ಮನು ನಿರ್ಗುಣನಾಗಿರುವುದು. ಹಾಗೂ ಮಾಯೆಯ ಸಹಾಯದಿಂದ ಜೀವ-ಜಡಯುಕ್ತವಾದ ಈ ವಿಶ್ವವನ್ನು ವಿವರಿಸಬೇಕಾಗುವುದು. ಮೂಲ ಸತ್ಯವನ್ನು ಕೇವಲ ಅಚೇತನ(ಜಡ)ವೆಂದು ಪರಿಗಣಿಸಿದರೆ ಅದರ ಕಾರಣದಿಂದಾಗಿ ಚೇತನಾಚೇತನಾತ್ಮಕವಾದ ಈ ವಿಶ್ವವನ್ನು ವಿವರಿಸಲು ಚಾರ್ವಾಕರೇ ಮೊದಲಾದ ಭೌತಿಕವಾದಿಗಳು ಪ್ರತಿಪಾದಿಸುವಂತೆ ಚೇತನವೆಂಬುದು ಭೌತಿಕವಸ್ತುಗಳ ಒಂದು ಪರಿಣಾಮ ಎಂದು ಒಪ್ಪಿಕೊಳ್ಳಬೇಕಾಗುತ್ತದೆ.

ಆದರೆ ಅಲ್ಲಮ ಈ ಎರಡೂ ಪ್ರಕಾರದ ಪ್ರತಿಪಾದನೆಗಳಿಗೆ ಆಸ್ಪದ ಕೊಡುವುದಿಲ್ಲ. ಅವನ ದೃಷ್ಟಿಯಲ್ಲಿ ಈ ವಿಶ್ವದ ವಿಕಾಸಕ್ಕೆ ಕಾರಣವಾದ ಮೂಲತತ್ತ್ವವು ಕೇವಲ ಚೇತನವೂ ಅಲ್ಲ. ಅಚೇತನವೂ ಅಲ್ಲ; ಅದು ಅಚೇತನವನ್ನು ಅಂತರ್ಗತಗೊಳಿಸಿಕೊಳ್ಳಬಲ್ಲ ಚೇತನ ಅಥವಾ ಶಕ್ತಿಯನ್ನು ತನ್ನಲ್ಲಿ ಅಂತರ್ಗತಗೊಳಿಸಿಕೊಂಡ ಶಿವ. ಇಲ್ಲವೆ ಶಕ್ತಿವಿಶಿಷ್ಟ ಶಿವ. ಆದ್ದರಿಂದ ಅದು ಶಕ್ತಿವಿಶಿಷ್ಟಾದ್ವೈತ. ಆದು ಚೇತನ, ಅಚೇತನ ಎಂಬ ಮಾನವಪ್ರಜ್ಞೆಗೆ ಸಹಜವಾದ ದ್ವಂದ್ವವನ್ನು ಮೀರಿನಿಂತಿರುತ್ತದೆ. ಆದ್ದರಿಂದ ಅದು ಅಲ್ಲಮನಲ್ಲಿ 'ಶೂನ್ಯ' ಎಂಬ ಪರಿಕಲ್ಪನೆಗೆ ಎಡೆಮಾಡಿರಬಹುದು.

ಪ್ರಕೃತಿ ಸ್ವಭಾವಗಳಿಂದ ಕೂಡಿದ ಆ ಭವ್ಯವಿಶ್ವದ ಪರಮಮೂಲನಾದ ಶಿವನ ಸಂಸ್ಪರ್ಶವಿಡಿದು ಈ ವಿಶ್ವರಂಗದಲ್ಲಿ ಮೂರ್ತಿಗೊಂಡ ಜೀವನು ಶರಣ. ಅವನು ಸ್ವರೂಪತಃ ಶಿವಾಂಶಕನಾದುದರಿಂದ ನಿತ್ಯಮುಕ್ತನು. ಆದರೆ ಮಾಯೆಯ ಮಂಜು ಅವನನ್ನು ಆವರಿಸಿದ್ದರಿಂದ ಅವನು ತನ್ನ ಮೂಲಸ್ವರೂಪವನ್ನೇ ಮರೆಯುತ್ತಾನೆ. ಜನನ ಮರಣಗಳೆಂಬ ಭವಚಕ್ರದಲ್ಲಿ ಸಿಲುಕುತ್ತಾನೆ. ತಾನು ಮಾಡಿದ ವಿಷಯಾಸಕ್ತ ಕರ್ಮಗಳಿಂದ ಭವದುಃಖದಿಂದ ಬಳಲುತ್ತಾನೆ. ಸುದೈವದಿಂದ ಶ್ರೀ ಗುರುವಿನ ಸಂಗ ದೊರೆತು ಅವನ ಹಸ್ತದಿಂದ ಪಡೆದ ಲಿಂಗ ಮನವನ್ನು ಇಂಬುಗೊಂಡರೆ ಅವನ ಬಂಧನ ಕಳಚುತ್ತದೆ.

ಮೊದಲಿನಂತೆ ನಿತ್ಯಮುಕ್ತಭಾವವನ್ನು ಹೊಂದುತ್ತಾನೆ. ಕಾಯ ಕರಣಗಳಲ್ಲಿ ಶಿವಪ್ರಭೆ ಹೊಮ್ಮುತ್ತದೆ. ಶಿವಾನಂದದಲ್ಲಿ ನಿತ್ಯ ರಮಿಸುತ್ತಾನೆ. ಈ ಸಂಗತಿಯನ್ನು ಅಲ್ಲಮಪ್ರಭು ತನ್ನ ವಚನವೊಂದರಲ್ಲಿ ಪ್ರಸ್ತಾಪಿಸಿದ್ದಾನೆ:

ಆದಿಯ ಮುಟ್ಟಿ ಬಂದ ಶರಣಂಗೆ ಬಂಧವಿಲ್ಲಯ್ಯ.
ಜನ್ಮಕೋಟಿ ಕ್ರೂರಕರ್ಮವ ಮಾಡಿದವಂಗೆ
ಸೋಂಕಿನ ಸೊಬಗ ಹೇಳಲಿಲ್ಲ. ಕೇಳಲಿಲ್ಲ ಕೇಳಾ
ಅಂಗದಲ್ಲಿ ಲಿಂಗ ಸೋಂಕಿದ ಶರಣಂಗೆ
ಕಾಯದೊಳಗುಳ್ಳ ಕರಣಂಗಳು ಕಳಾಕುಳ ಕಳಾಭೇದವಯ್ಯಾ
ಸುಖದ ಸೋಂಕಿನ ಸೊಬಗ
ಇನ್ನಾರಿಗೆಯೂ ಹೇಳಲಿಲ್ಲ ಗುಹೇಶ್ವರಾ. ವ. ೬೧

ಮನುಷ್ಯನಿಗೆ ಮೂರು ದೇಹಗಳಿವೆ: ಸ್ಥೂಲ, ಸೂಕ್ಷ್ಮ ಮತ್ತು ಕಾರಣ. ಸ್ಥೂಲದೇಹದ ಒಳಗಿರುವ ಶಿವಕಳೆಯ ಕುರುಹು ಇಷ್ಟಲಿಂಗ, ಸೂಕ್ಷ್ಮದೇಹದಲ್ಲಿ ಮೂಡಿದ ಶಿವಕಳೆಯು ಪ್ರಾಣಲಿಂಗ ಹಾಗೂ ಕಾರಣದೇಹದಲ್ಲಿ ಮೂಡಿದ ಶಿವಕಳೆಯು ಭಾವಲಿಂಗ. ದೃಷ್ಟಿಗೋಚರವಾದ ಇಷ್ಟಲಿಂಗವು ಸಾಕಾರ. ಮನೋಗೋಚರವಾದ ಪ್ರಾಣಲಿಂಗವು ಸಾಕಾರ-ನಿರಾಕಾರ ಮತ್ತು ಭಾವಗೋಚರವಾದ ಭಾವಲಿಂಗವು ನಿರಾಕಾರ. ಶರಣನು ಸ್ಥೂಲದೇಹವಿಡಿದು ಇಷ್ಟಲಿಂಗವನ್ನು, ಸೂಕ್ಷ್ಮದೇಹವಿಡಿದು

ಪ್ರಾಣಲಿಂಗವನ್ನು ಹಾಗೂ ಕಾರಣದೇಹವಿಡಿದು ಭಾವಲಿಂಗವನ್ನು ಸಮರ್ಚಿಸುತ್ತಾನೆ. ಕೊನೆಯಲ್ಲಿ ಮೂರೂ ದೇಹಗಳ ಹಾಗೂ ಅಲ್ಲಿರುವ ಶಿವಕಳಾಲಿಂಗಗಳನ್ನು ಮೀರಿ ಅವುಗಳಿಗೆಲ್ಲ ಮೂಲವಾದ ಪರಮಾತ್ಮನಲ್ಲಿ ಶರಣನು ಬಯಲಾಗುತ್ತಾನೆ. ಸಾಧನೆಯ ಈ ಎತ್ತರವನ್ನು ಮುಂದಿನ ವಚನವು ಬಿಂಬಿಸುತ್ತದೆ:

ಅಂಗದ ಮೇಲೆ ಲಿಂಗ ಸಂಬಂಧವಾದ ಬಳಿಕ
ಪ್ರಾಣನ ಮೇಲೆ ಜ್ಞಾನ ನಿರ್ಧಾರವಾಯಿತ್ತು ನೋಡಾ
ಒಳಹೊರಗೆಂಬ ಉಭಯವು ಏಕಾರ್ಥವಾಯಿತ್ತು,
ಗುಹೇಶ್ವರಾ, ನಿಮ್ಮ ನೆರೆದೆನಾಗಿ!

'ಒಳಹೊರಗೆಂಬ ಉಭಯವು ಏಕಾರ್ಥ'ವಾಗಿ ಗುಹೇಶ್ವರನಲ್ಲಿ ನೆರೆದ ಶರಣನ ಲಿಂಗಾರ್ಚನೆಯನ್ನು ಪ್ರಸ್ತಾಪಿಸುತ್ತಾನೆ, ಅಲ್ಲಮ.

ಶರಣ ಲಿಂಗಾರ್ಚನೆಯ ಮಾಡಲೆಂದು ಪುಷ್ಪಕ್ಕೆ ಕರವ ನೀಡಿದಡೆ,
ಆ ಪುಷ್ಪ ನೋಡ ನೋಡ ಕರದೊಳಗಡಗಿತ್ತಲ್ಲಾ!
ಅದು ಓರಗದ ಗೊಬ್ಬರವನ್ನುಣ್ಣದು,
ಕಾಮದ ಕಣ್ಣನರಿಯದು, ನಿದ್ದೆಯ ಕಪ್ಪೊತ್ತದು!
ಅದು ಅರುಣ ಚಂದ್ರರ ತೆರೆಯಲ್ಲಿ ಬೆಳೆಯದು!
ಲಿಂಗವೇದಿಯಾಗಿ ಬೆಳೆದ ಪುಷ್ಪವನು
ಗುಹೇಶ್ವರಾ, ನಿಮ್ಮಶರಣ ಪ್ರಾಣಲಿಂಗಕ್ಕೆ ಪೂಜೆಯ ಮಾಡಿದನು.

ಶರಣನು ತನ್ನ ಅಂತರಂಗದಲ್ಲಿ ಪ್ರಾಣಲಿಂಗಪೂಜೆಗೆ ತೊಡಗಿ ಪುಷ್ಪವನ್ನು ಗ್ರಹಿಸಲೆಂದು ಸುಜ್ಞಾನಹಸ್ತವನ್ನು ಚಾಚುತ್ತಾನೆ. ತತ್‌ಕ್ಷಣವೆ ಅರಳಿದ ಆನಂದವೆಂಬ ಭಕ್ತಿಪುಷ್ಪ ಅವನ ಕೈಯಲ್ಲಿ ಶೋಭಿಸಿತು. ಆ ಪುಷ್ಪ ಮಣ್ಣು- ಗೊಬ್ಬರವನುಂಡು ಸೂರ್ಯ-ಚಂದ್ರರ ಬೆಳಗನ್ನು ಹೀರಿ ಬೆಳೆದ ಸಾಮಾನ್ಯ ಪುಷ್ಪದಂತಹುದಲ್ಲ. ಅದು ಸಕಾಮರ ಕಣ್ಣಿಗೆ ಕಾಣದು. ತಮದ ಕತ್ತಲೆ ಅದನ್ನು ಸ್ಪರ್ಶಿಸಲಾರದು. ಲಿಂಗದ ಅವಿಚ್ಛಿನ್ನ ಅನುಸಂಧಾನದಿಂದ ಬೆಳೆದ ಪುಷ್ಪವದು. ಅದನ್ನು ಶರಣ ತನ್ನ ಪ್ರಾಣಲಿಂಗದ ಸಾನ್ನಿಧ್ಯದಲ್ಲಿ ಅರ್ಪಿಸಿ ಪೂಜೆ ಮಾಡಿದನು. ಆ ಪ್ರಾಣಲಿಂಗದೊಳಗೆ ಬೆರೆತು ಪ್ರಾಣಲಿಂಗವೇ ತಾನಾಗುತ್ತಾನೆ. ಆಗ ಅಲ್ಲಮ ಪ್ರಶ್ನಿಸುತ್ತಾನೆ:

ಮನವೆ ಲಿಂಗವಾದ ಬಳಿಕ ನೆನೆವುದಿನ್ನಾರನಯ್ಯಾ?
ಭಾವವೆ ಐಕ್ಯವಾದ ಬಳಿಕ ಬಯಸುವುದಿನ್ನಾರನಯ್ಯ?
ಭ್ರಮೆಯಳಿದು ನಿಜವು ಸಾಧ್ಯವಾದ ಬಳಿಕ
ಅರಿವುದಿನ್ನಾರನು ಗುಹೇಶ್ವರಾ?

ಮನ - ಭಾವ - ಭ್ರಮೆಗಳೆಲ್ಲ ಲಿಂಗದೊಳಗೆ ಬಯಲಾದುದರಿಂದ ಶರಣನು ನಿರಾಳನು. ಅವನು ಗೈವ ಅಂತಃಪೂಜೆಯ ವರ್ಣನೆ ಮುಂದಿನ ವಚನದಲ್ಲಿದೆ:

ಗಗನವೆ ಗುಂಡಿಗೆ, ಆಕಾಶವೆ ಅಘ್ಘವಣಿ,
ಚಂದ್ರಸೂರ್ಯರಿಬ್ಬರೂ ಪುಷ್ಪ ನೋಡಾ!
ಬ್ರಹ್ಮ ಧೂಪ, ವಿಷ್ಣು ದೀಪ, ರುದ್ರನೋಗರ ಸುಯಿಧಾನ ನೋಡಾ!
ಗುಹೇಶ್ವರಲಿಂಗಕ್ಕೆ ಪೂಜೆ ನೋಡಾ!

ಈ ವಚನದಲ್ಲಿ ಹುದುಗಿರುವ ಅರ್ಥವಲಯಗಳು ನಮ್ಮನ್ನು ಬೆರಗುಗೊಳಿಸುತ್ತವೆ. ಯೌಗಿಕ ಪರಿಭಾಷೆಯಲ್ಲಿ ಸಮರಸಾನುಭವದ ನೆಲೆಯನ್ನು ಈ ವಚನ ಪ್ರತಿಬಿಂಬಿಸಿರುವದಂತು ಸರಿಯೆ. ಬಾಹ್ಯಲೋಕದಲ್ಲಿ ನಡೆಯುತ್ತಿರುವ

ವಿಶ್ವಾರಾಧನೆಯ ಅಮೋಘ ಚಿತ್ರ ನಮ್ಮನ್ನು ಬೆರಗುಗೊಳಿಸುತ್ತದೆ. ಶರಣನು ತನ್ನ ಬಾಹ್ಯ - ಅಭ್ಯಂತರ ಪೂಜಾ ಸಾಧನೆಯ ಮೂಲಕ ಲಿಂಗದಲ್ಲಿ ಬಯಲಾಗುವನು. ಆಗ ಪೂಜೆಯ ಪ್ರಯೋಜನವೇನೆಂದು ಅಲ್ಲಮನ ಪ್ರಶ್ನೆ:

ಅಂಗೈಯೊಳಗಣ ಸಿಂಹಾಸನವಿದೇನೊ?
ಅಂಗೈಯ ಮೇಲಣ ಸಿಂಹಾಸನವೆಂದೇನೊ
ಧೂಪ ದೀಪ ನಿವಾಳಿಯೆಂದೇನೊ?
ಗುಹೇಶ್ವರನೆಂಬ ನಿರಾಳ.

ನಿರಾಳ ಶರಣನು ನಿಂದ ಶಿವಸಮರತಿಯ ನಿಲವನ್ನು ಹಾಗೂ ಆತನು ಅನುಭವಿಸುವ ಸುಖವನ್ನು ಶಬ್ದಗಳಿಂದ ವರ್ಣಿಸಲು ಅಸಾಧ್ಯವೆಂದು ಅಲ್ಲಮ ಹೇಳುತ್ತಾರೆ:

ಕಂಗಳಲ್ಲಿ ನೆಟ್ಟ ಗಾಯವನಾರಿಗೆ ತೋರಬಹುದಯ್ಯ?
ಮನ ಸೋಂಕಿದ ಸುಖದ ಮೊಟ್ಟೆಯ ಕಟ್ಟಬಹುದೆ?
ಆತ ನಿಂದ ಸುಖವಾತಂಗೆ ಸಾಧ್ಯವಾಯಿತ್ತು.
ಆತ ನಿಂದ ನಿಲವನೇನೆಂಬೆ ಗುಹೇಶ್ವರಾ?

ಶರಣನ ಸಾಧನೆಯು ಹೀಗೆ ಅನವರತ ಮುಂದುವರಿಯುತ್ತದೆ. ಲಿಂಗವನ್ನು ಮುಟ್ಟುವ, ಲಿಂಗದೊಳು ನೆಲೆಸುವ ಹಾಗೂ ಲಿಂಗದೊಳು ಬೆರೆತು ಒಂದಾಗುವ ತವಕವು ನೆಮ್ಮದಿಯಾಗಿ ಪರಿಣಮಿಸುತ್ತದೆ. ಆಗ ಶರಣನು ಲಿಂಗವನು ಮುಟ್ಟಿ ಲಿಂಗದೊಳು ನೆಲೆಸಿ ಲಿಂಗದೊಳಗೆ ಬೆರೆತವ. ಅವನೊಳಗೆ ಲಿಂಗವೆಂಬ ಶಬ್ದ ಕೂಡ ನಿಶ್ಶಬ್ದ. ಆದುದರಿಂದ ಅವನ ಮನಸ್ಸು ಪೂರ್ಣವಿಶ್ರಾಂತ. ಇದನ್ನು ಅಲ್ಲಮ ಹೀಗೆ ಅಭಿವ್ಯಕ್ತಿ ಮಾಡುತ್ತಾನೆ:

ಪಂಚಭೂತ ಸಂಗದಿಂದ ಜ್ಯೋತಿಯಾಯಿತ್ತು.
ಪಂಚಭೂತ ಸಂಗದಿಂದ ಕರ್ಪೂರವಾಯಿತ್ತು.
ಈ ಎರಡರ ಸಂಗವೇನಾಯಿತ್ತು ಹೇಳಾ.
ವಾಙ್ಮನೋತೀತ ಗುಹೇಶ್ವರಾ?

ಆಗ ಅಲ್ಲಮಪ್ರಭು ಒಂದು ಪ್ರಶ್ನಾವಳಿಯನ್ನೇ ಪ್ರಸ್ತಾಪಿಸುತ್ತಾನೆ:

ಅರಿವರತು ಬೆರಗು ಹತ್ತಿತ್ತೆಂಬ ಜ್ಞಾನವಿದೇನೋ?
'ನಾಹಂ' ಎಂಬಲ್ಲಿ ತಾನಾರೊ?
'ಕೋಽಹಂ' ಎಂಬಲ್ಲಿ ಮುನ್ನಾರೊ?
'ಪರಬ್ರಹ್ಮ ಸೋಽಹಂ' ಎಂಬಲ್ಲಿ ಮುನ್ನ
(ತಾನೇನಾಗಿದ್ದನೊ?)
'ಚಿದಹಂ' ಎಂಬಲ್ಲಿ ಹಮ್ಮಿನ ಭವಮಾಲೆ ಇದೇನು ಹೇಳಾ?
'ನಿಃಶಬ್ದಂ ಬ್ರಹ್ಮ ಉಚ್ಯತೆ' ಎಂಬ ಶಬ್ದವಿಡಿದು
ಬಳಲುವ ಕಾರಣವಿದೇನು ಹೇಳಾ ಗುಹೇಶ್ವರಾ?

ತನ್ನ ಅನ್ಯಭಾನವೆಲ್ಲವೂ ಅಡಗಿ ಶರಣನು ಚಿದ್ಬಯಲ ಲಿಂಗದಲ್ಲಿ ಬಯಲಾಗುತ್ತಾನೆ. ಅದು ನಿಬ್ಬರಗಿನ ಅವಸ್ಥೆ. ಸ್ವ-ಪರ ಎಂಬ ಕಲ್ಪನೆಗಳು ಇಲ್ಲದ ಸ್ಥಿತಿ. "(ಅದು ನಾನಲ್ಲ)", ಕೋಽಹಂ '(ನಾನು ಯಾರು) ಸೋಽಹಂ' (ಆ ಪರಬ್ರಹ್ಮವೇ ನಾನು) - ಎಂಬ ಈ ಮ..ಗಳು ಸಾಧಕನ ಪ್ರಜ್ಞಾವಿಕಾಸದ ಕ್ರಮಬದ್ಧವಾದ ಮೂರು ಹಂತಗಳು. ಅವುಗಳನ್ನು ದಾಟಿದವ ಶರಣ. ಲಿಂಗೈಕ್ಯ, ನಿರ್ಬಯಲು ಹೊಂದಿದ ಪ್ರಶಾಂತನು. 'ಅಹಂ' ಎಂಬ ಭಾವ ಭವಮಾಲೆಗೆ ಕಾರಣವಾಗಿರುವದರಿಂದ 'ಚಿದಹಂ' (ನಾನು ಕೇವಲ ಚಿದ್ರೂಪನು) ಎಂಬ ಮಾತಿಗೂ ಶಿವಸಾಮರಸ್ಯ ಹೊಂದಿದ ಶರಣನಲ್ಲಿ ಸ್ಥಾನವಿಲ್ಲ. ಯಾಕೆಂದರೆ

'ನಿಶ್ಶಬ್ದಂ ಬ್ರಹ್ಮ ಉಚ್ಯತೆ' (ಬ್ರಹ್ಮವು ನಿಶ್ಶಬ್ದ) ಎಂಬ ಮಾತು ಕೂಡ ಬಳಕೆ ಆಗಿದೆ. ಯಾಕೆಂದರೆ ಆ ನಿಶ್ಶಬ್ದವೇ ತಾನಾದ ಬಳಿಕ 'ನಿಃಶ್ಶಬ್ದ' ಎಂಬ ಶಬ್ದದ ಹಂಗಾದರೂ ಏಕೆ ಬೇಕು? 'ನಿಶ್ಶಬ್ದ' ಎಂಬುದೇ ಒಂದು ಶಬ್ದ. ಅದೂ ಅಡಗಬೇಕು. ಯಾಕೆಂದರೆ ಅರಿತು ಬೆರತ ಬಳಿಕ ಬೆರೆತನು ಎಂದು ಹೇಳಲಾದೀತೆ?

ನಿರ್ಬಯಲ ಬೆರೆದ ಅಲ್ಲಮನು 'ತತ್ - ತ್ವಂ - ಅಸಿ' ಎಂಬ ಮಹಾವಾಕ್ಯದ ಬಗ್ಗೆ ಯಾವ ಧೋರಣೆ ಹೊಂದಿದ್ದಾನೆ ಎಂಬುದು ಕುತೂಹಲಕಾರಿಯಾದ ಪ್ರಸಂಗವಾಗಿದೆ. ಅದನ್ನು ಇಲ್ಲಿ ಗಮನಿಸಬಹುದು.

ಛಾಂದೋಗ್ಯೋಪನಿಷತ್ತಿನಲ್ಲಿ ಸದ್ವಿದ್ಯೆಯ ಸಂದರ್ಭದಲ್ಲಿ ಉದ್ದಾಲಕನು ಶ್ವೇತಕೇತುನಿಗೆ ಹೇಳಿದ "ತತ್ತ್ವಮಸಿ" (೬-೮-೭) ಎಂಬ ಮಾತು ವೇದಾಂತದ 'ಮಹಾವಾಕ್ಯ'ಗಳಲ್ಲಿ ಒಂದು. 'ತತ್ತ್ವಮಸಿ' ಎಂಬ ವಾಕ್ಯದಲ್ಲಿ ತತ್ ('ಅದು', ಸದ್ ಬ್ರಹ್ಮ ಈಶತ್ವ, ಜಗತೋ ಜನ್ಮಾದಿ ಕಾರಣಂ') 'ತ್ವಂ' ('ನೀನು', 'ಪ್ರತ್ಯಗಾತ್ಮಾ ಜೀವ ಶಾರೀರ') ಮತ್ತು 'ಅಸಿ' ('ಆಗಿದ್ದೀಯೆ', ತಾದಾತ್ಮ್ಯದ ಅಥವಾ ಅಭೇದದ ನಿರ್ದೇಶನ) ಎಂಬ ಮೂರು ಪದಗಳಿವೆಯಷ್ಟೆ. ಪದಾರ್ಥಗಳಲ್ಲಿ ಒಮ್ಮತವೇ ವಾಕ್ಯಾರ್ಥವನ್ನು ವಿಚಾರ ಮಾಡುವದರಿಂದ ಒದಗಿದ ನಿಶ್ಚಯದಿಂದಲೇ ಬ್ರಹ್ಮಜ್ಞಾನವಾದೀತು ಎಂದು ಶಂಕರಾಚಾರ್ಯರ ಮಾತಿದೆ.

ಬ್ರಹ್ಮ (ತತ್) ಇರುವವನಾದರೂ ಇಂದ್ರಿಯ - ಮಾನಸ ಪ್ರತ್ಯಕ್ಷ, ಅನುಮಾನಾದಿಗಳಿಗೆ ಬರುವವನಲ್ಲ; ಅವನು ವ್ಯವಹಾರ ಜಗತ್ತಿನ ಎಲ್ಲ ಪ್ರಕಾರಗಳಿಂದಲೂ ಬೇರೆಯಾದವನಲ್ಲವೆ? ಆದರೆ ಅನುಭವಕ್ಕೆ ಬರುವವನು- 'ಅನುಭವಾತ್ಮಕಃ!' ಬ್ರಹ್ಮಜ್ಞಾನದ ಫಲವೇ ನೇರಾದ ಅನುಭವ. ಈ ಅನುಭವದ ಸ್ವರೂಪವನ್ನು ತಿಳಿಸುವುದೇ ವಾಕ್ಯದ ಪ್ರಯೋಜನ. ಇನ್ನು, ವಾಕ್ಯವನ್ನು ಕೇಳಿ ವಿಚಾರ ಮಾಡತೊಡಗುವವನೇ 'ತ್ವಂ' (ಶ್ವೇತಾ). ಅವನು ಆತ್ಮದ ಸ್ವರೂಪವನ್ನು ತಿಳಿಯಲಾರಂಭಿಸಿ ದೇಹವೇ ಆತ್ಮನಿರಬಹುದು. ಆತ್ಮನೆಂದರೆ ಇಂದ್ರಿಯಗಳಿರಬಹುದು. ಮನಸ್ಸಿರಬಹುದು. ಹೀಗೆ ಒಳಗೆ ಸರಿಯುತ್ತ ಸರಿಯುತ್ತ ಚೈತನ್ಯವೇ ತನ್ನ ಆತ್ಮವೆಂಬ ನಿಶ್ಚಯಕ್ಕೆ ಬರುವನು. ಅಂದರೆ 'ತ್ವಂ' ಎನ್ನುವಾಗ ಸಾಮಾನ್ಯವಾಗಿ ತಿಳಿಯುವಂತೆ ದೇಹಾದಿ ಯುಕ್ತನಾಗಿರುವ ಶರೀರ ವ್ಯಕ್ತಿಯೆಂದು ತಿಳಿಯದೆ, ದೇಹ - ಇಂದ್ರಿಯ - ಮನೋಬುದ್ಧಿ - ಸಂಘಾತದಿಂದ ಮೇಲೆದ್ದು ತಾನು ಆತ್ಮ, ಚೈತನ್ಯಮಾತ್ರ ಸ್ವರೂಪ ಎಂದು ತಿಳಿದುಕೊಳ್ಳುವುದು. ಈಗ 'ತತ್ತ್ವಮಸಿ' ವಾಕ್ಯಾರ್ಥ. ಆತ್ಮವೇ ಬ್ರಹ್ಮ ಎಂಬುದು; ಬೇರೆ ಮಾತುಗಳಲ್ಲಿ ಹೇಳುವುದಾದರೆ 'ಇದೇ ಜೀವನೆಂಬುವನ ಪಾರಮಾರ್ಥಿಕ ಸ್ವರೂಪ'. ಪಾರಮಾರ್ಥಿಕ ಸ್ವರೂಪವೆಂದರೆ ಶರೀರಾಭಿಮಾನವನ್ನು ಬಿಟ್ಟು ಮೇಲೆದ್ದ ಮೇಲೆ ತನ್ನ ರೂಪದಿಂದಲೇ ಸಿದ್ಧವಾಗುವುದೆಂದು ಶಂಕರಾಚಾರ್ಯರ ನಿರೂಪಣೆ ಇದೆ.

'ತತ್ತ್ವಮಸಿ' ಮತ್ತು 'ಅಹಂ ಬ್ರಹ್ಮಾಸ್ಮಿ' - ಈ ಎರಡು ಮಹಾವಾಕ್ಯಗಳಿಗೆ ಭಾರತೀಯ ದರ್ಶನದಲ್ಲಿ ಅತ್ಯಧಿಕ ಪ್ರಾಶಸ್ತ್ಯ ದೊರೆತಿರುವದು. ಅವುಗಳ ಬಗ್ಗೆ ಆಸಕ್ತಿಪೂರ್ಣ ಅಧ್ಯಯನಗಳು ನಡೆಯುತ್ತಲಿವೆ, ಇಂದಿಗೂ. ಆದರೆ ಅಲ್ಲಮಪ್ರಭುವಿಗೆ 'ತತ್ತ್ವಮಸಿ' ಮಹಾಕಾವ್ಯದ ಪರ್ಯಾಪ್ತತೆಯ ಬಗ್ಗೆ ಆತಂಕ. ಯಾಕೆಂದರೆ ಈ ಬ್ರಹ್ಮಪರ ನುಡಿ ಒಂದು ಹಂತದವರೆಗೆ ಅರ್ಥಪೂರ್ಣ. ಶರಣನು ಪರವಸ್ತುವಿನ ಚಿದ್ಘನ ಬಯಲನ್ನು ಸೇರಿದಾಗ ಇಂಥ ಮಹಾವಾಕ್ಯಗಳೆಲ್ಲ ಹುಸಿಯಾಗುತ್ತವೆ ಎಂದು ಅಲ್ಲಮ ತರ್ಕಮಾಡುತ್ತಾನೆ. ಈ ಮಹಾವಾಕ್ಯವನ್ನು ಹೊರಹೊರಗೆ ಶಾಬ್ದಿಕವಾಗಿ ಬಳಸುವ, ಬರಿದೆ ಪಠಿಸುವ ಹಿರಿಯರ ಬದುಕಿನ ಬಗೆಯನ್ನು ವಿಡಂಬಿಸುತ್ತಾನೆ. ಅಲ್ಲಮನ ಈ ವಿಶ್ಲೇಷಣೆ ಉಜ್ಜ್ವಲವಾಗಿದೆ:

ನಿತ್ಯ ನಿರಂಜನ ತಾನೆಂದರಿಯದೆ, 'ತತ್ತ್ವಮಸಿ' ಎಂದು
ಹೊರಗನೆ ಬಳಸಿ ಸತ್ತಿತ್ತಲ್ಲಾ ಜಗವೆಲ್ಲಾ ನಾಯ ಸಾವ!
ತಮ್ಮ ತಾವರಿಯದೆ,
ಸತ್ತವರ ಹೆಸರ ಪತ್ರವನೋದಿದಡೆ ಎತ್ತಣ ಮುಕ್ತಿ ಗುಹೇಶ್ವರಾ? ವ. ೬೪೮

'ತತ್' ('ಅದು') ಎಂಬ ತಾತ್ಕಾಲಿಕ ಪ್ರತ್ಯೇಕತೆಯನ್ನು ಅಲ್ಲಮಪ್ರಭು ಒಪ್ಪುವಂತೆ ತೋರುವುದಿಲ್ಲ. ಅಲ್ಲಿ ಅವನಿಗ ದ್ವೈತಸ್ಪರ್ಶ ಕಂಡಂತಿದೆ. 'ಸ್ವ-ಪರ' ಎಂಬ ಭೇದ ಇರಕೂಡದು. ತಾನು ಗುಹೇಶ್ವರಲಿಂಗವೆಂಬ ವ್ಯತ್ಯಾಸವನ್ನು ಅಳಿಯುವುದೆ ಶರಣನ ಪರಮ ಆದರ್ಶ. 'ತತ್' ಎಂಬುದು ಹೊರಗು ಮಾತ್ರ. ಈ ಬಾಹ್ಯವನ್ನೇ ಬರಿದೆ ಪಠಿಸಿ ಅದನ್ನೇ ಸರ್ವಸ್ವವೆಂದು ಭಾವಿಸಿ ಬದುಕುವ ಜಗವು ನಾಯ ಸಾವ ಸತ್ತೀತೆಂದು ಅಲ್ಲಮನ ವಿಡಂಬನೆ.

'ತತ್ತ್ವಮಸಿ' ವಾಕ್ಯದ ತತ್ (ಅದು) ಬಗ್ಗೆ ಪದ ಪ್ರಯೋಗದಲ್ಲಿ 'ಅನುಗ್ರಹ ಬುದ್ಧಿ'ಯ ಸೂಕ್ಷ್ಮ ಅಹಮಿಕೆಯನ್ನು ಅಲ್ಲಮಪ್ರಭು ಕಂಡಿರಬಹುದೇನೊ!

'ತತ್ತ್ವಮಸಿ' ಮಹಾವಾಕ್ಯದ ಇತಿಮಿತಿಯನ್ನು ಸಹ ಅಲ್ಲಮ ಸ್ಪಷ್ಟವಾಗಿ ಗುರುತಿಸಿದ್ದಾನೆ, ಈ ವಚನದಲ್ಲಿ:

ಉಪಮೆ ಉಪಮಿಸಲರಿಯದೆ ಉಪಮಾತೀತವೆನುತ್ತಿದ್ದಿತ್ತು.
ಅರಿವು, ಅರಿವಿನ ಮರೆಯಲಿರ್ದುದನರಿಯಲರಿಯದೆ,
ಪರಾಪರವೆಂದು ನುಡಿಯುತ್ತಿದ್ದಿತ್ತು.
ಧ್ಯಾನ ಧ್ಯಾನಿಸಲರಿಯದೆ, ಧ್ಯಾನ ರೂಪಾತೀತನೆಂದು, ತದ್ಧ್ಯಾನಗೊಂಡಿತ್ತು.
ಜ್ಞಾತೃ ಜ್ಞಾನ ಜ್ಞೇಯಕ್ಕೆ ಇನ್ನಾವ ಜ್ಞಾನವೋ?
ವೇದವಿಜ್ಞಾನವೆಂದುದಾಗಿ, 'ತತ್ತ್ವಮಸಿ' ವಾಕ್ಯಂಗಳೆಲ್ಲವೂ
ಹುಸಿಯಾಗಿ ಹೋದವು.
ಸಚ್ಚಿದಾನಂದವೆಂದುದಾಗಿ
ದ್ವೈತಾದ್ವೈತಗಳೆಲ್ಲ ಸಂಹಾರವಾಗಿ ಹೋದವು.
ಬಂದೂ ಬಾರದು, ನಿಂದ ನಿರಾಳ ಗುಹೇಶ್ವರ. ವ. ೬೫೨

ಉಪಮೆಯ ಕಾರ್ಯಕ್ಷೇತ್ರ ಕಾಲ, ದೇಶ, ಗುಣ ಮತ್ತು ಕ್ರಿಯೆ -ಇವುಗಳಿಗೆ ಮಾತ್ರ ಸೀಮಿತ. ಚಿದ್ಘನ ಬಯಲು ಇವುಗಳನ್ನೆಲ್ಲ ಮೀರಿದ್ದು. ಆದ್ದರಿಂದ ಅದನ್ನು ಉಪಮೆ ಉಪಮಿಸಲರಿಯದೇ ಉಪಮಾತೀತವೆನ್ನುತ್ತಿದ್ದಿತ್ತು.

ಬುದ್ಧಿವೃತ್ತಿಯ ಅರಿವು ಸಾಂತ, ಅದೇನಿದ್ದರೂ ತನ್ನೆದುರು ಹರಡಿದ ಅಂತರ್ಬಾಹ್ಯ ಜಗತ್ತನ್ನು ಮಾತ್ರ ಅರಿಯಬಲ್ಲದು. ಚಿದ್ಘನ ಬಯಲು ವಿಶ್ವವನ್ನು ಅರಿವ ಅರಿವಿನ ಹಿಂದೆ ಇರುವ ಮಹಾಅರಿವು. ಅದನ್ನು ಬುದ್ಧಿವೃತ್ತಿಯ ಅರಿವು ಅರಿಯಲು ಸಮರ್ಥವಾಗಿಲ್ಲ. ಆದ್ದರಿಂದ ಅದು ಪರಾತ್ಪರ.

ಮನಸ್ಸು ತನಗೆ ಗ್ರಾಹ್ಯವಾದುದನ್ನು ಮಾತ್ರ ಧ್ಯಾನಿಸಬಲ್ಲದು. ಆದರೆ ನಿರಾಳವಸ್ತುವಿಗೆ ಯಾವ ಪ್ರಕಾರದ ರೂಪವೂ ಇರುವುದಿಲ್ಲ. ಅದು ರೂಪಾತೀತ. ಅದನ್ನು ಮನಸ್ಸು ಧ್ಯಾನಿಸಲು ಸಮರ್ಥವಾಗಿರುವುದಿಲ್ಲ. ಆದ್ದರಿಂದ ನಿರಾಳವನ್ನು ಧ್ಯಾನಿಸಲು ಪ್ರಯತ್ನ ಮಾಡಿದರೆ ಧ್ಯಾನಕ್ರಿಯೆಯು ಅಡಗುತ್ತದೆ.

ವಿಶ್ವದ ಎಲ್ಲ ಜ್ಞಾನವೂ ಜ್ಞಾತೃ-ಜ್ಞಾನ-ಜ್ಞೇಯ -ಈ ಜ್ಞಾನ ತ್ರಿಪುಟಿಯ ಮೂಲಕ ನಡೆಯುತ್ತದೆ. ಆದರೆ ಪರವಸ್ತು ವಿಶ್ವಾತೀತವಾದ ಬರಿ ಬಟ್ಟ ಬಯಲು. ಅದನ್ನು ಜ್ಞಾನ ತ್ರಿಪುಟಿ ಗ್ರಹಿಸಲಾರದು.

ವೇದವು 'ವಿಜ್ಞಾನಮಾನಂದಂ ಬ್ರಹ್ಮ' ಎಂದು ಘೋಷಿಸುತ್ತದೆ. 'ತತ್ತ್ವಮಸಿ' ಮುಂತಾದ ಮಹಾವಾಕ್ಯಗಳು ಒಂದು ಹಂತದವರೆಗೆ ಅರ್ಥಪೂರ್ಣ. ಯಾಕೆಂದರೆ ಈ ವಾಕ್ಯವು ನಾನಾರೆಂದು ಕೇಳಿದವನ ಭ್ರಾಂತಿಯನ್ನು 'ತತ್ತ್ವಮಸಿ' (ಆ ಬ್ರಹ್ಮವೇ ನೀನು ಇರುವೆ) ಎಂದು ಸಮಾಧಾನಪಡಿಸುವುದು; ಆದರೆ ಸ್ವರೂಪ ಸ್ಥಿತಿಯನ್ನು ವಿವರಿಸುವುದಿಲ್ಲ. ಶರಣನು ಸೇರುವುದು ಪರವಸ್ತುವಿನ ಚಿದ್ಘನ ಬಯಲನ್ನು. ಅಲ್ಲಿ ಈ ವಾಕ್ಯಗಳೆಲ್ಲ ಹುಸಿ ಎನಿಸುತ್ತವೆ.

ಪರವಸ್ತು ಸಚ್ಚಿದಾನಂದವಾಗಿರುವದರಿಂದ ಅದು ಬರೀ ಅರಿವಿನ ಅಸ್ತಿತ್ವ. ಅಲ್ಲಿ ಎರಡು ಎಂದು ಹೇಳುವ ದ್ವೈತಭಾವಕ್ಕೆ, ಒಂದು ಎಂದು ಹೇಳುವ ಅದ್ವೈತಭಾವಕ್ಕೆ ಇಂಬಿಲ್ಲ. ದ್ವೈತಾದ್ವೈತಿಗಳೆಲ್ಲ ಸಂಹಾರವಾಗಿ ಹೋದರು. ಆದ್ದರಿಂದ ಪರವಸ್ತು ಭಾವದ ಅಳವಿಗೆ ಬಾರದು. ಭಾವ ನಿರ್ಭಾವವಾಗಬೇಕು. ಆಗ ಅಲ್ಲಿ ನಿಂದುದೆ ನಿರಾಳ ಗುಹೇಶ್ವರಾ.

'ತತ್ವಮಸಿ' ಮಹಾವಾಕ್ಯದ ಇತಿ-ಮಿತಿಗಳನ್ನು ಸ್ಪಷ್ಟಪಡಿಸಿದ ಅಲ್ಲಮಪ್ರಭು ಅದಕ್ಕೆ ತನ್ನದೇ ಅರ್ಥವನ್ನು ಮಾಡಿದ್ದಾನೆ:

ಇಂತೀ ಅಂಗ ತತ್ವವಿಪ್ಪತ್ತೈದು ಲಿಂಗತತ್ವ ಹನ್ನೊಂದು
ಇಂತೀ ಉಭಯತತ್ವ ಏಕಾರ್ಥವಾಗಿ
ಸರ್ವಶೂನ್ಯವನೆಯ್ದಿದ ಪರಿಕ್ರಮದ ನಿರ್ಣಯದ ಬೆಡಗು
ತತ್ವಮಸ್ಯಾದಿ ವಾಕ್ಯಾರ್ಥಂಗಳಲ್ಲಿ ಕಾಣಲಾಯಿತ್ತು.
ಅದೆಂತೆಂದಡೆ:
'ತತ್' ಪದವೆ ಲಿಂಗ, 'ತ್ವಂ' ಪದವೆ ಅಂಗ,
ಈ ಎರಡರ ಐಕ್ಯವೇ 'ಅಸಿ' ಎಂಬುದಾಗಿ,
ಇಂತು ಸಕಲನಾಗಬಲ್ಲ, ಸಕಲ ನಿಃಕಲನಾಗಬಲ್ಲ,
ಸಕಲ ನಿಃಕಲಾತೀತನಾಗಿ ಏನೂ ಇಲ್ಲದ
(ಮಹಾ ಘನ ಶೂನ್ಯ ಬ್ರಹ್ಮನಾಗಿ)
ಇರಬಲ್ಲನಯ್ಯ ನಮ್ಮ ಗುಹೇಶ್ವರಲಿಂಗವು. (ವ. ೧೩೭೦)

ವೇದಾಂತದ ಮಹಾವಾಕ್ಯವನ್ನು ಕುರಿತ ಅಲ್ಲಮನ ಅನಿಸಿಕೆಗಳು ಪ್ರಚೋದಕವಾಗಿವೆ, ಪ್ರಜ್ವಲವಾಗಿವೆ.

ವಚನ ಸಾಹಿತ್ಯದ ಎರಡನೆಯ ಘಟ್ಟ : ರೂಪರೇಷೆಗಳು

✍ ಡಾ. ಎಸ್. ವಿದ್ಯಾಶಂಕರ

ವಚನ ಸಾಹಿತ್ಯದ ಮೊದಲ ಘಟ್ಟ ಬಸವಾದಿ ಪ್ರಮಥರು ಹನ್ನೆರಡನೆಯ ಶತಮಾನದಲ್ಲಿ ವಿಶಿಷ್ಟಸಾಹಿತ್ಯ ಪ್ರಕಾರವಾದ ವಚನ ಸಾಹಿತ್ಯದ ಹುಟ್ಟು-ಬೆಳವಣಿಗೆಗೆ ಕಾರಣವಾದುದು ಸೃಜನಶೀಲ ಪ್ರತಿಭೆ ಕ್ರಿಯಾತ್ಮಕವಾಗಿ ಸಾಹಿತ್ಯ-ಸಮಾಜ-ಧರ್ಮಗಳಿಗೆ ಸಂಬಂಧಿಸಿದಂತೆ ಕೆಲಸಮಾಡಿದುದನ್ನು ಮೊದಲಘಟ್ಟದಲ್ಲಿ ಗುರುತಿಸುತ್ತೇವೆ. ಈ ಸೃಜನಾತ್ಮಕ ಪ್ರತಿಭೆ ೧೨ನೇ ಶತಮಾನದ ಕೊನೆಕೊನೆಗೆ ಕಲ್ಯಾಣದಲ್ಲಿ ನಡೆದ ಗಲಭೆಯ ವಾತಾವರಣದಲ್ಲಿ ಇದ್ದಕ್ಕಿದ್ದ ಹಾಗೆ ಸ್ತಬ್ಧವಾದುದು ಮತ್ತೆ ಕ್ರಿಯಾತ್ಮಕವಾಗಿ ತೊಡಗಿಕೊಂಡುದು ಹದಿನೈದನೆಯ ಶತಮಾನದ ನಂತರ. ವಿಜಯನಗರ ಸ್ಥಾಪನೆಯೊಂದಿಗೆ ಹಿಂದೂ ಸಾಮ್ರಾಜ್ಯದ ಪರಿಕಲ್ಪನೆ ಸಾಕಾರಗೊಂಡಂತೆ ಪ್ರಾಚೀನ ಸಂಸ್ಕೃತ ಸಾಹಿತ್ಯ ಹಾಗೂ ೧೨ನೇ ಶತಮಾನದ ವಚನ ಸಾಹಿತ್ಯದ ಪುನರುಜ್ಜೀವನದ ಕನಸು ನನಸಾಗತೊಡಗಿದ್ದು ವಿಜಯನಗರದ ಅರಸು ಎರಡನೆ ದೇವರಾಯನ ಪ್ರಧಾನಿ ಲಕ್ಕಣ್ಣ ದಂಡೇಶ ಹಾಗೂ ಆ ಕಾಲದಲ್ಲಿ ಪ್ರಭಾವಶಾಲಿಗಳಾಗಿದ್ದ ನೂರೊಂದು ವಿರಕ್ತರ ಮೂಲಕ. ಈ ಕಾಲದ ಸಾಹಿತ್ಯಕ ಚಟುವಟಿಕೆಗಳನ್ನು ವಚನ ಸಾಹಿತ್ಯದ ಎರಡನೆ ಘಟ್ಟವೆಂದು ಗುರುತಿಸಲಾಗಿದೆ. ಈ ಎರಡನೆ ಘಟ್ಟದಲ್ಲಿ ೧೨ನೇ ಶತಮಾನದಲ್ಲಿ ಬಸವಾದಿ ಶರಣರು ನಡೆಸಿದ ಸಮಾಜೋಧಾರ್ಮಿಕ ಚಳುವಳಿಯ ಫಲವಾದ ವಚನ ಸಾಹಿತ್ಯವನ್ನು ಸಂರಕ್ಷಿಸುವ, ತಮ್ಮ ತಮ್ಮ ಅನುಭಾವದ ಹಿನ್ನೆಲೆಯಲ್ಲಿ ಬಸವಾದಿ ಶರಣರ ವಚನಗಳನ್ನು ಸ್ಥಲಾನುಸಾರಿಯಾಗಿ ವಿಂಗಡಿಸಿ ಸಂಕಲಿಸುವ; ಅಗತ್ಯತೆಗೆ ಅನುಗುಣವಾಗಿ ವಚನಗಳಿಗೆ ಟೀಕೆ ಅಥವಾ ವ್ಯಾಖ್ಯಾನ ಬರೆಯುವ; ಹನ್ನೆರಡನೆ ಶತಮಾನದ ಶರಣರ ಪ್ರತ್ಯಭಿಜ್ಞಾನ ದರ್ಶನವನ್ನು ಶೂನ್ಯಸಂಪಾದನೆಗಳ ಪ್ರಸಂಗಗಳ ಮೂಲಕ ಕಂಡರಿಸುವುದು; ಹನ್ನೆರಡನೆಯ ಶತಮಾನದ ವಚನ ರಚನೆಯ ಸ್ವತಂತ್ರ ಪ್ರವೃತ್ತಿಯನ್ನು ಮುಂದುವರಿಸುವ ಬೃಹತ್ತಾದ ಸಾಮೂಹಿಕ ಸಾಹಿತ್ಯ ಸಂಬಂಧೀ ಚಟುವಟಿಕೆಗಳು ನಡೆದುವು.

ಎರಡನೆ ಘಟ್ಟದ ಚಟುವಟಿಕೆಗಳ ಪೂರ್ಣಸ್ವರೂಪದ ಅರಿವಾಗುವುದು ೧೨ನೇ ಶತಮಾನದ ಮೊದಲನೆ ಘಟ್ಟದ ಚಟುವಟಿಕೆಗಳೊಂದಿಗೆ ನಾವು ತುಲನೆಮಾಡುವ ಮೂಲಕ. ಸ್ಥೂಲವಾಗಿ ಹೇಳುವುದಾದರೆ, ಮೊದಲನೆಯದು ಸೃಜನಶೀಲ ಪ್ರತಿಭೆಯಾದರೆ, ಎರಡನೆಯದು ವಿಮರ್ಶನ ಪ್ರತಿಭೆ. ಹಾಗೆಂದಾಗ ಎರಡನೆಯದರಲ್ಲಿ ಸೃಜನಶೀಲ ಪ್ರತಿಭೆ ಇಲ್ಲವೆಂದಾಗಲೀ ಮೊದಲನೆಯದರಲ್ಲಿ ವಿಮರ್ಶನ ಪ್ರತಿಭೆ ಇಲ್ಲವೆಂದಾಗಲೀ ಅರ್ಥವಲ್ಲ. ಈ ಎರಡೂ ಘಟ್ಟಗಳ ಕಾರ್ಯವ್ಯಾಪ್ತಿಯನ್ನು ಲಕ್ಷ್ಯದಲ್ಲಿಟ್ಟುಕೊಂಡು ಅವುಗಳ ವೈಲಕ್ಷಣ್ಯಗಳನ್ನು ಗುರುತಿಸುವಾಗ ಅಧ್ಯಯನ ಸೌಲಭ್ಯಕ್ಕಾಗಿ ಹೀಗೆ ಗೆರೆ ಎಳೆಯಬಹುದಷ್ಟೆ. ವಚನ ಸಾಹಿತ್ಯವನ್ನು ವೀರಶೈವ ಧರ್ಮದ ಹೊರಗಿಟ್ಟು ಶುದ್ಧ ಸಾಹಿತ್ಯವಾಗಿ ನೋಡುವುದು ಬಹುಶಃ ಸಾಧ್ಯವಾಗಲಾರದು. ವಚನ ಸಾಹಿತ್ಯ ವೀರಶೈವ ಧರ್ಮದೊಡನೆ ತನ್ನನ್ನು ಗುರುತಿಸಿಕೊಂಡಿದೆ. ಜೇಡರ ದಾಸಿಮಯ್ಯ, ಅಕ್ಕಮಹಾದೇವಿ ಮೊದಲಾದ ಬೆರಳೆಣಿಕೆಯ ವಚನಕಾರರನ್ನು ಹೊರತುಪಡಿಸಿದರೆ ಮಿಕ್ಕವರೆಲ್ಲ ಒಂದಲ್ಲಾ ಒಂದು ನೆಲೆಯಲ್ಲಿ ವೀರಶೈವ ಮತವನ್ನು ಅದರ ತಾತ್ವಿಕ ಹಿನ್ನೆಲೆಯಲ್ಲಿ ವಿವರಿಸುವ ಪ್ರಯತ್ನದಲ್ಲಿ ನಿರತರಾಗಿರುವರು. ಇದು ಇನ್ನಷ್ಟು ನಿಚ್ಚಳವಾಗಿ, ಕ್ರಿಯಾತ್ಮಕವಾಗಿ ಕಾಣಬರುವುದು ವಚನ ಸಾಹಿತ್ಯದ ಎರಡನೆ ಘಟ್ಟದಲ್ಲಿ. ಈ ಘಟ್ಟದ ಸೃಜನೇತರ ಹಾಗೂ ಸೃಜನಾತ್ಮಕ ಚಟುವಟಿಕೆಗಳಲ್ಲಿ ಬಹುವಾಗಿ ಪಾಲ್ಗೊಂಡಿರುವವರು ಮಠಾಧಿಪತಿಗಳು- ವಿಶೇಷವಾಗಿ ವಿರಕ್ತಪರಂಪರೆಗೆ ಸೇರಿದವರು. ಇವರ ಆಸಕ್ತಿಯ ಕೇಂದ್ರ ವೀರಶೈವದ ಪುನರುಜ್ಜೀವನದ ಕಡೆಗೇ ಇದ್ದುದರಿಂದ ೧೨ನೇ ಶತಮಾನದ ವಚನ ಸಾಹಿತ್ಯ ರಕ್ಷಣೆಯ ಜವಾಬ್ದಾರಿಯನ್ನು

ಹೊತ್ತದ್ದಲ್ಲದೆ ಬೇರೆ ಬೇರೆ ನೆಲೆಗಳಲ್ಲಿ ವಚನಗಳನ್ನು ಉಳಿಸಿಕೊಳ್ಳುವ ಪ್ರಕ್ರಿಯೆ ಕಾಣಿಸುತ್ತದೆ. (ಇದು ಶೂನ್ಯಸಂಪಾದನೆಗಳಂತಹ ಸಂಕಲನಗಳಲ್ಲಿ, ಸ್ಥಲಾನುಸಾರಿ ವಚನ ಸಂಕಲನಗಳಲ್ಲಿ ಕಂಡುಬರುತ್ತದೆ).

ಒಂದು ಕೃತಿಯ ಅರ್ಥ, ಭಾವ ಹಾಗೂ ಉದ್ದೇಶಗಳನ್ನು ವಿವರಿಸಿ ಹೇಳಲು ಸಂಸ್ಕೃತ ಸಾಹಿತ್ಯದಲ್ಲಿ ವ್ಯಾಖ್ಯಾನ, ಭಾಷ್ಯ, ವಾರ್ತಿಕ, ಅಧಿಕರಣ, ಕೃತಕ, ತಾತ್ಪರ್ಯ ನಿರ್ಣಯಗಳೆಂಬ ಬೇರೆ ಬೇರೆ ಪ್ರಕಾರಗಳನ್ನು ಕಲ್ಪಿಸಿಕೊಳ್ಳಲಾಗಿದೆ. ಆದರೆ ಎರಡನೆ ಘಟ್ಟದ ವೀರಶೈವ ವ್ಯಾಖ್ಯಾನಕಾರರು ಟೀಕೆ, ವ್ಯಾಖ್ಯಾನ, ಟಿಪ್ಪಣಿ, ಸಾರಾರ್ಥ, ಸಾರಾಮೃತ, ವಾಚ್ಯ, ವಚನಾರ್ಥ, ನುಡಿ-ಹೀಗೆ ಬೇರೆ ಬೇರೆ ಪ್ರಕಾರಗಳನ್ನು ಹೆಸರಿಸಿದ್ದರೆ ಅವೆಲ್ಲವೂ 'ಟೀಕು' ಪದಕ್ಕೆ ಪರ್ಯಾಯವಾಗಿಯೇ ಬಳಕೆಗೊಂಡಿವೆ. ಈ 'ಟೀಕು' ಅಥವಾ ವ್ಯಾಖ್ಯಾನ ಸಾಹಿತ್ಯ ಒಂದು ಪರಂಪರೆಯಾಗಿ ಎರಡನೆ ಘಟ್ಟದಲ್ಲಿ ಕಾಣಿಸಿಕೊಳ್ಳುತ್ತದೆ. ಸರಳವಾಗಿ ವಚನಗಳನ್ನು ಅರ್ಥೈಸಬಹುದಾದ ಕ್ರಮವನ್ನು ವಿವರಿಸುವುದು ಒಂದು ಬಗೆಯದಾದರೆ, ವಿಶಿಷ್ಟವಾದ ತಾತ್ವಿಕ ಅರ್ಥವಿಟ್ಟು ಹೇಳುವುದು ಇನ್ನೊಂದು ಬಗೆಯದು; ಮೂರನೆಯದು ವೀರಶೈವ ವಚನ ಪ್ರಕಾರವಾದ ಬೆಡಗಿನ ವಚನಗಳನ್ನು ವ್ಯಾಖ್ಯಾನಿಸುವ ಕ್ರಮ.

ವೀರಶೈವ ಪುನರುಜ್ಜೀವನದ ಹಿನ್ನೆಲೆಯಲ್ಲಿ ಎರಡನೆಯ ಘಟ್ಟದ ಕಾರ್ಯಚಟುವಟಿಕೆಗಳು ಸಮಾಜಮುಖಿಯಾಗುವ ಬದಲು ಧರ್ಮಮುಖಿಯಾಗುವ ವೈಲಕ್ಷಣ್ಯವನ್ನು ನಾವಿಲ್ಲಿ ಗುರುತಿಸಬಹುದು. ಮೊದಲನೆ ಘಟ್ಟದಲ್ಲಿ ಶರಣರ ಚಿಂತನೆ ಸಮಾಜಮುಖಿಯಾದದ್ದು ನಿಜ. ಆದರೆ, ಎರಡನೆಯ ಘಟ್ಟದ ತುರ್ತು ಹಾಗೂ ಒತ್ತಡಗಳು ಆ ಕಾಲದ ಚಟುವಟಿಕೆಗಳನ್ನು ನಿರ್ದೇಶಿಸಿವೆಯೆಂದರೆ ತಪ್ಪಾಗಲಾರದು. ಮತೀಯ ವಾತಾವರಣದಲ್ಲಿ ವಿರಕ್ತ ಪರಂಪರೆಯವರು ಸೃಷ್ಟಿಸಿದ ಸೃಜನ ಹಾಗೂ ಸೃಜನೇತರ ಸಾಹಿತ್ಯದಲ್ಲಿ ವೀರಶೈವದ ತಾತ್ವಿಕ ನೆಲೆಯು ಪ್ರಧಾನವಾಗಿದ್ದರೆ, ಅದು ಆ ಕಾಲದ ತುಡಿತದ ಸಮಷ್ಠಿರೂಪವೆಂದು ನಾವು ಗ್ರಹಿಸಬೇಕಾಗುತ್ತದೆ. ಈ ಕಾಲಮಾನದಲ್ಲಿ ಮಹಿಳೆಯರು ಗೌಣವಾದರೆಂದೂ, ಸಾಮಾಜಿಕ ವೈರುದ್ಧಗಳಿಗೆ ಪ್ರತಿಕ್ರಿಯಾತ್ಮಕವಾಗಿ ಪ್ರತಿಭಟನೆ ಕಾಣುತ್ತಿಲ್ಲವೆಂದೂ, ಬಸವಾದಿ ಶರಣರ ರಚನೆಯಲ್ಲಿ ಕಾಣಬರುವ ಮಾನವೀಯತೆ, ಚಿಂತನಶೀಲತೆ, ಆರ್ದ್ರತೆ ಎರಡನೆಯ ಘಟ್ಟದ ವಚನಕಾರರ ವಚನಗಳಲ್ಲಿ ಕಾಣಬರುತ್ತಿಲ್ಲವೆಂದು ಹೊರಿಸುವ ಆರೋಪ ಪೂರ್ಣಸತ್ಯವಲ್ಲ. ಪರಂಪರೆ ರಾಚಿಹಾಕಿದ ಮೆಕ್ಕಲುಮಣ್ಣಿನಲ್ಲಿ ಜೇಡರದಾಸಿಮಯ್ಯ, ಬಸವಣ್ಣ, ಪ್ರಭು, ಸಿದ್ಧರಾಮ ಮೊದಲಾದ ಪ್ರತಿಭಾನ್ವಿತ ವಚನಕಾರರ ವಸ್ತು ವಿನ್ಯಾಸ, ಚಿಂತನೆ, ಸಾಮಾಜಿಕ ಸಂಘರ್ಷಗಳಿಗೆ ಪ್ರತಿಕ್ರಿಯಾತ್ಮಕ ಸ್ಪಂದನ, ಅಂದಂದಿನ ಅನುಭವ, ಅನುಭಾವಗಳಿಗೆ ಕಾವ್ಯಾತ್ಮಕ ಅಭಿವ್ಯಕ್ತಿ, ಆಡುಮಾತಿನ ಬಳಕೆ ಹಾಗೂ ಅದರ ಜೀವಸತ್ವದ ಪರಿಣಾಮಕಾರೀ ಬಳಕೆ, ಭಾವಗೀತೆಯ ಲಯ ಸಂಯೋಜನೆ -ಇವು ಪ್ರಕಟಗೊಳ್ಳಲು ಆ ಕಾಲವೇ ಅವಕಾಶ ಮಾಡಿಕೊಟ್ಟಿತು. ಹಲವು ಸಾಧ್ಯತೆಗಳ ಅಭಿನಿವೇಶಗಳಿಗೆ ತನ್ನನ್ನು ತೆರೆದುಕೊಂಡ ವಚನ ಸಾಹಿತ್ಯ ಮುಂದಿನವರಿಗೆ ಒಂದು ಮಾದರಿಯಾಗಿ ನಿಲ್ಲುವ ಭಾಗ್ಯ ಪಡೆದುಕೊಂಡಿತು. ಮೊದಲನೆ ಘಟ್ಟದ ವಾತಾವರಣ ಹಾಗೂ ಶರಣರು ಎದುರಿಸಿದ ಸವಾಲುಗಳಿಗೂ ಎರಡನೆಯ ಘಟ್ಟದ ವಾತಾವರಣ ಹಾಗೂ ಅವರು ಇದಿರಿಸಿದ ಇಕ್ಕಟ್ಟು-ಬಿಕ್ಕಟ್ಟುಗಳಿಗೂ ವ್ಯತ್ಯಾಸವಿದೆ. ಒಂದು ಪ್ರತಿಭಾ ಪ್ರವಾಹ ತನ್ನೆಲ್ಲ ಸಾಧ್ಯತೆಗಳನ್ನೂ ದುಡಿಸಿಕೊಂಡು ಸೃಜನಮಾಡಿದ ನಂತರ ತಲೆದೋರಿದ ಒಂದು ರೀತಿಯ ಶೂನ್ಯಸ್ಥಿತಿಯಲ್ಲಿ ಸಾಹಿತ್ಯ ನಿರ್ಮಿತಿಗೆ ಹೊರಟವರು ಎದುರಿಸಬೇಕಾದ ಸಮಸ್ಯೆ-ಸವಾಲುಗಳು ಗಂಭೀರತರವಾದುವು. ಇಲ್ಲಿ ವಿಷಯದ ಪುನರಾವೃತ್ತಿ, ಅನುಕರಣೆ, ಮೊದಲಿನವರ ಚಿಂತನೆಯ ಛಾಯೆ, ಪ್ರಭಾವ ದಟ್ಟವಾಗಿಬಿಡುತ್ತದೆ. ಇವುಗಳನ್ನು ದಾಟಿ ಎರಡನೆಯ ತಲೆಮಾರಿನವರು ತಮ್ಮ ವೈಯಕ್ತಿಕ ಪ್ರತಿಭೆ ಮೆರೆಯಬೇಕಾಗುತ್ತದೆ. ಹಿಂದಿನವರ ಪ್ರಭಾವವನ್ನು ಜೀರ್ಣಿಸಿಕೊಂಡು ಹೊಸದೆನ್ನುವಂತೆ ತಮ್ಮ ಹೊಳಹುಗಳನ್ನು ಹೇಳಬೇಕಾದ ಪರಿಸ್ಥಿತಿಯಿರುತ್ತದೆ. ಭಾಷೆ ಹಾಗೂ ಹೋಲಿಕೆಗಳು (Simile) ಬಳಸಿ ಬಳಸಿ ಸವೆದುಹೋಗಿರುತ್ತವೆ. ಕಣ್ಣು-ಕಿವಿಗಳಿಗೆ ಪರಿಚಿತವಿರುವ ದೃಶ್ಯ-ಶಬ್ದಗಳು ಹಾದುಹೋಗುವ ಸಾಧ್ಯತೆಯಿರುತ್ತದೆ.

ಹೀಗಾಗಿ ತಮ್ಮ ಇತಿ-ಮಿತಿಯಲ್ಲಿ ತಮ್ಮ ಚಿಂತನೆಗಳಿಗೆ ಅಭಿವ್ಯಕ್ತಿ ಸಾಧ್ಯತೆಗಳನ್ನು ಹುಡುಕಿಕೊಳ್ಳಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ತೋಂಟದ ಸಿದ್ಧಲಿಂಗೇಶ್ವರ ಹಾಗೂ ಷಣ್ಮುಖಸ್ವಾಮಿಗಳು ಪ್ರತಿಭಾನ್ವಿತರಾದರೂ ವಚನರಚನೆಯಲ್ಲಿ ಎರಡನೆಯ ದರ್ಜೆಯವರಾಗಿ ಪರಿಗಣಿತರಾಗಿಬಿಡುವ ದುರಂತದ ವಿಪರ್ಯಾಸವನ್ನು ಕಾಣಬಹುದಾಗಿದೆ.

ಹಿಂದೆಯೇ ಪ್ರಸ್ತಾಪಿಸಿದಂತೆ, ಎರಡನೇ ಘಟ್ಟವು ಜೀವನಮುಖಿಯಾಗದೆ ಧರ್ಮಮುಖಿಯಾದುದು ಅದು ತನಗೆ ತಾನೇ ನಿರ್ಮಿಸಿಕೊಂಡ ಬೇಲಿಯಾಗುತ್ತದೆ. ಇನ್ನೊಂದು ಮುಖ್ಯಸಂಗತಿಯೆಂದರೆ ಮೊದಲನೆಯ ಘಟ್ಟವು ಸಮಾಜೋಧಾರ್ಮಿಕ ಚಳವಳಿಯ ಭಾಗವಾಗಿ ಬರುತ್ತದೆ. ಆನುಷಂಗಿಕವಾಗಿ ಶರಣರ ಸಂಘಟನೆಯ ಬೌದ್ಧಿಕ ಚರ್ಚೆಗೆ ನೆಲೆ ಒದಗಿಸುತ್ತದೆ. ಎರಡನೆಯ ಘಟ್ಟವು ಕೇವಲ ಧರ್ಮವೊಂದರ ಪುನರುಜ್ಜೀವನ (Renaissance) ಕಾರ್ಯದಲ್ಲಿ ಭಾಗಿಯಾಗುವುದರಿಂದ ಮೊದಲನೆಯ ಘಟ್ಟದಲ್ಲಿ ತನಗೆ ತಾನೇ ಒದಗಿ ಬಂದ ಪ್ರೇರಣೆ- ಅವಕಾಶಗಳಿಂದ ವಂಚಿತವಾಗಿಬಿಡುತ್ತದೆ. ಇಲ್ಲಿ ಸಂಘಟನೆ ಎರಡು ರೀತಿಯಲ್ಲಿ ನಡೆದಿದೆ:

೧. ವಚನಗಳ ರಕ್ಷಣೆ, ಸಂಗ್ರಹಣೆ, ಸಂಕಲನ, ಪರಿಷ್ಕರಣ, ವ್ಯಾಖ್ಯಾನಗಳದ್ದು.

೨. ತೀರಾ ಪ್ರತ್ಯೇಕವಾದ (exclusively) ಧಾರ್ಮಿಕ ವಾತಾವರಣವನ್ನು ಚೈತನ್ಯಗೊಳಿಸುವುದು. ಅಂದರೆ, ವೀರಶೈವ ಧರ್ಮದ ತಾತ್ತ್ವಿಕ ನೆಲೆಗಟ್ಟನ್ನು ಭದ್ರಪಡಿಸುವುದು ಹಾಗೂ ವೀರಶೈವವನ್ನು ಚಲನಾತ್ಮಕ ಸ್ಥಿತಿಯಲ್ಲಿ ಜೀವಂತವಾಗಿಸುವುದು. (ಕರ್ನಾಟಕದ ಎಲ್ಲೆಡೆ ಮಠಗಳ ನಿರ್ಮಾಣ, ಅದಕ್ಕೆ ಪೂರಕವಾಗಿ ಧಾರ್ಮಿಕ ಗುರುಗಳಿಗೆ ಶಿಕ್ಷಣ ನೀಡುವುದು, ಸಮಾಜದ ಬೇಡಿಕೆಗೆ ಅನುಗುಣವಾಗಿ ಅವರನ್ನು ಸಜ್ಜುಗೊಳಿಸುವುದು ಮೊದಲಾದ ಪ್ರಕ್ರಿಯೆ).

ಸ್ವತಂತ್ರ ವಚನಗಳನ್ನು ರಚಿಸಿದವರು ಈ ಕಕ್ಷೆಯಲ್ಲಿ ಬರುವವರಾದ ಕಾರಣ, ಇಲ್ಲಿ ವೈಯಕ್ತಿಕತೆ (individuality) ಸಾಮುದಾಯಿಕ (community) ಭಾವನೆಯತ್ತ ಹೊರಳಿಬಿಟ್ಟಿರುವ ಸಾಧ್ಯತೆಯಿದೆ.

ಎರಡನೆಯ ಘಟ್ಟದ ಚಟುವಟಿಕೆಗಳಲ್ಲಿ ಪರಿಷ್ಕರಣಕಾರ್ಯವೂ ಒಂದು. ಶಿವಗಣಪ್ರಸಾದಿ ಮಹಾದೇವಯ್ಯನ ಶೂನ್ಯಸಂಪಾದನೆ ಪ್ರತ್ಯಭಿಜ್ಞ ದಾರ್ಶನಿಕ ಪ್ರತಿಭೆಯ ಒಂದು ವಿಶಿಷ್ಟ ಸಂಕಲನ ಕೃತಿಯಾದರೆ, ಮುಂದಣ ಹಲಗೆಯಾರ್ಯ, ಗುಮ್ಮಳಾಪುರದ ಸಿದ್ಧಲಿಂಗಯತಿ, ಗೂಳೂರು ಸಿದ್ಧವೀರಣ್ಣೊಡೆಯರ ಶೂನ್ಯಸಂಪಾದನೆಯ ಪರಿಷ್ಕರಣಗಳು ಹೊಸ ಹೊಸ ಪ್ರಸಂಗಗಳನ್ನು ತನ್ನ ಒಡಲಲ್ಲಿ ಸೇರಿಸಿಕೊಳ್ಳುತ್ತ ಧರ್ಮಮುಖಿಯಾಗಿ ವೀರಶೈವೀಕರಣಗೊಳ್ಳುವ ಜ್ವಲಂತ ಉದಾಹರಣೆ ನಮ್ಮ ಕಣ್ಣಮುಂದೆ ನಿಲ್ಲುತ್ತದೆ.

ಸ್ವರವಚನ ಅಥವಾ ಸ್ವರಪದಗಳು ಎರಡನೆ ಘಟ್ಟದ ಒಂದು ಗಮನಾರ್ಹ ಸಾಹಿತ್ಯ ಸ್ವರೂಪ. ಶರಣರು ವಚನಗಳನ್ನು ರಚಿಸಿದಂತೆ ಸ್ವರವಚನಗಳನ್ನೂ ರಚಿಸಿರುವುದು ಮುಖ್ಯ ಸಂಗತಿ. ಶಿವಶರಣರ ಸ್ವರವಚನಗಳನ್ನು ಮಹಾಲಿಂಗ ಹಾಗೂ ಜಕ್ಕಣ್ಣನ (ಸು.೧೪೩೦) ಏಕೋತ್ತರ ಶತಸ್ಥಲಗಳಲ್ಲಿ, ನಾಲ್ಕು ಶೂನ್ಯಸಂಪಾದನೆಗಳಲ್ಲಿ ಮೊದಲಿಗೆ ಕಾಣುತ್ತೇವೆ. ನಿಜಗುಣ ಶಿವಯೋಗಿಯ ಕೈವಲ್ಯಪದ್ಧತಿ, ಮುಪ್ಪಿನ ಷಡಕ್ಷರಿಯ ಕೈವಲ್ಯ ಪದದ ಮೂಲಕ ಸ್ವರವಚನ ಪರಂಪರೆಗೆ ಒಂದು ಭದ್ರವಾದ ಬುನಾದಿ ಬಿದ್ದಿತು. ಮುಂದೆ ಮಗ್ಗೆಯ ಮಾಯಿದೇವ, ಗುರುಬಸವಾರ್ಯ, ಇಮ್ಮಡಿ ಮುರಿಗಾ ಗುರುಸಿದ್ಧ, ಸರ್ಪಭೂಷಣ ಶಿವಯೋಗಿ, ಬಾಲಲೀಲಾ ಮಹಾಂತ ಶಿವಯೋಗಿ, ಸೋಮೇಕಟ್ಟೆ ಕರಿವೃಷಭೇಂದ್ರ, ಅವಧೂತ ಶಿವಯೋಗಿ, ಘನಮಠದ ಶಿವಯೋಗಿ, ಮೈಲಾರ ಬಸವಲಿಂಗ ಶರಣರು, ಕೆಸ್ತೂರದೇವ, ಕೂಡಲೂರು ಬಸವಲಿಂಗ ಶರಣರು, ಜಿಗುನಿ ಮರುಳದೇವರು, ಶಂಕರದೇವರು, ಹಾಗಲವಾಡಿ ಮುದ್ವೀರಸ್ವಾಮಿ, ಮರಿಶಾಂತ ಬಸವೇಶ್ವರ, ಕಡಕೋಳ ಮಡಿವಾಳಪ್ಪ, ಐನೆಲೆ ಕರಿಬಸವಾರ್ಯ, ಮೊಗ್ಗೆಯ ಪ್ರಭುದೇವ, ರಾಮಪುರದ ಬಕ್ಕಪ್ಪಯ್ಯ ಮೊದಲಾದವರ ಸ್ವರವಚನಗಳು ಪ್ರಸಿದ್ಧಿ ಪಡೆದುವು. ಸ್ವರವಚನಗಳು

ವಸ್ತುತಃ ಹಾಡುಗಳು, ರಾಗ ತಾಳಗಳ ಅನುಪೂರ್ವಿಯನ್ನು ಹೊಂದಿರುವವು. ಹಾಡಿನ ಮೊದಲಿಗೆ ಪಲ್ಲವಿ ಕಾಣಿಸಿಕೊಳ್ಳುತ್ತದೆ. ಇದು ೩,೪,೫ ವಚನ / ಹಾಡುಗಳ ಒಂದು ಘಟಕವಾಗಿದೆ. ಶರಣನೊಬ್ಬನ ರಚನೆಯೆಂಬುದನ್ನು ದೃಢಪಡಿಸಲು ನಿರ್ದಿಷ್ಟ ಅಂಕಿತವಿರುತ್ತದೆ. ಸಾಮಾನ್ಯವಾಗಿ ಇದು ವಿರಕ್ತಪರಂಪರೆಯವರು ಸೃಷ್ಟಿಸಿದ ಸಾಹಿತ್ಯ. ಇವುಗಳ ವಸ್ತು ಅಲೌಕಿಕ ಸ್ತರದ್ದು. ಉದಾಹರಣೆಗೆ ಇಲ್ಲಿ ಸ್ತೋತ್ರ, ಪ್ರಾರ್ಥನೆ, ಆತ್ಮಶೋಧನೆ, ಶರಣಸತಿ- ಲಿಂಗಪತಿ ಭಾವ, ನೀತಿ, ಸಾಮಾಜಿಕ ವಿಡಂಬನೆ, ಏಕೋತ್ತರಶತಸ್ಥಲ ಪ್ರತಿಪಾದನೆ ಮುಖ್ಯವಾಗಿರುತ್ತದೆ. ಇಮ್ಮಡಿ ಮುರಿಗಾ ಗುರುಸಿದ್ಧನಂತಹ ವಿರಕ್ತ ಸಂಪ್ರದಾಯದ ಕವಿ ಏಕೋತ್ತರ ಶತಸ್ಥಲವನ್ನು ಸ್ವರವಚನರೂಪದಲ್ಲಿ 'ಕೈವಲ್ಯ ಸೋಪಾನ ನಾಮೈಕೋತ್ತರ ಶತಸ್ಥಲ' ಎನ್ನುವ ಹೆಸರಿನಲ್ಲಿ ರಚಿಸಿರುವುದು ಗಮನಾರ್ಹವಾಗಿದೆ.

ವಚನ ಸಾಹಿತ್ಯದ ಎರಡನೆ ಘಟ್ಟದ ಚಟುವಟಿಕೆಗಳು ಸಂಕೀರ್ಣ ಸ್ವರೂಪದ್ದು. ಈ ಘಟ್ಟದ ಕೊಡುಗೆಯನ್ನು ಪ್ರಸ್ತಾಪಿಸುವಾಗ ನಾವು ಮುಖ್ಯವಾಗಿ ಆ ಕಾಲಮಾನದ ವಾತಾವರಣದ ಹಿನ್ನೆಲೆಯಲ್ಲಿ ಒಡಮೂಡಿದ ಪ್ರೇರಣೆ- ಪ್ರಭಾವಗಳನ್ನು ಲಕ್ಷ್ಯದಲ್ಲಿಟ್ಟುಕೊಳ್ಳಬೇಕು. ೧೨ನೇ ಶತಮಾನದ ಶಿವಶರಣರ ಏಕಮುಖಿಯಾದ ಪ್ರತಿಭಾ ಪ್ರವಾಹ ಸೃಷ್ಟಿಸಿದ ಅದ್ಭುತ ಎರಡನೆ ಘಟ್ಟದಲ್ಲಾಗಲಿಲ್ಲವೆನ್ನುವ ನಿರ್ಣಯಕ್ಕೆ ಬರುವುದು ಸಾಧುವಲ್ಲ. ಒಂದೊಂದು ಕಾಲಮಾನವೂ ತನ್ನದೇ ಆದ ಜಾಯಮಾನವನ್ನು ಹೊಂದಿರುತ್ತದೆ. ಆ ಕಾಲ ಪ್ರವಾಹದಲ್ಲಿ ಸೃಷ್ಟಿಯಾದ ಸಾಹಿತ್ಯದ ಸ್ವರೂಪವೇನು? ಅದು ತನ್ನ ವೈಶಿಷ್ಟ್ಯವನ್ನು ಹೇಗೆ ಮೈಗೂಡಿಸಿಕೊಂಡಿದೆ? ಆ ಸಾಹಿತ್ಯದ ಗುಣಾವಗುಣಗಳೇನು? ಕನ್ನಡ ಸಾಹಿತ್ಯಕ್ಕೆ ಅದರ ಒಟ್ಟಾರೆಯಾದ ಕೊಡುಗೆಯೇನು? -ಈ ಹಿನ್ನೆಲೆಯಲ್ಲಿ ವಚನ ಸಾಹಿತ್ಯದ ಎರಡನೆ ಘಟ್ಟದ ಮೌಲ್ಯವಿವೇಚನೆ ಆಗಬೇಕಿದೆ.

ಸ್ವರವಚನ ಪರಂಪರೆ

✍ **ಡಾ. ಬಿ.ವ್ಹಿ. ಶಿರೂರ**

"ಶಿವಯೋಗ ಸಾಧನೆಯ ಶಿಖರವನ್ನು ಏರುತ್ತ ಹೋಗುವ ಅನುಭಾವಿಗಳ ಆಧ್ಯಾತ್ಮಗೀತೆಗಳು"- ಸ್ವರ ವಚನಗಳು. ಇವು ೧೨ನೆಯ ಶತಮಾನದ ಶಿವಶರಣರ ವಿಶಿಷ್ಟ ಕೊಡುಗೆಗಳು. 'ದೇವರಿಗೆ ಕೊಡುವ ಭಾಷೆ' ಎಂಬರ್ಥದ ವಚನಗಳು ಮುಕ್ತರೂಪದ ಪದ್ಯಗಂಧಿಯಾಗಿ ಗದ್ಯರೂಪದಲ್ಲಿ ರಚನೆಗೊಂಡರೆ, ಅವಕ್ಕೆ ಸಂಗೀತದ ಹಿನ್ನೆಲೆಯನ್ನೊದಗಿಸಿ, 'ಸ್ವರ' ಎಂಬ ಪದ ಸೇರಿಸಿ ಸ್ವರ ವಚನಗಳನ್ನು ರಚಿಸಿದ್ದಾರೆ. 'ಸ್ವರ' ಎಂದರೆ ನಾದ, ಧ್ವನಿ ಎಂದರ್ಥ. ನಾದಮಯವಾಗಿ, ರಾಗಬದ್ಧವಾಗಿ, ಹಾಡಲು ಯೋಗ್ಯವಾಗಿ ರಚನೆಗೊಂಡ ಸ್ವರವಚನ. ಇವುಗಳಲ್ಲಿ ಸಾಹಿತ್ಯಕ್ಕೆ ಮುಖ್ಯವಾದ ಅರ್ಥಸ್ವಾರಸ್ಯ, ಸಂಗೀತಕ್ಕೆ ಮುಖ್ಯವಾದ ಸ್ವರಲಾಲಿತ್ಯ ಎರಡೂ ಮೇಳೈಸಿ ನಡೆದಿರುವುದರಿಂದ ಇವನ್ನು ಪದನು, ಪದಂಗಳು, ಗೀತೆವಚನ, ರಾಗಲಲಿತ ವಚನ, ಸ್ವರವಚನ, ಸ್ವರಪದ, ಸ್ವರವಚನ ಪದ, ಸ್ವರಬೊಲ್ಲಿ, ಅನುಭಾವ ಪದ, ತತ್ವಪದ, ಕೈವಲ್ಯ ಸಾಹಿತ್ಯ ಮುಂತಾಗಿ ಕರೆಯಲಾಗಿದೆ.

ಇದು ಛಂದೋಬದ್ಧವಾದ ಷಟ್ಪದಿ, ಸಾಂಗತ್ಯ, ಅಕ್ಕರ, ಏಳೆಯಂತಹ ದೇಶಿಮಟ್ಟುಗಳೊಂದಿಗೆ, ನಾಲ್ಕುಸಾಲಿನ ಜಾನಪದ ಮಟ್ಟುಗಳು, ಚಂದಮಾಮ ಪದ, ಕೋಲು ಪದ, ಉಯ್ಯಾಲೆ ಪದ, ಗೊಂದಲ, ಭಜನೆ, ಜೋಗುಳ, ಮಂಗಳಾರತಿ ಪದ, ಉದಯರಾಗ, ಕಣಿ, ವಾಲಿ, ಪರಾಕು, ಸೋಬಾನ, ಡಂಗುರ ಪದ, ದುಂದುಮೆ ಪದ, ಕಾಲಜ್ಞಾನ ಪದಗಳ ಧಾಟಿಗಳನ್ನೂ ಪಡೆದಿವೆ. ಒಂದರ್ಥದಲ್ಲಿ ಜನಪದರ ಹಾಡಿನೊಂದಿಗೇ ಈ ಕಾವ್ಯಪ್ರಕಾರವೂ ಹುಟ್ಟುಪಡೆಯಿತೆಂದು ಹೇಳಬಹುದಾಗಿದೆ. ಪ್ರಾಚೀನ ಕಾವ್ಯಗಳಲ್ಲಿ ಉಲ್ಲೇಖವಾದ ಪಾಡು, ಪಾಡುಗಬ್ಬ, ಪಾಡುಗವಿತೆ , ಒನಕೆವಾಡು, ಬೀದಿವಾಡು, ಮುಂತಾದವು ಈ ಸಾಹಿತ್ಯ ಪ್ರಕಾರಕ್ಕೆ ಪ್ರೇರಕವಾಗಿರಬೇಕು. ಮೊದಮೊದಲು ಹಗುರವಾದ ಶೃಂಗಾರ, ಅತಿಯಾದ ಅಶ್ಲೀಲಗಳಿಗೆ ಮಾರುಹೋಗಿದ್ದ ಇದನ್ನು ಶಿವಶರಣರು ಶಿವಾನುಭವ, ಶಿವತತ್ವ, ಶಿವಸ್ತುತಿಗಳಿಗೆ ಮಾಧ್ಯಮವನ್ನಾಗಿಸಿದರು.

ಇವುಗಳ ಪ್ರಾರಂಭದಲ್ಲಿ ಎಲ್ಲ ಹಾಡುಗಳಿಗೆ ಇರುವಂತೆ ಪಲ್ಲ ಇಲ್ಲವೆ ಪಲ್ಲವಿ-ಅನುಪಲ್ಲವಿ, ಆ ಮೇಲೆ ನುಡಿಗಳು, (ಇವು ಸಾಮಾನ್ಯವಾಗಿ ೩ರಿಂದ ೨೭ ಬೆಸ ಸಂಖ್ಯೆಯಲ್ಲಿ) ಕೊನೆಯ ನುಡಿಯಲ್ಲಿ ಕಡ್ಡಾಯವಾಗಿ ಮುದ್ರಿಕೆ ಅಥವಾ ಅಂಕಿತ ಇರಬೇಕು. ಆದಿಪ್ರಾಸ ಕಡ್ಡಾಯ, ಅಂತ್ಯಪ್ರಾಸ ಕ್ವಚಿತ್ತಾಗಿ ಬರಬಹುದು. ಪ್ರತಿ ಹಾಡಿನ ತಲೆಯ ಮೇಲೆ ರಾಗ-ತಾಳಗಳ ನಿರ್ದೇಶನವಿದ್ದರೆ ಒಮ್ಮೊಮ್ಮೆ 'ತಮ್ಮಿಚ್ಛೆ' ಎಂದಿರುವುದೂ ಉಂಟು.

"ಸ್ವರವಚನಸಾಹಿತ್ಯವು" ೧೨ನೆಯ ಶತಮಾನದಲ್ಲಿ ಬಸವಾದಿ ಶರಣದಿಂದಲೇ ಹುಟ್ಟಿತೆಂದು ಪ್ರೊ. ಎಸ್.ಎಸ್. ಬಸವನಾಳ, ಡಾ. ಎಲ್. ಬಸವರಾಜು, ಡಾ.ಎಂ.ಎಂ. ಕಲಬುರ್ಗಿ, ಡಾ. ವಿ.ಬಿ. ರಾಜೂರ ಅವರು ಅಭಿಪ್ರಾಯಪಟ್ಟರೆ, ಡಾ. ಎಂ. ಚಿದಾನಂದಮೂರ್ತಿ, ಡಾ.ವಿ. ಶಿವಾನಂದ ಅವರು ೧೫ ನೆಯ ಶತಮಾನದ ಏಕೋತ್ತರ ಶತಸ್ಥಲಕಾರರು ವಚನಗಳನ್ನು ಸ್ವರವಚನಗಳನ್ನಾಗಿ ಪರಿವರ್ತಿಸಿದರು ಎಂದಿದ್ದಾರೆ. ಈವರೆಗೆ 'ತಂಗಾಳಿಗಲಿರು ಮರನೆ ಎನ್ನಂಗದೊಳಿರ್ಪ ಶಿವಲಿಂಗದ ಮರನೆ' ಎಂಬ ಪಲ್ಲವಿಯನ್ನೊಳಗೊಂಡ, ಐದು ನುಡಿಗಳುಳ್ಳ ಸಕಲೇಶ ಮಾದರಸನ ಸ್ವರವಚನವೇ ಮೊದಲ ಸ್ವರವಚನ ಎಂದು ನಂಬಲಾಗಿತ್ತು. ಆದರೆ ಕಂಬಾಳ ಮಲ್ಲೇಶ (೧೬೦೦)ನ "ಗಣವಚನ ರತ್ನಾವಳಿ" ಪ್ರಕಟವಾದ ಮೇಲೆ, ಅದರಲ್ಲಿರುವ ಜೇಡರದಾಸಿಮಯ್ಯನ (೧೧೩೦) ಸ್ವರವಚನವೇ ಕನ್ನಡದ ಆದ್ಯಸ್ವರವಚನವೆಂದು ಗಣಿಸಲ್ಪಟ್ಟಿದೆ. ಅಲ್ಲಿಂದ ಇಲ್ಲಿಯವರೆಗೆ ಅವ್ಯಾಹತವಾಗಿ ಬೆಳೆದು ಬಂದಿರುವ ಸ್ವರವಚನ ಸಾಹಿತ್ಯವನ್ನು-

೧. ಬಸವಯುಗ

೨. ನೂರೊಂದು ವಿರಕ್ತರ ಯುಗ

೩. ತೋಂಟದ ಸಿದ್ಧಲಿಂಗರ ಕಾಲ

೪. ತತ್ವಪದಕಾರರ ಯುಗ

ಎಂದು ವಿಭಜಿಸಿ ಅಭ್ಯಾಸಿಸಬಹುದು.

೧. **ಬಸವಯುಗ:** ಕಂಬಾಳಮಲ್ಲೇಶನು ತನ್ನ "ಗಣವಚನ ರತ್ನಾವಳಿ" ಯಲ್ಲಿ 'ನೈಷ್ಠೆಯೊಳಗಣ ವಿಶ್ವಾಸಿ ಪ್ರೀತಿ ಪ್ರೇಮವೇ ಮಹೇಶ್ವರಂಗೆ ಶ್ರದ್ಧೆಯಾದ ಕಾರಣ ಮುಂದೆ ನೈಷ್ಠೆಯೊಳಗಣ ಶ್ರದ್ಧಾಭಕ್ತಿಸ್ಥಲವಾದುದು' ಎಂದು ಹೇಳಿ ಈ ಸ್ವರವಚನವನ್ನು ಉದ್ಧರಿಸಿದ್ದಾನೆ. ಇದರ ಎರಡುಸಾಲಿನ ಪಲ್ಲವ 'ನಿಜವಾಗದೆಂದು ಗಜಬಜೆಘನ. ಗುಜುಗುಜು ಮಾಣದು ಮನದಲಿ' ಎಂದಿದ್ದು, ಇಲ್ಲಿ "ಮೊದಲು ಭಕ್ತಿ.....(೧), ಮೊದಲ ದಿನ ಹಣೆ ಮುಟ್ಟಿ....(೨), ಎಲ್ಲರ ಕಂಡರೆ ಶಿವ...(೩) ಅರ್ಥಪ್ರಾಣ...(೪), ಪುಣ್ಯಕ್ಕೆ ಹೇಸುವೆ....(೫), ಪರಸ್ತ್ರೀಯ ಕಂಡು....(೬), ವಂಚಿಸಿ ಪಂಕ್ತಿಯಲ್ಲಿ....(೭), ತಾನು ಉಣ್ಣನು....(೮), ಇಳೆಯ ದಾನವೆ ದಾನ....(೯), ಎಂದು ಆರಂಭವಾಗುವ ಒಂಬತ್ತು ನುಡಿಗಳಿವೆ. ಪ್ರತಿ ನುಡಿಯ ಅಂತ್ಯದಲ್ಲಿ ಮನವೆ ಎಂಬ ಪದವಿದ್ದು ಒಂಬತ್ತನೆಯ ನುಡಿಯ ಕೊನೆಯಲ್ಲಿ 'ಅನ್ಯದೈವವ ಹೊಗಳುವ ಕುನ್ನಿಗಳನೇನೆಂಬೆ ರಾಮನಾಥ' ಎಂಬ ಅಂಕಿತವಿದೆ. ಅಲ್ಲದೆ ಇದು ಅಲ್ಪಸ್ವಲ್ಪ ಬದಲಾವಣೆಯೊಂದಿಗೆ ಪ್ರತ್ಯೇಕ ವಚನವಾಗಿಯೂ ಪ್ರಕಟವಾಗಿದೆ. ಈ ನುಡಿಗಳಲ್ಲಿನ ಪದಸಂಯೋಜನೆ, ರಚನಾವಿನ್ಯಾಸ ಮೊದಲಾದವನ್ನು ನೋಡಿದಾಗ ಇದೊಂದು ಒಂಬತ್ತು ನುಡಿಗಳಿಂದ ಕೂಡಿದ ಸ್ವರವಚನ ಎಂಬುದು ಸ್ಪಷ್ಟವಾಗುತ್ತದೆ.

ಇದರ ನಂತರ ಸಕಲೇಶ ಮಾದರಸ, (೧) ಬಸವಣ್ಣ, (೨೩) ಪ್ರಭುದೇವ, (೩೭), ಚನ್ನಬಸವಣ್ಣ, (೫೯) ಸಿದ್ಧರಾಮ (೬), ಆದಯ್ಯ, (೨೧) ಅಕ್ಕಮಹಾದೇವಿ, (೨೧) ನಿಜಗುಣಯೋಗಿ, (೯)ಅಮುಗಿದೇವ, (೨) ಹಾವಿನಹಾಳ ಕಲ್ಲಯ್ಯ, (೨) ಬಹುರೂಪಿಚೌಡಯ್ಯ, (೫) ಜೋದರ ಮಾಯಣ್ಣ, (೨) ಉಳಿಉಮೇಶ್ವರಚಿಕ್ಕಯ್ಯ, (೧) ನಿಜಲಿಂಗಚಿಕ್ಕಯ್ಯ ,(೧) ಸೊಡ್ಡಳ ಬಾಚರಸ , (೩) ಹಡಪದ ಅಪ್ಪಣ್ಣ , (೩) ನೀಲಲೋಚನೆ, (೧೨) ಹಡಪದ ಲಿಂಗಮ್ಮ, (೧) ಅಕ್ಕನಾಗಮ್ಮ, ( ) ಮಡಿವಾಳ ಮಾಚಯ್ಯ ( ), ಅಗ್ಘವಣಿ ಹೊನ್ನಯ್ಯ (೭), ಅಗ್ಘವಣಿ ಹಂಪಯ್ಯ (೧), ಗುರುಪುರದ ಮಲ್ಲಯ್ಯ (೯), ಪುಷ್ಪದ ಸೋಮಯ್ಯ (೭), ಮೊದಲಾದ ೨೫ಕ್ಕೂ ಹೆಚ್ಚು ಶರಣರ ೨೦೦ಕ್ಕೂ ಹೆಚ್ಚು ಸಂಖ್ಯೆಯ ಸ್ವರವಚನಗಳು ದೊರೆತಿವೆ. ಇವುಗಳಲ್ಲಿ ಕೆಲವು ಶೀರ್ಷಿಕೆಯನ್ನು ನೋಡಿದರೆ ಇವುಗಳ ವಸ್ತು ವಿಶೇಷತೆ ಸ್ಪಷ್ಟವಾಗುತ್ತದೆ. ಬಸವಣ್ಣನ ಕೆಲ ಸ್ವರವಚನಗಳ ಶೀರ್ಷಿಕೆ ಹೀಗಿವೆ: ಸ್ಥಾವರ ಜಂಗಮ ಸಂಬಂಧ, ಅರಿಯೆನು ನಿಮಗಾನಪಚಾರ, ಮನಭಾವ ಕರಣದೊಳು, ನಿಮ್ಮ ಶರಣರ ಒಕ್ಕುದ, ಗುರುಚರಣವೆ ಗತಿ, ಶ್ರೀವಿಭೂತಿಯನೊಲಿದು, ಶಿವನೆ ಜಂಗಮರೂಪ, ದಾಸೋಹವ ನೋಡಲೆಂದು, ಲಿಂಗವ ನೋಡಿ ನೋಡಿ, ಕಾಯದೊಳಗಣ ವಿಕಾರಂಗಳ, ನಿಮ್ಮಕಾರುಣ್ಯವೆನ್ನ ಗುರುಮಹಾತ್ಮೆ, ಗುರುಪಾದೋದಕ,...

ಚನ್ನಬಸವಣ್ಣನ ಕೆಲ ಸ್ವರವಚನಗಳ ಶೀರ್ಷಿಕೆ ಹೀಗಿವೆ: ಬಿಂದು ಬಿನ್ನಾಣದೊಳಗಂದವಿಟ್ಟಿಹ, ಸ್ವಾನುಭಾವದುದಯದಿಂದ, ಸಾರಾಯ ಚತುರ್ವಿಧ, ಲೋಕದಂತಪ್ಪನಲ್ಲ, ಉಪಮಿಸ ಬಾರದ ಮಹಾಘನ....ಶರಣನು ಸ್ವತಂತ್ರನು, ಅಂಗದಲಿ ಲಿಂಗ, ಅರಿಯಲಿಲ್ಲ ಮರೆಯಲಿಲ್ಲ.

ಇವುಗಳನ್ನೆಲ್ಲ ಗಮನಿಸಿದರೆ ಈ ಕಾಲದ ಸ್ವರವಚನಗಳ ಮೂಲ ಉದ್ದೇಶ - ವೀರಶೈವತತ್ವ - ಅಂದರೆ - ಷಟ್‌ಸ್ಥಲ, ಅಷ್ಟಾವರಣ, ಪಂಚಾಚಾರ, ಶಿವಯೋಗಗಳ ಪ್ರತಿಪಾದನೆ, ಶಿವ-ಶಿವಶರಣರ ಮಹಿಮಾತಿಶಯ ವರ್ಣನೆ-ಸ್ತುತಿ, ನೀತಿಬೋಧೆ,

ಬೆಡಗಿನ ಭಾಷೆ, ಸಾಂಕೇತಿಕತೆಗಳು ಎಂಬುದು ಸ್ಪಷ್ಟವಾಗುತ್ತದೆ. ಆ ಕಾರಣಕ್ಕಾಗಿ ಎಷ್ಟೋ ಸಲ ಮುಕ್ತರೂಪದಲ್ಲಿರುವ ವಚನಗಳಲ್ಲಿ ಕಂಡು ಬರುವ ಭಾವತೀವ್ರತೆ, ಸಾಹಿತ್ಯ ಶ್ರೀಮಂತಿಕೆ ಇವುಗಳಲ್ಲಿ ಕಾಣುವುದಿಲ್ಲ.

ಕಲ್ಯಾಣಕ್ರಾಂತಿಯ ನಂತರ ಈ ಸ್ವರವಚನ ಸಾಹಿತ್ಯ ಹರಿಹರ-ರಾಘವಾಂಕರಿಂದ ಮರಳಿ ಜೀವಪಡೆದಂತೆ ತೋರುತ್ತದೆ. ಸಿದ್ಧನಂಜೇಶನ ರಾಘವಾಂಕ ಚಾರಿತ್ರದಲ್ಲಿ ರಾಘವಾಂಕನು ತನ್ನ ಗುರುವಾದ ಹರಿಹರನ ಮಹಿಮಾತಿಶಯವನ್ನು ಕುಮಾರವ್ಯಾಸನಿಗೆ ಹೇಳಿ, ಅವನು ತಲೆದೂಗುವಂತೆ ಮಾಡಿದನು ಎನ್ನುವಲ್ಲಿ "ಅವನೆನ್ನಬಹುದು ಮತ್ತುವ... ಎಂಬ ಹಾಡು ಉಲ್ಲೇಖವಾಗಿದೆ. ಅಲ್ಲದೇ ಹರಿಹರನು ಬರೆದಿರುವ ಹಲವಾರು ರಗಳೆಗಳು ಸ್ವರವಚನಗಳ ಸಮಗ್ರಸ್ವರೂಪವನ್ನು ಹೋಲದಿದ್ದರೂ ಭಾವಭಾಷೆ ಆಶಯಗಳಲ್ಲಿ ಕೆಲವು ಮಟ್ಟಿಗೆ ಅವನ್ನು ಹೋಲುವುದನ್ನು ಕಾಣಬಹುದಾಗಿದೆ."

೨. **ನೂರೊಂದು ವಿರಕ್ತರ ಯುಗ.** ಸ್ವರವಚನ ಸಾಹಿತ್ಯ ಮತ್ತೆ ಸಮೃದ್ಧವಾಗಿ ಪ್ರಕಟವಾದುದು ನೂರೊಂದು ವಿರಕ್ತರ ಕಾಲದಲ್ಲಿ. ಇದನ್ನು 'ವಚನ ಮತ್ತು ಸ್ವರವಚನ ಸಾಹಿತ್ಯದ ಪುನರುಜ್ಜೀವನ ಕಾಲ' ಎಂದೂ ಕರೆಯಲಾಗಿದೆ. ಈ ಯುಗದ ಪ್ರಮುಖ ಸಂಕಲನ-ಸಂಪಾದನ ಕೃತಿಯಾದ ಮಹಾಲಿಂಗ ದೇವ (೧೪೩೦)ರ ಏಕೋತ್ತರ ಶತಸ್ಥಲದಲ್ಲಿ ೧೨ ನೆಯ ಶತಮಾನದ ಬಸವಾದಿ ಶರಣರ ವಚನ ಸ್ವರವಚನಗಳ ಜೊತೆಗೆ ನೂರೊಂದು ವಿರಕ್ತರ ಯುಗದ ಅನುಭಾವಿ ಕವಿಗಳ ಸ್ವರವಚನಗಳೂ ಎಡೆ ಪಡೆದವು. ಜಕ್ಕಣಾರ್ಯನ ಏಕೋತ್ತರ ಶತಸ್ಥಲದಲ್ಲಿ ಸ್ವರವಚನಗಳು ಸ್ಥಲಕ್ಕೊಂದರಂತೆ ಜೋಡಣೆಯಾದವು. ಶಿವಗಣಪ್ರಸಾದಿ ಮಹಾದೇವಯ್ಯ ಮೊದಲಾದ ಶೂನ್ಯಸಂಪಾದನೆಕಾರರಲ್ಲಿ ಸಂದರ್ಭಾನುಸಾರ ವಚನಗಳ ಜೊತೆಗೆ ಸ್ವರವಚನಗಳೂ ಸೇರ್ಪಡೆಯಾದವು. ಅಲ್ಲದೆ ಹಲವುಜನ ಸ್ವತಂತ್ರವಾಗಿಯೂ ಸ್ವರವಚನಗಳನ್ನು ರಚಿಸಿದರು. ಅವರಲ್ಲಿ ಕರಸ್ಥಲ ವೀರಣ್ಣನೊಡೆಯ ಕಂದ, ತ್ರಿಪದಿ, ವೃತ್ತಗಳಲ್ಲಿ ೩೦ ಸ್ವರವಚನಗಳನ್ನು ರಚಿಸಿದ್ದಾನೆ. ಅಂಕಿತ ನಿಜಗುರು ಶಾಂತ, ನಿಜಗುರು ಶಾಂತೇಶ, ನಿಜಗುರು ಶಾಂತೇಶ್ವರ. ಆರು ಕೊಡಲರಿಯರು, ಬರಿ ಬ್ರಹ್ಮದ ಮಾತ, ಲಿಂಗ ಕರಕಮಲದೊಳು, ತಾನಾರೆಂಬುದನರಿಯದೆ ಮುಂತಾದ ಸ್ವರವಚನಗಳ ಆದಿಯನ್ನು ನೋಡಿದರೆ ಇವು ವೀರಶೈವ ತತ್ವಜ್ಞಾನದ ವಿವರಗಳಾಗಿ ಗೋಚರಿಸುತ್ತಿವೆ. ನಿರೂಪಣೆಯಲ್ಲಿ ಸಹಜತೆ ಎದ್ದುಕಾಣುತ್ತದೆ.

ಸ್ವರವಚನಕಾರರಲ್ಲಿಯೇ ಅಗ್ರಗಣ್ಯನೆನಿಸಿದವ ಕರಸ್ಥಲದ ನಾಗಿದೇವ. ಕಾವೇರಿ ತೀರದ ಟೊಮ್ಮೂರಿನವ. ಗುರುಶಾಂತ, ಗುರುಕರುಣೆಶಾಂತ, ಸಿದ್ಧಶಾಂತ ಎಂಬ ಅಂಕಿತದಲ್ಲಿ ೪೨ ಸ್ವರವಚನಗಳು ದೊರೆತಿವೆ. ಅವನ ಕೆಲವು ಸ್ವರವಚನಗಳ ಆದಿ ಹೀಗಿವೆ: ಕಾಯಿ ಲಿಂಗಕಾಯಿ, ಬಸವನ ನೆನಹಿಂದೆ ಕೋಲೆ ಕೋತ, ತಾನೆ ತಾನಾರೆಂದರಿದು, ಆಗುಚೇಗುಗಳ ಲೆಕ್ಕಿಸದೆ, ಇಷ್ಟಲಿಂಗದಿ ನೋಡದೆ, ಜನ ಮೆಚ್ಚಲದೇಕೆ ಕಾಡಲಮ್ಮವು ಕರಣಂಗಳು, ಕಂಡೆ ನಾನೊಂದು ಕನಸುವ, ಶೂದ್ರದಾರು ಬ್ರಾಹ್ಮಣರಾರು ಮುಂತಾದವು. ಇವುಗಳಲ್ಲಿ ಲಿಂಗದ ಮಹಿಮೆಯಿದೆ ಜಾತಿಯ ವಿಚಾರವಿದೆ, ಶರಣರ ಸ್ತುತಿ ಇದೆ, ಪಂಚವಿಂಶತಿಲೀಲೆಗಳ ವಿಚಾರವಿದೆ, ಅಷ್ಟಾವರಣಗಳ ಮಹತ್ವದ ವರ್ಣನೆಯಿದೆ, ಶಿವಯೋಗ ಸಾಧನೆಯ ಸ್ವರೂಪವಿದೆ, ಬೆಡಗಿದೆ, ಸತಿ-ಪತಿಭಾವದ ಮಾಧುರ್ಯವಿದೆ. ಒಟ್ಟಿನಲ್ಲಿ ವೀರಶೈವಧರ್ಮದ ಎಲ್ಲಾ ತಾತ್ವಿಕ ವಿಷಯಗಳೂ ಬಿಡಿಬಿಡಿಯಾಗಿ ಇಲ್ಲಿ ನಿರೂಪಿತವಾಗಿವೆ.[೧]

ಬತ್ತಲೇಶ್ವರ ನೂರೊಂದು ವಿರಕ್ತರಲ್ಲಿ ಒಬ್ಬ. ಈತನ ಪ್ರಸ್ತಾಪ ಹಲವಾರು ಕಾವ್ಯಗಳಲ್ಲಿ ಬರುತ್ತದೆ. ಈತನು ರಚಿಸಿದ ಏಳು ಸ್ವರವಚನಗಳಲ್ಲಿ ನಿರ್ವಾಣಲಿಂಗ, ನಿರ್ವಾಣ ಪ್ರಿಯಲಿಂಗ, ನಿರ್ವಾಣ ನಾಯಕ, ನಿರ್ವಾಣಪ್ರಿಯ, ನಿರ್ವಾಣವರ ಕವಿಬತ್ತಲೇಶ್ವರ, ಬತ್ತಲೇಶ್ವರ ಎಂಬ ಅಂಕಿತಗಳಿವೆ. ಅವುಗಳಲ್ಲಿ ಕೆಲವು ಈ ರೀತಿ ಪ್ರಾರಂಭಗೊಳುತ್ತವೆ: ಮೋಸ ಹೋಗದೆ ಸವಿವರಾರು, ತನ್ನ ತಾನರಿಯಬೇಕು, ಹಾರಿತೋ ಹಂಸ ಹಾರಿತೋ, ನಾಟಕವಲ್ಲದೆ.... ಇವೆಲ್ಲ ಹೆಚ್ಚಾಗಿ ಶಿವಯೋಗದ

ರಹಸ್ಯವನ್ನು ಬೆಡಗಿನ ಸಾಂಕೇತಿಕ ಭಾಷೆಯಲ್ಲಿ ಹಿಡಿದಿಟ್ಟಂತಿವೆ. 'ಮುಂದುಮುಂದಕೆ ಹೋಗಿ ಮುಕ್ತನಾದುದೊಂದು ಚಂದಮಾಮ' ಎಂಬ ಹಾಡು ಬತ್ತಲೇಶ್ವರನ ಒಳ್ಳೆಯ ಪ್ರತಿಭೆಗೆ ಸಾಕ್ಷಿಯೆನ್ನುವಂತಿದೆ. ಕೋಲಾಟದ ಹಾಡಿನ, ಜಾನಪದ ಶೈಲಿಯ ಈ ಸ್ವರವಚನ ಅತ್ಯುತ್ತಮ ಗೀತಾತ್ಮಕತೆಯಿಂದ ಕೂಡಿದೆ.

ಇದೇ ಕಾಲದ ಇನ್ನೊಬ್ಬ ಸ್ವರವಚನಕಾರ ನಿರ್ವಾಣಿಬೋಳೇಶ. ಇವನ ಹತ್ತು ಸ್ವರವಚನಗಳು- ನಿರ್ವಾಣಿಬೋಳೇಶ, ನಿರ್ವಾಣಿ ಪ್ರಿಯ ಬೋಳೇಶ, ಬೋಳೇಶಲಿಂಗ ಎಂಬ ಅಂಕಿತ ಹೊಂದಿವೆ. ಇವುಗಳಲ್ಲಿ ಅಂಬರದ ಚಪ್ಪರದಡಿಯಲ್ಲಿ, ಕಾವ ತನ್ನ ತಲೆಯನರಿಯ, ತುಂಬಿ ತುಳುಕುತಿದೆ, ಅವ್ವ ಸುಮಾಯೆ ನಿನ್ನ -ಮೊದಲಾದವು ಶರಣಸತಿ ಲಿಂಗಪತಿ ಭಾವವನ್ನೂ, ಶಿವಯೋಗದ ರಹಸ್ಯವನ್ನು ಬೆಡಗಿನ ಭಾಷೆಯಲ್ಲಿ ಹೇಳಿದಂತಿವೆ, ಕೆಲವೆಡೆ ಕವಿಯ ಪ್ರತಿಭಾಶಕ್ತಿ ಒಡಮೂಡಿದೆ.

'ಗುರುಬಸವೇಶ' ಎಂಬ ಅಂಕಿತದಲ್ಲಿ ಗುರುಬಸವ ೨೬೩ ಸ್ವರವಚನಗಳನ್ನು ರಚಿಸಿದ್ದಾನೆ. ಒಮ್ಮೊಮ್ಮೆ ಒಂದು ನುಡಿ, ಕೆಲವು ಸಲ ೮-೧೦ ನುಡಿ ಇರುವ ಇವು ಷಟ್ಸ್ಥಲ, ಅಷ್ಟಾವರಣ, ಶಿವಯೋಗ, ಲಿಂಗಾಂಗ ಸಾಮರಸ್ಯವನ್ನು ವಿವರಿಸುತ್ತವೆ. ಶರಣರಲ್ಲಿ ವಿಶೇಷವಾಗಿ ಬಸವಣ್ಣನನ್ನು ವಿಪುಲವಾಗಿ ಸ್ತುತಿಸಿದ್ದಾನೆ. ಸತಿ-ಪತಿಭಾವದ ಸ್ವರವಚನಗಳಲ್ಲಿ ಈತನ ಕಾವ್ಯ ಪ್ರತಿಭೆ ಎದ್ದು ತೋರುತ್ತದೆ.

ಸಾಳ್ವ ನರಸಿಂಹನ (೧೪೮೭-೯೭) ಆಸ್ಥಾನ ಕವಿಯಾಗಿದ್ದ ಕವಿಲಿಂಗನು ತನ್ನ ಆರಾಧ್ಯದೈವವಾದ 'ಕಪಿನಿ ನಂಜುಂಡಲಿಂಗ'ನ ಅಂಕಿತದಲ್ಲಿ ೧೩೦ ಹಾಡುಗಳನ್ನು ರಚಿಸಿದ್ದಾನೆ. ತನ್ನನ್ನು ತಾನು 'ಅಂಗಜಕಲಾ ನಿಪುಣ ಗಂಡಭೇರುಂಡ, ಜಾಣಕವಿ' ಎಂದು ಕರೆದುಕೊಂಡಿದ್ದಾನೆ. ಈತನ ಹಾಡುಗಳಿಗೆ ಲಿಂಗನ ಪದಗಳು, ಸ್ವರವಚನಗಳು, ಜಾವಳಿಗಳು ಎಂಬ ಪರ್ಯಾಯ ನಾಮಗಳಿವೆ. ಇವುಗಳಲ್ಲಿ ಒಂದು ಚಂದಮಾಮ ಹಾಡಿನ ರೂಪದಲ್ಲಿದ್ದರೆ, ಇನ್ನೊಂದು ವಚನ ಮಾದರಿಯಲ್ಲಿದೆ. ಮತ್ತೊಂದು ಸವಾಲ್‌ಜವಾಬ್ ರೂಪದಲ್ಲಿದೆ. "ಕಾವ್ಯ ಬೇರೊಂದೆಡೆ ಕಲಿಯಬೇಕೋ ದಿವ್ಯ ಕಾಮಿನಿಯರಂಗಸಂಗದೊಳಗೈದನದ ಕೋ" ಎಂಬ ಹಾಡಿನಿಂದ ಈತನ ರಸಿಕತೆ, ಓದಿನ ವಸ್ತು ಗೋಚರಿಸುತ್ತವೆ. 'ಬಲ್ಲರೆ ಯೋಗಿಯಾಗು, ಇನಿತಲ್ಲದಿರೆ ಮೋಹಿಯಾಗಿರೈಯಾ' ಮುಂತಾದ ಹಾಡುಗಳು ಮಧುರ ಅಥವಾ ಶೃಂಗಾರ ಭಾವದಿಂದ ಕೂಡಿ, ಯೋಗಭೋಗದ ಸಮನ್ವಯದ ಹಾದಿಯಲ್ಲಿ ಸಾಗಿದೆ. ಅಲ್ಲದೆ ಕವಿ ತನ್ನ ಕಾಲದ ಬೆತ್ತಲಸೇವೆ, ಸಿಡಿ ಏರುವುದು, ಕುರಿಬಲಿ ಮುಂತಾದ ಆಚರಣೆಗಳ ಮೇಲೂ ಬೆಳಕು ಚೆಲ್ಲಿದ್ದಾನೆ. ಹೀಗೆ ಕವಿಲಿಂಗ ಈವರೆಗೆ ಆಧ್ಯಾತ್ಮಕ್ಕೆ ಮೀಸಲಾಗಿದ್ದ ಸ್ವರವಚನ ಸಾಹಿತ್ಯದ ಹಾದಿಯನ್ನು ಹರಿಗಡಿದು ಅದನ್ನು ಲೌಕಿಕದತ್ತ ಹೊರಳಿಸಿದ ಎಂದು ಹೇಳಬಹುದಾಗಿದೆ.

೧. ತೋಂಟದ ಸಿದ್ಧಲಿಂಗೇಶ್ವರರ ಕಾಲ

೧೬ ನೆಯ ಶತಮಾನದ ನಂತರ ವಚನಸಾಹಿತ್ಯಕ್ಕೆ ವಿಶೇಷ ಕಳೆಯನ್ನು ತಂದುಕೊಟ್ಟವರು ತೋಂಟದ ಸಿದ್ಧಲಿಂಗಯತಿಗಳು. ಈ ಕಾಲದಲ್ಲಿ ವಚನಸಾಹಿತ್ಯದೊಂದಿಗೆ ಸ್ವರವಚನ ಸಾಹಿತ್ಯವೂ ವಿಪುಲವಾಗಿ ಬೆಳೆಕಂಡಿತು. ತೋಂಟದ ಸಿದ್ಧಲಿಂಗಯತಿಗಳ ಶಿಷ್ಯ ಸಮುದಾಯದೊಂದಿಗೆ ಸ್ವತಂತ್ರವಾಗಿಯೇ ಹಲವರು ಕೃಷಿ ಮಾಡಿ ಸ್ವರವಚನ ಸಾಹಿತ್ಯ ಸಮೃದ್ಧವಾಗಿ ಬೆಳೆಯುವಂತೆ ಮಾಡಿದರು.

೧. **ತೋಂಟದ ಸಿದ್ಧಲಿಂಗಯತಿಗಳ ಶಿಷ್ಯ ಸಮುದಾಯ:** ತೋಂಟದ ಸಿದ್ಧಲಿಂಗರ ಶಿಷ್ಯಸಮುದಾಯದಲ್ಲಿ ವಚನ ರಚನೆ ಸಂಗ್ರಹ, ಸಂಕಲನ, ಸಂಪಾದನೆ, ವ್ಯಾಖ್ಯಾನ, ಟೀಕೆ ಟಿಪ್ಪಣಿಗಳ ಕಾರ್ಯವು ಬಹು ನಿಷ್ಠೆಯಿಂದ ನಡೆಯಿತು. ಅದರಲ್ಲಿ ಜಿಗುನಿ ಮರುಳದೇವ, ಕಪಿಯೊನ್ನ, ಪೀಣೆ ಗುರುಬಸವ, ಹಾಗಲವಾಡಿ ಮುದ್ವೀರಸ್ವಾಮಿ, ಕೆಸ್ತೂರದೇವ, ಸಿದ್ಧಲಿಂಗ

ಮೊದಲಾದವರು ಸ್ವರವಚನಗಳನ್ನು ರಚಿಸಿದರೆ, ಚನ್ನವೀರಾರ್ಯ, ಕಂಬಾಳ ಶಾಂತಮಲ್ಲೇಶರು ಆ ಸ್ವರವಚನಗಳನ್ನು ಶಿವಯೋಗಪ್ರದೀಪಿಕೆ ಮತ್ತು ಗಣವಚನ ರತ್ನಾವಳಿ ಮೊದಲಾದ ಕೃತಿಗಳಲ್ಲಿ ಸ್ಥಲಕಟ್ಟಿಗನುಗುಣವಾಗಿ ಸಂಯೋಜಿಸಿದರು.

ಜಿಗುನಿ ಮರುಳಾರ್ಯ. ವೀರಶೈವ ಸಾಹಿತ್ಯದಲ್ಲಿ ಮರುಳದೇವ ಎಂಬ ಹೆಸರಿನ ಮೂವರು ವ್ಯಕ್ತಿಗಳು ಪ್ರಸಿದ್ಧರು: ೧. ಪಂಚಾಚಾರ್ಯರಲ್ಲಿ ಒಬ್ಬರಾದ ಉಜ್ಜಯಿನಿಯ ಮರುಳ ದೇವರು ೨. ಶುದ್ಧಸಿದ್ಧ ಶ್ರೀಸಿದ್ದಪ್ರಭುವೇ ಶಾಂತ ಮಲ್ಲಿಕಾರ್ಜುನಯ್ಯ ಅಂಕಿತದಲ್ಲಿ ವಚನ ಬರೆದ ಮರುಳ ಶಂಕರದೇವ ೩. ಪ್ರಸ್ತುತ ಜಿಗುನಿಯ ಮರುಳದೇವರು. ಇವರು ನಿಜಗುಣ ಶಿವಯೋಗಿಗಳ ಗುರುಗಳು ಎಂಬುದು ಕೈವಲ್ಯ ಪದ್ಧತಿಯಿಂದ ಸ್ಪಷ್ಟವಾಗುತ್ತದೆ. ಕಾಲ ಸು. ೧೫೫೦. ಅಂಕಿತ ನಿಜಗುರು ಶಾಂತ. ಸದ್ಯ ಈತನ ೧೫೮ ಸ್ವರವಚನಗಳು ದೊರೆತಿದ್ದು ಒಂದರಲ್ಲಿ ನೂತನ ಮತ್ತು ಪುರಾತನ ಶರಣರನ್ನೂ ಶೈವಕವಿಗಳನ್ನು ಮನಸಾರೆ ಬಣ್ಣಿಸಿದ್ದಾನೆ. ಅಲ್ಲದೆ ಆತನ ಬಹುಪಾಲು ಸ್ವರವಚನಗಳು ವೀರಶೈವ ಸಿದ್ಧಾಂತದ ಪ್ರತಿಪಾದನೆಗೆ ಅದರಲ್ಲೂ ವಿಶೇಷವಾಗಿ ಶಿವಶರಣನ ನಿಲುವು, ಶಿವಮಂತ್ರದ ಮಹಿಮೆಯ ನಿರೂಪಣೆಗೆ ಮೀಸಲಾಗಿವೆ.

ಹಾಗಲವಾಡಿ ಮುದ್ವೀರಸ್ವಾಮಿ

ಕ್ರಿ.ಶ. ೧೬೨೦-೧೬೪೦ರವರೆಗೆ ಹಾಗಲವಾಡಿಯನ್ನಾಳಿದ ಇಮ್ಮಡಿ ಮುದಿಯಪ್ಪನಾಯಕನು ಮುದ್ವೀರ ಸ್ವಾಮಿಯನ್ನು ಕಾಶಿಯಿಂದ ಕರೆತಂದು ಗುರುವನ್ನಾಗಿ ಮಾಡಿಕೊಂಡ ಎಂದು ತಿಳಿದು ಬರುವುದು. ಇವನು ಸಂಸ್ಕೃತದಲ್ಲಿ ರೇವಣಾರಾಧ್ಯರು ರಚಿಸಿದ ಷಟ್ಸ್ಥಲಬ್ರಹ್ಮ ದೀಪಿಕೆಯನ್ನು 'ಶಿವತತ್ವಸುಜ್ಞಾನ ಪ್ರದೀಪಿಕೆ' ಎಂದು ಕನ್ನಡಕ್ಕೆ ತಂದಿದ್ದಾನೆ. ಅಲ್ಲದೆ ಗುರುಸಂಗ, ಸಂಗ, ಸಂಗಮೇಶ, ಗುರು ಸಂಗಮೇಶ ಅಂಕಿತದಲ್ಲಿ ಬಿಡಿಯಾಗಿ ೧೦೮ ಸ್ವರವಚನಗಳನ್ನು ರಚಿಸಿದ್ದಾನೆ. ತೋಂಟದ ಸಿದ್ಧಲಿಂಗ ಪರಂಪರೆಯ ಮುರಿಗೆ ಶಾಂತವೀರನನ್ನು ಗುರುವೆಂದು ಸೂಚಿಸಿದ್ದಾನೆ. ಇವನೊಬ್ಬ ಶ್ರೇಷ್ಠ ಯೋಗಿಯಾಗಿದ್ದು ಯೋಗತತ್ವದ ವಿಚಾರಗಳನ್ನು ತನ್ನ ಸ್ವರವಚನಗಳಲ್ಲಿ ತುಂಬಿದ್ದಾನೆ. ಅಲ್ಲಲ್ಲಿ ಲೋಕಾನುಭವದಿಂದ ಕೂಡಿದ ನೀತಿ ನಿರೂಪಣೆಯ ಪದಗಳೂ ಕಂಡುಬರುತ್ತವೆ. ಭಾವದ ಉತ್ಕಟತೆ, ಗೇಯತೆ, ನಿರರ್ಗಳತೆ ಹಾಗೂ ನಿರಾಡಂಬರತೆಗಳಿಂದ ಈತನೊಬ್ಬ ಮೇಲ್ಮಟ್ಟದ ಅನುಭಾವಿ ಕವಿ ಎಂಬುದು ಸ್ಪಷ್ಟವಾಗುತ್ತದೆ. ಇವೆಲ್ಲ ಏಳೆ, ವೃತ್ತ, ಷಟ್ಪದಿ, ಸಾಂಗತ್ಯ, ಚೌಪದಿ ಮತ್ತು ನಾಲ್ಕು ಸಾಲುಗಳ ಕನ್ನಡದ ವಿಶಿಷ್ಟ ಮಟ್ಟುಗಳಲ್ಲಿ ರಚನೆಗೊಂಡಿವೆ. ಹಲವು ಸಲ 'ಪಲ್ಲ' ಬಹಳ ಸುಲಭವಾಗಿದ್ದು ಮುಂದಿನ ನುಡಿಗಳು ಸಂಸ್ಕೃತ ಭೂಯಿಷ್ಠವಾಗಿರುವುದು ಈತನ ಹಾಡುಗಳ ವೈಶಿಷ್ಟ್ಯವೆನ್ನಿಸಿದೆ.

ಕವಿ ಹೊನ್ನ

'ಗಂಗೇಶ' ಅಂಕಿತದ ಸ್ವರವಚನಗಳ ಕರ್ತೃ-ಕವಿ ಹೊನ್ನ. ಇದು ಅವನ 'ಕಕೋದ್ಗಿರಿವಾಸ ಗಂಗಾಧರೇಶಾ' ಎಂಬ ಸ್ವರವಚನದಿಂದ ಸ್ಪಷ್ಟವಾಗಿದೆ. ಅಲ್ಲಿ ೪೧ ಸ್ವರವಚನಗಳಿವೆ. ಶಿವಗಂಗೆಯ ಬೆಟ್ಟದಲ್ಲಿರುವ ಗಂಗಾಧರೇಶ್ವರಸ್ವಾಮಿಯ ಭಕ್ತನಾದ ಇವನು ೧೭ನೆಯ ಶತಮಾನದವನು. 'ಅಲ್ಲ ಅಲ್ಲನೆಂದು ಗುರುವೆ ನಿಮ್ಮ ಬರಿದೆ ಒಲ್ಲದ ಮುಸಲ್ಮಾನರು ಕರೆವರದೇಕೋ' ಎಂದು ಪ್ರಶ್ನಿಸಿ ಉಪನಿಷತ್ಕಾರರು 'ನೇತಿ' (ಅದು ಅಲ್ಲ) ಎಂದು ನಿಷೇಧಾತ್ಮಕವಾಗಿ ಹೇಳಿರುವುದನ್ನು ಪ್ರಸ್ತಾಪಿಸಿದ್ದಾನೆ. 'ಆರು ಮತಗಳು ಬೇರೆಬೇರೆಯಾಗಿ ಸೇರಿ ಮುಕ್ತಿಯನೀವುದೊಂದೆ ಲಿಂಗ' ಎಂಬ ಸ್ವರರಚನೆಯಲ್ಲಿ 'ಏಕಂ ಸತ್ ವಿಪ್ರಾಬಹುದಾ ವದಂತಿ' ಎಂಬ ವೇದೋಕ್ತಿಯನ್ನು ಹಿಡಿದಿಟ್ಟಿದ್ದಾನೆ. ಹಾಗೆಯೇ ಜಂಗಮ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ ಮೊದಲಾದವನ್ನು ವಿವರಿಸಿ 'ಕಾಯವಳಿದ ಮೇಲೆ ಮುಕ್ತಿ ಎಂಬುದು ಪುಸಿಯದೆಲ್ಲ ಕಾಯವಿರ್ದಾಗಲೆ ಮೂಕನಾರೆಂಬುವ ಪೇಳು ಗುರುವೆ' ಎಂದು ಕೇಳಿದ್ದಾನೆ. ಹೀಗೆ ಸರಳ ಸುಲಭ ಮಾರ್ಗದಲ್ಲಿ ಆಧ್ಯಾತ್ಮವನ್ನು ಹಿಡಿದಿಟ್ಟಿರುವ ಶ್ರೇಯಸ್ಸು ಕವಿ ಹೊನ್ನನದಾಗಿದೆ.

ಈ ಕಾಲದಲ್ಲಿ ಸ್ವರವಚನಗಳನ್ನು ಸಂಗ್ರಹ ಮಾಡಿದವರಲ್ಲಿ ಕಂಬಾಳ ಶಾಂತಮಲ್ಲೇಶ ಮತ್ತು ಚೆನ್ನವೀರಾರ್ಯ ಪ್ರಮುಖರು. ಕ್ರಿ.ಶ. ಸು. ೧೬೦೦ ರಲ್ಲಿ ಕಂಬಾಳ ಶಾಂತ ಮಲ್ಲೇಶನು 'ಗಣವಚನ ರತ್ನಾವಳಿ'ಯನ್ನು ರಚಿಸಿದ್ದಾನೆ. ಅದರಲ್ಲಿ ೨೧೬ ಸ್ಥಲ, ಸ್ಥಲಕ್ಕೆ ಒಂದರಂತೆ ೨೧೬ ಹಾಡುಗಳನ್ನು ೬೨ ಜನ ಪುರಾತನ ಹಾಗೂ ನೂತನ ಶಿವಶರಣರಿಂದ ಆಯ್ದು ಕಟ್ಟಿ ಕೊಟ್ಟಿದ್ದಾನೆ. ಈ ಹಾಡುಗಳಲ್ಲಿ ೧೨೦೧ ನುಡಿಗಳಿವೆ. ಈ ಕೃತಿಯನ್ನೋದುವುದರಿಂದ 'ಪರಮ ಜೀವನ್ಮುಕ್ತಿ' ಎಂದೂ ಹೇಳಿದ್ದಾನೆ. ಅದೇ ರೀತಿ 'ಶಿವಯೋಗ ಪ್ರದೀಪಿಕೆ' ಯ ಕರ್ತೃ ಚೆನ್ನವೀರಾರ್ಯ. ಇವನು ತನ್ನ ಕೃತಿಯಲ್ಲಿ ಶಿವಯೋಗದ ಲಕ್ಷಣ, ತಂತ್ರ, ನೆಲೆ-ಬೆಲೆಗಳನ್ನು ೨೪ ಜನ ಬಸವಾದಿ ಶರಣರ ೭೩ ಸ್ವರವಚನಗಳ ಮೂಲಕ ವಿವರಿಸಲು ಪ್ರಯತ್ನಿಸಿದ್ದಾನೆ. ಅದಕ್ಕೆ ಸಹಾಯಕವಾಗಿ ಹಲವಾರು ಅವಾಂತರ ಸ್ಥಲಗಳನ್ನು ಕಲ್ಪಿಸಿಕೊಂಡು, ಒಂದೊಂದು ಸ್ಥಲದಲ್ಲಿಯೂ ಶಿವಯೋಗ ಸಾಧಕನು ಏರಬೇಕಾದ, ತಲುಪಬೇಕಾದ ಘಟ್ಟಗಳನ್ನು ವಿವರಿಸಿದ್ದಾನೆ. ಈ ಎಲ್ಲಾ ಸ್ಥಲಗಳ ಬೋಧನೆ, ಸಾಧನೆ ಮತ್ತು ಸಿದ್ಧಿ ಎಂಬ ಮೂರು ಹಂತಗಳಲ್ಲಿ ಅಡಕಗೊಂಡಿವೆ.

೨. ಈ ಕಾಲದ ಸ್ವತಂತ್ರ ಸ್ವರವಚನಕಾರರು

ತೋಂಟದಾರ್ಯರ ಶಿಷ್ಯವರ್ಗಕ್ಕೆ ಸೇರದೆ ಸ್ವತಂತ್ರ ರೀತಿಯಲ್ಲಿ ಸ್ವರವಚನ ರಚಿಸಿದವರು ನಿಜಗುಣ ಶಿವಯೋಗಿ, ಬಾಲಲೀಲಾಮಹಾಂತ ಶಿವಯೋಗಿ, ಮುಪ್ಪಿನಾರ್ಯ ಮುಂತಾದವರು.

ನಿಜಗುಣ ಶಿವಯೋಗಿ (ಸು. ೧೫೦೦)

ಇವರು ಹುಟ್ಟುಹಾಕಿದ ಸ್ವರವಚನ ಸಾಹಿತ್ಯ ಕೈವಲ್ಯಸಾಹಿತ್ಯವೆಂದು ಪ್ರಸಿದ್ಧಿ ಪಡೆಯಿತು. ಇದು ಸ್ವರವಚನ ಸಾಹಿತ್ಯದ ಒಂದು ಪ್ರಮುಖ ಭಾಗವೂ ಆಯಿತು. ನಿಜಗುಣರು ತಮ್ಮ ಸಂಕಲನವನ್ನು 'ಕೈವಲ್ಯಪದ್ಧತಿ' ಎಂದು ಕರೆದಂತೆ ಇದೇ ಮಾದರಿಯಲ್ಲಿ ಮುಂದೆ ಬಂದ ಸರ್ಪಭೂಷಣರು 'ಕೈವ್ಯಲ್ಯ ಕಲ್ಪವಲ್ಲರಿ', ಬಾಲಲೀಲಾಮಹಾಂತ ಶಿವಯೋಗಿಗಳು 'ಕೈವಲ್ಯದರ್ಪಣ', 'ಮುಪ್ಪಿನಾರ್ಯರು' ಕೈವಲ್ಯ ಪದಗಳು (ಸುಬೋಧ ಸಾರ.) ಸೋಮೇಕಟ್ಟೆ ಕರಿಬಸವಾರ್ಯ 'ಕೈವಲ್ಯಪದಗಳು' ಗುರು ಬಸವಾರ್ಯ 'ಕೈವಲ್ಯಪದ್ಧತಿ', ಘನಮಠದಾರ್ಯ 'ಕೈವಲ್ಯ ಪದಗಳು' (ಭಕ್ತಿಸುಧಾಸಾರ), ಮೈಲಾರ ಬಸವಲಿಂಗ ಶರಣರು 'ಶಿವಾನುಭವದರ್ಪಣ', ಇಮ್ಮಡಿ ಮುರಿಗಾ ಗುರುಸಿದ್ಧರು 'ಕೈವಲ್ಯಸೋಪಾನ ನಾಮೈಕೋತ್ತರ ಶತಸ್ಥಲ', ಅಮಾತೇಶ್ವರರು 'ಕೈವಲ್ಯನವನೀತ' ಎಂದು ಕರೆದಿರುವರು. ಹೀಗೆ ೧೮-೧೯ನೆಯ ಶತಮಾನದಲ್ಲಿ ಇಂತಹ ಪದಗಳ ರಚನೆ ವಿಪುಲವಾಗಿ ಬೆಳೆದು ಬರಲು ಈ ಕಾಲವನ್ನು ತತ್ವಪದಗಳ ಸಮೃದ್ಧ ಯುಗವೆಂದು ಕರೆದಿರುವರು. ರೂಪದ ದೃಷ್ಟಿಯಿಂದ ಹಾಡುಗಳೆಂದೂ, ವಸ್ತುವಿನ ದೃಷ್ಟಿಯಿಂದ ತತ್ವಪದಗಳೆಂದೂ, ಅವು ಉದ್ದೇಶಿಸಿದ ಆತ್ಯಂತಿಕ ಗುರಿಯ ದೃಷ್ಟಿಯಿಂದ ಕೈವಲ್ಯಪದಗಳೆಂದೂ ಇವನ್ನು ಕರೆಯಲಾಗುತ್ತದೆ.

ನಿಜಗುಣರ 'ಕೈವಲ್ಯಪದ್ಧತಿ'ಯ ಒಟ್ಟು ೧೭೪ ಹಾಡುಗಳು-ಶಿವಕಾರುಣ್ಯಸ್ಥಲ, (೨೮) ಜೀವಸಂಬೋಧನ ಸ್ಥಲ, (೨೨) ನೀತಿಕ್ರಿಯಾಚರ್ಯಸ್ಥಲ, (೨೬) ಯೋಗ-ಪ್ರತಿಪಾದನಸ್ಥಲ (೨೬) ಜ್ಞಾನಪ್ರತಿಪಾದನಸ್ಥಲ (೫೯) ಎಂಬ ಐದು ಸ್ಥಲಗಳಲ್ಲಿ ವಿಭಜನೆಗೊಂಡಿದ್ದು ಮೊದಲ ಮೂರುಸ್ಥಲ ಕೈವಲ್ಯ ಮಾರ್ಗದ ತಳಹದಿಯ ಮೂರು ಸೋಪಾನಗಳೆನ್ನಿಸಿದರೆ, ಅನಂತರದ ಎರಡು ಸ್ಥಲಗಳು ಅವುಗಳನ್ನು ಏರಿದ ಮೇಲೆ ಕಾಣುವ ಕೈವಲ್ಯಸೌಧಗಳೆನ್ನಿಸಿವೆ. ಒಟ್ಟಾರೆ ಅದ್ವೈತ ತತ್ವಬೋಧೆ, ಲೋಕನೀತಿ, ಸರಳ ನೇರ ಭಾಷೆ, ಸ್ಥಲಕ್ಕನುಗುಣವಾದ ಸಂಯೋಜನೆ, ಭಕ್ತಿ-ಜ್ಞಾನ-ವೈರಾಗ್ಯಪ್ರತಿಪಾದನೆ ಈ ಕೈವಲ್ಯಸಾಹಿತ್ಯದ ಮುಖ್ಯ ಲಕ್ಷಣವೆಂದು ಹೇಳಬಹುದಾಗಿದೆ.

ತತ್ವಪದಕಾರರ ಯುಗ. ೧೮-೧೯ ನೆಯ ಶತಮಾನ ಸ್ವರವಚನ ಸಾಹಿತ್ಯದ ಸುಗ್ಗಿಯ ಕಾಲ. ಈ ಕಾಲದಲ್ಲಿ ಸುಮಾರು ೫೦೦ಕ್ಕೂ ಹೆಚ್ಚುಜನ ಹಾಡುಗಾರರು ಸಾವಿರಾರು ಸಂಖ್ಯೆಯಲ್ಲಿ ಸ್ವರವಚನಗಳನ್ನು ರಚಿಸಿದ್ದಾರೆ.

ಕೂಡಲೂರ ಬಸವಲಿಂಗಶರಣರು. ೧೮ ನೆಯ ಶತಮಾನದ ಕೊನೆಯ ಭಾಗದಲ್ಲಿದ್ದ ಈತ ಯಾದಗಿರಿ ತಾಲೋಕಿನ ಬಳಿಚಕ್ರ ಗ್ರಾಮದಲ್ಲಿ ಜನಿಸಿದ. ದಿನಂಪ್ರತಿ ಕೂಡಲೂರಿಗೆ ಹೋಗಿ ಕಾಯಿಪಲ್ಲೆ ಮಾರುವ ಕಾಯಕ ಹೊಂದಿದ್ದರೂ ಅಲ್ಲಿದ್ದ ಈಶ್ವರಪ್ಪನೆಂಬ ಅಕ್ಕಸಾಲಿಯೊಂದಿಗೆ ಆಧ್ಯಾತ್ಮ ಚರ್ಚೆಯಲ್ಲಿ ತೊಡಗುತ್ತಿದ್ದನು. ಮುಂದೆ ಯಾದಗಿರಿ, ರಾಯಚೂರು, ದೇವದುರ್ಗ, ಗೊಬ್ಬೂರು, ಗೂಗಲ್ಲುಗಳನ್ನು ಸುತ್ತಿ ದೇವದುರ್ಗ ತಾಲ್ಲೂಕಿನ ಖಾನಾಪೂರಕ್ಕೆ ಬಂದು ನೆಲೆಯೂರಿದನು. ಗೂಗಲ್ಲು ಪರಪ್ಪ ಮತ್ತು ಈತ ಸೇರಿಯೇ ಹಲವಾರು ಆಶುಕವಿತೆ ರಚಿಸಿದರು. ಅವು ಅನುಭಾವ ಸೌಂದರ್ಯ, ಅರ್ಥಗಳ ದೃಷ್ಟಿಯಿಂದ ಬಹು ಮೇಲ್ಮಟ್ಟದ್ದಾಗಿವೆ. ಜನರ ಆಡುನುಡಿಯಲ್ಲಿ ಆಧ್ಯಾತ್ಮದ, ಆತ್ಮಾನುಭೂತಿಯ ವಿವರಣೆ ಸಹಜ, ಸುಂದರವಾಗಿದೆ. "ಗಂಡಗಂಜಿ ಬದುಕು ಮಾಡಮ್ಮಾ ಮುತ್ತೈದೆತನ ಕಳಕೋಬ್ಯಾಡ ತಿಳಕೋ ತಂಗೆಮ್ಮಾ" ಮುಂತಾದ ಹಾಡುಗಳು ಆದರ್ಶಪ್ರಾಯವಾಗಿವೆ. ಇವರ ಹಾಡಿನಲ್ಲಿ 'ಮೂಗುತಿ' ಹಲವಾರು ಸಲ ಕಾಣಿಸಿಕೊಂಡಿದ್ದು, ಅದನ್ನೊಂದು ರೂಪಕವಾಗಿ ಬಳಸಿಕೊಂಡವರು ಇವರೊಬ್ಬರೆ. 'ಹೊಲೆಯರು ನಾವು ಹೊಲೆಯರು' ಎಂಬ ಪದ್ಯದಲ್ಲಿ ಜಾತಿಯ ವಿಡಂಬನೆಯಿದೆ. ಈ ಹಾಡುಗಳ ತುಂಬಾ ಜನಸಾಮಾನ್ಯರ ಆಡುಮಾತು ತುಂಬಿ ತುಳುಕಾಡುತ್ತವೆ.

ಮೈಲಾರದ ಬಸವಲಿಂಗ ಶರಣರು: ೧೮ ನೆಯ ಶತಮಾನದ ಅಂತ್ಯ ೧೯ನೆಯ ಶತಮಾನದ ಆದಿಯಲ್ಲಿ ಬಳ್ಳಾರಿಜಿಲ್ಲೆಯ ಹೂವಿನ ಹಡಗಲಿ ತಾಲ್ಲೂಕಿನ ಮೈಲಾರದಲ್ಲಿ ಶೆಟ್ರಮನೆತನದಲ್ಲಿ ಜನಿಸಿದ ಇವರು ಅಯ್ಯನವರ ಪಾಠಶಾಲೆಯಲ್ಲಿ ಓದಿ, ನೆರೆಹೊರೆಯ ಊರುಗಳಲ್ಲಿ ಕೀರ್ತನ ಪ್ರವಚನ ಮಾಡುತ್ತ ಸ್ವಾಧ್ಯಾಯದಿಂದ ಸಿದ್ಧಿ ಪಡೆದರು. ಲಿಂಗನಾಯಕನ ಹಳ್ಳಿಗೆ ಹೋಗಿ.ಗುರು ಚೆನ್ನವೀರರ ಶಿಷ್ಯತ್ವ ವಹಿಸಿದರು. ವೀರಶೈವಾಚರಣೆಯನ್ನು ಜನಸಾಮಾನ್ಯರಿಗೆ ಮುಟ್ಟಿಸಬೇಕೆಂದು 'ಗುರುಕರುಣ ತ್ರಿವಿಧಿ, ಷಟ್ಸ್ಥಲ ನಿರಾಭಾರ ವೀರಶೈವ ಸಿದ್ಧಾಂತ, ಷಟ್‌ಸ್ಥಲಜ್ಞಾನಾನುಭಾವ, ಶಿವಾನುಭವ ದರ್ಪಣ, ಲಿಂಗಪೂಜಾವಿಧಾನ, ಭಕ್ತಿಬಿನ್ನಹ ದಂಡಕ' ಎಂಬ ಕೃತಿಗಳನ್ನು ರಚಿಸಿದರು, ಅವರು ರಚಿಸಿದ 'ಶಿವಾನುಭವ ದರ್ಪಣ'ದಲ್ಲಿಯ ಹಾಡುಗಳು ಸಾಹಿತ್ಯ, ತತ್ವ, ಸಂಗೀತಗಳಿಂದ ಮುಪ್ಪುರಿಗೊಂಡು, ರಾಗವೈವಿಧ್ಯ, ವಿಷಯ ವೈವಿಧ್ಯವನ್ನು ಹೊಂದಿವೆ. ಶಿವಾನುಭವಿಗೆ ಬೇಕಾದ ತತ್ವಾಚರಣೆಯನ್ನು ಈ ಗ್ರಂಥ ಪರಿಚಯಿಸಿಕೊಡುತ್ತದೆ.

ರಾಮಪುರ ಬಕ್ಕಪ್ಪ: ಗುಲಬರ್ಗಾ ಜಿಲ್ಲೆಯ ಜೇವರಗಿ ತಾಲೂಕಿನ ರಾಮಪುರದಲ್ಲಿ ಬಕ್ಕಪ್ಪ ೧೭ ನೆಯ ಶತಮಾನದಲ್ಲಿದ್ದ. ಅಲ್ಲಿಯ ಬೂದಿ ಬಸವೇಶ್ವರ ಈತನ ಆರಾಧ್ಯದೈವ ಆದರೂ ತನ್ನ ಹೆಸರನ್ನೇ ಕಾವ್ಯಾಂಕಿತವಾಗಿಸಿಕೊಂಡಿದ್ದಾನೆ. ಈತನು ನೂರಾರು ತತ್ವಪದಗಳನ್ನು ರಚಿಸಿರುವುದರ ಜೊತೆಗೆ ೨೧೧ ಪದ್ಯಗಳಿರುವ 'ನಿಜಶರಣ ತ್ರಿವಿಧಿ'ಯನ್ನೂ ರಚಿಸಿದ್ದಾನೆ. ಮುಂದೆ ಬಂದ ಕಡಕೋಳ ಮಡಿವಾಳಪ್ಪನ ಮೇಲೆ ಈತನ ಪ್ರಭಾವವಾಗಿದೆ. ಶರಣಸತಿ-ಲಿಂಗಪತಿ ಭಾವ, ಭಕ್ತಿ, ಆಧ್ಯಾತ್ಮ, ನೀತಿ ಈತನ ತತ್ವಪದಗಳ ವಸ್ತು. 'ಯವ್ವ, ಕಡಿತ ಹಾವಕಡಿತ' ಎಂಬ ತತ್ವಪದವಂತೂ ಈತನ ಹೆಸರನ್ನು ಚಿರಸ್ಥಾಯಿಯಾಗಿಸಿದೆ. ವಿಷಯವಾಸನೆಯ ಪ್ರತೀಕವಾದ ಹಾವು ಇಲ್ಲಿ ಸಹಜ ದೃಷ್ಟಾಂತವಾಗಿ ಮೂಡಿಬಂದಿದೆ.

ಬಿದನೂರ ಗಂಗಮ್ಮ. ಈಕೆ ಕಡಕೋಳ ಮಡಿವಾಳಪ್ಪನವರ ತಾಯಿ. ಈಕೆಯೂ ತತ್ವಪದಗಳನ್ನು ರಚಿಸಿದ್ದಾಳೆ. ಅವುಗಳಲ್ಲಿ ೧೨ ಪ್ರಕಟವಾಗಿವೆ. ಈಕೆ ಮೂಲತಃ ಬಿಜಾಪುರ ಜಿಲ್ಲೆಯ ಇಂಡಿ ತಾಲೂಕಿನ ನಾಗಠಾಣ ಗ್ರಾಮದವಳು.

ಬಾಲವಿಧವೆಯಾಗಿದ್ದ ಈಕೆ ಬಿಜಾಪುರ ಜಿಲ್ಲೆಯಲ್ಲಿ ಬರಗಾಲ ಬರಲು ಗುಲಬರ್ಗಾ ಜಿಲ್ಲೆಯ ಅಫಜಲ್‌ಪೂರ ತಾಲೂಕಿನ ಬಿದನೂರಿನಲ್ಲಿ ತಂದೆಯ ಜತೆ ವಾಸವಾಗಿದ್ದಳು. ತಂದೆ ಸಾಯಲು ಗಂಗಮ್ಮನಿಗೆ ಬಿದನೂರಿನ ಮಲ್ಲಿಕಾರ್ಜುನ ಗೌಡರು ಆಶ್ರಯ ನೀಡಿದರು. ಜನರು ಆಡಿಕೊಳ್ಳತೊಡಗಲು ಆತ್ಮಹತ್ಯೆಗೆ ಮುಂದಾದ ಗಂಗಮ್ಮನ್ನು ಚರಪಟ್ಟಾಧ್ಯಕ್ಷರಾದ ವಿರೂಪಾಕ್ಷಯ್ಯನವರು ತಡೆದು ಆಕೆಗೆ ಹೊಸಬದುಕು ನೀಡಿದರು. ಆಗ ಜನಿಸಿದಾತನೆ ಮಡಿವಾಳಪ್ಪ. ಜನರಿಂದ ಅವಮಾನಿತಳಾದ ಗಂಗಮ್ಮನ ಹಾಡುಗಳಲ್ಲಿ ನೋವು ತುಂಬಿತುಳುಕುತ್ತದೆ. ಅಂಕಿತ: ಬಿದನೂರ ಮಡಿವಾಳ. 'ಜಾರತನ ಮಾಡಿದೆನವ್ವಾ ಜಂಗಮನೊಡಗೂಡಿ' ಎಂಬ ಪದ ಲೌಕಿಕಸತ್ಯವನ್ನು, ಶರಣಸತಿ-ಲಿಂಗಪತಿ ಭಾವವನ್ನು ಸೊಗಸಾಗಿ ವ್ಯಕ್ತಗೊಳಿಸುತ್ತದೆ.

ಕಡಕೋಳ ಮಡಿವಾಳಪ್ಪ : ಗುಲಬರ್ಗಾ ಜಿಲ್ಲೆಯ ಅಫಜಲ್‌ಪೂರ ತಾಲೂಕಿನ ಬಿದನೂರು ಗ್ರಾಮದಲ್ಲಿ ಕ್ರಿ.ಶ.ಸು. ೧೭೮೫ ರಲ್ಲಿ ಹುಟ್ಟಿದ ಈತ ಜೇವರ್ಗಿ ತಾಲೂಕಿನ ಕಡಕೋಳದಲ್ಲಿ ಕ್ರಿ.ಶ. ಸು. ೧೮೪೦ ರಲ್ಲಿ ಜೀವಂತ ಸಮಾಧಿ ಹೊಂದಿದ. ಮಡಿವಾಳಪ್ಪ ಅರಳಗುಂಡಿಗೆಯ ಶರಣಬಸವರಲ್ಲಿ ಆಶ್ರಯ ಪಡೆದು, ಚಿಣಮಗೇರಿಯ ಮಹಾಂತೇಶನನ್ನು ಗುರುವಾಗಿ ಹೊಂದಿ, 'ಗುರುಮಹಾಂತ' ಎಂಬ ಅಂಕಿತದಲ್ಲಿ ನೂರಾರು ಹಾಡುಗಳನ್ನು ರಚಿಸಿದ್ದಾನೆ. ಅವುಗಳಲ್ಲಿ ಸುಮಾರು ೩೦೦ ಈಗ ಪ್ರಕಟವಾಗಿವೆ. ಸಾಧುಸಂತರನ್ನು ನಿಂದಿಸುವವರನ್ನೂ, ಕಲ್ಲುಮಣ್ಣು ದೇವರೆಂದು ಪೂಜಿಸುವವರನ್ನೂ, ಮರವ ಕಂಡಲ್ಲಿ ಸುತ್ತುವವರನ್ನು ನಿಂದಿಸಿದ್ದಾನೆ. ಈತನು ರಚಿಸಿದ 'ಗಾಳಿಪೂಜೆ' ವಚನವಂತೂ ಅರ್ಥಭಾರದಿಂದ ದಿವ್ಯವೂ ಭವ್ಯವೂ ಆದ ತತ್ವಕ್ಕೆ ನಿದರ್ಶನವೆನ್ನುವಂತಿದೆ. ಇವರ ಶಿಷ್ಯರಾದ ಖೈನೂರ ಕೃಷ್ಣಪ್ಪ, ಸಿದ್ಧಪ್ಪ, ತೆಲುಗು ಬಾಳಶ್ಯಾವಪ್ಪ, ಮೊದಲಾದವರೂ ಹಲವಾರು ಹಾಡುಗಳನ್ನು ರಚಿಸಿದ್ದಾರೆ.

ಇವರಲ್ಲದೆ ಸಾರವಾಡದ ಚಿಕ್ಕಪ್ಪಯ್ಯ, ಮರಿಶಾಂತ ದೇವರು, ಐನೂಲಿಯ ಕರಿಬಸವಾರ್ಯ, ನೀರಲಕೇರಿ ಬಸವಲಿಂಗ ಶಿವಯೋಗಿ, ಚನ್ನೂರ ಜಲಾಲಸಾಬ, ಸಿದ್ಧರಾಮ ಶಿವಯೋಗಿ, ನಿಂಬರಗಿಯ ನಾರಾಯಣ, ಮೋಟನಹಳ್ಳಿ ಹಸನ್‌ಸಾಬ, ತಳವಾರಗೇರಿ ಬಸನಗೌಡ, ಮಹಾಗಾವದ ಗುರುಲಿಂಗಸಿದ್ಧ, ದೇಗಾವಿ ಗುಂಡಪ್ಪ, ಮೊದಲಾದ ನೂರಾರು ತತ್ವಪದಕಾರರು, ಸಾವಿರಾರು ತತ್ವಪದಗಳನ್ನು ಹಾಡಿ ಜನಮನದಲ್ಲಿ ಸ್ಥಿರವಾಗಿ ನೆಲೆಸಿದ್ದಾರೆ. ಇವರಲ್ಲಿ ಬಹಳಷ್ಟು ಜನರು 'ಬಸವಾದಿ ಶರಣರ ನೂರೊಂದು, ಏಳನೂರೊಂದು ವಿರಕ್ತರ, ನಿಜಗುಣಾದಿ ಕೈವಲ್ಯಪದಕಾರರ ದೃಷ್ಟಿಧೋರಣೆಗಳನ್ನು ಮುಂದುವರೆಸಿಕೊಂಡು ನಡೆದರೆ, ಇತರ ನೂರಾರು ಸಂಖ್ಯೆಯ ತತ್ವಪದಕಾರರು ಆರೂಢಪಂಥದ ಜಾಡಿನಲ್ಲಿ ನಡೆದು, ಸಂಸಾರದ ಅಸಾರತೆಯನ್ನು ಸಾರುತ್ತ, ಗುರುವೇ ಪರದೈವವೆಂದು ನಂಬಿ, ಲೋಕ ವಿಮರ್ಶೆಯನ್ನು ತೀವ್ರವಾಗಿ ಮಾಡುತ್ತ ನಡೆದರು. ವಿವಿಧ ಜಾತಿಯ, ನಿಮ್ನ ಸ್ತರಕ್ಕೆ ಸೇರಿದ, ಜೀವನದಲ್ಲಿ ನೆಮ್ಮದಿಯ ನೆಲೆಯನ್ನು ಕಾಣಲು ಅಪೇಕ್ಷಿಸಿದ ವ್ಯಕ್ತಿಗಳು ತಾವು ಕಂಡ ಅನುಭವವನ್ನು, ಲೋಕದ ಅಂಕುಡೊಂಕುಗಳನ್ನು, ಹಾಡಾಗಿ ಕಟ್ಟಿ ಹಾಡುತ್ತಾ ಸಾಗಿದರು. ಹೀಗಾಗಿ ಈ ಯುಗದ ಹಾಡುಗಳಲ್ಲಿ ದೇಶೀ ಭಾಷೆಯ ಸೊಗಡು, ಪ್ರಾದೇಶಿಕ, ಸಾಮಾಜಿಕ, ಚಾರಿತ್ರಿಕ ಸಂಗತಿಗಳ ಅಭಿವ್ಯಕ್ತಿ ಉತ್ಕಟವಾಗಿ ಆದುದು ಕಂಡುಬರುತ್ತದೆ. ಈ ಕಾಲದ ಹಾಡುಗಳೆಲ್ಲ ಹೆಚ್ಚಾಗಿ ಮೌಖಿಕ ಪರಂಪರೆಯಲ್ಲಿ ಸಾಗಿಬಂದವು. ಜನಸಾಮಾನ್ಯರ ಬಾಯಲ್ಲಿ ನಿತ್ಯ ಬದುಕುತ್ತ ಅವರ ಬದುಕನ್ನೂ ಹಸನುಗೊಳಿಸುತ್ತ ನಡೆದು ಬಂದವುಗಳಾಗಿವೆ. ಹೀಗೆ ಸ್ವರವಚನ ಪರಂಪರೆ ಹನ್ನೆರಡನೆಯ ಶತಮಾನದಿಂದ ಇಲ್ಲಿಯವರೆಗೆ ನಡೆದು ಬಂದಿದೆ; ಇನ್ನೂ ಮುಂದೆ ನಡೆದು ಸಾಗಿದೆ.

ಆಧಾರ ಗ್ರಂಥಗಳು

೧. ಸ್ವರವಚನ- ಡಾ. ವಿ.ಬಿ. ರಾಜೂರ.

೨. ಭೂಷಣ- ಶ್ರೀ ಸರ್ಪಭೂಷಣ ಶಿವಯೋಗಿಗಳ ದ್ವಿಶತಮಾನೋತ್ಸವ ಸಂಸ್ಮರಣ ಸಂಪುಟ. ೧೯೯೯.

೩. ಶಿವಯೋಗ ಪ್ರದೀಪಿಕೆ, ಸಂ. ವಿ.ಬಿ. ರಾಜೂರ, ಕ.ವಿ. ಧಾರವಾಡ, ೧೯೮೧.

೪. ಕನ್ನಡದಲ್ಲಿ ಕೈವಲ್ಯಸಾಹಿತ್ಯ- ಡಾ. ಎಚ್. ತಿಪ್ಪೇರುದ್ರಸ್ವಾಮಿ, ಚಿತ್ತರಗಿ ಶ್ರೀ ವಿಜಯ ಮಹಾಂತೇಶ್ವರ ಧರ್ಮಪ್ರಸಾರಕ ಮಂಡಲಿ, ಇಲಕಲ್, ೧೯೮೩.

೫. ಬಸವಪಥದ ಹಲವಾರು ಸಂಚಿಕೆಗಳು.

೬. ಸುತ್ತೂರು ಮತ್ತು ತೋಂಟದಾರ್ಯ ಮಠದಿಂದ ಪ್ರಕಟವಾದ ಎಲ್ಲಾ ಸ್ವರವಚನ ಸಂಪುಟಗಳು.

ಅಡಿಟಿಪ್ಪಣಿಗಳು

೧. ಡಾ. ಎಚ್. ತಿಪ್ಪೇರುದ್ರಸ್ವಾಮಿ, ಕನ್ನಡದಲ್ಲಿ ಕೈವಲ್ಯ ಸಾಹಿತ್ಯ, ೧೯೮೩, ಪು. ೪.

೨. ಡಾ. ವೀರಣ್ಣ ರಾಜೂರ, ಕನಕಸಿರಿ, ಪು. ೪೦೯.

೧. ಈವರೆಗೆ ದೊರೆತ ಸಂಕಲನಾಂತರ್ಗತ ೪೦೩ ಸ್ವರವಚನಗಳಿಗೆ ಸು. ೧೦೦ ರಾಗಗಳು ಬಳಕೆಯಾಗಿದೆ. ತಾಳಗಳ ಸಂಖ್ಯೆ ಸು. ೧೫. ಸ್ವರವಚನಗಳು ಹೆಚ್ಚಾಗಿ ಅಂಶಗಣ ಘಟಿತ ಮಟ್ಟುಗಳಾಗಿದ್ದು ಕರ್ನಾಟಕ ಸಂಗೀತದ ರಾಗ ತಾಳಗಳನ್ನು ಅಳವಡಿಸಿಕೊಂಡಿವೆ. ಡಾ. ವಿ.ಬಿ. ರಾಜೂರ ಸ್ವರವಚನಗಳು. ಪು ೮-೬

೧. ಇವನು ಸುಪ್ರಸಿದ್ಧ ಗಾಯಕನಾಗಿದ್ದು ಶುದ್ಧಭೈರವಿಯಲ್ಲಿ ಸಿದ್ದರಾಮನ ಗೀತೆಗಳನ್ನು ಹಾಡಿದನು ಎಂಬ ಪ್ರಸ್ತಾಪವೂ ಇದೆ. ೧. ಡಾ. ವಿ.ಬಿ. ರಾಜೂರ ವಿಜಯಕಲ್ಯಾಣ. ಪು. ೧೪೨

೧. ಡಾ. ಎಚ್. ತಿಪ್ಪೇರುದ್ರಸ್ವಾಮಿ. ಕನ್ನಡದಲ್ಲಿ ಕೈವಲ್ಯಸಾಹಿತ್ಯ ಪು. ೨.

೧. ಡಾ. ವಿ.ಬಿ. ರಾಜೂರ. ಸ್ವರವಚನಗಳು. ಪು. ೩೧-೩೨.

ಸ್ವರವಚನ ಸಾಹಿತ್ಯ : ಸಂಪಾದನೆ ಮತ್ತು ಅಧ್ಯಯನ ಇತಿಹಾಸ

✍ ಡಾ. ಎಫ್.ಟಿ. ಹಳ್ಳಿಕೇರಿ

ಸ್ವರವಚನ ಸಾಹಿತ್ಯವು ನಡುಗನ್ನಡ ವಾಙ್ಮಯದ ಒಂದು ವಿಶಿಷ್ಟ ಪ್ರಕಾರವಾಗಿದೆ. ಬಸವಾದಿ ಪ್ರಮಥರಿಂದ ಸೃಷ್ಟಿಯಾದ ಇದು ವಿಜಯನಗರದ ನೂರೊಂದು ವಿರಕ್ತರು ಮತ್ತು ತೋಂಟದ ಸಿದ್ಧಲಿಂಗ ಶಿವಯೋಗಿಗಳ ಕಾಲದಲ್ಲಿ ವೈವಿಧ್ಯಮಯವಾಗಿ ಬೆಳೆದು ಬಂದಿತು. ಹೆಸರೇ ಸೂಚಿಸುವಂತೆ ಒಂದು ನಿರ್ದಿಷ್ಟ ಛಂದೋಬಂಧಕ್ಕೆ ಒಳಗಾಗಿ ರಚನೆಗೊಂಡ ಸ್ವರವಚನಗಳು ಹಾಡುಗಬ್ಬ ಪರಂಪರೆಗೆ ಸೇರಿದವುಗಳು. ಸದ್ಯಕ್ಕೆ ಜೇಡರದಾಸಿಮಯ್ಯನ ಬವುಳಿ ರಾಗದಲ್ಲಿನ "ನಿಜವಾಗದೆಂದು ಗಜಬಜೆ ಘನ ಗುಜುಗುಜು ಮಾಣದೆ ಮನದಲ್ಲಿ" ಎಂದು ಪ್ರಾರಂಭವಾಗುವ ಹಾಡು ಮೊದಲ ಉಪಲಬ್ಧ ಸ್ವರರಚನವಾಗಿದೆ. ಹೀಗಾಗಿ ಜೇಡರದಾಸಿಮಯ್ಯ ಸ್ವರವಚನ ಸಾಹಿತ್ಯದ ಆದ್ಯಪ್ರವರ್ತಕನೆಂದು ಹೇಳಬಹುದು.

ಬರವಣಿಗೆಯು ತಾಳೆಗರಿಯಿಂದ ಕಾಗದಕ್ಕೆ, ಕಾಗದದಿಂದ ಮುದ್ರಣಯಂತ್ರಕ್ಕೆ ವರ್ಗಾವಣೆಗೊಂಡುದು ಮಹತ್ತರ ಸಾಧನೆಯಾಗಿದೆ. ಇದರಿಂದಾಗಿ ಹಸ್ತಪ್ರತಿಗಳ ಬದಲಾಗಿ ಮುದ್ರಣಪ್ರತಿಗಳು ಅಧಿಕ ಪ್ರಮಾಣದಲ್ಲಿ ಕಾಣಿಸತೊಡಗಿದವು. ೧೯ನೆಯ ಶತಮಾನದ ಆರಂಭದಲ್ಲಿ ಧರ್ಮಪ್ರಚಾರ ಮತ್ತು ಪ್ರಸಾರಕ್ಕಾಗಿ, ಬ್ರಿಟಿಶ್ ಸರಕಾರದ ಪ್ರತಿನಿಧಿಯಾಗಿ, ಆಡಳಿತದ ವಿವಿಧ ಇಲಾಖೆಗಳ ಮುಖ್ಯಸ್ಥರಾಗಿ ಭಾರತಕ್ಕೆ ಬಂದ ಬಾಸೆಲ್ ಮಿಷನರಿಗಳು ಇಲ್ಲಿನ ಸಂಸ್ಕೃತಿ ಸಾಹಿತ್ಯದ ಅನನ್ಯತೆಯನ್ನು ನೋಡಿ ಬೆರಗಾದರು, ಮನಸೋತರು. ಈ ಕಾರಣಕ್ಕಾಗಿ ಕನ್ನಡ ಸಾಹಿತ್ಯದ ವೈವಿಧ್ಯಮಯವಾದ ಶಾಸನ, ಕಾವ್ಯ ಮತ್ತಿತರ ದಾಖಲೆಗಳನ್ನು ಸಂಗ್ರಹಿಸಿ ಪ್ರಕಟಿಸುತ್ತ ಅವರು ಆಸಕ್ತಿ ವಹಿಸಿದುದು ಕರ್ನಾಟಕದ ಪಾಲಿಗೆ ವರವಾಗಿ ಪರಿಣಮಿಸಿತು. ಆದರೆ ಕ್ರೈಸ್ತ ಧರ್ಮದ ತತ್ವಗಳಿಗೂ ಶರಣರ ರಚನೆಗಳಿಗೂ ಸಾಮ್ಯತೆಗಳು ತೋರಿದ್ದರಿಂದ ವಚನಗಳ ಪ್ರಕಟನೆಗೆ ಅವರು ಅಷ್ಟೊಂದು ಆಸಕ್ತಿವಹಿಸಲಿಲ್ಲ. ಹೀಗಾಗಿ ಶಿವಶರಣರ ಸಾಹಿತ್ಯ ಪ್ರಕಟನೆಯಲ್ಲಿ ಸ್ವಲ್ಪ ವಿಳಂಬವಾಯಿತು. ೧೯ ನೆಯ ಶತಮಾನದ ಕೊನೆಯ ದಶಕದಲ್ಲಿ ವಚನಗಳು ಪ್ರಕಟಗೊಳ್ಳಹತ್ತಿದವು. ವಚನ ಸಾಹಿತ್ಯ ಪ್ರಕಟವಾಗುವ ಪೂರ್ವ (೧೮೮೩) ದಲ್ಲಿಯೇ ಸ್ವರವಚನ ರಚನೆಗಳ ಸಂಕಲನ ನಿಜಗುಣ ಶಿವಯೋಗಿಗಳ ಕೈವಲ್ಯ ಪದ್ಧತಿಯು (೧೮೭೩) ಬೆಳಕು ಕಂಡಿರುವುದೊಂದು ವಿಶೇಷವಾಗಿದೆ. ಬಹುಶಃ ಇದೇ ಮೊದಲ ಪ್ರಕಟಿತ ಸ್ವರವಚನ ಕೃತಿಯಾಗಿದೆ. ಹೀಗೆ ೧೩೦ ವರ್ಷಗಳ ಅವಧಿಯಲ್ಲಿ ಪ್ರಮುಖವಾಗಿ ನಾಲ್ಕು ಘಟ್ಟಗಳನ್ನು ಗುರುತಿಸಬಹುದು. ಅವುಗಳೆಂದರೆ ೧. ಆರಂಭದ ಘಟ್ಟ ೨. ಡಾ. ಎಲ್. ಬಸವರಾಜು ಘಟ್ಟ ೩. ಗದುಗಿನ ತೋಂಟದಾರ್ಯ ಮಠದ ವೀರಶೈವ ಅಧ್ಯಯನ ಸಂಸ್ಥೆಯ ಘಟ್ಟ ೪. ಮೈಸೂರು ಸುತ್ತೂರು ಮಠದ ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆಯ ಘಟ್ಟ. ಈ ಘಟ್ಟಗಳಲ್ಲಿ ನಡೆದ ಸ್ವರವಚನಗಳ ಶೋಧನೆ, ಪರಿಷ್ಕರಣೆ, ಪ್ರಕಟನೆ ಮತ್ತು ಅಧ್ಯಯನಗಳ ಇತಿಹಾಸವನ್ನು ಅವಲೋಕಿಸುವುದು ಈ ಸಂಪ್ರಬಂಧದ ಉದ್ದೇಶವಾಗಿದೆ.

೧. ಆರಂಭದ ಘಟ್ಟ

ಆರಂಭದಲ್ಲಿ ನಿಜಗುಣ ಶಿವಯೋಗಿಗಳ 'ಕೈವಲ್ಯ ಪದ್ಧತಿ', ಸರ್ಪಭೂಷಣ ಶಿವಯೋಗಿಗಳ 'ಕೈವಲ್ಯ ಕಲ್ಪವಲ್ಲರಿ', ಮುಪ್ಪಿನ ಷಡಕ್ಷರಿಯ 'ಕೈವಲ್ಯ ಪದಗಳು' ಮತ್ತು ಮೈಲಾರ ಬಸವಲಿಂಗ ಶರಣರ 'ಶಿವಾನುಭವ ದರ್ಪಣ' ಮುಂತಾದ ಸ್ವರವಚನ ಸಂಕಲನಗಳ ಕಡೆಗೆ ಹೆಚ್ಚು ಗಮನ ಹರಿಸಲಾಗಿದೆ. ಪ್ರಕಾಶಕರು, ವಿದ್ವಾಂಸರು ವಿಶೇಷ ಒಲವು ತೋರಿಸಿದ್ದಾರೆ. ಒಂದೊಂದು ಸಂಕಲನವು ಐದಾರು ಸಲ ಮರುಮುದ್ರಣಗೊಂಡಿವೆ. ಇದರಿಂದ ಆಯಾ ಕೃತಿಗಳ ಜನಪ್ರಿಯತೆ ಎಷ್ಟಿತ್ತೆಂಬುದು ಮನದಟ್ಟಾಗುತ್ತದೆ. ಕರ್ನಾಟಕ ಬುಕ್ ಡಿಪೋ, ಹೊಳೆಕಲ್ಲು ನರಸಿಂಹಯ್ಯನವರ ವಿಚಾರದರ್ಪಣ ಮುದ್ರಾಕ್ಷರ ಶಾಲೆ,

ಬೆಂಗಳೂರು ಬುಕ್ ಡಿಪೋ ಇತ್ಯಾದಿ ಮುದ್ರಕರು, ಪ್ರಕಾಶಕರು; ಗಂಗಾಧರ ಮಡಿವಾಳೇಶ್ವರ ತುರಮರಿ, ಶಿ.ಶಿ. ಬಸವನಾಳ, ಫ.ಗು.ಹಳಕಟ್ಟಿ, ಕರಿಬಸವಶಾಸ್ತ್ರಿ ಮುಂತಾದ ವಿದ್ವಾಂಸರು ಹಸ್ತಪ್ರತಿ ಒಡಲಲ್ಲಿದ್ದ ಇವುಗಳನ್ನು ಬೆಳಕಿಗೆ ತಂದದ್ದು ಸ್ವರವಚನ ಸಾಹಿತ್ಯ ಪ್ರಕಟನೆಯ ಇತಿಹಾಸದಲ್ಲಿ ಮಹತ್ವದ ಸಾಧನೆಯಾಗಿದೆ. ಇನ್ನೂ ಮುಂದುವರೆದು ದೊಡ್ಡಬೆಲೆ ನಾರಾಯಣ ಶಾಸ್ತ್ರಿ, ಸಿ. ನಂಜುಂಡಶಾಸ್ತ್ರಿ, ಸಿ. ಸುಬ್ರಮಣ್ಯಶಾಸ್ತ್ರಿ ಅವರಂಥ ಪಂಡಿತರು ಜನಸಾಮಾನ್ಯರಿಗೂ ಅರ್ಥವಾಗುವಂತೆ ಇವುಗಳಿಗೆ ಟೀಕು, ತಾತ್ಪರ್ಯಗಳನ್ನು ಬರೆದು ಪ್ರಕಟಿಸಿರುವುದು ಗಮನಾರ್ಹವೆನಿಸುತ್ತದೆ.

೨. ಡಾ. ಎಲ್. ಬಸವರಾಜು ಘಟ್ಟ

ಸ್ವರವಚನ ಸಾಹಿತ್ಯ ಪ್ರಕಟನೆಯ ಇತಿಹಾಸದಲ್ಲಿ ಒಂದು ಮೈಲುಗಲ್ಲಾಗಿದೆ. ಡಾ. ಎಲ್. ಬಸವರಾಜು ಅವರ ಶಿವದಾಸ ಗೀತಾಂಜಲಿ (೧೯೬೩). ಬಸವಾದಿ ಪ್ರಮಥರ ೨೪೦ ಹಾಡುಗಳ ಈ ಸಂಕಲನವು ಸ್ವರವಚನಗಳ ಸ್ವರೂಪ, ವ್ಯಾಪ್ತಿ ಮತ್ತು ವಿಶೇಷತೆಯನ್ನು ಸ್ಪಷ್ಟವಾಗಿ ತಿಳಿಸಿಕೊಟ್ಟ ಮೊದಲ ಕೃತಿ. ಮಹಲಿಂಗನ 'ಏಕೋತ್ತರ ಶತಸ್ಥಲ', ಜಕ್ಕಣನ 'ಏಕೋತ್ತರ ಶತಸ್ಥಲ', ಸಿದ್ದಲಿಂಗನ 'ಏಕೋತ್ತರ ಶತಸ್ಥಲ,' ಕಂಬಾಳ ಶಾಂತಮಲ್ಲೇಶನ 'ಗಣೇಶನ ರತ್ನಾವಳಿ,' 'ಶಿವಯೋಗ ಪ್ರದೀಪಿಕೆ' ಮೊದಲಾದ ಸಂಕಲನ ಗ್ರಂಥಗಳಲ್ಲಿ ಅಡಕಗೊಂಡಿದ್ದ ಸ್ವರವಚನಗಳನ್ನು ಶೋಧಿಸಿ, ಪರಿಷ್ಕರಿಸಿ, ದೀರ್ಘವಾದ ಪ್ರಸ್ತಾವನೆ, ಸಮೃದ್ಧವಾದ ಮಾಹಿತಿಯನ್ನೊಳಗೊಂಡ ಅನುಬಂಧಗಳೊಂದಿಗೆ ಸಂಪಾದಿಸಿ ಕೊಡುವಲ್ಲಿ ಬಸವರಾಜು ಅವರ ಶ್ರಮ ಕೃತಿಯುದ್ದಕ್ಕೂ ಎದ್ದು ಕಾಣುತ್ತದೆ. ಸ್ವರವಚನಗಳ ಅರ್ಥ, ಲಕ್ಷಣ, ಆಕರ, ಛಂದಸ್ಸು ಇತ್ಯಾದಿ ಸಂಗತಿಗಳನ್ನು ಕುರಿತು ಮೊದಲ ಬಾರಿಗೆ ಇಲ್ಲಿ ಚರ್ಚಿಸಲಾಗಿದೆ. ಡಾ. ಡಿ.ಎಲ್. ನರಸಿಂಹಚಾರ್ ಅವರು ಮುನ್ನುಡಿಯಲ್ಲಿ ಹೇಳಿದ ಮಾತುಗಳು ಇಲ್ಲಿ ಉಲ್ಲೇಖನೀಯ: Important collection of the songs of the siva-saranas in kannada, which he has called 'Siva-dasa-gitanjali'. The songs have been put together here from several sources for the first time, the text of the songs have been carefully edited; the ragas and the talas been indicated and a number of appendices have been added which are of great help to the understanding and appreciation of the songs. ಹೀಗಾಗಿ ಸ್ವರವಚನ ಸಾಹಿತ್ಯದ ಶೋಧನೆ, ಅಧ್ಯಯನ ಮತ್ತು ಪ್ರಕಟನೆಯಲ್ಲಿ ಡಾ. ಬಸವರಾಜು ಅವರ ಪ್ರಯತ್ನ ಏಕವ್ಯಕ್ತಿ ನೆಲೆಯಲ್ಲಿ ಗಮನಾರ್ಹವಾಗಿದೆ.

೩. ಗದುಗಿನ ತೋಂಟದಾರ್ಯ ಮಠದ ವೀರಶೈವ ಅಧ್ಯಯನ ಸಂಸ್ಥೆಯ ಘಟ್ಟ

ವೀರಶೈವ ಅಪ್ರಕಟಿತ ಸಾಹಿತ್ಯ ಪ್ರಕಟನೆಯಲ್ಲಿ ಈ ಸಂಸ್ಥೆಯು ಮಾಡುತ್ತಿರುವ ಕಾರ್ಯ ಶ್ಲಾಘನೀಯ ಮತ್ತು ಆದರ್ಶನೀಯವಾಗಿದೆ. ಡಾ. ಎಂ. ಎಂ. ಕಲಬುರ್ಗಿ ಅವರ ಸಮರ್ಥ ಮಾರ್ಗದರ್ಶನ ಮತ್ತು ನಿರ್ದೇಶನದಲ್ಲಿ ಅಪ್ರಕಟಿತ ವಚನ, ಸ್ವರವಚನ, ಕಾವ್ಯಮಾಲೆ, ವೀರಶೈವ ಸಂಶೋಧನ ಪ್ರಬಂಧಗಳ ಪ್ರಕಟನ ಮಾಲೆ, ವೀರಶೈವ ಪುಣ್ಯಪುರುಷ ಸಾಹಿತ್ಯ ರತ್ನಮಾಲೆ, ಅಭಿನಂದನ ಗ್ರಂಥಮಾಲೆ, ಅನುವಾದ ಸಾಹಿತ್ಯ ರತ್ನಮಾಲೆ, ಗ್ರಾಮೀಣ ಸಾಹಿತ್ಯ ರತ್ನಮಾಲೆ -ಹೀಗೆ ಹಲವು ಮಾಲೆಗಳ ಮೂಲಕ ನೂರಾರು ಪುಸ್ತಕಗಳನ್ನು ಪ್ರಕಟಿಸಿದ ಶ್ರೇಯಸ್ಸು ವೀರಶೈವ ಅಧ್ಯಯನ ಸಂಸ್ಥೆಗೆ ಸಲ್ಲುತ್ತದೆ. ಇಲ್ಲಿಯವರೆಗೂ ಉಪೇಕ್ಷೆಗೊಳಗಾಗಿದ್ದ ಅನೇಕ ಸ್ವರವಚನ ಸಂಕಲನಗಳನ್ನು ಶೋಧಿಸಿ, ಪರಿಷ್ಕರಿಸಿ, ಪ್ರಕಟನೆಗೆ ಅನುವುಗೊಳಿಸಲಾಯಿತು.

ಕಡಕೋಳ ಮಡಿವಾಳೇಶ್ವರ, ಕೆಸ್ತೂರದೇವ, ಕೂಡಲೂರು ಬಸವಲಿಂಗ, ಕಂಬಾಳ ಶಾಂತಮಲ್ಲೇಶ, ಗುರುಬಸವಾರ್ಯ, ಹಾಗಲವಾಡಿ ಮುದ್ದೀರಸ್ವಾಮಿ, ಶಂಕರದೇವ, ಮರಿಶಾಂತ ಬಸವದೇವ, ರಾಮಪುರದ ಬಕ್ಕಪ್ಪಯ್ಯ, ಮೋಟ್ನಹಳ್ಳಿ

ಹಸನಸಾಹೇಬ, ಕವಿಲಿಂಗ, ನೀರಲಕೆರೆ ಬಸವಲಿಂಗ, ಚೀಲಾಳ ಪ್ರಭುಸ್ವಾಮಿ ಮುಂತಾದ ಏಕವ್ಯಕ್ತಿ ಸ್ವರವಚನ ಸಂಕಲನಗಳನ್ನಲ್ಲದೆ, ಗಣವಚನ ರತ್ನಾವಳಿಯಂಥ ಬಹುವ್ಯಕ್ತಿಗಳಿಂದ ರಚನೆಗೊಂಡ ಕೃತಿಗಳೂ ಇಲ್ಲಿ ಬೆಳಕುಕಂಡಿವೆ; ಕಾಣುತ್ತಲಿವೆ. ಪಾಂಡಿತ್ಯಪೂರ್ಣವಾದ ಪ್ರಸ್ತಾವನೆ, ವ್ಯವಸ್ಥಿತ ಪಾಠಪರಿಷ್ಕರಣೆ, ಸಮೃದ್ಧ ಮಾಹಿತಿಯನ್ನೊಳಗೊಂಡ ಅನುಬಂಧಗಳು ಈ ಸಂಕಲನಗಳ ಮಹತ್ವವನ್ನು ಹೆಚ್ಚಿಸಿವೆ ; ವಿದ್ವಾಂಸರ, ಜನಸಾಮಾನ್ಯರ, ಸಂಗೀತಗಾರರ ಗಮನವನ್ನು ಸೆಳೆಯುವಲ್ಲಿ ಯಶಸ್ವಿಯಾಗಿವೆ.

ಈ ಸಂಕಲನಗಳು ಪ್ರಕಟವಾದಂತೆಲ್ಲ ಅವು ವಿದ್ವಾಂಸರಿಂದ, ಆಸಕ್ತರಿಂದ ಅಧ್ಯಯನಕ್ಕೆ ಆಕರಗಳಾದವು. ಇದರಿಂದಾಗಿ ಸ್ವರವಚನಗಳ ಅರ್ಥ, ಸ್ವರೂಪ, ವಸ್ತು ವಿಶೇಷತೆ, ಐತಿಹಾಸಿಕತೆ, ಛಂದಸ್ಸು, ಭಾಷೆ ಇತ್ಯಾದಿ ಸಂಗತಿಗಳು ಸ್ಪಷ್ಟವಾಗತೊಡಗಿದುದು ಈ ಅವಧಿಯಲ್ಲಿಯೇ ಎಂದು ಹೇಳಿದರೆ ಅತಿಶಿಯೋಕ್ತಿಯಾಗಲಾರದು. ಎಂ. ಎಂ. ಕಲಬುರ್ಗಿ, ವೀರಣ್ಣ ರಾಜೂರ, ಎಂ.ಎಸ್. ಲಠ್ಠೆ ಮುಂತಾದ ಸಂಶೋಧಕರ ಲೇಖನಗಳು, ಕೃತಿಗಳು ಸ್ವರವಚನಗಳ ಪರಂಪರೆ ಮತ್ತು ವ್ಯಾಪ್ತಿಯನ್ನು ವಿಸ್ತಾರಗೊಳಿಸಿದ್ದು, ಎಸ್. ಶಿವಣ್ಣ, ಎಸ್. ಉಮಾಪತಿ, ಬಿ.ಆರ್. ಹಿರೇಮಠ ಅವರಂಥ ಅನೇಕ ವಿದ್ವಾಂಸರು ಬಿಡಿಬಿಡಿ ರೂಪದಲ್ಲಿ, ಲೇಖನಗಳ ರೂಪದಲ್ಲಿ ಈ ಸಾಹಿತ್ಯವನ್ನು ಶೋಧಿಸಿ, ಪರಿಷ್ಕರಿಸಿ ಪ್ರಕಟಿಸಿದ್ದಾರೆ. ಹೀಗಾಗಿ ವೀರಶೈವ ಅಧ್ಯಯನ ಸಂಸ್ಥೆಯ ಈ ಘಟ್ಟವನ್ನು ಸ್ವರವಚನ ಸಾಹಿತ್ಯ ಪ್ರಕಟನೆಯ ಸುವರ್ಣಯುಗವೆಂದು ಕರೆಯಬಹುದು.

೪. ಮೈಸೂರು ಸುತ್ತೂರುಮಠದ ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆಯ ಘಟ್ಟ

ವೀರಶೈವ ಧರ್ಮ, ಸಾಹಿತ್ಯ, ಸಂಸ್ಕೃತಿಯ ಪ್ರಸಾರದಲ್ಲಿ ಸುತ್ತೂರು ಮಠವು ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆಯ ಮೂಲಕ ಹತ್ತು ಹಲವು ಕ್ರಿಯಾತ್ಮಕವಾದ ಯೋಜನೆಗಳನ್ನು ರೂಪಿಸಿ ಕಾರ್ಯಗೊಳಿಸುತ್ತಾ ನಾಡಿನ ಜನತೆಗೆ ಸಾಹಿತ್ಯದಾಸೋಹವನ್ನು ಉಣಬಡಿಸುತ್ತಲಿದೆ. ಈವರೆಗೆ ವಚನ ಸಾಹಿತ್ಯವು ಬಹುಮಟ್ಟಿಗೆ ಪೂರ್ಣಪ್ರಮಾಣದಲ್ಲಿ ಬೆಳಕುಕಂಡಿರುವುದನ್ನು ಗಮನಿಸಿದ ಶ್ರೀಮಠವು, ಶರಣರ ಇನ್ನೊಂದು ಪ್ರಕಾರವಾದ ಸ್ವರವಚನ ಸಾಹಿತ್ಯ ಪ್ರಕಟನೆಯತ್ತ ಗಮನ ಹರಿಸಿತು. ೧೯೬೩ ರಲ್ಲಿಯೇ 'ಶಿವದಾಸ ಗೀತಾಂಜಲಿ,' ಮುಪ್ಪಿನ ಷಡಕ್ಷರಿಗಳ 'ಕೈವಲ್ಯಪದ' ಕೃತಿಗಳನ್ನು ಪ್ರಕಟಿಸುವುದರ ಮೂಲಕ ಸ್ವರವಚನ ಸಾಹಿತ್ಯ ಪ್ರಕಟನೆಯಲ್ಲಿ ಮೊದಲ ಹೆಜ್ಜೆಯನ್ನಿಟ್ಟಿತ್ತು. ಇದರ ಮುಂದುವರಿಕೆಯೆಂಬಂತೆ ಈ ಸಾಹಿತ್ಯರಾಶಿಯನ್ನು ಪೂರ್ಣಪ್ರಮಾಣದಲ್ಲಿ ಪ್ರಕಟಿಸಬೇಕೆಂಬ ಉದ್ದೇಶದಿಂದ ಸಮಗ್ರ ಸ್ವರವಚನ ಸಾಹಿತ್ಯ ಪ್ರಕಟನೆ ಯೋಜನೆಯನ್ನು ೧೯೯೫ ರಲ್ಲಿ ಜಾರಿಗೆ ತಂದಿತು.

ಅಪ್ರಕಟಿತ ರೂಪದಲ್ಲಿರುವ ಲಿಖಿತ ಪರಂಪರೆಯ ಎಲ್ಲ ಸ್ವರವಚನಗಳನ್ನು ಪ್ರಕಟಿಸುವುದು, ಬೇರೆ ಬೇರೆ ಪ್ರದೇಶಗಳಲ್ಲಿ ಮೌಖಿಕ ಪರಂಪರೆಯಲ್ಲಿ ಸಿಗುವ ಸ್ವರವಚನಗಳ ಧ್ವನಿಮುದ್ರಣ ಮಾಡಿ ಸಂಪುಟಗಳಲ್ಲಿ ಪ್ರಕಟಿಸುವುದು, ಅವುಗಳನ್ನು ಹೊಸಬಗೆಯ ಮಾನದಂಡದಿಂದ ವಿಮರ್ಶಿಸುವುದು, ಸಂಗೀತ ಮಾಧ್ಯಮದಲ್ಲಿ ಪ್ರಸಾರಗೊಳಿಸುವುದು- ಈ ಯೋಜನೆಯ ಬಹುಮುಖ್ಯ ಉದ್ದೇಶವಾಗಿದೆ. ಇದರನ್ವಯ ೧೯೯೫, ೧೯೯೭ ಹೀಗೆ ಎರಡು ಹಂತಗಳಲ್ಲಿ ಹತ್ತು ಸಂಪುಟಗಳು ಪ್ರಕಟಗೊಂಡಿವೆ. ಬಸವಾದಿ ಪ್ರಮಥರು, ನಿಜಗುಣ ಶಿವಯೋಗಿ, ಮುಪ್ಪಿನ ಷಡಕ್ಷರಿ, ಬಾಲಲೀಲಾ ಮಹಾಂತ ಶಿವಯೋಗಿ, ವರತೆಯ ಸೋಮಣ್ಣ , ಸೋದೆ ಸದಾಶಿವರಾಯ, ಮಗ್ಗೆಯ ಮಾಯಿದೇವ, ಸೋಮನಕಟ್ಟೆ ಕರಿಬಸವೇಶ್ವರ, ಕಾರುಗಹಳ್ಳಿ ಶಾಂತಯ್ಯ, ಗುರುಗುಂಡ ಬಸವ -ಹೀಗೆ ಹತ್ತಾರು ಶರಣರ, ಕವಿಗಳ ಸ್ವರವಚನಗಳು ಈ ಸಂಪುಟದಲ್ಲಿವೆ. ಜೊತೆ ಜೊತೆಗೆ ಸ್ವರವಚನಗಳನ್ನು ವಿವಿಧ ಆಯಾಮಗಳಿಂದ ವಿಮರ್ಶಿಸುವ, ವಿಶ್ಲೇಷಿಸುವ ಕಾರ್ಯವೂ ಆರಂಭಗೊಂಡಿರುವುದು ಶ್ರೀಮಠದಿಂದಲೇ. ೧೯೯೭ ರಲ್ಲಿ ಪ್ರಕಟವಾದ ೧೬ ಲೇಖನಗಳನ್ನೊಳಗೊಂಡ ಸ್ವರವಚನ ವಿಚಾರ ಸಂಕಿರಣ ಸಂಪುಟವು ಈ ಸಾಹಿತ್ಯ ಕುರಿತಾದ ಅಧ್ಯಯನಗಳಲ್ಲಿಯೇ ಬಹುಮುಖ್ಯವಾದುದಾಗಿದೆ. ಲಿಖಿತ ಮತ್ತು ಮೌಖಿಕ ಪರಂಪರೆಯ ಸ್ವರವಚನಗಳನ್ನು ಸಮಗ್ರವಾದ

ದೃಷ್ಟಿಕೋನದಿಂದ ವಿಮರ್ಶೆಗೊಳಪಡಿಸಿದ್ದು ಈ ಸಂಪುಟದ ವೈಶಿಷ್ಟ್ಯವೆನಿಸುತ್ತದೆ. ಇತ್ತೀಚೆಗೆ ಗುಲ್ಬರ್ಗಾ ವಿಶ್ವವಿದ್ಯಾಲಯದಿಂದ ಈಶ್ವರಯ್ಯ ಮಠ ಅವರು ಸ್ವರವಚನ ಸಾಹಿತ್ಯವನ್ನು ಕುರಿತಂತೆ ಸಂಶೋಧನೆ ಕೈಗೊಂಡು ಪೂರ್ಣಗೊಳಿಸಿರುವುದು ಇಲ್ಲಿ ಉಲ್ಲೇಖನೀಯ. ಈ ಎಲ್ಲಾ ಸಾಧನೆಗಳು ಸ್ವರವಚನ ಸಾಹಿತ್ಯ ಪ್ರಕಟನೆಯಲ್ಲಿ ನಾಲ್ಕನೆಯ ಘಟ್ಟವೆಂದು ಗುರುತಿಸಬಹುದು.

ಹೀಗೆ ಸ್ವರವಚನ ಸಾಹಿತ್ಯದ ಪ್ರಕಟನೆ ಮತ್ತು ಅಧ್ಯಯನವು ನಾಲ್ಕು ಘಟ್ಟಗಳಲ್ಲಿ ಮುನ್ನಡೆದು ಶರಣರ ಸಾಹಿತ್ಯವೆಂದರೆ ಕೇವಲ ವಚನಗಳಷ್ಟೇ ಅಲ್ಲ, ಸ್ವರವಚನಗಳೂ ಸೇರಿವೆ ಎಂಬುದನ್ನು ಸಾಬೀತುಪಡಿಸಿದೆ.

ನಾನು ಗಮನಿಸಿದ ಸ್ವರವಚನ ಸಾಹಿತ್ಯದ ಸಂಪಾದನೆ ಮತ್ತು ಅಧ್ಯಯನಗಳ ಕೃತಿ-ಲೇಖನ ಸೂಚಿಯನ್ನು ಮಾಹಿತಿಗಾಗಿ ಇಲ್ಲಿ ಕೊಡಲಾಗಿದೆ:

ಸಂಪಾದನೆ

---, ಕೈವಲ್ಯ ಪದ್ಧತಿ, ಹೊಳೆಕಲ್ಲು ನರಸಿಂಹಯ್ಯನವರ ವಿಚಾರದರ್ಪಣ ಮುದ್ರಾಕ್ಷರ ಶಾಲೆ, ಬೆಂಗಳೂರು, ೧೮೭೩,೧೮೯೨

---, ಕೈವಲ್ಯ ಕಲ್ಪವಲ್ಲರಿ, ಬೆಂಗಳೂರು ಡಿಪೋ ಮುದ್ರಾಕ್ಷರ ಶಾಲೆ, ಬೆಂಗಳೂರು, ೧೮೮೪

---, ಕೈವಲ್ಯ ಕಲ್ಪವಲ್ಲರಿ, ಸತ್ಸಂಪ್ರದಾಯ ಕಳಾನಿಧಿ ಮುದ್ರಾಕ್ಷರ ಶಾಲೆ, ಬೆಂಗಳೂರು, ೧೮೯೦

---, ಷಡಕ್ಷರಯ್ಯನವರ ವಚನ, ಕರ್ನಾಟಕ ಬುಕ್ ಡಿಪೋ, ಬಳ್ಳಾರಿ, ೧೮೯೨

---, ಕೈವಲ್ಯ ಪದಗಳು, ಕರ್ನಾಟಕ ಬುಕ್ ಡಿಪೋ, ಬಳ್ಳಾರಿ, ೧೯೦೨

---, ಕೈವಲ್ಯ ನವನೀತ (ಆದಿ ಅಮಾತೆಪ್ಪ ಕೃತ) ಕರ್ನಾಟಕ ಬುಕ್ ಡಿಪೋ ಬಳ್ಳಾರಿ, ೧೯೧೯, ೧೯೨೯

---, ಕೈವಲ್ಯ ಪದಗಳು (ಸೋಮೆಕಟ್ಟೆ ಮಠದ ಕರಿವೃಷಭೇಂದ್ರ ಸ್ವಾಮಿಗಳು), ಶಿವಾನುಭವ ಗ್ರಂಥಮಾಲೆ ಬಿಜಾಪುರ, ೧೯೩೩

---, ಸಟೀಕಾ ಷಡಕ್ಷರಿಯ ವಚನಗಳು, ಬೆಂಗಳೂರು

ಅಕ್ಕಮಹಾದೇವಿ ಹಿರೇಮಠ, ಐನೂಲಿ ಕರಿಬಸವಾರ್ಯರ ಸ್ವರವಚನಗಳು, ವೀರಶೈವ ಅಧ್ಯಯನ ಸಂಸ್ಥೆ, ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ ಗದಗ, ೧೯೮೩

ಉಮಾಪತಿ, ಎಸ್, ಸ್ವರವಚನ ವಾಹಿನಿ, ೧೯೯೪ ವೀರಶೈವ ಅಧ್ಯಯನ ಸಂಸ್ಥೆ, ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ ಗದಗ, ೧೯೮೬ ಕಂಬಾಳ ಶಾಂತಮಲ್ಲೇಶನ ಗಣವಚನ ರತ್ನಾವಳಿ, ವೀರಶೈವ ಅಧ್ಯಯನ ಸಂಸ್ಥೆ, ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ ಗದಗ ೧೯೮೬, ಚೀಲಾಳ ಪ್ರಭುಸ್ವಾಮಿ ಸ್ವರವಚನಗಳು, ವೀರಶೈವ ಅಧ್ಯಯನ ಸಂಸ್ಥೆ, ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ ಗದಗ,೨೦೦೨

ಉಮಾಪತಿಶಾಸ್ತ್ರಿ, ಗೌ. ಮ. ಬಿಡಿ ಸ್ವರವಚನಗಳು, ಶಾರದಾ ಭವನ ಪ್ರಕಾಶನ, ಬಾಗಲಕೋಟೆ, ೧೯೬೮

ಕರಿಬಸವಶಾಸ್ತ್ರಿ, ಶಿವಯೋಗ ಪ್ರದೀಪಿಕೆ, ವೀರಶೈವ ಗ್ರಂಥಪ್ರಕಾಶನ, ಮೈಸೂರು, ೧೯೧೩

ಕಲಬುರ್ಗಿ, ಎಂ.ಎಂ, ಆದಯ್ಯನ ಲಘು ಕೃತಿಗಳು, ವೀರಶೈವ ಅಧ್ಯಯನ ಸಂಸ್ಥೆ, ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ, ೧೯೮೦

ಗಂಗಾಧರ ಮಡಿವಾಳೇಶ್ವರ ತುರಮರಿ, ಕೈವಲ್ಯ ಪದ್ದತಿ, ಸಮಾಚಾರ ಅಚ್ಚುಕೂಟ, ಬೆಳಗಾವಿ, ೧೮೭೩

ಚೆನ್ನಬಸವ ಹಿರೇಮಠ, ಬಳಗಾನೂರ ಮರಿಸ್ವಾಮಿಗಳ ಸ್ವರವಚನಗಳು, ವೀರಶೈವ ಅಧ್ಯಯನ ಕೇಂದ್ರ, ಗಚ್ಚಿನಮಠ, ಮಸ್ಕಿ, ೨೦೦೦

ಚೆನ್ನವೀರಪ್ಪ ಎಸ್.ಆರ್, ಸ್ವರವಚನ ತರಂಗ-೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೦

ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು, ಮುಪ್ಪಿನ ಷಡಕ್ಷರಿಗಳ ಕೈವಲ್ಯ ಪದ, ಜಗದ್ಗುರು ಶ್ರೀ ಶಿವರಾತ್ರೀಶ್ವರರ ಗ್ರಂಥಮಾಲೆ, ಸುತ್ತೂರುಮಠ, ಮೈಸೂರು, ೧೯೮೭

ಪೂಜಾರ, ವಿ.ಜಿ., ರಾಮಪುರ ಬಕ್ಕಪ್ಪಯ್ಯನ ಸ್ವರವಚನಗಳು, ವೀರಶೈವ ಅಧ್ಯಯನ ಸಂಸ್ಥೆ, ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ, ೧೯೯೬

ಬಸವಣ್ಣ ಪಿ. ಕೈವಲ್ಯ ಪದ್ಧತಿ (ಜೇಬು ಆವೃತ್ತಿ) ನಿಜಗುಣ ನಿಲಯ ಪ್ರಕಾಶನ, ಶಂಭುಲಿಂಗನ ಬೆಟ್ಟ, ೧೯೭೭, ೧೯೮೮

ಬಸವನಾಳ, ಶಿ.ಶಿ. ಕೈವಲ್ಯ ದರ್ಪಣ, ಮುರುಘಾಮಠ, ಧಾರವಾಡ, ೧೯೪೩, ಮೈಲಾರದ ಶ್ರೀ ಬಸವಲಿಂಗ ಶರಣರ ಸಮಗ್ರ ಕೃತಿಗಳು, ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಶ್ವರ ಗ್ರಂಥಮಾಲೆ, ಮುರುಘಾಮಠ, ಧಾರವಾಡ, ೧೯೪೫, ೧೯೫೫

ಬಸವರಾಜು, ಎಲ್. ಶಿವದಾಸ ಗೀತಾಂಜಲಿ, ಶ್ರೀ ಜಗದ್ಗುರು ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು ೧೯೬೩, ೧೯೯೦ (ಪರಿಷ್ಕೃತ ಆವೃತ್ತಿ)

ಬಸವಲಿಂಗ ಸೊಪ್ಪಿಮಠ, ನೀರಲಕೆರೆ ಬಸವಲಿಂಗ ಶರಣರ ಸ್ವರವಚನಗಳು, ವೀರಶೈವ ಅಧ್ಯಯನ ಸಂಸ್ಥೆ, ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ, ೧೯೯೯

ಬಿರಾದಾರ, ಎಂ.ಜಿ. ಮೋಟ್ನಹಳ್ಳಿ ಹಸನಸಾಹೇಬರ ತತ್ವಪದಗಳು, ವೀರಶೈವ ಅಧ್ಯಯನ ಸಂಸ್ಥೆ, ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ, ೧೯೯೭

ಭಾನುಮತಿ, ವೈ.ಸಿ. ಸ್ವರವಚನ ಸಂಪುಟ- ೪, ಶ್ರೀ ಜಗದ್ಗುರು ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು ೧೯೯೫, ಸ್ವರವಚನ ಸಂಪುಟ-೧೦, ಶ್ರೀ ಜಗದ್ಗುರು ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, ೧೯೯೭, ಕವಿಲಿಂಗನ ಪದಗಳು, ವೀರಶೈವ ಅಧ್ಯಯನ ಸಂಸ್ಥೆ, ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ, ೧೯೯೮

ಭೂಸನೂರಮಠ, ಸಂ.ಶಿ. ಘನಮಠೇಶರ ತತ್ವಪದಗಳು, ೧೯೪೫

ಮಂಜುನಾಥನ್, ಜಿ.ಜಿ, ಸ್ವರವಚನ ಸಂಪುಟ-೩ ಶ್ರೀ ಜಗದ್ಗುರು ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, ೧೯೯೫

ಮೃತ್ಯುಂಜಯ ಸ್ವಾಮಿಗಳು, ಕೈವಲ್ಯ ದರ್ಪಣ, ಮುರುಘಾಮಠ, ಧಾರವಾಡ, ೧೯೨೨

ಮಲ್ಲಾಬಾದಿ ವೀರಭದ್ರಪ್ಪ, ಕೈವಲ್ಯ ಪದ್ಧತಿ (ಸಮಗ್ರ ಹಾಗೂ ಪರಿಶುದ್ಧ ಸಂಪಾದನೆ), ಪ್ರೇಮದ ಬಳ್ಳಿಯ ಬಳಗ, ೧೯೬೭

ಮಹಾದೇವಸ್ವಾಮಿಗಳು, ಕೈವಲ್ಯ ಕಲ್ಪವಲ್ಲರಿ (ಪರಿಶುದ್ಧ ಹಾಗೂ ಶಾಸ್ತ್ರೀಯ), ಶ್ರೀ ಸರ್ಪಭೂಷಣಮಠ, ಬೆಂಗಳೂರು, ೧೯೪೮

ಮಲ್ಲಾಪುರ, ಬಿ.ವಿ., ಸ್ವರವಚನ ಸಂಪುಟ-೮, ಶ್ರೀ ಜಗದ್ಗುರು ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, ೧೯೯೭

ಮುಳಗುಂದ ಗವಿಮಠದ ಶ್ರೀ ಬಸವಲಿಂಗ ಸ್ವಾಮಿಗಳು, ಘನಮಠೇಶರ ತತ್ವಪದಗಳು: ನಾಗಭೂಷಣ ಶಿವಯೋಗಿಗಳು, ೧೯೦೮

ಮೊರಬದ ಮಲ್ಲಿಕಾರ್ಜುನ, ಗುರುಬಸವಾರ್ಯರ ಸ್ವರವಚನಗಳು, ವೀರಶೈವ ಅಧ್ಯಯನ ಸಂಸ್ಥೆ, ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ ಗದಗ, ೧೯೮೬

ರವೀಂದ್ರನಾಥ, ಕೆ., ಬಸವಯುಗದ ವಚನೇತರ ಸಾಹಿತ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ, ೨೦೦೦

ಲಕ್ಕೆ, ಎಮ್.ಎಸ್., ಕಡಕೋಳ ಮಡಿವಾಳೇಶ್ವರರ ಸ್ವರವಚನಗಳು, ವೀರಶೈವ ಅಧ್ಯಯನ ಸಂಸ್ಥೆ, ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ, ೧೯೮೨

ವಾಲಿ ಎಂ.ಎನ್, ಸಾಲೋಟಗಿ ಶ್ರೀ ಶಿವಯೋಗಿಶ್ವರ ಡಂಗುರ ಪದಗಳು, ವೀರಶೈವ ಅಧ್ಯಯನ ಸಂಸ್ಥೆ, ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ ಗದಗ, ೧೯೮೨

ವಿದ್ಯಾಶಂಕರ್, ಎಸ್. ಜಿಗುನಿ ಮರುಳದೇವರ ಕೃತಿಗಳು, ವೀರಶೈವ ಅಧ್ಯಯನ ಸಂಸ್ಥೆ, ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ ಗದಗ, ೧೯೮೩

ವೀರಣ್ಣ ರಾಜೂರ, ಹಾಗಲವಾಡಿ ಮುದ್ವೀರಸ್ವಾಮಿ ಸ್ವರವಚನಗಳು, ವೀರಶೈವ ಅಧ್ಯಯನ ಸಂಸ್ಥೆ, ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ, ೧೯೮೬, ಶಿವಯೋಗ ಪ್ರದೀಪಿಕೆ, ವೀರಶೈವ ಅಧ್ಯಯನ ಸಂಸ್ಥೆ, ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ, ೧೬೮೧, ಸ್ವರವಚನ ಸಂಪುಟ-೯, ಶ್ರೀ ಜಗದ್ಗುರು ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, ೧೯೯೭

ಶಾಂತರಸ, ಕೂಡಲೂರು ಬಸವಲಿಂಗ ಶರಣರ ಸ್ವರವಚನಗಳು, ವೀರಶೈವ ಅಧ್ಯಯನ ಸಂಸ್ಥೆ, ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ ಗದಗ, ೧೯೮೩

ಶಿವಣ್ಣ, ಎಸ್. ಶಂಕರದೇವರ ಸ್ವರವಚನಗಳು, ವೀರಶೈವ ಅಧ್ಯಯನ ಸಂಸ್ಥೆ, ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ, ೧೯೮೭, ಮರಿಶಾಂತದೇವರ ಸ್ವರವಚನಗಳು ವೀರಶೈವ ಅಧ್ಯಯನ ಸಂಸ್ಥೆ, ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ, ೧೯೮೮, ಸ್ವರವಚನ ಸಂಪುಟ-೧ ಶ್ರೀ ಜಗದ್ಗುರು ಶಿವರಾತ್ರೀಶ್ವರ ಗಂಥಮಾಲೆ, ಮೈಸೂರು, ೧೯೯೫, ಸ್ವರವಚನ ಸಂಪುಟ-೧ ಶ್ರೀ ಜಗದ್ಗುರು ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, ೧೯೯೫, ಶ್ರೀಗುರು ಬಸವೇಶಾಂಕಿತದ ಸ್ವರವಚನಗಳು, ವೀರಶೈವ ಅಧ್ಯಯನ ಸಂಸ್ಥೆ, ಜಗದ್ಗುರು ತೋಂಟಾದಾರ್ಯ ಸಂಸ್ಥಾನಮಠ, ಗದಗ, ೨೦೦೨

ಶಿವರಾಜ, ಎಂ. ದೇವಪ್ಪ, ಸ್ವರವಚನ ಸಂಪುಟ- ೭, ಶ್ರೀ ಜಗದ್ಗುರು ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, ೧೯೯೭

ಶಿವಲಿಂಗಯ್ಯ. ಜಿ.ಎ., ಗಂಗೇಶ ಸ್ವರವಚನಗಳು, ಶಿವಕವಿ ಪ್ರಕಾಶನ, ಮೈಸೂರು, ೧೯೮೧, ಕೈವಲ್ಯ ಸೋಪಾನ, ಮಲೆನಾಡು ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ಮುರುಘರಾಜೇಂದ್ರ ಸಂಸ್ಥಾನಮಠ, ಆನಂದಪುರಂ, ೧೯೮೩

ಶಿವಾನಂದ ವಿರಕ್ತಮಠ, ವಚನ ಸ್ವರವಚನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೧೦೦೨s

ಶ್ರೀ ಸಿದ್ಧಾಶ್ರಮದ ಶ್ರೀ ಜಹಾಕೃಷ್ಣಾನಂದ ಸ್ವಾಮಿಗಳು, ಕೈವಲ್ಯ ಪದ್ಧತಿ, (ನಿಜಗುಣ ಶಿವಯೋಗಿ ವಿರಚಿತ ವೇದಾಂತ ಗ್ರಂಥಾವಳಿಯ ಒಂದು ಭಾಗ), ಹುಬ್ಬಳ್ಳಿ, ೧೯೪೧

ಶೇಷಗಿರಿ. ಕೆ.ಆರ್., ಸ್ವರವಚನ ಸಂಪುಟ-೫, ಶ್ರೀ ಜಗದ್ಗುರು ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, ೧೯೯೫

ಸದಾಶಿವ ಶಿವಾಚಾರ್ಯ ಸ್ವಾಮಿಗಳು, ಕೈವಲ್ಯ ಪದ್ಧತಿ, (ಯೋಗಪ್ರತಿಪಾದನಾ ಸ್ಥಲ), ಶ್ರೀ ಗುರು ಕುಮಾರಾಶ್ರಮ, ಗಿರಿಯಾಪುರ, ೧೯೬೩

ಸಂತೆಕೆಲೂರ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು, ಘನಮಠೇಶರ ತತ್ವಪದಗಳು, ೧೯೭೦

ಸುಂಕಾಪುರ, ಎಂ.ಎಸ್., ಕೆಸ್ತೂರದೇವನ ಸ್ವರವಚನಗಳು, ವೀರಶೈವ ಅಧ್ಯಯನ ಸಂಸ್ಥೆ, ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ ಗದಗ, ೧೯೮೨

ಹರ್ಡೇಕರ ಮಂಜಪ್ಪ ಸುಬೋಧಸಾರ (ಮುಪ್ಪಿನ ಷಡಕ್ಷರಿಸ್ವಾಮಿಗಳ ಹಾಡುಗಳು) ವೀರಶೈವ ವಿದ್ಯಾಲಯ, ಆಲಮಟ್ಟಿ, ೧೯೪೦

ಹಳಕಟ್ಟಿ, ಫ.ಗು. ಮೈಲಾರ ಬಸಪ್ಪನವರ ಶಿವಾನುಭವ ದರ್ಪಣ, ಶಿವಾನುಭವ ಗ್ರಂಥಮಾಲೆ, ಬಿಜಾಪುರ, ೧೯೨೯,

ಹಳ್ಳಿಕೇರಿ, ಎಫ್.ಟಿ. ಕರಸ್ಥಲ ಸಾಹಿತ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೦, ಬಸವಣ್ಣನವರ ಸ್ವರವಚನ ಮತ್ತು ಕಾಲಜ್ಞಾನ ಸಾಹಿತ್ಯ, ಶ್ರೀ ಬಸವೇಶ್ವರ ಪೀಠ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೨೦೦೩

ಹಿರೇಮಠ, ಎಸ್.ಎಂ. ಸ್ವರವಚನ ಸಂಪುಟ-೬, ಶ್ರೀ ಜಗದ್ಗುರು ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು ೧೯೯೭

ಟೀಕುಗಳು

ದೊಡ್ಡಬೆಲೆ ನಾರಾಯಣಶಾಸ್ತ್ರಿಯವರ ಟೀಕು, ಸಟೀಕು ಕೈವಲ್ಯ ಕಲ್ಪವಲ್ಲರೀ, ಕರ್ನಾಟಕ ಬುಕ್ ಡಿಪೋ ಬಳ್ಳಾರಿ, ೧೮೯೧

ಸಿ. ಸುಬ್ರಹ್ಮಣ್ಯಶಾಸ್ತ್ರಿಗಳು ಬರೆದ ತಾತ್ಪರ್ಯ, ಕೈವಲ್ಯ ಪದ್ಧತಿ: ಕರ್ನಾಟಕ ಬುಕ್‌ಡಿಪೋ ಬಳ್ಳಾರಿ, ೧೯೨೭

ಸಿ. ನಂಜುಂಡಶಾಸ್ತ್ರಿಗಳ ಟೀಕು, ಕೈವಲ್ಯ ಪದ್ಧತಿ, ಕರ್ನಾಟಕ ಬುಕ್‌ಡಿಪೋ ಬಳ್ಳಾರಿ, ೧೯೩೭

ಮಿರ್ಲೆ ನಂಜುಂಡಯ್ಯನವರ ಟೀಕು, ಸಟೀಕಾ ಕೈವಲ್ಯ ಪದ್ಧತಿ, ಕೃಷ್ಣ ಮಂದಿರ ಬುಕ್‌ಡಿಪೋ ಬಳ್ಳಾರಿ,

ನಾಗಭೂಷಣಶಾಸ್ತ್ರಿ, ಪಂ. ಕೈವಲ್ಯ ಪದ್ಧತಿ ಸಟೀಕು, ಶ್ರೀ ರುದ್ರಾಕ್ಷಿಮಠ ಹುಬ್ಬಳ್ಳಿ, ೧೯೮೫

ನಾಗೇಶ ಶಾಸ್ತ್ರೀ, ವೈ. ಕೈವಲ್ಯ ಕಲ್ಪವಲ್ಲರಿ (ಭಾವಾರ್ಥ ಬೋಧಿನಿ ಟೀಕೆ ಸಹಿತ) ಬಾಲಲೀಲಾ ಮಹಾಂತ ಶಿವಯೋಗಿಶ್ವರ ಗ್ರಂಥಮಾಲೆ, ಮುರುಘಾಮಠ, ಧಾರವಾಡ, ೧೯೭೨

ಗ್ರಂಥಗಳು

ಕಲಬುರ್ಗಿ, ಎಂ.ಎಂ., (ಸಂ) ಸ್ವರವಚನ ವಿಚಾರ ಸಂಕಿರಣ ಸಂಪುಟ, ಶ್ರೀ ಜಗದ್ಗುರು ಶಿವರಾತ್ರೀಶ್ವರ ಗ್ರಂಥಮಾಲೆ, ಜೆ.ಎಸ್.ಎಸ್. ಮಹಾವಿದ್ಯಾಪೀಠ, ಮೈಸೂರು, ೧೯೯೭

ವೀರಣ್ಣ ರಾಜೂರ, ಸ್ವರವಚನಗಳು, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೯೯

ಲತೈ ಎಂ.ಎಸ್., ಸ್ವರವಚನಗಳು: ಒಂದು ವಿವೇಚನೆ, ಅಖಿಲ ಭಾರತ ಸಾಹಿತ್ಯ ಪರಿಷತ್ತು, ಮೈಸೂರು, ೨೦೦೦

ಮಹಾದೇವಯ್ಯ ಟಿ.ಆರ್. ವೀರಶೈವ ವಾಗ್ಗೇಯಕಾರರು. ಅನ್ನದಾನೇಶ್ವರಮಠ, ಮುಂಡರಗಿ.

ಲೇಖನಗಳು

ಉಮಾಪತಿ, ಎಸ್. ಹಿರಿಯಣಾಚಾರ್ಯ ವಿರಚಿತ ಸ್ವರವಚನಗಳು, ಬಸವಪಥ ೮-೯, ೧೯೮೬

ಉಷಾಕಿರಣ್, ಸ್ವರವಚನಗಳಲ್ಲಿ ಪ್ರತಿಮೆಗಳು, ಭೂಷಣ (ಶ್ರೀ ಸರ್ಪಭೂಷಣ ಶಿವಯೋಗಿಗಳ ದ್ವಿಶತಮಾನೋತ್ಸವ ಸಂಸ್ಮರಣ ಸಂಪುಟ), ೧೯೯೯

ಕಲಬುರ್ಗಿ, ಎಂ.ಎಂ., ವೀರಶೈವ ಸ್ವರವಚನ ಸಾಹಿತ್ಯ, ಗೌರವ (ಸಂ.ಶಿ. ಭೂಸನೂರಮಠ ಅಭಿನಂದನ ಗ್ರಂಥ), ೧೯೯೩, ಬಸವಪಥ ೧೭-೩

ಗಿರಿರಾಜು, ಪಿ.ಎಂ. ವೀರಶೈವ ಹಾಡುಗಬ್ಬಗಳು, ಸಿದ್ದಗಂಗಾಶ್ರೀ, ಹಳೆಯ ವಿದ್ಯಾರ್ಥಿಗಳ ಸಂಘ, ಸಿದ್ದಗಂಗಾಮಠ, ತುಮಕೂರು, ೧೯೮೧

ಗುರುಲಿಂಗ ಕಾಪಸೆ, ಸ್ವರವಚನಗಳ ಸಾಹಿತ್ಯಕ ಮೌಲ್ಯ, ಭೂಷಣ (ಶ್ರೀ ಸರ್ಪಭೂಷಣ ಶಿವಯೋಗಿಗಳ ದ್ವಿಶತಮಾನೋತ್ಸವ ಸಂಸ್ಮರಣ ಸಂಪುಟ), ೧೯೯೯

ಚೆನ್ನಕ್ಕ ಪಾವಟೆ, ಹೇಮಗಲ್ಲ ಹಂಪನ ಸ್ವರವಚನ ಸಾಹಿತ್ಯ, ಅಮರವಾಣಿ (ಎಂ.ಜಿ. ನಂಜುಂಡಾರ್ಯರ ಸಂಸ್ಮರಣ ಗ್ರಂಥ) ೧೯೯೪

ಚೆನ್ನಮಲ್ಲಿಕಾರ್ಜುನರು, ಶಿವಯೋಗ ಪ್ರದೀಪಿಕೆ, ಸದ್ಧರ್ಮ ದೀಪಿಕೆ ಸಂ. ೩೮,

ನಂಜುಂಡಸ್ವಾಮಿ, ಬಿ. ಸ್ವರವಚನಕಾರ ಹೊನ್ನಕವಿ, ಬಸವಪಥ ೧೮-೧,೧೯೯೬

ನಾಗರಾಜು, ವಿ. ಸ್ವರವಚನಗಳ ಸುತ್ತಮುತ್ತ, ಸ್ವಪ್ನಲೋಕ ೧-೩,೨೦೦೨

ನಾರಾಯಣ, ಪಿ.ವಿ. ವಚನಗಳು ಮತ್ತು ಸ್ವರವಚನಗಳು: ಶಿಲ್ಪರಚನೆ, ಭೂಷಣ (ಶ್ರೀ ಸರ್ಪಭೂಷಣ ಶಿವಯೋಗಿಗಳ ದ್ವಿಶತಮಾನೋತ್ಸವ ಸಂಸ್ಮರಣ ಸಂಪುಟ), ೧೯೯೯

ನಾರಾಯಣ ಪ್ರಸಾದ, ಕೆ.ಜಿ. ಸ್ವರವಚನಗಳಲ್ಲಿ ಛಂದೋರೂಪಗಳು, ಭೂಷಣ (ಶ್ರೀ ಸರ್ಪಭೂಷಣ ಶಿವಯೋಗಿಗಳ ದ್ವಿಶತಮಾನೋತ್ಸವ ಸಂಸ್ಮರಣ ಸಂಪುಟ), ೧೯೯೯

ನೇಗಿನಹಾಳ ಎಂ.ಬಿ. ಬಸವಯುಗದ ಸ್ವರವಚನ ಸಾಹಿತ್ಯ, ನೇಗಿನಹಾಳ ಪ್ರಬಂಧಗಳು, ಪ್ರಸಾರಾಂಗ, ಕನ್ನಡ ವಿ.ವಿ., ೧೯೯೯

ಪರಮಶಿವಮೂರ್ತಿ, ಡಿ.ವಿ. ನೂರೊಂದು ವಿರಕ್ತರ ಸ್ವರವಚನಗಳು, ಭೂಷಣ (ಶ್ರೀ ಸರ್ಪಭೂಷಣ ಶಿವಯೋಗಿಗಳ ದ್ವಿಶತಮಾನೋತ್ಸವ ಸಂಸ್ಮರಣ ಸಂಪುಟ), ೧೯೯೯

ಪೂಜಾರ, ಎ.ಜಿ. ವಚನಗಳು, ಸ್ವರವಚನಗಳು -ಒಂದು ವಿವೇಚನೆ, ಬಸವಪಥ ೧೧-೨, ೧೯೮೯, ಮಡಿವಾಳಪ್ಪನವರ ಸ್ವರವಚನಗಳಲ್ಲಿ ಕಾವ್ಯಾಂಶಗಳು, ಸಂತುಷ್ಟಿ (ಎಂ.ಎಸ್. ಲಠ್ಠೆ ಅಭಿನಂದನ ಗ್ರಂಥ), ೧೯೯೩

ಬಸವರಾಜ ಮಲಶೆಟ್ಟಿ, ಅಕ್ಕನಾಗಮ್ಮನ ಹಾಡು, ಬಸವಪಥ ೫-೬, ೧೯೮೩, ೧೫-೭,೮,೯, ೧೯೯೩, ಸ್ವರವಚನ ಸಾಹಿತ್ಯ : ಒಂದು ಮರುವಿಚಾರ, ಸಂಕ್ರಮಣ ೩೧೮-೩೧೯, ೧೯೯೯

ಬಸವರಾಜ ಹೂಗಾರ, ಸಮಗ್ರ ವೀರಶೈವ ಅಪ್ರಕಟಿತ ಪ್ರಾಚೀನ ಸಾಹಿತ್ಯ ಪ್ರಕಟನ ಮಾಲೆ : ಸ್ವರವಚನ ಸಂಪುಟಗಳು, ಕಲ್ಯಾಣದ ಹಾದಿ (ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳ ಅಭಿನಂದನ ಗ್ರಂಥ), ೧೯೯೯

ಬಸವರಾಜು, ಎಲ್. ಶಿವದಾಸ ಗೀತೆಗಳು, ಬಸವಪಥ ೫-೪, ೧೯೮೩

ಬಿರಾದಾರ, ಎಂ.ಜಿ. ಸ್ವರವಚನ : ಒಂದು ಸಾಹಿತ್ಯ ರೂಪ, ಜ್ಞಾನದೇಗುಲ (ಶ್ರೀ ವೇ. ಡಾ. ಪುಟ್ಟರಾಜ ಗವಾಯಿಗಳವರ ಅಭಿನಂದನ ಗ್ರಂಥ), ೧೯೮೯

ಭಾನುಮತಿ, ವೈ.ಸಿ. ತೋಂಟದ ಸಿದ್ಧಲಿಂಗಯುಗದ ಸ್ವರವಚನ ಸಾಹಿತ್ಯ, ಆಲಿನುಂಗಿದ ನೋಟ, ಮೈಸೂರು, ೨೦೦೨

ಭೂಸರೆಡ್ಡಿ ಎಸ್.ಎಸ್. ಮತ್ತು ವೀರಣ್ಣ ರಾಜೂರ, ನಿಜಗುಣದೇವನ ಒಂದು ಹೊಸ ಸ್ವರವಚನ, ಸಾಧನೆ ೭-೨, ೧೯೭೮, ಹೊಸದಾಗಿ ದೊರೆತ ಮೂರು ಸ್ವರವಚನಗಳು, ಕರ್ನಾಟಕ ಭಾರತಿ ೧೦-೪, ೧೯೭೮

ಮಧು ವೆಂಕಾರೆಡ್ಡಿ, ವರಳಕ್ಕಿಯ ಪದ ಸ್ವರವಚನ, ಬಸವಪಥ ೫-೧, ೧೯೮೩

ಮಲ್ಲಾಪುರ, ಬಿ.ವಿ. ಸ್ವರವಚನಗಳು: ಛಂದೋವಿಚಾರ, ಸುಧಾರ್ಣವ, ೧೯೯೮, ಶ್ರೀ ಬುದ್ದಯ್ಯ ಪುರಾಣಿಕ ಅವರು ಶೋಧಿಸಿ ಪ್ರಕಟಿಸಿದ ಸ್ವರವಚನಗಳು : ಒಂದು ಪರಿಚಯ, ಭೂಷಣ (ಶ್ರೀ ಸರ್ಪಭೂಷಣ ಶಿವಯೋಗಿಗಳ ದ್ವಿಶತಮಾನೋತ್ಸವ ಸಂಸ್ಮರಣ ಸಂಪುಟ), ೧೯೯೯

ಮಹಂತಯ್ಯ ಎಚ್.ಆರ್. ಸೋಮೆಕಟ್ಟೆ ಕರಿವೃಷಭೇಂದ್ರ ಕೈವಲ್ಯ ಪದಗಳು, ಶಿವಾನುಭವ ೯-೩, ೧೯೩೩

ರವೀಂದ್ರನಾಥ ಕೆ., ಡಾ. ಲಠ್ಠೆ ಸಂಪಾದಿತ ಕಡಕೋಳ ಮಡಿವಾಳೇಶ್ವರ ಸ್ವರವಚನಗಳು, ಸಂತುಷ್ಟಿ (ಎಂ.ಎಸ್. ಲಠ್ಠೆ ಅಭಿನಂದನ ಗ್ರಂಥ,) ೧೯೯೩ ವೀರಣ್ಣ ದಂಡೆ, ಮೌಖಿಕ ಸ್ವರವಚನಗಳ ಸ್ವರೂಪ, ದೇಶೀ ದೃಷ್ಟಿ, ೨೦೦೧

ವೀರಣ್ಣ ರಾಜೂರ, ಅಜ್ಞಾತ ವಚನಕಾರನ ಒಂದು ಅಪ್ರಕಟಿತ ಸ್ವರವಚನ, ತರಳಬಾಳು ೩-೪, ಇತ್ತೀಚೆಗೆ ದೊರೆತ ಹತ್ತು ಸ್ವರವಚನಗಳು, ಬಸವಪಥ ೧-೧, ೧೯೭೯, ಪ್ರಭುದೇವರ ದಶಲಿಂಗಾರ್ಚನೆಯ ಪದ, ಹೇಮಕೂಟ ಮೇ ೧೯೮೦, ವೀರಣ್ಣದೇವರ ಮತ್ತೊಂದು ಸ್ವರವಚನ, (ಪಂ. ನಾಗಭೂಷಣಶಾಸ್ತ್ರಿ ಅವರ ಅಭಿನಂದನ ಗ್ರಂಥ), ೧೯೮೦, ಮುದ್ವೀರಸ್ವಾಮಿಯ ಏಳು ಸ್ವರವಚನಗಳು, ಬಸವಪಥ ೨-೨ ೧೦೮೦, ಶಂಕರದೇವನ ಮತ್ತೊಂದು ಸ್ವರವಚನ, ಬಸವಪಥ ೩-೪,೧೯೮೧, ಐದು ಹೊಸ ಸ್ವರವಚನಗಳು, ಬಸವಪಥ ೧೮-೧,೧೯೮೫, ನಿಜಗುರು ಸಿದ್ಧಲಿಂಗ ಅಂಕಿತದ ಒಂದು ಸ್ವರವಚನ, ಕರ್ನಾಟಕ ಭಾರತಿ ೨೪-೩, ೧೯೯೨, ಸ್ವರವಚನ ಸಾಹಿತ್ಯ, ಕನಕಸಿರಿ (ಅಖಿಲ ಭಾರತ ೬೭ ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸ್ಮರಣ ಸಂಚಿಕೆ), ೧೯೯೯

ಶಕುಂತಲಾ ಪಾಟೀಲ, ಹಡಪದ ಅಪ್ಪಣ್ಣಗಳ ಪುಣ್ಯಸ್ತ್ರೀ, ಲಿಂಗಮ್ಮನವರ ಸ್ವರವಚನ, ಬಸವಪಥ ೪-೫,೧೯೮೨, ತಾರಕಿ ಅಂಕಿತದ ಸ್ವರವಚನಗಳು, ಬಸವಪಥ ೧೮-೨,೧೯೯೬

ಶಿವಣ್ಣ ಎಸ್. ಶಿವಯೋಗ ಪ್ರದೀಪಿಕೆಯ ಹಾಡೊಂದನ್ನು ಕುರಿತು, ಸಾಧನೆ ೬-೧,೧೯೭೭, ಗುರು ಬಸವೇಶಾಂಕಿತ ಸ್ವರ ಬೊಲ್ಲಿಗಳು, ಬಸವಪಥ ೨-೫, ೧೯೮೦, ಚೀಲಾಳೇಶ್ವರ ಅಂಕಿತದ ಸ್ವರವಚನಗಳು, ಬಸವಪಥ ३-೯, ೧೯೮೧, ಮಲ್ಲೇಶ್ವರಾಂಕಿತ ಸ್ವರವಚನ, ಬಸವಪಥ ೪-೮,೧೯೮೨, ಎರಡು ಸ್ವರವಚನಗಳು, ಲೋಚನ ३-೨, ೧೯೮೫, ಮಗ್ಗೆಯ ಮಾಯಿದೇವನ ಸ್ವರವಚನಗಳು, ಲೋಚನ ३-೨, ೧೯೮೫, ಬೆಂಗಳೂರು ಮುದ್ವೀರಸ್ವಾಮಿ ಸ್ವರವಚನಗಳು, ಬಸವಪಥ ೬-೧೦, ೧೯೮೫, ಮೂರು ಅಪ್ರಕಟಿತ ಸ್ವರವಚನಗಳು, ಬಸವಪಥ ೧೧-೧, ೧೯೮೯, ಶಂಕರದೇವರ ಮತ್ತೆರಡು ಅಪ್ರಕಟಿತ ಸ್ವರವಚನಗಳು ಮತ್ತು ತೋಂಟದಾರ್ಯ ಮತ್ತು ಸ್ಕಂದಕಲ್ಯಾಣದೊಳಗಣ ಚೌಪದಿ ವರ್ನದ ಶಿವಸ್ತೋತ್ರ, ಚಿನ್ಮೂಲಾದ್ರಿಯ ಚೇತನ, ಪೀಠಾರೋಹಣ ರಜತಮಹೋತ್ಸವ ಸಮಿತಿ, ಚಿತ್ರದುರ್ಗ, ೧೯೮೯, ಕೆಂಪುಕಂಬಳಿ ಬಸವಲಿಂಗೇಶಾಂಕಿತದ ಸ್ವರವಚನಗಳು, ಬಸವಪಥ ೧೧-೮,೧೯೮೯, ೧३-೬, ೧೯೯೧, ೧३-೭, ೧೯೯೧, ಆರು ಅಪ್ರಕಟಿತ ಸ್ವರವಚನಗಳು, ಲೋಚನ, ३-೨, ೧೯೯೦, ಶಿವಪೂಜೆದೇವ ಶಿವಪೂಜೇಶಾಂಕಿತದ ಎರಡು ಸ್ವರವಚನಗಳು, ಬಸವಪಥ ೧೨-೧೧-೧೯೯೧, ಆರೂಢ ಮಲ್ಲಾಂಕಿತದ ಮೂರು ಸ್ವರವಚನಗ್ಗಳು, ಬಸವಪಥ ೧३-೮, ೧३-೯, ೧೯೯೧, ಅಪ್ರಕಟಿತ ಐದು ಸ್ವರವಚನಗಳು, ಬಸವಪಥ ೧೪-೧, ೧೪, ೧೯೯೨, ಕೆಲವು ಅಪ್ರಕಟಿತ ಸ್ವರವಚನಗಳು, ಕರ್ನಾಟಕ ಭಾರತಿ ೨೫-೧, ೧೯೯೨, ಮೂರು ಅಪ್ರಕಟಿತ ಸ್ವರವಚನಗಳು, ಬಸವಪಥ ೧೮-೯, ೧೯೯೬, ಸ್ವರವಚನ ಸಂಕಲನಗಳು, ಭೂಷಣ (ಶ್ರೀ ಸರ್ಪಭೂಷಣ ಶಿವಯೋಗಿಗಳ ದ್ವಿಶತಮಾನೋತ್ಸವ ಸಂಸ್ಮರಣ ಸಂಪುಟ), ೧೯೯೯, ಮಹದೇವಿಯಕ್ಕನ ಒಂದು ಅಪೂರ್ಣ ಅಪ್ರಕಟಿತ ಸ್ವರವಚನ, ಸ್ವಪ್ನಲೋಕ ೧-೧೧, ೨೦೦३

ಶಿವಲಿಂಗಯ್ಯ, ಜಿ.ಎ. ಗಂಗೇಶ ಅಂಕಿತದ ಸ್ವರವಚನಗಳು, ಬಸವಪಥ ೧-೨,೧೯೭೯

ಶಿವಾನಂದ, ಎ. ಪರುಕ್ಷಿಯ ಹಾಡುಗಳು, ಬಸವಪಥ ೧-೪೪, ೧೯೯೨

ಹಳಕಟ್ಟಿ, ಫ.ಗು. ಹಡಪದ ಅಪ್ಪಣ್ಣನ ಸ್ವರವಚನ ಮತ್ತು ಪದಮಂತ್ರಗೋಪ್ಯ, ಶಿವಾನುಭವ ೧೫,೧೦, ೧೧, ೧೯೯೨

ಹಳ್ಳಿಕೇರಿ, ಎಫ್.ಟಿ. ಸ್ವರವಚನಗಳಲ್ಲಿ ಹಂಪೆ ವಿಜಯನಗರ, ವಿಜಯನಗರ ಅಧ್ಯಯನ ಸಂಪುಟ ೭, ೨೦೦३, ಸ್ವರವಚನ ಸಾಹಿತ್ಯ : ಸಂಪಾದನೆ ಮತ್ತು ಅಧ್ಯಯನದ ಇತಿಹಾಸ, ಕನ್ನಡ ಅಧ್ಯಯನ ಸಂಸ್ಥೆ, ೧೦-೧, ೨೦೦೪

ಹಿರೇಮಠ, ಬಿ.ಆರ್. ಕರಸ್ಥಲ ನಾಗಿದೇವನ ಆರು ಸ್ವರವಚನಗಳು, ಬಸವಪಥ, ೫-೪, ೧೯೮३, ಗುಂಡಬಸವನನ್ನು ಕುರಿತ ಸ್ವರವಚನಗಳು, ಕರ್ನಾಟಕ ಭಾರತಿ ೧೯-೨, ೧೯೮೬, ನಾಗಾವಿ ಶರಣ ಗುಂಡಬಸವನ ಅಂಕಿತದಲ್ಲಿರುವ ಸ್ವರವಚನಗಳು, ಬಸವಪಥ ೮-೬, ೧೯೮೬, ೮-೧೨, ೯-೧, ೯-೨, ೯-३, ೯-೪, ೫, ೯-೬, ೯-೭, ೯-೮, ೧೯೮೭, ಸೋದೆ ಸದಾಶಿವರಾಯನ ಸ್ವರವಚನಗಳಲ್ಲಿ ಐತಿಹಾಸಿಕ ಸಂಗತಿಗಳು, ಕರ್ನಾಟಕ ಭಾರತಿ ೨೪-೧,೧೯೯೧, ನೂರೊಂದು ವಿರಕ್ತಯುಗದ ಸ್ವರವಚನ ಸಾಹಿತ್ಯ, ವೀರಶೈವ ಸಂಪದ, ೧೯೯೮.

■■

ಶೂನ್ಯಸಂಪಾದನೆ

✍ ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯ

ಶೂನ್ಯಸಂಪಾದನೆ ಎಂಬ ಶಬ್ದವೇ ವಚನಪರಂಪರೆಯ ಒಂದು ಸಮಾಸ ಪದ. ವಚನಕಾರರು ತಾವು ರೂಪಿಸಿದ ಹಲವಾರು ಮೌಲ್ಯಗಳಲ್ಲಿ ಶೂನ್ಯಸಂಪಾದನೆ ಎನ್ನುವುದೂ ಒಂದು.

ಈ ಪರಿಕಲ್ಪನೆಯನ್ನು ಕುರಿತು ಚಿಂತಿಸುವಾಗ ತಟ್ಟನೆ ನಮ್ಮೆದುರು ಸುಳಿಯುವುದು ಹದಿನೈದನೆ ಶತಮಾನದ ಸಂಗೋಪನ ಯುಗ. ಒಂದರ್ಥದಲ್ಲಿ ಅದು ಸಂಕಲನದ ಯುಗ ಕೂಡ ಹೌದು.

ಹನ್ನೆರಡನೆಯ ಶತಮಾನದ ಶರಣರ ಕ್ರಾಂತಿ ಸಮಾಜೋಧಾರ್ಮಿಕ ಸಾಹಿತ್ಯಿಕ ಮೌಲ್ಯಗಳನ್ನು ಅನ್ವೇಷಿಸುವ ಮಹಾಯತ್ನದಿಂದ ಕೂಡಿದ್ದು ಅಂದಿನ ಶರಣರು ತಮ್ಮ ಬದುಕಿನ ಮೂಲಕ ಆ ಕ್ರಾಂತಿಗೆ ಶಕ್ತಿ ತುಂಬಿದುದೇ ಅಲ್ಲದೆ ಆ ಕ್ರಾಂತಿ ಸ್ಥಾಯಿಯಾಗುವಂತೆ ವಚನಗಳನ್ನು ರಚಿಸಿದರು. ಆ ವಚನಗಳು ಮತ್ತೆ ಶರಣರ ಹಾಗೆಯೇ ಸಾಹಿತ್ಯಕ್ಕಿಂತ ಪ್ರಧಾನವಾಗಿ ಬದುಕಿನ ಮೌಲ್ಯಗಳ ಕಡೆಗೆ ಮುಖ ಮಾಡಿದ್ದುವು. ಅದೃಷ್ಟವೆಂದರೆ ಅಂಥ ವಚನಗಳನ್ನು ಬರೆದವರು ಕನ್ನಡ ಸಂಸ್ಕೃತ ಸಾಹಿತ್ಯಗಳ ಪರಂಪರೆಯನ್ನು ಅರಗಿಸಿಕೊಂಡಿದ್ದರು. ಪುಣ್ಯಕ್ಕೆ ಎಂಬಂತೆ ಅವರಲ್ಲಿ ನೂರಾರು ಜನ ಪ್ರತಿಭಾವಂತರೂ ಆಗಿದ್ದರು. ಹೀಗಾಗಿ ವಚನಕಾರರ ವಚನ ಚಳುವಳಿಯು ಸಮಾಜೋಧಾರ್ಮಿಕ ಸಾಹಿತ್ಯಿಕ ಸಿದ್ಧಿಗಳನ್ನು ಪರ್ಯವಸಾನವಾದದ್ದು ಕನ್ನಡದ ಪುಣ್ಯ. ಸಾಲದುದಕ್ಕೆ ವಚನಕಾರರು ತಾವು ಬಸವಣ್ಣನವರ ನೇತೃತ್ವದಲ್ಲಿ ಪಡೆದ ಸೃಜನಾತ್ಮಕ ವಾತಾವರಣದಲ್ಲಿ ಉಸಿರಾಡಿ ವಚನಗಳಿಗೆ ಪ್ರಾಣದಾನ ಮಾಡಿದರು. ಅಂಥ ವಚನಕಾರರಲ್ಲಿ ಬಹುತೇಕ ಜನರು- ಸಮಾಜದ ಕೇಳಸ್ತರಕ್ಕೆ ಸೇರಿದವರಾಗಿದ್ದು ಪ್ರಾತಿಭವಾಗಿ ಅವರು ಯಾವ ದೃಷ್ಟಿಯಲ್ಲೂ ಕಡಿಮೆಯ ಮಟ್ಟದವರಾಗಿಲ್ಲದುದು ಅಪರೂಪದ ಸಂಗತಿ.

ಇಷ್ಟೇ, ಇಷ್ಟೆಲ್ಲ ಅದ್ಭುತಗಳನ್ನು ಮಾಡಿ ಕನ್ನಡದ ಭಾಷೆ ಹಾಗೂ ಸಾಹಿತ್ಯಗಳಿಗೆ ಹೊಸ ಆಯಾಮವನ್ನೇ ನೀಡಿದ ಈ ವಚನ ಚಳುವಳಿ ಬಸವಣ್ಣ ಕಲ್ಯಾಣವನ್ನು ಬಿಡುವಂತಾದಾಗ ಇದ್ದಕ್ಕಿದ್ದಂತೆ ತಟಸ್ಥವಾದದ್ದು ಮಾತ್ರ ಒಂದು ಸಾಂಸ್ಕೃತಿಕವೂ ಸಾಹಿತ್ಯಕವೂ ಆದ ದುರಂತ.

ಸುಮಾರು ಮೂರು ಶತಮಾನಗಳವರೆಗೆ ಅಂದು ಚೆದುರಿಹೋದ ಶರಣರು ಮತ್ತು ವಚನಗಳ ಕಡೆ ಗಮನ ಹರಿಸಿದರೆ ನಮಗೆ ದಿಗಿಲಾಗುತ್ತದೆ. ಏಕೆಂದರೆ ಹರಿಹರ ರಾಘವಾಂಕರು ಅಂಥ ಒಂದು ಭಯಾನಕ ಸನ್ನಿವೇಶವನ್ನು ಕುರಿತೇ ಕಲಿಕಾಲ ಬರಲಿಹುದು ಎಂಬಂಥ ಮಾತನ್ನಾಡಿದ್ದಂತೆ ತೋರುತ್ತದೆ. ಇಂಥ ಕಲಿಕಾಲ ಮೂರು ಶತಮಾನಗಳಷ್ಟು ಸುದೀರ್ಘ ಕಾಲ ಸ್ಥಿರವಾಗಿದ್ದಂತೆ ತೋರುತ್ತದೆ.

ಇಂಥ ಸನ್ನಿವೇಶದಲ್ಲಿ ನಮಗೆ ವಚನ ಸಂಗೋಪನ ಯುಗ-ವಚನ ಸಂಕಲನ ಯುಗವಾದ ಹದಿನೈದನೆಯ ಶತಮಾನದ ಕಡೆ ದೃಷ್ಟಿ ಹೊರಡುತ್ತದೆ. ಪ್ರೌಢದೇವರಾಯನ ನೇತೃತ್ವದಲ್ಲಿ ಅಂಥ ಒಂದು ಯತ್ನ ನಡೆದುದನ್ನು ಆಗ ವಚನಗಳ ಸಂಕಲನಗಳು, ವ್ಯಾಖ್ಯಾನಗಳು, ವಿಶ್ಲೇಷಣೆಗಳು ನಡೆದವು.

ಅಂಥ ವಚನ ಸಂಕಲನಗಳಲ್ಲಿ ತೀರ ಶಾಸ್ತ್ರೀಯ ಎನ್ನುವಂಥವು ಇನ್ನೊಬ್ಬರ ವಚನಗಳನ್ನು ಸಂಗ್ರಹಿಸಿದ್ದುದು ಮತ್ತು ಸ್ಥಲಗಳ ಕ್ರಮದಲ್ಲಿ ವಚನಗಳನ್ನು ಸಂಕಲಿಸಹೊರಟದ್ದು. ಇಂಥ ಸಂಕಲನಗಳು ಒಂದೇ ರೀತಿಯವಾಗಿರಲಿಲ್ಲ.

ಅವುಗಳಲ್ಲಿ ಒಂದು ರೀತಿಯ ಸಂಕಲನ ಪ್ರಾಯಶಃ ಅದನ್ನು ಸೃಜನಾತ್ಮಕ ಸಂಕಲನ ಎನ್ನಬಹುದೊ ಏನೋ! ಅಂಥ ಒಂದು ಸೃಜನಾತ್ಮಕ ಸಂಕಲನವೇ 'ಶೂನ್ಯಸಂಪಾದನೆ.'

ಶೂನ್ಯಸಂಪಾದನೆಯಲ್ಲಿ ಇಂಥ ಒಂದು ಸೃಜನಾತ್ಮಕ ಸಂಕಲನ ಎಂದು ಕರೆಯುವುದು ಕೂಡ ಹಾದಿತಪ್ಪಿಸುವ ಯತ್ನವಾಗುತ್ತದೆಯೋ ಏನೋ! ಏಕೆಂದರೆ ಇಂಥ ಒಂದು ಶೂನ್ಯಸಂಪಾದನೆಯನ್ನು ಮೊದಲು ಸಂಕಲನ ಮಾಡಿದ ಮಹಾನ್ ಪ್ರತಿಭಾವಂತ ಶಿವಗಣಪ್ರಸಾದಿ ಮಹಾದೇವಯ್ಯ ಎನ್ನುವವನು ಹೇಳುವ ಮಾತುಗಳನ್ನು ಗಮನಿಸಿ:

> ಶ್ರೀಮತ್ಸಕಲ ಜಗದಾಚಾರ್ಯರುಮಪ್ಪ ಅಲ್ಲಮಪ್ರಭುದೇವರು,
> ಬಸವರಾಜದೇವರು ಚೆನ್ನಬಸವರಾಜದೇವರು ಮುಖ್ಯವಾದ
> ಅಸಂಖ್ಯಾತ ಮಹಾಗಣಂಗಳೊಡನೆ ನಡೆಸಿದ ಸರ್ವಕರಣ
> ಶೂನ್ಯಸಂಪಾದನೆಯ ಸದ್ಗೋಷ್ಠಿ ಕಥಾಪ್ರಸಂಗಮಂ
> ಮುಕ್ತಕವಾಗಿರ್ದ ಶಿವಾದ್ವೈತವಚನಗಳಂ ಉತ್ತರ
> ಪ್ರತ್ಯುತ್ತರ ಸಂಬಂಧವಾಗಿ ಸೇರಿಸಿ ಮಾಡಿದ ಮಹಾಪ್ರಸಂಗ
> ....

ಎಂಬ ಮಹಾದೇವಯ್ಯನ ಹೇಳಿಕೆ ಮುಖ್ಯವಾಗಿ ಮೂರು ಸಂಗತಿಗಳನ್ನು ಸೂಚಿಸುವಂತೆ ತೋರುತ್ತದೆ.

ಒಂದನೆಯದು ಈ ಶೂನ್ಯಸಂಪಾದನೆ ಎನ್ನುವುದು ಪ್ರಭುದೇವರು ಬಸವಣ್ಣ ಚನ್ನಬಸವಣ್ಣ ಮುಂತಾದ ಪ್ರಮುಖ ಶರಣರೊಂದಿಗೆ ನಡೆಸಿದ ಸದ್ಗೋಷ್ಠಿ ಕಥಾಪ್ರಸಂಗ ಎಂಬುದು.

ಎರಡನೆಯದು ಮುಕ್ತಕವಾಗಿದ್ದ ಶಿವಾದ್ವೈತ ವಚನಗಳನ್ನು ಉತ್ತರ ಪ್ರತ್ಯುತ್ತರ ಸಂಬಂಧವಾಗಿ ರೂಪಿಸಲಾಗಿದೆ ಎಂಬುದು.

ಮೂರನೆಯದು ಇಂಥ ಮುಕ್ತಕವಾಗಿರುವ ವಚನಗಳಿಂದ ರೂಪಿಸಿದ್ದು ಹಲವಾರು ಪ್ರಸಂಗಗಳನ್ನು ಒಳಗೊಂಡ ಒಂದು ಮಹಾಪ್ರಸಂಗ ಎಂಬ ವಿಚಾರ.

ಮೇಲಿನ ಮೂರೂ ಪ್ರಧಾನ ಅಂಶಗಳಿಂದ ಮಥಿತವಾಗುವ ಮುಖ್ಯ ಅಂಶ-ಶೂನ್ಯಸಂಪಾದನೆ ಎಂಬುದು ಪ್ರಸಂಗಗಳ ರೂಪವಾಗಿರುವ ಮಹಾಪ್ರಸಂಗ ಕೃತಿ ಎಂಬುದು ಮತ್ತು ಇಂಥ ಪ್ರಸಂಗ ನಿರೂಪಣೆಗೆ ದ್ರವ್ಯವಾಗಿರುವುದು ಅಲ್ಲಮ ಬಸವಣ್ಣ ಚೆನ್ನಬಸವಣ್ಣ ಮೊದಲಾದವರ ವಚನಗಳು ಎಂಬುದು.

ಮಹಾದೇವಯ್ಯ ಮಹಾಪ್ರಸಂಗವನ್ನು ನಿರೂಪಿಸುವ ಇಂಗಿತದ ಹಿಂದೆ ಹನ್ನೆರಡನೆಯ ಶತಮಾನದ ಶರಣರಲ್ಲಿ ನಡೆದಿರಬಹುದಾದ ಅನುಭವ ಮಂಟಪದ ಸುಳಿವಿದ್ದಂತೆಯೇ ಆತ ರಚಿಸುತ್ತಿರುವುದು ಹನ್ನೆರಡನೆಯ ಶತಮಾನದ ಸಾಂಸ್ಕೃತಿಕ ಇತಿಹಾಸ ಎಂಬುದು ಮಹತ್ವದ ವಿಚಾರ.

ಬಸವಣ್ಣ ಕಲ್ಯಾಣವನ್ನು ಬಿಟ್ಟು ಹೊರಟ ಮೇಲೆ ಏನಾಯಿತೆಂಬುದು ಇತಿಹಾಸದಲ್ಲಿ ಇನ್ನೂ ಕತ್ತಲಿನ ವಿಚಾರವೇ. ಬಸವಣ್ಣ ಏನಾದರು? ಬಿಜ್ಜಳ ಏನಾದ? ಬಿಜ್ಜಳನ ಅನಂತರ ಪಟ್ಟಕ್ಕೆ ಬಂದವರಾರು? ಇಂಥ ವಿಚಾರಗಳಲ್ಲಿ ಖಚಿತವಾದ ಆಧಾರಗಳು ಇನ್ನೂ ದುರ್ಲಭವಾಗಿಯೇ ಇವೆ. ಈ ನೆಲೆಯಲ್ಲಿ ನೋಡಿದಾಗ ಶೂನ್ಯಸಂಪಾದನೆ ಅಂತಹ ಒಂದು ಕೊರತೆಯನ್ನು ಸಾಂಸ್ಕೃತಿಕವಾಗಿ ಅನ್ವೇಷಿಸುವ ಒಂದು ಮಹತ್ವದ ಕೃತಿಯಾಗಿ ನಮಗೆ ಕಾಣುತ್ತದೆ.

ಮಹಾದೇವಯ್ಯ ಈ ಶೂನ್ಯಸಂಪಾದನೆಯನ್ನು ಒಂದು ಯುಗಮಾನದ ಕಥೆಯಾಗಿ ಗ್ರಹಿಸಿರುವಂತೆ ತೋರುತ್ತದೆ. ಶೂನ್ಯಸಂಪಾದನೆಯ ನಾಯಕಮಣಿಯಂತಿರುವ ಪ್ರಭು ಪ್ರಸಂಗದಿಂದ ಆರಂಭವಾದ ಕೃತಿ ಅನಿಮಿಷ ಕೃಪಾಭಾಗ್ಯ

ಸಂಪನ್ನತೆಯಿಂದ ಬೆಳೆದು ತಾನು ಕಂಡ ಬೆಳಕನ್ನು ಮುಕ್ತಾಯಿ, ಸಿದ್ಧರಾಮ, ಬಸವಣ್ಣ, ಚನ್ನಬಸವಣ್ಣ, ಮಡಿವಾಳ ಮಾಚಯ್ಯ, ಮರುಳು ಶಂಕರದೇವ, ಅಕ್ಕ ಮೊದಲಾದವರೆಲ್ಲ ಬಿತ್ತಿ ಎಲ್ಲರೊಂದಿಗೆ ಬೆಳೆದು ಸಿದ್ಧಿಸಿದ ಶೂನ್ಯಸಂಪಾದನೆಯಾದ ಮೇಲೆ ಅವಧಿ ಅಳಿದಿತ್ತು ಎಂದು ಆ ಶರಣರನ್ನೆಲ್ಲ ಅವರವರ 'ಗೊತ್ತಿಗೆ' ಕಳುಹಿಸಿ ತಾನು ಕದಳಿಯಲ್ಲಿ ಐಕ್ಯವಾಗುವವರೆಗಿನ ಕತೆಯಾಗಿ ರೂಪಿಸಿರುವುದು ಆತನ ಕಥನಪ್ರತಿಭೆಗೆ ಹೇಗೆ ಸಾಕ್ಷಿ ಆಗಿದೆಯೊ ಹಾಗೆಯೇ ಹನ್ನೆರಡನೆ ಶತಮಾನದ ಮಹಾನ್ ದರ್ಶನದ ಪ್ರತ್ಯಭಿಜ್ಞಾನಕ್ಕೂ ಬಹಳಷ್ಟು ನೆರವಾಗಿದೆ.

ಇಂಥ ಒಂದು ಸಾಂಸ್ಕೃತಿಕ ರೂಪಕವನ್ನು ಪ್ರಸಂಗ ರೂಪದಲ್ಲಿ ಅರಳಿಸಿರುವ ಮಹಾದೇವಯ್ಯನಿಗೆ ಏನೇನು ಸ್ಫೂರ್ತಿ ನೀಡಿರಬಹುದು? ಮೊದಲಿಗೆ ಆತನದು ವಚನಾರ್ದ್ರ ಪ್ರತಿಭೆ. ಜೊತೆಗೆ ಹರಿಹರ ರಾಘವಾಂಕ ಭೀಮಕವಿಗಳು ಚಿತ್ರಿಸಿದ್ದ ಶರಣರ ಕಥೆಗಳು, ಜಾನಪದದ ಹಾಡುಗಳು, ಕಲ್ಯಾಣವನ್ನು ಬಿಟ್ಟು ಹೊರಟ ಶರಣರು ಹಂಬಲಿಸಿದ ಹಲವಾರು ಹಂಬಲಿಕೆಗಳು ಹಾಗೂ ಐತಿಹ್ಯಗಳು -ಇವುಗಳೆಲ್ಲದರಿಂದ ದೀಪ್ತವಾದದ್ದು ಆತನ ಪ್ರತಿಭೆ.

ಅಂಥ ಸತ್ವಶಾಲಿಯಾದ ಪ್ರತಿಭೆಯ ಮಹಾದೇವಯ್ಯ ತನ್ನ ಶೂನ್ಯಸಂಪಾದನೆಯನ್ನು ಮುಗಿಸುವಾಗ ಇದು ಪರಮಗುರು 'ಪರಮ ವೀರಶೈವ ಸಿದ್ಧಾಂತ' ಎಂದು ಘೋಷಿಸಿದರೂ ಆತನಿಗೆ ತಾನು ಗ್ರಹಿಸಿದ ಹನ್ನೆರಡನೆಯ ಶತಮಾನದ ಸಾಂಸ್ಕೃತಿಕ ದರ್ಶನದ ಗ್ರಹಿಕೆಯಲ್ಲಿ ಕೊರತೆಗಳಾಗಿರಬಹುದಾದ ಸಂಭಾವ್ಯತೆಯನ್ನು ಅರಿಯಬಲ್ಲ ನಮ್ರತೆಯಿದ್ದಿತು. ಹಾಗಾಗಿಯೆ ಆತ ಗ್ರಂಥದ ಕೊನೆಗೆ 'ವಚನಕ್ರಮ ಸೇರುವೆ ತಪ್ಪುಳ್ಳಡೆ ನಿಮ್ಮ ಪರಮಾನುಭಾವದಿಂ ತಿರ್ದುವುದು' ಎಂದು ಶೂನ್ಯಸಂಪಾದನೆಯ ಪರಿಷ್ಕರಣದ ಬಾಗಿಲನ್ನು ತೆರೆದ.

ಸುಮಾರು ನೂರು ವರ್ಷಗಳಷ್ಟು ಕಾಲ ಆ ಶೂನ್ಯಸಂಪಾದನೆಯು ಪ್ರಚಲಿತವಾಗಿದ್ದು ದೇಶಿಕನಾಗಿದ್ದ ಹಲಗೆಯಾರ್ಯ ಅದನ್ನು ತನ್ನ ಶಿಷ್ಯರಿಗೆ ಬೋಧಿಸಿದ್ದರೂ ಇರಬಹುದು. ಆತ ಮಹಾದೇವಯ್ಯನಲ್ಲಿ ಬರುವ ವಚನಕ್ರಮ ಸೇರುವೆ ತಪ್ಪುಳ್ಳಡೆ.... ತಿರ್ದುವುದು' ಎಂಬ ಮಾತಿನ ಜಾಡನ್ನೆ ಹಿಡಿದು ಪ್ರಥಮ ಪರಿಷ್ಕರಣಕ್ಕೆ ಕೈಹಾಕಿದವನಾದರೂ (ಕೆಂಚ ವೀರಣ್ಣೊಡೆಯ ಪ್ರಥಮ ಪರಿಷ್ಕರಣಕಾರನಲ್ಲ, ಆತನದೆನ್ನುವ ಕೃತಿ ಇಂದಿಗೂ ಲಭ್ಯವಿಲ್ಲ -ಈ ಎಲ್ಲ ವಿವರಗಳಿಗೆ ಡಾ. ವಿದ್ಯಾಶಂಕರ ಮತ್ತು ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯ ಸಂಪಾದಿಸಿದ ಹಲಗೆಯಾರ್ಯನ ಶೂನ್ಯಸಂಪಾದನೆಯನ್ನು ನೋಡಿರಿ.) ಆತ ಪರಿಷ್ಕರಣಕ್ಕೆ ಕೊಟ್ಟ ಕಾರಣ ಮಾತ್ರ ಭಿನ್ನ. ಸಿದ್ಧರಾಮೇಶ್ವರ ದೇವರು ಮೊದಲಾದವರ ಶೈವದೀಕ್ಷೆಯನ್ನು ಬಿಡಿಸಿ ವೀರಶೈವ ದೀಕ್ಷೆಯನ್ನು ನೀಡುವುದಕ್ಕಾಗಿ ಈ ಪರಿಷ್ಕರಣ ಮಾಡಿದೆ ಎಂದುಬಿಟ್ಟ. ಆಶ್ಚರ್ಯವೆಂದರೆ ಪ್ರಭುವಿಗೂ ಆತ 'ಗಣಸಾಕ್ಷಿಯಾಗಿ' ದೀಕ್ಷೆ ನೀಡಿದ ಪ್ರಸಂಗ ನಿರೂಪಿಸಿ ಎಲ್ಲರಿಗೂ ದೀಕ್ಷೆ ನೀಡಿದ. ಆದರೆ ಅದಕ್ಕಿಂತ ಮುಖ್ಯವಾದದ್ದು ಹಲಗೆಯಾರ್ಯ ನುಲಿಯ ಚಂದಯ್ಯನ ಪ್ರಸಂಗವನ್ನು ಹೊಸದಾಗಿ ಯೋಚಿಸಿ ಶೂನ್ಯಸಂಪಾದನೆಯೊಳಗೆ ಹನ್ನೆರಡನೆ ಶತಮಾನದ ಕಾಯಕ ತತ್ವದ ಮಹತ್ವದ ಮನವರಿಕೆ ಮಾಡಿದ. ಜೊತೆಗೆ ಮಹಾದೇವಿಯಕ್ಕನ ಪ್ರಸಂಗವನ್ನು ಆಕೆ ಶ್ರೀಶೈಲದ ಮಲ್ಲಿಕಾರ್ಜುನನಲ್ಲಿ ಒಂದಾಗುವವರೆಗೂ ನಿರೂಪಿಸಿದ. ಹಾಗೆಯೇ ಮರುಳು ಶಂಕರದೇವನ ಪ್ರಸಂಗದಲ್ಲಿ ಮೊದಲ ಬಾರಿಗೆ ಆತನ ೨೩ ವಚನಗಳನ್ನು ಸೇರಿಸಿದ.

ಮುಂದೆ ಬಂದ ಗುಮ್ಮಳಾಪುರದ ಸಿದ್ಧಲಿಂಗಯತಿ ತಾನು ಕೆಂಚವೀರಣ್ಣೊಡೆಯನ ಕೃತಿಯಲ್ಲಿದ್ದ ಸಿದ್ಧರಾಮ ದೀಕ್ಷಾಪ್ರಸಂಗ ಸೇರಿಸುತ್ತೇವೆಂದು ಹಾದಿ ತಪ್ಪಿಸಿದ್ದೇ ಅಲ್ಲದೆ ಪ್ರಭು ಪ್ರಸಂಗವನ್ನು ಮಹಾದೇವಯ್ಯ ಹಲಗೆಯಾರ್ಯರಿಗಿಂತ ಭಿನ್ನವಾಗಿ ನಿರೂಪಿಸಿದ.

ಆದರೆ ಹಲಗೆಯಾರ್ಯ ತಾನು ಹೊಸದಾಗಿ ಸೇರಿಸಿದ್ದ ನುಲಿಯ ಚಂದಯ್ಯನ ಪ್ರಸಂಗವನ್ನು ಚಾಚು ತಪ್ಪದಂತೆ ತಾನು ಬಳಸಿಕೊಂಡನು- ಆ ಪ್ರಸಂಗದ ವಚನಕಾರರ ಕ್ರಮ ಮತ್ತು ವಚನಗಳ ಸಂಖ್ಯೆಯನ್ನು ಹಾಗೆಯೇ ಇರಿಸಿಕೊಂಡು ತನಗರಿವಿಲ್ಲದಂತೆ ತಾನು ಹಲಗೆಯಾರ್ಯನಿಗೆ ಋಣಿಯೆಂದು ಸೂಚಿಸುವಂತಾಯಿತು.

ಈತ ಮರುಳು ಶಂಕರದೇವ ಮತ್ತು ಮಹಾದೇವಿಯಕ್ಕರ ಪ್ರಸಂಗಗಳನ್ನು ಇನ್ನಷ್ಟು ಪರಿಷ್ಕರಿಸಿ ಸೊಗಸುಗೊಳಿಸಿದ ಹಾಗೇ ಆಯ್ದಕ್ಕಿ ಲಕ್ಕಮ್ಮ ಮತ್ತು ಮಾರಯ್ಯಗಳ ಪ್ರಸಂಗವನ್ನು ಸೇರಿಸಿ ಕಾಯಕತತ್ವದ ಹಿನ್ನೆಲೆಯಲ್ಲಿ ಮಾಗಿದ ದಾಂಪತ್ಯದ ಹದವನ್ನು ಧ್ವನಿಸಿದ. ಹಾಗೆಯೇ ಗೋರಕ್ಷ ಪ್ರಸಂಗವನ್ನು, ಹಲವಾರು ವಚನಗಳನ್ನು ಸೇರಿಸಿ ಘಟನಾಮಯವಾಗಿಸಿದ.

ಈತನನ್ನು ಅನುಸರಿಸಿದ ಗೂಳೂರು ಸಿದ್ಧವೀರಣ್ಣ ಅತ್ತ ಹಲಗೆಯಾರ್ಯನನ್ನು ಹೆಸರಿಸಲಿಲ್ಲ; ಕೆಂಚವೀರಣ್ಣನನ್ನು ಸ್ಮರಿಸಲಿಲ್ಲ. ಕಿಲಾಡಿಯಾದ ಆತ ಮಹಾದೇವಯ್ಯ ಅನಂತರ ಗುಮ್ಮಲಾಪುರದ ಸಿದ್ಧಲಿಂಗಯತಿಗಳನ್ನು ಸ್ಮರಿಸಿ ತನ್ನ ಪರಿಷ್ಕರಣೆ ಮಾಡಿ ಮುಗಿಸಿದ.

ಈತ ಮೋಳಿಗೆ ಮಹಾದೇವಿ ಮತ್ತು ಮೋಳಿಗೆ ಮಾರಯ್ಯರ ಪ್ರಸಂಗ, ಘಟ್ಟಿವಾಳಯ್ಯನ ಪ್ರಸಂಗ ಹಾಗೂ ನೀಲಮ್ಮನ ಪ್ರಸಂಗಗಳನ್ನು ಹೊಸದಾಗಿ ಸೇರಿಸಿದುದೇ ಅಲ್ಲದೆ ಪ್ರವಾಹರೂಪದಲ್ಲಿದ್ದ ಶೂನ್ಯಸಂಪಾದನೆಯ ಕತೆಯನ್ನು ಭಾಗಗಳಾಗಿ ವಿಂಗಡಿಸಿ ಪ್ರತಿಭಾಗವನ್ನು ಒಂದು ಕಂದಪದ್ಯದಿಂದ ಆರಂಭಿಸಿ ಕಥಾಸೂಚನೆ ನೀಡಿದ ಮತ್ತು ಅಂತ್ಯದ ಗದ್ಯದಲ್ಲಿ ಬಳಸಿರುವ ವಚನಗಳ ಸಂಖ್ಯೆ ಹಾಗೂ ಪ್ರಸಂಗಗಳನ್ನು ಹೆಸರಿಸಿದ. ಹೆಚ್ಚು ಪರಿಣತವಾದ ಪರಿಷ್ಕರಣ ಈತನದು.

ಇಷ್ಟನ್ನು ಗಮನಿಸಿದ ಮೇಲೆ ಮೂಲ ಶೂನ್ಯಸಂಪಾದನಕಾರ ಮಹಾದೇವಯ್ಯ, ಅಂಥ ಮಹಾನ್ ದರ್ಶನವನ್ನು ಪ್ರಸಂಗ ರೂಪದಲ್ಲಿ ವಚನಗಳ ಮೂಲಕ ಮೂಡಿಸಿದ ಮಹಾಪ್ರತಿಭಾವಂತ ಎಂದರೂ ಮುಂದಿನ ಮೂವರು ಪರಿಷ್ಕರಣಕಾರರು ಅಷ್ಟಿಷ್ಟು ಹೊಸ ಅಂಶಗಳನ್ನು ಮತ್ತು ಪ್ರಸಂಗಗಳನ್ನು ತೇಪೆ ಹಾಕಿದ ಪರಿಷ್ಕರಣಕಾರರು ಎನ್ನುವಂತಿಲ್ಲ.

ಮಹಾದೇವಯ್ಯನಿಂದ ಹಿಡಿದು ಗೂಳೂರು ಸಿದ್ಧವೀರಣ್ಣನವರೆಗೆ ಎಲ್ಲರೂ ಶೂನ್ಯಸಂಪಾದನೆ ಎಂಬುದು ಶರಣರ ಸದ್ಗೋಷ್ಠಿ ಕಥಾಪ್ರಸಂಗಗಳನ್ನೊಳಗೊಂಡ ಮಹಾಪ್ರಸಂಗ ಎಂದೇ ಕರೆದಿದ್ದರೂ ಕೊನೆಕೊನೆಗೆ ಇದು 'ಪರಮ ಗುರು ಪರಮ ವೀರಶೈವ ಸಿದ್ಧಾಂತ' ಎಂಬ ನೆಲೆಗೆ ಮುಟ್ಟಿರುವುದರಿಂದ ಅನೇಕರು ಇದು ಸಾಹಿತ್ಯ ಗ್ರಂಥವೋ ವೀರಶೈವಾಚಾರ ಗ್ರಂಥವೋ ಎಂಬ ಸಂದೇಹದಲ್ಲಿ ಮುಳುಗಿರುವುದುಂಟು. ಸ್ವಾರಸ್ಯವೆಂದರೆ ಇದು ಧರ್ಮಗ್ರಂಥವೂ ಹೌದು; ಅದಕ್ಕಿಂತ ಹೆಚ್ಚಾಗಿ ಸಾಹಿತ್ಯ ಕೃತಿಯೂ ಹೌದು. ಆಶ್ಚರ್ಯವೆಂದರೆ ಈ ಸಾಹಿತ್ಯ ಕೃತಿ ವಚನಾಧಾರಿತವಾಗಿದ್ದು ಹನ್ನೆರಡನೆಯ ಶತಮಾನದ ಶರಣರಲ್ಲಿ ಅನುಭವ ಮಂಟಪದಲ್ಲಿ ನಡೆದಿರಬಹುದಾದ ಸಾಂಸ್ಕೃತಿಕ ಅಂಶಗಳನ್ನು ಒಳಗೊಂಡು ದಾರ್ಶನಿಕವೂ ಸಾಂಸ್ಕೃತಿಕವೂ ಆಗಿ ಮಹತ್ವದ ಕೃತಿಯೆನಿಸಿದೆ.

ಇಲ್ಲಿ ಶೂನ್ಯಸಂಪಾದನೆಯಾಗುವ ಕ್ರಮವನ್ನು ಷಟ್ಸ್ಥಲ ಮಾರ್ಗದಲ್ಲಾಗಲಿ, ಪಂಚಕೋಶಗಳ ಕ್ರಮದಲ್ಲಾಗಲಿ, ಷಟ್ಚಕ್ರ ಅಥವಾ ಏಕಾದಶ ಚಕ್ರ ಕ್ರಮದಲ್ಲಾಗಲಿ ಕ್ರಮಬದ್ಧವಾಗಿ ವಿವರಿಸಿಲ್ಲವೆಂಬುದನ್ನು ಗಮನಿಸಬೇಕು. ಅಷ್ಟಾವರಣ ಪಂಚಾಚಾರಗಳನ್ನು ಹಾಗೆಯೇ ಕ್ರಮಬದ್ಧವಾಗಿ ನಿರೂಪಿಸಿಲ್ಲ. ಆದರೆ ಆ ಎಲ್ಲ ಕ್ರಮಗಳ ದರ್ಶನದ ಉಚಿತವಾದ ಬಳಕೆ ಕಥಾಪ್ರಸಂಗಗಳ ಮೂಲಕ ನಡೆದಿದೆ.

ಈ ಶೂನ್ಯಸಂಪಾದನೆಗಳಲ್ಲಿರುವ ಸಾಹಿತ್ಯಿಕ ಮಹತ್ವವನ್ನು ಸೂಚಿಸುವ ಕೆಲವು ಸಂಗತಿಗಳನ್ನು ಸ್ಥೂಲವಾಗಿ ಗಮನಿಸಬಹುದು.

ಶೂನ್ಯಸಂಪಾದನಕಾರರ ಚಿತ್ರಕ ಶಕ್ತಿ ಅಸಾಧಾರಣವಾದುದು. ಪ್ರಭು ಬಸವಣ್ಣನವರ ಮನೆಗೆ ಬಂದಾಗಿನ ಈ ಚಿತ್ರವನ್ನು ಗಮನಿಸಿ:

...ಆ ಬಸವರಾಜಂ ಕೈಗುಡೆ, ಮಡಿವಾಳ ಮಾಚಿ ತಂದೆಗಳು ಪಾಯವಧಾರೆಂದು ಉಗ್ಘಡಿಸೆ, ಸೊಡ್ಡಳ ಬಾಚರಸರ ಹೆಗಲ ಮೇಲೆ ಹಸ್ತಮಂ ಮಡಗಿ, ಚೆನ್ನಬಸವರಾಜ ದೇವರೊಡನೆ ನಸುನಗೆಯಿಂ ಪ್ರಸಂಗಿಸುತ್ತ...." (ಪು. ೧೦೨)

ಆ ಚಿತ್ರ ಕಣ್ಣಿಗೆ ಕಟ್ಟುವಂತಿದೆ. ಅಷ್ಟೇ ಅಲ್ಲ ಶರಣರ ಆತ್ಮೀಯತೆಯೊಂದಿಗೆ ಅಂದಿನ ಒಂದು ಸಾಂಸ್ಕೃತಿಕ ಚಿತ್ರವಾಗಿದೆ. ಇಲ್ಲಿ ಸ್ವಾಗತಿಸುತ್ತಿರುವವರು ಬಸವಣ್ಣ. ಕೈ ಹಿಡಿದು ಸ್ವಾಗತಿಸುತ್ತಿದ್ದಾರೆ ಮಡಿವಾಳ ಮಾಚಿತಂದೆಗಳು. ಪ್ರಭುಗಳು ಬರುತ್ತಿದ್ದಾರೆಂದು ಶರಣರೆಲ್ಲ ಉದ್ಘೋಷಣೆ ಮಾಡುತ್ತಿದ್ದಾರೆ. ಪ್ರಭುಗಳು ಅಷ್ಟೇ ಅಕ್ಕರೆಯಿಂದ ಸೊಡ್ಡಳ ಬಾಚರಸರ ಹೆಗಲ ಮೇಲೆ ಕೈಹಾಕಿ ನಡೆದು ಬರುತ್ತಿದ್ದಾರೆ. ಮೌನವಾಗಿ ಅಲ್ಲಿ- ಷಟ್ಸ್ಥಲಬ್ರಹ್ಮಿ ಚೆನ್ನಬಸವಣ್ಣನವರ ಜೊತೆ ಪ್ರಸಂಗಿಸುತ್ತಿದ್ದಾರೆ. ಈ ಪ್ರಸಂಗ ಕೂಡ ನಸುನಗೆಯಿಂದ ಕಾಂತಿಗೊಂಡಿರುವಂಥದ್ದು.

ಇಂಥ ಇನ್ನೂ ಹಲವಾರು ಚಿತ್ರಗಳಿವೆ- ಶೂನ್ಯಸಂಪಾದನೆಯಲ್ಲಿ ಕಥನಕ್ಕೆ ಸಂಬಂಧಿಸಿದಂತೆ. ಗಮನಿಸಿ:

...ಆ ರುದ್ರಕನ್ನಿಕೆ, ಶಿವನ ನಿರೂಪದಿಂ ಆ ಪುರದ ಶಿವಭಕ್ತೆಯ ಬಸುರೊಳೊಗೆದು, ಕಾಮಲತೆಯೆಂಬ ನಾಮಮಂ ಧರಿಸಿ, ಅತ್ಯಂತ ಸುರೂಪಿಯಾಗಿ, ಅಲ್ಲಮಂಗೆ ಸತಿಯಾಗಿ- ಇಬ್ಬರುಂ ಸುರತೋನ್ಮತ್ತ ಸುಖದೊಳ್ ಪರವಶರಾಗಿ, ಹಲವು ಕೆಲವು ಸಂವತ್ಸರಂಗಳಂ ಕಳೆವುತ್ತಿರಲಾ ಪುರದ ಗುಹೇಶ್ವರನೆಂಬ ಮೂಲಸ್ಥಾನದ ಪರಿಚರ್ಯದಿಂದಿರ್ಪರು ಇರಲಾ ರುದ್ರಕನ್ನಿಕೆಯು ವಿಶ್ವಾಪವನೆಯ್ದಲಾಕೆಯನಗಲ್ದು ಚಿಂತೆಯೊಳ್ ಮುಳುಂಗಿ ಪುಷ್ಪವಾಟಿಕೆಯೊಳ್ ಕುಳ್ಳಿರ್ದು, ಪರವಶನಾಗಿ ಇರುತ್ತಮಿರೆ..." (ಪು. ೩).

"...ಒಂದು ದಿನ, ಒಂದು ಏಕಾಂತ ಸ್ಥಳದೊಳು ಶಿವಚಿಂತಾತುರ ಸಮಾಧಿಯೊಳು ಕುಳ್ಳಿರ್ದಿರಲು, ಅಂಜನ ಉಳ್ಳವಂಗೆ ನಿಧಾನ ಮೈದೋರುವಂತೆ ಶಿವಜ್ಞಾನಾಂಜನದೃಷ್ಟಿಯ ಮುಂದೆ ಅನಾದಿ ಸಂಸಿದ್ಧವಾದ ಅನಿಮಿಷ ದೇವರ ಸಮಾಧಿ ಕಾಣಬರುತ್ತಿರೆ- ಅಲ್ಲಿ ಪರಮ ಹರುಷಿತನಾಗಿ, ಆ ಸಮಾಧಿಯ ಮುಸುಂಕಿದ ಭೂಮಿಯನು ಅಗಲಕ್ಕೆ ತೊಲಗಿಸಿ ನೋಳ್ಪಾಗಳು, ಒಂದು ಶಿವಾಲಯದಾಕಾರಮಾಗಿರೆ ಕಂಡು ತನ್ನೊಳ್ ತಾನೆ ಹಾರೈಸಿ ಪರಿಣಾಮಿಸುತ್ತಿರ್ದನು." (ಪು. ೮)

ಮೇಲಿನ ಕಥಾಭಾಗ ಎರಡು ಖಂಡಗಳಾಗಿ ಒಡೆದಿದೆ. ಮೊದಲ ಭಾಗದ ಕಥಾಂಶ ಪೂರ್ಣವಾಗುವತ್ತ ಚಲಿಸುವುದು ಎರಡನೆಯ ಪುಟದಲ್ಲಿ. ಮಧ್ಯೆ ಮುವತ್ತು (ಅಲ್ಲಮನ) ವಚನಗಳಿವೆ. ಅಲ್ಲಿ ಅಲ್ಲಮನ ಮಾಯಾವಿಲಾಸ ನಿವೃತ್ತಿಯನ್ನು ಧ್ವನಿಸುವ ವಚನಗಳನ್ನು ಮಹಾದೇವಯ್ಯ ಯೋಚಿಸಿದ್ದಾನೆ. ಮೇಲಿನ ಉದಾಹರಣೆ ಶೂನ್ಯಸಂಪಾದನೆಯ ಕಥನ ಕೌಶಲದಂತೆ ಅದರ ಶಿಲ್ಪದ ಬಗೆಗೂ ಸೂಚನೆ ನೀಡುತ್ತದಾದ್ದರಿಂದ ಎರಡು ಖಂಡಗಳಲ್ಲಿ ಅಲ್ಲಮ ಅನಿಮಿಷ ದರ್ಶನ ಮಾಡುವವರೆಗಿನ ಕಥಾಭಾಗವನ್ನು ಸಂಗ್ರಹವಾಗಿ ನಿರೂಪಿಸಲಾಗಿದೆ.

ಶೂನ್ಯಸಂಪಾದನೆಯ ಕಥನಕೌಶಲ ಎಷ್ಟು ಅಪೂರ್ವವಾದುದೆಂದರೆ ಅದೊಂದು ಕಲಾಕೃತಿಯೆಂಬಂತೆಯೇ ಮುಂದುವರಿಯುತ್ತದೆ, ಸಿದ್ಧರಾಮನನ್ನು ಪ್ರಭು ಕಂಡ ಸಂದರ್ಭವನ್ನು ಗಮನಿಸಿದರೆ.

ಆ ಪ್ರಸಂಗವನ್ನು ಶೂನ್ಯಸಂಪಾದನಕಾರ ಆರಂಭಿಸುವುದೇ ಧ್ವನ್ಯಾತ್ಮಕವೂ ಆಗಿ ಕುತೂಹಲಕರವಾಗಿದೆ. ಸೊನ್ನಲಿಗೆಗೆ ಬಂದ ಪ್ರಭು ದೇಗುಲ ಕೆರೆಕಟ್ಟೆಗಳ ನಿರ್ಮಾಣದಲ್ಲಿ ತೊಡಗಿರುವುದನ್ನು ಕಾಣುತ್ತಾನೆ, ಶಿಷ್ಯರೊಂದಿಗೆ. ಆತ ಅದನ್ನು ಕಾಣುವುದು ಹೀಗೆ-

ಧರೆಯ ಮೇಲೊಂದು ಹಿರಿದಪ್ಪ ಸಂತೆಯ ನೆರವಿಗೆ ಬಂದವರನೇನೆಂಬೆನು. ಪರಿಪರಿಯ ಭಾಂಡದ ವ್ಯವಹಾರದೊಳಗೆ ಕೊಡಲಿಲ್ಲ ಕೊಳಲಿಲ್ಲ. ವೃಥಾ ವಿಳಾಸವಿದೇನೋ! ಅರೆಮರುಳೆಂಬ ಶಿವನು ನೆರೆಮರುಳೆಂಬ ಜಗವ ಹುಟ್ಟಿಸಿದ ಪರಿಯ ಕಂಡು ಬೆರಗಾದೆನು.

ಮೇಲಿನ ಒಂದು ವಚನ ನಿರ್ಮಿಸುವ ವಾತಾವರಣ ಅಸಾಧಾರಣವಾದುದು. ಶೂನ್ಯವನ್ನು ಸಾಧಿಸುವುದನ್ನು ಬಿಟ್ಟು ಏನೇನನ್ನೂ ಸಾಧಿಸುವ ಜನರನ್ನು ಕುರಿತ ವಿಡಂಬನೆ- ಲೋಕದ ಜನರ ನಿರರ್ಥಕ ವ್ಯವಹಾರಗಳನ್ನು, ವಿಡಂಬಿಸುತ್ತಿಲ್ಲ ಮಾತ್ರ; ಇಂಥ ನಿರರ್ಥಕರನ್ನು ಸೃಷ್ಟಿಸಿದ ಶಿವನ ಅರೆಮರುಳುತನವನ್ನೂ ವಿಡಂಬಿಸುತ್ತಿದೆ. ಇಂಥ ಕಠೋರ ವಿಡಂಬನೆ ಪ್ರಭುವಿಗಲ್ಲದೆ ಇನ್ನಾರಿಗೆ ತಾನೆ ಸಾಧ್ಯ!

ಆಗಲೂ ಜನರ ಗಮನ ಅವನತ್ತ ಹರಿಯಲಿಲ್ಲ. ಆಗ ಪ್ರಭು 'ಆ ಕೆರೆಯ ಕಟ್ಟುವ ಗುಡ್ಡಗಳೊಡನೆ ಒಡ್ಡ ರಾಮಯ್ಯ ನಿದ್ದಹನೇ' ಎಂದು ಕೇಳುತ್ತಾನೆ. ಗುರುನಿಂದನೆ ಸಹಿಸದ ಶಿಷ್ಯರು ಕಲ್ಲುಗಳನ್ನು ಇವನ ಮೇಲೊಗೆದರು. ಎಸೆದ ಕಲ್ಲುಗಳು ಅವರಿಗೇ ಹಿಂದಿರುಗಿ ಬಂದು ತಾಗಿದವು. ನೊಂದ ಶಿಷ್ಯರು ನೆರವಿಗಾಗಿ ಗುರು ಸಿದ್ಧರಾಮನ ಬಳಿ ಬಂದು ದೂರಿದರು. ಮುನಿದ ಸಿದ್ಧರಾಮ ನೊಸಲಗಣ್ಣು ತೆರೆದ. ಆದರೆ ಪ್ರಭು ತನ್ನ ಅಂಗಾಲಲ್ಲದನ್ನು ಅಡಗಿಸಿ ಅಂಗಾಲ ಅಗ್ನಿಯನ್ನು ಅಟ್ಟಿದನು. ಭಯಂಕರವಾಗಿ ೧೪ ಬ್ರಹ್ಮಾಂಡಗಳನ್ನೂ ನುಂಗಿಬಂದ ಆ ಅಗ್ನಿಯ ವರ್ಣನೆಯನ್ನು ಮೂಲವನ್ನೋದಿಯೇ ಸವಿಯಬೇಕು. ಆ ಅಗ್ನಿಯನ್ನು ಕಂಡ ಸಿದ್ಧರಾಮನಿಗೆ ಆಗ ಇದೆಲ್ಲಿಯದು ಮಹಾಜ್ವಾಲೆ!' ಎಂದರಿವಾಯಿತು. ವಿವೇಕ ಮೂಡಿ "ಈತನು ಶಿವನಲಾ" ಎಂದು ಅರಿದು ಶರಣಾಗಲು ಬಂದರೆ ಭಕ್ತರನ್ನು ಆ ಶಿವನೆಲ್ಲಿ ಎಂದಾಗ ಅವರು ಕೊಡುವ ಚಿತ್ರ ಗಮನಿಸಿ.

"ದೇವ, ಆತನು ನಿಂದರೆ ನೆಳಲಿಲ್ಲ, ಸುಳಿದರೆ ಹೆಜ್ಜೆಯಿಲ್ಲ, ಕಾಯವಿದ್ದು ಕಾಯವಿಲ್ಲ, ನೀವಿನ್ನು ಆವ ಪರಿಯಲ್ಲಿ ಮುನಿಸ ತಿಳುಹಿ ತಪ್ಪಿರಿ..." (ಪು. ೩೬).

ಇಡೀ ಘಟನೆಯನ್ನು ನಿರ್ವಹಿಸುವ ರೀತಿ ಪ್ರತಿಭಾವಂತ ಕವಿಯ ಶಕ್ತಿಗೆ ನಿದರ್ಶನವಾಗಿದೆ. ಮೇಲಿನ ಭಾಗದ ಕಥೆಯ ಮೂಲವನ್ನು ಓದಿದರೆ ಅಲ್ಲಿ ವರ್ಣನಾಶಕ್ತಿಗೆ ಸಂಬಂಧಿಸಿದೆ- ಹಣೆಗಣ್ಣಿನ ವರ್ಣನೆಯಲ್ಲಿ. ಆರಂಭದ ವಚನದಲ್ಲಿ ಪ್ರಭು-ಮುಂದೆ ಶಿಷ್ಯರನ್ನು ಪ್ರಶ್ನಿಸಿದ ಸಂದರ್ಭದಿಂದ ಹಿಡಿದು ಸಿದ್ಧರಾಮ ಪ್ರಭುವಿನ ಬಳಿಗೆ ಆರ್ತನಾಗಿ ಓಡಿಬರುವವರೆಗಿನ ಸಂಗತಿಗಳು ಶ್ರೇಷ್ಠ ಕಥನಕಲೆಗೆ ನಿದರ್ಶನವಾಗಿವೆ.

ವರ್ಣನೆಗೆ ಸಂಬಂಧಿಸಿದ ಮತ್ತೊಂದು ಸಂಗತಿಯನ್ನು ಗಮನಿಸಬಹುದು. ಅದು ಪ್ರಸಾದದ ಕುಳಿಯಿಂದ ಮರುಳು ಶಂಕರದೇವರು ಮೇಲೆದ್ದು ಬರುವ ಚಿತ್ರವನ್ನು ಕುರಿತದ್ದು. ಆ ಚಿತ್ರವನ್ನು ನಮಗೆ ನೀಡಿದವನು ಗುಮ್ಮಳಾಪುರದ ಸಿದ್ಧಲಿಂಗಯತಿ-ಪ್ರಭು ಬಸವರಾಜದೇವರ ಮನೆಯಲ್ಲಿ ಚಲಿಸುತ್ತಿರುವಾಗ ಪ್ರಮಥರ ತಿಂಥಿಣಿ 'ಉಘೇ ಚಾಂಗು ಭಲಾ' ಎಂದು ಸಂಭ್ರಮಿಸಿದಂತಿವೆ. ಆ ಸಂಭ್ರಮದಿಂದ ಕುತೂಹಲಕರವಾದ ಮರುಳುಶಂಕರದೇವರು ಪ್ರಭು ಸಮೀಪಸ್ಥರಾಗಲು "ಶ್ರೀ ಮೂರ್ತಿಯಂ ಕಂಡು ಮೆಲ್ಲಮೆಲ್ಲನೆ ಆ ಪ್ರಸಾದದ ಕೊಂಡದಿಂ ಪೊರಮಡುತ್ತಿರ್ದರದೆಂತೆನೆ-

ವಸಂತಮಾರುತಂ ಬರಲು ಬೂತದಿಂದಂಕುರಂ ಪೊರಮಡುವಂತೆ, ಸ್ವಾತಿಯ ವರುಷದ ದಿನಕ್ಕೆ ಅಂಬುಧಿಯೊಳಗಿರ್ದ ಮೌಕ್ತಿಕ ಶಂಬುಕ ಅಂಬುಧಿಯೊಳಗಿರ್ದು ಕಾಣಬಪ್ಪಂತೆ, ನಲಿದು ಸೂಜಿಕಲ್ಲ ಕಾಣುತ್ತ ಸೂಜಿ ಮೆಲ್ಲನೆ ತನ್ನ ಸ್ಥಾನದಿಂದೇಳುವಂತೆ, ಶಿವಯೋಗಾಂಗದಲ್ಲಿ ತನುವ ಮರೆದಿರ್ದ ಶಿವಯೋಗಿ ತನಗೆ ಶಿವ ಪ್ರಸನ್ನಮಾಗಲು ಮುಂದೆ ಶಿವನ ಶ್ರೀಚರಣಮಂ ಕಂಗಳಿಂದೊತ್ತಿಕೊಂಬೆನೆಂಬ ತೆರನಂತೆ, ಪೂರ್ಣಿಮೆಯ ಚಂದ್ರನುದಯಕ್ಕೆ ಸಿಂಧು ಮೆಲ್ಲನೆ ಮುಂದಕ್ಕುಬ್ಬಿ ನಡೆದು ಬಪ್ಪಂತೆ" -ಎಂದು ಕೊಡುವ ಐದೂ ಉಪಮೆಗಳು ಕಾವ್ಯಾತ್ಮಕವಾಗಿ ಅಷ್ಟೇ ಅಲ್ಲ ಆಧ್ಯಾತ್ಮಿಕವಾಗಿಯೂ ಮರುಳುಶಂಕರದೇವ ಮತ್ತು ಪ್ರಭುಗಳ ಸಂಬಂಧವನ್ನು ಧ್ವನಿಸುತ್ತವೆ. ಹನ್ನೆರಡು ವರ್ಷಗಳಷ್ಟು ದೀರ್ಘಕಾಲ ಪ್ರಸಾದ ಕುಂಡದಲ್ಲಿದ್ದ ಮರುಳುಶಂಕರದೇವರು ಪ್ರಸಾದ ಕುಂಡದಿಂದ ಮೇಲೇಳುವ ಚಿತ್ರವನ್ನು 'ನಲಿದು ಸೂಜಿಕಲ್ಲ ಕಾಣುತ್ತ ಸೂಜಿ ಮೆಲ್ಲನೆ ತನ್ನ ಸ್ಥಾನದಿಂದೇಳುವಂತೆ' ಎನ್ನುವ ಉಪಮೆ ಅಭಿನಯಿಸುತ್ತದೆ. ಇಂಥ ಕಡೆಗಳಲ್ಲಿ ಶೂನ್ಯಸಂಪಾದಕಾರರು ಪ್ರತಿಭಾನ್ವಿತರಾದ ಕವಿಗಳಾಗಿ ಬಿಡುತ್ತಾರೆ- ವಾಸ್ತವವಾಗಿ ಗುಮ್ಮಲಾಪುರದ ಸಿದ್ಧಲಿಂಗಯತಿ ಒಬ್ಬ ಒಳ್ಳೆಯ ವಚನಕಾರ ಕೂಡ ಆಗಿದ್ದಾರೆ.

ಇನ್ನು ಮುಕ್ತಕವಾಗಿದ್ದ ವಚನಗಳನ್ನು ಉತ್ತರ ಪ್ರತ್ಯುತ್ತರ ಸಂಬಂಧವಾಗಿ ಸೇರಿಸಿ ಕಥಾಪ್ರಸಂಗವಾಗಿ ಮಾಡಿದ ಇವರ ಪ್ರತಿಭೆಗೆ ಉದಾಹರಣೆಯಾಗಿ ಅಕ್ಕಮಹಾದೇವಿ ಮತ್ತು ಪ್ರಭುಗಳಲ್ಲಿ ನಡೆದ ಸಂವಾದವೊಂದನ್ನು ಗಮನಿಸಬೇಕು.

ಅಕ್ಕ ತಾನು ಚೆನ್ನಮಲ್ಲಿಕಾರ್ಜುನನನ್ನು ಕೂಡಿದ್ದೇನೆ ಎಂದಾಗ ನಡೆದ ಸಂವಾದ ಇದು:

'ನಾ ಸತ್ತೆನೆಂದು ಹೆಣ ಕೂಗಿದುದುಂಟೆ? ಬೈಚಿಟ್ಟ ಬಯಕೆ ಕರೆದುದುಂಟೆ? ಹೆಪ್ಪಿಟ್ಟ ಹಾಲು ಸಿಹಿಯಪ್ಪುದೇ? ಈ ಮಾತು ಒಪ್ಪವಲ್ಲ ಗುಹೇಶ್ವರ ಲಿಂಗಕ್ಕೆ'

ಇದಕ್ಕೆ ಅಕ್ಕನ ಪ್ರತ್ಯುತ್ತರ-

'ಸತ್ತ ಹೆಣ ಕೂಗಿದುದುಂಟು. ಬೈಚಿಟ್ಟ ಬಯಕೆ ಕರೆದುದುಂಟು. ಹೆಪ್ಪಿಟ್ಟ ಹಾಲು ಸಿಹಿಯಾದುದುಂಟು. ಇದ ನಿಶ್ಚೈಸಿ ನೋಡಿ ಚೆನ್ನಮಲ್ಲಿಕಾರ್ಜುನ ದೇವರಲ್ಲಿ.'

ಇದಕ್ಕೆ ಪ್ರಭುದೇವರ ವಚನ:

'ಇದು ಎನಗೆ ಆಶ್ಚರ್ಯ! ಹೇಳವ್ವ ಕಾಯವಿಲ್ಲದ ಸುಖವ, ಜೀವವಿಲ್ಲದ ಭವವ ಆ ಠಾವ ಹೇಳಾ ಗುಹೇಶ್ವರ ಲಿಂಗಕ್ಕೆ

ಇದಕ್ಕೆ ಅಕ್ಕಳ ಪ್ರತ್ಯುತ್ತರ:

'ಮರೆದೊರಗಿ ಕನಸ ಕಂಡು ಹೇಳುವಲ್ಲಿ ಸತ್ತ ಹೆಣ ಎದ್ದಿತ್ತು, ತನ್ನ ಋಣ ನಿಧಾನವ ಎದ್ದು ಕರೆಯಿತ್ತು. ಹೆಪ್ಪಿಟ್ಟ ಹಾಲು ಘಟ್ಟಿ ತುಪ್ಪವಾಗಿ ಸಿಹಿಯಾಯಿತ್ತು. ಇದಕ್ಕೆ ತಪ್ಪ ಸಾಧಿಸಲೇಕೆ- ಚೆನ್ನಮಲ್ಲಿಕಾರ್ಜುನ ದೇವರ ದೇವನಣ್ಣಾಗಳಿರಾ.'

ಗೂಳೂರು ಸಿದ್ಧವೀರಣ್ಣನಲ್ಲಿ ಬರುವ ಈ ಸಂಭಾಷಣೆ ವಚನಗಳನ್ನು ಉತ್ತರ ಪ್ರತ್ಯುತ್ತರ ಸಂಬಂಧವಾಗಿ ಜೋಡಿಸಿರುವ ಸುಂದರ ಪ್ರಸಂಗಕ್ಕೆ ಒಂದು ಉದಾಹರಣೆಯಾಗಿದೆ. ಹಾಗೆಯೇ ವಚನಗಳನ್ನು ಸಂವಾದ ರೂಪಕ್ಕೆ ಸಂಯೋಜಿಸುವಾಗ ಎಲೆ ಕೇಳಾ, ಎಂಬ ಸಂಬೋಧನಾ ರೂಪಗಳು ಅಕ್ಕನ ಪ್ರತ್ಯುತ್ತರ, ಪ್ರಭುದೇವರ ವಚನ ಎಂಬ ಗದ್ಯದ ಕೊಂಡಿಗಳೂ ಸೇರುವುದನ್ನು ನೋಡಬಹುದು.

ವಚನಗಳೇ ಶೂನ್ಯಸಂಪಾದನೆಯ ಮೂಲ ಆಧಾರವಾದರೂ ಗದ್ಯವನ್ನು ವರ್ಣನೆ, ಸಂದರ್ಭ ಸೃಷ್ಟಿ ಮೊದಲಾದವುಗಳಿಗೆ ಬಳಸಿಕೊಳ್ಳಲಾಗಿದೆ. ಈ ಪ್ರಸಂಗದ ಸೊಗಸನ್ನು ಹೆಚ್ಚಿಸುವುದಕ್ಕಾಗಿ ಹಾಡುಗಳನ್ನು ಸೇರಿಸಲಾಗಿದೆ. (ವಚನಗಳನ್ನು ಹಾಡಾಗಿಸಿರುವ ಸಾಧ್ಯತೆಯಿದೆ.)

ಹೀಗೆ ಈ ಶೂನ್ಯಸಂಪಾದನೆಗಳು ರಚಿತವಾಗಿವೆ.

ಶಿವಗಣಪ್ರಸಾದಿ (ಸು.ಕ್ರಿ. ಶ. ೧೪೦೦) ತಾನು ತನ್ನ ಶೂನ್ಯಸಂಪಾದನೆಯಲ್ಲಿ ೯೫೯ ವಚನಗಳನ್ನು ಮತ್ತು ೧೧ ಹಾಡುಗಳನ್ನು ಬಳಸಿಕೊಂಡಿದ್ದಾರೆ. ಹಲಗೆಯಾರ್ಯ (ಕ್ರಿ.ಶ. ೧೫೦೦) ೧೪೧೭ ವಚನಗಳನ್ನು ಮತ್ತು ೩೨ ಹಾಡುಗಳನ್ನು ಬಳಸಿಕೊಂಡಿದ್ದಾರೆ. (ಕ್ರಿ.ಶ. ಸು. ೧೫೪೦) ಗುಮ್ಮಲಾಪುರದ ಸಿದ್ಧಲಿಂಗಯತಿ ಬಳಸಿಕೊಂಡಿರುವುದು ೧೩೩೭ ವಚನಗಳನ್ನು ಮತ್ತು ೧೮ ಹಾಡುಗಳು, ಗೂಳೂರು ಸಿದ್ಧವೀರಣ್ಣ (ಸು. ಕ್ರಿ.ಶ. ೧೫೪೦) ಬಳಸಿಕೊಂಡಿರುವುದು ೧೪೪೦ ವಚನಗಳನ್ನು ಮತ್ತು ೨೧ ಹಾಡುಗಳನ್ನು.

ಕನ್ನಡ ಸಾಹಿತ್ಯದಲ್ಲೇ ವಿನೂತನ ಹಾಗೂ ವಿಲಕ್ಷಣ ಎನ್ನಿಸುವ ಈ ವಚನ ಸಂಕಲನ ಕೃತಿ ಒಂದು ಸುಂದರ ಪ್ರಸಂಗಗಳನ್ನೊಳಗೊಂಡ ಮಹಾಪ್ರಸಂಗವಾಗಿರುವುದು ಕನ್ನಡ ಸಾಹಿತ್ಯದ ಪುಣ್ಯ. ಈ ಶೂನ್ಯಸಂಪಾದನೆಗಳು ಕಾವ್ಯಕ್ಕೆ ಕಾವ್ಯ, ಧರ್ಮಕ್ಕೆ ಧರ್ಮ ಆಗಿದ್ದರೂ ಅಲ್ಲಿರುವ ಕಾವ್ಯಮಯತೆ ಈ ಸಂಕಲನಗಳನ್ನು ಕಾವ್ಯವಲಯಕ್ಕೇ ಹೆಚ್ಚು ಸಮೀಪವಾಗುವಂತೆ ಮಾಡುತ್ತವೆ.

■■

'ಪ್ರಭುಲಿಂಗಲೀಲೆ'ಯಲ್ಲಿ ಪ್ರಕಟಿತ-ಅಪ್ರಕಟಿತ ಶಿವಶರಣರ ವಚನಗಳು

✍ ಪ್ರೊ. ಜಿ. ಅಶ್ವತ್ಥನಾರಾಯಣ

ವೀರಶೈವ ಷಟ್ಪದಿ ಕಾವ್ಯಗಳಲ್ಲಿ ಜನಪ್ರಿಯವೂ, ಕನ್ನಡ ಕಾವ್ಯಗಳಲ್ಲಿ ಶ್ರೇಷ್ಠಕಾವ್ಯಗಳ ಸಾಲಿಗೆ ಸೇರುವಂಥ ಕೃತಿಯೂ ಆಗಿರುವುದು 'ಪ್ರಭುಲಿಂಗಲೀಲೆ' ಷಟ್ಪದಿಕಾವ್ಯ. ಗಮಕಿಗಳಿಗೆ ಹಾಡಲು, ರಸಿಕರು ಕೇಳಿ ಆನಂದಿಸಲು ರಾಘವಾಂಕನ ಹರಿಶ್ಚಂದ್ರಕಾವ್ಯ, ಚಾಮರಸನ ಪ್ರಭುಲಿಂಗಲೀಲೆ ಕರ್ಣರಸಾಯನ ನೀಡುವ ಕಾವ್ಯಗಳು ಆಗಿವೆ. ಈ ಕಾವ್ಯಗಳಲ್ಲಿ ಕಂಡುಬರುವ ನಾಟಕೀಯತೆ ಮತ್ತು ರೂಪಕ ಸಂಪತ್ತು ಅಪೂರ್ವವಾದವು. ಈಗಾಗಲೇ ನಾಡಿನ ವಿಮರ್ಶಕರು ಈ ಕಾವ್ಯಗಳ ವಸ್ತು, ವರ್ಣನೆ, ಅಲಂಕಾರ, ಭಾಷೆ ಕುರಿತು ನಾನಾ ಮುಖ ಚರ್ಚೆ ನಿರೂಪಣೆಗಳನ್ನು ಮಾಡಿದ್ದಾರೆ; ಈ ಕಾವ್ಯಗಳ ಹತ್ತಾರು ವೈಶಿಷ್ಟ್ಯಗಳನ್ನು ಗುರುತಿಸಿದ್ದಾರೆ.

ವೀರಶೈವ ಕವಿಗಳು ವಚನಕಾರರಾದ ಶಿವಶರಣರನ್ನು ಕುರಿತು ಕಾವ್ಯಬರೆಯುವಾಗ ಆ ಶಿವಶರಣರ ವಚನಗಳನ್ನು ಸಮಯೋಚಿತವಾಗಿ ತಮ್ಮ ಕಾವ್ಯದಲ್ಲಿ ಅಳವಡಿಸಿರುವುದೊಂದು ವಿಶೇಷವನ್ನು ಕಾಣಬಹುದು. ಈ ಸಾಲಿನಲ್ಲಿ ವಿಶಿಷ್ಟಕವಿ ಚಾಮರಸ. ಅವನು ಪ್ರಭುಲಿಂಗಲೀಲೆಯಲ್ಲಿ ಶಿವಶರಣರ ವಚನಗಳನ್ನು ಷಟ್ಪದಿ ರೂಪದಲ್ಲಿ ಅಳವಡಿಸಿರುವ ರೀತಿ-ವಚನವಿನ್ಯಾಸ ಅಧ್ಯಯನ ಯೋಗ್ಯವೂ ಕುತೂಹಲಕಾರಿಯೂ ಆಗಿದೆ.

ಈ ಸಂದರ್ಭದಲ್ಲಿ ಎಲ್. ಬಸವರಾಜು ಅವರು ಅಲ್ಲಮನ ವಚನಚಂದ್ರಿಕೆಯಲ್ಲಿ ಹೇಳಿದ ಮಾತುಗಳನ್ನು ಗಮನಿಸುವುದು ಅಗತ್ಯವಾಗಿದೆ. ಅಲ್ಲಮಪ್ರಭುದೇವರ ವಚನಗಳು ನಾಲ್ಕು ವಿಧವಾದ ಮುಖ್ಯ ಮೂಲಗಳಲ್ಲಿ ಸಿಗುವುವು: ೧.ಷಟ್ಸ್ಥಲಾನುಕ್ರಮವಾಗಿ ಜೋಡಿಸಿ ಅವಕ್ಕೆಲ್ಲ ವ್ಯಾಖ್ಯಾನ ಬರೆದು ವೀರಶೈವ ಸಿದ್ಧಾಂತ ಪ್ರತಿಪಾದನೆಗೆ ಕ್ರಮವೇರ್ಪಟ್ಟಿರುವ ವಚನಗಳು........ ೨. ಶೂನ್ಯ ಸಂಪಾದನೆ ೩. ಹಲವರ ವಚನಗಳನ್ನು ಒಂದೆಡೆ ಸೇರಿಸಿದ ರಾಶಿ. ೪. ಶರಣರ ಜೀವನ ಚರಿತ್ರಾತ್ಮಕವಾದ ವೀರಶೈವ ಪುರಾಣಗಳು (ಪು. ೧೯). ಈ ನಾಲ್ಕನೆಯ ರೀತಿಯನ್ನು ಮುಖ್ಯ ಮೂಲವೆಂದು ಕರೆದು ಆ ಬಗೆಗೆ ಹೇಳುತ್ತಾ "ಶಿವಕವಿಗಳು ಶಿವಶರಣರ ಮೇಲೆ ಕಾವ್ಯಗಳನ್ನು ಬರೆಯುವಾಗ ಆ ಶರಣರು ವಚನಕಾರರಾಗಿದ್ದರೆ ತಮ್ಮ ಆ ಕಾವ್ಯಗಳಲ್ಲಿ ಅವನ್ನು ಸೂಚಿಸುವುದಲ್ಲದೆ ಅವರ ವಚನಗಳನ್ನು ಸಂದರ್ಭೋಚಿತವಾಗಿ ಉಲ್ಲೇಖಿಸಿಯೂ ಇದ್ದಾರೆ. ನಮ್ಮಲ್ಲಿ ಈ ಸಂಪ್ರದಾಯವನ್ನು ಪ್ರಾರಂಭಿಸಿದವರು ಹರಿಹರ, ರಾಘವಾಂಕ ಮತ್ತು ಪಾಲ್ಕುರಿಕೆ ಸೋಮನಾಥ. ಈ ಸತ್ ಸಂಪ್ರದಾಯವನ್ನು ಮುಂದೆ ಬಂದ ಶಿವಕವಿಗಳೆಲ್ಲರೂ ಪರಿಪಾಲಿಸಿರುವರು. ಈಚಿನವನಾದ ಎಳಂದೂರು ಹರೀಶ್ವರ ಕವಿಯೂ ಪ್ರಭುದೇವರ ಜೀವನಚರಿತ್ರೆಯನ್ನು ಬರೆಯುವಾಗ- ಹರಿಹರ, ರಾಘವಾಂಕ, ಚಾಮರಸ ಮುಂತಾದವರಂತೆ ಪ್ರಭುದೇವರ ವಚನಗಳನ್ನೂ ಸಂದರ್ಭೋಚಿತವಾಗಿ ಷಟ್ಪದಿಗೆ ತಿರುಗಿಸಿಕೊಂಡಿದ್ದಾನೆ. ಹೀಗೆ ಶರಣರ ಕಥೆಗಳನ್ನು ಹೇಳುವಾಗ ಆ ಶರಣರ ವಚನಗಳನ್ನು ಅವರ ಬಾಯಿಂದ ಆಡಿಸಿದ್ದಾರೆ. ಇಂಥ ಸಂದರ್ಭಗಳಲ್ಲಿ ಕವಿಯು ಬಳಸಿರುವ ಮಾತುಗಳು ಸ್ವಲ್ಪ ಹೆಚ್ಚಿರಬಹುದು ಅಥವಾ ಪದಗಳು ಬೇರೆಯಾಗಿರಬಹುದು. ಆದರೆ ಅವು ಶರಣರ ಮೂಲ ವಚನಾರ್ಥಕ್ಕೆ ಬಾಧಕವಾಗಲೀ ವಿರೋಧಕವಾಗಲೀ ಆಗಲಾರವು (ಪುಟ ೨೫-೨೬).

ಹೀಗೆ ವೀರಶೈವ ಕಾವ್ಯಗಳಲ್ಲಿ ಶಿವಶರಣರ ವಚನಗಳು ಹೇಗೆ ಮೂಡಿವೆ ಎಂಬುದನ್ನು ಸಮರ್ಥ ರೀತಿಯಲ್ಲಿ ಮೂಡಿಸುವ ಎಲ್. ಬಸವರಾಜರ ಇನ್ನೊಂದು ಮಹತ್ವದ ಮಾತನ್ನು ಆಡಿದ್ದಾರೆ:

ಹಲವೆಡೆ ಕವಿಗಳು ತಮ್ಮ ತಮ್ಮ ಕಾವ್ಯಗಳಲ್ಲಿನ ಶರಣರ ಬಾಯಿಂದ ಆಡಿಸುವ ಮಾತುಗಳು ಈಗ ಪ್ರಕಟವಾಗಿರುವ ಆಯಾ ಶರಣರ ವಚನಗಳಲ್ಲಿ ಕಂಡು ಬರದಿದ್ದರೆ ಅವು ನಮಗೆ ಇನ್ನೂ ಸಿಕ್ಕಿಲ್ಲವೆಂದಷ್ಟನ್ನು ಮಾತ್ರ ನಿರ್ಣಯಿಸಬಹುದೇ

ಹೊರತು ಆ ಅರ್ಥದ ವಚನವನ್ನು ಆ ಶರಣನು ಹಾಡಿಲ್ಲವೆನ್ನುವುದು ಸಾಹಸವಾದೀತು ಎಂಬ ಮಾತಿಗೆ ನಿದರ್ಶನವಾಗಿ ಅಲ್ಲಮನ ವಚನಕ್ಕೆ ಸಂಬಂಧಿಸಿದಂತೆ ಒಂದು ಉದಾಹರಣೆಯನ್ನು ಇಲ್ಲಿ ಪ್ರಸ್ತಾಪಿಸಿದೆ. ಚಾಮರಸನು ಪ್ರಭುಲಿಂಗಲೀಲೆಯಲ್ಲಿ ಅಲ್ಲಮನ ಕಥೆಯನ್ನೇ ಮುಖ್ಯವಾಗಿ ಹೇಳಿದ್ದರೂ ಉಳಿದ ಶಿವಶರಣರ ಕಥೆಗಳೂ ಸಾಕಷ್ಟು ಪ್ರಧಾನವಾಗಿಯೇ ಬಂದಿವೆ. ಹೀಗಾಗಿ ಅಲ್ಲಮನ ವಚನಗಳನ್ನು ಹಾಗೆಯೇ ಇತರ ಶಿವಶರಣರ ವಚನಗಳನ್ನು ತನ್ನ ಕಾವ್ಯದಲ್ಲಿ ಕವಿ ಅಳವಡಿಸಿಕೊಂಡಿದ್ದಾನೆ, ವಚನವನ್ನು ಷಟ್ಪದೀ ರೂಪದಲ್ಲಿ ತಿರುಗಿಸಿದ್ದಾನೆ.

ವಚನಗಳನ್ನು ಷಟ್ಪದೀ ರೂಪದಲ್ಲಿ ತಿರುಗಿಸುವ ಪ್ರಯತ್ನ ಇಂದಿಗೂ ನಿಂತಿಲ್ಲ, ಮುಂದುವರೆದ ಪದ್ಧತಿ ಆಗಿದೆ. ದೇವರದಾಸಿಮಯ್ಯನ ವಚನಗಳನ್ನು ಷಟ್ಪದಿಗೆ ಅಳವಡಿಸುವುದನ್ನು ಶಿವರಾಮ ಐತಾಳರು, ಇನ್ನೊಬ್ಬರು ಪಿ. ಬಸವಣ್ಣನವರು ಬಸವಣ್ಣನವರ ವಚನಗಳನ್ನು - ವಾರ್ಧಕ ಷಟ್ಪದಿಯಲ್ಲಿ ಅಳವಡಿಸಿದ್ದಾರೆ. ೧೯೭೪ರಲ್ಲಿ ಪ್ರಕಟವಾದ ಪಿ. ಬಸವಣ್ಣನವರ (ಕುಮಾರ ನಿಜಗುಣ ಕಾವ್ಯನಾಮದಲ್ಲಿ) ಸಂಗಮೇಶ್ವರ ಶತಕ ಗ್ರಂಥದಲ್ಲಿ ಬಸವಣ್ಣನವರ ೧೦೦ ವಚನಗಳನ್ನು ವಾರ್ಧಕ ಷಟ್ಪದಿಯಲ್ಲಿ ನಿರೂಪಿಸಲಾಗಿದೆ.

ಹೀಗೆ ವಚನಗಳನ್ನು ಷಟ್ಪದಿರೂಪದಲ್ಲಿ ಹೇಳುವ ಒಂದು ಪರಂಪರೆಯನ್ನೇ ವೀರಶೈವ ಕಾವ್ಯಇತಿಹಾಸದಲ್ಲಿ ಕಾಣಬಹುದು. ಷಟ್ಪದಿಯೇ ವಚನಕ್ಕೆ ಹೆಚ್ಚು ಸೂಕ್ತ ಛಂದೋ ಮಾದರಿ ಎನ್ನುವುದಕ್ಕೆ ಹಲವಾರು ಕಾರಣಗಳಿವೆ. ಈ ಪರಂಪರೆಯಲ್ಲಿ ಚಾಮರಸನ ಪ್ರಭುಲಿಂಗಲೀಲೆಯಲ್ಲಿ ಉಳಿದೆಡೆ ಕಾಣದ ಹಲವು ವೈಶಿಷ್ಟ್ಯಗಳನ್ನು ಕಾಣಬಹುದು.

ಮೊದಲನೆಯದಾಗಿ ಇಂದು ನಮಗೆ ಸಿಗದ ಶಿವಶರಣರ ವಚನಗಳು ಅಥವಾ ಇನ್ನೂ ಪ್ರಕಟವಾಗದ ಕೆಲವು ವಚನಗಳು ಪ್ರಭುಲಿಂಗಲೀಲೆಯಲ್ಲಿ ಅಡಗಿವೆ. ಉದಾಹರಣೆಗೆ ಪಿಂಡಸ್ಥಲದ ಒಂದು ವಚನವನ್ನು ಗಮನಿಸಬಹುದು. ಅಲ್ಲಮನ ಪಿಂಡಸ್ಥಲದ ವಚನಗಳು ೪ ಎಂದು ಇದುವರೆಗೆ ಅಲ್ಲಮನ ವಚನಗಳನ್ನು ಸಂಗ್ರಹಿಸಿದವರೆಲ್ಲ ತಿಳಿಸಿದ್ದಾರೆ (ಗಮನಿಸಿ; ಅಲ್ಲಮನ ವಚನ ಚಂದ್ರಿಕೆ ಎಲ್. ಬಸವರಾಜು, ೧೯೬೦; ಅಲ್ಲಮಪ್ರಭುವಿನ ಟೀಕಿನ ವಚನಗಳು, ಇಮ್ಮಡಿ ಶಿವಬಸವ ಸ್ವಾಮಿಗಳು (೧೯೮೬); ಅಲ್ಲಮ ಪ್ರಭುದೇವರ ವಚನ ನಿರ್ವಚನ, ಶ್ರೀ ಸಿದ್ದೇಶ್ವರ ಸ್ವಾಮಿಗಳು (೨೦೦೧) ಇತ್ಯಾದಿ)

ಕೆಲವು ಪಾಠಾಂತರಗಳ ವ್ಯತ್ಯಾಸದೊಡನೆ ಆ ನಾಲ್ಕು ವಚನಗಳು ಇವು:

೧. ಶಿಲೆಯೊಳಗಣ ಪಾವಕನಂತೆ

೨. ಕಲ್ಲೊಳಗಣ ಕಿಚ್ಚು ಉರಿಯಬಲ್ಲುದೆ

೩. ಜಲದೊಳಗಿದ್ದ ಕಿಚ್ಚು ಜಲವ ಸುಡದೆ ಜಲವು ತಾನಾಗಿದ್ದಿತು ನೋಡಾ.

೪. ನೆಲದ ಮರೆಯ ನಿಧಾನದಂತೆ.

ಪ್ರಭುಲಿಂಗಲೀಲೆಯ ೬ ನೇ ಗತಿಯ ೪೩ನೇ ಪದ್ಯ ಹೀಗಿದೆ:

ಎಳ್ಳಿನೊಳಗೆಂತೆಣ್ಣೆಯಿಹ ಪರಿ
ಯಲ್ಲಿ ಕಾಷ್ಠದೊಳನಿಲನಿಹ ಪರಿ
ಯಲ್ಲಿ ಹಾಲೊಳು ಬೆಣ್ಣೆಯೆಂತಿಹುದಂತೆ ಭಾವಿಸಲು
ಬಲ್ಲೊಡೆಮ್ಮಯ ದೇವನಿರುತಿಹ
ನೆಲ್ಲರೆಡೆಗಳಲನುವನರಿದೊಡೆ
ಯಲ್ಲಮಪ್ರಭು ಗುರುಗುಹೇಶ್ವರ ಲಿಂಗ ಲೀಲೆಯಲಿ.

(ವಿಚಾರಮಾಡಿದಲ್ಲಿ ಎಳ್ಳಿನಲ್ಲಿ ಎಣ್ಣೆಯಿರುವ ರೀತಿಯಲ್ಲಿ, ಕಟ್ಟಿಗೆಯಲ್ಲಿ ಅಗ್ನಿಯಿರುವ ರೀತಿಯಲ್ಲಿ, ಹಾಲಿನಲ್ಲಿ ಬೆಣ್ಣೆ ಇರುವ ರೀತಿಯಲ್ಲಿ ನಮ್ಮ ದೇವ ಅಲ್ಲಮ ಪ್ರಭುವಾದ ಗುರುಗುಹೇಶ್ವರ ಲಿಂಗನು ಲೀಲೆಯಿಂದ ಎಲ್ಲರಲ್ಲಿಯೂ ಇರುವನು)

(ಪ್ರಭುಲಿಂಗಲೀಲೆ, ಗದ್ಯಾನುವಾದ: ಡಾ. ಎಸ್. ವಿದ್ಯಾಶಂಕರ, ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಕಟಣೆ, ಪುಟ ೧೧೯).

-ಇದು ಪಿಂಡಸ್ಥಲದ ವಚನ ಎಂಬುದು ಸ್ಪಷ್ಟ.

ಈಗ ಪ್ರಕಟಿತವಾದ ೪ ಪಿಂಡಸ್ಥಲದ ವಚನಗಳಲ್ಲಿ ಇರುವ ಉಪಮೆಗಳಿವು:

೧. ಶಿಲೆಯೊಳಗಣ ಪಾವಕನಂತೆ

೨. ಉದಕದೊಳಗಣ ಪ್ರತಿಬಿಂಬದಂತೆ

೩. ಬೀಜದೊಳಗಣ ವೃಕ್ಷದಂತೆ

೪. ಶಬ್ದದೊಳಗಣ ನಿಶ್ಯಬ್ದದಂತೆ -ಅಲ್ಲಮ ವಚನ ೩

೫. ಕಲ್ಲೊಳಗಣ ಕಿಚ್ಚು ಉರಿಯಬಲ್ಲುದೆ

೬. ಬೀಜದೊಳಗಣ ವೃಕ್ಷ ಉಲಿಯಬಲ್ಲುದೆ. -ಅಲ್ಲಮನ ವಚನ ೩

೭. ಜಳದೊಳಗಿದ್ದ ಕಿಚ್ಚು

೮. ಕಾಲದೊಳಗಿದ್ದ ಕುಲವ ಬೆಳಗದೆ -ಅಲ್ಲಮನ ವಚನ ೪

೯. ನೆಲದ ಮರೆಯ ನಿಧಾನದಂತೆ

೧೦. ಮುಗಿಲ ಮರೆಯಲಡಗಿದ ಮಿಂಚಿನಂತೆ

೧೧. ಬಯಲ ಮರೆಯಲಡಗಿದ ಮರೀಚಿಯಂತೆ

೧೨. ಕಂಗಳ ಮರೆಯಲಡಗಿದ ಬೆಳಗಿನಂತೆ

ಪ್ರಭುಲಿಂಗಲೀಲೆಯ ಪದ್ಯದಲ್ಲಿ ಉದಾಹೃತವಾದವು:

ಎಳ್ಳಿನೊಳಗೆಂತೆಣ್ಣೆಯಿಹ ಪರಿ
ಕಾಷ್ಠದೊಳನಲನಿಹ ಪರಿ
ಹಾಲೊಳು ಬೆಣ್ಣೆಯಂತಿಹುದು

ಈಗ ಲಭ್ಯವಿರುವ ೪ ಅಲ್ಲಮನ ಪಿಂಡಸ್ಥಲದ ವಚನಗಳಲ್ಲಿ ಇಲ್ಲದಿರುವ ಉಪಮೆಗಳು ಇಲ್ಲಿವೆ ಎಂಬುದನ್ನು ಗಮನಿಸಬೇಕು. ಇಲ್ಲಿ ಗುರು ಗುಹೇಶ್ವರ ಎಂಬ ಅಂಕಿತವು ಈ ಪದ್ಯದಲ್ಲಿ ಅಲ್ಲಮನ ವಚನದ ಷಟ್ಪದಿರೂಪ ಎಂದು ತಿಳಿಯುವುದು ಹೆಚ್ಚು ಸಮಂಜಸ. ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ಬಹುಶಃ ನಮಗೆ ಲಭ್ಯವಿಲ್ಲದಿರುವ ಅಲ್ಲಮನ ವಚನವನ್ನು ಚಾಮರಸ ಈ ಪದ್ಯದಲ್ಲಿ ಅಳವಡಿಸಿದ್ದಾನೆ ಎನ್ನಬಹುದು. ಡಾ. ಎಲ್. ಬಸವರಾಜು ಅವರು ಹೇಳಿದ ಮಾತು: "ಹಲವೆಡೆ ಕವಿಗಳು ತಮ್ಮ ತಮ್ಮ ಕಾವ್ಯಗಳಲ್ಲಿನ ಶರಣರ ಬಾಯಿಂದ ಆಡಿಸಿರುವ ಮಾತುಗಳು, ಈಗ ಪ್ರಕಟವಾಗಿರುವ ಆಯಾ ಶರಣರ ವಚನಗಳಲ್ಲಿ ಕಂಡು ಬರದಿದ್ದರೆ ಅವು ನಮಗೆ ಇನ್ನೂ ಸಿಕ್ಕಿಲ್ಲ ಎಂದು ಮಾತ್ರ ನಿರ್ಣಯಿಸಬಹುದು" ಎಂಬ ಮಾತಿಗೆ ಈ ಚಾಮರಸನ ಪದ್ಯ ಒಂದು ನಿದರ್ಶನವಾಗಿದೆ ಎಂದರೆ ತಪ್ಪಾಗದು.

ಇಲ್ಲಿರುವ ಉಪಮೆಗಳು, ಬೇರೆ ರೂಪದಲ್ಲಿ ಇತರ ಶರಣರ ವಚನಗಳಲ್ಲಿ ಸಿಗುತ್ತವೆ.

ಉದಾಹರಣೆಗೆ ಅಕ್ಕನ ವಚನ-

ನೆಲದ ಮರೆಯ ನಿಧಾನದಂತೆ
ಫಲದ ಮರೆಯ ರುಚಿಯಂತೆ
ಶಿಲೆಯ ಮರೆಯ ಹೇಮದಂತೆ
ತಿಲದ ಮರೆಯ ತೈಲದಂತೆ
ಭಾವದ ಮರೆಯ ಬ್ರಹ್ಮವಾಗಿಪ್ಪ
ಚನ್ನಮಲ್ಲಿಕಾರ್ಜುನನ ನಿಲವನು ಆರೂ
ಅರಿಯಬಾರದು.

ಮತ್ತು ದೇವರ ದಾಸಿಮಯ್ಯನ ವಚನ:

ಮರದೊಳಗೆ ಮಂದಾಗ್ನಿಯನು ಉರಿಯದಂತಿರಿಸಿದೆ,
ನೊರೆವಾಲೊಳಗೆ ತುಪ್ಪವ ಕಂಪಿಲ್ಲದಂತಿರಿಸಿದೆ,
ಶರೀರದೊಳಗೆ ಆತ್ಮನನು ಯಾರೂ ಕಾಣದಂತಿರಿಸಿದೆ,
ನೀ ಬೆರಸಿದ ಭೇದಕ್ಕೆ ಬೆರಗಾದೆನಯ್ಯ ರಾಮನಾಥಾ.

ಈ ವಚನದ್ವಯಗಳಲ್ಲಿ ಅಲ್ಲಮನ ವಚನದ ಎಳ್ಳು, ಕಾಷ್ಟ, ಹಾಲುಗಳಲ್ಲಿ ಎಣ್ಣೆ, ಅನಿಲ, ಬೆಣ್ಣೆ ಅಡಗಿರುವ ಭಾವವನ್ನು. ತಿಲದ ಮರೆಯ ತೈಲದಂತೆ- ಮರದೊಳಗೆ ಮಂದಾಗ್ನಿಯನು ಉರಿಯದಂತಿರಿಸಿದೆ - ನೊರೆವಾಲೊಳಗೆ ತುಪ್ಪವ ಕಂಪಿಲ್ಲದಂತಿರಿಸಿದೆ ಎಂಬ ಮಾತುಗಳಲ್ಲಿ ಕಾಣಬಹುದಾದರೂ - ಸಮಾನ ಸಂಗತಿಗಳನ್ನು ಹೇಳುವಾಗ ಸಮಾನ ಸಾದೃಶಗಳು ಬರುವುದು ಸಾಮಾನ್ಯ ಸಂಗತಿ. ಆದ್ದರಿಂದ ಬಂದಿವೆ ಅಷ್ಟೆ. ಅವರ ವಚನಗಳು ಪಿಂಡಸ್ಥಲದ ವಚನಗಳೇ ಆದರೂ ಅವು ಆ ಶರಣರ ಸ್ವತಂತ್ರ ವಚನಗಳು ಎಂದು ತಿಳಿಯಬೇಕು.

ಚಾಮರಸನು ಪ್ರಭುಲಿಂಗಲೀಲೆಯಲ್ಲಿ ಶರಣರ ವಚನವನ್ನು ಬಳಸಿಕೊಳ್ಳುವಾಗ ಮೂಲಭಾವವನ್ನು ವಚನದ ಆಯ್ದ ಪದಗಳನ್ನು ಬಳಸಿ ಪದ್ಯ ರೂಪವಾಗಿ ಹೇಳುವ ಪರಿಪಾಟವನ್ನು ಕಾಣಬಹುದು. ಉದಾಹರಣೆಗೆ, ೧೭ ನೇ ಗತಿಯ ೧೮ ನೇ ಪದ್ಯ ಗಮನಿಸಬಹುದು.

ನರೆ ತೆರೆಗಳಿರದಡರಿ ತನು ಜ
ರ್ಜರಿತವಾಗಿಯನೇಕ ದಿನದಲಿ
ಹಿರಿಯರೆಂದೆನಿಸಿದರೆ ಹಿರಿಯರೆ ಬೆಟ್ಟದಂದದಲಿ
ಹಿರಿದು ದಿನವಿರೆ ಹಿರಿಯರಹರೇ
ನಿರುತ ನಿರಹಂಕಾರವಿಲ್ಲದೆ
ಹಿರಿಯತನ ಮಹದೇವಿಗಾಯಿತ್ತೆಂದುದಭವಗಣ (ಪುಟ ೧೭-೧೮)

(ಮುಪ್ಪಿಡಿದ ಚರ್ಮ) ನೆರಿಗೆಗಟ್ಟಿ ದೇಹ ಶಿಥಿಲವಾಗಿ ಅನೇಕ ದಿವಸಗಳು ಕಳೆದದ್ದರಿಂದ ಹಿರಿಯರೆಂದೆನಿಸಿದವರು (ನಿಜವಾಗಿ) ಹಿರಿಯರೆ? ಬೆಟ್ಟದಂತೆ ಬಹಳ ದಿನಗಳಿಂದಿರಲು (ಅವರು) ಹಿರಿಯರಾಗುವರೆ? ಸದಾ ನಿರಹಂಕಾರಿಗಳಾಗಿ (ಕಿರಿಯತನದಲ್ಲೇ) ಹಿರಿಯತನ ಮಹಾದೇವಿಗೆ ಆಯಿತು ಎಂದು ಶಿವಗಣವು ಹೊಗಳಿತು (ಗದ್ಯಾನುವಾದ: ಎಸ್. ವಿದ್ಯಾಶಂಕರ, ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಕಟನೆ, ಪುಟ ೨೮೧).

ಚಾಮರಸನು ಚನ್ನಬಸವಣ್ಣನವರ ಈ ವಚನವನ್ನು ಇಲ್ಲಿ ಅಳವಡಿಸಿದ್ದಾನೆ ಎಂದು ಸುಲಭವಾಗಿ ಗ್ರಹಿಸಬಹುದು:

ಅಜಕೋಟಿ ಕಲ್ಪ ವರುಷದವರೆಲ್ಲರೂ ಹಿರಿಯರೆ?
ಹುತ್ತೇರಿ ಬೆತ್ತ ಬೆಳೆದ ತಪಸ್ವಿಗಳೆಲ್ಲರೂ ಹಿರಿಯರೆ?
ನಡು ಮುರಿದು ಗುಡುಗೂರಿ ತಲೆ ನಡುಗಿ
ನೆರೆ ತೆರೆ ಹೆಚ್ಚಿ ಮತಿಗೆಟ್ಟು, ಒಂದನಾಡ ಹೋಗಿ ಒಂಬತ್ತನಾಡುವ
ಅಜ್ಞಾನಿಗಳೆಲ್ಲ ಹಿರಿಯರೆ?
ಅನುವನರಿದು ಘನವ ಬೆರಸಿ ಹಿರಿದು ಕಿರಿದೆಂಬ ಭೇದವ ಮರೆದು
ಕೂಡಲ ಚನ್ನಸಂಗಯ್ಯನಲ್ಲಿ ಬೆರೆಸಿ ಬೇರಿಲ್ಲದಿಪ್ಪ ಹಿರಿಯತನ
ನಮ್ಮ ಮಹಾದೇವಿಯಕ್ಕಂಗಾಯಿತ್ತು.

(ಚನ್ನಬಸವಣ್ಣನವರ ವಚನಗಳು ೩೫೩
ಕವಿವಿ ಪ್ರಕಟನೆ. ಸಂ. ಡಾ. ಆರ್.ಸಿ. ಹಿರೇಮಠ)

ಪ್ರಭುಲಿಂಗಲೀಲೆಯಲ್ಲಿ ಪ್ರಮುಖ ಶರಣರ ವಚನಗಳನ್ನು ಗಮನಿಸಿ-ಆಧರಿಸಿ ಚಾಮರಸ ಕಾವ್ಯರಚನೆ ಮಾಡಿದ್ದಾನೆ. ಬಸವಣ್ಣನವರ ವಚನಗಳನ್ನು ಸಾಕಷ್ಟು ಬಳಸಿಕೊಂಡಿದ್ದಾನೆ. ಅಲ್ಲಮನ ಕಥೆ ಹೇಳಲು ಹೊರಟಿದ್ದರೂ ಸಹ ಅಲ್ಲಮನ ವಚನಗಳಲ್ಲಿ ಸಾಕಷ್ಟು ಬೆಡಗು ಆಧ್ಯಾತ್ಮ ಅಡಗಿರುವುದರಿಂದ ಕಾವ್ಯದಲ್ಲಿ ಮಿತಬಳಕೆಗೆ ಕಾರಣವಾಗಿದೆ ಎನ್ನಬಹುದು. ಆದರೆ ಬಸವಣ್ಣನವರ ವಚನ ಸುಲಭ ಗ್ರಾಹ್ಯವಾದುದರಿಂದ, ಕಾವ್ಯಾಕರ್ಷಣೆಗೆ ಹತ್ತಿರವಾದುದರಿಂದ ಬಸವಣ್ಣನ ವಚನಗಳತ್ತ ಚಾಮರಸ ಹೆಚ್ಚು ಒಲವು ತೋರಿದ್ದಾನೆ ಎಂದರೆ ತಪ್ಪಿಲ್ಲ. ಬಸವಣ್ಣನವರ ವಚನಗಳನ್ನು ಚಾಮರಸ ಅಳವಡಿಸಿಕೊಳ್ಳುವ ರೀತಿಗೆ ಇಗೋ ಒಂದು ನಿದರ್ಶನ : ಪ್ರಭುಲಿಂಗಲೀಲೆಯ ೧೬ ನೇ ಗತಿಯ ೪೬ ನೇ ಪದ್ಯ ಹೀಗಿದೆ:

ಹೊನ್ನಿನೊಳಗೊಂದೊರೆಯ ವಸ್ತ್ರದ
ಮನ್ನಣೆಯಲೊಂದೆಳೆಯನಥವಾ
ಧಾನ್ಯದೊಳಗಣುಮಾತ್ರವೆನಗೆನ್ನವರಿಗಿರಲೆಂದು
ದೈನ್ಯತೆಯಲಾ ಜಂಗಮವನತಿ
ಮನ್ನಿಸದೆ ಮರೆತಿರ್ದೆನಾದೊಡೆ
ನಿನ್ನ ಪಾದಕೆ ದೂರನಾದಹೆ ದೇವ ಕೇಳೆಂದ.

(ಚಿನ್ನದಲ್ಲಿ ಒಂದು ಚೂರನ್ನು, ಬೆಲೆಬಾಳುವ ವಸ್ತ್ರದಲ್ಲಿ ಒಂದು ಎಳೆಯನ್ನು, ಇಲ್ಲವೇ ಧಾನ್ಯದಲ್ಲಿ ಒಂದು ಸಣ್ಣ ಕಣ ಮಾತ್ರವನ್ನು ನನಗೆ, ನನ್ನವರಿಗೆ ಇರಲೆಂದು ಆಸೆಯಿಂದ (ನನ್ನಲ್ಲಿಗೆ ಬಂದ) ಜಂಗಮನನ್ನು ವಿಶೇಷವಾಗಿ ವಿನಯದಿಂದ ಗೌರವಿಸದೆ ಸೊಕ್ಕಿನಿಂದ ನಡೆದೆನಾದರೆ ದೇವಾ ಕೇಳು, ನಾನು ನಿನ್ನ ಪಾದಕ್ಕೆ ದೂರನಾಗುವೆ; ಎಂದು ಅಲ್ಲಮನಿಗೆ ಬಸವಣ್ಣ ಹೇಳಿದನು) (ಎಸ್. ವಿದ್ಯಾಶಂಕರರ ಅನುವಾದ.)

ಇದಕ್ಕೆ ಆಕರವಾಗಿರಬಹುದಾದ ಬಸವಣ್ಣನ ವಚನ ಹೀಗಿದೆ:

ಹೊನ್ನಿನೊಳಗೊಂದೊರೆಯ
ಸೀರೆಯೊಳಗೊಂದೆಳೆಯ
ಅನ್ನದೊಳೊಂದಗುಳ
ಇಂದಿಗೆ ನಾಳಿಂಗೆ ಬೇಕೆಂದೆನಾದಡೆ
ನಿಮ್ಮಾಣೆ ನಿಮ್ಮ ಪ್ರಮಥರಾಣೆ
ನಿಮ್ಮ ಶರಣರಿಗಲ್ಲದೆ ಮತ್ತೊಂದಕೆ
ಮಾಡೆನು ಕೂಡಲಸಂಗಮದೇವ.

ಬಹುಶಃ ಚಾಮರಸನಿಗೆ ಸಿಕ್ಕ ಬಸವಣ್ಣನ ವಚನದಲ್ಲಿ 'ಧಾನ್ಯದೊಳಗಣು ಮಾತ್ರವನು' ಎಂಬ ಸಾಲು ಇದ್ದು ಈಗ ಲಭ್ಯವಿರುವ ವಚನದಲ್ಲಿ ಬಿಟ್ಟು ಹೋಗಿದೆ ಎನ್ನಬಹುದೇ? ಚಾಮರಸ ವಚನದ ಕೀಲಿಪದಗಳನ್ನು ಬಳಸಿ ಆ ವಚನದ ಭಾವವನ್ನು ಸಮಯೋಚಿತವಾಗಿ ನಿರೂಪಿಸುತ್ತಾನೆ. ಬಸವಣ್ಣನವರ ವಚನವೊಂದರ ಮಾತುಗಳನ್ನು ಬಸವಣ್ಣನವರ ಬಾಯಲ್ಲಿ ಆಡಿಸಿ ಪದ್ಯ ರಚಿಸಿರುವುದನ್ನು ಪ್ರಭುಲಿಂಗಲೀಲೆಯ ೧೪ ನೇ ಗತಿ ೨೧ ನೇ ಪದ್ಯದಲ್ಲಿ ನೋಡಬಹುದು:

ನಾನು ಮರವೆಯ ಮರುಳು ಸಂತತ
ನೀನೆಯರಿವಿನ ತಿರುಳು ತಿಳಿವೊಡೆ
ನಾನು ರಂಜಕನಖಿಳರರಿಯಲು ನೀ ನಿರಂಜಕನು
ನಾನು ಭಾವಿಸೆ ಪಶು ವಿಚಾರಿಸೆ
ನೀನು ಪಶುಪತಿ ಯೆನ್ನ ತಪ್ಪನು
ನೀನು ತಿದ್ದುವುದೆನುತೆ ಮೈಯಿಕ್ಕಿದನು ಬಸವಣ್ಣ. (೧೪-೨೧)

ನಾನು ಜ್ಞಾಪಕಶಕ್ತಿಯಿಲ್ಲದ ಹುಚ್ಚ, ನೀನು ಸದಾಜ್ಞಾನದ ತಿರುಳು. ತಿಳಿಯುವುದಾದರೆ ನಾನು ವೇಷಧಾರಿ, ನೀನು ಸರ್ವರೂ ತಿಳಿದಂತೆ ಸಹಜ ಸ್ವರೂಪನು. ವಿಚಾರ ಮಾಡಲು ನಾನು ಪಶು, ನೀನು ಪಶುಪತಿ. ನನ್ನ ತಪ್ಪನ್ನು ನೀನೇ ಸರಿಪಡಿಸುವುದು" ಎಂದು ಬಸವಣ್ಣನು (ಪ್ರಭುಗಳ ಪಾದಗಳಿಗೆ) ಅಡ್ಡಬಿದ್ದನು (ಡಾ. ವಿದ್ಯಾಶಂಕರರ ಅನುವಾದ)

ಚಾಮರಸನ ಈ ಪದ್ಯಕ್ಕೆ ಆಕರವಾದ ಬಸವಣ್ಣನವರ ವಚನ ಹೀಗಿದೆ:

ಬಡಪಶು ಪಂಕದಲಿ ಬಿದ್ದರೆ ಕಾಲ ಬಡಿವುದಲ್ಲದೆ ಬೇರೆ ಗತಿಯುಂಟೆ?
ಶಿವ ಶಿವ ಹೋದಹೆ ಹೋದಹೆನಯ್ಯಾ,
ನಿಮ್ಮ ಮನದತ್ತಲೆನ್ನ ಹಿಡಿದು ಬಡಿಯದ ಮುನ್ನ
ಒಡೆಯ ನಿಮ್ಮ ಬೈಯದಂತೆ ಮಾಡು ಕೂಡಲಸಂಗಮದೇವ.

(ಬಸವ ವಚನಾಮೃತ-ಭಾಗ ೧೬ ಎಲ್. ಬಸವರಾಜು)

ಅಕ್ಕಮಹಾದೇವಿ, ಬಸವಣ್ಣ, ಚೆನ್ನಬಸವಣ್ಣ, ಅಲ್ಲಮ ಮೊದಲಾದವರ ವಚನಗಳನ್ನು ನೇರವಾಗಿ, ಆಂಶಿಕವಾಗಿ ಮುಖ್ಯವಚನಗಳ ಬಳಕೆ ಮೂಲಕ, ವಚನದ ಸಾರ ನಿರೂಪಣೆಯಿಂದ ಚಾಮರಸನ ಪ್ರಭುಲಿಂಗಲೀಲೆಯನ್ನು ರಚಿಸಿರುವುದರಿಂದ ಎಂ.ಆರ್.ಶ್ರೀ. ಅವರು ಚನ್ನಬಸವ ಪುರಾಣ ಸಂಗ್ರಹದಲ್ಲಿ (ಪು. ೪೭ ಪೀಠಿಕೆ) ಹೇಳಿದಂತೆ "ಚಾಮರಸನು ಪ್ರಭುಲಿಂಗಲೀಲೆಯಲ್ಲಿ ವಚನಗಳ ಆಧಾರದಿಂದ ಕಥೆಯನ್ನು ಬೆಳೆಸಿಕೊಂಡು ಹೋಗಿದ್ದಾನೆ. ಈ ಕೆಲಸವನ್ನು ಚಾಮರಸನಂತೆ ಸಾರ್ಥಕರೀತಿಯಲ್ಲಿ ಯಾರು ಮಾಡಿದಂತಿಲ್ಲ. ಬಸವರಾಜದೇವರರಗಳೆ, ಬಸವ ಪುರಾಣಾದಿ ಗ್ರಂಥಗಳಲ್ಲಿ ಬಸವಣ್ಣನ ವಚನಗಳನ್ನು ಸಮಯೋಚಿತವಾಗಿ ಹಾಡಿದ ಗೀತಗಳೆಂದು ಯುಕ್ತ ಪ್ರಸಂಗಗಳಲ್ಲಿ ಉದ್ಧೃತವಾಗಿವೆ.... ಆದರೆ ಚೆನ್ನಬಸವ ಪುರಾಣದಲ್ಲಿ ಚೆನ್ನಬಸವಣ್ಣನನ್ನು ಕುರಿತು ಕವಿ ಕಡೆಗೆ ಅವನ ಕೆಲವು ವಚನಗಳನ್ನೂ ಕೂಡ ಉದ್ಧರಿಸಿಲ್ಲ" ಎಂದಿದ್ದಾರೆ.

ಮತ್ತೊಂದು ವಿಚಾರ ಗಮನಿಸಬೇಕಾದ್ದು ಎಂದರೆ ಎಸ್.ಎಸ್. ಬಸವನಾಳರಿಂದ ಸಂಪಾದಿತವಾದ ಪ್ರಭುಲಿಂಗಲೀಲೆ ಕಾವ್ಯದ ಮುನ್ನುಡಿಯಲ್ಲಿ ತಾವು ಉಪಯೋಗಿಸಿದ ಮಾತೃಕೆ (ಹಸ್ತಪ್ರತಿ) ಗಳನ್ನು ಕುರಿತು ಹೇಳುತ್ತಾ ಈ ಎಲ್ಲ ಪ್ರತಿಗಳಲ್ಲಿ ಪ್ರತಿಯೊಂದು ಗತಿಯ ಆರಂಭದಲ್ಲಿ ಅವತರಿಸಿದ ವಚನಗಳು ಒಂದೇ ಸಮನಾಗಿಲ್ಲ. ಖ ಪ್ರತಿಯಲ್ಲಂತೂ (ಇದರ ಕಾಲ ಗೊತ್ತಿಲ್ಲ) ಈ ವಚನಗಳ ಸಂಖ್ಯೆ ೩೬೦ ರವರೆಗೆ ಹೋಗಿರುವುದಲ್ಲದೆ ಅದರಲ್ಲಿ ಒಟ್ಟು ಕಂದಗಳು ೧೯ ವೃತ್ತಗಳು ೪ ಮತ್ತು ವಾಕ್ಯಗಳು ೨೦ ಇರುವುವು. ಇವೆಲ್ಲ ವಚನಗಳಲ್ಲಿ ಯೋಗ್ಯ ಕಂಡವುಗಳನ್ನು ಮಾತ್ರ ಆರಿಸಿ ಆ ಗತಿಗಳ ಆರಂಭದಲ್ಲಿ ಕೊಟ್ಟಿದೆ ಎಂದಿದ್ದಾರೆ.

ಎಲ್ಲಾ ಹಸ್ತಪ್ರತಿಗಳಲ್ಲೂ ಇರುವ ವಚನಗಳು ಒಂದೇ ಸಮನಾಗಿಲ್ಲ ಎಂಬಂಶದಿಂದ ಇವುಗಳನ್ನು ಚಾಮರಸ ಹಾಕಿಲ್ಲ. ಪ್ರತಿಕಾರರು ಸೇರಿಸಿರುವುದು ವಾದರ್ಥವಾಗುತ್ತದೆ. ಈ ವಚನಗಳೆಲ್ಲವನ್ನು ಸಮಗ್ರವಾಗಿ ಗಮನಿಸಿ ಪ್ರಭುಲಿಂಗಲೀಲೆಯಲ್ಲಿ ಕವಿ ವಚನ ಬಳಸಿ ರಚಿಸಿರುವ ಪದ್ಯಗಳಿಗೆ ಸದೃಶವಾದ ಮೂಲವಚನ ಯಾವುದು ಎಂಬುದು ಗಮನಿಸಬೇಕಾದ ಸಂಗತಿಯಾಗಿದೆ.

ಇನ್ನು ಎಂ.ಆರ್.ಶ್ರೀ. ಅವರು ಪ್ರಭುಲಿಂಗಲೀಲೆಯ ಸಂಗ್ರಹದ ಟಿಪ್ಪಣಿಗಳಲ್ಲಿ ಅಲ್ಲಮನ ವಚನದ ಪ್ರಭಾವದ ಪದ್ಯಗಳನ್ನು ಗುರುತಿಸಿದ್ದಾರೆ. ಉದಾಹರಣೆಗೆ-

ಪೊಂಪುಳಿಯ ಘನ ಸೌಖ್ಯ ಮಿಕ್ಕಳಿ
ಗಂಪುಗಳಲಿಲ್ಲೆನುತ ತನ್ನೊಳು
ಜೊಂಪಿಸುವ ಮನವೆಂಬ ತುಂಬಿಯ ಭಾವ ಮಿಗೆ ತುಂಬಿ
ಸಂಪಿಗೆಯ ಸಾರ್ವಂತೆ ಬಂದಳ
ಲಂಪಿನಲ್ಲಿ ಮಹದೇವಿ ಮುಕ್ತಿಯ
ಸೊಂಪು ಶೋಭಿಸುವ ವಲ್ಲಭ ಪ್ರಭುರಾಯನಿರ್ದೆಡೆಗೆ (ಸಂಗ್ರಹ ೩೬೪)

ಈ ಪದ್ಯದ ಬಗ್ಗೆ ಎಂ.ಆರ್.ಶ್ರೀ. ಟಿಪ್ಪಣಿ ಹೀಗಿದೆ:

"ಸಾಮಾನ್ಯವಾಗಿ ದುಂಬಿಗಳು ಸಂಪಿಗೆಯ ಹೂವುಗಳ ಬಳಿ ಹೋಗಲಾಗುವುದಿಲ್ಲ ಎಂದು ಹೇಳುವುದು ಕವಿಸಮಯ..... ಹೀಗೆಯೇ ಮನುಷ್ಯರು ಕಷ್ಟಸಾಧ್ಯವಾದ ಮೋಕ್ಷಸುಖಕ್ಕೆ ಎಳಸದೆ ಸುಲಭಸಾಧ್ಯಗಳಾದ ವಿಷಯಸುಖಗಳನ್ನೇ ದಿನವೂ ಎಳಸುವರು. ಆದರೆ ಮಹದೇವಿಯಕ್ಕನು ಇತರರಿಗೆ ದುಸ್ಸಾಧ್ಯವಾದ ಮೋಕ್ಷವನ್ನು ಬಯಸಿ ವಿಷಯಗಳನ್ನು ತೊರೆದು ಮೋಕ್ಷಸ್ವರೂಪಿಯಾದ ಅಲ್ಲಮಪ್ರಭುವನ್ನು ಆಶ್ರಯಿಸಿದಳು."

ಮನವೆಂಬ ತುಂಬಿಯ ಭಾವ ಮಿಗೆ ತುಂಬಿ..... ಮೊದಲನೆಯ ತುಂಬಿ ನಾಮಪದ, ಎರಡನೆಯದು ಕ್ರಿಯಾಪದ. ಸಾಮಾನ್ಯಾರ್ಥವು ಸುಲಭವಾಗಿಯೇ ಇದೆ. ವೀರಶೈವ ತತ್ವದಲ್ಲಿ ತುಂಬಿ ಎಂದರೆ ಪರಿಪೂರ್ಣತ್ವ ಎಂದು ಅಭಿಪ್ರಾಯ ಎಂದು ಹೇಳಿ ಪ್ರಭುದೇವರ ಈ ವಚನವನ್ನು ಉಲ್ಲೇಖಿಸಿದ್ದಾರೆ:

ತುಂಬಿ ಪರಿಮಳ ಉಂಡುದೋ
ಪರಿಮಳ ತುಂಬಿಯನುಂಡುದೊ
ಲಿಂಗ ಪ್ರಾಣವಾಯಿತೊ ಪ್ರಾಣಲಿಂಗವಾಯಿತೊ
ಗುಹೇಶ್ವರಾ ಈ ಉಭಯದ ಭೇದವ ನೀನೆ ಬಲ್ಲೆ

(ಅಲ್ಲಮಪ್ರಭುವಿನ ಟೀಕಿನ ವಚನಗಳು ೬೭೯)
ಸಂ. ಇಮ್ಮಡಿ ಶಿವಬಸವ ಸ್ವಾಮಿಗಳು)

ಈ ರೀತಿ ಹಲವು ಪದ್ಯಗಳಲ್ಲಿ (ಪದ್ಯಸಂಖ್ಯೆ ೩೭೦, ४೦೮...) ಅಲ್ಲಮನ ವಚನದ ಭಾವ ಹೇಗೆ ಬಂದಿದೆ ಎಂಬುದನ್ನು ಎಂ.ಆರ್.ಶ್ರೀ. ವಿವರಿಸಿದ್ದಾರೆ. ಹೀಗೆ ವಚನಗಳ ಪ್ರಭಾವವಿರುವುದನ್ನು ಗುರುತಿಸಿದ ಎಂ.ಆರ್.ಶ್ರೀ. ಅವರು ಚೆನ್ನಬಸವ ಪುರಾಣ ಕಾವ್ಯಸಂಗ್ರಹದಲ್ಲಿ ಚೆನ್ನಬಸವನ ವಚನಗಳನ್ನು ಬಳಸಿಕೊಳ್ಳದಿರುವ ಬಗೆಗೆ ಹೇಳುತ್ತಾ-

"ಚಾಮರಸನು ಪ್ರಭುಲಿಂಗಲೀಲೆಯಲ್ಲಿ ವಚನಗಳ ಆಧಾರದಿಂದ ಕಥೆಯನ್ನು ಬೆಳೆಸಿಕೊಂಡು ಹೋಗಿದ್ದಾನೆ" ಎಂಬ ಮಾತು ಒಪ್ಪತಕ್ಕದ್ದಾಗಿದೆ. ಮೇಲಿನ ನಿದರ್ಶನಗಳು ಆ ಮಾತಿಗೆ ತಕ್ಕ ಸಾಕ್ಷ್ಯಗಳನ್ನು ಒದಗಿಸುತ್ತಿವೆ. ಒಟ್ಟಿನಲ್ಲಿ ಶಿವಶರಣರ ಜೀವನವನ್ನು ಕಾವ್ಯರೂಪದಲ್ಲಿ ವಚನಗಳನ್ನು ಬಳಸಿಕೊಂಡು ಹೇಗೆ ರಚಿಸಬೇಕು ಎನ್ನಲು ಚಾಮರಸ ಪ್ರಭುಲಿಂಗಲೀಲೆ ಆದರ್ಶ ಕಾವ್ಯವಾಗಿದೆ ಎನ್ನಲಡ್ಡಿ ಇಲ್ಲ.

ಕನ್ನಡದಲ್ಲಿ ಕಾಲಜ್ಞಾನ ಸಾಹಿತ್ಯ

✍ ಡಾ. ಮಾಣಿಕರಾವ್ ಧನಶ್ರೀ

ವೀರಶೈವ ಧರ್ಮವು ಕನ್ನಡ ಸಾಹಿತ್ಯದ ಮೇಲೆ ಅಚ್ಚಳಿಯದ ಪ್ರಭಾವವನ್ನು ಬೀರಿದೆ. ಬಸವಾದಿ ಪ್ರಮಥರ ನೇತೃತ್ವದಲ್ಲಿ ವಚನ ಸಾಹಿತ್ಯ ಹಿಂದೆಂದೂ ಅನುಭವಿಸದ ಸಾಮಾಜಿಕ ಮಾನವೀಯ ಸಂವೇದನೆ ಪಡೆದು ಶ್ರೀಸಾಮಾನ್ಯನ ಸಾಹಿತ್ಯವಾಗಿ ಪರಿಣಮಿಸಿತು.

ಶ್ರೀ ಬಸವೇಶ್ವರರು, ಅಲ್ಲಮಪ್ರಭುದೇವರು ಮತ್ತು ಚನ್ನಬಸವೇಶ್ವರರು ವಚನ ಸಾಹಿತ್ಯ ರಚಿಸಿದಂತೆ, ಕಾಲಜ್ಞಾನ ಸಾಹಿತ್ಯವನ್ನು ಸಹ ರಚಿಸಿರುವುದಾಗಿ 'ಕಾಲಜ್ಞಾನ ಸಂಗ್ರಹ ಭಾಗ-೧'ನ್ನು ಸಂಪಾದಿಸಿದ ಶ್ರೀ ಶಿವಬಸವಸ್ವಾಮಿಗಳು ತಿಳಿಸಿದ್ದಾರೆ. ಅನಂತರ ಡಾ. ಎಲ್. ಬಸವರಾಜು ಅವರು ಸಹ "ಶರಣರು ತಾವು ಬರೆದ ವಚನಗಳಿಂದ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಪ್ರಖ್ಯಾತರಾಗಿದ್ದರೂ ಅವರು ಅಷ್ಟನ್ನೇ ಬರೆದವರಲ್ಲ; ಅಷ್ಟಕ, ಶತಕ, ತಾರಾವಳಿ, ಕಾಲಜ್ಞಾನ, ಉದ್ಧರಣೆ ಮುಂತಾದ ಲಘು ಕಾವ್ಯಪ್ರಕಾರಗಳಲ್ಲಿ ತಮ್ಮ ಭಾವನಾ ಲಹರಿಯನ್ನು ಹರಿಯಬಿಟ್ಟಿದ್ದಾರೆ" ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಹನ್ನೆರಡನೆಯ ಶತಮಾನದ ಶರಣರು ಕಾಲಜ್ಞಾನ ಸಾಹಿತ್ಯವನ್ನು ವಿರಚಿಸಿದರೆ? ಎಂಬ ವಿಚಾರವನ್ನು ನಿರ್ಣಯಿಸ ಬೇಕಾದರೆ ಆಂತರಿಕ ಮತ್ತು ಬಾಹ್ಯ ಪ್ರಮಾಣಗಳ ಜೊತೆಗೆ ಆಯಾ ವಚನಕಾರರ ವಿಚಾರಧಾರೆಯನ್ನು ಪ್ರಮುಖವಾಗಿ ಪರಿಶೀಲಿಸ ಬೇಕಾಗುತ್ತದೆ. ಯಾವುದೇ ವಿಷಯವನ್ನು ವ್ಯಕ್ತಿನಿಷ್ಠವಾಗಿ ನಿರ್ಣಯಿಸದೆ ವಸ್ತುನಿಷ್ಠವಾಗಿ ನಿರ್ಣಯಿಸಿದರೆ ಸರಿಯಾದ ಉತ್ತರ ಲಭಿಸುವುದು.

'ಶರಣರ ಕಾರ್ಯವಿಧಾನದಲ್ಲಿ ಎಂದೆಂದಿಗೂ ಉಳಿಯುವ ಮತ್ತು ಇಂದಿಗೂ ಬಹಳ ಮೆಚ್ಚುಗೆಯಾಗುವ ಅಂಶವೆಂದರೆ ಅವರ ಸ್ವತಂತ್ರ ವಿಚಾರಶೀಲತೆ. ಯಾವುದನ್ನೂ ವಿಚಾರದ ಒರೆಗಲ್ಲಿಗೆ ಉಜ್ಜಿ ನೋಡದೆ ಅವರು ನಂಬಿದವರೇ ಅಲ್ಲ. ಅನುಭವ ಮಂಟಪದಲ್ಲಿ ಧಾರ್ಮಿಕ ಸಾಮಾಜಿಕ ವಿಚಾರಗಳ ಚರ್ಚೆ ಮುಕ್ತ ಮನಸ್ಸಿನಿಂದ ನಡೆಯುತ್ತಿತ್ತು.

ಆದುದರಿಂದ ಶರಣರ ಕಾಲಜ್ಞಾನ ಸಾಹಿತ್ಯವನ್ನು ವಿಮರ್ಶೆಗೆ ಗುರಿಪಡಿಸಿದಾಗ ನಾವು ಎಲ್ಲ ಪೂರ್ವಗ್ರಹಗಳಿಂದಲೂ ತರತಮ ಭಾವಗಳಿಂದಲೂ ವಿಮುಕ್ತರಾಗಿರುವುದು ಅವಶ್ಯವಾಗಿದೆ. ಅಲ್ಲದೆ ಭಕ್ತಿಯ ಆಧಿಕ್ಯದಲ್ಲಿ ರೂಢಿಗೆ ಪ್ರಾಧಾನ್ಯ ಕೊಡುವುದು ಅಷ್ಟು ಸಮಂಜಸವಾಗಿ ತೋರುವುದಿಲ್ಲ.

ಕಾಲಜ್ಞಾನ ಶಬ್ದದ ಅರ್ಥ ಮತ್ತು ವ್ಯಾಪ್ತಿ

'ಕಾಲಜ್ಞಾನ' ಶಬ್ದವು ಕಾಲ ಮತ್ತು ಜ್ಞಾನ ಎಂಬ ಎರಡು ಸಂಸ್ಕೃತ ಶಬ್ದಗಳಿಂದ ಕೂಡಿದೆ. 'ಕಾಲ ಎಂದರೆ ಸಮಯ ಮತ್ತು ಜ್ಞಾನ ಎಂದರೆ ತಿಳಿವಳಿಕೆ, ಹೀಗೆ ಕಾಲಜ್ಞಾನ ಎಂದರೆ ಕಾಲದ ಅಥವಾ ಸಮಯದ ತಿಳಿವಳಿಕೆ ಎಂದು ಸ್ಥೂಲವಾಗಿ ಅರ್ಥೈಸಬಹುದು. ರೆವರೆಂಡ ಕಿಟಲ್‌ರು ತಮ್ಮ ಶಬ್ದಕೋಶದಲ್ಲಿ ಕಾಲಜ್ಞಾನ ಶಬ್ದಕ್ಕೆ ಅರ್ಥವನ್ನು ನಿರೂಪಿಸಿದ ರೀತಿ ಹೀಗಿದೆ.

ಕಾಲಜ್ಞಾನ: Knowledge of time or of the times; Knowledge of events to come.

ಕಾಲಜ್ಞಾನಿ: A Person who possesses knowledge of the times, siva. ಡಾ. ಫ.ಗು. ಹಳಕಟ್ಟಿಯವರು ಕಾಲಜ್ಞಾನ ಸಾಹಿತ್ಯದ ಸಂಶೋಧಕರಿಗೆ ಕೊಟ್ಟ ಎಚ್ಚರಿಕೆಯ ಮಾತು ಇಲ್ಲಿ ನೆನಪಿಸಿಕೊಳ್ಳುವುದು ಔಚಿತ್ಯಪೂರ್ಣವಾಗಿದೆ.

ಅನೇಕರು ಕಾಲಜ್ಞಾನ ವಚನಗಳನ್ನು ಅಂಧ ಭಕ್ತಿಯಿಂದ ನಂಬಬಹುದು. ಬೇರೆ ಕೆಲವರು ಸಂಪೂರ್ಣ ಚಿಕಿತ್ಸಕ ಬುದ್ಧಿಯಿಂದ ಪರೀಕ್ಷಿಸಲೂ ಹೋಗಬಹುದು. ಆದರೆ ಹೀಗೆ ಇವುಗಳ ಮಹತ್ವವನ್ನು ಕಂಡುಹಿಡಿಯಲು ಯತ್ನಿಸುವುದು ದೋಷಪೂರ್ಣವಾಗಿದೆ. ಆದರೆ ಸಂಶೋಧಕ ಬುದ್ಧಿಯಿಂದ ಇವುಗಳನ್ನು ಸೂಕ್ಷ್ಮವಾಗಿ ಪರೀಕ್ಷಿಸಿ, ನಿಜವಾಗಿ ವರ್ತಿಸಿದ್ದನ್ನು ಕಂಡುಹಿಡಿಯುವುದಕ್ಕೆ ಇವು ಬರೀ ಮಾರ್ಗದರ್ಶಕವಾದವುಗಳೆಂದು ತಿಳಿಯಬೇಕೆಂದು ನಮ್ಮ ಸೂಚನೆ ಇದೆ.

ಈ ಸೂಚನೆಯನ್ನು ಹಿನ್ನೆಲೆಯಾಗಿಟ್ಟುಕೊಂಡೇ ಹನ್ನೆರಡನೆಯ ಶತಮಾನದ ವಚನಕಾರರು ಕಾಲಜ್ಞಾನ ಸಾಹಿತ್ಯದ ಕರ್ತೃಗಳೇ ಎಂಬುದನ್ನು ಇಲ್ಲಿ ಪರಿಶೀಲನೆಗೆ ತೆಗೆದುಕೊಳ್ಳಲಾಗಿದೆ.

ಬಸವಣ್ಣನವರು: ಅಗ್ರಮಾನ್ಯ ವೈಚಾರಿಕ ವಚನಕಾರರೂ ಹಿರಿಯ ಅನುಭಾವಿಗಳೂ ಆದ ಬಸವಣ್ಣನವರು ತಮ್ಮ ವಚನಗಳಿಂದ ಕನ್ನಡಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಬಸವಣ್ಣನವರ ವಚನಗಳು ಸುಲಭ, ಸುಂದರ ಮತ್ತು ಪರಿಣಾಮಕಾರಿಯಾಗಿದ್ದು, ಓದುಗರ ಮನಸ್ಸನ್ನು ಸೂರೆಗೊಳ್ಳುತ್ತವೆ. ನಿತ್ಯಜೀವನದಿಂದ ಎತ್ತಿಕೊಂಡ ದೃಷ್ಟಾಂತಗಳು, ಸಾಮಾಜಿಕ ಕಳಕಳಿ ಮತ್ತು ಭಕ್ತಿಪರವಶತೆ ಬಸವಣ್ಣನವರ ವಚನಗಳನ್ನು ಮೌಲಿಕವಾಗುವಂತೆ ಮಾಡಿವೆ. 'ಅವು ವೀರಶೈವ ಧರ್ಮದ ಹಾಗೂ ವಿಶ್ವಧರ್ಮದ ಕನ್ನಡಿಯಾಗಿದ್ದು, ಕನ್ನಡ ಸಾಹಿತ್ಯಕ್ಕೆ ವಿಶೇಷ ಕಾಂತಿಯನ್ನು ಉಂಟುಮಾಡಿವೆ ಎಂಬ ಅಭಿಪ್ರಾಯವನ್ನು ಯಾರೂ ಅಲ್ಲಗಳೆಯುವಂತಿಲ್ಲ. ಉದಾಹರಣೆಗಾಗಿ ಕೆಳಗೆ ಪರಿಶೀಲಿಸಬಹುದು.

'ಉಳ್ಳವರು ಶಿವಾಲಯವ ಮಾಡುವರು
ನಾನೇನು ಮಾಡುವೆ, ಬಡವನಯ್ಯಾ
ಎನ್ನ ಕಾಲೇ ಕಂಭ, ದೇಹವೇ ದೇಗುಲ
ಶಿರ ಹೊನ್ನ ಕಳಸವಯ್ಯಾ, ಕೂಡಲಸಂಗಮದೇವಾ ಕೇಳಯ್ಯಾ
ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ.

ಈ ವಚನದ ಜೊತೆಗೆ ಇನ್ನೊಂದು ವಚನವನ್ನು ಪರಿಶೀಲಿಸಬಹುದು.

ನುಡಿದಡೆ ಮುತ್ತಿನ ಹಾರದಂತಿರಬೇಕು
ನುಡಿದಡೆ ಮಾಣಿಕ್ಯದ ದೀಪ್ತಿಯಂತಿರಬೇಕು
ನುಡಿದಡೆ ಸ್ಫಟಿಕದ ಶಲಾಕೆಯಂತಿರಬೇಕು
ನುಡಿದಡೆ ಲಿಂಗ ಮೆಚ್ಚಿ ಅಹುದಹುದೆನಬೇಕು
ನುಡಿಯೊಳಗಾಗಿ ನಡೆಯದಿದ್ದಡೆ,
ಕೂಡಲಸಂಗಮದೇವನೆಂತೊಲಿವನಯ್ಯಾ?

ಇಂಥ ವಚನಗಳನ್ನು ರಚಿಸಿದ ಬಸವಣ್ಣನವರು ಕಾಲಜ್ಞಾನ ವಚನಗಳನ್ನು ರಚಿಸಿದ್ದಾರೆಂದು ಕವಿಚರಿತೆಯಲ್ಲಿ ಉಲ್ಲೇಖಿಸಲಾಗಿದೆ. ಅವರ ಕಾಲಜ್ಞಾನ ಗ್ರಂಥದಲ್ಲಿ ೬೪ ಪದ್ಯಗಳಿದ್ದು, ಕೊನೆಯಲ್ಲಿ ಕೆಳಗೆ ಕಾಣಿಸಿದ ಪದ್ಯವಿರುವುದಾಗಿ ತಿಳಿದುಬರುತ್ತದೆ.

ಕಾಲ ಕರ್ಮವ ದಹಿಪುದು ಬಸವಣ್ಣನು
ಪೇಳಿದ ಕಾಲಜ್ಞಾನವನು,
ಶೂಲಧರನ ಭಕ್ತರಾಲಿಸಿ ಕೇಳಲು,
ಮೇಲೆ ಮುಕ್ತಿ ದೊರಕುವುದು.

ಈ ಪದ್ಯ ಮೇಲುನೋಟಕ್ಕೆ ಬಸವಣ್ಣನವರಿಂದ ರಚಿತವಾದುದಲ್ಲವೆಂದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಬಸವಣ್ಣನವರು ನಿರೂಪಿಸಿದ ಕಾಲಜ್ಞಾನ ಶಿವಭಕ್ತರು ಲಕ್ಷ್ಯಕೊಟ್ಟು ಕೇಳಲು ಕರ್ಮಕ್ಷಯವಾಗುವುದಲ್ಲದೆ ಮೇಲಾಗಿ ಮುಕ್ತಿಯೂ ಲಭಿಸುವುದೆಂದು

ಈ ಪದ್ಯ ನೇರವಾಗಿ ವಿವರಿಸುತ್ತದೆ. ಇಲ್ಲಿ 'ಬಸವಣ್ಣನು ಪೇಳಿದ ಕಾಲಜ್ಞಾನವನು' ಎಂಬ ಪದಗಳನ್ನು ಗಮನಿಸಿದರೆ, ಸ್ವತಃ ಬಸವಣ್ಣನವರು ಹೇಳಿದ ಕಾಲಜ್ಞಾನವನ್ನು ಅವರೇ 'ಬಸವಣ್ಣನವರು ಪೇಳಿದ ಕಾಲಜ್ಞಾನವನು' ಎಂದೇಕೆ ಬರೆಯುತ್ತಿದ್ದರು? ಎಂಬ ಪ್ರಶ್ನೆ ಉದ್ಭವಿಸುತ್ತದೆ. ತಾವೇ ನಿರೂಪಿಸಿದ ಕಾಲಜ್ಞಾನಕ್ಕೆ 'ನಾನು ಪೇಳಿದ ಕಾಲಜ್ಞಾನವನು' ಎಂದು ಸಹಜವಾಗಿ ಬರೆಯುತ್ತಿದ್ದರು. 'ಆನು ಹಾರುವನೆಂದರೆ ನಗುವ ನಮ್ಮಕೂಡಲಸಂಗಮದೇವ', ಎನಗಿಂತ ಕಿರಿಯರಿಲ್ಲ, ನಿಮ್ಮ ಚರಣಕಮಲದಲಾನು ತುಂಬಿ' ಎಂಬಲ್ಲೆಲ್ಲಾ ಬಸವಣ್ಣನವರು ತಮ್ಮ ಹೆಸರಿನ ಬದಲಾಗಿ 'ಆನು' 'ಎನಗಿಂತ' ಮೊದಲಾದ ಸರ್ವನಾಮಗಳನ್ನು ಬಳಸಿರುವುದಾಗಿ ತಿಳಿದುಬರುತ್ತದೆ. ಅವರು ಎಲ್ಲಿಯೂ ತಮ್ಮ ಹೆಸರನ್ನು ಸರ್ವನಾಮದ ಬದಲಾಗಿ ಉಪಯೋಗಿಸಿಲ್ಲವೆಂಬುದು ನಿಶ್ಚಿತ. ಎರಡನೆಯದಾಗಿ ಆಂತರಿಕ ಪ್ರಮಾಣಗಳನ್ನು ಪರೀಕ್ಷಿಸಿದರೂ ಇದನ್ನು ಪ್ರತಿ ಮಾಡಿದವರು ಬರೆದಿರಬಹುದಾದ ಸಾಧ್ಯತೆಗಳು ಇಲ್ಲವೆಂದೇ ಹೇಳಬಹುದು.

ನ್ಯಾಯನಿಷ್ಠುರಿಗಳಾಗಿದ್ದ ಬಸವಣ್ಣನವರು ತಮ್ಮ ಸ್ವಾನುಭವವನ್ನು ಪ್ರಮಾಣವಾಗಿಟ್ಟುಕೊಂಡು ನಿರ್ದಾಕ್ಷಿಣ್ಯವಾಗಿ ನುಡಿದರೇ ಹೊರತು ವೇದ, ಶಾಸ್ತ್ರ, ಪುರಾಣಗಳನ್ನು ಅಂಧಶ್ರದ್ಧೆಯಿಂದ ನಂಬಲಿಲ್ಲ.

'ವೇದಕ್ಕೆ ಒರೆಯ ಕಟ್ಟುವೆ
ಶಾಸ್ತ್ರಕ್ಕೆ ನಿಗಳವನಿಕ್ಕುವೆ,
ತರ್ಕದ ಬೆನ್ನ ಬಾರನೆತ್ತುವೆ,
ಆಗಮದ ಮೂಗ ಕೊಯಿವೆ.'

'ನಾಳೆ ಬಪ್ಪುದು ನಮಗಿಂದೆ ಬರಲಿ; ಇಂದು ಬಪ್ಪುದು ನಮಗೀಗಲೇ ಬರಲಿ' ಎಂದು ಉದ್ಘೋಷಿಸಿದ ಬಸವಣ್ಣನವರು ಇಂಥ ಸಂವತ್ಸರದಲ್ಲಿ ಹೀಗಾಗುತ್ತದೆ, ಅಂಥ ಸಂವತ್ಸರದಲ್ಲಿ ಹಾಗಾಗುತ್ತದೆ ಎಂದು ಸರ್ವನಾಶದ ಘೋರ ಚಿತ್ರವನ್ನು ನಿರೂಪಿಸಿ ಜನಮನದಲ್ಲಿ ಭಯ ಬಿತ್ತುವ ಮಾತುಗಳನ್ನು ಹೇಳಿರುವ ಸಾಧ್ಯತೆಯನ್ನು ನಂಬುವುದಾದರೂ ಹೇಗೆ?

'ಎಮ್ಮವರು ಬೆಸಗೊಂಡರೆ ಶುಭಲಗ್ನವೆನ್ನಿರಯ್ಯಾ,
ರಾಶಿ ಕೂಟ ಗಣ ಸಂಬಂಧವುಂಟೆಂದು ಹೇಳಿರಯ್ಯಾ,'
ಚಂದ್ರಬಲ ತಾರಾಬಲವುಂಟೆಂದು ಹೇಳಿರಯ್ಯಾ.

ಎಂಬ ತರ್ಕದ ನೆಲಗಟ್ಟಿನ ಮೇಲೆ ಸದಾ ನಿಂತ ಬಸವಣ್ಣನವರಿಗೆ ಗ್ರಹಗತಿಯಲ್ಲಿ ವಿಶ್ವಾಸವಿರಲಿಲ್ಲ. ಶರಣರನ್ನು ಕಂಡ ಗಳಿಗೆಯೇ ಶುಭ ಮುಹೂರ್ತವಾಗಿತ್ತು. ಅವರು ಮುಂದಿನ ಆಗುಹೋಗುಗಳ ಬಗ್ಗೆ ಚಿಂತಿಸದೆ ದೇವರ ಮೇಲೆಯೇ ಭಾರ ಹಾಕಿ, ಸರ್ವಾರ್ಪಣಭಾವದಿಂದ ಅವರು ಇರುತ್ತಿದ್ದುದನ್ನು ಗಮನಿಸಬಹುದು.

ಬಸವಣ್ಣನವರ ಹೆಸರಿನಲ್ಲಿ ಉಪಲಬ್ಧವಿರುವ ಕಾಲಜ್ಞಾನದ ವಸ್ತು, ವೈವಿಧ್ಯಮಯ ವಿಷಯಗಳಿಂದ ಕೂಡಿದೆ. ಅನಂತರ 'ಆದ್ಯಾವು' 'ಚಿತ್ತೈಸ್ಯಾರು' ಎಂಬ ಗ್ರಾಮ್ಯಸ್ವರೂಪದ ಕ್ರಿಯಾಪದಗಳು ಬಸವಣ್ಣನವರವೆಂದು ಹೇಳುವುದಾದರೂ ಹೇಗೆ? ಮುತ್ತಿನ ಹಾರದಂತೆ ನುಡಿಯುವ ಬಸವಣ್ಣನವರು, ತಮ್ಮ ಮಾತನ್ನು ಜನರು ಅಂಧಶ್ರದ್ಧೆಯಿಂದ ನಂಬಲೇ ಬೇಕು ಎಂಬ ಹಟವಾದಿಗಳಾಗಿರಲಿಲ್ಲ. ಈ ಹಿನ್ನೆಲೆಯಲ್ಲಿ 'ಇಂತು ನಾವು ಪೇಳಿದ ಕಾಲಜ್ಞಾನ ಹುಸಿಯಲ್ಲ ನಿಮ್ಮಾಣೆ' ಎಂಬ ಪದಪ್ರಯೋಗಗಳು ತಮ್ಮ ಮಾತೇ ಸತ್ಯವೆಂದು ಕಣ್ಮುಚ್ಚಿ ಒಪ್ಪುವಂತೆ ಒತ್ತಾಯಿಸುತ್ತವೆ. ತಮ್ಮ ನುಡಿಯೇ 'ಇದಮಿತ್ಥಂ' ಎಂದು ಹೇಳುವ ಮನೋಭಾವ ಬಸವಣ್ಣನವರ ಜಾಯಮಾನಕ್ಕೆ ಸಲ್ಲ. ಆದುದರಿಂದ ಇಲ್ಲಿಯವರೆಗೆ ಚರ್ಚಿಸಲಾದ ಆಂತರಿಕ ಹಾಗೂ ಬಾಹ್ಯ ಪ್ರಮಾಣಗಳ ಆಧಾರದ ಮೇಲೆ ಬಸವಣ್ಣನವರು ಕಾಲಜ್ಞಾನ ವಚನಗಳನ್ನು ರಚಿಸಿದ್ದಾರೆಂಬುದನ್ನು ಸ್ಪಷ್ಟವಾಗಿ ಅಲ್ಲಗಳೆಯಬಹುದು.

ಬಸವಣ್ಣನವರ ಕಾಲಜ್ಞಾನ ಸಾಹಿತ್ಯವನ್ನು ಅವರ ವಚನಸಾಹಿತ್ಯದೊಡನೆ ಹೋಲಿಸಿ ನೋಡಿದಾಗ ಅದು ತೀರ ಸಾಮಾನ್ಯವಾಗಿ ಕಾಣುತ್ತದೆ. ಇದರಲ್ಲಿ ಪ್ರಸಾದ ಗುಣವಾಗಲಿ, ಓಜಸ್ಸಾಗಲಿ ಕಾಣ ಸಿಗುವುದಿಲ್ಲ. ಅವರ ಕಾಲಜ್ಞಾನದ ಶೈಲಿ ತೀರ ಸಪ್ಪೆಯಾಗಿದ್ದು, ಓದುಗರ ಮನಸ್ಸಿನ ಮೇಲೆ ವಿಶೇಷವಾದ ಪ್ರಭಾವ ಬೀರುವುದಿಲ್ಲ. ಅಲ್ಲಲ್ಲಿ ಗ್ರಾಮ್ಯಶಬ್ದ ಪ್ರಯೋಗ ಬಂದಿದ್ದು, ಶೈಲಿಯನ್ನು ಶಿಥಿಲಗೊಳಿಸಿವೆ.

ಬಸವಣ್ಣನವರ ಹೆಸರಿನ ಮೇಲೆ ಉಪಲಬ್ಧವಿರುವ ಕಾಲಜ್ಞಾನ ಸಾಹಿತ್ಯವನ್ನು ಇಲ್ಲಿಯವರೆಗೆ ಬಸವಣ್ಣನವರಿಂದ ರಚಿತವೆಂದೇ ನಂಬಿಕೊಂಡು ಬರಲಾಗಿದೆ. ಈ ಕಾಲಜ್ಞಾನ ಸಾಹಿತ್ಯದ ವಸ್ತುನಿಷ್ಠ ಅಧ್ಯಯನದಿಂದ ಇದು ಬಸವಣ್ಣನವರಿಂದ ರಚಿತವಾಗಿಲ್ಲ ಎನ್ನಿಸುತ್ತದೆ. ಕಾಲಜ್ಞಾನ ಸಾಹಿತ್ಯಧ ರಚನೆಯ ಗೌರವ ಬಸವಣ್ಣನವರಿಂದ ತಪ್ಪಿಹೋದುದಕ್ಕಾಗಿ ಅವರ ವ್ಯಕ್ತಿತ್ವಕ್ಕೆ ಯಾವುದೇ ಚ್ಯುತಿಯುಂಟಾಗದೆ, ತಪ್ಪುಗ್ರಹಿಕೆಯಿಂದ ಅವರನ್ನು ಉಳಿಸಿದಂತಾಯಿತು. ಸಾರಸ್ವತ ಲೋಕದಲ್ಲಿ ಬಸವಣ್ಣನವರ ಘನತೆ ಮುತ್ತಿನ ಹಾರ, ಮಾಣಿಕ್ಯದ ದೀಪ್ತಿ ಮತ್ತು ಸ್ಫಟಿಕದ ಶಲಾಕೆಯಂತಿರುವ ಅವರ ವಚನಸಾಹಿತ್ಯದಿಂದ ಇದೆಯೇ ಹೊರತು ಅವರ ಮನೋವೃತ್ತಿಗೆ ಒಗ್ಗದ ಕಾಲಜ್ಞಾನ ಸಾಹಿತ್ಯದಿಂದಲ್ಲ ಎಂಬುದನ್ನು ಚೆನ್ನಾಗಿ ನೆನಪಿನಲ್ಲಿಡಬೇಕಾಗಿದೆ. ಬಸವಣ್ಣನವರ ಭಾವುಕ ಅಭಿಮಾನಿಯೊಬ್ಬನು ತಾನು ರಚಿಸಿದ ಕಾಲಜ್ಞಾನ ಸಾಹಿತ್ಯವನ್ನು ಬಸವಣ್ಣನವರ ಕೊರಳಿಗೆ ಕಟ್ಟಿದುದನ್ನು ಈ ಹಿನ್ನೆಲೆಯಲ್ಲಿ ಯಾರೂ ಒಪ್ಪಬಹುದಾಗಿದೆ.

ಇದೇ ರೀತಿಯಾಗಿ ಹನ್ನೆರಡನೆಯ ಶತಮಾನದಲ್ಲಿಯ ಇತರ ಶಿವಶರಣ ಶರಣೆಯರು ಕಾಲಜ್ಞಾನ ಸಾಹಿತ್ಯವನ್ನು ರಚಿಸಿಲ್ಲವೆಂದು ಹೇಳಬಹುದು.

ಕಾಲಜ್ಞಾನ ಸಾಹಿತ್ಯದ ಪ್ರಮುಖ ಕವಿಗಳು

ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನವರ ನೇತೃತ್ವದಲ್ಲಿ ಸಾಮಾಜಿಕ, ಸಾಹಿತ್ಯಿಕ ಮತ್ತು ಧಾರ್ಮಿಕ ಸ್ಥಿತ್ಯಂತರಗಳು ತಲೆದೋರಿದವು. ಇವುಗಳ ಪರಿಣಾಮವಾಗಿ ಅನುಪಮವಾದ ವಚನಸಾಹಿತ್ಯ ಜನ್ಮತಾಳಿತು. ಆದರೆ ಕಲ್ಯಾಣದಲ್ಲಿ ರಾಜಕೀಯ ಕ್ರಾಂತಿಯಿಂದ ಅಲ್ಲೋಲ- ಕಲ್ಲೋಲವಾಗಿ ಶರಣರೆಲ್ಲರು ಚೆಲ್ಲಾಪಿಲ್ಲಿಯಾದರು. ಶರಣರ ಮಣಿಹ ಪೂರೈಸಿತೋ ಏನೋ, ಅವರು ಜನತೆಯ ಸರ್ವತೋಮುಖ ಪ್ರಗತಿಗೆ ನಾಂದಿಹಾಡಿ ದಿಕ್ಕುದಿಕ್ಕಿಗೆ ಚದುರಿಹೋದರು. ಹದಿಮೂರು, ಹದಿನಾಲ್ಕನೆಯ ಶತಮಾನಗಳಲ್ಲಿ ಕಲ್ಯಾಣಕ್ರಾಂತಿಯ ಸತ್ಫಲಗಳು ಅಷ್ಟು ಎದ್ದು ಕಾಣುವಂತೆ ಲಭಿಸಲಿಲ್ಲ. ಆದರೆ ಮುಂದೆ ಮಾತ್ರ ಅಂದರೆ ಹದಿನೈದನೆಯ ಶತಮಾನದಲ್ಲಿ ಪ್ರೌಢದೇವರಾಯನ ಆಳ್ವಿಕೆಯಲ್ಲಿ ವೀರಶೈವ ಧರ್ಮ ಪುನರುಜ್ಜೀವನ ಪಡೆಯಿತು. ನೂರೊಂದು ವಿರಕ್ತರು ವೀರಶೈವಧರ್ಮ ಸಂಘಟನೆಯ ಕಾರ್ಯವನ್ನು ಅತ್ಯಂತ ಶ್ರದ್ಧೆಯಿಂದ ಕೈಗೆತ್ತಿಕೊಂಡರು. ಹನ್ನೆರಡನೆಯ ಶತಮಾನದ ಶರಣರ ಬಗ್ಗೆ ಜನಮನದಲ್ಲಿ ಭಕ್ತಿಯನ್ನು ಹುಟ್ಟಿಸಿ, ಅವರ ನೈತಿಕ ಮಟ್ಟವನ್ನು ಹೆಚ್ಚಿಸಿದಂತೆ, ಅನಂತರ ಬಂದ ಕವಿಗಳು ಕಾಲಜ್ಞಾನ ಸಾಹಿತ್ಯವನ್ನು ರಚಿಸಿದಂತೆ ತೋರುತ್ತದೆ. ಹಲವಾರು ಭಾವುಕ ಜನರು, ಹನ್ನೆರಡನೆಯ ಶತಮಾನದಲ್ಲಿಯ ಬಸವಣ್ಣನವರ ಸಾಮಾಜಿಕ ಹಾಗೂ ಧಾರ್ಮಿಕ ಕ್ರಾಂತಿಯು ಸಂಪೂರ್ಣ ಸಫಲತೆಯನ್ನು ಪಡೆಯಲಿಲ್ಲವೆಂದು ನೊಂದುಕೊಂಡಿದ್ದರು. ಇಂಥ ನೊಂದ ಬೆಂದ ಜನರು ಹನ್ನೆರಡನೆಯ ಶತಮಾನದಂಥ ಸುವರ್ಣಕಾಲ ಮತ್ತೆ ಬರುವುದೇ ಎಂದು ಪರಿತಪಿಸುತ್ತಿರಬೇಕು. ಈ ಭಾಗದ ಜನ ಮುಸ್ಲಿಂ ದೌರ್ಜನ್ಯದ ದಾವಾಗ್ನಿಯಲ್ಲಿ ಬೆಂದು ತಮ್ಮ ಸಾಹಿತ್ಯ ಸಂಸ್ಕೃತಿಯ ರಕ್ಷಣೆಗೆ ಹಂಬಲಿಸುತ್ತಿರುವ ಕಾಲ ಅದಾಗಿತ್ತು. ಈ ಸಂದರ್ಭದಲ್ಲಿ ಜನಮನದ ಮಿಡಿತವನ್ನರಿತ ಕಾಲಜ್ಞಾನ ಕವಿಗಳು, ಬಸವಾದಿ ಪ್ರಮಥರು ಮತ್ತೆ ಉದಯಿಸಿ ಬರುತ್ತಾರೆಂದೂ, ವೀರಶೈವ ಧರ್ಮ ಮತ್ತೇ ಊರ್ಜಿತಾವಸ್ಥೆಗೆ ಬರುವುದೆಂದೂ ಜನಮನದಲ್ಲಿ ಚಿತ್ರಿಸುವ ಪ್ರಯತ್ನ ಮಾಡಿದರು. ಈ ನಂಬುಗೆ ಜನತೆಯಲ್ಲಿ ಸಂಜೀವಿನಿಯಂತೆ ಕೆಲಸ ಮಾಡಿ ಅವರ ಮಾನಸಿಕ ಸ್ಥೈರ್ಯವನ್ನು ಹೆಚ್ಚಿಸಲು ಸಹಕಾರಿಯಾಯಿತು. ಕರ್ಮವು ಅನಂತಮುಖವಾಗಿ ವ್ಯಾಪಿಸುತ್ತ, ಧರ್ಮವು ಖಿಲವಾಗುತ್ತಿರುವ ಬದುಕಿನ ಅಧಃಪತನದ ಈ ಆಧುನಿಕ ಕಾಲದಲ್ಲಿಯೂ ಕಾಲಜ್ಞಾನಿಗಳು ಸಾರಿದ ಆ ದಿವ್ಯಸಂದೇಶ ನಮ್ಮೆಲ್ಲರ ಜೀವನಕ್ಕೆ ಒಂದಿಲ್ಲೊಂದು ರೀತಿಯಲ್ಲಿ ಅನ್ವಯಿಸುವಂತಿದೆ.

ಹನ್ನೆರಡನೆಯ ಶತಮಾನದಲ್ಲಿ ವಚನಸಾಹಿತ್ಯ ರಚನೆಗೆ ಒಂದು ದೊಡ್ಡ ಗುಂಪೇ ತಯಾರಾದಂತೆ ಕಾಲಜ್ಞಾನ ಸಾಹಿತ್ಯ ನಿರ್ಮಿತಿಗೂ ಮತ್ತೊಂದು ಕವಿಸಮೂಹವೇ ನಿರ್ಮಾಣವಾಯಿತು. ಕಾಲಜ್ಞಾನ ಸಾಹಿತ್ಯ ಕಥೆ ಕಾವ್ಯವಾಗಿ ಜನರಂಜನೆಯನ್ನು ತನ್ನ ಗುರಿಯಾಗಿಟ್ಟುಕೊಳ್ಳದೇ ಜನರು ಬದುಕಬೇಕು, ಬದುಕು ಹಸನಾಗಬೇಕು ಎನ್ನುವ ಮೂಲ ಉದ್ದೇಶ ಇಟ್ಟುಕೊಂಡು, ಶರಣರ ಮೌಲ್ಯಗಳ ಪುನರ್‌ಪ್ರತಿಷ್ಠಾಪನೆಗೆ ತೊಡಗಿದಂತೆ ಕಾಣುತ್ತದೆ. ಈ ದಿಶೆಯಲ್ಲಿ ಅದನ್ನು ಆಧುನಿಕ ಸಾಹಿತ್ಯ ವಿಮರ್ಶೆಯ ಒರೆಗಲ್ಲಿಗೆ ಉಜ್ಜಿ, ಅದರಿಂದ ರಸನಿಷ್ಪತ್ತಿಯನ್ನು ಮತ್ತು ಸನ್ನಿವೇಶಗಳ ಸೌಂದರ್ಯ ಸಮೀಕ್ಷೆಯನ್ನು ಮಾಡ ಹೊರಡುವುದು ಅಷ್ಟು ಸಮಂಜಸವಾಗಿ ತೋರುವುದಿಲ್ಲ. ಆದರೆ ಅದರ ಸಾಮಾಜಿಕ ಮೌಲ್ಯ ಹಾಗೂ ಬದುಕನ್ನು ಕುರಿತು ಅದಕ್ಕಿರುವ ಕಾಳಜಿ ಇಲ್ಲಿ ಮುಖ್ಯ.

ಈ ಹಿನ್ನೆಲೆಯಲ್ಲಿ ಹಲವಾರು ಬದುಕು ಬರಹಗಳ ವಿಶ್ಲೇಷಣ ಆವಶ್ಯಕ. ಇದುವರೆಗೆ ಯಾವ ಸಾಹಿತ್ಯ ಚರಿತ್ರೆಯಲ್ಲಿಯೂ ಉಲ್ಲೇಖಿತವಾಗದ ಕವಿ ಪರಿಚಯ, ಕೃತಿ ಪರಿಚಯವು ಕನ್ನಡ ಸಾಹಿತ್ಯ ಚರಿತ್ರೆಯ ದೃಷ್ಟಿಯಿಂದ ಪ್ರಮುಖ ಕೊಡುಗೆಯಾಗದಿರದು.

ಹದಿನೈದನೆಯ ಶತಮಾನ ಮತ್ತು ಅನಂತರದ ಕಾಲಜ್ಞಾನ ಕವಿಗಳಲ್ಲಿ ಕರಸ್ಥಲದ ನಾಗಲಿಂಗ, ಜಂಬುಲಿಂಗ, ಎಮ್ಮೆಬಸವಣ್ಣ, ತಿಂಥಿಣಿ ಮೌನೇಶ್ವರ, ವಿರೂಪಾಕ್ಷ ಪಂಡಿತ, ಕೊಡೇಕಲ್ ಬಸವಣ್ಣ, ಸರ್ವಜ್ಞ, ಚೆನ್ನಪ್ಪಕವಿ, ಕೃಷ್ಣಮಾಚಾರ್ಯ, ಸಾರವಾಡದ ಚಿಕ್ಕಪ್ಪಯ್ಯ, ಮಂಟೇಶ್ವರ, ಜೋಗಿಕೊಳ್ಳದ ಸ್ವಾಮಿ, ನಂಜೇಶ ಮೊದಲಾದವರು ಪ್ರಮುಖರಾಗಿದ್ದಾರೆ.

ಎಮ್ಮೆ ಬಸವಣ್ಣ: ಕಾಲಜ್ಞಾನ ಕವಿಗಳಲ್ಲಿ ಎಮ್ಮೆ ಬಸವಣ್ಣನ ಸ್ಥಾನ ತುಂಬಾ ಪ್ರಮುಖವಾಗಿದೆ. ಕಾಲಜ್ಞಾನ ಪರಂಪರೆಯ ಐತಿಹಾಸಿಕ ವ್ಯಕ್ತಿಗಳಲ್ಲಿ ಎಮ್ಮೆ ಬಸವಣ್ಣ ಅಗ್ರಗಣ್ಯನೆಂದು ಹೇಳಬಹುದು. ಇವನು ಹಂಪೆಯ ನಿವಾಸಿಯಾಗಿದ್ದು, ಜಂಬುನಾಥನ ಅನುಗ್ರಹದಿಂದ ತ್ರಿಕಾಲಜ್ಞಾನಿಯಾದನೆಂದು ತಿಳಿದು ಬರುತ್ತದೆ. ಮಹಾಪಂಡಿತನೂ, ತಪಸ್ವಿಯೂ, ದೇಶಾಭಿಮಾನಿಯೂ ಮತ್ತು ರಾಜಪೂಜಿತನೂ ಆದ ಎಮ್ಮೆ ಬಸವಣ್ಣನು ಮಠಾಧಿಪತಿಯಾಗಿದ್ದಂತೆ ತಿಳಿದು ಬರುತ್ತದೆ. 'ರಕ್ಕಸಿಯಲ್ಲವೆ ಕೊಕ್ಕಸಿ' ಎಂಬ ಕಾಲಜ್ಞಾನದ ಅಂತ್ಯದಲ್ಲಿ 'ಬಸವಣ್ಣನವರ ಮಠ' ಎಂದಿರುವುದರಿಂದ ಮೇಲಿನ ಮಾತಿಗೆ ಇನ್ನಷ್ಟು ಪುಷ್ಟಿ ದೊರೆಯುತ್ತದೆ.

ಎಮ್ಮೆ ಬಸವಣ್ಣನು ಒಂದು ಸಲ ವಿಜಯನಗರ ರಾಜಬೀದಿಯಲ್ಲಿ 'ಅಯ್ಯಾ, ಅರಸುತನಕಿನ್ನು ಕಡೆಗಾಲವಾದೀತು ಹುಯ್ಯಲೊ ಡಂಗುರವ' ಎಂದು ಸಾರುತ್ತ ಬರುತ್ತಿರಲು, ಅರಸನಾದ ಕೃಷ್ಣರಾಯನು ಇದನ್ನು ಕೇಳಿ ಪಟ್ಟದಾನೆಯ ಮುಂದೆ ಇವನನ್ನು ನೂಕಿಸಿದನಂತೆ. ಆದರೆ ಆನೆ ಇವನನ್ನು ತುಳಿಯದೆ ಸೊಂಡಿಲಿನಿಂದೆತ್ತಿ ಮೇಲೆ ಕೂಡಿಸಿಕೊಂಡು, ರಾಜಬೀದಿಯಲ್ಲಿ ಬಂದಿತೆಂದು ದಂತಕಥೆ ಇದೆ. ಆದಕಾರಣ ಎಮ್ಮೆ ಬಸವಣ್ಣ ತನ್ನ ಸತ್ಯವಾದ ಮಾತುಗಳನ್ನು ರಾಜಧಾನಿಯವರಿಗೆ ಸಾರಿಸಾರಿ ಹೇಳಿದನಂತೆ. ಈ ಘಟನೆಯಿಂದ ಕಾಲಜ್ಞಾನ ಹೇಳುವಲ್ಲಿ ಎಮ್ಮೆ ಬಸವಣ್ಣನ ಸ್ಥೈರ್ಯ, ಸತ್ಯನಿಷ್ಠುರತೆ ಮತ್ತು ಉನ್ನತ ಮನೋಬಲ ವ್ಯಕ್ತವಾಗುತ್ತದೆ.

ಎಮ್ಮೆ ಬಸವಣ್ಣ ತನ್ನ ಕಾಲಜ್ಞಾನ ವಚನಗಳಲ್ಲಿ ವೈವಿಧ್ಯಮಯ ಜನಪದ ಪಲ್ಲವಿಗಳನ್ನು ಬಳಸಿದ್ದಾನೆ. ಅವುಗಳಲ್ಲಿ "ಹುಯ್ಯಲೊ ಡಂಗುರವ" "ಹಾಕಿರೊ ಮಂಡಿಗೆಯ" "ಕಣಿಯ ಹೇಳಿರೊ" "ಎಚ್ಚರಿಕೆ, ಎಚ್ಚರಿಕೆ" "ಕೂ ಕೂ ಕೂ ಮಾ" "ಸುಪ್ಪಿ ಬಾ" "ಧರ್ಮವ ಬಿಡಬೇಡಿರೂ" "ದಿಮಿದಿಮಿ" "ಬಾಬೂಜಿ" ಮತ್ತು "ಶ್ರೀವೀರಭೋಜಾ" ಇತ್ಯಾದಿ ಪ್ರಮುಖವಾಗಿವೆ.

ತಿಂಥಿಣಿಯ ಮೌನೇಶ್ವರ: ತಿಂಥಿಣಿಯ ಮೌನೇಶ್ವರ ಕ್ರಿ.ಶ. ೧೬ ನೆಯ ಶತಮಾನದ ಸಂತ ಹಾಗೂ ಕಾಲಜ್ಞಾನ ಕವಿ. ಈತನು ಗುಲಬರ್ಗಾ ಜಿಲ್ಲೆಯ ಸುರಪುರದ ಸಮೀಪವಿರುವ ಗೋನಾಳ ಎಂಬ ಗ್ರಾಮದಲ್ಲಿ ವಿಶ್ವಕರ್ಮ ಧರ್ಮದ ಸಾನಗ ಗೋತ್ರದ ಕಮ್ಮಾರ ಮನೆತನದಲ್ಲಿ ಜನಿಸಿದನು. ಈತನ ತಂದೆಯ ಹೆಸರು ಹಾವಪ್ಪ ಮತ್ತು ತಾಯಿಯ ಹೆಸರು ಹಾವಕ್ಕ. ಈ ಹೆಸರುಗಳು ಶೇಷಪ್ಪ ಶೇಷಕ್ಕ ಎಂದು ಪರ್ಯಾಯವಾಗಿ ಕರೆಯಲ್ಪಟ್ಟಿದ್ದೂ ಉಂಟು. ಈ ದಂಪತಿಗಳು ಗೋನಾಳ ಗ್ರಾಮದ ಆದಿಲಿಂಗೇಶ್ವರನ ಪರಮಭಕ್ತರಾಗಿದ್ದರು. ಶೇಷಕ್ಕನ ಪರಮಭಕ್ತಿಗೆ ಮೆಚ್ಚಿ ಪರಮಾತ್ಮನು ತಾನೇ ಅವಳಿಗೆ "ಮೌನೇಶ್ವರ" ಎಂಬ ಹೆಸರಿನಿಂದ ಮಗನಾಗಿ ಹುಟ್ಟಿ ಬರಲು ಒಪ್ಪಿಕೊಂಡನೆಂದು ಜನಮನದಲ್ಲಿ ಬಲವಾದ ನಂಬಿಕೆ ಇದೆ, ಮೌನೇಶ್ವರನ ವಿಷಯದಲ್ಲಿ ಅನೇಕ ಪವಾಡಗಳು ಪ್ರಚಲಿತದಲ್ಲಿವೆ. ಅವನು ಬಾಲಕನಾಗಿದ್ದಾಗ ಐದನೆಯ ವರ್ಷದಲ್ಲಿ

ಅಕ್ಷರಾಭ್ಯಾಸದ ಗುರುಗಳಿಗೆ "ಓಂ ನಮಃ ಶಿವಾಯ" ಎಂಬ ಷಡಕ್ಷರಿ ಮಂತ್ರದ ಅರ್ಥವನ್ನು ತತ್ವಶಃ ಹೇಳಿ, ಹೊಡೆಯಲು ಬಂದ ಕೈ ಹಾಗೆಯೇ ನಿಲ್ಲುವಂತೆ ಮಾಡುತ್ತಾನೆ.

ಮೌನೇಶ್ವರನ ಎಂಟನೆಯ ವಯಸ್ಸಿನಲ್ಲಿ ಉಪನಯನ ಸಮಾರಂಭವು ಜರುಗುತ್ತದೆ. ಪುರೋಹಿತರು ಪದ್ಧತಿಯ ಪ್ರಕಾರ ಶುದ್ಧೀಕರಣಕ್ಕಾಗಿ ನಾಲಗೆಯನ್ನು ಸುಟ್ಟಾಗ ಆ ಪುರೋಹಿತನ ಮೈಗೆ ಉರಿ ಹತ್ತಿದಂತಾಗಿ ತುಂಬಾ ತೊಂದರೆಯಾಗುತ್ತದೆ. ಅನಂತರ ಅವನ ಮೈ ಮೇಲೆ ಮೌನೇಶ್ವರ ಸ್ನಾನ ಮಾಡಿದ ನೀರನ್ನು ಚಿಮುಕಿಸಿದಾಗ ತಾಪ ನಿವಾರಣೆಯಾಗುತ್ತದೆ.

ಮೌನೇಶ್ವರನ ವಚನಗಳ ಮುದ್ರಿಕೆ 'ಬಸವ'. ಈ ಅಂಕಿತದಿಂದ ಪ್ರೇರಿತನಾಗಿ ಅವನು ಬಸವಣ್ಣನ ಸಮಕಾಲೀನನೆಂದು ಹಲವರು ಊಹಿಸುತ್ತಾರೆ. ಆದರೆ ಮೌನೇಶ್ವರ ವಚನಗಳ ಭಾಷೆ, ಶೈಲಿ ಹಾಗೂ ಇನ್ನುಳಿದ ಬಾಹ್ಯಾಂತರಿಕ ಪ್ರಯೋಗಗಳಿಂದ ಅವನ ಕಾಲ ಕ್ರಿ.ಶ. ಹದಿನಾರನೆಯ ಶತಮಾನದ ಉತ್ತರಾರ್ಧವೆಂದು ಎನ್ನಬಹುದಾಗಿದೆ. ಇದು ಎಲ್ಲರೂ ಒಪ್ಪಬಹುದಾದ ಸತ್ಯವೆನ್ನುವಲ್ಲಿ ಸಂಶಯವಿಲ್ಲ.

ಐತಿಹಾಸಿಕ ಹಾಗೂ ರಾಜಕೀಯ ಸಂಗತಿಗಳನ್ನು ವಿವರಿಸಿದ ಮೌನೇಶ್ವರನು ಸಾಮಾಜಿಕ ಪರಿಸ್ಥಿತಿಯ ಬಗ್ಗೆ ಮೌನವನ್ನೇನೂ ತಾಳಿಲ್ಲ. ಅವನು ದಿನಬಳಕೆಯ ವಸ್ತುಗಳ ಬೆಲೆಗಳು ಗಗನಕ್ಕೇರುವ ಚಿತ್ರವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾನೆ.

ಬಾಜಾರು ಬಂದಿತು ವ್ಯಾಜ್ಯ ಉಂಟಾದೀತು,
ಸೂಜಿ ಹೊನ್ನಿಗೊಂದು ಮಾರೀತು ಸುವ್ವಿ, ಸೂಜಿ ಹೊನ್ನಿಗೊಂದು
ಮರ್ತ್ಯರಾ ಸೋಜಿಗವ ನೋಡೋ ಬಸವಣ್ಣ.

ಒಟ್ಟಿನಲ್ಲಿ ಮೌನೇಶ್ವರನ ಶೈಲಿ ಮಧ್ಯಮ ದರ್ಜೆಯದಾಗಿದ್ದು, ಓದುಗರ ಮೇಲೆ ಬಯಸಿದ ಪರಿಣಾಮವನ್ನು ಬೀರುತ್ತದೆ.

ನಂಜೇಶ: ನಂಜೇಶ ಕವಿಯ ಜನ್ಮಸ್ಥಳ, ತಾಯಿ ತಂದೆಯ ವಿವರ ಮತ್ತು ಆತನ ಸಮಗ್ರ ಕೃತಿಗಳ ಬಗ್ಗೆ ಬೆಳಕು ಚೆಲ್ಲುವ ಯಾವ ಸಂಗತಿಗಳೂ ತಿಳಿದು ಬರುವುದಿಲ್ಲ. ಆದರೆ ಆತನ ಕಾಲಜ್ಞಾನ ಮಾತ್ರ ಅಚ್ಚಳಿಯದೆ ಉಳಿದು ಎಲ್ಲರಿಗೂ ವಿಶೇಷವಾಗಿ ಪರಿಣಮಿಸಿದೆ. ಕವಿಯ ಕಾಲ ಶ್ರೀ ಶಿವಬಸವ ಸ್ವಾಮಿಗಳ ಪ್ರಕಾರ ಕ್ರಿ.ಶ. ೧೬೩೦ ಇದ್ದರೆ, ಡಾ. ವಿ. ಶಿವಾನಂದ ಅವರ ಪ್ರಕಾರ ಕ್ರಿ.ಶ. ೧೮೫೦ ಎಂದು ಸ್ವೀಕರಿಸಲಾಗಿದೆ.

ನಂಜೇಶ, ಕಾಲಜ್ಞಾನ ಕವಿಗಳಲ್ಲಿ ಎದ್ದು ಕಾಣುವ ವಿಶಿಷ್ಟ ಶಕ್ತಿ ಪಡೆದ ಕವಿ. ಇವನು ಭಾಷೆಯನ್ನು ಚೆನ್ನಾಗಿ ದುಡಿಸಿಕೊಂಡು, ಸಮರ್ಥ ತ್ರಿಪದಿಗಳನ್ನು ರಚಿಸಿದ್ದಾನೆ.

ಕಲಿಯುಗದಲ್ಲಿ ಕರ್ಮದ ಹೆಚ್ಚಳವನ್ನು ಮತ್ತು ಧರ್ಮದ ಲಯವನ್ನು ನಂಜೇಶ ಕವಿಯು ಪರಿಣಾಮಕಾರಿಯಾದ ಭಾಷೆಯಲ್ಲಿ ಅಭಿವ್ಯಕ್ತಪಡಿಸಿದ್ದಾನೆ:

ಕರ್ಮವು ಹೆಚ್ಚುವುದು, ಧರ್ಮವು ಮುಳುಗುವುದು,
ಧರ್ಮಿಗಳ ರಾಜ್ಯ ಲೋಪಾಗಿ-ಕಲಿಯುಗದಿ
ಕರ್ಮಿಗಳ ಆಟ ನಂಜೇಶ।

ಈ ಜಗತ್ತಿನಲ್ಲಿ ಗೌರವಾನ್ವಿತ ಜನರ ಸಂಖ್ಯೆ ಕಡಿಮೆಯಾಗಿ ಮಾನಗೇಡಿಗಳ ಸಂಖ್ಯೆ ಹೆಚ್ಚಾಗಿರುವುದನ್ನು ಕವಿಯು ಸುಂದರವಾಗಿ ವರ್ಣಿಸಿದ್ದಾನೆ:

ಮಾನವಂತರು ಜಗದಿ ತಾವೆಂದು-ಬೋಧಿಸಿ
ಮಾನ ಕಳೆಯುವರು ನಂಜೇಶ.

ನಂಜೇಶನ ಕಾಲಜ್ಞಾನದಲ್ಲಿ ಇಂದು ಬಳಕೆಗೆ ಬಂದ ಸ್ವಯಂ ಚಾಲಿತ ಯಂತ್ರಗಳ ಮುನ್ಸೂಚನೆ ತುಂಬಾ ಮನೋಜ್ಞವಾಗಿ ಬಂದಿದೆ. ಇದು ಅವನ ಕಾಲಜ್ಞಾನದ ಸತ್ಯವನ್ನು ಎತ್ತಿ ತೋರಿಸುತ್ತದೆ.

"ಎತ್ತು ಕುದುರೆಗಳಿಲ್ಲ, ಎತ್ತಿ ಹಿಡಿಯುವರಿಲ್ಲ.
ಒತ್ತಿ ಎಳೆಯುವರು ಯಾರಿಲ್ಲದಾ ರಥವು
ಒತ್ತಿ ನಡೆದೀತು ನಂಜೇಶ"

ಕನ್ನಡ ಭಾಷೆಯು ಸರ್ವತೋಮುಖ ಅಭಿವೃದ್ಧಿಯನ್ನು ಹೊಂದಿ, ವಿಶ್ವದೊಳಗೆ ತನ್ನ ಪ್ರಭಾವವನ್ನು ಬೀರುವುದೆಂದು ನಂಜೇಶನು ಮೊದಲೇ ಸಾರಿದ್ದಾನೆ:

"ಕನ್ನಡದ ನುಡಿಯೊಮ್ಮೆ, ಕನ್ನಡಿಯ ತೆರದಿಂದ
ಚೆನ್ನಾಗಿ ಬೆಳೆದು ಹೊಳೆಯುವುದು-ಜಗದೊಳಗೆ
ಮುನ್ನುಡಿಯು ಎಂದು ನಂಜೇಶ"

ಕಾಲಜ್ಞಾನ ಸಾಹಿತ್ಯವನ್ನು ಸಂಗ್ರಹಿಸಿ, ಅದನ್ನು ಪ್ರಕಟಿಸುವ ದಿಶೆಯಲ್ಲಿ ಪ್ರಪ್ರಥಮ ಹೆಜ್ಜೆಯನ್ನಿಟ್ಟವರು ಡಾ. ಫ.ಗು. ಹಳಕಟ್ಟಿಯವರು. ಇವರು ಕ್ರಿ.ಶ. ೧೯೩೩ ರಲ್ಲಿಯೇ 'ಕಾಲಜ್ಞಾನ ವಚನಗಳು' ಎಂಬ ಗ್ರಂಥವನ್ನು ಪ್ರಕಟಿಸಿದರು. ಆ ನಂತರ ಮೈಸೂರಿನ ಶಿವಬಸವಸ್ವಾಮಿಗಳು ವಿವಿಧ ಮೂಲಗಳಿಂದ ಕಾಲಜ್ಞಾನ ಸಾಹಿತ್ಯಕ್ಕೆ ಸಂಬಂಧಪಟ್ಟ ಹಸ್ತಪ್ರತಿಗಳನ್ನು ಕಲೆಹಾಕಿ ಕ್ರಿ.ಶ. ೧೯೪೬ರಲ್ಲಿ 'ಕಾಲಜ್ಞಾನ ಸಂಗ್ರಹ ಭಾಗ-೧'ನ್ನು ಪ್ರಕಟಿಸಿದರು. ಕಾರಣಾಂತರಗಳಿಂದ ಇದರ ಎರಡನೆಯ ಭಾಗವನ್ನು ಅವರಿಂದ ಪ್ರಕಟಿಸಲಾಗಲಿಲ್ಲವೆಂದು ತೋರುತ್ತದೆ. ತದನಂತರ ಶಿವರುದ್ರಸ್ವಾಮಿಗಳು ಸಾಲೀಮಠ ಇವರು 'ಸರ್ವಪುರಾತನರ ಕಾಲಜ್ಞಾನ' ಎಂಬ ಹೆಸರಿನಲ್ಲಿ ಅನೇಕ ಶಿವಶರಣರ ಕಾಲಜ್ಞಾನಗಳನ್ನು ಪ್ರಕಟಿಸಿದ್ದಾರೆ. ಇವುಗಳಲ್ಲದೆ 'ಕೊಡೇಕಲ್‌ರವರು ನಿರೂಪಿಸಿದ ಕಾಲಜ್ಞಾನ'ವೂ ಲಭ್ಯವಾಗಿದೆ. ಹೀಗೆ ಕಾಲಜ್ಞಾನ ಸಾಹಿತ್ಯವು ಹಸ್ತಪ್ರತಿಗಳ ಸಂಗ್ರಹ, ಗ್ರಂಥಸಂಪಾದನೆ ಮತ್ತು ಪ್ರಕಟಣಾ ಕಾರ್ಯದ ಸೌಲಭ್ಯಗಳನ್ನು ಪಡೆದು ಗಣನೀಯ ಪ್ರಮಾಣದಲ್ಲಿ ಬೆಳಕು ಕಂಡಿದೆ. ಈ ದೃಷ್ಟಿಯಿಂದ ಮೇಲ್ಕಾಣಿಸಿದ ಮಹನೀಯರು ಕಾಲಜ್ಞಾನ ಸಾಹಿತ್ಯ ಪ್ರಕಟಣೆಗೆ ಕೊಟ್ಟ ಕಾಣಿಕೆ ಅಪಾರ ಮತ್ತು ಅಮೂಲ್ಯವೆಂದೇ ಹೇಳಬೇಕು.

ಈ ವೈಜ್ಞಾನಿಕ ಯುಗದಲ್ಲಿ ಬಾಳುತ್ತಿರುವ ನಮಗೆ ಕಾಲಜ್ಞಾನ ಸಾಹಿತ್ಯದ ರಚನೆ ಅಸಹಜ ಮತ್ತು ನಿರರ್ಥಕವೆಂದು ಒಮ್ಮೊಮ್ಮೆ ತೋರಬಹುದು. ಆದರೆ ಅಂದಿನ ಯುಗಧರ್ಮಕ್ಕನುಸರಿಸಿ ಕಾಲಜ್ಞಾನ ಕವಿಗಳಿಗೆ ಶ್ರೀ ಸಾಮಾನ್ಯರಲ್ಲಿ ಶಿವಶರಣರ ಬಗ್ಗೆ ಭಕ್ತಿ ಶ್ರದ್ಧೆಗಳನ್ನು ಹುಟ್ಟಿಸಲು ಹಾಗೂ ಬಸವಾದಿ ಪ್ರಮಥರನ್ನು ಘನತೆಗೇರಿಸಲು ಕಾಲಜ್ಞಾನ ಸಾಹಿತ್ಯದ ರಚನೆ ಅನಿವಾರ್ಯವೆನಿಸಿರಬೇಕು. ಇಂದಿನ ಜನಸಾಮಾನ್ಯರಲ್ಲಿ ಶರಣರ ಬಗ್ಗೆ ಇರುವ ಶ್ರದ್ಧೆಗೆ ಕಾಲಜ್ಞಾನ ಸಾಹಿತ್ಯ ಬಹುಮಟ್ಟಿಗೆ ಕಾರಣವೆಂದು ಹೇಳಿದರೆ ತಪ್ಪಾಗಲಾರದು.

ಕಾಲಜ್ಞಾನ ಸಾಹಿತ್ಯವನ್ನು ಸಂಪೂರ್ಣ ಸತ್ಯವೆಂದು ಅನೇಕ ಜನರು ಅಂಧಶ್ರದ್ಧೆಯಿಂದ ನಂಬುತ್ತಾರೆ. ಇನ್ನು ಕೆಲವರು ಅದನ್ನು ನಿರುಪಯುಕ್ತ ಸಾಹಿತ್ಯವೆಂದು ಸಂಪೂರ್ಣ ಅನಾದರದಿಂದ ಕಾಣುತ್ತಾರೆ. ಇವೆರಡೂ ದೃಷ್ಟಿಗಳು ದೋಷಪೂರಿತ. ಇಲ್ಲಿ ಮತ್ತೆ ಡಾ. ಫ.ಗು. ಹಳಕಟ್ಟಿಯವರ ಕಾಲಜ್ಞಾನ ವಚನಗಳನ್ನು ಸಂಶೋಧಕ ದೃಷ್ಟಿಯಿಂದ ಸೂಕ್ಷ್ಮವಾಗಿ ಪರೀಕ್ಷಿಸಿ, ನಿಜವಾಗಿ ವರ್ತಿಸಿದ್ದನ್ನು ಕಂಡು ಹಿಡಿಯಲಿಕ್ಕೆ ಇವು ಬರೀ ಮಾರ್ಗದರ್ಶಕವಾದವುಗಳೆಂದು ತಿಳಿಯಬೇಕು ಎಂಬ ಉಕ್ತಿಯೇ ಸೂಕ್ತ ಪರಿಹಾರವಾಗಿ ತೋರುತ್ತದೆ.

ಕೊನೆಯದಾಗಿ ಈ ವಿಷಯವನ್ನು ಕುರಿತು ಪರಿಶೀಲಿಸುವಾಗ, ಏನಾದರೂ ತಪ್ಪು ತಿಳಿವಳಿಕೆಯಾಗಿದ್ದುದು ಕಂಡು ಬಂದರೆ ಪ್ರಾಜ್ಞರು ಅದನ್ನು ಪ್ರಾಂಜಲ ಮನದಿಂದ ಮನ್ನಿಸಿ, ನನಗೆ ಅದನ್ನು ತಿಳಿಸಿಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಕಾಲಜ್ಞಾನ ಸಾಹಿತ್ಯದಲ್ಲಿ ಆಸಕ್ತಿಯುಳ್ಳ ವಿದ್ವಾಂಸರ ಹಾಗೂ ಅನುಭಾವಿಗಳ ವಸ್ತುನಿಷ್ಠವಾದ ಸೂಕ್ತ ಸಲಹೆಗಳನ್ನು ನಾನು ಸದಾ ಸ್ವಾಗತಿಸುತ್ತೇನೆ.

■■

ಉದ್ಧರಣೆಗಳು

✍ ಡಾ. ಕೆ. ರವೀಂದ್ರನಾಥ

ವಿಷಯ ಪ್ರಧಾನವಾಗಿ ವೀರಶೈವ ಸಾಹಿತ್ಯವನ್ನು ಅರ್ಪಣ, ಅರ್ಚನ, ಅನುಭಾವ, ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲ ಮತ್ತು ಸಕೀಲ ಸಾಹಿತ್ಯವೆಂದು ವರ್ಗೀಕರಿಸಲಾಗಿದೆ. ಇವುಗಳ ಜೊತೆಗೆ ಚಿತ್ರಪ್ರಧಾನವಾದ ಉದ್ಧರಣೆಗಳು ವೀರಶೈವರ ಶಾಸ್ತ್ರಸಾಹಿತ್ಯ ಹಾಗೂ ಚಿತ್ರಪರಂಪರೆಗೆ ವಿಶೇಷ ಕೊಡುಗೆಯಾಗಿರುವುದನ್ನು ಗಮನಿಸಬೇಕಾಗಿದೆ. ಹಸ್ತಪ್ರತಿಗಳನ್ನು ಶಾಸ್ತ್ರಸಮ್ಮತವಾಗಿ ಅಧ್ಯಯನ ಮಾಡುತ್ತಿರುವ ಇಂದಿನ ದಿನಮಾನಗಳಲ್ಲಿ ಅವುಗಳಲ್ಲಿರುವ ಚಿತ್ರಕಲಾ ವಿನ್ಯಾಸವನ್ನು ಕುರಿತಂತೆ ಪರಿಪೂರ್ಣವಾದ ಅಧ್ಯಯನಕ್ಕೆ ಕೈಹಾಕಿಲ್ಲವೆಂದು ಹೇಳಬೇಕು. ಹಸ್ತಪ್ರತಿಗಳಲ್ಲಿ ಬರವಣಿಗೆಯ ಜೊತೆಗೆ ಆಲಂಕಾರಿಕ ಬಣ್ಣ, ರೇಖೆ, ವಿನ್ಯಾಸಗಳಿಂದ ಕೂಡಿದ ಸಚಿತ್ರ ಹಸ್ತಪ್ರತಿಗಳು ಸೃಷ್ಟಿಯಾದಂತೆ, ಪರಿಪೂರ್ಣವಾಗಿ ಚಿತ್ರಗಳಿಂದೊಡಗೂಡಿದ ಉದ್ಧರಣೆಗಳು ರಚನೆಯಾಗಿವೆ.

ಉದ್ಧರಣೆಗಳು ಎಂದರೆ ವೀರಶೈವ ತತ್ತ್ವಗಳ ರಹಸ್ಯವನ್ನು ತಿಳಿಸುವ ಒಂದು ಸಾಧನ. ಈ ಸಾಧನಗಳು ಅನಾದಿ ಭಕ್ತೋದ್ಧರಣೆ, ಅಷ್ಟಾವರಣೋದ್ಧರಣೆ, ಅನಾದಿ ಜಂಗಮೋದ್ದರಣೆ, ಮಕುಟೋದ್ದರಣೆ, ಶೂನ್ಯಲಿಂಗೋದ್ಧರಣೆ, ಚಿದಂಬರೋದ್ಧರಣೆ, ಷಡ್ಬ್ರಂಹ್ಮೋದ್ಧರಣೆ, ಪಂಚಮೂರ್ತಿ ಲಿಂಗೋದ್ಧರಣೆ, ಶಾಂಭವೀ ಚಕ್ರೋದ್ಧರಣೆ, ಮಹಲಿಂಗೋದ್ಧರಣೆ, ವೃಷಭೋದ್ಧರಣೆ. ನವಚಕ್ರೋದ್ಧರಣೆ, ತತ್ವಪಂಚೀಕರಣೋದ್ಧರಣೆ, ಮಂತ್ರ ಪಂಚೀಕರಣೋದ್ಧರಣೆ, ಲಿಂಗಪಂಚೀಕರಣೋದ್ಧರಣೆ, ಷಡಕ್ಷರೋದ್ಧರಣೆ, ಬಸವಾಕ್ಷರೋದ್ಧರಣೆ, ನೂರೆಂಟು ಪ್ರಣವೋದ್ಧರಣೆ, ಅಧೋಕುಂಡಲಿ ಉದ್ಧರಣೆ, ಊರ್ಧ್ವಕುಂಡಲಿ ಉದ್ಧರಣೆ, ಲಿಂಗಷಡಕ್ಷರೋದ್ಧರಣೆ, ಅಂಗಷಡಕ್ಷರೋದ್ಧರಣೆ, ಜ್ಞಾನಚಕ್ರೋದ್ಧರಣೆ, ಗೋಮುಖೋದ್ಧರಣೆ, ಪ್ರಣವೋದ್ಧರಣೆ, ನೂರೆಂಟು ತೆರದ ಅರ್ಪಣೋದ್ಧರಣೆ, ಅರುವತ್ತಾರು ತೆರದ ಕರಣಾರ್ಪಣೋದ್ಧರಣೆ, ನಾಲ್ವತ್ತೆಂಟು ತೆರದ ಅರ್ಪಣೋದ್ಧರಣೆ, ಇನ್ನೂರು ಹದಿನಾರು ತೆರದ ಅರ್ಪಣೋದ್ಧರಣೆ, ಮೂವತ್ತಾರು ತೆರದ ಮಿಶ್ರಾರ್ಪಣೋದ್ಧರಣೆ, ಕಾಯಾರ್ಪಣೋದ್ಧರಣೆ, ಲಯಯೋಗ ಸಮಾಧಿ ಉದ್ಧರಣೆ, ಗಣೇಶ್ವರನೋದ್ಧರಣೆ, ರಥೋದ್ಧರಣೆ -ಎಂಬಿತ್ಯಾದಿಯಾಗಿವೆ.

ಉದ್ಧರಣ ಎಂಬುದು ಉತ್+ಹರಣ ಎಂಬ ಎರಡು ಪದಗಳಿಂದ ಕೂಡಿದೆ. ಉತ್ (ಊರ್ಧ್ವ) ಎಂದರೆ ಮೇಲೆ, ಮುಂದೆ, ಮಿಗಿಲು ಎಂದರ್ಥ, ಹರಣ ಎಂದರೆ ಅಪಹರಿಸು, ತೆಗೆದುಕೊಂಡು ಹೋಗು, ಒಯ್ಯು ಎಂದರ್ಥ. ಹೀಗಾಗಿ ಉದ್ಧರಣ ಎಂದರೆ ಉದ್ಧರಿಸು, ಮೇಲಕ್ಕೆತ್ತು, ಬಂಧನದಿಂದ ಮುಕ್ತಗೊಳಿಸು, ಪರಿಪೂರ್ಣ ಹಂತಕ್ಕೆ ಮುಟ್ಟಿಸು, ಎಂಬಿತ್ಯಾದಿ ಅರ್ಥಗಳು ಪ್ರಾಪ್ತವಾಗುತ್ತವೆ. ಅಂದರೆ ರೋಗ, ಭಯ, ಮುಂತಾದ ಭವಬಂಧನಗಳ ಪರಿಹಾರಕ್ಕಾಗಿ, ಇಲ್ಲವೆ ಅಧೋಮುಖಿಯಾದ ಜೀವಿಯನ್ನು ಊರ್ಧ್ವಮುಖಿಗೊಳಿಸುವ ಉತ್ಕರ್ಷಕ ಸಿದ್ಧಾಂತ, ತತ್ತ್ವ ಮತ್ತು ತಂತ್ರಸಾಹಿತ್ಯ ಇದಾಗಿದೆ. ಉದ್ಧರಣೆಗಳು ಚಿತ್ರ (ಪಟಲ) ಹಾಗೂ ಪಠ್ಯ (ವಾಚ್ಯ)ಗಳೆಂಬ ಎರಡು ರೀತಿಯಲ್ಲಿ ಬೆಳೆದು ಬಂದ ದೃಶ್ಯ ಶ್ರವ್ಯದಿಂದೊಡಗೂಡಿದ ಸಾಹಿತ್ಯವಾಗಿದೆ. ಡಾ. ಜ.ಚ.ನಿ.ಯವರು ಈ ಸಾಹಿತ್ಯದ ಕೆಲವು ಲಕ್ಷಣಗಳನ್ನು ಕುರಿತು ಹೀಗೆ ತಿಳಿಸುತ್ತಾರೆ: "ಉದ್ಧರಣೆಸಾಹಿತ್ಯ ವಾಚ್ಯವೂ (ವಾಙ್ಮಯ) ಹೌದು, ವರ್ಣಮಯವೂ (ಬಣ್ಣ) ಹೌದು. ರೂಪದ ದೃಷ್ಟಿಯಿಂದ ಅಂಕಿ, ಅಕ್ಷರ, ವರ್ಣ ಪ್ರಧಾನ ಸಾಹಿತ್ಯ. ಸಮನ್ವಯ ದೃಷ್ಟಿಯಿಂದ ಸಾಂಖ್ಯ-ಯೋಗ, ಮೀಮಾಂಸೆ ಮತ್ತು ಜ್ಯೋತಿಷ್ಯಗಳ ಲಕ್ಷಣವುಳ್ಳ ಸಾಹಿತ್ಯ. ವಿಶೇಷವಾಗಿ ಅಂಕಿ-ಸಂಖ್ಯೆಗಳಿಗೆ ತತ್ತ್ವದೀಕ್ಷೆ ಮತ್ತು ಸಾಹಿತ್ಯ ದೀಕ್ಷೆ ನೀಡಿದ ಸಾಹಿತ್ಯ. ಸಾಂಕೇತಿಕ ದೃಶ್ಯ ಸಾಹಿತ್ಯ. ಸಂವಹನಶೀಲ ಸಾಹಿತ್ಯ."[೧]

ಡಾ. ಜ.ಚ.ನಿ.ಯವರು ಅಭಿಪ್ರಾಯಪಡುವಂತೆ: "ಉದ್ಧರಣೆಗಳಿಗೆ ಅವುಗಳದ್ದೇ ಆದ ಭಾಷೆಯಿದೆ; ಭಾವವಿದೆ. ಅಂಗ-ಲಿಂಗಗಳ ಅನುಭಾವವನ್ನುಂಟುಮಾಡುವ ಸೂಚ್ಯಶಕ್ತಿಯಿದೆ; ಸತ್ವವಿದೆ. ಒಂದೊಂದು ಉದ್ಧರಣೆ ಒಂದೊಂದು ತತ್ವಜ್ಞಾನವನ್ನುಂಟುಮಾಡುವ ವಿಶಾಲಾನುಭೂತಿಯಿಂದ ಕೂಡಿರುತ್ತದೆ. ಅಂತರಂಗಕ್ಕೆ ಅಚ್ಚೊತ್ತುವಂತೆ ಮಾಡುತ್ತದೆ. ಒಂದು ಉದ್ಧರಣೆ ಒಂದು ಉದ್ಗ್ರಂಥವಾಗುವಷ್ಟು ವಿಚಾರವುಳ್ಳದ್ದಾಗಿರುತ್ತದೆ. ಯೋಗಶಕ್ತಿ ಜ್ಞಾನದೀಪ್ತಿ ತತ್ವವ್ಯಾಪ್ತಿಗಳನ್ನು ನಿಚ್ಚಳವಾಗಿ ನಿರೂಪಿಸುವ ನಿಲವುಳ್ಳದ್ದಾಗಿರುತ್ತದೆ. ಆಧ್ಯಾತ್ಮತತ್ವಗಳನ್ನು ಶಿವಾದ್ವೈತ ಸಿದ್ಧಾಂತಗಳನ್ನು ಉದ್ಧರಿಸುವುದೆ ಉದ್ಧರಣೆಗಳ ಗುರಿ. ಇವುಗಳ ವಿಜ್ಞಾನವನ್ನುಂಟುಮಾಡಿಕೊಡುವುದೇ ಇವುಗಳ ಸಂಕೇತ. ಅಂಗದೊಳಗಿರುವ ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲಗಳನ್ನು ಅರ್ಚನ ಅರ್ಪಣ ಅನುಭವಗಳನ್ನು ಇವಕ್ಕೆಲ್ಲ ಆಕರವಾದ ಸತ್ಯವಸ್ತುವನ್ನು ಕಂಡುಕೊಂಡು ಶಾಂತರೂ ಸಮರಸಚಿತ್ತರೂ ಆಗಬೇಕೆಂಬ ಉದ್ದೇಶವೆ ಉದ್ಧರಣೆಗಳ ಯೋಚನೆ ಮತ್ತು ಯೋಜನೆ. ಸ್ಥೂಲ ಸೂಕ್ಷ್ಮ ವರ್ಣ ವಿನ್ಯಾಸ ಸಾಹಿತ್ಯವೆ ಉದ್ಧರಣೆಗಳ ಉದ್ದೇಶ, ಒಟ್ಟಿನಲ್ಲಿ ಹೇಳುವುದಾದರೆ ಕಲೆ-ಕಳೆಗಳೆರಡರ ನೆಲೆ ಉದ್ಧರಣೆ! (**ಗೌರವ :** ಪ್ರೊ.ಎಸ್.ಎಸ್. ಭೂಸನೂರಮಠ ಅಭಿನಂದನ ಗ್ರಂಥ, ಸಂ: ಡಾ. ಬಿ.ವ್ಹಿ. ಶಿರೂರ, ಪ್ರ: ವೀರಶೈವ ಅಧ್ಯಯನ ಸಂಸ್ಥೆ, ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ, ೧೯೮೬, ಪು. ೧೫೫-೧೫೬.)

ಕರ್ನಾಟಕ ಚಿತ್ರಕಲೆಯ ಬಹುವಿಧಾನಗಳನ್ನು ಪರಿಚಯಿಸುವ ಉದ್ಧರಣೆಗಳಿಗೆ ಮಹತ್ವದ ಸ್ಥಾನವಿದೆ. ಕಲೆಗಾರಿಕೆ ಹಾಗೂ ಅನುಭಾವಗಳೆರಡು ಏಕಗೊಂಡ ಅಪೂರ್ವ ರಚನೆಗಳಿವು. ಹೀಗಾಗಿ "ಉದ್ಧರಣೆಯ ಚಿತ್ರಗಳಲ್ಲಿನ ಪ್ರತಿಯೊಂದು ರಚನೆಗೂ, ಆಕೃತಿಗಳಿಗೂ ಇರುವ ಅರ್ಥವತ್ತಾದ ವಿವರಣೆಯನ್ನು ಗಮನಿಸಿದರೆ ಇಲ್ಲಿನ ಸಂಕೇತಗಳು ಶರಣರ ಬೆಡಗಿನ ವಚನಗಳಿಗೆ ತೀರಾ ಹತ್ತಿರವಾಗಿ ಕಾಣುತ್ತವೆ. ಇಂಥ ಹಲವಾರು ಸಂಕೇತಗಳೇ ಚಿತ್ರವಾಗಿ ಮೂಡಿ ನಿಲ್ಲುವ ಈ ಕೃತಿಗಳು ಕಣ್ಣಿಗೆ ಒಗಟಾಗಿ ಕಂಡರೂ ಇವು ಕೇವಲ ಕಲ್ಪನೆ ಅಥವಾ ಭ್ರಮೆಯ ಚಿತ್ರಗಳಲ್ಲ. ಇವುಗಳನ್ನು ಅನುಭಾವದ ಸಿಲುಗನ್ನಡಿಗಳೆಂದೇ ಹೇಳಬೇಕಾಗುತ್ತದೆ.[೨] ಈ ಕಾರಣವಾಗಿಯೇ ಉದ್ಧರಣೆಗಳನ್ನು ಚಿತ್ರಕ್ಕೆ ಚಿತ್ರವೂ ಹೌದು, ಸಾಹಿತ್ಯಕ್ಕೆ ಸಾಹಿತ್ಯವೂ ಹೌದು, ಶಾಸ್ತ್ರಕ್ಕೆ ಶಾಸ್ತ್ರವೂ ಹೌದು ಎಂದು ಹೇಳುತ್ತಾರೆ. ಇವುಗಳ ರಚನಾಕಾರನಿಗೆ ಉನ್ನತ ಅಧ್ಯಯನ, ಪರಿಶ್ರಮ, ಹಲವು ವಿಷಯಗಳ ಜ್ಞಾನ, ಸಂಸ್ಕಾರಗಳಿರುವುದನ್ನು ಗುರುತಿಸಿಕೊಂಡರೆ ಈ ಚಿತ್ರಗಳನ್ನು ಜಾನಪದ ಎನ್ನಬೇಕೋ? ಬೇಡವೋ ಎಂಬ ಚರ್ಚೆ ವಿದ್ವಾಂಸರಲ್ಲಿದೆ. ಸಿಂಹ, ಜಿಂಕೆ, ಚಿಗರೆ, ಹಾವು, ಮೀನು, ಕಪ್ಪೆ ಹಾಗೂ ಬಳ್ಳಿಯಾಕಾರದ ಚಿತ್ರಗಳು ಶುದ್ಧ ಜನಪದ ಚಿತ್ರಕಲೆಗೆ ನಿದರ್ಶನವಾಗಿವೆ.

ಉದ್ಧರಣೆಗಳ ಸ್ವರೂಪ

೧.ಉದ್ಧರಣೆ ವಾಚ್ಯ	೨.ಉದ್ಧರಣೆ ಪಟೀ
೧ ರೇಖಾ ವಿನ್ಯಾಸ (ತಾಳೆಗರಿ)	೨. ವರ್ಣ ವಿನ್ಯಾಸ (ಕಾಗದ ಪ್ರತಿ)

ವಾಚ್ಯ (ಪಠ್ಯ) ಮತ್ತು ಚಿತ್ರ (ವರ್ಣ)ಗಳ ಸಂಗಮ ಉದ್ಧರಣೆಗಳಾದ್ದರಿಂದ ಇವುಗಳನ್ನು ಮೇಲಿನಂತೆ ವರ್ಗೀಕರಿಸುವುದು ಅವೈಜ್ಞಾನಿಕವಾಗಿ ಕಾಣಬಹುದು. ಆದರೆ ನಾಡಿನಾದ್ಯಂತ ಸಿಗುವ ಹಸ್ತಪ್ರತಿಗಳಲ್ಲಿ ಕೆಲವು ಉದ್ಧರಣೆಗಳು ಕೇವಲ ವಾಚ್ಯದಿಂದ; ಮತ್ತೆ ಕೆಲವು ಪಟಲ (ಚಿತ್ರ)ದಿಂದ ಪ್ರತ್ಯೇಕ ಪ್ರತ್ಯೇಕವಾಗಿ ಸಿಗುತ್ತವೆಂಬುದಕ್ಕೆ ಈ ಕೆಳಗಿನ ಹೇಳಿಕೆಗಳನ್ನು ಗಮನಿಸಬಹುದು:

"ಶ್ರೀ ಗುರುಬಸವಲಿಂಗಾಯ ನಮಃ। ಉದ್ಧರಣೆಯ ವಾಚ್ಯ ಬರೆಯುವುದಕ್ಕೆ ಶುಭಮಸ್ತು... ಪ್ಲವ ಸಂವತ್ಸರದ ಚೈತ್ರ ಶು ೨ ಯಿಂದುವಾರದಲ್ಲು ಬ್ಯಂಗಳೂರಲ್ಲಿರುವ ಕೋಟಿಲಿಂಗಶಾಸ್ತ್ರಿ ಕುಮಾರ ಶರಭಯ್ಯನವರು ಬರೆದು ಕೊಟ್ಟದ್ದು ಕಂಪ್ಲಿಯಲ್ಲಿರುವ ಕಲ್ಗುಡಿ ದೊಡ್ಡಪ್ಪನವರಿಗೆ ಉದ್ಧರಣೆ ವಾಚ್ಯ ವಹಿ ರುಜು"[೩]

"ಇದು ಉದ್ಧರಣೆಯ ಪಟಲಗಳಾಗಿರುವದರಿಂದ ಸುಂದರವಾದ ೨೩ ಚಿತ್ರಪಟಲಗಳಿವೆ"[೪]

ಹೀಗೆ ಎಳೆ ಎಳೆಯಾಗಿ ಉದ್ಧರಣೆಗಳನ್ನು ಬಿಡಿಸಿನೋಡುವ ಉದ್ದೇಶ ಹಸ್ತಪ್ರತಿಗಳ ವೈವಿಧ್ಯಮಯ ಅಧ್ಯಯನ ಹಾಗೂ ಚಿತ್ರಪ್ರಧಾನ ಹಸ್ತಪ್ರತಿಗಳ ಪ್ರತ್ಯೇಕ ರೂಪ-ಸ್ವರೂಪಗಳ ದಾಖಲೀಕರಣವಾಗಿದೆ.

ಉದ್ಧರಣೆ ಪಟಲಗಳು ತಾಳೆಗರಿ ಮತ್ತು ಕಾಗದ ರೂಪದಲ್ಲಿ ಕಾಣಸಿಗುತ್ತವೆಯಾದರೂ ತಾಳೆಗರಿಗಳಲ್ಲಿಯ ಉದ್ಧರಣೆಗಳು ಪ್ರಮಾಣ ದೃಷ್ಟಿಯಿಂದ ವಿರಳ; ಕಾಗದ ಪ್ರತಿಗಳು ಹೇರಳವಾಗಿವೆ. ಇದಕ್ಕೆ ಕಾರಣ ಉದ್ಧರಣೆಗಳ ಸ್ಥಾಯೀ ಗುಣ ಚಿತ್ರಕಲೆ. ಅದರಲ್ಲೂ ವರ್ಣಚಿತ್ರಗಳಿಗೆ ಕಾಗದ ಉಪಯೋಗಕಾರಿ ಸಾಮಗ್ರಿ. ಹೀಗಾಗಿ ತಾಳೆಗರಿ ಚಿತ್ರಗಳು ರೇಖಾಪ್ರಧಾನವಾಗಿರುತ್ತವೆ; ಕಾಗದ ಉದ್ಧರಣೆಗಳು ವರ್ಣಪ್ರಧಾನವಾಗಿರುತ್ತವೆ. ಕಾರಣ ಇಲ್ಲಿಯವರೆಗಿನ ಸರ್ವೇಕ್ಷಣೆಯಿಂದ ಕಾಗದ ಮಾಧ್ಯಮದಲ್ಲಿ ಬರೆದ ಉದ್ದರಣೆಗಳು ಹೆಚ್ಚಾಗಿವೆ.

ಉದ್ಧರಣೆಗಳ ಬಣ್ಣ ತಯಾರಿಕೆ: ಪ್ರಾಚೀನ ಚಿತ್ರಕಲಾವಿದರು ತಮ್ಮ ಸುತ್ತಲಿನ ಪರಿಸರದಲ್ಲಿ ಲಭ್ಯವಿದ್ದ ಸಾಮಗ್ರಿಗಳನ್ನು ಬಳಸಿಕೊಂಡು ಬಣ್ಣಗಳನ್ನು ತಯಾರಿಸುತ್ತಿದ್ದರು. ಕಲಾವಿದರು ಬಳಸುತ್ತಿದ್ದರೆನ್ನಲಾದ ಬಣ್ಣಗಳ ಯಾದಿಯನ್ನು ಕೆಲವು ಕಾವ್ಯಗಳು ಹೀಗೆ ಉಲ್ಲೇಖಿಸುತ್ತವೆ. ಪದ್ಮಸಂಹಿತೆಯಲ್ಲಿ ಪಂಚವರ್ಣಗಳನ್ನು ಹೇಳಿದರೆ ಪೊನ್ನ ತನ್ನ ಶಾಂತಿಪುರಾಣದಲ್ಲಿ "... ಅತಿಶಯ ಪಂಚರುಚಿ ಪ್ರತಿಕೃತಿ ಹರಿತಂ, ತಾಮ್ರ, ಕೃಷ್ಣ, ಪೀತ, ಸಿತ...' ಎಂಬುದಾಗಿಯೂ; ವಚನಕಾರ ಮೋಳಿಗೆ ಮಾರಯ್ಯ "ಷಡುವರ್ಣದ ಟಿಪ್ಪಣದಂತೆ..." ಎಂದು ಆರುವರ್ಣಗಳ ಕಡೆಗೆ ನಮ್ಮ ಗಮನ ಹರಿಯಿಸುತ್ತಾನೆ. ಕವಿ ಚೌಂಡರಸ ತನ್ನ ಅಭಿನವದಶಕುಮಾರ ಚರಿತೆಯಲ್ಲಿ "... ಪಟದೊಳ್ ಸರ್ವಾಂಗ ಸೌಂದರ್ಯದೊಪ್ಪವನಾಂ ಚಿತ್ರಮೇನಕ್ಕೆ ಕೂರ್ತು ಬರೆದೆಂ ಷಡ್ವರ್ಣ ಸಂಪೂರ್ಣದಿಂ..." ಎಂಬ ಹೇಳಿಕೆ ಮತ್ತು ಪಾಯಣವರ್ಣಿ ಕವಿ ಸಿಂಧೂದೇವಿಯ ಭವಾವಳಿಯನ್ನು ವರ್ಣಿಸುತ್ತ ಆಕೆ ಪೂರ್ವದಲ್ಲಿ "ಹರಿತ, ಪೀತಾರುಣ ಶ್ವೇತ ಕೃಷ್ಣಗಳೆಂಬುರುತರ ಪಂಚವರ್ಣಗಳಿಂ..." ಎಂಬ ಉಲ್ಲೇಖಗಳಿಂದ ಬಿಳಿ, ಹಳದಿ, ಕೆಂಪು, ಎಳೆಹಸಿರು, ಕಪ್ಪು, ಇತ್ಯಾದಿ ಬಣ್ಣಗಳನ್ನು ತಯಾರಿಸಿಕೊಳ್ಳುತ್ತಿದ್ದರೆಂಬುದು ತಿಳಿದುಬರುತ್ತದೆ.

ಬಿಳಿಬಣ್ಣ: ಸಂಗಮುವರಿಕಲ್ಲಿನ (Marble) ಚೂರುಗಳನ್ನು ಸುಟ್ಟು ನೀರಿನಲ್ಲಿ ನೆನಯಿಸಿ; ಸೋಸಿ ಅಂಟು ನೀರಿನಲ್ಲಿ ಮಿಶ್ರಣಮಾಡಿ ಬಿಳಿಬಣ್ಣವನ್ನು ತಯಾರಿಸುತ್ತಿದ್ದ ವಿಧಾನವನ್ನು ಕಂಡುಕೊಂಡಿದ್ದರು. ಆದರೆ ಹಸ್ತಪ್ರತಿ ಚಿತ್ರಕಾರರು ಈ ವಿಧಾನದಿಂದ ಸಿದ್ಧಗೊಂಡ ಬಿಳಿಬಣ್ಣವನ್ನು ಉಪಯೋಗಿಸಿದಂತಿಲ್ಲ; ಬದಲಾಗಿ ಹೇರಳವಾಗಿ ದೊರೆಯುವ ಹಸಿರು ಛಾಯೆಯ ಬಳಪದ ಕಲ್ಲನ್ನು ಗಂಧದಂತೆ ತೆಯ್ದು ಸಂಗ್ರಹಿಸಿದ ಕೆನೆಯನ್ನು ಅಂಟುನೀರಿನೊಂದಿಗೆ ಬೆರಸಿ ಉಪಯೋಗಿಸುತ್ತಿರಬೇಕೆಂಬ ಊಹೆಯನ್ನು ಡಾ.ಬಿ.ಕೆ. ಹಿರೇಮಠರು ಮಾಡುತ್ತಾರೆ.

ಕೆಂಪುಬಣ್ಣ: ಇದನ್ನು ಹುರಿಮಂಜು ಎಂಬ ಮಣ್ಣಿನಿಂದ ತಯಾರಿಸುತ್ತಿದ್ದರು. ಇದನ್ನು ಗೈರಿಕ ಎಂಬ ಪರ್ಯಾಯ ಹೆಸರಿನಿಂದ ಕರೆಯಲಾಗಿದೆ. ಸೂಸು ಮಣ್ಣಿಗೆ ನೀರು ಬೆರಸುತ್ತ ಕಲ್ಲ ಮೇಲೆ ಅರೆದು ಈ ಬಣ್ಣವನ್ನು ಪಡೆಯುತ್ತಿದ್ದರು. ಇದಲ್ಲದೆ ಕೆಂಪು ಬಳಪದ ಕಲ್ಲು, ಕಾವಿಬಣ್ಣ ಮತ್ತು ಇಂಗಳೀಕಗಳಿಂದಲೂ ಇದನ್ನು ತಯಾರಿಸುತ್ತಿದ್ದರು. ಇದು ಉದ್ದರಣೆಗಳಲ್ಲಿ ಬಳಕೆಗೊಂಡ ಅತ್ಯಂತ ಶ್ರೀಮಂತವಾದ ಬಣ್ಣವಾಗಿದೆ.

ಕಪ್ಪುಬಣ್ಣ: ಸಾಸಿವೆ ಎಣ್ಣೆ ಇಲ್ಲವೇ ಔಡಲ ಎಣ್ಣೆಯಿಂದ ಕರ್ಪೂರ ಸಂಯುಕ್ತವಾದ ಬತ್ತಿಯನ್ನು ಉರಿಸಿ ಇಲ್ಲವೇ ಕುಡಿಯುಳ್ಳ ದೀಪದ ಮೇಲೆ ಮಣ್ಣಿನ ಮುಚ್ಚಳವನ್ನಿಟ್ಟು ಸಂಗ್ರಹಿಸಿದ ಕಾಡಿಗೆಯನ್ನು ಅಂಟುನೀರಿಗೆ ಬೆರಸಿ ಕಪ್ಪುಬಣ್ಣವನ್ನು ತಯಾರಿಸುತ್ತಿದ್ದರು. ಉದ್ಧರಣೆಗಳಲ್ಲಿ ಈ ವರ್ಣದ ಬಳಕೆ ಅತೀ ಕಡಿಮೆಯೆನ್ನಬೇಕು. ಪ್ರಾಯಶಃ ಇದಕ್ಕೆ ಹಚ್ಚೆಸೊಪ್ಪು, ಒಣ ಅಚ್ಚರಿಕೆ ಸೊಪ್ಪು ಮತ್ತು ಅರಿಸಿಣ ಪುಡಿಗಳನ್ನು ಸಮವಾಗಿ ಬೆರಸಿ ರಸ ಮಾಡಿದ ಮಿಶ್ರಣವನ್ನು ಸೇರಿಸಿ ಬೂದು ಬಣ್ಣಕ್ಕೆ ವರ್ಗಾಯಿಸಿಕೊಂಡು (ಹಚ್ಚೆ ಬಣ್ಣಕ್ಕೆ) ಬಳಸಿರುವುದೇ ಹೆಚ್ಚು ಕಂಡುಬರುತ್ತದೆ.

ನೀಲಿಬಣ್ಣ: ನೀಲೋಪಲ ಶಿಲೆಯನ್ನು ಪುಡಿಮಾಡಿ ಸೋಸಿ ಇಲ್ಲವೇ ನೀಲಿಸಸ್ಯದ ಪುಡಿಯನ್ನು ಅಂಟಿನೊಡನೆ ಬೆರಸಿ ತಯಾರಿಸುತ್ತಿದ್ದರು. ತುಂಬೆಹೂ ಹಾಗೂ ಎಲೆಗಳನ್ನು ಬಳಸಿ ಈ ಬಣ್ಣವನ್ನು ತಯಾರಿಸುತ್ತಿದ್ದರು.

ಹಳದಿಬಣ್ಣ: ಗೌರಿಮರದ ಎಲೆಗಳ ರಸದಿಂದ ಹಳದಿ ವರ್ಣವನ್ನು ತಯಾರಿಸುತ್ತಿದ್ದರು. ಮತ್ತು ಉರ್ಚಿಕಾಯಿ, ಬೆಂಗಾಲಿಕಾಯಿ ಹಣ್ಣಿನ ರಸದಿಂದಲೂ ಇದನ್ನು ಸಿದ್ಧಪಡಿಸುತ್ತಿದ್ದರು. ನನ್ನ ಗಮನಕ್ಕೆ ಬಂದಂತೆ ಉದ್ಧರಣೆಗಳಲ್ಲಿ ಅತಿ ಹೆಚ್ಚು ಬಳಕೆಗೊಂಡ ಬೆಡಗಿನ ಬಣ್ಣ ಇದಾಗಿದೆ.

ಹಸಿರುಬಣ್ಣ: ಹಸ್ತಪ್ರತಿ ಚಿತ್ರಕಾರರು ಈ ಬಣ್ಣವನ್ನು ಹಳದಿ ಮತ್ತು ನೀಲಿ ಬಣ್ಣಗಳ ಸಮ್ಮಿಶ್ರಣದಿಂದ ತಯಾರಿಸಿಕೊಳ್ಳುತ್ತಿದ್ದಂತೆ ತಿಳಿದುಬರುತ್ತದೆ.

ಹಳದಿ, ಗುಲಾಬಿ, ಕೆಂಪು, ನೀಲಿ ಮತ್ತು ಕಾವಿ ಬಣ್ಣಗಳನ್ನು ಅತಿ ಹೆಚ್ಚು ಬಳಸಿದ ಉದ್ಧರಣೆ ಚಿತ್ರಕಾರರು ಇವುಗಳ ಬಳಕೆಯನ್ನು ಪ್ರಾಯಶಃ ವಿನ್ಯಾಸ ಶಾಸ್ತ್ರ ಸಮ್ಮತವಾಗಿ ಸಂಯೋಜಿಸಿಕೊಂಡಂತೆ ತೋರುತ್ತದೆಯಾದರೂ ಬಣ್ಣಗಳ ಆಯ್ಕೆ ಚಿತ್ರಕಾರನ ಮನೋಧರ್ಮಕ್ಕೆ ಬಿಟ್ಟಂತೆ ಕಂಡುಬರುತ್ತದೆ.

ಬಣ್ಣಗಾರಿಕೆಯ ವಿವರ : ನಾನು ಗಮನಿಸಿದ ಕೆಲವು ಉದ್ಧರಣೆಗಳಲ್ಲಿ ಚಿತ್ರಕಾರನು ಬಳಸಿದ ಬಣ್ಣಗಾರಿಕೆಯ ವಿವರವನ್ನು ನೋಡಬಹುದು. ಇವು ಕಾಗದದ ಮೇಲೆ ಬರೆದ ವರ್ಣವಿನ್ಯಾಸಗಳು.

ಕೊಪ್ಪಳ ಜಿಲ್ಲೆ ಬನ್ನಿಕೊಪ್ಪಗ್ರಾಮದ ಶ್ರೀ ತೋಟನಗೌಡ, ಅಮರಪ್ಪಗೌಡ ಪೋಲಿಸ್ ಪಾಟೀಲರ ಮನೆಯಲ್ಲಿನ ಉದ್ಧರಣೆ ಪಟಲವು ೩೨ ಚಿತ್ರಗಳಿಂದ ಕೂಡಿದ್ದು ಒಂದು ಕಡೆ ಚಿತ್ರ, ಅದರ ಬೆನ್ನಹಿಂದೆ ಆ ಚಿತ್ರಕ್ಕೆ ಸಂಬಂಧಿಸಿದ ವಾಕ್ಯವನ್ನು ಬರೆಯಲಾಗಿದೆ. ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಎರಡು ಉದ್ಧರಣೆ ಪಟಗಳನ್ನು ಸಂರಕ್ಷಿಸಲಾಗಿದೆ. ಅವುಗಳಲ್ಲಿ ಪುಸ್ತಕರೂಪದಲ್ಲಿರುವ (ಕ್ರ.ಸಂ. ೩೮೧) ಉದ್ಧರಣೆಯ ಚಿತ್ರ ಹಾಗೂ ಬಣ್ಣ ವಿನ್ಯಾಸವನ್ನು ನೋಡಬಹುದಾಗಿದೆ. ನಿದರ್ಶನಕ್ಕೆ ಅನಾದಿ ಜಂಗಮೋದ್ಧರಣೆಯಲ್ಲಿ ಹಳದಿ, ಕಾಪಿ ಮತ್ತು ಕಂದುಬಣ್ಣಗಳನ್ನು ಬಳಸಲಾಗದೆ. ಜಂಗಮಮೂರ್ತಿ ಕುಳಿತ ಲಿಂಗಪೀಠ ಸಂಪೂರ್ಣವಾಗಿ ಹಳದಿ ಬಣ್ಣದಿಂದ ಆವೃತ್ತವಾದ ರೇಖಾವಿನ್ಯಾಸದಿಂದ ಕೂಡಿದ್ದರೆ ಜಂಗಮ ಮೂರ್ತಿಯ ಅಖಂಡ ಅಂಗಾಂಗ ದೇಹವು ಕಾಪಿ ಬಣ್ಣದಿಂದ ವಿನ್ಯಾಸಗೊಂಡಿದೆ. ತಲೆ ಕಿರೀಟ ಹಾಗೂ ಭುಜ ಕಿರೀಟಗಳು ಹಳದಿ ಬಣ್ಣದಿಂದಲೂ ಹಾಗೂ ಹೆಗಲ ಮೇಲಿಂದ ನೀಳವಾಗಿ ಹಾಕಿಕೊಂಡ ಶಾಲಿನ ಹೊದಿಕೆ ಕಂದುಬಣ್ಣದಿಂದ ಅಲಂಕೃತಗೊಂಡಿದೆ. ಒಟ್ಟು ಆಕೃತಿಯ ಸುತ್ತ ಅಂಚು ಹೂಬಳ್ಳಿಯಿಂದ ರಚನೆಗೊಂಡಿದೆ.

ಉದ್ಧರಣೆ ಪಟಲ ಕಲೆಗಾರಿಕೆಯಿಂದ ಎಷ್ಟು ಮಹತ್ವವೋ ವೀರಶೈವ ಸಂಸ್ಕಾರದ ದೃಷ್ಟಿಯಿಂದಲೂ ಅಷ್ಟೇ ಗಮನಾರ್ಹವಾದವುಗಳು. ಇಲ್ಲಿ ಉಲ್ಲೇಖಿಸಿದ ಜಂಗಮೋದ್ಧರಣೆ ಷಡಕ್ಷರಿ ಮಂತ್ರದ ಬೀಜಾಕ್ಷರಗಳಿಂದ ಪರಿಪೂರ್ಣಗೊಂಡಿದೆ. "ಓಂ=ತಲೆಯಲ್ಲಿ, ನ = ತಲೆಯಲ್ಲಿ, ನ = ಎಡಭುಜದಲ್ಲಿ ಮಃ = ಬಲಭುಜದಲ್ಲಿ, ಶಿ = ನಾಭಿ ಕೆಳಭಾಗದಲ್ಲಿ, ವಾ = ಬಲಗಾಲಿನ ಮಂಡೆಯಲ್ಲಿ, ಯ = ಎಡಗಾಲಿನ ಮಂಡೆಯಲ್ಲಿದ್ದು ಕರಣ ಪ್ರಸಾದ ಪೂಜೆಯಲ್ಲಿ ಜಂಗಮರು ಈ ಭಾಗಗಳನ್ನು ಪತ್ರೆ- ಪುಷ್ಪ -ಗಂಧಗಳಿಂದ ಪೂಜಿಸುವುದನ್ನು ಗಮನಿಸಿದರೆ ವೀರಶೈವರ ಪೂಜೆ ವ್ಯಕ್ತಿರೂಪದ ಸ್ಥಾವರ ಪೂಜೆಯ ಬದಲಾಗಿ ತತ್ತ್ವರೂಪದ ಜಂಗಮಪೂಜೆಯಾಗಿದೆ."

ಇನ್ನೊಂದು ಚಿತ್ರ, ಅಧೋಕುಂಡಲಿ ಮತ್ತು ಊರ್ಧ್ವಕುಂಡಲಿ ಉದ್ಧರಣೆಗಳದು. ಜಿಂಕೆಯ ಮುಖ, ಎದೆಯಿಂದ ನಡುವಿನ ವರೆಗೆ ಸ್ತ್ರೀದೇಹ, ಮುಂದಿನವು ಹುಲಿಗಾಲು, ಹಿಂದಿನವು ನಂದಿಕಾಲು, ನೀಳವಾದ ಬೆನ್ನ ಮೇಲೆ ಹಾವು, ನಾಲ್ಕು ಕೈಗಳು ಮತ್ತು ಖಡ್ಗ, ರುಂಡಗಳು, ಜಲಚರ ಪ್ರಾಣಿಗಳಾದ ಮೀನು, ವ್ಯಾಘ್ರ, ಸಿಂಹ, ಆಕಳು, ಹರಿಣಗಳಂತಹ ಸಾಂಕೇತಿಕ ಚಿತ್ರಗಳಿಂದ ಆವೃತವಾಗಿವೆ. ಗಾಢವಾದ ಬಣ್ಣಗಾರಿಕೆಯಿಂದ ಕೂಡಿದ ಇವು ಚಿತ್ರಕಲಾವಿದನ ಪರಿಣತಿಗೆ ನಿದರ್ಶನಗಳಾಗಿವೆ.

ಈ ಚಿತ್ರಗಳಿಗೆ ಸಂಕೇತಗಳು ಹೀಗಿವೆ: "ಅಹಂಕಾರ ಮಮಕಾರವೆಂಬೆರಡು ಕೋಡು, ಎಂಬತ್ತುನಾಲ್ಕು ಲಕ್ಷ ಜೀವರಾಶಿ; ಶಿವನರಿಯದ ಪ್ರಾಣಿಗಳ ಸುಡುತ್ತಿಹನೆಂಬ ಜಿಂಕೆಯ ಮೊರೆ. ತನ್ನರಿದೆನೆಂಬವರಿಗೆ ಮುಕ್ತಿ ತೋರುವೆನೆಂಬ ಮೂಗುತಿ. ಶಿವಲಿಖಿತವ-ದುರ್ಲಿಖಿತವ ಬರೆವುದಕ್ಕೆ ವಾಲೆ ಕಂಠ. ವಿಷ ಅಮೃತವೆಂಬೆರಡು ಕೈಯಲ್ಲಿ ಕುಂಭಗಳು. ಸಿಂಹನಾದ ನುಡು.

ವಿಷ ಅಮೃತ ತಲೆಮೊಲೆಗಳು ಶಿವಪಥಕ್ಕೆ ಹೆಜ್ಜೆಯನಿಟ್ಟು ಮರಳದಿಹವೆಂಬ ಚಲವಾದ ವ್ಯಾಘ್ರಪಾದಂಗಳು ಮುಂದಿಹವು. ದಶವಾಯುಗಳೆ ತುರಗದ ಪಾದ ಹಿಂಗಾಲು ಬಲನು ಕಾಲಮೃತ್ಯು, ಎಡನು ಅಪಮೃತ್ಯು. ಬಾಲವೇ ಕುಂಡಲಿಯ ಸರ್ಪ. ಅಧೋಮುಖವ ನೋಡುತಿಹುದು. ಸರ್ಪಕಂಠ ಕಂಗಳೆ ಕಠಾರಿ. ತಲೆಕೆಳಗಾಗಿಹುದು. ಆ ಕಠಾರಿಯ ಮೊನೆ ಮೇಲಾಗಿ ಇಹುದು. ಆ ಕುಂಡಲಿ ಮುಖ ಊರ್ಧ್ವವಾಗಿಹುದು. ಚತುರ್ವಿಧ ಪದಗಳೇ ನಾಲ್ಕು ಮೊಲೆಗಳು. ಅದಕ್ಕೆ ಭ್ರಮಣ ಜೀವನೆಂಬ ಮೀನು. ಅರ್ಧ ಮಾಯಾಶಕ್ತಿ; ಅರ್ಧ ಚಿತ್‌ಶಕ್ತಿ. ಮಾಯಾಮುಖದಿಂದ ಬ್ರಹ್ಮ ವಿಷ್ಣು ಅಧಿದೇವತೆಗಳು ನಿರ್ಮಿತಂಗಳು. ಊರ್ಧ್ವಮುಖದಿಂದ ಪ್ರಮಥಗಣಂಗಳು ನಿರ್ಮಿತ. ಮಾಯೆಯ ಹೊಟ್ಟೆ, ಆ ಹೊಟ್ಟೆಯಿಂದ ಜನನವು. ಆ ಮಾಯಾ ಬೀಜ ಊರ್ಧ್ವಕ ಚಿದಗ್ನಿಯಿಂದ ಹುರಿಯಲು ಭವ ನಾಸ್ತಿ...[೬]

ಕಾಗದ ಪ್ರತಿಗಳಿಗೆ ಭಿನ್ನವಾಗಿ ತಾಳೆಗರಿಗಳ ಮೇಲಿನ ಉದ್ಧರಣೆ ಚಿತ್ರಗಳು ರಚನೆಯಾಗಿವೆ. ಇವು ಕೇವಲ ವರ್ಣರಹಿತವಾದ ರೇಖಾವಿನ್ಯಾಸದಿಂದ ಕೂಡಿದವುಗಳು. ಚಿತ್ರಕಾರನು ಕಂಟ, ರೇಖಾಪಟ್ಟಿ ಮತ್ತು ಕೈವಾರ (Compass)ಗಳ ಸಹಾಯದಿಂದ ಸೃಷ್ಟಿಸಿದ ಸುಂದರವಾದ ರೇಖಾನಕ್ಷೆಗಳಾಗಿವೆ. ಯಾವುದೇ ಬಣ್ಣಗಾರಿಕೆಯಿಲ್ಲದಿದ್ದರೂ ಪ್ರತಿಕಾರ ಅಥವಾ ವಿನ್ಯಾಸಕಾರನ ಪರಿಣತಿಯಿಂದ ಬರಿಗೈಗೆ ಬಣ್ಣ ಲೇಪಿಸಿದಂತೆ ತೋರಿಸಿದ ಚಮತ್ಕೃತವಾದ ನಕ್ಷಾಚಿತ್ರಗಳಿವಾಗಿವೆ. ಇಲ್ಲಿಯ ಚಿತ್ರಗಳು ಅಂಗರಚನಾಶಾಸ್ತ್ರಕ್ಕೆ (ಅನಾಟಮಿ) ಚಲನಶೀಲತೆಯನ್ನು ನೀಡುತ್ತವೆ. ಇತ್ತೀಚಿನ ದಖ್ಖನ್ ಮತ್ತು ಮೊಘಲ್ ಶೈಲಿಯನ್ನು ಇವುಗಳಲ್ಲಿ ಕಾಣುತ್ತೇವಾದರೂ ಹೆಚ್ಚು ಸ್ಫುಟವಾದ ರಚನೆಗಳಾಗಿವೆ.

ಒಟ್ಟಿನಲ್ಲಿ ಉದ್ಧರಣೆಗಳು ವಸ್ತು ನಿರ್ದೇಶನ ಮಾಡುವುದರಿಂದ ಬಣ್ಣಗಾರಿಕೆಯನ್ನು ಪೂರಕವಾಗಿ ಬಳಸಿದಂತಿದೆ ಮತ್ತು ಕಲೆ ಸಾಹಿತ್ಯ ಸಂಸ್ಕೃತಿಗಳ ಸಂಗಮವಾದ ಇವು ವೀರಶೈವ ಚಿತ್ರಕಲಾ ಪರಂಪರೆಗೆ ಬಹುದೊಡ್ಡ ಕೊಡುಗೆಗಳಾಗಿವೆ. ಹೀಗಾಗಿ, ಬಣ್ಣಗಾರಿಕೆಯಲ್ಲಿ ತತ್ವವನ್ನು ಬಣ್ಣಿಸುವ ತಂತ್ರಗಾರಿಕೆ ಕಲಾರಾಧನೆಗೆ ಮತ್ತೊಂದು ಕೌಶಲವಾಗಿದೆ. ಜ್ಯೋತಿಷ್ಯ, ಸೂತ್ರ, ಭಾಷ್ಯ, ಶಾಸ್ತ್ರ, ಗಣಿತಗಳ ಜೊತೆಗೆ ರೇಖೆ, ವರ್ಣ, ಚಿತ್ರಗಳ ಸಮಗ್ರತೆಯನ್ನು ಇವುಗಳಿಂದರಿಯಲು ಸಾಧ್ಯವಾಗುತ್ತದೆ. ಹೀಗೆ ಉದ್ಧರಣೆಗಳಂತಹ ಕಲಾಪೂರ್ಣವಾದ ಹಸ್ತಪ್ರತಿಗಳನ್ನು ಕಾವ್ಯ ಇಲ್ಲವೇ ಶಾಸ್ತ್ರ ದೃಷ್ಟಿಯಿಂದ ನೋಡುತ್ತಾ ಬಂದಿದ್ದೇವೆಯೇ ಹೊರತು ಅವುಗಳಲ್ಲಿಯ ಕಲಾಪ್ರಜ್ಞೆಯನ್ನು ಗುರುತಿಸದೆ ಅವುಗಳಿಗೆ ಮತ್ತು ರಚನಾಕಾರರಲ್ಲಿರುವ ಚಿತ್ರಕಲಾ ಮನಸ್ಸಿಗೆ ತುಂಬಾ ಅನ್ಯಾಯ ಮಾಡುತ್ತಾ ಬಂದಿದ್ದೇವೆ. ಕುಟಿಲ ಕುಹಕ ಯಂತ್ರ ತಂತ್ರಗಳಲ್ಲದ ಉದ್ದರಣೆಗಳು ಸಾಹಿತ್ಯ ಮತ್ತು ಚಿತ್ರಕಲೆಗಳೆರಡೂ ಕ್ಷೇತ್ರಕ್ಕೂ ಕೊಡುಗೆಯಾಗಿವೆ. ಈ ಕಾರಣವಾಗಿ ನಮ್ಮ ನಾಡಿನ ಆಳರಸರು ಹಾಕಿಸಿದ ಶಾಸನಗಳಿಗಿಂತ ಶಿವಶರಣರು ರೂಪಿಸಿದ ಈ ಶಿವಲಿಂಗಾಂಕಿತ ಶಾಸನಗಳೆಂಬ ಉದ್ಧರಣೆಗಳು ಹೆಚ್ಚು ಉಪೇಕ್ಷೆಗೆ ಒಳಗಾಗಿವೆ. ಇವುಗಳ ಸಂರಕ್ಷಣೆ, ಸಂಗ್ರಹ ಮತ್ತು ಅಧ್ಯಯನಗಳು ತೀವ್ರಗೊಳ್ಳಬೇಕಾಗಿರುವ ಅಗತ್ಯವಿದೆ.

ಅಡಿಟಿಪ್ಪಣಿಗಳು

೧. ಗೌರವ (ಪ್ರೊ. ಸಂ. ಶಿ. ಭೂಸನೂರಮಠ ಅಭಿನಂದನ ಗ್ರಂಥ) ಸಂ. ಡಾ. ಬಿ. ವ್ಹಿ. ಶಿರೂರ, ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ತೋಂಟದಾರ್ಯಮಠ, ಗದಗ ಪುಟ ೧೫೪-೧೬೭.

೨. ಕನ್ನಡ ಹಸ್ತಪ್ರತಿಗಳು: ಒಂದು ಅಧ್ಯಯನ. ಡಾ.ಬಿ.ಕೆ. ಹಿರೇಮಠ ಪುಟ-೧೯೭.

೩. ಕನ್ನಡ ವಿಶ್ವವಿದ್ಯಾಲಯ ಹಸ್ತಪ್ರತಿ ಸೂಚಿ ಸಂಪುಟ-೧ ಸಂಃ ಡಾ. ಎಫ್.ಟಿ. ಹಳ್ಳಿಕೇರಿ, ಡಾ. ಕೆ. ರವೀಂದ್ರನಾಥ ಪುಟ ೪೨-೪೩.

೪. ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಸೂಚಿ ಸಂಪುಟ ೮. ಸಂ. ಡಾ. ವೀರಣ್ಣ ರಾಜೂರ ಪುಟ -೨೯.

೫. ಕನ್ನಡ ಹಸ್ತಪ್ರತಿಗಳು: ಒಂದು ಅಧ್ಯಯನ: ಡಾ. ಬಿ. ಕೆ. ಹಿರೇಮಠ ಪುಟ ೧೮೪.

೬. ಕನ್ನಡ ಹಸ್ತಪ್ರತಿಗಳು: ಒಂದು ಅಧ್ಯಯನ ಡಾ. ಬಿ.ಕೆ. ಹಿರೇಮಠ ಪುಟ-೧೯೮.

■■

ವೀರಶೈವ ಆಧುನಿಕ ವಚನಕಾರರು

✍ ಪ್ರೊ. ಆರ್. ರಾಚಪ್ಪ

ಕನ್ನಡ ಸಾಹಿತ್ಯದಲ್ಲಿ ವಚನ ಸಾಹಿತ್ಯಕ್ಕೆ ವಿಶಿಷ್ಟ ಸ್ಥಾನ. ಜನರ ಮಧ್ಯದಿಂದ ಎದ್ದು ಬಂದ ಮಾನವತಾವಾದಿ ಶರಣರಿಂದ ಆರಂಭಗೊಂಡದ್ದು ಹನ್ನೊಂದನೇ ಶತಮಾನದಲ್ಲಿ. ಇದರ ತಲಪರಿಗೆ ನಮಗೆ ಕಾಣಸಿಗುವುದು ಜೇಡರ ದಾಸಿಮಯ್ಯನಲ್ಲಿ. ಆತನ ಸುಮಾರು ಒಂದುನೂರ ಎಪ್ಪತ್ತೈದು ವಚನಗಳು ಮುಂದಿನ ವಚನಗಂಗಾ ಪ್ರವಾಹಕ್ಕೆ ಗಂಗೋತ್ರಿಯಾದುವು. ಬಸವಣ್ಣ, ಅಲ್ಲಮಪ್ರಭು, ಚನ್ನಬಸವಣ್ಣ, ಸಿದ್ಧರಾಮ, ಅಂಬಿಗರ ಚೌಡಯ್ಯ, ಅಕ್ಕಮಹಾದೇವಿ, ಗೊಗ್ಗವ್ವೆ, ಆಯ್ದಕ್ಕಿ ಲಕ್ಕಮ್ಮ ಮೊದಲಾದ ಶರಣ ಶರಣೆಯರು ಈ ಜೀವನದಿಗೆ ಉಪನದಿಗಳಾದರು. ಈ ವಚನಸಾಹಿತ್ಯದ ಪ್ರಮುಖ ಲಕ್ಷಣವೆಂದರೆ ತನ್ನನ್ನು ಮುಟ್ಟಿದ (ಓದಿದ) ಎಲ್ಲರನ್ನೂ ವಚನ ರಚನೆಗೆ ಪ್ರೇರೇಪಿಸುವುದು. ಇದರ ಸ್ಪರ್ಶಶಿಲಾ ಗುಣದಿಂದ ನೂರಾರು ಶರಣರು, ಶರಣೆಯರು ವಚನ ರಚಿಸಿದರು. ಅವರಿಗೆ ಸಮಾಜದಲ್ಲಿನ ಆಚರಣೆಗಳು ಅಂಧಶ್ರದ್ಧೆಗಳು, ಕಂದಾಚಾರ, ಅರ್ಥವಿಲ್ಲದ ನಿಯಮಗಳು ವಸ್ತುವಾದುವು. ಸಮಾಜದಲ್ಲಿನ ಕುಂದುಕೊರತೆಗಳನ್ನು ನಗೆಮಾತು, ಚಾಟುಮಾತು, ಚುಚ್ಚುಮಾತುಗಳಿಂದ ನಿರೂಪಿಸಿ ಜನರಲ್ಲಿ ಜಾಗೃತಿಯುಂಟು ಮಾಡಿದರು. ಹೀಗಾಗಿ ವಚನ ಸಾಹಿತ್ಯ ಜಾಗತಿಕ ಸಾಹಿತ್ಯ ಚರಿತ್ರೆಯಲ್ಲೂ ತನ್ನದೇ ಆದ ವಿಶಿಷ್ಟ ಸ್ಥಾನ ಪಡೆದಿದೆ, ತನ್ನದೇ ಆದ ಛಾಪು ಮೂಡಿಸಿದೆ.

ಈ ವಚನ ಸಾಹಿತ್ಯದ ಪ್ರಭಾವ ಆಧುನಿಕ ಸಾಹಿತಿಗಳ ಮೇಲೆಯೂ ಆಗಿದೆ. ಹೇಳಿಕೆಗಳಂತಹ ನುಡಿಗಳು, ಸಿದ್ಧಾಂತ ಪ್ರತಿಪಾದಿಸುವ ಮಾತುಗಳು, ಆದರ್ಶ, ಮೌಲ್ಯಗಳನ್ನು ಬಿತ್ತರಿಸುವ ಈ ವಚನ ಸಾಹಿತ್ಯ ಮುಂದಿನ ತಲೆಮಾರಿಗೆ 'ಕಟ್ಟೆಟ್ಟ' ಬುತ್ತಿಯಾಯಿತು. ಈ ಬುತ್ತಿಯನ್ನು ಬಿಚ್ಚಿತಿಂದ ಅನೇಕ ಚಿಂತಕರು ವಚನ ರಚನೆಗೆ ಸಾಹಸ ಮಾಡಿದರು. ಜ್ಯೋತಿಯನ್ನು ಮುಟ್ಟಿದ ಬತ್ತಿ ಜ್ಯೋತಿಯಾಗುವಂತೆ ಈ ಸಾಹಿತ್ಯ ಓದಿದ ಜಾಣರು ವಚನ ರಚಿಸಿ ತಮ್ಮ ಸಾಮರ್ಥ್ಯ ಪ್ರದರ್ಶಿಸಿದರು. ಆಧುನಿಕ ವಚನಸಾಹಿತ್ಯಕ್ಕೆ ನಾಂದಿಯಾಡಿದವರೆಂದರೆ ಹರ್ಡೇಕರ್ ಮಂಜಪ್ಪನವರು. ಈ ನಾಂದಿಯಿಂದ ಮುಂದಿನ ವಿಚಾರ ಲಹರಿಗೆ ಲಗ್ಗೆ ಹತ್ತಿದವರು ಶ್ರೀ ಮಹದೇವ ಬಣಕಾರ, ಶ್ರೀ ಸಿದ್ಧಯ್ಯ ಪುರಾಣಿಕ, ಅನ್ನದಾನಯ್ಯ ಪುರಾಣಿಕ, 'ಮೂಜಗಂ' ಹೆಸರಿನಲ್ಲಿ ವಚನ ರಚಿಸಿದ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಸ್ವಾಮಿಗಳು, ಜ.ಚ.ನಿ., ಜಗದ್ಗುರು ಶಿವಕುಮಾರ ಸ್ವಾಮಿಗಳು, ಪರಮೇಶ್ವರಭಟ್ಟ, ಎಸ್.ವಿ. ರಂಗಣ್ಣ ಮುಂತಾದವರು. ಈ ಹಿರಿಯ ಮುತ್ಸದ್ದಿಗಳ ವಚನ ರಚನಾಕೌಶಲಗಳ ಪರಿಶೀಲನೆ ಈ ಲೇಖನದ ಉದ್ದೇಶ. ಇದಕ್ಕೂ ಮೊದಲು ವಚನ ಸಾಹಿತ್ಯದ ವೈಶಿಷ್ಟ್ಯಗಳನ್ನು ಹೀಗೆ ಗುರುತಿಸಬಹುದು.

೧. ವಚನಸಾಹಿತ್ಯ ತನ್ನ ಕಾಲದ ಸಮಾಜ ಹಾಗೂ ಬದುಕಿನೊಂದಿಗೆ ಹೊಂದಿದ್ದ ಅವಿನಾಭಾವ ಸಂಬಂಧ.

೨. ವಚನಸಾಹಿತ್ಯ ಒಂದು ರೀತಿಯ ಸಾಮೂಹಿಕ ಸೃಷ್ಟಿಯಾದರೂ ಅಲ್ಲಿ ಮಿಂಚಿದ ವೈಯಕ್ತಿಕ ಪ್ರತಿಭೆಗಳ ಸಾಧನೆ.

೩. ಜನರ ಆಡುಮಾತಿನೊಂದಿಗೆ ಹೊಂದಿದ್ದ ಸಂಬಂಧ.

೪. ಸಾಹಿತ್ಯಕ ಹಾಗೂ ಆಧ್ಯಾತ್ಮಿಕ ರಂಗದಲ್ಲೂ ನಡೆಸಿದ ಪ್ರಯೋಗ ಹಾಗೂ ಸಾಧಿಸಿದ ಸಿದ್ಧಿ.

೫. ಭಾಷೆ ಮತ್ತು ಸಾಹಿತ್ಯ ನಿರ್ಮಾಣದಲ್ಲಿ ಒಂದು ಪರಂಪರೆಯನ್ನೇ ಸ್ಥಾಪಿಸಿದ್ದು ಹಾಗೂ

೬. ಹನ್ನೆರಡನೇ ಶತಮಾನದಲ್ಲಿ ಅನ್ವೇಷಕ ತಂಡದ ಮುಂದೆ ಇದ್ದ ಸ್ವಚ್ಛ ಸಮಾಜದ ನಿರ್ಮಾಣಕ್ಕೆ ನೀಡಿದ ಕಾಣಿಕೆ.

೭. ಹೀಗೆ ತನ್ನದೇ ಆದ ವೈಶಿಷ್ಟ್ಯಗಳೊಂದಿಗೆ ವಿಜೃಂಭಿಸಿದ ಈ ವಚನ ಸಾಹಿತ್ಯ ಸ್ಪರ್ಶಶಿಲಾಗುಣದಿಂದ ಮೆರೆದದ್ದು ನಿಜಕ್ಕೂ ಕನ್ನಡ ಸಾಹಿತ್ಯದ ವಿಶಿಷ್ಟ ಸಾಧನೆ ಮತ್ತು ಜಾಗತಿಕ ಸಾಹಿತ್ಯ ಚರಿತ್ರೆಯಲ್ಲೂ ತನ್ನದೇ ಆದ ಸ್ಥಾನ ಗಳಿಸಿದ್ದು ಈ ವಚನಸಾಹಿತ್ಯದ ವೈಶಿಷ್ಟ್ಯ.

ಈ ವಿಶಿಷ್ಟತೆಗಳಿಂದ ವಚನ ಸಾಹಿತ್ಯವು ಉಪನಿಷತ್ತು, ತಿರುಕ್ಕುರುಳ್, ಕನ್‌ಫ್ಯೂಷಿಯಸ್, ಮಾರ್ಕಸ್, ಅರೀಲಿಯಸ್ ಅವರ ಚಿಂತನೆ, ಬೈಬಲ್ ಹಾಗೂ ಇಮಿಟೇಷನ್ ಆಫ್ ಕ್ರೈಸ್ಟ್ ಅಂತಹ ಜಾಗತಿಕ ಸಾಹಿತ್ಯಕ್ಕೆ ಸಂವಾದಿಯಾಗಿ ನಿಲ್ಲ ಬಲ್ಲ ಸಾಹಿತ್ಯವಾಗಿದೆ. ಇದಲ್ಲದೆ ಸಮಾಜದಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗಿ ದೇವರ ಪೂಜೆ ಮಾಡಲೂ ಅರ್ಹಳಲ್ಲದ ಹೆಣ್ಣಿಗೆ ಪುರುಷ ಸಮಾನ ಸ್ಥಾನ ತಂದುಕೊಟ್ಟದ್ದು, ಹಾಗೆಯೇ ಸ್ತ್ರೀಗೆ ಬಾಯಿ ಕೊಟ್ಟು ಅವಳೂ ಧರ್ಮಚಿಂತನೆಯಲ್ಲಿ ಭಾಗಿಯಾಗಿ ತನ್ನ ಅಭಿಪ್ರಾಯ ಅಭಿವ್ಯಕ್ತಿಸಲು ಈ ಸಾಹಿತ್ಯ ಪುಷ್ಟಿ ಕೊಟ್ಟಿತು.

ಹರ್ಡೇಕರ್ ಮಂಜಪ್ಪನವರು ಆಧುನಿಕ ವಚನ ಸಾಹಿತ್ಯಕ್ಕೆ ನಾಂದಿ ಹಾಡಿದವರು 'ಕರ್ನಾಟಕದ ಗಾಂಧಿ' ಎಂದು ಹೆಸರಾಗಿದ್ದ ಶ್ರೀ ಹರ್ಡೇಕರ್ ಮಂಜಪ್ಪನವರು. ೧೯೩೫ರಷ್ಟು ಹಿಂದೆಯೇ ಅಂದಿಗೆ ಹೈದರಾಬಾದ್ ಸಂಸ್ಥೆಯಲ್ಲಿದ್ದ, ಈಗ ಮಹಾರಾಷ್ಟ್ರದಲ್ಲಿ ಇರುವ ಉದಯಗಿರಿಯಲ್ಲಿನ ಜನ ಸಮುದಾಯದಲ್ಲಿ ಚೈತನ್ಯ ಉಕ್ಕುವಂತೆ ಮಾತನಾಡಿ ಅದ್ಭುತ ಆಂದೋಲನಕ್ಕೆ ಕಾರಣರಾಗಿದ್ದ ರಾಷ್ಟ್ರ ಧರ್ಮದ್ರಷ್ಟಾರ ಹರ್ಡೇಕರ್ ಮಂಜಪ್ಪಣ್ಣನವರು ತಮಗೆ ಎಳ್ಳನಿತು ಬಿಡುವಿಲ್ಲದಿದ್ದರೂ ತಮ್ಮ ಪರಿಚರ್ಯೆಯಲ್ಲಿದ್ದ ಶ್ರೀ ಚನ್ನವೀರಪ್ಪವಾಲಿಯವರ ಕೋರಿಕೆ ಮೇರೆಗೆ ಮೂವತ್ತೆರಡು ವಚನಗಳನ್ನು ಮೌಖಿಕವಾಗಿ ಹೇಳಿ ಬರೆಸಿದ್ದೂ; ಈ ವಚನಗಳನ್ನು ನಾಗರಿ ಲಿಪಿಯಲ್ಲಿ ಚೆನ್ನವೀರಪ್ಪ ವಾಲಿಯವರು ಬರೆದಿಟ್ಟುಕೊಂಡು ಸುಮಾರು ಐವತ್ತು ವರ್ಷ ಅತುಲೈಶ್ವರ್ಯದಂತೆ ಕಾಯ್ದಿರಿಸಿ ಕೊಂಡದ್ದೂ ಒಂದು ಪವಾಡವೇ ಸರಿ. ಕಾರ್ಯನಿಮಿತ್ತ ಹೋಗಿದ್ದ ಡಾ. ಮಾಣಿಕರಾವ್ ಧನಶ್ರೀ ಹಾಗೂ ಶ್ರೀ ಎಚ್. ಕಾಶೀನಾಥ ರೆಡ್ಡಿಯವರಿಗೆ ಈ ಅಮೂಲ್ಯ ವಚನಗಳನ್ನು ದಾನ ಮಾಡಿದ್ದೂ ಪವಾಡವೇ. ಡಾ. ಸಿದ್ಧಯ್ಯಪುರಾಣಿಕರು: "ನನಗೆ ನೆನಪಿರುವಂತೆ ಹರ್ಡೇಕರ ಮಂಜಪ್ಪಣ್ಣನವರು "ಜನ ಸೇವಕನ ವಚನಗಳು" ಎಂಬ ವಚನಗಳನ್ನು ಬರೆದುದುಂಟು. ಅವು ಒಂದು ಪುಸ್ತಿಕೆಯ ರೂಪದಲ್ಲಿ ಪ್ರಕಟವಾಗಿದ್ದಂತೆ ಕೂಡ ನೆನಪಿದೆ ನನಗೆ. ಈ ವಚನಗಳ ಭಾಷೆ ಹರ್ಡೇಕರ್ ಅವರ ಪರಿಚಿತ ಭಾಷೆ. ಇವುಗಳ ವಿಚಾರಗಳು ಹರ್ಡೇಕರ್ ಮಂಜಣ್ಣನವರಿಗೆ ಪ್ರಿಯವಾಗಿದ್ದ ವಿಚಾರಗಳೇ" ಎಂಬ ಮಾತುಗಳಿಂದ ಈ ಮೂವತ್ತೆರಡು ವಚನಗಳು ಹರ್ಡೇಕರ್ ಅವರ ವಚನಗಳೇ ಎಂದು ಸ್ವೀಕರಿಸಬಹುದು.

ರಾಷ್ಟ್ರಧರ್ಮ ದ್ರಷ್ಟಾರರೆಂಬ ಬಿರುದನ್ನು ಪಡೆದ ಹರ್ಡೇಕರ್ ಮಂಜಪ್ಪಣ್ಣನವರು ಬನವಾಸಿಯಲ್ಲಿ ಕ್ರಿ.ಶ. ೧೮೮೬ರ ಫೆಬ್ರವರಿ ೧೮ ರಂದು ಜನಿಸಿದರು. ಕನ್ನಡದ ಆದಿಕವಿ ಪಂಪನ ಅಭಿಮಾನದ ನಾಡು, ವೈರಾಗ್ಯನಿಧಿ ಪ್ರಭುದೇವರ ಭಕ್ತಿಯ ಬೀಡಾದ ಬನವಾಸಿಯಲ್ಲಿಯೇ, ರಾಷ್ಟ್ರಪ್ರೇಮಿ, ಆಜನ್ಮಬ್ರಹ್ಮಚಾರಿಗಳಾದ ಹರ್ಡೇಕರ್ ಮಂಜಪ್ಪನವರು ಜನಿಸಿದುದು ಕಾಕತಾಳೀಯವೇ ಸರಿ. ಕ್ರಿ.ಶ. ೧೯೦೩ ರಲ್ಲಿ ಶಿರ್ಸಿಯಲ್ಲಿ ಮುಲ್ಕಿ ಪರೀಕ್ಷೆ ಪಾಸು ಮಾಡಿ ಮುಂದೆ ಅದೇ ಶಾಲೆಯಲ್ಲಿ ಶಿಕ್ಷಕರಾಗಿ ಶಿಸ್ತಿನ ಶಿಕ್ಷಕರೆಂಬ ಅಭಿಮಾನಕ್ಕೆ ಪಾತ್ರರಾದರು. ೧೯೦೮ ರಲ್ಲಿ ವಂಗ ವಿಭಜನೆಯ ಝಳ ಇವರಿಗೂ ತಾಕಿ ಶಿಕ್ಷಕ ವೃತ್ತಿಗೆ ಶರಣು ಹೊಡೆದು ೧೯೦೯ರಲ್ಲಿ "ಧನುರ್ಧಾರಿ" ಎಂಬ ವಾರಪತ್ರಿಕೆಯನ್ನು ದಾವಣಗೆರೆಯಲ್ಲಿ ಪ್ರಾರಂಭಿಸಿದರು. ಬ್ರಿಟಿಷ್ ಸರ್ಕಾರ ಪತ್ರಿಕೆ ಮೇಲೆ ನಿರ್ಬಂಧ ಹೇರಿದಾಗ ಅವರ ಒಲವು ಧಾರ್ಮಿಕ ರಂಗದ ಕಡೆ ವಾಲಿತು. ಬಸವಣ್ಣನವರ ವಚನಗಳನ್ನು ಆಳವಾಗಿ ಅಧ್ಯಯನ ಮಾಡಿ ಪ್ರಭಾವಿತರಾಗಿ ಸಮತಾವಾದಿ, ಜಾತ್ಯಾತೀತ, ಕನ್ನಡದ ಪ್ರಥಮ ವಿಚಾರವಾದಿಯಾದ ಹರ್ಡೇಕರ್ ಮಂಜಪ್ಪನವರು ತಮಗೆ ಹೊಳೆದಂತೆ ವಚನಗಳನ್ನು ಡಾ. ಮಾಣಿಕರಾವ್ ಧನಶ್ರೀಯವರಿಂದ ಬರೆಸಿದರು. ಇದೂ ಕನ್ನಡದ ಪುಣ್ಯ. ಇಪ್ಪತ್ತನೇ ಶತಮಾನದಲ್ಲಿ ವಚನ ರಚನೆಯ ಹರಿಕಾರರೆನಿಸಿದರು ಮಂಜಪ್ಪನವರು. ಇದಲ್ಲದೆ ಅನೇಕ ವಿಚಾರ ಸಾಹಿತ್ಯ ಗ್ರಂಥ ರಚನೆಗೂ ನಾಂದಿ ಹಾಡಿದರು. ಮಕ್ಕಳಿಗೆ ನೆರವಾಗುವಂತೆ ಸಾಹಿತ್ಯ ರಚಿಸಿದುದಲ್ಲದೆ ಪ್ರೌಢಸಾಹಿತ್ಯ ರಚನೆಯನ್ನೂ ನಡೆಸಿದರು. ಈ ವಚನಗಳನ್ನು ರಕ್ಷಿಸಿ ಪ್ರಕಟಿಸಿದ ಕೀರ್ತಿ ಮಾಣಿಕರಾವ್ ಧನಶ್ರೀ ಮತ್ತು ಎಚ್. ಕಾಶೀನಾಥರೆಡ್ಡಿಯವರದ್ದು. "ನಾವು ಮರಕುಂದಿಯ "ಬಸವಣ್ಣಪ್ಪನವರ" ಭಜನೆಗಳನ್ನು ಸಂಗ್ರಹಿಸಿ ಪ್ರಕಟಿಸುವ

ಉದ್ದೇಶದಿಂದ ಬೀದರ್ ತಾಲ್ಲೂಕಿನ ಭಂಗೂರಿಗೆ ಹೋದಾಗ ಅಲ್ಲಿಯ ಶ್ರೀ ಚೆನ್ನವೀರಪ್ಪವಾಲಿಯವರ ಮನೆಯಲ್ಲಿ ಶ್ರೀ ಹರ್ಡೇಕರ್ ಮಂಜಪ್ಪಣ್ಣನವರ ವಚನಗಳು ನಮಗೆ ಲಭಿಸಿದುವು. ಸಾಹಿತ್ಯಾಭಿಮಾನಿಗಳೂ, ಸುಸಂಸ್ಕೃತರೂ ಆದ ಶ್ರೀ ಚೆನ್ನವೀರಪ್ಪನವರು ಆ ವಚನಗಳನ್ನು ಅತ್ಯಂತ ಜೋಪಾನವಾಗಿ ರಕ್ಷಿಸಿಕೊಂಡು ಬಂದಿದ್ದರು. ಸದರಿ ವಚನಗಳನ್ನು ಮಹಾರಾಷ್ಟ್ರದ ಉದಗೀರದಲ್ಲಿ ಸ್ವತಃ ಮಂಜಪ್ಪಣ್ಣನವರ ಮುಖದಿಂದಲೇ ಕೇಳಿ ಬರೆದುಕೊಂಡುದಾಗಿ ಅವರು ನಮಗೆ ತುಂಬಾ ಅಭಿಮಾನದಿಂದ ವಿವರಿಸಿದರು" ಎಂಬ ಅವರ ಮಾತುಗಳಿಂದ ಈ ಮೂವತ್ತೆರಡು ವಚನಗಳು ಶ್ರೀ ಹರ್ಡೇಕರ್ ಮಂಜಪ್ಪನವರದೆಂದು ತಿಳಿಯುತ್ತದೆ. ಹೀಗಾಗಿ ಇಪ್ಪತ್ತನೇ ಶತಮಾನದಲ್ಲಿ ವಚನ ರಚನೆಗೆ ನಾಂದಿ ಹಾಡಿದ ಕೀರ್ತಿ ಮಂಜಪ್ಪನವರದ್ದು.

ಮಂಜಪ್ಪನವರ ವಚನಗಳ ಅಂಕಿತ "ಪ್ರಭುದೇವ" ಎಂಬುದು. ಈ ವಚನಗಳಲ್ಲಿ ಅವರ ಸ್ವಂತ ವಿಚಾರ ಲಹರಿ, ಸಾಮಾಜಿಕ ಪ್ರೇಮ, ಮಾನವೀಯ ಅನುಕಂಪೆಯನ್ನು ಕಾಣಬಹುದು. ಗುರುವಿನ ಬಗೆಗೆ ಅಪಾರ ಗೌರವ ಹೊಂದಿದ್ದ ಮಂಜಪ್ಪನವರು ಗುರುವನ್ನು ಕುರಿತು ನಾಲ್ಕು ವಚನಗಳನ್ನು ರಚಿಸಿ ಗುರುವಿನ ಮಹತ್ವವನ್ನು ಸಾರಿದ್ದಾರೆ. ಗುರುವನ್ನು ಕುರಿತು 'ಮಾಯಾತೀತ', ಲೋಕಹಿತನಾಥ, ನಿತ್ಯಸುಖದಾತ, ಜ್ಞಾನನಿಧಿ, ತೇಜೋಮೂರ್ತಿಯೆಂದು ಹಾಡಿ ಹೊಗಳಿ ಜನಸೇವಕಂಗೆ ಕೃಪೆಯಾಗು ಎಂದು ಬೇಡಿದ್ದಾರೆ. ಮುಂದುವರಿದು "ಗಂಟೆ ನುಡಿಯುವುದೆ ಅಯ್ಯ ತಾನೆ ನುಡಿಸುವರಿಲ್ಲದೆ" ಎಂದು ಹೇಳುವಲ್ಲಿ ಅವರ ಗುರುನಿಷ್ಠೆ ವ್ಯಕ್ತವಾಗುತ್ತದೆ. ಅಲ್ಲದೆ "ನೀ ನುಡಿಸಿದಂತೆ ನುಡಿವೆನಯ್ಯ, ನೀ ನಡೆಸಿದಂತೆ ನಡೆಯುವೆನಯ್ಯ" ಎಂಬಲ್ಲಿ ಗುರುಕೃಪೆಯಿಂದ ವ್ಯಕ್ತಿಯ ಬಾಳು ಎಂಬುದನ್ನು ನಿರೂಪಿಸುತ್ತಾರೆ. ಲೌಕಿಕ ಜೀವನದ ಮಾಯಾಪಾಶದಲ್ಲಿ ಬಂಧಿತನಾಗಿ ಬಾಳುವ ಮನುಜ ಆಧ್ಯಾತ್ಮ(ದೈವ)ವನ್ನು ಮರೆತುದನ್ನು "ಪಂಜರದೊಳು ಬಂದು ಗುಡುಗುಟ್ಟುವ ಅರಗಿಳಿಯೇ, ನಿನ್ನ ನುಡಿ ನೀನು ಮರೆತೆಯಲ್ಲಾ" ಎಂದು ಹೇಳಿ ಪ್ರಭುದೇವನತ್ತ ತನ್ನನ್ನು ಬರಮಾಡಿಕೊಳ್ಳಲಿ ಎಂದು ಬೇಡುವರು. ಅಂದರೆ ಪರಮಾತ್ಮನಿಂದ ಬೇರಾದ ಜೀವಾತ್ಮ ಮತ್ತೆ ಪರಮಾತ್ಮನಲ್ಲಿ ಐಕ್ಯವಾಗಬೇಕೆಂಬ ವೀರಶೈವ ಧರ್ಮದ "ಲಿಂಗಾಂಗ ಸಾಮರಸ್ಯ"ವನ್ನು ಸೂಚಿಸುತ್ತಾರೆ. ಕಾಮಕ್ರೋಧಾದಿಗಳ ಬಲೆಯಲ್ಲಿ ಸಿಕ್ಕಿ ತೊಳಲುವ ಮನುಜನ ಸ್ಥಿತಿಯನ್ನು-

ಮನವೆ ತನುವಿಗೆ ಮೋಹಿಸಿದಡೆ
ಘನ ಬಾಧೆಗೆ ಈಡು ಮಾಡುವೆ
ಮನವೆ ಮೂತ್ರದ ಕುಣಿಗೆ ಮೋಹಿಸಿದಡೆ
ಗಾತ್ರದ ನರಕದಲಿಕ್ಕುವೆ.

ಎಂದು ಹೇಳಿ ಅತ್ತಲಿತ್ತ ಸುಳಿದು ಹಾಳಾಗುವ ಮನವನ್ನು ಹಿಡಿತದಲ್ಲಿಟ್ಟುಕೊಂಡು ಪ್ರಭುವಾದ ಪರಮಾತ್ಮನು ತನಗೆ ನಡೆಗಲಿಸಲೆಂದು ಬೇಡಿದ್ದಾರೆ.

ಇರುವ ಒಬ್ಬ ದೇವನನ್ನು ಮನುಜರು ತಮತಮಗೆ ತಿಳಿದಂತೆ ರೂಪಿಸಿ, ತಮ್ಮ ತಮ್ಮ ಧರ್ಮವನ್ನು ಪ್ರತಿಪಾದಿಸುವುದನ್ನು ಕಂಡು, ಅಂದರೆ ಜಾತಿವಿಂಗಡಣೆ ಮಾಡುವುದನ್ನು ಕಂಡು "ಜನ್ಮಾಂಧರು ವರ್ಣನಿರ್ಣಯಕ್ಕೆ ಕಲಹ ಮಾಡಿದಂತಾಯಿತಲ್ಲ" ಎಂದು ವಿಡಂಬಿಸುವರು. ತಿಳಿಯದೆ ಆಡಿದ ಅಸತ್ಯ ಅಸತ್ಯವೇ ಹೊರತು ಅದು ಸತ್ಯವಾಗದು, ಅದರ ಪರಿಣಾಮ ತಪ್ಪದು ಎಂಬುದನ್ನು-

ಅರಿಯದೆ ಉರಿಯ ಮುಟ್ಟಿದೊಡೆ
ದಹಿಸದೆ ಮಾಬುವದೆ
ನಗೆಗೆ ವಿಷವ ಕೊಂಡರೆ
ಕೊಲ್ಲದೆ ಬಿಡುವದೆ.

ಎಂದು ಹೇಳಿ ಮಿಥ್ಯೆ ದುಃಖದ ಹೆಮ್ಮಡು ಎಂದು ತಿಳಿಸುವರು. ವ್ರತ ನಿಯಮಗಳನ್ನು ಹಿಡಿದು ಅದನ್ನು ಪಾಲಿಸದೆ ಬಿಡುವ ಕ್ರಿಯೆಯನ್ನು 'ಜಲದ ಮೇಲಿನ ಲಿಪಿ' ಎಂದು ಹೇಳುವುದಲ್ಲದೆ, ವ್ರತಹೀನರ ಸೇರಿದರೆ ನರಕ ತಪ್ಪದು ಎಂದು ಸೂಚಿಸುತ್ತಾರೆ. ಮುಂದುವರೆದು ವ್ರತನೇಮಾದಿಗಳನ್ನು ಛಲದಿಂದ ಪಾಲಿಸುವುದು "ಶಿಲೆಯ ಮೇಲಣ ಲಿಪಿಯಂತೆ" ಎಂದು ಕರೆಯುವರು.

ಬಸವಣ್ಣನವರ "ಛಲಬೇಕು ಮನುಜಂಗೆ ಪರಧನವನೊಲ್ಲೆನೆಂಬ" ಎಂಬ ವಚನದಿಂದ ಪ್ರಭಾವಿತರಾದ ಮಂಜಪ್ಪನವರು-

ಛಲ ಬೇಕೊ ಮನುಜಂಗೆ
ಹಿಡಿದ ವ್ರತದ ಬಿಡೆನೆಂಬ
ಛಲ ಬೇಕೊ ಮನುಜಂಗೆ
ಅಸುವಳಿಯೆ ಪುಸಿಯೆನೆಂಬ
ಶಿರ ಬೀಳೆ ಅಧರ್ಮಕ್ಕೆ ತಲೆ ಬಾಗೆನೆಂಬ"

ತನಗೆ ಇಂತಹ ಛಲವನ್ನು ಕಲಿಸಿ ನಡೆಸಲೆಂದು ಪ್ರಭುವಿನಲ್ಲಿ ಪ್ರಾರ್ಥಿಸಿದ್ದಾರೆ. ಧರ್ಮ ಧರಗೆ ಆಧಾರ, ಧರ್ಮವನ್ನು ರಕ್ಷಿಸುವವರನ್ನು ಧರ್ಮ ರಕ್ಷಿಸುವುದು ಎಂದು ಹೇಳಿ ಜನಸೇವಕನಿಗೆ ಪ್ರಭುವು ಧರ್ಮದೀವಟಿಗನಾಗಬೇಕೆಂದು ಬೇಡುವರು. ಧರ್ಮ ಅಲ್ಲಿ ಇಲ್ಲಿ ಹುಡುಕಿದರೆ ಇಲ್ಲ. ಅದು ಮಹಾತ್ಮರ ನಡೆಯಲ್ಲಿರುವುದು ಎಂದು ಹೇಳುವರು. ಈ ಧರ್ಮವೃಕ್ಷ ಪ್ರಭುಕೃಪೆಯಿಂದ ಬೆಳೆಯ ಬೇಕು. ಪ್ರಭುವು-

ಪವಿತ್ರ ಹೃದಯಭೂಮಿಯಲ್ಲಿ
ಪರಹಿತಾಂಕುರವನ್ನೂರಿ
ಕರುಣಾಜಲವನ್ನೆರದು
ಸದಾಚಾರ ಕಟ್ಟೆಯ ಕಟ್ಟಿ
ಧರ್ಮ ವೃಕ್ಷವನ್ನು ಬೆಳೆಸಿದ್ದಾನೆ

ಎಂದು ತಿಳಿಸುವರು. ಆದುದರಿಂದ ಈ ಧರ್ಮ, ಮನದೊಳಗೆ ಬೆಳೆಯಬೇಕು ಬಾಹ್ಯಡಂಬರದಲ್ಲಲ್ಲ ಎಂದು ಹೇಳುವರು. ಧರ್ಮದ ಆಚರಣೆಗಳು ಭಿನ್ನವಾಗಿದ್ದರೂ ದಯೆ ಭಿನ್ನವಾಗಿರುವುದಿಲ್ಲ ಎಂದು ಹೇಳುವಲ್ಲಿ ದಯೆಯಿಲ್ಲದಾ ಧರ್ಮವದೇವುದಯ್ಯ, ದಯೆಯೇ ಧರ್ಮದ ಮೂಲವಯ್ಯ ಎಂಬ ಬಸವಣ್ಣನವರ ವಚನದ ಪ್ರಭಾವವಿರುವುದನ್ನು ಕಾಣಬಹುದು. ಅಲ್ಲದೆ 'ಧರ್ಮವಿಲ್ಲದೆ ಮನುಜರುಂಟೆ' ಎಂದು ಹೇಳಿ ತನ್ನ ಧರ್ಮ ತನಗೆ ಉನ್ನತಗೊಳಿಸುವುದೆಂದು ಹೇಳುವರು. ವೇದ ಆಗಮಗಳು ಸತ್ಯಶರಣರ ಸ್ವಾನುಭಾವದ ಉಕ್ತಿಗಳು. ದೇವನಾದವನು ಅಂದಂದಿಗೆ ಬಂದು ಬಂದು ಬಂಧನವ ಬಿಡಿಸುವನು ಎಂದು ಹೇಳಿ ಆತ ನುಡಿವುದೆಲ್ಲಾ ವೇದ, ನಡೆವುದೆಲ್ಲಾ ಶಾಸ್ತ್ರ ಎಂದು ಹೇಳುವರು. ಪರರ ಸುಖಕ್ಕಾಗಿ ತನ್ನನೀಡುಮಾಡುವುದು ಮಾನವ ಧರ್ಮ ಎಂದು ಹೇಳಿ, ಪರಸುಖಕ್ಕೆ ತನ್ನನ್ನು ಆಹುತಿಯಾಗುವಂತೆ ಮಾಡು ಎಂದು ಪ್ರಾರ್ಥಿಸುವರು. ದೇವರು ಎಲ್ಲಿರುವನು ಎಂಬುದಕ್ಕೆ 'ಜಂಗಮದಲ್ಲಿ ಬೆಳಗುವುದಯ್ಯಾ' 'ಪ್ರಾಣಿಗಳ ಹೃದಯದಲ್ಲಿ ಕುಳಿತು ಕರೆವನಯ್ಯಾ ದೇವನು' ಎಂದು ಹೇಳಿ ದೇಹವೇ ದೇವಾಲಯ ಎಂದು ತಿಳಿಸುವರು. ತಮ್ಮ ಮೂವತ್ತೆರಡು ವಚನಗಳಲ್ಲಿ ಅವರು ಮನುಷ್ಯ ಮನುಷ್ಯನಾಗಿ ಹೇಗೆ ಬದುಕಬೇಕೆಂಬುದನ್ನು ಹೇಳಿದ್ದಾರೆ.

ಸಿದ್ಧಯ್ಯ ಪುರಾಣಿಕರು

ಕನ್ನಡ ಸಾಹಿತ್ಯದಲ್ಲಿ ಕವಿಯಾಗಿ, ಕತೆಗಾರರಾಗಿ, ನಾಟಕಕಾರರಾಗಿ, ವಚನಕಾರರಾಗಿ ಹೆಸರಾದವರು ಸಿದ್ಧಯ್ಯ ಪುರಾಣಿಕರು. ಆಡಳಿತಗಾರರಾಗಿ ತಮಗೆ ಬಿಡುವಾದಾಗಲೆಲ್ಲಾ ಚಿಂತನೆ ನಡೆಸಿ ಸಾಹಿತ್ಯ ಸೃಷ್ಟಿಸಿದವರು ಸಿದ್ಧಯ್ಯ ಪುರಾಣಿಕರು. ತಮ್ಮಲ್ಲಿ ವಚನರಚನೆಯ ಗುಂಗು ಆರಂಭವಾದುದನ್ನು ಹೀಗೆ ಹೇಳುತ್ತಾರೆ. "ನನಗೆ ವಚನಗಳನ್ನು ರಚಿಸಬೇಕೆಂಬ ಚಪಲವೇ ಇರಲಿಲ್ಲ. ಆ ಬಾನೆತ್ತರದ ವ್ಯಕ್ತಿತ್ವದ ಸಾಗರೋಪಮ ಅನುಭಾವಶ್ರೀಯ ಅಂದಿನ ವಚನಕಾರರೆಲ್ಲಿ, ಈ "ಮರವೆಯ ಮರುಳ"ನೆಲ್ಲಿ? ಹೀಗಿದ್ದೂ ಹವ್ಯಾಸವಿದು ಹಠಾತ್ತಾಗಿ ಹಾರಿಬಂದು ನನ್ನ ಹೇಗಲೇರಿ ಕುಳಿತಿತು. ಕಲ್ಬುರ್ಗಿ ವಿಭಾಗದ ಶಿಕ್ಷಕ ಮಿತ್ರರ ಮುಖಪತ್ರಿಕೆಯಾದ 'ಜೀವನ ವಿಕಾಸ'ಕ್ಕೆ ಏನಾದರೂ ಬರೆದು ಕಳಿಸಬೇಕೆಂಬ ಹಠಕ್ಕೆ ಕಟ್ಟು ಬಿದ್ದು ಆ ಯೋಚನೆಯಲ್ಲಿದ್ದಾಗ ಎಡೆಯೂರಿನ ಶಿವಯೋಗಿಶ್ವರ ಸಿದ್ಧಲಿಂಗೇಶ್ವರರ ದೇವಾಲಯದಲ್ಲಿ ಇದ್ದಕ್ಕಿದ್ದಂತೆ ಎರಡು ವಚನಗಳು ಸ್ಫುರಿಸಿದವು. ಈ ಸೋಂಪಿ ನಿರಾತಂಕವಾಗಿ ನಡೆದು "ವಚನೋದ್ಯಾನ"ವಾಗಿ ಬೆಳೆಯಿತೆಂದು ಹೇಳುತ್ತಾರೆ. "ಸ್ವತಂತ್ರಧೀರ ಸಿದ್ಧೇಶ್ವರಾ"

ಇವರ ವಚನಗಳ ಅಂಕಿತ. ಈ ಅಂಕಿತ ಮೂಡಿಬಂದ ಬಗೆಗೆ ವಚನಕಾರರು ಕೊಡುವ ವಿವರಣೆ ಹೀಗಿದೆ. "ಕೂಡಲ ಸಂಗನ ಶರಣರು ಸ್ವತಂತ್ರರು, ಧೀರರು" ಎಂದು ಸಾರಿದ್ದಾರೆ ಬಸವಣ್ಣನವರು. 'ಸ್ವತಂತ್ರ' 'ಧೀರ'ಈ ಎರಡೂ ಪದಗಳು ಪರಮ ಪ್ರಿಯವಾದುವುಗಳು ನನಗೆ. ಪರಮಾತ್ಮನನ್ನೇ ಸರ್ವತಂತ್ರ ಸ್ವತಂತ್ರನೆಂದು ಕರೆಯಲಾಗಿದೆ. ಆಹ್ಲಾದಮಯಿತ್ವ, ಅನನ್ಯ ಪರತಂತ್ರತೆಗಳು ಅಭಿವ್ಯಕ್ತಿಯ ಪ್ರಮುಖ ಲಕ್ಷಣಗಳೆಂದು ಪರಿಗಣಿತವಾಗಿವೆ. ಧೀರ ಶಬ್ದದ ಬಗ್ಗೆ ಉಪನಿಷತ್ತುಗಳಲ್ಲಿ ಸಾಕಷ್ಟು ಮಾಹಿತಿಗಳಿವೆ. "ಧೀಯಂಈರಯತೀತಿ" ಮತ್ತು 'ಧಿಯಂರಾತೀತಿ' ಎಂದು ಇದರ ವ್ಯುತ್ಪತ್ತಿಯನ್ನು ಹೇಳಲಾಗಿದೆ. ಆದುದರಿಂದ ಧೀರರೂ ಸ್ವತಂತ್ರರೂ ಆಗಿರದವರು ಶರಣರಾಗಲಾರರೆಂಬ ವಿಚಾರ ಬಸವಣ್ಣನವರಿಗಿದ್ದಂತೆ ಕಾಣುತ್ತದೆ. ಆದುದರಿಂದ ಈ ಎರಡೂ ಪದಗಳಿಗೆ ಎಡೆಯೂರಿನ ಯತೀಶ್ವರರ ಹೆಸರು ಸೇರಿಸಿ ಅಂಕಿತವನ್ನು ರೂಪಿಸಿಕೊಳ್ಳಲಾಗಿದೆ ಎಂದು ಹೇಳಿ 'ಸ್ವತಂತ್ರ ಧೀರ ಸಿದ್ಧೇಶ್ವರ' ಎಂದು ತಮ್ಮ ವಚನಗಳ ಅಂಕಿತವನ್ನಾಗಿಸಿಕೊಂಡಿದ್ದಾರೆ. ಡಾ. ಸಿದ್ಧಯ್ಯ ಪುರಾಣಿಕರ 'ವಚನೋದ್ಯಾನ' ದಲ್ಲಿ ೫೨೫ ವಚನಗಳಿವೆ. ಇಲ್ಲಿನ ವಚನಗಳು ಸಿದ್ಧೇಶ್ವರನ ಕೃಪೆಯಿಂದ ಮೂಡಿದುವು ಎಂದು- 'ನನಗೆ ತೋರಿದಂತೆ ಬರೆದರೆ ಅದು ರಚನೆ, ನೀನು ತೋರಿಸಿದಂತೆ ಬರೆದರೆ ಅದು ವಚನವಯ್ಯಾ' ಎಂಬ ಮಾತುಗಳಲ್ಲಿ ಸ್ಪಷ್ಟಪಡಿಸುತ್ತಾರೆ. ಅವರ ಒಂದು ವಚನ ಹೀಗೆ-

ವಿದ್ಯೆ ಬಂತು, ವಿನಯ ಹೋಯ್ತು;
ಬುದ್ಧಿ ಬಂತು, ಶ್ರದ್ಧೆ ಹೋಯ್ತು;
ಶ್ರದ್ಧೆ ಬಂತು, ವಿವೇಚನೆ ಹೋಯ್ತು;
ಸಮೃದ್ಧಿ ಬಂತು, ಸಂಸ್ಕೃತಿ ಹೋಯ್ತು;
ವಿಜ್ಞಾನ ಬಂತು, ಸಮಾಧಾನ ಹೋಯ್ತು;
ಶರೀರಸ್ವಾಸ್ಥ್ಯ ಬಂತು, ಚಿತ್ತಸ್ವಾಸ್ಥ್ಯ ಹೋಯ್ತು;
ದೀರ್ಘಾಯುಷ್ಯ ಬಂತು, ಜೀವನ ಸ್ವಾರಸ್ಯ ಹೋಯ್ತು;
ಬೋಧನೆ ಬಂತು, ಸಾಧನೆ ಹೋಯ್ತು;
ಮಾತು ಬಂತು, ಕೃತಿ ಹೋಯ್ತು;
ಜಾತಿ ಬಂತು, ಪ್ರೀತಿ ಹೋಯ್ತು;
ಸ್ವಾತಂತ್ರ್ಯ ಬಂತು, ಸೌಜನ್ಯ ಹೋಯ್ತು;
ಸಿದ್ದಯ್ಯ ಪುರಾಣಿಕ ಬಂದ
ಸ್ವತಂತ್ರ ಧೀರ ಸಿದ್ಧೇಶ್ವರ ಹೋದ.

ಬೇಕಾದದ್ದು ಹೋಗಿ ಬೇಡವಾದದ್ದು ಬಂದಂತೆ ತಿಳಿಸುವಲ್ಲಿ ಜೀವನವೆಲ್ಲಾ ಬೇಡವಾದದ್ದನ್ನು ಗಳಿಸುವುದೇ ಆಗಿದೆ ಎಂದು ತಿಳಿಸುವರು. ಅದರಲ್ಲಿಯೂ "ಸಿದ್ಧಯ್ಯ ಪುರಾಣಿಕ ಬಂದ, ಸ್ವತಂತ್ರ ಧೀರ ಸಿದ್ಧೇಶ್ವರ ಹೋದ" ಎಂಬ ಕೊನೆಯ ಮಾತಿನಲ್ಲಿ ದೇವತ್ವ ಹೋಗಿ ಮನುಜತ್ವ ನೆಲೆಯೂರಿರುವುದನ್ನು ಸೂಚಿಸುತ್ತಾರೆ. ಇದು ಅವರ ಅನುಭವವೇ ಅನುಭಾವಗೀತೆಯಾಗಿರುವುದಕ್ಕೆ ಸಾಕ್ಷಿ. ಪುರಾಣಿಕರು ಸ್ವತಂತ್ರ ಧೀರ ಸಿದ್ಧೇಶ್ವರನ ಎದುರು ತಮ್ಮ ಅಂತರಂಗದ ಪದರುಗಳು ಬಿಚ್ಚುವ ಹಾಗೆಯೇ ಲೋಕದ, ಸಮಾಜದ ತೊಂದರೆ ತೊಡಕುಗಳನ್ನು ತೋಡಿಕೊಳ್ಳುತ್ತಾರೆ. ಈ ವಚನಗಳು ಆತ್ಮಗೀತೆಗಳೂ ಹೌದು; ಸಾಮಾಜಿಕ ವಿವೇಚನೆ, ಲೋಕವಿಮರ್ಶೆಗಳೂ ಹೌದು. ಆತ್ಮನ ಕಾಳರಾತ್ರಿಯನ್ನು ಕಳೆಯಲು ತೋರುವ ತವಕವನ್ನೇ ಅವರು ಸುತ್ತಲ ಪರಿಸರವನ್ನು ಮುತ್ತಿರುವ ಕರಾಳ ಕತ್ತಲೆಯನ್ನು ತೊಳೆಯಲೂ ತೋರಿಸುತ್ತಾರೆ. ಒಂದು ದೃಷ್ಟಿಯಲ್ಲಿ ಪುರಾಣಿಕರ ವಚನಗಳು ಶುದ್ಧ ಜೀವನಸಂಹಿತೆಗಳು. ಮೌಲ್ಯಗಳಿಗೆ ಬೆಲೆ ಕೊಡುತ್ತಾರೆ; ಮೌಢ್ಯವನ್ನು ಪುರಸ್ಕರಿಸುವುದಿಲ್ಲ. ಹೊಸಕಾಲದ ಹರಿಕಾರರಾಗಿದ್ದಾರೆ. ಅನ್ಯಾಯ, ಅಸಮತೆಗಳು ಅವರನ್ನು ಕೆರಳಿಸುತ್ತವೆ, ಕೊರಗಿಸುತ್ತವೆ:

"ಹೋಮರನಂಥ ವಿಶ್ವಕವಿಗಳು ಭಿಕ್ಷೆ ಬೇಡಬೇಕು
ಹೆಂಡಮಾರುವವರು ಲಕ್ಷಾಧೀಶರಾಗಬೇಕು-

ಇದೇ ನಿನ್ನ ಸಾಮಾಜಿಕ ನ್ಯಾಯವೇನಯ್ಯಾ?
ದುಡಿದವರಿಗೆ ದುಗ್ಗಾಣಿ, ದುಡಿಸಿಕೊಳ್ವರಿಗೆ ಅಷ್ಟೈಶ್ವರ್ಯ
ಇದುವೆ ನಿನ್ನ ಆರ್ಥಿಕ ವ್ಯವಸ್ಥೆಯೇನಯ್ಯಾ?"

ಎಂದು ಪ್ರಶ್ನಿಸುತ್ತಾರೆ. ಒಟ್ಟಿನಲ್ಲಿ ಸಿದ್ಧಯ್ಯನವರ ವಚನಗಳು ಆಧುನಿಕ ಅನುಭಾವ ಸಾಹಿತ್ಯದ ಶ್ರೀಮಂತಿಕೆಯನ್ನು ಹೆಚ್ಚಿಸಿವೆ.

ಮಹದೇವ ಬಣಕಾರ

'ಮಹದೇವ ಬಣಕಾರರ ವಚನಗಳು' ಶೀರ್ಷಿಕೆಯೊಡನೆ ೧೧೧೦ಲ ವಚನಗಳನ್ನು ಮಹಾದೇವ ಬಣಕಾರರು ೧೯೭೯ರಲ್ಲಿ ತಮ್ಮದೇ ಆದ 'ಅನುಭವ ಮಂಟಪ ಪ್ರಕಾಶನ' ದಲ್ಲಿ ಪ್ರಕಟಿಸಿದರು. ಇವರ ವಚನಗಳ ಅಂಕಿತ 'ಎನ್ನ ವರ ಗುರು ಶಿವಕುಮಾರ ಪ್ರಭುವೆ" ಎಂಬುದಾಗಿದೆ. ತಮ್ಮ ವಚನಗಳನ್ನು "ಅಜ್ಞಾನ ನಿರಸನ ಸ್ಥಲ; ಜ್ಞಾನಪ್ರತಿಪಾದನ ಸ್ಥಲ; ಆಚಾರ ನಿರ್ದೇಶನ ಸ್ಥಲ; ಅನುಭಾವ ನಿಷ್ಪತ್ತಿ ಸ್ಥಲ, ನಿರವಯಸ್ಥಲ ಎಂಬುದಾಗಿ ವಿಭಜಿಸಿ ನಿರೂಪಿಸಿದ್ದಾರೆ.

ಮೊದಲನೆ ಸ್ಥಲದಲ್ಲಿಯೇ ಅಜ್ಞಾನ ಕಾರಣದಿಂದಾಗಿ ಈ ಭವಸಾಗರದಲ್ಲಿ ಸಿಕ್ಕಿ ತೊಳಲುವ ಮಾನವನ ಚಿತ್ರವಿದೆ.

ಸಕ್ಕರೆಯ ಮೂಟೆಯ ಬಳಿ ಇದ್ದ ಮೂಷಕವು
ಬೆಕ್ಕಿಂಗೆ ಭಯಗೊಂಡು ಹೊರಗಣ ಹುತ್ತವ ಹೊಕ್ಕಂತೆ
ಎತ್ತಣ ಮಾರ್ಗವಯ್ಯಾ ಎನ್ನ ಇರುವಿಂಗೆ?
ಒಳಗಣ ಸರ್ಪ, ಹೊರಗಣ ಬೆಕ್ಕು
ಬದುಕುವ ಬಗೆಯೆಂತು ಹೇಳಾ?
ಕೆಟ್ಟೆನಯ್ಯಾ ಭವಕ್ಕೆ ಬಂದು
ಹುಟ್ಟಿತ್ತೆ ತಪ್ಪಾಯಿತೆಂಬೆ, ಮುನ್ನ ಹುಟ್ಟದಂತಿರಿಸೆಂಬೆ.
ಸರ್ಪದ ಬಾಯೊಳು ಸಿಕ್ಕು ಸತ್ತರೇನು?
ಬೆಕ್ಕಿಂಗೆ ಬಲಿಯಾದರೇನು?
ಹೊತ್ತು ಕಳೆಯದೆ ಎನ್ನನೆತ್ತಿಕೊಂಡು ಸಲಹಯ್ಯಾ
ನಿಮ್ಮ ಶರಣರ ಸಾಕ್ಷಿಯಾಗಿ ಶಿವಶಿವಾ ಎಂಬೆ
ಎನ್ನ ವರಗುರು ಶಿವಕುಮಾರಪ್ರಭುವೆ"

ಎಂಬ ವಚನದಲ್ಲಿ ಜೀವಿಯನ್ನು ಮೂಷಕನಿಗೂ ಮೃತ್ಯುವನ್ನು ಬೆಕ್ಕಿಗೂ, ಸರ್ಪಕ್ಕೂ ಸಮೀಕರಿಸಿ ಹೇಳಿದ್ದಾರೆ. ಈ ಭವ ಬಂಧನ ಎಂತೂ ಸುಖಕಾರಿಯಲ್ಲ ಎಂಬ ಅಂಶವನ್ನು ಹೇಳಿ ಇದರಿಂದ ಬಿಡುಗಡೆ ಬಯಸಿ ಗುರುಪಾದಕ್ಕೆ ಶರಣಾಗುವ, ಸಲಹೆಂದು ಬೇಡುವ ಜೀವಿಯ ಚಿತ್ರವಿದೆ.

ತನಗೆ ಎಷ್ಟೇ ಪದವಿ ಅಂತಸ್ತುಗಳು ಸಿಕ್ಕಿದರೂ "ಸ್ವಯವರಿತ ಸಮ್ಯಗ್ ಜ್ಞಾನ ಲಿಂಗಿ ತಾನಗದನ್ನಕ್ಕ ಜೀವಿಗೆ ಮುಕ್ತಿಯಿಲ್ಲ" ಎಂಬುದನ್ನು ಜ್ಞಾನಪ್ರತಿಪಾದನ ಸ್ಥಲದಲ್ಲಿ ಹೇಳಿದ್ದಾರೆ.

ಜ್ಞಾನ ಸಿದ್ಧಿಸಿದೊಡನೆ ಅದನ್ನು ಆಚಾರಕ್ಕಿಳಿಸಬೇಕು. ಸಾರಾಸಾರ ವಿವೇಚನೆಯಿಂದ ಈ ಬದುಕನ್ನು ಸಾಗಿಸಬೇಕೆಂದು ಆಚಾರ ನಿರ್ದೇಶನ ಸ್ಥಲದಲ್ಲಿ ಹೇಳಿದ್ದಾರೆ. ಇಲ್ಲಿ 'ಆಚಾರ' ಜೀವಾತ್ಮನ ಸಕಲವೆಂಬುದನ್ನು

ಆಚಾರವೇ ಗುರು
ಆಚಾರವೇ ಲಿಂಗ
ಆಚಾರವೇ ಜಂಗಮ
ಆಚಾರವೇ ಅಷ್ಟಾವರಣ
ಆಚಾರವೇ ಷಟ್‌ಸ್ಥಲವಯ್ಯಾ

ಆಚಾರವಿಲ್ಲದ ಡಾಂಭಿಕರ ಕಂಡರೆ
ಸೂತಕವನಾಚರಿಸುವರು
ಎನ್ನ ವರಗುರು ಶಿವಕುಮಾರನ ಭಕ್ತರು.

ಎಂದು ಆಚಾರದ ಮಹತ್ವವನ್ನು ತಿಳಿಸಿದ್ದಾರೆ.

ಮಹಾದೇವ ಬಣಕಾರರ ವಚನಗಳಲ್ಲಿ ಆಧ್ಯಾತ್ಮದ ಪರಿ ಇದೆ. ಲೌಕಿಕದ ಜ್ಞಾನವಿದೆ. ಇಹದ ಆಗು ಹೋಗುಗಳ ಬಗೆಗೆ ವಿವರಣೆ ಇದೆ. ರಾಜಕೀಯದ ಗುಂಗಿನಿಂದ ಹೊರಬಂದು ಚಿರವಾದ ಸಾಹಿತ್ಯ, ಅದರಲ್ಲೂ ವಚನಗಳ ರಚನೆಗೆ ತೊಡಗಿಸಿಕೊಂಡು ತಮ್ಮ ಬದುಕನ್ನು ಬಂಗಾರವಾಗಿಸಿಕೊಂಡರು.

ಅನ್ನದಾನಯ್ಯ ಪುರಾಣಿಕ

ಅನ್ನದಾನಯ್ಯ ಪುರಾಣಿಕರು ಪ್ರಸಿದ್ಧ ವಕೀಲರು. ಸಮಾಜಸೇವಾಕಾರ್ಯಗಳಲ್ಲಿಯೂ ತಮ್ಮನ್ನು ತೊಡಗಿಸಿಕೊಂಡು ಜನಸಂಪರ್ಕ ಹೊಂದಿ ಸಮಾಜದಲ್ಲಿ ವಿಶಿಷ್ಟಸ್ಥಾನ ಗಳಿಸಿದರು. ಅವರ ಜೀವನಾನುಭವ ಅವರ ಸಾಹಿತ್ಯಕ್ರಿಯೆಗೆ ಮೂಲಧನವಾಗಿದ್ದು ಅವರನ್ನು ಸಾಹಿತಿಯಾಗಿಸಿದೆ. ತಮ್ಮ ಭಾವನೆಗಳ ಅಭಿವ್ಯಕ್ತಿಗೆ ಅವರು ಬಳಸಿಕೊಂಡದ್ದು ವಚನ ಸಾಹಿತ್ಯ ಪ್ರಕಾರವನ್ನು. ಇವರು 'ವಚನ ವಾಹಿನಿ', 'ವಚನ ದೀಪ್ತಿ', 'ವಚನ ಪ್ರಕಾಶ', 'ವಚನ ಮಂದಾರ', 'ವಚನ ಸಂಗಮ', ಮತ್ತು 'ವಚನ ಮಲ್ಲಿಗೆ' ಎಂಬ ಶೀರ್ಷಿಕೆಗಳಲ್ಲಿ ವಚನಗಳನ್ನು ರಚಿಸಿದ್ದಾರೆ. ಇವರ ಅಂಕಿತ "ಶ್ರೀ ಗುರುಸಿದ್ಧಲಿಂಗೇಶ್ವರ". ಈ ಆರು ಸಂಪುಟಗಳಿಂದ ೧೩೨೮ ವಚನಗಳು ಮೂಡಿವೆ. ಇವರು ವಚನ ರಚನೆಯಲ್ಲಿ ಮೆರೆದಿರುವ ವಿನಯವನ್ನು ಗಮನಿಸಿ.

ಭಾಷೆಯನರಿಯೆ, ಬಂಧವನರಿಯೆ
ಸಾಹಿತ್ಯ ಕಲೆ ಕಾವ್ಯ ಒಂದನೂ ನಾನರಿಯೆ,
ನೀನು ನುಡಿಸಿದಂತೆ ನುಡಿದಿರುವೆ!
ನಡೆಸಿದಂತೆ ನಡೆಯುವೆ!
ಒಳಿತೆಲ್ಲವೂ ನಿನ್ನ ಕೊಡುಗೆ,
ಈ ವಚನವಾಹಿನಿಯೊಂದು
ನಿನ್ನ ಪಾದವ ತೊಳೆದರೆ ಧನ್ಯ ನಾನೆಂಬೆ!
ಶ್ರೀಗುರು ಸಿದ್ಧಲಿಂಗೇಶ್ವರಾ.

ಇಲ್ಲಿ ತನ್ನದೆಲ್ಲಾ ದೈವಕೃಪೆಯಿಂದ ಬಂದುದೆಂಬ ಕೃತಜ್ಞತಾ ಭಾವವಿದೆ. ಇವರ ವಚನಗಳಲ್ಲಿ ಮಾನವ ಜೀವನ ಉದಾತ್ತಗೊಳ್ಳುವುದರ ಜೊತೆಗೆ ಸುಸಂಸ್ಕೃತ ಬಾಳ್ವಿಯ ಕನಸನ್ನು ಸಾಕಾರಗೊಳಿಸುವ ಬನಿಯಿದೆ. ಮಾನವೀಯತೆ ಹಾಸುಹೊಕ್ಕಾಗಿದೆ. ಒಮ್ಮೊಮ್ಮೆ ಮುಕ್ತಕಗಳಾಗಿಯೂ ಮೂಡುವ ಸಾಧ್ಯತೆ ಇದೆ. ಒಮ್ಮೊಮ್ಮೆ ವ್ಯಂಗ್ಯವೂ ಧ್ವನಿತವಾಗಿದೆ.

ಈ ಆಧುನಿಕ ವಚನವಾಹಿನಿಗೆ ಇಬ್ಬರು ಜಗದ್ಗುರುಗಳು ವಚನಗಳ ಕಾಣಿಕೆ ಸಲ್ಲಿಸಿದ್ದಾರೆ. ನಿಡುಮಾಮಿಡಿ ಜಗದ್ಗುರು ಜ.ಚ.ನಿ. ಅವರು ಮತ್ತು ಮೂರು ಸಾವಿರ ಮಠದ ಜಗದ್ಗುರು ಶ್ರೀ ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳು ವಚನಗಳನ್ನು ರಚಿಸಿದ್ದಾರೆ. 'ಪೂರ್ಣಜ್ಞ ವಚನಗಳು' ಎಂಬ ಹೆಸರಲ್ಲಿ ಮೂರು ಸಾವಿರ ಮಠದ ಜಗದ್ಗುರುಗಳು ವಚನ ರಚಿಸಿದ್ದರೆ "ಸುಳುಹು-ಹೊಳಹು" ಎಂಬ ಹೆಸರಲ್ಲಿ ಶ್ರೀ ನಿಡುಮಾಮಿಡಿ ಶ್ರೀ ಗಿರಿ ಸೂರ್ಯಸಿಂಹಾಸನಾಧೀಶ್ವರ ಎಂಬ ಅಂಕಿತದಲ್ಲಿ ಜ.ಚ.ನಿ. ರಚನಗಳನ್ನು ರಚಿಸಿದರು. ಪ್ರೊ. ಆರ್. ರಾಚಪ್ಪ ಅವರ 'ಶ್ರೀಮನ್ನಿರಂಜನ ಕಾರದ ಪ್ರಭುವೆ' ಅಂಕಿತದಲ್ಲಿ ನಾಲ್ಕು ನೂರು ವಚನಗಳನ್ನು ರಚಿಸಿದ್ದಾರೆ. ಶ್ರೀಮತಿ ಶಾರದಾ ರಾಜಶೇಖರ್ ಮೊದಲಾದವರೂ ಆಧುನಿಕ ವಚನಗಳನ್ನು ರಚಿಸಿದ್ದಾರೆ.

ಭಾಗ–೪

ಜಾನಪದ

ವೀರಶೈವರ ಜನಪದ ಕಲೆಗಳು

✍ ಎಚ್.ಎಸ್. ಸಿದ್ಧಗಂಗಪ್ಪ

ಕಲೆ ಮೂಲತಃ ಮಾನವನ ಸೃಷ್ಟಿ. ಅದು ಪ್ರತಿಭಾನ್ವಿತ ಮಾನವನ ಜೀವನಾನುಭವದ ಅಭಿವ್ಯಕ್ತಿ. ಕಲೆ ಮಾನವತೆಯ ವಿಶಿಷ್ಟ ಆನಂದದಾಯಿನಿಯಾದ ಮಾತೃಶಕ್ತಿ. ಭೌತಿಕಜಗತ್ತಿನ ಬಾಹ್ಯಸೃಷ್ಟಿಗಿಂತ ಹೆಚ್ಚಾಗಿ, ಮಾನವನ ಅಂತರಂಗಿಕ ನಿತ್ಯಸತ್ಯದ ಆನಂದಾನುಭವದ ಅಭಿವ್ಯಕ್ತಿ. ಕಲಾವಿದನ ಆತ್ಮದರ್ಶನ, ಅಂತಃಪ್ರೇರಣೆ ಮತ್ತು ಬಾಹ್ಯಪ್ರಭಾವಗಳ ಸಮಾಹಿತ ಅಭಿವ್ಯಕ್ತಿ. ಈ ಕಲೆ ಭಾವ, ಬಣ್ಣ, ನಾದ ಮುಂತಾದ ವಿವಿಧ ಮಾಧ್ಯಮಗಳಲ್ಲಿ ಹೊಮ್ಮಿ ಸಮಾಜದ ಹೃದಯವಂತಿಕೆಯನ್ನು ಆಗುಮಾಡುತ್ತಿದೆ; ಋಜುಮಾರ್ಗವನ್ನು ತೋರುತ್ತದೆ.[೧]

ಶ್ರೇಷ್ಠಕಲೆ ಸಮಾಜವನ್ನು, ವ್ಯಕ್ತಿಯನ್ನು ತಿದ್ದಬಲ್ಲ ಶಕ್ತಿ ಪಡೆದಿದೆ. ಅಲ್ಲದೆ, ಜೀವಂತ ಜನ ಮಾತ್ರ ಸತ್ವಯುತ ಕಲೆಯನ್ನು ನಿರ್ಮಿಸಬಲ್ಲರು. ಅದು ಜನಾಂಗದ ಧೀಶಕ್ತಿಯನ್ನು ಪಟುಗೊಳಿಸುತ್ತದೆ. ಅದಕ್ಕಾಗಿಯೇ ಇತಿಹಾಸ ಒಂದು ಜನಾಂಗದ "ಜೀವನ ಚರಿತ್ರೆ" ಯಾದರೆ; ಕಲೆ (ಸಾಹಿತ್ಯ) ಆಯಾ ದೇಶದ "ಆತ್ಮಚರಿತ್ರೆ" ಎಂಬ ಪ್ರಸಿದ್ಧವಾದ ಹೇಳಿಕೆ ಎಂದಿಗೂ ಸತ್ಯವಾದುದು. ಕಲೆ ಬೆಳೆಯಬೇಕು. ಜನಾಂಗ ಉಳಿಯಬೇಕು, ಜೀವನ ಪರಂಪರೆ ಮುಂದುವರಿಯಬೇಕು. ನಾಡಿನ ಸಂಸ್ಕೃತಿ ಅರಳಬೇಕೆನ್ನುವ ಸಮಾಜ ಸತ್ವಪೂರ್ಣ ಕಲಾಸೃಷ್ಟಿಯನ್ನು ಗೌರವಿಸುತ್ತದೆ. ಹಾಗೆ ಕಲೆ ಮತ್ತು ಸಮಾಜಗಳಲ್ಲಿ ಪರಸ್ಪರ ಪೂರಕ, ಪ್ರೇರಕತ್ವವೇ ಅಡಗಿದೆ.[೨]

ಕಲೆ ಮಾನವನ ಬದುಕಿಗೆ ಸಂಜೀವಿನಿ ಇದ್ದ ಹಾಗೆ. ಶ್ರಮ ಪರಿಹಾರವನ್ನು ನೀಗಿಸುವ, ನೊಂದ ಮನಸ್ಸಿಗೆ ನೆಮ್ಮದಿಯನ್ನು, ಚೈತನ್ಯವನ್ನು ತಂದುಕೊಡುವ ಅಪೂರ್ವವಾದ ಶಕ್ತಿಯನ್ನು ಪಡೆದುಕೊಂಡಿದೆ. ಮನಸ್ಸಿಗೆ ಆನಂದವನ್ನು ಉಲ್ಲಾಸವನ್ನು ತಂದುಕೊಡುವ ಕಲೆ-ಶಿಲ್ಪಕಲೆಯಾಗಿರಬಹುದು, ಚಿತ್ರಕಲೆಯಾಗಿರಬಹುದು, ನೃತ್ಯಕಲೆಯಾಗಿರ ಬಹುದು, ಸಂಗೀತ, ಜನಪದ -ಹೀಗೆ ಹಲವಾರು ಪ್ರಕಾರಗಳಿರಬಹುದು.

ಕಲೆ ಇಲ್ಲದೆ ಯಾವ ಬದುಕೂ ಬೆಳೆಯುವುದಕ್ಕೆ ಸಾಧ್ಯವಿಲ್ಲ. ಕಲೆ ಎನ್ನುವುದು ನಾವು ಹಾಕಿಕೊಳ್ಳುವ ಕೋಟು ಇದ್ದ ಹಾಗಲ್ಲ. ಕಲೆ ಎನ್ನುವುದು ಜೀವನದ ಭಾಗವಾದಾಗ ಮಾತ್ರ ಕಲೆ ಏನನ್ನು ಕೊಡಬಲ್ಲದು ಅದನ್ನು ಮಾತ್ರ ನಾವು ಸಂಪೂರ್ಣವಾಗಿ ಸ್ವೀಕರಿಸಲು ಸಾಧ್ಯ.[೩]

ಟಾಲ್‌ಸ್ಟಾಯ್ ಅವರ ಪ್ರಕಾರ, ಕಲೆ ಎಂದರೆ "ಅನುಭವಿಸಿ ಆಗಿರುವ ಭಾವವನ್ನು ಒಬ್ಬಾತ ತನ್ನಲ್ಲಿ ಎಚ್ಚರಿಸಿಕೊಂಡು, ಅದನ್ನು ಚಲನೆ, ರೇಖೆ, ಬಣ್ಣ, ನಾದ, ಆಕೃತಿ ಅಥವಾ ಶಬ್ದಗಳ ಮೂಲಕ ಅಭಿವ್ಯಕ್ತಿಗೊಳಿಸಿ, ಆ ಭಾವವನ್ನು ಇನ್ನೊಬ್ಬನೆಡೆಗೆ ಪ್ರವಹಿಸಿದಾಗ ಎರಡನೆಯವನಲ್ಲೂ ಮೂಲದ ಭಾವನೆ ಸ್ಫುರಿಸುವಂತೆ ಮಾಡುವುದೇ ಕಲೆಯ ಕೆಲಸ."[೪]

ಇಮ್ಮಾನ್ಯುಯಲ್ ಕ್ಯಾಂಟ್ ಅವರ ಪ್ರಕಾರ "ಯಾವುದು ತಾಟಸ್ಥ್ಯ ಚಿಂತನೆಯಲ್ಲಿ ಆನಂದವನ್ನು ಕೊಡಬಲ್ಲುದೋ ಅದೇ ಕಲೆ. ತಾಟಸ್ಥ್ಯವು ಶುದ್ಧವಾದ ಚಿಂತನೆಯಾಗಿದ್ದು ಅದಕ್ಕೆ ವಸ್ತುವಿನ ಇರುವಿಕೆಯ ಅವಶ್ಯಕತೆಯಿಲ್ಲ. ವಸ್ತುವಿನ ಮೇಲಿರುವ ಆಸಕ್ತಿಯೊಡನೆ ಆ ವಸ್ತು ಒಳ್ಳೆಯದು. ಹಿತಕಾರಿ ಎಂಬ ಗುಣಗಳೂ ಸೇರಿರುತ್ತವೆ. ಆದರೆ ಯಾವುದು ಸುಂದರವಾಗಿರುತ್ತದೆ ಅದು ಈ ಬಗೆಯ ಎಲ್ಲಾ ಆಸಕ್ತಿಗಳಿಗಿಂತ ತಟಸ್ಥವಾಗಿರುತ್ತದೆ."[೫]

ಕ್ಲೈವ್‌ಬೆಲ್ ಪ್ರಕಾರ "ಕಲೆಯಲ್ಲಿ ಕಾಣುವ ಅದರ ಅತ್ಯುಚ್ಚ ಗುಣಸ್ವರೂಪವೇ ಅದರ ಸ್ವರೂಪ. ಸ್ವರೂಪವೆಂದರೆ ವ್ಯವಸ್ಥೆ, ಕ್ರಮಾನುಗತ ಚಲನೆ ಮತ್ತು ಆಕಾರಗಳ ಒಟ್ಟಂದ. ಕಲೆಯು ಭಾವನಾತ್ಮಕವಾಗಿದ್ದರೂ ಅದು ಪ್ರಚೋದಿತ ಸೌಂದರ್ಯ ಭಾವ."[೬]

ಈ ಎಲ್ಲ ವಿದ್ವಾಂಸರ ಅಭಿಪ್ರಾಯಗಳನ್ನು ಗಮನಿಸಿದಾಗ 'ಕಲೆ' ಎಂಬುದು ಜೀವನವನ್ನು ಅರಳಿಸುವ, ನೊಂದ ಮನಸ್ಸಿಗೆ ಶಾಂತಿ, ನೆಮ್ಮದಿಯನ್ನು ತಂದುಕೊಡುವ ಹಾಗೂ ಆಯಾ ಪ್ರದೇಶದ ಸಂಸ್ಕೃತಿಯನ್ನು ಬಿಂಬಿಸುವ ಒಂದು ಉತ್ತಮ ಸಾಧನವಾಗಿರುವುದು ವ್ಯಕ್ತವಾಗುತ್ತದೆ.

ಕಲೆಯ ಮಹತ್ವ ಹಾಗೂ ಅದರ ಜೀವಂತಿಕೆ ಅದು ಎಷ್ಟರಮಟ್ಟಿಗೆ ತನ್ನ ಕಾಲದ ಸಾಂಸ್ಕೃತಿಕ ಮತ್ತು ಸಾಮಾಜಿಕ ಬದುಕಿಗೆ ಸ್ಪಂದಿಸುತ್ತದೆ ಎಂಬುದರ ಮೇಲಿದೆ. ಈ ದೃಷ್ಟಿಯಿಂದ ಕಲೆ ಬದುಕಿನಿಂದ ದೂರ ಸರಿದ ಮಾನಸಿಕ ಕ್ರಿಯೆಯಾಗದೆ, ದೈನಂದಿನ ಬದುಕಿನ ಅಂಗವಾಗಿ ಸ್ಪಂದಿಸುತ್ತಾ ಕ್ರಿಯಾಶೀಲ ಪ್ರತಿಭಾವಂತ ಕಲಾವಿದರಲ್ಲಿ ಅಭಿವ್ಯಕ್ತಿಯನ್ನು ಪಡೆಯುತ್ತದೆ.

"ಜನಪದ ಹಾಡು ಕುಣಿತಗಳ ಜಲಮೂಲ ನಮ್ಮ ಅನಕ್ಷರಸ್ಥ ಗ್ರಾಮೀಣರ ಅಂತರಂಗ. ಅವು ಬೆಳೆದುದು ಲೋಕಕ್ಕೆ ಅನ್ನ ಬೆಳೆದು ಕೊಡುವ ರೈತರ ಅಂಗಣದಲ್ಲಿ. ನಮ್ಮ ಜನಪದ ಬದುಕಿಗೆ ಹುಟ್ಟಿದ ಪರಿಸರವೇ ಶಾಲೆ. ಪಟ್ಟ ಅನುಭವವೇ ಗುರು."[೭] ನಮ್ಮ ಗ್ರಾಮೀಣರು ತಮ್ಮ ಸಮಸ್ತ ಬದುಕಿಗೂ ಕಾರಣಕರ್ತನಾದ ದೈವವನ್ನು, ದೈವೀಶಕ್ತಿಯನ್ನು ಮೊದಲಿನಿಂದಲೂ ಆರಾಧಿಸಿಕೊಂಡು ಬಂದಿದ್ದಾರೆ. ತಾವು ನಂಬಿದ ಆ ಶಕ್ತಿಯನ್ನು ಪೂಜಿಸುವಲ್ಲಿ ನೆಮ್ಮದಿಯನ್ನು, ಬದುಕಿನ ಸಾರ್ಥಕ್ಯವನ್ನು ಕಂಡುಕೊಂಡು ಬಂದಿದ್ದಾರೆ. ತಮ್ಮ ದೈನಂದಿನ ಕಾರ್ಯಗಳಲ್ಲಿ ತಾವು ನಂಬಿದ ದೈವದ ಪೂಜೆಯೂ ಒಂದು ಅವಿಭಾಜ್ಯ ಅಂಗವಾಯಿತು. ದೇವರನ್ನು ಸಂತೃಪ್ತಿಗೊಳಿಸುವುದರ ಮೂಲಕ ಆತ್ಮಾನಂದವನ್ನು ಪಡೆಯುವುದು ಅವರ ಗುರಿಯಾಯಿತು. ತಮ್ಮ ಆರಾಧ್ಯದೈವವನ್ನು ಪೂಜಿಸುವಾಗ ಹೃದಯತುಂಬಿ ಹಾಡತೊಡಗಿದರು; ಮೈದುಂಬಿ ಕುಣಿಯತೊಡಗಿದರು. ದೇವರ ಆರಾಧನೆಗಾಗಿಯೇ ಹುಟ್ಟಿಕೊಂಡ ಈ ಹಾಡು, ಕುಣಿತಗಳಲ್ಲಿ ಕೆಲವು ಕಾಲಗತಿಯಲ್ಲಿ ಮನರಂಜನೆಯ ಮಾಧ್ಯಮವಾದರೆ ಮತ್ತೆ ಕೆಲವು ಕಲೆಗಳು ಜೀವನೋಪಾಯಕ್ಕೆ ಆಸರೆಯೂ ಆದವು. ಕೆಲವು ದೈವೀಆರಾಧನೆಗೆ ಮೀಸಲಾದರೆ ಮತ್ತೆ ಕೆಲವು ಮನರಂಜನೆಯನ್ನು ನೀಡುವಲ್ಲಿ ಯಶಸ್ವಿಯಾದವು.

ವೀರಶೈವ ಅಥವಾ ಲಿಂಗಾಯತರಲ್ಲಿ ಪ್ರಸ್ತುತ ಪ್ರಚಲಿತವಿರುವ ಜನಪದ ಕಲೆಗಳನ್ನು ಇಲ್ಲಿ ಪರಿಚಯ ಮಾಡಿಕೊಡಲು ಪ್ರಯತ್ನಿಸಲಾಗಿದೆ.

೧೨ನೇ ಶತಮಾನದಲ್ಲಿ ಬಸವಾದಿ ಶರಣರು ನೀಡಿದ ಕಾಯಕ-ದಾಸೋಹ ತತ್ವಗಳು ಸಮಾಜಕ್ಕೆ ನೀಡಿದ ಬಹುದೊಡ್ಡ ಕಾಣಿಕೆ. ಶರಣರು ಕಾಯಕವಿಲ್ಲದ ಬದುಕು ಅರ್ಥಹೀನ ಎಂಬುದನ್ನು ಮನಗಂಡಿದ್ದರು. ಅವರು ತಾವು ಮಾಡುವ ವೃತ್ತಿಯಲ್ಲಿ ಆದರ್ಶವನ್ನು, ಜೀವನ ಮೌಲ್ಯವನ್ನು ಅಳವಡಿಸಿಕೊಂಡಿದ್ದರು. ಲೌಕಿಕ ಜೀವನದಲ್ಲಿ ಆಧ್ಯಾತ್ಮಿಕ ಸಾಧನೆಯ ಮೆಟ್ಟಿಲುಗಳನ್ನೇರಿ ಶಿವನನ್ನು ಸಾಕ್ಷಾತ್ಕಾರ ಮಾಡಿಕೊಂಡ ಸಿದ್ಧಪುರುಷರು.

ಅನೇಕ ಜನ ಶರಣರು ಬಸವಣ್ಣನವರ ಆದರ್ಶ ವ್ಯಕ್ತಿತ್ವಕ್ಕೆ ಆಕರ್ಷಿತರಾಗಿ ತಮ್ಮ ಬದುಕನ್ನು ರೂಪಿಸಿಕೊಂಡರು. ಅವರಲ್ಲಿ ಮನೆಮಾಡಿಕೊಂಡಿದ್ದ ಕೀಳರಿಮೆಯನ್ನು ಕಿತ್ತೆಸೆದು ಜೀವನವನ್ನು ಪ್ರೀತಿಸುತ್ತಾ ಸಮಾನತೆಯ ಮೆಟ್ಟಿಲುಗಳನ್ನು ಏರತೊಡಗಿದರು. ತಾವು ಮಾಡುವ ಕಾಯಕದಲ್ಲಿ ಭಕ್ತಿ, ನಿಷ್ಠೆ, ಪ್ರಾಮಾಣಿಕತೆ, ಶ್ರದ್ಧೆ, ಪ್ರೀತಿ, ಗೌರವಗಳನ್ನು ಆಧ್ಯಾತ್ಮಿಕ ಭೂಮಿಯಲ್ಲಿ ಬಿತ್ತಿ ಬೆಳೆದ ಮಹಾಪುರುಷರು.

ಅನುಭಾವದ ಮೇರುಶಿಖರ, ಅಲ್ಲಮಪ್ರಭು ಮದ್ದಲೆಯನ್ನು ಬಾರಿಸುವ ಕಾಯಕದಿಂದಲೇ ಅಧ್ಯಾತ್ಮಿಕತೆಯ ತುಟ್ಟತುದಿಯನ್ನು ಮುಟ್ಟಿದ ವೈರಾಗ್ಯಮೂರ್ತಿ, ನಗೆಯ ಮಾರಿತಂದೆಯದು ನಗಿಸುವ ಕಾಯಕ, ಬಹುರೂಪಿ ಚೌಡಯ್ಯನದು ನೃತ್ಯ ಕಾಯಕ, ಘಟ್ಟಿವಾಳಯ್ಯಗಳು ತಂಬೂರಿ ನುಡಿಸುವ ಕಾಯಕದಿಂದಲೇ ಶಿವನನ್ನು ಕಂಡರು.

ರಾಗದ ಸಂಕಣ್ಣ ತನ್ನ ಸುಮಧುರವಾದ ಕಂಠಶ್ರೀಯಿಂದ ಶಿವನನ್ನು ಕುರಿತು ಹಾಡುಗಳನ್ನು ಹಾಡುತ್ತಾ ಮೈಮರೆಯುತ್ತಿದ್ದನು; ಇತರರನ್ನು ಮೈಮರೆಯುವಂತೆ ಮಾಡುತ್ತಿದ್ದನು. ಅಂತಹ ಅದ್ಭುತವಾದ ಹಾಡುವ ಕಲೆಗಾರಿಕೆ ಅವನಿಗೆ ಸಿದ್ಧಿಸಿತ್ತು. ಅವನು ಹಾಡುವ ಕಾಯಕದಲ್ಲಿಯೇ ಕೈಲಾಸವನ್ನು ಕಂಡ ಮಹಾಶರಣ. ಹೀಗೆ ಶರಣರು ತಮ್ಮ ಕಲೆಯ ಮೂಲಕ ಜನರಲ್ಲಿ ಜಾಗೃತಿಯನ್ನು ಮೂಡಿಸಿದರು. ಅವರು ತಮ್ಮ ತಮ್ಮ ಕಲೆಯ ಮೂಲಕವೇ ಶಿವನನ್ನು ಆರಾಧಿಸಿದರು.

ಜನಪದ ಕಾವ್ಯಗಳನ್ನು ಹಾಡುವುದನ್ನೇ ಒಂದು ವಿಶೇಷ ಹವ್ಯಾಸವನ್ನಾಗಿ ಬೆಳೆಸಿಕೊಂಡು ಬಂದ ಗಾಯಕ ವರ್ಗ ಎಲ್ಲ ಸಂಸ್ಕೃತಿಗಳಲ್ಲೂ ಕಂಡುಬರುತ್ತದೆ. ಇದು ಅವರ ಪಾಲಿಗೆ ಜೀವನೋಪಾಯದ ಒಂದು ಮಾರ್ಗವೂ ಆಗಬಹುದು. ಇವರು ಹಾಡುವ ಕಾವ್ಯಗಳನ್ನು ಕೇಳಿ ನಲಿದು ಜನರು ಅವರಿಗೆ ಸೂಕ್ತ ಉಡುಗೊರೆಗಳನ್ನು, ದವಸ ಧಾನ್ಯಗಳನ್ನು, ಹಣವನ್ನು ನೀಡಬಹುದು. ಈ ಪರಸ್ಪರ ವಿನಿಮಯ ದೃಷ್ಟಿ ವೃತ್ತಿಗಾಯಕ ಪರಂಪರೆಗೆ ಮೂಲವಾಗಿ ಪರಿಣಮಿಸಿದೆ. ಸಾಮಾನ್ಯವಾಗಿ ಸುದೀರ್ಘವಾದ ಕಾವ್ಯಗಳನ್ನು ಹಾಡುತ್ತ ತಲೆಮಾರಿನಿಂದ ತಲೆಮಾರಿಗೆ ಆ ಕಾವ್ಯಗಳನ್ನು ಒಯ್ಯುತ್ತಾ ತಮ್ಮದೇ ಆದ ಹಾಡುಗಾರಿಕೆಯ ಸಂಪ್ರದಾಯವನ್ನು ಕಾವ್ಯಪರಂಪರೆಯನ್ನು ಹೊಂದಿರುವ ಗಾಯಕ ಸಮೂಹವೇ 'ವೃತ್ತಿಗಾಯಕರು' ಎನಿಸಿಕೊಳ್ಳುತ್ತಾರೆ. ಇವರು ಸಾಮಾನ್ಯ ಗಾಯಕರಿಗಿಂತ ಕೆಲವು ಅಂಶಗಳಲ್ಲಿ ಭಿನ್ನವಾಗಿ ನಿಲ್ಲುತ್ತಾರೆ. ಸಾಮಾನ್ಯ ಗಾಯಕರು ತಾವು ಕಲಿತ ಹಾಡನ್ನು ತಮ್ಮತಮ್ಮಲ್ಲಿಯೇ ಹಾಡಿಕೊಳ್ಳುತ್ತಾರೆ. ಅವರಿಗೆ ನಿರ್ದಿಷ್ಟವಾದ ಶ್ರೋತೃವರ್ಗ ಇರುವುದಿಲ್ಲ. ಅದು ಅವರ ಕೆಲಸದ ಆಯಾಸವನ್ನು ನೀಗಲು, ಮನಸ್ಸಿನ ಬೇಸರವನ್ನು ಕಳೆಯಲು ಹಾಡಿಕೊಳ್ಳಬಹುದಾದ ಹಾಡೋ ಅಥವಾ ಕಾವ್ಯವೋ ಆಗಿರುತ್ತದೆ. ಬೀಸುವಾಗ, ಕುಟ್ಟುವಾಗ, ಕಳೆ ಕೀಳುವಾಗ, ನಾಟಿ ಹಾಕುವಾಗ, ರಾತ್ರಿಯ ಕಾಲದಲ್ಲಿ ದೂರ ಪ್ರಯಾಣಕ್ಕೆ ಬಂಡಿಯಲ್ಲಿ ಸಾಗುವಾಗ, ಅಡಿಕೆ ಸುಲಿಯುವಾಗ, ಹತ್ತಿ ಬಿಡಿಸುವಾಗ, ಸುಗ್ಗಿಯ ಕಾಲದಲ್ಲಿ ಹಂತಿಯನ್ನು ಹೊಡೆಯುವಾಗ, ನದಿ ಸಮುದ್ರಗಳಲ್ಲಿ ದೋಣಿಯನ್ನು ನಡೆಸುವಾಗ, ಧಾರ್ಮಿಕ ವಿಧಿಗಳನ್ನು ಆಚರಿಸುವಾಗ, ಮಗುವನ್ನು ತೂಗಿ ಮಲಗಿಸುವಾಗ, ಮದುವೆ, ಒಸಗೆಗಳನ್ನು ನಡೆಸುವಾಗ ಹಾಡಿನ ಮಹಾಪೂರ ಸಾಮಾನ್ಯ ಗಾಯಕರಲ್ಲಿ ಉಕ್ಕಿ ಬರುತ್ತದೆ.[೮]

ಮನಸ್ಸಿನ ನೆಮ್ಮದಿಗಾಗಿ, ಆತ್ಮಸಂತೋಷಕ್ಕಾಗಿ ಹಾಡುವ ಸಾಮಾನ್ಯ ಗಾಯಕರು ತಾವು ಸಂತೋಷಪಡುವುದಲ್ಲದೆ ತಮ್ಮ ಸುತ್ತಮುತ್ತಲಿನವರನ್ನು ಸಂತೋಷಪಡಿಸುತ್ತಾರೆ. ಹಾಡುವುದರ ಮೂಲಕ ತಮ್ಮ ಎದೆಯಲ್ಲಿ ತುಂಬಿರುವ ಮಾನಸಿಕ ದುಗುಡವನ್ನು ಕಡಿಮೆಮಾಡಿಕೊಳ್ಳುತ್ತಾರೆ. ಹೀಗೆ ಹಾಡುವುದನ್ನು ಅವರು ಒಂದು ಹವ್ಯಾಸವಾಗಿ ರೂಪಿಸಿಕೊಂಡಿರುವುದನ್ನು ಕಾಣಬಹುದಾಗಿದೆ. ಇಂತಹ ವೃತ್ತಿಗಾಯಕರ ಸಾಲಿನಲ್ಲಿ ಕರಪಾಲದವರು ಬರುತ್ತಾರೆ.

ಕರಪಾಲ: ದಕ್ಷಿಣ ಕರ್ನಾಟಕದ ಕೆಲವು ಭಾಗಗಳಲ್ಲಿ ಕಂಡುಬರುವ ಸಮೂಹವನ್ನು ಆಕರ್ಷಿಸುವ ಒಂದು ಜನಪ್ರಿಯ ಕಲೆ "ಕರಪಾಲ". ಈ ಕಲೆ ಉತ್ತರ ಕರ್ನಾಟಕದಿಂದ ದಕ್ಷಿಣ ಕರ್ನಾಟಕದ ಕಡೆಗೆ ಬಂದುದೆಂದು ಕಲಾವಿದರು ಹೇಳುತ್ತಾರೆ. ಮೂರು ಜನ ಕಲಾವಿದರು ಸೇರಿ ನಡೆಸಿಕೊಡುವ ಈ ಕರಪಾಲ ಮೇಳವು ಸಾಹಿತ್ಯ, ಸಂಗೀತ ಮತ್ತು ನೃತ್ಯವನ್ನು ಒಳಗೊಂಡಿದ್ದು, ಒಂದಕ್ಕೊಂದು ಪೂರಕವಾಗಿವೆ. ಈ ಮೂರು ಜನರಲ್ಲಿ ಒಬ್ಬ ಪ್ರಧಾನ ನಾಯಕನಿದ್ದು ಅವನನ್ನು 'ಗುರು' ಎಂದು ಕರೆಯುತ್ತಾರೆ.

ಉಳಿದ ಇಬ್ಬರು ಕಲಾವಿದರು ಅವನಿಗೆ ಸಹಾಯಕರಾಗಿರುತ್ತಾರೆ. ಅವರನ್ನು 'ಶಿಷ್ಯ'ರೆಂದು ಕರೆಯುತ್ತಾರೆ. 'ಕರಪಾಲ ಮೇಳವು' ಹವ್ಯಾಸಿಕಲೆಯೂ ಹೌದು, ವೃತ್ತಿಕಲೆಯೂ ಹೌದು.

ಕರಪಾಲ ಮೇಳಕ್ಕೆ ವಿಶೇಷವಾದ ರಂಗಸಜ್ಜಿಕೆಯ ಅಗತ್ಯವಿಲ್ಲ. ಮೂರು ಜನರು ಕುಣಿಯಬಹುದಾದಂತಹ ಒಂದು ಎತ್ತರವಾದ ವೇದಿಕೆಯಾದರೆ ಸಾಕು. ಕೆಲವು ಕಡೆ ಆಕರ್ಷಣೆಯ ದೃಷ್ಟಿಯಿಂದ ಹಸಿರು ಚಪ್ಪರವನ್ನು ಹಾಕುವುದೂ ಉಂಟು.

ಶಿಷ್ಯರ ವೇಷಭೂಷಣ ಸಾಧಾರಣವಾಗಿದ್ದರೂ, ಗುರುವಿನ ವೇಷಭೂಷಣ ಭಿನ್ನವಾಗಿರುತ್ತದೆ. ತಲೆಗೆ ಕಿರೀಟಾಕೃತಿಯ ವರ್ಣರಂಜಿತ ಕುಲಾವಿ, ಕುಲಾವಿಗೆ ಇಳಿಬದ್ದ ಮುತ್ತಿನ ತುರಾಯಿ. ಕಿವಿಗೆ ಕರ್ಣಕುಂಡಲಗಳು, ಕುಲಾವಿಯನ್ನು ಬಳಸಿದ ರುದ್ರಾಕ್ಷಿಸರ, ಕೊರಳಿಗೆ ಹಾಗೂ ಕೈಗಳಿಗೆ ರುದ್ರಾಕ್ಷಿ ಮಾಲೆ, ಕಾಲಿಗೆ ಗೆಜ್ಜೆ, ಕಾವಿಯ ನಿಲುವಂಗಿ, ಸೊಂಟಕ್ಕೆ ಕೆಂಪು ವಸ್ತ್ರದ ನಡುಕಟ್ಟು, ಕಾಸೆಪಂಚೆ, ಹಣೆಗೆ ವಿಭೂತಿ -ಇವಿಷ್ಟು ಗುರುವಿನ ಅಥವಾ ನಾಯಕನ ವೇಷಭೂಷಣಗಳು. ಶಿಷ್ಯರಿಬ್ಬರೂ ಕಾವಿವಸ್ತ್ರದಿಂದ ತಲೆಗೆ ಪೇಟ ಸುತ್ತಿ ನಿಲುವಂಗಿ, ಕಾಸೆಪಂಚೆ ಧರಿಸಿ, ಕಾಲಿಗೆ ಗೆಜ್ಜೆ, ನಡುವಿಗೆ ಬಿಳಿವಸ್ತ್ರದ ನಡುಪಟ್ಟಿ ಕಟ್ಟಿದ್ದು, ಹಣೆಗೆ ವಿಭೂತಿ ಧರಿಸಿರುತ್ತಾರೆ.

ಕರಪಾಲ ಮೇಳದಲ್ಲಿ ನಾಯಕನೇ ಪ್ರಧಾನ. ಇವನನ್ನು 'ನಿರೂಪಕ' ಎಂದು ಕರೆಯುತ್ತಾರೆ. ಮೇಳದ ಜೀವನಾಡಿಯೇ ಇವನು. ಅವನ ವಾಕ್‌ಚಾತುರ್ಯ, ನಿರೂಪಣಾ ವೈಖರಿಯಿಂದ ಮೇಳ ಕಳೆಗಟ್ಟುತ್ತದೆ. ಪ್ರೇಕ್ಷಕನ ಮನಸ್ಸನ್ನು ಸೆರೆಹಿಡಿಯುವ ವಿಶಿಷ್ಟಕಲೆ ನಾಯಕನಿಗೆ ಕರಗತವಾಗಿರುತ್ತದೆ. ಶಿಷ್ಯರಿಬ್ಬರು ಗುರುವಿನ ಎಡಬಲಗಳಲ್ಲಿ ನಿಂತಿರುತ್ತಾರೆ. ನಾಯಕನ ಕೈಯಲ್ಲಿ ತಾಳಗಳಿರುತ್ತವೆ. ಶಿಷ್ಯರಲ್ಲಿ ಒಬ್ಬ ದಮ್ಮಡಿ ಬಾರಿಸಿದರೆ ಮತ್ತೊಬ್ಬ ತಂಬೂರಿ ನುಡಿಸುತ್ತಾನೆ. ನಾಯಕ ಸೊಲ್ಲೆತ್ತಿ ಕೊಟ್ಟ ಹಾಡಿನ ಮೊದಲ ಚರಣಕ್ಕೆ ಉಳಿದಿಬ್ಬರು ದನಿಗೂಡಿಸಿ-

ಸುವ್ವಿ ಬಾ ಸಂಗಯ್ಯ
ಸುವ್ವಿ ಬಾ ಲಿಂಗಯ್ಯ
ಸುವ್ವಿ ಬಾ ಚನ್ನಬಸವಯ್ಯ ॥ ಸುವ್ವಿ ॥

ಸುವ್ವಿ ಬಾ ನೀ ಚನ್ನಬಸವಯ್ಯ ಬರುವಾಗ
ಹೊಯ್ಕಲು ಬೊಬ್ಬಿ ಜಗವೆಲ್ಲ ॥ ಸುವ್ವಿ ॥

ಎಂದು ಹಾಡುತ್ತಾರೆ. ಇವರು ಕಾಡುಸಿದ್ಧಮ್ಮನ ಕಥೆ, ಬಸವಕುಮಾರ, ಲೋಹಿತ ಕುಮಾರ, ನೀಲಕಂಠ, ರೂಪಾವತಿ ಮೊದಲಾದ ಕಥೆಗಳನ್ನು ಕುತೂಹಲ ಕೆರಳುವಂತೆ ಹಾಡುತ್ತಾ ನಿರೂಪಿಸುತ್ತಾರೆ. ಆಧುನಿಕ ಕೀರ್ತನಕಾರರಂತಿರುವ ಕರಪಾಲ ಮೇಳದ ಗುರು ನವರಸಗಳನ್ನು ತನ್ನ ಮೇಳದಲ್ಲಿ ತುಂಬಿ ಜನರನ್ನು ರಂಜಿಸುತ್ತಾನೆ. ಹಾಡುಕುಣಿತಗಳು ಬಂದಾಗ ಗುರುವಿನ ಒಂದೊಂದು ಮಾತಿಗೂ ಹೂಂಗುಡುತ್ತಿರುತ್ತಾರೆ. ಮಧ್ಯೆ ಮಧ್ಯೆ ಅವರು ಸಣ್ಣಪುಟ್ಟ ಕುತೂಹಲದ ಪ್ರಶ್ನೆಗಳನ್ನು ಹಾಕುವುದೂ ಉಂಟು. ಶಿಷ್ಯರು ಗುರುವಿನ ಕಥಾನಿರೂಪಣೆಗೆ ಸ್ಫೂರ್ತಿ ನೀಡುತ್ತಾರೆ.

ಕರಪಾಲ ಮೇಳದಲ್ಲಿ ಸುಶ್ರಾವ್ಯವಾದ ಹಾಡುಗಾರಿಕೆ ಮತ್ತು ಕಥೆಯ ನಿರೂಪಣೆ ಆಕರ್ಷಣೀಯ. ಇವರು ಮಾಡುವ ನಗರ ಮುತ್ತು ರಾಜನ ವೈಭವದ ವರ್ಣನೆಗಳನ್ನು ಅವರ ಬಾಯಿಂದಲೇ ಕೇಳಿ ಆನಂದಿಸಬೇಕು.

"ಕೆತ್ತುಗಲ್ಲಿನ ಕೋಟೆ ಮುತ್ತಿನ ತೋರಣ..." ಹೀಗೆ ಆರಂಭವಾಗುವ ವರ್ಣನೆ

"ಹಾಲು ಮಾರುವ ಬೀದಿ, ನೂಲು ಮಾರುವ ಬೀದಿ
ಸಾಲು ಸಕಲಾತಿಗಳ ಮಾರುವ ಬೀದಿ..."

ಎಂದು ನಗರದ ಭವ್ಯತೆಯ ಚಿತ್ರಣವನ್ನು ಕಣ್ಣಿಗೆ ಕಟ್ಟುವಂತೆ, ಕೇಳುಗರ ಮನ ಮುಟ್ಟುವಂತೆ ಚಿತ್ರಿಸುತ್ತಾರೆ.

ಕರಪಾಲ ಮೇಳದವರ ಕಥಾನಿರೂಪಣೆಗೆ ಮಾರುಹೋದ ಗ್ರಾಮೀಣರು ಹಬ್ಬ ಹರಿದಿನಗಳಲ್ಲಿ, ಜಾತ್ರೆ ಉತ್ಸವಗಳಲ್ಲಿ ಕಲಾವಿದರನ್ನು ಬರಮಾಡಿಕೊಂಡು ಕಲಾಪ್ರದರ್ಶನದ ವ್ಯವಸ್ಥೆ ಮಾಡುತ್ತಾರೆ. ಪ್ರೇಕ್ಷಕರಿಗೆ ಬೇಸರವಾಗದಂತೆ ನೋಡಿಕೊಳ್ಳಲು ಕಲಾವಿದರು ಕಥೆಯ ಮಧ್ಯೆ ಹಾಸ್ಯಪ್ರಸಂಗಗಳನ್ನು ಹೇಳಿ ಕಥೆಯನ್ನು ಮುಂದುವರಿಸಿಕೊಂಡು ಹೋಗುತ್ತಾರೆ. ಗ್ರಾಮೀಣರು ರಾತ್ರಿಯೆಲ್ಲ ಆಸಕ್ತಿಯಿಂದ ಕುಳಿತು ಕೇಳಿ ಸಂತೋಷ ಪಡುತ್ತಾರೆ. ಮರುದಿನ ಬೆಳಿಗ್ಗೆ ತಮ್ಮ ಶಕ್ತ್ಯಾನುಸಾರ ದವಸ-ಧಾನ್ಯ ಕೊಟ್ಟು ಗೌರವಿಸಿ ಕಳುಹಿಸಿಕೊಡುತ್ತಾರೆ."[೯]

ಕುಟುಂಬ ಯೋಜನೆ, ಮದ್ಯಪಾನ ನಿಯಂತ್ರಣ, ಜೂಜುಗಾರಿಕೆ ಪರಿಣಾಮ ಮೊದಲಾದ ವಿಚಾರಗಳನ್ನು ಗ್ರಾಮೀಣ ಜನರಿಗೆ ಸರಳವಾಗಿ, ಪರಿಣಾಮಕಾರಿಯಾಗಿ ಮುಟ್ಟಿಸಿ ಅವರಲ್ಲಿ ಅರಿವಿನ ಜ್ಯೋತಿಯನ್ನು ಬೆಳಗಿಸಲು ಸರ್ಕಾರ ಹಾಗೂ ಸಂಘಸಂಸ್ಥೆಗಳು ಕರಪಾಲ ಮೇಳದ ಕಲಾವಿದರನ್ನು ಬಳಸಿಕೊಳ್ಳುತ್ತಿದ್ದಾರೆ. ಕಥೆಯ ಮಧ್ಯೆ ಸರ್ಕಾರದ ಯೋಜನೆಗಳನ್ನು ಮನಮುಟ್ಟುವಂತೆ ಹೇಳುವಲ್ಲಿ ಅವರ ಪಾತ್ರ ಗಮನಾರ್ಹವಾದುದು.

ಉತ್ತರ ಕರ್ನಾಟಕದಲ್ಲೂ ಕರಪಾಲದವರು ಅಲ್ಲಲ್ಲಿ ಕಂಡುಬರುತ್ತಾರೆ. ಇವರನ್ನು ಆ ಭಾಗದಲ್ಲಿ 'ಕರಪಲ್ಲ'ದವರು ಎಂದು ಕರೆಯುತ್ತಾರೆ. ಕರಪಲ್ಲದ ಕಲೆ ಬಹುಮಟ್ಟಿಗೆ ಜಂಗಮರಿಗೆ ಮಾತ್ರ ಮೀಸಲಾದರೂ ಈ ಕಲೆಯನ್ನು ಕಲಿತ ಕಲಾವಿದರನ್ನು 'ಕರಪಲ್ಲದ ಐಗಳು' ಎಂದು ಕರೆಯುತ್ತಾರೆ.

ಕರಪಲ್ಲದ ಮೇಳ ಸಂಪೂರ್ಣವಾಗಲು ಕೊನೆಯ ಪಕ್ಷ ಮೂವರು ಬೇಕು. ಒಬ್ಬರು ಗುರು, ಉಳಿದವರಿಬ್ಬರು ಶಿಷ್ಯರು (ಇವರ ಸಂಖ್ಯೆ ಎರಡಕ್ಕಿಂತ ಹೆಚ್ಚಿರಬಹುದು) ಗುರುಗಳು ದಮ್ಮಡಿಯಂತಹ ವಾದ್ಯವನ್ನು ಹಿಡಿದು ನಿಂತರೆ, ಅವರಿಂದ ಸುಮಾರು ೨೦೦-೩೦೦ ಅಡಿ ದೂರದಲ್ಲಿ ಶಿಷ್ಯರು ತಾಳಗಳನ್ನು ಹಿಡಿದು ನಿಲ್ಲುತ್ತಾರೆ. ಗುರುಗಳನ್ನು ಅನುಸರಿಸಿ ಶಿಷ್ಯರು ಹಾಡುತ್ತಾರೆ. ಈ ಹಾಡುಗಳಲ್ಲಿ ಬಹುಮಟ್ಟಿಗೆ ಎಲ್ಲವೂ ಬಸವ, ಚನ್ನಬಸವ ಮುಂತಾದ ಶರಣರಿಗೆ ಸಂಬಂಧಪಟ್ಟ ಕಾಲಜ್ಞಾನಗಳು. ಹೀಗೆ ಇವರು ಸಂತೆಗಳಲ್ಲಿ, ಊರಿನ ಬೀದಿಗಳಲ್ಲಿ ಹಾಡುತ್ತಿದ್ದರೆ ಜನ ಮುಖ್ಯವಾಗಿ ಗುರುಗಳ ಸುತ್ತ ನೆರೆಯುತ್ತಾರೆ. ಹಾಡುಗಳನ್ನು ಮಧ್ಯ ನಿಲ್ಲಿಸಿ ಗುರುಗಳು ನೆರೆದ ಜನರಲ್ಲಿ ನಿಗದಿಯಾದ ಹಣವನ್ನು ಒಂದಾಣೆ ಅಥವಾ ಎರಡಾಣೆ ಕೊಡಲು ಸಿದ್ಧವಿರುವವರ ಹೆಸರುಗಳನ್ನು ತಿಳಿದುಕೊಂಡು ದೂರದಲ್ಲಿ ನಿಂತಿರುವ ಶಿಷ್ಯರಿಗೆ ಬೆರಳ ಸಂಜ್ಞೆಗಳ ಮೂಲಕ ತಿಳಿಸುತ್ತಾರೆ. ಅವರು ಗುರುಗಳು ನೀಡುವ ಸಂಜ್ಞೆಗಳನ್ನು ಅರ್ಥಮಾಡಿಕೊಂಡು ಹಣ ಕೊಟ್ಟವರ ಹೆಸರುಗಳನ್ನು ಗಟ್ಟಿಯಾಗಿ ಹೇಳುತ್ತಾರೆ. ಕೆಲವು ಸಾರಿ ಹಣಕೊಟ್ಟವರು ತಮ್ಮ ಮನೆದೇವರ ಹೆಸರುಗಳನ್ನು ಹೇಳುವಂತೆ ಮಾಡುವುದೂ ಉಂಟು. ಹೆಸರನ್ನು ಬಾಯಿಬಿಟ್ಟು ಹೇಳದೆ ಸಂಜ್ಞೆಯಿಂದಲೇ ಹೇಳಿಸುವ ಈ ವಿದ್ಯೆಗೆ ಜನರು ಬೆರಗಾಗುತ್ತಾರೆ. ಕರಪಲ್ಲ ಹೀಗೆ ದುಡಿಯುವ ಮಾರ್ಗವೂ ಆಗಿದೆ. ಹೆಸರುಗಳನ್ನು ಹೇಳಿದ ಮೇಲೆ ಮತ್ತೆ ಹಾಡುಗಳನ್ನು ಆರಂಭಿಸಿ ಮುಂದೆ ನಡೆಯುತ್ತಾರೆ."

ಕರಪಲ್ಲದ ಗುರು ಸಂಜ್ಞೆಗಳಿಗೆ ಬಲಗೈಯನ್ನು ವಿಶೇಷವಾಗಿ ಬಲಗೈಯ ಬೆರಳುಗಳನ್ನು ಬಳಸುತ್ತಾರೆ. (ಎಡಗೈಯನ್ನು ಬಳಸುವುದೇ ಇಲ್ಲ) ಇಲ್ಲಿ ಸಂಜ್ಞೆಗಳಿರುವುದು ಭಾಷೆಯ ಪದಗಳಿಗಲ್ಲ. ಧ್ವನಿಗಳಿಗೆ ಅಥವಾ ಅಕ್ಷರಗಳಿಗೆ. ಸೂಕ್ಷ್ಮವಾಗಿ ವಿಚಾರ ಮಾಡಿದರೆ ಸಂಜ್ಞೆಗಳನ್ನು ನಿಯೋಜಿಸಿದವರು ಕನ್ನಡದ ವರ್ಣಮಾಲೆಯನ್ನು ತಮ್ಮ ಮುಂದಿಟ್ಟುಕೊಂಡು ಅಲ್ಲಿಯ ಒಂದೊಂದು ಚಿಹ್ನೆಗೂ ಆಂಗಿಕ ಸಂಜ್ಞೆಗಳನ್ನು ಕಲ್ಪಿಸಿದ್ದಾರೆ ಎಂಬುದರಲ್ಲಿ ಸಂದೇಹವಿಲ್ಲ. ಅಂದರೆ ಕನ್ನಡದ ಬರಹವನ್ನು ಈ ಸಂಜ್ಞೆಗಳ ವ್ಯವಸ್ಥೆ ಚಾಚೂ ತಪ್ಪದಂತೆ ಅನುಸರಿಸಿದೆ. ಕೆಲವು ಕಡೆ ಬರಹದ ರೀತಿಯನ್ನು ಸರಳಗೊಳಿಸಿಕೊಂಡಿದೆ. ಕನ್ನಡದ ಮಿತ ಸಂಖ್ಯೆಯ ಅಕ್ಷರಗಳ ಸಹಾಯದಿಂದ ಭಾಷೆಯ ಎಲ್ಲ ಪದರಗಳನ್ನು ಬರೆಯಲು ಸಾಧ್ಯವಾಗುವಂತೆ ಕೆಲವು ಮಿತಸಂಖ್ಯೆಯ ಸಂಜ್ಞೆಗಳ ಸಹಾಯದಿಂದ ಏನನ್ನು ಬೇಕಾದರೂ ಕಾಣಿಸುತ್ತಿರುವ ಜನರಿಗೆ ಮಾತಿನ ಸಹಾಯವಿಲ್ಲದೆಯೇ ಪ್ರವಚನ ಮಾಡಲು ಸಾಧ್ಯವಾಗುತ್ತದೆ"[೧೦] ಎಂಬುದನ್ನು ಕರಪಲ್ಲದ ಪ್ರದರ್ಶನದಲ್ಲಿ ಕಾಣಬಹುದಾಗಿದೆ.

"ಕರಪಲ್ಲ ಹೇಳುವವರೂ, ಅದನ್ನು ಒಡೆದು ಬಿಡಿಸುವವರೂ ಇಬ್ಬರೂ ಬುದ್ಧಿವಂತರಾಗಿರಬೇಕು. ಒಬ್ಬೊಬ್ಬರ ಹೆಸರು ಹೇಳುವಾಗಲೂ ಒಂದೊಂದು ಪರೀಕ್ಷೆಯನ್ನು ಗೆದ್ದು ಬಂದಂತಾಗುತ್ತದೆ. ಶಿಷ್ಯರಿಗೆ ಅರ್ಥವಾಗುವಂತೆ ಹೇಳುವ ಕಲೆಗಾರಿಕೆ ಗುರುವಿಗೆ ಇರಬೇಕು. ಶಿಷ್ಯರು ಗುರುವಿನ ಸಂಜ್ಞೆಯನ್ನು ಸರಿಯಾಗಿ ಅರ್ಥಮಾಡಿಕೊಂಡು ತಪ್ಪಿಗೆ ಅವಕಾಶಕೊಡದಂತೆ ತುಂಬಾ ಜಾಣ್ಮೆಯಿಂದ ಉತ್ತರವನ್ನು ಹೇಳಬೇಕಾಗುತ್ತದೆ."

ಗುರುವಿನಿಂದ ಪರಸ್ಪರ ದೂರ ನಿಂತಿರುವ ಶಿಷ್ಯರು ಗುರುವಿನೊಂದಿಗೆ ಹಾಡುತ್ತಿರುತ್ತಾರೆ. ಹಾಡನ್ನು ಮಧ್ಯೆ ನಿಲ್ಲಿಸಿ ಗುರುಗಳು ಸಂಜ್ಞೆಮಾಡುತ್ತಾರೆ. ಶಿಷ್ಯರು ಗುರುಗಳು ನೀಡುವ ಸಂಜ್ಞೆಗಳನ್ನು ಓದಿಕೊಂಡು ಅವರು ಹೇಳಿದ ಹೆಸರು ಕಲ್ಲಪ್ಪ ಆಗಿದ್ದರೆ-

ಕಲ್ಲಪ್ಪ ಹೌದೇನ್ರಿ
ಮತ್ತಿನ್ನ್ಯಾರ್ ಹೇಳಯ್ಯಾ
ಸುವ್ವಿ ಬಾ ಚನ್ನಬಸವಯ್ಯ ಸುವ್ವಿ

ಎಂದು ಒಡೆದು ಹೇಳಿ

ಸುವ್ವಿ ಬಾ ಸಂಗಯ್ಯ
ಸುವ್ವಿ ಬಾ ಲಿಂಗಯ್ಯ
ಸುವ್ವಿ ಬಾ ಚನ್ನಬಸವಯ್ಯ ಸುವ್ವಿ

ಎಂಬ ಪಲ್ಲವಿ ಹಾಡಿ, ಹಾಡುಗಳನ್ನು ಮುಂದುವರಿಸುತ್ತಾರೆ.

ಕರಪಲ್ಲದವರು ಹಾಡುವ ಒಂದು ಹಾಡು ಹೀಗಿದೆ:

ಸುವ್ವಿ ಬಾ ಸಂಗಯ್ಯ
ಸುವ್ವಿ ಬಾ ಲಿಂಗಯ್ಯ
ಸುವ್ವಿ ಬಾ ಚನ್ನಬಸವಯ್ಯ ಸುವ್ವಿ ೧

ಸುವ್ವಿ ಬಾ ನೀ ಚನ್ನಬಸವಯ್ಯ ಬರುವಾಗ
ಹೊಯ್ಕಲು ಬೊಬ್ಬಿ ಜಗವೆಲ್ಲ ಸುವ್ವಿ ೨

ನಮ್ಮಯ್ಯ ಬರುವಾಗ ಉಮ್ಮಾಯೆ ಶರಣರು
ಕರ್ಮದ ಲೋಕ ಅಳಿದವ ಸುವ್ವಿ
ಕರ್ಮದ ನೀ ಲೋಕ ಅಳಿದವ ಮುಂದಿನ
ಧರ್ಮದ ಗುರುಬಸವ ಬರುವಾಗ ಸುವ್ವಿ ೩

ಕಾರಣಿಕದ ದಿನವು ಭೋರೆಂದು ಬರುವಾಗ
ಮೂರು ದೈವವ ಮುಳಿಗ್ಯಾವ ಸುವ್ವಿ
ಮೂರು ನೀ ದೈವವ ಮುಳಿಗ್ಯಾವ ಮುಂದಿನ್ನು
ಘೋರಪಾತಕರು ಬರುವಾಗ ಸುವ್ವಿ ೪

ಈಶಾನ ದಿಕ್ಕೀಲ ಬೀಸಿತು ಬಿರುಗಾಳಿ
ದೇಶಮಂಡಲವ ಮುಸಿಕೀತು ಸುವ್ವಿ
ದೇಶಾ ನೀ ಮಂಡಲವ ಮುಸುಕೀತು ಕೆಂಧೂಳ
ಮೋಸವಾದವು ಮಳೆಗಾಲ ಸುವ್ವಿ ೫

ಆದ(ಗ?)ರ ಅಳಿದಾವು ಗೂಗೇಗಳಾದವು
ಕಾಗೀನ ದಂಡು ಬರುವಾಗ ಸುವ್ವಿ
ಕಾಗೀನ ನೀ ದಂಡು ಬರುವಾಗ ಜಗವೆಲ್ಲ
ಕೂಗಿ ಬೊಬ್ಬೆಗಳು ಮನೆಮನೆಗೆ ಸುವ್ವಿ ೬

ಅಣ್ಣಗಳ ದಿನಗಳು ಹಣ್ಣಾಗಿ ಬರುವಾಗ
ಕಣ್ಣೇಲಿ ಕಾಣೆನೆನುಬ್ಯಾಡ ಸುವ್ವಿ
ಕಣ್ಣೇಲಿ ನೀ ಕಾಣೆನೆನುಬ್ಯಾಡ ಮುಂದಿನ್ನ
ಮಣ್ಣು ಹೊಯ್ಕುಂಬ ದಿನ ಬಂತು ಸುವ್ವಿ ೭

ಅಗ್ಗದ ದಿನಗಳು ಮುಗ್ಗುತ ಬರುವಾಗ
ಸುಗ್ಗಿ ಹೋಳೀಗಿ ಕನಸಾಗಿ ಸುವ್ವಿ
ಸುಗ್ಗೀ ನೀ ಹೋಳೀಗಿ ಕನಸಾಗಿ ಮುಂದಿನ್ನ
ಬೊಬ್ಬಿ (ಗ್ಗಿ?) ಹೊಯ್ಕುಂಬೂ ದಿನ ಬಂತು ಸುವ್ವಿ ೮

ನಾಲ್ಕು ದಿಕ್ಕಿನ ಮೂಲಿ ಏಕಾಗಿ ಬರುವಾಗ
ಲೋಕದ ಕರ್ಮ ಅಳಿದೀತ ಸುವ್ವಿ
ಲೋಕದ ನೀ ಕರ್ಮ ಅಳಿದೀತ ಮುಂದಿನ್ನು
ಪಾಕ ಮಾಡುವಳು ಧರಣೀಯ ಸುವ್ವಿ ೯

ಅಮ್ಮಿನ ದುರ್ಗಕ್ಕೆ ಅಮ್ಮಾಜಿ ಬರುವಾಗ
ಗುಮ್ಮಾಡಿ ಬಿಟ್ಟ ಜಗವೆಲ್ಲ ಸುವ್ವಿ
ಗುಮ್ಮಾಡಿ ನೀ ಬಿಟ್ಟ ಜಗವೆಲ್ಲ ಮುಂದಿನ್ನ
ಹಮ್ಮಿನ್ ಮನುಜರಿಗೆ ತಿಳಿದಾಗ ಸುವ್ವಿ ೧೦

ಹುಟ್ಟಿದೇಳು ದಿವಸಕ್ಕೆ ಬೆಟ್ಟಗಳು ನಡುಗ್ಯಾವು
ಬೆಟ್ಟದ ಗುಂಡ ಉರುಳ್ಯಾವು ಸುವ್ವಿ
ಬೆಟ್ಟದ ನೀ ಗುಂಡ ಉರುಳ್ಯಾವ ಮುಂದಿನ್ನ
ಪಟ್ಟಕ್ಕೆ ಚನ್ನಬಸವ ಬರುವಾಗ ಸುವ್ವಿ" ೧೧

ಈ ಮೇಲಿನ ಹಾಡುಗಳನ್ನು ಕಾಲಜ್ಞಾನದ ವಚನಗಳೆಂದು ಕರೆಯುತ್ತಾರೆ. ಮುಂದೆ ನಡೆಯುವ ಆಗುಹೋಗುಗಳನ್ನು ಒಳಗೊಂಡಿರುವ ಭವಿಷ್ಯವಾಣಿಯನ್ನು ನಮ್ಮ ಗ್ರಾಮೀಣರು ಶ್ರದ್ಧಾಭಕ್ತಿಗಳಿಂದ ಕೇಳುತ್ತಾರೆ. ಈ ಎಲ್ಲ 'ವಚನ'ಗಳನ್ನು ಬಸವಣ್ಣನವರು ನಿಧನರಾಗುವ ಕಾಲಕ್ಕೆ ಚನ್ನಬಸವಣ್ಣನವರ ಸಹೋದರಿ ಅಕ್ಕನಾಗಮ್ಮ ಸಾರಿದರು ಎಂದು ನಂಬುತ್ತಾರೆ. ಕಾಲಜ್ಞಾನದ ಹಾಡುಗಳನ್ನು ಹಾಡುವಾಗ ಜನಪದರು ಮೈಯೆಲ್ಲಾ ಕಿವಿಯಾಗಿ ಕೇಳುತ್ತಾರೆ. ಅನ್ಯಾಯ, ಅನೀತಿ, ಅಧರ್ಮ ತಲೆಎತ್ತಿ ಧರ್ಮನಾಶವಾಗುವ ಸಂದರ್ಭದಲ್ಲಿ ಜಗತ್ತನ್ನು ರಕ್ಷಿಸಲು ಬಸವಣ್ಣ ಹುಟ್ಟಿಬರುತ್ತಾರೆ. ಅವರು ಬಂದು ಪಾಪಕೂಪವಾಗಿದ್ದ ಜಗತ್ತಿನಲ್ಲಿ ಧರ್ಮವನ್ನು ಮತ್ತೆ ಪುನಶ್ಚೇತನಗೊಳಿಸುತ್ತಾರೆ ಎಂಬುದನ್ನು ಈ ಕಾಲಜ್ಞಾನದ ಹಾಡುಗಳಲ್ಲಿ ಗಮನಿಸಬಹುದು.

ವೃತ್ತಿಗಾಯಕರು ಸಾಮಾನ್ಯ ಗಾಯಕರಿಗಿಂತ ಭಿನ್ನವಾಗಿರುತ್ತಾರೆ. ಅವರು ಹಾಡುವುದನ್ನೇ ವೃತ್ತಿಯನ್ನಾಗಿಸಿಕೊಂಡು ಅದರ ಮೇಲೆಯೇ ಅವಲಂಬಿಸಿ ಬದುಕುವವರು. ಜನರ ಕುತೂಹಲವನ್ನು ಕೆರಳಿಸುವಂತಹ, ಅವರನ್ನು ತಮ್ಮತ್ತ ಸೆಳೆಯುವ ಶಕ್ತಿಯನ್ನು ಅವರು ಪಡೆದಿರುತ್ತಾರೆ. ಗುರುಗಳಿಂದ ಅಭ್ಯಾಸಮಾಡಿರುತ್ತಾರೆ. ಕತೆಗಾರಿಕೆ, ಮಾತುಗಾರಿಕೆ, ಜೊತೆಗೆ ಉತ್ತಮ ಶಾರೀರ ಮುಖ್ಯವಾಗಿರಬೇಕಾಗುತ್ತದೆ. ಗ್ರಾಮೀಣರು ಈ ಕಲಾವಿದರನ್ನು ಆಗಾಗ ಆಹ್ವಾನಿಸಿ ಹಾಡುವ ಅವಕಾಶವನ್ನು

ಕಲ್ಪಿಸಿಕೊಡುತ್ತಾರೆ. ಕೆಲವು ಸಂದರ್ಭಗಳಲ್ಲಿ ವೃತ್ತಿಗಾಯಕರೇ ಜನರ ಬಳಿ ಹೋಗಿ ತಮ್ಮ ಕಾವ್ಯಪ್ರತಿಭೆಯನ್ನು ಪ್ರದರ್ಶಿಸಿ ಅವರಿಂದ ದವಸಧಾನ್ಯ ಕಾಣಿಕೆ ಪಡೆಯುತ್ತಾರೆ. ಕಲಾವಿದರು ಇಲ್ಲಿ ಸದಾ ಜಾಗೃತರಾಗಿರುತ್ತಾರೆ. ಮೇಳದಿಂದ ಮೇಳಕ್ಕೆ ತಮ್ಮ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುತ್ತಾ ಹೋಗುತ್ತಾರೆ. ತಮ್ಮ ಕಲಾಪ್ರದರ್ಶನ ಪ್ರೇಕ್ಷಕ ಸಮೂಹವನ್ನು ಆಕರ್ಷಿಸುವಂತೆ ಮಾಡಲು ಎಲ್ಲಾ ರೀತಿಯ ಮುನ್ನೆಚ್ಚರಿಕೆಯನ್ನು ವಹಿಸುತ್ತಾರೆ. ಜನರನ್ನು ರಂಜಿಸಲು, ಅಗತ್ಯವಾದ ವೇಷಭೂಷಣ, ವಾದ್ಯವಿಶೇಷಗಳು, ನೃತ್ಯ, ಕಥೆ, ಕಥೆಗೆ ಪೂರಕವಾಗುವ ಉಪಕಥೆ -ಹೀಗೆ ಹಲವು ರೀತಿಯ ವೈವಿಧ್ಯಗಳನ್ನು ಅಳವಡಿಸಿಕೊಂಡು ಮೇಳ ಕಳೆಗಟ್ಟುವಂತೆ ಮಾಡುತ್ತಾರೆ. ರಾತ್ರಿಯೆಲ್ಲಾ ಪ್ರೇಕ್ಷಕರಿಗೆ ಬೇಸರವಾಗದಂತೆ ಹಾಡುವ ಕಲೆಗಾರಿಕೆಯನ್ನು ನಿರಂತರ ಅಭ್ಯಾಸದಿಂದ ರೂಢಿಸಿಕೊಂಡಿರುತ್ತಾರೆ. ಇವರ ಕಲಾಪ್ರದರ್ಶನ ನಿಂತ ನೀರಾಗದೆ ಸದಾ ಪ್ರವಹಿಸುವ ನದಿಯಂತಿರುತ್ತದೆ. ತಮ್ಮ ಕಥೆ ಹಾಗೂ ಹಾಡಿನ ಭಂಡಾರಕ್ಕೆ ಹೊಸತನ್ನು ಸೇರಿಸಿಕೊಳ್ಳುತ್ತಲೇ ಇರುವ ಕಲಾವಿದರು ಮುಖ್ಯವಾಗಿ ಪ್ರೇಕ್ಷಕ ಸಮೂಹ ತಮ್ಮತ್ತ ಕೇಂದ್ರೀಕರಿಸುವಂತೆ ಮಾಡುವ ಕಲೆಗಾರಿಕೆಯನ್ನು ರೂಢಿಸಿಕೊಂಡಿರುತ್ತಾರೆ.

ವೃತ್ತಿಗಾಯಕರು ನಡೆಸಿಕೊಡುವ ಕಲಾಮೇಳಗಳಲ್ಲಿ ಹಾಡಿನಷ್ಟೇ ಪ್ರಮುಖವಾದುದು ವಾದ್ಯಗಳ ಬಳಕೆ. ಕಲಾವಿದರು ಮುಖ್ಯವಾದ್ಯಗಳ ಜೊತೆಗೆ ಇತರ ವಾದ್ಯಗಳನ್ನು ವೈವಿಧ್ಯಕ್ಕಾಗಿ ಬಳಸುವುದನ್ನು ಕಾಣಬಹುದು. ಕರಪಾಲ ಮೇಳದಲ್ಲಿ ಏಕತಾರಿ ಮತ್ತು ದಮ್ಮಡಿಗಳನ್ನು ಬಳಸಿದರೆ, ನೀಲಗಾರ ಮೇಳದಲ್ಲಿ ಗಗ್ಗರ ಮತ್ತು ಥಕ್ಕೆಗಳನ್ನು ಬಳಸಲಾಗುತ್ತದೆ. ಗೊರವ ಮೇಳದಲ್ಲಿ ಡಮರುಗದ ಜೊತೆಗೆ ಕೊಳಲೂ ಸೇರುತ್ತದೆ. ಚೌಡಿಕೆಮೇಳದಲ್ಲಿ ಮುಖ್ಯವಾದ್ಯವಾದ ಚಾರಿಕೆಯ ಜೊತೆಗೆ ಒಂದು ಶ್ರುತಿವಾದ್ಯವೂ ಸೇರುತ್ತದೆ. ಕಿನ್ನರಿ ಜೋಗಿ ಮೇಳದಲ್ಲಿ ತಾಳ-ದಮಡಿಗಳು ಸೇರುತ್ತವೆ. ವಾಘೀ ಮುರಳಿಯಲ್ಲಿ ತುಂತಣಿಯ ಜೊತೆಯಲ್ಲಿ ತಾಳವೂ ಸೇರುತ್ತದೆ. ಪೋಷಕ ವಾದ್ಯಗಳಲ್ಲದೆ ಮುಖ್ಯವಾದ್ಯವೊಂದನ್ನೇ ಬಳಸುವ ಮೇಳಗಳಲ್ಲಿ ಹೆಳವರ ಮೇಳ, ಜುಂಜಪ್ಪನ ಮೇಳ ಮುಖ್ಯವಾದವು.[೨]

ಕರಪಾಲ ಮೇಳದಲ್ಲಿ ಕಾಡುಸಿದ್ಧರಾಮನ ಕಥೆಯನ್ನು ಮನಮುಟ್ಟುವಂತೆ ಪ್ರೇಕ್ಷಕರ ಮನ ಕರಗುವಂತೆ ಹೇಳುತ್ತಾರೆ. ಈ ಕಥೆ ಗದ್ಯ ಪದ್ಯ ಮಿಶ್ರಿತವಾದ ರಚನೆಯಾಗಿದ್ದು ಎರಡು ಸಾಲಿನ ಹಾಡುಗಳು ವೈವಿಧ್ಯಕ್ಕಾಗಿ ಬರುತ್ತವೆ. ಕಾಡು ಸಿದ್ಧಮ್ಮನ ಕಥೆ ಹೀಗೆ ಪ್ರಾರಂಭವಾಗುತ್ತದೆ:

ಮಧುರಾವತಿ ಎಂಬೋ ಪಟ್ಟಣ
ಮದನಾ ಮಾರಾಜಾ ದೊರೆಯೂ
ಲಗ್ನವಾಗಿ ಶಿವನೇ ಹನ್ನೆರಡು ವರ್ಷ
ಮಕ್ಕಾಳಿಲ್ಲದೆ ದುಃಖ ಮಾಡ್ಯಾರು

ನಮ್ಮದು ಬಂಜೆ ಪಟ್ಟಣ ಆಯಿತಲ್ಲಾ
ಬಂಜೆಬಾಳ ನಾವು ಬಾಳಲಾರೇವು
ಬಂಜೆಂಬೋ ಶಬ್ದ ಮರೆಸೋ ಶಿವನೆ
ಎಂದಿಗೆ ಶಿವನೇ ಕಂದನ ಪಡೆದೇವು

ಕಂದನ ಸುಖವ ಎಂದಿಗೆ ನೋಡಲಿ
ಕಲಾವತಿ ತಾಯಿ ದುಃಖ ಮಾಡ್ಯಾಳು
ಕಂದ ಹುಟ್ಟಿದ ಮೂರು ದಿವಸಕೆ
ಕಂದಾನು ಸಾಯಲೊ ನಾನು ಸಾಯಲೊ
ಬಂಜೆಂಬೋ ಶಬ್ದ ಮರಸೋ ಶಿವನೇ
....

....
ನಾವು ಹುಟ್ಟಿ ಶಿವನೆ ಫಲವೇನು ಬಂತು
ರಾಜನಾಗೀ ನಾನು ರಾಜ್ಯವಾಳೀಗ
ರಾಜ್ಯವಾಳೀಗ ಫಲವೇನು ಬಂತು
ಕಲಾವತಿ ತಾಯಿ ದುಃಖ ಮಾಡಿದಳು
ಏನು ಇದ್ದರೆ ನಮಗೇನು ದೊರೆಗಳೇ
ಪಲ್ಲವಿದ್ದೇನು ಪಾಳ್ಯವಿದ್ದೇನು

ಹಣವು ಇದ್ದರೆ ಆಸ್ತಿ ಇದ್ದರೆ
ಮಕ್ಕಳಿಲ್ಲಾದ ಮನೆಯು ಏತಕ್ಕೆ
ಒಕ್ಕಲಿಲ್ಲದ ಊರು ಏತಕ್ಕೆ
ಹಿರಿಯರಿಲ್ಲದ ಮನೆಯೂ ಏತಕ್ಕೆ
ಗುರುವಿಲ್ಲದ ಮಠವಿನ್ಯಾತಕೆ
ಗಂಗೆ ಇಲ್ಲದ ನದಿಯೂ ಏತಕ್ಕೆ
....

ಹೀಗೆ ಅವರ ಕಥಾನಿರೂಪಣಾ ಶೈಲಿ ಮುಂದುವರಿಯುತ್ತದೆ.

ಕಾಶಿರಾಜನಿಗೆ ಮಕ್ಕಳಿರಲಿಲ್ಲ. ಶಿವನ ವರದಿಂದ ಹೆಣ್ಣುಮಗುವನ್ನು ಪಡೆಯುತ್ತಾನೆ. ಮಗುವಿಗೆ ಮೂರುದಿನ ತುಂಬುವಾಗ ಕಾಶಿರಾಜನು ಚಂದ್ರಸೇನ ರಾಜನೊಂದಿಗೆ ಪಗಡೆ ಆಡಿ ಎಲ್ಲವನ್ನೂ ಸೋತು ಬಾಣಂತಿ ಮಗುವಿನೊಂದಿಗೆ ಕಾಡಿಗೆ ಬರುತ್ತಾನೆ. ಕಾಡಿನಲ್ಲಿ ಅಲೆಯುವ ಚಿತ್ರ ಮನಕರಗುವಂತೆ ಈ ಕಾವ್ಯದಲ್ಲಿ ಮೂಡಿಬಂದಿದೆ:

ಕಾಡಿಗೆ ಸೇರವರೆ ಕಾಶೀ ದೊರೆರಾಯ
ಕಾಡಿಗೆ ಬಂದು ಶಿವನ ಸೇರ್‍ಯಾರು
ಉಣುವುದಕೆ ಅನ್ನವು ಇಲ್ಲವೋ ಶಿವನೇ
ಹೊದಿಯಲು ಬಟ್ಟೆ ಇಲ್ಲವೋ ಶಿವನೆ
ಗೆಡ್ಡೆಗೆಣಸುಗಳು ತಿನ್ನುವರವರು
ಕಾಡಿನಲ್ಲಿ ಶಿವನೆ ದುಃಖ ಮಾಡುವರು
ಕಾಶಿರಾಜನ ಹೆಂಡತಿಯಾದರೆ
ಬ್ಯಾಸಿಗೆ ಬಿಸಿಲು ವಸಂತ ಕಾಲವು
ತಡೆಯಲಾರದೆ ದುಃಖ ಮಾಡ್ಯಾಳು
ಕಲ್ಲುಮುಳ್ಳುಗಳ ತುಳಿಯಲಾರದೆ
ದುಃಖ ಮಾಡ್ಯಾರು ಶಿವನಿಗೆ ಅವರು
....
ಪಾಪಿ ಜನ್ಮವು ಹೆಣ್ಣು ಜನ್ಮವು
ಹೆಣ್ಣು ಜನ್ಮವು ಹುಟ್ಟಲೆ ಬಾರದು
ಇಂಥ ಕಷ್ಟವ ಶಿವನು ಕೊಟ್ಟನು
ಒಂದು ಸೆರಗನ್ನೇ ಹಾಸ್ಯಾಳಮ್ಮಯ್ಯ
ಉಟ್ಟಂಥ ಸೀರೆ ಸೆರಗಾ ಹಾಸ್ಯಾಳು
ಮಗುವನ್ನು ಶಿವನೆ ಮಲಗಿಸಿದಾಳು

ಹೀಗೆ ಕಥೆಯು ಮುಂದುವರಿಯುತ್ತದೆ. ಶಿವನು ಅವರ ಕಷ್ಟವನ್ನು ನೋಡಲಾರದೆ ಅವರಿಗೆ ಚೆನ್ನಾಗಿ ನಿದ್ರೆ ಬರುವಂತೆ ಮಾಡಿ ಮಗುವನ್ನು ಎತ್ತಿಕೊಂಡು ಹೋಗಿ ಸೀಗೆ ತರಗನ್ನು ನೆಲದ ಮೇಲೆ ಹಾಸಿ ಮಲಗಿಸಿ ಅದನ್ನೇ ಹೊದಿಸಿ ಹೋಗುತ್ತಾನೆ.

ಎಚ್ಚರಗೊಂಡ ದಂಪತಿಗಳು ಮಗುವನ್ನು ಕಾಣದೆ ದುಃಖಪಡುತ್ತಾ ಕಾಡಿನಲ್ಲೆಲ್ಲಾ ಹುಡುಕುತ್ತಾರೆ. ಇತ್ತ ಬೆಳಗಾಗುತ್ತದೆ. ಕಾಡುಸಿದ್ದೇಶನ ಕಣ್ಣಿಗೆ ಮೂರು ದಿನದ ಈ ಹೆಣ್ಣುಮಗು ಕಾಣಿಸುತ್ತದೆ. ಆ ಮಗುವನ್ನು ಎತ್ತಿಕೊಂಡು ಹೋಗಿ ಸಾಕುತ್ತಾನೆ. ಪ್ರತಿದಿನ ಕಾಮಧೇನು ಬಂದು ಹಾಲು ಕರೆಯುತ್ತದೆ. ಮಗುವಿಗೆ 'ಕಾಡುಸಿದ್ಧಮ್ಮ' ಎಂದು ಹೆಸರಿಡುತ್ತಾನೆ. ಅವಳಿಗೆ ಹನ್ನೆರಡು ವರ್ಷ ತುಂಬುತ್ತದೆ. ಇತ್ತ ಚದುರಂಗರಾಯ ಕಾಡಿಗೆ ಬೇಟೆಯಾಡಲು ಬರುತ್ತಾನೆ. ಕಾಡುಸಿದ್ದಮ್ಮ ಶಿವನ ಪೂಜೆಗಾಗಿ ಹೂವನ್ನು ಕೀಳುತ್ತಿರುತ್ತಾಳೆ. ಅವಳನ್ನು ನೋಡಿ ಚದುರಂಗರಾಯನು ಸಂತೋಷಪಡುವುದನ್ನು ಕಂಡು ನಾಚಿಕೆಯಿಂದ ಕಾಡುಸಿದ್ದೇಶನ ಗುಡಿಗೆ ಬರುತ್ತಾಳೆ. ಅವಳನ್ನು ಹುಡುಕಿಕೊಂಡು ಬಂದ ಚದುರಂಗರಾಯನಿಗೆ ಕಾಡುಸಿದ್ದೇಶ ಮದುವೆಮಾಡಿಕೊಡುತ್ತಾನೆ. ಅವಳನ್ನು ಕರೆದುಕೊಂಡು ಅರಮನೆಗೆ ಬರುತ್ತಾನೆ. ಸವತಿಯರು ಅವಳಿಗೆ ಕೊಡಬಾರದ ಕಷ್ಟ ಕೊಡುತ್ತಾರೆ. ಅದೆಲ್ಲವನ್ನು ಸಹಿಸಿಕೊಂಡಿರುತ್ತಾಳೆ. ಅವಳು ಗರ್ಭಿಣಿಯಾಗುತ್ತಾಳೆ. ಆಗ-

ಐದು ಜನ ಅಕ್ಕಂದಿರು
ಹೊಟ್ಟೆ ಉರಿದು ಸಾಯುವರು
ಕಿರಿಯ ಹೆಂಡ್ತಿಗೆ ಮಕ್ಕಳಾದ್ರೆ
ನಮ್ಮ ಮೇಗಳ ಆಸೆಯನ್ನೆ
ರಾಜನಾದರೆ ಬಿಡ್ತಾನೆ
ಒಂಬತ್ತು ತಿಂಗಳು
ತುಂಬಿತ್ತಲ್ಲೋ ರಾಣಿಗೆ
ಸೂಲಗಿತ್ತಿಯನ್ನೇ ಅವರು
ಬೇಗನಾದರೆ ಕರೆಸುತ್ತಾರೆ
ಚಂಡುಮುರಿದು ಮಗುವೆನಾದ್ರೆ
ಕಾಡಿಗಾದ್ರು ಎಸೆಯಬೇಕು
ಎಂದು ಹೇಳಿಕೊಟ್ಟರಲ್ಲಿ

ಸೂಲಗಿತ್ತಿ ಕಾಡುಸಿದ್ಧಮ್ಮನ ಕಣ್ಣಿಗೆ ಬಟ್ಟೆ ಕಟ್ಟಿ ಹೆರಿಗೆ ಮಾಡುತ್ತಾಳೆ. ಗಂಡು ಮಗು ಹುಟ್ಟಿದರೂ ಅದನ್ನು ತೋರಿಸದೆ ಕಲ್ಲುಗುಂಡು ಹುಟ್ಟಿತೆಂದು ಸುಳ್ಳು ಹೇಳುತ್ತಾಳೆ. ಆಗ ರಾಜನು ಅವಳ ತಲೆಯನ್ನು ಕತ್ತರಿಸುವಂತೆ ಹೇಳುತ್ತಾನೆ. ಮಂತ್ರಿ ಬುದ್ಧಿ ಹೇಳುತ್ತಾನೆ. ಎರಡನೆಯ ಮಗು ಗಂಡು, ಕೊನೆಯ ಮಗು ಹೆಣ್ಣು ಹುಟ್ಟಿದರೂ ಒನಕೆ ಹಾಗೂ ಪೊರಕೆ ಹುಟ್ಟಿತೆಂದು ಸುಳ್ಳು ಹೇಳುತ್ತಾರೆ. ದೊರೆಗೆ ಬೇಸರವಾಗುತ್ತದೆ. ಹಿಂದೆಯೂ ಸಹ ಜನರು 'ಎರಡು ಬೇಕು ಮೂರು ಸಾಕು' ಎಂಬ ನೀತಿಯನ್ನು ಇಂದಿನ ಪರಿಭಾಷೆಯಲ್ಲಿ 'ಕುಟುಂಬ ಯೋಜನಾ' ಪದ್ಧತಿಯನ್ನು ಅನುಕರಿಸುತ್ತಿದ್ದರು ಎಂಬುದು ವ್ಯಕ್ತವಾಗುತ್ತದೆ. ಒಬ್ಬ ರಾಜನಾದವನು ತಾನು ಮೊದಲು ನಿಯಮಗಳಿಗೊಳಪಟ್ಟು ಜನರಿಗೆ ಮಾರ್ಗದರ್ಶಕನಾಗಿದ್ದನೆಂಬುದು ಕಾಡುಸಿದ್ಧಮ್ಮನ ಕಥೆಯಿಂದ ತಿಳಿದುಬರುತ್ತದೆ. ಕಲಾವಿದರು ಕಥೆಯನ್ನು ಹೇಳುವಾಗ ಪ್ರಚಲಿತ ಸಮಸ್ಯೆಗಳಿಗೆ ಅನುಗುಣವಾಗಿ ಕಥೆಯ ಹಂದರವನ್ನು ಹೆಣೆಯುತ್ತಾ ಜನರಿಗೆ ಪರೋಕ್ಷವಾಗಿ ಕುಟುಂಬ ಯೋಜನೆಯ ಮಹತ್ವವನ್ನು ತಿಳಿಸಿಕೊಡುತ್ತಾರೆ.

ಆರನೆಯ ರಾಣಿಯನ್ನು
ಕಾಡಿನಲ್ಲಿ ಕೊಲೆಯ ಮಾಡಿ
ಸ್ವಾಮಿ ಶಿವನು ಆಗ ನೋಡು
ಮಕ್ಕಳಿಗೆ ಪ್ರಾಣ ಕೊಟ್ಟ
ಹೂಗಾರ ಮುದ್ದಣ್ಣನು
ಮನೆಯಲ್ಲಾದರೆ ಬೆಳೆದರಲ್ಲೊ
ಮಗುವಿನ ಮುಖವನ್ನೇ ನೋಡಿದಾ

ಮಕ್ಕಳ ಮುಖವನ್ನೇ ನೋಡಿದ ರಾಯನು
ನನ್ನಾ ಗರ್ಭದಲ್ಲಿ ಹುಟ್ಟಿದ ಮಕ್ಕಳು
ನನ್ನಂಗೆ ಇರುವ್ವೋವು ಮಕ್ಕಳು ಅಂದನು
ಚದುರಂಗರಾಜನು ಓಡಿಯೇ ಬಂದಾನು[೧೩]

ಮಕ್ಕಳನ್ನು ನೋಡಿ ರಾಜನಿಗೆ ದುಃಖವಾಗುತ್ತದೆ. ಕರುಳು ತನ್ನ ಮಕ್ಕಳೆಂಬುದನ್ನು ಹೇಳುತ್ತದೆ. ಕಣ್ಣು ಅರಿಯದಿದ್ದರೂ ಕರುಳು ಅರಿಯುತ್ತದೆ ಎಂಬುದಕ್ಕೆ ಇದೊಂದು ಜ್ವಲಂತ ನಿದರ್ಶನವಾಗಿದೆ. ರಾಜ ಸೂಲಗಿತ್ತಿಯನ್ನು ಕರೆಸಿ ವಿಚಾರಿಸಿದಾಗ ನಿಜಸಂಗತಿ ಬಯಲಾಗುತ್ತದೆ. ಮಕ್ಕಳೊಂದಿಗೆ ಕಾಡಿನಲ್ಲಿದ್ದ ಹೆಂಡತಿಯ ಅಸ್ಥಿಪಂಜರವನ್ನು ಪತ್ತೆಮಾಡಿ ದುಃಖಪಡುತ್ತಾನೆ. ಶಿವ ಪಾರ್ವತಿಯರಿಗೆ ಅವರ ಗೋಳು ಮುಟ್ಟಿ ಪ್ರತ್ಯಕ್ಷರಾಗಿ ಕಾಡುಸಿದ್ಧಮ್ಮನಿಗೆ ಜೀವದಾನ ಮಾಡುತ್ತಾರೆ. ಕಾಡುಸಿದ್ಧಮ್ಮ ತನ್ನ ಮಕ್ಕಳು ಹಾಗೂ ಗಂಡನನ್ನು ಕೂಡಿಕೊಳ್ಳುತ್ತಾಳೆ. ರಾಣಿಯರು ತಾವು ಮಾಡಿದ ತಪ್ಪಿಗೆ ಕಾಡುಸಿದ್ಧಮ್ಮ ಹಾಗೂ ರಾಜನಲ್ಲಿ ಕ್ಷಮೆ ಕೇಳುತ್ತಾರೆ. ಹೀಗೆ ಕಥೆ ಮುಂದುವರೆಯುತ್ತದೆ.

೧೨ನೇ ಶತಮಾನದಲ್ಲಿ ಬರುವ ಶರಣ ಹೂಗಾರ ಮಾದಯ್ಯನಿಗೂ, ಈ ಕಥೆಯಲ್ಲಿ ಬರುವ ಹೂಗಾರ ಮುದ್ದಣ್ಣನಿಗೂ ಏನಾದರೂ ಸಂಬಂಧವಿದೆಯೆ ಎಂಬ ಸಂಶಯ ಉದ್ಭವವಾಗುತ್ತದೆ. ಹೂಗಾರ ಮಾದಯ್ಯ ಜನಪದ ಕಲಾವಿದರ ಬಾಯಲ್ಲಿ ಹೂಗಾರ ಮುದ್ದಣ್ಣ ಆಗಿರಬಹುದೇ. ಒಂದು ವೇಳೆ ಈ ಊಹೆ ನಿಜವಾದರೆ ಕಾಡುಸಿದ್ಧಮ್ಮನ ಕಥೆ ೧೨ನೇ ಶತಮಾನದಲ್ಲಿ ನಡೆದಿರಬಹುದೆನಿಸುತ್ತದೆ.

ಪ್ರೇಕ್ಷಕರ ಮನಸ್ಸನ್ನು ಆಕರ್ಷಿಸುವ ರೀತಿಯಲ್ಲಿ ಕಥೆಯನ್ನು ಹೇಳುವ ಲಯಗಾರಿಕೆ, ಸಂದರ್ಭಕ್ಕನುಗುಣವಾಗಿ ಧ್ವನಿಯ ಏರಿಳಿತ, ಕಥೆಯಲ್ಲಿ ಮುಂದೆ ಏನಾಗುತ್ತದೆಯೋ ಎಂಬ ಕಾತುರವನ್ನು ಹುಟ್ಟಿಸುವ ತಂತ್ರಗಾರಿಕೆ ಕರಪಾಲದ ಕಲಾವಿದರಲ್ಲಿ ಕರಗತವಾಗಿರುತ್ತದೆ. ಎಷ್ಟು ಕೇಳಿದರೂ ಸಾಕೆನಿಸದೆ ಮತ್ತಷ್ಟು ಕೇಳಬೇಕೆನ್ನುವ ಕುತೂಹಲ ಕಥೆಯನ್ನು ಮುಂದುವರಿಸಿ ಕೊಂಡು ಹೋಗುವ, ಪ್ರೇಕ್ಷಕ ಸಮುದಾಯವನ್ನು ಅಯಸ್ಕಾಂತದಂತೆ ತಮ್ಮತ್ತ ಆಕರ್ಷಿಸುವ ಜಾಣ್ಮೆ ನಿಜಕ್ಕೂ ಮೆಚ್ಚುವಂತಹುದು.

ಕರಪಾಲ ಮೇಳ ಧಾರ್ಮಿಕ ಕಲೆಯಾದರೂ, ಕಲಾವಿದರು ಕಾಲಕ್ಕೆ ತಕ್ಕಂತೆ ಬದಲಾವಣೆ ಮಾಡಿಕೊಳ್ಳುತ್ತಾ ಮನರಂಜನೆಗೂ ಹೆಚ್ಚು ಒತ್ತು ನೀಡುತ್ತಿರುವುದು ವ್ಯಕ್ತವಾಗುತ್ತದೆ. ದಟ್ಟವಾದ ನಾಗರಿಕತೆಯ ಪ್ರಭಾವದ ನಡುವೆಯೂ ಕರಪಾಲ ಮೇಳದವರು ತಮ್ಮ ಕಲೆಯನ್ನು ಉಳಿಸಿ ಬೆಳೆಸಿಕೊಂಡು ಬರುತ್ತಿರುವುದು ಸಂತೋಷದ ಸಂಗತಿ.

ವೀರಗಾಸೆ: ವೀರಶೈವ ಸಂಪ್ರದಾಯಕ್ಕೆ ಸೇರಿದ ವೀರಗಾಸೆಯನ್ನು 'ವೀರಭದ್ರನ ಕುಣಿತ,' 'ಲಿಂಗದ ವೀರರು', 'ಲಿಂಗದ ಬೀರರ ಕುಣಿತ'ವೆಂದು ಕರೆಯುತ್ತಾರೆ. ಮೂಲತಃ ಇದು ಧಾರ್ಮಿಕ ಕಲೆಯಾದರೂ ಇತ್ತೀಚೆಗೆ 'ವೀರಗಾಸೆ'ಯನ್ನು ಮನರಂಜನೆಯ ಕಲೆಯಾಗಿ ರೂಪಿಸಿಕೊಂಡಿದ್ದಾರೆ. ಹಬ್ಬ ಹರಿದಿನಗಳಲ್ಲಿ, ಜಾತ್ರೆ ಉತ್ಸವಗಳಲ್ಲಿ ಕಲೆಯನ್ನು ಪ್ರದರ್ಶಿಸುತ್ತಾರೆ. ಗ್ರಾಮೀಣರು ಲಿಂಗದ ವೀರರನ್ನು ಊರಿಗೆ ಆಹ್ವಾನಿಸಿ ವೀರಭದ್ರನ ಪ್ರತಾಪದ ಬಗ್ಗೆ ಖಡ್ಗ ಹೇಳಿಸಿ ಕತೆ ಕೇಳುವುದರಿಂದ ಗ್ರಾಮಕ್ಕೆ ಒಳ್ಳೆಯದಾಗುತ್ತದೆ, ದನಕರುಗಳಿಗೆ ರೋಗರುಜಿನಗಳಿದ್ದರೆ ಅವು ನಿವಾರಣೆಯಾಗುತ್ತವೆಂಬ ನಂಬಿಕೆಯಿದೆ. ಕಲಾವಿದರಲ್ಲಿಯೂ "ಈ ಕಲೆಯನ್ನು ಬಿಟ್ಟರೆ ತಮಗೆ ದರಿದ್ರ ಬರುತ್ತದೆ"[೧೪] ಎಂಬ ಭಾವನೆಯಿದೆ. ಕಲಾವಿದರು ಎಷ್ಟೇ ಶ್ರೀಮಂತರಾಗಿದ್ದರೂ ಜಾತ್ರೆ ಉತ್ಸವಗಳಲ್ಲಿ, ಕಾರ್ತೀಕ ಹಾಗೂ ಶ್ರಾವಣ ಸೋಮವಾರಗಳಲ್ಲಿ, ವೀರಗಾಸೆ ಕಲಾ ಪ್ರದರ್ಶನವನ್ನು ಪ್ರದರ್ಶಿಸುತ್ತಾರೆ. ಶಿವರಾತ್ರಿ, ಯುಗಾದಿ ಹಬ್ಬದಂದು ಕಾವಿ ಧರಿಸಿ ಮೂರು ಮನೆಗಾದರೂ 'ಕ್ವಾರಣ್ಯ'ಕ್ಕೆ ಹೋಗಬೇಕು. ಇವರನ್ನು ವೀರಭದ್ರನ ಅವತಾರವೆಂದೇ ಭಾವಿಸಿರುವ ಗ್ರಾಮೀಣರು ಎಂದೂ ಬರಿಗೈಯಲ್ಲಿ ಕಳುಹಿಸದೆ 'ಭಿಕ್ಷೆ' ನೀಡಿ

ನಮಸ್ಕರಿಸುತ್ತಾರೆ. ಅವರು ನೀಡುವ 'ಭಿಕ್ಷೆ'ಯಲ್ಲಿ ಪ್ರೀತಿ, ಗೌರವ ಹಾಗೂ ಭಕ್ತಿಯು ಮುಪ್ಪರಿಗೊಂಡಿರುತ್ತದೆ. ಅವರಲ್ಲಿ ಧನ್ಯತೆಯ ಭಾವನೆ ಮೂಡಿ ಸಂತೋಷವನ್ನು ತಂದುಕೊಡುತ್ತದೆ. ಆ ದಿನದ ಬದುಕು ಸಾರ್ಥಕವಾಯಿತೆಂದು ಭಾವಿಸುತ್ತಾರೆ. ತಾವು ಕಷ್ಟಪಟ್ಟು ಬೆವರು ಸುರಿಸಿ ದವಸ ಧಾನ್ಯಗಳಲ್ಲಿ ಒಂದಿಷ್ಟು ಭಾಗ ಸದ್ವಿನಿಯೋಗವಾಯಿತೆಂದು ಸಂತೋಷಪಡುತ್ತಾರೆ.

ಮೊದಲು 'ಲಿಂಗದ ವೀರ' ಕುಣಿತದಲ್ಲಿ ಒಬ್ಬರೇ ಕಲಾವಿದರಿರುತ್ತಿದ್ದರು. ಕಾಲಕ್ರಮೇಣ ಅಗತ್ಯಕ್ಕೆ ತಕ್ಕಂತೆ ಕಲಾವಿದರ ಸಂಖ್ಯೆಯೂ ಹೆಚ್ಚಾಗತೊಡಗಿತು. ಕೆಲವು ಕಡೆ (ಮಂಡ್ಯ ಜಿಲ್ಲೆ) ಒಬ್ಬ ಅಥವಾ ಇಬ್ಬರು ವೀರಭದ್ರನ ಬಿರುದಾವಳಿಯನ್ನು ಧರಿಸಿ ಕುಣಿಯುತ್ತಾರೆ. ಒಬ್ಬ ಖಡ್ಗ ಹೇಳಿದರೆ ಮತ್ತೊಬ್ಬರು 'ಭಲರೇ ವೀರ' ಎಂದು ಕುಣಿಯುತ್ತಾರೆ. ಕರಡೆ, ತಮಟೆ ಅಥವಾ ವಾಲಗ, ಡೋಲುಗಳ ವಾದ್ಯಕ್ಕೆ ತಕ್ಕಂತೆ ಕುಣಿಯುತ್ತ ಖಡ್ಗವನ್ನು ಝಳಪಿಸುತ್ತ ವೀರಭದ್ರನ ಮಹಿಮೆಯನ್ನು ಕೊಂಡಾಡುತ್ತಾರೆ. 'ಖಡ್ಗ' ಹೇಳುತ್ತ ಕುಣಿಯುವುದಕ್ಕೆ 'ಖಡ್ಗದ ಕುಣಿತ' ಎಂದೂ, ಲಿಂಗಗಳನ್ನು ಧರಿಸುವುದರಿಂದ 'ಲಿಂಗವೀರರ ಕುಣಿತ'ವೆಂದೂ ಇದಕ್ಕೆ ಹೆಸರಿದೆ.

ಸಾಮಾನ್ಯವಾಗಿ ಲಿಂಗದ ವೀರರ ಕುಣಿತದಲ್ಲಿ ತಮಟೆಯನ್ನು ಬಳಸುವುದು ತುಂಬಾ ಅಪರೂಪ. ಮಂಡ್ಯ ಮತ್ತು ಮೈಸೂರು ಜಿಲ್ಲೆಯ ಕೆಲವು ಪ್ರದೇಶಗಳಲ್ಲಿ ಬಳಸುತ್ತಿರುವುದು ಕಂಡುಬರುತ್ತದೆ.

ವೀರಗಾಸೆ ಅಥವಾ ಲಿಂಗದ ವೀರರ ಕಲೆಯ ಹಿನ್ನೆಲೆಯಲ್ಲಿ ಒಂದು ಪೌರಾಣಿಕ ಕಥೆ ಪ್ರಚಲಿತವಿದೆ. "ಹಿಂದೆ ದಕ್ಷಬ್ರಹ್ಮನಿಗೂ ಅವನ ಅಳಿಯನಾದ ಈಶ್ವರನಿಗೂ ವೈರತ್ವ ಬಂದು ದಕ್ಷಬ್ರಹ್ಮನು ತಾನು ಮಾಡುವ ಯಾಗಕ್ಕೆ ಈಶ್ವರನನ್ನು ಬಿಟ್ಟು ಉಳಿದ ದೇವಾಧಿದೇವತೆಗಳನ್ನು ಆಹ್ವಾನಿಸುತ್ತಾನೆ. ಯಜ್ಞದಲ್ಲಿ ಈಶ್ವರನಿಗೆ ನ್ಯಾಯವಾಗಿ ಸಲ್ಲಬೇಕಾದ ಹವಿರ್ಭಾಗವನ್ನು ಕೊಡದೆ ತಿರಸ್ಕರಿಸುತ್ತಾನೆ. ಈಶ್ವರನು ಬೇಡವೆಂದರೂ ತಂದೆ ಮಾಡುವ ಯಾಗದಲ್ಲಿ ಭಾಗವಹಿಸಲು ಪಾರ್ವತಿ ಬರುತ್ತಾಳೆ. ದಕ್ಷಬಹ್ಮ ಅಳಿಯನ ಮೇಲಿನ ಕೋಪದಿಂದ ಮಗಳೆಂಬ ಮಮತೆಯನ್ನು ತೊರೆದು, ಕಂಡೂ ಕಾಣದಂತೆ ತಿರಸ್ಕಾರವಾಗಿ ಕಾಣುತ್ತಾನೆ; ಅವಳೆದುರಿಗೆ ಈಶ್ವರನನ್ನು ನಿಂದಿಸುತ್ತಾನೆ. ತಂದೆಯಿಂದ ಪತಿಯ ನಿಂದನೆಯನ್ನು ಕೇಳಿದ ಪಾರ್ವತಿ ಅಪಮಾನವನ್ನು ಸಹಿಸಲಾಗದೆ "ಅಗ್ನಿಕೊಂಡ ಹಾಳಾಗಿ ಹೋಗಲಿ, ನಿನ್ನ ಹೆಣ್ಣು ಮಕ್ಕಳು ಮುಂಡೆಯರಾಗಲಿ, ಆಗಸ ತೂಕದ ಚಿನ್ನವಿಲ್ಲದಂತಾಗಲಿ ಭೂಮಿ ತೂಕದ ಬೆಳ್ಳಿಯಿಲ್ಲದಂತಾಗಲಿ" ಎಂದು ತಂದೆಗೆ ಶಾಪವನ್ನು ಕೊಟ್ಟು ಅಗ್ನಿಕುಂಡದಲ್ಲಿ ಬಿದ್ದು ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ."[೫]

ತಂದೆ ಮತ್ತು ಮಗಳ ನಡುವೆ ನಡೆದ ವಾಗ್ವಾದ, ನಂತರ ನಡೆದ ಘಟನೆಗಳನ್ನು ಶಿವ ದಿವ್ಯದೃಷ್ಟಿಯಿಂದ ಗಮನಿಸಿ ಉಗ್ರನಾಗಿ ತಾಂಡವ ನೃತ್ಯವನ್ನು ಮಾಡುತ್ತಾನೆ. ಆ ಸಂದರ್ಭದಲ್ಲಿ ಹಣೆಯಲ್ಲಿ ಬಂದ ಬೆವರಿನ ಹನಿಗಳನ್ನು ಸೆಳೆದು ನೆಲಕ್ಕೆ ಅಪ್ಪಳಿಸುತ್ತಾನೆ. ಆಗ ನೂರೊಂದು ಆಯುಧಗಳನ್ನು ಧರಿಸಿದಂತಹ ವೀರಭದ್ರನ ಜನನವಾಗುತ್ತದೆ ಎಂಬ ವಿಚಾರ ಪೌರಾಣಿಕ ಕಥೆಯಿಂದ ತಿಳಿದುಬರುತ್ತದೆ. ನೂರೊಂದು ಆಯುಧಗಳ ಬಗ್ಗೆ ವಿವರಗಳು ದೊರೆಯುತ್ತಿಲ್ಲ. ಹಿರಿಯ ವಿದ್ವಾಂಸರಾದ ಶ್ರೀ ಎಂ.ಜಿ. ನಾಗರಾಜ್ ಅವರು ತಮ್ಮ 'ಸಾಂಸ್ಕೃತಿಕ ಶ್ರೀ ವೀರಭದ್ರಸ್ವಾಮಿ' ಎಂಬ ಕೃತಿಯಲ್ಲಿ ಮೂವತ್ತೆರಡು ಆಯುಧಗಳ ವಿವರಗಳನ್ನು ನೀಡಿದ್ದಾರೆ. ಬೆಂಗಳೂರಿನ ಗವೀಪುರಂ ಗುಟ್ಟಹಳ್ಳಿಯಲ್ಲಿರುವ ಸುಮಾರು ಆರು ಅಡಿ ಎತ್ತರವಿರುವ ಪುಷ್ಪಶಿಲ್ಪವಾಗಿ ದ್ವಿಭಂಗದಲ್ಲಿ ಏಕಶಿಲಾ ಶಿಲ್ಪವಾಗಿ ಕೆತ್ತನೆಗೊಂಡಿರುವ ೩೨ ಹಸ್ತಗಳ (ದ್ವಾತ್ರಿಂಶದ್ಭುಜ) ವೀರಕ್ರಿಯಾಭಂಗಿಯ ಸ್ಥಾನಕ ಶಿಲ್ಪವಿದಾಗಿದೆ. ಧೀರ ಗಂಭೀರ ಪ್ರಸನ್ನವದನದ ಈ ಮೂರ್ತಿಯ ೩೨ ಭುಜಗಳ ಭಂಗಿ ಹಾಗೂ ೩೨ ಹಸ್ತಗಳು ಆಯುಧಗಳನ್ನು ಹಿಡಿದಿರುವ ರೀತಿ ಚಿತ್ತಾಕರ್ಷಕವಾಗಿದೆ. ವೈವಿಧ್ಯಮಯ ಆಯುಧಗಳ ರೂಪಗಳು ಸ್ಪಷ್ಟವಾಗಿ ಕೆತ್ತನೆಗೊಂಡು. ಅರ್ಧಭಾಗ ಎತ್ತಿದ ತೋಳುಗಳಲ್ಲಿ ಅರ್ಧಭಾಗ ಇಳಿಬಾಗುವಿನ ತೋಳುಗಳಲ್ಲಿ ಇವು ಎದ್ದು ಕಾಣುತ್ತವೆ" ಎಂದು ಅವರು ವಿಗ್ರಹದಲ್ಲಿನ ಎರಡು ಕೈಗಳಲ್ಲಿರುವ ಆಯುಧಗಳನ್ನು ಈ ಕೆಳಕಂಡಂತೆ ಪಟ್ಟಿಮಾಡಿದ್ದಾರೆ:

ಬಲತೋಳುಗಳ (೧೬) ಆಯುಧಗಳು ೧. ಕಡತಲೆ (ಕಡಿತಲೆ) ಮಾದರಿರುಗತ್ತಿ, ೨. ಪರಶು, ೩. ಚಕ್ರ, ೪. ತ್ರಿಶೂಲ, ೫. ವಜ್ರಾಯುಧ (ಮುದ್ಗರ), ೬. ಬಿದಿರುಗತ್ತಿ, ೭. ಬಾಚಿಗತ್ತಿ, ೮. ಬಾಮ, ೯. ನೀಳದಂಡ, ೧೦. ವಿಠಲಗದೆ, ೧೧. ಆನೆ ಅಂಕುಶ, ೧೨. ಕೊಡಲಿ, ೧೩. ಸೂರ್ಯ, ೧೪. ಭರ್ಜಿ, ೧೫. ಗಜದಂಡ, ೧೬. ಮುಖ್ಯ ಬಲ ಮುಂದೋಳು ಬಾಗಿಸಿ ಉದರಕ್ಕೆ ಅಡ್ಡಲಾಗಿ ಹಿಡಿದ ಸು. ೧೧/೨ ಅಡ್ಡಿ ಎತ್ತರ ನೀಳ ಗಡಸು ಗತ್ತಿ (ಸಿಡಿದಲೆ ಗತ್ತಿ).

ಎಡತೋಳುಗಳ (೧೬) ಆಯುಧಗಳು ೧. ನೀಳ ನಾಗಗತ್ತಿ (ನಿಮಿರಿದ ಹೆಡೆನಾಗ ಶರೀರ) ೨. ಪಾಶ ೩. ಶಂಖ ೪. ಡಮರು ೫ ವಜ್ರ (ಜೋಡಿ ಬೋರಲು ತ್ರಿಶೂಲ ರೂಪಗಳು) ೬. ಕೊಕ್ಕುಗತ್ತಿ (ಗಿಣಿ ಕೊಕ್ಕಿನ ರೂಪ). ೭. ಹಲಾಯುಧ (ನೇಗಿಲುಗತ್ತಿ). ೮. ಬಿಲ್ಲು ೯. ಬಾಕು, ೧೦. ಮಲಚೂರಿ, ೧೧. ಮಲಚೂರ. ೧೧. ಆನೆ ಅಂಕುಶ (೨ನೇ ಮಾದರಿ). ೧೨. ಅಗಲಗತ್ತಿ (ಚಪ್ಪೆಗತ್ತಿ), ೧೩. ಚಂದ್ರ, ೧೪. ಉದ್ದನ ಕತ್ತಿ, ೧೫. ಪಸರು (೨ನೇ ಮಾದರಿ). ೧೬. ಮುಖ್ಯ ಎಡ ಮುಂದೋಳನ್ನು ಮೇಲ್ಬಾಗಿಸಿ ಕಟಿಮಟ್ಟಕೆ ಹಿಡಿದ ಸುಮಾರು ೧ ೧/೨ಅಡಿ ಎತ್ತರ ೪. ಅಂಗುಲ ಅಗಲದ ಡೌಲು (ಚಪ್ಪೆಗುರಾಣಿ).[೧೬]

"ವಡಬುಗಳಲ್ಲಿ ಬರುವ ಆಯುಧದ ಬಗೆಗಳಿಗೆ ಈ ವೀರಭದ್ರಮೂರ್ತಿಯ ಆಯುಧಗಳು ಒಂದು ಉದಾಹರಣೆ ಎನಿಸುತ್ತದೆ. ಶಾಸ್ತ್ರದ ಚೌಕಟ್ಟಿನ ಜೊತೆಗೆ ಜಾನಪದ ಅಳವಡಿಕೆಯೂ ಇಲ್ಲಿ ಕಾಣುವಂತಿದೆ. ಆಯುಧಗಳ ಕುರಿತ ಸಾಂಸ್ಕೃತಿಕ ಅಧ್ಯಯನಕ್ಕೆ ಈ ವರ್ಣನೆ ಸಾಕ್ಷ್ಯವಾಗಿದೆ.

ವೀರಭದ್ರನು ಹುಟ್ಟಿದ ಸಂದರ್ಭದಲ್ಲಿ ಸಪ್ತಸಮುದ್ರಗಳು ಬತ್ತಿಹೋದವು. ಹುಟ್ಟಿದ ಮರುಕ್ಷಣದಲ್ಲಿಯೇ ವೀರಭದ್ರನು ಲೋಕವನ್ನೇ ಬಿಲ್ಲಾಗಿ, ಭೂಮಿಯನ್ನೇ ಬಾಣವನ್ನಾಗಿ ಮಾಡಿಕೊಂಡು 'ತಂದೆಯೇ ನಮಗೆ ವೈರಿ ಯಾರು?' ಎಂದು ಕೇಳುತ್ತಾನೆ. ಅದಕ್ಕೆ ಶಿವನು 'ದಕ್ಷ ಬ್ರಹ್ಮ'ನೆಂದು ಹೇಳಿ ಅವನದು ಮೂನ್ನೂರ ಅವರತ್ತು ಗಾವುದ ಪಟ್ಟಣ. ಅದಕ್ಕೆ ಮುನ್ನೂರ ಅರವತ್ತು ಬಾಗಿಲು, ಒಂದೊಂದು ಬಾಗಿಲಿಗೂ ಒಬ್ಬೊಬ್ಬ ರಾಕ್ಷಸ ಕಾವಲಿರುತ್ತಾನೆ. ಆ ರಾಕ್ಷಸರ ಒಂದೊಂದು ತೊಟ್ಟು ರಕ್ತಬಿದ್ದರೆ ಒಂದು ಕೋಟಿ ರಾಕ್ಷಸರು ಜನಿಸುತ್ತಾರೆ' ಎಂದು ತಿಳಿಸಿ ಅವನ ಹಿಂದೆಯೇ ಜನಿಸಿದ ಚೌಡೇಶ್ವರಿಯನ್ನು ಸಹಾಯಕ್ಕಾಗಿ ಕಳುಹಿಸಿಕೊಡುತ್ತಾನೆ.

ವೀರಭದ್ರನು ಶಿವನ ಅಪ್ಪಣೆಯಂತೆ ಬಾಗಿಲಲ್ಲಿ ಕಾವಲು ಕಾಯುತ್ತಿದ್ದ ರಾಕ್ಷಸರನ್ನು ಸಂಹರಿಸಿ, ನಂತರ ದಕ್ಷಬ್ರಹ್ಮನ ಯಾಗ ಸ್ಥಳಕ್ಕೆ ನುಗ್ಗಿ ಅವನ ತಲೆಯನ್ನು ಚಂಡಾಡುತ್ತಾನೆ. ತಲೆ ಅಗ್ನಿಕುಂಡಕ್ಕೆ ಬಿದ್ದು ಭಸ್ಮವಾಗುತ್ತದೆ. ಇದನ್ನು ಗಮನಿಸಿದ ದಕ್ಷಬ್ರಹ್ಮನ ಹೆಂಡತಿ ಭಕ್ತಿಯಿಂದ, ದೈನ್ಯದಿಂದ ವೀರಭದ್ರನನ್ನು ಪತಿಭಿಕ್ಷೆ ನೀಡುವಂತೆ ಪ್ರಾರ್ಥಿಸುತ್ತಾಳೆ. ಅವನಿಗೆ ಪ್ರಾಣದಾನವನ್ನು ಮಾಡಲು ರುಂಡವಿಲ್ಲದ್ದನ್ನು ಗಮನಿಸಿದ ವೀರಭದ್ರ "ಉತ್ತರ ದಿಕ್ಕಿಗೆ ಮುಖಮಾಡಿ ಮಲಗಿರುವ ಯಾವುದಾದರೂ ಪ್ರಾಣಿಯ ತಲೆಯನ್ನು ಕತ್ತರಿಸಿ ತನ್ನಿ" ಎಂದು ಹೇಳಿಕಳುಹಿಸುತ್ತಾನೆ. ವೀರಭದ್ರನ ಆದೇಶದಂತೆ ಸೇವಕರು ಉತ್ತರ ದಿಕ್ಕಿಗೆ ಮಲಗಿದ್ದ ಟಗರಿನ ತಲೆಯನ್ನು ಕತ್ತರಿಸಿ ತರುತ್ತಾರೆ. ಅದನ್ನೇ ದಕ್ಷನ ಮುಂಡಕ್ಕೆ ಜೋಡಿಸಿ ಪ್ರಾಣದಾನ ಮಾಡುತ್ತಾನೆ. ಈ ಸಂದರ್ಭದಲ್ಲಿ ವೀರಭದ್ರನು ತೋರಿದ ಪ್ರತಾಪದ ಪ್ರತೀಕವೇ 'ವೀರಗಾಸೆ' ಎಂದೂ ಅಂದಿನಿಂದಲೇ ಈ ಕಲೆ ಬೆಳೆದು ಬಂದಿತೆಂದೂ ಕಲಾವಿದರು ಹೇಳುತ್ತಾರೆ.[೧೭]

ವೇಷಭೂಷಣ: ಕಲಾವಿದರ ವೇಷಭೂಷಣ ವೈಶಿಷ್ಟಪೂರ್ಣ. ಕಾವಿ ಕಾಸೆಪಂಚೆ, ಕಿವಿ, ಕೊರಳು, ತೋಳು, ಮುಂಗೈಗಳಿಗೆ ರುದ್ರಾಕ್ಷಿ ಮಾಲೆ, ನಾಗಾಭರಣ, ಎದೆಯ ಹತ್ತಿರ ವೀರಭದ್ರಸ್ವಾಮಿಯ ಹಲಗೆ, ತಲೆಗೆ ಬಿಳಿಯ ಚೌಲಿಯನ್ನು ಧರಿಸಿರುತ್ತಾರೆ. ಸೊಂಟದಲ್ಲಿ ಚೌಲಿ ಹಾಕಿದ ಹಿತ್ತಾಳೆಯ ನರಸಿಂಹ ಮತ್ತು ದಕ್ಷಬ್ರಹ್ಮನ ಶಿರಗಳನ್ನು ಕಟ್ಟಿಕೊಂಡಿರುತ್ತಾರೆ. ಮೊಣಕಾಲಿಗೆ ಜಂಗು ಧರಿಸುತ್ತಾರೆ. ಇದಕ್ಕೆ ಕಡಗ, ತೋಡ ಎಂದೂ ಕರೆಯುತ್ತಾರೆ. ಬಲಗೈಯಲ್ಲಿ ಕತ್ತಿ, ಎಡಗೈಯಲ್ಲಿ ವೀರಭದ್ರನ ಹಲಗೆಯನ್ನು ಹಿಡಿದಿರುತ್ತಾರೆ. ದೇವರ ಉತ್ಸವದ ಮುಂದೆ ಕರಡಿ ಮತ್ತು ಚಮಾಳ ವಾದ್ಯದ ಗತ್ತಿಗೆ ಲಯಬದ್ಧವಾಗಿ ಕುಣಿಯುತ್ತಾರೆ. ಕುಣಿತದ ಮಧ್ಯೆ ವೀರಭದ್ರನ ಒಡಪುಗಳನ್ನು ಹೇಳುತ್ತಾರೆ.

ಅಹಹಾ ರುದ್ರ- ಅಹಹಾ ವೀರ
ನಮ್ಮ ವೀರಭದ್ರದೇವರು ಹುಟ್ಟಿದಾಗಲೆ ಹೂವಿನಕಾಶಿ
ವಿಷ್ಣುಕಾಶಿ, ಬ್ರಹ್ಮಕಾಶಿ, ಬರಕಾಶಿ, ಮೆಟ್ಟುವ ಹೊನ್ನಿನ ಹಾವಿಗೆ
ಸಾವಿರ ಶಿರಸ, ಎರಡು ಸಾವಿರ ಭುಜ, ಮೂರುಸಾವಿರ ಕಣ್ಣು
ಕಣ್ಣುಗಳ ಕೆಕ್ಕರಿಸಿ ಮೀಸೆಯಂ ಹೊಡೆಮುರಿದು
ನಮ್ಮ ವೀರಭದ್ರ ದೇವರು ಹೇಗೆ ಬರುತ್ತಿದ್ದರೆಂದಡೆ
ಕೂಗುವ ಹೆಗ್ಗಾಳೆ, ಕೈಯೊಳು ತಿರುಗುವ ಚಪ್ಪಗೊಡಲಿ, ಗಜದಾಂಡು
ಗಜಾಂಕುಶ ಗಂಡುಗತ್ತರಿ, ಹಿಡಿದ ಹಸ್ತದ ಹಲಿಗೆ ಕಿತ್ತದಲಗು
ಅದರುಗತ್ತಿ, ಬಿದಿರಗತ್ತಿ, ವಜ್ರಗತ್ತಿ, ಗುದ್ದಗತ್ತಿ
ಕೈಯಂಬು, ಕಠಾರಿ, ಗೋಟೆ ರಣಚೂರಿ
ಶೂಲ ಬಾಣ, ಶಶಿಯಬಾಣ ರಾಟೆ ಬಾಣ, ಹೊಗೆಯ ಬಾಣ
ಇಂತಿಷ್ಟು ನಮ್ಮ ಶ್ರೀ ವೀರಭದ್ರದೇವರು
ಅಯ್ವತ್ತಾರು ದೇಶದ ಆಯುಧಗಳನ್ನು ಧರಿಸಿಕೊಂಡು
ಹೇಗೆ ಬರುತ್ತಿದ್ದರೆಂದೆಡೆ
ಖಡ್ಗಂ ಕಕ್ಕಲಲಲಲ ಎಂದು ಕೂಗುತ್ತ
ಹೋಮಕ್ಕೆ ಹೋಗುತ್ತ..........
ನಾಗರ ಗದ್ದುಗೆ ಮೇಲೇರಿ ಜವನ ಗಂಡ
ಕಲಿ ವೀರಭದ್ರ ಕರುಣಸಮುದ್ರ ಖಡೆ ಎಂದ[೧೫]

ಇಲ್ಲಿ ವೀರಭದ್ರನ ಕಲಿತನವನ್ನು ಹುಟ್ಟಿನಿಂದಲೇ ವರ್ಣಿಸುವ ಪ್ರಯತ್ನವಿದು. ಆದರೆ ಸಾವಿರ ತಲೆಯ, ಎರಡು ಸಾವಿರ ಭುಜದ, ಮೂರು ಸಾವಿರ ಕಣ್ಣಿನ ತೇಜಸ್ಸು- ಏಕೀಭವಿಸಿದ ಚಿತ್ರವನ್ನು ಪರಿಭಾವಿಸಬಹುದೇ ವಿನಾ, ಆ ಭಾವವನ್ನು ಶಿಲ್ಪಗಳಲ್ಲಿ ಮೂಡಿಸಿರಬಹುದೇ ವಿನಾ ಆಕೃತಿಗಳ ರೂಪದಲ್ಲಿ ಕಾಣಬಂದಿಲ್ಲ.[೧೬] ಇಲ್ಲಿ ಬರುವ ಆಯುಧಗಳನ್ನು ಕುರಿತು ಸಂಶೋಧನೆ ಮಾಡಿದರೆ ಮತ್ತಷ್ಟು ಕುತೂಹಲ ಅಂಶಗಳು ಬೆಳಕಿಗೆ ಬರಬಹುದು. ಈ ನಿಟ್ಟಿನಲ್ಲಿ ಕೆಲಸ ಮಾಡಲು ವಿಪುಲ ಅವಕಾಶಗಳಿವೆ. ಒಡಪಿನಲ್ಲಿ ಪ್ರಸ್ತಾಪವಾಗಿರುವ ಅಯ್ವತ್ತಾರು ದೇಶಗಳ ಹೆಸರುಗಳು ಈ ಕೆಳಗಿನಂತಿವೆ:

ಅಂಗ, ವಂಗ, ಕಳಿಂಗ, ಕರ್ಣಾಟ, ಕೇರಳ, ಕಾಮರೂಪ, ಗೌಡ, ವನವಾಸ, ಕುಂತಲ, ಕೊಂಕಣ, ಮಗಧ, ಸುರಾಷ್ಟ್ರ, ಮಾಳವ, ಲಾಟ, ಭೋಟ, ವರಾಟ, ಶಬರ, ಕುಕುರ, ಕುರು, ಆವಂತಿ, ಪಾಂಡ್ಯ, ಮದ್ರ, ಸಿಂಹಲ, ಗುರ್ಜರ, ಪಾರಸಿಕ, ಮಿಥಿಲ, ಪಾಂಚಾಲ, ಶೂರಸೇನಿ, ಗಾಂಧಾರ, ಬಾಹ್ಲಿಕ, ಹೈಹಯ, ತೌಳವ, ಸಾಲ್ವ, ಪುಂಡ್ರಕ, ಪ್ರಾಗ್ಜ್ಯೋತಿಷ, ಮತ್ಸ್ಯ, ಚೇದಿ, ಬರ್ಬರ, ನೇಪಾಳ, ಗೌಳ, ಕಾಶ್ಮೀರ, ಕನ್ಯಾಕುಬ್ಜ, ವಿದರ್ಭ, ಖುರಸಾಣ, ಮಹಾರಾಷ್ಟ್ರ, ಕೋಸಲ, ಕೇಕಯ, ಅಹಿಚ್ಛತ್ರ, ತ್ರಿಲಿಂಗ, ಪ್ರಯಾಗ, ಕರಹಾಟಕ, ಕಾಂಭೋಜ, ಭೋಜ, ಚೋಳ, ಹೂಣ, ಕಾಶಿ. (ರತ್ನಕೋಶ- ಪುಟ ೩೧೦)

ಶ್ರೀ ಎಂ.ಜಿ. ನಾಗರಾಜ್ ಅವರು ತಮ್ಮ ಕೃತಿಯಲ್ಲಿ ಕೊಡಗಿನ ಸೋಮವಾರಪೇಟೆ ವಿರಕ್ತ ಮಠದ ಕ್ರಿ.ಶ. ೧೮೯೨ರ ಹಸ್ತಪ್ರತಿ 'ವೀರಭದ್ರಾಷ್ಟಕ'ದಲ್ಲಿ ಬಂದಿರುವ ವೀರಭದ್ರನ ವರ್ಣನೆಯನ್ನು ಈ ಕೆಳಕಂಡಂತೆ ಉಲ್ಲೇಖಿಸಿದ್ದಾರೆ:

ಕಿಶೋರ ಹಂಸಕೋಟಿ ತೇಜ ವಜ್ರಕಾಯ ತಾಂಡವಾ
ಅನಂತಸಿಂಹನಾದ ಕೋಲಾಹಲ ಕಾಲಭೈರವಾ
ಅಘೋರ ತುಂಡ ಫಾಲಲೋಚನ್ನಾಗ ಶಾಖ ಸಂಭವಾ
ಪ್ರಸನ್ನ ಪಾಣಿ ಚಾಪ ಚಕ್ರಶೂಲ ಖಡ್ಗ ತೋಮರಾ
ನಿಶಾಕುಠಾರ ಪಾಪಕಂಬುವ್ರಾತ ವಜ್ರಮಾರ್ಗಣಾ
ಕಿರೀಟ ಕುಂಡಲಕ್ಷಮಾಲ ಹಾರ ವೀರ ಕಂಕಣಾ
ಫಣಾಮಣಿ ಪ್ರಬದ್ಧ ಯೋಗದಂಡ ಭಸ್ಮಘಟಿಕಾ
ಝಣ ಝಣೇತಿ ನಾದ ಪಾದಪೀಠ ಪದ್ಮ ಸಿಂಜಿನಿ
ಹಿಮಾಂಶು ಜಾನಿಯುಕ್ತ ಜ್ಯೋತಿವರ್ಗ ದುಃಖ ದಾಯಕಾ
ಸಮೀರ ಮಿತ್ರ ಸಪ್ತ ಜಿಂಹ್ವ ಚಾಚಕರ್ತ ವಿಕ್ರಮಾ
ಮರುದ್ಗಣರ್ಘ್ಯಾಪಾತ್ರ ಪಿಂಡ ಪುಷ್ಪ ಭೂಪಲಾಯನಾ
ನೃಸಿಂಹ ಕಾಯ ಕಂಠ ಬಾಹು ಪಾಣಿ ಪರ್ವ ಸಂಹರಾ
ನಕಾಷ್ಠ ಪಾದಪಕ್ಷ ಕುಂತಮೇಘ ಮಾರ್ಗಸಂಚರಾ
ಪ್ರತಾಪ ವೀರಭದ್ರ ಕೋಟಿ ಮುದ್ಗರೋಪ ಘರ್ಜಿತಾ
ಸಮಸ್ತ ಭೂತನಾಥ ದಕ್ಷಯಜ್ಞ ದರ್ಪಭಂಜನಾ
ಉಮಾಕುಮಾರ ಹಾರಕಂಠ ಕರ್ಕದಂತ ಶೋಷಣಾ
ಹಿರಣ್ಯಗರ್ಭಕಲ್ಪ ನಾಸಿಕಾಗ್ರಪೀಠ ಖಂಡನಾ
ಅಸಂಖ್ಯ ಬ್ರಂಹರಾಕ್ಷಸಾದಿ ಭೂತ ವ್ರಾತ ನಾಯಕಾ
ಕೃಪೀಠ ಮಂತ್ರ ಶಕ್ತಿಯೋಷ್ಪ ಚೂಶತದ್ವಸೀಕ್ಷಕಾ
ವಿಷದ್ವರಪ್ರವೇಷಚಾರ ಚೋರ ಪಾರಹಿಂಸಕಾ
ಅನಾದಿ ವೀರಶೈವ ಭಕ್ತಿಸಾರ ಹಾರ ದಾರಕಾ
ಘನಪ್ರತಾಪಶಾದಿ ಭಸ್ಮಕಾಯ ಕಾಮ್ಯದಾಯಕಾ
ಶಿವಸ್ಯ ಜಾತ ಲಿಂಗನಾಂಚ್ಛನಕ್ಷಮಾಲ ಶೋಭಿತಾ
ಅಂಗನಾಮರಾಜಿತಾರ್ದನಾರಿಭಕ್ತವತ್ಸಲಾ[೨೦]
ಕ್ವಚಿದ್ಗಿರಮಠ ಶ್ರೀ ವೀರಭದ್ರ ಮೂರ್ತಿ ಪಾಹಿಮಾಂ।

ಈ ವರ್ಣನೆಯಲ್ಲಿ ವೀರಭದ್ರನ ವೀರಲಕ್ಷಣಗಳನ್ನು ಹೇಳುವುದರ ಜೊತೆಗೆ, ಅವರ ಸಾಹಸ, ಧರಿಸಿರುವ ಆಯುಧ, ಆಭರಣ, ಶಿವಲಿಂಗ, ವೀರಶೈವ ಗೋತ್ರ, ಪುರವಂತಿಕೆಯನ್ನು ಸೂಚಿಸಲಾಗಿದೆ. ಅವನ ದೈಹಿಕ ಸೌಷ್ಠವ, ಕ್ರಿಯಾಭಂಗಿ, ಅಭಯಹಸ್ತ, ಕಿರೀಟ, ಹಾರ, ಕಂಕಣ, ಬಿಲ್ಲುಬಾಣಧಾರಣ ಮೊದಲಾದ ವಿವರಗಳನ್ನು ಕೊಡಲಾಗಿದೆ.[೨೧] ಜಾತ್ರೆ ಉತ್ಸವಗಳಲ್ಲಿ ಇವರು ಕೊಂಡ ಆಯ್ದ ನಂತರ ಇವರ ಹಿಂದೆ ಕಳಸದರು (ಕೆಲವು ಕಡೆ ಅರ್ಚಕರು) ಹರಕೆ ಹೊತ್ತ ಭಕ್ತರು, ಕೆಲವು ಕಡೆ ನಂದೀಧ್ವಜ ಹಾಗೂ ಕರಡಿ ವಾದ್ಯದವರು ಹಾಯುತ್ತಾರೆ. ಈ ಸಂದರ್ಭದಲ್ಲಿ 'ಶಸ್ತ್ರ' ಪವಾಡ ನಡೆಸುವುದೂ ಉಂಟು. ಒಂದು ಕಾಲದಲ್ಲಿ ಧಾರ್ಮಿಕ ಕಾರ್ಯಕ್ರಮಗಳಿಗಷ್ಟೇ ಮೀಸಲಾಗಿದ್ದ 'ವೀರಗಾಸೆ' ಇಂದು ಮನರಂಜನೆಯ ರೂಪ ತಳೆದು ನಾಡು, ರಾಷ್ಟ್ರೀಯ ಹಾಗೂ ದೇಶೀಯ ಉತ್ಸವಗಳಲ್ಲಿ ಪ್ರದರ್ಶಿತವಾಗುತ್ತಿದೆ. ಅಲ್ಲದೆ ರಾಜಕೀಯ ಸಮಾರಂಭಗಳಲ್ಲಿ, ಮೆರವಣಿಗೆಗಳಲ್ಲಿ ಪ್ರದರ್ಶಿಸುತ್ತಿರುವುದು ನೋವಿನ ಸಂಗತಿ. ಈ ಮೊದಲೇ ತಿಳಿಸಿದಂತೆ 'ವೀರಗಾಸೆ' ವೀರಾವೇಶದ ಧಾರ್ಮಿಕ ಕಲೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಸಮಾಜದಲ್ಲಿ ನಡೆಯುವ ಅನ್ಯಾಯ, ಅಧರ್ಮ, ಅನೀತಿಯ ವಿರುದ್ಧ ಪ್ರತಿಭಟಿಸುವ ಕೆಚ್ಚನ್ನು ಕಾಣುತ್ತೇವೆ. ೧೨ನೇ ಶತಮಾನದಲ್ಲಿ ಶರಣರು ನಡೆಸಿದ ಸಾಮಾಜಿಕ, ಧಾರ್ಮಿಕ ಕ್ರಾಂತಿಯ ಕಿಡಿಯನ್ನು 'ವೀರಗಾಸೆ' ಕಲೆಯಲ್ಲಿ ಗುರುತಿಸಬಹುದು.

ಪುರವಂತಿಕೆ: ಉತ್ತರ ಕರ್ನಾಟಕದಲ್ಲಿ ಪ್ರಚಲಿತವಿರುವ ಶೈವ ಪರಂಪರೆಯ ಒಂದು ವಿಶಿಷ್ಟವಾದ ಧಾರ್ಮಿಕ ಕಲೆ. ಇದನ್ನು ಒಂದು ಆಚರಣೆಯೆಂದೂ ಕರೆಯಬಹುದು. 'ಪುರವಂತಿಕೆ'ಯು ದಕ್ಷಿಣ ಕರ್ನಾಟಕದಲ್ಲಿ ಜನಪ್ರಿಯವಾಗಿರುವ 'ವೀರಗಾಸೆ', 'ಲಿಂಗದ ವೀರರು', 'ವೀರಭದ್ರನ ಕುಣಿತ' ಇವುಗಳ ಸಾಲಿನಲ್ಲಿ ಬರುವ ಈ ಕಲೆ ಆಚರಣೆಯಲ್ಲಿ ಹಾಗೂ ವೇಷಭೂಷಣಗಳಲ್ಲಿ ಸ್ವಲ್ಪ ವ್ಯತ್ಯಾಸವನ್ನು ಕಾಣಬಹುದು.

'ವೀರಗಾಸೆ' ಅಥವಾ 'ವೀರಭದ್ರನ ಕುಣಿತ'ದ ಕಲಾವಿದರ ಬಗ್ಗೆ ಇರುವ ನಂಬಿಕೆಯಂತೆ ಪುರವಂತರೂ ವೀರಭದ್ರನ ಅವತಾರವೆಂಬ ಪ್ರತೀತಿ ಇದೆ. ಅವರ ರೌದ್ರವ ಕುಣಿತ ಆ ನಂಬಿಕೆಯನ್ನು ದೃಢಪಡಿಸುತ್ತದೆ. ತಮ್ಮ ಕುಟುಂಬಕ್ಕೆ ಪುರವಂತರ ಮನೆಯವರೆಂದು ಅಡ್ಡಹೆಸರಾಗುವಷ್ಟರ ಮಟ್ಟಿಗೆ ಈ ಕಲೆಯನ್ನು ಉಳಿಸಿ ಬೆಳೆಸಿಕೊಂಡು ಬಂದಿರುವ ಕಲಾವಿದರೂ ಇದ್ದಾರೆ.

ಮದುವೆ ಮೆರವಣಿಗೆ, ದೇವರ ಉತ್ಸವಗಳಲ್ಲಿ ಪುರವಂತರ ಕುಣಿತವಿರುತ್ತದೆ. ಕುಣಿತದ ಮಧ್ಯೆ ಮಧ್ಯೆ ಒಡಪುಗಳನ್ನು ಏರುಧ್ವನಿಯಲ್ಲಿ ಹೇಳುವ ಕಲಾವಿದರು ಒಡಪುಗಳು ಮುಗಿಯುತ್ತಿದ್ದಂತೆ ಸಂಬಾಳ, ಸನಾದಿ ಮೇಳದ ಗತ್ತಿಗೆ ಲಯಬದ್ಧವಾಗಿ ವೀರಾವೇಶದಿಂದ ಕುಣಿಯುತ್ತಾರೆ. ಕೆಲವು ಕಡೆ ಮದುವೆಯ ಸಂದರ್ಭದಲ್ಲಿ 'ಗುಗ್ಗಳ' ಹೊರಡಿಸುವ ಸಂಪ್ರದಾಯವೂ ಇದೆ. 'ಗುಗ್ಗಳ'ವನ್ನು ನಡೆಸಿಕೊಡುವಂತೆ ಮದುವೆಗೆ ಮೊದಲೇ ಪುರವಂತರಿಗೆ ವೀಳೆ ನೀಡಿ ಆಹ್ವಾನಿಸಲಾಗುತ್ತದೆ. ಮದುವೆಯ ಮನೆಯಿಂದ ಪುರವಂತರು ದೇವಸ್ಥಾನಕ್ಕೆ ಒಡಪು ಹೇಳುತ್ತಾ ಕುಣಿಯುತ್ತಲೇ ಶಸ್ತ್ರಹಾಕಿಕೊಳ್ಳುತ್ತ ನಡೆಯುತ್ತಾರೆ. ಇದನ್ನು 'ಗುಗ್ಗಳ' ಎಬ್ಬಿಸುವುದು ಎಂದು ಕರೆಯುತ್ತಾರೆ. ಇವರು ವೀರಾವೇಶದಿಂದ ಕುಣಿಯುತ್ತಾ ಬರುವಾಗ ಮಧ್ಯದಲ್ಲಿ ಹರಕೆ ಹೊತ್ತವರು ಇವರ ಕೈಯಿಂದ ಶಸ್ತ್ರಗಳನ್ನು ದೇಹದ ವಿವಿಧ ಭಾಗಗಳಿಗೆ ನಾಟಿಸಿಕೊಳ್ಳುವುದುಂಟು.

'ಗುಗ್ಗಳ' ಹರಕೆಯಲ್ಲಿ ಕಾಸು ಮುಡಿಕಟ್ಟಿ ದೇವರನ್ನು ನೆನಸಿ ಹರಕೆ ಕಟ್ಟಿಕೊಳ್ಳುತ್ತಾರೆ. ಹಿರೇಮಠದ ಸ್ವಾಮಿ ಲಗ್ನದ ಮನೆಗೆ ಹೋದಾಗ ಪಾದ ತೊಳೆದು ಒಳಗೆ ಕರೆದು ಮನೆಯವರು ಭಕ್ತಿ ಸಲ್ಲಿಸುತ್ತಾರೆ. 'ಹಡದಿ' (ನಡೆ ಮುಡಿ) ಹಾಕುತ್ತಾರೆ. ಕರಡಿಮಜಲು ಬಾರಿಸುತ್ತಾರೆ. ಒಳಗೆ 'ದೇವರು' ಬಂದಾಗ ಮದುಮಕ್ಕಳು ದೇವರು ಎದುರು, ಕೊಡಗಳಲ್ಲಿ ಗುಗ್ಗಳ ತಂದಾಗ ಪುರವಂತರು ಹತ್ತಿಸುತ್ತಾರೆ. ಹರಕೆ ಕಟ್ಟಿದವರು ಮದುಮಕ್ಕಳ ತಾಯಿ, ದೊಡ್ಡಮ್ಮ ಅಥವಾ ಚಿಕ್ಕಮ್ಮ ಶಾಸ್ತ್ರ ಮುಗಿಯುವವರೆಗೂ ನಿಷ್ಠೆ ಪಾಲಿಸಬೇಕು.[೨] ಕೊಲ್ಲಾಪುರದ ಮಾಯೆ ರೇವಣಸಿದ್ಧರಿಗೆ ವಿಷ ಕುಡಿಸಿದಳಂತೆ. ಅವರು ಮತ್ತೂ ಬೇಕು ಎಂದು ಕೇಳಿದರಂತೆ. ಮಾಯೆ ಅಶಕ್ತಳಾದಾಗ, ಶಾಪದಿಂದ ಹಲ್ಲಿಯಾದಳಂತೆ. ಆಗ ಹುಟ್ಟಿದ ಹಲ್ಲಿಗಳನ್ನು ಸಂಹಾರಮಾಡಿ ರೇವಣಸಿದ್ಧರು ಗುಗ್ಗಳಕೊಂಡ ಮಾಡಿದರಂತೆ. ಇನ್ನೊಂದು ಕತೆಯ ರೀತಿ 'ವೀರಭದ್ರ ನರಸಿಂಹನನ್ನು ಸಂಹಾರ ಮಾಡಿ ಕರುಳು ಬಗೆದು ಆ ಕರುಳಿನಿಂದ ಗುಗ್ಗಳ ಮಾಡಿದನಂತೆ. ಬ್ಯಾಡಗಿಯಲ್ಲಿ ಈ ಕತೆ ಪ್ರಚಲಿತವಾಗಿದೆ. ಇಲ್ಲಿ ಗುಗ್ಗಳ ಆಚರಣೆಯನ್ನು ಹೀಗೆ ಮಾಡುತ್ತಾರೆ:

ಗುಗ್ಗಳ ಕೊಡಗಳನ್ನು ಲಗ್ನದ ಸಮಯದಲ್ಲಿ ಎರಡು ಮಾದರಿಯಲ್ಲಿ ಸಿದ್ಧಮಾಡುತ್ತಾರೆ. ಒಂದು 'ಸಾದಾ ಗುಗ್ಗಳ' ಕೊಡವನ್ನು ಮಣ್ಣಿನ ಮಡಕೆಯಿಂದ ಸಿದ್ಧಮಾಡುತ್ತಾರೆ. ಇನ್ನೊಂದು 'ಶರಭ ಗುಗ್ಗಳ' ಕೊಡವನ್ನು ಭತ್ತದ ಹುಲ್ಲನ್ನು ಬಳಸಿ ತಯಾರಿಸುತ್ತಾರೆ. ಇವಕ್ಕೆ ಅಂಗಾರಪುಡಿ (ಗಂಧದ ತುಂಡು ಸುಟ್ಟು ಬಂದ ಬೂದಿ) ತುಂಬಿ ಗಂಧದ ಚಿಕ್ಕೆ ಹಾಕಿ ಮಧ್ಯೆ ಗಂಧದ ತುಂಡಿಗೆ ಬತ್ತಿ ಸುತ್ತಿ ಹಚ್ಚುತ್ತಾರೆ. ಪುರವಂತರ ಸಮಕ್ಷಮದಲ್ಲಿ ಜಂಗಮರಿಂದ ಗುಗ್ಗಳ ಕೊಡದ ಪೂಜೆ ನಡೆಯುತ್ತದೆ. ಈ ಕೊಡವನ್ನು 'ಪಟು' (ಬತ್ತಿ ದೀಪ ಹಚ್ಚಿ) ಮಾಡುತ್ತಾರೆ. ಪುರವಂತರು ವಡಪು ಹೇಳುತ್ತಾ ಬರುವಲ್ಲಿ ಈ ಗುಗ್ಗಳ ಕೊಡಗಳನ್ನು ತೆಗೆದುಕೊಡು ಸಾಗುವರು.

ಹಿರೇಮಗನ ಅಥವಾ ಕೊನೇಮಗನ ಮದುವೆ ಸಮಯದಲ್ಲಿ 'ಗುಗ್ಗಳ ಲಗ್ನ' ಆಚರಿಸುತ್ತಾರೆ. ಅಂದರೆ ಲಗ್ನದ ಹಿಂದಿನ ದಿನ ಗುಗ್ಗಳ ಮಾಡುತ್ತಾರೆ. 'ಸುರಗಿ ಮಡಕೆ' (ಬೆತ್ತದ ಸೊಪ್ಪು)ಯಲ್ಲಿ ಗುಗ್ಗಳ ಸಿದ್ಧಮಾಡಿ ಅದರಲ್ಲಿನ ಗಂಧದ ಬತ್ತಿಯನ್ನು ಮನೆಯಿಂದ ದೇಗುಲಕ್ಕೆ ಹೋಗುವವರೆವಿಗೂ ಆರದಂತೆ ನೋಡಿಕೊಳ್ಳುತ್ತಾರೆ. ದೇಗುಲದ ಮುಂದೆ ಶಾಸ್ತ್ರೋಕ್ತವಾಗಿ ತೋಡಿದ ಕೊಂಡವನ್ನು ಹಾಯ್ದು ದೇವರ ಪೂಜೆಗೆ ಸಾಗುತ್ತಾರೆ. ಇದನ್ನು 'ಸುರಗಿ ಕೊಂಡ' ಅಥವಾ ಸಾಮಾನ್ಯಕೊಂಡ, 'ಲಗ್ನದ ಸಮಯದ ಸಣ್ಣಕೊಂಡ' ಎನ್ನುತ್ತಾರೆ. ಸುರಗಿ ಲಗ್ನದ ಹರಕೆ ಹೊತ್ತವರು ಇದನ್ನಾಚರಿಸುತ್ತಾರೆ.[೨೪]

ಕಲಾವಿದರು ಧರಿಸುವ ವೇಷಭೂಷಣ ನೋಡಲು ಆಕರ್ಷಕ ಹಾಗೂ ವರ್ಣಮಯವಾಗಿರುತ್ತವೆ. ವೀರಗಾಸೆಗೆ ಹಾಕಿದ ಕಾವಿ ರೇಷ್ಮೆ ಧೋತ್ರ ಹಾಗೂ ಕಾವಿ ಅಂಗಿ ಧರಿಸಿ ಸೊಂಟಕ್ಕೆ ನಡುಕಟ್ಟನ್ನು ಕಟ್ಟಿರುತ್ತಾರೆ. ಕೆಲವು ಕಡೆ ಬಿಗಿ ಪೈಜಾಮ ಹಾಕಿ ತುದಿಯಲ್ಲಿ ಕಾಲಿಗೆ ಹತ್ತಿಕೊಳ್ಳುವಂತೆ ಕಟ್ಟಿರುತ್ತಾರೆ. ಇದಕ್ಕೆ 'ಚುಡೇದಾರ', 'ಪಾಯಿಜಾಮ' ಎಂದು ಹೇಳುತ್ತಾರೆ. ಮೈಮೇಲೆ 'ಗಲೀಫ'ದಂಥ ವಸ್ತ್ರವನ್ನು ಹಾಕಿಕೊಂಡಿರುತ್ತಾರೆ. ಈ ವಸ್ತ್ರದ ಅಂಚು ಚುಂಗುಗಳಿಂದ ಅಲಂಕಾರವಾಗಿರುತ್ತದೆ. ತಲೆಗೆ ರೇಷ್ಮೆ ರುಮಾಲು. ತೋಳಿಗೆ ಬೆಳ್ಳಿಯ ನಾಗರಗಳು, ಎದೆಗೆ ತೀರ್ಥಮುಖಗಳು, ದರ್ಪಣ, ನಡುವಿಗೆ ನಾರಸಿಂಹ ಮುಖ ಹಾಗೂ ರುಂಡಮಾಲೆಗಳು, ಕೈಮಣಿಕಟ್ಟಿಗೆ ರುದ್ರಾಕ್ಷಿ, ಕೊರಳಿಗೆ ರುದ್ರಾಕ್ಷಿಮಾಲೆ ಕಿವಿಗಳಿಗೆ ರುದ್ರಾಕ್ಷಿ, ಪಕ್ಕದಲ್ಲಿ ಸಣ್ಣ ರಕ್ಷಾಜೋಳಿಗೆ, ಹಣೆಗೆ ವಿಭೂತಿ- ಇವಿಷ್ಟು ಪುರವಂತರ ವೇಷಭೂಷಣಗಳು. ಕಲಾವಿದರು ಬಲಗೈಯಲ್ಲಿ ಖಡ್ಗ ಅಥವಾ ತ್ರಿಶೂಲ ಹಿಡಿದಿರುತ್ತಾರೆ. ಪಂಚಲೋಹದಿಂದ ಮಾಡಿದ ಪುರವಂತರ ಶಸ್ತ್ರಗಳು ಸುಮಾರು ಕಾಲು ಅಂಗುಲಕ್ಕೂ ತುಸು ಹೆಚ್ಚು ದಪ್ಪವಿದ್ದು ಮೂರು ನಾಲ್ಕು ಅಡಿ ಉದ್ದವಿರುತ್ತವೆ.

ಕಲಾವಿದರು ಆವೇಶಭರಿತರಾಗಿ ಕುಣಿಯುತ್ತಾ "ಆಹಾ ವೀರ, ಆಹಹಾ ರುದ್ರ..." ಎಂದು ಪ್ರಾರಂಭಿಸಿ ವೀರಭದ್ರನ ರೌದ್ರಾವತಾರವನ್ನು ಕಣ್ಣಿಗೆ ಕಟ್ಟುವಂತೆ ವರ್ಣಿಸುವುದಲ್ಲದೆ ಶರಭಾವತಾರ ಮತ್ತು ಶಿವನ ವರ್ಣನೆಗಳನ್ನು ಸೊಗಸಾಗಿ ಹೇಳುತ್ತಾರೆ. ಅವರು ಹೇಳುವ ಒಡಪಿನ ಮಾದರಿ:

ಆಹಾಹಾ ವೀರ, ಆಹಾಹಾ ರುದ್ರ, ಆಹಹಾ ಶರಭ
ನಮ್ಮ ಶ್ರೀವೀರಭದ್ರದೇವರು ದಕ್ಷನ ಹೋಮಕುಂಡಕ್ಕೆ
ಬಂದಾಗ ಆತನ ಘೋರರೂಪ ಹೇಗಿತ್ತೆಂದರೆ
ಮುಖವು ಸೂರ್ಯನಂತೆ ಹೊಳೆಯುತ್ತಿತ್ತು
ಕಣ್ಣುಗಳು ಕಿಡಿಗಳನುಗುಳುತ್ತಿದ್ದುವು...
ಹುಬ್ಬುಗಳು ಅಬ್ಬರಿಸಿ ಹಾರಾಡುತ್ತಿದ್ದುವು
ಅಂತಪ್ಪ ನಮ್ಮ ವೀರಭದ್ರ ದೇವರ ಹಣೆಯಲ್ಲಿ ತ್ರಿಪುಂಡ್ರ
ಹಸ್ತದಲ್ಲಿ ಅಲಗು, ಈಟಿ, ಉರಲು, ಹಗ್ಗ, ಚಪ್ಪೆಗೊಡಲಿ, ಉರಿಬಾಣ

ಇಂತೀ ಘೋರ ರೂಪದಲ್ಲಿ ದಕ್ಷಬ್ರಹ್ಮನ ಯಜ್ಞಮಂಟಪಕ್ಕಿಳಿದು, ದಕ್ಷನು ಹಾದಿಗೆ ಬಾರದಿರೆ ಆತನ ಶಿರ ಕಡಿದು ಹಾಕಲಾಗಿ 'ಅಯ್ಯೋ ಹರಹರಾ ವೀರಭದ್ರಾ' ಎಂದು ದಕ್ಷಪತ್ನಿ ಪ್ರಸೂತಿಯು ಶ್ರೀ ವೀರಭದ್ರದೇವರ ಚರಣಕ್ಕೆರಗಿ 'ಎನ್ನಯ್ಯಾ ಪಾಲಿಸಯ್ಯಾ ನನಗೆ ಪತಿಭಿಕ್ಷೆಯ ನೀಡಿ ಮಾಂಗಲ್ಯದಾನ ಮಾಡಬೇಕೆಂದು' ಬೇಡಿಕೊಳ್ಳಲು-

ಆಗ ನಮ್ಮ ವೀರೇಶ್ವರನ ಘೋರರೂಪ ಮಾಯವಾಗಿ
ಕರುಣಾರಸವುಕ್ಕಿ ಕಾರುಣ್ಯಮೂರ್ತಿಯಾಗಿ
ದಕ್ಷಬ್ರಹ್ಮನ ಹರಿದ ತಲೆಗೆ ಕುರಿದಲೆಯನ್ನಿಟ್ಟು ರಕ್ಷಿಸಿದ
ನಮ್ಮ ಅಭಿನವ ರುದ್ರ ಕರುಣಾಸಮುದ್ರ
ಶ್ರೀ ವೀರಭದ್ರ ಕಡಕ್ಕಡೆ!

ದಕ್ಷಬ್ರಹ್ಮನ ಸಂಹಾರದ ನಂತರ, ಅವನ ಪತ್ನಿಯ ಪ್ರಾರ್ಥನೆಗೆ ಸ್ಪಂದಿಸಿದ ಶ್ರೀ ವೀರಭದ್ರ, ಅವನ ತಲೆಗೆ ಬದಲಾಗಿ ಕುರಿತಲೆಯನ್ನು ಏಕೆ ತಂದಿರಿಸಿದ ಎಂಬ ಸಂಶಯಕ್ಕೆ ಸೂಕ್ತ ಉತ್ತರ ಡಾ. ಜಚನಿ ಅವರ ಅಭಿಪ್ರಾಯದ ಪ್ರಕಾರ ಅಸೂಯೆ, ದ್ವೇಷ, ಅಹಂಕಾರದಿಂದ ಮೆರೆದು ಮರ್ದನಗೊಂಡ ದಕ್ಷನನ್ನು ಬದುಕಿಸಬೇಕಾದರೆ, ಮುಗ್ಧವಾದ ಕುರಿ, ಯಾಜ್ಞಿಕರ ವಧೆಗೆ ಗುರಿಯಾದ ಜಿಂಕೆ, ಕುದುರೆ, ಹೋತ, ಹಸು, ಆನೆ ಮುಂತಾದ ಪ್ರಾಣಿಗಳನ್ನು ಬದುಕಿಸಬೇಕೆಂಬುದು. ಪಾಶವೀಕೃತ್ಯಕ್ಕಿಂತ ಸತ್ವಗುಣದ ಜೀವಿಯ ಬದುಕು ಲೇಸು ಎಂದು ತೋರಿದ' ಎಂಬ ಮಾತು ಚಿಂತನೆಗೆ ಪ್ರಚೋದನೆ ನೀಡುತ್ತದೆ.

ಪ್ರಾಣಿ ಶಿರಗಳ ಕಸಿಯನ್ನು ಆ ಕಾಲಕ್ಕೆ ಸಾಧಿಸಿದ್ದರೆ? ಎಂಬ ಪ್ರಶ್ನೆಗೆ ಉತ್ತರಿಸುವ ಬದಲು, ಪ್ರಾಣಿವಧೆಯನ್ನು ವೀರಭದ್ರ ನಿಲ್ಲಿಸಿದ ಅಥವಾ ತಪ್ಪಿಸಿದ ಎಂಬುದರ ಸಂಕೇತ ಅದು ಎಂದು ಭಾವಿಸುವುದೊಳಿತು. ಯಜ್ಞದಲ್ಲಿ ಪ್ರಾಣಿಹಿಂಸೆ, ಪ್ರಾಣಿವಧೆ ನಿಲ್ಲಿಸಿದರೆ ದಕ್ಷ ಹಾಗೂ ನೆರೆದ ಇತರ ಯಾಜ್ಞಿಕರ ವಧೆಯನ್ನು ತಾನು ನಿಲ್ಲಿಸುವೆ ಎಂದು ವೀರಭದ್ರನು ಪ್ರಸೂತಿಯ ಬೇಡಿಕೆಗೆ ನೀಡಿದ ವಚನವಾಗಿತ್ತಿದು. ಅಂತಾಗಿ 'ಕುರಿದಲೆ'ಯು ಜೀವವುಳಿಸಿದ ಸಂಕೇತ ಎಂದಾಯಿತು. ಮೂಕಸಂಕಟಕ್ಕೆ ಒಳಗಾದ ಯಜ್ಞಪಶು (ಹರಕೆಯ ಕುರಿ!) ವಿನಯ, ಮುಗ್ಧತ್ವ, ಮಾನವನ ಅಹಂಕಾರ, ಅಸೂಯೆ, ದುರಾಸೆಗಳಿಗಿಂತ ಮೌಲಿಕವಾದದ್ದು ಎಂಬುದರ ಸಂಕೇತವಾಗಿ ಮಾನವರೂಪದ ದೇಹಕ್ಕೆ ಕುರಿದಲೆಯ ಅಳವಡಿಕೆ! ದೇವಲೋಕದವನಿಂದ ಇಂಥ ಕಾರ್ಯವಾದರೂ ಇಳೆಯ ಪ್ರಾಣಿಯ ಮುಗ್ಧತೆಯ ಮೌಲ್ಯಕ್ಕೆ ಅವನೂ ತಲೆಬಾಗಬೇಕೆಂಬ ಅಂಶ ಇಲ್ಲಿದೆ. ಮಾನವನಾಗಲಿ, ದೇವಲೋಕದ ವ್ಯಕ್ತಿಯಾಗಲಿ ಈ ಮುಗ್ಧತೆಯ ಜೊತೆಗೆ ವಿವೇಕ ಬುದ್ಧಿ ಬೆಳೆಸಿಕೊಂಡರೆ ನಿಜ ದೇವಮಾನವತ್ವ ಒದಗುತ್ತದೆ ಎಂಬ ಆಶಯವಿಲ್ಲಿದೆ. ಮುಖ್ಯವಾಗಿ ದಕ್ಷನ ಅಹಂಕಾರ, ಅಸೂಯೆ, ದುರಾಸೆ, ಯಜ್ಞಮದವನ್ನು ತರಿದು ವಿನಯ, ಸಜ್ಜನಿಕೆಯನ್ನು ದಕ್ಷನಲ್ಲಿ ತಂದುಕೊಟ್ಟುದುದರ ಸಂಕೇತ ಅವನ ಆಕೃತಿ- ಶಿಲ್ಪಗಳಲ್ಲಿ ಕಾಣುವ (ಟಗರು) 'ಕುರಿದಲೆ' ಎನ್ನಬೇಕು. ಇಂದಿನ ಪರಿಭಾಷೆಯಲ್ಲಿ ಹೇಳುವುದಾದರೆ ಜೀವವೈವಿಧ್ಯದ ರಕ್ಷಕ ವೀರಭದ್ರ ಎಂದಾಗಬಹುದು. ಇದಲ್ಲದೆ ವೀರಭದ್ರ ಹಾಗೂ ದಕ್ಷನ ನಡುವಣ ಸಂಘರ್ಷವು ಪ್ರಾಗೈತಿಹಾಸಿಕ ಕಾಲದಲ್ಲಿ ನಡೆದಿರಬಹುದಾದ ಎರಡು ಸಂಸ್ಕೃತಿಗಳ ನಡುವಣ ಸಂಘರ್ಷದ ಸಂಕೇತವೆಂದು ಭಾವಿಸುವವರೂ ಇದ್ದಾರೆ."

ಇವರು ಒಡಪುಗಳನ್ನು ಹೇಳುವಾಗ ಪ್ರತಿ ಸಾಲು ಅಥವಾ ನುಡಿಗೊಮ್ಮೆ ಸಂಬಾಳದ ದನಿಯಾಗುತ್ತದೆ. ಅದು ಅವರು ಒಡಪು ಮುಂದುವರಿಸಲು ಸ್ಫೂರ್ತಿ ನೀಡುತ್ತದೆ. ಪುರವಂತರಲ್ಲಿ 'ಶಸ್ತ್ರ ಪವಾಡ' ಮುಖ್ಯವಾದ ಅಂಶ. ಕಲಾವಿದರು ಆವೇಶದಿಂದ ಕುಣಿಯುವಾಗ ಶಸ್ತ್ರಗಳನ್ನು ಲೀಲಾಜಾಲವಾಗಿ ದೇಹದ ವಿವಿಧ ಭಾಗಗಳಿಗೆ ಚುಚ್ಚಿಕೊಳ್ಳುತ್ತಾರೆ. ಇದು ನೋಡುವವರಿಗೆ ಭಯಾನಕ ದೃಶ್ಯ. ಆದರೆ ಕಲಾವಿದರಿಗೆ ಇದೊಂದು ಸಾಮಾನ್ಯ ಕ್ರಿಯೆ. "ದೇವರ ಬಗ್ಗೆ ಪೂರ್ಣವಾದ ನಂಬಿಕೆಯನ್ನಿಟ್ಟು ಶಸ್ತ್ರವನ್ನು ಚುಚ್ಚಿದರೆ ನಮಗೆ ನೋವಾಗುವುದಿಲ್ಲ" ಎನ್ನುವ ಕಲಾವಿದರು ಪಣಶಸ್ತ್ರ, ನಾಭಿಶಸ್ತ್ರ, ಜನಿವಾರ ಶಸ್ತ್ರ, ಕಂಠಶಸ್ತ್ರ, ಗುಪ್ತಶಸ್ತ್ರ -ಹೀಗೆ ಹತ್ತಾರು ಬಗೆಯ ಶಸ್ತ್ರ ಪವಾಡ ನಡೆಸುತ್ತಾರೆ. ಕೆಲವು ಪುರವಂತರು ಸುಮಾರು ಕಾಲು ಅಂಗುಲ ದಪ್ಪದ ೪೦೦-೫೦೦ ಅಡಿ ಉದ್ದದ ದಾರವನ್ನು ಹೊಟ್ಟೆಯ ಚರ್ಮದಲ್ಲಿ ಹಾಯಿಸುತ್ತಾರೆ. "ಆವೇಶ ತುಂಬಿ ಕುಣಿಯುವ ಪುರವಂತರು ಒಬ್ಬರಿಗೊಬ್ಬರು ಎದುರುಬದುರಾಗಿ ನಿಂತು ಇಬ್ಬರ ತುಟಿ-ನಾಲಗೆಗಳನ್ನು ಸೇರಿಸಿ ಶಸ್ತ್ರ ಏರಿಸುವುದು, ಕೆನ್ನೆಗಳಲ್ಲಿ, ಕೊರಳಿನ ಚರ್ಮದಲ್ಲಿ, ಕಿವಿಯಲ್ಲಿ -ಹೀಗೆ ದೇಹದ ನಾನಾ ಭಾಗಗಳಲ್ಲಿ ಶಸ್ತ್ರ ಹಾಯಿಸುವುದು ಸೋಜಿಗವೆನಿಸುತ್ತದೆ. ಪುರವಂತರು ಶಸ್ತ್ರಗಳನ್ನು ಹೊರಗೆ ತೆಗೆದ ಕೂಡಲೆ ಆ ಸ್ಥಳಕ್ಕೆ ಭಸ್ಮ ಲೇಪಿಸಿಕೊಂಡು ಮತ್ತೆ ಕುಣಿಯತೊಡಗುತ್ತಾರೆ. ಕೆಲವು ಕಡೆ ಪುರವಂತರು ಸಂಬಾಳ ಗತ್ತಿಗೆ ತಕ್ಕಂತೆ ವಚನಗಳನ್ನು ಹಾಡುತ್ತಾರೆ."

ನಂದೀಧ್ವಜ: ಶೈವ ಸಂಪ್ರದಾಯದ ವೀರಗಾಸೆ, ಪುರವಂತಿಕೆ ಕಲೆಗಳಂತೆ ನಂದೀಧ್ವಜವೂ ಒಂದು ವೀರಾವೇಶದ ಗಂಡುಕಲೆ. ಕೊಡಗು, ಕರಾವಳಿ ಪ್ರದೇಶವನ್ನು ಬಿಟ್ಟರೆ ಬಹುತೇಕ ಭಾಗಗಳಲ್ಲಿ ಈ ಕಲೆ ಪ್ರಚಲಿತವಿರುವುದು ಕಂಡುಬರುತ್ತದೆ. ನಂದೀಧ್ವಜ ಕುಣಿತಕ್ಕೆ ಪ್ರಾಚೀನ ಪರಂಪರೆಯದೆ, ಪೌರಾಣಿಕ ಹಿನ್ನೆಲೆಯಿದೆ.

ಜಾತ್ರೆ ಉತ್ಸವಗಳಲ್ಲಿ ನಂದೀಧ್ವಜಕ್ಕೆ ಮುಂಚೂಣಿ ಸ್ಥಾನ. ನಂದೀಧ್ವಜ ಕುಣಿತವಿದ್ದರೆ ಮೆರವಣಿಗೆಗೆ ಸೊಬಗು, ಎತ್ತರದಲ್ಲಿ ಎದ್ದು ಕಾಣುವ ನಂದೀಧ್ವಜ ಘನತೆ, ಗೌರವಗಳ ಸಂಕೇತ. ವೀರಶೈವ ಸಂಪ್ರದಾಯದಲ್ಲಿ ಧಾರ್ಮಿಕ ಗುರುಗಳನ್ನು ಬರಮಾಡಿಕೊಳ್ಳುವಾಗ ನಂದೀಧ್ವಜ ಕುಣಿತ ಪ್ರದರ್ಶಿಸುವುದುಂಟು.

ಕಲಾವಿದರು ನಂದೀಧ್ವಜದ ಕುಣಿತದ ಬಗ್ಗೆ ಪೌರಾಣಿಕ ಕಥೆಯೊಂದನ್ನು ಹೇಳುತ್ತಾರೆ. ಆ ಕಥೆಯ ಪ್ರಕಾರ ದಕ್ಷನ ಯಾಗವನ್ನು ಶಿವನ ಆದೇಶದಂತೆ ಧ್ವಂಸ ಮಾಡಲು ಬಂದ ವೀರಭದ್ರ ಯಾಗದ ಅಧ್ವರ್ಯುಗಳನ್ನು ಖಂಡಿಸಿ ರುಂಡಗಳನ್ನು ಮುಂಡಗಳಿಂದ ಬೇರ್ಪಡಿಸಿದ. ಕೋಪದ ಆವೇಶದಲ್ಲಿ ಅಲ್ಲಿದ್ದವರ ರುಂಡಗಳನ್ನು ಚಂಡಾಡಿದ ಬಳಿಕ, ಅವರೆಲ್ಲರೂ ಶಿವಭಕ್ತರೆಂದು ತಿಳಿದು ತಾನು ಮಾಡಿದ ಕೆಲಸಕ್ಕೆ ಪಶ್ಚಾತ್ತಾಪ ಪಟ್ಟ. ಅವರಿಗೆ ಶ್ರೇಷ್ಠಸ್ಥಾನ ಕೊಡಬೇಕೆಂದು ಯೋಚಿಸಿ ವ್ಯಾಸನ ತೋಳುಗಳನ್ನು ಕೋಲನ್ನಾಗಿ ಮಾಡಿ ಅದಕ್ಕೆ ಶಿವನ ವಾಹನವಾದ ನಂದಿಯನ್ನು ಮೂರ್ತಿಯನ್ನಾಗಿ ಪ್ರತಿಷ್ಠಾಪಿಸಿದ. ಋಷಿಯ ರುಂಡಗಳನ್ನು 'ಹಂಡೆ'ಗಳನ್ನಾಗಿ ಮಾಡಿ ಆ ನಂದೀಕೋಲಿಗೆ ತೊಡಿಸಿದ. ಮಹಾದ್ವಾರದಲ್ಲಿದ್ದ ಸಿಂಹವನ್ನು ತಂದು ಅದರ ಚರ್ಮದಲ್ಲೇ ಧ್ವಜಮಾಡಿ ನಂದೀಕೋಲಿನ ತುದಿಯನ್ನು ಅಲಂಕರಿಸಿದ. ಹೀಗೆ ರೂಪುಗೊಂಡ ಧ್ವಜವನ್ನೇ ಮುಂದುಮಾಡಿಕೊಂಡು ವಿಜಯಘೋಷದೊಂದಿಗೆ ಕೈಲಾಸಕ್ಕೆ ಹಿಂತಿರುಗಿದ. ಅಂದಿನಿಂದ 'ನಂದೀಧ್ವಜ' ಶಿವಭಕ್ತರ ಧರ್ಮಧ್ವಜವೂ ಆಯಿತು.

ನಂದೀಧ್ವಜಕ್ಕೆ 'ನಂದಿಕೋಲು', 'ನಂದೀಕಂಬ', 'ಬಿರಡೆಕಂಬ', 'ವ್ಯಾಸಗೋಲು' ಎಂದು ಪ್ರಾದೇಶಿಕವಾಗಿ ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ. ಶಾಸ್ತ್ರೀಯ ನಂದೀಧ್ವಜದ ಕೋಲು ಹದಿನೆಂಟು ಮೊಳ ಎತ್ತರವಿರುತ್ತದೆ. ಒಂದೊಂದು ಮೊಳವೂ ಒಂದೊಂದು ಧರ್ಮದ ಸಂಕೇತ ಎನ್ನುತ್ತಾರೆ. ನಂದೀಕೋಲು ಒಂದು ಬಿದುರಿನ ಬೊಂಬು ಅದರ ವ್ಯಾಸ ಮೂರರಿಂದ ನಾಲ್ಕು ಅಂಗುಲ ಇರುತ್ತದೆ. ಬೊಂಬಿಗೆ ಹಿತ್ತಾಳೆಯ 'ಹಂಡೆ'ಗಳನ್ನು ತೊಡಿಸಿರುತ್ತಾರೆ. ಪ್ರತಿ ಎರಡು ಹಂಡೆಗಳ ಮಧ್ಯೆ ಒಂದು ಹಿತ್ತಾಳೆಯ 'ಕೊಳಗ'ವಿರುತ್ತದೆ. ಈ ಹಂಡೆ-ಕೊಳಗಗಳ ಸಂಖ್ಯೆ ತಲಾ ಹದಿನೆಂಟು ಇರುತ್ತದೆ (ಇದಕ್ಕೆ ಹಂಡಿ-ಗಗ್ಗರ ಎಂದು ಕರೆಯುತ್ತಾರೆ). ಇವುಗಳ ಮಧ್ಯೆ ಅಲ್ಲಲ್ಲಿ ಹಿತ್ತಾಳೆಯ ಕಂಚಿನ ತಟ್ಟೆಗಳು ಇರುತ್ತವೆ. ಕಂಬದ ತುದಿಗೆ ಕಟ್ಟುವ ಕಾವಿಬಣ್ಣದ ರೇಷ್ಮೆ ಬಟ್ಟೆಯೇ ಪಟ್ಟೆ ಅಥವಾ ಧ್ವಜ. ಇದೂ ಹದಿನೆಂಟು ಮೊಳವಿರುತ್ತದೆ. ನಂದೀಕೋಲಿನ ತುದಿಯಲ್ಲಿ ಹಿತ್ತಾಳೆಯ ಛತ್ರಿ ಜೋಡಿಸುತ್ತಾರೆ. ಕೆಲವು ಕಡೆ ಬೆಳ್ಳಿಯ ಛತ್ರಿಯನ್ನು ಜೋಡಿಸಿರುವುದನ್ನು ಕಾಣಬಹುದಾಗಿದೆ. ಈ ಛತ್ರಿಯ ತುದಿಯೇ ನಂದೀಕೋಲಿಗೆ ಕಳಸ; ಧ್ವಜದ ತುದಿ. ಅಂಚಿಗೆ ರೇಷ್ಮೆದಾರದ ಕುಚ್ಚಿನ ಅಲಂಕಾರವಿರುತ್ತದೆ. ಬುಡದಿಂದ ಮೂರು ನಾಲ್ಕು ಅಡಿ ಬಿಟ್ಟರೆ ನಂದೀಕೋಲಿನ ಬೊಂಬು ಪೂರ್ಣವಾಗಿ ಆ ತೊಡಿಗೆಗಳಿಂದ ತುಂಬಿಕೊಂಡಿರುತ್ತದೆ. ಕಂಬದ ಕೆಳಭಾಗದಿಂದ ಐದು ಆರು ಅಡಿ ಎತ್ತರದಲ್ಲಿ ಹಲಗೆಯನ್ನು ಕಟ್ಟಿ ಬೆಳ್ಳಿಯ ಕವಚ ತೊಡಿಸಿದ ನಂದಿ ಮೂರ್ತಿಯನ್ನು ಸ್ಥಾಪಿಸಿರುತ್ತಾರೆ. ಹೀಗೆ ಸ್ಥಾಪಿಸಿದ ಹಲಗೆಗೆ 'ವೀರಭದ್ರನ ಹಲಗೆ' ಎಂದು ಹೇಳುತ್ತಾರೆ. ನಂದೀಧ್ವಜದ ಈ ರಚನೆಯನ್ನು ಗಮನಿಸಿದಾಗ ಕಲಾವಿದರು ಹೇಳುವ ಪೌರಾಣಿಕ ಹಿನ್ನೆಲೆಗೆ ಅರ್ಥವಿದೆ ಎಂದೆನಿಸುತ್ತದೆ.

ಗಂಡು ಕಚ್ಚೆಯ ಬಿಳಿ ಪಂಚೆ ಅಥವಾ ಧೋತ್ರ, ಕಸೆಯಂಗಿ, ತಲೆಗೆ ಪೇಟ, ಹಣೆಗೆ ವಿಭೂತಿ ನಂದೀಧ್ವಜವನ್ನು ಕುಣಿಸುವ ಕಲಾವಿದರ ಇವಿಷ್ಟು ವೇಷ ಭೂಷಣಗಳು. ಕಲಾವಿದ ಸೊಂಟದ ಸಮೀಪದಲ್ಲಿ ಒಂದು ಗಟ್ಟಿಯಾದ ಪಟ್ಟಿ

ಚೀಲವನ್ನು ಹೆಗಲಿನಿಂದ ಇಳಿಬಿಟ್ಟಿರುತ್ತಾನೆ. ಈ ಚೀಲಕ್ಕೆ 'ನವಾರ' ಎಂದು ಕರೆಯುತ್ತಾರೆ. ನಂದೀಕೋಲನ್ನು ಹಿಡಿದಿಟ್ಟುಕೊಳ್ಳಲು ಇದೇ ಆಧಾರ. ನಂದೀ ಕೋಲಿನ ಬುಡವನ್ನು ಚೀಲದಲ್ಲಿರಿಸಿ ಕೈಗಳಿಂದ ಧ್ವಜವನ್ನು ಹಿಡಿದುಕೊಂಡು ವಾದ್ಯದ ಗತ್ತಿಗೆ ಹೆಜ್ಜೆ ಹಾಕುತ್ತಾ ಲಯಬದ್ಧವಾಗಿ ಕುಣಿಸುತ್ತಾನೆ. ಈ ಕುಣಿತಕ್ಕೆ ಕರಡೆ, ಚಮ್ಮಾಳ, ನಗಾರಿ ಹಾಗೂ ನಾಗಸ್ವರಗಳ ಹಿಮ್ಮೇಳಗಳಿರುತ್ತದೆ. ನಂದೀಧ್ವಜವನ್ನು ಕುಣಿಸುವಾಗ ಅದು ಕೆಳಕ್ಕೆ ಬೀಳಬಾರದೆಂದೂ, ಒಂದು ವೇಳೆ ಕೆಳಕ್ಕೆ ಬಿದ್ದರೆ ಧ್ವಜ ಕುಣಿಸುವವನಿಗೆ, ಅವನ ಮನೆತನಕ್ಕೆ, ಸಮಾಜಕ್ಕೆ ಕೆಡುಕಾಗುತ್ತದೆ ಎಂಬ ನಂಬಿಕೆಯಿದೆ. ಇದರಿಂದ ನಂದೀಧ್ವಜವನ್ನು ಕುಣಿಸುವಾಗ ತುಂಬಾ ಎಚ್ಚರಿಕೆ ವಹಿಸುತ್ತಾರೆ. ನಂದಿಧ್ವಜ ಕೆಳಕ್ಕೆ ಬೀಳದಂತೆ ನೆರವಾಗಲು ಅಕ್ಕಪಕ್ಕದಲ್ಲಿ ಒಬ್ಬೊಬ್ಬರು ನಿಂತು ನಿಗಾವಹಿಸುತ್ತಾರೆ. ಕೆಲವು ಕಡೆ ನಂದೀಧ್ವಜದ ಮಧ್ಯಭಾಗಕ್ಕೆ ಉದ್ದವಾದ ಹಗ್ಗ ಕಟ್ಟಿ ಎಳೆದು ಹಿಡಿದುಕೊಳ್ಳುವುದು ಉಂಟು.

ನಂದೀಧ್ವಜ ಕುಣಿತಕ್ಕೆ ಶಕ್ತಿಯಷ್ಟೇ ಯುಕ್ತಿಯೂ ಬೇಕು. ಕೆಲವು ಕಡೆ ಹದಿನೆಂಟು ವರ್ಷದೊಳಗಿನ ಯುವಕರೂ ನಂದೀಧ್ವಜ ಹಿಡಿದು ಕುಣಿಯುವುದನ್ನು ನೋಡಿದಾಗ ಶಕ್ತಿಗಿಂತ ಯುಕ್ತಿಯೇ ಹೆಚ್ಚು ಬೇಕೆಂದೆನಿಸುತ್ತದೆ. ವಾದ್ಯಗಳ ಗತ್ತಿಗೆ ಸರಿಯಾಗಿ ಹೆಜ್ಜೆ ಹಾಕುತ್ತಾ ಧ್ವಜವನ್ನು ಸಮತೋಲನದಲ್ಲಿ ನಿಲ್ಲಿಸಿಕೊಂಡು ಕುಣಿಯುವ ದೃಶ್ಯ ಮನಮೋಹಕ. ಕೆಲವು ಅನುಭವಿ ಕಲಾವಿದರು ನಂದೀಧ್ವಜ ಭಾರವಿದ್ದರೂ ಎದೆ, ಹೆಗಲು, ಹಣೆ, ಗಲ್ಲ, ಅಂಗೈಗಳ ಮೇಲೆ ನಿಲ್ಲಿಸಿಕೊಂಡು ಕುಣಿದು ಪ್ರೇಕ್ಷಕರನ್ನು ಚಕಿತಗೊಳಿಸುತ್ತಾರೆ. ಕೆಲವು ಕಡೆ ಎರಡೆರಡು ನಂದೀಧ್ವಜಗಳನ್ನು ಒಬ್ಬರೇ ಹೊತ್ತು ಕುಣಿಯುವ ಕಲಾವಿದರೂ ಇದ್ದಾರೆ.

ನಂದೀಧ್ವಜದ ಬಗ್ಗೆ ಭಕ್ತಿ ಗೌರವಗಳನ್ನು ಇಟ್ಟುಕೊಂಡಿರುವ ಕಲಾವಿದರು ಸಾಮಾನ್ಯವಾಗಿ ಸ್ನಾನಮಾಡಿ ಮಡಿಯುಟ್ಟು ಹಣೆಗೆ ವಿಭೂತಿ ಧರಿಸಿಕೊಂಡು ಮೊದಲು ನಂದೀಕಂಬಕ್ಕೆ 'ಸನಿ' (ಶರಣು) ಮಾಡಿ ನಂತರ ಅದನ್ನು ನವಾರದಲ್ಲಿ ಇಟ್ಟುಕೊಂಡು ಕುಣಿಯತೊಡಗುತ್ತಾರೆ. ನಂದೀಧ್ವಜ ಕುಣಿತದಲ್ಲಿ ಒಂದ್ಹೆಜ್ಜೆ ಎರಡ್ಹೆಜ್ಜೆ, ಮೂರೆಜ್ಜೆ, ನಾಲ್ಕೆಜ್ಜೆ, ತಿರುಗಣಿ ಹೀಗೆ ನಾಲ್ಕೈದು ಗತ್ತುಗಳಿವೆ. ಈ ಗತ್ತುಗಳಿಗೆ ತಕ್ಕಂತೆ ವಾದ್ಯಗಳ ಲಯಗಳೂ ವ್ಯತ್ಯಾಸವಾಗುತ್ತವೆ.

ಆದರೆ ಜಾತ್ರೆ ಉತ್ಸವಗಳಿಗೆ ಸೀಮಿತವಾಗಿದ್ದ ನಂದೀಧ್ವಜವನ್ನು ಇಂದು ಬೇರೆ ಬೇರೆ ಸಂದರ್ಭಗಳಲ್ಲೂ ಪ್ರದರ್ಶಿಸಲಾರಂಭಿಸಿದ್ದಾರೆ. ಸಭೆ-ಸಮಾರಂಭಗಳಲ್ಲಿ, ರಾಜಕೀಯ ಮುಖಂಡರನ್ನು ಸ್ವಾಗತಿಸುವಾಗಲೂ ಧ್ವಜದ ಬಳಕೆಯಾಗುತ್ತಿರುವುದು ಮೂಲ ಆಶಯಕ್ಕೆ ಅಪಚಾರ ಮಾಡಿದಂತಾಗಿದೆ. ನಂದೀಧ್ವಜದಲ್ಲಿ ಕೆಲವು ಬದಲಾವಣೆ ಮಾಡಿಕೊಂಡಿದ್ದಾರೆ. ಕುಣಿಸಲು ಭಾರ ಎನ್ನುವ ದೃಷ್ಟಿಯಿಂದ ಹಂಡೆ ಹಾಗೂ ಕೊಳಗಗಳ ಸಂಖ್ಯೆಯನ್ನು ಕಡಿಮೆ ಮಾಡುತ್ತಿರುವುದು ಕಂಡುಬರುತ್ತಿದೆ.

ಕಂಸಾಳೆ: ಮೈಸೂರು ಜಿಲ್ಲೆಯಲ್ಲಿ ವಿಶೇಷವಾಗಿ, ಮಂಡ್ಯ-ಬೆಂಗಳೂರು ಜಿಲ್ಲೆಗಳಲ್ಲಿ ಕಂಡುಬರುವ ಕಂಸಾಳೆ ಕಲಾವಿದರು ಪ್ರಮುಖವಾಗಿ ಶಿವ ಮತ್ತು ಶಿವಶರಣರ ಮಹಿಮೆಗಳನ್ನು ಕಥಾರೂಪದಲ್ಲಿ ಹಾಡುತ್ತಾ ಒಂದು ವಿಶಿಷ್ಟ ಜಾನಪದ ಸಂಪ್ರದಾಯವಾಗಿ ಬೆಳೆಸಿಕೊಂಡು ಬಂದಿದ್ದಾರೆ. ಇವರು ಮಲೆಮಹದೇಶ್ವರನ ಭಕ್ತರು.

ಸಾಮಾನ್ಯವಾಗಿ 'ಕಂಸಾಳೆ' ಮೇಳದಲ್ಲಿ ಮೂರುಜನ ಕಲಾವಿದರಿರುತ್ತಾರೆ. ಇವರ ವೇಷಭೂಷಣಗಳು ಸಾಮಾನ್ಯವಾಗಿರುತ್ತವೆ. ಸಾಧಾರಣವಾದ ಅಂಗಿ, ಪಂಚೆ, ಹೆಗಲಲ್ಲಿ ಜೋಳಿಗೆ, ಕೊರಳಲ್ಲಿ ರುದ್ರಾಕ್ಷಿ, ಹಣೆಯಲ್ಲಿ ವಿಭೂತಿ ಧರಿಸಿರುತ್ತಾರೆ. ಇವರಲ್ಲಿ ಇಬ್ಬರು ಏಕತಾರಿ, ಕಂಜರ ಹಿಡಿದು ಹಿಮ್ಮೇಳದವರಾಗಿರುತ್ತಾರೆ. ಇನ್ನೊಬ್ಬ ಮುಮ್ಮೇಳದವನಾಗಿ ಕಂಸಾಳೆ ಹಿಡಿದು ಕುಣಿತಿರುತ್ತಾರೆ.

ಕಂಸಾಳೆ ಎನ್ನುವುದು ಕಲಾವಿದರು ಕೈಯಲ್ಲಿ ಹಿಡಿಯುವ ಒಂದು ಬಗೆಯ ವಾದ್ಯವಿಶೇಷ, ಭಿಕ್ಷಾಪಾತ್ರೆಯಂತಿರುವ ಮಧ್ಯೆ ದಾರದ ಕುಚ್ಚುಕಟ್ಟಿದ, ಅಂಗೈ ಅಗಲದ ಮಿಶ್ರಲೋಹದ ಒಂದು ಬಟ್ಟಲು ಎಡಗೈಯಲ್ಲಿದ್ದರೆ, ಬಲಗೈಯಲ್ಲಿ ಮಟ್ಟಸವಾದ ತಾಳವಿರುತ್ತದೆ. ಮುಚ್ಚಳದ ನಡುವಿನ ಹೊರಭಾಗ ಉಬ್ಬಿರುತ್ತದೆ. ಆ ಉಬ್ಬಿನ ರಂಧ್ರವಿರುವ ಬಿಗಿದ ನೀಳವಾದ ದಾರ ಗೊಂಡೆಗಳಿಂದ ಅಲಂಕೃತವಾಗಿ ಬಲಗೈ ಮೇಲಿಂದ ಇಳಿಬಿಟ್ಟಿರುತ್ತಾರೆ. ಕಲಾವಿದರ ಎಡಗೈ ಬಟ್ಟಲನ್ನು ಮೇಲುಮುಖವಾಗಿ ಅಂಗೈ ಮೇಲೆ ಇರಿಸಿಕೊಂಡು ಬಲಗೈಯ ಮೇಲು ತಾಳವನ್ನು ಕುಟ್ಟುವುದರಿಂದ ಕಂಚಿನ ಕಣಿಕಣಿ ನಾದ ಉಂಟಾಗುತ್ತದೆ. ವಿವಿಧ ಧಾಟಿಯ ವಿವಿಧ ತಾಳದ ಹಾಡುಗಳಿಗೆ ಈ ನಾದ ಮಧುರ ಹಿನ್ನೆಲೆಯಾಗುತ್ತದೆ.

ಹಬ್ಬ ಹರಿದಿನಗಳಲ್ಲಿ ಶಿವರಾತ್ರಿ-ನವರಾತ್ರಿ ಕಾಲದಲ್ಲಿ, ಮಹದೇಶ್ವರನ ಜಾತ್ರೆ ಸಂದರ್ಭದಲ್ಲಿ ಕೈಯಲ್ಲಿ ಕಂಸಾಳೆ ಹಿಡಿದು ಮಾದಯ್ಯನ ಕೋಲನ್ನು (ನಾಗಬೆತ್ತ) ಕಂಕುಳಲ್ಲಿಟ್ಟು, ಹಸುಬೆ (ಜೋಳಿಗೆ)ಯನ್ನು ಹೆಗಲಿಗೆ ಹಾಕಿಕೊಂಡು ಬುತ್ತಿಯ ಗಂಟನ್ನು ತಲೆಯ ಮೇಲಿಟ್ಟುಕೊಂಡು ಯಾತ್ರೆ ಹೊರಡುವುದು ಮೈಸೂರು ಜಿಲ್ಲೆಯಲ್ಲಿ ಕಂಡುಬರುವ ಸಾಮಾನ್ಯ ದೃಶ್ಯ. ಮಲೆಯ ಮಹದೇಶ್ವರನ ಜಾತ್ರೆಯಲ್ಲಿ ಕಂಸಾಳೆಯ ಪ್ರದರ್ಶನ ಕೇಂದ್ರವಾಗಿರುತ್ತದೆ. ಬೆಳದಿಂಗಳ ರಾತ್ರಿಯಲ್ಲಿ ಕಂಸಾಳೆಯ ಕಲಾವಿದರನ್ನೊಳಗೊಂಡ ಹಲವಾರು ಗುಂಪುಗಳು ಅಲ್ಲಿ ಮೇಳ ನಡೆಸುತ್ತವೆ.

"ಕೂಗೋ ಕೂಗು ಮಾದೇವನ
ಕೂಗಯ್ಯ ಎಂದು ಮಾದೇವನ
ಕೂಗಿದರೆ ಕುಣಿಯುತ್ತ ಬರುವನು ಮಾದೇವನ
ಕೂಗಯ್ಯ ಮುದ್ದು ಮಾದೇವನ"

ಎಂಬಂತಹ ಸೊಲ್ಲುಗಳ ಹಿನ್ನೆಲೆಯಲ್ಲಿ ಕಂಚಿನ ತಾಳದ ಶಬ್ದ ಕಿವಿಗೆ ಇಂಪನ್ನುಂಟುಮಾಡುತ್ತದೆ.

ಕಲಾವಿದರು ವಿಶೇಷವಾಗಿ ಮಹದೇಶ್ವರರ ಜನನ, ಬಾಲ್ಯ, ಯೌವನ, ವಿನೋದ, ವಿರಸ ಮೊದಲಾದ ವಿವರಗಳನ್ನು, ಮಹಿಮೆಗಳನ್ನು ಬಹುಸೊಗಸಾಗಿ ಹಾಡುತ್ತಾರೆ. ಇಡೀ ರಾತ್ರಿಯೆಲ್ಲ ಹಾಡುವುದನ್ನು ರೂಢಿಸಿಕೊಂಡಿರುವ ಕಲೆಗಾರಿಕೆ ಮೆಚ್ಚುವಂತಹುದು. ಕಲಾವಿದರು ಮಹದೇಶ್ವರನ ಕಥೆಯಲ್ಲದೆ, ಪಿರಿಯಾಪಟ್ಟಣದ ಲಾವಣಿ, ಸಾರಂಗಧರ, ಚೆನ್ನಿಗರಾಮ, ಘನಪತಿರಾಯ, ಬಾಲನಾಗಮ್ಮ, ಅರ್ಜುನಜೋಗಿ ಮುಂತಾದ ಜನಪದ ಕಥಾಪ್ರಸಂಗಗಳನ್ನು ಪ್ರೇಕ್ಷಕರ ಕುತೂಹಲ ಕೆರಳುವಂತೆ ಹಾಡುತ್ತಾರೆ. ಜನಪದ ಸೊಗಡನ್ನು, ಸತ್ವವನ್ನು, ಸ್ವಾರಸ್ಯವಾದ ಕಥಾಪ್ರಸಂಗಗಳನ್ನು ಉಳಿಸಿ, ಬೆಳೆಸಿಕೊಂಡು ಬಂದಿರುವ ಇವರ ಕಲೆಗಾರಿಕೆ ಜಾನಪದ ಕ್ಷೇತ್ರಕ್ಕೆ ಬಹುದೊಡ್ಡ ಕಾಣಿಕೆಯಾಗಿದೆ.

ಕಂಸಾಳೆಯ ಕಲಾ ಪ್ರಕಾರಗಳಲ್ಲಿ 'ಬೀಸು ಕಂಸಾಳೆ' ವಿಶಿಷ್ಟ ಶೈಲಿಯಿಂದ ಕೂಡಿದೆ. ಶ್ರಮ ಮತ್ತು ಚಮತ್ಕಾರ ಎರಡೂ ಒಟ್ಟಿಗೆ ಸೇರಿ ಅಭಿವ್ಯಕ್ತವಾಗುವ ಈ ಪ್ರದರ್ಶನಕ್ಕೆ ನಾಲ್ಕು ಜನ ಕಲಾವಿದರು ಬೇಕು. ಒಬ್ಬ ಕಲಾವಿದ ಮಧ್ಯೆ ಇದ್ದು ತಾಳಕ್ಕೆ ತಕ್ಕಂತೆ ತಲೆಯ ಮೇಲೆ, ಬೆನ್ನ ಹಿಂದೆ, ಕಾಲು ಕೆಳಗೆ ಕುಳಿತು, ನಿಂತು, ಬಾಗಿ ಬಳುಕುತ್ತ ಉರುಳಾಡಿ ಸುತ್ತ ನಿಂತ ಮೂವರು ಕಲಾವಿದರಿಗೆ ತಾಳಗಳನ್ನು ಕೊಡುತ್ತಾ ನಿರ್ದಿಷ್ಟವಾದ ಲಯದಲ್ಲಿ ಬೀಸುಕಂಸಾಳೆಯನ್ನು ಪ್ರದರ್ಶಿಸುತ್ತಾರೆ. ಈ ಕಲೆ ನೋಡುಗರಿಗೆ ಒಂದು ಅದ್ಭುತವಾದ ಅನುಭವವನ್ನು ತಂದುಕೊಡುತ್ತದೆ. ಕಲಾವಿದರ ಪ್ರತಿಭೆ ಅವರು ತಮ್ಮನ್ನು ಕಲೆಯಲ್ಲಿ ತೊಡಗಿಸಿಕೊಂಡಿರುವ ರೀತಿ ನಿಜಕ್ಕೂ ಸೋಜಿಗವನ್ನುಂಟುಮಾಡುತ್ತದೆ. ಗಾಯಕರು 'ಲಿಂಗ ಬಾ, ಮುದ್ದು ಲಿಂಗ ಬಾ, ನಮ್ಮ ಮುದ್ದು ಮಾದಯ್ಯನ ಲಿಂಗ ಬಾ' ಎಂಬ ಹಾಡನ್ನು ಸೊಗಸಾಗಿ, ಲಯಬದ್ಧವಾಗಿ ತಾಳಕ್ಕೆ ಹೊಂದಿಸಿಕೊಂಡು ಹಾಡುತ್ತಾರೆ.[೨]

ಈ ಸಂಪ್ರದಾಯದಲ್ಲಿ ಅನನ್ಯ ಶ್ರದ್ಧೆ, ನಿಷ್ಠೆ, ದೈವಭಕ್ತಿ, ಅಭ್ಯಾಸ ಮುಂತಾದವು ಇದ್ದು ಧಾರ್ಮಿಕ ಮನೋಭಾವ ಹಿನ್ನೆಲೆಯಲ್ಲಿದೆ. ಆ ದೈವಕ್ಕೆ ಸಂಬಂಧಿಸಿದ ಭಕ್ತರು ತಮ್ಮ ದೇವರ ಪ್ರತಿನಿಧಿಗಳಾದ ಕಂಸಾಳೆಯವರನ್ನು ಹಬ್ಬ ಹರಿದಿನಗಳಲ್ಲಿ, ಜಾತ್ರೆ-ಉತ್ಸವ ಸಂದರ್ಭಗಳಲ್ಲಿ, ಕಾರ್ತೀಕ, ಶ್ರಾವಣ ಮಾಸಗಳಲ್ಲಿ ಕರೆಸಿ ಅವರಿಂದ ಕಲಾಪ್ರದರ್ಶನವನ್ನು ಏರ್ಪಡಿಸುವುದು ಒಂದು ಪವಿತ್ರವಾದ ಕಾರ್ಯವೆಂದು ಭಾವಿಸುತ್ತಾರೆ. ಈ ಸಂಪ್ರದಾಯದಲ್ಲಿ ಮನರಂಜನೆಗಿಂತ ಧಾರ್ಮಿಕ ಶ್ರದ್ಧೆ, ದೈವನಿಷ್ಠೆಗಳು ಹೆಚ್ಚಾಗಿ ಕೆಲಸ ಮಾಡುತ್ತವೆ. ಇದರಿಂದ ಕಲಾವಿದರಿಗೆ ಮೇಲಿಂದ ಮೇಲೆ ಹಾಡುವ ಅವಕಾಶಗಳು ದೊರೆತು ಕತೆಗಳನ್ನು ನೆನಪಿನಲ್ಲಿಟ್ಟುಕೊಳ್ಳಲು ಸಹಾಯವಾಗುತ್ತದೆ. ಜೊತೆಗೆ ಧಾರ್ಮಿಕ ಸಂಪ್ರದಾಯಗಳಲ್ಲಿ ವಟುಗಳಿಗೆ ದೀಕ್ಷೆಯಾಗಿ ಗುರುವಿನ ಸೇವೆ ಸತತ ಲಭ್ಯವಾಗಿ ದೀರ್ಘಕಾಲದ ಅವಕಾಶ ಸಿಗುತ್ತದೆ. ನಿರಂತರ ಅಭ್ಯಾಸಶೀಲನಾದ ಶಿಷ್ಯ ತಾನು ಪ್ರೌಢವಯಸ್ಕನಾಗುವ ವೇಳೆಗೆ ಗುರುವಿನ ಕಾವ್ಯಭಂಡಾರವನ್ನೆಲ್ಲ ತನ್ನದನ್ನಾಗಿಸಿಕೊಳ್ಳುತ್ತಾನೆ. ಹೀಗೆ ಪರಂಪರಾಗತವಾಗಿ ಧಾರ್ಮಿಕ ವೃತ್ತಿಗಾಯಕ ಕಾವ್ಯಗಳೂ ಸಹ ಸಾಧ್ಯವಾದ ಮಟ್ಟಿಗೆ ಉತ್ತಮರೂಪದಲ್ಲಿ ಉಳಿದುಕೊಂಡುಬರಲು ಸಾಧ್ಯವಾಗಿದೆ.

ಕಂಸಾಳೆ ಸಂಪ್ರದಾಯದ ಗಾಯಕರು ದೇವರಗುಡ್ಡರು. ಮಾದೇಶ್ವರ ೧೨ನೇ ಶತಮಾನದ ನಂತರ ಕಾಣಿಸಿಕೊಂಡ ಒಬ್ಬ ಮಹಾಶರಣ. ಅವನ ಜೀವನ ಆದರ್ಶಗಳನ್ನು, ಜೀವಿತ ಕಾಲದಲ್ಲಿ ತೋರಿಸಿದ ಮಹಿಮೆಗಳನ್ನು ಒಪ್ಪಿಕೊಂಡು ಅವನ ಭಕ್ತರಾಗಿದ್ದಾರೆ. ಕಷ್ಟದ ಸಂದರ್ಭದಲ್ಲಿ ಮಲೆಯ ಮಹದೇಶ್ವರನಿಗೆ ಹರಕೆಯನ್ನು ಹೊತ್ತವರು ತಮ್ಮ ಕಷ್ಟಗಳು ಸೂರ್ಯನ ರಶ್ಮಿಗೆ ಮಂಜು ಕರಗಿದಂತೆ ಪರಿಹಾರವಾದಾಗ ಗಂಡುಮಕ್ಕಳಲ್ಲಿ ಹಿರಿಯ ಮಗನನ್ನು ಗುಡ್ಡನನ್ನಾಗಿ ಮಾಡುತ್ತಾರೆ. ಈ ಗುಡ್ಡನು ಮಾದೇಶ್ವರನ ಸಂಪ್ರದಾಯಕ್ಕೆ ಸೇರುತ್ತಾನೆ. ಅವನ ವಂಶಸ್ಥರು ಈ ಸಂಪ್ರದಾಯವನ್ನು ಮುಂದುವರಿಸಿಕೊಂಡು ಹೋಗಬೇಕು. ಈ ಸಂಪ್ರದಾಯಕ್ಕೆ ಸೇರಿದ ದಂಪತಿಗಳಿಗೆ ಗಂಡು ಮಗುವಾದರೆ ಮೊದಲ ಮಗುವಿಗೆ ದೀಕ್ಷೆ ಕೊಡಿಸಬೇಕು. ಹೆಣ್ಣು ಮಗುವಾದರೆ ಮಾದೇಶ್ವರನ ಹೆಸರನ್ನು ಇಡಬೇಕು. ಹೀಗೆ ಮಾದೇಶ್ವರನ 'ಗುಡ್ಡ'ನಾದರೂ ಅವನು ಮೊದಲಿನಿಂದಲೂ ತಮ್ಮ ಮನೆಯವರು ನಡೆದುಕೊಳ್ಳುವ ಮನೆದೇವರಿಗೆ ನಡೆದುಕೊಳ್ಳಬಹುದು. ಆದರೆ ಅಗ್ರಪೂಜೆ ಮಾದೇಶ್ವರನಿಗೆ ಸಲ್ಲಿಸಬೇಕು.

ಸಂಪ್ರದಾಯಬದ್ಧವಾಗಿ ದೀಕ್ಷೆ ಪಡೆದ 'ಗುಡ್ಡ' ಮಾದೇಶ್ವರನ ಭಕ್ತರಿಗೆ ದೇವರ ಪ್ರತಿನಿಧಿ ಎಂಬ ನಂಬಿಕೆಗೆ ಪಾತ್ರನಾಗುತ್ತಾನೆ. ಮಾದೇಶ್ವರನ ಭಕ್ತರು ನಡೆಸುವ ಎಲ್ಲ ಧಾರ್ಮಿಕ ವಿಧಿಗಳಲ್ಲೂ ಇರಲೇಬೇಕು. ಈ ಗುಡ್ಡರು ರುದ್ರಾಕ್ಷಿಯನ್ನು ಕೊರಳಲ್ಲಿ ಧರಿಸುತ್ತಾರೆ. ಇದು ಅವರ ದೀಕ್ಷೆಯ ಸಂದರ್ಭದಲ್ಲಿ ದೊರೆತ ದೇವರ ಲಾಂಛನ ಎಂದು ಭಾವಿಸುತ್ತಾರೆ.

ಮನೆಯ ಹಿರಿಯ ಮಗನಿಗೆ 'ಗುಡ್ಡ'ನ ದೀಕ್ಷೆಯನ್ನು ಸಾಮಾನ್ಯವಾಗಿ ಅವನ ಒಂಬತ್ತನೆಯ ವಯಸ್ಸಿನಲ್ಲಿ ನೀಡುತ್ತಾರೆ. ಆದರೆ ಹದಿನೈದು ವರ್ಷಗಳ ಒಳಗೆ ದೀಕ್ಷೆ ಆಗಬೇಕು. ದೀಕ್ಷೆ ಹುಟ್ಟಿದೂರಿನಲ್ಲಿ ಅಥವಾ ಅವರ ಮನೆದೇವರು ನೆಲಸಿರುವ ಕ್ಷೇತ್ರದಲ್ಲಿ ಆಗಬಹುದು. ಇದು ಅವರ ಆರ್ಥಿಕ ಸ್ಥಿತಿಯ ಮೇಲೆ ಅವಲಂಬಿತವಾಗಿರುತ್ತದೆ. ದೀಕ್ಷಾಸಂಸ್ಕಾರವನ್ನು ಸೋಮವಾರ ದಿನ ಕೊಡಿಸಬೇಕು. ಮನೆಯನ್ನೆಲ್ಲಾ ಗೋಪಿಸ ಗಂಜಲದಿಂದ ಶುದ್ಧೀಕರಿಸಿ, ಸುಣ್ಣ-ಬಣ್ಣ ಮಾಡಿಸುತ್ತಾರೆ. ದೀಕ್ಷಾ ಸಂದರ್ಭದಲ್ಲಿ ಹತ್ತಿರದ ಊರುಗಳಿಂದ ಹಿರಿಯ ಗುಡ್ಡರನ್ನು ಬರಮಾಡಿಕೊಳ್ಳುವರು. ದೀಕ್ಷೆ ಪಡೆಯುವ ಹುಡುಗನಿಗೆ ತಲೆ ಬೋಳಿಸಿ ಸ್ನಾನಮಾಡಿಸುತ್ತಾರೆ. ಬಂಧು-ಬಳಗದವರೆಲ್ಲ ಹುಡುಗನ ತಲೆಯ ಮೇಲೆ ನೀರು ಹಾಕಿ ನಂತರ ಮಡಿಬಟ್ಟೆ ತೊಡಿಸಿ ದೇವಸ್ಥಾನಕ್ಕೆ ಕರೆದುಕೊಂಡು ಹೋಗುತ್ತಾರೆ. ದೇವಸ್ಥಾನ ಶೈವ ಸಂಪ್ರದಾಯಕ್ಕೆ ಸೇರಿದುದಾಗಿರಬೇಕು. ಸಾಮಾನ್ಯವಾಗಿ ಮಾದೇಶ್ವರನ ಅಥವಾ ಶಿವನ ದೇವಾಲಯವಾಗಿರಬೇಕು. ಈ ದೇವಸ್ಥಾನಗಳು ಇಲ್ಲದೆ ಇದ್ದ ಸಂದರ್ಭದಲ್ಲಿ ನದಿ, ಬಾವಿ ಅಥವಾ ಕೆರೆಯ ದಡವನ್ನು ಆರಿಸಿಕೊಳ್ಳುತ್ತಾರೆ. ಅಲ್ಲಿ ಐದು ಹೊಸಗಡಿಗೆಗಳಲ್ಲಿ ನೀರು ತುಂಬಿ ಇಡುವರು. ಅರಿಶಿನದ ಬಟ್ಟೆಯಲ್ಲಿ ಐದು ಬಗೆಯ ಧಾನ್ಯಗಳ ಗಂಟನ್ನು ಗಡಿಗೆಗಳ ಕಂಠಕ್ಕೆ ಕಟ್ಟುವರು. ಈ ಐದು ಗಡಿಗೆಗಳಿಗೂ ಹೊಂಬಾಳೆ ಸಿಕ್ಕಿಸಿ ವಿಭೂತಿ, ಅರಿಶಿನ, ಕಂಕುಮ, ಹೂಗಳನ್ನಿಟ್ಟು ಪೂಜೆ ಮಾಡುತ್ತಾರೆ. ಒಂದು ಅಗ್ರ ಬಾಳೆ ಎಲೆಯನ್ನು ಹಾಸಿ ಅದರ ಮೇಲೆ

ಸುಮಾರು ಒಂದು ಸೇರಿನಷ್ಟು ಅಕ್ಕಿಯನ್ನು ಸುರಿದು ಅದರ ಮೇಲೆ ಕಳಶವನ್ನು ಸ್ಥಾಪಿಸುತ್ತಾರೆ. ಬಾಲಕ ವಟುವನ್ನು ತಂದೆ ತಾಯಿಗಳು ಹಿರಿಯ ಗುಡ್ಡರಿಗೆ ಒಪ್ಪಿಸುವರು. ಹಾಗೆ ಒಪ್ಪಿಸುವಾಗ 'ಇಲ್ಲಿಯವರೆಗೆ ನಮ್ಮ ಮಗ. ಇಲ್ಲಿಂದ ಮುಂದೆ ಮಾದೇವನ ಮಗ' ಎಂದು ಹೇಳುತ್ತಾರೆ. ನಂತರ ಹಿರಿಯ ಗುಡ್ಡರು ಬಾಲಕನಿಗೆ ಹಾಲು, ತುಪ್ಪ, ಎಳನೀರು, ನಿಂಬೆಹಣ್ಣು, ಪನ್ನೀರು, ವಿಭೂತಿ, ಅರಿಶಿಣ ಹಾಗೂ ಸೀಗೆಕಾಯಿಪುಡಿಯಿಂದ ಮೈಯನ್ನು ಉಜ್ಜಿ ಸ್ನಾನಮಾಡಿಸುತ್ತಾರೆ. ಅಲ್ಲದೆ ಅರಿಶಿನ-ಸೀಗೆಕಾಯಿಯನ್ನು ನೀರಿನಲ್ಲಿ ಬೆರೆಸಿ ಸ್ವಲ್ಪ ಕುಡಿಸುತ್ತಾರೆ. ನಂತರ ಆ ಕಿರಿಯ ಗುಡ್ಡನ ಮೈಯನ್ನು ಹೊಸ ವಸ್ತ್ರದಿಂದ ಒರಸಿ ವಿಭೂತಿ ಧಾರಣೆ ಮಾಡುತ್ತಾರೆ. ಅವನ ಬಲಗೈಗೆ ಕಂಕಣ ಕಟ್ಟಿ ಅದಕ್ಕೆ ಪೂಜೆಮಾಡಿ ಕೊರಳಿಗೆ ರುದ್ರಾಕ್ಷಿ ಧಾರಣೆ ಮಾಡುತ್ತಾರೆ.

ಈ ಎಲ್ಲಾ ಧಾರ್ಮಿಕ ವಿಧಿಗಳು ನಡೆದ ನಂತರ ಸಾಮಾನ್ಯನಾಗಿದ್ದ ಬಾಲಕ ಗುಡ್ಡರ ಸಂಪ್ರದಾಯಕ್ಕೆ ಸೇರುತ್ತಾನೆ. ಕೊರಳಲ್ಲಿ ರುದ್ರಾಕ್ಷಿ ಧರಿಸಿದ ಮೇಲೆ ಅವನು ಪೂರ್ಣವಾಗಿ ಗುಡ್ಡನಾಗುತ್ತಾನೆ. ನಂತರ ಅವನಿಗೆ ದೇವರ ಬೆತ್ತ ಮತ್ತು ಜೋಳಿಗೆಯನ್ನು ಕೊಟ್ಟು ಹೀಗೆ ಬೋಧನೆ ಮಾಡುತ್ತಾರೆ:

"ಏನಪ್ಪ ಈ ಚಿಕ್ಕ ಜೋಳಿಗೆ ಕೊಟ್ಟಿದ್ದೀರಲ್ಲ, ಇದನ್ನು ಏನು ಮಾಡ್ತಿ?" ಈ ಪ್ರಶ್ನೆಗೆ ಏನು ಉತ್ತರ ಹೇಳಬೇಕು ಎಂಬುದರ ಬಗ್ಗೆ ಅವನಿಗೆ ಹೇಳಿಕೊಡಲಾಗುತ್ತದೆ. "ನಾಲ್ಕು ಮನೆ ಭಿಕ್ಷೆ ಮಾಡಬೇಕು. ಹಸಿದು ಬಂದವರಿಗೆ ಅಡಿಗೆ ಮಾಡಿ ಊಟಕ್ಕೆ ಇಡಬೇಕು."

"ಅವೇಳೆಯಲ್ಲಿ ಬಂದರೆ"?

"ಅವಾಗ ಈ ಜೋಳಿಗೆ ತೆಗೆದುಕೊಂಡು ಹೋಗಿ ಭಿಕ್ಷೆಮಾಡಿ ಊಟಕ್ಕೆ ನೀಡುತ್ತೇನೆ."

"ಇದು ಸತ್ಯವಾದ ಮಾತೆ!"

"ನೀವು ಹೇಳಿದ ಹಾಗೆ ನಡೆದುಕೊಂಡು ಹೋಗುತ್ತೇನೆ" ಎಂದು ಹೇಳಿ ಅವರ ಪಾದ ಮುಟ್ಟಿ ನಮಸ್ಕರಿಸುತ್ತಾನೆ. ಅಲ್ಲಿಗೆ ಅವನು ಸಂಪೂರ್ಣವಾಗಿ ಗುಡ್ಡನಾದ ಎಂದು ಭಾವಿಸುತ್ತಾರೆ.

ಇನ್ನು ದೀಕ್ಷೆಯ ಎರಡನೆ ಹಂತ ದೇವಸ್ಥಾನದಿಂದ ಮನೆಗೆ ಹಿಂದಿರುಗಿದ ನಂತರ ಪ್ರಾರಂಭವಾಗುತ್ತದೆ. ಮನೆಗೆ ಮರಳಿದ ಮೇಲೆ ಕಳಶ ಮತ್ತು ನೀರು ತುಂಬಿ ಪೂಜಿಸಿದ ಗಡಿಗೆಗಳನ್ನು ಐದು ಜನ ಮುತ್ತೈದೆಯರು ಹೊತ್ತು ತರುತ್ತಾರೆ. ಅಂದು ಕಜ್ಜಾಯದ ಅಡುಗೆ ಮಾಡಿ ದೇವರಿಗೆ ಎಡೆ ಇಡುತ್ತಾರೆ. ಪೂಜೆಯ ನಂತರ ಮನೆಗೆ ಬಂದ ಗುಡ್ಡರು ಊಟಕ್ಕೆ ಕೂರುತ್ತಾರೆ. ದೀಕ್ಷೆಯಾದ ಕಿರಿಯ ಗುಡ್ಡನನ್ನು ಪಂಕ್ತಿಯಲ್ಲಿ ಊಟಕ್ಕೆ ಸೇರಿಸಿಕೊಳ್ಳಬೇಕು. ಆಗ ದೀಕ್ಷೆಯ ಸಂದರ್ಭದಲ್ಲಿ ಕಟ್ಟಿದ ಕಂಕಣವನ್ನು ಸಡಿಲಿಸುತ್ತಾರೆ (ಬಿಚ್ಚುವುದು). ಕಿರಿಯ ಗುಡ್ಡ ಎಲ್ಲರ ಬಳಿಬಂದು ಮಾದೇವನ ಭಿಕ್ಷೆ ಎಂದು ಕೇಳುವನು. ಎಲ್ಲರೂ ತಮಗೆ ನೀಡಿದ ಎಡೆಯಿಂದ ಅವನಿಗೆ ಎಡೆ ತುತ್ತು ಕೊಡುತ್ತಾರೆ. ಇಲ್ಲಿಗೆ ದೀಕ್ಷೆಯ ಎರಡನೆ ಹಂತ ಮುಗಿಯುತ್ತದೆ.

ಮೂರನೆಯ ಹಂತ ಮರುದಿನದ ಪ್ರಾರಂಭವಾಗುತ್ತದೆ. ಹಿರಿಯ ಗುಡ್ಡರು ಮರುದಿವಸ ಬಂದು ದೀಕ್ಷೆಯಾದ ಗುಡ್ಡನಿಗೆ ವಿಭೂತಿಧಾರಣೆ ಮಾಡಿ ಕಂಕುಳಿಗೆ ಜೋಳಿಗೆ ಹಾಕಿಸಿ ಜೊತೆಯಲ್ಲಿ ನಾಲ್ಕು ಮನೆಗೆ ಕರೆದುಕೊಂಡು ಹೋಗಿ ಭಿಕ್ಷೆ ಮಾಡಿಸುವರು. ಮನೆಗೆ ಮರಳಿದಾಗ ತಣ್ಣೀರಿನಿಂದ ಕಾಲು ತೊಳೆದು ಅವನನ್ನು ಮನೆಯೊಳಗೆ ಬರಮಾಡಿಕೊಳ್ಳುತ್ತಾರೆ. ನಂತರ ಮನೆಯಲ್ಲಿ ಈ ಮೊದಲು ಪ್ರತಿಷ್ಠಾಪಿಸಿದ್ದ ಗದ್ದುಗೆಯನ್ನು ಪೂಜೆ ಮಾಡುತ್ತಾರೆ. ಅಲ್ಲಿಗೆ ದೀಕ್ಷಾವಿಧಿ ಪೂರ್ಣಗೊಂಡಂತಾಗುತ್ತದೆ. ದೇವರ ಬೆತ್ತ ಹಾಗೂ ಜೋಳಿಗೆಯನ್ನು, ಜೊತೆಗೆ ಒಂದು ಕಂಸಾಳೆಯನ್ನು ಬಿರುದಾಗಿ ಅವನಿಗೆ ಕೊಡುತ್ತಾರೆ. ಈ ಎಲ್ಲಾ ಸಂಪ್ರದಾಯಗಳು ಗುಡ್ಡರ ಮುಖ್ಯಸ್ಥ 'ಪುರುಷಕಾರಿ'ಯ ನೇತೃತ್ವದಲ್ಲಿ ನಡೆಯುತ್ತದೆ.

ಇಷ್ಟೆಲ್ಲಾ ಧಾರ್ಮಿಕ ಸಂಪ್ರದಾಯಗಳು ನಡೆದ ಮೇಲೆ ಕಿರಿಯ ಗುಡ್ಡನಿಗೆ ಕಾವ್ಯದೀಕ್ಷೆ ನೀಡುತ್ತಾರೆ. ಸೋಮವಾರದ ದಿನ ಯಾರಾದರೂ ಒಬ್ಬ ಗುರುವಿನ ಹತ್ತಿರ ಕಥೆ ಕಲಿಯಲು ಪ್ರಾರಂಭಿಸುತ್ತಾನೆ. ಗುಡ್ಡರಲ್ಲಿ ಹಾಗೂ ಗುಡ್ಡರ ಹಿರಿಯರಾದ ಪುರುಷಕಾರಿಗಳೆಲ್ಲರೂ ಒಳ್ಳೆಯ ಹಾಡುಗಾರರಿಲ್ಲದಿರಬಹುದು. ಅದಕ್ಕಾಗಿ ನುರಿತ ಹಿರಿಯ ಗಾಯಕರನ್ನು ಆರಿಸಿಕೊಳ್ಳುತ್ತಾರೆ. ಗುರು ಮೊದಲು ಶಿಷ್ಯನ ನಾಲಗೆಯ ಚುರುಕನ್ನು ಪರೀಕ್ಷಿಸುತ್ತಾನೆ.

ಕಷ್ಟವಾದ ಶಬ್ದಗಳುಳ್ಳ ವಾಕ್ಯವನ್ನು ಒಂದೇ ಸಮನೆ ಹೇಳಿಸುತ್ತಾರೆ. ಅವನು ಎಲ್ಲೂ ತಪ್ಪದೆ, ತಡವರಿಸದೆ ಹೇಳಿದರೆ ನಾಲಗೆ ಚುರುಕಾಗಿದೆ ಎಂಬ ತೀರ್ಮಾನಕ್ಕೆ ಬಂದು ಮುಂದಿನ ಶಿಕ್ಷಣಕ್ಕೆ ಅಣಿಮಾಡುವರು. ಅವನ ಧ್ವನಿಯನ್ನು ಹದಕ್ಕೆ ತರಲು ತಲೆ ತೂರುವಷ್ಟು ಅಗಲ ಬಾಯಿ ಇರುವ ಹೊಸಮಡಿಕೆಯಲ್ಲಿ ಅವನ ತಲೆಯನ್ನು ತೂರಿಸಿ ಕೆಲವು ಹಾಡುಗಳನ್ನು ಹಾಡಿಸುತ್ತಾರೆ. ಹೀಗೆ ಒಂದು ತಿಂಗಳು ಸತತವಾಗಿ ಅಭ್ಯಾಸ ಮಾಡಿಸಿದ ಮೇಲೆ ಅವನ ಧ್ವನಿ ಒಂದು ಹದಕ್ಕೆ ಬಂದಿದೆ ಎಂದು ಗೊತ್ತಾದರೆ ಕಥೆಗಳನ್ನು ಕಲಿಸಲು ಪ್ರಾರಂಭಿಸುತ್ತಾರೆ. ಧ್ವನಿ ಹದವಾಗದ ಹೊರತು ಕಥೆಯನ್ನು ಪ್ರಾರಂಭಿಸುವುದಿಲ್ಲ. ಒಂದೆರಡು ತಿಂಗಳು ಅಭ್ಯಾಸ ಮಾಡಿಸಿದರೂ ಅವನ ಧ್ವನಿ ಹದವಾಗದಿದ್ದರೆ ಮೇಳದಲ್ಲಿ ಸೊಲ್ಲುಕೊಡಲು ಅಥವಾ ದಮ್ಮಡಿ ಬಾರಿಸಲು ನಿಯೋಜಿಸುತ್ತಾರೆ. ಪ್ರತಿ ಸೋಮವಾರ ಮತ್ತು ಶುಕ್ರವಾರ ಸ್ನಾನ ಮಾಡಿ ಮಡಿಯುಟ್ಟು ದೇವರ ಪೂಜೆ ಮಾಡಿ ನಾಲ್ಕು ಮನೆಗಳಿಗೆ ಕ್ವಾರಣ್ಯಕ್ಕೆ ತಪ್ಪದೆ ಹೋಗಬೇಕು. ಭಿಕ್ಷೆಗೆ ಹೋದಾಗ ಕಥೆಗಳನ್ನು ಹೇಳಬೇಕು.[೨]

ಕಲಾವಿದರು ಬಿಗಿ ಕಾಸೆಅಂಗಿ, ಮೊಳಕಾಲಿನವರೆಗೆ ಬಿಗಿ ಕಾಸಿಕಟ್ಟಿದ ಪಂಚೆ ಧರಿಸಿರುತ್ತಾರೆ. ಮೈ ಕೈಗೆ ಅಲ್ಲಲ್ಲಿ ವಿಭೂತಿ ಧರಿಸಿರುತ್ತಾರೆ. ಕಿವಿಯಲ್ಲಿ ರುದ್ರಾಕ್ಷಿ ಧರಿಸಿರುತ್ತಾರೆ.

ಈ ಮೇಲೆ ಪರಿಚಯಿಸಿದ ಕಲೆಗಳು ಶೈವ ಸಂಪ್ರದಾಯದಲ್ಲಿ ಕಂಡುಬರುವ ಪ್ರಮುಖವಾದವು. ನನ್ನ ಗಮನಕ್ಕೆ ಬಾರದ ಇನ್ನು ಅನೇಕ ಜನಪದ ಕಲೆಗಳಿರಬಹುದು. ಈ ಎಲ್ಲಾ ಜನಪದ ಕಲೆಗಳು ದೈವೀ ಆರಾಧನೆಯ ಹಿನ್ನೆಲೆಯಲ್ಲಿ ರೂಪುಗೊಂಡವುಗಳು. ಆದರೆ ಕಾಲಚಕ್ರದಲ್ಲಿ ಪ್ರೇಕ್ಷಕರನ್ನು ಆಕರ್ಷಿಸುವ ರೀತಿಯಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡುತ್ತಾ ಬಂದರು. ಮೊದಲು ಕೆಲವು ನಿರ್ದಿಷ್ಟ ಸಂದರ್ಭದಲ್ಲಿ ಮಾತ್ರ ಪ್ರದರ್ಶನಗೊಳ್ಳುತ್ತಿದ್ದ ಈ ಕಲೆಗಳು ಮನರಂಜನೆಯ ಲೇಪವನ್ನು ಹಚ್ಚಿಕೊಂಡು ಕಾಲಕ್ಕನುಗುಣವಾಗಿ ಬದಲಾವಣೆಗೊಳ್ಳುತ್ತಾ ಬಂದಿವೆ. ಬದಲಾವಣೆ ಜೀವಂತಿಕೆಯ ಲಕ್ಷಣ. ಯಾವುದೇ ಕಲೆ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಬೇಕಾದರೆ ಜನರ ಭಾವನೆಗಳಿಗೆ ಸ್ಪಂದಿಸುವಂತಹ ಬದಲಾವಣೆ ಮಾಡಿಕೊಳ್ಳುವುದು ಅನಿವಾರ್ಯ. ಈ ದೃಷ್ಟಿಯಿಂದ ಈಗ ಪ್ರಚಲಿತವಿರುವ ಜನಪದ ಕಲೆಗಳನ್ನು ನೋಡಬೇಕಾಗುತ್ತದೆ. ಈಗಾಗಲೇ ಸ್ಪಷ್ಟಪಡಿಸಿದಂತೆ ಬದಲಾವಣೆ ಜೀವಂತಿಕೆಯ ಲಕ್ಷಣವಾದರೂ, ಬದಲಾವಣೆಯ ನೆಪದಲ್ಲಿ ಕಲೆಗಳ ಮೂಲ ಆಶಯಕ್ಕೆ ಲೋಪವಾಗದಂತೆ ಬೆಳೆಸಿಕೊಂಡು ಬರಬೇಕು. ಹಾಗೆ ಮಾಡುವುದರಿಂದ ಮುಂದಿನ ತಲೆಮಾರಿಗೆ ನಮ್ಮ ಸಾಂಸ್ಕೃತಿಕ ಪರಂಪರೆಯನ್ನು ಪರಿಚಯಿಸುವ ಉದ್ದೇಶ ಸಫಲವಾಗುತ್ತದೆ.

ಅಡಿಟಿಪ್ಪಣಿಗಳು

೧. ವಿಶ್ವಕನ್ನಡ-೩, ಸಂ.ಎನ್.ಎಸ್. ರಾಮಪ್ರಸಾದ್, ಪ್ರ. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಪುಟ-೩೩.

೨. ಅದೇ -ಪುಟ ೩೪

೩. ಕಲೆ ಮತ್ತು ರಸಸ್ವಾದನೆ ಸಂ. ಎಂ. ಎಚ್. ಕೃಷ್ಣಯ್ಯ ಪ್ರ. ಕರ್ನಾಟಕ ಲಲಿತ ಕಲಾ ಅಕಾಡೆಮಿ, ಪು-೯.

೪. ಅದೇ ಪುಟ ೨೨

೫. ಅದೇ ಪುಟ ೨೨

೬. ಅದೇ ಪುಟ ೨೨

೭. ಕರ್ನಾಟಕ ಜನಪದ ಕಲೆಗಳು, ಸಂ. ಗೊ.ರು. ಚನ್ನಬಸಪ್ಪ ಪು. ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು, ೧೯೭೫, ಪುಟ ೧೩

೮. ಜೀಶಂಪ ಅವರ ಜಾನಪದ ಬರಹಗಳು ಸಂ. ಪ್ರೊ. ಕಾಳೇಗೌಡ ನಾಗವಾರ, ಡಾ. ಅಂಬಳಿಕೆ ಹಿರಿಯಣ್ಣ, ಪುಟ ೧೩೬ ಪ್ರ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ

೯. ಕರ್ನಾಟಕ ಜಾನಪದ ಕಲೆಗಳು ಸಂ. ಗೊ.ರು. ಚನ್ನಬಸಪ್ಪ, ಪುಟ ೨೯

೧೦. ಗ್ರಾಮೀಣ, ಡಾ. ಎಂ. ಚಿದಾನಂದಮೂರ್ತಿ, ಪುಟ ೨೦೬-೨೦೭

೧೧. ಗ್ರಾಮೀಣ, ಡಾ. ಎಂ. ಚಿದಾನಂದಮೂರ್ತಿ, ಪುಟ ೨೧೬.

೧೨. ಜೀಶಂಪ ಅವರ ಜಾನಪದ ಬರಹಗಳು, ಪುಟ ೧೧೬

೧೩. ಕನ್ನಡ ವೃತ್ತಿಗಾಯಕ ಕಾವ್ಯಗಳು, ಜೀಶಂಪ, ಪುಟ ೨೧೩.

೧೪. ಕರ್ನಾಟಕ ಜನಪದ ಕಲೆಗಳು, ಸಂ. ಗೊ.ರು. ಚನ್ನಬಸಪ್ಪ ಪುಟ ೧೫೯, ಪ್ರ. ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು. ೧೯೭೮

೧೫. ಕರ್ನಾಟಕ ಜನಪದ ಕಲೆಗಳು, ಸಂ. ಗೊ.ರು. ಚನ್ನಬಸಪ್ಪ ಪುಟ ೧೫೯.

೧೬. ಸಾಂಸ್ಕೃತಿಕ ವೀರಭದ್ರಸ್ವಾಮಿ. ಲೇ. ಪ್ರೊ. ಎಂ.ಜಿ.ನಾಗರಾಜ್, ಪುಟ ૩೫-૩೬, ಪ್ರ. ಶ್ರೀಮದ್ವೀರಶೈವ ಸದ್ಬೋಧನಾ ಸಂಸ್ಥೆ, ಶ್ರೀ ಜಗದ್ಗುರು ರಂಭಾಪುರಿ ವೀರಸಂಸ್ಥಾನ ಮಹಾಪೀಠ, ಬಾಳೆಹೊನ್ನೂರು, ೧೯೯೯.

೧೭. ಕರ್ನಾಟಕ ಜನಪದ ಕಲೆಗಳು, ಸಂ. ಗೊ.ರು. ಚನ್ನಬಸಪ್ಪ, ಪುಟ-೧೫೯.

೧೮. ಸಾಂಸ್ಕೃತಿಕ ವೀರಭದ್ರಸ್ವಾಮಿ. ಲೇ. ಪ್ರೊ. ಎಂ.ಜಿ. ನಾಗರಾಜ್, ಪ್ರ. ಶ್ರೀಮದ್ವೀರಶೈವ ಸದ್ಬೋಧನಾ ಸಂಸ್ಥೆ, ಶ್ರೀ ಜಗದ್ಗುರು ರಂಭಾಪುರಿ ವೀರಸಂಸ್ಥಾನ ಮಹಾಪೀಠ, ಬಾಳೆಹೊನ್ನೂರು, ೧೯೯೯. ಪು-೧೭.

೧೯. ಅದೇ ಪುಟ-೧೭

೨೦. ಅದೇ ಪುಟ-೧೬

೨೨. ಅದೇ ಪುಟ-೫೩

೨೩. ಅದೇ ಪುಟ-೬೨

೨೪. ಅದೇ ಪುಟ-೧೯

೨೫. ಕರ್ನಾಟಕ ಜನಪದ ಕಲೆಗಳು, ಪುಟ -೧೦೨

೨೬. ಅದೇ ಪುಟ-೨೧

೨೭. ಜೀಶಂಪ ಅವರ ಜಾನಪದ ಬರಹಗಳು. ಪುಟ ೪೬೪.

■■

ಜಾನಪದ ಮತ್ತು ಆಧುನಿಕತೆ

✍ ಪ್ರೊ. ಡಿ. ಲಿಂಗಯ್ಯ

ಜಾನಪದವೆಂದರೆ ಸ್ವಲ್ಪಮಟ್ಟಿಗೆ ಹಳೆಯದೆಂದು ತನಗೆ ತಾನೇ ಹೊಳೆಯುತ್ತದೆ. ಜಾನಪದವನ್ನು ಇಂದು ಬಳಸಿದರೂ ಅದರಲ್ಲಿ ಹಿಂದಿನ ವಾಸನೆ ಇದ್ದೇ ಇರುತ್ತದೆ. ವರ್ತಮಾನದಲ್ಲಿ ಬಳಸುವ ಏನೆಲ್ಲಾ ಜಾನಪದ ವಿಷಯವೂ ಭೂತಕಾಲದ ಪಳೆಯುಳಿಕೆಯೇ ಆಗಿರುತ್ತದೆ. ಭೂತ ಜಾನಪದ ವರ್ತಮಾನದ ಪ್ರಸ್ತುತತೆಯಾಗುತ್ತದೆ, ವರ್ತಮಾನ ಜಾನಪದ ಭವಿಷ್ಯತ್ತಿನ ಪ್ರಸ್ತುತತೆಯಾಗುತ್ತದೆ. ಅಂದರೆ, ಪೂರ್ಣಪ್ರಮಾಣದಲ್ಲಾಗಲೀ ಅಂಕಿತ ಪ್ರಮಾಣದಲ್ಲಾಗಲೀ ಜಾನಪದ ಮನುಕುಲದ ಬದುಕಿನಲ್ಲಿ ನಿರಂತರವಾಗಿ ಪ್ರವಹಿಸುತ್ತಿರುತ್ತದೆ. ಪ್ರಾಚೀನ ಜಾನಪದ ತವನಿಧಿಯಂತೆ ತ್ರಿಕಾಲಗಳನ್ನೂ ಆವರಿಸುತ್ತದೆ. ಪ್ರಾಚೀನ ಜಾನಪದದ ಪ್ರಚ್ಛನ್ನ ಪ್ರತಿಮಾ ಸೃಷ್ಟಿ, ಸಾರ್ವಕಾಲಿಕವಾಗಿ ತನ್ನ ಪ್ರಭಾವವನ್ನು ಬೀರುತ್ತಿರುತ್ತದೆ. ಜಾನಪದದಲ್ಲಿ ಆಧುನಿಕತೆ ಅಥವಾ ಆಧುನಿಕತೆಯಲ್ಲಿ ಜಾನಪದ ಎಂಬ ಪರಿಕಲ್ಪನೆಯಲ್ಲೂ ಪ್ರಾಚೀನತೆಯ ಸೆಳಕು ಇಲ್ಲದೆ ಇಲ್ಲ.

ಯಾವ ದೇಶದಲ್ಲಿ, ಯಾವ ಜನಾಂಗದಲ್ಲಿ ಸನಾತನ ಜಾನಪದ ದಟ್ಟವಾಗಿದೆಯೋ ಆ ದೇಶದಲ್ಲಿ, ಆ ಜನಾಂಗದಲ್ಲಿ ಜಾನಪದದ ಪ್ರಭಾವ ಸುಲಭವಾಗಿ ಅಳಿಸಿ ಹೋಗುವುದಿಲ್ಲ. ಅದು ಹಿಂದಿನಷ್ಟು ಪ್ರಭಾವಶಾಲಿಯಾಗಿ, ಪರಿಣಾಮಕಾರಿಯಾಗಿ ಅಸ್ತಿತ್ವದಲ್ಲಿ ಇಲ್ಲದಿದ್ದರೂ ಗುಪ್ತಗಾಮಿನಿಯಾಗಿಯಾದರೂ ಪ್ರವಹಿಸುತ್ತಿರುತ್ತದೆ. ಪ್ರಾಚೀನ ಜಾನಪದ ಪ್ರತಿಭೆಯ ಅತ್ಯದ್ಭುತವಾದ ಪುರಾಣ, ಪ್ರತಿಮೆ, ಕಲಾಮಯ ರೂಪಕ, ಸಂಭಾವ್ಯ ಕನಸು ಅದೇ ಪ್ರಮಾಣದಲ್ಲಿ ಅದೇ ಪರಿಣಾಮದಲ್ಲಿ ಇಂದೂ ಸೃಷ್ಟಿಯಾಗದಿದ್ದರೂ ಅದರ ಅಣಕು ರೂಪವಾದರೂ ಸೃಷ್ಟಿಯಾಗುತ್ತಿರುತ್ತದೆ. ಜೊತೆಗೆ ರೂಪಾಂತರ ಕ್ರಿಯೆಯಲ್ಲಿ ಮರುಹುಟ್ಟು ಪಡೆಯುತ್ತಿರುತ್ತದೆ. ಇಂತಹ ರೂಪಾಂತರ ಕ್ರಿಯೆಗೆ, ಮರುಹುಟ್ಟು ಕ್ರಿಯೆಗೆ ಕನ್ನಡ ಜಾನಪದದಲ್ಲಿ ಸಾಕಷ್ಟು ಉದಾಹರಣೆ ದೊರೆಯುತ್ತದೆ. ಕಲಾತ್ಮಕವಾದ ಕಾವ್ಯ ಸೃಷ್ಟಿ ಅಷ್ಟಾಗಿ ಇಲ್ಲದಿದ್ದರೂ ಜನಪದ ಕಲೆ, ಜನಪದ ಆಭರಣಗಳ ಮುಂದುವರಿಕೆ ಅಥವಾ ರೂಪಾಂತರ ಕ್ರಿಯೆ ಎಂದಿನಂತೆ ಮುಂದುವರಿಯುತ್ತಿದೆ. ಇದು ಹಳ್ಳಿಗರಿಗಷ್ಟೇ ಅಲ್ಲ ಪಟ್ಟಣಿಗರಿಗೂ ಪ್ರಿಯವಾಗುತ್ತಿದೆ. ಜನಪದ ಕಲೆ ಕಣ್ಣಿಗೆ ಬಿದ್ದಾಗ ಕ್ಷಣವಾದರೂ ಮನಸ್ಸು ತೆರದ ಮಾನವ ಜೀವಿಯಿಲ್ಲ. ಒಂದು ವೇಳೆ ಅಂಥವರು ಇರಬಹುದಾದರೆ ಅವರ ಸಂಸ್ಕಾರದ ಬಗೆಗೆ ಅನುಮಾನ ಉಂಟಾಗುತ್ತದೆ.

ಹಲಸಂಗಿ ಗೆಳೆಯರ 'ಗರತಿಯ ಹಾಡು' ಸಂಕಲನದ ಧ್ವನಿಪೂರ್ಣವಾದ ತ್ರಿಪದಿಗಳು; ಮತಿಘಟ್ಟ ಕೃಷ್ಣಮೂರ್ತಿಯವರ 'ನಾಡ ಪದಗಳು' ಸಂಕಲನದ ಭಾವಪೂರ್ಣವಾದ ಭಾವಗೀತೆಗಳು, ಅರ್ಚಕ ಬಿ. ರಂಗಸ್ವಾಮಿಯವರ 'ಹುಟ್ಟಿದ ಹಳ್ಳಿ' ಸಂಗ್ರಹದ ಲವಲವಿಕೆಯ ಕೋಲಾಟದ ಪದಗಳು ಇಂದು ಸೃಷ್ಟಿಯಾಗುತ್ತಿಲ್ಲ. ಬಹುಶಃ ಸೃಷ್ಟಿಯಾಗುವುದೇ ಇಲ್ಲ. ಆದರೆ ಅವುಗಳ ಅಥವಾ ಇತರ ಹಾಡುಗಳ ಧಾಟಿಗಳನ್ನು ನೆನಪಿಸುವ ಅಣಕು ರೀತಿಯ ರೂಪಾಂತರಗಳು ಹುಟ್ಟುತ್ತಿವೆ. ಅವು ಏಸಿದ್ದರೂ ಬೆಳೆ ಕೊಯ್ದ ಮೇಲೆ ಚೆಲ್ಲುವ ಹಕ್ಕಲು ಕಡ್ಡಿಗಳಂತೆ, ಮಳೆ ನಿಂತ ಮೇಲೆ ತೊಟ್ಟಿಕ್ಕುವ ಮರದ ಹನಿಗಳಂತೆ, ಉತ್ತಮ ಹಾಡುಗಾರಿಕೆಯನ್ನು ಕೇಳಿದ ಮೇಲೆ ಗುನುಗಿಕೊಳ್ಳುವ ರಾಗಗಳಂತೆ, ಮೊಸರು ಹಾಕಿಸಿಕೊಂಡ ಮೇಲೆ ಕೇಳುವ ಕೊಸರಿನಂತೆ ಅಲ್ಪತೃಪ್ತಿಯವು. ಬೃಹತ್ ಆಲದ ಮರದ ಕೆಳಗೆ ಮತ್ತೊಂದು ಮರ ಹುಟ್ಟುವುದಿಲ್ಲ. ಆದರೆ ಗರಿಕೆ ಹುಲ್ಲು ಹುಟ್ಟುತ್ತದೆ. ಆಲದ ಮರದಷ್ಟು ಉಪಯೋಗವಲ್ಲವಾದರೂ ಗರಿಕೆ ನಿಷ್ಪ್ರಯೋಜಕವಲ್ಲ. ಫಿನ್‌ಲೆಂಡಿನ 'ಕಲೆವಾಲ' ಕಾವ್ಯ, ಕರ್ನಾಟಕದ 'ಮಂಟೆಸ್ವಾಮಿ ಕಾವ್ಯ' ಮತ್ತು ಅಂತಹ ಇನ್ನಿತರ ಕಾವ್ಯಗಳು ಮತ್ತೆ ಹುಟ್ಟುವುದಿಲ್ಲ. ಆದರೆ ಅವುಗಳ ಪ್ರಭಾವ ಕಡಿಮೆಯೇನೂ ಅಲ್ಲ.

ಹಿಂದಿನ ಜನಪದ ಕಥೆಗಳು ಆಧುನಿಕ ಕಥಾ ಪ್ರತಿಭೆಯೊಡನೆ ಮೇಳವಿಸಿಕೊಂಡು ವಿವಿಧ ರೂಪದಲ್ಲಿ ಹೊರಹೊಮ್ಮುತ್ತವೆ. ತೊಗಲು ಗೊಂಬೆ, ಸೂತ್ರದ ಗೊಂಬೆ, ಕಾಯಕ ಸಾಧನ ಸಲಕರಣೆಗಳ ಮೇಲಿನ ಚಿತ್ತಾರ, ಹಿಂದಿನ ಕರಕುಶಲತೆ, ಆಧುನಿಕ ವೇಷಭೂಷಣ, ಒಡವೆ ವಸ್ತ್ರಗಳ ರೂಪದಲ್ಲಿ ಮರುಹುಟ್ಟು ಪಡೆಯುತ್ತಿವೆ. ಕೆಲವು ವ್ಯಾಪಾರದ ಪೈಪೋಟಿಗೂ ಇಳಿದಿವೆ. ಆಚರಣೆಯ ಹಿನ್ನೆಲೆಯಲ್ಲೇ ಕಾಣಿಸಿಕೊಳ್ಳುತ್ತಿದ್ದ ಧಾರ್ಮಿಕ ಕುಣಿತ, ವಾದ್ಯ ವಾದನಗಳು ಆಚರಣೆಯ ಆಚೆ ಬಂದು ಮನೋರಂಜನೆಯ ಹೆಸರಿನಲ್ಲಿ ಉಳಿದುಕೊಳ್ಳಲು ಹೆಣಗುತ್ತಿವೆ. ಕೆಲವು ಯಶಸ್ವಿಯಾಗಿರುವುದೂ ಉಂಟು. ಜನಪದ ಕುಣಿತ ಪ್ರಕಾರವಂತೂ ಸಾರ್ವಕಾಲಿಕವಾಗಿ ಉಳಿದುಕೊಳ್ಳುವ ಸಮರ್ಥ ಕಲಾ ಪ್ರಕಾರವಾಗಿದೆ. ಡೊಳ್ಳು ಕುಣಿತ, ಪೂಜಾ ಕುಣಿತ, ಸುಗ್ಗಿ ಕುಣಿತ, ಹುತ್ತರಿ ಕುಣಿತ, ತಮಟೆ ವಾದನ, ಕಂಸಾಳೆ, ವೀರಗಾಸೆ ಮೊದಲಾದವು ದೇಶವಿದೇಶಗಳಲ್ಲಿ ಹೆಸರುವಾಸಿಯಾಗಿರುವುದು ಅವುಗಳ ಅವಿನಾಶಿಯಾದ ಅಭಿಜಾತ ಗುಣದಿಂದಲೇ ಎಂಬುದನ್ನು ಮರೆಯಬಾರದು.

ಭಾರತದ ವೇದ, ಉಪನಿಷತ್ತು, ಶಾಸ್ತ್ರ, ಪುರಾಣಗಳಲ್ಲಿ; ಮಹಾಕಾವ್ಯ, ನಾಟಕಾದಿ ಸೃಜನಶೀಲ ಸಾಹಿತ್ಯದಲ್ಲಿ; ಸಂಗೀತ, ನೃತ್ಯ, ಚಿತ್ರಕಲೆಯಲ್ಲಿ ಜಾನಪದದ ಪ್ರಭಾವವಿದೆ. ಅಂತಹ ಮೂಲಧಾತುವನ್ನು ಸುಲಭವಾಗಿ ಕಳೆದುಕೊಳ್ಳಲು ಆಗುವುದಿಲ್ಲ. ಆದರೆ, ಆಧುನಿಕತೆಯಲ್ಲಿ ಜಾನಪದ ಮಿಳಿತವಾಗುತ್ತಿರುವುದನ್ನು ಗುರುತಿಸುವ, ಅದರ ಅಗತ್ಯವನ್ನು ಸ್ವಾಗತಿಸುವ ಒಳನೋಟವನ್ನು ಬೆಳೆಸಿಕೊಳ್ಳಬೇಕಾಗಿದೆ. ಆ ದಿಶೆಯಲ್ಲಿ ನಿರ್ಣಾಯಕವಾಗಿ ಬೆಳಕು ಚೆಲ್ಲಬೇಕಾಗಿದೆ. ಸಂಪೂರ್ಣವಾಗಿ ಜಾನಪದವನ್ನು ಹೊರತುಪಡಿಸಿದ ಅಭಿಜಾತ ಕಲೆ ಬಹುಶಃ ಇಲ್ಲ. ಯಾವುದೇ ರೀತಿಯ ಶಿಷ್ಟ ಕಲೆಯಲ್ಲೂ ಅಷ್ಟೋ ಇಷ್ಟೋ ಜಾನಪದದ ಅಂಶವಿದೆ.

ಕೇವಲ ಅಧ್ಯಯನ ದೃಷ್ಟಿಯಿಂದ ಜಾನಪದ ಮತ್ತು ಶಿಷ್ಟ ಎಂಬುದರ ವಿಭಜನೆ ಸರಿ. ಆದರೆ ಪರಿಣಾಮದಲ್ಲಿ ಎಲ್ಲವೂ ಒಂದೇ. ಜಾನಪದದಲ್ಲಿ ಶಿಷ್ಟ, ಶಿಷ್ಟದಲ್ಲಿ ಜಾನಪದ ಮಿಳಿತಗೊಳ್ಳುವುದು ಅಸಹಜವೂ ಅಲ್ಲ, ಅಸಂಭವವೂ ಅಲ್ಲ. ಹಿಂದಿನದನ್ನು ಬಿಟ್ಟು ಇಂದಿನದು ಇರಲು ಸಾಧ್ಯವಿಲ್ಲ. ಹಿಂದಿನದರ ಮುಂದುವರಿಕೆಯೇ ಇಂದಿನದು. ಹಿಂದಿನ ಜಾನಪದವಿಲ್ಲದೆ ಇಂದಿನ ಆಧುನಿಕತೆ ಇಲ್ಲ. ನಿಜವಾದ ಗ್ರಹಿಕೆಗೆ ಪ್ರಾಮಾಣಿಕವಾದ ಪ್ರಾಂಜಲ ಮನಸ್ಸು ಬೇಕು, ಅಷ್ಟೆ.

ಎಲ್ಲಾ ಕ್ಷೇತ್ರಗಳಿಗೂ ಜಾನಪದವನ್ನು ಮುಕ್ತವಾಗಿ ಬಳಸಿಕೊಳ್ಳುವುದಕ್ಕೆ ಮುಂದಾಗಬೇಕು. ಆ ದಿಶೆಯಲ್ಲಿ ಸದಾ ನಮ್ಮ ಚಿಂತನೆ ಹರಿಯಬೇಕು. ಜಾನಪದವನ್ನು ತಲಸ್ಪರ್ಶಿಯಾಗಿ ಅಭ್ಯಸಿಸಿ ಅದರ ಹೂರಣವನ್ನು ಆಧುನಿಕತೆಗೆ ನೀರು ಗೊಬ್ಬರವಾಗಿ ಬಳಸಿಕೊಳ್ಳುವ ತಿಳಿವಳಿಕೆಯನ್ನು ಪ್ರತಿಭಾವಂತರು ಸಂಪಾದಿಸಿಕೊಳ್ಳಬೇಕು. ಆಗ ಜಾನಪದ ಮತ್ತು ಶಿಷ್ಟ ಎಂಬ ಅಂತರ ಅಳಿಯುತ್ತದೆ; ಎಲ್ಲವೂ ಒಂದೇ ಎಂಬ ಸತ್ಯ ತಿಳಿಯುತ್ತದೆ. ಆಗ ಆಧುನಿಕತೆ ಅರ್ಥಪೂರ್ಣವಾಗುತ್ತದೆ. ಜಾನಪದವನ್ನು ಮರೆತ ಆಧುನಿಕತೆ ಅಂಗಹೀನವಾಗುತ್ತದೆ.

ಸಮಗ್ರ ಜಾನಪದವನ್ನು ಅರಗಿಸಿಕೊಳ್ಳದೆ ಜಾನಪದದ ಬಗೆಗೆ ವ್ಯಾಖ್ಯಾನಿಸಲು ಸಾಧ್ಯವಾಗುವುದಿಲ್ಲ. ಮನುಕುಲದ ಸಮಗ್ರ ಸಂಸ್ಕೃತಿಯ ಹಿನ್ನೆಲೆಯಲ್ಲಿ ವ್ಯಾಖ್ಯಾನಿಸದಿದ್ದರೆ ಜಾನಪದದ ವಿರಾಟ್ ರೂಪ ಗೋಚರಿಸುವುದಿಲ್ಲ. ಜಾನಪದದ ಲಭ್ಯ ಸಾಹಿತ್ಯವನ್ನು ಮುಂದಿಟ್ಟುಕೊಂಡು, ಅಧ್ಯಯನದಿಂದ ಅದರ ಪರಕಾಯ ಪ್ರವೇಶ ಮಾಡಿ ಸಾಂಸ್ಕೃತಿಕ ಸಾರವನ್ನು ಸಹೃದಯರಿಗೆ ತಲುಪಿಸುವತ್ತ ಆಧುನಿಕತೆ ಮುಂದಾಗಬೇಕು. ಹಾಗೆ ಮಾಡದಿದ್ದರೆ ಎಲ್ಲಾ ದೃಷ್ಟಿಯಿಂದಲೂ ಆಧುನಿಕತೆ ದುರ್ಬಲವಾಗುತ್ತದೆ. ಆಧುನಿಕತೆಯ ಸಬಲೀಕರಣಕ್ಕೆ ಜಾನಪದ ಪೌಷ್ಠಿಕತೆ ಅಗತ್ಯ. ಪ್ರಾಚೀನತೆಯನ್ನು ಅರಗಿಸಿಕೊಳ್ಳದೆ ಆಧುನಿಕತೆ ಅರ್ಥಪೂರ್ಣವಾಗುವುದಿಲ್ಲ. ಯಾವುದೇ ಸಂಸ್ಕೃತಿ ಕೊಡುಕೊಳಿಕೆಯಿಲ್ಲದೆ ತನಗೆ ತಾನೇ ಪರಿಪೂರ್ಣವಾಗುವುದಿಲ್ಲ.

ಮನುಕುಲಕ್ಕೆ ತಿಳಿವಳಿಕೆ ಬಂದಾಗಲೇ ಜಾನಪದ ಹುಟ್ಟಿದೆ. ಅಂದಿನಿಂದ ತನ್ನಷ್ಟಕ್ಕೆ ತಾನು ಬೆಳೆದುಕೊಂಡು ಬಂದಿದೆ. ಇತರ ಹಂಗಿಗೆ ಒಳಗಾಗಿಲ್ಲ; ಇತರ ರಕ್ಷಣೆಯನ್ನು ಬಯಸಿಲ್ಲ. ಜಾನಪದ ಸ್ವಯಂಪೂರ್ಣವಾದದ್ದು. ಅದನ್ನು ನಿರ್ಲಕ್ಷಿಸುವ ಪ್ರಯತ್ನ ನಡೆದಿದ್ದರೂ ಅದು ಜಗ್ಗಲಿಲ್ಲ; ಕಣ್ಮರೆಯಾಗಲಿಲ್ಲ. ಬರಗಾಲದಲ್ಲೂ ಬದುಕುವ ಗುಣ ಅದರದು.

ಸಾವಿರಾರು ವರ್ಷಗಳಿಂದ ಶಿಷ್ಟರು ಜಾನಪದವನ್ನು ಕಣ್ಣೆತ್ತಿ ನೋಡದಿದ್ದರೂ ಟೀಕಿಸಿದರೂ ಜಾನಪದ ಸಾಯಲಿಲ್ಲ. ಶಿಷ್ಟ ಸಾಹಿತ್ಯ, ಕಲೆ, ಸಂಗೀತ ಸಮೃದ್ಧವಾಗಿ ಸೃಷ್ಟಿಯಾದರೂ ಜನಪದ ಸಾಹಿತ್ಯ, ಕಲೆ, ಸಂಗೀತ ಅಳಿಸಿ ಹೋಗಲಿಲ್ಲ. ಎಲ್ಲಾ ಪ್ರಕಾರದಲ್ಲೂ ಸಮೃದ್ಧವಾಗಿಯೇ ಬೆಳೆದಿದೆ. ಹಾಗೆ ನೋಡಿದರೆ ಶಿಷ್ಟರು ಜಾನಪದವನ್ನು ಪರೋಕ್ಷವಾಗಿ

ಬಳಸಿಕೊಂಡಿರುವ ಉದಾಹರಣೆಗಳು ಬೇಕಾದಷ್ಟಿವೆ. ಅಂದರೆ ಜಾನಪದ ಕೊಡುಗೈ ದಾನಿಯೇ ಹೊರತು, ಕೊಳ್ಳೆ ಹೊಡೆಯುವ ದರೋಡೆಕೋರನಲ್ಲ. ತಾನೂ ಉಂಡು ಇತರರಿಗೂ ಉಣಬಡಿಸುವ; ತಾನೂ ಬದುಕಿ ಇತರರನ್ನೂ ಬದುಕಿಸುವ ಜಾಯಮಾನ ಜಾನಪದದ್ದು.

ಎಲ್ಲಾ ಕಾಲದಲ್ಲೂ ಜಾನಪದ ಆಯಾ ಕಾಲದ ಆಧುನಿಕ ವಸ್ತುವಾಗಿಯೇ ಕಾಣಿಸಿಕೊಂಡಿದೆ. ಅಂದರೆ ಎಲ್ಲಾ ಕಾಲದಲ್ಲೂ ಜಾನಪದ ಆಧುನಿಕತೆಯೊಡನೆ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದೆ. ಅದಕ್ಕಾಗಿ ಹೋರಾಡಿರಬಹುದು, ಹೆಣಗಾಡಿರಬಹುದು; ಏರು ಇಳಿವು ಕಂಡಿರಬಹುದು; ಸೋಲು-ಗೆಲುವುಗಳ ಪರಿಣಾಮವನ್ನು ಅನುಭವಿಸಿರಬಹುದು. ಆದರೂ ಅದು ಎಂದೂ ಸಂಪೂರ್ಣವಾಗಿ ಹೇಳ ಹೆಸರಿಲ್ಲದಂತೆ ನಾಶವಾಗಿಲ್ಲ. ಸ್ವಂತ ಅಸ್ತಿತ್ವಕ್ಕಾಗಿ ಹೋರಾಟ ಮಾಡುವುದು ಜಾನಪದದ ಹುಟ್ಟುಗುಣ. ಇಲ್ಲದಿದ್ದರೆ ಪ್ರತಿಕೂಲ ಪರಿಸ್ಥಿತಿಯಲ್ಲಿ ಜಾನಪದ ಉಳಿಯುತ್ತಿರಲಿಲ್ಲ. ಎಲ್ಲಾ ಸೃಜನಶೀಲ ಕಲೆಯ ಹಣೆಯ ಬರಹವೂ ಇದೇ ಆಗಿದೆ.

ಆಧುನಿಕ ಕಾಲದಲ್ಲಿ ಕಾಣಸಿಗುವ ಜಾನಪದವನ್ನು ಆಧುನಿಕ ಜಾನಪದವೆಂದೇ ಪರಿಭಾವಿಸಬೇಕು. ಇಂದು ಕಾಣುವ ಜಾನಪದದಲ್ಲಿ ಹಿಂದಿನದೆಲ್ಲವೂ ಇಲ್ಲದಿರಬಹುದು; ಹಿಂದಿನ ವೈಭವವೆಲ್ಲ ಕಾಣದಿರಬಹುದು; ಹಿಂದಿನದರ ರೂಪಾಂತರವೂ ಆಗಿರಬಹುದು. ಒಟ್ಟಿನಲ್ಲಿ ಅದು ಈವರೆಗೆ ಮೌಖಿಕ ಪರಂಪರೆಯಲ್ಲಿ ಉಳಿದುಕೊಂಡಿದೆ ಎಂಬುದು ಮುಖ್ಯ. ಹಿಂದಿನಿಂದ ಬಂದಿರುವ ಶಾಸ್ತ್ರೀಯ ಭರತನಾಟ್ಯ, ಶಾಸ್ತ್ರೀಯ ಸಂಗೀತವನ್ನು ಆಧುನಿಕ ಕಲೆ ಎನ್ನಬಹುದಾದರೆ, ಹಿಂದಿನಿಂದ ಬಂದಿರುವ ಜನಪದ ಕುಣಿತ, ಜನಪದ ಸಂಗೀತವೂ ಆಧುನಿಕ ಕಲೆಯೇ ಆಗುತ್ತದೆ. ಅದರಷ್ಟಕ್ಕೆ ಅದು, ಇದರಷ್ಟಕ್ಕೆ ಇದು ಉಳಿದುಕೊಂಡು ಬಂದಿವೆ ಅಷ್ಟೆ. ಎರಡು ಪ್ರಕಾರಗಳೂ ಅವುಗಳದೇ ಆದ ಪ್ರೇಕ್ಷಕ ವರ್ಗವನ್ನೂ ಮನ್ನಣೆಯನ್ನೂ ಪಡೆದಿವೆ.

ಜನಪದ ಕಲೆಗಳಲ್ಲಿ ಹಿಂದೆ ದಟ್ಟವಾಗಿದ್ದ ದೈವಿಕ ಆವರಣ; ಆಚರಣೆಯ ಕಟ್ಟುನಿಟ್ಟು ಈಗ ಕಡಿಮೆಯಾಗಿದೆ. ಸೀಮಿತ ಪ್ರದೇಶ, ಜನಾಂಗ ಬಿಟ್ಟು ಜನಪದ ಕಲೆ ಹೊರಗೆ ಬಂದಿದೆ. ಹಳ್ಳಿಯಲ್ಲಿದ್ದದ್ದು ಪಟ್ಟಣಕ್ಕೂ ಪ್ರವೇಶಿಸಿದೆ. ಹಳ್ಳಿಯಲ್ಲಿದ್ದ ವೇಷಧಾರಿಗಳು ಪಟ್ಟಣಕ್ಕೂ ಬಂದು ವೇಷ ಕಟ್ಟಿ ಪ್ರದರ್ಶಿಸಬಹುದು. ದೇವರ ಸಂಬಂಧವಾಗಿದ್ದ ಕಲೆ ನಗರಕ್ಕೆ ಬಂದು ಮನೋರಂಜಕವಾಗಿ ಕಾಣಿಸಿಕೊಳ್ಳಬಹುದು. ವಾತಾವರಣ ಗಾಂಭೀರ್ಯ ಕಡಿಮೆಯಾಗಿರಬಹುದು. ವೈಜ್ಞಾನಿಕ ಪರಿಧಿಗೆ ಪ್ರವೇಶಿಸಿದಾಗ ಬದಲಾವಣೆ ಅನಿವಾರ್ಯ. ಜಾಗತೀಕರಣಕ್ಕೂ ಜಾನಪದ ಉತ್ತರವಾಗುವುದಿಲ್ಲವೆಂದು ಹೇಳಲಾಗುವುದಿಲ್ಲ. ಕಾಲ ಎಷ್ಟೇ ಬದಲಾಗಲಿ, ಜನಜೀವನ ಎಷ್ಟೇ ವಿಪರೀತಗೊಳ್ಳಲಿ ಜಾನಪದ ಮೂಗು ತೂರಿಸುವುದನ್ನು ಬಿಡುವುದಿಲ್ಲ.

ಜಾನಪದದ ಅನಿವಾರ್ಯತೆಗೆ ನಾನಾ ಕಾರಣಗಳಿವೆ. ಇಂದು ಜಾನಪದ ಹಳ್ಳಿಗರಿಗಿಂತ ಪಟ್ಟಣಿಗರಿಗೆ ಹೆಚ್ಚಾಗಿ ಬೇಕಾಗಿದೆ. ಹಳ್ಳಿಗರಾಗಲೀ ಪಟ್ಟಣಿಗರಾಗಲೀ ಕಲೆಯಿಲ್ಲದೆ ಬದುಕುವುದಕ್ಕಾಗುವುದಿಲ್ಲ. ಲೌಕಿಕ ಭೋಗದಲ್ಲಿ ತನ್ಮಯರಾಗುವವರೂ ಕೂಡ ಒಂದಲ್ಲ ಒಂದು ಸಂದರ್ಭದಲ್ಲಿ ಕಲೆಗೆ ಶರಣಾಗಬೇಕಾಗುತ್ತದೆ. ಕೃತಕ ಕಲೆಗಿಂತ ತಾಜಾ ಕಲೆಗೆ ಮನುಷ್ಯನ ಮನಸ್ಸು ಹಾತೊರೆಯುತ್ತದೆ. ಆಗ ಜಾನಪದ ಅನಿವಾರ್ಯವಾಗುತ್ತದೆ. ಆದ್ದರಿಂದ ಜಾನಪದ ಹಳೆಯ ಕಾಲದ್ದು, ಅದರ ಕಾಲ ಮುಗಿದು ಹೋಯಿತು ಎನ್ನುವಂತಿಲ್ಲ. ಅದು ಇಂದೂ ಇದೆ, ನಾಳೆಯೂ ಇರುತ್ತದೆ. ಜಾನಪದವನ್ನು ಅದು ಇರುವಂತೆ ವ್ಯಾಖ್ಯಾನಿಸುವುದು ವಿದ್ವಾಂಸರ ಕೆಲಸ; ಕಣಿ ಹೇಳುವುದು ವ್ಯರ್ಥ.

ಆಧುನಿಕ ಜೀವನ ವಿಧಾನ ಬದಲಾದಂತೆ, ವೈಜ್ಞಾನಿಕ ಸವಲತ್ತು ಹೆಚ್ಚಾದಂತೆ, ಜನರ ಆರ್ಥಿಕ ಸ್ಥಿತಿ ಸುಧಾರಿಸಿದಂತೆ ಜನಪದದ ಮೂಲಕಲಾವಿದರು ಬದಲಾಗಬಹುದು. ಆ ಸ್ಥಳಕ್ಕೆ ಆಧುನಿಕರು ಪ್ರವೇಶಿಸಬೇಕಾಗುತ್ತದೆ. ಅದಕ್ಕೆ ಕಲಿಕಾ ತರಬೇತಿ ಬೇಕು. ಬಹುತೇಕ ಭಿಕ್ಷುಕರ ಜೊತೆಗಿರುವ ಜನಪದ ಕಲೆಗಳು ಉಳ್ಳವರ ತೆಕ್ಕೆಗೆ ಬರಬೇಕಾಗುತ್ತದೆ. ನಿರ್ದಿಷ್ಟ ಜಾತಿ, ಮತ, ಆಚರಣಾ ಸಂಬಂಧದಲ್ಲಿ ಜನಪದ ಕತೆಗಳು ಹುಟ್ಟಿದ್ದರೂ ಅವು ಸಮೂಹದ ಹಿತ ಬಯಸುವ ಸದಾಶಯ ಪಡೆದಿರುವುದರಿಂದ ಆಧುನಿಕರ ಸ್ವತ್ತಾಗುವುದು ಕಷ್ಟವಾಗುವುದಿಲ್ಲ. ವೈಜ್ಞಾನಿಕ ವಿಧಾನಗಳಿಂದ ಜನಪದ ಕಲೆಗಳನ್ನು ಸಂಗ್ರಹಿಸಿ, ಸಂರಕ್ಷಿಸಿ, ಅಧ್ಯಯಿಸಿಸಿ, ಪ್ರಯೋಗ ಪ್ರದರ್ಶನಗಳಿಗೆ ದುಡಿಸಿಕೊಳ್ಳುವ ಹೊಣೆ ಆಧುನಿಕರದಾಗಿದೆ. ಜಗತ್ತಿನ ಮುಂದುವರಿದ ದೇಶಗಳಲ್ಲಿ ಈ ಪ್ರಕ್ರಿಯೆ ಪ್ರಾರಂಭವಾಗಿದೆ. ನಾವೂ ಅದೇ ಜಾಡಿನಲ್ಲಿ ಸಾಗಬೇಕಾಗುತ್ತದೆ. ಜಾನಪದದ ಆವಾಹನೆಗೆ ಮುಂದಾದರೆ ಸಾಂಸ್ಕೃತಿಕ ಭವಿಷ್ಯಕ್ಕೆ ಉಪಯೋಗವಾಗುತ್ತದೆ.

■■

ಭಾಗ-೫

ಶಿಕ್ಷಣ

ಪ್ರಾಚೀನ ಭಾರತದಲ್ಲಿ ಶಿಕ್ಷಣ

✍ ಕೆ. ಶಾಂತಯ್ಯ

ಶೈಕ್ಷಣಿಕ ಸಮಸ್ಯೆಗಳು ಜಟಿಲವಾಗುತ್ತಿರುವ ಈ ಕಾಲದಲ್ಲಿ ಅವುಗಳ ಪರಿಹಾರಕ್ಕಾಗಿ ಎಲ್ಲಂದದ ಪ್ರಯತ್ನ ಮುಂದುವರಿಸುವುದು ಅಗತ್ಯ. ಈ ನಿಟ್ಟಿನಲ್ಲಿ ಪ್ರಾಚೀನ ಕಾಲದ ಶಿಕ್ಷಣ ಪದ್ಧತಿಯ ಕೂಲಂಕಷ ಅಧ್ಯಯನವೂ ಒಂದು ಪ್ರಯತ್ನ. ಇಂದಿನ ಮತ್ತು ಹಿಂದಿನ ಪದ್ಧತಿಯ ಚಲನಾತ್ಮಕ ವಿಮರ್ಶೆಯಿಂದ ಕೆಲ ಸಮಸ್ಯೆಗಳ ಪರಿಹಾರಕ್ಕೆ ಸುಳಿವು ಸಿಕ್ಕಬಹುದು. ಈ ಉದ್ದೇಶದಿಂದ ಪ್ರಾಚೀನ ಕಾಲದ ಶಿಕ್ಷಣ ಪದ್ಧತಿಯ ಸ್ಥೂಲಚಿತ್ರಣ ನೀಡಲು ಪ್ರಯತ್ನಿಸಿದೆ.

ಪೀಠಿಕೆ. ಪ್ರಾಚೀನ ಕಾಲದ ಶಿಕ್ಷಣ ಪದ್ಧತಿಯ ಇತಿಹಾಸ ಒಂದು ರೋಚಕ ವಿಷಯವಾಗಿದ್ದು ಕುತೂಹಲ ಕೆರಳಿಸುವಂಥದ್ದಾಗಿದೆ. ಇದರ ಚರಿತ್ರೆ ಸಹಸ್ರಾರು ವರ್ಷಗಳ ವ್ಯಾಪ್ತಿಯನ್ನು ಹೊಂದಿದೆ. ಸುಮಾರು ನಾಲ್ಕು ಸಾವಿರ ವರ್ಷಗಳ ಅವಧಿಯ ಇತಿಹಾಸವನ್ನು ಅವಲೋಕಿಸಿದಾಗ ಶಿಕ್ಷಣ ಪದ್ಧತಿಯ ಧ್ಯೇಯೋದ್ದೇಶಗಳು ಅನೇಕ ಬದಲಾವಣೆಗಳನ್ನು ಹೊಂದಿರುವುದು ದೃಗ್ಗೋಚರವಾಗುತ್ತದೆ. ಒಂದು ಕಾಲದಲ್ಲಿ ಮಹಿಳಾ ಶಿಕ್ಷಣ, ಮಾನವ ಶ್ರಮ ಮತ್ತು ಕುಶಲ ಕಲೆಗಳಿಗೆ ಪ್ರೋತ್ಸಾಹ ಲಭಿಸಿದ್ದರೆ ನಂತರದಲ್ಲಿ ಇವುಗಳನ್ನು ಕಡೆಗಣಿಸಲಾಗಿದೆ. 'ಸ್ಮೃತಿ' ಯುಗದಲ್ಲಿ ಜಾತಿ ಮನುಷ್ಯನ ಉದ್ಯೋಗವನ್ನು ನಿರ್ಧರಿಸಿದ್ದರೆ, ವೈದಿಕ ಕಾಲದಲ್ಲಿ ಇದರ ಬಗ್ಗೆ ಸ್ಪಷ್ಟತೆಯಿಲ್ಲ. 'ಅಧಿಕಾರ'ಕ್ಕಿಂತ ವಿವೇಕಕ್ಕೆ ಹೆಚ್ಚಿನ ಆದ್ಯತೆ ನೀಡಿದ ಒಂದು ಕಾಲ, ಮುಂದೆ ಅದನ್ನು ತಿರುವುಮುರುವುಗೊಳಿಸಿದ್ದು ಕಂಡುಬರುತ್ತದೆ.

ಆಕರ. ಪ್ರಾಚೀನ ಶಿಕ್ಷಣ ಪದ್ಧತಿಯ ಅಧ್ಯಯನಕ್ಕೆ 'ಧರ್ಮಸೂತ್ರ' ಮತ್ತು 'ಸ್ಮೃತಿ'ಗಳ ಮೊರೆ ಹೋಗಬೇಕಾಗುತ್ತದೆ. ಇವುಗಳಲ್ಲಿ ಶಿಕ್ಷಣದ ಪರಿಕಲ್ಪನೆ, ಗುರಿ ಮತ್ತು ಸಿದ್ಧಾಂತಗಳ ಬಗ್ಗೆ ಕ್ರಮಬದ್ಧವಾಗಿ ಚರ್ಚಿಸಿಲ್ಲ. ಕೆಲವೊಂದು ಭಾಗಗಳಲ್ಲಿ ಮಾತ್ರ ಅಲ್ಲಲ್ಲಿ ಬಿಡಿ ವಿಚಾರಗಳು ವ್ಯಕ್ತವಾಗಿವೆ. ಅನಾಮಿಕ ವ್ಯಕ್ತಿಗಳಿಂದ ಸುಸಂಸ್ಕೃತ ವರ್ತುಲದಲ್ಲಿ ಶ್ಲೋಕ ರೂಪದಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯಗಳೇ ಪೀಳಿಗೆಯಿಂದ ಪೀಳಿಗೆಗೆ ಪ್ರಚುರಗೊಂಡು ಘನೀಭೂತಗೊಂಡಿವೆ. ಇದುವೇ ಅತ್ಯಂತ ಉಪಯುಕ್ತ ಆಕರವಾಗಿದೆ.

ಪರಿಕಲ್ಪನೆ: ವಿಶಾಲವಾದ ಅರ್ಥದಲ್ಲಿ ಶಿಕ್ಷಣವು ಜೀವನದುದ್ದಕ್ಕೂ ಮತ್ತು ಕೊನೆಯ ಉಸಿರಿರುವವರೆಗೂ ಮಾನವನ ಸುಧಾರಣೆಗಾಗಿ ಮತ್ತು ಸಂಸ್ಕೃತಿಯನ್ನು ಸಂವರ್ಧಿಸಲು ಸಹಾಯಕವಾದ ಪ್ರಕ್ರಿಯೆಯಾಗಿದೆ. ಸಂಕುಚಿತ ಅರ್ಥದಲ್ಲಿ ಒಬ್ಬ ವ್ಯಕ್ತಿ ಒಂದು ಉದ್ಯೋಗವನ್ನವಲಂಬಿಸಿ ನೆಲೆಸುವ ಮುನ್ನ ವಿದ್ಯಾರ್ಥಿದೆಸೆಯಲ್ಲಿ ಪಡೆಯುವ ಬೋಧನೆ ಮತ್ತು ತರಬೇತಿಯಾಗಿದೆ. ವೇದಕಾಲದಿಂದಲೂ ಶಿಕ್ಷಣದ ಕೇಂದ್ರ ಪರಿಕಲ್ಪನೆ ಜ್ಞಾನೋದಯದ ಮೂಲವಾಗಿದೆ. ಒಬ್ಬ ತತ್ವಜ್ಞಾನಿಯ ಅಭಿಪ್ರಾಯದಲ್ಲಿ 'ಶಿಕ್ಷಣ' ಮನುಷ್ಯನ ಮೂರನೆಯ ಕಣ್ಣು ಇದ್ದಂತೆ. ಎರಡು ಕಣ್ಣುಗಳಿಗೆ ಕಾಣದ್ದನ್ನು ಅದು ತೋರಿಸುತ್ತದೆ. ಜೀವನದ ಬಗ್ಗೆ ಪರಿಪೂರ್ಣ ಮಾಹಿತಿಯನ್ನು ನೀಡುವುದಲ್ಲದೆ, ಉದ್ಭವಿಸುವ ಸಮಸ್ಯೆಗಳನ್ನೆದುರಿಸಲು ಸರಿಯಾದ ಮಾರ್ಗದರ್ಶನ ನೀಡುತ್ತದೆ. ಇದರ ಉಪಯೋಗದ ಬಗ್ಗೆ ಅರ್ಥಗರ್ಭಿತವಾಗಿ ಹೇಳುವುದಾದರೆ ತಾಯಿಯಂತೆ ಪೋಷಿಸುತ್ತದೆ. ತಂದೆಯಂತೆ ದಾರಿ ತೋರಿಸುತ್ತದೆ ಮತ್ತು ಮಡದಿಯಂತೆ ಸಂತೋಷ ಹಾಗೂ ನೆಮ್ಮದಿಯನ್ನು ನೀಡುತ್ತದೆ. ನಿಜವಾದ ಶಿಕ್ಷಣ ನಮ್ಮ ನೈತಿಕತೆಯನ್ನು ಸದೃಢಗೊಳಿಸಿ ತಪ್ಪುದಾರಿ ತುಳಿಯುವುದರಿಂದ ರಕ್ಷಿಸುತ್ತದೆ. ಕೇವಲ ಪುಸ್ತಕಜ್ಞಾನದಿಂದ ಪ್ರಯೋಜನವಿಲ್ಲ, ವಿಷಯದ ಸೂಕ್ಷ್ಮ ಪರಿಜ್ಞಾನ ಹೊಂದಿ ಒಬ್ಬ ಕ್ರಿಯಾಶೀಲ ವ್ಯಕ್ತಿಯಾಗಲು ಸಹಾಯಕವಾಗುತ್ತದೆ. ನಿಜವಾದ ಶಿಕ್ಷಣ ಜೀವನೋಪಾಯದ ಸಮಸ್ಯೆಯನ್ನೂ ಪರಿಹರಿಸುತ್ತದೆ. ಬೆಳಕನ್ನು ಒಳನೋಟವನ್ನು ಮತ್ತು ಸುಸಂಸ್ಕೃತಿಯನ್ನು ನೀಡಿ, ಒಬ್ಬ ಗೌರವಾನ್ವಿತ ಹಾಗೂ

ಸ್ವಾವಲಂಬಿ ನಾಗರಿಕನನ್ನಾಗಿಸುತ್ತದೆ. ನಮ್ಮನ್ನು ಜೀವಿಸಲು ಸಮರ್ಥರನ್ನಾಗಿಸುತ್ತದಲ್ಲದೆ ಜೀವನೋಪಾಯದ ಮಾರ್ಗವನ್ನು ಕಂಡುಕೊಳ್ಳಲು ಸಮರ್ಥರನ್ನಾಗಿಸುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಶಿಕ್ಷಣವು ಪ್ರಕಾಶ ಮತ್ತು ಶಕ್ತಿಯ ಆಕರವಾಗಿದ್ದು, ವ್ಯಕ್ತಿಯ ದೈಹಿಕ, ಬೌದ್ಧಿಕ ಮತ್ತು ಆಧ್ಯಾತ್ಮಿಕ ಶಕ್ತಿಗಳ ಸಮತೋಲ ಬೆಳವಣಿಗೆಗೆ ಸಹಾಯಕವಾಗಿದೆ.

ಗುರಿ: ಪ್ರಾಚೀನ ಶಿಕ್ಷಣ ಪದ್ಧತಿಯು ಸ್ಪಷ್ಟ ಗುರಿಗಳನ್ನು ಹೊಂದಿತ್ತು.

೧. ಧಾರ್ಮಿಕತೆ ಮತ್ತು ದೈವಭಕ್ತಿಯನ್ನುಂಟುಮಾಡುವುದು:- ಇದನ್ನು ವ್ರತ, ನಿಯಮಗಳ ಆಚರಣೆ ಮತ್ತು ಸೂಕ್ತ ಪರಿಸರ ನಿರ್ಮಾಣದಿಂದ ಸಾಧಿಸಲಾಗುತ್ತಿತ್ತು. ಶಿಕ್ಷಣದ ಪ್ರಾರಂಭದ ಮುನ್ನ ಕೆಲ ಧಾರ್ಮಿಕ ವಿಧಿ ವಿಧಾನಗಳನ್ನೂ ಪಾಲಿಸುವುದು ಪ್ರತಿನಿತ್ಯದ ಎರಡು ಹೊತ್ತಿನ ಪ್ರಾರ್ಥನೆ ಹಾಗೂ ಧಾರ್ಮಿಕ ಹಬ್ಬಗಳ ಅತ್ಯುತ್ಸಾಹದ ಆಚರಣೆಯಿಂದ ಸೂಕ್ತ ವಾತಾವರಣ ನಿರ್ಮಾಣವಾಗುತ್ತಿತ್ತು. ಅರ್ಚಕರೇ ಶಿಕ್ಷಕರಾಗಿರುತ್ತಿದ್ದುದರಿಂದ ಮತ್ತು ಅವರ ಪರಿಶುಭ್ರ ವ್ಯಕ್ತಿತ್ವದ ಪ್ರಭಾವದಿಂದ ನಿರೀಕ್ಷಿತ ಫಲ ಲಭ್ಯ. ಇದರಿಂದ ಸಹಜವಾಗಿ ವಿದ್ಯಾರ್ಥಿಗಳಲ್ಲಿ ಧಾರ್ಮಿಕ ಶ್ರದ್ಧೆಯುಂಟಾಗಿ ಜೀವನದ ಪ್ರಲೋಭನೆಗಳನ್ನೆದುರಿಸಲು ಸಾಧ್ಯವಾಗುತ್ತಿತ್ತು. ಆಧ್ಯಾತ್ಮಿಕದತ್ತ ಅವರ ಬುದ್ಧಿ ಮತ್ತು ಮನಸ್ಸು ಚಿಂತಿತವಾಗುತ್ತಿತ್ತು. ಅವರು ಜೀವನವನ್ನು ತ್ಯಜಿಸಿ ಸನ್ಯಾಸಿಗಳಾಗುವಂತೆ ಪ್ರೇರೇಪಿಸುವ ಉದ್ದೇಶ ಮಾತ್ರವಿರಲಿಲ್ಲ.

೨. ಸಚ್ಚಾರಿತ್ರ್ಯ ನಿರ್ಮಾಣ:- ಚಾರಿತ್ರ್ಯರಹಿತ ಬೌದ್ಧಿಕ ಸಾಧನೆ ನಿರುಪಯುಕ್ತ. ವೇದಾಧ್ಯಯನ ಮಾಡಿದ ಪ್ರಕಾಂಡ ಪಂಡಿತ ಚರಿತ್ರಹೀನನಾಗಿದ್ದರೆ ಮನ್ನಣೆಯಿಂದ ವಂಚಿತ. ಅಲ್ಪಜ್ಞಾನಿಯಾಗಿದ್ದ ಚಾರಿತ್ರ್ಯವಂತನಿಗೆ ಹೆಚ್ಚಿನ ಮನ್ನಣೆ. ಪ್ರಾಮಾಣಿಕ ವ್ಯಕ್ತಿ ಜ್ಞಾನಿಯೆಂಬ ಗೌರವಕ್ಕೆ ಪಾತ್ರ. "ಸದ್ಗುಣ ಸಂಪನ್ನನೇ ನಿಜವಾದ ಜ್ಞಾನಿ"ಯೆಂದು ಸಾಕ್ರಟೀಸನು ಹೇಳಿದ ಮಾತನ್ನು ಇಲ್ಲಿ ಸ್ಮರಿಸಬಹುದು. ವಿದ್ಯಾರ್ಥಿಗಳು ಓದುತ್ತಿದ್ದ ಪುಸ್ತಕಗಳ ಪ್ರತಿ ಪುಟದಲ್ಲಿಯೂ ಅವರು ಕೇಳುತ್ತಿದ್ದ ಪ್ರತಿ ಮಾತಿನಲ್ಲೂ ನೈತಿಕ ನಿಷ್ಠೆಯನ್ನು ಬೆಳೆಸಿಕೊಳ್ಳಲು ಸಹಾಯಕವಾಗಲು ಒಂದಿಲ್ಲೊಂದು ಕಟ್ಟಳೆಯ ಪಾಲನೆಗಾಗಿ ನೇರ ನಿರೂಪಣೆ. ಶಿಕ್ಷಕರು ತಮ್ಮ ನೇರ ಮೇಲುಸ್ತುವಾರಿಯಲ್ಲಿರುತ್ತಿದ್ದ ವಿದ್ಯಾರ್ಥಿಗಳ ಬೌದ್ಧಿಕ ಬೆಳವಣಿಗೆಯನ್ನಷ್ಟೆ ಗಮನಿಸದೆ ಅವರ ನಡೆ ನುಡಿ, ಹಿರಿ ಕಿರಿಯರೊಡನೆ ಅವರು ನಡೆದುಕೊಳ್ಳುವ ರೀತಿಯನ್ನೂ ಗಮನಿಸಿ, ಸದಾಚಾರದ ನಿಯಮಗಳನ್ನು ಉಲ್ಲಂಘಿಸದಂತೆ ಎಚ್ಚರಿಕೆ ನೀಡುತ್ತಿದ್ದರು. ಜೊತೆಗೆ ಕಾಲಕಾಲಕ್ಕೆ ಆಚರಿಸುತ್ತಿದ್ದ ಶಾಸ್ತ್ರೋಕ್ತ ವಿಧಿ ವಿಧಾನ, ನಿಯಮಬದ್ಧವಾಗಿ ಮಾಡುತ್ತಿದ್ದ ಪ್ರಾರ್ಥನೆ ಹಾಗೂ ರಾಷ್ಟ್ರೀಯ ನಾಯಕರ ಜೀವನ ಚರಿತ್ರೆ ಅವರು ನಿರ್ಮಿಸಿದ ಆದರ್ಶಗಳು ಅಧ್ಯಯನದಿಂದ ಚಾರಿತ್ರ್ಯ ನಿರ್ಮಾಣಕ್ಕೆ ಸಹಾಯಕವಾಗಿತ್ತು.

೩. ವ್ಯಕ್ತಿತ್ವದ ಬೆಳವಣಿಗೆ:- ಆತ್ಮಗೌರವ, ಆತ್ಮವಿಕಾಸ, ಆತ್ಮಸಂಯಮ ಹಾಗೂ ವಿವೇಚನಾ ಶಕ್ತಿಯನ್ನು ಬೆಳೆಸುವ ಮೂಲಕ ಇದನ್ನು ಸಾಧಿಸಲು ಪ್ರಯತ್ನ. ವೇದಾಧ್ಯಯನ ಮತ್ತಿತರ ವಿಷಯಗಳ ಬೋಧನೆಯ ಕಾಲಕ್ಕೆ ಶಿಕ್ಷಕರು ಇವುಗಳ ಬೆಳವಣಿಗೆಯತ್ತ ಹೆಚ್ಚು ಒತ್ತು ಕೊಡುತ್ತಿದ್ದರು. ಸ್ವಯಂ ಶಿಸ್ತು ಮತ್ತು ಉತ್ತಮ ರೂಢಿಗಳನ್ನು ಅಳವಡಿಸಿಕೊಳ್ಳಲು ಸಹ ಸೂಚಿಸುತ್ತಿದ್ದರು. ಒಬ್ಬ ಅರಸ ಉತ್ತಮ ಆಡಳಿತಗಾರನಾಗಿದ್ದರೆ, ಒಬ್ಬ ಯೋಧ ಸಮರ್ಥ ಪರಾಕ್ರಮಿಯಾಗಿದ್ದರೆ ಅವನು ಬೆಳೆಸಿಕೊಂಡಿರುವ ವ್ಯಕ್ತಿತ್ವವೇ ಮುಖ್ಯ ಕಾರಣ. ಸುಶಿಕ್ಷಿತ ಮತ್ತು ತರಬೇತಿ ಹೊಂದಿದ ಯೋಗ್ಯ ವ್ಯಕ್ತಿಗೆ ರಾಜನಿಗಿಂತ ಹೆಚ್ಚಿನ ಮನ್ನಣೆ ಲಭ್ಯ. ಈ ರೀತಿಯ ಉದಾಹರಣೆಗಳಿಂದ ವ್ಯಕ್ತಿತ್ವದ ವಿಕಾಸಕ್ಕೆ ಆತ್ಮಗೌರವದ ಹೆಚ್ಚಳಕ್ಕೆ ಪ್ರೇರಣೆ.

೪. ಸಾಮಾಜಿಕ ಕರ್ತವ್ಯಗಳ ನಿರ್ವಹಣೆ:- ಸುಶಿಕ್ಷಿತನಾದ ವ್ಯಕ್ತಿ ಸ್ವಾರ್ಥಿಯಾಗುವಂತಿರಲಿಲ್ಲ. ತಾನು ಕಲಿತ ವಿದ್ಯೆಯನ್ನು ಶುಲ್ಕವನ್ನು ನಿರೀಕ್ಷಿಸದೆ ಬೇರೆಯವರಿಗೆ ಕಲಿಸಬೇಕಾಗುತ್ತಿತ್ತು. ಒಬ್ಬ ವ್ಯಕ್ತಿ; ಮಗ, ತಂದೆ ಮತ್ತು ಗಂಡನಾಗಿ ನಿರ್ವಹಿಸಬೇಕಾದ ಕರ್ತವ್ಯಗಳನ್ನು ತಪ್ಪದೇ ನಿರ್ವಹಿಸಬೇಕು. ತನ್ನ ಸಂಪತ್ತನ್ನು ತನ್ನ ಕುಟುಂಬದ ಸೌಖ್ಯಕ್ಕೆ ಮಾತ್ರ ಮೀಸಲಿಡದೆ ದಾನ ಧರ್ಮ

ಮತ್ತು ಅತಿಥಿ ಸತ್ಕಾರಕ್ಕೆ ಬಳಸಬೇಕು. ಉದ್ಯೋಗದ ನಿರ್ವಹಣೆಯಲ್ಲಿ ನೈತಿಕ ಕಟ್ಟಳೆ ಪಾಲಿಸಬೇಕು. ವೈದ್ಯ ತನ್ನ ಜೀವದ ಹಂಗು ತೊರೆದು ರೋಗಿಯ ಉಪಚಾರ ಮಾಡಬೇಕು. ವೈರಿಯನ್ನು ಎಚ್ಚರಿಸಿ ಅವನು ಸಿದ್ಧನಾದಾಗ ಮಾತ್ರ ಅವನ ಮೇಲೆ ಪ್ರಹಾರ ಮಾಡಬೇಕು -ಇವುಗಳ ಬಗ್ಗೆ ಘಟಿಕೋತ್ಸವದ ಸಂದರ್ಭದಲ್ಲಿ ಪ್ರಮಾಣ ಮಾಡಬೇಕಾಗುತ್ತಿತ್ತು. ಈ ರೀತಿಯಾಗಿ ಸಾಮಾಜಿಕ ಕರ್ತವ್ಯಗಳ ನಿರ್ವಹಣೆಯ ಬಗ್ಗೆ ಮನವರಿಕೆ ಮಾಡಿಕೊಡಲಾಗುತ್ತಿತ್ತು.

೫. ಸಾಮಾಜಿಕ ಸ್ವಾಸ್ಥ್ಯ: ಜ್ಞಾನ, ಉದ್ಯೋಗ ಮತ್ತು ಕೈಗಾರಿಕೆಗಳ ವಿವಿಧ ಅಂಗಗಳಲ್ಲಿ ಪ್ರತಿಯೊಬ್ಬರಿಗೆ ಅವರು ನಿರ್ವಹಿಸಬಹುದಾದ ಉದ್ಯೋಗಕ್ಕನುಗುಣವಾಗಿ ತರಬೇತಿ ಪಡೆಯಲು ಅವಕಾಶ. ಆನುವಂಶಿಕವಾಗಿ ಅನುಸರಿಸುತ್ತ ಬಂದ ಕಸುಬಿನಲ್ಲಿ ತರಬೇತಿ ನೀಡುವ ತತ್ವಕ್ಕೆ ಬದ್ಧತೆ. ಪ್ರತಿಭಾವಂತರು ತಮ್ಮ ಆಯ್ಕೆಯ ಉದ್ಯೋಗದಲ್ಲಿ ತರಬೇತಿ ಪಡೆದು ಮುಂದುವರಿಯುವ ಸ್ವಾತಂತ್ರ್ಯ. ಕುಟುಂಬ ಮತ್ತು ಸಂಘ ಸಂಸ್ಥೆಗಳು ಅವರವರ ಸದಸ್ಯರಿಗೆ ಅವರವರ ಕಸುಬಿನಲ್ಲಿ ತರಬೇತಿ ನೀಡುವ ವ್ಯವಸ್ಥೆ -ಮುಂತಾದ ಕ್ರಮಗಳಿಂದ ಈ ಗುರಿಯ ಸಾಧನೆಗೆ ಪ್ರಯತ್ನಿಸಲಾಗುತ್ತಿತ್ತು. ಬ್ರಾಹ್ಮಣ ಮತ್ತು ವೈಶ್ಯರು, ರಾಜರು ಅಥವಾ ಯೋಧರಾಗಲು, ಕ್ಷತ್ರಿಯ ಮತ್ತು ಶೂದ್ರರು ತತ್ವಜ್ಞಾನಿಗಳು ಮತ್ತು ಧರ್ಮಬೋಧಕರಾಗಲು ಅವಕಾಶವಿತ್ತು. ಬಡವಿದ್ಯಾರ್ಥಿಗಳಿಗೆ ಸಹಾಯ ಮಾಡುವುದು ಸಮಾಜದ ಹೊಣೆ. ಈ ಹೊಣೆಯಿಂದ ಜಾರಿದಲ್ಲಿ ಸಮಾಜ ನೈಸರ್ಗಿಕ ವಿಪತ್ತುಗಳಿಗೆ ಗುರಿಯಾಗುವುದೆಂಬ ನಂಬಿಕೆ. ಈ ರೀತಿಯಾಗಿ ಸಮಾಜದ ಪ್ರತಿಯೊಬ್ಬ ಸದಸ್ಯ ಒಂದಿಲ್ಲೊಂದು ಉದ್ಯೋಗದಲ್ಲಿ ತೊಡಗಿ ತನ್ನ ಕಾರ್ಯಸಾಮರ್ಥ್ಯದಿಂದ ಆರ್ಥಿಕ ಭದ್ರತೆಯನ್ನುಂಟುಮಾಡಿ ಸಮಾಜದ ಸ್ವಾಸ್ಥ್ಯ ಮತ್ತು ಸೌಖ್ಯಕ್ಕೆ ಕಾರಣನಾಗುತ್ತಿದ್ದ.

೬. ಸಂಸ್ಕೃತಿಯ ರಕ್ಷಣೆ ಮತ್ತು ಪ್ರಚಾರ:- ರಾಷ್ಟ್ರೀಯ ಬಳುವಳಿಯಾಗಿ ಬಂದ ಸಂಸ್ಕೃತಿಯ ರಕ್ಷಣೆ ಮತ್ತು ಪ್ರಚಾರ ಅಗತ್ಯವಾಗಿತ್ತು. ಉತ್ತಮ ಶಿಕ್ಷಣದಿಂದ ಹಿಂದಿನಿಂದ ಬಂದ ಸಂಪ್ರದಾಯ, ವಿಚಾರ ಮತ್ತು ಕ್ರಿಯೆಗಳ ರಕ್ಷಣೆ ಮತ್ತು ಪ್ರಚಾರಕ್ಕಾಗಿ ಪ್ರಯತ್ನಿಸಲಾಗುತ್ತಿತ್ತು. ವೈದಿಕ ಸಾಹಿತ್ಯದ ರಕ್ಷಣ ಆನುವಂಶಿಕವಾಗಿ ಅನುಸರಿಸುತ್ತ ಬಂದ ಕಸುಬುಗಳಲ್ಲಿ ತರಬೇತಿ ನೀಡುವ ಮೂಲಕ ಇದನ್ನು ಸಾಧಿಸಲಾಗುತ್ತಿತ್ತು. ವೈದಿಕ ಸಾಹಿತ್ಯದಲ್ಲಿ ಆಸಕ್ತರಾದ ಕೆಲವರು ಮಾತ್ರ ವೈದಿಕ ಶ್ಲೋಕಗಳನ್ನು ಕಂಠಸ್ಥಗೊಳಿಸಿಕೊಳ್ಳಲು ತಮ್ಮ ಜೀವನವನ್ನು ಮುಡುಪಾಗಿಟ್ಟುಗೊಂಡಿದ್ದರು. ಕಾಗದ ಮತ್ತು ಮುದ್ರಣ ಸೌಲಭ್ಯವಿಲ್ಲದ ಈ ಕಾಲದಲ್ಲಿ ಇದು ಅನಿವಾರ್ಯವಾಗಿತ್ತು. ಇನ್ನುಳಿದವರು ಇತರೆ ಶಾಸ್ತ್ರಗಳ ಅಧ್ಯಯನ ಕೈಕೊಂಡು ಪೂರ್ವಜರಿಂದ ಬಂದ ಜ್ಞಾನಭಂಡಾರದ ರಕ್ಷಣೆ ಮಾಡುತ್ತಿದ್ದರು. ವಿಷಯಗಳ ಆಳ ಅಧ್ಯಯನದಿಂದ ತಮ್ಮದೇ ಆದ ವಿಚಾರ ಮತ್ತು ಸಿದ್ಧಾಂತಗಳ ಕಾಣಿಕೆ ಸಲ್ಲಿಸುತ್ತಿದ್ದರು. ಹೀಗಾಗಿ ಸಂಸ್ಕೃತಿಯ ಸಂವರ್ಧನೆ, ರಕ್ಷಣೆ ಮತ್ತು ಪ್ರಚಾರದ ಹಾದಿ ಸುಗಮವಾಗಿತ್ತು.

ಮುಖ್ಯಾಂಶಗಳು:- ಸಹಸ್ರಾರು ವರ್ಷಗಳ ಪ್ರಾಚೀನ ಶಿಕ್ಷಣ ಪದ್ಧತಿಯ ಇತಿಹಾಸವನ್ನು ನಾಲ್ಕು ಅವಧಿಯಲ್ಲಿ ವಿಂಗಡಿಸಿ ಮುಖ್ಯಾಂಶಗಳನ್ನು ಪರಿಶೀಲಿಸಬಹುದು.

೧. ವೇದಗಳ ಕಾಲ: ಕ್ರಿ. ಪೂ. ೧೦೦೦ ವರ್ಷಗಳವರೆಗೆ, ಮಾನವನ ಪ್ರಗತಿ ಮತ್ತು ಸೌಖ್ಯಕ್ಕೆ ಬೌದ್ಧಿಕ ಬೆಳವಣಿಗೆ ಮತ್ತು ಕಾರ್ಯತತ್ಪರತೆ ಮುಖ್ಯ. ಪ್ರತಿಯೊಬ್ಬ ವ್ಯಕ್ತಿಗೆ ಹೆಣ್ಣಾಗಲಿ ಗಂಡಾಗಲಿ, ಪವಿತ್ರ ಸಾಹಿತ್ಯದ ಅಧ್ಯಯನ ಮತ್ತು ಕುಟುಂಬದ ಉದ್ಯೋಗದಲ್ಲಿ ತರಬೇತಿಗೆ ಸಜ್ಜಾಗುವ ಮುನ್ನ ಬ್ರಹ್ಮಚರ್ಯದ ಪಾಲನೆ ಅಗತ್ಯ. ಸೂಕ್ತ ಶಿಕ್ಷಣವನ್ನು ಪಡೆಯದೆ ಯಾರೂ ಪ್ರಸಿದ್ಧ ವಿದ್ವಾಂಸ, ಯಶಸ್ವಿ ಆಡಳಿತಗಾರ, ಸಮರ್ಥಯಂತ್ರಶಿಲ್ಪಿ ಅಥವಾ ಅಭಿವೃದ್ಧಿಶೀಲ ವ್ಯಾಪಾರಿಯಾಗಲು ಸಾಧ್ಯವಿಲ್ಲ. ಮಹಿಳಾ ಶಿಕ್ಷಣಕ್ಕೆ ಮನ್ನಣೆ ವಿಶ್ವಾವರ, ಸಿಕತಾ, ನಿರಾವರಿ, ಘೋಷಾ, ಲೋಪಾಮುದ್ರ ಮತ್ತು ಅಪಲಾ ರವರು ವೈದಿಕಶ್ಲೋಕಗಳನ್ನು ರಚಿಸಿ ಪ್ರಸಿದ್ಧರಾಗಿದ್ದರು. ಉಪನಯನವೆಂಬ ಶಾಸ್ತ್ರವಿಧಿಯಿಂದ ಶಿಕ್ಷಣದ ಪ್ರಾರಂಭ. ತಂದೆಯೇ

ಪ್ರಥಮ ಗುರು. ಶಿಕ್ಷಕರಾಗಲಿ, ಶಾಲೆಗಳಾಗಲಿ ಅಸ್ತಿತ್ವಕ್ಕೆ ಬಂದಿರಲಿಲ್ಲ. ವೇದದ ಶ್ಲೋಕಗಳನ್ನು ಮತ್ತು ವೀರರನ್ನು ಕುರಿತು ಜಾರಿಯಲ್ಲಿದ್ದ ಲಾವಣಿ ಪದಗಳನ್ನು ಕಂಠಸ್ಥಗೊಳಿಸುವುದು, ಕುಟುಂಬದ ಕಸುಬಿನಲ್ಲಿ ತಂದೆಯಿಂದ ಅಥವಾ ಇತರ ಹಿರಿಯ ಸದಸ್ಯರಿಂದ ತರಬೇತಿ ಕೊಡಿಸುವುದು ಪಠ್ಯವಸ್ತುವಾಗಿತ್ತು. ಎಲ್ಲ ಬ್ರಾಹ್ಮಣರು ಹನ್ನೆರಡು ವರ್ಷಗಳ ಕಾಲ ವೇದದ ಮೂಲ ಪಾಠಗಳನ್ನು ಕಂಠಸ್ಥಗೊಳಿಸುತ್ತಿರಲಿಲ್ಲ. ಕೆಲವರು ಮಾತ್ರ ಇದನ್ನು ಮಾಡುತ್ತಿದ್ದು ಉಳಿದ ಬಹುಸಂಖ್ಯಾತರು ನಿತ್ಯದ ಉಪಯೋಗಕ್ಕೆ ಅವಶ್ಯಕವಾದ ಕೆಲವು ಶ್ಲೋಕಗಳನ್ನು ಮಾತ್ರ ಕಲಿತು ಉಳಿದ ಸಮಯವನ್ನು ಸಾಹಿತ್ಯ, ತತ್ವಶಾಸ್ತ್ರ, ತರ್ಕಶಾಸ್ತ್ರ, ನ್ಯಾಯಶಾಸ್ತ್ರ ಮತ್ತು ಕಾವ್ಯಮೀಮಾಂಸೆಯನ್ನು ಕಲಿಯುವುದರಲ್ಲಿ ವ್ಯಯಿಸುತ್ತಿದ್ದರು. ಕ್ರಿ.ಪೂ. ೫೦೦ ರವರೆಗೆ ಜಾತಿ ಪದ್ಧತಿಯ ಒತ್ತಡವಿರಲಿಲ್ಲ. ಪ್ರತಿಯೊಬ್ಬ ವ್ಯಕ್ತಿ ತನ್ನ ಇಚ್ಛಾನುಸಾರ ಉದ್ಯೋಗವನ್ನು ಆಯ್ಕೆ ಮಾಡಿಕೊಂಡು ತರಬೇತಿ ಹೊಂದಲು ಅವಕಾಶವಿತ್ತು. ಸ್ಮೃತಿ ಕಾಲದ ಶಿಕ್ಷಣದ ಪಠ್ಯಕ್ರಮ ಬ್ರಹ್ಮವಿದ್ಯೆಗೆ ಸಂಬಂಧಿಸಿದ್ದು ಕೇವಲ ಕಾಲ್ಪನಿಕ ಮತ್ತು ಆದರ್ಶವಾದದತ್ತ ಕೊಂಡೊಯ್ಯುತ್ತಿತ್ತು. ಸಮಾಜದ ನೈಜ ಸ್ಥಿತಿಗತಿಗೆ ಪ್ರಯೋಜನಕಾರಿಯಾಗಿರಲಿಲ್ಲ.

೨. **ಉಪನಿಷತ್ತುಗಳ ಕಾಲ:** ಕ್ರಿ.ಪೂ. ೧೨೦೦ ರಿಂದ ಕ್ರಿ.ಪೂ. ೨೦೦ ರವರೆಗೆ. ಸಮಾಜದ ಸ್ವಾಸ್ಥ್ಯಕ್ಕಾಗಿ ಶಿಕ್ಷಣವು ಅಗತ್ಯ. ಆರ್ಯರೆಲ್ಲರಿಗೆ ಉಪನಯನ ಕಡ್ಡಾಯದ ಧರ್ಮಾಚರಣೆಯಾಯಿತು. ವೈದಿಕಸಾಹಿತ್ಯ ವಿಪುಲವಾಗಿ ಬೆಳೆದು ಶಾಸ್ತ್ರೋಕ್ತ ವಿಧಿವಿಧಾನಗಳು ಹೆಚ್ಚು ಜಟಿಲವಾದವು. ವ್ಯಾಕರಣ, ಛಂದಶಾಸ್ತ್ರ, ತತ್ವಶಾಸ್ತ್ರ ಮತ್ತು ಭಾಷಾಶಾಸ್ತ್ರ ಅಧ್ಯಯನದ ವಿಷಯಗಳು, ಕುಟುಂಬದಲ್ಲಿ ಕಲಿಸಲು ಸಾಧ್ಯವಾಗದೆ, ಬೋಧನೆಗಾಗಿ ಅರ್ಚಕರು ಮುಂದಾದರು. ಶಿಕ್ಷಕರು ತಮ್ಮ ಚಾರಿತ್ರ್ಯ ಮತ್ತು ವಿದ್ವತ್ತಿನಿಂದ ಸಮಾಜದಲ್ಲಿ ಗೌರವದ ಸ್ಥಾನ ಪಡೆದರು. ವಿದ್ಯಾರ್ಥಿಗಳಿಗೆ ಶುಲ್ಕ ನಿಗದಿಯಾಗಿರಲಿಲ್ಲ. ಅಭ್ಯಾಸದ ಕೊನೆಯಲ್ಲಿ ಪಾಲಕರು ಕೊಡುವ ಕಾಣಿಕೆಗಳಿಂದ ಸಂತೃಪ್ತಿ. ಇದರಿಂದ ಕಡುಬಡವನಿಗೆ ಶಿಕ್ಷಣದ ಸೌಲಭ್ಯ, ಒಬ್ಬ ಶಿಕ್ಷಕನಲ್ಲಿ ಹತ್ತುಹದಿನೈದು ವಿದ್ಯಾರ್ಥಿಗಳಿಗೆ ಮಾತ್ರ ಅವಕಾಶ. ಶಿಕ್ಷಕರ ಮನೆಯಲ್ಲಿಯೇ ಇವರ ವಾಸ. ಅವರ ಮನೆಯೇ ಶಾಲೆ. ಪ್ರತ್ಯೇಕ ಶಾಲಾ ಕಟ್ಟಡಗಳು ವಿರಳ. ವಿದ್ಯಾರ್ಥಿಗಳು ಬಿಡುವಿನ ಸಮಯದಲ್ಲಿ ಶಿಕ್ಷಕರ ಮನೆ ಅಥವಾ ಹೊಲದ ಕೆಲಸಗಳನ್ನು ಮಾಡಬೇಕಾಗುತ್ತಿತ್ತು. ಎರಡು ಅವಧಿಗಳಲ್ಲಿ (ಮುಂಜಾನೆ ಮತ್ತು ಮಧ್ಯಾಹ್ನ) ಬೋಧನೆ, ವೇದಗಳು ಸ್ವಪ್ರಕಟಿತವೆಂದು ನಂಬಿದ್ದರಿಂದ ಅವುಗಳಿಗೆ ಗೌರವ, ಶ್ಲೋಕಗಳನ್ನು ಕಂಠಸ್ಥಗೊಳಿಸುವುದಕ್ಕೆ ಹೆಚ್ಚಿನ ಸಮಯ, ಇವುಗಳ ಅರ್ಥವನ್ನು ತಿಳಿದಿರಬೇಕಾಗಿತ್ತು. ಹನ್ನೆರಡು ವರ್ಷಗಳು ವೇದಾಧ್ಯಯನ ಮತ್ತು ಅದಕ್ಕೆ ಸಂಬಂಧಿಸಿದ ಶಾಸ್ತ್ರೋಕ್ತ ವಿಧಿ ವಿಧಾನಗಳನ್ನು ಕಲಿಯುವುದಕ್ಕೆ. ಕ್ರಿ.ಪೂ. ೮೦೦ ರಷ್ಟೊತ್ತಿಗೆ ಮರದ ನುಣುಪಾದ ತೊಗಟೆಯ ಮೇಲೆ ಬರೆಯಲು ಪ್ರಾರಂಭ. ಸಾಮಾನ್ಯ ವಿದ್ಯಾರ್ಥಿಗಳಿಗೆ ಇದು ಸಾಧ್ಯವಿರಲಿಲ್ಲ. ಆದ್ದರಿಂದ ವಿಷಯಗಳನ್ನು ಕಂಠಸ್ಥ ಮಾಡುವುದು ಅವಶ್ಯಕವಾಗಿತ್ತು. ವೇದಗಳಲ್ಲದೆ ಇತರ ವಿಷಯಗಳ ಅಧ್ಯಯನ ಮಾಡುವವರು ವೇದಾಧ್ಯಯನಕ್ಕೆ ಎರಡು ಮೂರು ವರ್ಷ ಮೀಸಲಿಟ್ಟು ಎಂಟು ಅಥವಾ ಒಂಬತ್ತು ವರ್ಷ ಇತರ ವಿಷಯಗಳನ್ನು ಕಲಿಯುತ್ತಿದ್ದರು. ನ್ಯಾಯಶಾಸ್ತ್ರ, ಗಣಿತ, ಗಣೆಗಾರಿಕೆ, ಶಸ್ತ್ರ ಚಿಕಿತ್ಸೆ ಮತ್ತು ಖನಿಜಶಾಸ್ತ್ರಗಳೂ ಅಭ್ಯಾಸದ ವಿಷಯಗಳಾದವು. ಜ್ಞಾನದ ಮೇರೆಯು ವಿಸ್ತರಿಸಿ ಸೃಜನಶೀಲ ಜ್ಞಾನದ ಬೆಳವಣಿಗೆಗೆ ಒತ್ತು ಕೊಡಲಾಯಿತು. ಭಾರತೀಯ ಸಂಸ್ಕೃತಿ, ಸಾಹಿತ್ಯ, ಕಲೆ ಮತ್ತು ವಿಜ್ಞಾನದ ಅಭೂತಪೂರ್ವ ಬೆಳವಣಿಗೆಗೆ ಭದ್ರಬುನಾದಿಯನ್ನು ಹಾಕಲಾಯಿತು.

೩. **ಧರ್ಮಶಾಸ್ತ್ರಗಳ ಕಾಲ:** ಕ್ರಿ.ಪೂ. ೨೦೦ ರಿಂದ ಕ್ರಿ. ಶ. ೫೦೦ ರವರೆಗೆ, ಈ ಅವಧಿಯಲ್ಲಿ ಶಿಕ್ಷಣದ ಪರಿಕಲ್ಪನೆ ಮತ್ತು ಗುರಿಗಳು ಸ್ಪಷ್ಟ. ಶಿಕ್ಷಣದ ಕ್ರಮ ಮತ್ತು ಪಠ್ಯವಸ್ತು ಉಪನಿಷತ್ಕಾಲದಲ್ಲಿದ್ದಂತೆ ಮುಂದುವರಿಯಿತು. ಆದರೆ ಕ್ರಮಬದ್ಧತೆಗೆ ಒತ್ತುಕೊಟ್ಟು ಗುಣಮಟ್ಟವನ್ನು ಹೆಚ್ಚಿಸಲಾಯಿತು. ಆರು ವರ್ಷದವರಾದಾಗ ಪ್ರಾಥಮಿಕ ಮತ್ತು ಹತ್ತು ಅಥವಾ ಹನ್ನೊಂದು ವರ್ಷಕ್ಕೆ ಉನ್ನತ ಶಿಕ್ಷಣದ ಪ್ರಾರಂಭ. ಬಾಲ್ಯಾವಸ್ಥೆಯಿಂದಲೇ ಶಿಕ್ಷಣದ ಪ್ರಕ್ರಿಯೆ ಪ್ರಾರಂಭಿಸುವುದು. ಮಕ್ಕಳಿಗೆ ಶಿಕ್ಷೆಕೊಡುವ ಮತ್ತು ಮನವೊಲಿಸುವ ಪದ್ಧತಿ ಜಾರಿ. ದಿನಚರಿ ಮತ್ತು ಉತ್ತಮ ಚಟಗಳನ್ನು ರೂಢಿಸುವತ್ತ ಶಿಕ್ಷಕರ ಗಮನ. ಶಿಸ್ತಿನ

ನಿಯಮಗಳು ಜಾರಿ. ಉತ್ತಮ ಪರಿಸರದಲ್ಲಿ ಶಿಕ್ಷಣ ನೀಡುವುದಕ್ಕೆ ಆದ್ಯತೆ, ಗುರುಕುಲಗಳ ಪ್ರಾರಂಭ. ಹೆಚ್ಚು ವಿದ್ಯಾರ್ಥಿಗಳು ಸಮರ್ಥ ಗುರುಗಳ ಹತ್ತಿರ ಓದುವ ಅವಕಾಶ. ಹಿರೇಮಣಿ ಪದ್ಧತಿಯ ಪ್ರಾರಂಭ. ಬುದ್ಧಿವಂತ ಮಕ್ಕಳು ಕಿರಿಯ ತರಗತಿಯ ಮಕ್ಕಳಿಗೆ ಬೋಧಿಸುವುದು, ಮುಂದೆ ಇವರೇ ಶಿಕ್ಷಕರಾಗುವುದು. ಶಿಕ್ಷಕರಿಗಾಗಿ ಪ್ರತ್ಯೇಕ ತರಬೇತಿ ಸಂಸ್ಥೆಗಳ ಅಗತ್ಯವಿರಲಿಲ್ಲ. ಕಂಠಸ್ಥಗೊಳಿಸುವುದು, ವಿವರಣೆ ನೀಡುವುದು ಮತ್ತು ಚರ್ಚೆಗಳಲ್ಲಿ ಭಾಗವಹಿಸುವುದು ಬೋಧನಾ ವಿಧಾನವಾಗಿತ್ತು. ಲೇಖನ ಸಾಮಗ್ರಿಗಳಿಲ್ಲದ್ದರಿಂದ ತಾಡೋಲೆಯ ಮೇಲೆ ಬರೆಯುವುದು ವೆಚ್ಚದ ವಿಷಯವಾಗಿದ್ದರಿಂದ ಕಂಠಸ್ಥಗೊಳಿಸುವುದೇ ಪ್ರಧಾನ ವಿಧಾನವಾಗಿತ್ತು. ಹತ್ತು ಹದಿನೈದು ದಿನಗಳಲ್ಲಿ ಜಟಿಲ ವಿಷಯಗಳನ್ನು ಕಂಠಸ್ಥಗೊಳಿಸುತ್ತಿದ್ದ ವಿದ್ಯಾರ್ಥಿಗಳನ್ನು ನೋಡಿ ಚೀನಾದೇಶದ ಬೌದ್ಧಪ್ರವಾಸಿಯೊಬ್ಬ ಆಶ್ಚರ್ಯ ವ್ಯಕ್ತಪಡಿಸಿದ್ದಾನೆ. ಪರೀಕ್ಷಾಪದ್ಧತಿ ಜಾರಿಯಲ್ಲಿರಲಿಲ್ಲ. ಮೊದಲನೆಯ ಪಾಠವನ್ನು ಪರಿಪೂರ್ಣವಾಗಿ ಕಲಿತು ಪ್ರೌಢಿಮೆ ಸಾಧಿಸಿದ ಮೇಲೆಯೇ ಎರಡನೆಯ ಪಾಠ ಕಲಿಸುತ್ತಿದ್ದರು. ಮೌಲ್ಯಮಾಪನ ಸತತವಾಗಿಯೂ ಬೋಧನೆಯ ಅಂತರ್ಗತ ತತ್ವವಾಗಿರಬೇಕೆಂಬ ಜಗದ್ವ್ಯಾಪಿಯಾಗಿರುವ ನವೀನ ಕಲ್ಪನೆ ಹಿಂದೆಯೇ ಇದ್ದದ್ದು ವಿಸ್ಮಯಕಾರಿ. ಉದ್ಯೋಗಾರ್ಥಿಗಳಿಗೆ ತರಬೇತಿ ಕೊಡುವ ಪದ್ಧತಿ ಕುಶಲ ಕರ್ಮಿಗಳ ಹತ್ತಿರ ಇವರು ಕಲಿಯಲು ಬೇಕಾದ ಅವಧಿಗಿಂತ ಹೆಚ್ಚಿನ ಅವಧಿಗೆ ಕಲಿಯಲು ಅವರ ಮನೆಯಲ್ಲಿಯೇ ಇರುತ್ತಿದ್ದರು.

ಶಿಕ್ಷಕರೇ ಇವರ ಖರ್ಚನ್ನು ಭರಿಸುತ್ತಿದ್ದರು. ನಂತರ ತಾವು ಗಳಿಸಿದ ಆದಾಯದಿಂದ ಶಿಕ್ಷಕರು ಭರಿಸಿದ್ದ ಎಲ್ಲ ಖರ್ಚನ್ನು ಹಿಂದಿರುಗಿಸುತ್ತಿದ್ದರು. ಇದರಿಂದ ತರಬೇತಿಯ ಗುಣಮಟ್ಟ ಹೆಚ್ಚಿ ಪ್ರಖ್ಯಾತ ಕುಶಲಕರ್ಮಿಗಳ ಪಡೆ ಸಿದ್ಧವಾಯಿತು. ವಿಷಯಗಳ ವಿವಿಧ ಅಂಗಗಳಲ್ಲಿ ಪ್ರೌಢಿಮೆ ಪಡೆಯುವುದಕ್ಕಾಗಿ ಆಯಾಯ ತಜ್ಞರ ಹತ್ತಿರ ಶಿಕ್ಷಣ ಪಡೆಯುವ ಅವಕಾಶ. ತರ್ಕಸಮ್ಮತ ವಿಚಾರ, ಬೌದ್ಧಿಕ ದೃಷ್ಟಿಕೋನ ಮತ್ತು ಕ್ರಮಬದ್ಧವಾದ ಬೋಧನಾ ಪದ್ಧತಿಯಿಂದ ಅಭೂತಪೂರ್ವ ಸಾಧನೆ. ಆದರೆ ಮಹಿಳಾ ಶಿಕ್ಷಣಕ್ಕೆ ಹಿಂದೇಟು. ಅವರ ಮದುವೆಯ ವಯಸ್ಸನ್ನು ಹನ್ನೆರಡಕ್ಕೆ ಇಳಿಸಲಾಯಿತು.

೪. **ಪೌರಾಣಿಕ ಕಾಲ:-** ಕ್ರಿ.ಶ. ೫೦೦ ರಿಂದ ಕ್ರಿ.ಶ. ೧೨೦೦ರವರೆಗೆ. ಹಿಂದಿನ ಕಾಲದ ವಸ್ತುಸ್ಥಿತಿ ಮುಂದುವರಿಯಿತಾದರೂ ಮಹಿಳೆಯರ ಮದುವೆಯ ವಯಸ್ಸನ್ನು ಎಂಟಕ್ಕಿಳಿಸಿ ಅವರ ಶಿಕ್ಷಣಕ್ಕೆ ಅಡಚಣೆ, ಶ್ರೀಮಂತರ ಮತ್ತು ಸುಸಂಸ್ಕೃತ ಮನೆತನದ ಮಹಿಳೆಯರು ಮತ್ತು ಮನೆ ಮೇಷ್ಟ್ರುಗಳ ನೆರವಿನಿಂದ ಸಂಸ್ಕೃತ ಮತ್ತು ಲಲಿತ ಕಲೆಗಳ ಅಭ್ಯಾಸ ಮಾಡುತ್ತಿದ್ದರು. ಔದ್ಯೋಗಿಕ ಶಿಕ್ಷಣ ಕುಲಕಸುಬುಗಳ ತರಬೇತಿಗೆ ಗೌಣತೆ. ಕಸುಬುದಾರರನ್ನು ಕೆಳ ದರ್ಜೆಯವರೆಂದು ಕಾಣತೊಡಗಿದರು. ಸಾಹಿತ್ಯಕ ಮತ್ತು ಸಾಂಸ್ಕೃತಿಕ ಶಿಕ್ಷಣ ಮೇಲ್ದರ್ಜೆಯವರ ಸ್ವತ್ತಾಯಿತು. ಒಕ್ಕಲುತನಕ್ಕೂ ಹಿಂದೇಟು. ಮಾತೃಭಾಷೆಯನ್ನು ಕಡೆಗಣಿಸಿ, ಸಂಸ್ಕೃತ ಭಾಷಾ ಶಿಕ್ಷಣಮಾಧ್ಯಮವಾಯಿತು. ಐದನೆಯ ಶತಮಾನದ ಕೊನೆಯಲ್ಲಿ ಬೌದ್ಧ ಧರ್ಮದ ಪ್ರಭಾವದಿಂದಾಗಿ ಶಿಕ್ಷಣ ಸಂಸ್ಥೆಗಳ ಪ್ರಾರಂಭ. ಬೌದ್ಧವಿಹಾರಗಳಲ್ಲಿ ಹತ್ತು ವರ್ಷಗಳವರೆಗೆ ಪಾಲಿ ಮತ್ತು ಸಂಸ್ಕೃತ ಭಾಷೆಗಳಲ್ಲಿ ಪವಿತ್ರ ಗ್ರಂಥಗಳ ಅಧ್ಯಯನ, ಶೇಕಡಾ ಹತ್ತರಷ್ಟು ಬೌದ್ಧ ವಿಹಾರಗಳಲ್ಲಿ ಸಾಮಾನ್ಯ ವಿದ್ಯಾರ್ಥಿಗಳಿಗೆ ಶಿಕ್ಷಣ ಪಡೆಯುವ ಅವಕಾಶ . ಹಿಂದೂ ಧರ್ಮವೂ ಇವರಿಂದ ಪ್ರೇರಿತಗೊಂಡು ದೇವಾಲಯಗಳಲ್ಲಿ ಶಿಕ್ಷಣ ಕೇಂದ್ರಗಳನ್ನು ಸ್ಥಾಪಿಸಿತು. ಈ ವಿಶ್ವವಿದ್ಯಾಲಯಗಳಲ್ಲಿ ತತ್ವಶಾಸ್ತ್ರ, ನ್ಯಾಯಶಾಸ್ತ್ರ, ಸಾಹಿತ್ಯ, ಗಣಿತ, ಜ್ಯೋತಿಷ್ಯಶಾಸ್ತ್ರದ ಅಧ್ಯಯನ, ಉಚಿತ ಊಟ ಮತ್ತು ವಸತಿಯ ಸೌಲಭ್ಯ, ನಲಂದಾ ಮತ್ತು ವಿಕ್ರಮಶಿಲಾ ವಿಶ್ವವಿದ್ಯಾಲಯಗಳು ಅಂತಾರಾಷ್ಟ್ರೀಯ ಖ್ಯಾತಿ ಪಡೆದವು. ಬೌದ್ಧ ದೇಶ, ಮಧ್ಯ ಏಷಿಯಾ ಮತ್ತು ಪೂರ್ವದ ದೇಶಗಳಿಂದ ವಿದ್ಯಾರ್ಥಿಗಳು ಬರತೊಡಗಿದರು. ಇಲ್ಲಿಯವರು ಅಲ್ಲಿಗೆ ಹೋಗಿ ಭಾರತೀಯ ಸಂಸ್ಕೃತಿಯ ಪ್ರಚಾರ ಮಾಡಿದರು. ದುರ್ದೈವದಿಂದ ಶೈಕ್ಷಣಿಕ ಪದ್ಧತಿ ಮತ್ತು ದೃಷ್ಟಿಕೋನ ಬದಲಾಗಿ ಒಂದೇ ವಿಷಯದ ಬಗ್ಗೆ ಆಳವಾಗಿ ಅಭ್ಯಾಸಮಾಡಿ ವಿಶೇಷ ತಜ್ಞರಾಗುವ ಕಡೆ ಒಲವು. ಪ್ರಸಿದ್ಧ ಗಣಿತಜ್ಞರು, ಲಾಕ್ಷಣಿಕರು, ಅಲಂಕಾರಶಾಸ್ತ್ರಜ್ಞರು ಮತ್ತು ತಾರ್ಕಿಕರ ಸೃಷ್ಟಿಯಾಯಿತು. ಆದರೆ ಇವರಿಗೆ ಇತರ ಶಾಸ್ತ್ರಗಳ ಬಗ್ಗೆ ಏನೂ ತಿಳಿದಿರುತ್ತಿರಲಿಲ್ಲ.

ಹೊಸ ವಿಚಾರಕ್ಕೆ ಶಾಸ್ತ್ರಗಳಿಗೆ ವೈಚಾರಿಕ ನೆಲೆಗಟ್ಟಿನ ಮೇಲೆ ಒಪ್ಪಿಗೆ ಸಿಕ್ಕಲಿಲ್ಲ. ಬದಲಾಗಿ ಪವಿತ್ರಗ್ರಂಥಗಳ ಉಲ್ಲೇಖಾನುಸಾರ ಒಪ್ಪಿಗೆ ಅಥವಾ ನಿರಾಕರಣೆ. ಬ್ರಹ್ಮಗುಪ್ತನೆಂಬ ಜ್ಯೋತಿಷಿ ಗ್ರಹಗಳ ವೈಜ್ಞಾನಿಕ ವಿವರಣೆಯನ್ನು ನಿರಾಕರಿಸಿ ರಾಹು ಕೇತುಗಳೆಂಬ ರಾಕ್ಷಸರೇ ಇದಕ್ಕೆ ಕಾರಣವೆಂದು ಹಿಂದಿನದನ್ನು ಹೊಗಳುವುದು, ಹೊಸತನ್ನು ತೆಗಳುವುದಕ್ಕೆ ಪ್ರಾರಂಭ. ಕಲಿಯುಗ ಪಾಪಿಗಳ ಯುಗ. ಸಂಕುಚಿತತೆ, ಮೂಢ ನಂಬಿಕೆ ಮತ್ತು ಪೂರ್ವಗ್ರಹ ಪೀಡನೆಗೆ ದಾರಿ. ಪಾಶ್ಚಾತ್ಯ ದೇಶಗಳಲ್ಲಿ ಚರ್ಚುಗಳ ಹಿಡಿತದಿಂದಾಗಿ ಹೆಚ್ಚು ಕಡಿಮೆ ಇದೇ ಸ್ಥಿತಿ ಮುಂದುವರಿದಿತ್ತು. ಆದರೆ ಮುಂದೆ ಸಂಭವಿಸಿದ ಕ್ರಾಂತಿ, ಸುಧಾರಣೆಗಳಿಂದಾಗಿ ಆ ದೇಶಗಳು ಪ್ರಗತಿಪಥದಲ್ಲಿ ಮುನ್ನಡೆದವು. ಭಾರತ, ಅರಸೊತ್ತಿಗೆಗಳ ಕಾರಭಾರದಿಂದ ಮತ್ತು ಪರಕೀಯರ ಕಪಿಮುಷ್ಟಿಯಲ್ಲಿ ಸಿಕ್ಕಿದ್ದರಿಂದ ಸ್ಥಿತಿಯಲ್ಲಿ ಸುಧಾರಣೆಯನ್ನು ಕಾಣದೆ, ಬಹುಸಂಖ್ಯಾತ ಅನಕ್ಷರಸ್ಥರ ಬೀಡಾಯಿತು.

ಉಪಸಂಹಾರ:- ಪ್ರಾಚೀನ ಶಿಕ್ಷಣಪದ್ಧತಿಯಲ್ಲಿ ವ್ಯಕ್ತವಾಗುವ ಕೆಳಗೆ ನಮೂದಿಸಿದ ಉತ್ತಮಾಂಶಗಳನ್ನು ಈಗಿನ ಪರಿಸ್ಥಿತಿಗನುಗುಣವಾಗಿ ಸೂಕ್ತ ಮಾರ್ಪಾಟಿನೊಂದಿಗೆ ಇಂದಿನ ಶಿಕ್ಷಣಪದ್ಧತಿಯಲ್ಲಿ ಅಳವಡಿಸಬಹುದಾಗಿದೆ:

೧. ಶಿಕ್ಷಣಕ್ಕೆ ಕೊಟ್ಟ ವಿಶಾಲಾರ್ಥ.

೨. ಶಿಕ್ಷಣ ನೌಕರಿಗಾಗಿಯಲ್ಲ, ವ್ಯಕ್ತಿತ್ವ ವಿಕಾಸಕ್ಕೆ.

೩. ಸಚ್ಚಾರಿತ್ರ್ಯ ನಿರ್ಮಾಣದ ಗುರಿ.

೪. ನೈತಿಕ ಮತ್ತು ಧಾರ್ಮಿಕ ಹಿನ್ನೆಲೆ.

೫. ಪ್ರಾರ್ಥನೆಗೆ ಕೊಟ್ಟ ಮಹತ್ವ.

೬. ವಿದ್ಯಾರ್ಥಿಜೀವನದ ಸರಳತೆ.

೭. ಬ್ರಹ್ಮಚರ್ಯ, ಶಿಸ್ತು ಮತ್ತು ಬೌದ್ಧಿಕ ಸ್ವಾತಂತ್ರ್ಯಕ್ಕೆ ಕೊಟ್ಟ ಪ್ರಾಶಸ್ತ್ಯ.

೮. ಶುಲ್ಕರಹಿತ ಶಿಕ್ಷಣ.

೯. ಬಡವಿದ್ಯಾರ್ಥಿಗಳ ಮತ್ತು ಶಿಕ್ಷಕರ ಪೋಷಣೆ ಸಮಾಜದ ಹೊಣೆ.

೧೦. ನಿಕಟವಾಗಿದ್ದ ಗುರು-ಶಿಷ್ಯರ ಸಂಬಂಧ. ಒಬ್ಬ ಶಿಕ್ಷಕರಿಗೆ ಕಡಿಮೆ ವಿದ್ಯಾರ್ಥಿಗಳ ಹೊಣೆ.

೧೧. ಬೋಧನಾ ವಿಧಾನದಲ್ಲಿ ಕಂಠಸ್ಥಗೊಳಿಸುವಿಕೆಗೆ, ವಿವರಣೆಗೆ ಮತ್ತು ಚರ್ಚೆಗೆ ಕೊಟ್ಟ ಸ್ಥಾನ.

೧೨. ಹಿರೇಮಣಿ ಪದ್ಧತಿ.

೧೩. ಪರೀಕ್ಷೆಗಳಿಗೆ ಕೊಟ್ಟ ಗೌಣತೆ.

■■

ಪ್ರಶಿಕ್ಷಣದಲ್ಲಿ ಇತ್ತೀಚಿನ ಬೆಳವಣಿಗೆಗಳು

✍ ಪ್ರೊ. ಕೆ.ಹೆಚ್. ಉದ್ದಂಡಪ್ಪ

ಶಿಕ್ಷಣವನ್ನು ಇಂದಿನ ದಿನಗಳಲ್ಲಿ ಮಾನವನ ಮೂಲಭೂತ ಅವಶ್ಯಕತೆಗಳಲ್ಲಿ ಒಂದು ಎಂದು ಪರಿಗಣಿಸಲಾಗಿದೆ. ಏಕೆಂದರೆ ಶಿಕ್ಷಣದಿಂದ ಮಾತ್ರವೇ ವ್ಯಕ್ತಿಯ ಸರ್ವಾಂಗೀಣ ಬೆಳವಣಿಗೆ ಮತ್ತು ವಿಕಾಸ ಸಾಧ್ಯ. ತನ್ಮೂಲಕ ಒಂದು ಸಮಾಜದ ಅಥವಾ ರಾಷ್ಟ್ರದ ಅಭಿವೃದ್ಧಿಗೆ ಮೂಲಭೂತ ತಳಹದಿ ಎಂದು ಶಿಕ್ಷಣವು ರಾಷ್ಟ್ರದ ಅಭಿವೃದ್ಧಿಗೆ ಮೂಲಭೂತ ತಳಹದಿ ಎಂದು ಶಿಕ್ಷಣ ಆಯೋಗದ ಮುಖ್ಯಸ್ಥ ಡಾ. ಡಿ.ಎಸ್. ಕೊಠಾರಿಯವರು ತಮ್ಮ ವರದಿಯಲ್ಲಿ (೧೯೬೬) ಒತ್ತಿ ಹೇಳಿದ್ದಾರೆ. ಇದನ್ನು ಮನಗಂಡ ಎಲ್ಲಾ ರಾಷ್ಟ್ರಗಳೂ ಇಂದು ತಮ್ಮ ರಾಷ್ಟ್ರೀಯ ವರಮಾನದ ಬಹುತೇಕ ಪಾಲು ಹಣವನ್ನು ಶಿಕ್ಷಣದಲ್ಲಿ ತೊಡಗಿಸುತ್ತಿವೆ. ಭಾರತದೇಶವೂ ಸಹ ತನ್ನ ರಾಷ್ಟ್ರೀಯ ವರಮಾನದ ಶೇಕಡಾ ೬ ರಷ್ಟು ಹಣವನ್ನು ಶಿಕ್ಷಣಕ್ಕಾಗಿ ವಿನಿಯೋಗಿಸುತ್ತಿದೆ.

ಶಿಕ್ಷಣದ ವ್ಯವಸ್ಥೆಯನ್ನು ಸುಧಾರಿಸಲು ಹಲವಾರು ಕ್ರಮಗಳನ್ನು ನಮ್ಮ ರಾಷ್ಟ್ರೀಯ ಸರಕಾರ ಹಾಗೂ ರಾಜ್ಯ ಸರಕಾರಗಳು ಕೈಗೊಂಡಿದೆ. ಪಠ್ಯವಸ್ತುವಿನ ನವೀಕರಣ, ಶಾಲೆಗಳಿಗೆ ಮೂಲಭೂತ ಅವಶ್ಯಕತೆಗಳಾದ ಕೊಠಡಿಗಳು, ಆಟದ ಮೈದಾನ, ಪ್ರಯೋಗಾಲಯ ಮತ್ತು ವಾಚನಾಲಯಗಳು, ಬೋಧನಾ ಉಪಕರಣಗಳು ಇತ್ಯಾದಿಗಳನ್ನು ಒದಗಿಸುತ್ತಿವೆ ಮತ್ತು ಪರೀಕ್ಷಾ ಪದ್ಧತಿಯಲ್ಲಿ ಸೂಕ್ತ ಬದಲಾವಣೆಗಳನ್ನು ತರುವುದು ಮುಂತಾದುವನ್ನು ಸಮಯಕ್ಕೆ ಸರಿಯಾಗಿ ತ್ವರಿತಗತಿಯಲ್ಲಿ ನಿರ್ವಹಿಸುತ್ತಿವೆ. ಅಲ್ಲದೆ ಶಿಕ್ಷಣವನ್ನು ಸಾರ್ವತ್ರೀಕರಿಸಲು ಹಲವಾರು ಯೋಜನೆಗಳನ್ನು ಸಹ ಕೈಗೊಂಡಿವೆ. ಆದರೆ ಇವೆಲ್ಲವೂ ಪೂರ್ಣವಾಗಿ ಫಲ ಕೊಡಬೇಕಾದರೆ, ಮೇಲೆ ಹೇಳಿದ ಎಲ್ಲಾ ಅಂಶಗಳನ್ನು ಸರಿಯಾದ ಸಮಯದಲ್ಲಿ, ಸರಿಯಾದ ರೀತಿಯಲ್ಲಿ ಅಳವಡಿಸಿಕೊಂಡು, ಮಕ್ಕಳಿಗೆ ಶಾಲೆಗಳಲ್ಲಿ ಉತ್ತಮ ಶಿಕ್ಷಣವನ್ನು ನೀಡಲು ಬೇಕಾದ ಉತ್ತಮವಾದ ಹಾಗೂ ಸೂಕ್ತ ಅರ್ಹತೆ, ಸಾಮರ್ಥ್ಯಗಳನ್ನು ಹೊಂದಿದ ಶಿಕ್ಷಕ ಸಮುದಾಯದ ಮಹತ್ವವನ್ನು ಎಲ್ಲಾ ಆಯೋಗಗಳೂ ಒತ್ತಿ ಹೇಳಿರುವುದರ ಜೊತೆಗೆ ಶಿಕ್ಷಣಕ್ಷೇತ್ರಕ್ಕೆ ಸಂಬಂಧಿಸಿದವರೆಲ್ಲರೂ ಮನಗಂಡಿದ್ದಾರೆ. ಕೊಠಾರಿ ಆಯೋಗವು ತನ್ನ ವರದಿಯಲ್ಲಿ "ಭಾರತದ ಭವಿಷ್ಯವು ತರಗತಿಗಳಲ್ಲಿ ರೂಪಿತವಾಗುತ್ತದೆ" ಎಂದು ಹೇಳಿದರೆ, ೧೯೮೬ರಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯು "ಯಾವುದೇ ರಾಷ್ಟ್ರವು ತನ್ನಲ್ಲಿನ ಶಿಕ್ಷಕರ ಗುಣಮಟ್ಟಕ್ಕಿಂತ ಮೇಲೇರಲು ಸಾಧ್ಯವಿಲ್ಲ" ಎಂದು ಸಾರಿದೆ. ಇದು ಶಿಕ್ಷಕರ ಮಹತ್ವವನ್ನು ಒತ್ತಿಹೇಳುವುದೇ ಅಲ್ಲದೆ ಅದರ ಗುರುತರ ಜವಾಬ್ದಾರಿಯನ್ನು ಸಹ ಜ್ಞಾಪಿಸುತ್ತದೆ. ಆದ್ದರಿಂದ ಶಿಕ್ಷಣದಲ್ಲಿ ಸುಧಾರಣೆಗಳನ್ನು ತರುವುದರ ಜೊತೆಗೆ ಪ್ರಶಿಕ್ಷಣದಲ್ಲಿಯೂ (ಶಿಕ್ಷಕ ಶಿಕ್ಷಣ) ಹಲವಾರು ಸುಧಾರಣೆಗಳಾಗ ಬೇಕಾದುದು ಅತ್ಯಗತ್ಯ. ಅಂದರೆ ಪ್ರಶಿಕ್ಷಣ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಣ ಮಹಾವಿದ್ಯಾಲಯಗಳು, ತರಬೇತಿ ಸಂಸ್ಥೆಗಳು, ದೈಹಿಕಶಿಕ್ಷಣ ಮಹಾವಿದ್ಯಾಲಯಗಳು, ಪಠ್ಯ ರಚನೆ, ಪರೀಕ್ಷಾ ಪದ್ಧತಿ ಇತ್ಯಾದಿಗಳಲ್ಲಿಯೂ ಸೂಕ್ತ ಬದಲಾವಣೆಗಳು ಆಗಬೇಕಾಗುವುದು ಅತ್ಯವಶ್ಯ. ಈ ಹಿನ್ನೆಲೆಯಲ್ಲಿ ನಮ್ಮ ದೇಶದಲ್ಲಿ ಅದರಲ್ಲೂ ನಮ್ಮ ರಾಜ್ಯ ಕರ್ನಾಟಕದಲ್ಲಿ ಪ್ರಶಿಕ್ಷಣ ಕ್ಷೇತ್ರದಲ್ಲಿ ಆಗಿರುವ ಕೆಲವು ಬೆಳವಣಿಗೆಗಳನ್ನು ಓದುಗರಿಗೆ ಪರಿಚಯಿಸುವುದೇ ಈ ಲೇಖನದ ಉದ್ದೇಶ.

ಭಾರತದಲ್ಲಿ ಸುವ್ಯವಸ್ಥಿತವಾದ ಮತ್ತು ಕ್ರಮಬದ್ಧವಾದ ಪ್ರಶಿಕ್ಷಣ ಪದ್ಧತಿಯು ಜಾರಿಗೆ ಬಂದುದು ಬ್ರಿಟಿಷರ ಆಳ್ವಿಕೆಯಲ್ಲಿ. ಇದಕ್ಕೂ ಮೊದಲು ಶಿಕ್ಷಕರ ಅನೌಪಚಾರಿಕ ತರಬೇತಿಯು ಗುರುಕುಲಗಳಲ್ಲಿ, ಬೌದ್ಧ ಮಠಗಳಲ್ಲಿ, ವಿವಿಧ ಧಾರ್ಮಿಕ ಸಂಸ್ಥೆಗಳಲ್ಲಿ ನಡೆಯುತ್ತಿತ್ತು. ಹಿರಿಯ ವಿದ್ಯಾರ್ಥಿಗಳು ಗುರುಗಳ ಗೈರುಹಾಜರಿಯಲ್ಲಿ ಕಿರಿಯ ವಿದ್ಯಾರ್ಥಿಗಳಿಗೆ ಬೋಧಿಸುವ

ಮೂಲಕ ಕ್ರಮೇಣವಾಗಿ ಬೋಧನಾ ವಿಧಿ ವಿಧಾನಗಳನ್ನು ಅಭ್ಯಾಸಮಾಡಿ ಮುಂದೆ ಅವರೇ ಗುರುಗಳಾಗಿ ಏರ್ಪಡುತ್ತಿದ್ದರು. ಈ ಕಾರ್ಯಕ್ಕೆ ಯಾವುದೇ ರೀತಿಯ ಕಟ್ಟುನಿಟ್ಟಿನ ಹಾಗೂ ಕಠಿಣವಾದ ನಿಬಂಧನೆಗಳಿರಲಿಲ್ಲ. ಬೋಧನೆ ಮಾಡುವುದು ಕಲಿತ ವ್ಯಕ್ತಿಯ ಒಂದು ಆದ್ಯಕರ್ತವ್ಯವೆಂದು ಪರಿಗಣಿಸಲಾಗಿತ್ತು. ಇದು ಒಂದು ರೀತಿಯಲ್ಲಿ 'ಗುರುಋಣ'ವನ್ನು ತೀರಿಸುವ ಮಹತ್ಕಾರ್ಯವೂ ಆಗಿತ್ತು. ಇದರಲ್ಲಿ ಸಂಪಾದನೆ ಪೂರ್ಣವಾಗಿ ಗೌಣವಾಗಿದ್ದು ಸೇವೆಯೇ ಪ್ರಧಾನವಾಗಿತ್ತು. ಇದು ಒಂದು ಧರ್ಮಕಾರ್ಯವೂ ಸಹ ಆಗಿತ್ತು.

ಬ್ರಿಟಿಷರ ಆಳ್ವಿಕೆಯಲ್ಲಿ ರೂಢಿಗೆ ಬಂದ ಪ್ರಶಿಕ್ಷಣ ಪದ್ಧತಿಯು ಸಂಪೂರ್ಣವಾಗಿ ಅವರ ದೇಶದ ಮಾದರಿಯಲ್ಲೇ ಜಾರಿಗೆ ಬಂದು ಬೆಳೆದಿರುವುದು ಇಂದಿಗೂ ಸಹ ಬಹುತೇಕ ಆಚರಣೆಯಲ್ಲಿದೆ. ಪೂರ್ವ ಪ್ರಾಥಮಿಕ, ಪ್ರಾಥಮಿಕ ಹಾಗೂ ಉನ್ನತ ಶಿಕ್ಷಣದ ಮಟ್ಟದ ಶಿಕ್ಷಕ ತರಬೇತಿ ಸಂಸ್ಥೆಗಳು, ಬಹುತೇಕ ಇಂಗ್ಲೆಂಡಿನ ಮಾದರಿಯಲ್ಲೇ ನಡೆಯುತ್ತಿರುವುದು ಒಂದು ದುರದೃಷ್ಟಕರ ಸಂಗತಿ. ಅದ್ಯಾಗ್ಯೂ ಭಾರತೀಯ ಶಿಕ್ಷಣಕ್ಷೇತ್ರದಲ್ಲಿ ಛಾಪು ಮೂಡಿಸಿದ ಅನೇಕ ದಾರ್ಶನಿಕರ, ಚಿಂತಕರ ಹಾಗೂ ಅನುಭವಿಗಳ ಚಿಂತನೆ ಮತ್ತು ತತ್ವಗಳನ್ನು ಅಲ್ಲಲ್ಲಿ ಅಳವಡಿಸಿಕೊಂಡು ಪ್ರಾಯೋಗಿಕವಾಗಿ ಆಚರಣೆಗೆ ತಂದ ಅನೇಕ ದೃಷ್ಟಾಂತಗಳೂ ಸಹ ಇಲ್ಲದಿಲ್ಲ. ಉದಾಹರಣೆಗಾಗಿ, ಗಾಂಧೀಜಿಯವರ ಮೂಲಶಿಕ್ಷಣದ ಪದ್ಧತಿಗಳು, ರವೀಂದ್ರನಾಥ ಟ್ಯಾಗೋರರ ಪ್ರಕೃತಿ ಮಡಿಲಲ್ಲಿ ಶಿಕ್ಷಣಪದ್ಧತಿ, ಸ್ವಾಮಿ ವಿವೇಕಾನಂದ ಹಾಗೂ ಶ್ರೀ ಅರವಿಂದರ ಆದರ್ಶನೀತಿಯ ಶಿಕ್ಷಣ ಮುಖ್ಯವಾದವು. ಸ್ವಾತಂತ್ರ್ಯಾನಂತರದ ಭಾರತದಲ್ಲಿ ಅನೇಕ ಬೆಳವಣಿಗೆಗಳು ಶಿಕ್ಷಣ ಹಾಗೂ ಪ್ರಶಿಕ್ಷಣ ಕ್ಷೇತ್ರಗಳಲ್ಲಿ ನಡೆದಿವೆ. ಇವೆಲ್ಲವನ್ನು ಪ್ರಸ್ತಾಪಿಸುವುದು ಈ ಕಿರುಲೇಖನದಲ್ಲಿ ಸಾಧ್ಯವಾಗುವುದಿಲ್ಲವಾದ್ದರಿಂದ ಕೆಲವನ್ನು ಮಾತ್ರ ಪರಿಚಯಿಸಲಾಗಿದೆ.

೧. ಶಿಕ್ಷಣ ಆಯೋಗಗಳ ವರದಿಗಳು

ಸ್ವತಂತ್ರ ಭಾರತ ಸರಕಾರವು ರಾಷ್ಟ್ರವು ಶಿಕ್ಷಣದ ವಿವಿಧ ಹಂತಗಳಲ್ಲಿ ಸೂಕ್ತ ಬದಲಾವಣೆಗಳನ್ನು ಜಾರಿಗೆ ತರಲು ಉದ್ದೇಶಿಸಿ, ಹಲವಾರು ಸಲಹೆಗಳನ್ನು ಕೊಡಲು ಹಲವು ಶಿಕ್ಷಣ ಆಯೋಗಗಳನ್ನು ಕಾಲಕಾಲಕ್ಕೆ ರಚಿಸಿದೆ. ಅವುಗಳಲ್ಲಿ ಮುಖ್ಯವಾದುವೆಂದರ-

i. ವಿಶ್ವವಿದ್ಯಾಲಯ ಶಿಕ್ಷಣ ಆಯೋಗ (೧೯೪೮) ಡಾ. ಎಸ್. ರಾಧಾಕೃಷ್ಣನ್‌ರವರ ಅಧ್ಯಕ್ಷತೆಯಲ್ಲಿ.

ii. ಮಾಧ್ಯಮಿಕ ಶಿಕ್ಷಣ ಆಯೋಗ (೧೯೫೨) ಡಾ. ಲಕ್ಷ್ಮಣಸ್ವಾಮಿ ಮೊದಲಿಯಾರ್‌ರವರ ಅಧ್ಯಕ್ಷತೆಯಲ್ಲಿ.

iii. ಭಾರತ ಶಿಕ್ಷಣ ಆಯೋಗ (೧೯೬೪-೬೬) ಡಾ. ಡಿ.ಎಸ್. ಕೊಠಾರಿಯವರ ಅಧ್ಯಕ್ಷತೆಯಲ್ಲಿ.

iv. ರಾಷ್ಟ್ರೀಯ ಶಿಕ್ಷಣ ನೀತಿ (೧೯೮೬)ಯ ಘೋಷಣೆಯಾದದ್ದು.

v. ರಾಷ್ಟ್ರೀಯ ಶಿಕ್ಷಣ ನೀತಿಯ ಅನುಬಂಧವಾಗಿ ಬಂದ ಕ್ರಿಯಾತ್ಮಕ ಕಾರ್ಯಸೂಚಿ (೧೯೮೭).

ಇವೆಲ್ಲವೂ ಅನೇಕ ರೀತಿಯ ಮಹತ್ತರ ಸಲಹೆಗಳನ್ನು ನೀಡಿವೆ. ಬಹುತೇಕ ಶಿಫಾರಸ್ಸುಗಳನ್ನು ಆಚರಣೆಗೆ ತರಲಾಗಿದೆ. ಒಂದು ಮಹತ್ವದ ಬೆಳವಣಿಗೆ ಎಂದರೆ ಶಿಕ್ಷಣ ಮಸೂದೆಯನ್ನು ಮೊದಲ ಬಾರಿಗೆ ಸಂಸತ್ತಿನಲ್ಲಿ ಮಂಡಿಸಿ ಅದನ್ನು ಕಾಯಿದೆಯ ರೂಪದಲ್ಲಿ ಜಾರಿಗೆ ತಂದುದು. ಇದು ಭಾರತೀಯ ಶಿಕ್ಷಣದ ಇತಿಹಾಸದಲ್ಲೇ ಒಂದು ಮೈಲಿಗಲ್ಲು.

೨. ಪ್ರಶಿಕ್ಷಣ ಸಂಸ್ಥೆಗಳಿಗೆ ಧನಸಹಾಯ ನೀತಿ

ದೇಶದ ಎಲ್ಲಾ ಹಂತದ ಶಿಕ್ಷಕರ ಬೃಹದ್ ದಂಡನ್ನು ತರಬೇತುಗೊಳಿಸಲು ಸಹಸ್ರಾರು ಪ್ರಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿರುವುದು ಗೊತ್ತಿರುವ ವಿಷಯ. ಶಾಲಾಪೂರ್ವ ಹಂತದಲ್ಲಿ ಪೂರ್ವ ಪ್ರಾಥಮಿಕ ಶಿಕ್ಷಕರ ತರಬೇತಿ ಸಂಸ್ಥೆಗಳು ಪ್ರಾಥಮಿಕ ಹಂತದಲ್ಲಿ ಪ್ರಾಥಮಿಕ ಶಿಕ್ಷಕರ ತರಬೇತಿ ಸಂಸ್ಥೆಗಳು, ಪ್ರೌಢ ಹಂತದಲ್ಲಿ ಶಿಕ್ಷಣ ಮಹಾವಿದ್ಯಾಲಯಗಳು.

ಉನ್ನತ ಹಂತದಲ್ಲಿ ವಿಶ್ವವಿದ್ಯಾಲಯ ಶಿಕ್ಷಣ ವಿಭಾಗಗಳು ಮುಂತಾದ ಸಂಸ್ಥೆಗಳು ಸ್ಥಾಪಿತವಾಗಿವೆ. ಈ ಎಲ್ಲಾ ಸೇವಾ ಪೂರ್ವ ಪ್ರಶಿಕ್ಷಣ ಸಂಸ್ಥೆಗಳ ಸ್ಥಾಪನೆ, ಆಡಳಿತ, ಇತ್ಯಾದಿಗಳನ್ನು ನಿಭಾಯಿಸುವುದು ಸರ್ಕಾರದ ವತಿಯಿಂದ ಕಷ್ಟಸಾಧ್ಯವೆಂದರಿತ ಸರಕಾರವು ಖಾಸಗಿ ಸಂಸ್ಥೆಗಳಿಗೆ ಉತ್ತೇಜನ ನೀಡಿ ಧನಸಹಾಯವನ್ನು ಮಾಡುವ ಪದ್ಧತಿಯನ್ನು ಜಾರಿಗೆ ತಂದಿದೆ. ಈಗ ಸರಕಾರಿ, ಖಾಸಗಿ ಅನುದಾನಿತ ಹಾಗೂ ಖಾಸಗಿ ಅನುದಾನ ರಹಿತ ಪ್ರಶಿಕ್ಷಣ ಸಂಸ್ಥೆಗಳು ಕರ್ನಾಟಕವನ್ನೊಳಗೊಂಡಂತೆ ದೇಶದಾದ್ಯಂತ ಕಾರ್ಯ ನಿರ್ವಹಿಸುತ್ತಿವೆ.

೩. ಬೋಧನಾ ಸುಧಾರಣೆಗೆ ಕಾರ್ಯಕ್ರಮಗಳು

ವಿವಿಧ ಹಂತದ ಶಾಲೆಗಳಲ್ಲಿ ಕಾರ್ಯನಿರತವಾಗಿರುವ ಶಿಕ್ಷಕರುಗಳಿಗೆ ಕಾಲಕಾಲಕ್ಕೆ ಸೂಕ್ತವಾದ ಪುನಶ್ಚೇತನಗೊಳಿಸುವ ಸೇವಾನಿರತ ತರಬೇತಿಯನ್ನು ನೀಡಲು ಹಲವಾರು ಸೇವಾನಿರತ ತರಬೇತಿ ಸಂಸ್ಥೆಗಳನ್ನು ತೆರೆಯಲಾಗಿದೆ. ಉದಾಹರಣೆಗಾಗಿ ಪ್ರಾಥಮಿಕ ಹಂತದಲ್ಲಿ ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆಗಳು, ಸಂಪನ್ಮೂಲ ಕೇಂದ್ರಗಳು ಹಾಗೂ ಗುಚ್ಛ ಸಂಪನ್ಮೂಲಕೇಂದ್ರಗಳು ಇತ್ಯಾದಿ. ಪ್ರೌಢ ಹಂತದಲ್ಲಿ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯಗಳು ಹಾಗೂ ಶಿಕ್ಷಣ ಉನ್ನತ ಅಧ್ಯಯನ ಸಂಸ್ಥೆಗಳು, ವಿಶ್ವವಿದ್ಯಾಲಯ ಹಂತದಲ್ಲಿ ಶೈಕ್ಷಣಿಕ ಸಿಬ್ಬಂದಿ ತರಬೇತಿ ಮಹಾವಿದ್ಯಾಲಯಗಳು ಮುಖ್ಯವಾದುವು. ಇವೆಲ್ಲವೂ ಹಲವು ಬಗೆಯ ಕಾರ್ಯಾಗಾರಗಳು, ಪುನಶ್ಚೇತನ ಶಿಬಿರಗಳು, ಉಪನ್ಯಾಸಗಳು, ಅಧ್ಯಯನ ಕೇಂದ್ರಗಳು, ಶೈಕ್ಷಣಿಕ ಯೋಜನೆಗಳು ಇತ್ಯಾದಿಗಳನ್ನು ಹಮ್ಮಿಕೊಳ್ಳುತ್ತವೆ. ಇತ್ತೀಚೆಗೆ ವಿದ್ಯುನ್ಮಾನ ಮಾಧ್ಯಮದ ಬಳಕೆಗೆ ಹೆಚ್ಚು ಒತ್ತು ಕೊಡಲಾಗಿದೆ.

೪. ಶಿಕ್ಷಕ-ವಿದ್ಯಾರ್ಥಿಗಳ ದಾಖಲಾತಿ

ಸ್ವಲ್ಪಕಾಲದ ಹಿಂದೆ, ಕರ್ನಾಟಕ ರಾಜ್ಯದಲ್ಲಿ ಪ್ರಶಿಕ್ಷಣ ಸಂಸ್ಥೆಗಳು ತಮ್ಮ ವಿದ್ಯಾರ್ಥಿಗಳನ್ನು ತಾವೇ ಆರಿಸಿ ದಾಖಲಾತಿ ಮಾಡುತ್ತಿದ್ದವು. ಇದರಲ್ಲಿನ ಹಲವಾರು ದೋಷಗಳನ್ನು ಮನಗಂಡ ಸರಕಾರವು ೧೯೯೫ ರಿಂದೀಚೆಗೆ ದಾಖಲಾತಿ ಪ್ರಕ್ರಿಯೆಯನ್ನು ತಾನೇ ವಹಿಸಿಕೊಂಡು ಪ್ರವೇಶ ಪರೀಕ್ಷೆಯ ಮೂಲಕ ವಿದ್ಯಾರ್ಥಿಗಳನ್ನು ಆರಿಸಿ ವಿವಿಧ ಕಾಲೇಜುಗಳು ಮಾತ್ರ ತರಬೇತಿ ಸಂಸ್ಥೆಗಳಿಗೆ ವಿದ್ಯಾರ್ಥಿಗಳ ಕೋರಿಕೆಯ ಮೇರೆಗೆ ಹಂಚುವುದರ ಮೂಲಕ ಸ್ವಲ್ಪಮಟ್ಟಿಗೆ ವ್ಯಾಪಾರೀಕರಣಕ್ಕೆ ತಡೆಹಾಕಿದೆ. ವಿದ್ಯಾರ್ಥಿಗಳು ಕೊಡಬೇಕಾದ ವಾರ್ಷಿಕ ಶುಲ್ಕಗಳನ್ನು ಸಹ ಸರಕಾರವೇ ನಿಗದಿಪಡಿಸಿದೆ. ಈ ಎಲ್ಲಾ ಕಾರ್ಯಗಳನ್ನು ನಿಭಾಯಿಸಲು ರಾಜ್ಯಮಟ್ಟದಲ್ಲಿ "ಕೇಂದ್ರೀಕೃತ ದಾಖಲಾತಿ ಘಟಕ"ವನ್ನು ಬೆಂಗಳೂರಿನಲ್ಲಿ ಸ್ಥಾಪಿಸಲಾಗಿದೆ. ಇದೂ ಸಹ ಒಂದು ಮೈಲಿಗಲ್ಲೆನ್ನಬಹುದು.

೫. ಪಠ್ಯ ಮತ್ತು ಪರೀಕ್ಷಾ ಪದ್ಧತಿ

ಪೂರ್ವ ಪ್ರಾಥಮಿಕ ಮತ್ತು ಪ್ರಾಥಮಿಕ ಹಂತದ ಶಿಕ್ಷಕ ತರಬೇತಿ ಸಂಸ್ಥೆಗಳಿಗೆ ಸಂಬಂಧಿಸಿದಂತೆ ರಾಜ್ಯಸರಕಾರವೇ ಪಠ್ಯವನ್ನು ನಿಗದಿಪಡಿಸುವ ಹಾಗೂ ಪರೀಕ್ಷೆಗಳನ್ನು ನಡೆಸುವ ಹೊಣೆಗಾರಿಕೆಯನ್ನು ನಿಭಾಯಿಸುತ್ತಿದೆ. ಸರಕಾರದ ಅಂಗಸಂಸ್ಥೆಗಳಾದ ರಾಜ್ಯಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ ಮತ್ತು ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಗಳು ಅನುಕ್ರಮವಾಗಿ ಪಠ್ಯವಸ್ತು ತಯಾರಿಕೆ ಮತ್ತು ಪರೀಕ್ಷೆಗಳನ್ನು ನಡೆಸುವ ಸಂಸ್ಥೆಗಳಾಗಿವೆ.

ಪ್ರೌಢಶಿಕ್ಷಣ ಮಟ್ಟದ ಪ್ರಶಿಕ್ಷಕ ಸಂಸ್ಥೆಗಳಲ್ಲಿ ಅಭ್ಯಾಸ ಮಾಡಬೇಕಾದ ಪಠ್ಯವಸ್ತು ರಚನೆ ಮತ್ತು ಪರೀಕ್ಷೆಗಳನ್ನು ನಡೆಸುವ ಕಾರ್ಯವನ್ನು ರಾಜ್ಯದ ಆರು ವಿಶ್ವವಿದ್ಯಾಲಯಗಳು ನಿರ್ವಹಿಸುತ್ತಿವೆ. ಇತೀಚೆಗೆ ಎಲ್ಲಾ ವಿಶ್ವವಿದ್ಯಾಲಯಗಳು ಏಕರೀತಿಯ ಪಠ್ಯವಸ್ತು ಹಾಗೂ ಪರೀಕ್ಷಾ ವಿಧಾನಗಳನ್ನು ನಡೆಸುವ ಪದ್ಧತಿಯನ್ನು ಜಾರಿಗೊಳಿಸಲು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಇವುಗಳ ಜೊತೆಗೆ ಕರ್ನಾಟಕರಾಜ್ಯ ಮುಕ್ತ ವಿಶ್ವಾವಿದ್ಯಾಲಯ ಮತ್ತು ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯಗಳೂ ಸಹ ಪ್ರೌಢಶಾಲಾ ಶಿಕ್ಷಕರ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ.

೬. ಪ್ರಶಿಕ್ಷಣ ಸಂಸ್ಥೆಗಳ ನಿರ್ವಹಣೆ ಹಾಗೂ ನಿಯಂತ್ರಣ.

ಕರ್ನಾಟಕ ರಾಜ್ಯದ ಎಲ್ಲಾ ಹಂತಗಳ ಪ್ರಶಿಕ್ಷಣ ಸಂಸ್ಥೆಗಳ ನಿರ್ವಹಣೆ, ಆಡಳಿತ ಹಾಗೂ ನಿಯಂತ್ರಣ ಇತ್ಯಾದಿ ಕಾರ್ಯಗಳನ್ನು ನಿರ್ವಹಿಸಲು ಸರಕಾರವು ಮುಖ್ಯವಾಗಿ ಮೂರು ಸಂಸ್ಥೆಗಳಿಗೆ ಅಧಿಕಾರವನ್ನು ಕೊಟ್ಟಿದೆ. ಮೊದಲನೆಯದಾಗಿ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಯ ಪೂರ್ವಪ್ರಾಥಮಿಕ ಮತ್ತು ಪ್ರಾಥಮಿಕ ಹಂತದ ತರಬೇತಿ ಸಂಸ್ಥೆಗಳ ಸೇವಾ ಪೂರ್ವ ಹಾಗೂ ಸೇವಾನಿರತ ತರಬೇತಿ ಕಾರ್ಯಕ್ರಮಗಳನ್ನು ನಿರ್ವಹಿಸುತ್ತಿದೆ. ೨೦೦೩ರಿಂದ ಪ್ರಾಥಮಿಕ ಶಿಕ್ಷಕ ತರಬೇತಿಯ ಶೀರ್ಷಿಕೆಯನ್ನು 'ಟಿ.ಸಿ.ಹೆಚ್' ಎನ್ನುವುದರ ಬದುಲು 'ಡಿಪ್ಲೊಮಾ ಇನ್ ಎಜುಕೇಷನ್' ಎಂಬ ಹೊಸ ಪದನಾಮವನ್ನು ಕೊಟ್ಟಿದೆ. ಇದನ್ನು ರಾಷ್ಟ್ರೀಯ ಶಿಕ್ಷಣ ನೀತಿಗೆ ಅನುಸಾರವಾಗಿ ಮಾಡಲಾಗಿದೆ.

ಪ್ರೌಢ ಹಂತದ ಪ್ರಶಿಕ್ಷಣ ಸಂಸ್ಥೆಗಳ ನಿರ್ವಹಣೆ, ಆಡಳಿತ ಹಾಗೂ ನಿಯಂತ್ರಣ ವಿಷಯಗಳ ಉಸ್ತುವಾರಿಯನ್ನು ರಾಜ್ಯಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಯು ಭಾಗಶಃವಾಗಿಯೂ, ವಿವಿಧ ವಿಶ್ವವಿದ್ಯಾಲಯಗಳು ಭಾಗಶಃವಾಗಿಯೂ ನಿರ್ವಹಿಸುತ್ತಿವೆ. ರಾಜ್ಯ ಸರಕಾರದ ಶಿಕ್ಷಣ ಇಲಾಖೆಯು ಉನ್ನತ ಮಟ್ಟದ ಆಡಳಿತಾತ್ಮಕ ಹಾಗೂ ರೀತಿನೀತಿಗಳನ್ನು ರೂಪಿಸುವ ಸಂಸ್ಥೆಯಾಗಿದೆ.

ಶಿಕ್ಷಕರ ತರಬೇತಿ ಕಾರ್ಯಕ್ರಮವು ರಾಷ್ಟ್ರವ್ಯಾಪಿಯಾಗಿರುವುದರಿಂದ ಹಾಗೂ ಶಿಕ್ಷಣದ ಆಡಳಿತದ ಹೊಣೆಗಾರಿಕೆಯು ಕೇಂದ್ರ ಮತ್ತು ರಾಜ್ಯಸರ್ಕಾರಗಳೆರಡರ ವ್ಯಾಪ್ತಿಗೆ ಬರುವುದರಿಂದ ರಾಷ್ಟ್ರಮಟ್ಟದಲ್ಲಿ ಪ್ರಶಿಕ್ಷಣ ಸಂಸ್ಥೆಗಳನ್ನು ನಿಯಂತ್ರಿಸುವ ಸಂಸ್ಥೆಯೊಂದನ್ನು ಇತ್ತೀಚೆಗೆ ಸ್ಥಾಪಿಸಲಾಗಿದೆ. ಇದೇ "ರಾಷ್ಟ್ರೀಯ ಪ್ರಶಿಕ್ಷಣ ಪರಿಷತ್ತು". ಈ ಸಂಸ್ಥೆಯು ೧೯೯೩ರಲ್ಲಿ ಅಸ್ತಿತ್ವಕ್ಕೆ ಬಂತು. ಇದು ಸಂಸತ್ತಿನ ಅಂಗೀಕಾರ ಪಡೆದ ಕಾಯಿದೆ ತಳಹದಿ ಮೇರೆಗೆ ಸ್ಥಾಪಿಸಲ್ಪಟ್ಟ ಸಂಸ್ಥೆಯಾಗಿದೆ. ಆದ್ದರಿಂದಲೇ ಈ ಸಂಸ್ಥೆಗೆ ಹೆಚ್ಚು ಮಹತ್ವವನ್ನು ಮತ್ತು ಅಧಿಕಾರವನ್ನು ನೀಡಲಾಗಿದೆ. ಆ ಸಂಸ್ಥೆಯ ಮುಖ್ಯ ಉದ್ದೇಶವೆಂದರೆ ದೇಶಾದ್ಯಂತ ಪ್ರಶಿಕ್ಷಣವನ್ನು ಒಂದು ಯೋಜನೆಯ ತಳಹದಿಯ ಮೇಲೆ ಸಂಯೋಜನಾತ್ಮಕ ಬೆಳವಣಿಗೆಯ ಪ್ರಕ್ರಿಯೆಯನ್ನಾಗಿ ಮಾಡುವುದು. ಆಗಿನ ಒಂದೆರಡು ದಶಕಗಳಲ್ಲಿ ದೇಶಾದ್ಯಂತ ನಾಯಿಕೊಡೆಗಳಂತೆ ತಲೆ ಎತ್ತಿದ ಸಾವಿರಾರು ಕಳಪೆ ಪ್ರಶಿಕ್ಷಣ ಸಂಸ್ಥೆಗಳನ್ನು ನಿಯಂತ್ರಿಸಿ ಶಿಕ್ಷಕ ತರಬೇತಿಯನ್ನು ಗುಣಾತ್ಮಕವಾಗಿ ಮಾರ್ಪಡಿಸುವುದು. ಅಲ್ಲದೆ ಖಾಸಗಿ ಪ್ರಶಿಕ್ಷಣ ಸಂಸ್ಥೆಗಳಲ್ಲಿ ತಾಂಡವವಾಡುತ್ತಿದ್ದ ವ್ಯಾಪಾರೀಕರಣವನ್ನು ತಡೆಗಟ್ಟುವುದು ಇದರ ತ್ವರಿತ ಕಾರ್ಯಗಳಾಗಿದ್ದವು. ಹಿಂದಿನ ಪರಿಸ್ಥಿತಿಯಲ್ಲಿ ಪ್ರಶಿಕ್ಷಣವು ತುಂಬಾ ಶೋಚನೀಯ ಪರಿಸ್ಥಿತಿಯಲ್ಲಿತ್ತು ಎಂದರೆ ತಪ್ಪಾಗಲಾರದು. ಬಹುತೇಕ ಖಾಸಗಿ ಪ್ರಶಿಕ್ಷಣ ಸಂಸ್ಥೆಗಳಲ್ಲಿ ಹಾಗೂ ಕೆಲವು ವಿಶ್ವ ವಿದ್ಯಾಲಯಗಳಲ್ಲಿಯೂ ಸಹ ಯಾವುದೇ ಮೂಲಭೂತ ಸೌಲಭ್ಯಗಳಿಲ್ಲದ ಹಾಗೂ ಸೂಕ್ತ ಅರ್ಹತೆ ಮತ್ತು ಸಾಮರ್ಥ್ಯಗಳನ್ನು ಹೊಂದಿರದ ಶಿಕ್ಷಕರಿಲ್ಲದ ಸಂಸ್ಥೆಗಳಲ್ಲಿ ಬಹಳ ಕಳಪೆಯ ಶಿಕ್ಷಕ ತರಬೇತಿಯನ್ನು ನೀಡಲಾಗುತ್ತಿತ್ತು. ಇದು ಯಾವ ಮಟ್ಟಕ್ಕೆ ಹೋಗಿತ್ತೆಂದರೆ 'ಹಣ ಕೊಟ್ಟು ಡಿಗ್ರಿ ಪಡೆ' ಎನ್ನುವ ಪರಿಸ್ಥಿತಿಯನ್ನು ಮುಟ್ಟಿತ್ತು. ಇಂತಹ ಪರಿಸ್ಥಿತಿಯಲ್ಲಿ 'ರಾಷ್ಟ್ರೀಯ ಪ್ರಶಿಕ್ಷಣ ಪರಿಷತ್ತು' ಒಂದು ವರದಾನವಾಗಿದೆ. ಇದೊಂದು ಮಹತ್ತರ ಬೆಳವಣಿಗೆಯೆಂದೇ ಪರಿಗಣಿಸಲಾಗಿದೆ.

ಇದರ ಕೇಂದ್ರ ಕಛೇರಿಯು ನವದೆಹಲಿಯಲ್ಲಿದ್ದು, ಆಡಳಿತಕ್ಕಾಗಿ ನಾಲ್ಕು ಪ್ರಾಂತೀಯ ಸಮಿತಿಗಳನ್ನು ಕಾನೂನು ಬದ್ಧವಾಗಿ ಸ್ಥಾಪಿಸಲಾಗಿದೆ. ಪ್ರಸ್ತುತ ದಕ್ಷಿಣವಲಯ ಕಛೇರಿಯು ಬೆಂಗಳೂರಿನಲ್ಲಿದೆ.

ಇದರ ವ್ಯಾಪ್ತಿಗೆ ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು, ಕೇರಳ ರಾಜ್ಯಗಳೇ ಅಲ್ಲದೆ ಕೇಂದ್ರಾಡಳಿತ ಪ್ರದೇಶಗಳಾದ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು, ಪಾಂಡಿಚೆರಿ ಮತ್ತು ಲಕ್ಷದ್ವೀಪಗಳು ಸೇರಿವೆ. ಪ್ರಶಿಕ್ಷಣದಲ್ಲಿ ಗುಣಮಟ್ಟವನ್ನು ಕಾಪಾಡಲು ಎಲ್ಲಾ ಹಂತಗಳ ಪ್ರಶಿಕ್ಷಣ ಸಂಸ್ಥೆಗಳಿಗೆ ಖಡ್ಡಾಯವಾಗಿ ಪಾಲಿಸಲೇಬೇಕಾದ ಹಲವು ಮಾನದಂಡಗಳನ್ನು ಇದು ಜಾರಿಗೆ ತಂದಿದೆ. ಪ್ರಶಿಕ್ಷಣ ಸಂಸ್ಥೆಗಳಲ್ಲಿರಬೇಕಾದ ಮೂಲಭೂತ ಸೌಲಭ್ಯಗಳು, ವಿದ್ಯಾರ್ಥಿಗಳ ದಾಖಲಾತಿ, ಬೋಧನಾ ಸಲಕರಣೆಗಳು, ವಿದ್ಯುನ್ಮಾನ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದ ಉಪಕರಣಗಳು, ಸಂಸ್ಥೆಗಳ ಆರ್ಥಿಕ ಸುಭದ್ರತೆ ಮತ್ತು ಮುಖ್ಯವಾಗಿ ಸೂಕ್ತ ವಿದ್ಯಾರ್ಹತೆಯುಳ್ಳ ಹಾಗೂ ದಕ್ಷರಾದ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಯ ನೇಮಕ ಮತ್ತು ಅವರ ಸಂಬಳ, ಸೇವಾ ಸೌಲಭ್ಯಗಳು ಇತ್ಯಾದಿಗಳನ್ನು ನಿಗದಿಪಡಿಸಿದೆ. ಪ್ರತಿಯೊಂದು ಪ್ರಶಿಕ್ಷಣ ಸಂಸ್ಥೆಯೂ ಇದರ ಅಂಗೀಕಾರವನ್ನು ಪಡೆಯುವುದು ಕಡ್ಡಾಯ. ಇದಿಲ್ಲದೆ ಶಿಕ್ಷಕ ತರಬೇತಿಯ ಪ್ರಮಾಣ ಪತ್ರಗಳಿಗೆ ಮನ್ನಣೆ ದೊರಕುವುದಿಲ್ಲ ಹಾಗೂ ಅಂತಹ ಸಂಸ್ಥೆಗಳಲ್ಲಿ ತರಬೇತಿ ಪಡೆದ ವಿದ್ಯಾರ್ಥಿಗಳು ಉದ್ಯೋಗಕ್ಕೆ ಅನರ್ಹರಾಗುತ್ತಾರೆ. ಈ ನಿಬಂಧನೆಗಳು ಸ್ವಲ್ಪ ಕಠಿಣವಾಗಿ ಗೋಚರಿಸುತ್ತವೆಯಾದರೂ ಇಂತಹ ಒಂದು ಪ್ರಶಿಕ್ಷಣ ನಿಯಂತ್ರಣ ಸಾಧನ ಅಗತ್ಯವಾಗಿತ್ತು ಎಂಬುದರಲ್ಲಿ ಎರಡು ಮಾತಿಲ್ಲ. ಇದರ ಪರಿಣಾಮವಾಗಿ ದೇಶದ ಎಲ್ಲಾ ಪ್ರಶಿಕ್ಷಣ ಸಂಸ್ಥೆಗಳು ತಮ್ಮ ಸಾಂಸ್ಥಿಕ ಅಭಿವೃದ್ಧಿ ಮತ್ತು ಬೆಳವಣಿಗೆಯ ಕಡೆ ಹೆಚ್ಚು ಗಮನ ಹರಿಸುವಂತೆ ಆಗಿದೆ. ಅಲ್ಲದೆ ನೂತನವಾಗಿ ಸ್ಥಾಪನೆಯಾಗುವ ಪ್ರತಿಯೊಂದು ಪ್ರಶಿಕ್ಷಣ ಸಂಸ್ಥೆಯು ರಾಷ್ಟ್ರೀಯ ಪ್ರಶಿಕ್ಷಣ ಪರಿಷತ್ತಿನ ಅಂಗೀಕಾರ ದೊರಕಿದ ನಂತರವೇ ಕಾರ್ಯಾರಂಭ ಮಾಡಬೇಕಾಗಿದೆ.

ಇಷ್ಟೆಲ್ಲಾ ಬೆಳವಣಿಗೆಗಳ ನಡುವೆ, ಕರ್ನಾಟಕದಲ್ಲಿ ಆಗಿರುವ ಈಗಿನ ಒಂದು ಅಶೈಕ್ಷಣಿಕ ಬೆಳವಣಿಗೆಯೆಂದರೆ ರಾಜ್ಯದಲ್ಲಿ ನೂರಾರು ಪ್ರಶಿಕ್ಷಣ ಸಂಸ್ಥೆಗಳ ಸ್ಥಾಪನೆಗೆ ಒಂದೇ ವರ್ಷದಲ್ಲಿ ಸರಕಾರವು ಅನುಮತಿ ನೀಡಿರುವುದು. ಇದಕ್ಕೆ ರಾಜಕೀಯ ಕಾರಣ ಮಾತ್ರವೇ ಹೊರತು ಇನ್ನಾವ ಶೈಕ್ಷಣಿಕವಾದ ಅಥವಾ ಮಾನವ ಸಂಪನ್ಮೂಲ ಅಧ್ಯಯನದ ಆಧಾರಗಳಾಗಲೀ ಇಲ್ಲ. ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಪ್ರಶಿಕ್ಷಣ ಸಂಸ್ಥೆಗಳಿಗೇ ಸಾಕಷ್ಟು ಪ್ರಮಾಣದಲ್ಲಿ ವಿದ್ಯಾರ್ಥಿಗಳು ದಾಖಲಾಗದೇ ಅನೇಕ ಸೀಟುಗಳು ಖಾಲಿ ಬಿದ್ದಿರುವಾಗ ಇಷ್ಟೊಂದು ದೊಡ್ಡಪ್ರಮಾಣದಲ್ಲಿ, ಅಂದರೆ ಸುಮಾರು ೩೦೦ಕ್ಕೂ ಹೆಚ್ಚು ಡಿ.ಎಡ್. ಕಾಲೇಜುಗಳನ್ನು ಮತ್ತು ಸುಮಾರು ೨೦೦ ಬಿ.ಇಡಿ. ಕಾಲೇಜುಗಳನ್ನು ಸ್ಥಾಪಿಸಲು ಅನುಮತಿ ನೀಡಿರುವುದು ನಿಜವಾಗಿಯೂ ಶೈಕ್ಷಣಿಕವಾಗಿ ದುರದೃಷ್ಟಕರ ಸಂಗತಿಯೇ ಸರಿ. ಸಂಖ್ಯಾತ್ಮಕ ಬೆಳವಣಿಗೆ ಗುಣಾತ್ಮಕ ಬೆಳವಣಿಗೆಗೆ ಮಾರಕವಾಗುವುದರಲ್ಲಿ ಯಾವುದೇ ಸಂಶಯವಿಲ್ಲ. ಇದನ್ನು ಗಂಭೀರವಾಗಿ ಪರಿಗಣಿಸಿ ಸರಕಾರ, ವಿಶ್ವವಿದ್ಯಾಲಯಗಳು ಹಾಗೂ ರಾಷ್ಟ್ರೀಯ ಶಿಕ್ಷಣ ಪರಿಷತ್ತು ಸಂಸ್ಥೆಗಳು ಸೂಕ್ತಕ್ರಮಗಳನ್ನು ಕೈಗೊಳ್ಳದಿದ್ದರೆ ಪ್ರಶಿಕ್ಷಣ ಕ್ಷೇತ್ರ ತುಂಬಾ ಒರಟಾಗಿ ಯಾತಕ್ಕೂ ತರವಲ್ಲದ ಶಿಕ್ಷಕರನ್ನು ತರಬೇತಿ ಮಾಡಿ ಶಾಲೆಗಳಿಗೆ ಕಳುಹಿಸಿದರೆ "ಭಾರತದ ಭವಿಷ್ಯ ತರಗತಿಗಳಲ್ಲಿ ರೂಪಿತವಾಗುತ್ತದೆ" ಎಂಬ ಘೋಷಣೆಗೆ ಅರ್ಥವಾದರೂ ಎಲ್ಲಿರುತ್ತದೆ? ಇದನ್ನು ಸಂಬಂಧಿಸಿದವರೆಲ್ಲರೂ ಚಿಂತಿಸಬೇಕಾಗಿದೆ.

■■

ಭಾಗ-೬

ಸಂಕೀರ್ಣ

ಬೆಳ್ಳಾವಿಯ ಕಾರದ ಶಿವಯೋಗಿಗಳು

✍ ಡಾ. ಬಿ. ನಂಜುಂಡಸ್ವಾಮಿ



ತುಮಕೂರು ಜಿಲ್ಲೆ ವೀರಶೈವ ಧರ್ಮದ ಕಟ್ಟಾಚರಣೆಗೆ ಬಹಳ ಪ್ರಸಿದ್ಧವಾದದ್ದು. ಈ ಜಿಲ್ಲೆಯ ಗ್ರಾಮಗಳಲ್ಲಿ ಅಳಿದು ಉಳಿದಿರುವ ಮಠಮಾನ್ಯಗಳ ಅಧ್ಯಯನ ಮಾಡಿದರೆ ಬಹಳ ರೋಚಕವಾದ ಇತಿಹಾಸ ಲಭ್ಯವಾಗುತ್ತದೆ. ಯುವ ವಿದ್ವಾಂಸರು ಆ ನಿಟ್ಟಿನಲ್ಲಿ ಕ್ಷೇತ್ರಕಾರ್ಯ ಮಾಡಿ ಅಧ್ಯಯನ ಮಾಡಬೇಕು. ವೀರಶೈವ ಧರ್ಮದ ಕಟ್ಟಾಚರಣೆಗೆ ಬಹಳ ಪ್ರಸಿದ್ಧವಾದ ಗ್ರಾಮಗಳೆಂದರೆ ದೊಡ್ಡಗುಣಿ, ಚಿಕ್ಕನಾಯಕನಹಳ್ಳಿ, ಹೊನ್ನವಳ್ಳಿ, ತಿಪಟೂರು, ನೊಣವಿನಕೆರೆ, ನಿಟ್ಟೂರು, ಪುರ, ಸಂಪಿಗೆ, ಬೆಳ್ಳಾವಿ, ಗುಬ್ಬಿ, ಚೇಳೂರು, ಹಾಲ್ಲೂರು, ಬೆಳ್ಳಾವಿ, ತುಮಕೂರು, ಸಿದ್ಧಗಂಗೆ, ಕೇತಸಮುದ್ರ ಅಥವಾ ಕ್ಯಾತಸಂದ್ರ, ದೇವರಾಯಪಟ್ಟಣ, ಗೂಳೂರು, ಹೊನ್ನುಡಿಕೆ ಗ್ರಾಮಗಳು. ಈ ಗ್ರಾಮಗಳಲ್ಲಿ ನಡೆಯುತ್ತಾ ಇದ್ದ ಅರಿವು, ಆಚರಣೆ, ಅನುಭಾವ, ದಾಸೋಹ, ಅಧ್ಯಯನ, ಲಿಂಗಪೂಜೆ, ಜಂಗಮಪ್ರೇಮ, ಪಾದೋದಕ-ಪ್ರಸಾದದ ನಿಷ್ಠೆ, ಶೀಲಾಚರಣೆ, ಕಾಯಕ ನಿಷ್ಠೆಗಳನ್ನು ನೋಡಿ ಬೆಕ್ಕಸ ಬೆರಗಾಗಿದ್ದೇನೆ. ಸಾಕಷ್ಟು ಅಡೆತಡೆಯ ನಡುವೆಯೂ ವೀರಶೈವ ಧರ್ಮ ಉಸಿರಾಡುತ್ತಿದೆ. ಈ ಧರ್ಮದ ವಿಶ್ವಭ್ರಾತೃತ್ವದ ಅನೇಕ ಉದಾಹರಣೆಗಳು ಸಾಮಾನ್ಯ ಗ್ರಾಮಗಳಲ್ಲೂ ನೋಡಬಹುದು. ಈ ಮಣ್ಣಿನಲ್ಲಿ ವೀರಶೈವ ಧರ್ಮ ಇಷ್ಟು ಆಳವಾಗಿ ಬೇರುಬಿಡಲು ಕಾರಣ, ವೀರಶೈವ ಅನುಭಾವಿಗಳು ಮತ್ತು ಕವಿಗಳು.

ಸುಮಾರು ಹದಿಮೂರನೇ ಶತಮಾನದಲ್ಲಿದ್ದ ಅಮರಗೊಂಡ ಗುರುಪರಂಪರೆ. ಆ ಪರಂಪರೆಯ ಹೆಮ್ಮೆಯ ಬಹುದೊಡ್ಡ ಅನುಭಾವಿ ಪ್ರಪ್ರಥಮ ವಚನಸಂಕಲನಕಾರ ಸುಮಾರು ೧೪೩೦ರಲ್ಲಿ ಇದ್ದ ಗುಬ್ಬಿ ಮಲ್ಲಣ್ಣ, ಅವನ ಮೊಮ್ಮಗ ಸುಮಾರು ೧೫೩೦ ರಲ್ಲಿ ಇದ್ದ ಗುಬ್ಬಿಮಲ್ಲಣಾರ್ಯ, ಹರದನಹಳ್ಳಿ ನಿರಂಜನ ಪೀಠ ಪರಂಪರೆಯ ಸುಮಾರು ೧೫೦೦ರಲ್ಲಿ ಇದ್ದ ಗುಬ್ಬಿ ಶ್ರೀಚೆನ್ನಬಸವೇಶ್ವರರು, ಅವರ ಕರಕಮಲಸಂಜಾತರಾದ ದ್ವಿತೀಯ ಅಲ್ಲಮ ಪ್ರಭು ಎಂದು ಪ್ರಖ್ಯಾತರಾದ ಸುಮಾರು ೧೫೬೦ರ ಕಾಲಮಾನದ ತೋಂಟದ ಸಿದ್ಧಲಿಂಗೇಶ್ವರರು, ಅವರ ಕರಸಂಜಾತರಾದ ಸುಮಾರು ೧೫೮೦ರಲ್ಲಿ ಇದ್ದ ಮದ್ದಗಿರಿಯಲ್ಲಿ ನಿರ್ವಿಕಲ್ಪ ಸಮಾಧಿಯಾದ ಬೋಳಬಸವೇಶ್ವರರು, ಅವರ ಹಸ್ತಕಮಲದಿಂದ ಆಶೀರ್ವಾದ ಪಡೆದ ಶೂನ್ಯಸಂಪಾದನೆ ಕರ್ತೃ ಗೂಳೂರು ಸಿದ್ಧವೀರಣ್ಣೊಡೆಯರು, ಅವರ ಶಿಷ್ಯರಾದ ವಿರಕ್ತ ತೋಂಟದಾರ್ಯರು, ದೇವರಾಯ ಪಟ್ಟಣದ ಶಂಕರದೇವರು, ನೊಣವಿನಕೆರೆ ಸಿದ್ಧೇಶ್ವರ ಸ್ವಾಮಿಗಳು, ತುಮಕೂರು ಸೋಮೇಕಟ್ಟೆ ಮಠದ ಚನ್ನವೀರಸ್ವಾಮಿಗಳು, ಹಾಗಲವಾಡಿ ಮುದ್ವೀರಸ್ವಾಮಿಗಳು, ಕುಪ್ಪೂರು ಮರುಳಸಿದ್ಧೇಶ್ವರರು, ಹೊನ್ನವಳ್ಳಿ ಕರಿಸಿದ್ಧೇಶ್ವರರು ಮುಂತಾದ ಶಿವಯೋಗಿಗಳ ತಪೋಭೂಮಿ.

೧೯ನೇ ಶತಮಾನದ ವೀರಶೈವ ಇತಿಹಾಸ ತಿಳಿಯುವ ಸಾಧನಗಳನ್ನು ನಮ್ಮ ದಿವ್ಯ ನಿರ್ಲಕ್ಷ್ಯದಿಂದ ಹಾಳುಮಾಡಿ ಬಿಟ್ಟಿದ್ದೇವೆ. ಪರಿಸರದಲ್ಲಿ ಇದ್ದ ವಿದ್ವಾಂಸರು ಆಸಕ್ತಿ ವಹಿಸಿ ಸ್ಥಳೀಯ ಮಠಗಳ ಪೂಜ್ಯರ ಜೀವನ- ಸಾಧನೆಯನ್ನು ಸರಿಯಾಗಿ ದಾಖಲೆ ಮಾಡದೆ, ಪವಾಡಗಳನ್ನಷ್ಟೇ ತಮ್ಮ ಮುಂದಿನ ಜನಾಂಗಕ್ಕೆ ಹೇಳಿದ್ದರಿಂದ, ಅನೇಕ ಗಟ್ಟಿಯಾದ ವಿಷಯಗಳು ಕೂಡ ಕಥೆಗಳ ಕಾಡಿನಲ್ಲಿ ಕಳೆದುಕೊಂಡು ಬಿಟ್ಟಿದ್ದೇವೆ. ಆದರೂ ಅಳಿದು ಉಳಿದಿರುವ ಸಾಮಗ್ರಿಯಿಂದ ಇತಿಹಾಸವನ್ನು ಕಟ್ಟಬೇಕಾಗಿದೆ.

ಉತ್ತರ ಕರ್ನಾಟಕ ಅಂಕಲಿಯಿಂದ ಗುಬ್ಬಿ ನಗರಕ್ಕೆ ದಯಮಾಡಿಸಿ, ಗೋಸಲ ಗುಬ್ಬಿ ಶ್ರೀಚನ್ನಬಸವೇಶ್ವರ ಸ್ವಾಮಿಗೆ ಮಜ್ಜನಕೊಳ, ಬೆಳ್ಳಿಪಲ್ಲಕ್ಕಿಯನ್ನು ಮಾಡಿಸಿ, ಶಿಥಿಲವಾಗಿ ಕಾಲಗರ್ಭದಲ್ಲಿ ಹೂತು ಹೋಗುತ್ತಾ ಇದ್ದ ತೋರೆಮಠವನ್ನು ಜೀರ್ಣೋದ್ಧಾರ ಮಾಡಿದ ಅಡವಿಸ್ವಾಮಿಗಳು, ಆ ನಂತರ ತಮ್ಮ ಪ್ರಭಾವವಲಯವನ್ನು ಸಿದ್ಧಗಂಗಾ ಕ್ಷೇತ್ರಕ್ಕೂ, ಚಿಕ್ಕತೊಟ್ಟಿಲುಕೆರೆ ವಿರಕ್ತಮಠಕ್ಕೂ ವಿಸ್ತರಿಸಿ ಸಿದ್ಧಗಂಗಾ ಕ್ಷೇತ್ರದಲ್ಲಿ ಸಂಸ್ಕೃತ ಪಾಠಶಾಲೆಯನ್ನು ಪ್ರಾರಂಭಿಸಿ, ಅನ್ನದಾನ- ವಿದ್ಯಾದಾನಕ್ಕೆ ಶ್ರೀಕಾರ ಹಾಕಿದರು. ಇಂತಹ ಶಿವಾನುಭವಚಕ್ರವರ್ತಿಯ ಜೊತೆ ಶಿವಾನುಭವವನ್ನು ಚರ್ಚೆ ಮಾಡುತ್ತಾ ಇದ್ದವರು ಕಾರದ ಶಿವಯೋಗಿಗಳು. ಅರಿಯೂರು ಗ್ರಾಮದಲ್ಲಿ ಗದ್ದುಗೆಯಾಗಿರುವ ಆದವಾನಿ ಅಥವಾ ಆದವೇಣಿ ಸ್ವಾಮಿಗಳು ಅಮ್ಮನಘಟ್ಟದ ಕಂಥೆಸ್ವಾಮಿಗಳು, ಕೋರಾದ ಲಿಂಗಣ್ಣ ತಾತನವರು, ಹಾಲ್ನೂರು ಮಠದ ಜಂಗಮ ಮೂರ್ತಿಗಳಾದ ನಂಜುಂಡ ಸ್ವಾಮಿಗಳು.

ಇದೇ ಕಾಲಘಟ್ಟದಲ್ಲಿ ಇನ್ನೊಂದು ಗಟ್ಟಿಯಾದ ಪರಂಪರೆ ಬೆಳೆಯುತ್ತಾ ಇತ್ತು. ನೊಣವಿನಕೆರೆ ಕಾಡಸಿದ್ಧೇಶ್ವರ ಮಠದ ಕರಿವೃಷಭದೇಶಿಕೇಂದ್ರ ಸ್ವಾಮಿಗಳು (೧೮೦೮-೧೮೭೯). ಅವರ ಅನುಭಾವಿ ಶಿಷ್ಯರಾದ ಮಲ್ಲೇನಹಳ್ಳಿ ಚೆನ್ನಬಸವದೇವರು, ಹೊನ್ನುಡಿಕೆ ಗಂಗಾಧರ ಸ್ವಾಮಿಗಳು, ಗುಬ್ಬಿ ಕಿಡಿಗಣ್ಣಪ್ಪರು ಪ್ರಮುಖರಾದವರು. ಹೀಗೆ ಕ್ಷೇತ್ರ ಫಲವತ್ತಾಗಲು ಹಿರಿಯ ನಿರಂಜನ ಮೂರ್ತಿಗಳು, ಪಟ್ಟದ ದೇವವರುಗಳು, ಶಿವಾನುಭವಿಗಳು ತಮ್ಮ ಶಿಷ್ಯ ಪರಂಪರೆಗೆ ಸಾಕಷ್ಟು ಅನುಭವದ ನಡೆ ನುಡಿ ಕಲಿಸಿದ್ದರಿಂದ ಇಷ್ಟು ಬಹುದೊಡ್ಡಕಾರ್ಯ ನಡೆಯಲು ಸಾಧ್ಯವಾಯಿತು.

ಈ ಕಾಲಮಾನದ ಮುಖ್ಯರಾದ ನಿರಂಜನ ಜಂಗಮಮೂರ್ತಿಗಳಾದ ಕಾರದ ಶಿವಯೋಗಿಗಳ ಬಗ್ಗೆ ತಿಳಿಯಲು ಇರುವ ಆಧಾರ ಗ್ರಂಥವೆಂದರೆ, ಅವರ ಸೇವೆಯನ್ನು ಮನಮುಟ್ಟಿ ಮಾಡಿದ ಹಿರಿಯ ಶಿವಾಭವಿಗಳಾದ ಬೆಳ್ಳಾವಿ ಮೂಲ ಮಠದ ವೇ|| ಬೆಳ್ಳಾವೆ ರುದ್ರಶಾಸ್ತ್ರಿಗಳು ಬರೆದ "ಶ್ರೀ ಕಾರದ ಗುರುವರೇಣ್ಯರ ಚರಿತಂ" ಪ್ರಕಾಶಕರಾದ ಬೆಳ್ಳಾವೆ ಯಜಮಾನ್|| ಜಿ.ಎನ್. ಗಟ್ಟಪ್ಪನವರು ಹಿನ್ನುಡಿಯಾಗಿ ಈ ಮಾತುಗಳನ್ನು ಬರೆದಿದ್ದಾರೆ. ಮಾತುಗಳನ್ನು ಯಥಾವತ್ತಾಗಿ ಕೊಟ್ಟಿದ್ದೇನೆ.

ಹಿನ್ನುಡಿ

"ಈಗ್ಯೆ ಸುಮಾರು ನಲವತ್ತು ವರ್ಷಗಳ ಹಿಂದೆ ನಮ್ಮ ದೊಡ್ಡಪ್ಪಂದಿರಾದ ಕೈಲಾಸವಾಗಿ ಗ॥ವಿ॥ ಚನ್ನಪ್ಪನವರು ಕೈಲಾಸವಾಸಿ ವೇದಮೂರ್ತಿ ಮೂಲೇಮಠದ ರುದ್ರಾರಾಧ್ಯಶಾಸ್ತ್ರಿಗಳವರಿಂದ ಬರೆಸಿ ಇಟ್ಟಿದ್ದ "ಶ್ರೀ ಕಾರದ ಗುರುವರೇಣ್ಯರ ಚರಿತಂ" ಈಗ ಮುದ್ರಣವನ್ನು ಕಂಡದ್ದಕ್ಕಾಗಿ ಸಂತೋಷವೆನಿಸುತ್ತದೆ. ಈ ಚರಿತ್ರೆಯಲ್ಲಿ ಪೂರ್ಣ ವಿಷಯ ಬಂದಿರದೆ ಇರಬಹುದು. ಶ್ರೀ ಸ್ವಾಮಿಗಳು ಜೀವಿತಕಾಲದಲ್ಲಿದ್ದವರು ಈಗ ಎಷ್ಟೋ ಜನರಿದ್ದಾರೆ. ಅವರಿಗೆ ವಿವರಗಳು ಗೊತ್ತಿರಬಹುದು. ಅಂತಹ ಬಿಟ್ಟಿರುವ ವಿಷಯಗಳನ್ನು ತಿಳಿಸಿದರೆ ಮುಂದಿನ ಮುದ್ರಣದಲ್ಲಿ ಸೇರಿಸುವ ಭರವಸೆಯನ್ನು ಕೊಡುತ್ತೇನೆ. ಈ ಚರಿತ್ರೆಯ ಮೂಲಪ್ರತಿಯನ್ನು ತಿದ್ದುವುದರಲ್ಲಿಯೂ, ಅಚ್ಚಿನ ದೋಷಗಳನ್ನು ತಿದ್ದುವುದರಲ್ಲಿಯೂ ನೆರವಾದ ಚಿ॥ ಜಿ.ಎಸ್. ಸಿದ್ಧಲಿಂಗಯ್ಯ ಬಿ.ಎ. (ಆನರ್ಸ್) ಮತ್ತು ಮೂರೇ ದಿನಗಳಲ್ಲಿ ಮುದ್ರಿಸಿಕೊಟ್ಟ ನ್ಯಾಷನಲ್ ಮುದ್ರಣಾಲಯದವರನ್ನು ನೆನೆಯದಿರಲಾರೆ.

ತುಮಕೂರು — ಬೆಳ್ಳಾವಿಯ ಯ॥ ಜಿ.ಎಣ. ಗಟ್ಟಪ್ಪ

೨೫-೪-೧೯೫೬ — ಪ್ರಕಾಶಕ

ಈ ಮೇಲಿನ ಮಾತುಗಳಿಂದ "ಶ್ರೀಕಾರದ ಗುರುವರೇಣ್ಯರ ಚರಿತಂ" ಕೃತಿಯನ್ನು ಮೂಲೇಮಠದ ವೇ॥ ರುದ್ರಶಾಸ್ತ್ರಿಗಳು ರಚಿಸಿದ್ದು ಸುಮಾರು ೧೯೨೬ ರಲ್ಲಿ. ಆದರೆ ಕೃತಿ ಪ್ರಕಟವಾದದ್ದು ಸುಮಾರು ನಲವತ್ತು ವರ್ಷಗಳ ನಂತರ. ಮತ್ತೆ ಈ ಕೃತಿ ಮುದ್ರಣವಾಗಿಲ್ಲ. ೨೪ ಪುಟದ ಈ ಪುಟ್ಟಪುಸ್ತಕವನ್ನು ಕಾರದ ಸ್ವಾಮಿಗಳ ಭಕ್ತಾದಿಗಳು ಮತ್ತೆ ಮುದ್ರಣ ಮಾಡಬೇಕು. ಈ ಕೃತಿಯ ಲೇಖಕರಾದ ವೇ॥ ರುದ್ರಶಾಸ್ತ್ರಿಗಳು ತಮ್ಮ ಹೆಚ್ಚಿನ ವಿದ್ಯಾಭ್ಯಾಸವನ್ನು ಮೈಸೂರು ನಗರದಲ್ಲಿ ನೆಲೆಸಿದ್ದ ಆಸ್ಥಾನ ಮಹಾವಿದ್ವಾನ್, ಕರ್ನಾಟಕ ಭಾಷಾರತ್ನಂ ಪಿ.ಆರ್. ಕರಿಬಸವಶಾಸ್ತ್ರಿಗಳ ಶಿಷ್ಯತ್ವ ವಹಿಸಿ, ವೇದ-ಉಪನಿಷತ್ತು-ಆಗಮ, ಸಂಸ್ಕೃತ ಮತ್ತು ಕನ್ನಡ ಸಾಹಿತ್ಯವನ್ನು ಆಳವಾಗಿ ಅಧ್ಯಯನ ಮಾಡಿದ್ದರು.

ಕರ್ನಾಟಕ ಭಾಷಾರತ್ನಂ, ಆಸ್ಥಾನ ಮಹಾವಿದ್ವಾನ್ ಶ್ರೀ ಪಿ.ಆರ್. ಕರಿಬಸವ ಶಾಸ್ತ್ರಿಗಳಿಂದ ಸ್ಥಾಪಿತವಾದ ಶ್ರೀವೀರಶೈವ ಮತಸಂವರ್ಧಿನೀಸಭಾ ೧೯೦೪ ರಲ್ಲಿ ಸ್ಥಾಪಿಸಲ್ಪಟ್ಟು, ಪ್ರತಿವರ್ಷ ಮೈಸೂರು ಜಿಲ್ಲೆ ಮುಡುಕುತೊರೆ ಬೆಟ್ಟದ ಬುಡದಲ್ಲಿ ಮೂರು-ನಾಲ್ಕು ದಿನದ ವಿಶೇಷ ಸಭೆಗಳನ್ನು ನಡೆಸುತ್ತಾ ಇದ್ದರು. ೧೯೧೦ ರಲ್ಲಿ ನಡೆದ ಈ ಸಭೆಯಲ್ಲಿ "ವೀರಶೈವಮತವು" ಎಂಬ ವಿಷಯದ ಬಗ್ಗೆ ವೇ॥ ರುದ್ರ ಶಾಸ್ತ್ರಿಗಳು ಉಪನ್ಯಾಸ ಮಾಡಿದ್ದಾರೆ. ೧೯೨೫ ರಲ್ಲಿ ಮೈಸೂರು ಆಸ್ಥಾನ ವಿದ್ವಾನ್ ಸಿರಸಿ ಗುರುಶಾಂತಶಾಸ್ತ್ರಿಗಳಿಂದ ಸಂಗ್ರಹಿಸಲ್ಪಟ್ಟ "ಉಪನ್ಯಾಸ ಸಂಗ್ರಹ" ಸಂಪುಟದಲ್ಲಿ (ಪುಟ ೧೨೩-೧೨೬) ಪ್ರಕಟವಾಗಿದೆ. ವೇ॥ ರುದ್ರಶಾಸ್ತ್ರಿಗಳು ಪುಸ್ತಕ ಪ್ರಕಾಶಕರಾಗಿ "ಗುರುಮಲ್ಲೇಶ ವಿಲಾಸವು" ಕೃತಿಯನ್ನು ೧೯೧೯ ರಲ್ಲಿ ಪ್ರಕಟಿಸಿದ್ದಾರೆ. ಕೃತಿಕರ್ತರು ಬೆಳ್ಳಾವೆ ವೇ॥ ನರಹರಿಶಾಸ್ತ್ರಿಗಳು ಮತ್ತು ವೇ॥ ಪಿ.ಆರ್. ಕರಿಬಸವಶಾಸ್ತ್ರಿಗಳು, ಈ ಕೃತಿ ಪ್ರಕಟವಾದಾಗ ವೇ॥ ರುದ್ರಶಾಸ್ತ್ರಿಗಳು ಪುಂಗನೂರು ಸಂಸ್ಥಾನದ ವೈದಿಕಪಾಠಶಾಲಾಧ್ಯಾಪಕರಾಗಿದ್ದರು. ಶಾಸ್ತ್ರಿಗಳು ಈ ಕೃತಿಯಲ್ಲಿ ತಮ್ಮ ಮಠವನ್ನು ಮೂಲಮಠ ಎಂದೇ ಕರೆದಿದ್ದಾರೆ.

ಬೆಳ್ಳಾವಿ ಗ್ರಾಮದಲ್ಲಿ ಮೂಲಮಠ, ರುದ್ರಮಠ, ದೇಶಮಠ, ಹಿರೇಮಠ, ಮಲ್ಲಿಕಾರ್ಜುನ ಮಠ ಅಥವಾ ಕಾರದ ಸ್ವಾಮಿಗಳ ಮಠ, ಕಂಚಿ ಗುರುಮಠಗಳು ಇವೆ. ಈ ಊರಿನ ಪ್ರಮುಖವಾದ ದೈವ ಸೋಮೇಶ್ವರ. ಸಾಂಸ್ಕೃತಿಕವಾಗಿ ಬಹಳ ಶ್ರೀಮಂತವಾದ ಗ್ರಾಮ. ಇಂತಹ ಮಣ್ಣಿನ ಒಡನಾಟದಿಂದ ಮೂಲಮಠದ ರುದ್ರಶಾಸ್ತ್ರಿಗಳು ಬೆಳೆದು ದೊಡ್ಡವರಾದವರು. ಅವರು ರಚಿಸಿದ "ಶ್ರೀ ಕಾರದ ಗುರುವರೇಣ್ಯರ ಚರಿತಂ" ಕೃತಿಯಿಂದ ನಿರಂಜನ ಮೂರ್ತಿ ಬಗ್ಗೆ ಈ ವಿಷಯಗಳು ತಿಳಿದು ಬರುತ್ತವೆ. ಕಾರದ ಶಿವಯೋಗಿಗಳ ನಿಜನಾಮ ಶಂಕರಾರ್ಯ. ಪೂರ್ವಾಶ್ರಮದ ಬಗ್ಗೆ ಶಾಸ್ತ್ರಿಗಳು ಈ ರೀತಿ ಬರೆದಿದ್ದಾರೆ:

"ಸೊನ್ನಲಾಪುರದ ಮಹಂತಿನಮಠದೊಳ್ ಶಿವಪೂಜಾ ಧುರಂಧರಪ್ಪರೇವೇಗಿಮಠದ ಸಿದ್ದಪ್ಪಶರ್ಮರೆಂಬ ಸುಜನ ಶಿರೋಮಣಿಗಳ ದ್ವಿತೀಯ ಪುತ್ರರತ್ನರಾಗಿ ನೃಪಶಾಲೀವಾಹನ ಶಕ ೧೭೫೮ ನೇ ಹೇವಿಳಂಬಿನಾಮ ಸಂವತ್ಸರದ ಶ್ರಾವಣ ಶುದ್ಧ (೬) ಷಷ್ಠಿ ಇಂದುವಾಸರದೊಳ್ ಚಿತ್ತಾ ನಕ್ಷತ್ರ ದ್ವಿತೀಯ ಪಾದದೊಳ್ ಶ್ರೀ ಶಂಕರಾಹ್ವಯದಿಂ ಜನಿಸಿದರು."

ಈ ಮೇಲಿನ ವಾಕ್ಯದಿಂದ ಸೊಲ್ಲಾಪುರದ ಮಹಂತಿನ ಮಠದಲ್ಲಿ ನೆಲೆಸಿದ್ದ ಶಿವಪೂಜಾಧುರಂಧರ ರೇವೇಗಿಮಠದ ಸಿದ್ಧಪ್ಪಶರ್ಮರ ದ್ವಿತೀಯ ಪುತ್ರರಾಗಿ ಕ್ರಿ.ಶ. ೧೮೩೭ರಲ್ಲಿ ಅವರು ಜನಿಸಿದರು. ಇವರ ಬಾಲ್ಯದ ಬಗ್ಗೆ "ಬಾಲ್ಯದಲ್ಲಿಯೇ ಲೌಕಿಕ ವ್ಯಾಪಾರಮನುಳಿದು ಘನವೈರಾಗ್ಯಂ ಗಟ್ಟಿಗೊಂಡು ಶ್ರೀ ಗುರುಮೂರ್ತಿಯನ್ನರಸುತಿರ್ಪವಸರದೊಳ್ ಭವಾರಣ್ಯ ದಾವಾನಲ ನೆನಸಿದಿಗಂತ ಕೀರ್ತಿಯಂ ಪಡೆದ ಪ್ರಭುಪರಂಪರೆಯ ಶ್ರೀ ಮುರುಘರಾಜೇಂದ್ರ ಸೂತ್ರಾನುವರ್ತಿಯಾದ ಶ್ರೀ ನೀಲಂಗೀಪುರಿ ಮಠಾಧೀಶನಪ್ಪ ಚರವರ್ಯನ ಸಂದರ್ಶನಮಾಗಲ್ಕೆ 'ಎಲೈ ಗುರುವೇ ಹಸಿದು ಹಂಬಲಿಸುವಂಗೆ ಅಮೃತಾನ್ನಂ ದೊರೆವಂತೆ ತಮ್ಮ ಸನ್ನಿಧಿಯು ಇಂದಿಗೆನ್ನ ಪೂರ್ವಪುಣ್ಯಫಲದಿಂ ಲಭಿಸಿದುದೆಂದು ಹರ್ಷಾಂಬುಧಿಯೊಳೀ ಮುಳುಂಗಿ ತಮ್ಮ ಕೃಪಾಸಮುದ್ರದೊಳೆನ್ನಂ ತೊಳೆದು ಭವ ಬಂಧಮಂ ಪರಿಹರಿಸಬೇಕೆಂದು ನಾನಾವಿಧದಿಂ ಬೇಡಿಕೊಳಲ್ ಶಿಷ್ಯಜನ ಪ್ರಿಯನಾದ ಗುರುವರ್ಯಂ ಆಶ್ಚರ್ಯಚಿತ್ತನಾಗಿ ಈ ಅಲ್ಪ ವಯಸ್ಸಿನ ಬಾಲಂಗೆ ಎಂಥ ಗುಣಂ ಪುಟ್ಟಿರ್ಪುದು. ಈತನೆಂತಹ ಸುಕೃತಶಾಲಿಯು ಎಂದು ಕೃಪೆಯಂಕುರಿಸಿ 'ಎಲೈ ಕುವರನೆ ಸಾವಧಾನ ಚಿತ್ತನಾಗಿ ಲಾಲಿಪುದೆಂದು ಅಷ್ಟಾವರಣ, ಪಂಚಾಚಾರ, ಲಿಂಗಾಂಗ ಸಾಮರಸ್ಯ, ಷಟ್ಸ್ಥಲ ನಿರ್ಣಯಂಗಳಂ ಬೋಧಿಸಿ' 'ಎಲೈ ಸಚ್ಛಿಷ್ಯನೆ, ಸಕಲಗೋಪ್ಯ ವಿಷಯಂಗಳಂ ಸಾಂಗಮಾಗಿ ತಿಳಿಸಿರ್ಪೆಂ. ಮುಂದೆ ಮಹಾಮಹಿಮೋನ್ನತಿಯಂ ಪಡೆದು ಅಡಿಗೆರಗಿದ ಭಕ್ತರನ್ನುದ್ಧರಿಸೆಂದಾಶೀರ್ವದಿಸಲಾ ಶಿಷ್ಯಂ ಸಂತೋಷಚಿತ್ತನಾಗಿ ಸಾಷ್ಟಾಂಗ ಪ್ರಣಾಮಂಗೆಯ್ದು 'ಎಲೈ ಗುರುವೇ ನಿನ್ನ ಬೋಧೆಯಿಂ ಕೃತಾರ್ಥತೆಯಂ ಪೊಂದಿದೆನೆಂದು ಪೊಡೆಮಟ್ಟಲ್ಲಿಂ ಬಂದು ಹಿಮಾಚಲ, ಹರಿದ್ವಾರ, ಗಯ, ಪ್ರಯಾಗ, ಬದರಿಕಾಶ್ರಮ, ನೇಪಾಳ, ಕಪಿಲಧಾರ, ಕಪತ್ತಗಿರಿ, ಷಣ್ಮುಖಾದ್ರಿ ಇತ್ಯಾದಿ ತಪೋಕ್ಷೇತ್ರಂಗಳೊಳ್ ಸಂಚರಿಸಿ ತಪಸ್ಸಿದ್ಧಿಯಂ ಪಡೆದು ಕರದೊಳ್ ದಂಡ ಕಮಂಡಲುಗಳಂ ಪಿಡಿದು ಸರ್ವಾಂಗದೊಳ್ ಭಸ್ಮ ರುದ್ರಾಕ್ಷ ಧಾರಣಂಮಾಡಿ ಕೌಪೀನಾವಶೇಷವಾಗಿ ನಾನಾ ದೇಶಂಗಳಂ ಸಂಚರಿಸುತ್ತಂ ಅಲ್ಲಲ್ಲಿ ಭಕ್ತರಭೀಷ್ಟಮಂ ಪರಿಪೂರ್ಣಗೊಳಿಸಿ ಮುಕ್ತರಂ ಮಾಡುತ್ತ ಮಹಾಶೀಲಮಾದಾಚರಣೆಯಂ ಕೈಕೊಂಡು ಆಹಾರಕ್ಕೆ ಬರಿಯ ಕಾರಮಂ ಸೇವಿಸುತ್ತಿರ್ದುದರಿಂ ಶ್ರೀಕಾರದಸ್ವಾಮಿಯೆಂಬ ಪೆಸರನಾಂತು ಚರಿಸುತ್ತಿರ್ಪಾಗಳ್ ಅನೇಕ ಗುಹೆಗಳಿಂ ತೀರ್ಥಾವಳಿಗಳಿಂ ವಿವಿಧಮಾದ ವನಸ್ಪತಿಗಳಿಂ ಮಹಾಸಿದ್ಧಪುರುಷರ್ಕಳಿಂ ತೀವಿ ಸಂಚರಿಸಿದವರ್ಗಾಯುರಾರೋಗ್ಯಮುಮಂ ಆರಾಧಿಸಿದವರ್ಗಾನಂದ ಮುಮನೀವ ಕಂಡ ಕಂಗಳ ಪುಣ್ಯಮೆನಿಸಿ ಮಹಿಮೆ ಪಡೆದ ಸಿದ್ಧೇಶ್ವರನೆಂಬ ಮಹಾಲಿಂಗಮೂರ್ತಿಯಂ ವಿರಾಜಿಪ ಸಿದ್ಧಾದ್ರಿಯಂ ಕಂಡಲ್ಲಿಗೈದಿ ಮಹಾಮೂರ್ತಿಯಂ ಕಂಡು ಮಹದಾನಂದಂಗೊಂಡು ಪುಳಕ ಮೇರಿ ಸುಂದರಮಾದೊಂದು ಗುಹೆಯೊಳ್ ಅತಿಶಯಮಾದನುಷ್ಠಾನಮನೆಸಗುತ್ತಮಿರ್ಪಾಗಳ್.....

ಬಾಲ್ಯದಲ್ಲೇ ವೈರಾಗ್ಯ ಗಟ್ಟಿಗೊಂಡು, ತಕ್ಕ ಗುರುವನ್ನು ಹುಡುಕಿ ಶ್ರೀಮುರುಘಾ ಪರಂಪರೆಯ ಶ್ರೀನೀಲಂಗೀಪುರಿ ಮಠಾಧಿಪತಿಗಳ ಹತ್ತಿರ ಶಿಷ್ಯತ್ವ ವಹಿಸಿ, ಅವರಿಂದ ಅಷ್ಟಾವರಣ, ಪಂಚಾಚಾರ, ಲಿಂಗಾಂಗ ಸಾಮರಸ್ಯ, ಷಟ್ಸ್ಥಲ ನಿರ್ಣಯಂಗಳಂ ಅರಿತು, ಸಕಲ ಗೋಪ್ಯವಾದ ವಿಷಯಗಳನ್ನು ತಿಳಿದು ಆಶೀರ್ವಾದ ಪಡೆದು ದೇಶಸಂಚಾರಕ್ಕೆ ಹೊರಟು, ಕರದಲ್ಲಿ ದಂಡ ಕಮಂಡಲಗಳಂ ಪಿಡಿದು ಸರ್ವಾಂಗದೊಳ್ ಭಸ್ಮ ರುದ್ರಾಕ್ಷ ಧಾರಣಮಂ ಮಾಡಿಕೊಂಡು, ಕೌಪೀನವನ್ನು ಧರಿಸಿಕೊಂಡು ನಾನಾ ದೇಶಂಗಳಂ ಸಂಚರಿಸುತ್ತಾ, ಭಕ್ತರಭೀಷ್ಟಮಂ ಪರಿಪೂರ್ಣಗೊಳಿಸಿ, ಮುಕ್ತಿಮಾರ್ಗವನ್ನು ತೋರಿಸುತ್ತಾ ಮಹಾಶೀಲಮಾದಾಚರಣೆಯಂ ಕೈಕೊಂಡು ಆಹಾರಕ್ಕೆ ಅರ್ಥಾತ್ ಪ್ರಸಾದಕ್ಕೆ ಬರಿಯ ಕಾರವನ್ನು ಸೇವಿಸುತ್ತಾ ಇದ್ದುದರಿಂದ ಕಾರದ ಸ್ವಾಮಿಗಳು ಎಂದು ಪ್ರಸಿದ್ಧರಾಗಿದ್ದ ಸ್ವಾಮಿಗಳು ಸಿದ್ಧರಬೆಟ್ಟದ ಗುಹೆಯಲ್ಲಿ ಅನುಷ್ಠಾನ ಮಾಡುತ್ತಾ ಇದ್ದ ವಿಷಯ ತಿಳಿದ ಬೆಳ್ಳಾವಿಯ ಭಕ್ತಾದಿಗಳು ಸಿದ್ಧರಬೆಟ್ಟಕ್ಕೆ ಹೋಗಿ ತಮ್ಮ ಗ್ರಾಮಕ್ಕೆ ಬರುವಂತೆ ಬಿನ್ನಹ ಮಾಡಲು. ಈ ಸಿದ್ಧರಬೆಟ್ಟದಲ್ಲಿ

ಇನ್ನು ಕೆಲವು ದಿನ ತಪಸ್ಸು ಮಾಡಿ ಆ ನಂತರ ನಿಮ್ಮ ಪುರಕ್ಕೆ ಬರುತ್ತೇವೆ ಎಂದು ಅಪ್ಪಣೆ ಕೊಡಲು, ಮಹಾಪ್ರಸಾದವೆಂದು ಭಕ್ತಾದಿಗಳು ಬೆಳ್ಳಾವಿ ಗ್ರಾಮದಲ್ಲಿ ತಮ್ಮ ಗುರುವನ್ನು ನಿರೀಕ್ಷಿಸುತ್ತಾ ಇದ್ದರು. ಒಬ್ಬ ಭಕ್ತರ ಕನಸ್ಸಿನಲ್ಲಿ ಸ್ವಾಮಿ ಬಂದು 'ನಾಳೆ ನಿಮ್ಮ ಗ್ರಾಮಕ್ಕೆ ಬರುತ್ತೇವೆ' ಎಂದು ಅಪ್ಪಣೆ ಮಾಡಿದ್ದು ಕೇಳಿ ಎಲ್ಲರೂ ಸಂತೋಷಪಟ್ಟರು. ಶಾಲೀವಾಹನ ಶಕ ೧೭೬೧ ಶುಕ್ಲ ಸಂವತ್ಸರದ ಕಾರ್ತೀಕ ಶುದ್ಧ ನವಮಿ, ಭಾರ್ಗವಾಸರದರುಣೋದಯದೊಳ್ ಸಮಸ್ತ ಭಕ್ತರು ಕಳಸ ಕನ್ನಡಿ ನಂದಿಧ್ವಜ, ಫಲಪುಷ್ಪ, ಪಲ್ಲಕ್ಕಿಯನ್ನು ತೆಗೆದು ಕೊಂಡು ಹೋಗಿ ಗುರುಧ್ಯಾನ ಮಾಡುತ್ತಾ ನಿಂತಿರಲು ಕಾರದ ಶಿವಯೋಗಿ ದಯಮಾಡಿಸಿದರು. ಭಕ್ತಜನರು ಅನರ್ಘ್ಯಪಾದ್ಯಗಳಿಂದ ಸತ್ಕರಿಸಿ, ಆಂದೋಳನದೊಳ್ ಅರ್ಥಾತ್ ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ವೇದ ಪಾರಾಯಣ ಮಾಡುತ್ತಾ ನಾನಾ ವಿಧವಾದ ವಾದ್ಯಗಳನ್ನು ಮಾಡಿಕೊಂಡು, ಪುರಬೀದಿಯಲ್ಲಿ ಉತ್ಸವವನ್ನು ಮಾಡಿಕೊಂಡು, ಇಂತಹ ಮಹಾತ್ಮನ ದರ್ಶನದಿಂದ ನಮ್ಮ ಅಭೀಷ್ಟಗಳೆಲ್ಲ ಸಿದ್ಧಿಯಾಗುತ್ತವೆ ಎಂದು ಸ್ತೋತ್ರ ಮಾಡುತ್ತಾ ಬಯಲು ಬಸವೇಶ್ವರಾಲಯದಲ್ಲಿ ಸುಂದರವಾದ ಹಸಿರುಚಪ್ಪರ ಹಾಕಿ, ಕಾರದ ಶಿವಯೋಗಿಗಳ ಶಿವಪೂಜಾದಿಗಳಿಗೆ ವ್ಯವಸ್ಥೆ ಮಾಡಿ, ಭಕ್ತಜನರು ತೀರ್ಥಪ್ರಸಾದವನ್ನು ಪಡೆದರು.

ಕಾರದ ಶಿವಯೋಗಿಗಳನ್ನು ಕುರಿತು ಭಕ್ತಜನಂಗಳು, 'ಮಹಾಸ್ವಾಮಿ ತಾವು ಈ ಗ್ರಾಮದಲ್ಲೆ ನೆಲೆಸಿ ಮುಂದಿನ ಶಿಷ್ಯ ಸಮುದಾಯಕ್ಕೆ ಕೃಪೆಯಂ ಕರುಣಿಸಿ ಮುಕ್ತರನ್ನಾಗಿ ಮಾಡಬೇಕೆಂದು ವಿನಂತಿಸಿಕೊಂಡಾಗ, ಸ್ವಾಮಿಯು ಪರಮೇಶ್ವರನು ಉಮಾ ಸಮೇತರಾಗಿ ನಿಮ್ಮ ಗ್ರಾಮದಲ್ಲಿ ನೆಲೆಸಿದ್ದಾನೆ. ನಮ್ಮ ಮನಸ್ಸು ನಿಮ್ಮ ಪುಣ್ಯಕ್ಷೇತ್ರವನ್ನು ಬಯಸುತ್ತಿದೆ' ಎಂದು ಅಪ್ಪಣೆ ಮಾಡಿದರು. ಸ್ವಲ್ಪ ದಿನದಲ್ಲೆ ಬೆಳ್ಳಾವೆ ಗ್ರಾಮದ ಶ್ರೀ ಸೋಮೇಶ್ವರಸ್ವಾಮಿ ಜಾತ್ರಾಮಹೋತ್ಸವ ದಿನ ಹತ್ತಿರ ಬರಲು ಜಾತ್ರೆಗೆ ಬಂದಂತಹ ಭಕ್ತರು ಸೋಮೇಶ್ವರನ ದರ್ಶನದ ನಂತರ ಕಾರದ ಶಿವಯೋಗಿಗಳ ದರ್ಶನಕ್ಕೆ ಬಂದು ಅಲ್ಲಿಯೂ ಗಣಾರಾಧನೆಯನ್ನು ನೆರವೇರಿಸಿದರು. ಅದ್ವೈತ ಸಿದ್ಧಾಂತವನ್ನು ಬಹಳ ಆಳವಾಗಿ ಅಧ್ಯಯನ ಮಾಡಿರುವ ಯಂತ್ರ ವಿಶಾರದರಾದ, ಸಕಲರೊಳ್ ಸಮಚಿತ್ತರಾದ, ಗುರುದೈವದೊಳಾಸಕ್ತರೂ, ಪುರಪ್ರಮುಖರೂ ಆದ ಕುಲಕರ್ಣಿ ವೆಂಕಟಪ್ಪಶರ್ಮರಿಗೆ ಕಾರದ ಶಿವಯೋಗಿಗಳ ಮೇಲೆ ಭಕ್ತಿ ಹುಟ್ಟಿ, ಈ ಹಿಂದೆ ಚೋಳರಾಜರಿಂದ ಕಟ್ಟಲ್ಪಟ್ಟ, ಶ್ರೀಮಲ್ಲಿಕಾರ್ಜುನ ಮಠವನ್ನು ಜೀರ್ಣೋದ್ಧಾರಂ ಮಾಡಿಸಿ, ಸ್ವಾಮಿಗಳ ಅನುಷ್ಠಾನಕ್ಕೆ ಸಂಪೂರ್ಣ ವ್ಯವಸ್ಥೆ ಮಾಡಿದರು.

ಸೊಂಡೆಕೊಪ್ಪ ಗ್ರಾಮದ ರುದ್ರಮೂರ್ತಿಯೆಂಬ ಯತಿವರನು ಕಾರದ ಶಿವಯೋಗಿಗಳ ವಿಶ್ವಾಸಮಂ ಬೆಳೆಸಿ, ಸಕಲರು ಅಚ್ಚರಿಪಡುವಂತೆ ಮಹಿಮೆಗಳನ್ನು ತೋರಿಸುತ್ತಾ ಇದ್ದನು. ಬೆಳ್ಳಾವಿ ಗ್ರಾಮದ ಪೂರ್ವಭಾಗಕ್ಕೆ ಇರುವ ನಾಗಪುರೀ ಎಂಬ ಗ್ರಾಮದ ಹತ್ತಿರ ಬೆಟ್ಟದ ಮೇಲೆ ಗವಿಯಲ್ಲಿ ಇರುವ ಮಲ್ಲಿಕಾರ್ಜುನ ಲಿಂಗವನ್ನು ನೋಡಿ ಆ ಗವಿಯನ್ನು ಸೇರಿಸಿ ಆಲಯಂ ಕಟ್ಟಿಸಿ ನೂತನ ರಥವನ್ನು ಮಾಡಿಸಿ, ರಥೋತ್ಸವ, ನಂದೀಧ್ವಜೋತ್ಸವ ಮತ್ತು ಮಹಾಗಣಾರಾಧನೋತ್ಸವಗಳನ್ನು ನಡೆಸಿ ಪ್ರತಿವರ್ಷ ಜಾತ್ರೆ ನಡೆಯುವಂತೆ ವ್ಯವಸ್ಥೆ ಮಾಡಿದರು. ಮುಂದೆ ಹೀಗೆ ಸಂಚಾರಕ್ಕೆ ಹೊರಟಾಗ ಅಳಲಘಟ್ಟ ಪುರಕ್ಕೆ ದಯಮಾಡಿಸಿ ಆ ಊರಿನ ಭಕ್ತರು ಶಿವಪೂಜಾದಿಗಳಿಗೆ ಏರ್ಪಡಿಸಿ, ಲಿಂಗಾರ್ಚನೋಪಕರಣಂಗಳಂ ಸಿದ್ಧಗೊಳಿಸಿ ಗುರುವೇ ದಯಮಾಡಿಸ ಬೇಕು ಎಂದು ಬಿನ್ನಹ ಮಾಡಿಕೊಳ್ಳಲು, ಕಾರದ ಗುರುವು ಬರುತ್ತೇವೆ ಎಂದು ಶೌಚಕರ್ಮಕ್ಕೋಸ್ಕರ ಹೋದಾಗ, ರಾಜಭೃತ್ಯಂ ಅಥವಾ ರಾಜನ ಸೇವಕ ಕತ್ತಲಲ್ಲಿ ಗೊತ್ತಾಗದೆ, ಅನುಮಾನದಿಂದ ಪ್ರಶ್ನೆಯನ್ನು ಮಾಡಲು ಕಾರದ ಶಿವಯೋಗಿಯು ಆಚಾರಭಂಗವಾಗುವುದು ಎಂದು ಮಾತನಾಡದೆ ಇರಲು, ರಾಜಭೃತ್ಯನು ವಿಕಾರಬುದ್ಧಿಯಿಂದ ಕಾವಲುದಂಡವನ್ನು ತೆಗೆದುಕೊಂಡು ಪರಿಪರಿಯಾಗಿ ಬಡಿಯಲು, ಬಾಧೆಯಂ ಸಹಿಸಿ ಕ್ರಿಯಾಲೋಪಬುದ್ಧಿಯಿಂ ಕಳವಳಿಸದೆ ಶೌಚಾದಿಗಳಂ ಪೂರ್ತಿಗೊಳಿಸಿ ಮಹಾತಾಪದಿಂ ಬಂದು ಪುರದ ದ್ವಾರದಲ್ಲಿ ನಿಂದು ಸಕಲರಿಗೂ ಈ ವೃತ್ತಾಂತವನ್ನು ತಿಳಿಸಲು, ಎಲ್ಲರೂ ಭಯದಿಂದ ನಡುಗಿದರು. ರಾಜಭೃತ್ಯ ಕ್ಷಮೆಯನ್ನು ಕೇಳಲು, ಪ್ರಯೋಜನವಾಗದೆ ಗುರುವಿನ ನಿಟ್ಟುಸುರಿನಿಂದ ಮೂರು ವರ್ಷ ಬರ ಹುಟ್ಟಲು ಎಲ್ಲರೂ ಮತ್ತೆ ಗುರುವಿನ ಪಾದಸ್ಪರ್ಶದಿಂದಲೆ ಉದ್ಧಾರವಾಗುವುದು ಎಂದು ತಿಳಿದು

ಗುರುವರನ ಸನ್ನಿಧಿಗೆ ಬಂದು ಬೇಡಿಕೊಳ್ಳಲು, ಗುರುವರನಿಗೆ ಕರುಣೆ ಬಂದು, ಇನ್ನು ಎಂಟು ದಿನಕ್ಕೆ ನಿಮ್ಮ ಗ್ರಾಮಕ್ಕೆ ಬರುತ್ತೇವೆ, ನಮ್ಮ ಅನುಷ್ಠಾನಕ್ಕೆ ಹಸಿರು ಚಪ್ಪರವನ್ನು ಹಾಕಿ ಮಹಾಗಣಾರಾಧನೆಗೆ ಬೇಕಾಗುವ ಸಾಮಗ್ರಿಗಳನ್ನು ಸಂಗ್ರಹಿಸಿ, ಗ್ರಾಮದ ಎಲ್ಲಾ ದೇವರುಗಳ ಉತ್ಸವವಂ ಏರ್ಪಡಿಸಿ ಎಂದು ಅಪ್ಪಣೆ ಕೊಡಲು, ಅದರಂತೆ ಸರ್ವ ವ್ಯವಸ್ಥೆಯನ್ನು ಮಾಡಿ, ಕಾರದ ಶಿವಯೋಗಿಗಳು ಅನುಷ್ಠಾನ ಜಪ ತಪವನ್ನು ಮುಗಿಸಿ ಶಿವಪೂಜೆಯನ್ನು ಸಾಂಗವಾಗಿ ನೆರವೇರಿಸಿ ಪಾದೋದಕ ಪ್ರಸಾದ ಕ್ರಿಯೆ ಮುಗಿದ ನಂತರ ಗಣಾರಾಧನೆಯನ್ನು, ದೇವರ ಉತ್ಸವಗಳನ್ನು ಕಾರದ ಶಿವಯೋಗಿಯನ್ನು ಜೀವಂತ ಬಸವನ ಮೇಲೆ ಆರೋಹಣ ಮಾಡಿಸಿ ಉತ್ಸವವನ್ನು ಮಾಡಲು ಆ ದಿನ ರಾತ್ರಿಯೆ ಮಳೆ ಬಂದು, ಕೆರೆ, ಹಳ್ಳ ಬಾವಿಗಳೆಲ್ಲಾ ನೀರು ತುಂಬಿ ಆ ಊರಿನ ಬರ ಹೋಗಿ ಸಮೃದ್ಧಿಯನ್ನು ಕಂಡಿತು. ಜನರೆಲ್ಲಾ ಗುರುಮಹಿಮೆಯನ್ನು ಕೊಂಡಾಡಿದರು.

ಬೆಳ್ಳಾವಿ ಗ್ರಾಮಕ್ಕೆ ಅಳಲುಘಟ್ಟದಿಂದ ಬರುವಾಗ ವೇಣುಪುರಿ ಅರ್ಥಾತ್ ಬಿದರೆ ಗ್ರಾಮದ ಭಕ್ತರು, ಮಹಾತ್ಮನ ಆಗಮನವನ್ನು ತಿಳಿದು ಮಹಾವೈಭವದಿಂದ ಎದುರುಗೊಂಡು ಬಿನ್ನಹ ಮಾಡಿಕೊಂಡು ಮಠದಲ್ಲಿ ಲಿಂಗಾರ್ಚನೆಯನ್ನು ಮಾಡಿಸಿ ತಮ್ಮ ಭಕ್ತಿಯನ್ನು ಸಮರ್ಪಿಸಿದರು. ಇರಕಸಮುದ್ರ ಗ್ರಾಮದ ನಂಜಯ್ಯನೆಂಬ ಭಕ್ತ ಬಂದು 'ನನ್ನ ಮಡದಿಗೆ ಮೋಹಿನಿಗ್ರಹ ಹಿಡಿದಿದೆ. ನನ್ನ ಸಂತಾನಗಳೆಲ್ಲ ನಾಶವಾಗಿ ಯಾವ ವಿಧವಾದ ಯಂತ್ರ ಮಂತ್ರಕ್ಕೂ ಅದು ಬಿಟ್ಟು ಹೋಗುತ್ತಿಲ್ಲ. ಭಕ್ತನ ರಕ್ಷಣಾಶೀಲನೆಂಬ ಬಿರುದನ್ನು ಧರಿಸಿರುವ ಸ್ವಾಮಿ ನೀನು ನನ್ನ ರಕ್ಷಿಸ ಬೇಕು' ಎಂದು ದೈನದಿಂದ ಬೇಡಲು ಆತನ ಮೇಲೆ ದಯೆ ಹುಟ್ಟಿ ಆತನ ಗೃಹಕ್ಕೆ ಹೋಗಿ ಲಿಂಗಾರ್ಚನೆಯನ್ನು ಮಾಡಿ ಆ ಭಕ್ತನ ಮಡದಿ ನಂಜಮ್ಮನನ್ನು ಕರೆದು ಭಸ್ಮವನ್ನು ಅಭಿಮಂತ್ರಿಸಿ ಧರಿಸಲು ನಿನ್ನ ಹೊಟ್ಟೆಯಲ್ಲಿ ಪುತ್ರ ಹುಟ್ಟುತ್ತಾನೆ ಎಂದು ಆಶೀರ್ವದಿಸಿದರು. ಆ ವಿಷಯವನ್ನು ತಿಳಿದ ಅದೇ ಗ್ರಾಮದ ಬೇಡ ಜಾತಿಯ ಪುಟ್ಟಹನುಮಪ್ಪ ತನಗೆ ಸಂತಾನವಿಲ್ಲದ್ದನ್ನು ಸ್ವಾಮಿಯಲ್ಲಿ ಅರಿಕೆ ಮಾಡಿಕೊಳ್ಳಲು ಭಸ್ಮವನ್ನು ಕೊಟ್ಟು ನಿನ್ನ ಇಷ್ಟಾರ್ಥ ನೆರವೇರುತ್ತದೆ' ಎಂದು ಆಶೀರ್ವದಿಸಿದರು.

ಅದರಂತೆ ಪುಟ್ಟಹನುಮಪ್ಪನಿಗೆ ಪುತ್ರ ಜನನವಾಗಲು ಬಹಳ ಸಂತೋಷದಿಂದ ಗುರುಕೃಪೆಯನ್ನು ಕೊಂಡಾಡುತ್ತಾ ಇದ್ದನು. ಕಾರದ ಗುರುವರೇಣ್ಯನು ಬೆಳ್ಳಾವಿಗ್ರಾಮದಲ್ಲಿ ಅನುಷ್ಠಾನ ಮಾಡಿಕೊಂಡು ಇರುತ್ತಿರಲು, ಬೆಳ್ಳಾವಿಗ್ರಾಮದ ಮೂಲೇಮಠದ ಸಿದ್ಧವೀರನೆಂಬ ಜಂಗಮೋತ್ತಮನು ಮನೆಮಠವನ್ನು ಬಿಟ್ಟು ವೈರಾಗ್ಯದಿಂದ ಗಿರಿಗುಹೆಗಳಲ್ಲಿ ಅನುಷ್ಠಾನ ಮಾಡಿಕೊಂಡು ಇರುತ್ತಾ ಇದ್ದನು. ಕಾರದ ಸ್ವಾಮಿಯ ಮಹಿಮೆಯನ್ನು ತಿಳಿದು ಸ್ವಾಮಿಯ ಸೇವೆಯನ್ನು ಮಾಡುತ್ತಾ ಇರಲು, ಗುರುವರನ ಲಿಂಗಾರ್ಚನಾವ್ರತಕ್ಕನುಕೂಲವಾಗಿ, ಯಾವ ರೀತಿ ಲಿಂಗಪೂಜೆಗೆ ಶಿಷ್ಯ ಅಣಿ ಮಾಡುತ್ತಾ ಇದ್ದ ಎಂಬುದನ್ನು ಕವಿಯ ಮಾತಿನಲ್ಲಿ ನೋಡೋಣ:

'ಮಹದುಷ್ಣೋದಕದೊಳ್ ನಿಂಬಪತ್ರಮಂ ಜತೆಗೂಳಿಸಿ' ಅರ್ಥಾತ್ ಶಿವಯೋಗಿಗಳು ತುಂಬಾ ಬಿಸಿಯಾದ ನೀರಿನಿಂದ ಜಳಕವನ್ನು ಮಡುತ್ತಾ ಇದ್ದರು, ಆ ನೀರು ಕಾಯಿಸುವ ಮುನ್ನ ಬೇವಿನ ಎಲೆಯನ್ನು ಸೇರಿಸಿ ಕಾಯಿಸಲಾಗುತ್ತಿತ್ತು ಎಂಬ ವಿಷಯ ತಿಳಿದು ಬರುತ್ತದೆ. ಬೇವು ವೈರಾಗ್ಯಕ್ಕೆ ಬಹಳ ಅನುಕೂಲವಾದದ್ದು. ಜೊತೆಗೆ ರೋಗನಾಶಕ. ಚರ್ಮಕ್ಕೆ ಬಹಳ ಅನುಕೂಲಕರವಾದದ್ದು. ಶ್ರೀ ಅಡವಿಸ್ವಾಮಿಗಳು, ಶ್ರೀ ಉದ್ದಾನ ಸ್ವಾಮಿಗಳು ಬಹಳ ಸುಡುವ ನೀರನ್ನು ಜಳಕಕ್ಕೆ ಬಳಸುತ್ತಾ ಇದ್ದರು. ಶಿಷ್ಯರು ಇಕ್ಕಳದಲ್ಲಿ ಚೆಂಬನ್ನು ಹಿಡಿದು ಹಾಕುತ್ತಾ ಇದ್ದರು ಎಂದು ಶಿಷ್ಯ ಸಂಪ್ರದಾಯದವರು ಹೇಳುತ್ತಾ ಬಂದಿರುವುದನ್ನು ಕೇಳಿದ್ದೇವೆ. "ಚಿತ್ರಕಂಬಾಳಾಸನದಿಂ ಗದ್ದುಗೆಯನ್ನಿಟ್ಟು ಪೂಜ್ಜ್ವಪೊಸದಾತ ಭಿನ್ನವಿಲ್ಲದ ಬಿಲ್ವಪತ್ರಂ, ತುಳಸೀಪತ್ರಂ, ಶಮೀಪತ್ರಂ, ದೂರ್ವಾಂಕುರಂ, ದ್ರೋಣಪುಷ್ಪಂ, ಶ್ರೀಗಂಧ ಧವಳಾಕ್ಷತೆ, ದೀಪ, ಧೂಪ, ಕರ್ಪೂರ, ತಾಂಬೂಲ, ನಾರಿಕೇಳ, ರಂಭಾಫಲ, ಖರ್ಜೂರ, ದ್ರಾಕ್ಷಾಶರ್ಕರಂ, ಮಧು, ಘೃತ, ದಧಿ, ಕ್ಷೀರ, ಪಚ್ಚಕರ್ಪೂರ, ಕೇಸರಿ, ಶ್ವೇತಸರ್ಷಪ, ಲಾಮಂಚ, ಕಚೋರ, ಕೋಷ್ಟ, ಪಲಕ್ಕಿ, ಜಾಯಿಕಾಯಿ, ಏಕಾದಶಘೃತವರ್ತಿತ್ಯಾದಿ, ಶಿವಾರ್ಚನೋಪಕರಣಂಗಳನ್ನಳವಡಿಸಿ ಗುರುವೇ ಶಿವಾರ್ಚನಾಸಮಯವೆಂದು ವಂದಿಸಲಾ ಗುರವರ್ಯಂ ವಿಧಿ ಕ್ರಮದಿಂ ಸ್ನಾನಂಗೈದಾಸನಾಸೀನನಾಗಿ ಮಂತ್ರತಂತ್ರಗಳಿಂ ಶಿಷ್ಯರಿಂ

ಶ್ರೀರುದ್ರಪಾರಾಯಣದಿಂ ನಾನಾವಿಧ ಸ್ತೋತ್ರ ಕೀರ್ತನಂಗಳಿಂದರ್ಚನೆಯ ಪೂರೈಸಲು ಕ್ಷೀರಾನ್ನ, ಗುಡಮಿಶ್ರ ಎಳೆಯ ನಾರಿಕೇಳಫಲದಿಂ ಮಿಶ್ರಮಾದ ಪರಮಾನ್ನಂಗಳಂ ತ್ರಿಮೂರ್ತಿಗಳರ್ಪಿತಕ್ಕೆ ತ್ರಿವಿಧಮಾದಡೆಯಂ ಬಡಿಸಿ ಗುರುವಿಂಗೆ ಬರಿಯ ಹಸಿಯ ಕಾರಮಂ ಬಡಿಸಲಾ ಚರವರಂ ಲಿಂಗಾರ್ಪಣೆಯಂ ಮಾಡಿ ಸೇವಿಸಿ ಶೇಷಮಂ ಶಿಷ್ಯಗೊಪ್ಪಿಸಿ ಈ ಕ್ರಮದಿಂದಾನಂದದೊಳಿರುತ್ತಿರ್ದು.

ಒಂದು ದಿನ ಗುರುವು ಶಿಷ್ಯನನ್ನು ಕುರಿತು "ಕಳೆದಿರುಳ್ ಕರದೊಳ್ ತ್ರಿಶೂಲಿ-ದಂಡ-ಕಮಂಡಲುಗಳಂ ಪಿಡಿದು ಪೆಗಲೊಳ್ ಗಂಡುಗೊಂಡಲಿಯಂ ಪೊತ್ತು ಶಿರದೊಳ್ ಜಡೆಯಂ ಧರಿಸಿ ಚರಣದೊಳ್ ಪಾವುಗೆಯಂ ಮೆಟ್ಟಿ ಸರ್ವಾಂಗದೊಳ್ ಭಸ್ಮ ರುದ್ರಾಕ್ಷಧಾರಣಮನೆಸಗಿ ವಕ್ತ್ರದೊಳ್ ಮಹಾಪಂಚಾಕ್ಷರ ಮಂತ್ರಮಂ ಪಠಿಸುತ್ತಿಲ್ಲಿಗೆ ಷೋಡಶಯೋಜನದೊಳ್ ಪ್ರಕಾಶಿಸುವ ಗಿರಿಮಾಳವೆಂಬ ಕ್ಷೇತ್ರದೊಳ್ ಯೋಗಸಮಾಧಿಯೊಳಿರ್ಪ ಶ್ರೀ ಜಡೆಯ ರುದ್ರಸ್ವಾಮಿಯು ಎನ್ನಂ ಕುರಿತು ಎಲೈ ಸಾಧುಜನಸಂಪ್ರೀತನೆ ನಮ್ಮ ಕ್ಷೇತ್ರಕ್ಕೊಮ್ಮೆ ದಯೆಗೈದು ಆತಿಥ್ಯಮಂ ಸ್ವೀಕರಿಸಲಿಚ್ಛೆಯುಮಿಲ್ಲವೇ ಎಂದು ದರ್ಶನಗೊಟ್ಟು ನಿರೂಪಿಸಿ ಪೋಗಿರ್ದನದು ಕಾರಣದಿಂದಾ ಮಹಾತ್ಮನ ಸನ್ನಿಧಿಗೆ ಪೋಗಲ್ವೇಳ್ಕುಮೆಂದು ಶಿಷ್ಯನೊಡನೆ ಪ್ರಯಾಣಮಂ ಬೆಳೆಸಿ ಮುಡುಕುತೊರೆ, ಶಂಭುಲಿಂಗಾದ್ರಿ, ಪ್ರಭುಗಿರಿ ಮೊದಲಾದ ಪರ್ವತಕ್ಷೇತ್ರಂಗಳೊಳನುಷ್ಠಾನಂಗೈದುಲಲ್ಲಿ ಸದ್ಭಕ್ತರಿಷ್ಟಾರ್ಥಮನ್ನಿತ್ತು ಕೆಲವು ದಿನಂಗಳ್ಗೆ ಶ್ರೀಜಡೆಯ ರುದ್ರಾಂಗವಾಸವಾದ ಗಿರಿಮಾಳಂ ಕ್ಷೇತ್ರಮಂ ಪೊಕ್ಕು ಮೂರ್ತಿಯ ದರ್ಶನ ಮಾಡಿ ಶಿವಪೂಜಾದಿಗಳನ್ನು ಮಾಡುತ್ತಾ ಕೆಲವು ದಿನದ ನಂತರ ಹೊರಡಲು ಅಪ್ಪಣೆ ಕೇಳಲು ನಿನ್ನ ಶಿಷ್ಯ ಸಿದ್ಧವೀರದೇವರಿಗೆ ಇಲ್ಲೇ ಇದ್ದು ಸೇವೆ ಮಾಡಿಕೊಂಡು ಇರಲು ಆಜ್ಞಾಪಿಸಲು ಎಂದು ಅಪ್ಪಣೆ ಮಾಡಲು ಅದರಂತೆ ಸಿದ್ಧವೀರದೇವ ಜಡೆಯರುದ್ರಸ್ವಾಮಿ ಕರುಣೆಗೆ ಪಾತ್ರನಾಗಿ, ಸಕಲಭಕ್ತರ್ಗೆ ಅನುಗ್ರಹವನ್ನು ಮಾಡುತ್ತಾ ಮಹಾಮಹಿಮನೆನಿಸಿ ಆನಂತರ ಲಿಂಗೈಕ್ಯವಾದನು.

ಸಂಚಾರ ಮಾಡುತ್ತಾ ಕಾರದ ಶಿವಯೋಗಿ ಶಿಷ್ಯರಕ್ಷಣಾರ್ಥ ಬೆಂಗಳೂರು ನಗರಕ್ಕೆ ಬರಲು, ಮಾಮೂಲುಪೇಟೆ ಬಾಣಾವರದ ಗುರುಬಸಪ್ಪನೆಂಬ ಶಿವಭಕ್ತನು ಫಲಪುಷ್ಪದ ತಟ್ಟೆಯನ್ನು ಒಪ್ಪಿಸಿ ನಮ್ಮ ಮನೆಗೆ ಶಿವಪೂಜೆಗೆ ದಯಮಾಡಿಸ ಬೇಕು ಎಂದು ಸಾಷ್ಟಾಂಗ ಹಾಕಲು ಅದರಂತೆ ಕಾರದ ಶಿವಯೋಗಿ ಅವರ ಮನೆಯಲ್ಲಿ ಶಿವಪೂಜೆಯನ್ನು ಮಾಡುತ್ತಾ ಕಡೆಯಲ್ಲಿ ಶಿಷ್ಯನಾದ ಗುರುಬಸವಯ್ಯನನ್ನು ಮತ್ತೆ ಸ್ನಾನ ಮಾಡಿ ಎಂದು ಅಪ್ಪಣೆ ಮಾಡಿದರು. ಅದರಂತೆ ಮತ್ತೆ ಸ್ನಾನ ಮಾಡಿ ಬಂದ ಗುರುಬಸಪ್ಪ ಸಾಷ್ಟಾಂಗದೀರ್ಘನಮಸ್ಕಾರ ಮಾಡಿ ನಿಂತಿರಲು, ಕಾರದ ಶಿವಯೋಗಿಯು ಸುಪ್ರಸನ್ನನಾಗಿ ನಾರಿಕೇಳಫಲ ಅರ್ಥಾತ್ ತೆಂಗಿನಕಾಯಿ, ರಂಭಾಫಲಂ ಅರ್ಥಾತ್ ಬಾಳೆಹಣ್ಣನ್ನು ಭಸಿತ ಸಹಿತ ಸೇವಿಸಬೇಕು ಎಂದು ಅಪ್ಪಣೆ ಮಾಡಲು, ಗುರುಬಸಪ್ಪನವರು ದೈನ್ಯಭಾವದಿಂದ 'ಗುರುವೆ, ಅತಿಯಾದ ಶ್ವಾಸರೋಗದಿಂದ ಬಳಲುತ್ತಾ ಇದ್ದೇನೆ. ಶೀತವಾದ ಈ ಪ್ರಸಾದ ಸೇವನೆಯಿಂದ ಬಹಳ ತೊಂದರೆಯಗುವುದು' ಎಂದಾಗ, 'ಅಂಜದಿರು ಶಿಷ್ಯ ನಿನ್ನ ಕಾಯಿಲೆ ಇಂದಿಗೆ ನಾಶವಾಗುವುದು' ಎಂದು ಪರುಷಹಸ್ತದಿಂದ ನೀಡಿದ ಪ್ರಸಾದ ಸೇವನೆಯಿಂದ ಶರೀರದ ತಾಪವೆಲ್ಲ ಅಡಗಿತ್ತು. ನಂತರ ಗುರುವಿನ ಪಂಕ್ತಿಯಲ್ಲಿ ಕುಳಿತು ತಯಾರಿಸಲ್ಪಟ್ಟ ಎಲ್ಲಾ ಭಕ್ಷಂಗಳನ್ನು ಸೇವನೆ ಮಾಡಿದರು. ಗುರುವಿನ ಕಟಾಕ್ಷದಿಂದ, ರೋಗವಿಮುಕ್ತನಾದನೆಂದು ಬಹಳ ಸಂತೋಷದಿಂದ ಗುರುಬಸಪ್ಪನು ಜಂಗಮ ಮಹಿಮೆಯನ್ನು ಕೊಂಡಾಡುತ್ತಾ ಇದ್ದನು.

ಶಿರಾ ರಸ್ತೆಯಲ್ಲಿರುವ ತರುಪುರೀಕ್ಷೇತ್ರದಲ್ಲಿ (ತರೂರು ಗ್ರಾಮ) "ಭವಾರಣ್ಯ ವೈಶ್ವಾನರವೆನಿಸಿ ನೆರೆಕೀರ್ತಿಯಂ ಪಡೆದು ಕಡೆಯೊಳ್ ಯೋಗಸಮಾಧಿಯ ತಾ ಪೊಂದಿ ಪ್ರಕಾಶಿಸುತ್ತಿರ್ಪ" ಶ್ರೀ ಸಿದ್ಧಲಿಂಗಸ್ವಾಮಿಯ ಸಮಾಧಿಸ್ಥಾನದೊಳ್ ಕಾರ್ತಿಕ ಮಾಸದ ಕಡೆಯಲ್ಲಿ ದಾಸೋಹವನ್ನು ನಡೆಸುತ್ತಾ ಇದ್ದ ಮಲ್ಲಾರ್ಯನೆಂಬ ಶರಣನು ಆ ಪರಿಸರದಲ್ಲೆ ಸಂಚಾರ ಮಾಡುತ್ತಾ ಇದ್ದ ಕಾರದ ಸ್ವಾಮಿಗಳಿಗೆ ಬಿನ್ನಹ ಮಾಡಿಕೊಂಡು ದಯಮಾಡಿ ಅನುಷ್ಠಾನ ಶಿವಪೂಜೆಯನ್ನು ಮಾಡಬೇಕೆಂದು ವಿನಂತಿಮಾಡಿಕೊಳ್ಳಲು ಅದರಂತೆ ಶಿವಪೂಜೆ, ಅನುಷ್ಠಾನವನ್ನು ನೆರವೇರಿಸಲು ಈ ಕಾರ್ಯಕ್ರಮಕ್ಕೆ ಊರಿನ ಅನೇಕ ಶರಣರು

ಬರದೆ ಇರಲು, ಕಾರದ ಸ್ವಾಮಿಗಳು ಎಲ್ಲರನ್ನೂ ಕರೆಸಿ ಈ ಪ್ರಮಥರಾರಾಧನೆಗೆ ಭಾಗವಹಿಸದೆ ಇರುವುದು ವಿಹಿತವಲ್ಲ. ಎಲ್ಲರೂ ಸೇರಿ ಪರ್ವವನ್ನು ಮಾಡಿ ಎಂದು ಅಪ್ಪಣೆ ಕೊಡಲು ಭಕ್ತಜನರು ಜಡಬುದ್ಧಿಯಿಂ ಬಿಡದಿರಲು ನಿಮಗೆ ಧನಧಾನ್ಯ ಮದದಿಂದ ಇಂತಹ ಅಹಂಕಾರ ಉಂಟಾಗಿದೆ ಎಂದು, ನಿಮ್ಮ ತೋಟಗಳೆಲ್ಲಂ ಒಣಗಿ ಗೋಟಂಗಳಾಗಿ ಪರಿಣಮಿಸಲೆಂದು ನುಡಿದು ನಿಮಗೆ ಸಂದರ್ಶನ ಸಲ್ಲದೆಂದು ಬೆಳ್ಳಾವೆ ಗ್ರಾಮಕ್ಕೆ ನಡೆದರು. ಆಗ ತರೂರು ಭಕ್ತರೆಲ್ಲ ಒಗ್ಗಟ್ಟಾಗಿ ಬಂದು ನಾವು ಮಾಡಿದ್ದು ತಪ್ಪು ಎಂದು ಪಶ್ಚಾತ್ತಾಪದ ಅಗ್ನಿಯಲ್ಲಿ ಬೆಂದು, ಗುರುಕೃಪೆಗೋಸ್ಕರ ಸಾಕಷ್ಟು ಬೇಡಿಕೊಂಡರು. ಆಗ ತರೂರು ಭಕ್ತಾದಿಗಳನ್ನು ಆಶೀರ್ವದಿಸಿ ಸದಾ ಗುರುಭಕ್ತರಾಗಿರಿ ಎಂದು ಆಶೀರ್ವದಿಸಿ ಕಳುಹಿಸಿ ಕೊಟ್ಟರು.

ಬೆಳ್ಳಾವೆ ಗ್ರಾಮದ ಹತ್ತಿರ ಇರುವ ದೊಡ್ಡೇರಿ ಗ್ರಾಮದ ಲಿಂಗಪ್ಪನೆಂಬ ಗೃಹಸ್ಥನಿಗೆ ಮಾಂತ್ರಿಕರು ಮಾಟ ಮಾಡಿದ್ದರಿಂದ, ಮಹಾವ್ಯಾಧಿಗೆ ಸಿಲುಕಿ ತದ್ಬಾಧೆಯಿಂ ತಾಳಲಾರದೆ ಆರು ತಿಂಗಳಾದರೂ ಮಂತ್ರ ಔಷಧಗಳಿಂದ ಗುಣ ಕಾಣದೆ, ಬಹಳ ವ್ಯಥೆಪಡುತ್ತಾ ಪ್ರಾಣೋತ್ಕ್ರಮಣ ಸ್ಥಿತಿಯಲ್ಲಿ ಇರಲು ಆತನ ಪತ್ನಿ ಪೂರ್ವಸಂಸ್ಕಾರ ಪರಿಪಾಕದಿಂ ಜ್ಞಾನೋದಯ ಹೊಂದಿ ಬೆಳ್ಳಾವಿ ಗ್ರಾಮದಲ್ಲಿ ಅನುಷ್ಠಾನ ಮಾಡಿಕೊಂಡಿರುವ ಕಾರದ ಶಿವಯೋಗಿಗಳ ಚರಣಕಮಲಗಳಿಗೆ ನಮಸ್ಕರಿಸಿ ತನ್ನ ಗಂಡನ ಎಲ್ಲಾ ವಿಷಯವನ್ನು ಬಿನ್ನವಿಸಿ ರಕ್ಷಿಸಬೇಕು ಎಂದು ಸೆರಗೊಡ್ಡಿ ಬೇಡಿಕೊಂಡಳು. ಆಕೆಗೆ ಅಭಯವನ್ನು ಕೊಟ್ಟು ಭಕ್ತನ ಗೃಹಕ್ಕೆ ಬಂದು "ಭಕ್ತನಂ ಕೃಪಾವಲೋಕನದಿಂ ಸಂತೈಸಿ, ಅಮೃತಾಂಜಲಿಯಿಂದಭಿಮಂತ್ರಿತವಾದ ಭಸ್ಮಮಂ ಸರ್ವಾಂಗದೊಳು ಧೂಳನಗೆಯ್ದು ಮೃತ್ಯುಂಜಯಮಾದ ಶ್ರೀ ಪಂಚಾಕ್ಷರೀ ಮಹಾಮಂತ್ರೋಚ್ಚಾರಣೆಯಿಂದಾ ಮಾಂತ್ರಿಕರ ದೃಷ್ಟಿ ಪ್ರಯೋಗಂಗಳಂ ನಾಶಪಡಿಸಲಾವ್ಯಾಧಿಯುಂ ದಿವಾಕರನಿಂ ದಹಿಸಿಲ್ಪಟ್ಟ ತಮೋರಾಶಿಯಂದದಿಂ ಪರಿಹೃತಮಾದುದು. ಲಿಂಗಪ್ಪನ ವ್ಯಾಧಿ ಪರಿಹಾರವಾಗಿ ಸುಖವಾಗಿ ತನ್ನ ಬದುಕನ್ನು ಸಾಗಿಸಿದ. ಆತನ ವಂಶಸ್ಥರು ಈಗಲೂ ಸ್ವಾಮಿಯ ಸೇವೆಯನ್ನು ಮಾಡುತ್ತಾ ಇದ್ದಾರೆ. ಅದೇ ದೊಡ್ಡೇರಿ ಗ್ರಾಮದಲ್ಲಿ ಸಿದ್ಧನಂಜಪ್ಪ ಎಂಬ ಹೆಸರಿನ ಶರಣನಿಗೆ ಮೋಹಿನಿಗ್ರಹದಿಂದ ಬಹಳ ತೊಂದರೆಗೆ ಸಿಲುಕಿದ್ದ ಅವನು ಸ್ವಾಮಿ ದಯೆಯಿಂದ ಪಾರಾದ ಶಿಂಗಿಪುರದ ರಂಗಪ್ಪನಿಗೆ ಮಾಂತ್ರಿಕರಿಂದ ಬಹಳ ತೊಂದರೆ ಉಂಟಾಗಿತ್ತು. ಅದು ಸ್ವಾಮಿಯ ಕರುಣೆಯಿಂದ ಪರಿಹಾರವಾಯಿತು.

ಸಿದ್ಧರ ಬೆಟ್ಟದ (ಸಿದ್ಧಗಿರಿಯ) ದಕ್ಷಿಣ ಭಾಗಕ್ಕೆ ಮಣುವಿನ ಕುರಿಕೆ ಎಂಬ ಗ್ರಾಮವಿದೆ. ಸಿದ್ಧರ ಬೆಟ್ಟದ ಈ ತಪ್ಪಲಿನಲ್ಲಿ ಶ್ರೀ ಗಮನದ ಸ್ವಾಮಿ ಅವರ ಸಮಾಧಿ ಇದೆ. ಭಕ್ತಜನರು ಈ ಗದ್ದುಗೆಗೆ ಬಹಳ ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಕಾರದ ಶಿವಯೋಗಿಗಳು ಈ ಶರಣರ ಗದ್ದುಗೆ ಹತ್ತಿರ ಶಿವಪೂಜಾನುಷ್ಠಾನ ಮಾಡಿಕೊಂಡು ಇರುತ್ತಾ ಇದ್ದರು. ಮಣೆವಿನ ಕುರಿಕೆಯ ಭಕ್ತರು ನಮ್ಮ ಗ್ರಾಮಕ್ಕೆ ದಯಮಾಡಿಸಿ ದರ್ಶನಾಶೀರ್ವಾದ ನೀಡಬೇಕು ಎಂದು ಬಿನ್ನಹ ಮಾಡಿಕೊಂಡರು. ಅದರಂತೆ ಕಾರದ ಶಿವಯೋಗಿಗಳು ಗ್ರಾಮದ ಭಕ್ತರ ಸೇವೆಯಂ ಕೈಕೊಳ್ಳುತ್ತಿರ್ಪಾಗಳ್, ನಾಗಣ್ಣನೆಂಬ ಭಕ್ತ ಸ್ವಾಮಿಯ ಬಗ್ಗೆ ಉದಾಸೀನಭಾವಮಂ ತಳೆದು ಜನ ಮೆಚ್ಚಲಿ ಎಂದು ಈ ಸ್ವಾಮಿಗಳು ಕಾಪಟ್ಯದಿಂ ಸೇವಿಸುತ್ತಾರೆ ಎಂದು ಅನ್ನಲು, ಇದನ್ನು ತಿಳಿದ ಕಾರದ ಶಿವಯೋಗಿಗಳು 'ಮಹಾಪಾಪಿಯಾದ ನೀನು ಗುರುನಿಂದನೆ ಮಾಡಿರುವೆ. ಆದ್ದರಿಂದ ನಿನ್ನ ಸೇವೆ ಬೇಡ' ಎಂದು ಉಳಿದ ಭಕ್ತರಿಂದ ಸತ್ಕಾರ ಹೊಂದಿ ಬೆಳ್ಳಾವೆ ಗ್ರಾಮಕ್ಕೆ ಬರಲು, ಮಣುವಿನಕುರಿಕೆ ಗ್ರಾಮದಲ್ಲಿ ನಾಗಣ್ಣನನ್ನು ಭಕ್ತಜನರು ಯಾವ ಕಾರ್ಯಗಳಿಗೂ ಸೇರಿಸದೆ ಬಹಿಷ್ಕಾರವನ್ನು ಹಾಕಲು ಆತನ ಮಕ್ಕಳು ಬಂದು ಕಾರದ ಶಿವಯೋಗಿಗಳನ್ನು ಕಾಡಿ ಬೇಡಿ ತಮ್ಮ ತಂದೆಯ ತಪ್ಪನ್ನು ಮನ್ನಿಸಬೇಕು ಎಂದು ವಿನಂತಿಸಿಕೊಂಡರು.

ಕಾರದ ಶಿವಯೋಗಿಗಳು ಬೆಳ್ಳಾವಿಯ ಮಠದಲ್ಲಿ ಶಿವಪೂಜಾದಿಗಳನ್ನು ಮಾಡಿಕೊಂಡು ಇರುವಾಗ ತತ್ಪುರದ ದೇಶದ ಮಠಾಧಿಪನಪ್ಪ ಕಾಕಾರ್ಯನೆಂಬ ಮಾಹೇಶ್ವರಂ ಬಂದು ಸಾಷ್ಟಾಂಗವಾಗಿ ನನಗೆ ಹುಟ್ಟಿದ ಮಕ್ಕಳು ದಕ್ಕುತ್ತಾ ಇಲ್ಲ. ಎಲ್ಲವೂ ನಾಶವಾಗುತ್ತಾ ಇವೆ. ತಮ್ಮ ಕೃಪೆಯಿಂದ ಪುತ್ರನನ್ನು ಅನುಗ್ರಹಿಸ ಬೇಕು ಎಂದು ವಿನಂತಿಸಿಕೊಂಡಾಗ 'ಎಲೈ ಕಾಕಾರ್ಯನೇ ಅದರ ಪೂರ್ವಾಪರಂ ವೇದ್ಯಮಾಗಿರ್ಪುದು. ಆದರೆ ನಿನಗದರ ಗೊಡವೆ ಬೇಡ, ನಿನ್ನ ಕೋರಿಕೆಯಂತೆಯೇ ಪುತ್ರನುದಿಸಿ

ಗುರುಪೀಠಮನಾರೋಹಿಸಿ ಮಹಿಮಾಕರನಪ್ಪಂ ಕೆಲವತ್ಸರಂಗಳ್ ಕಳೆಯಲ್ಕಾತನಂ ಗುರುಪಾದಕ್ಕರ್ಪಿಸೆಂದು ಮಂತ್ರಪೂರಿತವಾದ ಭಸ್ಮಮನಿತ್ತರ್.

ಶಿಷ್ಯರಕ್ಷಣೆಗಾಗಿ ಕಾರದ ಶಿವಯೋಗಿಗಳು ಸಂಚಾರಕ್ಕೆ ಹೋಗುತ್ತಿದ್ದಾಗ ಮಾವುಕೆರೆ ಭಕ್ತರು ಮಹಾತ್ಮನ ದರ್ಶನದಿಂದ ಕೃತಾರ್ಥರಾಗಬೇಕೆಂದು ಬಿನ್ನಹ ಮಾಡಿಕೊಂಡರು. "ಭಕ್ತರ್ಕಳೇ, ಈ ಆಶ್ವಯುಜಮಾಸಂ ಪರಿಪೂರ್ತಿಯಾಗುವ ಪರಿಯಂತರಮೀ ಗಿರಿಯೊಳೆ ನಿಮ್ಮ ಪುರಿಯ ಶ್ರೇಯಃ ಪ್ರಾರ್ಥನೆಯನ್ನೆಸಗುವೆ" ಎಂದು ಅಪ್ಪಣೆ ಕೊಡಲು ಗುರುವರನ ನುಡಿಗೆ ಹರ್ಷಗೊಂಡು ಮಹಾಗಣಾರಾಧನೆಯನ್ನು ಮಾಡಿ ಭಕ್ತಜನರನ್ನು ಸಂತೋಷಪಡಿಸಿದರು.

ಬೆಳ್ಳಾವೆ ಗ್ರಾಮದ ಪುರಬೀದಿಯೊಳಗೆ ಬರುತ್ತಾ ಇರಲು ಸಿದ್ಧಹೊನ್ನಪ್ಪನೆಂಬ ಭಕ್ತನು ಬಂದು ತನ್ನ ಗೃಹಮಂ ಪೊಕ್ಕು ರಕ್ಷಿಸಬೇಕು ಎಂದು ವಿನಂತಿಸಿಕೊಳ್ಳಲು, ಅದರಂತೆ ಅವರ ಮನೆಯಲ್ಲಿ ಉನ್ನತಾಸನದಲ್ಲಿ ಕುಳಿತು ಭಕ್ತನು ತನ್ನ ಪತ್ನಿ ಪುತ್ರರ ಸಮೇತ ಪಾದಪ್ರಕ್ಷಾಲನೆ ಮಾಡಿ, 'ಮೂರು ದಿನದಿಂದ ಸರ್ಪವು ಈ ಮನೆಯಲೆಲ್ಲಾ ಓಡಾಡುತ್ತಿದೆ. ಬಹಳ ಭಯವನ್ನು ಮಕ್ಕಳು ಪತ್ನಿ ಪಡುತ್ತಿದ್ದಾರೆ. ತಮ್ಮ ದೃಷ್ಟಿಯಿಂದ ಈ ಕಷ್ಟವನ್ನು ನಿವಾರಣೆ ಮಾಡಬೇಕು' ಎಂದು ವಿನಂತಿಸಿಕೊಂಡರು. ಈ ಪಾದೋದಕವನ್ನು ಗೃಹದ ಎಲ್ಲಾ ಭಾಗಗಳಿಗೂ ಸಿಂಪಡಿಸು ಎಂದು ಅಪ್ಪಣೆ ಮಾಡಿದರು. ಆ ದಿನದಿಂದ ಸರ್ಪಸಂಚಾರ ತಪ್ಪಿತು.

ಒಂದು ದಿನ ಗುರುಚನ್ನಬಸವಣ್ಣನೆಂಬ ಸದ್ಭಕ್ತನ ಮನೆಗೆ ದಯಮಾಡಿಸಿ ಪಾದಪೂಜೆಯನ್ನು ಸ್ವೀಕರಿಸಿ ಕುಳಿತಿರಲು, ಶಿವಯೋಗಿಗೆ ಆನಂದಪುಟ್ಟಿ ಶಿವಯೋಗ ನಿದ್ರೆಯೊಳಿರಲ್, ಭಕ್ತಂ ಭಯಗೊಂಡು ಧ್ಯಾನಿಸುತ್ತಿರಲ್ ಮೂರು ದಿನಾನಂತರದೊಳ್ ಬಹಿರ್ಮುಖವಾಗಿ ಮೆರೆವ ಗುರುವರನಂ ಮಹಾಭಕ್ತಿಯಿಂದರ್ಚಿಸಿ ಬೀಳ್ಕೊಟ್ಟಂ.

ಶ್ರೀಗುರುದೇವರು ಸಂಧ್ಯಾ ಸಮಯದಲ್ಲಿ ಶೌಚಕರ್ಮಕ್ಕೆ ಹೋಗುತ್ತಿದ್ದಾಗ ವೀರಸೋಮಪ್ಪನೆಂಬ ಮೂಢಭಕ್ತನು, ಮುಂದಿನ ಗ್ರಾಮಕ್ಕೆ ಹೋಗುತ್ತಿದ್ದಾಗ ಗುಡುಗು ಸಿಡಿಲು ಸಮೇತ ಮಳೆ ಬರಲು, ಭಕ್ತನು ಕಾರದ ಶಿವಯೋಗಿಗಳನ್ನು ಬೇಗ ಬೇಗ ಬನ್ನಿ ಬಹಳ ಮಳೆ ಬರುತ್ತಿದೆ ಎಂದು ಹೇಳಲು, ಆ ಭಕ್ತನನ್ನು ಕುರಿತು ಶಿವಯೋಗಿಗಳು ನೀನು ಮುಂದೆ ಕಾಣುವ ಮಂಟಪದಲ್ಲಿ ನಿಲ್ಲು ಬರುತ್ತೇನೆ ಎಂದು ಅಪ್ಪಣೆ ಮಾಡಿದರು. ಆ ಮಂಟಪವನ್ನು ಆ ಭಕ್ತ ಮುಟ್ಟುವ ಮುನ್ನವೆ ಕಾರದ ಶಿವಯೋಗಿಗಳು ಆ ಮಂಟಪದಲ್ಲಿ ಇದ್ದು, ಭಕ್ತನನ್ನೇ ಬಾ ಬೇಗ ಎಂದು ಕರೆದರು. ಅದನ್ನು ಕಂಡು ಭಕ್ತನಿಗೆ ಬಹಳ ಆಶ್ಚರ್ಯವಾಯಿತು. ಇನ್ನು ಇಹಲೋಕದ ಜಂಜಾಟ ಸಾಕು, ಲೀಲೆಯನ್ನು ಮುಗಿಸಬೇಕು ಎಂದು ನಿರ್ಧರಿಸಿ ತಮಗೆ ದೀಕ್ಷೆ ಕೊಟ್ಟ ಗುರುವಿನ ಅಥವಾ ಗುರುಗದ್ದುಗೆ ದರ್ಶನ ಮಾಡಿ ಅವರ ಅಪ್ಪಣೆ ಪಡೆಯಲು ಸೊಲ್ಲಾಪುರಕ್ಕೆ ಪ್ರಯಾಣ ಬೆಳೆಸಲು ನಿರ್ಧರಿಸಿದರು. ಆ ಭಾಗವನ್ನು ಯಥಾವತ್ತಾಗಿ ಕೊಡಲಾಗಿದೆ:

ಸೊನ್ನಲಾಪುರದ ಕ್ಷೇತ್ರಮಂ ಪೊಕ್ಕಲ್ಲಿರ್ದು ನಿಜಗುರುವಿಗಾವಾಸಮಾದ "ನೀಲಂಗಪುರಮಠದೊಳ್ ಶೋಭಿಸುತ್ತಿರ್ಪ ಗುರುದರ್ಶನಂಗೈದು. ಕಾಣಿಕೆಯನ್ನು ಕೊಟ್ಟು ಗುರುವೇ ನಿನ್ನ ಕೃಪೆಯಿಂದ ಧನ್ಯತೆಯಾಂದೆಂ ನಿನ್ನಪ್ಪಣೆಯಿಂದಿನ್ನು ಕೆಲರ್ ಧನ್ಯತೆಯಾಂತರ್ ಎಂದು ಗುರುವರನೊಳ್ ವಿಜ್ಞಾಪಿಸಿ ಕೆಲವು ದಿನಂಗಳ್ ತತ್ಸೇವಾಸಕ್ತನಾಗಿರ್ದು ಅಪ್ಪಣೆಯಂ ಪಡೆದು ಬೆಳ್ಳಾವಿ ಗ್ರಾಮಕ್ಕೆ ಬಂದು, ಶಾಲಿವಾಹನ ಶಕ ೧೮೩೦ಕ್ಕೆ ಸಲ್ಲುವ ಕೀಲಕ ಸಂವತ್ಸರ ಶ್ರಾವಣ ಶುಕ್ಲ ತ್ರಯೋದಶಿ ಇಂದು ವಾಸರದೊಳ್ ಲಿಂಗಾರ್ಚನಾನಂತರ ಶಿಷ್ಯರ್ಕಳಂ ಬರಮಾಡಿ ಎಲೈ ಶಿಷ್ಯರ್ಕಳೇ ಇನ್ನೆವರಂ ನಿಮ್ಮ ಭಕ್ತಿಪಾಶಕ್ಕೆ ಸಿಲ್ಕಿರ್ದೆ. ಲಿಂಗಮೂರ್ತಿಯೊಳ್ ಬೆರೆದಾನಂದಮಂ ಪೊಂದುವೆಂ. ನೀವ್ಗಳೆಲ್ಲ ಗುರುಲಿಂಗಜಂಗಮಪ್ರೇಮಗಳಿಂದಿರ್ದು ಕಡೆಯೊಳ್ ಮುಕ್ತಿಪಡೆಯಿರೆಂದು ಆಶೀರ್ವದಿಸಿ ಸರ್ವಜೀವದಯಾಪರನಾಗಿಯೂ ಗುರುದೈವಂಗಳೊಳಾಸ್ತಿಕವಾಗಿಯೂ ಸಕಲ ಕಾರ್ಯಂಗಳೊಳ್ ಚತುರನಾಗಿಯೂ ಭಕ್ತಿಸಾಗರನೆನಿಸಿ ರಂಜಿಸುವ ಗಟ್ಟೇ ಚನ್ನಪ್ಪಯ್ಯನೆಂಬ ಪ್ರಿಯಶಿಷ್ಯನಂ ಕರೆದು ಎಲೈ

ಸಚ್ಛಿಷ್ಯನೇ, ಅಂದಿನಿಂದ ನೀಂ ನನ್ನಂತರಂಗಮನರಿತ್ತು ಅನುಜ್ಞೆಯಿಂದ ಮಹಾಪ್ರಸಾದಮೆಂದು ಶಿರದೊಳಾಂತು ಮನವೊಪ್ಪಂತೆ ನಡಸುತ್ತಿರ್ಪೆ. ಈಗಳುಂ ಈ ಭಕ್ತಿ ವಿಶ್ವಾಸಮಂ ಬಿಡದೆ ನಡೆಸುಯೆಂಬ ನಂಬಿಕೆಯಿಂ ಸಂಪೂರ್ಣವಾಗಿ ನೆಲೆಗೊಂಡಿರ್ಪುದು ನೀ ನಡೆಸುವ ಕಾರ್ಯಗಳೊಳೆಲ್ಲಂ ನಾಂ ಸಹಕಾರಿಯಾಗಿರ್ಪೆನಿಕೆ ಸಂದೇಹಂ ಬೇಡೆಂದು ಆ ಶಿಷ್ಯಂಗೊರೆಯಲ್ ನಿಜಶಿಷ್ಯಂ ಗುರುವೇ ನಿಮ್ಮನುಜ್ಞೆಯನೇಗಳುಮತಿಕ್ರಮಿಸಿದೆನಿಲ್ಲ. ಇನ್ನೀಗಳುಮತಿಕ್ರಮಿಸುವನೆ ಈ ಎನ್ನ ದೇಹಂ ನಿಮ್ಮ ಸೇವೆಯೋಳ್ ಸವೆಯಲೆಂದು ವಿಜ್ಞಾಪಿಸಿದ ಶಿಷ್ಯನೊಳ್ ಮಿಗಿಲಾದಂತಃಕರಣಂ ಪುಟ್ಟಿ ಹೇ ಶಿಷ್ಯಶಿಖಾಮಣಿ, ನೀಂ ಕಡೆಯೊಳ್ ಮೋಕ್ಷಮಂ ಪಡೆದು ನಿತ್ಯಾನಂದಸುಖಮಂ ಪೊಂದುವೆ ಎಂದಭಯಪಿತ್ತು, ಶಿಷ್ಯನೇ, ಸಮಯಮೊದಗಿದುದು ಸಕಲ ಸನ್ನಾಹಂಗ್ಗಳನವಡಿಸಿ ಸಲುಜ್ಜಗಿಸೆಂದಪ್ಪಣೆಯಿತ್ತು ಪದ್ಮಾಸನಾಸೀನನಾಗಿ ಕುಳಿತು ನಿಸ್ತರಂಗ ಸಮುದ್ರದಂತೆ ಚಲಿಸದೆ ಮನಮಂ ಲಿಂಗದೊಳ್ ತಂಗಿಸಿ ಉರಿಯೊಳ್ಕಪ್ಪುರಂ ಜಲದೊಳಾಲಿಕಲ್ಲುಂ ಬೆರೆದಂತೆ ಐಕ್ಯರಾದರ್.

ಆಗಳ್ ಶಿಷ್ಯಾದಿಗಳೆಲ್ಲಂ ಉಘೇ ಉಘೇ ಎಂದು ಭಕ್ತಪ್ರಾಣ ಪದಕನೇ, ಭೋಗ ಮೋಕ್ಷಪ್ರದನೆ ಕಾಯ್ವರಿನ್ನಾರೆಂದು ದುಃಖಿಸುತ್ತಿರಲ್ ಆಗಳ್ ಮುಖ್ಯಶಿಷ್ಯನಪ್ಪ ಚನ್ನಪ್ಪಯ್ಯಂ ಶ್ರೀಗುರುವಿನಾಜ್ಞೆಯಂತೆ ಸಕಲಸನ್ನಾಹಂಗಳಂ ಮಾಡಿ ವರಪುತ್ರನಾಗಿ ಮಹಿಮೆವಡೆದಿರ್ದ ಶ್ರೀ ಅಡವೀಸ್ವಾಮಿಯಿಂ ತತ್ಸ್ವಾಮಿಗಳ್ಗೆ ಉತ್ತರಕ್ರಿಯಾದಿಗಳಂ ಸಾಂಗಗೊಳಿಸಿ ಮಹಾಗಣಾರಾಧನಮನೆಸಗಿ ಸಮಾಧಿಸ್ಥಾನದೊಳ್ ಮಹಾವೈಭವಮನೆಸಗಿ ಪ್ರಕಾಶಿಸಲ್ಪಡುವ ಕಾಶೀಕೆಲಸದ ಶಿಲಾಮಯ ಮಂಟಪಮಂ ನಿರ್ಮಿಸಿ ಸಕಲಭಕ್ತಾಳಿಯೊಡವೆರೆದು ಶ್ರೀ ಗುರುವರನಂಘ್ರಿಕಮಲ ಸೇವಾನಿರತವಾಗಿರ್ದಂ.

ತಮ್ಮ ಸ್ವಸ್ಥಳವಾದ ಸೊನ್ನಲಾಪುರಕ್ಕೆ ಹೋಗಿ ನೀಲಂಗಪುರ ಮಠದಲ್ಲಿ ಇರುವ ಗುರುಗದ್ದಿಗೆಯ ದರ್ಶನ ಮಾಡಿ ಎಂದು ನಾವು ಇಲ್ಲಿ ಅರ್ಥ ಮಾಡಬೇಕಾಗುತ್ತದೆ. ಸಾಕ್ಷಾತ್ ಅವರ ದೀಕ್ಷಾಗುರುಗಳು ಜೀವಂತವಾಗಿರುವುದು ಕಷ್ಟ. ಆದರೆ ಈ ಕೃತಿ ರಚಿಸಿದ ರುದ್ರಶಾಸ್ತ್ರಿಗಳು "ಗುರುದರ್ಶನಂಗೈದು ಕಾಣ್ಕೆಯಿತ್ತು ಗುರುವೇ ನಿನ್ನ ಕೃಪೆಯಂ ಧನ್ಯತೆಯಾತೆಂತೆಂ ನಿನ್ನಪ್ಪಣೆಯಿಂದಿನ್ನು ಕೆಲರ್ ಧನ್ಯತೆಯಾಂತರ್ ಎಂದು ಗುರುವರ ನೊಳ್ ವಿಜ್ಞಾಪಿಸಿ ಕೆಲವು ದಿನಂಗಳ್ ತತ್ರೇವಾಸಕ್ತನಾಗಿರ್ದು ಅಪ್ಪಣೆಯಂ ಪಡೆದು" ಎಂಬ ವಾಕ್ಯಗಳು ಗುರು ಜೀವಂತವಾಗಿ ಇದ್ದರೆ? ಎಂದು ಅನುಮಾನ ಬರುತ್ತದೆ ಅಥವಾ ದೀಕ್ಷಾಗುರುವಿನ ಗದ್ದುಗೆಗೆ ಸೇವೆ ಸಲ್ಲಿಸಿ ಪರಂಪರೆಯ ದೀಕ್ಷಾಗುರುಗಳ ಕರಸಂಜಾತರ ಅಪ್ಪಣೆ ಪಡೆದು ಬೆಳ್ಳಾವೆ ಗ್ರಾಮಕ್ಕೆ ಹೊರಟು ಬಂದದ್ದಾ! ಈಗ ಆ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಹೇಳುವುದು ಬಹಳ ಕಷ್ಟ.

ಶಾಲೀವಾಹನ ಶಕ ೧೮೩೦ ಒಂದು ಸಾವಿರದೆಂಟನೂರ ಮೂವತ್ತಕ್ಕೆ ಸಲ್ಲುವ ಕೀಲಕನಾಮ ಸಂವತ್ಸರದ ಶ್ರಾವಣ ಶುಕ್ಲ ತ್ರಯೋದಸಿ ಇಂದುವಾಸರದೊಳ್ ಅರ್ಥಾತ್ ಕ್ರಿ.ಶ. ೧೯೦೮ ಒಂದು ಸಾವಿರದೆಂಟನೂರ ಮೂವತ್ತಕ್ಕೆ ಸಲ್ಲುವ ಕೀಲಕನಾಮ ಸಂವತ್ಸರದ ಶ್ರಾವಣ ಶುಕ್ಲ ತ್ರಯೋದಶಿ ಇಂದುವಾಸರದೊಳ್ ಅರ್ಥಾತ್ ಕ್ರಿ.ಶ. ೧೯೦೮ ರಲ್ಲಿ ಲಿಂಗಾರ್ಚನಾನಂತರ ಬೆಳ್ಳಾವಿ ಗ್ರಾಮದ ಎಲ್ಲಾ ಶಿಷ್ಯರನ್ನು ಕರೆಸಿಕೊಂಡು, "ನಿಮ್ಮ ಭಕ್ತಿಪಾಶಕ್ಕೆ ಬದ್ಧವಾಗಿ ಲೀಲೆಯೊಳಿರ್ದಂ ಶಿವನ ಅಪ್ಪಣೆಯಾಗಿದೆ. ಲಿಂಗಮೂರ್ತಿಯೊಳ್ ಬೆರೆತು ಆನಂದವನ್ನು ಹೊಂದುವೆ, ನೀವೆಲ್ಲಾ ಗುರುಲಿಂಗಜಂಗಮ ಪ್ರೇಮಿಗಳಾಗಿ ಕಡೆಯಲ್ಲಿ ಮುಕ್ತಿಪಡೆಯಿರಿ" ಎಂದು ಆಶೀರ್ವದಿಸಿ, ಸರ್ವಜೀವದಯಾಪರನಾಗಿಯೂ ಗುರು ದೈವಗಳಲ್ಲಿ ಆಸಕ್ತನಾಗಿಯೂ ಸಕಲ ಕಾರ್ಯಗಳಲ್ಲಿ ಚತುರನಾಗಿಯೂ ಭಕ್ತಿಸಾಗರನೆನಿಸಿ ಪ್ರಖ್ಯಾತಿ ಹೊಂದಿದ ಗಟ್ಟೀ ಚನ್ನಪ್ಪಯ್ಯನೆಂಬ ಶಿಷ್ಯನನ್ನು ಕರೆದು 'ಅಂದಿನಿಂದ ನೀನು ನಮ್ಮ ಅಂತರಂಗವನ್ನು ಅರಿತು, ನಮ್ಮ ಅಜ್ಞೆಯನ್ನು ಮಹಾಪ್ರಸಾದವೆಂದು ಶಿರದಲ್ಲಿ ಧರಿಸಿ ನಡೆಸಿರುವೆ, ನೀನು ನಡೆಸುವ ಎಲ್ಲಾ ಧರ್ಮಕಾರ್ಯಗಳಿಗೂ ನನ್ನ ಆಶೀರ್ವಾದವಿದೆ' ಎಂದು ಅಪ್ಪಣೆ ಮಾಡಲು, ಭಕ್ತ ಶಿರೋಮಣಿ ಚನ್ನಪ್ಪಯ್ಯ, ನನ್ನ ದೇಹ ನಿಮ್ಮ ಸೇವೆಯಲ್ಲಿ ಸವೆಯಬೇಕು ಎಂದು ವಿನಂತಿಸಿಕೊಂಡ. ಆ ನಂತರ ಎಲ್ಲಾ ಭಕ್ತರಿಗೂ ಆಶೀರ್ವದಿಸಿ, ಶಿಷ್ಯಶಿಖಾಮಣಿ ಚನ್ನಪ್ಪಯ್ಯನಿಗೆ ನೀನು ಕಡೆಯಲ್ಲಿ ಮೋಕ್ಷಮಂ ಪಡೆದು ನಿತ್ಯಾನಂದಸುಖವನ್ನು

ಅನುಭವಿಸು ಎಂದು ಹರಸಿ ಗದ್ದುಗೆಯ ಮೇಲೆ ಪದ್ಮಾಸೀನ ಸ್ಥಿತಿಯಲ್ಲಿ ಕುಳಿತು ಇಷ್ಟಲಿಂಗ ಧ್ಯಾನಾಸಕ್ತರಾಗಿ ಮನವನ್ನು ಲಿಂಗಧ್ಯಾನದಲ್ಲಿ ತೊಡಗಿಸಿ ಉರಿಉಂಡ ಕರ್ಪೂರದಂತೆ, ಜಲದಲ್ಲಿ ಆಲಿಕಲ್ಲು ಬೆರೆದಂತೆ ಪರಶಿವನಲ್ಲಿ ಕಾರದ ಶಿವಯೋಗಿಗಳು ಐಕ್ಯವಾದರು. ಆಗ ಶಿಷ್ಯಾದಿಗಳು ಉಘೇ ಉಘೇ ಎಂದು ಜಯಕಾರ ಮಾಡಿದರು. ಕೆಲ ಶಿಷ್ಯರು ಭಕ್ತಪ್ರಾಣ ಪದಕನೇ, ಭೋಗಮೋಕ್ಷಪ್ರದನೆ ನಮ್ಮನ್ನು ಕಾಯುವರು ಯಾರು? ಎಂದು ದುಃಖವನ್ನು ಮಾಡಿದರು. ಕಾರದ ಶಿವಯೋಗಿಗಳ ಆಜ್ಞೆಯಂತೆ ಗಟ್ಟೀ ಚನ್ನಪ್ಪಯ್ಯನವರು ಕ್ರಿಯಾಸಮಾಧಿಗೆ ಸಂಪೂರ್ಣವಾದ ವ್ಯವಸ್ಥೆಯನ್ನು ಮಾಡಿದರು.

"ವರಪುತ್ರನಾಗಿ ಮಹಿಮೆಪಡೆದಿರ್ದ ಶ್ರೀ ಅಡವೀ ಸ್ವಾಮಿಯಂ ತತ್ಸ್ವಾಮಿಗಳ್ಗೆ ಉತ್ತರಕ್ರಿಯಾದಿಗಳಂ ಸಾಂಗಗೊಳಿಸಿ" ಎಂಬ ಈ ಸಾಲು ಇತ್ತೀಚಿನ ವಿದ್ವಾಂಸರಿಗೆ ಯಕ್ಷಪ್ರಶ್ನೆಯಾಗಿ ಕಾಡಿದೆ. ಕಾರಣ ಗುಬ್ಬಿ-ಸಿದ್ಧಗಂಗೆ-ಚಿಕ್ಕತೊಟ್ಲಿಲುಕೆರೆ ಮಠದ ಸ್ವಾಮಿಗಳಾಗಿದ್ದ ನಿರಂಜನ ಪ್ರಣವ ಸ್ವರೂಪಿ ಅಡವೀಸ್ವಾಮಿಗಳು ಲಿಂಗೈಕ್ಯರಾದದ್ದು ಕ್ರಿ.ಶ. ೧೯೦೧ ಕಾರ್ತೀಕ ಶುದ್ಧ ದಶಮಿಯಲ್ಲಿ, ಕಾರದ ಶಿವಯೋಗಿಗಳು ಲಿಂಗೈಕ್ಯರಾದದ್ದು ಕ್ರಿ.ಶ. ೧೯೦೮ ರಲ್ಲಿ. ಮತ್ತೆ ೧೯೦೮ ರಲ್ಲಿ ಉತ್ತರಕ್ರಿಯೆ ಮಾಡಿದ ಅಡವೀಸ್ವಾಮಿಗಳು ಯಾರು? ವೀರಶೈವ ಸಿದ್ಧಾಂತದಲ್ಲಿ ಶಿಷ್ಯನನ್ನು ಪುತ್ರನೆಂದೇ ಭಾವಿಸಲಾಗುತ್ತದೆ. ಗುಬ್ಬಿ ತೋರೇಮಠದ ಮರಿದೇವರಿಗೆ ೧೯೦೦ ರಲ್ಲಿ ಅಡವೀಸ್ವಾಮಿಗಳು ವಿರಕ್ತಾಶ್ರಮವನ್ನು ಅನುಗ್ರಹಿಸಿದರು. ಅವರ ಹೆಸರು ಮರಿಅಡವೀಸ್ವಾಮಿಗಳು ಅಥವಾ ಚಿಕ್ಕಅಡವೀಸ್ವಾಮಿಗಳು. ಇವರು ಕ್ರಿ.ಶ. ಸುಮಾರು ೧೯೬೨ ರಲ್ಲಿ ಲಿಂಗೈಕ್ಯರಾಗಿದ್ದಾರೆ. ಇವರು ಕೆಲವು ಕಾಗದ ಪತ್ರಗಳಲ್ಲಿ ಅಡವೀಸ್ವಾಮಿಗಳಂತೆ ವ್ಯವಹರಿಸಿದ್ದಾರೆ.

ಕಾರದ ಶಿವಯೋಗಿಗಳದು ಬಹಳ ಕಟ್ಟುನಿಟ್ಟಾದ ಆಚರಣೆ. ಮುಂದಿನ ಜನಾಂಗ ಇಷ್ಟು ಗಟ್ಟಿಯಾದ ಆಚರಣೆ ಮಾಡುವುದು ಕಷ್ಟ ಎಂದು ಕರಸಂಜಾತ ಶಿಷ್ಯನನ್ನು ಸ್ವೀಕರಿಸಲಿಲ್ಲ. ಕಾರದ ಶಿವಯೋಗಿಗಳು, ಅಡವೀಸ್ವಾಮಿಗಳು ಸಮಕಾಲೀನವರು ಮತ್ತು ಒಂದೇ ಪರಂಪರೆಗೆ ಸೇರಿದವರು. ಮರಿ ಅಡವೀಸ್ವಾಮಿಗಳಿಗೆ ಗುರುಸ್ವರೂಪರು. ಈ ಕಾರಣದಿಂದ ಕಾರದ ಶಿವಯೋಗಿಗಳ ಕ್ರಿಯಾಸಮಾಧಿ ಮತ್ತು ಗಣಾರಾಧನೆಗೆ ಮರೀಅಡವೀಸ್ವಾಮಿಗಳು ಕರ್ತೃವಾಗಿ ತಮ್ಮ ಸೇವೆಯನ್ನು ಸಲ್ಲಿಸಿದ್ದಾರೆ. ಈ ಕಿರುಕೃತಿಯ ಲೇಖಕರು ಈ ವಿಷಯ ಸ್ಪಷ್ಟಪಡಿಸಿಲ್ಲ. ಕಾರಣ ಅಂದಿನ ದಿನಮಾನದಲ್ಲಿ ಎಲ್ಲರಿಗೂ ಗೊತ್ತಿದ್ದ ವಿಷಯ.

ಕಾರದ ಶಿವಯೋಗಿಗಳ ಗಣಾರಾಧನೆಯನ್ನು ಶಿವ ಮೆಚ್ಚುವಂತೆ ಮಾಡಿ ಭಕ್ತರು ತಮ್ಮ ಭಕ್ತಿಯನ್ನು ಸಲ್ಲಿಸಿದರು. ಆ ನಂತರ ಸಮಾಧಿಯನ್ನು ಕಲ್ಲುಮಂಟಪದಿಂದ ಕಟ್ಟಿ ವಿಶಾಲವಾದ ನವರಂಗವನ್ನು ನಿರ್ಮಿಸಿದರು.

ಮಣುವಿನಕುರಿಕೆ ಗ್ರಾಮದ ನಾಗಣ್ಣನ ಮಕ್ಕಳು, ಸಕಲಭಕ್ತರನ್ನು ಕ್ಷಮಾಪಣೆಯಂ ಬೇಡಲು, ಕಾರದ ಶಿವಯೋಗಿಗಳು ಕ್ಷಮಿಸಿದರೆ ಆಗಬಹುದು ಎಂದು, ಹೇಳಿದಾಗ ನಾಗಣ್ಣನ ಮಕ್ಕಳು ಮತ್ತು ಗ್ರಾಮದ ಜನತೆ ಬೆಳ್ಳಾವಿ ಗ್ರಾಮಕ್ಕೆ ಬಂದು ಶಿವಯೋಗಿಗಳ ಗದ್ದುಗೆಗೆ ನಮಸ್ಕರಿಸಿ ಭಕ್ತಿಯಿಂದ ತಮ್ಮ ಕಾಣಿಕೆಯನ್ನು ಅರ್ಪಿಸಿ ನಮ್ಮ ಮನೆತನದ ಹಿರಿಯರು ಮಾಡಿದ ತಪ್ಪನ್ನು ಕ್ಷಮಿಸಬೇಕು ಎಂದು ಬೇಡಿಕೊಂಡರು. ಗದ್ದುಗೆಯಲ್ಲಿ ಪ್ರಸಾದವಾಯಿತು.

ಕಾರದ ಶಿವಯೋಗಿಗಳ ಗದ್ದುಗೆ ಮೇಲೆ ಚನ್ನಪ್ಪಯ್ಯ ಎಂಬ ಭಕ್ತನು ನೃಪಶಾಲೀವಾಹನ ಶಕ ೧೮೩೮ ನೇ ನಳನಾಮ ಸಂವತ್ಸರ ಫಾಲ್ಗುಣ ಶುದ್ಧ ಪಂಚಮೀ ಇಂದುವಾರ ಸೂರ್ಯೋದಯಾದಿ ೮-೧೨ ಘಳಿಗೆ ಲಾಗಾಯ್ತು ೧೦ ಘಳಿಗೇ ಒಳಗಾಗಿ ನಡೆಯುವ ಶ್ರೀ ಶುಭ ಮೇಷ ಲಗ್ನದಲ್ಲಿ ಅತಿವೈಭವದಿಂ ಲಿಂಗಪ್ರತಿಷ್ಠಾಕಾರ್ಯಂಗಳಂ ಸಾಂಗವಾಗಿ ನೆರವೇರಿಸಿದರು. ಅರ್ಥಾತ್ ಕ್ರಿ.ಶ. ೧೯೧೬ ರಲ್ಲಿ ಸಮಾಧಿ ಮೇಲೆ ಲಿಂಗಪ್ರತಿಷ್ಠೆಯಾಯಿತು. ಈಗಲೂ ಪ್ರತಿನಿತ್ಯ ತ್ರಿಕಾಲ ಕಟ್ಟಾ ಮಡಿಯಲ್ಲಿ ಅರ್ಚನೆ-ಅರ್ಪಣೆ ನಡೆಯುತ್ತಾ ಇದೆ. ಪ್ರತಿವರ್ಷ ಕಾರದ ಶಿವಯೋಗಿಗಳ ಜಾತ್ರೆ-ಉತ್ಸವ-ಗಣರಾಧನೆಯನ್ನು ಭಕ್ತಿ ಶ್ರದ್ಧೆಯಿಂದ

ಭಕ್ತಾದಿಗಳು ಮಾಡುತ್ತಾ ಇದ್ದಾರೆ. ಗದ್ದುಗೆಯಲ್ಲಿ ಸುಮಾರು ಎರಡು ಅಡಿ ಎತ್ತರದ ಕಾರದ ಶಿವಯೋಗಿಗಳ ಲಿಂಗಾನುಷ್ಠಾನ ಮಾಡುತ್ತಾ ಇರುವ ಭಂಗಿಯ ಉತ್ಸವ ಮೂರ್ತಿ ಇದೆ. ಈಗಲೂ ಎಡೆ ಬಟ್ಟಲಲ್ಲಿ ಬಿಲ್ವಪತ್ರೆ, ಮೆಣಸಿನಕಾಯಿ, ಉಪ್ಪು ಅರೆದು ರುಬ್ಬಿದ ಕಾರದ ಸಣ್ಣ ಉಂಡೆಯನ್ನು ಎಡೆ ಮಾಡುತ್ತಾರೆ.

ಸ್ವಾಮಿ ಮಹಾಮನೆಯವರು ೧೯೫೪ರಲ್ಲಿ ಮಹಾತ್ಮ ಗುರುಮಲ್ಲೇಶ್ವರನನ್ನು ಕುರಿತು ಪುಸ್ತಕವನ್ನು ಬರೆದಿದ್ದಾರೆ. ಆ ಕೃತಿಯಲ್ಲಿ ಕಾರದ ಶಿವಯೋಗಿಗಳ ಬಗ್ಗೆ ಇಷ್ಟು ಮಾಹಿತಿ ಲಭ್ಯವಾಗುತ್ತದೆ:

ಕಾರದ ಶಿವಯೋಗಿಗಳು ಇವರು ಬೆಳಗಾವಿಯವರು. ಹಗಲಲ್ಲೆ ನಿದ್ದೆ ಮಾಡಿಕೊಳ್ಳುವುದು ರಾತ್ರೆ ಬೆಳಗಿನವರೆಗೆ ಶಿವಪೂಜೆ ಮಾಡುವುದು, ಬೆಳಗಿನ ಜಾವಕ್ಕೆ ಶಿವಪೂಜೆ ಮುಗಿಸಿ, ಆ ವೇಳೆಗೆ ತಯಾರಿಸಿದ ತಲೆ ಗಾತ್ರದ ಖಾರದ ಮುದ್ದೆಯನ್ನು ಲಿಂಗಾರ್ಪಿತ ಮಾಡಿ ಸೇವಿಸುತ್ತಿದ್ದರು. ದೊಡ್ಡ ಪತ್ರೆ, ಒಣಮೆಣಸಿನಕಾಯಿ, ಬೆಳ್ಳುಳ್ಳಿ -ಇವು ಮೂರನ್ನು ಅರೆದು ಕಟ್ಟಿದ ಮುದ್ದೆ ಅದು. ನೋಡೋಣಾಂತ ತುದಿಬೆಟ್ಟಿನಲ್ಲಿ ಒಬ್ಬರ ತುಟಿಗೆ ಸೋಕಿಸಿದಕ್ಕೆ.....ಸುಮಾರು ಒಂದು ವಾರದ ವರೆವಿಗೂ ಕಡಿತ ತಪ್ಪಲಿಲ್ಲವಂತೆ..... ಅಂದ ಮೇಲೆ ಹೇಗಿರಬೇಕು ಖಾರ!

ಇವರ ಗುರುಗಳು ಚಾಮರಾಜನಗರ ತಾಲ್ಲೂಕು ಗೇರುಮಾಳದಲ್ಲಿ ಗದ್ದಿಗೆಯಾಗಿರುವ ಜಡೆಸ್ವಾಮಿಗಳು. ಬೆಳಗಾವಿಯಿಂದ ಚಕ್ಕಡಿ ಕಟ್ಟಿಸಿಕೊಂಡು ಮುಂದಿನ ಊರಿಗೆ ಬಂದು ಅಂದಿನ ರಾತ್ರಿ ಅಲ್ಲಿ ಉಳಿಯುವುದು. ರಾತ್ರಿ ಶಿವಪೂಜೆ ಮುಗಿಸಿಕೊಂಡು ಮಾರನೆ ದಿನ ಮುಂದಿನ ಊರು -ಹೀಗೆ ಪ್ರಯಾಣ ಮಾಡಿ ಗುರುಗದ್ದಿಗೆಯನ್ನು ದರ್ಶನ ಮಾಡಿ ಸೇವೆ ಸಲ್ಲಿಸಿ ಹ್ಯಾಗೇ ಬಂದರೋ ಅದೇ ರೀತಿಯಲ್ಲಿ ಹಿಂದಕ್ಕೆ ಹೊರಡುವುದು. ಅವರು ಪ್ರಯಾಣ ಮಾಡುವ ಚಕ್ಕಡಿಗೆ ಬಾರಕಾಣೆ ಕೂಡ ಹಗ್ಗದೇ ಆಗಿರಬೇಕು, ಚಕ್ಕಳದ್ದು ಕೂಡದು (ಪ್ರಾಣಿವಧೆಯಿಂದ ಬರುತ್ತದಾಗಿ). ಹೀಗೆ ಯಾವತ್ತೂ ಚರಮೂರ್ತಿಯಾಗಿ ಲೋಕೋದ್ಧಾರವೆಸಗಿದ ಮಹನೀಯರು ಅವರು. ಹೋಗುವಾಗ ಬರುವಾಗ ಗುರುಸ್ವಾಮಿಯವರನ್ನು ಕಾಣದೆ ಮಾತ್ರ ಇರುತ್ತಿರಲಿಲ್ಲ.

ಸ್ವಾಮಿ ಮಹಾಮನೆಯವರು ಬೆಳ್ಳಾವಿ ಗ್ರಾಮವನ್ನು ಬೆಳಗಾವಿ ಎಂದು ಬರೆದಿದ್ದು ಬಿಟ್ಟರೆ ಮಿಕ್ಕೆಲ್ಲಾ ವಿಷಯವೂ ಸರಿ. ಮೂಲಮಠದ ರುದ್ರಶಾಸ್ತ್ರಿಗಳು ಪ್ರಸ್ತಾಪಿಸಿರುವ ಗಿರಿಮಾಳದ ಶ್ರೀ ಜಡೆಯರುದ್ರಸ್ವಾಮಿಯ ಕ್ಷೇತ್ರಕ್ಕೆ ಭೇಟಿ ನೀಡಿದ್ದನ್ನೇ ಸ್ವಾಮಿಮಹಾಮನೆಯವರು ಜಡೆಸ್ವಾಮಿಗಳ ಗದ್ದಿಗೆಯ ಬಗ್ಗೆ ಹೇಳಿದ್ದಾರೆ. ಯುವ ವಿದ್ವಾಂಸರು ಕ್ಷೇತ್ರಕಾರ್ಯಮಾಡಿ ಇನ್ನು ಹೆಚ್ಚಿನ ವಿಷಯವನ್ನು ಸಂಶೋಧನೆ ಮಾಡಬೇಕು.

ಹಾಲ್ನೂರು ಮಠದ ವೇದಮೂರ್ತಿ ನಂಜುಂಡಸ್ವಾಮಿಗಳು ಸಂಸಾರಸ್ಥರಾದರೂ ಬಹಳ ಆಚಾರವಂತರು, ಕಾರದ ಶಿವಯೋಗಿಗಳು ಅವರಿಗೆ ಅಪ್ಪಣೆ ಮಾಡಿದರಂತೆ 'ನನ್ನ ಲಿಂಗಶರೀರವನ್ನು ನೀನು ಗದ್ದುಗೆಗೆ ಇಳಿಸಬೇಕು' ಎಂದು. ಅದೇ ರೀತಿ ತಮ್ಮ ಸೇವೆಯನ್ನು ಸಲ್ಲಿಸಿದರು. ಬೆಳ್ಳಾವಿಗ್ರಾಮದ ಸುತ್ತಮುತ್ತಾ ಭಕ್ತಾದಿಗಳು ಈ ದಿನವೂ ಬಹಳ ಶ್ರದ್ಧಾ ಭಕ್ತಿಯಿಂದ ನಡೆದು ಕೊಳ್ಳುತ್ತಾ ತಮ್ಮ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ನೂತನ ಶರಣರ ಗುಂಪಿನ ಮಹಾಚೇತನಕ್ಕೆ ಲೇಖಕನ ಭಕ್ತಿಪೂರ್ವಕವಾದ ಶರಣು ಶರಣಾರ್ಥಿಗಳು.

■■

ಸಾಮಾಜಿಕ ಅಭ್ಯುದಯಕ್ಕೆ ಕ್ರಿಯಾತ್ಮಕ ನಾಯಕತ್ವ

(ಮಠಗಳು ಹಮ್ಮಿಕೊಳ್ಳಬಹುದಾದ ಕಾರ್ಯಸಾಧ್ಯ ಕಾರ್ಯಕ್ರಮಗಳು)

✍ ಡಾ. ಎಚ್.ಎಂ. ಮರುಳಸಿದ್ಧಯ್ಯ

I

ಸಮಾಜಶಾಸ್ತ್ರೀಯ ಮಾರ್ಗದೃಷ್ಟಿ(Approach)ಯಿಂದ ಸಮಾಜವನ್ನು, ಸಮುದಾಯಗಳನ್ನು, ಸಂಘಗಳನ್ನು, ಸಂಸ್ಥೆಗಳನ್ನು, ಸಂಸ್ಕೃತಿಯನ್ನು ವ್ಯಕ್ತಿಗಳನ್ನು ಅಧ್ಯಯನ ಮಾಡಿದಾಗ ಧರ್ಮ,ರಾಜಕೀಯ, ಆರ್ಥಿಕತೆ, ನೈತಿಕತೆ, ನ್ಯಾಯಪದ್ಧತಿ, ಇವೆಲ್ಲವುಗಳಿಗೆ ಸಂಬಂಧಿಸಿದ ಮೌಲ್ಯಗಳು ಮಾನವನ ಸಾಂಘಿಕ ಜೀವನದ ಒಡಲಿನಾಳದಿಂದ ರೂಪುಗೊಂಡಿವೆ ಎಂಬುದು ವಿದಿತವಾಗುತ್ತದೆ. ಆದುದರಿಂದಲೇ ಧರ್ಮಧ್ವಜವನ್ನು ಹಿಡಿದಿರುವ ಮಠಗಳು ಮಾನವ ಸಮಾಜದ ಅವಿಭಾಜ್ಯ ಅಂಗಗಳೇ ಆಗಿವೆ. ಇವು ಮೂಲತಃ ಮಾನವನ ಧರ್ಮೋ-ನೈತಿಕ ಅವಶ್ಯಕತೆಗಳನ್ನು ಪೂರೈಸುತ್ತಿರುವವಾದರೂ ತೀರಾ ಲೌಕಿಕವೆಂಬುವ (secular) ಇತರ ಅಂಶಗಳನ್ನು ಇವು ಕಡೆಗಣಿಸುವಂತಿಲ್ಲ. ಯಾಕೆಂದರೆ, ಆ 'ಲೌಕಿಕ ಅಂಶಗಳು' ಧಾರ್ಮಿಕವನ್ನು ಪೋಷಿಸುತ್ತವೆ. ಹಿಂದಿರುಗಿ ಲೌಕಿಕ ಅಂಶಗಳು ಧರ್ಮದಿಂದ ಸಾತ್ವಿಕತೆಯ ಸತ್ವವನ್ನು ಗಳಿಸಿಕೊಳ್ಳುತ್ತ. ಈ ವಾಸ್ತವವನ್ನು ಗಮನದಲ್ಲಿರಿಸಿಕೊಂಡು ಮಠಗಳು ಪರಿವರ್ತನ ಶೀಲ ಸಮಾಜದಲ್ಲಿ ತಾವೆಂಥ ಕ್ರಮಗಳನ್ನ ಕೈಗೊಳ್ಳಬೇಕಾಗುತ್ತದೆ ಎಂಬುದನ್ನು ನಾವು ಚಿಂತಿಸಬೇಕಾಗುತ್ತದೆ. ಸಿದ್ಧಾಂತಕ್ಕೂ ಆನ್ವಯಿಕತೆಗೂ ಇರುವ ಅನಿವಾರ್ಯ ಅವಿನಾಭಾವ ಸಂಬಂಧವನ್ನು ಗಮನದಲ್ಲಿರಿಸಿಕೊಂಡೇ ನಮ್ಮ ಚಿಂತನೆಯ ವಿನ್ಯಾಸವನ್ನು ರೂಪಿಸಿಕೊಳ್ಳಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ವೀರಶೈವ ಮಠಗಳು ಲೌಕಿಕತೆಗೆ ಸಾತ್ವಿಕ ಶಕ್ತಿಯನ್ನು ನೀಡುವ ಎರಡು ಕ್ರಮಗಳನ್ನು ಈ ಲೇಖನದಲ್ಲಿ ರೇಖಿಸುವ ಪ್ರಯತ್ನವನ್ನು ಮಾಡಲಾಗಿದೆ. ಅನ್ನದಾಸೋಹದ ಮೂಲಕ ಸಾತ್ವಿಕತೆಯನ್ನು ಬಿತ್ತುವ, ಜ್ಞಾನದಾಸೋಹದ ಮೂಲಕ ಕ್ರಿಯಾತ್ಮಕ ವ್ಯಕ್ತಿತ್ವವನ್ನು ರೂಪಿಸುವ ಸಾಧ್ಯತೆಯ ಕಡೆಗೆ ವೀರಶೈವ ಮಠಗಳ ಗಮನವನ್ನು ಸೆಳೆಯಲಾಗಿದೆ.

II

ವೀರಶೈವ ಮಠಗಳು ಬಹುಕಾಲದಿಂದ ನಡೆಸಿಕೊಂಡು ಬಂದ ಕಲ್ಯಾಣಕಾರ್ಯಗಳನ್ನು ಅವಲೋಕಿಸಿದರೆ, 'ಸಕಲಜೀವಾತ್ಮರಿಗೆ ಲೇಸು' ಮಾಡುವುದೇ ಅವುಗಳ ಹೂರಣ-ಧ್ಯೇಯವಾಗಿದೆ, ಎಂದು ಅರಿವಾಗುತ್ತದೆ. ಲಿಂಗಾಂಗ ಸಾಮರಸ್ಯವು ತನ್ನ ಪ್ರತಿಯೊಂದು ಕೃತಿಯ ಆಂತರ್ಯವಾಗಿರಬೇಕು ಎಂಬುದು ವೀರಶೈವರ ಹಂಬಲ. ಇದು ಆತ್ಮ-ಪರಮಾತ್ಮರ ಅವಿನಾಭಾವವನ್ನು ಸಾಧ್ಯವಾಗಿಸುವ ಹಂಬಲ. ಆದುದರಿಂದಲೇ ವೀರಶೈವನಾದವನು ಅಂತರಂಗ-ಬಹಿರಂಗ ಶುದ್ಧೀಕರಣದಲ್ಲಿ ನಿರತನಾಗಿ, ಅರಿಷಡ್ವರ್ಗಗಳನ್ನು ಜಯಿಸಿ, ಅಷ್ಟಾವರಣದ ರಕ್ಷಣೆಯೊಳಗೆ ಪಂಚಾಚಾರಗಳನ್ನು ನಡೆ-ನುಡಿಗಳಲ್ಲಿ ಅಳವಡಿಸಿಕೊಂಡು ಷಟ್‌ಸ್ಥಲಗಳನ್ನು ಏರಿ ತನ್ನನ್ನು ತಾನು ಅರಿತುಕೊಳ್ಳಬೇಕೆಂಬ, ತನ್ನನ್ನು ತಾನು'ಗಳಿಸಿಕೊಳ್ಳಬೇಕು' ಎಂಬುದು ವೀರಶೈವವು ತನ್ನ ಸಾಧಕನಿಗೆ, ಭಕ್ತನಿಗೆ ನೀಡುವ ಮಾರ್ಗೋಪದೇಶವಾಗಿದೆ. ಇಷ್ಟಲಿಂಗೋಪಾಸನೆಗಿಂತ ಬೇರೇನೂ ಜೀವನ್ಮುಕ್ತಿಗೆ ಅಗತ್ಯವಿಲ್ಲವೆಂಬುದು ಇದರ ಪ್ರತಿಪಾದನೆ. ಆದರೂ ಮೃಣ್ಮಯ ಜಗತ್ತು ಮತ್ತು ಮೃಣ್ಮಯ ಶರೀರ ಶಿವನ ಕರುಣೆಯ ಪ್ರತೀಕಗಳಾಗಿರುವುದರಿಂದ ಇವನ್ನು ನಿಕೃಷ್ಟವಾಗಿ ಕಾಣುವಂತಿಲ್ಲ, ಎಂಬುದು ಅದರ ನಿಲವು ಕೂಡ. ಪ್ರಾಣಕ್ಕೆ ಕಾಯವೇ ಆಶ್ರಯವಾಗಿರುವುದರಿಂದ ಅದು ಪ್ರಸಾದಕಾಯ. ಇದನ್ನು ಕಡೆಗಣಿಸಬಾರದು ಮತ್ತು ಕೆಡಿಸಕೂಡದು. ಜೊತೆಗೆ, ಇದನ್ನು

ಸಾರ್ಥಕ ಕಾರ್ಯದಲ್ಲಿ ತೊಡಗಿಸಲೇ ಬೇಕು. ಕಾಯಕದೊಡನೆ ಮನಸ್ಸು ಸಮ್ಮಿಳಿತವಾಗಿರುವುದರಿಂದ ಈ ಎರಡೂ ಪರಿಶುದ್ಧ ಸ್ಥಿತಿಯಲ್ಲಿದ್ದು ಇವು ಕಾಯಕ-ದಾಸೋಹದ ಪ್ರಕ್ರಿಯೆಯಲ್ಲಿ ಅವಿನಾಭಾವದಿಂದ ನಿರತವಾಗಿರಬೇಕು. 'ಮಾಡಬೇಕು ಮಾಡದಂತಿರಬೇಕು; ಮಾಡುವ ಮಾಟದೊಳಗೆ ತಾನಿಲ್ಲದಂತಿರಬೇಕು' ಎಂಬ ಸೂತ್ರವಿಡಿದು ದಾಸೋಹ ಭಾವದಿಂದ ಅಹಂಕಾರ ರಹಿತನಾಗಿ ಸತ್ಕಾರ್ಯದಲ್ಲಿ ತೊಡಗಿರಬೇಕು, ಎಂಬುದು ವೀರಶೈವದ ಕಟ್ಟಳೆ. ವೀರಶೈವನ ದೃಷ್ಟಿಯಲ್ಲಿ ಎರಡಿರುವುದಿಲ್ಲ. ಮೇಲು-ಕೀಳುಗಳಿರುವುದಿಲ್ಲ; ಅವನ ಸಂಬಂಧಗಳು ಸಮಾನತೆಯ ಕಮ್ಮಟದಲ್ಲಿಯೇ ರೂಪುಗೊಂಡಿರುತ್ತವೆ, ಹರಡಿ ಬಲಗೊಂಡಿರುತ್ತವೆ. ಲಿಂಗ, ವಯಸ್ಸು, ವೃತ್ತಿ, ಕೌಶಲ್ಯ, ಸಮುದಾಯ, ಆರ್ಥಿಕಸ್ಥಿತಿ, ಸಾಂಘಿಕ ಮತ್ತು ಸಾಂಸ್ಥಿಕ ಸ್ಥಾನ, ಇತ್ಯಾದಿಗಳಾವುವೂ ಮಾನವ ಸಂಬಂಧಗಳಿಗೆ ಅಳಿಸಲಾರದ ಬಣ್ಣ ಬಳಿಯುವುದಿಲ್ಲ; ಹಾಗೇನಾದರೂ ಆದರೆ ಮಾನವತ್ವಕ್ಕೇ ಅಪಚಾರವಾಗುತ್ತದೆ, ವೀರಶೈವ ಸಿದ್ಧಾಂತಕ್ಕೆ ಧಕ್ಕೆಯಾಗುತ್ತದೆ. ಈ ತಾತ್ವಿಕ ತಳಹದಿಯ ಮೇಲೆ ವೀರಶೈವನ ವ್ಯಕ್ತಿತ್ವವು ರೂಪಿತವಾಗಿರುತ್ತದೆ; ರೂಪಿತವಾಗಿರತಕ್ಕದ್ದಾಗಿದೆ. ವೀರಶೈವ ಸಿದ್ಧಾಂತವು ಶಿವಾಗಮಗಳಿಂದ ಪ್ರಭಾವಿತವಾಗಿ, ವೇದೋಪನಿಷತ್ತುಗಳಿಂದ ಶೋಧಿಸಿ ಪಡೆದ ಪರಿಶುದ್ಧ ನಿಲುವಿನಿಂದ ರೂಪಿತವಾಗಿದೆ. ಇದರ ಸಿದ್ಧಾಂತವು ಗ್ರೀಕ್ ತತ್ವಜ್ಞಾನಿ ಅರಿಸ್ಟಾಟಲ್‌ನ ಪ್ರಕಾರ 'ಧೈರ್ಯ, ಮಿತಾಚಾರ, ಗೌರವ, ನ್ಯಾಯ, ಕರುಣೆ, ಸುಜ್ಞಾನ, ಸಂಯಮ, ಸ್ನೇಹ, ತಾಳತತೆ ಮತ್ತು ಚಿಂತನೆ' -ಇವು ಉತ್ತಮ ಜೀವನದ ಮುಖ್ಯ ವೈಲಕ್ಷಣ್ಯಗಳು; ಸಾಮಾಜಿಕವಾಗಿ ಮೌಲಿಕವಾದ ಕಾರ್ಯದಲ್ಲಿರುವ ನೈತಿಕ ಮತ್ತು ಬೌದ್ಧಿಕ ಶ್ರೇಷ್ಠತೆಯನ್ನು ಗಳಿಸುವುದರಿಂದ ಸೌಖ್ಯವನ್ನು ಕಂಡುಕೊಳ್ಳುವುದು ಅತ್ಯಂತ ಖಚಿತ ಮಾರ್ಗ.[6] ಇದು ವೈಚಾರಿಕತೆಯ ನೆಲೆಯ ಮೇಲೆಯೇ ನಿಂತಿರುತ್ತದೆ. ಹೀಗೆ ಪರಿಶುದ್ಧ ನಡೆ ನುಡಿಯು ವೈಚಾರಿಕ ನಿಕಷಕ್ಕೆ ಒಳಗಾಗಿ ಕಂಡರಿಸಲ್ಪಟ್ಟಿರುತ್ತದೆ ಎಂಬುದರಲ್ಲಿ ವೀರಶೈವನಿಗೆ ಅಪಾರ ಶ್ರದ್ಧೆಯಿರಬೇಕಾಗುತ್ತದೆ. ಇಷ್ಟಲಿಂಗೋಪಾಸನೆಯ ಮೂಲಕ ಸಾಧಕನು ತನ್ನ ಅಂಗವನ್ನು ಲಿಂಗವಾಗಿ ಪರಿವರ್ತಿಸಿಕೊಳ್ಳುತ್ತಾನೆ, ಪರಿವರ್ತಿಸಿಕೊಳ್ಳಬೇಕು. ಇಷ್ಟೇ ಸಾಕಾಗುವುದಿಲ್ಲ. ಸಕಲ ಜೀವರಾಶಿಯ ಲೇಸನ್ನು ಆತನು ಬಯಸುತ್ತಿರುವುದರಿಂದ, ಲೇಸೆಂಬುದು ಕೇವಲ ಶಾರೀರಿಕ ಸೌಖ್ಯ ಮತ್ತು ಇತರ ಲೌಕಿಕ ಸೌಲಭ್ಯಗಳನ್ನು ಒದಗಿಸುವುದರಲ್ಲಿಯೇ ಪರ್ಯವಸಾನವಾಗುತ್ತದೆ, ಎಂದು ತಿಳಿಯಕೂಡದು. ಮಾನವರ ಮಟ್ಟಿಗೇ ನಮ್ಮ ದೃಷ್ಟಿಯನ್ನು ಸೀಮಿತಗೊಳಿಸಿದರೆ, ಪ್ರತಿಯೊಬ್ಬ ವ್ಯಕ್ತಿಯ ವ್ಯಕ್ತಿತ್ವವು ಆರೋಗ್ಯಕರವಾಗಿ ವಿಕಸನಗೊಳ್ಳಬೇಕು ಎಂದು ಮೇಲ್ನೋಟಕ್ಕೇ ಅರ್ಥವಾಗುತ್ತದೆ. ಆದರೆ ಆರೋಗ್ಯಕರವಾಗಿ ವಿಕಸನಗೊಳ್ಳುವುದು ಅದು ಸಮಗ್ರವಾಗಿದ್ದಾಗ ಮಾತ್ರವೇ ಸಾಧ್ಯವಾಗುತ್ತದೆ, ಎಂಬುದನ್ನು ತಿಳಿದುಕೊಳ್ಳಬೇಕು.

ಇಂಥ ವಿಕಸನಕ್ಕೆ ಸಾಂಘಿಕ ಪ್ರಯತ್ನವು ಅಗತ್ಯವಾಗುತ್ತದೆ. ಸಾಮಾಜೀಕರಣದಿಂದಲೇ ವ್ಯಕ್ತಿತ್ವವು ವಿಕಸನಗೊಳ್ಳುವುದರಿಂದ ನಮಗೆ ಸಾಂಘಿಕ ಪ್ರಯತ್ನದ ಮಹತ್ವದ ಅರಿವಾಗುತ್ತದೆ. ವೀರಶೈವ ಸಿದ್ಧಾಂತವು ಒಡಮೂಡುವುದು ಸಾಮೂಹಿಕ ಚರ್ಚೆಯ ಮೂಲಕ ಮತ್ತು ಅನುಭಾವದ ನೆಲೆಯ ಮೇಲೆ. ಇಂಥ ಈ ಸಿದ್ಧಾಂತವು ಅನುಭವಿಕ ಉಕ್ತಿಗಳಲ್ಲಿ ಅಭಿವ್ಯಕ್ತಿಗೊಂಡಿರುವುದೂ, ಇವುಗಳ ಪ್ರಸರಣೆಯು ಸಾಧ್ಯವಾಗಿದ್ದುದೂ ವೀರಶೈವ ಮಠಗಳ ಮೂಲಕ. ಆಧುನಿಕ ಕಾಲದಲ್ಲಿ ಇತರ ಸಾಂಘಿಕ ವ್ಯವಸ್ಥೆಗಳು ಪ್ರಕಟಣ- ಪ್ರಸರಣ ಕಾರ್ಯದಲ್ಲಿ ನಿರತವಾಗಿರುವುದೇನೋ ನಿಜವೇ. ಆದರೆ ವೀರಶೈವದ ಮೂಲ ಆಶಯವಾದ 'ಸಕಲ ಜೀವಾತ್ಮರಿಗೆ ಲೇಸು' ಸಾಧ್ಯವಾಗುವುದು ಮತ್ತು ಸಾಧ್ಯವಾಗಬೇಕಾದುದು ಮಠಗಳಿಂದಲೇ. ಕೆಲವು ಲೌಕಿಕ ಸಾಂಘಿಕ ವ್ಯವಸ್ಥೆಗಳು ಶಿವಶರಣರ ಆಶಯಗಳನ್ನು ತಾವು ಕೈಗೊಂಡ ಕಲ್ಯಾಣಾಭ್ಯುದಯ ಕಾರ್ಯಗಳಲ್ಲಿ ಸ್ವಲ್ಪಮಟ್ಟಿಗೆ ಅಳವಡಿಸಿಕೊಳ್ಳುತ್ತಲಿರುವುದು ನಿಜವಾದರೂ ವೀರಶೈವ ಮಠಗಳು ತಮ್ಮ ಸಾಮಾಜಿಕ ಕರ್ತವ್ಯಗಳನ್ನು ಹೆಚ್ಚು ಸಮರ್ಥವಾಗಿ, ನೆರವೇರಿಸಬೇಕಾದದ್ದು ಅತ್ಯಂತ ಅವಸರದ್ದು, ಎಂದು ನಾನು ಭಾವಿಸುತ್ತೇನೆ.

III

ಆಧುನಿಕ ಕಾಲದಲ್ಲಿ, ವೈಜ್ಞಾನಿಕ ಯುಗದಲ್ಲಿ, ತಾಂತ್ರಿಕತೆಯ ಹಬ್ಬುವಿಕೆಯಲ್ಲಿ, ಹದ್ದು ಮೀರುತ್ತಿರುವ ವ್ಯಕ್ತಿ ಸ್ವಾತಂತ್ರ್ಯದ ಬೀಸುಗಾಳಿಯಲ್ಲಿ ಮಧುರ ಬಾಂಧವ್ಯಕ್ಕೆ, ಮರುಕ-ಪ್ರೇಮಗಳಿಗೆ, ಅನ್ಯರ ಸಂಕಷ್ಟ ನಿವಾರಣೆಗೆ ಎಡೆಯಿಲ್ಲವೇನೋ ಅನ್ನಿಸುತ್ತಲಿದೆ. ಇಂಥ ಸಂದರ್ಭದಲ್ಲಿ ಮಠಗಳ ಕರ್ತವ್ಯದ ಕಡೆಗೆ ಗಮನ ಸೆಳೆಯಲು ಬಯಸುತ್ತೇನೆ. ಈ ಪ್ರಸಂಗಗಳಲ್ಲಿ ಗಿನ್ಸ್‌ಬರ್ಗ್ ಅವರ ಈ ಮಾತುಗಳು ನೆನಪಿಗೆ ಬರುತ್ತವೆ: "ಅಮೂರ್ತವಾದ ತಮ್ಮ ತಾತ್ವಿಕಬೋಧನೆಗಳು ಪ್ರಾಮುಖ್ಯತೆಯನ್ನು ಕಳೆದು ಕೊಳ್ಳುತ್ತಿರುವಾಗಲೇ ಸದೃಢ ನೈತಿಕ ನಂಬುಗೆಗಳ ಕಟ್ಟನ್ನು ಧರ್ಮಗಳು ಒದಗಿಸಬಹುದಾಗಿದೆ."[೨]

ವೀರಶೈವ ಮಠಗಳು ಅನ್ನ ದಾಸೋಹದ ಜೊತೆಗೆ ಜ್ಞಾನ ದಾಸೋಹವನ್ನೂ ಕೈಗೊಂಡಿರುವುದು ಬಹು ಜನರ ಮೆಚ್ಚುಗೆಗೆ, ಪ್ರಶಂಸೆಗೆ ಒಳಗಾಗಿರುವುದು ನಿಜ. ಆದರೆ ಅವು ನಡೆಸುತ್ತಿರುವ ಶಾಲೆ-ಕಾಲೇಜುಗಳ ವಿದ್ಯಾರ್ಥಿಗಳು 'ದಾಸೋಹಂ ಭಾವದಿಂದ' ನಡೆದುಕೊಳ್ಳುತ್ತಿರುವರೆ? ಹಾಗೆ ನೋಡಿದರೆ, ಬೇರೆ ಸಂಘಟನೆಗಳು ನಡೆಸುತ್ತಲಿರುವ ಶಾಲೆ-ಕಾಲೇಜುಗಳ ವಿದ್ಯಾರ್ಥಿಗಳಲ್ಲಾಗಲಿ, ಶಿಕ್ಷಕರಲ್ಲಾಗಲಿ ಆರೋಗ್ಯಕರ ವ್ಯಕ್ತಿತ್ವವನ್ನು ಅಭಿವೃದ್ಧಿಶೀಲ ದೇಶಗಳಿಗೆ ಅತ್ಯಗತ್ಯವಾಗಿ ಬೇಕಾದಂತಹ ವ್ಯಕ್ತಿತ್ವವನ್ನು ಬೆಳೆಸುವ ಮತ್ತು ಬೆಳೆಸಿಕೊಳ್ಳುವ ಹಾಗೂ ತಾವು ಜೀವಿಸುತ್ತಿರುವ ಸಮುದಾಯದ ಸಂಘಟನೆ- ಅಭ್ಯುದಯಕ್ಕೆ ಅಗತ್ಯವಾದ ವಾತಾವರಣವಾಗಲಿ, ಪ್ರವೃತ್ತಿಯಾಗಲಿ ಕಾಣುತ್ತಿಲ್ಲ. ಮಠಗಳ ಸಂದರ್ಭವನ್ನು ಗಮನದಲ್ಲಿರಿಸಿಕೊಂಡು ನೋಡಿದಾಗ, ಮಠಗಳು ಶಾಲೆ-ಕಾಲೇಜುಗಳನ್ನು ನಡೆಸುತ್ತಿರುವುದು ತಾವು ಶೈಕ್ಷಣಿಕ ಚಟುವಟಿಕೆಗಳಲ್ಲೂ ನಿರತವಾಗಿವೆ ಎಂದು ತೋರಿಸಿಕೊಳ್ಳಲಿಕ್ಕೇನೊ ಅನ್ನಿಸುತ್ತದೆ. ಜ್ಞಾನ ಸಂಪಾದನೆ ಅಂದರೆ, ವಿಷಯಗಳ ಸಂಗ್ರಹಣೆ ಎಂದೂ, ಇದರ ಮೂಲಕ ಉದ್ಯೋಗವನ್ನು ದೊರೆಕಿಸಿಕೊಳ್ಳುವುದಕ್ಕೆ ಅತ್ಯಗತ್ಯವಾದ ಶಿಫಾರಸ್ಸು ಪತ್ರವನ್ನು ದೊರೆಕಿಸಿಕೊಳ್ಳಲು ಸಾಧ್ಯವೆಂದೂ ತಿಳಿದಿರುವುದರಿಂದ, ಇಂಥ ಭಾವನೆಯೇ ವ್ಯಾಪಕವಾಗಿ ಹರಡಿರುವುದರಿಂದ ಶಿಕ್ಷಣವೂ ವಾಣಿಜ್ಯೀಕರಣಗೊಳ್ಳುತ್ತಲಿದೆ. ಯಾವ ಪ್ರಾಣಿಗೂ ಇರದ ಶ್ರೇಷ್ಠ ಶಕ್ತಿಯನ್ನು ಉಪಯೋಗಿಸಿಕೊಂಡು ಪ್ರಾಪಂಚಿಕ ಜ್ಞಾನವನ್ನು ಸಂಪಾದಿಸಿಕೊಂಡು ಶ್ರೇಷ್ಠ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವ ಮತ್ತು ಮಾನವ ಸಮಾಜವನ್ನು ಆದರ್ಶಸಮಾಜವನ್ನಾಗಿ ಪರಿವರ್ತಿಸಿ, ಅದನ್ನು ಸಂಪೋಷಿಸಿಕೊಂಡು ಹೋಗುವ ಸಂಕಲ್ಪವನ್ನು ತೆಗೆದುಕೊಳ್ಳಲು ಸೂಕ್ತವಾದ ಕಮ್ಮಟಗಳೇ ಶಿಕ್ಷಣ ಸಂಸ್ಥೆಗಳು ಎಂಬ ಭಾವನೆಯನ್ನು ಹೊಂದಿ, ಇಂಥ ಭಾವನೆಗೆ ಅನುಗುಣವಾದ ಕ್ರಮವನ್ನು ಮಠಗಳು ತಗೆದುಕೊಂಡರೆ ಹಬ್ಬುತ್ತಿರುವ ವಾಣಿಜ್ಯೀಕರಣವನ್ನು ಹತ್ತಿಕ್ಕಲು ಮತ್ತು ಜಾಗತೀಕಣದ ದುಷ್ಪಸವಾಲುಗಳನ್ನು ಎದುರಿಸಲು ಸಾಧ್ಯವಾಗುತ್ತದೆ.

ತೀವ್ರವಾಗಿ ಬದಲಾಗುತ್ತಲಿರುವ ಸಮಾಜದಲ್ಲಿ ಸಮಸ್ಯೆಗಳೇ ಪುಂಖಾನುಪುಂಖವಾಗಿ ಏಳುತ್ತಲಿವೆಯೇ ಹೊರತು ಅವುಗಳನ್ನು ಪರಿಹರಿಸುವ ಕ್ರಮಗಳನ್ನು ಅದೇ ಪ್ರಮಾಣದಲ್ಲಿ ಕಾಣುತ್ತಲಿಲ್ಲ. ಸಮಾಜದ ಎಲ್ಲ ರಂಗಗಳಲ್ಲೂ ನಿರ್ಲಕ್ಷ್ಯೆಯ, ಪರಾಙ್ಮುಖತೆಯ ಮತ್ತು ಅನೈತಿಕತೆಯ ವಾತಾವರಣವಿದೆ. ಜಾಗತೀಕರಣವು ಎಸೆದಿರುವ ಸವಾಲುಗಳನ್ನು ಎದುರಿಸುವ ಸಾಮರ್ಥ್ಯವು ನಮ್ಮ ತರುಣ ಜನರಲ್ಲಿ ಕಾಣುತ್ತಲಿಲ್ಲ. ಇದಕ್ಕೆ ಮುಖ್ಯ ಕಾರಣ, ಬಹುಶಃ ಇತರರಲ್ಲೂ ಇಂಥ ಸಾಮರ್ಥ್ಯ ಮತ್ತು ಕಾಳಜಿ ಇರದೇ ಹೋಗಿರುವುದು. ದುಡಿಯದೆ ಬದುಕಬೇಕು, ಅತಿಶೀಘ್ರವಾಗಿ ಹಣಸಂಪಾದಿಸಬೇಕು ಎಂಬ ಮನೋಭಾವನೆಯೇ ದಟ್ಟವಾಗುತ್ತಲಿರುವಾಗ ಕಾಯಕ-ದಾಸೋಹ ಮೌಲ್ಯಗಳು ಕಳಾಹೀನವಾಗಿವೆ. ಸ್ಪರ್ಧಾತ್ಮಕತೆಯು ಶೀಲದ ಗೆರೆಯನ್ನು ಅಳಿಸುತ್ತಲಿರುವುದರಿಂದ ಪ್ರಾಮಾಣಿಕತೆಗೆ ಬೆಲೆಯಿಲ್ಲದಾಗಿದೆ; ಭ್ರಷ್ಟತೆಗೆ ಮನ್ನಣೆಯ ಮಣೆ ದೊರೆಕಿದೆ. ಇಂಥ ವಿಷಮ ಪರಿಸ್ಥಿತಿಯಲ್ಲಿ ಸಾತ್ವಿಕ ಸಂಪನ್ನರಾದ, ಕಾಯಕ-ದಾಸೋಹಗಳ ಸೂತ್ರಗಳನ್ನು ಮೈಗೂಡಿಸಿಕೊಂಡ ಧೀರ ತರುಣಜನರ ಪಡೆಯನ್ನು ಸಿದ್ಧಗೊಳಿಸುವ ಅಗತ್ಯವಿದೆ. ಇದನ್ನು ವೀರಶೈವ ಮಠಗಳು ಮಾಡಬೇಕಾಗಿದೆ. ಅನ್ಯರು ನಡೆಸುವ ಶಿಕ್ಷಣಸಂಸ್ಥೆಗಳಿಂದ, ವಿದ್ಯಾರ್ಥಿನಿಲಯಗಳಿಂದ ಭಿನ್ನವಾಗಿ ಮಠಗಳು ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳ, ಪ್ರಸಾದ ನಿಲಯಗಳ

ಪ್ರಯೋಜನ ಪಡೆಯುವವರು ವಿಭಿನ್ನ ರೀತಿಯಲ್ಲಿ ತಮ್ಮ ವ್ಯಕ್ತಿತ್ವವನ್ನು ಸುಜ್ಞಾನದ ಸಂಪಾದನೆಯ ಮೂಲಕ ಬೆಳೆಸಿಕೊಳ್ಳಬೇಕಾಗಿದೆ. ಇದು ಕೇವಲ ಅಪೇಕ್ಷಣೀಯವಲ್ಲ, ಸ್ಪಷ್ಟ ನಿರೀಕ್ಷಣೆಯೂ ಆಗಿದೆ, ಅನಿವಾರ್ಯ ಅವಸರವೂ ಆಗಿದೆ.

IV

ವೀರಶೈವ ಮಠಗಳು ಆಗಮಿಸಿದ ಭಕ್ತಾದಿಗಳಿಗೆ ದಾಸೋಹದ ಹೆಸರಿನಲ್ಲಿ ಪ್ರಸಾದವೆಂದು ಆಹಾರವನ್ನು ನೀಡುತ್ತಿರುವುದು ಸಾಮಾನ್ಯ ದೃಶ್ಯ. ಈ ಭಕ್ತವೃಂದದಿಂದಲೇ ಮಠಗಳು ಪೋಷಣೆಗೊಳ್ಳುತ್ತಲಿರುವುದರಿಂದ ದಾಸೋಹಕ್ಕೆ ಮಹತ್ವ ಬಂದಿದೆ. ಸಮಾಜದ ಇತಿಹಾಸವನ್ನು ಸೂಕ್ಷ್ಮವಾಗಿ ಗಮನಿಸಿದರೆ, ಆಹಾರವನ್ನು ಹಂಚಿಕೊಂಡು ಭುಂಜಿಸುವುದು, ಒಟ್ಟಾಗಿ ಕುಳಿತು ಭೋಜನ ಮಾಡುವುದು ಮತ್ತು ಈ ಸಾಂಘಿಕ ಕ್ರಿಯೆಯ ಮೂಲಕ ಪರಸ್ಪರರೊಳಗೆ ಅನುಭವ-ವಿಚಾರಗಳನ್ನು ಹಂಚಿಕೊಳ್ಳುವುದು ಸಮಾಜದ ಸ್ವಾಸ್ಥ್ಯಕ್ಕೆ ಬೆಂಬಲವಾಗಿರುವುದು ಸಮಾಜಶಾಸ್ತ್ರಜ್ಞರಿಗೆ ಪರಿಚಿತವೇ ಆಗಿದೆ. ಈ ಕ್ರಮವು ವೀರಶೈವ ಮಠಗಳ ಚರ್ಯೆಯ ಅವಿಭಾಜ್ಯ ಅಂಗವೇ ಆಗಿದೆ. ಮಠಗಳಂತೆಯೇ ಕರ್ನಾಟಕಾದ್ಯಂತ, ಎಲ್ಲೆಲ್ಲಿ ವೀರಶೈವರು ಹೆಚ್ಚಾಗಿ ವಾಸಿಸುತ್ತಾರೋ ಅಲ್ಲೆಲ್ಲಾ, ಊರೂರುಗಳಲ್ಲಿ ವಾಸಿಸುತ್ತಿರುವ ಜಂಗಮರು ತಮ್ಮ ಮನೆಗಳಲ್ಲಿ ಪ್ರಯಾಣಿಕರಿಗೆ ಬೇಕಾದ ಆಹಾರ-ಪಾನೀಯ - ತಂಗುದಾಣ ಸೌಕರ್ಯವನ್ನು ಒದಗಿಸುತ್ತಿದ್ದುದುಂಟು. ತೀವ್ರತರವಾದ ಬದಲಾವಣೆಯಿಂದಾಗಿ ಜಂಗಮರು 'ಕೋರಾನ್ನ' ಭಿಕ್ಷೆಗೆ ಹೋಗುವುದಾಗಲಿ, ಸೋಮವಾರ ಮತ್ತಿತರ ಹಬ್ಬದ ದಿನಗಳಂದು 'ಬಿನ್ನಕ್ಕೆ' ಹೋಗುವುದಾಗಲಿ, ಸುಗ್ಗಿಯಲಿ ಕಣಕಣಗಳಿಂದ ಧಾನ್ಯಗಳನ್ನು ಎತ್ತಿಕೊಂಡು ಬರುವುದಾಗಲಿ ಕಡಿಮೆಯಾಗುತ್ತಿದೆ; ಕೆಲವು ಕಡೆ ಇಂಥವುಗಳನ್ನು ಕೈಬಿಡಲಾಗಿದೆ. ಈ ಕಾರಣಗಳಿಂದಲೂ ಅವರು ತಮ್ಮ ಮನೆಗಳಲ್ಲಿ ಪ್ರಯಾಣಿಕರಿಗೆ ಪರಂಪರೆಯಿಂದ ನಡೆಸಿಕೊಂಡು ಬರುತ್ತಿದ್ದ ಈ ಸೇವೆಗಳು ಕರಗಿಹೋಗುತ್ತಲಿವೆ. ಈ ಜಂಗಮರ ಮನೆಗಳನ್ನು ಊರವರು ಮಠದವರ ಮನೆಗಳೆಂದು, ಕೆಲವೊಮ್ಮೆ ಮಠಗಳೆಂದೇ ಕರೆಯುತ್ತಿದ್ದರು. ಬಹುಶಃ ಈ ಪರಂಪರೆಯ ನಡವಳಿಕೆಯು ವೀರಶೈವ ಮಠಗಳ ನೈಜ ಕಾರ್ಯಗಳನ್ನು ವಿಕೇಂದ್ರೀಕರಣದ ರೀತಿಯಲ್ಲಿ ಮತ್ತು ತುಂಬಾ ಆತ್ಮೀಯವಾಗಿಯೇ ಪೂರೈಸಲಾಗುತ್ತಿತ್ತು.

ಅನ್ನದಾಸೋಹಕ್ಕೆ ಹೆಸರಾದ ಮಠಗಳು ಬಂದ ಭಕ್ತರಿಗೆ ಪ್ರಸಾದ ನೀಡಿಯೇ ಕಳಿಸುತ್ತವೆ. ಮಠಾಧ್ಯಕ್ಷರು "ಪ್ರಸಾದ ತೆಗೆದುಕೊಂಡು ಹೋಗಿ" ಎಂದು ಭಕ್ತರಿಗೆ ಹೇಳಿದರೆ, ಭಕ್ತರು ಪ್ರಸಾದ ತೆಗೆದುಕೊಳ್ಳದೆ ಹೋಗುವಂತಿಲ್ಲ. ಹಾಗೆ ಹೋದರೆ ಅದೊಂದು ಅಪರಾಧವೇನೋ ಎನ್ನುವ ಭಾವನೆ. 'ಮಠಕ್ಕೆ ಹೋಗುವಾಗ ಬರಿಗೈಲಿ ಹೋಗಬಾರದು' ಎಂಬ ಪರಂಪರೆಯ ಭಾವನೆಯೂ ಭಕ್ತರಲ್ಲಿದೆ. ಹೀಗೆ ವ್ಯವಹಾರವು ಧರ್ಮೋ-ನೈತಿಕ ಆಯಾಮವನ್ನು ಹೊಂದಿರುವುದನ್ನು ನಾವು ಗಮನಿಸಬಹುದು. ಆದರೆ ಲೌಕಿಕ ಭಾವನೆಗಳು ದಟ್ಟವಾಗುತ್ತಿರುವಾಗ ಮಠಗಳಲ್ಲಿನ ಪ್ರಸಾದ ವಿನಿಯೋಗ ಪಾವಿತ್ರ್ಯಭಾವನೆಯು ಆಕುಂಚನಗೊಳ್ಳುತ್ತಲಿದೆ. ಇದರಿಂದಾಗಿ ದಾಸೋಹವು ಉದರಪೋಷಣೆಯ ಮಟ್ಟಕ್ಕೆ ಕುಸಿಯುತ್ತಿರುವಂತೆ ತೋರುತ್ತದೆ. ಮಠಗಳು ಜ್ಞಾನ ದಾಸೋಹವೆಂದು ನಡೆಸುತ್ತಲಿರುವ ಶಾಲೆ-ಕಾಲೇಜುಗಳಂತೆಯೇ ಇರುವುದರಿಂದ ಅಲ್ಲಿಂದ ಹೊರಬೀಳುವವರು ಜ್ಞಾನಿ-ಸುಜ್ಞಾನಿಗಳಾಗಿ ಸಮುದಾಯವನ್ನು ಪ್ರವೇಶಿಸುತ್ತಾರೆ, ತಮ್ಮ ವೃತ್ತಿ-ಕಸುಬುಗಳಲ್ಲಿ ಕಾಯಕ-ದಾಸೋಹ ಸೂತ್ರಗಳನ್ನು ಅಳವಡಿಸಿಕೊಳ್ಳುತ್ತಾರೆ ಎಂಬ ಭರವಸೆ ಇಲ್ಲದಾಗಿದೆ. ಹೀಗಾದರೆ ವೀರಶೈವದ ಮಹೋನ್ನತ ಆದರ್ಶಗಳನ್ನು ಗಾಳಿಗೆ ತೂರಿದಂತೆಯೇ ಆಗುತ್ತದೆ.

ಆದುದರಿಂದ ವೀರಶೈವ ಮಠಗಳಲ್ಲಿ ಪ್ರಸಾದವನ್ನು ಸ್ವೀಕರಿಸಿ ಹೋಗುವ ಭಕ್ತಾಧಿಗಳು 'ಪ್ರಸಾದ ಕಾಯಗಳಾಗಿ' ತೆರಳಬೇಕು; ಮಠಗಳು ನಡೆಸುತ್ತಲಿರುವ ಶಿಕ್ಷಣ ಸಂಸ್ಥೆಗಳಿಂದ ಹೊರಬೀಳುವ ಶಿಕ್ಷಿತರು ನವಸಮಾಜದ ನಿರ್ಮಾಪಕರಾಗಿ ಬದುಕುವಂತಾಗಬೇಕು. ಇದಕ್ಕಾಗಿ ವೀರಶೈವ ಮಠಗಳು 'ಕಾಯಕ-ದಾಸೋಹ' ಸೂತ್ರಗಳನ್ನು ಆಧರಿಸಿದ ರಚನಾತ್ಮಕ ಕಾರ್ಯಕ್ರಮಗಳನ್ನು ರೂಪಿಸಿ, ಅನುಷ್ಠಾನಗೊಳಿಸಬೇಕಾಗಿದೆ. ಮಠಗಳ ಒಳಗೂ ಹೊರಗೂ ಧಾರ್ಮಿಕತೆ-ನೈತಿಕತೆ

ವಿಜೃಂಭಿಸುವಂತಾಗಬೇಕು; ಮಠಗಳಿಗೆ ಸಂಬಂಧಪಟ್ಟವರ ಮತ್ತು ಅವುಗಳೊಡನೆ ಸಂಪರ್ಕವಿರಿಸಿಕೊಂಡವರ ಅಂತರಂಗ-ಬಹಿರಂಗಗಳೆರಡೂ ಶುದ್ಧವಾಗಿರುವಂತಾಗಬೇಕು.

ಲೌಕಿಕರಾಜ್ಯದಲ್ಲಿನ ಶಿಕ್ಷಣಸಂಸ್ಥೆಗಳಲ್ಲಿ ಧರ್ಮಬೋಧನೆಗೆ ಅವಕಾಶವಿಲ್ಲ ಎಂದು ಹೇಳಲಾಗುತ್ತಿದೆ. ಆದರೆ ವೀರಶೈವವು ಕೇವಲ ಆಧ್ಯಾತ್ಮಸಾಧನೆಯ ಧರ್ಮವಾಗಿರದೆ ಲೌಕಿಕ ಪ್ರಪಂಚದ ಉನ್ನತಿಯನ್ನು ಸಾತ್ವಿಕ ನೆಲೆಯ ಮೇಲೆ ಸಾಧಿಸುವ ಧರ್ಮವೂ ಆಗಿದೆ. ಊನವಾದ ಸಮಾಜವನ್ನು ಏರ್ಪಡಿಸಿ, ಅದನ್ನು ಸಮೃದ್ಧವಾಗಿ ರೂಪಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಿರುವುದರಿಂದ ಶಿಕ್ಷಣಸಂಸ್ಥೆಗಳು ನವಸಮಾಜ ನಿರ್ಮಾಣದ ಸಮರ್ಥ ರೂವಾರಿಗಳನ್ನು ಸಿದ್ಧಮಾಡುವಂಥ ಕಮ್ಮಟಗಳಾಗಬೇಕಾಗಿದೆ. ವೀರಶೈವ ಮಠಗಳು ಸ್ಥಾಪಿಸಿ ನಡೆಸುತ್ತಿರುವ ಶಿಕ್ಷಣಸಂಸ್ಥೆಗಳು ಜ್ಞಾನದಾಸೋಹದ ವಿಸ್ತೃತ ಘಟಕಗಳೆಂದೇ ತಿಳಿಯಬೇಕಾಗಿದೆ. 'ಅಲ್ಲಿ ಸಲ್ಲಬೇಕಾಗಿರುವ' ಸರ್ವಸಮರ್ಥ ಸಾತ್ವಿಕ ವ್ಯಕ್ತಿತ್ವವನ್ನುಳ್ಳ ವ್ಯಕ್ತಿಗಳನ್ನು 'ಇಲ್ಲಿಯೇ' ಕಂಡರಿಸುವ ಸಾಮರ್ಥ್ಯವು ವೀರಶೈವ ಧರ್ಮಕ್ಕಿದೆ.

ಆದುದರಿಂದಲೂ ವೀರಶೈವ ಮಠಗಳು ನಡೆಸುತ್ತಲಿರುವ ಶಿಕ್ಷಣಕೇಂದ್ರಗಳು ತಾವು ಅಸ್ತಿತ್ವದಲ್ಲಿರುವ ಸಮುದಾಯಗಳನ್ನು ಉನ್ನತೋನ್ನತವಾಗಿ ಅಭಿವೃದ್ಧಿಗೊಳಿಸುವ ರಚನಾತ್ಮಕ ಕಾರ್ಯಕ್ರಮಗಳನ್ನು ರೂಪಿಸಿ, ಅವುಗಳನ್ನು ಅನುಷ್ಠಾನಗೊಳಿಸಬೇಕಾಗಿದೆ. ಈ ಸಂದರ್ಭದಲ್ಲಿ ಸಮಷ್ಟಿ ಸಮುದಾಯತ್ವದ ಸೃಷ್ಟಿಕರ್ತರಾದ ಇಂಗ್ಲೇಂಡಿನ ರಾಬರ್ಟ್ ಓವೆನ್ (೧೭೭೧-೧೮೫೮) ಅವರನ್ನು ನೆನೆಯುವುದು ಉಚಿತವೆನ್ನಿಸುತ್ತದೆ. ಓವೆನ್ ಒತ್ತಿ ಹೇಳುವುದು ಮತ್ತು ಎತ್ತಿ ಹಿಡಿಯುವುದು ಸಹಕಾರತ್ವವನ್ನು ಮತ್ತು ಸಮಷ್ಟಿ ಸಮುದಾಯತ್ವವನ್ನು (Communitarianisom) ಅವರ ಪ್ರಕಾರ ಇದುವರೆಗೆ ಪ್ರಪಂಚದಲ್ಲಿ ನಡೆದ ಶಿಕ್ಷಣ ಪ್ರಕ್ರಿಯೆಯು ಮಕ್ಕಳನ್ನು ಹಾದಿ ತಪ್ಪಿಸುವುದೇ ಆಗಿದೆ; ಅನೀತಿಯುತ ನಡವಳಿಕೆಯನ್ನು ಪ್ರಚೋದಿಸುವುದೇ ಆಗಿದೆ; ದುಡಿದುದನ್ನು ಹಂಚಿಕೊಂಡು ಭೋಗಿಸದೆ, ಸ್ವಾರ್ಥಪರರಾಗಿ ಜೀವಿಸಲಿಕ್ಕೆ ಕುಮ್ಮಕ್ಕು ನೀಡುತ್ತದೆ. ಆದುದರಿಂದಲೇ ಶಿಕ್ಷಣಕ್ಷೇತ್ರದಲ್ಲಿ ಕ್ರಾಂತಿಕಾರಕ ಬದಲಾವಣೆಗಳಾಗಬೇಕಾಗಿದೆ ಎಂಬುದು ಅವರ ನಿಶ್ಚಿತಾಭಿಪ್ರಾಯ. ತಮ್ಮ ಆಲೋಚನೆಗಳನ್ನು, ಹಂಬಲವನ್ನು ಕಾರ್ಯರೂಪಕ್ಕೆ ತರಬೇಕೆಂದು ತಾವು ನಿರ್ಮಿಸಿದ ಜವಳಿಗಿರಣಿಯ ಕಾರ್ಮಿಕರ ಮಕ್ಕಳಿಗೆಂದು ವಿಶಿಷ್ಟವಾದ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸುತ್ತಾರೆ. ಆ ಸಂಸ್ಥೆಯು ಹಳೆಯದೆಲ್ಲವನ್ನೂ ಅಳಿಸಿಹಾಕಿ ಹೊಸ ಚಿಂತನೆಯನ್ನು ಬಿತ್ತಬೇಕೆಂಬುದು ಅವರ ನಿರೀಕ್ಷೆ. ಆ ಸಂಸ್ಥೆಗೆ ಇರಬೇಕಾದ ಧ್ಯೇಯೋದ್ದೇಶಗಳು ಮೂರು ಮತ್ತೊಂದು; ಸಂಸ್ಥೆಯು ಇರುವ ಹಳ್ಳಿಯ ವಾಸಿಗಳೆಲ್ಲರೂ ತತ್‌ಕ್ಷಣದ ನೆಮ್ಮದಿಯನ್ನೂ, ಲಾಭವನ್ನೂ ಪಡೆಯುವಂಥ ಸ್ಥಿತಿಯನ್ನು ನಿರ್ಮಿಸುವುದು ಅದರ ಮೊದಲ ಧ್ಯೇಯೋದ್ದೇಶ. ಎರಡನೆಯದಾಗಿ ನೆರೆಹೊರೆಯ ಸಮುದಾಯದ ಕ್ಷೇಮವನ್ನು ಕಾಪಾಡುವ ಹಾಗೂ ಅದಕ್ಕೆ ಉಚಿತವಾದ ಅನುಕೂಲಗಳನ್ನು ಒದಗಿಸುವ ಧ್ಯೇಯವಿರತಕ್ಕದ್ದು. ಮೂರನೆಯ ಧ್ಯೇಯವು ಬ್ರಿಟೀಷ್ ಸಾಮ್ರಾಜ್ಯದ ತುಂಬೆಲ್ಲಾ ವಿಸ್ತೃತವಾದ ಒಳ್ಳೆ ನೆರವೇರಬೇಕು ಎಂಬುದಾಗಿರುತ್ತದೆ. ಕೊನೆಯದಾಗಿ ಕ್ರಮಕ್ರಮೇಣವಾಗಿ ಪ್ರಪಂಚದ ಪ್ರತಿಯೊಂದು ರಾಷ್ಟ್ರವೂ ಉತ್ತಮಗೊಳ್ಳಬೇಕು ಎಂಬುದಾಗಿರುತ್ತದೆ.[೩] ರಾಬರ್ಟ್ ಓವೆನ್ ಅವರ ಚಿಂತನೆಗಳು ವೀರಶೈವ ಸಿದ್ಧಾಂತದಲ್ಲಿ ಅಡಕವಾಗಿವೆ ಎಂಬುದು ಸ್ಪಷ್ಟ. ಅಂದರೆ, ಮಠಗಳು ಶಿಕ್ಷಣಸಂಸ್ಥೆಗಳನ್ನು ನೇರವಾಗಿಯಾಗಲಿ, ಪರೋಕ್ಷವಾಗಿಯಾಗಲಿ ಹೊಸ ಸಮಾಜದ ನಿರ್ಮಾಣಕ್ಕೆ ಬಳಸಿಕೊಳ್ಳುವುದು ಸುಲಭ ಮತ್ತು ಇಂದಿನ ವಿಷಮ ಪರಿಸ್ಥಿತಿಯಲ್ಲಿ ಅನಿವಾರ್ಯವೂ ಆಗಿದೆ.

ವೀರಶೈವ ಮಠಗಳು ತಾವು ನಡೆಸುತ್ತಲಿರುವ ಶಿಕ್ಷಣಕೇಂದ್ರಗಳ ಮೂಲಕ ಸುತ್ತಣ ಸಮುದಾಯಗಳನ್ನು ಉನ್ನತೋನ್ನತವಾಗಿ ಅಭಿವೃದ್ಧಿಗೊಳಿಸುವ ರಚನಾತ್ಮಕ ಕಾರ್ಯಗಳನ್ನು ಅನುಷ್ಠಾನಕ್ಕೆ ತರಬೇಕು. ಮಠಗಳು ನಡೆಸುತ್ತಲಿರುವ ಶಿಕ್ಷಣ ಕೇಂದ್ರಗಳ ವಿದ್ಯಾರ್ಥಿಗಳಿಗೆ ಮತ್ತು ತಾವು ನಡೆಸುತ್ತಲಿರುವ ಪ್ರಸಾದನಿಲಯಗಳ ವಾಸಿಗಳಿಗೆ ಸಮಾಜ/ಸಮುದಾಯ ಸಂಘಟನೆಯಲ್ಲಿ ಮಾರ್ಗದರ್ಶನ ನೀಡಲು ಒಬ್ಬ ಪ್ರಶಿಕ್ಷಣ ಪಡೆದ ಸಮಾಜಕಾರ್ಯಕರ್ತನನ್ನು ನೇಮಿಸಿಕೊಳ್ಳಬೇಕು. ಈ ಕಾರ್ಯಕರ್ತನು ಪೂರ್ಣಾವಧಿಯ ಕಾರ್ಯಕರ್ತನಾಗಿರತಕ್ಕದ್ದು. ಈತನು ಸರಕಾರ ಮತ್ತು ಸ್ವಯಂಸೇವಾ ಸಂಘಟನೆಗಳು (ಸರಕಾರೇತರ

ಸಂಸ್ಥೆಗಳು) ಕೈಕೊಂಡಿರುವ ಕಲ್ಯಾಣಾಭಿವೃದ್ಧಿ ಕಾರ್ಯಕ್ರಮಗಳನ್ನು ಸಂಪೂರ್ಣವಾಗಿ ಅರಿತವನಾಗಿರಬೇಕು. ಜೊತೆಗೆ ಸಾರ್ವಜನಿಕ ಸಂಪರ್ಕಾಧಿಕಾರಿಯಂತೆ (ಅಭ್ಯುದಯ ಕಾರ್ಯ ಮತ್ತು ಕ್ರಿಯಾತ್ಮಕ ನಾಯಕತ್ವದ ಬೆಳವಣಿಗೆಯನ್ನು ಗಮನದಲ್ಲಿರಿಸಿಕೊಂಡು) ಕಾರ್ಯನಿರತನಾಗಿರಬೇಕಾಗುತ್ತದೆ. ಈ ಕಾರ್ಯಕರ್ತನು ಮಠವು ನಡೆಸುತ್ತಲಿರುವ ಶಾಲೆ-ಕಾಲೇಜುಗಳೊಡನೆಯೂ, ಸುತ್ತಣ ಸಮುದಾಯಗಳಲ್ಲೂ ಕೆಲಸಮಾಡಬೇಕು. ಈತನು ಅಭ್ಯುದಯ ಕಾರ್ಯದಲ್ಲಿ ತೊಡಗಿರುವ (ಸುತ್ತಣ) ಎಲ್ಲರ ನಡುವೆ ಮಧುರವಾದ ಕ್ರಿಯಾತ್ಮಕ ಕೊಂಡಿಯಾಗಿರುತ್ತಾನೆ.

ಈ ಕಾರ್ಯಕರ್ತನ ಮೂಲಕ ಮಠವು ಎರಡು ತೆರನಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತದೆ. ಒಂದು ಸಾಮಾನ್ಯ, ಇನ್ನೊಂದು ವಿಶಿಷ್ಟ. ಮೊದಲಿನದು ಎಲ್ಲಾ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ, ಇನ್ನೊಂದು ಆಯ್ದ ವಿದ್ಯಾರ್ಥಿಗಳಿಗೆ ಸಂಬಂಧಿಸಿರುತ್ತದೆ. ಮೊದಲನೆಯದು ಶಿಕ್ಷಣಸಂಸ್ಥೆಗಳ ಒಳಗೆ ನಡೆದರೆ, ಎರಡನೆಯದು ಶಿಕ್ಷಣಸಂಸ್ಥೆಗಳ ಹೊರಗೆ-ಸಮುದಾಯಗಳಲ್ಲಿ-ನಡೆಯುತ್ತಿರುತ್ತದೆ.

V

ಮೊದಲನೆಯ ಕಾರ್ಯಕ್ರಮವು ಹೀಗಿರುತ್ತದೆ:

ಪ್ರೌಢಶಾಲೆಯ ಕೊನೆಯ ತರಗತಿಯ, ಪದವಿಪೂರ್ವ ಕಾಲೇಜಿನ ಮತ್ತು ಸ್ನಾತಕ ತರಗತಿಯ ಹಾಗೂ ತಾಂತ್ರಿಕ ವಿದ್ಯೆಯ ಶಾಲೆಗಳಿದ್ದರೆ ಅಲ್ಲಿನ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ನಮ್ಮ ದೇಶದ ಇತಿಹಾಸ, ಸಂಸ್ಕೃತಿ, ಸಾಹಿತ್ಯ, ಧರ್ಮಗಳ ನೈತಿಕತೆಯ ಬಗೆಗೆ ವಿಶೇಷ ಉಪನ್ಯಾಸಗಳನ್ನು ವಾರಕ್ಕೆ ಒಮ್ಮೆಯಾದರೂ ಏರ್ಪಡಿಸಿ, ನಮ್ಮ ಸಮಾಜದಲ್ಲಿರುವ ಹುಳುಕುಗಳನ್ನು ನಿಸ್ಸಂಕೋಚವಾಗಿ ಪರಿಚಯಿಸಿ, ಅವುಗಳ ವಿಶ್ಲೇಷಣೆ ಮತ್ತು ಪರಿಹಾರಗಳಲ್ಲಿ ಯುವಜನರ ಪಾತ್ರದ ಮಹತ್ವವನ್ನು ಎತ್ತಿ ತೋರಿಸಬೇಕು. ಪ್ರಸಾರ ಮಾಧ್ಯಮಗಳ 'ಹಾವಳಿಯಿಂದ' ವಿದ್ಯಾರ್ಥಿಗಳು ಓದಿನಲ್ಲಿ ಮತ್ತು ಇಂತಹ ಉಪನ್ಯಾಸಗಳಲ್ಲಿ ಆಸಕ್ತಿ ಇಲ್ಲದವರಾಗಿದ್ದಾರೆ ಎಂಬ ಭಾವನೆಯು ವ್ಯಾಪಕವಾಗಿದೆ. ಆದರೆ ಅದೇ ಮಾಧ್ಯಮದ ಉಪಕರಣಗಳನ್ನು ಉಪಯೋಗಿಸಿಕೊಂಡು ವಿಷಯವನ್ನು ಆಕರ್ಷಕವಾಗಿ ಮತ್ತು ಮನಂಬುಗುವ ಹಾಗೆ, ಅವರ ಮನಸ್ಸು ಉತ್ಸಾಹಭರಿತವಾಗುವಂತೆ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು. ಇಂಥ ಕಾರ್ಯಕ್ರಮಗಳನ್ನು ರೂಪಿಸುವಲ್ಲಿ ಮತ್ತು ಅನುಷ್ಠಾನಗೊಳಿಸುವಲ್ಲಿ ವಿದ್ಯಾರ್ಥಿಗಳೂ ಭಾಗವಹಿಸುವಂತಾಗಬೇಕು. ಇವರನ್ನು ಸಂಘಟನೆ ಕಾರ್ಯದಲ್ಲಿ ತೊಡಗಿಸುವಲ್ಲಿ ಮತ್ತು ಅನುಷ್ಠಾನಗೊಳಿಸುವಲ್ಲಿ ಆಸ್ಥೆಯುಳ್ಳ ಶಿಕ್ಷಕರನ್ನು (ತರಗತಿಗೆ ಒಬ್ಬರಂತೆ) ಗುರುತಿಸಿ, ಅವರು ಸಾಂಘಿಕವಾಗಿ ಈ ಕಾರ್ಯಕ್ರಮದ ನಿರ್ವಹಣೆಯನ್ನು ನೋಡಿಕೊಳ್ಳಬೇಕು. ಮಠಾಧಿಪತಿಯವರು ವೈಯಕ್ತಿಕ ಆಸಕ್ತಿ ವಹಿಸಿ, ಶಿಕ್ಷಕರನ್ನು ಗುರುತಿಸುವಲ್ಲಿ, ಅವರಿಗೆ ಮಾರ್ಗದರ್ಶನ ನೀಡುವಲ್ಲಿ ಹೆಚ್ಚಿನ ಕಾಳಜಿ ತೋರಿಸಬೇಕು. ಈ ಎಲ್ಲ ಕಾರ್ಯಗಳಲ್ಲಿ ಸಮಾಜಕಾರ್ಯಕರ್ತನು ಸಂಯೋಜಕನಾಗಿರುತ್ತಾನೆ.

VI

ಈ ಕಾರ್ಯಕ್ರಮವು ಎಲ್ಲಾ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಅನ್ವಯಿಸುತ್ತದೆ. ಆದರೆ ಎರಡನೆಯದು ಭಿನ್ನವಾದ, ಗಂಭೀರವೂ ಘನವೂ ಆದ ಕಾರ್ಯಕ್ರಮವಾಗಿರುತ್ತದೆ. ಆಸಕ್ತ ಯುವ ವಿದ್ಯಾರ್ಥಿಗಳಲ್ಲಿ ಕೆಲವರನ್ನು ಆಯ್ದುಕೊಂಡು ಇವರಿಗಾಗಿ ಈ ಕಾರ್ಯಕ್ರಮವನ್ನು ರೂಪಿಸಿ, ಅನುಷ್ಠಾನಗೊಳಿಸಬೇಕು. ಸಾಮಾಜಿಕ ಅಭ್ಯುದಯದಲ್ಲಿ ಕಳಕಳಿ ಮತ್ತು ಆಸ್ಥೆಯುಳ್ಳ ನಲವತ್ತು ವಿದ್ಯಾರ್ಥಿಗಳನ್ನು ಗುರುತಿಸಿ ಅವರಿಗೆ ಕ್ರಿಯಾತ್ಮಕ ನಾಯಕತ್ವದಲ್ಲಿ ತರಬೇತಿಯನ್ನು ಕೊಡಬೇಕು. ಈ ತರಬೇತಿಯನ್ನು ನೀಡುವುದು ಮಠದ ಒಳಗೆ, ಪ್ರಸಾದ ನಿಲಯದ ಆಶ್ರಯದಲ್ಲಿ ಮತ್ತು ಮಠದ ಸುತ್ತಣ ಸಮುದಾಯದಲ್ಲಿ, ಈ ತರಬೇತಿಯನ್ನು ನೀಡುವಲ್ಲಿ ನೆರವಾಗುವವರು ನಾಲ್ಕು ಜನ ಆಸಕ್ತ ಶಿಕ್ಷಕರು. ನೇಮಿಸಿಕೊಂಡ ಪ್ರಶಿಕ್ಷಣ ಪಡೆದ ಸಮಾಜ ಕಾರ್ಯಕರ್ತ ಮತ್ತು ಮಠಾಧ್ಯಕ್ಷರು ಅಥವಾ ಅವರ ಉತ್ತರಾಧಿಕಾರಿಯವರು ಅಥವಾ ಅವರ ಧಾರ್ಮಿಕ ಪ್ರತಿನಿಧಿ.

ಈ ಕಾರ್ಯಕ್ರಮವು ಹೀಗೆ ನಡೆಯುತ್ತದೆ: ಮಠವಿರುವ ಸಮುದಾಯಕ್ಕೆ ನಾಲ್ಕೈದು ಕಿಲೋಮೀಟರ ಫಾಸಲೆಯಲ್ಲಿರುವ ಹಳ್ಳಿಗಳನ್ನು ಗುರುತಿಸಿ ಅವುಗಳ ಸರ್ವಾಂಗೀಣ ಅಭ್ಯುದಯಕ್ಕೆ ಈ ನಲವತ್ತು ಯುವ ಜನರನ್ನು ತೊಡಗಿಸಲಾಗುತ್ತದೆ. ಇವರಿಗೆ ಬೆನ್ನೆಲುಬಾಗಿ ನೆರವಾಗುತ್ತಿರುವವರು ಈ ನಾಲ್ಕು ಶಿಕ್ಷಕರು, ಒಬ್ಬ ಸಮಾಜಕಾರ್ಯಕರ್ತ ಮತ್ತು ಮಠದ ಸ್ವಾಮಿಯವರು. ವಿದ್ಯಾರ್ಥಿ ಯುವಜನರಿಗೆ ಕಾಯಕ ತತ್ವವನ್ನು ಬೋಧಿಸುವುದಲ್ಲದೆ ಆಯ್ದ ಹಳ್ಳಿಗಳವರೆಗೂ ಈ ಕಾಯಕ-ದಾಸೋಹ ತತ್ವದ ನಿಕಟಪರಿಚಯವಾಗುವಂಥ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ. ನಾವೀಗಾಗಲೇ ತಿಳಿದಿರುವಂತೆ ನಗರಗಳಲ್ಲಿನವರಂತೆ ಹಳ್ಳಿಯವರೂ ಹದಗೆಟ್ಟಿದ್ದಾರೆ. ಹಳ್ಳಿಯವರು ತಮ್ಮ ಸಮಸ್ಯೆಗಳನ್ನು ವೈಜ್ಞಾನಿಕವಾಗಿ ತಿಳಿದುಕೊಳ್ಳುವುದರಲ್ಲಾಗಲಿ, ಅವುಗಳ ಪರಿಹಾರಕ್ಕೆಂದು ಸೂಕ್ತವಾದ ಕ್ರಮಗಳನ್ನು ಕೈಕೊಳ್ಳವುದರಲ್ಲಾಗಲಿ ಅವರಿಗಿರುವುದು ಪರಮ ನಿರ್ಲಕ್ಷ್ಯ. ದುಡಿಮೆಯ ನೈತಿಕತೆಯನ್ನೇ ಕಳೆದುಕೊಂಡಿರುವುದು, ದುಡಿಯದೆ ಏನು ಬಂದರೂ, ಹೇಗೇ ಬಂದರೂ, ಯಾರಿಂದಲೇ ಬಂದರೂ ಇದರಿಂದ ಆಗುವ ದುಷ್ಪರಿಣಾಮಗಳನ್ನು ಲೆಕ್ಕಿಸದೆ ಅದನ್ನು ಸ್ವೀಕರಿಸುವ ಮನೋಭಾವವು ಗಾಢವಾಗಿರುವುದು,' ತಮ್ಮ ಸಮುದಾಯದ ಬಗೆಗೆ ನಿರಭಿಮಾನವಿರುವುದು, ದ್ವೇಷಾಸೂಯೆಯಿಂದ ತಮ್ಮ ಚಿತ್ತಶಾಂತಿಯನ್ನು ಕಳೆದುಕೊಂಡಿರುವುದು, ಇತರರಿಗೂ ಅವರು ಸಮಸ್ಯೆಯಾಗಿರುವುದು ಇಲ್ಲಿ ಜಗಜ್ಜಾಹೀರಾಗಿದೆ. ಇಂಥ ಪರಿಸ್ಥಿತಿಯನ್ನು ಸರಿಪಡಿಸುವುದು ವೀರಶೈವ ಮಠಗಳ ಕರ್ತವ್ಯವಾಗಿದೆ ಮತ್ತು ಇದು ಅವುಗಳಿಗೆ ಸಾಧ್ಯವೂ ಇದೆ. ರೋಗಗಳು ಹೆಚ್ಚುತ್ತಿರುವಾಗ, ಅವುಗಳು ಉಲ್ಬಣವಾಗುತ್ತಿರುವಾಗ ಚಿಕಿತ್ಸೆಯನ್ನು ಕೈಗೊಳ್ಳಬೇಕಾಗುತ್ತದೆಯಲ್ಲವೆ? ರೋಗ ನಿಯಂತ್ರಣಕ್ಕೆ, ಆರೋಗ್ಯ ಸುಧಾರಣೆಗೆ ಆಸ್ಪತ್ರೆಗಳನ್ನು ಸ್ಥಾಪಿಸುವುದು ಅನಿವಾರ್ಯವಲ್ಲವೆ? ಇದರಂತೆಯೇ ಶರಣರ ಜೀವನಸಿದ್ಧಾಂತದ ಸಮರ್ಥ ಆಯುಧವಿರುವುದರಿಂದ, ಇಂಥ ಆಯುಧವನ್ನು ಉಪಯೋಗಿಸುವುದರಲ್ಲಿ ಶತಮಾನಗಳ ಅನುಭವವಿರುವ ವೀರಶೈವ ಮಠಗಳು ಧರ್ಮೋ-ನೈತಿಕ ಬೀಜವನ್ನು ಜನಮನದಲ್ಲಿ ಬಿತ್ತುವುದು ಸುಲಭ ಸಾಧ್ಯ, ಸುಭಗವೂ ಹೌದು.

ನಲವತ್ತು ಯುವಜನರ ಗುಂಪಿಗೆ ಈಗಾಗಲೇ ನಮೂದಿಸಿದ ಹಾಗೆ ನಾಲ್ಕು ಆದರ್ಶ ಶಿಕ್ಷಕರು ಮಾರ್ಗದರ್ಶಿಗಳಾಗಿರುತ್ತಾರೆ. ಸಮಾಜಕಾರ್ಯಕರ್ತನು ಅನ್ಯಪ್ರೇರಕನಾಗಿಯೂ, ಸವಲತ್ತು ಸೃಜನಕನೂ ಆಗಿರುತ್ತಾನೆ. ಯುವಜನರ ಗುಂಪನ್ನು ನಾಲ್ಕು ಉಪಗುಂಪುಗಳನ್ನಾಗಿ ವಿಭಾಗಿಸಲಾಗುವುದು; ಒಂದೊಂದು ಉಪಗುಂಪಿಗೆ ಒಬ್ಬೊಬ್ಬ ಶಿಕ್ಷಕನು ಸಹಾಯಕ ಮಾರ್ಗದರ್ಶಕನಾಗಿರುತ್ತಾನೆ. ಸಮಾಜ ಕಾರ್ಯಕರ್ತನು ರಿಂಗಣ ಸಮುದಾಯಗಳನ್ನು, ಅಂದರೆ ಮಠವಿರುವ ಸಮುದಾಯದ ನಾಲ್ಕೈದು ಕಿಲೋಮೀಟರ ಫಾಸಲೆಯಲ್ಲಿರುವ ಸಮುದಾಯಗಳನ್ನು, ಸತತವಾಗಿ ಸಂದರ್ಶಿಸಿ, ಆ ಹಳ್ಳಿಗರೊಡನೆ ಅನುನಯ ಸಂಬಂಧವನ್ನು ಬೆಳೆಸುತ್ತಾನೆ. ಯುವಜನರ ಕ್ರಿಯಾತ್ಮಕ ವ್ಯಕ್ತಿತ್ವದ ಬೆಳವಣಿಗೆಗಾಗಿ ಈ ರಿಂಗಣ ಸಮುದಾಯಗಳಲ್ಲಿ ಒಂದನ್ನು ಆಯ್ದುಕೊಂಡು ಯುವಜನರ ರಚನಾತ್ಮಕ ಕಾರ್ಯಕ್ಕೆ ನೆರವಾಗುತ್ತಾನೆ. ಉಪಗುಂಪುಗಳಾಗಿ ವಿಂಗಡಿಸಿದ ಯುವ ಜನರು ಸರದಿಯ ಪ್ರಕಾರ ಆ ಮೊದಲ ಹಳ್ಳಿಯಲ್ಲಿ ಕಾರ್ಯತೊಡಗುತ್ತಾರೆ.

ಅದು ಹೀಗಿರುತ್ತದೆ: ಮೊದಲ ಉಪಗುಂಪು ತಿಂಗಳ ಮೊದಲ ಭಾನುವಾರ ತನ್ನ ಮಾರ್ಗದರ್ಶಿ ಶಿಕ್ಷಕ ಮತ್ತು ಸಮಾಜಕಾರ್ಯಕರ್ತನ ಜೊತೆ ಆ ಆಯ್ದುಕೊಂಡ ಗ್ರಾಮಕ್ಕೆ ಹೋಗಿ ಇಡೀ ದಿನ ಅದನ್ನು ಸುತ್ತಿ, ಜನರನ್ನು ಕಂಡು, ಅವರೊಡನೆ ಮಾತನಾಡಿ, ಸಮುದಾಯದ ಪರಿಚಯ ಮಾಡಿಕೊಳ್ಳುತ್ತಾರೆ. (ಪ್ರಸಾದ ನಿಲಯದಿಂದಲೇ ಹಗುರವಾದ ಅಗತ್ಯವಾದಷ್ಟೇ ಆಹಾರವನ್ನು ಕಟ್ಟಿಸಿಕೊಂಡು ತೆಗೆದುಕೊಂಡು ಹೋಗಿ ಆ ಹಳ್ಳಿಯ ಯಾವುದಾದರೂ ಮರದ ಬುಡದಲ್ಲಿ ಕುಳಿತು ಭುಂಜಿಸಬೇಕು, ಹಳ್ಳಿಯವರಿಂದ ನೀರನ್ನು ಪಡೆದುಕೊಳ್ಳಬಹುದು.) ಸಂಜೆಗೆ ಮಠಕ್ಕೆ ಹಿಂದಿರುಗುತ್ತಾರೆ. ಮರುದಿನ-ಸೋಮವಾರ ಸಂಜೆ ಒಂದು ತಾಸು ವರದಿ ಮಂಡನೆ ಮತ್ತು ಚರ್ಚೆ ನಡೆಯುತ್ತದೆ. ಈ ಗೋಷ್ಠಿಯಲ್ಲಿ ಎಲ್ಲ ನಲವತ್ತು ವಿದ್ಯಾರ್ಥಿಗಳು, ಎಲ್ಲಾ ನಾಲ್ಕು ಶಿಕ್ಷಕರು, ಸಮಾಜಕಾರ್ಯಕರ್ತ ಮತ್ತು ಮಠದ ಸ್ವಾಮಿಯವರು ಭಾಗವಹಿಸುತ್ತಾರೆ. ಒಂದಿನ ದಿನ ಹೋಗಿ ಬಂದ ಉಪಗುಂಪಿನ ನಾಯಕನು (ಉಪಗುಂಪಿನ ಎಲ್ಲಾ ಸದಸ್ಯರು ಸರತಿಯ ಪ್ರಕಾರ ಮುಖಂಡರಾಗಿ

ಕಾರ್ಯ ನಿರ್ವಹಿಸುತ್ತಾರೆ. ಮುಖಂಡನಾದವನು ವರದಿ ಸಿದ್ಧಮಾಡಿ ಅದನ್ನು ಸೋಮವಾರದ ಗೋಷ್ಠಿಯಲ್ಲಿ ಮಂಡಿಸುತ್ತಾನೆ.) ಮಂಡಿಸಿದ ವರದಿಯ ಮೇಲೆ ಚರ್ಚೆ ನಡೆಯುತ್ತದೆ. ಇದರಿಂದ ಆ ಹಳ್ಳಿಯ ಪರಿಚಯವು ಇಡೀ ಗುಂಪಿಗೆ ಆಗುತ್ತದೆ. (ವರದಿಯ ನಕಲನ್ನು ಜೋಪಾನವಾಗಿ ಇರಿಸಿಕೊಳ್ಳ ಬೇಕಾಗುತ್ತದೆ.) ಎರಡನೆಯ ಉಪಗುಂಪು, ಎರಡನೆಯ ಶಿಕ್ಷಕನೊಡನೆ ಮತ್ತು ಸಮಾಜಕಾರ್ಯಕರ್ತನೊಡನೆ ಎರಡನೆಯ ಭಾನುವಾರ ಅದೇ ಹಳ್ಳಿಗೆ ಹೋಗಿ, ಆ ಹಳ್ಳಿಯವರೊಡನೆ ವಿಚಾರವಿನಿಮಯವನ್ನು ಮಾಡಿಕೊಳ್ಳುತ್ತಾರೆ. ಸೋಮವಾರದ ಗೋಷ್ಠಿಯಲ್ಲಿ ನಡೆದ ಚರ್ಚೆಯ ಮೂಲಕ ಆ ಹಳ್ಳಿಯ ದೂರಗು ಚಿತ್ರವಾದರೂ ದೊರೆತಿರುತ್ತದೆ. ಆದುದರಿಂದ ಈ ಎರಡನೆಯ ಗುಂಪು ಹೆಚ್ಚು ಪರಿಚಯ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಸಂಜೆಗೆ ಹಿಂದಿರುಗಿದ ಗುಂಪು ಮರುದಿನ ಇಡೀ ಗುಂಪಿನ ಮುಂದೆ ಈ ಉಪಗುಂಪಿನ ಮುಖಂಡನು ವರದಿಯನ್ನು ಮಂಡಿಸುತ್ತಾನೆ. ಚರ್ಚೆ ನಡೆಯುತ್ತದೆ. ಈ ಚರ್ಚೆಯಿಂದ ಅಲ್ಪ ಸ್ವಲ್ಪ ಪ್ರಗತಿಯು ಸಾಧಿತವಾಗುತ್ತದೆ. ಹೀಗೆಯೇ ಮೂರನೆಯ ಉಪಗುಂಪು ಮೂರನೆಯ ಭಾನುವಾರ, ನಾಲ್ಕನೆಯ ಉಪಗುಂಪು ನಾಲ್ಕನೆಯ ಭಾನುವಾರ ಅದೇ ಹಳ್ಳಿಯನ್ನು ಸಂದರ್ಶಿಸುತ್ತದೆ; ಮೂರನೆಯ ಮತ್ತು ನಾಲ್ಕನೆಯ ಸೋಮವಾರದಂದು ಕ್ರಮವಾಗಿ ಉಪಗುಂಪುಗಳ ನಾಯಕರು ತಮ್ಮ ತಮ್ಮ ವರದಿಗಳನ್ನು ಮಂಡಿಸಿ, ಚರ್ಚೆಗೆ ಅವಕಾಶ ಮಾಡಿಕೊಡುತ್ತಾರೆ. ಎರಡನೆಯ ತಿಂಗಳ ಮೊದಲ ಭಾನುವಾರ ಮೊದಲಗುಂಪು, ಎರಡನೆಯ ಭಾನುವಾರ ಎರಡನೆಯ ಗುಂಪು, ಮೂರನೆಯ ಭಾನುವಾರ ಮೂರನೆಯ ಗುಂಪು ಮತ್ತು ನಾಲ್ಕನೆಯ ಭಾನುವಾರ ನಾಲ್ಕನೆಯ ಗುಂಪು ಅದೇ ಹಳ್ಳಿಯನ್ನು ಸಂದರ್ಶಿಸುತ್ತವೆ. ಎರಡನೆಯ ತಿಂಗಳ ಸೋಮವಾರಗಳಂದು ಕ್ರಮವಾಗಿ ಸಂಬಂಧಿಸಿದ ಗುಂಪುಗಳ ಮುಖಂಡರು ವರದಿ ಮಂಡಿಸುತ್ತಾರೆ, ಚರ್ಚೆ ನಡೆಯುತ್ತದೆ. ಹೀಗೆಯೇ ಆರುತಿಂಗಳು ಇಂಥ ಹಳ್ಳಿ ಸಂದರ್ಶನ, ವಿಚಾರ ವಿನಿಮಯದ ಗೋಷ್ಠಿ ನಡೆಯುತ್ತವೆ. ಅಂದರೆ, ಪ್ರತಿಯೊಬ್ಬರೂ ತಿಂಗಳಿಗೆ ಒಮ್ಮೆ, ಆರು ತಿಂಗಳಲ್ಲಿ ಆರು ಸಲ, ಆದರೆ ಸಮಾಜಕಾರ್ಯಕರ್ತನು ಮಾತ್ರ ಎಲ್ಲ ಭಾನುವಾರಗಳಂದು ಗುಂಪುಗಳೊಡನೆ ಹಳ್ಳಿಯ ಸಂದರ್ಶನ ಮಾಡುತ್ತಾನೆ. ಎಲ್ಲರೂ ಪ್ರತಿ ಸೋಮವಾರ ಚರ್ಚಾಗೋಷ್ಠಿಯಲ್ಲಿ ಭಾಗವಹಿಸುತ್ತಾರೆ. ಮಠದ ಸ್ವಾಮಿಯವರು ತಿಂಗಳಿಗೆ ಒಮ್ಮೆಯಾದರೂ ಆ ಹಳ್ಳಿಗೆ ಸಂದರ್ಶನ ನೀಡುತ್ತಾರೆ. ಹೀಗೆ ಮಾಡುವುದರಿಂದ ಆ ಹಳ್ಳಿಯ ರಾಚನಿಕತೆ, ಅದರ ಕ್ರಿಯಾತ್ಮಕತೆ, ಅದರ ಸಂಚಲನಾತ್ಮಕತೆ, ಅದರ ಸಮಸ್ಯೆಗಳು ಅಥವಾ ಅದರ ಸಾಮಾಜಿಕ ಸ್ಥಿತಿ, ಅಲ್ಲಿ ಲಭ್ಯವಿರುವ ಸಂಪನ್ಮೂಲಗಳು, ಅಲ್ಲಿನವರ ತಿಳಿವಳಿಕೆ, ತಮ್ಮ ಸಮುದಾಯದ ಬಗೆಗೆ ಇರುವ ಅಭಿಮಾನದ ಪ್ರಮಾಣ, ಅಲ್ಲಿರುವ ಗುಂಪು-ಬಣಗಳು, ಅದರ ಮುಖಂಡತ್ವದ ಪರಿ, ಇತ್ಯಾದಿಗಳನ್ನು ನಿಕಟವಾಗಿ ಅರಿತುಕೊಳ್ಳಲು ಸಾಧ್ಯವಾಗುತ್ತದೆ. ಅಂದರೆ, ಯುವಜನರ ತಿಳಿವಳಿಕೆಯ ಮಟ್ಟ ಹೆಚ್ಚಾಗುತ್ತದೆ, ಜನರೊಡನೆ ಸ್ಥಾಪಿಸಿದ ಅನುನಯ ಸಂಬಂಧವು ಗಾಢವಾಗುತ್ತದೆ. ತಮ್ಮೊಡನೆ ಅವರು ಸೇರಿ ಸಮುದಾಯದ ಅಭಿವೃದ್ಧಿಯಲ್ಲಿ ಪಾಲ್ಗೊಳ್ಳುತ್ತಾರೆ ಎಂಬ ವಿಶ್ವಾಸವು ಮೂಡುತ್ತದೆ. ಇದರ ಜೊತೆಗೆ ಬದಲಾಗುತ್ತಲಿರುವ ರಾಜಕೀಯ, ಆರ್ಥಿಕ, ಧಾರ್ಮಿಕ, ನ್ಯಾಯಿಕ, ಇತ್ಯಾದಿ ದಿಕ್ಕಿನ ಪರಿಚಯವಾಗುತ್ತದೆ. ಜನರನ್ನು ಸಂಪರ್ಕಿಸಿ, ಅವರೊಡನೆ ಸಂವಾದ ಮಾಡುವುದರಿಂದ, ಚರ್ಚಿಸುವುದರಿಂದ ತಮ್ಮ ಕೌಶಲ್ಯಶಕ್ತಿಯನ್ನು ಬೆಳೆಸಿಕೊಳ್ಳಲೂ ಸಾಧ್ಯವಾಗುತ್ತದೆ.

ಆರು ತಿಂಗಳ ಇಪ್ಪತ್ತನಾಲ್ಕು ಅಥವಾ ಇಪ್ಪತ್ತೈದು ಸಂದರ್ಶನಗಳ ಮೂಲಕ ಆ ಊರಿಗೆ ಅತ್ಯಂತ ಅಗತ್ಯವಾದ ಸೌಕರ್ಯ ಯಾವುದು, ಅದನ್ನು ಒದಗಿಸುವ ತಂತ್ರೋಪಾಯ ಯಾವುದು ಎಂಬುದೂ ಗೊತ್ತಾಗುತ್ತದೆ. ಈ ಎಲ್ಲಾ ತಿಳಿವಳಿಕೆಯನ್ನು ಹಿನ್ನೆಲೆಯಾಗಿರಿಸಿಕೊಂಡು ಆ ಊರಿನಲ್ಲಿ ಒಂದು ವಾರದ ರಚನಾತ್ಮಕ ಶಿಬಿರವನ್ನು ಹಮ್ಮಿಕೊಳ್ಳಬೇಕು. ಸಮುದಾಯ ಸಂಘಟನೆಯ ಮತ್ತು ಶಿಬಿರದ ಸೂತ್ರಗಳನ್ವಯ ಸಮಾಜಕಾರ್ಯಕರ್ತನ ನೆರವಿನೊಡನೆ, ಹಳ್ಳಿಯವರ ಸಮಾಲೋಚನೆಯ ಮೂಲಕ ಸೂಕ್ತವಾದ ಕೈ ಕೆಲಸವನ್ನು ಹಮ್ಮಿಕೊಳ್ಳಬೇಕು. ರಸ್ತೆಯ ನಿರ್ಮಣ ದುರಸ್ತು, ಶಾಲಾಕಟ್ಟಡ ನಿರ್ಮಾಣ, ದುರಸ್ತಿ, ಗಿಡಗಳನ್ನು ನೆಡುವುದು, ಸುಣ್ಣ ಬಣ್ಣ ಬಳಿಯುವುದು, ಚರಂಡಿ ನಿರ್ಮಾಣ , ಶೌಚಾಲಯಗಳನ್ನು

ಕಟ್ಟುವುದು, ಇಂಗುಗುಂಡಿಗಳನ್ನು ನಿರ್ಮಿಸುವುದು -ಇವುಗಳಲ್ಲಿ ಯಾವುದನ್ನೇ ಆಗಲಿ ಕೈಗೊಳ್ಳಬಹುದು. ಜೊತೆಗೆ ಆರೋಗ್ಯ ತಪಾಸಣೆ, ಚಲನಚಿತ್ರ ಪ್ರದರ್ಶನ, ಜ್ಞಾನ ಪ್ರಚೋದಕ ಉಪನ್ಯಾಸಗಳು, ಚರ್ಚಾಗೋಷ್ಠಿಗಳು, ಗ್ರಾಮದಲ್ಲಿರುವ ಕಲೆ ಮತ್ತಿತರ ಸಾಮರ್ಥ್ಯವನ್ನು ಬಳಸಿಕೊಂಡು ಮನೋರಂಜನೆ ಕಾರ್ಯಕ್ರಮಗಳನ್ನು ಏರ್ಪಡಿಸಬಹುದು. ಶಿಬಿರಕ್ಕೆ ಸರಕಾರಿ ಮತ್ತು ಸರಕಾರೇತರ ಸಂಘಟನೆಗಳ ಮುಖ್ಯಸ್ಥರನ್ನು ಕರೆಸಿ, ಆ ಗ್ರಾಮದ ಅಭ್ಯುದಯಕ್ಕೆ ನೆರವಾಗುವಂತೆ ಅವರ ಮನ ಒಲಿಸಬೇಕು. ಈ ಶಿಬಿರ ನಡೆಯುತ್ತಿರುವಾಗ ಮಠದ ಸ್ವಾಮಿಯವರು ಒಂದೆರಡು ಸಲವಾದರೂ ಭೇಟಿಕೊಟ್ಟು ಯುವ ಜನರನ್ನು ಊರವರನ್ನೂ ರಚನಾತ್ಮಕ ಕಾರ್ಯಕ್ಕೆ ಪ್ರೇರಣೆ ನೀಡಬೇಕು.

ಶಿಬಿರದ ಒಟ್ಟು ಕಾರ್ಯದ ಅವಲೋಕನ ವರದಿಯನ್ನು ಆ ಶಿಬಿರಾರ್ಥಿಗಳು ಸಿದ್ಧಗೊಳಿಸಿ, ಅದನ್ನು ಸಾದ್ಯಂತ ಚರ್ಚಿಸಿ ಆದಷ್ಟೂ ದೋಷರಹಿತ ವರದಿಯಾಗಿರುವಂತೆ ನೋಡಿಕೊಳ್ಳಬೇಕು.

ವರ್ಷದ ಉಳಿದ ಆರುತಿಂಗಳಲ್ಲಿ ಮೂರು ತಿಂಗಳ ಅವಧಿಯಲ್ಲಿ ಮೊದಲ ಆರು ತಿಂಗಳು ನಡೆಸಿದಂಥ ಸಂದರ್ಶನಗಳು ಮರುಕಳಿಸುವಂತಾಗಬೇಕು. ಈ ಸಂದರ್ಶನಗಳಲ್ಲಿ ಅನುಸರಣೆಯ ಕಾರ್ಯವಾಗಬೇಕಾಗುತ್ತದೆ. ಅಂದರೆ ಹಳ್ಳಿಯ ಅಭ್ಯುದಯವು ಹೇಗೆ ಹೇಗೆ ನಡೆಯಬೇಕೆಂದು ಊರವರೊಡನೆ ಸೇರಿ ನಿರ್ಧರಿಸಲಾಗಿತ್ತೊ ಶಿಬಿರದಲ್ಲಿ ಮಾದರಿಯೆಂದು ಹೇಗೆ ಕೆಲಸಗಳನ್ನು ಕೈಗೊಂಡು ನಡೆಸಲಾಗಿತ್ತೊ ಆ ಪ್ರಕ್ರಿಯೆಯನ್ನು ಆ ಹಳ್ಳಿಗರೇ ಮುಂದುವರಿಸುವಂತೆ ಪ್ರೇರಣೆ ನೀಡುವಂಥ ಕಾರ್ಯವು ಈ ಮೂರು ತಿಂಗಳಲ್ಲಿ ನಡೆಯಬೇಕು. ಈ ಒಂಬತ್ತು ತಿಂಗಳ ಅವಧಿಯಲ್ಲಿ ಆ ಊರಿನಲ್ಲಿ ಆ ಊರಿನವರೇ ಆದ ತರುಣ ತರುಣಿಯರ ಕ್ರಿಯಾಗುಂಪುಗಳನ್ನು ರಚಿಸುವ ಕಾರ್ಯವೂ ಆಗಿರಬೇಕು. ವಿದ್ಯಾರ್ಥಿ ಯುವಜನರು ಆ ಹಳ್ಳಿಯ ಸಂದರ್ಶನ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಿದ ಮೇಲೆ, ಹುಟ್ಟು ಹಾಕಿ ಸಂಘಟಿಸಿದ ತರುಣ ತರುಣಿಯರ ಗುಂಪುಗಳು ಅಭ್ಯುದಯ ಕಾರ್ಯವನ್ನು ಮುಂದುವರಿಸಬೇಕು. ಅದರ ನೆರವಿಗೆ ಸಮಾಜಕಾರ್ಯಕರ್ತನು ಇದ್ದೇ ಇರುತ್ತಾನೆ.

ಎರಡನೆಯ ವರ್ಷದಲ್ಲಿ ಹೊಸ ನಲವತ್ತು ವಿದ್ಯಾರ್ಥಿಗಳನ್ನು ಮತ್ತು ಹೊಸ ನಾಲ್ಕು ಶಿಕ್ಷಕರನ್ನು ಆರಿಸಿಕೊಂಡು ಅವರನ್ನು ನಾಲ್ಕು ಉಪಗುಂಪುಗಳಾಗಿ ವಿಭಾಗಿಸಿ, ಹಿಂದಿನ ವರ್ಷದಂತೆ ಈ ವರ್ಷವೂ ಅಭ್ಯುದಯ ಕಾರ್ಯವನ್ನು ಮುಂದುವರಿಸಬೇಕು. ಆದರೆ, ಈ ವರ್ಷ ಮುಂದಿನ ರಿಂಗಣ ಹಳ್ಳಿಯಲ್ಲಿ. ಮೊದಲ ಹಳ್ಳಿಯಲ್ಲಿ ನಡೆದಿದ್ದ ಕೆಲಸ ಇತರರೊಡನೆ ಎರಡನೆಯ ಹಳ್ಳಿಯವರಿಗೂ ಪರಿಚಯವಾಗಿರುತ್ತದೆ, ಮುಖ್ಯವಾಗಿ ಸಮಾಜಕಾರ್ಯಕರ್ತನ ಮೂಲಕ. ತತ್ಪರಿಣಾಮವಾಗಿ ಎರಡನೆಯ ಹಳ್ಳಿಯ ಕೆಲಸವು ಮೊದಲ ಹಳ್ಳಿಯಲ್ಲಿ ನಡೆಸಿದ ಕೆಲಸಕ್ಕಿಂತ ಸುಲಭವಾಗುತ್ತದೆ. ಈ ಎರಡನೆಯ ನಲವತ್ತು ಯುವಜನರು ಹಿಂದಿನ ವರ್ಷ ಕ್ರಿಯಾಶೀಲರಾಗಿದ್ದ ಯುವಜನರ ಮತ್ತು ಶಿಕ್ಷಕರ ಮಾರ್ಗದರ್ಶನ ಪಡೆಯಬಹುದು. ಮೊದಲವರ್ಷದ ಮೊದಲ ತಂಡದ ಯುವ ಜನರು ಹೇಗೆ ಕ್ರಿಯಾತ್ಮಕ ನಾಯಕತ್ವ ಗುಣಗಳನ್ನು ತಮ್ಮ ವ್ಯಕ್ತಿತ್ವದ ಭಾಗವನ್ನಾಗಿಸಿ ಕೊಂಡಿದ್ದರೆಂಬುದನ್ನು ಈ ಎರಡನೆಯ ವರ್ಷದ ಎರಡನೆಯ ತಂಡದವರು ಎರಡನೆಯ ಗ್ರಾಮದಲ್ಲಿ ಕಾರ್ಯನಿರತರಾಗಿದ್ದಾಗ, ಪ್ರಸಾದನಿಲಯದಲ್ಲಿ ವಿಚಾರ ವಿನಿಮಯದ ಗೋಷ್ಠಿಯಲ್ಲಿ ಪಾಲ್ಗೊಂಡಿದ್ದಾಗ ಅರಿತುಕೊಳ್ಳುತ್ತಾರೆ. ಎರಡನೆಯ ತಂಡದವರು ನಡೆಸುವ ಷಣ್ಮಾಸಿಕ ಶಿಬಿರದಲ್ಲಿ ಮೊದಲನೆಯ ತಂಡದಲ್ಲಿದ್ದ ಕೆಲವರಾದರೂ ಸಾಂಕೇತಿಕವಾಗಿ ಮತ್ತು ಮಾರ್ಗದರ್ಶನ ಮಾಡುವ ಧ್ಯೇಯದಿಂದ ಭಾಗವಹಿಸಬಹುದು. ಇದರಿಂದ ಈ ಶಿಬಿರವು ಮತ್ತಷ್ಟು ಕಳೆಗಟ್ಟುತ್ತದೆ ಹಾಗೂ ಹಾಗೇ ಪಾಲ್ಗೊಂಡ ಮೊದಲ ತಂಡದವರ ಕ್ರಿಯಾತ್ಮಕ ನಾಯಕತ್ವವು ಗಟ್ಟಿಗೊಳ್ಳುತ್ತದೆ. ಸಾಧ್ಯವಾದರೆ ಮೊದಲ ಹಳ್ಳಿಯಲ್ಲಿ ಸ್ಥಾಪಿತವಾಗಿದ್ದ ತರುಣ ತರುಣಿಯರ ಗುಂಪುಗಳ ಕೆಲವರಾದರೂ ಈ ಎರಡನೆ ಹಳ್ಳಿಯಲ್ಲಿ ನಡೆಸುತ್ತಿರುವ ಎರಡನೆಯ ತಂಡದವರ ಶಿಬಿರದಲ್ಲಿ ಪಾಲ್ಗೊಳ್ಳಬಹುದು. ಹಾಗೆ ಮಾಡಿದರೆ ಎರಡು ಹಳ್ಳಿಗಳ ಕ್ರಿಯಾತ್ಮಕ ಬಾಂಧವ್ಯವು ದೃಢಗೊಳ್ಳುತ್ತದೆ.

ಮೂರನೆಯ ವರ್ಷದಲ್ಲಿ ಮೂರನೆಯ ತಂಡದವರು, ಮೂರನೆಯ ಹಳ್ಳಿಯಲ್ಲಿ ಹಿಂದಿನ ಹಳ್ಳಿಗಳಲ್ಲಿ ನಡೆಸಿದ ರಚನಾತ್ಮಕ ಕಾರ್ಯವನ್ನು ಮರು ಪ್ರಯೋಗಿಸಬಹುದು. ಹೀಗೆ ರಿಂಗಣ ಹಳ್ಳಿಗಳೆಲ್ಲವನ್ನು ಸರತಿಯಾಗಿ ಅಭ್ಯುದಯ ಕಾರ್ಯಕ್ಕೆ

ಒಳಪಡಿಸಬಹುದು. ಈ ಕಾರ್ಯದಲ್ಲಿ ನಿರತವಾಗಿ ಅನುಭವ ಪಡೆದ ಮಠದ ಯುವ ವಿದ್ಯಾರ್ಥಿಗಳು ಮಠವನ್ನು ಬಿಟ್ಟು ತಮ್ಮ ತಮ್ಮ ಆಯ್ದ ಕ್ಷೇತ್ರದಲ್ಲಿ ದುಡಿಯತೊಡಗಿದಾಗ ಕಾಯಕ-ದಾಸೋಹದ ಮಹತ್ವವನ್ನು ಅರಿತು ಹಾಗೆಯೇ ನೆಡೆದುಕೊಳ್ಳಲು ಪ್ರಯತ್ನಿಸುತ್ತಾರೆ. ಮಠದ ಸಮುದಾಯದ ರಿಂಗಣ ಸಮುದಾಯಗಳು ಹತ್ತಾರು ವರ್ಷಗಳಲ್ಲಿ ಅಭ್ಯುದಯಗೊಂಡು ಪ್ರಗತಿಪರ ಜೀವನ ನಡೆಸಲು ಸಾಧ್ಯವಾಗಿರುತ್ತದೆ. ಇದರಿಂದ ವೀರಶೈವ ಮಠವು ಇಹದ ಕಾರ್ಯವನ್ನು ಧರ್ಮೋ-ನೈತಿಕ ಸೂತ್ರಗಳನ್ವಯ ಕೈಗೊಂಡು ನಡೆಸಿದ ತೃಪ್ತಿ ಪಡೆಯುತ್ತದೆ. ಇಂಥ ಕೆಲಸದ ಮೂಲಕ ತನ್ನ ಅಸ್ತಿತ್ವವನ್ನು ಸಾರ್ಥಕಗೊಳಿಸಿಕೊಳ್ಳುತ್ತದೆ. ಜಗತ್ತಿಗೆ ಸುಧಾರಣೆಗೊಂಡ ಆರೋಗ್ಯಕರ ವ್ಯಕ್ತಿತ್ವವನ್ನು ಪಡೆದ ವ್ಯಕ್ತಿಗಳನ್ನು ನೀಡಿದ ಕೀರ್ತಿಗೆ ಭಾಜನವಾಗುತ್ತದೆ. ಮಠದ ಈ ಕಮ್ಮಟದಲ್ಲಿ ಸಿದ್ಧವಾದ 'ನಾಣ್ಯಗಳು' ಈ ಮಠದಲ್ಲಿ ರಚನಾತ್ಮಕ ಕಾರ್ಯ ನಡೆಸಿದ ರಿಂಗಣ ಸಮುದಾಯಗಳಲ್ಲಿ ಮಾತ್ರವೇ ಅಲ್ಲದೆ ಇವುಗಳಾಚಿನ 'ಹೊರ' ಜಗತ್ತಿನಲ್ಲೂ 'ಸಲ್ಲುವ' ನಾಣ್ಯಗಳಾಗಿ ಬಾಳುತ್ತವೆ ಎಂಬುದನ್ನು ಸಾಬೀತು ಪಡಿಸಬಹುದು.

ಕರ್ನಾಟಕದಲ್ಲಿ ಮತ್ತು ಕರ್ನಾಟಕದ ಹೊರಗಡೆ ಇರುವ ಸಾವಿರಾರು ವೀರಶೈವ ಮಠಗಳು ಈ 'ಕ್ರಿಯಾತ್ಮಕ ನಾಯಕತ್ವ'ದ ಕಾರ್ಯಕ್ರಮವನ್ನು ಹಮ್ಮಿಕೊಂಡರೆ ಹತ್ತಾರು ವರ್ಷಗಳಲ್ಲಿ ಸಹಸ್ರಾರು ಕ್ರಿಯಾಶೀಲರೂ, ಹಲವೊಮ್ಮೆ ತೀವ್ರ ಕ್ರಿಯಾಶೀಲರೂ (Activists) ನಿರ್ಮಾಣಗೊಳ್ಳುವರಲ್ಲದೆ ಸಹಸ್ರಾರು ಸಮುದಾಯಗಳು ನವ ಸಮುದಾಯಗಳಾಗಿ ಪರಿವರ್ತನೆಗೊಳ್ಳುತ್ತವೆ ಎಂಬುದರಲ್ಲಿ ಸಂಶಯವಿಲ್ಲ. ಹಣದ ಕೊರತೆಯಿದೆ, ಜನರು ಯಾರ ಮಾತನ್ನು ಯಾರೂ ಕೇಳುವ ಸ್ಥಿತಿಯಲ್ಲಿಲ್ಲ ಇತ್ಯಾದಿ ನೆಪಗಳನ್ನು ಮುಂದು ಮಾಡಿ ಅತ್ಯಂತ ಮಹತ್ವದ ಇಂಥ ಕಾರ್ಯಕ್ರಮವನ್ನು ಕೈಕೊಳ್ಳದೇ ಹೋದರೆ ಅವುಗಳ ಅಸ್ತಿತ್ವವನ್ನೇ ಪ್ರಶ್ನಿಸುವ ಸಂದರ್ಭ ಬರುವ ಸಾಧ್ಯತೆ ಇದೆ. ಮಠದ ಒಳಗೆ ಆಧ್ಯಾತ್ಮಶಕ್ತಿಯು ಬೆಳೆಯುತ್ತಿರಬೇಕು, ಅದರ ಹೊರಗೆ ಲೌಕಿಕ ಅಭ್ಯುದಯ ಪ್ರಕಟವಾಗಬೇಕು. ಲೌಕಿಕ-ಅಲೌಕಿಕಗಳೆರಡರ ಸದೃಢ ಕೊಂಡಿಯಾಗಿ ವೀರಶೈವ ಮಠಗಳು ಕ್ರಿಯಾತ್ಮಕವಾಗಿ ಅಸ್ತಿತ್ವದಲ್ಲಿರಬೇಕು. ಇದು ಎಲ್ಲರ ಹಂಬಲ. ಹಂಬಲವು ಹಣ್ಣಾಗಲಿ.

ಅಡಿಟಿಪ್ಪಣಿಗಳು

೧. ನೋಡಿ; Saxe commins and Robert N. Linscott, (ed), The Social Philosophers, Modern Pocket Library, New Year, 1954, p.2.

೨. ನೋಡಿ; Morris Ginsberg, Sociology, Oxford University Press, London, 1963ರ ಮುದ್ರಣ., ಪು, 23 ರಾಬರ್ಟ್ ಓವೆನ್ ಇದ್ದದ್ದು ಬ್ರಿಟಿಷ್ ಸಾಮ್ರಾಜ್ಯ ಕಾಲದಲ್ಲಿ. ಆದುದರಿಂದಲೇ ಅವರು ಈ ಮಾತನ್ನು ಹೇಳಿದ್ದು.

೩. Robery owen, A new view of Society, Everyman's Library, Dent; London, Print ಒಂದು ಕಡೆ ಹುಲಿ ಇನ್ನೊಂದು ಕಡೆ ದರಿ ಇರುವ ಕಠಿಣ ಪ್ರಸಂಗದಲ್ಲಿ ಹುಲಿಯನ್ನು ಏರಿ ದರಿಯನ್ನು ಹಾರಿ ದಾಟಬೇಕು. ಹೀಗೆ ಮಾಡಬಹುದೆಂಬುದಕ್ಕೆ ಸ್ವಾಮಿ ವಿವೇಕಾನಂದರವರಿಗೆ ಒದಗಿದ ಸಂಕಷ್ಟವನ್ನು ಹೇಗೆ ಪರಿಹರಿಸಿಕೊಂಡರು ಎಂಬುದನ್ನು ಆಲಂಕಾರಿಕವಾಗಿ 'ಹುಲಿ-ದರಿ' ಉಪಮಾನವನ್ನು ಕೊಟ್ಟು ಕುವೆಂಪು ಅವರು ವರ್ಣಿಸಿದ ನೆನಪು.

೪. ನೋಡಿ: ಡಾ.ಎಚ್.ಎಂ. ಮರುಳಸಿದ್ಧಯ್ಯ, ಗ್ರಾಮೋನ್ನತಿ, ಸ್ವತ್ತಿ ಪ್ರಕಾಶನ, ಬೆಂಗಳೂರು, ೧೯೯೩ (ಮೂರನೆಯ ಆವೃತ್ತಿ). "ಸತ್ಯವೆಂಬ ಕೂರಲಗನೆ ಕಳೆದುಕೊಂಡು ಸದ್ಭಕ್ತರು ಗೆದ್ದರು" ಎಂಬ ಬಸವಣ್ಣನ ಮಾತು ಗಮನಾರ್ಹ.

೫. ಮಾರ್ಗದರ್ಶನಕ್ಕಾಗಿ ನೋಡಿ: ಡಾ. ಎಚ್.ಎಂ. ಮರುಳ ಸಿದ್ಧಯ್ಯ, ಸಮುದಾಯ ಸಂಘಟನೆ, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, ೨೦೦೩ (ಮೂರನೆಯ ಆವೃತ್ತಿ) ಮೂರು ತಿಂಗಳು ಯಾಕೆಂದರೆ, ವಿದ್ಯಾರ್ಥಿಗಳು ಪರೀಕ್ಷೆ, ಇತ್ಯಾದಿ ಕಾರ್ಯದಲ್ಲಿ ನಿರತರಾಗಿರುತ್ತಾರೆ ಉಳಿದ ಮೂರು ತಿಂಗಳಲ್ಲಿ.

ಸಾಂಸ್ಕೃತಿಕ ನೆಲೆಯಲ್ಲಿ ವೀರಶೈವ

(ಶಾಸನ, ಶಿಲ್ಪ, ಚಿತ್ರಕಲೆ, ಜಾನಪದ, ಸಾಹಿತ್ಯ)

✍ ಎಂ.ಜಿ. ನಾಗರಾಜ್

ವೀರಶೈವ; ಶಿವನಿಷ್ಠೆ ಪ್ರಧಾನವಾದ ಧರ್ಮ. ತನ್ನಂತೆ ಪರರನ್ನು ಕಾಣುವುದೇ ಆ ಧರ್ಮದ ಅಂತರಂಗ, ಬಹಿರಂಗ. ಹೀಗಾಗಿ ಜೀವ ಹಾಗು ಶಿವರ ಮಂಗಳಕರ ಸಂಗಮವಲ್ಲಿದೆ. ಇಂಥ ಚರ್ಯೆಯಲ್ಲಿ ಶಿವಸಂಸ್ಕೃತಿಯ ಉಸಿರಿದೆ; ಭಾವವಿದೆ; ಆತ್ಮವಿದೆ. ಈ ಪರಂಪರೆ ಒಂದು ವಿಕಸಿತ ಪರಂಪರೆ. ಭಾರತೀಯ ಹಿನ್ನೆಲೆಯಲ್ಲಿ ಸುಮಾರು ಐದುಸಾವಿರ ವರ್ಷಗಳ ಮುನ್ನಿನ ಜೋಬ್ ಸಂಸ್ಕೃತಿಯ ನಿಷ್ಕಲಲಿಂಗ ರೂಪವನ್ನು ಆರಾಧಿಸುತ್ತ ಬಂದ ಬಗೆ ಇಲ್ಲಿದೆ. ವರ್ಣಾಶ್ರಮದ ಸಂಕೋಚಗಳನ್ನು ಉಳಿಗು ಅತಿವರ್ಣಾಶ್ರಮಿಯಾದ ಈ ಧರ್ಮದ ತೆಕ್ಕೆಗೆ, ರಾಜವಂಶೀಯರು, ಜನಪದರು, ಅಧಿಕಾರಿಗಳು, ಗುರುವರ್ಗದವರು, ಆಚಾರ್ಯರು, ಶರಣರು, ಯಾರೆಲ್ಲ ಬಂದರು! ಇದು ಶಾಸನಗಳಿಂದ ವಿದಿತ; ಇತಿಹಾಸದಿಂದ ಸ್ಪಷ್ಟ; ಶಿಲ್ಪಗಳಿಂದ ಗೋಚರ; ಚಿತ್ರಕಲೆಯಲ್ಲಿ ಅಭಿವ್ಯಕ್ತ; ಸಾಹಿತ್ಯ-ವಚನಗಳಲ್ಲಿ ಮಂಡಿತ. ಸಾಂಸ್ಕೃತಿಕ ನೆಲೆಯಲ್ಲಿ ವಿವೇಚಿಸುವಾಗ ಇವೆಲ್ಲದರ ಸಂಗಮವಾಗಿಯೆ ಗಮನಿಸಬೇಕಾಗುತ್ತದೆ.

ಸಂಸ್ಕೃತಿ ಪಾರಂಪರಿಕ ಸ್ಥಿತಿಬಿಂಬವಾದರೆ, ನಾಗರಿಕತೆ ವರ್ತಮಾನದ ಗತಿಬಿಂಬ. 'ಗತಿ'ಯೂ ಒಂದು 'ಸ್ಥಿತಿ'ಯ ಅವಸ್ಥೆಯಾಗಿರುವಲ್ಲಿ ಸ್ಥಿತಿಬಿಂಬದ ಭಾಗವಾಗಿ ಗತಿಬಿಂಬ ಚರಿಸುತ್ತದೆ. ಸಂಸ್ಕೃತಿ ಆಂತರಿಕ ಸೊಬಗಿನ ಬಾಹ್ಯಚರ್ಯೆ. ಅಂದರೆ ಆಂತರಿಕ ಪಲ್ಲವದ್ದು ಸಂಸ್ಕೃತಿ -ಒಳಗಿಂದ ಅರಳಿಕೊಳ್ಳುವುದು. ನಾಗರಿಕತೆ ಬಾಹ್ಯಪಲ್ಲವದ್ದು ಅಂದರೆ ಹೊರಗಿಂದ ಅರಳಿಕೊಳ್ಳುವುದು. ಸಂಸ್ಕೃತಿ ಎಂಬುದು ಒಂದು ಜೀವನ ವಿಧಾನ, ಸಮಗ್ರ ಚರ್ಯೆ ಎಂಬುದು ಆಧುನಿಕ ವ್ಯಾಖ್ಯೆ. ಈ ಅರ್ಥ 'ನಾಗರಿಕತೆ' ಎಂಬುದಕ್ಕೆ ಸನಿಹವಾದದ್ದು. ಇವೆರಡರ ಅರ್ಥಸಂಗಮದಲ್ಲಿ ಅರಳಿಬರುವುದು ಸಾಂಸ್ಕೃತಿಕ ವೀರಶೈವ. ಸ್ಥಿತಿಯೂ ಬೇಕು; ಗತಿಯೂ ಬೇಕು. ಯೋಗವೂ ಬೇಕು; ಭೋಗವೂ ಬೇಕು. ಬಾನೂ ಬೇಕು; ಇಳೆಯೂ ಬೇಕು. ಈ ಯೋಗ-ಭೋಗಗಳ ಸಾಮರಸ್ಯವೆ ಜೀವನಧರ್ಮ. ಸಾಂಸ್ಕೃತಿಕ ವೀರಶೈವ ಅಂತೇ ಇದರಲ್ಲಿ ಪ್ರವೃತ್ತ. ಪರಂಪರೆ ಮತ್ತು ವರ್ತಮಾನದ ಸಂಲಗ್ನತೆ ಅವರ ಚಿಂತನೆ; ಹಾಗು ಸಾಂಸ್ಕೃತಿಕ ನೆಲೆ. ತತ್ತ್ವವೂ ಬೇಕು, ಸುಖವೂ ಬೇಕು ಎಂಬುದು ಅದರ ವಾಸ್ತವತೆ.

ಶಿವನ ಪ್ರತೀಕವಾದ 'ಲಿಂಗ'ದ ನಿಜೇಷ್ಟಲಿಂಗತತ್ವವನ್ನು ಋಗ್ವೇದದ ಹೇಳಿದೆ: 'ಅಯಂ ಮೇ ಹಸ್ತೋ ಭಗವಾನ್, ಅಯಂ ಮೇ ಭಗವತ್ತರಃ' (ಮಂ: ೧೦.೪, ಸೂ. ೬೦) ಎಡಹಸ್ತದಲ್ಲಿ ಇಷ್ಟಲಿಂಗವಿಟ್ಟು ಪೂಜಿಸುವ ಕಾರಣ, ಎಡಹಸ್ತವೂ ದೇವಾಂಗವಾಯಿತು. ದೇಹ, ದೇಗುಲವಾಗುವ ಬಗೆ ಇದು. ವ್ರಾತ್ಯ ಪಾಶುಪತ ಮುನಿಗಳ ಕರಪೀಠಾರ್ಚನ ಮಂತ್ರದ ಬಗೆ ಇದು. ಇದನ್ನೆಲ್ಲ ಐದುಸಾವಿರ ವರ್ಷಗಳ ಹಿಂದಿನ ಕಾಲದ್ದು ಎಂದು ದೂರ ತಳ್ಳಿದರೆ, ಪರಂಪರೆಯ ನಷ್ಟ ನಮ್ಮದೆ; ಚರ ಸ್ಥಾಯಿತ್ವ ನಷ್ಟ ನಮ್ಮದೆ. ವೀರಶೈವಕ್ಕಾಗುವ ನಷ್ಟ ನಮ್ಮದೆ. ವರ್ತಮಾನದ ಮೋಹ ಅಥವಾ ಕಾಲೀನ ವ್ಯಾಮೋಹ ಪರಂಪರೆಯನ್ನು ತಳ್ಳಿದರೆ, ಒಗ್ಗೂಡುವಿಕೆಗೆ ಅಪಾಯ. ಉಭಯಪಕ್ಷಗಳ ವಿವೇಚನೆ ಇಂತಲ್ಲಿ ಬೇಕು.

ಮೌರ್ಯರ ಅಶೋಕನು (ಕ್ರಿ.ಪೂ. ೩ನೇ ಶತಮಾನ) ಕಾಶ್ಮೀರದಲ್ಲಿ ಶಿವ ಅಶೋಕೇಶ್ವರ ಎಂಬ ದೇಗುಲ ನಿರ್ಮಿಸಿ ಶಿವರಾಧನೆಯ ಸಾಕ್ಷಿಯಾಗಿದ್ದಾನೆ. ಅವನ ಪುತ್ರ ಜುಲುಕನೂ ಹಾಗೆಯೇ. ಕ್ರಿ.ಪೂ. ೧ನೇ ಶತಮಾನದ ಖರೋಷ್ಠಿ ಶಾಸನದಲ್ಲಿ;

'ಈಶಾ ದೇವೋ ವರೇ ಅಹಮಸ ಮಹೇಶ' ಎಂದಿದೆ.[೧] ಕ್ರಿ.ಪೂ. ೨ನೇ ಶತಮಾನದ ಪಂಚಮುಖ ಲಿಂಗವು ಲಕ್ನೋ ವಸ್ತುಸಂಗ್ರಹಾಲಯದಲ್ಲಿದೆ. ಇದು ಶಾತವಾಹನರ ಕಾಲದ ವಿಷಯ. ಶಿವಲಿಂಗವನ್ನು ತಲೆಯ ಮೇಲೆ ಹೊತ್ತು ಅರ್ಥಾತ್ ಅಂಗದ ಮೇಲೆ ಹೊತ್ತು ತಿರುಗುತ್ತಿದ್ದ ಪದ್ಧತಿ ಕ್ರಿ.ಶ. ೩-೪ನೆಯ ಶತಮಾನದ ಭಾರಶಿವರಾಜರಲ್ಲಿತ್ತು. ಭಾರಶಿವರ ವಂಶಿಕರಾದ ಶಾಸನೋಕ್ತ ವಾಕಾಟಕರೂ ಹೀಗೆಯೇ ಶಿವಲಿಂಗಧಾರಿಗಳಾಗಿದ್ದರು.[೨] ಕ್ರಿ.ಶ. ೪೨೮ರ ವಾಕಾಟಕರ ಪ್ರವರಸೇನನ (೨ನೇ) ಶಿಲಾಶಾಸನದಲ್ಲಿ :

> **'ಅಂಶಭಾರ ಸನ್ನಿವೇಶಿತ ಶಿವಲಿಂಗೋದ್ವಹನ ಶಿವ ಪರಿತುಷ್ಟ**
> **ಸಮುತ್ಪಾದಿತ ರಾಜವಂಶಾನಾಂ'**

ಎಂದಿದೆ; ಶಿವಲಿಂಗವನ್ನು ಸದಾ ಭುಜದಲ್ಲಿ ಧಾರಣಮಾಡಿದರೆ ಅರ್ಥಾತ್ ಅಂಗದ ಮೇಲೆ ಧರಿಸಿದರೆ ಶಿವನ ಕೃಪೆಯು ಒದಗುತ್ತದೆ ಎಂದರ್ಥವಾಗುತ್ತದೆ. ಕ್ರಿ.ಶ. ೬ನೇ ಶತಮಾನದ ಕಂಚಿಯ ಅತ್ಯಂತಕಾಮ, ಗುಣಭರ ಇತ್ಯಾದಿ ಪಲ್ಲವ ವಂಶಿಕ ರಾಜರೂ 'ಲಿಂಗಧಾರಿ'ಗಳಾಗಿ 'ಶಿರಸಿ ಶಂಕರಂ', 'ಶಿವ ಶಿರಸಿ ಧಾರಯತಾ' ಇತ್ಯಾದಿ ಉಪಾಧಿಗಳನ್ನು ಅವರುಗಳು ಹೊಂದಿದ್ದುದು ಶಾಸನೋಕ್ತ.[೩] ಕ್ರಿ.ಶ. ೧೧೧೮-೩೫ರ ಕುಲೋತ್ತುಂಗ ಚೋಳ ಮುಂತಾದವರ ಶಾಸನಗಳಲ್ಲಿ ಮಠ ನಿರ್ವಹಣೆ, ಮಾಹೇಶ್ವರ ದಾನ, ಗಣಪರ್ವಗಳನ್ನು ಚಾಲನೆ ಮಾಡಿದ ವಿಷಯವಿದೆ.[೪] 12091

ಕರ್ನಾಟಕದ ಶಾಸನಗಳ ಪೈಕಿ ಕೊಡಗಿನ ಶಾಸನಗಳನ್ನು ಗಮನಿಸಿದರೆ ಕ್ರಿ.ಶ. ೧೦೯೫ರ ಯಡೂರು ಶಾಸನವು[೫] ಹಾನುಗಲ್ಲು ಕದಂಬ ಶಾಖೆಯಾದ ಕೊಡಗಿನ ಕದಂಬರ ದುದ್ದರಸನನ್ನು 'ಅಯ್ಯನಂಕಕಾರ', 'ಶಿವಪಾದಸೇಕರ' ಎಂದು ಹೇಳಿದೆ. ರಾಜನ ಗುರುಸೇವಾ ಸಂದರ್ಭವು 'ಅಯ್ಯನಂಕಕಾರ' ಎಂಬ ಶಬ್ದದಲ್ಲಿ, ಶಿವಸಮಯದ ವ ಎಂಬುದು, 'ಶಿವಪಾದ ಸೇಕರ' ಎಂಬ ಶಬ್ದದಲ್ಲಿ ಸೂಚಿತಗೊಂಡಿವೆ. ಕ್ರಿ.ಶ. ೧೭೭೯ರ ಮಾದಾಪುರಮಠದ ಶಾಸನದಲ್ಲಿ (ಕೊಡಗು ೨೯) ೧ನೇ ಲಿಂಗರಾಜೇಂದ್ರನು ಶಿವಾಧೀನನಾದಾಗ, ಕ್ರಿಯಾಸಮಾಧಿ ಮಾಡಿ, ಬಸವೇಶ್ವರ ಪ್ರತಿಷ್ಠೆ, ಗಣಾರಾಧನೆ, ಲಿಂಗಮುದ್ರೆ (ಗಡಿಸೂಚಿತ) ಹಾಕಿ ಗ್ರಾಮದಾನ ಮಾಡಿದ ವಿಷಯ; ಹೀಗೆಯೇ ಕ್ರಿ.ಶ. ೧೭೯೬ರ ಮಾದಾಪುರಮಠದ ಶಾಸನದಲ್ಲಿ 'ಮೇಲನಗವಿ ಸಿಂಹಾಸನಾರೂಢರ ಸಂಪ್ರದಾಯಸ್ಥರಾದ, ವೀರಶೈವ ಮತಸ್ತರಾದ' ಎಂದಲ್ಲದೆ ಮುರಿಗಾಸ್ವಾಮಿಗಳ ಚರಮೂರ್ತಿಗಳಿಗೆ ದಾನಕೊಟ್ಟ ವಿಷಯ; ದೊಡ್ಡ ವೀರರಾಜೇಂದ್ರ ಒಡೆಯನು ಅಬ್ಬಿಮಠಕ್ಕೆ ದಾನವಿತ್ತ ವಿಷಯ; ಕ್ರಿ.ಶ. ೧೮೨೨ರ ಚಿಕ್ಕವೀರರಾಜೇಂದ್ರ ಒಡೆಯನ ಮಡಿಕೇರಿ ಶಾಸನದಲ್ಲಿ (ಕೊಡಗು ೩) 'ಭರದ್ವಾಜ ಗೋತ್ರ ಸಂಜಾತರಾದ ಅಶ್ವಲಾಯನ ಸೂತ್ರ ಋಕ್‌ಶಾಖಿಗಳಾದ ವೀರಶೈವ ಮತ ಧುರೀಣ ಪ್ರವೀಣ ಶ್ರೀಮತ್ಕೊಡಗು ಸಂಸ್ಥಾನ... ಸಿಂಹಾಸನಾರೂಢರಾದ' ಎಂದೆಲ್ಲ ಹೇಳಿ ಪ್ರಜೆಗಳು ಬಿನ್ನಹ ಮಾಡಲಾಗಿ ನಡೆಸಿದ ಬೇಟೆಗಾರಿಕೆಯ ಚಿತ್ರವನ್ನು ಸಾಹಿತ್ಯಕ ವರ್ಣನೆಯಂತೆ ನೀಡಲಾಗಿದೆ -ಈ ಅಂಶಗಳಿಂದ ಕೊಡಗಿನ ಹಾಲೇರಿ ಅರಸರು ವೀರಶೈವರೆಂದೂ, ಗುರು-ವಿರಕ್ತ ಸಮನ್ವಯ ದೃಷ್ಟಿಯವರೆಂದೂ, ತತ್ಫಲವಾಗಿ ಅಬ್ಬಿಮಠದ ಪರಂಪರೆಯನ್ನು ಗಮನಿಸಿ 'ವೀರಸಿಂಹಾಸನ-ಮುರುಘಾ ಬ್ರಹ್ಮತರ್ಕ' ಎಂದು ಗುರು ಹಾಗು ವೈರಾಗ್ಯ ಬಗೆಯ ಸಂಯುಕ್ತ ಸಿಂಹಾಸನ ಸೂಚಿಯಾಗಿ ಅಬ್ಬಿಮಠವನ್ನು ನೇರ್ಪುಗೊಳಿಸಿದ್ದೂ, ಹಾಗು ಸಾಧಿಸಿದ ಸಾಂಸ್ಕೃತಿಕ ಸಾಧನೆಗಳ ಚಿತ್ರ ಸಿಗುತ್ತದೆ.

ಮೈಸೂರು ಜಿಲ್ಲೆಯ[೬] ಕ್ರಿ.ಶ. ೧೬೬೫ರ ದೇಶೀಪುರ ಶಾಸನವು ಮೈಸೂರು ದೊರೆ ಸೂರ್ಯಸಿಂಹಾಸನಾಧೀಶ್ವರ ದೇವರಾಜ ಒಡೆಯರು ಕಪಿನಿ ಕವುಂಡನಿ ಸಂಗಮ ಕ್ಷೇತ್ರದಲ್ಲಿ (ನಂಜನಗೂಡು ಹಾದಿಯ ಮಲ್ಲನಮೂಲೆ) ಹೊಸದಾಗಿ ವಿರಕ್ತ ಮಠವೊಂದನ್ನು ಕಟ್ಟಿಸಿದರು ಎಂದಿದೆ. ಚನ್ನವೀರದೇವರಿಗೆ (ಮಠದ ಗುರು) ದೇಸಪುರ, ಹೂಕುಂದ ಎಂಬ ಗ್ರಾಮಗಳನ್ನು ಸಕಲ ವೀರಮಾಹೇಶ್ವರರ ಪ್ರೀತ್ಯರ್ಥ ಶಿವಾರ್ಪಿತವೆಂದು ಆ ಮಠವನ್ನು ಕಟ್ಟಿಸಿಕೊಟ್ಟಾಗ ದಾನ ಕೊಟ್ಟರು ಎಂದಿದೆ. ಕ್ರಿ.ಶ.

೧೬೬೩-೬೪ರ ಬೇಗೂರು ಶಾಸನದಲ್ಲಿ ವಿರಕ್ತಗೊಡಿಗೆ ಹಾಗು ಕಪ್ಪರ ಕೊಡಿಗೆಯಾಗಿ ಬೇಗೂರು ಗ್ರಾಮವನ್ನು ವಿರಕ್ತ ಜಂಗಮರಿಗೆ ಕೊಟ್ಟ ವಿಷಯವಿದೆ. ಭಿಕ್ಷೆಗೆ ಹೋಗಿ ದಾಸೋಹ ನಡೆಸುತ್ತಿದ್ದ ಮಠಕ್ಕೆ ದಾನವಾದ ವಿಷಯವಿದೆನ್ನುವಂತಿದೆ. ಕ್ರಿ.ಶ. ೧೫೪೯ರ ಬೆಳಚಲವಾಡಿ ಶಾಸನವು ಮಠದ ಹಲಗೆವೊಡೆಯರಿಗೆ ಗುತ್ತಿಗೆಗಾಗಿ ಭೂಮಿ ಕೊಟ್ಟಿರುವ ಸಂಗತಿಯಿಂದ ಮಠಗಳು ಬೇಸಾಯದಲ್ಲಿ ತೊಡಗುತ್ತಿದ್ದ ವಿಷಯ ತಿಳಿಯುತ್ತದೆ. ಕ್ರಿ.ಶ. ೧೪೬೯ರ ಗೊಂದಿಗನಹಳ್ಳಿ ಶಾಸನವು ಸೀಮೆ ಗುರುತಿಗೆ ಲಿಂಗಮುದ್ರೆ ಶಿಲಾಶಾಸನ ಹಾಕಿ ಆದ ರಾಜದಾನವು ರುದ್ರಾಕ್ಷಿ ಒಡೆಯರಿಗೆ ದತ್ತವಾಗಿದೆ. ಇದರಿಂದ ಗುರು-ವಿರಕ್ತ ಮಠಗಳ ನಿರ್ಮಾಣ, ವೀರಮಾಹೇಶ್ವರರಿಗಿದ್ದ ಗುರುಗೌರವ, ಕೋರಣ್ಯ ಭಿಕ್ಷಾಪದ್ಧತಿ ಹಾಗು ಮಠಗಳ ಕೃಷಿಕಾರ್ಯ-ಚಟುವಟಿಕೆಗಳ ಚಿತ್ರ ದೊರಕುತ್ತದೆ. ಇನ್ನೊಂದು ಗಮನಾರ್ಹ ವಿಷಯವಾಗಿ ಕ್ರಿ.ಶ. ೧೪೨೨ರ ಮಲೆಯೂರ ಬಸದಿ ತಾಮ್ರಶಾಸನದಲ್ಲಿ ಹರಿಹರರಾಯ ಒಡೆಯನು ತ್ರಿಯಂಬಕ ದೇವರ ಸನ್ನಿಧಿಯಲ್ಲಿ ಜಿನಾಲಯಕ್ಕೆ ಗ್ರಾಮದಾನ, 'ವೀರಣ್ಣ ವರ್ತ್ತನೆ'ಯನ್ನು ಸುಂಕದುತ್ಪನ್ನದಿಂದ ಧಾರೆಯೆರೆದು, ಮುಕ್ಕೊಡೆಯ ಕಲ್ಲು ನೆಟ್ಟು ಕೊಟ್ಟ ವಿಷಯವಿದೆ. ವೀರಣ್ಣವರ್ತನೆ ಎಂದರೆ ವೀರಗಾಸಿಗಳ ವಡಬು ಉಗ್ಗಡಿಕೆ ಖಡ್ಗ ಉದ್ಗಾರಗಳಿಗೆ ಬಸದಿಯಿಂದ ಕೊಡುತ್ತಿದ್ದ ಸುಂಕವಾಗಿದ್ದಿರಬೇಕು. ಅಂದರೆ ಶಿವಸಂಕೇತಗಳನ್ನು (ವೀರ)ಶೈವದೊಡನೆಯ ಹೊಂದಿಕೆಗಾಗಿ ಬಳಸುತ್ತಿದ್ದ ಜಿನಾಲಯಗಳ ಕುರಿತಾಗಿ ಹೇಳಿದಂತಾಗುತ್ತದೆ. ಅಂಥವು ಯಕ್ಕೋಟಿ ಜಿನಾಲಯಗಳೆನಿಸಿದ್ದವು. ಜೈನ ಮತ್ತು ವೀರಶೈವದ ಸಹಬಾಳ್ವೆಯ ಚಿತ್ರವಿಲ್ಲಿದೆ. ಹೀಗೆಯೇ ವೀರಶೈವ ಗಣಾಚಾರಿಗಿದ್ದ ಸ್ಥಾನ ಗೌರವವೂ ತಿಳಿಯುತ್ತದೆ.

ಮಂಡ್ಯ ಜಿಲ್ಲೆಯ ಶಾಸನಗಳಿಂದ[2] ಅಂದರೆ ಕ್ರಿ.ಶ. ೧೩೦೬ರ ಹೊಸ ಹೊಳಲು ಶಾಸನ, ಕ್ರಿ.ಶ. ೧೪೦೨ರ ಪಾಂಡವಪುರ ತಾ. ಪುರದ ವೀರಭದ್ರಗುಡಿ ಶಾಸನ, ಕ್ರಿ.ಶ. ೧೫೧೧ರ ವೀರಭದ್ರ ದೇಗುಲ ಶಾಸನ, ಬೆಳ್ಳೂರು ಶಾಸನ, ಕ್ರಿ.ಶ. ೧೩೦೫ರ ಮರಡಿಪುರ ಶಾಸನ, ಕ್ರಿ.ಶ. ೧೨೫೧ರ ರಾಯಶೆಟ್ಟಿಪುರ ಶಾಸನಗಳಲ್ಲಿ ವೀರಶೈವ ಆಚಾರಗಳ ಪ್ರಸ್ತಾಪ, ಗಣಗಳ ಚರ್ಯೆ, ಲಿಂಗಮುದ್ರೆ ಕಲ್ಲುಗಳು, ವೀರಭದ್ರ ಸಂಬಂಧೀ ಆಚರಣೆಗಳು ಹಾಗು ವೀರಭದ್ರನ ವಾರ ಮಂಗಳವಾರ ಎಂಬ ಸೂಚನೆಗಳು ಕಂಡುಬರುತ್ತವೆ.

ಹಾಸನ ಜಿಲ್ಲೆಯ ಶಾಸನಗಳ ಪೈಕಿ[3] ಅಂಕನಾಥಪುರದ ಶಾಸನವು ದೇವರ ದಾಸಿಮಯ್ಯ ಶೀಲಾಚಾರ ಸಂಪನ್ನತೆಯನ್ನು ಹೇಳಿರುವುದು ತವನಂದಿ ಶಾಸನವು (ಕ್ರಿ.ಸ. ೧೧೯೫), ದೇವರದಾಸಿಮಯ್ಯನ 'ತವನಿಧಿ' ಸಂಬಂಧಸೂಚಕವಾಗಿರುವುದು, ಅರಕಲಗೂಡು ತಾ. ಶಾಸನವು, ವೀರಶೈವ ಮಠಗಳ ಸಾಮಾಜಿಕ ನೆರವು, ಗ್ರಾಮನಿರ್ವಹಣೆ, ಧಾರ್ಮಿಕ ಹೊಣೆಗಾರಿಕೆ ಹಾಗು ವೀರಶೈವ ಪಾರಿಭಾಷಿಕ ಶಬ್ದಗಳ ('ಶಠಸ್ತಲ ಚಕ್ರವರ್ತ್ತಿ, ವಿರಕ್ತ ಶಿಖಾಮಣಿ...') ಬಗ್ಗೆ ಹೇಳಿದರೆ ಉಳಿದ ಶಾಸನಗಳು ಗುರು-ವಿರಕ್ತ ಸಮನ್ವಯ, ವೀರಶೈವ ಮಠದ ಗುರುಗಳಿಗೆ ಕೊಟ್ಟ ಮಠಮಾನ್ಯ ಧರ್ಮ, ಗಣಾಚಾರದ ಹಣದ ಸಲ್ಲಿಕೆ, ಸಾಲುಮೂಲೆ ವೀರಶೈವ ಬಣಜಿಗರ ವ್ಯಕ್ತಿತ್ವ ವರ್ಣನೆ ಹಾಗು ಅವರ ಚನ್ನಬಸವೇಶ್ವರ ಸಂಪ್ರದಾಯ ಇತ್ಯಾದಿಗಳ ಪ್ರಸ್ತಾಪ ಮಾಡಿ, ಸಾಂಸ್ಕೃತಿಕ ಚೌಕಟ್ಟನ್ನು ತಿಳಿಸಿವೆ.

ಚಿಕ್ಕಮಗಳೂರು ಜಿಲ್ಲೆಯ ಶಾಸನಗಳಲ್ಲಿ[4] ರೈತಾಪಿ ಜನರು ವೀರಶೈವ ಮಠಗಳಿಗೆ ಕೊಟ್ಟ ಕೊಡುಗೆ, ರಾಜಮಾನಿತ ಪಟ್ಟದ ಮಹಾಮಹತ್ತಿನ ಮಠಗಳಿಗೆ ನಡೆದುಕೊಳ್ಳುವ ವಿವಿಧ ವರ್ಗದ ಜನತೆ, ಫಲಹಾರ ಮಠದ ವೈಶಿಷ್ಟ್ಯ ಹಾಗು ವೀರಶೈವ ಸಂಪ್ರದಾಯದ ಪಂಚಪೀಠಗಳೊಡನೆ ಅದರ ಸಂಪರ್ಕ, ಗಣಕುಮಾರಿ ಬೊಪ್ಪವ್ವೆಯಂಥ, ಗಣಸ್ತ್ರೀಯರ ಅಧ್ಯಾತ್ಮಿಕ ನಿಷ್ಠೆ, ಬಾಳೆಹಳ್ಳಿಯ ಶ್ರೀಮದ್ರಂಭಾಪುರಿ ಪೀಠದ ಪ್ರಾಚೀನತೆ ಹಾಗು ರಾಜವಂಶೀಯ ಮಾನ್ಯತೆಗಳು, ಪೀಠದ ಧಾರ್ಮಿಕ, ಸಾಮಾಜಿಕ ಚಟುವಟಿಕೆಗಳು, ತಮ್ಮಡಿಗಳು (ಶಿವಾರ್ಚಕರು), ಗುರು-ವಿರಕ್ತ ಸಂಪ್ರದಾಯ ಸಾಮರಸ್ಯ ಕುರಿತೆಲ್ಲ ಹೇಳಿ ಸಾಂಸ್ಕೃತಿಕ ವೈವಿಧ್ಯತೆಗಳು ಮಂಡಿತವಾಗಿವೆ.

ತುಮಕೂರು ಜಿಲ್ಲೆಯ ಶಾಸನಗಳು[೧೧] ಶಂಕರಗೋತ್ರದ ಶಿವಸೂತ್ರದ ಗುಬ್ಬಿಹೊಸಳ್ಳಿಯ ಮಹಾನಾಡ ಪ್ರಭುಗಳ ಆಳ್ವಿಕೆ, ಆಗ ಪ್ರಮುಖ ವ್ಯಾಪಾರ ಕೇಂದ್ರವಾಗಿದ್ದ ಗುಬ್ಬಿ ಹೊಸಳ್ಳಿ; ಹರಳೂರು ವೀರಭದ್ರ ಹಾಗು ಅನುಗುಣ ವೀರಶೈವಮಠ, ಲಿಂಗದಬೀರರ ಷಟ್ಚಕ್ರ ಪುರಾಣದ ಅಧ್ಯಯನ ಹಾಗು ಶಾಸನೋಕ್ತ ತಾಂತ್ರಿಕ ಸಂಕೇತ; ಆಂಧ್ರದಲ್ಲಿದ್ದಂತಹ 'ವೀರಮುಷ್ಟಿಪನ್ನು ಗಣಾಚಾರಿ' ಎಂಬ ಲಿಂಗದ ವೀರರ ಉಪಪಂಗಡದ ಗುಬ್ಬಿ ತಾಲೂಕಿನಲ್ಲಿಯ ಅಸ್ತಿತ್ವ; ಮಹಾಶಿವಯೋಗಿ ಶ್ರೀಮದಟವೀಶ ಸ್ವಾಮಿಗಳು ಗುಬ್ಬಿ ಚನ್ನಬಸವೇಶ್ವರ ಕ್ಷೇತ್ರದಲ್ಲಿ ಕೆರೆ ನಿರ್ಮಾಣ ಹಾಗು ಚಂದ್ರಮೌಳೀಶ್ವರ ಲಿಂಗಪ್ರತಿಷ್ಠೆ ಮಾಡಿದ ವಿಷಯ; ವಿಜಯನಗರ ಕಾಲದ ವೀರಶೈವ ಗುರುಗಳ ಪ್ರಾಮುಖ್ಯ; ಯಡಿಯೂರು ಸಿದ್ಧಲಿಂಗೇಶ್ವರರ ವರ್ಣನೆ ಮಾಡುತ್ತ 'ಭಕ್ತನ ಹೃದಯಲ್ಲಿ ಜಂಗಮ ಜಂಗಮ ಮಕುಟದಲ್ಲಿ ಶೂನ್ಯಲಿಂಗ ಆ ಲಿಂಗದಲ್ಲಿ ಚಿದಂಬರ ಶಿವಶಕ್ತಿ', 'ಭಕ್ತನ ಪ್ರಾಣಕಳಾಚೈತನ್ಯ ಸ್ವರೂಪೇ ತೋಂಟದ ಸಿದ್ಧಲಿಂಗೇಶ್ವರನು' ಎಂದೆಲ್ಲ ಶಿವಕುಲಯಿಂತಪ್ಪ ಅನಾದಿ ಜಂಗಮದ ಪಾತ್ರವನ್ನು ತನ್ಮಯವಾಗಿ ವೀರಶೈವದ ತಾತ್ವಿಕ ತ್ರಿವಿಧ ಸ್ವರೂಪವನ್ನು ಹೇಳಿರುವುದು; ವೀರಶೈವದ ಪಚ್ಚೆಕಂತ ಸಮಯದ ಅಸ್ತಿತ್ವ; ಮಾಹೇಶ್ವರ ಸಂಪ್ರದಾಯದ ರಾಜರ ದಾನಧರ್ಮಗಳು; ಪಂಚಪೀಠಗಳ ಪೈಕಿಯ ಶ್ರೀಶೈಲ, ಕಾಶಿ ಸಿಂಹಾಸನ ಪೀಠಗಳ ಶಾಖಾಮಠಗಳ ಮಣಿಹ ಹಾಗು ವೀರಶೈವ ಮಠಗಳಿಗೆ ಪುರಧರ್ಮ್ಮ ಶಾಸನಗಳಂತೆ ದಾನದತ್ತಿಗಳ ನೀಡಿಕೆ; ವೀರಶೈವದೊಡನೆ ಹೊಂದಾಣಿಕೆ ಮಾಡಿಕೊಂಡು ಬಸದಿಗಳಲ್ಲಿ ಶೈವದ ಪೂಜಾಸಂಕೇತಗಳನ್ನು ನಿರ್ವಹಿಸುತ್ತಿದ್ದ ಕ್ರಿ.ಶ. ೧೨೭೭ರ ತೈಲಂಗೆರೆ ಯಕ್ಕೋಟಿ ಜಿನಾಲಯದ ವಿಷಯ ಮತ್ತು ವೀರಶೈವ ತಮ್ಮಡಿಗಳಿದ್ದ ಸೂಚನೆ; ವೀರಶೈವದ ಅಜಾತಿ ವ್ಯವಸ್ಥೆ ಹಾಗು ತದನುಗುಣ ಗುರು 'ಅಜಾತಿಯಬಸ ಚನವೀರ ದೇವರ' ಶಿಷ್ಯ ಬಂಡ್ಯೆಯನಿಗೆ ಲಿಂಗಮುದ್ರೆಯ ಸೀಮಾಚಿಷ್ನೆ ಹಾಕಿ ದಾನ ನೀಡಿರುವ ಸಂಗತಿ; ವೀರಶೈವ ದೊರೆಗಳಾದ ಹಾಗಲವಾಡಿ ಅರಸರು ಮಠ ಕಟ್ಟಿಸಿ ಶಾಸನೋಕ್ತ ದಾನನೀಡಿರುವುದು -ಇತ್ಯಾದಿಗಳನ್ನು ಹೇಳಿ ಈ ಜಿಲ್ಲೆಯ ವೀರಶೈವ ವಲಯದ ಧಾರ್ಮಿಕ, ಸಾಮಾಜಿಕ, ಆಧ್ಯಾತ್ಮಿಕ, ಸಾಂಸ್ಕೃತಿಕ ಸಾಧನೆಗಳನ್ನು ಬಿಂಬಿಸಿವೆ.

ಬೆಂಗಳೂರು ಚಿಕ್ಕಪೇಟೆಯ ಮಂಜಿಸೋಮೇಶ್ವರನಿಗೆ ಕೊಡಗಿನ ವೀರಶೈವ ದೊರೆ ದೊಡ್ಡವೀರರಾಜೇಂದ್ರ ಒಡೆಯನು ದೇವಸೇವೆಗೆಂದು ಕೊಡಗಿನ ಜಮೀನನ್ನು ದಾನನೀಡಿರುವುದು; ಮಡಿವಾಳದ ಸೋಮೇಶ್ವರ ದೇಗುಲಕ್ಕಂಟಿದ ಮಠದ ಗುರು ಶ್ರೀರುದ್ರ ಮಾಹೇಶ್ವರರಿಗೆ, ಸುಂಕಮಾನ್ಯ ಭತ್ತದ ಕೊಡುಗೆಯಾದ ವಿಷಯ ಹಾಗು ದೇಗುಲದ ತಮ್ಮಡಿ ಅರ್ಚಕರಿದ್ದ ಸೂಚನೆ; ಶಿವಾಚಾರದ ನಗರ್ತರು ಅರ್ಚಕ ವೃತ್ತಿಗೆ ಕೊಟ್ಟ ಗ್ರಾಮದಾನ; ವಿಭೂತಿಪುರ ಮಠದ ಇತಿಹಾಸ ಹಾಗು ವಾಚ್ಛಿದೇವ ಗುರುಗಳಿಗೆ 'ಮಠಪುರ'ವನ್ನು ಸರ್ವಮಾನ್ಯವಾಗಿ ನೀಡಿದ ಸಂಗತಿ; ಕೋರಣ್ಯಭಿಕ್ಷೆ ಮಾಡಿ ಮಠದಲ್ಲಿ ಅನ್ನದಾಸೋಹ ನಡೆಸುತ್ತಿದ್ದ ಕಂಬಾಳು ಮಠ; ಶಿವಗಂಗೆಯ ಮೇಲಣಗವಿ ಮಠದ ವೀರಭದ್ರನಿಗೆ ಒದಗಿದ್ದ ರಾಜದಾನಗಳು; ನಿಜಗಲ್ ವೀರಭದ್ರ (ಉದ್ದಂಡ-ಉದ್ದಾನ ವೀರಭದ್ರ) ದೇವರಿಗೆಂದು ಮಠದ ಗುರುಗಳಿಗೆ ಹಿರಿ ಕೆರೆಯ ಕೆಳಗಣ ಗದ್ದೆಯ ದಾನ (ಬಿತ್ತುವಟ್ಟ) ಹಾಗು ಶ್ರೀಮದಟವೀ ಸ್ವಾಮಿಗಳ ಶಿಷ್ಯ 'ಉದ್ದಾನ ಶಿವಯೋಗಿ' (ಪೂರ್ವಾಶ್ರಮನಾಮಿ ರುದ್ರಪ್ಪ) ಈ ಉದ್ದಾನ ವೀರಭದ್ರನ ಸಾನ್ನಿಧ್ಯದಲ್ಲಿ ತಪೋನುಷ್ಠಾನ ಮಾಡಿದ ಸೂಚನೆ ಇರುವುದು; ಕಲ್ಯದ ಕಲ್ಲೇಶ್ವರ ಗುಡಿಯ ವೀರಶೈವ ಅರ್ಚಕ ದೇಗುಲದ ಸ್ಥಾನಿಕನಾಗಿದ್ದುದು ಹಾಗು ಆ ದೇಗುಲ ಮಠದ ಅಸ್ತಿತ್ವ (ಗೋತ್ರ ಪುರುಷ ಭೃಂಗಿ ಹಾಗು ಶಿವಯೋಗಿಯ ಶಿಲ್ಪಗಳೂ ಮಠದ ಶಿಲಾಸ್ತಂಭದ ಮೇಲಿವೆ), ವೀರಭದ್ರ ದೇವರ ಸಮಯಾಚಾರ; ಚಕ್ರಭಾವಿ ಸಿಂಹಾಸನದ ಪಟ್ಟದ ಮರುಳದೇವರ ಉಲ್ಲೇಖ ಹಾಗು ಮಠಕ್ಕೆ ಕಟ್ಟೆಯ ಕೆಳಗಣ ಅಚ್ಚುಕಟ್ಟು ಭೂಮಿಯ ದಾನ; ಚಿಕ್ಕಹೆಜ್ಜಾಜಿಯ ಹೊಯ್ಸಳರ ಕಾಲದ ಶಾಸನೋಕ್ತ 'ವೀರಸರಣರು', 'ಜಂಗಮ ಭಾಷೆ', 'ಬಸವಣವಾಕ್ಯ, ಸರಣರ ವಾಕ್ಯ ಪರಮೇಶ್ವರ ಗಂಗಾಧರ ವಾಕ್ಯ' ಎಂಬ ಉಲ್ಲೇಖಗಳು; ಸದಾಶಿವ ಗೋತ್ರಜರೆನಿಸಿದ ಸುಗಟೂರು ಅರಸರ ವೀರಶೈವಾನುಸರಣೆ; ಹೊಸಕೋಟೆ ಬಯಿರತ್ತಿ ಶಾಸನೋಕ್ತ 'ಮುಸುಕುಂದ ಮಹಾರುಸಿಯ ಪಿತಾಮ ರೇವಣಸಿದ್ಧೆಯ ದೇವರ' ಪೂಜಾತಾಣ; ರಾಜಾಪುರ ಮಠಕ್ಕೆ ಶಿವಪೂಜಾ ನಿರ್ವಹಣೆಗೆಂದು ಗುರುವಿಗೆ ಕೊಟ್ಟ ಗ್ರಾಮ; ಕನಕಪುರ ತಾ. ಚಿಕ್ಕಬಳ್ಳಿಗೆರೆಯ ವೀರಮಲ್ಲೇಶ್ವರ ದೇವರಿಗೆ ಆರಾಧನೆಯ ಪರಿಕರಗಳಿಗೆ,

ದೀಪಾರಾಧನೆಗೆ ಕಳಂಜು ನಾಣ್ಯಸಹಿತ, 'ಮಠಪುರ' ನಿರ್ವಹಣೆಗೂ ಭೂದಾನ ನೀಡಿದ ವಿಷಯ; ಗುಮ್ಮಳಾಪುರದ ರೇವಣಸಿದ್ಧೇಶ್ವರ ಸಂಪ್ರದಾಯದ ಗುರುಮಠಕ್ಕೆ ಇಮ್ಮಡಿ ಕೆಂಪೇಗೌಡನು ಗ್ರಾಮದಾನ ಮಾಡಿದ ಸಂಗತಿ ಹಾಗು ಕನಕಪುರ ತಾ. ಗುಳ್ಳಹಟ್ಟಿ ಕಾವಲು (ಮುನಿನಗರ) ಗ್ರಾಮದ ಪಚ್ಚಣ್ಣಯ್ಯನ ದಾಸೋಹ ಮಠಕ್ಕೆ ಸೊಳ್ಳೆಪುರವನ್ನು ದಾನ ನೀಡಿರುವುದು; ಕಾನಕಾನ ಹಳ್ಳಿಯ ಶಾಸನೋಕ್ತ ಮಡಿವಾಳರ ಮೊಸಲು ಮಲ್ಲಿಗೆ, ಕ್ಷೌರಿಕರ ಮೊಸಲು ಕೆಂಪು ಕಣಗಲೆ ಹೂ ಮುಡಿಯುವ ಸಂಬಂಧದ ಸಂಘರ್ಷದಲ್ಲಿ ಕಲ್ಯಾಣದ ಬಸವೇಶ್ವರ-ಬಸವಪ್ಪ-ಸಾಕ್ಷಿ ಎಂದಿರುವುದು, ವೀರಭದ್ರ ನ ಜಾನಪದ ಸಂಬಂಧಿಸಿದ ವೀರಗಂಟ್ಟೆ ಮಡಿವಾಳನ ಕತೆಯ ಸೂಚನೆಯಲ್ಲಿ ಜಯ ಪಡೆದ ಮಡಿವಾಳರ ಸಂಗತಿಯಾಗಿ ಬಹುಶಃ ಕನಕಪುರ ದೇಗುಲ ಮಠದ ಗುರುಗಳೆ ಕಲ್ಯಾಣದ ಬಸವಣ್ಣನನ್ನು ಸ್ಮರಿಸಿ ತೀರ್ಪು ನೀಡಿರುವ ಸಂಕೇತವಿರುವುದು (ಕನಕಪುರದ ದೇಗುಲಮಠದ ಪ್ರವೇಶ ದ್ವಾರದ ಬಳಿಯೆ ಮಡಿವಾಳ ಮಾಚಯ್ಯನ ದೇಗುಲವಿದ್ದು, ಅಲ್ಲಿನ ಗುರುಪೂಜಾ ಕಾರ್ಯಗಳಿಗೆ ದೇಗುಲಮಠದ ಗುರುಗಳು ದಯಮಾಡಿಸುವುದು ಹಾಗು ಮಠದಲ್ಲಿ ವೀರಭದ್ರ ಹಲಗೆಯ ಪೂಜೆ ಇರುವುದು, ಶಿವನಹಳ್ಳಿ, ಆಡನಕುಪ್ಪೆ ಮುಂತಾದ ಕಡೆಯ ವೀರಭದ್ರ ಜಾತ್ರೋತ್ಸವಗಳು ದೇಗುಲಮಠದ ಗುರುಗಳ ಸಮಕ್ಷಮದಲ್ಲಿ ನಡೆಯುವುದು. ಈ ಸಂದರ್ಭಕ್ಕೆ ಗಮನಾರ್ಹ- ವೀರಗಂಟೆ ಮಡಿವಾಳಯ್ಯನೂ ಒಬ್ಬ ವೀರಗಾಸಿಯಾಗಿದ್ದ ಸೂಚನೆಯೂ ದೊರಕುವಂತಿದೆ); ತಾಲೂಕಿನ ಗಡಿ ಹಲಗೂರಿನ ವೀರಭದ್ರನ ಶುದ್ಧ ಶೈವಾರ್ಚಕರು ವೀರಶೈವ ತಮ್ಮಡಿಗಳಂತಿರುವುದು; ದೇಗುಲಮಠಕ್ಕೆ ಮೈಸೂರು ದಳವಾಯಿ ಕುಮಾರಯ್ಯ ಹಾಗು ಅವನ ತಾಯಿ ತಿಮ್ಮಮ್ಮಣ್ಣಿಯು ದಾನ ನೀಡಿರುವ ಎರಡು ಶಾಸನಗಳ ಹಿನ್ನೆಲೆಯಲ್ಲಿ ಅದು ಅವರ ಕುಲಗುರು ಮಠವಾಗಿತ್ತೆಂಬ ಸೂಚನೆ; ರಾಮನಗರ ತಾ. ಮುಗುಳನ ಹಳ್ಳಿಯ ನಂಜುಂಡೇಶ್ವರ ದೇಗುಲದ ತಮ್ಮಡಿ ಅರ್ಥಾತ್ ಶಿವಾರ್ಚಕನಾಗಲು ಆಸ್ತಿಯನ್ನು ವಿಸರ್ಜಿಸಿ, ತಮ್ಮಡಿ ದೀಕ್ಷೆಯನ್ನು ಪಡೆಯಬೇಕಿದ್ದ ಸಂಪ್ರದಾಯ; ಕೋಡಂಬಳ್ಳಿಯ ಮಳಲೇಶ್ವರ ದೇಗುಲಕ್ಕೆ ಸಂಬಂಧಿಸಿದ 'ಗಣಾಚಾರ'ದ ಪ್ರಸ್ತಾಪ; ಚಕ್ಕಲೂರು ಗ್ರಾಮವನ್ನು ಪುರಧರ್ಮ್ಮದ ಪುರಮಠಕ್ಕೆ ಕೊಟ್ಟು ವೀರಶೈವ ಪಾರಿಭಾಷಿಕ ಶಬ್ದಗಳಲ್ಲಿ ಅಷ್ಟಾವರಣದ ಘಟಕಗಳನ್ನು ಶಾಪಾಶಯದಲ್ಲಿ ಹೇಳಿರುವುದು -ಇತ್ಯಾದಿಗಳು ಬೆಂಗಳೂರು ಜಿಲ್ಲೆಯ ಶಾಸನಗಳಿಂದ[೯೯] ಗಮನಕ್ಕೆ ಬರುತ್ತದೆ. ವೀರಶೈವ ಧರ್ಮ-ಸಂಸ್ಕೃತಿಯ ಪ್ರಭಾವಗಳು ವಿವಿಧ ಆಯಾಮಗಳಲ್ಲಿ ಇಲ್ಲಿ ಮೇಳಗೊಂಡಿರುವುದು ಕಾಣಬರುತ್ತದೆ. ಸಾಮಾಜಿಕ, ಆರ್ಥಿಕ, ಧಾರ್ಮಿಕ ನೆಲೆಯಲ್ಲಿ ಜನಜೀವನ ವಿಧಾನವನ್ನು ಪರಿಣಾಮಕಾರಿಯಾಗಿ ಇಲ್ಲಿನ ಶಾಸನಗಳು ನಿರೂಪಿಸಿವೆ. ವೀರಶೈವದ ಅಚ್ಚು ಇಲ್ಲಿ ಎದ್ದುಕಾಣುತ್ತದೆ.

ಕೋಲಾರ ಜಿಲ್ಲೆಯ ಶಾಸನಗಳಲ್ಲಿ[೧೦೦] ಕೋಟೂರು ಬಸವಾಪುರದಲ್ಲಿ ಸುಗಟೂರು ಮುಂಮಡಿ ತಂಮಯಗೌಡರ ಆಳ್ವಿಕೆ; ಅಂಡಿಗೇನಹಳ್ಳಿಯ ವೀರಶೈವಮಠವು ದೇವರಕಾಡಿನಂಥ ಪರಿಸರ ನಿರ್ವಹಣಾ ಪ್ರೇರಣೆಯಾಗಿ ಮಠದ ಕಾಡನ್ನು ಹೊಂದಿದ್ದ ಸೂಚನೆ; ಕಾವುತ್ರನಹಳ್ಳಿಯ ವೀರಮರಸನು ಭಟವೃತ್ತಿಯಾಗಿ (ವೀರಶೈವ ಜಂಗಮ) ವೀರಯ್ಯನಿಗೆ ಗದ್ದೆಯ ದಾನ ನೀಡಿರುವುದು; ವಿರೂಪಾಕ್ಷಿಪುರದ ಭಿಕ್ಷಾಮಠಕ್ಕೆ ವೀರಶೈವಧರ್ಮಿ ದಂಡನಾಯಕ ಲಕ್ಕಂಣನು ದಾನ ನೀಡಿದ ಸಂಗತಿ; ಕ್ರಿ.ಸ. ೩೩೮ರ (ಮುಡಿಯನೂರು ಸಂಸ್ಕೃತ ಶಾಸನ) ಬಾಣವಂಶದ ದೊರೆ ಮಲ್ಲಿದೇವ ನಂದಿವರ್ಮನ ಶೌರ್ಯವನ್ನು ವೀರಭದ್ರನ ಶೌರ್ಯಕ್ಕೆ ಹೋಲಿಸಿ, ವೀರಭದ್ರ ಪಂಥದ ಅಸ್ತಿತ್ವದ ಸೂಚನೆ ನೀಡಿರುವುದು; ಗೂಳೂರಿನಲ್ಲಿರುವ ಪ್ರಸಿದ್ಧ ವೀರಶೈವ ಸಿಂಹಾಸನ ಪೀಠವಾದ ಶ್ರೀಶೈಲ ನಿಡುಮಾಮಿಡಿ ಪೀಠದ ವೀರಭದ್ರದೇವರ ಅಖಂಡ ದೀಪಾರಾಧನೆಗೆ ಶಿಲಾಗಾಣವನ್ನು ನೀಡಿರುವುದು; ಗುಮ್ಮನಾಯಕನ ಪಾಳೆಯಪಟ್ಟಿನ ನಾಯಕರ ರಾಜಗುರು-ಕುಲಗುರುಗಳಾಗಿ ಈ ಜಗದ್ಗುರು ಪೀಠದವರಿದ್ದ ಸೂಚನೆ ಹಾಗು ಈ ಪೀಠಕ್ಕೆ ಇದ್ದ ದಲಿತ ಛಲವಾದಿಗಳ ಕುರಿತ ನ್ಯಾಯಕಟ್ಟಲೆಗಳ ಅಧಿಕಾರ ಇತ್ಯಾದಿ ವಿಷಯಗಳು ಕಾಣಬರುತ್ತವೆ.

ಚಿತ್ರದುರ್ಗ ಜಿಲ್ಲೆಯ ಹುಲ್ಲೂರು ಗ್ರಾಮದ ವೀರಭದ್ರ ದೇಗುಲ ಶಾಸನವು, ಶ್ರೀಮನ್ಮಹಾನಾಯಂಕಾಚಾರ್ಯ ಮೆದಕರಿನಾಯ್ಕನು ಹುಲ್ಲೂರು ವೀರಭದ್ರನ ಭಕ್ತನಾಗಿದ್ದ ಬಗ್ಗೆ; ಗಣಾಚಾರಿ ದೊಡ್ಡಣ್ಣ, **ತಂಮಡಿ ಚೆಂನಣಪೂಜಾರಿ** ಇವರೆಲ್ಲರ ವೀರಭದ್ರ ಪೂಜಾಕಾರ್ಯಗಳಿಗೆ ದೇವದಾನವಾಗಿರುವುದನ್ನು ಸೂಚಿಸಿ ವೀರಶೈವ ಪರಿಸರವನ್ನು ಹೇಳುವಂತಿದೆ.

ಹುಳವಾರ ಗ್ರಾಮದ ಮಾಸ್ತಿಗುಡಿಯ ಶಾಸನದ ಶಾಪಾಶಯದಲ್ಲಿ ಗೃಹಸ್ತರು ತಪ್ಪಿ ನಡೆದರೆ ಗುರುಲಿಂಗ ಜಂಗಮಕ್ಕೆ ತಪ್ಪಿ ನಡೆದಂತೆ ಎಂದು ಹೇಳಿರುವುದು ವೀರಶೈವ ಪ್ರಭಾವಿತ ಶಾಪಾಶಯದಂತಿದೆ. ಕೊಂಡಜ್ಜಿಯ ಕ್ರಿ.ಶ. ೧೩೬೭ರ ಶಾಸನವು 'ಮುದ್ರೆಯ ಪುಟ ಅಯ್ಯಗಳು ವಿರೂಪಾಕ್ಷ ದೇವರಿಗೆ ಬಿಟ್ಟ ಮತ್ತರು' ಎಂದಿರುವಲ್ಲಿ ಇಷ್ಟಲಿಂಗಕ್ಕೆ ಚಿದ್ರಸವಿಟ್ಟು ಪುಟ ಹಾಕುವ ವೀರಶೈವ ಕಾಯಕವಂತನ ದಾನವನ್ನು ಸೂಚಿಸಿದಂತಿದೆ. ವಡೇರಹಳ್ಳಿಯ ಕ್ರಿ.ಶ. ೧೫೭೮ರ ಶಾಸನವು ಕೆಂಡದದೇವರಿಗೆ ವಿಭೂತಿ ಮುಂತಾದ ಗಣಂಗಳ ಸಾಕ್ಷಿಯಾಗಿ ದಾನ ಕೊಟ್ಟ ವಿಷಯ ಹೇಳುವಲ್ಲಿ ವೀರಭದ್ರನಿಗೆ ಆದ ದಾನವಾಗಿ, ಅಷ್ಟಾವರಣದ ಘಟಕಗಳ ಸಾಕ್ಷಿ ಇಟ್ಟು ಮಠದ ಗುರುವಿನ ನಿರ್ವಹಣೆಗೆ ಬಿಟ್ಟ ಸಂಗತಿಯಾಗಿದೆ. ಕೊಟ್ಟದಗುಡ್ಡದ ಶಾಸನವು (ಕ್ರಿ.ಶ. ೧೫೨೩) ಕಾಶಿಯ ವಿಶ್ವಾರಾಧ್ಯ ಪೀಠ ಹಾಗೂ ಶಿವಯೋಗಿಯ ಪ್ರಸ್ತಾಪ ಮಾಡಿ ಗಣಾಚಾರದ ಹೊನ್ನನ್ನು ವೀರಭದ್ರ ದೇವರ ನೈವೇದ್ಯ ನಿತ್ಯನಿಯಮಕ್ಕೆ ಬಳಸಲು ದಾನ ನೀಡಿರುವ ವಿಷಯ ಹೇಳಿದೆ. ಅಂದರೆ ಗುರು-ವಿರಕ್ತ ಸಮನ್ವಯ, ಗಣಾಚಾರದಿಂದ ಒದಗುತ್ತಿದ್ದ ಆರ್ಥಿಕ ಸಂಪನ್ಮೂಲದ ಕುರಿತಾಗಿ ಹೇಳಿದಂತಿದೆ. ಹಿರಿಯೂರು ತಾ. ಐಮಂಗಲದ ಶಾಸನವೊಂದು ರಾಚವಟ್ಟಿ ದೇವರು ಅಂದರೆ 'ವೀರಭದ್ರ' ದೇವರು, ವಿರಕ್ತ ಗುರುವರ್ಗಕ್ಕೆ ಲಿಂಗಾನುಭಾವ ನೀಡುವ ವೀರೇಶ್ವರಲಿಂಗವಾಗಿದ್ದಾನೆ ಎಂದು ಪ್ರಸ್ತಾಪಿಸಿದೆ. ಹೊಳಲ್ಕೆರೆ ತಾ. ದುಂಮಿ ಗ್ರಾಮದ ಶಾಸನವು: 'ದುಂಮಿಯ ಪುರವರಾಧೀಶ್ವರ ಶ್ರೀ ವೀರಭದ್ರದೇವರ ಅಮೃತಪಡಿಗೆ ನಿರಾಶ್ರಯ ಮಠದ ಕೆಂಚವೀರಣ್ಣೊಡೆಯರು' ಹೇಳಿದಂತೆ ದುಂಮಿಯ ಗೌಡ ಪಟ್ಟಣಸ್ವಾಮಿ ಪ್ರಜೆಗಳು ಮಹಾನಾಡು ಒಳಗಾಗಿ ಬಿಟ್ಟುಕೊಟ್ಟಿದ್ದ ಮೂಲೆವೀಸದೊಳಗೆ ಅರ್ಧಪಾಲು ಧರ್ಮಾಭಿವೃದ್ಧಿಗಾಗಿದೆ; ಈ ಶಾಸನಕ್ಕೆ ತಪ್ಪಿದರೆ 'ಮಹಾಮಹತ್ತಿಗೆ ಹೊರಗು ವಿಭೂತಿ ರುದ್ರಾಕ್ಷಿಗೆ ಹೊರಗು' ಎಂದೆಲ್ಲ ಹೇಳಿದೆ. ಇಲ್ಲಿನ ಗಮನಾರ್ಹ ವಿಷಯಗಳಾಗಿ ಹಂಪೆಯ ವಿರೂಪಾಕ್ಷ 'ಹಂಪೆಯಾಳ್ದ' ಎನಿಸಿದಂತೆ, ಕಾಶಿ ವಿಶ್ವನಾಥ ವಾರಣಾಸಿಯ ಒಡೆಯನಾದಂತೆ, ದುಂಮಿಯ ಪುರುವರಾಧೀಶ್ವರ ವೀರಭದ್ರನಾಗಿರುವುದಾಗಿದೆ. ದುಂಮಿಯ ವಿರಕ್ತ ಸಂಪ್ರದಾಯದ ಮಠವು ಪಟ್ಟಣವಾಗಿ ಪ್ರಸಿದ್ಧವಾಗಿದ್ದ ದುಂಮಿಯ ಅಧಿಪತಿ ವೀರಭದ್ರ ದೇವರ ಪೂಜಾಚಾರಗಳಿಗೆ ಮೂಲೆವೀಸದ ಪಾಲಿನ ಸುಂಕವನ್ನಾ ಆಗಿ ಒದಗಿಸಿದ್ದು, ಗುರು-ವಿರಕ್ತ ಸಂಪ್ರದಾಯದ ಅನ್ಯೋನ್ಯ ಚಿತ್ರವನ್ನು ನೀಡುತ್ತದೆ. ಚನ್ನಗಿರಿ ತಾ. ನೀತಗೆರೆ ಗ್ರಾಮದ ವೀರಭದ್ರ ದೇಗುಲ ಶಾಸನವು 'ರುದ್ರನ ಸುತ ವೀರಭದ್ರಂ', 'ಶಿವಾಚಾರ ದಕ್ಷಂ ವೀರ ರಉದ್ರಂ ತಾನು ರುದ್ರಂ... ಮಹಾವೀರಭದ್ರ'ನನ್ನು ವರ್ಣಿಸಿದೆ. ಇಲ್ಲಿ ಲಿಂಗಪುರಾಣ, ವಾಯುವೀಯ ಸಂಹಿತೆಯು ಹೇಳಿರುವ 'ರುದ್ರಸ್ಯತನಯೋ ರೌದ್ರಃ' ಎಂಬ ಮಾತಿನ ಕನ್ನಡ ರೂಪ (ರುದ್ರನ ಮಗ ವೀರಭದ್ರ)ವಿದೆ; ಜನಪದರಲ್ಲಿ ಬಳಕೆಯಲ್ಲಿರುವ 'ರುದ್ರದೇವರು' ಎಂದು ವೀರಭದ್ರನಿಗ ಆರೋಪವಿದೆ. ಅವನು ಶಿವಾಚಾರದ ಅರ್ಥಾತ್ ವೀರಶೈವವನ್ನು ಪಾಲಿಸುವವ ಎಂದೆಲ್ಲ ಅರ್ಥ ಒದಗುತ್ತದೆ. ಚಿತ್ರದುರ್ಗ ಜಿಲ್ಲೆಯ ಶಾಸನಗಳಿಂದ[೧೩] ಈ ಅಂಶಗಳು ಗಮನಕ್ಕೆ ಬರುತ್ತದೆ.

ಶಿವಮೊಗ್ಗ ಜಿಲ್ಲೆಯ ಶಾಸನಗಳ ಪೈಕಿ[೧೪] ಸೊರಬ ತಾ. ಆವಲಿ ಗ್ರಾಮದ ಕಲ್ಲೇಶ್ವರ ಗುಡಿಯ ಶಾಸನವು ವೀರಶೈವ ಪಂಚಪೀಠಗಳ ಗೋತ್ರಪುರುಷರ ಉಲ್ಲೇಖ, ಮಹಾಮಹತ್ತಿನ ಮಠದ ಗುರುಗಳು ಇತ್ತ ಅಡಕೆ ಮರಗಳ ದಾನ, ದಿಗಂಬರ ಮುಕ್ತಿನಾಥ ಎಂಬ ಶಿವನಿಗಿದ್ದ ಆದಿಯ ಹೆಸರು ಇತ್ಯಾದಿಗಳನ್ನು ನೀಡುತ್ತದೆ. ಆನೆವಟ್ಟಿ ಶಾಸನವು ಗುರುವಿಗೆ ಕಲ್ಲುಮಠ ಕಟ್ಟಿಸಿಕೊಟ್ಟ ಬಗ್ಗೆ ಹೇಳಿದೆ. ಕೋಟೆಕೊಪ್ಪ ವೀರಭದ್ರ ದೇಗುಲ ಶಾಸನವು 'ನಿರಾಸಿಮಠ'ವನ್ನು ಉಕ್ತಮಾಡಿ 'ಲಿಂಗದ ಕಂಥೆಯ' ದೇವರಿಗೆ ಲಿಂಗಾಪುರ ಗ್ರಾಮವನ್ನು ದಾನ ನೀಡಿದ ಬಗ್ಗೆ ಹೇಳಿದೆ. ಇದು ಇಷ್ಟಲಿಂಗ ಸಾಕ್ಷಿಯಾಗಿ ಅದೇ ಲಿಂಗಕ್ಕೆ ಅರ್ಪಿಸುವ ಭಾವನೆ ದಾಸಿಯಲ್ಲಿರುವ ವೀರಶೈವಾಚಾರದ ತಾತ್ವಿಕ ಆಚರಣೆಯ ಕುರುಹುವಿನಂತಿದೆ. ಸಾಗರ ತಾ. ಜಂಬಾಣಿ ಗ್ರಾಮದ ಶಾಸನವು ಕೆಳದಿ ಚನ್ನಮ್ಮಾಜಿಯ ಕುಲಗುರುವಿನ ಕುರಿತು ಹೇಳಿ ಆ ಗುರುವಿಗೆ ಗ್ರಾಮಾಧಿಪತ್ಯವೊಂದನ್ನು ಕೊಟ್ಟ ಬಗ್ಗೆ ಸೂಚಿಸುವಂತಿದೆ. ರತ್ನಾಪುರದ ಕ್ರಿ.ಶ. ೧೬೯೬ರ ಶಾಸನವು ಹಾಗು ಹೊಸೂರು ಶಾಸನವು ಕೆಳದಿ ಬಸಪ್ಪನಾಯಕನು ಗುರುಬಸವಪ್ಪನವರಿಗೆ 'ಬಸವರಾಜಪುರ'ವನ್ನು ಪುನರ್ ರೂಪಿಸಿ 'ಬಸವರಾಜಪುರಮಠ'ವಾಗಿ ಅರ್ಪಿಸಿದ ಸಂಗತಿಯನ್ನು

ತಿಳಿಸುತ್ತವೆ. ಕವಲೇದುರ್ಗದ ಮಹಂತಮಠದ ಶಾಸನಗಳು: ಕೆಳದಿ ಅರಸನು ಮಠಧರ್ಮ್ಮಕ್ಕೆ ಗ್ರಾಮ, ಗದ್ದೆ ಬೀಜಮಂ, ಸುಂಕಬಿರಾಡ, ಭೂಮಿ, ಭತ್ತರಾಗಿ, ಹಣ, ಉಪ್ಪು ಜೀನಸುಗಳ ಹೇರು, ಉಂಬಳಿಮಾನ್ಯವನ್ನು ಹೇರಳವಾಗಿ ನೀಡಿ, ಮಠಗಳನ್ನು ನಿರ್ಮಿಸಿಕೊಟ್ಟ ವಿಷಯಗಳನ್ನು ತಿಳಿಸಿವೆ. ಕೆರೆಕೇರಿ ಶಾಸನವು ಕೆಳದಿ ವೀರಭದ್ರನಾಯಕನು ದಾನಿವಾಸ ಸೀಮೆಯ ಮಹತ್ತಿನ ಮಠದ ಧರ್ಮಕ್ಕೆ ಅಂದರೆ ದಾಸೋಹ, ಸಿದ್ಧಾಂತ ವಿವರಣೆ, ಷಡ್ದರ್ಶನ ಬೋಧನ ಕಾರ್ಯಕ್ಕೆ ಗ್ರಾಮದಾನ ಮಾಡಿದ ವಿಷಯ ಹೇಳಿದೆ. ಆನಂದಪುರದ ಮಠದ ಶಾಸನದಲ್ಲಿ ಕೆಳದಿ ಸೋಮಶೇಖರ ನಾಯಕನ ಶಾಸನ ಪ್ರಮಾಣವಿಟ್ಟು; ಕಲ್ಯಾಣ ಪಟ್ಟಣದಲ್ಲಿ ನಿರಂಜನ ಪ್ರಭುಸ್ವಾಮಿಗಳು ತಮ್ಮ ಶೂನ್ಯಸಿಂಹಾಸನಕ್ಕೆ... ಚೆನ್ನಬಸವೇಶ್ವರ... ಚಂನ ಬಸವರಾಜದೇವರ ಸಮಯಾಚಾರದ ೬ ಸಾವಿರಕ್ಕೆ ಅಧ್ಯಕ್ಷರಾದ ನಿರಂಜನ ಪ್ರಭುವಿನಲ್ಲಿ... ಗಂಗಾಧರಸ್ವಾಮಿಗಳಿಗೆ... ಚರಪಟ್ಟ ನಿಬಂಧಿಸಿ... ಶಿಷ್ಯಪಾರಂಪರ್ಯ ನಡೆಯಬೇಕು ಅಲ್ಲಮಪ್ರಭು ಸ್ವಾಮಿಗಳು ನಿಶ್ಚೈಸಿದರು' ಎಂದಿದೆ. ಈ ಶಾಸನದಲ್ಲಿ ಬರುವ ನಿರಂಜನ, ಶೂನ್ಯಸಿಂಹಾಸನ, ಚೆಂನಬಸವ ಸಮಯಾಚಾರ, ಚರಪಟ್ಟ, ಅಲ್ಲಮಪ್ರಭು ಇತ್ಯಾದಿ ಶಬ್ದಗಳು ಪೂರ್ಣವಾಗಿ ೧೨ನೆಯ ಶತಮಾನದ ವೀರಶೈವ ಪರಂಪರೆಯ ಪರಿಸರವನ್ನು ತಂದೊಡ್ಡಿವೆ.

ಧಾರವಾಡ ಜಿಲ್ಲೆ ಹಿರೇಕೆರೂರು ತಾ. ಅಬಲೂರು ಶಾಸನವು[೧೫] ವೀರಭದ್ರಾವತಾರವನ್ನು ಏಕಾಂತರಾಮಯ್ಯನ ಮೂಲಕ ಪರಸಮಯಿಗಳನ್ನು ನಿಯಂತ್ರಿಸಲು ಮಹೇಶ್ವರನೇ ಮಾಡಿಸಿದ ಎಂದು ಹೇಳುವಲ್ಲಿ ಪೌರಾಣಿಕ ಕಲ್ಪನೆಗೆ ಇತಿಹಾಸದ ಚಾಮರವನ್ನು ಬೀಸುವ ಹವಣೆದ್ದರೂ, ವೀರಶೈವದ ಗಣಾಚಾರವನ್ನು ಗಟ್ಟಿಯಾಗಿ ನಿರ್ದೇಶಿಸಿರುವ ಸಂಗತಿಯಾಗಿದೆ. ಅರ್ಜುನವಾಡ ಶಾಸನವು[೧೬] ಬಸವಣ್ಣನವರ ಜೀವಿತದ ಮೇಲೆ ಬೆಳಕು ಚಲ್ಲುತ್ತದೆ. 'ಮಂಗಳ ಕೀರ್ತಿ ಪುರಾತನ ಜಂಗಮ ಲಿಂಗೈಕ ಭಕ್ತಿ ನಿರ್ಭ್ಭರ ಲೀಲಾಸಂಗಂ ಸಂಗನ ಬಸವಂ' ಎಂದು ಉಗ್ಗಡಿಸಿ ಬಸವಣ್ಣನ ಮಂಗಳಕರ ವ್ಯಕ್ತಿತ್ವವನ್ನು ಸೆರೆಹಿಡಿದಿದೆ.

ಹಂಪಿಯ ಉದ್ದಾನ ವೀರಭದ್ರ ದೇಗುಲದ ಶಾಸನವು ದಳವಾಯಿ ಜಂಗಮಯ್ಯನು ಮಾಡಿದ ವೀರಭದ್ರ ಪ್ರತಿಷ್ಠಾಪನೆ, ಹಿರಿಯ ಮಠದ ನಿರ್ವಹಣೆಗೆ ಬಿಟ್ಟ ಸೂಚನೆ ನೀಡುತ್ತದೆ. ಈ ದೇಗುಲ ಶ್ರೀಶೈಲ ನಿಡುಮಾಮಿಡಿ ಪೀಠದ ಜಗದ್ಗುರುಗಳ ಪ್ರೇರಣೆಯಿಂದ ಕಟ್ಟಿಸಲಾಯಿತೆಂದು ಆ ಪೀಠದ ಚರಿತ್ರೆಯಲ್ಲಿ ತಿಳಿದುಬರುತ್ತದೆ. ವಿರೂಪಾಕ್ಷಪಂಡಿತನು ತನ್ನ ಚನ್ನಬಸವಪುರಾಣದಲ್ಲಿ, ವೀರಶೈವ ಧರ್ಮಬೋಧೆಗಾಗಿ, ಈ ದೇಗುಲದಲ್ಲಿರುವ 'ಸರ್ವಾಂಗಲಿಂಗ'ವನ್ನು ಪ್ರಾತ್ಯಕ್ಷಿಕೆಯಾಗಿ ಇಟ್ಟುಕೊಳ್ಳುತ್ತಿದ್ದ ಬಗ್ಗೆ ಹೇಳಿದ್ದಾನೆ.[೧೭]

ಬಳ್ಳಾರಿ ಜಿಲ್ಲೆಯ ಕೊಟ್ಟೂರು ಬಸವೇಶ್ವರ ದೇಗುಲದ ಶಾಸನವು 'ಶಿರಗುಪ್ಪಿಯ ಶಿವಾಚಾರ ಸಂಪನ್ನ ಶ್ರೀ ಗುರುಲಿಂಗ 'ಜಂಗಮರಂಘ್ರಿಶೇವಾದಲ್ಲಿ ಪ್ರೀತನಾದ ಬಸಪ್ಪನು' 'ಕೊಟ್ಟೂರು ಬಸವೇಶ್ವರ' ಸ್ಥಾಪನೆ ಮಾಡಿದ ವಿಷಯ ಹೇಳುತ್ತದೆ; ವೀರಶೈವಾಚಾರಗಳನ್ನು ವಿದಿತಗೊಳಿಸುತ್ತದೆ. ಹಗರಿಬೊಮ್ಮನಹಳ್ಳಿ, ಕುರುವತ್ತಿ ಶಾಸನಗಳು ದಾನಿವರ್ತಕರ ಹೆಸರನ್ನು ಉಕ್ತಮಾಡಿ 'ಜಂಗಮಲಿಂಗ ಪ್ರಸಾದಕರು' ಎಂದು ಅವರ ವೀರಶೈವ ನಿಷ್ಠೆಯನ್ನು ತೋರಿವೆ. ಹರಪನಹಳ್ಳಿ ತಾ. ಚಟ್ನಹಳ್ಳಿ ಕಲ್ಲೇಶ್ವರ ದೇಗುಲದ ಕ್ರಿ.ಶ. ೧೧೪೬ರ ಶಾಸನವು 'ಶಿವಬ್ರಾಹ್ಮಣರ'ನ್ನು ಬ್ರಾಹ್ಮಣರಿಂದ (ವೈದಿಕ) ಬೇರೆ ಮಾಡಿ ಹೇಳಿರುವುದನ್ನು ನೋಡಿದರೆ, ಬಹುಶಃ ವೀರಶೈವ ಜಂಗಮರನ್ನು ಆ ಕಾಲಕ್ಕೆ ಹಾಗೆ ಗುರುತಿಸುತ್ತಿದ್ದ ಸೂಚನೆಯಂತೆ ಕಾಣುತ್ತದೆ.

ಆಂಧ್ರ ಪ್ರದೇಶದ ಕಡಪಾ ಜಿಲ್ಲೆಯ ಸಿದ್ಧಿವಟಂನಲ್ಲಿ ವೀರಭದ್ರ ದೇವಾಲಯವಿದ್ದು ಸಿದ್ಧೇಶ್ವರ ಎಂದು ಕರೆಯುತ್ತಾರೆ.[೧೮] ಮಧ್ಯಪ್ರದೇಶದ ಸಿದ್ಧವಟಕ್ಷೇತ್ರ, ವೀರಶೈವ ಜ॥ ಪೀಠವಾದ ಉಜ್ಜಯಿನಿ ಪೀಠದ ಮೂಲ ನೆಲೆ. ಅಲ್ಲಿಯೂ ಕ್ಷಿಪ್ರಾನದಿಯ ದಂಡೆಯ ಮೇಲೆ ವಟವೃಕ್ಷವಿದೆ, ಸಿದ್ಧೇಶ್ವರಲಿಂಗವಿದೆ. ಉಜ್ಜಯಿನಿ ಪೀಠವು ಕರ್ನಾಟಕಕ್ಕೆ ಬರುವಲ್ಲಿ ಕಡಪಾದ ಸಿದ್ದಿವಟಂನಲ್ಲಿ ಕೆಲಕಾಲವಿದ್ದು ಬಂದಿರಬೇಕು. ಹೀಗಾಗಿ ವೀರಶೈವ ಪರಂಪರೆ ಅಲ್ಲಿನ ವೀರಭದ್ರನ ಮೂಲಕ ಉಳಿದು ಬಂದು ಸಾಂಕೇತಿಕವೆನಿಸುವಂತಿದೆ.

ಅನಂತಪುರ ಜಿಲ್ಲೆ ಪೆನುಗೊಂಡೆಯ ಆಂಜನೇಯ ದೇಗುಲ ಶಾಸನದಲ್ಲಿ ಚನ್ನವೀರಭದ್ರದೇವರ ಪ್ರಸ್ತಾಪ; ಕನಗಾನಿಪಲ್ಲಿ ಶಾಸನದಲ್ಲಿ ಕಾಡವೀರನೆಂಬ ಲಿಂಗಧರನು ವೀರೇಶ್ವರನಿಗೆ 'ಲಿಂಗಧಾರಿಗಳು' ಕೊಡುವಂಥ ಲಿಂಗದೆರಿಗೆ ಅರ್ಪಿಸಬೇಕಾದ ಬಗ್ಗೆ ಹೇಳಿದೆ. ಬಹುಶಃ ವೀರಭದ್ರ ಖಡ್ಗ ಯಾ ವಡಬು ಹೇಳುವ, ಶಸ್ತ್ರ ಪವಾಡ ನಡೆಸುವವರಿಗೆ ಇದ್ದ ಆದಾಯದ ಮೇಲಿನ ತೆರಿಗೆ ಎಂದಾಗಿರಬೇಕು. ಮಹಾಶಿವರಾತ್ರಿಯ ಲಿಂಗೋದ್ಭವ ಕಾಲವಾದ ನಡುರಾತ್ರಿಯಲ್ಲಿ 'ವೀರಣಂ ಅಥವಾ ವೀರಂಗಂ' ಎಂಬ ಭೇರಿಯ ಶಬ್ದಕ್ಕನುಗುಣವಾಗಿ ಕುಣಿಯುತ್ತ 'ಖಡ್ಗಾಲು' ಎಂಬ ಹೆಸರಿನಲ್ಲಿ ವೀರಭದ್ರ ವಡಬುಗಳನ್ನು ಹೇಳುತ್ತಾರೆ; ವೀರಾಭಿನಯ ಮಾಡುತ್ತಾರೆ. ಇದು ವೀರಶೈವದ ಜಾನಪದ ಆಚರಣೆಯೆ ಸೈ. ನಂದಿಕೊಟ್ಟೂರು ಶಾಸನದಲ್ಲಿ ವಿಜಯನಗರದ ಪ್ರೌಢದೇವರಾಯನ ಅರಮನೆಯ ಓದುವ ಹೊನ್ನವ್ವ ಎಂಬವಳು ಕ್ಷೇತ್ರವನ್ನು ಕ್ರಯವಾಗಿ ಕೊಂಡು ಮಲ್ಲಿಕಾರ್ಜುನ ದೇವರ ನೈವೇದ್ಯಕ್ಕೆ, ಜಂಗಮ ಆರೋಗಣೆಯ ಕಟ್ಟಳೆಗೆ ದತ್ತಿಯನ್ನು ಶ್ರೀಶೈಲ ಕ್ಷೇತ್ರದಲ್ಲಿ 'ಜಂಗಮಸ್ಥಾನ-ವೀರಶೈವಕ್ಷೇತ್ರ' ಎಂಬ ಶ್ರದ್ಧೆಯೊಡನೆ ಅರ್ಪಿಸಿದ್ದಾಳೆ. ಬಸವಣ್ಣ ಹೇಳುವ 'ನಾನಾ ಸ್ಥಾನಂಗಳ ಮುಟ್ಟದೆ ಜಂಗಮವೆ ಲಿಂಗವೆಂದು ನಂಬಿದೆ' ಎನ್ನುವಲ್ಲಿ ನಾಲ್ಕು ಜಂಗಮ ಪೀಠಗಳನ್ನು ನಂಬುತ್ತೇನೆ ಎಂದಿರುವುದಕ್ಕೆ ಹೊನ್ನವ್ವನ ಚರ್ಯೆ ಸಂವಾದಿ ಎನಿಸುತ್ತದೆ. ಪೆನುಗೊಂಡೆ ತಾ. ನಿಡುಮಾಮಿಡಿಯಲ್ಲಿ ಶ್ರೀಶೈಲ ನಿಡುಮಾಮಿಡಿ ಪೀಠದ ಶಾಖಾಮಠವಿದೆ. ಇಲ್ಲಿದ್ದ (ಕಾಶಿವಿಲಾಸ) ಕ್ರಿಯಾಶಕ್ತಿಯು ವಿಜಯನಗರದರಸರ ಕುಲಗುರುವಾಗಿದ್ದ, ರಾಜಗುರುವಾಗಿದ್ದ ಬಗ್ಗೆ ಶಾಸನೋಕ್ತಗಳಿವೆ.[೧೯] ಜಮ್ಮಲಮಡಗು ಶಾಸನದಲ್ಲಿ 'ಶ್ರೀ ಅಜಾತಿ ವೀರಶೈವ ಶ್ರೀ ಭಿಕ್ಷಾವೃತ್ತಿ ಅಯ್ಯವಾರು' ಎಂದು ಹೇಳಿ ವೀರಶೈವದ ಜಾತ್ಯಾತೀತ ದೃಷ್ಟಿಗೆ ಸಾಕ್ಷಿಯಾದಂತಿದೆ.

ತಮಿಳುನಾಡಿನ ಶಾಸನಗಳ ಪೈಕಿ ವಿಜಯನಗರ ಕಾಲದ ಎರಗನಹಳ್ಳಿ ಶಾಸನವು ನಂಜುಂಡೇಶ್ವರ ಸನ್ನಿಧಿಯಲ್ಲಿ 'ಬ್ರಾಹ್ಮಣ ಜಾತಿಯ ಜಂಗಮ ದೇವರಿಗೆ' ಗ್ರಾಮ, ಪುರಗಳಿಗೆ ಸಲ್ಲುವ ದತ್ತಿಯನ್ನು ನೀಡಿದ ಬಗ್ಗೆ ಹೇಳಿದೆ. ಇದರಿಂದ ಆ ಕಾಲದ ವೀರಶೈವ ಜಂಗಮರ ಸಾಮಾಜಿಕ ಸ್ಥಾನಮಾನ, ಗೌರವ ಕುರಿತು ಹೇಳಿದಂತಿದೆ. ಕುಂಭಕೋಣದ ಪೆರಿಯಮಠದ ಕ್ರಿ.ಶ. ೧೫೦೭ರ ಶಾಸನವು ಸೋಮೇಶ್ವರ ಜಂಗಮ ಗುರುಗಳಿಗೆ ಸರ್ವಮಾನ್ಯವಾಗಿ ಎರಡು ಗ್ರಾಮಗಳನ್ನು ಕೊಟ್ಟ ವಿಷಯವಿದೆ. ಈ ಮಠಕ್ಕೆ 'ವೀರಸಿಂಹಾಸನ-ಮುರುಘಾಬ್ರಹ್ಮತರ್ಕ' ಎಂದು ಹೆಸರಿದ್ದು ವೀರಸಿಂಹಾಸನ ಹಾಗು ಶೂನ್ಯ ಯಾ ವೈರಾಗ್ಯ ಸಿಂಹಾಸನ ಸಂಯುಕ್ತ ಸಂಪ್ರದಾಯದ್ದಾಗಿದೆ. ಇಂದಿನ ಪರಿಭಾಷೆಯಲ್ಲಿ ಹೇಳಿದರೆ ಗುರು-ವಿರಕ್ತ ಸಮನ್ವಯ ಮಠವೆಂದರಿಯ ಬೇಕಾಗುತ್ತದೆ. ಧರ್ಮಪುರಿ ಜಿಲ್ಲೆ ಹೊಸೂರಿನಲ್ಲಿ ಸುಜ್ಞಾನಮೂರ್ತಿಗಳ ಶಿವಾಚಾರದ ಮಠವೊಂದಿದೆ. ವೀರಶೈವರಲ್ಲಿ ವಿಶ್ವಕರ್ಮ ಪಂಗಡದವರು ಈ ಮಠಕ್ಕೆ ನಡೆಮಕೊಳ್ಳುತ್ತಾರೆ. ಈ ಸುಜ್ಞಾನಮೂರ್ತಿಗಳು ಸುಗಟೂರು ಪಾಳೆಯಗಾರರ ಕುಲಗುರುವಾಗಿದ್ದರೆನ್ನಲಾಗಿದೆ.[೨೦]

ಉತ್ತರ ಪ್ರದೇಶದ ವಾರಣಾಸಿಯಲ್ಲಿ ಪ್ರಸಿದ್ಧ ಕಾಶಿ ಜಂಗಮವಾಡಿ ಮಠವಿದೆ. ನೇಪಾಳ, ಕಾಶಿ, ರೇವಾಸಂಸ್ಥಾನ, ಮೈಹರ್ ಸಂಸ್ಥಾನ, ಮೈಸೂರು ಹಾಗು ಕೊಡಗಿನ ದೊರೆಗಳು ಈ ಮಠಕ್ಕೆ ದಾನ ದತ್ತಿಕೊಟ್ಟು ಭಕ್ತರಾಗಿ ನಡೆದುಕೊಂಡಿದ್ದಾರೆ. ಈ ಮಠದ ಶಿವಾಚಾರ್ಯರು ಶಿವಾದ್ವೈತವನ್ನು ಪ್ರಚಾರ ಮಾಡುತ್ತ ಸಂಚರಿಸುತ್ತಿದ್ದುದರಿಂದ ಜಂಗಮವಾಡಿ ಮಠವೆಂದೇ ಪ್ರಸಿದ್ಧಿಗೊಂಡಿದೆ. ಇದಕ್ಕೆ ಪೂರಕವಾಗಿ 'ಜಂಗಮಬಾಬಾ'ಗಳು ಜಡೆಗಳಲ್ಲಿ ಲಿಂಗಧರಿಸಿ ಶಿವಜಂಗಮರಾಗಿ ಶಿವಕಥನ ಗಾಯನ ಮಾಡುತ್ತ ಹರಿಯಾನ, ಪಂಜಾಬ್ ಪ್ರದೇಶಗಳಲ್ಲಿ ಸಂಚರಿಸುತ್ತಾರೆ. ಒಂದು ಕಾಲಕ್ಕ ಕಾಶಿ ಜಂಗಮವಾಡಿ ಮಠವೆ ಇವರಿಗೆ ಶಿವಾದ್ವೈತವನ್ನು ಬೋಧಿಸಿ 'ಜಂಗಮ ಸಂಚಾರಿ'ಗಳನ್ನಾಗಿ ಸಿದ್ಧಮಾಡುತ್ತಿದ್ದಿರಬೇಕು. ಹರ್‍ಯಾನದ ಗುಡಗಾಂವ್, ಕರ್ನಾಲ ಜಿಲ್ಲೆಯ ಪೋಪಡ ಗ್ರಾಮ ಹಾಗು ಆ ಸುತ್ತಲಿನ ಗ್ರಾಮಗಳಲ್ಲಿ ವಾಸವಾಗಿದ್ದಾರೆ. (ಇತ್ತೀಚೆಗೆ ಕಾಶಿ ಜಗದ್ಗುರುಗಳಲ್ಲಿ ಜಂಗಮ ಎಂಬ ಉಪಾಧಿಗಳಿರುವ ಈ ಗ್ರಾಮದ ಶಿವನಿಷ್ಠರು ತಮಗೆ ಪುನರ್‌ದೀಕ್ಷೆ ಕೊಡಲು ಬಿನ್ನಹಪಿಟ್ಟದ್ದು ವರದಿಯಾಗಿದೆ). ಶುದ್ಧ ಸಸ್ಯಾಹಾರಿಗಳಾಗಿ, ತಲೆಯಲ್ಲಿ ಲಿಂಗಧರಿಸಿ, ಶಿವಪುರಾಣ ಪ್ರಚಾರದಿಂದ ಜೀವನ ಸಾಗಿಸುವ ಇವರು ತಮ್ಮ ಗಾಯನ ಶಿವಕಥನದಲ್ಲಿ ಕರ್ನಾಟಕದ ಗಡಿಪ್ರದೇಶವಾದ ಅಕ್ಕಲಕೋಟೆಯಿಂದ ವಲಸೆಗೊಂಡವರೆಂದು ಹೇಳಿಕೊಳ್ಳುತ್ತಾರೆ. ಇವರೆಲ್ಲ ಒಂದು ಕಾಲದ ನಿಷ್ಠಾ ವೀರಶೈವರಾಗಿ, ಇಂದು ಪ್ರಾದೇಶಿಕ ಸಂಸ್ಕೃತಿಯಲ್ಲಿ ಮಿಂದುಹೋಗಿದ್ದರೂ, ವೀರಶೈವ ಆಚಾರಗಳನ್ನು ಸಾಂಕೇತಿಕವಾಗಿ ಅಡಕಗೊಳಿಸಿಕೊಂಡಿರುವುದು ಕಾಣುತ್ತದೆ. ಕುಂಭಮೇಳಗಳಲ್ಲಿ ಇವರ ತಂಡ ಶಿವಕಥನ ಮಾಡಿಕೊಂಡು ಅಡ್ಡಾಡುತ್ತದೆ.

ಕರ್ನಾಟಕದ ಸುಡುಗಾಡು ಸಿದ್ಧರೂ, ಗುಡಿಸಲುವಾಸಿಗಳಾಗಿ, ವಿಭೂತಿಧಾರಿಗಳಾಗಿ, ಇಷ್ಟಲಿಂಗಧಾರಿಗಳಾಗಿ ಎದೆಯ ಮೇಲೆ ಕರಡಿಗೆಗಳನ್ನು ಎರಡೆರಡು ಇಟ್ಟುಕೊಂಡಿರುತ್ತಾರೆ. ಹರ್ಯಾನದ ಜಂಗಮ ಬಾಬಾಗಳಂತೆ ಪೇಟ ಕಟ್ಟಿಕೊಂಡು ತಲೆಗೆ ನವಿಲುಗರಿ ಸಿಕ್ಕಿಸಿಕೊಂಡು ಜನಪದ ಕಲಾ ಪ್ರದರ್ಶನಗಳನ್ನು ನೀಡುತ್ತಾರೆ. ಜಂಗಮಬಾಬಾಗಳ ಹಾಗು ಸುಡುಗಾಡು ಸಿದ್ಧರ ಕುರಿತು ತೌಲನಿಕ ಸಾಂಸ್ಕೃತಿಕ ಅಧ್ಯಯನ ನಡೆದರೆ, ವೀರಶೈವದ ಪ್ರಭಾವವನ್ನು ಗುರುತಿಸಬಹುದೆನ್ನಿಸುತ್ತದೆ.

ಶಿಲ್ಪಗಳ ದೃಷ್ಟಿಯಿಂದ ಹೇಳಿದರೆ ಶಾಸನ ಸಹಿತವಾದ ಹಾಗು ಶಾಸನ ರಹಿತವಾದ ವೀರಶೈವ ವೀರರ, ಭಕ್ತರ ಹಾಗು ತಮ್ಮಡಿ ಶಿವಾರ್ಚಕರ ಶಿಲ್ಪಗಳು ಕಾಣಬರುತ್ತವೆ. ಇಷ್ಟಲಿಂಗ ಪೂಜಾಭಂಗಿಯ ವೀರಶೈವ ಗುಂಡಬ್ರಹ್ಮಯ್ಯ ಶಿಲ್ಪಗಳು ಶಿವಗಂಗೆ, ಬೀರೂರು, ನಿಡುಗಲ್ಲು, ನೀತಿಗೆರೆ, ಗುಂಡೇನಹಳ್ಳಿ ಇತ್ಯಾದಿ ಕಡೆ ಕಾಣಬರುತ್ತವೆ. ದೇವರ ಹೊಸಳ್ಳಿ, ಗೆಜ್ಜೆಗಾರಗುಪ್ಪೆ, ಆಂಧ್ರದ ನಿಡುಮಾಮಿಡಿ ಮುಂತಾದ ಕಡೆಯ ವೀರಭದ್ರ ಗುಡಿಗಳಲ್ಲಿ ಇಷ್ಟಲಿಂಗಪೂಜೆ ಮಾಡಿಕೊಳ್ಳುತ್ತಿರುವ ಭಕ್ತರ, ಯತಿಗಳ ಉಬ್ಬುಶಿಲ್ಪಗಳು ಕಾಣಬರುತ್ತವೆ; ವೀರಗಲ್ ಶಾಸನಗಳಲ್ಲಿಯೂ (ರಾಮನಗರ) ಇಂಥ ಶಿಲ್ಪಗಳು ಕಾಣಬರುತ್ತವೆ. ಹೊನ್ನಾಳಿ ತಾ. ಕುಂಕೋವ ಗ್ರಾಮದ ವೀರಭದ್ರನ ಗುಡಿಯಲ್ಲಿ ಗುಂಡಬ್ರಹ್ಮಯ್ಯರ ಶೂಲಸಂಕೇತ ಶಿಲ್ಪಗಳು ಹಾಗು ದ್ವಾರದ ಲಲಾಟದಲ್ಲಿ ಶರಭೋಪನಿಷದ್ ವರ್ಣಿತ ಉಭಯ ಶರಭಭೇರುಂಡ ನರಸಿಂಹಮರ್ದನ ವೀರಭದ್ರ (ಶರಭ ವೀರಭದ್ರ)ನ ಶಿಲ್ಪ ಬಹಳ ಕುತೂಹಲಕಾರಿ ಆಗಿವೆ. ಇದೆಲ್ಲ ವೀರಶೈವದ ಸಾಂಸ್ಕೃತಿಕ ಭಾಗವೊಂದನ್ನು ಪರಿಚಯ ಮಾಡಿಕೊಡುತ್ತದೆ. ಚಿತ್ರಕಲೆಯ ದೃಷ್ಟಿಯಿಂದ ಗಮನಿಸಿದರೆ, ಬೆಂಗಳೂರು ಮ್ಯೂಸಿಯಂನಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಇಷ್ಟಲಿಂಗಪೂಜೆ ಮಾಡಿಕೊಳ್ಳುತ್ತಿರುವ ವರ್ಣಚಿತ್ರವಿದೆ. ಕನಕಪುರ ತಾ. ಆಡನಕುಪ್ಪೆ, ಬೆಳಗಾವಿ ಜಿಲ್ಲೆ ಯಡೂರು, ಬೀದರ್ ಜಿಲ್ಲೆಯ ಹುಮ್ನಾಬಾದ್ ವೀರಭದ್ರ ಗುಡಿಗಳ ಭಿತ್ತಿಯಲ್ಲಿ ವೀರಭದ್ರನ ವೀರ ಪ್ರಸಂಗಗಳ ಚಿತ್ರಗಳು ಬಿಡಿಸಲ್ಪಟ್ಟಿವೆ.

ಜಾನಪದ ಆಚಾರಗಳ ದೃಷ್ಟಿಯಿಂದ ಹೇಳಿದರೆ, ಕೆಂಡೋತ್ಸವ, ಗುಗ್ಗುಳಪೂಜೆ, ಮಡೆ ಆರತಿ, ಖಡ್ಗ, ವಡಬು ಉಗ್ಗಡನೆ ಮುಂತಾದವು ವೀರಶೈವ ಪ್ರಣೀತವಾದ ಆಚರಣೆಗಳಾಗಿವೆ.

ವೀರಭದ್ರನನ್ನು ವೀರಶೈವದೊಡನೆ ಸಮೀಕರಿಸಿಕೊಳ್ಳುವುದಕ್ಕೆ ಸಾಹಿತ್ಯಕವಾಗಿ, ಪೌರಾಣಿಕವಾಗಿ, ಆಚಾರಾತ್ಮಕವಾಗಿ, ಶಿಲ್ಪೋಕ್ತವಾಗಿ, ಶಾಸನೋಕ್ತವಾಗಿ, ಜನಪದೀಯವಾಗಿ ಸಾಕ್ಷ್ಯಗಳಿವೆ. ಸ್ಕಾಂದಪುರಾಣವು: 'ನಮಾಮಿ ವೀರಭದ್ರಂ ತಂ ಅಸಮಾನ ಪರಾಕ್ರಮಂ। ವೀರಶೈವ ಮತಂ ಸ್ಥಾಪ್ಯಂ ವರ್ಧಯನ್ ಪುರಾಭವಿ' ಎಂದಿದೆ; ವಿರಾಗಮವು: 'ವೀರಮಾಹೇಶ್ವರಾಚಾರ ವೀರಭದ್ರಾಯತೇ ನಮಃ। ಅಶೇಷ ಪ್ರಮಥಾಚಾರ ಗುರೂಣಾಂ ಗುರುವೇ ನಮಃ' ಎಂದು ಸ್ತುತಿಸಿದೆ. ವಚನಗಳು, ಕಾವ್ಯಗಳು ವೀರಶೈವಸಂಬಂಧಿಯಾಗಿ ವಿಪುಲವಾಗಿ ಕಾಣಬರುತ್ತವೆ. ಜಾನಪದ ಸಾಹಿತ್ಯವಂತು ಇಷ್ಟಲಿಂಗಪೂಜೆಯನ್ನು, ಶಿವಶರಣರನ್ನು ಮನಸಾರೆ ವರ್ಣಿಸಿಕೊಂಡು ಬಂದಿದೆ. ಶಿವಾಚಾರ್ಯ-ಶಿವಶರಣ ಸಮನ್ವಯದ ಶಾಸನಗಳು ೧೬ನೇ ಶತಮಾನದಲ್ಲಿಯೇ ಕಾಣಿಸಿಕೊಂಡು ಇಂದಿನ ಗುರು-ವಿರಕ್ತ ಸಮನ್ವಯ ಸಮ್ಮೇಳನಗಳಿಗೆ ಒಂದು ಪೂರ್ವ ಮಾದರಿಯಾಗಿವೆ ಎನ್ನಬಹುದು.

ಒಟ್ಟಾರೆ ವೀರಶೈವವೆನ್ನಿ (ಲಿಂಗಾಯಿತವೆನ್ನಿ) ಅದರ ವ್ಯಾಪ್ತಿ ಹೇಗೆ ಭಾರತದಲ್ಲಿ ಬಿತ್ತರಗೊಂಡಿತ್ತು, ಕರ್ನಾಟಕವು ಸ್ಫೂರ್ತಿ ಕೇಂದ್ರವಾಗಿತ್ತು, ಎಂಬುದರ ಪರಿಚಯ, ಶಾಸನ, ಶಿಲ್ಪ, ಚಿತ್ರಕಲೆ, ಜಾನಪದ ಹಾಗು ಸಾಹಿತ್ಯ ಮಾಧ್ಯಮಗಳ ಮೂಲಕ ಗಮನಕ್ಕೆ ಬರುತ್ತದೆ. ಈ ಮೇಲ್ಕಂಡ ವಿಷಯಗಳ ಪೂರ್ಣ ವಿವರಗಳುಳ್ಳ ಸಚಿತ್ರ ಕೃತಿ 'ನಿರ್ವಾಣಶ್ರೀ' ಸಂಪುಟದೊಡನೆ ಪ್ರತ್ಯೇಕವಾಗಿ ಪ್ರಕಟವಾಗುತ್ತಿರುವ ಕಾರಣ, ಅದರ ಸಾರಲೇಖವನ್ನು ಮಾತ್ರ ಇಲ್ಲಿ ನೀಡಲಾಗಿದೆ.

ಅಡಿಟಿಪ್ಪಣಿಗಳು

೧. Srinivasan, L.K., 'Shiva in Space and Time, in Indian context', *Isvara Darshana*, 2001, Mangalore.

೨. i. ಡಾ. ಮಲ್ಲೇದೇವರು, ಎಚ್.ಪಿ., 'ವೀರಶೈವ ಧರ್ಮದ ಪ್ರಾಚೀನತೆ', **ಸಿದ್ಧಗಂಗಾ**, ೧೯೮೦, ಪು. ೫೬೦-೬೧.

ii. ಸೌತ್ ಇಂಡಿಯನ್ ಇನ್‌ಸ್ಕ್ರಿಪ್‌ಷನ್ಸ್ ನಂ. ೧, ಸಂ. ೩೨

iii. ಇಂಡಿಯನ್ ಆಂಟಿಕ್ವೆರಿ ನಂ. ೧೨

೩. i. ಮಲ್ಲಪ್ಪ, ಟಿ.ಎನ್., ೧೯೬೯, **ವೀರಶೈವದ ಉಗಮ ಮತ್ತು ಪ್ರಗತಿ**, ಬೆಂಗಳೂರು, ಪು. ೪೧.

ii. ಎಪಿಗ್ರಾಫಿಯ ಇಂಡಿಕ, xviii, ಪು. ೧೪೯-೫೦

೪. Mahalingam, T.V., 1985, *A Topological List of Inscriptions* (Tamil Nadu, Kerala), New Delhi.

೫. **ಎಪಿಗ್ರಾಫಿಯ ಕರ್ನಾಟಕ ಸಂ. ೧ (ಹೊಸತು)**., ೧೯೭೨, ಕೊಡಗು ಜಿಲ್ಲೆ ೬೨ (ಸೋಮವಾರ ಪೇಟೆ ತಾ, ಯಡೂರು, ಕ್ರಿ.ಶ. ೧೦೯೫), ಮೈಸೂರು ವಿಶ್ವವಿದ್ಯಾಲಯ.

೬. **ಎ.ಕ.ಸಂ. ೩ (ಹೊಸತು)**., ೧೯೭೪, ಮೈಸೂರು ಜಿಲ್ಲೆಯ ಶಾಸನಗಳು, ಮೈ.ವಿ.ವಿ.

೭. **ಎ.ಕ.ಸಂ. ೬ (ಹೊಸತು)**., ೧೯೭೭, ಮಂಡ್ಯ ಜಿಲ್ಲೆಯ ಶಾಸನಗಳು, ಮೈ.ವಿ.ವಿ.

೮. **ಎ.ಕ.ಸಂ. ೮ (ಹೊಸತು)**., ೧೯೮೪, ಹಾಸನ ಜಿಲ್ಲೆಯ ಶಾಸನಗಳು, ಮೈ.ವಿ.ವಿ.

೯. **ಎ.ಕ.ಸಂ. ೧೧೯ (ಹೊಸತು)**., ೧೯೯೮, ಚಿಕ್ಕಮಗಳೂರು ಜಿಲ್ಲೆಯ ಶಾಸನಗಳು, ಮೈ.ವಿ.ವಿ.

೧೦. **ಎ.ಕ.ಸಂ. ೧೨ (ರೈಸ್ ಆವೃತ್ತಿ)**, ೧೯೦೪, ತುಮಕೂರು ಜಿಲ್ಲೆಯ ಶಾಸನಗಳು ಮತ್ತು ಎ.ಕ.ಸಂ. ೧೬ [ಅನುಬಂಧ ಸಂಪುಟ-೨., (ಸಂ) ಕೆ.ಎ. ನೀಲಕಂಠಶಾಸ್ತ್ರಿ, ೧೯೫೮].

೧೧. **ಎ.ಕ.ಸಂ. ೯ (ರೈಸ್ ಆವೃತ್ತಿ) ಮತ್ತು ಅನುಬಂಧ**., ಬೆಂಗಳೂರು ಜಿಲ್ಲೆಯ ಶಾಸನಗಳು

೧೨. **ಎ.ಕ.ಸಂ. ೧೦ (ರೈಸ್ ಆವೃತ್ತಿ)**., ಕೋಲಾರ ಜಿಲ್ಲೆಯ ಶಾಸನಗಳು; ಎ.ಕ.ಸಂ. ೧೨ (೧೯೬೮) ಕೋಲಾರ ಜಿಲ್ಲೆಯ ಅನುಬಂಧ ಶಾಸನಗಳು

೧೩. **ಎ.ಕ.ಸಂ. ೧೧ (ರೈಸ್ ಆವೃತ್ತಿ)**., ೧೯೦೩, ಚಿತ್ರದುರ್ಗ ಜಿಲ್ಲೆಯ ಶಾಸನಗಳು, ರಾಜ್ಯ ಪುರಾತತ್ವ ಇಲಾಖೆ, ಮೈಸೂರು, ಬೆಂಗಳೂರು.

೧೪. **ಎ.ಕ.ಸಂ. ೮ (ರೈಸ್ ಆವೃತ್ತಿ)**., ೧೯೦೪, ಶಿವಮೊಗ್ಗ ಜಿಲ್ಲೆಯ ಶಾಸನಗಳು, ರಾಜ್ಯ ಪುರಾತತ್ವ ಇಲಾಖೆ.

೧೫. 'ಅಬಲೂರು ಶಾಸನ' : **ಶಾಸನ ಸಂಗ್ರಹ**, ೧೯೭೫, (ಸಂ) ಎ.ಎಂ. ಅಣ್ಣಿಗೇರಿ, ಆರ್. ಶೇಷಶಾಸ್ತ್ರಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪು. ೪೯-೫೬.

೧೬. 'ಅರ್ಜುನವಾಡ ಶಾಸನ' : **ಕನ್ನಡ ಶಾಸನ ಸಂಪದ**, ೧೯೮೭, (ಸಂ) ಡಾ. ಆರ್.ಸಿ. ಹಿರೇಮಠ, ಡಾ. ಎಂ.ಎಂ. ಕಲಬುರ್ಗಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಪು. ೧೦೧-೧೦೩.

೧೭. **ವಿರೂಪಾಕ್ಷ ಪಂಡಿತಾರಾಧ್ಯ ಚನ್ನಬಸವ ಪುರಾಣ**, ೧೯೩೪, (ಸಂ) ಶಿ.ಶಿ. ಬಸವನಾಳ, ಧಾರವಾಡ, ಸಂಧಿ ೧, ಪದ್ಯ ೨೦.

೧೮. ದುರ್ಗಜಗದೀಶ., 'ರಾಚೋಟಿ ಪುಣ್ಯಕ್ಷೇತ್ರ', **ರಾಚೋಟ ವೀರಭದ್ರ** (ಸಂ) ಸಂಗಯ್ಯ ಸೊಪ್ಪಿನ ಮಠ, ಅಂತರಂಗಿ ಸಾಂಸ್ಕೃತಿಕ ಪ್ರತಿಷ್ಠಾನ, ರಾಯಚೂರು, ೧೯೯೯, ಪು. ೧೧.

೧೯. ಎಂ.ಜಿ. ನಂಜುಂಡಾರಾಧ್ಯ, 'ಸಿಡುಮಾಮಿಡಿ ಶ್ರೀಶೈಲ ಪೀಠವನ್ನು ಆರಾಧಿಸಿದ ರಾಜರು', **ಶ್ರೀಶೈಲಪೀಠ ದರ್ಶನ**, (ಸಂ) ಡಾ. ಶ್ರೀ ಜಚನಿ, ಬೆಂಗಳೂರು, ೧೯೬೭, ಪು. ೨೩೭.

೨೦. ಪಿ.ಪಿ. ಕೃಷ್ಣಮೂರ್ತಿ., ೧೯೯೭, **ತಮಿಳುನಾಡಿನ ಕನ್ನಡ ಶಾಸನಗಳು**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ನಮ್ಮ ಲೇಖಕರ ಬಳಗ

೧. **ಡಾ. ಹೆಚ್.ಎಂ. ಮರುಳಸಿದ್ಧಯ್ಯ**
೬೨, ಈಶಕೃಪ, ಮಂಜುನಾಥ ಕಾಲೋನಿ
ಜೆ.ಪಿ. ನಗರ, ಬೆಂಗಳೂರು

೨. **ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯ**
೨೦೩, ಲಲಿತಕೃಪ, ೭ನೇ 'ಎ' ಮೈನ್
ವಿಜಯನಗರ ೨ನೇ ಹಂತ, ಬೆಂಗಳೂರು-೪೦

೩. **ಪ್ರೊ. ಆರ್. ರಾಚಪ್ಪ**
ರಜತಾದ್ರಿ, ೭ನೇ 'ಬಿ' ಮೈನ್,
ವಿಜಯನಗರ ೨ನೇ ಹಂತ, ಬೆಂಗಳೂರು-೪೦

೪. **ಡಾ. ಎಸ್. ವಿದ್ಯಾಶಂಕರ**
೧೩೪, ೭ನೇ 'ಸಿ' ಮೈನ್
ವಿಜಯನಗರ ೨ನೇ ಹಂತ, ಬೆಂಗಳೂರು-೪೦

೫. **ಡಾ. ಬಿ.ಎಸ್. ಸ್ವಾಮಿ**
ಮಾದೇಶ್ವರ ನಿಲಯ, ೭ನೇ 'ಎ' ಮೈನ್
ವಿಜಯನಗರ ೨ನೇ ಹಂತ, ಬೆಂಗಳೂರು-೪೦

೬. **ಡಾ. ಡಿ.ವಿ. ಪರಶಿವಮೂರ್ತಿ**
ಅಧ್ಯಾಪಕರು
ಕನ್ನಡ ವಿಶ್ವವಿದ್ಯಾನಿಲಯ, ಹಂಪಿ

೭. **ಪ್ರೊ. ಬಿ. ವಿರೂಪಾಕ್ಷಪ್ಪ**
೫, ಚೇತನ, ೧ನೇ 'ಡಿ' ಮುಖ್ಯರಸ್ತೆ
ವಿಜಯನಗರ ೨ನೇ ಹಂತ, ಬೆಂಗಳೂರು-೪೦

೮. **ಎಲ್. ಶಿವಲಿಂಗಪ್ಪ**
ಪ್ರಾಚಾರ್ಯ, ಆಚಾರ್ಯ ಚಿತ್ರಕಲಾ ಭವನ
ಬಸವನಗರ, ಮಾರತ್ ಹಳ್ಳಿ, ಬೆಂಗಳೂರು-೩೭

೯. **ಡಾ. ಎಫ್.ಟಿ. ಹಳ್ಳಿಕೇರಿ**
ಕನ್ನಡ ಪ್ರವಾಚಕರು, ಹಸ್ತಪ್ರತಿ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೦. **ಡಾ. ನಿರುಪಮ**
೨೪೮, ೧೬-೧೭ನೇ ಅಡ್ಡರಸ್ತೆ
ಮಲ್ಲೇಶ್ವರಂ, ಬೆಂಗಳೂರು-೩

೧೧. **ಡಾ. ಎಂ. ಚಿದಾನಂದಮೂರ್ತಿ**
೬-ಎ, ಮಿಂಚು, ೪ನೇ ಅಡರಸ್ತೆ
೧೧ನೇ ಮೈನ್, ವಿಜಯನಗರ ೨ನೇ ಹಂತ,
ಬೆಂಗಳೂರು-೪೦

೧೨. **ಪೂಜ್ಯಶ್ರೀ ಇಮ್ಮಡಿ ಶಿವಬಸವ ಸ್ವಾಮಿಗಳು**
ಕುಂದೂರುಮಠ, ಮೈಸೂರು

೧೩. **ಡಾ. ಸಾ.ಶಿ. ಮರುಳಯ್ಯ**
೩, ರಾಗಿಣಿ, ಸರ್ವಿಸ್ ರಸ್ತೆ
ವಿಜಯನಗರ ೨ನೇ ಹಂತ, ಬೆಂಗಳೂರು-೪೦

೧೪. **ಎಂ.ಜಿ. ನಾಗರಾಜ್**
೨೨೧, ಅನಘ, ಶ್ರೀ ಜಚನಿ ಕೃಪೆ, ೬೦ನೇ ಕ್ರಾಸ್,
೪ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-೧೦

೧೫. **ಕೆ. ಶಾಂತಯ್ಯ**
೨ನೇ ಕ್ರಾಸ್, ೧೦ನೇ ಮೈನ್, ೧ನೇ ಬ್ಲಾಕ್
ಬಸವೇಶ್ವರ ನಗರ ೩ನೇ ಘಟ್ಟ, ಬೆಂಗಳೂರು-೭೯

೧೬. **ಡಾ. ಡಿ.ಎನ್. ಯೋಗೀಶ್ವರಪ್ಪ**
ಇತಿಹಾಸ ಪ್ರಾಧ್ಯಾಪಕ
ಶ್ರೀ ಸಿದ್ಧಗಂಗಾ ಮಹಿಳಾ ಕಾಲೇಜು, ತುಮಕೂರು

೧೭. **ಡಾ. ಕೆ. ರವೀಂದ್ರನಾಥ್**
ಹಸ್ತಪ್ರತಿ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೮. **ಹೆಚ್.ಎಸ್. ಸಿದ್ಧಗಂಗಪ್ಪ**
೫೩/೧, ಶಿವಕೃಪ, ೧ನೇ ಮೈನ್
ಕಾವೇರಿ ಬಡಾವಣೆ, ನಾಗರಬಾವಿ ರಸ್ತೆ
ಬೆಂಗಳೂರು-೪೦

೧೯. **ಚಕ್ರವರ್ತಿ**
ಸಹಾಯ ಸಂಶೋಧಕರು
ಪ್ರಾಚ್ಯ ಸಂಶೋಧನಾ ಶಾಖೆ, ಮೈಸೂರು

೨೦. **ಡಾ. ಎಸ್.ಎಚ್. ಭುವನೇಶ್ವರ**
೮೧೭-ಸಿ, ಪರಮೇಶ್ವರ ಕೃಪ, ೧೫ನೇ ಅಡ್ಡರಸ್ತೆ
೭ನೇ ಬ್ಲಾಕ್, ಜಯನಗರ, ಬೆಂಗಳೂರು-೮೨

೨೧. ಎನ್. ಮಹದೇವಪ್ಪ
ಮೈಸೂರು

೨೨. ಡಾ. ಕೆ.ಎಸ್. ರತ್ನಮ್ಮ
ಪ್ರಾಂಶುಪಾಲರು, ೨೮೮೪, ಕೋರ್ಟ್ ಹಿಂಭಾಗ
ಸರಸ್ವತಿಪುರಂ, ಮೈಸೂರು-೯

೨೩. ಷಣ್ಮುಖಯ್ಯ ಅಕ್ಕೂರಮಠ
೬೭, ದೇವಗಂಗೋತ್ರಿ, ಶಂಕರಮಠದ ರಸ್ತೆ
ಬಸವನಗುಡಿ, ಬೆಂಗಳೂರು-೪

೨೪. ಅಜ್ಜಂಪುರ ಜಿ. ಸೂರಿ
ಅಧ್ಯಕ್ಷರು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು
ಕಡೂರು, ಚಿಕ್ಕಮಗಳೂರು ಜಿಲ್ಲೆ

೨೫. ಡಾ. ಸಿ. ಶಿವಕುಮಾರಸ್ವಾಮಿ
೬, ಪಿಎಫ್ ಲೇಔಟ್, ಮಾರೇನಹಳ್ಳಿ
ವಿಜಯನಗರ, ಬೆಂಗಳೂರು-೪೦

೨೬. ಷಟ್ಸ್ಥಲಬ್ರಹ್ಮಿ ಶ್ರೀ ಡಾ. ಸಿದ್ಧರಾಮ
ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು
ಹಿಪ್ಪರಗಿ ಮಠ, ಜಮಖಂಡಿ ಕಾಲೋನಿ
ಬಾಗಲಕೋಟೆ ಜಿಲ್ಲೆ

೨೭. ಡಾ. ಎಸ್.ಆರ್. ಗುಂಜಾಳ
ನಿರ್ದೇಶಕರು, ಲಿಂಗಾಯತ ಅಧ್ಯಯನ ಸಂಸ್ಥೆ
ಶ್ರೀ ರುದ್ರಾಕ್ಷಿಮಠ, ಶಿವಬಸವ ನಗರ, ಬೆಳಗಾವಿ

೨೮. ಎನ್. ಬಸವಾರಾಧ್ಯ
೭೪೩, ೧೨ನೇ ಮುಖ್ಯರಸ್ತೆ
೩ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-೪೦

೨೯. ಟಿ.ಆರ್. ಮಹದೇವಯ್ಯ
೧೩೬, ೧ನೇ ಮೈನ್, ೧ನೇ ಬ್ಲಾಕ್
ನಾಗರಬಾವಿ ೨ನೇ ಹಂತ, ಬೆಂಗಳೂರು-೭೨

೩೦. ಡಾ. ವ್ಹಿ.ಜಿ. ಪೂಜಾರ
ಪ್ರಾಧ್ಯಾಪಕರು
ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ-೦೬

೩೧. ಡಾ. ಬಸವರಾಜ ಪುರಾಣಿಕ
೧೩೩೭, ೩ನೇ ಅಡ್ಡರಸ್ತೆ, ಮಾಗಡಿರಸ್ತೆ
ಕೆ.ಹೆಚ್.ಬಿ. ಕಾಲೋನಿ, ಬೆಂಗಳೂರು-೫೬೦೦೭೯

೩೨. ಬಿ.ವ್ಹಿ. ಶಿರೂರ
೧೩, ಮಂಜುನಾಥನಗರ, ಹುಬ್ಬಳ್ಳಿ-೫೮೦೦೩೦

೩೩. ಜಿ. ಅಶ್ವತ್ಥನಾರಾಯಣ
೯೫, ೩೪ನೇ 'ಬಿ' ಕ್ರಾಸ್, ೧೬ನೇ ಮೈನ್
೪ನೇ 'ಟಿ' ಬ್ಲಾಕ್, ಜಯನಗರ, ಬೆಂಗಳೂರು-೪೧

೩೪. ಡಾ. ಮಾಣಿಕರಾವ್ ಧನಶ್ರೀ
೧-೬೧, ಕಾಯಕ ನಿಲಯ, ಜಯನಗರ
ಸೇಡಂ ರಸ್ತೆ, ಗುಲಬರ್ಗಾ-೫೮೫೧೦೫

೩೫. ಪ್ರೊ. ಡಿ. ಲಿಂಗಯ್ಯ
೬೯೦, ೭ನೇ ಬ್ಲಾಕ್, ೨ನೇ ಫೇಸ್
ಬನಶಂಕರಿ ೩ನೇ ಹಂತ, ಬೆಂಗಳೂರು-೫೬೦೦೮೫

೩೬. ಪ್ರೊ. ಕೆ.ಎಚ್. ಉದ್ದಂಡಪ್ಪ
ವಿಜಯನಗರ ೨ನೇ ಹಂತ, ಬೆಂಗಳೂರು-೪೦

೩೭. ಡಾ. ಬಿ. ನಂಜುಂಡಸ್ವಾಮಿ
ಪಂಡಿತ್ ತಾರಾನಾಥ್ ಚಿಕಿತ್ಸಾಲಯ
ತುಮಕೂರು ಷಾಪಿಂಗ್ ಕಾಂಪ್ಲೆಕ್ಸ್
ಗಾಯಿತ್ರಿ ಟಾಕೀಸ್ ಪಕ್ಕ, ಬಿ.ಹೆಚ್. ರಸ್ತೆ
ತುಮಕೂರು-೫೭೨೧೦೨

೩೮. ಕೆ.ವಿ. ನಾಗರಾಜಮೂರ್ತಿ
೫೬೬-೪, ೭೫ನೇ 'ಸಿ' ಕ್ರಾಸ್, ೬ನೇ ಬ್ಲಾಕ್
ರಾಜಾಜಿನಗರ, ಬೆಂಗಳೂರು-೧೦

೩೯. ಎನ್. ಚನ್ನಬಸವಯ್ಯ
ಪ್ರಜಾವಾಣಿ, ಎಂ.ಜಿ. ರಸ್ತೆ, ಬೆಂಗಳೂರು-೧

೪೦. ಲಿಂ. ಡಾ. ಹೆಚ್. ತಿಪ್ಪೇರುದ್ರಸ್ವಾಮಿ
ನಿವೃತ್ತ ಕನ್ನಡ ಪ್ರಾಧ್ಯಾಪಕರು
೨೨೩, ೧೨ನೇ ಮೈನ್, ೩ನೇ ಕ್ರಾಸ್
ಸರಸ್ವತಿಪುರ, ಮೈಸೂರು-೫೭೦೦೦೯

೪೧. ಎಸ್. ಚನ್ನಬಸವಯ್ಯ
ಶಿವಾನಿ, ನಂ. ೪, ೧ನೇ 'ಎ' ಕ್ರಾಸ್
ಎಸ್.ವಿ.ಜಿ. ನಗರ, ಮೂಡಲಪಾಳ್ಯ
ಬೆಂಗಳೂರು-೭೨

೪೨. ಎನ್. ಮಹದೇವಪ್ಪ
ವಿಶ್ರಾಂತ ಮುಖ್ಯೋಪಾಧ್ಯಾಯರು, ಎಲ್.ಐ.ಜಿ.-೨
ನಂ. ೧೩೪, ಕರ್ನಾಟಕ ಹೌಸಿಂಗ್ ಕಾಲೋನಿ
ಡಾ. ರಾಜ್‌ಕುಮಾರ್ ರಸ್ತೆ, ಕಲ್ಯಾಣಗಿರಿ ನಗರ
ಮೈಸೂರು-೯

12091

